

ಶ್ರೀನಿವಾಸ

ಮಾಸ್ತಿ ಸಂಭಾವನಾ ಗ್ರಂಥ

ಸಂಪಾದಕ
ಮಾವಿನಕೆರೆ ರಂಗನಾಥನ್

ಡಾ|| ಮಾಸ್ತಿ ಶತಮಾನೋತ್ಸವ ಸಮಿತಿ
ಬೆಂಗಳೂರು - ೫೬೦ ೦೦೩

SRINIVASA - Sambhavana Grantha

A collection of Articles by various Authors on the Life and Works of Dr. Masti Venkatesh Iyengar, Poet - Laureate of Karnataka, known as Srinivasa. Edited and Published by Mavinakere Ranganathan, Purogami Sahitya Sangha, X Cross, Malleswaram, Bangalore 560 003.

Reprinted by Dr. Masti Venkatesha Iyengar Centenary Celebrations Committee, No. 21, Yellappa Garden, 10th Cross, Malleswaram, Bangalore - 3, Ph : 363347

DTP Composition at akshar graphics, Basaveswaranagar, Bangalore 560 079

Printed at Aksharographics, Magadi Road, Bangalore - 560 046.

Pages xvi + 700

I Edition 1972

II Revised Edition 1992

Price : Rs. 125/-

ಶ್ರೀನಿವಾಸ

(ಮಾಸ್ತಿ ವೆಂಕಟೇಶ ಅಯ್ಯಂಗಾರ್)

ಗೌರವ ಸಂಪಾದಕರು

ತಿ. ತಾ. ಶರ್ಮ

ಮುನ್ನುಡಿ

ಸುಮಾರು ಅರುವತ್ತು ವರ್ಷಕ್ಕೂ ಮಿಕ್ಕು ನಾಡಿಗೂ, ನುಡಿಗೂ ಅನನ್ಯ ಸೇವೆಸಲ್ಲಿಸುತ್ತಾ ಬಂದಿರುವ ಹಿರಿಯರಾದ, ಡಾಕ್ಟರ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ 'ಶ್ರೀನಿವಾಸ' ಅವರ ಮಹಾಸೇವೆಯನ್ನು ಕೃತಜ್ಞತಾಭಾವದಿಂದ ಸ್ಮರಿಸುತ್ತ; ಅವರ ಜೀವನ; ಸಾಹಿತ್ಯ ಪ್ರಭೆಯ ಸಮೀಕ್ಷೆ ಮಾಡಿ ಅಂತಃಕರಣ ಪೂರ್ವಕ ಈ ಸಂಭಾವನಾ ಗ್ರಂಥದ ಮೂಲಕ ಜನತೆಯ ಪರವಾಗಿ ಅವರಿಗೆ ಅರ್ಪಿಸುವ ಸೌಭಾಗ್ಯ ಬಂದುದಕ್ಕೆ ಹೃದಯ ತುಂಬಿ ಬರುತ್ತದೆ.

೨

ಹೊಸಗನ್ನಡ ಸಾಹಿತ್ಯದಲ್ಲಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಹೆಸರು ಬಹು ದೊಡ್ಡದು. ಅವರ ಸಾಹಿತ್ಯ ಸೃಷ್ಟಿ ಎಷ್ಟು ವಿಪುಲವೋ, ಅಷ್ಟೇ ಪ್ರಾಮುಖ್ಯವುಳ್ಳದ್ದು. ಗುಣದಲ್ಲೂ ವೈವಿಧ್ಯದಲ್ಲೂ ಇವರ ಸಾಹಿತ್ಯ ಸೃಷ್ಟಿ ನುಡಿಗೆ ತಿಲಕಪ್ರಾಯವಾದುದು. ಸಣ್ಣ ಕಥೆ, ನಾಟಕ, ಕಾದಂಬರಿ, ಜೀವನ ಚರಿತ್ರೆ, ವಿಮರ್ಶೆ, ಅನುವಾದ, ಸಂಪಾದಕೀಯ, ಕನ್ನಡದಲ್ಲಿ ಭಾಷಣ, ಸಮಗ್ರ ಕರ್ಣಾಟಕ ಜನತೆಯನ್ನು ಒಂದುಗೂಡಿಸಲು ಏಕಮೇವಾ ಸಾಧಕ ಎಂದು ನಂಬಿ, ಅದಕ್ಕಾಗಿ ಶ್ರಮಿಸಿ ಬೆಳೆಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ. ಒಂದೇ? ಎರಡೇ? ಮುಂದಲ ಪೀಳಿಗೆ ಒಬ್ಬ ವ್ಯಕ್ತಿಯಲ್ಲಿ ಇಷ್ಟೆಲ್ಲಾ ಸಾಧ್ಯವೇ, ಲಭ್ಯವೇ ಎಂದು ಅಚ್ಚರಿಪಡುವಂತಿದೆ. ಮಾಸ್ತಿಯವರದ್ದು ಅಂತಹ ರಸಸೃಷ್ಟಿ.

ಈ ಕಾರ್ಯಕ್ಕೆಂದು ಮಾಸ್ತಿ ನಾಡಿನ ಒಳಗೂ ಹೊರಗೂ ಸಂಚರಿಸಿದರು. ನುಡಿಯ ಜನರನ್ನು ಕಲೆಹಾಕಲು ಅದಮ್ಯ ಉತ್ಸಾಹದಿಂದ ದುಡಿದ ಸಫಲ ಚೇತನ ಅವರದು. ಹೀಗೆ ನಾಡಿನಾದ್ಯಂತ ಸಂಚರಿಸುವ ಸಂದರ್ಭದಲ್ಲಿ ಪ್ರಾದೇಶಿಕವಾಗಿ ಬಳಕೆಯಲ್ಲಿದ್ದ ಶಬ್ದ ಸಂಪತ್ತನ್ನು ಸಾರ್ವತ್ರಿಕವಾಗಿಸಲು ಪ್ರಯತ್ನಿಸಿ, ಕನ್ನಡ ಶಬ್ದಭಂಡಾರಕ್ಕೆ ಅಪೂರ್ವ ಶಬ್ದಗಳನ್ನು ತುಂಬಿಕೊಟ್ಟಂತಹವರು.

ಪರಿಪಕ್ವವಾದ ಜೀವನ, ಸುಸಂಸ್ಕೃತವಾದ ಮನಸ್ಸು, ಬದುಕಿನ ಘನತೆಯೊಂದಿಗೆ ಕಾಯಾ ವಾಚಾ ಮನಸಾ ನಂಬಿದ್ದ ವಿಚಾರಗಳನ್ನು ಸಾಹಿತ್ಯದ ಮೂಲಕ ತಾವು ಅಭಿವ್ಯಕ್ತಗೊಳಿಸಿದರು. ಆ ಕಾರ್ಯಕ್ಕೆ ಸಮರ್ಥರೆಂದು ಕಂಡವರನ್ನೆಲ್ಲ ಪ್ರೋತ್ಸಾಹಿಸಿದರು - ಅವರ ಸೃಷ್ಟಿಯನ್ನು ಮೆಚ್ಚುನುಡಿಯೊಂದಿಗೆ ಪ್ರಕಟಿಸುವ ಕೆಲಸ ಮಾಡಿದರು. ಇದು ವಿಶೇಷ ವ್ಯಕ್ತಿಗಳಲ್ಲಿ ಮಾತ್ರವೇ ಕಾಣುವ ಅಪರೂಪ ಗುಣ. ಸ್ವಾರ್ಥ ನಿರಪೇಕ್ಷತೆ, ಸ್ಥಿತ ಪ್ರಜ್ಞೆ, ಸ್ಫುಟವಾದ ವೈಚಾರಿಕತೆ ಅವರ ಸಾಹಿತ್ಯ ರಚನೆಯಲ್ಲಿ ವ್ಯಕ್ತವಾಗುವ ಗುಣ. ಇದರೊಳಗೆ ಲೀನವಾದ ಅವರ ಕಳಕಳಿಯ ಮಾನವೀಯತೆ; ಇವೆಲ್ಲಕ್ಕೂ ಕಳಶವಿಟ್ಟಂತೆ ಸರಳವಾಗಿ ನವಿರಾಗಿ ಬರೆವ ನುಡಿವ ಕಲಾಕೌಶಲ್ಯ. ಸಾಹಿತ್ಯ ಚರಿತೆಯಲ್ಲಿ ಆಗೊಮ್ಮೆ ಈಗೊಮ್ಮೆ ಮಿಂಚುವ ಅಪರೂಪ ಘಟನೆಯಲ್ಲವೆ ಇದು?

ಈ ತೆರನಾಗಿ ಸೇವೆ ಸಲ್ಲಿಸಿದರೂ ಶ್ರೀ ಮಾಸ್ತಿ ಅಂದುಕೊಳ್ಳುವುದಾದರೂ ಏನು?

''ನಾನು ಕನ್ನಡದ ಕೆಲಸ ಪ್ರಾರಂಭ ಮಾಡಿದಾಗ ಇನ್ನೂ ನಮಗೆ ಇಂಗ್ಲಿಷಿನ ವ್ಯಾಮೋಹ ಹೋಗಿರಲಿಲ್ಲ. ನನ್ನ ಮಾತನ್ನು ಜನ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ ಎಂದು ನಾನು ಬೇಸರ ಪಟ್ಟುಕೊಳ್ಳುವುದಿಲ್ಲ. ಮುಸಲ್ಮಾನರಲ್ಲಿ ಮೋಜನ್ ಎಂಬೊಬ್ಬ ಮನುಷ್ಯ ಇರುತ್ತಾನೆ. ಬೆಳಗಾಗ ಜನರನ್ನು ಪ್ರಾರ್ಥನೆಗೆ ಕೂಗಿ ಎಬ್ಬಿಸುವುದು ಅವನ ಕೆಲಸ. 'ನಾನು ಕೂಗಿದಾಗ ಹೆಚ್ಚು ಜನ ಕೇಳಲಿಲ್ಲ' ಎನ್ನುವ ಮಾತನ್ನು ಆಡುವಂತಿಲ್ಲ. ಇತರರು ಮಲಗಿದಾಗ ಕೂಗಿ ಎಬ್ಬಿಸುವ ಕೆಲಸ ಅವನದು. ಕನ್ನಡ ನಾಡಿನಲ್ಲಿ ನಾನು ಮಾಡಿದುದು ಈ 'ಮೋಜನ್' ಕೆಲಸ*''

ಈ ಸೇವಾ ಮನೋಭಾವದ, ನಿರಪೇಕ್ಷ ಕಾರ್ಯತತ್ಪರರಿಗೆ ನಾಡು ಪ್ರೀತಿಯನ್ನು ಗೌರವವನ್ನೂ ಕೃತಜ್ಞತೆಯನ್ನೂ ಹೇಗೆ ಅರ್ಪಿಸಬೇಕು, ಯಾವ ತೆರನಾಗಿರಬೇಕು?

''ಅಭಿನಂದನ ಸಾಹಿತ್ಯ ಕನ್ನಡದ ವಿಶಿಷ್ಟ ರೂಪವೆಂದೇ ಹೇಳಬಹುದು. ಅದು ಹೊರಗಡೆಯಿಂದ ಆಮದಾದುದಲ್ಲ. ಇಂಡಿಯಾ ದೇಶದ ಯಾವ ಭಾಷೆಯಲ್ಲಿಯೂ ಅದು ಇಷ್ಟು ಸಮೃದ್ಧವಾಗಿ ಬೆಳೆದಿಲ್ಲ. ಒಂದು ಭಾಷೆಯ ಜನ ತನ್ನ ಸಾಹಿತಿಗಳ ಶಕ್ತಿ ಸಾಮರ್ಥ್ಯ ಸಾಧನೆ ಸಿದ್ಧಿಗಳನ್ನು ಮೆಚ್ಚುವ, ಗೌರವಿಸುವ ವಿಧಾನವಿದು. ಒಬ್ಬ ಸಾಹಿತಿ ದೇಶದ ಅಮೂಲ್ಯ ಆಸ್ತಿ, ಸಂಸ್ಕೃತಿಯ ಕಣ್ಣು, ಸಮಾಜದ ತಲೆ, ರಾಷ್ಟ್ರದ ಅಗ್ರನಾಯಕ ಎಂಬ ಭಾವನೆ ಅಭಿನಂದನ ವಿಧಾನದಲ್ಲಿ ವ್ಯಕ್ತಗೊಳ್ಳುತ್ತದೆ. ಇದು ಜನ ತಮ್ಮ ಹೆಮ್ಮೆಯ ಕವಿಗೆ ತೋರುವ ಕೃತಜ್ಞತೆ. ಸಾಮಾನ್ಯವಾಗಿ ಈ ಗೌರವ ಕವಿಗಣಕ್ಕೆ ಮೀಸಲಾದದ್ದು. ಆಗೊಮ್ಮೆ, ಈಗೊಮ್ಮೆ ಸಾಹಿತ್ಯೇತರ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ನಾಡಿನ ಹಿರಿಯರಿಗೂ ಇಂಥ ಗೌರವ ಸಂದದ್ದುಂಟು. ಏನೇ ಆಗಲಿ ಜನತೆಯ ಕಲಾಭಿರುಚಿ, ಸಂಸ್ಕೃತಿಯ ಪ್ರಜ್ಞೆ, ಮತ್ತು ಉದಾರಾಕಾಂಕ್ಷೆ ಇದರಿಂದ ವ್ಯಕ್ತವಾಗುತ್ತದೆ. ಸಾಮಾನ್ಯವಾಗಿ ಇಂಥ ಅಭಿನಂದನ ಕಾರ್ಯ ಕವಿಯ ಜೀವಿತ ಕಾಲದಲ್ಲಿ ನಡೆಯುವುದುಂಟು. ಅವನು ತನ್ನ ಕ್ಷೇತ್ರದಲ್ಲಿ ಸಿದ್ಧಿಯ ಹಂತವನ್ನು ಮುಟ್ಟಿದಾಗಲೊ, ಒಂದು ವಯೋಮಿತಿಯನ್ನು ತಲುಪಿದಾಗಲೊ, ಇಂಥದೊಂದು ಸನ್ಮಾನ ಸಮಾರಂಭ ಏರ್ಪಾಡಾಗುತ್ತದೆ. ಕವಿಯ ವ್ಯಕ್ತಿತ್ವವನ್ನು ಕುರಿತ ಕವನ ಲೇಖನಗಳನ್ನೂ, ಅವನ ಕೃತಿಗಳನ್ನೂ ಕುರಿತ ವಿಮರ್ಶೆಗಳನ್ನೂ ಸಂಗ್ರಹಿಸಿ, ಭಾವ ಚಿತ್ರಗಳೊಡನೆ ಗ್ರಂಥವನ್ನು ಮುದ್ರಿಸಿ, ಅವನಿಗೆ ಸಮರ್ಪಿಸುವುದು ರೂಢಿಯ ಸಂಪ್ರದಾಯ. ಇಂಥ ಅಭಿನಂದನ ಗ್ರಂಥವೇ ಶ್ರೇಷ್ಠವಾದದ್ದು**''

ಎಂಬ ಶ್ರೀ ದೇ.ಜ.ಗೌ. ಅಭಿಪ್ರಾಯದೊಂದಿಗೆ ದನಿಗೂಡಿಸುತ್ತಾ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಕಾವ್ಯನಾಮ ''ಶ್ರೀನಿವಾಸ'' ಅಂಕಿತದಲ್ಲಿಯೇ ಗ್ರಂಥ ಸಂಪಾದಿಸಿ ಅವರಿಗೆ ಅರ್ಪಿಸುವ ಬಹು ವರುಷಗಳ ಕನ್ನಡಿಗರ ಅನ್ನಿಸಿಕೆ ನೆರವೇರುತ್ತಿರುವುದು ಸಂತಸದ ಸಂಗತಿ.

---

* ವಿವರಕ್ಕೆ ಪುಟ ೪೩೭ 'ಸಂಪಾದಕೀಯ'

** ಗಂಗೋತ್ರಿ (೧೯೭೦) ಸಂಪಾದಕೀಯ

೩

ಕನ್ನಡ ಸಾಹಿತ್ಯದಲ್ಲಿ ಮಾಸ್ತಿಯವರ ಸೃಷ್ಟಿ ಎಷ್ಟು ವಿಸ್ತಾರವೋ, ಎಷ್ಟು ವಿವಿಧವೋ ಅಷ್ಟೇ ಮಟ್ಟಿನ ಗುಣಮಟ್ಟದ್ದು ಕೂಡ. ಇವರ ರಚನೆಯಿಂದ ಕನ್ನಡ ಸಾಹಿತ್ಯ ಶ್ರೀಮಂತವಾಗಿದೆ. ಕಥೆ, ಕಾದಂಬರಿ, ಕವಿತೆ, ನಾಟಕ, ವಿಮರ್ಶೆ, ಜೀವನಚರಿತ್ರೆ, ಸಂಪಾದಕೀಯ, ಅನುವಾದ ಹೀಗೆ ನಾನಾ ತೆರನಾಗಿ ಸಾಹಿತ್ಯದ ಎಲ್ಲ ವಿಭಾಗದಲ್ಲಿಯೂ ಏಕ ಪ್ರಕಾರವಾದ ಸಾಧನೆ, ಯಶಸ್ಸು, ಸಾರ್ಥಕತೆ ಪಡೆದವರು ಲೋಕದ ಯಾವುದೇ ಸಾಹಿತ್ಯ ಚರಿತೆಯಲ್ಲಿ ವಿರಳ. ಈ ಭಾಗ್ಯ ಕನ್ನಡ ನುಡಿಯ, ನಾಡಿನ ಸ್ವತ್ತಾಗಿರುವುದು ಕನ್ನಡಿಗರ ಪುಣ್ಯ ವಿಶೇಷ.

ಮಾಸ್ತಿಯವರು ಕನ್ನಡ ಸಾಹಿತ್ಯದಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಾದರೂ, ಅವರ ಹೆಸರನ್ನು ಸಣ್ಣ ಕಥೆಗಳ ಸೀಮಾ ವ್ಯಕ್ತಿ ಎಂಬ ವಿಶೇಷಣದೊಂದಿಗೆ ಅಂಟುಹಾಕುವುದು ನಮ್ಮಲ್ಲಿ ಸಾಮಾನ್ಯವಾಗಿದೆ. ಪ್ರಾಯಶಃ ಸಮಕಾಲೀನ ವಿಮರ್ಶೆಯ ಉಪಾಧಿಗಳಲ್ಲಿ ಇದು ಒಂದೋ ಎಂಬ ಅನುಮಾನ ನನಗುಂಟು. ಅದು ಏನೇ ಇರಲಿ, ಅವರ ಸಾಹಿತ್ಯ ಸೃಷ್ಟಿಯ ಇತರ ಪ್ರಕಾರಗಳಲ್ಲಿಯೂ ಇಷ್ಟೇ ಮಟ್ಟಿನ ಪರಿಣತ, ಸಿದ್ಧಿ ಪಡೆದವರು, ಹೊಸ ಹಾದಿಯನ್ನು ಹುಟ್ಟು ಹಾಕಿದವರು ಮೇಲ್ಪಂಕ್ತಿಯಾದವರು ಎಂದು ಅವರ ರಸಸೃಷ್ಟಿಯನ್ನು ವಿಮರ್ಶಾತ್ಮಕವಾಗಿ ಅವಲೋಕಿಸಿದವರು ಒಪ್ಪಿಕೊಳ್ಳುವಂಥದು.

ಯಾವ ವ್ಯಕ್ತಿಯನ್ನಾಗಲಿ, ಸಾಹಿತ್ಯ ರಚನೆಯನ್ನಾಗಲಿ ವಿನಾಕಾರಣ ಹೊಗಳುವುದರಿಂದ ಸಾಹಿತ್ಯಕ್ಕೆ ಭಾಷೆಗೆ ಅಪಚಾರವೆಸಗಿದಂತೆ. ಹೀಗೆ ಮಾಡುವುದರಿಂದ ಸಾಹಿತ್ಯದ ಪರಿಧಿ ಸಂಕುಚಿತವಾಗುತ್ತದೆ, ನಿರ್ಬಲವಾಗುತ್ತದೆ. ಅತಿಶಯೋಕ್ತಿಗಳಿಂದ ವಿಮರ್ಶೆಯಿಂದ ಆಗಬೇಕಾದದ್ದು ಆಗದೆ ವಿಮರ್ಶೆ ನಿರರ್ಥಕವಾಗುವ ಸಂಭವವೇ ಹೆಚ್ಚು. ಸಮಕಾಲೀನತೆಯ ಪ್ರಭಾವದಿಂದ ಆಗಿನ ಜನ ಒಪ್ಪಿಯಾರು. ಆದರೆ ಯಾರು ಏನೇ ಹೇಳಲಿ ವ್ಯಕ್ತಿ ಅಥವಾ ಸಾಹಿತ್ಯ ರಚನೆ ಉಳಿಯಬೇಕಾದರೆ - ಬೆಳೆಯಬೇಕಾದರೆ ಕೃತಿನಿಷ್ಠ ವಿಮರ್ಶೆ ಅಗತ್ಯ. ಪೂರ್ವಗ್ರಹವಿಲ್ಲದ ಕೃತಿನಿಷ್ಠ ವಿಮರ್ಶೆ ಸಾಹಿತ್ಯವನ್ನು ಉಳಿಸುವುದರೊಂದಿಗೆ ಬೆಳೆಸುತ್ತದೆ. ಕೃತಿಯನ್ನು ಸಕಾರಣವಾಗಿ ಅರ್ಥೈಸಿದಾಗ ಈ ಪ್ರಯತ್ನ ಸಫಲವಾಗುತ್ತದೆ.

ಸಹಸ್ರ ಸಹಸ್ರ ಪುಟಗಳ ಮಾಸ್ತಿ ಸಾಹಿತ್ಯ ರಚನೆಯನ್ನು ಯಾವ ಅಳತೆಗೋಲಿನಿಂದ ಅಳೆಯುವುದು? ಪದಲಾಲಿತ್ಯದಿಂದ ಸುಲಲಿತವಾಗಿ ನಿರರ್ಗಳವಾಗಿ ಅರ್ಥವತ್ತಾಗಿ ಸೃಷ್ಟಿಗೊಂಡ ಅವರ ವೈಚಾರಿಕ ಪ್ರಜ್ಞೆ ಯಾವ ಕಾರಣದಿಂದ ನಮ್ಮ ಸಾಹಿತ್ಯದಲ್ಲಿ ಮನ್ನಣೆ ದೊರಕಿಸಿಕೊಂಡಿದೆ ಎಂದು ವಿವರಿಸುವ ಪ್ರಯತ್ನವನ್ನು ಈ ಗ್ರಂಥದಲ್ಲಿ ಮಾಡಿದೆ. ಇದು ಪ್ರಯತ್ನ; ಪರಿಪೂರ್ಣತೆಯಲ್ಲ. ಸಾಹಿತ್ಯ ವಿಷಯದಲ್ಲಿ ಕಡೆಯ ತೀರ್ಮಾನ ಕೊಡುವಂತಹ ಪ್ರವೃತ್ತಿ ಸಲ್ಲದೆನ್ನುತ್ತಾರೆ. ಕಾಲ ಹೊಸ ದೃಷ್ಟಿಯನ್ನೂ ಮೌಲ್ಯವನ್ನೂ ರೂಪಿಸುತ್ತಾ ಹೋಗುತ್ತದೆ.

ಆದರೆ ಮಾಸ್ತಿ ಸಾಹಿತ್ಯ ಸೃಷ್ಟಿಯ ಘಟ್ಟ ಘಟ್ಟವನ್ನು ಸೃಷ್ಟಿ ಚೇತನವನ್ನು ಅದರ ವಿವಿಧ ರೂಪವನ್ನು ನಾನಾ ದೃಷ್ಟಿಕೋನಗಳಿಂದ ಅರ್ಥೈಸಲು ಇಲ್ಲಿ ಪ್ರಯತ್ನಿಸಲಾಗಿದೆ. ಅವರ ಎಲ್ಲ ಕೃತಿ ರಚನೆಯನ್ನೂ ಒಳಪಡಿಸಲು ಇಲ್ಲಿ ಪ್ರಾಮಾಣಿಕವಾದ ಪ್ರಯತ್ನ ಮಾಡಲಾಗಿದೆ. ಇಷ್ಟಾದರೂ ಅನಿವಾರ್ಯ ಕಾರಣಗಳಿಂದಾಗಿ ಜನಪದ ಸಾಹಿತ್ಯ ಭಾಗವನ್ನು ಸೇರಿಸಲಾಗಿಲ್ಲ.

ಒಬ್ಬ ವ್ಯಕ್ತಿಗೆ ರಚನೆಗೆ ಇಷ್ಟೊಂದು ಪ್ರಾಮುಖ್ಯ ಹೇಗೆ, ಏಕೆ ಎಂಬ ಸಂದೇಹ ಕೆಲವರಿಗೆ ಮೂಡಿದರೂ ಮೂಡಬಹುದು. ಅಂಥವರಿಗಾಗಿ ಈ ನುಡಿ. ಒಬ್ಬನ ರಚನೆಯಿಂದ ಸಾಹಿತ್ಯ ಪ್ರಬುದ್ಧಾವಸ್ಥೆಗೇರಿದಾಗ; ಇತರರ ಕೃತಿ ರಚನೆಗೆ ಅಂತಃಚೇತನ ಬಲಗೊಂಡಾಗ ಅದರ ಮೌಲ್ಯಮಾಪನದ ಪ್ರಯತ್ನ ಅಗತ್ಯ. ಈ ಮಟ್ಟಿಗಾದರೂ ಪ್ರಾಮಾಣಿಕತೆ ಬೇಕೇಬೇಕು. ಇಲ್ಲಿಯ ವಿಮರ್ಶಕರು ತಮ್ಮ ತಮ್ಮ ಅನುಭವಗಳನ್ನು, ಆಲೋಚನೆಗಳನ್ನು, ಪ್ರಜ್ಞೆಯನ್ನು, ಪ್ರಾಮಾಣಿಕವಾಗಿ ಔಚಿತ್ಯದಿಂದ ಸಮರ್ಥಿಸಿರುವುದು, ಮಾಸ್ತಿಯವರ ಸಾಹಿತ್ಯ ಸೃಷ್ಟಿಯ ಮೌಲ್ಯಮಾಪನಕ್ಕೂ, ಬರೆದವರ ಕೃತಜ್ಞತಾ ಭಾವನೆಗೂ ನಿದರ್ಶನವಾಗಿದೆ.

ಒಬ್ಬ ಸಾಹಿತಿಯ ಎಲ್ಲ ರಚನೆಯನ್ನು ಸಮೀಕ್ಷಿಸುವ ವಿಸ್ತಾರ ಪ್ರಯತ್ನ ಪ್ರಾಯಶಃ ಕನ್ನಡದಲ್ಲಿ ಇದೇ ಕಾಲದಲ್ಲಿಯೇ ಮೊದಲಾದದ್ದು. ಈ ಮಟ್ಟಿಗೆ ಎಷ್ಟು ಮಟ್ಟಿನ ಸಫಲತೆ 'ಶ್ರೀನಿವಾಸ' ಗ್ರಂಥಕ್ಕೆ ಲಭಿಸಿದೆ ಎಂದು ಬಲ್ಲವರು ನಿಷ್ಕರ್ಷಿಸಬೇಕು. ಒಂದು ಮಾತಂತು ನಿಜ. ಮಾಸ್ತಿ ಅವರನ್ನು ಅವರ ರಚನೆಯನ್ನು, ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಅವರ ಪ್ರಭಾವವನ್ನು ತಿಳಿಯಬೇಕೆಂದವರಿಗೆ ಅಭ್ಯಾಸಿಸಬೇಕೆಂದವರಿಗೆ ಇದು ನೆರವಾಗುತ್ತದೆಯೆಂದು ನಂಬಿದ್ದೇನೆ.

೪

ಸಾಹಿತ್ಯ ಸೃಷ್ಟಿಯೊಂದಿಗೆ ನಾಡಿನ ಸಾಂಸ್ಕೃತಿಕ ಜೀವನವನ್ನು ರೂಪಿಸುವಲ್ಲಿಯೂ ಸಹ ಮಾಸ್ತಿಯವರ ಸೇವೆ ಗಣ್ಯವಾದುದು. ಸಾಹಿತ್ಯ ಪರಿಷತ್ತಿನ ಸೂತ್ರಧಾರರಾಗಿ ನಾಡಿನಾದ್ಯಂತ ಸಂಚಾರ ಮಾಡಿ ಕನ್ನಡ ಜನರ ಮನೋಧರ್ಮ ಎಂಥದು, ಅವರನ್ನು ಭಾಷೆಯ ಉತ್ಕರ್ಷ ಸಾಧನೆಯ ಒಂದು ಸೂತ್ರಕ್ಕೆ ಹೇಗೆ ರೂಪಿಸಿಕೊಳ್ಳಬೇಕು ಎಂದು ಮನಗಂಡು ತನ್ಮಯ ಭಾವದಿಂದ ಕಾರ್ಯ ಪ್ರವೃತ್ತರಾದವರು.

> ''ನಮ್ಮ ಸಂಪ್ರದಾಯ ದೊಡ್ಡದು. ಅದು ಹಿಂದಿನ ಕಾಲಕ್ಕೆ ಎತ್ತರವಾದ ಮಟ್ಟವನ್ನುಮುಟ್ಟಿತ್ತು. ಆ ಸ್ಥಿತಿಗೆ ಮತ್ತೆ ಏರುವಂಥಾಗ ಬೇಕು. ಸತ್ಯವಂತಿಕೆ, ದೊಡ್ಡತನ, ಸ್ಥಿರತೆ, ಅಭಿಮಾನ ನಿತ್ಯ ಜೀವನದಲ್ಲಿ ಒಂದುಗೂಡಬೇಕು.''

ಎನ್ನುವ ಶ್ರೀ ಮಾಸ್ತಿ ಅವರು ಜನರ ಮನಸ್ಸನ್ನೂ ಒಲವನ್ನೂ ಅತ್ತ ರೂಪಿಸಲು ಸರ್ವದಾ ಪ್ರಯತ್ನ ಮಾಡುತ್ತಲೇ ಬಂದಿದ್ದಾರೆ. ಅವರ ಭಾಷಣಗಳಲ್ಲಿ, ಇಪ್ಪತ್ತೈದು ವರ್ಷಗಳಷ್ಟು ಕಾಲ ನಡೆಸಿದ 'ಜೀವನ' ಪತ್ರಿಕೆಯ ಸಂಪಾದಕೀಯದಲ್ಲಿ, ಲೇಖನಗಳಲ್ಲಿ ಹೇಳುತ್ತಲೇ ಬಂದಿದ್ದಾರೆ. ಕೃತಿಯಲ್ಲಿ ಮಾಡಿ ತೋರಿಸಿದ್ದಾರೆ.

ಮಾಸ್ತಿ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಸಾಹಿತಿಗಳಿಗೆ ಪ್ರೋತ್ಸಾಹ ಉದಾರತೆ ತೋರುವುದರೊಂದಿಗೆ ಅವರ ಮೂಲಕ ಸಾಹಿತ್ಯ ಸಿರಿ ಹೆಚ್ಚಲು ಕಾರಣರಾಗಿದ್ದಾರೆ. ಅವರ ಸಹೃದಯತೆ ಉದಾರತೆ ಸಾಹಿತಿಗಷ್ಟೇ ಅಲ್ಲದೆ ಸಮಾಜದ ಇತರ ಜನರಿಗೂ ಪರಿಚಯವಾಗಿದೆ. ಅವುಗಳ ಪ್ರಸ್ತಾಪ ಶ್ರೀ ಮಾಸ್ತಿ ಅವರಿಗೆ, ಅವರಂಥ ಮನೋಧರ್ಮವುಳ್ಳವರಿಗೆ ಅಗತ್ಯ ಕಾಣದೆ ಹೋಗಬಹುದು. ನಾಡಿನ ಜನಕ್ಕೆ ಈ ಅಂತರ್ಯದ ವಿಚಾರ ತಿಳಿಯುವುದು ಒಳಿತು. ಮೂಲತಃ ಇದು ವ್ಯಕ್ತಿ ವ್ಯಕ್ತಿ ಸಂಬಂಧವೆಂದು ಕಂಡರೂ, ಮಾನವೀಯತೆಯ ಒಂದು ಮೂಲ ಸ್ವರೂಪ ಅದು ಎಂಬುದನ್ನು

ಮರೆಯುವಂತಿಲ್ಲ. ಅವುಗಳ ಪ್ರಸ್ತಾಪದಿಂದ ಈ ತತ್ವ ಬಲಗೊಳ್ಳಬಹುದು. ಹಾಗಾಗಿ ಈ ಸಂಪುಟದ ಮೂರನೆಯ ಭಾಗದಲ್ಲಿ ಅಂತಃಕರಣದ ಮಾತುಗಳಿವೆ. ಸ್ಥಳಾಭಾವದಿಂದ ಬಂದ ಎಲ್ಲ ಮಾತುಗಳನ್ನು ಅಚ್ಚು ಹಾಕದೆ ಉಳಿಸಿದುದಕ್ಕೆ ಅವರೆಲ್ಲರ ಕ್ಷಮೆ ಬೇಡುತ್ತಿದ್ದೇನೆ.

೫

ಕೆಲವು ವರ್ಷಗಳ ಹಿಂದೆಯೇ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರಿಗೆ ಸಂಭಾವನಾ ಗ್ರಂಥವೊಂದನ್ನು ಅರ್ಪಿಸಬೇಕೆಂದು ನಮ್ಮ ಹಿರಿಯ ಲೇಖಕರು ಪ್ರಯತ್ನಿಸಿದ್ದುಂಟು. ಆದರೆ ಇದು ಕಾರ್ಯರೂಪಕ್ಕೆ ಬಾರದೇ ಹೋಯಿತು. ಈ ಘಟನೆಯಿಂದ ಮನಸ್ಸಿಗೆ ಬಹಳ ಬೇಸರದೊಂದಿಗೆ, ಒಂದು ನಿರ್ಧಾರವೂ ನನಗೆ ಮೂಡಿತು. ಆ ನಿರ್ಧಾರ ಇಂದು ಸಾರ್ಥಕವಾಗುತ್ತಿರುವುದು ಸಮಾಧಾನದ ಸಂಗತಿ.

ಈ ಪ್ರಯತ್ನದಲ್ಲಿ ನಮ್ಮ ಎಲ್ಲಾ ಲೇಖಕರೂ, ಪ್ರಕಾಶಕರೂ, ಆತ್ಮೀಯವಾಗಿ ಸಹೃದಯತೆಯಿಂದ ಸಹಕರಿಸಿದ್ದಾರೆ. ಅವರಿಗೆಲ್ಲಾ ಕೃತಜ್ಞತಾ ಪೂರ್ವಕ ಪ್ರಣಾಮಗಳು. ಗ್ರಂಥ ಸಂಪಾದಿಸುವಲ್ಲಿ ಒತ್ತಾಸೆಯಾಗಿ ನಿಂತು ಸಲಹೆಗಳನ್ನಿತ್ತ ಹಿರಿಯರಾದ ತಿ.ತಾ. ಶರ್ಮ ಅವರಿಗೂ, ಪ್ರತ್ಯಕ್ಷವಾಗಿ ಪರೋಕ್ಷವಾಗಿ ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ನಮನಗಳು.

೬

ಈ ಮುನ್ನುಡಿಯನ್ನು ಮುಗಿಸುವಲ್ಲಿ ಮನಸ್ಸು ಒಂದು ರೀತಿಯಲ್ಲಿ ಹೊಯ್ದಾಡುತ್ತಿದೆ. ನಾಡನ್ನು ನುಡಿಯನ್ನು ಶ್ರೀಮಂತಗೊಳಿಸಿ 'ಕನ್ನಡದ ಆಸ್ತಿ' ಎಂಬ ಉಕ್ತಿಯಲ್ಲಿ ಬೆಳಗುತ್ತಿರುವ ನಮ್ಮ ಈ ಹಿರಿಯರಿಗೆ ಈ ಗ್ರಂಥ ಅನುರೂಪವಾಯಿತೇ, ತಕ್ಕದೆಂದೆನಿಸೀತೆ ಎಂಬ ಆತಂಕ ತಲೆದೋರುತ್ತಿದೆ.

ಇದು ಹೆಚ್ಚುವ ಮುನ್ನವೇ ಅವರ ಕೃತಿ 'ಶ್ರೀರಾಮ ಪಟ್ಟಾಭಿಷೇಕ'ದ ಮಂಗಳದ ನಾಲ್ಕು ಸಾಲುಗಳು ಆಯಾಚಿತವಾಗಿ ಮನಸ್ಸಿನಲ್ಲಿ ಮೂಡಿ ಒಂದು ರೀತಿಯ ಸಮಾಧಾನ ತರುತ್ತದೆ. ಆ ಸಾಲುಗಳನ್ನು ಉದ್ಧರಿಸಿ ಈ ಮಾತು ಮುಗಿಸುತ್ತಿದ್ದೇನೆ.

ತಂದೆ, ಈ ಲೋಕದಲ್ಲಿ ತಪ್ಪು ಮಾಡದ ಮನುಜ
ಒಬ್ಬನೂ ಇಲ್ಲ, ಎಲ್ಲರ ಕುರಿತು ಕರುಣೆಯೇ
ಯುಕ್ತ ವರ್ತನ ಎಂದ ತಾಯಿ ಜಾನಕಿ ದೇವಿ,
ನಿಮ್ಮ ಕನಿಕರದ ನುಡಿ ಜಗಕೆ ಅಕ್ಷಯ ಭಾಗ್ಯ.

೧೨-೬-೧೯೭೨ ಮಾವಿನಕೆರೆ ರಂಗನಾಥನ್

ಎರಡನೆಯ ಮುದ್ರಣ

ಮೊದಲ ಮುದ್ರಣ ಆಗಿ ಇಪ್ಪತ್ತು ವರುಷದ ನಂತರ ಈ ಗ್ರಂಥಕ್ಕೆ ಮರುಮುದ್ರಣ ಯೋಗ ಬಂದಿದೆ. ಅದೂ ಮಾಸ್ತಿ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ. ಒಳ್ಳೆಯದೇ. ಅಂದು ಮಾಸ್ತಿ ಅವರಿಗೆ ಗ್ರಂಥ ಅರ್ಪಿಸುವ ಭಾಗ್ಯ ನಮ್ಮದಿತ್ತು. ಇಂದು ಆ ಮಹಾಚೇತನ ನಮ್ಮನ್ನಗಲಿಯೇ ಐದು ವರ್ಷ ಸಂದಿದೆ. ಈ ಅಂತರದಲ್ಲಿ ಮಾಸ್ತಿ ಅವರು ರಚಿಸಿದ ಕೃತಿಗಳ ಸಂಖ್ಯೆ ಸುಮಾರು ೨೩. ಅವುಗಳಲ್ಲಿ ಬಹುತೇಕ ಕೃತಿಗಳ ಸಮೀಕ್ಷೆಯನ್ನು ಮಾಡಿಸಿ ಇದರಲ್ಲಿ ಅಳವಡಿಸಲಾಗಿದೆ. ಇದಕ್ಕೆ ಸಹಕರಿಸಿದ ಲೇಖಕ ಮಿತ್ರರಿಗೆ ನಾನು ಋಣಿ. ಅಂತೆಯೇ ಅಂತಃಕರಣ ವಿಭಾಗಕ್ಕೆ ಮಾಸ್ತಿ ಮಕ್ಕಳು, ಮೊಮ್ಮಕ್ಕಳು ಹಾಗೂ ಆಪ್ತ ಸ್ನೇಹಿತರು ಬರೆದ ಕೆಲವು ಲೇಖನಗಳ ಸೇರ್ಪಡೆಯೂ ಆಗಿದೆ.

ಈ ಮುದ್ರಣವನ್ನು ಪ್ರಕಟಿಸುತ್ತಿರುವ ಡಾ॥ ಮಾಸ್ತಿ ಶತಮಾನೋತ್ಸವದ ಅಧ್ಯಕ್ಷರಿಗೂ, ಸಮಿತಿಯ ಮಾನ್ಯ ಸದಸ್ಯರಿಗೂ ನಾನು ಕೃತಜ್ಞ. ಹಾಗೆಯೇ ಮುದ್ರಣದಲ್ಲಿ ಸಹಕರಿಸಿದ ಶ್ರೀ ಡಿ. ಸೋಮಶೇಖರ ಪಾಟೀಲ, ಶ್ರೀ ಬಿ. ರಘುರಾಮ ಶೆಣೈ, ಶ್ರೀ ಕೃಷ್ಣರಾವ್ ಅವರಿಗೆ ವಂದನೆಗಳು.

ಬೆಂಗಳೂರು
೬.೬.೧೯೯೨

ಮಾವಿನಕೆರೆ ರಂಗನಾಥನ್

ಪರಿವಿಡಿ

ಭಾಗ: ಒಂದು

ಜೀವನ ದರ್ಶನ

ಭಾಗ: ಎರಡು

ಸಾಹಿತ್ಯ ಸಮೀಕ್ಷೆ


ಇತರ ಕೃತಿಗಳು:

ಭಾಗ: ಮೂರು

ಅಂತಃಕರಣ

ಭಾಗ: ನಾಲ್ಕು


ಮಾಸ್ತಿ ಗ್ರಂಥಗಳು




ಡಾ। ಮಾಸ್ತಿ ವೆಂಕಟೇಶ ಅಯ್ಯಂಗಾರ್



ಮಾಸ್ತಿ ದಂಪತಿಗಳು





1. ಮಾಸ್ತಿ ಬರಹ

2. ಮಾಸ್ತಿ ಹಸ್ತಾಕ್ಷರ



ಮಾಸ್ತಿ ಅಧ್ಯಯನ ಇಲ್ಲಿ

ಭಾಗ : ಒಂದು

ಜೀವನ ದರ್ಶನ

ಧನ್ಯಜೀವಿ

ಡಾ|| ಡಿ.ವಿ. ಗುಂಡಪ್ಪ

ಭಗವಂತನು ಸಾಧು ಸಜ್ಜನರಿಗೆ ತೋರುವ ಅನುಗ್ರಹವು ಲೋಕಾನುಗ್ರಹನಾಗುತ್ತದೆ.

ನಮ್ಮ ಮಾಸ್ತಿ ವೆಂಕಟೇಶಯ್ಯಂಗಾರ್ಯರಿಗೆ ಭಗವಂತನು ಕರುಣಿಸಿರುವ ಸಂಪತ್ತನ್ನು ಅವರು ತಮ್ಮ ಜನತೆಗೆ ಹಂಚಿಕೊಡುತ್ತಿದ್ದಾರೆ. ಅದು ಲೋಕದಲ್ಲಿ ಶುಭವನ್ನೂ ಸಂತೋಷವನ್ನೂ ಹರಡುತ್ತಿದೆ.

ವೆಂಕಟೇಶಯ್ಯಂಗಾರ್ಯರು ಧನ್ಯಜೀವಿ. ಅವರು ಚಿರಂಜೀವಿಯಾಗಿರುವಂತೆ ಭಗವಂತನು ಕೃಪೆ ಮಾಡಲಿ.

ಈ ಭಾಗ್ಯವನ್ನು ಕಂಡುಕೊಳ್ಳುವ ದೃಷ್ಟಿಶಕ್ತಿಯನ್ನೂ ಅದರ ಸವಿ-ಕಾಂತಿಗಳನ್ನು ಅನುಭವಿಸುವ ಅಂತರಂಗ ಪರಿಷ್ಕಾರವನ್ನೂ ನಮ್ಮ ಜನಕ್ಕೆ ಭಗವಂತನು ದಯಪಾಡಿ ಕೊಡಲಿ.

ಜೀವನ ದರ್ಶನ

ತಿ. ತಾ. ಶರ್ಮ

ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರವರು 'ಪೆರಿಯಾತ್' ಅಂದರೆ 'ದೊಡ್ಡಮನೆ'ಯವರು. ಈ ಹೆಸರೇ ಅವರ ಮನೆತನದ ಹಿರಿತನವನ್ನು ಸೂಚಿಸುತ್ತದೆ. ಈ ಮನೆತನದ ಇತಿಹಾಸ ಕುರಿತು ಎರಡು ಸಂದರ್ಭಗಳನ್ನು ಮಾಸ್ತಿಯವರು ಕೊಡುತ್ತಾರೆ. ಮುನ್ನೂರು ವರ್ಷಗಳ ಹಿಂದಿನ ಮಾತು:

ಅವರ ಗ್ರಾಮದ ಸುತ್ತ ಒಬ್ಬ ಮುಸಲ್ಮಾನ ಅಧಿಕಾರಿ. ಊರಿನ ಜನ ಅವನನ್ನು 'ಸುಲ್ತಾನ' ಎಂದು ಕರೆಯುತ್ತಿದ್ದರು. ಮಾಸ್ತಿಯವರ ಮನೆತನದ ಹಿರಿಯರೊಬ್ಬರು ಆ ಸುಲ್ತಾನನಿಗೆ ದಿವಾನರು; ಅವರ ಹೆಸರು ಲಕ್ಷ್ಮಯ್ಯ. ಅವರು ಸುತ್ತ ಹತ್ತು ಗ್ರಾಮಗಳಿಗೆ ತಮ್ಮ ನೆಂಟರಿಷ್ಟರನ್ನು ಕರಣೀಕರನ್ನಾಗಿ ನೇಮಿಸಿದರೆಂದು ದಿವಾನರ ಮೇಲೆ ಸುಲ್ತಾನರಿಗೆ ಅಸಮಾಧಾನ. ಈ ಅಸಮಾಧಾನ ಬೆಳೆಯಿತು. ಸುಲ್ತಾನರಿಗೆ ದಿವಾನರನ್ನು ಮುಗಿಸಿಬಿಡಬೇಕೆಂಬ ದುರ್ಬುದ್ಧಿ ಹುಟ್ಟಿತು. ಒಂದು ದಿನ ಸುಲ್ತಾನ ಮನೆಗೆ ಬಂದ ದಿವಾನರನ್ನು ''ಸ್ವಲ್ಪ ಹಾಲು ತೆಗೆದುಕೊಳ್ಳಿ'' ಅಂದ. ''ಉಣ್ಣುತ್ತಿರುವುದೆಲ್ಲ ನಿಮ್ಮ ಅನ್ನವೇ, ಅದನ್ನು ಎಲ್ಲಿ ತೆಗೆದುಕೊಂಡರೇನು'' ಅಂದು ಲಕ್ಷ್ಮಯ್ಯ ಉಪಾಯದಿಂದ ತಪ್ಪಿಸಿಕೊಂಡರು. ಎಂದಿದ್ದರೂ ಈ ಅಪಾಯ ತಪ್ಪಿದ್ದಲ್ಲ ಎಂದು ಅವರಿಗೆ ಖಚಿತವಾಯಿತು. ಒಂದು ದಿನ ಅವರು ಸುಲ್ತಾನನ ಮನೆಗೆ ಹೋದರು; ಕೊಟ್ಟ ಹಾಲನ್ನು ಕುಡಿದರು. ಜೀವಂತರಾಗಿ ಮನೆಗೆ ಹಿಂತಿರುಗಲಿಲ್ಲ.

ಈ ಮನೆತನದಲ್ಲಿ ವೆಂಕಟಕೃಷ್ಣಯ್ಯ ಎಂಬವರೊಬ್ಬರು ಸಮೀಪಗ್ರಾಮದ ಹೆಣ್ಣುಮಗಳನ್ನು ತಂದು ಅವರಿಗೆ ಮದುವೆ ಮಾಡಿದ್ದರು. ಅತ್ತೆ ಸೊಸೆ ಜಗಳ ಮೊದಲಾಯಿತು. ಸೊಸೆಯ ಬಾಳು ಕಷ್ಟವಾಯಿತು. ಗಂಡ ತೀರಿಕೊಂಡ. ಆಕೆ ಗಂಡನೊಂದಿಗೆ ಸಹಗಮನ ಮಾಡಿದಳು! ಮಹಾಸತಿಯಾದಳು! ಆ ಊರಿಗೇ 'ಮಾಸ್ತಿ' ಎಂದು ಹೆಸರಾಯಿತು.

ಮಾಸ್ತಿಯವರ ಮುತ್ತಾತ ರಾಯಪ್ಪ. ಇವರೇ ಮಾಸ್ತಿಯವರಿಗೆ ''ಕುದುರೆ, ಕಂಠೀರಾಯಿ ಹಣ, ತುಪಾಕಿ, ಇವುಗಳ ನೆನಪಿನ ವಿಜೃಂಭಣೆಯ ಮುತ್ತಾತ!'' ಚೆನ್ನಾಗಿ ಪುಣ್ಯವಂತರಾಗಿ ಬಾಳಿದ್ದ ಮನೆತನ ಮಾಸ್ತಿಯವರ ತಾತಂದಿರ ಕಾಲಕ್ಕೆ ''ಸಾಮಾನ್ಯ ಸ್ಥಿತಿಗೆ ಬಂದಿತ್ತು. ಬಡತನವಲ್ಲ, ಅಂದರೆ ಪುಣ್ಯವಂತಿಕೆಯೂ ಅಲ್ಲ''. ತಂದೆಯವರ ಕಾಲಕ್ಕೆ ''ಮನೆತನ ಬಡತನವೇ ಆಯಿತು''. ಹದಿನೆಂಟು ವಯಸ್ಸಾಗಿ ಶಾನುಭೋಗಿಕೆ ಪಡೆಯಲು ಪಡಬಾರದ ಕಷ್ಟಪಟ್ಟರು. ಆದರೂ ವಿರೋಧಿಗಳ ಉಪಕಾರದಿಂದ ಅದು ಕೈಬಿಟ್ಟು ಹೋದಾಗ, ಮಗನ ಹೆಸರಿಗಾದರೂ ಮಾಡಿಸೋಣವೆಂದು ಅವರು ಪ್ರಯತ್ನ ಮಾಡುತ್ತಿರುವಾಗ ಆ ಮಗುವೂ ತೀರಿಕೊಳ್ಳಬೇಕೆ?

''ಆ ವೇಳೆಗೆ ನಾನು ಹುಟ್ಟಿದೆ. ಶಾನುಭೋಗಿಕೆ ನನ್ನ ಹೆಸರಿಗೆ ಆಯಿತು. ಲೆಕ್ಕದಲ್ಲಿ ಹೆಚ್ಚುಕಡಿಮೆ ಆಗಿದ್ದ ಹಣವನ್ನು ಸರಕಾರಕ್ಕೆ ಕೊಡುವುದಕ್ಕಾಗಿ ನಮ್ಮ ತಂದೆ ಒಬ್ಬ ಬಂಧುವಿನಿಂದ, ಸ್ವಲ್ಪ ಹಣ ಸಹಾಯ ಪಡೆದರು. ಮನೆಯ ವರಮಾನ ಮತ್ತಷ್ಟು ಕಡಿಮೆಯಾಯಿತು. ಹೀಗೆ ನಾನು ಹುಟ್ಟಿದ ಸಮಯಕ್ಕೆ ಸರಿಯಾಗಿ ನಮ್ಮ ತಂದೆ ತಮ್ಮ ಅಧಿಕಾರವನ್ನು ಕಳೆದುಕೊಂಡರು. ನನ್ನ ಅಣ್ಣ ಒಬ್ಬ ತೀರಿಕೊಂಡ. ನಮ್ಮ ಮನೆತನ ಎಂದೂ ಕಾಣದ ಒಂದು ಮಟ್ಟದ ಬಡತನವನ್ನು ಮುಟ್ಟಿತು. ಹಳಬರ ಮಾತಿನಲ್ಲಿ ಹೇಳುವುದಾದರೆ ನನ್ನ ಜನ್ಮನಕ್ಷತ್ರ ಮನೆತನಕ್ಕೆ ಅಷ್ಟು ಒಳ್ಳೆಯದಲ್ಲವಾಯಿತು'' ಅನ್ನುತ್ತಾರೆ ಮಾಸ್ತಿಯವರು.

ಈ ಮಾತು 'ಸರಿಯಲ್ಲ' ಅನ್ನಿಸುತ್ತದೆ ನನಗೆ; ನನ್ನಂತೆಯೇ ಇನ್ನೂ ಹಲವರಿಗೆ. ಮಾಸ್ತಿಯವರು ತಮ್ಮ ಮನೆತನಕ್ಕೆ ಮಾತ್ರವಲ್ಲ, ಮಾಸ್ತಿ ಗ್ರಾಮಕ್ಕೆ ಮಾತ್ರವಲ್ಲ, ಕರ್ನಾಟಕ ದೇಶಕ್ಕೆ ಮಾತ್ರವಲ್ಲ, ಇಡೀ ಭರತಖಂಡಕ್ಕೇ ಕೀರ್ತಿಯನ್ನು ತಂದಿದ್ದಾರೆ. ಅವರ ಜನ್ಮನಕ್ಷತ್ರ ಬಹಳ ಒಳ್ಳೆಯದ್ದಾಗಿರಬೇಕು.

೨

ಏಕಾದಶಿಯ ದಿನ ಹುಡುಗರು ಪೇಟೆಯ ಶೆಟ್ಟರ ಮನೆಗಳಿಗೆ ಹೋಗಿ ದಕ್ಷಿಣೆ ಕಾಸು ತರುತ್ತಿದ್ದರು. ಮಾಸ್ತಿಯವರು ಆ ಹುಡುಗರ ಜೊತೆ ಸೇರಿ ಹೋದರು. ಒಂದು ಮನೆಯ ಯಜಮಾನ ಎಲ್ಲರಿಗೂ ಕಾಸು ಕೊಟ್ಟ; ಮಾಸ್ತಿಯವರಿಗೆ ಕೊಡಲಿಲ್ಲ. 'ಈ ಹುಡುಗನಿಗೆ ಕೊಟ್ಟಿಲ್ಲ' ಎಂದು ಯಾರೋ ಅಂದರು. ಆ ಯಜಮಾನ ''ಅಯ್ಯೋ! ಅವರ ಮನೆಯವರಿಗೆ ದಕ್ಷಿಣೆ ಕೊಟ್ರ್ಯೋರುಂಟೆ?'' ಅಂದರು! ಹುಡುಗ ಮಾಸ್ತಿಗೆ ಅಸಮಾಧಾನವಾಯಿತು. ಮನೆಗೆ ಬಂದು ನಡೆದದ್ದನ್ನೆಲ್ಲ ತಾಯಿಗೆ ಹೇಳಿದರು. ಹತ್ತಿರವಿದ್ದವರೊಬ್ಬರು,

''ದೊಡ್ಡಮನೆ ಹುಡುಗನಿಗೆ ದಕ್ಷಿಣೆ ಕೊಟ್ಟರೆ ಮನೆ ಮರ್ಯಾದೆಗೆ ಕಡಿಮೆ. ಆದ್ದರಿಂದ ಏಕಾದಶಿ ಕಾಸು ಕೊಡುವುದಿಲ್ಲ'' ಅಂದರು. ಈ ಸಂದರ್ಭದ ಮಾತನ್ನೆತ್ತಿ ಮಾಸ್ತಿಯವರು,

''ಬಡತನದ ಅಡಸಿದರೂ ದೊಡ್ಡಮನೆಯ ಮರ್ಯಾದೆ ನಡೆಸಬೇಕು ಎಂಬ ಈ ಜನರ ಭಾವನೆ ತುಂಬ ಆತ್ಮಗೌರವಕ್ಕೆ ಕಾರಣ ಆಯಿತು. ನಾವು ಬಡವರು ಸರಿ. ಇದ್ದೂ ನಮ್ಮ ಮನೆತನ ದೊಡ್ಡದು ಎಂಬ ಕೆಚ್ಚು, ಆಮೇಲೆ ನನ್ನ ಬಡತನದ ದಿನದಲ್ಲಿ ನನ್ನ ನಡೆತೆಗೆ ಊರೆಯಾಗಿ ನಿಂತಿತು'' ಅನ್ನುತ್ತಾರೆ.

ಮೊದಲು ಯಲದೂರಿನ ಶಾಲಾ ಪ್ರವೇಶ ಮಾಡಿ ಅನಂತರ ಮಾಸ್ತಿಯವರು ಹೊಂಗೇನಹಳ್ಳಿಗೆ, ತಾತನ ಮನೆಗೆ (ತಾಯಿಯ ತಂದೆ) ಹೋದರು. ಆ ಸಂದರ್ಭ ಚಿತ್ತಾಕರ್ಷಕವಾಗಿದೆ. ಮಾಸ್ತಿಯಲ್ಲಿ ಪ್ಲೇಗು. ಊರಿನವರೆಲ್ಲ ಗುಡಿಸಲುಗಳಲ್ಲಿದ್ದರು. ಅಲ್ಲಿಗೆ ಮಗಳನ್ನು ನೋಡಲು ತಾತಂದಿರು ಬಂದರು. ಮೊಮ್ಮಗನನ್ನು ನೋಡಿದರು:

''ನೋಡಮ್ಮ ನೀವು ಗುಡಿಸಲಲ್ಲಿ ಇದ್ದುಕೊಂಡು ಈ ಹುಡುಗ ಪಾಠ ಇಲ್ಲದೆ ಕುಳಿತಿದ್ದಾನೆ. ಪಾಠ ಇದ್ದರೂ ನಿಮ್ಮ ಈ ಊರಿನ ಶಾಲೆಯಲ್ಲಿ ಸರಿಯಾದ

> ಉಪಾಧ್ಯಾಯ ಇಲ್ಲ. ನಿನ್ನ ಮಗ ನಿಮ್ಮ ಬೀದಿಗೆ ಇತರ ಹತ್ತು ಹುಡುಗರೊಡನೆ ತಿಥಿದಿನದ ವಡೆಗಳನ್ನು ತಿಂದುಕೊಂಡು ದಡ್ಡನಾಗಿ ಬೆಳೆಯುತ್ತಾನೆ. ನೀನು ಮನಸ್ಸುಮಾಡು; ನಿನ್ನ ಗಂಡನಿಗೆ ಹೇಳು. ಇವನನ್ನು ನನ್ನ ಜೊತೆಗೆ ಕಳುಹಿಸು. ಶಿವಾರಪಟ್ಟಣದ ಶಾಲೆಯಲ್ಲಿ ಒಳ್ಳೆ ಉಪಾಧ್ಯಾಯರಿದ್ದಾರೆ. ಈ ಸಹವಾಸವಿರುವುದಿಲ್ಲ''

ಎಂಬುದಾಗಿ ಹೇಳಿದರು; ಮಗಳನ್ನೂ, ಅಳಿಯನನ್ನೂ ಒಪ್ಪಿಸಿದರು. ಮೊಮ್ಮಗನನ್ನು ತಾತ ತಮ್ಮೂರಿಗೆ ಕರೆದೊಯ್ದರು.

> ''ಮಾಸ್ತಿಯನ್ನು ಬಿಟ್ಟು ಹೊಂಗೇನಹಳ್ಳಿಗೆ ಬಂದದ್ದು ನನ್ನ ಬಾಳಿನ ಬಹುಮುಖ್ಯವಾದ ಒಂದು ಘಟ್ಟ. ಬೆಳೆದ ಮೇಲೆ ದಾರಿಯನ್ನು ಹಿಂತಿರುಗಿ ನೋಡಿದಾಗ ಇದು ನನಗೆ ಮಂದಟ್ಟಾಯಿತು''

ಅನ್ನುತ್ತಾರೆ ಮಾಸ್ತಿಯವರು. ಮಾಸ್ತಿಯವರ ಅಜ್ಜಿ ಲಕ್ಷ್ಮಮ್ಮನವರೋ, ''ಮಗಳು ಬಡತನದಲ್ಲಿ ಸಿಕ್ಕಿದ್ದಾಳೆ. ಈ ಹುಡುಗನಿಗಾದರೂ ಹೊಟ್ಟೆ ತುಂಬ ಅನ್ನ ಹಾಕೋಣ.'' ಎಂದು ಆದಷ್ಟು ಅಕ್ಕರೆ ತೋರಿಸಿದರಂತೆ. ಹಾಗೆಂದು ಮಾಸ್ತಿಯವರು ಹೇಳುತ್ತಾರೆ. ಇಂತಹ ತಾತ, ಅಜ್ಜಿಯನ್ನು ಪಡೆದ ಮಾಸ್ತಿಯವರ ಧನ್ಯತೆ ಕುರಿತು ಎಷ್ಟು ಕೊಂಡಾಡಿದರೂ ಸಾಲದು. ತಾತ ಜ್ಞಾನದಾತ! ಅಜ್ಜಿ ಅನ್ನದಾತೆ!

ಮಾಸ್ತಿಯವರು ಶಿವಾರಪಟ್ಟಣದ ಶಾಲೆ ಸೇರಿದರು. ಹೊಂಗೇನಹಳ್ಳಿಯಿಂದ ಶಿವಾರಪಟ್ಟಣಕ್ಕೆ ಅಷ್ಟೇನೂ ದೂರವಲ್ಲ. ಶಾಲೆಯಲ್ಲಿ ಒಳ್ಳೆ ಉಪಾಧ್ಯಾಯರು. ಮನೆಯಲ್ಲಿ ಅಕ್ಕರೆಯಿಂದ ನೋಡಿಕೊಳ್ಳುವ ತಾತ, ಅಜ್ಜಿ.

> ''ಈ ಹುಡುಗ ಓದಿ ಜಾಣನಾಗುತ್ತಾನೆ. ಮನೆಯ ಬಡತನವನ್ನು ನೀಗುತ್ತಾನೆ''

ಎಂಬ ಆಸೆಯ ಮಾತು ತಾತನ ಬಾಯಿಂದ ಹೊರಡುತ್ತಿತ್ತಂತೆ.

> ''ಅವರ ಈ ಆಶೆಯೇ ನನ್ನ ಜೀವನವನ್ನೆಲ್ಲ ರೂಪಿಸಿತು. ಎಲ್ಲ ಹೊತ್ತಿನಲ್ಲಿಯೂ ತಾತ ಒಪ್ಪುವಂತೆ ನಡೆದುಕೊಳ್ಳಬೇಕು ಎನ್ನುವುದು ನನಗೆ ಒಂದು ಗುರಿಯಾಯಿತು.''

ಎಂದು ಮಾಸ್ತಿಯವರು ಹೇಳುವಾಗ ತಲೆದೂಗುವಂತಾಗುತ್ತದೆ.

ಶಿವಾರಪಟ್ಟಣದಿಂದ ಪರೀಕ್ಷೆಗಾಗಿ ಉಪಾಧ್ಯಾಯ ನಾರಣಪ್ಪನವರು ನಾಲ್ಕು ಮಂದಿ ವಿದ್ಯಾರ್ಥಿಗಳನ್ನು ಕೋಲಾರಕ್ಕೆ ಕರೆದೊಯ್ದರು. ಪರೀಕ್ಷೆ ಮುಗಿಯಿತು. ನಾರಣಪ್ಪನವರು ''ಏನೋ ಫಸ್ಟ್‌ಕ್ಲಾಸ್ ಆಗುತ್ತಿಯೇನೋ'' ಎಂದು ಕೇಳಿದರು. ''ಆಗಬೇಕು ಸಾರ್'' ಅಂದರಂತೆ ಮಾಸ್ತಿ!

ಮಾಸ್ತಿಯವರ ಹಿರಿಯ ಸೋದರಮಾವಂದಿರು ವೆಂಕಟರಾಮಯ್ಯಂಗಾರ್ಯರು, ಪೋಲಿಸ್ ಶಾಲೆಯಲ್ಲಿ ಓದಿ, ಪರೀಕ್ಷೆಯಲ್ಲಿ ತೇರ್ಗಡೆಯಾದರು. ಅವರನ್ನು ಮಳವಳ್ಳಿ ತಾಲ್ಲೂಕಿಗೆ ಜಮೇದಾರರನ್ನಾಗಿ ನೇಮಿಸಿದರು. ಸುಮಾರು ೧೯೦೨; ಚಿಕ್ಕ ಸೋದರ ಮಾವ ರಂಗಸ್ವಾಮಿ, ಮಾಸ್ತಿ, ಇಬ್ಬರೂ ಮಳವಳ್ಳಿಗೆ ಬಂದರು; ಇಂಗ್ಲಿಷ್ ಶಾಲೆಯನ್ನು ಸೇರಿದರು.

ಹೊಸ ಊರು, ಹೊಸ ಉದ್ಯೋಗ, ಹೊಸ ಸಂಸಾರ, ದೊಡ್ಡಮಾವ ಹೊಸ ಜೀವನವನ್ನಾರಂಭಿಸಿದ ದಿನ; ಉತ್ಸವದ ದಿನ. ಈ ಉತ್ಸವಕ್ಕಾಗಿ ಅವರ ಅತ್ತೆ, ಮೈದುನರು,

ನಾಲ್ಕೈದು ಜನ ಬಂದಿದ್ದರು. ಅದೇ ದಿನ ಮಾಸ್ತಿಯವರೂ ಮಳವಳ್ಳಿಗೆ ಹೋದದ್ದು. ರಾತ್ರಿ ಮಾವ, ಬೀಗರಮನೆ ಹುಡುಗರು, ಚಿಕ್ಕಮಾವ, ಮಾಸ್ತಿ, ಎಲ್ಲರೂ ಊಟಕ್ಕೆ ಕೂತರು. ಕೊನೆಗೆ ಮಜ್ಜಿಗೆ ಬರಬೇಕಷ್ಟೆ. ಅತ್ತೆ ಅವರ ತಮ್ಮಂದಿರಿಗೆ ಬಡಿಸಿದರು. ಚಿಕ್ಕಮಾವ ''ನನಗೆ ಬೇಡ'' ಅಂದರು. ಮಾಸ್ತಿಯವರು ಅತ್ತೆಗೆ ''ನನಗೆ ಬಡಿಸಿ'' ಅಂದರು. ಎದುರಿಗೆ ಕುಳಿತಿದ್ದ ದೊಡ್ಡಮಾವಂದಿರು ''ಯಾಕೋ ಹುಚ್ಚುಮುಂಡೆ! ಹಾಲೇ ಬೇಕು ಅನ್ನುತ್ತಿ'' ಎಂದು ಗದರಿಸಿದರು. ಹಾಲನ್ನು ಮರ್ಯಾದೆಗಾಗಿ ಮೈದುನರಿಗೆ ಬಡಿಸಿದ್ದೆಂಬುದು ಮಾಸ್ತಿಯವರಿಗೆ ಗೊತ್ತಿಲ್ಲ. ಅತ್ತೆ ಬಡಿಸುತ್ತಿದ್ದುದು ಮಜ್ಜಿಗೆ ಅಂದುಕೊಂಡು 'ನನಗೆ ಬಡಿಸಿ' ಅಂದರು.

> ''ಆ ದಿನದ ಗದರಿಕೆ ಅವರು ನನ್ನನ್ನು ಮೊಟ್ಟಮೊದಲು ಗದರಿಸಿದ ಅನುಭವ. ನನ್ನ ಜೀವ ಎಷ್ಟು ತಲ್ಲಣಿಸಿತು, ನಾನೆಷ್ಟು ಕುಸಿದುಹೋದೆ; ಇದನ್ನು ಹೇಳುವುದು ಸಾಧ್ಯವಿಲ್ಲ, ಮುಖದ ಮೇಲೆ ಹೊಡೆದಂತಾಗಿ ನಾನು ಕಕಮಕನಾದೆ. ದಿಕ್ಕುಗೆಟ್ಟೆ. ಪ್ರತಿಹೇಳುವುದಕ್ಕೆ ಮಾತಿಲ್ಲದೆ ತಲೆತಗ್ಗಿಸಿಕೊಂಡೆ; ಕಣ್ಣೀರು ಹಾಕಿದೆ. ಇದು ಹಾಲು ಎಂದು ನನಗೆ ತಿಳಿಯಲಿಲ್ಲ ಎಂದು ಮಾವನಿಗೇಕೆ ತಿಳಿಯಲಿಲ್ಲ ಎಂದು ದುಃಖಿಸಿದೆ. ಹೀಗೆ ನನ್ನ ಈ ಹೊಸ ಜೀವನ ಕಣ್ಣೀರಿಂದ ಮೊದಲಾಯಿತು.''

ಎಂದು ಅವರು ಹೇಳುವುದನ್ನೋದುವಾಗ ಹೊಟ್ಟೆಯಲ್ಲಿ ಕಿಚ್ಚಿಟ್ಟಂತಾಗುತ್ತದೆ; ಕಣ್ಣಲ್ಲಿ ನೀರು ಬರುತ್ತದೆ.

೩

ಮಳವಳ್ಳಿ ಶಾಲೆಯಲ್ಲಿ ಓದಿ ಇಂಗ್ಲಿಷ್ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರು. ಹಿರಿಯ ಸೋದರಮಾವಂದಿರಿಗೆ ಕೃಷ್ಣರಾಜಪೇಟೆಗೆ ವರ್ಗವಾಗಿತ್ತು. ಅವರು ಸೋದರಳಿಯನನ್ನು ಮೈಸೂರಿಗೆ ಕರೆದುಕೊಂಡು ಹೋಗಿ ವಾಸಕ್ಕೆ ಬಲ್ಲೇರಿ ರಂಗಣ್ಣನ ಮನೆ ತೋರಿಸಿದರು; ಓದಲಿಕ್ಕೆ ವೆಸ್ಲಿಯನ್ ಮಿಷನ್ ಸ್ಕೂಲಿಗೆ ಸೇರಿಸಿದರು. ರಂಗಣ್ಣನವರ ಮನೆಯಲ್ಲಿ ಆಗಲೇ ಬಂಧುಬಳಗದವರನೇಕರಿದ್ದರು. ಮಗನ ಸ್ವಲ್ಪ ವರಮಾನಕ್ಕೆ ಇವನೊಬ್ಬ ಹೊಸಬ ಬಂದನಲ್ಲ- ಎಂದು ತಾಯಿಗೆ ಬೇಸರ. ಮಾಸ್ತಿಯವರ ವಿಷಯದಲ್ಲವರು ತುಂಬ ಅಸಹನೆಯಿಂದ ನಡೆದುಕೊಂಡರು. ಒಂದು ದಿನ ಅವರು ಎಲ್ಲರಿಗೂ ಕೇಳಿಬರುವಹಾಗೆ ''ಯಾರು ಇವರನ್ನೆಲ್ಲ ಈ ಮನೆಗೆ ಬರಹೇಳಿದವರು? ಮೈಸೂರಿನಲ್ಲಿರಬೇಕಾದರೆ ಬೇರೆ ಕಡೆ ಇರಲಿ. ಇದೊಂದೇನೇ ಮನೆ?'' ಅಂದರು. ಇನ್ನೊಂದು ದಿನ ಒಣಹಾಕಿದ್ದ ಪಂಚೆಯನ್ನು ಕೋಲಿನಿಂದ ಕೆಳಕ್ಕೆಳೆದು ಮಾಸ್ತಿಯವರ ಮುಂದೆ ಹಾಕಿ ''ನಿನ್ನ ಪಂಚೆ ನೀನು ತೆಗೆದುಕೊಂಡು ಎಲ್ಲಿಯಾದರೂ ಹೋಗು'' ಅಂದರು.

ಈ ಸಮಯದಲ್ಲಿ ಹುಡುಗ ಮಾಸ್ತಿಯವರ ಹೃದಯದ ವೇದನೆಯನ್ನು ಊಹಿಸಲು ಸಾಧ್ಯವೆ? ರಂಗಣ್ಣನವರು ಮನೆಗೆ ಬಂದಮೇಲೆ ನಡೆದ ಸಂಗತಿಯನ್ನು ಯಾರೋ ಹೇಳಿರಬೇಕು. ಆಗ ಅವರು ಮಾಸ್ತಿಯವರನ್ನು ಕರೆದುಕೊಂಡು ಆರು ಮನೆಗಳನ್ನು ಗೊತ್ತುಮಾಡಿಕೊಟ್ಟು, ''ಏಳನೆಯ ದಿನ ನನ್ನ ಮನೆ'' ಅಂದರು. ಅನಂತರ 'ವಾರದ ಹುಡುಗ ಮಾಸ್ತಿ' ಹೇಳುವುದನ್ನಾಲಿಸಿ:

''ವಾರದ ಮನೆಗಳಲ್ಲಿ ಊಟಮಾಡಬೇಕಾಗಿ ಬಂದ ನಾನು ನನ್ನ ಸ್ಥಿತಿ ಎಷ್ಟು ಅಸಹಾಯ ಎನ್ನುವುದನ್ನು ಮನಗಂಡೆ. ನಾನು ಒಂದು ದೊಡ್ಡ ಮನೆತನದ ಮಗ; ನಮ್ಮ ಹಿರಿಯರು ಬಹುಜನಕ್ಕೆ ಅನ್ನ ಹಾಕಿ ಹೆಸರುಗಳಿಸಿದ್ದರು. ಈಗ ನನಗೆ ಇತರರು ಅನ್ನಹಾಕಬೇಕಾಗಿ ಬಂದಿತ್ತು. ಪುಣ್ಯವಂತರು ಮಕ್ಕಳನ್ನು ಹಾಸ್ಟಲಿನಲ್ಲೋ, ಒಂದು ಹೋಟಲಿನಲ್ಲೋ ಇರಿಸಿ ನೋಡಿಕೊಳ್ಳುತ್ತಾರೆ. ನಮ್ಮ ತಂದೆ ನನ್ನನ್ನು ಹೀಗೆ ನೋಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಪಾಪ, ಇದರ ಹೀನಾಯ ನನಗೆ ಸೋಕಿದ್ದಕ್ಕಿಂತ ನಮ್ಮ ತಂದೆಗೆ ನಮ್ಮ ತಾಯಿಗೆ ಬಹು ಹೆಚ್ಚಾಗಿ ಸೋಕಿರಬೇಕು. ಸ್ಪಷ್ಟವಾಗಿ ಅಲ್ಲ, ಅಸ್ಪಷ್ಟವಾಗಿ. ನಾನು, ಈ ಸ್ಥಿತಿಯಿಂದ ಬಿಡಿಸಿಕೊಳ್ಳುವುದು ಈ ಬದುಕಿನ ಮೊದಲ ಕರ್ತವ್ಯ ಎಂದು ನಿಶ್ಚಯ ಮಾಡಿಕೊಂಡೆ. ಈ ನಿಶ್ಚಯ ನನ್ನ ಮನಸ್ಸಿಗೆ ಬಂದದ್ದು ದೈವದ ಕೃಪೆಯಿಂದ.''

''ಬಡತನದ ಕಹಿ ಎಷ್ಟಿದ್ದರೂ ಅದನ್ನು ಸಹಿಸಿಕೊಳ್ಳುವ ಶಕ್ತಿಯನ್ನು ನಾನೇ ಕಾಣದೆ ಗಳಿಸಿಕೊಂಡೆ''

ಎಂದು ಮಾಸ್ತಿಯವರು ಹೇಳುತ್ತಾರೆ.

''ಎಲ್ಲ ಮನೆಯವರೂ ಒಂದು ನೇಮ ಹಾಕಿದ್ದರು; ಕುಡಿಯುವ ನೀರಿನ ಪಾತ್ರೆಯನ್ನು ನಾನೇ ತೆಗೆದುಕೊಂಡು ಹೋಗಬೇಕು. ಊಟ ಮಾಡಿದ ಮೇಲೆ ಎಲೆಯನ್ನು ನಾನೇ ಎತ್ತಿ ಹೊರಕ್ಕೆ ಹಾಕಿ, ಊಟ ಮಾಡಿದ ಸ್ಥಳವನ್ನು ಗೋಮಯದಿಂದ ಸಾರಿಸಬೇಕು. ಅನ್ನ ಹಾಕುವ ಪುಣ್ಯವಂತರ ಮನೆಯಲ್ಲಿ ಇಷ್ಟನ್ನು ಮಾಡುವುದು ಏನು ಕಷ್ಟ? ನಾನು ತಪ್ಪದೆ ಒಂದು ಪಂಚಪಾತ್ರೆಯನ್ನು ತೆಗೆದುಕೊಂಡು ಹೋಗುತ್ತಿದ್ದೆ. ತಪ್ಪದೆ ಎಂಜಲ ಹಾಳೆಯನ್ನು ಹೊರಕ್ಕೆ ಹಾಕಿ, ಎಂಜಲ ಸ್ಥಳವನ್ನು ಶುದ್ಧಿಮಾಡಿ ಆಮೇಲೆಯೇ ಹೊರಕ್ಕೆ ಬರುತ್ತಿದ್ದೆನು.''

ಇದು ವಾರದ ಹುಡುಗ ಮಾಸ್ತಿಯವರ ನಿತ್ಯಜೀವನ. 'ಉಪಕಾರಿ ಪುಣ್ಯವಂತರು ತಮ್ಮ ಮನೆಯ ವಾರದ ಹುಡುಗನನ್ನು ಚೆನ್ನಾಗಿಯೇ ನೋಡಿಕೊಂಡರಂತೆ!' ಎಂತಹ ಕೃತಜ್ಞತೆ! ಕಂಠೀರವಾಚಾರ್ಯರು ಒಂದು ದಿನ ಬಂದು ಹುಡುಗನ ಎಲೆ ನೋಡಿ ''ಯಾಕೆ ಹುಡುಗನಿಗೆ ಉಂಡೆ ಬಡಿಸಲಿಲ್ಲವೆ?'' ಅಂದರಂತೆ. ಆಮೇಲೆ ಮಾಸ್ತಿಯವರು ತೊಗರಿ ನುಚ್ಚಿನುಂಡೆಯ ರುಚಿ ಕಂಡರಂತೆ!

ಇನ್ನೊಂದು ಮನೆಯಲ್ಲಿ ರಾತ್ರಿ ಬೆಳದಿಂಗಳೂಟ, ಮನೆಯ ಯಜಮಾನಿಯು ತಮ್ಮ ದೊಡ್ಡಮ್ಮನನ್ನು ನೋಡಿ ''ಆ ಹುಡುಗನೂ ಅಲ್ಲಿಗೆ ಬರಲಮ್ಮ'' ಅಂದರು. ''ವಾರದ ಹುಡುಗನಿಗೆ ಬೆಳದಿಂಗಳ ತುತ್ತೇನೆ'' ಅಂದರು ದೊಡ್ಡಮ್ಮ! ಮಾಸ್ತಿಯವರ ಮನಸ್ಸು ಚಿಕ್ಕದಾಯಿತು. ಆಗ ಮನೆಯ ಯಜಮಾನಿ ''ಇರಲಿ ಬಾಮ್ಮಾ ಅವನೂ ಜೊತೆಗೆ ಇದ್ದುಬಿಡಲಿ'' ಅಂದರು! ಮಾಸ್ತಿಯವರೂ ಮಕ್ಕಳೊಡನೆ ಕೂತು ತಿಂಗಳೂಟದ ಸುಖವನ್ನು ಅನುಭವಿಸಿದರು. ''ಅದರ ಹಿಂಬದಿಗೆ ಮನಸ್ಸು ಚಿಕ್ಕದಾದ ಬೇನೆಯೂ ಒಂದಷ್ಟು ಇತ್ತು'' ಅನ್ನುತ್ತಾರೆ ಮಾಸ್ತಿ.

ಇನ್ನೊಂದು ಮನೆ. ಅಲ್ಲಿ ಮೆಟ್ರಿಕ್ಯುಲೇಷನ್ ಮಾಡಿದ ಹುಡುಗಿ ತನ್ನ ಅಕ್ಕನಿಗೆ 'The boy is dull' ಅಂದಳಂತೆ. ''ಕೆಟ್ಟ ಮಾತನ್ನು ಕೇಳುವ ಬಡವ ಏನು ಮಾಡುವಂತಿದ್ದಾನು'' ಎಂದು ಕೇಳುತ್ತಾರೆ ಮಾಸ್ತಿಯವರು.

೪

ವೆಸ್ಲಿಯನ್ ಸ್ಕೂಲಿನಲ್ಲಿ ಓದುತ್ತಿದ್ದಾಗ ಮಾಸ್ತಿ ತಿಂಗಳಿಗೆ ಎರಡು ರೂಗಳ ಶುಲ್ಕ ಕೊಡಬೇಕಾಗಿತ್ತು; 'ಫ್ರೀಷಿಪ್' ಕೊಡಿರೆಂದು ಎಷ್ಟು ಕೇಳಿಕೊಂಡರೂ ಪ್ರಿನ್ಸಿಪಾಲರು ಕೊಡಲಿಲ್ಲ. ಆದ್ದರಿಂದ ಇದಕ್ಕಾಗಿ ಅವರು ಸೋದರಮಾವನಿಗೇ ಹೊರೆಯಾಗಬೇಕಾಯಿತು. ಈ ಸಂದರ್ಭ ಕುರಿತು ಮಾಸ್ತಿಯವರು ಬರೆಯುವುದನ್ನು ಓದುವಾಗ ಕರುಳು ಕತ್ತರಿಸಿಬೀಳುತ್ತದೆ.

> ''ಬರುತ್ತಿದ್ದ ಇಪ್ಪತ್ತು ರೂಪಾಯಿಗಳಲ್ಲಿ ಈ ನನ್ನ ಮಾವ ಏನಿಲ್ಲವೆಂದರೂ ಆರೂವರೆ ರೂಪಾಯಿಯಷ್ಟು ಹಣವನ್ನು ನನಗೆ ತನ್ನ ತಮ್ಮನಿಗೆ ತಿಂಗಳು ತಿಂಗಳೂ ಕಳುಹಿಸುತ್ತಿದ್ದರಲ್ಲ! ಇವರ ವಾತ್ಸಲ್ಯ ಎಷ್ಟು ದೊಡ್ಡದು! ಮಾವ ತ್ಯಾಗಮಾಡಿದರು, ವಾತ್ಸಲ್ಯ ತೋರಿದರು; ತಮ್ಮನಿಗೆಂದು, ಸೋದರಳಿಯನಿಗೆಂದು, ಈ ದೊಡ್ಡ ರೀತಿಯಲ್ಲಿ ನಡೆದರು. ಆದರೆ ಗಂಡ ಈ ರೀತಿಯಲ್ಲಿ ನಡೆದುಕೊಂಡರೆ ಅವರ ಹೆಂಡತಿ, ನನ್ನ ಸೋದರತ್ತೆ ಅಚ್ಚಮ್ಮ ಅದನ್ನು ಒಪ್ಪಿಕೊಂಡು ಸಮಾಧಾನವಾಗಿ ಇದ್ದರಲ್ಲ. ಇದನ್ನು ನೆನೆದರೆ ನನಗೆ ಆ ಗಂಡ ಎಷ್ಟು ಹಿರಿಯ ಸ್ವಭಾವದ ಮನುಷ್ಯ; ಅವರ ಹೆಂಡತಿ ಅಷ್ಟೇ ಹಿರಿಯ ಸ್ವಭಾವದ ಸ್ತ್ರೀ ಎನ್ನಿಸುತ್ತದೆ. ನಾನೀಗ ವಯಸ್ಸಾದ ಮನುಷ್ಯ. ಅವರ ದಿನ ಮುಗಿದು ಅವರಿಬ್ಬರೂ ದೇವರ ಸನ್ನಿಧಿಯನ್ನು ಸೇರಿದ್ದಾರೆ. ನನ್ನ ನಮನದಿಂದ ಅವರಿಗೆ ಆಗಬೇಕಾದದ್ದು ಏನೂ ಇಲ್ಲ. ಆದರೂ ಇಲ್ಲಿ ಈ ಕೃತಜ್ಞತೆಯ ನಮನವನ್ನು ನನ್ನ ತೃಪ್ತಿಗಾಗಿ ಒಪ್ಪಿಸುತ್ತೇನೆ. ವಾತ್ಸಲ್ಯ ಮೂರ್ತಿ ಆ ಮಾವ, ತ್ಯಾಗರೂಪಿಣಿ ಆ ಅತ್ತೆ, ನನ್ನ ಮನಸ್ಸಿಗೆ ಲೋಕವನ್ನು ಕಾಯುತ್ತ ದೈವ ಒಂದಿದೆ ಎನ್ನುವುದಕ್ಕೆ ಪ್ರಮಾಣವಾಗಿ, ನೆನಪಾಗಿ ಉಳಿದಿದ್ದಾರೆ. ಆ ಮಾವನಿಗೆ ನಮೋ! ಆ ಅತ್ತೆಗೆ ನಮೋ!''

ಈ ಹೃದಯ ಪವಿತ್ರತೆಯನ್ನು ಊಹಿಸಲಾದೀತೆ? ಮಾಸ್ತಿಯವರ ಮಾತು, ಹೃದಯ, ಚರ್ಯೆ, ಪ್ರತಿಯೊಂದೂ ಅವರ ಹಿರಿಯ ಮನೆತನದ, ಹಿರಿತನವನ್ನೂ ಮೀರಿದ ಉತ್ತಮ ಸಂಸ್ಕಾರ ಫಲ; ಅವರ ಪುಣ್ಯದ ಫಲ.

ಶಾಲೆಯ ದಿನಗಳ 'ಬಡಬಾಳ'ನ್ನು ಕುರಿತು ಮಾಸ್ತಿಯವರು ಹಲವಾರು ಸನ್ನಿವೇಶಗಳ ಚಿತ್ರವನ್ನು ಕೊಡುತ್ತಾರೆ. ಹಸಿವಾದ ದಿನ ಎರಡೊ ಕಾಸೋ, ಮೂರು ಕಾಸೋ, ಉಪಯೋಗಿಸುತ್ತಿದ್ದರಂತೆ. ಎರಡು ಕಾಸಿಗೊಂದು ದೋಸೆ; ಆದರೆ ಅದಕ್ಕೆ ಕಾಯಬೇಕು. ಕಾಲು ಘಂಟೆ ಕಾದರೂ ದೋಸೆ ಸಿಗುವ ಹಾಗಿಲ್ಲ. ಶಾಲೆಯ ಮುಂಭಾಗದಲ್ಲಿ ಒಬ್ಬ ಕಡಲೆಕಾಯಿ ಮಿಠಾಯಿ ಮಾರುತ್ತಿದ್ದ. 'ಹಲ್ಲಿಗೆ ಬಂದದ್ದು ಬಾಯಿಗೆ ಬರಲ್ಲಿಲ್ಲ ಅನ್ನುವಷ್ಟು ಕೊಂಚವಂತೆ ಆ ಮಿಠಾಯಿ! ಕಡೆಗೆ ಅವರು ಕಡಲೆಕಾಯಿ ಕೊಂಡು ಜೇಬಿನಲ್ಲಿ ಹಾಕಿಕೊಂಡು ತಿನ್ನುತ್ತಿದ್ದರಂತೆ! ಒಂದು ದಿನ ಉಪಾಧ್ಯಾಯರು ''ಕ್ಲಾಸಿನಲ್ಲಿ ಕಡಲೆಕಾಯಿ ತಿನ್ನಬಾರದು, ತಿಳೀತೇ'' ಅಂದರು. ಹತ್ತು ದಿನ ಸುಮ್ಮನಿದ್ದರು; ಅದೇ ತರಗತಿಯಲ್ಲಿ ಕಡಲೆಕಾಯಿ ಸುಲಿದರು ಮಾಸ್ತಿ. ಉಪಾಧ್ಯಾಯರು ಮಾಸ್ತಿಯನ್ನು ಹತ್ತಿರಕ್ಕೆ ಕರೆದು 'ಹಿಡಿ ಕೈ' ಎಂದು ಕೋಲಿನಿಂದ ಪೆಟ್ಟು ಕೊಟ್ಟರು. 'ಅಯ್ಯೋ' ಅಂದರು ಮಾಸ್ತಿ. ''ಇಷ್ಟಕ್ಕೆಲ್ಲ ಶಿಕ್ಷೆ

ಮಾಡಿದರೆ ನಿಮ್ಮ ಕ್ಲಾಸ್ ಹಾಳಾಗುತ್ತೆ, ನಿಮ್ಮ ಸ್ಕೂಲು ಹಾಳಾಗುತ್ತೆ'' ಅಂದುಬಿಟ್ಟರು. ಕ್ಲಾಸಿನಲ್ಲಿ ಮೊದಲನೆಯ ಸ್ಥಾನದ ಹುಡುಗ; ಅವನಿಗೇ ಇಂತಹ ಶಿಕ್ಷೆ?

ಐದನೆಯ ಫಾರಂಗೆ ಬಂದ ಮೇಲೆ ತಮ್ಮ ಸ್ವಶಕ್ತಿಯಿಂದ ಅರ್ಧ 'ಫ್ರೀಷಿಪ್'ಗಳಿಸಿದರು. ಆದರೂ ತಿಂಗಳಿಗೆ ಒಂದೂಕಾಲು ರೂಪಾಯಿ ಶುಲ್ಕ ಕೊಡಬೇಕು. ಪ್ರಿನ್ಸಿಪಾಲರಲ್ಲಿ ಎಷ್ಟೋ ಹೇಳಿಕೊಂಡರು ಮಾಸ್ತಿ; ಪ್ರಯೋಜನವಾಗಲಿಲ್ಲ. ಆರನೆಯ ಫಾರಂಗೆ ಬಂದ ಮೇಲೆ ಪೂರ್ಣ 'ಫ್ರೀಷಿಪ್' ಸಿಕ್ಕಿತು.

> ''ಮಾವ ನನಗೆ ತಿಂಗಳಿಗೆ ಒಂದು ರೂಪಾಯಿ ಕಳುಹಿಸಿದರೆ ಸಾಕು ಎನ್ನುವ ಸ್ಥಿತಿಗೆ ಬಂತು'' ಅನ್ನುತ್ತಾರೆ ಮಾಸ್ತಿ.

೫

ಮಾಸ್ತಿಯವರು ಮೆಟ್ರಿಕ್ಯುಲೇಷನ್ ಫಸ್ಟ್ ಕ್ಲಾಸಿನಲ್ಲಿ ತೇರ್ಗಡೆಯಾದರು. ಮದರಾಸು ವಿಶ್ವವಿದ್ಯಾನಿಲಯದಲ್ಲಿ ಆಗ 'ಮೆಟ್ರಿಕ್ಯುಲೇಶನ್'ನಲ್ಲಿ ಪಾಸ್ ಮಾಡುವುದೆಂದರೆ ಒಂದು ಅಶ್ವಮೇಧಯಾಗ ಮಾಡಿದ ಹಾಗೆ! ಅಂತಹ ಕಾಲದಲ್ಲಿ ಆ ಪರೀಕ್ಷೆಯಲ್ಲಿ ಮಾಸ್ತಿಯವರು 'ಫಸ್ಟ್‌ಕ್ಲಾಸ್!' ಈ ವಿಜಯದ ಫಲವಾಗಿ ಸರಕಾರದವರು ಮಾಸ್ತಿಯವರಿಗೆ 'ಸ್ಕಾಲರ್‌ಷಿಪ್'ಕೊಟ್ಟರು. ಮಾಸ್ತಿ, ಚಿಕ್ಕಮಾವ ರಂಗಸಾಮಿ, ಇಬ್ಬರೂ ಮೈಸೂರಿನ ಮಹಾರಾಜ ಕಾಲೇಜಿಗೆ ಸೇರಿ, ಎಫ್.ಎ. ಪರೀಕ್ಷೆಗೆ ಓದಲಾರಂಭಿಸಿದರು.

ಬೇಸಿಗೆ ರಜದಲ್ಲಿ ಮಾಸ್ತಿಯವರು ಹಳ್ಳಿಗೆ ಹೋಗಿ, ತಂದೆತಾಯಿಗಳೊಂದಿಗೆ ಕೊಂಚಕಾಲವಿದ್ದರು. ಆ ತಂದೆತಾಯಿಗಳಿಗೆ ತಮಗೆ ಬರುತ್ತಿದ್ದ 'ಸ್ಕಾಲರ್‌ಷಿಪ್' ಮಾತನ್ನು ಹೇಳಿ,

> ''ನನಗೆ ಬರುವ ಹತ್ತು ರೂಪಾಯಿಗಳಲ್ಲಿ ಮಾವನಿಗೆ ಹೇಳಿ ಇಲ್ಲಿಗೆ ತಿಂಗಳು ತಿಂಗಳು ಐದು ರೂಪಾಯಿ ಕಳುಹಿಸುತ್ತೇನೆ - ಎಂದೆನು. ಹಣ ನನಗೆ ಬೇಕಾಗಬಹುದು ಎಂದು ಅವರಿಬ್ಬರ ಯೋಚನೆ. ಅಲ್ಲದೆ ಮಾವನಿಗೆ ಬರುತ್ತಿರುವ ಸಂಬಳ ಸಾಲದು. ಈ ಹಣವನ್ನು ಮಾವನಿಗೆ ಕೊಟ್ಟುಬಿಡುವುದೇ ಸರಿ ಎನ್ನುವುದು ಇನ್ನೊಂದು ಯೋಚನೆ. ನಾನು ಪುಣ್ಯವಂತರ ಮನೆಯಲ್ಲಿ ಸಣ್ಣ ಹುಡುಗರಿಗೆ ಪಾಠ ಹೇಳಿ ಕೆಲವು ರೂಪಾಯಿ ಗಳಿಸುವ ಯೋಚನೆ ಮಾಡಿದ್ದೇನೆ, ಸ್ಕಾಲರ್‌ಷಿಪ್ ಸ್ವಲ್ಪ ಹಣ ಬಂದೀತು, ಅದನ್ನು ಮಾವನವರಿಗೆ ಕೊಡುತ್ತೇನೆ.'' ಎಂದು ಇವರಿಗೆ ಸಮಾಧಾನ ಹೇಳಿದೆ.

ಎಂದು ತಮ್ಮ ಕರ್ತವ್ಯ ನಿಷ್ಠ ಹೃದಯವನ್ನು ಬಿಚ್ಚಿ ತೋರಿಸುತ್ತಾರೆ.

ಹಳ್ಳಿ ಬಿಟ್ಟು ಮೈಸೂರಿಗೆ ಬಂದರು. ಮೂರು ವರ್ಷಗಳ ಕಷ್ಟದ ಕಾಲ ನೆನಪಿಗೆ ಬಂತು.

> ''ಮೊತ್ತದಲ್ಲಿ ನನ್ನ ಮೆಟ್ರಿಕ್ಯುಲೇಷನ್ ಪರೀಕ್ಷೆಯ ಫಲ ತಿಳಿದ ತರುಣದ ಆ ಕೆಲವು ತಿಂಗಳ ಕಾಲ ನನ್ನ ಜೀವನದ ಅತ್ಯಂತ ಸಂತೋಷದ ಕಾಲ. ಕಷ್ಟದ ಮೂರು ವರ್ಷದ ಕೊನೆಕೊನೆಗೆ ನನ್ನ ಜೀವ ಹತ್ತಿರ ಹತ್ತಿರ ಸೋತಿತ್ತು. ಶಾಲೆಗೆ ಹೋಗುತ್ತ ಮನಸ್ಸಿಗೆ, ಈ ಕಷ್ಟ ಇದು ಎಂದಿಗೆ ಮುಗಿಯುವುದೋ ಎಂದು ತೋರಿದ್ದುಂಟು.

ಹಾಗೆ ತೋರಿದ ಕೆಲವೇ ತಿಂಗಳಲ್ಲಿ ಆ ಕಷ್ಟ ಕೊನೆಯಾಯಿತು. ಮಾವ ಮೈಸೂರಿಗೆ ಬಂದರು. ನನಗೆ ನೆರಳು ದೊರೆಯಿತು. ಪರೀಕ್ಷೆಯಲ್ಲಿ ಚೆನ್ನಾಗಿ ಪಾಸಾಯಿತು. ತುಂಬ ಸಂತೋಷ ಲಭಿಸಿತು. ಅದರ ಮೇಲೆ ಯೂನಿವರ್ಸಿಟಿಗೇ 'ಫಸ್ಟ್' ಪಟ್ಟ ಬಂತು. ತಿಂಗಳಿಗೆ ಹತ್ತು ರೂಪಾಯಿ ವಿಶೇಷ ವಿದ್ಯಾರ್ಥಿವೇತನ ಬೇರೆ. ಅನ್ನಕ್ಕಾಗಿ ಮನೆಮನೆಗೆ ಹೋಗುತ್ತಿದ್ದ ಬಡ ಹುಡುಗ ಇದಕ್ಕಿಂತ ಹೆಚ್ಚು ಏನನ್ನು ಬಯಸಬಹುದು? ನೀರಿನಲ್ಲಿ ತೊಳಲುತ್ತಿದ್ದು ಗಡ್ಡೆಗೆ ಬಿದ್ದ ಪ್ರಾಣಿಯಂತೆ ನಾನು ದೀರ್ಘವಾಗಿ ಉಸಿರೆಳೆದು ಹಾಯಾಗಿ ನಡೆದೆನು.''

ಈ ಸಂತೋಷ ಸಮಾಧಾನದಿಂದ ಮಾಸ್ತಿಯವರು ಬಹಳ ಕಾಲ ಸುಖಾನುಭವ ಮಾಡಲಿಲ್ಲ. ಪ್ಲೇಗಿನಿಂದ ತಮ್ಮ, ರಾಜ ಕಾಲವಾದ ಮಾಸ್ತಿಯಲ್ಲಿ. ಅಜ್ಜಅಜ್ಜಿ, ತಾಯಿತಂದೆ, ಎಲ್ಲರೂ ಮೈಸೂರಿಗೆ ಬಂದರು. ತಂದೆ ತೀರಿಕೊಂಡರು; ಅಜ್ಜಯೂ ತೀರಿಕೊಂಡರು.

''ಕಷ್ಟದಿಂದ ಪಾರಾದೆ ಎಂದುಕೊಂಡ ಆ ವರ್ಷ ನನ್ನ ಬಾಳು ಕೆಲವೇ ತಿಂಗಳಲ್ಲಿ ದುರ್ಭರವಾದ ದುಃಖಗಳಿಗೀಡಾಯಿತು.''

ಎಂದು ಮಾಸ್ತಿಯವರು ಹೇಳುವುದನ್ನು ಓದುವಾಗ ಕೊರಳು ಬಿಗಿಯುತ್ತದೆ; ಕಣ್ಣುಗಳಲ್ಲಿ ನೀರು ತುಂಬುತ್ತದೆ; ಏನೋ ಹೇಳಲಾಗದ ಸಂಕಟವಾಗುತ್ತದೆ.

''ನನಗೆ ಬಂದ ಕಾಸು ಎಂದು ಐದು ರೂಪಾಯನ್ನಾದರೂ ಕಳುಹಿಸಿ, ತಂದೆ ಅದುವರೆಗೆ ಸವಿದ ಬಡತನ ಸ್ವಲ್ಪವಾದರೂ ಕಡಿಮೆಯಾಯಿತು, ಎಂದು ಕೊಳ್ಳುವಂತೆ ಮಾಡುವುದಕ್ಕೆ ಕೂಡ ನನ್ನ ಅದೃಷ್ಟದಲ್ಲಿ ಅವಕಾಶವಿಲ್ಲದೆ ಹೋಯಿತು. ಇದು ನನ್ನ ಜೀವನದ ಒಂದು ಕೊರೆ ಎನ್ನಿಸಿ, ನನ್ನ ಮನಸ್ಸು ಈಗಲೂ ಒಮ್ಮೊಮ್ಮೆ ವ್ಯಾಕುಲಗೊಳ್ಳುತ್ತದೆ.''

ಎಂದು, ನೊಂದು ನುಡಿಯುತ್ತಾರೆ ಮಾಸ್ತಿ.

೬

ಮಾಸ್ತಿಯವರ ತಂದೆ ತೀರಿಕೊಂಡ ಮೇಲೆ ಮಾವನವರು ಬೇರೆ ಮನೆ ಮಾಡಿದರು. ಅಷ್ಟರಲ್ಲೆ ಮಾವನವರಿಗೆ ಪಾವಗಡಕ್ಕೆ ವರ್ಗವಾಯಿತು. ತಿಂಗಳ ೧೫ ರೂಗಳ ವರಮಾನದಲ್ಲಿ ಮಾಸ್ತಿಯವರು ಸಂಸಾರ ನಡೆಸುವ ಧೈರ್ಯ ಮಾಡಿದರು. ವರ್ಷ ಮುಗಿದು ಎಲ್ಲರೂ ಪಾವಗಡಕ್ಕೆ ಹೋದರು. ರಜ ತೀರಿದ ಮೇಲೆ ಮಾಸ್ತಿ, ಅವರ ಚಿಕ್ಕಮಾವ, ಇಬ್ಬರೂ ಮೈಸೂರಿಗೆ ಬಂದರು. ಮಾಸ್ತಿಯವರ ತಾಯಿ ಪಾವಗಡದಲ್ಲೇ ನಿಂತರು. ಮಾಸ್ತಿಯವರಿಗೆ ರಂಗಣ್ಣನವರ ಮನೆಯಲ್ಲಿ ಊಟ. ರಂಗಸಾಮಿಯವರಿಗೆ ಹೋಟಲಲ್ಲಿ ಊಟ. ಮಾಸ್ತಿಯವರ ಸಂಪಾದನೆಯ ಹದಿನೈದು ರೂಪಾಯಿಗಳು ಇಬ್ಬರ ಓದಿನ ವೆಚ್ಚ ಎಂಬುದು ನಿಶ್ಚಯವಾಯಿತು.

ಇಬ್ಬರು ಎಫ್.ಎ. ಕ್ಲಾಸ್ ಸೇರಿದರು, ಓದಿದರು. 'ಪೀಟರ್ ಕೇಟರ್' ಸ್ಪರ್ಧೆಯಲ್ಲಿ ಮಾಸ್ತಿಯವರು ೩೦ ರೂಗಳ ಬಹುಮಾನ ಪಡೆದರು. ಹಾಗೂ ಹೀಗೂ ಮಾಡಿ ೪೮ ರೂಗಳನ್ನು ಕೂಡಿಸಿ, ಮಾವ, ಸೋದರಳಿಯ ಎಫ್.ಎ. ಪರೀಕ್ಷೆಗೆ ಕೂತರು. ಮಾಸ್ತಿಯವರು ಫಸ್ಟ್‌ಕ್ಲಾಸ್! ರಂಗಸಾಮಿಗೆ ಪಾಸ್ ಆಗಲಿಲ್ಲ. ಮಾಸ್ತಿಯವರು

ಬೆಂಗಳೂರಿಗೆ ಬಂದು ವರದರಾಜಯ್ಯಂಗಾರ್ಯರ ಮನೆಯಲ್ಲಿ ನಿಂತರು. ಸೆಂಟ್ರಲ್ ಕಾಲೇಜ್ ಸೇರಿದರು.

> ''ನನ್ನ ಚೇತನಕ್ಕೆ ಬೆನ್ನು ಮೂಳೆಯನ್ನು ನೇರವಾಗಿಟ್ಟುಕೊಂಡು ನೆಟ್ಟಗೆ ನಿಲ್ಲುವ ರುಚಿ ಉಳಿದೆಲ್ಲ ರುಚಿಗಿಂತ ಹೆಚ್ಚಿನ ರುಚಿ ಎನ್ನುವುದನ್ನು ಕಲಿಸಿದರು.''

ಎಂದು ಪ್ರಿನ್ಸ್‌ಪಾಲ್ ಟೇಟರನ್ನು ಕುರಿತು ಹೇಳಿ,

> ''ಹಳ್ಳಿಯ ಉಪಾಧ್ಯಾಯ ನಾರಣಪ್ಪನವರು ನನ್ನ ಜೀವನಕ್ಕೆ ಮೊದಲ ಹೆಜ್ಜೆಗಳನ್ನು ತೋರಿಸಿಕೊಟ್ಟರು. ಹೈಸ್ಕೂಲಿನಲ್ಲಿ ಸುಬ್ಬಕೃಷ್ಣಯ್ಯನವರು ಭಾಷೆ ಕಲಿಯುವ ರೀತಿ ಏನೆಂದು ಹೇಳಿಕೊಟ್ಟು, ನನ್ನ ಜೀವನದ ಎರಡನೆಯ ಮಾರ್ಗದರ್ಶಕರಾದರು. ಟೇಟ್ ಸಾಹೇಬರು ಮಾತಿಗೆ ಹೇಗೆ ಹಾಗೆ ಬಾಳಿಗೆ ಗುರಿಯೇನು ಎನ್ನುವುದನ್ನೂ, ಆ ಗುರಿಯನ್ನು ಮುಟ್ಟುವುದಕ್ಕೆ ದಾರಿ ಏನು ಎನ್ನುವುದನ್ನೂ ಕಲಿಸಿಕೊಟ್ಟರು. ಜೊತೆಗೆ ಆ ದಾರಿಯನ್ನು ಧೈರ್ಯವಾಗಿ ತುಳಿಯುವುದನ್ನು ಕಲಿಸಿಕೊಟ್ಟರು. ನನ್ನದೆಂಬ ಈ ಬಾಳುವೆ ಏನಾದರೂ ಬೆಲೆಯ ವಸ್ತು ಆಗಿದ್ದಲ್ಲಿ ಅದಕ್ಕೆ ಈ ಮೂವರು ಗುರುಗಳು ಕಾರಣರು. ಈ ಗುರುಗಳಿಗೆ ಈ ಸ್ಥಳದಲ್ಲಿ ನಾನು 'ನಮೋ ನಮೋ' ಎಂದು ಕೃತಜ್ಞತೆಯನ್ನು ಸಲ್ಲಿಸುತ್ತೇನೆ.''

ಎಂಬುದಾಗಿ ಹೇಳುವ ಮಾಸ್ತಿಯವರನ್ನು ಕಂಡರೆ ಇಂತಹ ಮಕ್ಕಳನ್ನು ಪಡೆದ ಕನ್ನಡ ತಾಯಿಯ ಭಾಗ್ಯವೇ ಭಾಗ್ಯ ಅನ್ನಿಸುತ್ತದೆ.

ಮಾಸ್ತಿಯವರಿಗೆ ಒಳ್ಳೆಯ ಮನೆತನದಲ್ಲಿ ಮದುವೆ ಆಯಿತು; ಮದುವೆ ಪಶ್ಚಿಮ ವಾಹಿನಿಯಲ್ಲಿ ನಡೆಯಿತು.

ಸೆಂಟ್ರಲ್ ಕಾಲೇಜಿನಲ್ಲಿ ಅವರ ವ್ಯಾಸಂಗ ಚೆನ್ನಾಗಿಯೇ ನಡೆಯಿತು. ಬಿ.ಎ. ಪರೀಕ್ಷೆಗೆ ಹೊರಡುವ ಮೊದಲು ಪ್ರವೇಶಪತ್ರ ಪಡೆಯಲು ಟೇಟ್ ಸಾಹೇಬರನ್ನು ಕಂಡರು. ಅವರು ಶಿಷ್ಯನ ಕೈಗೆ ಪ್ರವೇಶಪತ್ರ ಕೊಟ್ಟು,

"Go and cover yourself and your College with glory.''

ಅಂದರು! ಪರೀಕ್ಷೆ ಮುಗಿಯಿತು, ಇಂಗ್ಲಿಷ್ ಮತ್ತು ಕನ್ನಡದಲ್ಲಿ ಫಸ್ಟ್‌ಕ್ಲಾಸ್! 'ಫಿಜಿಕ್ಸ್'ನಲ್ಲಿ ಎರಡನೆ ವರ್ಗದಲ್ಲಿ ಉತ್ತೀರ್ಣರಾದರು. "First in First Class" ಟೇಟರ ಮಾತು ನಿಜವಾಯಿತು! ಈ ಸಮಾಚಾರವನ್ನು ವೆಂಕಟೇಶಯ್ಯಂಗಾರ್ಯರಿಗೆ ತಿಳಿಸೆಂದು ಟೇಟರೇ ತಮ್ಮ ಇನ್ನೊಬ್ಬ ವಿದ್ಯಾರ್ಥಿಗೆ ಹೇಳಿದರು. ಇದನ್ನು ತಿಳಿದು ಮಾಸ್ತಿಯವರೇ ಟೇಟರ ಮನೆಗೆ ಹೋಗಿ ಗುರುಗಳನ್ನು ಕಂಡರು. ಗುರುಗಳು ಕೈ ನೀಡಿ ಶಿಷ್ಯನಿಗೆ ಹಸ್ತಲಾಘವ ಕೊಟ್ಟು,

> "They have never allowed the first place to go out of Madras. It is a great thing that you have got it."

ಅಂದರು. ಅನಂತರ ಮಾಸ್ತಿಯವರಿಗೆ ತಮ್ಮ ಕಾಲೇಜಿನಲ್ಲೇ ಇಂಗ್ಲಿಷ್ ಪಾಠ ಹೇಳುವ ಲೆಕ್ಚರರನ್ನಾಗಿ ನೇಮಿಸಿದರು! ತಿಂಗಳಿಗೆ ನೂರು ರೂಪಾಯಿಗಳಂತೆ ಮುನ್ನೂರು ರೂಪಾಯಿಗಳನ್ನು ಕೊಟ್ಟರು! ಈ ಹಣದ ಸಹಾಯದಿಂದ ಮಾಸ್ತಿಯವರು ಮದರಾಸಿಗೆ ಹೋಗಿ, 'ಪ್ರೆಸಿಡೆನ್ಸಿ ಕಾಲೇಜ್' ಸೇರಿ, ಎಂ.ಎ. ಓದಲಾರಂಭಿಸಿದರು. ಗುರು ಟೇಟರು 'ಪ್ರೆಸಿಡೆನ್ಸಿ ಕಾಲೇಜಿ'ನ ಹಂಟರ್ ಸಾಹೇಬರಿಗೆ ಮಾಸ್ತಿಯವರನ್ನು ಕುರಿತು ಪತ್ರ ಬರೆಯುತ್ತಾ,

"We had many First Class students here but Venkatesh Iyengar beat them all easily"

ಎಂದು ಹೇಳಿದರು!

೭

ಮದರಾಸಿನ ತಮ್ಮ ಬಾಳನ್ನು ಕುರಿತು ವರ್ಣಿಸುತ್ತಾ, ಜೊತೆಯಲ್ಲಿದ್ದವರನ್ನು ನೆನಪು ಮಾಡಿಕೊಂಡು, ಮಾಸ್ತಿಯವರು ಹೀಗೆ ಹೇಳುತ್ತಾರೆ :

''ನಾರಾಯಣರಾವ್, ಶೇಷಯ್ಯ, ಪುಣ್ಯವಂತರು. ಊಟ ಸರಿ ಹೋಗದಿದ್ದರೂ ಇತರ ಆಹಾರ ತೆಗೆದುಕೊಂಡು ಬಾಳಬಲ್ಲರು. ರಾಘವಯ್ಯ ಅತಿ ವೆಚ್ಚಕ್ಕೆ ಹೋಗುವಂತಿರಲಿಲ್ಲ. ಆದ್ದರಿಂದ ಅವರು ದಿನವೂ ಎರಡು ಹೊತ್ತೂ ಊಟಕ್ಕೆ ಕುಳಿತೊಡನೆ ಕದನ್ನದಾತ ಜನಾರ್ದನರಾಯನನ್ನು, ಅವನ ವಂಶದ ಹಿರಿಯರನ್ನು ಬಾಯಿತುಂಬ ಶಪಿಸಿ, ಊಟ ಆರಂಭಿಸುವರು. ಅವರ ಬೈಗಳು ಮಲೆನಾಡಿನ ವಿಶಿಷ್ಟ ರೀತಿಯವು. ಬೈಯುತ್ತ ಅವರೇ ನಗುವರು. ಕೇಳಿದ ನಾವು ನಗದೆ ಇರುವುದು ಸಾಧ್ಯವೇ ಇಲ್ಲ. ಹೀಗೆ ಚೆನ್ನವಲ್ಲದ ಊಟವನ್ನು ಚೆನ್ನಾದ ಹಾಸ್ಯದ ಸಂಭ್ರಮದಲ್ಲಿ ತಿಂದೋ, ಬಿಟ್ಟೋ, ನಾವು ದಿನ ಹಾಕಿದೆವು.''

ಹೋಟಲಿನ ಮೃಷ್ಟಾನ್ನ ತಿಂದು, ಮಧ್ಯಾಹ್ನ ತಮ್ಮ ತಮ್ಮ ಕೋಣೆಗಳಲ್ಲಿ ಉಪ್ಪಿಟ್ಟು ಮಾಡಿಕೊಂಡು ತಿಂದು, ಮಲೆ ಬಾಳೆಹಣ್ಣನ್ನು ಕೊಂಡು ತಿಂದು, ''ನಾವು ಜೀವಂತರಾಗಿ'' ಉಳಿದೆವೆನ್ನುತ್ತಾರೆ ನಿರ್ಮಲ ಹಾಸ್ಯದ ಸೆಲೆ ಮಾಸ್ತಿ.

ಜನಾರ್ದನರಾಯನ ಹೋಟಲಿನ ಊಟ ಬಿಟ್ಟು ಅಣ್ಣಾಜಿರಾಯರ ಮಾತು ಕೇಳಿ ಆಚಾರ್ಯರ ಮನೆ ಊಟಕ್ಕೆ ಬಂದರು. ಕೆಲವೇ ದಿನಗಳಲ್ಲಿ ಮಾಸ್ತಿಯವರು ಹೇಳುವಂತೆ ಆಚಾರ್ಯರ ಮನೆ ಊಟ ''ಜನಾರ್ದನನ ಹೋಟಲಿನ ಊಟದ ಅಪ್ಪ ಅಲ್ಲದಿದ್ದರೂ ಅಣ್ಣನೋ ತಮ್ಮನೋ, ಆಯಿತು!''

'ಕಾನ್ವೊಕೇಷನ್' ನಲ್ಲಿ ಮಾಸ್ತಿಯವರಿಗೆ ಚಿನ್ನದ ಪದಕ ಬಂತು. ಎಪ್ಪತ್ತು ಎಂಬತ್ತು ರೂಗಳು ಬಹುಮಾನವಾಗಿ ಬಂತು!

ವಿಶ್ವೇಶ್ವರಯ್ಯನವರ ದಿವಾನಗಿರಿ ಕಾಲ. ನಿಂತುಹೋಗಿದ್ದ 'ಸಿವಿಲ್ ಸರ್ವಿಸ್' ಪರೀಕ್ಷೆ ಮತ್ತೆ ಪ್ರಾರಂಭವಾಯಿತು. ಮಾಸ್ತಿಯವರು ಆ ಪರೀಕ್ಷೆಗೆ ಓದುವ ನಿಶ್ಚಯ ಮಾಡಿದರು. ಅದಕ್ಕೆ ಮೊದಲು 'ಪ್ರೆಸಿಡೆನ್ಸಿ ಕಾಲೇಜ'ನಲ್ಲೂ ಉಪಾಧ್ಯಾಯರಾಗಿ ಒಂದೂವರೆ ತಿಂಗಳು ಕಳೆದರು. ಬೆಂಗಳೂರಿಗೆ ಬಂದು, 'ಸಿವಿಲ್ ಸರ್ವಿಸ್' ಗೆ ಓದಿ, ಪರೀಕ್ಷೆ ಮುಗಿಸಿ, ತುಮಕೂರಿಗೆ ಹೋದರು.

'ಸೆಂಟ್ರಲ್ ಕಾಲೇಜ್ ಡೆ', ಉತ್ಸವಕ್ಕೆ ಮಾಸ್ತಿಯವರೂ ಬಂದರು. ಉಪಾಧ್ಯಾಯ ತೇಲಂಗರಿಗೆ ಪರೀಕ್ಷೆಯ ಫಲಿತಾಂಶ ಗೊತ್ತಾಯಿತು. ಮಾಸ್ತಿಯವರ ಬಳಿ ಬಂದು, ಅವರ ಕಿವಿಯಲ್ಲಿ,

"You have got the first place in the Civil Service Examination. Congratulations. Keep this to yourself"

ಅಂದರು! ಮಾರನೆಯ ದಿನ ಮಾಸ್ತಿ ಮಲ್ಲೇಶ್ವರಕ್ಕೆ ಹೋಗುತ್ತಿದ್ದಾರೆ. ಶೇಷಾದ್ರಿ ಪುರದ ಬಳಿ

ಟೇಟರನ್ನು ಕಂಡರು; ಕೈಮುಗಿದರು. ಆ ಮಾತು ಈ ಮಾತು ಆಯಿತು. ಅವರು ಹೊರಟು ಹೋದರು. ಮಾಸ್ತಿ ತುಮಕೂರಿಗೆ ಬಂದರು. ಮಾವನವರಿಗೊಂದು ತಂತಿ ಕಾಗದ ಬಂತು. "Seenappa first in Civil Service" ಎಂದಿತ್ತು. ಅದರಲ್ಲಿ! ಮಾವ ಸೋದರಳಿಯನನ್ನು ನೋಡಿ,

> ''ಕಂಗ್ರಾಜುಲೇಷನ್ಸ್ ಶೀನಪ್ಪ! ದೇವರು ಕಣ್ಣೆತ್ತಿ ನೋಡಿದರು.''

ಅಂದರು!

> ''ಹುಟ್ಟಿದ ದಿನ ಆರಂಭವಾದ ಬಡತನದ ಕಷ್ಟಗಳ ಜೀವನ ಘಟ್ಟ ಅಂದು ಕೊನೆಗೊಂಡಿತು.''

ಅಂದರು ಮಾಸ್ತಿ!! ಸೋದರ ಮಾವಂದಿರು ಮಾರನೆಯ ದಿನ ರಾಮದೇವರ ದೇವಸ್ಥಾನದಲ್ಲಿ ಪೂಜೆ ಮಾಡಿಸಿದರು. ಪ್ರಸಾದಕ್ಕೆ ಬರಬೇಕೆಂದು ಹತ್ತು ಜನ ಇಷ್ಟರಿಗೆ ಹೇಳಿ ಕಳಿಸಿದರು. ಬಂದ ಹಿರಿಯರೆಲ್ಲ ನನಗೆ (ಮಾಸ್ತಿಯವರಿಗೆ) ಮಾವನಿಗೆ, ಅಭಿನಂದನೆ ನೀಡಿದರು.

> ''ಆಗ ಮಾವಂದಿರು (ಹೆಣ್ಣುಕೊಟ್ಟ ಮಾವಂದಿರು) ಕೃಷ್ಣಸ್ವಾಮಿ ಅಯ್ಯಂಗಾರ್ಯರು ಮಧುಗಿರಿಯಲ್ಲಿ 'ಸಬ್-ಡಿವಿಜನ್' ಅಧಿಕಾರಿಗಳಾಗಿದ್ದರು. ನಾನು ಮಾರನೆಯ ದಿನ ಒಂದು ಬೈಸಿಕಲ್ ತೆಗೆದುಕೊಂಡು ಮಧುಗಿರಿಗೆ ಹೋದೆ. ಅವರಿಗೆ, ನನ್ನ ಸೌಭಾಗ್ಯವತಿಗೆ, ಪರೀಕ್ಷೆ ಫಲಿತಾಂಶ ತಿಳಿಸಿದೆ. ಒಂದು ದಿನ ಅಲ್ಲಿದ್ದು, ಹಿಂತಿರುಗಿದೆನು. ಕೆಲಸದ ಅಪ್ಪಣೆ ಬರಬಹುದೆಂದು ನಿರೀಕ್ಷಿಸಿ ಬೆಂಗಳೂರಿಗೆ ಬಂದೆನು.''

ಎಂದು ಮಾಸ್ತಿಯವರು ಬರೆಯುತ್ತಾರೆ. ಕೊಂಚ ತಡವಾಗಿ ಆಜ್ಞೆ ಬಂತು. ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ''ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್'' ಆದರು!

ಪ್ರಸನ್ನ ಶಿರೋಮಣಿ ಮಾಸ್ತಿ

> ''ದೇವರು ಕೊಡದೆ ಈ ಅರಿವು ಇಲ್ಲ, ಭಕ್ತಿ ಇಲ್ಲ. ಇದು ಮನಸ್ಸಿಗೆ ಬಂದು ನಾನು ಇತ್ತೀಚಿನ ಕೆಲವು ವರ್ಷ ಇಂಥ ಹೊತ್ತಿನಲ್ಲಿ ಎಂದಲ್ಲ, ಎಲ್ಲಿ ತೋಚಿದರೆ ಅಲ್ಲಿ, ಮನಸ್ಸಿನಲ್ಲಿ, ದೈವವನ್ನು ಕುರಿತು ''ನಂಬಿಕೆಯನ್ನು ಕೊಡು, ಭಕ್ತಿಯನ್ನು ಕೊಡು, ಧೈರ್ಯ ಕೊಡು, ಶಕ್ತಿ ಕೊಡು, ಸೇವೆ ಮಾಡಿಸಿಕೋ, ಉದ್ಧಾರಮಾಡು'' ಎಂದು ಬೇಡುವುದನ್ನು ಅಭ್ಯಾಸ ಮಾಡಿಕೊಂಡೆನು. ಆ ಮೇಲೆ ಕೆಲವು ಕಾಲ ''ನೀನು ಇದ್ದೀಯೆ, ನೀನು ನಡೆಸುತ್ತಿದ್ದೀಯೆ, ನೀನು ನೋಡಿಕೊಳ್ಳುತ್ತಿದ್ದೀಯೇ, ನೀನು ಕಾಪಾಡುತ್ತಿದ್ದೀಯೆ'' ಎಂದು ದೈವದಲ್ಲಿ ಒಪ್ಪಿಗೆ ಹೇಳಿಕೊಳ್ಳುವುದನ್ನು ಅಭ್ಯಾಸ ಮಾಡಿದೆನು. ಇತ್ತೀಚಿನ ದಿನಗಳಲ್ಲಿ ''ತಂದೆ ಕಾಪಾಡು, ನಿನ್ನ ಕಾಲ ಮೇಲೆ ಬಿದ್ದಿದ್ದೇನೆ, ಕಾಪಾಡು'' ಎಂದು ಕೇಳಿಕೊಳ್ಳುತ್ತಿದ್ದೇನೆ.

ಎಂಬುದಾಗಿ ಮಾಸ್ತಿಯವರು ತಮ್ಮ ಬಾಳುವೆ ಕುರಿತು ಬರೆದ ಪುಸ್ತಕಕ್ಕೆ ಭರತ ವಾಕ್ಯ ಹಾಡಿದ್ದಾರೆ!

''ಈ ಬುದ್ಧಿ ಹುಟ್ಟಿದ್ದೇ ದೈವದ ಅನುಗ್ರಹ, ದೈವ ತಾನಾಗಿ ಇದನ್ನು ಅನುಗ್ರಹಿಸಿದೆ.''
ಈ ಮನೋಧರ್ಮ, ಈ ನಂಬಿಕೆ, ಈ ಶ್ರದ್ಧೆ, ಆಸ್ತಿಕ್ಯವಲ್ಲವಾದರೆ ಮತ್ತೆ ಯಾವುದು ಅದು? ಪರಮ ಭಾಗವತರ ಶ್ರೇಣಿಗೆ ಸೇರತಕ್ಕವರು ಮಾಸ್ತಿಯವರು.

ದೊಡ್ಡ ಮನೆಯ ಮಾಸ್ತಿ, ಪ್ರತಿವಾದಿ ಭಯಂಕರ ರಾಮಣ್ಣ, ಇಬ್ಬರೂ ಪುಟ್ಟ ಮರಿಗಳು. ತುಂಬ ಹತ್ತಿರವಾಗಿ ಬೆಳೆದರು. ಮಾಸ್ತಿಯವರ ಮನೆಯಲ್ಲೊಂದು ಮರದ ಬಸವಣ್ಣ; ರಾಮಣ್ಣನ ಮನೆಯಲ್ಲಿ ಕೆಲವು ಲೋಹದ ದೇವರ ವಿಗ್ರಹಗಳು. ಮಕ್ಕಳ ಆಟವೆಂದರೆ ದೊಡ್ಡವರು ಮಾಡುವುದರ ಅನುಕರಣ, ಸ್ನೇಹಿತರಿಬ್ಬರೂ ಸೇರಿದರು; ಮರದ ಬಸವಣ್ಣನ ಮೇಲೆ ಲೋಹದ ದೇವರುಗಳನ್ನು ಕೂಡಿಸಿದರು. ಶಿವನ ವಾಹನದ ಮೇಲೆ ವಿಷ್ಣು ಮೂರ್ತಿಗಳು! ಎಳೆಯ ಮಕ್ಕಳಿಗೆ ಶಿವನೂ ಒಂದೇ, ವಿಷ್ಣುವೂ ಒಂದೇ! ಎರಡೂ ದೇವರೆಂಬುದು ಮಾತ್ರ ಅವರಿಗೆ ಗೊತ್ತು; ಸಾಕು. ಈ ದೇವರ ಮೆರವಣಿಗೆಯನ್ನು ಚೂಡಾಮಣಿ ದಂಪತಿಗಳ ಮನೆ ಬಳಿಗೊಯ್ದರು. ಚೂಡಾಮಣಿ ಅಜ್ಜ 'ನಾಲ್ಕು ಖರ್ಜೂರ, ನಾಲ್ಕು ಚೂರು ಸಕ್ಕರೆ ತಟ್ಟೆಯಲ್ಲಿಟ್ಟು, ದೇವರಿಗೆ ಒಪ್ಪಿಸಿದರು. ಅದೇ ಮನೆಯಲ್ಲಿ ಉಪಾಧ್ಯಾಯರೊಬ್ಬರಿದ್ದರು. ಅವರೂ ಎರಡು ಕಲ್ಲು ಸಕ್ಕರೆ ಚೂರನ್ನು ಕೊಟ್ಟರು. ಹೀಗೆ ದಿನವೂ ಆ ಮನೆ ಬಳಿಗೆ ಮೆರವಣಿಗೆ ಹೋಗುತ್ತಿತ್ತು. ''ಅವರೂ ತಪ್ಪದೆ ಏನಾದರೂ ಕೊಡುವರು. ಮೊದಲಿನ ದಿನ ಕೊಟ್ಟಷ್ಟು ಅಲ್ಲ; ಆದರೆ ಏನೂ ಇಲ್ಲ ಅಂತಲೂ ಅಲ್ಲ. ಎಂತೂ ರಾಮಣ್ಣನಿಗೆ, ನನಗೆ, ನಮ್ಮ ದೈವ ಭಕ್ತಿಗೆ ಪ್ರತಿಯಾಗಿ ತಕ್ಷಣ ಫಲ ದೊರೆಯಿತು'' ಎಂದು ಮಾಸ್ತಿಯವರು ಬರೆಯುತ್ತಾರೆ. ಹೀಗೆ ಮಗುವಾದಾಗಿನಿಂದ ದೈವಭಕ್ತಿಯನ್ನು ಬೆಳೆಸಿಕೊಂಡು ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಭಾಗವತ ಶಿರೋಮಣಿಗಳಾದುದರಲ್ಲಿ ಆಶ್ಚರ್ಯವೇನೂ ಇಲ್ಲ.

ಊಟದ ಎಲೆಗಾಗಿ ಬಿಡಿ ಎಲೆ ಬಿಡಿಸಲು ಒಮ್ಮೆ ತೋಪಿಗೆ ಹೋದರು. ಹೇಗೋ ಕೊನೆಯ ಕೊಂಬೆಯವರೆಗೂ ಏರಿಬಿಟ್ಟರು. ಇಳಿಯಲಿಕ್ಕಾಗಲಿಲ್ಲ, ಭಯವಾಯಿತು. ಹೇಗೋ ಕೊಂಬೆಯನ್ನಪ್ಪಿಕೊಂಡು, ಹಿಂದುಮುಂದಾಗಿ ಸರಿದು, ಇಳಿದರು. ''ಇದನ್ನು ನಾನು ನೆನೆದುಕೊಂಡಾಗ ಈಗ, ಇದು ದೈವದ ಕೃಪೆಯೆಂದೇ ಅನ್ನಿಸುತ್ತದೆ'' ಎಂದು ಮಾಸ್ತಿಯವರು ಹೇಳುತ್ತಾರೆ.

ಶಾಲೆಯ ದಿನಗಳಲ್ಲಿ ಒಮ್ಮೆ ಏನೋ ಕಾರಣದಿಂದ ಶಾಲೆಗೆ ಹೊತ್ತಾಗಿ ಹೊರಟರು. ದಾರಿಯಲ್ಲಿ ಉಪಾಧ್ಯಾಯರೆಷ್ಟು ಬಯ್ಯುತ್ತಾರೋ ಅಂದುಕೊಂಡು ''ದೇವರೆ, ಈ ಹೊತ್ತು ಹೇಗಾದರೂ ಮರ್ಯಾದೆ ಉಳಿಸು.'' ಎಂದು ಬೇಡಿಕೊಂಡರು. ಉಪಾಧ್ಯಾಯರ ಪತ್ನಿ ಅಂದು ಹೆತ್ತರಾದ ಕಾರಣ ಅವರು ತಡವಾಗಿ ಬಂದರು. ಮಾಸ್ತಿಯವರು ಈ ಸಂದರ್ಭ ಕುರಿತು ''ನಾನೇನೋ ಈ ಪ್ರಸಂಗ ದೇವರು ನನ್ನ ಮೊರೆಯನ್ನು ಕೇಳಿ ನನ್ನ ಮರ್ಯಾದೆ ಉಳಿಸಿದ ಮೊದಲ ಸಂದರ್ಭ ಎಂದು ಈಗಲೂ ನನ್ನ ಮನಸ್ಸಿನಲ್ಲಿ ಉಳಿದಿದೆ'' ಅನ್ನುತ್ತಾರೆ.

ಕಾಕನಹಳ್ಳಿಯಲ್ಲಿ ಮಾಸ್ತಿಯವರು ಹೊಳೆಯಲ್ಲಿ ಈಜಲಾರಂಭಿಸಿದರು. ಪ್ರವಾಹಕ್ಕೆ ಸಿಕ್ಕಿಬಿಟ್ಟರು. ಹೇಗೋ ಘಟ್ಟದ ಪಕ್ಕದ ಕಲ್ಲನ್ನು ಹಿಡಿದು ಏರಿ ಮೇಲಕ್ಕೆ ಬಂದರು. ''ನನ್ನ ಜೀವನದಲ್ಲಿ ದೈವ ತಾನಾಗಿ ಕಾಪಾಡಿತು ಎಂಬ ಭಾವ ನನಗೆ ಹಲವು ಸಲ ಬಂದಿದೆ'' ಇದು ಇಂತಹ ಒಂದು ಸಂದರ್ಭವೆಂದು ಚಿತ್ರಿಸುತ್ತಾರೆ ಮಾಸ್ತಿ.

ಇಂಗ್ಲಿಷ್ ಲೋಅರ್ ಸೆಕೆಂಡರಿ ಪರೀಕ್ಷೆಗೆ ಮಾಸ್ತಿಯವರು ಮೈಸೂರಿಗೆ

ಬಂದಿದ್ದರು. ಅಲ್ಲಿ ಇಲ್ಲಿ ಅಲೆಯುತ್ತ ದೊಡ್ಡ ಮಾರ್ಕೆಟ್ ಬಳಿ ಬಂದರು; ತಲೆಯೆತ್ತಿದರು; ಕಂಬದ ಮೇಲಿನ ಗಡಿಯಾರ ಕಣ್ಣಿಗೆ ಬಿತ್ತು. ಇನ್ನೇನು ಹತ್ತು ಘಂಟೆಯ ಸಮಯ. ಪರೀಕ್ಷೆಯ ಆರಂಭದ ದಿನ ಅಂದು! ಮನೆಗೆ ಓಡಿದರು; ಪ್ರವೇಶ ಪತ್ರವನ್ನು ತೆಗೆದುಕೊಂಡು ಮಹಾರಾಜ ಕಾಲೇಜಿಗೆ ಓಡಿದರು. ಸಕಾಲದಲ್ಲಿ ಪರೀಕ್ಷೆಯ ಕೋಣೆ ಪ್ರವೇಶಿಸಿದರು. ಐದು ನಿಮಿಷ ಸುಧಾರಿಸಿಕೊಂಡು ಉತ್ತರ ಬರೆದು ಬಂದರು. ''ಈ ನಿಷ್ಕಾರಣ ದೇವ ವ್ಯಾಪಾರ ಇಲ್ಲದಿದ್ದರೆ ನನ್ನ ಜೀವನ ಏನಾಗುತ್ತಿತ್ತೋ ಹೇಳುವಂತಿಲ್ಲ . . . ಅದನ್ನು ನಡೆಸುತ್ತಿದ್ದ ದೈವ, ತಾನೇ ತನ್ನಿಚ್ಛೆಯಿಂದ ದಾರಿಯ ಮೇಲಕ್ಕೆ ದೂಡಿತು.'' ಇದು ಮಾಸ್ತಿಯವರು ಹೇಳುವುದು.

ಪಶ್ಚಿಮವಾಹಿನಿಯಲ್ಲಿ ಮಾಸ್ತಿಯವರಿಗೆ ಮದುವೆ ಆಯಿತು. ಮದುವೆಯ ಹಿಂದಿನ ಸಂಜೆ ಶ್ರೀ ರಂಗನಾಥನ ದೇವಾಲಯಕ್ಕೆ ಹೋಗಿ ಅಮ್ಮನವರ ಸನ್ನಿಧಿಗೆ ಹೋದರಂತೆ.

> ''ನಾನು ಅಮ್ಮನವರ ಸನ್ನಿಧಿಯಲ್ಲಿ ಅದೇನೋ ಒಂದು ಶರಣಭಾವವನ್ನು ಅನುಭವಿಸಿದೆನು. ಅಂತರ್ಯದಲ್ಲಿ ತಾಯಿಗೆ ಶರಣು ಹೋಗಿ, ''ನನ್ನ ಗೃಹಸ್ಥ ಜೀವನವನ್ನು ಚೆನ್ನಮಾಡು ಓ ತಾಯಿ'' ಎಂದು ಬೇಡಿಕೊಂಡೆನು. ಎಂದು ಹೇಳಿ, ಮುಂದುವರಿಯುತ್ತಾ ಮಾಸ್ತಿಯವರು ಹೀಗೆ ವಿವರಿಸುತ್ತಾರೆ :
>
> ''ಅಮ್ಮನವರ ಸನ್ನಿಧಿಯಲ್ಲಿ ನಿಂತಾಗ ಈ ಶರಣಭಾವ ತಾನಾಗಿ ರೂಪುಗೊಂಡಿತು. ಜೀವ ತಟ್ಟನೆ ದೈನ್ಯವನ್ನು ಅನುಭವಿಸಿತು. ತಾಯ ಪಾದವನ್ನು ಅಪ್ಪಿಕೊಂಡಿತು. ಈ ಪ್ರಾರ್ಥನೆಯನ್ನು ಮಾಡಿದ ಪರಿಣಾಮ ಅಂದಿನಿಂದ ಇಂದಿನವರೆಗೆ ಜೀವನದಲ್ಲಿ ದೈವ, ಅದರ ರಕ್ಷಣೆ, ಇವುಗಳ ಯೋಚನೆ ಬಂದಾಗ ನನ್ನ ಮನಸ್ಸಿಗೆ ತೀರ ಮೊದಲಲ್ಲಿ ಬರುವ ಚಿತ್ರ ಶ್ರೀರಂಗಪಟ್ಟಣದ ಅಮ್ಮನವರ ಸನ್ನಿಧಿ, ಅಲ್ಲಿ ತಾಯ ಮೂರ್ತಿ, ಪ್ರಸನ್ನವಾಗಿ ಕುಳಿತಿರುವ ರೀತಿ, ತಾಯಿ ಎತ್ತಿರುವ ಅಭಯ ಹಸ್ತ, ಇವುಗಳ ಚಿತ್ರ.''

ಮಾಸ್ತಿಯವರ ತಾಯಿಯ ತಂದೆ - ತಾತ ಸ್ವರ್ಗಸ್ಥರಾದ ಸಮಯದಲ್ಲಿ ಅವರ ಬಾಳ, ಸಾವಿನ, ಮಾತನ್ನೆತ್ತಿ ಆಡಿರುವ ಮಾತುಗಳನ್ನು ಓದುವಾಗ ಎಂತಹವರಿಗಾದರೂ ದೇವರಲ್ಲಿ ನಂಬಿಕೆ, ಭಕ್ತಿ, ಉಂಟಾಗುತ್ತದೆ.

> ''ಮನುಷ್ಯ ತನ್ನನ್ನು ನಡೆಸುವ ದೈವ ಯಾವ ದಾರಿಯಲ್ಲಿ ನಡೆಸುತ್ತದೆ, ಆ ದಾರಿಯಲ್ಲಿ ನಡೆಯಬೇಕು. ದೈವ ನಡೆಸುತ್ತಿದೆ ಎಂದು ಧೈರ್ಯದಿಂದ ಇರಬೇಕು. ಕಷ್ಟವಾಯಿತು, ಇದು ದೈವದ ಇಚ್ಛೆ ಎಂದು ಸಹಿಸಿಕೊಳ್ಳಬೇಕು. ಕಾಪಾಡು ಎಂದು ಬೇಡಿದವನನ್ನು ದೈವ ಕೈಬಿಡದೆ ಕಾಯುತ್ತದೆ. ಈ ವಿಷಯದಲ್ಲಿ ಸಂದೇಹವಿಲ್ಲ. ದೈವ ಭಯಕೃತ್, ಭಯನಾಶನ.''

ಸಿವಿಲ್ ಸರ್ವಿಸ್ ಪರೀಕ್ಷೆಗೆ ಕೂತ ಕಡೆಯ ದಿನ, ಹಿಂದಿನ ದಿನ ಉತ್ತರ ಸರಿಯಾಗಿ ಬರೆಯಲಿಲ್ಲವೆಂದು ಮಾಸ್ತಿಯವರಿಗೆ ಬಹಳ ದುಃಖವಾಯಿತು. ಇಂದು ಹೋಗಿ ನಾನು ಮಾಡುವುದಾದರೂ ಏನೆಂದು ಮೀನಮೇಷ ಮಾಡುತ್ತಾ ನಿಂತಿರುವಾಗ ಮಿತ್ರ ವೆಂಕಟರಂಗನ್ ಬಂದು ಧೈರ್ಯ ಹೇಳಿ, ''ಏಳು, ಹೊರಡು ಪರೀಕ್ಷೆಗೆ'' ಎಂದು ಗದರಿಸಿದರು.

> ''ಈ ಸಂಗತಿ ನನ್ನ ಜೀವನದ ಒಂದು ಸಂಧಿ ಸಮಯ ಎಂದು ನನಗೆ ಕಂಡಿದೆ.... ಇದು ನನಗೆ ದೈವ ಬಾಳನ್ನು ನಡೆಸುವುದರಲ್ಲಿ ಪ್ರತ್ಯಕ್ಷವಾಗಿ ಕೈಹಾಕಿದ

ಒಂದು ಸಂದರ್ಭ ಎಂದು ಕಂಡಿದೆ. ವೆಂಕಟರಂಗನ್ ಬಾರದೆ ಇದ್ದಿದ್ದರೆ ನಾನು ಪರೀಕ್ಷೆಗೆ ಆ ಸಮಾಧಾನದಿಂದ ಹೋಗುತ್ತಿರಲಿಲ್ಲ. ಉತ್ತರಗಳನ್ನು ಆ ಸುಖದಿಂದ ಬರೆಯುತ್ತಿರಲ್ಲಿಲ್ಲ. ಸ್ಥಾನದೊರೆತರೂ ದೊರತೀತು ಏಕೆ? ಐವತ್ತರಲ್ಲಿ ಎರಡು ಪ್ರಶ್ನೆ ಕೆಟ್ಟರೆ ಉಳಿದದ್ದರ ಬೆಲೆ ಈ ಎರಡರ ನಷ್ಟವನ್ನು ಮುಚ್ಚಲಾರದೆ? ಎಂಬ ಧೈರ್ಯದಲ್ಲಿ ನಡೆಯುವುದಕ್ಕೆ ಇಲ್ಲದೆ ಕೆಟ್ಟೆನೇ ಎಂಬ ಖೇದದಲ್ಲಿ ವ್ಯರ್ಥವಾಗಿ ವಿಷಣ್ಣನಾಗುತ್ತಿದ್ದೆನು, ನನ್ನ ಜೀವನದ ಇನ್ನು ಕೆಲವು ಸಂದರ್ಭಗಳು ನನಗೆ ಹೀಗೆಯೇ ದೈವ ಸ್ಪಷ್ಟವಾಗಿ ಕೈಯಾಡಿಸಿದ ಸಂದರ್ಭಗಳು ಎಂದು ಕಂಡು ಬಂದಿದೆ.''

ಎಂಬುದಾಗಿ ಮಾಸ್ತಿಯವರು ಬರೆಯುತ್ತಾ ತಾವು ಬರೆದ ಈ ಗೀತೆಯನ್ನು ಹಾಡಿದ್ದಾರೆ :

''ನೀನೆನ್ನ ಜೊತೆಯೊಳೇ ಎಡಬಿಡದೆ ನಡೆದುದನು ಅರಿಯೆನಯ್ಯಾ ನಾನಿನ್ನೆವರಂ''

''ಕರುಣೆ ಕಾಣದೆ ಮರುಗಿದೆ ಮನವು''

ಎಂದು ಹಾಡಿಕೊಳ್ಳುತ್ತ ಹನುಮನಗಿರಿಯ ಭುಜದ ಕಾಲುದಾರಿಯಲ್ಲಿ ನಡೆಯುತ್ತಿದ್ದಾರೆ. ಸಣ್ಣ ಮರವೊಂದರ ಬಳಿ ಬಂದಾಗ ಮರದ ಕೊಂಬೆಯುದ್ದಕ್ಕೂ ಹಾವೊಂದು ಮಲಗಿದೆ. ಮಾಸ್ತಿಯವರ ಹೃದಯ ಝಲ್ಲೆಂದಿತು; ಅಪಾಯವೇನೂ ಆಗಲಿಲ್ಲ. ಮನೆಗೆ ಬಂದರು. ''ಕರುಣೆ ಕಂಡಿತು'' ಎಂಬ ಹಾಡನ್ನು ಕಟ್ಟಿದರು!

ಇನ್ನೊಂದು ದಿನ ಸಂಜೆ; ನರಹರಿರಾಯರ ಗಿರಿಯ ಹಿಂದುಗಡೆ ಡೊಂಗರಿನಲ್ಲಿ ನಡೆಯುತ್ತಿದ್ದಾರೆ. ಹಾವೊಂದು ಬಿದ್ದಿತ್ತು. ಸತ್ತಿರಬಹುದೆಂದು ಭಾವಿಸಿದರು. ''ಹಾವಿನಬಾಯಿ ತೆರೆಯಿತು. ಅದರ ಸೀಳುನಾಲಿಗೆ ಹೊರಕ್ಕೆ ಚಾಚಿತು'' ಮಾಸ್ತಿಯವರಿಗೆ 'ಮೈ ಝುಮ್ಮೆಂದಿತು''.

''ಇಷ್ಟನಾದ ಒಬ್ಬ ಮನುಷ್ಯ, ಬೇಡ ಬೇಡ (ದಾಟಬೇಡ) ಎಂದು ಕೈ ಆಡಿಸಬಹುದಾದಂತೆ ಹಾವು ತನ್ನ ನಾಲಿಗೆಯನ್ನು ಚಾಚಿ, ಅತ್ತ ಇತ್ತ ಆಡಿಸಿದ್ದು ನನಗೆ ಜೀವನದ ರಕ್ಷಕ ಸತ್ವದ ಕರುಣೆಯ ಕುರುಹು ಎಂದು ನನಗೆ ಈಚೆಗೆ ತೋರಿದೆ''

ಅನ್ನುತ್ತಾರೆ ಮಾಸ್ತಿಯವರು. ಕರುಣಾನಿಧಿಯಾದ ಪರಮಾತ್ಮ ಯಾವ ಸಮಯದಲ್ಲಿ, ಯಾವ ರೂಪದಲ್ಲಿ, ತನ್ನ ಕರುಣೆಯನ್ನು ತನ್ನ ಭಕ್ತರಿಗೆ ತೋರಿಸುತ್ತಾನೋ ಬಲ್ಲವರಿಲ್ಲ.

''ಗೀತಾ ಗ್ರಂಥದ ವಿಚಾರ ಸರಣಿ'' ಎಂಬ ಲೇಖನ ಬರೆದರು ಮಾಸ್ತಿಯವರು. ಗೀತೆಯನ್ನು ಮತ್ತಷ್ಟು ಅಭ್ಯಾಸ ಮಾಡಿದರು.

''ಗೀತೆಯ ಭಾಷಾಂತರವೊಂದನ್ನು ಸಿದ್ಧಪಡಿಸಿದ್ದೇನೆ. ಅದಕ್ಕೆ ಉಪೋದ್ಘಾತವಾಗಿ ಹೇಳಬೇಕಾದ ಸಂಗತಿಗಳ ಟಿಪ್ಪಣಿಗಳನ್ನು ಮಾಡಿಕೊಂಡಿದ್ದೇನೆ. ದೈವಕೃಪೆಯಿಂದ ಪುಸ್ತಕ ಇನ್ನು ಮುಂದೆ ಪೂರ್ಣ ಆಗಬೇಕು''

ಎಂದು ಹೇಳುತ್ತಾರೆ.

''ಕೋಲಾರದಲ್ಲಿ ಕುದುರೆ ಏರಿ ಹೋಗುತ್ತಿದ್ದ ಒಂದು ದಿನ ಆ ಕುದುರೆ ತನ್ನ ಮಗುವನ್ನು ಬೆನ್ನಮೇಲೆ ಕೂಡಿಸಿಕೊಂಡು ಆಡಿಸುವುದಕ್ಕಾಗಿ ದೇವರು ಧರಿಸಿರುವ ರೂಪ.''

ಅಂದುಕೊಂಡರಂತೆ ಮಾಸ್ತಿ! ಅನೇಕ ಸಾರಿ ಈ ಭಾವ ಅವರಿಗೆ ಬರುತ್ತಿತ್ತಂತೆ. ಕಾರ್ಡಿನಲ್ ನ್ಯೂಮನ್ ವಿಚಾರದ ಮಾತನ್ನೆತ್ತಿ, ಆತ ''ಸೃಷ್ಟಿಯಲ್ಲಿರುವ ತತ್ವ ಎರಡೇ; ಒಂದು ನಾನು; ಉಳಿದದ್ದೆಲ್ಲ ನನ್ನ ದೇವರು'' ಎಂದು ಹೇಳಿದನಂತೆ. ''ನನ್ನ ಅನುಭವ ಈ ಅನುಭವ ಒಂದುಗೂಡಿದವು. ಆಮೇಲೆ ನಾನು ಯಾರು ನಮಸ್ಕಾರ ಮಾಡಿದರೂ ಪ್ರತಿ ನಮಸ್ಕಾರವನ್ನೇ ಮಾಡತೊಡಗಿದೆನು''ಅನ್ನುತ್ತಾರೆ. ಅವರು ಎಳೆಯ ಮಕ್ಕಳಿಗೆ ಸಹ ಕೈ ಮುಗಿದು ಹರಸುವರು!

ದೇವರನ್ನು ಕುರಿತು ತಮ್ಮ ನಿಲುವುವೇನೆಂಬುದರ ವಿಚಾರವಾಗಿ ಮಾಸ್ತಿಯವರು ವಿಸ್ತಾರವಾಗಿ ಬರೆದಿದ್ದಾರೆ. ''ಬೆಂಗಳೂರಿನ ಕಾಲೇಜ್ ದಿನಗಳಲ್ಲಿ ನಾನು ಒಂದರ್ಥ ಅಪನಂಬಿಕೆ ಎನ್ನಬಹುದಾದ ಮನೋಧರ್ಮದಲ್ಲಿದ್ದೆ'' ಎಂದು ಹೇಳುತ್ತಾ ಅವರು ಸಂಪ್ರದಾಯದಂತೆ ನಡೆಯುವ ದೇವರ ಪೂಜೆ, ಸಮಾಶ್ರಮಣ, ದೇವರ ಬೀದಿ ಉತ್ಸವ, ಇತ್ಯಾದಿಗಳಲ್ಲಿ ಉದಾಸೀನರಾಗಿದ್ದರಂತೆ. ದೇವಾಲಯಕ್ಕೆ ಒಂದು ದಿನವಾದರೂ ಹೋಗಲಿಲ್ಲವಂತೆ. ದೈವವನ್ನು ಕುರಿತು ತಮ್ಮದೇ ಒಂದು ಭಾವವನ್ನು ಬೆಳೆಸಿಕೊಂಡರು. ೧೯೨೨ ರ ಕೊನೆಗೆ ಕಾಯಿಲೆ ಬಿದ್ದರು. ೧೯೨೩-೨೪ರ ವೇಳೆಗೆ ''ಜೀವ ದೈವವನ್ನು ಕುರಿತು ಬಹು ವಿವಿಧ ಯೋಚನೆಮಾಡಿ ಒಂದು ಗುರಿಯತ್ತ ನಡೆದಿತ್ತು'' ಅನ್ನುತ್ತಾರೆ.

ಅವರು ಮಧುಗಿರಿಯಲ್ಲಿದ್ದಾಗ ತಿರುಪತಿ ಯಾತ್ರೆಯ ಮಾತು ಬಂತು. ಗೋಡೆಗೆ ಶ್ರೀನಿವಾಸ ದೇವರ ಪಟ ತೂಗುಹಾಕಿತ್ತು.

> ''ನನ್ನ ದೇವರು ಇಲ್ಲೆ ಇದ್ದಾರೆ...ತಿರುಪತಿಗೆ ಹೋಗಬೇಕಾದ್ದಿಲ್ಲ'' ಅಂದುಬಿಟ್ಟರು.

ಒಂದು ದಿನ ಬೆಂಗಳೂರು 'ಮಹಿಳಾ ಸಮಾಜದ'ದ ಪಕ್ಕದ ಬೀದಿಯಲ್ಲಿ ಬರುತ್ತಾ ''ದೇವರು ಅಂದರೆ ಏನು'' ಎಂದು ವಿಚಾರ ಮಾಡುತ್ತಿದ್ದಾರೆ ಮಾಸ್ತಿ. ಹರಿದಾಸರೊಬ್ಬರು ಕೆ.ಎಚ್.ರಾಮಯ್ಯನವರ ಮನೆಗೆ ಹೋಗುತ್ತಾ,

> ''ನಂಬಿಕೆಟ್ಟವರಿಲ್ಲವೋ ರಂಗಯ್ಯನಾ
> ನಂಬದೆ ಕೆಟ್ಟರೆ ಕೆಡಲೀ''

ಎಂದು ಹಾಡಿದ್ದನ್ನು ಕೇಳಿದರು. ಈ ಸಂದರ್ಭವನ್ನು ಕುರಿತು ಮಾಸ್ತಿಯವರು ಹೇಳುವುದನ್ನಾಲಿಸಿ:

> ''ಇದನ್ನು ನಾನು ಈ ಮೊದಲು ಕೇಳಿದ್ದೆನು. ಆದರೆ ಆ ದಿನ ಅದನ್ನು ಕೇಳಿಬಂದ ಅನುಭವ ವಿಚಿತ್ರವಾಗಿತ್ತು. ನಾನು ಒಂದು ಪ್ರಶ್ನೆ ಕೇಳಿದಂತೆ, ಪ್ರಾಜ್ಞನಾದ ಎದುರಾಳಿ ಅದಕ್ಕೆ ಉತ್ತರ ಕೊಟ್ಟಂತೆ, ಇದ್ದ ಇದರ ರೀತಿಯಿಂದ ನನ್ನ ಮೇಲೆ ಗಾಢ ಪರಿಣಾಮ ಮಾಡಿತು.''

ಇಷ್ಟಕ್ಕೇ ನಿಲ್ಲಿಸಲಿಲ್ಲ ಮಾಸ್ತಿಯವರು,

> ''ತಂದೆ ತಾತಂದಿರ ಈ ನೆನಪು (ದೇವರನ್ನು ನಂಬಿ ನಡೆದದ್ದು) ಹರಿದಾಸರ ಹಾಡಿಗೆ ನಿದರ್ಶನ ಎಂಬಂತೆ ಇದ್ದವು. ಆ ದಿನ ನಾನು 'ನಂಬಿ ನಡೆಯುವುದೇ ದಾರಿ' ಎಂಬ ಸತ್ಯವನ್ನು ಮನಗಂಡೆನು''

ಎಂದು ಹೇಳುತ್ತಾರೆ.

ಮಾಸ್ತಿಯವರು ರಾಮಾಯಣ ಪಾರಾಯಣವನ್ನಾರಂಭಿಸಿದರು. 'ದೈವಕೃಪೆಯಿಂದ ಅದು ಇದುವರೆಗೆ ನಡೆದುಬಂದಿದೆ' ಅನ್ನುತ್ತಾರೆ. ಅಗಡಿ ಸಾಧುಗಳ

ಅನುಗ್ರಹದ ಕುರುಹಾಗಿ ಬಂದ ಪ್ರಸಾದ, ರಾಮಾನುಜಾಚಾರ್ಯರ ದರ್ಶನ, ಪ್ರತಿವರ್ಷ ತಿರುಪತಿ ಯಾತ್ರೆ ಮಾಡಬೇಕೆಂಬಾಸೆ, ನಂಜನಗೂಡಿನ ಯಾತ್ರೆಗಳ ಫಲವಾಗಿ ನಂಜನಗೂಡು ನಂಜುಂಡೇಶ್ವರ ತಿರುಪತಿಯ ಶ್ರೀನಿವಾಸನೇ ಎಂಬ ಅನುಭವವಾದದ್ದು, ಅವರು ಹೊತ್ತ ನೀರು ಶ್ರೀನಿವಾಸನ ಅಭಿಷೇಕದ ಮುಕ್ತಾಯ ತೀರ್ಥವಾದದ್ದು-ಇತ್ಯಾದಿಗಳನ್ನೆಲ್ಲ ವಿವರಿಸಿದ ಮೇಲೆ ಮಾಸ್ತಿಯವರು ಹೇಳುವುದನ್ನು ಕೇಳಿ:

''ದೈವ ಉಂಟು ಎಂಬ ವಿಷಯ ನನಗೆ ಮೂರನೆಯ ಬಾರಿ ಸಿದ್ಧಾಂತ ಆಯಿತು. ಅಂದಿನಿಂದ ಈಚೆ ನಾನು ಈ ವಿಷಯದಲ್ಲಿ ಸಂದೇಹ ಪಟ್ಟಿಲ್ಲ. ನಂಬಿಕೆ ಆ ಕ್ಷಣ ಭದ್ರ ಆದಂತೆ ಅಂದಿನಿಂದ ಇಂದಿನವರೆಗೆ ಕ್ಷಣ ಬಿಡದೆ ಇದ್ದಿದೆ ಎಂದಲ್ಲ. ಜೀವನದ ಏರು-ಬೀಳು, ಹಿಗ್ಗು-ತಗ್ಗಿನಲ್ಲಿ ಎದ್ದು-ಬಿದ್ದು, ಹಿಗ್ಗಿ-ತಗ್ಗಿ, ನಂಬಿಕೆ ಉಯ್ಯಾಲಾಡಿದೆ. ಆದರೆ ಯಾವ ಕ್ಷಣದಲ್ಲೂ ಅದು ಅಳಿದಿಲ್ಲ.''

ತೊಂಡನೂರು ಕೆರೆಯಲ್ಲಿ (ಮೋತಿ ತಲಾವ್ ಎಂದು ಅದಕ್ಕೆ ಹೆಸರು) ಮಾಸ್ತಿ, ರಂಗಣ್ಣ, ಇಬ್ಬರೂ ಸ್ನಾನಕ್ಕೆ ಹೋದರು. ಈಜಲು ಮಾಸ್ತಿ ಕೆರೆಗೆ ಇಳಿದರು. ಮುಳುಗಿದರು, ಎದ್ದರು; ಭಯವಾಯಿತು. ''ಯಾಕೋ ಸೋತೆಯಾ? ಹಿಡಿ ಇದನ್ನು'' ಎಂದು ಹೇಳುತ್ತಾ ಒಗೆಯುತಿದ್ದ ಬಟ್ಟೆಯನ್ನೆಸೆದರು ರಂಗಣ್ಣ. ಮಾಸ್ತಿಯವರು ಆ ಬಟ್ಟೆಯ ಕೊನೆ ಹಿಡಿದರು. ರಂಗಣ್ಣ ಈ ಕೊನೆ ಹಿಡಿದು ಎಳೆದರು. ಮಾಸ್ತಿಯವರು ಕಟ್ಟೆ ಮುಟ್ಟಿದರು.

ಮತ್ತೆ ಇಪ್ಪತ್ತು ವರ್ಷಗಳ ನಂತರ ಮಾಸ್ತಿ, ರಂಗಣ್ಣ ಇಬ್ಬರೂ ಮಾಸ್ತಿಹಳ್ಳಿಯ ಬಳಿ ಬಾಳಿಗಾನಹಳ್ಳಿಗೆ ಮದುವೆಯೊಂದಕ್ಕೆ ಹೋದರು, ರಾತ್ರಿ, ಕತ್ತಲು, ಜಲಶಂಕೆ ತೀರಿಸಿಕೊಳ್ಳಲು ಮಾಸ್ತಿ ಓಣಿಯೊಂದರ ಮೂಲಕ ಬಯಲಿಗೆ ಹೊರಟರು. ರಂಗಣ್ಣನವರೂ ಅವರ ಹಿಂದೆ ಹೊರಟರು. ಹೊಲದಲ್ಲಿ ನಾಲ್ಕು ಹೆಜ್ಜೆ ಹೋದರು ಮಾಸ್ತಿ.

''ಕತ್ತಲಲ್ಲಿ ಎಷ್ಟು ದೂರ ಹೋಗುತ್ತೀಯಪ್ಪಾ. ಅಲ್ಲೇ ಕೂತುಕೋ'' ಅಂದರು ರಂಗಣ್ಣ. ಮಾಸ್ತಿ ಕೂತರು; ಇಬ್ಬರೂ ಹಿಂತಿರುಗಿದರು. ಬೆಳಗ್ಗೆ ಅದೇ ಓಣಿಯ ಮೂಲಕ ಇಬ್ಬರೂ ಕೆರೆಗೆ ಹೋಗುತ್ತಿದ್ದಾರೆ. ಅಲ್ಲೊಂದು ಬಾವಿ. ಹಿಂದಿನ ರಾತ್ರಿ ಮಾಸ್ತಿಯವರು ಇನ್ನೆರಡು ಹೆಜ್ಜೆ ಇಟ್ಟಿದ್ದರೆ ಆ ಬಾವಿಯೊಳಕ್ಕೆ ಬೀಳುತ್ತಿದ್ದರು. ಹಾಳುಬಾವಿ, ಇಪ್ಪತ್ತು ಅಡಿಗಳ ಆಳ. ಕೆಳಗೆ ಬದಿ.

''ಅಪಾಯ ಏನಿದೆಯೆಂದು ಕಾಣದೆಯೇ ರಂಗಣ್ಣ ನನ್ನನ್ನು ತಡೆದಿದ್ದರು. ನನ್ನ ಪ್ರಾಣವನ್ನು ಉಳಿಸಿದ್ದರು,''

ಎಂದು ಮಾಸ್ತಿಯವರು ವಿವರಿಸುವಾಗ ''ನಿಮಿತ್ತ ಮಾತ್ರಂ ಭವ ಸವ್ಯಸಾಚಿ'' ಎಂದ ಭಗವಂತನ ವಾಕ್ಯ ನೆನಪಿಗೆ ಬರುತ್ತದೆ.

ಮಾಸ್ತಿಯವರೊಮ್ಮೆ (೧೯೩೩) ಅನಂತಪುರಕ್ಕೆ ಹೋದರು, ಕೊಂಚ ದೂರ ಸುತ್ತಾಡುವುದವರ ಅಭ್ಯಾಸ. ಹಾಗೆ ಹೊರಟಿದ್ದಾರೆ; ರೈಲು ದಾರಿ, ಒಂದು ರೈಲು ಸೇತುವೆ. ಗುಂತಕಲ್ ಕಡೆಯಿಂದ ಅನಂತಪುರಕ್ಕೆ ರೈಲು ಬರುತ್ತದೆ. ಮಾಸ್ತಿ ಸೇತುವೆ ದಾಟಿ ಸ್ಟೇಷನ್ ಕಡೆ ಬರುತ್ತಿದ್ದಾರೆ. ರೈಲು ಬರುವ ಹೊತ್ತು. ದೂರದಲ್ಲಿ ಸೇತುವೆಯ ಕಡೆ ನಾಲ್ವರು ಮಕ್ಕಳು ಬರುತ್ತಿದ್ದಾರೆ ಸೇತುವೆ ಕಡೆಗೆ; ಅವರ ಜೊತೆಯಲ್ಲಿ ಮಾಸ್ತಿಯವರ ಕಿರಿಯ ಮೈದುನನ ಹೆಸರನ್ನು ಹಿಡಿದು ಕೂಗಿದರು. ಕೂಗವರಿಗೆ ಕೇಳಿಸಲ್ಲಿಲ್ಲ.

''ನೀನು ಅವರನ್ನು ತಡೆದು ಕಾಪಾಡುವಂತಿಲ್ಲ. ದೇವರು ರಕ್ಷಿಸಲಿ

ಅಂದುಕೋ ನಿನ್ನಿಂದಾಗುವುದಷ್ಟೇ. ರಕ್ಷಿಸುವುದು ಅವನ ಭಾರ.''

ಎಂದು ಮಾಸ್ತಿಯವರ ಮನಸ್ಸಿಗೆ ತೋರಿತು. ಕೊಡಲೆ ಅವರು ''ಈ ಮಕ್ಕಳಿಗೆ ಸೇತುವೆಯ ಮೇಲೆ ಹೋಗದಂತೆ ಬುದ್ಧಿ ಕೊಡು'' ಎಂದು ದೇವರನ್ನು ಬೇಡಿದರು. ದೇವರು ಮಕ್ಕಳನ್ನು ಕಾಪಾಡಿದ! ಹೀಗೆ ಬೇಡುವ ಬುದ್ಧಿ ಮಾಸ್ತಿಯವರಿಗೆ ಬಂದದ್ದೂ ದೇವರ ಪ್ರೇರಣೆಯಿಂದ! ಇದು ಮಾಸ್ತಿಯವರ ನಂಬಿಕೆ. ಮಾಡುವ ಕೆಲಸ ಮಾಡುವುದು; ದೇವರ ಚಿತ್ತವೆಂದು ಸಮಾಧಾನವಾಗಿರುವುದು; ಇದು ಅವರ ಜೀವನದ ಸೂತ್ರ.

ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಐದು ವರ್ಷಗಳ ಕಾಲ ಮಾಸ್ತಿಯವರು ದುಡಿದರು, ದಣಿದರು. ಆದರೆ ಆ ಕೆಲಸದಿಂದಾದ ಫಲವನ್ನು ಅವರ ಮಾತಿನಿಂದಲೇ ಕೇಳಬೇಕು.

> ''ಪರಿಷತ್ತಿನ ಕೆಲಸಕ್ಕಾಗಿ ನಾಡಿನ ತೀರ ದೂರದ ಸ್ಥಳಗಳಿಗೆಲ್ಲ ಹೋಗಿ ನಾನು ಒಟ್ಟು ನಮ್ಮ ಜನತೆಯೊಂದಿಗೇ ಬಾಂಧವ್ಯ ಬೆಳೆಸುವ ಭಾಗ್ಯವನ್ನು ಅನುಭವಿಸಿದೆನು. ನೂರು ಸ್ಥಳದಲ್ಲಿ, ನೂರು ಮನೆಯಲ್ಲಿ, ಮನೆಯ ಹಿರಿಯ ಎಂಬಂತೆ, ಬಂಧು ಎಂಬಂತೆ, ಮರ್ಯಾದೆಯನ್ನು, ಆದರವನ್ನೂ, ನಾನು ಅನುಭವಿಸಿದ್ದೇನೆ....... ಈ ಎಲ್ಲ ಮನೆಗಳಲ್ಲೂ ದೈವ ನನಗೆ ಅನ್ನ ಕೊಟ್ಟು ಆದರ ತೋರಿ, ನನ್ನ ಉಸಿರನ್ನು ಅಕ್ಕರೆಯಿಂದ ಕಾಪಾಡಿತು. ಬಾಲ್ಯದಲ್ಲಿ ಅನ್ನ ಇಲ್ಲದ್ದರಿಂದ ದೈನ್ಯದಿಂದ, ಏಳು ಮನೆಯಲ್ಲಿ ಉಂಡ ನಾನು ವಯಸ್ಸಿನಲ್ಲಿ ಅನ್ನ ಇದ್ದೂ ನೆಪಕ್ಕೆ ನನ್ನದಾದ ಮನೆಯಲ್ಲಿ ಗೌರವದ ಅತಿಥಿಯಾಗಿ ಅನ್ನವನ್ನು ಉಂಡೆನು . ಅಷ್ಟೇ ಗೌರವದ ಅತಿಥಿಯಾಗಿ ನೂರು ಮನೆಯಲ್ಲಿ ಅನ್ನವನ್ನು ಕಂಡೆನು. ಯಾವ ಮನೆಯಲ್ಲೂ ಒಂದು ಜೀವಕ್ಕೆ ಆಹಾರವನ್ನು ಒದಗಿಸುವುದು ಒಂದೆ ಅನ್ನದಾತ ದೈವ. ನನ್ನ ಜೀವನದಲ್ಲಿ ಹೀಗೆ ನನಗೆ ನೂರು ರೂಪದಿಂದ, ನನ್ನದೆಂಬ ಈ ಬಂಧುಗಣವೆಂಬ, ನೂರು ಮನೆಗಳಲ್ಲಿ ಆಹಾರ ಒದಗಿಸಿದ ಸಹಸ್ರಶೀರ್ಷ ಅನ್ನಪೂರ್ಣತ್ವಕ್ಕೆ ನಮೋ ನಮಃ''

ಅನ್ನಕ್ಕೂ ಬ್ರಹ್ಮಕ್ಕೂ, ವ್ಯತ್ಯಾಸವನ್ನೇ ಕಾಣದ ಮಾಸ್ತಿಯವರ ಧನ್ಯತೆಗೆ ಸಮನಿಲ್ಲ!

ಮಾಸ್ತಿಯವರು ಕೆಲಸದಿಂದ ನಿವೃತ್ತರಾದಮೇಲೆ ಹಿಂದೆ ಅವರು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಮುಖ್ಯೋಪಾಧ್ಯಾಯರು ಶ್ರೀ ರಾಮೇಶ್ವರಯ್ಯನವರು ಇವರನ್ನು ಭೇಟಿ ಮಾಡಿದರು, 'ಸೆಂಚುರಿ ಕ್ಲಬ್' ದಾರಿಯಲ್ಲಿ.

ಅವರು: ಮನುಷ್ಯನಿಗೆ ವಯಸ್ಸು ಮುಖ್ಯವಲ್ಲ. ಯೋಚನೆ, ವಿವೇಚನೆ ಮುಖ್ಯ. ಎಷ್ಟು ವಯಸ್ಸಾದರೂ ಯೋಚನೆ, ವಿವೇಚನೆ ಇಲ್ಲದೆ ತ್ಯಾಗ ಮಾಡುವ ಧೈರ್ಯ ಬರುವುದಿಲ್ಲ. ವಿವೇಚನೆ ಇದ್ದರೆ ಅದು ಬೇಗನೆಯೇ ಬರುವುದು.

ಮಾಸ್ತಿ: ತಾವು ನನಗೆ ಏನು ಹೇಳುತ್ತಿದ್ದೀರಿ?

ಅವರು: ಹೌದು ನೀನು ಧೀರ, ಕಾಸಿನ ಆಸೆಯನ್ನು ಜಯಿಸಿದ್ದೀಯೆ ಎಂತ ನಿನ್ನ ವಿಷಯದಲ್ಲಿ ತುಂಬ ಮೆಚ್ಚಿಕೆ.

ಮಾಸ್ತಿ: ಹಿರಿಯರ ಆಶೀರ್ವಾದ. ದೇವರು ಕೊಟ್ಟ ಶಕ್ತಿ; ಮನುಷ್ಯ ತಾನಾಗಿ ಏನು ಮಾಡಬಲ್ಲ?

ಅವರು: ಒಳ್ಳೆ ಮಾತು. ಚಿರಂಜೀವಿಯಾಗಿ ಹೀಗೆಯೇ ದೊಡ್ಡವನಾಗಿರು.

ಮಾಸ್ತಿಯವರ ವಿಚಾರದಲ್ಲಿ ತನ್ನ ನಾಡಿನ ಎಲ್ಲ ಜನರೂ ಬಯಸುವುದು ಇದನ್ನೇ. ದೇವರ ಪೂರ್ಣಾನುಗ್ರಹಕ್ಕೆ ಪಾತ್ರರಾಗುವುದಕ್ಕಿಂತ ದೊಡ್ಡತನವೇನಿದೆ? ಮಾಸ್ತಿಯವರು ಪರಮಾತ್ಮನ ಪಾದಗಳ ಮೇಲೆ ತಮ್ಮ ಜೀವಾತ್ಮನನ್ನು ಹಾಕಿಬಿಟ್ಟಿದ್ದಾರೆ. ಅವರು ಪರಮಭಾಗವತರ ಶ್ರೇಣಿಗೆ ಸೇರತಕ್ಕವರು.

ಮಾಸ್ತಿಯವರಿಗೆ ಅರವತ್ತು ವರ್ಷ (೧೯೫೧) ತುಂಬಿತು. ತಿರುಪತಿಗೆ ಹೋಗಿ ಆರತಿ ಮಾಡಿಸೋಣವೆಂದು ಅವರು ನಿಶ್ಚಯ ಮಾಡಿದರು. ಮಡದಿ ಮಕ್ಕಳು ಮೊಮ್ಮಕ್ಕಳನ್ನೆಲ್ಲ ಒಂದು ಮೋಟರ್ ವ್ಯಾಗನ್‌ನಲ್ಲಿ ಕೂಡಿಸಿಕೊಂಡು ಹೊರಟರು. ಸಿಲ್ವರ್‌ಜೂಬಿಲಿ ಪಾರ್ಕ್, ಅಲಸೂರ್ ಗೇಟ್ ಪೋಲೀಸ್ ಸ್ಟೇಷನ್ ಬಳಿ ಏನೋ ತೊಂದರೆ, ಎರಡು ಘಂಟೆ ತಡ. 'ಈ ಯಾತ್ರೆ ಈ ದಿನ ಬೇಡ ಎಂದು ದೈವ ನಿಯಾಮಕವೊ? ದೈವ ಇಚ್ಛೆಯೇನೋ, ಅದು ನಡೆಯಬೇಕು.' ಅಂದು 'ಮುಂದೆ ಏನಾಗಬೇಕೋ ತಂದೆ ನೀನೇ ನೋಡಿಕೋ?' ಎಂದು ತಾವು ಜಪವನ್ನಾರಂಭಿಸಿದರು. ಕೋಲಾರಕ್ಕೆ ಹಿಂತಿರುಗಿ ಮಾರನೆಯ ದಿನ ಬೇರೆ ಬಸ್‌ನಲ್ಲಿ ಹೊರಟರು. ನಂಗಲಿ ದಾಟಿ ನಾಲ್ಕು ಮೈಲಿ ಹೋಗುವುದರಲ್ಲೇ ಬಸ್ಸಿನ ಅಚ್ಚು ಮುರಿಯಿತು. ಆಮೇಲೆ ಪೋಲೀಸಿನವರ ಬಾಧೆಯಿಂದ ತಡ. ಕಡೆಗೂ ತಿರುಪತಿ ಸೇರಿದರು. ಈ ಪ್ರಯಾಣ ಕುರಿತು ಮಾಸ್ತಿಯವರಿಗೆ ''ದೈವಕ್ಕೆ ನಾನು ತನ್ನ ಸನ್ನಿಧಿಗೆ ಬಂದು ಪೂಜೆ ಮಾಡುವುದು ಬೇಡವಾಗಿದೆಯೋ ಎಂದು ಶಂಕೆ'' ಆಯಿತಂತೆ.

ದೇವ ಕಾರ್ಯಕ್ಕಾಗಿ ಮಧುಗಿರಿಗೆ ಹೊರಟರು ಮಾಸ್ತಿಯವರು. ರೈಲು ಕೋಳಿಕೋಡ್ ಸ್ಟೇಷನ್ ಬಳಿ ಹೋಗುತ್ತಿದೆ. ದಾರಿಯುದ್ದಕ್ಕೂ ಸಮುದ್ರ, ಎರಡೂ ಬದಿಗೆ ತೋಟ; ಸಂಜೆ, ''ಇದರ ಮಧ್ಯೆ ನೋಟ ಹರಿಯುವಷ್ಟು ದೂರದವರೆಗೆ ಚಿನ್ನದ ತಗಡಿನಂತಹ ನೀರು. ಇದರ ಮೇಲೆ ಬಾನಿನಲ್ಲಿ ಪ್ರಕಾಶಮಾನವಾದ ಸೂರ್ಯಬಿಂಬ. ಈ ಚಿತ್ರ ಬಣ್ಣಿಸಲುಬಾರದ ಒಂದು ಸೊಗಸಿನಿಂದ ತೊಳಗಿತು. ಮನಸ್ಸಿಗೆ ಹಿಡಿಯಲಾರದ ಆನಂದ ಆಯಿತು. ನಾನು ಹೊರಟದ್ದು ದೇವರ ಒಂದು ಕಾರ್ಯಕ್ಕೆ, ಪ್ರಯಾಣದಲ್ಲಿ ದಾರಿಯಲ್ಲಿ ದೇವರು ದರ್ಶನ ಕೊಟ್ಟರು ಎನ್ನಿಸಿತು'' ಎಂದು ಹೇಳುತ್ತಾ ಮಾಸ್ತಿಯವರು ಮುಂದುವರೆದು ''ನನಗೆ ಈ ಭವ್ಯದೃಶ್ಯದ ಆನಂದ ದೊರೆಯಲೆಂದೇ ಮಾರ್ಗ ಸಹಾಯಕ ದೈವ ರೈಲು ತಡವಾಗಿ ಓಡುವಂತೆ ನಿಯಾಮಕ ಮಾಡಿತೋ ಎಂದು ನಾನು ಯೋಚಿಸಿದೆನು'' ಎಂದು ಹೇಳುತ್ತಾರೆ. ಹಿಂದೊಮ್ಮೆ ದೇವನೂರ ಮುಂದೆ, ಕೊರಟಗೆರೆ ಬಳಿಯ ಬಯಲಲ್ಲಿ, ''ಸೂರ್ಯಬಿಂಬವನ್ನು ಜ್ಯೋತಿರ್ಲಿಂಗವಾಗಿ ಕಂಡು ಸಂತೋಷ'' ಪಟ್ಟರಂತೆ.

''ಜಯಶಾಲಿ ವ್ಯಕ್ತಿ ಜೀವನ'' ವೆಂದು ಮಾಸ್ತಿಯವರು ಸೂತ್ರ ರೂಪವಾಗಿ ತಮ್ಮ ಜೀವನಚಿತ್ರ ಕೊಟ್ಟು ಕಡೆಗೆ,

> ''ಎಪ್ಪತ್ತೇಳು ವರ್ಷದ ಹಿಂದೆ ಮಾಸ್ತಿಯಲ್ಲಿ ಹುಟ್ಟಿದ ಮಗು ಈ ದಿನ ನಾನು ಈಗ ಇರುವ ಸ್ಥಿತಿಯಲ್ಲಿರುವುದು ದೈವಾನುಗ್ರಹ ಎನ್ನುವುದು ಯಾರೇ ಆದರೂ ಒಪ್ಪಬಹುದಾದ ಮಾತು. ದೈವ ನನಗೆ ಒಟ್ಟಿನಲ್ಲಿ ಸುಖವನ್ನೂ, ಜಯವನ್ನೂ ಅನುಗ್ರಹಿಸಿದೆ ಎನ್ನುವುದನ್ನು ಬೇರೆ ಯಾರಿಗಿಂತಲೂ ಹೆಚ್ಚಾಗಿ ನಾನು ಮನಗಂಡಿದ್ದೇನೆ. ಈ ಅನುಗ್ರಹ ಎಷ್ಟು ಎನ್ನುವದನ್ನೂ ಮನಗಂಡು ಕೃತಜ್ಞತೆಯಿಂದ ತಲೆಬಾಗಿದ್ದೇನೆ''

ಎಂದು ಮಾಸ್ತಿಯವರು ಹೃದಯ ತೆರೆದು ಹೇಳುತ್ತಾರೆ.

ಮಾಸ್ತಿಯವರೊಂದು ದಿನ ಎಂದಿನಂತೆ ತಮ್ಮ ಮನೆಯಲ್ಲಿ, ದೇವರ ಪೂಜೆ,

ಪಾರಾಯಣ ಮಾಡಿ ಊಟಕ್ಕೆ ಕೂತರು.

''ದೇವರು ಮನೆಯ ಯಜಮಾನ. ನಾನು ಅವನ ಮನೆಯಲ್ಲಿ ಊಟ ಮಾಡುವ ಹತ್ತು ಜನರಲ್ಲಿ ಒಬ್ಬ ಎನ್ನಿಸಿತು. ಕೃಷ್ಣನ ಹದಿನಾರು ಸಾವಿರ ಸಂಸಾರಗಳ ಮಾತಿನ ಅರ್ಥ ಇದೇ ಎಂದು ನನಗೆ ತೋರಿತು. ಎಲ್ಲ ಮನೆಯೂ ದೇವರ ಮನೆ. ಒಂದೊಂದರಲ್ಲೂ ಅವನ ಹತ್ತು ಮಕ್ಕಳು ಊಟ ಮಾಡುತ್ತಾರೆ. ಈ ಭಾವ ಮನಸ್ಸಿನಲ್ಲಿ ಹುಟ್ಟಿ ನನ್ನ ಮನಸ್ಸಿಗೆ ತುಂಬ ಹರ್ಷ ಆಯಿತು''

ಎಂದು ಈ ಮಾತನ್ನು ಮುಗಿಸುತ್ತಾರೆ.

''ನಮ್ಮ ಹಿರಿಯರು ಪ್ರಪತ್ತಿಯೆಂದು ವರ್ಣಿಸಿದ ಮನಃಸ್ಥಿತಿ, ಎಂದೋ ಒಂದು ಅಸಹಾಯದ ಹೊತ್ತಿನಲ್ಲಿ ದೈವ ಎಂದು ಭಾವಿಸಿ, ಹಿರಿಯರು ಕೈ ಮುಗಿದಂತೆ, ಕೈ ಮುಗಿದು ಬೇಡಿದಂತೆ, ಬೇಡಿದ ಒಂದು ಕ್ರಮ, ಒಂದು ಮನೋಧರ್ಮ ಆಗಿ, ನಲವತ್ತು ವರ್ಷ ಮೆಲ್ಲಮೆಲ್ಲನೆ ಬೆಳೆದು, ಇಂದು ನನ್ನ ಜೀವ ಈ ಸ್ಥಿತಿಯಲ್ಲಿ ನಿಂತಿದೆ. ಯಾರಾದರೂ ಹೇಳಿಕೊಟ್ಟಿದ್ದರೆ ನಾನು ಇದನ್ನು ಒಪ್ಪುತ್ತಿರಲಿಲ್ಲ. ನನ್ನನ್ನು ಮಾಡಿದ ದೈವ ಇದನ್ನು ಬಲ್ಲುದು. ಆದ್ದರಿಂದ ಅಂತರ್ಯಾಮಿಯಾಗಿ ತಾನೇ ಗುರುವಾಗಿ ಈ ಮಾರ್ಗದಲ್ಲಿ ಒಂದೊಂದು ಹೆಜ್ಜೆಯನ್ನಿಡಲು ಕಲಿಸಿ, ನನ್ನನ್ನು ಈ ಸ್ಥಿತಿಗೆ ತಂದಿದೆ.''

ಎಂದು ಹೇಳುವಾಗ ಮಾಸ್ತಿಯವರು ''ಪ್ರಪತ್ತಿ'' ಎಂಬ ಒಂದು ಮಾತನ್ನು ಹೇಳಿದ್ದಾರೆ. ಅದು ಕೇವಲ ''ಮಾತಲ್ಲ'' ಅದೊಂದು ''ಮಾರ್ಗ''. ಸಂಸಾರ ಬಂಧನದಿಂದ ಮುಕ್ತನಾಗಲು ಒಂದು ಭಕ್ತಿಯೋಗ; ಇನ್ನೊಂದು ಪ್ರಪತ್ತಿ ಭಕ್ತಿಯೋಗ, ಪ್ರಪತ್ತಿ, ಈ ಎರಡರಿಂದಲೂ ಸಾಧಕರು ಪರಮಾತ್ಮನ ಅನುಗ್ರಹ ಪಡೆಯಬಹುದು. ಸಾಮಾನ್ಯ ಜನರಿಗೆ ಭಕ್ತಿಯೋಗ ಸಾಧನೆ ಸಾಧ್ಯವಿಲ್ಲ. ಸಾಮಾನ್ಯರಿಗಾಗಿ 'ಪ್ರಪತ್ತಿ' ಎಂಬ ಸರಳ ಮಾರ್ಗವೊಂದನ್ನು ಭಗವದ್ರಾಮಾನುಜಾಚಾರ್ಯರು ಆಚರಣೆಗೆ ತಂದರು. ಇದನ್ನು ಆಚಾರ್ಯರು ಹೊಸದಾಗಿ ನಿರ್ಮಿಸಿದರೆಂದಲ್ಲ. ''ಏತತ್ತ್ವೆ ಮಹೋಪನಿಷದಂ ದೇವಾನಾಂ ಗುಹ್ಯಂ'' ಎಂಬುದುನ್ನು ತೈತ್ತರೀಯೋಪನಿಷತ್ತಿನಲ್ಲೇ ನೋಡುತ್ತೇವೆ. ಇದನ್ನೇಕೆ ರಹಸ್ಯವಾಗಿಟ್ಟರೆಂಬುದು ಸ್ಪಷ್ಟವಾಗಿಲ್ಲ. ಬ್ರಹ್ಮಸೂತ್ರದಲ್ಲೂ 'ಪ್ರಪತ್ತಿ'ಯ ವಿವರಣೆ ಇಲ್ಲ. ಆಚಾರ್ಯರೂ 'ಶ್ರೀ ಭಾಷ್ಯ'ದಲ್ಲಾಗಲಿ, 'ಗೀತಾ ಭಾಷ್ಯ'ದಲ್ಲಾಗಲಿ ಇದರ ಮಾತನ್ನೇ ಎತ್ತಿಲ್ಲ. ಆದರೆ 'ಗದ್ಯತ್ರಯ'ದಲ್ಲಿ ಅವರು 'ಪ್ರಪತ್ತಿ'ಯ ಪ್ರತಿಪಾದನ ಮಾಡಿದ್ದಾರೆ. ಆಚಾರ್ಯರ ''ಶರಣಾಗತಿ ಗದ್ಯ''ದಲ್ಲಿ ಇದರ ಪೂರ್ಣ ವಿವರಣೆ ಇದೆ.

''ಅನುಕೂಲ್ಯಸ್ಯ ಸಂಕಲ್ಪ
ಪ್ರಾತಿಕೂಲಸ್ಯ ವರ್ಜನಂ
ರಕ್ಷಿಷ್ಯತೀತಿ ವಿಶ್ವಾಸಃ
ಗೋಪ್ತೃತ್ವವರಣಂ ತಥಾ
ಆತ್ಮನಿಕ್ಷೇಪ ಕಾರ್ಪಣ್ಯೇ
ಷಡ್ವಿಧಾ ಶರಣಾಗತಿಃ''

ಪರಮಾತ್ಮನಿಗೆ ಅನುಕೂಲವಾದದ್ದನ್ನು ಮಾಡುವ ಸಂಕಲ್ಪ, ಪ್ರತಿಕೂಲವಾದುದನ್ನು ಬಿಡುವುದು. ದೇವರು ರಕ್ಷಿಸುತ್ತಾನೆಂಬ ವಿಶ್ವಾಸ. ಅಶಕ್ತಿ ನಿವೇದನೆ. ಭಗವದಾಜ್ಞೆಯ ಪಾಲನೆ. ಇವೈದನ್ನೂ ಪರಮಾತ್ಮನಿಗೆ ಅರ್ಪಿಸಬೇಕು. ಇದೇ ಆತ್ಮನಿಕ್ಷೇಪ. ಇದೇ ಪ್ರಪತ್ತಿ.

ಹೀಗೆ ಅರ್ಪಿಸಿದವನೇ ಪ್ರಪನ್ನ. ಹೀಗೆ ನೋಡುವಾಗ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರಲ್ಲದೆ ಮತ್ತೆಯಾರು ಪ್ರಪನ್ನರು?

ಕಡೆಯದಾಗಿ ಮಾಸ್ತಿಯವರ ಈ ವಚನವನ್ನು ಗಮನಿಸಬೇಕು.

''ಜಪಮಾಡಲಿಲ್ಲ; ತಪಮಾಡಲಿಲ್ಲ; ಸಾಧನೆ ಎನ್ನುವುದು ಲವಲೇಶ ಇಲ್ಲ. ಆದರೆ ಮನಸ್ಸಿನಲ್ಲಿ ಈ ನಂಬಿಕೆ ಮೂಡಿದೆ. ದೈವ ಯಾರಿಗೆ ತಾನಾಗಿ ಕೃಪೆ ತೋರುತ್ತದೆ. ಅವರು ಅದನ್ನು ಪಡೆಯುತ್ತಾರೆ, ಎಂಬ ಉಪನಿಷದ್ವಾಕ್ಯ ದಿಟವೆಂದು ನನ್ನ ಜೀವನ ನನಗೆ ಕಲಿಸಿದೆ.''

ಕವಿಜನ ಪೋಷಕ ಮಾಸ್ತಿ

ಮಾಸ್ತಿ ವೆಂಕಟೇಶಯ್ಯಂಗಾರ್ಯರು ಪ್ರಜಾಪ್ರತಿನಿಧಿ ಸಂಸ್ಥೆಗೆ ಸಂಬಂಧಪಟ್ಟ ಆಡಳಿತ ಕಾರ್ಯಾಲಯದ ಹೊಣೆ ಹೊತ್ತಿದ್ದರು. ಎರಡು ವರ್ಷಗಳ ಕಾಲ ಈ ಕರ್ತವ್ಯ ನಿರ್ವಾಹಕ್ಕಾಗಿ ಪ್ರತಿ ಅಧಿವೇಶನಕ್ಕೂ ಅವರು ಮೈಸೂರಿಗೆ ಹೋಗಬೇಕಾಗಿತ್ತು. ಆಗ ಪ್ರಜಾಪ್ರತಿನಿಧಿ ಸಭೆಯಲ್ಲಿ ಭಾಷಣಗಳು, ಚರ್ಚೆಗಳು, ಎಲ್ಲ ಕನ್ನಡದಲ್ಲೇ ಆಗುತ್ತಿತ್ತು. ಮಾಸ್ತಿಯವರು ಆ ಸಭೆಯಲ್ಲಿ ಮಾತನಾಡುತ್ತಿದ್ದವರನ್ನೆಲ್ಲ ಎಚ್ಚರಿಕೆಯಿಂದ ಗಮನಿಸುತ್ತಿದ್ದರು. ಅಂತಹ ಭಾಷಣಕಾರರಲ್ಲಿ ಇಬ್ಬರನ್ನು ಕುರಿತು ಮಾಸ್ತಿಯವರು ಹೇಳುವುದನ್ನಾಲಿಸಿ.

''ಮಾತಿನ ನಯಕ್ಕೆ, ಚದುರಿಗೆ ಕೃಷ್ಣರಾಜಪೇಟೆಯ ಕೃಷ್ಣಶಾಸ್ತ್ರಿಗಳು ಮೇಲ್ಪಂಕ್ತಿ ಎಂಬಂತೆ ಇದ್ದರು. ಕೃಷ್ಣಶಾಸ್ತ್ರಿಗಳ ಕನ್ನಡ ವಾಕ್ಯಗಳು ಮುದ್ದು ಮುದ್ದಾಗಿ ಸೇರಿ ಒಂದು ಪುಸ್ತಕದಿಂದ ಓದುತ್ತಿರುವ ಅಚ್ಚಾದ ವಾಕ್ಯಗಳೋ ಎಂಬಂತೆ ಕಾಣುವುವು.''

''ಅಂಬಳೆ ಅಣ್ಣಯ್ಯ ಪಂಡಿತರು ಮಾತನಾಡುತ್ತಿದ್ದ ರೀತಿ ಗಂಭೀರ ರೀತಿ. ಸಾವಧಾನವಾಗಿ ನುಡಿಯುತ್ತಿದ್ದ ಅವರ ಒಂದೊಂದು ಶಬ್ದವೂ ತೂಕವಾಗಿ ಬರುತ್ತಿತ್ತು. ಈ ಹಿರಿಯರ ಮಾತನ್ನು ಕೇಳುತ್ತಿದ್ದಂತೆ ನನಗೆ ಕನ್ನಡದಲ್ಲಿ ಎಷ್ಟು ಚೆನ್ನಾಗಿ ಮಾತನಾಡಲು ಸಾಧ್ಯ ಎಂದು ಸಂತೋಷ ಆಗುತ್ತಿತ್ತು.''

ಸುಮಾರು ೪೦-೪೫ ವರ್ಷಗಳ ಕನ್ನಡದಲ್ಲಿ ಚೆನ್ನಾಗಿ ಮಾತನಾಡಬಲ್ಲ ಶಾಸ್ತ್ರಿಗಳೂ, ಪಂಡಿತರೂ, ಇದ್ದರು. ಅತ್ತಿಕುಪ್ಪೆ ಕೃಷ್ಣಶಾಸ್ತ್ರಿಗಳ ಭಾಷಣ ವೈಖರಿ, ವೈದುಷ್ಯ, ವಾಗ್ಮಿತೆ, ಕುರಿತು ಡಿ.ವಿ. ಗುಂಡಪ್ಪ ಮೊದಲಾದವರಿಂದ ಕೇಳಿದ್ದೇನೆ.

*

ಒಂದು ದಿನ ಗರಳಪುರಿ ಶಾಸ್ತ್ರಿ, ಮಾಸ್ತಿ, ಡಾ|| ಸಿ.ಬಿ. ರಾಮರಾವ್, ಮೂವರೂ ಕನ್ನಡ ಪುಸ್ತಕಗಳ ಅಭಾವ ಕುರಿತು ಮಾತನಾಡುತ್ತಿದ್ದರು.

ಮಾಸ್ತಿ: ಕನ್ನಡದಲ್ಲಿ ಪುಸ್ತಕ ಇಲ್ಲ ಎನ್ನುವುದನ್ನು ಈ ನಮ್ಮ ಜನ ಕನ್ನಡದ ತಪ್ಪು ಎಂತ ಭಾಷೆ ಮೇಲೆ ಹೊರಿಸಿ ಮಾತನಾಡುತ್ತಾರಲ್ಲಾ? ಇವರು ಬರೆದು, ಬರೆಸಿ, ಅಚ್ಚು ಮಾಡಿಸಿದರಲ್ಲವೇ ಕನ್ನಡದಲ್ಲಿ ಪುಸ್ತಕ ಬರೋದು.

ಶಾಸ್ತ್ರಿ: ನೋಡು ವೆಂಕಟೇಶಯ್ಯಂಗಾರ್; ಇದಿಷ್ಟೂ ಬರೀ ಮಾತು, ಪುಸ್ತಕ ಬರೀಲಿಲ್ಲ, ಬರೆಸಲಿಲ್ಲ, ಅಚ್ಚು ಮಾಡಿಸಲಿಲ್ಲ, ಜನದ ತಪ್ಪು ಒಪ್ಪಿದೆ. ಈಗ ನನಗೆ,

ಡಾಕ್ಟರಿಗೆ, ನೀನು ಏನು ಕೆಲಸ ಹೇಳತೀ ಹೇಳು.

ಮಾಸ್ತಿ: ಶಾಸ್ತ್ರೀ ಒಬ್ಬರು, ಇಬ್ಬರು, ಏನು ಮಾಡಬಹುದು? ಡಾಕ್ಟರು ಕಾಸು ಕೊಡುತ್ತೇನೆ ಅಂತಾರೆ. ನೀನೂ ಕಾಸುಕೊಡುತ್ತೀ; ನಾಲ್ಕು ಪಂಕ್ತಿ ಬರೆಯುತ್ತೀ. ನಾನು ಬಯಸುತ್ತಿರೋದು ಇನ್ನೂರು ಮುನ್ನೂರು ಪುಟದ ಐನೂರು ಪುಸ್ತಕ. ಒಳ್ಳೆ ರಟ್ಟಿನಲ್ಲಿ ಅಂದವಾಗಿ ಕಾಣುವುವು. ಇಂಗ್ಲಿಷ್ ಪುಸ್ತಕ ಇರೋ ಹಾಗೆ ಇರೋವು. ಐದು ಬೀರು ತುಂಬಬೇಕು. ಇದೇನು ಈಡೇರುವ ಆಸೆಯೆ?

ಶಾಸ್ತ್ರಿ: ಐನೂರು ಪುಸ್ತಕ ಆಗಬೇಕು ಅಂದರೆ ಕಾಲಬೇಕು. ಐದು ಪುಸ್ತಕ ಆಗ ಬಹುದಲ್ಲ. Come on, make a practical proposal. Don't waste time waiting.

ಮಾಸ್ತಿ: ನೋಡಪ್ಪ, ನೀನೂ ಡಾಕ್ಟರೂ ತಿಂಗಳಿಗೆ ಇಷ್ಟಿಷ್ಟು ಅಂತ ಕೊಡಿ. ನಾನೂ ನನ್ನ ಕೈಲಾದಷ್ಟನ್ನು ಕೊಡುತ್ತೇನೆ. ಇನ್ನೂ ನಾಲ್ಕು ಜನ ಸ್ನೇಹಿತರನ್ನು ಬೇಡುತ್ತೇನೆ. ಅವರು ಏನು ಕೊಡುತ್ತಾರೆ ಅದನ್ನು ತೆಗೆದುಕೊಳ್ಳುತ್ತೇನೆ. ತಕ್ಕಷ್ಟು ಹಣ ಸೇರಿದಾಗ ಹೊಸ ಪುಸ್ತಕ ಒಳ್ಳೇದು ಅನ್ನೋದು ಯಾವುದು ಇದೆಯೋ ತೆಗೆದುಕೊಂಡು ನಮ್ಮ ನಿಧಿಯಿಂದ ಅಚ್ಚು ಮಾಡಿಸೋಣ. ನೀನು ಹೇಳುವಂತೆ ಐದು ಪುಸ್ತಕವೇ ಆಗಲಿ. ಒಳ್ಳೆ ಪುಸ್ತಕ ಅಂತ ಅಚ್ಚುಮಾಡಿಸಿದರೆ ಕೆಲಸ ಆರಂಭವಾಗುತ್ತದೆ.

ಹೀಗೆ ಆರಂಭವಾಯಿತು ''ಲೇಖಕ ಸಹಾಯಕ ನಿಧಿ''. ವಿವರಗಳು ಹಾಗಿರಲಾಗಿ ಈ ನಿಧಿಯಿಂದ ಹೊರಬಿದ್ದ ಪುಸ್ತಕಗಳನ್ನೂ, ಅವುಗಳ ಲೇಖಕರನ್ನೂ ಇಲ್ಲಿ ನೋಡಬಹುದು.

೧. ಕೆ.ವಿ. ಪುಟ್ಟಪ್ಪ-''ಕೊಳಲು''
೨. ದತ್ತಾತ್ರೇಯ ರಾಮಚಂದ್ರ ಬೇಂದ್ರೆ-''ಗರಿ''
೩. ಗೊರೂರು ರಾಮಸ್ವಾಮಿ ಅಯ್ಯಂಗಾರ್-''ಹಳ್ಳಿಯ ಚಿತ್ರಗಳು''
೪. ದೇವುಡು ನರಸಿಂಹ ಶಾಸ್ತ್ರಿ-''ವಿಚಾರಣೆ''
(Masefield's "The trial of Jesus")
೫. ಪು.ತಿ. ನರಸಿಂಹಾಚಾರ್ಯ-''ಹಣತೆ''
೬. ಶಿವರಾಮ ಕಾರಂತರ ಗ್ರಂಥಕ್ಕೆ-(ಧನ ಸಹಾಯ)
೭. ಟಿ.ಪಿ. ಕೈಲಾಸಂ-''ಹುತ್ತದಲ್ಲಿ ಹುತ್ತ''

*

ಜೆ.ಪಿ. ರಾಜರತ್ನಂರವರು ಎಂ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಉದ್ಯೋಗವಿಲ್ಲದೆ, ಪ್ರಯತ್ನಗಳೆಲ್ಲ ವಿಫಲವಾಗಿ ಮಾಸ್ತಿಯವರ ಬಳಿಗೆ ಬಂದರು. ಆಗ ಮಾಸ್ತಿಯವರು ಜನಗಣತಿಯ ಶಾಖಾಧಿಕಾರಿಗಳು.

ರಾಜರತ್ನಂ: ಏನಾದರೂ ಕೆಲಸ ಕೊಡುತ್ತೀರಾ?

ಮಾಸ್ತಿ: ಇಲ್ಲಿ ಇರುವ ಕೆಲಸ ಕಡೆಯ ಮಟ್ಟದ್ದು. ಸಂಬಳ ಇಪ್ಪತ್ತೈದು ರೂಪಾಯಿ. ಎಂ.ಎ. ಆಗಿರುವ ನಿಮಗೆ ಇದು ಸಲ್ಲ.

ರಾಜರತ್ನಂ: ನನಗೆ ಜೀವನಕ್ಕೆ ಕಾಸು ಬೇಕು. ಬೇರೆ ಎಲ್ಲಿಯೂ ಕೆಲಸ ದೊರೆಯಲಿಲ್ಲ. ನಿಮ್ಮಲ್ಲಿ ಈ ಕೆಲಸವನ್ನೇ ಮಾಡುತ್ತೇನೆ.

ಮಾಸ್ತಿ: ನಿಮಗೆ ಇಪ್ಪತ್ತೈದು ರೂಪಾಯಿ ಕೆಲಸ ಕೊಟ್ಟು ಈ ಚೀಟಿಗಳನ್ನು ವಿಂಗಡಿಸುವ ಕೆಲಸವನ್ನು ನಿಮ್ಮಿಂದ ಮಾಡಿಸುವುದು ನನಗೆ ರುಚಿಸುತ್ತಿಲ್ಲ. ನಿಮಗೆ ಬೇರೆ ಒಂದು ಯೋಚನೆ ಹೇಳುತ್ತೇನೆ ಒಪ್ಪಿಗೆಯೆ, ಹೇಳಿ.

ರಾಜರತ್ನಂ: ಅಪ್ಪಣೆ.

ಮಾಸ್ತಿ: ನಾನು ಫಾಹಿಯನ್, ಹುಯೆನ್‌ತ್ಸಾಂಗ್, ನಮ್ಮ ದೇಶದಲ್ಲಿ ಸಂಚಾರಮಾಡಿ ಬರೆದ ವರದಿಗಳನ್ನು ಕನ್ನಡಕ್ಕೆ ತರಬೇಕೆಂದು ಎಂದೋ ಯೋಚಿಸಿದೆ. ಲೋಕದ ಬೇರೆ ಭಾಷೆಗಳ ಉತ್ತಮ ಗ್ರಂಥಗಳನ್ನು ಕನ್ನಡಕ್ಕೆ ತರುವ ಕೆಲಸ ಆಗಬೇಕಾಗಿದೆ. ಈಚೆಗೆ ನಾನು ವಾಲ್ಟೇರವರ 'ಕ್ಯಾಂಡಿಡೆ' ಪುಸ್ತಕವನ್ನು ಓದಿದೆನು. ಅದನ್ನು ಕನ್ನಡಕ್ಕೆ ತಂದರೆ ಚೆನ್ನ ಆದೀತು ಎನ್ನಿಸಿತು. ನೀವು ಮನೆಯಲ್ಲಿ ಕುಳಿತು ಈ ಭಾಷಾಂತರ ಕೆಲಸವನ್ನು ಮಾಡಿ. ನಾನು ನಿಮಗೆ ತಿಂಗಳಿಗೆ ಇಪ್ಪತ್ತೈದು ರೂಪಾಯಿ ಕೊಡುತ್ತೇನೆ.

ರಾಜರತ್ನಂ: ಆಗಲಿ, ಈ ಕೆಲಸ ಮಾಡುತ್ತೇನೆ.

ರಾಜರತ್ನಂರವರು ಈ ಕೆಲಸವನ್ನಾರಂಭಿಸಿದರು. ಚೀನಾ ಯಾತ್ರಿಕರ ಎರಡು ಪುಸ್ತಕಗಳನ್ನೂ, 'ಪ್ರಬುದ್ಧ ಕರ್ನಾಟಕ' ದಲ್ಲಿ ಭಾಗಭಾಗವಾಗಿ ಪ್ರಕಟಿಸಿದರು ಎ.ಆರ್.ಕೃಷ್ಣಶಾಸ್ತ್ರಿಗಳು. ಪ್ರತಿಫಲ ರೂಪವಾಗಿ ಶಾಸ್ತ್ರಿಗಳು ರಾಜರತ್ನಂರವರಿಗೆ ನೂರ ಐವತ್ತು ರೂಪಾಯಿಗಳನ್ನು ಕೊಟ್ಟರು. ಮಾಸ್ತಿಯವರಿಂದ ಆರು ತಿಂಗಳು ಪಡೆದ (೧೫೦ರೂ) ಹಣವನ್ನು ರಾಜರತ್ನಂ ಅವರಿಗೆ ಹಿಂತಿರುಗಿ ಕೊಡಲು ಹೋದರು.

> ''ನಾನು ಕೊಟ್ಟದು ಸಂಬಳ ಅಲ್ಲ, ಮಾಸಾಶನ, ಈ ಹಣ ಅದರ ಮೇಲೆ ಸಂಪಾದಿಸಿದ್ದು ಎಂದು ಇಟ್ಟುಕೊಳ್ಳಿ. ಈ ಕೆಲಸವನ್ನು ಇನ್ನಷ್ಟು ಮಾಡಿ. ನಾನು ನಿಮಗೆ ಇಪ್ಪತ್ತೈದು ತಿಂಗಳು ತಿಂಗಳೂ ಕೊಡುತ್ತೇನೆ'' ಅಂದರು ಮಾಸ್ತಿ. ರಾಜರತ್ನಂರವರಾದರೋ,
>
> ''ಕೃಷ್ಣಶಾಸ್ತ್ರಿಗಳು ಕೊಟ್ಟ ಕಾಸು ಕೈಯಲ್ಲಿದೆ, ಜೀವನ ನಡೆಯುತ್ತಿದೆ. ಕಾಸು ಬೇಕಾದಾಗ ಬಂದು ಕೇಳುತ್ತೇನೆ.''

ಅಂದರು! ಅನಂತರ ರಾಜರತ್ನಂ ಪಾಲಿಭಾಷೆ ಕಲಿತು, ಬೌದ್ಧ, ಜೈನ ಸಾಹಿತ್ಯದಲ್ಲಿ ಪ್ರವೀಣರಾದರು. ಕನ್ನಡ ಸಾಹಿತ್ಯಕ್ಕೆ ಮಹತ್ತಾದ ಸೇವೆ ಸಲ್ಲಿಸುತ್ತಿದ್ದಾರೆ.

> ''ಇವರ ಮನಸ್ಸನ್ನು ಈ ಕೆಲಸದತ್ತ ಮೊದಲು ತಿರುಗಿಸಿದ ಭಾಗ್ಯ ನನ್ನದು ಎನ್ನುವುದು ಈಗಲೂ ನನಗೆ ಸಂತೋಷದ ಸಂಗತಿಯಾಗಿದೆ.''

ಇದು ಮಾಸ್ತಿಯವರ ಹೇಳಿಕೆ.

ಮಾಸ್ತಿಯವರು 'ಜನರಲ್ ಸೆಕ್ರೆಟರಿ' ಆದರು. ಕಾಲೇಜೊಂದರಲ್ಲಿ ಕನ್ನಡ ಪಂಡಿತರ ಸ್ಥಾನ ತೆರವಾಗಲು ರಾಜರತ್ನಂರವರು ಆ ಸ್ಥಾನವನ್ನಪೇಕ್ಷಿಸಿದರು. ಆ ಸ್ಥಾನದ ಸಂಬಳ ನಲವತ್ತು ರೂಪಾಯಿಗಳು. ಹಣಕಾಸಿನ ಶಾಖೆಯವರು ಎಂ.ಎ. ಮಾಡಿದವರಿಗೆ ''ನಲವತ್ತು ರೂಗಳನ್ನು ಕೊಡುವುದು ಸರಿಯಲ್ಲ'' ಅಂದರು. ಮಾಸ್ತಿಯವರು.

> ''ರಾಜರತ್ನಂರವರನ್ನು ನಾನು ಸ್ವತಃ ಬಲ್ಲೆ. ಅವರು ಮೇಧಾವಿಗಳು. ಅಗ್ರಪಂಕ್ತಿಯ ಕವಿ, ಅಗ್ರ ಪಂಕ್ತಿಯ ಲೇಖಕರು. ಆದರೂ ಈ ಕೆಲಸಕ್ಕೆ

ಬರಬೇಕಾಗಿರುವುದು ದುರ್ದೈವ. ಅವರ ಯೋಗ್ಯತೆಗೆ ಅರವತ್ತು ರೂಪಾಯಿ ಸಂಬಳ ಬಹಳ ಕಡಿಮೆ. ಯೂನಿವರ್ಸಿಟಿ ಸೂಚಿಸಿರುವ ಈ ಸಂಬಳವನ್ನು ಕೊಡಬಹುದು.''

ಎಂದು ಬರೆದರು. ಸರಕಾರ ಒಪ್ಪಿತು.

※

ಮಾಸ್ತಿಯವರಿಗೂ, ಬೇಂದ್ರೆಯವರಿಗೂ, ಅಪೂರ್ವವಾದ ಬಾಂಧವ್ಯ ಉಂಟಾಯಿತು. ಜನಗಣತಿ ಶಾಖಾ ಅಧಿಕಾರಿಗಳಾಗಿ ಮಾಸ್ತಿಯವರು ಸಂಸ್ಥಾನದಲ್ಲಿ ಹತ್ತು ಕಡೆ ಹೋಗಬೇಕಾಗಿತ್ತು. ಆಗ ಬೇಂದ್ರೆಯವರನ್ನೂ ಕರೆದೊಯ್ದರು. ''ಹತ್ತು ಊರಿನ ಸಾವಿರಾರು ಜನಕ್ಕೆ ವರಕವಿಯ ಕಾವ್ಯದ ರುಚಿಯನ್ನು ಸವಿಯಿಸಿ''ದರು! ಈ ಸೋದರ ಬಾಂಧವ್ಯದ ಶಬ್ದ ಚಿತ್ರವನ್ನು ಮಾಸ್ತಿಯವರೇ ನಮ್ಮ ಮುಂದಿಡುತ್ತಾರೆ:

''ತಿಂಗಳ ದಿನ ಜೊತೆಯಾಗಿ ಸುತ್ತಿ, ಜೊತೆಯಾಗಿ ಕುಳಿತು, ಜೊತೆಯಾಗಿ ನಡೆದು, ನಾನು, ಬೇಂದ್ರೆ ತುಂಬ ಹತ್ತಿರದ ಗೆಳೆಯರಾದೆವು; ಸೋದರರಾದೆವು. ಕರ್ನಾಟಕ ಮಾತೆ, ಭಾರತ ಮಾತೆ, ಭೂ ಮಾತೆ, ಎಂಬಲ್ಲಿ ಮಾತೆ ಶಬ್ದ ಬರಿಯ ಅಲಂಕಾರ ಅಲ್ಲ ಎಂದು ಎಂದಿನಿಂದಲೂ ನನ್ನ ನಂಬಿಕೆ. ಲೋಕಮಾತೆ ಒಬ್ಬಳೇ, ಅವಳೇ ಭೂಮಿ, ಅವಳೇ ಭಾರತ, ಅವಳೇ ಕರ್ನಾಟಕ, ಅವಳೇ ನಮ್ಮೊಬ್ಬರನ್ನೂ ಹೆರುವ ಒಂದೊಂದು ಗ್ರಾಮ. ಇದು ಸದಾಕಾಲ ಪೂರ್ಣವಾಗಿ ಅನುಭವ ಆಗದಿದ್ದರೂ ವರ್ಷದಲ್ಲಿ ಒಂದು ಕ್ಷಣ ಇದರ ಅನುಭವ ಆದ ಮನುಷ್ಯ ಅದರ ಸುಖಕ್ಕೆ ಮಾರುಹೋಗುತ್ತಾನೆ. ಬೇಂದ್ರೆಯವರೊಂದಿಗೆ ತಿಂಗಳ ದಿನ ನಡೆದ ಈ ಸಂದರ್ಭದಲ್ಲಿ ನನಗೆ ಈ ಅನುಭವ ಹಲವು ಬಾರಿ ಆಯಿತು. ಕನ್ನಡ ಮಾತೆ ನನ್ನ ಹೆತ್ತ ತಾಯಂತೆ ಒಂದು ದಿಟವಾದ ದೈವ ಆದಳು. ನನ್ನ ಒಡಹುಟ್ಟಿದ ಸೋದರರನ್ನು ಹೇಗೋ ಹಾಗೆ ನಾನು ಬೇಂದ್ರೆಯವರನ್ನೂ ಸೋದರ ಎಂದು ಕಾಣಲು ಮೊದಲಾಯಿತು.''

ಸಂಚಾರದಿಂದ ಬೆಂಗಳೂರಿಗೆ ಬಂದು ಬೇಂದ್ರೆಯವರು ಧಾರವಾಡಕ್ಕೆ ಹೊರಟರು. ರೈಲ್ವೆ ಸ್ಟೇಷನ್ನಿಗೆ ಹೋಗುತ್ತ ಇಬ್ಬರ ಮಧ್ಯೆ ನಡೆದ ಸಂಭಾಷಣೆ ಇದು;

ಮಾಸ್ತಿ: ನಾನು ನಿಮ್ಮಲ್ಲಿ ಒಂದು ಪ್ರಾರ್ಥನೆ ಮಾಡಬೇಕು. ಮಾಡಲೇ?

ಬೇಂದ್ರೆ: ಸಂಕೋಚವೇ ಬೇಡ. ಹೇಳಿ.

ಮಾಸ್ತಿ: ನಾನು ಬಹಳ ಪುಣ್ಯವಂತ, ದಾನ ಮಾಡುವ ಶಕ್ತಿಯುಳ್ಳವನು, ಕೊಡುತ್ತೇನೆ, ಎಂಬ ದೃಷ್ಟಿಯಿಂದ ಮಾತನಾಡುತ್ತಿಲ್ಲ. ನೀವು ಅಸಹಾಯರು, ನನ್ನ ಉಪಕಾರಕ್ಕಾಗಿ ಕಾದಿದ್ದೀರಿ, ಎಂದು ನಾನು ಎಣಿಸಿಲ್ಲ. ಆದರೆ ನಾನೊಬ್ಬ ಲೇಖಕ. ನೀವು ಜೊತೆಯ ಲೇಖಕ. ನನ್ನ ಕೈಯಲ್ಲಿ ನಾಲ್ಕು ಕಾಸು ಹೆಚ್ಚಾಗಿದೆ. ನಿಮಗೆ ಒಂದು ಕಾಸು ಕೊಡಬೇಕು ಎಂದು ಕಂಡಾಗ ಅದನ್ನು ನೀವು ನನ್ನ ಕೈಯಿಂದ ತೆಗೆದುಕೊಳ್ಳಬಹುದು. ಏನೆನ್ನುತ್ತೀರಿ?

ಬೇಂದ್ರೆ: ಆಗಲಿ.

ಮಾಸ್ತಿ: ಎಂದರೆ ಅವಶ್ಯಕ ಕಂಡಾಗ ನೀವು ನನಗೆ ತಿಳಿಸುತ್ತೀರಿ.

ಬೇಂದ್ರೆ: ತಿಳಿಸುತ್ತೇನೆ.

ಹಲವರು ಈ ವಿಚಾರವಾಗಿ ''ತಪ್ಪು ಮಾತನ್ನಾಡಿ ಬೇಂದ್ರೆಯವರ ಮನಸ್ಸನ್ನು ನೋಯಿಸಿದ್ದಾರೆ; ನನಗೆ ಬೇಸರವನ್ನುಂಟುಮಾಡಿದ್ದಾರೆ'' ಎಂದು ಮಾಸ್ತಿಯವರು ಹೇಳಿ, ಈ ರೀತಿಯಾಗಿ ವಿವರಣೆಯನ್ನು ಕೊಟ್ಟಿದ್ದಾರೆ;

''ಬೇಂದ್ರೆಯವರಿಗೆ ನನ್ನಿಂದ ಸಂದ ಕಾಸು ನಾನು ದೂರದ ಒಬ್ಬ ಪರಿಚಯಸ್ಥರಿಗೆ ಮಾಡಿದ ಸಹಾಯ ಅಲ್ಲ. ಜೊತೆಗಾರನಾದ ಶ್ರೇಷ್ಠ ಕವಿಗೆ ನೀಡಿದ ಕಾಣಿಕೆ. ನಾನು ಸರಸ್ವತಿಯ ಮಂದಿರದಲ್ಲಿ ಅರವತ್ತು ಘಳಿಗೆ ಸೇವೆಸಲ್ಲಿಸಬೇಕಾಗಿತ್ತು. ಆ ಸೇವೆಯಿಂದ ಬಾಳುವೆ ನಡೆಯುತ್ತಿರಲಿಲ್ಲ. ಬಾಳು ನಡೆಯಲಿ ಎಂದು ಬೇರೆ ದುಡಿಮೆಗೆ ಒತ್ತೆ ಆಗಿ ಬಿಡುವಿನ ಹೊತ್ತಿನಲ್ಲಿ ಮಾತ್ರ ದೇವಿಯ ಪೂಜೆ ನಡೆಸುತ್ತಿದ್ದೆ. ನಮ್ಮಲ್ಲಿ ಸೇವೆ ಮಾಡಬೇಕಾದ ಕಡೆ, ತಾನು ಮಾಡಲಾರದೆ ಬದಲಿಗೆ ಇನ್ನೊಬ್ಬರನ್ನು ಇಟ್ಟು ತಮ್ಮ ಹೊಣೆ ಸಲ್ಲಿಸುವ ಕರ್ಮ ಒಂದುಂಟು. ತಾಯ ಸನ್ನಿಧಿಯಲ್ಲಿ ನಾನು ಉಳಿದಾಳಾಗಿದ್ದೆನು. ಬೇಂದ್ರೆಯವರನ್ನು ಬದಲಾಳಾಗಿರಿ ಎಂದು ಬೇಡಿದೆನು. ಅವರು ನನ್ನ ಮೇಲಿನ ಪ್ರೀತಿಯಿಂದ ಇದನ್ನು ಒಪ್ಪಿದರು. ದಿಟದಲ್ಲಿ ಬದಲಾಳು ಮಾಡಿದ ಉಪಕಾರಕ್ಕೆ ಉಳಿಯಾಳು ನೀಡಿದ ಕಾಣಿಕೆ ಅಲ್ಪದಲ್ಲಿ ಅಲ್ಪ.''

೧೯೪೬ರಲ್ಲಿ ಧಾರವಾಡದಲ್ಲಿ ಬೇಂದ್ರೆಯವರ ಐವತ್ತನೆಯ ವರ್ಧಂತಿ ಉತ್ಸವ. ಮಾಸ್ತಿಯವರೇ ಅಂದಿನ ಉತ್ಸವಾಧ್ಯಕ್ಷರು. ಆ ಸಮಯದಲ್ಲಿ ಬೇಂದ್ರೆಯವರು ಹೀಗೆ ಹೇಳಿದರು:

''ಅಣ್ಣ ಮಾಸ್ತಿಯವರು ನನಗೆ ನೆರವಾಗಿ ನಿಂತರು. ನಾನು ನೆರವನ್ನು ತೆಗೆದುಕೊಂಡೆನು. ಕೆಲವು ಜನ ನಾನು ಪರಾವಲಂಬಿ ಆದೆ ಎಂದು ನನ್ನನ್ನು ಹಳಿಯುತ್ತಾರೆ. ನಾನು ಪರಾವಲಂಬಿ ಆದೆ; ಒಪ್ಪುತ್ತೇನೆ. ಪರಾವಲಂಬಿಗಳಾಗದೆ ಇವರು ಬಾಳುವಂತೆ ನನ್ನಿಂದ ಆಗಲಿಲ್ಲ. ಇದು ನನ್ನ ದೈವ.''

ಈ ಮಾತನ್ನು ಕೇಳಿದ ಮಾಸ್ತಿಯವರಿಗೆ ಬಹಳ ನೋವಾಯಿತು. ತಾವು ಮಾತನಾಡುವಾಗ ಈ ರೀತಿಯಾಗಿ ಹೃದಯ ಬಿಚ್ಚಿದರು:

''ನನ್ನ ಸೋದರ ಬೇಂದ್ರೆಯವರು ತಮ್ಮ ದೃಷ್ಟಿಯಿಂದ ಯಾವುದನ್ನೂ ನೆರವು ಎನ್ನುತ್ತಾರೆ ಅದು ನನ್ನ ದೃಷ್ಟಿಯಿಂದ ನಾನು ಕಾವ್ಯಕ್ಕೆ ಒಪ್ಪಿಸಿದ ಕಾಣಿಕೆ. ಪರಾವಲಂಬನ ಎಂಬ ಶಬ್ದ ಈ ಸಂದರ್ಭಕ್ಕೆ ಹೊಂದುವುದೇ ಇಲ್ಲ. ಕಾಸು ಉಳ್ಳವನಿಂದ ಕವಿ ಕಾಸು ತೆಗೆದುಕೊಳ್ಳುವುದು ಪರಾವಲಂಬ ಆದರೆ ಎಲ್ಲ ಕವಿಗಳೂ, ಎಲ್ಲ ಕಾಲದಲ್ಲೂ, ಪರಾವಲಂಬಿಗಳೇ.''

ಚಿಕ್ಕಮಗಳೂರಿನಲ್ಲಿ ಮಾಸ್ತಿಯವರಿದ್ದಾಗ ಟಿ. ಪಿ. ಕೈಲಾಸಂರವರು ಅವರ ಮನೆಗೆ ಬಂದರು. ಬಂದು, ಒಂದೂವರೆ ತಿಂಗಳು ಅವರ ಅತಿಥಿಗಳಾಗಿದ್ದರು. ಆಗ ಅವರೊಂದಿಗೆ ಜಿಲ್ಲೆಯಲ್ಲೆಲ್ಲ ಸಂಚಾರ ಮಾಡಿದರು. ಮೊದಲು ಮಾಸ್ತಿಯವರಿಗೆ ಕೈಲಾಸಂ ಪರಿಚಯವಾದದ್ದು ಬೆಂಗಳೂರು ಅಮೆಚೂರು ನಾಟಕ ಮಂಡಲಿಯಲ್ಲಿ. ಕೈಲಾಸಂರವರಿಗಾದರೋ ಮಾಸ್ತಿಯವರಲ್ಲಿ ವಿಶೇಷ ಗೌರವ. ಸರಕಾರದ ಉನ್ನತ ಅಧಿಕಾರಸ್ಥಾನದಲ್ಲಿದ್ದು ಅದನ್ನು ಬಿಟ್ಟು, ಜೀವನವನ್ನೆಲ್ಲ ನಾಟಕಕಾರರಾಗಿ, ನಟರಾಗಿ ಕಳೆದರು. ಕೈಲಾಸಂರವರು ಇದ್ದ ಆಡಳಿತ ಶಾಖಾಧಿಕಾರಿಗಳು ಸಂಪತ್ತಯ್ಯಂಗಾರ್ಯರೊಮ್ಮೆ ಕೈಲಾಸಂರವರು ಕಂಡು,

''ನೀನು ಎಂತಹ ಬಾಳನ್ನು ಬಾಳಬಹುದಾಗಿತ್ತು? ಅದನ್ನು ಏನು ಮಾಡಿಕೊಂಡು ಕುಳಿತಿದ್ದಿ.''

ಎಂದು ಅವರನ್ನು ಆಕ್ಷೇಪಿಸಿದರು. ಆಗ ಮಾಸ್ತಿಯವರು ಆ ಅಧಿಕಾರಿಗಳಿಗೆ ಹೀಗೆ ಸಮಾಧಾನ ಹೇಳಿದರು:

''ಕೈಲಾಸಂ ನಿಮ್ಮಂತೆ, ನಮ್ಮಂತೆ, ಬಾಳುತ್ತಿಲ್ಲ, ದಿಟ. ಆದರೂ ಆ ಕ್ರಮವನ್ನು ನೀವು ಖಂಡಿಸಬೇಡಿ. ಕೈಲಾಸಂ ಹೆಸರು ಸರಕಾರದ ಅಧಿಕಾರಿ ವರ್ಗದ ಕೋಶದಿಂದ ಅಳಿಸಿಹೋಯಿತು. ಆದರೆ ಬೇರೆ ಒಂದು ಕೋಶದಲ್ಲಿ ಅದು ಬಹು ಎತ್ತರದಲ್ಲಿರುತ್ತದೆ.''

ಆ ಅಧಿಕಾರಿಗಳು ಈ ಮಾತನ್ನು ಒಪ್ಪಿದರು.

''ಸ್ನೇಹಿತ, ಡೆಪ್ಯುಟ ಕಮೀಷನರ್ ಆಗಿದ್ದಾರೆ. ಅವರ ಜಿಲ್ಲೆಯಲ್ಲಿ ನಾಲ್ಕು ದೊಡ್ಡ ಸ್ಥಳಗಳಿಗೆ ಹೋಗಿ, ಸಭೆಗಳ ಮುಂದೆ ಕಥೆಗಳನ್ನು ಹೇಳಿ, ನಾಟಕಗಳನ್ನು ರಚಿಸಿ, ನಾಲ್ಕು ಕಾಸು ಗಳಿಸೋಣ''

ಎಂದು ಭಾವಿಸಿ, ಮಾಸ್ತಿಯವರಿಗೆ ಮೊದಲು ತಿಳಿಸದೆಯೇ ಕೈಲಾಸಂ ಹೊರಟುಬಿಟ್ಟರು! ಚಿಕ್ಕಮಗಳೂರಿಗೆ ಬಂದರು; ಮಾಸ್ತಿಯವರ ಮನೆಯಲ್ಲಿ ಇಳಿದುಕೊಂಡರು.

''ಐದು ನಿಮಿಷದ ಹತ್ತು ಮಾತಿನಿಂದ ನಾವು ಬಹು ಸಮೀಪ ಬಂಧುಗಳಾಗಿಬಿಟ್ಟೆವು. ಅವರು ಸಂಸಾರದಲ್ಲಿ ಒಬ್ಬ ಹಿರಿಯ ಎಂಬಂತೆ ನಮ್ಮೊಂದಿಗೆ ಸಹಜವಾಗಿ ಬಾಳತೊಡಗಿದರು.''

ಎಂದು ಮಾಸ್ತಿಯವರು ಬರೆಯುತ್ತಾರೆ. ಕೈಲಾಸಂರವರಿಗೆ 'ಗಳಿಕೆ ಬಹಳ ಆಗಲಿಲ್ಲ' ಎಂದು ಹೇಳಿ ಕೈಲಾಸಂ ಜೀವನ, ಆ ಜೀವನದ ಉದ್ದೇಶ ಕುರಿತು ಹೀಗೆ ವಿವರಿಸುತ್ತಾರೆ:

''ಎಷ್ಟು ಗಳಿಕೆಯಾಗಿದ್ದರೂ ಕೈಲಾಸಂ ಬಳಸುತ್ತಿದ್ದ ರೀತಿಯಲ್ಲಿ ಅದು ಮೂರು ದಿನಕ್ಕೆ ಹೆಚ್ಚಾಗಿ ಅವರ ಕೈಯಲ್ಲಿ ಉಳಿಯುವುದು ಸಾಧ್ಯವಲ್ಲ. ದಿಟದಲ್ಲಿ ಕೈಲಾಸಂ ಚಿಕ್ಕಮಗಳೂರಿಗೆ ಬಂದದ್ದು ಗಳಿಕೆಗೆ ಅಂದಲ್ಲ. ಪುಣ್ಯವಂತನಾದ ಸಹೃದಯ ಸೋದರ ಲೇಖಕನ ಜೊತೆಯಲ್ಲಿ ತಿಂಗಳ ದಿನ ಇದ್ದು ನಿಶ್ಶಂಕ ನಿಶ್ಚಿಂತ, ಜೀವನವನ್ನು ಸವಿಯುವುದು; ಸೋದರನಿಗೆ ತನ್ನ ಸಹವಾಸದ ಸೌಖ್ಯವನ್ನು ನೀಡುವುದು, ತನ್ನ ನಿಷ್ಕಪಟ, ನಿಷ್ಕಲ್ಮಷ, ಸರಳ ಸುಂದರ ಚೇತನದ ಪರಿಚಯವನ್ನು ಒದಗಿಸುವುದು; ಇಷ್ಟೇ ಅವರ ಉದ್ದೇಶ.''

ಮಾಸ್ತಿಯವರು ಹೇಳುವುದು ನಿಜ. ವರ್ಷಗಟ್ಟಲೆ ನಾನೂ ಕೈಲಾಸಂ 'ಸಹವಾಸ ಸುಖ'ದ ಸವಿ ಅನುಭವ ಪಡೆದವನಾಗಿ ಈ ಮಾತನ್ನು ಹೇಳುತ್ತೇನೆ.

''ಈ ಹಿರಿಯ ಚೇತನ ಹೀಗೆ ನನ್ನ ಬಳಿಗೆ ಬಂದು ಸೋದರಿಕೆಯ ಸುಖವನ್ನು ನೀಡಿದ್ದು ನನಗೆ ನನ್ನ ಜೀವನದ ಹಲವು ಸೌಭಾಗ್ಯಗಳಲ್ಲಿ ಒಂದು ಎಂದು ನನ್ನ ದೃಢವಾದ ನಂಬಿಕೆ.''

ಎಂದು ಮಾಸ್ತಿಯವರು ಹೇಳುವಾಗ ಒಂದು ಹಿರಿಯ ಚೇತನ ಮತ್ತೊಂದು ಹಿರಿಯ ಚೇತನ ಕುರಿತು ಹೀಗೆ ಹೇಳುವುದು ಸಹಜವಷ್ಟೆ.

''ಕೈಲಾಸಂರಂಥ ಪ್ರತಿಭಾವಂತ ನಾಟಕಕಾರ ಬಂದೂ ನಮ್ಮ ನಾಟಕದ ಹೊಸ ಶಾಖೆ ಸರಿಯಾದ ಸ್ಥಾನ ಗಳಿಸದೆ ಹೋದದ್ದು ದೇಶದ ದುರದೃಷ್ಟ. ಪರಿಸ್ಥಿತಿ ಈಗಲೂ ಹೀಗೆಯೇ ಇದೆ. ನಮ್ಮ ಜನರಲ್ಲಿ ಯಾವ ವಿಷಯದಲ್ಲಿಯೂ ಇನ್ನೂ

ಎಚ್ಚರ ಮೂಡಿಲ್ಲ.''

ಎಂಬ ಮಾಸ್ತಿಯವರ ಮಾತು ನೂರಕ್ಕೆ ನೂರರಷ್ಟು ನಿಜವೆಂದು ಯಾರೇ ಆಗಲಿ ಒಪ್ಪಬೇಕು.

ಮಾಸ್ತಿಯವರು ಬೆಂಗಳೂರಿಗೆ ಬಂದರು. ಕಲಾಸಿಪಾಳ್ಯದ 'ರತ್ನಾವಳಿ ನಾಟಕಶಾಲೆ' ಯಲ್ಲಿ ಕೈಲಾಸಂ ನಾಟಕವೆಂದು ಪ್ರಕಟನೆ ಹೊರಟಿತ್ತು. ಮೊದಲನೆಯ ದಿನವೇ ಮಡದಿ ಮಕ್ಕಳೊಂದಿಗೆ ನಾಟಕ ಶಾಲೆಗೆ ಹೋದರು. ಅಲ್ಲಿ ಜನರೇ ಇಲ್ಲ. ನಟರಾದರೋ ರಂಗಭೂಮಿ ಪ್ರವೇಶಕ್ಕೆ ಸಿದ್ಧರಾಗುತ್ತಿದ್ದಾರೆ.

''ಮಾಸ್ತಿಯವರೂ, ಅವರ ಮನೆಯವರೂ, ಬಂದಿದ್ದಾರೆ.''

ಅಂದರು ಯಾರೋ.

''ನಮಗಷ್ಟೇ ಸಾಕು, ಬೇಗನೆ ಬಣ್ಣ ಹಚ್ಚಿಕೊಳ್ಳಿ.''

ಅಂದರು ಕೈಲಾಸಂ. ಮಾಸ್ತಿಯವರು ಕೈಲಾಸಂಗೆ ಹೇಳಿಕಳುಹಿಸಿ, ಒಳಕ್ಕೆ ಹೋದರು.

ಮಾಸ್ತಿ: ಜನಬಂದಿಲ್ಲ. ಸ್ವಲ್ಪ ವೆಚ್ಚವೇನೋ ಅನಿವಾರ್ಯ, ಅಷ್ಟು ವ್ಯರ್ಥ ಆಯಿತು. ನೀವೇ ನಾಟಕವನ್ನು ಹಾಕಿಯೇ ಬಿಡುತ್ತೇವೆ ಅಂದರೆ ಇನ್ನಷ್ಟು ವೆಚ್ಚ. ಇದಕ್ಕೆ ನಿಮಗೆ ಬರುವುದು ಏಳು ಟಿಕೆಟಿನ ಹಣ. ಏಳಲ್ಲದೆ ಹದಿನೈದು ಟಿಕೆಟ್ಟಿನ ಹಣ ಕೊಟ್ಟರೂ ನಿಮ್ಮ ಹೆಚ್ಚಿನ ವೆಚ್ಚ ಹೊರಡುವುದಿಲ್ಲ. ಯಾಕೆ ಈ ಹಣ ವೆಚ್ಚ ಮಾಡಿಕೊಳ್ಳುತ್ತೀರಿ? ಇದೇ ನಾಟಕ ಎಂಟು ದಿವಸ ಬಿಟ್ಟು ಹಾಕಿ. ಇನ್ನಷ್ಟು ಅಭ್ಯಾಸಮಾಡಿ, ಒಂದು ಇನ್ನೂರು ಜನವಾದರೂ ಬರಲಿ. ನಾನೂ ಬರುತ್ತೇನೆ, ಆಡುವಿರಂತೆ.''

ಕೈಲಾಸಂ: ನನ್ನ ತಂಗಿ, ಆಕೆಯ ಮಕ್ಕಳೂ, ನನ್ನ ನಾಟಕದಲ್ಲಿ ನನ್ನನ್ನು ನೋಡಲು ಬಂದಿದ್ದಾರೆ. ಅವರಿಗೆ ನಾನೇಕೆ ನಿರಾಶೆಯನ್ನುಂಟುಮಾಡಲಿ?

ಮಾಸ್ತಿ: ಅವರಿಗೇನೂ ನಿರಾಶೆ ಮಾಡುತ್ತಿಲ್ಲ. ವಾರಬಿಟ್ಟು ಇದೇ ನಾಟಕವನ್ನಾಡಿ. ಇತರರೊಂದಿಗೆ ಅವರೂ ಬಂದು ನೋಡಿ, ಸಂತೋಷಪಡುವಂತಾಗುತ್ತದೆ. ಈ ದಿನ ನೋಡುವುದೆಂದರೆ ''ನಾವು ಇವರಿಗೆ ನಷ್ಟ ಉಂಟು ಮಾಡುತ್ತಿರುವೆವಲ್ಲಾ'' ಎಂದು ಅವರಿಗನ್ನಿಸುತ್ತದೆ.

ಕೈಲಾಸಂ: ಇನ್ನೊಮ್ಮೆ ನೀವು ಅವರನ್ನು ಕರೆತರುವಿರೋ?

ಮಾಸ್ತಿ: ಖಂಡಿತವಾಗಿಯೂ ಕರೆತರುತ್ತೇನೆ.

ಅನಂತರ ಅವರು ಮುಖದ ಬಣ್ಣ ಒರೆಸಿ, ಹೊರಕ್ಕೆ ಬಂದು ಶ್ರೀಮತಿ ಮಾಸ್ತಿಯವರನ್ನು ಕಂಡು, ಅವರ, ಅವರ ಮಕ್ಕಳ ಕ್ಷಮೆ ಬೇಡಿದರು.

ಆಮೇಲೆ ಆ ನಾಟಕ ಸಂಘ ಸರಿಯಾಗಿ ನಡೆಯಲಿಲ್ಲ. ಕೈಲಾಸಂ Humming Birds ಎಂಬ ಕೂಟ ಕಟ್ಟಿದರು. ಅದೂ ಸರಿಯಾಗಿ ನಡೆಯಲಿಲ್ಲ.

*

''ನಾನು ವಿಶ್ರಾಂತನಾಗುವ ಮುನ್ನ ಸಂಸ್ಥಾನದ ದಿವಾನನಾಗುವೆನೆಂದು ಭಾವಿಸಿದ್ದೆನು. ೧೯೨೧ರಲ್ಲಿ ಬಾಬಾಬುಡನ್‌ಗಿರಿಯ ಮೇಲೆ ಸಂನ್ಯಾಸಿಯೊಬ್ಬರು ಯಾದೃಚ್ಛೆಯಿಂದ ಕಂಡವೇಳೆ ''ಇವರು ದಿವಾನರೋ'' ಎಂದು ಕೇಳಿದ್ದನ್ನು ಹೇಳಿದ್ದೇನೆ. ಆಗ ರಾಮರಾಯರು ''ಈಗ ಅಲ್ಲ ಮುಂದೆ ಆಗುತ್ತಾರೆ'' ಎಂದು ಹೇಳಿದ್ದರು. ಅದು ಉಪಚಾರಕ್ಕೆ ಹೇಳಿದ ಮಾತಲ್ಲ. ಅದು ಅವರಿಗೂ ನಂಬಿಕೆಯೇ,

ನನಗೂ ನಂಬಿಕೆಯೇ; ನನ್ನ ಜೊತೆಗಿದ್ದ ಶ್ರೀ ನರಸಿಂಹರಾಯರಿಗೂ ನಂಬಿಕೆಯೇ.''

ಹೀಗೆ ಮಾಸ್ತಿಯವರು ಹೇಳುತ್ತಾ, ಸರಕಾರ ಅವರಿಗೆ 'ಕಂಟ್ರೋಲರ್' ಕೆಲಸ ಕೊಟ್ಟಾಗ,

''ಮುಂದೆ ದಿವಾನನಾಗಬೇಕು. ಆಡಳಿತದ ಮುಖ್ಯವಾದ ಒಂದು ಅಂಗದ ಅನುಭವವಿರಲಿ ಎಂದೇ ನನ್ನ ದೈವ ನನ್ನನ್ನು ಈ ಸ್ಥಾನಕ್ಕೆ ನೇಮಕ ಮಾಡಿತು ಎಂದು ತಿಳಿದೆನು''

ಎಂದು ಬರೆಯುತ್ತಾರೆ ಮಾಸ್ತಿ. ಎಲ್ಲ ಸೂಚನೆಗಳೂ ಅವರಿನ್ನೂ ಮೇಲಕ್ಕೇರುವಂತೆಯೇ ಕಂಡು ಬಂತು. ಆದರೆ ನಿರೀಕ್ಷಿಸಿದಂತೆ ಆಗಲಿಲ್ಲ.

''ಹಂತ ಮುಗಿದು ನಾನು ಕಮರಿಯಲ್ಲಿ ಬಿದ್ದೆನು. ಜೀವನದ ಕಟ್ಟಡ, ತಳಹದಿ, ಗೋಡೆ, ಬಾಗಿಲು, ಎಲ್ಲ ಚೆನ್ನಾಗಿ ಮೇಲೆ ಬಂದು, ಚಾವಣಿ ಹಾಕುವ ಹೊತ್ತಿನಲ್ಲಿ ನಿಂತುಹೋಯಿತು.''

ಎಂದು ಮಾಸ್ತಿಯವರು ವರ್ಣಿಸುವಾಗ ಅವರು ಅನುಭವಿಸಿದ ಯಾತನೆಯನ್ನು ಸುಲಭವಾಗಿ ಭಾವಿಸಬಹುದು.

''ಮದುಮಗನಾಗುವೆನೆಂದು ಸಿದ್ಧಪಡಿಸಿದ ವಸ್ತ್ರ ಮದುವೆ ನಿಂತು ವ್ಯರ್ಥವಾಯಿತು''

ಎಂಬ ಅವರ ವಾಕ್ಯದಲ್ಲಿ ದುರಂತದ ಪರಾಕಾಷ್ಠದೆಸೆಯ ದುಃಖ ಹೃದ್ಗೋಚರವಾಗುತ್ತದೆ.

''ಸರಕಾರ ನನ್ನನ್ನು ಇಷ್ಟು ಕಡೆಗಣಿಸಲು ಕಾರಣವೇನು? ಇದರ ಹೀನಾಯ ನನ್ನ ಎದೆಯಲ್ಲಿ ಕುದಿಯಿತು. ಅತ್ತೆನು, ಎರಡು ನಿಮಿಷದ ನಂತರ ತಡೆದುಕೊಂಡೆನು. ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಸ್ಥಾನವನ್ನು ಕೊಟ್ಟ ದೈವ ಇನ್ನು ಈ ಪದವಿಯ ಹಂಬಲ ಸಾಕು ಎಂದು ಹೇಳಿದೆ. ಇದಕ್ಕೆ ವ್ಯಥೆಪಡುವುದು ಸರಿಯಲ್ಲ''

ಅಂದುಕೊಂಡು, ತಮಗೆ ತಾವೇ ಸಮಾಧಾನ ಮಾಡಿಕೊಂಡರು.

''ವ್ಯಥೆಪಡುವುದು ಸರಿಯಲ್ಲ, ಸರಿ, ಆದರೆ ವ್ಯಥೆ ತಪ್ಪಿದ್ದಲ್ಲ. ಗೌರವ ಲಭಿಸಿದ ದಿನ ಸಂತೋಷಪಟ್ಟಂತೆ ಅವಮರ್ಯಾದೆ ಆದ ದಿನ ದುಃಖಪಡಬೇಕು. ಅಂದು ನಗೆ ಹೇಗೆ; ಇಂದು ಅಳು ಹಾಗೆ, ಸಹಜ. ಇದರಿಂದಲೂ ಆಗಬೇಕಾದ್ದೇನೊ ಇದೆ''

ಅಂದರು. ೫೫ ವಯಸ್ಸಿನವರೆಗೆ ಸೇವೆ ಸಲ್ಲಿಸಿ ನಿವೃತ್ತರಾದ ಮೇಲೆ ಸಮಾಜಸೇವೆ ಸಲ್ಲಿಸುವ ಅಪೇಕ್ಷೆ ಮಾಸ್ತಿಯವರಿಗೆ ಮೊದಲಿನಿಂದಲೂ ಇತ್ತು. ಸೇವೆಯ ಸಂಸ್ಥೆಯೊಂದು, ಸಾಹಿತ್ಯ ದೃಷ್ಟಿಯಿಂದ ಜ್ಞಾನಪ್ರಸಾರ ಪತ್ರಿಕೆಯೊಂದು - ಇವೆರಡು ಅವರ ಬಯಕೆಯ ಎರಡು ಕ್ಷೇತ್ರಗಳು. ಶ್ರೀ ಬೇಂದ್ರೆಯವರು ೧೯೪೦ ರಲ್ಲೇ (ನವೆಂಬರ್) 'ಜೀವನ' ಪತ್ರಿಕೆಯನ್ನು ಧಾರವಾಡದಲ್ಲಿ ಆರಂಭಿಸಿದರು. ನಾಲ್ಕು ವರ್ಷ ಅಲ್ಲಿ ನಡೆಯಿತು. ಮಾಸ್ತಿಯವರು ಇಲ್ಲಿ ನಿವೃತ್ತರಾದರು. ೧೯೪೪ರಲ್ಲಿ 'ಜೀವನ' ಪತ್ರಿಕೆ ಬೆಂಗಳೂರಿಗೆ ಬಂತು. ೨೧ ವರ್ಷಗಳ ಕಾಲ ಮಾಸ್ತಿಯವರು ಆ ಪತ್ರಿಕೆಯನ್ನು ನಡೆಸಿದರು. ಪತ್ರಿಕೆಯ ೨೫ನೆಯ ವರ್ಷ ಉತ್ಸವ ಆಚರಿಸಿ, ವಿಶಿಷ್ಟ ಸಂಚಿಕೆಯನ್ನು ಹೊರಡಿಸಿ ಪತ್ರಿಕೆಯನ್ನು ಐದು ಜನ ಸ್ನೇಹಿತರ ಕಡೆಗೆ ಒಪ್ಪಿಸಿದರು.

ಎರಡನೆಯದು ಕನ್ನಡ ಸಾಹಿತ್ಯ ಪರಿಷತ್ತಿನ ಸೇವಾ ಕ್ಷೇತ್ರ.

> ''ಸರಕಾರದ ಕೆಲಸದಿಂದ ಬಿಡುಗಡೆ ಬೇಡಿದ ವೇಳೆ ನನಗೆ ನನ್ನ ಬರವಣಿಗೆ ಕೆಲಸ ಮುಂದೆ ಚೆನ್ನಾಗಿ ಸಾಗಬಹುದು ಎಂಬ ಒಂದು ನಿರೀಕ್ಷೆ ಇತ್ತು. ಪರಿಷತ್ತಿನ ಉಪಾಧ್ಯಕ್ಷನಾಗಿ ಕೆಲಸ ಮಾಡಬೇಕಾದ್ದರಿಂದ ನನ್ನ ಈ ಆಸೆ ಪೂರ್ಣವಾಗಿ ಫಲಿಸಲಿಲ್ಲ. ತತ್ಕಾಲಕ್ಕೆ ಪರಿಷತ್ತು ನನ್ನ ಎಲ್ಲ ಶಕ್ತಿ, ಸಮಯದ ವಿನಿಯೋಗಕ್ಕೆ ವಸ್ತು ಆಯಿತು.''

ಎಂಬುದಾಗಿ ಮಾಸ್ತಿಯವರು ಹೇಳಿದ್ದಾರೆ. ಮಾಸ್ತಿಯವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದದ್ದು ಕನ್ನಡನಾಡಿನ ಪುಣ್ಯ. ಪರಿಷತ್ತಿನ ಸದಸ್ಯ ಸಂಖ್ಯೆ ಬೆಳೆಸಲು; ಪರಿಷತ್ತನ್ನು ಪಂಡಿತ ಸಂಸ್ಥೆ, ಲೇಖಕರ ಸಂಸ್ಥೆಯನ್ನಾಗಿ ಪರಿವರ್ತಿಸಲು; ನೃತ್ಯ, ಗೀತ ನಾಟಕಗಳ ಪುನರುಜ್ಜೀವ ಕಾರ್ಯವನ್ನಾರಂಭಿಸಲು; ಉಪನ್ಯಾಸ ದತ್ತಿಗಳನ್ನು ಸ್ಥಾಪಸಲು; ಕನ್ನಡನಾಡಿನ ಪ್ರತಿಯೊಂದು ಭಾಗದಲ್ಲೂ ಸಂಚಾರ ಮಾಡಿ, ಜನರಲ್ಲಿ ಕನ್ನಡನಾಡು, ನುಡಿ, ಕಲೆ, ಇತ್ಯಾದಿ ವಿಚಾರಗಳಲ್ಲಿ ಅಭಿಮಾನ ಮೂಡಿಸುವ ಮಹತ್ಕಾರ್ಯ ಸಾಧನೆ ಮಾಡಲು; ಮಾಸ್ತಿಯವರು ಹಗಲಿರುಳು ದುಡಿದರು. ಇದನ್ನೆಲ್ಲ ನೋಡಿ, ನಾಡಿಗೆ ನಾಡೇ ಸಂತೋಷಪಟ್ಟಿತು. ಆದರೂ,

> ''ಅಲ್ಲಿ, ಇಲ್ಲಿ, ಕೆಲವು ಜನ ನಾನು ಉಪಾಧ್ಯಕ್ಷ ಸ್ಥಾನದಲ್ಲಿ ಪ್ರತಿಷ್ಠೆ ಬೆಳೆಸಿಕೊಳ್ಳುತ್ತಿದ್ದೇನೆಂದೂ, ಸರ್ವಾಧಿಕಾರದ ಮನೋಧರ್ಮವನ್ನು ಪ್ರಚಲಿಸುತ್ತಿದ್ದೇನೆಂದೂ, ಪರಿಷತ್ತಿಗೆ ಅದಕ್ಕೆ ಸಲ್ಲಬೇಕಾದ ಗೌರವಕ್ಕಿಂತ ಹೆಚ್ಚಿನ ಗೌರವದ ಒಂದು ಸ್ಥಾನವನ್ನು ಗಳಿಸಲು ತೊಡಗಿದ್ದೇನೆಂದೂ, ಟೀಕೆ ಮಾಡಿದರು.''

ಇದರಿಂದ ಕುಸುಮಕೋಮಲವಾದ ಮಾಸ್ತಿಯವರ ಮನಸ್ಸಿಗೆ ಬೇಸರ ಮಾತ್ರವಲ್ಲ, ಬಹಳ ನೋವಾಯಿತು. ಹಿರಿಯರೊಬ್ಬರು,

> ''ಅವರು ಸರಿಯಾಗಿ ನಡೆದುಕೊಳ್ಳಲಿಲ್ಲ, ನೀವು ಹೇಗೆ ನಡೆದುಕೊಳ್ಳುತ್ತೀರೋ ನೋಡುತ್ತಿದ್ದೇನೆ. I am watching you''

ಅಂದರು!

> ''ಇದೇನು ಮಹಾಸ್ವಾಮಿ? ಕನ್ನಡದ ಕೆಲಸ ಅಂತ ಇದಕ್ಕೆ ಒಪ್ಪಿಕೊಂಡು ನಿಮ್ಮ ಸಹಕಾರವನ್ನು ಬೇಡಿ ನಾನು ಬಂದರೆ I am watching you ಅನ್ನುತ್ತಿದ್ದೀರಲ್ಲ. ಇದು ನೀವು ಬಳಸಬಹುದಾದ ಭಾಷೆಯೆ? ನಾನು ಅಂಥ ಅಕೃತ್ಯ ಏನನ್ನು ಮಾಡುವುದಕ್ಕೆ ಹೊರಟಿದ್ದೇನೆ ಎಂದು ನಿಮ್ಮ ಯೋಚನೆ?''

ಎಂದು ಮಾಸ್ತಿಯವರು ಕೇಳಿದರು. ಆ ಹಿರಿಯರೇನು ಉತ್ತರವಿತ್ತರೋ ಮಾಸ್ತಿಯವರಿಗೆ ಮಾತ್ರ ಗೊತ್ತು. ಸಾರ್ವಜನಿಕ ಸಂಸ್ಥೆಗಳಲ್ಲಿ ನಿಸ್ಪೃಹತೆ, ಸೇವಾತತ್ಪರತೆ, ಇವುಗಳಿಂದ ಕೆಲಸ ಮಾಡುವವರೆಲ್ಲ ಇಂತಹ ಅಪಾದನೆ, ನಿಂದೆಗಳಿಗೆ, ಸಿದ್ಧರಾಗಿ ಇರಲೇಬೇಕು.

> ''ಸ್ವಾಧೀನೇ ಮಾಧುರ್ಯೇ
> ಮಧುರಾಕ್ಷರ ಸಂಹಿತೇಷು ವಾಕ್ಯೇಷು
> ಕಿಂ ನಾಮ ಸತ್ವವಂತಃ
> ಪುರುಷಾಃ ಪರುಷಾಕ್ಷರಾಣಿ ಭಾಷಂತೇ''

ಕೆಲಸ ಮಾಡುವವರನ್ನು ಕಂಡಾಗ ಅವರಿಗೆ ಯಾರೂ ಕಿರೀಟವಿಡಬೇಕಾಗಿಲ್ಲ, ಹೊಗಳಬೇಕಾಗಿಲ್ಲ. ನಯವಾದ, ಮಧುರವಾದ, ಪ್ರಿಯವಾದ, ಒಂದು ಒಳ್ಳೆಯ ಮಾತಾದರೂ ಬೇಡವೆ? ಕಟುವಾಗಿ ಮಾತಾಡುವರು ಅದೇಕೆ?

ಸಾಹಿತ್ಯದ ಸ್ಫೂರ್ತಿ, ಪ್ರಕೃತಿ ಸೌಂದರ್ಯ

ಮಾಸ್ತಿಯವರು ಕೋಲಾರದಲ್ಲಿದ್ದಾಗ ಸಂಸ್ಕೃತ, ಬಂಗಾಲಿ, ಇವೆರಡು ಭಾಷೆಗಳನ್ನು ಕಲಿಯಲು ಆರಂಭಿಸಿದರು. ವೀಣಾವಾದನದಲ್ಲೂ ಸಾಕಷ್ಟು ನೈಪುಣ್ಯತೆ ಗಳಿಸಲು ಮೊದಲು ಮಾಡಿದರು.

ಆಗಲೇ ಅವರು ''ಶಾಂತಿ'' ಎಂಬ ಪ್ರಬಂಧವನ್ನು ಬರೆದದ್ದು. ಅದನ್ನು ಶ್ರೀ ಬೇಂದ್ರೆಯವರು ಗೆಳೆಯರ ಪ್ರಬಂಧಮಾಲೆಯಲ್ಲಿ ಪ್ರಕಟಿಸಿದರು. ಅನಂತರ ಕೇಂದ್ರ ಸರಕಾರದ 'ಸಾಹಿತ್ಯ ಅಕ್ಯಾಡೆಮಿ' ಪ್ರಬಂಧ ಸಂಕಲನದಲ್ಲಿ ಶ್ರೀ ಗೊರೂರ ರಾಮಸ್ವಾಮಿಗಳು ಸೇರಿಸಿದರು.

> ''ನನ್ನ ಮದುವೆಯಾದ ವರ್ಷ ತಾತ ಕಾಯಿಲೆ ಬಿದ್ದ ದಿನಗಳಲ್ಲಿ ಅವರ ಪಕ್ಕದಲ್ಲಿ ಕುಳಿತು ಅವರನ್ನು ನೋಡಿಕೊಳ್ಳುತ್ತಾ ನಾನು ''ರಂಗನ ಮದುವೆ'' ಎಂಬ ಕತೆಯನ್ನು ಬರೆದಿದ್ದೆನಷ್ಟೆ. ಕನ್ನಡದಲ್ಲಿ ಕತೆ, ಪದ್ಯ, ಪ್ರಬಂಧ, ಮುಂತಾದುವನ್ನು ಬರೆಯೋಣವೆಂದು ನನಗೆ ಮೊದಲಿನಿಂದಲೂ ಅಪೇಕ್ಷೆ ಉಂಟು. ಆದರೆ ಇಂಗ್ಲಿಷಿನಲ್ಲಿ ಗಟ್ಟಿಗ ಎಂಬುದಾಗಿ ಸಭೆಗಳೆದುರು ಮಾತನಾಡುವುದು, ಬೇಕೆಂದ ವಿಷಯವನ್ನು ಕುರಿತು ಬರೆಯುವುದು, ಸುಲಭ ಆದಾಗ ಇಂಗ್ಲಿಷಿನಲ್ಲಿ ಬರೆಯೋಣ ಎಂಬ ಆಸೆಯೂ ಸಹಜ ಆಯಿತು. . . .ಹೀಗೆ ಅರ್ಧ ಇಂಗ್ಲಿಷ್, ಅರ್ಧ ಕನ್ನಡಕ್ಕೆ ಒಲಿದು, ನಡೆಯುತ್ತಿದ್ದ ದಿನದಲ್ಲಿ''

ಮಾಸ್ತಿಯವರಿಗೆ ಕೆಲವು ಅನುಭವಗಳಾದುವು.

ಶ್ರೀ ಬೆನಗಲ್ ರಾಮರಾಯರ ''ಕನ್ನಡ ಸಾಹಿತ್ಯ ಬೆಳೆಯುವುದಕ್ಕೆ ಯಾರು ಏನು ಮಾಡಬೇಕು'' ಎಂಬ ಲೇಖನ. ಅದಕ್ಕೆ ಉತ್ತರವಾಗಿ ವಿ. ಸುಬ್ರಹ್ಮಣ್ಯ ಅಯ್ಯರ್‌ಅವರು ಬರೆದ ಲೇಖನ. ಮಾಸ್ತಿಯವರ ಕೋಲಾರ ಜಿಲ್ಲೆಯ ಜಮಾಬಂದಿ ಕಾಲದ ಅನುಭವ. ಈ ಅನುಭವವನ್ನು ಅವರ ಮಾತಿನಿಂದಲೇ ತಿಳಿಯಬೇಕಾದದ್ದು ಅವಶ್ಯಕ.

> ''ಮಲ್ಲಸಂದ್ರ ಗ್ರಾಮದ ಪ್ರವಾಸಿ ಮಂಟಪದಲ್ಲಿ ಒಂದು ಸಂಜೆ ನಾನು ಬಿಡಾರ ಮಾಡಿದ್ದೆ. ಗ್ರಾಮದ ಜಮಾಬಂದಿ ವೇಳೆಯಲ್ಲಿ ರೈತ ಮಾಡಿದ್ದ ಅದೇನೋ ಸಂಗತಿ ತಪ್ಪು ಎನ್ನುವ ಮಾತಿಗೆ ಅವನು ನನ್ನೆದುರು ನಿಂತ:

ನಾನು: ಏನಪ್ಪಾ, ಇದು ಮಾಡಬಾರದು ಎಂತ ನಿನಗೆ ತಿಳಿಯಲಿಲ್ಲವೆ?

ಅವನು: ಇಲ್ಲ, ಸ್ವಾಮಿ.

ನಾನು: ಯಾಕಯ್ಯ? ರೂಲ್ಸ್ ಇದೆಯಲ್ಲ. ಇದನ್ನು ತಿಳಿದುಕೊಳ್ಳಬೇಡವೆ?

ಅವನು: ನಿಮ್ಮ ರೂಲ್ಸು, ಗೀಲ್ಸು, ಎಲ್ಲಾ ಇಂಗ್ಲಿಷಿನಲ್ಲಿದೆ ಸ್ವಾಮಿ; ನಾನೇನು ತಿಳ್ಕೊಳ್ಳೋದು?

ಸಂಗತಿ ಸಣ್ಣದು; ಮನಸ್ಸಿಗೆ ಹೊಸತಾದುದೂ ಅಲ್ಲ. ಆದರೆ ಆ ಕ್ಷಣ ಅವನ ಮಾತು ನನ್ನ ಮೇಲೆ ಪ್ರಚಂಡ ಪರಿಣಾಮಮಾಡಿತು.

ನಾನು: ಹೌದಲ್ಲಾ, ನಾನು ಸರಕಾರ ಅಂತ ಮಾಡುವ ಕೆಲಸವೆಲ್ಲ ಇಂಗ್ಲಿಷಿನಲ್ಲಿ ಮಾಡಿದರೆ ನಮ್ಮ ಜನಕ್ಕೆ ಹೇಗೆ ತಿಳಿಯಬೇಕು? ಇಂಥ ಗ್ರಾಮದ ಇಂಥ ಜನ ಬೆವರು ಸುರಿಸಿ, ಬೆನ್ನು ಮುರಿಯ ದುಡಿದು, ಗಳಿಸಿದ ಆರು ಕಾಸಿನಲ್ಲಿ ಮೂರು ಕಾಸನ್ನು ಸರಕಾರಕ್ಕೆ ಕೊಟ್ಟು, ನಮಗೆಲ್ಲ ಸಂಬಳ ಕೊಡಿಸಿ, ಸುಖವಾಗಿ ನೋಡಿಕೊಳ್ಳುತ್ತಾರೆ. ನಾವು ಹೆಸರಿಗೆ Public Servants, ಜನತೆಯ ಸೇವಕರು. ದಿಟದಲ್ಲಿ Licensed Tyrants, ಸ್ವೇಚ್ಛಾವರ್ತಿ ಚಂಡ ಪ್ರಭುಗಳು. ಇವರಿಗೆ ದಂಡ ಹಾಕಿದ್ದೇವೆ ಎಂದು ನಾವು ಬರೆಯುವ ಆಜ್ಞೆ ಕೂಡ ಇಂಗ್ಲಿಷಿನಲ್ಲಿರುತ್ತದೆ. ಅದನ್ನು ಇವರು ತಿಳಿದುಕೊಳ್ಳಬೇಕಾದರೆ ಇಂಗ್ಲಿಷ್ ಕಲಿತ ಲಾಯರ್ ಮುಂತಾದವರನ್ನು ಆಶ್ರಯಿಸಬೇಕು-

ಎಂದುಕೊಂಡೆನು. ಈ ಯೋಚನೆಯಿಂದ ನಮ್ಮ ಜನರ ಪರವಾಗಿ ನಾನು ತುಂಬಾ ಖಿನ್ನನಾದೆನು.''

❊

ಕೋಲಾರದ ಕ್ಲಬ್‌ನಲ್ಲಿ ಒಂದು ಸಂಜೆ ಕೋಲಾರದ ಹೈಸ್ಕೂಲ್ ಹೆಡ್‌ಮಾಸ್ಟರಾಗಿದ್ದ ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರೊಂದಿಗೆ ಆಗ ಏರ್ಪಾಡಾಗಲಿದ್ದ ಯೂನಿವರ್ಸಿಟಿಯ ಭಾಷಾ ನೀತಿಯ ಮಾತು ಬಂತು.

ನಾನು: The University should give special attention to Kannada as it has to serve the Kannada country.

ಅವರು: Kannada country!

ನಾನು: Yes, Mysore is Kannada country.

ಅವರು: Who says so Mr. Venkates Iyengar? The whole of India is now English country.

❊

''ಈ ಎಲ್ಲ ಮಾತಿನ ಫಲವಾಗಿ ನಾನು ಇನ್ನು ಮುಂದೆ ಆದಷ್ಟು ಕನ್ನಡಕ್ಕಾಗಿ ದುಡಿಯಬೇಕು. ಈ ಜನ ನನ್ನನ್ನು ಸಾಕುತ್ತಿದೆ; ಇದಕ್ಕೆ ಸೇವೆ ಸಲ್ಲಿಸುವುದು ನನ್ನ ಕರ್ತವ್ಯ'' ಎಂಬ ಭಾವವನ್ನು ಅನುಭವಿಸಿದೆನು.

❊

ಒಂದು ಸಲ ನಮ್ಮ ಮಿತ್ರರೆಲ್ಲ ಒಂದು ಸಂತೋಷ ಕೂಟದಲ್ಲಿ ನೆರೆದಿದ್ದಾಗ ಮಿತ್ರರು,

ಒಬ್ಬರು: ನೀವು M.A. ಯಾವಾಗ ಪ್ಯಾಸ್ ಮಾಡಿದಿರಿ?

ನಾನು: ೧೯೧೫ರಲ್ಲಿ.

ಮಿತ್ರರು: After you got into the Civil Service?

ನಾನು: Yes.

ಮಿತ್ರರು: What was your subject?

ತಮಿಳರೊಬ್ಬರು : Kannada of course.

ನಾನು : There is no 'of course' about it. My degree was in English.

ಎಲ್ಲರಿಗೂ ಆಶ್ಚರ್ಯ! ''ಇಂಗ್ಲಿಷಿನಲ್ಲಿ M.A. ಪ್ಯಾಸ್ ಮಾಡಿದ್ದಾನೆ; ಕನ್ನಡದಲ್ಲಿ ಕಥೆ ಬರೆಯುತ್ತಾನೆ. ಇವನಿಗೇನು ಬಂತು, ಎಂದು ಇವರಲ್ಲಿ ಕೆಲವರು ಯೋಚನೆ ಮಾಡಿದ್ದರೆ ಆಶ್ಚರ್ಯವಿಲ್ಲ. ಕಾಲ ಹಾಗಿತ್ತು. ಜನ ಹಾಗಿದ್ದೆವು''

ಮ್ಯಾಥಮ್ಯಾಟಿಕ್ಸ್ ಬಿ.ಎ. ಆಗಿದ್ದ ಲಕ್ಷ್ಮೀಪತಿ ಎಂಬ ಒಬ್ಬ ಉಪಾಧ್ಯಾಯರು ಕನ್ನಡದಲ್ಲಿ ಒಂದು ಪುಸ್ತಕವನ್ನು ಬರೆದು ಪ್ರಕಟಿಸಿದಾಗ, ಅವನ ಬಂಧುಗಳು ''B.A. ಪ್ಯಾಸ್ ಮಾಡಿ ಕನ್ನಡದಲ್ಲಿ ಪುಸ್ತಕ ಬರೆಯೋದಕ್ಕೆ ಇವನಿಗೇನು ಬಂತು ತೆವಲು'' ಎಂದರಂತೆ! ಅವರ ಮನೆ ಮಾತು ತೆಲುಗು, ಅವರು ಹೀಗೆ ಅವರನ್ನು ಖಂಡಿಸಿದ್ದೂ ತೆಲುಗಿನಲ್ಲಿ. ಲಕ್ಷ್ಮೀಪತಿಯ ಮನೆಯ ಮಾತು ತೆಲುಗು ಹೇಗೋ ಹಾಗೆ ನನ್ನ ಮನೆ ಮಾತು ತಮಿಳು. ತೆಲುಗಿನಲ್ಲಿ ಅಪರಾಧವಾದದ್ದು ತಮಿಳಿನಲ್ಲೂ ಇಂತಹ ಹಿರಿಯರಿಗೆ ಅಪರಾಧವೆಂದೇ ಕಂಡಿರಬೇಕು.''

''ಚೆನ್ನಬಸವ ನಾಯಕ'' ರಚನೆಯ ಹಿನ್ನೆಲೆ ಕುರಿತು ಮಾಸ್ತಿಯವರು ಹೇಳಿರುವುದು ಇದು :

> ''ಗಿರಿಯ ಚೆಲುವನ್ನು ನೋಡಿ ಅದರ ಸಂಬಂಧದ ಕತೆಗಳನ್ನು ಕೇಳಿ, ನನ್ನ ಜೀವಕ್ಕೆ ಹೊಸದೊಂದು ಸಂಸ್ಕಾರವೇ ಆಯಿತು. ಆಮೇಲೆ ಎರಡು ಮೂರು ಸಲ ಪೀಠಕ್ಕೆ ಹೋಗಿ ಬಂದು, ಜನರ ಮಾತನ್ನು ಕೇಳಿ, ತಿಳಿದು, ನಾನು ''ಚನ್ನಬಸವ ನಾಯಕ'' ಎಂಬ ನನ್ನ ಆಮೇಲಿನ ಕಾದಂಬರಿಯ ವಿಷಯವನ್ನು ಮನಸ್ಸಿನಲ್ಲಿ ಬೆಳೆಸಿಕೊಂಡೆನು. ನನ್ನ ಅಂದಿನ ಆ ಅನುಭವದ ಒಂದು ರೂಪವನ್ನು ಆ ಕಾದಂಬರಿಯ ಆರಂಭದಲ್ಲಿ ಸಹೃದಯರು ಕಾಣಬಹುದು.''

ಮೂಡಿಕೆಗೆರೆ, ಆಲದೂರು, ಗೋಣೇಬೀಡುಗಳಲ್ಲಿ ಕೋಲಾಟ ಹಾಕಿಸಿ, ಹೀಗೆ ಹೇಳುತ್ತಾರೆ:

> ''ನಾನು ಸಂತೋಷಪಟ್ಟು ಅವರನ್ನೂ ಸಂತೋಷಪಡಿಸಿದೆನು. ಅದೇ ಹೊತ್ತಿನಲ್ಲಿ ಆಟದಲ್ಲಿ ಅವರು ಹಾಡಿದ ಹಾಡುಗಳನ್ನು ಆಮೇಲೆ ಅವರಿಂದ ಹೇಳಿಸಿ, ಬರೆದುಕೊಂಡು, ನಮ್ಮ ಜನಪದ ಸಾಹಿತ್ಯದ ಕೆಲವು ತೆರನ ಸಂಪತ್ತನ್ನು ಸಂಗ್ರಹಿಸಿ ಇಟ್ಟೆನು.''
>
> ''ಅರಿಶಿನಕೊಪ್ಪದ ಚೆನ್ನೇಗೌಡರ ಪತ್ನಿಯವರ ರೀತಿ ಒಂದು ವಿಧದಲ್ಲಿ ಚೆಲುವಾಗಿ ಕಂಡಂತೆ ಈ ಹೆಗ್ಗಡಿತಿಯವರ ಈ ರೀತಿ ಇನ್ನೊಂದು ವಿಧದಲ್ಲಿ ಚೆಲುವಾಗಿ ಕಂಡಿತು. ಇದರ ಚಿತ್ರ ನನ್ನ ಮನಸ್ಸಿನಲ್ಲಿ ಭದ್ರವಾಗಿ ನಿಂತಿತು. ಬರುವ ದಿನಗಳಲ್ಲಿ ಇದು ನನ್ನ ಮನಸ್ಸಿಗೆ ನಮ್ಮ ಜನರ ಸಂಸ್ಕೃತಿಯ ಹಿರಿಯ ಒಂದು ಪ್ರಕಾರ ಎಂದು ಕಂಡಿತು. ಚೆನ್ನಬಸವ ನಾಯಕ ಕಾದಂಬರಿಯನ್ನು ಎಷ್ಟೋ ವರ್ಷದಾಚೆಗೆ ಬರೆಯುವಾಗ ನನಗೆ ವಸ್ತಾರೆ ಹೆಗ್ಗಡಿತಿಯ ರೀತಿ ನೀತಿಯ ಕಲ್ಪನೆಯನ್ನು ಒದಗಿಸಿತು.''

ಈ ಗ್ರಾಮದ (ಕೋಗಿಲೆ)ಲ್ಲಿ (ಸಬ್‌ಡಿವಿಷನ್ ಅಧಿಕಾರಿ) ನೋಡಿ ಮಾಡಬೇಕಾದ

ಕೆಲಸವೇನೂ ಇರಲಿಲ್ಲ. ಮನುಷ್ಯ ಗ್ರಾಮ ಇರುವ ಭೂಮಿಯ ಚೆಲುವನ್ನೂ ನೋಡಿ ಸಂತೋಷಪಡಬಹುದು. ನಾನು ಚೆಲುವನ್ನು ನೋಡಿದೆನು. ಸಂತೋಷಪಟ್ಟೆನು. ಹಿಂತಿರುಗಿ ಎರಡು ತಾಸು ನಡೆದು ಮತ್ತೆ ಬಿಡಾರವನ್ನು ಮುಟ್ಟಿದೆನು. ಆಮೇಲಿನ ದಿನಗಳಲ್ಲಿ ಈ ಗ್ರಾಮದ ಚೆಲುವನ್ನು ಹೊಗಳಿ ನಾನು ಸಣ್ಣ ಪದ್ಯವೊಂದನ್ನು ಬರೆದೆನು.''

> ನಾನು ಚಿಕ್ಕಮಗಳೂರಿನಲ್ಲಿದ್ದಾಗ ನನ್ನ ಮೊದಲ ಪುಸ್ತಕ ''ಕೆಲವು ಸಣ್ಣ ಕತೆಗಳು'' ಪ್ರಕಟವಾಯಿತು. . . . . ಈ ಪುಸ್ತಕವನ್ನು ಕುರಿತು ತುಂಬ ಮೆಚ್ಚುಗೆಯ ಒಂದು ಅವಲೋಕನವನ್ನು ಶ್ರೀ ಎ.ಆರ್. ಕೃಷ್ಣಶಾಸ್ತ್ರಿಗಳವರು ತಾವೇ ಸಂಪಾದಿಸುತ್ತಿದ್ದ 'ಪ್ರಬುದ್ಧ ಕರ್ನಾಟಕ'ದಲ್ಲಿ ಪ್ರಕಟಿಸಿದರು. . .

ಮಾಸ್ತಿಯವರೂ, ನವರತ್ನ ರಾಮರಾಯರೂ, ಸಕ್ಕರೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಇಳಿದುಕೊಂಡಿದ್ದಾಗ ಮಾಸ್ತಿಯವರು ತಮ್ಮ ಪುಸ್ತಕದ ಒಂದು ಪ್ರತಿಯನ್ನು ರಾಮರಾಯರಿಗೆ ಕೊಟ್ಟರು.

> ''ಆದಿನ, ಮಾರನೆಯದಿನ, ಆ ಪುಸ್ತಕವನ್ನೋದಿ, ಅವರು ಅದರ ಲೇಖಕ ನಾನೇ ಆಗಿರಬೇಕು ಎಂದು ನಿಶ್ಚಯಿಸಿಕೊಂಡರು. ಹೀಗೆ ನನಗೆ ತಿಳಿಸಿದರು, ನಾನು ಹೌದು ಎಂದೆನು. ಅವರು ಪುಸ್ತಕವನ್ನು ತುಂಬ ಮೆಚ್ಚಿಕೊಂಡರು.''

ಅನ್ನುತ್ತಾರೆ ಮಾಸ್ತಿಯವರು.

ಚಿಕ್ಕಮಗಳೂರಿಂದ ಬಂದ ಮೇಲೆ ಮಾಸ್ತಿಯವರು ದೇವರನಾಮಗಳ ರೀತಿಯಲ್ಲಿ ಹಾಡುಗಳನ್ನು ಬರೆಯಲಾರಂಭಿಸಿದರು. ಬೇಲೂರು ಚನ್ನಕೇಶವನ ಮೂರ್ತಿಯಿಂದ ಸ್ಫೂರ್ತಿ ಪಡೆದು ಬರೆದ,

''ಅರಸುವುದು ಜಗವು ನಿನ್ನನು ಶ್ರೀನಿವಾಸ'' ಎಂಬುದೇ ಮೊದಲನೆಯ ಹಾಡು. ಹತ್ತು ಹಾಡುಗಳನ್ನು ಬರೆದ ಮೇಲೆ ಮಾಸ್ತಿಯವರು ವೆಂಕಣ್ಣಯ್ಯನವರಿಗೆ ತಿಳಿಸಿದರು. ತಾವೇ ಅವುಗಳನ್ನು ಹಾಡಿ ಕೇಳಿಸಿದರು.

> ''ದೇವರಕೃಪೆ, ನಿಮ್ಮ ಕತೆಗಳು ಹೇಗೆ, ಹಾಗೆ ಈ ರಚನೆಗಳೂ ಶ್ರೇಷ್ಠವಾಗಿವೆ. ಕೆಲಸ ನಡೆಯಲಿ''

ಅಂದರು ವೆಂಕಣ್ಣಯ್ಯನವರು. ಎರಡು ತಿಂಗಳಿನಲ್ಲಿ ಐವತ್ತು ಹಾಡುಗಳನ್ನು ರಚಿಸಿದರು.

> ''ಕನ್ನಡದಲ್ಲಿ ಹೀಗೆ ಸಹಜವಾದ, ಸ್ವತಂತ್ರ ಸಾಹಿತ್ಯ ಹೀಗೆ ಸುಂದರವಾಗಿ ಸೃಷ್ಟಿಯಾಗಿ ಮುನ್ನೂರು ವರ್ಷಕ್ಕೆ ಮೇಲೆ ಆಗಿದೆ''

ಎಂಬುದಾಗಿ ಹೇಳಿದರು ವೆಂಕಣ್ಣಯ್ಯ. ಮಾಸ್ತಿಯವರು ಆ ಹಾಡುಗಳನ್ನೆಲ್ಲ 'ಬಿನ್ನಹ' ಎಂಬ ಹೆಸರಿನಿಂದ (೧೯೨೮) ಪ್ರಕಟಿಸಿದರು.

ಮಧುಗಿರಿಯಲ್ಲಿ ಅವರಿದ್ದಾಗ ಆದ ಅವರ ಸಾಹಿತ್ಯ ಸೃಷ್ಟಿ ಕುರಿತು ಅವರ ಮಾತುಗಳಿಂದಲೇ ಕೇಳಬೇಕು.

> ''ವ್ಯಕ್ತಿಜೀವನ, ಜನರ ಸಹವಾಸ, ಪ್ರಕೃತಿಯ ಪ್ರಸನ್ನಮುಖ, ಎಲ್ಲ ಸೇರಿ ನನಗೆ ಈ ದಿನಗಳು ತುಂಬ ಸುಖದ ಅನುಭವವನ್ನು ತಂದವು. ಈ ದಿನಗಳಲ್ಲಿ ನಾನು 'ಅರುಣ' ಕಾವ್ಯದ ನನ್ನ ಕವಿತೆಗಳನ್ನು ಬರೆದೆನು. ಕುದುರೆ ನಡೆಯುವ, ಓಡುವ, ಗತಿಯ ಲಯದಿಂದ ಪದ್ಯಗಳ ಲಯ ರೂಪುಗೊಂಡವು. ಹಾಗೆಯೇ ಈ ಕೃತಿಗಳಲ್ಲಿ ನಮ್ಮ ಜನರ ಜೀವನದ ಹತ್ತು ವಿವರಗಳು ಚಿತ್ರವಾದುವು.

ಚಿಕ್ಕಮಲ್ಲಮ್ಮ ಕಥನದ ಸ್ಥಳೀಯ ಇತಿಹಾಸ ನನಗೆ ಸಿಕ್ಕಿದ್ದು ಇದೇ ಕಾಲದಲ್ಲಿ. ಹೊಸ ರೀತಿಯ ಕವಿತೆ ಎಂದು ಛಂದಸ್ಸಿನ ಹೊಸ ರೂಪಿಸುತ್ತಾ ನಾನು ಇಂಗ್ಲಿಷಿನ ಬ್ಲ್ಯಾಂಕ್‌ವರ್ಸ್ ಎಂಬ ಛಂದಸ್ಸಿನ ರೂಪಿಗೆ ಸಮನಾಗಿ ಬಿಡಿವೃತ್ತವನ್ನು ರೂಪಿಸಿದ್ದು ಈ ದಿನಗಳಲ್ಲಿ. ಬಿ.ಎ. ತರಗತಿಯಲ್ಲಿ ಹ್ಯಾಂಲೆಟ್ ಓದಿ ಅದನ್ನು ನಮ್ಮ ಭಾಷೆಗೆ ಭಾಷಾಂತರ ಮಾಡುವುದೇ ಎಂದು ಆಮೇಲೆ ಯೋಚಿಸಿ, ಇದರ ಕ್ರಮ ಹೇಗಿರಬೇಕು ಎಂಬ ವಿಷಯದಲ್ಲಿ ನನಗೆ ಬಹು ಕಟ್ಟುನಿಟ್ಟಿನ ಕಲ್ಪನೆ ಬೆಳೆದಿತ್ತು. ಅದರ ಪ್ರಕಾರ ಬ್ಲ್ಯಾಂಕ್‌ವರ್ಸ್‌ಗೆ ಬದಲಾಗಿ ಅಷ್ಟೇ ನಿರ್ಬಂಧ ರಹಿತವಾದ ಸುಸಂಬದ್ಧ ಪಂಕ್ತಿ ಒಂದು ಇರಬೇಕು. ಹ್ಯಾಂಲೆಟ್ಟಿನ To be or not to be that is the question. ಪಂಕ್ತಿ Blank verse ಗೆ ಒಂದು ಉದಾಹರಣೆ. ಇದನ್ನು ಕನ್ನಡದಲ್ಲಿ ಏನೆಂದು ಬರೆಯಬೇಕು?

''ಉಳಿಯುವುದೇ, ಅಳಿಯುವುದೇ, ಇದುವೇ ಸಮಸ್ಯೆ''

ಈ ರೀತಿಯಾಗಿ ಕನ್ನಡ ಪಂಕ್ತಿ ಆದರೆ ಸರಿಹೋಗುತ್ತದೆ ಅನ್ನಿಸಿತು. ಹ್ಯಾಂಲೆಟ್ ಭಾಷಾಂತರದ ಮಾತು ಮುಂದಕ್ಕಿರಲಿ; ಸದ್ಯ ಈ ಬಿಡಿ ಪಂಕ್ತಿ ಕಾವ್ಯಕ್ಕೆ ಹೇಗೆ ಒದಗುತ್ತದೆ ನೋಡೋಣ ಎಂದು ನಾನು ''ಸ್ಥಳಗಳ ಹೆಸರುಗಳು'' ಎಂಬ ನನ್ನ ಕಥೆಗಳ ಪದ್ಯವನ್ನು ಬರೆದೆನು. ಪಂಕ್ತಿ ತುಂಬ ಚೆನ್ನ ಆಯಿತು. ಕಥನಕ್ಕೆ ಹದವಾಗಿ ಒದಗಿತು. ಇಂಗ್ಲಿಷಿನ ಅತ್ಯುತ್ತಮ ಬ್ಲ್ಯಾಂಕ್ ವರ್ಸ್ ಕವನಗಳ ಬಾಗು, ಬಳುಕು, ಚೆದುರು, ಒನಪು ಎಲ್ಲವನ್ನೂ ಇಲ್ಲಿ ಸಾಧಿಸುವುದು ಸಾಧ್ಯ ಎಂದು ನನಗೆ ಕಂಡಿತು. ''ಅರುಣ'' ಪುಸ್ತಕದಲ್ಲಿ ಪ್ರಕಟವಾದ ಈ ಛಂದೋರೂಪವನ್ನು ಶ್ರೀ ವೆಂಕಣ್ಣಯ್ಯನವರು ಸರಳ ರಗಳೆ ಎಂದು ಕರೆದರು. ರಗಳೆ ಶಬ್ದಪ್ರಾಸ ಇರುವ ಛಂದೋರೂಪಗಳ ಹೆಸರು. ಆ ರೂಪಗಳ ಇತರ ಮುಖ್ಯ ಲಕ್ಷಣಗಳು ನನ್ನ ಪ್ರಯೋಗದಲ್ಲಿ ಕಾಣುತ್ತಿರಲಿಲ್ಲ. ಆದರೂ ಸರಳ ರಗಳೆ ಒಂದು ಹೆಸರಾಗಲಿಕ್ಕೆ ಅಡ್ಡಿ ಏನೂ ಇರಲಿಲ್ಲ. . . .ಆಮೇಲಿನ ದಿನಗಳಲ್ಲಿ ನಾನು ಈ ಪದ್ಯಗಳನ್ನು ಬೆಂಗಳೂರಿನಲ್ಲಿ, ಮೈಸೂರಿನಲ್ಲಿ, ಓದಿ ಹೇಳಿ; ಸರಳ ರಗಳೆ ವಿದ್ಯಾರ್ಥಿ ಸಮುದಾಯದಲ್ಲಿ ಬಳಕೆಗೆ ಬಂದಿತು. ಶ್ರೀ ಪುಟ್ಟಪ್ಪನವರು ಒಂದು ನಾಟಕದಲ್ಲಿ, ಸೌಭಾಗ್ಯವತಿ ರಾಜಮ್ಮನವರು ಒಂದು ಸಣ್ಣ ದೃಶ್ಯದಲ್ಲಿ ಇದನ್ನು ದಕ್ಷವಾಗಿ ಬಳಸಿ ವಾಡಿಕೆಗೆ ತಂದರು. ಈಚೆಗೆ ಅದು ವಿಸ್ತಾರವಾಗಿ ಬಳಕೆಯಾಗಿದೆ.''

ಮಾಸ್ತಿಯವರು ಕೋಲಾರದಲ್ಲಿ ಆರಂಭಿಸಿದ ಸಂಸ್ಕೃತ ಭಾಷಾ ಪರಿಚಯ ಮಧುಗಿರಿಯಲ್ಲಿ ಬೆಳೆಯಿತು. ಕೋಲಾರದಲ್ಲಿ ವೀಣೆ ಕಲಿಯಲಾರಂಭಿಸಿದವರು ಮಧುಗಿರಿಯಲ್ಲಿ ಪಿಟೀಲು ಪ್ರಾರಂಭಿಸಿದರು. ಹೊಳವನಹಳ್ಳಿ ಶೇಷಾಚಾರ್ಯರಿಂದ ಗೀತಾ ವ್ಯಾಖ್ಯಾನಗಳನ್ನು ಕೇಳಿ, ಅವರ ಕಡೆಯಿಂದ ಬರೆಸಿ, ಅದನ್ನು ಪ್ರಕಟಿಸಿದರು.

''ಇದು ಮೊದಲು ಭಗವದ್ಗೀತೆಯನ್ನು ಕುರಿತು ನಾನು ಸೂಕ್ಷ್ಮವಾಗಿ ವಿಚಾರ ಮಾಡಲು ತೊಡಗಿದೆನು. ಆಗ ತೊಡಗಿದ ವಿಚಾರ ಹತ್ತು ವರ್ಷಗಳು ನಡೆದಮೇಲೆ ''ಗೀತಾ ಗ್ರಂಥದ ವಿಚಾರ ಸರಣಿ'' ಎಂಬ ಒಂದು ಲೇಖನವನ್ನು ಬರೆದೆನು. ಈಚೆಗೆ ಮತ್ತಷ್ಟು ಅಭ್ಯಾಸ ಮಾಡಿದ್ದೇನೆ. ಗೀತೆಯ ಭಾಷಾಂತರ ಒಂದನ್ನು ಸಿದ್ಧಪಡಿಸಿದ್ದೇನೆ. ಅದಕ್ಕೆ ಉಪೋದ್ಘಾತವಾಗಿ ಹೇಳಬೇಕಾದ

ಸಂಗತಿಗಳ ಟಿಪ್ಪಣಿಗಳನ್ನು ಮಾಡಿಕೊಂಡಿದ್ದೇನೆ. ದೈವಕೃಪೆಯಿಂದ ಪುಸ್ತಕ ಇನ್ನು ಮುಂದೆ ಪೂರ್ಣ ಆಗಬೇಕು.''

ಎಂಬದಾಗಿ ಹೇಳಿದ್ದಾರೆ.

ಮಾಸ್ತಿಯವರು ಮಧುಗಿರಿಯಲ್ಲಿದ್ದಾಗ ನವರತ್ನ ರಾಮರಾಯರು ತುಮಕೂರಿಗೆ ಬಂದು, ಕುಣಿಗಲ್ಲಿಗೆ ಹೋಗುವವರಿದ್ದರು. ಮಾಸ್ತಿಯವರೂ ಅವರೊಂದಿಗೆ ಕುಣಿಗಲ್ಲಿಗೆ ಹೋದರು. ಆಗ ಇಬ್ಬರೂ ಏನೇನೋ ಮಾತನಾಡಿದರು. ''ರಾಮರಾಯರೊಂದಿಗೆ ಹತ್ತು ವರ್ಷಗಳ ಹಿಂದೆ ಆರಂಭಿಸಿದ್ದ ಪರಿಚಯ ಈ ವೇಳೆಗೆ ತಕ್ಕಷ್ಟು ಗಾಢ ಸ್ನೇಹ ಆಗಿತ್ತು'' ಅನ್ನುತ್ತಾರೆ ಮಾಸ್ತಿಯವರು. ಅವರ ಜೀವನ ಚಿತ್ರ ಕುರಿತು ನಾಲ್ಕು ಮಾತು ಹೇಳಿ

''ಇವರ ಬರಹ, ಇವರ ಮಾತು ಸಾಹಿತ್ಯ'' ಎಂಬುದಾಗಿ ವಿವರಿಸಿ, ಅವರು ಆರಂಭಿಸಿದ್ದ ತಮ್ಮ ಪರಿಚಯದ ಒಬ್ಬ ಗಾಯಕ ಶಾಮಣ್ಣ ಎಂಬವರನ್ನು ಕುರಿತು ಇಬ್ಬರೂ ಮಾತಿಗಾರಂಭಿಸಿದರು.

ಮಾಸ್ತಿ: ಆ ಕೆಲಸ ಮುಂದುವರಿಯಿತೆ?

ನವರತ್ನ: ಆರೇಳು ಪುಟ ಬರೆದಿದ್ದದ್ದು ಕಳೆದುಹೋಯಿತು. ನಾನು ಮತ್ತೆ ಅದನ್ನು ಬರೆಯಲಾರೆ.

ಮಾಸ್ತಿ: ಬಹು ಒಳ್ಳೆಯ ವಿಷಯ; ಅದು ಸಾಹಿತ್ಯ ಆಗಬೇಕು. ನೀವು ಬರೆಯುವುದಿಲ್ಲ ಅಂದರೆ ಅದು ಕಳೆದುಹೋಗುತ್ತದಲ್ಲಾ, ರಾಯರೇ.

ನವರತ್ನ: ನನ್ನಿಂದ ಆಗುವುದಿಲ್ಲ, ವಿಷಯ ವ್ಯರ್ಥವಾಗಬಾರದು ಎನ್ನುವುದಾದರೆ ನೀವು ಬರೆಯಿರಿ.

ಮಾಸ್ತಿ: ಆ ವಸ್ತುವನ್ನು ನಾನು ಬಳಸುತ್ತೇನೆ.

ರಾಯರೊಪ್ಪಿದರು; ಮಾಸ್ತಿ ಬರೆದರು, ಅದೇ ''ಸುಬ್ಬಣ್ಣ''!

''ಸುಬ್ಬಣ್ಣನ ಕೊನೆಯ ದಿನಗಳ ಮನೋಧರ್ಮ ಒಂದು ಆದರ್ಶದ ಮನೋಧರ್ಮ ಎಂದು ಆಗ ನನ್ನ ತಿಳಿವಳಿಕೆ. ರಾಮರಾಯರು ಗಾಯಕನ ಇಳಿವಯಸ್ಸಿನ ಸಂಗತಿ ಕೆಲವನ್ನು ಹೇಳಿದ್ದರು. ಆತ ಮನೆಯಲ್ಲಿ ಸರಿಹೋಗದೆ, ದೇಶ ಬಿಟ್ಟು ಹೋಗಿ ಕಲ್ಕತ್ತೆಯಲ್ಲಿ ಇದ್ದು ಹಿಂತಿರುಗಿದ್ದವನು ಎಂದಿದ್ದರು. ಈ ಭಾಗವನ್ನು ಸಾಧಿಸುವುದಕ್ಕೆ ನಾನು ನಾರಾಯಣಶಾಸ್ತ್ರಿಗಳ ಸಂಸಾರದ ಚಿತ್ರವನ್ನು ನಿರ್ಮಿಸಬೇಕಾಯಿತು. ಆ ಚಿತ್ರದಲ್ಲಿ ಬರುವ ಎಲ್ಲ ಜನ, ಎಲ್ಲ ಸಂಗತಿ, ಕಲ್ಪಿತ. ಊರಿಂದ ಹೊರಡುವಾಗ ಒಬ್ಬ ವೇಶ್ಯೆ ನೂರು ರೂಪಾಯಿ ನೋಟನ್ನು ಕೊಟ್ಟಳು ಎಂಬ ವಿವರ ಹೊರತಾಗಿ ನೀಲಾಸಾನಿಯ ಚಿತ್ರವೂ ಕಲ್ಪಿತವೇ. ಅರಮನೆಯ ಮಾತೂ ಅಷ್ಟೇ. ಕಲ್ಕತ್ತೆಯ ಮೂವತ್ತೈದು ವರ್ಷಗಳ ಚರಿತ್ರೆಯೂ ಅಷ್ಟೆ. ಆದರೆ ಬರೆಯುವ ಮೊದಲೇ ಶ್ರುತ, ಕಲ್ಪಿತ, ಎರಡೂ ಒಂದನ್ನೊಂದು ತಿದ್ದಿ, ಸರಿಮಾಡಿ, ಹೊಂದಿಕೊಂಡು, ಸುಸಂಬದ್ಧವಾದ ಒಂದು ಇತಿಹಾಸ ಆಗಿದ್ದುವು. ಮಣಿಮಣಿಯನ್ನು ಪೋಣಿಸಿ ಹಾರ ಮಾಡುವಂತೆ ಸಂಗತಿ ಸಂಗತಿಯನ್ನು ಪೋಣಿಸಿ, ಒಂದು ಕಥೆಯಾಗಿ ಸುಬ್ಬಣ್ಣನ ಚರಿತ್ರೆಯನ್ನು ಮುಗಿಸುವ ವೇಳೆಗೆ ನನ್ನ ಮನಸ್ಸಿಗೆ ತುಂಬ ಸಮಾಧಾನ ಬಂದಿತ್ತು. ಮೈ ಮತ್ತಷ್ಟು ದಣಿದಿತ್ತು. ಆದರೆ ಒಂದು ಕೆಲಸ ಮುಗಿದಿತ್ತು ಎಂಬ ಸಂತೋಷದಲ್ಲಿ ಅದರಿಂದ ತೊಂದರೆ

ಆಗಲಿಲ್ಲ.''

ಪ್ರಜಾಪ್ರತಿನಿಧಿ ಸಭೆಯ ಅಧಿವೇಶನ. ಮಾಸ್ತಿಯವರು ಮೈಸೂರಿಗೆ ಹೊರಟರು. ಮಾಸ್ತಿಯವರು ''ಸುಬ್ಬಣ್ಣ''ನ ಹಸ್ತಪ್ರತಿಯನ್ನೂ ತೆಗೆದುಕೊಂಡು ಹೋದರು. ಹೈಸ್ಕೂಲು ಕಟ್ಟಡವೊಂದರಲ್ಲಿ ಅವರ ಬಿಡಾರ. ಕೋಣೆಯಲ್ಲಿ ಮೇಜಿನ ಮೇಲೆ ಹಸ್ತಪ್ರತಿಯನ್ನಿಟ್ಟು ಮಾಸ್ತಿಯವರೇನೋ ಕೆಲಸ ಮಾಡುತ್ತಿದ್ದಾರೆ. ಚಿಕ್ಕಮಗಳೂರಿನ ಶ್ರೀನಿವಾಸರಾಯರು ಕೋಣೆಗೆ ಬಂದು ಹಸ್ತಪ್ರತಿ ನೋಡಿದರು.

''ನಾನು ಈಚೆಗೆ ಬರೆದ ಒಂದು ಕಥೆ'' ಅಂದರು ಮಾಸ್ತಿ. ''ನಾನು ನೋಡಲೆ'' ಅಂದರು ರಾಯರು. ಪುಸ್ತಕವನ್ನೋದಲಾರಂಭಿಸಿದರು. ''ಕಥೆ ಬಹಳ ಚೆನ್ನಾಗಿದೆ'' ಅಂದರು ರಾಯರು. ''ಸಂತೋಷ ಸ್ವಾಮಿ'' ಅಂದರು ಮಾಸ್ತಿ. ರಾಯರು ಓದನ್ನು ಮುಂದುವರಿಸಿದರು. 'ಗೊಳೋ' ಎಂದು ಅಳಲಾರಂಭಿಸಿದರು.

ಮಾಸ್ತಿ: ಏಕೆ ರಾಯರೆ, ತಡಕೊಳ್ಳಿ, ತಡಕೊಳ್ಳಿ, ಯಾವ ಭಾಗ ಓದುತ್ತಿದ್ದೀರಿ.

ರಾಯರು: ಅಯ್ಯೋ! ವೆಂಕಟೇಶಯ್ಯಂಗಾರ್, ಹೊಡೆದುಬಿಟ್ಟನಲ್ಲಾ ಹುಡುಗೀನ, ಪಾಪಿ! ಹೊಡೆದುಬಿಟ್ಟನಲ್ಲ, ಹೊಡೆದುಬಿಟ್ಟನಲ್ಲ.

ಮಾಸ್ತಿ: ಕಥೆ ಅಲ್ಲವೆ? ಇಷ್ಟು ಅತ್ತರೆ ಹೇಗೆ?

ರಾಯರು: ಕಥೇನೆ? ಹೊಡೆದುಬಿಟ್ಟನಲ್ಲಾ.

ಎಂದು ಕಣ್ಣೊರಸಿಕೊಂಡರು. ಬಹಳ ಮೆಚ್ಚಿಕೊಂಡರು.

ಮದರಾಸು ವಿಶ್ವವಿದ್ಯಾನಿಯಲಯದಲ್ಲಿ ನಾಲ್ಕು ಉಪನ್ಯಾಸಗಳನ್ನು ಕೊಡಲು ಮಾಸ್ತಿಯವರು ಮದರಾಸಿಗೆ ಹೋದರು. ''ಕರ್ನಾಟಕ ಜನತೆಯ ಸಂಸ್ಕೃತಿ'' ಎಂಬುದೇ ವಿಷಯ. ಇಂಗ್ಲಿಷಿನಲ್ಲಿ ಬರೆದ ಪುಸ್ತಕದ ಹೆಸರು Popular Culture in Karnataka ಎಂದು.

ಆ ಸಂದರ್ಭದಲ್ಲಿ ಮಾಸ್ತಿಯವರು ಮಹಾಬಲಿಪುರಕ್ಕೆ ಹೋದರು.

> ''ಎದುರಲ್ಲಿ ಈಗ ನೀರು ಹರಡಿರುವ ವಿಸ್ತಾರವಾದ ಪ್ರದೇಶದಲ್ಲಿ ಹಿಂದೆ ಮಾಮಲ್ಲಪುರದ ನಗರ ಇತ್ತು. ಅದರಲ್ಲಿ ಇದಕ್ಕಿಂತ ದೊಡ್ಡದಾದ ರಂಗನಾಥ ದೇವಾಲಯ ಇತ್ತು. ಒಂದು ಬೆಳದಿಂಗಳ ರಾತ್ರಿ ಸಮುದ್ರ ಉಕ್ಕೇರಿ, ಇಡೀ ನಗರ, ಮಧ್ಯದ ದೊಡ್ಡ ದೇವಸ್ಥಾನ, ನೀರಿನಲ್ಲಿ ಮುಳುಗಿ ಹೋದುವು; ಎಂಬ ಐತಿಹ್ಯವನ್ನು ನೆನೆದು, ಸಹಿಸಲಾಗದ ದುಃಖದ ಆಳದಲ್ಲಿ ಇಳಿದೆನು.''

ಎಂದು ಹೇಳಿ ಕಡೆಗೆ ಮಾಸ್ತಿಯವರು

> ''ಮಾಮಲ್ಲಪುರ ಮುಳುಗಡೆಯಾದ ಸಂಗತಿಯನ್ನು ಕುರಿತು ಕವಿತೆ ಬರೆಯಬೇಕೆಂದು ಅಂದು ನನಗೆ ಅನ್ನಿಸಿತು. ಅದನ್ನು ಬರೆಯಲಿಲ್ಲ''

ಎಂದು ಮುಗಿಸಿದ್ದಾರೆ. ಇದು ನಿಜವಾಗಿಯೂ ಕನ್ನಡನಾಡಿಗೆ ಆದ ಮಹಾನಷ್ಟವೆಂದು ಹೇಳದೆ ವಿಧಿ ಇಲ್ಲ.

೧೯೩೩ರ ಕೊನೆಯಲ್ಲಿ ಮಾಸ್ತಿಯವರು ಮಡದಿ ಮಕ್ಕಳೊಂದಿಗೆ ಅನಂತಪುರಕ್ಕೆ ಹೋದರು. ನಾದಿನಿ ಮನೆಯಲ್ಲಿ ಹತ್ತು ದಿನ ಇದ್ದರು. ಆ ದಿನಗಳ ಅನುಭವ ಅವರೇ ವಿವರಿಸುತ್ತಾರೆ;

> ''ಅನಂತಪುರದಲ್ಲಿ ದಿನವೂ ಒಂದಲ್ಲ ಒಂದು ಮಾರ್ಗದಲ್ಲಿ ನಡೆದಾಡಿ

ಬರುತ್ತಿದ್ದೆವು. (ನಾದಿನಿಯ ಯಜಮಾನರು ರಾಘವಾಚಾರ್ಯರು) ಅನಂತಪುರದ ಕೆರೆಯನ್ನು ಉಳಿಸಿದ ಮುಸಿಲಮ್ಮ ಎಂಬ ಧೀರ ಮಹಿಳೆಯ ಕಥೆ ನಾನು ಕೇಳಿದ್ದು ಆಗ. ಆಮೇಲೆ ಇದನ್ನು ನಾನು ಒಂದು ಪದ್ಯವಾಗಿ ಬರೆದೆನು. ನವರಾತ್ರಿ ಕಥನ ಸಮುಚ್ಚಯದ ಹತ್ತೊಂಬತ್ತು ಕಥೆಗಳಲ್ಲಿ ಒಂದಾಗಿ ಅದನ್ನು ಸೇರಿಸಿದೆನು. ನನ್ನ 'ಮಲಾರ' ಪುಸ್ತಕದ ಅನೇಕ ಅಷ್ಟಷಟ್ಪದಿ ಪದ್ಯಗಳನ್ನು ನಾನು ಅನಂತಪುರದ ಈ ಪ್ರವಾಸದ ವಿಶ್ರಾಂತಿಯ ದಿನಗಳಲ್ಲಿ ರಚಿಸಿದೆನು. ಬೆಳಿಗ್ಗೆ ಎದ್ದು ತೋಚಿದಷ್ಟು ದೂರ ನಡೆದು ಹಿಂತಿರುಗಿ ಬರುವುದು ದಿನದಿನದ ಕ್ರಮ. ಈ ಸುತ್ತಾಟದ ವೇಳೆ ಒಂದೊಂದು ದಿನ ಒಂದೊಂದು ಪದ್ಯ ತಾನೇ ರೂಪುಗೊಳ್ಳುವುದು. ಕೆಲವು ದಿನ ಎರಡು ಪದ್ಯ ರೂಪುಗೊಂಡದ್ದುಂಟು. ಅಂತೂ ಮನಸ್ಸು ತುಂಬ ಪ್ರಸನ್ನವಾಗಿ ವಿಷಯಗಳನ್ನು ಹಿಡಿದು, ವಿವರಗಳನ್ನು ಗುರುತಿಸಿ ಒಂದೊಂದು ಭಾವನೆಗೂ ತೃಪ್ತಿಕರವಾದ ಒಂದು ರೂಪವನ್ನು ಕೊಡುವ ಸ್ಥಿತಿಯಲ್ಲಿ ಇದ್ದ ಈ ದಿನಗಳು ನನ್ನ ಜೀವನದಲ್ಲಿ ಅತ್ಯಂತ ಸುಖದ ದಿನಗಳಾಗಿ ನೆನಪಿನಲ್ಲಿವೆ.''

ಚಿಕ್ಕಮಗಳೂರಿನಲ್ಲಿದ್ದಾಗ ಮದರಾಸಿಗೆ ಹೋಗಿ ಮಾಸ್ತಿಯವರು ಇಂಗ್ಲಿಷಿನಲ್ಲಿ ರಾಮಾಯಣ ಕುರಿತು ಮಾತನಾಡಿದ್ದರು. ಅವರು ನಿತ್ಯ ರಾಮಾಯಣ ಪಾರಾಯಣ ಮಾಡುವರು. ಆಗಲೇ ಕಾವ್ಯ ಗುಣಗ್ರಹಿಸಿ ಟಿಪ್ಪಣಿಗಳನ್ನು ಬರೆದಿಡುವರು. ಒಂದು ದಿನ ವೆಂಕಣ್ಣಯ್ಯನವರು 'ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದು ದಿನ ಮಾತನಾಡಿ' ಅಂದರು. ಮಾಸ್ತಿಯವರೊಪ್ಪಿದರು. ಒಂದು ಮುಕ್ಕಾಲು ಗಂಟೆ ಮಾತನಾಡಿದರು.

''ಕಾವ್ಯದ ರುಚಿಯನ್ನು ತಿಳಿಸುತ್ತಾ ನಾನೇ ಮತ್ತೊಮ್ಮೆ ಅದನ್ನು ಅನುಭವಿಸಿದೆ''

ಅನ್ನುತ್ತಾರೆ ಮಾಸ್ತಿ. ಸಭೆಗೆ ಬಂದು ಭಾಷಣ ಕೇಳಿ; ಡಿ.ವಿ. ಗುಂಡಪ್ಪ ನವರಾದರೋ,

''ಇಂಥ ಉಪನ್ಯಾಸ ಕೇಳುವುದಕ್ಕೆ ನಾನು ಏಳು ಜನ್ಮ ಎತ್ತು ಅಂದರೂ ಒಪ್ಪಿಕೊಂಡೇನು''

ಅಂದರು!

ವೆಂಕಣ್ಣಯ್ಯನವರು ''ಇದನ್ನು ನೀವು ಕನ್ನಡದಲ್ಲಿ ಬರೆದು ಬಿಡಬೇಕು'' ಅಂದರು. ಮಾಸ್ತಿಯವರಾದರೂ

''ನನಗೂ ಆ ಆಸೆ ಇದ್ದದ್ದರಿಂದ ಒಡನೆ ಆ ಕೆಲಸದಲ್ಲಿ ತೊಡಗಿದೆನು. ಮನೆಯಲ್ಲಿ ನನ್ನ ಮನೆಯಾಕೆಯೋ, ಇಲ್ಲ ಓದುತ್ತಿದ್ದ ವಿದ್ಯಾರ್ಥಿಗಳಲ್ಲಿ ಒಬ್ಬರೋ, ದಿನವೂ ಕುಳಿತು ನಾನು ಹೇಳುತ್ತಿದ್ದಂತೆ ಕೆಲವು ಪುಟಗಳನ್ನು ಬರೆದುಕೊಳ್ಳುವರು. ಹೀಗೆ ಪುಸ್ತಕ ಮೂರು ನಾಲ್ಕು ತಿಂಗಳಲ್ಲಿ ಸಿದ್ಧವಾಯಿತು''

ಎಂದು ಬರೆಯುತ್ತಾರೆ. ಆ ಪುಸ್ತಕವೇ ''ಆದಿಕವಿ ವಾಲ್ಮೀಕಿ''

*

೧೯೩೬ ರಲ್ಲಿ ಪರಮಹಂಸರ ಜನ್ಮದಿನದ ಶತಮಾನೋತ್ಸವ. ಸ್ವಾಮಿ ಸಿದ್ಧೇಶ್ವರಾನಂದರು ಭಾಷಣ ಮಾಡಬೇಕೆಂದೂ, ಆ ಭಾಷಣವನ್ನು ಬರೆದುಕೊಡಬೇಕೆಂದೂ ಕೇಳಿದರು. ಉತ್ಸವ ಕಾಲಕ್ಕದನ್ನು ಪ್ರಕಟಿಸುವುದಾಗಿಯೂ ಹೇಳಿದರು. ಮಾಸ್ತಿಯವರು ಒಪ್ಪಿದರು.

''ಉಪನ್ಯಾಸವನ್ನು ಹೇಳಿ ಬರೆಯಿಸಲು ಆರಂಭಿಸಿದೆನು. ದಿನವೆಲ್ಲ ಇದೇ ಯೋಚನೆ, ರಾತ್ರಿ ಮಲಗುವ ಮುನ್ನ ಅರ್ಧಗಂಟೆ, ಮುಕ್ಕಾಲು ಗಂಟೆ ನಾನು ಹೇಳುವುದನ್ನು ನಮ್ಮ ಮನೆಯಾಕೆ ಬರೆದುಕೊಳ್ಳುವುದು. ಇದು ಸುಮುಖವಾಗಿ ನಡೆಯಿತು. ಲೇಖನ ನಾನು ಎಣಿಸಿದ್ದಂತೆ ಮೂವತ್ತು ನಲವತ್ತು ಪುಟಗಳಲ್ಲಿ ಮುಗಿಯಲಿಲ್ಲ. ನೂರಕ್ಕೆ ಮೇಲೆ ಹೋಯಿತು; ಸಣ್ಣ ಪುಸ್ತಕವೇ ಆಯಿತು. ಅದನ್ನು ಆಶ್ರಮ ಅಚ್ಚುಮಾಡಿತು.''

ಇದೇ ಮಾಸ್ತಿಯವರ ''ಶ್ರೀರಾಮಕೃಷ್ಣ''

*

''ಪರಿಷತ್ತಿನ ಉಪಾಧ್ಯಕ್ಷ ಸ್ಥಾನದಿಂದ ಬಿಡುಗಡೆ ಹೊಂದಿದಮೇಲೆ ನಾನು ಎಂದಿನಿಂದಲೋ ಮಾಡಬೇಕೆಂದು ಯೋಚಿಸಿದ್ದು, ಮಾಡಲಾಗದೆ ಸಾಲವಾಗಿ ಉಳಿದಿದ್ದ ಪುಸ್ತಕಗಳನ್ನು ಬರೆಯತೊಡಗಿದೆನು. ವಿಷಯಗಳೆಲ್ಲ ಮನಸ್ಸಿನಲ್ಲಿ ಸಿದ್ಧವಾಗಿದ್ದವು. ಆದ್ದರಿಂದ ಬರಹ ಸರಾಗವಾಗಿ ನಡೆಯಿತು. ಪತ್ರಿಕೆಗಾಗಿ ಹೊಸ ಕಥೆಗಳನ್ನು ಬರೆಯುತ್ತ, ಇನ್ನಷ್ಟು ಸಂಗತಿಯನ್ನು ಹೇಳಿ ಬರೆಯಿಸುತ್ತ, ಈ ಕೆಲಸವನ್ನು ಮನಸ್ಸಿಗೆ ಸಮಾಧಾನವಾಗುವ ಪರಿಮಾಣದಲ್ಲಿ ಕೆಲವು ವರ್ಷ ಮಾಡಿದ್ದಾಯಿತು. ಬಹುಕಾಲದಿಂದ ಉದ್ದೇಶಿಸಿದ್ದ ಎರಡು ಐತಿಹಾಸಿಕ ಕಾದಂಬರಿಗಳು ಸಿದ್ಧವಾಗಿ ಪ್ರಕಟ ಆದಾಗ ಮನಸ್ಸಿಗೆ ಹೊರೆಯಾಗಿದ್ದ ಸಾಲ ಒಂದು ಹರಿದಷ್ಟು ಸಂತೋಷವಾಯಿತು.''

ಎಂದು ಮಾಸ್ತಿಯವರು ಹೇಳುತ್ತಾರೆ. ಕನ್ನಡನಾಡಿನ ಕೋಟಿ ಕೋಟಿ ಜನಕ್ಕೂ ಸಂತೋಷವಾಯಿತೆಂದು ಹೇಳಬೇಕೆ? ಮುಂದಿನ ತಲೆಮಾರು ತಲೆಮಾರಿನ ಕನ್ನಡ ನಾಡಿನ ಜನ ಸಂತೋಷಪಡುವರೆಂಬುದರಲ್ಲಿ ಸಂಶಯವೇನೇನೂ ಇಲ್ಲ.

*

''ಸಾಹಿತ್ಯ ನಿರ್ಮಾಣ ನನ್ನ ಜೀವನದ ಬಹು ಮುಖ್ಯ ಭಾಗ'' ಎಂದಾರಂಭಿಸಿ ಮಾಸ್ತಿಯವರು, ಸಂಗ್ರಹವಾಗಿ ''ಸಾಹಿತ್ಯದ ಮೂಲ ಪ್ರೇರಣೆ'' ಕುರಿತು ಈ ರೀತಿ ಯಾರು ಹೇಳಿದ್ದಾರೆ;

''ಎಳೆಯ ಹುಡುಗನಾಗಿಯೇ ನಾನು ಉನ್ನತ ಸಾಹಿತ್ಯದ ಸವಿಗೆ ಸೋತ ಸಂಗತಿಯನ್ನು ಹೇಳಲಾಗಿದೆ. ಈಗ ಆಗ ನಾಲ್ಕು ಪಂಕ್ತಿ ಬರೆಯುತ್ತ ಎಫ್.ಎ. ತರಗತಿಯಲ್ಲಿದ್ದ ದಿನಗಳಲ್ಲಿ W.T. Stead ರವರ Books for the Brains ಪುಸ್ತಕಮಾಲೆಯ The story of a donkey ಎಂಬ ಸಣ್ಣ ಇಂಗ್ಲಿಷ್ ಕಥೆಯನ್ನು ಕನ್ನಡಕ್ಕೆ ಅನುವಾದಿಸಿದೆನು. ಬಿ.ಎ. ತರಗತಿಯಲ್ಲಿದ್ದ ಮಂಗಳೂರಿನ ಒಬ್ಬ

ಮಿತ್ರರ ಪ್ರೇರಣೆಯಿಂದ ಆ ಊರಿನ ಒಂದು ಕನ್ನಡ ಪತ್ರಿಕೆಗೆ ಒಂದು ಲೇಖನ ಬರೆದೆನು. Strand Magazine ಎಂಬ ಇಂಗ್ಲಿಷಿನ ಕತೆಗಳ ಮಾಸಪತ್ರಿಕೆಯನ್ನು ಕಾಲೇಜಿನ ವಾಚನಾಲಯದಲ್ಲಿ ನೋಡಿ ನಮ್ಮ ಜನಕ್ಕೆ ಇಂಥ ಕತೆ ಇದ್ದರೆ ಚೆನ್ನ ಆದಿತಲ್ಲಾ ಎಂದುಕೊಂಡವನು ನನ್ನ ಮದುವೆ ಆದ ವರ್ಷ 'ರಂಗನ ಮದುವೆ' ಕತೆಯನ್ನು ಬರೆದೆನು. ಅದೇ ಈಗ ಪ್ರಕಟವಾಗಿರುವ ನನ್ನ ಪುಸ್ತಕಗಳಲ್ಲಿ ಕಾಣುವ ಮೊಟ್ಟಮೊದಲ ಬರಹ. ಮೈಸೂರನ್ನು ಬಿಟ್ಟು ಬೆಂಗಳೂರಿಗೆ ಬಂದಾಗ ನಾನು ಚೆಲುವಾಂಬಾ ಅಗ್ರಹಾರದಲ್ಲಿ ರಂಗಣ್ಣನವರ ಮನೆಯಲ್ಲಿ ಇಟ್ಟು ಬಂದಿದ್ದ ಕಾಗದಗಳು ಹನುಮಾನ್‌ರವರ ಕೈಗೆ ಸೇರಿ, ಅವರು ತಾವು ನಡೆಸುತ್ತಿದ್ದ 'ಮಧುರವಾಣಿ' ಪತ್ರಿಕೆಗೆ ನನ್ನಿಂದ ಬರಹವನ್ನು ಬಯಸಿ, ೧೯೧೨-೧೩ ರಲ್ಲಿ ಈ ಕತೆಯನ್ನು ಅವರಿಗೆ ಕಳುಹಿಸಿದೆನು. ಅದು ೧೯೧೪ರಲ್ಲಿ ಪ್ರಕಟವಾಯಿತು.

ಅಂದಿನಿಂದ ಇದುವರೆಗೆ ಈ ಕೆಲಸ ನಡೆದುಬಂದಿದೆ. ೧೯೧೭ರಲ್ಲಿ ಒಂದು ಸ್ಪರ್ಧೆಗಾಗಿ 'ತಾಳಿಕೋಟೆ' ನಾಟಕವನ್ನು ಬರೆದದ್ದು ಹೊರತಾಗಿ ಮೊದಲ ಹಲವು ವರ್ಷವೆಲ್ಲ ಕತೆಗಳನ್ನೇ ಬರೆದು ೧೯೨೧ ರಲ್ಲಿ ಬೇಲೂರಿನಲ್ಲಿ ಚೆನ್ನಕೇಶವ ದೇವರ ದರ್ಶನ ಲಭಿಸಿದ ಸಮಯದಲ್ಲಿ ಮನಸ್ಸಿನಲ್ಲಿ ಆದ ಪರಿಣಾಮದ ಫಲವಾಗಿ ಆ ವರ್ಷ ನಾನು ಗೀತೆಗಳನ್ನು ಬರೆಯಲು ಆರಂಭಿಸಿದುದು. ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದಲ್ಲಿ ಸಾಹಿತ್ಯದ ವಿಷಯ ಮಾತನಾಡಬೇಕೆಂದು ಮಿತ್ರರಾದ ತಳಕಿನ ವೆಂಕಣ್ಣಯ್ಯನವರು ಅಪೇಕ್ಷಿಸಿದ ಕಾರಣ ಸಾಹಿತ್ಯ ಕುರಿತ ನಾಲ್ಕು ಉಪನ್ಯಾಸಗಳನ್ನು ಬರೆದೆನು. ಸಣ್ಣ ಕತೆಯಂತೆ ಜನರಿಗೆ ಸಣ್ಣ ದೃಶ್ಯವೂ ಇರಬೇಕೆಂದು ತೋರಿ ಆ ದಿನಗಳಲ್ಲಿ ಶಾಂತಾ, ಸಾವಿತ್ರೀ, ದೃಶ್ಯಗಳನ್ನು ಬರೆದೆನು.

''ಮಧುಗಿರಿಯಲ್ಲಿದ್ದ ದಿನಗಳಲ್ಲಿ ಪದ್ಯಗಳನ್ನು ಬರೆಯಲು ಆರಂಭಿಸಿ ಬೆಂಗಳೂರಿಗೆ ಬಂದಮೇಲೆ 'ಅರುಣ' ಪುಸ್ತಕವನ್ನು ಪ್ರಕಟಿಸಿದೆನು. ಆ ದಿನಗಳಲ್ಲಿ ಸಾಹಿತ್ಯ ಪರಿಷತ್ಪತ್ರಿಕೆಗೆಂದು, ಪ್ರಬುದ್ಧ ಕರ್ನಾಟಕಕ್ಕೆಂದು, ವಿಮರ್ಶನ ಲೇಖನಗಳನ್ನು ಬರೆದು, ಆ ಸುಮಾರಿನಲ್ಲಿ ''ವಿಮರ್ಶೆ'' ಎಂಬ ಲೇಖನದ ಮೊದಲ ಸಂಗ್ರಹವನ್ನು ಪ್ರಕಟಿಸಿದೆನು. ಈ ವೇಳೆಗೆ ನಾನು ಕನ್ನಡದ ಸೇವೆಗೆ ಟೊಂಕ ಕಟ್ಟಿದ ಒಬ್ಬ ಲೇಖಕನೇ ಆದೆನು. ಈ ಲೇಖನದ ಹಿಂದಿನ ಮನೋಧರ್ಮ, ನಮ್ಮ ಭಾಷೆಯಲ್ಲಿ ಆಂಗ್ಲ ಸಾಹಿತ್ಯದ ಉತ್ತಮ ಶ್ರೇಣಿಯ ಕೃತಿಗಳಿಗೆ ಸಮನಾದ ಕತೆ, ಕವನ, ನಾಟಕ, ಪ್ರಬಂಧ, ಆಗಬೇಕು, ನಮ್ಮ ಜನಕ್ಕೆ ಉನ್ನತ ಸಾಹಿತ್ಯದಿಂದ ಬರುವ ಸಂತೋಷ, ಜ್ಞಾನ, ಲಭಿಸಬೇಕು, ಎನ್ನುವ ಪೇರಾಶೆ. ನಾನು ಕನ್ನಡ ಭಾಷೆಯನ್ನು ಅಷ್ಟಾಗಿ ಅಭ್ಯಾಸ ಮಾಡಿದವನಲ್ಲ. ಆದರೆ ಅರಮನೆಯ ರಾಮಾಯಣ, ಭಾರತ, ವೆಂಕಟಾಚಾರ್ಯರ ನಾವಲ್‌ಗಳು, ಮುದ್ರಾಮಂಜೂಷ, ಆಯಾ ಪರೀಕ್ಷೆಯಲ್ಲಿ ಪಠ್ಯಪುಸ್ತಕವಾಗಿದ್ದ ಪುಸ್ತಕಗಳು, ಇಷ್ಟನ್ನೂ ರುಚಿಯಿಂದ ಓದಿದ್ದೆನು. ತಕ್ಕಷ್ಟು ಕನ್ನಡ ಕಲಿತಿದ್ದೆನು. ಬರವಣಿಗೆ ಹೇಗಿರಬೇಕು ಎನ್ನುವುದಕ್ಕೆ ಆಂಗ್ಲ ಸಾಹಿತ್ಯದ ಶ್ರೇಷ್ಠ ಲೇಖಕರ ಉತ್ತಮ ಕೃತಿಗಳು ಮೇಲ್ಪಂಕ್ತಿಯಾಗಿದ್ದವು.''

''ಅಲ್ಲಿಂದಾಚೆಗೆ ನನ್ನ ಸಂತೋಷಕ್ಕೆಂದೇ ಓದಿದ, ಓದಿನಿಂದ ಪ್ರೇರಣೆ ಪಡೆದು ಇತರ ವಿಮರ್ಶನ ಲೇಖನಗಳನ್ನು ಬರೆದೆನು. ಹತ್ತು ಕಡೆ ಸುತ್ತುತ್ತ ಏತರದೋ ಅನುಭವದಿಂದ ಭಾವ ಎಚ್ಚೆತ್ತಾಗ ಕವಿತೆಗಳನ್ನು ಬರೆದೆನು. ರಾಮಾಯಣವನ್ನು ಓದಿ ಕಾವ್ಯದ ಮೇರುಶಿಖರವನ್ನೇ ಕಂಡು ಆ ಕಾವ್ಯ ನನಗೆ ನೀಡಿದ ಸುಖದ ರೀತಿಯನ್ನು ನಮ್ಮ

ಜನರಿಗೆ ತಿಳಿಸಲು 'ಆದಿಕವಿ ವಾಲ್ಮೀಕಿ' ಗ್ರಂಥವನ್ನು ಬರೆದೆನು. ಆಗಲೇ ಮಹಾಭಾರತವನ್ನು ಮೂಲದಲ್ಲಿಯೂ, ಭಾಷಾಂತರದಲ್ಲಿಯೂ, ಮತ್ತೆ ಓದತೊಡಗಿ ಆ ಮಹಾಗ್ರಂಥವನ್ನೂ ಕುರಿತ ಒಂದು ಗ್ರಂಥವನ್ನು ರಚಿಸತೊಡಗಿದೆನು. ಚಿಕ್ಕಮಗಳೂರಿನಲ್ಲಿ, ಮೈಸೂರಿನಲ್ಲಿ, Sub Division Officer ಆಗಿದ್ದ ದಿನಗಳಲ್ಲಿ ದೊರೆತ ಇತಿಹಾಸದ ಸಂಗತಿಗಳ ಆಧಾರದ ಮೇಲೆ ಈಗ ಇಪ್ಪತ್ತು ವರ್ಷ, ಹದಿನೈದು ವರ್ಷದ ಹಿಂದೆ ಚೆನ್ನಬಸವನಾಯಕ, ಚಿಕವೀರರಾಜೇಂದ್ರ ಕಾದಂಬರಿಗಳನ್ನೂ ರಚಿಸಿದೆನು. ಇಲ್ಲಿಯೂ ನನ್ನ ಉದ್ದೇಶ ಅದೇ. ಇಂಗ್ಲಿಷ್ ಬಲ್ಲ ಜನಕ್ಕೆ ಇಂಗ್ಲಿಷಿನಲ್ಲಿ ದೊರೆಯುವ ಸಾಹಿತ್ಯಕ್ಕೆ ಸಮನಾದಂಥ ಅತ್ಯುತ್ತಮ ಸಾಹಿತ್ಯ ನಮ್ಮ ಜನಕ್ಕೆ ನಮ್ಮ ಭಾಷೆಯಲ್ಲಿ ದೊರೆಯಬೇಕು. ಜೀವನ ಪತ್ರಿಕೆಯನ್ನು ನಡೆಸುತ್ತ ಆಗಾಗ ಕತೆ, ಕವಿತೆ, ಕಥನ, ಕವನಗಳನ್ನು ಹಾಕಬೇಕಾಗಿ ಇದೇ ಇಪ್ಪತ್ತು ವರ್ಷದಲ್ಲಿ ನಾನು ಈಚಿನ ಕತೆಗಳನ್ನು ಗೌಡರಮಲ್ಲಿ, ರಾಮನವಮಿ, ಮೂಕನ ಮಕ್ಕಳು ಕವಿತೆಗಳನ್ನೂ, ಇತರ ಕವಿತೆಗಳನ್ನು ಬರೆದೆನು. ನವರಾತ್ರಿ ಗ್ರಂಥದ ೧೯ ಕವನ ಕಥನಗಳನ್ನೂ ರಚಿಸಿದೆನು.''

> ''ಈ ಎಲ್ಲ ಸಾಹಿತ್ಯದ ಹಿಂದಿರುವ ಉದ್ದೇಶ, ನಮ್ಮ ಜನಕ್ಕೆ ನನ್ನ ತಿಳಿವಿನ, ನನ್ನ ಅನುಭವದ ಅತ್ಯುತ್ತಮ ಭಾಗವನ್ನು ತಿಳಿಸಿಕೊಡುವುದು. ನನ್ನ ಸ್ವಭಾವದಲ್ಲಿ ನಮ್ಮ ಪೂರ್ವಾರ್ಜಿತ ಸಂಸ್ಕೃತಿಯನ್ನು ಕುರಿತ ಹೆಮ್ಮೆಯೊಂದಿಗೆ, ಹೊರಗಿಂದ ಬಂದ ಹೊಸಕಾಲದ ಸಂಸ್ಕೃತಿಯ ಪ್ರೇಮ ಬೆರೆತಿದೆ. ಜೊತೆಗೆ ಇದು ಯಾವುದನ್ನೂ ವಿಚಾರ ಮಾಡಿನೋಡಿ ಮನಸ್ಸಿಗೆ ಒಪ್ಪಿಗೆಯಾದರೆ ಮಾತ್ರ ಅಂಗೀಕರಿಸುವ ಹಠ ಇದೆ. ಸ್ವತಂತ್ರವಾಗಿ ವಿಚಾರ ಮಾಡುವುದೇ ಸರಿಯಾದ ಮಾರ್ಗ.''

ಹದಿನಾರು ವರ್ಷಗಳ ಕಾಲ 'ಜೀವನ' ಪತ್ರಿಕೆ ನಡೆಸಿದರು. ಅದರಲ್ಲಿ ಅವರು ಬರೆದ ಸಂಪಾದಕೀಯ ಟಿಪ್ಪಣಿಗಳನ್ನೆಲ್ಲ ಐದು ಸಂಪುಟಗಳ ಒಂದು ಗ್ರಂಥವನ್ನಾಗಿ ಮಾಸ್ತಿಯವರು ಪ್ರಕಟಿಸಿದರು. ಜನಕ್ಕೆ ತಿಳಿವಳಿಕೆ ಕೊಡುವುದೇ ಇದರ ಉದ್ದೇಶವೆಂದು ಸ್ಪಷ್ಟಪಡಿಸಿದ್ದಾರೆ.

> ''ಇಂದಲ್ಲ ಇನ್ನು ಐವತ್ತು ವರ್ಷದಲ್ಲಾದರೂ ನಮ್ಮ ರಾಷ್ಟ್ರ ಪ್ರಜಾಪ್ರಭುತ್ವದಲ್ಲಿ ಸಿದ್ಧಿಯನ್ನು ಕಾಣಬೇಕೆಂದರೆ ನಮ್ಮ ಎಲ್ಲ ಭಾಷೆಗಳ ಪ್ರಾಂತಗಳಲ್ಲೂ ಆಯಾ ಭಾಷೆಯಿಂದ ಜನರ ತಿಳಿವಳಿಕೆಯನ್ನು ಹೀಗೆ ಬೆಳೆಸುವುದೇ ಮಾರ್ಗ. ಈ ಮಾರ್ಗದಲ್ಲಿ ಮೊದಲ ಹೆಜ್ಜೆಯನ್ನಿಡುವ ಭಾಗ್ಯ ಮತ್ತು ಹೊಣೆ ನಮ್ಮ ತಲೆಮಾರಿಗೆ ಬಂದಿತು. ಅದರ ಹೊಣೆಯಲ್ಲಿ ಒಂದು ಭಾಗವನ್ನು ವಹಿಸಿಕೊಳ್ಳುವುದು ನನ್ನ ಪಾಲಿಗೆ ಬಂದದ್ದು ನನ್ನ ಭಾಗ್ಯ ಎಂದು ನಾನು ಎಣಿಸುತ್ತೇನೆ.''

ಭ್ರಾಂತಿಯಲ್ಲ ಭವಿಷ್ಯ ಸೂಚನೆ

''ನನ್ನ ಜೀವನದಲ್ಲಿ ಎಚ್ಚರದ ವೇಳೆಯಲ್ಲಿ ಭ್ರಮೆ ನಿಜದ ಭಾವವನ್ನು ಮೂಡಿಸಿದ ಏಕೈಕ ಸಂದರ್ಭವಿದು''

ಎಂದು ಆ ಸಂದರ್ಭವನ್ನು ಹೀಗೆ ವಿವರಿಸಿದ್ದಾರೆ:

> ''ಒಂದು ಸಂಜೆ ನಮ್ಮ ತಾಯಿ ನನ್ನನ್ನು ಸೊಂಟದಲ್ಲಿ ಎತ್ತಿಕೊಂಡು

ಬಾಗಿಲಲ್ಲಿ ನಿಂತಿದ್ದರು. ಮನೆಯ ಜಗುಲಿಯ ಎದುರಿಗೆ ತಕ್ಕಷ್ಟು ದೊಡ್ಡ ಅಂಗಳ ಒಂದಿತ್ತು. ಅದರ ಅಂಚಿನ ಒಂದು ಕಡೆ ನನಗೆ ಒಂದು ಗಿಳಿ ಕುಳಿತಿದೆ ಎಂಬಂತೆ ಕಂಡಿತು. ನಾನು 'ಆ ಗಿಳಿ ನೋಡಮ್ಮ ಎಷ್ಟು ಚೆನ್ನಾಗಿದೆ' ಎಂದೆ. ತಾಯಿ 'ಗಿಳಿ ಎಲ್ಲಿದೆಯೋ?' ಎಂದರು. ನಾನು ಕೈಚಾಚಿ ತೋರಿಸಿದೆ. ಅವರು 'ಅಲ್ಲಿ ಗಿಳಿ ಇಲ್ಲ, ಏನೂ ಇಲ್ಲ' ಎಂದರು. ನಾನು 'ಕಾಣುತ್ತಾ ಇದೆ, ಇಲ್ಲ ಅಂದರೆ' ಎಂದೆ. ಕ್ಷಣಬಿಟ್ಟು 'ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗು' ಅಂದೆ. ಅವರು ನನ್ನನ್ನು ಎತ್ತಿಕೊಂಡೇ ಅಲ್ಲಿಗೆ ನಡೆದರು. ಅಲ್ಲಿ ನೋಡಿದರೆ ಬರಿ ಕಲ್ಲು! ನನ್ನ ಭ್ರಮೆ ವಾಸಿಯಾಯಿತು. ತಾಯಿ ನನ್ನನ್ನು ಎತ್ತಿಕೊಂಡೇ ಬಾಗಿಲ ಬಳಿಗೆ ಹಿಂತಿರುಗಿದರು. ಆ ಮೊದಲು ನಿಂತಿದ್ದ ಸ್ಥಳದಲ್ಲೇ ನಿಂತರು. ನನಗೆ ಮತ್ತೆ ಆ ಕಲ್ಲು ಒಂದು ಗಿಳಿಯಂತೆಯೇ ಕಂಡಿತು.''

ಒಂದು ರಾತ್ರಿ ಮಾಸ್ತಿಯವರು ಗಾಢನಿದ್ರೆಯಲ್ಲಿದ್ದಾರೆ. ಆಗ ಅವರಿಗೆ ಸ್ವಪ್ನದಂಥ ಒಂದು ಅನುಭವವಾಯಿತು. ಅದನ್ನು ಕುರಿತು ಅವರು ಹೇಳುವುದಿದು: ''ಸ್ವಪ್ನದಂಥ ಎನ್ನಲು ಕಾರಣ ಅದು ಸ್ವಪ್ನ ಅಲ್ಲ ಎನ್ನುವುದು. ನಿದ್ದೆಯಿಂದಾಚೆಯ ಎಚ್ಚರಕ್ಕಿಂತ ಹೆಚ್ಚು ಸ್ವಚ್ಛವಾದ ಒಂದು ಅವಸ್ಥೆ. ಅದರಲ್ಲಿ ನನಗೆ ಎದುರಿನ ಪಟ ಒಂದು ಮಧ್ಯೆ ಕಂಡಿಯಾಗಿ ತೆರೆದು ಪಟದ ಆಚೆಗಿದ್ದ ಸಂಗತಿ ಕಾಣಲು ಎಡೆಮಾಡಿದಂತಾಯಿತು. ಇದೇನು ಎಂದು ನಾನು ಆಚೆಯ ಕಡೆ ದೃಷ್ಟಿಸಿದೆನು. ಅಲ್ಲಿ ನನ್ನ ಗುರು ನಾರಣಪ್ಪನವರು ಕಂದಿದ ಮುಖದಿಂದ ನಿಂತಿದ್ದಂತೆ ಕಂಡುಬಂದಿತು. ಇವರು ಏಕೆ ಹೀಗಿದ್ದಾರೆ ಎಂದು ನಾನು ಯೋಚಿಸುವಷ್ಟರಲ್ಲೇ ಅವರು ಎರಡು ಕೈಯನ್ನೂ ಎತ್ತಿ ಆಗಿಯೋಯಿತು ಎಂಬ ಅರ್ಥ ಬರುವಂತೆ ಒಂದು ಕೈಯನ್ನು ಇತ್ತ ಒಂದು ಕೈಯನ್ನು ಅತ್ತ ಆಡಿಸಿದರು. 'ಅಯ್ಯೋ! ಏನಾಯಿತೋ' ಎಂದುಕೊಳ್ಳುತ್ತೇನೆ. ಮೂರ್ತಿ ಎಡಗೈಯನ್ನು ಕೆಳಕ್ಕಿಳಿಸಿತು. ನನ್ನ ದೃಷ್ಟಿ ಆ ಕೈಯೊಡನೆ ಕೆಳಕ್ಕಿಳಿಯಿತು. ಕೈ ಒಬ್ಬ ಹುಡುಗನನ್ನು ಮುಟ್ಟಿ ನನ್ನ ಕಡೆಗೆ ಸರಿಸಿದಂತೆ ಕಂಡಿತು. 'ಮೇಷ್ಟರಿಗೆ ಏನಾಗಿದೆ? ಇವರು ಏಕೆ ಈ ಹುಡುಗನನ್ನು ನನಗೆ ತೋರಿಸುತ್ತಿದ್ದಾರೆ?' ಎಂದುಕೊಳ್ಳುತ್ತಿದ್ದೇನೆ. ಪಟ ಮುಚ್ಚಿಕೊಂಡಿತು. ನಾನು ನಿದ್ದೆಯಿಂದೆ ಎದ್ದೆನು.''

ಈ ದರ್ಶನವಾದ ಮೂರು ದಿನಗಳ ಅನಂತರ ಮಾಸ್ತಿಯವರು ಮನೆಬಿಟ್ಟು ಚಾಮರಾಜಪೇಟೆ ಕಡೆಗೆ ಹೋಗುತ್ತಿದ್ದಾರೆ. ಶಿವಾರಪಟ್ಟಣ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದ ಶ್ರೀ ನಂದಗುಡಿ ಶ್ರೀನಿವಾಸರಾಯರು ಬರುತ್ತಿದ್ದರು.

ರಾಯರು: ನಾನು ನಿಮ್ಮ ಮನೆಗೆ ಬರಬೇಕು ಎಂದಿದ್ದೆ.

ಮಾಸ್ತಿ : ಏನು ಸಂಗತಿ?

ರಾಯರು : ನಮ್ಮ ಮೇಷ್ಟು ಮುನಿಯಪ್ಪನವರು ಮೂರು ದಿನದ ಹಿಂದೆ ತೀರಿಕೊಂಡರು. ಮನೆಯಲ್ಲಿ ಯಾರೂ ದಿಕ್ಕಿಲ್ಲ, ಹೋಗೋ ಹೊತ್ತಿನಲ್ಲಿ ಮನೆಯವರಿಗೆ, ಹುಡುಗನ್ನ ಕರಕೊಂಡುಹೋಗಿ ವೆಂಕಟೇಶಯ್ಯಂಗಾರ್ ಹತ್ತಿರ ಬಿಡಿ. ಅವನು ಇವನ್ನ ಮುಂದಕ್ಕೆ ತರತಾನೆ ಎಂದು ಹೇಳಿದರು. ವೆಂಕಟರಾಮಯ್ಯನೋ ಸೂರ್ಯನಾರಾಯಣನೋ ಅವನ್ನ ನಿಮ್ಮ ಹತ್ತಿರಕ್ಕೆ ಕರೆತರುತಾರೆ.

''ನಿದ್ದೆಯೊಳಗಿನ ಎಚ್ಚರದ ಕಾಣೋಣ ನಿಜ ಆಯಿತು'' ಎಂದು ಮಾಸ್ತಿಯವರು ಹೇಳುತ್ತಾರೆ. ಇದಾದ ಒಂದೆರಡು ವಾರಗಳಲ್ಲಿ ಹುಡುಗನ ಬಂಧುಗಳು ಅವನನ್ನು ಕರೆತಂದರು. ಮನೆಯವರೆಲ್ಲ ಹುಡುಗನನ್ನು

ಪ್ರೀತಿಯಿಂದ ಬರಮಾಡಿಕೊಂಡರು. ಮಾಸ್ತಿಯವರ ಮಾತಿನಲ್ಲಿ ''ಹುಡುಗ ನನ್ನ ತಮ್ಮಂದಿರೊಂದಿಗೆ ಒಬ್ಬ ತಮ್ಮನಾಗಿ ಬೆಳೆದ.''

ಚಿಕ್ಕಮಗಳೂರು ತಾಲ್ಲೂಕು ಜಮಾಬಂದಿ ಜಿಲ್ಲಾಧಿಕಾರಿಗಳಿಗೂ ಮಾಸ್ತಿಯವರಿಗೂ ಮಧ್ಯೆ ವಿರಸಮೂಡಿತ್ತು. ಇನ್ನೆಲ್ಲಿಗಾದರೂ ವರ್ಗ ಮಾಡಿಸಿಕೊಂಡು ಹೊರಟುಹೋಗೋಣ ಅನ್ನಿಸಿತ್ತವರಿಗೆ. ಲಕ್ಯದ ಹೋಬಳಿ ಜಮಾಬಂದಿ; ತೋಪಿನ ಡೇರೆಯಲ್ಲಿ ಬಿಡಾರ. ಅವರ ಗುಮಾಸ್ತೆ ಬಂದು ನಿಂತರು. ಅವರೊಂದಿಗೆ ''ನನಗೆ ಈ ಸಬ್-ಡಿವಿಷನ್‌ನಿಂದ ವರ್ಗವಾಗಿದೆ ಅನ್ನಿಸುತ್ತಿದೆ'' ಅಂದರು. ಮಾರನೆಯ ದಿನವೇ ಅಂಚೆಯಿಂದ ಮಾವಂದಿರ ಪತ್ರಬಂತು. ''ನಿಮ್ಮನ್ನು ಚಿತ್ರದುರ್ಗದ ಜಿಲ್ಲಾ ಪೋಲೀಸ್ ಸೂಪೆರಿಂಟೆಂಡೆಂಟ್ ಆಗಿ ನೇಮಿಸಿ ವರ್ಗಾಯಿಸಿದ್ದಾರೆ'' ಎಂದು ಬರೆದಿದ್ದರು. ''ಹಿಂದಿನ ದಿನ ನನ್ನ ಮನಸ್ಸಿಗೆ ತೋಚಿದ್ದ ಸಂಗತಿ ಹೀಗೆ ದಿಟವಾದದ್ದು ನನಗೆ ತುಂಬ ಸೋಜಿಗ ಎನ್ನಿಸಿತು. ಇಂಗ್ಲಿಷಿನಲ್ಲಿ ಇದನ್ನು ಟೆಲೆಪತಿ ಅನ್ನುತ್ತಾರೆ'' ಎಂದು ಹೇಳುತ್ತಾರೆ ಮಾಸ್ತಿ.

ಒಂದು ದಿನ ರಾತ್ರಿ ನಿದ್ದೆಯಲ್ಲಿ ಮಾಸ್ತಿಯವರಿಗೆ ಕನಸುಬಿತ್ತು. ಚಿಕ್ಕಮಗಳೂರು ಹೈಸ್ಕೂಲಿನಿಂದ ಶ್ರೀನಿವಾಸಮೂರ್ತಿ ಅವರಿಗೆ ಬೆಂಗಳೂರಿಗೆ ವರ್ಗವಾದಂತೆ ಸ್ಪಷ್ಟವಾಯಿತು. ಮಾರನೆಯ ದಿನ ಅವರನ್ನು ಕಂಡು ''ನಿಮಗೆ ಬೆಂಗಳೂರಿಗೆ ವರ್ಗವಾಗಿ ಅಪ್ಪಣೆ ಬಂದಿದೆಯೇ'' ಎಂದು ಶ್ರೀನಿವಾಸಮೂರ್ತಿಗಳನ್ನು ಕೇಳಿದರು. ಅವರು ''ಇಲ್ಲವಲ್ಲ'' ಅಂದರು,

ಮಾಸ್ತಿಯವರು 'ಸೆನ್ಸಸ್' ಅಧಿಕಾರಿಗಳಾಗಿ ಬೆಂಗಳೂರಿಗೆ ಬಂದರು. ಒಂದು ದಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘಕ್ಕೆ ಹೋದರು. ಸ್ವಪ್ನದಲ್ಲಿ ಕಂಡಿದ್ದಂತೆ ಶ್ರೀನಿವಾಸಮೂರ್ತಿಗಳನ್ನು ಕಂಡರು. ಅವರು ಬಂದು ಮಾಸ್ತಿಯವರಿಗೆ ''ತಮ್ಮ ಮಾತು ನಿಜವಾಯಿತು, ನೀವು ಅಲ್ಲಿಂದ ಹೊರಟ ಮೂರು ದಿನದಲ್ಲಿ ನನಗೆ ವರ್ಗದ ಅಪ್ಪಣೆ ಬಂತು. ಇಲ್ಲಿಗೆ ಬಂದು ಕೆಲಸಕ್ಕೆ ಸೇರಿದ್ದೂ ಆಯಿತು'' ಅಂದರು.

ತಳುಕಿನ ವೆಂಕಣ್ಣಯ್ಯನವರು ಅಗಡಿ ಸಾಧುಗಳ ಪೂರ್ಣ ಅನುಗ್ರಹಕ್ಕೆ ಪಾತ್ರರಾದವರು. ವೆಂಕಣ್ಣಯ್ಯನವರು ಮಾಸ್ತಿಯವರಿಗೆ ಆ ಸಾಧುಗಳನ್ನು ಕುರಿತ ವಿವರಗಳನ್ನು ಕೊಟ್ಟಿದ್ದರು. ಮಾಸ್ತಿಯವರಿಗೆ ಅವರಲ್ಲಿ ಗುರುಭಾವ ಉಂಟಾಯಿತು. ಅವರ ಆಶ್ರಮದ ಶಿಷ್ಯರಾದ ಶಾಂತಾರಾಂ ಜೋಷಿಯವರು ತಮ್ಮ ಪಟ್ಟಿಯಲ್ಲಿ ಮಾಸ್ತಿಯವರನ್ನು ''ಸಾಧುಗಳ ವಿಷಯದಲ್ಲಿ ಶ್ರದ್ಧೆ ತಳೆದ ಒಬ್ಬ ಗೃಹಸ್ಥ'' ಎಂದು ಬರೆದುಕೊಂಡರು, ಹೊರಟುಹೋದರು. ಆಮೇಲೇನಾಯಿತು? ಮಾಸ್ತಿಯವರೇ ಹೇಳಲಿ :

''ಒಂದು ದಿನ ರಾತ್ರಿ ನನಗೆ ನಿದ್ರೆಯಲ್ಲಿ ಒಂದು ದರ್ಶನ. ಹಿಂದೆ ಬಂದ ಇಂಥ ಅನುಭವವನ್ನು ನಾನು ದರ್ಶನ ಎಂದು ಕರೆದಿದ್ದೇನೆ. ಅವು ಕನಸಲ್ಲ ಎಂದೂ ಹೇಳಿದ್ದೇನೆ. ಆ ಮಾತು ಈ ಅನುಭವಕ್ಕೂ ಅನ್ವಯಿಸುತ್ತದೆ. ಇದರಲ್ಲಿ ನಾನು ಎಲ್ಲೋ ಒಂದು ಕಡೆ ನಡೆಯುತ್ತಿದ್ದೇನೆ. ಅದು ದೊಡ್ಡದೊಂದು ಕೆರೆಯ ಅಂಗಳದ ನೀರಿನ ಅಂಚು. ನನ್ನ ಬಲಕ್ಕೆ ನೀರು ಸಣ್ಣ ಸಣ್ಣ ಅಲೆಯಾಗಿ ಆಡುತ್ತಾ ಬಂದು ನೆಲವನ್ನು ಮುಟ್ಟುತ್ತಾ ಇದೆ. ನಾಲ್ಕು ಹೆಜ್ಜೆ ನಡೆದು ನಾನು ತಲೆ ಎತ್ತಿ ನೋಡಿದೆನು. ಸ್ವಲ್ಪ ದೂರದಲ್ಲಿ ಒಂದು ಐದು ಜನ ನಡೆಯುತ್ತಿದ್ದಾರೆ. ಒಬ್ಬರು ದೊಡ್ಡವರು, ನಾಲ್ಕು ಜನ ಕಿರಿಯರು. ಇವರು ಗುರು ಶಿಷ್ಯರು ಇರಬಹುದು. ಅವರು ನಡೆಯುತ್ತಿದ್ದಾರೆ. ಇಷ್ಟು ದೂರದಲ್ಲಿ ನಾನು ನಡೆಯುತ್ತಿದ್ದೇನೆ. ಸ್ವಲ್ಪದರಲ್ಲಿ

ಎದುರಿಗೆ ಒಂದು ತೋಪು ಕಾಣಿಸಿತು. ಕೆರೆಯ ನೀರು ಅದರೊಳಕ್ಕೆ ಹಾಯ್ದಿದೆ. ಮರಗಳು ನೀರಿನಲ್ಲಿ ನಿಂತಿವೆ. ಗುರು ನಡೆಯುತ್ತ ನಡೆಯುತ್ತ ತೋಪಿನ ಮುಂಭಾಗದ ನೀರೊಳಕ್ಕೆ ಹೋದರು. ಅಲ್ಲಿ ಅದೇನೋ ಮಾಡಿದರು. ಅದೇನು ಎನ್ನುವುದು ನನಗೆ ಸ್ಪಷ್ಟವಾಗಲಿಲ್ಲ. ನೀರನ್ನು ತಲೆಗೆ ಪ್ರೋಕ್ಷಿಸಿಕೊಂಡಿರಬಹುದು. ಆಮೇಲೆ ಕೈಯಿಂದ ಉದ್ದನಾದ ಒಂದು ಕೋಲನ್ನು ಹಿಡಿದು ಮೀನು ಹಿಡಿಯುವವರು ನೀರೊಳಕ್ಕೆ ದಾರವನ್ನು ಬಿಡುವಂತೆ ದಾರ ಬಿಡುವ ರೀತಿಯಲ್ಲಿ ಅದನ್ನು ಮುಂದಕ್ಕೆ ಚಾಚಿದರು. ಇದು ಏನು ಎಂದು ನನಗೆ ವಿಸ್ಮಯ. ನಾನು ಹೀಗೆಂದುಕೊಳ್ಳುವಷ್ಟರಲ್ಲೇ ಹಿರಿಯರು ನೀರಿಂದ ಹೊರಕ್ಕೆ ಬಂದರು. ನಾನು ನಿಂತಿರುವ ದಿಕ್ಕಿನತ್ತ ನಡೆಯತೊಡಗಿದರು. ನಾನು ನಿಂತಲ್ಲಿಯೇ ನಿಂತೆನು. ಗುರು ಶಿಷ್ಯರು ಎಲ್ಲಾ ನನ್ನೆದುರಿಗೆ ಹಾಯ್ದರು. ಯಾರೂ ನನ್ನತ್ತ ನೋಡಲಿಲ್ಲ. ಅವರ ಗಮನವೆಲ್ಲ ಮುಂದುಗಡೆ ಇದ್ದಿತು. ಅವರು ಎದುರಲ್ಲಿ ಹಾಯ್ದಾಗ ನನಗೆ ಇವರು ಯಾರೋ ಬಹುದೊಡ್ಡ ಗುರು ಅನ್ನಿಸಿತು. ಇವರ ಹಿಂದೆಯೇ ಹೋಗಿ ಇವರು ಆಶ್ರಮ ಸೇರಿದ ಮೇಲೆ ಇವರ ಕಾಲ ಹಿಡಿಯಬೇಕು ಎಂದು ಪ್ರೇರಣೆ ಆಯಿತು. ನಾನು ಅವರನ್ನು ಹಿಂಬಾಲಿಸಿದೆನು. ಸ್ವಲ್ಪದೂರ ಹೋಗುವುದರಲ್ಲಿ ಒಂದು ಮಂದಿರದ ದ್ವಾರ ಕಂಡಿತು. ಎಲ್ಲ ಒಳಕ್ಕೆ ಹೋದರು. ನಾನು ಹಿಂದೆಯೇ ಹೋದೆನು . . . ನಾನು ಕೈಸಾಲೆಯ ಮೇಲಿನ ಬುಡವನ್ನು ಮುಟ್ಟುವ ವೇಳೆಗೆ ಅದರ ಎಡ ಬದಿಯ ಗೋಡೆಯಲ್ಲಿದ್ದ ಬಾಗಲಿಂದ ಗುರು ಕೈಸಾಲೆಗೆ ಬಂದರು. ಅವರ ಬಲಗಡೆಯ ಕೊನೆಗೆ ನಿಂತಿದ್ದ ನನ್ನೆದುರಿಗೆ ಬಂದು ನಿಂತರು. ನನಗೆ ಅವರ ಮುಖ ಸರಿಯಾಗಿ ಕಂಡದ್ದು ಆಗಲೇ. ಅದನ್ನು ಕಂಡೊಡನೆ ತಟ್ಟನೆ ಓ! ಅಗಡಿಯ ಸಾಧುಗಳು, ಎಂದು ನನಗೆ ತೋರಿತು. ಆಕ್ಷಣ ನನ್ನ ಗೃಹಿಣಿ ನನ್ನ ಪಕ್ಕದಲ್ಲಿ ನಿಂತರು. ನಾವಿಬ್ಬರೂ ಗುರುವಿನ ಪಾದದ ಮೇಲೆ ತಲೆ ಇಟ್ಟೆವು. ನಾನು 'ನಮ್ಮನ್ನು ಕಾಪಾಡಬೇಕು' ಎಂದು ಅವರನ್ನು ಬೇಡಿದೆನು. ಗುರು, 'ಹರಿಭಕ್ತಿ ಲಭಿಸಿದೆ. ಎಲ್ಲ ಸರಿಹೋಗುತ್ತೆ, ಚಿಂತೆ ಬೇಡಿ, ಏಳಿ' ಎಂದರು. ನಾನು ''ಹಾಗಲ್ಲ, ಉದ್ಧಾರ ಮಾಡಬೇಕು. ತಡಮಾಡಬಾರದು'' ಎಂದೆನು. ಗುರು 'ಎಲ್ಲ ಸರಿಹೋಗುತ್ತೆ, ಆತುರ ಬೇಡಿ, ಕರ್ಮ ಸವೆಯಬೇಕಲ್ಲ' ಎಂದರು. ನಾವು ಕಾಲನ್ನು ಹಿಡಿದಿದ್ದಂತೆಯೇ ಮೂರ್ತಿಮೈಗರೆಯಿತು. ನಿದ್ರೆಹರಿದು ನಾನು ಎಚ್ಚತ್ತೆನು.''

''ಇದು ಕನಸಲ್ಲ, ದರ್ಶನ, ಎಂದು ಹೇಳಿದ್ದೇನೆ. ಇದರ ಲಕ್ಷಣ ಏನೆಂದರೆ ಇದರ ನಡೆ ನುಡಿ ಎಲ್ಲಾ ನಮ್ಮ ವಾಡಿಕೆಯ ನಿಜದ ಜೀವನದ ಸಂಗತಿಗಳಿಗಿಂತ ಹೆಚ್ಚು ಸ್ಫುಟವಾಗಿ ನಿಜವೆಂದು ತೋರುವುದು. ಕನಸು ಮಸುಕು ಬೆಳಕು. ಬಳಕೆಯ ಜೀವನ ಸಾಮಾನ್ಯವಾದ ಬೆಳಕು. ದರ್ಶನದ ಬೆಳಕು ವಿಶುದ್ಧ ಪ್ರಭೆ. ಎಚ್ಚೆತ್ತ ನನಗೆ ಈ ಅನುಭವ ಪೂರ್ಣವಾಗಿ ನಿಜ ಎನಿಸಿತು. ಗುರು ಅಗಡಿ ಸಾಧುಗಳು ವೆಂಕಣ್ಣಯ್ಯನವರ ಮಾತನ್ನು ಕೇಳಿ ನಾನು ಅವರನ್ನು ಒಪ್ಪಿಕೊಂಡಿದ್ದದ್ದರಿಂದ ಅವರು ನನಗೆ ಹೀಗೆ ದರ್ಶನವನ್ನು ಅನುಗ್ರಹಿಸಿದರು, ಜೀವನವನ್ನು ಕುರಿತು ನನಗೆ ಈ ಆಶ್ವಾಸನವನ್ನು ನೀಡಿದರು, ಎಂದು ನಾನು ನಿಶ್ಚಯ ಮಾಡಿಕೊಂಡೆನು. ಬೆಳಿಗ್ಗೆ ಎದ್ದು ಮನೆಯಾಕೆಗೆ ಹೇಳಿದೆನು. ಗುರುವಿನ

ಕಾಲನ್ನು ಹಿಡಿಯುವ ವೇಳೆಗೆ ಅವರು ನನ್ನ ಜೊತೆಗಿದ್ದರು ಎಂದು ಹೇಳಿದ್ದು ಆಕೆಗೆ ತುಂಬ ಸಂತೋಷ.''

ಮಾರನೆಯ ದಿನವೇ ಅಂಚೆಯಿಂದ ಒಂದು ಗಂಟು ಬಂತು. ಅಂಗಡಿಯಿಂದ ಶ್ರೀ ಶಾಂತಾರಾಂ ಪತ್ರಬರೆದು ಸಾಧುಗಳ ಆರಾಧನೆಯ ಕುರುಹಾಗಿ ಪ್ರಸಾದ ಕಳುಹಿಸಿದ್ದರು!

''ನನಗೆ ಎಷ್ಟು ಆಶ್ಚರ್ಯ ಆಯಿತು ಎನ್ನುವುದನ್ನು ನಾನು ಹೇಳಲಾರೆ. ಪ್ರಸಾದವನ್ನು ತಲೆಗಿಟ್ಟು, ಗುರುವನ್ನು ನೆನೆದು ಕೈಮುಗಿದೆನು.''

ಎಂಬುದಾಗಿ ಮಾಸ್ತಿಯವರು ಹೇಳುತ್ತಾರೆ.

ಮಾಸ್ತಿಯವರಿಗೊಂದು ರಾತ್ರಿ ಕನಸಾಯಿತು. 'ಇದು ಕನಸು, ದರ್ಶನವಲ್ಲ' ಅನ್ನುತ್ತಾ ಅವರು ಈ ರೀತಿ ಕನಸನ್ನು ವರ್ಣಿಸಿದರು.

''ನಾನು ಒಮ್ಮೆ ಗೆಳೆಯ ವೆಂಕಟರಂಗನ್ ಮನೆಗೆ ಹೋಗಿದ್ದೇನೆ. ಅವರ ಕೋಣೆಯಲ್ಲಿ ಒಂದು ಕುರ್ಚಿಯ ಮೇಲೆ ಕುಳಿತಿದ್ದೇನೆ. ಗೆಳೆಯ ಮನೆಯ ಒಳಗೆ ಇದ್ದಿರಬೇಕು. ಯಾರೋ ಬಂದು ಬಾಗಿಲಲ್ಲಿ ಕರೆದಂತಾಯಿತು. ನಾನು ನೋಡಿದೆನು. ವೈದಿಕ ವೇಷದ ಶ್ರೀ ವೈಷ್ಣವರು. ಬಹು ತೇಜಸ್ವಿಯಾದ ಮೂರ್ತಿ. 'ಒಳಗೆ ದಯಮಾಡಿ, ಬರುತ್ತಾರೆ' ಎಂದೆನು. ಅವರು ಒಳಕ್ಕೆ ಬಂದರು. ಕೋಣೆಯಲ್ಲಿ ನನ್ನೆದುರಿಗೆ ಒಂದು ಕುರ್ಚಿಯಲ್ಲಿ ಕುಳಿತರು. ಸ್ವಲ್ಪ ಹೊತ್ತು ಕೂತಿದ್ದು 'ನನಗೆ ಕೆಲಸವಿದೆ, ನಾನು ಮತ್ತೆ ಬರುತ್ತೇನೆ' ಎಂದು ಎದ್ದರು. ನಾನು 'ಯಾರು ಬಂದಿದ್ದರು ಎಂದು ಹೇಳಲಿ' ಎಂದು ಕೇಳಿದೆನು. 'ಲಕ್ಷ್ಮಣಾಚಾರ್' ಎಂದು ಹೇಳಿ ಉತ್ತರಕೊಟ್ಟು ಹಿರಿಯರು ಹೊರಕ್ಕೆ ನಡೆದರು. ಲಕ್ಷ್ಮಣಾಚಾರ್ ಎಂಬ ಹೆಸರಿನ, ವೆಂಕಟರಂಗನ್‌ರವರ ನಾದಿನಿಯ ಗಂಡ ಒಬ್ಬರಿದ್ದರು. ನಾನು ಇದನ್ನು ನೆನೆದೆನು. ''ಇವರು ಆತ ಅಲ್ಲ. ಆತ ಲೌಕಿಕರು'' ಎಂದುಕೊಂಡೆನು. ಅದೇಕ್ಷಣ ''ಬಂದಿದ್ದವರು ರಾಮಾನುಜಾಚಾರ್ಯರು. ಪ್ರತ್ಯಕ್ಷವಾಗಿ ಹೇಳಿದರೆ ಗೊಂದಲಮಾಡಿಯಾನು ಎಂದು ಹೆಸರನ್ನು ಪರ್ಯಾಯವಾಗಿ ಹೇಳಿ ತಪ್ಪಿಸಿಕೊಂಡು ಹೋದರು'' ಎಂದು ನನಗೆ ಹೊಳೆಯಿತು. ''ಅಯ್ಯೊ! ಗುರು ಎದುರಿಗೆ ಬಂದಾಗ ಅವರು ಎಂದು ತಿಳಿಯದೆ ಹೋದೆನಲ್ಲಾ! ಅವರೂ ಸರಿಯಾಗಿ ಹೇಳದೆ ಹೊರಟುಹೋದರು'' ಎಂದು ನಾನು ವ್ಯಥೆಪಟ್ಟೆನು. ನಿದ್ರೆಯಿಂದ ಎಚ್ಚೆತ್ತೆನು.

ತಿರುಪತಿ ಯಾತ್ರೆಮಾಡಿ ಅಲ್ಲಿ ಗರುಡೋತ್ಸವ ಮಾಡಿಸಲು (ತಾತಂದಿರ ಬಯಕೆ) ಮಾಸ್ತಿಯವರೂ, ಮನೆಯವರೂ ಹೊರಟರು. ಹೋಗಿ ಮೈಸೂರು ಛತ್ರದಲ್ಲಿ ಇಳಿದರು. ಹಿಂದಿನ ರಾತ್ರಿ ರೈಲಿನಲ್ಲಿ ನಿದ್ದೆ ಇಲ್ಲ. ಹಗಲೆಲ್ಲ ಓಡಾಟ; ಎಲ್ಲರೂ ದಣಿದಿದ್ದರು. ರಾತ್ರಿ ಮಲಗಿದರು. ಎಲ್ಲರಿಗೂ ಚೆನ್ನಾಗಿ ನಿದ್ರೆಬಂತು. ಯಾರು ಬೇಗ ಏಳುವರೋ ಅವರು ಉಳಿದವರನ್ನೆಬ್ಬಿಸಬೇಕೆಂದು ನಿಶ್ಚಯವಾಗಿತ್ತು. ಮಾಸ್ತಿಯವರಿಗೆ ಕನಸಾಯಿತು.

''ಹೊಂಗೇನಹಳ್ಳಿಯ ನನ್ನ ತಾತ ಬಂದು ನನ್ನ ಪಕ್ಕದಲ್ಲಿ ಕುಳಿತು ''ಲೋ! ಅಪ್ಪ, ಹೊತ್ತಾಯಿತು ನೋಡು'' ಎಂದು ನನ್ನನ್ನು ಎಬ್ಬಿಸಿದಂತಾಯಿತು. ತಾತನ ಧ್ವನಿ; ನೋಡುತ್ತೇನೆ, ಅವರಂತೆ ಮುಖ, ಹೊಳೆಯುವ ಆ ಬಿಳಿಯ ನಾಮ. ತಾತನನ್ನು ಕಂಡ ಸಂತೋಷದಲ್ಲಿ ನಿದ್ದೆ ತಿಳಿದು ಎದ್ದೆನು.. . . . ಗಡಿಯಾರ ನೋಡಿದೆನು. ನಾ ಏಳಬೇಕೆಂದುಕೊಂಡಿದ್ದ ಹೊತ್ತು. ಶ್ರೀನಿವಾಸ ನನಗೆ

ಇಷ್ಟವಾದ ರೂಪದಲ್ಲಿ ನನ್ನ ಪಕ್ಕದಲ್ಲಿ ಕುಳಿತು, ನನ್ನನ್ನೂ ನಿದ್ದೆಯಿಂದ ಎಬ್ಬಿಸಿದರೆಂದು ನನಗೆ ತೋರಿತು.''

ಇದು ಸ್ವಪ್ನ ಅನ್ನುತ್ತಾರೆ ಮಾಸ್ತಿ! ದರ್ಶನಕ್ಕೂ ಇದಕ್ಕೂ ವ್ಯತ್ಯಾಸವೇನು?

ವೆಂಕಣ್ಣಯ್ಯನವರ ಪತ್ನಿ ತೀರಿಕೊಂಡರು. ತಾಯಿಯ ಬಲವಂತಕ್ಕೆ ಅವರು ಎರಡನೆ ಮದುವೆಗೆ ಒಪ್ಪಬೇಕಾಯಿತು.

''ಒಂದು ರಾತ್ರಿ ನಿದ್ರೆಯಲ್ಲಿ ನನಗೆ ಒಂದು ದರ್ಶನ. ನಾನು ಲಾಲ್‌ಬಾಗಿನಿಂದ ನನ್ನ ಮನೆಗೆ ನಡೆದುಬರುತ್ತಿದ್ದೇನೆ. ಉತ್ತರಾದಿಮಠದ ಸ್ವಲ್ಪ ಈಚೆಗೆ ಮಾರ್ಗದಲ್ಲಿ ಒಂದು ಮದುವೆ ಮೆರವಣಿಗೆ ಬರುತ್ತಿದೆ. ನಾನು ಮಾರ್ಗದ ಪಕ್ಕದಿಂದ ಅತ್ತ ನೋಡುತ್ತೇನೆ. ಮದುಮಗ ವೆಂಕಣ್ಣಯ್ಯನವರು! ಕೊರಳಿಗೆ ಮಲ್ಲಿಗೆಯ ದಂಡೆಹಾರ ಹಾಕಿದ್ದರು. ಪಕ್ಕದಲ್ಲಿ ಮದುಮಗಳು ನಡೆಯುತ್ತಿದ್ದಾಳೆ. ನಾನು ಓ! ಓ! ಕೊನೆಗೂ ವೆಂಕಣ್ಣಯ್ಯ ಮದುವೆ ಆದರು! ತಾಯಿ ಬಿಡಲಿಲ್ಲ''ಎಂದುಕೊಂಡೆನು. ಎಚ್ಚೆತ್ತೆನು. 'ಇದು ಸ್ವಪ್ನ ಅಲ್ಲ, ದರ್ಶನ. ಇದು ದಿಟ ಇರಬೇಕು. ನಾಳೆ ನಾಳಿದ್ದರಲ್ಲಿ ಹೋಗಿ ವಿಚಾರಿಸೋಣ' ಎಂದುಕೊಂಡೆನು''

ಎಂದು ಮಾಸ್ತಿಯವರು ಬರೆದರು. ಎರಡು ದಿನದೊಳಗೇ ವೆಂಕಣ್ಣಯ್ಯನವರೇ ಬಂದು ''ಸಂತೋಷದ ಸಂಗತಿ ಅಲ್ಲ'' ಅಂದರು. ಮಾಸ್ತಿಯವರಾದರೋ ''ಮದುವೆ ಎನ್ನುವುದು ಶುಭಪ್ರಸಂಗ. ಅದರ ವಿಷಯದಲ್ಲಿ ಬೇಸರದ ಮಾತುಬೇಡ'' ಅಂದರು.

ಮಾಸ್ತಿಯವರು ತಮ್ಮ ಕೋಣೆಯಲ್ಲಿ ಮಲಗಿ ನಿದ್ದೆಮಾಡುತ್ತಿದ್ದಾರೆ.

''ಕೋಣೆಯ ಪಶ್ಚಿಮದ ಕಿಟಕಿಯಿಂದ ಒಂದು ದೇಹ ತೊರೆದ ಆತ್ಮ ಕೋಣೆಯೊಳಕ್ಕೆ ಪ್ರವೇಶಿಸಿದಂತೆ ಭಾವ. ಅದು ಒಂದು ಉತ್ತರದ ಗೋಡೆಗೆ ಒರಗಿಸಿ ಇಟ್ಟಿದ್ದ ಕುರ್ಚಿಯ ಮೇಲೆ ಕುಳಿತಿತು. ನನಗೆ ಇದು ಯಾರೋ ತಿಳಿದ ಜನ ಎನ್ನಿಸುತ್ತಿದೆ. ಯಾರು ಎಂದು ತಿಳಿಯುತ್ತಿಲ್ಲ. ತಿಳಿದವರು, ಬೇಕಾದವರು ಆದರೂ ದೇಹ ಇಲ್ಲದೆ ಬರಿಯ ಆತ್ಮವಾಗಿ ಬಂದಿರುವುದರಿಂದ ಸಾಮೀಪ್ಯ ಬೇಡ ಅನ್ನಿಸುತ್ತಿದೆ. ಒಳಗೆ ಭಯವೇ ಆಗುತ್ತಿದೆ. ನಿಶ್ಚೇಷ್ಟನಾಗಿ ಬಿದ್ದೇ ಇದ್ದೇನೆ. ಬಂದ ಆತ್ಮ ಕೆಲವು ಕ್ಷಣ ಅಲ್ಲಿದ್ದು ಕುರ್ಚಿಯನ್ನು ಬಿಟ್ಟು ಏರಿ ಅದೇ ಕಿಟಕಿಯಿಂದ ಹೊರಟುಹೋಯಿತು. ಆತ್ಮ ಯಾರದು?''

ಎಂದು ಮಾಸ್ತಿಯವರು ಪ್ರಶ್ನೆ ಹಾಕಿಕೊಂಡರು. ಹನ್ನೊಂದು ದಿನಗಳ ಹಿಂದೆ ವೆಂಕಣ್ಣಯ್ಯನವರು ತೀರಿಕೊಂಡಿದ್ದರು ಮೈಸೂರಲ್ಲಿ. ಅವರ ಆತ್ಮ ಇರಬಹುದೇ ಎಂದು ಅನುಮಾನ ಮಾಡಿದರು. ಮಾರನೆಯ ದಿನ ಮೈಸೂರಿಂದ ಪತ್ರಬಂತು. ವರದರಾಜಯ್ಯನವರು ತೀರಿಕೊಂಡರೆಂದು. ಅವರು ಮಾಸ್ತಿಯವರ ಉಪಾಧ್ಯಾಯರು. ಅವರು ''ದೇಹ ಬಿಟ್ಟೊಡನೆಯೇ ನನ್ನ ಬಳಿ ಸ್ವಲ್ಪ ಇರೋಣ ಎನ್ನಿಸಿ, ಇಲ್ಲಿಗೆ ಬಂದು ಎರಡು ನಿಮಿಷ ಇದ್ದು ಹೊರಟುಹೋದರು ಎನ್ನಿಸಿತು'' ಎಂದು ಮಾಸ್ತಿಯವರು ತಮ್ಮ ಮನಸ್ಸಿನ ನಿಶ್ಚಯವನ್ನು ತಿಳಿಸಿದ್ದಾರೆ.

ಮಾಸ್ತಿಯವರ ಅತ್ತೆ ತೀರಿಕೊಂಡ ಎರಡು ವರ್ಷದ ಕೊನೆಯ ದಿನ ರಾತ್ರಿ ಮಾಸ್ತಿಯವರ ಸ್ವಪ್ನದಲ್ಲಿ ಅತ್ತೆ ಕಂಡುಬಂದರು. ಬೆಳಿಗ್ಗೆ ಎದ್ದು ಮನೆಯಾಕೆಯೊಂದಿಗೆ ವಿಚಾರ ಹೇಳಿದರು. ಶ್ರೀಮತಿಯವರು,

''ಈಹೊತ್ತೇ ತಿಥಿ. ದೇವಸ್ಥಾನದಲ್ಲಿ ನೈವೇದ್ಯ, ಪೂಜೆ; ಅವರ ಹೆಸರಿನಲ್ಲಿ

ಮಾಡಿಸುವುದಕ್ಕೆ ನಿನ್ನೆಯೇ ಹೇಳಿದ್ದಾಯಿತು''

ಎಂದು ಹೇಳಿದರು. ಮಾಸ್ತಿಯವರೇ ಸಂದರ್ಭ ಕುರಿತು ಹೇಳುವುದನ್ನಾಲಿಸಿ:

''ನನಗೆ ಅತ್ತೆ ಆಗಿದ್ದ ಸತ್ವಲೋಕದಲ್ಲಿದ್ದುಕೊಂಡು, ನನ್ನ ವಿಷಯಕ್ಕೆ ಇನ್ನೂ ಅಕ್ಕರೆಯಿಂದಿರುತ್ತ, ವರ್ಷ ಮುಗಿದ ದಿನ ತನ್ನ ಬಂಧುವರ್ಗವನ್ನು ನೋಡಿ ರಕ್ಷಿಸಿ ಹೋಗುವ ಸಲುವಾಗಿ ಬಂದುಹೋಯಿತೋ? ಇರಬಹುದೇನೋ! ಇಂಥ ವಿಷಯದಲ್ಲಿ ನಾನು ಬುದ್ಧಿಯನ್ನು ಮುಂದುಮಾಡಿ 'ಇದನ್ನು ನಾನು ನಂಬಲಾರೆ'ಎನ್ನುವುದಿಲ್ಲ. ಭಾವವನ್ನು ಮುಂದುಮಾಡಿ 'ಹೌದು, ಹೀಗೆಂದು ನಂಬುತ್ತೇನೆ' ಎನ್ನುವುದಿಲ್ಲ. ಅನುಭವ ಎಷ್ಟೋ ಅಷ್ಟನ್ನು ಹೌದು ಎನ್ನುತ್ತೇನೆ. ಅದರಿಂದ ಒಂದು ನಿರ್ಣಯವನ್ನು ಮಾಡಲು ಹೋಗುವುದಿಲ್ಲ''

ಬುದ್ಧಿಗಿಂತ, ಭಾವಕ್ಕಿಂತ, ಅನುಭವಕ್ಕೇ ಹೆಚ್ಚು ಬೆಲೆ ಕೊಡುತ್ತಾರೆ ಮಾಸ್ತಿಯವರು.

ಮಾಸ್ತಿಯವರ ಮಿತ್ರ-ಅಧಿಕಾರಿಗಳು ಶಾಮಣ್ಣನವರು ಒಂದೆರಡು ಸಾರಿ ''ಅರುಣಾಚಲಕ್ಕೆ ಹೋಗೋಣ ಬರುತ್ತೀರಾ''ಎಂದು ಕೇಳಿದರು. ಮಾಸ್ತಿಯವರು ರಮಣಮಹರ್ಷಿಗಳನ್ನು ಕುರಿತು,

''ಅವರು ಮಹಾತ್ಮರು. ಆದರೆ ಅವರ ಮಹಿಮೆ ನನ್ನನ್ನು ಮುಟ್ಟಬೇಕಾದರೆ ನಾನು ಅವರ ಬಳಿಗೇ ಹೋಗಬೇಕು ಎನ್ನುವುದಿಲ್ಲ. ಅವರು ಅಲ್ಲಿಂದ ನಾನು ಇರುವಲ್ಲಿಯೇ ನನ್ನನ್ನು ಮುಟ್ಟಬಲ್ಲರು.''

ಎಂದು ಹೇಳಿದರು. ಶಾಮಣ್ಣನವರು ಮತ್ತೆ 'ಬರುತ್ತೀರಾ'ಎಂದು ಕೇಳಿ ಅರುಣಾಚಲಕ್ಕೆ ಹೊರಟರು. ಮಾರನೆಯ ದಿನವೇ ಮಾಸ್ತಿಯವರಿಗೆ ಸ್ವಪ್ನದಲ್ಲಿ ಒಂದು ದರ್ಶನ! ಅವರೇ ಹೇಳುತ್ತಾರೆ ಕೇಳಿ:

''ನಾನು ಒಂದು ಗುಡ್ಡದ ಬಳಿ ನಡೆಯುತ್ತಿದ್ದೇನೆ, ಸುತ್ತಣ ನೆಲ ಗಿಡಮರ ಬಳ್ಳಿಯಿಂದ ಒಂದು ಉದ್ಯಾನವಾಗಿ ಕಾಣುತ್ತದೆ. ನಾಲ್ಕು ಹೆಜ್ಜೆ ನಡೆಯುವ ವೇಳೆಗೆ ನಾನು ಒಂದು ಸಣ್ಣ ಕಾಲುವೆಯ ಬಳಿ ನಿಂತಿದ್ದೇನೆ. ಅದು ಒಂದು ತೋಟದ ಕಾಲುವೆ. ನೊರಜುಕಲ್ಲಿನ ತಳ. ಅದರ ಮೇಲೆ ತಿಳಿಯಾದ ನೀರು ನನ್ನ ಕಡೆಗೆ ಹರಿದು ಬರುತ್ತಿದೆ. ನನ್ನ ಮನಸ್ಸಿಗೆ ಬಹಳ ಹರ್ಷ ಆಯಿತು. ನಾನು ಮೆಲ್ಲನೆ ಕಾಲುವೆಯ ಬದಿಯಲ್ಲಿ ಮೇಲಕ್ಕೆ ನಡೆದೆನು. ಸ್ವಲ್ಪ ದೂರದಲ್ಲಿ ಎರಡು ಕಟ್ಟಡ. ಒಂದು ಎದುರಿಗೆ ಅಡ್ಡಲಾಗಿ, ಇನ್ನೊಂದು ಅದಕ್ಕೆ ಅಂಟಿದಂತೆ, ಒಂದು ಕಡೆಗೆ ಉದ್ದನಾಗಿ ಕಂಡವು. ನಾನು ''ಓ! ಇದು ಒಂದು ಆಶ್ರಮ''ಎಂದುಕೊಂಡೆನು. ಮುಂದಕ್ಕೆ ನಡೆದೆನು. ಎಡಗಡೆಗೆ ಇದ್ದ ಆ ಉದ್ದನೆಯ ಕಟ್ಟಡದಲ್ಲಿ ಒಂದು ಬಾಗಿಲು ಒಳಗಡೆ ಒಬ್ಬ ಮಹಿಳೆ ಕಾಯಿಪಲ್ಯ ಹೆಚ್ಚುತ್ತ ಕುಳಿತಿದ್ದರು. ಅವರು ಯಾರು ನನಗೆ ತಿಳಿಯಲಿಲ್ಲ. ಆದರೆ ಆಕೆ ''ಓಹೋ! ನೀವು ಬಂದಿರಾ?''ಎಂದರು. ಎಂದದ್ದೇ''ನೋಡಿ ಮಾಸ್ತಿ ಬಂದಿದ್ದಾರೆ''ಎಂದರು. ಈ ಮಾತನ್ನು ಯಾರಿಗೆ ಹೇಳಿದರು ನನಗೆ ತಿಳಿಯಲ್ಲಿಲ್ಲ. ನಾನು ಅಲ್ಲಿ ನಿಂತಿದ್ದೇನೆ. ನನ್ನ ಎದುರಿನ ಕಟ್ಟಡದ ಒಂದು ಬಾಗಿಲಿಗೆ ಹಾಕಿದ್ದ ಗೋಣಿಪಟ್ಟೆಯ ತೆರೆಯನ್ನು ಯಾರೋ ಸರಿಸಿದ್ದು ಕಂಡಿತು. ನಾನು ಅತ್ತ ನೋಡಿದೆನು. ಒಳಗಡೆ ಮಹರ್ಷಿ ನಿಂತಿದ್ದಾರೆ. ನಾನು ''ಓ! ನಾನು ರಮಣಾಶ್ರಮಕ್ಕೆ ಬಂದಿದ್ದೇನೆ'' ಎಂದಕೊಂಡೆನು. ಮಹರ್ಷಿಗಳಿಗೆ ಕೈಮುಗಿದೆನು. ಅವರು ''ಬಂದೆ, ಸ್ನಾನ

ಮುಗಿಸಿ ಬರುತ್ತೇನೆ''ಎಂದರು. ತೆರೆಯನ್ನು ಬಿಟ್ಟರು . ನನಗೆ ಎಚ್ಚರ ಆಯಿತು'' ಮುಂದುವರಿದು ಮಾಸ್ತಿಯವರು ಹೀಗೆ ಬರೆಯುತ್ತಾರೆ:

''ಇದು ಸ್ವಪ್ನವಲ್ಲ ದರ್ಶನ. ನಾನು ಇಲ್ಲೇ ಇರುತ್ತ ಮಹರ್ಷಿಗಳು ನನ್ನ ಚೇತನವನ್ನು ಮುಟ್ಟಬಲ್ಲರು ಎಂದು ನಾನು ಹೇಳಿದ್ದ ಮಾತು ದಿಟವೆಂದು ಗುರು ತೋರಿಸಿದಂತಿತ್ತು. ನನ್ನ ಜೀವ ಅಪೂರ್ವ ರೀತಿಯ ಒಂದು ಶಾಂತಿಯನ್ನು ಅನುಭವಿಸಿತು, ಆನಂದದಿಂದ ತುಂಬಿತು.''

ಮತ್ತೆ ಶಾಮಣ್ಣನವರು ರಮಣಾಶ್ರಮಕ್ಕೆ ಹೋಗಿ ಬಂದು, ಮಾಸ್ತಿಯವರನ್ನು ಕಂಡು, ''ಮಹರ್ಷಿಗಳ ಆಶ್ರಮದಲ್ಲಿ ಸ್ನಾನದ ಮನೆಗೆ ಗೋಣಿ ತಟ್ಟಿನ ತೆರೆ ಇದೆ'' ಎಂದರು!

ಮಾಸ್ತಿಯವರ ಮಗಳು ಶ್ರೀಮತಿ ರಂಗನಾಯಕಿ ಪರೀಕ್ಷೆಗೆ ಕುಳಿತಿದ್ದಳು. ಫಲಿತಾಂಶ ಪ್ರಕಟವಾಗುವ ದಿನಗಳವು. ಮಾಸ್ತಿಯವರಿಗೆ ಸ್ವಪ್ನವಾಯಿತು.

''ಆದರಲ್ಲಿ ಹುಡುಗಿಯನ್ನು ಯಾರೋ ಸೆಳೆದು ಕರಿಯದೋ, ಕೆಂಪಿನದೋ, ಒಂದು ಅಸಹ್ಯ ವರ್ಣದ ವಸ್ತ್ರವನ್ನವಳಿಗೆ ಸುತ್ತಿದಂತೆ, ಉತ್ತರ ಕ್ಷಣದಲ್ಲಿ ಅದನ್ನು ಕಳಚಿ ಎಸೆದಂತೆ, ಕಂಡಿತು. ನಿದ್ದೆಯಿಂದ ಎದ್ದು 'ಇದೇನು ಹುಡುಗಿಯ ಪರೀಕ್ಷೆಯ ಫಲಿತಾಂಶದ ಮಾತು ಇರಬಹುದೋ' ಎಂದು ಕೊಂಡೆನು. ಮಾರನೆಯ ದಿನ ಮೈದುನ ಕೃಷ್ಣಸಾಮಿ ಬಂದವನು ಅವಳಿಗೆ ಪರೀಕ್ಷೆಯಲ್ಲಿ ಫೆಯಿಲ್ ಆಯಿತು ಎಂದು ಹೇಳಿದನು. ಹುಡುಗಿ ಅತ್ತು ಕೊಂಡಳು. ನಾನು 'ಈ ಬಾರಿ ಫೆಯಿಲ್ ಆದರೇನು? ಮುಂದಿನ ಬಾರಿ ಪ್ಯಾಸ್ ಮಾಡುವಿಯಂತೆ'ಎಂದು ಹೇಳಿದೆನು. ಮಧ್ಯಾಹ್ನ ತಂತಿಯೋ, ಕಾಗದವೋ, ಬಂದಿತು. ಅವಳಿಗೆ ಪ್ಯಾಸ್ ಆಗಿತ್ತು. ನಾಳೆ ಏನಾಗುವುದು ಎನ್ನುವುದು ನನಗೆ ಸ್ವಪ್ನದಲ್ಲಿ ಸಂಕೇತವಾಗಿ ತಿಳಿದದ್ದಕ್ಕೆ ಇದೂ ಒಂದು ನಿದರ್ಶನ.''

ಎಂಬುದಾಗಿ ಮಾಸ್ತಿಯವರು ವಿವರಣೆ ಕೊಡುತ್ತಾರೆ.

ಅಧಿಕಾರಿಗಳಾಗಿದ್ದ ಮಾಸ್ತಿಯವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಸ್ಥಾನವನ್ನಂಗೀಕರಿಸಲು ಸರಕಾರದ ಅಪ್ಪಣೆಬೇಕು. ಅದಕ್ಕಾಗಿ ಮಾಸ್ತಿಯವರು ಸರಕಾರಕ್ಕೆ ಪತ್ರ ಬರೆದರು.

''ಈ ಸುಮಾರಿನಲ್ಲಿ ನನಗೆ ನಿದ್ರೆಯಲ್ಲಿ ಒಂದು ದರ್ಶನ. ನಾನು ಎಲ್ಲೋ ನಿಂತಿದ್ದೇನೆ. ನನ್ನ ಕೊರಳಿಲ್ಲಿ ದೊಡ್ಡದೊಂದು ಹಾರವಿದೆ. ಅದು ಅರಳಿದ ಮಲ್ಲಿಗೆಯ ದಂಡೆಹಾರ. ನಾನು ಅದನ್ನು ನೋಡುತ್ತಿದ್ದೇನೆ. ಅದು ನಾನು ನೋಡುತ್ತಿದ್ದಂತೆ ಕಡಿದುಹೋಯಿತು. ಎರಡು ಕೊನೆ ಅತ್ತ ಇತ್ತ ತೂಗಿದವು. ಇದು ಏಕೆ ಎಂದುಕೊಳ್ಳುವ ಹೊತ್ತಿಗೆ ಅದರ ಅಡಿಯಲ್ಲಿ ಇನ್ನೊಂದು ಹಾರ ಇರುವುದು ಕಂಡಿತು. ಅದು ಮಲ್ಲಿಗೆ ಮೊಗ್ಗಿನ ದಂಡೆಹಾರ. ಇಷ್ಟು ಕಂಡು ದರ್ಶನ ಮುಗಿಯಿತು. ನಾನು ನಿದ್ದೆಯಿಂದ ಎದ್ದೆನು.''

ಎಂದು ಹೇಳಿ 'ನನಗೆ ಈ ದರ್ಶನ ಏನೋ ಭವಿಷ್ಯವನ್ನು ಸೂಚಿಸುತ್ತಿದೆ ಎನ್ನುವುದು ನಿಶ್ಚಯ. ಆದರೆ ಅದು ಏನು ಎನ್ನುವುದು ತೋರಲಿಲ್ಲ' ಅನ್ನುತ್ತಾರೆ.

ಕೊಂಚ ಕಾಲಾನಂತರ ಆ ದರ್ಶನದ ಮಾತನ್ನೆತ್ತಿ ''ಅರಳಿದ್ದ ದೊಡ್ಡಹಾರ ನನ್ನ ಸಿವಿಲ್ ಸರ್ವಿಸ್ ಅಧಿಕಾರ. ಅರಳು ಮೊಗ್ಗೆಯದಂಡೆ ಪರಿಷತ್ತಿನ

ಅಧ್ಯಕ್ಷಸ್ಥಾನ. ಅದು ಕಡಿದುಹೋಯಿತು. ಇದು ಕೊರಳನ್ನು ಸೇರಿತು.''
ಎಂದು ಸ್ಪಷ್ಟಪಡಿಸುತ್ತಾರೆ ಮಾಸ್ತಿ.

''ಒಂದು ರಾತ್ರಿ ನನಗೆ ಒಂದು ಸ್ವಪ್ನ, ನಾನು ನನ್ನ ಪರಿಚಯದ ಒಬ್ಬರು ಮನೆಯ ಪೌಳಿಯಲ್ಲಿ ನಡೆಯುತ್ತಿದ್ದೇನೆ. ಯಾರ ಮನೆ ಎಂದು ಮನಸ್ಸು ಕಾಣದು. ನಾಲ್ಕು ಹೆಜ್ಜೆ ನಡೆದಿದ್ದೇನೆ. ಅಲ್ಲಿ ಒಂದು ಬಾವಿ; ಅದರ ಅರುಗಿಗೆ ನಾನು ಬಂದಿದ್ದೇನೆ. ನನ್ನೆದುರಿಗೆ ಆಚೆಯ ದಂಡೆಯಮೇಲೆ ಇಬ್ಬರು ನಿಂತಿದ್ದಾರೆ. ಅವರು ನಾನು ಬಲ್ಲ ಜನ. ಯಾರು ಎನ್ನುವುದು ನಿಶ್ಚಯವಿಲ್ಲ. ಎಡಗಡೆಗೆ ಬಾವಿಯ ಅಂಚಿನಲ್ಲಿ ಒಬ್ಬರು ಕುಳಿತಿದ್ದಾರೆ. ಅವರೂ ಪರಿಚಿತರು. ಆದರೆ ಯಾರು ಎನ್ನುವುದು ನಿಶ್ಚಯವಿಲ್ಲ. ಈ ವ್ಯಕ್ತಿ 'ನಾನು ಬಾವಿಯೊಳಕ್ಕೆ ಬಿದ್ದುಬಿಡುತ್ತೇನೆ' ಎನ್ನುತ್ತಿದ್ದಾರೆ. ನಾನು 'ಇದೇನಪ್ಪ ಇದು, ನೀನು ಆಡುವ ಮಾತು? ಇದೇನು ವಿವೇಕವೆ? ಹಿಂದಕ್ಕೆ ಸರಿಯಿರಿ. ಹಿಂದಕ್ಕೆ ಸರಿಯಿರಿ' ಎಂದೆನು. ನನ್ನ ಮಾತನ್ನು ಮೀರಲಾರದೆ ಅವರು ಹಿಂದಕ್ಕೆ ಸರಿದರು. ಹಿಂದುಗಡೆ ಇದ್ದ ಗದ್ದೆಯ ಮೇಲೆ ಕುಳಿತರು. ನಾನು ''ಆದೀಗ ಜಾಣ'' ಎಂದು, ಮನೆಗೆ ಹೋಗಿ ಇಲ್ಲಿ ಕುಳಿತಿರಬೇಡಿ ಎಂದೆನು. ಮುಂದಕ್ಕೆ ನಡೆದೆನು. ನಾಲ್ಕು ಹೆಜ್ಜೆ ಹೋಗಿದ್ದೇನೆ. ಈ ಮನುಷ್ಯ ತಾನು ಕುಳಿತಿದ್ದ ಸ್ಥಳದಿಂದಲೇ ನೀರಿಗೆ ಹಾರಿಬಿಟ್ಟರು. 'ಅಯ್ಯೋ ಕೊನೆಗೂ ಇವನು ತನ್ನ ಹಟವನ್ನು ನಡೆಸಿಬಿಟ್ಟನೇ' ಎಂದು ನಾನು ಹಿಂತಿರುಗಿ ಬಾವಿಯ ಕಡೆಗೆ ಹೆಜ್ಜೆ ಇಟ್ಟೆನು. ನಿದ್ದೆ ತಿಳಿಯಿತು.'' 16335

ಮುಂಜಾನೆ, ಹಾಲು ಕೊಡುವಾಕೆ ಶ್ರೀಮತಿ ಮಾಸ್ತಿಯವರೊಂದಿಗೆ ''ಬಾವಿಗೆ ಬಿದ್ದುಬಿಟ್ಟರಂತೆ'' ಮುಂತಾಗಿ ವಿವರ ಹೇಳುತ್ತಿದ್ದಾರೆ. ಮಾಸ್ತಿಯವರು ಮನೆಯವರನ್ನು ''ಯಾರು ಬಾವಿಗೆ ಬಿದ್ದವರು'' ಎಂದು ಕೇಳಿದರು. ವಾಸುದೇವಮೂರ್ತಿಗಳೆಂದು ಅವರು ಉತ್ತರ ಕೊಟ್ಟರು.

ಕೆಲವೇ ದಿನಗಳ ಹಿಂದೆ ವಾಸುದೇವಮೂರ್ತಿಗಳು ಮಾಸ್ತಿಯವರೊಂದಿಗೆ ಧರ್ಮ, ನೀತಿ, ನಡತೆ, ಕುರಿತು ಮಾತನಾಡಿದ್ದರು.

*

ಎಲ್ಲೋ ಬಿದ್ದಿದ್ದ ಕಲ್ಲು ಯಾವನೋ ಒಬ್ಬ ಶಿಲ್ಪಿಯ ಕಣ್ಣಿಗೆ ಬಿತ್ತು. ಆ ಕಲ್ಲನ್ನು ಆ ಶಿಲ್ಪಿ ಕಣ್ಣರಿಸಿದ. ಆ ಮೂರ್ತಿ ವಿಜಯನಾರಾಯಣನಾದ! ವಿಜಯ ಶಿಲ್ಪಿಗಾಯಿತು. ನಾರಾಯಣ ಚೆನ್ನಕೇಶವನಾದ! ಪರಮಾತ್ಮನೇ ಆದ! ಜನ ಹಾಗೆ ನಂಬಿ ಶತಶತಮಾನಗಳಿಂದ ನಡೆದು ಧನ್ಯರಾಗುತ್ತಿದ್ದಾರೆ!

ಇನ್ನೊಂದು ಕಲ್ಲು ಇನ್ನೊಬ್ಬ ಶಿಲ್ಪಿಯ ಕೈಗೆ ಸಿಕ್ಕಿತು. ಅದನ್ನವನು ಕಣ್ಣರಿಸಿದ; ಮೋಹಿನಿಯಾದಳು! ಜಗನ್ಮೋಹಿನಿಯಾದಳು! ಸೌಂದರ್ಯವೇ ಆದಳು! ಜನರು ಶತ ಶತಮಾನಗಳಿಂದ ಆ ಸೌಂದರ್ಯಾನಂದ ಸವಿದು ಧನ್ಯರಾಗುತ್ತಿದ್ದಾರೆ!

ಮಾಸ್ತಿಯೆಂಬ ಹಳ್ಳಿಯಲ್ಲಿ ಒಂದು ಮಗು ಹುಟ್ಟಿತು. ಶಿಲ್ಪಿಗಳ ಶಿಲ್ಪಿ, ದೇವದೇವ, ಶಿವನೋ-ಕೇಶವನೋ, ಈ ಮಗುವನ್ನು ಕಂಡು ಹರಸಿದ. ಆ ಮಗುವಿನೊಳಗಿನ ದೇವತ್ವವನ್ನು ಹೊರಗೆಡಹಿದ. ದೇವರು ನಡಪಿದ ಆ ಕೂಸು 'ಮಾಸ್ತಿ' ಎಂಬೆರಡಕ್ಷರಗಳಿಗೆ

ಮಂತ್ರಶಕ್ತಿಯನ್ನು ಕೊಟ್ಟಿತು; ತನ್ನ ಬುದ್ಧಿಯಿಂದ, ಭಾವದಿಂದ, ಕೌಶಲದಿಂದ, ಆಸ್ತಿಕ್ಯದಿಂದ, ಸರ್ವಶರಣ್ಯ ಭಾವದಿಂದ!

ಮಾಸ್ತಿಯವರ ಸಾಹಿತ್ಯ ಸತ್ಯ ಸೌಂದರ್ಯ ಸಂಹಿತೆ. ಅವರ ಮಾತು ಸರಳ; ಆ ಮಾತಿನ ಹಿಂದಿನ ಹೃದಯ ಸುಮ ಕೋಮಲ, ವಿಶಾಲ, ಉದಾರ. ಹೆಚ್ಚೇನು ಅವರದು ''ಸರ್ವಂ ಶ್ರೀ ಕೃಷ್ಣಾರ್ಪಣ ಮಸ್ತು'' ಎಂಬ ಸಂಸ್ಕಾರ.

ನನ್ನ ಮಿತ್ರರೊಬ್ಬರು, ಅವರೂ ಸಾಹಿತಿಗಳು,

> ''ಮಾಸ್ತಿಯವರ ಸಾಹಿತ್ಯ ದೊಡ್ಡದ್ದೋ, ಮಾಸ್ತಿಯವರು ದೊಡ್ಡವರೋ?''

ಎಂದು ಕೇಳಿದರು. ನನಗಾಶ್ಚರ್ಯವಾಯಿತು. ನಾನೇನು ಹೇಳಲಿ?

> ''ಮಾಸ್ತಿಯವರ ದೊಡ್ಡವರು, ಆದ ಕಾರಣ ಅವರು ಕೊಟ್ಟ ಸಾಹಿತ್ಯ ದೊಡ್ಡದಾಯಿತು.''

ಎಂದು ಉತ್ತರವಿತ್ತೆ. ಕಾವ್ಯ ಕವಿಯ ವ್ಯಕ್ತ ಸ್ವರೂಪದ ಒಂದು ಮುಖ. ಕವಿಗೆ ಸಹಸ್ರ ಮುಖಗಳು! 'ಮಾಸ್ತಿ' ಕನ್ನಡ ನಾಡಿಗೆ ಮಾತ್ರ ಕೀರ್ತಿ ತರಲಿಲ್ಲ; ವಿಶಾಲ ಭಾರತಕ್ಕೆ ಕೀರ್ತಿಯನ್ನು ತಂದಿತು ಅನ್ನುವುದರಲ್ಲಿ ಏನೂ ತಪ್ಪಿಲ್ಲ. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ಮಾಸ್ತಿ' ವಿಶಾಲ ವಿಶ್ವದ ಅಂಚುಗಳನ್ನೂ ಬೆಳಗುತ್ತದೆ ಎಂದು ಹೇಳಲು ಆಶಿಸುತ್ತೇನೆ.

ಒಂದು ಸಮಾಧಾವೆಂದರೆ, ಮಾಸ್ತಿಯವರೇ ಮಾಸ್ತಿಯ ಕೂಸಿನ ಸುಮಾರು ೮೦ ವರ್ಷಗಳ ಹುಟ್ಟು ಬೆಳವಣಿಗೆಗಳ ಅಥವಾ ಬಾಳುವೆಯ ಕಥೆಯನ್ನು ಹೇಳಿದ್ದಾರೆ.

''ಇಂಥ ಒಂದು ಬಾಳುವೆಯ ಅನುಭವವನ್ನು ಲೋಕ ಅರಿಯುವುದವಶ್ಯಕ'' ಅಂದಿದ್ದಾರೆ. ಮುಂದುವರಿದು ''ಎಷ್ಟು ಸಣ್ಣದಾದರೂ ಈ ಬದುಕು ಲೋಕದ ಬದುಕಿದಲ್ಲಿ ಒಂದು ಅಂಗ'' ಎಂದು ಹೇಳಿ ''ನಾನು ಪರಿಶೀಲಿಸುವ ಜೀವನ ಈ ರೀತಿಯಾಗಿ ಬಹು ಜನರ ಜೀವನದ ಪ್ರತಿನಿಧಿ ಎಂದು ನನ್ನ ನಂಬಿಕೆ'' ಅಂದು ಮುಗಿಸುತ್ತಾರೆ.

''ಮಾಸ್ತಿಯವರ ಬಲವೆಲ್ಲ ಎಲ್ಲಿದೆ?''

ಎಂದೊಬ್ಬ ಮಿತ್ರರು ನನ್ನನ್ನು ಕೇಳಿದ್ದುಂಟು.

> ''ನಮ್ಮ ತಂದೆ ಪೂಜಿಸಿದ ರಾಮಚಂದ್ರ ನನ್ನ ಆಂತರ್ಯದಲ್ಲಿ, ಪಡೆದು ತಂದೆಯಾಗಿ, ಸಾಕಿ ತಾಯಾಗಿ, ಒಳ್ಳೆಯ ಬುದ್ಧಿಯನ್ನು ಕೊಟ್ಟು ಗುರುವಾಗಿ, ಒಳ್ಳೆದಾರಿಯಲ್ಲಿ ನಡೆಸುವ ನಾಯಕನಾಗಿ ನಿಂತಿದ್ದಾರೆ.''

ನಾನು ಈ ವಚನವನ್ನು, ಅವರಿಗೆ ತೋರಿಸಿ, ''ಇಲ್ಲಿದೆ ಅವರ ಬಲವೆಲ್ಲ'' ಎಂದು ಹೇಳಿದೆ. ಮಿತ್ರರು ತಕ್ಷಣ ''what a gem!'' ಅಂದರು. ಆ Gem ಮಾಸ್ತಿಯವರೋ, ಮಾಸ್ತಿಯವರ ವಚನವೊ -ಎಂದು ನಾನು ಕೊಂಚ ಯೋಚನೆ ಮಾಡಿ ''ಎರಡಕ್ಕೂ ಅನ್ವಯಿಸುತ್ತದೆ'' ಎಂಬುದಾಗಿ ನಿಶ್ಚಯಮಾಡಿಕೊಂಡೆ.

ಭಾಗ : ಎರಡು

ಸಾಹಿತ್ಯ ಸಮೀಕ್ಷೆ

'ಮಸುಮತ್ತಿ'

ಚಕ್ರವರ್ತಿ ರಾಜಗೋಪಾಲಾಚಾರ್ಯ

ತ್ರಿವೇಣಿ ★ ಪತ್ರಿಕೆಯ ಸಂಚಿಕೆಗಳನ್ನು ಒಂದು ದಿನ ತಿರುವಿ ಹಾಕುತ್ತಿರುವಾಗ ಒಂದು ಕಥೆ ಕಣ್ಣಿಗೆ ಬಿತ್ತು. ಅದನ್ನು ನಾನು ಮೊದಲಿನಿಂದ ಓದದಿದ್ದರೂ ಆರಂಭಿಸಿದ ಸ್ಥಳದಿಂದ ನನಗೇ ತಿಳಿಯದೆ ಕೊನೆಯವರೆಗೂ ಓದಿದೆನು. ಅದು ಅಷ್ಟು ಸ್ವಾರಸ್ಯವಾಗಿತ್ತು. ಎಷ್ಟು ಸೊಗಸಾದ ಭಾವ ಚಿತ್ರ! ಎಂತಹ ದೇಶಾಭಿಮಾನ! ಆ ದೈವ ಭಕ್ತಿ; ಆ ಕಲಾಜ್ಞಾನ; ಹುಡುಕಿದರೂ ದೋಷ ಸಿಕ್ಕದ ತಿಳಿಯಾದ ಆ ಆಂಗ್ಲ ಭಾಷಾಶೈಲಿ. ಇಷ್ಟು ಸುಂದರವಾದ ರಚನೆಯ ಕಥೆಗಾರರು ಯಾರಿರಬಹುದು ಎಂದು ಮೊದಲನೆಯ ಹಾಳೆಯನ್ನು ತಿರುಗಿಸಿ ನೋಡಿದೆನು. ಕನ್ನಡ ಸಾಹಿತ್ಯಕ್ಕೆ ಹೊಸ ಜೀವನವನ್ನು ಕೊಟ್ಟು ಮುಂದುವರಿಯುತ್ತಿರುವ ಸಾಹಿತಿಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ನಿಲ್ಲುವ ಆಚಾರ್ಯರೂ, ನನ್ನ ಮಿತ್ರರೂ ಆದ ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್ಯರು ಬರೆದುದೆಂದು ನೋಡಿ ಬಹಳ ಸಂತೋಷವಾಯಿತು. ಈ ಮಹನೀಯರ ಹೆಸರಿನ ಕೆಳಗೆ ಆಂಗ್ಲ ಭಾಷೆಗೆ ಅನುವಾದ ಮಾಡಿದವರು ಶಾಲೆಯಲ್ಲಿ ನನ್ನ ಸಹಪಾಠಿಯಾಗಿದ್ದು, ಅನಂತರ ನಮ್ಮ ಜೀವನದಲ್ಲಿ ಬೇರೆ ಬೇರೆ ದಾರಿಗಳನ್ನು ಹಿಡಿದು ದೂರವಾಗಿದ್ದರೂ ಬಾಲ್ಯದ ಸ್ನೇಹವು ಕುಂದದೆ ಇಂದಿಗೂ ಅದೇ ಮೈತ್ರಿಯಿಂದಿರುವ ನವರತ್ನ ರಾಮರಾಯರೆಂದು ನೋಡಿ ನನ್ನ ಸಂತೋಷಕ್ಕೆ ಪಾರವೇ ಇಲ್ಲದ ಹಾಗಾಯಿತು.

ಸೌಂದರ್ಯವೂ, ವಿಷಯವೂ ಕೂಡಿ ಉತ್ತಮ ರಚನೆಯಾದ ಆ ಕಥೆಯನ್ನು ತಮಿಳರೂ ಅನುಭವಿಸಬೇಕೆಂದು ಅದನ್ನು ತಮಿಳಿಗೆ ಅನುವಾದಿಸಿದೆನು. ಕಥೆಯ ಹೆಸರು ''ಮಸುಮತ್ತಿ'' ಎನ್ನುವುದನ್ನು ''ವೇಣುಗಾನಂ'' ಎಂದು ಮಾರ್ಪಡಿಸಿದೆನು.

ಕಲೆ ನಾಡಿನ ಜೀವ; ಈ ತತ್ವವನ್ನು ವಸ್ತುವನ್ನಾಗಿ ಮಾಡಿಕೊಂಡು ಬೇರೆ ಹಲವು ಉತ್ತಮ ತತ್ವಗಳನ್ನು ಹೊಂದಿಸಿ ಮಿಗಿಲಾದ ಕಲ್ಪನಾಶಕ್ತಿಯಿಂದ ಈ ಕಥೆಯು ರಚಿಸಲ್ಪಟ್ಟಿದೆ. ಈ ಮಹನೀಯರು ಬರೆದುದನ್ನು ಸಂಕ್ಷಿಪ್ತಗೊಳಿಸಲು ಮನಸ್ಸು ಒಗ್ಗಲಿಲ್ಲ. ಕಥೆ ಸ್ವಲ್ಪ ಉದ್ದವಾಯಿತು. ಆದರೂ ಅದರ ಸ್ವಾರಸ್ಯವನ್ನು ಸವಿಯ ಬಲ್ಲ ಓದುಗರಿಗೆ ಸ್ವಲ್ಪವೂ ಬೇಸರವೇ ಆಗದೆಂದು ನನ್ನ ಭಾವನೆ.

★ಶ್ರೀ ನವರತ್ನ ರಾಮರಾಯರು ''ಮಸುಮತ್ತಿ'' ಕಥೆಯನ್ನು ಇಂಗ್ಲಿಷಿಗೆ ಪರಿವರ್ತಿಸಿ ಪರಿವರ್ತನವನ್ನು ತ್ರಿವೇಣಿ ಪತ್ರಿಕೆಗೆ ಕೊಟ್ಟರು. ಆ ಪತ್ರಿಕೆಯಲ್ಲಿ ಪ್ರಕಟವಾದ ಆ ಕಥೆಯನ್ನು ಅಕಸ್ಮಾತ್ ನೋಡಿ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ಬಹು ಸಂತೋಷಪಟ್ಟು ಅದನ್ನು ತಮಿಳಿಗೆ ಭಾಷಾಂತರ ಮಾಡಿದರು. ಭಾಷಾಂತರವನ್ನು ಒಂದು ತಮಿಳು ಮಾಸಪತ್ರಿಕೆಯಲ್ಲಿ ಪ್ರಕಟಿಸುವಲ್ಲಿ ಅದಕ್ಕೆ ಒಂದು ಪ್ರಸ್ತಾವನೆಯನ್ನು ಕೊಟ್ಟರು. ಆ ಪ್ರಸ್ತಾವನೆಯ ಕನ್ನಡ ರೂಪ ಇದು.

ಶ್ರೀನಿವಾಸರ ಕಥೆಗಳು

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಕನ್ನಡ ಸಾಹಿತ್ಯದಲ್ಲಿ ಮೊದಲು ಪ್ರಸಿದ್ಧಿಗೆ ಬಂದ ಸಣ್ಣ ಕತೆಗಳು ಶ್ರೀಮಾನ್ ಶ್ರೀನಿವಾಸರು ಬರೆದುವು. ಶ್ರೀನಿವಾಸರು ಕನ್ನಡ ಕತೆಗಳಿಗೆ ಮೂಲಪುರುಷರೋ ಅಲ್ಲವೋ ಎಂಬ ವಾದಕ್ಕೆ ನಾನು ಈಗ ಹೊರಟಿಲ್ಲ. ಒಬ್ಬ ಬರಹಗಾರನು ಒಂದು ಬಗೆಯ ಸಾಹಿತ್ಯಕ್ಕೆ ಮೂಲಪುರುಷನಾಗಲಿ ಅಥವಾ ಆಗದೆ ಇರಲಿ ಅದು ನಮಗೆ ಮುಖ್ಯವಲ್ಲ. ಆದರೆ ಯಾರು ಆ ಸಾಹಿತ್ಯ ಭಾಗವನ್ನು ತಾವು ಅದರ ಮೂಲಪುರುಷರಲ್ಲದಿದ್ದರೂ ಜನರಿಗೆ ಮಾನ್ಯವಾಗುವಂತೆ, ಭಾಷಾದೇವಿಗೆ ಭೂಷಣವಾಗುವಂತೆ ಜಗತ್ತಿನ ಇತರ ಸಾಹಿತ್ಯಗಳ ಶ್ರೇಷ್ಠಕೃತಿಗಳೊಂದಿಗೆ ಸರಿದೂಗುವಂತೆ ಸೃಷ್ಟಿಸುತ್ತಾರೊ ಅವರೇ ಆ ಸಾಹಿತ್ಯ ಭಾಗಕ್ಕೆ ಮೂಲಪುರುಷರು. ಕಾಳಿದಾಸ ಕವಿಯು ಸಂಸ್ಕೃತ ಸಾಹಿತ್ಯರತ್ನವಾಗಿರುವುದಕ್ಕೆ ಕಾರಣ, ಅವನಿಗಿಂತ ಹಿಂದೆ ಸಂಸ್ಕೃತ ಬರೆಯಬಲ್ಲ ಬೇರೆ ಕವಿಗಳಿರಲಿಲ್ಲವೆಂದಲ್ಲ. ಸಂಸ್ಕೃತ ಸಾಹಿತ್ಯವು ಜಗತ್ಪೂಜ್ಯವಾದುದು ಅವನ ಕೃತಿಯಿಂದ, ಸೃಷ್ಟಿಯಿಂದ ಎಂಬ ಕಾರಣದಿಂದ. ಯಾವ ಕವಿಯು ಒಂದು ಬಗೆಯ ಸಾಹಿತ್ಯಕ್ಕೆ (ಸಾಹಿತ್ಯದ ಒಂದು ಭಾಗಕ್ಕೆ) ಶಕ್ತಿಯನ್ನೂ ತೇಜಸ್ಸನ್ನೂ ನವಿರನ್ನೂ ಆರ್ದ್ರತೆಯನ್ನೂ ವೈಶಾಲ್ಯಭಾವವನ್ನೂ ಉಂಟುಮಾಡಿ ಆ ಸಾಹಿತ್ಯಕ್ಕೆ ಜೀವಕಳೆಯನ್ನು ತುಂಬುತ್ತಾನೋ ಅವನೇ ಅದಕ್ಕೆ ಜನಕ. ಈ ಕಾರಣಗಳಿಂದ ಸಣ್ಣ ಕಥೆಗಳ ಬೆಳವಣಿಗೆಯು ಕನ್ನಡ ಸಾಹಿತ್ಯದಲ್ಲಿ ಶ್ರೀಮಾನ್ ಶ್ರೀನಿವಾಸರು ಪ್ರಕಟಿಸಿದ ಕೆಲವು ಸಣ್ಣಕತೆಗಳು ಎಂಬ ಕಥಾ ಸಂಗ್ರಹದಿಂದ ಆರಂಭವಾಯಿತೆಂದು ಹೇಳಬಹುದು.

ಉತ್ತಮವಾದ ಸಣ್ಣ ಕತೆಗಾರರನ್ನು ಸ್ವಲ್ಪ ಕೆದಕಿ ನೋಡಿದರೆ ಅವನು ಕವಿ ಎಂಬುದು ಗೊತ್ತಾಗುತ್ತದೆ. ನೂರು ಕಾದಂಬರಿಗಳನ್ನು ಬರೆದವನು ಕವಿಯಾಗದೆ ಇರಬಹುದು. ಆದರೆ ಲೇಖಕನು ಕವಿಯಾದ ಹೊರತು ಕತೆಗಾರನಾಗಲಾರನು. ಶ್ರೀಮಾನ್ ಶ್ರೀನಿವಾಸರು ಇಲ್ಲಿಯವರೆಗೆ ಅನೇಕ ಕಥೆಗಳನ್ನು ಪ್ರಕಟಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಹೊಸಬಗೆಯ ಬೆಳಕನ್ನೂ ಶಕ್ತಿಯನ್ನೂ ತೇಜಸ್ಸನ್ನೂ ಉಂಟುಮಾಡಿರುವ ಅವರ ಕತೆಗಳನ್ನು ಕುರಿತು ವಿಸ್ತಾರವಾಗಿ ವಿಮರ್ಶಿಸಲು ಇಲ್ಲಿ ನನಗೆ ಅವಕಾಶವಿಲ್ಲ. ಶ್ರೀನಿವಾಸರ ಕತೆಗಳಲ್ಲಿ ಕಾಣುವ ಜೀವನ ಅನುಭವ, ವೈವಿಧ್ಯ, ರಸಿಕತೆ, ಹಾಸ್ಯ, ಶಾಂತಿ ಯಾವ ಕಥೆಯನ್ನು ಓದಿದರೂ ಒಟ್ಟಿನಲ್ಲಿ ಮನಸ್ಸಿನ ಮೇಲೆ ಆಗುವ ಒಂದು ಬಗೆಯ ಉಚ್ಚ ಆದರ್ಶದ ಮತ್ತು ಮುಂದಲ ಶುಭದ ಸೂಚನೆ ಇವುಗಳನ್ನೆಲ್ಲಾ ಕುರಿತು ವಿವೇಚಿಸುವ ಹೊತ್ತನ್ನು ಇಲ್ಲಿ ನನಗೆ ಕೊಟ್ಟಿಲ್ಲ. ಶ್ರೀನಿವಾಸರ ಕತೆಗಳಲ್ಲಿ ದಪ್ಪದಪ್ಪವಾಗಿ ಕಾಣುವ ತಿರುಳೇನು? ಅವರು ಕಥೆಗಳನ್ನು ಹೇಳುವ ಬಗೆ ಯಾವುದು? ಅವರ ಮಾತು ಯಾವ ತರಹ, ಆ ಮಾತುಗಳ ಹಿಂದಲ ಕವಿಯ ಸಂಸ್ಕಾರವೇನು? ಅವರ ಕತೆಗಳು ಕನ್ನಡನಾಡಿಗೆ ಮಾದರಿಯಾಗಿ, ಕನ್ನಡ

ಬರಹಗಾರರಿಗೆ ಉಸಿರಾಗಿ, ಇಂಗ್ಲಿಷು, ಮರಾಠಿ ಮುಂತಾದ ಭಾಷೆಗಳಿಗೆ ತರ್ಜುಮೆಯಾಗಿ ಆ ವಾಚಕರ ಮೆಚ್ಚುಗೆಗೂ ಪಾತ್ರವಾಗಲು ಕಾರಣಗಳಾವುವು ಎಂಬುದನ್ನು ಬಹು ಸಂಕ್ಷೇಪವಾಗಿ ಸೂಚಿಸುತ್ತೇನೆ.

ಶ್ರೀನಿವಾಸರು ಬರೆದಿರುವ ಕತೆಗಳಲ್ಲಿ ಬಹು ಭಾಗದವು ನಮ್ಮ ಜನರಿಗೆ, ನಮ್ಮ ಸಂಸಾರಗಳಿಗೆ ಸಂಬಂಧಪಟ್ಟವು. ಅವರು ಮುಖ್ಯವಾಗಿ ಪ್ರತಿಪಾದಿಸುವ ರಸ ಶೃಂಗಾರ; ಹೇಳುವ ಕ್ರಮ ಮೊದಲಿನಿಂದ ಕೊನೆಯವರೆಗೆ ನೇರವಾಗಿ; ಮಧುರವಾಗಿ ನಯವಾದ ಮಾತು ಮತ್ತು ಸಣ್ಣ ಸಣ್ಣ ವಾಕ್ಯಗಳು; ವಾಕ್ಯಗಳ ಜೊತೆಯಲ್ಲಿ ಸೇರಿಕೊಂಡು ಇರುವ ಸಾಮ್ಯಗಳು; ಕತೆಗಳನ್ನೆಲ್ಲಾ ಮೇಲಕ್ಕೆ ಕಾಣದಿದ್ದರೂ ಹೂವಿನ ಪರಿಮಳದಂತೆ ಹೊಂದಿಕೊಂಡು ಆವರಿಸಿರುವ ಆದರ್ಶ; ಓದಿದ ಮೇಲೆ ಉಂಟಾಗುವ ಮುಂದಲ ಶುಭ; ಮುಂದಲ ಒಳ್ಳೆಯದರಲ್ಲಿ ನಂಬಿಕೆ; ಸತ್ಯ ಸೌಂದರ್ಯ ಶಾಂತಿಗಳಿಗೇ ಎಂದೆಂದಿಗೂ ಜಯವೆಂಬ ಸ್ವಾತಿಕ ಭಾವನೆ, ಕಥಾವಸ್ತುವಿಗೂ, ಶೈಲಿಗೂ, ಪಾತ್ರ ರಚನೆಗೂ, ಹೇಳುವ ಕ್ರಮಕ್ಕೂ ಅನ್ವಯಿಸುವ ಅಲೌಕಿಕವಾದ ಆನಂದ. ಇವು ಶ್ರೀನಿವಾಸರ ಸಣ್ಣ ಕತೆಗಳ ವೈಶಿಷ್ಯಗಳು.

ಶ್ರೀನಿವಾಸರು ಒಂದು ಸಲ "Woman is man and woman put together' ಎಂಬುದಾಗಿ ಹೇಳಿದರು. ನಮ್ಮ ಮೇಷ್ಟರು ಎಂಬ ಕತೆಯಲ್ಲಿ ಪ್ರಾಯಶಃ ಮೇಷ್ಟರು ಇಲ್ಲದಿದ್ದರೂ ಕತೆ ನಡೆಯುತ್ತೆ. ಆದರೆ ಇನಸ್ಪೆಕ್ಟರ ಕೈಯಿಂದ ಬಲಿತ ಹುಡುಗಿ ಎನಿಸಿಕೊಂಡ ಮೇಷ್ಟರ ಹೆಂಡತಿ ಇಲ್ಲದಿದ್ದರೆ ಕತೆ ನಡೆಯುವುದಿಲ್ಲ. ಮೇಷ್ಟರ ಹೆಂಡತಿಯ ವಿಷಯ ತಿಳಿದರೆ ಮೇಷ್ಟರ ವಿಷಯ ತಿಳಿದಂತೆ ಆಗುತ್ತದೆ. ಮೇಷ್ಟರ ಹೆಂಡತಿ ಇಂಥವಳೆಂಬುದರಿಂದ ಅವಳ ಗಂಡ ಎಂಥವನೆಂದು ಧಾರಾಳವಾಗಿ ಊಹಿಸಬಹುದು. ಆದರೆ ಮೇಷ್ಟರ ವಿಷಯದಿಂದ ಮೇಷ್ಟರ ಹೆಂಡತಿಯನ್ನು ಅರಿಯುವುದು ಕಷ್ಟ. ಸ್ತ್ರೀಯ ಪ್ರಾಧಾನ್ಯವನ್ನು ಹೆಚ್ಚಿಸಿ ಆ ಮೂಲಕ ಪುರುಷನ ಪರಿಚಯ ಮಾಡಿಸುವುದು ಶ್ರೀನಿವಾಸರ ಮಾರ್ಗ. ಇದನ್ನು ಅವರ ಇತರ ಕತೆಗಳಲ್ಲೂ ನೋಡಬಹುದು. ಸ್ತ್ರೀಯು ತುಳಿಯಲ್ಪಟ್ಟವಳೆಂಬ ಕಾರಣದಿಂದಲೋ ಏನೋ ಅವರ ಆದರವು ಯಾವಾಗಲೂ ಅವರ ಕಡೆಗೇ ಇದೆ. ಅವಿವೇಕಿಯಾದ ಧನಿಕರ ಮಗನಾದ ತಾನೆ ಸುಂದರನೆಂದುಕೊಂಡಿದ್ದ ರಂಗಸಾಮಿಗೆ ತನ್ನ ಹೆಂಡತಿ ಸೀತೆ ತನಗೆ ಅರ್ಹಳಾಗಿ ಕಾಣಲಿಲ್ಲ. ಸ್ವಾಭಾವಿಕವಾಗಿ ನರಸಿಂಹಮೂರ್ತಿಯ ಹೆಂಡತಿ ಇಂದಿರಾದೇವಿ ತನ್ನ ಹೆಂಡತಿಯೊಂದಿಗೆ ತನ್ನನ್ನು ಕುರಿತು ಆಡಿದ ಮಾತುಗಳಿಗ ಕಾಮೀಸ್ವತಾಂ ಪಶ್ಯತಿ ಎಂಬಂತೆ ತಪ್ಪು ಅರ್ಥ ಮಾಡಿಕೊಂಡನು. ಯಾವ ಮನುಷ್ಯನಿಗೂ, ಮತ್ತೊಬ್ಬನ ಸುಂದರಿಯಾದ ಹೆಂಡತಿಯನ್ನು ಕಂಡರೆ ಅವನು ಅವಳನ್ನು ಪ್ರೀತಿಸುವುದಿಲ್ಲ, ಅಯ್ಯೋ ನಾನು ಅವಳ ಗಂಡನಾಗಿದ್ದರೆ, ಎಂಬ ಭಾವ ಮೊದಲು ಬರುವುದು ಸ್ವಾಭಾವಿಕ ಅಥವಾ ಅದೊಂದು ಮಂಕೆಂದು ಬೇಕಾದರೂ ಹೇಳಬಹುದು. ಆದರೆ ಆ ಮಂಕು ಹರಿದಾಗ ಮಾತ್ರ ಅವನಿಗೆ ಚೆನ್ನಾಗಿ ಬುದ್ಧಿ ಬರುವುದು. ಈ ಕಥೆಯಲ್ಲಿ ಶ್ರೀನಿವಾಸರು, ಮನುಷ್ಯ, ಸಣ್ಣ ವಿಷಯಕ್ಕೆ ಅಪಾರ್ಥವನ್ನು ಕಲ್ಪಿಸಿಕೊಂಡು ಹೇಗೆ ಗುಂಡಿ ಬೀಳುತ್ತಾನೆಂಬುದನ್ನು ಚೆನ್ನಾಗಿ ತೋರಿಸಿದ್ದಾರೆ. ಕೊನೆಯಲ್ಲಿ ಗಂಡನ ಸ್ನೇಹಿತನೆಂದು ಮನೆಗೆ ಬಂದವನಿಗಾಗಿ 'ಕಾಫಿ ಮಾಡಲೆ' ಎಂದು ಹೆಂಡತಿ ಕೇಳಿದರೆ ಅವಳಿಗೆ ತನ್ನಲ್ಲಿ ಪ್ರೇಮವಿದೆ ಎಂದು ರಂಗಸ್ವಾಮಿಯು ಭಾವಿಸುವುದೂ, ಇಂದಿರಾ ದೇವಿಯನ್ನು ಹಿಡಿದುಕೊಳ್ಳುವುದಕ್ಕೆ ಹೋಗಿ ತನ್ನಲ್ಲಿ ತನಗೇ ತಿರಸ್ಕಾರವುಂಟಾಗಿ 'ಸೀತೆಗೆ ಇದುವರೆಗೆ ತಕ್ಕ ಗಂಡನಾಗಿದ್ದೆ. ಇಂದು ಅಯೋಗ್ಯನಾದೆ,

ಅವಳಂತಹ ಹುಡುಗಿಗೆ ನನ್ನಂತಹ ಪಾಪಿಯೇ ಯಜಮಾನನು, ಎಂದು ಅಳುವುದೂ ಹೃದಯಂಗಮವಾಗಿ ವರ್ಣಿತವಾಗಿವೆ. ಈ ಕಥಾ ನಿರೂಪಣದಲ್ಲಿ ಶ್ರೀನಿವಾಸರು ಮನುಷ್ಯ ಸ್ವಭಾವದ ಸೂಕ್ಷ್ಮ ವ್ಯಾಪಾರವನ್ನು ಚೆನ್ನಾಗಿ ವಿವರಿಸಿ ತನ್ನ ಹೆಂಡತಿಯು ತನಗೆ ಅರ್ಹಳಲ್ಲವೆಂದಿದ್ದವನು ಹೇಗೆ ತಾನು ಅವಳಿಗೆ ಅಯೋಗ್ಯನೆಂಬ ಭಾವಕ್ಕೆ ಸಂದನೆಂಬುದನ್ನು ತೋರಿಸಿದ್ದಾರೆ. ಸ್ತ್ರೀಯರಲ್ಲಿ ತಮಗಿರುವ ಈ ಸ್ವಾಭಾವಿಕವಾದ ಗೌರವದಿಂದ ಶ್ರೀನಿವಾಸರ ಶೃಂಗಾರ ಯಾವಾಗಲೂ ಹಿತವಾಗಿ ಮಿತವಾಗಿ ಗಂಭೀರವಾಗಿದೆ. ಶೃಂಗಾರವು ಹೆಚ್ಚಾದರೆ, ಅದು ಓದಿನ ನಂತರ ಟೊಳ್ಳಾಗುವುದೆಂಬುದು ಶ್ರೀನಿವಾಸರಿಗೆ ಗೊತ್ತು. ಶ್ರೀನಿವಾಸರು ಶೃಂಗಾರ ವರ್ಣನೆಯನ್ನು 'ಇನ್ನಷ್ಟು ಇವರು ವರ್ಣಿಸಬಾರದಾಗಿತ್ತೆ?' ಎಂಬ ಮಟ್ಟದಲ್ಲಿ ಇಟ್ಟಿರುತ್ತಾರೆ. ಶೃಂಗಾರದ ಪ್ರಾಮುಖ್ಯತೆ ಎಂಬುದು ಅವರಿಗೆ ಚೆನ್ನಾಗಿ ಗೊತ್ತು. ಇದನ್ನು ಇಂದಿರಾದೇವಿಯ ವರ್ಣನೆ, ಹಳೆಯ ಕತೆಯ ಸುಂದರಿಯ ವರ್ಣನೆ ಇವುಗಳಲ್ಲಿ ಕಾಣಬಹುದು. ''ಸ್ತ್ರೀ ಜನ್ಮ ಹೀನವೆಂದು ಹೇಳುವೆವಾದರೂ ಸ್ತ್ರೀಯ ಆತ್ಮವು ಪುರುಷನ ಆತ್ಮಕ್ಕಿಂತ ಹೆಚ್ಚು ಸುಸಂಸ್ಕೃತವಾದುದೆಂಬುದರಲ್ಲಿ ಸಂದೇಹವಿಲ್ಲ. ಉತ್ತಮವಾದುದನ್ನು ಕಂಡು ಉತ್ತಮವಲ್ಲದುದು ಅದರ ಕಡೆ ತಿರುಗುವುದು ಸ್ವಾಭಾವಿಕ, ಸೆಳೆಯುವುದೆಂದರೆ ಇದೇ ಅರ್ಥ. ಅಯಸ್ಕಾಂತ ಶಿಲೆಯನ್ನು ಕಂಡ ಕಬ್ಬಿಣವು ಅದರ ಕಡೆ ತಿರುಗುವುದು. ಸ್ತ್ರೀಯು ಅಯಸ್ಕಾಂತದಂತೆ. ಪುರುಷನು ಕಬ್ಬಿಣದಂತೆ, ಕಬ್ಬಿಣವು ದೋಷವುಳ್ಳದುದಾದರೂ ದೋಷವಿಲ್ಲದೆ ಬಹು ಶುದ್ಧವಾಗಿದ್ದರೂ, ಅಯಸ್ಕಾಂತದ ಕಡೆ ತಿರುಗುವುದು. ಪುರುಷನು ಎಷ್ಟು ಶ್ರೇಷ್ಠನಾದರೂ ಸ್ತ್ರೀಯ ಕಡೆ ತಿರುಗುವನು.''

ಬೀದಿಯಲ್ಲಿ ಹೋಗುವ ನಾರಿ, ಎಂಬ ಕತೆಯಲ್ಲಿ ಶ್ರೀನಿವಾಸರು ಒಂದು ಸತ್ಯವನ್ನು ಪ್ರತಿಪಾದಿಸಿದ್ದಾರೆ. ಜನ ದೇಹದ ದೌರ್ಬಲ್ಯದಿಂದ ವ್ಯಭಿಚಾರ ಮಾಡುತ್ತಾರೆ. ಅದರ ಫಲವಾಗಿ ಹುಟ್ಟಿದ ಮಕ್ಕಳನ್ನೂ ಸಹ ತಮ್ಮ ಮಕ್ಕಳೆಂದುಕೊಳ್ಳುವುದಿಲ್ಲ. ತಮ್ಮ ಪಾಪದ ಫಲವನ್ನು ಮತ್ತೆ ಪಾಪ ಮಾಡಲು ಬಿಡುತ್ತಾರೆ. 'ಹೋಗುವುದು ವೇಶ್ಯೆಯ ಮನೆಗೆ. ಮನೆಯಲ್ಲಿ ನನ್ನ ಹೆಂಡತಿ ಒಳ್ಳೆಯವಳು ನನ್ನ ಹೆಣ್ಣುಮಕ್ಕಳು ಸತ್ಯವಂತರು ಎಂಬ ಜಂಭ. ಬಾಯಲ್ಲಿ ಜಂಭ, ಮನಸ್ಸಿನಲ್ಲೂ ಜಂಭ. ಬಾಯಜಂಭ ಹಾಗಿರಲಿ, ನಾವು ಬದುಕುವುದೇ ಬಾಯಜಂಭದಿಂದ. ಆ ಮನಸ್ಸಿನ ಜಂಭವೊ? ಅದೂ ಕೂಡ ನಮ್ಮ ಬದುಕಿಗೆ ಬೇಕಾಗಿದೆಯೇ, ಇಲ್ಲ. ಇದು ಮನುಷ್ಯನ ಅಜ್ಞಾನವೇ ಹೊರತು ಬೇರೆಯಲ್ಲ. ಮನೆಯ ಹೊರಗಡೆ ಇರುವ ಮಗಳು ವೇಶ್ಯೆಯಾದರೂ ಮನೆಯಲ್ಲಿರುವ ಮಗಳು ಸತ್ಯವಂತಳು ಎಂಬ ಈ ಜಂಭವೂ ಹುಚ್ಚು ಜಂಭ. ಆದರೆ ಈ ಯೋಚನೆ ವೇಶ್ಯೆಯ ವಾಟೆಗೆ ಹೋಗುವವರಿಗೆ ತಿಳಿಯುವುದಿಲ್ಲವಲ್ಲಾ ಎಂಬುದೇ ಆ ಕತೆಯಲ್ಲಿ ಪ್ರತಿಪಾದಿಸಿರುವ ಸತ್ಯ. ಇಲ್ಲಿಯೂ ಸ್ತ್ರೀಯರ ವಿಷಯದಲ್ಲಿ ಶ್ರೀನಿವಾಸರ ಗೌರವ ಚೆನ್ನಾಗಿ ಕಾಣುತ್ತದೆ. 'ವೇಶ್ಯೆಯು ಹತ್ತಿರ ಬಂದುದನ್ನು ಕಂಡು ಶ್ರೀನಿವಾಸಯ್ಯನು ದೂರಸರಿದನು. ಸ್ತ್ರೀಯು ಅದನ್ನು ನೋಡಿ ಸ್ವಲ್ಪ ಅಸಮಾಧಾನದಲ್ಲಿ ಎದ್ದು 'ನಾನು ಪತಿತೆ, ತಾವು ನನ್ನನ್ನು ಮುಟ್ಟಲೂಬಾರದು' ಎಂದಳು. ಶ್ರೀನಿವಾಸಯ್ಯನು ಹತ್ತಿರ ಬಂದು ಅವಳನ್ನು ಕರೆದುಕೊಂಡು ಹೋಗಿ ಒಂದು ಕುರ್ಚಿಯ ಮೇಲೆ ಕುಳ್ಳಿರಿಸಿ ಅವಳು ಪತಿತೆಯಾದುದರಿಂದ ತಾನು ಅವಳನ್ನು ಮುಟ್ಟ ಕೂಡದೆಂಬ ಭಾವ ತನ್ನಲ್ಲಿ ಇಲ್ಲವೆಂದು ತೋರಿಸುವಂತೆ ಅವಳ ಮುಖಕ್ಕೆ ಒಂದು ಮುತ್ತನ್ನು ಕೊಟ್ಟನು. ಸ್ತ್ರೀಯ ಮುಖವು ಸಂತೋಷದಿಂದ ಕೂಡಿತು...

ನೀನು ನನ್ನ ತಂಗಿ, ನಿನ್ನಲ್ಲಿ ಮರ್ಯಾದೆಯೇ? ಎಂದು ಹೊರಟನು.' ಇಲ್ಲಿ ಕತೆಗಾರರ ಕೌಶಲದಿಂದ ನಮಗೆ ಶ್ರೀನಿವಾಸಯ್ಯನಲ್ಲಾಗಲಿ ವೇಶ್ಯೆಯಲ್ಲಾಗಲಿ ತಿರಸ್ಕಾರವುಂಟಾಗುವುದಿಲ್ಲ. ಒಂದು ಹೊಸ ತತ್ವ ಗೋಚರವಾಗುತ್ತದೆ.

ನಮ್ಮ ಜನರ ಸ್ವಭಾವವನ್ನು ವರ್ಣಿಸುವುದರಲ್ಲಿ ಶ್ರೀನಿವಾಸರ ಪ್ರತಿಭೆ ಅಸಾಧಾರಣವಾದುದು. ನಾಯಿಂದ ವೆಂಕಟಶಾಮಿಯು ದೊಂಬರ ಹುಡುಗಿಯ ಸೆರಗನ್ನು ಹಿಡಿದುಕೊಂಡು ತಿರುಗತೊಡಗಿದಾಗ ವೆಂಕಟಶಾಮಿ ತಾಯಿಗೆ ಗಾಬರಿಯಾಯಿತು. ಆದರೆ ವೆಂಕಟಶಾಮಿ ತಂದೆ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಅವನು, ಅಲೆ ಅಲೆ ಯಜಮಾನಗಿತ್ತಿ ಎತ್ತ ಮಾತನಾಡ್ತೀಯ? ಬಿಡತ್ತ. ನೀನೇನು ಮಗನ್ನ ದೊಂಬರಿಗೆ ಹೆತ್ಯಾ, ಅವನು ದೊಂಬರ ಹುಡುಗೀನ ಮದುವೆಯಾಗೋಕೆ. ಆ ತೈನೆ ಎಲ್ಲೋ ಒಸಿ ನೆಕ್ಕಾಳೆ ಇವ ಹಂಗೇ ನಿಂತಾನೆ, ಇದ್ಯಾಕ ಇಷ್ಟು ಕೂಗಾಟ. ಎರಡು ದಿನ ನೋಡುತಾನೆ, ಬರುತಾನೆ' ಎಂದನು. ಆದರೆ ಪ್ರೇಮ ಆ ಮುದುಕ ಯೋಚಿಸಿದಷ್ಟು ಸಡಿಲವಾಗಿರಲಿಲ್ಲ. ಪ್ರೇಮಕ್ಕೆ ವೆಂಕಟಶಾಮಿ ನಾಯಿಂದ, ಹುಡುಗಿ ದೊಂಬರವಳು ಎಂಬ ಜ್ಞಾನವಿರಲಿಲ್ಲ. ಇಲ್ಲಿ ಶ್ರೀನಿವಾಸರು ಪ್ರೇಮದ ಆಳವನ್ನು ಚೆನ್ನಾಗಿ ವರ್ಣಿಸಿದ್ದಾರೆ. ಆ ಪ್ರಣಯದ ದುರಂತ ಹೀಗೆ ಆಯಿತು. 'ಜ್ವರದಲ್ಲಿ ಅವನ ಕನವರಿಕೆಯೆಲ್ಲಾ ಆ ದೊಂಬರ ಹುಡುಗಿಯ ಜತೆಗೇ ಓಡಾಡುತ್ತಿದ್ದಂತೆ ಇತ್ತು. ಮಧ್ಯ ಎಚ್ಚರವಾದಾಗ ಅವಳನ್ನು ಕರೆಯಿಸಿ ಎಂದು ಹೇಳಿದನು. ಕೈ ಹಿಡಿದ ಹೆಂಡತಿಯಾದರೆ ಇಂಥ ಸಂದರ್ಭದಲ್ಲಿ ಕರೆಕಳುಹಿಸುವುದೂ ಅಯ್ಯೋ ಪಾಪ ಎನ್ನುವುದೂ ನ್ಯಾಯವೆಂದು ಕಾಣುತ್ತದೆ. ಹುಡುಗನನ್ನು ತಪ್ಪುದಾರಿಗೆ ಎಳೆದು ಅವನೊಡನೆ ಪೋಲಿ ತಿರುಗಿದ ದೊಂಬರ ಹುಡುಗಿಯನ್ನು ಜ್ವರದ ಹಾಸಿಗೆ ಬಳಿಗೆ ಕರೆತಂದು ಕುಳ್ಳಿರಿಸುತ್ತಾರೆಯೆ? ಕೊನೆಗೂ ವೆಂಕಟಶಾಮಿ ಅವಳನ್ನು ನೋಡಲಿಲ್ಲ. ತೀರಿಹೋಗುವ ಮೊದಲು ಅವನಿಗೆ ಮನಸ್ಸಿಗೆ ತೋರಿತೆಂದು ಕಾಣುತ್ತದೆ. ಅವನು ಅಪ್ಪನಿಗೆ, ಅಪ್ಪ ನಾನು ಒಂದು ಮಾತು ಕೇಳುತ್ತೇನೆ ಮಾಡಿಕೊಡುತೀಯ ಎಂದ. ತಂದೆ ಯಾಕೋ ಏನಾಗ್ತದೆ ಎಂದ. ಮಗ 'ಏನೂ ಆಗೋಲ್ಲ ನನ್ನ ಆಟ ಮುಗಿಯಿತು. ನನಗೆ ನಮ್ಮ ಹೊಲ್ದ ಪಕ್ಕದ ಹುಲ್ಲು ಇದೆಯೆಲ್ಲಾ ಅಲ್ಲಿ ಜಾಗ ಮಾಡಬೇಕು' ಎಂದ. ಹತ್ತಿರ ಇದ್ದವರು ಯಾರೋ 'ಏನು ಮಾತು? ಬಹಳ ಚೆನ್ನಾಗಿದೆಯೆಂತ ಆಡ್ತಾ ಇದ್ದೀ ಏನೋ?' ಎಂತ ಕೇಳಿದರು. ವೆಂಕಟಶಾಮಿ 'ನಿನ್ನ ಚೆನ್ನಗಿನ್ನ ಯಾರಿಗೆ ಬೇಕು. ಹೇಳ್ದೀರ ಇದ್ದರೆ ಎಲ್ಲಾದರೂ ಹೂತು ಬಿಡ್ತಾರೆ' ಎಂದ. ಅವರು ಹೋಗೋನಿಗೆ ಎಲ್ಲಿ ಹೂತರೆ ಏನು ಎಂದರು. ವೆಂಕಟಶಾಮಿ 'ನಾನು ಶಾನೆ ಮಾತ್ನಾಡಲಾರೆ. ಮಾತು ಕೊಟ್ಟೀಯಪ್ಪಾ' ಎಂದು ಕೇಳಿದ. ತಂದೆ ಆಗಲಿ ಅಣ್ಣ ಎಂದ. ವೆಂಕಟಶಾಮಿ ಒಂದು ಕ್ಷಣ ಬಿಟ್ಟು 'ಮೂರು ರಾತ್ರಿ ಅಲ್ಲಿ ಮಲಗಿದ್ವಿ' ಅಂದ. ಸುಮಾರು ಅದೇ ಅವನ ಕೊನೆಯ ಮಾತು ಎಂತ ನನಗೆ ಜ್ಞಾಪಕ.'

ಹೀಗೆಯೇ ಜೋಗ್ಯೋರ. ಅಂಜಪ್ಪನ ಕೋಳಿಕತೆಯಲ್ಲೂ, ಮೊಸರಿನ ಮಂಗಮ್ಮನಲ್ಲೂ ನಮ್ಮ ಸಮಾಜದ ಜೀವನ ಬಹಳ ಸಹಾನುಭೂತಿಯಿಂದ ಚಿತ್ರಿತವಾಗಿದೆ. ಮಂಗಮ್ಮ ಹಳ್ಳಿಯ ಹಳೆಯ ಕಾಲದ ಹೆಂಗಸು. ಆದರೆ ಬಹಳ ಸುಸಂಸ್ಕೃತವಾದ ಮನಸ್ಸು. ಸೊಸೆಗೆ ಅಧಿಕಾರ ಬಿಟ್ಟುಕೊಡುವುದಕ್ಕೆ ಇಷ್ಟವಿಲ್ಲ. ಸೊಸೆಯಲ್ಲಿ ಸಿಟ್ಟಿದ್ದರೂ ಮೊಮ್ಮಕ್ಕಳನ್ನು ಪ್ರೀತಿಸುತ್ತಾಳೆ. ಇಲ್ಲೂ ಗಂಡನ ಮೇಲಿನ ಅಧಿಕಾರಕ್ಕೆ ಅತ್ತೆ ಸೊಸೆಯರಲ್ಲಿ ಕಾದಾಟ. ಇದು ಎಲ್ಲಾ ಸಂಸಾರದಲ್ಲೂ ಎಲ್ಲೆಲ್ಲೂ ನಡೆಯತಕ್ಕದ್ದೆ. 'ಆ ಮನೆಯಲ್ಲಿ ಈಗ ಅತ್ತೆಸೊಸೆಗೆ ಸ್ವಾತಂತ್ರ್ಯ ಸ್ಪರ್ಧೆ ನಡೆಯುತ್ತಿದೆ. ಅದರ ಮೂರ್ತ ಸ್ವರೂಪ ಆ ತಾಯ ಮಗ, ಈ

ಹೆಂಡತಿಯ ಗಂಡ. ಅವನನ್ನು ಬಿಟ್ಟುಕೊಡಕೂಡದೆಂದು ತಾಯ ಮನೋಗತ. ಅವನನ್ನು ಹಿಡಿಯಲೇ ಬೇಕೆಂದು ಈ ಸೊಸೆಯ ವ್ರತ. ಇದು ಎಲ್ಲಾ ಕಡೆಯಲ್ಲೂ ನಡೆಯುತ್ತಿರುವ ವ್ಯಾಪಾರ. ಇದರ ಸೋಲು ಗೆಲುವು ಹೀಗೆಯೇ ಎಂದು ಹೇಳುವಂತಿಲ್ಲ, ನೀರೊಳಗಿರುತ್ತ ಮೊಗವಿನ ಕಾಲು ಹಿಡಿದಿರುವ ಮೊಸಳೆಯ ಹಾಗೆ ಸೊಸೆ ಮೇಲೆ ನಿಂತು ಮೊಗುವಿನ ತೋಳನ್ನು ಹಿಡಿದುಕೊಂಡು ಅದನ್ನು ಉಳಿಸುತ್ತೇನೆ ಎನ್ನುವವಳು ತಾಯಿ. ಮಧ್ಯೆ ಆ ಮಗುವಿನ ಪಾಡು ತಾನೆ ಸ್ವಲ್ಪ ಕಷ್ಟ. ಹಳ್ಳಿಯಲ್ಲಾದರೆ ಮೊಸರು ಮಾರುವ ಮಂಗಮ್ಮನ ಮನೇಲಿ, ಪಟ್ಟಣದಲ್ಲಿ ಮೊಸರು ಕೊಳ್ಳುವ ತಂಗಮ್ಮನ ಮನೇಲಿ ನಡೆಯುತ್ತಾ ಇದೆ ಈ ವ್ಯಾಪಾರ. ಕೊನೆಯ ಅಂಕಕಾಣದ ನಾಟಕ.

ನಿಜಗಲ್ಲಿನ ರಾಣಿ ಎಂಬುದರಲ್ಲಿ ನಮ್ಮ ದೇಶದ ಒಂದು ಪಾಳೆಯ ಪಟ್ಟಿನ ರಾಣಿಯಾದ ಗಿರಿಜವ್ವನ ಆತ್ಮಯಜ್ಞದ ಕತೆ ನಿರೂಪಿತವಾಗಿದೆ. ಚರಿತ್ರೆಗೆ ಸಂಬಂಧಪಟ್ಟ ಕಥೆಗಳನ್ನು ಬರೆಯುವುದು ಕಷ್ಟವಾದರೂ ಶ್ರೀನಿವಾಸರು ಈ ಕೆಲಸವನ್ನು ಬಹಳ ಯಶಸ್ವಿಯಾಗಿ ನೆರವೇರಿಸಿದ್ದಾರೆ. ಈ ಕತೆಯಲ್ಲಿಯ ಅವರ ಶೈಲಿಗೂ ಉಳಿದ ಕತೆಗಳ ಶೈಲಿಗೂ ವ್ಯತ್ಯಾಸವುಂಟು. ಇಲ್ಲಿ ಮಾತುಗಳು ಗುರಿಯನ್ನು ಕುರಿತು ಒಂದೇ ಸಮನೆ ನಾಗಲೋಟದಲ್ಲಿ ದೌಡಾಯಿಸುತ್ತವೆ.

'ಮಾರನೆಯ ದಿನ ಗಿರಿಜವ್ವೆ ಬೆಳಗಾಗ ಎದ್ದು ಸ್ನಾನಮಾಡಿ ದೇವರ ಪೂಜೆಯನ್ನು ಮುಗಿಸಿಕೊಂಡು ಮಗುವನ್ನು ಎತ್ತಿಕೊಂಡು ಲಕುಮವ್ವೆಯ ಬಳಿಗೆ ಬಂದು 'ಇದು ನನ್ನ ಹಣೆಯಲ್ಲಿ ಬರೆದಿತ್ತು. ಇಂದಿನಿಂದ ಈ ಮಗು ನನ್ನದಲ್ಲ, ನಿಮ್ಮದು, ಇದನ್ನು ಕಾಪಾಡುವ ಕೆಲಸ ನಿಮ್ಮದು' ಎಂದು ಹೇಳಿ 'ನನಗೆ ಒಳ್ಳೆಯದಾಗುವಂತೆ ಹರಸಿ' ಎಂದು ಕಣ್ಣೀರು ಸುರಿಸಿದಳು. ಲಕುಮವ್ವೆ 'ನಿನ್ನ ಬುದ್ಧಿಯೆಲ್ಲಾ ಎಲ್ಲಿ ಹೋಯಿತು? ಅವನು ಕೇಳಿದರೆ ಬೇಡವೆನ್ನುವುದಕ್ಕೆ ನಿನಗೆ ತಿಳಿಯಲಿಲ್ಲವೆ? ಈಗಲೂ ಇಷ್ಟವಿಲ್ಲದಿದ್ದರೆ ಬೇಡವೆನ್ನು' ಎಂದಳು. ಗಿರಿಜವ್ವೆ 'ಹೇಳಿ ಆಯಿತು. ಇನ್ನು ಆ ಮಾತು ಬೇಡಿ ಇನ್ನು ನನ್ನ ದಾರಿ ಬೇರೆ' ಎಂದು ಹೇಳಿ ಅರಮನೆಯಿಂದ ಹೊರಟಳು. ಬಾಗಿಲಲ್ಲಿ ಊರ ಪ್ರದಕ್ಷಿಣಕ್ಕೆ ಬೇಕಾದ ಏರ್ಪಾಡೆಲ್ಲಾ ಆಗಿತ್ತು. ಗಿರಿಜವ್ವೆ ಸುಮಂಗಲಿಯಂತೆ ಅಲಂಕಾರವನ್ನು ಮಾಡಿಕೊಂಡಿದ್ದಳು. ಜನರಿಗೆ ಇದನ್ನು ನೋಡಿ ಅಸಹ್ಯ. ಅವಳು ಕಸ್ತೂರಿಯನ್ನು 'ನೀನು ಈ ಕಡೆಯಿಂದ ಬಾ. ನಾನು ಆ ಕಡೆಯಿಂದ ಬರುತ್ತೇನೆ. ಇಬ್ಬರೂ ಕೊತ್ತಲದ ಬಳಿ ಸೇರೋಣ' ಎಂದಳು. ಅದರಂತೆ ಉತ್ಸವವು ಹೊರಟಿತು.

'ನಿಜಗಲ್ಲಿನ ಕೋಟೆ ಬಹಳ ಅಂದವಾದ ಕೋಟೆ. ಭೀಕರವಾದ ಬಂಡೆಯ ಮೇಲೆ ಶತ್ರುವನ್ನು ಧಿಕ್ಕರಿಸುವ ಗೋಡೆಗಳು. ಒಂದೇ ಕಡೆ ಬಾಗಿಲು. ಬಾಗಿಲಿಗೆ ಎದುರಾಗಿ ಕೋಟೆಯ ಗೋಡೆಯ ಆ ಕಡೆ ಅರ್ಧದಲ್ಲಿ ಒಂದು ಕೊತ್ತಳ. ಅದರಿಂದ ಊರಿನೊಳಕ್ಕೆ ಇಳಿಯುವುದಕ್ಕೆ ಒಂದು ಸೊಗಸಾದ ಮೆಟ್ಟಿಲ ಪಂಗ್ತಿ. ನಾಯಕನು ವಿಹಾರಕ್ಕಾಗಿ ಕೆಲವು ವೇಳೆ ಇಲ್ಲಿಗೆ ಬಂದು ನಿಲ್ಲುವುದುಂಟು. ಇಲ್ಲಿಂದ ನೋಡಿದರೆ ಹತ್ತಾರು ಮೈಲಿಯ ದೂರಕ್ಕೂ ಇರುವ ಹಳ್ಳಿ, ಕೊಳ, ತೋಪು, ಎಲ್ಲಾ ಚಿತ್ರಗಳಲ್ಲಿ ಬರೆದಂತೆ ಕಾಣುವುದು. ಆ ಕಡೆ ಬಂಡೆ ಕೋಟೆಯ ಗೋಡೆಯ ಕೆಳಗೆ ಮುಂದಕ್ಕೆ ಚಾಚಿ ಪೀಠದಂತಾಗಿತ್ತು. ಪೀಠದ ಮೇಲೆ ಕೋಟೆಯ ಗೋಡೆ ಎಳೆತ್ತರ. ಆ ಬಂಡೆಯ ಆಚೆ ಅಗಳು. ಪೀಠವು ವಿಶಾಲವಾಗಿ ಚಪ್ಪಟೆಯಾಗಿ ರಾಜರು ಕುಳ್ಳಿರುವ ಗದ್ದಿಗೆಯಂತೆ ಕಾಣುತ್ತಿದ್ದುದರಿಂದ ಅದಕ್ಕೆ ಜನ ಗದ್ದಿಗೆಯ ಬಂಡೆ ಎಂದು ಹೆಸರಿಟ್ಟಿದ್ದರು. ಹಾಗೆಯೇ ಆ ಕೊತ್ತಳವನ್ನು ಗದ್ದಿಗೇ ಕೊತ್ತಳ ಎನ್ನುವರು.

ಕಸ್ತೂರಿ ಒಂದು ಕಡೆಯಿಂದಲೂ ತಾನು ಒಂದು ಕಡೆಯಿಂದಲೂ ಕೊತ್ತಳದ ಮೆಟ್ಟಲಿಗೆ ಬರುವುದೆಂದು ಏರ್ಪಾಡು ಮಾಡಿ ಗಿರಿಜವ್ವೆ ಒಬ್ಬ ಚೇಟಿಯನ್ನು ಕುರಿತು 'ಇಂದು ನನ್ನ ತಮ್ಮನಿಗೆ ಆರತಿ ಮಾಡಬೇಕು. ಒಂದು ತಟ್ಟೆಯಲ್ಲಿ ಆರತಿ ತನ್ನಿರಿ' ಎಂದು ಹೇಳಿ ಕೋಟೆಯ ಗೋಡೆಯ ಮೇಲೆ ಹೊರಟಳು. ಊರಿನಲ್ಲಿ ಜನವೆಲ್ಲ 'ಇಂಥ ವಿಚಿತ್ರ ಉಂಟೆ? ಇವಳ ಸೊಗಸೇನು, ಈ ಆರತಿಯೇನು?' ಎಂದು ವಿಸ್ಮಿತರಾಗಿ ಕೋಟೆಯ ಮೇಲೆ ಎರಡು ಕಡೆಯಿಂದಲೂ ಬರುತ್ತಿರುವ ಮೆರವಣಿಗೆಯ ಗುಂಪನ್ನು ನೋಡುತ್ತಿದ್ದರು. ಒಂದು ಗಳಿಗೆಯ ಹೊತ್ತಿಗೆ ಎರಡು ಗುಂಪೂ ಗದ್ದಿಗೆಯ ಕೊತ್ತಳದ ಹತ್ತಿರ ಬಂದುವು. ಗಿರಿಜವ್ವೆ ಅರ್ಧ ನಿಮಿಷ ಮುಂದಾಗಿ ಬಂದಿದ್ದು ಕಸ್ತೂರಿ ಬಂದಾಗ್ಗೆ ಚೇಟಿಯ ಕೈಯಿಂದ ಆರತಿಯ ತಟ್ಟೆಯನ್ನು ತೆಗೆದುಕೊಂಡು ಮಾತನಾಡದೆ ಹತ್ತಿರಕ್ಕೆ ಬಂದಳು. ಇಬ್ಬರೂ ಕೊತ್ತಳದ ಮಧ್ಯೆ ನಿಂತಿದ್ದರು. ಇತ್ತ ಒಂದಿಪ್ಪತ್ತು ಜನ, ಅತ್ತ ಒಂದಿಪ್ಪತ್ತು ಜನ. ಸದ್ದು ಮಡದೆ ನಿಂತಿದ್ದಾರೆ. ಗಿರಿಜವ್ವೆ ಎಂದಿನಂತೆ ಗಂಭೀರ ಭಾವದಲ್ಲಿ ತಮ್ಮನಿಗೆ ಆರತಿಯನ್ನೆತ್ತಿ ತಟ್ಟೆಯನ್ನು ಚೇಟಿಯ ಕೈಗೆ ಕೊಟ್ಟು ಸ್ವಲ್ಪ ನಗುತ್ತಾ ತಮ್ಮನನ್ನು ಕುರಿತು ಮೃದುವಾದ ನುಡಿಯಿಂದ 'ಕಸ್ತೂರಿ ನಿನ್ನಿಂದ ನನಗೆ ಈ ಪದವಿ ಬಂತು. ನಿನ್ನನ್ನು ನಾನು ಮರೆಯಬಾರದು. ನಿನಗೂ ಗದ್ದಿಗೆಯ ಮೇಲೆ ಆಸೆ' ಎಂದು ಹೇಳಿ ಉತ್ತರ ಕ್ಷಣದಲ್ಲಿ ಕರ್ಕಶವಾದ ಧ್ವನಿಯಿಂದ 'ನನ್ನ, ನಿನ್ನಿಂದ ರಾಮರಾಯನ ಮನೆ ಕೆಟ್ಟಿತು, ನಮ್ಮನ್ನು ಹೆತ್ತವರಿಗೆ ಅಪಕೀರ್ತಿ ಬಂತು. ಕಸ್ತೂರಿ ನಾವು ಬದುಕಬಾರದು' ಎಂದು ಹೇಳಿ ಅವನನ್ನು ಭದ್ರವಾಗಿ ಅಪ್ಪಿಕೊಂಡು ಕೊತ್ತಳದಿಂದ ಗೋಡೆಯ ಹೊರಕ್ಕೆ ದುಮುಕಿಬಿಟ್ಟಳು.

ಜನರು 'ಹಾ' ಎನ್ನುವ ಮೊದಲು ಅಕ್ಕ ತಮ್ಮಂದಿರು ಗದ್ದಿಗೆಯ ಬಂಡೆಯನ್ನು ಸೇರಿದ್ದರು. ಆ ಎತ್ತರದಿಂದ ಬಂಡೆಯ ಮೇಲೆ ಬಿದ್ದವರಿಗೆ ಉಳಿವಿಲ್ಲ. ಎರಡು ಕ್ಷಣದಲ್ಲಿ ಅವರಿಬ್ಬರ ದೇಹಗಳೂ ಜೀವವನ್ನಳಿದು ಬಂಡೆಯಿಂದ ನೆಲಕ್ಕೆ ಉರುಳಿದ್ದುವು.

ವೆಂಕಟರಾಯನ ಪಿಶಾಚದಲ್ಲಿ ಶ್ರೀನಿವಾಸರ ಹಾಸ್ಯ ಸ್ವಭಾವವನ್ನು ಚೆನ್ನಾಗಿ ಕಾಣಬಹುದು. ಸಾರಿಪುತ್ರನ ಕೊನೆಯ ದಿನಗಳಂತಹ ಗಂಭೀರ ಭಾವವನ್ನು ವರ್ಣಿಸಿದ ಕವಿ, ಅಷ್ಟೇ ಸರಸವಾಗಿ ವೆಂಕಟರಾಯನ ಜೀವನದ ಒಂದು ವಿನೋದವನ್ನು ವರ್ಣಿಸಿದ್ದಾರೆ. ಅದರಲ್ಲಿ ಅವರು ಕತೆಯಿಲ್ಲದೆ ಕತೆಯನ್ನು ನೇಯ್ದಿದ್ದಾರೆ. ಆ ಕತೆಯನ್ನು ಓದುವುದಕ್ಕೆ ಪ್ರಾರಂಭಿಸಿದರೆ ಕೊನೆಯವರೆಗೆ ನಗದೇ ಇರಲು ಸಾಧ್ಯವೇ ಇಲ್ಲ. 'ಬೆಕ್ಕಿನ ರೂಪದ ಪಿಶಾಚಿಯು ವೆಂಕಟರಾಯನ ನಡುವಿಗೆ ಸರಿಯಾಗಿ ಬಂದಾಗ ಅದರ ಹೊಟ್ಟೆಯಲ್ಲಿ ಆಗುತ್ತಿದ್ದ ಗುಡುಗುಡು ಶಬ್ದವು ವೆಂಕಟರಾಯನಿಗೆ ಕೇಳಿಸುವುದಕ್ಕೆ ಪ್ರಾರಂಭವಾಯಿತು. ಆ ಗುಡುಗುಡು ಶಬ್ದದಿಂದ ವೆಂಕಟರಾಯನಿಗೆ ಒಂದು ಸಹಾಯವಾಯಿತು. ಬೆಕ್ಕು ಎಷ್ಟು ದೂರ ಮುಂದಕ್ಕೆ ಬಂತು ಎಂದು ತಿಳಿಯಲು ಸಹಾಯವಾಯಿತು. ಪಿಶಾಚವು ನಡುವಿನ ಬಳಿ ಕುಳಿತಿದ್ದುದು ಮೆಲ್ಲನೆ ಹೆಜ್ಜೆಯನ್ನಿಡುತ್ತಾ ವೆಂಕಟರಾಯನ ಬೆನ್ನ ನಡುವಿಗೆ ಬಂದಿತು. ಭುಜದ ನೇರಕ್ಕೆ ಬಂದಿತು. ಕುತ್ತಿಗೆಯ ನೇರಕ್ಕೆ ಬಂದಿತು. ತಲೆಯ ಹಿಂದುಗಡೆಗೆ ಬಂದಿತು. ಮುಂದಕ್ಕೆ ಹೆಜ್ಜೆಯನ್ನಿಡುವುದಕ್ಕೆ ಹೋಗಿ ಇಡದ ಹಾಗೆ ಇದ್ದಲ್ಲಿಯೇ ನಿಂತಿತು. ವೆಂಕಟರಾಯನಿಗೆ ಬಹಳ ಹೆದರಿಕೆಯಾಯಿತು. ಏನು ಮಹಾ ಹೆದರಿಕೆ, ಅವನು ಹೆಂಗಸಾಗಿ ಹುಟ್ಟಬೇಕಾಗಿತ್ತು ಎಂದು ಹೇಳುವವರು ನೀವು ಯಾರಾದರೂ ಇದ್ದರೆ ನಿಮಗೆ ಒಂದು ಮಾತನ್ನು ಹೇಳುತ್ತೇನೆ. ಈಗ ನಾನು ಹೇಳುವುದನ್ನು ರಾತ್ರಿ ೧೦ ಗಂಟೆಯಲ್ಲಿ ನಿಮ್ಮ ಮನೆಯವರೆಲ್ಲಾ ಮಲಗಿದ ಮೇಲೆ ನೀವೇ ಕೂತು ಓದಿ. ನಿಮ್ಮ ಹೆಂಡತಿಯೋ ಮಗುವೋ

ಮಲಗಿರುವ ಶಯ್ಯಾಗೃಹದಲ್ಲಿ ಕುಳಿತು ಓದಬೇಡಿ. ಕೂಗಿಕೊಂಡರೆ ಅವಳಿದ್ದಾಳೆ ಸಹಾಯಕ್ಕೆ ಬರುತ್ತಾಳೆ ಎಂತ ನಿಮಗೆ ಧೈರ್ಯವಿರುತ್ತದೆ. . . .ಬಲವಾದ ಏಟುಗಳನ್ನು ಗುಡುಗುಡು ಎನ್ನುತ್ತಿದ್ದ ಬೆಕ್ಕಿನ ಮೇಲೆ ಗುರಿಯಿಟ್ಟು ಅದು ಆ ಕಡೆ ಈ ಕಡೆ ಕದಲುವುದಕ್ಕಾಗದಂತೆ ರಪರಪನೆ ಸುಮ್ಮನೆ ಹತ್ತು ಏಟು ಹಾಕಿಬಿಟ್ಟ. ಬೆಕ್ಕು ಮಾಯವಾಯಿತು. ಈ ಏಟಿಗೆ ಬೆಕ್ಕು ಉಳಿಯುವುದೆ? ಬೆಕ್ಕು ಮಾಯವಾಗಿ ತಲೆ ಬಂದಿತು. ತಲೆ ಬಂದದ್ದೇನೊ ನಿಶ್ಚಯ ಆದರೆ ವೆಂಕಟರಾಯನಿಗೆ ಕಿಟಕಿಯಲ್ಲಿ ಕಂಡ ಕರಾಳ ಮುಖದ ಜೋಲು ನಾಲಗೆಯ ಕೋರೆಹಲ್ಲಿನ ತಲೆಯಲ್ಲ. ಕೃಷ್ಣಪ್ಪನವರ ತಲೆ. ಕಾರಣವಿಲ್ಲದೆ ಹೆಂಡತಿಯ ಕೈಯಲ್ಲಿ ಮಾತು ಕೇಳಿದವನ ಮುಖಬ ಹಾಗೆ ಇತ್ತು. ಕೃಷ್ಣಪ್ಪನವರು ಮುದುಕರು ಆದರೂ ಏಟುಗಳು ಹೀಗೆ ಮಳೆಗರೆಯುತ್ತಲೂ ಯಾವ ಹುಡುಗನಿಗೂ ಇಲ್ಲದ ಚಟುವಟಿಕೆಯನ್ನು ಪಡೆದು ಸರ್ರನೆ ಎದ್ದರು. ಎದ್ದು ಸ್ವಲ್ಪ ಚೇತರಿಸಿಕೊಂಡು ಅಯ್ಯ ಅಯ್ಯ ಯಾಕಪ್ಪ ಯಾಕಪ್ಪ ಎಂದು ವೆಂಕಟರಾಯನನ್ನು ಕೇಳಿದರು. ಕೃಷ್ಣಪ್ಪನವರು ತಲೆ ಮೂಗು ಎಲ್ಲವನ್ನೂ ಮುಟ್ಟಿಕೊಂಡರು. ಏಟು ಪೂರಾ ಬಿದ್ದಿದ್ದರೂ ಎಲ್ಲವೂ ಸರಿಯಾಗಿದ್ದವು, ಸಾಯಂಕಾಲ ಸಹಸ್ರನಾಮ ಹೇಳುವುದನ್ನು ಮರೆತೆ. ಇದರಿಂದ ಹೀಗಾಯಿತು ಎಂದುಕೊಂಡು ಪುನಃ ನಿದ್ದೆ ಹೋದರು.'

ಕೊನೆಯದಾಗಿ ನಾನು ಹೇಳಬೇಕಾದ ವಿಷಯ ಶ್ರೀನಿವಾಸರ ಕತೆಗಳನ್ನು ಓದಿದನಂತರ ಒಂದು ಬಗೆಯ ಗಂಭೀರವಾದ ಶಾಂತವಾದ ವಾತಾವರಣ ನಮ್ಮನ್ನು ಮುಚ್ಚಿಕೊಳ್ಳುತ್ತದೆ ಎಂಬುದು. ಶ್ರೀನಿವಾಸರು ತಮ್ಮ ಕತೆಗಳಲ್ಲಿ ಪುಸ್ತಕ ಪುಸ್ತಕಗಳನ್ನು ಬರೆದರೂ ಮುಗಿಯದಂತಹ ತತ್ವಗಳನ್ನು ಉಪಾಯವಾಗಿ ಹುದುಗಿಸಿದ್ದಾರೆ. ಸಾರಿ ಪುತ್ರನ ಕೊನೆಯ ದಿನಗಳು ಎಂಬುದರಲ್ಲಿ ಮೊದಲಿನಿಂದ ಕೊನೆಯವರೆಗೆ ಶಾಂತಿರಸ ತುಂಬಿರುತ್ತದೆ. ಮನುಷ್ಯನು ಬೌದ್ಧನಾದರೇನು, ವೇದಾನುಯಾಯಿಯಾದ ಬ್ರಾಹ್ಮಣನಾದರೇನು? ಅವನು ಜಗತ್ತಿಗೆ ತೋರಿಸಿಕೊಡುವ ಸತ್ಯ ಮುಖ್ಯವಾದುದು ಎಂಬುದಕ್ಕೆ ಸಾರಿ ಪುತ್ರನ ಜೀವನವೇ ನಿದರ್ಶನ. 'ಹೇಮಕೂಟದಿಂದ ಬಂದ ಮೇಲೆ' ಎಂಬುದರಲ್ಲೂ ಈ ಬಗೆಯ ಶಾಂತಿಯ ವಾತಾವರಣವನ್ನು ನಾವು ಕಾಣಬಹುದು. ಕವಿಯು ಅರಮನೆಯಿಂದ ಆಶ್ರಮಕ್ಕೆ ಬಂದ ಶಕುಂತಲೆಯು ಜ್ವರಬಿಟ್ಟ ಮಗು ತಾಯಮಡಲಲ್ಲಿ ಮಲಗುವಂತೆ ಮಲಗಿದಳೆಂದು ಹೇಳಿದ್ದಾನೆ. ಚಕ್ರವರ್ತಿನಿಯಾದರೂ ಅರಮನೆಗಿಂತ ಶಂಕುತಲೆಗೆ ಕಾಡಿನಲ್ಲೇ ಹೆಚ್ಚು ಸುಖವಿದ್ದಿತೆಂದು ತೋರಿದ್ದಾನೆ. ಈ ಕತೆಗೆ ಪಾತ್ರಗಳು ಕಾಳಿದಾಸನ ನಾಟಕದಿಂದ ನೇರವಾಗಿ ಬಂದಿವೆ.

'ನಮ್ಮ ನಾಡು ಚೆನ್ನಾಗಬೇಕು, ನಮ್ಮ ಬಾಳು ಬೆಳಗಬೇಕು; ನಮ್ಮ ದೇಶದ ಹಿರಿಯದುದರಲ್ಲಿ, ನಮ್ಮ ನಾಡ ಸಂಸ್ಕೃತಿಯಲ್ಲಿ ನಮಗೆ ಗೌರವ ಬರಬೇಕು. ಇತರರ ಅಂಧಾನುಕರಣದಿಂದ ಪ್ರಯೋಜನವಿಲ್ಲ. ನಮ್ಮ ನಾಗರೀಕತೆ ನಮ್ಮ ತಾಯ ಎದೆ ಹಾಲು' ಎಂಬ ಮಾತನ್ನು ಶ್ರೀನಿವಾಸರು ತಮ್ಮ ಕಥೆಗಳಲ್ಲೆಲ್ಲಾ ಹೇಳಿದ್ದಾರೆ. ನಮ್ಮ ರಾಷ್ಟ್ರಕವಿ ಅವರೇ ಎಂದು ನಾವು ಧಾರಾಳವಾಗಿ ಹೇಳಬಹುದು. ಅವರು ಒಂದು ಸಲ, 'ನಮ್ಮ ಜನಕ್ಕೆ ಈಗ ಹುಚ್ಚು ಹತ್ತಿದೆ. ತಮ್ಮ ವಸ್ತ್ರಗಳನ್ನು ತಾವು ಧರಿಸಿಕೊಂಡಿಲ್ಲ ಎಂಬುದು ಅವರಿಗೆ ತಿಳಿಯದು. ಅದನ್ನು ತಿಳಿಯುವ ಕಾಲವು ಇನ್ನೇನು ಬರುವುದು' ಎಂದರು. ಇದೇ ರೀತಿಯಾದ ಭಾವವನ್ನು ಶ್ರೀನಿವಾಸರು ತಮ್ಮ ಕತೆಯಲ್ಲಿ 'ಈ ಜನ ಭಾರತ ಎನ್ನುತ್ತಾರಲ್ಲ ಆ ಸುಂದರಿ ಸನ್ನಿಯಿಂದ ಈಗ ಮಲಗಿದ್ದಾಳೆ. ಮಕ್ಕಳು ಹತ್ತಿರ ಕುಳಿತು ಅಮ್ಮಾ ಎಂದು

ಅಳುತ್ತಿವೆ. ದೇಹವನ್ನು ನೋಡಿದರೆ ಜೀವ ಇನ್ನು ಈಗಲೋ ಆಗಲೋ ಬರುತ್ತೆ ಎನ್ನುವ ಹಾಗೆ ಕಳೆ ಇದೆ. ಇವರ ನಾಗರೀಕತೆ ಖಿಲವಾಗಿದೆ ಎಂದು ನಮ್ಮ ನಾಗರೀಕತೆಯನ್ನು ನಾವು ಇಲ್ಲಿ ಪ್ರಚಾರಕ್ಕೆ ತರುವುದೂ ಪರಕಾಯ ಪ್ರವೇಶದಂತೆ' ಎಂದು ಹೇಳಿದ್ದಾರೆ. ಶ್ರೀನಿವಾಸರು ಈ ಮಾತುಗಳನ್ನು ಕತೆಯಲ್ಲಿ ಆಂಗ್ಲ ರಮಣಿಯ ಬಾಯಲ್ಲಿ ಹಾಕಿದ್ದರೂ ನಮ್ಮವರಿಗೇ ಅನೇಕರಿಗೆ ಇದರಲ್ಲಿ ನಂಬಿಕೆ ಇಲ್ಲದೆ ನಮ್ಮ ದೇವರಿಗೂ ಹ್ಯಾಟು ಧರಿಸಲು ಅವರು ತವಕಿಸುತ್ತಿರುವುದು ವಿಷಾದಕರವಾದುದು.

ಶ್ರೀನಿವಾಸರ ಸಣ್ಣ ಕತೆಗಳನ್ನು ಕುರಿತು ನಾಲ್ಕು ಮಾತುಗಳನ್ನು ಹೇಳಿದ್ದೇನೆ. ಆ ನಂದನವನದ ಬಾಗಿಲಿನ ದಾರಿ ತೋರಿಸಿದ್ದೇನೆ. ಇಂತಹ ಕವಿಯು ಎದುರಿಗೇ ಇದ್ದು ತಮ್ಮ ಸಾನ್ನಿಧ್ಯವನ್ನು ನಮಗೆ ನೀಡುತ್ತಿರುವುದು ನಮ್ಮ ಭಾಗ್ಯ. ಕನ್ನಡನಾಡಿಗೆ ಅವರ ಸೇವೆ ಬಹುಕಾಲ ಲಭಿಸಲಿ. ಆ ಸೇವೆಗೆ ಅರ್ಹರಾಗುವ ಯೋಗ್ಯತೆ ಕನ್ನಡಿಗರಿಗೆ ಉಂಟಾಗಲಿ.

'ಶ್ರೀನಿವಾಸ'ರ ಸಣ್ಣ ಕತೆಗಳು

ಎಲ್.ಎಸ್. ಶೇಷಗಿರಿ ರಾವ್

'ಸಾಹಿತ್ಯದ ಈ ಪ್ರಕಾರದಲ್ಲಿ ನಮ್ಮಲ್ಲಿ ಮೊದಲು ದುಡಿದವರು ಶ್ರೀ ಪಂಜೆ ಮಂಗೇಶರಾಯರು ಎಂದು ನನ್ನ ತಿಳಿವಳಿಕೆ. ಶ್ರೀ ಕೆರೂರ್ ವಾಸುದೇವಾಚಾರ್ಯರೂ ಶ್ರೀ ಎಂ.ಎನ್. ಕಾಮತರೂ ಬಹು ಮುಂದಾಗಿ ಕತೆಗಳನ್ನು ಬರೆದರು ಎಂದು ಮಿತ್ರರು ಹೇಳುವುದುಂಟು', ಎಂದಿದ್ದಾರೆ ಮಾಸ್ತಿಯವರು. ಆದರೆ ಸಣ್ಣ ಕತೆಯನ್ನು ಒಂದು ಮಾಧ್ಯಮವಾಗಿ ಮೊದಲು ಯಶಸ್ವಿಯಾಗಿ ಬಳಸಿದವರು ಅವರೇ. ೧೯೧೮-೧೯ ರಲ್ಲಿ 'ಶ್ರೀನಿವಾಸ'ರ ಕತೆಗಳು ಅಚ್ಚಾಗಲು ಪ್ರಾರಂಭವಾದುವು; ಸುಮಾರು ೫೦ ವರ್ಷಗಳ ಕಾಲ ಕತೆಗಳ ರಚನೆಯನ್ನು ಮುಂದುವರೆಸಿದ್ದಾರೆ. ಎರಡು ವರ್ಷಗಳ ಕೆಳಗೆ ಅವರಿಗೆ ಸಾಹಿತ್ಯ ಅಕಾಡೆಮಿ ಬಹುಮಾನ ದೊರೆತದ್ದು ಸಣ್ಣ ಕತೆಗಳ ಸಂಕಲನಕ್ಕಾಗಿಯೆ.

ಮಾಸ್ತಿಯವರ ಜೀವನಾನುಭವ ಬಹು ವಿಶಾಲವಾದದ್ದು. ಅಷ್ಟೇನೂ ಶ್ರೀಮಂತವಲ್ಲದ ಕುಟುಂಬದಲ್ಲಿ ಹಳ್ಳಿಯಲ್ಲಿ ಹುಟ್ಟಿ ಬೆಳೆದವರು. ಸಂಸ್ಕೃತ ಧರ್ಮಗ್ರಂಥಗಳ ಅಧ್ಯಯನ ಮತ್ತು ಭಾರತದ ಪರಂಪರಾಗತ ಜೀವನದೃಷ್ಟಿ ಇವು ಬೆರೆತು ಹೋಗಿದ್ದ ವಾತಾವರಣದಲ್ಲಿ ಬೆಳೆದವರು. ಪಾಶ್ಚಾತ್ಯ ರೀತಿಯ ವಿದ್ಯಾಭ್ಯಾಸ ಪಡೆದು, ಮದರಾಸು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಭಾಷೆಯ ವಿಭಾಗದಲ್ಲಿ ಎಂ.ಎ. ಪರೀಕ್ಷೆಯಲ್ಲಿ ಮೊದಲನೆಯ ಸ್ಥಾನ ಪಡೆದರು. ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಮೊದಲನೆಯ ಸ್ಥಾನ ಗಳಿಸಿ, ಅಸಿಸ್ಟೆಂಟ್ ಕಮೀಷನರಾಗಿ ಸೇರಿ ಆಡಳಿತದಲ್ಲಿ ಹಲವು ವಿಭಾಗಗಳಲ್ಲಿ-ನ್ಯಾಯಾಧೀಶರಾಗಿ, ಜನಗಣತಿಯ ಮುಖ್ಯಾಧಿಕಾರಿಗಳಾಗಿ, ರೆವಿನ್ಯೂ ಕಮೀಷನರಾಗಿ - ಕೆಲಸ ಮಾಡಿದವರು. ಜೀವನದುದ್ದಕ್ಕೂ ಭಾರತೀಯ ಸಾಹಿತ್ಯ, ಚರಿತ್ರೆ ಮತ್ತು ಸಂಸ್ಕೃತಿಗಳಲ್ಲಿಯೂ ಪಾಶ್ಚಾತ್ಯ ಸಾಹಿತ್ಯ, ಚರಿತ್ರೆ, ಸಂಸ್ಕೃತಿಗಳಲ್ಲಿಯೂ ಆಸಕ್ತಿ ಉಳಿಸಿಕೊಂಡು ಬಂದವರು. ಅರಮನೆಯಿಂದ ಹಿಡಿದು ಅತಿ ದೀನನ ಗುಡಿಸಿಲಿನವರೆಗೆ ಎಲ್ಲ ಅಂತಸ್ತುಗಳ ಜನರ ನೇರವಾದ ಪರಿಚಯ ಅವರಿಗಾಯಿತು. ಅವರ ವಿಸ್ತಾರವಾದ, ವೈವಿಧ್ಯಮಯವಾದ ವಿದ್ವತ್ತು ಮತ್ತು ಜೀವನಾನುಭವ ಅವರ ಸಣ್ಣ ಕತೆಗಳ ಮೇಲೆ ಪ್ರಭಾವವನ್ನು ಬೀರಿದುವು.

'ಶ್ರೀನಿವಾಸ'ರ ಕತಾಸೃಷ್ಟಿಯಲ್ಲಿನ ವೈವಿಧ್ಯ ಅಸಾಧಾರಣವಾದುದು. 'ರಂಗಪ್ಪನ ದೀಪಾವಳಿ' ಅವರ ಮೊದಲನೆಯ ಕತೆ. 'ರಂಗಪ್ಪನ ಕೋರ್ಟ್‌ಷಿಪ್'ನಲ್ಲಿ ರಂಗಪ್ಪ ತನ್ನ ಹೆಂಡತಿಗೆ ಪ್ರೇಮ ಪತ್ರಗಳನ್ನು ಬರೆಯುವುದನ್ನು ಕಲಿಸಲು ಪ್ರಯತ್ನಿಸುತ್ತಾನೆ. ಹಳ್ಳಿಯ ಹುಡುಗಿ ಅವಳಿಗೆ ಬರೆಯಲು ನಾಚಿಕೆ, ಜೊತೆಗೆ ಬರೆಯಲು ಬರುವುದಿಲ್ಲ. ''ತೀ. ರಂಗರಾಯರಿಗೆ, ನೀವು ಬರೆದ ಕಾಗದ ಬಂತು. ನಾವೆಲ್ಲರು ಸೌಖ್ಯ, ಇನ್ನೇನು ವಿಶೇಷವಿಲ್ಲ. ರತ್ನಮ್ಮ,'' ಎಂದು ಬರೆಯುತ್ತಾಳೆ. ದೊಡ್ಡ ಕಾಗದ ಬರಿ ಎಂದರೆ, ''ಇಲ್ಲಿ ನಾನು ಕ್ಷೇಮ.

ನಮ್ಮ ಚಿಕ್ಕಮ್ಮನವರು ಕ್ಷೇಮ, ನಮ್ಮ ಚಿಕ್ಕಪ್ಪನವರು ಕ್ಷೇಮ. ಅವರ ಕೂಸೂ ಕ್ಷೇಮವಾಗಿದೆ'' ಎನ್ನುತ್ತಾಳೆ. ಶ್ರೀನಿವಾಸರು ಹೇಳುವಂತೆ, 'ಎಲ್ಲರೂ ಒಟ್ಟಾಗಿ ಕ್ಷೇಮವಾಗಿರುವುದನ್ನು ಬಿಟ್ಟು ಒಬ್ಬೊಬ್ಬರೇ ಕ್ಷೇಮವಾಗಿರಲು ಪ್ರಾರಂಭ ಮಾಡಿದರು'. ಈ ರತ್ನಮ್ಮನಿಂದ ಪ್ರಾರಂಭವಾಗಿ, ತಾನು ಹೆಂಗಸಾಗಿ ಹುಟ್ಟಬಾರದಾಗಿತ್ತು ಎಂಬಂತೆ, ಗಂಡಸಿನ ಉಡುಪನ್ನೇ ಧರಿಸಿ, (ಇವಳು ಎದೆ ಗಂಡು ಎದೆಯಂತೆ ಕಾಣಲಿ ಎಂದು ಶಸ್ತ್ರ ಚಿಕಿತ್ಸೆ ಮಾಡಿಕೊಂಡಿದ್ದಳು ಎಂದು ತೋರುತ್ತದೆ) ಗಂಡಸಿಗಿಂತ ದಿಟ್ಟವಾಗಿ ರಾಜ್ಯವಾಳಿದ ರಾಣಿ ಹಾಟ್‌ಷೇಪ್ ಸಿಟೂನವರೆಗೆ, ಕತೆಗಳಲ್ಲಿನ ಕ್ಷತ್ರಿಯ ರಮಣಿಯರಂತಿಲ್ಲ ಎಂದು ಕೊರಗಿ ಬೇರೊಬ್ಬನ ಹೆಂಡತಿಯನ್ನು ಪ್ರೀತಿಸಿ ಅವಳೂ ತನ್ನನ್ನು ಪ್ರೀತಿಸುತ್ತಾಳೆ ಎಂದು ಭ್ರಮಿಸಿ ಬುದ್ಧಿಕಲಿತ ರಂಗಸಾಮಿಯಿಂದ ಪ್ರಾರಂಭವಾಗಿ, ನೂರು ವರ್ಷ ಬಾಳಿ ಸ್ಥಿತಪ್ರಜ್ಞೆ ಸಾಧಿಸಿ, 'ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್ ವಿಶ್ವಾನಿ ದೇವ ವಯುನಾನಿ ವಿದ್ವಾನ್ ಯು ಯೋಧ್ವಸ್ಮಜ್ಜುಹು ರಾಣಮೇನೋ ಭೂಮಿಷ್ಠಾಂತೇ ನಮ ಉಕ್ತಿಂವಿಧೇಮ' ಎಂಬ ಮಂತ್ರವನ್ನು ಉಚ್ಚರಿಸಿ, 'ಯತ್ತೇರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ' ಎನ್ನುತ್ತ ಕಣ್ಣು ಮುಚ್ಚಿದ ಮಹರ್ಷಿ ವಾಮದೇವ ದ್ವೈಪಾಯನರುಣೇಯನವರೆಗೆ ನೂರಾರು ಪಾತ್ರಗಳನ್ನು ಅವರ ಸಣ್ಣ ಕತೆಗಳಲ್ಲಿ ಸೃಷ್ಟಿಸಿದ್ದಾರೆ.

'ಶ್ರೀನಿವಾಸ'ರದು ಧಾರ್ಮಿಕ ಒಲವಿನ (religious) ಮನಸ್ಸು - ಹೀಗೆಂದಾಗ ಆದರ ಅತಿ ಶ್ರೇಷ್ಠ ಅರ್ಥದಲ್ಲಿ ಎಂದು ಸೇರಿಸಬೇಕು. ಜೀವನದಲ್ಲಿ ಅಪಾರ ಶ್ರದ್ಧೆ, ಮಾನವ ಜೀವನದ ಗುರುತರ ಹೊಣೆಯ ಅರಿವು, ಇದರೊಂದಿಗೆ ಅಪಾರ ಅನುಕಂಪ. ಜೀವನವನ್ನು ಶುಭ್ರಗೊಳಿಸುವ, ಸಾರ್ಥಕಗೊಳಿಸುವ ಮಾರ್ಗದ ಅನ್ವೇಷಣೆಯೊಂದಿಗೆ ಅತಿ ಗಂಭೀರತೆ-ಗಹನತೆಗಳಿಗೇ ಜೋತು ಬೀಳದೆ, ತುಟಿಗೆ ಒಂದು ಕ್ಷಣ ನಗೆಯನ್ನೊ ಮನಸ್ಸಿಗೆ ಒಂದು ಕ್ಷಣ ಹರ್ಷವನ್ನೊ ತರಬಹುದಾದುದೆಲ್ಲಕ್ಕೆ-ಒಂದು ಹಾಸ್ಯ ನುಡಿಗೆ, ಒಂದು ಹೂವಿಗೆ, ಒಂದು ಹಾಡಿಗೆ - ಬೆಲೆಕೊಡಬಲ್ಲ ಮನಸ್ಸು ಇದು. ಇಂತಹ ಮನಸ್ಸು ಮೌಲ್ಯಗಳನ್ನು ಒಪ್ಪಿರುತ್ತದೆ, ಕಟ್ಟುಪಾಡುಗಳನ್ನು ಒಪ್ಪಿರುವುದಿಲ್ಲ. ಆದುದರಿಂದಲೇ ಮಾಸ್ತಿಯವರು ಸಂಪ್ರದಾಯವಂತರು ಎಂದುಕೊಂಡವರು 'ವೆಂಕಟಶಾಮಿಯ ಪ್ರಣಯ', 'ಕವಿಯ ಬಾಳ ಕೊನೆಯ ದಿನ', 'ವಿಚಿತ್ರ ಪ್ರೇಮ' ಇಂತಹ ಕಥೆಗಳನ್ನು ಓದಿ ವಿಸ್ಮಿತರಾಗುವುದು. ಗಂಡು-ಹೆಣ್ಣಿನ ಸಂಬಂಧದ ವಿಷಯದಲ್ಲಿ ಎಷ್ಟು ಸಹಾನುಭೂತಿಯ ಔದಾರ್ಯದ ಮನೋಭಾವ ಈ ಕತೆಗಳ ಹಿಂದಿದೆ ಎಂಬುದು ಗಮನಾರ್ಹವಾದ ಸಂಗತಿ. ('ವಿಚಿತ್ರ ಪ್ರೇಮ'ದಲ್ಲಿ ಮುಖ್ಯ ಪಾತ್ರಗಳು ಮೂರು -ಫ್ರಾನ್ಸ್‌ನ ಮಹಾ ಸಾಹಿತಿ ವಾಲ್ಟೇರ್, ಅವರ ಪ್ರೇಯಸಿಯಾಗಿದ್ದು ಅನಂತರ ಸೇಯಿಂಟ್ ಲ್ಯಾಂಬರ್ಟ್ ಎಂಬಾತನನ್ನು ಪ್ರೀತಿಸಿ, ಅನಂತರ ಚಾಟ್‌ಲೈಟ್ ಪ್ರಭುವನ್ನು ವರಿಸಿದ ಚಾಟ್‌ಲೈಟ್ ಪ್ರಭವಿ, ಅವಳ ಗಂಡ. ಚಾಟ್‌ಲೈಟ್ ಪ್ರಭವಿ ಸಾಯುವ ಮುನ್ನ ವಾಲ್ಟೇರನನ್ನು ಕಾಣಬೇಕು ಎಂದು ಬಯಸುತ್ತಾಳೆ. ಅವಳನ್ನು ನೋಡಲು ಹೋದರೆ, ಅಲ್ಲಿ ಸೇಯಿಂಟ್ ಲ್ಯಾಂಬರ್ಟನೂ ಇದ್ದಾನೆ. ಸಾಯುವ ಹೆಣ್ಣು 'ನನ್ನ ಪ್ರಭು ನನಗೆ ಪದವಿ ಕೊಟ್ಟರು, ನೀನು ಜಾಣನ ಒಲವನ್ನು ಕೊಟ್ಟೆ. . . .ಸೇಯಿಂಟ್ ಲ್ಯಾಂಬರ್ಟ್ ರೂಪಿನ ಅನುಭವವನ್ನು ನೀಡಿದ. ನಾನು ತೃಪ್ತಳಾಗಿದ್ದೇನೆ' ಎನ್ನುತ್ತಾಳೆ. ಅವಳ ಗಂಡನಾದರೂ ಮದುವೆಯಾದಂದೇ, 'ಹೆಂಡಿರಾದವಳು ಬಂದಿಯೆಂದು ನಾನು ತಿಳಿದಿಲ್ಲ. ಗಂಡಹೆಂಡಿರ ಸಂಬಂಧದಲ್ಲಿ ಇವನಲ್ಲಿ ಸರಿ ಎನ್ನುವ ನಡತೆ ಅವಳಲ್ಲಿಯೂ ಸರಿ', ಎಂದವನು.)

ಘಟನೆಗಳಲ್ಲಿಯೆ 'ಶ್ರೀನಿವಾಸ'ರಿಗೆ ಆಸಕ್ತಿ ಹೆಚ್ಚಿಲ್ಲ. (ಅವರ ಯಾವ ಕತೆಯಲ್ಲಿಯೂ ಅನಿರೀಕ್ಷಿತ ಮುಕ್ತಾಯವನ್ನು ಬಳಸುವುದಿಲ್ಲ ಎನ್ನುವುದು ಗಮನಾರ್ಹವಾದ ಅಂಶ. ಸಾಮಾನ್ಯವಾಗಿ ಪಾತ್ರಗಳಿಗೆ ಸಂಬಂಧಿಸಿದ ಎಲ್ಲ ವಿವರಗಳನ್ನು ಅವರು ಓದುಗರ ಮುಂದೆ ಇಟ್ಟುಬಿಡುತ್ತಾರೆ.) 'ಮಂತ್ರೋದಯ'ದಲ್ಲಿ ಕಥಾವಸ್ತು - ಪ್ಲಾಟ್-ನ ಅಂಶ ಎಷ್ಟಿದೆ ಎನ್ನೋಣ? ಮಹರ್ಷಿವಾಮದೇವನಿಗೆ ತಂದೆ, 'ಲೋಕದ ಕರ್ಮವನ್ನು ಮಾಡಿಕೊಂಡು ನೂರು ವರ್ಷ ಬಾಳು', ಎಂದು ಹೇಳಿದ್ದರು. ನೂರು ವರ್ಷ ತುಂಬಿದೆ. ಲೋಕವನ್ನು ಬಿಡಲು ನಿರ್ಧರಿಸಿದ್ದಾನೆ. ಅವನ ಕಡೆಯ ದಿನ ಕಳೆದ ರೀತಿಯನ್ನು ಕತೆ ನಿರೂಪಿಸುತ್ತದೆ. ಕೋಲಾಹಲಕರವಾದ, ವಿಸ್ಮಯಕಾರಿಯಾದ ಘಟನೆಗಳೇನೂ ಇಲ್ಲ ಈ ಕತೆಯಲ್ಲಿ. ಎಂದಿನಂತೆ ಮಹರ್ಷಿ ಗಿಡಗಳಿಗೆ ನೀರೆರೆಯುತ್ತಾನೆ, ಪ್ರಶ್ನೆಗಳನ್ನು ಕೇಳಿದವರಿಗೆ ಉತ್ತರ ನೀಡುತ್ತಾನೆ, 'ಯತ್ತೇ ರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ' ಎನ್ನುತ್ತ ಲೋಕವನ್ನು ಬಿಡುತ್ತಾನೆ.

ಶ್ರೀನಿವಾಸರ ಆಸಕ್ತಿ ಇರುವುದು ಮನುಷ್ಯ ಸ್ವಭಾವದಲ್ಲಿ. ಒಂದು ಪಾತ್ರವನ್ನು ತೋರಿಸುವ ಘಟನೆಗಳಲ್ಲಿ ('ವೆಂಕಟಿಗನ ಹೆಂಡತಿ' ಕತೆಯಲ್ಲಿನಂತೆ) ಅಥವಾ ಒಂದು ಪಾತ್ರದಲ್ಲಿ ಮಹತ್ತರ ಮಾರ್ಪಾಡನ್ನು ಸಾಧಿಸುವ ಘಟನೆಗಳಲ್ಲಿ ('ಗೌತಮಿ ಹೇಳಿದ ಕತೆ,' 'ಒಂದು ಹಳೆಯ ಕತೆ' ಉದಾಹರಣೆಗಳು) ಅವರಿಗೆ ಆಸಕ್ತಿ. ಕತೆಯ ಚೌಕಟ್ಟಿನಲ್ಲಿ, ಅವರು ನಿರೂಪಿಸಿದ ಘಟನೆಗಳಲ್ಲಿ, ಪಾತ್ರ ಬೆಳಗುವಂತಾದಾಗ ಕತೆ ಯಶಸ್ವಿಯಾಗುತ್ತದೆ. ಒಮ್ಮೊಮ್ಮೆ ಕತೆಗಾರರಿಗೆ ಪಾತ್ರ ಬಹು ಕುತೂಹಲಕರವಾದದ್ದು ಎನ್ನಿಸಿರುತ್ತದೆ. ಕತೆಯಲ್ಲಿ ಪಾತ್ರ ಅರಳುವುದಕ್ಕೆ ಅವಕಾಶವಿಲ್ಲದೆ ಹೋಗುತ್ತದೆ. ಆಗ ಕತೆ ಸೋಲುತ್ತದೆ. 'ನೇಷಹುವಲ್ ಕೋಯ್‌ಟ್‌ಲ್' ಎಂಬುದು ಇಂತಹ ಒಂದು ಕತೆ. ಇದು ಒಂದು ಸುಂದರ ಪಾತ್ರ ಚಿತ್ರಣವಾಯಿತು; ಕತೆಗಾರರು 'ಹೀಗಾಯಿತು, ಹೀಗಾಯಿತು' ಎಂದು ನಾಲ್ಕಾರು ಸಂಗತಿಗಳನ್ನು ಹೇಳುತ್ತಿದ್ದಾರೆ ಎನ್ನಿಸುತ್ತದೆ. ದಕ್ಷಿಣ ಅಮೆರಿಕ ಖಂಡದ ಹಿಂದಿನ ಚರಿತ್ರೆಯಲ್ಲಿನ ಒಬ್ಬ ರಾಜ ನೇಷ್‌ಹುವಲಿನ ಜೀವನದ ಏರುಪೇರುಗಳನ್ನು ಈ ಕತೆ ನಿರೂಪಿಸುತ್ತದೆ. ಘಟನೆಗಳು, ವಿವರಗಳು ಸೇರಿಕೊಂಡು ತಾವೇ ಒಂದು ಜಗತ್ತನ್ನು ಸೃಷ್ಟಿಸಿ, ಕೆಲವು ಮೌಲ್ಯಗಳಿಗೆ ಜೀವ ಕೊಟ್ಟಿವೆ ಎನ್ನಿಸುವುದಿಲ್ಲ. ಘಟನೆಗಳು ಅಷ್ಟೇನೂ ಅಸಾಧಾರಣ, ಕೋಲಾಹಲಕರ ಎನ್ನಿಸದಿದ್ದರೂ ಪಾತ್ರವನ್ನು ಸ್ಫುಟಗೊಳಿಸಬಲ್ಲ ಶಕ್ತಿ ಪಡೆದಿದ್ದಾಗ, ವಿವರಗಳು-ಘಟನೆಗಳು ಸೇರಿ ಒಂದು ವಿಶಿಷ್ಟ ಜಗತ್ತಾಗಿ ಅದರಲ್ಲಿ ಮೌಲ್ಯಗಳು ಜೀವಂತವಾಗುತ್ತವೆ. ಇಂತಹ ಒಂದು ಕತೆ 'ವೆಂಕಟಿಗನ ಹೆಂಡತಿ'. ವೆಂಕಟಿಗ ಸೌದೆ ಮಾರಿ ಜೀವನ ಸಂಪಾದಿಸುವ ತರುಣ. ಹೆಂಡತಿ ಸಾಹುಕಾರನೊಬ್ಬನಿಗೆ ಮರುಳಾಗಿ ಅವನ ಬಳಿಗೆ ಹೊರಟು ಹೋಗಿದ್ದಾಳೆ. ಸಾಹುಕಾರ 'ಹಣ ಕೊಡುತ್ತೇನೆ, ಬೇರೆಯವನನ್ನು ಮದುವೆಯಾಗು', ಎನ್ನುತ್ತಾನೆ. ಇವನು ಒಲ್ಲ. ಹೆಂಡತಿಗೆ ಬುದ್ಧಿ ಹೇಳುತ್ತಾನೆ, ಅವಳು ಇದಕ್ಕೆ ಕಿವುಡು, ಕೆಲವು ದಿನಗಳ ನಂತರ ಅವಳ ಸಾಹುಕಾರ ಮತ್ತೊಬ್ಬಳನ್ನು ಕರೆತಂದಾಗ ರೋಸಿಹೋಗಿ ಹಿಂದಕ್ಕೆ ಬರುತ್ತಾಳೆ. ಇವನು ಸ್ವೀಕರಿಸುತ್ತಾನೆ. ವೆಂಕಟಿಗ ತನ್ನ ಕತೆಯನ್ನು ಹಿರಿಯರೊಬ್ಬರಿಗೆ ಹೇಳಿಕೊಂಡಿದ್ದಾನೆ, ಅವರು ತಮ್ಮ ಗೆಳೆಯರಿಗೆ ಹೇಳುತ್ತಾರೆ. ಎಂದರೆ, ಕತೆಗೆ ಚೌಕಟ್ಟಿದೆ. ಸಾಮಾನ್ಯವಾಗಿ ಕತೆಯ ಕ್ರಿಯೆಗೆ ಇಂತಹ ಚೌಕಟ್ಟನ್ನು ಒದಗಿಸುವುದು, ಕತೆ ಕೇಳಿದವರ ಮಾತುಗಳಿಂದ ಬೇರೆ ಬೇರೆ ದೃಷ್ಟಿಗಳು -'ಅಪ್ರೋಚ್'ಗಳು-ವ್ಯಕ್ತವಾಗಲಿ,

ಕತೆಗಾರನ ವೈಯಕ್ತಿಕ ನಿಲವು ಏನಿದ್ದರೂ ಕತೆಯಲ್ಲಿ ಅವನು ವಕೀಲನಾಗದಿರಲಿ ಎಂದು. ಆದರೆ ಈ ಕತೆಯಲ್ಲಿ ಕತೆಯನ್ನು ಕೇಳುವ ಮಿತ್ರರು ಒಂದು ಮಾತನ್ನೂ ಆಡುವುದಿಲ್ಲ. ಆದರೆ ಕತೆಯ ಪ್ರಾರಂಭದಲ್ಲಿ ಗೆಳೆಯರು ಹನುಮನ ಗಿರಿಯನ್ನೇರಿ ಮರದಡಿ ಕೂಡುತ್ತಾರೆ. ಚಳಿ ಹಿಂದಾಗಿ ಬಿಸಿಲು ಮೇಲುಗೈಯಾಗುತ್ತಿದೆ. ಮೇಲೊಂದು ಹಕ್ಕಿ ಹಾರುತ್ತಿದೆ. ಹದ್ದು ಇರಬೇಕು, ಇಲ್ಲವೆ ಗರುಡ, ಹತ್ತಿರ ಬಂದಾಗ, ದೇವರ ವಾಹನ ಎನ್ನಿಸಿಕೊಂಡ ಗರುಡ ಎಂದು ಕಾಣುತ್ತದೆ. ಅದು ಒಂದು ಕೂಗು ಹಾಕಿದಾಗ ಎಲೆಗಳ ನಡುವೆ ಇದ್ದ ಇನ್ನೊಂದು ಗರುಡ ಮೇಲೇರುತ್ತದೆ. ಎರಡೂ ಸ್ವಲ್ಪ ಹೊತ್ತು ದೂರ ದೂರದಲ್ಲಿ ಸ್ವಲ್ಪ ಹೊತ್ತು ಹತ್ತಿರ ಹತ್ತಿರದಲ್ಲಿ ಹಾರುತ್ತ ಒಂದನ್ನೊಂದು ಕರೆಯುತ್ತಿವೆ. ''ಇವು ಹಾರುವುದನ್ನು ಸ್ವಲ್ಪ ಹೊತ್ತು ನೋಡುತ್ತಿದ್ದ ಮೇಲೆ ಶ್ರೀರಾಮರು ನಮಗೆ ತಮ್ಮ ಅನುಭವ ಒಂದು ಸಂಗತಿಯನ್ನು ಹೇಳಿದರು.'' ಈ ಭಾಗದಿಂದ, ಕಣ್ಣು-ಮನಸ್ಸು ಎರಡೂ ಊರ್ಧ್ವಮುಖವಾಗುತ್ತವೆ. ಅಲ್ಲದೆ, ಗರುಡಗಳು ಹಾರುವುದನ್ನು ಕಂಡ ಶ್ರೀರಾಮರು ಕತೆ ಪ್ರಾರಂಭಮಾಡಿದರೆ, ಈ ಗರುಡಗಳಿಗೂ ವೆಂಕಟಿಗನ ಕತೆಗೂ ಸಂಬಂಧವಿದೆ, ಅದರಿಂದಲೇ ಗರುಡಗಳನ್ನು ನೋಡುತ್ತಿದ್ದಂತೆ ಅವರಿಗೆ ವೆಂಕಟಿಗನ ಚರಿತ್ರೆ ನೆನಪಾಯಿತು ಎಂಬುದು ಸ್ಪಷ್ಟ. ಗರುಡ ಕಾಣುವ ಮುನ್ನ ಹದ್ದು ಕಂಡಿದೆ: ಅನಂತರ ಒಂದು ಗರುಡ, ಅದರ ಕರೆ ಕೇಳಿ ಇನ್ನೊಂದು ಗರುಡ. ಅಪರಂಜಿ ಚಿನ್ನದ ಬಣ್ಣದ ಗರುಡನಂತೆ, ಅಪರಂಜಿ ಚಿನ್ನದಂತಹ ವೆಂಕಟಿಗ ನಮಗೆ ಕಾಣುತ್ತಾನೆ. ಅನಂತರ ಅವನ ಹೆಂಡತಿ, ದೂರವಾಗಿದ್ದವಳು, ಹತ್ತಿರವಾಗುತ್ತಾಳೆ, ಅವನ ಎತ್ತರಕ್ಕೇರುತ್ತಾಳೆ. (ಕತೆಯಲ್ಲಿ ಸಾಹುಕಾರನನ್ನು ಯಾರೋ ಕೊಂದರು ಎಂಬ ಸುದ್ದಿ ಬಂದಾಗ, ಅದನ್ನು ಅವಳಿಗೆ ತಿಳಿಸಲು ವೆಂಕಟಿಗ ಹಿಂಜರಿಯುತ್ತಾನೆ. ಸತ್ಯಾಂಶವನ್ನು ಊಹಿಸಿದ ಹೆಂಡತಿ, 'ಬೀದಿಗೆ ಬಂದ ಹಾವನ್ನ ಯಾರೋ ಕೊಲ್ಲುವುದೇ ನಿಜ. ಅವನಾಟವೂ ಮುಗಿಯಿತು,' ಎನ್ನುತ್ತಾಳೆ. ಅಷ್ಟು ವಿವೇಕ ಬಂದಿದೆ. ಜೊತೆಗೆ ಕಣ್ಣಿನಲ್ಲಿ ಹನಿ!) ಅವಳು ಬಿಟ್ಟು ಹೋದಾಗ, ಅವಳಿಗೆ ಬುದ್ಧಿ ಹೇಳಲು - ತನ್ನ ಆತ್ಮ ಗೌರವದ ಚಿಂತೆಯೇ ಇಲ್ಲದೆ-ವೆಂಕಟಿಗನೇ ಅವಳ ಮನೆಗೆ ಹೋಗುತ್ತಾನೆ. ಅವಳು ಹಿಂದಕ್ಕೆ ಬಂದಾಗ, ಅವಳ ತಾಯಿಯೂ 'ಬೇಕಾದಾಗ ಹೋದೆ, ಬೇಡವಾದಾಗ ಬರ್ತಾ ಇದೀಯ, ನಿನಗೆ ಅನ್ನ ಹಾಕಬಹುದೊ ಕೂಡದೊ ಹೇಳುವ ಯಜಮಾನ ಇಲ್ಲಿಲ್ಲ, ಅವನಿರೋ ಕಡೆ ಹೋಗು, ಅವನು ಒಪ್ಪಿಕೊಂಡರೆ ಬಾಳು, ಇಲ್ಲದಿದ್ದರೆ ಹಾಳಾಗು,' ಎನ್ನುತ್ತಾಳೆ. (ಎಷ್ಟು ಸ್ಪಷ್ಟ, ಖಂಡಿತ ಈ ನಿಲುವು! ಈ ಒಂದು ವಾಕ್ಯದಲ್ಲಿ ವೆಂಕಟಿಗನ ಅತ್ತೆ ವ್ಯಕ್ತಿಯಾಗಿ ನಿಲ್ಲುತ್ತಾಳೆ.) ಬಂದವಳು ಕಂಕುಳಲ್ಲಿ ಮಗುವನ್ನು ಎತ್ತಿಕೊಂಡೆ ಬಂದಿದ್ದಾಳೆ. ಅವಳನ್ನು ಮಗುವನ್ನು ಒಂದಿಗೇ ಇರಿಸಿಕೊಳ್ಳುತ್ತಾನೆ ಅವನು. ಅವಳು, ಮಗುವಿನ ಹುಬ್ಬು ನಿನ್ನ ಹಾಗೆಯೇ ಎನ್ನುತ್ತಾಳೆ. ವೆಂಕಟಿಗ ಎನ್ನುತ್ತಾನೆ: ''ಇದು ಹೌದೋ ಅಲ್ಲವೊ ನಾನೇಕೆ ನೋಡಲಿ? ನಾನು, 'ಹೌದು,' ಎಂದೆ.'' ಕತೆ ಹೇಳುವ ಶ್ರೀರಾಮ್, 'ಈಗ ಮಗುವಿಗೆ ವರ್ಷ ಅರೆ ಆಗಿದೆಯೋ!' ಎನ್ನುತ್ತಾರೆ. (ದೊಡ್ಡವರಿಗೂ ಇರುವ ಸಣ್ಣ ಕುತೂಹಲ!) ವೆಂಕಟಿಗ, 'ತಿಂಗಳು ಹೆಚ್ಚು ಕಡಮೆ. ಕೇಳಿ ಆಗುವುದೇನು? ಕೇಳಿದರೆ ವಿಚಾರಣೆ ಮಾಡಿದ ಅಂತ ನೊಂದುಕೊಳ್ಳುತ್ತಾಳೆ. ಅವಳು ಸಂತೋಷವಾಗಿರಲಿ, ಸ್ವಾಮಿ,' ಎನ್ನುತ್ತಾನೆ. (ಇದರ ಪರಿಣಾಮ ಕಥೆ ಹೇಳುವವರ ಮೇಲೆ ಆದುದನ್ನು ಸೂಕ್ಷ್ಮವಾಗಿ ಶ್ರೀನಿವಾಸರು ಸೂಚಿಸಿದ್ದಾರೆ. ವೆಂಕಟಿಗನ ಹೆಂಡತಿ, ಮಗು ಇವರ ಭೇಟಿಯಾಯಿತು. ಅವರಿಗೆ. ಅವರೇ ಹೇಳುತ್ತಾರೆ, ''ಮೊದಲ ಕ್ಷಣ ಮಗು ವೆಂಕಟಿಗನಂತೆ ಇದೆಯೆ ಎಂದು ನೋಡೋಣವೇ

ಎನ್ನಿಸಿತು. ಒಡನೆಯೇ, 'ಕೈ ಹಿಡಿದ ಗಂಡ ಮಾಡದಿರುವ ಪರೀಕ್ಷೆಯನ್ನು ನಾನು ಮಾಡಲಿಯೇಕೆ?' ಎಂದುಕೊಂಡು ಸುಮ್ಮನಾದೆನು.'') ಈ ಕಥೆಯುದ್ದಕ್ಕೂ ವರ್ಣನೆಯ ವಿವರಗಳು, ವೃತ್ತಾಂತದ ವಿವರಗಳು, ಸಂಭಾಷಣೆಯ ಅಂಶಗಳು ಒಂದಕ್ಕೊಂದು ಪೂರಕವಾಗಿ, ಒಂದರಲ್ಲೊಂದು ಹೆಣೆದುಕೊಂಡು, ಕತೆಯ ಪಾತ್ರ ಜೀವಂತವಾಗುತ್ತದೆ. 'ಗೌತಮಿ ಹೇಳಿದ ಕತೆ'ಯಲ್ಲಿ ಮತ್ತೆ ಒಂದು ಚೌಕಟ್ಟು. ಶಕುಂತಲೆ, ದುಷ್ಯಂತನ ಅರಮನೆಯಿಂದ ಕಣ್ವಾಶ್ರಮಕ್ಕೆ ಮಗನೊಡನೆ ಬಂದಿದ್ದಾಳೆ. ರಾತ್ರಿ ಅನಸೂಯೆ, ಪ್ರಿಯಂವದೆ, ಅಜ್ಜಿ ಗೌತಮಿ ಇವರೊಂದಿಗೆ ಮಾತುಕತೆಯಾಡುತ್ತಿದ್ದಾಳೆ. ಅನಸೂಯೆ, ಪ್ರಿಯಂವದೆಯರಿಗೆ ಬೇಗ ಮದುವೆಯಾಗಬೇಕು ಎಂದು ಗೌತಮಿ ಹಠ ಹಿಡಿದು ಮಾತು ಬರುತ್ತದೆ. ''ನೀವು ಚಿಕ್ಕವರು, ನಿಮಗೆ ಈ ಮಾತೆಲ್ಲ ತಿಳಿಯುವುದಿಲ್ಲ. ಬ್ರಹ್ಮಚರ್ಯೆಯಲ್ಲಿ ಇರುವ ಮಕ್ಕಳಿಗಾದರೂ ಶಕುಂತಲೆಗೆ ಒದಗಿದ ಮನೋಧರ್ಮ ಒದಗಬಹುದು. ನನ್ನ ಚಿಕ್ಕಂದು ಒಬ್ಬ ತರುಣಿಗೆ ಆದ ಅನುಭವವನ್ನು ಬಲ್ಲೆನು,'' ಎಂದು ಅಜ್ಜಿ ಗೌತಮಿಯು ಮಾಲಿನಿ ಎಂಬ ಹುಡುಗಿಯ ಕತೆ ಹೇಳುತ್ತಾಳೆ. ಆಶ್ರಮದಲ್ಲಿ ಭಾರದ್ವಾಜ, ದತ್ತ ಎಂಬ ತರುಣರೊಡನೆ ಓಡಾಡುತ್ತಿದ್ದ ಈಕೆ ಭಾರದ್ವಾಜನೊಂದಿಗೆ ಮದುವೆಯಾಗುವುದು ಎಂದು ನಿಶ್ಚಿತವಾಯಿತು. ದೇಹ ಸಂಬಂಧವಾಗದಿದ್ದರೂ ಗಂಡಹೆಂಡಿರಂತೆ ಮನಸ್ಸಿನ ಭಾವನೆ ಬಂದಿತ್ತು. ಭಾರದ್ವಾಜ ನೀರಿನ ಪಾಲಾದ. ದುಃಖದಲ್ಲಿ ಮಾಲಿನಿಯೂ ನೀರಿನಲ್ಲಿ ಹಾರಿದಾಗ, ದತ್ತ ಅವಳನ್ನು ಉಳಿಸಿದ. ಅನಂತರ ಒಂದು ದಿನ ಅವಳು ದತ್ತನಲ್ಲಿ ಪ್ರಣಯ ಭಿಕ್ಷೆ ಬೇಡಿದಳು; ಹಠ ಹಿಡಿದಳು; ದತ್ತನ ಮುಖವನ್ನು ತನ್ನ ಎದೆಯ ಬಳಿಗೆ ಸೆಳೆಯಲು ಕೈ ಚಾಚಿದಳು. ಅವನು ಅವಳ ಕಾಲನ್ನು ಹಿಡಿದುಕೊಂಡು, 'ನೀನು ನನ್ನನ್ನು ಕಾಪಾಡಬೇಕು. ಪರೀಕ್ಷೆ ಮಾಡಬೇಡ. ನೀನು ಹೆಣ್ಣು; ಆದಿಶಕ್ತಿ; ನಿನಗೆ ಪತನವೆಂಬುದಿಲ್ಲ. ನಾನು ಹೆಣ್ಣಲ್ಲ. ನನಗೆ ನಿನಗಿರುವ ಆತ್ಮಶುದ್ಧಿಯಿಲ್ಲ. ನೀನು ಅನುಗ್ರಹಿಸಿದರೆ ನಾನು ಮುಂದುಗಾಣುತ್ತೇನೆ. ಹಠ ಮಾಡಿದೆಯೊ ನಾನು ಬಟ್ಟೆಗೆಟ್ಟೆ. ನನ್ನ ಮೇಲೆ ಅನುಗ್ರಹ ಮಾಡು. ನನ್ನನ್ನು ಕಾಪಾಡು,' ಎಂದು ಬೇಡಿಕೊಂಡ. ಅವನ ಅಂಗಲಾಚಿಕೆಯ ಎಳೆ ಅವಳ ಬಾಳಿನ ಯಾವುದೋ ಒಂದು ಕಳೆಯನ್ನು ಮುಟ್ಟಿತು.; ಅವಳಿಗೆ ಅವನು ತನ್ನ ಸಹಾಯದಿಂದ ಮಾತ್ರ ಬದುಕಬಲ್ಲ ನಿಸ್ಸಹಾಯ ಬಾಲಕನಾಗಿ ಕಂಡನು. ಅವಳ ಮೋಹ ಹರಿದುಹೋಯಿತು. ಇದು ಉದಾತ್ತ ವ್ಯಕ್ತಿಗಳಿಬ್ಬರ ಜೀವನದಲ್ಲಿ ಅಗ್ನಿಪರೀಕ್ಷೆಯ ಗಳಿಗೆಯ ಕತೆ. ಸಾಮಾನ್ಯವಾಗಿ ಅಸಹಜ ಎನ್ನಿಸಬಹುದಾದ ಈ ಘಟನೆಗೆ ಕಣ್ವಾಶ್ರಮ ಒಂದು ವಿಶಿಷ್ಟ ಆವರಣವನ್ನು ಕಲ್ಪಿಸುತ್ತದೆ. ''ನನ್ನ ಚಿಕ್ಕಂದು ಒಬ್ಬ ತರುಣಿಗೆ ಆದ ಅನುಭವವನ್ನು ನಾನು ಬಲ್ಲೆನು. ಅದನ್ನು ಹೇಳುತ್ತೇನೆ ಕೇಳಿ,'' ಎನ್ನುವುದು ಕತೆಯ ಘಟನೆಯ ಸತ್ಯತೆಯನ್ನು ನಾವು ಒಪ್ಪಲು ಸಿದ್ಧತೆ ಮಾಡುತ್ತದೆ. ಕತೆ ಮುಗಿದ ನಂತರದ ಮಾತುಕತೆಗಳಲ್ಲಿ, ಗೌತಮಿಯು ಹೇಳಿದ ಕತೆ ಗೌತಮಿ ಕತೆಯೇ, ಅವಳೇ ಮಾಲಿನಿ, ಕಣ್ವರೇ ದತ್ತ ಎಂಬುದು ಹೊರಪಟ್ಟಾಗ, ಕತೆಯ ಸತ್ಯತೆ ದೃಢವಾಗುತ್ತದೆ ಮಾತ್ರವಲ್ಲ, ಅದಕ್ಕೆ ಹೊಸ ಆಸಕ್ತಿ, ಮಾನವೀಯ ಅಂಶ ಸೇರುತ್ತವೆ. ಕತೆಯಲ್ಲಿ ಗೌತಮಿ ನಡೆದ ಘಟನೆಯನ್ನು ವಿವರಿಸಿ, ದತ್ತನ ಹಿರಿಮೆ, ಮಾಲಿನಿಯ ಪುಣ್ಯ ಇವನ್ನು ಕುರಿತು ಆಡುವ ಮಾತು ಕತೆಗಾರರದಾಗಿ ತೋರದೆ, ಒಂದು ಪಾತ್ರದ ಅಭಿಪ್ರಾಯವಾಗಿ ತೋರಿ, ಕತೆಗಾರರೇ ತಮ್ಮ ಅಭಿಪ್ರಾಯವನ್ನು ಹೊರಿಸುತ್ತಿದ್ದಾರೆ ಎಂಬ ಭಾವನೆಗೆ ಅವಕಾಶವಿಲ್ಲದೆ ಹೋಗುತ್ತದೆ. ಕಣ್ವಾಶ್ರಮದ ವೃದ್ಧ ತಾಪಸಿ, ತನ್ನ ಬಾಲ್ಯದಲ್ಲಿ ಆಶ್ರಮದಲ್ಲಿ ನಡೆದ ಘಟನೆಯನ್ನು ಕುರಿತು ಮುಪ್ಪಿನಲ್ಲಿ ಮಾತನಾಡುತ್ತಿದ್ದಾಳೆ, ಪಕ್ವವಾದ ಚೇತನದ ನುಡಿ

ಎಂದು ಅದಕ್ಕೆ ಬೆಲೆ ಬರುತ್ತದೆ. ಮಾಲಿನಿ ಅವಳೇ ಎಂಬುದು ಸ್ಪಷ್ಟವಾದಾಗ, ಆ ಅಭಿಪ್ರಾಯಕ್ಕೆ ಇನ್ನೂ ಮೌಲ್ಯ ಹೆಚ್ಚುತ್ತದೆ, ಏಕೆಂದರೆ ಅಗ್ನಿ ಪರೀಕ್ಷೆಯಲ್ಲಿ ಉಳಿದವಳೇ ಹಲವು ದಶಕಗಳ ನಿರ್ಮಲ ಜೀವನ ನಡೆಸಿದ ಮೇಲೆ ಹೇಳುವ ಮಾತು ಅದು. ಇಷ್ಟಾಗಿ ಅವಳ ಮನಸ್ಸಿಗೆ ಕಾಠಿಣ್ಯ, ಬೇಸರ, ವಿಧಿಯ ಮೇಲೆ ಮುನಿಸು ಸೋಂಕಿಲ್ಲ ಎಂಬುದು ಕತೆಯಲ್ಲಿ ಹತ್ತು ವಿವರಗಳಲ್ಲಿ ಕಾಣುತ್ತದೆ.

ಹೀಗೆ, 'ಶ್ರೀನಿವಾಸ'ರ ಯಶಸ್ವಿ ಕತೆಗಳು ತಾಂತ್ರಿಕ ಯಶಸ್ಸನ್ನೂ ತೋರುತ್ತವೆ. ಆದರೆ ಅವರು ತಂತ್ರದ ವಿಷಯ ಹೆಚ್ಚು 'ಥಿಯರಿ' ಕಟ್ಟಿಕೊಂಡವರಲ್ಲ, ಕ್ರಾಂತಿಕಾರಕ ಪ್ರಯೋಗಗಳನ್ನು ಮಾಡಿದವರಲ್ಲ. ದತ್ತ, ಮಹರ್ಷಿದ್ವೈಪಾಯನ ಇವರು ಮಾನವ ಮುಟ್ಟಬಹುದಾದ ಶಿಖರಗಳನ್ನು ಸಾರಿ ಹೇಳುವ ಭವ್ಯ ಚೇತನಗಳು, ಮತ್ತೆ ಮತ್ತೆ, ಇಂತಹ ಬೆಳಕಿನ ಮಕ್ಕಳನ್ನು ಶ್ರೀನಿವಾಸರು ಚಿತ್ರಿಸಿದ್ದಾರೆ. ಆದರೆ ಹಿರಿಮೆಗೆ ಒಂದು ನಿಷ್ಠುರವಾದ ಅಳತೆಗೋಲನ್ನಿಟ್ಟುಕೊಂಡಿಲ್ಲ ಅವರು. ಆದುದರಿಂದಲೇ ಹಲವು ಪ್ರೇಯಸಿಯರೊಂದಿಗೆ ಸುಖಿಸಿದ ಗಟೆ, ಇಬ್ಬರು ಪ್ರಿಯರೊಂದಿಗೆ ಸುಖಿಸಿ ಮೂರನೆಯವನನ್ನು ಮದುವೆಯಾದ ಫಾಟ್‌ಲೈಟ್ ಪ್ರಭವಿ-ಅವಳ ಗಂಡ ಇಂತಹವರಲ್ಲಿಯೂ ಅವರು ದೊಡ್ಡತನವನ್ನು ಕಾಣಬಲ್ಲರು. ಉಪ್ಪು ತಾರದೆ ಶಾಲೆಗೆ ಹೋಗಿ ತರಗತಿಯಲ್ಲಿ ಕುಳಿತ ಗಂಡನನ್ನು ಹೆಂಡತಿ ತರಾಟೆಗೆ ತೆಗೆದುಕೊಳ್ಳುವಾಗಲೆ ಇನ್ಸ್‌ಪೆಕ್ಟರು ಬಂದುದನ್ನು ಕಂಡು ರುಮಾಲನ್ನು ಹಿಂದು ಮುಂದಾಗಿ ಇಟ್ಟುಕೊಂಡ ಮೇಷ್ಟರನ್ನು ಕಂಡು ಅವರಿಗೆ ನಗು, ಆದರೂ ಮರುಕವಿದೆ. ಮನುಷ್ಯನ ಚೇತನದ ಯಾತ್ರೆಯಲ್ಲಿ ನಿರಂತರ ಆಸಕ್ತಿ, ನಿರಾಡಂಬರವಾದ ಆದರೆ ಅಪಾರವಾದ ಅನುಕಂಪ ಇವು ಶ್ರೀನಿವಾಸರ ಸಣ್ಣ ಕತೆಗಳನ್ನು ಒಟ್ಟಾಗಿ ಸಮೀಕ್ಷಿಸಿದಾಗ ಎದ್ದು ಕಾಣುವ ಲಕ್ಷಣಗಳು. ಇಷ್ಟೊಂದು ಕತೆಗಳಲ್ಲಿಯೂ (ಅವರ ಎಪ್ಪತ್ತೆಂಟು ಕತೆಗಳು ಅಚ್ಚಾಗಿವೆ, ಸುಮಾರು ೧೯೫೦ ಪುಟಗಳನ್ನು ತುಂಬಿವೆ ಎಂದಿದ್ದಾರೆ ಪ್ರೊ.ಎ.ಎನ್. ಮೂರ್ತಿರಾಯರು) ವಿಡಂಬನೆಯ ಸುಳಿವಿಲ್ಲ ಎಂಬುದು ವಿಶೇಷವಾದ, ಅರ್ಥವತ್ತಾದ ಸಂಗತಿ. ವರ್ಡ್ಸ್‌ವರ್ತ್ ಕವಿಯ ನಂತರ ಟೆನಿಸನ್ ಇಂಗ್ಲೆಂಡಿನ ಆಸ್ಥಾನ ಕವಿಯಾದ; ವರ್ಡ್ಸ್‌ವರ್ತ್‌ನನ್ನು ನೆನೆಸಿಕೊಂಡು, ""This laurel greener from the brows of him that uttered nothing base", ಎಂದ. 'ಶ್ರೀನಿವಾಸ'ರ ಇಡೀ ಸಾಹಿತ್ಯವನ್ನು ನೆನೆಸಿಕೊಂಡು ಅವರದೂ "Brows of him that uttered nothing base' ಎನ್ನಬಹುದು; ಸಣ್ಣ ಕತೆ ಅವರು ನೂರು ಬಗೆಯ ಅನುಭವಗಳನ್ನು ಕರಗಿಸಿಕೊಂಡು ಜೀವನವನ್ನೂ ನಿರೂಪಿಸಲು ಸೊಗಸಾದ ಮಾಧ್ಯಮವಾಯಿತು. ಇನ್ನೂ ಬಹುಕಾಲ ಅವರು ನಮ್ಮೊಡನಿದ್ದು ಈ ನಿರ್ಮಲ ಸಾಹಿತ್ಯ ಗಂಗೆ ಹೊಸ ಹೊಸ ರೀತಿಗಳಲ್ಲಿ ನಮ್ಮ ಮನಸ್ಸನ್ನು ತಣಿಸುವಂತಾಗಲಿ!

ಸಣ್ಣ ಕಥೆಗಳಲ್ಲಿ ವ್ಯಕ್ತಿ ಮತ್ತು ಅಭಿವ್ಯಕ್ತಿ

ಕೆ. ಶಿವರಾಮ ಐತಾಳ

'ಸುಬ್ಬಣ್ಣ' ಹೊರತುಪಡಿಸಿ ಉಳಿದ ಮಾಸ್ತಿಯವರ ಕಥೆಗಳನ್ನು ಇಲ್ಲ ಕುರಿತಿದ್ದೇನೆ. ಇಲ್ಲೂ ಈಚೆಗೆ ಅಚ್ಚಾದ ಅವರ ಕಥೆಗಳನ್ನು ಬಿಟ್ಟುಬಿಟ್ಟಿದ್ದೇನೆ. ಮಾಸ್ತಿಯವರ ಪುಸ್ತಕಗಳು ಸರಣಿಯ 'ಕತೆಗಳು ೧' (ಐದನೇ ಮುದ್ರಣ) ಇಲ್ಲಿ ವಿವಕ್ಷಿತ.

ಮಾಸ್ತಿ ಅವರನ್ನು ಕುರಿತು, ಅವರ ಸಾಹಿತ್ಯವನ್ನು ಕುರಿತು, ಕಥೆಗಳನ್ನೂ ಕುರಿತು ಬರೆಯುವುದು ಸ್ವಲ್ಪ ಕಷ್ಟದ ಕಾರ್ಯ. ಏಕೆಂದರೆ ಮಾಸ್ತಿಯವರು ಬಹಳ ಹಿಂದಿನವರು. ಅಷ್ಟೇ ಅಲ್ಲ, ಈಗಿನವರೂ. ತುಂಬ ಹಿಂದಿನವರಾದರೂ ಒಂದು ರೀತಿಯ ತೊಂದರೆ, ಈಗಿನವರಾದರೆ ಇನ್ನೊಂದು ರೀತಿಯದು. ಎರಡೂ ಆದರೆ ಅದೇ ಬೇರೆತೆರನು.

ಮಾಸ್ತಿ ಅವರು ಹೆಸರಾದುದು ಕಥೆಗಳಿಗೆ. ಅವರ ಸಾಧನೆಗೊಂದು ಐತಿಹಾಸಿಕ ಮಹತ್ವ ಇದ್ದೇ ಇದೆ. ಅದನ್ನು ಯಾರೂ ಒಪ್ಪುತ್ತಾರೆ. ಆದರೆ ಅವರ ಸಾಹಿತ್ಯದ ಯಾವುದೊಂದು ಪ್ರಕಾರದ, ಇಲ್ಲವೆ ಯಾವುದೊಂದು ಕೃತಿಯ ವಿಷಯಕ್ಕೆ ಬಂದರೆ ಸಾಕು, ಏನೋ ರೋಗ ಲೇಖನಿಗಂಟುತ್ತದೆ. ಅದು ದುರದೃಷ್ಟ, ವಿಮರ್ಶೆಯ ದುರದೃಷ್ಟ. ಪ್ರಾಯಶಃ ಅದಕ್ಕೆ ಕಾರಣ ಮಾಸ್ತಿಯವರೂ ಅಲ್ಲ; ಅವರ ಸಾಹಿತ್ಯವೂ ಅಲ್ಲ. ಬೇರೆ ಏನೋ, ಏನೋ ಇರಬೇಕು. ಆದರೆ ಅವುಗಳಿಂದ ಯಾರಿಗೂ ತೊಂದರೆಯಿಲ್ಲ.

ಇವೆಲ್ಲಾ ಸಮಕಾಲೀನತೆಯ ಉಪಾಧಿಗಳು. ಇದಕ್ಕೆ ಯಾರೂ ಹೊರತಲ್ಲ. ಯಾವ ಹಳೆಯ ಕವಿಯನ್ನಾದರೂ ಇಂದು ಬಿಚ್ಚುಮನಸ್ಸಿನಿಂದ ವಿಮರ್ಶಿಸಲು ಸಾಧ್ಯ? ಯಾವ ಗುಂಪಿಗೂ ಸೇರದ ವ್ಯಕ್ತಿಯ ಅಸ್ತಿತ್ವವನ್ನು ಸಮಾಜ, ಬರೆಹಗಾರರ ಸಮಾಜವೂ ಒಪ್ಪುವುದಿಲ್ಲ. ಆದುದರಿಂದ ಕವಿಯನ್ನಾಗಲಿ, ವಿಮರ್ಶಕನನ್ನಾಗಲಿ ಅವನು ಯಾವುದಕ್ಕೂ ಸೇರದಿದ್ದರೂ ಅವನನ್ನು ಯಾವುದಕ್ಕಾದರೂ ಸೇರಿಸದೆ ತೃಪ್ತಿ ಇಲ್ಲ. ಈ ಕೆಟ್ಟ ವಾತಾವರಣದಲ್ಲಿ ಯಾರ ಮಾತು, ಯಾವ ಮಾತು ನಂಬಿಕೆಗೆ ಯೋಗ್ಯ? ನಾವು ಪ್ರಮಾಣಿಕರಲ್ಲ; ಆದುದರಿಂದ ಯಾರೂ ಪ್ರಾಮಾಣಿಕರಲ್ಲ; ಯಾರ ಮಾತೂ ನಂಬಲು ಯೋಗ್ಯವಲ್ಲ; ಇದರೊಳಗೆ ಏನೋ ಇರಬೇಕು. ಇದು ಇಂದಿನ ಮಾತು.

ಇದೆಲ್ಲಾ ಹೇಳಲು ಎರಡು ಕಾರಣಗಳಿವೆ. ಒಂದು ಮಾಸ್ತಿಯವರ ಕಥೆಗಳ ವಿಷಯವಾಗಿ ತುಂಬಾ ಜನ ಬರೆದಿದ್ದಾರೆ. ಹಾಗಿಲ್ಲ ಹೀಗಿಲ್ಲ ಅದಿಲ್ಲ ಇದಿಲ್ಲ ಎಂದೆಲ್ಲ ಹೇಳಿದ್ದಾರೆ. ಯಾವುದಾವುದೋ ಹಿತಾಸಕ್ತಿಗಳೂ ಕೆಲಸ ಮಾಡಿದ್ದೂ ಇಲ್ಲದಿಲ್ಲ. ಅವನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಳ್ಳದೆ ನಾನು ಹೇಳಬೇಕಾದ್ದು. ಈ ಮಧ್ಯೆ ನನ್ನ ಪೂರ್ವಗ್ರಹಗಳನ್ನೂ ಪರಿಮಿತಿಗಳನ್ನೂ ಸದಾ ಮರೆಯದೆ ಎಚ್ಚರದಿಂದ ಸಾಗಬೇಕಾದ್ದು.

ಮಾಸ್ತಿಯವರ ಕಥೆಗಳ ಹುರುಳನ್ನು, ಅವರ ವೈಶಿಷ್ಟ್ಯವನ್ನು ತಿಳಿಯುವ ಮುನ್ನ

ಮುಖ್ಯವಾದ ಒಂದು ಪ್ರಶ್ನೆ ಇತ್ಯರ್ಥವಾಗಬೇಕು. ಏಕೆಂದರೆ ಅದು ಅಳೆಯುವ ಮಾಪನಕ್ಕೆ, ಮೌಲ್ಯಗಳಿಗೆ ಸಂಬಂಧಿಸಿದ್ದು. ಬದುಕಿನಲ್ಲಿ ಬುದ್ಧಿವಂತಿಕೆ ಮುಖ್ಯವೋ, ಹೃದಯವಂತಿಕೆ ಮುಖ್ಯವೋ ಎಂಬುದು ಆ ಪ್ರಶ್ನೆ. ಬುದ್ಧಿವಂತಿಕೆ ಇಲ್ಲದಂತೆ ತೋರುವ ಕಡೆ, ಅಥವಾ ಹೆಚ್ಚಿನ ಸಂದರ್ಭಗಳಲ್ಲಿ ಎರವಲು ಬುದ್ಧಿ ಜೀವಿಗಳಿಗೆ ಹಾಗನಿಸಿದ ಸಂದರ್ಭಗಳಲ್ಲಿ ''ಸೆಂಟಿಮೆಂಟಲ್'' ಎಂಬ ಶಬ್ದ ಉಪಯೋಗವಾಗುತ್ತಿದೆ. ಹೃದಯವಂತಿಕೆ ಇಲ್ಲದ ಬುದ್ಧಿವಂತಿಕೆ ಮೇಲು ಎಂದರೆ ನಾನು ಸೆಂಟಿಮೆಂಟಲ್ ಎಂದೇ ಎನ್ನಿಸಿಕೊಳ್ಳಲು ಬಯಸುತ್ತೇನೆ. ರೂಪಕ್ಕಾಗಿ ಹುರುಳಲ್ಲ; ಹುರುಳಿಗಾಗಿ ರೂಪ ಎಂದುಕೊಂಡಿದ್ದೇನೆ. ಚೌಕಟ್ಟಿಗಾಗಿ ಚಿತ್ರವನ್ನು ಕತ್ತರಿಸಲು ನಾನು ಇಷ್ಟಪಡುವುದಿಲ್ಲ. ಚಿತ್ರಕ್ಕೆ ಉಚಿತವಾಗಿ ಕಟ್ಟು ಇರಬೇಕು ಎನ್ನುತ್ತೇನೆ. ಬದುಕಿನಲ್ಲಿ ಬುದ್ಧಿವಂತಿಕೆ ಹೃದಯವಂತಿಕೆಯನ್ನು ಹಿಂಬಾಲಿಸಿ ಬಂದರೆ, ಪೂರಕವಾಗಿ ಬಂದರೆ ಮೆಚ್ಚಬೇಕಾದ್ದು.

ಬದುಕು ಎಂದೆ. ಪ್ರತಿಯೊಬ್ಬನಿಗೂ 'ಬದುಕು ಎಂದರೆ ಏನು' ಎನ್ನುವ ತತ್ವ ಇರುತ್ತದೆ ಎಂದುಕೊಂಡಿದ್ದೇನೆ. ಈ ತತ್ವ ಕವಿಯಲ್ಲಿ ಎತ್ತರವಾಗಿರಬೇಕು. ಪ್ರಾಯಶಃ ವಿಮರ್ಶಕನಲ್ಲಿ ಇನ್ನೂ ಎತ್ತರವಿದ್ದರೆ ಲೇಸು. ಈ ಎತ್ತರ-ಅದಕ್ಕೆ ಓದು ಬೇಕು, ಆದರೆ ಬರೀ ಓದಿನಿಂದಲೇ ಸಾಧ್ಯವಲ್ಲ. ಅಮೃತಮತಿಯ ಪತನವನ್ನು ಮಾನವೀಯ ಸಹಾನುಭೂತಿಯಿಂದ ನೋಡುವುದು ನನ್ನ ಪಾಪಾಭಿರುಚಿ ಎಂದು ನಾನು ಬಗೆಯುವುದಿಲ್ಲ. ಇವೆಲ್ಲಾ ನನ್ನ ಪೂರ್ವಾಗ್ರಹಗಳು. ನನ್ನ ವಿಮರ್ಶೆಗೆ ಮುನ್ನ ಅವನ್ನು ನಾನು ಹೇಳಬೇಕು.

ಇನ್ನು ಸಂಕೀರ್ಣ-ಸರಳ ಎಂಬ ವಿಷಯ. ಸಂಕೀರ್ಣವಸ್ತು ಸಂಕೀರ್ಣ ರೂಪದಲ್ಲೆ ಮೈದೋರಬೇಕೆಂಬ ಹಠ ಹಲವರಿಗಿರುವಂತೆ ತೋರುತ್ತದೆ. ನನಗೆ ಹಾಗನ್ನಿಸುವುದಿಲ್ಲ. ನಮ್ಮ ಬಾಳಿನಲ್ಲಿ ಎಷ್ಟೊಂದು ಸಂಕೀರ್ಣ ಘಟನೆಗಳು ಅತ್ಯಂತ ಸರಳ ರೀತಿಯಲ್ಲಿ ನಡೆದು ಹೋಗುವುದಿಲ್ಲ! ಎಷ್ಟೋ ಸಂಕೀರ್ಣಗಳು, ಮಹತ್ಸಂಕೀರ್ಣಗಳು ಏನೂ ನಡೆದಿಲ್ಲವೆಂಬಂತೆ ಲೀಲಾಜಾಲವಾಗಿ ನಡೆದು ಹೋಗಿಬಿಡುತ್ತವೆ. ಅವನ್ನು ನಾನು ಕಂಡಿದ್ದೇನೆ. ಕಂಡಿದ್ದೇನೆ ಎಂದರೆ ಮಹಾಕವಿಗಳು, ಕವಿಗಳು ಬ್ರಹ್ಮದ ಮಾತನಾಡುತ್ತಾರಲ್ಲ; ಹಾಗಲ್ಲ. ಈ ಮಾತು ಏಕೆಂದರೆ ಮಾಸ್ತಿಯವರು ಸಂಕೀರ್ಣತೆಯನ್ನು ಚಿತ್ರಿಸುವುದಿಲ್ಲ ಎನ್ನುವವರಿಗಾಗಿ. ನಾನಂತೂ-ಯಾವುದು ತೀರ ಸರಳ-ಅಲ್ಲಿ ಸಂಕೀರ್ಣತೆಯನ್ನು ಕಾಣುತ್ತೇನೆ. ಸಂಕೀರ್ಣತೆ ಎಂದು ಹೇಳಿಕೊಳ್ಳುವ, ತೋರುವ ಎಷ್ಟೋ ಅಭಿವ್ಯಕ್ತಿಗಳು ನನಗೆ ತೀರ, ತೀರ ಸರಳವಾಗಿ ತೋರುತ್ತಾರೆ. ಮಹಾಭಾರತದ ಕಥೆಗಾರಿಕೆ ತೀರ ಸರಳ. ಆದರೆ ಹುರುಳು?

ಮಾಸ್ತಿಯವರ ಮಾರ್ಗ ತುಂಬ ಸರಳ. ಮಗುವಿಗೂ ಅರ್ಥವಾಗತಕ್ಕದ್ದು ಒಂದು ನೆಲೆಯಲ್ಲಿ. ಆಲೋಚಿಸತಕ್ಕವರಿಗೆ ಆ ಅನುಭವ ಇರತಕ್ಕವರಿಗೆ ಅರ್ಥವಾಗತಕ್ಕದ್ದು ಇನ್ನೊಂದು ನೆಲೆಯಲ್ಲಿ. ಪಂಚತಂತ್ರದ ಕಥೆಗಳ ಹಾಗೆ ಎನ್ನಿ ಈ ಮಟ್ಟಿಗೆ.

ಮಾಸ್ತಿಯವರು ತಮ್ಮ 'ಸಣ್ಣಕತೆಗಳ' ಬರವಣಿಗೆಯಲ್ಲಿ ಮಹಾಮಹಾ ಉದ್ದೇಶಗಳನ್ನೇನೂ ಇಟ್ಟುಕೊಂಡವರಲ್ಲ. ''ನಿಮಗೆ ಇದರಿಂದ ಸ್ವಲ್ಪ ಹೊತ್ತು ಸಂತೋಷವಾದರೆ ನಾನು ತೃಪ್ತನು'' ಎನ್ನುತ್ತಾರೆ. ಅದೇನೋ ಸರಿಯೆ. ಆದರೆ ಕಥೆಯ ಕೊನೆಯಲ್ಲಿ, ಕೆಲವೊಮ್ಮೆ ಮಧ್ಯವೂ ತಮ್ಮನ್ನು ''ತಮ್ಮದಾಸ'' ಎಂದು

ಕರೆದುಕೊಳ್ಳುತ್ತಾರೆ. ಒಟ್ಟಾರೆ ದಾಸಕಾರ್ಯ ಇದು. ಈ ದಾಸನ ಕೆಲಸ ಸಂತೋಷ ಪಡಿಸುವುದು. ಆದರೆ ಅಷ್ಟೆಯೆ? ಅಷ್ಟೇ ಎಂದೂ ಹೇಳಿಕೊಳ್ಳುತ್ತಾರೆ. ಆದರೆ ಅಷ್ಟೆಯೆ, ಇನ್ನೇನೂ ಇಲ್ಲವೆ? ಅದನ್ನು ಆಮೇಲೆ ನೋಡೋಣ.

ಒಂದು ಮಜಲಲ್ಲಿ ಸಣ್ಣಕಥೆ ಮಾಸ್ತಿಯವರಿಗೆ ಭಾವಗೀತೆಯ ಹಾಗೆ. ಒಂದು ಹೊತ್ತಿನ ಯಾವುದೋ ಒಂದು ಅನುಭವ, ಕಂಡ ಯಾವುದೋ ಒಂದು ಸಂದರ್ಭ, ಏನೋ ಒಂದು ಸ್ವಾರಸ್ಯ, ಯಾವುದೋ ಒಂದು ಮಿಡಿತ, ಇನ್ನೇನೋ ಒಂದು ಆಲೋಚನೆ, ಇಲ್ಲಾ-ಒಂದು ವೇದಾಂತ-ತಾನು ಸವಿದದ್ದು ಹತ್ತು ಜನ ಸವಿಯಲಿ ಎಂದು ಮಾಸ್ತಿ ಕೊಡುತ್ತಾರೆ. ಅವು ಸಣ್ಣಕತೆಗಳಾಗುತ್ತವೆ. ಇದು ಸಜ್ಜನ ಪದ್ಧತಿ. ತಮ್ಮ ದುಃಖವನ್ನು ಅವರು ಹಂಚಿಕೊಂಡವರಲ್ಲ. ಹೀಗೆನ್ನುವುದು ನೂರಕ್ಕೆ ನೂರು ಸತ್ಯವಲ್ಲ. ಅವರು ದುಃಖವನ್ನೂ ಹಂಚಿಕೊಂಡಿದ್ದಾರೆ. ಆದರೆ ತಮ್ಮ ಸ್ವಂತ ದುಃಖವನ್ನಲ್ಲ. ತಡೆಯಿರಿ, ಅದನ್ನು ಸ್ವಂತ ದುಃಖವಲ್ಲವೆಂದು ಹೇಗೆ ಹೇಳುತ್ತೀರಿ? ನಾನು ಸುಖವಾಗಿದ್ದೇನೆ. ಅಂಥಾದ್ದರಲ್ಲಿ ನಾನು ರಸ್ತೆಯಲ್ಲಿ, ಹೆಂಡದಂಗಡಿಗಳಲ್ಲಿ ಕಾಸಿಗೆ ಕೈಚಾಚುವ ತೊನ್ನು ಹಿಡಿದ ನನ್ನ ತಂಗಿಯರನ್ನು ನೋಡಿ ಅತ್ತಿದ್ದೇನೆ. ಎತ್ತಿ ಹಾಕುವವರಿಲ್ಲದೆ ಮೊಂಡುಕಾಲಿನ, ಮೂಗು ಕೊಳೆತು; ಇಲ್ಲವಾದ ಅರೆಬೆರಳುಗಳಿಂದ ಆಕಾಶಕ್ಕೆ ಕೈಚಾಚಿ ನನ್ನನ್ನು ''ಅಣ್ಣಾ'' ಎಂದು ಕರೆದ ನನ್ನ ''ತಮ್ಮ'' ನನ್ನು ಕಂಡು ಅತ್ತಿದ್ದೇನೆ. ''ತಮ್ಮ'' ಎಂದು ನಾನು ಕರೆಯಲಾರದೆ ಹೋದುದಕ್ಕೆ ಅತ್ತಿದ್ದೇನೆ. ಇದು, ಇವು ನನ್ನ ಸ್ವಂಥ ದುಃಖವಲ್ಲವೆ? ಹಾಗೆಯೇ ಮಾಸ್ತಿಯವರು ತಮ್ಮ ತೀರಾ ಸ್ವಂತದ ದುಃಖಗಳನ್ನು ಹೀಗೆ-''ನಿಮಗೆ ಇದರಿಂದ ಸ್ವಲ್ಪ ಹೊತ್ತು ಸಂತೋಷವಾದರೆ ನಾನು ತೃಪ್ತನು,'' ನಾನು ''ತಮ್ಮದಾಸ'' ಎಂದು ಹಂಚಿಕೊಂಡು ಬಿಡುತ್ತಾರೆ. ಇಲ್ಲಿ ಇರುವುದು ಕಥೆಯ ಮೋಜು.

ಈಗ, ನಾನು 'ಸ್ವಲ್ಪ' ಬೇರೆ ಕಡೆ ತಿರುಗಲು ಅನುಮತಿ ತೆಗೆದುಕೊಳ್ಳುತ್ತೇನೆ. ಮಾಸ್ತಿಯವರು ಸಣ್ಣಕತೆಗಳಿಗಾಗಿ ತಾನೇ, ಹೆಸರಾದುದು. ಆದರೆ ಅವರ ಎತ್ತರವನ್ನು ಸ್ಪಷ್ಟವಾಗಿ ಕಾಣಬೇಕಾದರೆ ಅವರ ಕಾದಂಬರಿಗಳ ಕಡೆಯೇ ತಿರುಗಬೇಕು. ಕತೆಗಳನ್ನು ಕುರಿತು ಹೊರಟಿರುವ ನಾನು ಕಾದಂಬರಿಗಳ ಕಡೆ ಕಣ್ಣೆತ್ತಿಯೂ ನೋಡಬಾರದು ಎಂಬ ವಸ್ತುನಿಷ್ಠ ತರ್ಕವೇನೋ ಸರಿಯೆ. ಆದರೆ ನಾನು ಜೀವವಿಲ್ಲದ ವಸ್ತುವನ್ನು ಒಪ್ಪುವುದಿಲ್ಲ.

ನಾನು ಹಿಂದೆಯೇ ಹೇಳಿದೆ, ಸಣ್ಣ ಕತೆಗಳೆಂದರೆ ಮಾಸ್ತಿಯವರಿಗೆ ಭಾವಗೀತೆಗಳಂತೆ ಎಂದು. ಅವರ ಭಾವಗೀತೆಗಳಿಗಿಂತ ಶ್ರೇಷ್ಠ ಭಾವಗೀತೆಗಳು ಅವರ ಸಣ್ಣ ಕತೆಗಳು. ಕಾದಂಬರಿ ಮಾಸ್ತಿಯವರಿಗೆ ಮಹಾಕಾವ್ಯವೇ. ಅವರ ಕಾದಂಬರಿಗಳಿಗಾದಷ್ಟು ಅನ್ಯಾಯ ಪ್ರಾಯಶಃ ಯಾವ ಕನ್ನಡ ಕೃತಿಗೂ ಆಗಿಲ್ಲವೆನ್ನುತ್ತೇನೆ. ಇದು ಯಾರಿಗೆ ತಿಳಿದದ್ದಲ್ಲ? ತಿಳಿದು ಯಾರು ಏನು ಮಾಡಿದ್ದಾರೆ? ಇದು ಸತ್ಯದ ವಿರುದ್ಧ ಬರೀ ಗೂಂಡಾಗಿರಿ. ಇದು ಈಗಿನದಲ್ಲ ಕವಿರಾಜಮಾರ್ಗಕ್ಕಿಂತ ಮೊದಲಿಂದ ನಡೆದು ಬಂದದ್ದು.

ಒಂದು ವಿಷಯದಲ್ಲಿ ಮಾಸ್ತಿ ಅವರನ್ನು ನಾನು ಒಪ್ಪುವುದಿಲ್ಲ. ಅವರ ಸೌಜನ್ಯ ಅವರಿಗೆ ಸಹಜ; ನಮಗೇನೋ ಅತಿ ಎನಿಸುತ್ತದೆ. ವೀರಮ್ಮಾಜಿಯನ್ನು ಅವರು 'ಭಾಸನಹಾಗೆ' ಉದ್ಧಾರ ಮಾಡಲು ಹೋಗಬಾರದಿತ್ತು, ಆಯಿತು, ಮುಗಿದ ಕಥೆ. ನನಗೇನೋ ಕುಂಟಬಸವನನ್ನು ಕಂಡರೆ ತುಂಬ ಇಷ್ಟ. ಕನ್ನಡ ಸಾಹಿತ್ಯದಲ್ಲಿ ಇನ್ನೊಬ್ಬ ಕುಂಟ ಬಸವ ನನಗೆ ಸಿಕ್ಕಿಲ್ಲ. ಮಾಸ್ತಿ ಅವರನ್ನು ಕಾಣಬೇಕಾದ್ದು ಅಲ್ಲಿ; ಅಂಥ ಕಡೆಗಳಲ್ಲಿ. ಅವಕ್ಕೆ ಸಾಧಾನಾರಂಗ ಸಣ್ಣ ಕತೆಗಳು.

'ಭಾಸನಹಾಗೆ' ಎಂದೆ. ಅದೇ ಮಾಸ್ತಿಯವರ ಹುರುಳು. ಕನ್ನಡದ ಭಾಸ ಮಾಸ್ತಿ ಎಂದು ಧಾರಾಳವಾಗಿ ಹೇಳುತ್ತೇನೆ. ಭಾಸನ ಮನೋಧರ್ಮ ಬಲ್ಲವರು ಅದನ್ನೊಪ್ಪುತ್ತಾರೆ ಎಂದುಕೊಂಡಿದ್ದೇನೆ.

ಮಾಸ್ತಿಯವರು ಭಾಸನ ಹಾಗೆ ಎನ್ನುವಲ್ಲಿ ಸ್ವಲ್ಪ ತಿದ್ದುಪಡಿ ಅಗತ್ಯ ಎಂದು ಕೊಂಡಿದ್ದೇನೆ. ಇದು-ನನಗೂ ಮಾಸ್ತಿಯವರ ಅಭಿವ್ಯಕ್ತಿಗೂ ಸಂಬಂಧಪಟ್ಟಂತೆ ಮಾತ್ರವಷ್ಟಲ್ಲದೆ - ನನಗೂ ವ್ಯಕ್ತಿ ಮಾಸ್ತಿಗೂ ಯಾವುದೇ ನಂಟಿಲ್ಲ - ಎನ್ನುವ ಹಿನ್ನೆಲೆಯ ಮೇಲೆ. 'ಭಾಸ' ಎಂದರೆ ತಿಳಿದವರಿಗೆ ವಿವರಣೆ ವ್ಯಾಖ್ಯಾನ ಬೇಕಿಲ್ಲ. ಭಾಸನ ಬಗ್ಗೆ ನನಗೆ ತುಂಬ ಗೌರವ. ಆದರೆ, ಭಾಸ ತಾನೇನೂ ಕೆಡಕು, ಅಸಹ್ಯ ಕಂಡಿಲ್ಲವೆಂಬಂತೇ ವರ್ತಿಸುತ್ತಾನಲ್ಲವೆ? ಇದು ಮಕ್ಕಳಿಗೆ ಮೆಲ್ಪಂಕ್ತಿಯಾಗಬಯಸಿ ಕದ್ದು ಸಿಗರೇಟು ಸೇದುವ ತಂದೆಯಂತೆ ಎಂದು ನಾನಂದುಕೊಳ್ಳುತ್ತೇನೆ. ಭಾಸನಿಗೆ 'ಕೀಳು' ತಿಳಿಯದೆಂದಲ್ಲ. ತಿಳಿದಿರುವುದರಿಂದಲೇ ಅದನ್ನು ಮರೆಸಿದ್ದಾನೆ - ಮಕ್ಕಳ ಹಿತಕ್ಕಾಗಿ. ಈ ವಿಷಯದಲ್ಲಿ ಮಾತ್ರ ಮಾಸ್ತಿ ಭಾಸನಂತಲ್ಲ; ಒಂದು ಹಂತ ಮೇಲೆ. ಏಕೆಂದರೆ ಮಾಸ್ತಿಯವರು ಅಂಥವರಲ್ಲ. ಅವರು ಕೀಳ್ಮೆಯನ್ನು ಮೆರೆಸುವುದಿಲ್ಲ ನಿಜ; ಆದರೆ ಅದು ಅವರ ಎಚ್ಚರದಲ್ಲಿರುತ್ತದೆ. ಅವರು ಪರಿವೃತ್ತ (ಅಂದರೆ ಪರ್‌ವರ್ಟೆಡ್) ಋಷಿಯಲ್ಲ; ನಿವೃತ್ತ (ಎಂದರೆ ಎಸ್ಕೇಪಿಸ್ಟ್) ಋಷಿಯಲ್ಲ; ಪ್ರವೃತ್ತ ಋಷಿ.

ಆದುದರಿಂದಲೇ ಮಾಸ್ತಿಯವರಲ್ಲಿ ಅತಿರೇಕದ ಆದರ್ಶ ಅಥವಾ ಆದರ್ಶದ ಅತಿರೇಕ ಕಾಣುವುದಿಲ್ಲ. ಮಾಸ್ತಿಯವರೂ ಆದರ್ಶವಾದಿಗಳೇ. ಆದರೆ ವಾಸ್ತವತೆಯನ್ನು ನಿರಾಕರಿಸಿದ ಆದರ್ಶವನ್ನು ಪ್ರತಿಪಾದಿಸುವುದಿಲ್ಲ. ಅವರು ವಿಫಲ ಉಪದೇಶಕರು. ಅವರಿಗೆ ಉಪದೇಶದಲ್ಲಿ ನಂಬಿಕೆಯಿಲ್ಲದಿರುವುದೇ ಅದಕ್ಕೆ ಕಾರಣ.

ಪು.ತಿ.ನ. ಅವರ ಸಾಹಿತ್ಯ ಕೃತಿಗಳನ್ನು ಕುರಿತ ವಿಚಾರಗೋಷ್ಠಿಯಲ್ಲಿ, ಅಧ್ಯಕ್ಷತೆ ವಹಿಸಿದ್ದ ಡಾ|| ಡಿ.ಎಲ್. ನರಸಿಂಹಾಚಾರ್ ಅವರು ಒಮ್ಮೆ ಹೇಳಿದರು - ''ಅಧ್ಯಾತ್ಮದಷ್ಟು ಅಗ್ಗವಾದ ಸರಕು ಸಾಹಿತಿಗಳಿಗೆ ಬೇರೊಂದಿಲ್ಲ'' ಎಂದು. ಮಾಸ್ತಿಯವರು ಅಧ್ಯಾತ್ಮವನ್ನು ಹಾಗೆ ತೆಗೆದುಕೊಂಡವರಲ್ಲ. ಬದುಕಿಗಾಗದ, ಒಗ್ಗದ, ಒಗ್ಗಲಾರದ ಅಧ್ಯಾತ್ಮವನ್ನು ಮಾಸ್ತಿ ಅವರು ಎಂದೂ ಪ್ರತಿಪಾದಿಸಲು ಹೊರಡಲಿಲ್ಲ.

ಮಾಸ್ತಿ ಅವರು ರವೀಂದ್ರರ ಆದರ್ಶವನ್ನು ಮೆಚ್ಚಿದವರು. ರವೀಂದ್ರರ ಆದರ್ಶ ಎಂದರೆ ಅವರು ತಮ್ಮ ಕೃತಿಗಳಲ್ಲಿ ಪದೇ ಪದೇ ಬೇಸರ ಪಡಿಸುವಷ್ಟೂ ಸಾರಿ ಸಾರಿ ಹೇಳಲೆಳಸಿದ ಆದರ್ಶ. ನನ್ನ ದೃಷ್ಟಿಗೇನೋ ರವೀಂದ್ರರು ಉಪದೇಶಕರೇ. ಆ ಆದರ್ಶವನ್ನು ಅವರು ತಮ್ಮ ಜೀವನದಲ್ಲಿ ಹಾಗಿರಲಿ, ತಮ್ಮ ಕಲೆಯಲ್ಲಾದರೂ ಎಷ್ಟು ಸಾಧಿಸಿದರೋ - ಆ ಮಾತೂ ಹಾಗಿರಲಿ. ಒಟ್ಟಾರೆ ಅದು ಭಾರತೀಯ ಸಂಸ್ಕೃತಿಯ ಸಾರ. ಆ ಸಾರದಲ್ಲೂ ಸಾರವೆಂದರೆ ಸ್ವಾರ್ಥ. ಈ ವೇದಾಂತ ಸ್ವಾರ್ಥವನ್ನು ಒಪ್ಪುತ್ತದೆ; ಆದರೆ ಅಲ್ಲೆ ವಿರಮಿಸುವುದಿಲ್ಲ; ವಿಸ್ತಾರವಾಗುತ್ತಾ, ಲೋಕಕ್ಕೆಲ್ಲಾ ವಿಸ್ತಾರವಾಗುತ್ತಾ ಹೋಗುತ್ತದೆ. ಮಾಸ್ತಿ ಅವರಂತೂ ನಿಜವಾಗಿ ಅದನೊಪ್ಪಿ ಬಾಳಿದರು. ಆ ಆದರ್ಶವನ್ನು ರವೀಂದ್ರರಿಗಿಂತ ಹೆಚ್ಚು ಸಹಜವಾಗಿ, ಹೆಚ್ಚು ಸಮರ್ಥನೀಯವಾಗಿ ತಮ್ಮ ಕೃತಿಗಳಲ್ಲಿ, ಕಥೆಗಳಲ್ಲೂ ಚಿತ್ರಿಸಿದ್ದಾರೆ. ಆದರ್ಶಕ್ಕಾಗಿ ಚಿತ್ರಿಸಿದ್ದಲ್ಲ; ತಮ್ಮ ಬಾಳಿನಲ್ಲೆ ಅದನ್ನು ಕಂಡುಕೊಂಡು, ತಾವು ಕಂಡುಕೊಂಡಂತೆ ಚಿತ್ರಿಸಿದ್ದಾರೆ. ರವೀಂದ್ರರಿಗಿಂತ ಹೆಚ್ಚು ಸಫಲತೆಯನ್ನು ಈ ವಿಷಯದಲ್ಲಿ ಮಾಸ್ತಿಯವರು ಕಂಡುಕೊಂಡಿದ್ದಾರೆ ಎಂದರೆ ಹೊಗಳಿಕೆಗಾಗಿ

ಹೇಳಿಲ್ಲವೆಂದು ತಿಳಿಯಬೇಕು.

ಮಾಸ್ತಿಯವರು ವಿಫಲ ಉಪದೇಶಕರು ಎಂದೆ. ವಾಸ್ತವವಾಗಿ ಅವರು ಉಪದೇಶಕರೇ ಅಲ್ಲ. ಅವರಿಗೆ ಕಾದಂಬರಿಯಂಥ ದೊಡ್ಡ ಕ್ಯಾನ್‌ವಾಸು ಬೇಕು. ಆ ಕೆಲಸವನ್ನು ಒಮ್ಮೊಮ್ಮೆ ಕಥೆಯಲ್ಲಿ ಮಾಡಹೊರಡುತ್ತಾರೆ. ಎಲ್ಲಿ ತುಂಬಾ ತೀವ್ರರಾಗುತ್ತಾರೆ ಆಗ ಉಪದೇಶಕರಾಗಿ ಬಿಡುತ್ತಾರೆ. ಆದರೆ ಇಂಥ ಸಂದರ್ಭಗಳು ತೀರ ಕಡಿಮೆ, ಅಂಥ ಕಡೆಗಳಲ್ಲಿ ಸುಲಭವಾಗಿ ಅವುಗಳನ್ನು ಕಾಣಬಹುದು. ಕನ್ನಡದಲ್ಲಿ ಅತ್ಯಂತ ಕಡಿಮೆ ಉಪದೇಶ ಮಾಡತಕ್ಕವರು ಮಾಸ್ತಿ.

ಮಾಸ್ತಿಯವರ ಇಪ್ಪತ್ತೆಂಟು ಕತೆಗಳನ್ನು (ಹಿಂದೆ ಹೇಳಿದ ಹೊತ್ತಿಗೆಯವು) ನಾನು ಮೂರು ಗುಂಪು ಮಾಡಿದ್ದೇನೆ. ನಾನು ತೀರ ಮೆಚ್ಚತಕ್ಕವು ಹನ್ನೊಂದು. ಮೆಚ್ಚದವು ಹನ್ನೊಂದು. ಇನ್ನಾರು ಸಾಮಾನ್ಯ ಮಟ್ಟದಲ್ಲಿ ಸಾರ್ಥಕ್ಯಪಡೆಯತಕ್ಕವು. ಕಥೆಗಳನ್ನೆಲ್ಲ ಎಲ್ಲರೂ ಓದಿರುವುದರಿಂದ ಇಲ್ಲಿ ವಿವರವಾದ ವಿಶ್ಲೇಷಣೆಗೇನೂ ಹೋಗುವುದಿಲ್ಲ. ಒಂದೆರಡು ಮಾತುಗಳಲ್ಲಿ ನನ್ನ ಪ್ರತಿಕ್ರಿಯೆ ಮುಗಿಸಬೇಕಾಗಿದೆ. ಮೊದಲು ಮೆಚ್ಚದವನ್ನು ತೆಗೆದುಕೊಳ್ಳುತ್ತೇನೆ.

ಬೀದಿಯಲ್ಲಿ ಹೋಗುವ ನಾರಿ ಒಳ್ಳೆಯ ವಸ್ತು. ಕೊನೆಯವರೆಗೂ ನಿರ್ವಹಣೆ ಚೆನ್ನಾಗಿ ನಡೆದಿದೆ. ಕೊನೆಕೊನೆಯಲ್ಲಿನ ಶ್ರೀನಿವಾಸಯ್ಯನ ಮನಸ್ಸಿನ ಚಿತ್ರ ಸ್ಪಷ್ಟವಾಗಿ ಬರದೆ ಹೋಗಿದೆ. ಈ ಹಂತದಲ್ಲಿ ಇದರ ಸೋಲು. ಒಂದು ಹಳೆಯ ಕಥೆ, ಹೆಣ್ಣಿನ ಸೆಳೆತವನ್ನು ಕುರಿತದ್ದು. ಅದರಿಂದ ಯಾರೂ ತಪ್ಪಿಸಿಕೊಳ್ಳಲಾರರು ಎಂಬ ತತ್ವ ಸಾಮಾನ್ಯವಾಗಿ ಬಂದಿದೆ. ಇನ್ನೊಂದು ಹಳೆಯ ಕಥೆ, ಶ್ರದ್ಧೆಗೂ ಆಚರಣೆಗೂ ಸಂಬಂಧಿಸಿದ್ದು. ಬಾದಷಹನ ನ್ಯಾಯ ಮತ್ತು ಬಾದಷಹನ ದಂಡನೆ. ಇದರಲ್ಲಿ ಮೊದಲನೆಯದು ಈಚೆಗೆ ಚಂದಮಾಮದಲ್ಲೂ ಇನ್ನೊಂದು ಬಗೆಯಾಗಿ ಬಂದಿದೆ. ಬಾದಷಹನ ಯುಕ್ತಿ ಇಲ್ಲಿ ಮನಸೆಳೆವ ಅಂಶ. ಎರಡನೆಯದು ನ್ಯಾಯಪರತೆಯ ಆದರ್ಶವನ್ನು ಚಿತ್ರಿಸತಕ್ಕದ್ದು. ಇವುಗಳಲ್ಲಿ ಆಕರ್ಷಣೆ ಇಲ್ಲವೆಂದಲ್ಲ; ಆದರೆ ತೀವ್ರ ಸಂವೇದನೆ ಇಲ್ಲವಾಗಿವೆ ಅಷ್ಟೆ. ಮಸುಮತ್ತಿ ಡೂಬಾಯಿ ಪಾದ್ರಿಯ ಪತ್ರ ಇವೆರೆಡರಲ್ಲಿ ಮೊದಲನೆಯದರಲ್ಲಿ ವಿಚಾರ ಇದ್ದರೂ ಅದು ಹೃದಯ ತಟ್ಟುವಂತಾಗಿಲ್ಲ. ಎರಡನೆಯದರಲ್ಲಿ ನರಸಿಂಹನ ಪಾತ್ರ ಆಕರ್ಷಣೀಯವಾಗಿದ್ದರೂ ಪಾದ್ರಿಯ ಹಸಿತನ ಕಥೆ ನೀಡಬೇಕಾದ್ದನ್ನು ನೀಡುವುದಿಲ್ಲ. ಇಂದಿರಿಯೋ ಅಲ್ಲವೊ ಮತ್ತು ಪೆನುಕೊಂಡೆಯ ಕೃಷ್ಣಮೂರ್ತಿ ಎರಡೂ ದಾರುಣ ದುರಂತಗಳು. ಒಂದು ಸಾಮಾಜಿಕ ಇನ್ನೊಂದು ಐತಿಹಾಸಿಕ. ಮೊದಲನೆಯದು ನಿರೂಪಣೆಯಾಗಿ ಬಿಟ್ಟಿದೆ. ಎರಡನೆಯದರಲ್ಲಿ ದುರಂತವಷ್ಟೇ ನಮ್ಮನ್ನು ಮರುಗುವಂತೆ ಮಾಡಬೇಕಾಗಿದೆ. ಸಾರಿಪುತ್ರನ ಕಡೆಯ ದಿನಗಳು, ಹೇಮಕೂಟದಿಂದ ಬಂದಮೇಲೆ, ಇಲ್ಲಿ ಮೊದಲನೆಯದಕ್ಕಿಂತ ಎರಡನೆಯದು ವಾಸಿ. ಒಟ್ಟಾರೆ ಎರಡರಲ್ಲೂ ಕತೆಗಳನ್ನು ನಾವೇ ಶ್ರಮದಿಂದ ಹಿಂಬಾಲಿಸಬೇಕಾಗುತ್ತದೆ.

ಒಂದು ಮಟ್ಟದಲ್ಲಿ ಸಾರ್ಥಕ್ಯ ಪಡೆಯತಕ್ಕವು ರಂಗನ ಮದುವೆ ಇತ್ಯಾದಿಗಳು. ಲೇಖಕರು ಯಾವ ತತ್ವಗಳನ್ನೂ ಹೇಳುವುದು ಇಲ್ಲಿ ಮುಖ್ಯವಾಗಿಲ್ಲದಿರುವುದೇ ಅಥವಾ ಹಾಗೆಂದು ತೋರುವಷ್ಟು ಸರಳವಾಗಿರುವುದರಿಂದಲೇ ಇವು ಹೆಚ್ಚು ಸಾರ್ಥಕ ಕತೆಗಳಾಗಿವೆ. ತತ್ವ ಒಂದೇ ಆದರೂ ಅದನ್ನು ಒಂದು ಹಳೆಯ ಕತೆಗಿಂತ ರಂಗನ ಮದುವೆ ಚೆನ್ನಾಗಿ ಪ್ರತಿಪಾದಿಸುತ್ತದೆ. ವೆಂಕಟರಾಯನ ಪಿಶಾಚ ಮೋಜಿನದಾದರೆ ಮಲೆನಾಡಿನ ಒಂದು

ಪಿಶಾಚ ಅದ್ಭುತ ರಮ್ಯವಾಗಿದೆ. ಮೊದಲನೆಯದು ನಗುವನ್ನು, ಎರಡನೆಯದು ಭಯವನ್ನೂ ಹುಟ್ಟಿಸುತ್ತದೆ. ಎರಡೂ, ಅದರಲ್ಲೂ ಎರಡನೆಯದು ತುಂಬ ಸಹಜವಾಗಿ ಕುಡಿವಡೆದಿದೆ. ಬಾಳಿನ ಅನುಭವ ಭಾಗವಾಗಿ ಇವಕ್ಕೆ ಬೆಲೆ ಕೊಡಬೇಕಾಗಿದೆ.

ಈಗ ಮಾಸ್ತಿಯವರ ಯಶಸ್ವಿಯಾಗಿರುವ ಕಥೆಗಳನ್ನು ಎತ್ತಿಕೊಳ್ಳೋಣ :

ಇಲ್ಲಿಯ ತೀರ್ಪು ಮತ್ತು ಜೋಗ್ಯೋರ ಅಂಜಪ್ಪನ ಕತೆ ಒಂದು ಜಾತಿಯವು. ನ್ಯಾಯ ಬೇರೆ ಕಾನೂನು ಬೇರೆ ಎಂಬುದನ್ನು ನ್ಯಾಯಾಲಯಗಳೇ ಒಪ್ಪಿಕೊಳ್ಳುತ್ತವೆ. ಕಾನೂನೇ ನ್ಯಾಯವಾದಾಗ ಆಗುವ ಕೇಡುಗಳು ಇಲ್ಲಿ ಚಿತ್ರಿತವಾಗಿವೆ. ಸಾಮಾಜಿಕ ಕಟ್ಟಳೆಗಳು ಎಂದೂ ಪೂರ್ಣ ನ್ಯಾಯವನ್ನು ದೊರಕಿಸಲಾರವು. ಕಾನೂನುಬದ್ಧವಾದ ನ್ಯಾಯ ಅನ್ಯಾಯವೆನಿಸಬಹುದು. ಇಲ್ಲಿಯ ತೀರ್ಪಿನ ಪರಿಮಿತಿ ಅದು. ಮೊದಲ ಕತೆಯಲ್ಲಿ ನ್ಯಾಯಕೊಡತಕ್ಕವನ ಅಸಹಾಯಕತೆ, ಎರಡನೆಯದರಲ್ಲಿ ನ್ಯಾಯ ಪಡೆಯುವವನ ಅಸಹಾಯಕತೆ. ಒಟ್ಟಾರೆ ಇದು ಅನ್ಯಾಯ.

ರಂಗಸಾಮಿಯ ಅವಿವೇಕ, ವೆಂಕಟಸಾಮಿಯ ಪ್ರಣಯ - ಇವೆರಡು ಒಂದು ವಸ್ತುವಿನ ಎರಡು ಮುಖಗಳನ್ನು ಚಿತ್ರಿಸುತ್ತವೆ. ಇವು ರಂಗಸಾಮಿಯ ಪ್ರಣಯ ಮತ್ತು ವೆಂಕಟಶಾಮಿಯ ಅವಿವೇಕ ಎಂದು ಕರೆಯುವುದನ್ನು ಗಮನಿಸಬೇಕು. ಗಂಡು ಹೆಣ್ಣಿನ ಆಕರ್ಷಣೆಯಲ್ಲಿ ವಿವೇಕದ ಪಾತ್ರ ಎಷ್ಟೋ! ವೆಂಕಟಶಾಮಿಯದು ಕೇವಲ ಆರಾಧನೆ. ವೆಂಕಟಶಾಮಿ ರಂಗಸಾಮಿಯ ಅಂತಸ್ತಿನವನಲ್ಲ. ಅವನ ಹುಚ್ಚು ಮೆಚ್ಚುಗೆ ಗಳಿಸುತ್ತದೆ. ಆದರೆ ಲೇಖಕರು ಅವನಿಗಾಗಿ ಮನಸ್ಸು ಕರಗುವುದಲ್ಲದೆ ಅವನನ್ನು ಕಳೆದುಕೊಂಡ ಹುಡುಗಿಗಾಗಿ ಮನಸ್ಸು ಕರಗುತ್ತದೆನ್ನುವುದು ಮುಖ್ಯ. ಪ್ರೀತಿಯೆಂಬುದು ಅಂತಸ್ತು ಜಾತಿ ಇತ್ಯಾದಿಗಳಿಗೆ ಸೀಮಿತವಲ್ಲ ಎಂಬುದು ಇಲ್ಲಿ ಚೆನ್ನಾಗಿ ವ್ಯಕ್ತವಾಗಿದೆ. ಆದರೆ ರಂಗಸಾಮಿಯ ವಿಷಯ ಹಾಗಲ್ಲ. ಪ್ರಾಯಶಃ 'ಅವಿವೇಕ' ಎಂದು ಕರೆಯದಿದ್ದರೆ ಚೆನ್ನಾಗಿತ್ತೇನೊ! ಅವನ ಅವಿವೇಕಕ್ಕೆ ಪಾಪ ಎನ್ನಿಸದಿರದು. ಇವನಿಗೆ ಪ್ರೀತಿಯ ಅರ್ಥ ತಿಳಿಯದು. ಈ ರಂಗಸಾಮಿಯ ಹಾಗೇ ಬೆಸ್ತು ಬಿದ್ದವನು ಸುಬೇದಾರ. ಸುಬೇದಾರರಿಗೆ, ಪ್ಯಾದೇಮಾತು ಕೇಡು ಕ್ಷುಲ್ಲಕಕ್ಕೆ ಹೇಗೆ ಬಾಗಬೇಕು ಎಂಬುದನ್ನು ತೋರಿಸುತ್ತದೆ.

ಕೃಷ್ಣಮೂರ್ತಿಯ ಹೆಂಡತಿ, ಕಾಮನ ಹಬ್ಬದ ಒಂದು ಕತೆ, ಮೇಲೂರಿನ ಲಕ್ಷ್ಮಮ್ಮ-ಮೂರು ಕ್ರೂರ ಚಿತ್ರಗಳೇ. ಮೊದಲನೆಯದು ಕೊನೆಯದು ಒಂದು ರೀತಿಯಾದರೆ ಕಾಮನ ಹಬ್ಬದ ಒಂದು ಕತೆ ಇನ್ನೊಂದು ರೀತಿಯದು. ಪ್ರಾಯಶಃ ಈ ಮೂರು ಕಥೆಗಳು ಸಂಕೀರ್ಣ ವಸ್ತುವನ್ನು ತುಂಬಾ ಯಶಸ್ವಿಯಾಗಿ, ಸರಳವಾಗಿ ನಿರ್ವಹಿಸಿವೆ ಎನ್ನಬೇಕು. ಕೃಷ್ಣಮೂರ್ತಿಯ ಹೆಂಡತಿ, ಮೇಲೂರಿನ ಲಕ್ಷ್ಮಮ್ಮ ಎರಡೂ ದುರಂತಗಳು. ಒಂದು ಸಾಮಾಜಿಕವಾಗಿ ಅನ್ಯಾಯಕ್ಕೆ ಗುರಿಯಾದರೆ - ಇನ್ನೊಂದು ವಿಧಿಯಿಂದ ಅನ್ಯಾಯಕ್ಕೆ ಒಳಗಾದುದು. ಮೇಲೂರಿನ ಲಕ್ಷ್ಮಮ್ಮನಿಗೆ ಮೇಲೂರೇ ನ್ಯಾಯವನ್ನು ದೊರಕಿಸಬೇಕು. ಕಾಮನ ಹಬ್ಬದ ಕತೆ ಸುಖಾಂತವಾದುದು ವಿಶೇಷದ ಮಾತಲ್ಲ; ಅದೂ ದುರಂತದ ಕತೆಯೇ ವಾಸ್ತವವಾಗಿ. ತಿರುವು ಒಂದು ಆಕಸ್ಮಿಕ; ಅದರಿಂದ ಕತೆಗೆ ಕೋಡೇನೂ ಬಂದಿಲ್ಲ. ಈ ಮೂರು ಕಥೆಗಳಲ್ಲೂ ಮಾಸ್ತಿ ಅವರು ಸ್ತ್ರೀಯ ಅಮಾಯಕತೆಯನ್ನು, ತ್ಯಾಗಪರವಾದ ನಿಷ್ಠೆಯನ್ನು ಚಿತ್ರಿಸುತ್ತಾರೆ. ಸ್ತ್ರೀ ನೋವಿನ ಸಂಕೇತವಾಗಿದೆ, ತ್ಯಾಗದ ಸಂಕೇತವಾಗಿದೆ ಮಾಸ್ತಿ ಅವರಿಗೆ. ಪ್ರಾಯಶಃ ಇನ್ನೊಂದು ಕಾಣಬೇಕಾಗಿದ್ದುದು

'ಬೀದಿಯಲ್ಲಿ ಹೋಗುವ ನಾರಿ' ಯಲ್ಲಿ. ಅದರ ವಿಷಯ ಹಿಂದೆ ಪ್ರಸ್ತಾಪಿಸಿದ್ದೇವೆ. ಇಲ್ಲಿ ಸ್ತ್ರೀಯ ಇನ್ನೊಂದು ಮುಖವನ್ನು ಅವರು ಕಂಡಿದ್ದಾರೆ; ಆದರೆ ಕಾಣಿಸಬಯಸುವುದಿಲ್ಲ. ಪ್ರಾಯಶಃ ಗಂಡು ಹೆಣ್ಣನ್ನು ಉದಾರವಾಗಿ ಕಾಣುವುದು ತನ್ನ ಪರಿಮಿತಿಯ, ಪಾಲಿನ, ಎಚ್ಚರದಿಂದ ಎಂದು ಕಾಣುತ್ತದೆ. ವಿಧಿಯ ಕ್ರೌರ್ಯವನ್ನು ಒಪ್ಪುವಾಗ ಮಾನವನ ಕ್ರೌರ್ಯವನ್ನು ಏಕೆ ಒಪ್ಪಬಾರದೋ ತಿಳಿಯದು.

ನಿಜಗಲ್ಲಿನ ರಾಣಿ ಮತ್ತು ಪಂಡಿತನ ಮರಣ ಶಾಸನ - ಎರಡೂ ಹತ್ತಿರ ಬರತಕ್ಕವು. ನಿಜಗಲ್ಲಿನ ರಾಣಿ ಅಸಹಾಯ ಪರಿಸ್ಥಿತಿಯಲ್ಲಿ ವೀರಳಾಗುತ್ತಾಳೆ. ಆದರೆ ಪಂಡಿತರ ನಿರ್ಧಾರ ಅಸಹಾಯಕತೆಯಿಂದ ಬಂದುದಲ್ಲ. ತನ್ನನ್ನು ಕೊಟ್ಟು ನ್ಯಾಯವನ್ನು ನಿಲ್ಲಿಸುವ ದೃಷ್ಟಿಯಿಂದ ಎರಡೂ ಒಂದೇ. ರಾಣಿ ವ್ಯಕ್ತಿನಿಷ್ಠನಾದ ದಾರಿಯಿಂದ ಅದನ್ನು ಸಾಧಿಸಿದರೆ ಪಂಡಿತ ವಸ್ತುನಿಷ್ಠ ದಾರಿಯಲ್ಲಿ ಸಾಧಿಸುತ್ತಾನೆ.

ಸಾಮಾನ್ಯವಾದ ಸಾಂಸಾರಿಕ ಚಿತ್ರವನ್ನು ಕಥೆಯೇ ಅಲ್ಲವೇನೋ ಎಂದು ಚಿತ್ರಿಸಿ ಸಂಕೀರ್ಣ ಬಾಳಿನೊಳಗಣ ಹೊಂದಾಣಿಕೆಯನ್ನು ವಿಶ್ವಸಾಧಾರಣವಾಗಿ ನಿರೂಪಿಸುವ ವಿಶಿಷ್ಟ ಕಥೆ ಮೊಸರಿನ ಮಂಗಮ್ಮ. ಇದು ಮಾಸ್ತಿಯವರನ್ನು ಚೆನ್ನಾಗಿ ಗುರುತಿಸುತ್ತದೆ. ಈ ಕಥೆಯ ಕೊನೆಯ ಪ್ಯಾರಾದಲ್ಲಿ ನಾವು ಹೇಳಬೇಕಾದ್ದನ್ನು ಲೇಖಕರು ಹೇಳಿಬಿಟ್ಟಿದ್ದಾರೆ. ಅದೇ ಇದರ ಕೊರತೆ; ಆದರೆ ಅದರಿಂದ ಕಟ್ಟಡಕ್ಕೆ ಹಾನಿಯೇನೂ ಇಲ್ಲ. ಒಡಬಾಳು, ಅದರಲ್ಲಿರಬೇಕಾದ ಪ್ರೇಮ ಬಂಧನವೇ. ಅದು ಹಿತವಾದ ಬಂಧನವಾಗದಿದ್ದಾಗ ಸ್ವಾತಂತ್ರ್ಯದ ಸ್ಪರ್ಧೆ. ಸ್ವಾತಂತ್ರ್ಯ ಪಡೆದಾಗ ಏಕಾಕಿತನ, ತಬ್ಬಲಿತನ ಕಟ್ಟಿಟ್ಟದ್ದು. ಬಾಳಿನಲ್ಲಿ ನಾವೆಲ್ಲ ಹೀಗೆ ಏಕಾಕಿಗಳು, ತಬ್ಬಲಿಗಳು. ನಮಗೆ ಬಂಧನವೂ ಬೇಕು ಸ್ವಾತಂತ್ರ್ಯವೂ ಬೇಕು ಎನ್ನಿಸುತ್ತದೆ. ಆದರೆ ಪೂರ್ಣ ಸ್ವಾತಂತ್ರ್ಯ ಭಯಕಾರಿಯಾಗಿರುತ್ತದೆ. ರವೀಂದ್ರರ ಚಿನ್ನದ ಪಂಜರದ ಹಾಗೆ.

ರವೀಂದ್ರರು ಪ್ರತಿಮೆ ಪ್ರತೀಕಗಳನ್ನು ಕಡೆಯುತ್ತಾರೆ. ಸಿದ್ಧ ಸೂತ್ರಗಳಲ್ಲಿ, ಸಿದ್ಧಪಾತ್ರಗಳಲ್ಲಿ, ಸಿದ್ಧ ತತ್ವಗಳನ್ನು ಪ್ರತಿಪಾದಿಸುತ್ತಾರೆ. ಅದು ಅವರ ದಾರಿ. ಆದರೆ ಮಾಸ್ತಿಯವರು ಹಾಗೆ ಮಾಡುವುದಿಲ್ಲ. ಇಡೀ ಕಥೆಯೇ ಒಂದು ಪ್ರತಿಮೆಯಾಗಬೇಕು - ಅದಕ್ಕಾಗಿ ಸರಳಮಾರ್ಗ ಹಿಡಿಯುತ್ತಾರೆ. ಭಾಸ ಶ್ರೇಷ್ಠ ಅಚ್ಚುಕಟ್ಟುಗಾರ. ಕಲೆಗಾರಿಕೆಯ ಚೌಕಟ್ಟು ತಂತ್ರದಲ್ಲಿ ಪರಿಣತ. ಕಾಳಿದಾಸನ ಹಾಗೆ ಮಾತಿನ ಕುಶಲತೆಗಿಂತ ಭಾಸ ಸನ್ನಿವೇಶಗಳ ಕುಶಲತೆಯಲ್ಲಿ ಮೆರೆಯುತ್ತಾನೆ. ಮಾಸ್ತಿಯವರಲ್ಲಿ ಆ ಮೋಡಿ, ಮಾತಿನ ಚಮತ್ಕಾರ ಇಲ್ಲ. ನಿರಾಭರಣ ಸೌಂದರ್ಯ ಇವರಿಗೆ ಮೆಚ್ಚು.

ಮಾಸ್ತಿಯವರು ಆದಷ್ಟು ಜನಕ್ಕೆ ಸಂತೋಷವನ್ನು ನೀಡುವ 'ದಾಸ' ಎಂಬ ಮಾತು ಹಿಂದೆಯೇ ಬಂತು. ಅದು ಅವರ ಮೊದಲ ಅಸ್ತ್ರ. ಆದರೆ ಅವರು ತುಂಟ ಮೋಡಿಗಾರನ ಹಾಗೆ ನನಗೆ ತೋರುತ್ತದೆ. ಪೆಪ್ಪರಮೆಂಟಿನ ಆಸೆ ತೋರಿಸಿ ಶಾಲೆಗೆ ಸೇರಿಸುವ ರೀತಿ ಅದು. ಆದರೆ ಶಾಲೆಯ ತೊಂದರೆ ಕೊಡುವುದಿಲ್ಲ. ಇನ್ನೂ ಒಂದು ರೀತಿ ಹೇಳುವುದಾದರೆ ಮಾಸ್ತಿ ಲಲ್ಲೆ ಹೊಡೆಯುವ ಗೈಡು. ಅದು ತೋರಿಸುತ್ತೇನೆ, ಇದು ತೋರಿಸುತ್ತೇನೆ ಎಂದು ಕರೆದೊಯ್ಯುತ್ತಾರೆ. ಅದು ನೋಡಿ ಇದು ನೋಡಿ ಎಂದು ವರ್ಣಿಸಿ ಆನಂದಪಡಿಸುತ್ತಾರೆ. ದಾರಿ ಕಳೆದದ್ದೇ ನಮಗೆ ಗೊತ್ತಾಗುವುದಿಲ್ಲ. ಸಂತೋಷದ ಸ್ವರ್ಗಕ್ಕೆ ಒಯ್ಯುತ್ತೇನೆ ಎಂದು ಕೊನೆಗೆ ಕಾಡಿನ ಮಧ್ಯೆ ತಂದು ಬಿಡುತ್ತಾರೆ. ಇದ್ದಕ್ಕಿದ್ದ ಹಾಗೆ ಅದೃಶ್ಯರಾಗುತ್ತಾರೆ.

ಮನಸ್ಸಿನಲ್ಲಿದ್ದವರು ದಾರಿ ಮಾಡಿಕೊಂಡೋ, ಕಂಡುಕೊಂಡೋ ಹೋಗಬಹುದು. ಆ ಹೊತ್ತಿನಲ್ಲಿ ಮಾಸ್ತಿಗೆ ತುಂಟನಗು ಎಂದು ತೋರುತ್ತದೆ. ತಬ್ಬಿಬ್ಬಾಗಲು ಅವಕಾಶವಿಲ್ಲ; ಕೂಡಲೇ ಮೊದಲ ಸ್ಥಳ ಸೇರಿಸಿಬಿಡುತ್ತಾರೆ.

ಇದು ಮಾಸ್ತಿ ಅವರ ಕಥೆಗಳ ವಿಶೇಷ ಎಂದುಕೊಂಡಿದ್ದೇನೆ. ಸರಳದಿಂದ ಸಂಕೀರ್ಣದ ಚಿತ್ರಣ ಅವರದು. ಅವರ ಕತೆಗಳು ನಿರಾಯಾಸವಾಗಿ ಒಯ್ಯುತ್ತವೆ. ಯಾವುದೋ ಒಂದು 'ಸಮಾಧಿ'ಯಲ್ಲಿ, ಕೇಂದ್ರಬಿಂದುವಿನಲ್ಲಿ ನಿಲ್ಲಿಸಿಬಿಡುತ್ತವೆ. ಅವರ ಕಥನ ಕವನಗಳಲ್ಲೂ ಈ ಲಕ್ಷಣವನ್ನೇ ಗಮನಿಸಬಹುದು. ಈ ವಿಶಿಷ್ಟತೆ ಕನ್ನಡ ಲೇಖಕರಲ್ಲಾರಲ್ಲೂ ಕಾಣುವುದಿಲ್ಲ.

ಕೇವಲ ಐತಿಹಾಸಿಕ ಮಹತ್ವದಲ್ಲಿ ನನಗೆ ನಂಬಿಕೆಯಿಲ್ಲ. ಮಾಸ್ತಿಯವರ ಸಾಧನೆಗಳಂತೂ ಆ ಮಹತ್ವನ್ನು ನೆಚ್ಚಬೇಕಾಗಿಲ್ಲ. ಅವು ನೂರು ಕಾಲಕ್ಕೂ ಬಾಳಿಕೆ ಬರುವ ಸತ್ವ ಉಳ್ಳವು.

ಕತೆಗಾರ ಮಾಸ್ತಿಯವರ ಕಲೆ ಮತ್ತು ಒಲವು

ಡಾ|| ದ.ರಾ. ಬೇಂದ್ರೆ

ಶ್ರೀಮಾನ್ ಮಾಸ್ತಿಯವರನ್ನು ಕನ್ನಡ ಕತೆಗಾರಿಕೆಯ ಪುಣ್ಯೋಗಮವೆಂದೂ ಪವಿತ್ರ ಪ್ರವಾಹವೆಂದೂ ಅವರ ಮಿತ್ರರಾದ ನಾವೆಲ್ಲರೂ ಅವರನ್ನು ಗೌರವಿಸಲು ಇಲ್ಲಿ ಕಲಿತಿರುವೆವು. ಇಂಥ ಕಾಲಕ್ಕೆ ಅವರ ಕೃತಿಗಳ ಮೂಲಕ್ಕಿರುವ ಮನದ ಝರಿ ಎಂತಹದೆಂದು ನಾವು ತಿಳಿದುಕೊಳ್ಳಲು ಯತ್ನಿಸಿದರೆ ತಪ್ಪಾಗದು. ಎಲ್ಲ ಕಲಾಕೃತಿಯ ಮೂಲಘಟಕಗಳು ನಾಲ್ಕೆಂದು ಈ ಪ್ರಬಂಧದ ಮಟ್ಟಿಗೆ ಪ್ರಮೇಯವಾಗಿಟ್ಟುಕೊಂಡು ಮಾಸ್ತಿಯವರ ಮನದ ರಚನೆಯ ಚತುಷ್ಕೋಣಗಳನ್ನು ಕುರಿತು ನಾಲ್ಕು ಮಾತು ಇಲ್ಲಿ ಹೇಳುತ್ತೇನೆ.

ಎಲ್ಲ ಕಲಾಕೃತಿಗಳಲ್ಲಿ ಕಲೆಯೊಂದು ಪಾಲು, ಜಗದ ವಿಜ್ಞಾನ ಒಂದು ಪಾಲು, ಕೃತಿದ್ರವ್ಯವಾದ ವಸ್ತುವೊಂದು ಪಾಲು, ಪ್ರತಿಭಾಶಕ್ತಿಯೊಂದು ಪಾಲು. ಈ ನಾಲ್ಕು ಬಿಟ್ಟು ಐದನೆಯದಿದ್ದರೆ ಅದು ದೈವ. ಕಲೆಯೆಂಬುದು ಕರ್ಮ ಕೌಶಲ್ಯವು. ಯಾರಿಗೂ ಕತೆ ಹೇಳುವುದು, ಯಾರಿಂದಲೂ ಕತೆ ಕೇಳುವುದು, ಯಾವ ಕತೆಗಾರರನ್ನೂ ವಿಮರ್ಶಕ ಸಹಾನೂಭೂತಿಯ ಸಾಮರಸ್ಯದಿಂದ ಸೇವಿಸುವುದು, ಜೀವನ ಕರ್ಮ ಪರಂಪರೆಯನ್ನೆಲ್ಲ ಕತೆಯಾಗಿ ಕಾಣುವುದು, ನೋಡುವುದು ಇದರಿಂದಲೆ ಕತೆಯ ಕಲೆಯು ಕರಗತವಾಗಿ ಬಿಡುವುದು. ಮಾಸ್ತಿಯವರಿಗೆ ಏನಕೇನ ಪ್ರಸ್ತಾಪದಿಂದ ಮತ್ತೆ ಮತ್ತೆ ಕತೆ ಹೇಳುವುದೂ, ಮಿಗಿಲಾದ ತಾಳ್ಮೆಯಿಂದ ಎಂಥವರೂ ಹೇಳುವ ಜೀವನ ಕಥನವನ್ನು ಕೇಳುವದು ವಾಡಿಕೆಯಾಗಿದೆ. ಅಗಳು ಹಿಚಿಕಿ ಅನ್ನ ನೋಡಿದಂತೆ ಅವರು ವಿವಿಧ ಕಥಾ ಲೇಖಕರ ಹೃದಯವನ್ನು ಮಾರ್ಮಿಕತೆಯಿಂದ ತಿಳಿದುಕೊಂಡಿದ್ದಾರೆ, ಮೆಚ್ಚಿದ್ದಾರೆ. ಪರಗುಣ ಕಥನರತಿಯಿಂದ ಸ್ವಗುಣವಿವರ್ಧನವಾಗುವುದೆಂದು ಅವರು ಚೆನ್ನಾಗಿ ಅರಿತಿದ್ದಾರೆ. ಇದಲ್ಲದೆ ಅವರಿಗೆ ದಿನದ ಜೀವನದ ಯಾವ ಮುಖವೂ ತನ್ನ ಸಮಗ್ರ ಕಥಾದೇಹವನ್ನು ಪ್ರಕಟಿಸುವುದು. ಪ್ರತಿಭೆಯ ಮೂಲಕ ಅವರಿಗೆ ಹಾಗೆ ತೋರುವದೋ ಊಹಾಬಲದಿಂದ ಅವರು ಕ್ಷಣ ಮಾತ್ರದಲ್ಲಿ ಸಂಪೂರ್ಣ ಜೀವನವನ್ನು ಸೃಷ್ಟಿಸಿಕೊಳ್ಳವರೋ ಹೇಳಬರದು. ಇಲ್ಲಿ ಕಲಾಶಕ್ತಿ, ಪ್ರತಿಭಾಶಕ್ತಿ ಸುಗಮವಾಗುವದು. ಕೃತ್ರಿಮತೆಯು ಕೃತಿವಂತಿಕೆಯಲ್ಲಿ ಲೀನವಾಗುವುದು. ಅಭ್ಯಾಸವಾವುದು ಪ್ರಕೃತಿ ಗುಣವಾವುದು ಎಂಬುದನ್ನು ಬೇರ್ಪಡಿಸುವುದು ಕಷ್ಟವಾಗುವುದು.

ಇನ್ನು ಎರಡನೆಯ ಶಕ್ತಿಯೆಂದರೆ - ಜಗದ ವಿಜ್ಞಾನ, ಅಥವಾ ಜೀವನದ ಜ್ಞಾನಾನುಭವ. ಬಾಲ್ಯದಲ್ಲಿ ಬಡತನವನ್ನೂ ತಾರುಣ್ಯದಲ್ಲಿ ಅಧಿಕಾರಪದವನ್ನೂ ಅನುಭವಿಸಿದ ಮಾಸ್ತಿಯವರಿಗೆ ಎರಡು ಕಣ್ಣಿನಿಂದಲೂ ಜೀವನವು ಕಂಡಿದೆ. ಅದರಲ್ಲೂ ಬಡತನವಿದ್ದಾಗಲೂ ದೈನ್ಯಕ್ಕಿಳಿಯದೆ ಆತ್ಮಗೌರವದ ಧಾರಣೆಯನ್ನು

ಕಳೆದುಕೊಳ್ಳದುದರಿಂದಲೂ, ಅಧಿಕಾರವಿದ್ದಾಗಲೂ ಮದಕ್ಕೇರದೆ ಜೀವನದ ಸುಖದುಃಖ ವಿವರದ ಸಮತೂಕವನ್ನು ಕಾಯ್ದುಕೊಂಡದುದರಿಂದಲೂ ಅವರ ಕಣ್ಣಿಗೆ ಯಾವ ಮೋಹದ ಪೊರೆಯೂ ತನ್ನ ತೆರೆಯನ್ನೆಳೆಯಲಿಲ್ಲ. ಅಧಿಕಾರದಲ್ಲಿದ್ದಾಗ ಪರಾಂಬರಿಕೆಗೆ ಬಂದ ಎಲ್ಲ ಓಲೆಕಾಗದಗಳೂ ಕರ್ಣ ಪಿಶಾಚಗಳಂತೆ ತಮ್ಮ ಆತ್ಮಕಥೆಯನ್ನು ಅವರ ಕಿವಿಗೆ ಹಾಕಿವೆ. ಅಧಿಕಾರದ ಆಸನವು ಅವರನ್ನು ಸಿರಿವಂತರ ಮನೋರಾಜ್ಯದಲ್ಲಿ ಸೆರೆಹಿಡಿಯಲಿಲ್ಲ. ಅವರ ಮನದ ಕಿಟಕಿ ಬಾಗಿಲಂತೆ ಅವರ ಮನೆಯ ಬಾಗಿಲೂ ಜೀವನವು ಕಣ್ಮರೆಯಾಗುವಂತೆ ಯಾವ ಪರದೆಯನ್ನೂ ಎಳೆದುಕೊಳ್ಳಲಿಲ್ಲ. ಹೀಗಾಗಿ ಹತ್ತು ದಿಕ್ಕಿನಿಂದ ಜೀವನವು ಅವರನ್ನು ಬೆಟ್ಟಿಯಾಗಿದೆ.

ಮಾಸ್ತಿಯವರು ಆಶಾವಾದಿಗಳಾಗಿರುವದೇನೋ ನಿಜ; ಆದರೆ ಪರದುಃಖವು ಎಂದಿಗೂ ಅವರಿಗೆ ಶೀತಲವಾಗಿ ಕಂಡಿಲ್ಲ. ತಮ್ಮ ಧ್ಯೇಯವಾದ ಬಲದಿಂದ ಕರಿದನ್ನೆಲ್ಲ ಬಿಳಿದನ್ನಾಗಿ ಬಣ್ಣಿಸಿ ನೋಡುವ ಹಠವಾದಿಗಳವರಲ್ಲ. ಅವರು ಜೀವನದ ರೌದ್ರಭಯಾನಕ ಬೀಭತ್ಸಗಳ ತ್ರಿಮೂರ್ತಿಗಳ ಮುಖದ ಮೇಲೆ ತೆಳುವಾದ ಜವನಿಕೆಯನ್ನೆಳೆದಿದ್ದರೂ ಆ ವಿಷಯದಲ್ಲಿ ಅವರು ಶೂನ್ಯವಾದವನ್ನು ಪ್ರತಿಪಾದಿಸುವುದಿಲ್ಲ. ದೇವರ ವಿಷಯದಲ್ಲಿರುವಂತೆ ಅದರ ವಿಷಯವಾಗಿ ಅವರಿಗೊಂದು ಭಯಭಕ್ತಿಯಿದೆ. ದಿವ್ಯ ದೃಷ್ಟಿಯ ತೃತೀಯ ನೇತ್ರದಿಂದಲೂ ಜಗದ್ಮೂಲದ ದರ್ಶನವು ಅವರಿಗಾಗಿದೆ. ಆದರೆ ವಿಶ್ವರೂಪವನ್ನು ನೋಡಿ ಭಯಚಕಿತನಾದ ಅರ್ಜುನನಂತೆ ದೇವದೇವನ ಸೌಮ್ಯ ರಮ್ಯರೂಪದ ಉಪಾಸನೆಯನ್ನು ಅವರು ಬಹು ಭಕ್ತಿಯಿಂದ ನಡೆಯಿಸಿರುವರು. ಹಣೆಗಣ್ಣನ್ನು ದಕ್ಕಿಸಿಕೊಳ್ಳಬಲ್ಲವನು ಶಿವ-ರುದ್ರನಂತೆ ಜಗದೇಕನಾದ ಜೋಗಿಯಾಗಿರಬೇಕಲ್ಲದೆ ಅಂಥಿಂಥವರು ಕುತೂಹಲದಿಂದ ರೌದ್ರ, ಭಯಾನಕ, ಬೀಭತ್ಸ ತ್ರಿಮೂರ್ತಿಗಳ ಬಣ್ಣನೆಗೆ ಕುಂಚವನ್ನೆತ್ತುವುದು ತಲೆತುರಿಸಿಕೊಳ್ಳಲು ಹಾವಿನ ಹೆಡೆಯನ್ನೆತ್ತುವ ಹುಡುಗಾಟ ನಡೆಸಿದಂತೆ ಎಂದು ಅವರು ತಿಳಿಯುವರು. ಇಷ್ಟಾಗಿ ಅವರ ಕಣ್ಣಿಗೆ ಬೀಳದ ಕಾಠಿಣ್ಯವಿಲ್ಲ, ಅದಕ್ಕೆ ಎದೆ ಕರಗಿ ನೀರಾಗದ ಜೀವನವನ್ನು ಜಗತ್ತನ್ನು ನೋಡಿದ್ದಾರೆ. ಜಗವೂ ಜೀವನವೂ ಅವರಿಗೆ ಸಾಕ್ಷಾತ್ತಾಗಿ ಕಂಡಿದೆ. ಅವರು ಕಂಡದ್ದನ್ನೆಲ್ಲ ತೋರಿಸುವುದು ದೈವದ ಇಚ್ಛೆಗೆ ಸೇರಿದುದು. ಜಗದ ವಿಜ್ಞಾನವು ಅವರಿಗೆ ವಾಸ್ತವವಾಗಿರುವುದಾಗಿ ಅವರ ಕೃತಿಗಳಿಂದ ಕಂಡುಬಂದರೂ ಅವರು ರುದ್ರನನ್ನೆ ಶಿವನನ್ನಾಗಿ ಕಾಣುವ ಪ್ರಾತಿಭಚಕ್ಷುಗಳುಳ್ಳವರು. ಫಾಲನೇತ್ರವು ಹಣೆಯ ನಾಮದಂತೆಯೂ, ಭುಜಂಗಾವಳಿಯ ಭೂಷಣಾವಳಿಯಂತೆಯೂ, ವ್ಯಾಘ್ರಾಂಬರವು ದಿಗಂಬರತ್ವದ ಮುಸುಕಾಗಿಯೂ, ಭಸಿತವು ದೇಹಪ್ರಭೆಯಾಗಿಯೂ, ವಿಷವು ಕಂಠಾಭರಣವಾಗಿಯೂ ಮಾರ್ಪಾಡಾಗುವ ಇಂದ್ರಜಾಲವು ಕಲಾವತಿಯಾದ ಅವರ ವಾಣಿಯಲ್ಲಿದೆ. ಆದರೆ ಅವರೆಂದೂ ಬೆಂಕಿಯನ್ನು ನೀರೆಂದೂ, ಹಾವನ್ನು ಹೂವೆಂದೂ, ಹುಲಿಯನ್ನು ಹುಸಿಯೆಂದೂ, ಬೂದಿಯನ್ನು ಭಾಗ್ಯವೆಂದೂ, ಕಹಿಯನ್ನು ಸಿಹಿಯೆಂದೂ ತಿಳಿದಿರಲಾರರು. ಜೀವನದಂತೆ ಜೀವಿಗಳ ವೈವಿಧ್ಯವನ್ನೂ, ವಿಶಿಷ್ಟ ದೃಷ್ಟಿಗಳ ಆನಂತ್ಯವನ್ನೂ, ಮಾನವದೃಷ್ಟಿಯ ಸ್ವಾಭಾವಿಕೇಚ್ಛೆಯನ್ನೂ ಅವರು ಚೆನ್ನಾಗಿ ಅರಿತಿದ್ದಾರೆ. ವಾಚಕರ ಅಂತಃಕರಣವನ್ನು ಸೂರೆಗೊಳ್ಳುವ ಸಾಮರ್ಥ್ಯವು ಈ ಅರಿವಿನಿಂದಲೇ ಸಾಧ್ಯವಾಗುವುದು.

ಇನ್ನು ಮೂರನೆಯ ಕೃತಿಶಕ್ತಿಯೆಂದರೆ ಕಲಾದ್ರವ್ಯದ ವಸ್ತುಶಕ್ತಿ. ಮಾಸ್ತಿಯವರ ಕೈಯಲ್ಲಿ ಕತೆಯು ಕತೆಯಾಗಿಯೆ ಉಳಿದಿದೆ. ಬೆಳೆದಿದೆ. ಕಲ್ಲಿಗೆ ಮೇಣದ ಮಿದುತರುವದಾಗಲಿ, ಅರಲಿಗೆ ಕಲ್ಲಿನ ಹದ ಬರಿಸುವುದಾಗಲಿ, ಐಂದ್ರಜಾಲಕ ಚಮತ್ಕಾರವಾದೀತು, ಬೂಟಾಟಿಕೆಯ ವ್ಯಾಪಾರವಾದಿತೇ ಹೊರತು ವಸ್ತುವಿನ ಸ್ವಾಭಾವಿಕಾಂಗ ಸೌಂದರ್ಯದ ಸಹಜಾವಿಷ್ಕರಣವಾಗಲಾರದು. ಕಲ್ಲಲ್ಲಿ ನಾರೆತ್ತುವ ಚಾತುರ್ಯವು ಅವರಿಗೆ ಸೇರಿದ್ದಲ್ಲ. ಗಾಳಿಯಲ್ಲಿ ಗೋಪುರಗಳನ್ನಾಗಲಿ ಗಂಧರ್ವ ನಗರಗಳನ್ನಾಗಲಿ ಬರೆಯುವ ಹವ್ಯಾಸ ಅವರಿಗಿಲ್ಲ. ಆದರೆ ಜೀವನದೊಂದು ಜೀವಂತ ಪಿಂಡದಲ್ಲಿ ಬ್ರಹ್ಮಾಂಡದ ಸಕಲ ವ್ಯೂಹದ ಗೆರೆಗಳನ್ನು ಅವರು ತೋರಿಸಬಲ್ಲರು. ನೀತಿ, ಮನೋವ್ಯಾಪಾರ, ರಸೋತ್ಪತಿ, ಕಣಸು, ರಂಜನೆ, ಪಾತ್ರಸೃಷ್ಟಿ, ತತ್ತ್ವ, ಯಾವುದೂ ಕಥಾಂಗ ಲಕ್ಷಣವಾಗಿ ಅವರ ಕತೆಗಳಲ್ಲಿ ಮೂಡಿಬರಬಹುದಲ್ಲದೆ ಆಲದ ಎದೆ ಸೀಳಿ ಅರಳೆಲೆ ಚಿಗುರೆತ್ತಿ ಬಂದಂತೆ ಬಂದಳಿಕೆಯ ಆಗಂತುಕ ವ್ಯಾಪಾರಕ್ಕೆ ಅವರ ಕತೆಯಲ್ಲಿ ಆದರಾತಿಥ್ಯವಿಲ್ಲ. ಅದರಿಂದ ಅವರ ಕತೆಗೆ ಜೀವನದ ವಿಶಾಲಧ್ವನಿ ಸಾಮರ್ಥ್ಯವು ತಾನಾಗಿಯೇ ಬರುವುದು. ತಮ್ಮ ಶೈಲಿಯು ವಸ್ತುಶೀಲವಾಗಿರುವುದೆಂದು ಮಾಸ್ತಿಯವರು ಆಗಾಗ್ಗೆ ಹೇಳುವುದುಂಟು. ಕತೆಗಾರನು ಕತೆಯ ಮುಖವಾಗಬೇಕಲ್ಲದೆ, ಕತೆಗಾರನ ಕೈಯಲ್ಲಿ ಕತೆಯೊಂದು ಕತ್ತಿಯಾಗಬಾರದು. ಹಾಗಾದದ್ದಾದರೆ ಎಲ್ಲ ಬತ್ತೀಸಾಯುಧಗಳಾಗುವ ಕತೆಯ ಸ್ವಯಂಭುಶಕ್ತಿಯು ಮಾಯವಾಗುವದು. ಕಥಾಪಾತ್ರಗಳೊಮ್ಮೆ ಕತೆಗಾರನ ಹೃದ್ರಂಗವನ್ನು ಪ್ರವೇಶಮಾಡಿದೊಡನೆ ಮುಂದಿನ ವಾಗ್ವಿಲಾಸವೆಲ್ಲ ಶ್ರುತಿಯಾಗಿಯೂ ಕೃತಿಯೆಲ್ಲ ದರ್ಶನವಾಗಿಯೂ ಬಿಡುವುದು. ಇಲ್ಲಿಯೆ ವಸ್ತುಶಕ್ತಿಯು ಮತ್ತೆ ಪ್ರತಿಭಾಶಕ್ತಿಯೊಡನೆ ಮೈಗೂಡಿಕೊಳ್ಳುವದು.

ಕೃತಿಯ ಕೊನೆಯ ಶಕ್ತಿಯೆಂದರೆ ಪ್ರತಿಭೆ. ಕತೆಯಿರಲಿ, ನಾಟಕವಿರಲಿ, ಕವನವಿರಲಿ, ಪ್ರಬಂಧವಿರಲಿ, ಅವರ ಪ್ರತಿಭೆಯು ಸಿದ್ಧಹಸ್ತಳಾಗಿ, ವರದಪಾಣಿಯಾಗಿ ಅಭಯಕರಳಾಗಿ ನಿಂತಿದ್ದಾಳೆ. ಸಿದ್ಧರ ಜೀವನವಿರಲಿ, ನಿರ್ಬುದ್ಧರ ಜೀವನವಿರಲಿ, ಕುಹಕ ಕುಟಿಲರದಿರಲಿ. ನಿಷ್ಕಪಟಿಗಳಾದ ನಿಷ್ಕಳಂಕರದಿರಲಿ, ವಿಲಾಸಿಗಳದಿರಲಿ, ವಿರಾಗಿಗಳದಿರಲಿ; ವಿನೋದಿಗಳದಿರಲಿ, ವಿಪರೀತರದಿರಲಿ; ಧೀರರದಿರಲಿ, ಭೀರುಗಳದಿರಲಿ, ಯಥಾವತ್ತಾಗಿ ಅವರ ಪ್ರತಿಭೆಗೆ ಆ ಪಾತ್ರ ಮೂರ್ತಿದರ್ಶನವಾಗಿರುವುದು. ಸ್ತ್ರೀಪಾತ್ರ ಸೃಷ್ಟಿಯಲ್ಲಂತೂ ನವನವೋನ್ಮೆಷಶಾಲಿನಿಯಾದ ಅವರ ಪ್ರತಿಭೆಯು ಪ್ರಪಂಚದ ಕತೆಗಾರರಲ್ಲಿಯೂ ಅದ್ವಿತೀಯವಾಗಿದೆ. ಆರು ಹೆಣ್ಣು ಮಕ್ಕಳ ತಂದೆಯಾದ ತಾನು ಅರೆವಾಸಿ ಹೆಣ್ಣೆಯಾಗಿರುವುದರಿಂದ ಹೆಣ್ಣಿನ ಹೃದಯವು ತನಗೆ ಸ್ವಭಾವವಾಗಿಯೇ ಗೋಚರಿಸುವುದೆಂದು ಅವರು ತಮ್ಮ ಸಹಜ ವಿನೋದದಿಂದ ಆಗೀಗ ಆಡುವುದುಂಟು. ಅದೇನೇ ಇದ್ದರು ಕಾಮಹತವಾಗದ ಅವರ ನಿರ್ಮಲ ಮನದ ಮುಕುರವೇ ಈ ಅಪೂರ್ವದರ್ಶನಕ್ಕೆ ಕಾರಣವೆಂದು ನಾನು ತಿಳಿಯುತ್ತೇನೆ. ಕ್ರೋಧ ಕಲುಷಿತವಲ್ಲದ ಅವರ ಅಂತಃಕರಣಕ್ಕೆ ಎಂಥ ನೀಚಪಾತ್ರರೊಡನೆಯೂ ಕಾರುಣ್ಯದಿಂದಾದ ಸಹಾನುಭೂತಿಯಿಂದ ತೋರುವ ವಿನೋದ ವಿವರಗಳು ಬೇರೆ ಪ್ರಕೃತಿಯವರಿಗೆ ಗೋಡೆಯೆಂದೇ ಹೇಳಬೇಕು. ಮತ್ಸರದೂಷಿತವಿಲ್ಲದ ಅವರ ದೃಷ್ಟಿಯ ವಿವಿಧ ಗುಣಗಣ ರಸಿಕರೊಡನೆ ಮೈತ್ರಿಯಿಂದ ಬಹುಮುಖವಾದ ಭಾವನಾತರಂಗಗಳನ್ನು ಗ್ರಹಿಸಬಲ್ಲದಾಗಿದೆ. ಪ್ರತಿಭೆಯ ಕಿರಣಗಳನ್ನು ಪೃಥಕ್ಕರಿಸಿ ಹೇಳುವದು ಸಾಧ್ಯವಲ್ಲವಾದರೂ ರಜಸ್ತಮಗಳ ಧೂಳಿಕತ್ತಲುಗಳನ್ನು ದಾಟಿ

ಸತ್ತ್ವದ ಬೆಳಕಿನಲ್ಲಿ ಸತತವಾಗಿರುವ ಅವರ ಅಭ್ಯಾಸದಿಂದಲೆ ಅವರ ಪ್ರತಿಭೆ ಬಂದಿದೆ ಎಂದು ತೋರುವದು. ಆದರೂ ಸಾಹಿತ್ಯಸೃಷ್ಟಿಯನ್ನು ಮಾಡಿ ಸರ್ವಕಾಲಕ್ಕೂ ರಸದೂಟವನ್ನು ಹಾಕುತ್ತಿರುವ ಅವರ ಕಾವ್ಯಪ್ರತಿಭೆಗೆ ಅವರ ಜೀವನದಲ್ಲಿ ನೆಲೆಯಾಗಿ ನಿಂತ ಅವರ ಉಪಾಸ್ಯ ದೈವವೆ ಕಾರಣವೆನ್ನದೆ ಗತಿಯಿಲ್ಲ. ಅವರ 'ಬಿನ್ನಾಹ'ವನ್ನಾಲಿಸಿದ ದೈವವೆ ಅವರ ಕತೆಕವನಗಳನ್ನು ತನ್ನ ಕೃತಿಭವನಗಳನ್ನಾಗಿ ಮಾಡುತ್ತಿರುವದು.

ಇದಾಯಿತು ಅವರ ಕಲೆಯ ಜಾತಿ ರೀತಿ. ಇನ್ನು ಈ ಕಲೆಯ ಸೃಷ್ಟಿಯಾದ ಅವರ ಕಥಾಕೃತಿಗಳಲ್ಲಿ ಅವರ ಒಲವೂ ಮನಸ್ಸು ಮೂಡಿದ ಬಗೆಯನ್ನಷ್ಟು ಸಂಕ್ಷೇಪದಿಂದ ಹೇಳುವುದು ಈ ಪ್ರಸಂಗದಲ್ಲಿ ಅಪ್ರಸ್ತುತವಾಗಲಾರದು. ಕಥಾಸಾಹಿತ್ಯದಲ್ಲಿ ಗೊಮ್ಮಟನಂತೆ ನಿಂತ 'ಸುಬ್ಬಣ್ಣ' ಕತೆಯನ್ನು ಹಿಡಿದರೆ ಇದುವರೆಗೂ ಮಾಸ್ತಿಯವರ ಪ್ರಸಿದ್ಧವಾದ ಕತೆಗಳು ಅನೇಕ. ಇದಲ್ಲದೆ ಪದ್ಯ ರೂಪವಾಗಿಯೂ ಅವರು ಕತೆಗಳನ್ನು ಹೇಳಿದ್ದಾರೆ; ಕಥೆಗಳನ್ನು ನಾಟಕವಾಗಿ ರೂಪಿಸಿದ್ದಾರೆ. ಪ್ರಬಂಧಗಳಲ್ಲಿ ಕಥಾಗಾಥೆಗಳನ್ನು ಹರಡಿದ್ದಾರೆ, ಅದಿರಲಿ.

ಮಾಸ್ತಿಯವರ ಕೆಲವು ಕತೆಗಳ ಪ್ರಕಟನೆಯೊಡನೆ ಅಕುಟಿಲವಾದ ಸರಸ, ವಿನೋದ, ನಿರ್ಮಲವಾದ ಮಧರ ಶೃಂಗಾರ, ಜಂಭವಿಲ್ಲದ ನೈಜಗಾಂಭೀರ್ಯ, ವಿಕಾರವರಿಯದ ಧೀರವಿವೇಕ, ಕೈಗಡವಲ್ಲದ ಕನ್ನಡ ಜನ ಜೀವನ, ಸಾಹಿತ್ಯ ಸೇವೆಯಲ್ಲಿ ಗೌರವಗೆಡದ ವಿನಯ-ತುಂಬು ಜೀವನದ ಸಮಗ್ರತೆ ಪಠಾಗ್ರತೆ, ಅಂತೂ ಇವೇ ಪ್ರಮುಖವಾದ ಅವರ ಗುಣಗಳು ಬೆಳಕುಗಂಡವು. ವಾದರಸದ ಮತೀಯ ಆವರಣವುಳ್ಳ ಕತೆಗಳಲ್ಲಿ ಮಾಸ್ತಿಯವರ ಸರ್ವಧರ್ಮ ಸಹಾನುಭೂತಿಯೊಡನೆ ಭಾರತದ ಸ್ಥಿತಿಯ ಬಗ್ಗೆ ಕಾರುಣ್ಯ, ಅದರ ಆಶೆಗಳು ಸೂಚಿತವಾದವು. 'ಇಲ್ಲಿಯ ತೀರ್ಪು, ಮಸುಮತ್ತಿ, ದುಬಾಯಿ ಪಾದ್ರಿಯ ಒಂದು ಪತ್ರ' ಇವುಗಳಲ್ಲಿ ಕತೆಗಾರಿಕೆಯ ಕಲಾದೃಷ್ಟಿಯಿಂದ ಮಾಸ್ತಿಯವರು ತೋರಿಸಿದ ನಿಗ್ರಹದ ಮಾತಿರಲಿ ನವದೇಶಾಭಿಮಾನ ಪ್ರೇರಿತವಾದ ಆತ್ಮಗೌರವವುಳ್ಳ ಹೃದಯದ ಮೂಕವೇದನೆಗಳು ಭಾರತ ಸಂಸ್ಕೃತಿಯ ಬಗ್ಗೆ ಅವರಿಗೆ ಇರುವ ಗಂಭೀರ ಆಶಾವಾದವನ್ನು ಪ್ರಕಟಿಸಿದವು. 'ಬಾದಶಹನ ದಂಡನೆ' ಅದಕ್ಕೂ ಹೆಚ್ಚಾಗಿ 'ನಿಜಗಲ್ಲಿನ ರಾಣಿ' ಇವು ಮಾಸ್ತಿಯವರು 'ತಾಳೀಕೋಟೆ'ಯಲ್ಲಿ ಪ್ರಕಟಿಸಿದ ಆದರೆ ಇನ್ನೂ ಪ್ರಯೋಜನಕಾರಿಯಾಗ ಬೇಕಾಗಿರುವ ಜನಚೈತನ್ಯೋದ್ದೀಪನಕಾರಿಯಾಗಬಹುದಾದ ಅವರ ರೂಪಕ ನಿರ್ಮಾಣ ಶಕ್ತಿಯ ಸಂಚಕಾರವನ್ನು ಕೊಡುತ್ತಿವೆ. 'ವೆಂಕಟಶಾಮಿಯ ಪ್ರಣಯ' 'ಜೋಗ್ಯೆರ ಅಂಜಪ್ಪ ಕೋಳೀ ಕದ್ದ ಕಥೆ' 'ಮೊಸರಿನ ಮಂಗಮ್ಮ' 'ಸುಬೇದಾರ್ರ್ರೀಗೆ ಪ್ಯಾದೆ ಮಾತು' 'ದುಬಾಯಿ ಪಾದ್ರಿಯ ಒಂದು ಪತ್ರ' ಇವು ನೀಚಪಾತ್ರಗಳ ಸ್ವಭಾವವಿಷ್ಕರಣವು ಯಾವ ನಿಲುವಿನಲ್ಲಿ ಮಾಸ್ತಿಯವರ ಮನಸ್ಸಿಗೆ ತೋರುವದೆಂಬುದನ್ನು ಸೂಚಿಸುವುವು. 'ಹೇಮಕೂಟದಿಂದ ಬಂದ ಮೇಲೆ' ಎಂಬ ಕತೆಯು ಕಾಳಿದಾಸ ವಾಲ್ಮೀಕಿಗಳ ಪ್ರತಿಭಾ ಪ್ರವಾಹಗಳಲ್ಲಿ ಮಿಂದು ಮನದ ಸ್ವಾಭಾವಿಕವಾದ ಜೀವನದ ಗಂಭೀರ ದರ್ಶನ ಶಕ್ತಿಯನ್ನೂ ಸಾಹಿತ್ಯದ ಬಗ್ಗೆ ಮಾಸ್ತಿಯವರಿಗಿರುವ ಅತುಲ ಶ್ರದ್ಧೆ ವಿಶ್ವಾಸಗಳನ್ನು ಪ್ರಕಟಿಸುವದು. ಗೃಹಸ್ಥನ ಸುನಿರ್ಮಲವಾದ ಜೀವನಕ್ಕಿಂತ ಪವಿತ್ರತರವಾದ ಉನ್ನತವಾದ ಜೀವನವು ಬೇರೊಂದಿಲ್ಲೆಂಬ ಅವರ ಶ್ರದ್ಧೆಯ 'ಸಾರಿಪುತ್ರನ ಕೊನೆಯ ದಿನಗಳು' ಎಂಬ ಕತೆಯಲ್ಲಿ ತೋರಿಬರುವದು. ಭೋಗಯೋಗದ ಸಮತೂಕವನ್ನು ತಿಳಿದು ಹೊಳೆದ ಬಾಳಿದ ತುಂಬು ಜೀವನವೆ ಜೀವಿತದ

ಅಮೃತಮಯವಾದ ಭಾಗವೆಂದು ಅವರು ನಂಬಿದ್ದಾರೆ. ಇತಿಹಾಸದಲ್ಲಿ ಹಾಗೆ ಇರುವುದಾಗಿ ಕಂಡಿದ್ದಾರೆ. ಇಂದಾದರೂ ಪ್ರಪಂಚವು ಬದಲಾಗಿಲ್ಲ. ಅಮೃತ ಪಡೆಯುವದಕ್ಕೆ ಮರ್ತ್ಯಮಾನವನ ಹೃದಯಕ್ಕಿಂತ ಬೇರೆ ಯಾವ ಕಡೆಗೂ ಹೋಗಬೇಕಾಗಿಲ್ಲ. ಪ್ರಕೃತಿಯ ಉದಾರ ಧರ್ಮದಿಂದ ಈಶ್ವರನ ಅಪಾರ ಕಾರುಣ್ಯದಿಂದ ಈ ಹೃದಯವು ಎಲ್ಲರಲ್ಲಿಯೂ ವ್ಯಾಪಿಸಿಕೊಂಡಿದೆ. ಆ ಹೃದಯದ ಒಳಹೊಕ್ಕ ಜೀವನವೇ ಅಮೃತವೆಂದು ಮಾಸ್ತಿಯವರ ಸಾಹಿತ್ಯವು 'ಸುಬ್ಬಣ್ಣ' ಹೃದಯದಿಂದ ಸಾರಿ ಹೇಳುತ್ತಿದೆ. ಆ ಹೃದಯ ಪರಿಪಾಕವೆ ಎಲ್ಲ ಪರಿಣಾಮಕ್ಕೆ ಹಾದಿಯೆಂದು ತಿಳಿಸಿಕೊಡುತ್ತಿದೆ. ಇದೆಲ್ಲಕ್ಕೂ ಹೆಚ್ಚಾಗಿ ಸ್ತ್ರೀಜಾತಿಯ ಬಗ್ಗೆ ಮಾಸ್ತಿಯವರಿಗಿರುವ ಅಂತರದೃಷ್ಟಿಯೂ ಪೂಜ್ಯಭಾವವೂ ಅವರ ಅನೇಕ ಕತೆಗಳ ಕೆಚ್ಚಾಗಿದೆ, ಅನೇಕ ವಾಚಕರಿಗೆ ಜೀವಕ್ಕೆ ಮೆಚ್ಚಾಗಿವೆ. ಮಾಸ್ತಿಯವರ ಮನಸ್ಸು ಅವರ ಜೀವನವನ್ನೇ ಉನ್ನತವನ್ನಾಗಿ ಉಜ್ವಲವನ್ನಾಗಿ ಮಾಡಿರುವಂತೆ ಅವರ ಅಮೃತ ಕಲಾಸಂಪನ್ನವಾದ ಸಾಹಿತ್ಯವು ನಮ್ಮ ನಾಡಿನ ಜೀವನವನ್ನು ಹಾಗೆ ಮಾಡಲು ಸಮರ್ಥವಿದೆ ಎಂದು ಹೇಳಿದರೆ ಆ ಕತೆಗಳನ್ನು ಓದಿ ಅನುಭವಿಸಿದವರೆಲ್ಲ ಒಪ್ಪುವರು ಎಂದು ನಾನು ತಿಳಿದಿದ್ದೇನೆ.

ಸುಬ್ಬಣ್ಣ

ಪ್ರೊ॥ ಎ.ಎನ್.ಮೂರ್ತಿರಾವ್

ಈ ಕೃತಿಯಲ್ಲಿ ಮಾಸ್ತಿಯವರ ಕಥನ ಶಕ್ತಿ ಅತ್ಯುನ್ನತ ಮಟ್ಟಕ್ಕೆ ಏರಿದೆ. ಇದು ಒಬ್ಬ ಕಲೆಗಾರನನ್ನು ಕುರಿತ ನೀಳ್ಗತೆ. ಕಲೆಗಾರರ ವಿಷಯದಲ್ಲಿ ಕೆಲವು ವೇಳೆ ವಿಚಿತ್ರ ಕಲ್ಪನೆಗಳು ಹರಡಿಕೊಂಡಿರುವುದುಂಟು: ಅವರು ಕೊಳಕರಾಗಿರಬೇಕು, ಕುಡುಕರಾಗಿರಬೇಕು, ಹೆಣ್ಣಿನ ಚಟವುಳ್ಳವರಾಗಿರಬೇಕು, ಇತ್ಯಾದಿ. ಪಶ್ಚಿಮದಲ್ಲೂ ಇಲ್ಲೂ ಅವರನ್ನು ಕುರಿತ ಸಾಹಿತ್ಯ ಕೆಲವು ವೇಳೆ ಈ ಭಾವನೆಯನ್ನು ಬೆಳೆಸಿದೆ. ಈ ಬಗೆಯ ಕಲೆಗಾರರಿಲ್ಲವೆಂದಲ್ಲ, ಅವರನ್ನು ತಿರಸ್ಕರಿಸಬೇಕೆಂದೂ ಅಲ್ಲ, ಆ ಗುಣಗಳು ಕಲೆಗಾರರಲ್ಲಿದ್ದ ಮಾತ್ರಕ್ಕೆ ಗುಣಗಳಿಗಾಗಲಿ ಕಲೆಗಾರರಿಗಾಗಲಿ ದೊಡ್ಡಸ್ತಿಕೆ ಬರುವುದಿಲ್ಲ ಎಂಬುದನ್ನು ನೆನಪಿನಲ್ಲಿಡಬೇಕು. ಮಾಸ್ತಿಯವರ ಕಥೆಗಳಲ್ಲಿ ಬರುವ ಕಲೆಗಾರರು ಈ ತರದವರಲ್ಲ;★ ಆದರ್ಶವ್ಯಕ್ತಿಗಳೂ ಅಲ್ಲ. 'ಮಸುಮತ್ತಿ'ಯ ಚಿತ್ರಗಾರನಿಗೆ ತನ್ನ ಕಲೆಯ ವಿಷಯದಲ್ಲಿ ಯಾವ ದೃಷ್ಟಿಯಿತ್ತು ಎಂಬುದನ್ನು ಇಲ್ಲಿ ನೆನೆಯಬಹುದು. 'ಸುಬ್ಬಣ್ಣ'ದಲ್ಲಿ ಕೊಟ್ಟಿರುವುದು ಸಂಗೀತಗಾರನೊಬ್ಬನ ಚಿತ್ರ.

ಇಲ್ಲಿ ಸುಬ್ಬಣ್ಣನ ಕಲೆಗೆ ಗಣನೀಯವಾದ ಸ್ಥಾನವಿದೆ;ಆದರೂ ಕಥೆಯಲ್ಲಿ, ಮುಖ್ಯವಾದದ್ದು ಆತನ ಗಾನಕಲೆಯಲ್ಲ. ಮೊದಮೊದಲು ಸುಬ್ಬಣ್ಣನಿಗೆ ಸಂಗೀತವೇ ಜೀವನದ ಗುರಿ ಎಂಬ ಭಾವನೆ ಇದ್ದಿರಬೇಕು. ಅವನು ತನ್ನ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತಿದ್ದ ಭವಿಷ್ಯವೆಲ್ಲಾ ಸಂಗೀತಕ್ಕೆ ಸಂಬಂಧಪಟ್ಟದ್ದು; ಉಳಿದದ್ದು ಅವನಿಗೆ ಅಷ್ಟು ಮುಖ್ಯವಲ್ಲ. ಮದುವೆಯಾದ ಹೆಂಡತಿಯ ವಿಷಯದಲ್ಲೂ ಅವನು ''ಇವಳು ಬೇರೆ ಕುತ್ತಿಗೆಗೆ ಸುತ್ತಿದಾಳೆ. ಇದೆಲ್ಲಿಯ ಶನಿ'' ಎಂದುಕೊಂಡಿದ್ದ. ನೀಲಾಸಾನಿಯ ಮನೆಯಲ್ಲೂ ಅವನಿಗೆ ಬೇಕಾಗಿದ್ದದ್ದು ಸಂಗೀತಾಭ್ಯಾಸಕ್ಕೆ ಬೇಕಾದ ವಾತಾವರಣ, ನಿರಾಳವಾದ ಮನಸ್ಸು, ಅದಕ್ಕೆ ಅವಶ್ಯಕವಾದಷ್ಟು ಶುಶ್ರೂಷೆ. ಸಂಗೀತಕ್ಕಾಗಿ ಅವನು ಇತರ ಸಂಪಾದನೆಯ ಮಾರ್ಗಗಳನ್ನು ತೊರೆದಿದ್ದ. ಇನ್ನೆಲ್ಲ ಆಸೆಗಳು ಹೋದಮೇಲೂ ಆತನಲ್ಲಿ ತನ್ನ ಸಂಗೀತದ ಹೆಮ್ಮೆ ಸ್ವಲ್ಪ ಉಳಿದಿತ್ತು. ತನ್ನ ಪಿಟೀಲನ್ನು ಹೊಳೆಗೆ ಎಸೆದಾಗ ಅವನಿಗೆ ತನ್ನ ಪ್ರಾಣವನ್ನೇ ಕಳಚಿ ಎಸೆದಂತಾಯಿತು.

★ಮಾಸ್ತಿಯವರ ಇಸಡೋರ ಡಂಕನ್‌ಳಂಥ ಐತಿಹಾಸಿಕ ವ್ಯಕ್ತಿಯನ್ನು ಚಿತ್ರಿಸುವಾಗಲೂ ಅಂಥ ಗುಣಗಳಿಗೆ ಬೆಲೆಯುಂಟು ಎಂಬ ಭಾವನೆಗೆ ಅವಕಾಶ ಕೊಡುವುದಿಲ್ಲ.

ಇದೆಲ್ಲಾ ನಿಜ. 'ಮಸುಮತ್ತಿ'ಯ ಚಿತ್ರಗಾರನ ಚಿತ್ರಗಳು ಯಾವ ಮನೋಧರ್ಮದಿಂದ ಹೊರಬಿದ್ದವೋ ಹೆಚ್ಚುಕಡಿಮೆ ಅದೇ ಮನೋಧರ್ಮದಿಂದ ಸುಬ್ಬಣ್ಣನ ಸಂಗೀತವೂ ಹೊರಡುತ್ತಿತ್ತು. ''ಯಾವ ಸಂಗೀತಗಾರನು ಗಾನವನ್ನು ಅಂತರ್ಯದಲ್ಲಿ ದೇವರ ಪೂಜೆಗೆಂದು ಉಪಯೋಗಿಸುವನೋ, ತನ್ನ ಬುದ್ಧಿಶಕ್ತಿಯ ಪ್ರದರ್ಶನಕ್ಕೆ ಅವಕಾಶವೆಂದು ಉಪಯೋಗಿಸುವುದಿಲ್ಲವೋ, ಅವನಿಗೆ ಮಾತ್ರ ಆ ರೀತಿಯ ಸೊಗಸು ಲಭ್ಯ.'' ''ಹೃದಯದಲ್ಲಿ ಅತಿಶಯವಾಗಿ ಬೆಳೆದ ಪ್ರೇಮವೇ ಗಾನವಾಗಿ ಬಂದಿತೆಂಬಂತೆ ಇವನ ಗೀತದಲ್ಲಿ ಅಸಾಧಾರಣವಾದ ಕಳೆ ಬಂದು ಸೇರಿತು.'' ಆದರೆ ಈ ಬಗೆಯ ಸಂಗೀತ ಅವನಿಗೆ ಸಿದ್ಧಿಸಿದ್ದು ಅವನ ಮನಸ್ಸು ಪರಿಪಕ್ವವಾಗುತ್ತ ಬಂದಂತೆ. ಗಾನ ಅವನನ್ನು ಉದ್ಧರಿಸುವುದಕ್ಕೆ ಸ್ವಲ್ಪ ಮಟ್ಟಿಗೆ ಸಹಾಯ ಮಾಡಿರಬೇಕು- ಯಾವ ಕಲೆಗಾರನೂ ತನ್ನ ಕಲೆಯ ಪ್ರಭಾವದಿಂದ ಸ್ವಲ್ಪವಾದರೂ ಮಾರ್ಪಡದಿರಲಾರ. ಆದರೆ ಒಟ್ಟಿನಲ್ಲಿ ಸಂಗೀತದಿಂದ ಸುಬ್ಬಣ್ಣ ಉದ್ಧಾರವಾಗಲಿಲ್ಲ, ಸುಬ್ಬಣ್ಣ ಉದ್ಧಾರವಾದ್ದರಿಂದ ಅವನ ಸಂಗೀತ ಉದ್ಧಾರವಾಯಿತು. ಅವನ ಹೃದಯ ಪರಿಪಕ್ವವಾದ್ದರಿಂದ ಅವನ ಕಲೆ ಪರಿಪಕ್ವವಾಯಿತು.

ಅಂದಮೇಲೆ ಈ ಕಥೆಯ ವಸ್ತುವೆಂದರೆ ಸುಬ್ಬಣ್ಣನ ಸಂಗೀತವಲ್ಲ, ಸುಬ್ಬಣ್ಣನ ಉದ್ಧಾರ. ಕಷ್ಟದ ಮೇಲೆ ಕಷ್ಟ, ಸಂಕಟದ ಮೇಲೆ ಸಂಕಟ -ಎಲ್ಲೋ ಸ್ವಲ್ಪ ಸುಖ ಕೂಡ- ಅವನ ಮೇಲೆ ಎರಗಿ ಬಂತು; ಒಂದಾದ ಮೇಲೊಂದು ಭ್ರಮೆ ಕಳೆದು ಮನಸ್ಸಿಗೆ ಯಾವ ಲೇಪವೂ ಇಲ್ಲದಂತೆ ಅವನ ಬದುಕು ಸಂಸ್ಕೃತವಾಯಿತು. ಈ ಕಥೆಯನ್ನು ಓದುವಾಗ ನಮ್ಮನ್ನು ಸೆರೆ ಹಿಡಿದು ತಡೆಯಲಾರದಷ್ಟು ಭಾವೋತ್ಕರ್ಷವುಂಟುಮಾಡಿ, ಕಣ್ಣೀರು ಹರಿಸಿ, ನಿರ್ಮಲವಾದ ಆನಂದವನ್ನು ಕೊಡುವುದು ಈ ಆತ್ಮೋದ್ಧಾರದ ಚಿತ್ರಣ.

ಸಂಗೀತವನ್ನು ಕಲಿಯಬೇಕು, ರಾಜಪೂಜ್ಯತೆ ಪಡೆಯಬೇಕು, ತಂದೆ ತನ್ನಲ್ಲಿ ಹೆಮ್ಮೆಗೊಳ್ಳುವಂತಾಗಬೇಕು, ಹೆಂಡತಿಗೆ ತಾಯಿಯ ಕೋಟಲೆಯನ್ನು ತಪ್ಪಿಸಬೇಕು, ಮಕ್ಕಳಿಗೆ ಮೊಸರು ಹಾಕಬೇಕು (ಇದೂ ಅವನ ಭಾಗಕ್ಕೆ ದೊಡ್ಡ 'ಆಸೆ'!)-ಇವೆಲ್ಲ ಅವನ ಯೌವನದ ಆಸೆಗಳು. ಅವುಗಳಲ್ಲಿ ಒಂದೆರಡು ತೀರಿದವೇನೊ. ಕಲಿಕತ್ತೆಗೆ ಹೋದ ಮೇಲೆ ಅವನ ಹೆಂಡತಿ ಸುಖವನ್ನು ಕಂಡಳೆಂಬ ಮಾತು ಬಂದಿದೆ. ಆದರೂ ಅವನ ಆಸೆಗಳು ಸ್ವಲ್ಪ ಮಟ್ಟಿಗೆ ತೀರಿದವೆಂದೂ ಹೇಳುವುದು ಕಷ್ಟ. ಯಾವ ವಾತಾವರಣದಲ್ಲಿ ಅವನಿಗೆ ಕೀರ್ತಿ ಬೇಕಾಗಿತ್ತೋ ಅದನ್ನು ಬಿಟ್ಟು ಅವನು ಕಲಿಕತ್ತೆಗೆ ಬಂದ. ಅವನು ಕೀರ್ತಿಗಳಿಸಿದ್ದನ್ನು ಕಂಡು ಹೆಮ್ಮೆಪಡಬೇಕಾಗಿದ್ದ ತಂದೆ ತಾಯಿಗಳನ್ನು ತೊರೆದು ಹೋಗಬೇಕಾಯಿತು. ಎಷ್ಟೋ ವರ್ಷಗಳು ಅಗಲಿದ್ದ ಮೇಲೂ ಸಾವಿರಾರು ಮೈಲಿ ದೂರದಿಂದ ಅವರನ್ನು ನೋಡುವುದು ಸಹ ಅವನಿಗೆ ಬೇಡವೆನ್ನಿಸಿತು. ಅವನ ಭಾಗಕ್ಕೆ ಅವರು ಎಂದೋ ಸತ್ತಂತೆ ಆಯಿತು. ಆಮೇಲೆ ಹೆಂಡತಿ ಮಕ್ಕಳು ಎಲ್ಲರೂ ಹೋದರು. ಯಾರಿಗಾಗಿ ಆಸೆಗಳು ಬಂದವೋ ಅವರೆಲ್ಲರನ್ನೂ ವಿಧಿ ಕಸಿದುಕೊಂಡಿತು. ಅವನ ಜೀವನದಲ್ಲಿ ಸಂಪೂರ್ಣವಾದ ಶೂನ್ಯವುಂಟಾಯಿತು.

ಸುಬ್ಬಣ್ಣನ ಆತ್ಮ ಸಂಸ್ಕಾರಕ್ಕೆ ವಿಧಿ ಒಂದು ಅನುಕ್ರಮವನ್ನು ಏರ್ಪಡಿಸಿತ್ತು ಎಂದುಕೊಂಡರೆ, ಆ ಕಾರ್ಯಕ್ರಮದಲ್ಲಿ ಈ ಶೂನ್ಯ ಅವಶ್ಯಕವಾದ ಮತ್ತು ಮುಖ್ಯವಾದ ಘಟ್ಟ. ಅವನು ಮೊದಲು 'ತಾನು', 'ತನ್ನದು' ಎಂಬ 'ಮಮ'ತೆಯ ಮೇಲೆ ಜೀವನ ಸೌಧವನ್ನು ಕಟ್ಟಹೊರಟಿದ್ದ. ತನಗೆ ಅವಮಾನವಾಯಿತು, ತನ್ನ ಹೆಂಡತಿಗೆ ಕೋಟಲೆ

ಕೊಡುತ್ತಿದ್ದರು (ಲಲಿತಮ್ಮನಿಗಲ್ಲ; ಆಗ ಲಲಿತಮ್ಮನಿಗಿದ್ದ ಸ್ಥಾನ-'ಇದೆಲ್ಲಿಯ ಶನಿ' ಎನ್ನುವಂಥಾದ್ದು!) ತನ್ನ ಮಗನಿಗೆ ಮೊಸರಿಲ್ಲವಾಯಿತು, ತನ್ನ ಮೇಲೆ ಸಂಗೀತಗಾರರು ಅಸೂಯೆಪಟ್ಟರು. ಅವನು ಕಲಿಕತ್ತೆಗೆ ಹೋಗುವವರೆಗೂ ಈ 'ಮಮ'ದ ಮಟ್ಟದಲ್ಲೇ ಇದ್ದ. ಯೌವನದಲ್ಲಿ ಅದು ಸಹಜವೂ ಹೌದು. ಅವನು ಹೆಂಡತಿಯನ್ನು ಹೊಡೆದದ್ದು ಅವಳ ಮೇಲಿನ ರೋಷದಿಂದಲ್ಲ. ಅವನ ಅಹಂತನಗಾದ ಅವಮಾನಕ್ಕೆ ಆ ರೀತಿಯ ಪ್ರತೀಕಾರವನ್ನು ಹುಡುಕಿತು, ಬೇರೆ ಯಾವ ಪ್ರತೀಕಾರವೂ ಸಾಧ್ಯವಲ್ಲದ್ದರಿಂದ.

ಕಲಿಕತ್ತೆಗೆ ಹೋದಮೇಲೆ ಹೆಂಡತಿ ಅವನನ್ನು ಬಹುಮಟ್ಟಿಗೆ ತಿದ್ದಿದಳು. ಹೆಂಡತಿ ತನ್ನ ಅಧಿಕಾರಕ್ಕೆ ಒಳಪಟ್ಟವಳು ಎಂಬ ಭಾವನೆಯನ್ನು ಮರೆತು ಅವಳು ದೇವಿಯ ಅವತಾರ ಎಂದುಕೊಳ್ಳುವ ಮಟ್ಟಿಗೆ ಸುಬ್ಬಣ್ಣ ಮುಂದುವರಿದ. ಹೆಂಡತಿ ಮಕ್ಕಳ ಪ್ರೀತಿಯನ್ನು ಸಂಪಾದಿಸಿದಾಗ -ಅರ್ಥಾತ್ ಅವರಿಗೆ ಪ್ರೀತಿಯನ್ನು ಕೊಟ್ಟಾಗ- ಅವನು ಒಂದು ಮೆಟ್ಟಲು ಮೇಲಕ್ಕೇರಿದಂತಾಯಿತು; ಆದರೆ ಅಲ್ಲಿ ನಿಂತರೆ ಸಾಲದಷ್ಟೆ. ಆ ಪ್ರೀತಿಯನ್ನು ವಿಶಾಲ ಪ್ರಪಂಚಕ್ಕೆ ಕೊಡಬೇಕು ಮತ್ತು ಅದರಿಂದ ಪಡೆಯಬೇಕು. ಅವನು ಅನಿಕೇತನನಾದ ಮೇಲೆ ವಿಶ್ವನಿಕೇತವನಾಗುತ್ತಾನೆ. ಆದರೆ ಅನಿಕೇತನನಾಗುವ ಅನುಭವ ತೀರ ಭಯಂಕರವಾದದ್ದು. ಅವನು ರೈಲ್ವೆ ಸ್ಟೇಷನ್ನಿಗೆ ಹೋಗಿ 'ಎಲ್ಲಿಗಾದರೂ ಸರಿಯೆ, ಟಿಕೆಟ್ ಕೊಡಿ' ಎಂದಾಗ ಅವನ ಜೀವನದಲ್ಲಿ ಸಂಪೂರ್ಣವಾದ ಶೂನ್ಯ ಬಂದಿತ್ತು. ಹೃದಯದಲ್ಲಿ ಮೊದಲು ಇದ್ದದ್ದೆಲ್ಲಾ ಹೋಗಿ ಹೊಸದಕ್ಕೆ ಸ್ಥಳವಾಗಿತ್ತು. ಆ ಶೂನ್ಯವುಂಟಾದ ಮೇಲೆ ''ನಾವು ಹುಟ್ಟುವುದು ಏಕೆ? ಬಾಳುವುದು ಹೇಗೆ? ಎಲ್ಲಿಂದ ಬರುತ್ತೇವೆ? ಎಲ್ಲಿಗೆ ಹೊರಟಿದ್ದೇವೆ?'' ಇತ್ಯಾದಿ ಪ್ರಶ್ನೆಗಳು ಬಂದು ಮುತ್ತಿದವು. ಅಷ್ಟೇ ಅಲ್ಲ, ''ಏನು ದೇವರೋ!''ಎನ್ನುತ್ತಿದ್ದ ಸುಬ್ಬಣ್ಣ ''ದೇವರೇ, ಕೃಪೆಮಾಡು, ಏನು ಮಾಡುವುದೆಂದು ತೋರಿಸು'' ಎಂದು ಪ್ರಾರ್ಥಿಸಿದ.

ಅವನು ಬೊಂಬಾಯಿಯಲ್ಲಿ ಮಿಠಾಯಿ ಅಂಗಡಿಯ ಬಳಿ ನಿಂತು ತನ್ನ ಬಿಗುಮಾನವನ್ನು ತೊರೆದು ಪಿಟೀಲು ಬಾರಿಸಿದಾಗ; ಅಂಗಡಿಯವಳು ಅವನಿಗಾಗಿ ಮರುಗಿದಾಗ; ಅವನು ಜಂಬವನ್ನು ಬಿಟ್ಟು ತನ್ನನ್ನು ಕರೆದ ಶ್ರೀಮಂತನ ಮನೆಗೆ ಹೋಗಿ ಪೀಟೀಲು ಬಾರಿಸಿ ಆನಂದವನ್ನು ಕೊಟ್ಟಾಗ; ಶ್ರೀಮಂತನ ಮಗು (ಹಿಂದೆ ತನ್ನ ಮಗು ಕೊಡುತ್ತಿದ್ದಂತೆ) ಅವನಿಗೆ ಹಣ್ಣು ಕೊಟ್ಟಾಗ-ಸುಬ್ಬಣ್ಣನಿಗೆ ಹೊಸದೊಂದು ಜೀವನ ಆರಂಭವಾಯಿತು. ಹಿಂದಿನ ಜೀವನ ಕೊನೆಗೊಂಡಿತ್ತು; ಆದರೆ ಜೀವನದಲ್ಲಿ ಒಂದು ಕೊನೆಗಾಣುವುದು ಎಂದರೆ ಮತ್ತೇನೋ ಒಂದು ಪ್ರಾರಂಭವಾಗುವುದು ಎಂದೇ ಅರ್ಥ. ತನ್ನವರಾಗಿ ತನ್ನ ಜೀವನಕ್ಕೆ ಇಂಬುಕೊಡುವವರು ಯಾರೂ ಇಲ್ಲವೆಂದು ತಾನೆ ಅವನು ರೋಷಗೊಂಡು ಮೈಸೂರಿನಿಂದ ಹೊರಟುಹೋದದ್ದು, ಈಗ ಅವನಿಗಾಗಿ ಮರುಗಿದವರೊಬ್ಬರೂ 'ಅವನವರು' ಅಲ್ಲ; ಯಾರೋ. ಆ 'ಯಾರೋ' ಈಗ ಅವನವರಾದರು. ಎಲ್ಲರೂ ಅವನವರಾಗುವುದಕ್ಕೆ ಇದು ಮೊದಲನೆಯ ಹೆಜ್ಜೆ. ಸುಬ್ಬಣ್ಣ ಅವರನ್ನು ಇನ್ನೂ ತನ್ನವರು ಎಂದು ಒಪ್ಪಿಕೊಂಡಿಲ್ಲ-ತಾನು ಪಿಟೀಲು ಬಾರಿಸಿದ್ದರಿಂದ ಮಿಠಾಯಿ ಅಂಗಡಿಯವಳಿಗೆ ವ್ಯಾಪಾರ ಹೆಚ್ಚಾಯಿತು, ಅವಳಿಗೆ ತಾನು ಉಪಕಾರ ಮಾಡಿದೆ, ಎಂದು ಭಾವಿಸುತ್ತಾನೆ. ಆದರೂ ಅವನು ಒಂದು ಹೆಜ್ಜೆ ಮುಂದುವರಿದಿದ್ದಾನೆ.

ಹೀಗೆ ಇತರರಿಂದ ಬಂದ ಪ್ರೇಮವು ಮೊದಲೇ ಶುದ್ಧಿಯಾಗಲಾರಂಭಿಸಿದ್ದ ಅವನ ಮನಸ್ಸಿನ ಮೇಲೆ ಪರಿಣಾಮವುಂಟುಮಾಡಿತು. ಆ ಶ್ರೀಮಂತನ ಮನೆಯಲ್ಲಿ ಪಿಟೀಲು

ಬಾರಿಸಿದ ದಿನವೇ ಅವನಿಗೆ ರಾತ್ರಿ ಕನಸಾಯಿತು. ತಾನು ತಂದೆತಾಯಿಯರ ಸೇವೆ ಮಾಡುತ್ತಿದ್ದಂತೆ. ರೋಷದಿಂದ ಪ್ರಯತ್ನಪೂರ್ವಕವಾಗಿ ಮನಸ್ಸಿನ ಅಂತರಾಳಕ್ಕೆ ಅದುಮಿದ್ದ ತಂದೆತಾಯಿಯವರ ನೆನಪು ಈಗ ಮನಸ್ಸಿನ ಮೇಲುಪದರಕ್ಕೆ ಬಂದು ಸುಬ್ಬಣ್ಣನನ್ನು ಮೈಸೂರಿಗೆ ಹೊರಡಿಸಿತು.

ಊರಿಗೆ ಹೋದ ಮೇಲೆ ಅವನಲ್ಲಿ ಪರಿವರ್ತನೆ ಮತ್ತಷ್ಟು ವೇಗದಿಂದ ಸಾಗಿತು. ಸನ್ಯಾಸಿಯಂತಿರಬೇಕು ಎಂಬ ಮನಸ್ಸಿನಿಂದ ಬಂದರೂ ಅವನು ''ತಂದೆ ತಾಯಿಗಳ ಬಳಿಗೆ ಹೋಗಿ ತಪ್ಪೊಪ್ಪಿಕೊಳ್ಳಬೇಕು, ಅವರ ಸೇವೆಗೆ ನಿಲ್ಲಬೇಕು'' ಎಂದುಕೊಳ್ಳುತ್ತಾ ಕಣ್ಣೀರು ಬಿಟ್ಟ. ಕಲ್ಲಾಗಿದ್ದ ಎದೆ ಕರಗಿತು. ಇದಾಗುವವರೆಗೆ ನಿಜವಾದ ಸಂನ್ಯಾಸ ಸಾಧ್ಯವಲ್ಲ. ಕಲ್ಲಿಗೆ ಭ್ರಮೆಯಿಲ್ಲ, ಕ್ರೋಧ ಸಮ್ಮೋಹಗಳೇನೂ ಇಲ್ಲ; ಅಂದ ಮಾತ್ರಕ್ಕೆ ಕಲ್ಲು ಸನ್ಯಾಸಿಯಲ್ಲವಷ್ಟೆ! ತಂದೆತಾಯಿಯರು ಸತ್ತುಹೋದರೆಂದು ಕೇಳಿದಾಗ ಒಂದೊಂದು ಮಾತೂ ಅವನ ಮೇಲೆ ವಜ್ರದ ಪೆಟ್ಟಿನಂತೆ ಬಿದ್ದಿತಂತೆ. ಆ ದಿನ ಅವನು ಕೆರೆಯಲ್ಲಿ ಸ್ನಾನ ಮಾಡಿ ಅವರಿಗೆ ತರ್ಪಣಕೊಟ್ಟು ''ಇದೇ ನಾನು ನಿಮ್ಮ ಮಗನಾದುದಕ್ಕೆ ನಿಮಗೆ ಮಾಡಿದ ಶುಶ್ರೂಷೆ, ಉತ್ತರಕ್ರಿಯೆ'' ಎಂದುಕೊಂಡ. ಇತರರು ತನಗೆ ಏನು ಮಾಡಬೇಕಾಗಿತ್ತು, ಏನು ಮಾಡದೆ ಹೋದರು ಎಂಬ ಯೋಚನೆಯನ್ನು ಬಿಟ್ಟು ಅವನ ಮನಸ್ಸು 'ನಾನು ಇತರರಿಗೆ ಏನು ಮಾಡ ಬೇಕಾಗಿತ್ತು ಏನು ಮಾಡದೆ ಹೋದೆ' ಎಂಬ ಕಡೆಗೆ ಪ್ರಯಾಣ ಮಾಡಿತ್ತು. ಇವು ಒಂದೊಂದೂ ಅವನು ತನ್ನ 'ಅಹಂ' (ego) ಅನ್ನು ಮರೆತು ವಿರಕ್ತಿಯ ಕಡೆಗೆ ಇಟ್ಟ ಹೆಜ್ಜೆಗಳು. ಆದರೆ ಅವನ ಮನಸ್ಸು ಪೂರ್ಣವಾಗಿ ಹದಕ್ಕೆ ಬರಬೇಕಾದರೆ ಇನ್ನೂ ಕಾಲ ಬೇಕಾಗಿತ್ತು.

ಅವನನ್ನು ಆವರಿಸಿದ್ದ ಕತ್ತಲೆ ತೊರೆಯವುದಕ್ಕೆ ಹೋದ ಮೇಲೂ ಪೂರ್ತಿ ಹರಿದಿರಲಿಲ್ಲ; ಅಲ್ಲಿ ಒಂದು ಜಗಲಿಯ ಮೇಲೆ ಮಲಗಿ ಅವನು ''ರಾತ್ರಿಯಲ್ಲಿ ನಾಲ್ಕಾರು ಸಲ, ನಾನು ಕೇವಲ ದಿಕ್ಕಿಲ್ಲದಾದೆ, ಎಂದು ಕತ್ತಲಲ್ಲಿ ಮಗು ಭಯಪಡುವಂತೆ ಭಯಪಟ್ಟು ನಿದ್ದೆಯಿಂದ ಎದ್ದರು.'' ತನ್ನ ವಿಷಯದಲ್ಲಿ ಆಸಕ್ತಿಯನ್ನು ತೋರದಿರುವ, ಕೆಲವು ವೇಳೆ ಸ್ಪಷ್ಟವಾಗಿ ಕ್ರೌರ್ಯವನ್ನೇ ತೋರುವ, ಈ ವಿಶಾಲ ವಿಶ್ವದಲ್ಲಿ ಮಾನವನ ಆತ್ಮ ಎದುರಿಸಬೇಕಾಗುವ ಭಯಂಕರ ಒಂಟಿತನವನ್ನೂ ಅಸಹಾಯಕತೆಯನ್ನೂ ಈ ಸರಳವಾದ ವಾಕ್ಯ ಹೃದಯಕ್ಕೆ ಒಯ್ದು ಮುಟ್ಟಿಸುತ್ತದೆ. ಸುಬ್ಬಣ್ಣನಷ್ಟು ಸಂಕಟಕ್ಕೆ ಗುರಿಯಾಗದಿದ್ದರೂ ವಿಚಾರಪರರಾದವರನೇಕರಿಗೆ ಈ ಭಯದ ಅನುಭವವಾಗಿರುತ್ತದೆ. ಆದರೆ

Thanks to the human heart by which we live,
Thanks to its tenderness,

ಆ ಭಯ ಕಳೆದುಹೋಯಿತು. ಮಾರನೆಯ ದಿನವೇ ವೆಂಕಟರಮಣ-ಸುಬ್ಬಣ್ಣನಿಗೆ ಹಿಂದೆ ಆದರವನ್ನು ತೋರಿಸಿದ್ದ ನೀಲಾಸಾನಿಯಂತೆ ಇವನೂ ನಟುವರವನು-ಆ ಭಯವನ್ನು ಒಡೆಯಲು ನಿಮಿತ್ತನಾದ. ಆ ಕೆಲಸವೇನೂ ಸುಲಭವಾಗಿ ಆಗಲ್ಲಿಲ್ಲ. ಸುಬ್ಬಣ್ಣ ತನ್ನ ಜಂಬದಿಂದಾಗಿ ತನ್ನ ವಿಷಯದಲ್ಲೇ ಬೇಸರಗೊಂಡು ಆ ಬೇಸರಕ್ಕೆ ತನ್ನ ಪೀಟಿಲನ್ನು ಬಲಿಕೊಡುವುದರಲ್ಲಿದ್ದ. ಕೊನೆಗೆ ಆ ಪಿಟೀಲೇ (ಹೊಳೆಯಲ್ಲಿ ತೇಲುತ್ತಿದ್ದ ಅದನ್ನು ವೆಂಕಟರಮಣ ತಂದುಕೊಟ್ಟ) ಅವನ ಒಂಟಿತನವನ್ನು ಕಳೆದು ಹೊಸದೊಂದು ರೀತಿಯಲ್ಲಿ ಅವನನ್ನು ಸಹಮಾನವರ ಗುಂಪಿಗೆ ಎಳೆತಂದಿತು. ಸುಬೇದಾರರು ಅವನಿಗೆ ಕರೆಕಳಿಸಿದಾಗ ಅವನ ಜಂಬ ಮತ್ತೊಂದು ಸಾರಿ ಮರುಕಳಿಸಿತು. ಆಮೇಲೆ ಕಳಚಿಹೋಯಿತು.

ಅವನ ಜೀವನದ ಕೊನೆಯ ಘಟ್ಟದಲ್ಲಿ ವೆಂಕಟರಮಣ ಆರಂಭ ಮಾಡಿದ-ಲಲಿತಮ್ಮ ಕಲಿಕತ್ತೆಯಲ್ಲೇ ಆರಂಭಮಾಡಿದ್ದ-ಕೆಲಸವನ್ನು ಈಗ ಮತ್ತೊಬ್ಬ ಲಲಿತಮ್ಮ ಪೂರೈಸಿದಳು. ಈ ಘಟ್ಟಕ್ಕೆ ಬಂದಾಗ ನಾವು ಸಾರಿಪುತ್ರನ ಕಥೆಯಲ್ಲಿ ಬರುವ ವಾಕ್ಯವೊಂದನ್ನು ನೆನೆಯಬಹುದು: ''ಹತ್ತಿರ ಹೋದರೆ ಬಂಧನಕ್ಕೆ ಸಿಕ್ಕಿಯೇನು ಎನ್ನುವವನು ಇದ್ದಲ್ಲಿಯೇ ಬಂಧನದಲ್ಲಿದ್ದಾನೆ.'' ಸುಬ್ಬಣ್ಣ ತನ್ನಲ್ಲಿ ಏರ್ಪಟ್ಟಿದ್ದ ಶೂನ್ಯವನ್ನು ಭೇದಿಸಿ ಮತ್ತೆ ಮಾನವರೊಡನೆ ಬೆರೆಯದಿದ್ದರೆ; ವೆಂಕಟರಮಣ ಸುಬೇದಾರರು, ಅವರ ಹೆಂಡತಿ, ಲಲಿತಮ್ಮ (ಸುಬೇದಾರರ ಮಗಳು), ಇವರೆಲ್ಲರನ್ನೂ ಹತ್ತಿರಕ್ಕೆ ಕರೆದುಕೊಳ್ಳದಿದ್ದರೆ; ಅಥವಾ ಅವರು ಕರೆದಾಗ ಹತ್ತಿರಕ್ಕೆ ಹೋಗದಿದ್ದರೆ ಅವನ ಹೃದಯ ಪೂರ್ಣವಾಗಿ ಪಕ್ವವಾಗುತ್ತಿರಲ್ಲಿಲ್ಲ. ಪ್ರಕೃತಿಯಲ್ಲಿ ಶೂನ್ಯಕ್ಕೆ ಉಳಿಗಾಲವಿಲ್ಲ; ಅದು ಬಂದೊಡನೆ ಅದನ್ನು ತುಂಬಲು ಏನಾದರೊಂದು ಓಡಿಬರುತ್ತದೆ. ಮಾನವ ಪ್ರೇಮದ ಅಮೃತ ಬರದ್ದಿದ್ದರೆ ಮಾನವ ದ್ವೇಷದ ವಿಷ ಬಂದು ತುಂಬೀತು! ಸುಬ್ಬಣ್ಣ ಈ ಅಪಾಯವನ್ನು ತಪ್ಪಿಸಿಕೊಂಡ, ಜೀವನದಲ್ಲಿದ್ದು, ಜನರೊಡನೆ ಬೆರೆತು, ಕರ್ಮಮಾಡಿ, ಕರ್ಮದ ಲೇಪವಿಲ್ಲದೆ ತನ್ನ ಬದುಕನ್ನು ಮುಗಿಸಿದ.

ಈ ಕೃತಿ ದೊಡ್ಡ ಕಾದಂಬರಿಯಲ್ಲವಾದ್ದರಿಂದ ಇದರಲ್ಲಿ ಇತರ ಪಾತ್ರಗಳು ಮೈತುಂಬಿ ಬರಲು ಅವಕಾಶವಿಲ್ಲ. ಸುಬ್ಬಣ್ಣನ ಹೆಂಡತಿಯಾದ ಲಲಿತಮ್ಮನನ್ನು ನಾವು ಕಣ್ಣಿಂದ ನೋಡತ್ತೇವೆ ಎನ್ನುವುದಕ್ಕಿಂತ ಮನಗಾಣುತ್ತೇವೆ ಎಂದರೆ ಸರಿ ಹೋಗುತ್ತದೆ. ಆಕೆಯ ಚಿತ್ರ ಸ್ಫುಟವಲ್ಲ. ಆದರೆ ಅವಳ ಸ್ವಭಾವದ ಹಿರಿಮೆ ನಮಗೆ 'ಅನುಮಾನ' (inference) ದಿಂದ ಭಾಸವಾಗುತ್ತದೆ. ಈ ಮಾತಿನಲ್ಲಿ ಸ್ವಲ್ಪ ಉತ್ಪ್ರೇಕ್ಷೆಯಿರಬಹುದು, ಆದರೆ ಬಹುಶಃ ಅದು ಸತ್ಯದ ಉತ್ಪ್ರೇಕ್ಷೆ. ಅವಳು ಹಟವಾದಿಯಲ್ಲ, ಸಹನಶೀಲೆ, ಸುಬ್ಬಣ್ಣನಿಗೆ ಸಮಾಧಾನ ಕೊಡುವುದಕ್ಕೆ ಸಂಗೀತವಾದರೂ ಇತ್ತು; ಅವಳಿಗೆ ಏನೂ ಇರಲ್ಲಿಲ್ಲ. ತನ್ನ ದುಃಖವನ್ನು ಅವಳು ಯಾರಲ್ಲಿಯೂ, ತನ್ನ ಗಂಡನಲ್ಲಿ ಕೂಡ ಹೇಳಿಕೊಳ್ಳುವಂತಿರಲ್ಲಿಲ್ಲ. ಆದರೂ ಅವಳು ''ಈ ಮೊದಲೇ ಬದುಕಿನಲ್ಲಿ ಒಂದು ದೊಡ್ಡ ಅಂತಸ್ತನ್ನು ಸೇರಿಬಿಟ್ಟಿದ್ದಳು. ಯಾವುದರಲ್ಲೂ ತನ್ನ ಸುಖ, ತನ್ನ ಆಶೆ, ತನ್ನದು ಎನ್ನುವುದನ್ನು ಮರೆಯವುದನ್ನು ಅವಳು ಕಲಿತು ಮುಗಿಸಿದ್ದಳು.'' ತನಗೆ ಕ್ರೂರಿಯಾಗಿದ್ದ ಅತ್ತೆಯ ಮೇಲೂ ಅವಳಿಗೆ ರೋಷವಿಲ್ಲ. ತಂದೆತಾಯಿಯರು ತೀರಿಹೋದಂತೆ ಕನಸಾದದ್ದು ತೀರಿಕೊಂಡವರ ಮಗನಿಗಲ್ಲ, ಸೊಸೆಗೆ.

ಇದು ದೊಡ್ಡ ಕಾದಂಬರಿಯಾಗಿದ್ದಿದ್ದರೆ ಸುಬೇದಾರರ ಪಾತ್ರ ಆಕರ್ಷಕವಾಗಿ ಬೆಳೆಯಬಹುದಾಗಿತ್ತು. ಈ ಕಥೆಯ ಮಿತಿಯಲ್ಲಿ ಅದಕ್ಕೆ ಹೆಚ್ಚು ಅವಕಾಶವಿಲ್ಲ. ಆಕರ್ಷಕತೆಯ ಸೂಚನೆಯೇನೋ ಇದೆ. ಇತರ ಪಾತ್ರಗಳಲ್ಲಿ ಸುಬ್ಬಣ್ಣನ ತಾಯಿಯ ಹೆಸರನ್ನು ಮುಖ್ಯವಾಗಿ ಹೇಳಬೇಕು. ''ಮಾತು ಕಠಿಣವಾಗಿದ್ದರೂ, ನಡತೆ ಕಠಿಣವಾಗಿದ್ದರೂ, ಅವರು ಮನಸ್ಸಿನಲ್ಲಿ ಕಠಿಣರಾದವರಲ್ಲವೆಂದು ತೋರುತ್ತದೆ, '' ಎಂದು ಮಾಸ್ತಿಯವರು ಆಕೆಯ ಪರವಾಗಿ ಒಂದು ಮಾತು ಹೇಳಿದ್ದಾರೆ. ಕೊನೆಕೊನೆಯಲ್ಲಿ ಆಕೆ ಅಂಥ ಸೊಸೆಯೊಡನೆ ಸಂಸಾರ ಮಾಡುವ ಭಾಗ್ಯ ತನಗಿಲ್ಲವಲ್ಲ ಎಂದು ಪಶ್ಚಾತ್ತಾಪದ ಮಾತನ್ನಾಡುತ್ತಾಳೆ. ಆದರೂ ಅವಳ ಹೃದಯದಲ್ಲಿ ಮಾರ್ದವವೇನಾದರೂ ಇದ್ದಿದ್ದರೆ (ತನ್ನ ಮಗಳ ವಿಷಯದಲ್ಲಿ ಇತ್ತು) ಅದನ್ನು ಯಾರಿಗೂ ಕಾಣದಂತೆ ಬಹಳ ಯಶಸ್ವಿಯಾಗಿ ಬಚ್ಚಿಟ್ಟಿದ್ದಾಳೆ ಎನ್ನಬೇಕು. ಆ ಕಾಲದಲ್ಲಿ ಸಂಸಾರದ ವಾತಾವರಣ ಹೇಗಿತ್ತು ಎಂಬುದನ್ನು

ನೆನೆದರೆ ಆಕೆಯ ನಡತೆಯನ್ನು ಅರ್ಥಮಾಡಿಕೊಳ್ಳಬಹುದು; ಅರ್ಥವಾದ ಮೇಲೆ ಸಹಾನುಭೂತಿಯನ್ನೂ ಕೊಡಬಹುದು.

ಮೇಲೆ ಹೇಳಿರುವುದು ವಿಶ್ಲೇಷಣೆಯ ಮಾತು. ಆದರೆ ಇಂಥ ಕೃತಿಗಳ ಸ್ವಾರಸ್ಯ ವಿಶ್ಲೇಷಣೆಗೆ ಸಿಕ್ಕುವುದಿಲ್ಲ. ಬುದ್ಧಿಯಿಂದ ಬಂದದ್ದನ್ನು ಬುದ್ಧಿಯಿಂದ ತಿಳಿಯಬಹುದು. ಹೃದಯದಿಂದ ಬಂದದ್ದನ್ನು ಹೃದಯದಿಂದಲೇ ತಿಳಿಯಬೇಕು. ಮಾಸ್ತಿಯವರು ಒಂದು ಕಡೆ ''ಈ ವರ್ಣನೆಯಲ್ಲೆಲ್ಲ ಬಣ್ಣ ಸಾಲದೆಂದು ನಾನು ಬಲ್ಲೆ'' ಎಂದಿದ್ದಾರೆ. ವರ್ಣನೆ ಇಲ್ಲಿ ಕಾಣುವಷ್ಟು ಮಿತಿಯಲ್ಲಿರುವುದೇ ಉಚಿತ ಎಂಬುದರ ಅರಿವು ಆ ಮಾತಿನ ಹಿಂದೆ ಅಡಗಿದೆ. ನಿಜವಾಗಿ ನೋಡಿದರೆ ವರ್ಣನೆ ಎಂಬ ಪದವೇ ಇಲ್ಲಿ ಸಲ್ಲದು. ಮಾಸ್ತಿಯವರು ಇಲ್ಲಿ ಮಾಡಿರುವುದೆಂದರೆ ಸತ್ಯದ ಮೇಲೆ ಯಾವ ತೆರೆಯೂ ಬೀಳದಂತೆ, ಅದನ್ನು ನೋಡಲು ಬಳಕೆಗೆ ಅಡ್ಡಿಯಾಗದಂತೆ ನೋಡಿಕೊಂಡಿದ್ದಾರೆ, ಅಷ್ಟೆ. ಇದೇ ಕಲೆಯಲ್ಲಿ ಬಹಳ ಕಷ್ಟದ ಕೆಲಸ; ಯಾವುದು ತಾನಾಗಿಯೇ ಪರಿಣಾಮಕಾರಿಯಾಗಬಲ್ಲುದೋ ಅದು ಗಮನಕ್ಕೆ ಬರಲು ಅಡ್ಡಿಯಾಗಬಹುದಾದದ್ದೆಲ್ಲವನ್ನೂ, ಅದರ ಜೊತೆ ಬೆರೆದಿರುವ ಪ್ರಸಕ್ತವಲ್ಲವಾದ್ದೆಲ್ಲವನ್ನೂ, ದೂರಕ್ಕೆ ಸರಿಸುವುದು; ಆದರೆ ಅದಕ್ಕೆ ಬಣ್ಣ ಹಾಕದಿರುವುದು. ಬಣ್ಣವನ್ನು ಹಾಕ ಹೊರಟರೆ ಭಾವಾತಿರೇಕ, ವ್ಯಾಖ್ಯಾನ ಮಾಡುವ ಚಟ, ಶೈಲಿಯ ಕೃತಕತೆ- ಇವೆಲ್ಲಕ್ಕೂ ಎಡೆಯಾಗುತ್ತದೆ. ಮೊದಲು ಆ ಸತ್ಯವನ್ನು ನೋಡುವಂಥ ಪ್ರತಿಭೆ ಇರಬೇಕೆಂಬುದನ್ನು ಎತ್ತಿ ಹೇಳಬೇಕಾಗಿಯೇ ಇಲ್ಲ. ಮಾಸ್ತಿಯವರು ಮೇಲೆ ಕಾಣಿಸಿರುವ ವಿಷಯದಲ್ಲಿ ದೃಢವಾದ ಹತೋಟಿಯನ್ನಿಟ್ಟುಕೊಂಡಿದ್ದಾರೆ. ಶೈಲಿಯಂತೂ ಅತ್ಯಂತ ಸರಳವಾದದ್ದು. ಯಾವುದೊಂದು ಕಡೆಯೂ ತನ್ನ ಕಡೆಗೆ ಗಮನವನ್ನು ಸೆಳೆದುಕೊಳ್ಳುವುದಿಲ್ಲ. ಶೈಲಿ ಮಿತಿಯಲ್ಲಿರಬೇಕೆಂದು ಕಷ್ಟಪಟ್ಟಂತೆಯೂ ತೋರುವುದಿಲ್ಲ. ವಸ್ತು ಶೈಲಿಗಳೆರಡೂ ಸ್ವಾಭಾವಿಕವಾಗಿಯೇ ಒಂದಾಗಿದೆ. ಮೇಲೆ ಉದಾಹರಿಸಿರುವ ಸುಬ್ಬಣ್ಣ ಭಯದಿಂದ ಎಚ್ಚೆತ್ತದ್ದನ್ನು ಕುರಿತ ವಾಕ್ಯ ಈ ಮಿತಿಗೆ ಸಾಕ್ಷಿ. ಹಾಗೆಯೇ ಸುಬ್ಬಣ್ಣನ ತಂದೆಯ ಕೊನೆಗಾಲವನ್ನೂ ಅವರ ಮನಸ್ಸಿನ ಅಶಾಂತತೆಯನ್ನೂ ಸೂಚಿಸುವ ಕೆಲಸ ನಾಲ್ಕೈದು ವಾಕ್ಯಗಳಲ್ಲಿ ಮುಗಿದಿದೆ. ಆದರೂ ಕಣ್ಣೀರು ಉಕ್ಕುವಂತಾಗುತ್ತದೆ.

ಈ ಕಥೆ ಭಾವವಿಕಾಸದ ದೃಷ್ಟಿಯಿಂದ ಹೇಗೋ ಹಾಗೇ ವಿಚಾರ ಪ್ರಚೋದನೆಯ ದೃಷ್ಟಿಯಿಂದಲೂ ಪರಿಣಾಮಕಾರಿಯಾಗಿದೆ. ನಾವು ಹುಟ್ಟುವುದು ಏಕೆ? ಎಲ್ಲಿಂದ ಬಂದೆವು? ಎಲ್ಲಿಗೆ ಹೊರಟಿದ್ದೇವೆ? ಇಂಥ ಪ್ರಶ್ನೆಗಳು ಸುಬ್ಬಣ್ಣನಲ್ಲಿ ಉದ್ಭವಿಸುತ್ತದೆ. ನಮ್ಮಲ್ಲೂ ಉದ್ಭವಿಸುತ್ತವೆ. ರುದ್ರನಾಟಕಗಳನ್ನು ಓದುವಾಗ ನಮ್ಮ ಮೇಲೆ ದಾಳಿಯಿಟ್ಟು ಬರುವ ಯೋಚನೆಗಳೇ ಇಲ್ಲೂ ಬರುತ್ತವೆ. ಸುಬ್ಬಣ್ಣ ಕೇಡಿಗನಲ್ಲ, ಸತ್ವರಹಿತನಲ್ಲ. ಸುತ್ತಣ ಪರಿಸ್ಥಿತಿಯ ಸವಾಲನ್ನು ಎದುರಿಸಿ ನಿಂತು ತನ್ನ ಜೀವನವನ್ನೂ ರೂಪಿಸಿಕೊಳ್ಳುವ ಶಕ್ತಿಯುಳ್ಳವನು. ಅವನೇಕೆ ಅಷ್ಟೊಂದು ಸಂಕಟವನ್ನು ಅನುಭವಿಸಬೇಕಾಗಿ ಬಂತು?

''ಭಗವಂತನು ಮಾನವನ ಆತ್ಮವನ್ನು ತನ್ನ ಬಳಿಗೆ ಕರೆದುಕೊಳ್ಳುವುದು ಹೀಗೆಯೇ ಎಂದು ತೋರುತ್ತದೆ. ಸರಿಯಾದ ಸಮಯವನ್ನು ನೋಡಿ, ಕಷ್ಟವನ್ನೋ ಸುಖವನ್ನೋ ಕೊಟ್ಟು, ಮನುಷ್ಯನು ತನ್ನನ್ನು ಅಪೇಕ್ಷಿಸುವಂತೆಯೂ ತನ್ನನ್ನು ನಂಬುವಂತೆಯೂ ಮಾಡುವನು''- ಇದು ಸಾಧಾರಣವಾಗಿ ನಮ್ಮ ಸಮಾಧಾನಕ್ಕಾಗಿ ನಾವು ಕೊಟ್ಟುಕೊಳ್ಳುವ ಉತ್ತರ, ಹಾಗೆಂದೇ ಮಾಸ್ತಿಯವರು ಈ ಅಭಿಪ್ರಾಯವನ್ನು ಇಲ್ಲಿ ಕಾಣಿಸಿದ್ದಾರೆ. ಅದು ಸಮರ್ಪಕವಾದ ಉತ್ತರವೆಂದು ಹೇಳಲಾಗುವುದಿಲ್ಲ. ಸುಬ್ಬಣ್ಣನ ಆತ್ಮ ಭಗವಂತನ ಬಳಿಗೆ

ಹೋಗಬೇಕಾದರೆ ಅವನ ತಂದೆಗೂ ಅವನ ಹೆಂಡತಿಗೂ ಸಂಕಟವನ್ನು ಕೊಡುವುದು ನ್ಯಾಯವೆ? ಸಂಕಟದಿಂದ ಅವರಿಬ್ಬರ ಆತ್ಮವೂ ಪರಿಪಕ್ವವಾಯಿತು ಎನ್ನಬಹುದು. ಸುಬ್ಬಣ್ಣನ ಮಕ್ಕಳು ಅಕಾಲ ಮರಣಕ್ಕೆ ತುತ್ತಾದದ್ದರಿಂದ ಅವಕ್ಕೆ ಆದ ಪ್ರಯೋಜನವೇನು? ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಯಾರೂ ಕೊಟ್ಟಿಲ್ಲ. ಬಹುಶಃ ಯಾರೂ ಕೊಡಲಾರರು. ಸಂಕಟವನ್ನು ಅನುಭವಿಸಿದ್ದರಿಂದ ಮೇಲೆ ಹೇಳಿರುವ ಸತ್ಪರಿಣಾಮವೇ ಆಗುತ್ತದೆಂದು ಹೇಳುವಂತಿಲ್ಲ. ಸುಬ್ಬಣ್ಣನ ಹೃದಯದಲ್ಲಿ ಶೂನ್ಯವುಂಟಾದಾಗ ಅದನ್ನು ತುಂಬಲು ಅಮೃತ ಹರಿದು ಬಂತು. ಅದು ಅವನ ಪುಣ್ಯ. ಅಮೃತಕ್ಕೆ ಬದಲು ವಿಷ ಬಂದು ಅಂಥ ಶೂನ್ಯವನ್ನು ತುಂಬಿದ್ದಕ್ಕೆ ಉದಾಹರಣೆಗಳು ಎಷ್ಟೋ ಸಿಕ್ಕುತ್ತವೆ. ಇಂಥ ಸಮಸ್ಯೆಗಳನ್ನು ಬಿಡಿಸುವುದು ಕಥೆಗಾರನ ಕೆಲಸವಲ್ಲ. ಆದರೆ ಇಂಥ ಸಮಸ್ಯೆಗಳನ್ನು ತಂದು ವಿಚಾರಲಹರಿಯನ್ನು ಹೊರಡಿಸುವುದರಿಂದ ಕಥೆಯ ಬೆಲೆ ಹೆಚ್ಚುತ್ತದೆ. ಉನ್ನತಮಟ್ಟದ ಕಲೆಯಲ್ಲಿ ಸಾಧಾರಣವಾಗಿ ಭಾವಪ್ರಚೋದನೆ, ವಿಚಾರಪ್ರಚೋದನೆ ಜೊತೆಯಾಗಿ ನಡೆಯುತ್ತವೆ.

'ಸುಬ್ಬಣ್ಣ'ನ ಬಗೆಗೆ ಪುನರ್ವಿಚಾರ

ಗೌರೀಶ ಕಾಯ್ಕಿಣಿ

''ನಾನು ಬೆಳೆಯುವ ತಮ್ಮ
ನೀನು ಬೆಳೆದಣ್ಣ''

- ಅಂಬಿಕಾತನಯದತ್ತ

ಪೂಜ್ಯ ಮಾಸ್ತಿಯವರನ್ನು ಕುರಿತು ಒಂದು ದಶಕಕ್ಕೂ ಹಿಂದೆ ಮರಾಠಿಯ 'ನವ ಭಾರತ'ವೆಂಬ ಒಂದು ಮಹತ್ವದ ವೈಚಾರಿಕ ಮಾಸಪತ್ರಿಕೆಯಲ್ಲಿ ಒಂದು ವ್ಯಕ್ತಿ ಪರಿಚಯವನ್ನು ಬರೆದಿದ್ದೆ. ಅದರ ಜತೆಗೆ ಅವರ 'ಗೌತಮಿ ಹೇಳಿದ ಕಥೆ'ಯನ್ನು ಮರಾಠಿಯಲ್ಲಿ ಅನುವಾದಿಸಿ ಕೊಟ್ಟಿದ್ದೆ. ಅದನ್ನು ಓದಿ ಮರಾಠಿಯ ಪ್ರಚಂಡ ವಿನೋದಿ ಕವಿ ಅತ್ರೆಯವರು ''ಈ ಮುದುಕಿಯ ಬಾಳಿನಲ್ಲಿಯೂ ಒಂದು ಪ್ರಣಯ ಪ್ರಸಂಗ ಆಗಿ ಹೋಯಿತೇ?'' ಎಂದು ಕೌತುಕದ ಉದ್ಗಾರ ತೆಗೆದದ್ದು ನೆನಪು -ಅದನ್ನು ತಮ್ಮ ಪತ್ರಿಕೆಯೊಂದರಲ್ಲಿ ಸಮೀಕ್ಷಿಸುತ್ತ.

ನಾನು ಈ ಕಥೆಯನ್ನು ಆಯ್ದು ಕೊಟ್ಟದ್ದೇಕೆ? ಅದಕ್ಕೆ ಎರಡು ಕಾರಣಗಳು: ಒಂದು, ಅದು ಮಾಸ್ತಿಯವರ ಪ್ರತಿಭೆಯ ಒಂದು ಅದ್ಭುತ ಅಂಶಕ್ಕೆ ದ್ಯೋತಕ. ಕಾಳಿದಾಸನಂಥ ಮಹಾಕವಿಯ ಕೃತಿಕೌಶಲ್ಯದ ಪಾತಳಿಯಲ್ಲಿ ಅವರ ಊಹೆ ನಿರಾತಂಕವಾಗಿ ನಿರಾಯಾಸವಾಗಿ ಕೆಲಸಮಾಡುತ್ತದೆ. 'ಹೇಮಕೂಟದಿಂದ ಮರಳಿ ಬಂದ ಮೇಲೆ', 'ಗೌತಮಿ ಹೇಳಿದ ಕಥೆ' ಹಾಗೆಯೇ 'ಮಂತ್ರೋದಯ'. ಇಂಥವು ಈ ಮಾದರಿಯ ಅವರ ಶಕ್ತಿಗೆ ಉತ್ತಮ ಉದಾಹರಣೆ. ಈ ಕಥೆಯಲ್ಲಿ ಮಾಸ್ತಿಯವರು ಕಾಳಿದಾಸನ ಕೃತಿ ಸೌಧಕ್ಕೆ ಹೊಸದೊಂದು ರಕ್ಷೆ ಜೋಡಿಸಿದರು. ಕವಿಕುಲ ಗುರುವಿನ ಕಾವ್ಯ ರೂಪಕಕ್ಕೆ ಹೊಸದೊಂದು ಪರಿಮಾಣ ಕಲ್ಪಿಸಿದರು. ಇದೇ ಬಗೆಯ ಸಾರ್ಥಕವಾದ ಸಹೃದಯ ಸಾಹಸವನ್ನು ಅವರು ಶೇಕ್ಸ್‌ಪಿಯರ್, ಗಾಯಟೆ, ಟಾಲಸ್ಟಾಯಿ- ಪ್ರಭೃತಿಗಳ ಬಾಳಿನ ಬಗೆಗೂ ಕೈಗೂಡಿಸಿದ್ದಿದೆ.

ನಮ್ಮ ಆಯ್ಕೆಗೆ ಇನ್ನೊಂದು ಕಾರಣವೆಂದರೆ, ಎರಡು ದಶಕಗಳ ಹಿಂದೆ ಮಾಸ್ತಿಯವರು ನಮ್ಮ ಊರಿಗೆ ಚಿತ್ತೈಸಿದಾಗ ನಮ್ಮನ್ನೆಲ್ಲ ಸುತ್ತಲು ಕೂಡಿಸಿಕೊಂಡು ಇದೇ ಕತೆಯನ್ನು ಕೇಳಿಸಿದ್ದರು. ಸೋಜಿಗವೆಂದರೆ ಆಗ ಈ ಕಥೆಯನ್ನು ಅವರು ಬರೆದಿರಲಿಲ್ಲ. ಮುಂದೆ ಒಂದೆರಡು ವರ್ಷಗಳ ನಂತರ ಅದು ಬರೆದು 'ಜೀವನ'ದಲ್ಲಿ ಅಚ್ಚಾಗಿ ಬಂತು. ಆಗ ಅದನ್ನು ಓದುತ್ತಿದ್ದಾಗ ನನಗೆ ಮತ್ತೊಮ್ಮೆ ಮಾಸ್ತಿಯವರು ಆ ಭಾವಾನುಕಂಪನದ ಮೆಲುದನಿ ಕಥೆಯ ಪದಗತಿಯಲ್ಲಿ ಉದ್ದಕ್ಕೂ ಕೇಳಿಸಿತು.

ಇದು ಮಾಸ್ತಿಯವರ ಪ್ರತಿಭೆಯ ಒಂದು ಅಪೂರ್ವ ಅಂಶ. ಸಾಮಾನ್ಯವಾಗಿ ಕಥೆ-ಕಾದಂಬರಿಕಾರರು ತಮ್ಮ ಕೃತಿಯನ್ನು ಸಮಗ್ರವಾಗಿ ರೂಪಿಸಕೊಂಡು ದೀರ್ಘಕಾಲ

ಹೀಗೆ ಮನದೊಳಗೆ ಇಟ್ಟುಕೊಂಡು ಇತರ ವ್ಯವಹಾರಗಳ ಒತ್ತಡಗಳಲ್ಲಿಯೂ ತುಂಬ ವ್ಯಗ್ರರಾಗಿ ಅಲೆದಾಡುತ್ತಿರುವುದಿಲ್ಲ. (ಅಂದು ಅವರು ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಿದ್ದು, ಅವರು ಪ್ರಚಾರಾರ್ಥವಾಗಿ ಬಂದಿದ್ದರು!)

ಯಾವದೊಂದು ಕಥೆಯ ವಸ್ತುವೋ ಬೀಜವೋ ಮನಸ್ಸಿನಲ್ಲಿ ಎಂದೋ ನಟ್ಟಿರಬಹುದು. ಅದರ ಸ್ಥೂಲ ರೂಪರೇಷೆ ನಸುಮಸುಕಾಗಿ ಚಿತ್ತದಲ್ಲಿ ಗುರುತು ಹಾಕಿಕೊಂಡಂತೆ ಇರಬಹುದು. ಆದರೆ ಹೀಗೆ ಇಡಿಯ ಕತೆಯನ್ನು-ಅಲ್ಲ ಕೆಲವಾರು ಕತೆಗಳನ್ನು! ಅದರ ಪೂರ್ಣ ರೂಪದಲ್ಲಿ, ಪಾತ್ರ-ಪ್ರಸಂಗ, ಸಂವಿಧಾನ-ಸಂವಾದಗಳೊಂದಿಗೆ, ತನ್ನ ಮರಿಯನ್ನು ಒಡಲು ಜೇಬಿನಲ್ಲಿ ಇಟ್ಟುಕೊಂಡು ಓಡಾಡುವ ಕಾಂಗರುವಿನಂತೆ ಬಹುಕಾಲ ತಲೆಯಲ್ಲಿ ಇಟ್ಟುಕೊಳ್ಳುವ ಕಸಬು-ಅಲ್ಲ, ಆ ಕಸುವು ಸಾಧಿಸಿದವರು ನಮ್ಮ ಸಾಹಿತ್ಯ ಪ್ರಪಂಚದಲ್ಲಿ ಮಾಸ್ತಿಯವರೊಬ್ಬರೇ ಏನೋ!

ಮಸಿಯ ರಾಜ್ಯಕ್ಕೆ ಇಳಿಸುವ ಮುನ್ನ ಮನೋರಾಜ್ಯದಲ್ಲಿ ಹೀಗೆ ಹಲವಾರು ಕತೆಗಳನ್ನು ತಾನು ಪೂರ್ತಿ ಕಲ್ಪಿಸಿ ಇಟ್ಟುಕೊಳ್ಳುವುದುಂಟು-ಎಂದು ಅವರು ಅಂದು, ಈ ಸೋಜಿಗದ ಬಗೆಗೆ ಕೇಳಿದಾಗ, ವಿವರಿಸಿ ನನ್ನನ್ನು ಇನ್ನಿಷ್ಟು ಸೋಜಿಗಗೊಳಿಸಿದರು! ಆಗಲೇ ಅವರು ತಮ್ಮ ಆತ್ಮಚರಿತ್ರೆ ಬರೆಯಲಿದ್ದು ಅದಕ್ಕೆ 'ಭಾವ' ಎಂದು ನಾಮಕರಣ ಮಾಡುವೆನೆಂದು ಹೇಳಿದ್ದರು-50 ರ ದಶಕದಲ್ಲಿಯೇ!

❊

ಈ ಬಗೆಯ ಪ್ರಜ್ಞೆಯ ಪರಿಣತಿ ಮಾಸ್ತಿಯವರ ವ್ಯಕ್ತಿತ್ವದ್ದೇ ಒಂದು ಅವಿಭಾಜ್ಯ ಅಂಗ. ಅಂತೆಯೇ ಬೇಂದ್ರೆಯವರು ಅವರನ್ನು 'ಬೆಳೆದ ಅಣ್ಣ'ನೆಂದು ಕರೆದರು. (ಬೇಂದ್ರೆಯವರೋ ಇನ್ನೂ ಬೆಳೆಯುತ್ತಲೇ ಇದ್ದಾರೆ! ''ಬಾ ಹತ್ತಿರ''ವೆಂದೂ ದೂರ ಹೋಗುತ್ತಿದ್ದಾರೆ!) ಅವರ ಒಂದೊಂದು ನುಡಿ ನಡೆಯ ಹಿಂದೆಯೂ ಮಾಗಿದ ರಸವಿದೆ. ಮಾಗಿಯ ಮುದುಡಲ್ಲ! ಅವರ ಒಂದೊಂದು ಮಾತೂ ಪರಿಪಕ್ವ ಪರಿಪೂರ್ಣ ಮತ್ತು ಪರಿಣತ ಮತಿಗೆ ಪರಿಚಾಯಕ. ಅವರ ಇತ್ತೀಚೆಯ ಲೇಖನದಲ್ಲಿ ಕಂಡುಬರುವ ಹುರುಳುದುಂಬಿದ ಪಕ್ವತೆ ಪೂರ್ಣತೆ ಅವರ ತೀರ ಆರಂಭದ ಬರಹದಲ್ಲಿಯೂ ಅಷ್ಟೇ ಸುಂದರವಾಗಿ, ಸರ್ವಾಂಗಬಂಧುರವಾಗಿ ಕಂಡುಬರುವುದೂ ನಮ್ಮ ಸಾಹಿತ್ಯಕ್ಕೆ ಒದಗಿದ ಒಂದು ಪವಾಡ. ಇಂಥಹ ಪವಾಡ ನಮ್ಮನ್ನು ಚಕಿತಗೊಳಿಸುವ ಇನ್ನೊಂದು ಉದಾಹರಣೆ, ಗುರುದೇವ ರವೀಂದ್ರರದೇ ಸರಿ. ಈ ವಿಕಾಸ ಪರಿಣತಿಯನ್ನು ಅವರು ಎಂದು ಹೇಗೆ ಪಡೆದರೋ ಆ 'ಶ್ರೀನಿವಾಸ'ನಿಗೇ ಗೊತ್ತು!

ಈ ಪೂರ್ಣತೆಯೇ ಅವರ ಸಾಹಿತ್ಯದ, ವ್ಯಕ್ತಿತ್ವದ ಎಲ್ಲ ಗೌರವಕ್ಕೆ ಮೂಲ. Ripeness in all ಆಂಗ್ಲ ಕವಿ ಚಕ್ರವರ್ತಿ ಅಂದದ್ದು ಇಂಥ ಪ್ರತಿಭಾ ಪುರುಷರಿಗೂ ಅನ್ವಯಿಸುತ್ತದೆ.

ನಮ್ಮಲ್ಲಿಗೆ ಬಂದಾಗ ಅವರ ಪರಿಚಯವನ್ನು ಸಾರ್ವಜನಿಕ ಸಭೆಯಲ್ಲಿ ಮಾಡಿಕೊಟ್ಟು ಅವರು ಯಾವ ವಿಷಯ ಮಾತಾಡುವರೆಂದು ಜಾಹೀರು ಮಾಡಲು ತಿಳಿಯದೆ ಅವರನ್ನು ಕೇಳಿದೆ. 'ಸರ್, ಯಾವ ವಿಷಯವೆಂದು ತಿಳಿಸಲಿ?' ಅವರು ಕಿರಿದಾಗಿ ನಗುತ್ತಲೆ ಅಂದರು. ''ವಿಷಯ ಬೇಡ. ಮಾಸ್ತಿ ಮಾತಾಡುತ್ತಾರೆ, ಅನ್ನಿ ಸಾಕು''. ಈ ಉದ್ಗಾರ ಅವರ

ಸಮಸ್ತ ಸಾಹಿತ್ಯ ಪ್ರಪಂಚಕ್ಕೂ ಸಾಕು. ಅದೇ ಮಾಸ್ತಿ Touch, ಮಾಸ್ತಿ Tone ಎಲ್ಲ. ಔಚಿತ್ಯ ಔನ್ನತ್ಯವನ್ನೂ ಒಂದಾಗಿಸಿ, ಸುಬ್ಬಣ್ಣನ ಪಿಟೀಲಿನಿಂದ ಪ್ರೀತಿಯೇ ಗಾನವಾಗಿ ಹೊಮ್ಮುವಂತೆ ಅವರ ಬಾಳಿನ ಜ್ಞಾನ, ಶಾಂತಿ ಮತ್ತು ಸಾಮರಸ್ಯ ಯೋಗವೆಲ್ಲವನ್ನೂ ಚೆಲುವಿನ ಬಿನ್ನಪವಾಗಿ ಅರಳಿಸಿದೆ.

*

''ಸುಬ್ಬಣ್ಣ'' ಕಾದಂಬರಿ-ಅಥವಾ ನೀಳ್ಗತೆಯನ್ನು-ಬರೆದದ್ದು ೧೯೨೮ರಲ್ಲಿ. ಇಂದಿಗೆ ಅದರ ೧೨ ಆವೃತ್ತಿಗಳು ಬೆಳಕು ಕಂಡವು. ಬೆಳಕಿರುವವರೆಗೂ ಅವು ಮತ್ತೆ ಮತ್ತೆ ಕಂಡು ಬರುತ್ತಲೇ ಇರುವವು. ಆದರೆ ಇತ್ತೀಚೆಗೆ ಅವರ ಲೆಕ್ಕಣಿಕೆಯಿಂದ ಮೂಡಿಬಂದ 'ಶೇಕ್ಸ್‌ಪಿಯರನ ಮಂಚ' ದಂಥ ಕಥೆಗಳಷ್ಟೇ ಕಥನ ಕೌತುಕವನ್ನೂ ಕೌಶಲ್ಯವನ್ನೂ ಆ ಕಾದಂಬರಿಯಲ್ಲಿ ನಾವು ಕಾಣುತ್ತೇವೆ. ಇದು ಹೀಗೆ ಕಾಣಲು ಕಾರಣ, ಅವರು ಹಿಂದೆ ಎಂದೋ ಅಂಗೈಯನಲ್ಲಿಯಂತೆ ಪಳಗಿಸಿಕೊಂಡ ಭಾಷೆಯ, ಶೈಲಿ-ಸಿದ್ಧಿಯೊಂದೇ ಅಲ್ಲ. ಅವರ ಕಥನ ತಂತ್ರದ, ಅದರೊಳಗಿಂದ ಸುಗಂಧದಂತೆ ಸೂಸಿಬರುವ ಅವರ ಜೀವನ ದರ್ಶನದ ಮಂತ್ರಸಿದ್ಧಿಯೂ ಈ 'ಪೂರ್ಣಯೋಗ'ವೂ ಅದರ ಜೀವಾಳವಾಗಿದೆ.

ಈ ಪೌರ್ಣಮೆಯು ಮಾಸ್ತಿಯವರ ಬಾಳಿನ ಕಲಾವೃದ್ಧಿಯಲ್ಲಿಯೆ ಅರಳಿದೆ. ಹೊಸಗನ್ನಡದ ಹಲವಾರು ಹಿರಿ ಕಿರಿ ಸಾಹಿತಿಗಳನ್ನು ಹತ್ತಿರದಿಂದಲೂ ದೂರದಿಂದಲೂ ಕಂಡಿದ್ದೇನೆ. ಆದರೆ ಎರಡೂ ನೋಟಗಳಲ್ಲಿ ಅಭಿನ್ನವಾಗಿ ಕಂಡು ಬಂದವರು ತೀರ ಕಡಿಮೆ. ಒಬ್ಬ ಕವಿ ತನ್ನ ಕೃತಿಗಿಂತಲೂ ಹಿರಿಯನಾಗಿದ್ದರೆ, ಇನ್ನೊಬ್ಬನ ಕೃತಿ ಆ ಕವಿಗಿಂತ ಮಿಗಿಲಾಗಿ ತೋರುತ್ತದೆ. ಆದರೆ ಮಾಸ್ತಿಯವರನ್ನು ಸುತ್ತುಬಳಸಿ ಯಾವ ಅಂತರ-ಕೋನದಿಂದ ಹೇಗೂ ನೋಡಲಿ, ಸಭೆಯಲ್ಲಿ ನೋಡಲಿ, ಮನೆಯಲ್ಲಿ ನೋಡಲಿ, ಪೂರ್ವ ಸೂಚನೆಯಿಂದ ನೋಡಲಿ, ಆಕಸ್ಮಾತ್ತಾಗಿ ನೋಡಲಿ, ದಿನ ಬಿಟ್ಟು ನೋಡಲಿ, ದಶಕ ಬಿಟ್ಟು ನೋಡಲಿ (ನಾನು ನೋಡಿದಂತೆ!) ಅವರದು ಅಖಂಡ, ಅಂತರ್ಬಾಹ್ಯ ಸಾಮರಸ್ಯ ಹೊಂದಿದ ವ್ಯಕ್ತಿತ್ವ-integrated personality. ಜೀವನದ ಪಂಚಕೋಶಗಳೂ ಪಂಚಾಮೃತವಾಗಿ ಪಾಕಗೊಂಡ ವ್ಯಕ್ತಿತ್ವವದು.

'ಸಮನ್ವಯ' 'ಸಾಮರಸ್ಯ'ವೆಂಬವು ಮಾಸ್ತಿಯವರ ಮಟ್ಟಿಗೆ ಒಂದು ವಿಶೇಷ ಪದಪ್ರಯೋಗವಲ್ಲ. ಅದು ಅವರ ಬಾಳಿನ ಸಮಗ್ರತೆಯನ್ನೂ ಏಕಾಗ್ರತೆಯನ್ನೂ ಒಂದಾಗಿಸಿದೆ. ಅವರು ನಂಬಿ, ನೆಟ್ಟ, ನುಡಿದು ನಡೆದು ಬಂದ ಮೂಲ್ಯಗಳ ವೈಶಾಲ್ಯವನ್ನೂ ನೈರ್ಮಲ್ಯವನ್ನೂ ಸಾಫಲ್ಯವನ್ನೂ ವ್ಯಾಪಿಸಿ ಅದಕ್ಕೊಂದು ಕೈವಲ್ಯ (Uniqueness) ತಂದಿರಿಸಿದೆ. ಶೀಲದಿಂದ ಶೈಲಿ ಎಂಬ ಮಾತು ಇವರ ಜೀವನದ ಧಾತುವಾಗಿದೆ. ಅವರ ವ್ಯಕ್ತಿತ್ವದಲ್ಲಿ ಯಾವ ಬೆರಕೆಯೂ ಇಲ್ಲ. ಯಾವ ಬಿರುಕೂ ಇಲ್ಲ.

''ಕಲಿಕಪ್ಪು ಎಲ್ಲಿನೂ ಇಲ್ಲ ಒಂದೆ ಸಮನಲ್ಲ ಎಲ್ಲನೂ'' ನುಣುಪು
ಇದು ಹಾಲುಗಡಲನಾ ಸೀಮಿ(ತನಗೆತಾ)ಸ್ವಾಮಿ''
ಎಂಬ 'ಬೆಳದಿಂಗಳ ನೋಡು' -ಕೃತಿಯಲ್ಲಿನಂತೆ.

ಇದು Public face ಮತ್ತು private face ಎಂಬುದಿಲ್ಲ. ಯಾವದೋ Pose ಯಾವದೋ profile ಇದಿರಾಗಿ ಇಡುವ ವೃತ್ತಿ ಅನೇಕ ಗಣ್ಯ-ವ್ಯಕ್ತಿಗಳಲ್ಲಿ ನಾವು

ನೋಡುತ್ತೇವೆ. ಆದರೆ ಮಾಸ್ತಿಯವರನ್ನು ಎಂದೇ ನೋಡಲಿ ಎಂತೇ ನೋಡಲಿ ಅವರದು ಒಂದೇ ರೂಪು.

ಮಾನವ್ಯದ ಉಪಾಸನೆ, ಚೆಲುವಿನ ಆಸ್ವಾದನೆ ಭಗವಂತನ ಆರಾಧನೆ - ಈ ಮೂರು ಈ ಹಿರಿಯ ಜೀವಕ್ಕೆ ಬೇರೆ ಅಲ್ಲ.

''ಹೊರಗಾವುದೋ ಚೆಲುವ ಮುಗುಳರಳುತ್ತಿಹುದು
ಒಳಗರಳುತಿಹುದಂತೆ ಅದನರಿವ ಶಕ್ತಿ
ನಿರುತವೂ ನಡೆವುವೀ ಎರಡು ವಿನ್ಯಾಸ
ಬೆಳೆವುದಿಂತನವರತ ಚೆಲುವಿನ ವಿಕಾಸ.''

-ಈ ದೃಷ್ಟಿಗೆ,

ಕಾಣುವ ಸೃಷ್ಟಿಯ ಕಾಣದೆ ಸುತ್ತಿಹ
ಅನಂದಾಬ್ಧಿಯ ಅಮೃತದ ತುಂತುರ
ನೆಲ, ಮೊಗ, ನಭದಲ್ಲಿ ಹೂ, ನಗೆ, ತಾರೆಯ
ರೂಪಾಂತಿಹವು ಅನಂತ ನಿರಂತರ!''

ಇದುವೇ ''ರಸೋವೈಸಃ''ಎಂಬ ವೃತ್ತಿ. ಇಲ್ಲಿ 'ಸಃ' ರಸವಲ್ಲ. ರಸವೇ 'ಸಃ'ಸೃಷ್ಟಿಯಲ್ಲಿಯೇ ಈಶನನ್ನು ಕಾಣುವ ಈಶಾವಾಸ್ಯ ಪ್ರಜ್ಞೆಯಿದು. ಸತ್ಯವನ್ನೂ ಸೌಂದರ್ಯವಾಗಿ, ಎರಡನ್ನೂ ಆನಂದವಾಗಿ, ಸುಖದುಃಖಗಳನ್ನೂ ಈಶನಂದದ ಸಂವೇದನಾ ಕ್ಷಮತೆಯನ್ನು ಬೆಳೆಯಿಸುವ ಸಂಸ್ಕಾರವಾಗಿ ಕಾಣವ ಹಾದಿಯನ್ನೂ ಹದವನ್ನೂ ಮಾಸ್ತಿಯವರು ತಮ್ಮ ಅನುಭವದಲ್ಲಿ ಪಳಗಿಸಿಕೊಂಡು, ತನ್ನ ಅರಿವೆ ತನ್ನ ಗುರುವಾಗಿಸಿಕೊಂಡು ಹೀಗೆ ಪ್ರಜ್ಞರಾದರು.

*

ಈ ಪರಿಣತಿಯ ರೂಪಕವೆ 'ಸುಬ್ಬಣ್ಣ'. ಇದರಲ್ಲಿ ಲೇಖಕನ ಆತ್ಮ ಶಿಲ್ಪಕ್ಕೆ ಪ್ರತೀಕವಾಗಿ ಸುಬ್ಬಣ್ಣನ ಬಾಳಿನ ಬಿಂಬ ಒಡಮೂಡಿದೆ. ಚಿನ್ನದ ಗಣಿಯ ಅವರು ಅಪರಂಜಿಯಾಗುವ ವಿಚಿತ್ರ ನ್ಯಾಸವನ್ನು ಇಲ್ಲಿ ಚಿತ್ರಸಲಾಗಿದೆ. ಈ ಕಾದಂಬರಿಯನ್ನು ಓದಿದರೆ 'ಇದೇನು ಮಹಾ!' "Any one can write a novel!' ಎನ್ನಬಹುದು. ಆದರೆ ಈ ಸರಳತನ ತೋರಿಕೆಯದು, ಭರದಿಂದ ತಿರುಗುವ ಬುಗರಿ ನಿಶ್ಚಲ ನಿಂತಂತೆ ಕಾಣುವುದಿಲ್ಲವೇ? ಗತಿಯ ಅಲೆಯೇ ಈ ಆಭಾಸಕ್ಕೆ ಕಾರಣ. ಕಲೆಯನ್ನು ಅಡಗಿಸುವ ಕಲೆಗೆ 'ಸುಬ್ಬಣ್ಣ' ಸಾಕ್ಷಿ.

೮೬ ಪುಟಗಳ ಈ ಪುಟ್ಟ ಸಂಪುಟದಲ್ಲಿ ಮಾಸ್ತಿಯವರ ಜೀವನ ದರ್ಶನದ ಸಾರವೆಲ್ಲ ತುಂಬಿದೆ. ಅವರ ಆ ಮುಂದಿನ ವಿಸ್ತಾರವಾದ ಸಾಹಿತ್ಯವೆಲ್ಲ ಈ ತತ್ವ ತಾತ್ಪರ್ಯದ್ದೇ ವ್ಯಾಖ್ಯಾನ ಮತ್ತು ವ್ಯಾಕರಣ. ಗಂಡು ಹೆಣ್ಣಿನೊಂದಿಗೆ, ಹೆಣ್ಣು ಹೆಣ್ಣಿನೊಂದಿಗೆ, ಮಾನವ ಮಾನವನೊಂದಿಗೆ, ಮಾನವ ಆದರ್ಶದೊಂದಿಗೆ ದೇವನೊಂದಿಗೆ ಇಟ್ಟುಕೊಂಡ ಕೊಳ್ಳಬೇಕಾದ ಸಂದರ್ಭಗಳ ಸಮಸ್ಯೆಗೆ; ಬಗೆಹರಿಕೆಯೇ ತತ್ವಜ್ಞಾನ ಇಲ್ಲವೇ ದರ್ಶನ. ಅದೆಲ್ಲವೂ ಇಲ್ಲಿ ಬಾಲಕೃಷ್ಣನ ಬಾಯಿಯಲ್ಲಿ ಯಶೋದೆ ವಿಶ್ವರೂಪವನ್ನು ಕಂಡಂತೆ ಸುಬ್ಬಣ್ಣನ ಬದುಕಿನ ಚಿಮುಟಗೆ ಮಣ್ಣಿನಿಂದ ನಾವು ಕಂಡುಕೊಳುತ್ತೇವೆ.

ಈ ಮೂಲಕ ''ಸುಬ್ಬಣ್ಣ''ನನ್ನು ಒಂದಕ್ಕಿಂತ ಹೆಚ್ಚು ದೃಷ್ಟಿಯಿಂದ ಅಭ್ಯಸಿಸಬೇಕು. ಇಲ್ಲಿ ನಾನು ಕೈಗೊಂಡ ಪ್ರಯತ್ನ ಒಂದೆರಡೇ ಪ್ರಶ್ನೆಗಳ ಕುರಿತು. ಈ ಪ್ರಯತ್ನಕ್ಕೆ ನಾನು ಬಯಸುವ ಪ್ರತಿಫಲವೆಂದರೆ, ನಮ್ಮ ವಿಮರ್ಶಕ ವಿಚಾರವೇತ್ತರಲ್ಲಿ ಈ ಕುರಿತು ತೀವ್ರ ಪ್ರತಿಕ್ರಿಯೆಗೆ ಪ್ರಚೋದನೆ.

ಮೊದಲು ಗಮನಿಸಬೇಕಾದದ್ದು ಶಾಮಣ್ಣ ಸುಬ್ಬಣ್ಣನಾದ ಬಗೆಯದು. ದಿ. ನವರತ್ನ ರಾಮರಾಯರು 'ಸುಬ್ಬಣ್ಣ'ನ ಮೂಲವಸ್ತುವನ್ನು ಲೇಖಕರಿಗೆ ಒದಗಿಸಿದ್ದು. ತಮ್ಮ ಪರಿಚಯದ ಒಬ್ಬ ವೃದ್ಧ ಗಾಯಕನ ಕಡೆಯ ದಿನಗಳನ್ನು ಅವರು ತಮ್ಮ ಸ್ನೇಹಿತರಿಗೆ ಬಣ್ಣಿಸಿ ಹೇಳಿದ ವ್ಯಕ್ತಿಯೇ ಈ ಕತೆಯ ನಾಯಕ. ನವರತ್ನರು ಆ ವ್ಯಕ್ತಿಯ ಕೊನೆಯ ದಿನಗಳನ್ನು ಮಾತ್ರ ನಿರೂಪಿಸಿದ್ದು. ಅವರು ಗುರುತು ಹಾಕಿಕೊಟ್ಟ ಜೀವನದ ಸಂಪೂರ್ಣ ಚಿತ್ರ ಒಂದನ್ನು ಕಲ್ಪಿಸುವ ಪ್ರಯತ್ನದಲ್ಲಿ ಈ ಕತೆ ನಿರ್ಮಾಣವಾಯಿತು.

ಆದರೆ ಇದೊಂದು ಸಂಪೂರ್ಣ ಜೀವನದ ಚಿತ್ರವಾಗಿದೆಯೆಂಬ ಭರವಸೆ ಲೇಖಕರಿಗಿದೆಯೇ? ಅವರೇ ಕಥೆಯ ಪ್ರಥಮ ಪರಿಚ್ಛೇದದ ಕೊನೆಗೆ ಅನ್ನುತ್ತಾರೆ -

''ಹೇಗಾದರೂ ಓದುವವರೇ ಊಹಿಸಿ ಸೇರಿಸಿಕೊಳ್ಳಬಹುದಾದ ಬಹು ಭಾಗದಿಂದ ಮಾತ್ರ ಈ ಕತೆ ಸಂಪೂರ್ತಿಯಾಗಬಹುದೇ ಹೊರತು ಇಲ್ಲಿ ಹೇಳಿರುವಷ್ಟರಿಂದ ಮಾತ್ರ ಸಂಪೂರ್ತಿಯಾಗಲಾರದು.'' ಈ ಓದುಗರಿಗೆ ಬಿಟ್ಟ ಈ 'ಬಹುಭಾಗ'ದಲ್ಲಿಯೆ ನಮ್ಮ ಊಹೆ ಇಲ್ಲಿ ಓಡಿಸುವದಿದೆ, ಇರಲಿ.

ದಿ. ಶ್ರೀ ರಾಮರಾಯರೆ ಆ ವೃದ್ಧನನ್ನು ಕುರಿತು ಕತೆಯೊಂದನ್ನು ಬರೆಯಬೇಕೆಂದು ಉದ್ದೇಶಿಸಿದ್ದರು. ಈ ಕುರಿತ ರಾಮರಾಯರ ರಸಾಭಿಜ್ಞತೆಯನ್ನೂ ಕಥಾನಿರೂಪಣ ಶಕ್ತಿಯನ್ನೂ ಕೊಂಡಾಡಿದ್ದಾರೆ. ಇಷ್ಟು ಶಕ್ತಿ ಇರುವವರು ಉತ್ತಮವಾದ ಕಥಾವಸ್ತುವನ್ನು ತನಗೆ ಬಿಟ್ಟುಕೊಟ್ಟದರ ಔದಾರ್ಯವನ್ನೂ ಅವರು ಕೊಂಡಾಡಿದ್ದಾರೆ.

ಆದರೆ ರಾಮರಾಯರು ತಮ್ಮ ''ಕೆಲವು ನೆನೆಹು''ಗಳಲ್ಲಿ ಈ ಕಥೆಯನ್ನು ತಾವೇ ಬರೆಯಬೇಕೆಂದು ಉದ್ದೇಶಿಸಿದ ಉಲ್ಲೇಖ ಮಾಡಿಲ್ಲ. ''ಮಾಸ್ತಿಯವರು ಹೇಳಿದ್ದನ್ನು ನಾನು ಮತ್ತೆ ಹೇಳುವದರಲ್ಲಿ ಪ್ರಯೋಜನವಿಲ್ಲ - ಅವರ ಸಂಗಡ ನನ್ನನ್ನು ಹೋಲಿಸುವದಕ್ಕೆ ಅವಕಾಶ ಕೊಡುವುದು ವಿವೇಕವಲ್ಲ.'' ಎಂದಿದ್ದಾರೆ! ಅಂದರೆ ತಾವೇ ಈ ಕತೆ ಬರೆಯುವದರ ಮಾತಿಲ್ಲ. ಅವರ ನೆನಹುಗಳು ೧೯೫೧ರಲ್ಲಿ ಪ್ರಕಟವಾದವು. ಅದಕ್ಕೂ ೩ ವರ್ಷ ಮೊದಲಿಂದ 'ಜೀವನ'ದಲ್ಲಿ ಧಾರಾವಾಹಿಯಾಗಿ ಬಂದವು. ಮಾಸ್ತಿಯವರೇ ನೆನಹುಗಳಿಗೆ ಏಕಪ್ರೇರಕರು. ಅವರಿಗೆ ಈ ಗ್ರಂಥ ಸಮರ್ಪಿತವಾಗಿದ್ದು ಅದರ ೩೦ನೆಯ ಪರಿಚ್ಛೇದದಲ್ಲಿ 'ಸುಬ್ಬಣ್ಣ'ನ ಮೂಲಬಿಂಬ ಉಲ್ಲೇಖ ಬರುತ್ತದೆ. ನವರತ್ನ ರಾಮರಾಯರು ನರಸಿಪುರ ತಾಲೂಕಿನಲ್ಲಿ ಇದ್ದಾಗ ಅವರಿಗೆ ಪಿಟೀಲು ಕಲಿಸಲು ಒಪ್ಪಿ ಬೇಸರದಿಂದ ಕಾಪಾಡಿದ ವೃದ್ಧ ಗಾಯಕ ಶಾಮಣ್ಣನೆ ಸುಬ್ಬಣ್ಣನಾಗಿ ಮಾರ್ಪಟ್ಟಿದ್ದು.

''ಶಾಮಣ್ಣನವರ ಮಿಶ್ರ ರಸಭರಿತ ಜೀವನದ ಕೆಲವು ಕತೆಗಳನ್ನು ನನ್ನಿಂದ ಕೇಳಿ ಮಾಸ್ತಿಯವರು ತಮ್ಮ ಅದ್ಭುತ ಭಾವನದಿಂದ ತುಕುಡಗಳನ್ನು ಜೋಡಿಸಿ ಪೂರ್ತಮಾಡಿ ತಮ್ಮ ಪ್ರತಿಭೆಯ ಸಚೇತನ ಮಂತ್ರದಿಂದ ತಮ್ಮ ಕಲ್ಪನ ಪುರುಷ ವ್ಯಕ್ತಿಗೆ ಜೀವ ತುಂಬಿದ್ದಾರೆ.'' ''ಸುಬ್ಬಣ್ಣ ಶಾಮಣ್ಣನವರ ಅಚೇತನ ತಸ್ವೀರಲ್ಲ. ಆ ಪೂಜ್ಯ ವ್ಯಕ್ತಿಯ ನೈಸರ್ಗಿಕ ಬಣ್ಣದ ಅದ್ಭುತ ಚಲನಚಿತ್ರ.'' (ಮುಂದೆ ನವರತ್ನ ರಾಮರಾಯರ ತಮ್ಮ ಈ ''ಮೆಚ್ಚಿನ ಮಿತ್ರ''ರ ಕಾದಂಬರಿಯನ್ನು ಇಂಗ್ಲಿಷಿನಲ್ಲಿ ಅನುವಾದಿಸಿದ್ದಾರೆ.)

ಇಷ್ಟೊಂದು ಸಿಜ. ಶಾಮಣ್ಣನನ್ನು ರಾಮರಾಯರ ದೃಷ್ಟಿಯಲ್ಲಿ ಪೂಜ್ಯನಾಗಿಸಿದ ಗುಣಗಳನ್ನೆಲ್ಲ ತನ್ನ ಪ್ರತಿಭಾ ಲೋಕದೊಳಗಿಂದ ಕಂಡು ಲೇಖಕರು ಈ ಅದ್ಭುತ ವರ್ಣರಂಜಿತ ಚಿತ್ರವನ್ನು ನೀಡಿದ್ದಾಗಿದೆ. ಇವರು ಪುನರ್ನಿರ್ಮಿಸಿದ ಈ ಅದ್ಭುತ ಭಾವನದ ಕಲ್ಪನಾ ಪುರುಷ, ಮಾಸ್ತಿಯವರ ಮಾನಸ ಪುತ್ರ - ಒಂದು ಅನುಭವ ಪರಂಪರೆಗೆ ಒಬ್ಬ ನಾಮ ರೂಪ. ಮಾಸ್ತಿಯವರ ಜೀವನ ದರ್ಶನಕ್ಕೆ ಒಂದು ಮಾಧ್ಯಮ. ಶ್ರೀ ನವರತ್ನರು ಬರೆದ ಏಳೆಂಟು ಪುಟಗಳಲ್ಲಿ ಸಜೀವ ಮೂರ್ತಿಯಾಗಿ ನಿಲ್ಲುವ ಶಾಮಣ್ಣ ಸುಬ್ಬಣ್ಣನಾದಾಗ, ಇಡಿಯ ಕಾದಂಬರಿಯಲ್ಲಿ ಎಂಥೆಂಥ ಕರುಣ ರಮ್ಯ ಸನ್ನಿವೇಶಗಳಲ್ಲಿ ಭಾಗಿಯಾಗಿದ್ದರೂ ಅವನ ಸ್ವಭಾವದಷ್ಟು ಸ್ವರೂಪ ಸ್ಫುಟವಾಗಿಲ್ಲ. ಪ್ರಯಾಗದ ಕುಂಭ ಮೇಳದಲ್ಲಿ ಮೈಸೂರಿನವರಿಗೆ ಹೇಗೋ ಹಾಗೆ ನಮಗೂ ಅವನನ್ನು ಗುರುತಿಸುವದು ಕಷ್ಟವೇ ಆಗಿದೆ! ಕೊನೆಯ ದಿನಗಳಲ್ಲಿ ಶಾಮಣ್ಣನ ಚಿತ್ರ ನವರತ್ನರ ಶಬ್ದಗಳಲ್ಲಿ ಹೇಗೆ ನಿಖರವಾಗಿದೆ ನೋಡಿ.

ಬಂಡೆತಲೆ ಸ್ಥೂಲಕಾಯದ ಕಪ್ಪು ಬಣ್ಣದ ಮುದುಕ. (ಸುಬ್ಬಣ್ಣನೋ? ಬರೆ 'ಸೋತ ಮೋರೆಯ' 'ಮಂಗ ಮೋರೆಯ' ಮುದುಕ.) ತನ್ನ ಪ್ರಪಂಚದಲ್ಲಿಯೇ ತಾನಿದ್ದುಕೊಂಡು ಜನ್ಮ ಜನ್ಮಾಂತರದ ಕನಸುಗಳನ್ನು ಕಾಣುತ್ತಿರುವಂತೆ ತೋರುತ್ತಿದ್ದರು... ನಿತ್ಯಕಟ್ಲೆಯ ೫ ಮನೆಗಳ ಭಿಕ್ಷಾಟನೆ ಮಾಡುತ್ತಿದ್ದರು. ಅದರಿಂದ ತಂದ ಅನ್ನವನ್ನು ದುರ್ಬಲ ಅಥವಾ ಕಾಯಿಲೆಯಿಂದ ನರಳುತ್ತಿರುವ ದುರ್ಭಾಗ್ಯರಿಗೆ ನಿಶ್ಶೇಷವಾಗಿ ಕೊಟ್ಟು ತಾವು ಉಪವಾಸ ಮಲಗಿದ್ದನ್ನು ಅನೇಕ ವೇಳೆ ಕೇಳಿದ್ದೇನೆ.

ಮಾಸ್ತಿಯವರು ಇವೆಲ್ಲ ಭೌತಿಕ ವಿವರಗಳನ್ನು ಕೊಡಲು ಹೊಗಲಿಲ್ಲ. ಸ್ಥಿತ ಪ್ರಜ್ಞನ ಭಾಷೆಯೊಂದೆ ಕೊಟ್ಟಿದ್ದಾರೆ ಹೊರತು ಆತನ ಅಶನವೇನು ವರ್ಜನೆಯೇನು ಎಂಬುದೆಲ್ಲ ಹೇಳ ಹೋಗಿಲ್ಲ.

ಆಶ್ಚರ್ಯವೇನೆಂದರೆ ಮಾಸ್ತಿಯವರ ಸುಬ್ಬಣ್ಣ ಕಾದಂಬರಿಯಲ್ಲಿ ಮಾತನಾಡಿದ ಸಂದರ್ಭಗಳೇ ಐದೋ-ಆರೋ. ಅದೂ ಒಂದೊಂದು ಸಂದರ್ಭವೂ ಅವನ ಬಾಳಿನ ಆಯಕಟ್ಟಿನ ಘಟ್ಟದ್ದು ಎನ್ನುವಂತಹದು. ಉಳಿದ ಅವನ ಎಲ್ಲ ಚರ್ಯೆ ಚರಿತವನ್ನು ಮಾಸ್ತಿಯವರೇ ತಮ್ಮ ಮಾತಿನಲ್ಲಿ ಹೇಳಿ ಮುಗಿಸುತ್ತಾರೆ.

ಶಾಮಣ್ಣ ನರಸಿಪುರದಲ್ಲಿ ಚಾಪೆಯ ತೆರೆಕಟ್ಟಿದ ಜಗಲಿಯಲ್ಲಿ ವಾಸಿಸುತಿದ್ದ. ನಮ್ಮ ಸುಬ್ಬಣ್ಣ ಅದಕ್ಕೂ ಎರವಾದ ಅನಿಕೇತನ. ''ಒಂದು ಜಗಲಿಯ ಮೇಲೆ ಇದ್ದಾಗ ಮಳೆ ಇರಿಚಲು ಬಡಿದರೆ ಅವರ ಮುಂಗಡೆಯ ಮನೆಯ ಜಗಲಿಗೆ ಹೋಗುವರು.'' ''ಒಂದು ಮನೆಯೊಳಗೆ ಹೋಗಿ ಮಲಗುತ್ತಿರಲಿಲ್ಲ. ಶಾಮಣ್ಣನ ಸೊತ್ತೆಂದರೆ ಹರಕು ಮಂದಲಿಗೆ ಭಿಕ್ಷಾಪಾತ್ರೆ, ಮಣ್ಣ ಹಣತೆ ಮತ್ತು ಬಿದುರಿನ ಊರುಗೋಲು. ಸುಬ್ಬಣ್ಣ ಮುದುಕನಾದರೂ ಊರುಗೋಲು ಹಿಡಿದು ನಡೆಯುವವನಲ್ಲ. ಶಾಮಣ್ಣ ಪಿಟೀಲು ಒಡೆದು ಹಾಕಿ ವಾದ್ಯ ಸಂನ್ಯಾಸ ತೆಗೆದುಕೊಂಡೇ ೨೦ ವರ್ಷವಾಗಿತ್ತು. ಮಾಸ್ತಿಯವರು ಇದನ್ನು ತಮ್ಮ ಕಲಾತ್ಮಕತೆಗೆ ಒಪ್ಪುವಂತೆ ಹೆಚ್ಚು ಕೌಶಲ್ಯದಿಂದ ಕೋಮಲತೆಯಿಂದ ಚಿತ್ರಿಸಿದ್ದಾರೆ. ತನಗೇಕೆ ವಿದ್ಯೆಯ ಜಂಭ? - ಎಂಬ ಒಂದು ಉತ್ಥಾನ ವೃತ್ತಿಯಲ್ಲಿ ಸುಬ್ಬಣ್ಣ ಹೊಳೆಯ ತಡಿಗೆ ಹೋಗಿ ಪಿಟೀಲನ್ನು ಒಡೆಯಲು ಮನಸ್ಸು ಬರದೆ ಅದನ್ನು ತೇಲಿಬಿಡುತ್ತಾನೆ. ಆದರೆ ಮರುದಿನ ಮುಂಜಾನೆ ದೈವ ಸಂಕೇತವೆಂಬತೆ ಆ ಪಿಟೀಲು ಅವನ ತಲೆಯ ಬಳಿಗೇ ಬಂದು ಕೂತಿರುತ್ತದೆ. ಶಿಷ್ಯನಾಗಲು ಬಂದು ಅವನ ಬೆನ್ನಿಗೆ ಬಿದ್ದ

ವೆಂಕಟರಮಣ ಅದನ್ನು ಎತ್ತಿತಂದು ಅಲ್ಲಿ ಇಟ್ಟಿರುತ್ತಾನೆ. ಈ ಹೃದಯಸ್ಪರ್ಶಿಯಾದ ಮಾರ್ಪಾಟು ಮಾಸ್ತಿಯವರ ಅದ್ಭುತ ಭಾವನಕ್ಕೆ ಸಾಧ್ಯ. ಅರ್ಥಾತ್ ಈ ಘಟನೆ ಆದದ್ದೂ ೨೦ ವರ್ಷ ಹಿಂದೆಯೇ. ಆದರೆ ಕೇವಲ ವಾದ್ಯ ಸಂನ್ಯಾಸ ಮಾಡಿಬಿಟ್ಟ ಊರುಗೋಲಿನ ಮುದುಕ ಶ್ಯಾನಭೋಗ ವೆಂಕಟಸುಬ್ಬಯ್ಯನಿಗೆ ಮುಂದೆ ಪಿಟೀಲು ಕಲಿಸುವದೆಂತು?

ಶಾಮಣ್ಣನ ಸಂಗೀತ ಸಿದ್ಧಿ ವೆಂಕಟಸುಬ್ಬಯ್ಯನ ಕಲಾ ಪ್ರೌಢಿಮೆಯಿಂದ ನವರತ್ನರು ಸೂಚಿಸಿದ್ದಾರೆ. ಮಾಸ್ತಿಯವರು ಸ್ವಯಂ ಸುಬ್ಬಣ್ಣನಿಂದಲೇ ಅವನ ವಾದನ ವೈಖರಿಯ ವೈಭವವನ್ನು ವ್ಯಕ್ತಗೊಳಿಸಿದ್ದಾರೆ. ಸುಬ್ಬಣ್ಣನ ಸಂಗೀತವನ್ನು ಸುಬೇದಾರ 'ಮಾವ' (ನವರತ್ನರ ಪ್ರತಿನಿಧಿ) ತಾವೇ ಎರಡು ಸಲ ಕೇಳಿ ಮರುಳಾಗುತ್ತಾರೆ. ಮಗಳಿಗೆ ಸಂಗೀತ ಪಾಠ ಹೇಳೆಂದು ಶಾಮಣ್ಣನ ಮನ ಒಲಿಸುವವಳು ನವರತ್ನರ ಹೆಂಡತಿ. ಸುಬ್ಬಣ್ಣನನ್ನು ಸ್ವಯಂ ಸುಬೇದಾರರೆ ಒಲಿಸುತ್ತಾರೆ. ಮುಂದೆ ಹಣ ಸ್ವೀಕರಿಸುವ ಪ್ರಸಂಗದ ಮಧ್ಯಸ್ಥಿಕೆಗೆ ಸುಬೇದಾರರ ಪತ್ನಿ ಮುಂದೆ ಬರುತ್ತಾಳೆ.

ಇನ್ನೊಂದು ಮಹತ್ವದ ವ್ಯತ್ಯಾಸವೆಂದರೆ ಶಾಮಣ್ಣನನ್ನು ಊರು ಬಿಟ್ಟು ಹೋಗಲು ಕಾರಣವಾದ, 'ಪ್ಲೇಗಿ'ನ ಸನ್ನಿವೇಶ, 'ಸುಬ್ಬಣ್ಣ'ದಲ್ಲಿ ತಂದಿಲ್ಲ. ಸುಬ್ಬಣ್ಣ - ಶಾಮಣ್ಣನಂತೆಯೇ. ಆದರೂ ಅವನ ನಿರ್ವಾಹ ಹೇಗೆ ಎಲ್ಲಿ ಸಾಗಿತ್ತು? ಸುಬೇದಾರರಲ್ಲಿಯೂ ಆತ ಊಟಕ್ಕೆ ಉಳಿಯುತ್ತಿದ್ದಿಲ್ಲ. ಅವನೂ ಭಿಕ್ಷಾಟನೆ ಮಾಡುತಿದ್ದನೇ? ವೆಂಕಟರಮಣ ಮಾಡಿಸಿದ ದೀಕ್ಷಿತರ ಮನೆಯ ಊಟದ ಏರ್ಪಾಟು ಸುಬ್ಬಣ್ಣ ಒಪ್ಪಲಿಲ್ಲ.

ಇನ್ನೂ ಒಂದು ಮಾರ್ಮಿಕ ವ್ಯತ್ಯಾಸವೆಂದರೆ ಶಾಮಣ್ಣ ಕೇವಲ ನವರತ್ನ ದಂಪತಿಗಳ ಸ್ನೇಹದ ಒತ್ತಾಯಕ್ಕೆ ಅವರ ಮಗಳು ಬ್ರಾಹ್ಮಣಿಗೆ ಪಿಟೀಲು ಕಲಿಸಲು ಒಪ್ಪಿದರೆ, ಕೇವಲ ಭಾವಜೀವಿಯಾದ ಸುಬ್ಬಣ್ಣ ಸುಬೇದಾರರ ಮಗಳ ಹೆಸರು 'ಲಲಿತೆ' ಎಂಬುದನ್ನು ಕೇಳಿಯೇ - ಈ ಹೆಸರಿನವರೆಲ್ಲರೂ ಒಳ್ಳೆಯವರು, ತನ್ನ ಹೆಂಡತಿಯಂತೆಯೇ ಎಂದು ಭಾವಿಸಿ - ಅವಳಿಗೆ ಪಾಠ ಹೇಳಲು ಒಪ್ಪುತ್ತಾನೆ.

ಸುಬ್ಬಣ್ಣನಷ್ಟು ಶಾಮಣ್ಣ ಪರಿಸರದಿಂದ ಸಿಡಿದು ನಿಂತಂತಿಲ್ಲ. ಆತ ನೋಡಲು ''ನೈಸರ್ಗಿಕವಾಗಿಯೇ ಮನುಷ್ಯ ಜಾತಿಯನ್ನು ಧಿಃಕರಿಸುವ ಡೈಯೊಜನಿಸನೊ, ಅಥವಾ ತನ್ನ ಪ್ರಿಯರ ಪ್ರೀತಿದ್ರೋಹದಿಂದ ಹುಳಿಹಿಂಡಿದ ಹಾಲಿನಂತೆ ಸ್ವಭಾವ ವೈಪರೀತ್ಯಕ್ಕೆ ಎಳೆಯಲ್ಪಟ್ಟ ಟೈಮನನೋ, ಎಂಬಂತೆ ಅನಿಸಿದರೂ ಎರಡೂ ಅಲ್ಲ. ಬಹಳ ಕ್ಲೇಷದಲ್ಲಿ ಪುಟಕ್ಕೆ ಬಿದ್ದು ರಾಗದ್ವೇಷಗಳಿಂದ ಶುದ್ಧವಾಗಿ ವಿಷಯ ವಿತೃಷ್ಣೆಯನ್ನು ಪಡೆದಿರುವ ಧೀರ ಜೀವಿಯೆಂದು'' ನವರತ್ನರು ಬಣ್ಣಿಸುತ್ತಾರೆ. ಸುಬ್ಬಣ್ಣನೂ ''ಕೊನೆಕೊನೆಗೆ ತತ್ವಜ್ಞಾನಿಗಳಾದರೆಂದೇ ನನ್ನ ಭಾವನೆ'' ಎಂದಿದ್ದಾರೆ ಮಾಸ್ತಿ.

''ಯಾರಿಗೂ ಒಂದು ಕೆಟ್ಟ ಮಾತನ್ನು ಹೇಳದೆ ಯಾರಿಂದಲೂ ಒಂದಿಷ್ಟನ್ನೂ ಬೇಕೆಂದು ಕೇಳದೆ ಜೀವನದಲ್ಲಿ ಕುಂದು ಕೊರತೆ ಎಂಬ ವ್ಯಥೆಯನ್ನು ಕಾಣದೆ ಸರ್ವದಾ ಶಾಂತಭಾವದಿಂದ ದೇವರ ಧ್ಯಾನದಲ್ಲಿ ಇದ್ದವರು ತತ್ವಜ್ಞಾನಿಗಳಲ್ಲದೆ ಏನು?''

ಶಾಮಣ್ಣ ಮಕ್ಕಳೊಡನೆ ಮಗುವಾಗಿ ಆಡಿ ನಗುವನು. ವಿನೋದದಿಂದ ಮಾತಾಡಬಲ್ಲನು. ಆದರೆ ಸುಬ್ಬಣ್ಣ ಹಾಗಲ್ಲ. ಮುಂದೆ ಸುಬೇದಾರರ ಮಗಳ ಮುಗ್ಧ ಭಾವನೆಗೆ ಮನಸೋತನಲ್ಲದೆ, ಹೆರವರ ಮನೆಯ ಜಗಲಿಯಲ್ಲಿ ಒಟ್ಟಾಗಿ ಕೆಲ ಮಕ್ಕಳಿಗೆ ಸಂಗೀತ ಪಾಠ ಹೇಳಿಕೊಡುವುದನ್ನು ಬಿಟ್ಟರೆ ಆತನ ಸಂಪರ್ಕ ಸಮಾಜದೊಂದಿಗೆ,

ಸಂಸಾರಿಗರೊಂದಿಗೆ ತೀರ ಕಡಿಮೆ. ಈ ಸಂಪರ್ಕವನ್ನು ಆತ ಬುದ್ಧಿಪೂರ್ವಕವಾಗಿ ಕಟ್ಟಿಕೊಂಡಿದ್ದ.

'ಇನ್ನೊಬ್ಬರಿಗೆ ಉಪಕಾರವಿಲ್ಲದೆಯೆ ಹೋಗಬೇಕೇ? ಉಪಕಾರ ಬೇಡ, ಸಾಲ ತೀರಿಸುವುದೂ ಬೇಡವೇ?' ಈ ಬಗೆಯ ಸ್ಪಷ್ಟೀಕರಣ ಸುಬ್ಬಣ್ಣ ತನಗೇ ಕೊಟ್ಟು ಕೊಳ್ಳುತ್ತಾನೆ. ಈ ಸಂಗೀತ ಪಾಠ ಒಪ್ಪಿಕೊಂಡಿದ್ದಕ್ಕೆ ಅಂದರೇನು? ಶಾಮಣ್ಣನಿಗಿಂತ ಸುಬ್ಬಣ್ಣ ಹೆಚ್ಚು ಅಂತರ್ಮುಖಿ, ಚಿಂತನ ಶೀಲ. ಭವಸ್ತರಕ್ಕಿಂತ ಭಾವಸ್ತರದಲ್ಲಿಯೆ ಬಾಳಿನ ಉದ್ದಕ್ಕೂ ಹೆಚ್ಚು ವಿಹರಿಸಿ - ವಿರಮಿಸಿದವನು. ಕೊನೆಕೊನೆಗೆ ಪರಮಹಂಸನಂತೆ ವ್ಯವಹರಿಸಿದವನು.

ನವರತ್ನರಿಗೆ ಬೇರೆಡೆಗೆ ವರ್ಗವಾಗಿ ಪ್ರಯಾಣ ಮಾಡುತ್ತಿರುವಾಗ ಶಾಮಣ್ಣ ವೆಂಕುವನ್ನು ಮತ್ತೊಂದು ಸಲ ನೋಡಬೇಕೆಂದು ಗಾಡಿಯ ಹಿಂದೆ ಓಡಿ ಬಂದ ಕತೆ ಸುಬ್ಬಣ್ಣನ ಕುರಿತು ಮಾಸ್ತಿಯವರು ಹೇಳಿದ್ದಾರೆ. ಆದರೆ ಅದನ್ನು ಒಮ್ಮೆಲೆ ಭಾವೋತ್ಕಟ ಮಟ್ಟಕ್ಕೆ ಏರಿಸಿದ್ದಾರೆ. ಸುಬ್ಬಣ್ಣ 'ಮತ್ತೊಂದು ಸಲ'ವೆಂದಲ್ಲ. ಈ ಸಂಸಾರಬಂಧನದ ಮಾಯಾಪಾಶವೇ ಬೇಡವೆಂದು ಸುಬೇದಾರ ಪರಿವಾರದಿಂದಲೆ ಮುಂಚಿನ ದಿನವಿಡೀ ದೂರವಿದ್ದು ಎಲ್ಲೋ ತಲೆಮರೆಸಿಕೊಂಡು ಇದ್ದ ಸುಬ್ಬಣ್ಣ ಆ ಪರಿವಾರ ಊರು ಬಿಟ್ಟು ಮೂರು ಮೈಲು ಹೋದಾಗ ಓಡಿಬಂದು ಲಲಿತೆಯನ್ನು ಕಂಡು ಆಶೀರ್ವದಿಸಿ ತನ್ನ ದೌರ್ಬಲ್ಯಕ್ಕೆ ತಾನೇ ಹಳಿದಳಿಸಿ ಹಿಂತಿರುಗಿ ಹೋಗುವ ಈ ಸನ್ನಿವೇಶವು ಈ ಕಾದಂಬರಿಯ ಉತ್ಕಟ ರಸಸ್ತಾನಗಳಲ್ಲಿ ಒಂದಾಗಿ ಮಾರ್ಪಟ್ಟಿದೆ.

ಇದಿಷ್ಟು ಶಾಮಣ್ಣ ಸುಬ್ಬಣ್ಣನಾದ ವಿನ್ಯಾಸ.

*

ಸುಬ್ಬಣ್ಣನ ಆಧ್ಯಾತ್ಮಿಕ ಉತ್ಕ್ರಾಂತಿಯನ್ನು ಕಾದಂಬರಿಯಲ್ಲಿ 'ನಾದಯೋಗ'ವೆಂದು ಕರೆಯಲಾಗಿದೆ. ಅದು ''ದೈನ್ಯರ ತಪಸ್ಸೆಂ''ದೂ ಹೇಳಲಾಗಿದೆ. ಸುಬ್ಬಣ್ಣ ಗಾನದ ಮೂಲಕ ಸರ್ವ ತತ್ವಗಳನ್ನೂ ತಿಳಿದುಕೊಂಡನೆಂದು ಕಾದಂಬರಿಯ ಕೊನೆಯ ಒಂದು ಮಾತು ಬರುತ್ತದೆ.

ಈ ಪ್ರಶ್ನೆಯನ್ನು ತುಸು ಪರಿಶೀಲಿಸಬೇಕು. ಸುಬ್ಬಣ್ಣ ಮಿಕ್ಕ ಸಂಗೀತಗಾರರಂತೆ ಅಲ್ಲ. ಆತ ತೀವ್ರ ಸಂವೇದನಾಕ್ಷಮ ವಿಚಾರಪರ ಪ್ರವೃತ್ತಿಯ ಕಲಾವಿದನೆಂಬುದು ನಿಜ. ಬದುಕಿನ ಚಿಕ್ಕಪುಟ್ಟ ಸಂದರ್ಭವೂ ಅವನಿಗೆ ಆತ್ಮ ವಿಶ್ಲೇಷಣೆ ಮಾಡಲು ದಾರಿ ತೆರೆಯುತ್ತಿತ್ತು. ಅನುಭವ ಬಲಿತಂತೆ ಮನಸ್ಸು ಪಕ್ವವಾಗಿ ಭಾವಕಳಿತಂತೆ ಆತ ಯೋಗಿಯಂತೆಯೇ ಬದುಕಿದನು, ಯೋಗಿಯಂತೆಯೇ ದೇಹವನ್ನು ತ್ಯಜಿಸಿದನು.

ಆದರೆ ಇಲ್ಲಿ ಏಳುವ ಪ್ರಾಮಾಣಿಕ ಪ್ರಶ್ನೆ-ಇದು ಸುಬ್ಬಣ್ಣನ ಈ ಮಾರ್ಪಾಟಕ್ಕೆ ಸಂಗೀತ ಸಾಧನೆಯಲ್ಲಿ ಸಾಗಿ ಸಂನ್ಯಾಸಿಯಂತೆ ಆಗಿ ಪರಮಹಂಸನಂತೆ ತತ್ವಜ್ಞಾನಿಯಂತೆ ಸಾಧುತ್ವದ ಸಿದ್ಧಿ ಪಡೆದುದಕ್ಕೆ ಕಾರಣವೇನು? ಸುಬ್ರಹ್ಮಣ್ಯಶಾಸ್ತ್ರಿಯಾಗುವ ಬದಲು ಆತ ಪೀಟಿಲಿನ ಸುಬ್ಬಣ್ಣನಾದನೆಂಬುವುದರಿಂದ ಅವನ ಬಾಳಿನ ಮುಂದಿನ ಎಲ್ಲ ಕಾಮ-ಮಧುರ ಕರುಣ-ದಾರುಣ ವಿಪಾಕವೋ ಪರಿಪಾಕವೋ ಒದಗಿಬಂದಿತು. ಆದರೆ ಇದೆಲ್ಲ ಅವನ ಸಂಗೀತದಿಂದಲೇ ಸಾಧಿಸಿದ ಸಾಧುತ್ವವೋ? ಅವನ ಮಾರ್ಪಾಟಕ್ಕೆ ಕಾರಣ ಸಂಗೀತವೋ

ಅಥವಾ ಅವನಿಗೆ ಅವ್ಯಾಹತವಾಗಿ ಆಕಸ್ಮಿಕವಾಗಿ ಆಗಂತುಕವಾಗಿ ಒದಗುತ್ತ ಹೋದ ಸಂಕು-ಶೋಕ ಪರಂಪರೆಯೋ? ಅಂದರೆ ಇದು ಸಂಗೀತ ಯೋಗವೋ? ದೈನ್ಯದ ತಪಸ್ಸೋ?

ಕಲಾವಿದನು ಕಲೆಯಲ್ಲಿಯೆ ಕಲೆಯಿಂದಲೇ ತನ್ನ ಜೀವನದ ಪರಮಸಿದ್ಧಿ ಪಡೆಯುವದುಂಟು. ಇದಕ್ಕೆ ಒಂದು ಉತ್ಕಟ ಉದಾಹರಣೆ ಮನ್‌ಗೋ ಎಂಬ ಚಿತ್ರಕಾರ. ಅವನ ಕಥೆಯನ್ನು ಒಂದು ಸಮರ್ಥ ಕಾದಂಬರಿಯಾಗಿ ''ಮೂನ ಎಂಡ್ ಸಿಕ್ಸ್ ಪೆನ್ಸ್'' ಎಂಬ ಹೆಸರಿನಲ್ಲಿ ಸಾಮರಸೆಟ ಮಾಮ ಬರೆದದ್ದು ಸುಪ್ರಸಿದ್ಧವಿದೆ. ಕಲೆಯೊಳಗೆ ಪರಮಸಿದ್ಧಿ ಆ ಆತ್ಮದ ಕೃತಾರ್ಥತೆ ಅಥವಾ ಸಾಫಲ್ಯವನ್ನು ಪಡೆಯುವುದಕ್ಕೆ ಕಲಾವಿದನು ಆ ತನ್ನ ಒಂದು ವಿವ್ಹಲ ಭಾವಜೀವನಕ್ಕಾಗಿ ಎಲ್ಲ ಸುಖ ಎಲ್ಲ ಸ್ವಾರ್ಥವನ್ನೂ ಹೋಳುಮಾಡಿ ಆ ಕಲೆಯೊಂದರ ಉಪಾಸನೆಯಲ್ಲಿಯೇ ಉಪವಾಸ ಬಿದ್ದು ಸಾಯಲು ಸಿದ್ಧನಾಗುವದುಂಟು - ಸತ್ಯಾನ್ವೇಷಣೆಗೆ ಸಿದ್ಧಾರ್ಥ ಹೋದಂತೆ ಇಂಥ ಕಲೋಪಾಸನೆ ಸೌಂದರ್ಯೋಪಾಸನೆ ಸುಬ್ಬಣ್ಣ ಮಾಡಿದಂತಿಲ್ಲ. ಅದ್ವಿತೀಯ ಸಂಗೀತಗಾರನಾಗಬೇಕೆಂಬ ಧ್ಯಾನವೂ ಅವನಿಗಿದ್ದಂತಿಲ್ಲ. ಅವನಿಗೆ ಚಿಕ್ಕಂದಿನಿಂದಲೂ ಹಾಡುಗಾರಿಕೆಯ ಗೀಳು. ಸಂಸ್ಕೃತದ ಓದು ಅವನಿಗೆ ಒಗ್ಗಲಿಲ್ಲ. ಮೂರು ಹುಡಿಗಿಯರ ನಂತರ ಹುಟ್ಟಿದ ಒಬ್ಬ ಹುಡುಗ ಸ್ವಾಭಾವಿಕವಾಗಿಯೇ ಅತಿ ಮುದ್ದಿನಲ್ಲಿ ಬೆಳೆಯುತ್ತಾನೆ. ಆತ ಒಂದೇ ಅಕ್ಕಂದಿರ ವರ್ಚಸ್ಸಿಗೆ ಒಳಗಾಗಿ ತಾನು ಮನೋದುರ್ಬಲ ಸ್ತ್ರೈಣನಾಗುತ್ತಾನೆ, ಅಥವಾ ಹಟವಾದಿಯಾಗಿ ಒರಟು ಗಡಸು ಕಾಣಿಸುವ ತುಂಟ ಗಂಡಸಾಗುತ್ತಾನೆ - ತನ್ನ ಸತ್ವವನ್ನೂ ಸಿದ್ಧಮಾಡಲಿಕ್ಕೆ (to assert himself).

ಸುಬ್ಬಣ್ಣ ಸಂಗೀತದ ಹಾದಿ ಹಿಡಿಯುವದರಲ್ಲಿಯೂ ಇದೇ ಮಾದರಿಯ ಹಟದ ಪ್ರೇರಣೆ ಹೆಚ್ಚಿತ್ತು. ತಾನು ಸಂಗೀತ ಕಲಿತು ಮಹಾರಾಜರಿಂದ ಖಿಲ್ಲತ್ತು ಪಡೆಯ ಬೇಕೆಂಬುದೊಂದೇ ಅವನ ಚರಮ ಧ್ಯೇಯವಾಗಿತ್ತು. ಇದು ಒಂದು ಲೌಕಿಕ ಶ್ರೇಯಸ್ಸು. ನಿಜವಾದ ಕಲಾ ಜೀವಿಯ ಗುರಿ ಅಲ್ಲ. ಆತನ ಸಂಗೀತದ ಆಸಕ್ತಿಗೆ ಖಿಲ್ಲತ್ತು ಗಳಿಸುವ ಪ್ರಸಕ್ತಿ ಆಮಿಷದಂತೆ ಕೆಲಸ ಮಾಡಿತು.

ಅವನ ಈ ಆಯ್ಕೆಯನ್ನು ತಂದೆ ನಾರಾಯಣಶಾಸ್ತ್ರಿ ಅಷ್ಟೊಂದು ಪ್ರತಿಭಟಿಸಬೇಕಾದ್ದಿಲ್ಲ. ತಂದೆಯ ಪಿತ್ರ ಪಾರಂಪರ್ಯದ ಪುರಾಣದಂತೆ ಮಗನ ಈ ಸಂಗೀತಾಭಿರುಚಿಯನ್ನು ಮಹಾರಾಜರು ತುಂಬ ಮೆಚ್ಚಿ ಶ್ಲಾಘಿಸಿ ಉಡುಗೊರೆಕೊಟ್ಟು ಖಿಲ್ಲತ್ತಿನ ಭರವಸೆ ಹುಟ್ಟಿಸಿ ಪ್ರೋತ್ಸಾಹಿಸಿದ್ದರು. ಅಂದಾಗ ನಾರಾಯಣಶಾಸ್ತ್ರಿಗಳು ಮಗ ಕೆಟ್ಟು ಹೋಗುವನೆಂದು ಕಳವಳವಾಗಲಿ ನಾಚಿಕೆಯನ್ನಾಗಲಿ ಪಡಬೇಕಾಗಿದ್ದಿಲ್ಲ. ಇಲ್ಲಿ ತಂದೆಯ ವಿರೋಧ ಅಥವಾ ಪ್ರತಿಕೂಲ ಮುಂದೆ ಮಗನ ಹಟವನ್ನು ಹುರಿಗೊಳಿಸುವುದಕ್ಕೆ ಮಾತ್ರ ಕಥಾ ನಿರ್ವಹಣೆಯಲ್ಲಿ ನೆರವಾಗುತ್ತದೆ. ಏಕೆಂದರೆ ತನ್ನ ಮಗ ಏನು ಮಾಡುತ್ತಾನೆ? - ದಿನದ ಬಹುಭಾಗ ಎಲ್ಲಿ ಹೇಗೆ ಕಳೆಯುತ್ತಾನೆಂಬುದರ ಅರಿವು ಪರಿವೆ ತನಿಖೆ - ಏನನ್ನು ನಾರಾಯಣಶಾಸ್ತ್ರಿಗಳು ಮಾಡಿದಂತೆ ಇಲ್ಲ. ಅವರಿಗೆ ಗೊತ್ತು; ಮಗ ಪುರಾಣಿಕನಾಗಲೊಲ್ಲನೆಂದು. ಅವರಿಗೆ ಇದು ಗೊತ್ತು; ಮಗ ಸಂಗೀತಗಾರನಾಗಲು ಹೆಣಗುತಿದ್ದಾನೆಂದು. ಆದರೆ ಆತ ಹಗಲೆಲ್ಲ ವಿದ್ವಾಂಸರ ಮನೆಯಲ್ಲಿಯೋ ವೇಶ್ಯೆಯರ ಮಹಡಿಯಲ್ಲಿಯೋ ಗಾನಲುಬ್ಧನಾಗಿ ಅಲೆಯುತ್ತ ಕಳೆಯುತ್ತಿರುವನೆಂಬುದು ಅವರಿಗ ಗೊತ್ತಿಲ್ಲ. ಗೊತ್ತುಮಾಡಿಕೊಳ್ಳಲೂ ಅವರು ಯತ್ನಿಸಿದಂತಿಲ್ಲ!

ಇನ್ನು ಸುಬ್ಬಣ್ಣನ ಸಂಗೀತ ಸಾಧನೆಯ ಪರಿಯಾದರೂ ಹೇಗೆ? ಮಹಾರಾಜರಿಂದ ಕಂಠ ಮಾಧುರ್ಯಕ್ಕಾಗಿ ಸುಶ್ರಾವ್ಯ ಹಾಡುಗಾರಿಕೆಗಾಗಿ ಪ್ರಶಂಸೆ ಪಡೆದ ಸುಬ್ಬಣ್ಣ ನಡುವೆ ಯಾವ ನಿಮಿತ್ತವಾಗಿ ಯಾರ ನಿರ್ದೇಶನದಿಂದ ಗಾಯನ ಬಿಟ್ಟು ಕೇವಲ ಪಿಟೀಲು ವಾದನಕ್ಕೆ ಹೊರಳುತ್ತಾನೆ? ಲೇಖಕನ ದೃಷ್ಟಿಯಿಂದ ಈ ಬದಲಾವಣೆಯಲ್ಲಿ ಒಂದು ಅನುಕೂಲವೆಂದರೆ ಆತ ಈ ಮೂಲಕ ಮೌನಿಯಾಗುತ್ತಾನೆ. ಹೆಚ್ಚು ಹೆಚ್ಚು ಅಂತರ್ಮುಖನಾಗುತ್ತಾನೆ. ಆದರೆ ನಾಯಕನಾಗಲಿ ಇತರ ಪಾತ್ರಗಳಾಗಲಿ ಕೇವಲ ಲೇಖಕನ ಸಂದೇಶವಾಹನಕ್ಕಾಗಿಯೇ ಹುಟ್ಟುವದಲ್ಲ, ಬದುಕುವದಲ್ಲ. ಪಾತ್ರದ್ದೇ ಒಂದು ಸ್ವಾಯತ್ತೆ ಇರುತ್ತದೆ.

ಗಾಯಕನಾಗುವುದನ್ನು ಬಿಟ್ಟು ಸುಬ್ಬಣ್ಣ ಪಿಟೀಲುಗಾರನಾದದ್ದು ಹೇಗೆ ಅಥವಾ ಏಕೆ ಎಂಬುದನ್ನು ಲೇಖಕರು ಹೇಳಿಲ್ಲ. ಅದೇ ರೀತಿ ಸುಬ್ಬಣ್ಣನ ಸಂಗೀತ ಸಾಧನೆಯಲ್ಲಿ ಅಪ್ರತಿಮ ಪ್ರಾವೀಣ್ಯ ಪಡೆಯುವಂತೆ ಮಾಡಲು ಅವನಿಗೆ ಗುರು ಯಾರು? ಆತ ಕೇವಲ ಅಲ್ಲಲ್ಲಿ ಕೇಳಿ ನೋಡಿ, ತಾನೇ ತಾನಾಗಿ ಸಂಗತಿ ವರೆಕುಗಳನ್ನು ಹಾಕುತ್ತ ತಾಳ ಹಿಡಿಯಲು ಯಾರೂ ಇರದೆ, ಏಕಾಂತದಲ್ಲಿ ನೀಲಾಸಾನಿಯ ಮಹಡಿಯಲ್ಲಿ ಅಸಹಾಯ ಶೂರನಾಗಿ ಅಭ್ಯಾಸ ಮಾಡಿಯೇ ಶ್ರೇಷ್ಠ ಸಂಗೀತಗಾರನಾದನೇ? ಇಂಥ ರೀತಿಯಲ್ಲಿ improvisation ಮಾಡುತ್ತ ನವ್ಯ ಸಂಗೀತಗಾರನಾದ ರಾಮ ಐತಾಳನೆಂಬ ಪಾತ್ರವನ್ನು ಶಿವರಾಮಕಾರಂತರು ಸೃಷ್ಟಿಸಿದ್ದುಂಟು. ಆದರೆ ಸುಬ್ಬಣ್ಣ ಅಂಥವನಲ್ಲ. ದೇಶೀ, ತೋಡಿ, ಶಂಕರಾಭರಣ, ಭೈರವಿ ಮುಂತಾದ ಅಭಿಜಾತ ರಾಗಗಳಲ್ಲಿ ಪಳಗಿದ ಸಂಗೀತಗಾರ. ಇದು ಗುರುವಿಲ್ಲದೆ ಫಲಿಸುವ ವಿದ್ಯೆಯೇ?

ಹೀಗೆ ಸಂಗೀತ ಸಾಧನೆಯಲ್ಲಿ ಸುಬ್ಬಣ್ಣ ಎಷ್ಟು ಅವ್ಯವಸ್ಥಿತನೋ, ಅದರಿಂದ ಪಡೆಯುವ ಸಾಂತ್ವನೆಯ ಬಗೆಗೂ ಆತ ಅಷ್ಟೇ ಉದಾಸೀನ. ಮನಸ್ಸು ಕಲಿಕಿ ಕದಡಿ ಉದ್ವಿಗ್ನವಾದಾಗ ರೋಸಿಹೋದಾಗ ಆತ ಸಂಗೀತದಲ್ಲಿ ಸಾಂತ್ವನೆ ಕಂಡ ಒಂದೂ ಪ್ರಸಂಗವನ್ನೂ ಕಾದಂಬರಿಯು ಚಿತ್ರಿಸಿಲ್ಲ. ಮುಂಬಯಿಯ ಸಾಹುಕಾರನ ಮನೆಯಲ್ಲಿ ವೆಂಕಟರಮಣನು ಭೇಡಿಸಿದಾಗ, ದೇವರ ಸಂಗೀತ ಸೇವೆಯಲ್ಲಿ, ಮಕ್ಕಳಿಗೆ ಕಲಿಸುವಾಗ ಒಮ್ಮೆ ಲಹರಿ ಬಂದು ಆತ ದಿವ್ಯವಾಗಿ ಪೀಟಿಲು ಬಾರಿಸಿದ ಪ್ರಸಂಗಗಳು ಬಂದಿವೆ. ಆದರೆ ಇಲ್ಲಿ ಪ್ರೇರಣೆಯೇ ಬೇರೆ - ಅದೊಂದು ಬಗೆಯ ಆವೇಶ. ಪ್ರದರ್ಶನದ ಮೋಹ ಅಥವಾ ಮನಸ್ಸಿನ ಹಿಗ್ಗು.

ನಿಜವಾಗಿ ಆತನ ಕಲಕತ್ತೆ (ಕಲಿಕತೆ)ಯ ಜೀವನ ಮುಗಿದ ಮೇಲೆಯೇ ಅವನ ಸಂಗೀತಮಯವೆನ್ನಬಹುದಾದ ಬದುಕು ಆರಂಭವಾಗುತ್ತದೆ.

ಕಲಕತ್ತೆಯಲ್ಲಿ ಆತ ೩೦ ವರ್ಷ ಬಾಳಿದನು - ಕೌಟುಂಬಿಕ ದುರಂತಗಳಿಗೆ ಒಳಗಾಗಿ ವಿರಕ್ತನಾಗಿ ಹೊರಟದ್ದು ಬರುವನಕವೂ. ಕೌಟುಂಬಿಕದ ವಿಪ್ಲವದ ಕಥೆಯೇ ಹೊರತು ಕಲಾವಿದನ ತಪಸ್ಸಿನ ಕಥೆಯಲ್ಲ. ಉದ್ದಕ್ಕೂ ಮನೆಯಲ್ಲಿ ತನ್ನ ತಂದೆತಾಯಿಗಾಗಿ, ಹೆಂಡತಿಮಕ್ಕಳಿಗಾಗಿ ಆತ ಬದುಕಿದ್ದನೇ ಹೊರತು ಸಂಗೀತಕ್ಕಾಗಿ ಬದುಕಲಿಲ್ಲ. ಹೆಚ್ಚೆಂದರೆ ಸಂಗೀತದಿಂದ ಬದುಕಿದನು. ಪ್ರಾವೀಣ್ಯದ ಮಟ್ಟಿಗೆ ಪೀಟಿಲು ಅವನ ದೇಹದ್ದೇ ಒಂದು ಅಂಗವಾಗಿತ್ತು. ಹಾಗೆ ಸಂಗೀತ ಅವನ ಬಾಳಿಗೆ ಹಾಸುಹೊಕ್ಕಾಗಿರಲಿಲ್ಲ.

ತಂದೆಗೆ ರುಚಿಸಲಿಕ್ಕಿಲ್ಲವೆಂದು, ಅದೊಂದು ನೀಚಾನ್ನವೆಂದು ಆತ ವೇಶ್ಯೆಯರಿಗೆ ಸಂಗೀತಪಾಠ ಹೇಳಲು ಒಪ್ಪಲಿಲ್ಲ. ಹೆಂಡತಿಗೆ ಸುಖವಿಲ್ಲ. ಮಗನಿಗೆ ಮೊಸರಿಲ್ಲವೆಂದು ಆತ

ಮನೆ ಬಿಟ್ಟು ದೇಶಾಂತರಕ್ಕೆ ಸಕುಟುಂಬ ಹೋಗಿಬಿಟ್ಟ. ಪ್ರಾಪಂಚಿಕ ವ್ಯಥೆಯೇ ಅವನಿಗೆ ತಾಯಿಯಿಂದ ದೂರವಾಗಲು ಪ್ರೇರಿಸುತ್ತದೆ. ಆತನಿಗೆ ಸಂಗೀತದಲ್ಲಿ ಒಂದು ಯೋಗವಲ್ಲ, ಬರೆ ವಿನಿಯೋಗ. ಕಲಕತ್ತೆಯಲ್ಲಿ ಕೆಲವು ಪಾಠ ಹೇಳಿ ಕಚೇರಿಗಳನ್ನು ನಡೆಯಿಸಿ ಮಡದಿ ಮಕ್ಕಳಿಗಾಗಿ ಸುಖವಾಗಿ ಮನೆ ಮಾಡಿಕೊಂಡು ಇರುವುದಕ್ಕೆ ಆತ ತನ್ನ ವಿದ್ಯೆಯನ್ನು ''ಅರ್ಥಕರಿ'' ಯಾಗಿ ಉಪಯೋಗಿಸಿಕೊಳ್ಳುತ್ತಾನೆ.

ಕಲಕತ್ತೆಯಲ್ಲಿ ಆ ಮಟ್ಟಿಗೆ ಅವನಿಗೆ ಒಳ್ಳೆಯ ಸಂಪಾದನೆಯಾಗುತ್ತದೆ. ಅಲ್ಲಿಯೂ ಅವನ ಪ್ರತಿಭೆಗೆ ಅಸೂಯೆ ಪಡುವವರು ಇದ್ದರು. ಆದ್ದರಿಂದ ಆತ ಹೆಚ್ಚು ಕಾಲ ಮನೆಯಲ್ಲಿ ಮಕ್ಕಳೊಂದಿಗೆ ಆಟವಾಡುವದರಲ್ಲಿಯೆ (ಸಂಗೀತ ಸಮಾಧಿಯಲ್ಲಿ ಅಲ್ಲ!) ಕಳೆಯುತ್ತಾನೆ. ಇದ್ದುದೆಲ್ಲವ ತೊರೆದು ಇಲ್ಲದರ ಕಡೆಗೆ ತುಡಿಯುವ ತವಕ ಕಲಾಜೀವಿಯದು. ಅಂಥ ಒಂದು ಭಾವಾವೇಶದ ನಿರ್ಭರತೆ ವಿವಶತೆ ಕಲೆಯ ಕುರಿತು ಸುಬ್ಬಣ್ಣನಲ್ಲಿ ಅವನ ಕೌಟುಂಬಿಕ ಬದುಕು ಉಧ್ವಸ್ತವಾಗಿ ಕಲಕತ್ತೆಯಲ್ಲ ಕಂಬಿಕೀಳುವತನಕವೂ ಕಾಣಿಸಿಕೊಂಡದ್ದು ಇಲ್ಲ. ಮುಂದೆಯೂ ಆತ ಸಂಗೀತವನ್ನು ದೇವರ ಸೇವೆಗೆ ಬಳಸುವನೇ ಹೊರತು ಸಂಗೀತವನ್ನೇ ದೇವರ ಸೇವೆಯೆಂದು ಬದುಕುವುದಿಲ್ಲ.

''ನನ್ನ ಪ್ರಾಣ ತಲ್ಲಣಿಸುತ್ತದೆ. ಈ ರಾತ್ರಿಯೆಲ್ಲ ಇನ್ನೂ ಇದಕ್ಕೆ ಉಪಶಮನ ಮಾಡಿಕೊಳ್ಳಬೇಕು'' ಎಂದಾಗಲೂ ''ಉಪಶಮನ ಎನ್ನುವುದು ದೇವಸ್ಥಾನದಲ್ಲಿ ಕುಳಿತು ದೇವರ ಧ್ಯಾನಮಾಡುತ್ತ ಇಲ್ಲಿಯ ಯೋಚನೆಗಳನ್ನು ಮರೆಯುವುದಕ್ಕೆ ಶಕ್ತಿ ಕೊಡೆಂದು ಪ್ರಾರ್ಥಿಸುವದು.'' ಆ ಶಕ್ತಿ ದೇವರು ಅವನಿಗೆ ಧಾರಾಳವಾಗಿ ಕೊಟ್ಟಿದ್ದುಂಟು - ಸಂಗೀತದ ಸಿದ್ಧಿಯಲ್ಲಿ ರಾತ್ರೆಯೆಲ್ಲ ತನ್ನ ತಲ್ಲಣವನ್ನು ಸುಬ್ಬಣ್ಣ ಪಿಟೀಲು ವಾದನದಲ್ಲಿ ತಣಿಸಿಕೊಳ್ಳುವದಿಲ್ಲವೆಂಬುದು ಇಲ್ಲಿ ಮಹತ್ವದ್ದು. ಕೊನೆಗೆ ನಾದಯೋಗಕ್ಕಾಗಿ ಸರ್ವಸ್ವಕ್ಕೆ ನೀರು ಬಿಡುವುದರ ಬದಲು, ಆತ ಸಂಸಾರದ ಬಗೆಗೆ ಉಂಟಾದ ಅತಿ ವಿರಕ್ತಿಯ ಉಲ್ಬಣದಿಂದ ನಿರಂಹಕಾರಿಯಾಗಬೇಕೆಂಬ ಹಂಬಲದಿಂದ ಸಂಗೀತದ ಜಂಭವಾದರೂ ಏಕೆ? ಎಂಬ ಹಟದಿಂದ ಪಿಟೀಲನ್ನು ನೀರಿಗೆ ಬಿಡುತ್ತಾನೆ. ಆತ ಸಂಗೀತದಿಂದ ಯೋಗಿ ಆದುದಲ್ಲವೆಂಬುದಕ್ಕೆ ಈ ಸಾಂಕೇತಿಕ ಕ್ರಿಯೆಯೇ ಸಾಕ್ಷಿ!

ಈ ಮಹಾತ್ಯಾಗ ತುಂಬ ಹೃತ್‌ಸ್ಪರ್ಶಿ. ಲಲಿತೆ ತನ್ನ ಕೆನ್ನೆಗೆ ಹೊಡೆದ ಸುಬ್ಬಣ್ಣನ ಕೈಯನ್ನು ಮುತ್ತಿಟ್ಟ ಸನ್ನಿವೇಶದಷ್ಟೇ ಹೃದಯಂಗಮ. ಆದರೆ ಈ ವಾದ್ಯ ಸಂನ್ಯಾಸ ನಾದಯೋಗಿಯ ಲಕ್ಷಣವೇ? - ಈ ಬಗೆಯ ತ್ಯಾಗದಿಂದ ಆತ ಹಿಂದೆಂದೂ ಅಳದಷ್ಟು ಬಲವಾಗಿ ಅತ್ತುಬಿಟ್ಟ. ನಿಜವಾಗಿ ಅವನಿಗೆ ಆಮೇಲೆ ಹುಚ್ಚೇ ಹಿಡಿಯಬೇಕಿತ್ತು - ಬಾಳಿನ ಉದ್ದಕ್ಕೂ ಇದ್ದ ಒಂದೇ ಆ ಲಂಬನವು ಕೈತಪ್ಪಿ ತೇಲಿಹೋದ ಮೇಲೆ.

ಶಾಮಣ್ಣನಂತೆ ಸುಬ್ಬಣ್ಣನೂ ಮನುಷ್ಯ ದ್ವೇಷಿಯಾಗದೆ, ಡೈಯೋಜನಿಸನೋ ಥೈಮನನೋ ಆಗದೆ ರಾಗದ್ವೇಷರಹಿತ ವಿಷಯ ವಿತೃಷ್ಣೆಯ ಜ್ಞಾನಿಯೋ ಯೋಗಿಯೋ ಆದದ್ದು ಸತ್ಯ. ಆದರೆ ಅದು ಪಾಕಗೊಂಡ ಭಟ್ಟ. ಅವನ ಬದುಕಿನ ಅನರ್ಥ ಪರಂಪರೆಯ ಅನುಭವ ಹೊರತು ಸಂಗೀತ ಸಾಧನೆಯಲ್ಲ. ಅವನು ಜ್ಞಾನಿಯೂ ಆದಂತೆ ಒಂದು ದೇವದತ್ತ ಅದ್ಭುತ ಸಂಗೀತ ಪ್ರಜ್ಞೆಯೂ ಅವನಲ್ಲಿ ಇತ್ತು - ಇಷ್ಟೇ ಅನ್ನಬಹುದು.

ಸುಬ್ಬಣ್ಣನು ಗಾಯನ ಬಿಟ್ಟು ವಾದನಕ್ಕೆ ಮೀಸಲಾದದ್ದು ಏಕೆ? ಅದೂ ಅವನ ಹೃದಯದ ಮೂಕತೆಯ ಪ್ರತೀಕ. ಸೊಗಸಾದ ಶಾರೀರವಿದ್ದ ಸುಬ್ಬಣ್ಣನು (ಅದು ಹೊಡೆದು ಕೀಸರಗೊಟ್ಟ ಸಮಾಚಾರವಿಲ್ಲ.) ತಂತುವಾದ್ಯ ಒಂದನ್ನು ಒಲಿಸಿಕೊಂಡು 'ಮರುಳಸಿದ್ಧನ

ಮಾಯಾ ಕಿನ್ನರಿ'ಯಂತೆ ಅದನ್ನ ತನ್ನ ಪ್ರತಿಭೆಯ ಹೃದಯದ ಅಭಿವ್ಯಕ್ತಿ ಮಾಧ್ಯಮವಾಗಿ ಮಾಡಿಕೊಂಡದ್ದು ಅಷ್ಟೊಂದು ವಿಶದವಾಗದ ಒಂದು ವಿಸಂಗತಿ.

*

ಇನ್ನು ಸುಬ್ಬಣ್ಣನ ಉತ್ತರೋತ್ತರ ವಿರಕ್ತಿ ಉಪರತಿಗಳಿಗೆ ಕಾರಣಗಳು ಎರಡು, ಸ್ವದೇಶದಿಂದ ಸ್ವಜನರಿಂದ - ಸ್ವಭಾವದಿಂದಲೇ ಅನ್ನಿ ಬೇಕಾದರೆ - ಓಡಿಹೋಗಲು ಹಚ್ಚಿದ ವಿಯೋಗ-ವಿರಹಗಳ ಈ ವಿಹ್ವಲತೆಗೆ ಕಾರಣಗಳೆಂದರೆ ಒಂದು, ಅವನ ಆಂತರಿಕ ಪ್ರತಿಕ್ರಿಯೆ ಆತ್ಮದ ಪ್ರಕೃತಿ. ಇನ್ನೊಂದು ಅದರ ವೇದನೆಯನ್ನು ಒಂದೇ ಸಮನೆ ತೀವ್ರಗೊಳಿಸುತ್ತಲೆ ನಡೆದ ಬಾಹ್ಯ ಘಟನಾವಳಿಗಳ ಆಗಂತುಕ ಪ್ರಚೋದನೆ.

ಅವನ ಪ್ರಕೃತಿ ಸಂತೋಷವಾಗಿರತಕ್ಕ ಪ್ರಕೃತಿ ಅಲ್ಲ. ಜನರಲ್ಲಿ ಅವನು ತೀರ ಅಸಾಧ್ಯವಾದ ಒಳ್ಳೆಯತನವನ್ನು ಅಪೇಕ್ಷಿಸುವನು. ಇಂಥ ಸ್ವಾಭಾವದವರಿಗೆ ಸೂರ್ಯನು ಸಾಕಷ್ಟು ತೇಜಸ್ವಿಯಲ್ಲ; ಗಾಳಿ ಸಾಕಷ್ಟು ಹಗುರಲ್ಲ. (ಆದರೆ ಈ ಬಗೆಯ ಅವನ ಸ್ವಭಾವದ ಅಂಶ ಸ್ಫುಟವಾಗುವಂಥ ಯಾವ ಪ್ರಸಂಗವೂ ಕಾದಂಬರಿಯಲ್ಲಿ ಚಿತ್ರಿತವಾಗಿಲ್ಲ. ಲೇಖಕರ ಭರವಸೆಯ ಮೇಲೆಯೇ ಈ ಮಾತನ್ನು ಒಪ್ಪಬೇಕಾಗಿದೆ.)

ಮೈಸೂರೇನು, ಕಲಕತ್ತೆ ಏನು, ಅವನಿಗೆ ಜನ 'ಸರಿಹೋಗಲಿಲ್ಲ.' ಅಲ್ಲಿ ಇಲ್ಲಿ - ಎಲ್ಲ ಅದೇ ಅಸೂಯೆ, ಅನಾದರ, ಅಸಹನೆಯ ಪ್ರಪಂಚ. (ಆದರೆ ಹೀಗಿದ್ದು ಆತ ಕಲಕತ್ತೆಯಲ್ಲಿ ಅನೇಕರು ಮೆಚ್ಚಿ ಅಲ್ಲಲ್ಲಿ ಸಣ್ಣ ಸಣ್ಣ ಕಚೇರಿಗಳ ಏರ್ಪಾಟಾಗಿ ಸ್ವಲ್ಪ ಹಣ ಶೇಖರಿಸಿ ಬಾಡಿಗೆಗೆ ನಿಂತ ಮನೆಯನ್ನೆ ಖರೀದಿಸಿ ೫-೬ ತಿಂಗಳಲ್ಲಿಯೇ ನೀಲಾಸಾನಿಯ ಸಾಲವನ್ನು ತೀರಿಸಿ ಸುಖವಾಗಿಯೇ ೩೦ ವರ್ಷ ಬಾಳಿದನು. ಜೀವನಕ್ಕೆ ಯಾವ ವಿಧವಾದ ಯೋಚನೆಯೂ ಇಲ್ಲದಂತಾಯಿತು.)

ಇನ್ನು ಬಾಹ್ಯ ಕಾರಣಗಳೆಲ್ಲ ದೈವಾಯತ್ತ ಮತ್ತು ಅವುಗಳ ಪ್ರಭಾವವೇ ಬಲಿಷ್ಠವಾಯಿತು. ಸುಬ್ಬಣ್ಣನ ಚರಿತ್ರವನ್ನು ರೂಪಿಸುವುದರಲ್ಲಿ ಅವೆಲ್ಲವೂ ಅವನ ಭಾವನಾಲೋಕಕ್ಕೆ ದಾಳಿಯಿಕ್ಕಿ ಅವನ ಎದೆಯನ್ನು ಒಡೆದವು. ಮೊದಲನೆಯದಾಗಿ ಅವನ ಸಂಗೀತ ಸಾಧನೆಗೆ ತಂದೆ ಪ್ರತಿಕೂಲ. ತಾಯಿಯಂತು ವೈರಿಯಂತೆ ಸೊಸೆಯನ್ನು ಕಾಡಿದಳು (ಮಾಸ್ತಿಯವರು ತಮ್ಮ ಸ್ವಭಾವ ಸಹಜವಾದ ಅನುಕಂಪೆಯಿಂದ ಆಕೆ 'ತಿಳಿಯದ ಹೆಂಗಸು' ಎಂದು ಓದುಗರಲ್ಲಿ ಅವಳ ಪರವಾಗಿ ಸಮರ್ಥನೆ ಮಾಡಿದಂತಿದೆ. ಆದರೆ ಯಜಮಾನಿ ಹಾಗೆ 'ತಿಳಿಯದ'ವಳಾಗಿದ್ದಿಲ್ಲ ಆಕೆ ತೀರ ಕ್ಷುಲ್ಲಕ ಮನಸ್ಸಿನ ಸಣ್ಣ ಬುದ್ಧಿಯ ಹೆಂಗಸಾಗಿದ್ದಳು. ಆದರೆ ಇಲ್ಲಿ ಅವಳ ಪಾತ್ರದ ವಿಶ್ಲೇಷಣೆ ಪ್ರಸ್ತುತವಲ್ಲ.) ಯಜಮಾನಿಯ ದೌಷ್ಟ್ಯ ದೌರ್ಬಲ್ಯವಲ್ಲವೆಂಬುದು ಅಡಿಗಡಿಗೆ ಸ್ಪಷ್ಟವಾಗುತ್ತದೆ. ಬಳ್ಳಿಯಿಂದ ಕಾಯಿ ದೂರವಾಗುವಂತೆ ಸುಬ್ಬಣ್ಣ ತಾಯಿಯಿಂದ ದೂರನಾಗುತ್ತಾನೆ - ಊರಿಂದಲೂ ದೂರ ಹೋಗುತ್ತಾನೆ. ಅವನ ಈ ''ಮಹಾ ನಿಷ್ಕ್ರಮಣ''ಕ್ಕೆ ಮಿಕ್ಕ ಸಂಗತಿಗಳಿಗಿಂತ ತಾಯಿಯೇ ಹೆಚ್ಚು ಕಾರಣ.

ನಂತರದ ಆಘಾತ ಆಳುವ ಮಹಾಪ್ರಭುಗಳ ನಿಧನದಿಂದಾಗ ಖಿಲ್ಲತ್ತಿನ ಆಶೆ ಕುಸಿದದ್ದು. ಅವನ ಈ ರಾಜಾಶ್ರಮದ ಡೇರೆಯ ಮೂಲಸ್ತಂಭ ಕಳಚಿಬಿದ್ದುದರಿಂದ ಅರಮನೆಯಿಂದ ಬರುವ ವರಮಾನವೂ ಮನೆಯಲ್ಲಿ ಕಡಿಮೆ ಆಯಿತು. ತಾಯಿಯ

ಮಾನಸಿಕ ಕಾರ್ಪಣ್ಯಕ್ಕೆ ತಂದೆಯ ಆರ್ಥಿಕ ಕಾರ್ಪಣ್ಯ ಕೂಡಿತು. ಮನೆ ಅರಗಿನ ಮನೆಯಾಯಿತು. ಆಮೇಲೆ ಕಲಕತ್ತೆ ೩೫ ವರ್ಷಗಳ ವಾಸದಲ್ಲಿಯೂ ಅವನ ಬದುಕು ಅರ್ಧ ಸುಖ ಅರ್ಧ ಚಿಂತೆಯಲ್ಲಿ ಕಳೆಯಿತು. ಮನೆಬಿಟ್ಟು ವನವಾಸಕ್ಕೆ ಹೊರಟಾಗಲೆ ಹಾದಿಯಲ್ಲಿ ಲಲಿತೆಗೆ ಗರ್ಭಸ್ರಾವವಾಯಿತು. ಕಲಕತ್ತೆಯಲ್ಲಿ ಅವಳಿಗೆ ಒಂದು ಹೆಣ್ಣು ಮಗು ಆಗಿಹೋಯಿತು. ಮುಂದೆ ಇದ್ದಕ್ಕಿದ್ದಂತೆ ಹಿರಿಯ ಮಗ - ಯಾರಿಗೆ ಮೊಸರು ಉಣಿಸುವಂತೆ ಆಗಬೇಕೆಂದು ಸುಬ್ಬಣ್ಣ ಕಲಕತ್ತೆಗೆ ದೇಶಾಂತರ ಮಾಡಿದ್ದನೊ ಅವನೇ ವಿಷಮಶೀತಜ್ವರಕ್ಕೆ ಬಲಿಯಾದನು. ಸುಬ್ಬಣ್ಣನ ಕಷ್ಟ ಪ್ರಕೃತಿಗೆ ಮಗನ ಸಾವು ವಿಪರೀತ ಪೆಟ್ಟುಕೊಟ್ಟಿತು. ಆ ಮೇಲೆ ೫-೬ ವರ್ಷಗಳಲ್ಲಿ ಬೆಳೆದುನಿಂತ ೯ ವರ್ಷದ ಮಗಳು ಹೀಗೆಯೇ ಆಕಸ್ಮಾತ್ ಗಂಗೆಯಲ್ಲಿ ಸ್ನಾನಮಾಡುವಾಗ ಬಳಿದುಹೋದಳು. ಇದೆಲ್ಲ ಆಘಾತವು ಎಂಥ ಪತಿಭಕ್ತಿ ಗೌರೀ ಪೂಜೆಗಳ ಸಾಂತ್ವನೆಯಿಂದಲೂ ಲಲಿತೆಗೆ ಸಹಿಸದಾಯಿತು. ಆ ಸಾಧ್ವಿಯೂ ೬-೭ ವರ್ಷಗಳಲ್ಲಿ ಕಾಯಿಲೆಯಲ್ಲಿ ತೀರಿಕೊಂಡಳು.

ಹೀಗೆ ''ಕಾಗೆಮಳೆಯಲ್ಲಿ ನೆನೆದ ಹಾಗೆ'' ದುಃಖ ಶೋಕ ಪರಂಪರೆಯಲ್ಲಿ ಸುಬ್ಬಣ್ಣ ನೆನೆದುದಾಯಿತು. ಎಂಥ ಕರಳು ಮಿಡಿಯುವ ಉಪಮೆ! ಕನ್ನಡ ಸಾಹಿತ್ಯ ಲೋಕದಲ್ಲಿ ಸಮರ್ಪಕ ಉಪಮೇಗಳ ಔಚಿತ್ಯ ಪರಿಷ್ಕರಕ್ಕೆ ಮಾಸ್ತಿಯವರೇ ಕಾಳಿದಾಸರು! ಈ ಒಂದು ಉಪಮೆಯಿಂದ ಸುಬ್ಬಣ್ಣ ಅನಿವಾರ್ಯವಾಗಿ ಅನುಭವಿಸಿದ ಈ ಬದುಕಿನ ಅರ್ಥಹೀನ ವಿಧಿಯ ವಿಕಟ ವಿಲಾಸದಲ್ಲಿ ಸಿಲುಕಿ ತೊಳಲಾಡುವ ವ್ಯಕ್ತಿಯ ನಿರುಪಾಯತೆ ಅಸಹಾಯತೆ ಪೂರ್ತಿ ವ್ಯಕ್ತವಾಗುತ್ತದೆ. ದೈವವೆನ್ನಿ ಪೂರ್ವಜನ್ಮದ ಪಾಪವೆನ್ನಿ. ಇದನ್ನು ಎದುರಿಸುವ ಸುಬ್ಬಣ್ಣ ಧೀರೋದಾತ್ತ ನಾಯಕನಲ್ಲ. ಹಟವಾದಿಯಾದರೂ ಏಕಾಕಿಯಾದ ಭಾವಜೀವಿ ಮಾನವ. ಆತ ಮನೆಬಿಟ್ಟದ್ದೂ ಸಂಗೀತದ ಸಿದ್ಧಿಗಾಗಿ ಅಲ್ಲ. ತನ್ನ ಮಡದಿ ಮಕ್ಕಳಿಗೆ ಹಾಲು ಮೊಸರು ಸುಖ ಸೌಕರ್ಯ ಸಿಗುವಂತೆ ಒಂದು ಉಪಜೀವಿಕೆಯ ಶೋಧಕ್ಕಾಗಿ. ಅಲ್ಲಿ ಪಾಲಿಗೆ ಬಂದದ್ದರಲ್ಲಿ ಸುಖಕ್ಕಿಂತ ದುಃಖವೇ ಹೆಚ್ಚು. ಅವನ ಬಾಳೊಂದು ''ದೈನ್ಯದ ತಪಸ್ಸಾ''ಯಿತು. ಇದು ಬಾಳಿನ ಅಸಂಗತ ನಿರರ್ಥಕತೆ (absurdity) ಒಂದು ವ್ಯಂಗ್ಯವಾದ ಭಾಷ್ಯ. ಕಣ್ಣೀರಿನಲ್ಲಿ ಬರೆದಂತೆ.

ಈ ತಪಸ್ಸಿನ ಫಲವೇನು? ಒಟ್ಟಾರೆ ಹಟವಾದಿಯಾದ ಅಂತರ್ಮುಖಿಯಾದ ಸುಬ್ಬಣ್ಣನ ಕಠಿಣ ಮನಸ್ಸೂ ತನ್ನನ್ನೆ ಅರಿಯದೆ ಸ್ವಲ್ಪ ಮೃದುವಾಯಿತು. ಅಂದರೆ ಕಲೆಯು ಕೊನರಿ ಅರಳಿಲಿಕ್ಕೆ ಅಲ್ಲಿ ಯೋಗ್ಯ ಭೂಮಿ ಸಂಸ್ಕಾರಗೊಂಡಿತು. ಅವನ (ಎದೆಯ ಒಕ್ಕಲಿಗ ಯಾರು?) ಈ ಹೃದಯ ಕೃಷಿ ಯಾರಿಂದ ನೆರವೇರಿತು?

*

ಈ ಸಂದರ್ಭದಲ್ಲಿ ಮಾಸ್ತಿಯವರು ಒಂದು ಜೀವಾಳದ ಸೂತ್ರವನ್ನು ಆಡಿದ್ದಾರೆ.

''ಮನುಷ್ಯ ಆಯುಸ್ಸನ್ನು ಎಲ್ಲಿ ಬೇಕಾದರೂ ಕಳೆಯಬಹುದು. ಅದಕ್ಕೆ ಅವನು ಕಷ್ಟ ಪಡಬೇಕಾದುದಿಲ್ಲ. ಕಷ್ಟ ವಿರುವದೆಲ್ಲ ಸರಿಯಾದ ರೀತಿಯನ್ನು ಹುಡುಕುವದರಲ್ಲಿ.''

ಈ ರೀತಿಯನ್ನು ಸುಬ್ಬಣ್ಣ ಕಲಿತದ್ದು ಯಾತರಿಂದ? ಸಂಗೀತದಿಂದಲೇ? ಅಲ್ಲವೇ ಅಲ್ಲ. ಅವನ ಬಾಳನ್ನು 'ತಿದ್ದಲು ಬಂದ ದೇವಿಯ ಅವತಾರ' ಲಲಿತೆ. ಲಲಿತೆ ಕಲಿಸಿಕೊಟ್ಟ ಪಾಠ ಚಿತ್ತದ ಏಕಾಗ್ರತೆ. ಈ ಒಂದು ತಪಸ್ಸು - ಯಾವ ಋಷಿಗೂ ಕಡಮೆ ಇಲ್ಲದ್ದು.

ಇದರಿಂದಲೆ ಜೀವನದ ಸಮಸ್ತ ಸಂಸ್ಕಾರಗಳನ್ನು ಸಾಧಿಸಿಬಿಡುವುದು ಹೆಣ್ಣಿಗೆ ಸಾಧ್ಯ. ಆ ಸಾಧನೆ ಆಕೆಯನ್ನು ನೋಡಿ, ಕಳೆದುಕೊಂಡ ಮೇಲೆ ನೆನೆದು ಸುಬ್ಬಣ್ಣ ಕಲಿತು ಪಳಗಿಸಿಕೊಂಡನು. ಲಲಿತೆಯು ತನ್ನ ಜೀವನದ ಸಂಸ್ಕಾರದಿಂದ ಗಂಡನನ್ನು ದೇವರೆಂದು ಭಾವಿಸಿ ಆರಾಧಿಸುತ್ತ ಅವನನ್ನೂ ದೇವತ್ವದ ಹಾದಿಗೆ ಹಚ್ಚಿದಳು.

ಮಗ ಸತ್ತಾಗ ಸುಬ್ಬಣ್ಣನಲ್ಲಿ ದೇವಭಕ್ತಿ ಹುಟ್ಟಿದ್ದಿಲ್ಲ. ಸುಬ್ಬಣ್ಣನ ಬಾಳಿನ ಸುಖ-ಶಾಂತಿ-ಶ್ರದ್ಧೆಯ ಕೇಂದ್ರ ಸಂಗೀತವಾಗಿರಲಿಲ್ಲ, ಲಲಿತೆ ಆಗಿದ್ದಳು. ಅವಳು ತೀರಿ ಹೋದಂದಿನಿಂದ ''ಅವಳು ಅಂಥ ನಂಬಿಕೆಯನ್ನಿಟ್ಟಿದ್ದ ದೇವರಲ್ಲಿ ತನಗೂ ಭಕ್ತಿ ಉಂಟಾಗುವದಾದರೆ ಆಗಲಿ'' ಎಂದು ಆತ ಯಾತ್ರೆಗೆ ಹೊರಟನು.

ಈ ಯಾತ್ರೆ ಬಾಳಿನುದ್ದಕ್ಕೂ ಅವನ ಸಾಧನೆ. ಆತ ಸಂಸಾರದಿಂದ ಪ್ರತ್ಯೇಕತೆಯನ್ನು ಸಾಧಿಸಲು ಹೆಣಗಿದನು - ಕೊನೆಗೆ ಅನಿಕೇತನ ಪರಮಹಂಸನಾಗುವತನಕವೂ. ಮನೆಯಿಂದ ಓಡಿದ, ಕಲಕತ್ತೆಯಿಂದ ಓಡಿದ, ಸುಬೇದಾರರಿಂದ ಓಡಿದ, ಹೀಗೆ ನಿಜವಾಗಿಯೂ ಆತ ತನ್ನಿಂದ ತಾನೇ ದೂರವಾಗಲು ಪಾರಾಗಲು ಓಡುತ್ತಿದ್ದ. ಹೆಂಡತಿ ಸತ್ತಮೇಲಂತೂ ಪ್ರಿಯೆಯ ವಿರಹದಿಂದ ಅವನಿಗೆ ಜಗತ್ತೇ ಘೋರಾರಣ್ಯವೆನಿಸಿತು - ಭವಭೂತಿ ರಾಮನ ಕುರಿತು ಹೇಳುವಂತೆ!

ಬಾಳಿನ ಕುರಿತು ಸುಬ್ಬಣ್ಣ ತಲುಪಿದ ತೀರ್ಮಾನವೇನು?

''ಜೀವನವೆನ್ನುವುದು ಸಭಿಕರಿಗೇ ವೇಷ ಹಾಕಿ ಕುಣಿಸುವ ಬಯಲಾಟ.'' ಬಾಳಿನ ಅಸಂಗತತೆಯನ್ನು ಇದಕ್ಕೂ ನಿಚ್ಚಳವಾಗಿ ತೋರಿಸುವ ರೂಪಕ ಬೇರೆ ಯಾವದಿದೆ? ಇದೇ ಬಯಲಾಟದ ರೂಪಕವನ್ನು ಮತ್ತೆ ಎತ್ತಿಕೊಂಡು ಮುಂದೆ ಇನ್ನೂ ಮಾರ್ಮಿಕವಾಗಿ ವಿವರಿಸಲಾಗಿದೆ.

''ನಾವು ಸಂಸಾರದಲ್ಲಿ ಕೆಲವರು ದೊಡ್ಡ ಮನುಷ್ಯನ ವೇಷ ಹಾಕಿ ದೊಡ್ಡ ಮನುಷ್ಯನೆಂದು ಹೇಳಿಕೊಳ್ಳುತ್ತೇವೆ. ಚಿಕ್ಕ ಮನುಷ್ಯನ ವೇಷ ಹಾಕಿ ಚಿಕ್ಕ ಮನುಷ್ಯ ಎಂದು ಕೊಳ್ಳುತ್ತೇವೆ . . . ಚಿಕ್ಕ ಮನುಷ್ಯನ ವೇಷದವನು ತಗ್ಗಿ ನಡೆಯದಿದ್ದರೆ ದೊಡ್ಡ ಮನುಷ್ಯನ ವೇಷದವನಿಗೆ ಕೋಪ. ಆದರೆ ನೋಡಿ, ಜವಾನ ಪಾರ್ಟಿನ ಜೀವಂಡರಾಯ ರಾಜಾಪಾರ್ಟಿನ ರಂಗರಾಯನಿಗೆ ನಾಟಕದಲ್ಲಂತೂ ನಮಸ್ಕಾರ ಮಾಡಬೇಕು; ಬೀದಿಯಲ್ಲಿ ಬಂದಾಗಲೋ? ಆಗಲೂ ದಾಸೋಹಂ ಎನ್ನಬೇಕೆ? ಒಂದೊಂದು ಸಂದರ್ಭದಲ್ಲಿ ಏನಾಗುತ್ತದೆಂದರೆ, ರಂಗರಾಯ ಇನ್ನೂ ನಾಟಕದಲ್ಲೇ ಇರುತ್ತಾನೆ, ಜೀವಂಡರಾಯ ಹೊರಗೆ ಬಂದಿರುತ್ತಾನೆ. ಆಗ ತೊಂದರೆ. ಇಲ್ಲಿ ಆಗಿದ್ದೂ ಅದೇನೆ.

ಬಾಳಿನ ಅರ್ಥ ಶೂನ್ಯತೆಯನ್ನು ವ್ಯಕ್ತಿಯ ಅಸಹಾಯಕತೆ ಎದುರಿಸಿದಾಗ ಆಗುವ ಕ್ರಿಯೆ ಪ್ರತಿಕ್ರಿಯೆಗಳ ಕರ್ಮ ಕಥೆ ಇದು. ಬಾಳಿನಲ್ಲಿ ಸುಬ್ಬಣ್ಣ ಕೇವಲ ತನ್ನ ಮೂಗಿನ ನೇರಕ್ಕೆ ನಡೆದಂತೆ ಆಯಿತೆ ಹೊರತು ಇತರರ ಕಷ್ಟ ಸುಖವನ್ನು ಯೋಚಿಸಿ ನಡೆದುಕೊಂಡ ಹಾಗೆ ಆಗಲಿಲ್ಲ. ತಾವು ಕೆಟ್ಟವರಾದರೇನು? ತಾವು ಒಳ್ಳೆಯವರಾಗದಿದ್ದರೆ ಏನು?

ಸುಬ್ಬಣ್ಣನ ಈ ಏಕಾಕಿತನ ಪ್ರಪಂಚದಲ್ಲಿ ವ್ಯಕ್ತಿ ವ್ಯಕ್ತಿಯ - ಅದೂ ಭಾವಜೀವಿ ಅಂತರ್ಮುಖಿ ವ್ಯಕ್ತಿ - ಮೂಲಭೂತ ಅಸಹಾಯಕತೆ ಅಗತಿಕತೆಯನ್ನೇ ಪ್ರತಿನಿಧಿಸುತ್ತದೆ. ಈ ಪ್ರತ್ಯೇಕತೇ, ಅದರಿಂದ ಏಳುವ ಅಂತರಂಗದ ತುಮುಲ ಸುಬ್ಬಣ್ಣನ ಪಿಟೀಲು ಮಿಡಿಯುವ ದೀನಸ್ವರದ ಶ್ರುತಿಯಾಗಿದೆ. ಅಂತೆಯೇ ಆತನ ವಾದನದಲ್ಲಿ ಒಂದು ಉತ್ತಾನತೆ ಉಕ್ಕೇರಿ ಬರುತ್ತದೆ. ವಿರಹಕಾತರ ವಿಹ್ವಲತೆಯು ಮೊರೆಯುತ್ತದೆ. ಈ ಕುರಿತು

ಪ್ರಸಂಗಗಳೆದ್ದಾಗೆಲ್ಲ ಆತ ಅತೃಪ್ತಿಯ ನಿವಾರಣೆಗಾಗಿ ನೀಲಾಸಾನಿಯಲ್ಲಿ ಹಗಲೆಲ್ಲ ಕಳೆದು ರಾತ್ರಿ ಮಲಗುವುದಕ್ಕೆ ಮಾತ್ರ ಮನೆಗೆ ಬರುತ್ತಿದ್ದನು.

ಅಂದಾಗ ನೀಲಾಸಾನಿಯ ಮನೆ ಸುಬ್ಬಣ್ಣನಿಗೆ ಹೃದಯ ಸಂವಾದ ಒದಗಿಸುವ ಸ್ವಸ್ಥಾನವೆನಿಸಿದರೆ ತಪ್ಪಿಲ್ಲ. ಆದಾಗ್ಯೂ ಆತ ಪ್ರಪಂಚದ ಪರಲು ಹರಿದುಕೊಂಡು ಮರಳಿ ಮೈಸೂರಿಗೆ ಬಂದಾಗ ನೀಲಾಸಾನಿಯಲ್ಲಿಗೆ ಹೋಗುವದಿಲ್ಲ. ಅವಳ ಕುರಿತು ಚೌಕಶಿಯನ್ನು ಮಾಡುವುದಿಲ್ಲ. ಅವಳ ಋಣ ತೀರಿದ ಮೇಲೆ ಅವಳನ್ನು ಪೂರ್ತಿ ಮರೆತನೆ? ಹಾಗೆಯೂ ಇಲ್ಲ. ಅವಳ ಹಣ ಸಂದಾಯ ಮಾಡಿದ ಮಾತ್ರಕ್ಕೆ ಋಣ ತೀರಿತೆಂದು ಆತ ತಿಳಿಯಲಿಲ್ಲ. ವೆಂಕಟರಮಣ ಸಂಗೀತ ಪಾಠ ಕಲಿಸಲು ಕೇಳಿಕೊಂಡಾಗ ಸುಬ್ಬಣ್ಣ ನೀಲಾಸಾನಿಯನ್ನು ಜ್ಞಾಪಿಸಿಕೊಳ್ಳುತ್ತಾನೆ. ವೆಂಕಟರಮಣನೂ ಆಕೆಯಂತೆ ನಾಚುವನು ಅಲ್ಲದೆ ''ಇಂಥ ಸಂಬಂಧಗಳಿಂದ ಹೃದಯದಲ್ಲಿ ಸ್ನೇಹ ಮೊಳೆಯುವದೆಂದು'' ಒಂದು ಮಾರ್ಮಿಕ ಮಾತು ಆಡಿದ್ದಾರೆ ಮಾಸ್ತಿಯವರು. ಜತೆಗೆ ಉಪಕಾರ ಭಾವನೆಗಿಂತ ನೀಲಾಳ ಋಣ ಈ ರೀತಿ ಪರ್ಯಾಯವಾಗಿ ತೀರಿಸಬೇಕೆಂಬ ಬುದ್ಧಿ ಸುಬ್ಬಣ್ಣನಲ್ಲಿ ಬಲವಾಗುತ್ತದೆ.

ಒದಗದ ಶೋಕ ಪರಂಪರೆಯಲ್ಲಿ ನಿಂತ ಸುಬ್ಬಣ್ಣನಿಗೆ ''ಕತ್ತಲಲ್ಲಿ ಒಂಟಿಯಾಗಿ ಸಿಕ್ಕಿಕೊಂಡ ಮಕ್ಕಳ'' ಹೋಲಿಕೆ ಲೇಖಕ ಕೊಟ್ಟಿದ್ದಾರೆ. ಇದು ಮಾನವನ ಅಸಂಗತ ಜೀವನದಲ್ಲಿಯ ಅಸಹಾಯಕತೆಗೆ ಅತ್ಯಂತ ಸಮರ್ಪಕವಾಗಿದೆ. ಬಯಲಾಟದ ಸೋಗಿನ ಉಪಮೆ ಹಿಂದೆಯೇ ಬಂದಿದೆ. ಆತ ಇದಿರಿಸಬೇಕಾಗಿ ಬಂದ ದುಃಖಗಳ ರಾಶಿಗೆ ಯಾವ ಸಾಮಂಜಸ್ಯವೂ ಇಲ್ಲ. ಅವು ಒದಗಿದವೆಂಬುದೇ ಅವುಗಳ ಸಮರ್ಥನೆ. ಅವುಗಳ ಹೊಡೆತಕ್ಕೆ ಜರ್ಜರನಾದ ಸುಬ್ಬಣ್ಣ ಸಂಸಾರದಲ್ಲಿಯೂ ಸಂನ್ಯಾಸಿಯಾಗಿ ಬಾಳಲು ಪಣತೊಟ್ಟ. 'ವಿಶ್ವಜಿತ್' ಯಜ್ಞವನ್ನು ಮುಗಿಸಿ ಕಂಕಣ ಬಿಚ್ಚಿದ. ನಮ್ಮ ಸಂಸ್ಕೃತಿಯಲ್ಲಿ ಹೀಗೆ ''ಯದಹರೇವ ವಿರಜೇತ್, ತದಹರೇವ ಪ್ರವ್ರಜೇತ್'' ಎಂಬ ವಿರಕ್ತಿಯ ಪರಿವ್ರಾಜಕನ ದಾರಿಯೊಂದೇ ಭವದ ಬೇಸರದಿಂದ ಬಿಡುಗಡೆ ಪಡೆಯಲಿಕ್ಕೆ. ಇದರಿಂದ ''ಅರತಿಃ ಜನಸಂಸದಿ'' ಉಂಟಾದವನು ಇಂದಿನಂತೆ ಹಿಪ್ಪಿಯೋ ಎಂದಿನಂತೆ ಹುಚ್ಚನೋ ಆಗಬೇಕಾದ ಬಲವಂತವಿಲ್ಲ. ಸುಬ್ಬಣ್ಣ ಸಂಸ್ಕೃತಿಯ ತಾವರೆಗೊಳದಲ್ಲಿ ಬಿದ್ದು ಈಜಿ ಜೈಸಿದವನು. ಅದರಿಂದ ಪೂರ್ತಿ ಬಿಡುಗಡೆ ಅವನಿಗೆ ಸಾಧ್ಯವಾಗಲಿಲ್ಲ. ಮುಂಬಯಿ ಸಾಹುಕಾರ ಮನೆಯಿಂದ ಪಾರಾಗಿ ಬಂದರೂ, ತೊರೆಯಪುರದಲ್ಲಿ ಸುಬೇದಾರರ ಮಗಳ (ಅವಳ ಹೆಸರೂ ಲಲಿತ ಎಂದಿದ್ದುದರಿಂದಲೋ ಏನೋ!) ಸಂಗೀತ ಪಾಠದ ನಿಮಿತ್ತ ಮತ್ತೆ ತನ್ನನ್ನು ಕೆಲ ಮಟ್ಟಿಗೆ ಸಂಸಾರದ ವ್ಯಾಮೋಹದಲ್ಲಿ ಸಿಲುಕಿಸಿಕೊಂಡನು.

''ಹೀಗೆ ಸಂಸಾರದ ಸುಖ ಒಂದೊಂದು ಸುಬ್ಬಣ್ಣನವರನ್ನು ರಾಟೆಯ ಓಟದಲ್ಲಿ ಸೇರಿಸಿಕೊಂಡಿತು. ಅವರು ಇದಕ್ಕೆ ಸಿಕ್ಕಬಾರದು ಸಿಕ್ಕಬಾರದು ಎಂದುಕೊಳ್ಳುತ್ತ ಸೇರಿಯೂ ಸೇರದ ಹಾಗೆ ಇರಬೇಕು ಎಂದು ಪ್ರಯತ್ನ ಮಾಡುತ್ತ ಕಾಲವನ್ನು ಕಳೆಯುತ್ತಿದ್ದರು.''

*

ಹೀಗೆ ಸೇರಿಯೂ ಸೇರದ ಹಾಗೆ ಇರಬೇಕೆಂಬುದೆ ಸುಬ್ಬಣ್ಣನ ಸಾಧನೆಯ ಸಂದೇಶ - ಬಯಲಾಟದ ನಟ ತನ್ನ ವೇಷ ಚೆನ್ನಾಗಿ ನಿರ್ವಹಿಸುತ್ತಿದ್ದೂ ಅದರಿಂದ ತಾನು ತಟಸ್ಥ ನಿರ್ಲಿಪ್ತನಿರುವಂತೆ. ಬದುಕು ಅರ್ಥ ಶೂನ್ಯ. ಅಲ್ಲಿ ವ್ಯಕ್ತಿ ವ್ಯಕ್ತಿ ಸಂಬಂಧ ತಾತ್ಕಾಲಿಕ -

ಸ್ಟೇಶನ್ನಿನಲ್ಲಿ, ಮಿಠಾಯಿ ಅಂಗಡಿಯಲ್ಲಿ, ತೊರೆಯ ಕಟ್ಟೆಯ ಮೇಲೆ, ದೇವರ ಗುಡಿಯಲ್ಲಿ, ಯಾರದೋ ಜಗಲಿಯ ಮೇಲೆ, ಅಥವಾ ಮರದ ಕೆಳಗೆ - ಕೂಡಿದಂತೆ ಕಾಲ ಕಳೆದಂತೆ, ಈ ಅನುಭವಕ್ಕೆಲ್ಲ ಸುಬ್ಬಣ್ಣ ಪ್ರತೀಕ. ಈ ಪ್ರತೀಕವು ಒಡಮೂಡಿಸುವ ತತ್ವವೇನು?

''ಕಟ್ಟಿಕೊಂಡವರಿಗೆ ಬಿಟ್ಟ ದುಃಖ ತಪ್ಪಿಲ್ಲ. ಬಿಟ್ಟೇ ಇರುವವನಿಗೆ ದುಃಖವೇ ಇಲ್ಲ - ಇದನ್ನು ಸುಬ್ಬಣ್ಣ ಮೊದಲು ಕೇಳಿ ತಿಳಿದಿದ್ದನು. ಈಗ ಅನುಭವಿಸಿ ತಿಳಿದನು.''

ಆದರೆ ಇದು ಬಾಳಿನ 'ಆರ್ಯಸತ್ಯ'ದ ಒಂದು ಮುಖ. ಇದರ ಇನ್ನೊಂದು ಮುಖವನ್ನು ಸುಬೇದಾರನ ಬಾಯಿಯಿಂದ ಮಾಸ್ತಿಯವರು ಆಡಿಸಿದ್ದಾರೆ; ಅದು ಬಾಳಿನ ಅಷ್ಟೇ ಮೂಲಭೂತ ಸಿದ್ಧಾಂತವೂ ಅಹುದು.

''ಸ್ವಾಮಿ, ಬಿಟ್ಟು ಪಡುವ ಸುಖ ಸುಖವಲ್ಲ, ಕಟ್ಟಿಕೊಂಡು ಆಮೇಲೆ ಬಿಡಬಹುದು. ಅದರ ಸುಖ, ಸುಖ.'' ಈ ತತ್ವದ ಶ್ರದ್ಧೆ ಇಷ್ಟೇ: ಸಂಸಾರ ಮಾಡದೆ ಇದ್ದರೆ ಇಷ್ಟು ಸಂಸ್ಕಾರ ಹೇಗಾಗುತ್ತಿತ್ತು?

ಈ ತಿಳಿವಳಿಕೆಗೆ ಇನ್ನೂ ಒಂದು ಕೋನವಿದೆ. ಅದನ್ನು ಹೇಮಕೂಟದಿಂದ ತಿರುಗಿ ಬಂದ ಶಕುಂತಲೆ ನಿರೂಪಿಸಿದ್ದಾಳೆ: ಆಶೆ ಪಡುವ ಮೊದಲಿನ ನಗೆಯೇ ನಗೆ. ಅಂದರೆ ಕಟ್ಟಿಕೊಂಡು ಬಿಡುವದೂ ಅಲ್ಲ. ಬಿಟ್ಟೇ ಇರುವುದೂ ಅಲ್ಲ. ಕಟ್ಟು ಬಿಟ್ಟು ಮಾಡುವುದಕ್ಕೂ ಮುಂಚಿನ ಸಹಜ ಭಾವವೆ ಸುಖ.

ಸುಖದ ಈ ತ್ರಿಭಂಗಿಯ ತ್ರಿಕೋನ ಮಿತಿ ಏನೇ ಇರಲಿ. ಈ ಬಗೆಯ ತಿಳುವಳಿಕೆ ಸುಬ್ಬಣ್ಣನಿಗೆ ಅವನ ಸಂಗೀತ ಸಾಧನೆಯಿಂದಲೇ ಬಂತೆಂದರೆ ಅದು ಅವನಿಗೂ ಅವನ ಸಂಗೀತಕ್ಕೂ ಕೂಡಿಯೇ ಅಪಚಾರವಾದೀತು. ಅದು ಅವನ ಬದುಕಿನ ಅನುಭವದ ಮಿಶ್ರಪಾಕ; ಬಹಿರ್ಮುಖಿಯಾದ ಬದುಕಿನಲ್ಲಿ ಅಂತರ್ಮುಖಿಯಾದ ಬಾಳು ಕಲಿತುಕೊಂಡ ಪಾಠ. ಅನ್ಯಕೇಂದ್ರಿತ ವಿಶ್ವದಲ್ಲಿ ಆತ್ಮಕೇಂದ್ರಿತ ವ್ಯಕ್ತಿಯ ಜೀವನ ಶಿಲ್ಪಕ್ಕೆ ಸುಬ್ಬಣ್ಣ ಒಂದು ಮನಕರಗುವ ಸಂಕೇತ.

ಒಂಧು ದೃಷ್ಟಿಯಿಂದ ನೋಡಿದರೆ ಬಾಳಿನಲ್ಲಿಯ ಈ ನಿರ್ಲಿಪ್ತ ನಿರಂಜನ ವೃತ್ತಿ ಸುಬ್ಬಣ್ಣನಿಗಿಂತ ಅವನ ಮೂಲ ಮಾದರಿ ಶಾಮಣ್ಣನೆ ಹೆಚ್ಚು ಸಾಧಿಸಿಕೊಂಡಂತೆ ಕಾಣುತ್ತದೆ. ನವರತ್ನ ರಾಮರಾಯರು ಚಿತ್ರಿಸಿದ ಅವನ ವ್ಯಕ್ತಿ ಚಿತ್ರಣದಲ್ಲಿಯೂ ಅದು ಸಾಕಷ್ಟು ಸ್ಫುಟವಾಗಿದೆ. ಆದ ಧೀರಜೀವಿ. ಈತ ಕೇವಲ ಭಾವಜೀವಿ. ಆತ ಅನುಭಾವಿ. ಈತ ತತ್ವಜ್ಞಾನಿ. ಆಮಟ್ಟಿಗೆ ಈತನಿಗೆ ಉಪಕಾರ ಋಣಾನುಬಂಧಗಳ ಹಂಬಲ ಕಾಣುತ್ತದೆ. ಅನಿಚ್ಛೆಯಿಂದಲೂ ಮಿಠಾಯಿಯ ಮುದುಕಿಯ, ಮುಂಬಯಿ ಸಾಹುಕಾರನ ಆಗ್ರಹಕ್ಕೆ ಒಲಿಯುತ್ತಾನೆ. ಶಾಮಣ್ಣನಂತೆ ಪಿಟೀಲು ಒಡೆದೇ ಹಾಕುವುದಿಲ್ಲ; ತೇಲಿ ಬಿಡುತ್ತಾನೆ. ಒಮ್ಮೆ ಕೋಪ, ಶಾಪಗೊಂಡರೂ ವೆಂಕಟರಮಣನಿಗೆ, ಲಲಿತೆಗೆ, ಕೆಲವು ಹುಡುಗರಿಗೆ ಸಂಗೀತ ಪಾಠ ಹೇಳಲು ಒಪ್ಪುತ್ತಾನೆ, ಬಾಳಿನೊಂದಿಗೆ ಮನಸ್ಸಿಲ್ಲದ ಮನಸ್ಸಿನಿಂದ ಒಂದಲ್ಲ ಒಂದು ಒಡಂಬಡಿಕೆ (Compromise) ಹೊರಗಿನ ಆಗ್ರಹಕ್ಕೆ ಮಾತ್ರವಲ್ಲ, ಆಂತರ್ಯದ ಅನುಮತಿಯಿಂದ ಸ್ವೀಕರಿಸುತ್ತಾನೆ. ತಂದೆಯ ಭಾವನೆಗೆ ಗೌರವವಿತ್ತು, ವೇಶ್ಯೆಯರಿಗೆ ಸಂಗೀತದ ಪಾಠ ಹೇಳಿ ಬರುವ ನೀಚಾನ್ನವನ್ನು ಗಳಿಸದೆ ಮನೆಯಲ್ಲಿ ಕಾರ್ಪಣ್ಯಕ್ಕೆ ಕಾರಣನಾಗುತ್ತಾನೆ.

'ಪರಮಹಂಸ'ನೆಂಬ ನಿರ್ದೇಶ ಒಂದನ್ನು ಬಿಟ್ಟು ಸುಬ್ಬಣ್ಣನ ಸ್ಥಿತಿಯನ್ನು

ಮಾಸ್ತಿಯವರು ಪ್ರಭಾವಿಯಾಗಿ ಅಷ್ಟೇ ನಿರಾಯಾಸವಾಗಿ ಚಿತ್ರಿಸಿದ್ದಾರೆ. ಕೆಲಮಟ್ಟಿಗೆ ಶಾಮಣ್ಣ ಸುಬ್ಬಣ್ಣನಾಗುವದರಲ್ಲಿ ಲೇಖಕರಿಂದ ಲಾವಣ್ಯ ಪಡೆದಿದ್ದಾನೆ. ಪೂರ್ವ ಯೌವನದಲ್ಲಿ ಆತನನ್ನು ಸುಂದರಾಂಗನಾಗಿಯೇ ಅವರು ಚಿತ್ರಿಸಿದ್ದಾರೆ. ಬಡಕಲು ದೇಹದ ವರ್ಚಸ್ಸು ತೇಜಸ್ಸಿನಿಂದ ಕೂಡಿದ ಸುಬ್ಬಣ್ಣನ ಆ ಚಿತ್ರ ಸ್ವಯಂ ಮಾಸ್ತಿಯವರ ಬಿಡಿ ರೂಹನ್ನೇ ಮೂಡಿಸಿರಬಹುದೇ? ಅಂತೆಯೇ ಮಾಸ್ತಿಯವರು ಸುಬ್ಬಣ್ಣನೊಂದಿಗೆ ಬಹುಮಟ್ಟಿಗೆ ತಾದಾತ್ಮ್ಯ ಹೊಂದಿದಂತಿದೆ.

ಹೀಗೆ ಮಾಸ್ತಿ 'ಟಚ್' ಮತ್ತು ಮಾಸ್ತಿ 'ಟೋನ್' ಅವರ ಶೈಲಿಯಲ್ಲಿ ಭಾವಗೀತದ ಪದಲಾಲಿತ್ಯದೊಂದಿಗೆ ಮಾಹಾಕಾವ್ಯದ ಅರ್ಥಗೌರವ ಎರಕವಾಗಿದೆ. ಸ್ಟೀವನ್ ಸನ್ ಹೇಳುವ "Significant Simplicity'ಗೆ ಈ ಶೈಲಿ ಮಾದರಿ. ಈ.ಎಂ. ಫೊರಸ್ಟರ್ ಒಂದು ಮಾತು ಹೇಳಿದ್ದಾನೆ: "The final test of a novel will be our affection for it, as it is the of our test friends and of anything which we cannot define." ಈ 'ಟೆಸ್ಟ್' ಈ ಕಾದಂಬರಿಯು ತನ್ನ ಅನಿರ್ವಚನೀಯ ಅಕ್ಲಿಷ್ಟ ಕಾಂತಿಯಿಂದ ಅಮರವಾಗಿ ನಿಂತಿದೆ. ಮಾಸ್ತಿಯವರ ಕತೆಗಳ Mythical ಗುಣಕ್ಕೆ ಈ 'ಸುಬ್ಬಣ್ಣ' ಉತ್ತಮ ಉದಾಹರಣೆ. ಯಾವ ಕೋಲಾಹಲ - ಕರ್ಕಶವೂ ಇಲ್ಲದೆ, ನಮಗೆ ಅರಿವಾಗದಂತೆ ನಮ್ಮ ಹೃದಯವನ್ನು ಹೊಕ್ಕು ಪರಿಣಾಮ ಮಾಡುವ ಈ ಶಕ್ತಿ ಜಗತ್ತಿನ ಎಲ್ಲ ಪುರಾಣ ಕಥೆ (Myth)ಗಳ ಗುಣ. 'ಸುಬ್ಬಣ್ಣ'ದ ಶಕ್ತಿಯೂ ಇದೇ ಗುಣದಲ್ಲಿದೆ.

ಸುಬ್ಬಣ್ಣನ ಸಂಗೀತ ಸಾಧನೆಯ ಬಗೆಗೆ ಇಲ್ಲಿ ಅನೇಕ ಅಡ್ಡತಿಡ್ಡ ಮಾತುಗಳು ಬಂದಿವೆ. ಆದರೆ ಅವುಗಳಿಂದ ಈ ಕೃತಿಯ ಗುಣಮೂಲ್ಯಕ್ಕೆ ಯಾವ ಕುಂದೂ ಬರುವುದಿಲ್ಲ. ಏಕೆಂದರೆ ಆರ್.ಎಲ್. ಸ್ಟೀವನ್‌ಸನ್ ಅಂದಂತೆ, "The novel is not a transcription of life, to be judged by its exactitudes. It stands or falls by its significant simplicity. The well written novel echoes and reechoes its one creative and controlling thought."

ಇಲ್ಲಿ ಅಂಥ "thought' ಯಾವದು? ಚಿನ್ನದ ಅದರು ಅಪರಂಜಿಯಾದ ನ್ಯಾಸ. ಅದರ ಸಾಧನೆಯ ವಿನ್ಯಾಸ. ಅದು ನಾದಯೋಗವೋ, ದೈನ್ಯರ ತಪಸ್ಸೋ?

ಸಂಗೀತವೇನು ಯಾವ ಕಲೆ ಕಸಬಾದರೇನು? ಅದನ್ನು ಕಾಯಕವಾಗಿ ಕಂಡು ಅದರೊಂದಿಗೆ ತಾದಾತ್ಮ್ಯ ಹೊಂದಿದ ಸಾಧಕ ಈ ಮೂಲಕ ಸರ್ವತತ್ವವನ್ನೂ ತಿಳಿದುಕೊಳ್ಳಬಲ್ಲ ಪರಮ ಸಿದ್ಧಿಯನ್ನು ಈ ಕಲೆಯೊಂದಿಗೆ ತನ್ನ ಬಾಳಿನಲ್ಲಿಯೂ ಪಡೆಯ ಬಲ್ಲ. ಈ ತಿಳಿವು ಈ ಸಿದ್ಧಿಯೇ ಮುಕ್ತಿ. ಬಾಳಿನ ಬಂಧ-ಮೋಕ್ಷಗಳ ಗಹನ ಗಾಥೆ - ಈ ಸುಬ್ಬಣ್ಣನ ನೀಳ್ಗತೆ. ಅದು ನೀಳವಿದ್ದಷ್ಟೇ ಧ್ವನಿ ನಿಬಿಡವಿದೆ. ಈ ಧ್ವನಿಯೆ ಅದನ್ನು ಮೈಸೂರ-ಕಲಕತ್ತ-ತೊರೆಯ ಪುರಗಳ ಪರಿಮಿತ ಸಂದರ್ಭಗಳಿಂದ ಬಿಡಿಸಿ ಅದಕ್ಕೆ ಒಂದು ಸರ್ವಾತೀತ ಸರ್ವಕಾಲಕ ದೃಷ್ಟಿಯನ್ನೂ ದರ್ಶನವನ್ನೂ ನೀಡುತ್ತದೆ. ಮಾಸ್ತಿಯವರ ಎಲ್ಲ ಗ್ರಂಥಗಳಲ್ಲಿ ಯಾವದೊ ಎರಡನ್ನು ಆಯ್ದುಕೊಳ್ಳಲು ಸುಗ್ರೀವಾಜ್ಞೆ ಹೊರಟರೆ ನನ್ನ ಪಾಲಿಗೆ 'ಆದಿಕವಿ ವಾಲ್ಮೀಕಿ' ಮತ್ತು 'ಸುಬ್ಬಣ್ಣ' ಇವೆರಡೇ ಸಾಕು. ಕಲೆ, ತತ್ವ, ಭಾವ, ಶೈಲಿ, ಚತುರ್ಮುಖ ಸೌಂದರ್ಯವಾಗಿ ಮಾಸ್ತಿಯೆಂಬ ವ್ಯಕ್ತಿತ್ವದ ಸಾಕ್ಷಾತ್ಕಾರವನ್ನು ಲೋಕಕ್ಕೆ

ಮಾಡಿಕೊಡುವ ಧನ್ಯ ಕೃತಿಯಿದು. ಇದನ್ನು ನಮಗಿತ್ತ ಈ ಹಿರಿಯ ಲೇಖಕರಿಗೆ ಕನ್ನಡದ ದೊರೆಗೆ ನಾವು ಹೇಳುವುದಿಷ್ಟೇ:

''ವಯಂ ತತ್ವಾನ್ವೇಷಾತ್, ಮಧುಕರ, ಹತಾಃ
ತ್ವ ಖಲು ಕೃತೀ''

ಮಾಸ್ತಿಯವರ ಸಣ್ಣ ಕಥೆಗಳು

ಡಾ|| ಎಂ.ಜಿ. ಕೃಷ್ಣಮೂರ್ತಿ

ಹೊಸಗನ್ನಡ ಸಾಹಿತ್ಯದಲ್ಲಿ ಮಾಸ್ತಿಯವರ ಸಣ್ಣ ಕತೆಗಳಿಗಿರುವ ಸ್ಥಾನದ ಬಗ್ಗೆ ಬಹುಶಃ ಹೆಚ್ಚು ವಿವಾದಕ್ಕೆ ಆಸ್ಪದವಿಲ್ಲ. ಮಾಸ್ತಿಯವರು ಕನ್ನಡದಲ್ಲಿ ಸಣ್ಣ ಕತೆಗೆ ರೂಪುಕೊಟ್ಟ ಹಿರಿಯರು; ಸಣ್ಣ ಕತೆಗಳಲ್ಲಿ ಆಸಕ್ತಿಯಿರುವವರು ಅವರ ಸಣ್ಣ ಕತೆಗಳನ್ನು ತಳ್ಳಿಹಾಕುವುದಿಲ್ಲ - ಇವು ನಿರ್ವಿವಾದ ವಿಷಯಗಳು. ಆದರೆ ನಮ್ಮ ಸಾಹಿತ್ಯದಲ್ಲಿ ಚಾರಿತ್ರಿಕ ಮತ್ತು ಸಾಹಿತ್ಯಕ ಮಹತ್ವವುಳ್ಳ ಇಂತಹ ಹಿರಿಯರ ಕೃತಿಗಳ ಬಗ್ಗೆ ಮೂಲಭೂತ ಪ್ರಶ್ನೆಗಳನ್ನು ಕೇಳುವುದರ ಮೂಲಕ, ಅವರ ಕೃತಿಗಳ, ಅವರ ಸಂವೇದನಾಶೀಲತೆಯ ಬಗ್ಗೆ ನಿರ್ವಿಕಾರ ಮನೋಭಾವದಿಂದ ಯೋಚಿಸುವುದರ ಮೂಲಕ, ಸಾಹಿತಿ ಮಾಸ್ತಿಯವರಿಗೆ ನಾವು ಕೊಡುವ ಗೌರವ ಅವರು ಬರೆದದ್ದೆಲ್ಲ ಹೊನ್ನು ಎಂದು ಹೇಳಿ ಅವರನ್ನು ಗರ್ಭಗುಡಿಗೆ ನೂಕುವುದಕ್ಕಿಂತ, ನಾವು ಗೌರವಿಸುವ ಹಿರಿಯ ಸಾಹಿತಿಗಳ ಕೃತಿಗಳನ್ನು ವಿಮರ್ಶೆಯ ಆಚೆಗಿಡುವ ಮನೋಭಾವ ಬೆಳಸಿಕೊಳ್ಳುವುದಕ್ಕಿಂತ ಹೆಚ್ಚು ಮುಖ್ಯ. ಉತ್ತಮ ಸಾಹಿತ್ಯ ಕೃತಿ ಯಾವುದೇ ರೀತಿಯ ವಿಮರ್ಶೆಯಿಂದ ನಾಶವಾಗುವುದಿಲ್ಲ. ಅನೇಕ ವೇಳೆ ಆ ಕೃತಿಯ ಗುಣ ಹೆಚ್ಚು ಗಮನಕ್ಕೆ ಬರುತ್ತದೆ.

ಎರಡು ಸಂಪುಟಗಳಲ್ಲಿ ಪ್ರಕಟವಾಗಿರುವ ಮಾಸ್ತಿಯವರ ಕತೆಗಳಲ್ಲಿ ಕೆಲವು ಸಫಲವಾಗಿವೆ, ಕೆಲವು ಆಗಿಲ್ಲ. ಈ ಲೇಖನದ ಉದ್ದೇಶ ಇದಕ್ಕೆ ಕಾರಣಗಳನ್ನು ಸಾದರವಾಗಿ ಕೊಡಲು ಪ್ರಯತ್ನಿಸುವುದು, ಸಾಹಿತಿ ಮಾಸ್ತಿಯವರ ಸಂವೇದಾನಾಶೀಲತೆಯ ಇತಿಮಿತಿಗಳ ಬಗ್ಗೆ ಆಲೋಚಿಸುವುದು.

ಎಲ್ಲಕ್ಕೂ ಮೊದಲಿಗೆ ಒಂದು ಮಾತು; ಮಾಸ್ತಿಯವರ ಪ್ರಜ್ಞೆ, ಸಾಂಪ್ರದಾಯಿಕ. ನಮ್ಮ ಸಂಪ್ರದಾಯಗಳಲ್ಲಿ ಮತ್ತು ಸಂಸ್ಕೃತಿಯಲ್ಲಿ ಅವರಿಗಿರುವ ಅಗಾಧ ನಂಬಿಕೆಯನ್ನು ಅವರ ಕೃತಿಗಳಿಂದಲೇ ತಿಳಿದುಕೊಳ್ಳಬಹುದು. ಸಣ್ಣ ಕತೆ ನಮಗೆ ಹೊರಗಿನಿಂದ ಆಮದಾಗಿ ಬಂದುದಾದರೂ, ಮಾಸ್ತಿಯ ಸಫಲ ಕತೆಗಳಲ್ಲಿ ನಮಗೆ ಮೊದಲಿಗೆ ಕಾಣಬರುವುದು ಅದರ ಸಾಂಪ್ರದಾಯಿಕ ಪ್ರಜ್ಞೆಗೂ, ಅವರ ಕಥೆಗಳಿಗೂ ಇರುವ ನಿಕಟ ಸಂಬಂಧ. ಈ ಸಂಬಂಧ ಅವರು ಆಯ್ದುಕೊಂಡ ವಿಷಯಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ವಿಷಯಕ್ಕೆ ಅನುಭವಕ್ಕೆ ರೂಪುಕೊಡುವ ಸಂವೇದನೆ, ಆ ಸಂವೇದನೆಗೆ ರೂಪುಕೊಟ್ಟ ಮೌಲ್ಯಗಳು - ಇವೆಲ್ಲಕ್ಕೂ ಸಂಬಂಧ. ಮಾಸ್ತಿಯವರ ಸಾರ್ಥಕ ಕತೆಗಳ ''ಶಕ್ತಿ'' (Power) ಸಂಪ್ರದಾಯದ ''ಶಕ್ತಿ''ಯಿಂದ ಬಂದುದು. ಅದರಿಂದಲೇ ಏನೋ ಸಂಪ್ರದಾಯದ ಚೌಕಟ್ಟಿನಲ್ಲಿ ಬಗೆಹರಿಸಲಾರದ ಸಮಸ್ಯೆಗಳನ್ನು ಮತ್ತು ಅನುಭವಗಳನ್ನು ಕತೆಯ ವಿಷಯವನ್ನಾಗಿ ಮಾಡಿಕೊಂಡಾಗ ಕಥೆ ಸಫಲವಾಗುವುದಿಲ್ಲ.

ಸಣ್ಣ ಕತೆ ಹೊಸದಾದರೂ ಮಾಸ್ತಿಯವರು ಅದಕ್ಕೆ ತಂದ ದೃಷ್ಟಿ ಹೊಸದಲ್ಲ.

ವಿಷಯ ಏನೇ ಆದರೂ ಉದ್ರೇಕಗೊಳ್ಳದೆ ಕತೆ ಹೇಳುವುದು ಮಾಸ್ತಿಯವರ ವೈಯಕ್ತಿಕ ಸಂಸ್ಕೃತಿಗೆ ಮಾತ್ರ ಸಂಬಂಧಿಸಿದ್ದಲ್ಲ. ಅವರ ಮೇಲೆ ನಮ್ಮ ಪ್ರಾಚೀನ ಸಾಹಿತ್ಯ ಬೀರಿರುವ ಪ್ರಭಾವವೂ ಒಂದು ಕಾರಣವಿರಬಹುದು. ಆದರಲ್ಲೂ, ಕತೆಗೂ ನೈಜ ಜೀವನದ ಅನುಭವಗಳಿಗೂ ಮಾಸ್ತಿಯವರು ನೇರ ಸಂಬಂಧವೇರ್ಪಡಿಸದೆ ಇರುವುದರಲ್ಲಿ, ನಮ್ಮ ಪ್ರಾಚೀನ ಸಾಹಿತ್ಯದ ಪ್ರಭಾವವಿರುವುದು ಹೆಚ್ಚು ಸಾಧ್ಯ. ಕತೆ ಮತ್ತು ನೈಜ ಜೀವನದ ಅನುಭವಗಳಿಗೆ ''ದೂರ'' (distance) ವೇರ್ಪಡಿಸುವುದಕ್ಕಾಗಿ ಮಾಸ್ತಿಯವರು ಕೆಲವು ತಂತ್ರಗಳನ್ನು ಉಪಯೋಗಿಸುತ್ತಾರೆ. ಅವುಗಳಲ್ಲಿ ಮುಖ್ಯವಾದುವು : ೧) ಕತೆ ''ನಡೆದ'' ಕಾಲ ಮತ್ತು ಕತೆ ಹೇಳುವ ಕಾಲಗಳನ್ನು ದೂರವಿಡುವುದು, (೨) ಕತೆ ಹೇಳುವ ಪಾತ್ರ ಮತ್ತು ಕತೆಗಳಲ್ಲಿ ಮುಖ್ಯಪಾತ್ರ ವಹಿಸುವ ಪಾತ್ರಗಳ ಜಾತಿ, ವರ್ಗ ಮತ್ತು ವಯಸ್ಸುಗಳಲ್ಲಿರುವ ವ್ಯತ್ಯಾಸಗಳನ್ನು ಓದುಗನ ಗಮನಕ್ಕೆ ತರುವುದು (೩) ಜೀವನದಲ್ಲಿರುವ ನೋವಿನ ಗೂಢತೆಯನ್ನು (Mystery) ಒಪ್ಪಿಕೊಳ್ಳುವುದು ಮತ್ತು ಓದುಗ ಒಪ್ಪಿಕೊಳ್ಳುವಂತೆ ಮಾಡುವುದು ಮತ್ತು (೪) ದೃಷ್ಟಿಯನ್ನು ನೋವಿನ ಮೇಲೆ ಕೇಂದ್ರೀಕರಿಸದೆ, ನೋವನ್ನು ಕೊಂಚಮಟ್ಟಿಗಾದರೂ ಅರ್ಥಮಾಡಿಕೊಳ್ಳಲು ಮತ್ತು ಒಪ್ಪಿಕೊಳ್ಳಲು ಸಹಾಯ ಮಾಡುವ ಸಾಂಸ್ಕೃತಿಕ ಮೌಲ್ಯಗಳ ಮೇಲೆ ಕೇಂದ್ರೀಕರಿಸುವುದು. ಇವುಗಳಲ್ಲಿ ಮೊದಲನೆಯ ಎರಡು ತಂತ್ರಕ್ಕೆ ಸಂಬಂಧಿಸಿದುವಾದರೆ ಕೊನೆಯ ಎರಡು ಮಾಸ್ತಿಯವರ ಸಂವೇದನಾಶೀಲತೆಗೆ ಸಂಬಂಧಿಸಿದುದಾಗಿವೆ. ಅಲ್ಲದೆ, ತಂತ್ರಕ್ಕೂ ಮತ್ತು ಸಂವೇದನಾ ಶೀಲತೆಗೂ ನಿಕಟ ಸಂಬಂಧವಿದ್ದಾಗ ಮಾತ್ರ ಕತೆ ಸಫಲವಾಗುತ್ತದೆ.

ಮತ್ತೊಂದು ಮಾತು : ಮಾಸ್ತಿಯವರ ಕತೆಗಳ ವಿಷಯಗಳಿಗೂ ಈ ಶತಮಾನದ ಮೊದಲ ಮೂರು ನಾಲ್ಕು ದಶಕಗಳ ಕತೆಗಾರರಿಗೆ ಪ್ರಿಯವಾಗಿದ್ದ ''ವಸ್ತು'' (subject) ಗಳಿಗೂ ಹೆಚ್ಚು ವ್ಯತ್ಯಾಸಗಳಿಲ್ಲ. ಆ ವಸ್ತುಗಳಲ್ಲಿ ಮುಖ್ಯವಾದುವು : (1) ''ಪೂರ್ವ ಪಶ್ಚಿಮ''ಗಳ ಭೇಟಿ (East-West encounter), (2) ಸಾಮಾಜಿಕ ಅನ್ಯಾಯಗಳು ಮತ್ತು ಅವುಗಳಿಂದುಂಟಾಗುವ ನೋವು ಮತ್ತು (3) ಸಾಮಾಜಿಕ ಮತ್ತು ವೈಯಕ್ತಿಕ ಜೀವನದಲ್ಲಿ ಸುಬದ್ಧತೆಯ (order) ಸಮಸ್ಯೆ. ಆದರೆ ಬೇರೆ ಅನೇಕ ಕತೆಗಾರರು ಈ ವಿಷಯಗಳನ್ನು ಉಪಯೋಗಿಸಿಕೊಳ್ಳುವುದರಲ್ಲಿ ಇರುವ ವ್ಯತ್ಯಾಸಗಳು, ಧ್ವನಿ (tone) ಯಲ್ಲಿರುವ ವ್ಯತ್ಯಾಸಗಳು, ಮತ್ತು ಅನುಭವವನ್ನು ಕೆದಕುವ (explore) ಮತ್ತು ಅದಕ್ಕೆ ರೂಪುಕೊಡುವ ಸಂವೇದನಾಶೀಲತೆಯಲ್ಲಿರುವ ವ್ಯತ್ಯಾಸಗಳು, ಕನ್ನಡ ಸಾಹಿತ್ಯ ಮತ್ತು ಕನ್ನಡ ಸಂಸ್ಕೃತಿಯಲ್ಲಿ ಆಸಕ್ತಿಯಿರುವವರೆಲ್ಲರ ಗಮನ ಸೆಳೆಯಬೇಕಾದದ್ದು ಆವಶ್ಯಕ.

ನಮ್ಮ ಚಾರಿತ್ರಿಕ ಹಿನ್ನೆಲೆಯಿಂದಾಗಿ ''ಪೂರ್ವ-ಪಶ್ಚಿಮ''ಗಳ ಭೇಟಿಯನ್ನು ವಸ್ತುವಾಗಿ ಉಪಯೋಗಿಸಿಕೊಂಡ ಬರಹಗಾರರಲ್ಲಿ ಅನೇಕರು ಆ ಭೇಟಿಯ ರಾಜಕೀಯ ಕೋನವನ್ನೋ ಅಥವಾ ಇಂಗ್ಲಿಷ್ ಕಲಿತ ಭಾರತೀಯರು ಎದುರಿಸುವ ಸಮಸ್ಯೆಗಳನ್ನೋ ಒತ್ತಿ ಹೇಳುವುದು ಹೆಚ್ಚು. ದೃಷ್ಟಿಕೋನ ರಾಜಕೀಯವಾದಾಗ ಸಿಟ್ಟು ಮತ್ತು ಕರುಣೆ ಕತೆಯ ಮತ್ತು ಅದರ ಧ್ವನಿಯ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ. ಅಥವಾ ಕತೆಗಾರ, ಇಂಗ್ಲಿಷ್ ಕಲಿತು, ತನ್ನ ಸಮಾಜದ ಮೌಲ್ಯಗಳ ಚೌಕಟ್ಟಿನಿಂದ ದೂರವಾದ ಭಾರತೀಯನ ಸಮಸ್ಯೆಯನ್ನು ವಸ್ತುವಾಗಿ ಉಪಯೋಗಿಸಿಕೊಂಡಾಗ ಪ್ರಾಮುಖ್ಯ ದೊರಕುವುದು ಇಂತಹ ದೂರವಾದುದರ ಫಲವಾದ ಅಸಹಾಯಕತೆ ಮತ್ತೆ ಹಾನಿಗಳಿಗೆ. ಎರಡು ತರಹ ಕತೆಗಳಲ್ಲೂ

ಬರಹಗಾರನ ಮತ್ತು ಓದುಗನ ಸಮಾಜಕ್ಕಿಂತ ಹೆಚ್ಚಾಗಿ ಬರಹಗಾರನ ಅಥವಾ ಕತೆಯ ಮುಖ್ಯ ಪಾತ್ರಗಳ ಸಂವೇದನಾಶೀಲತೆಗೆ ಹೆಚ್ಚು ಪ್ರಾಮುಖ್ಯ ದೊರಕುತ್ತದೆ. ಆದ್ದರಿಂದ ಅನೇಕ ವೇಳೆ ಅನುಭವಕ್ಕೆ ಬೆಲೆಕಟ್ಟಲು ನೇರವಾಗಿಯೇ ಅಥವಾ ಹಿಂಬಾಗಿಲಿನಿಂದಲೋ ಕತೆಗಾರ ಉಪಯೋಗಿಸಿಕೊಳ್ಳುವ ಮೌಲ್ಯಗಳ ಚೌಕಟ್ಟು ಕೇವಲ ತಾತ್ವಿಕವಾಗುತ್ತದೆ. ಅಂದರೆ, ಬಹುಕಾಲದಿಂದ ಜೀವನದೊಂದಿಗೆ ಹಾಸುಹೊಕ್ಕಾಗಿ ಬೆರೆತ ಮೌಲ್ಯಗಳ ಚೌಕಟ್ಟು ಕುಸಿದುಹೋಗಿದೆ ಎಂಬ ಭಾವದಿಂದಲೋ ಅಥವಾ ಇಂದಿನ ಸನ್ನಿವೇಶದಲ್ಲಿ ಆ ಚೌಕಟ್ಟು ಅಷ್ಟು ಮುಖ್ಯವಲ್ಲ ಎಂಬ ಭಾವದಿಂದಲೋ ಕತೆಗಾರನ ನ್ಯಾಯ-ಅನ್ಯಾಯಗಳ ಕಲ್ಪನೆ ಅತಿ ತಾತ್ವಿಕವಾಗುತ್ತದೆ. ಹೀಗೆಂದಾಗ ನಮ್ಮ ಸಾಂಪ್ರದಾಯಿಕ ಬರಹಗಾರರಿಗೆ ನ್ಯಾಯಾನ್ಯಾಯಗಳ ಕಲ್ಪನೆಯೇ ಇರಲಿಲ್ಲ ಎಂದು ಅರ್ಥವಲ್ಲ. ನಮ್ಮ ಹಿಂದಿನ ಬರಹಗಾರರಾದ, ಆದರೆ ಚಾರಿತ್ರಿಕ ದೃಷ್ಟಿಯಿಂದ ಈಚಿನವರಾದ ಎಂ.ಎಸ್. ಪುಟ್ಟಣ್ಣನವರಂತಹ ಬರಹಗಾರರ ಕೃತಿಗಳಲ್ಲಿ ನ್ಯಾಯಾನ್ಯಾಯಗಳ ಕಲ್ಪನೆಗೂ, ಕೇವಲ ತಾತ್ವಿಕ ಮತ್ತು ಲೌಕಿಕವಲ್ಲದ ಧರ್ಮಕ್ಕೂ ಅತಿ ನಿಕಟ ಸಂಬಂಧವಿತ್ತು. ಈ ಧರ್ಮದ ಕಲ್ಪನೆಯ ಪ್ರಭಾವದಿಂದಾಗಿ ವೈಯುಕ್ತಿಕ ನ್ಯಾಯಾನ್ಯಾಯಗಳ ಕಲ್ಪನೆ ಒಂದು ಇಡೀ ಸಮಾಜವೇ ಒಪ್ಪಿಕೊಂಡ ನ್ಯಾಯಾನ್ಯಾಯಗಳ ಕಲ್ಪನೆಯಿಂದ ಬೇರಾಗಿ ಇರಲಿಲ್ಲ. ಆದರೆ ಧರ್ಮದ ಕಲ್ಪನೆ ಹೆಚ್ಚು ಹೆಚ್ಚು ಲೌಕಿಕವಾದಂತೆ, ಧರ್ಮಕ್ಕೂ ನ್ಯಾಯಕ್ಕೂ ಇರಬೇಕಾದ ಮುಖ್ಯ ವ್ಯತ್ಯಾಸ ಕಮ್ಮಿಯಾದಂತೆ, ಒಂದು ವಿಶಿಷ್ಟ ಸಂವೇದನಾಶೀಲತೆಗೆ ಬಾಹ್ಯರೂಪು ಕೊಡಬಲ್ಲ ಪ್ರಕಾರಗಳನ್ನು (forms) ಕಲೆಗಾರ ಹುಡುಕಲೇಬೇಕಾಯಿತು. ಬಹುಶಃ ಸಾಹಿತಿಯ ಮತ್ತು ಸಮಾಜದ ನಂಬಿಕೆಗಳ ನಡುವೆ ಬಿರುಕುಂಟಾದುದು ಇದಕ್ಕೆ ಕಾರಣವಿರಬಹುದು.

ಕಾರಣ ಏನೇ ಆದರೂ ಮಾಸ್ತಿಯವರ ಸಣ್ಣ ಕತೆಗಳಿಗೂ ಈಚಿನ ಬರಹಗಾರರ ಸಾರ್ಥಕ ಸಣ್ಣ ಕತೆಗಳಿಗೂ ಸ್ಪಷ್ಟ ವ್ಯತ್ಯಾಸಗಳಿವೆ. ಮಾಸ್ತಿಯವರ ಸಂವೇದನಾಶೀಲತೆ ಇಂದಿನ ಬರಹಗಾರರಿಗೆ ಸಿಗದ ಒಂದು ಸಾಮಾಜಿಕ ಚೌಕಟ್ಟಿನಲ್ಲಿ ಬೆಳೆದುಬಂದುದು. ೧೯೨೦ ರಿಂದ ೧೯೫೭ರ ವರೆಗೂ ಪ್ರಕಟವಾದ ಅವರ ಕತೆಗಳನ್ನು ಒಂದಾದ ಮೇಲೆ ಒಂದರಂತೆ ಓದಿದಾಗ ಈ ಶತಮಾನದ ಎರಡನೆಯ ದಶಕದಲ್ಲಿ ಮಾಸ್ತಿಯವರು ಬರೆದ ಮತ್ತು ಐದನೆಯ ದಶಕದಲ್ಲಿ ಅವರು ಬರೆದ ಕತೆಗಳು ವ್ಯಕ್ತಮಾಡುವ ಸಂವೇದನಾಶೀಲತೆ ಒಂದೇ ಎನ್ನಿಸುತ್ತದೆ. ಇದರ ಅರ್ಥ ಸಾಂಪ್ರದಾಯಿಕ ಸಾಮಾಜಿಕ ಚೌಕಟ್ಟಿನಲ್ಲಿ ಬೆಳೆದ ಮಾಸ್ತಿಯವರ ಸಂವೇದನಾಶೀಲತೆ ಸಮಾಜದ ಚೌಕಟ್ಟು ಬದಲಾದರೂ ಬದಲಾಗಲಿಲ್ಲ ಎಂದೇ? ಅವರ ಸಂವೇದನಾಶೀಲತೆಯಲ್ಲಿ ಬೆಳವಣಿಗೆಯೇ ಇಲ್ಲ ಎಂದೇ? ಅಥವಾ, ವಿಷಯ ಯಾವುದಾದರೂ ಅದನ್ನು ತಮ್ಮ ಸಂವೇದನಾಶೀಲತೆಗೆ ಒಗ್ಗುವ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಕಲೆಗಾರರು ಮಾಸ್ತಿಯವರು ಎಂದೇ?

ಈ ಪ್ರಶ್ನೆಗಳಿಗೆ ಸಾಹಿತ್ಯ ವಿಮರ್ಶೆಯೊಂದೇ ಉತ್ತರ ಕೊಡಬಲ್ಲದು. ಎಲ್ಲಕ್ಕೂ ಮೊದಲಿಗೆ ನಮ್ಮ ಗಮನ ಸೆಳೆಯುವ ಸಂಗತಿಯೆಂದರೆ ನಮ್ಮಲ್ಲಿ ''ರೊಮ್ಯಾಂಟಿಕ್'' ಸಾಹಿತ್ಯ ಬೆಳೆಯುತ್ತಿದ್ದಾಗಲೂ ಮಾಸ್ತಿಯವರು ತಮ್ಮದೇ ಬೇರೆ ರೀತಿಯ ಸಾಹಿತ್ಯ ಬೆಳೆಸುತ್ತಿದ್ದುದು. ೧೯೨೦ ಪ್ರಕಟವಾದ ಅವರ ಕೆಲವು ಸಣ್ಣ ಕಥೆಗಳು ಎಂಬ ಸಂಗ್ರಹದಲ್ಲಿರುವ ''ರಂಗನ ಮದುವೆ'', ''ರಂಗಪ್ಪನ ದೀಪಾವಳಿ'', ''ರಂಗಪ್ಪನ ಕೋರ್ಟ್‌ಶಿಪ್'', ಮತ್ತು ''ರಂಗಸಾಮಿಯ ಅವಿವೇಕ'' - ಈ ಕತೆಗಳಿಗೂ, ಹಲವು

ವರ್ಷಗಳ ನಂತರ ಬೇರೆಯವರು ಬರೆದ, ಪ್ರೇಮವನ್ನೇ ಮುಖ್ಯ ವಸ್ತುವಾಗುಳ್ಳ ಕತೆಕವನಗಳಿಗೂ ಇರುವ ವ್ಯತ್ಯಾಸ ಮಾಸ್ತಿಯವರ ಸಂವೇದನಾಶೀಲತೆಯ ಮೇಲೆ ಬೆಳಕು ಚೆಲ್ಲುತ್ತದೆ. ರೊಮ್ಯಾಂಟಿಕ್ ಬರಹಗಾರರಿಗೆ ಅನೇಕ ವೇಳೆ ಕಲೆಯೇ ಜೀವನವಾದಲ್ಲಿ, ಈ ನಾಲ್ಕು ಕತೆಗಳು ಕಲೆಗೂ ಜೀವನಕ್ಕೂ ಇರಬೇಕಾದ ಸಂಬಂಧದ ಬಗ್ಗೆ ಕೆಲವು ಪ್ರಶ್ನೆಗಳನ್ನು ಓದುಗನ ಗಮನಕ್ಕೆ ತರುತ್ತವೆ. ತಾನೇ ಮೆಚ್ಚಿ ಮದುವೆ ಮಾಡಿಕೊಳ್ಳಬೇಕು ಎಂದು ಹೇಳುವ ರಂಗನ ಬೆಳವಣಿಗೆ ''ರಂಗನ ಮದುವೆ'', ''ರಂಗಪ್ಪನ ದೀಪಾವಳಿ'', ಮತ್ತು ''ರಂಗಪ್ಪನ ಕೋರ್ಟ್‌ಶಿಪ್'' ವಿಷಯ. ಮೊದಲ ಕತೆಯಲ್ಲಿಯೇ ಕತೆ ''ನಡೆದ'' ಕಾಲಕ್ಕೂ, ಕತೆ ಹೇಳುವ ಕಾಲಕ್ಕೂ ಹತ್ತು ವರ್ಷಗಳ ಅಂತರವಿದೆ ಎಂಬ ಮಾತು ಬರುತ್ತದೆ; ''ಆಗ ನಮ್ಮ ಊರಿನಲ್ಲಿ ಇಂಗ್ಲಿಷ್ ಓದಿದವರು ಬಹುಜನ ಇರಲಿಲ್ಲ''[1] ಎಂದು ಕತೆ ಹೇಳುವವ ಹೇಳುವುದು ಹೊಸಹಳ್ಳಿಯ ಸ್ಥಿತಿಯನ್ನು ವರ್ಣಿಸುವುದರ ಜೊತೆಗೆ ರಂಗನ ಅಭಿಪ್ರಾಯಗಳಿಗೂ ಅವನವರೇ ಆದ ಹಳ್ಳಿಯ ಜನರ ಅಭಿಪ್ರಾಯಗಳಿಗೂ ಏನೇನೂ ಸಂಬಂಧವಿಲ್ಲ ಎಂಬುದನ್ನು ಸ್ಪಷ್ಟ ಪಡಿಸುತ್ತದೆ. ಸುತ್ತಿ ಸುತ್ತಿ ಕತೆ ಹೇಳುವ ರೀತಿ, ಹೇಳುವುದಕ್ಕಾಗಿ ಉಪಯೋಗಿಸಿದ ಲಘುಧ್ವನಿ ಸನ್ನಿವೇಶವನ್ನು ಸೃಷ್ಟಿಸುವುದರ ಜೊತೆಗೆ ರಂಗನ ಅಭಿಪ್ರಾಯಗಳಿಗೂ ಬೆಲೆ ಕಟ್ಟುತ್ತವೆ. ''ರಂಗನ ಮದುವೆ''ಯಲ್ಲಿ ಕತೆ ಹೇಳುವವ ರಂಗನಿಗೆ ಸಾಂಪ್ರದಾಯಿಕ ಮದುವೆ ಮಾಡಿಸುವುದರಲ್ಲಿ ಜಯಗಳಿಸುತ್ತಾನೆ. ''ರಂಗಪ್ಪನ ದೀಪಾವಳಿ''ಯಲ್ಲಿ ರಂಗ ತನ್ನ ಮಾವನ ಮನೆಗೆ ಹೋಗಿ ನೈಜ ಸನ್ನಿವೇಶಗಳನ್ನು ಎದುರಿಸುವುದರ ಮೂಲಕ ತನ್ನ ಸಾಮಾಜಿಕ ಮೌಲ್ಯಗಳಿಗೆ ಕೊಂಚ ಹತ್ತಿರ ಬರುತ್ತಾನೆ. ಮದುವೆಯ ದಿನ ''ನಾನು ಏನನ್ನು ಹೇಳುವುದು ಈ ಹುಡುಗಿಯರಿಗೆ? ನಿಮಗೆ ಮೊದಲೆ ಹೇಳಿದ್ದೆನಲ್ಲವೇ? ನಾವು ಏನಾದರೂ ಹೇಳಿದರೆ, ಅವರಿಗೆ ತಿಳಿಯುವ ಬಗೆ ಹೇಗೆ?''[2] ಎಂದಿದ್ದ ರಂಗ, ದೀಪಾವಳಿಗೆ ಮಾವನ ಮನೆಗೆ ಹೋದಾಗ ''ಬೆಳಿಗ್ಗೆ ಮನೆಗೆ ಬಂದವರು ನನ್ನ ಕೂಡ ಮಾತನಾಡುವುದಕ್ಕೆ ಈಗಲೇ ಬರುವುದು?''[3] ಎಂದು ಹೆಂಡತಿ ಕೇಳಿದಾಗ ಉತ್ತರ ಕೊಡಲಾರದೆ ಹೋಗುತ್ತಾನೆ. ಅಂದರೆ, ತನ್ನ ಹೆಂಡತಿ ಒಂದು ಕಲ್ಪನೆಯಲ್ಲ, ಒಬ್ಬ ವ್ಯಕ್ತಿ ಎಂಬುದನ್ನು ಅರಿತುಕೊಳ್ಳುತ್ತಾನೆ. ''ರಂಗಪ್ಪನ ಕೋರ್ಟ್‌ಶಿಪ್''ನಲ್ಲಿ ರಂಗಪ್ಪ ತನ್ನ ಹೆಂಡತಿಗೆ ಪ್ರೇಮ ಪತ್ರಗಳನ್ನು ಬರೆಯಲು ಕಲಿಸಿಕೊಡುವ ಪ್ರಯತ್ನದಲ್ಲಿ ವಿಫಲನಾಗುತ್ತಾನೆ. ಈ ಮೂರು ಕತೆಗಳ ವಸ್ತು ಒಂದು ದೃಷ್ಟಿಯಲ್ಲಿ ರಂಗ ತನ್ನ ಸಮಾಜಕ್ಕೆ ಹೊಂದದ ಅಭಿಪ್ರಾಯಗಳ ನಿರರ್ಥಕತೆಯನ್ನು ಮತ್ತು ಸಮಾಜದಲ್ಲಿ ಭಾವನೆಗಳನ್ನು ವ್ಯಕ್ತಪಡಿಸುವ ರೀತಿಯನ್ನು ಅರಿತುಕೊಳ್ಳುವುದು. ಅದಕ್ಕಾಗಿಯೇ ಏನೋ ಮೂರು ಕತೆಗಳನ್ನು ಹೇಳುವವನು ರಂಗನಿಗಿಂತ ಹೆಚ್ಚು ವಯಸ್ಸಾದವನು ಮತ್ತು ತಾನು ಮತ್ತು ರಂಗನಿಗಿರುವ ಸಮಾಜ ವ್ಯವಸ್ಥೆ ಸರಿಯಾದುದು ಎಂದು ನಂಬಿದವನು. ಆದ್ದರಿಂದಲೇ ರಂಗನ ಅಭಿಪ್ರಾಯಗಳು ಸಮಾಜದ ಸರಿ ಒಪ್ಪುಗಳ ಕಲ್ಪನೆಯನ್ನು ಬಿಟ್ಟು ಅಡ್ಡ ಹರಿದಂಥವು (deviations) ಎಂಬ ನಂಬಿಕೆ ಕತೆಗಳ ಬೆನ್ನು ಮೂಳೆಯಾಗಲು ಸಾಧ್ಯ.

---

1 ಕೆಲವು ಸಣ್ಣ ಕತೆಗಳು (ಬೆಂಗಳೂರು 1920) ಪುಟ 3

2 ,, ಪುಟ 17

3 ,, ಪುಟ 23

''ರಂಗಸಾಮಿಯ ಅವಿವೇಕ''ದಲ್ಲಿ ''ಅವಿವೇಕಿ'' ರಂಗಸಾಮಿ ತಾನು ಓದಿದ ಚಾರಿತ್ರಿಕ ಕಾದಂಬರಿಗಳ ಕ್ಷತ್ರಿಯ ರಮಣಿಯರಿಗೂ ತನ್ನ ಸುತ್ತಮುತ್ತಲಿರುವ ''ರಮಣಿ''ಯರಿಗೂ ಇರುವ ವ್ಯತ್ಯಾಸಗಳನ್ನು ತಿಳಿದುಕೊಳ್ಳದಿರುವುದು. ತಾನು ಓದುವ ಸಾಹಿತ್ಯಕ್ಕೂ ತನ್ನ ಸುತ್ತಮುತ್ತಲಿನ ಜೀವನಕ್ಕೂ ಇರುವ ವ್ಯತ್ಯಾಸಗಳನ್ನು ತಿಳಿಯದ ರಂಗಸಾಮಿ ತನ್ನ ಹೆಂಡತಿ ಕ್ಷತ್ರಿಯ ರಮಣಿಯರಂತಲ್ಲ ಎಂದು ಕೊರಗುವುದು ಸ್ವಾಭಾವಿಕ. ಏಕೆಂದರೆ ಅವನ ಸಂವೇದನಾಶೀಲತೆ ಕೇವಲ ಸಾಹಿತ್ಯಕ. ಇದು ನೇರ ಹೇಳಿಕೆಯಾಗಿ ಬರದೆ ರಂಗಸಾಮಿ ಇಂದಿರಾದೇವಿಯನ್ನು ನೋಡುವ ದೃಷ್ಟಿಯ ವರ್ಣನೆಯ ಮೂಲಕವಾಗಿಯೇ ಬರುತ್ತದೆ.[4] ಆ ವರ್ಣನೆಯನ್ನು ಆ ದೃಷ್ಟಿಯಿಂದ ನೋಡಿದಾಗ ಆ ವರ್ಣನೆಗಳ ಭಾಷೆಗೂ, ಕನ್ನಡ ಚಾರಿತ್ರಿಕ ಕಾದಂಬರಿಗಳ ಕ್ಷತ್ರಿಯ ರಮಣಿಯರ ವರ್ಣನೆಗಳ ಭಾಷೆಗೂ ಇರುವ ನೇರ ಸಂಬಂಧ ಅತಿ ಮಹತ್ವವುಳ್ಳದ್ದು ಎನ್ನಿಸುತ್ತದೆ. ರಂಗಸಾಮಿ ಸಂಗೀತ ಕಲಿತುಕೊಳ್ಳುವುದು, ಕೂದಲನ್ನು ಉದ್ದವಾಗಿ ಬೆಳೆಸಿಕೊಳ್ಳುವುದು, ಮೊದಲಾದ ''ಅವಿವೇಕ''ಗಳೆಲ್ಲ ಅವನ ಮೂಲ ಅವಿವೇಕಕ್ಕೆ ಸಂಬಂಧಿಸಿವೆ. ಆದರೆ ಕತೆಯ ಕೊನೆಯಲ್ಲಿ ಓದುಗನಿಗೆ ಆಗುವ ಅರಿವು ರಂಗಸಾಮಿಯ ಕಲ್ಪನೆ ತಪ್ಪು ಎನ್ನುವುದು ಮಾತ್ರವಲ್ಲ; ಕತೆ ರಂಗಸಾಮಿಯ ಕಲ್ಪನೆಗಳ ಅಪರಿಪೂರ್ಣತೆ, ಅಂದರೆ ಅವನ ''ರೊಮ್ಯಾಂಟಿಕ್'' ಕಲ್ಪನೆಗಳ ಅಪರಿಪೂರ್ಣತೆಯನ್ನು ಕೂಡ ಓದುಗನಿಗೆ ತಂದುಕೊಡುತ್ತದೆ. ಏಕೆಂದರೆ ಚಾರಿತ್ರಿಕ ಕಾದಂಬರಿಗಳನ್ನು ಓದಿದ ರಂಗಸಾಮಿ ಅಂತಹ ಕಾದಂಬರಿಗಳ ನಾಯಕಿಯರ ಸಾಧಾರಣ ಗುಣಗಳಾದ ಪಾತಿವ್ರತ್ಯ ಮತ್ತು ಸಿಟ್ಟಿಗೆ ಸಾಕಷ್ಟು ಗಮನ ಕೊಟ್ಟಿರಲಿಲ್ಲ. ಇದರಿಂದಾಗಿ ಕತೆಯ ಹಿಂದೆ ಒಬ್ಬ ವ್ಯಕ್ತಿಯ ಅವಿವೇಕವಲ್ಲದೆ, ಒಂದು ದೃಷ್ಟಿಕೋನದ ಅವಿವೇಕ, ಸಾಹಿತ್ಯಕ್ಕೂ ಜೀವನಕ್ಕೂ ಇರುವ ಸಂಬಂಧವನ್ನು ಅರಿತುಕೊಳ್ಳಲು ಬೇಕಾದ ಪೂರ್ಣದೃಷ್ಟಿ ಇವುಗಳ ಬಗೆಗೂ ಚಿಂತನೆಯಿದೆ ಎನ್ನಿಸುತ್ತದೆ.

ಈ ನಾಲ್ಕು ಸಫಲ ಕತೆಗಳನ್ನು, ಅವು ಪ್ರಕಟವಾದ ಸಂಪುಟದಲ್ಲಿ ಪ್ರಕಟವಾದ ''ಬೀದಿಯಲ್ಲಿ ಹೋಗುವ ನಾರಿ''ಯೊಂದಿಗೆ ಹೋಲಿಸಿದರೆ ಮಾಸ್ತಿಯವರ ಸಂವೇದನಾಶೀಲತೆಯ ಇತಿಮಿತಿಗಳ ಪರಿಚಯ ನಮಗಾಗುತ್ತದೆ. ಕತೆ ಸುಂದರವಾದ, ಜೊತೆಯಲ್ಲಿ ಯಾರೂ ಇಲ್ಲದೆ ಹೆಣ್ಣಿನ ಮತ್ತು ಆಕೆಯ ಹಾವಭಾವಗಳ ವರ್ಣನೆ ಮತ್ತು ಆಕೆಯನ್ನು ಸುತ್ತುವರೆಯುವ ಗಂಡುಗಳ ವರ್ತನೆಯ ವರ್ಣನೆಗಳಿಂದ ಪ್ರಾರಂಭವಾಗುತ್ತದೆ. ಈ ವರ್ಣನೆಗಳಿಂದ ಮತ್ತು ಕತೆ ಬೆಳೆದಂತೆ ಆ ಹೆಣ್ಣು ಒಬ್ಬ ಸೂಳೆ ಎಂಬ ಅರಿವು ಓದುಗನಿಗಾಗುತ್ತದೆ. ಆದರೆ ''ಎಳೆಯ ಮನಸ್ಸಿನ'' ಶ್ರೀನಿವಾಸಯ್ಯನಿಗೆ ಆ ಅರಿವು ಆಗುವುದು ಓದುಗನಿಗಾದ ಬಹಳ ಕಾಲದ ನಂತರ. ಒಂದು ದೃಷ್ಟಿಯಿಂದ ಈ ಕತೆಯ ವಸ್ತು ಒಂದು ಉತ್ತಮ ಹಾಸ್ಯಕತೆಯದು. ಆದರೆ ಶ್ರೀನಿವಾಸಯ್ಯನ ''ಎಳೆಯ ಮನಸ್ಸಿನ'' ಬಗೆಗೆ ಕತೆಗಾರರಿಗಿರುವ ಭಾವನೆ ಕತೆ ಹಾಸ್ಯಕತೆಯಾಗಿ ಬೆಳೆಯಲು ಬಿಡುವುದಿಲ್ಲ; ಕತೆ ಬಹು ಭಾವುಕ (Sentimental) ವಾಗುತ್ತದೆ. ಕತೆಯಲ್ಲಿ ಸೃಷ್ಟಿಯಾದ ಸನ್ನಿವೇಶವೆಂದರೆ ರೈಲ್ವೆ ಸ್ಟೇಷನ್ನಿನಲ್ಲಿ ನಡೆಯುವ ಸನ್ನಿವೇಶವೊಂದೇ. ಆ ದೃಶ್ಯಕ್ಕೂ ಶ್ರೀನಿವಾಸಯ್ಯನಿಗೂ ಸಂಬಂಧ ಬಹಳ ಕಡಿಮೆ. ಆದ್ದರಿಂದ ಶ್ರೀನಿವಾಸಯ್ಯನ ಸುಗುಣಕ್ಕೂ ಕತೆಯಲ್ಲಿ ಸೃಷ್ಟಿಯಾದ ಒಂದೇ

---

4 ಕೆಲವು ಸಣ್ಣ ಕತೆಗಳು (1920) ಪುಟ 98-99

ಒಂದು ಸನ್ನಿವೇಶಕ್ಕೂ ಇರಬೇಕಾದ ಸಂಬಂಧ ಇಲ್ಲವಾಗುತ್ತದೆ. ಈ ಕಾರಣದಿಂದಾಗಿ ಅವನ ಸುಗುಣದ ಕಲ್ಪನೆ ಕೂಡ ತಾತ್ವಿಕವಾಗುತ್ತದೆ.

ಈ ಕತೆಯ ಸೋಲಿಗೆ ಕಾರಣ ಮಾಸ್ತಿಯವರ ಸಂವೇದನಾಶೀಲತೆಗೆ ಈ ಕತೆಯಲ್ಲಿನ ತಾತ್ವಿಕ ಕಲ್ಪನೆಗಳಿಗೂ ಇಂದಿನ ಜೀವನದ ಬಿಡಿ ಎಳೆಗಳಿಗೂ ಸಂಬಂಧ ಕಲ್ಪಿಸುವ ಶಕ್ತಿಯಿಲ್ಲದಿರುವುದು. (ಕತೆಯ ವಿಷಯ ಹಿಂದೆ, ಪುರಾಣ ಯುಗದಲ್ಲೋ ಅಥವಾ ನೂರಾರು ವರ್ಷಗಳ ಹಿಂದೋ ''ನಡೆ''ದದ್ದಾದರೆ ಮಾತು ಬೇರೆ: ಉದಾಹರಣೆಗೆ ''ಆಚಾರ್ಯರ ಪತ್ನಿ'' ಎಂಬ ಕತೆಯನ್ನು ನೋಡಿ.) ಈ ಕಾರಣದಿಂದಲೇ ''ಮಸುಮತ್ತಿ''ಯಂತಹ ಕತೆ ಸೋಲುತ್ತದೆ. ತಮ್ಮ ಕತೆಗಳಲ್ಲಿ ಬೇರೆ ಸಮಾಜದಲ್ಲಿ ಹುಟ್ಟಿ ಬೆಳೆದ ವ್ಯಕ್ತಿಗಳಿಗೆ ಮುಖ್ಯಪಾತ್ರ ಕೊಡಲು ಮಾಸ್ತಿಯವರು ಪ್ರಯತ್ನಿಸಿದಾಗ ಕತೆಗಳು ಸೋಲುತ್ತವೆ. ''ಮಸುಮತ್ತಿ''ಯ ಮೊದಲ ಕೆಲವು ಪುಟಗಳಲ್ಲಿರುವ ''ಬಿಗಿತ''ಕ್ಕೂ ಕತೆಯ ಕೊನೆಯ ಕೆಲವು ಪುಟಗಳ ಅತಿಭಾವಕತೆಗೂ ಸಂಬಂಧವೇನು? ಎಂಬ ಪ್ರಶ್ನೆ ಮುಖ್ಯ. ಕತೆಯಲ್ಲಿ ಅತಿ ಮುಖ್ಯವಾದ ಭಾವನೆ ಮನುಷ್ಯ ಜೀವ ಪುನರ್ಜನ್ಮ ಪಡೆಯುವಂತೆಯೇ ಒಂದು ಸಂಸ್ಕೃತಿ ಕೂಡ ಪುನರ್ಜನ್ಮ ಪಡೆಯಬಹುದು ಎಂಬುದು. ಈ ಭಾವನೆಯ ಮುಖ್ಯತೆಯನ್ನು ಕತೆಗಾರರು ಮಸುಮತ್ತಿಯನ್ನು ವರ್ಣಿಸುವ ರೀತಿಯಲ್ಲಿಯೇ ಓದುಗನ ಗಮನಕ್ಕೆ ತರುತ್ತಾರೆ. ವರ್ಣನೆಯಲ್ಲಿ ನೈಜತೆ (reality) ಮತ್ತು ಪುರಾಣ (myth) ಒಂದಕ್ಕೊಂದಕ್ಕೆ ವ್ಯತ್ಯಾಸವೇ ಇಲ್ಲವೇನೋ ಎನ್ನುವಷ್ಟು ನಿಕಟವಾಗಿವೆ. ನೈಜತೆಗೂ ಪುರಾಣಕ್ಕೂ ಈ ಕತೆಯಲ್ಲಿರುವ ನಿಕಟ ಸಂಬಂಧ ಕೇವಲ ತಾತ್ವಿಕವಲ್ಲ, ಅದು ಮಸುಮತ್ತಿಯ ಜನಜೀವನದ ಮೇಲೆ ಅಗಾಧ ಪರಿಣಾಮ ಉಂಟುಮಾಡಿದೆ ಎಂಬ ಭಾವನೆ ಮುದುಕನೊಂದಿಗೆ ಕೋಟ್ನೇಸಾಹೇಬ, ಘರ್‍ಕುವರ ಮತ್ತು ಎಮಿಲಿ ಮಾತಾಡಿದಾಗ ಓದುಗನಿಗೆ ಉಂಟಾಗುತ್ತದೆ. ಆದರೆ ಕತೆ ಬೆಳೆದಂತೆ, ಎಮಿಲಿ ಕತೆಯಲ್ಲಿ ಮುಖ್ಯಪಾತ್ರ ವಹಿಸಿದಂತೆ, ಕತೆ ಅತಿ ಭಾವುಕವಾಗುತ್ತದೆ, ಕತೆಯ ಕೊನೆಯ ಮೂರು ಪುಟಗಳು ಸಹಿಸಲಾರದಷ್ಟು ಅತಿ ಭಾವುಕವಾಗುತ್ತವೆ.

ಮಸುಮತ್ತಿಯನ್ನು ವರ್ಣಿಸುವ ಭಾಗದಲ್ಲಿ, ಭಾವನೆ ಸೃಷ್ಟಿಯಾದ ಒಂದು ಸಾಮಾಜಿಕ ಮತ್ತು ಮೌಲ್ಯದ ಚೌಕಟ್ಟಿನಿಂದ ಹುಟ್ಟುತ್ತದೆ. ಆದರೆ ಎಮಿಲಿಯ ಉದಾತ್ತತೆಗೆ ದೇಹ ಕೊಡಬಲ್ಲ, ಕತೆಯಲ್ಲಿ ಸೃಷ್ಟಿಯಾದ, ಸಾಮಾಜಿಕ ಮತ್ತು ಮೌಲ್ಯದ ಚೌಕಟ್ಟಿಲ್ಲ. ಅಂದರೆ, ಮುದುಕನಿಗೂ ಅವನು ಹುಟ್ಟಿ ಬೆಳೆದ ಸಮಾಜಕ್ಕೂ ಇರುವ ಸಂಬಂಧ ಎಮಿಲಿಗೂ ಆಕೆ ಹುಟ್ಟಿ ಬೆಳೆದ ಸಮಾಜಕ್ಕೂ ಇಲ್ಲ. ಅದರಿಂದ ಎಮಿಲಿ ಕೆಲವು ಉದಾತ್ತ ಭಾವನೆಗಳ ಧ್ವನಿ (voice) ಯಾಗುತ್ತಾಳೆ ; ಒಂದು ಸಮಾಜದ ಮೌಲ್ಯಗಳಿಗೆ ಸಂಬಂಧಿಸಿದ ಉದಾತ್ತ ಭಾವನೆಗಳ ಮೂರ್ತಿಕರಣ (Symbolization) ವಾಗುವುದಿಲ್ಲ. ಇದೇ ಕತೆಯಲ್ಲಿ ಮುದುಕನಿಗೂ ಎಮಿಲಿಗೂ ಇರುವ ಮುಖ್ಯ ವ್ಯತ್ಯಾಸ. ಈ ವ್ಯತ್ಯಾಸದಿಂದಲೊ ಏನೋ, ಮುದುಕನ ಭಾಷೆಗೂ ಎಮಿಲಿಯ ಭಾಷೆಗೂ ಅಗಾಧ ವ್ಯತ್ಯಾಸವಿದೆ. ಮುದುಕನ ಭಾಷೆಯ ಬೆನ್ನ ಹಿಂದೇ ಒಂದು ಸಂಸ್ಕೃತಿಯ ಧ್ವನಿ ಕೇಳಿಸಿದರೆ, ಎಮಿಲಿಯ ಭಾಷೆ ಅತಿ ಸರಳವಾದ ಮತ್ತು ಕೇವಲ ಸಾಹಿತ್ಯಕವಾದ ಭಾವುಕ ಭಾಷೆಯಾಗುತ್ತದೆ.

ಬೇರೆ ದೇಶದ ಪಾತ್ರಗಳಿಗೆ ಕೊಂಚವಾದರೂ ಪ್ರಾಮುಖ್ಯ ಕೊಡುವ ''ಸೋರಲೀ ಪ್ರಸಂಗ'' ಕೂಡ ಈ ದೃಷ್ಟಿಯಿಂದ ಆಸಕ್ತಿ ಹುಟ್ಟಿಸುತ್ತದೆ. ತಮ್ಮ ದೇಶದಿಂದ ಭಾರತಕ್ಕೆ

ಬಂದು, ಇಲ್ಲಿ ತಮ್ಮದಲ್ಲದ ಸಂಸ್ಕೃತಿಯಲ್ಲಿ ತಮ್ಮತನ ಉಳಿಸಿಕೊಳ್ಳಲು ಪ್ಲಾಂಟರುಗಳು ಮಾಡುವ ಪ್ರಯತ್ನವೇ ಅವರನ್ನು ಒರಟಾಗಿ (coarse) ಮಾಡಿದೆ. ಆದರೆ ತನ್ನ ಜನಾಂಗದ ಗಂಡಸರು ಅನೇಕ ವರ್ಷಗಳಲ್ಲಿ ಮಾಡಲಾರದುದನ್ನು ಅರಾಬೆಲ್ಲಾ ಕೆಲವು ತಿಂಗಳುಗಳಲ್ಲಿ ಮಾಡುತ್ತಾಳೆ; ತನ್ನ ಸುತ್ತಮುತ್ತಲಿರುವ ಭಾರತೀಯರನ್ನು ಅರಿತುಕೊಳ್ಳುತ್ತಾಳೆ. ಓದುಗ ಕೇಳಬೇಕಾದ ಪ್ರಶ್ನೆ, ಜನ ಜನಾಂಗದ ಗಂಡಸರಿಗೆ ಸಾಧ್ಯವಾಗದುದು ಅರಾಬೆಲ್ಲಾಳಿಗೆ ಹೇಗೆ ಸಾಧ್ಯವಾಗುತ್ತದೆ? ಎಂಬುದು. ಅರಾಬೆಲ್ಲಾ ಗೌಡರಿಗೆ ''ನನಗೆ ಬಿಳಿಯ ಜನ ನಮ್ಮವರು, ನೀವು ಹೆರವರು ಎಂಬ ತಿಳುವಳಿಕೆಯಿಲ್ಲ. ನಾನು ಥಿಯಾಸಫಿ ಬಲ್ಲೆ. ಚಾರ್ಲಿ ಇಲ್ಲಿಗೆ ಬಂದ ಕಾಲಕ್ಕೆ ನಾನು ಇಲ್ಲಿ ಬರಬೇಕಾದೀತು ಎಂಬ ಕಾರಣದಿಂದ ನಿಮ್ಮ ದೇಶದ ರೀತಿ ತಿಳಿಯುವಂತೆ ಗ್ರಂಥಗಳನ್ನು ಓದಿಕೊಂಡೆ. ನಿಮ್ಮ ಸಂಪ್ರದಾಯವೆಂದರೆ ನನಗೆ ಗೌರವವಿದೆ. ನಾನು ಹಿಂದು ಜನರನ್ನು ಅಲ್ಲಗಳೆಯುವುದಿಲ್ಲ''[5] ಎಂದು ಹೇಳುತ್ತಾಳೆ. ಆದರೆ ಕೇವಲ ಥಿಯಾಸಫಿಯನ್ನು ತಿಳಿದುಕೊಳ್ಳುವುದರಿಂದ, ಗ್ರಂಥಗಳನ್ನು ಓದುವುದರಿಂದ, ಅವಳಿಗೆ ಬರುವಂತಹ ಅರಿವು ಬರುವುದು ಸಾಧ್ಯವೆ? ಇದಕ್ಕಿಂತಲೂ ಮುಖ್ಯವಾಗಿ ಇಂಗ್ಲೆಂಡಿನ ಗಂಡಸರು ತಿಳಿದುಕೊಳ್ಳಲಾರದುದನ್ನು ಅಲ್ಲಿನ ಹೆಂಗಸರು ತಿಳಿದುಕೊಳ್ಳುವಂತೆ ಮಾಡುವ ಶಕ್ತಿ ಯಾವುದು? ಈ ಪ್ರಶ್ನೆಗೆ ಕತೆಯಲ್ಲೇ ಉತ್ತರ ಸಿಗುವುದಿಲ್ಲ. ಬಹುಶಃ ಕೆಲವು ವಿಷಯಗಳನ್ನು ಹೆಂಗಸರು ಗಂಡಸರಿಗಿಂತ ಬೇಗ ತಿಳಿದು ಕೊಳ್ಳುತ್ತಾರೆ ಎಂಬ ತಾತ್ವಿಕ ನಂಬಿಕೆ ಇದಕ್ಕೆ ಕಾರಣವಿರಬಹುದು. ಆದರೆ ಈ ನಂಬಿಕೆಗೆ ಕತೆಯ ಅನುಭವವೇ ತಳಹದಿಯಾದ ಹೊರತು ಅದನ್ನು ಒಪ್ಪಿಕೊಳ್ಳುವುದು ಓದುಗನಿಗೆ ಸಾಧ್ಯವಿಲ್ಲ; ತಮ್ಮ ವೈಯಕ್ತಿಕ ನಂಬಿಕೆಯನ್ನು, ಆಧಾರ ಕೊಡದೆ ಕತೆಗಾರರು ಕತೆಯ ಮೇಲೆ ಹೇರಿದ್ದಾರೆ ಎಂದು ಓದುಗನಿಗೆ ಅನ್ನಿಸುತ್ತದೆ.

ಆದರೆ ಬೇರೆ ದೇಶದವ ಕೇವಲ ಕತೆ ಹೇಳುವವನಾದಾಗ ಇಂತಹ ಪ್ರಶ್ನೆಗಳು ಹುಟ್ಟುವುದಿಲ್ಲ. ಇದಕ್ಕೆ ''ಇಲ್ಲಿಯ ತೀರ್ಪು'' ಮತ್ತು ''ರಂಗನಹಳ್ಳಿಯ ರಾಮ'' ಉದಾಹರಣೆಗಳು. ಈ ಎರಡು ಕತೆಗಳನ್ನು ಹೇಳುವವನು ಕೋಟ್ನೀಸಾಹೇಬ. ಆದರೆ ಕತೆಗಳಲ್ಲಿ ಅವನದು ಮುಖ್ಯಪಾತ್ರವಲ್ಲ; ಮುಖ್ಯಪಾತ್ರ ವಹಿಸುವವರು ಹಿಂದೂ ಸಮಾಜಕ್ಕೆ ಸೇರಿದವರು. ''ಇಲ್ಲಿಯ ತೀರ್ಪು'' ಕತೆಯಲ್ಲಿ ಕೋಟ್ನೀ ಸಾಹೇಬರ ಅರಿವು ವಿಸ್ತಾರವಾದರೂ, ಆ ವಿಸ್ತರೀಕರಣ ಎಮಿಲಿಗೆ ಆದಂಥದಲ್ಲ; ಇಲ್ಲಿ ಕೊಡುವ ತೀರ್ಪಿಗೂ ದೇವರ ತೀರ್ಪಿಗೂ ವ್ಯತ್ಯಾಸವಿರಬಹುದು ಎಂಬ ಅರಿವು ಕತೆಗೆ ಹೊರೆ ಆಗದೆ, ಕತೆ ಓದುಗನಿಗೆ ತರುವ ಅನೇಕ ವಿಷಯಗಳ ಒಂದು ಅಂಶವಾಗಿ ಬರುತ್ತದೆ. ಜೊತೆಗೆ ಕತೆ ಸಂಭಾಷಣೆಯ ಮೂಲಕ ಬೆಳೆದು ಧರ್ಮಾಂತರದ ಸಮಸ್ಯೆಯ ಪದರು ಪದರುಗಳನ್ನು ಓದುಗನ ಗಮನಕ್ಕೆ ತರುವುದರಿಂದ, ಓದುಗ, ಕೂಡ ಕೋಟ್ನೀ ಸಾಹೇಬನಂತೆ ಕತೆಯ ಅನುಭವದಲ್ಲಿ ಭಾಗವಹಿಸುತ್ತಾನೆ. ಆದರೆ ''ಮಸುಮತ್ತಿ''ಯಲ್ಲಿ ಎಮಿಲಿಯ ಭಾಗ ಮುಖ್ಯವಾದಂತೆ ಓದುಗ ಕತೆಯ ಒಟ್ಟು ಅನುಭವದಿಂದ ದೂರಾಗುತ್ತಾನೆ.

''ರಂಗನಹಳ್ಳಿಯ ರಾಮ''ನಲ್ಲಿ ಘರ್ಕುವರನಿಗೆ ಒಂದು ನಿಶ್ಚಿತ ಸ್ಥಾನವಿದೆ. ಮಣ್ಣಿನಲ್ಲಿ ಮುಚ್ಚಿಹೋದ ರಾಮದೇವರ ಗುಡಿಯ ಅರಿವು ಜಾನಪದ ಕವನದ ಮೂಲಕ

---

5 ಕೆಲವು ಸಣ್ಣ ಕತೆಗಳು (ಬೆಂಗಳೂರು 1943) ಪುಟ 63

ಉಳಿದುಬಂದಿದೆ. ಆದರೆ ಆ ಜಾನಪದ ಕವನ ಹಳ್ಳಿಗರ ಮೂಢ ನಂಬಿಕೆಗಳೊಂದಿಗೆ ಹಾಸುಹೊಕ್ಕಾಗಿ ಬೆರೆತುಹೋಗಿರುವುದರಿಂದ, ಆ ಕವನದ ಸಾಂಕೇತಿಕ ಅರ್ಥ ತಿಳಿದುಕೊಳ್ಳುವುದು ರಂಗನಹಳ್ಳಿಯ ಸಮಾಜದ ಹೊರಗಿರುವ, ಆದರೆ ಆಸಕ್ತಿಯುಳ್ಳ, ಘರ್ಕುವರನಿಗೆ ಹೆಚ್ಚು ಸಾಧ್ಯ. ಸುಲ್ತಾನರ ಕಾಲದಲ್ಲಿ ರಾಮದೇವರನ್ನು ಬಚ್ಚಿಟ್ಟು ರಂಗನಾಥ ದೇವರನ್ನು ಮಾಡಿಸಿದರು ಎಂಬುದು ಗುಡಿಯ ಅರ್ಚಕನಿಗೆ ತಿಳಿದಿದ್ದರೂ ಅದನ್ನು ಬೇರೆಯವರಿಗೆ ಹೇಳಿದರೆ ರಂಗನಾಥ ದೇವರಲ್ಲಿ ಭಕ್ತಿ ಕಡಿಮೆಯಾದೀತು ಎಂಬ ಭಯದಿಂದ ಅವನು ಗುಟ್ಟನ್ನು ರಟ್ಟು ಮಾಡಲಾರ. ಜೊತೆಗೆ ರಾಮದೇವರ ಗುಡಿ ಹೂತು ಹೋಗಿರುವ ರೌರವನರಕ ಎಂಬ ಹೆದರಿಕೆ, ತಿಟ್ಟನ್ನು ಏರಲೇಬೇಕಾಗಿ ಬಂದಾಗ ಮಡಿಬಟ್ಟೆ ತಾವಾಗಿಯೇ ಅಗೆದು ದೇವರ ಗುಡಿಯನ್ನು ಕಂಡುಹಿಡಿಯುವುದು ಸಾಧ್ಯವಿಲ್ಲ ಎಂಬುದನ್ನು ತಿಳಿಸಿಕೊಡುತ್ತವೆ. ಆದ್ದರಿಂದ ಘರ್ಕುವರ ಕತೆಗೆ ಬೇಕು; ಆತ ಭಾವನೆಯೊಂದರ ಪ್ರತಿಧ್ವನಿ ಅಥವಾ ಧ್ವನಿಯಾಗದೆ ಬೌದ್ಧಿಕ (intellectural) ಮನೋಭಾವದ ಪ್ರತಿಧ್ವನಿ ಮತ್ತು ಕತೆ ಹೇಳುವವ ಮಾತ್ರ ಆಗುತ್ತಾನೆ. ಅಂದರೆ ಕತೆಯ ವಸ್ತು ಘರ್ಕುವರನ ಭಾವನೆಯನ್ನು ಅವಲಂಬಿಸಿದೆ, ರಂಗನಹಳ್ಳಿಯ ಜನರ ನಂಬಿಕೆಗಳನ್ನು ಮತ್ತು ಸಂಸ್ಕಾರಗಳನ್ನು ಅವಲಂಬಿಸುತ್ತದೆ. ಅಂತೆಯೇ ಕತೆಗೂ ಒಂದು ಸಮಾಜಕ್ಕೂ ನಿಕಟ ಸಂಬಂಧ ಇಳಿದು ಕತೆ ಸಫಲವಾಗಿದೆ.

ಮಾಸ್ತಿಯವರ ಸಫಲ ಕತೆಗಳಿಗೂ ಒಂದು ಸ್ವಯಂಪೂರ್ಣ ಸಂಸ್ಕೃತಿಗೂ ಸಂಬಂಧವಿರುವುದರಿಂದ ಇಂತಹ, ತಮ್ಮ ಅನುಭವದ ಅಂಗವಾದ ಸ್ವಯಂಪೂರ್ಣ ಸ್ಕೃಂತಿಯ ಚೌಕಟ್ಟಿನಿಲ್ಲ ಏಳುವ ಸಮಸ್ಯೆಗಳನ್ನು ಎದುರಿಸುವ ಕತೆಗಳೂ ಕೂಡ ಸಫಲವಾಗುತ್ತವೆ. ಇಲ್ಲಿ ಕೂಡ ಸನ್ನಿವೇಶಗಳನ್ನು ಇಂತಹ ಸಂಸ್ಕೃತಿಯ ಚೌಕಟ್ಟಿನಲ್ಲಿ ಅರಿತುಕೊಳ್ಳುವುದು ಸಾಧ್ಯವಾದಾಗ ಮಾತ್ರ ಕತೆಗಳು ಪೂರ್ಣವಾಗಿ ಸಫಲವಾಗುತ್ತವೆ. ಇದಕ್ಕೆ ''ಕೃಷ್ಣಮೂರ್ತಿಯ ಹೆಂಡತಿ' ಮತ್ತು ''ಮೇಲೂರಿನ ಲಕ್ಷ್ಮಮ್ಮ'' ಸ್ಪಷ್ಟ ಉದಾಹರಣೆಗಳು. ಈ ಎರಡು ಕತೆಗಳಲ್ಲೂ ಹುಚ್ಚು ಮತ್ತು ಹುಚ್ಚಿನಿಂದ ಉಂಟಾಗುವ ನೋವು ಕೇಂದ್ರಸ್ಥಾನದಲ್ಲಿವೆ. ''ಕೃಷ್ಣಮೂರ್ತಿಯ ಹೆಂಡತಿ'' ವಸ್ತು ಬ್ರಾಹ್ಮಣ ಸಮಾಜದ ಒಂದು ಮುಖ್ಯ ಸಮಸ್ಯೆಯಾದ ಬಾಲವಿಧವಾ ಸಮಸ್ಯೆ. ತನ್ನ ತಾಯಿ ಮತ್ತು ಕತೆ ಹೇಳುವವನ ಸಂಭಾಷಣೆಯನ್ನು ಅವರಿಗರಿವಿಲ್ಲದಂತೆ ಕೇಳಿದ ಹುಡುಗಿ ತನ್ನ ಗಂಡ ಸತ್ತಿದ್ದಾನೆ, ತಾಯಿ ತನ್ನಿಂದ ಆ ವಿಷಯವನ್ನು ಮುಚ್ಚಿಟ್ಟಿದ್ದಾಳೆ ಎಂದು ತಿಳಿದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಎರಡು ಸಾವುಗಳ ಹೊರೆ ಹೊತ್ತವಳು ಮಗಳ ಸಾವಿನ ಹೊರೆಯನ್ನು ಹೊರಬೇಕಾಗುತ್ತದೆ. ಕತೆಯ ಕೊನೆಯಲ್ಲಿ ಆಕೆ ನಿಜವಾಗಿಯೂ ಏಕಾಂಗಿನಿ. ಆಕೆ ಹುಟ್ಟಿ ಬೆಳೆದ ಸಮಾಜದಲ್ಲಿ ಒಬ್ಬಂಟಿ ಹೆಣ್ಣಿನ ನಿಸ್ಸಹಾಯಕತೆಯನ್ನು ನೆನಪಿನಲ್ಲಿಟ್ಟುಕೊಂಡಲ್ಲಿ, ಆಕೆಯ ಸ್ಥಿತಿಯ ಪೂರ್ಣ ಅರಿವು ನಮಗಾಗುತ್ತದೆ. ಆದರೆ ಕತೆ ಇಂತಹ ನೋವಿನ ಕಾರಣಗಳನ್ನು ಹುಡುಕಲು ಹೊರಡದೆ, ಆಕೆ ಹುಟ್ಟಿ ಬೆಳೆದ ಸಮಾಜದ ಮೇಲೆ ಓದುಗನನ್ನು ರೊಚ್ಚಿಗೆಬ್ಬಿಸದೆ, ಸತ್ತ ಹುಡುಗಿಯ ಮತ್ತು ಆಕೆಯ ತಾಯಿಯ ಬಗ್ಗೆ ಕೇವಲ ಅನುಕಂಪ ಹುಟ್ಟಿಸದೆ, ಒಬ್ಬಂಟಿ ಹೆಂಗಸು ತನ್ನ ಒಂಟಿತನವನ್ನು ಕಳೆದುಕೊಳ್ಳುವುದನ್ನು ವರ್ಣಿಸುತ್ತದೆ. ಕತೆಯ ಮುಖ್ಯ ಕಾರ್ಯ (main action) ನಡೆದ ಕೆಲವು ಗಂಟೆಗಳ ನಂತರ ನಡೆಯುವ ಕಾರ್ಯವನ್ನು ವರ್ಣಿಸುವ ಕತೆಯ ಕೊನೆಯ ಪ್ಯಾರಾ ಈ ದೃಷ್ಟಿಯಿಂದ

ಗಮನಾರ್ಹ : ''ನಮ್ಮ ಮನೆಯವರು ಇಂದು ಬಂದರು. ನನ್ನ ಲಕ್ಷ್ಮಿಯನ್ನು 'ಅಮ್ಮ ನೀನೇ ನನಗೆ ಗತಿ. ನಿನ್ನ ಗಂಡ, ಮಕ್ಕಳು, ನೀನು ಎಲ್ಲರೂ ಸುಖವಾಗಿರಿ, ತಾಯಿ. ನನಗಿನ್ನಾರೂ ಇಲ್ಲವಮ್ಮ, ನೀನೇ ನನ್ನ ಲಕ್ಷ್ಮಿ' ಎಂದರು.''

ಈ ಪ್ಯಾರಾ ನೋವಿನಿಂದಾಚೆಗೆ ನಮ್ಮನ್ನು ತೆಗೆದುಕೊಂಡು ಹೋಗುವುದಲ್ಲದೆ ಒಂದು ಹೊಸ ಸಂಬಂಧವನ್ನು ಸೃಷ್ಟಿಸುತ್ತದೆ; ಒಂದು ಸಂಸ್ಕೃತಿ ಹೇಗೆ ಸಾವುನೋವನ್ನು ಎದುರಿಸುವ, ಒಪ್ಪಿಕೊಳ್ಳುವ ಶಕ್ತಿಯನ್ನು ತಂದುಕೊಡುತ್ತದೆ ಎಂಬುದನ್ನು ಓದುಗನ ಗಮನಕ್ಕೆ ತರುತ್ತದೆ.

''ಮೇಲೂರಿನ ಲಕ್ಷಮ್ಮ''ನಲ್ಲಿ ನೋವನ್ನು ಒಪ್ಪಿಕೊಳ್ಳುವ ಶಕ್ತಿಕೊಡುವುದು ಹಿಂದೂ ಸಂಸಾರ, ಮತ್ತು ಆ ಕಲ್ಪನೆಯ ಅಂಗವಾದ ನಿಯಮಿತ ಹೊಣೆಗಾರಿಕೆಯ (limited responsibility) ಕಲ್ಪನೆ. ಕತೆ ಹೇಳುವವ ಲಕ್ಷಮ್ಮನನ್ನು ತನ್ನ ಮನೆಗೆ ಕರೆದುಕೊಂಡು ಹೋದರೂ, ಆಕೆಯನ್ನು ನೋಡಿಕೊಳ್ಳುವ ಹೊಣೆ ಆಕೆಯ ಅಣ್ಣನದು. ಆದ್ದರಿಂದಲೇ ಅಣ್ಣ ಹಳ್ಳಿಯಿಂದ ಬಂದು ತಂಗಿಯನ್ನು ಕರೆದುಕೊಂಡು ಹೋದ ಕೂಡಲೆ ಕತೆ ಹೇಳುವವನ ಹೊಣೆಗಾರಿಕೆ ಮುಗಿಯುತ್ತದೆ. ಅದರಿಂದಲೋ ಏನೋ ಕತೆ ಹೇಳುವವನಿಗೆ ನೋವಿನ ಕಾರಣ ಮತ್ತು ಹೊಣೆಗಾರಿಕೆ ಹುಡುಕದೆ ಜೀವನದಲ್ಲಿ ಇರುವ ನೋವನ್ನು ಒಪ್ಪಿಕೊಳ್ಳುವುದು ಸಾಧ್ಯವಾಗುತ್ತದೆ. ಹೊಣೆಗಾರಿಕೆಯ ಹಂತಗಳ (gradations of responsibility) ಅರಿವು ಇರುವುದರಿಂದಲೇ ಕತೆ ಹೇಳುವವ ಲಕ್ಷಮ್ಮನ ನೋವಿನೊಂದಿಗೆ ತಾದಾತ್ಮ್ಯ ಹೊಂದುವುದಿಲ್ಲ. ಕತೆ ಹೇಳುವವನ ಹೆಂಡತಿ, ಹಣೆಯ ಬರಹ ನಮ್ಮ ನಮ್ಮ ನೋವುಗಳಿಗೆ ಕಾರಣವೆಂದರೂ ಆ ಸಿದ್ಧಾಂತವನ್ನೊಪ್ಪಿಕೊಳ್ಳದೆ, ಕತೆ ಹೇಳುವವ ನೋವಿನೊಂದಿಗೆ ರಾಜಿ ಮಾಡಿಕೊಳ್ಳುತ್ತಾನೆ. ಆದರೆ ಕತೆ ಹೇಳುವವನ ಅಪನಂಬಿಕೆ (scepticism) ಕೂಡ ಅವನ ಹೆಂಡತಿಯ (''ಇವೆಲ್ಲ ವೇದಾಂತವೆಂದು ನಮ್ಮ ಮನೆಯವರ ಅಭಿಪ್ರಾಯ'') ಅಭಿಪ್ರಾಯದಿಂದಾಗಿ, ಆಕೆ ತನ್ನ ಗಂಡನ ಅಭಿಪ್ರಾಯಕ್ಕೆ ಗಮನ ಕೊಡದೆ ಹೋಗುವುದರಿಂದಾಗಿ, ಸಿದ್ಧಾಂತವಾಗದೆ ಜೀವನದಲ್ಲಿ ನೋವಿರುವುದನ್ನು ಒಪ್ಪಿಕೊಂಡವ ತನ್ನ ಒಪ್ಪಿಗೆಗೆ ಕೊಡುವ ಅಸಂಪೂರ್ಣ ಬೌದ್ಧಿಕ ಕಾರಣವಾಗಿ ಉಳಿಯುತ್ತದೆ. ಕಾರಣಕ್ಕಿಂತ ಹೆಚ್ಚಾಗಿ ನೋವಿನ ಅರಿವು, ಅದನ್ನು ಒಪ್ಪಿಕೊಳ್ಳುವುದು ಮುಖ್ಯವಾಗುತ್ತದೆ.

ನೋವಿನ ಗೂಢತೆಯನ್ನು ಒಪ್ಪಿಕೊಳ್ಳುವುದು, ಮತ್ತು ಅದಕ್ಕೆ ಸಾಂಕೇತಿಕತೆಯನ್ನು ಆರೋಪಿಸದಿರುವುದು ಸಮಾಜದ ಸರಿ ಒಪ್ಪುಗಳ ಕಲ್ಪನೆಯನ್ನು ಮೀರಿಹೋಗುವುದನ್ನೇ ವಸ್ತುವಾಗುಳ್ಳ ಕತೆಗಳ ಮೇಲೂ ಪ್ರಭಾವ ಬೀರುತ್ತದೆ. ಇದನ್ನು ''ವೆಂಕಟಶಾಮಿಯ ಪ್ರಣಯ'', ''ಚಿಕ್ಕವ್ವ'' ಇಂತಹ ಕತೆಗಳಲ್ಲಿ ನೋಡಬಹುದು. ''ವೆಂಕಟಶಾಮಿಯ ಪ್ರಣಯ'' ನಡೆಯುವ ಸಾಮಾಜಿಕ ಆವರಣದಲ್ಲಿ ಕತೆ ವೆಂಕಟಶಾಮಿಯ ಸಾವಿನಿಂದ ಕೊನೆಗೊಂಡ ಹೊರತೂ ಕತೆಯ ಧ್ವನಿಯಲ್ಲಿ ಅದು ಅರಗಿಸಿಕೊಳ್ಳಲಾರದ ಬದಲಾವಣೆಗಳಾಗದಿರಲು ಸಾಧ್ಯವಿಲ್ಲ. ಆದರೆ ಕತೆಯನ್ನು ಓದುವಾಗ ಕತೆಗಾರರು ತಾವು ನಿರ್ವಹಿಸಲಾರದ ಸಮಸ್ಯೆಯನ್ನೆತ್ತಿಕೊಂಡು, ಸಮಸ್ಯೆಗೆ ತಕ್ಕ ಉತ್ತರ ಕೊಡಲಾರದೆ ವೆಂಕಟಶಾಮಿಯನ್ನು ಸಾಯಿಸಿ ಪಾರಾಗಿದ್ದಾರೆ ಎನ್ನಿಸುವುದಿಲ್ಲ. ಕತೆಯನ್ನು ಎಷ್ಟು ಸಲ ಓದಿದರೂ ಹಾಗನ್ನಿಸುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಕತೆಯ ವಸ್ತು ವೆಂಕಟಶಾಮಿಯ ಪ್ರಣಯವಾದರೂ, ಕೇವಲ ಪ್ರಣಯವೇ ಕತೆಯಲ್ಲಿ ಮುಖ್ಯಪಾತ್ರ ವಹಿಸದೆ, ಇಬ್ಬರು

ಪ್ರಣಯಿಗಳು ಹುಟ್ಟಿ ಬೆಳೆದ ಇಡೀ ಸಾಮಾಜದ ನಂಬಿಕೆಗಳ, ಮೌಲ್ಯಗಳ, ಚೌಕಟ್ಟೂ ಮುಖ್ಯಪಾತ್ರ ವಹಿಸುತ್ತದೆ. ಇಂತಹ ಘಟನೆಗಳು ನಡೆದ ಸಾಮಾಜಿಕ ಚೌಕಟ್ಟಿನ ಪೂರ್ಣ ಅರಿವು ಕತೆ ಹೇಳುವವನಿಗೆ ಆಗುವುದು ಕತೆಯ ಮೂರನೆಯ ಭಾಗದಲ್ಲಿ. ಕತೆಯ ವಿಷಯ ಓದುಗನಲ್ಲಿ ಉಂಟುಮಾಡಬಹುದಾದ ಅತಿ ಭಾವುಕತೆಗೆ ಮೂರನೆಯ ಮತ್ತು ಕೊನೆಯ ಭಾಗ ತಡೆಗಟ್ಟುತ್ತದೆ. ಉದಾಹರಣೆಗೆ : ಕತೆ ಹೇಳುವವ ತನ್ನ ಸ್ನೇಹಿತ ರಾಮಸ್ವಾಮಿಯನ್ನು ''ಆ ದೊಂಬರ ಹುಡುಗಿ ಏನಾಯಿತು ?'' ಎಂದು ಕೇಳಿದಾಗ ರಾಮಸ್ವಾಮಿ ಹೇಳುವುದು ''....ಈಗಾಗಿದ್ದರೆ ತೋರಿಸಬಹುದಾಗಿತ್ತು; ಅಥವಾ ನನಗೆ ತೋರದೆ ಇದ್ದರೂ ನೀನು ಕತೆ ಬರೆಯುವ ದೊಡ್ಡ ಮನುಷ್ಯ, ನಿನಗೋಸ್ಕರ ವಿಚಾರಿಸಬಹುದಾಗಿತ್ತು; ಆಗ ನನಗದೆಲ್ಲಾ ಬೇಕಾಗಿರಲಿಲ್ಲ'' ಎಂದು ಕತೆ ಹೇಳುವವನ ಆಸಕ್ತಿಗೂ ಹಳ್ಳಿಯವರ ಆಸಕ್ತಿಗೂ ಇರುವ ವ್ಯತ್ಯಾಸ ಕತೆ ಹೇಳುವವ ವಯಸ್ಸಾದ ಗೌಡನ ಜೊತೆ ಮಾತಾಡಿದಾಗ ಸ್ಪಷ್ಟವಾಗುತ್ತದೆ. ಕತೆ ಹೇಳುವವ, ''ಪಾಪ ಅವನು ಬದುಕಿದ್ದರೆ ಇನ್ನೂ ಏನು ಸುಖಪಡಬಹುದಾಗಿತ್ತೋ? ಚಿಕ್ಕಂದಿನಲ್ಲೆ ಹೋದ. ನಿಮಗೆ ಯಾರು ಕೆಲಸ ಮಾಡಿದರೆ ಏನು'' ಎಂದಾಗ ಗೌಡ, ''ಅದೆಲ್ಲ ಬೆಂಗಳೂರ ಮಾತು ಸ್ವಾಮಿ. ಹಳ್ಳಿ ಜನ ಹಂಗನ್ನೋಕಾಗ್ತದೆಯೇ. ನಮ್ಮೂರಿನ ಮಿರಾಸಿಗೆ ಬೇರೆ ಊರಿನೋರು ಹಚ್ಚಡ ಹಚ್ಚೊ ಹಂಗಾಯಿತು. ನಮ್ಮ ನಾಯಿಂದನಾದ್ರೆ ಯಾಕೋ ಎನ್ನಬಹುದು. ಈ ಬೇರೆ ಊರೋರ್ನ ಮಾತ್ನಾಡ್ಸಾಕಿಲ್ಲ'' ಎನ್ನುತ್ತಾನೆ. ಕತೆಗಾರ ಅನ್ನುತ್ತಾನೆ : ನನಗೆ ವೆಂಕಟಶಾಮಿಯ ಕತೆ, ರಾಮಾಸ್ವಾಮಿಯ ಔದಾಸೀನ್ಯ, ಗೌಡನ ಗ್ರಾಮ ಪ್ರೇಮ, ಮನಸ್ಸಿನಲ್ಲಿ ಸುರಳಿಸುತ್ತಿದವು.'' ಆದರೆ ರಾಮಾಸ್ವಾಮಿಯ ''ಔದಾಸೀನ್ಯ'' ಮತ್ತು ಗೌಡನ ''ಗ್ರಾಮ ಪ್ರೇಮ''ಗಳಿಗೆ ಅವರ ಪರಿಮಿತ ಅರಿವು (limited awareness) ಕಾರಣವಲ್ಲ. ನಿಜ ವಾಗಿಯೂ ಅವು ಒಂದು ನಿಷ್ಠುರ ಜೀವನ ಕಲ್ಪನೆಯಿಂದ ಬಂದವು. ರಾಮಾಸ್ವಾಮಿಗೂ, ಗೌಡನಿಗೂ, ಕತೆ ಹೇಳುವವನಿಗೂ ಇರುವ ವ್ಯತ್ಯಾಸಗಳೇ ಅವರ ಜೀವನದ ಕಲ್ಪನೆಗಳತ್ತ ನಮ್ಮ ಗಮನ ಸೆಳೆಯುತ್ತವೆ. (''ಚಿಕ್ಕವ್ವ'' ಅತಿ ಭಾವುಕ ಕತೆಯಾಗಿರುವುದರ ಕಾರಣ ಕೂಡ ಕತೆ ''ನಡೆದ'' ಕಾಲವನ್ನು ಕತೆ ಹೇಳುವ ಕಾಲದಿಂದ ದೂರ ಮಾಡುವುದು ಮತ್ತು ಕತೆಯಲ್ಲಿ ವರ್ಣಿಸಿರುವ ದುಃಖ ಮತ್ತು ನೋವಿನ ಗೂಢತೆಯನ್ನು ಒಪ್ಪಿಕೊಳ್ಳುವ ಸಂವೇದನಾಶೀಲತೆ.)

ಭಾವನೆಗಳಿಗೂ ನೀತಿಯ ಕಟ್ಟುಗಳಿಗೂ ಹೋರಾಟ ನಡೆಯುವಂತಹ ವಸ್ತು ಮತ್ತು ಸನ್ನಿವೇಶಗಳನ್ನು ಮಾಸ್ತಿಯವರು ಆಯ್ದುಕೊಂಡಾಗಲೂ ಕೂಡ ಆ ಹೋರಾಟ ಕೇವಲ ಹೋರಾಟವಾಗಿ ಉಳಿಯದೆ, ಕತೆ ದುರಂತವಾಗದೆ, ಕೊನೆಯಾಗುವಂತೆ ಮಾಡುತ್ತಾರೆ. ಇದಕ್ಕೆ ''ಆಂಗ್ಲ ನೌಕಾ ಕ್ಯಾಪ್ಟನ್'' ಮತ್ತು ''ವೆಂಕಟಿಗನ ಹೆಂಡತಿ'' ಉದಾಹರಣೆಗಳು. ಈ ಎರಡು ಕತೆಗಳಲ್ಲಿ ''ವೆಂಕಟಿಗನ ಹೆಂಡತಿ'' ಸಫಲವಾದುದು. ಇದಕ್ಕೆ ಕಾರಣ ಮಾಸ್ತಿಯವರ ಮಿಕ್ಕ ಸಾರ್ಥಕ ಕತೆಗಳಂತೆ ಇಲ್ಲಿಯ ಒಂದು ಸಮಾಜಕ್ಕೂ ವೆಂಕಟಿಗ ಮತ್ತು ಅವನ ಹೆಂಡತಿಗೂ ಇರುವ ನಿಕಟ ಸಂಬಂಧ. ಈ ಎರಡೂ ಕತೆಗಳಲ್ಲೂ ಆಸಕ್ತಿ ಹುಟ್ಟಿಸುವ ಸಂಗತಿಯೆಂದರೆ ಗಂಡನನ್ನು ಬಿಟ್ಟು ಅಥವಾ ನೀತಿ ಕಟ್ಟಲೆಗಳನ್ನು ಮುರಿದು ಹೆಣ್ಣು, ಅಕೆಯನ್ನು ಪುನಃ ಒಪ್ಪಿ ಹಿಂತೆಗೆದುಕೊಳ್ಳುವ ಗಂಡು - ಕಥೆ ಹೇಳುವವನು ಸೇರಿದ ಬ್ರಾಹ್ಮಣ ಸಮಾಜಕ್ಕಿಂತ ಕಮ್ಮಿ ನಿಷ್ಠುರವಾದ ಸಮಾಜಕ್ಕೆ ಸೇರಿರುವುದು. ಇದರಿಂದಾಗಿ ವಸ್ತು ಮತ್ತು ಸನ್ನಿವೇಶ ಉದ್ರೇಕಕ್ಕೆ ಅವಕಾಶ

ಕೊಡುವುದಿಲ್ಲ. ಈ ಎರಡೂ ಕತೆಗಳಿಗೆ ಇರುವ ಮುಖ್ಯ ವ್ಯತ್ಯಾಸ - ಇಂಗ್ಲಿಷ್ ಕ್ಯಾಪ್ಟನ್ ಮತ್ತು ವೆಂಕಟಿಗ ತಂತಮ್ಮ ಹೆಂಡಿರನ್ನು ಹಿಂತೆಗೆದುಕೊಳ್ಳುವುದರಲ್ಲಿ ಕತೆ ಹೇಳುವವ ವಹಿಸುವ ಪಾತ್ರ - ಮಾಸ್ತಿಯವರಿಗೆ ಸಾಮಾಜಿಕ ಚೌಕಟ್ಟಿನ ಸ್ಥಾನದ ಬಗ್ಗೆ ಇರುವ ನಂಬಿಕೆಯ ಮೇಲೆ ಬೆಳಕು ಚೆಲ್ಲುತ್ತದೆ. ಇಂಗ್ಲಿಷ್ ಕ್ಯಾಪ್ಟನ್ ಮತ್ತು ಕತೆ ಹೇಳುವವನು ಹೆಚ್ಚು ಕಡಿಮೆ ಒಂದೇ ಅಂತಸ್ತಿಗೆ ಸೇರಿದವರು; ಒಬ್ಬರೊಡನೊಬ್ಬರು ಮಾತಾಡುವ ರೀತಿ ಈ ವಿಷಯವನ್ನು ಸ್ಪಷ್ಟಪಡಿಸುತ್ತದೆ. ಹೀಗಿದ್ದರೂ ಇಂಗ್ಲಿಷ್ ಕ್ಯಾಪ್ಟನ್ ತನ್ನ ಹೆಂಡತಿಯನ್ನು ಹಿಂತೆಗೆದುಕೊಳ್ಳುವುದಲ್ಲಿ ಕತೆ ಹೇಳುವವನ ಪಾತ್ರ ಮುಖ್ಯವಾಗಿದೆ. ಆದರೆ ಕತೆ ಹೇಳುವವನಿಗಿಂತ ಕೀಳು ಅಂತಸ್ತಿನಲ್ಲಿರುವ ವೆಂಕಟಿಗ ಕತೆ ಹೇಳುವವನ ಸಹಾಯವಿಲ್ಲದೆ ಹಿಂತಿರುಗಿ ಬಂದ ತನ್ನ ಹೆಂಡತಿಯನ್ನು ಒಪ್ಪಿಕೊಳ್ಳುತ್ತಾನೆ. ಬಹುಶಃ ಇದರ ಅರ್ಥ ಈ ಎರಡು ಪಾತ್ರಗಳ ಕಲ್ಪನೆಯಲ್ಲೇ ಇರಬಹುದು. ಇಂಗ್ಲಿಷ್ ಕ್ಯಾಪ್ಟನ್ ಮತ್ತು ಅವನ ಸಮಾಜಕ್ಕಿರುವ ಸಂಬಂಧಕ್ಕಿಂತ ವೆಂಕಟಿಗ ಮತ್ತು ಅವನ ಸಮಾಜಕ್ಕೆ ಹೆಚ್ಚು ಸಂಬಂಧವಿದೆ. ಎರಡು ಕತೆಗಳನ್ನೂ ಒಂದಾದ ಮೇಲೊಂದರಂತೆ ಓದಿದಾಗ ಸಮಾಜದ ಚೌಕಟ್ಟಿನೊಂದಿಗೆ ನಿಕಟ ಸಂಬಂಧ ಹೊಂದಿದಾತ ಅಂತಹ ಸಂಬಂಧವಿಲ್ಲದವನಿಗಿಂತ ಒಂದು ವಿಧದಲ್ಲಿ ಹೆಚ್ಚು ಸ್ವತಂತ್ರ ಎಂಬ ಭಾವನೆ ಕತೆಗಳ ಹಿಂದಿರಬಹುದು ಎನ್ನಿಸುತ್ತದೆ. ಅಂತಹ ಮನುಷ್ಯನಿಗೆ ತನ್ನ ಸಾಮಾಜಿಕ ಚೌಕಟ್ಟಿಗೂ ತನ್ನ ವೈಯಕ್ತಿಕ ಜೀವನಕ್ಕೂ ಇರುವ ನಿಕಟ ಸಂಬಂಧದಿಂದಾಗಿ ಬಹುಶಃ ವ್ಯಕ್ತ್ಯತೀತವಾದ ಒಂದು ಸರಿತಪ್ಪುಗಳ ಕಲ್ಪನೆಯಿರುತ್ತದೆ ಎಂಬ ಭಾವನೆ ಕತೆಗಳ ಹಿಂದಿರಬಹುದು, ಅಥವಾ ಕತೆಯ ಮೂಲಕ ಮಾಸ್ತಿಯವರು ಸ್ಥಳವಂತ (Settled) ಸಮಾಜಕ್ಕೆ ಸರ್ವಸಮ್ಮತವಾದ ಕಟ್ಟಲೆಗಳ (norms) ಅತಿರೇಕಗಳನ್ನು ಅರಗಿಸಿಕೊಳ್ಳುವ ಮತ್ತು ಆ ಅತಿರೇಕಗಳನ್ನು ಅರಗಿಸಿಕೊಂಡು ಮತ್ತೆ ಸಮತೂಕ ಸ್ಥಾಪಿಸಿಕೊಳ್ಳುವ ಶಕ್ತಿಯಿದೆ ಎಂದು ಹೇಳುತ್ತಿರಬಹುದು.

ಒಂದು ಸಮಾಜದಲ್ಲಿ ಸಮತೂಕ ಸ್ಥಾಪಿತವಾಗುವುದನ್ನೇ ವಸ್ತುವಾಗುಳ್ಳ ಮತ್ತೆ ಕೆಲವು ಕತೆಗಳನ್ನು ನೋಡಬಹುದು. ''ಬೈಚೇಗೌಡ'' ಇಂತಹ ಒಂದು ಕತೆ. ಶಾನುಭೋಗ ತನ್ನ ಹಳ್ಳಿಯವರಿಗೆ ದ್ರೋಹ ಬಗೆಯುವುದು ಮಾಸ್ತಿಯವರು ಈ ಕತೆಯಲ್ಲಿ ಚಿತ್ರಿಸುವ ಮತ್ತು ಸುಮಾರು ೨೦-೨೫ ವರ್ಷಗಳವರೆಗೂ ಅಸ್ತಿತ್ವದಲ್ಲಿದ್ದ ಸಮಾಜದಲ್ಲಿ ಬೇಲಿ ಎದ್ದು ಹೊಲ ಮೇದಂತೆ, ಅವನಿಗೆ ಸಹಾಯ ಮಾಡಲು ಹೋಗಿ ಬೈಚೇಗೌಡ ಪೇಚಿಗೆ ಸಿಕ್ಕಿಕೊಳುತ್ತಾನೆ. ಆದರೆ ಕತೆ ದುರಂತವಾಗುವುದಕ್ಕೆ ಕಾರಣ ಶಾನುಭೋಗನ ಹೆಂಡತಿಗಿರುವ, ಮತ್ತು ಅವಳು ಮತ್ತು ಬೈಚೇಗೌಡ ಸೇರಿದ ಸಮಾಜ ಒಪ್ಪುವ ಸರಿತಪ್ಪುಗಳ ಕಲ್ಪನೆ. ತನ್ನ ಕೆಲಸ ಬಿಡಲು ಸಂಕಲ್ಪಿಸಿದ ಬೈಚೇಗೌಡ ಶಾನುಭೋಗನಿಗೆ ಕೊಡುವ ಕಾರಣ ಅವನ ಸಮಾಜದ ಸರಿತಪ್ಪುಗಳ ಕಲ್ಪನೆಯ ಇತಿಮಿತಿಗಳನ್ನು ತೋರಿಸುತ್ತದೆ: ''ನೋಡಪ್ಪ, ಈಸು ದಿನ ಸತ್ಯಮಂತಾ ಇದ್ದಿನಿ. ಆ ಮೊಗ ನಿನ್ನ ನೋಡಲೀ ಅಂತ ತಪ್ಪು ಮಾಡಿದಿನಿ. . . ನಿಮ್ಮಪ್ಪ ಇದ್ದನಲ್ಲ ಆ ನನ್ನಪ್ಪ ಇಂತಾ ಮಾತಿಗೆ ಒಪ್ಪುತಿರಲಿಲ್ಲ, ಅನ್ಯಾಯ ಮಾಡಬೇಕು ಅಂತನ್ನೊ ತಾವಿನಿಂದ ಹನ್ನೆರಡು ಗಾವುದ ದೂರ ಓಡಿಹೋಗಿ ನಿಂತುಕೋ ಅನ್ನೋನು. ಹನ್ನೆರಡು ಗಾವುದ ಹೋಗಲಿಲ್ಲ, ಹನ್ನೆರಡು ಫರ್ಲಾಂಗಾದರೂ ಹೋಗತೀನಿ. ಜೇಲ್ ಕೆಲಸ ಬಿಟ್ಟೇನಿ ಅಷ್ಟೆ. ಬೆಂಗಳೂರಾಗಿ ಇರತೀನಿ. ಯಾವಾಗಲಾದರೂ ಕಾಣತೀನಿ. ನೀ ಜಾಣನಾಗಿರು.'' ಈ ಮಾತುಗಳಿಂದ ವ್ಯಕ್ತವಾಗುವುದು ಬೈಚೇಗೌಡನ ಸರಿ ತಪ್ಪುಗಳ ಕಲ್ಪನೆ ಮತ್ತು ಅಸಹಾಯಕತೆ. ಎರಡು ಕರ್ತವ್ಯಗಳಲ್ಲಿ ಯಾವುದು ಹೆಚ್ಚು ಮುಖ್ಯ ಎಂದು

ತೀರ್ಮಾನಿಸಬೇಕಾಗಿ ಬಂದಾಗ, ಅಂತಹ ತೀರ್ಮಾನ ಮಾಡಬೇಕಾಗಿ ಬರುವಂತಹ ಸನ್ನಿವೇಶದಿಂದ ದೂರ ಹೋಗಿ ''ಆಯ್ಕೆ'' (choice) ಯ ಆವಶ್ಯಕತೆಯಿಂದ ತಪ್ಪಿಸಿಕೊಳ್ಳುತ್ತಾನೆ. ಆದರೆ ಈ ''ಅಸಹಾಯಕತೆ'' ಕತೆಯ ವಸ್ತುವಾಗದೆ ಅದರ ಒಂದು ಭಾಗವಾಗಿ ಬರುವುದರಿಂದ ಕತೆ ಬೈಚೇಗೌಡನ ಸಮಾಜದ ವಿಶ್ಲೇಷಣೆಯಾಗದೆ, ಆದರೆ ಆ ಮೌಲ್ಯಗಳ ಚೌಕಟ್ಟಿನ ಇತಿಮಿತಿಗಳನ್ನು ಓದುಗನಿಂದ ಮರೆಮಾಡದೆ, ಸಫಲವಾಗುತ್ತದೆ. ಅಂದರೆ ಸಾಂಪ್ರದಾಯಿಕ ಮೌಲ್ಯಗಳ ಚೌಕಟ್ಟನ್ನು ಬಿಡಲಾರದ ಕತೆಗಾರರ ಸಂವೇದನಾಶೀಲತೆ ಇತಿಮಿತಿಗಳನ್ನೇ ಕತೆಯ ಕೇಂದ್ರವಸ್ತುವನ್ನಾಗಿ ಮಾಡಿದುದರಿಂದಾಗಿ ಕತೆ ಸಫಲವಾಗುತ್ತದೆ.

ಇದೇ ರೀತಿ ''ಜೋಗ್ಯೋರ ಅಂಜಪ್ಪನ ಕೋಳೀ ಕತೆ'' ಕೂಡ ಓದುಗನ ಲಕ್ಷ್ಯವನ್ನು ಅನ್ಯಾಯಕ್ಕಿಂತ ಸನ್ನಿವೇಶದ ಜಟಿಲತೆ (Complexity) ಯ ಮೇಲೆ ಕೇಂದ್ರೀಕರಿಸುವುದರಿಂದಾಗಿ ಸಫಲವಾಗುತ್ತದೆ. ವಿನಾಕಾರಣ ಜುಲ್ಮಾನೆ ತೆತ್ತ ಅಂಜಪ್ಪನ ಕತೆ ನ್ಯಾಯ ವಿತರಣೆಯ ಬಗ್ಗೆ ತಾತ್ವಿಕ ಪ್ರಶ್ನೆಗಳಿಗಿಂತ, ಅನ್ಯಾಯಕ್ಕಿಂತ, ಜೀವನದ ಅನುಭವ ಅಂಜಪ್ಪನಿಗೆ ತಂದುಕೊಡುವ ವಿವೇಕವನ್ನು ಹೇಳುತ್ತದೆ. ಮುಖ್ಯವಾಗಿ ಮಾಸ್ತಿಯವರ ಸಂವೇದನಾಶೀಲತೆ ಬಹುಶಃ ಅರಗಿಸಿಕೊಳ್ಳಲಾರದ ತಾತ್ವಿಕ ಪ್ರಶ್ನೆಗಳು ಕತೆಯ ಧ್ವನಿಯನ್ನು ಬದಲಾಯಿಸುವುದಿಲ್ಲ.

ಕೊನೆಯದಾಗಿ, ತಾವು ಹುಟ್ಟಿ ಬೆಳೆದ ಸಮಾಜದ ಸರಿ ತಪ್ಪುಗಳ ಕಲ್ಪನೆಯಲ್ಲಿ ಮಾಸ್ತಿಯವರಿಗಿರುವ ನಂಬಿಕೆ ಮತ್ತು ಆ ಕಲ್ಪನೆಗಳು ಉಳಿಯುವಂತಹವುಗಳು ಎಂಬ ಅವರ ನಂಬಿಕೆ ಅವರ ಸಾರ್ಥಕ ಕಥೆಗಳ ವಿಶಿಷ್ಟತೆಗೆ ಕಾರಣ. ಈ ನಂಬಿಕೆಗಳೇ ಅವರ ''ಬುದ್ಧಿಗೆ'' (Intelligence) ಒಂದು ಆವರಣವಾಗುತ್ತದೆ. ಮತ್ತೊಂದು ಮಾತು: ಪುರಾಣ ಮತ್ತು ಚರಿತ್ರೆಗಳನ್ನು ಉಪಯೋಗಿಸಿಕೊಳ್ಳುವ ಕತೆಗಳಲ್ಲಿ ಹಿಂದೂ ಪುರಾಣಗಳು, ಸ್ಥಳೀಯ ಪುರಾಣಗಳು ಮತ್ತು ಸ್ಥಳೀಯ ಚರಿತ್ರೆಗಳನ್ನು ಉಪಯೋಗಿಸಿಕೊಳ್ಳುವ ಕತೆಗಳು ಮಾತ್ರ ಸಾರ್ಥಕವಾಗಿವೆ. ಬೇರೆ ಬೇರೆ ದೇಶಗಳ ಚರಿತ್ರೆ ಮತ್ತು ಪುರಾಣಗಳನ್ನು ಉಪಯೋಗಿಸಿಕೊಂಡು ಮಾಸ್ತಿಯವರು ಬರೆದಿರುವ ಕತೆಗಳು ಕೇವಲ ನೀತಿಬೋಧಕವಾಗುವುದಕ್ಕೆ ಮತ್ತು ಅವರು ನಂಬಿರುವ ಮೌಲ್ಯಗಳ ಸರಳ ಉದಾಹರಣೆಗಳಾಗುವುದಕ್ಕೆ ಕಾರಣ, ಮೌಲ್ಯಗಳನ್ನು ಸಂವೇದನೆಯಾಗಿ ಪರಿವರ್ತಿಸಬಲ್ಲ ಸೃಷ್ಟಿತ ಆವರಣ ಇಂತಹ ಕತೆಗಳಲ್ಲಿ ಇಲ್ಲದಿರುವುದು. ಮಾಸ್ತಿಯವರ ಸರಳ ತಂತ್ರ ಅವರ ಸಂವೇದನಾಶೀಲತೆಗೂ ಮತ್ತು ಅವರು ಹುಟ್ಟಿ ಬೆಳೆದ ಸಮಾಜಕ್ಕೂ ಇರುವ ನಿಕಟ ಸಂಬಂಧದಿಂದಾಗಿ ಕತೆಗಳನ್ನು ಸರಳ ಮಾಡುವುದಿಲ್ಲ. ಮಾಸ್ತಿಯವರು ಹೊಸ ಮೌಲ್ಯಗಳ ಅನ್ವೇಷಕರಲ್ಲ; ಅವರ ಸಫಲ ಕತೆಗಳು ಅವರ ಸಮಾಜದ ಮೌಲ್ಯಗಳನ್ನು ''ನಾಟಕೀಕರಣ'' (Dramatization) ಮಾಡುವುದರ ಮೂಲಕ ಸಫಲ ಕಲಾಕೃತಿಗಳಾಗಿವೆ. ಆದರೆ ಮಾಸ್ತಿಯವರು ತಮ್ಮ ಸಫಲ ಕತೆಗಳಲ್ಲಿ ಸೃಷ್ಟಿಸುವ ಸಮಾಜ ಇಂದು ಸಫಲ ಕತೆಗಳನ್ನು ಬರೆಯುತ್ತಿರುವ ಕತೆಗಾರರು ಜೀವಿಸುತ್ತಿರುವ, ಅನುಭವಿಸುತ್ತಿರುವ, ಸಮಾಜವಲ್ಲ. ಆದರಿಂದಲೋ ಏನೋ ಇಂದಿನ ಸಮರ್ಥ ಬರಹಗಾರರ ಮೇಲೆ ಮಾಸ್ತಿಯವರ ಕತೆಗಳ ಪ್ರಭಾವ ಕಾಣಬರುವುದಿಲ್ಲ. ನಮ್ಮ ಚರಿತ್ರೆಯ ಒಂದು ಘಟ್ಟದಲ್ಲಿ ಅಸ್ತಿತ್ವದಲ್ಲಿದ್ದ ಸಾಮಾಜಿಕ ಚೌಕಟ್ಟಿಗೂ ಕತೆಗಳಲ್ಲಿ ಸೃಷ್ಟಿಯಾಗುವ ಸಾಮಾಜಿಕ

ಚೌಕಟ್ಟಿಗೂ, ಮಾಸ್ತಿಯವರ ಸಂವೇದನಾಶೀಲತೆಗೂ ಇರುವ ಅತಿ ನಿಕಟ ಸಂಬಂಧದಿಂದಾಗಿ ನಮ್ಮ ಸಂವೇದನಾಶೀಲತೆ ಬದಲಾದಂತೆ ಈ ಪ್ರಭಾವ ಕಡಿಮೆಯಾಗುವುದಲ್ಲದೆ ಹೆಚ್ಚಾಗುವುದು ಸಾಧ್ಯವಿಲ್ಲ.

ಮಾಸ್ತಿ ಕಥನ ಕಲೆ

ಯಶವಂತ ಚಿತ್ತಾಲ

ಹಿರಿಯರಾದ ಮಾಸ್ತಿಯವರು, ತಾವು ಇತ್ತೀಚೆಗೆ ಬರೆದ ಕೆಲವು ಕತೆಗಳು -೧೫ ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುವಾಗ ಆ ಪುಸ್ತಕಕ್ಕೆ ನಾನೊಂದು ಪ್ರಸ್ತಾವನೆಯನ್ನು ಬರೆಯುವುದು ಸಾಧ್ಯವೋ ಎಂದು ಕೇಳಿ ಬರೆದ ಪತ್ರವನ್ನು ಓದಿ, ಅವರಲ್ಲಿ ನನ್ನ ಬಗೆಗೆ ವ್ಯಕ್ತಗೊಂಡ ಪ್ರೀತಿ ಅಭಿಮಾನಗಳಿಗೆ ಪುಲಕಿತಗೊಂಡಿರುವೆನಾದರೂ ಪ್ರಸ್ತಾವನೆಯನ್ನು ಬರೆಯುವ ಹೊಣೆಯನ್ನು ತುಂಬ ಅಧೈರ್ಯದಿಂದಲೇ ಒಪ್ಪಿಕೊಳ್ಳುತ್ತಿದ್ದೇನೆ.

ನನ್ನ ಈವರೆಗಿನ ಬರವಣಿಗೆಯ ಹಿಂದಿನ ಬಹುದೊಡ್ಡ ಸ್ಫೂರ್ತಿಯಾದ, ಅದರ ಈಗಿನ ಆಕಾರವನ್ನು ನಿಶ್ಚಯಿಸಿದ ಆರೋಗ್ಯಕರ ಶಕ್ತಿಗಳಲ್ಲಿ ಒಂದಾದ ಈ ಹಿರಿಯರ ಕತೆಗಳನ್ನು ಕುರಿತು ನಾನು ಬರೆಯಬೇಕೆಂದುಕೊಂಡದ್ದು ಬಹಳವಿದೆಯಾದರೂ ಒಂದು ನಿರ್ದಿಷ್ಟ ಪುಸ್ತಕಕ್ಕೆ ಬರೆದ, ಆ ಪುಸ್ತಕದ ಅವಿಭಾಜ್ಯ ಅಂಗವಾಗಿ ಉಳಿಯಬಹುದಾದ ಪ್ರಸ್ತಾವನೆ ಅಂಥದಕ್ಕೆ ತಕ್ಕುದಾದ ಸ್ಥಳವೆಂದು ತೋರಲಿಲ್ಲ. ಪ್ರಸ್ತಾವನೆಯನ್ನು ಕೇವಲ ಪ್ರಸ್ತುತ ಸಂಗ್ರಹದ ಕತೆಗಳಿಗೇ ಮೀಸಲಾಗಿಸುವಂತೆಯೂ ಇಲ್ಲ; ಅವರ ಇತರ ಎಲ್ಲ ಕತೆಗಳ ಹಾಗೆಯೆ ಓದುಗನನ್ನು ನೇರವಾಗಿ ಒಳಗೆ ಬರಮಾಡಿಕೊಂಡು ತಮ್ಮ ಅಂತರ್ದರ್ಶನವನ್ನು ಸ್ಫುಟವಾಗಿ ಮಾಡಿಕೊಡುವ ಈ ಕತೆಗಳಿಗೆ ಇಂಥ ಯಾವ ಪ್ರಸ್ತಾವನೆಯ ನೆರವೂ ಬೇಕಿಲ್ಲ; ಮಾಸ್ತಿಯವರು ಬಯಸಿದ್ದು ಕೂಡ ಅದು ಇರಲಾರದು ಎಂಬ ಭರವಸೆ ನನಗಿದೆ.

ಕೆಲವು ತಿಂಗಳ ಹಿಂದೆ, ಈ ಹಿರಿಯರನ್ನು ಬೆಂಗಳೂರಿನ ಅವರ ಮನೆಯಲ್ಲೇ ಕಂಡು ಮಾತನಾಡಿಸುವ ಸುಯೋಗ ಒದಗಿ ಬಂತು. ಆಗ, ಭೇಟಿಯ ಉತ್ಸಾಹದಲ್ಲಿ, ಬಹಳ ವರ್ಷಗಳ ಹಿಂದೆ ಅವರು ನನಗೆ ಬರೆದ ಒಂದು ಪತ್ರದ ಬಗ್ಗೆ ನಾನು ಆಡಿದ ಮಾತುಗಳಿಂದ ಅವರಿಗೆ ಆದ ಸಂತೋಷ ಅಚ್ಚಳಿಯದೇ ನನ್ನ ನೆನಪಿನಲ್ಲಿ ಉಳಿದಿದೆ. ಬಹುಶಃ ಅದುವೇ ಈ ಪ್ರಸ್ತಾವನೆಯ ಬಗೆಗಿನ ಕೋರಿಕೆಗೆ ಎಡೆ ಮಾಡಿಕೊಟ್ಟಿರಬಹುದು ಎಂದೂ ನನಗೆ ಅನ್ನಿಸಿದೆ. ಅದೇನೆ ಇದ್ದರೂ ನಾನು ಅವರ ಆ ಪತ್ರದ ಸುತ್ತವೇ ಈ ಪ್ರಸ್ತಾವನೆಯನ್ನು ಬೆಳಸಬೇಕೆಂದು ನಿರ್ಧರಿಸಿದ್ದೇನೆ. ಮಾಸ್ತಿಯವರ ಸಾಹಿತ್ಯಕ ನಂಬಿಕೆಗಳ ಮೇಲೆ ಬೆಳಕು ಚೆಲ್ಲುವ ಈ ಪತ್ರ ಅವರ ಕಥನ ಕಲೆಯ ಕೆಲವು ವೈಶಿಷ್ಟ್ಯಗಳನ್ನು ಅರಿಯುವುದರಲ್ಲೂ ನೆರವಾಗಬಲ್ಲುದೆಂದು ನನಗೆ ತೋರಿದೆ. ಹೀಗೆ ಬೆಳೆಸಿದ ಈ ಪ್ರಸ್ತಾವನೆ, ಮಾಸ್ತಿಯವರ ಕಥಾ ಪರಂಪರೆಯ ಅಂತಃಸತ್ವ ಅವರಿಂದ ಬೇರೆಯಾಗಿ ಬರೆಯುವ ಲೇಖಕರ ಕತೆಗಳಲ್ಲೂ ಹರಿದು ಬರುವ ಬಗೆಯನ್ನು ಅರಿಯುವ ಕೆಲಸಕ್ಕೆ ಒಂದಾದರೂ ಹೊಸ ಒಳನೋಟವನ್ನು ಒದಗಿಸಬಹುದೆಂದೂ ಆಶಿಸುತ್ತೇನೆ.

ನನ್ನ ''ಕತೆಯಾದಳು ಹುಡುಗಿ'' ಕಥಾ ಸಂಗ್ರಹಕ್ಕೆ ಈ ವರ್ಷ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ಸಂತೋಷದಾಯಕ ಸಂದರ್ಭದಲ್ಲಿ ಕನ್ನಡ ಸಣ್ಣಕತೆಯ

ಜನಕರೆನಿಸಿಕೊಂಡ ಮಾಸ್ತಿಯವರನ್ನು ಕಂಡು ನನ್ನ ಗೌರವ, ಪ್ರೀತಿಗಳನ್ನು ಅರ್ಪಿಸುವುದು ನಾನು ಅವರ ಮನೆಗೆ ಹೋದದ್ದರ ಉದ್ದೇಶ. ನನ್ನನ್ನು ಉತ್ಸಾಹ, ಲವಲವಿಕೆ ತುಂಬಿದ ಅಕ್ಕರೆಯಿಂದ ಬರಮಾಡಿಕೊಂಡು, ಅವರು ಮಾತನಾಡಿಸಿದ ರೀತಿ ನಾನು ಮರೆಯುವಂತಹದಲ್ಲ. ನನಗೆ ಅತ್ಯಂತ ಪ್ರಿಯವಾದ ಅವರ ಕಥಾಸಾಹಿತ್ಯದ ಉದ್ದಕ್ಕೂ ಸಾಕ್ಷಾತ್ಕಾರಗೊಂಡ - ಮನುಷ್ಯನ ಬಗೆಗೆ ಪ್ರೀತಿ ಔದಾರ್ಯಗಳು ತುಂಬಿದ - ಮನಸ್ಸು ಈ ಭೇಟಿಯಲ್ಲೂ ಪ್ರಕಟಗೊಂಡಿತ್ತು. ಬೆಂಗಳೂರಿನಲ್ಲಿ ಮುನ್ನಾ ದಿನವಷ್ಟೇ ಸಾಹಿತ್ಯ ಪರಿಷತ್ತು ಏರ್ಪಡಿಸಿದ ಸತ್ಕಾರ ಸಮಾರಂಭದಲ್ಲಿ ನಾನು ಭಾಷಣ ಮಾಡುವಾಗ ಮಾಸ್ತಿಯವರು ಸುಮಾರು ಮೂರು ದಶಕಗಳ ಹಿಂದೆ ನನಗೆ ಬರೆದ ಆ ಪತ್ರದ ಕೆಲವು ಸಾಲುಗಳನ್ನು ಉದ್ಧರಿಸಿ ಅವುಗಳ ಸಂದರ್ಭವನ್ನೂ, ನನ್ನ ದೃಷ್ಟಿಯಲ್ಲಿ ಅವುಗಳಿಗಿದ್ದ ಮಹತ್ವವನ್ನು ವಿವರಿಸಿದ್ದೆ. ಅದನ್ನೆಲ್ಲ ಈಗ ಖುದ್ದು ಮಾಸ್ತಿಯವರ ಎದುರೇ ಆಡಿ ತೋರಿಸಿದಾಗ, ಅದು ಅವರ ಮೇಲೆ ಮಾಡಿದ ಪರಿಣಾಮದಿಂದ ನಾನೇ ಅವಾಕ್ಕಾದೆ. ಅವರು ಬಹಳ ಸಂತೋಷ ಪಟ್ಟರು. ''ನಿಜಕ್ಕೂ ಹಾಗೆ ಬರೆದಿದ್ದೆನೆ? ತುಂಬ ಚೆನ್ನಾಗಿದೆ,'' ಎಂದು ಮತ್ತೆ ಮತ್ತೆ ಅಂದರು.

ಆ ಸಾಲುಗಳು, ಅವುಗಳ ಸಂದರ್ಭ, ಹೀಗಿವೆ:

೧೯೫೦ರಲ್ಲಿ ನನ್ನ ಮೊಟ್ಟ ಮೊದಲಿನ ಕಥಾಸಂಗ್ರಹ 'ಸಂದರ್ಶನ' ಪ್ರಕಟವಾಯಿತು. ಅದರಲ್ಲಿಯ ಕೆಲವು ಕತೆಗಳನ್ನು ಮಾಸ್ತಿಯವರೇ ತಮ್ಮ 'ಜೀವನ' ಪತ್ರಿಕೆಯಲ್ಲಿ ಈ ಮೊದಲು ಪ್ರಕಟಿಸಿ ನನ್ನನ್ನು ಪ್ರೋತ್ಸಾಹಿಸಿದ್ದರು. 'ಸಂದರ್ಶನ'ದ ಪ್ರತಿ ಒಂದನ್ನು ಮಾಸ್ತಿಯವರಿಗೆ ಕಳುಹಿಸಿ ಅವರ ಪ್ರತಿಕ್ರಿಯೆ ತಿಳಿಯಲು ಕಾತರನಾಗಿದ್ದೆ. ಆಗ ಅವರು ಸಂಗ್ರಹವನ್ನು ಮೆಚ್ಚಿ ಬರೆದ ಪತ್ರದಲ್ಲಿಯ ಕೆಲವು ಸಾಲುಗಳು ಈಗಲೂ ನನ್ನ ಕಥಾ ಸಾಹಿತ್ಯದ ದಾರಿದೀಪವಾಗಿಯೇ ಉಳಿದಿವೆ.

'' . . . ಬರವಣಿಗೆ ನನಗೆ ಮೆಚ್ಚುಗೆಯಾಗುವ ರೀತಿಯದು. ಎಂದರೆ ಜೊತೆಯ ಜೀವದ ಜೀವನದಲ್ಲಿ ಸಹಾನುಭೂತಿಯಿಂದ ಬೆರೆತು ಅದರ ಸಂಗತಿಯನ್ನು ಬೇರೆ ಜೀವಕ್ಕೆ ತಿಳಿಸುವ ಆಸೆಯದು. ಸಾಹಿತ್ಯ ಹಲವು ರೀತಿ ಉದಿಸಬಲ್ಲುದು. ಆದರೆ ಅದು ಹೀಗೆ ಉದಯಿಸಿದಾಗ ಸಾಹಿತ್ಯವೆಂಬ ಕರ್ಮದ ಅತ್ಯುತ್ತಮ ಲಕ್ಷ್ಯವನ್ನು ಸಾಧಿಸ ಹೊರಟಿರುತ್ತದೆ ಎಂದು ನನ್ನ ತಿಳಿವಳಿಕೆ . . .''

ತಮಗಿಂತ ತುಂಬ ಕಿರಿಯನಾದ, ಸಾಹಿತ್ಯ ಕ್ಷೇತ್ರದಲ್ಲಿ ಮೊದಲ ಹೆಜ್ಜೆಗಳನ್ನು ಅದೇ ಇಡಲು ತೊಡಗಿದ್ದ, ಒಬ್ಬ ಲೇಖಕನಿಗೆ ಹುರಿದುಂಬಿಸುವ ಉದ್ದೇಶದಿಂದಲೇ ಬರೆದ ಬಹಳ ಹಳೆಯ ಪತ್ರವೊಂದರಲ್ಲಿಯ ಈ ಸಾಲುಗಳು ಸ್ವತಃ ಮಾಸ್ತಿಯವರ ಮೇಲೆಯೇ ಈಗ ಮಾಡಿದ ಪರಿಣಾಮಕ್ಕೆ ಕಾರಣವನ್ನು ಸುಲಭವಾಗಿ ಊಹಿಸಿಕೊಳ್ಳಬಲ್ಲೆವು. ಸಾಹಿತ್ಯ ಸೃಷ್ಟಿಯ ಉದ್ದೇಶವನ್ನು ಇಷ್ಟೊಂದು ಚೆನ್ನಾಗಿ, ಸಂಕ್ಷಿಪ್ತವಾಗಿ ವಿವರಿಸುವ ಈ ಸಾಲುಗಳು ಅಷ್ಟೇ ಚೆನ್ನಾಗಿ ಮಾಸ್ತಿಯವರ ಕಥಾ ಸಾಹಿತ್ಯದ ಸಿದ್ಧಿಯೊಳಗೆ ಅತಿ ಮುಖ್ಯವಾದದ್ದನ್ನೂ ಸಂಗ್ರಹಿಸಿ ಹೇಳುತ್ತವೆ. ಮಾಸ್ತಿಯವರ ಕತೆಗಳ ಉದ್ದಕ್ಕೂ ನಮ್ಮನ್ನು ಗಾಢವಾಗಿ ತಟ್ಟುವುದು ಜೊತೆಯ ಜೀವದ ಬಗೆಗಿನ ನಿತಾಂತವಾದ ಆಸ್ಥೆಯೇ. ಕಥನ ಸಾಹಿತ್ಯದ ಥಾಟಿಗೆ ಇಂಥ ಆಸ್ಥೆಯೇ ಕಾರಣವೆನ್ನಬಹುದು. ಮನುಷ್ಯನ ಬಗ್ಗೆ ಹೇಳ ಹೊರಟದ್ದೆಲ್ಲವೂ ಸಹಜವಾಗಿಯೆ ಕಥಾನಕದ ಥಾಟ ಪಡೆಯುತ್ತದೆ ಎಂದು ನಾನು ವ್ಯಕ್ತಪಡಿಸುತ್ತ ಬಂದ ಒಂದು ನಂಬಿಕೆಗೆ ಪ್ರೇರಣೆಯಾದುದು ಮಾಸ್ತಿಯವರ ಮೇಲೆ ಉಲ್ಲೇಖಿಸಿದ ಪತ್ರವೇ ಎನ್ನಬೇಕು. ಅದನ್ನು ದೃಢಪಡಿಸಿದ್ದು ಕೂಡ ಅವರ ಕತೆಗಳೇ.

ತೊಂಭತ್ತು ದಾಟಿದ ಮಾಸ್ತಿಯವರಿಗೆ ಕತೆ ಹೇಳುವ ಉತ್ಸಾಹ ಎಳ್ಳಷ್ಟೂ ಕಡಿಮೆಯಾಗಿಲ್ಲ ಎನ್ನುವುದಕ್ಕೆ ಪ್ರಸ್ತುತ ಸಂಕಲನದ ಕತೆಗಳು ಸಾಕ್ಷಿಯಾಗಿವೆ. ಕತೆಗೆ ವಸ್ತುವಾದ ಘಟನೆ ಪೌರಾಣಿಕವೇ ಆಗಿರಲಿ ಇಲ್ಲವೇ ಐತಿಹಾಸಿಕ, ಸಾಮಾಜಿಕವೇ ಆಗರಲೀ, ಕೇಂದ್ರ ಸನ್ನಿವೇಶವನ್ನು ನಿರ್ಮಿಸುವ ಕಲ್ಪನಾಶಕ್ತಿ ; ಕಥಾ ಶರೀರಕ್ಕೆ - ಪ್ರಾಣ ಸಂಚಾರಕ್ಕೆ ಆಹ್ವಾನವಾಗುವಂಥ ಆಕೃತಿ ಮೂಡಿಸುವಂತೆ ವಿವರಗಳನ್ನು ಸಂಘಟಿಸುವ ಬಲ, ತುಸುವೂ ಕುಗ್ಗಿಲ್ಲ ಎನ್ನುವುದು ಸ್ಪಷ್ಟಕಾರ್ಯದ ಇತಿಹಾಸದಲ್ಲಿಯ ಒಂದು ಅದ್ಭುತವೇ ಎನ್ನಬೇಕು. ಮಾಸ್ತಿಯವರ ಸಾಹಿತ್ಯದ ನಂಬಲಾಗದ ವಿಸ್ತಾರ ಹಾಗೂ ವೈವಿಧ್ಯಗಳಿಗೆ, ಮುಪ್ಪನ್ನರಿಯದ ಅದರ ಜೀವಂತಿಕೆಗೆ, ಕಾರಣವಾದ ಮನಸ್ಸಿನ ಚೈತನ್ಯ ನಿಜಕ್ಕೂ ಬೆರಗುಗೊಳಿಸುವಂಥದು.

ಪ್ರಸ್ತುತ ಕಥಾಸಂಗ್ರಹದ ಸಂದರ್ಭದಲ್ಲಿ ನನಗೆ ಮಹತ್ವದ್ದೆಂದು ತೋರಿದ್ದು ಸಣ್ಣಕತೆಯನ್ನು ಇಷ್ಟೊಂದು ದೀರ್ಘವಾದ ಪರಂಪರೆಯುಳ್ಳ ಸಾಹಿತ್ಯ ಪ್ರಕಾರವನ್ನಾಗಿ ರೂಪಿಸಿದ ಮಾಸ್ತಿಯವರಿಗೆ ಕತೆ ಹೇಳುವುದರ ಬಗ್ಗೆ ಇರುವ ಉತ್ಸಾಹವೇ: ಧಾರ್ಮಿಕವೆನ್ನಬಹುದಾದಷ್ಟು ಗಾಢವಾದ ಶ್ರದ್ಧೆಯ ಬಲವುಳ್ಳ ಈ ಉತ್ಸಾಹದ ಮೂಲವನ್ನು ಅರಿಯುವ ಪ್ರಯತ್ನ ನಾವು ಮಾಡಬೇಕು. ಇಂಥ ಒಂದು ಪ್ರಯತ್ನವನ್ನು ನಾವು ಮಾಸ್ತಿಯವರ ಪತ್ರದಿಂದಲೇ ಆರಂಭಿಸಬಹುದು. ಈ ಮೊದಲು ಉದ್ಧೃತವಾದ ಸಾಲುಗಳಲ್ಲಿ ಕಥನ ಸಾಹಿತ್ಯದ ಮೂರು ಮುಖ್ಯ ಅಂಶಗಳು ಅಡಕಗೊಂಡಿವೆ. ೧: ಜೊತೆಯ ಜೀವದ ಜೀವನವನ್ನು ಗ್ರಹಿಸುವ ಬಗೆ. ೨: ಅದರ ಸಂಗತಿಯನ್ನು ಬೇರೆ ಜೀವಕ್ಕೆ ತಿಳಿಸುವ ಆಸೆ ನಿಜವಾಗುವ ಕ್ರಮ. ಹಾಗೂ ೩ : ಆ 'ಬೇರೆ ಜೀವ'ವನ್ನು ಕಲ್ಪಿಸುವ ರೀತಿ. ಸೃಜನ ಶಕ್ತಿಯ ಕ್ರಿಯಾಕ್ಷೇತ್ರಗಳಾದ ಈ ಮೂರಕ್ಕೂ ವಿಮರ್ಶೆಯ ಪರಿಭಾಷೆಯಲ್ಲಿ ನಿರ್ದಿಷ್ಟ ಹೆಸರುಗಳಿವೆ. ಅವುಗಳನ್ನು ಉಪಯೋಗಿಸದೆಯೆ ಹೇಳಬೇಕೆಂದು ನನಗೆ ತೋರುವುದನ್ನು ಹೀಗೆ ಸಂಗ್ರಹಿಸಬಹುದು. ಮೇಲೆ ಉಲ್ಲೇಖಿಸಿದ ಕ್ಷೇತ್ರಗಳಲ್ಲಿ ನಡುವಿನ ಕ್ಷೇತ್ರಕ್ಕೆ ಅಂದರೆ ಜೊತೆಯ ಜೀವದ ಸಂಗತಿಯನ್ನು ಬೇರೆ ಜೀವನಕ್ಕೆ ತಿಳಿಸುವ ಆಸೆ ನಿಜವಾಗುವ ಕ್ರಮಕ್ಕೆ ಮಾತ್ರವೇ ದೀರ್ಘವಾದ ಪರಂಪರೆಯಾಗಿ ಬೆಳೆಯುವ ಸಾಧ್ಯತೆಯಿದೆ. ಮಾಸ್ತೀ-ಪರಂಪರೆಯ ಮುಖ್ಯ ಲಕ್ಷಣಗಳೆಂದು ಗುರುತಿಸಲಾಗುವ, ಪರಂಪರೆಯಲ್ಲಿ ಸೇರಿ ಮುಂದುವರಿಯಬಹುದಾದ, ಮುಖ್ಯ ಗುಣಗಳು ಈ ಕ್ಷೇತ್ರದಲ್ಲಿ ಹುಟ್ಟಿದವುಗಳೇ ಆಗಿವೆ. ತದ್ವಿರುದ್ಧವಾಗಿ, ಉಳಿದೆರಡು ಕ್ಷೇತ್ರಗಳು ಮನೋವೈಜ್ಞಾನಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಆಯಾಮ ಉಳ್ಳವುಗಳಾಗಿದ್ದು ಪರಿವರ್ತನಶೀಲವಾಗಿವೆ, ಕಾಲಕಾಲಕ್ಕೆ ಬದಲಿಸುವಂಥವುಗಳಾಗಿವೆ. ನಿರ್ದಿಷ್ಟ ಮಾನವೀಯ ಅನುಭವದ ಮೂಲಕವೇ ಕೃತಿಯಲ್ಲಿ ಆಕೃತಿ ಪಡೆಯುವ ಅವುಗಳಿಗೆ ಪರಂಪರೆಯಾಗುವದು ಸಾಧ್ಯವಲ್ಲ. ಒಂದು ನಿರ್ದಿಷ್ಟ ಪರಂಪರೆಗೆ ಸೇರಿಯೂ ಒಬ್ಬ ಲೇಖಕ ತನ್ನ ವೈಯಕ್ತಿಕ ವೈಶಿಷ್ಟ್ಯವನ್ನು ಪ್ರಕಟಿಸಲು ಶಕ್ಯವಾಗುವದು, ಅಥವಾ ಕಥನ ಕಲೆಯ ಹಲವು ಮಾರ್ಗಗಳು ಹುಟ್ಟಿಕೊಳ್ಳುವುದು ಈ ಎರಡು ತುದಿಯ ಕ್ಷೇತ್ರಗಳಲ್ಲೇ ಎನ್ನಬೇಕು. ಆದ್ದರಿಂದಲೇ, ಮಾಸ್ತಿಯವರಿಂದ ತೀರ ಬೇರೆಯಾಗಿ ಬರೆಯುವ ಲೇಖಕರ ಕತೆಗಳೂ ಕೂಡ ಉದಾಹರಣೆಗೆ, ಸಂಪೂರ್ಣವಾಗಿ ಸಮಕಾಲೀನ ವಸ್ತುವನ್ನು ಒಳಗೊಂಡು ಸಮಕಾಲೀನ ಆಶಯಗಳನ್ನು ಪ್ರಕಟಿಸುವ ಕತೆಗಳು ಕೂಡ, ಮಾಸ್ತೀ-ಪರಂಪರೆಗೆ ಹತ್ತಿರವಾಗಲು ಶಕ್ಯವಾಗುವದು ಜೊತೆಯ ಜೀವದ ಸಂಗತಿಯನ್ನು ಬೇರೆ ಜೀವಕ್ಕೆ ಹೇಳಬೇಕು, ತಿಳಿಸಬೇಕು ಎಂಬ ಆಸೆಯಲ್ಲಿ ಅವು ಹುಟ್ಟಿದಾಗ.

ಹೇಳುವ ಕ್ರಮಕ್ಕೆ ಅಂಥ ಪ್ರಭೆ ಬಂದಾಗ, 'ನಮ್ಮ'ದ ನಂತರ ಬಂದ ಹಲವು ಕತೆಗಳು, ಬಹು ಮುಖ್ಯವಾಗಿ ದೇವನೂರು ಮಹದೇವರ ಕತೆಗಳು ಇದಕ್ಕೆ ಒಳ್ಳೆಯ ಉದಾಹರಣೆಯಾಗಬಲ್ಲವು. ಇಂಥ ಕತೆಗಳಲ್ಲಿ ಮಾಸ್ತಿ ಕಥಾ ಪರಂಪರೆ ಮುಂದುವರಿಯುತ್ತಿರುವುದನ್ನು ಈಗಾಗಲೇ ವಿಮರ್ಶಕರು ಕಂಡಿದ್ದಾರೆ.

ಕತೆ ಹೀಗೆ ಉದಯಿಸಿದಾಗ ಸಾಹಿತ್ಯವೆಂಬ ಕರ್ಮದ ಅತ್ಯುತ್ತಮ ಲಕ್ಷ್ಯವನ್ನು ಸಾಧಿಸ ಹೊರಟಿರುತ್ತದೆ ಎಂಬ ತಿಳಿವಳಿಕೆ ನಮ್ಮ ಸಾಹಿತ್ಯಕ್ಕೆ ಇದ್ದಕ್ಕಿದ್ದಂತೆ ಬಂದುದಲ್ಲ. ಮಾಸ್ತಿ ಕಥಾ ಪರಂಪರೆಯು ದೀರ್ಘಕಾಲದ ಪ್ರಯತ್ನದಿಂದಾಗಿ ಫಲಿಸಿದ್ದು. ಇದನ್ನು ಅರಿಯ ಬೇಕಾದರೆ ಈ ಪರಂಪರೆಗೆ ಇರುವ ಇನ್ನೊಂದು ಪರಂಪರೆಯ ಹಿನ್ನೆಲೆಯನ್ನು ಅರಿಯಬೇಕು. ಪರಂಪರೆ ಎನ್ನುವುದರ ಒಂದು ಮುಖ್ಯ ಲಕ್ಷಣವೇ ಇದು. ಇನ್ನೊಂದು ಪರಂಪರೆಯಲ್ಲಿ ಬೇರು ಬಿಟ್ಟಿರುವುದು. ಮಾಸ್ತಿಯವರ ಕಥಾಪರಂಪರೆ ಬೇರು ಬಿಟ್ಟದ್ದು ಮಹಾಭಾರತ ರಾಮಾಯಣಗಳಂತಹ ನಮ್ಮ ಬಹು ಪ್ರಾಚೀನ ಕಥಾ ಸಾಹಿತ್ಯದಲ್ಲಿ. ಕಥೆ ಯಾಕೆ ಹೇಳಬೇಕು? ಕಥೆ ಹೇಳುವುದು ಒಂದು ಪರಂಪರೆಯಾಗಿರದಾಗ, ಅದು ಕೂಡ ಒಂದು ಒಳ್ಳೆಯ ಕೆಲಸ ಎಂಬ ಶ್ರದ್ಧೆ ಮೂಡಿರದಾಗ ಮೇಲಿನ ಪ್ರಶ್ನೆಗೆ ಉತ್ತರ ಸಾಧ್ಯವಿಲ್ಲ. ''ಅವನು ಇವನಿಗೆ ಹೇಳಿದ್ದನ್ನು ಇವನು ನನಗೆ ಹೇಳಿದ. ಅದನ್ನೇ ನಾನು ನಿಮಗೆ ಹೇಳುತ್ತಿದ್ದೇನೆ. ಅನೇಕರು ಹೀಗೆ ಹೇಳುತ್ತ ಬಂದದ್ದೇ ನಾನು ನಿಮಗೆ ಹೇಳುವುದಕ್ಕೆ ಪ್ರೇರಣೆಯಾಗಿದೆ,'' ಎನ್ನುವಂತಿರುವ ಮಾಸ್ತಿಯವರ ಕತೆ ಹೇಳುವ ಕ್ರಮದ ಒಂದು ವಿಶೇಷವನ್ನು ಹಾಗೂ ಅದರ ಮೂಲವನ್ನು ಲಕ್ಷ್ಯಕ್ಕೆ ತೆಗೆದುಕೊಂಡರೆ ನನ್ನ ಮಾತಿನ ಅರ್ಥ ಸ್ಪಷ್ಟವಾದೀತು. ಇದಕ್ಕಾಗಿ, ಈ ಪ್ರಸ್ತಾವನೆಯನ್ನು ಬರೆಯುವ ಕಾಲಕ್ಕೆ ಸುಲಭವಾಗಿ ಕೈಗೆ ಸಿಕ್ಕಿದ ಕೆಲವು ಉದ್ಧರಣಗಳನ್ನು ಕೆಳಗೆ ಕೊಡುತ್ತಿದ್ದೇನೆ.

೧. ''ಶ್ರೀ ವ್ಯಾಸ ಮಹರ್ಷಿಗಳು ತಮ್ಮ ಶಿಷ್ಯನಾದ ವೈಶಂಪಾಯನನಿಗೆ ಹೇಳಿದ ಮಹಾಭಾರತ ಕಥೆಯನ್ನು, ವೈಶಂಪಾಯನನು ಜನಮೇಜಯ ರಾಯನಿಗೆ ಅವನು ಮಾಡಿದ ಸರ್ಪಯಾಗದ ಕಾಲದಲ್ಲಿ ಹೇಳಿದನು. ಅದನ್ನು ಕೇಳಿದ್ದ ಉಗ್ರಶ್ರವನೆಂಬ ಸೂತ ಪುರಾಣಿಕನು ನೈಮಿಷಾರಣ್ಯದಲ್ಲಿ ಶೌನಕನೆಂಬ ಕುಲಪತಿಯು ನಡೆಸುತ್ತಿದ್ದ ದ್ವಾದಶವಾರ್ಷಿಕ ಯಜ್ಞಕ್ಕೆ ಹೋಗಿದ್ದಾಗ, ಅಲ್ಲಿ ಋಷಿಗಳ ಅಪೇಕ್ಷೆಯಂತೆ, ಆ ಕಥೆಯನ್ನು ಅವರಿಗೆ ಹೇಳಿದನು.'' ('ವಚನ ಭಾರತ' : ಎ.ಆರ್. ಕೃಷ್ಣಶಾಸ್ತ್ರೀ)

೨. ''ಈ ಬಾರಿ ನಾನು ಟಾಂಗಾ ಹುಸೇನ್ ಸಾಬಿ ಊರಿಗೆ ಹೋಗಿದ್ದಾಗ ಅವನು ಹಿಂದಿನ ದೊರೆಯನ್ನು ಕುರಿತು ಮಾತನಾಡುವಾಗ ಬೇರೆ ಒಬ್ಬ ದೊರೆಯ ಕತೆಯನ್ನು ಹೇಳಿದ.'' ('ಪದವಿಯ ಅಪಾಯ')

೩. ''ನಮ್ಮ ಸ್ನೇಹಿತರೊಬ್ಬರು ತಮ್ಮ ಮಗಳ ಮದುವೆಯ ವಿಷಯ ಚಿಂತಿಸುತ್ತಿದ್ದಾಗ ತಮ್ಮ ಅಜ್ಜಿ ತಮಗೆ ಹೇಳಿದ ಒಂದು ಸಂಗತಿಯನ್ನು ನನಗೆ ತಿಳಿಸಿದರು.'' ('ಬಾಳಿನ ಚೌಕಾಬಾರ')

೪. ''ಕಳೆದ ವಾರ ನಾನು ಪುರೋಹಿತನೊಂದಿಗೆ ಶ್ರೀರಾಮ್ ಮನೆಗೆ ಹೋಗಿದ್ದೆವು . . ಶ್ರೀರಾಮ್ ತಮಗೆ ತಿಳಿದ ಒಬ್ಬ ದೊಡ್ಡ ಮನುಷ್ಯರಿಂದ ತಾವು ಕೇಳಿದ ಒಂದು ಸಂಗತಿಯನ್ನು ನಮಗೆ ಹೇಳಿದರು.'' ('ಚಿಕ್ಕವ್ವ')

೫. ಪ್ರಸ್ತುತ ಸಂಗ್ರಹದಿಂದ : ''ನನ್ನ ಪರಿಚಯದ ಸೌದೆ ಅಂಗಡಿ ಸುಬ್ಬಯ್ಯನವರು ತಮ್ಮ ಅನುಭವಕ್ಕೆ ಬಂದದ್ದು ಅಂತ ಹೇಳಿದ ಒಂದು ಸಂಗತಿ ಇದು.'' ('ಪಕ್ಷಿ ಜಾತಿ')

ಇಲ್ಲಿಯ ಮೊದಲನೆಯ ಅವತರಣಿಕೆ 'ವಚನ ಭಾರತ'ದಿಂದ ಎತ್ತಿಕೊಂಡದ್ದಾದರೆ, ಉಳಿದವುಗಳು ಮಾಸ್ತಿಯವರ ಕತೆಗಳಿಂದ ಎತ್ತಿಕೊಂಡವುಗಳು. ಕೊನೆಯದು ಅವರ ಪ್ರಸ್ತುತ ಸಂಗ್ರಹಕ್ಕೆ ಸೇರಿದ್ದು.

ಈ ಅವತರಣಿಕೆಗಳನ್ನು ಕೊಟ್ಟದ್ದು ಅವರ ಕತೆಗಳು ಆರಂಭವಾಗುವ ರೀತಿಯನ್ನು ಮಹಾಭಾರತದೊಡನೆ ಹೋಲಿಸುವುದಕ್ಕಾಗಿ ಮಾತ್ರ ಅಲ್ಲ. ಪ್ರತಿಯೊಬ್ಬ ಲೇಖಕನೂ ಎದುರಿಸಲೇ ಬೇಕಾದ, ಸ್ಪಷ್ಟವಾಗಿ ಕೇಳಿಕೊಂಡಿರದಿದ್ದರೂ ಬರೆಯುವ ಸನ್ನಿವೇಶದಲ್ಲೇ ಗರ್ಭಿತವಿದ್ದ, ''ನಾನಿದನ್ನು ಯಾಕೆ ಹೇಳುತ್ತಿದ್ದೇನೆ? ಯಾರಿಗಾಗಿ ಹೇಳುತ್ತಿದ್ದೇನೆ?'' ಎಂಬ ಪ್ರಶ್ನೆಗಳನ್ನು ಸಣ್ಣ ಕತೆಯ ಜನಕರಾದ ಮಾಸ್ತಿಯವರೇ ಹೇಗೆ ಬಿಡಿಸಿಕೊಂಡರು, ಬಿಡಿಸಕೊಂಡ ರೀತಿಯಿಂದಾಗಿ ಕನ್ನಡ ಕತೆಗೆ ಅವರು ತಂದುಕೊಟ್ಟ ಶಕ್ತಿಯ ಸ್ವರೂಪವೇನು, ಎನ್ನುವುದನ್ನು ಅರಿತುಕೊಳ್ಳುವುದಕ್ಕೂ ಆಗಿದೆ. ಮಹಾಭಾರತ, ರಾಮಾಯಣದಂಥ ಕತೆಗಳನ್ನು ಹೇಳುವುದು, ಕೇಳುವುದು ಒಂದು 'ಪುಣ್ಯದ' ಕೆಲಸ, ಋಷಿಗಳು ಕೂಡ ಅದನ್ನು ಕೇಳಲು ಅಪೇಕ್ಷಿಸುತ್ತಿದ್ದರು, ಎನ್ನುವಂಥ ಶ್ರದ್ಧೆಗೆ ಸಂವಾದಿಯಾಗಿ, ನಮ್ಮ ಜೊತೆಯ ಜೀವದ ಬಗ್ಗೆ ಬೇರೆ ಜೀವಕ್ಕೆ ಹೇಳುವ ಕೆಲಸ ಕೂಡ ಅಷ್ಟೇ ಒಳ್ಳೆಯದು-ಎಂಬ ಶ್ರದ್ಧೆಯನ್ನು, ಅಂಥ ಪ್ರಭೆಯುಳ್ಳ ಉತ್ಸಾಹವನ್ನು ಹುಟ್ಟಿಸಿದ್ದು ಮಾಸ್ತಿ ಕಥಾಪಂರಂಪರೆಯ ಅತಿ ಮುಖ್ಯ ಸಾಧನೆಯೆಂದು ನನ್ನ ತಿಳಿವಳಿಕೆ. ಮಹಾಭಾರತದ ಕಥೆ ನಮ್ಮವರೆಗೆ ಹರಿದು ಬರಲು ಕಾರಣರಾದವರಲ್ಲಿ ವೈಶಂಪಾಯನ, ಜನಮೇಜಯ, ಉಗ್ರಶ್ರವರಂಥವರಿದ್ದರೆ, ಮಾಸ್ತೀ-ಕತೆಯನ್ನು ನಮಗೆ ತಂದು ಮುಟ್ಟಿಸಿದವರಲ್ಲಿ ಟಾಂಗಾ ಹುಸೇನ್‌ಸಾಬಿ, ಸೌದೆ ಅಂಗಡಿ ಸುಬ್ಬಯ್ಯನವರಂತಹರೂ ಇದ್ದಾರೆ ಎನ್ನುವುದರ ಮಹತ್ವವನ್ನು ಒತ್ತಿಹೇಳುವ ಗರಜಿಲ್ಲವೇನೋ.

ಮಾಸ್ತೀ-ಕಥೆಯ ಶೈಲಿಯೊಡನೆ ಸಹಜವಾಗಿ ಜೊತೆಯಾಗುವ ನೇರ, ಸಹಜ, ಸರಳ ಇಲ್ಲವೆ ಅನುದ್ರಿಕ್ತ, ನಯ, ವಿನಯ ಮೊದಲಾದ ಗುಣಗಳ ಮೂಲವನ್ನೂ ಈಗ ತಿಳಿಯುವುದು ಸುಲಭವಾಗಬಹುದು. ಮಾಸ್ತೀಕಥೆ ಯಾವಾಗಲೂ ಮತ್ತೊಬ್ಬನಿಂದ 'ನನ್ನ'ವರೆಗೆ ಬಂದು ನನ್ನಿಂದ ಮತ್ತೆ ಇನ್ನೊಬ್ಬನಿಗೆ ಮುಟ್ಟುವ ಕಡೆಗೇ ಮುಖ ಮಾಡಿರುತ್ತದೆ. ನಮ್ಮ ಮಾತುಗಳು, ವಿಚಾರಗಳು ನಾವು ನಮ್ಮಷ್ಟಕ್ಕೇ ಆಡಿಕೊಂಡಾಗ, ಮಾಡಿಕೊಂಡಾಗ ಮೂಡುವ ಆಕೃತಿಗೂ, ಇನ್ನೊಬ್ಬರ ಸಮಕ್ಷಮ ವ್ಯಕ್ತಪಡಿಸಿದಾಗ ಮೂಡುವ ಆಕೃತಿಗೂ ಇರುವ ಅಂತರವನ್ನು ನಾವು ಸುಲಭವಾಗಿ ಗ್ರಹಿಸಬಲ್ಲೆವು. ಈ ಮಾತು ಕೇವಲ ವೈಯಕ್ತಿಕ ಪ್ರಾಮಾಣಿಕತೆಗೆ ಸಂಬಂಧಪಟ್ಟದ್ದಲ್ಲ; ವಾಸ್ತವದ ಗ್ರಹಿಕೆಗೆ 'ಇನ್ನೊಬ್ಬ'ನಿಂದಾಗಿ ಬರುವ ಆರೋಗ್ಯದ ಕಳೆಗೆ ಸಂಬಂಧಿಸಿದ್ದು. ಇದರ ಮಹತ್ವವನ್ನು ನಾವು, 'ನವ್ಯ'ದ ಮುಂದಿನ ಹಂತಕ್ಕೆ ಬೆಳೆಯುವ ಪ್ರಯತ್ನ ಮಾಡಿದ ಕತೆಗಳ ಅಭ್ಯಾಸದಿಂದ ತಿಳಿಯಬಹುದು.

ನಾವು 'ನವ್ಯ'ಕ್ಕೆ ಬರುವ ಹೊತ್ತಿಗೆ ಕತೆ 'ಹೇಳು'ವ ಕಾಲ ಮುಗಿದಿತ್ತು. ಹೇಳುವುದನ್ನು ಬಿಟ್ಟು ನಾವು ಕತೆಯನ್ನು 'ಬರೆ'ಯ ತೊಡಗಿದ್ದೆವು. ಕತೆಗೆ ಪ್ರೇರಣೆಯಾಗಬೇಕಾದ 'ಜೊತೆಯ ಜೀವ,' ಹಾಗೂ ತಿಳಿಸಿಕೊಳ್ಳಬೇಕಾದ 'ಬೇರೆ ಜೀವ' ಎರಡೂ ಮಾಯವಾಗಿ, ಕತೆಗಳಲ್ಲಿ ನಾವೇ ತುಂಬಿಕೊಂಡಿದ್ದೆವು! ಆಗ ಹೊಸ ಚೈತನ್ಯಕ್ಕಾಗಿ ತಿರುಗಿದ್ದು, ಮಾಸ್ತೀ-ಕಥೆಯ ಕಡೆಗೇ. ಸ್ವತಃ ನಾನೇ ''ಬನ್ನಿ, ಕುಳಿತುಕೊಳ್ಳಿ, ನಿಮಗೊಂದು ಕತೆ ಹೇಳುತ್ತೇನೆ'', ಎಂದು ಆರಂಭವಾಗುವಂಥ ಕತೆಗಳನ್ನು ಬರೆದದ್ದು ಆಗಲೇ.

ಮಾಸ್ತಿಯವರು ಅಷ್ಟಾಗಿ ಮೆಚ್ಚಿಕೊಂಡ ಮೈತ್ರೇಯಿಗೆ ಅವಳ ಗಂಡ ಯಾಜ್ಞವಲ್ಕ್ಯ ಹೇಳುವ ಮಾತುಗಳಿಗೆ ನಾಂದಿಯಾಗುವ, ''ಬಾ, ಕುಳಿತುಕೋ, ನಿನಗೆ (ಆತ್ಮದ ಬಗ್ಗೆ) ತಿಳಿಸುತ್ತೇನೆ'' ಎನ್ನುವ ಶಬ್ದಗಳಿಗೆ ನನ್ನ ಕತೆಗಳ ಆರಂಭ ಹತ್ತಿರವಾಗಿರುವಾಗಲೂ, 'ಹೇಳುಗ-ಕೇಳುಗ'ದ ನಡುವಿನ ಇಲ್ಲಿಯ ಸಂಬಂಧ ತೀರ ಬೇರೆ ಸ್ವರೂಪದ್ದು. ಈ ಕತೆಗಳು ಹಿಡಿಯ ಹೋದ ಮಗ್ಗುಲುಗಳು ಕೂಡ ಮಾಸ್ತಿಯವರ ಕತೆಗಳಿಂದ ಭಿನ್ನವಾದವುಗಳು. ಇವುಗಳ ಚರ್ಚೆ ಇಲ್ಲಿ ಸಾಧ್ಯವಿಲ್ಲ, ಮುಖ್ಯವೂ ಅಲ್ಲ . ಮುಖ್ಯವಾದ ಸಂಗತಿ : ಇಲ್ಲಿಯ 'ಓದುಗ-ಲೇಖಕ' ಸಂಬಂಧದ ಗ್ರಹಿಕೆಗೆ ಮೂಡಿದ ಆಕೃತಿ ಮಾಸ್ತೀ-ಕಥೆಯಿಂದಲೇ ಸ್ಫೂರ್ತಿ ಪಡೆದದ್ದಾಗಿದೆ ಎನ್ನುವುದು ಅಷ್ಟೇ ಮುಖ್ಯವಾದ ಇನ್ನೊಂದು ಸಂಗತಿ; ಲೇಖಕ, ತನ್ನ ಸೃಷ್ಟಿ ಕಾರ್ಯಕ್ಕೂ ಬದುಕಿಗೂ ಇರುವ ಸಂಬಂಧವನ್ನು, ಅವು ಒಂದನ್ನೊಂದು ಪ್ರಭಾವಿಸುವ, ಪೋಷಿಸುವ ಪ್ರಕ್ರಿಯೆಯನ್ನು, ಮತ್ತೆ ಮತ್ತೆ ವಿಮರ್ಶಿಸಿಕೊಳ್ಳುತ್ತ ಹುಟ್ಟಿಸುವ ಕೃತಿ ಯಾವಾಗಲೂ ಇನ್ನೊಬ್ಬನ ಕಡೆಗೆ ಮುಖ ಮಾಡಿರುತ್ತದೆ ಎಂದೂ, ಹಾಗೂ ಹಾಗೆ ಮುಖ ಮಾಡಿದ ಕಡೆಗಳಲ್ಲೆಲ್ಲ ಕನ್ನಡದ ಸಣ್ಣಕತೆ, ಮಾಸ್ತಿಯವರು ಅದಕ್ಕೆ ತಂದುಕೊಟ್ಟಂಥ ಆರೋಗ್ಯವನ್ನು ಕಾಪಾಡಿಕೊಳ್ಳುತ್ತದೆ ಎಂದೂ ತಿಳಿವಳಿಕೆ ಮೂಡಿದ್ದು. ಈ ಮಾತನ್ನು ನಾನು ಕೇವಲ ನನ್ನೊಬ್ಬನ ಪರವಾಗಿ ಹೇಳುತ್ತಿಲ್ಲ ಎಂಬ ವಿಶ್ವಾಸ ನನಗಿದೆ.

ಈ ಪುಸ್ತಕಕ್ಕೆ ಪ್ರಸ್ತಾವನೆಯನ್ನು ಬರೆಯುವ ನೆಪದಲ್ಲಿ ಮಾಸ್ತಿಯವರ ಕಥಾಪರಂಪರೆಗೆ ನನ್ನಿಂದ ಸಲ್ಲಬೇಕಾದ ಋಣವನ್ನು ಒಪ್ಪಿಕೊಳ್ಳುವ ಈ ಅವಕಾಶ ನನಗೆ ಅತ್ಯಂತ ಸಂತೋಷದಾಯಕವಾದದ್ದು. ಅದನ್ನು ಒದಗಿಸಿದ್ದಕ್ಕಾಗಿ ಪೂಜ್ಯ ಮಾಸ್ತಿಯವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಹಾಗೂ, ಇತ್ತೀಚೆಗಷ್ಟೇ ಅವರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತ ಸಂದರ್ಭ, ಸಂಪೂರ್ಣವಾಗಿ ನಮ್ಮ ನೆಲದ ಜೀವನದಲ್ಲೇ ಬೇರು ಬಿಟ್ಟು ಅದರ ಗಾಳಿ, ಮಳೆ ಬಿಸಿಲುಗಳಿಗೇ ಮೈಯೊಡ್ಡಿ ಬೆಳೆದ ಅವರ ಸಮೃದ್ಧ ಕಥಾ ಸಾಹಿತ್ಯವನ್ನು ಇಡಿಯಾಗಿ ಅಭ್ಯಾಸ ಮಾಡುವ, ಕನ್ನಡ ಸಾಹಿತ್ಯದ ಸಂದರ್ಭದಲ್ಲಷ್ಟೇ ಅಲ್ಲದೇ ವಿಶ್ವಸಾಹಿತ್ಯದ ಸಂದರ್ಭದಲ್ಲೂ ಇಟ್ಟು ಪುನರ್ವಿಮರ್ಶಿಸುವ ಮಹತ್ವದ ಕಾರ್ಯಕ್ಕೆ ಉತ್ಸಾಹ ತುಂಬುತ್ತದೆ ಎಂಬ ಭರವಸೆಯೊಂದಿಗೆ ಈ ಪ್ರಸ್ತಾವನೆಯನ್ನು ಮುಗಿಸುತ್ತೇನೆ.

''ಕತೆ ಎಂದರೆ ಇದು''

ಮಾವಿನಕೆರೆ ರಂಗನಾಥನ್

ಸಣ್ಣ ಕತೆಯ ಪ್ರಕಾರಕ್ಕೆ ಸಂಬಂಧಿಸಿದಂತೆ ಮಾಸ್ತಿಯವರದು ಅನುಪಮ ಸಾಧನೆ. ಸಾಹಿತ್ಯದ ಅಭ್ಯಾಸಿಗಳಿಗೆ ತಿಳಿದಿರುವಂತೆ ಅವರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ್ದು ಸಣ್ಣ ಕತೆಯ ರಚನೆಯಿಂದಲೇ. ೧೯೦೯ರ ಸುಮಾರಿಗೆ ಅವರ ಮೊಟ್ಟಮೊದಲ ಕತೆ 'ರಂಗನ ಮದುವೆ' ಪ್ರಕಟವಾಯಿತು. ಆ ನಂತರ ಸುಮಾರು ಏಳೆಂಟು ದಶಕಗಳ ಕಾಲ ಅವರು ಈ ಪ್ರಕಾರಕ್ಕೆ ಒಂದು ನಿಶ್ಚಿತ ರೂಪವನ್ನು ಕೊಟ್ಟದ್ದೇ ಅಲ್ಲದೆ, ಸಣ್ಣಕತೆಯ ಸಾಧ್ಯತೆಗಳನ್ನು ಹಿಗ್ಗಿಸಿ, ಸಾಹಿತ್ಯದಲ್ಲಿ ಅದಕ್ಕೊಂದು ಶಾಶ್ವತ ಸ್ಥಾನವನ್ನು ಗಳಿಸಿಕೊಟ್ಟರು. ಮಾಸ್ತಿಯವರಿಗೂ ಮೊದಲು ಪಂಜೆ ಮಂಗೇಶರಾವ್, ಎಂ.ಎನ್. ಕಾಮತ್, ಕೆರೂರ ವಾಸುದೇವಾಚಾರ್ಯ ಮೊದಲಾದವರು ಸಣ್ಣಕತೆಗಳನ್ನು ಬರೆದರೆಂಬುದು ಐತಿಹಾಸಿ ಸತ್ಯ, ನಿಜ. ಆದರೆ ಈ ಪ್ರಕಾರದ ರೂಪರೇಷೆಗಳನ್ನೂ ವ್ಯಾಪಕ ಮಹತ್ವವನ್ನೂ ಗುರುತಿಸಿ, 'ಕತೆ ಎಂದರೆ ಇದು' ಎಂದು ಹೇಳುವಷ್ಟರ ಮಟ್ಟಿಗೆ ಜೀವನಾನುಭವದ ರಸಘಟ್ಟಿಗಳನ್ನೇ ನಿರ್ಮಿಸಿ, ಅವುಗಳಿಗೆ ಪ್ರಾಣ ಸಂಚಾರದ ಧ್ವನಿಶಕ್ತಿಯನ್ನು ನೀಡಿದವರು ಮಾಸ್ತಿಯವರೇ. ಈ ಕಾರಣದಿಂದ ಅವರು ಸಹಜವಾಗಿಯೇ 'ಕನ್ನಡ ಸಣ್ಣಕತೆಯ ಜನಕ' ರೆನಿಸಿದ್ದಾರೆ.

ಸಂಖ್ಯಾ ದೃಷ್ಟಿಯಿಂದಷ್ಟೇ ಅಲ್ಲ, ವಸ್ತು ವೈವಿಧ್ಯದ ದೃಷ್ಟಿಯಿಂದಲೂ ಮಾಸ್ತಿಯವರ ಕತೆಗಳ ಹರಹು, ಬೀಸು ತುಂಬ ದೊಡ್ಡದು, ವ್ಯಾಪಕವಾದದ್ದು. ಇದುವರೆಗೆ ಪ್ರಕಟವಾಗಿರುವ ಕಥಾ ಸಂಕಲನಗಳ ಹದಿನೈದು; ಒಟ್ಟು ಕತೆಗಳು ತೊಂಬತ್ತೊಂಬತ್ತು. ಇವುಗಳ ಜೊತೆಗೆ 'ಮಾಯಣ್ಣನ ಕನ್ನಡಿ' ಎಂಬ ಇತ್ತೀಚಿನ ಕತೆಯನ್ನೂ ಸೇರಿಸಿದರೆ ಒಂದು ನೂರು ಆಯಿತು. ಇಷ್ಟು ದೊಡ್ಡ ಪ್ರಮಾಣದ ಕತೆಗಳ ವಸ್ತುಗಳೂ ಕೂಡ ಬೆರಗು ಹುಟ್ಟಿಸುವಷ್ಟು ವೈವಿಧ್ಯಮಯವಾಗಿದೆ. ಅಭ್ಯಾಸಕ್ಕೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಅವರ ಕತೆಗಳನ್ನು ಸ್ಥೂಲವಾಗಿ ಈ ರೀತಿ ವಿಭಾಗಿಸಬಹುದೇನೊ: ೧ ಪೌರಾಣಿಕ ಕತೆಗಳು ೨ ಐತಿಹಾಸಿಕ ಕತೆಗಳು ೩. ಸಾಮಾಜಿಕ ಕತೆಗಳು ೪. ಮಹಾ ಚೇತನಗಳನ್ನು ಕುರಿತು ಕತೆಗಳು. ಮತ್ತೆ ಇವುಗಳನ್ನು ದಂತಕತೆಗಳು, ದೃಷ್ಟಾಂತ ಕತೆಗಳು, ಚಮತ್ಕಾರ ಪ್ರದರ್ಶನದ ಕತೆಗಳು, ಅದ್ಭುತರಮ್ಯ (Fantasy) ಕತೆಗಳು, ಮೋಜಿನ ಕತೆಗಳು ಎಂದೂ ವಿಂಗಡಿಸಿ ನೋಡುವ ಅವಕಾಶವಿದೆ.

ಕತೆ ನಡೆಯುವ ಕಾಲ ಸಮಕಾಲೀನವಾಗಲಿ, ಪ್ರಾಚೀನವಾಗಲಿ, ಕತೆಯ ಪಾತ್ರ ಹಳ್ಳಿಯ ಕಡುಬಡವನಾಗಿರಲಿ, ಎಂದೋ ಅಳಿದುಹೋದ ಸಾಮ್ರಾಜ್ಯವೊಂದರ ಚಕ್ರವರ್ತಿಯಾಗಿರಲಿ, ಮಾಸ್ತಿಯವರು ಆ ಕಾಲ ಇಂದಿಗೂ ಅನ್ವಯಿಸುವಂತೆ, ಆ ಪಾತ್ರ ನಮ್ಮ ನೆರೆಯವನೇನೂ ಎಂದು ಅನ್ನಿಸುವಂತೆ ಬರೆಯುತ್ತಾರೆ. ಕಾಲ, ದೇಶ, ಭಾಷೆ,

ಪಾತ್ರ, ಜನಜೀವನ - ಇವೆಲ್ಲ ಬೇರೆ ಬೇರೆಯಾದರೂ ಕಥೆಗಳ ಒಟ್ಟು ಧ್ವನಿ ಇವತ್ತಿನ ಮಾನವನ ಘನತೆಯನ್ನೇ ಪ್ರತಿನಿಧಿಸುತ್ತದೆ. ಅವರ ಕಥೆಗಳಲ್ಲಿ ಬರುವ ಆ್ಯನ್ ಷೇಕ್ಸ್‌ಪಿಯರ್, ಗಯಟೆ, ಗೌತಮಿ, ವಡ್ಡರ ವೆಂಕಟಿಗ, ಜೋಗ್ಯೋರ ಅಂಜಪ್ಪ ಮುಂತಾದ ಅಸಂಖ್ಯ ಪಾತ್ರಗಳು ಆಡುವುದು ನಮ್ಮದೇ ಭಾಷೆ, ಮನುಷ್ಯ ಸಹಜ ಭಾಷೆ. ಮತ್ತೆ ಒಂದೊಂದು ಕತೆಯಲ್ಲೂ ಗಾಢ ಅನುಭವಕ್ಕೆ ಕಾರಣವಾಗುವುದು ಅಂತಃಕರಣವನ್ನು ಮುಟ್ಟಬಲ್ಲ ಮಾನವೀಯತೆ. ಆದ್ದರಿಂದಲೇ 'ನೇಷ್‌ಹುವಲ್ ಕೊಯೋಟ್‌ಲ್' ಪ್ರಾಚೀನ ಕಾಲದ ಮೆಕ್ಸಿಕೋ ದೇಶಕ್ಕೆ ಸಂಬಂಧಿಸಿದ ಕತೆ, ಇದು ಬೇಡ: 'ಮೋಸರಿನ ಮಂಗಮ್ಮ' ನಮ್ಮದೇ ಹಳ್ಳಿಯ ಕತೆ, ಇದು ಇರಲಿ ಎಂದು ಅವರ ಕತೆಗಳಲ್ಲಿ ಕೆಲವಷ್ಟನ್ನೇ ಆಯ್ಕೆಮಾಡುವಂತಿಲ್ಲ.

ಕನ್ನಡದ ಮಟ್ಟಿಗೆ ಹೇಳುವುದಾದರೆ ಸಣ್ಣಕತೆಯ ಪ್ರಕಾರ ಸಂಪೂರ್ಣವಾಗಿ ಈ ಶತಮಾನದ್ದು. ಈ ಪ್ರಕಾರದಲ್ಲಿ ಆಗಿರುವ ಸೃಷ್ಟಿಯಲ್ಲಿ ಮಾಸ್ತಿಯವರದೇ ಸಿಂಹಪಾಲು. ಯಾಕೆಂದರೆ ತಮ್ಮ ಜೀವನದಲ್ಲಿ ಅನೇಕ ದಶಕಗಳ ಕಾಲ ಅವರು ಒಂದು ತಪಸ್ಸಿನ ರೀತಿಯಲ್ಲಿ ಈ ಪ್ರಕಾರದ ವೈಶಿಷ್ಟ್ಯಕ್ಕೆ ನಿಷ್ಠೆಯಿಂದ ನಡೆದುಕೊಂಡಿದ್ದಾರೆ. ಅಂದರೆ ಅವರ ಜೀವನದಲ್ಲಿ ಕೊನೆಯವರೆಗೂ ಸಣ್ಣ ಕತೆಗಳ ರಚನೆ ನಿರಂತರವಾಗಿ ನಡೆಯಿತೆನ್ನಬಹುದು.

ಮಾಸ್ತಿಯವರಿಗೆ ಈ ಶತಮಾನದ ಆರಂಭ ಕಾಲದಲ್ಲಿ, ಅದರಲ್ಲೂ ಈ ಪ್ರಕಾರ ಕನ್ನಡಕ್ಕೆ ತೀರ ಹೊಸದು ಎನ್ನುವಂತಿದ್ದ ಕಾಲದಲ್ಲಿ ಸಣ್ಣಕತೆ ರಚಿಸಬೇಕೆಂಬ ಪ್ರೇರಣೆ ಉಂಟಾಗಿದ್ದು ಹೇಗೆ? ಆ ಕಾಲದಲ್ಲಿ ಇಂಗ್ಲಿಷಿನ ಕೆಲವು ಪತ್ರಿಕೆಗಳಲ್ಲಿ, ಅದರಲ್ಲೂ ಮುಖ್ಯವಾಗಿ 'ಸ್ಟ್ಯಾಂಡ್' ಎಂಬ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಕತೆಗಳನ್ನು ಅವರು ಓದುತ್ತಿದ್ದರಂತೆ. ಜನಜೀವನದ ತುಣುಕುಗಳನ್ನು ಲಲಿತ ಶೈಲಿಯಲ್ಲಿ ತುಂಬ ಸರಳವಾಗಿ ಕಟ್ಟಿಕೊಡುತ್ತಿದ್ದ ಆ ಕತೆಗಳನ್ನು ಓದುತ್ತಿದ್ದಾಗ ಒಮ್ಮೆ 'ಇಂಥವು ಕನ್ನಡದಲ್ಲಿಲ್ಲವಲ್ಲ: ಇವು ನಮ್ಮಲ್ಲೂ ಇರಬೇಕು' ಎಂದು ಅನ್ನಿಸಿತೆಂದೂ, ಅದರಿಂದಲೇ ತಾವು ಸಣ್ಣ ಕತೆಗಳನ್ನು ಬರೆಯತೊಡಗಿದ್ದೆಂದೂ ಮಾಸ್ತಿಯವರೇ ಒಂದೆಡೆ ಹೇಳಿದ್ದಾರೆ. ಸಣ್ಣಕತೆಯನ್ನೂ ಒಳಗೊಂಡ ಹೊಸಗನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳೂ ಇಂಗ್ಲಿಷ್ ಸಾಹಿತ್ಯದಿಂದಲೇ ಸ್ಫೂರ್ತಿ ಪಡೆದುವೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ಕನ್ನಡದಲ್ಲಿ ಅಪರೂಪವಾಗಿದ್ದ ಸಣ್ಣಕತೆಯ ಪ್ರಕಾರವನ್ನು ಬೆಳೆಸುವುದಕ್ಕಾಗಿ ಮಾಸ್ತಿಯವರು ಇಂಗ್ಲಿಷ್ ಕತೆಗಳ ಅನುಕರಣೆ ಮಾಡಲಿಲ್ಲ ಎಂಬುದು ಮುಖ್ಯವಾದ ಮಾತು. ಪ್ರತಿಯೊಬ್ಬ ಲೇಖಕನ ಭಾವ ಪ್ರಪಂಚದ ತುಂಬ ಅವನ ಬಾಲ್ಯ ಕಾಲವೇ ರಾರಾಜಿಸುತ್ತದೆ ಎಂಬ ಒಂದು ಮಾತಿದೆ. 'ರಂಗನ ಮದುವೆ' 'ರಂಗಪ್ಪನ ದೀಪಾವಳಿ' 'ರಂಗಪ್ಪನ ಕೋರ್ಟ್‌ಷಿಪ್' ಮುಂತಾದ ಮಾಸ್ತಿ ಅವರ ಮೊದಲ ಕತೆಗಳನ್ನು ಓದಿದರೆ ಅವರು ಸಣ್ಣ ಕತೆಗೆ ತಮ್ಮ ಬಾಲ್ಯದ ಅನುಭವಗಳನ್ನೇ ಆಧಾರ ಮಾಡಿಕೊಂಡ ಸಂಗತಿ ಸ್ಪಷ್ಟವಾಗುತ್ತದೆ. ರೂಪ, ಬಂಧಗಳ ದೃಷ್ಟಿಯಿಂದ ಇಂಗ್ಲಿಷ್ ಕತೆಗಳು ಅವರ ಮೇಲೆ ಪ್ರಭಾವ ಬೀರಿರಬಹುದು; ಆದರೆ ಕತೆಗಳ ಒಳಗಿನ ವಸ್ತುವಾಗಲಿ, ನಿರೂಪಣೆಯಾಗಲಿ, ಧ್ವನಿಯಾಗಲಿ, ಜೀವನ ದರ್ಶನವಾಗಲಿ ಅಕ್ಷರಶಃ ಮಾಸ್ತಿಯವರವೇ ಎಂಬುದರಲ್ಲಿ ಸಂಶಯವಿಲ್ಲ. ಈ ದೃಷ್ಟಿಯಿಂದ ಮಾಸ್ತಿಯವರ ಕತೆಗಳನ್ನು ಸೂಕ್ಷ್ಮವಾಗಿ ಓದಿದಾಗ ಅವರು ಎಂಥ ಸ್ವೋಪಜ್ಞ ಕತೆಗಾರರೆಂದು ಅರಿವಾಗದೆ ಇರದು.

ಯಾವುದೇ ಹೊಸ ವಿಚಾರ, ಭಾವನೆ ತತ್‌ಕ್ಷಣ ಎಲ್ಲರ ಸಮ್ಮತಿ ಪಡೆಯುವುದು ಕಷ್ಟ. ಹಾಗೆಯೇ ಮಾಸ್ತಿಯವರ ಮೊದಲ ಕತೆಗಳು ಪ್ರಕಟವಾದಾಗ ''ಇದೇನು ಸಣ್ಣ ಕತ್ತೆ ಬಂತಪ್ಪ'' ಎಂದವರುಂಟು; ''ಮಧುರವಾಣಿಯಲ್ಲಿ ಯಾರೋ ಒಂದು ಕತೆಯಂತೆ. ಕತೆ, ಕತೆಯನ್ನು ಬರೆದಿದ್ದಾರೆ. ಅದರ ಹೆಸರು 'ರಂಗಪ್ಪನ ದೀಪಾವಳಿ' ಇನ್ನು, ನಾಳೆ ನಾನು ಕೂತು 'ಉಗ್ರಪ್ಪನ ಉಗಾದಿ' ಎಂದು ಒಂದು ಕತೆಯನ್ನು ಬರೆಯಬೇಕೆಂದಿದ್ದೇನೆ. ಆಹಾ, ಏನು ಹೇಳಬೇಕೋ!'' ಎಂದು ಮೂದಲಿಸಿದವರೂ ಉಂಟು. ಸುದೈವದಿಂದ ಮಾಸ್ತಿಯವರು ಇಂಥ ಮಾತುಗಳನ್ನು ಕೇಳಿ ಎದೆಗುಂದಲಿಲ್ಲ. ಸಣ್ಣಕತೆ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ ಎಂಬ ಅರಿವಿದ್ದುದರಿಂದಲೇ ಅವರು ಕೊನೆಯವರೆಗೂ ಈ ಕ್ಷೇತ್ರದಲ್ಲಿ ಅವಿರತವಾಗಿ ದುಡಿದು, ಜಗತ್ತಿನ ಅತ್ಯುತ್ತಮ ಕತೆಗಳಿಗೆ ಸರಿಸಾಟಿಯಾಗುವಂಥ ಅನೇಕ ಕತೆಗಳನ್ನು ಸೃಷ್ಟಿಸಲು ಸಾಧ್ಯವಾದದ್ದು. ಮಾಸ್ತಿಯವರಿಗೆ ಸಣ್ಣಕತೆಗಳ ವಿಷಯದಲ್ಲಿ ಎಂತಹ ಒಲವಿತ್ತೆಂಬುದಕ್ಕೆ 'ಕೆಲವು ಸಣ್ಣ ಕತೆಗಳು' ಎಂಬ ಮೊದಲ ಸಂಕಲನದಲ್ಲಿ ಅವರು ಬರೆದಿರುವ ಈ ಮಾತುಗಳೇ ನಿದರ್ಶನ:

> ''ರಂಗಪ್ಪನ ದೀಪಾವಳಿಯೇ, ಸರಿ, ಉಗ್ರಪ್ಪನ ಉಗಾದಿ, ವೆಂಕಟರಾಯನ ಪಿಶಾಚವೋ, ಸರಿ, ಶ್ರೀಕಂಠಯ್ಯನ ಬೇತಾಳ,'' ಎಂದು ಮೊದಲಾಗಿ ಧೋರಣೆಯಿಂದ ಮಾತನಾಡಿ ಈ ಕತೆಗಳನ್ನು ಎಸೆಯಬೇಡಿ. ನಾನು ರಂಗಪ್ಪನ ದೀಪಾವಳಿಯನ್ನು ಅಚ್ಚು ಹಾಕಿಸಿದ್ದೇನೆ; ಇದರಿಂದ ಕೆಲವರು ಸಂತೋಷಪಟ್ಟಿದ್ದಾರೆ. 'ಉಗ್ರಪ್ಪನ ಉಗಾದಿ' ಎನ್ನುವ ನೀವು ಉಗ್ರಪ್ಪನ ಉಗಾದಿಯನ್ನು ಬರೆದು ಅಚ್ಚು ಹಾಕಿಸಿ; ನಾನು ಓದಿ ಸಂತೋಷ ಪಡುತ್ತೇನೆ. ಶ್ರೀಕಂಠಯ್ಯನ ಬೇತಾಳವನ್ನು ಅದು ಅಚ್ಚಾಗಿ ಬಂದಾಗ್ಗೆ ನನ್ನ ಒಡಹುಟ್ಟಿದವನಂತೆ ಪ್ರೀತಿಯಿಂದ ಆಲಂಗಿಸಿ ಕೊಳ್ಳುತ್ತೇನೆ. ಈ ಕತೆಗಳು ಸಾಮಾನ್ಯವಾದುವು; ಕೆಲವರು ಮಾತ್ರ ಓದಿ ಸಂತೋಷಪಡಬಹುದು. ನೀವು ಒಳ್ಳೆಯ ಕತೆಗಳನ್ನು ಬರೆಯಿರಿ; ಅಚ್ಚು ಹಾಕಿಸಿ; ಹೆಚ್ಚು ಜನ ಓದಿ ಸಂತೋಷ ಪಡಲಿ. ಈ ಹತ್ತು ಕತೆಗಳು ಇವುಗಳೆಲ್ಲಕ್ಕಿಂತ ನೂರು ಪಾಲು ಹೆಚ್ಚಾದುವುಗಳನ್ನು ನಮ್ಮ ನಾಡಿನ ನನ್ನ ಅಣ್ಣಂದಿರಾ, ತಮ್ಮಂದಿರಾ, ನೀವು ಬರೆಯಬೇಕೆಂಬುದೇ ನನ್ನ ಮನಸ್ಸಿನ ಅಂತರಾಳದಲ್ಲಿರುವ ಅಧಿಕವಾದ ಆಸೆ. . .''

ಸಾಹಿತ್ಯಕೃತಿ ಓದುಗರಿಗೆ ಸಂತೋಷ ಕೊಡುವಂತಿರಬೇಕೆನ್ನುವುದು ಪ್ರಾಥಮಿಕ ಸಂಗತಿ. ವಿಚಾರ ಪ್ರಚೋದನೆ, ಅರಿವಿನ ಬೆಳವಣಿಗೆ, ಅನುಭವ ವಿಶ್ಲೇಷಣೆ ಇವೆಲ್ಲ ನಂತರದ ಮಾತು. ತಮ್ಮ ಸಣ್ಣಕತೆಗಳ ವಿಷಯದಲ್ಲಿ ಅಂಥ ಮಹಾತ್ವಾಕಾಂಕ್ಷೆಯನ್ನು ಇಟ್ಟುಕೊಳ್ಳದ ಮಾಸ್ತಿ ಒಮ್ಮೆ ''ನಿಮಗೆ ಇದರಿಂದ ಸ್ವಲ್ಪ ಹೊತ್ತು ಸಂತೋಷವಾದರೆ ನಾನು ತೃಪ್ತನು'' ಎಂದದ್ದುಂಟು. ಇನ್ನೊಂದು ಸಂದರ್ಭದಲ್ಲಿ ಸಣ್ಣಕತೆಗಳನ್ನು ಬರೆಯುವ ತಮ್ಮ ಉದ್ದೇಶವನ್ನು ಈ ರೀತಿ ಸ್ಪಷ್ಟಪಡಿಸಿದ್ದಾರೆ.

> ''ನನ್ನ ಕತೆಗಳನ್ನು ಬರೆಯುವಲ್ಲಿ ನನ್ನ ಉದ್ದೇಶ ಒಂದೇ ಒಂದು, ಎಂದು ನಾನು ಹಲವು ಸಂದರ್ಭದಲ್ಲಿ ಸೂಚಿಸಿದ್ದೇನೆ. ಆ ಉದ್ದೇಶ, ಜೀವನ ನನಗೆ ನೀಡಿರುವ ದರ್ಶನವನ್ನು ವಿವರಿಸುವ ಚಿತ್ರಗಳನ್ನು ಕೊಡುವುದು.

> ಇಂದಿನ ಹಿಂದಿನ, ನಮ್ಮ ನಾಡಿನ, ನಮ್ಮ ರಾಷ್ಟ್ರದ, ಬೇರೆ ಹತ್ತು ರಾಷ್ಟ್ರಗಳ, ಬಹುತೆರನ ಜೀವನ ಚಿತ್ರಗಳನ್ನು ನನ್ನ ಕಥೆಗಳಲ್ಲಿ ಕಾಣುತ್ತದೆ. ಇವು ಸತ್ಯವನ್ನು ಬಿಂಬಿಸಿವೆ, ಸ್ಫುಟವಾಗಿವೆ, ಇಷ್ಟೊ ಅಷ್ಟೊ ರಸಾನುಭವವನ್ನು ನೀಡುತ್ತವೆ, ಎಂದು ಓದುವವರಿಗೆ ಕಂಡರೆ ನನ್ನ ಕೆಲಸ ಸಾರ್ಥಕ ಆಯಿತು. ಇದರ ಆಚೆಗೆ ಇವನ್ನು ಓದುವವರು ಇವುಗಳಲ್ಲಿ ಜೀವನವನ್ನು ಕುರಿತು ಇಂಥ ಅಂಥ ನೀತಿ ಮುಂತಾದುವನ್ನು ನಿರೂಪಿಸುವ ಉದ್ದೇಶ ಇದೆ ಎಂದು ಭಾವಿಸಬಹುದು. ದಿಟವಾದ ಜೀವನದಿಂದ ಒಂದು ಭಾವ ತೋರುವಂತೆ ಜೀವನದ ದಿಟವಾದ ಒಂದು ಚಿತ್ರದಿಂದಲೂ ಒಂದು ಭಾವ ತೋರುವುದು ಸಹಜ. ಆದರಿಂದ ಓದುವವರಿಗೆ ಪ್ರಯೋಜನ, ಸಂತೋಷ ಆಗುವುದಾದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. . .
>
> (ಮುನ್ನುಡಿ - ಸಣ್ಣ ಕತೆಗಳು -೧೪)

ಈ ಮಾತುಗಳು ಸಣ್ಣಕತೆಗಳಿಗಷ್ಟೇ ಅಲ್ಲ, ಅವರ ಇತರ ಎಲ್ಲ ಸೃಜನಶೀಲ ಸಾಹಿತ್ಯ ಕೃತಿಗಳಿಗೂ ಅನ್ವಯಿಸುವಂತಿವೆ. ಕೆಲವೇ ಪುಟಗಳ ಸಣ್ಣಕತೆಗಳಲ್ಲಿ ಹೇಗೋ ಹಾಗೆ ನೂರಾರು ಪುಟಗಳ ಕಾದಂಬರಿಗಳಲ್ಲೂ ಇದೇ ಉದ್ದೇಶ, ಮನುಷ್ಯ ಲೋಕವನ್ನು ಕುರಿತು ಪರಿಪಕ್ವವಾದ ಜೀವನ ದರ್ಶನ ಪ್ರಕಟವಾಗುತ್ತವೆ. ಆತ್ಮೀಯ ಸ್ನೇಹಿತನೊಡನೆ ಅತ್ಯಂತ ಆಪ್ತವಾಗಿ ಮಾತನಾಡುವ ಧಾಟಿಯಲ್ಲಿ ಬದುಕಿನಲ್ಲಿ ಕಂಡು, ಕೇಳಿದ ಯಾರೋ ಒಬ್ಬ ವ್ಯಕ್ತಿ, ಯಾವುದೋ ಸಂದರ್ಭ, ಇನ್ನಾವುದೋ ಅನುಭವ, ಹೃದಯ ಮಿಡಿಯುವ ಮಾತ್ತಾವುದೋ ಸಂಗತಿ - ಇವೆಲ್ಲ ಅವರ ಕೈಯಲ್ಲಿ ಓದುಗನ ಮನಸ್ಸನ್ನು ಸೆರೆಹಿಡಿದು ನಿಲ್ಲಿಸುವಂಥ ಸಣ್ಣಕತೆಗಳು ರೂಪುಗೊಂಡ ಬಗೆ ನಿಜಕ್ಕೂ ಆಶ್ಚರ್ಯ ಹುಟ್ಟಿಸುವಂಥದು. ಮೇಲೆ ಉದ್ಧರಿಸಲಾಗಿರುವ ಸಾಲುಗಳು ಅವರ ಸ್ವಭಾವಸಹಜ ವಿನಯದ ಮಾತುಗಳೇ. ಬದುಕಿನಲ್ಲಿ ತಾವು ಕಂಡುಕೊಂಡ ಅನುಭವವನ್ನು ಹಂಚಿಕೊಳ್ಳುವ ಕಾರ್ಯದಲ್ಲಿ 'ನಾನು ನಿಮಿತ್ತ ಮಾತ್ರ' ಎಂದೂ ಅವು ಸೂಚಿಸುವಂತಿದೆ.

ಮಾಸ್ತಿಯವರ ಕತೆಗಳ ಹಿಂದೆ ಕೆಲಸ ಮಾಡಿರುವ ಮನಸ್ಸು ಧಾರ್ಮಿಕ ನಿಷ್ಠೆಯಿಂದ ಪಕ್ವಗೊಂಡದ್ದು. ಅವರ ಧಾರ್ಮಿಕತೆಯಲ್ಲಿ ಅಪಾರ ಜೀವನಶ್ರದ್ಧೆಯಿದೆ, ಮಾನವನ ಮೇಲಿರುವ ಗುರುತರ ಜವಾಬ್ದಾರಿಯ ಅರಿವಿದೆ, ಬದುಕನ್ನು ಶುಚಿ ಮಾಡಿ ಸಾರ್ಥಕ ಪಡಿಸುವ ಮಾರ್ಗಾನ್ವೇಷಣೆಯಿದೆ, ಮೇಲುನೋಟಕ್ಕೆ ಸಂಪ್ರದಾಯ ಶರಣರಂತೆ ಕಾಣಿಸುತ್ತಿದ್ದ ಮಾಸ್ತಿ ಆಳದಲ್ಲಿ ಅಪಾರ ಮಾನವೀಯ ಅಂತಃಕರಣವನ್ನು ತುಳುಕಿಸಿದವರು. ಅವರು ಧಾರ್ಮಿಕತೆಯನ್ನು ಅದರ ಅತ್ಯುನ್ನತ ಅರ್ಥದಲ್ಲಿ ಕಂಡು ಕೊಂಡಿದ್ದರು ಎಂಬುದಕ್ಕೆ 'ವಿಚಿತ್ರ ಪ್ರೇಮ' 'ಬೀದಿಯಲ್ಲಿ ಹೋಗುವ ನಾರಿ', 'ವೆಂಕಟಶಾಮಿಯ ಪ್ರಣಯ' , ಮತ್ತೆ ಅವರು ತಮ್ಮ ಎಂಭತ್ತೆಂಟನೆಯ ವಯಸ್ಸಿನಲ್ಲಿ ಬರೆದ 'ದುರದೃಷ್ಟದ ಹೆಣ್ಣು' ಮೊದಲಾದ ಕತೆಗಳೇ ನಿದರ್ಶನವಾಗಿವೆ. ಘಟನೆಗಳ ಬಗೆಗೆ ಅಷ್ಟಾಗಿ ಗಮನ ಕೊಡದ ಅವರು ನಿಜಕ್ಕೂ ಆಸಕ್ತಿ ತಾಳಿದ್ದು ಮನುಷ್ಯ ಸ್ವಭಾವದಲ್ಲಿ. ಅಂದರೆ ಒಂದು ಪಾತ್ರ ತೆರೆದಿಡುವ ಪ್ರಾಮಾಣಿಕ ಅನುಭವದಲ್ಲಿ ಅಥವಾ ಒಂದು ಪಾತ್ರ ಕ್ರಮೇಣ ಸಹಜವಾಗಿ ಹೊಂದುವ ಬೆಳವಣಿಗೆಯಲ್ಲಿ, ಸಾಂಪ್ರದಾಯಿಕ ಮೌಲ್ಯಗಳನ್ನು

ಒಪ್ಪಿಕೊಂಡ ಅವರ ಮನಸ್ಸು ಎಲ್ಲರಿಗೂ ಒಳಿತನ್ನು ಬಯಸುವ ಪ್ರಜ್ಞಾಪೂರ್ವಕ ಧೋರಣೆಯನ್ನು ಅಪ್ಪಿಕೊಂಡಿತ್ತು.

ಮಾಸ್ತಿಯವರ ಕತೆಗಳ ಯಶಸ್ಸಿಗೆ ಕಾರಣವಾದ ಅವರ ತಂತ್ರ ಹಾಗೂ ಜೀವನ ದೃಷ್ಟಿಗಳ ಬಗ್ಗೆ ಈಗಾಗಲೇ ಅನೇಕ ಮಂದಿ ವಿಮರ್ಶಕರು ಸಾಕಷ್ಟು ವಿವರವಾಗಿ ಚರ್ಚಿಸಿದ್ದಾರೆ. ಒಂದು ಕತೆ ಯಶಸ್ವಿಯಾಗಬೇಕಾದರೆ ಅದರಲ್ಲಿ ಕತೆಗಾರ ಕಾಣಿಸಿಕೊಳ್ಳಲೇಬಾರದು. ಹಾಗೇನಾದರೂ ಪ್ರತ್ಯಕ್ಷ ಕಾಣಿಸಿಕೊಂಡರೆ ಆತ ಕತೆಯ ಸಹಜ ಬೆಳವಣಿಗೆಗೆ ಅಡ್ಡಿಯಾಗಿ, ಪಾತ್ರಗಳನ್ನು ತನ್ನ ಉದ್ದೇಶಕ್ಕೆ ತಕ್ಕಂತೆ ಕುಣಿಸುವುದು ಸಾಮಾನ್ಯ. ಈ ಬಗ್ಗೆ ಸಂಪೂರ್ಣ ಅರಿವಿದ್ದ ಮಾಸ್ತಿ ಪ್ರಾರಂಭದಲ್ಲೇ 'ಇದು ನಾನು ಹೇಳುವ ಕತೆಯಲ್ಲ' ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಇದಕ್ಕೆ ಅವರ ಕಥಾ ಪರಂಪರೆ ರಾಮಾಯಣ ಮಹಾಭಾರತಗಳಂಥ ನಮ್ಮ ಪ್ರಾಚೀನ ಕಥಾಸಾಹಿತ್ಯದಲ್ಲಿ ಬೇರುಬಿಟ್ಟಿರುವುದೇ ಕಾರಣವಾಗಿದೆ ಎನ್ನುತ್ತಾರೆ ಪ್ರಸಿದ್ಧ ಲೇಖಕ ಯಶವಂತ ಚಿತ್ತಾಲರು :

> ಕಥೆ ಯಾಕೆ ಹೇಳಬೇಕು? ಕಥೆ ಹೇಳುವುದು ಒಂದು ಪರಂಪರೆಯಾಗಿರದಾಗ, ಅದು ಕೂಡ ಒಳ್ಳೆಯ ಕೆಲಸ ಎಂಬ ಶ್ರದ್ಧೆ ಮೂಡಿರದಾಗ ಮೇಲಿನ ಪ್ರಶ್ನೆಗೆ ಉತ್ತರ ಸಾಧ್ಯವಿಲ್ಲ. ''ಅವನು ಇವನಿಗೆ ಹೇಳಿದ್ದನ್ನು ಇವನು ನನಗೆ ಹೇಳಿದ. ಅದನ್ನೇ ನಾನು ನಿಮಗೆ ಹೇಳುತ್ತಿದ್ದೇನೆ. ಅನೇಕರು ಹೀಗೆ ಹೇಳುತ್ತ ಬಂದದ್ದೇ ನಾನು ನಿಮಗೆ ಹೇಳುವುದಕ್ಕೆ ಪ್ರೇರಣೆಯಾಗಿದೆ'' ಎನ್ನುವಂತಿರುವ ಮಾಸ್ತಿಯವರ ಕತೆ ಹೇಳುವ ಕ್ರಮದ ಒಂದು ವಿಶೇಷವನ್ನು ಹಾಗೂ ಅದರ ಮೂಲವನ್ನು ಲಕ್ಷ್ಯಕ್ಕೆ ತೆಗೆದುಕೊಂಡರೆ ನನ್ನ ಮಾತಿನ ಅರ್ಥ ಸ್ಪಷ್ಟವಾದೀತು . . .
>
> ೧. ''ಶ್ರೀ ವ್ಯಾಸ ಮಹರ್ಷಿಗಳು ತಮ್ಮ ಶಿಷ್ಯನಾದ ವೈಶಂಪಾಯನನಿಗೆ ಹೇಳಿದ ಮಹಾಭಾರತ ಕತೆಯನ್ನು, ವೈಶಂಪಾಯನನು ಜನಮೇಜಯರಾಯನಿಗೆ ಅವನು ಮಾಡಿದ ಸರ್ಪಯಾಗದ ಕಾಲದಲ್ಲಿ ಹೇಳಿದನು. ಅದನ್ನು ಕೇಳಿದ್ದ ಉಗ್ರಶ್ರವನೆಂಬ ಸೂತ ಪುರಾಣಿಕನು ನೈಮಿಷಾರಣ್ಯದಲ್ಲಿ ಶೌನಕನೆಂಬ ಕುಲಪತಿಯು ನಡೆಸುತ್ತಿದ್ದ ದ್ವಾದಶವಾರ್ಷಿಕ ಯಜ್ಞಕ್ಕೆ ಹೋಗಿದ್ದಾಗ, ಅಲ್ಲಿ ಋಷಿಗಳ ಅಪೇಕ್ಷೆಯಂತೆ, ಆ ಕತೆಯನ್ನು ಅವರಿಗೆ ಹೇಳಿದನು''
>
> ('ವಚನ ಭಾರತ': ಎ.ಆರ್. ಕೃಷ್ಣಶಾಸ್ತ್ರೀ)
>
> ೨. ''ಈ ಬಾರಿ ನಾನು ಟಾಂಗಾ ಹುಸೇನ್ ಸಾಬಿ ಊರಿಗೆ ಹೋಗಿದ್ದಾಗ ಅವನು ಹಿಂದಿನ ದೊರೆಯನ್ನು ಕುರಿತು ಮಾತನಾಡುವಾಗ ಬೇರೆ ಒಬ್ಬ ದೊರೆಯ ಕತೆಯನ್ನು ಹೇಳಿದ.''
>
> ('ಪದವಿಯ ಅಪಾಯ')
>
> ೩. '' ನಮ್ಮ ಸ್ನೇಹಿತರೊಬ್ಬರು ತಮ್ಮ ಮಗಳ ಮದುವೆಯ ವಿಷಯ ಚಿಂತಿಸುತ್ತಿದ್ದಾಗ ತಮ್ಮ ಅಜ್ಜಿ ತಮಗೆ ಹೇಳಿದ ಒಂದು ಸಂಗತಿಯನ್ನು ನನಗೆ ತಿಳಿಸಿದರು''
>
> ('ಬಾಳಿನ ಚೌಕಾಬಾರ')

೪. ''ಕಳೆದ ವಾರ ನಾನು ಪುರೋಹಿತರೊಂದಿಗೆ ಶ್ರೀರಾಮ್ ಮನೆಗೆ ಹೋಗಿದ್ದೆನು . . . ಶ್ರೀರಾಮ್ ತಮಗೆ ತಿಳಿದ ಒಬ್ಬ ದೊಡ್ಡ ಮನುಷ್ಯರಿಂದ ತಾವು ಕೇಳಿದ ಒಂದು ಸಂಗತಿಯನ್ನು ನಮಗೆ ಹೇಳಿದರು.''

('ಚಿಕ್ಕವ್ವ')

೫. ''ನನ್ನ ಪರಿಚಯದ ಸೌದೆ ಅಂಗಡಿ ಸುಬ್ಬಯ್ಯನವರು ತಮ್ಮ ಅನುಭವಕ್ಕೆ ಬಂದದ್ದು ಅಂತ ಹೇಳಿದ ಒಂದು ಸಂಗತಿ ಇದು.''

('ಪಕ್ಷಿಜಾತಿ')

ಇಲ್ಲಿಯ ಮೊದಲನೆಯ ಅವತರಣಿಕೆ 'ವಚನ ಭಾರತ'ದಿಂದ ಎತ್ತಿಕೊಂಡದ್ದಾದರೆ, ಉಳಿದವುಗಳು ಮಾಸ್ತಿಯವರ ಕತೆಗಳಿಂದ ಎತ್ತಿಕೊಂಡವುಗಳು.

ಈ ಅವತರಣಿಕೆಗಳನ್ನು ಕೊಟ್ಟದ್ದು ಅವರ ಕತೆಗಳು ಆರಂಭವಾಗುವ ರೀತಿಯನ್ನು ಮಹಾಭಾರತದೊಡನೆ ಹೋಲಿಸುವುದಕ್ಕಾಗಿ ಮಾತ್ರ ಅಲ್ಲ, ಪ್ರತಿಯೊಬ್ಬ ಲೇಖಕನೂ ಎದುರಿಸಲೇ ಬೇಕಾದ, ಸ್ಪಷ್ಟವಾಗಿ ಕೇಳಿಕೊಂಡಿರದಿದ್ದರೂ ಬರೆಯುವ ಸನ್ನಿವೇಶದಲ್ಲೇ ಗರ್ಭಿತವಿದ್ದ, ''ನಾನಿದನ್ನು ಯಾಕೆ ಹೇಳುತ್ತಿದ್ದೇನೆ, ಯಾರಿಗಾಗಿ ಹೇಳುತ್ತಿದ್ದೇನೆ?'' ಎಂಬ ಪ್ರಶ್ನೆಗಳನ್ನು ಸಣ್ಣಕತೆಯ ಜನಕರಾದ ಮಾಸ್ತಿಯವರೇ ಹೇಗೆ ಬಿಡಿಸಿಕೊಂಡರು, ಬಿಡಿಸಿಕೊಂಡ ರೀತಿಯಿಂದಾಗಿ ಕನ್ನಡ ಕತೆಗೆ ಅವರು ತಂದುಕೊಟ್ಟ ಶಕ್ತಿಯ ಸ್ವರೂಪವೇನು, ಎನ್ನುವುದನ್ನು ಅರಿತುಕೊಳ್ಳುವುದಕ್ಕೂ ಆಗಿದೆ. ಮಹಾಭಾರತ, ರಾಮಾಯಣದಂಥ ಕಥೆಗಳನ್ನು ಹೇಳುವುದು, ಕೇಳುವುದು ಒಂದು 'ಪುಣ್ಯ'ದ ಕೆಲಸ, ಋಷಿಗಳು ಕೂಡ ಅವನ್ನು ಕೇಳಲು ಅಪೇಕ್ಷಿಸುತ್ತಿದ್ದರು, ಎನ್ನುವಂಥ ಶ್ರದ್ಧೆಗೆ ಸಂವಾದಿಯಾಗಿ, ನಮ್ಮ ಜೊತೆಯ ಜೀವನ ಬಗ್ಗೆ ಬೇರೆ ಜೀವಕ್ಕೆ ಹೇಳುವ ಕೆಲಸ ಕೂಡ ಅಷ್ಟೇ ಒಳ್ಳೆಯದು ಎಂಬ ಶ್ರದ್ಧೆಯನ್ನು, ಅಂಥ ಪ್ರಭೆಯುಳ್ಳ ಉತ್ಸಾಹವನ್ನು ಹುಟ್ಟಿಸಿದ್ದು ಮಾಸ್ತಿ ಕಥಾ ಪರಂಪರೆಯ ಅತಿಮುಖ್ಯ ಸಾಧನೆಯೆಂದು ನನ್ನ ತಿಳವಳಿಕೆ.

(ಪ್ರಸ್ತಾವನೆ - 'ಸಣ್ಣಕತೆಗಳು - ೧೫')

ಅಂದರೆ ಮಾಸ್ತಿಯವರಿಗೆ ಕತೆ ಹೇಳುವುದು ಒಂದು ಒಳ್ಳೆಯ ಕೆಲಸ, ಪುಣ್ಯದ ಕೆಲಸ ಎಂಬ ನಂಬಿಕೆ ಇದ್ದಿತೆಂದಾಯಿತು. ಮತ್ತೆ ಮನುಷ್ಯನಾದವನು ತನ್ನ ಸುತ್ತಲ ಪರಿಸರದ ನೋವು ನಲಿವುಗಳಿಗೆ ಕುರುಡಾಗಿರಲಾರ. ಮನುಷ್ಯ ಮೃತನಾಗುತ್ತಾನೆ, ಆದರೆ ಮಾನವ ಕುಲ ಶಾಶ್ವತವಾಗಿರಬೇಕು; ಅದು ಶಾಶ್ವತವಾಗಿರಬೇಕಾದರೆ ಮನುಷ್ಯ ಜೀವ ಹಸನಾಗಿರಬೇಕು; ಅಲ್ಲಿ ಸುಖ, ನೆಮ್ಮದಿ ನೆಲೆಸಬೇಕು. ಅದಕ್ಕಾಗಿ ಸಮಾಜದಲ್ಲಿ ಪರಸ್ಪರರ ನಡುವೆ ಪ್ರೀತಿ, ವಿಶ್ವಾಸ, ಗೌರವಗಳು ಒಡಮೂಡಬೇಕು. ಇಂಥ ಆಶಯಗಳನ್ನು ಹೊಂದಿರುವ ಲೇಖಕ ಬರೀ ಕೆಡುಕನ್ನಷ್ಟೇ ಚಿತ್ರಿಸದೆ ಮಾನವ ಘನತೆಯನ್ನು ಬಿತ್ತರಿಸುವ, ಬದುಕಿನ ಚೆಲುವನ್ನು ಎತ್ತಿತೋರಿಸುವ ಮಹಾತ್ಕಾರ್ಯ ನಿರ್ವಹಿಸುತ್ತಾನೆ. ಈ ಬಗೆಯ

ನಿಲುವುಗಳಿಂದ ಹೊರಡುವ ಮಾಸ್ತಿಯವರಿಗೆ 'ಮನುಷ್ಯನ ಬಗ್ಗೆ ಹೇಳಹೊರಟಿದ್ದೆಲ್ಲವೂ ಕಥಾನಕದ ಧಾಟಿ ಪಡೆಯುತ್ತದೆ' ಎಂದು ಗೊತ್ತು. ಆಮೇಲೆ ಆಯ್ದುಕೊಂಡ ವಸ್ತುವನ್ನು ನಿಭಾಯಿಸಲು ಅವರು ಅನುಸರಿಸುವ ಕ್ರಮವನ್ನು ವಿಮರ್ಶಕ ಡಾ|| ಎಂ.ಜಿ. ಕೃಷ್ಣಮೂರ್ತಿ ತುಂಬ ಸಮರ್ಪಕವಾಗಿ ವಿವರಿಸಿದ್ದಾರೆ:

> ''ಕತೆ ಮತ್ತು ನೈಜ ಜೀವನದ ಅನುಭವಗಳಿಗೆ 'ದೂರ' (distance) ವೇರ್ಪಡಿಸುವುದಕ್ಕಾಗಿ ಮಾಸ್ತಿಯವರು ಕೆಲವು ತಂತ್ರಗಳನ್ನು ಉಪಯೋಗಿಸುತ್ತಾರೆ. ಅವುಗಳಲ್ಲಿ ಮುಖ್ಯವಾದುವು: ೧ ಕತೆ 'ನಡೆದ' ಕಾಲ ಮತ್ತು ಕತೆ ಹೇಳುವ ಕಾಲವನ್ನು ದೂರವಿಡುವುದು. ೨. ಕತೆ ಹೇಳುವ ಪಾತ್ರ ಮತ್ತು ಕತೆಗಳಲ್ಲಿ ಮುಖ್ಯ ಪಾತ್ರ ವಹಿಸುವ ಪಾತ್ರಗಳ ಜಾತಿ, ವರ್ಗ ಮತ್ತು ವಯಸ್ಸುಗಳಲ್ಲಿ ಇರುವ ವ್ಯತ್ಯಾಸವನ್ನು ಓದುಗರ ಗಮನಕ್ಕೆ ತರುವುದು. ೩. ಜೀವನದಲ್ಲಿರುವ ನೋವಿನ ಗೂಢತೆಯನ್ನು (Mystery) ಒಪ್ಪಿಕೊಳ್ಳುವುದು ಮತ್ತು ಓದುಗ ಒಪ್ಪಿಕೊಳ್ಳುವಂತೆ ಮಾಡುವುದು ಮತ್ತು ೪. ದೃಷ್ಟಿಯನ್ನು ನೋವಿನ ಮೇಲೆ ಕೇಂದ್ರೀಕರಿಸದೆ, ನೋವನ್ನು ಕೊಂಚಮಟ್ಟಿಗಾದರೂ ಅರ್ಥಮಾಡಿಕೊಳ್ಳಲು ಮತ್ತು ಒಪ್ಪಿಕೊಳ್ಳಲು ಸಹಾಯ ಮಾಡುವ ಸಾಂಸ್ಕೃತಿಕ ಮೌಲ್ಯಗಳ ಮೇಲೆ ಕೇಂದ್ರೀಕರಿಸುವುದು. ಇವುಗಳಲ್ಲಿ ಮೊದಲನೆಯ ಎರಡು ತಂತ್ರಕ್ಕೆ ಸಂಬಂಧಿಸಿದುವಾದರೆ, ಕೊನೆಯ ಎರಡು ಮಾಸ್ತಿಯವರ ಸಂವೇದನಾಶೀಲತೆಗೆ ಸಂಬಂಧಿಸಿದುವಾಗಿವೆ.''
>
> (ಮಾಸ್ತಿಯವರ ಸಣ್ಣಕತೆಗಳು - 'ಶ್ರೀನಿವಾಸ')

ಕತೆಗಾರರಾಗಿ ಮಾಸ್ತಿ ಈ ತಂತ್ರಗಳನ್ನು, ಇಂಥ ಸಂವೇದನಾಶೀಲತೆಯನ್ನು ಕೊನೆಯವರೆಗೂ ಬಿಟ್ಟುಕೊಡಲಿಲ್ಲ. ಮನುಷ್ಯನ ಸಣ್ಣತನಗಳನ್ನು ಎಂದೂ ಮೆಚ್ಚಿಕೊಳ್ಳದ ಅವರು ಮೇಲುಕೀಳೆನ್ನದ ಎಲ್ಲರಲ್ಲೂ ಉದಾತ್ತ ಚೇತನವನ್ನು ಕಂಡರು. ಆದ್ದರಿಂದಲೇ ಅನೇಕ ಮಹಿಳೆಯರ ಸಂಗಸುಖ ಅನುಭವಿಸಿದ ಗಯಟೆ ಕವಿ, ಇಬ್ಬರು ಗಂಡಸರೊಡನೆ ಸುಖಿಸಿ ಮೂರನೆಯವನನ್ನು ಮದುವೆಯಾದ ಫಾಟ್‌ಲೈಟ್ ಪ್ರಭವಿ, ಲೈಂಗಿಕ ಸ್ವೇಚ್ಛೆಯಿಂದ ಮೆರೆದು, ಕೊನೆಗೆ ಒಬ್ಬನಿಂದ ಅಂಥ ಸುಖಪಡೆಯದೆ ಹೋದ ಇಸಾಡೋರಾ ಡಂಕನ್, ಮೊದಲಾದವರಲ್ಲೂ ಅವರು ದೊಡ್ಡತನವನ್ನು ಕಾಣುವುದು ಸಾಧ್ಯವಾಯಿತು.

ಅವರ ಬಹುಪಾಲು ಕತೆಗಳಲ್ಲಿ ಸ್ಥಾಯಿಯಾಗಿ ಕಾಣುವ ಇನ್ನೊಂದು ಅಂಶ ಮಾನವೀಯ ಅನುಕಂಪ. ಇದಕ್ಕೆ ಉದಾಹರಣೆಯಾಗಿ ಒಂದು ಪ್ರಸಂಗವನ್ನು ನೋಡಬಹುದು.

ಸುಮಾರು ಇಪ್ಪತ್ತಾರು ವರ್ಷ ತುಂಬಿದ ಮಾಸ್ತಿ. ಒಂದು ಸಣ್ಣ ಪಟ್ಟಣ. ಅಲ್ಲಿ ಒಬ್ಬರ ಮನೆಯಲ್ಲಿ ಸುಮಾರು ಹದಿನೈದು ಹದಿನಾರು ವರ್ಷ ವಯಸ್ಸಿನ ದೇವದಾಸಿ ಮನೆತನದ ಒಬ್ಬ ಹೆಣ್ಣು ಮಗಳ ಸಂಗೀತ (ಈಕೆ ಮುಂದೆ ರಂಗಭೂಮಿಯ ಅಭಿನೇತ್ರಿಯಾಗಿ ಪ್ರಖ್ಯಾತರಾದರು). ಹೆಣ್ಣು ಮಗಳ ಗಾಯನ ಪ್ರಾಂಭವಾಯಿತು:

''ಸರ್ಪಿಣಿ ನಾನು, ಸದ್ಗತಿ ಎನಗೆಲ್ಲಿ?'' ಸಭೆಯಲ್ಲಿದ್ದ ಸುಸಂಸ್ಕೃತರೆನಿಸಿಕೊಂಡ

ಹಲವಾರು ಮಂದಿ ತಲೆದೂಗತೊಡಗಿದರು. ಆದರೆ ಮಾಸ್ತಿಯವರಲ್ಲಿದ್ದ ಕತೆಗಾರ ಎಚ್ಚೆತ್ತ. ''ಅಯ್ಯೋ ಪಾಪವೆ, ಈಗ ತಾನೆ ಕಣ್ಣು ಬಿಡುತ್ತಿರುವ ಈ ಕೂಸಿನ ಬಾಯಲ್ಲಿ ಎಂಥ ಹಾಡು! ಇದು ಈಕೆಯ ಹೃದಯದಿಂದ ಬಂದದ್ದೆ? ಆದಾವ ಮನುಷ್ಯ ಈ ಹಾಡನ್ನು ಬರೆದು ಈ ಮಗುವಿನ ಬಾಯಲ್ಲಿ ಹಾಡಿಸುತ್ತಿದ್ದಾನೆ? ಈಕೆ ಸರ್ಪಿಣಿ ಹೇಗಾದಳು? ಇದು ನ್ಯಾಯವೆ?'' ಎಂದೆಲ್ಲ ಅನ್ನಿಸಿ ಅವರಿಗೆ ತುಂಬ ದುಃಖವಾಗಿಬಿಟ್ಟಿತು. ಕೆಲವು ದಿನಗಳ ನಂತರ ಅನುಕಂಪ ತುಂಬಿದ ಈ ದುಃಖವೇ ಅವರ ಕೈಯಲ್ಲಿ 'ಚಂದ್ರವದನಾ' ಎಂಬ ಕತೆಯಾಗಿ ರೂಪು ತಳೆಯಿತು.

ಮಾಸ್ತಿಯವರ ಮನಸ್ಸು ಪರಂಪರಾಗತ ಮೌಲ್ಯಗಳನ್ನು, ಒಪ್ಪಿಕೊಂಡದ್ದು; ಆದರೆ ಅದೇ ಕಾಲಕ್ಕೆ ಸಾಮಾಜಿಕ ಕಟ್ಟುಪಾಡುಗಳನ್ನು ಅವರು ಒಪ್ಪಿಕೊಂಡಂತೆ ತೋರುವುದಿಲ್ಲ. ಅವರನ್ನು ಮಡಿವಂತರು ಎಂದು ತಿಳಿದವರು 'ವೆಂಕಟಶಾಮಿಯ ಪ್ರಣಯ', 'ಕವಿಯ ಬಾಳ ಕೊನೆಯ ದಿನ', 'ಸಂಯಮಿ ಕೇಟೋ', 'ವಿಚಿತ್ರ ಪ್ರೇಮ', 'ಆಂಗ್ಲರ ನೌಕಾ ಕ್ಯಾಪ್ಟನ್', 'ದುರದೃಷ್ಟದ ಹೆಣ್ಣು', 'ಪಕ್ಷಿಜಾತಿ' ಇಂಥ ಕತೆಗಳನ್ನು ಓದಿದರೆ ಖಂಡಿತ ಬೆರಗಾಗುತ್ತಾರೆ. 'ವಿಚಿತ್ರ ಪ್ರೇಮ'ದ ಚಾಟ್‌ಲೈಟ್ ಪ್ರಭವಿ ಮೊದಲು ಫ್ರಾನ್ಸಿನ ಮಹಾ ಲೇಖಕ ವಾಲ್ಟೇರ್‌ನ ಪ್ರೇಯಸಿಯಾಗಿದ್ದಳು; ನಂತರ ಸೇಂಟ್ ಲ್ಯಾಂಬರ್ಟ್ ಎಂಬಾತನನ್ನು ಪ್ರೀತಿಸಿ, ಕೊನೆಗೆ ಚಾಟ್‌ಲೈಟ್ ಪ್ರಭುವನ್ನು ಮದುವೆಯಾದವಳು. ಸಾಯುವ ಮುನ್ನ ಅವಳಿಗೆ ವಾಲ್ಟೇರನನ್ನು ಒಮ್ಮೆ ನೋಡುವ ಆಸೆ. ಅವನು ಬಂದಾಗ ಅಲ್ಲಿ ಸೇಂಟ್ ಲ್ಯಾಂಬರ್ಟನೂ ಇರುತ್ತಾನೆ. ಆ ಹೆಣ್ಣು ವಾಲ್ಟೇರನನ್ನು ಉದ್ದೇಶಿಸಿ, ''ನನ್ನ ಪ್ರಭು ನನಗೆ ಪದವಿ ಕೊಟ್ಟರು, ನೀನು ಜಾಣನ ಒಲವನ್ನು ಕೊಟ್ಟೆ . . . ಸೇಂಟ್ ಲ್ಯಾಂಬರ್ಟ್ ರೂಪಿನ ಅನುಭವವನ್ನು ನೀಡಿದ. ನಾನು ತೃಪ್ತಳಾಗಿದ್ದೇನೆ'' ಎನ್ನುತ್ತಾಳೆ. ತನ್ನ 'ಅನೈತಿಕ' ಸಂಬಂಧ ಗಂಡನಿಗೆ ಗೊತ್ತಾಗುವುದೆಂಬ ಹೆದರಿಕೆಯಿಲ್ಲದ ಪ್ರಾಮಾಣಿಕವಾಗಿ ಆಡಿದ ಮಾತು. ಆದರೆ ಆ ಗಂಡನಾದರೂ ಎಂಥವನು? ''ಹೆಂಡಿರಾದವಳು ಬಂದಿಯೆಂದು ನಾನು ತಿಳಿದಿಲ್ಲ. ಗಂಡ ಹೆಂಡಿರ ಸಂಬಂಧದಲ್ಲಿ ಇವನಲ್ಲಿ ಸರಿ ಎನ್ನುವ ನಡತೆ ಅವಳಲ್ಲಿಯೂ ಸರಿ'' ಎಂದು ಹೇಳುವವನು. ಇಂಥ ಕತೆಗಳಲ್ಲಿ ಗಂಡು-ಹೆಣ್ಣಿನ ಸಂಬಂಧವನ್ನು ಕುರಿತಂತೆ ಮಾಸ್ತಿಯವರದು ಎಂಥ ಔದಾರ್ಯವುಳ್ಳ ಮನಸ್ಸು ಎಂಬುದು ಗೊತ್ತಾಗುತ್ತದೆ.

'ದುರದೃಷ್ಟದ ಹೆಣ್ಣು' ಕತೆಯಲ್ಲಿ ನಪುಂಸಕನೊಬ್ಬ ಮುಗ್ಧ ಹುಡುಗಿಯನ್ನು ಮದುವೆಯಾಗಿ, ಅವಳನ್ನು ಇತರ ಗಂಡಸರಿಗೆ ಒಡ್ಡಿ, ತನ್ನ ಜೀವನ ಸಾಗಿಸಲು ಪ್ರಯತ್ನಿಸುತ್ತಾನೆ. ಆ ಹುಡುಗಿ ತನ್ನ ಗಂಡ ಕರೆತಂದವನೊಬ್ಬನನ್ನು ಮೆಚ್ಚುವುದೂ, ಆತನಿಂದ ಅವಳ ಗಂಡನ ಕೊಲೆಯಾಗುವುದೂ ಪೂರ್ಣ ನಿಯೋಜಿತ ಎಂದು ಅನ್ನಿಸದಂತೆ ಸಹಾನುಭೂತಿಯ ಬೆಳಕಿನಲ್ಲಿ ಹೊಸ ತಿರುವು ಪಡೆಯುತ್ತವೆ.

ಗಂಡು-ಹೆಣ್ಣಿನ ಆಕರ್ಷಣೆ ವಯೋಮಾನಕ್ಕೆ, ನಿಸರ್ಗಕ್ಕೆ ಸಂಬಂಧಿಸಿದ್ದು ಎಂದು ನಂಬುವ ಮಾಸ್ತಿ, ಸಾಮಾಜಿಕವಾಗಿ ಯಾವುದನ್ನು ಅನೈತಿಕ ಎನ್ನುತ್ತೇವೋ ಅದಕ್ಕೆ ಗುರಿಯಾಗದಂತೆ ಸಂಯಮದಿಂದ ವರ್ತಿಸುವ ಪಾತ್ರಗಳನ್ನೂ ಸೃಷ್ಟಿಸಿದ್ದಾರೆ. 'ಬೀದಿಯಲ್ಲಿ ಹೋಗುವ ನಾರಿ', 'ಒಂದು ಹಳೆಯ ಕತೆ', 'ಗೌತಮಿ ಹೇಳಿದ ಕತೆ' ಮೊದಲಾದುವು ಅಂಥ ಪಾತ್ರಗಳಿರುವ ಕತೆಗಳು. 'ಗೌತಮಿ ಹೇಳಿದ ಕತೆ'ಯ ಗೌತಮಿ,

ಮಾಲಿನಿ ಎಂಬ ಹುಡುಗಿಯ ಕತೆಯೆಂದು ಹೇಳುವುದು ತನ್ನ ಕತೆಯನ್ನೇ. ಆದರೆ ಈ ಸಂಗತಿ ಸೂಚ್ಯವಾಗಿ ಗೊತ್ತಾಗುವುದು ಕತೆಯ ಅಂತ್ಯದಲ್ಲಿ. ಆಕೆ ಕಣ್ವಾಶ್ರಮದಲ್ಲಿ ಭಾರದ್ವಾಜನನ್ನು ಮದುವೆಯಾಗಬೇಕಾಗಿದ್ದವಳು. ಅವನು ನೀರಿನಲ್ಲಿ ಮುಳುಗಿ ಸತ್ತಮೇಲೆ ಯೌವನ ಸಹಜ ಆಕಾಂಕ್ಷೆಯಿಂದ ದತ್ತನಲ್ಲಿ ಪ್ರಣಯ ಭಿಕ್ಷೆ ಕೇಳುತ್ತಾಳೆ. ಮುಂದೆ ಆಶ್ರಮದ ಗುರುವಾಗಬೇಕಿರುವ ದತ್ತ ಅಸಾಧರಣ ಸಂಯಮದಿಂದ ವರ್ತಿಸುತ್ತಾನೆ. ಅವನು ಅವಳ ಕಾಲು ಹಿಡಿದು ''ನೀನು ಹೆಣ್ಣು; ಆದಿಶಕ್ತಿ; ನಿನಗೆ ಪತನವೆಂಬುದಿಲ್ಲ. ನಾನು ಹೆಣ್ಣಲ್ಲ. ನನಗೆ ನಿನಗಿರುವ ಆತ್ಮ ಶುದ್ಧಿಯಿಲ್ಲ. ನೀನು ಅನುಗ್ರಹಿಸಿದರೆ ನಾನು ಮುಂದುಗಾಣುತ್ತೇನೆ. ಹಠ ಮಾಡಿದೆಯೊ ನಾನು ಬಟ್ಟೆ ಗೆಟ್ಟೆ. ನನ್ನ ಮೇಲೆ ಅನುಗ್ರಹ ಮಾಡು. ನನ್ನನ್ನು ಕಾಪಾಡು'' ಎಂದು ಬೇಡುತ್ತಾನೆ. ಆಗ ಅವಳಿಗೆ ದತ್ತ ತನ್ನ ನೆರವಿನಿಂದ ಬೆಳೆಯಬಲ್ಲ ಅಸಹಾಯಕ ಹುಡುಗನಾಗಿ ಮಾತ್ರ ಕಾಣಿಸುತ್ತಾನೆ.

'ವೆಂಕಟಶಾಮಿಯ ಪ್ರಣಯದ'ದ ನಾಯಕ ದೊಂಬರ ಹುಡುಗಿಯಿಂದ ಆಕರ್ಷಿತನಾದಾಗ ಅವನು ಅವಿವೇಕಿಯಾಗಿ ವರ್ತಿಸಿದ ಎಂಬ ಧ್ವನಿ ಬರುವುದಿಲ್ಲ. ಅವನದು ಆರಾಧಿಸುವಂಥ ಮುಗ್ಧ ಪ್ರೇಮ. ಅವನಿಗಷ್ಟೇ ಅಲ್ಲ, ಅವನು ಕಳೆದುಕೊಂಡ ಹುಡುಗಿಗಾಗಿಯೂ ಮನಸ್ಸು ಕರಗುವಂತಹ ಚಿತ್ರಣ ಇಲ್ಲಿದೆ. 'ಕೃಷ್ಣಮೂರ್ತಿಯ ಹೆಂಡತಿ', 'ಕಾಮನ ಹಬ್ಬದ ಒಂದು ಕತೆ', 'ಮೇಲೂರಿನ ಲಕ್ಷಮ್ಮ', 'ಸುಶೀಲಾ, ರಜಾಕರ್' ಮೊದಲಾದುವು ದುರಂತ ಕತೆಗಳು, ಇವುಗಳಲ್ಲಿ ಸಾಮಾಜಿಕ ಅನ್ಯಾಯ ಹಾಗೂ ವಿಧಿಯ ಕೈವಾಡಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಪ್ರಯತ್ನ ಯಶಸ್ವಿಯಾಗಿದೆ. 'ಕಾಮನ ಹಬ್ಬದ ' ಕತೆ ಅಂತ್ಯದಲ್ಲಿ ಸುಖವಾಗಿ ಮುಗಿದರೂ ಕೇಂದ್ರಪಾತ್ರ ತನ್ನ ಅಮಾಯಕ ಸ್ಥಿತಿಯಿಂದಾಗಿ ಅನುಭವಿಸಬೇಕಾಗಿ ಬಂದ ನೋವು ಮಡುಗಟ್ಟಿ ನಿಲ್ಲುತ್ತದೆ.

''ಜೋಗ್ಯೋರ ಅಂಜಪ್ಪನ ಕೋಳೀಕತೆ'' ವಿನಾಕಾರಣ ಅಪರಾಧಿಯಾದವನ ಅಸಹಾಯಕತೆಯನ್ನು ಚಿತ್ರಿಸುತ್ತದೆ. ಇಲ್ಲಿ ನ್ಯಾಯ ವಿತರಣೆಯ ಅಸಮರ್ಪಕತೆಗಿಂತ, ಅನ್ಯಾಯಕ್ಕಿಂತ ಜುಲ್ಮಾನೆ ತೆತ್ತ ಅಂಜಪ್ಪನಿಗೆ ಜೀವನದ ಅನುಭವ ತಂದುಕೊಡುವ ವಿವೇಕ ಮುಖ್ಯವಾಗುತ್ತದೆ. 'ಬೈಚೇಗೌಡ' ಕತೆಯಲ್ಲಿ ಸಮಾಜ ನಿರ್ಧರಿಸುವ ಸರಿ ತಪ್ಪುಗಳ ಕಲ್ಪನೆಯುಳ್ಳ ನಾಯಕ ಕೊನೆಗೆ ತಪ್ಪುಮಾಡಿದ ಶ್ಯಾನುಭೋಗನನ್ನು ಉಳಿಸುವುದಕ್ಕಾಗಿ ತಾನೇ ತಪ್ಪು ಮಾಡುತ್ತಾನೆ. ಇನ್ನೊಬ್ಬರ ಸಹಾಯಕ್ಕಾಗಿ ಹೋಗಿ ಅಸಹಾಯಕನಾಗುವ ದುರಂತ ಇಲ್ಲಿನದು. ಆದರೆ 'ನಿಜಗಲ್ಲಿನ ರಾಣಿ' ತನ್ನ ಅಸಹಾಕ ಪರಿಸ್ಥಿತಿಯಲ್ಲೇ ವೀರವನಿತೆಯಾಗಿ ಮೆರೆಯುತ್ತಾಳೆ. 'ಅರ್ವಾಚೀನ ಆಂಗ್ಲ ಶಕುಂತಲೆ'ಯ ಹುಡುಗಿ ಯುವಕನೊಬ್ಬನಿಂದ ಬಸುರಾಗಿ ಬಂದು ಮಗು ಹೆತ್ತವಳು. ಹುಡುಗ ಉದ್ಯೋಗವನ್ನರಸಿ ಎಲ್ಲೋ ಹೋದವನು ಬರಲಿಲ್ಲ. ಆಕೆಯ ತಂದೆ ತಾಯಿಯರೂ ಬಡವರು. ಕೊನೆಗೆ ಅವಳು ಆ ಹುಡುಗನ ತಂದೆತಾಯಿಗಳಲ್ಲಿಗೆ ಬಂದು ತನ್ನ ಕತೆ ಹೇಳಿಕೊಂಡಾಗ, ಅವರಿಬ್ಬರೂ ಅವಳನ್ನು ಒಪ್ಪಿಕೊಂಡು, ತಮ್ಮ ಮನೆಯಲ್ಲಿರಿಸಿಕೊಳ್ಳುವ ಉದಾತ್ತ ಭಾವನೆ ತೋರಿಸುತ್ತಾರೆ. 'ಎಮ್ಮೆ ಕಳವು' ಕತೆಯಲ್ಲೂ ಕಡೆಯಲ್ಲಿ ಇದೇ ಬಗೆಯ ದೊಡ್ಡತನ ಕಾಣುತ್ತದೆ.

ಭಾರತಕ್ಕೆ ವಿದೇಶದಿಂದ ಬಂದು ನೆಲೆಸಿದ ಪ್ಲಾಂಟರುಗಳ ಸುತ್ತ ಹೆಣೆದಿರುವ ಕತೆ 'ಸೋರಲೀ ಪ್ರಸಂಗ'. ಇದರಲ್ಲಿ ವಿದೇಶೀ ಮಹಿಳೆ ಅರಾಬೆಲ್ಲಾ ಭಾರತದ ಬಗ್ಗೆ ತನ್ನ

ದೇಶದ ಪುರುಷರಿಗೆ ಸಾಧ್ಯವಾಗದಂತಹ ಒಳನೋಟಗಳನ್ನು ಪಡೆಯುತ್ತಾಳೆ. 'ಮಸುಮತ್ತಿ'ಯ ಎಮಿಲಿ ಇಂಥದೇ ಇನ್ನೊಂದು ಪಾತ್ರ. 'ಇಲ್ಲಿಯ ತೀರ್ಪು', 'ರಂಗನ ಹಳ್ಳಿಯ ರಾಮ' ಕತೆಗಳು, ವಿದೇಶೀ ಕಣ್ಣುಗಳು ಭಾರತವನ್ನು ನೋಡುವ ಇತ್ಯಾತ್ಮಕ ಪರಿಯನ್ನು ದಾಖಲಿಸುತ್ತವೆ. 'ಟಾಲ್‌ಸ್ಟಾಯ್ ಮಹರ್ಷಿಯ ಭೂರ್ಜ ವೃಕ್ಷಗಳು, ಧೀರ ಚೇತನವೊಂದರ ಅಂತಿಮ ತೊಳಲಾಟವನ್ನು ವರ್ಣಿಸಿದರೆ, 'ಶ್ರೀ ಕೃಷ್ಣನ ಅಂತಿಮ ಸಂದರ್ಶನ' ಸಾಮಾನ್ಯ ಮನುಷ್ಯನಾಗಿ ಕೊನೆಯುಸಿರೆಳೆದ ಅವತಾರ ಪುರುಷನನ್ನು ಚಿತ್ರಿಸುತ್ತದೆ. 'ಮೊಸರಿನ ಮಂಗಮ್ಮ'ನಂತೂ ತುಂಬ ಜಟಿಲವಾದ ಸಾಂಸಾರಿಕ ಸಂಬಂಧಗಳಲ್ಲಿ ನೆಮ್ಮದಿಯಿಂದಿರಬೇಕಾದರೆ ಹೊಂದಾಣಿಕೆ ಎಷ್ಟು ಮುಖ್ಯ ಎಂಬುದನ್ನು ಸೂಚಿಸುವವಳು.

ಇನ್ನು 'ಮುನೀಶ್ವರನ ಮರ', 'ಬಿಳಿಗಿರಿ ರಂಗ'ದಂಥ ದಂತಕತೆಗಳಲ್ಲಿ, 'ಮಲೆನಾಡಿನ ಒಂದು ಪಿಶಾಚ,' 'ಇಂದಿರೆಯೋ? ಅಲ್ಲವೊ?' ಎಂಬಂಥ ಅದ್ಭುತ ರಮ್ಯ ಕತೆಗಳಲ್ಲಿ, 'ಕಾಕಲೋಕ'ದಂಥ ದೃಷ್ಟಾಂತ ಕತೆಗಳಲ್ಲಿ, 'ಬಾದಷಹನ ನ್ಯಾಯ'ದಂತ ಚಮತ್ಕಾರ ಪ್ರದರ್ಶಿಸುವ ಮೋಜಿನ ಕತೆಗಳಲ್ಲಿ ಯಾವುದನ್ನೂ ಲಘುವಾಗಿ ಪರಿಗಣಿಸಿದ ಉದಾರವಾದ ಮನಸ್ಸೇ ಕೆಲಸಮಾಡಿದೆ.

ಮಾಸ್ತಿಯವರದು ನೂರು ಕತೆಗಳು, ನೂರಾರು ಪಾತ್ರಗಳು. ಬದುಕಿನ ಅನಂತ ಮುಖಗಳನ್ನೂ ಅವುಗಳ ಸ್ವಭಾವ ವೈಚಿತ್ರಗಳನ್ನೂ ಹೃದಯಸ್ಪರ್ಶಿಯಾಗುವಂತೆ ಅವರು ನಿರೂಪಿಸಿದ್ದಾರೆ. ಪ್ರೀತಿ, ನೋವು, ನಲಿವು, ದೇಶದ ಮತ್ತು ಮನುಷ್ಯನ ಘನತೆ, ಅವನತಿ, ಸಾರ್ಥಕ ಜೀವನ, ನೈತಿಕ ಹೊಣೆಗಾರಿಕೆ, ಸಂಸ್ಕೃತಿಯ ಮಹತ್ವ, ಪರಂಪರಾನುಗತ ಮೌಲ್ಯಗಳ ವಿಶ್ಲೇಷಣೆ- ಹೀಗೆ ಅವರು ಕತೆಗಳಲ್ಲಿ ಒಡಮೂಡಿಸದ ವಿಷಯಗಳಿಲ್ಲ. ಅವರ ಆರ್ಷೇಯ ದೃಷ್ಟಿ ಇಡೀ ಜಗತ್ತನ್ನು ಒಳಗೊಳ್ಳುವಂಥದು; ಮಾನವೀಯ ಕಳಕಳಿಯಿಂದ ಪ್ರಬುದ್ಧ ಜೀವನದರ್ಶನವನ್ನು ಪ್ರಕಟಗೊಳಿಸುವಂಥದು. ಅವರಷ್ಟು ಯಶಸ್ವೀ ಕತೆಗಳನ್ನು ಬರೆದವರು ಬಹುಶಃ ಇನ್ನೊಬ್ಬರಿರಲಾರರು, ನೂರು ಕತೆಗಳನ್ನು ಒಟ್ಟಿಗೇ ಓದಿದಾಗ ಒಬ್ಬರೇ ವ್ಯಕ್ತಿ ಇಷ್ಟೆಲ್ಲಾ ಬಗೆಯ ಕತೆಗಳನ್ನು ಬರೆದರೆಂದು ನಂಬುವುದೇ ಕಷ್ಟವಾಗುತ್ತದೆ. ಮತ್ತೆ ಅಷ್ಟೂ ಕತೆಗಳ ಬಗ್ಗೆ ವಿವರವಾಗಿ ಬರೆಯುವುದಕ್ಕೂ ಇಲ್ಲಿ ಅವಕಾಶವಿಲ್ಲ. ಮಾಸ್ತಿಯವರ ಕಥಾ ಸಾಹಿತ್ಯವನ್ನು ಪ್ರವೇಶಿಸಲು ಅನುಕೂಲವಾಗುವಂಥ ಒಂದು ರೂಪುರೇಷೆಯನ್ನಷ್ಟೇ ರಚಿಸಲು ಇಲ್ಲಿ ಪ್ರಯತ್ನಿಸಿದ್ದೇನೆ. ಕನ್ನಡ ಸಾಹಿತ್ಯದಲ್ಲಿ ಅವರ ಸ್ಥಾನ ಎಂಥದು, ಮುಂದಿನ ಪೀಳಿಗೆಯವರಿಗೆ ಅವರ ಮಹತ್ವ ಎಷ್ಟು ಎಂಬ ಬಗೆಗೆ ಲೇಖಕ, ವಿಮರ್ಶಕ ಡಾ।। ಯು.ಆರ್. ಅನಂತಮೂರ್ತಿಯವರು ಬರೆದಿರುವುದು ತೀರ ಅರ್ಥಪೂರ್ಣ. ಹಾಗಾಗಿ ಅವರ ಮಾತುಗಳಿಂದಲೇ ಈ ಲೇಖನವನ್ನು ಮುಗಿಸುವುದು ಔಚಿತ್ಯಪೂರ್ಣವೆನಿಸುತ್ತದೆ, ನನಗೆ.

> ''ಪ್ರಾಯಕ್ಕೆ ಬರುತ್ತಿರವ ಮಕ್ಕಳಿಗೆ ಯಾವನಾದರೂ ಒಬ್ಬ ಕನ್ನಡ ಲೇಖಕನನ್ನು ಓದಲು ಕೊಡಬೇಕೆಂದು ಅನಿಸುವುದಾದರೆ ಅದು ಮಾಸ್ತಿ ಎಂದು ನನ್ನ ಭಾವನೆ. ಜೀವನದ ನಿಜಗಳೇನು, ಸೋವುಗಳೇನು, ತಾಳುವುದೆಂದರೇನು, ಗೆಲ್ಲುವುದೆಂದರೇನು ಎಂಬ ಕಷ್ಟಗಳನ್ನು ಭಾವಾತಿ ರೇಕವಿಲ್ಲದೆ, ಸೋಗಿಲ್ಲದೆ ಎದುರಿಸಲು ಖಂಡಿತ ಮಾಸ್ತಿ

ಕಲಿಸುತ್ತಾರೆ. ನಮ್ಮ ಭಾವನಾ ಪ್ರಪಂಚವನ್ನು ಪಕ್ವವಾಗಿಸಬಲ್ಲ ಶಿಕ್ಷಣ ಅವರ ಕಥೆಗಳಿಂದ ಖಂಡಿತ ಸಿಗುತ್ತದೆ. ನಯವಾದ ಮಾತಾಡುವವರೆನ್ನೆಲ್ಲ ಅನುಮಾನದಿಂದ ನೋಡುವುದು ಸರಿಯೆನ್ನಿಸುವ ಈ ಕಾಲದಲ್ಲಿ, ಅಂಥ ಮಾತುಗಳನ್ನೇ ಆಡಿಯೂ ಪ್ರಾಮಾಣಿಕರಾಗಿರುವ ಮಾಸ್ತಿಯವರಂಥ ಅಪ್ಪಟ ಸಾಹಿತಿಗಳು ಕನ್ನಡದಲ್ಲಾಗಲಿ, ಇಂಗ್ಲಿಷಿನಲ್ಲಾಗಲಿ ತೀರ ಅಪರೂಪ.''

ಮಾಸ್ತಿಯವರ ಐತಿಹಾಸಿಕ ಕಾದಂಬರಿಗಳು

ಪ್ರೊ|| ಕೀರ್ತಿನಾಥ ಕುರ್ತಕೋಟಿ

ಶ್ರೀ ಮಾಸ್ತಿಯವರು ೧೯೨೪ರಷ್ಟು ಹಿಂದೆಯೇ 'ಚನ್ನಬಸವನಾಯಕ' ಕಾದಂಬರಿಯ ಹೊಳಹನ್ನು ಹಾಕಿದ್ದರು; ಆದರೆ ಅದನ್ನು ಬರೆದು ಮುಗಿಸಿದ್ದು ಮಾತ್ರ ೧೯೫೦ರಲ್ಲಿ. 'ಚನ್ನಬಸವನಾಯಕ' ಪ್ರಕಟವಾದೊಡನೆ 'ಚಿಕವೀರ ರಾಜೇಂದ್ರ' ಅವರ ಬಗೆಯಲ್ಲಿ ರೂಪುಗೊಂಡು ಮತ್ತೆ ಕೆಲ ವರ್ಷಗಳಾದ ಮೇಲೆ ಮುಗಿದು ಪ್ರಕಟವಾಯಿತು. ಈ ಸಂಗತಿಗಳಿಂದ ವಿದಿತವಾಗುವ ಮಹತ್ವದ ಅಂಶವೆಂದರೆ ಈ ಎರಡೂ ಕಾದಂಬರಿಗಳ ಸೃಷ್ಟಿಸಂದರ್ಭ ಒಂದೇ ಆಗಿರುವದು. ಈ ಕಾದಂಬರಿಗಳ ಇತಿಹಾಸ ಸಾಮಗ್ರಿ ಕರ್ನಾಟಕದ ಭಿನ್ನ ಭಿನ್ನ ಸ್ಥಳಗಳಿಗೆ - ಬಿದನೂರು ಮತ್ತು ಕೊಡಗು - ಸಂಬಂಧಿಸಿದ್ದಾಗಿದೆ; ಅಲ್ಲದೆ ಈ ಕಥೆಗಳ ಗಮನ, ಉದ್ದೇಶ ಪರಿಣಾಮಗಳು ಕೂಡ ಬೇರೆ ಬೇರೆಯಾಗಿವೆ. ಇಷ್ಟಾಗಿಯೂ ಈ ಕಾದಂಬರಿಗಳ ಬಂಧ ಮತ್ತು ಉದ್ದೇಶಗಳಲ್ಲಿ ಮತ್ತು ಜೀವನ ದೃಷ್ಟಿಯ ಬೆಳವಣಿಗೆಯಲ್ಲಿ ಒಂದು ಐಕ್ಯ ಕಾಣುತ್ತದೆ.

ಈ ಕಾದಂಬರಿಗಳೆರಡು ಐತಿಹಾಸಿಕವಾಗಿರುವದರಿಂದ ಈ ಬಗೆಯ ಐಕ್ಯ ಸಾಧ್ಯವಾಗುತ್ತದೇನೋ ಎಂಬ ಅನುಮಾನ ಬರಬಹುದು. ಆದರೆ ಈ ಕಾದಂಬರಿಗಳ ವಸ್ತು ಐತಿಹಾಸಿಕವಾಗಿರುವದು ಆನುಷಂಗಿಕವಾದ ವಿಷಯ. ಮಾಸ್ತಿಯವರ ಬರವಣಿಗೆಯ ರೀತಿ ಒಂದು ಸಮಗ್ರ ದೃಷ್ಟಿಯ ವಾಸ್ತವಿಕತೆಯ ರೀತಿ; ಅಂದರೆ ಅದು ವ್ಯಾವಹಾರಿಕ ಅನುಭವಕ್ಕೆ ಮಾತ್ರ ಸೀಮಿತವಾಗಿರುವ ವಾಸ್ತವಿಕತೆ ಅಲ್ಲ. ಇತಿಹಾಸದ ವೈಭವವನ್ನು ಕಲ್ಪನೆಯಿಂದ ಕಂಡು ಅದನ್ನು ಪುನರ್ರಚಿಸುವ ಹಂಬಲ ಮಾಸ್ತಿಯವರ ಬರವಣಿಗೆಯಲ್ಲಿ ಕಾಣುವದಿಲ್ಲ. ಒಮ್ಮೆಮ್ಮೆ ವರ್ಣನೆಯ ಚಿತ್ರಕತೆ ಅಚ್ಚಳಿಯದ ಪರಿಣಾಮವನ್ನುಂಟು ಮಾಡುತ್ತಿದ್ದರೆ ಅದಕ್ಕೆ ಕಾರಣ ಅವರ ಗದ್ಯ ಗದ್ಯತನವನ್ನು ಕಾಯ್ದುಕೊಂಡೂ ಶ್ರೇಷ್ಠ ಕಾವ್ಯದ ಅನುಭವವನ್ನು ಮೂಡಿಸಲು ಸಮರ್ಥವಾಗುತ್ತದೆಂಬುದು. ಚಿಕ್ಕವೀರ ರಾಜ ರೆಸಿಡೆಂಟ್ ಮತ್ತು ಅವನ ಸಂಗಡಿಗರನ್ನು ಕಾಣುವಾಗ, ''. . . ದೊಡ್ಡ ವಜ್ರ ಒಂದರಿಂದ ಬೆಳಗುತ್ತಿದ್ದ ಪಾಗನ್ನು ತಲೆಯಲ್ಲಿಟ್ಟು. . .'' ಸ್ವಾಗತಿಸಿದನು ಎಂಬ ಸಣ್ಣ ಆದರೆ ಖಚಿತವಾದ ವಿವರವೊಂದನ್ನು ಉಪಯೋಗಿಸಿ ಸನ್ನಿವೇಶವನ್ನು ಅವರು ಸೃಷ್ಟಿಸಬಲ್ಲರು. ಕಾದಂಬರಿಯಲ್ಲಿ ಇದೊಂದೇ ಸನ್ನಿವೇಶದಲ್ಲಿ ವೀರರಾಜನ ವೇಷಭೂಷಣಗಳ ವಿವರ ವರ್ಣಿತವಾಗಿರುವದರಿಂದ ಉಳಿದ ಕಡೆಗಳಲ್ಲಿ ಅವನು ಹಿಂಸೆ, ಕಾಮುಕತನಗಳ ನಗ್ನ ಉನ್ಮಾದಗಳ ವರ್ಣನೆಗೆ ಹೆಚ್ಚು ವ್ಯಂಗ್ಯದಿಂದ ಕೂಡಿದಂತಾಗಿದೆ. ಮಾಸ್ತಿಯವರ ಲಕ್ಷ್ಯ ಯಾವಾಗಲೂ ಮನುಷ್ಯರ ನಡವಳಿಕೆಯ ಇತಿ-ಮಿತಿಗಳ ಕಡೆಗೆ, ಅವನ ಊರ್ಧ್ವಗಮನ ಮತ್ತು ಅಧೋಗತಿಗಳ ವಿಚಿತ್ರದ ಕಡೆಗೆ ನೆಟ್ಟಿರುವದರಿಂದ ಅವರ ಬರವಣಿಗೆಯಲ್ಲಿ ಅಂತಃಸತ್ವವನ್ನು ಕಾಣಬಹುದೇ ಹೊರತು ಹೊರಗಿನ ಆವರಣವನ್ನಲ್ಲ. ಕಲೆಯ

ದೃಷ್ಟಿಯಿಂದ ಮಾಸ್ತಿಯವರ ಬರವಣಿಗೆಯಲ್ಲಿಯ ಪರಿಣತಿ ನನಗೆ ಈ ದಿಸೆಯಲ್ಲಿ ಕಾಣುತ್ತದೆ. ಕತೆಯ ಸಾಮಗ್ರಿಯಲ್ಲಿ ಉಳಿಸಬೇಕಾದ ಅಂಶ ಎಷ್ಟು, ಬಿಟ್ಟುಬಿಡಬಹುದಾದ ಅಂಶ ಎಷ್ಟು ಎಂಬುದು ನುರಿತ ಕಲಾವಿದನಿಗೆ ತಟ್ಟನೆ ಹೊಳೆಯುತ್ತದೆ. ಕಲೆಯೆಂದರೆ ಕೈಗೆ ಸಿಕ್ಕ ಸಾಮಗ್ರಿಯನ್ನು ನುಣುಪುಗೊಳಿಸುವದಾಗಲಿ, ಹೊಳಪುಗೊಳಿಸುವದಾಗಲಿ ಅಲ್ಲ. ಮಾಸ್ತಿಯವರ ಕೃತಿಗಳಲ್ಲಿ ಕಥೆ ತಳೆಯುವ ಆಕಾರ ಮುಖ್ಯವೇ ಹೊರತು ಬರವಣಿಗೆಯ ಪರಿಷ್ಕಾರವಲ್ಲ.

ಹಿಂದೆ ಕನ್ನಡ ಕಾದಂಬರಿಯನ್ನು ಕುರಿತು ಬರೆದಿದ್ದ ದೊಡ್ಡ ಪ್ರಬಂಧದಲ್ಲಿ ಈ ಎರಡು ಕಾದಂಬರಿಗಳ ಬಗ್ಗೆ ಬರೆಯುತ್ತ, ನಾನು ಮಾಸ್ತಿಯವರಿಗೆ ಇತಿಹಾಸದ ರಾಜಕೀಯ ತಂತ್ರ ಪ್ರತಿ-ತಂತ್ರಗಳಿಗಿಂತ ಸಂಸ್ಕೃತಿ-ದರ್ಶನದಲ್ಲಿ ಹೆಚ್ಚು ಆಸಕ್ತಿ ಎಂದು ಬರೆದಿದ್ದೆ. ಈ ಮಾತು ಒಂದು ಅಂಶದಲ್ಲಿ ಮಾತ್ರ ಸತ್ಯ ಎಂದು ಈಗ ನನಗೆ ತೋರುತ್ತದೆ. ನನ್ನ ಹೇಳಿಕೆಯಲ್ಲಿ ಐತಿಹಾಸಿಕ ಕಾದಂಬರಿಯನ್ನು ಈ ಎರಡು ಸಂಗತಿಗಳಲ್ಲಿ ಮಾತ್ರ ಅಡಕಗೊಳಿಸುಬಹುದೆಂಬ ವಿಚಾರವೇ ಅಪೂರ್ಣವಾಗಿದೆ. ಕಾದಂಬರಿ ಐತಿಹಾಸಿಕವೇ ಇರಲಿ, ಸಾಮಾಜಿಕವೇ ಇರಲಿ ಅದರ ಸಾಧ್ಯತೆಗಳೂ ಬಹಳ ಇವೆ. ಈ ಕಾದಂಬರಿಗಳಲ್ಲಿ ಮಾಸ್ತಿಯವರು ಸಾಮಾನ್ಯ ಜೀವನದ ಸಾಂಸ್ಕೃತಿಕ ಮೌಲ್ಯಗಳನ್ನು ಒಂದು ಮಹತ್ವದಿಂದ ಚಿತ್ರಿಸಿರುವದು ನಿಜವೇ. ಎಂಥ ಅಪಾಯದ ಹೊತ್ತಿನಲ್ಲಿಯೂ ಸುರಕ್ಷಿತವಾಗಿ ಉಳಿಯಬಲ್ಲ ಮೌಲ್ಯಗಳ ಮತ್ತು ಅವನ್ನು ಉಳಿಸಿಕೊಂಡು ಬರಬೇಕೆಂಬ ಹಂಬಲವುಳ್ಳ ವ್ಯಕ್ತಿಗಳ ಚಿತ್ರಣ ಈ ಎರಡೂ ಕೃತಿಗಳಲ್ಲಿ ಅರ್ಥಪೂರ್ಣವಾದ ಅಂಶಗಳಾಗಿವೆ. ಆದರೆ ಈ ರೀತಿಯ ಸಂಸ್ಕೃತಿ-ದರ್ಶನ ಎಷ್ಟೇ ಮುಖ್ಯವಾಗಿದ್ದರೂ ಅದು ಈ ಕೃತಿಗಳು ನಿರ್ವಹಿಸುವ ಒಂದು ಕಾರ್ಯ ಮಾತ್ರವಾಗಿದೆ. ಆದರೆ ಸಂಸ್ಕೃತಿಯ ಚಿತ್ರಣವಷ್ಟೇ ಈ ಕಾದಂಬರಿಗಳ ಏಕಮಾತ್ರ ಉದ್ದೇಶವಾಗಿದ್ದರೆ ಈ ಕಾದಂಬರಿಗಳ ನಾಯಕ ಪಾತ್ರಗಳ ಅರ್ಥವಂತಿಕೆ ಎಷ್ಟು ಎಂಬ ಪ್ರಶ್ನೆ ತಾನಾಗಿ ಏಳುತ್ತದೆ. ಸಂಸ್ಕೃತಿಯೆಂದರೆ ಜೀವನಾನುಭವ ಪಾಕಗೊಂಡು ಹರಳುಗಟ್ಟಿದ ಮೌಲ್ಯ; ಅದರ ಬದಲಾಗಿ ಸಂಸ್ಕೃತಿಯನ್ನು ಜೀವನದ ಸಮಸ್ಯೆಗಳಿಗೆ ಸಿದ್ಧವಾಗಿರುವ ಸುಲಭವಾದ ಉತ್ತರ ಎಂದು ತಿಳಿದರೆ ತಪ್ಪಾದೀತು. ಎಂಥ ಸುಸಂಸ್ಕೃತ ಸಮಾಜದಲ್ಲಿಯೂ ಜೀವನದ ಮೂಲಭೂತವಾದ ದುಃಖ ಕಷ್ಟಗಳು ತಪ್ಪಿಲ್ಲ. ಮಾಸ್ತಿಯವರ ಈ ಕೃತಿಗಳಲ್ಲಿಯೂ ಬಿಸಿ ತಟ್ಟಿಸುವ, ಕಣ್ಣು ತೆರೆಯಿಸುವ, ದಿಗ್ಭ್ರಮೆಗೊಳಿಸುವ ದುಃಖಗಳಿಗೆ ಕೊರತೆ ಇಲ್ಲ. ಚನ್ನಬಸವನಾಯಕ, ವೀರಮ್ಮಾಜಿ, ಶಾಂತವ್ವೆ, ವೀರರಾಜ, ಗೌರಮ್ಮಾಜಿ, ರಾಜಕುಮಾರಿ ಮೊದಲಾದ ವ್ಯಕ್ತಿಗಳ ಜೀವನದ ರೌದ್ರಕರುಣಗಳು ಕಾದಂಬರಿಯ ಅನುಭವ ಪ್ರಪಂಚದ ಮಹತ್ವದ ಭಾಗವಾಗಿರುವದರಿಂದ ಅವುಗಳನ್ನು ಕಾದಂಬರಿಯ ಸಮಗ್ರಶಿಲ್ಪದ ದೃಷ್ಟಿಯಿಂದ ಪರಿಶೀಲಿಸಬೇಕಾದ ಅಗತ್ಯವಿದೆ.

ಮೇಲೆ ಹೆಸರಿಸಿರುವ ಪಾತ್ರಗಳು ಸಾಂಸ್ಕೃತಿಕವಾಗಿ ತಮ್ಮ ಸಮಾಜದಿಂದ ದೂರ ಸಿಡಿದುಹೋದ ವ್ಯಕ್ತಿಗಳಲ್ಲ. ಈ ನಾಯಕ ಪಾತ್ರಗಳ ಸಾಮಾಜಿಕ ಅಂತಸ್ತು ಕೂಡ ನಾಯಕರದೇ. ಆದರೆ ಹಿಂದಿನ ಕಾಲಕ್ಕೆ ನಾಯಕ ಮತ್ತು ಅನುಯಾಯಿಗಳ ಸಂಬಂಧ ಗಾಢವಾದ ಸಜೀವ ಸಂಬಂಧವಾಗಿತ್ತೆಂಬುದನ್ನು ಹೆಚ್ಚಿಗೆ ವಿವರಿಸಿ ಹೇಳುವ ಕಾರಣವಿಲ್ಲ. ರಾಜ್ಯ ವ್ಯವಸ್ಥೆ ಈಗಿನಂತೆ ವ್ಯಕ್ತಿ ನಿರಪೇಕ್ಷವಾಗಿರದೆ ವೈಯಕ್ತಿಕವಾಗಿತ್ತು. ಜೀವನಾನುಭವದ ನಿರಂತರವಾದ ಮಥನದಿಂದ ವ್ಯಕ್ತಿನಿರಪೇಕ್ಷವಾದ ಆದರೆ ಜೀವಂತವಾದ ಧರ್ಮ

ಸೃಷ್ಟಿಯಾಗುತ್ತಿತ್ತು. ಕಾಯದೆಗಿಂತ ನಿಸ್ಪೃಹ ಮನುಷ್ಯನ ಸ್ಥಿತಪ್ರಜ್ಞೆಯ ಮಾತಿಗೆ ಆಗ ಹೆಚ್ಚು ಬೆಲೆ ಇರುತ್ತಿತ್ತು. ವೈಯಕ್ತಿಕ ಸಂಬಂಧಗಳನ್ನು ತಿರಸ್ಕರಿಸಿ ಅಲ್ಲ, ಆದರೆ ಅವುಗಳನ್ನು ಮೀರಿದ ಸಾರ್ವತ್ರಿಕವಾದ ಮೌಲ್ಯಗಳ ವ್ಯವಸ್ಥೆಯನ್ನು ಸಮಾಜ ಒಪ್ಪಿಕೊಂಡಿತ್ತು.

'ಚನ್ನಬಸವನಾಯಕ'ದಲ್ಲಿ ಈ ಸಂಬಂಧಗಳ ನಿರೂಪಣೆ ಹೆಚ್ಚು ಪ್ರಭಾವ ಪೂರ್ಣವಾಗಿ ಬಂದಿದೆ. ಬೆಟ್ಟದ ತಗ್ಗಿನಲ್ಲಿರುವ ವಸ್ತಾರೆಯಿಂದ ಹಿಡಿದು ಬಿದನೂರಿನವರೆಗೆ, ಒಂದೇ ಸಂವೇದನೆಯ, ಒಂದೇ ಶಿಸ್ತಿಗೆ ಒಳಪಟ್ಟಿರುವ, ಅಂದರೆ ಒಂದೇ ಸಂಸ್ಕೃತಿಯ ಜೀವನ ಚಿತ್ರ ಇಲ್ಲಿದೆ. (ದೂರದ ಮೈಸೂರಿನಲ್ಲಿ ಕೂಡ ಬೇರೆ ರೀತಿಯ ಸಾಂಸ್ಕೃತಿಕ ಜೀವನವಿರಬಹುದೆಂಬ ಸೂಚನೆ ಇಲ್ಲ. ಶಾಂತನ್ವೆಯ ಚೇಟಿ ಕೆಂಚವ್ವನಿಗೆ ಮೈಸೂರವರು ಆಡುವ ಭಾಷೆ ಸ್ವಲ್ಪ ಭಿನ್ನವೆಂದು ತೋರಿತೇ ಹೊರತು ಸಂಸ್ಕೃತಿಯಲ್ಲ.) ಬಿದನೂರಿನ ಪಟ್ಟ ಕೆಲಕಾಲ ಅನಾಯಕವಾಗಿದ್ದರೆ ವಸ್ತಾರೆಯ ಹೆಗ್ಗಡಿತಿ ತನ್ನ ಆಳ್ವಿಕೆಯಲ್ಲಿಯೇ ಏನೋ ಊನವಾದಂತೆ ಕಳವಳಪಡುತ್ತಾಳೆ. ಈ ಸಮಾಜ ತನ್ನ ಮಟ್ಟಿಗೆ ಒಳಿತು ಕೆಡಕುಗಳನ್ನು ಖಚಿತವಾಗಿ ನಿರ್ಣಯಿಸಿಕೊಂಡು, ಬದುಕಿನ ಧರ್ಮವನ್ನು ಕಾಪಾಡಿಕೊಂಡು ಬಂದಿರುವ ಸಮಾಜ. ಧರ್ಮ ಇಲ್ಲಿ ಕಲಿತವರ ಅಥವಾ ಮುಂದುವರಿದವರ ಸೊತ್ತಲ್ಲ. ಹಿರೇಮಠದ ಅಯ್ಯ, ನೇಮಯ್ಯ ಇಂಥ ಸಂಸ್ಕೃತಿಯ ಜೀವಂತ ಪ್ರತೀಕವಾಗಿದ್ದವರು ಕೂಡ ಬಹಳ ಕಲಿತವರೇನಲ್ಲ. ಇಷ್ಟಾದರೂ ಈ ಬದುಕಿನ ಒಪ್ಪ ಓರಣಗಳು ತಲೆತಲಾಂತರದಿಂದ ಇಳಿದು ಬಂದಿರುವ ತಿಳುವಳಿಕೆಯ ಫಲವಾಗಿವೆ. ನಗರದಪೇಟೆಯ ವ್ಯವಹಾರದಲ್ಲಿಯ ಪ್ರಾಮಾಣಿಕತೆ, ನೇಮಯ್ಯನ ತೂಕದ ನಡೆವಳಿಕೆ, ಶಾಸ್ತ್ರಿಯ ನಿಷ್ಠುರವಾದ ಸತ್ಯ ಪ್ರಿಯತೆ, ಈ ಲೋಕದ ಬದುಕಿಗೆ ಅರ್ಥವನ್ನು ನೀಡುವ ಮಠದ ಅಯ್ಯನ ಸಹಜ ಅನುಭಾವ ಇವುಗಳಿಂದ ಶ್ರೀರಂಗಪಟ್ಟಣದಿಂದ ರಾಜದೂತನಾಗಿ ಬಂದ ರಾಯಸದ ವೀರಣ್ಣ ಪ್ರಭಾವಿತನಾಗುತ್ತನೆ. ಬಿದನೂರಿನ ಜೀವನಕ್ಕಿಂತ ಶ್ರೀರಂಗಪಟ್ಟಣದ ಜೀವನ ಹೆಚ್ಚು ಮುಂದುವರಿದದ್ದು, ಹೆಚ್ಚು ಪರಿಷ್ಕೃತವಾದದ್ದು. ಆದರೆ ರಾಜಕೀಯದ ದುಷ್ಟಭಾವಗಳಿಗೆ ಒಳಗಾಗಿ ಅಂತರಂಗದಲ್ಲಿ ಟೊಳ್ಳಾಗಿರುವ ಜೀವನ ಅದು. ಅಧಿಕಾರದ ಭಯಕ್ಕೆ ತತ್ತರಿಸಿ ನಡಗುವ ಮೌಲ್ಯ ವ್ಯವಸ್ಥೆಯಿಂದ ಜೀವನಕ್ಕೆ ಏನು ಉಪಯೋಗವಾದೀತು? ''ಸಂಬಳ ಒಂದು ಕೊಟ್ಟರೆ ಸಾಕು ಮೈಸೂರಿನ ಬ್ರಾಹ್ಮಣರು ಯಾವ ಬೈಗುಳನ್ನು ಬೈದರೂ ಸಹಿಸಿಕೊಳ್ಳುವರು'' ಎಂಬ ಅನುಭವವುಳ್ಳ ಹೈದರ್, ಮಂತ್ರಿ ಲಿಂಗಣ್ಣಯ್ಯನ ದಿಟ್ಟವಾದ ನಡೆವಳಿಕೆಯಿಂದ ಹತಪ್ರಭನಾಗುತ್ತಾನೆ. ಆಳಬೇಕಾದ ಅರಸ ಒಂದು ನಿರ್ಜೀವ ಸಂಕೇತವಾಗಿ ಒಂದು ಉಪಕೃತ ಜೀವ ಸರ್ವಾಧಿಕಾರಿಯಾಗಿ ಮೆರೆಯುತ್ತಿರುವದೇ ಅವನತಿಯನ್ನು, ವಿಪರೀತ ಮೌಲ್ಯಗಳನ್ನು ಸೂಚಿಸುತ್ತದೆ.

ಈ ಕಾದಂಬರಿಯ ಒಂದು ಮಗ್ಗುಲಲ್ಲಿ ಮೌಲ್ಯಗಳಿಂದ ಪರಿಪುಷ್ಟವಾದ ಜೀವನ ಚಿತ್ರವಿದ್ದರೆ ಇನ್ನೊಂದು ಮಗ್ಗುಲಲ್ಲಿ ನಾಯಕ ಪಾತ್ರಗಳ ಜೀವನ ವಿಷಮವಾಗುತ್ತಿರುವ ಚಿತ್ರವಿದೆ. ನಾಯಕ ಪಾತ್ರಗಳ ವ್ಯಕ್ತಿತ್ವದಲ್ಲಿ ಅವುಗಳ ಅಂತಸ್ತಿಗೆ ಅನುಗುಣವಾಗಿ ಹೆಚ್ಚು ಸ್ವಾತಂತ್ರ್ಯವಿದೆ. ಅಧಿಕಾರವುಳ್ಳವರಿಗೆ ಸ್ವಾಧೀನತೆಯ ಜೊತೆಗೆ ಸಂಯಮವೂ ಇದ್ದರೆ ಲೋಕಕ್ಕೆ ಕ್ಷೇಮವಾಗುತ್ತದೆ. ಅದರಲ್ಲಿಯೂ ಬಿದನೂರಿನ ರಾಜಮನೆತನದಲ್ಲಿ ಸಂಯಮ ತಪ್ಪಿದವಳು ಹೆಣ್ಣು, ತಾಯಿ ವೀರಮ್ಮಾಜಿ. ಅವಳ ಸಲ್ಲದ ನಡತೆಯಿಂದ ರಾಜಮನೆತನದ ಜೀವನ ವಿರಸಗೊಂಡಿದೆ. ಮಗನಿಗೆ ಪಟ್ಟವನ್ನು ಬಿಟ್ಟುಕೊಡಲು ತಾಯಿಗೆ ಮನಸ್ಸಿಲ್ಲ;

ಮಗನಿಗೆ ಅದನ್ನು ಕೇಳಲು ಸಂಕೋಚ. ಇವರಿಬ್ಬರ ನಡುವೆ ಇವರಿಬ್ಬರಿಗಿಂತ ಹೆಚ್ಚು ಸಂಕೋಚವನ್ನು ಅನುಭವಿಸುವವಳು ಶಾಂತವ್ವೆ.

ಎರಡು ಲಕ್ಷ ಜನ ವಾಸಿಸುವ ಬಿದನೂರಿನಲ್ಲಿ ದುಬಾರಿ ತಿಟ್ಟಿನ ಕಳ್ಳ ವ್ಯವಹಾರ ಬೇರೆ, ಪೇಟೆಯ ಪ್ರಾಮಾಣಿಕವಾದ ವ್ಯವಹಾರ ಬೇರೆ ಎಂದು ನಿರ್ದಿಷ್ಟಪಡಿಸಿ ಒಳಿತು ಕೆಡುಕುಗಳನ್ನು ವಿವೇಚಿಸಬಲ್ಲ ಊರ ಹಿರಿಯರು ರಾಜಮನೆತನದ ಈ ಅಕ್ರಮವನ್ನು ಸರಿಪಡಿಸಬಹುದಿತ್ತು. ಆದರೆ ನಾಯಕನಿಗೆ ಮನೆ ಮಗಳನ್ನು ಕೊಟ್ಟ ನೇಮಯ್ಯನಿಗೆ ಪಟ್ಟದ ವಿಷಯ ಏನೂ ಮಾತಾಡಲೂ ಸಂಕೋಚ. ಈ ನೇಮಯ್ಯನಿಂದಾಗಿ ಉಳಿದವರಿಗೂ ಸಂಕೋಚ. ಬೇರೆ ಯಾರಾದರೂ - ವಸ್ತಾರೆಯ ಹೆಗ್ಗಡಿತಿ, ರಾಮಶಾಸ್ತ್ರಿ ಮುಂತಾದವರು - ಸ್ವಲ್ಪ ದಿಟ್ಟತನದಿಂದ ವರ್ತಿಸಿದರೂ, ಅವರ ಧರ್ಮವೇ ಅವರ ಬಾಯಿಕಟ್ಟುವಂತೆ ಉತ್ತರ ಹೇಳಬಲ್ಲ ಧಾರ್ಷ್ಟ್ಯ ವೀರಮ್ಮಾಜಿಯಲ್ಲಿದೆ. ಅವಳು ಶತ್ರುವಾಗಿದ್ದರೆ ಊರ ಜನರು ಧೈರ್ಯದಿಂದ ಎದುರಿಸಬಹುದಾಗಿತ್ತು. ಆದರೆ ಅವಳು ಸ್ವಜನಳೆಂದೇ ಎಲ್ಲರಿಗೂ ಸಂಕೋಚ. ಅವಳ ತಪ್ಪು ಏನಿದ್ದರೂ ಬಳಗದ ಗುಟ್ಟು. ಈ ಕಾದಂಬರಿಯಲ್ಲಿ ನಿಸ್ಸಂಕೋಚನಾಗಿ ವರ್ತಿಸುವ ವ್ಯಕ್ತಿಯೆಂದರೆ ಹೈದರನೊಬ್ಬನೇ. ಧರ್ಮವನ್ನು ಕಾಪಾಡಿಕೊಂಡು - ಅವನ ಧರ್ಮ ಅಧರ್ಮಗಳು ನಮಕ್ ಹಲಾಲಿ, ನಮಕ್ ಹರಾಮಿ ಎಂಬ ಶಬ್ದಗಳಲ್ಲಿ ಸರಳೀಕೃತವಾಗಿವೆ-ರಾಜ್ಯವನ್ನೂ ದಕ್ಕಿಸಿಕೊಳ್ಳಬಲ್ಲ ದಕ್ಷತೆ ಅವನದಾಗಿದೆ. ಧರ್ಮವಿದ್ದು ಅವ್ಯವಸ್ಥೆಗೀಡಾದ ಸಮಾಜದಲ್ಲಿ ವಿಧರ್ಮೀಯನೊಬ್ಬ ಒಂದು ವ್ಯವಸ್ಥೆಯನ್ನು ಏರ್ಪಡಿಸುತ್ತಾನೆ. ಇದು ಈ ದೇಶದ ದೊಡ್ಡ ದುರಂತ ಎಂಬ ಧ್ವನಿ ಈ ಕಾದಂಬರಿಯಲ್ಲಿದೆ.

ಬಿದನೂರಿನ ಸುವ್ಯವಸ್ಥಿತವಾದ ಸಾಂಸ್ಕೃತಿಕ ಜೀವನ ಒಂದು ಕಡೆಗೆ, ಕಾದಂಬರಿಯ ದುರಂತವನ್ನು ಕಟುವಾಗಿ ಅನುಭವಿಸುವ ನಾಯಕ ಪಾತ್ರಗಳು ಇನ್ನೊಂದು ಕಡೆಗೆ, ಹೀಗೆ ಎರಡು ಪರಸ್ಪರ ವಿರುದ್ಧವಾದ ಚಿತ್ರಗಳನ್ನು ಮೇಳವಿಸಿಕೊಂಡಿರುವ ಈ ಕಾದಂಬರಿಯ ಶಿಲ್ಪದ ಅರ್ಥವಂತಿಕೆಯಾದರೂ ಏನು ಎಂದು ಪ್ರಶ್ನೆಯೇಳುವದು ಸ್ವಾಭಾವಿಕವಾಗಿದೆ. ರಾಣಿ ವೀರಮ್ಮಾಜಿಯ ಸ್ವಾರ್ಥದ ಅನರ್ಥವನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಚನ್ನಬಸವನಾಯಕ ಶಾಂತವ್ವೆಯರ ಜೀವನ ಇಷ್ಟು ವಿಷಮವಾಗಬೇಕೇ? ವ್ಯಕ್ತಿಯ ದೈವ, ರಾಜ್ಯದ ದೈವ ಇವುಗಳ ಗತಿ ವಿಚಿತ್ರವಿದ್ದಷ್ಟೇ ರಹಸ್ಯಪೂರ್ಣವೂ ಆಗಿದೆ. ಜೀವನ ಒಂದು ದೈವದಾಟ ಎಂದು ಹೇಳುವದು ಸುಲಭ; ಆದರೆ ಆಟದ ನಿಯಮಗಳು ಬಹಳ ನಿಷ್ಠುರ ಎಂದು ಮಾಸ್ತಿಯವರು ಒಪ್ಪಿಕೊಳ್ಳುವಂತೆ ಒಪ್ಪುವದು ಮಾತ್ರ ಕಠಿಣವಾಗುತ್ತದೆ. ನಾಯಕ ಸಾಹಸಿ, ಲೋಕಪ್ರಿಯ ಅಲ್ಲದೆ ದಕ್ಷನೂ ಹೌದು. ಶಾಂತವ್ವೆಯ ತ್ಯಾಗ, ಧೈರ್ಯ, ನಿಷ್ಠೆಗಳನ್ನು ನೋಡಿದಾಗ ಅವಳು ನೇಮಯ್ಯನಿಗೆ ತಕ್ಕ ಸಾಕುಮಗಳು ಎಂದು ಅನಿಸದೆ ಇರಲಾರದು. ಇಷ್ಟಾಗಿಯೂ ಇವರಿಬ್ಬರಿಗೆ ಬಿದನೂರಲ್ಲಿ ತಮ್ಮದೇ ಎನ್ನುವ ಸ್ಥಳ ಇಲ್ಲ. ಶ್ರೀರಂಗಪಟ್ಟಣದ ನವರಾತ್ರಿ ಉತ್ಸವದಲ್ಲಿ ಭಾಗವಹಿಸಿದಾಗ ಮಾತ್ರ ಇವರು ಆತ್ಮೀಯತೆಯ ಸುಖವನ್ನು ಅನುಭವಿಸಿದರು. ಬಿದನೂರಲ್ಲಿ ಇವರು ಪರಕೀಯರಂತೆ ವಾಸ ಮಾಡುತ್ತಾರೆ. ತಾಯಿ ಮಗನನ್ನು ಮಗನೆಂದು ನೋಡಲಿಲ್ಲ; ಮಗ ತಾಯಿಗೆ ಪ್ರತ್ಯಕ್ಷವಾಗಿ ಎದುರಾಗಲಿಲ್ಲ, ಆದರೆ ಮನಸ್ಸಿನಿಂದ ದೂರವಾದ. ಹೆಂಡತಿಯ ಬಗ್ಗೆ ಪ್ರೀತಿ ಇದ್ದೂ ಅದನ್ನು ತೋರಿಸಿಕೊಳ್ಳಲಿಲ್ಲ. ಸಾಂಸಾರಿಕ ಆತ್ಮೀಯತೆ ಸಹಜ ವ್ಯಾಪಾರವೂ ಆಗಬೇಕು,

ಧರ್ಮವೂ ಆಗಬೇಕು ಅಂದಾಗ ಮಾತ್ರ ಜೀವನ ಸುಖಮಯವಾಗುತ್ತದೆ. ಆತ್ಮೀಯತೆಯ ತಳಹದಿಯ ಮೇಲೆಯೇ ನಿರ್ಮಿತವಾದ ಸಮಾಜದಲ್ಲಿ ಆತ್ಮೀಯತೆಯ ಸೆಲೆ ಬತ್ತಿ ಹೋದರೆ ಹೊಗೆ ಕಟ್ಟಿದ ವಾತಾವರಣದಲ್ಲಿ ಉಸಿರಾಡಿಸಿದಷ್ಟು ಬದುಕು ಕಷ್ಟವಾಗುತ್ತದೆ.

ಇದಕ್ಕೆ ಕಾದಂಬರಿಯಿಂದಲೇ ಎರಡು ನಿದರ್ಶನಗಳನ್ನು ಎತ್ತಿಕೊಡಬಹುದು. ವಸ್ತಾರೆಯ ಹೆಗ್ಗಡಿತಿ ಜೀತದ ಮಲ್ಲಿಗೆ ಸಗುನರನ್ನು ನಡೆಸಿಕೊಂಡ ರೀತಿ ಮತ್ತು ನೇಮಯ್ಯ ತನ್ನ ಸಾಕು ಮಗಳ ಬಗ್ಗೆ ತೋರುವ ಪ್ರೀತಿ ಇವು ಅಂಥವು. ಈ ಸಂಬಂಧಗಳು ಯಾವ ಔರಸ ಸಂಬಂಧಕ್ಕೂ ಕಡಿಮೆ ಎಂದು ಹೇಳುವ ಹಾಗಿಲ್ಲ. ಇಂಥ ಸಮಾಜದಲ್ಲಿ ಆತ್ಮೀಯತೆ ಕೇವಲ ಭಾವನೆಯ ಒಂದು ಸೊಗಸು ಅಲ್ಲ ಅದು ಜೀವನದ ಅಭಿವೃದ್ಧಿಗೆ ಅವಶ್ಯವಾದ ಸೂತ್ರವಾಗುತ್ತದೆ. ವೈಯಕ್ತಿಕ ಸಂಬಂಧಗಳೇ ಸತ್ಯವಾಗಿರುವ ಸಂದರ್ಭದಲ್ಲಿ, ಪೇಟೆಯ ವ್ಯವಹಾರವೇ ಆಗಲಿ, ರಾಜ್ಯ ವ್ಯವಸ್ಥೆಯೇ ಆಗಲಿ, ಸಾಂಸ್ಕೃತಿಕ ಜೀವನದ ಅಳಿವು ಉಳಿವುಗಳಿಗೆ ಮೂಲವಾಗಿರುವದು ಆತ್ಮೀಯತೆ. ನೇಮಯ್ಯ ಬಿದನೂರಿನ ಸುರಕ್ಷಿತತೆಗೆ ಕೋಟೆಗಿಂತ ಮುಖ್ಯ, ಅವನನ್ನು ನೋಡಿಕೋ ಎಂದು ಮಠದ ಅಯ್ಯ ರಾಣಿಗೆ ಉಪದೇಶ ಮಾಡುತ್ತಾರೆ; ಲಿಂಗಣ್ಣಯ್ಯನಿಗೆ ನಾಯಕನನ್ನು ಗುರುತಿಸುವದಕ್ಕೆ ಯಾವ ಪುರಾವೆಯೂ ಬೇಕಾಗುವುದಿಲ್ಲ. ನಾಯಕ ಮತ್ತು ಶಾಂತವ್ವ ಇಬ್ಬರ ಪಾಲಿಗೆ ಮಾತ್ರ ಈ ಆತ್ಮೀಯತೆಯ ಅಭಾವವಿರುವದು ಇಲ್ಲಿಯ ದುರಂತವಾಗಿದೆ.

ಆತ್ಮೀಯತೆಯನ್ನು ಕಳೆದುಕೊಂಡ ಈ ವ್ಯಕ್ತಿಗಳನ್ನು ದೈವ ಬೇಕೆಂದೇ ಪ್ರತ್ಯೇಕವಾಗಿ ತೆಗೆದಿಟ್ಟಂತಾಗಿದೆ. ನಾಯಕನೇ ಬೂದಿಬಸವಸ್ವಾಮಿ ಎಂದು ಗೊತ್ತಾದಾಗ ಅದು ಐತಿಹಾಸಿಕ ಕತೆಯ ಚಮತ್ಕಾರವಾಗಿ ಕಾಣುವುದಿಲ್ಲ. ನಾಯಕನ ವ್ಯಕ್ತಿತ್ವದ ಇನ್ನೊಂದು ಮಗ್ಗುಲಲ್ಲಿರುವ ವಿರಕ್ತಿಯನ್ನು ಈ ಸಂಗತಿ ಎತ್ತಿ ತೋರಿಸುತ್ತದೆ. ಅವನ ಹತ್ಯೆಗೆ ಪ್ರಯತ್ನಿಸಿದವರು ಅವನ ಮೇಲೆ ಪ್ರಯೋಗಿಸಿದ ಯೋಗಚೂರ್ಣದಿಂದ ಅವನು ನಿರ್ಬಲನಾಗುತ್ತಾನೆ. ನಾಯಕನ ಹತ್ಯೆಯ ಪ್ರಯತ್ನ ಶಾಂತವ್ವೆಯ ಆತ್ಮಾಹುತಿಯ ಪ್ರಯತ್ನ ಇವೆರಡೂ ಅವರಿಬ್ಬರ ದೈವ ಅವರ ಸ್ವಭಾವದ ಮೂಲಕ ಪ್ರಕಟವಾಗುವ ಪ್ರತೀಕಗಳಾಗಿವೆ. ಬೆಟ್ಟ ಕೊಳ್ಳಗಳು ಶಿವನ ಬೆನ್ನು, ಅಂಬಿಕೆಯ ಮಡಿಲು ಎಂಬ ಪಾಠವನ್ನು ಮಠದ ಅಯ್ಯನಿಂದ ಕಲಿತುಕೊಂಡಿದ್ದರೂ ನಾಯಕನಲ್ಲಿ ಜೀವನಾಶಕ್ತಿ ಶಕ್ತಿಯಾಗಿ ವಿಜೃಂಭಿಸುವದಿಲ್ಲ. 'ಎದೆ ತೊರೆದು ತಾಯಿ, ಮೈನ ತೆರೆದು ಹೆಂಡತಿ' ಎಂದು ಮೈಸೂರಿನ ರಾಜಮಾತೆ ಉಪದೇಶ ಮಾಡಿದ್ದರೂ ಶಾಂತವ್ವೆಗೆ ಕಮರಿಯಲ್ಲಿ ಹಾರಿ ಪ್ರಾಣ ತೊರೆಯುವ ಆಕರ್ಷಣೆ ತಪ್ಪಲಿಲ್ಲ. ಇವರಿಬ್ಬರೂ ತಪ್ಪಿನಡೆದವರಲ್ಲ, ಕೆಡುಕು ಬಯಸಿದವರಲ್ಲ, ವಿನಾಶಕಾಲಕ್ಕೂ ವಿಪರೀತ ಬುದ್ಧಿಯನ್ನು ತಂದುಕೊಂಡವರಲ್ಲ. ಆದರೆ ದೈವ ಇವರ ಬಾಯಿ ಕಟ್ಟುತ್ತದೆ, ಅಡ್ಡ ನಿಂತು ದಾರಿ ಕಟ್ಟುತ್ತದೆ. ದೈವಾನುಕೂಲವಿರುವ ಹೈದರನಿಗೆ ಬಿದನೂರಿನ ಕೋಟೆಯ ಬಾಗಿಲು ತಾನಗಿ ತೆರೆದಿದೆ. ಕಾಲ ಬದಲಾದಂತೆ ಜೀವನದ ವ್ಯವಸ್ಥೆ ಬದಲಾಗುತ್ತಿರುವ ಸೂಚನೆಯೂ ಇಲ್ಲಿದೆ.

ಯುಗಪರಿವರ್ತನೆಯ ವಾಸನೆ ಬಡಿದಿರುವದು ಹೈದರನ ಮೂಗಿಗೆ ಮಾತ್ರ. ಹೈದರ್ ಬದುಕಿ ಬಂದ ಸಮಾಜದ ತಳಹದಿ ಕೂಡ ಆತ್ಮೀಯತೆಯೇ. ಆದ್ದರಿಂದಲೇ ಅವನು ಸರ್ವಾಧಿಕಾರಿಯಾಗಿದ್ದರೂ ರಾಜನಾಗಬಯಸಲಿಲ್ಲ. ಆದರೆ ಬರ್ಕಿ ಶ್ರೀನಿವಾಸರಾಯನಿಗಿರುವ ಸಂಕೋಚ ಹೈದರನಿಗಿಲ್ಲ. ಧರ್ಮ ಮತ್ತು ರಾಜ್ಯ ವ್ಯವಸ್ಥೆ ಇವು ಬೇರೆ ಎಂದು ಹೈದರನ ಹೊಸ ತಿಳುವಳಿಕೆ, ಅಲ್ಲದೆ ತಾನು ನಂಬಿದ್ದ ಧರ್ಮವನ್ನು ತನ್ನ ಮಗ

ಮುಂದುವರಿಸಲಾರ ಎಂಬ ದೂರದೃಷ್ಟಿ ಹೈದರನಿಗಿದೆ. ಚನ್ನಬಸವನಾಯಕನ ಸೋಲು, ಹೈದರನ ಗೆಲವು ಇವು ವಾಸ್ತವಿಕ ಸಂಗತಿಗಳಾಗಿದ್ದರೂ, ಮಾಸ್ತಿಯವರ ದೃಷ್ಟಿಯಲ್ಲಿ ಇವು ಒಳಿತು ಕೆಡುಕುಗಳನ್ನು ಪ್ರತಿನಿಧಿಸುವದಿಲ್ಲ. ಇವೇ ಕೊನೆಯ ಮಾತಲ್ಲ. ಹಳೆ ಹೊಸ ಮೌಲ್ಯಗಳ ತಾರತಮ್ಯ ವಿವೇಚನೆ ಹೈದರನ ಬುದ್ಧಿವಂತಿಕೆಗೆ ಮೀರಿದ್ದು. ಇವೆಲ್ಲ ಹೇಳುವ ಕಾರಣವೆಂದರೆ ಮಾಸ್ತಿಯವರ ದೃಷ್ಟಿ ಅರ್ಥಪರವಲ್ಲ, ದುರಂತವೂ ಅಲ್ಲ ಎಂದು ಸೂಚಿಸುವುದಕ್ಕೆ. ಅವರು ಹೈದರನ ಗೆಲವನ್ನು ಪುರಸ್ಕರಿಸುವದಿಲ್ಲ. ನಾಯಕನ ಸೋಲಿನ ಬಗ್ಗೆ ಭಾವುಕತೆಯ ಕಣ್ಣೀರನ್ನು ಸುರಿಸುವದೂ ಇಲ್ಲ. ಹೈದರ್ ತನ್ನ ದಕ್ಷತೆಯಿಂದ ಯಶಸ್ವಿತೆಯಿಂದ ಇತಿಹಾಸದಲ್ಲಿ ಒಂದು ಸ್ಥಾನವನ್ನು ಗಳಿಸಿದ; ಚನ್ನಬಸವನಾಯಕ ತನ್ನ ಆತ್ಮೀಯತೆಯ ಕ್ಷೇತ್ರದಲ್ಲಿ, ಆ ಯುಗದ ಮೌಲ್ಯಗಳ ಪರಿಸರದಲ್ಲಿ, ದಂತಕತೆಗಳ ನಾಯಕನಾದ, ಪವಾಡ ಪುರುಷನಾದ. ''ನಗರದ ನಾಯಕರು ಸ್ವಾಮಿ; ಅವರು ಇದ್ದಾರೆ ಅಂತಾರೆ. ವೇಷ ಮರೆಸಿಕೊಂಡು ಮರೆಯಾಗಿ ನಿಂತರಂತೆ, ತಿರಿಗಿ ಬರತಾರಂತೆ'' ಇದು ಹಳ್ಳಿಗರ ಮುಗ್ಧ ನಂಬಿಕೆ. ಮಾಸ್ತಿಯವರಿಗೆ ಇಂಥ ನಂಬಿಕೆಯ ಬೆಲೆ ಏನೆಂಬುದು ಗೊತ್ತು. 'ಇತಿಹಾಸ ಕನಸಪಟ; ಯಾವ ಕನಸೂ ಮತ್ತೆ ಕಾಣುವದಿಲ್ಲ. ಆದರೆ ಕನಸಿನ ಹಿಂದಿರುವ ಮನಸ್ಸು ಅಂತೆ ಇರುತ್ತದೆ.'' ಮೌಲ್ಯಗಳು ನಿತ್ಯದ ಅವತಾರವಾಗಬೇಕೆಂಬ ಮಾಸ್ತಿಯವರ ಹಂಬಲ ಬಹಳ ಮಹತ್ವದ್ದಾಗಿದೆ.

೨

'ಚಿಕವೀರ ರಾಜೇಂದ್ರ,' ಮಾಸ್ತಿಯವರ ಎರಡನೆಯ ಐತಿಹಾಸಿಕ ಕಾದಂಬರಿ, 'ಚನ್ನಬಸವನಾಯಕ' ಕ್ಕಿಂತ ಗಾತ್ರದಲ್ಲಿ ದೊಡ್ಡದಾಗಿದೆ. ಎಂಥ ಸುಭದ್ರವಾದ ಮೌಲ್ಯ ವ್ಯವಸ್ಥೆಯಲ್ಲಿಯೂ, ಎಂಥ ಶ್ರೀಮಂತ ವ್ಯಕ್ತಿತ್ವಗಳ ನಡೆಯ ನಡುವೆಯೂ ದೈವ ತನ್ನ ದಾರಿಯನ್ನು ತೆರೆಯುವ, ದೈವ ಯೋಜನೆಯನ್ನು ವ್ಯಕ್ತಿಗಳು ತಮ್ಮ ಯೋಜನೆಯೆಂಬಂತೆ ನಿರ್ವಹಿಸುತ್ತಿರುವ ದರ್ಶನ 'ಚನ್ನಬಸವನಾಯಕ'ದಲ್ಲಿ ಕಾಣುತ್ತದೆ. ಅಲ್ಲದೆ 'ಚನ್ನಬಸವನಾಯಕ' ಒಬ್ಬ ಧೀರನ, ಸತ್ವಶಾಲಿಯ ಕತೆ. ಎಂಥ ವಿನಾಶದಲ್ಲಿಯೂ ಉಳಿಯ ಬೇಕಾದ ಅಂಶ ಅವನಲ್ಲಿರುವದರಿಂದ ಅವನು ಜಾನಪದ ಕಲ್ಪನೆಯಲ್ಲಿ ಅಮರನಾಗುತ್ತಾನೆ. 'ಚಿಕವೀರ ರಾಜೇಂದ್ರ'ದ ದರ್ಶನ ಬೇರೆ, ಹರಹು ಬೇರೆ, ರಸಾವಿಷ್ಕಾರವೂ ಬೇರೆ. 'ಚನ್ನಬಸವನಾಯಕ'ದಲ್ಲಿಯಂತೆ ಇಲ್ಲಿಯೂ ಒಂದು ರಾಜ್ಯದ ವಿನಾಶದ ಕತೆ ವಿವರವಾಗಿ ಚಿತ್ರಿತವಾಗಿದೆ. ಅಂತರವೆಂದರೆ ಇಷ್ಟೇ. 'ಚನ್ನಬಸವನಾಯಕ'ದಲ್ಲಿ ವಿನಾಶದ ಆಟವೆಲ್ಲ ತೆರೆಯ ಹಿಂದೆ ನಡೆಯುತ್ತದೆ. ಈ ಕಾದಂಬರಿಯಲ್ಲಿ ವಿನಾಶ ಕಣ್ಣಿಗೆ ಹೊಡೆಯುವಂತೆ ಸ್ಪಷ್ಟವಾಗಿ, ಘೋರವಾಗಿ, ಸಶಬ್ದವಾಗಿ ಚಿತ್ರಿತವಾಗಿದೆ. ಚನ್ನಬಸವನಾಯಕನ ಸಾತ್ವಿಕತೆ ಸಂಕೋಚದಿಂದ ಪ್ರವರ್ತಿಸಿದರೆ ಇಲ್ಲಿ ನಾಯಕ ಪಾತ್ರವಾದ ವೀರರಾಜ ನಿಸ್ಸಂಕೋಚವಾಗಿ, ಸ್ವಚ್ಛಂದವಾಗಿ ದುಷ್ಟತನವನ್ನು ತೋರಿಸಿಕೊಳ್ಳುತ್ತಾನೆ.

ವೀರರಾಜನದು ಅತಿಶಯವೆನ್ನಬಹುದಾದ ದುಷ್ಟತನ; ಆದರೂ ಅದರ ಅಭಿವ್ಯಕ್ತಿಯಲ್ಲಿ ಮಾಸ್ತಿಯವರ ಸಂಯಮ ಮೆಚ್ಚುವಂಥದ್ದಾಗಿದೆ. 'ಚನ್ನಬಸವನಾಯಕ' ಕಾದಂಬರಿಯಲ್ಲಿ ಮನುಷ್ಯನ ಕೆಡುಕುತನ ಎಲ್ಲೆ ಮೀರಿಲ್ಲ. ಅಲ್ಲಿ ಕೆಟ್ಟತನ ವೀರಮ್ಮಾಜಿಯ ಸೆಡವಿನಲ್ಲಿ, ಅವಳ ನಂಜಿನ ನುಡಿಗಳಲ್ಲಿ, ನಂಬಯ್ಯನೊಡನೆ ಅವಳ ಸಲಿಗೆಯಲ್ಲಿ, ನಂಬಯ್ಯನ ಹೇಡಿತನದ ದುಷ್ಟತನದಲ್ಲಿ ಮಿತವಾಗಿ ಅಭಿವ್ಯಕ್ತಿಯನ್ನು ಪಡೆದಿದೆ. ಈ

ಕಾದಂಬರಿಯಲ್ಲಿ ಮಾತ್ರ ಕೆಟ್ಟತನಕ್ಕೆ ಹೆಚ್ಚಿನ ಔದ್ಧತ್ಯ, ಹೆಚ್ಚಿನ ಹಿಂಸೆ ಹೆಚ್ಚಿನ ಅಬ್ಬರ ದೊರೆತಿವೆ. ವೀರರಾಜನ ಪಾತ್ರದ ಆವೇಶವೇ ಬೇರೆ; ಈ ಮನುಷ್ಯ ಮಾದರಿಯು ನಿರ್ಮಿತವಾಗಿರುವ ದೃಷ್ಟಿಯೇ ಬೇರೆ. ವೀರರಾಜನ ಹಿಂಸೆ ಮತ್ತು ಕಾಮುಕತನಗಳು ಜೀವನದ ಮೌಲ್ಯಗಳ ಮೇಲೆಯೇ ಅತ್ಯಾಚಾರವೆಸಗಿವೆ. ಪಾಣಿ ಸೂರ್ಯನಾರಾಯಣನ ಹೆಂಡತಿಯನ್ನು ಬಲಾತ್ಕಾರದಿಂದ ಅಪ್ಪರ ವಾಡಿಗೆ ಸೇರಿಸಿಕೊಂಡದ್ದು, ಅಳಿಯ ಚೆನ್ನಬಸವಯ್ಯನ ಆಳು ಚೋಮನನ್ನು ಕಾಡಿನಲ್ಲಿ ನಿಂತ ಕಾಲ ಮೇಲೆ ಶೂಲಕ್ಕೇರಿಸುವುದು, ತೊಟ್ಟಿಲಿನಲ್ಲಿ ನಿದ್ರಿಸುತ್ತಿದ್ದ ಚನ್ನಬಸವಯ್ಯನ ಕೂಸನ್ನು ಮಧ್ಯ ರಾತ್ರಿಯಲ್ಲಿ ಅಲಗಿನಿಂದ ಕೊಯ್ದು ಕೊಲ್ಲುವುದು, ಇಂಥ ಹಲವಾರು ರಾಕ್ಷಸ ಕೃತ್ಯಗಳು ಅವನ ಕೈಯಿಂದ ನಡೆಯುತ್ತವೆ. ಅವನ ಕಾಮುಕತನಕ್ಕೆ ಬಲಿಯಾಗದ ಹೆಣ್ಣಿಲ್ಲ, ಹಿಂಸೆಗೆ ಬಲಿಯಾಗದ ಗಂಡಿಲ್ಲ. ಇಂಥ ಕಾರ್ಯಗಳಲ್ಲಿ, ಅವನ ಬಲಗೈಯಂತೆ ವರ್ತಿಸುವ ಕುಂಟ ಬಸವಯ್ಯನಿಗೆ ಕೂಡ ಹೆದರಿಕೆಯಾಗುವಷ್ಟು ದುಷ್ಟತನ ವೀರರಾಜನಲ್ಲಿದೆ.

ಕುಂಟ ಬಸವಯ್ಯನ ಕತೆ ಕೆಡುಕಿನ ಇನ್ನೊಂದು ಮುಖವನ್ನು ತೋರಿಸುತ್ತದೆ. ಅವನಿಗೆ ತಿಳಿಯುವಷ್ಟು ವಯಸ್ಸಾಗುವ ಮೊದಲೇ ಅವನ ಮೇಲೆ ಅತ್ಯಾಚಾರ ನಡೆದು ಅವನು ದೈಹಿಕವಾಗಿ ಕುಂಟನಾಗಿ, ಮನಸ್ಸಿನ ದೃಷ್ಟಿಯಿಂದ ವಿಕೃತನಾಗಿ ಬೆಳೆದ. ದೊರೆಯ ಅಣ್ಣನಾಗಿದ್ದರೂ, ರಾಜಕೀಯ ತಂತ್ರಗಳ ಫಲವಾಗಿ ಅಜ್ಞಾತ ಕುಲಶೀಲಗಳಿಂದ ದೊರೆಯ ಆಳಾಗಿ ದಾಸತ್ವವನ್ನೇ ವ್ಯಕ್ತಿತ್ವವನ್ನಾಗಿಸಿಕೊಂಡ ಕುಂಟ ಬಸವಯ್ಯನ ಕತೆ ಮುಖ್ಯ ಕತೆಯ ರೌದ್ರಕ್ಕೆ ಕರುಣವನ್ನೊದಗಿಸಿ ದೈವದುರ್ವಿಪಾಕವನ್ನು ಘೋರತರವನ್ನಾಗಿಸಿದೆ. ದೊರೆ ಮತ್ತು ಕುಂಟರ ಗೆಳೆತನ ಕರ್ಣದುರ್ಯೋಧನರ ಗೆಳೆತನದಷ್ಟೇ ಗಾಢವಾಗಿದ್ದರೂ ಪುರಾಣ ಪಾತ್ರಗಳ ಗೌರವ ಇವರಿಬ್ಬರಿಗಿಲ್ಲ. ಬೇರೆ ಬೇರೆ ತಾಯಂದಿರ ಮಕ್ಕಳಾದ ಈ ಅಣ್ಣತಮ್ಮಂದಿರ ಅನ್ಯೋನ್ಯಾಶ್ರಯ ಕತೆಯ ಕೆಡುಕನ್ನು ಹುರಿಗೊಳಿಸುತ್ತದೆ. ಇವರಿಬ್ಬರು ಕೇವಲ ಜೀವನ ವಿಮುಖರಾದ ಕೆಡುಕಷ್ಟೇ ಅಲ್ಲ, ಜೀವನದ ಮೇಲೆ ಅತ್ಯಾಚಾರ ನಡೆಸುವುದರಲ್ಲಿ ಇವರಿಗೆ ಆನಂದವಾಗುತ್ತದೆ. ಈ ಕೃತಿಯಲ್ಲಿ ಮಾಸ್ತಿಯವರು ಮನುಷ್ಯನ ಪಾಪದ ಸ್ವರೂಪವನ್ನು ಹತ್ತುನಿಟ್ಟಿನಿಂದ ನೋಡಿ ಆಳವಾಗಿ ಪರಿಶೀಲಿಸಿದ್ದಾರೆ. ವೀರರಾಜನ ಕೆಟ್ಟತನಕ್ಕೆ ಕುಂಟ ಬಸವಯ್ಯನ ಸ್ನೇಹವೇ ಕಾರಣ ಎಂದು ಒಂದೆಡೆಗೆ ಸೂಚಿಸಿದ್ದರೂ ಮುಂದೆ ಮಾತ್ರ ವೀರರಾಜನ ಕೆಡುಕು ಕಾರಣವನ್ನು ಮೀರಿ ಬೆಳೆಯುತ್ತದೆ. ದೀಕ್ಷಿತನ ಧಾರ್ಮಿಕತೆ, ರಾಣಿ ಗೌರಮ್ಮನ ಜೀವನ ಶ್ರದ್ಧೆ, ಮಂತ್ರಿಗಳ ಸಾತ್ವಿಕ ನಿಷ್ಠೆ, ಇಂಗ್ಲರ ಭಯ ಇವುಗಳಿಂದೇನೂ ಪರಿಣಾಮವಾಗದಷ್ಟು ಅವನ ಕೆಡುಕುತನ ಮಿತಿ-ತಪ್ಪುತ್ತದೆ. ಅಂದರೆ ಪಾಪ ಕೇವಲ ಮನಸ್ಸಿನ ಸ್ಥಿತಿಯಾಗದೆ, ಕೃತ್ಯಗಳ ಕಪ್ಪುಬಣ್ಣವಾಗದೆ ವಿನಾಶದ ಸಂತತವಾದ ಪ್ರಕ್ರಿಯೆಯಾಗುತ್ತದೆ. ಮಾಯಲಾರದ ಹುಣ್ಣು ಅನೇಕ ವಿಕಾರಗಳನ್ನು ತಾಳುವಂತೆ ವೀರರಾಜನ ಪಾಪ ಉಲ್ಬಣವಾಗುತ್ತ ಹೋಗುತ್ತದೆ.

ಪಾಪದ ಈ ಪ್ರಕ್ರಿಯೆಯನ್ನು ಮಾಸ್ತಿಯವರು ಈ ಕಾದಂಬರಿಯಲ್ಲಿ ಅತ್ಯಂತ ನಾಟಕೀಯವಾದ ರೀತಿಯಲ್ಲಿ ಚಿತ್ರಿಸಿದ್ದಾರೆ. ವೀರರಾಜ ಲಕ್ಷ್ಮೀನಾರಾಯಣಯ್ಯನ ತಾಯಿ ಸಾವಿತ್ರಮ್ಮನೊಡನೆ ಮಾತಾಡುವ ಸನ್ನಿವೇಶ ಮತ್ತು ರಾಣಿ ಗೌರಮ್ಮ ಮಂತ್ರಿಗಳೊಡನೆ ಆಲೋಚನೆ ನಡೆಸುತ್ತಿದ್ದಾಗ ಅಲ್ಲಿಗೆ ಬಂದ ವೀರರಾಜ ಅವಳನ್ನು ಹೀನವಾಗಿ ಬಯ್ಯುವ ಪ್ರಸಂಗ, ರೆಸಿಡೆಂಟ್ ಸಾಹೇಬನಿಗೆ ಕೊಡಗಿನ ಸ್ಥಿತಿಗತಿಗಳನ್ನು ಅವನು ವಿವರಿಸುವಾಗಿನ ಪ್ರಸಂಗ ಈ ಸನ್ನಿವೇಶಗಳಲ್ಲಿ ನೋಡಬಹುದು. ಇಂಥಲ್ಲೆಲ್ಲ

ವೀರರಾಜ ಉಪಯೋಗಿಸುವ ಭಾಷೆಯಲ್ಲಿಯೇ ಅನಾಗರಿಕವಾದ ಘಾಟು ಮೂಗಿಗೆ ಹೊಡೆಯುತ್ತದೆ. ಒಳ್ಳೆಯದನ್ನು ಅಪಮಾನಗೊಳಿಸುವದು, ತಿರಸ್ಕರಿಸುವದು, ಶಿಕ್ಷಿಸುವದು, ಇಲ್ಲದಿದ್ದರೆ ಕುತ್ಸಿತವಾದ ಸಂಬಂಧವನ್ನು ಆರೋಪಿಸಿ ಹೀಯಾಳಿಸುವದು; ಇವು ವೀರರಾಜನ ಪಾಡಿಕೆಯ ಅಸ್ತ್ರಗಳಾಗಿವೆ. ಇಂಥ ಕೆಡುಕಿನ ದೌರ್ಬಲ್ಯವೆಂದರೆ ತನ್ನ ವಿನಾಶದ ಅರಿವಿಲ್ಲದಿರುವದು. ವೀರರಾಜ ದಿನದಿನಕ್ಕೆ ಸತ್ವಹೀನನಾಗುತ್ತ ಕೊನೆಕೊನೆಗೆ ಸಾಮಾನ್ಯ ತಿಳುವಳಿಕೆಯನ್ನು ಕಳೆದುಕೊಂಡೇ ಬಿಡುತ್ತಾನೆ. ರಾಜ್ಯ ಅನಿರೀಕ್ಷಿತವೆನ್ನುವಷ್ಟು ಹಗುರಾಗಿ ಆಂಗ್ಲರ ಉಡಿಯಲ್ಲಿ ಬೀಳುತ್ತದೆ.

ಕೆಡುಕುತನ ಇಷ್ಟು ಶಕ್ತಿಹೀನವಾಗಿದ್ದರೆ ಒಳ್ಳೆಯದು ತನ್ನ ಸತ್ವದಿಂದ ಇದನ್ನು ಗೆದ್ದುಕೊಂಡು ಪರಿಸ್ಥಿತಿಯನ್ನು ಸರಿಪಡಿಸಬಹುದಿತ್ತಲ್ಲ ಎಂಬ ನೈತಿಕ ಪ್ರಶ್ನೆಯನ್ನು ಕೇಳಬಹುದಾಗಿದೆ: ಅದು ಕಾದಂಬರಿಯ ತಾಂತ್ರಿಕ ಪ್ರಶ್ನೆಯೂ ಹೌದು. ಕೆಟ್ಟದೇ ತುಂಬಿಕೊಂಡಂತೆ ಕಾಣುವ ಈ ಕಾದಂಬರಿಯಲ್ಲಿ ಒಳ್ಳೆಯ ಅಂಶಗಳಿಗೆ ಕೊರತೆಯಿಲ್ಲ. ವೀರರಾಜನ ಮಂತ್ರಿಗಳಾದ ಲಕ್ಷ್ಮೀನಾರಾಯಣಯ್ಯ ಮತ್ತು ಬೋಪಣ್ಣ ಇಬ್ಬರೂ ನಿಷ್ಠರು, ವಿವೇಕಿಗಳು, ಅಲ್ಲದೆ ಸಮರ್ಥರು. ರಾಣಿ ಗೌರಮ್ಮ ಇಂಥ ಕೆಟ್ಟ ದೊರೆಯನ್ನು ಕೂಡ ನಿಯಂತ್ರಿಸುವ ವರ್ಚಸ್ಸಿದ್ದವಳು - ಓಂಕಾರೇಶ್ವರನ ಅರ್ಚಕನಾದ ದೀಕ್ಷಿತನಿಗೆ ಕ್ರಾಂತದರ್ಶಿಯಾದ ತಿಳುವಳಿಕೆ ಇದೆ. ವೀರರಾಜನ ಕೆಟ್ಟತನ ಇವರ ಕಣ್ಣಿಗೆ ಸ್ಪಷ್ಟವಾಗುತ್ತದೆ. ಈ ವ್ಯಕ್ತಿಗಳಿಗೆ ಕೊಡಗಿನ ಮೇಲಿನ ಅಭಿಮಾನ ಕಡಿಮೆಯಿಂದು ಹೇಳುವಂತಿಲ್ಲ. ಉತ್ತಯ್ಯ ತಕ್ಕ ಬೋಪಣ್ಣನಂಥವರು ಕೊಡಗಿನ ಅಭಿಮಾನ ರಕ್ಷಣೆಗೆ ಪ್ರಾಣಕೊಡಲು ಸಿದ್ಧರಿದ್ದವರು. ಇವರ ಪರಿಸ್ಥಿತಿಯು ಅಸಹಾಯವಾದದ್ದಲ್ಲ. ಇಷ್ಟಿದ್ದರೂ, ಇವರು ವೀರರಾಜನನ್ನು ವಿರೋಧಿಸಿ ಅವನನ್ನು ಪದಚ್ಯುತನನ್ನಾಗಿ ಮಾಡುವದರಲ್ಲಿ ಯಶಸ್ವಿಯಾಗುವುದಿಲ್ಲ. ಅಂತ ಪ್ರಯತ್ನಗಳು ನಡೆದಿಲ್ಲವೆಂದಲ್ಲ. ದೊರೆಯ ವರ್ತನೆಯಿಂಗ ಎಲ್ಲರಿಗಿಂತ ಹೆಚ್ಚು ಅಸಮಾಧಾನಗೊಂಡಿದ್ದವನು ಬೋಪಣ್ಣ. ಆವನು ಮನಸ್ಸು ಮಾಡಿದ್ದರೆ ಸೈನಿಕರಿಂದ ದಂಗೆಯೆಬ್ಬಿಸುವದು ಕಷ್ಟವಾಗುತ್ತಿರಲಿಲ್ಲ. ಆದರೆ ಹಿರಿಯನಾದ ಲಕ್ಷ್ಮೀನಾರಾಯಣಯ್ಯನ ಸಲಹೆಯಂತೆ ಅವನು ನಡೆದುಕೊಳ್ಳಬೇಕಾಗಿತ್ತು. ಚಿಕ್ಕಶೆಟ್ಟಿ, ಬೋಪಣ್ಣ ಮತ್ತು ಲಕ್ಷ್ಮೀನಾರಾಯಣಯ್ಯ ಒಟ್ಟಾಗಿ ಸೇರಿ ರಾಣಿ ಗೌರಮ್ಮನೇ ರಾಜ್ಯವಾಳಬೇಕೆಂದು ಮನವಿಮಾಡಿ ನೋಡಿದರು. ಆದರೆ ಅದಕ್ಕೆ ರಾಣಿ ಒಪ್ಪುವದು ಸಾಧ್ಯವಿರಲಿಲ್ಲ. ಒಳ್ಳೆಯವರ ಈ ತಂತ್ರಗಳೆಲ್ಲ ವಿಫಲವಾಗುವದಕ್ಕೆ ಎರಡು ಕಾರಣಗಳನ್ನು ಹೇಳಬಹುದು. ಮೊದಲನೆಯದಾಗಿ ಇವರಲ್ಲಿ ಯಾರಿಗೂ ರಾಜ್ಯದಾಸೆಯಿಲ್ಲ. ರಾಣಿ ಗೌರಮ್ಮ ಗಂಡ ಎಂಥವನೇ ಆಗಲಿ ಅವನ ಛಾಯಾನುವರ್ತಿನಿ. ಕೊನೆಯಲ್ಲಿ ಲಕ್ಷ್ಮೀನಾರಾಯಣಯ್ಯ ಬೋಪಣ್ಣನೇ ಗಾದಿ ಏರಲಿ ಎಂದು ಸೂಚಿಸಿದಾಗ, ರಾಜ್ಯವಾಳುವದು ಕೊಡಗನ ಕರ್ತವ್ಯವಲ್ಲ, ಅದು ಬಿಕ್ಕೆಯವರ ಕೆಲಸ ಎಂದ ಬೋಪಣ್ಣ ವ್ಯಕ್ತಿಧರ್ಮವನ್ನು ಎತ್ತಿಹಿಡಿಯುತ್ತಾನೆ. ಎರಡನೆಯ ಕಾರಣವೆಂದರೆ ಇವರೆಲ್ಲ ಶತ್ರು ಸಂಕಟವನ್ನು ಧೈರ್ಯದಿಂದ ಎದುರಿಸಬಲ್ಲವರು, ಆದರೆ ಸ್ವಜನರಿಂದ ಹುಟ್ಟಿದ ಸಮಸ್ಯೆಗೆ ಇವರು ಪ್ರತಿಕಾರ ಮಾಡಲರಿಯರು. ದೊರೆ ವೀರರಾಜ ಎಷ್ಟೆ ಕೆಟ್ಟವನಾಗಿದ್ದರೂ ಉಚ್ಚೆ ಹೊಯ್ದ ಮಗು, ಮಂತ್ರಿಗಳಿಗೆ ರಾಜ, ಕುಂಟ ಬಸವಯ್ಯನ ಒಡೆಯ. ಮನುಷ್ಯ ಒಳ್ಳೆಯವನಾಗಿರಲಿ, ಕೆಟ್ಟವನಾಗಿರಲಿ ಈ ಸಂಬಂಧಗಳು ಕೌಟುಂಬಿಕ ಸಂಬಂಧಗಳಷ್ಟೇ ಬಲವತ್ತರವಾದವುಗಳಾಗಿವೆ.

ಇದೇ ಸಂದರ್ಭದಲ್ಲಿ ಭಗವತಿಯ ಪ್ರಯತ್ನಗಳ ಬಗ್ಗೆಯೂ ಒಂದು ಮಾತು ಹೇಳಬಹುದು. ಭಗವತಿ ದೀಕ್ಷಿತನ ತಮ್ಮನ ಮಗಳು, ರಾಜಮನೆತನದೊಂದಿಗೆ ಪಾಪದ ಸಂಬಂಧವಿದ್ದವಳು. ಈ ಸಂಬಂಧದ ಫಲವಾಗಿ ಹುಟ್ಟಿಬಂದ ಕೂಸು ಕುಂಟ ಬಸವಯ್ಯ. ಈ ತಾಯಿ ಮಕ್ಕಳ ಮೇಲೆ ರಾಜಮನೆತನದವರು ನಡೆಸಿದ ಅನ್ಯಾಯ ಅಕ್ಷಮ್ಯವಾದದ್ದು. ಇದರಿಂದಲೇ ಭಗವತಿಗೆ ಪ್ರತೀಕಾರದ ಹಟ. ಏನೇ ಮಾಡಿ ತನ್ನ ಮಗನನ್ನು ಪಟ್ಟದ ಮೇಲೆ ಕೂಡಿಸಬೇಕೆಂಬ ಛಲ. ದೀಕ್ಷಿತ ಈ ದಾರಿ ಒಳ್ಳೆಯದಲ್ಲವೆಂದು ಎಷ್ಟು ಉಪದೇಶ ಮಾಡಿದರೂ ಅವಳು ಕೇಳುವುದಿಲ್ಲ. ಪ್ರತಿಕಾರದ ಬುದ್ಧಿಯಿಂದ ಇವಳ ಪ್ರಯತ್ನಗಳಿಗೆ ಏಕಾಗ್ರತೆ ಬಂದರೂ ತನ್ನ ಮಗನನ್ನು ತನ್ನ ಕಡೆಗೆ ಎಳೆದುಕೊಳ್ಳುವ ರಾಜಕೀಯ ಪ್ರಜ್ಞೆ ಅವಳಲ್ಲಿಲ್ಲ. ಅಳಿಯ ಚನ್ನಬಸಯ್ಯ ಮತ್ತು ಅಪ್ಪಾಜಿ ಇವರಂತೆ ಅವಳೂ ಆಂಗ್ಲರಿಗೆ ಶರಣು ಹೋಗಬೇಕಾಯಿತು. ಇನ್ನು ಅವಳ ಪ್ರಯತ್ನ ಒಂದು ವೇಳೆ ಸಫಲವಾಗಿದ್ದರೂ ಕೊಡಗಿಗೆ ಕ್ಷೇಮವೆಂಬುದಿಲ್ಲ. ವೀರರಾಜನ ಬದಲಾಗಿ ಕುಂಟ ಬಸವಯ್ಯ ದೊರೆಯಾಗಿದ್ದರೆ ಕೊಡಗಿನ ಪ್ರಜೆಗಳಿಗೆ ಅದರಿಂದ ಸುಖ ಬರುತ್ತಿರಲಿಲ್ಲ.

ಇಂಥ ರಾಜಕೀಯ ಇಕ್ಕಟ್ಟಿನಲ್ಲಿಯೇ ಮಾಸ್ತಿಯವರು ದೈವದಾಟವನ್ನು ಗುರುತಿಸುತ್ತಾರೆ. ಮಗುವನ್ನು ಬೇಡಿ ಬಂದ ಆಂಗ್ಲರ ನಿಯೋಗಿಗಳನ್ನು ವೀರರಾಜ ಸೆರೆಯಲ್ಲಿರಿಸಿದ ಸಂದರ್ಭದಲ್ಲಿ ಮಾಸ್ತಿಯವರು ವಿಮರ್ಶಿಸುವ ರೀತಿ ಇದು:

''ಇದೆಲ್ಲ ಸರಿಯೆ, ಆದರೆ ಇದನ್ನು ತಪ್ಪಿಸುವದಕ್ಕೆ ಯಾರು ಏನು ಮಾಡಬಹುದು? ಇಂಥ ಸಂದರ್ಭದಲ್ಲಿ ಜೀವನವೆನ್ನುವದು ವಿಧಾತ ಬರೆದಿಟ್ಟ ಒಂದು ನಾಟಕದಂತೆ ಆಗಿಬಿಡುತ್ತದೆ. ಕವಿ ಬರೆದು ಮುಗಿಸಿ ಆಡಿ ಎಂದು ಕೈಗೆ ಕೊಟ್ಟಿರುವ ನಾಟಕ; ನಟ ಅದನ್ನು ಆಡಬಹುದು ಹೊರತು ಬೇರೆ ಮಾಡಲು ಬರುವದಿಲ್ಲ. ಇದನ್ನೇ ಪೂರ್ವಿಕರು ವಿಧಿಲಿಖಿತ ಎಂದಿರುವದು. ಕಾಡಿನ ಮಧ್ಯದ ರಾಜಮಾರ್ಗದಲ್ಲಿ ಹೊರಟ ರಥ ಎದುರಿಗೆ ಹುಲಿ ಬಂತೆಂದು ಕಾಡಿಗೆ ಹರಿಯುವಂತಿಲ್ಲ; ಮಾರ್ಗದಲ್ಲಿ ಹರಿಯಬೇಕು. ಜೀವನದ ಹರಿವೂ ಇಷ್ಟೇ. ರಥಕ್ಕೆ ಜೀವನಕ್ಕೆ ಒಂದು ವ್ಯತ್ಯಾಸ; ಹುಲಿಗೆ ಅಂಜಿ ರಥ ನಿಂತಲ್ಲಿ ನಿಲ್ಲಬಹುದು; ಜೀವನದಲ್ಲಿ ಸಿಕ್ಕಿದವರಿಗೆ ಈ ಭಾಗ್ಯವಿಲ್ಲ.''

ಈ ಇಕ್ಕಟ್ಟಿನ ಮಾರ್ಗ ಒಯ್ಯುವದೇ ದುರಂತದ ಕಡೆಗೆ, ಗೊತ್ತಿದ್ದರೂ ಹೋಗಬೇಕು, ಗೊತ್ತಿಲ್ಲದಿದ್ದರೂ ಹೋಗಬೇಕು. ವೀರರಾಜ ಒಬ್ಬನೇ ಆ ಮಾರ್ಗದಲ್ಲಿ ಹೋಗುವದಿಲ್ಲ; ಅವನ ಜೊತೆಗೆ ರಾಣಿ, ರಾಜಕುಮಾರಿ, ಕುಂಟ ಬಸವಯ್ಯ ಇವರು ಹೋಗುತ್ತಾರೆ. ಅದು ಅವರ ಹೋಣೆ, ಅಲ್ಲದೆ ಅವರಿಗೆ ಅದು ಅನಿವಾರ್ಯ. ಯಥಾ ಪ್ರಕಾರ ಕೊನೆಗೆ ಉಳಿಯುವದು ರಾಣಿ ಗೌರಮ್ಮ, ಬೋಪಣ್ಣ, ದೀಕ್ಷಿತ ಇವರು ನಂಬಿಕೊಂಡು ಆಚರಿಸಿದ ಜೀವನ ಮೌಲ್ಯಗಳು.

೩

ಈ ಎರಡು ಕಾದಂಬರಿಗಳ ಅಭ್ಯಾಸದ ಮೂಲಕವಾಗಿ ಮಾಸ್ತಿಯವರ ಚಿಂತನ ಪರತೆಯನ್ನು ಸ್ವಲ್ಪವಾದರೂ ಅರಿತುಕೊಳ್ಳುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಿದ್ದಾಗಿದೆ. ಮಾನವ ಮೌಲ್ಯಗಳ ಈ ಬಗೆಯ ಅಭ್ಯಾಸ ಮಾಸ್ತಿಯವರ

ಬರವಣಿಗೆಯಲ್ಲಿ ಹೊಸತೇನೂ ಅಲ್ಲ. ಜೀವನದಲ್ಲಿ ಅನುಭವದ ಗಟ್ಟಿತನವನ್ನು ಅವರು ಮತ್ತೆ ಮತ್ತೆ ತಮ್ಮ ಕತೆ ಕಾದಂಬರಿಗಳ ಮೂಲಕ ಒರೆಗೆ ಹಚ್ಚಿ ನೋಡಿದ್ದಾರೆ. ಮನುಷ್ಯ ಜೀವನದ ನಿತ್ಯಸತ್ವವನ್ನು ದೇಶಕಾಲಗಳ ಭಿನ್ನ ಭಿನ್ನ ಸಂದರ್ಭಗಳಲ್ಲಿಟ್ಟು ಪರೀಕ್ಷಿಸಿದ್ದಾರೆ. ನಿತ್ಯಸತ್ವದಲ್ಲಿ ಅವರಿಗೆಷ್ಟು ನಂಬಿಕೆಯೋ ಅಷ್ಟೇ ನಂಬಿಕೆ ಅದು ಬೆಳೆದು ಬರುವ ಪರಿಸರದಲ್ಲಿಯೂ ಇದೆ. ಮಾಸ್ತಿಯವರ ಸ್ವಜನ ಪ್ರಕ್ರಿಯೆಯ ವಿಶಿಷ್ಟ ಗುಣವೇ ಇದೆಂದು ಹೇಳಿದರೂ ತಪ್ಪಾಗಲಾರದು. ಮಾಸ್ತಿಯವರು ಸಂಪ್ರದಾಯ ನಿಷ್ಠರು, ಬದಲಾವಣೆ ಅವರ ಪ್ರಕೃತಿಗೆ ಒಗ್ಗುವದಲ್ಲ ಎಂಬ ಅಭಿಪ್ರಾಯವೂ ಇದೆ. ಆದರೆ ಸಂಪ್ರದಾಯದ ಬೆಲೆಯನ್ನು ಪರಿವರ್ತನದ ಒರೆಗೆ ಹಚ್ಚಿಯೇ ಬೆಲೆಗಟ್ಟುವ ಪ್ರಯತ್ನ ಮಾಸ್ತಿಯವರಲ್ಲಿರುವಂತೆ ಇನ್ನೊಬ್ಬರಲ್ಲಿ ಕಾಣುವದಿಲ್ಲ. ಮೇಲೆ ವಿಮರ್ಶಿಸಲಾದ ಎರಡೂ ಕಾದಂಬರಿಗಳಲ್ಲಿ ಒಂದು ವ್ಯವಸ್ಥೆ ಅಳಿದು ಇನ್ನೊಂದು ವ್ಯವಸ್ಥೆ ರೂಪುಗೊಳ್ಳುವ ಸಂಧಿಕಾಲದ ಚಿತ್ರವೇ ಇದೆ. ಹಳೆ ಹೊಸ ವ್ಯವಸ್ಥೆಗಳಲ್ಲಿ ಯಾವದು ಒಳ್ಳೆಯದು ಯಾವದು ಅಲ್ಲ ಎಂಬ ಪ್ರಶ್ನೆಗೆ ಮಾಸ್ತಿಯವರ ಬರವಣಿಗೆಯಲ್ಲಿ ಮಹತ್ವವಿಲ್ಲ. ಇಂಥ ಹಲವಾರು ಪ್ರಯತ್ನಗಳನ್ನು ಹಿಂದೆಯೂ ಅವರು ಮಾಡಿದ್ದರು. 'ಚನ್ನಬಸವನಾಯಕ'ನ ಕೊನೆಯಲ್ಲಿ ಹುಟ್ಟುವ ಪೌರಾಣಿಕತೆ 'ಮಸುಮತ್ತಿ' ಕತೆಯಷ್ಟು ಹಳೆಯದು. ಚನ್ನಬಸವನಾಯಕ ಕೊನೆಯಲ್ಲಿ ಹಳ್ಳಿಗರ ಹಾಡುಗಳಲ್ಲಿ ಪವಾಡ ಪುರುಷನಾಗುವ ಪ್ರಸಂಗ 'ಕಾಕನಕೋಟೆ'ಯ ಕಾಕನನ್ನು ನೆನಪಿಗೆ ತರುತ್ತದೆ. 'ಚಿಕವೀರ ರಾಜೇಂದ್ರ'ದ ರಾಣಿ ಗೌರಮ್ಮನ ಪಾತ್ರ ಮಾಸ್ತಿಯವರು ಸೃಷ್ಟಿಸಿರುವ ಕೆಲವು ಪೂರ್ಣಪಾತ್ರಗಳಲ್ಲಿ ಒಂದಾಗಿದೆ. ಚಿಕವೀರ ರಾಜನ ವ್ಯಕ್ತಿತ್ವ ನಿರ್ಮಾಣದಂಥದ್ದು ಕನ್ನಡದಲ್ಲಿ ತೀರ ಅಪರೂಪವೆಂದೇ ಹೇಳಬೇಕು. ಕನ್ನಡ ಕಾದಂಬರಿಗಳ ಕ್ಷೇತ್ರದಲ್ಲಿ ಈ ಎರಡು ಕೃತಿಗಳ ಸ್ಥಾನ ದೊಡ್ಡದಾಗಿದೆಯೆಂದು ಹೇಳಬಹುದು.

ಚೆನ್ನಬಸವನಾಯಕ ಮತ್ತು ಚಿಕವೀರರಾಜೇಂದ್ರ

ಎಲ್.ಎಸ್. ಶೇಷಗಿರಿ ರಾವ್

ಕನ್ನಡ ನವೋದಯ ಕಾಲದಲ್ಲಿ ಸಣ್ಣಕಥೆಗಳನ್ನು ಬರೆದವರೆಲ್ಲ ಸಾಮಾನ್ಯವಾಗಿ ಕಾದಂಬರಿ ಮಾಧ್ಯಮದತ್ತ ಬೇಗನೆ ತಿರುಗಿದರು. ಕನ್ನಡ ಸಣ್ಣಕಥೆಗಳ ಜನಕ 'ಶ್ರೀನಿವಾಸ'ರ ಮೊದಲನೆಯ ಕಾದಂಬರಿ 'ಚೆನ್ನಬಸವನಾಯಕ' ಹೊರಬಿದ್ದುದು ೧೯೪೯ರಲ್ಲಿ - ಅವರಿಗೆ ೫೮ ವರ್ಷವಾಗಿದ್ದಾಗ, ಎರಡನೆಯ ಕಾದಂಬರಿ 'ಚಿಕವೀರ ರಾಜೇಂದ್ರ' ೧೯೫೬ರಲ್ಲಿ ಪ್ರಕಟವಾಯಿತು.

ಆದರೆ ಸಣ್ಣಕಥೆಗಿಂತ ವಿಶಾಲವಾದ ಕ್ಷೇತ್ರಕ್ಕೆ ಬಹು ವರ್ಷಗಳ ಮೊದಲೇ ಶ್ರೀನಿವಾಸರು ಕಾಲಿಟ್ಟಿದ್ದರು. ೧೯೨೮ರಲ್ಲಿ ಕಿರುಕಾದಂಬರಿ (ಅಥವಾ ನೀಳ್ಗತೆ) 'ಸುಬ್ಬಣ್ಣ' ಪ್ರಕಟವಾಯಿತು. 'ಚೆನ್ನಬಸವನಾಯಕ' ೧೯೪೯ರಲ್ಲಿ ಪ್ರಕಟವಾದರೂ ೧೯೨೦-೨೧ರಲ್ಲಿಯೇ ಇದನ್ನು ಬರೆಯುವ ಯೋಚನೆ ಶ್ರೀನಿವಾಸರಿಗೆ ಬಂದಿತ್ತು. ''೧೯೨೨ರಲ್ಲಿ ನಾನು ಇದರ ಒಂದು ಪರಿಜನ್ನು ಹಾಕಿಕೊಂಡೆನು; ೧೯೨೫ರಲ್ಲಿ ಅರವತ್ತು ಪುಟಗಳನ್ನು ಬರೆದೆನು. ಆದರೆ ಒಟ್ಟಿಗೆ ಇದಕ್ಕಾಗಿಯೇ ಕುಳಿತುಕೊಳ್ಳದೆ ಕೆಲಸ ಮುಂದುವರಿಯುವಂತಿರಲಿಲ್ಲ; ಆದ್ದರಿಂದ ಅದು ಅಲ್ಲಿಗೆ ನಿಂತಿತು,'' ಎಂದು ಅವರೇ ಹೇಳಿದ್ದಾರೆ.

ಇವೆರಡೂ ಚಾರಿತ್ರಿಕ ಕಾದಂಬರಿಗಳೇ. ಕನ್ನಡ ನಾಡಿನ ಚರಿತ್ರೆಯಿಂದ ಸಾಮಗ್ರಿಯನ್ನಾರಿಸಿಕೊಂಡರು ಶ್ರೀನಿವಾಸರು. ಹಿಂದಿನ ಮೈಸೂರು ಸಂಸ್ಥಾನದ ಬಳಿ ಇದ್ದ ಬಿದನೂರು ಎಂಬ ಸಣ್ಣ ಸಂಸ್ಥಾನದ ಉತ್ತರಾಧಿಕಾರಿ ಯುವಕ ಚೆನ್ನಬಸವನಾಯಕ. ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿ ನಡೆದ ಘಟನೆಗಳ ಹಂದರದ ಮೂಲ ಕಥೆಯನ್ನು ಹಬ್ಬಿಸಿದೆ. ಬಿದನೂರಿನ ಹಿರಿಯನಾಯಕ ತೀರಿಕೊಂಡಿದ್ದಾನೆ, ಅವನ ಹೆಂಡತಿ ವೀರಮ್ಮಾಜಿಯೇ ರಾಜ್ಯದ ಸೂತ್ರಗಳನ್ನು ಕೈಯಲ್ಲಿ ಹಿಡಿದಿದ್ದಾಳೆ; ಪ್ರಾಯಕ್ಕೆ ಬಂದ ಮಗ ಚೆನ್ನಬಸವನಾಯಕನಿಗೆ ಪಟ್ಟ ಕಟ್ಟಿಲ್ಲ. ವೀರಮ್ಮಾಜಿ ಅರಮನೆಯ ಮನೆವಾರ್ತೆಯ ನಂಬಯ್ಯ ಎಂಬುವನಿಗೆ ವಿಶೇಷ ಸಲಿಗೆ ಕೊಟ್ಟಿದ್ದಾಳೆ. ಹೀಗಾಗಿ, ಜನ ಹತ್ತು ಬಗೆಯಲ್ಲಿ ಆಡಿಕೊಳ್ಳಲು ಅವಕಾಶವಾಗಿದೆ. ಮಗ ಧೀರ, ಮಾತು ಕಡಿಮೆ, ತಾಯಿಯ ರೀತಿ-ಜನರ ಮಾತುಗಳಿಂದ ನೊಂದುಕೊಂಡಿದ್ದಾನೆ. ರಾಣಿಗೆ ಬುದ್ಧಿ ಹೇಳಿ ರಾಜ್ಯದ ಹಣೆಯಬರಹವನ್ನು ತಿದ್ದಬೇಕಾದವನು ನೇಮಯ್ಯ-ಊರ ಪ್ರಮುಖ. ಇದಕ್ಕೆ ತಕ್ಕ ಯೋಗ್ಯತೆಯೂ ಅವನಿಗುಂಟು, ಸಂಸ್ಥಾನದ ಹಿತಕ್ಕಾಗಿಯೇ ಬದುಕುವವನು, ಸ್ವಾರ್ಥ ಲವಲೇಶವೂ ಸುಳಿಯದಂತೆ ಯೋಚಿಸಬಲ್ಲವನು. ಆದರೆ ಅವನ ತಮ್ಮನ ಮಗಳು ತಂದೆಯಿಂದ ದೂರವಾದ ಹೆಣ್ಣು ಶಾಂತಪ್ಪನಾಯಕನ ಹೆಂಡತಿ. ಇದರಿಂದ, ತಾನು

ನಾಯಕನ ಪಟ್ಟಾಭಿಷೇಕದ ಮಾತನ್ನಾಡಿದರೆ ತಪ್ಪು ಭಾವನೆಗೆ ಅವಕಾಶವಾದೀತು ಎಂಬ ಸಂಕೋಚ ಅವನ ನಾಲಿಗೆಯನ್ನು ತಡೆಯುತ್ತದೆ. ನೇಮಯ್ಯನ ಮಗಳನ್ನು ನಾಯಕನಿಗೆ ತಂದುಕೊಂಡರೆ ನಾಡಿಗೂ ಅರಮನೆಗೂ ಒಳಿತಾಗುತ್ತದೆ ಎಂದು ಹಿರಿಯ ನಾಯಕ ಕೈಗೊಂಡ ನಿರ್ಧಾರವೇ ಈಗ ನಾಡನ್ನು ಉಳಿಸಬಹುದಾದ ಒಬ್ಬನೇ ಒಬ್ಬ ವ್ಯಕ್ತಿಯ ನಾಲಿಗೆಯನ್ನೂ ಕೈಗಳನ್ನೂ ಕಟ್ಟಿದೆ. ನಾಯಕನಿಗೆ ಸಣ್ಣವ್ವ ಎಂಬ ಹುಡುಗಿಯನ್ನು ತಂದು ಮದುವೆಮಾಡಬೇಕೆಂದು ವೀರಮ್ಮಾಜಿಯ ಸನ್ನಾಹ. ಸಿಂಹಾಸನವೇರಬಹುದಾದ ಪ್ರಾಯದ ಹಕ್ಕುದಾರನಿಲ್ಲದೆ, ಬಿದನೂರಿನ ಬಳಿಯ ವಸ್ತಾರೆಯೂ ಹೆಂಗಸೊಬ್ಬಳ ಆಡಳಿತದಲ್ಲಿದೆ. ಈಕೆ, ಹೆಗ್ಗಡತಿ, ವೀರಮ್ಮಾಜಿಗೆ ಬುದ್ಧಿ ಹೇಳುವ ಪ್ರಯತ್ನ ಮಾಡುವುದು ವಿಷಮ ಪರಿಣಾಮವನ್ನೇ ಉಂಟುಮಾಡುತ್ತದೆ. ಬಳಿಯ ಮೈಸೂರು ಸಂಸ್ಥಾನದಲ್ಲಿ ಹೆಸರಿಗೆ ಮುಮ್ಮಡಿ ಕೃಷ್ಣರಾಜರು ಅರಸರು. ಸರ್ವಾಧಿಕಾರಿ ಹೈದರಾಲಿ ಮಾತಿನಲ್ಲಿ ಪ್ರಪಂಚದಲ್ಲಿ ಹಿಡಿಯದಷ್ಟು ರಾಜಭಕ್ತಿ ತೋರಿಸುತ್ತಾನೆ, ಕೃತಿಯಲ್ಲಿ ಅವರನ್ನು ಬೆಕ್ಕು ಇಲಿಯನ್ನು ಆಡಿಸಿದಂತೆ ಆಡಿಸುತ್ತಾನೆ. ಆದರೂ, ತಾನೇ ಸಿಂಹಾಸನವೇರಿದರೆ 'ನಮಕ್‌ಹರಾಂ' ಆದೇನು ಎಂಬ ಸಂಕೋಚ ಉಂಟು, ತನ್ನ ನಂತರ ತನ್ನ ಮಗ ಟಿಪ್ಪು ಅರಸು ಮನೆತನಕ್ಕೆ ಇಷ್ಟು ಗೌರವವನ್ನೂ ಸಲ್ಲಿಸಲಾರ ಎಂಬ ಶಂಕೆ ಉಂಟು. ಆದುದರಿಂದ ಬಿದನೂರಿನ ಕಡೆ ಅವನ ದೃಷ್ಟಿ ಹೊರಳುತ್ತದೆ. ಶಾಂತವ್ವ ಗಂಡನ ಕಲ್ಯಾಣಕ್ಕಾಗಿ ತಾನೇ ಭೈರವ ದೇವನಿಗೆ ಬಳಿಯಾಗುತ್ತಾಳೆ, ತರುಣ ನಾಯಕ ಸಾಯುತ್ತಾನೆ, ವೀರಮ್ಮಾಜಿ-ನಂಬಯ್ಯ ಸೆರೆಯಾಗುತ್ತಾರೆ.

'ಚಿಕವೀರ ರಾಜೇಂದ್ರ' ಕೊಡಗಿನ ಚರಿತ್ರೆಗೆ ಸಂಬಂಧಿಸಿದುದು. ಚಿಕವೀರ ರಾಜೇಂದ್ರ ಕೊಡಗಿನ ಕಡೆಯ ಅರಸ; ೧೮೩೪ರಲ್ಲಿ ಈ ಪುಟ್ಟ ಪ್ರದೇಶವನ್ನು ಈಸ್ಟ್ ಇಂಡಿಯಾ ಕಂಪೆನಿ ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿತು. ಚಿಕವೀರ ರಾಜೇಂದ್ರ, ತನ್ನ ತಂಗಿ ದೇವಮ್ಮಾಜಿ, ಅವಳ ಗಂಡ ಚೆನ್ನಬಸವ ಇಬ್ಬರನ್ನೂ ಬಂಧಿಸಿಡಲು ಪ್ರಯತ್ನಿಸಿದ. ಅವರು ಕಂಪೆನಿಯ ಆಶ್ರಯ ಪಡೆದರು. ಅರಸನ ಆಡಳಿತದ ವಿರುದ್ಧ ಕಂಪೆನಿಗೆ ಹಲವಾರು ದೂರುಗಳು ಬಂದುವು. ಕೀಳು ಕೆಲಸದಲ್ಲಿದ್ದು ಅರಸನ ಸ್ನೇಹವನ್ನು ಸಂಪಾದಿಸಿ ಮಂತ್ರಿಯಾದ ಕುಂಟ ಬಸವ ಎನ್ನುವವನು ರಾಜನ ದೌರ್ಭಾಗ್ಯದ ಶಿಲ್ಪಿಯಾದ. ಕಡೆಗೆ ಸೆರೆಯಾದ ರಾಜ ಇಂಗ್ಲೆಂಡಿನಲ್ಲಿ ನೆಲೆಸಿದ, ತೀರಿಕೊಂಡ. ಅವನ ಮಗಳು ಕ್ರೈಸ್ತ ಮತವನ್ನು ಅವಲಂಬಿಸಿದಳು.

ಚಾರಿತ್ರಿಕ ಕಾದಂಬರಿ ಬರೆಯುವಾತನ ಆಸಕ್ತಿ ಒಂದು ಯುಗದಲ್ಲಿ, ಚಾರಿತ್ರಿಕ ಅವಧಿಯಲ್ಲಿ ಇರಬಹುದು; ಇಲ್ಲವೇ ಚಾರಿತ್ರಿಕ ವ್ಯಕ್ತಿಗಳಲ್ಲಿರಬಹುದು. ಚಾರ್ಲ್ಸ್ ಡಿಕನ್ಸ್ 'ಎ ಟೇಲ್ ಆಫ್ ಟು ಸಿಟೀಸ್' ಎಂಬ ಚಾರಿತ್ರಿಕ ಕಾದಂಬರಿ ಬರೆದ. ಇದರಲ್ಲಿ ಅವನ ಆಸಕ್ತಿ ಫ್ರಾನ್ಸಿನ ಮಹಾಕ್ರಾಂತಿ (೧೭೮೯) ಯ ಕಾಲದಲ್ಲಿ ಮಹಾಕ್ರಾಂತಿಯನ್ನು ಕಣ್ಣಿಗೆ ಕಟ್ಟುವಂತೆ ಈತ ವರ್ಣಿಸಿದರೂ, ಮುಖ್ಯ ಪಾತ್ರಗಳೆಲ್ಲ-ಸಿಡ್ನಿ ಕಾರ್ಟನ್, ಚಾರ್ಲ್ಸ್ ಡಾರ್ನೆ, ಲೂಸಿ ಮ್ಯಾನೆಟ್, ಡಾ. ಮ್ಯಾನೆಟ್ ಮಿ ಲಾರಿ, ಡಿಫಾರ್ಜ್ ಮತ್ತು ಅವನ ಹೆಂಡತಿ ಎಲ್ಲರೂ-ಕಾಲ್ಪನಿಕ ಪಾತ್ರಗಳೇ. ಫ್ರಾನ್ಸಿನ ಮಹಾಕ್ರಾಂತಿಯಲ್ಲಿ ಕೇಂದ್ರ ವ್ಯಕ್ತಿಗಳಾಗಿದ್ದವರ ಪ್ರಸ್ತಾಪ ಎಲ್ಲಿಗೋ ನುಸುಳುತ್ತದೆ. ಕಾದಂಬರಿಕಾರ ಚಾರಿತ್ರಿಕ ವ್ಯಕ್ತಿಗಳಲ್ಲಿ ಆಸಕ್ತಿ ಹೊಂದಿರಬಹುದು. ಶ್ರೀನಿವಾಸರ ಆಸಕ್ತಿ ಇಂತಹುದು. ದೇವುಡು ಅವರ

'ಮಯೂರ'ದಿಂದ ಇತ್ತೀಚೆಗೆ ಪುಲಕೇಶಿ, ನೃಪತುಂಗ, ಕಿತ್ತೂರು ಚೆನ್ನಮ್ಮ, ಶಾಂತಲಾ ಇವರನ್ನು ಕುರಿತು ಬಂದಿರುವ ಕಾದಂಬರಿಗಳವರೆಗೆ ಕನ್ನಡ ಐತಿಹಾಸಿಕ ಕಾದಂಬರಿಗಳು ನಾಡಿನ ಚರಿತ್ರೆಯಲ್ಲಿ ಧೀರರಾಗಿ, ವಿವೇಕವಂತರಾಗಿ, ಆದರ್ಶ ವ್ಯಕ್ತಿಗಳಾಗಿ ಬಾಳಿದವರ ವ್ಯಕ್ತಿತ್ವವನ್ನು ಬೆಳಗುವ ಪ್ರಯತ್ನಗಳು. (ಪುಟ್ಟಸ್ವಾಮಯ್ಯನವರ ಕಾದಂಬರಿಗಳಲ್ಲಿ ಮಹಾವ್ಯಕ್ತಿಗಳ ಚಿತ್ರಣ ಮುಖ್ಯ ಉದ್ದೇಶವಾದರೂ, ಯುಗವೂ ಹಿನ್ನೆಲೆಯಲ್ಲಿ ತಕ್ಕಷ್ಟು ಪ್ರಧಾನವಾಗಿಯೇ ರೂಪ ತಾಳುತ್ತದೆ.) ಶ್ರೀನಿವಾಸರ ಐತಿಹಾಸಿಕ ಕಾದಂಬರಿಗಳು ಒಂದು ರೀತಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಎನ್ನಬಹುದು. ಅವರು ಆರಿಸಿಕೊಂಡ ವ್ಯಕ್ತಿಗಳು ತಮ್ಮ ರಾಜ್ಯದ ಅವನತಿಯ ಕಾಲದಲ್ಲಿ ಇದ್ದವರು, ಸ್ವಲ್ಪಮಟ್ಟಿಗೋ ಬಹುಮಟ್ಟಿಗೋ ಆ ಅವನತಿಗೆ ಕಾರಣರಾದವರು. (ಬಿದನೂರಿನ ಪತನಕ್ಕೆ ವಿಧಿ ಕಾರಣ ಎಂಬ ಸೂಚನೆ ಇದೆ; ವೀರಮ್ಮಾಜಿಯ ಸ್ವಭಾವದ ದೌರ್ಬಲ್ಯವೂ ಕಾರಣ. ಆದರೆ, ಚೆನ್ನಬಸವನಾಯಕನೂ ಸ್ವಲ್ಪಮಟ್ಟಿಗಾದರೂ ಕಾರಣನೆ, ತನ್ನ ಹೊಣೆಗೆ ಅನುಗುಣವಾದ ಎಚ್ಚರವನ್ನು ಅವನು ವಹಿಸಲಿಲ್ಲ, ವಿವೇಚನೆಗಿಂತ ಸಾಹಸವೇ ಮೇಲುಗೈಯಾಯಿತು ಎನ್ನಿಸುತ್ತದೆ.) ಎಂದರೆ ನಾಡಿನ ವೈಭವವೂ ಹಿರಿಮೆಯೂ ಮೂರ್ತಿಭವಿಸಿದಂತೆ ಕಾಣುವ ಭವ್ಯ ವ್ಯಕ್ತಿಗಳನ್ನು ಚಿತ್ರಿಸಿ ದೇಶಾಭಿಮಾನವನ್ನು ಜಾಗ್ರತಗೊಳಿಸುವುದು ಕಾದಂಬರಿಯ ಉದ್ದೇಶವಲ್ಲ.

ಶ್ರೀನಿವಾಸರ ಮುಖ್ಯ ಆಸಕ್ತಿ ವ್ಯಕ್ತಿತ್ವ - ಹೊರಜಗತ್ತುಗಳ ಸಂಬಂಧದಲ್ಲಿ. ಚೆನ್ನಾಗಿ ಬದುಕಿದ ರಾಜ್ಯ ಅವನತಿಯತ್ತ ಸಾಗುತ್ತದೆ. ಈ ಅವನತಿಯ ಪ್ರಕ್ರಿಯೆಯಲ್ಲಿ ವ್ಯಕ್ತಿಗಳು ಸೇರಿಕೊಂಡಿದ್ದಾರೆ. ಎಂತಹ ವ್ಯಕ್ತಿಗಳು ಇವರು? ತಮ್ಮ ಹೊರಜಗತ್ತಿಗೆ ಇವರು ತೋರಿಸಿದ ಪ್ರತಿಕ್ರಿಯೆ ಎಂತಹದು? ಅವರ ವ್ಯಕ್ತಿತ್ವದಿಂದ ಜನಿತವಾದ ಈ ಪ್ರತಿಕ್ರಿಯೆ ಹೊರ ಜಗತ್ತನ್ನು ಹೇಗೆ ಮಾರ್ಪಡಿಸಿತು? ಅವರ ವ್ಯಕ್ತಿತ್ವ ಬೇರೆಯಾಗಿದ್ದಿದ್ದರೆ, ಪ್ರತಿಕ್ರಿಯೆ ಬೇರೆಯಾಗಿದ್ದಿದ್ದರೆ ರಾಜ್ಯದ ಏಳುಬೀಳು ಮಾರ್ಪಾಟಾಗಬಹುದಾಗಿತ್ತೇ? ರಾಜ್ಯದ ದುರಂತದ ಬೇರೆ ಎಷ್ಟರ ಮಟ್ಟಿಗೆ ವ್ಯಕ್ತಿಗಳಲ್ಲಿ ಇಳಿದದ್ದು?

ಎಂದರೆ, ಹಿಂದಿನ ಒಂದು ಯುಗ - ಅದರ ವ್ಯಕ್ತಿಗಳ ಕಥೆಯನ್ನು ಹೇಳುವಾಗ ಶ್ರೀನಿವಾಸರ ಗುರಿ (ಎಲ್ಲ ಸಾಹಿತ್ಯ ಎಷ್ಟರ ಮಟ್ಟಿಗೆ ಮಾರ್ಗದರ್ಶಕವಾಗಬಹುದೋ ಅಷ್ಟರ ಹೊರತು) ಚರಿತ್ರೆಯಿಂದ ಕೆಲವು ಪಾಠಗಳನ್ನು ಎತ್ತಿ ತೋರಿಸುವುದಲ್ಲ. ನಿರಂತರವೂ ಆಸಕ್ತಿಯನ್ನುಂಟು ಮಾಡುವ ಜೀವನದ ಒಂದು ಸಮಸ್ಯೆ-ವ್ಯಕ್ತಿ ಮತ್ತು ಆವರಣಗಳ ಸಂಬಂಧದ ಸಮಸ್ಯೆ. ಕಾದಂಬರಿಯ ವಸ್ತು ಚರಿತ್ರೆಯನ್ನಾಧರಿಸಿದೆ, ಚಾರಿತ್ರಿಕ ಘಟನೆಗಳನ್ನು ಕಾದಂಬರಿ ಬಳಸಿಕೊಳ್ಳುತ್ತದೆ. ('ಚೆನ್ನಬಸವನಾಯಕ'ನಲ್ಲಿ ವೀರಮ್ಮಾಜಿ ಮಗನಿಗೆ ಪಟ್ಟಕಟ್ಟದೆ ಕುಳಿತದ್ದು, ಹೈದರ್ ಮುಮ್ಮಡಿ ಕೃಷ್ಣರಾಜ ಒಡೆಯರ ಪರವಾಗಿದ್ದ ಖಂಡೇರಾಯನನ್ನು ಸೆರೆಹಿಡಿದದ್ದು ಮತ್ತು ಬರ್ಕಿ ಶ್ರೀನಿವಾಸರಾಯನನ್ನು ಬಿಡಿಸಿ ತಂದದ್ದು, ಬಿದನೂರಿಗೆ ಮುತ್ತಿಗೆ ಹಾಕಿದ್ದು ಇವೆಲ್ಲ ಚಾರಿತ್ರಿಕ ಘಟನೆಗಳು. ಈ ಕಾದಂಬರಿಗಿಂತ 'ಚಿಕವೀರ ರಾಜೇಂದ್ರ' ಹೆಚ್ಚಾಗಿ ಚಾರಿತ್ರಿಕ ಘಟನೆಗಳನ್ನು ಬಳಸಿಕೊಂಡಂತೆ ಕಾಣುತ್ತದೆ. ಕೊಡಗು ಅರಸು ಮನೆತನದ ಹಣ ಕಂಪೆನಿಯವರ ಕೈಯ್ಯಲ್ಲಿದ್ದದ್ದು, ವೀರರಾಜೇಂದ್ರ ತಂಗಿಯನ್ನೂ ಭಾವನನ್ನೂ ಸೆರೆಯಲ್ಲಿಡಲು ಪ್ರಯತ್ನಿಸಿದ್ದು, ಅವರು ಕಂಪೆನಿಯ ರಕ್ಷಣೆಯಲ್ಲಿ ಬೆಂಗಳೂರಿಗೆ ಹೋದದ್ದು, ಕಂಪೆನಿಯ ಪ್ರತಿನಿಧಿ ಕರುಣಾಕರ ಮೆನನ್ ಎಂಬಾತನನ್ನು ವೀರರಾಜೇಂದ್ರ ಸೆರೆಯಲ್ಲಿಟ್ಟದ್ದು, ಕಂಪೆನಿಯ ಅಧಿಕಾರಿ ಫ್ರೇಸರ್ ಕೊಡಗನ್ನು ಮುತ್ತಿದ್ದು, ಮಂತ್ರಿ ಬೋಪಣ್ಣ ಅವನನ್ನು

ಸೇರಿಕೊಂಡದ್ದು, ವೀರರಾಜೇಂದ್ರ ಇಂಗ್ಲೆಂಡಿನಲ್ಲಿ ತೀರಿಕೊಂಡದ್ದು, ಅವನ ಮಗಳು ಅಲ್ಲಿ ಕ್ರೈಸ್ತ ಮತಕ್ಕೆ ಸೇರಿದ್ದು ಎಲ್ಲ ಚಾರಿತ್ರಿಕ ಘಟನೆಗಳೇ) ಆದರೆ ಒಂದೊಂದು ಘಟನೆಯೂ ಹಿಂದಿನ ಹಲವು ಘಟನೆಗಳು ಮತ್ತು ಸನ್ನಿವೇಶಗಳು, ಅವಕ್ಕೆ ಮನುಷ್ಯ ವ್ಯಕ್ತಿಗಳ ಪ್ರತಿಕ್ರಿಯೆಗಳು ಇವುಗಳಿಂದ ಬಹುಮಟ್ಟಿಗೆ ರೂಪಿತವಾಗಿರುತ್ತದೆ. ನಿನ್ನೆ ಇಂದಾಗುವುದು, ಇಂದು ನಾಳೆಯಾಗುವುದು ಕ್ಷಣಕ್ಷಣವೂ ನಡೆಯುವ ವ್ಯಾಪಾರ. ಯಾವುದೇ ಒಂದು ಗಡಿಯವರೆಗೆ ನಿನ್ನೆ ಸ್ಥಿರರೂಪವಾಗಿ ಅಸ್ತಿತ್ವದಲ್ಲಿದ್ದು, ಒಂದು ಕ್ಷಣದಲ್ಲಿ ಅದು ಸತ್ತು ಇಂದಿನ ಅವತಾರವಾಗಲಿಲ್ಲ. ಜೀವನದ ನಿನ್ನೆ-ಇಂದು-ನಾಳೆಗಳು ಕ್ಷಣ ಕ್ಷಣ ರೂಪುಗೊಳ್ಳುತ್ತ ಹೋಗುವ ರೀತಿ ಈ ಕಾದಂಬರಿಗಳ ವಸ್ತು. ಈ ನಿನ್ನೆ-ಇಂದು-ನಾಳೆಗಳು ರೂಪುಗೊಳ್ಳುವುದರಲ್ಲಿ ಸನ್ನಿವೇಶದ ಪಾತ್ರವೂ ಉಂಟು, ಮನುಷ್ಯ ಸಮುದಾಯದ ಪಾತ್ರವೂ ಉಂಟು. ಒಂದು ಸನ್ನಿವೇಶದಲ್ಲಿ ಕೆಲವು ಪಾತ್ರಗಳು; ಸನ್ನಿವೇಶಕ್ಕೆ ಪಾತ್ರಗಳು ತೋರುವ ಪ್ರತಿಕ್ರಿಯೆಯಿಂದ ಆ ಸನ್ನಿವೇಶ ಮಾರ್ಪಾಟಾಗಿ ಮತ್ತೊಂದು ಸನ್ನಿವೇಶ ಉದ್ಭವವಾಗುತ್ತದೆ. (ಹಿಂದಿನ ಸನ್ನಿವೇಶ ಯಾವ ಕ್ಷಣದಲ್ಲಿ ಈ ಸನ್ನಿವೇಶವಾಯಿತು ಎಂದು ಹೇಳುವುದು ಅಸಾಧ್ಯ); ಹೊಸ ಸನ್ನಿವೇಶದಲ್ಲಿ ಹಳೆಯ ಪಾತ್ರಗಳೇ ನಮಗೆ ಕಾಣಬಹುದು, ಇಲ್ಲವೆ ಕೆಲವು ಆವರೆಗೆ ನಾವು ಕಾಣದಿದ್ದ ಪಾತ್ರಗಳು ಕಾಣಬಹುದು. ಆದರೆ ನಾವು 'ಹಳೆಯ ಪಾತ್ರಗಳು' ಎಂದ ವ್ಯಕ್ತಿಗಳು ಎಲ್ಲರೂ ಯಾವಾಗಲೂ ಒಂದೇ ರೀತಿ ಇರುವುದಿಲ್ಲ, ಸ್ವಲ್ಪ ಮಟ್ಟಿಗೆ-ಬಹು ಸ್ವಲ್ಪ ಮಟ್ಟಿಗೆ-ಮಾರ್ಪಾಟಾಗಿರಬಹುದು. ಅವರೆಲ್ಲರೂ ಮಾರ್ಪಾಟಾಗಿರುತ್ತಾರೆ ಎಂದಲ್ಲ, ಕೆಲವರಾದರೂ ಆಗಿರಬಹುದು. ಹೊಸ ಸನ್ನಿವೇಶಕ್ಕೆ ಅವರು ತೋರುವ ಪ್ರತಿಕ್ರಿಯೆ ಅವರ ಸ್ವಭಾವದಿಂದ ಜನ್ಮವಾದುದು ಎನ್ನುವಾಗ, ಅವರ ಸ್ವಭಾವದಲ್ಲಿಯೂ ಹಿಂದಿನ ಹಲವು ಅನುಭವಗಳಿಂದ ಮಾರ್ಪಾಟಾಗಿರಬಹುದು, ಹೀಗೆ ಮಾರ್ಪಾಟಾದ ಸ್ವಭಾವ ಹೊಸ ಸನ್ನಿವೇಶಕ್ಕೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತದೆ ಎಂಬುದನ್ನು ನೆನಪಿಡಬೇಕು. 'ಸನ್ನಿವೇಶ' ಎಂಬ ಮಾತನ್ನು ಬಳಸುವಾಗಲೂ ಅದರಿಂದ ನಿರ್ದೇಶಿಸುವ ಆವರಣ ಎಷ್ಟು ಜಟಿಲವಾದದ್ದು ಎಂಬುದನ್ನು ಗಮನಿಸಬೇಕು. ನಾಲ್ಕು ಸರಳ ರೇಖೆಗಳ ಸ್ಪಷ್ಟ ಚೌಕಟ್ಟಲ್ಲ, ಸನ್ನಿವೇಶ. ಹಲವಾರು ರೇಖೆಗಳು-ಪದರಗಳು ಸೇರಿಕೊಂಡ ಆವರಣ. ಉದಾಹರಣೆಗೆ 'ಚನ್ನಬಸವನಾಯಕ'ನಲ್ಲಿ ಪ್ರಾರಂಭದ ಸನ್ನಿವೇಶ, ಪ್ರಾಪ್ತ ವಯಸ್ಸಿಗೆ ಬಂದ ಮಗನಿಗೆ ಪಟ್ಟಕಟ್ಟದೆ ಹಿರಿಯರಾಣಿ ತಾನೇ ಆಡಳಿತ ನಡೆಸುತ್ತಿರುವುದು ಎಂದರೆ, ನಿಜವಾದ ಸನ್ನಿವೇಶವನ್ನು ತೀರ ಸರಳಗೊಳಿಸಿದಂತಾಗುತ್ತದೆ. ಏಕೆಂದರೆ, ವೀರಮ್ಮಾಜಿಗೂ ಮಗನಿಗೆ ಪಟ್ಟಕಟ್ಟದೆ ತಾನೇ ಎಂದಿಗೂ ಆಳಬೇಕು ಎಂಬ ಉದ್ದೇಶವಿಲ್ಲ. ಈ ವಿಷಯವಾಗಿ ಅವಳು ಅಂತಹ ಸ್ಪಷ್ಟ ನಿರ್ಧಾರ ಕೈಗೊಂಡಿಲ್ಲ. ಜೊತೆಗೆ ನಂಬಯ್ಯನಲ್ಲಿ ಅವಳಿಗೆ ವಿಶೇಷ ಆದರ, ಅಲ್ಲದೆ ಸಿಂಹಾಸನಕ್ಕೆ ಅರ್ಹನಾದ ಮಗ-ಅವನ ತಾಯಿ ಎಂದು ಮಾತ್ರ ವೀರಮ್ಮಾಜಿ ನಾಯಕರನ್ನು ಕಾಣುವುದು ತಪ್ಪಾಗುತ್ತದೆ. ತನ್ನ ಗಂಡ ಬದುಕಿದ್ದಾಗಲೆ ಮಗನಿಂದ ತನ್ನ ನಡತೆಯ ವಿಷಯ ಹಗುರವಾದ ಮಾತನ್ನು ಕೇಳಿದ್ದವಳು ಅವಳು ; ಜೊತೆಗೆ, ತಾಯಿಗಿಷ್ಟವಿಲ್ಲದ ಹೆಣ್ಣನ್ನು ಮಗ ಮದುವೆಯಾಗಿದ್ದಾನೆ. ತನ್ನ ನಂತರಲ್ಲಿ ಒಂದು ಹುಡುಗಿಯನ್ನು ಅವನಿಗೆ ಮದುವೆ ಮಾಡುವ ಆಸೆ ಅವಳಿಗೆ (ನಾಯಕ ಸಣ್ಣವ್ವನ ಕೈ ಹಿಡಿದಿದ್ದರೆ ಬೇಗ ಪಟ್ಟವಾಗುತ್ತಿತ್ತೋ ಏನೊ!) ಆದರೆ ಸೊಸೆಯ ತಂದೆ ಊರಿನ ಪ್ರಮುಖ, ಎಲ್ಲರಲ್ಲಿ ಗೌರವ ಸಂಪಾದಿಸಿದವನು. ಆದುದರಿಂದ, 'ಚೆನ್ನಬಸವನಾಯಕ'

ಕಾದಂಬರಿಯ ಪ್ರಾರಂಭದ ಸನ್ನಿವೇಶವನ್ನು ತೀರ ಸರಳಗೊಳಿಸದೆ ವರ್ಣಿಸಬೇಕೆಂದರೆ ಹೀಗೆ ಹೇಳಬಹುದು: ''ತನ್ನ ಗಂಡನನ್ನು ಸ್ವಲ್ಪ ಕಾಲದ ಹಿಂದೆ ಕಳೆದುಕೊಂಡು, ತನ್ನ ಮನೆವಾರ್ತೆಯವರಲ್ಲಿ ಒಬ್ಬನಲ್ಲಿ ಬಹು ವಿಶ್ವಾಸವಿಟ್ಟಿರುವ ರಾಣಿ, ತನಗಿಷ್ಟವಿಲ್ಲದ ಅಲ್ಲಿದೆ ಊರಿನ ಪ್ರಮುಖನೊಬ್ಬನ ಮಗಳಾದ ಹುಡುಗಿಯನ್ನು ಮದುವೆಯಾಗಿರುವ ಮತ್ತು ತಾಳಿಯಲ್ಲಿ ಆಗಲೆ ಸ್ವಲ್ಪ ಕಹಿಯನ್ನು ಪ್ರಕಟಿಸಿರುವ ತರುಣ ಮಗನಿಗೆ ಬೇರೊಂದು ಹೆಣ್ಣನ್ನು ತಂದು ಮದುವೆ ಮಾಡುವ ಯೋಚನೆಯಲ್ಲಿ ಜನ ಹತ್ತು ರೀತಿಯಲ್ಲಿ ಸಂದೇಹಿಸಿದರೂ ಪಟ್ಟಾಭಿಷೇಕದ ವಿಷಯಕ್ಕೆ ಉದ್ದೇಶಪೂರ್ವಕವಾಗಿ ಹೆಚ್ಚು ಗಮನ ಕೊಡದಿರುವುದು.''

ಕಾದಂಬರಿಯ ಈ ಅಂಶವನ್ನು ಇಷ್ಟು ವಿವರಿಸಿ ಹೇಳುವುದರ ಉದ್ದೇಶ, ಈ ಎರಡು ಕಾದಂಬರಿಗಳ ವೈಶಿಷ್ಟ್ಯವೊಂದಕ್ಕ ಗಮನ ಸೆಳೆಯುವುದು. ಹಲವು ಚಾರಿತ್ರಿಕ ಕಾದಂಬರಿಗಳಲ್ಲಿ, ಸ್ವಲ್ಪ ಹೆಚ್ಚು ಕಡಿಮೆ ಎಲ್ಲ ಕನ್ನಡ ಚಾರಿತ್ರಿಕ ಕಾದಂಬರಿಗಳಲ್ಲಿ ನಾವು ಕಾಣುವ ತಂತ್ರ ಇದು: ವೃತ್ತಾಂತ ಸ್ವಲ್ಪ ದೂರ ಸಾಗುತ್ತದೆ, ಅನಂತರ ಎದ್ದು ಕಾಣುವಂತಹ ಒಂದು ದೃಶ್ಯ ಬರುತ್ತದೆ. ಮತ್ತೆ ವೃತ್ತಾಂತ. ಅನಂತರ ಮತ್ತೊಂದು ನಮ್ಮ ಮನಸ್ಸನ್ನು ಕಲಕುವ ಅಥವ ಮೆಚ್ಚಿಕೆಯನ್ನು ಸೂರೆಗೊಳ್ಳುವ ದೃಶ್ಯ (ರಾಜ ತನ್ನ ಶತ್ರುವನ್ನು ಕ್ಷಮಿಸುವುದು ಇಲ್ಲವೇ ದೇವಾಲಯದಲ್ಲಿ ಭಕ್ತಿಯಿಂದ ಆರಾಧಿಸುವುದು ಅಥವ ತಾಯಿ, ಮಗ, ಹೆಂಡತಿ, ಮಂತ್ರಿ, ಇಂತಹವರ ಎದುರಿಗೆ ತನ್ನ ಹೃದಯವನ್ನೆ ಬಿಚ್ಚಿಡುವುದು. ಇಂತಹ ದೃಶ್ಯಗಳು.) ಕಾದಂಬರಿಯನ್ನು ಓದಿ ಮುಚ್ಚಿಟ್ಟ ನಂತರ ಅದನ್ನು ನೆನಸಿಕೊಂಡರೆ, ಸ್ಮರಣೆಯಲ್ಲಿ ಎದ್ದು ನಿಲ್ಲುವುದು ಈ ದೃಶ್ಯಗಳ ಸಾಲು. ಆದರೆ 'ಚೆನ್ನಬಸವನಾಯಕ'ನಲ್ಲಾಗಲಿ 'ಚಿಕವೀರ ರಾಜೇಂದ್ರ'ನಲ್ಲಾಗಲಿ ಸುತ್ತಲಿನ ಮೈದಾನ ಪ್ರದೇಶವನ್ನು ಮೆಟ್ಟಿನಿಂತ ಶಿಖರಗಳಂತೆ-ವೃತ್ತಾಂತದ ಭಾಗವನ್ನು ಮೆಟ್ಟಿನಿಂತ ಮಹಾದೃಶ್ಯಗಳು ಇಲ್ಲವೇ ಇಲ್ಲ ಎನ್ನುವುದು ಕುತೂಹಲದ ಅಂಶ. ಸಾಮಾನ್ಯವಾಗಿ ಐತಿಹಾಸಿಕ ಕಾದಂಬರಿಯಲ್ಲಿ ವೃತ್ತಾಂತ ಭಾಗ, ಸ್ಮರಣೀಯ ದೃಶ್ಯದಿಂದ ಸ್ಮರಣೀಯ ದೃಶ್ಯಕ್ಕೆ ನಮ್ಮನ್ನು ಕರೆದೊಯ್ಯುವ ಹಾದಿ, ಎರಡು ಭವ್ಯ ದೃಶ್ಯಗಳ ನಡುವೆ ಸೇತುವೆ. ಶ್ರೀನಿವಾಸರ ಕಾದಂಬರಿಗಳಲ್ಲಿ ಹೀಗೆ ಎದ್ದು ಕಾಣುವ ದೃಶ್ಯಗಳೇ ಇಲ್ಲ. ಇದಕ್ಕೆ ಕಾರಣ, ಬಹುಮುಖ್ಯವಾದುವು ಎಂದು ಎಚ್ಚರಿಕೆಯಿಂದ ಸಿದ್ಧತೆ ಮಾಡಿ ಅವರು ಚಿತ್ರಿಸುವ ಸನ್ನಿವೇಶಗಳಿಲ್ಲ; ಪ್ರತಿ ಘಟನೆಯಲ್ಲಿ, ಸನ್ನಿವೇಶದ ಜಟಿಲತೆ, ವ್ಯಕ್ತಿತ್ವದ ಆಂತರ್ಯ ಎರಡನ್ನೂ ಭಾಷೆಯ ಮೂಲಕ ಸಂಪೂರ್ಣವಾಗಿ ನಮ್ಮ ಮುಂದಿಡುವ ಪ್ರಯತ್ನ ಅವರದು. ಸನ್ನಿವೇಶದ ಪದರ ಪದರದ ಅರಿವನ್ನೂ ಏಕಕಾಲದಲ್ಲಿ ಮಾಡಿಕೊಡಲು, ಜೊತೆಗೆ ಅದರಲ್ಲಿ ಒಳಗಾದ ಪಾತ್ರಗಳ ಇಡೀ ವ್ಯಕ್ತಿತ್ವವನ್ನೂ ಚಿತ್ರಿಸುವ ಪ್ರಯತ್ನ ಅವರದು, ವ್ಯಕ್ತಿತ್ವ ಕೆಲವು ಬೇರೆ ಬೇರೆ ಗುಣಗಳ ಮೊತ್ತವಲ್ಲ, ಹಲವು ಕವಡೆಗಳನ್ನಿರಿಸಿದಂತೆ ಅವು ಬೇರೆ ಬೇರೆಯಾಗಿದ್ದು ಒಂದು ಸನ್ನಿವೇಶಕ್ಕೆ ಪ್ರತಿಕ್ರಿಯೆ ತೋರಿಸುವುದಿಲ್ಲ. ಆನುವಂಶಿಕ ಗುಣಗಳು, ಪರಿಸರದಿಂದ ಕಲಿತದ್ದು, ವೈಯಕ್ತಿಕ ಗುಣಗಳು ಎಲ್ಲ ಹಾಸುಹೊಕ್ಕಾಗಿ ಸೇರಿ ಒಂದು ಸಂಕೀರ್ಣವಾದ ರಚನೆಯನ್ನು-'ಟೆಕ್ಸ್‌ಚರ್' ಅನ್ನು-ನಿರ್ಮಿಸಿರುತ್ತವೆ. ಇಡೀ ವ್ಯಕ್ತಿತ್ವ ಇಡೀ ಸನ್ನಿವೇಶಕ್ಕೆ ತೋರುವ ಪ್ರತಿಕ್ರಿಯೆಯಿಂದ ಶ್ರೀನಿವಾಸರ ಕಾದಂಬರಿಗಳಲ್ಲಿ ಕ್ರಿಯೆ ಮುಂದಕ್ಕೆ ಸಾಗುತ್ತದೆ. ಈ ಪ್ರತಿಕ್ರಿಯೆ ಕಾರ್ಯರೂಪದಲ್ಲಿ ವ್ಯಕ್ತವಾಗುತ್ತದೆ. ಚೆನ್ನಬಸವನಾಯಕ ಹೈದರಾಲಿಯನ್ನು ಭೇಟಿಯಾಗುವೆನೆಂದು ಒಬ್ಬನೇ ಹೋಗುವುದು,

ಗರ್ಭಿಣಿ ಸ್ತ್ರೀ ಭೈರವಿಗೆ ಬಲಿಯಾದರೆ ಗಂಡನಿಗೆ ಕಲ್ಯಾಣವಾಗುವುದೆಂಬುದು ಕೇಳಿ ತಾನೇ ಬಲಿಯಾಗಿ ಶಾಂತವ್ವ ಹೋಗುವುದು, ಬೋಪಣ್ಣ ಫ್ರೇಸರನನ್ನು ಕೂಡಿಕೊಳ್ಳುವುದು; ಇವು ಇಂತಹ ಕಾರ್ಯರೂಪದ ಪ್ರತಿಕ್ರಿಯೆಗಳು. ಆದರೆ ಈ ಪ್ರತಿಕ್ರಿಯೆ ಬಹು ಸೂಕ್ಷ್ಮವಾಗಿ, ಬೆಳಕು ಹರಡುತ್ತ ಹೋಗುವ ರೀತಿಯಲ್ಲಿ ಸನ್ನಿವೇಶವನ್ನೂ ವ್ಯಕ್ತಿತ್ವವನ್ನೂ ಬಿಡಿಸಿ ತೋರಿಸುವುದು ಸಂಭಾಷಣೆಯಲ್ಲಿ. ಆದುದರಿಂದಲೇ ಶ್ರೀನಿವಾಸರ ಈ ಕಾದಂಬರಿಗಳಲ್ಲಿ ಭಾಷೆಗೆ ವಿಶಿಷ್ಟ ಪಾತ್ರ ಉಂಟು. ಒಂದು ಉದಾಹರಣೆ: ವೀರಮ್ಮಾಜಿಗೆ, ತನ್ನ ಮಗ ಮೈಸೂರು ಆಸ್ಥಾನಕ್ಕೆ ಹೋಗಿರುವುದು ತನ್ನ ಮೇಲಿನ ಸಂಚಿಗೆ ಇದರಲ್ಲಿ ನೇಮಯ್ಯನೂ ಭಾಗಿ ಎಂದು ನಂಬಿಕೆ. ನೇಮಯ್ಯ ತನಗೆ ಏನೂ ತಿಳಿಯದು ಎನ್ನುತ್ತಾನೆ. ''ನಮ್ಮ ಮನೆ ಮಗಳನ್ನ ನಿಮ್ಮ ಮಗನಿಗೆ ತಂದುಕೊಳ್ಳೋ ಮೊದಲು, ಏನಾಗಿದ್ದ, ಈಗಲೂ ಅದೇ ಆಗಿದ್ದೇನೆ; ರವೆ ಹೆಚ್ಚಿಲ್ಲ, ರವೆ ಕಡಿಮೆ ಇಲ್ಲ. ಏನೋ, ನೀವು ಮಗಳಂತೀರಿ ಅಂತ ನಾನೂ ಮಗಳು ಅಂದಿದ್ದೇನೆ, ಆದರ ಮಗಳು ನಿಮ್ಮ ಸ್ವತ್ತು. ಹೆಣ್ಣಿನ ಅದೃಷ್ಟಕ್ಕೆ ತವರು ಹೊಣೆ ಅಲ್ಲ. ಈಗ ನಾನು ನಿಮ್ಮ ಸೊಸೆಗೆ ಏನೂ ಅಲ್ಲ ಅಂತ ತಿಳಿದುಕೊಳ್ಳಿ. ನಾನೇನಾದರೂ ತಪ್ಪಿ ನಡೆದಿದ್ದರೆ, ನೀವು ರಾಣಿ, ದಂಡಿಸಿ; ನಾನು ಒಪ್ಪಿಕೊಂಡ,'' ಎನ್ನುತ್ತಾನೆ.

ವೀರಮ್ಮಾಜಿ ಕೇಳುತ್ತಾಳೆ: ''ನಿಮ್ಮನ್ನು ದಂಡಿಸಿ ನಾನು ಬದುಕಬಹುದೊ ನೇಮಯ್ಯ?''.

''ನಾನು ಸತ್ಯವಂತನಾದರೆ, ಬಾರದು ಅಮ್ಮಾಜಿ. ನಾನು ದ್ರೋಹಿ ಆದರೆ ದಂಡಿಸದೆ ಬಿಟ್ರು ದಾರಿ ಇಲ್ಲ. ತಾವು ಗಳಿಗೆ ಮೊದಲು ಹೇಳಿದ ಮಾತು ನಿಜವಾದರೆ ನನ್ನನ್ನು ನೀವು ನಗರದಲ್ಲಿ ನಿಲ್ಲೋಕೆ ಬಿಡಬಾರದು; ಗಡೀಪಾರು ಮಾಡಬೇಕು.''

''ನಗರ ಇರೋ ಗತೀಲಿ ಇದನ್ನ ಯಾರು ಮಾಡಬೇಕು?''

''ಅಮ್ಮಾಜಿ, ಸತ್ಯವಾಗಿ ಹೇಳುತ್ತೇನೆ; ನೀವು ತಿಳಿದುಕೊಂಡಿರೋದು ತಪ್ಪು. ನೀವು ಕೋಪದಲ್ಲಿ ಮಾತನಾಡಿದ್ದೀರಿ; ನಾನು ಅನ್ಯಾಯ ತೃಣ ಮಾಡಿಲ್ಲ, ತೃಣ ಎಣಿಸಿಲ್ಲ. . .ಸಂಸ್ಥಾನ ಈ ಹೊತ್ತು ನಿಮ್ಮ ಕೈಯಲ್ಲಿದೆ; ಅದಕ್ಕೆ ಯಾವುದು ಒಳ್ಳೆಯದು ಅಂತ ಕೊನೆಯದಾಗಿ ನಿಶ್ಚಯ ಮಾಡೋರು ನೀವು. ಉಳಿದವರು ಹತ್ತು ಮಾತು ಹೇಳಬಹುದು; ನಿಶ್ಚಯ ನಿಮ್ಮದು. ಈಗ ನೀವು ತಪ್ಪಿ ತಿಳಿದೊ ಸರಿಯಾಗಿ ತಿಳಿದೊ ನಾನು ನಗರದಲ್ಲಿರೋದು ರಾಜ್ಯಕ್ಕೆ ಕೆಡಕು ಅಂತ ಹೇಳಿದರೆ, ಆ ಮಾತು ನಡೀಬೇಕು. ಹೌದೂ ಅಂತ ಹೇಳಿ. ಆಜ್ಞೇನ ಬೇರೆ ಯಾರಿಗೂ ತಿಳಿಸಬೇಕಾಗಿಲ್ಲ; ನಾನೆ, ಯಾರಿಗೂ ಹೇಳದೆ ಏನೂ ಸಂಗತಿ ತಿಳಿಸದೆ, ಊರು ಬಿಟ್ಟು ಹೊರಟಿರುತ್ತೇನೆ. ನಾಳೆ ಈ ಹೊತ್ತಿಗೆ ನಾ ನಗರದಲ್ಲಿಲ್ಲ.''

ಇದು ಒಂದು ದೀರ್ಘ ಸಂಭಾಷಣೆಯಲ್ಲಿ ಹ್ರಸ್ವಭಾಗ. ಇಲ್ಲಿ ನಾವು ಗಮನಿಸ ಬೇಕಾದದ್ದು ಇವರಿಬ್ಬರ ಮಾತು ಹೇಗೆ ಇಡೀ ಸನ್ನಿವೇಶವನ್ನು ಕಣ್ಣಮುಂದೆ ನಿಲ್ಲಿಸುತ್ತದೆ, ಆ ಇಡೀ ಸನ್ನಿವೇಶದಲ್ಲಿ ಇವರ ಸ್ವಭಾವಗಳನ್ನು ಕ್ಷ-ಕಿರಣ ಹಾಕಿ ತೋರಿದಂತೆ ತೋರುತ್ತದೆ ಎನ್ನುವುದು. ನೇಮಯ್ಯ ಊರಿನ ಪ್ರಮುಖ, ಶಾಂತವ್ವನ ಸಾಕುತಂದೆ, ರಾಣಿಯ ಅಪನಂಬಿಕೆಗೆ ಒಳಗಾದವನು, ರಾಣಿ ಆಗಲೆ ಇತರರ ಮಾತು ಕೇಳಿ ತಪ್ಪಿದ್ದಾಳೆ, ಇಷ್ಟಾಗಿ ಸಂಸ್ಥಾನದ ಆಗು ಹೋಗು ಅವಳ ಕೈಯಲ್ಲಿದೆ, ನೇಮಯ್ಯ ಹಿಂದೆ ದ್ರೋಹ ಮಾಡಿದವನಲ್ಲ. ಮುಂದೆ ಮಾಡುವವನಲ್ಲ - ಇಷ್ಟು ಇಡೀ ಸನ್ನಿವೇಶದಲ್ಲಿ ಈ ಪಾತ್ರಗಳ

ಈ ಗಳಿಗೆಯ ಘರ್ಷಣೆಯಲ್ಲಿ ನಾವು ನೋಡಬೇಕು. ಈ ಸನ್ನಿವೇಶದ ಎಲ್ಲ ಮುಖಗಳಿಗೂ, ಜಟಿಲತೆಗೂ ಕನ್ನಡಿಯಾಗುತ್ತದೆ ಸಂಭಾಷಣೆ. ಜೊತೆಗೆ, ನೇಮಯ್ಯನ ಮೊದಲ ಮಾತಿನಲ್ಲಿ, ತಂದೆ-ಊರ ಪ್ರಮುಖ-ಪ್ರಜೆ ಮೂರು ಸ್ಥಾನಗಳಿಂದ ಒಟ್ಟಿಗೆ ಬರುವ ಪ್ರತಿಕ್ರಿಯೆ ತೋರುತ್ತಿದೆ; ಈ ಮೂರು ಸ್ಥಾನಗಳಿಂದ ಬರುವ ಪ್ರತಿಕ್ರಿಯೆಗಳಿಗೆ ಸಾಮರಸ್ಯವನ್ನೂ ಏಕ ಮುಖತೆಯನ್ನೂ ನೀಡುವ-ಅವುಗಳ ಹಿಂದಿರುವ-ನಿರ್ಲಿಪ್ತತೆ, ಸ್ಥಿತಪ್ರಜ್ಞೆ, ಸ್ಫುಟವಾಗಿ ಬೆಳಗುತ್ತವೆ. ಇದರೊಂದಿಗೆ, ನೇಮಯ್ಯ ನಿಷ್ಠುರ ಪ್ರಾಮಾಣಿಕತೆಯಿಂದ, 'ನಾನೇನಾದರೂ ತಪ್ಪಿ ನಡೆದಿದ್ದರೆ, ನೀವು ರಾಣಿ, ದಂಡಿಸಿ,' ಎನ್ನುತ್ತಾನೆ. ರಾಣಿ, 'ನಿಮ್ಮನ್ನ ದಂಡಿಸಬಹುದೆ? ಅಂತಹ ಯೋಚನೆಯೇ ಇಲ್ಲ,' ಎನ್ನುವುದಿಲ್ಲ; 'ನಿಮ್ಮನ್ನ ದಂಡಿಸಿ ಜೀರ್ಣಿಸಿಕೊಳ್ಳುವುದು ಸಾಧ್ಯವಿದ್ದಿದ್ದರೆ ತಾನು ಮಾಡುತ್ತಿದ್ದೆ ಎಂಬ ಅರ್ಥ ತೋರುತ್ತದೆ. ರಾಣಿಯ ಎರಡು ರೀತಿಯ ಅವಿವೇಕ ಈ ಮಾತುಗಳಲ್ಲಿ ವ್ಯಕ್ತವಾಗುತ್ತದೆ - ತನ್ನ ಮನಸ್ಸಿನಲ್ಲಿರುವುದನ್ನು ಬಚ್ಚಿಟ್ಟುಕೊಳ್ಳಲಾರಳು, ಅಲ್ಲದೆ ನಿಜವಾಗಿ ಯಾರು ರಾಜ್ಯಕ್ಕೆ ಆಧಾರಸ್ತಂಭ ಎಂದು ತಿಳಿಯಲಾರಳು. ರಾಣಿ, 'ನಿಮ್ಮನ್ನು ದಂಡಿಸಿ ನಾನು ಬದುಕಬಹುದೊ?' ಎನ್ನುವುದು ವ್ಯವಹಾರದ ಮಟ್ಟದಲ್ಲಿ; ಇಷ್ಟು ಪ್ರಬಲನಾದವನನ್ನು ದಂಡಿಸಿದರೆ ಜನ ತನಗೆ ಎದುರುಬೀಳುವುದಿಲ್ಲವೆ ಎನ್ನುವ ಅರ್ಥದಲ್ಲಿ; ಇದಕ್ಕಿಂತ ಎತ್ತರದ ಮಟ್ಟಕ್ಕೆ ಅವಳ ಮನಸ್ಸು ಹೋಗಲಾರದು. ನೇಮಯ್ಯನ ಮನಸ್ಸು ಬರಿಯ ಲೌಕಿಕ ಪ್ರಯೋಜನದ ಮೆಟ್ಟಲಿನಲ್ಲಿ ನಿಂತು ಯೋಚಿಸಲಾರದು. ಅವನ ಉತ್ತರ ಬೇರೊಂದು ಎತ್ತರದಿಂದ ಬಂದದ್ದು; 'ನಾನು ಸತ್ಯವಂತನಾದರೆ, ಬಾರದು ಅಮ್ಮಾಜಿ?' ಇಲ್ಲಿ ಲೌಕಿಕ ಜಗತ್ತಿನಲ್ಲಿ ಎರಡು ಪಕ್ಷಗಳ ಬಲಾಬಲದ ದೃಷ್ಟಿ ಇಲ್ಲ. ಸತ್ಯವನ್ನು ಕಾಯುವ-ಅಸತ್ಯವನ್ನು ದಂಡಿಸುವ ಅದೃಶ್ಯ ಶಕ್ತಿಯ ದೃಷ್ಟಿಯಿಂದ ಈ ಮಾತು. ತಾನು ತಪ್ಪು ಮಾಡಿದ್ದರೆ, ತನ್ನನ್ನು ಗಡಿಪಾರು ಮಾಡಬೇಕು ಎಂದು ಆತ ಹೇಳಿದರೆ, 'ನಗರ ಇರೋ ಗತೀಲಿ ಇದನ್ನ ಯಾರು ಮಾಡಬೇಕು?' ಎನ್ನುತ್ತಾಳೆ ವೀರಮ್ಮಾಜಿ-ಅವನು ಗಡೀಪಾರಾಗಬೇಕಾದದ್ದೆ ಸರಿ, ಆದರೆ ಅದನ್ನು ನಡೆಸಿಕೊಡುವ ಶಕ್ತಿವಂತರಿಲ್ಲ ಎನ್ನುವ ಧ್ವನಿ. ಮತ್ತೆ ವ್ಯವಹಾರದ ಬಲಾಬಲಗಳ ತುಲನೆಯ ಮೆಟ್ಟಲಿನಿಂದ ಸಂಭಾಷಣೆ ನಿತ್ಯ ಮೌಲ್ಯಗಳ, ನ್ಯಾಯಾನ್ಯಾಯಗಳ ತುಲನೆಯ ಮೆಟ್ಟಲಿನಿಂದ ಸಂಭಾಷಣೆ ನಿತ್ಯ ಮೌಲ್ಯಗಳ, ನ್ಯಾಯಾನ್ಯಾಯಗಳ ತುಲನೆಯ ಮೆಟ್ಟಲಿಗೆ ಸಾಗುತ್ತದೆ ನೇಮಯ್ಯನ ಉತ್ತರದಲ್ಲಿ. 'ಉಳಿದವರು ಹತ್ತು ಮಾತು ಹೇಳಬಹುದು' ಎಂಬುದರಲ್ಲಿ ಹಿಂದೆ ಹೀಗೆ ನಡೆದಿದೆ ಎಂಬ ಸೂಚನೆ ಇದೆ; 'ಈಗ ನೀವು ತಪ್ಪು ತಿಳಿದೊ ಸರಿಯಾಗಿ ತಿಳಿದೊ' ಎಂಬುದರಲ್ಲಿ ರಾಣಿಯ ತಿಳಿವಳಿಕೆ ತಪ್ಪು ಎಂಬ ಸೂಚನೆ ಇದೆ, ಆದರೆ ಅದಕ್ಕೆ ಪ್ರಜೆಯಾಗಿ ತನ್ನ ಪ್ರತಿಭಟನೆ ಇಲ್ಲ ಎಂಬ ಸೂಚನೆಯೂ ಇದೆ. ನೇಮಯ್ಯನ ಇಡೀ ಉತ್ತರ ಅವನ ಇಡೀ ವ್ಯಕ್ತಿತ್ವಕ್ಕೆ, ಇಡೀ ಸನ್ನಿವೇಶಕ್ಕೆ ಕನ್ನಡಿ. ಅವನ ನ್ಯಾಯಾನ್ಯಾಯ ದೃಷ್ಟಿ, ಪ್ರಾಮಾಣಿಕತೆ, ಪ್ರಭುಭಕ್ತಿ ಎಲ್ಲ ಇಲ್ಲಿ ವ್ಯಕ್ತವಾಗುತ್ತವೆ; ಒಂದಿಗೇ, ರಾಜ್ಯಕ್ಕೆ ಕೆಡುಕನ್ನು ಮಾಡುವ ಅಂಶ ಅವನಲ್ಲಿಯೂ ಹೇಗೆ ಸೇರಿದೆ ಎಂಬುದೂ ಸೂಚಿತವಾಗುತ್ತದೆ-ಆಳುವ ಧಣಿ ತಪ್ಪು ಮಾಡಿದರೆ, ತಪ್ಪು ಎಂದು ತಿಳಿದೂ ಪ್ರತಿಭಟಿಸಲೊಲ್ಲ. ತನ್ನ ಈ ವಿಧೇಯತೆಯೇ ರಾಜ್ಯಕ್ಕೆ ಕುತ್ತಾಗಬಹುದು ಎಂಬುದನ್ನು ಅವನು ಗುರುತಿಸಲೊಲ್ಲ, ಗುರುತಿಸಿದರೆ ಅದರಂತೆ ನಡೆಯಲೊಲ್ಲ.

ಭಾಷೆಯ ಬಳಕೆಯಲ್ಲಿ ಅಮುಖ್ಯ ಎಂದು ತೋರಬಹುದಾದ ಅಂಶಗಳನ್ನು

ಶ್ರೀನಿವಾಸರು ಹೇಗೆ ಬಳಸುತ್ತಾರೆ ಎಂಬುದಕ್ಕೆ ಒಂದು ಉದಾಹರಣೆ. ತಂದೆಯಿಂದ ಚಿಕ್ಕಂದಿನಲ್ಲೆ ದೂರಳಾದ ಶಾಂತವ್ವನಿಗೆ ನೇಮಯ್ಯನೇ ತಂದೆ, ತಾಯಿ ಎಲ್ಲ. ನೇಮಯ್ಯನಿಗೆ ಅವಳೇ ಪ್ರಾಣ, ಆದರೆ ರಾಣಿಗೆ ಅವರಿಬ್ಬರ ವಿಷಯದಲ್ಲಿಯೂ ವಿರೋಧ. ಹೀಗಾಗಿ, ನೇಮಯ್ಯನೇ ಮನೆಗೆ ಬಂದ ಮಗಳಿಗೆ, 'ಈ ಒಂದು ದಿನಾನೆ ಶಾಂತವ್ವ, ನಾನು ನಿನ್ನ ಬರಮಾಡಿಕೊಳ್ಳಬಹುದು. ಇನ್ನು ಮೇಲೆ ನೀನು ಈ ಮನೆಗೆ ಬರದೆ ಇರೋದೆ ಎಲ್ಲರಿಗೂ ಸಮ', ಎಂದಿದ್ದಾನೆ. ಮಗಳು ಹೊರಟಿದ್ದಾಳೆ. ತಂದೆಗೆ ನಮಸ್ಕರಿಸಿ, 'ನಾ ಬರುತ್ತೇನೆ ಅಣ್ಣಯ್ಯ' ಎನ್ನುತ್ತಾಳೆ. ಸಂಪ್ರದಾಯದಂತೆ, 'ಹೋಗುತ್ತೇನೆ' ಎನ್ನುವುದು ಅಶುಭ, ಆದುದರಿಂದ ಹೊರಡುವಾಗಲೂ 'ಬರುತ್ತೇನೆ' ಎನ್ನುವುದು ವಾಡಿಕೆ. ಸಾಮಾನ್ಯವಾಗಿ ಈ ಮಾತಿಗೆ ಇಷ್ಟೇ ಅರ್ಥ. ಆದರೆ ಈ ಸನ್ನಿವೇಶದಲ್ಲಿ, 'ಬರುತ್ತೇನೆ' ಎನ್ನುವ ಮಗಳಿಗೆ 'ತಾನು ಮತ್ತೆ ಬರುವಂತಿಲ್ಲ,' ಎಂದು ಗೊತ್ತು, ಆ ಮಾತನ್ನು ಕೇಳುವ ತಂದೆಗೆ, 'ತಾನೇ ಅವಳಿಗೆ ಬರದಿರುವುದು ಒಳಿತು ಎಂದಿದ್ದೇನೆ, ಅವಳು ಬರುವುದಿಲ್ಲ' ಎಂದು ಗೊತ್ತು. ಹೀಗೆ ಒಂದು ಸಾಮಾನ್ಯ ಶಬ್ದಕ್ಕೆ ವಿಶೇಷ ಅರ್ಥ ಈ ಸನ್ನಿವೇಶದಲ್ಲಿ ಬರುತ್ತದೆ.

'ಚಿಕವೀರ ರಾಜೇಂದ್ರ'ದಲ್ಲಿ ಇಬ್ಬರು ಮಂತ್ರಿಗಳು - ಲಕ್ಷ್ಮೀನಾರಾಯಣಯ್ಯ ಬೋಪಣ್ಣ. ಇಬ್ಬರಿಗೂ ರಾಜನ ವಿಷಯದಲ್ಲಿ ಬೇಸರವೆ. ರಾಜ ಆಡಬಾರದ ಮಾತಾಡಿ, ಬೋಪಣ್ಣ ದೂರ ನಿಲ್ಲುತ್ತಾನೆ. ಅವನಿಂದಲೇ ಆಗಬೇಕಾದ ಕೆಲಸ ಇದೆ, ಅರಸನಿಂದ ಅಪ್ಪಣೆ ಬರಬೇಕು ಎಂದು ಲಕ್ಷ್ಮೀನಾರಾಯಣಯ್ಯನ ಮನಸ್ಸು. ಬೋಪಣ್ಣನನ್ನು ಅರಮನೆಗೆ ಕರೆದೊಯುತ್ತಾನೆ. ರಾಜನು ಕೋಪಿಷ್ಠ. ಇಬ್ಬರನ್ನೂ ಸಮಾಧಾನವಾಗಿಟ್ಟುಕೊಳ್ಳುವುದು ಲಕ್ಷ್ಮೀನಾರಾಯಣಯ್ಯನ ಕೆಲಸ. ಅರಸ, 'ನಾವಾಡಿದ ಮಾತು ತಪ್ಪಾಯಿತು ಅಂತ ಒಪ್ಪಿಕೊಳ್ಳಬೇಕು ಅಂತ ನೀವು ನಮಗೆ ಅಯ್ಯನವರ ಕೈಲಿ ಹೇಳಿ ಕಳುಹಿಸಿದಿರಾ?' ಎಂದು ಬೋಪಣ್ಣನನ್ನು ಕೇಳುತ್ತಾನೆ. ಅಲ್ಲದೆ,

''ನಿಮ್ಮ ಜೊತೇ ಮಂತ್ರಿ ಮರ್ಯಾದೇನ ಕಾಯೋರು, ನೀವು ನಿಮ್ಮ ದಣಿ ಮರ್ಯಾದೇನ ಯಾಕೆ ಕಾಯೋದಿಲ್ಲ? ಅವರು ಮಾಡುತಿರೋ ಉಳಿದ ಎಲ್ಲಾ ಕೆಲಸ ಮಾಡಿ ಅಂತ ನಾವು ಕರೆದೆವಾ! ಅದನ್ನು ಮಾಡೋಹಂಗೆ ಈ ಕೆಲಸಾನು ಮಾಡಬೇಕು. ಬೇರೆಯಾಗಿ ನಾವು ಕರೀಬೇಕು ಏಕೆ?'' ಎಂದು ಲಕ್ಷ್ಮೀನಾರಾಯಣಯ್ಯನನ್ನು ಪ್ರಶ್ನಿಸುತ್ತಾನೆ.

ಬೋಪಣ್ಣ ಲಕ್ಷ್ಮೀನಾರಾಯಣಯ್ಯನ ಕಡೆಗೆ ನೋಡಿ, ''ಉಳಿದ ಕೆಲಸಾನೂ ಬಿಡಲಿ ಅಂತಿದಾರಲ್ಲ?'' ಎನ್ನುತ್ತಾನೆ.

ಲಕ್ಷ್ಮೀನಾರಾಯಣಯ್ಯ ಅವನಿಗೆ ಸಮಾಧಾನ ಮಾಡಿ, ಅರಸನಿಗೆ ಹೇಳುತ್ತಾನೆ: ''ಉಳಿದ ಕೆಲಸ ಮಾಡಬೇಕಾದರೆ ಅರಮನೆಯೊಳಕ್ಕೆ ಬರಬೇಕಾದದ್ದಿಲ್ಲ. ಈ ಹಬ್ಬದ ಕೆಲಸದಲ್ಲಿ ಒಳಗೆ ಬರಬೇಕಾಗುತ್ತದೆ. ಅದರಿಂದ ಪ್ರಭುಗಳ ಅಪ್ಪಣೆ ಬೇಕು.''

ಅರಸ: ''ನಿಮ್ಮ ಜಾಣು ನಮಗೆ ತಿಳೀತದೆ ಅಯ್ಯನವರೆ. ನೀವು ನಮ್ಮಂತೆ ಮಾತನಾಡೋ ಸೋಗು ಹಾಕಿದ್ದೀರಿ, ನಿಮ್ಮ ಜೊತೇ ಮಂತ್ರಿಯಂತೆ ಮಾತನಾಡುತ್ತಿದ್ದೀರಿ. ಕೊಡಲಿ ಕಾವು ಮರವಾಗಿ ಕಾಣಿಸಿಕೊಂಡು ಕೊಡಲಿಗೆ ನೆರವಾಯಿತಂತೆ. ಆಗಲಿ ಬಿಡಿ; ನಿಮ್ಮಿಷ್ಟ ನಡೀಲಿ. ಮಂತ್ರಿಗಳಿಬ್ಬರೂ ನಮ್ಮ ಮೇಲೆ ದಯೆಯಿಟ್ಟು ಅರಮನೆಗೆ ಪಾದ ಬೆಳಸಿ ನಿಮ್ಮ ನಿಮ್ಮ ಕೆಲಸ ಏನಿದೆಯೊ ಅದನ್ನು ನಡೆಸಿ ನಮ್ಮನ್ನು ಕಾಪಾಡಿರಿ,'' ಎನ್ನುತ್ತಾನೆ.

ಬೋಪಣ್ಣ ಕೋಪದಿಂದ, ''ಇಷ್ಟು ಕೊಂಕಿ ಮಾತನಾಡಿದರೆ ಇಲ್ಲಿ ಬಂದು ಬಾಳ ಬರುತ್ತದೆಯೇ? ನಾ ಇಲ್ಲಿ ಉಳಿತರೆ ಮಾತು ಮತ್ತೂ ಕೆಡುತದೆ,'' ಎಂದು ಹೊರಡುತ್ತಾನೆ. ಲಕ್ಷ್ಮೀನಾರಾಯಣಯ್ಯ ಅವನನ್ನು ತಡೆದು, ''ಅಪ್ಪಣೆ ಮುಟ್ಟಿತು. ಅದರಲ್ಲಿ ಸ್ವಲ್ಪ ಬೇಸರ ಬೆರಸಿದೆ. ಅದನ್ನು ಗಮನಿಸಬೇಡಿ ಎಂದು ಆಜ್ಞೆ ಮಾಡಿದರೆ ಅನುಗ್ರಹವಾಗುತ್ತದೆ,'' ಎನ್ನುತ್ತಾನೆ. ಅರಸ, ''ಅಯ್ಯನೋರು ನೀವು, ಪ್ರಾಣಬೇಕೆಂದರೆ ಬಿಟ್ಟೀರಿ ಒಕ್ಕಣೀ ಬಿಡಪೊಲ್ಲರಿ ಅಲ್ಲವೆ ಅಯ್ಯನೋರೆ? ಒಳಿತು. ಆಜ್ಞೆ ಮಾಡಿದ್ದೇವೆ, ಅನುಗ್ರಹ-ಸೂ ಕೊಂಡು ಹೋಗಿ,'' ಎನ್ನುತ್ತಾನೆ.

ಇಲ್ಲಿ ಉದ್ಧರಿಸಿರುವ ಭಾಗದ ಪ್ರಾರಂಭವೇ ಅಲ್ಲಿನವರೆಗಿನ ಕ್ರಿಯೆಯನ್ನು ಒಂದು ರೀತಿಯಲ್ಲಿ ಸಂಗ್ರಹವಾಗಿ ನಮ್ಮ ಮುಂದಿಟ್ಟು ಬಿಡುತ್ತದೆ. ಲಕ್ಷ್ಮೀನಾರಾಯಣಯ್ಯನ ಇಡೀ ಬಾಳು ಮರ್ಯಾದೆಯನ್ನು ಕಾಯದೆ ಅರಸನ ರಾಜ್ಯದ ಮರ್ಯಾದೆ ಕಾಯುವುದು ಕಷ್ಟ ಎಂದು ತಿಳಿದವನು ಅವನು. ಈಗ ಮಾಡುತ್ತಿರುವುದೂ ವೈಯಕ್ತಿಕವಾಗಿ ಬೋಪಣ್ಣನ ಘನತೆಯನ್ನು ಉಳಿಸಲೆಂದಲ್ಲ, ಅರಮನೆಯ ಕೆಲಸ ಸುಗಮವಾಗಲಿ ಎಂದು. 'ಉಳಿದ ಎಲ್ಲಾ ಕೆಲಸ ಮಾಡಿ ಅಂತ ನಾವು ಕರೆದೆವಾ?' ಎಂದು ರಾಜ ಎನ್ನುವಾಗ, ಅವನಿಗೆ ಅರಿವಿಲ್ಲದ ಸತ್ಯ ಮಿಂಚುತ್ತದೆ. ರಾಜ ಕರೆದು ಹೇಳಿ ಪ್ರತಿಯೊಬ್ಬರೂ ತಮ್ಮ ಕೆಲಸ ಮಾಡುವುದಾಗಿದ್ದರೆ, ಎಂದೋ ಕೊಡಗು ಮುಳುಗಿ ಹೋಗಿರುತ್ತಿತ್ತು. ಮಂತ್ರಿಗಳು, ಅರಸಿ ಗೌರಮ್ಮಾಜಿ ಎಲ್ಲ ಹೇಳಿಸಿಕೊಳ್ಳದೆಯೇ ತಮ್ಮ ಶಕ್ತಿ ಮೀರಿ ಕೆಲಸ ಮಾಡುತ್ತಿರುವರೆಂದೇ ಇನ್ನೂ ಕೊಡಗು ಒಂದು ರಾಜ್ಯ, ವೀರರಾಜೇಂದ್ರ ಒಬ್ಬ ರಾಜ. 'ಕೊಡಲಿ ಕಾವು ಮರವಾಗಿ ಕಾಣಿಸಿಕೊಂಡು ಕೊಡಲಿಗೆ ನೆರವಾಯಿತಂತೆ' ಎನ್ನುವಾಗ, ಹೊರ ತೋರಿಕೆಯನ್ನು ನೆಚ್ಚುವಂತಿಲ್ಲ, ತನ್ನದಾಗಿ ಕಂಡದ್ದೆ ಮೃತ್ಯುವಾದೀತು ಎಂಬ ಪ್ರಜ್ಞೆ ಬೌದ್ಧಿಕ ಮಟ್ಟದಲ್ಲಿ ಕಾಣುತ್ತದೆ; ಆದರೆ ಅದನ್ನು ಜೀವನದಲ್ಲಿ ಈತ ಸಾಕ್ಷಾತ್ಕರಿಸಿಕೊಂಡಿಲ್ಲ ಎಂಬುದು ನಮ್ಮ ನೆನಪಿಗೆ ಬರುತ್ತದೆ - ಸದಾ ಅವನೊಡನಿರುವ ಕುಂಟ ಬಸವನನ್ನು ಕಂಡು, ಅರಸ ಬೋಪಣ್ಣನಿಗೆ ಅರಮನೆಯ ಕೆಲಸ ಮಾಡಿ ಎಂದು ಹೇಳುವುದು ಮಾತ್ರವೇ ಮುಖ್ಯವಲ್ಲ ಲಕ್ಷ್ಮೀನಾರಾಯಣಯ್ಯನಿಗೆ, ಹೇಳುವ ರೀತಿಯೂ; ಬಳಸುವ ಪದಗಳೂ ಮುಖ್ಯ. ಏಕೆಂದರೆ ಇದು ಔಪಚಾರಿಕ ಅಂಶವಲ್ಲ, ಒಂದು ಸಂಬಂಧವನ್ನು ಬೆಸೆಯಬಹುದಾದ ಅಥವಾ ಬಿಡಿಸಬಹುದಾದ ಅಂಶ. ಅರಸ ಇದನ್ನು ತಿಳಿಯಲಾರ; ಒಕ್ಕಣೆಯೇ ನಿಮಗೆ ಮುಖ್ಯ ಎಂದು ಹಾಸ್ಯ ಮಾಡುತ್ತಾನೆ, ಅನುಗ್ರಹ ಮಾಡುತ್ತಾನೆ. ಆದರೆ ಅನುಗ್ರಹ ಎನ್ನಿಸದಂತೆ ಖಾರ ಸೇರಿಸುತ್ತಾನೆ. ಜೀವನದುದ್ದಕ್ಕೂ ಇದೊಂದು ಪ್ರಾರಬ್ಧ ಇವನದು; ಒಳ್ಳೆಯ ಕೆಲಸ ಮಾಡಿದಾಗಲೂ - ತಂಗಿಯನ್ನು ಸೆರೆಯಿಂದ ಬಿಡಿಸಲಿ, ಸಾಧ್ವಿಯನ್ನು ರಕ್ಷಿಸಲಿ - ತಾನು ಮಾಡಿದ ಕೆಲಸದ ಸೊಬಗನ್ನು, ಸತ್ಯವನ್ನು ತಾನೇ ನಂಜಿನ ನಾಲಿಗೆಯಿಂದ ಹಾಳು ಮಾಡುತ್ತಾನೆ. ಸರಿಯಾಗಿ ಮಾಡಿದ್ದು ತಪ್ಪು ಎಂದು ಕಾಣುತ್ತದೆ.

ಹೀಗೆ ಶ್ರೀನಿವಾಸರು, ಭವ್ಯ, ಸ್ಮರಣೀಯ ಎನ್ನಿಸುವ ದೃಶ್ಯಗಳನ್ನು ಬಳಸದೆಯೇ ಭಾಷೆಯ ಬಳಕೆಯಿಂದ ಒಂದು ವಿಶಿಷ್ಟ ಜಗತ್ತನ್ನು ಸೃಷ್ಟಿಸುತ್ತಾರೆ. ಪಾತ್ರದ ಹೊರ ಜಗತ್ತೂ ಒಳ ಜಗತ್ತೂ ತಮ್ಮ ವಿಶಿಷ್ಟ ಸಂಕೀರ್ಣತೆಗಳನ್ನು ಉಳಿಸಿಕೊಂಡು ಇಲ್ಲಿ ರೂಪುಗೊಳ್ಳುತ್ತವೆ. ಪ್ರತಿ ಕಾದಂಬರಿಯಲ್ಲಿ ಪಾತ್ರಗಳ ಮಧ್ಯೆ, ಪಾತ್ರಗಳನ್ನು ನಾವು ಅಳೆಯಲು ಸಾಧ್ಯವಾಗುವಂತೆ, ಕಾದಂಬರಿಯ ಯುಗದ ಮೌಲ್ಯಗಳನ್ನು ಅಳವಡಿಸಿಕೊಂಡ ಒಂದು ಪಾತ್ರ ಕಾಣುತ್ತದೆ. 'ಚೆನ್ನಬಸವನಾಯಕ'ನಲ್ಲಿ ಮಠದ ಅಯ್ಯ ಈ ಪಾತ್ರ. ಅವನು

ಜಗತ್ತಿನಿಂದ ದೂರವಾದವನು, ಆದರೆ ಜಗತ್ತಿಗೆ ವಿಮುಖನಾದವನಲ್ಲ. ಅನುಭೂತಿಗಳನ್ನು ಕಲ್ಲಾಗಿಸಿದವನಲ್ಲ. ಜಗತ್ತನ್ನು ನಡೆಸುವ ಪರಮಶಕ್ತಿ ಇದೆ ಎಂಬ ನಂಬಿಕೆ ಅವನ ಉಸಿರು. ಅವನೆನ್ನುತ್ತಾನೆ: 'ಶಿವನ ತಂತ್ರವೇ ಇಂತು ನನ್ನ ರಾಜ. ಕತ್ತಲಾಗಿ ಮುಚ್ಚುತ್ತಾನೆ. ಬೆಳಕಾಗಿ ತೆರೀತಾನೆ, ಎಮ್ಮೆ ಏರಿ ಕೊಲ್ಲುತ್ತಾನೆ. ಎತ್ತ ಏರಿ ಕಾಯುತ್ತಾನೆ. ಲೋಕದ ಎಲ್ಲ ಆಟಾನ್ನ ಅವನೊಬ್ಬ ನಿಂತು ಆಡುತ್ತಾನೆ. ಎಲ್ಲ ಅವನಾಟನೆ: ಎಲ್ಲ, ಎಲ್ಲ! ಇತರರ ಕಷ್ಟ ಕಂಡಾಗ ಅವನ ಹೃದಯ ಕಲ್ಲಲ್ಲ; ಅವನಿಗೆ ಕಲ್ಲಿನ ಕಾಠಿಣ್ಯವಿಲ್ಲ ಕಲ್ಲಿನ ದೃಢತೆ ಇದೆ. ಈ ನಿರ್ಲಿಪ್ತ ಸ್ಥಿತಪ್ರಜ್ಞ ಸ್ಥಿತಿಯತ್ತ ನಡೆಯುತ್ತಿರುವವನು ನೇಮಯ್ಯ. ಅವನ ದೃಷ್ಟಿ ನಿಚ್ಚಳ, ಆದರೆ ತಾನು ಸಿಂಹಾಸನದ ಉತ್ತರಾಧಿಕಾರಿಯ ಮಾವ ಎಂಬ ಸಂಕೋಚಕ್ಕೆ ಎಲ್ಲಿ ಗೆರೆ ಎಳೆಯ ಬೇಕು ಎಂದು ಅರಿಯ. ಅವನು ಹಲವು ದಶಕಗಳಲ್ಲಿ ಸಾಧಿಸಿದ ಸಮಚಿತ್ತವನ್ನು ಎರಡು ದಶಕಗಳನ್ನೂ ಕಾಣದೆ ಶಾಂತವ್ವ ಸಾಧಿಸಿದ್ದಾಳೆ. ಚೆನ್ನಬಸವನಾಯಕ ಧೀರ, ನಿರ್ಮಲ ಮನಸ್ಸಿನವನು, ತರುಣನಾದರೂ ಶುಭ್ರಜೀವನ, ಆಮಿಷಕ್ಕೆ ಎಡೆಕೊಟ್ಟವನಲ್ಲ. ಆದರೆ ವಿವೇಚನೆ ಸಾಲದು. ತಾನಾಗಿ ವಿಪತ್ತನ್ನು ತಂದುಕೊಳ್ಳುತ್ತಾನೆ. ವೀರಮ್ಮಾಜಿ ರಾಜ್ಯಕ್ಕೆ ಕೆಟ್ಟದ್ದಾಗಬೇಕು ಎಂದು ಬಯಸಿದವಳಲ್ಲ, ಆದರೆ ಅವಳ ಮೂರ್ಖತನಕ್ಕೆ ರಾಜ್ಯ, ರಾಜ ಸಂತತಿ ಬಲಿ. ಅವಳಲ್ಲಿ ವೈಷಮ್ಯ ಕಾಣುತ್ತೇವೆ, ಅವಳಂತೆ ಗಂಡನನ್ನು ಕಳೆದುಕೊಂಡು, ಸಿಂಹಾಸನಕ್ಕೆ ಗಂಡು ಸಂತತಿ ಬರಲಿ ಎಂದು ಹಂಬಲಿಸುವ ವಸ್ತಾರೆಯ ಹೆಗ್ಗಡಿತಿ. ಇನ್ನೊಂದು ಹೋಲಿಕೆ, ಎಳೆಯ ವಯಸ್ಸಿನ ಮಗನಿಗಾಗಿ ಸಿಂಹಾಸನ ಕಾಯುತ್ತಿರುವ, ಶಕ್ತಿ ಮೀರಿ ಹೋರಾಡುತ್ತಿರುವ ಮೈಸೂರಿನ ರಾಜಮಾತೆಯೊಂದಿಗೆ. ನೇಮಯ್ಯ-ಹೈದರಾಲಿ ಒಂದು ರೀತಿಯಲ್ಲಿ ಒಂದೇ ಬಗೆಯ ಸ್ಥಾನಗಳಲ್ಲಿರುವವರು. ಇಬ್ಬರೂ ಯೋಚಿಸಿ ಯೋಚಿಸಿ ಮಾತನಾಡುವವರು. ಆದರೆ ನೇಮಯ್ಯನ ಮಾತಿನ ಹಿಂದಿರುವುದು ಪ್ರಾಮಾಣಿಕತೆ, ಹೈದರಾಲಿಯ ಮಾತಿನ ಹಿಂದೆ ಬುದ್ಧಿವಂತಿಕೆ. ನವರಾತ್ರಿ ಹಬ್ಬಕ್ಕೆ ಹೆಚ್ಚು ಹಣ ಬೇಕೆಂದು ರಾಜಮಾತೆ ಕೇಳಿದರೆ ಆಕ್ಷೇಪಿಸದಿದ್ದವನಂತೆಯೇ ಆಕ್ಷೇಪಿಸುತ್ತಾನೆ, ಖರ್ಚು ಹೆಚ್ಚಾಗುತ್ತಿದೆ ಎನ್ನುತ್ತಾನೆ. ಹೇಗೆ ಹೆಚ್ಚಾಯಿತು ಎಂದರೆ, ಉತ್ತರ ಹೇಳಿದಂತೆ ಮಾಡಿ ಹೇಳದೆ ನುಣಚಿಕೊಳ್ಳುತ್ತಾನೆ. ರಾಜ್ಯದ ಏಳುಬೀಳುಗಳ ಹೊಣೆ ಹೊತ್ತ ಇವರ ನಡುವೆ ಜೀತದ ಮಲ್ಲಿಗೆ-ಸಗುನ. ಮಲ್ಲಿಗೆ ಸಗುನನನ್ನೇ ಮದುವೆಯಾಗುತ್ತೇನೆ ಎನ್ನುತ್ತಾಳೆ; ಹೆಗ್ಗಡಿತಿಗೆ ಇಷ್ಟವಿಲ್ಲ; ಹೆಗ್ಗಡಿತಿಯ ಒಪ್ಪಿಗೆ ಇಲ್ಲದೆ ಮಲ್ಲಿಗೆ ಸಗುನನನ್ನು ಮದುವೆಯಾಗಳು. ಈ ಹೆಣ್ಣು ಸುಳಿವಲ್ಲಿ ಮಿಂಚು, ನುಡಿವಲ್ಲಿ ಹರ್ಷ. ಕಡೆಗೂ ತನ್ನ ಹಠವನ್ನು ಸಾಧಿಸುತ್ತಾಳೆ. ಇವಳಂತೆಯೇ ಗಂಡನನ್ನು ಅನುಸರಿಸುವ, ಅವನಿಗಾಗಿ ಹಂಬಲಿಸುವ, ಆದರೆ ಈ ಸೇವಕಿಗಿರುವ ಸ್ವಾತಂತ್ರ್ಯ, ಸಂತೋಷ ಇಲ್ಲದ ಇನ್ನೊಂದು ಎಳೆಯ ಜೀವದ - ಅರಮನೆಯೆಂಬ ಸೆರೆಮನೆಯಲ್ಲಿನ ಕಿರಿಯ ರಾಣಿಯ- ನೆನಪು ನಮಗೆ ಮತ್ತೆ ಮತ್ತೆ ಆಗುತ್ತದೆ. 'ಚಿಕವೀರ ರಾಜೇಂದ್ರ'ದಲ್ಲಿ ದೀಕ್ಷಿತನ ಭವ್ಯ ಮೂರ್ತಿ ನಿಶ್ಚಲ ಬಿಂದು. ಅವನು ಜಗತ್ತಿನ ಘಟನೆಗಳ ಹಿಂದೆ ಒಂದು ವಿನ್ಯಾಸವನ್ನು, ಅರ್ಥವನ್ನು ಕಾಣಬಲ್ಲ. 'ಅಯ್ಯೋ' ಎಂದು ಅನುಕಂಪ ತೋರಬಲ್ಲ. ಆದರೆ ಅವನ ವಿವೇಕ ಸದಾ ಜಾಗೃತ. ನೇಮಯ್ಯನಂತೆ ಇಲ್ಲಿ ಲಕ್ಷ್ಮೀನಾರಾಯಣಯ್ಯ. ಶಾಂತವ್ವ ಗಂಡನಿಗಾಗಿ ಬಲಿಯಾದಳು. ನಿತ್ಯ ಹತ್ತು ರೀತಿಯಲ್ಲಿ ಗಂಡನಿಗಾಗಿ ಬಲಿಯಾಗುತ್ತಾಳೆ, ವೀರರಾಜೇಂದ್ರನ ಹೆಂಡತಿ ಗೌರಮ್ಮಾಜಿ. ರಾಣಿ ವೀರಮ್ಮಾಜಿಯಂತೆ ಇಲ್ಲಿ

ವೀರರಾಜೇಂದ್ರನೂ ದುಷ್ಟನೆನ್ನುವಂತಿಲ್ಲ, ಆದರೆ ಮೂರ್ಖ.

ಎರಡು ಕಾದಂಬರಿಗಳಲ್ಲಿಯೂ ಕ್ರಿಯೆ ಪರಿಸರ- ವ್ಯಕ್ತಿತ್ವಗಳ ಪ್ರತಿಕ್ರಿಯೆಯಿಂದ ಮುಂದುವರೆದರೂ, ಅದಕ್ಕೆ ವಿಶಿಷ್ಟ ಗಹನತೆಯನ್ನು ಶ್ರೀನಿವಾಸರು ನೀಡಿದ್ದಾರೆ. ಎರಡು ಕಾದಂಬರಿಗಳಲ್ಲಿಯೂ ಮನುಷ್ಯರನ್ನು ಮೀರಿದ ಶಕ್ತಿಯೊಂದಿದೆ, ಜಗತ್ತೆಲ್ಲ ಅದರ ಆಟ ಎಂಬ ಧ್ವನಿ ಇದೆ. ಒಂದು ಕಾಲದಲ್ಲಿ, ಒಂದು ದೇಶದಲ್ಲಿ ನಡೆಯುವ ಘಟನೆಗಳನ್ನು ಇನ್ನೂ ವಿಶಾಲವಾದ, ಜಟಿಲವಾದ ವ್ಯಾಪಾರದ ಒಂದು ಭಾಗ ಎನ್ನುವ ಸೂಚನೆ ಇದೆ. 'ಚೆನ್ನಬಸವನಾಯಕ'ದ ಕಥೆ ಪ್ರಾರಂಭವಾಗುವುದು, ಶಾಂತವ್ವ ಗಂಡನ ಕಲ್ಯಾಣವನ್ನು ಬಯಸಿ ದತ್ತಾತ್ರೇಯ ಪೀಠಕ್ಕೆ ಯಾತ್ರೆ ಮಾಡುವುದರಿಂದ. ಗಂಡನ ಕಲ್ಯಾಣವನ್ನು ಬಯಸಿಯೇ ತುಂಬು ಗರ್ಭಿಣಿ ಪ್ರಾಣ ಕೊಡುತ್ತಾಳೆ. ನಾಯಕನನ್ನು ಶತ್ರುಗಳು ಮೋಸದಿಂದ ಮುತ್ತಿದಾಗ, ಮಠದ ಅಯ್ಯನಿಗೆ ನಾಯಕ ಕೂಗಿಕೊಂಡಂತೆ ಭಾಸವಾಗುತ್ತದೆ. ಅವನು ಹೋಗಿ ಅವನನ್ನು ರಕ್ಷಿಸುತ್ತಾನೆ. ಕಾಪಾಲ ಇನ್ನೇನು ಶಾಂತವ್ವನ ಕುತ್ತಿಗೆಯನ್ನು ಕಡಿಯಬೇಕು, ಮಚ್ಚೆ ಕಂಡು ತನ್ನ ಮಗಳು ಎಂದು ತಿಳಿಯುತ್ತದೆ. ಗವಿಯ ಸಿದ್ಧರು, ಶಾಂತವ್ವ ವಸುಮತಿ ಎನ್ನುವ ದೇವಸ್ತ್ರೀ ಎಂದು ವಿವರಣೆ ಕೊಡುತ್ತಾರೆ. 'ಚಿಕವೀರ ರಾಜೇಂದ್ರ'ದಲ್ಲಿ ವೀರಮ್ಮಾಜಿ, ಅವಳ ಗಂಡ, ಮಗು ತಪ್ಪಿಸಿಕೊಳ್ಳುವಾಗ ಮಗು ತೊಟ್ಟಿಲಿನಿಂದ ಹಾರಿ ಬೀಳುತ್ತದೆ, ವೀರರಾಜೇಂದ್ರನ ಕೈ ಸೇರುತ್ತದೆ. ಮಗು ಹುಟ್ಟುವ ಮೊದಲೇ ಅರಸನ ಜಾತಕದಲ್ಲಿ ಕಂಸನ ದಶೆ ಇದೆ ಎಂದು ದೀಕ್ಷಿತ ನುಡಿಯುತ್ತಾನೆ. ಅರಸನಿಗೆ ತಿಳಿಯದಂತೆ. ಅವನ ಹೆಂಡತಿಯ ನೆರವಿನಿಂದ, ವೀರಮ್ಮಾಜಿಯ ಗಂಡ ಸೆರೆಮನೆಗೆ ಭೇಟಿಕೊಟ್ಟು, ಸೆರೆಯಲ್ಲಿದ್ದ ವೀರಮ್ಮಾಜಿ ಗರ್ಭಧರಿಸುತ್ತಾಳೆ. ಕಾದಂಬರಿ ವೀರರಾಜೇಂದ್ರನ ಕೃತ್ಯಗಳನ್ನು ನಿರೂಪಿಸುತ್ತಿರುವಂತೆಯೇ ಉತ್ತರಾರ್ಧದಲ್ಲಿ ಭಗವತಿ ಕಾಣಿಸಿಕೊಳ್ಳುತ್ತಾಳೆ. ಲಿಂಗರಾಜ ಭಗವತಿಗೆ, 'ಮದುವೆ ಆದೆ ಅಂತ ಇಟ್ಟುಕೋ' ಎಂದು ಮಾತು ಕೊಟ್ಟು ಅವಳನ್ನು ವಶಮಾಡಿಕೊಂಡು ದೂರಮಾಡಿ, ತನ್ನ ಅವಳ ಮಗುವಿನ ಕಾಲು ತಿರುಚಿದ ಹಿಂದಿನ ಕಥೆ ಕಣ್ಣಮುಂದೆ ಕಟ್ಟುತ್ತದೆ. ಆ ಮಗು-ತಾನು ಯಾರೆಂದು ತಿಳಿಯದ ಅರಸನ ಸ್ನೇಹಿತ-ಕುಂಟ ಬಸವ, ಅರಸನನ್ನು ವಿನಾಶದತ್ತ ಕರೆದೊಯ್ಯುತ್ತಾನೆ. ಭಗವತಿ, ಕುಂಟ ಬಸವ ಅರಮನೆಯ ಪಾಪದ ನೆನಪಿನ ಮೂರ್ತಿಗಳಾಗುತ್ತಾರೆ. ಆದರೆ, ಮಾನವನನ್ನು ಮೀರಿದ ಶಕ್ತಿಗಳ ಇವು, ಅವುಗಳ ರೀತಿ ಇವನ್ನು ಕುರಿತು ಕಾದಂಬರಿಕಾರರು ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸುವುದಿಲ್ಲ. ಕಾದಂಬರಿಗಳಲ್ಲಿಯೇ ಈ ಮಾತನ್ನು ನಂಬದವರುಂಟು. ಚೆನ್ನಬಸವನಾಯಕನೇ ಗವಿಸಿದ್ಧರಿಗೆ, ''ಎಳೆತನದಿಂದಲೂ ಅಷ್ಟೆ. ನಮಗೆ ಇಂಥ ವಿವರಣೆಯಲ್ಲಿ ನಂಬಿಕೆಯಿಲ್ಲ,'' ಎನ್ನುತ್ತಾನೆ. ಭಗವತಿ, ಮಗನಿಗೆ ಈಗಲಾದರೂ ಒಳಿತಾಗುತ್ತದೆ, ಅರಸನಾಗುತ್ತಾನೆ, ಹಾಗಾಗಲು ನೆರವಾಗುತ್ತೇನೆ ಎಂದು ಬಂದರೆ, ಮಗ ಸಿಂಹಾಸನ ಏರಿದುದನ್ನು ಕಾಣುವುದಿಲ್ಲ, ಚಿತೆಯನ್ನು ಏರಿದುದನ್ನೆ ಕಾಣುತ್ತಾಳೆ. ರಾಜ್ಯಗಳ ದುರಂತವನ್ನು ಮಾನವರ ದೌರ್ಬಲ್ಯದಿಂದಲೇ ವಿವರಿಸುವುದು ಸಾಧ್ಯವಿದೆ.

ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಮಹತ್ವದ ಸಾಧನೆಗಳು, ಈ ಎರಡು ಕಾದಂಬರಿಗಳು. ಚಾರಿತ್ರಿಕ ವ್ಯಕ್ತಿಗಳು, ಕಾಲ್ಪನಿಕ ಪಾತ್ರಗಳು ಒಂದೇ ಬಗೆಯ ವಾಸ್ತವಿಕತೆಯನ್ನು ಪಡೆದಿದ್ದಾರೆ ಎನ್ನುವುದೇ ಶ್ರೀನಿವಾಸರು ತಾವು ಆರಿಸಿಕೊಂಡ

ಯುಗವನ್ನು ಎಷ್ಟರ ಮಟ್ಟಿಗೆ ಸಾಕ್ಷಾತ್ಕಾರ ಮಾಡಿಕೊಂಡಿದ್ದಾರೆ ಎಂಬುದಕ್ಕೆ ಸಾಕ್ಷಿ. (ಕುಂಟಬಸವ ಚಾರಿತ್ರಿಕ ವ್ಯಕ್ತಿ, ಭಗವತಿ ಕಾಲ್ಪನಿಕ. ವೀರಮ್ಮಾಜಿ ಚಾರಿತ್ರಿಕ ವ್ಯಕ್ತಿ, ಶಾಂತವ್ವ ಕಾಲ್ಪನಿಕ, ಚೆನ್ನಬಸವನಾಯಕ ಮಾತ್ರ ಅಸ್ಪಷ್ಟವಾಗಿಯೇ ಉಳಿಯುತ್ತಾನೆ.) ಈ ಕಾದಂಬರಿಗಳಲ್ಲಿ ಸ್ವಲ್ಪ ಅಚ್ಚರಿಯ ಸಂಗತಿ ಎನ್ನಿಸಬಹುದಾದದ್ದು ನಿಜವಾಗಿ ದುಷ್ಟ ಎನ್ನಬಹುದಾದ ಪಾತ್ರವೇ ಇಲ್ಲ ಎನ್ನುವುದು. ಚಿಕವೀರರಾಜೇಂದ್ರ, ಕುಂಟಬಸವ, ವೀರಮ್ಮಾಜಿ ಎಲ್ಲರೂ ದುರ್ಬಲರೇ ವಿನಾ ದುಷ್ಟರಲ್ಲ. ಕೆಟ್ಟತನದಲ್ಲಿ ಹಿಗ್ಗುವವರಲ್ಲ. ಮಾಸ್ತಿಯವರು ವಾಸ್ತವಿಕ ಜಗತ್ತಿನಲ್ಲಿ ಶುದ್ಧ, ಅಪ್ಪಟ ಕೆಟ್ಟತನವನ್ನು ಕಂಡೇ ಇಲ್ಲ ಎಂದು ಹೇಳುವುದು ಧಾರ್ಷ್ಟ್ಯದ ಮಾತಾದೀತು. ಆದರೆ, ಕಥೆಗಾರ-ಕಾದಂಬರಿಕಾರ 'ಶ್ರೀನಿವಾಸ'ರು ಶುದ್ಧ ಕೆಟ್ಟತನವನ್ನು ಚಿತ್ರಿಸಿಲ್ಲ; ದುಷ್ಟ ಕಾರ್ಯಗಳನ್ನು ಸಂತೋಷದಿಂದ, ಹೆಮ್ಮೆಯಿಂದ ಮಾಡುವ ಕೆಟ್ಟತನವನ್ನು ಅವರ ಕಾದಂಬರಿಗಳಲ್ಲಿ ನಾವು ಕಾಣುವುದಿಲ್ಲ. ಬಿಡಿ ಕೃತಿಗಳನ್ನು ಅಧ್ಯಯನ ಮಾಡಿದಾಗ, ತನ್ನ ನಿಯಮಗಳಿಗೆ ಅನುಗುಣವಾಗಿ ಸಾಗುವ ಜಗತ್ತನ್ನು ಪ್ರತಿ ಕಾದಂಬರಿ ಸೃಷ್ಟಿಸುವ ಬಗೆಯನ್ನು ಕಂಡು ವಿಸ್ಮಿತರಾಗುತ್ತೇವೆ. 'ಶ್ರೀನಿವಾಸ'ರು ಪಾತ್ರಗಳನ್ನು ಒಳಹೊಕ್ಕೂ, ಪಾತ್ರಗಳಲ್ಲಿ ಅನುಕಂಪವಿರಿಸಿಕೊಂಡೂ, ಪಾತ್ರಗಳಿಂದ ದೂರ ನಿಂತು ಅವುಗಳ ಜಗತ್ತನ್ನು ಕಾಣಬಲ್ಲವರಾದುದರಿಂದ ಆ ಜಗತ್ತು ವಿಶಿಷ್ಟ, ಸಮಂಜಸ ಸೃಷ್ಟಿಯಾಗುತ್ತದೆ. ಆದರೆ ಎರಡು ಕಾದಂಬರಿಗಳನ್ನೂ ಒಟ್ಟಿಗೆ ವಿಮರ್ಶಿಸುವಾಗ, ಅಪ್ಪಟ ಕೆಟ್ಟತನವನ್ನು ಗುರುತಿಸದಿರುವುದು ಒಂದು ಮಿತಿ ಎಂದು ತೋರಿದರೆ ಆಶ್ಚರ್ಯವಲ್ಲ.

ಚೆನ್ನಬಸವನಾಯಕ

ಪ್ರೊ|| ದೇ. ಜವರೇಗೌಡ

ಬಿದನೂರು ಸಂಸ್ಥಾನದ ಹಿರಿಯ ಹೆಸರಿಗೆ ಹುಳಿಯಾಗಿ, ಕಲೆಯಾಗಿ, ರಾಜವಂಶಕ್ಕೆ ಉರುಳಾಗಿ ಬಸಪ್ಪನಾಯಕರ ಕಿರಿಯ ಹೆಂಡತಿಯಾಗಿ ರಾಣಿ ವೀರಮ್ಮಾಜಿ ಅರಮನೆ ಸೇರುವಳು. ಗದ್ದುಗೆಯ ಮೇಲಣ ನಾಯಿಯ ಕಣ್ಣು ಬಚ್ಚಲ ಕೊಳೆತ ಮಾಂಸದ ಚೂರಿನ ಮೇಲೆಂತೋ ಅಂತೆಯೇ ಅವಳ ಕಣ್ಣು ಮನೆವಾರ್ತೆಯ ನಂಬಯ್ಯನ ಮೇಲೆ. ಅರಮನೆಯ ತೂತು ಹೊರಗಿನವರ ಕಿವಿಗೆ ಬೀಳಬಾರದು, ಮಲಗಿರುವ ನಾಯಿ ತೆಪ್ಪಗಿರಲಿ ಎಂದು ತಾಳ್ಮೆಯ ಅವತಾರದಂತಿದ್ದ ದೊರೆ ಕಂಡೂ ಕಾಣದಂತಿರುವವರು. ಗಾಳಿಯಿಲ್ಲದೆ ಜೀವನವಿಲ್ಲ, ಅದು ಹೋಗದೆಡೆಯಿಲ್ಲ. ಅದಕ್ಕೆ ಕಟ್ಟಿಲ್ಲ; ಸಹ್ಯವೋ ಅಸಹ್ಯವೋ ಆ ಸುದ್ದಿಯನ್ನು ಅದು ಎಲ್ಲೆಡೆಗೂ ಹರಡುವುದು, ಬೀದಿಯ ನಾಲ್ಕುಮಂದಿ ವೀರಮ್ಮಾಜಿಯ ಕುಮಾರ ಚೆನ್ನಬಸವನ ಕಡೆಗೆ ಬೆರಳುತೋರಿಸಿ ಪಿಸುಗುಟ್ಟುವುದು. ಆತ್ಮಾಭಿಮಾನಿಯಾದ ತರುಣ ವಯಸ್ಸಿನ ಮಗ ಕೊಂಕುನುಡಿ ಚುಚ್ಚು ನುಡಿಗಳಿಂದ ತಾಯಿಯನ್ನು ಎಚ್ಚರಿಸುವನು. ನಲ್ವಾತು ಅವಳಿಗೆ ಸಲ್ಲದು. ದೊರೆಯಿದ್ದೂ ಮಗನಿದ್ದೂ ರಾಣಿಯ ಕೈವಾಡವೇ ಮೇಲಾಗುವುದು; ಈ ಕೈವಾಡಕ್ಕೆ ಕೈಮರವಾಗಿ ಮಗನ ಗೆಳೆಯ ಲಿಂಗಣ್ಣಯ್ಯ ಸೆರೆಸೇರುವನು. ಮಗನ ದುಡುಕತನವನ್ನು, ಆತನ ನಿಸ್ಸಹಾಯಕತೆಯನ್ನು ಕಂಡ ಪುತ್ರ ಕ್ಷೇಮಾಕಾಂಕ್ಷಿಯಾದ ತಂದೆ ಊರಮುಖಂಡ ನೇಮಯ್ಯನ ತಮ್ಮನ ಮಗಳನ್ನು ತಂದು ಮಗನಿಗೆ ಮದುವೆ ಮಾಡಿಕೊಳ್ಳುವನು. ತನ್ನ ಕಡೆಯ ಹೆಣ್ಣನ್ನು ತಂದುಕೊಂಡು ತಾಯ್ತನದ ಬಾವುಟವನ್ನು ಹಾರಾಡಿಸಿ ಮಗನನ್ನು ತನ್ನ ಅಂಕೆಗೆ ತಂದುಕೊಳ್ಳಬೇಕೆಂದು ಹವಣಿಸಿದ ತಾಯಿಯ ಪ್ರಯತ್ನ ವಿಫಲವಾಗುವುದು. ತಂದೆ ತೀರಿಕೊಂಡ ಮೇಲಂತು ಅರಮನೆಯ ವಾರ್ತೆ, ರಾಜ್ಯದ ವ್ಯವಸ್ಥೆ, ತಾಯಿಮಕ್ಕಳ ಸಂಬಂಧ ಹಗರಣಕ್ಕಿಟ್ಟುಕೊಳ್ಳುವುದು. ರಾಣಿಯೊಬ್ಬಳ ಎದೆಯಲ್ಲಿ ಚಿಮ್ಮಿದ ನಂಜುಹನಿ ಹಿರಿದಾಗಿ ಹೊನಲಾಗಿ ದಡಮೀರಿ ಒಳ್ಳೆಯದು ಕೆಟ್ಟದೆನ್ನದೆ ಇಡೀ ನಾಡನ್ನೆ ಕೊಚ್ಚುವುದು.

ದೊರೆ ತೀರಿಕೊಂಡ ಮೇಲೆ ಮಗ ಗದ್ದುಗೆಯೇರಲೆಂದು ಜನದ ಉತ್ಸಾಹ ಪೂರ್ಣವಾದ ಕುತೂಹಲ; ಅಳಿಯನಿಗಾಗಿ ಮಾತಾಡುವುದು ಸಲ್ಲದೆಂದು ಪಾರಿಶುದ್ಧ್ಯವೇ ಮೂರ್ತಿವೆತ್ತಂತಿದ್ದ ನೇಮಯ್ಯ ತೆಪ್ಪಗಿರುವಾಗ, ಮನಹಿಡಿಯದೆ ನಾಡಿನ ಅಭಿಪ್ರಾಯವನ್ನು ನಿಷ್ಕಪಟವಾಗಿ ಪ್ರತಿಬಿಂಬಿಸಿ ನಿಲ್ಲುವರು ಗುರುಮನೆಯ ಅಯ್ಯ ಮತ್ತು ರಾಮಾಶಾಸ್ತ್ರಿ, ರಾಣಿಯೇ ಪಟ್ಟದ ಮಾತೆತ್ತಲಿ, ಕಾದುನೋಡೋಣವೆಂದುಕೊಂಡಿದ್ದು ತಡವಾಗಲು ವ್ಯವಹಾರ ವಿಮುಖನಾಗಿ ನಿಜವೇಷದಿಂದ, ಛದ್ಮವೇಶದಿಂದ ಕಾಡುಬೀಡುಗಳನ್ನು ಅಲೆಯುವ ದೊರೆಮಗ; ಸಟ್ಟುಗ ಕೈಯಲ್ಲಿರುವಾಗಲೇ ಕೈಸುಟ್ಟು ಕೊಳ್ಳಬಾರದು, ಅಧಿಕಾರ ತನ್ನ ಕೈಯಿಂದ ಮಗನ ಕೈಗೆ ಜಾರಿದರೆ ತನ್ನ ಮತ್ತು ತನ್ನನ್ನು

ನಂಬಿದವನ ಗತಿಯೇನೆಂದು ಹಟಸಾಧಿಸಲು ಕಂಕಣ ತೊಟ್ಟ ರಾಣಿ; ಅರಮನೆಯ ಛಿದ್ರವನ್ನರಿತು ಆಡಳಿತದ ಅವ್ಯವಸ್ಥೆಯನ್ನು ಪುಟಗೊಳಿಸಲು ಹವಣಿಸಿ ನಿನ್ನೆ ಮೊನ್ನೆ ಹೆಸರಿಗೆ ಮಾತ್ರ ಪಾಳೆಯಗಾರನೆನಿಸಿಕೊಂಡ ಹೊಂಬುಚದ ಪಾಳೆಯಗಾರ, ಮತ್ತೊಂದು ಕಡೆ ರಾಜ್ಯ ತಮ್ಮದಾಗಬೇಕೆಂದು ನಾಯಕ ವಂಶ ಕೊನೆಯಾಗಬೇಕೆಂದು ಶೈವ ವೈಷವ ಶಾಕ್ತ ಧರ್ಮಗಳ ರೀತಿಯಲ್ಲಿ ಸಾಧನೆ ನಡೆಸುತ್ತಿದ್ದ ಬಲ್ಲಾಳವಂಶದ ನೇಮಯ್ಯನ ತಮ್ಮ ಹಂಪಯ್ಯ; ಹೀಗೆ ಬಿದನೂರಿನ ಪರಿಸ್ಥಿತಿ ಧರ್ಮಭೀರುಗಳಿಗೆ ದೇಶಪ್ರೇಮಿಗಳಿಗೆ ಚಿಂತಾಜನಕವಾಗಿ, ದುರ್ಭರವಾಗಿ, ಹೊರಗಿನವರಿಗೆ ಆಗದವರಿಗೆ ಅಣಕವಾಗಿ ವಿಧಿಯ ಶಾಸನಕ್ಕೊಳಗಾಗಿರುವುದು.

ಈ ನಡುವೆ ಅತ್ತೆಗೆ ಬೇಡವಾಗಿ ಮನೆಗೆ ಸೊಸೆಯಾಗಿ ಬಂದ ಪರಿಶುದ್ಧಾತ್ಮಳಾದ ಶಾಂತವ್ವ ಗಂಡನ ಕ್ಷೇಮಕ್ಕಾಗಿ ನೋಂಪಿಯನ್ನಾಚರಿಸುವಳು; ತಾನು ರಾಣಿಯಾಗಿ ಗಾದಿಯೇರಬೇಕೆಂಬ ಬಯಕೆಯಿಂದಲ್ಲ, ಮುತ್ತೈದೆಯಾಗಿ ಬಾಳಬೇಕೆಂದು ಹಂಬಲದಿಂದ. ದತ್ತಾತ್ರೇಯ ಪೀಠದಲ್ಲಿ ಅವಳ ಮೊರೆಯಾದರೂ 'ಗಂಡ ನಗತಾ ಇರಬೇಕು, ತಾನು ತಾಯಿತಿಯೊಂದಿಗೆ ಕಣ್ಣುಮುಚ್ಚಿಕೊಳ್ಳಬೇಕು' ಎನ್ನುವುದೆ ತಾನೇ! ದೊರೆ ಮನೆಗೆ ನೆಂಟಳಾದ ವಸ್ತಾರೆ ಹೆಗ್ಗಡಿತಿಯಿಂದ ಹರಕೆಯನ್ನೂ ಪೀಠದಿಂದ ಪ್ರಸಾದವನ್ನು ತಂದ ಶಾಂತವ್ವ ಒಲ್ಲದ ಅತ್ತೆಯ ಸುಡುನುಡಿಯನ್ನು ಕೇಳಬೇಕಾಗುವುದು. ಕಣ್ಣರಂತಿದ್ದ ನೇಮಯ್ಯನ ಸಾಕುಮಗಳಲ್ಲವೇ ಶಾಂತವ್ವ! ಸದ್ದಿಲ್ಲದೆ ಎಲ್ಲವನ್ನೂ ಸಹಿಸುವಳು; ಅತ್ತೆ ತಾನು ತಂದ ಪ್ರಸಾದವನ್ನು ತಿಪ್ಪೆಗೆ ಬಿಸಾಡಿದಳೆಂದು ಕೇಳಿದಾಗ ಒಂದೆರಡು ತೊಟ್ಟು ಕಣ್ಣೀರು ಸುರಿಸುವಳು, ಅಷ್ಟೆ; ಅವಳ ಎದೆ ನಿಂದೆಯನ್ನೇ ಅರಿಯದು.

ಮಗನ ಮೇಲೆ 'ತಾಯ್ತನವನ್ನು ಸ್ಥಾಪಿಸಲು', ಅದರ ಅಟ್ಟಹಾಸವನ್ನು-ಅಕ್ಕರೆಯನ್ನಲ್ಲ-ಬೀರಬೇಕೆಂಬ ಉದ್ದೇಶದಿಂದ ಶಿವಾಚಾರದ ನೆಪ ಎತ್ತಿ ತನ್ನ ಕಡೆಯ ಸಣ್ಣವ್ವನನ್ನು ಮಗನಿಗೆ ಮದುವೆ ಮಾಡಬೇಕೆಂದು ರಾಣಿ ಸತ್ಯಸಂಧ ರಾಮಾಶಾಸ್ತ್ರಿ, ಸ್ಥಿತಪ್ರಜ್ಞ ನೇಮಯ್ಯ, ಧರ್ಮನಿಧಿ ಅಯ್ಯ - ಇವರೊಡನೆ ಮೆಲ್ಲನೆ ಮಾತೆತ್ತುವಳು. ಶಾಸ್ತ್ರಿ ಮತ್ತು ಅಯ್ಯ ನಿರ್ಭೀತರಾಗಿ ಆಗದೆನ್ನುವರು; ನೇಮಯ್ಯ ಹಸನ್ಮುಖಿಯಾಗಿ ತೆಪ್ಪಗಿರುವನು. ಸದ್ಯಕ್ಕೆ ಆ ಯೋಚನೆ ಮುರಿದುಬೀಳುವುದು.

ಇಷ್ಟರಲ್ಲಿಯೇ ನಾಯಕನಂತೆಯೇ ಸಮದುಃಖಭಾಜನನಾದ ಪಟ್ಟಣದ ದೊರೆ ಇಮ್ಮಡಿ ಕೃಷ್ಣರಾಜರಿಂದ ನಾಯಕನ ಹಿತವನ್ನು ಬಯಸಿದ, ಅವರ ಸಹಾಯ ಸಹಕಾರಗಳನ್ನು ಅಪೇಕ್ಷಿಸಿದ ಕಾಗದ ರಾಣಿಯ ಕೈಸೇರುವುದು. ಆ ಸಮಯದಲ್ಲಿಯೇ ವಸ್ತಾರೆಯ ಹೆಗ್ಗಡಿತಿಯ ಕಾಗದವೂ ತಲುಪುವುದು. ಮುಖ್ಯವಾಗಿ ರಾಣಿಯ ನಡತೆಯೇ ಆ ಕಾಗದಗಳ ಹಿನ್ನೆಲೆ. ಮನೆಯ ರಂಪ ಬೀದಿರಂಪವಾಗಿ ಆ ಕೊಚ್ಚೆ ಆ ಕೊನೆಯ ಪಟ್ಟಣದ ವರೆಗೆ ಹರಿದಿತ್ತು. ಪಟ್ಟಣದ ನವರಾತ್ರಿಯ ಉತ್ಸವಕ್ಕೆಂದು ನಾಯಕ ಹೆಂಡತಿಯೊಡನೆ ಹೊರಡುವ ಏರ್ಪಾಡೂ ಆಗುವುದು. ರಾಣಿ ಉಸಿರುಬಿಡಲೂ, ನಾಯಕ ಬೇಸರವನ್ನು ನೀಗಿಸಿಕೊಳ್ಳಲೂ, ಇದು ಅನುಕೂಲವಾಗುವುದು. ಕೊಳಕು ಮನದ ರಾಣಿ ಹೆಗ್ಗಡಿತಿಯ ಕಾಗದವನ್ನು ಓದಿಸಿ ಅದರಲ್ಲಿದ್ದ ಹಿತನುಡಿ ಕೊಂಕುನುಡಿಗಳನ್ನು ಬಿಂಕದ ನುಡಿಗಳೆಂದು ಭಾವಿಸಿ ಕ್ರುದ್ಧಳಾಗುವಳು; ಇದಕ್ಕೆಲ್ಲ ಶಾಂತವ್ವನೇ ಕಾರಣಳೆಂದು ಬುಸುಗುಟ್ಟಿ ನಿಷ್ಕಪಟಿ ನೇಮಯ್ಯನನ್ನು ಕರೆಸಿ, ಕೋಪಕಾರಿ ಛೀಮಾರಿಮಾಡುವಳು. ಬಿದನೂರಿನಲ್ಲಿರುವುದು

ಸದ್ಗುಣಿಯೂ ನಿರಪರಾಧಿಯೂ ಆದ ನೇಮಯ್ಯನಿಗೆ ಅಸಹ್ಯವೆನಿಸಿತಾದರೂ ಬಹುದೂರ ಆಲೋಚಿಸಿ, ಆಳಿದ ನಾಯಕರ ಮೇಲಣ ಪ್ರೇಮ, ರಾಷ್ಟ್ರಭಕ್ತಿ, ನಾಡಿನ ಭದ್ರತೆ, ಜತೆಗೆ ರಾಣಿಯ ಜೀವ ಸಂರಕ್ಷಣೆ ಇವುಗಳಿಗಾಗಿ ಅಲ್ಲಿಯೇ ನಿಲ್ಲುವನು.

ಹೀಗಿರುವಾಗ ಬಿದನೂರಿನ ಮತ್ತು ಸುತ್ತಮುತ್ತಣ ರಾಜಕೀಯ ಜೀವನ ಸಂಕ್ಷೋಭೆಗೊಳಗಾಗಿ ಕುದಿಯುವುದು. ಅರಮನೆಯ ಏರುಬೀರುಗಳೇ ನಾಡಿನ ಏರುಬೀರುಗಳು. ರಾಣಿಯ ಮನೆವಾರ್ತೆ ರಂಧ್ರಾನ್ವೇಷಣಾ ನಿರತರಾದ ವಿರೋಧಿಗಳ ಅಣಕಕ್ಕೆ ಪಕ್ಕಾಗುವುದು. ರಾಜ್ಯ ವಿಸ್ತರಣಕಾರ್ಯ ಪ್ರವೃತ್ತರಾದ ನೆರೆಯ ರಾಜರಿಗೆ ಮತ್ತು ಪಾಳೆಗಾರರಿಗೆ ಅನುಕೂಲಸಿಂಧುವಾಗುವುದು. ಒಳನಾಡಿನ ಪ್ರಜೆಗಳಿಗಂತು ಅತಿ ಬೇಸರವಾಗುವುದು. ಅತ್ತ ಪಟ್ಟಣದಲ್ಲಿ ನವರಾತ್ರಿ ಉತ್ಸವದ ಉತ್ಸಾಹ: ಇತ್ತ ಬಿದನೂರಿನ ಮೇಲೆ ಹೈದರನ ಸನ್ನಾಹ ಜತೆಗೆ ಸ್ವಾಮಿ ಕಾರ್ಯ ದುರಂಧರನಾದ ಉಜನಿಯ ಬಿನ್ನಹ. ಅಣ್ಣ ಲಿಂಗಣ್ಣಯ್ಯನ ಬಿಡುಗಡೆಯಾಗಿ ಬಸವಳಿದ ಮುಗ್ಧ ಭಾಸ್ಕರಯ್ಯ, ಸಮಯಸಾಧಕನಿರತನಾದ ಹೊಂಬುಚದ ಪಾಳೆಯಗಾರ ಮೊದಲಾದವರು ಉಜನಿಯ ಕೈಗೊಂಬೆಗಳಾಗಿ ಹೈದರನ ಕಾರ್ಯ ಕೈಗೂಡುವುದು. ಇದನ್ನರಿತ ರಾಣಿ ಸವಣೂರು ನವಾಬನ ಮತ್ತು ಮರಾಟೆವಾಡಿಯ ನೆರವನ್ನು ಕೋರಿ ಓಲೆಯನ್ನು ಕಳುಹಿಸುವಳು.

ಪಟ್ಟಣದಲ್ಲಿ ಕೆಲವು ದಿನಗಳಿದ್ದರೂ ರಾಜ ರಾಜಮಾತೆಯರ ಸವಿನುಡಿ ಹಿತನುಡಿ, ಅಲ್ಲಿ ದೊರೆತ ರಾಜಮರ್ಯಾದೆ, ಆ ಜನದ ಅಕ್ಕರೆ, ನಯ, ಪಟ್ಟಣದ ಸುತ್ತ ಮುತ್ತಣ ರಮಣೀಯ ದೃಶ್ಯಗಳ ಸಂದರ್ಶನ, ಮೇಲಾಗಿ ಶಾಂತವ್ವನ ಜತೆ - ಇವು ನಾಯಕನ ವ್ಯಾಕುಲವನ್ನು ತಾತ್ಕಾಲಿಕವಾಗಿ ಅದುಮುವುವು. ಮಲ್ಲಗಾಳಗದ ಹುಚ್ಚು ಅಲ್ಲಿಯೂ ಕಾಡಲು ನಾಯಕ ಛದ್ಮವೇಷದಿಂದ ತನ್ನ ಅಸಮಸಾಹಸವನ್ನು ಮೆರೆದು, ಉತ್ಸವದ ಸಡಗರದ ನಡುವೆ ತುಸು ಕೋಲಾಹಲವನ್ನುಂಟುಮಾಡಿ, ಕೊನೆಗೆ ಎಲ್ಲರ ಹೊಗಳಿಕೆಗೂ ಭಾಜನನಾಗುವನು. ಉತ್ಸವದ ಸಂಭ್ರಮದಲ್ಲಿ ತನ್ನ ನಗರದ, ತನ್ನ ಮನೆಯ ವಿಕ್ಷುಬ್ಧ ವಾತಾವರಣವನ್ನು ಮರೆತು ಮನಶ್ಶಾಂತಿಯನ್ನು ಪಡೆಯುವನು. ಹಾಗೆಯೇ ಪಟ್ಟಣದ ರಾಜ ರಾಜಮಾತೆಯರು ನಾಯಕನ ಸ್ನೇಹಾಧಿಕ್ಯದಿಂದ ಹೈದರನಿಂದ ಪ್ರಾಪ್ತವಾಗಬಹುದಾಗಿದ್ದ ವಿಪತ್‌ಭೂತವನ್ನು ಮರೆತು ಪ್ರಸನ್ನರಾಗಿರುವರು. ಪರಸ್ಪರ ಸುಖದುಃಖಗಳನ್ನು ಸುರಿದು ಅಳೆದು ಹೋಲಿಸಿಕೊಳ್ಳುವರು. ಅತ್ತೆಯ ಕೇಳ್ತನದ ಕೀಳಿನಲ್ಲಿ ದಾಂಪತ್ಯಸುಖದ ಸುಳಿವನ್ನೇ ಅರಿಯದ ಮುಗ್ಧೆ ಶಾಂತವ್ವನ ಹೆಣ್ತನದ ಮೊಗ್ಗರಳುವುದು; ಆಗ ಮಾತ್ರ ಆ ಸತಿಪತಿಗಳ ಎದೆಗಳು ಬೆಸುಗೊಂಡು ಪರಸ್ಪರ ಲೀನವಾಗುವುವು. ಆದರೆ ನಾಯಕ ಹಿಂದಿರುಗುವ ವೇಳೆಗೆ ಬಿದನೂರಿನ ಪರಿಸ್ಥಿತಿ ಉಲ್ಬಣವಾಗುವುದು. 'ಹೊರಡುವಂದು ಮುನ್ನಿರುಳಾಗಿದ್ದ ಜೀವನ ಈಗ ನಟ್ಟಿರುಳು ಕತ್ತಲನ್ನು ಮುಟ್ಟಿದಂತೆ ಅವನಿಗೆ' ಕಾಣುವುದು; 'ಚಿಂತೆಯನ್ನು ಮತ್ತೆ ಹೊದೆದುಕೊಳ್ಳುವನು; ಒಳಬೇಗೆ ಹೊರಬೇಗೆ ಅವನನ್ನು ಕೈಚಾಚಿ ಸ್ವಾಗತಿಸುವುದು.'

ಇಂತಹ ವಿಪತ್ಸಮಯದಲ್ಲಿ ತಾಯಿಮಕ್ಕಳ ವೈರ ಸಲ್ಲದು. ರಾಮಾಶಾಸ್ತ್ರಿ ಮತ್ತು ನೇಮಯ್ಯ, ಇವರ ಮಧ್ಯಸ್ಥಿಕೆಯಲ್ಲಿ ರಾಣಿ ನಾಯಕನೊಡನೆ ರಾಜಿಯಾಗುವಳು; ನಾಯಕ ರಾಜ್ಯಾಡಳಿತದಲ್ಲಿ ಪ್ರಮುಖನಾಗುವನು, ನಂಬಯ್ಯ ಕೋಣೆ ಪಾಲಾಗುವನು. ಆ ರಾಜಿಯಾದರೂ ರಾಜಕೀಯ ವೇದಿಕೆಯ ಸಂದಾನವೇ ಹೊರತು ತಾಯಿಮಗನ ಆತ್ಮವಿಶ್ವಾಸದ ರಾಜಿಯಾಗುವುದಿಲ್ಲ, ಅವರ ಹೃದಯಗಳು ಬೆರೆಯುವಂತಿಲ್ಲ.

ಈ ಮೇಲಂತು ರಾಜಕೀಯ ಘಟನೆಗಳು ವಿದ್ಯುದ್ವೇಗದಿಂದ ಸಾಗುವುವು. ಈ ಘಟನೆಗಳ ಜಂಝಾವಾತದಲ್ಲಿ ಹಿರಿಯ ಬಾಳುಗಳು ನುಚ್ಚುನೂರಾಗುವುವು. ಮೈಸೂರು ಅರಸರಿಗೆ ನಾಯಕನ ಓಲೆಯನ್ನು ಹೊತ್ತ ಭಾಸ್ಕರಯ್ಯ ಅವರಿಂದ ಮಾರೋಲೆಯನ್ನು ಪಡೆದು ತರುವಾಗ ಹೈದರನ ಕೈಸೆರೆಯಾಗುವನು. ನಾಯಕನ ಕೊಲೆಗೆಂದು ನಂಬಯ್ಯ ನೇಮಿಸಿದ ಚಂಡಾಲರು ರಾತ್ರಿ ನಗರ ಸಂಚಾರಕ್ಕೆ ಹೊರಟಿದ್ದ ನಾಯಕನ ಮೇಲೆ ಬಿದ್ದು ಅವನ ಕತ್ತು ಹಿಸುಕಿ, ಹತ್ತಿರದ ಮಠದ ಕಡೆಯಿಂದ ಸದ್ದು ಕೇಳಿಬರಲು ಅವನನ್ನು ಅಲ್ಲಿಯೇ ಬಿಟ್ಟು ಓಡುವರು. ಕಾರ್ಯವಿಘಟನೆಗೆ ಕಾರಣ ವಿಘಟನೆಯೇ ಸರಿಯೆಂದು ಯೋಚಿಸಿದ ನಂಬಯ್ಯ ಕೊಲೆಯ ಹೊಗೆ ಹರಡದಿರಲೆಂದು ತನ್ನ ನಿಲುವು ಮಾಸದಿರಲೆಂದು ಆ ಚಂಡಾಲರನ್ನು ಅಫೀಮು ಸೇರಿಸಿದ ಉಂಡೆಗಳನ್ನು ತಿನ್ನಿಸಿ ಕೊಲ್ಲುವನು. ಆರೈಕೆಯ ತಂಪಿನಲ್ಲಿ, ಹರಕೆಯ ಮಡಿಲಿನಲ್ಲಿ ಗುಣಮುಖನಾದ ನಾಯಕ ಕೂಡಲೆ ಕಾರ್ಯೋನ್ಮುಖನಾಗುವನು. ಶಸ್ತ್ರಾಸ್ತ್ರಸಜ್ಜಿತವಾದ ಸೈನ್ಯವುಳ್ಳ ಹೈದರನ ಮೇಲೆ ಪಡೆಯ ಬೆಂಬಲವಿಲ್ಲದೆ ಕೈಮಾಡುವುದು ಆಗದೆಂದು ಸಂಧಾನ ನಡೆಸುವ ಉದ್ದೇಶದಿಂದ ತಾನೊಬ್ಬನೆ ಹೈದರನ ಶಿಬಿರಕ್ಕೆ ಹೋಗುವನು. ನವಾಬ ಆ ಈ ನೆಪವೆತ್ತಿ ಆತನು ಛದ್ಮವೇಷದಾರಿಯೆಂದು ಆಪಾದನೆ ಹೊರಿಸಿ ಅವನನ್ನು ಉಜನಿಯ ವಶಪಡಿಸುವನು. ಈ ನಡುವೆ ಮಗ ಸತ್ತನೆಂದು ರಾಣಿಯಿಂದ ಬಂದ ಕಾಗದ, ಹಳ್ಳಿಗರು ಅವನನ್ನು ಬೂದಿ ಬಸವಸ್ವಾಮಿ ಎಂದು ಕರೆದದ್ದು ಇವು ನವಾಬನ ವಾದವನ್ನು ಪುಷ್ಟೀಕರಿಸಿದುವು. ಆದರೆ ಮಲ್ಲಯ್ಯ ಸಗನಮಲ್ಲಿಗೆಯರ ಒಳಸಂಚು, ಅವರ ಕೆಚ್ಚೆದೆತನಗಳ ಫಲವಾಗಿ ನಾಯಕನ ಬಿಡುಗಡೆ ಆಗುವುದು.

ಈ ಹೊತ್ತಿಗೆ ರಾಣಿ, ಹೈದರನ ಸೈನ್ಯ ರಾಜಧಾನಿಯ ಹತ್ತಿರ ಬಂದಿತೆಂಬುದನ್ನು ತಿಳಿದು ಬೊಕ್ಕಸದೊಡನೆ ಬಲ್ಲಾಳರಾಯನ ದುರ್ಗವನ್ನು ಸೇರುವಳು; ಬಸುರಿ ಶಾಂತವ್ವ ಹಿಂಬಾಲಿಸುವಳು. ಗಂಡನ ಶ್ರೇಯಸ್ಸಿಗಾಗಿ ಶಾಂತವ್ವ ಕಾಪಾಲಿಯಿಂದ ಪೂಜೆ ನಡೆಸುವಳು; ಕಾಪಾಲಿ ಬಸುರಿಯನ್ನು ಆಹುತಿ ಕೇಳಿದಾಗ ಗಂಡ ಬರುವನೆಂಬ ಆಶೆಯನ್ನುಳಿದ ಆ ಪುನೀತೆ ತಾನೇ ಮುನ್ನುಗ್ಗುವಳು. ಆ ಕಾಪಾಲಿಯೇ ತನ್ನನ್ನು ಪಡೆದವನು; ಮಗಳಿಗೆ ತಂದೆಯ ಅರಿವಿಲ್ಲ; ಕಾಪಾಲಿಯಿಂದ ಅವಳ ಬಾಳು ಬಿಡುಗಡೆ ಹೊಂದುವುದು. ಆದರೇನು ವಿಧಿಲೀಲೆ, ದುರ್ಗದ ಹತ್ತಿರ ಸೈನ್ಯ ಬಂತೆಂಬ ಸುದ್ದಿ ಕಿವಿಗೆ ಬಿದ್ದೊಡನೆ ಅವಳು ಬಳಿಯ ಕಮರಿಯಲ್ಲಿ ಬಿದ್ದು ಭೈರವನ ಪಾಲಾಗುವಳು; ಅವಳ ಬಾಳ ಹಿರಿಯ ಹಂಬಲಾಗಿದ್ದ ಸುಮಂಗಲಿಯ ಸಾವು ಒದಗಿಯೇ ಒದಗುವುದು. ಅವಳೊಡನೆ ರುದ್ರನಾಟಕದ ಕೊನೆಯ ಅಂಕ ಬಳಿಸಾರಿ, ನಾಯಕನ ಮರಣದಿಂದ ಕೊನೆಗೊಳ್ಳುವುದು. ಭಗ್ನಮನೋರಥನಾದ ಹಂಪಯ್ಯ ಮಗಳ ಕಾವಲಿಗೆಂದು ಆ ಕಮರಿಯಲ್ಲಿಯೇ ಒರಗುವನು. ವೀರವನಿತೆ ವೀರಮ್ಮಾಜಿ, ಅಂಜುಬುರಕ ನಂಬಯ್ಯ, ನವಾಬನ ಅಣಕಕ್ಕೆ ಈಡಾಗಿ ಮಧುಗಿರಿಯ ಬೆಟ್ಟದಲ್ಲಿ ಬಂಧಿತರಾಗುವರು.

ಇದು ಈ ಕಾದಂಬರಿಯ ತಡಿಕೆ. ಕರ್ಣಾಟಕದ ಇತಿಹಾಸದಲ್ಲಿ ಇನ್ನೂರು ವರ್ಷಗಳ ಹಿಂದೆ ಹೆಸರು ಪಡೆದ ಬಿದನೂರು ನಾಯಕ ಮನೆತನದ ಕೊನೆಗಾಲದ ಕತೆಯೇ ಇದಕ್ಕೆ ತಳಹದಿ. ಸುಮಾರು ಇನ್ನೂರು ವರ್ಷಗಳು ಅವಿಚ್ಛಿನ್ನವಾಗಿ ಆಳಿ ವೈಭವದಿಂದ ಮೆರೆದ ಆ ಮನೆತನ ಬಸಪ್ಪನಾಯಯಕನಲ್ಲಿ ಕೊನೆಮುಟ್ಟಿತು. ಆತನ ರಾಣಿಯ ದುರ್ನಡತೆಯೇ ಆ

ಕೊನೆಗೆ ಮುಖ್ಯಕಾರಣ - ಇದು ಐತಿಹಾಸಿಕ ಸಂಗತಿ; ಇದರ ನಿರೂಪಣೆಯೇ ಕಾದಂಬರಿಯ ಗುರಿ. ಈ ಐತಿಹಾಸಕ ಕತೆಯ ಮೊಗ್ಗು ಅದೊಂದು ರುದ್ರನಾಟಕವಾಗಿ ಅರಳಿ ಅದರ ಕಂಪು ಕನ್ನಡನಾಡನ್ನೆಲ್ಲ ವ್ಯಾಪಿಸಿತು. ಅದೇ ಮತ್ತೆ ರುದ್ರ ಕಾದಂಬರಿಯಾಗಿ ವಿಕಾಸಗೊಂಡು ಈ ನಾಡಿನಲ್ಲಿ ಕಂಪನ್ನು ಬೀರಿದೆ. ಒಂದರ ಪ್ರತೀಕವಲ್ಲ ಇನ್ನೊಂದು. ಆಕಾರ, ಗಮನ, ಒಯ್ಯಾರ ಒನಪುಗಳಲ್ಲಿ ಒಂದು ಇನ್ನೊಂದರಿಂದ ಭಿನ್ನ. ವಸ್ತು ಸಂವಿಧಾನ ಪಾತ್ರ ಪರಿಪೋಷಣೆಗಳಲ್ಲಂತೂ ಎರಡೂ ಪರಸ್ಪರ ವಿರುದ್ಧವಾದವು. ಕುವೆಂಪುರವರ 'ರಕ್ತಾಕ್ಷಿ' ನಾಟಕದ ಬಸವಯ್ಯ, ಚೆಲುವಾಂಬೆ, ನಿಂಬಯ್ಯ, ರುದ್ರಾಂಬೆ, ಹೊನ್ನಯ್ಯ ಇಲ್ಲಿ ಚೆನ್ನಬಸವನಾಯಕ, ವೀರಮ್ಮಾಜಿ, ನಂಬಯ್ಯ, ಶಾಂತವ್ವ, ಮಲ್ಲಯ್ಯ ಆಗಿದ್ದಾರೆ. ವ್ಯತ್ಯಾಸ ಹೆಸರಿನಲ್ಲಿಯೇ ಅಲ್ಲ, ವ್ಯಕ್ತಿತ್ವದಲ್ಲಿಯೂ ಉಂಟು. ದೇಹರಚನೆ, ಜಾಯಮಾನ, ಸ್ವಭಾವ, ವರ್ತನೆ ಪ್ರತಿಯೊಂದರಲ್ಲಿಯೂ ಅವರು ಪರಸ್ಪರ ಭಿನ್ನರು. ಆದುದರಿಂದ ಕತೆಯ ಕಟ್ಟಡವೇ ಬದಲಾವಣೆಯಾಗುತ್ತದೆ.

ಬಿದನೂರಿನ ಇತಿಹಾಸವಷ್ಟೇ ಅಲ್ಲ, ಮೈಸೂರಿನ ಇತಿಹಾಸವೂ ಕಾದಂಬರಿಯ ಮುಖ್ಯ ಕಥೆಯಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿದೆ. ಒಮ್ಮೆ ಎರಡರ ಹಣೆ ಬರಹವೂ ಒಂದೆ ತೆರನಾಗಿತ್ತು. ಆದರೆ ಒಂದು ಅಳಿದು ಮತ್ತೊಂದರಲ್ಲಿ ಉಳಿಯಿತು. ಮೈಸೂರಿನ ರಾಜಕೀಯ ಶರೀರದಲ್ಲಿ ಸರ್ವಾಧಿಕಾರಿಗಳು ಭೀಕರವ್ರಣಗಳು. ಅವರ ದುರದುಂಬಿತನದ ಫಲವಾಗಿ ಕೆಲವು ರಾಜರು ಮೂಲೆಯ ವಿಗ್ರಹಗಳಾದರು. ಆಳಾಗಿ ಸೇರಿ ಸರ್ವಾಧಿಕಾರಿಯಾಗಿ ಮೆರೆದ ಹೈದರನ ಪ್ರಾಬಲ್ಯವನ್ನು ತಡೆಯಲು ಇಮ್ಮಡಿ ಕೃಷ್ಣರಾಜರು ಎಷ್ಟು ಬಳಲಿದರೆಂಬುದು ಇಲ್ಲಿ ವ್ಯಕ್ತಗೊಂಡಿದೆ. ಕಾದಂಬರಿಯ ಗತಿ ಮೊದಲಿಂದ ಕೊನೆಯ ತನಕ ತಡೆಯಿಲ್ಲದೆ ಸರಾಗವಾಗಿ ಸರಳವಾಗಿ ಹರಿಯುತ್ತದೆ; ಎಲ್ಲಿಯೂ ತೊಡಕಿಲ್ಲ, ಕೊಂಕಿಲ್ಲ. ಕತೆಯ ನಡುವೆ ಪ್ರಾಸಂಗಿಕವಾಗಿ ಸುಳಿಯುವ ಮಲ್ಲಿಗೆ-ಸಗುನರ ಬಾಳಂತು ಅತಿ ಸುಂದರವಾಗಿ, ನೈಜವಾಗಿ ನಿರೂಪಿತವಾಗಿದೆ. ಕಾಮದ ಅಂಧಕಾರದಲ್ಲಿ ಪ್ರೇಮದ ಜ್ಯೋತ್ಸ್ನೆಯಾಗಿ, ನಿರಾಶೆಯ ಮೋಡದ ನಡುವೆ ಆಶೆಯ ಧ್ರುವತಾರೆಯಾಗಿ, ಕಟ್ಟಲನಿಟ್ಟುಸಿರ ಬೇಗೆಯನ್ನು ನಂದಿಸುವ ತಂಪಾಗಿ, ಕಿರಿದಾಗಿ ಹುಟ್ಟಿ ಹಿರಿದಾಗಿ ಬಾಳಿ, ಉಪ್ಪಿನ ಹಂಗನ್ನು ಮರೆಯದೆ ಶಾಶ್ವತ ಪ್ರೇಮವನ್ನು ಮಾರದೆ ಒಡೆಯನಿಗಾಗಿ ತುಸು ಹಿಂಜರಿಯದೆ ಸರ್ವಸ್ವವನ್ನೂ ಬಲಿಗೊಡಲು ಸಿದ್ಧರಾಗಿ, ಕಾದಂಬರಿಯ ವೃಕ್ಷವನ್ನು ತಬ್ಬಿ ಸುತ್ತುಮುತ್ತ ಪರಿಮಳವನ್ನು ಬೀರಿ ಕೃತಕೃತ್ಯವಾದ ಬಾಳು ಸಗುನ ಮಲ್ಲಿಗೆಯರದು. ನಿರಂತರವಾದ ಕಾತರತೆ, ಉದ್ವೇಗ, ಸಂಕಟ, ಕಳವಳಗಳ ಸುಳಿಯಲ್ಲಿ ತತ್ತರಿಸುವ ಓದುಗರ ಮನಸ್ಸು ಇವರ ಬಾಳ ಬಂಡೆಯನ್ನು ನೆಮ್ಮಿ ತುಸು ಶಾಂತಿ ಪಡೆಯುತ್ತದೆ. ಅವರ ಬಾಳೇ ನಿಜವಾದ ಬಾಳು! ಅವರಿಗೆ ಇಹವೇ ಪರ, ಬಾಳೇ ಬಿಡುಗಡೆ!

ಪಾತ್ರರಚನೆಯಲ್ಲಂತೂ ಶ್ರೀನಿವಾಸರದು ನುರಿತ ಕೈ, ಎತ್ತಿದ ಕೈ. ಎಲ್ಲರೂ ಜೀವಂತ ವ್ಯಕ್ತಿಗಳೇ; ಇಂದು ನಮ್ಮ ಕಣ್ಮುಂದೆ ನಿತ್ಯ ಸುಳಿದಾಡುವ ಜನರೇ. ನಾವು 'ನಮ್ಮ'ನು ಮರೆತು ಅವರ ಬಾಳ ಏರುಬೀಳುಗಳಲ್ಲಿ ಸಮಭಾಗಿಗಳಾಗುತ್ತೇವೆ. ಅವರಂತೆ ನಗುತ್ತೇವೆ, ನಲಿಯುತ್ತೇವೆ, ಅಳುತ್ತೇವೆ. ಇಲ್ಲಿ ಬರುವ ಪ್ರತಿಯೊಬ್ಬ ವ್ಯಕ್ತಿಯೂ ವಿಶಿಷ್ಟ ಗುಣಸ್ವಭಾವ ಸಂಪನ್ನನಾಗಿ ಪ್ರತ್ಯೇಕವಾಗಿ ನಿಲ್ಲುತ್ತಾನೆ; ಮಕ್ಕಳು ಸಹ ಗುರುತಿಸುವಷ್ಟು ಸುಸ್ಪಷ್ಟ ಅವರ ವ್ಯಕ್ತಿತ್ವ. ಐತಿಹಾಸಿಕ ವ್ಯಕ್ತಿಗಳಿಗೂ ಕಲ್ಪನಾವ್ಯಕ್ತಿಗಳಿಗೂ ವ್ಯತ್ಯಾಸ ಕಾಣುವಂತೆಯೇ ಇಲ್ಲ. ದುರ್ವ್ಯಾಪಾರ ಪ್ರವೃತ್ತಳಾದ, ಆದರೆ ಸ್ವೇಚ್ಛಾಚಾರಿಣಿಯಲ್ಲದ

ರಾಣಿಯಾಗಿ ಆಡಳಿತ ನಡೆಸುವ ಕೆಚ್ಚುಳ್ಳ, ಗಂಡುಗಂಡಿಗೆಯ, ಹೆತ್ತು ಬಂಜೆಯಾದ ಹಠಮಾರಿ ವೀರಮ್ಮಾಜಿ, ಅಂಜುಬುರಕ ನಾಯಿ ನಂಬಯ್ಯ, ಅಸೂಯೆಯ ತತ್ತಿ ಸಣ್ಣವ್ವ - ಇದೊಂದು ಗುಂಪು. ಗಾಂಭೀರ್ಯ ಶೌರ್ಯ ಧೈರ್ಯ ಸ್ಥೈರ್ಯಗಳಿಂದ ಕೂಡಿದ, ಆದರೆ ದುಡುಕುತನದ ಚೆನ್ನಬಸವನಾಯಕ; ಅವನಿಗಾಗಿ ಅವನನ್ನೇ ಬಳಸಿ, ಅವನ ಊಳಿಗಕ್ಕೆ ಸದಾ ಸಿದ್ಧವಾಗಿರುವ ಹಲವಾರು ವ್ಯಕ್ತಿಗಳು-ಸ್ವಾಮಿನಿಷ್ಠೆ, ದೇಶಭಕ್ತಿ, ವಿನಯ, ವಿವೇಕ, ಯುಕ್ತಾಯುಕ್ತ ವಿವೇಚನಾಶಕ್ತಿಗಳನ್ನುಳ್ಳ, ಮಿತಭಾಷೆಯ, ತಿಳಿಮನಸ್ಸಿನ ಅಜಾತಶತ್ರು, ಕರ್ಮಯೋಗಿ, ಸ್ಥಿತಪ್ರಜ್ಞ ನೇಮೆಯ್ಯ; ಅವನಂತಿರುವ ಅವನ ಸಾಕುಮಗಳು ಶಾಂತವ್ವ; ಒರಟು ಮಾತಿನ ಋಜುಸ್ವಭಾವದ ಲಿಂಗಣ್ಣಯ್ಯ, ಅವನ ತಮ್ಮ ಮುಗ್ಧ ಭಾಸ್ಕರಯ್ಯ; ಧರ್ಮದ ಪರ ಭಾಗವಹಿಸಿ ಎಂದೂ ಅನ್ಯಾಯಕ್ಕೆ ಮಣಿಯದ ರಾಮಶಾಸ್ತ್ರಿ, ಅಯ್ಯ; ಒಡೆಯರಿಗಾಗಿ ಒಡಲ ಸುಖವನ್ನು ತೊರೆದು ಬಾಳಿದ ಕೆಂಚವ್ವ, ಮಲ್ಲಯ್ಯ; ಹೀಗೆಯೇ ವಸ್ತಾರೆಯ ಹೆಗ್ಗಡಿತಿ, ಶಿವಪ್ಪ ಮೊದಲಾದವರು - ಇನ್ನೊಂದು ಗುಂಪು, ಇಮ್ಮಡಿ ಕೃಷ್ಣರಾಜ; ಪುತ್ರಕ್ಷೇಮಾಕಾಂಕ್ಷಿಯಾದ ದೇವಾಜಮ್ಮಣ್ಣಿ. ಮಾತಿನಲ್ಲಿ ನಯ, ನಡೆಯಲ್ಲಿ ತುಸು ಕೊಂಕು, ದಕ್ಷನೂ ಆದ ನವಾಬ; ಅವನಿಗೆ ಅನುರೂಪನಾದ ಕಿಂಕರ ಉಜನಿ; ಹಾಗೆಯೇ ರಾಯಸದ ವೀರಣ್ಣ; ತುಟಿ ತೆರೆಯದ ಸೂರಪ್ಪ; ಸುಬೇದಾರ್ ಮೊಕದಂ ಆಲಿ; ಅಧಿಕಾರ ಲಾಲಸೆಯಿಂದ ಕೃತಘ್ನನಾಗದೆ ಬರ್ಕಿ ಶ್ರೀನಿವಾಸರಾಯ ಮತ್ತು ಅವನ ತಾಯಿ; ಟಿಪ್ಪು, ಮೌಲ್ವಿಗಳು ಮೊದಲಾದವರು - ಮತ್ತೊಂದು ಗುಂಪು. ಇಷ್ಟೇ ಅಲ್ಲದೆ ಬಿದನೂರು ಸಂಸ್ಥಾನದ ಆಗಿನ ಕಾಲದ ಸಾಮಾಜಿಕ ವ್ಯವಹಾರಗಳು, ಅವುಗಳಿಗೆ ತಳಹದಿಯಾಗಿದ್ದ ಜನತೆಯ ನಿಸ್ವಾರ್ಥತೆ, ಸತ್ಯ ಸಂಧತೆ, ಧಾರ್ಮಿಕ ಮನೋಭಾವ, ಕರ್ತವ್ಯಪರಾಯಣತೆ ಮೊದಲಾದ ಸದ್ಗುಣಗಳು ಇವೆಲ್ಲ ಇಲ್ಲಿ ವ್ಯಕ್ತವಾಗುತ್ತವೆ.

ಶ್ರೀನಿವಾಸರು ಕತೆಗಾರರು. ಸಮದ ಜಾಡನ್ನು ಬಿಡದೆ ನಡುವೆಯೇ ಬಂಡಿಯ ಚಕ್ರ ಉರುಳುವಂತೆ ಈ ಕಾದಂಬರಿಯ ಕಥನಕ್ರಮವೂ ಸಣ್ಣ ಕತೆಯ ಜಾಡನ್ನು ಅನುಸರಿಸುತ್ತದೆ. ಸಣ್ಣ ಕತೆಯಲ್ಲಿ ಅತಿಯಾದುದೆಲ್ಲ ಕಾದಂಬರಿಯಲ್ಲಿ ಹಿತವಾಗುತ್ತದೆ. ಒಂದರದು ವಿದ್ಯುತ್ ಗಮನ, ಮತ್ತೊಂದರದು ಮಂದಗಮನ. 'ವಿಸ್ತಾರ', 'ವೈವಿಧ್ಯ', 'ವ್ಯಾಪಕತೆ'ಗಳು ಕಾದಂಬರಿಯ ಜೀವಾಳ. ಸಂಕ್ಷಿಪ್ತತೆ, ಸರಳತೆ, ಸೂಕ್ಷ್ಮತೆಗಳು ಸಣ್ಣಕತೆಯ ಜೀವಾಳ. ಮಲೆನಾಡಿನ ಗರ್ಭದಲ್ಲಿ ನೆಲೆಗೊಂಡಿರುವ ಬಿದನೂರಿನ ಪ್ರದೇಶ ಪರಿಚಯವನ್ನು ಭೂಪಟದ ಮೂಲಕ ತಿಳಿಯಬೇಕಾಗಿದೆಯೆ ಹೊರತು ಕಾದಂಬರಿಯಿಂದ ಅಷ್ಟು ಸ್ಪಷ್ಟವಾಗುವುದಿಲ್ಲ. ಅಲ್ಲಿಯ ವ್ಯವಹಾರಾಭಿರುಚಿಗಳನ್ನು, ಅಲ್ಲಿನ ಜನರ ನಿತ್ಯ ಜೀವನವನ್ನು ಅವರ ಮನೋಧರ್ಮ ಜೀವಿತೋದ್ದೇಶವನ್ನು ಬೆಳೆಸಿರುವ, ತಿದ್ದಿರುವ, ಪೋಷಿಸಿರುವ ವಾತಾವರಣ ಸನ್ನಿವೇಶಗಳು ಕತೆಯಲ್ಲಿ ಪ್ರತಿಬಿಂಬಿತವಾಗಿದ್ದರೆ ಕಾದಂಬರಿಯ ಶೋಭೆ ಅಧಿಕವಾಗುತ್ತಿತ್ತು. ಥಾಮಸ್ ಹಾರ್ಡಿಯಂಥವನ ಕೈಯಲ್ಲಿ ಕಲೆಯ ಸ್ವರೂಪವೇ ಬೇರೆಯಾಗುತ್ತಿತ್ತು. ನನ್ನ ಗೆಳೆಯರೊಬ್ಬರು ಈ ಕಾದಂಬರಿಯ ಓಟವನ್ನು 'ಕಣ್‌ನೇರ' ಕಟ್ಟಿದ ಕುದುರೆಯ ಓಟಕ್ಕೆ ಹೋಲಿಸಿದ್ದು ಸರಿಯೆಂದು ಕಾಣುತ್ತದೆ. ಇದೊಂದು ಕೊರತೆಯನ್ನುಳಿದರೆ ಅಥವಾ ನಿರ್ಲಕ್ಷಿಸಿದರೆ ಈ ಕಾದಂಬರಿ ಕನ್ನಡದ ನಾಲ್ಕೈದು ಶ್ರೇಷ್ಠ ಕಾದಂಬರಿಗಳಲ್ಲಿ ಒಂದೆಂದು ಹೇಳಬಹುದು.

ಶ್ರೀನಿವಾಸರ ಕಾವ್ಯ

ಡಾ॥ ರಂ.ಶ್ರೀ. ಮುಗಳಿ

ಶ್ರೀನಿವಾಸ ಎಂಬ ಕಾವ್ಯನಾಮದಿಂದ ಹೆಸರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಹೊಸ ಸಾಹಿತ್ಯದ ಕಣಜಕ್ಕೆ ಸೇರಿಸಿರುವ ಸತ್ವಯುತವಾದ, ಹುಲುಸಾದ ಬೆಳೆ ವೆಂಕಪ್ಪನ ಕಣಜದಂತೆ ಬೆಳೆಯುತ್ತ ಬಂದಿದೆ. ಅದರ ವಿಷಯ ವ್ಯಾಪ್ತಿ, ರೂಪ ವೈವಿಧ್ಯ, ದೃಷ್ಟಿ ವಿಶೇಷ, ಶೈಲಿಯ ಸ್ವಂತಿಕೆ ಎಲ್ಲವೂ ಬೆರಗುಗೊಳಿಸುವಂತಹದೇ ಆಗಿದೆ.

ಶ್ರೀನಿವಾಸರ ಕಾವ್ಯ ಪ್ರಪಂಚವೊಂದನ್ನೆ ನೋಡಿದರೆ ಅದರಲ್ಲಿ ಭಕ್ತಿಗೀತೆ, ಭಾವಗೀತೆ, ಕಥನ ಕವಿತೆ, ಅಷ್ಟಷಟ್ಪದಿ ಮುಂತಾದ ಪ್ರಕಾರಗಳು ಕಣ್ಣಿಗೆ ಬೀಳುತ್ತವೆ. 'ರಾಮನವಮಿ' ಮುಂತಾದ ಕೃತಿಗಳಲ್ಲಿ ಅಲ್ಲದೆ 'ನವರಾತ್ರಿ'ಯ ಕಥನ ಮಾಲಿಕೆಯಲ್ಲಿ ಅವರು ತಮ್ಮ ಕಥನ ಕವಿತೆಗಳನ್ನು ಹೇರಳವಾಗಿ ರಚಿಸಿಕೊಟ್ಟಿದ್ದಾರೆ. ಈ ಲೇಖನದಲ್ಲಿ ಅವರ ಕಥನ ಕವನಗಳನ್ನು ಹೊರತುಪಡಿಸಿ ಇತರ ಕಾವ್ಯ ಕೃತಿಗಳನ್ನು ಕುರಿತು ವಿವೇಚನೆ ಮಾಡುವ ಉದ್ದೇಶವಿದೆ. ಆದರೆ ಕಥನ ಕವಿತೆ ಮತ್ತು ಇತರ ಕವಿತೆ ಎಂಬುದರ ನಡುವಿನ ತೆಳುಗೆರೆಯನ್ನು ಯಾವಾಗಲೂ ಗುರುತಿಸಲಾಗುವುದಿಲ್ಲ ಎಂಬುದನ್ನು ನೆನೆದಿರಬೇಕು. ಅವರ ಭಕ್ತಿಗೀತೆಗಳೂ ಮುಖ್ಯವಾಗಿ ಅವರ ಮೊದಲನೆಯ ಕಾವ್ಯ ಸಂಗ್ರಹವಾದ 'ಬಿನ್ನಹ', ಆಮೇಲಿನ ಸಂಗ್ರಹಗಳಲ್ಲಿ ಒಂದಾದ 'ಮನವಿ' ಇವುಗಳಲ್ಲಿ ಬಂದಿವೆ. ಎರಡು ವರ್ಷಗಳ ಹಿಂದೆ ಪ್ರಕಟವಾದ 'ಸಂಕ್ರಾಂತಿ'ಯಲ್ಲಿಯೂ ೨-೩ ಭಕ್ತಿಗೀತೆಗಳು ಕೊನೆಯಲ್ಲಿರುತ್ತವೆ. ಹೊಸ ಕನ್ನಡ ಕಾವ್ಯದ ಚರಿತ್ರೆಯಲ್ಲಿ ಭಕ್ತಿಗೀತೆಗಳನ್ನು ರಚಿಸಿದವರಲ್ಲಿ ಶ್ರೀನಿವಾಸರೇ ಮೊದಲಿಗರು. ಅವರಿಗೆ ವಿಶಿಷ್ಟವಾದ ನೇರತೆ ಮತ್ತು ಸಹಜತೆಗಳಿಂದ ಇಂಥ ಗೀತೆಗಳನ್ನು ಹೇರಳವಾಗಿ ಅವರು ಹಾಡುತ್ತ ಬಂದಿದ್ದಾರೆ. ಇವುಗಳ ರಚನಾರೀತಿ, ರಾಗ ಸೂಚನೆಗಳನ್ನು ನೋಡಿದರೆ ಹರಿದಾಸ ಪರಂಪರೆಯಲ್ಲಿಯ ಕೀರ್ತನೆಗಳು ಆಧುನಿಕ ರೂಪವನ್ನು ತಾಳಿರುತ್ತವೆ ಎಂದು ತೋರಬಹುದು. ಪ್ರತಿಯೊಂದು ಗೀತೆಯ ಕೊನೆಗೆ ಆರಾಧ್ಯ ದೇವತೆಯ ಮುದ್ರಿಕೆಯಿಲ್ಲ ಎಂಬುದೊಂದೇ ವ್ಯತ್ಯಾಸವಿದೆ. ಇಲ್ಲಿ ಗಮನಿಸಬೇಕಾದ ಬಹು ಮುಖ್ಯ ಅಂಶವೆಂದರೆ ಹರಿದಾಸ ಪರಂಪರೆಯ ಅನುಸರಣಕ್ಕೆ ಬೇಕಾದ ಮನೋಧರ್ಮವನ್ನು ಶ್ರೀನಿವಾಸರು ಪಡೆದು ಬಂದಿರುವರಾದರೂ ಆಧುನಿಕ ಪ್ರಜ್ಞೆಯುಳ್ಳವರು, ತಮ್ಮ ವ್ಯಕ್ತಿತ್ವದಲ್ಲಿ ಭಕ್ತಿ ಸಹಜಸ್ಥಾಯಿಯಾಗಿರುವುದನ್ನು ಅರಿತುಕೊಂಡು ಅದನ್ನು ಬೆಳೆಸಿಕೊಂಡು ಬಂದವರು. ಅವರ 'ಬಿನ್ನಹ'ವೆಂಬ ಮೊದಲನೆಯ ಗೀತೆಯಲ್ಲಿ 'ಬಿನ್ನಹಕ್ಕೆ ಬಾಯಿಲ್ಲವಯ್ಯಾ ಅನಂತ ಅಪರಾಧ ಎನ್ನಲ್ಲಿ ಇರಲಾಗಿ' ಎಂಬ ಕೀರ್ತನೆಯ ಉಲ್ಲೇಖವಿದೆ, ಅದೇ ಸರಣಿಯಲ್ಲಿ ಚೆನ್ನಕೇಶವನಲ್ಲಿ ಬಿನ್ನಹವಿದೆ. ಇತರ ಗೀತೆಗಳಲ್ಲಿಯೂ ಪೂರ್ವ ಪರಂಪರೆಯನ್ನು ನೆನಪಿಸುವ ಭಾವಗಳಿವೆ. ಆದರೂ ಅವರ ಭಕ್ತಿಗೀತೆಗಳು ಅನುಕರಣೆಗಳಲ್ಲ; ಅವು ಕವಿಗೆ ಸಹಜವಾದ

ಭಕ್ತಿಸ್ಥಾಯಿಯಿಂದ ಸಹಜಸ್ಫೂರ್ತವಾಗಿ ಉಕ್ಕಿಬಂದ ಕೃತಿಗಳು.

ಅವರ ಭಕ್ತಿಸ್ಥಾಯಿಗೆ ಮೂಲಭೂತವಾಗಿರುವ ಎರಡು ಆಂತರಿಕ ಅಂಶಗಳೆಂದರೆ ಭಗವಂತನ ಸಾನಿಧ್ಯದ ಅರಿವು ಮತ್ತು ಭಗವತ್ ಕೃಪೆಯ ಅರಿವು. ಇವೆರಡೂ ಅವರ ಜೀವನವನ್ನು ಬೆಳಗಿಸಿರುತ್ತವೆ, ವ್ಯಕ್ತಿತ್ವವನ್ನು ರೂಪಿಸಿರುತ್ತವೆ. ಅವರ ಎಲ್ಲ ಬರೆವಣಿಗೆಗೆ ಪ್ರೇರಕಗಳಾಗಿರುತ್ತವೆ. ಭಕ್ತಿಗೀತೆಗಳಲ್ಲಿ ಅವುಗಳ ನೇರವಾದ ಆವಿಷ್ಕಾರವು ತರತರದ ಸಂಚಾರಿಗಳಲ್ಲಿ ಆಗಿದೆ. ಪರಂಪರಾಗತವಾದ ಗೀತೆಗಳಲ್ಲಿರುವಂತೆ ಇವುಗಳಲ್ಲಿಯೂ ದೇವದರ್ಶನದ ಆತುರ, ನಿರೀಕ್ಷೆ, ಪ್ರಾರ್ಥನೆ, ಸಮರ್ಪಣ ಮುಂತಾದ ಭಾವಗಳೂ ಅವನ್ನು ಅಭಿವ್ಯಕ್ತಿಸುವ ಪ್ರತಿಮೆಗಳೂ ಕವಿ ಮನೋಧರ್ಮದಲ್ಲಿ ಬೆರೆತು ನಿರ್ಮಿತಿ ಪ್ರಕ್ರಿಯೆಯಲ್ಲಿ ಒಡಮೂಡಿ ಬಂದಿರುತ್ತವೆ. ಜೊತೆಗೆ, ಪರಂಪರಾಗತವಲ್ಲದ ನವೀನ ಭಾವಗಳೂ ಪ್ರತಿಮೆಗಳೂ ಬಂದಿವೆ. ಉದಾಹರಣೆಗೆ, 'ಬೆಳೆದು ಫಲವೇನು ಹರಿಯೇ? ಇಳೆಯ ತುಂಬಿದ ನಿನ್ನ ಕಳೆಯನರಿವುದ ಮರೆಯೆ ಬೆಳೆದು ಫಲವೇನು ಹರಿಯೇ?' ಎಂಬಲ್ಲಿಯ ಭಾವವನ್ನೂ ಅದನ್ನು ನುಡಿಗಳಲ್ಲಿ ಬಿತ್ತರಿಸಿರುವ ಬಗೆಯನ್ನೂ ನೋಡಬಹುದು. ಹಾಗೇ, 'ದೇವ, ಮಾತೆಮಗೆ ಬೇಡ; ಜೀವವಿಹ ಮಾತುಂಟು, ಜೀವವಿಲ್ಲದುದುಂಟು', 'ಮುಂದೆ ಬರುವುದು ಬರಲಿ ನಿನ್ನ ಕೃಪೆ ಇರುವಂತೆ: ಇಂದೆಸಗಲಿರವ ಕಜ್ಜಕೆ ಬಲವ ನೀಡು', 'ಎಲ್ಲವ ನೋಡಿದೆನು ಎಲ್ಲಿಯು ನಿನ್ನ ನೋಡಲಿಲ್ಲ', 'ಮನ್ನಿಪುದು ಅತಿಯಾದ ಈ ಶ್ರದ್ಧೆಯ', ನಿನ್ನ ಊಳಿಗದವನ ಮೂಢಭಕ್ತಿಯಿದೆಂದು' ಇವು ಭಕ್ತಿಯ ಬಳ್ಳಿಯಲ್ಲಿ ಮೂಡಿದ ಹೊಸ ಕುಡಿಗಳು. ನವೀನ ಪ್ರತಿಮೆಗಳು ಹೋಲಿಕೆಯಾಗಿ ರೂಪಕವಾಗಿ ಅಲ್ಲಲ್ಲಿ ಮಿನುಗುತ್ತವೆ. ಉದಾಹರಣೆಗೆ, 'ಅರಸನೀ ದಾರಿಯಲಿ ಬರುವನೆಂದರು ಅವರು; ಬರಲಿಲ್ಲವೇಕೆ ಇನ್ನೂ?' ಎಂಬ ಪಲ್ಲವಿಯಿಂದ ಮೊದಲಾಗುವ 'ವ್ಯಾಕುಲ' ಎಂಬ ಗೀತೆ, 'ರಾಣಿಯ ಮನೆ' ಎಂಬ ಗೀತೆ ಇವುಗಳಲ್ಲಿ ಇಡೀ ಗೀತೆ ಒಂದು ಬಗೆಯ ರೂಪಕವಾಗಿದೆ. ಅನೇಕ ಗೀತೆಗಳಲ್ಲಿ ಹೊಸ ಹೋಲಿಕೆಗಳು ತಲೆಯೆತ್ತಿ ಕೇಂದ್ರಭಾವವನ್ನು ಕಾವ್ಯಮಯವಾಗಿ ವಿವರಿಸುತ್ತವೆ. ಉದಾಹರಣೆಗೆ, 'ಪ್ರಾರ್ಥನೆ' ಎಂಬಲ್ಲಿ 'ಉಪವನದ ಶೋಭೆಯ ತರಂಗಮಾಲೆಯ ಧರಿಸಿ ನೆಪಮಾತ್ರ ಕಂಡು ಮರಗಳ ನಡುವೆ ಮರೆಯಾದ ವಿಪಿನ ಮೋಹಿನಿಯ ಲಾವಣ್ಯದಿನಿಸನು ನೆನೆದು ತಪಿಪಂತೆ ಇಹುದು ಮನ, ಕಂಡು ಕಾಣದೆ ನಿನ್ನ, ನಿನ್ನ ರೂಪನು ತೋರಿಸೈ' ಎಂಬುದು ತುಂಬ ಸಮರ್ಪಕವಾದ ಹೋಲಿಕೆಯಾಗಿದೆ. ಕವಿಯ ಆಧುನಿಕ ಪ್ರಜ್ಞೆ, 'ಆಸೆ ಕೆಟ್ಟುದು ಎಂದೆನಯ್ಯ', 'ದೇಹವನು ಜರೆಯ ಬೇಡ', 'ವೇಷವಿದು ಬಿಡದು ಜೀವನವ', 'ಮೂರ್ಖ ಮಾಡಬೇಡ ಮನುಜ' ಈ ಗೀತೆಗಳಲ್ಲಿ ಎದ್ದು ಕಾಣುತ್ತದೆ. ಸಾಮಾನ್ಯವಾಗಿ ಅನುಭವದ ನೈಜತೆ ಮತ್ತು ಸೂಕ್ಷ್ಮತೆಯೊಡನೆ ಅಭಿವ್ಯಕ್ತಿಯ ನೇರತೆ ಮತ್ತು ಸಹಜತೆ ಸೇರಿಕೊಂಡು ಶ್ರೀನಿವಾಸರ ಕಾವ್ಯವು ರೂಪುಗೊಂಡಿದೆ. ಅಂತೇ ಅದಕ್ಕೆ ಎದೆತಟ್ಟುವ ಶಕ್ತಿ ಬಂದಿದೆ, ತೂಕಬಂದಿದೆ. ಕೆಲವು ಸಲ ಅಭಿವ್ಯಕ್ತಿ ಮೌಲ್ಯಕ್ಕಿಂತ ಆಶಯ ಮೌಲ್ಯದಿಂದಲೇ ಅದು ನಮ್ಮ ಮೇಲೆ ಪ್ರಭಾವ ಬೀರುತ್ತದೆ. ಎಲ್ಲ ಕಡೆಗೆ ಎದ್ದು ಕಾಣುವ ಗುಣವೆಂದರೆ ಸಂಪೂರ್ಣವಾದ ನೈಜತೆ ಅಥವಾ ಕಳಕಳಿ. 'ಹಾರಯಿಕೆ' ಎಂಬ ಗೀತೆಯಲ್ಲಿ 'ಊಣೆಯವಿಲ್ಲದ ಏಕನಾದವ ಮಾಡು', 'ಅಂಚೆನೊಳಿರಲಹ ಕಾಗೆಯೇ ಆದರೂ ವಂಚನೆಯಿಲ್ಲದ ದನಿಯನು ನೀಡು' ಎಂದು ಕವಿ ತನ್ನ ಮನೋಧರ್ಮಕ್ಕೆ ಅನುಗುಣವಾಗಿ ಬೇಡಿಕೊಂಡಿದ್ದಾನೆ. ಈ ಮನೋಧರ್ಮದ ಕಾರಣದಿಂದ ಬಹುಶಃ ಅವರ ಕಾವ್ಯವು

ನಿಗಿನಿಗಿಯಾಗಿ ಕಾವೇರುವುದಿಲ್ಲ. ಅದರಲ್ಲಿ ಏರಿಳಿತದ ಉರುಬು, ಅಲಂಕೃತಿಯ ಬೆಡಗು, ನುಡಿಯ ಚದುರು ಬಹುಶಃ ಕಂಡುಬರುವುದಿಲ್ಲ. ಅಂತೆಯೆ ಅವರ ಕಾವ್ಯವನ್ನು ಅರಿತುಕೊಳ್ಳಲು ಮತ್ತು ಆಸ್ವಾದಿಸಲು ಅವರ ಜೀವಸ್ವರದೊಡನೆ ಸಂವಾದಿಯಾಗಿ ಸಹೃದಯನು ತನ್ನ ಸ್ವರವನ್ನು ಸೇರಿಸಿದಾಗ ಮತ್ತು ಸರಳ ನುಡಿಯ ಒಳಹೊಕ್ಕು ನೋಡಿದಾಗ ನಿಜವಾದ ರಸಗ್ರಹವು ಫಲಿಸುತ್ತದೆ, ಯಾವ ಕಾವ್ಯದ ಬಗ್ಗೆಯೂ ಈ ಮಾತು ಸತ್ಯ. ಆದರೆ ಶ್ರೀನಿವಾಸರ ಕಾವ್ಯದ ಬಗ್ಗೆ ಇದನ್ನು ಸ್ವಲ್ಪ ಒತ್ತುಕೊಟ್ಟು ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ಅವರ ಭಕ್ತಿ ಗೀತೆಗಳನ್ನು ಪರೀಕ್ಷಿಸಿದಾಗ, 'ಬಿನ್ನಹದಲ್ಲಿಯ ಹಾರಯಿಕೆ', 'ಕವಿಗಳ ಕವಿ', 'ನಿದ್ದೆ', 'ವ್ಯಾಕುಲ', 'ನಿರೀಕ್ಷೆ', 'ಬೇಸರ', 'ಮಾತು', ಮನವಿಯಲ್ಲಿಯ 'ಮರವು', 'ಹೆಮ್ಮೆ', ಸಂಕ್ರಾಂತಿಯಲ್ಲಿರುವ 'ಆಟ' ಈ ಮುಂತಾದ ಗೀತೆಗಳೂ ಶ್ರೀನಿವಾಸ ಭಕ್ತಿಯ ಹಲವು ಪರಿಗಳನ್ನು ಒಳಗೊಂಡು ತಮ್ಮ ಸೌಮ್ಯಕಾಂತಿಯಿಂದ ನಮ್ಮ ಮನಸೆಳೆಯುತ್ತವೆ. ಸ್ವಾನುಭವ ಜನ್ಯವಾದ ಮತ್ತು ವ್ಯಕ್ತಿತ್ವದ ಸಹಜ ಭಾಗವಾದ ಭಕ್ತಿಸ್ಥಾಯಿಯ ಮೂಲಕವೇ ಈ ಗೀತೆಗಳಿಗೆ ಕಾಂತಿಬಂದಿದೆ, ಕಾವ್ಯ ಕಲೆ ಇಲ್ಲಿ ಅರಳಿ ನಿಂತಿದೆ. ಒಮ್ಮೊಮ್ಮೆ ಆ ನೇರತೆ-ಸಹಜತೆಗಳೇ ಶ್ರೀನಿವಾಸ ಕಾವ್ಯವನ್ನು ತೀರ ಸರಳಗೊಳಿಸುತ್ತವೆ, ಅವುಗಳಲ್ಲಿ ಕಾವ್ಯಾಂಶವೇ ಇಲ್ಲವೆನ್ನುವಷ್ಟು ರಚನೆ ನೇರವಾಗುತ್ತದೆ, ಶೈಲಿ ಗದ್ಯಮಯವಾಗುತ್ತದೆ. ಉದಾಹರಣೆಗೆ, 'ಬಿನ್ನಹ' ಎಂಬ ಮೊದಲನೆಯ ಗೀತೆಯಲ್ಲಿ ಬಿನ್ನಹದ ನೈಜಭಾವವಿದ್ದರೂ ಅದರ ನಿರೂಪಣೆಯ ಒಂದೆರಡು ನುಡಿಗಳಲ್ಲಿ ಈ ಸರಳತೆಯನ್ನು ಕಾಣಬಹುದು. 'ಮುನ್ನ ಭಕ್ತಾಗ್ರಣಿ ಅನಂತ ಅಪರಾಧ ತನ್ನಲ್ಲಿ ಇರಲಾಗಿ ಬಾಯಿ ಇಲ್ಲ ಬಿನ್ನಹಕ್ಕೆ ಎಂದನೈ: ಗುರುವರನೆ ಅಂತೆನ್ನಲು ಎನ್ನ ಮಾತೇನು ಹರಿಯೇ, ಆದೊಡೆಯು ಬಿನ್ನಹವನಿದನು ಲಾಲಿಪುದು' ಈ ನುಡಿಯಲ್ಲಿಯ ಪ್ರಾಸಯೋಜನೆಯೊಂದನ್ನುಳಿದರೆ ನಿರೂಪಣೆಯಲ್ಲಿ ಕಾವ್ಯಾಂಶವು ಕಡಿಮೆಯಾಗಿದೆ. ಇದರಂತೆ 'ನಂಬಿಕೆಯನು ನೀಡು' ಎಂಬ ಗೀತೆಯ ರಚನೆಯಲ್ಲಿಯೂ ಹೆಚ್ಚಾಗಿ ಈ ಅನುಭವ ಬರುತ್ತದೆ. ಕೊನೆಯ ನುಡಿಯಲ್ಲಿ 'ಎಲ್ಲವೂ ಒಳ್ಳೆಯದಾಗುವುದೆಂದು ನಂಬಿಕೆಯನು ನೀಡು' ಎಂಬುದನ್ನು ಗಮನಿಸಬೇಕು. ಈ ಬೇಡಿಕೆಯಲ್ಲಿ ಎಷ್ಟೇ ಕಳಕಳಿಯಿದ್ದರೂ ಅದು ತೀರ ನೇರವಾಗಿ ಕಾವ್ಯಸತ್ವವನ್ನು ಪಡೆಯದೆ ಹೋಗಿದೆ. ಮನವಿ ಸಂಕಲನದಲ್ಲಿಯ 'ಮರೆ', 'ವಿವರಣೆ' ಇಂಥ ಗೀತೆಗಳಲ್ಲಿಯೂ ಇದೇ ಸರಣಿ ಎದ್ದು ಕಾಣುತ್ತದೆ. 'ನಾನೆನ್ನ ಮರೆತ ಸಮಯದಿ ನೀನೆನ್ನ ಬಿಡಬಾರದು. (ಪ) ಒಂದು ಸಮಯದಿ ಮನವು ಸೋತು ಎಡೆಬಿಡದಿಂತು ಕಂದಿಸುವುದೇಕೆನ್ನನೆನ್ನಬಹುದು. ಒಂದು ತಾಸಾದರೂ ಬಿಡಬಾರದೇತಕೆ ಎಂದು ಮುಳಿದಿರುವಂತೆ ಕಾಣಬಹುದು.' 'ವಿವರಣೆ'ಯಲ್ಲಿ ಈ ಭಾಗವು ಬರೀ ವಿವರಣೆಯಾಗಿದೆಯೆ ಹೊರತು ಕಾವ್ಯನಿರೂಪಣೆಯಾಗಿಲ್ಲ.

ಶ್ರೀನಿವಾಸರ ಇತರ ಕವನಗಳಲ್ಲಿ ಭಾವಗೀತೆಗಳು ಅರುಣ, ತಾವರೆ, ಚೆಲುವು, ಸಂಕ್ರಾಂತಿ ಈ ಸಂಗ್ರಹಗಳಲ್ಲಿ ಅಡಕವಾಗಿವೆ. 'ಅರುಣ'ದಲ್ಲಿಯ ಅಭಿಮನ್ಯು, ಸ್ಥಳಗಳ ಹೆಸರು, ಆತ್ಮಗೀತ, ಇಂದುಮತಿ ಇವು ಕಥನ ಗುಣದಿಂದ ಕೂಡಿದ್ದು 'ನವರಾತ್ರಿ'ಯ ಕಥನ ಕಾವ್ಯಕ್ಕೆ ನಾಂದಿಯಂತಾಗಿರುತ್ತವೆ. 'ತಾವರೆ'ಯಲ್ಲಿ ಕನಕದಾಸರ ಕತೆಗಳು, 'ಚೆಲುವು' ಸಂಕಲನದಲ್ಲಿ ಚಿಕ್ಕಮಲ್ಲಮ್ಮ, 'ಸಂಕ್ರಾಂತಿ'ಯಲ್ಲಿ ಹಜರತ್ ಚರಿತೆ ಇಂಥವು ಕಥನ ಪ್ರಧಾನ ಕೃತಿಗಳಾಗಿ ಬಂದಿವೆ. ಶ್ರೀನಿವಾಸರು ಬರೆಯಲು ಪ್ರಾರಂಭಿಸಿದಾಗ ಭಾವಗೀತೆ ಭಾಷಾಂತರ ಯುಗದಿಂದ ಹೊರಬಂದು ತೀರಸ್ವಲ್ಪ ಕವಿಗಳಲ್ಲಿ ಸ್ವತಂತ್ರ ನಿರ್ಮಿತಿಯಾಗಿ

ಪ್ರಕಟವಾಗತೊಡಗಿತ್ತು. ಅದರ 'ಅರುಣ' ಪ್ರಕಾಶವನ್ನು ಬರಮಾಡಿಕೊಂಡು ಅವರು ಬಣ್ಣಿಸಿದರು, ವಿಷಯ-ಛಂದಸ್ಸು-ರೀತಿಗಳಲ್ಲಿ ಹಲವು ಪ್ರಯೋಗಗಳನ್ನು ಮಾಡಿದರು. 'ಅರುಣ' ಸಂಕಲನದಿಂದ ಮುಂದೆ ಮುಂದೆ ಹೋದಂತೆ ಅವರ ಭಾವಗೀತಾತ್ಮಕಶಕ್ತಿ ಕಥನ ಕಲೆಯಂತೆ ವಿಪುಲವಾಗಿ ಹೊರಹೊಮ್ಮದಿದ್ದರೂ ಅಪರೂಪವಾದ ಪರಿಪಕ್ವತೆಯನ್ನು ಪಡೆಯಿತು, ಕವಿಯ ದರ್ಶನ ವಿಶೇಷಕ್ಕೆ ಸಮರ್ಥ ರೂಪಕೊಟ್ಟಿತು. 'ಅರುಣ' ಸಂಗ್ರಹದಲ್ಲಿ ಅರುಣ, ತೆಂಗಾಳಿ, ಹಾಳೂರು ಇವು ಎತ್ತಿ ತೋರಿಸಬೇಕಾದ ಕವನಗಳು. 'ಅರುಣ'ದಲ್ಲಿ ಅರುಣನ ಜನನಕಥೆ ಮತ್ತು ಅವನು ಸೂರ್ಯನ ರಥಕ್ಕೆ ಸಾರಥಿಯಾದ ಕಥೆ ಸಾಕಷ್ಟು ವಿಸ್ತಾರವಾಗಿ ಛಂದಸ್ಸಿನ ಹೊರ ಆಕೃತಿ ಬಂಧದಲ್ಲಿ ಮೂಡಿದೆ. ಜೊತೆಗೆ ಅರುಣನ ಆಗಮನದಿಂದ ಉಂಟಾಗುವ ಸೃಷ್ಟಿಸೌಂದರ್ಯ, ಅವನಿಂದ ಆಗುವ ಜನೋಪಕಾರ, ದೊರೆಯುವ ಸ್ಫೂರ್ತಿ ಇವನ್ನು ವರ್ಣಿಸಲಾಗಿದೆ. ಇಷ್ಟು ಪರಿಯಿಂದ ಅರುಣನನ್ನು ಬಣ್ಣಿಸಿರುವ ಕವಿ ಪಾವನತೆಯ ಮತ್ತು ಸೌಮ್ಯಪ್ರಕಾಶದ ಪ್ರತೀಕವನ್ನು ಅವನಲ್ಲಿ ಕಂಡಿರಬೇಕು: 'ಜೀವರ ಹೃದಯದಿ ಪಾವನ ನಿನ್ನಯ ಉತ್ಸಾಹವನಿಸನಿರಿಸಿ ನಿರ್ಮಲ ಪ್ರತಿಭೆಯ ತರಿಸಿ ದೋಷಹಾರಿ ಸಂಚರಿಸು; ಇಂತು ಲೋಕವನ್ನು ಪೊರೆಯುತ ಅರುಣಾ, ಸಂತತ ಬಾಳ್ವೆ ನಿರ್ಜರ ತರುಣಾ'. 'ತೆಂಗಾಳಿ' ಅದಕ್ಕಿಂತ ಚಿಕ್ಕದಾದರೂ ಕವಿಗೆ ಹೆಚ್ಚು ಆತ್ಮೀಯವಾಗಿ ತೋರಿದ, ನವಜೀವನ ಪ್ರೇರಣೆಗೆ ಪ್ರತೀಕ ಸ್ವರೂಪವಾದ ಮತ್ತು ಭಾವಭಾಷೆಗಳಲ್ಲಿ ಒಟ್ಟಂದವನ್ನು ಪಡೆದ ಒಳ್ಳೆಯ ಕವನವಾಗಿರುತ್ತದೆ. 'ಬಾರ ಮುಂಬೇಸುಗೆಯ ಮೇಲು ನಡೆಯ ಮಾರುತ' ಎಂದು ಮೊದಲಾಗುವ ಸಾಲುಗಳಲ್ಲಿ ಸಾರ್ಥಕವಾದ ಲಯವಿದೆ. ಜೀವನದಲ್ಲಿ ಮತ್ತು ಸಾಹಿತ್ಯದಲ್ಲಿ ನವೀನತೆ ತಲೆದೋರುತ್ತಿರುವ ಆ ಕಾಲದಲ್ಲಿ 'ಚಿನ್ನ ಹೊಸಬಾಳ ಹೊಸರಸಗಳನೊಸರಿಸು, ಚಿನ್ನ ಹೊಸತಳಿರು ಸುಮಫಲಗಳನು ತರಿಸು' ಎಂಬುದು ಭವಿಷ್ಯ ಸೂಚಕವಾಗಿದೆ. 'ಮರಣದಲಿ ಜೀವನದ ಮೊಳೆಯಿಹುದು ತೋರು, ಪರಮಾತ್ಮನುಂಟು ಸುಖದೊಳಮೆಯ ಸಾರು' ಎಂಬಲ್ಲಿ ಕವಿಯ ಅದಮ್ಯ ಆಶಾವಾದ, ನವೀನ ದೃಷ್ಟಿ ಕಂಡುಬರುತ್ತವೆ. ಎರಡನೆಯ ನುಡಿಯ ಕೊನೆಯ ಸಾಲನ್ನುಳಿದು ಎಲ್ಲ ಕಡೆಗೆ ಆದಿ-ಅಂತ್ಯಪ್ರಾಸದ ಜೋಡಣೆ ಸಹಜವೂ ಹೃದ್ಯವೂ ಆಗಿದೆ. ಇದು ನವಜೀವನದ ಸ್ವಪ್ನವನ್ನು ಚಿತ್ರಿಸಿದರೆ 'ಹಾಳೂರು' ಗತಜೀವನದ ದಾರುಣ ಸತ್ಯವನ್ನು ಸರಳವಾಗಿಯೂ ಪರಿಣಾಮಕಾರಿಯಾಗಿ ಚಿತ್ರಿಸಿರುತ್ತದೆ. ಅದು ಬರೀ ಒಂದು ಹಾಳೂರಿನ ಚಿತ್ರವಲ್ಲ, ಹಾಳಾದ ಸಂಸ್ಕೃತಿಯ ಚಿತ್ರವಾಗಿ ತೋರುತ್ತದೆ.

ತಾವರೆ, ಚೆಲುವು ಈ ಕವನ ಸಂಕಲನಗಳಲ್ಲಿ ಶ್ರೀನಿವಾಸರ ಕಾವ್ಯಶಕ್ತಿ ಮಾಗಿರುವುದು ಕಾಣುತ್ತದೆ, ದರ್ಶನಶಕ್ತಿ ನಿಚ್ಚಳವಾಗಿರುವುದು ತೋರುತ್ತದೆ. ಭಕ್ತಿಗೀತೆಗಳಲ್ಲಿ ಅವರ ಭಕ್ತಿಸ್ಥಾಯಿ ಪ್ರಕಟವಾದಂತೆ ಇಲ್ಲಿಯ ಭಾವಗೀತೆಗಳಲ್ಲಿ ಪಾವನತೆಯಿಂದ ದೊರೆಯುವ ಮನಃಪ್ರಸಾದ, ಶಾಂತಿ ಇವು ತಾವರೆಯಂಥ ಕವನರೂಪದಲ್ಲಿ ತಮ್ಮ ಪ್ರತೀಕವನ್ನು ಕಂಡುಕೊಂಡು ಸಫಲವಾಗಿವೆ. ಹಲವು ಕವನಗಳಲ್ಲಿ ಶಾಂತಿಪದವು ಅಥವಾ ಆ ಅರ್ಥದ ಬೇರೆ ಪದವು ಬಂದಿರುವುದು ಆಕಸ್ಮಿಕವಾಗಿರಲಾರದು. ಅರಿಯದೆಯೆ ಮನದೆ ಶಾಂತಿಯ ಪಡೆವರು (ತಾವರೆ), ಹೋಗಿ ನೋಡು ಊರನು. ಶಾಂತಿಯೊಂದು ನೆಲೆಯನು (ಕೋಗಿಲೆ), ಅಂದೀ ಬಾಳಿದು ಶಾಂತಿಯ ಕಾಂಬುದು (ನಟರಾಜ), ಎನಿತೀ ನಿನ್ನಯ ಶಾಂತಿಯ ತನಿರಸ, ತಾಪಸ ವೃತ್ತಿಯ ಶಾಂತಿ ತಾಯಿ ಪ್ರಕೃತಿಯ ಮೊಗದವೀ ಕಾಂತಿ ಶಾಂತಿ (ಚೆಲುವು), ಆಸೆ ಎನಗಿಲ್ಲ, ಮೋಸ ಎನಿಸಿಲ್ಲ;

ಶಾಂತ ನಾನು (ಸಾತ್ವಿಕ). ಶಾಂತಿಯನ್ನು ಕುರಿತು ಶ್ರೀನಿವಾಸರು ತುಂಬ ಒಳ್ಳೆಯ ಪ್ರಬಂಧವನ್ನು ಬರೆದಿರುವರೆಂಬುದನ್ನು ಇಲ್ಲಿ ನೆನೆಯಬಹುದು. ತಾವರೆ ಸಂಕಲನದಲ್ಲಿ ಪ್ರಕೃತಿವರ್ಣನೆಯ ಮೂಲಕ ಪ್ರತ್ಯಕ್ಷವಾಗಿ ಇಲ್ಲವೆ ಅಪ್ರತ್ಯಕ್ಷವಾಗಿ ಕವಿ ತನ್ನ ಸಾತ್ವಿಕ ಆದರ್ಶಗುಣಗಳನ್ನು ನಿರೂಪಿಸಿದ್ದಾರೆ. 'ತಾವರೆ' ಕವನದಲ್ಲಿ ಇದು ಅಪ್ರತ್ಯಕ್ಷವಾಗಿ ಬಂದಿದ್ದರೆ, 'ಹನುಮನ ಗಿರಿ'ಯಲ್ಲಿ ಪ್ರತ್ಯಕ್ಷವಾಗಿ ಬಂದಿದೆ. ತಾವರೆಯನ್ನು ಬಣ್ಣಿಸುತ್ತ 'ವಿಮಲವಿಶದತೆಗೆ ಸರಿಸಮನಾಗಿ ಪಾವನತೆ ಕೋಮಲತೆ ಬೆರೆತಿರಲು ಸುಗುಣಕೆಲ್ಲ' ಎಂದು ಅಪ್ರತ್ಯಕ್ಷವಾಗಿ ಹೇಳಿದ್ದರೆ 'ಹನುಮನ ಗಿರಿ'ಯಲ್ಲಿ 'ನಿನ್ನಯ ವಿಮಲತೆ ಸೌಮ್ಯತೆ ಸರಳತೆ ನಿನ್ನೀ ಉನ್ನತಿ ಪರತೃಪ್ತಿ ಇನ್ನಿನಿಸಾರಿದರೂ ಬೆರೆಯಲಿ ನನ್ನಲಿ;' ಎಂದು ಪ್ರತ್ಯಕ್ಷವಾಗಿ ಹೇಳಲಾಗಿದೆ. 'ತಾವರೆ'ಯೇ ಈ ಸಂಕಲನದಲ್ಲಿಯ ಉತ್ತಮ ಕವನ. ಇಲ್ಲಿ ಪ್ರಕೃತಿವರ್ಣನೆ ಮತ್ತು ವ್ಯಕ್ತಿತ್ವದ ದರ್ಶನ ಎರಡೂ ಸಮರಸವಾಗಿರುತ್ತವೆ. ತಾವರೆ ಕವಿ ವ್ಯಕ್ತಿತ್ವದ ಮತ್ತು ಆದರ್ಶಗಳ ಪ್ರತೀಕವಾಗಿದ್ದರೂ ಅದನ್ನು ಧ್ವನಿಯಿಂದ ಸೂಚಿಸಲಾಗಿದೆ, ಎಳೆದು ತಂದು ಜೋಡಿಸಿಲ್ಲ. ಛಂದಸ್ಸು-ಭಾಷೆಗಳಲ್ಲಿ ಸಹಜಸ್ಫೂರ್ತನಿರ್ಮಿತಿಯ ಸೌಲಭ್ಯವಿದೆ. ಇದರ ೬ನೆಯ ನುಡಿಯಲ್ಲಿ ಹೇಳಿರುವಂತೆ 'ಪದದ ಸೊಗದಲಿ ಅರ್ಥ ಬೆರೆದು' ಈ ಕಾವ್ಯ ಉದಯವಾಗಿದೆ. ಅಚ್ಚಗನ್ನಡ ಮೃದುಪದಗಳ ಜೋಡಣೆಯಿಂದ ನಿರ್ಮಿತಿಸ್ವರೂಪದ ಪದರಚನೆಯನ್ನು ಶ್ರೀನಿವಾಸರು ಕೆಲವು ಸಲ ಹೇಗೆ ಮಾಡುವರೆಂಬುದಕ್ಕೆ ಇದೇ ನುಡಿಯಲ್ಲಿಯ 'ನುಡಿಯ ನೆರಿಗೆ' ಎಂಬುದೊಂದು ಉದಾಹರಣೆ. 'ಮೃದುವೆಂಬ ಗುಣಕಿಲ್ಲಿ ಒದವಿತೋ ರೂಪೆನಲು' ಎಂದು ತಾವರೆಯನ್ನು ಬಣ್ಣಿಸುವ ಅವರ ಶೈಲಿಯ ಬಗ್ಗೆಯೂ ಇದೇ ಉತ್ಪ್ರೇಕ್ಷೆಯನ್ನು ಮಾಡಬಹುದು. ೧೦ನೆಯ ನುಡಿಯಲ್ಲಿ 'ದೇವನಿರವಿಗೆ ಪಾವನತೆ ಸಲೆಸಾಕ್ಷಿ ಮಿಗಿಲಾಗಿ ಪ್ರೇಮಸೌಂದರ್ಯದಿಂದೆ; ಪಾವನತೆಯೊಂದು ಇದ ಗೈವುದೆಲ್ಲೆಡೆ ಸಮಯ; ಆದರಿಂದೆ ನಿನಗೆ ನಾ ವಂದಿಸುವೆನು' ಎಂಬಲ್ಲಿ ಹಾಗೂ ಮುಂದೆ 'ದೇವದೂತ, ದೇವವೈತಾಳಿಕ' ಎಂಬುದಾಗಿ ತಾವರೆಯನ್ನು ಸಂಬೋಧಿಸಿರುವಲ್ಲಿ ಶ್ರೀನಿವಾಸರು ಸೃಷ್ಟಿಯ ಪಾವನತೆಯಲ್ಲಿ ಭಗವಂತನ ಸಾಕ್ಷಿಸ್ವರೂಪವನ್ನು ಕಂಡಿರುವುದು ತಿಳಿಯುತ್ತದೆ.

ಈ ಸಂಗ್ರಹದ ಇತರ ಕವನಗಳಲ್ಲಿ ಒಂದೊಂದು ಗುಣದಿಂದ ಮತ್ತು ಎಲ್ಲದರಲ್ಲಿಯೂ ಇರುವ ಹೃದಯಸ್ಪರ್ಶಿಯಾದ ಸರಳತೆಯಿಂದ ಗಾಂಧಿಯವರ ದರ್ಶನ, ಕೋಗಿಲೆ, ಮಾಂಬಿ, ನಟರಾಜ, ಹನುಮನ ಗಿರಿ, ಗೋಮಟೇಶ್ವರ, ಕಣ್ಣು, ಗುರುವಿಗೆ, ಇವು ತುಂಬಿ ಬಂದಿವೆ. ಇವುಗಳಲ್ಲಿ ಸ್ವಲ್ಪ ನೀಳವಾದ 'ಮಾಂಬಿ' ಸಾಕುನಾಯಿಯ ಬಗ್ಗೆ ತೋರುವ ಅಕ್ಕರೆಯ ಕತೆಯನ್ನು ಒಳಗೊಂಡಿದೆ. ಇಂಥ ಪದ್ಯಗಳಲ್ಲಿ ಶ್ರೀನಿವಾಸರು ಭಾವಗೀತೆ ಮತ್ತು ಪದ್ಯರೂಪ ಕಥೆ ಎರಡನ್ನೂ ಹೇಗೆ ಬೆರಸಬಲ್ಲರು ಎಂಬುದನ್ನು ಅರಿಯುತ್ತೇವೆ. ಇದರಿಂದ ಎರಡರ ನಡುವಿನ ಗೆರೆ ತೀರ ತೆಳುವಾಗಿ ಬಿಡುತ್ತದೆ. ಅಲ್ಲದೆ ಗದ್ಯಪದ್ಯಗಳ ನಡುವಣ ಗೆರೆಯೂ ತೆಳ್ಳಗಾಗುತ್ತದೆ. ಶ್ರೀನಿವಾಸರ ಪದ್ಯರಚನೆಯಲ್ಲಿ ಅನೇಕಸಲ ಗದ್ಯದ ರೀತಿ ಪದ್ಯಬಂಧದಲ್ಲಿದೆ ಎಂದೂ ಅದರಲ್ಲಿ ಕವಿತಾಸತ್ವಕ್ಕಿಂತ ಗದ್ಯತೆಯ ನೀರಸತೆಯಿದೆ ಎಂದೂ ತಿಳಿಯಲು ಅವಕಾಶವಿದೆ. ಆದರೆ ಅಂಥಲ್ಲಿ ಯಾವಾಗಲೂ ಹಾಗೆ ತೋರುತ್ತದೆ ಎನ್ನುವುದರಿಂದ ಅವರ ಕವಿತೆಗೆ ಅನ್ಯಾಯವಾಗುತ್ತದೆ ಮತ್ತು ವಿಮರ್ಶೆಯನ್ನು ತೀರ ಸರಳಗೊಳಿಸಿದಂತಾಗುತ್ತದೆ. ಕೆಲವು ಸಲ ಹಾಗೆ ಆಗುತ್ತದೆ ನಿಜ. ಆದರೆ ಕೆಲವು ಸಲ ಅವರ ಕಾವ್ಯಪ್ರಜ್ಞೆ ತನ್ನ ಸರಳತೆಯ ತಂತ್ರದಿಂದ ಹೃದಯಸ್ಪರ್ಶಿಯಾದ ನಿರ್ಮಿತಿಯನ್ನು

ಒದಗಿಸುತ್ತದೆ ಎಂಬುದನ್ನು ಅರಿತು ಮೆಚ್ಚಬೇಕು. ಇದಕ್ಕೆ 'ಮಾಂಬಿ' ಕವನ ಒಂದು ಒಳ್ಳೆಯ ನಿದರ್ಶನ. ಈ ಕವಿಯ ನೇರತೆ ಒಮ್ಮೊಮ್ಮೆ ಧ್ವನಿಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ ಎಂಬುದಕ್ಕೆ 'ಗೋಮಟೇಶ್ವರ' ಕವಿತೆಯ 'ಹೊಗು ಎನ್ನೆದೆಯ; ಹೊಗುತೀ ಬಗೆಗೆ ಸೊಗಸಿನ ನಿಜವರಿವ ನೀತಿಯನು ಕಲಿಸು; ಪ್ರೀತಿಯ ತೋರು; ವೀತರಾಗ, ವಿಬುಧ' ಎಂಬ ಕೊನೆಯ ಸಾಲುಗಳು ಸಾಕ್ಷಿಯಾಗಿರುತ್ತವೆ.

'ಚೆಲುವು' ಸಂಕಲನದಲ್ಲಿರುವ 'ಚೆಲುವದೇವಿ, ಕಾಡುಹೂಗಳು, ಮುರಿದುಬಿದ್ದ ಕಲ್ಲು, ಸಾತ್ವಿಕ, ಕೆನ್ನೈದಿಲೆ, ಚಿಕ್ಕಮಲ್ಲಮ್ಮ, ಉದ್ಯಾನದಲ್ಲಿ, ಇವು ಕಳೆತುಂಬಿದ ಕವನಗಳಾಗಿವೆ. ಇವುಗಳಲ್ಲಿ 'ಮುರಿದುಬಿದ್ದ ಕಲ್ಲು ಮತ್ತು ಚಿಕ್ಕಮಲ್ಲಮ್ಮ' 'ಮಾಂಬಿ'ಯಂತೆ ಭಾವಗೀತೆ ಮತ್ತು ಪದ್ಯರೂಪ ಕಥೆಗಳ ಸಂಮಿಶ್ರ ಸ್ವಾರಸ್ಯವುಳ್ಳುವು. ಈ ಬಗೆಯ ಬರೆವಣಿಗೆಯಲ್ಲಿ 'ಚಿಕ್ಕಮಲ್ಲಮ್ಮ' ಕವನವು ತನ್ನ ಕರುಣರಸದಿಂದಲೂ ಪ್ರಭಾವಿಯಾದ ಚಿತ್ರ ನಿರ್ಮಾಪಕ ಶೈಲಿಯಿಂದಲೂ ಹೆಚ್ಚು ಯಶಸ್ವಿಯಾಗಿದೆ. ಇದರ ಶೈಲಿಗೆ 'ಕೊಕ್ಕರೆ ನೀರನು ಹೊಗುವಂದದಲಿ ಹೊಕ್ಕಳು ಬೆಂಕಿಯ ಹೊಕ್ಕರಣೆಯನು' ಎಂಬುದು ಉತ್ತಮ ಲಕ್ಷ್ಯವಾಗಿದೆ. ಈ ಕವನದ ಕೊನೆಯ ಕೆಲವು ಸಾಲುಗಳನ್ನು ಬಿಡಬಹುದಾಗಿತ್ತು. 'ಕನ್ನಡನಾಡಿನ ಮಕ್ಕಳು ಎಂದಿಗೂ ಮನ್ನಣೆ ಎಂದರೆ ಇಂತೇ ನಡೆಯಲಿ; ಚಿನ್ನದ ನಾಡಿದು ಲೋಕಕೆ ನಡತೆಯ ಕನ್ನಡಿಯಾಗಲಿ, ಉನ್ನತಿ ಪಡೆಯಲಿ' ಈ ಬಗೆಯ ಹಾರೈಕೆ ಎಷ್ಟೇ ಒಳ್ಳೆಯದಾದರೂ ಕಾವ್ಯ ಸೌಂದರ್ಯದ ಪರಿಣಾಮಕ್ಕೆ ಬಾಧಕವಾಗುತ್ತದೆ. 'ಸಾತ್ವಿಕ' ಕವನದಲ್ಲಿ ಸಾತ್ವಿಕನ ಉಪದೇಶದಿಂದ ಯೋಧನಲ್ಲಿ ಉಂಟಾದ ಹೃದಯಪರಿವರ್ತನಕ್ಕೆ ಮನವರಿಕೆ ಸಾಲದೆನಿಸುತ್ತದೆ. ಆದರೆ ಕಿರುನುಡಿಯ ಕಾವ್ಯಸತ್ವವು 'ಮಾನವನ ಬಾಳು ಕಾಣುವನ ಮನಕೆ ತಾಳೆಹೂವು; ಅರಿತು ಮುಡಿ ಗಂಧ, ಮರೆತು ಹಿಡಿ ಮುಳ್ಳು; ಬಾಳು ಇಂತೆ' ಎಂಬ ಬಗೆಯ ಸಾತ್ವಿಕನ ಮಾತುಗಳಲ್ಲಿ ಅಡಕವಾಗಿದೆ.

'ಕೆನ್ನೈದಿಲೆ' ಸೌಂದರ್ಯ ಸಂವೇದನೆಯಲ್ಲಿ ಮತ್ತು ವಿವರ ವರ್ಣನೆಯಲ್ಲಿ 'ತಾವರೆ'ಗೆ ಸಮಾನವಾದ ಕವಿತೆ. ಆದರೆ ಕೆನ್ನೈದಿಲೆ ಮತ್ತು ಜಲಪಾತ ಇವೆರಡರ ಸಮ್ಮಿಶ್ರರಸಾನುಭವದಿಂದ, 'ಹಿರಿದು ಕಿರಿದಿಲ್ಲ ಫಲಿಸಿದ ಬಾಳಿಗೆ' ಎಂಬ ಸಂದೇಶದಿಂದ ಈ ಕವನ ತನ್ನ ವಿಶೇಷವನ್ನು ಮೆರೆದಿದೆ. ಈ ಸಂಕಲನದಲ್ಲಿ ಮತ್ತು ಶ್ರೀನಿವಾಸರ ಎಲ್ಲ ಕವನಗಳಲ್ಲಿ 'ಚೆಲುವ ದೇವಿ' ಹಿರಿಮೆಗೆ ವೀಳ್ಯವೆತ್ತಿದ ಉತ್ತಮ ಕವನ. ಇದು ಕಾಣುವುದಕ್ಕೆ 'ವಿಂಧ್ಯಪರ್ವತದ ಮಲೆಗಳ ಮಾಲೆ'ಯ ಪರಿಸರದಲ್ಲಿ ಸೂರ್ಯಾಸ್ತದ ಸೌಂದರ್ಯವನ್ನು ಬಣ್ಣಿಸಿರುವ ಪ್ರಕೃತಿವರ್ಣನೆಯ ಕವನ. ಆದರೆ ಇದು ಕೇವಲ ಪ್ರಕೃತಿ ವರ್ಣನೆಯಾಗದೆ ಒಂದು ಕಪಿ ವಿಶಿಷ್ಟವಾದ ಸೌಂದರ್ಯದರ್ಶನವಾಗಿ ಪರಿಣಮಿಸುತ್ತದೆ. ಸ್ತ್ರೀ ವಿಷಯಕವಾದ ಕವಿಯ ಗೌರವವು ಇಲ್ಲಿ ಕಳಸ ಮುಟ್ಟಿದೆ. ಸೌಂದರ್ಯ ಸಾರವೆಲ್ಲ ಕವಿಗೆ ಆ ನಿಸರ್ಗದ ಹಿನ್ನೆಲೆಯಲ್ಲಿ ಹೊಳೆಗೆ ನೀರು ತುಂಬಲು ಇಳಿತಂದ ಸಾಮಾನ್ಯ ಮಹಿಳೆಯಲ್ಲಿ ಕಂಡಿದೆ. ಅಂತೇ 'ಮುಂದೆ ಕಂಡುದು ಎಲ್ಲ ಚೆಲುವಿಕೆಯ ಹುರುಳು,' 'ಮುಟ್ಟಿದುದು ಮುಗಿಲನಾಕ್ಷಣ ಚೆಲುವ ಶಿಖರ; ಸೃಷ್ಟಿಯಂದಕೆ ಹೆಣ್ಣಿನಂದ ಮಣಿಮುಕುರ' ಎಂಬ ಉಕ್ತಿಗಳು ಬಂದಿವೆ. ತಮ್ಮ ಬಾಳಿನುದ್ದಕ್ಕೂ ಶ್ರೀನಿವಾಸರು ಬೆಳೆಸಿಕೊಂಡು ಬಂದಿರುವ ಶುಚಿ ಮನೋಧರ್ಮವು ಒಬ್ಬ ಸಾಮಾನ್ಯ ಸ್ತ್ರೀಯಲ್ಲಿಯೂ ಸ್ತ್ರೀತ್ವದ ಅಸಾಮಾನ್ಯ ದರ್ಶನವನ್ನು ಕಂಡು ಅದರಿಂದ ಪುಳಕಿತವಾಗಿ ಅಭಿವ್ಯಕ್ತಿಯ ಸುಂದರ ಆಕಾರ ತಾಳಿದೆ. ಇದು ಕೇವಲ ಒಂದು ಸಂದರ್ಭದಿಂದ ಮಾತ್ರ ಸ್ಫುರಿಸಿದ ಭಾವವಲ್ಲ. 'ಮಗುವಾಗಿ ತಾಯ್ತಂದೆಯರ ಮನವ

ನಲಿಸಿ, ಸತಿಯಾದ ಪತಿಯ ಹೃದಯದ ಸುಖವ ಸಲಿಸಿ, ಜಗದಂಬೆಯವತಾರದಂತೆ ಕಳಕಳಿಸಿ, ಸುತರ ಹಡೆದೆತ್ತಿ ಮುದ್ದಾಡಿ ಸಲೆ ಬೆಳೆಸಿ, ಲಲನೆ ಅಂದುದ್ದೇಶಿಸದೆ ಕಣ್ಣ ತಣಿಸಿ ಸುಳಿದಳೆದುರಿಗೆ ನನ್ನ ಆತುರುವ ಮಣಿಸಿ' ಈ ನುಡಿಯಲ್ಲಿ ಸ್ತ್ರೀಯ ಸಾಮಾನ್ಯವಾದ ಜೀವನ ರೀತಿಯನ್ನು ವರ್ಣಿಸಿದ್ದರೂ ಅದರಲ್ಲಿ ಒಂದು ಸೌಂದರ್ಯದರ್ಶನದ ಉತ್ಕಟತೆಯಿದೆ, ಅಭಿವ್ಯಕ್ತಿಯ ಸಹಜತೆಯಿದೆ. 'ಜಗದಂಬೆಯವತಾರದಂತೆ ಕಳಕಳಿಸಿ' ಎಂಬಲ್ಲಿ ಅದು ಎದ್ದು ಕಾಣುತ್ತದೆ. ಒಬ್ಬ ಸಾಮಾನ್ಯಳಾದ ಹೆಂಗಸು ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ ಲೋಕ ಪೋಷಣೆಗಾಗಿ ಮಾಡುವ ಕಾರ್ಯವು ಕವಿಗೆ ಜಗದಂಬೆಯ ಕಾರ್ಯವೆಂದು ತೋರಿದೆ. ಅಂತೇ ಅವಳು ಜಗದಂಬೆಯ ಅವತಾರದಂತೆ ಅವನಿಗೆ ಕಂಡಿದ್ದಾಳೆ. ಅಂತೆಯೆ ಅವನ ಆತ್ಮವು ಅವಳನ್ನು ನೋಡಿ ಭಕ್ತಿಯಿಂದ ಮಣಿದಿದೆ. ಆ ದೃಶ್ಯವು ಕಣ್ಮರೆಯಾದ ಮೇಲೆ ಸಹ ಕವಿಯ ಸ್ಮೃತಿಪಥದಲ್ಲಿ ಆಗಾಗ ಅದು ಬಂದು ಅವನ ಅಂತರಾತ್ಮವನ್ನು ಬೆಳಗುತ್ತದೆ. 'ಮನದ ಬಾಂದಳಕಿಂಥ ನೆನವು ನಕ್ಷತ್ರ; ತಾನೊಂದು ಬೆಳಗುವುದು ದೆಸೆಯೊಂದನೆಲ್ಲ. ಮನುಜನನು ಗೆಲುವ ಚೆಲುವಿನ ತತ್ತ್ವ ಜಗದ ಮಾನವತೆಯೆಂದೆನಗೆ ಕಲಿಸಿತಾ ಸಂಜೆ' ಎಂಬ ಕೊನೆನುಡಿಯ ಸಾಲುಗಳು ವರ್ಡ್ಸ್‌ವರ್ಥ ಕವಿಯ ಡ್ಯಾಫೋಡಿಲ್ಸ ಕವಿತೆಯ ಕೊನೆಯನ್ನು ನೆನಪಿಗೆ ತರುತ್ತದೆ. ಇಲ್ಲಿ ನೆನವಿನಿಂದ ಆಗುವ ಆನಂದವಲ್ಲದೆ ಒಂದು ವಿಶಿಷ್ಟವಾದ ಸೌಂದರ್ಯ ದರ್ಶನವೂ ಉಂಟಾಗುತ್ತದೆ.

'ಸಂಕ್ರಾಂತಿ'ಯಲ್ಲಿ ಬಂದಿರುವ ಕವನಗಳಲ್ಲಿ 'ಹಲವು ಆಕಾಶವಾಣಿಯಲ್ಲಿ ಪ್ರಸಾತಕ್ಕಾಗಿ ಅದರ ಪ್ರವರ್ತಕರ ಅಪೇಕ್ಷೆಯಂತೆ ರೂಪುಗೊಂಡವು' ಎಂದು ಕವಿಗಳು ಹೇಳಿದ್ದಾರೆ. ಅಂದರೆ ಹೆಚ್ಚಾಗಿ ಇವು ಸಾಂದರ್ಭಿಕ ರಚನೆಗಳು. ಆದರೂ ಇವುಗಳಲ್ಲಿ ಹರಿವು ಇದೆ, ಹದ ಇದೆ. 'ಇಳಿತದ ಮಗ್ಗುಲಲೆ ಏರು ಇದೆ ಕಣಾ. ನೋಡು ಬಾಳೊಳಿಹ ವಸಂತವ,' 'ಮನೆ ದೇವರದು; ನಾವ ಅವನಿಟ್ಟಿರುವ ಆಳು; ಎಲ್ಲ ಮನೆಯಲು ಅವನು ಬೊಪ್ಪ,' 'ಪರತುಷ್ಟಿಯಲಿ ನಮ್ಮ ತುಷ್ಟಿಯನು ಕಾಣುವುದ ಕಲಿತೆವೇ ಬದುಕೆಲ್ಲ ಸೇಸೆ,' 'ಈ ಒಲವು ಕರುಣೆಯಲಿ ಜಗದ ಬೇರಿನ ಒಲವು ಕರುಣೆಯನು ಉಣುತಿದೆ ಜೀವ', 'ಒಳಹೊರಗಿನೊಳ್ಳಿತನು ತೆರೆ, ಬೆಳಸು, ಚೆಲ್ಲು, ಇದೇ ಜನ್ಮಸಾಫಲ್ಯ, ಸೌಭಾಗ್ಯ' ಇಂಥ ನುಡಿಗಳಲ್ಲಿ ಶ್ರೀನಿವಾಸರ ಆಶಾವಾದ, ಒಳ್ಳೆಯದರಲ್ಲಿ ನಂಬಿಕೆ. ಈಶ್ವರ ಭಕ್ತಿ ಇವು ಪ್ರಕಟವಾಗಿರುತ್ತವೆ. ಪದ್ಯ ರಚನೆಯಲ್ಲಿ, ಶೈಲಿಯಲ್ಲಿ ಅಲ್ಲಲ್ಲಿ ಅಸ್ಪಷ್ಟತೆ ಮೂಡಿರುತ್ತದೆ.

'ಮಲಾರ' ಇದು ಶ್ರೀನಿವಾಸರು ಬೇರೆ ಬೇರೆ ವ್ಯಕ್ತಿ-ವಿಷಯ- ಸಂದರ್ಭಗಳನ್ನು ಕುರಿತು ಬರೆದ ಅಷ್ಟಷಟ್ಪದಿಗಳ ಸಂಕಲನ. ಸಾನೆಟ್ ಎಂಬ ಪದ್ಯ ಪ್ರಕಾರವು ಇಂಗ್ಲಿಷಿನಿಂದ ಕನ್ನಡಕ್ಕೆ ಬಂದು ಅನುಭವದ ಮತ್ತು ಆಲೋಚನೆಯ ಮೊತ್ತವನ್ನು ಅಡಕಗೊಳಿಸಿ ನಿರೂಪಿಸುವ ಒಂದು ಹೊಸ ವಾಹಕವಾಗಿದೆ. ಇದನ್ನು ಯಶಸ್ವಿಯಾಗಿ ಬಳಸಿದವರಲ್ಲಿ ಶ್ರೀನಿವಾಸರೂ ಒಬ್ಬರು. ಇದರ ತಂತ್ರದಲ್ಲಿ ಭಾವಸಂಕ್ಷೇಪ ಮತ್ತು ಪ್ರಾಸಯೋಜನೆಯ ಪ್ರಯಾಸ ಇದ್ದರೂ ತಮ್ಮ ನೇರ ಮತ್ತು ಸಹಜವಾದ ರಚನಾವಿಧಾನ ಮತ್ತು ಶೈಲಿಗಳನ್ನು ಅವರು ಹೆಚ್ಚಾಗಿ ಅನುಸರಿಸಿದ್ದಾರೆ. ಇದೇ ಈ ಅಷ್ಟಷಟ್ಪದಿಗಳ ವೈಶಿಷ್ಟ್ಯವೆನ್ನಬಹುದು.

'ನಡೆದು ಬಂದ ದಾರಿ'ಯಲ್ಲಿ ಶ್ರೀನಿವಾಸರ ಕಾವ್ಯದ ವಿಮರ್ಶೆ ಮಾಡುತ್ತ ಶ್ರೀ ಕುರ್ತಕೋಟಿಯವರು 'ಉತ್ಕಟತೆಯ ಹತ್ತಿದವರಿಗೆ ಮಾಸ್ತಿಯವರ ಕಾವ್ಯದಲ್ಲಿ 'ಕಾವ್ಯತನ' ಕಾಣಲಿಕ್ಕಿಲ್ಲ. ಸಂಗೀತದ ಪರಿಭಾಷೆಯಲ್ಲಿ ಹೇಳುವದಾದರೆ ಮಾಸ್ತಿಯವರದು ಮಂದ್ರಸ್ಥಾಯಿಯಲ್ಲಿಯ ಕೆಲಸ' ಎಂದಿದ್ದಾರೆ. ಮಾಸ್ತಿಯವರ ಕಾವ್ಯದಲ್ಲಿ ಸಾಮಾನ್ಯವಾಗಿ

ನಿರಾಡಂಬರವಾದ ನೇರತೆ, ನಯ ಇರತ್ತವಾದರೂ ಅದರಲ್ಲಿ ಉತ್ಕಟತೆ ಇರುವುದಿಲ್ಲವೆಂದಲ್ಲ, ಉತ್ಕಟವಾದ ಎಚ್ಚರದಿಂದ ಓದಿ ಅದನ್ನು ಗುರುತಿಸಬೇಕಾಗುತ್ತದೆ. ಪ್ರಕಟವಾದ ಉತ್ಕಟತೆಯ ರುಚಿ ಹತ್ತಿದವರಿಗೆ ಅಂದರೆ ಕಾವ್ಯದಲ್ಲಿ ಅದೊಂದೇ ಪರಿಯನ್ನು ಮೆಚ್ಚಿಕೊಂಡವರಿಗೆ ಕಾವ್ಯತನವು ಮಾಸ್ತಿಯವರ ಕಾವ್ಯದಲ್ಲಿ ಎಲ್ಲಿಯೂ ಕಾಣಲಿಕ್ಕಿಲ್ಲ ಎಂದಿರುವುದು ನಿಜ ಸಂಗತಿಯಾದರೆ ರಸಿಕತನದ ಲಕ್ಷಣವೇನು ಎಂದು ಕೇಳಬೇಕಾಗುತ್ತದೆ. ಇನ್ನು ಮುಂದಿನ ವಾಕ್ಯದಲ್ಲಿ 'ಮಾಸ್ತಿಯವರದು ಮಂದ್ರಸ್ಥಾಯಿಯಲ್ಲಿಯ ಕೆಲಸ' ಎಂಬುದು ಹಿಂದಿನ ವಾಕ್ಯದ ಅಭಿಪ್ರಾಯವನ್ನೇ ಈ ವಿಮರ್ಶಕರು ಅನುಮೋದಿಸುತ್ತಾರೆ ಎಂದು ಸೂಚಿಸುತ್ತದೆ. ಇದಕ್ಕೆ ಮೊದಲು 'ಭಾವದ ಉತ್ಕಟತೆಗಿಂತ ಮಾಸ್ತಿಯವರ ಪ್ರತಿಭೆ ಕಥನವನ್ನಾಶ್ರಯಿಸಿದೆ' ಎಂದೂ ಅವರು ಹೇಳಿದ್ದಾರೆ. ನಿಜವಾಗಿ ಯಾವ ಸಂಗೀತಗಾರನೂ ಕೊನೆಯವರೆಗೂ ಮಂದ್ರಸ್ಥಾಯಿಯಲ್ಲಿ ಹಾಡುವುದಿಲ್ಲ; ಯಾವ ಕವಿಯೂ ಕೆಳಗಿನ ಸ್ತರದಲ್ಲಿ ಯಾವಾಗಲೂ ನಿರ್ಮಿತಿಯನ್ನು ಮಾಡುವುದಿಲ್ಲ. ಒಟ್ಟಿನಲ್ಲಿ ಶ್ರೀನಿವಾಸರ ಕಾವ್ಯವನ್ನು ಮೆಚ್ಚಿಕೊಂಡಿರುವ ಈ ವಿಮರ್ಶಕರು ಅವರ ನಿರೂಪಣ ಪದ್ಧತಿಯಲ್ಲಿಯ ಗುಣದೋಷಗಳನ್ನು ಹೇಳಿದರೆ ತಪ್ಪಿಲ್ಲ. ಆದರೆ ಅವರ ವಾಕ್ಯಸರಣಿ ಈಗಿರುವಂತೆ ಶ್ರೀನಿವಾಸರ ಇಡೀ ಕಾವ್ಯದ ಬಗ್ಗೆ ತಪ್ಪು ಕಲ್ಪನೆಯನ್ನು ಮಾಡಿಕೊಡುತ್ತದೆ.

ಈವರೆಗಿನ ವಿವೇಚನೆಯಲ್ಲಿ ಶ್ರೀನಿವಾಸ ಕಾವ್ಯದ ಒಂದು ವಿಭಾಗವನ್ನು ಕುರಿತು ತಮ್ಮ ವಿಶ್ಲೇಷಣೆಯನ್ನೂ ಮೌಲ್ಯಮಾಪನವನ್ನೂ ಈ ಲೇಖನದಲ್ಲಿ ಮಾಡಿದ್ದೇವೆ. ಅವರ ಕಾವ್ಯವನ್ನು ಅರ್ಥ ಮಾಡಿಕೊಂಡು ವಿಮರ್ಶಿಸಬೇಕೆನ್ನುವ ಸಹೃದಯರಿಗೆ ಪ್ರಯೋಜನವಾದರೆ ಇದು ಸಾರ್ಥಕವಾಗುತ್ತದೆ.

ಶ್ರೀನಿವಾಸರ ಗೇಯಕಾವ್ಯ

ಪ್ರೊ|| ಎಂ. ವಿ. ಸೀತಾರಾಮಯ್ಯ

(ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರರು 'ಶ್ರೀನಿವಾಸ' ಕಾವ್ಯ ನಾಮಾಂಕಿತದಲ್ಲಿ ಈತನಕ ಒಟ್ಟು ಹದಿನೈದು ಕವಿತಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವುಗಳ ವಿವರ ಹೀಗೆ: ಬಿನ್ನಹ, ಅರುಣ, ತಾವರೆ, ಚೆಲುವು, ಮಲಾರ, ಗೌಡರ ಮಲ್ಲಿ, ರಾಮನವಮಿ, ಮೂಕನ ಮಕ್ಕಳು, ನವರಾತ್ರಿಯ ೫ ಭಾಗಗಳು, ಸುನೀತ, ಮನವಿ. ಇವುಗಳ ಪೈಕಿ 'ನವರಾತ್ರಿ' ಕಥನ ಕಾವ್ಯ. ಗೌಡರ ಮಲ್ಲಿ, ರಾಮನವಮಿ, ಮೂಕನ ಮಕ್ಕಳು ಇವೂ ಆ ಜಾತಿಗೆ ಸೇರತಕ್ಕವೆ. ಮಲಾರ ೮೨ ಅಷ್ಟ ಷಟ್ಪದಿಗಳ ಸಂಕಲನ. ಅರುಣ, ತಾವರೆ, ಚೆಲುವು, ಸುನೀತ - ಈ ನಾಲ್ಕು ಭಾವಗೀತೆ. ಬಿನ್ನಹ, ಮನವಿ ಇವೆರಡು ಗೀತ ಜಾತಿಗೆ ಸೇರುತ್ತವೆ; ರಾಗತಾಳ ಬದ್ಧವಾಗಿ ಹಾಡತಕ್ಕವು. ಗೌಡರ ಮಲ್ಲಿ, ರಾಮನವಮಿ, ಮೂಕನ ಮಕ್ಕಳು - ಇವನ್ನೂ ಹಾಡಿದರೆ ತಪ್ಪಿಲ್ಲ. ಭಾವಗೀತೆಯಲ್ಲಿ ಗೇಯ ಗುಣವೂ ಒಂದು ಮುಖ್ಯ ಲಕ್ಷಣವಾದ್ದರಿಂದ ಇವೂ ಹಾಡಿಕೆಗೆ ಒದಗುತ್ತವೆ. (ಭಾವ ಗೀತೆಗಳನ್ನು ಹಾಡುವುದು ಈಗ ಪ್ರಚಾರಕ್ಕೆ ಬಂದಿರುವುದು ಎಲ್ಲರೂ ಬಲ್ಲ ವಿಷಯ.) ಆದರೂ, ಭಾವಗೀತೆ ಹಾಡು ಅಲ್ಲ. ಇಂಗ್ಲಿಷಿನಲ್ಲಿ lyric ಬೇರೆ.

ಈ ಲೇಖನದಲ್ಲಿ 'ಬಿನ್ನಹ' ಮತ್ತು 'ಮನವಿ' - ಇವೆರಡನ್ನು ಮಾತ್ರ ಗೇಯ ಕಾವ್ಯ - ಹಾಡು - ಎಂದು ಪರಿಗಣಿಸಿ, ಅವುಗಳ ಸ್ಥೂಲ ಅವಲೋಕನ ಮಾಡಿದೆ.)

೧

ವಿಶಾಲವಾದ ಅರ್ಥದಲ್ಲಿ ಪದ್ಯ ಕಾವ್ಯವೆಲ್ಲ ಹಾಡೆ. ಷಟ್ಪದೀ ಕಾವ್ಯದ ಕುಮಾರವ್ಯಾಸನನ್ನು ಕೊಂಡಾಡಿದ ಕುವೆಂಪು ''ಕುಮಾರವ್ಯಾಸನು ಹಾಡಿದನೆಂದರೆ'' ಎನ್ನುವ ಮಾತಿನಲ್ಲಿ ಇದೇ ಧ್ವನಿಯಿದೆ. ಹಕ್ಕಿಯ ಉಲಿ ಹಾಡು ಎಂದಾಗಿರುವಾಗ ಕವಿಯ ವಾಣಿಯೂ ಹಾಡೇ ಎಂದಾಗಬೇಕು. ''ಲಕ್ಷ್ಮೀವರಂ ತಾನೆ ಸಂಗೀತ ಸುಕಲಾ ನಿಪುಣನು ವೀಣೆಯಿಂದ ಗಾನಮಂ ನುಡಿಸುವಂದದೊಳೆನ್ನ ವಾಣಿಯಿಂ ಕವಿತೆಯಂ ಪೇಳಿಸಿದನು'' ಎಂಬ ನಾದಲೋಲ ಲಕ್ಷ್ಮೀಶನ ಮಾತಿನಲ್ಲೂ ಕಾವ್ಯದ ಗಾನ ಲಕ್ಷಣ ವಿವಕ್ಷಿತ. ತ್ರಿಪದಿ, ಸಾಂಗತ್ಯ, ಮುಂತಾದ ತ್ರಿಮೂರ್ತಿ (ಅಂಶ) ಗಣದ ದೇಸಿ ಛಂದಿಸ್ಸಿನಲ್ಲಿ ರಚಿತವಾದ ಕಾವ್ಯಗಳು ಹಾಡುಗಬ್ಬಗಳೆಂದೇ ಪ್ರಸಿದ್ಧ. ನಮ್ಮ ಪ್ರಾಚೀನ ಕವಿಗಳ ದೃಷ್ಟಿಯಲ್ಲಿ. ವಾಚನ ಯೋಗ್ಯವಾದ ಕಾವ್ಯ ವಸ್ತುಕ; ಗಾನ ಯೋಗ್ಯವಾದದ್ದು ವರ್ಣಕ, ಹಾಡುಗಬ್ಬ.

ಆದರೂ, ಹಾಡು ಅಥವಾ ಗೀತ ಎಂದು ಅನೂಚಾನವಾಗಿ ರೂಢಿಯಲ್ಲಿರುವ ಕಾವ್ಯವನ್ನು ಮಾತ್ರ ಗೇಯಕಾವ್ಯ ಎಂದು ನಿರ್ದೇಶಿಸುವುದು ವಿಹಿತ. ಗೇಯಕಾವ್ಯ ನಿರ್ಮಾಣಕಾರರು ವಾಗ್ಗೇಯಕಾರರು. ವಾಗ್ಗೇಯಕಾರರನ್ನು ಮೂರು ಪಂಗಡಗಳಾಗಿ

ವಿಂಗಡಿಸಬಹುದು : (೧) ಸಂಗೀತ ಶಾಸ್ತ್ರ ಪಂಡಿತರಾಗಿ, ಲಕ್ಷಣಾನುಗುಣವಾಗಿ ಲಕ್ಷ್ಯ ನಿರ್ಮಾಣ ಮಾಡುವುದರ ಜೊತೆಗೆ ಅವುಗಳ ಗೇಯರೂಪ ಜೀವಂತವಾಗಿ ಉಳಿಯುವಂತೆ ತಮ್ಮ ರಚನೆಗಳನ್ನು ತಾವೇ ಹಾಡಿ ತೋರಿಸಿ, ಶಿಷ್ಯರನ್ನು ತಯಾರಿಸುವವರು; ಇಲ್ಲವೋ, ಕೃತಿಗಳ 'ಸಾಹಿತ್ಯ'ಕ್ಕೆ ಸ್ವರ ಪ್ರಸ್ತಾರ (Musical notation) ಸಂಯೋಜನೆ ಮಾಡಿ, ಅವುಗಳ ಗೇಯ ರೂಪವನ್ನು ಬರೆದಿಡುವವರು. ಈ ಜಾತಿಯ ಕೃತಿಗಳಲ್ಲಿ 'ಧಾತು' (ಸಂಗೀತ ಭಾಗ) ಪ್ರಧಾನ; 'ಮಾತು' (ಸಾಹಿತ್ಯ ಭಾಗ) ಗೌಣ. ತ್ಯಾಗರಾಜ ಪರಂಪರೆಗೆ ಸೇರಿದವರು ಈ ವರ್ಗದ ವಾಗ್ಗೇಯಕಾರರು. ಇವರ ಕೃತಿಗಳೆಲ್ಲ ಭಕ್ತಿ ಸಾಹಿತ್ಯ; ಇವುಗಳಲ್ಲಿ ಕಾವ್ಯ ಗುಣ ಕಡಿಮೆ. ಸಾಹಿತ್ಯದ ಅರ್ಥ ರಾಗಭಾವಕ್ಕೂ ಲಯವಿನ್ಯಾಸಕ್ಕೂ ಒಳಪಟ್ಟು ಸಂಗೀತದ ಆಕಾರ ಪಡೆಯುತ್ತದೆ. ಈ ಜಾತಿಯ ರಚನೆಯನ್ನು 'ಸಂಗೀತ ಕೃತಿ' (Musical Composition) ಎಂದು ಕರೆಯಬಹುದು. ಯಾವುದೇ ಭಾಷೆಯ ಸಾಹಿತ್ಯ ಪ್ರಪಂಚದಲ್ಲಿ ಇವುಗಳ ಸ್ಥಾನ ಗೌಣ; ಇಲ್ಲವೆಂದರೂ ಆದೀತು. ಇಂಥ ಕೃತಿಗಳ ನಿರ್ಮಾಪಕರೇ ನಿಜವಾದ ವಾಗ್ಗೇಯಕಾರರು; ಕನ್ನಡದಲ್ಲಿ ಇಂಥ ವಾಗ್ಗೇಯಕಾರರು ಕಂಡುಬರದಿರುವುದು ಸೋಜಿಗದ ಸಂಗತಿ. (೨) 'ದಾಸ ಸಾಹಿತ್ಯ' ಪರಂಪರೆಗೆ ಸೇರಿದ ವಾಗ್ಗೇಯಕಾರರದ್ದು ಇನ್ನೊಂದು ಪ್ರಮುಖ ವರ್ಗ. ನಿಜಗುಣ ಶಿವಯೋಗಿ, ಪುರಂದರದಾಸ, ಕನಕದಾಸ, ಜಗನ್ನಾಥದಾಸ, ಮುಂತಾದ ಕನ್ನಡ ಸಂತ ಕವಿಗಳ ಕೃತಿಗಳು ಕರ್ಣಾಟಕ ಸಂಗೀತ ಪ್ರಪಂಚದಲ್ಲಿ ಹೇಗೆಯೋ ಹಾಗೆಯೇ ಸಾಹಿತ್ಯ ಪ್ರಪಂಚದಲ್ಲೂ ಪ್ರಸಿದ್ಧವಾಗಿವೆ. ಇವುಗಳನ್ನು ರಚಿಸಿದವರು ಸಂಗೀತ ಶಾಸ್ತ್ರಜ್ಞರಾಗಿದ್ದು, ಲಕ್ಷಣಾನುಸಾರವಾಗಿ ಕೃತಿ ರಚನೆ ಮಾಡಿದ್ದಾರೆ. ಇವರ ಕೃತಿಗಳಲ್ಲಿ ಎಲ್ಲವೂ ಅಲ್ಲದಿದ್ದರೂ ಈಗ ಪ್ರಚಾರದಲ್ಲಿರುವವು ಕೃತಿಕಾರರು ಹಾಡುತ್ತಿದ್ದ ಗೇಯರೂಪವನ್ನು ಬಹುಮಟ್ಟಿಗೆ ಉಳಿಸಿಕೊಂಡು ಬಂದಿವೆ ಎಂದು ಊಹಿಸಬಹುದು. ಅವರು ವಾಗ್ಗೇಯಕಾರರಾದದ್ದರಿಂದಲೇ ಅವರ ಬಹು ಸಂಖ್ಯೆಯ ರಚನೆಗಳ ಗೇಯರೂಪ ಪರಂಪರಾಗವಾಗಿ ಇಂದಿಗೂ ಉಳಿದುಕೊಂಡು ಬಂದಿರುವುದು. (ಆಧುನಿಕ ಗಾಯಕರು ಕೆಲವರು ಕೆಲವು ಕೃತಿಗಳ ಸಾಂಪ್ರದಾಯಿಕ ಗೇಯ ರೂಪವನ್ನು ತಮ್ಮ ಇಚ್ಛಾನುಸಾರ ಬದಲಾಯಿಸಿಕೊಳ್ಳುತ್ತಿದ್ದಾರೆ.) ಇವು ಸಂಗೀತ ಸಾಹಿತ್ಯ ಪ್ರಪಂಚಗಳೆರಡರಲ್ಲಿಯೂ ಮನ್ನಣೆ ಪಡೆದಿವೆ. (೩) ಮೂರನೆಯ ಪಂಗಡ, ಆಧುನಿಕ ಕನ್ನಡ ಕಾವ್ಯದಲ್ಲಿ ಕಂಡುಬರುವ ಒಂದು ಬೆಳವಣಿಗೆ: ಸಂಗೀತ ಶಾಸ್ತ್ರಜ್ಞಾನವುಳ್ಳ, ಆ ಜ್ಞಾನ ಇಲ್ಲದಿದ್ದರೂ ಹಾಡಿನ ಧಾಟಿಯಲ್ಲಿ ಬರೆಯಬಲ್ಲ ಕವಿಗಳು ಹಾಡುಗಳ ಮಾದರಿಯಲ್ಲಿ ರಚಿಸಿದ ಕೃತಿಗಳು. ಈ ಬಗೆಯ ಕೃತಿಗಳನ್ನು ಬರೆಯುವವರು ಅವುಗಳನ್ನು ಮನಸ್ಸಿನಲ್ಲಿ ಹಾಡಿಕೊಂಡು ರಚಿಸಿರಬಹುದು; ಹಾಡಿಕೆಯನ್ನು ಅಭ್ಯಾಸ ಮಾಡದ ಕಾರಣ ಹಾಡಲಾರದವರು. ಇವರ ಗೇಯಕಾವ್ಯ ಎಷ್ಟೇ ಮೇಲುತರದ್ದಾದರೂ, ಇವರನ್ನು ವಾಗ್ಗೇಯಕಾರರ ಗುಂಪಿಗೆ ಸೇರಿಸಲಾಗದು. ಶ್ರೀನಿವಾಸ, ಡಿ.ವಿ.ಜಿ., ವಿ.ಸೀ., ಪು.ತಿ.ನ., ಕುವೆಂಪು, ಆನಂದಕಂದ, ಕೆ. ಗೋಪಾಲಕೃಷ್ಣರಾವ್ ಮುಂತಾದವರು ಹಾಡಿಕೆಗೆ ಒದಗಿಬರುವಂತಹ ಕೃತಿಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಪಲ್ಲವಿ, ಅನುಪಲ್ಲವಿ, ಚರಣ, ಪ್ರಾಸ, ಅನುಪ್ರಾಸ, ಅಂತಪ್ರಾಸ, ಯತಿ, ಮುಂತಾದ ಸಂಗೀತ ಕೃತಿಗಿರಬೇಕಾದ ಪ್ರಮುಖ ಲಕ್ಷಣಗಳೆಲ್ಲವೂ ಕಂಡುಬರದಿದ್ದರೂ ಗೇಯ ಕೃತಿಯ ಪ್ರಧಾನ ಲಕ್ಷಣವಾದ ಪಲ್ಲವಿ ಮತ್ತು ಪಲ್ಲವಿಯ ಮೂಲಭಾವವನ್ನು ವಿಸ್ತರಿಸಿ ವಿನ್ಯಾಸ ಮಾಡುವ ಚರಣಗಳು - ಇವು ಕಂಡುಬರುತ್ತವೆ; ಸಾಧಾರಣವಾಗಿ ಆದಿಪ್ರಾಸ ಉಂಟು. ಆದ್ದರಿಂದ ಹಾಡಲು ಸರ್ವಥಾ

ಯೋಗ್ಯವಾದ ಇವನ್ನು 'ಗೇಯಕಾವ್ಯ' ಎಂದು ಕರೆಯಲು ಯಾವ ಅಭ್ಯಂತರವೂ ಇಲ್ಲ. ಇವೆಲ್ಲವೂ ಕವಿಗಳಿಂದ ರಚಿತವಾದವು; ಕಾವ್ಯಗುಣ ಇವುಗಳ ಹೆಚ್ಚುಗಾರಿಕೆ. ಶುದ್ಧ ಸಂಗೀತ ಕೃತಿಗಳಲ್ಲಿ ಅರ್ಥ ಸಾಧಾರಣವಾಗಿ ವಾಚ್ಯ; ಈ ಕವಿ ಕೃತಿಗಳಲ್ಲಿ ವ್ಯಂಗ್ಯದ ಛಾಯೆ ಅವುಗಳ ಕಾವ್ಯಗುಣವನ್ನು ಹೆಚ್ಚಿಸುತ್ತವೆ.

೨

ಶ್ರೀನಿವಾಸರ 'ಬಿನ್ನಹ' ಮತ್ತು 'ಮನವಿ' ಗಳಲ್ಲಿರುವ (೫೧+೪೮) ೯೯ ರಚನೆಗಳು ಮೇಲೆ ತಿಳಿಸಿದ ಮೂರನೆಯ ವರ್ಗಕ್ಕೆ ಸೇರಿದ ಹಾಡುಗಳು. ಅವುಗಳ ಸ್ವರೂಪವನ್ನು ತಿಳಿಯಲು ('ಮನವಿ' ಯಿಂದ ಆಯ್ದ) ಒಂದು ಹಾಡನ್ನು ದೃಷ್ಟಾಂತಿಸಬಹುದು :

ಬಿಂಕ

(ಕಾಂಭೋಜಿ)

ಬರಿಯ ಬಿಂಕದ ಮಾತ ಬಡಿವಾರದಲಿ ನಿನ್ನ
ಸರಿಪಡಿಸಿಕೊಳಲು ನೋಡುವೆವು ಹರಿಯೆ

ವೈರಾಗ್ಯವನು ಕುರಿತ ಮಾತ ಮಳೆಯನು ಕರೆದು
ಆರಾಧ್ಯವೆಂದು ಬಿರುದನು ತಳೆದು ಬಾಗಿ
ನೈರಾಶ್ಯ ಸಾಕ್ಷ್ಯಗಳ ತರ್ಕದಲಿ ಮೈಮರೆದು
ಧೀರಾಗ್ರಣಿಗಳಾಗಿ ನಾಲಗೆಯಲಿ
ಸನ್ಯಾಸವೆನ್ನುವೆವು ವಿನ್ಯಾಸ ಮಾಡುವೆವು
ಕನ್ಯಾಸಮೂಹವೆನೆ ಕಣ್ಣಲೆವುದು
ಅನ್ಯಾಯದಲಿ ಮನವ ಬೆಳೆಯಿಸುತೆ ಹರಿ ನಿನಗೆ
ಶೂನ್ಯವನು ಮಾಡಿ ಮೆಚ್ಚಿಪೆವೆಂಬೊಲು
ಎಷ್ಟು ಸೀರೆಯನುಡಲು ನಾಟಕದ ಬಾಲಕನು
ಸೃಷ್ಟಿಯಲಿ ವನಿತೆಯಾಗುವೆನೆನ್ನದೆ
ಇಷ್ಟು ವೇಷವ ಹಾಕಿ ಅಷ್ಟು ಮಾತನು ಆಡಿ
ಧೃಷ್ಟತನದಲಿ ನಿನ್ನನೊಲಿಸಲೆಳಸಿ

ಭಗವಂತನನ್ನು ವಾಗಾಡಂಬರ ಬಹಿರಾಡಂಬರಗಳ ಮೂಲಕ ಹೇಗೆ ಒಲಿಸಿಕೊಳ್ಳಲು ವ್ಯರ್ಥ ಪ್ರಯತ್ನ ಮಾಡುವೆವು ಎಂಬ ಪಲ್ಲವಿಯ ಮೂಲ ಭಾವ ಮುಂದಿನ ಮೂರು ಚರಣಗಳಲ್ಲಿ ವಿಸ್ತಾರಗೊಂಡಿದೆ, ವಿನ್ಯಾಸಗೊಂಡಿದೆ. ವಾಚ್ಯಾರ್ಥ ಸ್ಪಷ್ಟವಾಗಿದೆ. ಒಳಗೆ ಸರ್ವ ಸಮರ್ಪಣ ಭಾವದ ಭಕ್ತಿಯ ಸೆಲೆ ಇಲ್ಲದ ಹೊರಗಿನ ವಾಗ್ ವೈರಾಗ್ಯ, ವೇಷದ ಸನ್ಯಾಸ, ಭಕ್ತಿ ನಟನೆ - ಇವಕ್ಕೆ ಭಗವಂತ ಒಲಿಯುವುದಿಲ್ಲ ಎಂಬ ಸತ್ಯ ತೆಳು ವಿಡಂಬನೆಯ ಮೂಲಕ ವ್ಯಂಗ್ಯವಾಗಿರುವುದರಿಂದ ಪರಿಣಾಮಕಾರಿಯಾಗಿದೆ. ಇಂಥ ಒಂದೆರಡು ಕೃತಿಗಳನ್ನು ಬಿಟ್ಟರೆ, ಸಮಾಜ ವಿಡಂಬನೆಯ ರಚನೆಗಳು ಇಲ್ಲ, ಈ ಸಂಕಲನಗಳಲ್ಲಿ.

ಮೇಲಿನ ಉದಾಹರಣೆಯಲ್ಲಿ ಕಂಡುಬರುವ ಹಾಡಿನ ಮುಖ್ಯ ಲಕ್ಷಣಗಳೆಲ್ಲ

ಇನ್ನುಳಿದ ರಚನೆಗಳಲ್ಲಿಯೂ ಕಂಡುಬರುತ್ತವೆ. ಆದರೂ, ತಮ್ಮ ಕೃತಿ ರಚನೆಯಲ್ಲಿ ಇಷ್ಟದೈವಕ್ಕೆ ಅರ್ಪಿಸಲು ಇವು ಯೋಗ್ಯ ಎಂಬ ಆತ್ಮವಿಶ್ವಾಸವಿದೆ ಕವಿಗೆ. ಬಿನ್ನಹ ಮಾಡಲು ಹೊರಟ ಕವಿಯ ವಾಣಿ ಎಂಥದ್ದಾಗಿರಬೇಕು? ವಾಣಿಯ ವೀಣಾನಾದ, ಅವಳ ಕಾಲುಂಗುರದ ಘಲಿರು, ಕೋಗಿಲೆಯ ಇಂಚರ - ಇವು ಆಗದಿರಬಹುದು ತಮ್ಮ ಹಾಡು. ಅದು ಕಾಗೆಯ ದನಿಯೇ ಆದರೂ, ಕಾನನದ ಗೀತದಲ್ಲಿ ಅದು ಲೀನವಾಗಿ ಅಂದವಾಗಿಯೇ ತೋರುವುದು. ಎಲ್ಲ ದನಿಗಳ ಹಿಂದಿನ ಉಸಿರು ಪರಮಾತ್ಮ. ಗಾನದ ಬೆಡಗು ಇಲ್ಲದಿದ್ದರೂ ಸರಿ, ''ವಂಚನೆಯಿಲ್ಲದ ದನಿಯನು ನೀಡು'' ಎಂದು ಕೇಳಿಕೊಳ್ಳುತ್ತಾರೆ ಕವಿ ('ಹಾಡಯಿಕೆ'' ಬಿನ್ನಹ). ಶ್ರೀನಿವಾಸರ ಎಲ್ಲ ಗೀತಗಳಲ್ಲಿ 'ವಂಚನೆಯಿಲ್ಲದ ದನಿ' ಸ್ಪಷ್ಟವಾಗಿ ಕೇಳಿಬರುತ್ತದೆ, ಕಿವಿಗೊಟ್ಟು ಆಲಿಸಿದರೆ. ''ಸ್ವರವನು ಅರಿಯೇ ತಾಳವನರಿಯೇ, ಸರಿಯಾದ ರಾಗ ಅಲ್ಲದದ ನಾನರಿಯೆ'' ಎಂದು ಸಂಗೀತಜ್ಞಾನದ ಕೊರತೆಯ ಬಗೆಗೆ ಅವರ ಮಾತು ವಿನಯದಿಂದ ಆಡಿದ್ದು ಎಂದು ತೋರುತ್ತದೆ. ರಚನೆಗಳೆಲ್ಲ ಬೇರೆಬೇರೆ ತಾಳಗಳಿಗೆ ಹೊಂದುವಂತೆಯೆ ರಚಿತವಾಗಿವೆ (ತಾಳ ನಿರ್ದೇಶ ಮಾಡಿದ್ದರೆ ಚೆನ್ನಾಗಿತ್ತು); ಪ್ರತಿಯೊಂದು ಕೃತಿಗೂ ಉಚಿತವಾದ ರಾಗ ನಿರ್ದೇಶವಿದೆ. ಸಂಗೀತಕೃತಿರಚನಾ ದೃಷ್ಟಿಯಿಂದ ಅಲ್ಲಲ್ಲಿ ಕಂಡುಬರುವ ಸಣ್ಣ ಪುಟ್ಟ ಲೋಪದೋಷಗಳು (ಉದಾ: ತಾಳದ ಏಟು ಬೀಳುವ ಕಡೆ ಹಿತವಲ್ಲದ ರೀತಿಯಲ್ಲಿ ಪದಚ್ಛೇದವಾಗುವುದು: ''ವಿಷಯವಾವುದು ಹಿಡಿದೊಡೆಯ ವಿಷವ ನೆಣಿಸುತೆ'' ಮನವಿ, ಪು. 10) 'ಮೃದುಪದ ಬಂದ'ದ ನಾದಲಹರಿಯಲ್ಲಿ ಮುಚ್ಚಿ ಹೋಗುತ್ತವೆ. ಕೃತಿಗಳಲ್ಲಿ ಪದ್ಯರಚನಾ ವಿಧಾನದ ಛಂದೋಲಯಕ್ಕೆ ಅನುಗುಣವಾದ ಮಾತ್ರಾವಿನ್ಯಾಸಕ್ಕೆ ಬದಲು ಸಂಗೀತದ ತಾಳಲಯಕ್ಕೆ ಒಳಪಡುವಂತೆ ವಿರಳವಾಗಿ ಕಡಮೆಯ ಮಾತು ಬಳಕೆ ಆಗಿದ್ದಿದ್ದರೆ ಗೇಯ ದೃಷ್ಟಿಯಿಂದ ಹಾಡುಗಳ ಸ್ವರೂಪ ಹೆಚ್ಚು ಬಿಕ್ಕಟ್ಟಾಗಿರುತ್ತಿತ್ತು. ಆದರೆ, ಕವಿಯ ದೃಷ್ಟಿಯೆಬೇರೆ. ''ಜೀತ ಮಾಡುವುದು ಭಾವಕೆ ಮಾತು'' ಎಂಬ ಅವರ ನಿಲುವನ್ನೂ ನಾವು ಗಮನಿಸಬೇಕು. ಕವಿಯ ಗಮನವೆಲ್ಲ ಭಾವ ಪ್ರಕಾಶನ, ಭಾವ ವಿನ್ಯಾಸ - ಇವುಗಳ ಕಡೆಗೆ. ಹರಿ ಹಾಡು ಎಂದ; ತಾವು ಗಾಯಕರಲ್ಲದಿದ್ದರೂ ಕವಿ ಹಾಡಿದರು. ''ಬಾಯ ಮುಚ್ಚಿ ಒಬ್ಬರೊಬ್ಬರ ನೋಡುತೆ| ಗಾಯಕರೆಲ್ಲರು ನಸುನಗುತಿಹರು''; ಆದರೆ, ''ಮುರಹರ ಸುಮ್ಮನೆ ಹಾಡಿಕೊಂಡ ಹಾಡೇ ಹೊರತು ಸಂಗೀತ ವಿದ್ವಾಂಸರು ಮೆಚ್ಚಲಿ, ಕಚೇರಿಗಳಲ್ಲಿ ಹಾಡಲಿ ಎಂದು ರಚಿಸಿದವುಗಳಲ್ಲ. ''ಬಿನ್ನಹವಿದು ನಿನ್ನಡಿಗಳಲಿರಲಿ,'' ''ನಿನ್ನಡಿಯೊಳೆಸಗುವೀ ಮಾನವಿಯನು ಕೇಳು'' ಎಂದು ಗೀತ ಕುಸುಮಗಳನ್ನು ಕವಿ ತಮ್ಮ ಇಷ್ಟದೈವ ಚೆನ್ನಕೇಶವನ ಅಡಿಗಳಿಗೆ ಒಪ್ಪಿಸಿದ್ದಾರೆ. ''ನಿನ್ನ ಗಾನದೊಳು ಎಲ್ಲಾ ದನಿಗಳೂ ಸೇರಿ ಚೆನ್ನವಾಗುವುದು ಗಾನವಿಶಾರದಾ'' ಎಂಬ ಕವಿಯ ನಂಬಿಕೆಯ ಬೆಳಕಿನಲ್ಲೇ ನಾವು ಈ ರಚನೆಗಳನ್ನು ಸ್ವೀಕರಿಸಬೇಕು. ಮಾತಿಗಿಂತ ಭಾವಕ್ಕೆ ಪ್ರಾಧಾನ್ಯವುಳ್ಳ ಇವನ್ನು ಭಾವಗೀತಗಳೆಂದೇ ಎಣಿಸುವುದು ಸರಿ. ಕವಿ ಕೂಡ ಈ ಎರಡು ಸಂಕಲನಗಳನ್ನು ತಮ್ಮ ಕಾವ್ಯ ಸಂಪುಟಗಳಲ್ಲೆ ಅಡಕಮಾಡಿದ್ದಾರೆ.

೩

'ಬಿನ್ನಹ' ಮತ್ತು 'ಮನವಿ'ಗಳಲ್ಲಿ ಭಕ್ತಿ ಸಾಧನೆಯಲ್ಲಿ ತೊಡಗಿದ

ನಿರ್ಮಲಾಂತಃಕರಣದ ಕವಿಯ ಪರಿಚಯ ನಮಗಾಗುತ್ತದೆ. ತನ್ನ ಭಕ್ತರನ್ನು ಚತುರ್ವಿಧ ಎಂದು ಭಗವಂತನೇ ಗೀತೆಯಲ್ಲಿ ಹೇಳಿದ್ದಾನೆ : ಆರ್ತ, ಅರ್ಥಾರ್ಥಿ, ಜಿಜ್ಞಾಸು, ಜ್ಞಾನೀ. 'ಬಿನ್ನಹ-ಮನವಿ'ಗಳ ಕವಿ ಆರ್ತರಾಗಿ ಕಂಡುಬರುವುದಿಲ್ಲ. ಎಂದ ಮಾತ್ರಕ್ಕೆ ಈ ಕವಿ ಬದುಕನಲ್ಲಿ ಕ್ಷೇಶ ಕಾರ್ಪಣ್ಯಗಳನ್ನು ಕಂಡವರಲ್ಲ ಎಂದು ಅರ್ಥವಲ್ಲ. ಚಿಕ್ಕಂದಿನಲ್ಲೆ ತಂದೆಯನ್ನು ಕಳೆದುಕೊಂಡಿದ್ದಾರೆ; ವಿದ್ಯಾರ್ಜನೆ ಬವಣೆಪಟ್ಟಿದ್ದಾರೆ. ''ಎಳೆವೆಯ ದಿನದಲ್ಲಿ ಅನ್ನವ ತಿರಿದೆನು ವಾರದೇಳು ದಿನದಲ್ಲಿ ಮನೆಯೇಳು'' ಎಂದು ಸ್ಮರಿಸುವ ಇವರು, ಪರಮಾತ್ಮನ ದಯವೇ ಮನೆಯವರ ಆಕೃತಿಯಲ್ಲಿ ಅನ್ನವಿಟ್ಟು ಸಾಕಿತು ಎಂದು ನಂಬಿದವರು; ''ಎಂದೂ ಎಲ್ಲೂ ಹೊರೆವನು ನೀನೆ, ಬಿಡದಿರಲೀ ನಂಬುಗೆ'' ಎಂದು ನಂಬಿ ನಡೆಯುತ್ತಿರುವ ಅನನ್ಯ ಶರಣ ಭಾವದ ಭಕ್ತ. ಎಳವೆಯಲ್ಲಿ ಪ್ರಾರಬ್ಧ ಕರ್ಮಫಲವನ್ನು ಅನುಭವಿಸಬೇಕಾಯಿತು. ಕಷ್ಟದಲ್ಲಿ ಕೈಬಿಡದ ದೈವವನ್ನು ನೆನೆಯುವ ಈ ಕವಿ 'ಸುಖ ಪ್ರಾರಬ್ಧ'ದ ಕಾಲ ಮೊದಲಿಟ್ಟಾಗ, ದೈವವನ್ನು ಬಹು ಸುಲಭವಾಗಿ ಮರೆಯಬಹುದಾಗಿತ್ತು - ಸಾಮಾನ್ಯ ಜನರಂತೆ. ಸಂಕಟ ಬಂದಾಗ ವೆಂಕಟರಮಣ! ಇದು ಲೋಕ ರೂಢಿ. ಸುಖ ಸಾಧನೆ ಸಂಪತ್ತು ದೊರೆತಾಗ. ಅದು ಸ್ವಸಾಮರ್ಥ್ಯದಿಂದ ಪಡೆದದ್ದು! ಕಷ್ಟ ಕ್ಷೇಶಗಳಲ್ಲಿ ಪರಮಾತ್ಮನ ಕೈವಾಡ ಕಾಣುವ ದೃಷ್ಟಿ ಸುಖದಲ್ಲಿ ಕಾಣದು. ಶ್ರೀನಿವಾಸರಂತೆ ''ಪರಮಾತ್ಮನುಂಟು ಸುಖದೊಳು'' ('ತೆಂಗಾಳಿ') ಎಂದು ಅರಿಯುವುದಕ್ಕೆ, ಭಗವತ್ಸ್ವರೂಪದ ಪ್ರಜ್ಞೆ ಸೂಕ್ಷ್ಮವಾಗಿರಬೇಕು. ಅಲ್ಲದೆ, ಈ ಸುಖದ ಕಲ್ಪನೆ ಕೂಡ ಸಾಮಾನ್ಯ ರೀತಿಯದಲ್ಲ. ಅವರ ದೃಷ್ಟಿಯಲ್ಲಿ ಸುಖ ಎಂದರೆ ಇಂದ್ರಿಯ ಸುಖವನ್ನು ಮೀರಿದ ಆಧ್ಯಾತ್ಮಿಕ ಸುಖ, ಭಗವಂತನ ಇರವಿನ ಅರವಿನ ಸುಖ, ಅವನ ಕಾಲ್ಯಾಣಗುಣಗಳ - ಅನುಪಮ ಸೌಂದರ್ಯದ ದುಃಖವಾಗಲಿ, ಒಳಿತಾಗಲಿ ಕೆಡುಕಾಗಲಿ - ಪರಮಾತ್ಮನು ನೀಡಿದ್ದೆಲ್ಲವನ್ನೂ ಅವನ ಪ್ರಸಾದ ಎಂದು ಸ್ವೀಕರಿಸುವುದರಲ್ಲಿ ದೊರೆಯುವ ದ್ವಂದ್ವಾತೀತ ಸುಖ; ಸಂಪೂರ್ಣ ಸಮರ್ಪಣ ಭಾವದಲ್ಲಿ, ಪ್ರಪತ್ತಿಯಲ್ಲಿ, ಕಂಡುಕೊಳ್ಳುವ ಸುಖ. ಈ ಭವವನ್ನಿಷ್ಟು ಸುಖದಲ್ಲಿ ಪರಮಾತ್ಮ ಕಾಣದೆ ಹೋದರೆ ಬೇರೆ ಯಾವ ಬಗೆಯ ಸುಖದಲ್ಲಿ ಕಂಡಾನು?

ಈ ದಿವ್ಯಸುಖದ ನೆಲೆ -ಸೆಲೆ ಪರಮಾತ್ಮನಾದ್ದರಿಂದ, ಆ ಪರಮಾತ್ಮನ ಸ್ವರೂಪ ಎಂಥದೆಂದು ಅರಿಯುವ ಪ್ರಯತ್ನ ಸಾಧಕ ಭಕ್ತನ ಮುಂದಿನ ಮಜಲು. 'ಬಿನ್ನಹ' - 'ಮನವಿ'ಗಳ ಬಹುಪಾಲಿಯ ಕವನಗಳು ಪರಮಾತ್ಮನ ಸ್ವರೂಪ 'ದರ್ಶನ' ಸುಖವನ್ನು ದಕ್ಕಿಸಿಕೊಳ್ಳುವ ಕವಿಯ ಏಕೋನಿಷ್ಠ ಭಾವನಾತ್ಮಕ ಸಾಧನೆ-ಸಿದ್ಧಿಗಳ ಹೊಳಹನ್ನು ಸುಳಿವುಗೊಡುವ ಸಾರ್ಥಕ, ಸುಂದರ, ಪ್ರಯತ್ನಗಳು; ಅವರ ಅಂತರಂಗವನ್ನು ವ್ಯಾಪಿಸಿ ಬೆಳಗುವ ಬೆಳಕನ್ನು ತೋರುವ ಬೆಳಕಿನ ಕಿಂಡಿಗಳು.

''ಕವಿಕುಲದ ಕವಿ'' ಪರಮಾತ್ಮ ; ಸೃಷ್ಟಿ ಅವನ ''ಸವಿಯಾದ ಕವಿತೆ.'' ಸೃಷ್ಟಿ ಸರ್ವಸ್ವದಲ್ಲಿಯೂ ಅವನು ವ್ಯಾಪಕ; ಸೂತ್ರಾತ್ಮ. ಆದರೆ, ''ಸರವಿದನು ಪೋಕ್ಕದಾರವ ಹವಳ ಕಾಣದಿದೆ.'' ನಿನ್ನ ಕವಿತೆಯ ಅರ್ಥವನ್ನು ನೀನೆ ತಿಳಿಸು ಎಂದು ಕವಿ ('ಕವಿಗಳ ಕವಿ' ಎಂಬ ಗೀತದಲ್ಲಿ) ಬೇಡಿಕೊಳ್ಳುತ್ತಾರೆ. ಕವಿಯ ಭಾವನೆಯಲ್ಲಿ ಸೃಷ್ಟಿಯನ್ನು ಅರ್ಥಮಾಡಿಕೊಂಡರೆ ಸೃಷ್ಟಿಯ ಕರ್ತನನ್ನು ಅರ್ಥಮಾಡಿಕೊಂಡಂತೆ. ಕವಿಯ ವ್ಯಕ್ತಿತ್ವವನ್ನು ಅರಿಯಬೇಕಾದರೆ ಕಾವ್ಯವನ್ನು ಅರಿಯಬೇಕು. ಆದರೂ, ಕಾವ್ಯವನ್ನು ಬರೆದ ಕವಿಯನ್ನು ನೋಡಬೇಕೆಂಬ ಆಸೆ ಯಾರಿಗಿರುವುದಿಲ್ಲ! ಕವಿಯೇ ಆದವನಿಗೆ ಕವಿಗಳ

ಕವಿಯನ್ನು ನೋಡಬೇಕೆಂಬ ಹಂಬಲ. ಈ ಹಂಬಲವು ಹಲವು ಕೃತಿಗಳ ಹಲವಂದವಾಗಿ ಹೂತಿದೆ. ''ನಿನ್ನ ನೋಡದ ಈ ಜನ್ಮ ವ್ಯರ್ಥ'' ಎಂದು ಕುದ್ದುಕೊಳ್ಳುತ್ತಾರೆ. ಅವನು ''ನಿರಾಕಾರ, ನಿರ್ಗುಣ, ನಿರ್ವಿಕಾರ'' ಎಂಬುದನ್ನು ಅರಿತ ಕವಿಗೆ ಸಾಕಾರವಾಗಿಯೂ ಅವನನ್ನು ಕಾಣಬೇಕು ಎಂಬ ಬಯಕೆ. ''ವನಜಾಕ್ಷ, ನೀ ಧರಿಸಿರುವ ರೂಪಿನ ಸಾಸಿರಗಳನರಿಯುವುದ ನೀಡು'' ಎಂದು ಬೇಡಿಕೊಳ್ಳುತ್ತಾರೆ.

ಭಕ್ತ ಯಾವಾಗಲೂ ದೇವರ ಬಳಿಗೆ ಹೋಗುವುದಿಲ್ಲ; ದೇವರೇ ಭಕ್ತನ ಬಳಿಗೆ ಬರಬೇಕು! ಭಕ್ತನ ಕರೆಗೆ ಭಗವಂತ ಓಗೊಟ್ಟು ಬಂದಾನು. ಬರಮಾಡಿಕೊಳ್ಳಲು ನಾವು ಸಿದ್ಧರಾಗಿರಬೇಕು; ಅವನು ಯಾವಾಗ ದರ್ಶನ ಕೊಡುವನೋ? ಎಚ್ಚರದಲ್ಲಿ ಬಂದರೆ - ಬಂದೇ ಇದ್ದರೂ - ಎಚ್ಚರದಲಿ ಮನೆಮಠ ಮಂದಿ ಜನ ನೆಚ್ಚಿನ ಹೆಂಡಿರು ಮಕ್ಕಳು ಬಳಗ ಹೆಚ್ಚಿದ ಆಸೆ ಬಿಡದೆ ಬಾಧಿಸಲು, ಸಚ್ಚಿದಾನಂದ, ನಿನ್ನ ನೋಡಲಿಲ್ಲ; ಎಚ್ಚತ್ತು ಪ್ರಯೋಜನವೇನು?'' ಎಂದು ಕೊರಗುತ್ತಾರೆ. ''ನಿದ್ರೆಯಲಿ ಬರುವೊಡೆ ನಿದ್ರೆಯನು ಕೊಡು'' ಎಂದು ಬೇಡುತ್ತಾರೆ. ''ನಿನ್ನ ಕಾಣದೆ ಬಾಳ್ವುದು ಇದ್ದರೂ ಇಲ್ಲದ ಇರವು'' ಎಂಬ ತವಕದ ತುರೀಯಾವಸ್ಥೆಯನ್ನು ಮುಟ್ಟಿದ್ದಾರೆ, ಈ ಕವಿ - ಭಕ್ತ.

ಕವಿಯ ಮೊರೆಯನ್ನು ಕವಿಗಳ ಕವಿ ಕೇಳಿದನೆಂದು ತೋರುತ್ತದೆ; ನಿದ್ರೆಯಲಿ ಬರುವೊಡೆ ನಿದ್ರೆಯನು ಕೊಡು ಎಂದು ತಾನೆ ಅವರ ಪ್ರಾರ್ಥನೆ? ಒಮ್ಮೆ, ''ಅರನಿದ್ರೆಯಲಿ ಮೆಯ್ಯುಮರೆದಿಹ ಸಮಯದಿ ಹರಿ ಬಂದು ಕೆಲದೊಳು ಕುಳಿತು ಕರುಣದಿ'' ತನ್ನ ಕಳೆಯನ್ನು ತಮ್ಮಲ್ಲಿ ಇಟ್ಟು ''ಕಣ್ ತೆರೆವ ಮುನ್ನ ಮರೆಯಾಗುತೆ'' ಹೋದಂತೆ ಭಾಸವಾಗುತ್ತದೆ. ಹರಿ ಎಚ್ಚರಿಸದೆ, ತನ್ನ ತೋರಗೊಡದೆ, ಹೊರಟುಹೋದನೆಂದು ಪರಿತಾಪ. ''ಬೇರೆ ಲೋಕವನು ಸೇರಿದ ತಾಯಿ ಕುಮಾರನ ನಿದ್ರೆಯಲಿ ಮುದ್ದಿಪ ತೆರದಲಿ, ತೋರದೆ ಮರೆಯಿಂದ ಪೊರೆಯುವೆ'' ಎಂಬ ಸಮಾಧಾನ. ಆದರೂ, ''ನಾ ಕಾಣಲಾರೆನೆ ಇಲ್ಲಿ ನಿನ್ನನು ಕರುಣಾಕರಾ'' ಎಂಬ ಭಗವದ್ದರ್ಶನದ ಕಡು ಬಯಕೆ ಅವರನ್ನು ಬಿಡದು. ಭಗವಂತನನ್ನು ಕಾಣಬೇಕಾದರೆ ಎಲ್ಲ ಆಶೆಗಳನ್ನು ತೊರೆಯಬೇಕು; ಆಶೆ ಪಾಶ, ಆದರೆ, ಭಗವಂತನನ್ನು ಕಾಣಬೇಕೆಂಬ ಆಶೆ ಪಾಶವಾಗದು. ಈ ಆಶೆ ಕವಿಯಲ್ಲಿ ಎಷ್ಟು ಪ್ರಬಲವಾಗಿದೆ ಎಂದರೆ, ''ಹರಿಯೇ, ನಿನ್ನ ಸೇರಲೆಂದು ಕರಣಗಳೆಲ್ಲವು ಆಶಿಸುತಿಹವಯ್ಯ''; ''ಜಗದೊಳೆಲ್ಲೆಡೆ ನಿನ್ನ ಸೊಬಗನು ನೋಡಿ ನೋಡಿ ಇನ್ನೊಮ್ಮೆ ನೋಡುವ, ಚೆನ್ನಾಗಿ ಎನ್ನುವಾಸೆಯಿಂದ ತೀವಿ ಎನ್ನ ಮನಕರಣಗಳೆಲ್ಲವು ಆಶಿಸುತಿಹವಯ್ಯ'' - ಎಂದು ಬಿನ್ನವಿಸಿಕೊಳ್ಳುತ್ತಾರೆ.

ಕವಿಯದು ಮೂಢಭಕ್ತಿಯಲ್ಲ; ಜಿಜ್ಞಾಸುವಿನ ಭಕ್ತಿ; ಜ್ಞಾನಿಯ ಭಕ್ತಿ. ಜಗತ್ತಿನ ಜ್ಞಾನಿಗಳು, ಜಿಜ್ಞಾಸುಗಳು, ಸಾಧಕರು, ಭಕ್ತರು, ಮೀಮಾಂಸಕರು, ಮುಂತಾದ ನೂರಾರು ಪಂಥದವರು ಭಗವಂತನ ಹುಡುಕಾಟದಲಿ ಹೇಗೆ ತೊಳಲಿದ್ದಾರೆ, ಬಳಲಿದ್ದಾರೆ ಎಂಬುದನ್ನು - ''ನೂರಾರು ಕಡೆಯಿಂದ ಸೇರಿ ಬಂದಿರುವೆಗಳು ಬಾರಿ ಬಾರಿಗೆ ಒಂದನೊಂದಡ್ಡ ಕಟ್ಟಿ, ಸಾರೆಯೊಳಗಿರುವಿನಿಸು ಸಕ್ಕರೆಯ ಸೇರುವರೆ ತಾರಾಡುವಂತೆ ತಾರಾಡಿ ಹರಿಹರಿದೋಡಿ ಅರುಸುವುದು ಜಗವು ನಿನ್ನನು ಶ್ರೀನಿವಾಸ, ಹರಿಯೆಂದು ಹರನೆಂದು, ವರಪಿತಾಮಹನೆಂದು'' ಈ ಅನ್ವೇಷಣದಲ್ಲಿ ಕವಿ ತಮ್ಮದೇ ಆದ ಮಾರ್ಗವನ್ನು ಹಿಡಿದಿರುವುದು ಸ್ಪಷ್ಟ. ಈ ಅನ್ವೇಷಣದಲ್ಲಿ, ಸೋಲು ಸಂದೇಹ, ಸಮಾಧಾನ - ಮುಂತಾಗಿ ಎಲ್ಲ ಅನುಭವಗಳೂ ಅನ್ವೇಷಣದ ಅಂಗಗಳೇ. ''ಎಲ್ಲವ ನೋಡಿದೆನು, ಎಲ್ಲಿಯೂ ನಿನ್ನ

ನೋಡಲಿಲ್ಲ'' ಎಂಬ ಅತೃಪ್ತಿ; ತಾನೇ ಸೃಷ್ಟಿಸಿರುವ ವ್ಯಕ್ತಜಗತ್ತಿನ ಮರೆಯಲ್ಲಿ ಅವ್ಯಕ್ತನಾಗಿರುವ ಪರಮಾತ್ಮನನ್ನು ''ಅರಿಯಲಾರೆ ಅರಸಲಾರೆ'' ಎಂಬ ಅಶಕ್ತತೆಯ ನಿಟ್ಟುಸಿರು; ''ಶ್ರೀನಿವಾಸ, ಈ ಲೋಕದಿ ರೂಪವಿತಾನವ ತಳೆದು ಎನಗೆ ಕಾಣು'' ಎಂದು ಮುಗ್ಧನಾಗಿ ತಾನೇ ಬೇಡಿದೆನೇ ಎಂಬ ಪಶ್ಚಾತ್ತಾಪ; ಪರಮಾತ್ಮನ ರೂಪವರ್ಣನೆಯಲ್ಲಿ ತಣಿಯದ ಮನದ ಅತೃಪ್ತಿ - ಎಲ್ಲ ಭಾವತರಂಗಗಳೂ ಭಕ್ತಿ ಶರಧಿಯಲ್ಲೇ ಮೂಡಿದವು.

ಗೋಪಿಕಾಸ್ತ್ರೀಯರ ಕೃಷ್ಣ ಪ್ರೇಮದ ಸ್ವರೂಪದ ಭಾವಭಣಿತೆ ಕೆಲವು ಗೋಪಿಕಾ ಗೀತೆಗಳಾಗಿ ಹೊಮ್ಮಿವೆ ('ಬಿನ್ನಹ'ದ ನಿರೀಕ್ಷೆ, ಬೇರೆ ಇಷ್ಟು, ಕೋಗಿಲೆ; 'ಮನವಿ'ಯ ಪ್ರತ್ಯಾಶೆ); ಗೋಕುಲದಲ್ಲಿ ಗೋಪಿಯರು ಕೃಷ್ಣನ ಬರವಿಗಾಗಿ ಕಾಯುವುದು; ಕೃಷ್ಣ ಸಾನ್ನಿಧ್ಯ ಕ್ಷಣವಾದರೂ ಸರಿಯೇ ದೊರೆಯಲಿ ಎಂಬ ಒಬ್ಬ ಗೋಪಿಯ ಒಲವಿನ ಹಟ; ಗೋಪಿಯರ ವಿರಹವೇದನೆಯನ್ನು ತೀವ್ರಗೊಳಿಸುತ್ತಿರುವ, 'ವಿರಹ ಘನಿಸಿ ಮನಗಳ ಮುರಿಯೆ ಕುಲಿಶಮಾದವೊಲಿರುವ' ಕೋಗಿಲೆಯ ದನಿಯ ಕಠೋರ ಮಾಧುರ್ಯ; ಕೃಷ್ಣ ಬಾರನು ಎಂಬ ನಿರಾಶೆಯಲ್ಲಿದ್ದಾಗ ಮೋಡಪನ್ನು ಸೇರಿಕೊಂಡು ಬರುವ ಮಿಂಚಿನಂತೆ ಬಂದ ಕೊಳಲದನಿ ಹುಟ್ಟಿಸಿದ ಪ್ರತ್ಯಾಶೆ - ಈ ಸುಂದರ ಸನ್ನಿವೇಶಗಳ ವರ್ಣನೆ ವಸ್ತುನಿಷ್ಠವಾಗಿವೆ, ದಿಟ; ಆದರೆ, ಕವಿಯ ಇತರ ಸ್ವನಿಷ್ಠ ಗೀತೆಗಳ ಸಾಹಚರ್ಯದ ಪರಿಸರದಲ್ಲಿ ಈ ಗೋಪಕಾಗೀತೆಗಳು ವ್ಯಾಜಾಂತರದಿಂದ ಕವಿಯ ಮಧುರ ಭಕ್ತಿಯನ್ನೇ ವ್ಯಂಜನ ಮಾಡುತ್ತಿವೆ.

ಭಗವಂತನು ಸರ್ವಾಂತರ್ಯಾಮಿ ಎಂಬ ಅರಿವುಳ್ಳ ಕವಿಗೆ ಪ್ರಕೃತಿಯಲ್ಲಿಯೂ ದೈವಾಂಶವು ಗೋಚರಿಸುತ್ತದೆ. ಒಂದು ಉದಯದಂದು ಕವಿಗೆ ಅದೇನೋ ಉಲ್ಲಾಸ. ಅದಕ್ಕೆ ಕಾರಣ ಗೊತ್ತಾಗದು. ''ರಂಗನಾಥ, ಏನು ಇಂತುಬ್ಬುತಿದೆ ಹೃದಯ ರಂಗದಲಿ ಸಂತಸ ಈ ಉದಯದಿ . . . ಮಲೆಯ ಹೊದೆದಿರೆ ಪೀತವಸನದೊಲು ಹೊಂಬೆಳಗು ನಲಿವುದೇತಕೆ ಇಂತ ಮರುಳಾಗಿ ಮನವು?'' ಎಂದು ರಂಗನಾಥನನ್ನೇ ಪ್ರಶ್ನಿಸುತ್ತಾರೆ. ಇನ್ನೊಂದು ವೈಶಾಖದ ಉದಯಲ್ಲಿಯೂ ಇದೇ ಬಗೆಯ ಪ್ರಶ್ನೆ ಅವರನ್ನು ಕಾಡಿ, ಇದೆಲ್ಲಾ ''ಉದಯದ ಸೊಬಗ ಸುಖಸೌಂದರ್ಯಸಾರ'' ಎಂಬ ಉತ್ತರ ಹೊಳೆಯುತ್ತದೆ. ಒಂದು ಹೆಸರರಿಯದ ಪಕ್ಷಿಯ ಇಂಚರದಲ್ಲಿ ಕೃಷ್ಣನ ಅಂದಿನ ಕೊಳಲಗಾನ ತುಂಬಿ ಬಂದಿದೆ ಎಂದು ಭಾವಿಸುತ್ತಾರೆ. ಚೆಲುವಾದ ಹೂವು, ಹಣ್ಣು, ಕನ್ಯೆ - ಇವನ್ನು ಕಂಡು ಜನ ಆಕರ್ಷಿತರಾಗುತ್ತಾರೆ, ತಮ್ಮದನ್ನಾಗಿ ಮಾಡಿಕೊಳ್ಳಬಯಸುತ್ತಾರೆ. ಏಕೆ? ಸ್ವಾರ್ಥ ಎಂಬುದು ಸುಲಭದ ಉತ್ತರ. ಕವಿಯ ಉತ್ತರ; ಇದು ಭಗವದಾಕರ್ಷಣೆ - ''ಯಾದವಾ, ಇದು ನೀನು ಎಳೆದ ದಾರಿ. ನೀನು ಎಲ್ಲದರೊಳಿಹೆ ಎಂಬುದರ ಅರ್ಥವನು ನಾನು ಇಂದರಿದೆ ಕೃಷ್ಣಾ.'' ಶ್ರಾವಣ ಕಳೆದ ತರುಣದಲ್ಲಿ, ''ಬಂಗಾರವನು ಪುಟಕೆ ಹಾಕಿ ಊದಿಸೆ ಬರುವ ರಂಗಿನೊಂದತಿಶಯದ ಶೋಭೆಯಿಂದ ಶೃಂಗಾರವಾಗಿ ಕಣ್ಣಿಗೆ ಕೌತುಕವ ಕೊಡುವ ಪಾಂಗಿನಲಿ ಮೆರೆಯುತಿಹ'' ಹೂವೊಂದು ಕವಿಯ ಕಣ್ಣಿಗೆ ಬೀಳುತ್ತದೆ. ಯಾವ ಭಗೆಯ ಹೂವು ಎಂದು ಅರಿಯರು. ''ಆವ ಹೂವೆಂದು ಬಳಿಯಲಿ ಹೋಗಿ ನೋಡುವೆನೆ, ದೇವ, ನಿನ್ನಯ ಸೃಷ್ಟಿಯ ಸೊಬಗು ಆವ ತೆರನ ಅಲ್ಪ ತಾಣದಲು ಕಾಣಲುಬಹುದು'' ಎಂದು ಭಗವಂತನ ಕರಕೌಶಲವನ್ನು ಎಲ್ಲೆಲ್ಲೂ ಕಾಣುತ್ತಾರೆ.

ಎಲ್ಲೆಲ್ಲಿಯೂ ಇರುವ ಪರಮಾತ್ಮ ತನ್ನಲ್ಲಿಯೇ ಇದ್ದಾನಲ್ಲವೆ? ''ಸರ್ವಂ ಖಲ್ವಿದಂ ಬ್ರಹ್ಮ'' ಎನ್ನುವ ಬ್ರಹ್ಮಜ್ಞಾನಿಯ ನಿಲುವಿನಲ್ಲಿ ''ಅಹಂ ಬ್ರಹ್ಮಾಸ್ಮಿ''ಯೂ ಅಡಗಿದೆ.

ನಿರ್ಗುಣ ಬ್ರಹ್ಮೋಪಾಸಕನ ನಿಲುವು ಇದು; ಕಣ್ಣು ಮುಚ್ಚಿ ಆತ್ಮಧ್ಯಾನದಲ್ಲಿ ಮುಳುಗಿ ಚೈತನ್ಯರೂಪದ ಪರವಸ್ತುವನ್ನು ಅರಿಯುವ - ಅರಿತು ಅನುಭವಕ್ಕೆ ತಂದು ಕೊಳ್ಳುವ - ಜ್ಞಾನಮಾರ್ಗ. ಸಗುಣ ಬ್ರಹ್ಮೋಪಾಸಕನಿಗೆ - ಭಕ್ತಿಮಾರ್ಗದ ಜ್ಞಾನಿಗೆ - ಇದು ಹಿಡಿಸುವುದಿಲ್ಲ. ಈ ಮಾರ್ಗದಲ್ಲಿ ಒಲವುಳ್ಳ ಕವಿ - ''ಅರಿವರಿವೆನುತಲಿ ಅರಿವಿಲಿತನದಲಿ ಮರುಗಿಸಿ ಮಾನವ ಕಣ್ಣಿನ ಎವೆಗಳು ತೆರೆಯಲಿಕಿರುವುದ ಮರೆಯುತೆ ಮುಚ್ಚಿ ಹರಿಯನು ಇರವಿನ ಹೊರಗೇ ಬಿಡುವೆಯ?'' ಎಂದು ಕೇಳುತ್ತಾರೆ. ''ಬ್ರಹ್ಮಾಂಡವ ನೋಡದೆ ದೇವರ ಕಾಣ್ಬರೆ?'' ಇದು ಕವಿ ಮನೋಧರ್ಮದ ಯಾವ ಆಸ್ತಿಕನಾದರೂ ಕೇಳಬಹುದಾದ ಪ್ರಶ್ನೆ. ಸಹಜ ಪ್ರಶ್ನೆ; ಸಾರ್ಥಕ ಪ್ರಶ್ನೆ. ಹೊರಗಿನ ಪ್ರಪಂಚದಲ್ಲಿಯೆ ಹರಿಯ ಇರವನ್ನು ಗುರುತಿಸಬೇಕು; ಇದಕ್ಕೆ ಕಣ್ಣು ನೆರವು. ಕಣ್ಣುಮುಚ್ಚಿ ಹರಿಯನ್ನು ಒಳಗೆ ಕಾಣುತ್ತೇನೆ ಎನ್ನುವುದು ಮೂರ್ಖತನ. ಇಲ್ಲಿನ ಒಂದು ಕರಣದ ಮೂಲಕ ಕಾಣಲಾರದವನು 'ಅಲ್ಲಿನ' ಕರಣದ (ಎಂದರೆ ಅಂತಃಕರಣದ, ಒಳಗಣ್ಣಿನ, ಅರ್ಥಾತ್ ಜ್ಞಾನಚಕ್ಷುಸ್ಸಿನ) ಮೂಲಕ ಕಾಣುವ ಭರವಸೆ ಏನು? ಒಳಗೆ ಕಾಣುವ ಯತ್ನ ತಪ್ಪು, ಅಥವಾ ಬೇಡ, ಎಂದಲ್ಲ. ಮೊದಲು ಹೊರಗಿನ ಇರವಿನಲ್ಲಿ ಹರಿಯ ಕಾಣು, ಹೊರಗಣ್ಣಿನ ಮೂಲಕ - ಇದು ಕವಿಯ ಆಶಯ. ಕವಿಯ ನಿಸರ್ಗದ ನೋಟದಲ್ಲಿ ಈ ಆಶಯ ಸುವ್ಯಕ್ತವಾಗಿದೆ.

ಹೀಗೆ ಎಲ್ಲೆಲ್ಲೂ ಪರಮಾತ್ಮನ ಇರವನ್ನು ಕಾಣಬಲ್ಲ ಈ ಭಕ್ತಕವಿಗೆ - ಆತನ ಕೃಪೆಯಲ್ಲಿ, ವಾತ್ಸಲ್ಯದಲ್ಲಿ, ಎಲ್ಲ ಸ್ಥಿತಿಯಲ್ಲೂ ಎಲ್ಲೆಲ್ಲೂ ಎಂದೆಂದೂ ತನ್ನನ್ನು ಕಾಪಾಡುತ್ತಾನೆ ಎಂಬ ತಿಳಿವಳಿಕೆಯಲ್ಲಿ, ಅಚಲವಾದ ನಂಬಿಕೆ. ದೇವರು ತನ್ನನ್ನು ಮರೆತನೇನೋ, ತನ್ನ ಕೈಬಿಟ್ಟನೇನೋ ಎಂಬ ಸಂದೇಹ ಭಕ್ತನನ್ನು ಕಾಡದೆ ಇರುವುದಿಲ್ಲ. ಬದುಕಿನಲ್ಲಿ ಅಡಸುವ ಕ್ಲೇಶಪರಂಪರೆ ದೇವರು ತನಗೆ ಒಡ್ಡಿದ ಪರೀಕ್ಷೆ ಎಂಬ ಭಾವ ಬಾರದಿರುವುದಿಲ್ಲ. ಆದರೆ, ಈ ಕವಿಯ ಜೀವನದಲ್ಲಿ ಅಂತಹ ಸಂದೇಹದ ಬಿರುಗಾಳಿ ಬೀಸಿಲ್ಲ; ದುಃಖ ಕೋಟಲೆಗಳ ಅಗ್ನಿಪರೀಕ್ಷೆ ನಡೆದಿಲ್ಲ. ಇಲ್ಲಿನ ರಚನೆಗಳಲ್ಲಿಯಂತೂ ಆ ಬಗೆಗೆ ಸಾಕ್ಷ್ಯವಿಲ್ಲ. ಒಮ್ಮೆ ಮಾತ್ರ, ''ಸಂದೇಹವ ತಾಳಲಾರೆ, ತಂದೆ ನಿನ್ನ ಕೃಪೆ ಇಲ್ಲವೋ ಎಂಬ ಸಂದೇಹವ ತಾಳಲಾರೆ'' ಎಂಬ ಸಂದೇಹದ ಸುಳಿಗಾಳಿ ಸೋಕಿದೆ. ಉಳಿದಂತೆ, ತಾಯಿ ತನ್ನ ಮಗುವನ್ನು ಕಾಪಾಡುವಂತೆ, ಮಾರ್ಜಾಲಕಿಶೋರ ನ್ಯಾಯದಿಂದ ಭಗವಂತ ತಮ್ಮನ್ನು ಮೊರೆಯುತ್ತಿದ್ದಾನೆ, ನಿದ್ದೆಯಲ್ಲಿ ಕೂಡ ಮರೆಯಲ್ಲಿದ್ದು ಪೊರೆಯುತ್ತಿದ್ದಾನೆ, ಎಂದೇ ಕವಿಯ ದೃಢನಂಬಿಕೆ.

ಪೂಜೆ ಭಕ್ತಿಯ ಸಿದ್ಧಿಗೆ ಒಂದು ಅಗತ್ಯ ಸಾಧನ. ಇವರ ಪೂಜಾಮೂರ್ತಿ ಚೆನ್ನಕೇಶವ, ಶ್ರೀನಿವಾಸ, ಶ್ರೀಹರಿ. ವಿಷ್ಣುವಿನ ಭಕ್ತರಾದರೂ ಇವರ ದೃಷ್ಟಿ ವಿಶಾಲ. ''ಯಾವ ರೂಪದೊಳು ನಿನ್ನನ್ನು ಪೂಜಿಸಿದೊಡೇನು? ಯಾವ ನಾಮದಿ ನಿನ್ನ ಕರೆದರೇನು? ಸಾವಿರಾರು ನಾಮಗಳನು ಪೊತ್ತೆಲ್ಲರ ಸೇವೆಯನು ಕೊಳುವವನು ಒರ್ವ ನೀನು'' ಎನ್ನುವ ಇವರ ನಿಲುವು ಹೊಸದಲ್ಲವಾದರೂ, ಅವರ ಅನುಭವದ ಮಾತಾಗಿ ಬಂದಿರುವುದರಿಂದ ಗಮನಾರ್ಹ.

ದೇವರಲ್ಲಿ ಬೇಡಿಕೆಯನ್ನು ಸಲ್ಲಿಸದಿರುವ ಭಕ್ತರು ಯಾರೂ ಇಲ್ಲ. ಇಷ್ಟಾರ್ಥಗಳನ್ನು ಬೇಡಿಕೊಳ್ಳುವುದು ಪೂಜೆಯ ಒಂದು ಅಂಗವಾಗಿಯೇ ನಡೆದುಬಂದಿದೆ. ಕವಿಯ 'ಬಿನ್ನಹ-ಮನವಿ'ಗಳಲ್ಲಿ ಅವರ ಬೇಡಿಕೆಗಳೂ ಹಲವಿವೆ; ಆದರೆ ಎಲ್ಲೂ 'ಅರ್ಥಾರ್ಥಿ' ಯಾಗಿ ಬೇಡಿಲ್ಲ; ಅವರು ಬೇಡುವುದೆಲ್ಲ ಭಕ್ತಿಯೊಂದನ್ನೆ; ನಿಜವಾದ ಭಕ್ತನ

ಲಕ್ಷಣ ಇದು. ಇನ್ನು ಅವರ ಬೇಡಿಕೆಗಳ ಸ್ವರೂಪದ ಕೆಲವು ನಿದರ್ಶನಗಳು; ''ನಿನ್ನ ಮಕ್ಕಳು ನಿನ್ನ ಕರೆವ ದನಿ ಯಾವುದೋ ಆ ದನಿಯ ನೀಡು'' ಎಂದು ಒಂದು ಪ್ರಾರ್ಥನೆ. ಆ ದನಿಯನ್ನು ದೇವರು ಇವರಿಗೆ ಕರುಣಿಸಿಯೇ ಇದ್ದಾನೆ. ಇಲ್ಲವಾದರೆ 'ಬಿನ್ನಹ-ಮನವಿ'ಗಳು ಹೇಗೆ ಕೇಳಿಬರುತ್ತಿದ್ದುವು? ಹಿಂದಿನಿಂದ ಆರ್ಯ ಜನ ಯವುದು ಸತ್ಕರ್ಮ ಎಂದಿದ್ದಾರೋ ''ಆ ವಿಧದ ಕರ್ಮ ಬೆಳೆಯಲಿ'' ಎಂದು ಮನವಿ. ಮರೆವು ತನ್ನನ್ನು ಮುಸುಕದಿರಲಿ, ''ಎಲ್ಲ ಗತಿಯೊಳು ಮನವು ನಿನ್ನ ನೆನೆಯುವ ತೆರದೆ, ಫುಲ್ಲಲೋಚನ, ಎನಗೆ ವರವ ನೀಡು'' ಎಂದು ಬಿನ್ನಹ. ಸುಖವಾಗಿರುವಂದೂ ಹರಿಯನ್ನು ನೆನಯುತ್ತಲೇ ಇರಬೇಕು. ಇದು ಅವರ ಹೆಬ್ಬಯಕೆ. ಹೆಮ್ಮೆಯನ್ನು ಮುರಿ, ''ಕಳಚು ಈ ದುರಭಿಮಾನವನು ಮನದಿಂದ'' ಎಂದು ಆಗಾಗ್ಗೆ ತಮ್ಮನ್ನು ಮುಸುಕುವ ಅಹಂಕಾರ ಮಮಕಾರಗಳ ಕತ್ತಲೆಯನ್ನು ತೊಲಗಿಸಿ ''ನೀನೊಳಗೆ ಬೆಳಗು'' ಎಂದು ಚಿದ್ರೂಪನನ್ನು ಬೇಡಿಕೊಳ್ಳುತ್ತಾರೆ. ತಾವಿನ್ನೂ ಸರ್ವತ್ಯಾಗಕ್ಕೆ ಸಿದ್ಧರಾಗಿಲ್ಲದಿರುವುದರಿಂದ, ವಾಮನಾವತಾರದಲ್ಲಿ ಹೇಗೋ ಹಾಗೆ ತಮ್ಮ ಒಳಗನ್ನು ಕ್ರಮಕ್ರಮವಾಗಿ ಆಕ್ರಮಿಸಿಕೊ, ಪಡೆಯಬೇಕಾದ್ದನ್ನು ಪಡೆ, ಎಂದು ಮೊರೆಯಿಡುತ್ತಾರೆ. ''ಎಂತಾದರೂ ನಿನ್ನಯ ಚಿಂತೆಯಿಂದೆ ಇರವೆಲ್ಲವ ಸೋಕಿ ಸಂತತ ನಿನ್ನೊಳು ಬಾಳ್ವವೊಲೆಸಗಿ ಎನ್ನ ನಿನ್ನವನೆನಿಸೈ'' ಎಂದು ಅವರ ಅನುದಿನದ ಬೇಡಿಕೆ. ಭಕ್ತಿ ಸಾಧನೆಯಲ್ಲಿ ಗುಪ್ತ ಭಕ್ತಿಗೆ ಪ್ರಾಧಾನ್ಯ. ತಮ್ಮ ಭಕ್ತಿ ಗುಟ್ಟಾಗಿರಲಿ, ''ಎಲ್ಲರೊಡನಿರುವಾಗ ಎಲ್ಲರಂತಿರ್ದು. ಫುಲ್ಲಲೋಚನ, ಮನದೆ ಪ್ರೇಮವಿರಲಿ'' ಎಂದು ಕೇಳಿಕೊಳ್ಳುತ್ತಾರೆ. ಗುಪ್ತ ಭಕ್ತಿಗೆ ಇನ್ನೂ ಒಂದು ಕಾರಣ ಉಂಟು: ''ದೇವರಿಗೆ ನಿನ್ನ ಮೇಲೆ ಅಷ್ಟು ಪ್ರೇಮವಿದ್ದರೆ, ಅವನಿಗೆ ಸನ್ನೆ ಮಾಡಿ ಬರಮಾಡು'' ಎಂದು ಅವಿವೇಕಿಗಳು ಕುಚೋದ್ಯ ಮಾಡಬಹುದು ಎಂಬ ಅಂಜಿಕೆ. ಸನ್ನೆಮಾಡಿ ಕರೆಯುವುದಕ್ಕೆ ದೇವರು ಕುನ್ನಿಯೇ? ಹೀಗೆಯೇ ಸಾಗುತ್ತದೆ ಇವರ ಭಕ್ತಿ ಸಾಧನೆಯ ಅಭಿವ್ಯಕ್ತಿ 'ಬಿನ್ನಹ' - 'ಮನವಿ'ಗಳ ರಚನೆಯಲ್ಲಿ. ಇವುಗಳ ರಚನೆಯ ಕಾಲದ ಅವಧಿ ಸುಮಾರು ಮೂವತ್ತು ವರ್ಷ. ತೈಲಧಾರೆಯಂತೆ ಸ್ನಿಗ್ಧವಾಗಿ ಅನುಸ್ಯೂತವಾಗಿ ಒಮ್ಮುಖವಾಗಿ ಪ್ರವಹಿಸಿರುವ ಕವಿಯ ಭಕ್ತಿ, ಮನವಿಯ ಕಡೆಯ ಗೀತ 'ಅರ್ಪಣ'ದಲ್ಲಿ ಗುರಿಮುಟ್ಟಿದೆ.

'ಬಿನ್ನಹ' ಮತ್ತು 'ಮನವಿ'ಗಳ ಕಾವ್ಯವಸ್ತುವನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ಒಂದು ಮಾತಿನಲ್ಲಿ ವಿಶ್ಲೇಷಿಸಬಹುದಾದರೆ, ಶ್ರೀನಿವಾಸರ Testament of Devotion (ಭಕ್ತಿ ಪ್ರಾಮಾಣ್ಯ) ಎಂದು ಕರೆಯಬಹುದು.

ಮೃದು ಪದಬಂಧ; ಸರಳ ಸುಂದರ ಶೈಲಿ; ಭಾವವನ್ನು ಪೋಷಿಸುವ, ಸುತ್ತಲೂ ಕಾಣುವ ಪಳಕೆಯ ಬದುಕಿನಿಂದ ನಿಸರ್ಗದಿಂದ ಒದಗಿಬಂದ ಚೆಲುವಾದ ಉಪಮೆ ದೃಷ್ಟಾಂತಗಳು; ಚಿಕ್ಕ ಚಿಕ್ಕ ಪ್ರತಿಮಾ ಕಲ್ಪನೆಗಳು - ಇವು ಇಲ್ಲಿನ ಗೀತಗಳಿಗೆ ಕಾವ್ಯದ ಶೋಭೆಯನ್ನು ನೀಡಿವೆ.

'ಬಿನ್ನಹ' - 'ಮನವಿ'ಗಳು ಗೀತವೂ ಹೌದು, ಕಾವ್ಯವೂ ಹೌದು: ಇವು ಹುಡುಕಿಕೊಂಡು ಬಂದವರಿಗೆ ಮಾತ್ರ ಕಾಣಸಿಕ್ಕುವ, ಆಧುನಿಕ ಕನ್ನಡ ಸಾಹಿತ್ಯ ವನದ ಅಚ್ಛೋದ ಸರೋವರ. ಇದರಲ್ಲಿ ಮಿಂದವರು ನಿರ್ಮಲರಾಗುವುದರಲ್ಲಿ ಸಂದೇಹವಿಲ್ಲ.

ನವರಾತ್ರಿ

ಪ್ರೊ।। ವಿ. ಸೀತಾರಾಮಯ್ಯ

ಸಣ್ಣಕತೆ, ನೀಳ್ಗತೆ, ಕಾದಂಬರಿ, ಪದ್ಯಕತೆ ಮುಂತಾದ ಬಗೆಗಳಲ್ಲಿ ಉತ್ತಮ ಕೃತಿಗಳನ್ನು ಬರೆದು ಶ್ರೀ ಮಾಸ್ತಿ ಅವರು ಇನ್ನೇತಕ್ಕೂ ಸಲ್ಲರೇನೊ ಎಂಬಂತೆ ನುಡಿಯುವುದು ವಾಡಿಕೆಯಾಗಿದ್ದರೂ ಕವಿತೆ, ನಾಟಕ, ವಿಮರ್ಶೆ, ಜೀವನಚರಿತ್ರೆ, ಪ್ರಸಂಗ-ಈ ಎಲ್ಲ ರೂಪದ ಕೃತಿಗಳಲ್ಲಿಯೂ ಯಶಸ್ವಿಯಾಗಿದ್ದಾರೆ. ಮೊದಮೊದಲ ಕಾಲಗಳಲ್ಲಿ ಅವರು ಬಳಸುತ್ತಿದ್ದ ಹಗುರವಾದ- ಉಚ್ಚಾರ್ಥದಲ್ಲಿ ತಿಳಿಹಾಸ್ಯ ಒಂದು ವಿಶಿಷ್ಟ ನಯ ಉಳ್ಳದ್ದು; ಕನ್ನಡಕ್ಕೆ ಹೊಸದು. ಲೋಕ ಸ್ವಭಾವವನ್ನು ಮೃದುವಾಗಿ ನಗೆಯ ಮೂಲಕ ಕಾಣಿಸಬಲ್ಲದ್ದು. ಇಷ್ಟಾದರೂ 'ಸಣ್ಣ ಕತೆಯ ಶ್ರೀನಿವಾಸರು' ಎಂಬಂತೆ ಮಾತ್ರ ಅವರಿಗೆ ಕೀರ್ತಿ ಮಿತವಾಗಿರುವುದು ಅನ್ಯಾಯ. ಅದು ಹೇಗೇ ಇರಲಿ, ಈಗ ಸದ್ಯ-'ನವರಾತ್ರಿ'ಯ ಪದ್ಯ ಕಥೆಗಳನ್ನು ಕುರಿತು ನಾಲ್ಕು ಮಾತು ಹೇಳುತ್ತೇನೆ. ಎಷ್ಟು ಹಿರಿಮೆ ಉಳ್ಳವು ಅವು ಎಂಬುದು ಹೆಚ್ಚಾಗಿ ಕನ್ನಡ ಜನಕ್ಕೆ ತಿಳಿದಿಲ್ಲ. ಒಂದು ಕಾರಣ: ಅದು ಬಹುಮಟ್ಟಿಗೆ, ಸರಳ ರಗಳೆಯಲ್ಲಿದೆ ಎಂಬುದು. ಇನ್ನೊಂದು ಸಣ್ಣಕತೆಯಲ್ಲಿನ ಬಗೆಯ ಸಿದ್ಧ ಹಸ್ತತೆ, ಆ ಲೋಕ ಇಲ್ಲಿ ಅವರು ನೇರವಾಗಿ ಕಾಣದಿರುವುದು. ಕತೆಗಾರಿಕೆ ಇಲ್ಲಿ ಒಂದು ಹೆಚ್ಚಿನ ವಿಲಾಸವನ್ನೂ ಸೂಕ್ಷ್ಮವನ್ನೂ ಅವರ ಬಹುಮುಖ ಪ್ರಜ್ಞೆಯ ವಿಲಾಸವನ್ನೂ ಕಾಣಿಸುತ್ತದೆ. ಭಾರತೀಯ ಜ್ಞಾನಪೀಠದಲ್ಲಿ ಒಂದು ಲಕ್ಷ ರೂಪಾಯಿನ ವಾರ್ಷಿಕ ಬಹುಮಾನವನ್ನು ಈ 'ನವರಾತ್ರಿ' ಕವನಗಳಿಗೆ ಕೊಡಬೇಕು ಎಂದು ಅದರ ಎರಡನೆಯ ವರ್ಷದ ಬಹುಮಾನಕ್ಕೆ ಈ ಕವಿತೆಗಳನ್ನು ಸೂಚಿಸಿತ್ತು. ಇವನ್ನು ಭಾಷಾಂತರ ಮಾಡಿ ಇಲ್ಲಿನ ಚೆಲುವನ್ನೂ ದೊಡ್ಡತನವನ್ನೂ ಬೇರೆ ಭಾಷೆಯಲ್ಲಿ ಪ್ರತಿಪಾದಿಸುವುದು ಕಷ್ಟ. ಅವರೇ ಇಂಗ್ಲಿಷಿಗೆ ಭಾಷಾಂತರಿಸಿದರೂ ಅವುಗಳ ಕನ್ನಡತೆಯ ಮತ್ತು ಅವರ ನಯವಿಲಾಸದ ಗುಣ ಬರುವುದು ಕಷ್ಟ. ಈ ಬರವಣಿಗೆ ಅಷ್ಟು ಅಚ್ಚ ಕನ್ನಡದ್ದು; ಅದರ ನುಡಿಗಟ್ಟು ದೇಸಿಗಳಿಗೆ ಹೊಂದಿ ಹುಟ್ಟಿದುದಾದ್ದರಿಂದ.

ಸರಳರಗಳೆಯನ್ನು ಯಾರು ಮೊದಲು ಮಾಡಿದರು ಕನ್ನಡದಲ್ಲಿ ಎಂಬ ಪ್ರಶ್ನೆ, ಹಾಗೆಯೇ ಸಣ್ಣ ಕತೆಗಳನ್ನು ಕನ್ನಡದಲ್ಲಿ ಮೊದಲು ಯಾರು ಬರೆದವರು ಎಂಬ ಪ್ರಶ್ನೆ ಎತ್ತಿ ಮನಸ್ಸಿನಲ್ಲಿ ಅಲ್ಲಸಲ್ಲದ ತಾಪಗಳನ್ನು ಉಂಟು ಮಾಡಿಕೊಳ್ಳುವುದು ಅನಗತ್ಯ. ನಾನು ೧೯೨೨ರ ಹೊತ್ತಿಗೆ ಅವರು ಪ್ರಕಟಿಸಿದ 'ಅರುಣ' ಎಂಬ ಪದ್ಯ ಸಂಕಲನದಲ್ಲಿ 'ಸ್ಥಳಗಳ ಹೆಸರುಗಳು' ಎಂಬ ಕವಿತೆಯಲ್ಲಿ ಸರಳ ರಗಳೆಯನ್ನು ಮೊದಲು ಕಂಡು, ಅಲ್ಲಿನ 'ಮದಲಿಂಗನ ಕಣಿವೆ' ಎಂಬುದಕ್ಕೆ ಮಾರುಹೋದೆ. 'ಲೇಪಾಕ್ಷಿ' ಅದಕ್ಕೆ ಎರಡನೆಯ ಕೈ. ಮದಲಿಂಗನ ಕಣಿವೆಯ ಸ್ವಾರಸ್ಯ ಕನ್ನಡ ಕವಿತೆಯೆಲ್ಲಾಗಲಿ, ಕಥನ ಕೌಶಲದಲ್ಲಿಯಾಗಲಿ ಆ

ಹಿಂದೆ ಕನ್ನಡದಲ್ಲಿ ಕಾಣದಿದ್ದುದು. ಅಂತಹ ತಿಳಿಯಾದ ವಸ್ತು ನಿರೂಪಣೆ ಬೇರೆ ಈವರೆಗೂ ಬಂದಿಲ್ಲವೆಂದುಕೊಂಡಿದ್ದೇನೆ. ಅಂದಿನಿಂದ ಈಚೆಗೆ ಬೇಕಾದಷ್ಟು ಮಂದಿ ಸರಳರಗಳೆಯನ್ನು ಧಾರಾಳವಾಗಿ ಕಥನಕ್ಕೂ ಚೌದಶಪದಿಗೂ (Sonnet) ಬಳಸಿಕೊಂಡಿದ್ದಾರೆ. ಆದರೆ 'ಮದಲಿಂಗನ ಕಣಿವೆ' ಯ ಜೀವಂತತೆ ಅಪೂರ್ವವಾದ್ದು.

'ನವರಾತ್ರಿ'ಯ ಕವಿತೆಗಳಲ್ಲಿ ಇನ್ನೊಂದು ಬಗೆಯ ಕಥನ ಪ್ರಕಾಶನವಿದೆ. ೧೨ ಸುಮಾರು ದೊಡ್ಡವು; ೪-೪ ಕತೆಗಳುಳ್ಳ ಒಂದೊಂದು ಸಂಪುಟದಂತೆ ೩ ಸಂಕಲನಗಳಿವೆ; ಸ್ವಲ್ಪ ಸಣ್ಣ ಸಣ್ಣ ಏಳು ಇನ್ನೊಂದು ಭಾಗದಲ್ಲಿವೆ. ''ಸಿದ್ಧರ ಕಿನ್ನರಿ''ಯ ಬೇರೆ ಬಗೆಯ ಛಂದಸ್ಸನ್ನು ಬಿಟ್ಟರೆ ಉಳಿದೆಲ್ಲ ಸರಳ ರಗಳೆಯಲ್ಲಿವೆ. ಮೈಸೂರರಸರ ಮೂಲ ಪುರುಷರಾದ ಯದುರಾಜರ ಕತೆ; ಇಂಗರ್‌ಸಾಲ್ ಮೇಲೆ ಆಧಾರಗೊಂಡ 'ಸಮಾಧಿಯ ಸತ್ವ'; ದಕ್ಷಿಣ ಕನ್ನಡ ಜಿಲ್ಲೆಯ ಬಾರಕೂರಿನ ಪೂರ್ವ ಚರಿತ್ರೆಯಲ್ಲಿ ನಡೆದು ಅಳಿಸಿಹೋದ ಅರಸುವೈಭವದ ಒಂದು ರಾತ್ರಿಯ ಪುನರುಜ್ಜೀವನದ ಸೋಜಿಗದ ಹೊಳಲ ಅನುಭವ; ಶ್ರೀರಾಮನ ಹೆಸರ ಹಿರಿಮೆಯನ್ನು ಕುರಿತ 'ನಾಮದ ಮಹಿಮೆ'; ಹಾವೇರಿ ಬಳಿ ಇರುವ ಹಿಂದಿನ ಅಗಡಿಯ ಸಾಧುಗಳ ಮಹಿಮೆಯನ್ನು ಕುರಿತು ಒಂದು; ಬುಕ್ಕರಾಯ ಸಮುದ್ರ ಎಂಬ ಅನಂತಪುರದ ಕೆರೆಗೆ ಸಂಬಂಧಿಸಿದ ಮುಸಿಲಮ್ಮ ಎಂಬ ಸಾಧ್ವಿಯ ಮಹಾತ್ಯಾಗದ ಕತೆ; ಫ್ರಾನ್ಸಿನ ಸೋಲಿನ ಮತ್ತು ನಿಸ್ತೇಜದ ಒಂದು ಸಮಯದಲ್ಲಿ ಅದಕ್ಕೆ ಪುನಃ ಅಭ್ಯುದಯವನ್ನು ತಂದುಕೊಟ್ಟು ಸಿಂಹಾಸನಚ್ಯುತನಾದ ರಾಜನನ್ನು ಪಟ್ಟಕ್ಕೆ ಏರಿಸಿ, ಸಲ್ಲದ. ಅಪವಾದಕ್ಕೆ ಗುರಿಯಾಗಿ ದೈವಾಪಚಾರವೆಂಬ ಹೆಸರಲ್ಲಿ ಶಿಕ್ಷೆ ಪಡೆದು ತೀರಿಕೊಂಡ 'ಜೀನಿ ಡ ಆರ್ಕ್'; ಒಂದು ಉಚ್ಚಾರಣೆಯ ಸಂಬಂಧದಲ್ಲಿ ಹುಟ್ಟಿ ಬೆಳೆದ ವಚ್ಚರೊ ವಚ್ಚಲೊ; ಬೇಲೂರಿನ ವಿಷ್ಣುವರ್ಧನನ ಕಾಲದಲ್ಲಿ ಕಟ್ಟಿದ ಶಾಂತಲಾ ರಾಣಿಯ ಹೆಸರ ಸಂಬಂಧದ ಕಪ್ಪೆಚೆನ್ನಿಗನ ಮೂರ್ತಿ; ನಾರದರ ಅನುಭವ; ಗ್ರೀಕರ ಕತೆಯಂತೆ ಏರಿಸ್-ಆಫ್ರೋತಿತೆ ಎಂಬ ಕತೆಯ ರೂಪಾಂತರವಾದ ಅಪರಂಜಿ ಆರಿಗ; ಮಹಾಭಾರತದ ಪೌರಾಣಿಕರಾದ ಶೌನಕ ಋಷಿಗಳ ಭೃಗುವಂಶಕ್ಕೆ ಸೇರಿದ ಗುರುವಿಗೂ ಪ್ರಮದ್ವರೆಗೂ ಸಂಬಂಧಿಸಿದ ಪ್ರೇಮದ ಕತೆ;- ಇವು ದೊಡ್ಡ ಕತೆಗಳು. ದುರ್ಗದ ಅರ್ಚಕ; ವೀರಲಕ್ಷಮ್ಮ; ದೇಶಾಚಾರ; ಸಿದ್ಧರ ಕಿನ್ನರಿ (ವೀರಶೈವ ಸಿದ್ಧನದು); ಕುರುಬ ಹಂಪಣ್ಣ; ರಾಮಪ್ರಿಯ ಉದಂತ (ಬೌದ್ಧರದು); ಗುಂಡುಸೂಚಿ (ಗಾಂಧಿಯವರನ್ನು ಕುರಿತದ್ದು) ಮುಂತಾದ ಇತರ ಸಣ್ಣ ಕಥನಕವನಗಳು ಇಲ್ಲಿನ ವೈವಿಧ್ಯವನ್ನು ಕಾಣಿಸುತ್ತವೆ. ದೇಶಕಾಲದ ಮತ್ತು ಜೀವನದ ಹದದ ಅನೇಕ ಬಗೆಗಳು ಈ ಕತೆಗಳಿಗೆ ಹೊಂದಿಕೊಂಡು ಬರುತ್ತವೆ. "An idle singer of an empty day' ಎಂದುಕೊಂಡು ವಿಲಿಯಂ ಮಾರಿಸ್ ಕೆಲವು ಕತೆಗಳನ್ನು ಬರೆದ; ಆ ಕತೆಗಳೂ ಚೆಲುವಾದವೇ. ಆದರೆ ಈ ಹಾಡುಗಾರರು ಸೋಮಾರಿಯೂ ಅಲ್ಲ; ಈ ಕಾಲದ ಲಕ್ಷಣ ಬರಿದೂ ಅಲ್ಲ. ಚಾಸರ್ ''ಕ್ಯಾಂಟರ್‌ಬರಿ ಕತೆಗಳು'' ಎಂಬ ಕತೆಯಲ್ಲಿ ಒಂದು ಯಾಂತ್ರಿಕರ ವರ್ಗ ಹೇಗೆ ರಚಿತವಾಗಿ ಯಾತ್ರೆ ಮಾಡಿತು; ಅಲ್ಲಿನ ಪಾತ್ರಗಳ ಕಥನ ಕಲೆಯ ವಿಶೇಷವೇನು ಎಂದು ನೋಡಿದವರಿಗೆ ಅಲ್ಲಿನ ಆವರಣದ ಕಾರಣದಿಂದಾಗಿ ಒಂದು ಹೆಚ್ಚಿನ ಸಾವಯವ ಲಕ್ಷಣ ಕಾಣಿಸುತ್ತದೆ. 'ಅರೇಬಿಯನ್ ನೈಟ್ಸ್' ಕತೆಗಳಾಗಲಿ ಬೊಕ್ಕಾಚಿಯೊ ಎಂಬ ಇಟಾಲಿಯನ್ 'ಡೆಕಾಮರಾನ್' ಕತೆಗಳಾಗಲಿ ನಮ್ಮ 'ಪಂಚತಂತ್ರ'ದ ಕತೆಗಳಾಗಲಿ ಬೇರೆ ಧಾತುವಿನವು. 'ನವರಾತ್ರಿ'ಯ ರೀತಿ, ರಂಜನೆ ಬೇರೆ. ಇಲ್ಲಿನ ಆವರಣ ಒಂದೇ ಆದರೂ ಸಂದರ್ಭ, ಕಥನಕಾರರು, ಈ ಬರವಣಿಗೆಯ ಸಮಯಗಳು ಆಧಾರವಾದ ರಚನಾತಂತ್ರ, ಸ್ನೇಹದ

ಒಂದು ಗೋಷ್ಠಿ-ಇಲ್ಲಿಗೇ ವಿಶೇಷವಾದವು.

ರಚನೆ ಸುಮಾರು ಹೀಗಿದೆ: ಮೈಸೂರು ನವರಾತ್ರಿ ಉತ್ಸವ ಬಹು ಸಂಭ್ರಮದಿಂದ ನಡೆಯುತ್ತಿದ್ದ ನಾಲ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಊರಿನ ಒಬ್ಬ ಹಿರಿಯರ ಮನೆಯಲ್ಲಿ-ಗ್ರಂಥಕರ್ತರದೇ ಎನ್ನೋಣ-ಅವರ ಹಿರಿಯರ ಬಯಕೆಯಂತೆ ಮಿತ್ರಗೋಷ್ಠಿಯೊಂದು ಆಹ್ವಾನಿತವಾಗಿ ಸೇರಿ ಪಾಡ್ಯಮಿಯ ದಿವಸದಿಂದ ಹಿಡಿದು ಹುಣ್ಣಿಮೆಯವರೆಗೂ ಪ್ರತಿರಾತ್ರಿ ಒಂದೊಂದರಂತೆ, ಸಣ್ಣವಾದರೆ ಎರಡರಂತೆ ಮೂರರಂತೆ ಹೇಳಿದವೆಂಬವು ಇವು. ಒಂದೊಂದು ಕತೆಯನ್ನು ಹೇಳಿದರೂ ಗೋಷ್ಠಿಯಲ್ಲಿನ ಒಬ್ಬೊಬ್ಬ ಗೆಳೆಯರು; ಮಿಕ್ಕೆಲ್ಲರ ಗೌರವಕ್ಕೂ ಪಾತ್ರರಾದರು. ಕತೆ ಹೇಳುವವರು ಹತ್ತಿರದ ಆಪ್ತ ಸ್ನೇಹಿತರು. ಸಾಹಿತ್ಯಕ್ಕೂ ಸಂಸಾರಕ್ಕೂ ಹೆಸರಾದವರು. ಅವರ ಹೆಸರುಗಳನ್ನು ಆ ಹೆಸರಿನ ಯಾವುದೊ ಸೂಚನೆ ಬರುವಂತೆ ಪರ್ಯಾಯವಾಗಿ ಹೇಳುತ್ತಾರೆ. ಉದಾ: ಯದುರಾಜರನ್ನು ಕುರಿತ ಕತೆಯನ್ನು ಹಿರಿಯಣ್ಣ, ಎಂದರೆ ಬಿ.ಎಂ.ಶ್ರೀ ಹೇಳಿದರೆಂದು; ಡಾಕ್ಟರು-ಡಾ.ಎಸ್.ಸುಬ್ಬರಾಯರು; ದತ್ತೋಜಿ, ಬೇಂದ್ರೆ; ಕೌಶಿಕರು ರಾಘವಾಚಾರ್ಯರು; ವೆಂಕಪ್ಪ ವೆಂಕಣ್ಣನವರು; ರಾಜಣ್ಣ-ರಾಜರತ್ನಂ-ಹೀಗೆ. ಅವರವರ ಗುಣ, ಅಭಿರುಚಿ, ರೀತಿ, ಮನಸ್ಸಿನ ಓಲು ಸುಮಾರು ಹೇಗೆಂದು ಕತೆಗಾರರು ತಿಳಿದಿದ್ದಾರೊ ಅದನ್ನು ಅನುಸರಿಸುತ್ತದೆ ಕತೆ, ಕತೆಯನ್ನು ಬೆಳಸುವ ರೀತಿ. ಅವರ ವ್ಯಕ್ತಿತ್ವವನ್ನು ಕಾಣಿಸುತ್ತಿರಬೇಕೆಂಬುದು ಉದ್ದೇಶ. ನಾಳೆ ಇಂಥವರು ಕತೆ ಹೇಳುತ್ತಾರೆ ಎಂದು ಹಿಂದಿನ ದಿನ ಕತೆಯಲ್ಲಿ ಒಬ್ಬರು ಹೇಳುತ್ತಾರೆ,-ಮರುದಿನ ಅವರಿಂದ ಕತೆಯ ನಿರೂಪಣೆಯಾಗುತ್ತದೆ. ಕತೆ ಮುಗಿದ ಮೇಲೆ ಪ್ರತಿದಿನವೂ ಅವೊತ್ತಿನ ಕತೆಯನ್ನು ಕುರಿತು ಕೊನೆಯಲ್ಲಿ ಒಬ್ಬ ಹಿರಿಯ ಸ್ನೇಹಿತರು-ನಾಲ್ಕು ನಾಲ್ಕು ಕತೆಗಳನ್ನು ಒಬ್ಬೊಬ್ಬರು ಮೃದು ಟೀಕೆ ಮಾಡುತ್ತಾರೆ-ವಿಷಯವನ್ನು, ರೀತಿಯನ್ನು ಕುರಿತು. ವಿಷಯ ಹೇಳುವವರಿಗೆ ಮೆಚ್ಚಿನದು; ಮಾತನಾಡುವವರು ಇಂಥ ಗುಣದವರು ಎಂಬುದರಿಂದ ಕತೆಯನ್ನು ಬೆಳಸುವ ರೀತಿ ಅವರದೇ ವೈಖರಿ, ವಿನ್ಯಾಸ ಉಳ್ಳದ್ದು; ಅವರ ಭಾವಲಕ್ಷಣವನ್ನು ತೋರಿಸುವರು ಎಂಬುದು ಉದ್ದಿಷ್ಟ. ಆದರೆ, ಇದನ್ನು ಬರೆದ ಕತೆಗಾರರು ಆ ಪ್ರತಿಯೊಂದು ಕತೆಯಲ್ಲಿಯೂ ತಮಗೆ ಯಾವುದು ಬೆಲೆಯುಳ್ಳ ಅಂಶ, ಭಾಗ ಎಂದು ಕಂಡಿದ್ದಾರೊ ಅದರ ಮೇಲೆ ಹೆಚ್ಚು ಬೆಳಕನ್ನು ಬೀರುತ್ತಾರೆ. ಇದನ್ನು ವಿಶೇಷವಾಗಿ 'ಅಪರಂಜಿ ಆರಿಗ'ನ ಕತೆಯಲ್ಲಿಯೂ 'ಸೋಜಿಗದ ಹೊಳಲ'ಲ್ಲಿಯೂ, 'ಜೇನಿ ಡ ಆರ್ಕ್' ಅಲ್ಲಿಯೂ ಇನ್ನು ಕೆಲವು ಕಡೆಯಲ್ಲಿಯೂ ಕಾಣಬಹುದು. ಇಂಥ ವಿಷಯವನ್ನು ಕುರಿತು ಅವರು ತಮ್ಮ ಬೇರೆ ಕವನಗಳಲ್ಲಿ, ವಿಮರ್ಶೆಯ ಪ್ರಸಂಗಗಳಲ್ಲಿ ಹೇಳಿದ್ದಾರೆ. ಇಂಥ ಸಂಗತಿಗಳು ಇಲ್ಲಿ ಒಂದು ಜೀವಕ್ಕೂ ಸನ್ನಿವೇಶಕ್ಕೂ ಹೊಂದಿಕೊಂಡು ಪ್ರತಿಪಾದಿತವಾಗುವ ವಿಷಯಕ್ಕೆ ತುಂಬನ್ನೂ ಕಾಂತಿಯನ್ನೂ ಕೊಡುತ್ತವೆ. ಅಗಡಿಯ ಸಾಧುಗಳ ಸರಳ ಸ್ವಭಾವ, ಅವರ ಕಡೆಯ ದಿನದ ವರ್ಣನೆಯಲ್ಲಿ ಆ ಜೀವ ಹಣ್ಣಾದ ರೀತಿಯನ್ನು-"and like ripe fruit fall to the earth'ಎಂಬುದೂ ಅಲ್ಲ; "ripeness is all'ಎಂಬುದರ ಪರಿಚಯ ಮಾಡಿ ಕೊಡುವಂಥದು: ಹೇಳುವವರ ಬಾಳ ಗುಣವೂ ಅಂಥದೇ.

''ಸಾಧುಗಳು ಮರ್ತ್ಯದೇಹವನಳಿದು
ನಿರ್ವಿಕಲ್ಪದ ದಿವ್ಯಧಾಮದೆಡೆಗೇರಿಹುದು
ತಿಳಿದು ಭಗವಾನರಿಗೆ ಅರಿಸಿದೆನು. ಸಾಧುಗಳ

ಇಚ್ಛೆ ಎಂತಿತ್ತು ಅಂತೆಲ್ಲ ಕರ್ಮವನವರು
ನಡಸಿದರು. ಮಂದಿಯೆಲ್ಲವು, ತಮ್ಮ ಜೀವನದ
ಹಸುರಂತೆ ಹಾಲಂತೆ ಹುಣ್ಣಿಮೆಯ ಬೆಳಕಂತೆ
ತಾಯ ಕನಿಕರದಂತೆ ತಂಪೆರೆದು ಹೊರೆದಿದ್ದ
ನುಡಿಯೆಬಾರದ ಚೆಂದದೊಂದು ದಿವ್ಯಾನಂದ
ಮೂರ್ತಿಯಾಗಿದ್ದು ಮರೆಯಾದುದನು ತಿಳಿದರು.''

ಅವರ ರೀತಿಯನ್ನು ಕುರಿತು ರಾಮಕೃಷ್ಣಯ್ಯ ಮಾಡಿದ ಟೀಕೆಯಲ್ಲಿ ಕೂಡ ಕತೆಗಾರರ ಮನಸ್ಸು ಸಾಧುಗಳಲ್ಲಿ ಕಂಡ ಬೆಲೆ ಗುಣಗಳನ್ನು ಕಾಣಬಹುದು;

''ಕಾಮನಿದ್ದ ಕಡೆ
ರಾಮನಿಗೆ ಎಡೆಯಿಲ್ಲ; ರಾಮನಿಗೆ ಎಡೆಮಾಡು,
ಕಾಮನಿಗೆ ಎಡೆಯಿಲ್ಲ; ಎನ್ನುವುದು ಸಾಧುಗಳ
ಒಂದು ಬೆಡಗಿನ ವಚನ. ಆಶ್ರಮದ ಸೇವಕ
ತರುಣನೊಬ್ಬನಿಗೆ ನಸ್ಯದ ಚಪಲ. ಹಾಕುವನೆ
ಭಗವಾನರಿಗೆ ಕೋಪ. ಸಾಧುಗಳು ತರುಣನನು
ಒಮ್ಮೊಮ್ಮೆ ಬಳಿಗೆ ಕರೆಯುವರು; ಅವನಿಗೆ ಇನಿಸು
ನಸ್ಯವನು ಕೊಟ್ಟು, ಹಾಕಿಕೊ ಹೋಗು, ಯಾರಿಗೂ
ಹೇಳದಿರು, ಎನ್ನುವರು. ಆಶ್ರಮಕೆ ಬಂದ ಜನ
ಪೂಜೆ ಭೋಜನ ಮುಗಿದು ಹೊತ್ತು ಕಳೆಯುವುದೆಂತು
ಎಂದು ಬೇಸರದಿ ಕುಳಿತಿರಲು, ರಾಯರೆ, ಏಕೆ,
ತುಸು ಹೊತ್ತು ಚೀಟಾಡಬಾರದೇ ಎನ್ನುವರು;
ಆಡೆ ಬಳಿಯಲೆ ಕುಳಿತು ನೋಡುವರು; ಜನ ಇಲ್ಲ,
ತಾವೆ ಅವರೊಡನೆ ಆಡುವರು. ಅತಿನಿಯಮದಲಿ
ಬಾಳ ಕಗ್ಗಾಡು ಮಾಡುವುದ(ನು) ಇವರೊಲ್ಲರು.
ಮನುಜ ಆಸೆಯ ದಳವ ಮೆಲು ಮೆಲನೆ ಗೆಲಬೇಕು;
ಹೂಬಳ್ಳಿಯನು ಎಂತು ಅಂತು ಮನವನು ಅವನು
ತಿದ್ದಿಕೊಳ್ಳಲು ಬಹುದು, ತಿದ್ದಿಕೊಳ್ಳಲೆ ಬೇಕು;
ಎಂಬದನು ಇವರು ತೋರಿದರು. ನಮ್ಮಯ ನಾಡ
ಸಂಸ್ಕೃತಿಯ ಒಂದು ಮುಖ ಅಗಡಿ ಸಾಧುಗಳಲ್ಲಿ
ಚೆಲುವಾಗಿ ರೂಪುಗೊಂಡಿತು ಎಂದು ನನ್ನರಿವು.''

ಇನ್ನೊಂದು ಸಂಗತಿ ಅಲ್ಲಿ ವೇದ್ಯವಾಗುತ್ತದೆ. ಇದು ಸಾಧುಗಳ ನಿಲವಾದರೆ- ಈ ರೀತಿ ತುಂಬ ಮೆದು;

''ಶಿಷ್ಯರಲ್ಲದ ಮಂದಿ ಒಳಿತೆಂಬುದು ಬಯಸಿ,
ಇವರು ಗುರು, ಇವರಿಂದ ಬದುಕಿಕೊಳ್ಳುವ, ಎಂದು
ಬಳಿಸಾರುವಂತೆ ಮಾಡರು.''

-ಎಂಬ ವಿಮರ್ಶೆಯ ಮಾತು, ಈ ಸೌಜನ್ಯ ಇನ್ನಷ್ಟು ಜೀವಿಗಳ ಸಲಹಬಹುದಾಗಿತ್ತೆ ಎನ್ನುವ ವ್ಯಥೆ; ದಾರಿ ಬೇರೆಯಾಗಿದ್ದರೆ. ಇದರ ಸತ್ಯಾಸತ್ಯ ವಿಚಾರ

ಅವರವರಿಗೆ ಸೇರಿದುದು ಆಗಿರಬೇಕು. ಒಂದೊಂದು ಜೀವ ಒಂದೊಂದು ರೀತಿಗೆ ಒಲಿದು, ಅದನ್ನಾಯ್ದು, ಅದನ್ನು ಬೆಳೆಸಿಕೊಳ್ಳುತ್ತದೆ. ಇನ್ನೊಂದು ದಾರಿಯ ಅರಿವು ಇಲ್ಲವೆಂದಲ್ಲ; ಆದರೆ ಈ ದಾರಿ ಹೆಚ್ಚು ಒಪ್ಪು. ಹಿಚಗೆ ಕತೆಗಾರರೆಂಬುವಗು, ಸ್ವರೂಪ ಚಿತ್ರಣ, ಕಥೆ, ವಿಮರ್ಶೆ ಇದನ್ನೆಲ್ಲ ರೂಪಿಸಿದ ಕವಿಗಳು ಎಂಬ ನೆಲಸಿನಲ್ಲಿದೆ 'ನವರಾತ್ರಿ'ಯ ಕವನಗಳು.

''ಜೇನಿ ಡ ಆರ್ಕ್'' ಕತೆಯ ಕಡೆಕಡೆಗೆ-
ಗ್ರೀಸಿನಲಿ
ಸಾಕ್ರಟೀಸ್ ಅಂದು, ಇಂದಿಗೆ ನಮ್ಮ ದೇಶದಲಿ
ಗಾಂಧೀ ಮಹಾತ್ಮ, ತಮ್ಮಾಂತರ್ಯದಲಿ ಒಂದು
ದನಿ ನುಡಿವುದೆಂದುದನು ಎಲ್ಲರೂ ಬಲ್ಲೆವು.
ಇಲ್ಲದಿಹ ದನಿಯ ಇದೆಯೆಂಬ ಮರುಳರೆ ಇವರು?
ನಾವು ಬಲ್ಲವರೆ? ಎಳೆ ಹೆಣ್ಣಾದ ಮಾತ್ರಕೇ
ಜೇನಿ ಕೇಳಿದಳೆಂಬ ದನಿ ಸಾಕ್ರಟೀಸ್ ಗಾಂಧೀ
ತಾವು ಕೇಳಿದೆವೆಂಬ ದನಿಗೆ ಸಮನಾಗದೇ?''

-ಎಂದು ಸಾಮ್ಯವನ್ನೂ ಬಳಸಿ ಕಾಣಿಸುತ್ತಾರೆ.

'ಅಪರಂಜಿ-ಆರಿಗ' ಕತೆಯಲ್ಲಿ ಒಂದು ಸಂದರ್ಭ ಬರುತ್ತದೆ. ಆ ಇಬ್ಬರು ನಡೆದುಕೊಂಡ ರೀತಿ ಬಹು ವಿಲಕ್ಷಣ, ಬಹು ವಿಚಿತ್ರವಾದುದು:

''....ನಾವು ಯಾರನು ಅಸಂಸ್ಕೃತರೆಂದು
ತಿಳಿಯುವೆವೊ ಅಂಥ ಜನದಲಿ ಇರುವ ಪದ್ಧತಿ
ಕೆಲವ ಒಪ್ಪಿದರೆ ಇದೆಕತೆ ಇಲ್ಲಿ ನಡೆಯುವುದೆ.
ಇಂಥ ಜನರನು ಅಸಂಸ್ಕೃತರೆಂಬ ನಮ್ಮಂಥ
ಜನ, ತಮ್ಮ ಸಂಸ್ಕೃತ ಸಮಾಜದಲಿ ಇಂತಪ್ಪ
ಸಂಗತಿಗಳಿಲ್ಲವೇ ಎಂದು ಯೋಚಿಸಬೇಕು.
ಇಹವು, ಇಹ ಸಂಗತಿಗೆ ತಾವೇನು ಮಾಡುವರು,
ಅದನು ಯೋಚಿಸಬೇಕು. ಏನನೂ ಮಾಡದೆಯೆ,
ಕಣ್ಣುಗಳ ಮುಚ್ಚಿ, ಎಲ್ಲಾ ಒಳಿತು ಎನ್ನುವರೆ
ನಿಜವಾಗಿ ಹಸನು ಮಾಡುವುದೆ ಮನುಜನ ಕೆಲಸ.
ಅದಕ್ಕೆ ಚೇತನದ ಸ್ವಭಾವ ಪ್ರವೃತ್ತಿಗಳು
ಎಂಥ ಎಂಥವು ಎಂದು ತಿಳಿಯುವುದು ತಳಪಾಯ.''
ಯಾರ ಸುಖ ಸಾಧಿಸಿತು ಎಂದು ಚಿಂತಿಸಬೇಕು.
ಯಾವುದೆ ಸಮಾಜ ಸಂಸ್ಕೃತವಾಗುವುದು ತನ್ನ
ತಿಪ್ಪೆ ಸಾರಿಸಿ ಅಲ್ಲ. ಸೊಗಸಬೇಕೇ ಬಾಳು?
ಕಸವನೆಸೆ; ರಸವ ಬೆಳೆ; ನಿಜವ ತಿಳಿ; ಅದ ಸಾರು;
ನಿಜಕಾಗಿ ಉಳಿದೆಲ್ಲವನು ಮಾರು; ನಿನ್ನನೇ
ತೆರು. ಬಾಳು ಸೊಗಸುವುದು. ಬಲ್ಲೆಯಾ?-ಸರಿ ಹೋಗು.
ಕಣ್ಮುಚ್ಚು; ಕಿವಿಮುಚ್ಚು; ಇಲ್ಲದುದು ಇದೆಯನ್ನು,
ಇರುವುದನು ಇಲ್ಲೆನ್ನು; ಇದುವೆ ಸಂಸ್ಕೃತಿಯೆನ್ನು.

ಇಂಥ ಬಾಳುವೆಯಲ್ಲ ಬರಿಯ ಕೃತ್ರಿಮ. ಬಾಳ
ನಿಜವಾಗಿ ಹಸನು ಮಾಡುವುದೆ ಮನುಜನ ಕೆಲಸ.
ಅದಕೆ ಚೇತನದ ಸ್ವಭಾವ ಪ್ರವೃತ್ತಿಗಳು
ಎಂಥ ಎಂಥವು ಎಂದು ತಿಳಿಯುವುದು ತಳವಾಯ''.

ಇಂಥ ಸಂದರ್ಭಗಳಲ್ಲಿ ಮಾಸ್ತಿಯವರು ಮಾಡುವ ವ್ಯಾಖ್ಯಾನ ಅಮೂಲ್ಯವಾದುದು. ಬದುಕಿನಲ್ಲಿ ಎಷ್ಟು ಸಂಪ್ರದಾಯವಂತರಾಗಿ ನಡೆದುಕೊಳ್ಳುತ್ತಾರೆಯೊ ಅದು ಅವರ ಸ್ವಂತ ಜೀವನಕ್ಕೆ ಸಂಬಂಧಿಸಿದ ಸಂಗತಿ. ಅಲ್ಲಿಯೂ ಅವರ ದೈವಭಕ್ತಿ, ಆಚಾರ ಇವೆರಡರ ಹಿಂದೆಯೂ ಈ 70 ವರ್ಷಗಳಲ್ಲಿ ಜನಜೀವನವನ್ನು ರೂಪಿಸಿರುವ ಆಧುನಿಕ ಪ್ರಭಾವನನ್ನು ಅರಿತು ತಮ್ಮ ರಸವನ್ನು ಧಾತುವನ್ನೂ ಅದಕ್ಕೆ ಎರೆದು ಅವನ್ನು ಪುಷ್ಟಿಗೊಳಿಸಿಕೊಂಡಿರುತ್ತಾರೆ. ಅವರ ಬರವಣಿಗೆಗಳಲ್ಲಿ ಸ್ವತಂತ್ರವಾದ ವಿಶ್ಲೇಷಣೆ, ವ್ಯಾಖ್ಯಾನ, ವಿವರಣೆ, ಒಂದು ಹೆಜ್ಜೆ ಮುಂದೆ ಹೋಗಿ ಸಮಾಜವನ್ನೂ ಧರ್ಮವನ್ನೂ ಕಾಣಬಲ್ಲ ಶಕ್ತಿ, ದರ್ಶನ ಇರುತ್ತವೆ. 'ಸೋಜಿಗದ ಹೊಳಲ' ಲ್ಲಿನ ಸೌಂದರ್ಯ ಕಲ್ಪನಾ ಪ್ರಪಂಚವೊಂದರ ಬಣ್ಣಬೆಡುಗು ಕನ್ನಡದಲ್ಲಿ ಅವರೊಬ್ಬರು ಮಾತ್ರ ನಿರ್ಮಾಣಮಾಡಬಲ್ಲದ್ದು. 'ಹೇಮಕೂಟಕ್ಕೆ ಹಿಂದಿಗಾಗಿ ಬಂದ ಮೇಲೆ' ಎಂಬ ಸಣ್ಣ ಕತೆಯಲ್ಲಿ ಆಗದಿದ್ದುದನ್ನೂ, ಆಗಬಹುದುದಾದ್ದನ್ನೂ ಕಲ್ಪಿಸಿ ಅದರ ಮುಖಮಲ್ಲಿನ ಅಥವಾ ಅಚ್ಚುಕಟ್ಟಾದ ಆದರ್ಶ ನಿರ್ಮಿತವಾದ ಒಪ್ಪದ ನೆಲಸು ಹೇಗಿರುತ್ತದೆಂದು ಕಾಣಿಸಿದ್ದಾರೆ.

ಬಾರಕೂರಿನ ನೂರಾರು ವರ್ಷಗಳ ಹಿಂದಿನ ಅರಮನೆಯ ಭೋಗವೈಭವಗಳ ಚಿತ್ರಣ ಅಷ್ಟು ಹೃದಯಂಗಮವಾಗಿದೆ. ರುರುವಿನ ಕತೆ ಮಹಾಭಾರತದ ಆದಿಪರ್ವದ ಭಾಗಗಳಲ್ಲಿ ಎಲ್ಲೊ ಸೇರಿಕೊಂಡು ಮರೆಯಾಗಿತ್ತು. ಆತನ ಕತೆಯನ್ನು ಎತ್ತಿದವರೇ ಇರಲಿಲ್ಲ. ಇಲ್ಲಿ ರುರುಪ್ರಮದ್ವರೆಯರ ಕತೆಯನ್ನು ಬೆಳಸಿರುವ ರೀತಿ ಬಹು ಮುದ್ದಾದುದು. ಯುವಕಯುವತಿಯರ ಪ್ರೇಮ ಸಾವನ್ನು ಎದುರಿಸಿ ಕಟ್ಟಿ ನಿಲ್ಲುತ್ತದೆ; ಅದೇ ಮಹಾಭಾರತದ ಕತೆಯಾಗಿ ಸತ್ಯವಾನ್ ಸಾವಿತ್ರಿ ಕತೆ ಲೋಕ ಪ್ರಖ್ಯಾತವಾಗಿದೆ. ಅಲ್ಲಿ ಹೆಣ್ಣು ಸಾವಿತ್ರಿ ತಾನೊಲಿದು ಮದುವೆಯಾದ ಸತ್ಯವಂತನನ್ನು ವೀರ ನಿಷ್ಠೆಯಿರಿದ ಬದುಕಿಸಿಕೊಂಡಳು. ಇಲ್ಲಿ ತನ್ನ ತಪಃಶಕ್ತಿಯಿಂದ ಇಂದ್ರನನ್ನು ತನ್ನೆಡೆಗೆ ಬರಮಾಡಿಕೊಂಡು ತನ್ನ ಪ್ರೇಮದ ಅಮೋಘತೆಯ ಪರೀಕ್ಷೆ ಕೊಟ್ಟು, ತನ್ನರ್ಧ ಜೀವಿತ ಕಾಲವನ್ನು ಪ್ರಮದ್ವರೆಗಾಗಿ ಬೆಲೆಗೊಟ್ಟು ಆಕೆಯನ್ನು ಬದುಕಿಸಿಕೊಂಡು ಮದುವೆಯಾಗಿ ಆಯುಸ್ಸು ಮುಗಿದು ಬರಲು ಒಂದೇ ದಿನ ಇಬ್ಬರೂ ಏಕಕಾಲದಲ್ಲಿ ತೀರಿಕೊಂಡ ಚಿತ್ರ:

''....ರುರು ಸತಿಗೆ ತನ್ನ ಆಯುಷ್ಯದಲಿ
ಅರ್ಧವನು ನೀಡಿದುದರಿಂದ ಬಂದೊಂದು ಫಲ
ಏನೆನಲು, ಇವರು ಬಾಳುವ ಆನಿತು ಕಾಲವೂ
ಎರಡು ಒಡಲಲಿ ಹಂಚಿದೊಂದೆ ಒಂದುಸಿರಾಗಿ,
ಹೆಚ್ಚು ಕೊರೆಯೆಂಬುದಿಲ್ಲದೆ, ಪರಸ್ಪರ ಸರಿದು
ಒಲಿದು ಓಲೈಸಿ, ನಡೆದರು. ಅಂತೆ ಬೇರೊಂದು
ಫಲ ಅದೇನೆನೆ, ನೆಲ ನೋಳಿರುವ ದಿನ ಮುಗಿದಿರಲು,
ಇಬ್ಬರೂ ಒಂದೆ ಹೊತ್ತಲಿ ತನುವ ನೀಗಿದರು.
ಆ ಉದಯ, ರುರು ಮಿಂದು ಮಿಂದ ಸತಿಯನು ಕರೆದು

ದೈವಸಾನ್ನಿಧ್ಯದಲಿ ಜೊತೆಗೆ ಪೂಜೆಯ ನಡೆಸಿ
ಅವಳ ಕೈ ಹಿಡಿದು ಕುಳಿತನು. ಕಣ್ಣಿನಲ್ಲಿ ಕಣ್ಣ
ನಿಲಿಸಿ ನೋಡಿದನು. ಕೈ ಮೈಗಳನು ಬೆಸೆದವು;
ನೋಟ ಜೀವಗಳ ಬೆಸೆದವು. ಒಲವ ಸಂತಸದ
ಶಾಂತಿಯಲಿ ದಂಪತಿಗಳಿರೆ, ಗವಾಕ್ಷದಿ ಹಾಯ್ದು
ಬೀಸಿದೊಂದೇ ಗಾಳಿ ದೇವರೆದುರಿನ ಎರಡು
ದೀಪವನು ನಂದಿಸುವ ರೀತಿ, ಇವರುಸಿರುಗಳ
ಮೃತ್ಯು ಒಂದೇ ಕ್ಷಣದಿ ನಂದಿಸಿತು. ಇಂತಿವರು
ದೇವಲೋಕವ ಸಾರಿದರು.''

ಇದನ್ನು ಹೀಗೇ ಬೆಳಸಬಹುದು. ಒಂದು ಗಂಡು ಹೆಣ್ಣಿಗಾಗಿ ಅರ್ಧಾಯುಷ್ಯ ಕೊಟ್ಟಿದ್ದು ಏನು ಹಿರಿಮೆಯೆಂದು ಭಾವಿಸಿ ನಮ್ಮ ಲೋಕ ಅದಕ್ಕೆ ಬೆಲೆ ಕೊಡದೆ ಮರೆತಿತೆಂದು ಕಾಣುತ್ತದೆ. ಗಂಡನ್ನ ಕುರಿತ ಹೆಣ್ಣಿನ ಸಾಹಸ ಹೇಗೊ ಹೆಣ್ಣನ್ನು ಕುರಿತ ಗಂಡಿನ ಪ್ರೀತಿಯೂ ಅವತ್ತಿನದೇ ಎಂದಿಗೂ.

'ನವರಾತ್ರಿ' ಕತೆಗಳ ಒಂದು ವಿಶೇಷ ಅವುಗಳ ರಚನೆ, ಭೂಮಿಕೆ. ಅಲ್ಲಿ ದೊರೆಯುವ ಕಥನ ಕೌಶಲ, ನೆರೆದ ಸಹೃದಯ ವಿಮರ್ಶೆ, ಕತೆ ಹೇಳುವವರ ಮತ್ತು ಟೀಕೆ ಮಾಡುವವರ ವ್ಯಕ್ತಿ ಜೀವನದ ಮತ್ತು ಸಂಸ್ಕಾರದ ಚಿತ್ರ ನವರಾತ್ರಿ. ಒಂದರಲ್ಲಿ ಈ ಕವನವನ್ನು ಹೇಗೆ ಕೈಗೊಂಡರೆಂದೂ ಹದಿನೈದು ದಿನಗಳ ಕಥೆಯನ್ನು ಏರ್ಪಡಿಸಿ ಯಾವ ಯಾವ ತೆರದ ಜನ ಯಾವ ಯಾವ ಪ್ರಭಾವ ಬೀರಿದರು, ಏನು ಕೆಲಸ ಮಾಡಿ ಸಾಧಿಸಿದರು ಎಂಬ ಚಿತ್ರವನ್ನೂ ಕಟ್ಟುತ್ತದೆ. ಆರಂಭದಲ್ಲಿ ತೊಡಗುವ ಕಥಾ ಪ್ರಪಂಚದ ವರ್ಣನೆ, ಕನ್ನಡ ನಾಡಿನ ಹಿರಿಮೆ, ಸೊಗಸು, ಕವಿಯ ಉದ್ದೇಶ, ಪ್ರತಿಜ್ಞೆ, ಯಾವ ಲೇಖನಿಗೂ ಹಿರಿಮೆಯನ್ನು ತರತಕ್ಕವು. ಇಷ್ಟೆಲ್ಲ ಏರ್ಪಾಡು, ಇದರಲ್ಲಿ ಬೇರೆಯವರ ಕಾರ‍್ಯ, ಕತೆ ಹೇಳುವವರು, ವಿಮರ್ಶೆ ನುಡಿಯುವರು, ಕತೆಯ ನೆಲಸು ವೈಖರಿ-ಈ ಎಲ್ಲ ಕಲ್ಪಿತ. ಇದನ್ನೆಲ್ಲ ಮಾಡಿದವರು ಮೊದಲಿಂದ ಕಡೆಯವರೆಗೂ ಮಾಸ್ತಿಯವರೇ. ಎಷ್ಟು ಮಟ್ಟ, ನೆಲಸು, ವೈವಿಧ್ಯ, ನವುರು, ವಿಲಾಸ, ಸೌಹಾರ್ದ, ವಿಚಕ್ಷಣೆಗಳು, ಮೌಲ್ಯಗಳ ಪರಿಶೀಲನೆ - ಈ ಕಥೆಗಳಲ್ಲಿ ಕಾಣುವುದೆಂಬುದನ್ನು ಸುಮಾರು 370 ಪುಟಗಳ ವಿಸ್ತಾರವುಳ್ಳ ಕವಿತೆಯಲ್ಲಿ ಕಾಣಬಹುದು. ತಿಳಿಯಾಗಿ, ಸುಲಭವಾಗಿ, ಆದರೆ ಚೆಲ್ವುವಾಗಿ, ರಸವತ್ತಾಗಿ ಬರೆವ ಬರವಣಿಗೆ ಕಣ್ಣೆದುರಿಗೆ ಬಂದಾಗ ಯಾವುದೊ ಕೃತಕ ಅಭಿರುಚಿಗಳಿಗೆ ಮನಸ್ಸು ಕೊಟ್ಟು ಇಂಥದನ್ನು ನಿರ್ಲಕ್ಷಿಸುವ ಅಥವಾ ದುರ್ಲಕ್ಷಿಸಿ ಉಪೇಕ್ಷಿಸುವ ವೃತ್ತಿ, ಮೂಗು ಮುರಿವ, ಹಲ್ಕಿರಿವ ರೀತಿ ನಮ್ಮ ದೇಶದ ದುರದೃಷ್ಟ. ಸರಳರಗಳೆಯನ್ನು ಓದುವ ಒಂದು ವಿಧಾನ ಬಹುಶಃ ನಮ್ಮಲ್ಲಿ ಇನ್ನೂ ಹುಟ್ಟಲೇ ಇಲ್ಲವೇನೊ! ಪ್ರಾಸಾದಿ ಇತರ ನಿರ್ಬಂಧವಿಲ್ಲದೆ ಪಂಕ್ತಿಗಳನ್ನು ತಕ್ಕಂತೆ, ಕಥೆಯ ಅರ್ಥಕ್ಕೆ ಅಗತ್ಯಕ್ಕೆ ತಕ್ಕಂತೆ ಹೇಗೆ ಬೇಕಾದರೂ ನಡಸುವ, ನಿಲ್ಲಿಸುವ, ಹೊರಗಿನದನ್ನು ಕಟಾಕ್ಷ ವಿಕ್ಷೇಪದಿಂದೆಂಬಂತೆ ಸೂಚಿಸುವ, ಒಳಗಿನದನ್ನು ವಿಸ್ತರಿಸುವ ಅಥವಾ ಆಳಮಾಡುವ, ಸಾಮಾನ್ಯವಾದುದನ್ನು ಸಾಮಾನ್ಯವಾಗಿ ವರ್ಣಿಸುವ, ವಿಶೇಷಕ್ಕೊ ಅತಿಶಯಕ್ಕೊ ಸುಲಭವಾಗಿ ಎತ್ತುವ ಶಕ್ತಿವಿಲಾಸ ಸರಳರಗಳೆಗೆ ಯದು. ಅದನ್ನು ಮಾಸ್ತಿಯವರೇ 'ಯಶೋಧರಾ' ನಾಟಕದಲ್ಲಿ ಬೇರೆ ಕಾರ್ಯಕ್ಕೆ ಬಳಸಿದ್ದಾರೆ. ಅಲ್ಲಿ ಇರುವ ಒಂದು ಅಖಂಡ ಬಿಗಿಪು, ಬನಿ, ಭಾವಗೌರವ, ಸರಳರಗಳೆಗೆ ಒಂದು ದೀಪ್ತ

ಕಾಂತಿಯನ್ನೂ ಓಜಸ್ಸನ್ನೂ ಹೇಗೆ ಒದಗಿಸಿದೆಯೆಂಬುದನ್ನು ಕಾಣಬಹುದು. ಇಲ್ಲಿ ಅದರ ವಿಲಾಸ, ಲೀಲೆಗಳದು ಸೂಬಗು. ಕತೆ ಯಾವುದಿರಲಿ, ಕೈಕೊಂಡ ಕಾರ್ಯ ಎಂಥುದಾಗಲಿ, ಸ್ವಚ್ಛವಾದ ಒಂದು ಮನೋಧರ್ಮ, ಆಲೋಚನೆಯ ವಿಶದತೆ, ಸೈಜವಾದ ಲೋಕಾನುಭವ-ಇವೆಲ್ಲಕ್ಕಿಂತ ಹೆಚ್ಚಾಗಿ ಜೀವನದ, ಏಳಿಗೆಯ ಪ್ರೀತಿ, ಶುಚಿ - ಇವು ಮಾಸ್ತಿಯವರ ಈ ಕವನಗಳಲ್ಲಿ ಎದ್ದು ಕಾಣಿಸುತ್ತವೆ. ಇಂಥದಕ್ಕೆ ಸಾಹಿತಿಗಳು, ವಿಮರ್ಶಕರು ಒಲಿಯುವರೆ, ಒಲಿಯಬಲ್ಲರೆ? ಎಂಬುದು ಅವಗ ಅಭಿರುಚಿಯ ನಿಕಷವಾಗುತ್ತದೆ- ಎನ್ನುವವರೆಗೂ ಈ ಕೃತಿಗಳಲ್ಲಿ ಹಲವನ್ನು ಕುರಿತು ಹೇಳಬಹುದು.

ಹೊಸಕನ್ನಡ ಸಾಹಿತ್ಯಕ್ಕೆ ಬಲವಾದ ತಳಪಾಯವನ್ನು ಹಾಕಿ, ನಾನಾ ಬಗೆಯ ಕೃತಿಗಳನ್ನು ರಚಿಸಿರುವ ಮಾಸ್ತಿಯವರ ಈ ಆಸ್ತಿ ಕನ್ನಡ ಸಾಹಿತ್ಯಕ್ಕೆ ದೊಡ್ಡ ಕೊಡುಗೆ. ಇಲ್ಲಿ ಧಾರಾಳವಾಗಿ ಸಂಚರಿಸುವ, ಸಂತೋಷವನ್ನು ಅನುಭವಿಸುವ ಪುಣ್ಯ ಯಾರಿಗೂ ಉಂಟು. ಅಬ್ಬರವಿಲ್ಲ, ಕೊರಲೆತ್ತಿ ಕೂಗುವ ಆಕಾಂಕ್ಷೆಯಿಲ್ಲ, ನಾನೆಷ್ಟು ದೊಡ್ಡವ, ನನ್ನ ಪ್ರಜ್ಞೆಯ ಜೀವವೇಭಾವ, ನನ್ನ ಉಕ್ತಿವೈಭವ ಎಷ್ಟು ಮಹತ್ವದ್ದು ನೋಡಿ ಎಂಬ ಅಭಿಮಾನವಿಲ್ಲ. ತುಂಬಿದ ನದಿ ಒಂದು ಅಲೆಯನ್ನು ಕೂಡ ಕಾಣಿಸದಂತೆ ಆಳವಾಗಿ, ತಿಳಿಯಾಗಿ, ನುಣುಪಾಗಿ "Still waters run deep'ಎಂಬ ಗಾಂಭೀರ್ಯದಲ್ಲಿ ಹರಿದು ತನ್ನ ಕಲಾಜೀವನವನ್ನು ಸಾರ್ಥಕಪಡಿಸಿಕೊಳ್ಳುತ್ತದೆ. ಅಂಥದನ್ನು ಗೌರವಿಸುವ ಭಾಗ್ಯ ಸಾಹಿತಿಗಳದಾಗಲಿ.

ರಾಮನವಮಿ

ಪ್ರೊ|| ಗೋಪಾಲಕೃಷ್ಣ ಅಡಿಗ

ಕನ್ನಡ ಸಾಹಿತ್ಯದ ಆಧುನಿಕ ಯುಗದ ಇತಿಹಾಸದಲ್ಲಿ ಮಾಸ್ತಿಯವರ ಹೆಸರು ಬಹಳ ದೊಡ್ಡದು. ಸಾಹಿತ್ಯದಲ್ಲಿ ಅವರು ಮಾಡುತ್ತ ಬಂದಿರುವ ಕೆಲಸ ಎರಡು ರೀತಿಗಳಿಂದ ತುಂಬ ಪ್ರಾಮುಖ್ಯವುಳ್ಳದ್ದು: ಗಾತ್ರದಲ್ಲೂ ಗುಣದಲ್ಲೂ ವೈವಿಧ್ಯದಲ್ಲೂ ಇವರ ಸಾಹಿತ್ಯ ಸೃಷ್ಟಿ ಅದ್ವಿತೀಯವಾದದ್ದು; ಆಧುನಿಕ ಸಾಹಿತ್ಯ ರಚನೆಯ ಆರಂಭ ಕಾಲದಲ್ಲಿ ಕೈಕೊಂಡ ಹೊಸ ಪ್ರಯೋಗಗಳಿಗೆ ತಕ್ಕ ವಿಮರ್ಶೆಯ ತಾತ್ವಿಕ ತಳಪಾಯವನ್ನು ತಮ್ಮ ವಿಮರ್ಶ ಲೇಖನಗಳಿಂದ ಸಿದ್ಧಪಡಿಸಿದ್ದು. ಸಣ್ಣಕಥೆ, ಕಾವ್ಯ, ನಾಟಕ, ಕಾದಂಬರಿ, ಜೀವನ ಚರಿತ್ರೆ, ವಿಮರ್ಶೆ ಹೀಗೆ ಹೊಸಗನ್ನಡ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಹೀಗೆ ಅಭಿವ್ಯಕ್ತಿಗೊಂಡದ್ದು ಅಪೂರ್ವವಾದೊಂದು ಜೀವನ ಸತ್ವ. ಈ ಸತ್ವ ನಮ್ಮ ದೇಶದಲ್ಲಿ ಯಾವುದನ್ನು ಸನಾತನಧರ್ಮ ಎಂದು ಯುಗಯುಗಗಳಿಂದಲೂ ಒಪ್ಪಿ ನಂಬಿಕೊಂಡು ಬರಲಾಗಿದೆಯೋ ಆ ಧರ್ಮದ ಸಾರ. ಬಾಳಿನ ವೈವಿಧ್ಯದಲ್ಲಿ, ಸುಖ ದುಃಖಗಳಲ್ಲಿ, ಉಬ್ಬರ ಇಳಿತಗಳಲ್ಲಿ, ಏರು ತಗ್ಗುಗಳಲ್ಲಿ ಎಲ್ಲೂ ತೂಕ ತಪ್ಪದಂತೆ, ಧೃತಿಗೆಡದಂತೆ ಶಾಂತವಾಗಿ, ಪ್ರಜ್ಞೆಯ ಬೆಳಕಿನಲ್ಲಿ ಶುದ್ಧವಾಗಿ, ಸಮೃದ್ಧವಾಗಿ ವ್ಯಕ್ತವಾಗುವ ಮಾಸ್ತಿಯವರ ಅಂತರಂಗದ ಅನುಭವದ ಅಭಿವ್ಯಕ್ತಿಗೆ ಬೆಳದಿಂಗಳ ಪ್ರಶಾಂತಿ, ಹೂವುಗಳ ಮೃದುತ್ವ, ಬಯಲಲ್ಲಿ ಹರಿಯುವ ಅಗಲಕಿರಿದಾದ ಹೊಳೆಯ ಸ್ಪಟಿಕ ನಿರ್ಮಲ ಜಲದ ಪಾರದರ್ಶಕತೆ ಇದೆ. ಇವರ ಸಾಹಿತ್ಯಕ್ಕೆ ಮನಸ್ಸನ್ನು ಅಲ್ಲೋಲ ಕಲ್ಲೋಲಗೊಳಿಸಬಲ್ಲ ಯುಗಾಂತರಕಾರಕ ಆವೇಶ, ತೀವ್ರತೆ, ತಲಸ್ಪರ್ಶಿತ್ವ, ಆಕಾಶೋಡ್ಡಯನ ಇಲ್ಲ. ಅದು ಪುರಾತನವಾದೊಂದು ಸಮಾಜದ ಸ್ಥಿರ ಮೌಲ್ಯಗಳಲ್ಲಿ ಬೇರೂರಿನಿಂತದ್ದು. ಸಜ್ಜನನೊಬ್ಬನ ತುಂಬು ಬದುಕಿನ ಕೊಂಬೆಕೊಂಬೆಗಳಲ್ಲೂ ತುಂಬಿ ಮಾಗಿ ಹಣ್ಣಾಗಿರುವ ರೀತಿಯ ಕೃತಿ ರಾಶಿ ಇದು. ಮನಸ್ಸು ಮಾಗದೆ, ಸಮಸ್ಥಿತಿಯ ಕಲ್ಪನೆಯೂ ಇಲ್ಲದೆ ಈ ಕೃತಿಗಳನ್ನು ಮೆಚ್ಚುವುದು ಸುಲಭವಲ್ಲ. ಇವಕ್ಕೆ ಕಣ್ಣಿಗೆ ಹೊಡೆಯುವ ರೂಪವಿಲ್ಲ, ಸ್ಫೂರ್ತಿಗೊಳಿಸಬಲ್ಲ ಮಾಂತ್ರಿಕತೆ ಇಲ್ಲ ಭಾವೋದ್ವೇಗ ಸ್ಥಿತಿಯಾಗಲೀ, ಅಂಥ ಉದ್ವೇಗವನ್ನು ಹುಟ್ಟಿಸುವ ಶಕ್ತಿಯಾಗಲೀ ಇವರ ಸಾಹಿತ್ಯಕ್ಕೆ ಇಲ್ಲ. ಅಪಾರವಾದ ಅನುಕಂಪ, ವ್ಯಾಪಕವಾದ ಸಹಾನುಭೂತಿ ಇವರ ಸಾಹಿತ್ಯದಲ್ಲಿ ಅನುಸ್ಯೂತವಾಗಿ ಕಂಡುಬಂದರೂ ಅಲ್ಲಿ ದುರಂತ ದೃಷ್ಟಿ ಇಲ್ಲ. ಆದಕಾರಣ ಈ ಕೃತಿಗಳಲ್ಲಿ ಕಂಡುಬರುವ ಶಾಂತತೆ ಜಾಗ್ರತ ಮನಸ್ಸಿನ ವಿಚಾರಸ್ಥಲದಿಂದ ಹೊಮ್ಮುವಂತೆ ಕಾಣುತ್ತದೆಯಲ್ಲದೆ ಆಳದಿಂದೆದ್ದು ಬಂದು ಅಶಾಂತಿಯ ಬಿರುಗಾಳಿಯನ್ನನುಭವಿಸಿ, ಹಡಗೊಡೆದು ಪಾಡುಪಟ್ಟು ಬದುಕಿನ ಅರ್ಥವನ್ನು ಅನುಭವಿಸಿದ ಬಳಿಕ ಸಂಪಾದಿಸಿಕೊಂಡ ಶಾಂತಿಪರ್ವದ ಹಾಗೆ ಕಾಣುವುದಿಲ್ಲ. ಇದು ಇವರ

ಸಾಹಿತ್ಯದ ಪರಿಮಿತಿ: ಪ್ರಜ್ಞಾಬದ್ಧತೆ; ದ್ವಂದ್ವಗಳ ಚಿತ್ರವಿಲ್ಲದ ದ್ವಂದ್ವ ಸಮನ್ವಯ.

ಈ ಗುಣಗಳು ಚೆನ್ನಾಗಿ ಎದ್ದು ಕಾಣುವುದು ಇವರ ಕಾವ್ಯದಲ್ಲಿ. ಇಲ್ಲಿ ಭಾರತೀಯ ಕಾವ್ಯಸಂಪ್ರದಾಯವನ್ನು ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯ ಸಂಪ್ರದಾಯದೊಡನೆ ಹೊಂದಿಸಿಕೊಂಡ ರೀತಿ ಅಭ್ಯಾಸ ಯೋಗ್ಯವಾಗಿದೆ. ಕಾಳಿದಾಸನಿಂದ ಟಾಗೂರರವರೆಗೂ ಹರಿದು ಬಂದ ಭಾರತೀಯ ಕಾವ್ಯಸಂಪ್ರದಾಯ ತನ್ನ ಮೌಲ್ಯಗಳಲ್ಲಿ ಮುಖ್ಯವಾಗಿ ಸಾಮಾಜಿಕವಾದದ್ದು. ತನ್ನ ಸ್ವಂತ ಅನುಭವದ ವಿಶೇಷವನ್ನು ತನ್ನ ಸ್ವತ್ವದ ವೈಶಿಷ್ಟ್ಯವನ್ನು ಕಾವ್ಯವಾಗಿಸಬೇಕೆನ್ನುವುದಕ್ಕಿಂತ ಒಂದು ಆಖ್ಯಾನವನ್ನೋ ಪುರಾಣ ಕಥೆಯನ್ನೊ ಎತ್ತಿಕೊಂಡು ತನ್ನ ವೈಯಕ್ತಿಕ ವಿಶೇಷ ಏನಾದರೂ ಇದ್ದರೆ ಅದನ್ನು ಶೈಲಿ ಉಪಮೆ ಮುಂತಾದ ಅಂಶಗಳಲ್ಲಿ ತೋರಿಸಿದರೆ ಸಾಕು ಎನ್ನುವುದು ಈ ಸಂಪ್ರದಾಯದ ಸಾಮಾನ್ಯ ಧೋರಣೆ. ಅನುಭವದ ಫಲವನ್ನು ಮಾತ್ರ ಹೇಳುವ ಆದರೆ ಅದರ ಸಹಜ ರೂಪವನ್ನು - ಅದರ ತುಮುಲ, ಸಂಘರ್ಷ ಕ್ಲೇಶ ಇವುಗಳನ್ನು - ಹೊರತು ಪಡಿಸುವ ಧೋರಣೆ ಅದು. ಈ ಧೋರಣೆ ಮನಸ್ಸಿನ ಆಳಗಳನ್ನಾಗಲೀ ಕೆಡುಕಿನ ಭೀಕರತೆಯನ್ನಾಗಲೀ ಗಮನಿಸದೆ ಸಾಮಾಜಿಕ ಮೌಲ್ಯಗಳಿಗೇ ಅಂಟಿಕೊಳ್ಳುವುದರಲ್ಲಿ ವ್ಯಕ್ತವಾಗುತ್ತದೆ. ವೇದ, ಉಪನಿಷತ್ತು, ಮಹಾಭಾರತ ಪುರಾಣಗಳನ್ನು ಕಾವ್ಯವೆಂದು ಪರಿಗಣಿಸಿದ ಈ ಸಂಪ್ರದಾಯ ಬದುಕಿನ ಒಳ ಪದರುಗಳಿಗೆ ತಕ್ಕ ಮಹತ್ವಕೊಡದೆ ಕಾವ್ಯೋದ್ದೇಶವನ್ನೇ ಸಂಕುಚಿತಗೊಳಿಸಿ ಜೀವನವನ್ನೇ ತುಂಬ ಸರಳಗೊಳಿಸಿಕೊಂಡು ಬಂದಿದೆ ಎಂದು ತೋರುತ್ತದೆ. ಶೃಂಗಾರ ರಸಕ್ಕೆ ತೀರ ಪ್ರಾಧಾನ್ಯಕೊಟ್ಟು ಒಟ್ಟಿನಲ್ಲಿ ಕಾವ್ಯವನ್ನು ಮನೋರಂಜನ ಸಾಧನವನ್ನಾಗಿ ಮಾಡಿತು. ಈ ಶತಮಾನದ ಆದಿಭಾಗದಲ್ಲಿ ಕಾವ್ಯವೆಂದರೆ ಇದೇ, ಪದ್ಯರೂಪದಲ್ಲಿದ್ದದ್ದೆಲ್ಲ ಕಾವ್ಯ ಎಂದು ಸಾಮಾನ್ಯ ಭಾವನೆ ಇತ್ತು. ಸ್ವಂತ ಅನುಭವಕ್ಕೂ ಬರೆಯುವ ಕಾವ್ಯಕ್ಕೂ ಮೂಲಭೂತ ಸಂಬಂಧ ಅಗತ್ಯ ಎಂಬ ವಿಚಾರ ಸ್ಪಷ್ಟವಾದದ್ದು, ಕವಿಯ ವ್ಯಕ್ತಿತ್ವದ ಬಗ್ಗೆ, ಅವನ ಸ್ವಾನುಭವದ ಬಗ್ಗೆ ನಿಚ್ಚಳವಾದ ವಿವೇಚನೆ ನಡೆಯತೊಡಗಿದ್ದು ಇಂಗ್ಲಿಷ್ ಕಾವ್ಯದ ಪ್ರಭಾವ ನಮ್ಮ ವಿದ್ಯಾವಂತ ಸಾಹಿತ್ಯ ಪ್ರೇಮಿಗಳ ಮೇಲೆ ಬಿದ್ದು ಅನಂತರವೇ. ವರ್ಡ್ಸ್‌ವರ್ಥ್ ಕವಿಯ ಕಾವ್ಯ ಸೂತ್ರಗಳನ್ನು ಚೆನ್ನಾಗಿ ಅರಿತು ಅವುಗಳನ್ನು ತಮ್ಮದಾಗಿಯೂ ಆ ಮೂಲಕ ಕನ್ನಡದ್ದನ್ನಾಗಿಯೂ ಮಾಡಿಕೊಂಡವರು ನಮ್ಮಲ್ಲಿ ಶ್ರೀಮಾಸ್ತಿಯವರೊಬ್ಬರೇ ಎನ್ನಬಹುದು. ವರ್ಡ್ಸ್‌ವರ್ಥ್ ಕವಿಯ ಕಾವ್ಯ ಸೂತ್ರಗಳಲ್ಲಿ ಮಾಸ್ತಿಯವರು ಕನ್ನಡಕ್ಕೆ ಅರಗಿಸಿಕೊಂಡ ಅಂಶಗಳು ಮುಖ್ಯವಾಗಿ ಇವು: ಮನಸ್ಸಿನ ಕ್ರಿಯೆಗಳಿಗೆ ತಕ್ಕ ಕನ್ನಡಿಯಾಗಬಲ್ಲ, ಕಾವ್ಯಮಮತೆಯಿಂದ ಕವಿ ಸಮಯಗಳಿಂದ ಸಂಪೂರ್ಣ ಮುಕ್ತವಾದ, ಶಬ್ದಾಡಂಬರ ಸೋಂಕೂ ಇಲ್ಲದ ಜನಸಾಮಾನ್ಯನ ಆಡುಮಾತಿನ ಧಾಟಿಗೆ ತುಂಬ ಹತ್ತಿರವಾದ ಭಾಷಾಶೈಲಿ; ಅಶಿಕ್ಷಿತರು ಗ್ರಾಮಸ್ಥರು ಮುಂತಾಗಿ ಕಾವ್ಯ ಅಲ್ಲಿಯವರೆಗೆ ಕಡೆಗಣಿಸಿದ್ದ ಸಮಾಜವರ್ಗಗಳಲ್ಲಿ ಆಸಕ್ತಿ, ಅವರ ಬದುಕಿನಲ್ಲಿ ಮಥನಗೊಂಡು ವ್ಯಕ್ತವಾಗುವ ಜೀವನ ದರ್ಶನದ ಬಗ್ಗೆ ಕುತೂಹಲ; ಕಾವ್ಯವೆಂದರೆ 'ಪ್ರಶಾಂತ ಸ್ಥಿತಿಯಲ್ಲಿ ಮರುಕಳಿಸುವ ಭಾವ' ಎಂಬ ಧೋರಣೆ. ಆದರೆ ವರ್ಡ್ಸ್‌ವರ್ಥನ ಕಾಲದಲ್ಲೇ ತೀವ್ರವಾಗುತ್ತಿದ್ದ, ಆತನ ಕಾವ್ಯಕ್ಕೂ ಮುಖ್ಯ ಪ್ರೇರಕವಾಗಿದ್ದ ಏಕಾಂಗಿತನದ ಪ್ರಜ್ಞೆ, ಸ್ವಾನುಭವ ವಿಶ್ಲೇಷಣೆ ಮಾಸ್ತಿಯವರ ಕಾವ್ಯದಲ್ಲಿ ಇಲ್ಲ. ಹೊಸ ನಾಗರಿಕತೆಯ ಧರ್ಮಬಾಹಿರ ಧನದಾಹವನ್ನು ಮಾಸ್ತಿಯವರು ಖಂಡಿಸುತ್ತಾರಾದರೂ ಒಟ್ಟಿನಲ್ಲಿ ಇವರ

ಸಂಬಂಧ ಸಮಾಜದ ಜೊತೆಗೆ ಅನ್ಯೋನ್ಯವಾದದ್ದು. ನಮ್ಮ ಧರ್ಮದ ಉತ್ತಮ ಮೌಲ್ಯಗಳನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿ, ಸಹಿಷ್ಣುತೆಯನ್ನು ತಮ್ಮ ಅಂತರಂಗದ ಅವಿಭಾಜ್ಯಾಂಶವನ್ನಾಗಿ ಮಾಡಿಕೊಂಡು, ಈ ಪ್ರಪಂಚವೆಲ್ಲವೂ ಪರಮಾತ್ಮನ ಲೀಲೆ ಎಂಬ ಶ್ರದ್ಧೆಯ ಭದ್ರಬುನಾದಿಯ ಮೇಲೆ ಇವರು ತಮ್ಮ ಭಾವ ವಿಚಾರಗಳ ಹಂದರವನ್ನು ಹಬ್ಬಿಸುತ್ತಾರೆ. ಹೀಗಾಗಿ ಇವರ ಕಾವ್ಯ ಮೌಲ್ಯ ಸಂಶೋಧಕವಲ್ಲ, ಮೌಲ್ಯನಿಷ್ಠ.

ಕಾವ್ಯದಲ್ಲಿ ಮಾಸ್ತಿಯವರ ದೃಷ್ಟಿ ಧಾರ್ಮಿಕವಾದದ್ದು, ಆಧ್ಯಾತ್ಮಿಕವಾದದ್ದಲ್ಲ. ತನ್ನನ್ನು ಮೀರಿ ವಿಶ್ವದೊಡನೆ ಬೆರೆಯುವ ಆಶೆ-ಇದು ರೊಮ್ಯಾಂಟಿಕ್ ಕಾವ್ಯಕ್ಕೆ ಮೂಲಭೂತವಾದದ್ದು-ಮಾಸ್ತಿಯವರ ಕಾವ್ಯದಲ್ಲಿ ಇಲ್ಲ. ಬದಲಾಗಿ ನಾವು ಕಾಣುವುದು ನಮ್ಮ ಧರ್ಮದ 'ಸಹಿಷ್ಣುತೆ' ಎಂಬ ಮೌಲ್ಯದಲ್ಲಿ ಅಡಕವಾಗಿದ್ದು, ಪ್ರಜಾಪ್ರಭುತ್ವ ತತ್ವದ ಸೂತ್ರಗಳ ಅರಿವಿನಿಂದ ಸ್ಫುಟಗೊಂಡ 'ಲಿಬರಲ್' ಉದಾರವಾದಿ ದೃಷ್ಟಿ. ಅದರಿಂದಲೇ ಇವರಿಗೆ ತಮ್ಮ ಸ್ವಂತ ನಂಬಿಕೆಗಳಲ್ಲಿ ನಿಷ್ಠೆ ದೃಢವಾಗಿದ್ದರೂ ಅದೇ ಪರಮ ಎಂಬ ಮತಚ್ಛಲ ಇವರ ಕಾವ್ಯದಲ್ಲಿ ಎಲ್ಲೂ ಕಾಣಿಸುವುದಿಲ್ಲ. ಪ್ರತಿಯೊಬ್ಬನೂ ತನ್ನ ತನ್ನ ನಂಬಿಕೆಗನುಗುಣವಾಗಿ ಬದುಕುವುದೇ ಸರಿ; ಆದರೆ ಆ ನಂಬಿಕೆ ಬಾಳನ್ನು ಬೆಳಗುವಂಥದೂ, ನಮ್ಮ ಜೀವವನ್ನು ಮೆಟ್ಟಲು ಮೆಟ್ಟಲುಗಳಾಗಿ ದೇವರ ಕಡೆಗೆ ಏರಿಸುವಂಥದೂ ಆಗಿರಬೇಕು.

ಬಾಳನು ಬೆಳಗಲು ಬಲ್ಲ ನಂಬಿಕೆಯ
ನಾನು ಸತ್ಯ ಎಂಬೆ;
ಇದ ಮಾಡದ ನುಡಿ ಏತರ ಸತ್ಯ?
ಅದು ಸತ್ಯದ ಗೊಂಬೆ.

*

ಮುದುಪನ ನಂಬಿಕೆ ನನ್ನಲ್ಲಿ ಮೆಳೆಯದು;
ನನ್ನದು ನಿಮಗಲ್ಲ:
ಮೊಗದಲಿ ಮನದಲಿ ದೈವಸೃಷ್ಟಿಯಲಿ
ಇವನ ಪೊಲವನಿಲ್ಲ.

('ರಾಮನವಮಿ')

ಬೇಂದ್ರೆ, ಪುಟ್ಟಪ್ಪನವರ ಕವಿತೆಗಳಲ್ಲಿ ಕಾಣುವ ಆಧ್ಯಾತ್ಮಿಕ ಎನ್ನಬಹುದಾದ ದೃಷ್ಟಿ ಮಾಸ್ತಿಯವರದಲ್ಲ. ತನಗಿಂತ ಭಿನ್ನವಾದದ್ದರಲ್ಲಿ ತನ್ಮಯನಾಗುವ ಪ್ರವೃತ್ತಿಗಿಂತ ಹೆಚ್ಚಾಗಿ ನಾವು ಇವರ ಕವಿತೆಗಳಲ್ಲಿ ಕಾಣುವುದು ತನ್ನತನವನ್ನು ಚೆನ್ನಾಗಿ ಅರಿತು ಅದು ಉಳಿದವುಗಳ ಜೊತೆ ಹೇಗೆ ಸರಿಯಾಗಿ ಇರಲು ಸಾಧ್ಯ ಎಂದು ಚಿಂತನ ನಡಸುವ ಆಸಕ್ತಿ. ಇದರಿಂದ ಇವರ ಕಾವ್ಯ ತಕ್ಕಷ್ಟು ಆಳವಾದದ್ದಲ್ಲ ಎನ್ನಿಸುತ್ತದೆ. ಆದರೆ ಆ ಕಾರಣದಿಂದಲೇ ಇದು ಎಲ್ಲ ಮಿಥ್ಯಾಆಧ್ಯಾತ್ಮಿಕತೆಯಿಂದಲೂ ಭಾವಸಮಾಧಿಯ ಆಭಾಸದಿಂದಲೂ ಮುಕ್ತವಾಗಿದೆ. ಕೇವಲ ಮಾತುಗಳಲ್ಲಿ ಮಾತ್ರ ಹರಿದೋಡುವ ಆಧ್ಯಾತ್ಮಿಕತೆಯ ಸೋಗು ಇವರ ಕಾವ್ಯದಲ್ಲಿ ಎಲ್ಲೂ ಇಲ್ಲ. ತನ್ನ ಆಳಕ್ಕೆ ಮೀರಿದ್ದನ್ನು ತನ್ನ ತೆಕ್ಕೆಗೆ ಸಿಕ್ಕದ್ದನ್ನೂ ಹಿಡಿಯಲು ಇಲ್ಲಿ ಹೋರಾಟವೇ ನಡೆಯುವುದಿಲ್ಲವಾಗಿ ಇವರ ಕವಿತೆ ತೆಳ್ಳಗೆ ಎನ್ನಿಸಿದರೂ ಕೃತಕ

ಎನ್ನಿಸುವುದಿಲ್ಲ. ಅದು ಸಪ್ಪೆಯಾಗದೆ ಇರುವುದಕ್ಕೆ ಮಾಸ್ತಿಯವರ ನಿಲುವಿಗೆ ಸಹಜವಾಗಿರುವ ಚುತರೋಕ್ತಿ, ನರ್ಮಹಾಸ್ಯ, ನಿರ್ಮಲಬುದ್ಧಿ ಪ್ರಕಾಶ, ಇವು ಕಾರಣವೆಂದು ತೋರುತ್ತದೆ. ಒಟ್ಟಿನಲ್ಲಿ ಈ ಕವಿತೆ ತನ್ನ ಅನಿಸಿಕೆಗಳಿಗೆ ಬದ್ಧವಾಗಿರುವ ಕಲಾಪ್ರಮಾಣಿಕತೆಯಿಂದ, ಎಂದರೆ ತಾನು ಹೇಳಬೇಕೆಂದಿದ್ದುದಕ್ಕಿಂತ ಕೊಂಚವೂ ಹೆಚ್ಚು ಎನ್ನಿಸದ ಮಾತುಗಳ ಜೋಡಣೆಯಿಂದ, ಆಡುಮಾತಿಗೆ ಸಹಜವಾದ ಲಯದಿಂದ, ತನ್ನ ತೂಕದಿಂದ, ಗಾಂಭೀರ್ಯದಿಂದ, ಸಹಜತೆಯಿಂದ ಹೃದ್ಯವಾಗುತ್ತದೆ. ಮಾತಿನ ದುಂದುಗಾರಿಕೆಯಿಂದ ಮುಕ್ತವಾಗಿ, ತನ್ನ ಪ್ರಭಾವಸಿದ್ಧಿಗೆ ಸಂಗೀತಗತಿಯನ್ನು ಆಶ್ರಯಿಸದೆ, ಗದ್ಯದಲ್ಲೂ ಪದ್ಯದಲ್ಲೂ ಒಂದೇ ರೀತಿ ಬಳಸಬಹುದಾದ ಉಭಯ ಸಮಾನಶೈಲಿಯಲ್ಲಿ ರಚಿತವಾಗಿರುವ ಇವರ ಕವಿತೆ ಈ ದೃಷ್ಟಿಯಿಂದ ಮುನ್ನೋಟವುಳ್ಳದ್ದಾಗಿಯೂ, ಸಂಪ್ರದಾಯ ಮೌಲ್ಯಗಳಲ್ಲಿ ಶ್ರದ್ಧೆಯಿರುವ ಜೀವನದೃಷ್ಟಿಯಿಂದಾಗಿ ಪ್ರಜ್ಞಾಬದ್ಧವಾಗಿರುವುದರಿಂದ ಹಿನ್ನೋಟವುಳ್ಳದ್ದಾಗಿಯೂ ಇದ್ದು ನಮ್ಮ ದೇಶದ ಆಧುನಿಕೀಕರಣದ ಒಂದು ಹಂತವನ್ನು ತುಂಬ ಚೆನ್ನಾಗಿ ಪ್ರತಿನಿಧಿಸುತ್ತದೆ.

ಈ ಎಲ್ಲ ಅಭಿಪ್ರಾಯಗಳ ಸಮರ್ಥನೆಗಾಗಿ ಮಾಸ್ತಿಯವರ ಅತ್ಯುತ್ತಮ ದೀರ್ಘಕವನಗಳಲ್ಲಿ ಒಂದಾದ 'ರಾಮನವಮಿ' ಎಂಬ ಕವನವನ್ನು ಪರಿಶೀಲಿಸಬಹುದು. ೧೮೨ ಚತುಷ್ಪದಿಗಳಲ್ಲಿ ಅಂತ್ಯಪ್ರಾಸ ಸಹಿತವಾಗಿ ಬರೆದ ಈ ಕವನ ತುಂಬ ಮಹತ್ವವುಳ್ಳ ಕೃತಿ ಎಂದು ನನಗೆ ತೋರುತ್ತದೆ. ಈ ಕವನದ ಭಾಷೆ ಶೈಲಿ ನಿಲುವುಗಳಿಂದ ನಾವು ಕಲಿಯಬೇಕಾದ್ದು ಬಹಳವಿದೆ ಎಂದು ನನಗೆ ಅನ್ನಿಸುತ್ತದೆ. ನಾಲ್ಕು ಮಾತ್ರೆಗಳ ಗಣದಿಂದ ಕೂಡಿರುವ ಚೌಪದಿಗಳಲ್ಲಿ ಆಡುಮಾತಿನ ಗತಿಯನ್ನು ತರುವುದು, ನೇರವಾದ ಸಂಭಾಷಣೆಯ ಮಾತುಗಳನ್ನು ಅಳವಡಿಸಿಕೊಳ್ಳುವುದು, ಸಂಗೀತಗತಿಯ ಕಡೆಗೆ ಓಲದೆ ಭಾವಾನುಸಾರಿಗತಿಯಲ್ಲಿ ಅಭಿವ್ಯಕ್ತಿ ಸಾಧಿಸುವುದು ಆಶ್ಚರ್ಯಕರವಾದ ಸಾಧನೆ:

ನುಡಿಸಿದಾತಗೆ ಬಹು ಸಂತೋಷ,
"ಕೈ ಮುಗಿದೆ, ಒಡೆಯ,
ಎತ್ತ ಹೊರಟಿರಿ" ಎಂದನು ಮುದುಪ
ನಿಲಿಸಿ ನನ್ನ ನಡೆದು.

*

ವಿದೇಹರಾಜ ತನೂಜೆ, ದಶರಥ
ಚಕ್ರೇಶ್ವರನ ಸೊಸೆ,
ಈ ಕ್ಲೇಶವ ತಡೆವಳೆ? ಸರಿಯೇ ಈ
ತನ್ವಿಗೆ ಇಂಥ ದೆಸೆ?

ಈ ಕವನ ಒಂದು ಕಥನ ಕವನವೇ. ಕವಿ ಕಥೆಯನ್ನು ಬಳಸಿಕೊಳ್ಳುವ ರೀತಿಯಿಂದ ಅತ್ಯಂತ ಸರಳವಾಗಿ ಕಾಣುವ ಈ ಪದ್ಯಗಳಲ್ಲಿ ತಕ್ಕಷ್ಟು ಸಂಕೀರ್ಣವಾದೊಂದು ಅನುಭವ ಪಡಿಮೂಡುತ್ತದೆ. ಇದು ಒಂದು ರಾಮನವಮಿಯ ದಿನವೇ ನಡೆಯುವ ಸಂಗತಿ, ಕಥಕ ಪಟ್ಟಣವನ್ನು ಬಿಟ್ಟು ಬೋವನಹಳ್ಳಿಯ ಮುಂಗಡೆ ನಡೆಯುತ್ತಿರಲು ಒಂದು 'ಬಸರಿಯ

ಮರದಡಿ' ಹಳ್ಳಿಯ ಮುದುಕಗೌಡನೊಬ್ಬನನ್ನು ಕಾಣುತ್ತಾನೆ. ಮುದುಕನ ಕರೆಯಂತೆ ಹೋಗಿ ಮರದಡಿ ಕುಳಿತಾಗ ಮುದುಕ ಈತನಿಗೆ ಆ ಸ್ಥಳದ ಮಹಿಮೆಯನ್ನು ಕುರಿತು ಹಳೆಯ ಕತೆಯೊಂದನ್ನು ಹೇಳುತ್ತಾನೆ. ಅದು ರಾಮ, ಸೀತೆ, ಲಕ್ಷ್ಮಣರಿಗೆ ಸಂಬಂಧಪಟ್ಟ ಕಥೆ. ತನ್ನ ವನವಾಸಕಾಲದಲ್ಲಿ ಅಲ್ಲಲ್ಲಿ ಸಂಚರಿಸುತ್ತ ಈ ಕಡೆಗೆ ಬಂದಾಗ ಸೀತೆ ಬಿಸಿಲಲ್ಲಿ ಬೆಂದು ಬಳಲಿ ಕ್ಲೇಶಪಡುತ್ತಿರುವುದನ್ನು ಗಮನಿಸಿದ ಶ್ರೀರಾಮ ಅಲ್ಲಿ ಆ ಮರದಡಿಯಲ್ಲಿ ವಿಶ್ರಾಂತಿಗೆಂದು ಕುಳಿತಾಗ ಹಠಾತ್ತನೆ ಸೀತೆಗೆ ಅದು ಶ್ರೀರಾಮನ ಜನ್ಮದಿನ ಎಂಬುದು ನೆನಪಿಗೆ ಬರುತ್ತದೆ. ಹಣ್ಣುಹಂಪಲುಗಳನ್ನು ಆಯ್ದು ತಂದು ಆ ಮರದಡಿಯಲ್ಲೇ ಹಬ್ಬದ ಅಡುಗೆಯನ್ನು ಮಾಡಿ ಊಟಮಾಡಿ ವಿಶ್ರಮಿಸಿ ಅಲ್ಲಿಂದ ಹೊರಟು ಮುನ್ನಡೆಯುತ್ತಾರೆ. ಆ ಸ್ಥಳದ ಚಂದ ಸೀತೆಯ ಮನಸ್ಸಿಗೆ ತುಂಬ ಹಿಡಿಸುತ್ತದೆ. ಹೊರಡುವಾಗ ಸೀತಾದೇವಿ ಈ ಮರವನ್ನು ಹರಸುತ್ತಾಳೆ-''ಬಾಡ ಬೇಡ ನೀ'' ಎಂದು. ಹಾಗೆಯೇ ಅಡುಗೆಗೆ ನೆರವಾದ ಬಾವಿಗೆ 'ಬತ್ತದಿರು' ಎನ್ನುತ್ತಾಳೆ. ಪ್ರತಿವರ್ಷವೂ ರಾಮನವಮಿಯ ದಿವಸ ಅಲ್ಲಿಗೆ ಸೀತೆ ರಾಮ ಲಕ್ಷ್ಮಣ ಬರುತ್ತಾರೆ, ಬಂದು ಮೂರು ಗಳಿಗೆ ಸುಳಿದಾಡುತ್ತಾರೆ ಎಂದು ಹಳ್ಳಿಗಳ ನಂಬಿಕೆ. ಆ ಮರವೇ ಇಂದಿಗೂ ಇದೆ ಎಂಬುದು ಅವರ ನಂಬಿಕೆಯ ಒಂದು ಅಂಶ. ಅಂತೂ ಅಲ್ಲಿ ಮರವಿಲ್ಲದೆ ಇದ್ದದ್ದನ್ನು ಯಾರು ಕಂಡಿಲ್ಲ. ಅದನ್ನು ಯಾರು ಎಂದೂ ಕಡಿಯುವುದಿಲ್ಲ. ಅದು ಒಣಗುವಷ್ಟಕ್ಕೆ ಒಂದು ಕೊಂಬೆಯನ್ನು ಅಲ್ಲಿಯೇ ನೆಡುವ ಬುದ್ಧಿ ಜನಕ್ಕೆ ಎಂದಿಗೂ ಇರಲಿ ಎಂದು ಗೌಡ ಹಾರಯಿಸುತ್ತಾನೆ. ಈ ಗೌಡನ ತಾತ, ಹೆತ್ತಾತ ರಾಮಲಕ್ಷ್ಮಣಸೀತೆಯರು ಆ ಮರದಡಿ ರಾಮನವಮಿ ದಿವಸ ಸುಳಿದಾಡುವುದನ್ನು ಕಂಡಿದ್ದಾರೆ:

ಪುಣ್ಯವಂತರಿಗೆ ಕಾಣುವರೆಂದು
ಹೇಳಿ ಕೇಳಿ ಬಲ್ಲೆ.
ಕರುಣಿಸೆ ಕಾಂಬರು; ಪುಣ್ಯವೆ? ದೇವರ
ಕೃಪೆಗೆ ಏಕೆ ಎಲ್ಲೆ?

ತನಗೂ ಎಂದಾದರೂ ಕಾಣಬಹುದೆಂದು ಪ್ರತಿ ವರ್ಷವೂ ಈ ಮುದುಕಗೌಡ ರಾಮನವಮಿಯ ದಿವಸ ಮಧ್ಯಾಹ್ನದ ಹೊತ್ತು ಅಲ್ಲಿಗೆ ಬಂದು ಕಾದಿರುತ್ತಾನೆ. ಕಾಣುತ್ತಾರೆ ಎಂದೇ ಈ ಗೌಡ ನಂಬಿದ್ದಾನೆ- ಇನ್ನೂ ಕಂಡಿಲ್ಲ. ಅವನಿಗೆ ನಂಬಿಕೆ ಇದೆ:

ಕಾಣುವರೆಂದೇ ನಂಬಿಹೆ ನಾನು
ಹಿರಿಯರ ನುಡಿ ಹಿರಿದು;
ಕಾಂಬರೆ ಇಲ್ಲವೆ ನೋಡಬೇಡವೇ
ನಂಬಿಕೆಯಲಿ ನಡೆದು?
ಕಣ್ಣಿಗೇನು ಕಾಣುವುದೆ ಗಾಳಿ? ಕೈ
ಆಡಿಸೆ ಮೈ ಸೋಕಿ
ತಾನಿಹೆನೆಂಬುದು; ಅಂತೆಯೆ ದೇವರು;
ಕಾಣರು ಏಕಾಕಿ.
ತೆಳುವಾಗಿರುವರು; ಬುದ್ಧಿಯನಾಡಿಸೆ
ಮನಸಿಗೆ ತಟ್ಟುವರು.

ಸೈಪುಳ್ಳೆವರಿಂತಿದಿರಲಿ ನಡೆಯುವ
ದೇವರ ದಿಟ್ಟಿಪರು.

ಎಂದೂ ಗೌಡ ತಿಳಿಯಬಲ್ಲ; ನಾಕ, ನರಕ ಇವು ನಮ್ಮೆದುರಲ್ಲೇ ಇವೆ. ಅವುಗಳಲ್ಲಿ ಯಾವುದು ಬೇಕೋ ಅದನ್ನು ನಾವು ನಮ್ಮ ಕೆಲಸದಲ್ಲಿ ಕಾಣಬಹುದು. ಒಂದೇ ಬಲಗೈಯಿಂದ ಹೊಡೆದರೆ ನರಕ, ನೀಡಿದರೆ ನಾಕ. ಈ ನಮ್ಮ 'ಹೊಲಮೈ' ಕೂಡ 'ತೊಳೆದರೆ ದೇಗುಲ, ಬಿಟ್ಟರೆ ನಾರುವ ಬುದ್ದಲಿ'. ಹೀಗೆ ಸ್ವರ್ಗ ನರಕಗಳು ಎಲ್ಲಕಡೆಗಳಲ್ಲೂ 'ಹೆಣೆದಿವೆ' - ''ಕಲಿಯ ಬೇಕು ಮನುಜರು ಒಂದರಲೇ! ಕಾಣಲು ಇಮ್ಮಡಿಯ''.

ಈ ಮಾತುಗಳನ್ನು ನಮ್ಮ ಧರ್ಮದ ಸಾರ ಎಂಬುದು ಮಾತ್ರವಲ್ಲ. ಎಲ್ಲ ಕಾಲಕ್ಕೂ ಸಲ್ಲುವಂಥ ದೊಡ್ಡ ಮಾತುಗಳು. ಇವು ಗೌಡನ ಬಾಯಿಯಲ್ಲಿ ಬರುವುವಾದರೂ ಕಥನಕಾರಣವೇ. ಆದರೆ ಈ ಜ್ಞಾನದ ಮಾತುಗಳ ಹಿಂದಿರುವ ಅನುಭವ ಯಾವುದು? ಇದು ಪರಂಪರಾಗತವಾಗಿ ಬಂದ ಮಾತುಗಳ ಪುನರುಚ್ಚರಣೆಯೋ ಅಥವಾ ಆ ಹಳ್ಳಿಯ ಮುದುಕನ ಜೀವನಾನುಭವದಲ್ಲಿ ಸಿದ್ಧವಾದ ಮಾತುಗಳೋ? ಈ ಸಂದೇಹ ನಮಗೆ ಉಳಿಯುತ್ತದೆ. ಆದರೆ ಇಂಥ ಮಾತುಗಳು ಅವಿದ್ಯಾವಂತನಾದರೂ ಬುದ್ಧಿವಂತನಾದ, ಅನುಭವದ ಅರ್ಥವನ್ನು ಚಿಂತಿಸುವ ಶಕ್ತಿಯುಳ್ಳ ಹಳ್ಳಿಯವನಿಗೂ ಅಸಹಜ ಎನ್ನಿಸುವುದಿಲ್ಲ.

ಆದರೆ ಕಥೆ ಇಲ್ಲಿಗೆ ಮುಗಿಯುವುದಿಲ್ಲ. ಕೇವಲ ಹಳೆಯ ಕತೆಯೊಂದರ ಪುನರುಚ್ಚಾರವೇ ಈ ಕವನದ ಉದ್ದೇಶವಲ್ಲ. ಆ ಹಳೆಯ ಕಥೆಯ ಸತ್ವವೇ ಹೇಗೆ ಮತ್ತೆ ಮತ್ತೆ ಎಲ್ಲ ಕಾಲದಲ್ಲೂ ಪುನರಾವೃತ್ತಿ ಪಡೆಯುತ್ತದೆ, ಸಾರ್ವಕಾಲಿಕ ಸತ್ಯವನ್ನು ಹೇಗೆ ಸಂಕೇತಿಸುತ್ತದೆ ಎನ್ನುವುದನ್ನು ಕವಿ ಸೂಚಿಸುತ್ತಾರೆ. ಗೌಡ ಕಥೆ ಹೇಳುತ್ತಿರುವಾಗಲೇ ಕಥಕ ದೂರದ ''ತಗ್ಗಿನ ಮರದಡಿಗೆ'' ಒಬ್ಬ ಹುಡುಗ ನಿಂತಿರುವುದನ್ನೂ ಒಬ್ಬಳು ಹುಡುಗಿ ಕುಳಿತಿರುವುದನ್ನೂ ಕಾಣುತ್ತಾನೆ. ''ಸೀತಾರಾಮರೆ ಬಂದರೊ ಹೇಗೆ'' ಎಂದು ಆತನ ಎದೆ ತುಡಿಯುತ್ತದೆ. ಮುದುಕನನ್ನು ಮೆಚ್ಚಿ ಬಂದರೂ ಆಶ್ಚರ್ಯವಿಲ್ಲ ಎನ್ನಿಸುತ್ತದೆ. ಅಲ್ಲಿ ಕಂಡವರು ಗೌಡನನ್ನು ಕರೆಯಲು ಬಂದ ಅವನ ಮಗ ಮತ್ತು ಸೊಸೆ. ಮಗನ ಹೆಸರು ರಾಮ, ಸೊಸೆ ಈರವ್ವ. ಇವರೂ ಕೂಡಾ ರಾಮ ಸೀತೆಯರೇ ಅಲ್ಲವೇ?

ಮಾತಿನ ಜಾಣರು ಮನೆ ಮಗ ರಾಮ,
ಎಲ್ಲ ಹೆಣ್ಣು ಸೀತೆ,
ಎಂದು ಹೇಳುವುದ ಕೇಳಿಹೆ ನಾನು,
ಇದೇನು ಬರಿ ಮಾತೆ?
ದೇವರೆ ನಿಜ: ಹೆತ್ತಾತನು, ಎದುರಲಿ
ಆ ದಿನ ರಾಮನಿರೆ
ಮಗನನು ಕಂಡನು ದೇವರ ಕಾಣನು;
ಮಾಯೆಗೆ ನಾವಿದಿರೆ?

ಗೌಡನ ಮಾತುಗಳನ್ನು ಕೇಳುತ್ತ ಕೇಳುತ್ತ ಕಥಕನಿಗೆ ಒಂದು ಭಾವನೆ ಹೊಳೆಯುತ್ತದೆ:

ದಶರಥ ಸೀತಾರಾಮರು ಇವರು,
ನಾನೆ ಆದೆ ಜನಕ;

ಮನದಿಂದಿಳಿಯದು ಇನ್ನಾ ಚಿತ್ರ
ಈ ಉಸಿರಿರುವನಕ.

ಪುರಾಣನ ಕಥೆ ಹೀಗೆ ಇಂದಿನ ವಾಸ್ತವದಲ್ಲೂ ಮನಸ್ಸನ್ನು ತಿದ್ದುತ್ತದೆ, ತಿದ್ದಬೇಕು ಎನ್ನುವುದು ಮಾಸ್ತಿಯವರ ದೃಷ್ಟಿ. ಈ ಅಭಿಪ್ರಾಯವನ್ನು ಹೇಗೆ ಯಾವ ರೀತಿ ರೂಪಿಸಿದ್ದಾರೆ ಎನ್ನುವುದು ತುಂಬ ಮುಖ್ಯವಾದುದು. ಇದು ಮುದುಕನ ಅಭಿಪ್ರಾಯ, ತನ್ನದಲ್ಲ ಎಂದು ಹೇಳುತ್ತ-''ನನ್ನದು ನಿಮಗಲ್ಲ; ಮೊಗದಲಿ ಮನದಲಿ ದೈವಸೃಷ್ಟಿಯಲಿ। ಇವನವೊಲವನಿಲ್ಲ''. ಇದು ಆ ಗೌಡನ ನಂಬಿಕೆ. ಅಂಥ ನಂಬಿಕೆಯಿಂದ ಅವನ ಆತ್ಮ ಹಸನಾಗುತ್ತದೆ. ಅಲ್ಲದೆ ಸೀತಾರಾಮರನ್ನು ಎಲ್ಲ ಲೋಕವೂ ಪೂಜಿಸಲಾರದು; ಇದು ನಮ್ಮ 'ಕರ್ಮದುರ್ವಿಪಾಕ'. ಆದರೆ,

ಹೆಸರನು ಏನೇ ಮಾಡಲಿ ಲೋಕ,
ಹಿಡಿದಿರಲಿ, ಬಿಡಲಿ,
ಹೆಸರು ಗುರುತಿಸಿದ ಸತ್ಯದ ಬಿತ್ತನು
ಬಿಡದೆ ಒಳಗೆ ನೆಡಲಿ;

ಮಾಸ್ತಿಯವರ ಧರ್ಮದ ಕಲ್ಪನೆ ತುಂಬ ಆರೋಗ್ಯಕರವಾದದ್ದು. ಅದು ಯಾವ ಮಾನವ ಪ್ರವೃತ್ತಿಯನ್ನಾಗಲೀ ಅಲ್ಲಗೆಳೆಯುವಂಥದಲ್ಲ; ಸಂಪೂರ್ಣ ನಿಗ್ರಹದ ಅಸಹಜತೆಯನ್ನೂ ಭೀಕರತೆಯನ್ನೂ ಅರಿತಂಥದು; ಧರ್ಮದ ಸೂತ್ರಗಳಿಗೆಲ್ಲ ನಮ್ಮಲ್ಲಿರುವ ಸತ್ವವೃತ್ತಿಗಳೇ ಮೂಲವೆಂಬುದನ್ನು ಮರೆಯದಂಥದು. ರಾಮಸೀತೆಯರ ದಾಂಪತ್ಯ ಜೀವನದ ಚಿತ್ರಣದಲ್ಲಿ ಈ ದೃಷ್ಟಿ ತುಂಬ ಹೃದಯಂಗಮವಾಗಿ ನಿರೂಪಿತವಾಗಿದೆ. ರಾಮ ಸೀತೆ ಒಬ್ಬರನ್ನೊಬ್ಬರು ಚೆನ್ನಾಗಿ ಬಲ್ಲವರು. ಸೀತೆ ತಾನು ರಾಮನನ್ನು ಹಿಂಬಾಲಿಸಿ ಕಾಡಿಗೂ ಬರುವುದು ತನ್ನ ಧರ್ಮ ಎನ್ನುತ್ತಾಳೆ. ಆದರೆ

ತನ್ನ ಜೊತೆಗೆ ಇರಬೇಕೆಂಬಾಸೆಗೆ
ಧರ್ಮದ ಹೆಸರಿಟ್ಟು
ಸತಿ ಪಡುತಿಹ ಹಿರಿಯಾಯಸ ನೋಡಿದ
ರಾಘವ ಬಸಗೆಟ್ಟು

ಸೀತೆ ತಾನು ಆಯಾಸಪಟ್ಟುದನ್ನು ಮರೆಸಲು ಬೇರೆ ಮಾತು ತೆಗೆಯುತ್ತಾಳೆ. ಸುತ್ತಲಿನ ಚಂದವನ್ನು ನೋಡಿ 'ರಾಮಾ, ಎಂತಹ ಸಿಂಗರ' ಎನ್ನುತ್ತಾಳೆ. ರಾಮನೂ ವಿರಸವನ್ನಾಡಲಾರದೆ 'ಎಂತಹ ಸಿಂಗರ' ಎನ್ನುತ್ತಾನೆ. ಆದರೆ ತನ್ನ ಹೆಂಡಿರು ಆಯಾಸಪಟ್ಟುದನ್ನು ಮರೆಯಲಾರ. ಅವನ ಮೊಟಕು ಮಾತಿನಿಂದ ಸೀತೆಗೆ ತೃಪ್ತಿ ಆಗುವುದಿಲ್ಲ. ತನ್ನ ಅಣ್ಣನ ಚಿಂತೆಯನ್ನು ಕಳೆಯಲು ಯತ್ನಿಸುತ್ತಾಳೆ. ''ಕಾಡಿನ ಕಷ್ಟವನ್ನು ನೀನು ಬಹಳ ಬಣ್ಣಿಸಿದೆ, ಬರಲೇ ಬಾರದು ಎಂದು ನನ್ನನ್ನು ಎಷ್ಟೋ ತಡೆದೆ. ಆದರೆ ಇಲ್ಲಿಗೆ ಬರದಿದ್ದರೆ ಈ ಬನಸಿರಿಯನ್ನು ಕಾಣುವುದಾದರೂ ಹೇಗೆ? ಹತ್ತು ವರ್ಷ ನಿಂತರೂ ಇದನ್ನು ನೋಡಿ ತಣಿಯಲು ಆಗದು-

ದಿನದಿನವೂ ಅಲ್ಲಿ ಅಯೋಧ್ಯೆಯಲಿ
ಇದೇ ಚಂದ್ರ, ಸೂರ್ಯ
ಇದ್ದರು; ಏತಕೆ ಇಂತು ಕಾಣರು?
ಇದು ಎನಗಾಶ್ಚರ್ಯ

ಎನ್ನುತ್ತಾಳೆ. ಅನುಭವಿಸುತ್ತಿರುವ ಸುಖವನ್ನು ಸೀತೆ ಬಣ್ಣಿಸುತ್ತಾಳೆ-'ಅರ್ಧನಿಜದಿ' ಎಂದು ಸೇರಿಸುತ್ತಾರೆ ಮಾಸ್ತಿ. ತನಗಾಗಿ ದೊರೆಗೆ ಚಿಂತೆ ಬೇಡ ಎಂದು ಅರ್ಥವನ್ನು ಮರಸುತ್ತಾಳೆ. ರಾಘವನೂ ಇದನ್ನು ಬಲ್ಲ, ತನ್ನ ಸತಿಯ ಸ್ನೇಹದ ಈ ಅಭಿವ್ಯಕ್ತಿಯನ್ನು ಕಂಡು ಅವನಿಗೆ ಯಾವಾಗಲೂ ಆಶ್ಚರ್ಯ. ದಂಪತಿಗಳ ಈ ಅನ್ಯೋನ್ಯ, ಆ ಅನ್ಯೋನ್ಯದಲ್ಲೂ ಇರುವ, ಬಹುಶಃ ಇರಲೇ ಬೇಕಾದ ಮರಸು, ಈ ಅರೆನಿಜ ಇವುಗಳನ್ನೂ ಗುರುತಿಸುತ್ತಾರೆ. ಒಲಿದವರ ಪರಿಯೇ ಹೀಗೆ. ಗೌಡನ ಮಗಸೊಸೆಯರ ಬಗೆಯೂ ಇಂಥದೇ. ಕಥಕ ದೂರದಿಂದ ನೋಡಿದಾಗ ಹೆಣ್ಣು ನಗುತ್ತಿರುತ್ತಾಳೆ:

ಏನೋ ಹೇಳುವಳು; ಏನೂ ಕೇಳದೆ
ಗಂಡು ಬರಿಯ ಕಣ್ಣು.

ಗೌಡನೂ ಚಿಕ್ಕವಯಸ್ಸಿನ ಗಂಡ ಹೆಂಡಿರ ''ಕೂರ್ಪಿನ ಮಾತು। ಹೆರರು ಕೇಳತಗವು'' ಎಂದು ಬಲ್ಲ. ಗಂಡನಿಗೆ ಹೇಳುವ ಮಾತನ್ನು ಹುಡುಗಿ ಮನೆಯಲ್ಲಿ ಹೇಳುವುದು ಹೇಗೆ? ಕಣ್ಣು ಸನ್ನೆಯಲ್ಲಿ ಅವನನ್ನು ಕರೆದು ಕೊಳದ ಕಡೆಗೆ ಒಯ್ಯುತ್ತಾಳೆ; ಹಗ್ಗವನ್ನು ಹೊಸೆಯುವ ನೆವದಲ್ಲಿ, ಬಟ್ಟೆ ಒಗೆಯುವ ಸೋಗಿನಲ್ಲಿ ಸ್ವಲ್ಪ ಹೊತ್ತು ಜೊತೆಗಿದ್ದು ಪ್ರೀತಿಯಿಂದ ನಗುತ್ತಾರೆ, ನುಡಿಯುತ್ತಾರೆ. ಹೀಗೆ ರಾಮ ಸೀತೆಯನ್ನೂ ಗೌಡನ ಸೊಸೆ ಮಗನನ್ನೂ ಸಮೀಕರಿಸುವುದರಿಂದ ದೇವರು ನಮಗಿಂತ ಬೇರೆ ದೂರದಲ್ಲಿರುವವನಲ್ಲ; ಪ್ರೀತಿಯಲ್ಲಿ ಸ್ನೇಹದಲ್ಲಿ ಇಲ್ಲಿ ಸದಾಕಾಲವೂ ಪ್ರತ್ಯಕ್ಷವಾಗಿರುವ ಸತ್ಯವನ್ನು ಸೂಚಿಸುತ್ತಾರೆ. ಆದ ಕಾರಣ ಈ ಕವನದ ಮಧ್ಯದಲ್ಲಿ ಬರುವ ಈ ಮಾತುಗಳು,

ದೇವರ ಆಟದ ಮನೆ ಈ ಲೋಕ;
ಇಲ್ಲಿ ದನಿಗೆ ಕೊರೆಯೆ?
ಕಂಪಿಗೆ? ರುಚಿಗೆ? ಮನುಜಗೆ ಸಾಧ್ಯವೆ
ಇಹ ಬಣ್ಣವ ಬರೆಯೆ?
ಇನಿದೆಲ್ಲಾ ಸ್ವರ; ಎಲ್ಲವೂ ದೇವರು
ನಮ್ಮ ಕರೆವ ರೀತಿ;
ಒಮ್ಮೆ ಬಂದು ತೆರ, ಮತ್ತೆ ಬೇರೆ ತೆರ
ಹರಿವುದವನ ಪ್ರೀತಿ.

ಎಂಬ ಈ ಸಾಲುಗಳು ಈ ಕವನ ಸೃಷ್ಟಿಸುವ ವಾತಾವರಣದಲ್ಲಿ ನಿಜ ಎನ್ನಿಸುತ್ತವೆ, ಹೃದ್ಯವಾಗಿ ಕಣ್ಣನ್ನು ಒದ್ದೆಮಾಡುತ್ತವೆ. ಇವೆಲ್ಲ ಕೇವಲ ಸ್ವಾಭಾವೋಕ್ತಿಯ ವಾಚ್ಯದಿಂದಲೇ ಸಾಧಿಸುವಂಥದು-ನಿಜ. ರೂಪಕ ಪ್ರಯೋಗದಿಂದ, ಪ್ರತಿಮಾ ಸೃಷ್ಟಿಯಿಂದ ಬರುವ ಅರ್ಥದ ದಟ್ಟಣೆ ಇಲ್ಲಿ ಇಲ್ಲ. ಅಲ್ಲಲ್ಲಿ ಉಪಮೆರೂಪಕಗಳು ಬಂದರೂ ಮುಖ್ಯವಾಗಿ ಇದು ಸ್ವಭಾವೋಕ್ತಿ ಪ್ರಧಾನವಾದ ಕಾವ್ಯ. ಹೀಗಿದ್ದರೂ ಇದು ನಮ್ಮ ಮನಸ್ಸನ್ನು ಮುಟ್ಟಿ ತಟ್ಟಿ ಭಾವಗಳನ್ನು ಎಬ್ಬಿಸುವುದು ಹೇಗೆ?

ಮಾಸ್ತಿಯವರ ಕಾವ್ಯ ನಮಗೆ ಹೃದ್ಯವಾಗುವುದು ಅದರ ಮಾತಿನ ಹದದಿಂದ, ಅರ್ಥಾನುಸಾರಿಯಾದ ಶುದ್ಧ ಗತಿಯಿಂದ, ವಾಕ್ಯ ಪರಿಷ್ಕಾರದಿಂದ ಈ ಮಾತಿನ ಗತಿಯೊಡನೆ ಬೆರೆಯಲು ಅಗತ್ಯವಾದದ್ದು ಶ್ರುತಿ ಸೂಕ್ಷ್ಮತೆ. ಇಂಥದನ್ನು ಸೃಷ್ಟಿಸುವ ಪ್ರತಿಭೆಗೆ ಶ್ರಾವಣ ಪ್ರತಿಭೆ ಎನ್ನಬಹುದು. ಕೇವಲ ಶಬ್ದಗಳ ಲಯದ ಮೂಲಕವೇ, ಗತಿಯ ಸೂಕ್ಷ್ಮಾತಿಸೂಕ್ಷ್ಮ ಏರಿಳಿತಗಳ ಮೂಲಕವೇ ಈ ಕಾವ್ಯ ನಮ್ಮಲ್ಲಿ ಭಾವ ಪ್ರಬೋಧನೆಯನ್ನು

ಉಂಟುಮಾಡುತ್ತದೆ.

ಮಾಸ್ತಿಯವರ ಕವಿತೆ ತಣಿಸುವ ಕವಿತೆ. ಇದು ಬಹಳ ಆಳಕ್ಕೆ ಇಳಿದು ಮನಸ್ಸಿನ ಮೂಲವನ್ನು ಕೆದಕಿ ಬೆದಕಿ ನೋಡುವುದಿಲ್ಲ; ಪ್ರಜ್ಞೆಯ ಕೆಳಕ್ಕೆ ಇರುವ ದಾನವತ್ವ ಪಶುತ್ವಗಳಿಗೆ ಮುಖಾಮುಖಿ ಆಗುವುದಿಲ್ಲ. ಕನಸುಗಳ ರೆಕ್ಕೆ ಬಿಚ್ಚಿ ನಮಗೆ ದೂರದ ಅಂತರಾಳಗಳ ಯಾತ್ರೆ ಮಾಡಿಸುವುದಿಲ್ಲ. ರುದ್ರವೂ ಭೀಕರವೂ ಆದ ತಮಸ್ಸನ್ನು ಮರಸಿ ಬದುಕಿನಲ್ಲಿರುವ ಚೆಲುವನ್ನೂ ನಲಿವನ್ನೂ ನಗುವನ್ನೂ ಬೆಳಕನ್ನೂ ತೋರಿಸುತ್ತದೆ. ಆದ ಕಾರಣವೇ ಈ ಕವಿತೆ ನಮಗೆ ಸಂಪೂರ್ಣ ತೃಪ್ತಿಯನ್ನು ಕೊಡುವುದಿಲ್ಲ. ಆದರೆ ಎಷ್ಟನ್ನು ಕೊಡಲು ಉದ್ದೇಶಿಸಿರುತ್ತದೋ ಅಷ್ಟನ್ನು ಮಾತ್ರ ಕೊಟ್ಟೇಕೊಡುತ್ತದೆ. ಅದು ಎಷ್ಟನ್ನು ನೀಡುತ್ತದೋ ಅಷ್ಟೂ ಮಹತ್ವದ್ದು, ಮರೆಯಬಾರದ್ದು. ಆದಕಾರಣ ಮಾಸ್ತಿಯವರ ಕಾವ್ಯಭ್ಯಾಸ ಮನಸ್ಸಿಗೆ ತಂಪನ್ನು ನೀಡುವುದಲ್ಲದೆ ನಮ್ಮ ಅರಕೆಗಳನ್ನೆಷ್ಟೊ ತುಂಬಲೂ ಸಮರ್ಥ ವಾಗಿದೆ. ಎಲ್ಲ ಕಾಲಗಳಲ್ಲೂ ಕಾವ್ಯಾಭ್ಯಾಸಿಗಳು, ಸಾಹಿತ್ಯ ಪ್ರಿಯರು ಮತ್ತೆ ಮತ್ತೆ ಮಾಸ್ತಿಯವರ ಕವಿತೆಗಳ ಕಡೆಗೆ ಬರುತ್ತಾರೆ ಎನ್ನುವುದರಲ್ಲಿ ಸಂದೇಹವಿಲ್ಲ.

ಮಲಾರ

ಡಾ|| ಜಿ. ವರದರಾಜರಾವ್

ಇಂಗ್ಲಿಷ್ ಕಾವ್ಯದ ವಿವಿಧ ಪ್ರಕಾರಗಳನ್ನು ಹೊಸಗನ್ನಡ ಕಾವ್ಯ ಸಂಪ್ರದಾಯದಲ್ಲಿ ಬಳಸಲು ತೊಡಗಿದವರಲ್ಲಿ ಶ್ರೀನಿವಾಸರು ತುಂಬ ಹಳಬರು. ಅದಕ್ಕಾಗಿ ಅವರು ಕೈಕೊಂಡ ಪ್ರಯತ್ನಗಳಲ್ಲಿ 'ಮಲಾರ' ಎಂಬ ಕವನ ಸಂಕಲನ ತುಂಬ ವಿಶಿಷ್ಟವಾದದ್ದು. ಇಂಗ್ಲಿಷಿನಲ್ಲಿ ಸುಪ್ರಸಿದ್ಧವಾಗಿರುವ ಸಾನೆಟ್ ಎಂಬ ಪದ್ಯ ಜಾತಿಯನ್ನು ಕನ್ನಡಕ್ಕೂ ಅಳವಡಿಸಬೇಕೆಂದು ಹೊರಟ ಶ್ರೀನಿವಾಸರು ಇದನ್ನು 'ಅಷ್ಟಷಟ್ಪದಿ' ಎಂದು ಕರೆದಿರುತ್ತಾರೆ. ಈ ಹೆಸರಿನ ಔಚಿತ್ಯವನ್ನು ಕುರಿತು ಅವರೇ ತಮ್ಮ ಮುನ್ನುಡಿಯಲ್ಲಿ ಹೀಗೆ ಹೇಳಿರುತ್ತಾರೆ.

> ''ಅಷ್ಟಷಟ್ಪದಿ ಎಂಬ ಈ ಹೆಸರು ಹದಿನಾಲ್ಕು ಸಾಲಿನ ಪದ್ಯ ಎನ್ನುವುದಲ್ಲದೆ ಪದ್ಯದ ಇನ್ನೊಂದು ಮುಖ್ಯ ಲಕ್ಷಣವನ್ನೂ ಸೂಚಿಸುತ್ತದೆ. ಈ ಪದ್ಯಗಳಲ್ಲೆಲ್ಲಾ ಸಾಮಾನ್ಯವಾಗಿ ಮೊದಲ ಎಂಟು ಪಾದಗಳು ಒಂದು ಗುಂಪಾಗಿಯೂ ಕಡೆಯ ಆರು ಪಾದಗಳು ಒಂದು ಗುಂಪಾಗಿಯೂ ಕಾಣುತ್ತವೆ. ಆ ಎಂಟರಲ್ಲಿ ಒಂದು ವಿಷಯವು ವಿವರವಾಗುತ್ತದೆ; ಆ ಆರರಲ್ಲಿ ಆ ವಿಷಯದಿಂದ ಉದಿಸುವ ಭಾವ ಒಡೆದು ಕಾಣುತ್ತದೆ. ಮೊದಲ ಎಂಟರಲ್ಲಿ ಪ್ರಾಸದ ಕಟ್ಟು ಒಂದು ತೆರ; ಆ ಮೇಲಣ ಆರರ ಪ್ರಾಸದ ಕಟ್ಟು ಒಂದು ತೆರ. ಇದರ ವಿವರವನ್ನೆಲ್ಲಾ ಇಲ್ಲಿ ಹೇಳುವುದು ಅನವಶ್ಯಕ. ಒಂದು ಸಮಯದ ಒಂದೇ ಒಂದು ಭಾವವು ಅದಕ್ಕೆ ಕಾರಣವಾಗ ಸಂದರ್ಭದೊಂದಿಗೆ ಇಂಥ ಪದ್ಯದಲ್ಲಿ ಬಹು ಚೆನ್ನಾಗಿ ರೂಪುಗೊಳ್ಳುತ್ತದೆ. ನನಗೆ ಹಲವು ಸಂದರ್ಭಗಳಲ್ಲಿ ತೋರಿದ ಇಂಥ ಭಾವಗಳನ್ನು ವ್ಯಕ್ತಪಡಿಸುವುದಕ್ಕೆ ನಾನು ಈ ಪದ್ಯಗಳನ್ನು ಬರೆದಿದ್ದೇನೆ''

ಮುಖ್ಯವಾಗಿ ಈ ಪದ್ಯಜಾತಿ ತನ್ನದೇ ಆದ ಕೆಲವು ವಿಶಿಷ್ಟ ಲಕ್ಷಣಗಳನ್ನು ಒಳಗೊಂಡಿದೆಯೆಂಬುದು ಸ್ಪಷ್ಟವಾಗುತ್ತದೆ. ವಸ್ತುವಿನಲ್ಲಿ ಏಕೈಕವಾದ ಗುರಿ ಹೇಗೆ ಅಗತ್ಯವೋ ರಚನೆಯಲ್ಲಿಯೂ ಹಾಗೆಯೇ ಕಟ್ಟುನಿಟ್ಟುಗಳನ್ನುಳ್ಳದ್ದು. ಚರಣಗಳು ಹದಿನಾಲ್ಕು ಮೀರುವಂತಿಲ್ಲ; ಅದರಲ್ಲಿಯೂ ಎರಡು ವಿಭಾಗಗಳು. ಪೂರ್ವ ಭಾಗವನ್ನು ಪೂರ್ವಾಷ್ಟಕವೆಂದೂ (Octave) ಉತ್ತರ ಭಾಗವನ್ನು ಷಡುತ್ತರ (Sestet) ವೆಂದೂ ಕರೆಯಬಹುದು. ಇದಲ್ಲದೆ ಅಂತ್ಯಪ್ರಾಸ ಸಂಯೋಜನೆಯಲ್ಲಿಯೂ ಒಂದು ನಿಯತವಾದ ಆವೃತ್ತಿಯುಂಟು. ಇಷ್ಟೆಲ್ಲ ನಿರ್ಬಂಧಗಳಿದ್ದರೂ ಕನ್ನಡ ಕವಿಗಳಲ್ಲಿ ಹೆಸರುವಾಸಿಯಾಗಿರುವ ಕುವೆಂಪು, ಬೇಂದ್ರೆ, ಪು.ತಿ.ನ. ಮತ್ತು ವಿನಾಯಕರು ಈ ಪದ್ಯ ಜಾತಿಯ ಬಗ್ಗೆ ವಿಶೇಷವಾಗಿ ಆಸಕ್ತಿ ವಹಿಸಿ ಹಲವಾರು ಕವಿತೆಗಳನ್ನು ಬರೆದಿರುತ್ತಾರೆ. ಒಮ್ಮೊಮ್ಮೆ ಈ ಕಟ್ಟುಪಾಡುಗಳಲ್ಲಿ ಕೆಲವನ್ನು ಮೀರಿರುವುದೂ ಉಂಟು. ವಿಷಯದ

ಆಯ್ಕೆಯಲ್ಲಿ ಯಾವ ನಿಯಮೋಲ್ಲಂಘನೆಯೂ ಕಂಡುಬಾರದಿದ್ದರೂ, ಪೂರ್ವಾಷ್ಟಕದ ಮುಕ್ತಾಯ ಮತ್ತು ಅಂತ್ಯಪ್ರಾಸಗಳ ಸಂಯೋಜನೆಯಲ್ಲಿ ಸ್ವಾತಂತ್ರ್ಯ ವಹಿಸಿರುವ ನಿದರ್ಶನಗಳು ಕಂಡುಬರುತ್ತವೆ. ಏನೇ ಆಗಲಿ, ಈ ಅಷ್ಟಷಟ್ಪದಿಗಳು ಮುಂದೆ ಬಹು ಜನಪ್ರಿಯವಾದುವು. ಪ್ರಾರಂಭದಲ್ಲಿ ಈ ಬಗ್ಗೆ ನಡೆಸಿದ ಈ ಹಿರಿಯರ ಪ್ರಯತ್ನಗಳು ಬಹುಮಟ್ಟಿಗೆ ಸಫಲವಾದುವು ಎನ್ನುವುದರಲ್ಲಿ ಸಂದೇಹವಿಲ್ಲ. ಈ ದೃಷ್ಟಿಯಿಂದ ಶ್ರೀನಿವಾಸರ 'ಮಲಾರ' ಎಂಬ ಕವನ ಸಂಕಲನ ಒಂದು ಪ್ರಾಯೋಗಿಕ ಕೃತಿಯೆನ್ನಬಹುದು. ಈ ಸಂಕಲನದಲ್ಲಿರುವ ಎಂಬತ್ತೆರಡು ಕವಿತೆಗಳಲ್ಲಿ ನಿದರ್ಶನಾರ್ಥವಾಗಿ ಕೆಲವನ್ನು ಆಯ್ದುಕೊಂಡು ಅಲ್ಲಿ ವಿದಿತವಾಗುವ ಕವಿಗಳ ಮನೋಧರ್ಮವನ್ನು ಇಲ್ಲಿ ಪರಿಶೀಲಿಸಲಾಗಿದೆ.

'ಮಲಾರ' ಎಂಬ ಹೆಸರೇ ತುಂಬ ಅರ್ಥವತ್ತಾಗಿದೆ. ಬಳೆಗಾರನ ಮಲಾರದಲ್ಲಿ ಮಿನುಗುವ ಒಂದೊಂದು ಬಳೆಯೂ ಹೇಗೆ ಮನಸೆಳೆಯುತ್ತದೆಯೋ ಹಾಗೆಯೇ ಕವಿಗಳ ಈ ಒಂದೊಂದು ರಚನೆಯೂ ರಸಿಕನಿಗೆ ರಸದೌತಣವನ್ನು ನೀಡಬಲ್ಲದು. ತಮ್ಮ ಈ ಕೃತಿಸಂಕಲನದ ವೈಶಿಷ್ಟ್ಯವನ್ನು ಪರಿಚಯಮಾಡಿ ಕೊಡುತ್ತ ಕವಿಗಳು 'ಅಷ್ಟಷಟ್ಪದಿಗಳ ಮಲಾರವೊಂದನು ತಂದು ಇಂದು ನಿನಗರ್ಪಿಸಿರುವೆನು ನನ್ನ ತಾಯ್ನುಡಿಯೆ' ಎಂದು ವಿನಯದಿಂದ ಮೊದಲು ಮಾಡಿ, ಹಿಂದಿನವರ ಹಿರಿಮೆಯನ್ನು ಮನವಾರೆ ಸ್ಮರಿಸಿ,

ನಿನ್ನ ದೇಗುಲದ ನಿತ್ಯೋತ್ಸವದ ಮಧ್ಯದಲಿ
ಉಳಿದವರು ತಹ ಬೆಲೆಯ ತೊಡವುಗಳ ಜೊತೆಗಾನು
ಮಂಗಲದ್ರವ್ಯವೊಂದಿದ ತಂದು ನಿಂದೆಹೆನು;
ಬೆಲೆ ಕಡಿಮೆಯೆಂದೆಂಬ ಕುಂದಿದಕೆ ಹೊದ್ದದಲೆ;
ಬಳೆಯೆಂಬುದಿರಬೇಕು, ಭಕ್ತಿಯಲ್ಲಿ ತಂದಿಹನು
ಎಂದು ಕರುಣೆಯ ತೋರಿ ಇದನು ಒಪ್ಪುವೆ ನೀನು.

-ಎಂದು ತೃಪ್ತಿಯಿಂದ ತಮ್ಮ ಈ ನೂತನ ರಚನೆಯನ್ನು ನುಡಿ ತಾಯಿಗೆ ಭಕ್ತಿಯಿಂದ ಸಮರ್ಪಿಸುವರು. ನಮ್ಮ ಹಿರಿಯ ಕವಿಗಳು ಹೇಗೆ ತಮ್ಮ ತಮ್ಮ ಮಹಾಕಾವ್ಯಗಳನ್ನು ಕೆಚ್ಚಿನಿಂದಲೋ, ಮೆಚ್ಚಿನಿಂದಲೋ ಕನ್ನಡಮಾತೆಗೆ ಅರ್ಪಿಸಿ ಕೃತಾರ್ಥರಾಗಿರುವರೋ ಅಂತೆಯೇ ಈ ಕವಿಗಳು ತುಂಬ ವಿನಯದಿಂದ, ನಮ್ರತೆಯಿಂದ ತಮ್ಮ ಕಿರುಕವನಗಳನ್ನು ತಾಯಿಯ ಮಡಿಲಿಗೆ ಸಮರ್ಪಿಸಿರುವರು. ಬಳೆಯಾಗಲಿ, ತಾಳಿಯಾಗಲಿ ರೂಪದಲ್ಲಿ ಕಿರಿದಾದರೂ, ಬೆಲೆಯಲ್ಲಿ ಅತ್ಯಂತ ಹಿರಿದು. ಆದ್ದರಿಂದ ಈ ಬಿಡಿ ಕವಿತೆಗಳು ತಮ್ಮ ತಾಯಿಗೆ ಒಪ್ಪಿಗೆಯಾದೀತೆಂಬ ಕವಿಗಳ ಆಶಯ ಒಪ್ಪತಕ್ಕದ್ದಾಗಿದೆ. ಇಷ್ಟಕ್ಕೂ ಅವರೇ ಹೇಳಿರುವಂತೆ. 'ಕವನದ ಜಾಡು ಸಾಲ ಸಂಖ್ಯೆಯೊಳಿಹುದೆ?' ಖಂಡಿತವಾಗಿಯೂ ಇಲ್ಲ. 'ರಸಾತ್ಮಕಂ ವಾಕ್ಯಂ ಕಾವ್ಯಂ' ಎಂಬ ಮಾತನ್ನೇ ಉದಾಹರಿಸುವುದಾದರೆ ರಸವತ್ತಾದ ಒಂದು ವಾಕ್ಯವೇ ಕಾವ್ಯದ ಸುಖವನ್ನು ನೀಡಬಲ್ಲದು. ಕವಿಯ ಭಾವ ಮುಖ್ಯವೇ ವಿನಾ ಬಾಹ್ಯದ ಬಂಧ ಮುಖ್ಯವಲ್ಲ. ತಮ್ಮ ಬಾಳನ್ನು ನಡೆಸುವ ಚೇತನ ಆ ನುಡಿತಾಯಿಯ ಕೈಯಲ್ಲಿರಬೇಕಾದರೆ ತಾವು ಕೇವಲ ನಿಮಿತ್ತ ಮಾತ್ರವೆಂದು ಹೇಳುವ ಸೌಜನ್ಯ, 'ವೀರನಾರಾಯಣನೆ ಕವಿ ಲಿಪಿಕಾರ ಕುಮಾರವ್ಯಾಸ' ಎಂಬ ಸುಪ್ರಸಿದ್ಧ ಹೇಳಿಕೆಯನ್ನೇ ಹೋಲುತ್ತದೆ. 'ಆಕಾರ ತೋರಿಕೆ ಹೊಸತಾದೊಡೇನು? ಇದರಲಿ ಯಾವುದಿದೆ ಚಂದ ಅದು ನೀನು ಎನ್ನೊಳೂದಿದ ಉಸಿರ ಬಾವನ್ನ' ಎಂದು ಮುಕ್ತಾಯ ಮಾಡುವ ರೀತಿಯಂತೂ ತುಂಬ

ರಮಣೀಯವಾಗಿದೆ. ಹೊಸ ಹಾದಿಯಲ್ಲಿ ಕಾಲಿಟ್ಟ ರಾಘವಾಂಕ, ಇಲ್ಲವೆ ಲಕ್ಷ್ಮೀಶರಿಗೆ ಯಾವ ಅಳುಕು ಉಂಟಾಯಿತೋ ಹಾಗೆಯೇ ಇವರಿಗೂ 'ಹದಿನಾಲ್ಕು ಸಾಲಿನಲಿ ಬರೆದ ಪದ್ಯವ ನೋಡಿ ಇದು ಕನ್ನಡದ ಕವಿತೆಯಲ್ಲೇ ಬಂದಿರಬಹುದು' ಎಂದು ಶಂಕೆ ಮಿಡಿದಿದ್ದರಿಂದ ಇಂತು ಸಮಾಧಾನವನ್ನು ಹೇಳಬೇಕಾಯಿತು.

ಕವಿಗಳಿಗೆ ತಾವು ಮಾಡುತ್ತಿರುವ ಈ ಪ್ರಯತ್ನ ಎಷ್ಟು ಪರಿಶುದ್ಧವಾದದೋ ಅದನ್ನು ಸ್ವೀಕರಿಸಲಿರುವ ಕನ್ನಡ ತಾಯಿಯ ಅಂತಃಕರಣವೂ ಅಷ್ಟೇ ಉದಾರವಾದುದೆಂದು ದೃಢವಾದ ನಂಬಿಕೆ. ತಾವು ಇಂಗ್ಲಿಷಿನ ಕಲಿಕೆಗಾಗಿ ಹಗಲಿರುಳೂ ಶ್ರಮಿಸಿ, ಈಗ ಕನ್ನಡದಲ್ಲಿ ಬರೆಯತೊಡಗಿದುದನ್ನು ಕಂಡು ನಕ್ಕವರನ್ನು ಕುರಿತು ಬಹಳ ಒಳ್ಳೆಯ ಮಾತುಗಳನ್ನೇ ಹೇಳಿರುತ್ತಾರೆ. ಕನ್ನಡದ ದೇವಿ ನುಡಿಸಿದಂತೆ, ಆಡಿಸಿದಂತೆ ತಾವು ವರ್ತಿಸುತ್ತಿರುವುದಾಗಿ ಆಕೆಗೆ ವಿಜ್ಞಾಪಿಸಿಕೊಳ್ಳುವರು.

'ನಡೆ ಬಾರದವರ ಕುಣಿತವ ನೋಡಿ ನೀನಲಿದೆ;
ನುಡಿ ಬಾರದಂಥ ಹಸುಳೆಗಳ ತೊದಲಿನ ಮಾತ
ಮೆಚ್ಚಿದೆ. ಅರಿವನೇ ಇದೆ ಸಾಜವಲೆ. ಅಂಬೆ
ಕಂದಗಳ ಜಲ್ಪದಲೆ ಸಂತೋಷವನು ತಳೆದೆ.

-ಜನಮನ್ನಣೆಗಿಂತಲೂ ಕನ್ನಡ ದೇವಿಯ ಮನ್ನಣೆ ತಮಗೆ ಮಿಗಿಲೆಂಬ ಈ ಭಾವದಲ್ಲಿ ಕವಿಗಳ ಸೇವಾಕಾಂಕ್ಷೆ ವಿದಿತವಾಗುತ್ತದೆ. ಕುಹುಕಿಗಳನ್ನು ಹಂಗಿಸಿ 'ಮೂಢರ ಮಲ್ಲ' ಎಂದು ನಿಂದಿಸಿದ ಕವಿಗಳು ತಾವಾಗಿಯೇ ಮನನೊಂದು 'ಕಠಿನವಾಯಿತು ಮಾತು; ಎನ್ನ ಮನ್ನಿಸು ಅಣ್ಣ' ಎಂಬಲ್ಲಿ ಶ್ರೀನಿವಾಸರ ಮನೋಧರ್ಮವನ್ನು ಕಾಣಬಹುದು. ನಮ್ಮ ಹಿಂದಿನ ಕೆಲವು ಕವಿಗಳ ಒಣ ಜಂಭದ ಮಾತುಗಳನ್ನು ನೆನೆದರೆ ಈ ಮಾತುಗಳು ಯಾವೂ ಬಿರುಸು ಎನ್ನಿಸುವುದಿಲ್ಲ. ಆದರೆ ಸಾಹಿತ್ಯಕ್ಷೇತ್ರದಲ್ಲಿ ಅಹಿತವನ್ನು ಬಿತ್ತಿ ಬೆಳೆಸುವ ಚೇತವಲ್ಲ ಇದು. ಅದಕ್ಕಾಗಿಯೇ ತಮ್ಮನ್ನು ಹಂಗಿಸಿದ ಆ ಕುಹಕಿಯನ್ನು ಸಂಭೋಧಿಸಿ

.......ಬಾ, ಜೊತೆಗೆ ನಿಲ್ಲು; ನಮ್ಮಿಂದಾದ
ಇನಿತಿನಿತು ಸೇವೆಯನು ಬಿಡದೆ ಮಾಡುವ ನಾವು
ಎಲ್ಲ ಮಕ್ಕಳು ಇಂತು ತಮ್ಮ ಗೆಯ್ತವ ಸಲಿಸೆ,
ಬಾಳ್ವೆಯ ವಸಂತೋತ್ಸವದೊಳಂದು ಹಿಂದಾದ
ನಮ್ಮ ತಾಯ್ನಾಡು ಮುಂದಾಗುವುದ ನೋಡೆವು

- ಎಂದು ಅವನಿಗೂ ತಮ್ಮ ಸ್ನೇಹಹಸ್ತವನ್ನು ನೀಡಿ ಕರೆಯುವರು. ನಾಡ ಬದುಕಿಗೆ, ನುಡಿಯ ಏಳಿಗೆಗೆ ಎಷ್ಟು ಜನರಿದ್ದರೂ ಸಾಲದು. ಆದ್ದರಿಂದ ಈ ಮೈತ್ರಿ ಸಹಜವಾದುದೇ ಸರಿ. ಉದ್ಧಟತನದಿಂದ ವರ್ತಿಸುವ ಇಂದಿನ ಪೀಳಿಗೆಯವರ ಮನೋಧರ್ಮಕ್ಕೂ ತಮ್ಮನ್ನು ಆಕ್ಷೇಪಿಸುವವರನ್ನೂ ಅಣ್ಣ ತಮ್ಮ ಎಂದು ಕರೆದು ಸ್ನೇಹವನ್ನು ಬೆಳೆಸಲೆಳಸುವ ಈ ಹಿರಿಯ ಕವಿಗಳ ಸ್ವಭಾವಕ್ಕೂ ಇರುವ ಅಂತರವನ್ನು ಯಾರಾದರೂ ಅರಿಯಬಹುದು.

'ಮಲಾರ'ದ ಕರ್ತೃಗಳು ಕುಮಾರವ್ಯಾಸ, ಕಾಳಿದಾಸ ಮೊದಲಾದ ಹಿರಿಯ ಕವಿಗಳನ್ನು ತೆಗಳಿ ಲೇಖನಿಯನ್ನು ಹಿಡಿದವರಲ್ಲ. 'ಕಾಳಿದಾಸ ಕುಮಾರವ್ಯಾಸರಾದ್ಯ ಸ್ಥಾನ ನಮ್ಮಿಂದ ಕೆಡದು. ನಮ್ಮರಿ ಕಾವ್ಯಲತೆ ತಳೆದ ಸುಮವನರಡಿಯೊಳಿಡುತಿಹೆವಾವು ತಲೆದೂಗಿ' ಎಂದು ನಮ್ರಭಾವದಿಂದ ತಮ್ಮ ಕೈಂಕರ್ಯವನ್ನು ಕೈಕೊಂಡವರು.

ಕವನದ ಗುಟ್ಟನ್ನು ತಿಳಿಸಲಿಚ್ಛಿಸಿ ಕವಿಗಳು,
ಪ್ರಾಸ ಗಣಯತಿಗಳನು ಎದೆಗೆಡದೆಸೇರಿಸಲು
ಬಣ್ಣ ಬಣ್ಣದ ಮಾತ ಸರಿಯಾಗಿ ಸೇರಿಸಲು
ಕವಿತೆಯಾಗುವುದೆಂದು ನಿಜದಿ ನೆನದಿರ ಏನು?
ಕಾಗದದ ಹೂವಿನಲಿ ದೊರೆಯಬಹುದೇ ಜೇನು?
ಆಕಾರವಿದೆ ಉಸಿರು ಬೇಡೆಂದು ನಂಬಿದಿರೋ?
ಬಲ್ಲವರೆ, ಕಬ್ಬಾಗಬಹುದೆಂತು ಚೆಂಬಿದಿರು?
ನರಿಗೆ ಬಣ್ಣವ ಹಚ್ಚಿ ಹುಲಿಯೆಂಬ ನುಣ್ಬದರು
ಎಷ್ಟು ದಿನ ಸೊಗಸುವುದು? ಸಾಕು ಬಿಡಿ ಅಣ್ಣದಿರು.

ಎಂದು ಬಹು ಅರ್ಥವತ್ತಾಗಿ ಪೂರ್ವಾಪ್ಷಕದಲಿ ವಿಷಯವನ್ನು ಪ್ರಸ್ತಾಪಿಸಿ ಷಡುತ್ತರದಲ್ಲಿ 'ಅನುಭವವ ನುಡಿಯಿರಿ, ಪ್ರಾಸಗಣಯತಿ ಸೇರಿ ಕಾವ್ಯವಾಗುವುದು ನುಡಿ. ಇದು ಕವನದೊಳಗುಟ್ಟು' ಎಂದು ಕವನ ರಚನೆಯ ರಹಸ್ಯವನ್ನೇ ಬಿಡಿಸಿ ಹೇಳುವರು. ಕಾವ್ಯದ ಸತ್ವವನ್ನು ಇದಕ್ಕಿಂತ ಸರಳವಾಗಿ ಹೇಳುವವರು ವಿರಳ. ಕವಿಯಾಗಲು ದೈವಾನುಗ್ರವು ಹೇಗೆ ಅನಿವಾರ್ಯವೋ ಹಾಗೆಯೇ ಹಾಡುವ ಹುಮ್ಮಸ್ಸೂ ಅಗತ್ಯವೆಂದು ತಿಳಿಸುವರು. 'ಹಾಡಲಾಸೆಯಿರೆ ಮನಸಾರ ಹಾಡು. ನೀನಾಗ ಬಹುದವಳ ವೀಣೆಯ ತಂತಿ' ಎಂದು ಹಾಡಲು ಹಿಂಜರಿಯುತ್ತಿದ್ದ ಮಿತ್ರನೊಬ್ಬನನ್ನು ಹುರಿದುಂಬಿಸುವರು. ಅಂತೂ 'ಮಲಾರ'ದ ಪ್ರಾರಂಭದಲ್ಲಿಯೇ ಇರುವ ಈ ಹಲವು ಬಿಡಿ ಕವಿತೆಗಳು ಲೇಖಕನ ನೂತನ ಪ್ರಯತ್ನದ ರೂಪರೇಷೆಗಳನ್ನು ಪರಿಚಯ ಮಾಡಿಕೊಡುವುದಲ್ಲದೆ ಕಾವ್ಯದ ಆಂತರ್ಯವನ್ನೂ ಸ್ವಾರಸ್ಯವಾಗಿ ತಿಳಿಸುತ್ತದೆ.

'ಅಡಿಮುಡಿಗಳಿಲ್ಲವೋ ಎನ್ನ ಆಸೆಯ ಗಿಡಕೆ!' ಎಂದು ಒಮ್ಮೆ ಕವಿಗಳು ತಮ್ಮ ಆಗಸದೆತ್ತರದ ಆಸೆಯನ್ನು ತಾವೇ ಕಂಡುಕೊಂಡು ಕುತೂಹಲಪಡುವರು. ಅವರ ಆಸೆಯಾದರೂ ಏನು? 'ನಾಡು ನುಡಿಗಳ ಹೆಸರ ಮೇಲೆತ್ತಿ ನಭಮುಟ್ಟಿ ಅವರ ಪೂಜೆಗೆ ಅಲ್ಲಿ ಗುಡಿ ಗೋಪುರವ ಕಟ್ಟಿ ಜಗವನಚ್ಚರಗೊಳಿಸಿ ಸ್ಥಪತಿ ಎಂದೆಲೆ ಅಡಕೆ ಕೊಳಬೇಕು ಎಂದು ಬಯಕೆ.' ಇಷ್ಟು ಹಿರಿದಾದುದನ್ನು ತಾನು ಸಾಧಿಸಬಲ್ಲನೆ ಎಂಬ ಶಂಕೆ ಅವರನ್ನು ಕಾಡುತ್ತದೆ. ಕಡೆಗೆ ಇದು ತನ್ನೊಬ್ಬನಿಂದ ನೆರವೇರಲಸಾಧ್ಯವೆನ್ನಿಸಿದರೂ ತರುಣ ಸೋದರರೊಡನೆ ಕೂಡಿ ಸಾಧಿಸಬಹುದೆಂಬ ಭರವಸೆ ಮನಸ್ಸಿಗೆ ನೆಮ್ಮದಿಯನ್ನೀಯುತ್ತದೆ. ಇದೇ ಪ್ರಶ್ನೆಗೆ ಕವಿಗಳು ಮತ್ತೊಂದು ಕವನದಲ್ಲಿ ಇನ್ನೂ ಸೊಗಸಾದ ಉತ್ತರವನ್ನಿತ್ತಿದ್ದಾರೆ. 'ನೋಡೆ ಎನ್ನಾಸೆ ಎನ್ನದಲ್ಲ. ನಮ್ಮ ಈ ನಾಡ ಆಸೆಯೇ ತುಂಬಿ ಹಿಗ್ಗಿಸಿದೆ ಎನ್ನೆದೆ ಕಟ್ಟ.' ಎಂದು ನಾಡಿನ ಪ್ರೇರಣೆಯೆಂದು ಭಾವಿಸಿಕೊಳ್ಳುವರು. ಆ ನಾಡದೇವಿಯೇ ತಮಗೆ ಚೇತನದಾಯಕಳೆಂದೂ 'ಒಂದು ಜೀವಕೆ ಹೆಚ್ಚು ಎಂದ ಮಾತ್ರಕೆ ಆಸೆ ನಾಡ ಬಾಳ್ವೆಗೆ ಹಿರಿದೆ?' ಎಂದು ಧೈರ್ಯ ತಾಳುವರು. ಆ ದೇವಿಯ ಆಸೆ ಆಕಾಂಕ್ಷೆಗಳು ತಮ್ಮಂತಹ ಹಲವಾರು ಸಹೋದರರಿಂದ ನೆರೆವೇರುವುದೆಂದು ನಿರ್ಧರಿಸಿಕೊಳ್ಳುವರು. ಅಚ್ಚುಕಟ್ಟಾದ ಈ ಅಷ್ಟಷಟ್ಪದಿಗಳಲ್ಲಿ ಕಂಡಂತೆಯೇ ಯಾವುದೋ ಒಂದು ಭಾವ ರಸಘಟ್ಟಿಯಾಗಿ ನಿಲ್ಲುತ್ತದೆ. ಕಡೆಯ ಸಾಲಂತೂ ವಿಚಾರಮಂಥನದಿಂದ ತೇಲಿ ಬಂದ ನವನೀತದಂತೆ ಸವಿಯೆನ್ನಿಸುತ್ತದೆ.

ಕನ್ನಡ ನಾಡುನುಡಿಗಳ ಏಳುಬೀಳುಗಳನ್ನು ಕುರಿತು ಒಂದೆರಡು ಈ ಕಿರು ಕವನಗಳು ಸರ್ವದಾ ನಮ್ಮನ್ನು ಎಚ್ಚರಗೊಳಿಸುವ ದೀಪದ ಕುಡಿಗಳಂತಿವೆ. 'ನಿನ್ನ ಅಜ್ಞಾತವಾಸದ ಕಾಲ ಇದೀಗ ಮುಗಿಯುತಿದೆ ಕರ್ಣಾಟ ಕಾವ್ಯಪಾರ್ಥ' ಎಂದು ಮೊದಲಾಗುವ ಕವಿತೆಯಂತೂ, ಪೌರಾಣಿಕ ಉಪಮಾನದಿಂದ ಅತ್ಯಂತ ಉಜ್ವಲವಾಗಿ ಮುಂದೆ ಸಾಗುತ್ತದೆ. ಕ್ಷಾತ್ರ ತೇಜಸ್ಸಿದ್ದೂ, ಸಂದರ್ಭವಶದಿಂದ ಬೃಹನ್ನಳೆಯಾಗಿ 'ರಮಣೀಯವಲ್ಲದಿಹ ರಮಾಣಿಯಾಕೃತಿಯಿಂದ' ಪಾಡುಪಡಬೇಕಾಗಿ ಬಂದ ಪಾರ್ಥನಂತೆಯೇ ಈವರೆಗೆ ತಲೆಮರೆಸಿಕೊಂಡಿದ್ದ ಕನ್ನಡಕಾವ್ಯ ಇದೀಗ ನವೋದಯದಿಂದ ಮತ್ತೆ ಚೇತರಿಸಿಕೊಳ್ಳುತ್ತಿದೆಯೆಂಬ ಈ ಚಿತ್ರಣ ಯಾರ ಮನವನ್ನಾದರೂ ಸೆಳೆಯದೆ ಇರದು. ಕವಿಗಳು ಕಾವ್ಯ ಪಾರ್ಥನನ್ನು ಕುರಿತು 'ಬಾ ನಿನ್ನ ಅರೆವೆಣ್ಣವೇಷವನು ಬೀಸಾಡು; ತೊಡು ಪೂರ್ತದಾಯುದವ; ಕೆಟ್ಟ ಬಾಳನು ಅರೆಯು; ಧರ್ಮವನ್ನು ರಾಜನೆಂದೆನಿಸು; ಲೋಕವ ಜಯಿಸು;' ಎಂದು ಸ್ವಾಗತ ಕೊಡುವ ವಾಕ್ಸರಣಿಯಂತೂ ವೀರ್ಯವತ್ತಾಗಿದೆ. ಪುಟ್ಟ ಕವಿತೆಯಾದರೂ ಕವಿಗಳ ಕನ್ನಡಾಭಿಮಾನದ ಕೆಚ್ಚು ಹೇಗೆ ಇಲ್ಲಿ ಗುಡುಗಿನಂತೆ ಕೇಳಿ ಬರುತ್ತದೆಯೆನ್ನುವುದನ್ನು ಪರಿಭಾವಿಸಬಹುದು.

ಹರಿದು ಹಂಚಿ ಹೋಗಿದ್ದ ಅಂದಿನ ಕರ್ಣಾಟಕವನ್ನು ಕಂಡು ಅವರ ಹೃದಯ ಕರಗುತ್ತದೆ; ಮನಸ್ಸು ಮರುಗುತ್ತದೆ.

ಹರಿದು ತುಂಡಾಗಿಹದು ಇಂದು ಕನ್ನಡ ನಾಡು;
ಅಣ್ಣತಮ್ಮದಿರು ತಾವಣ್ಣತಮ್ಮದಿರೆಂದು
ತಿಳಿಯಲಾರರು, ನಡೆಯಲಾರರು; ಬಾ ಬಂಧು
ಎಂದು ಕರೆಯಲು, ಸ್ವಾಮಿ ನನ್ನೂರು ಧಾರ್ವಾಡ
ನನ್ನೂರು ಮೈಸೂರು ನನ್ನೂರು ಎರಕಾಡು
ಮರ್ಯಾದೆಯಿಂದ ಕರೆಯಿರಿ ನನ್ನ ಎನ್ನುವರು.

ಒಡಗೂಡಿ ಬಾಳಬೇಕಾದವರು ದೂರ ದೂರ ಸಿಡಿದು ನಿಂತಿರುವುದರಲ್ಲಿಯೇ ಹೆಮ್ಮೆ ಪಡುವ ಈ ಮಾನವರ ಮನೋದೌರ್ಬಲ್ಯಕ್ಕಾಗಿ ಕವಿಯ ಸಂಕಟ ಹೇಳತೀರದು. 'ನಾವೆಲ್ಲ ಒಂದು ಮನೆಯವರಣ್ಣತಮ್ಮದಿರು. ನಮ್ಮೆಲ್ಲರನು ಪಡೆದುದೊಂದೆ ನಾಡಿನ ಬಸಿರು, ಎಂದು ನಾವರಿದೆವೇ ನಮಗೆ ಇನ್ನಾರೆದುರು? ಹಾ ನನ್ನ ಸೋದರರೆ ಬನ್ನಿ ಒಂದಾಗಿ; ಜಯವಧುವ ನಿಮ್ಮ ತೋಳಿನೊಳಿಟ್ಟು ತೂಗಿ' ಎಂದು ಕನ್ನಡಿಗರಿಗೆ ಕರೆಗೊಡುವರು. ಕವಿಯ ಈ ಸದಾಶಯ ಇಂದು ಕೈಗೂಡಿದೆ. ಕನ್ನಡ ನಾಡಿನ ಇತಿಹಾಸವನ್ನು ಬರೆಯುವವರಿಗೆ ಈ ಕವಿತೆ ಖಂಡಕರ್ಣಾಟಕದ ಕಥೆಯನ್ನೂ, ವ್ಯಥೆಯನ್ನೂ ಎಲ್ಲ ಕಾಲಕ್ಕೂ ಸಾರಿ ಹೇಳುವಂತಿದೆ. ಜನಗಳು ಜಾತಿಮತಗಳ ಹೆಸರಿನಲ್ಲಿ ಕವಲೊಡೆದು ಗುಂಪುಗುಂಪಾಗಿ ಬಾಳುತ್ತಿರುವುದನ್ನು ಕಂಡಾಗಲೂ ಕವಿಯ ಮನಸ್ಸು ಅತೀವ ಯಾತನೆಯನ್ನು ಅನುಭವಿಸುತ್ತದೆ. 'ಗುಂಪುಗಳ ಹಮ್ಮು ಮೆಳೆಯಾಗಿ ಬೆಳೆದು ನಾಡಲಿ ಪೂರ್ವದಲಿ ಜನತೆ ಒಂದೆಂಬ ಭಾವನೆಯ ಹೂಬಳ್ಳಿ ಅನಿತಿನಿತು ತಲೆಯೆತ್ತದಂತೆ ಮಾಡಿದವು' ಎಂದು ಕೊರಗಿ ಎಲ್ಲರೂ ಒಟ್ಟುಗೂಡಿ ಬದುಕಬೇಕೆಂದು ಕೋರುವರು.

ಸಮಾಜದ ಕೊಂಕು ಡೊಂಕುಗಳನ್ನು ಈ ಚಿಕ್ಕ ಚಿಕ್ಕ ಕವಿತೆಗಳಲ್ಲಿ ಬಹಳ ತೀಕ್ಷ್ಣವಾಗಿಯೇ ಖಂಡಿಸಿರುತ್ತಾರೆ. ಹೆಣ್ಣುಮಗಳೊಬ್ಬಳು ತನ್ನ ಹೊಟ್ಟೆಯ ಪಾಡಿಗಾಗಿ ಹರಿಕಥೆ ಹೇಳುತ್ತಿರುವುದನ್ನು ಕಂಡು ಕವಿಗೆ ಸಹಿಸಲಾಗುವುದಿಲ್ಲ. 'ಹರಿಕಥೆಗೆ ಬಂದ ಗತಿ

ನರಕಥೆಗೆ ಬರಬೇಡ' 'ಚೆಲುವೆ ಕತೆ ಹೇಳುವೊಡೆ ಭಾಗವತನೇಕಿನ್ನು?' 'ನೋಡುವರು ಸೋದರರು ಹರಿಕಥಾ ಮೂರುತಿಯ; ಸರ್ವಭಾಷಾ ಪ್ರವೀಣಾಭಿನವ ಭಾರತೀಯ; ನೋಡ ನೋಡುತ ಇವರ ಮನಗಳೆಂತಹ ಗಾಢ ಭಾವದಲಿ ಸಿಲುಕುವುವೊ ಬ್ರಹ್ಮದೇವನೆ ಬಲ್ಲ; ಅಣ್ಣದಿರೆ ಹರಿಯ ಕಥೆಯೇನು ಹಾಡಿನ ಕಾಡೆ? ಸೂಳೆ ಕುಣಿತವೆ? ಚೆಲುವೆಯನು ಒಳ್ಳೆಯವರೆಲ್ಲ ನೋಡಬಹುದೆಂಬ ಕೂಟವೆ?' ಎಂದು ಮರ್ಮಭೇದಕವಾಗಿಯೇ ಟೀಕಿಸುವರು. ದಿಟವನ್ನು ಹೇಳುವಲ್ಲಿ ಕವಿಯ ನುಡಿ ಕಟುವಾದರೆ ತಪ್ಪೇನು? ಆದರೆ ಅವರ ಆಗ್ರಹ ಹರಿಕಥೆಯನ್ನು ಹೇಳುವ ಹೆಣ್ಣುಮಗಳ ಮೇಲಲ್ಲ. ಬೇರೊಂದು ಕವಿತೆಯಲ್ಲಿ 'ಸೋದರರ ಕುರಿತು ಏನನೊ ಹೇಳುವವಸರದಿ ನಿನ್ನ ಲಘುವಾಗಿ ನುಡಿದೆನು ತಾಯೆ ಮನ್ನಿಸು.' ಎಂದು ಆಕೆಯಲ್ಲಿ ಕ್ಷಮೆ ಕೋರುವರು. ಆಕೆಯ ಕರ್ಮಕ್ಕಾಗಿ ಪಶ್ಚಾತ್ತಾಪ ಪಡುವರು. ಇದೀಗ ಕವಿಯ ಹೃದಯ! ಇಂಥವರಿಗೆ ಆಕಾಶಗಂಗೆಗೆ ಯಾತ್ರಾರ್ಥಿಯಾಗಿ ಬಂದ ಗಂಡನೊಬ್ಬನು ಹೆಂಡತಿಯನ್ನು ಬಡಿದಾಗ ಮನಸ್ಸು ಸುಮ್ಮನಿರುತ್ತದೆಯೆ? ಕೂಡಲೆ ಕೆರಳುತ್ತದೆ. ಮಾಡುವುದೇನು? 'ತಡೆವೆನೆ ಇಲ್ಲ ಅಧಿಕಾರ' ಎಂಬ ಅರಿವು ಅಡ್ಡಬರುತ್ತದೆ. ಆ ನಿಷ್ಠುರ ಪತಿಯನ್ನು ಕುರಿತು ಹೊಡೆವುದಕ್ಕೆ ಹೆಂಡಿರನ್ನು ಬಹುದೂರ ಕರೆತಂದೆ. ''ಎಲೆ ಅಣ್ಣ ನಿನ್ನ ಗಂಡಸುತನದ ಹೆಕ್ಕಳ ನನ್ನ ನಾಚಿಸಿತಯ್ಯ' ಎಂದು ವ್ಯಂಗ್ಯವಾಗಿಯೆ ಟೀಕಿಸುವರು. ಅದೇ ವಿಷಯದ ಗುಂಗಿನಲ್ಲಿಯೇ ಇರಬೇಕಾದರೆ ಕವಿಗಳಿಗೆ ಮತ್ತೊಂದು ಕವಿತೆ ಸ್ಫುರಿಸುವುದು. ಹೆಣ್ಣಿಗೆ ಪೂಜ್ಯಸ್ಥಾನವನ್ನು ನೀಡಿದ ಸಂಪ್ರದಾಯದಲ್ಲಿ ಬೆಳೆದು ಬಂದ ನಾವು ಆಕೆಯ ಮೇಲೆ ಬಂದ ಸಿಟ್ಟನ್ನು ತಡೆಯಲಾರದೆ ಹೋಗುವೆವಲ್ಲಾ ಎಂದು ಕನಿಕರಪಡುವರು. ಶಕ್ತಿಯುತವಾದ ಗಂಡು ಕೋತಿಯೊಂದು ಹೆಣ್ಣು ಕೋತಿಯನ್ನು ಬೆನ್ನಟ್ಟಿ ಹೋದ ಚಿತ್ರವನ್ನು ಸ್ಮರಿಸಿಕೊಂಡು ನಿಷ್ಕರುಣೆಯಾದ ಆ ಗಂಡನ ಸ್ಥಿತಿಯೂ ಅಂತಹುದೇ ಸರಿಯೆಂದು ಭಾವಿಸುವರು. ಮನುಷ್ಯನ ಮೃಗ ಸ್ವಭಾವಕ್ಕೆ ಕವಿಯ ಕನಲುವ ಈ ನುಡಿಗಳು ಸರಳವಾಗಿದ್ದರೂ ಕರುಳಿರಿಯುವಂತಿದೆ.

ಮತದ ಹೆಸರಿನಲ್ಲಿ ಜನರನ್ನು ಸುಲಿಗೆ ಮಾಡುತ್ತಿರುವ ಮತದಳರನ್ನು ಕಂಡಾಗ ಕವಿಗಳಿಗೆ ಸತ್ತ ಕರುವಿನ ಶವವನ್ನು ಹಸುವಿನ ಮುಂದೆ ನಿಲ್ಲಿಸಿ ಕೆಚ್ಚಲ ಹಾಲನ್ನೆಲ್ಲ ಹಿಂಡಿ ತಮ್ಮ ಹೊಟ್ಟೆ ಹೊರೆದುಕೊಳ್ಳುವ ಕಪಟ ಗೋದಳರ ವರ್ತನೆ ನೆನಪಾಗುವುದು. 'ನಿರ್ಜೀವವಾದ ಧರ್ಮದ ಜನದ ಮುಂದೆತ್ತಿ, ನಿಮ್ಮ ಧರ್ಮವ ನೋಡಿ ಎಷ್ಟು ಅಕ್ಕರೆಯಿಂದ ರಕ್ಷಿಸುತಲಿಹೆವು, ನಡೆವುದಕೆ ಬಿಡದಿಹೆವಣ್ಣ, ಇದನು ಪೋಷಿಸಬೇಕು ಧನವ ತ್ವರೆಯಿಂದಿತ್ತು ಪುಣ್ಯವನ್ನು ಮೂಟೆ ಕಟ್ಟಿರಿ, ಎಂಬರೀ ಮಂದಿ' ಎಂದು ಅವರ ಮೋಸವನ್ನು ಬಹಳ ಕಟುವಾಗಿಯೇ ಚಿತ್ರಿಸಿರುವರು.

ಜೀವನದ ನಾನಾ ಕ್ಷೇತ್ರಗಳಲ್ಲಿ ಮೆರೆದ ಪ್ರತಿಭಾಶಾಲಿಗಳ ಗುಣಗಾನ ಮಾಡಲು ಅಷ್ಟಷಟ್ಪದಿಯ ಧಾಟಿ ಬಹು ಚೆನ್ನಾಗಿ ಒಪ್ಪುತ್ತದೆ. ಪ್ರಕೃತ ಸಂಕಲನದಲ್ಲಿ ಇಂಥ ಕೆಲವಾರು ಕೃತಿಗಳಿವೆ. ಅವುಗಳಲ್ಲಿ ಒಂದೆರಡನ್ನು ಇಲ್ಲಿ ಪರಿಶೀಲಿಸಬಹುದು. 'ಆದಿಕವಿ ವಾಲ್ಮೀಕಿ' ಎಂಬ ಸೊಗಸಾದ ವಿಮರ್ಶಾತ್ಮಕ 'ಪುಸ್ತಕವನ್ನು ಬರೆದಿರುವ ಶ್ರೀನಿವಾಸರು ಆ ಮಾನ್ಯಕವಿಯನ್ನು ಕುರಿತು ಮೂರು ಕವಿತೆಗಳನ್ನು ಬರೆದಿರುತ್ತಾರೆ. 'ಬರೆವ ಜನದೊಡೆಯ' ಎಂದು ಆತನಿಗೆ ನಮಸ್ಕರಿಸಿ ಚಿಕ್ಕಂದಿನಂದಿಲೂ ವಾಲ್ಮೀಕಿ ಹೇಗೆ ತಮ್ಮ ಮನಸ್ಸನ್ನು ಸೆಳೆದನೆಂಬುದನ್ನು ವಿದಿತಪಡಿಸುವರು. 'ನಿನ್ನ ನುಡಿಯಾದಿ ಶೇಷನ ಸಾವಿರದ ಹೆಡೆಯ ಮಣಿಯ ಬೆಳಕಿನೊಳೆನ್ನ ದೈವವನು ಕಂಡೆನು. ನೀ ಬಣ್ಣಿಸದ ಗುಣವೆ? ಚಿತ್ರಿಸದ ರೂಪವೇ? ತೋರದಿಹ ತತ್ವವೇ? ವಿವರಿಸದ ಭಾವವೇ?' ಎಂದು ವಾಲ್ಮೀಕಿಯ

ಮಹಾಕಾವ್ಯಕ್ಕೆ ತಮ್ಮ ಕೃತಜ್ಞತೆಯನ್ನು ಸಮರ್ಪಿಸುವರು. ವಾಲ್ಮೀಕಿಯ ಜೀವನದಲ್ಲಿ ಅನಿರೀಕ್ಷಿತವಾಗಿ ಸಂಭವಿಸಿದ ಆ ಕ್ರೌಂಚ ಮಿಥುನದ ಸಾವಿನ ಸಂಗತಿಯನ್ನು ಎರಡು ಕವಿತೆಗಳಲ್ಲಿ ನಿರೂಪಿಸಿರುವರು. ಆ ಘಟನೆಯ ಹಿನ್ನೆಲೆಯನ್ನೆಲ್ಲ ಚಿತ್ರಿಸಿ, 'ಅರೆ ಹಿಡಿಯ ಆಮಿಷಕೆ ಬೇಡನಂದೆಚ್ಚ ಕಣೆ ಹಕ್ಕಿಯೆದೆ ನೋವ ಕಿಡಿಯೊಡನೆ ನಿನ್ನೆದೆ ಹೊಕ್ಕು ಅಲ್ಲಿ ಹಚ್ಚಿತು ಅದನು ಜಗಕೆ ಬೆಳಕನು ಚೆಲ್ಲಿ' ಎಂಬ ಮಾತುಗಳಲ್ಲಿ ರಾಮಾಯಣದ ಉಗಮವನ್ನು ರೇಖಿಸುವರು. ಇನ್ನೊಮ್ಮೆ ಈ ಅನಿರೀಕ್ಷಿತ ಘಟನೆಯ ಹೃದಯಾಂತರಾಳವನ್ನು ವಿಶ್ಲೇಷಿಸಿ 'ಜಗವೆಲ್ಲ ಒಂದೆಂದ ನಿನಗೆ ಹಕ್ಕಿಯ ನೋವು ಬಾಳಪ್ರತಿನಿಧಿಯಾಗಿ ನಿತ್ಯವೆನಿಸಿತು; ನೋಡಿ ವ್ಯಾಕುಲದಿ ನೀ ನುಡಿದೆ. ಸತ್ಯವಂತನ ಮಾತು ಕ್ರಮವರಿತು ಒಂದೊಂದು ಕಾವ್ಯವಾಯಿತು; ಅದನು ಶಾಪವಾಗಿರಬಿಡದೆ ಬ್ರಹ್ಮನೇ ತಿದ್ದಿದನು ಮಂಗಲದ ಸುಧೆಯಾಗಿ' ಎಂದು ಶೋಕದಿಂದ ಶ್ಲೋಕ ಉದಿಸಿ ಬಂದ ಸಮೂಹೂರ್ತವನ್ನು ಬಾಯಿತುಂಬ ಕೊಂಡಾಡುವರು.

ವಿಭೂತಿ ಪುರುಷರನ್ನು ಸ್ಮರಿಸಲು ಹೊರಟರೆ ಕೊನೆ ಮೊದಲುಂಟೆ? ಸ್ತುತಿಸಲು ತೊಡಗಿದರೆ ಇತಿ ಮಿತಿಯುಂಟೆ? ಕಾಲ ದೇಶಗಳೆಂಬ ಭೇದವಿಲ್ಲ, ಜಾತಿಮತಗಳೆಂಬ ಅಂತರವಿಲ್ಲ. 'ಕವಿಲೋಕದಲಿ ನೀನು ಸಾರ್ವಭೌಮನೆ ಸತ್ಯ ಷೇಕ್ಸ್‌ಪಿಯರ್' ಎಂದು ಆ ಪಾಶ್ಚಾತ್ಯ ಕವಿಯನ್ನು ಕೊಂಡಾಡಲು ಮೊದಲಿಟ್ಟು ಅವನ ವೈಶಿಷ್ಟ್ಯವನ್ನೆಲ್ಲ ವಿಶದಪಡಿಸಿ, ಕಡೆಗೆ 'ನಿನ್ನು ಸಿರಿನನುಭವದ ರಸವ ಕಾವ್ಯಾಶ್ವಮೇಧದ ಅಗ್ನಿಯಲಿ ಹಿಂಡಿ ಅಮರತೆಯ ಸಾಧಿಸಿದೆ ನೀಯೋಗಿ ಚಿರರಸಿಕ.' ಎಂದು ಅವನ ಗೈಮೆಯ ತಿರುಳನ್ನೇ ತೆರದಿಡುವರು. ಕನ್ನಡದ ಕವಿ ಕುಮಾರವ್ಯಾಸವನನ್ನು ನೆನೆದಾಗ ಅವನ ಕಾವ್ಯದ ಭವ್ಯತೆಯೇ ಕವಿಗಳ ಕಣ್ಣಮುಂದೆ ನಿಂತಂತಾಗುತ್ತದೆ. 'ವೀರ ನಾರಾಯಣನ ಕೀರ್ತಿಗೆ ತಡೆಯುಂಟೆ?' 'ಅವನ ಹಿಡಿಯುವರಾರು ಅವನ ನಡೆಗೇನಡ್ಡಿ?' ಎಂಬುದಾಗಿ ಒಂದೊಂದಾಗಿ ಅವನ ಗುಣವಿಶೇಷಗಳನ್ನೆಲ್ಲಾ ವರ್ಣಿಸಿ, 'ನುಡಿ ಭಾವ ರಸ ಊಹೆ ನೀವು ಹಾಕಿದ ಕಡ್ಡಿ ದಾಟಲಾರದೆ ನಿಮಗೆ ನಡೆದುಕೊಂಡವು' ಎಂದು ಮುಕ್ತಕಂಠದಿಂದ ಶ್ಲಾಘಿಸುವುದಲ್ಲದೆ, 'ನಾಕ ನಿಮ್ಮ ಕೃತಿಯಲಿ ಬೆರೆತು ಒಪ್ಪಿಕೊಂಡಿತು ನಂಟ' ಎಂಬ ವಾಕ್ಯದಲ್ಲಿ ಕುಮಾರವ್ಯಾಸನ ಕಾವ್ಯ ಸ್ವರ್ಗಸದೃಶವಾದುದೆಂಬ ಅಭಿಪ್ರಾಯವನ್ನು ಮನವೊಪ್ಪುವಂತೆ ಹೇಳಲಾಗಿದೆ. 'ಭಾಸೋ ಹಾಸ: ಕವಿಕುಲ ಗುರುಃ ಕಾಲಿದಾಸೋ ವಿಲಾಸಃ' ಎಂಬ ಸಂಸ್ಕೃತದ ಉಕ್ತಿಯಂತೆಯೇ ಕಾಳಿದಾಸನೆನ್ನುವುದು ಕೇವಲ ವ್ಯಕ್ತಿಮಾತ್ರವಲ್ಲ. ಅದು ಬ್ರಹ್ಮನ ಅಪ್ಪಣೆಯ ಮೇರೆಗೆ ಸರಸ್ವತಿ ಭೂಲೋಕಕ್ಕೆ ಕಳುಹಿಸಿ ಕೊಟ್ಟ ಅಪೂರ್ವವಾದ ವಾಣಿಯ ಪ್ರತೀಕವೇ ಸರಿ ಎಂಬ ಚಿತ್ರಣ ಬೆರಗುಗೊಳಿಸುವಂತಹುದು. ಕವಿಗಳು ಈ ಕವನದ ಪೂರ್ವಾಪ್ಷಕದಲ್ಲಿ ಕಾಳಿದಾಸನ ಕಾವ್ಯದ ಹಿರಿಮೆಯನ್ನೆಲ್ಲ ಹುದುಗಿಟ್ಟು ಹೇಳಿರುವರು. ಅದರ ಗುಣ ಒಂದಲ್ಲ, ಎರಡಲ್ಲ; ಹಲವಾರು. ಕಾಳಿದಾಸನಂಥವರು ಒಮ್ಮೆ ಹುಟ್ಟಿ ಬಂದಾರೆಯೇ ಹೊರತು ಮತ್ತೆ, ಮತ್ತೆ ಬರುವವರಲ್ಲ. ಈ ತತ್ವವನ್ನು ಸರಸ್ವತಿ 'ಇಂದು ಕಳುಹೆವೆನು. ಇನ್ನೊಮ್ಮೆ ಮಗುವನು ಅಟ್ಟು ಎನ್ನದಿರು, ಎಂದಳು' ಎಂಬ ನುಡಿಗಳ ಮೂಲಕ ನವೀನವಾಗಿ ನಿರೂಪಿಸಿರುವರು. ಶ್ರೀ ವಿಶ್ವೇಶ್ವರಯ್ಯನವರ ಸೇವೆಯನ್ನು ಮನಗಂಡು 'ಮಸಕಾಗಿದ್ದ ಮೂಲೆಯಲಿ ಹಚ್ಚಿ ಇರಿಸಿದಿರಿ ತಿಳಿವಾಸೆಗಳ ಹಣತೆಯನು. ಧನ್ಯರಾದಿರಿ ಇಂತು ನೀವು' ಎಂದು ಹಿಗ್ಗುವರು. ಸೃಷ್ಟಿ ರಹಸ್ಯವನ್ನೇ ಭೇದಿಸಲು ಹೊರಟ ಸಿ.ವಿ. ರಾಮನ್ ಅವರ ಮೇಧಾಶಕ್ತಿಯನ್ನು ಮೆಚ್ಚಿಕೊಂಡ ಕವಿಗಳು 'ನೀನಿಂದು ಪ್ರಕೃತಿದೇವಿಯ ಮುಂದೆ ಕೈ ಮುಗಿದು ಪ್ರಶ್ನೆ ಕೇಳುತಲಿರುವೆ. ನಿನ್ನ ಭಕ್ತಿಯ ಬಗೆದು ಬರೆಯುತ್ತಿರುವಳು ತಾಯಿ, ನೀನಿಂದು ಅವಿಹತನು; ಕೇಳು ತಿಳಿ ಬರೆ ಹೇ ಶ್ವೇತಕೇತು' ಎಂದು ಆ ಭೌತ ವಿಜ್ಞಾನಿಯ ವ್ಯಕ್ತಿತ್ವವೆಲ್ಲ

ಎದ್ದುಕಾಣುವಂತೆ ಸ್ತುತಿಸಿರುವರು. ಹಿಟ್ಲರನ ಅನ್ಯಾಯ, ಐನ್‌ಸ್ಟೈನರ ಗಣಿತ ಜ್ಞಾನಗಳ ಕಡೆಗೂ ಕವಿಗಳ ಗಮನ ಹರಿಯದೆ ಇಲ್ಲ.

ವಿವೇಕಾನಂದರಿದ್ದ ಕೋಣೆಯನ್ನು ಕಂಡಾಗ ಕವಿಗಳ ಮನಸ್ಸು ಕ್ಷಣಕಾಲ ಆತನ ಸ್ಮರಣೆಯಲ್ಲಿ ತನ್ಮಯವಾಗುವುದು. ಆತನು ಅದನ್ನು ಬಿಟ್ಟು ಹೋದಂದು ಹೇಗಿತ್ತೋ ಈಗಲೂ ಹಾಗೆಯೇ ಇರುವುದನ್ನು ಕಂಡು ಆ ಹಿರಿಯ ಚೇತನ ಮತ್ತೊಮ್ಮೆ ಅವತರಿಸದೆ ಎಂದು ಹಂಬಲಿಸುವರು. 'ಕಾದಿಹುದು ಅದೆ ಪೀಠ, ಅದೆ ವಸ್ತ್ರ, ಅದೆ ತಲ್ಪ; ಕಾದಿಹುದು ಅದೆ ನಾಡು, ಅದೆ ಜನತೆ, ಅದೆ ನೋವು' ಎಂಬ ಮಾತುಗಳಲ್ಲಿ ಆ ಮಹಾನುಭಾವನ ಪುನರಾಗಮನಕ್ಕಾಗಿ ಹೇಗೆ ಸಮಸ್ತವೂ ಎದುರು ನೋಡುತ್ತಿವೆಯೆಂಬ ಚಿತ್ರ ಮನಸ್ಸನ್ನು ಹಿಡಿದು ನಿಲ್ಲಿಸುತ್ತದೆ. 'ಇನ್ನೊಮ್ಮೆ ನಮ್ಮ ಸಾರುವುದು ಆ ಹಿರಿಜೀವ' ಎಂಬ ಭರವಸೆಯಿಂದ ಕವಿಗಳು ತಮ್ಮ ತುಂಬುನಂಬಿಕೆಯನ್ನು ವ್ಯಕ್ತಪಡಿಸುವರು. ಶ್ರೀರಾಮಕೃಷ್ಣರ ಆರಾಧ್ಯ ದೇವತೆಯಾದ ದಕ್ಷಿಣೇಶ್ವರದ ಭವತಾರಿಣಿಯನ್ನು ಕಂಡಾಗ ಸ್ತಂಭೀಭೂತರಾಗುವರು; ಮೂಕ ವಿಸ್ಮಿತರಾಗುವರು. 'ಎನ್ನ ಆಸೆಗಳ ತೊಳೆದೇವಿ, ತೊಳೆಯುವ ಕಣ್ಣ, ಎಲ್ಲ ಹೆಣ್ಣಾಕೃತಿಯೊಳಿಂತೆಯೇ ಹೊಳೆದು ಪೂಜೆಯನೆ ಸಲಿಸಿಕೊಳು ಎನ್ನಿಂದ ನಿರುತ' ಎಂದು ಆ ದೇವಿಯಲ್ಲಿ ಶರಣಾಗತರಾಗುವರು.

ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರದ ಧ್ರುವತಾರೆಯಂತಿರುವ ಶ್ರೀ ಬಿ.ಎಂ. ಶ್ರೀ. ಅವರು ತಮ್ಮ ಹೆಗಲಣಿಯಾಗಿ ದುಡಿಯುತ್ತರುವ ಶ್ರೀ ಬೇಂದ್ರೆ ಮತ್ತು ಶ್ರೀ ಶಿವರಾಮ ಕಾರಂತರನ್ನು ಕುರಿತು ರಚಿಸಿರುವ ಅಷ್ಟಷಟ್ಪದಿಗಳು ಆಯಾ ಮಹನೀಯರ ಗುಣಗಳನ್ನು ಬಹು ಪ್ರಭಾವಶಾಲಿಯಾಗಿ ನಮಗೆ ಪರಿಚಯ ಮಾಡಿಕೊಡುತ್ತವೆ. 'ಶ್ರೀ' ಅವರ ಸ್ತುತಿ ಹೀಗಿದೆ:

ಆಧುನಿಕ ಕರ್ಣಾಟ ಕಾವ್ಯ ಕುಲಪತಿ ನೀವು
ಬೆಳ್ಳೂರ ಮೈಲಾರ ಶ್ರೀಕಂಠ ಗುರುವರ
ಸಿರಿಗನ್ನಡದೊಳಿನ್ನು ಮುಂದಾರು ಬರೆವರು
ಅವರೆಲ್ಲ ನಿಮ್ಮ ನೆನೆಯುವರು ಪೂಜೆಯ ಹೂವ
ನಿಮಗರ್ಪಿಸವರು. ಕನ್ನಡದೊಳಿಂದಾವಾವ
ಕಲಕಂಠ ಕೇಳುತಿದೆ ಅದರ ಗಾನದೊಳೆಲ್ಲ
ತೋರುತಿದೆ ನೀವು ತೆರೆದಾ ನವ್ಯ ಅಕ್ಷುಲ್ಲ
ಧೀರಗತಿ. ಸುದಿಶಾಲ ವಿಶ್ವ ವಿಸ್ತರ ಭಾವ.
ನುಡಿದು ಕವಿಸಿದಿರಿ; ನುಡಿಯದೆ ಮತ್ತೆ ಕಲಿಸಿದಿರಿ;
ದುಡಿದು ಕಲಿಸಿದಿರಿ; ಮನದರಕೆಗಳನೆಚ್ಚೆರಿಸಿ
ಎಳೆಯರೆದೆಯಲಿ ಹಾಡುವಾಸೆಯನು ಸುಳಿಸಿದಿರಿ.
ಒಂದೊಂದು ವೇಳೆ ನಿಮ್ಮನು ಕುರಿತು ಮಚ್ಚರಿಸಿ
ನುಡಿಯುವರು ಕೆಲರು ಸೋದರರು; ಅವರೂ ಮುಂದೆ
ತಿಳಿಯುವರು ಕನ್ನಡಕೆ ಕಣ್ವಮುನಿ ನಿವೇಂದು

ಶ್ರೀ ಬಿ.ಎಂ. ಶ್ರೀ. ಅವರನ್ನು ಕಣ್ಣಾರೆ ಕಂಡವರಿಗೆ ಇಲ್ಲಿಯ ಒಂದೊಂದು ಮಾತೂ ಎಷ್ಟು ಉಚಿತವಾಗಿದೆಯೆಂದು ತೋರದೆ ಇರದು. 'ಶ್ರೀ' ಅವರು ಅಂದು ಹಾಕಿದ ಶ್ರೀಕಾರದ ಪ್ರಭಾವದಿಂದ ಇಂದು ಕನ್ನಡ ಸಾಹಿತ್ಯ, ಕನ್ನಡ ಪ್ರಜ್ಞೆ, ಹೇಗೆ ಜೀವಂತವಾಗಿ

ಉಳಿದಿದೆಯೆಂಬುದು ವಿದಿತವಾಗುತ್ತದೆ. ಅವರಿಂದ ಪ್ರತ್ಯಕ್ಷವಾಗಿ ಪ್ರೇರಣೆ ಪಡೆದವರು ಕೆಲವರಾದರೆ ಪರೋಕ್ಷವಾಗಿ ಉಪಕೃತರಾದವರು ಹಲವರಿದ್ದಾರೆ. ಅವರು ಆಧುನಿಕ ಕನ್ನಡ ಕಾವ್ಯ ಪ್ರಪಂಚದ ಆಚಾರ್ಯರೂ ಹೌದು; ಅಖಂಡ ಕರ್ಣಾಟಕದ ಅಧ್ವರ್ಯಗಳೂ ಹೌದು.

ಶ್ರೀ ಬೇಂದ್ರೆಯವರ ಹಾಡುಗಾರಿಕೆಯ ಗಾರುಡಿಗತನವನ್ನೂ ಮಾತಿನ ಮೋಡಿಯನ್ನೂ ಶ್ರೀನಿವಾಸರಲ್ಲದೆ ಮತ್ತಾರು ಹೇಳಬಲ್ಲರು? ತಮ್ಮ ಸಾಹಿತ್ಯ ಮಿತ್ರನನ್ನು 'ಹಕ್ಕಿ ಹಾರಿದ ತೆರನ ಹಾಡಿ, ಕವಿತೆಯ ಹೊಸಲ ನೀದಾಂಟಿ ನಿಂತೆ ಗೆಳೆಯ' ಎಂಬ ಮಾತಿನಲ್ಲಿ ಮೆಚ್ಚಿಕೊಂಡಿರುವುದು ಬರಿಯ ಉಪಚಾರದ ಮಾತಲ್ಲ. ಅದು ಬೇಂದ್ರೆಯವರು 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಅಭೂತಪೂರ್ವವಾದ ತಮ್ಮ ಪದ್ಯವೊಂದರಿಂದ ಕನ್ನಡಿಗರ ಗಮನವನ್ನು ಹೇಗೆ ಸೆಳೆದರೆಂಬ ಸಂದರ್ಭವೊಂದನ್ನು ಕುರಿತುದಾಗಿದೆ. ಬೇಂದ್ರೆಯವರ ಕಾವ್ಯದ ಅನಂತ ಮುಖಗಳ್ನು ಕಂಡುಕೊಂಡ ಕವಿಗಳು 'ನಿನ್ನ ಮಡಿ ಕುಶಲ, ಊಹೆ ಸುಂದರ, ಭಾವ ಜಗದಂತೆ ವಿಸ್ತಾರ; ನಿನ್ನೆಣಿಕೆ ಮಾನವನ ಬಾಳಿಗೇ ಪ್ರಸ್ತಾರ; ಕಗ್ಗಲ್ಲ ಗಿರಿ ನಿನಗೆ ಸೃಷ್ಟಿ ಕಮಲದ ಎಸಳು' ಎಂಬ ವರ್ಣನೆಯಲ್ಲಿ ಬಹಳ ಚಿತ್ರವತ್ತಾಗಿ ಗುರುತಿಸಿರುತ್ತಾರೆ. ಇಲ್ಲಿನ ಹದಿನಾಲ್ಕು ಪಂಕ್ತಿಗಳೂ ಬೇಂದ್ರೆಯವರ ಕಾವ್ಯಸತ್ವವನ್ನು ಸಾರ್ಥಕವಾಗಿ ಪ್ರತಿಪಾದಿಸುತ್ತವೆ.

'ಶಿವರಾಮ ಕಾರಂತ, ಕಡಲ ತೀರದ ನಮ್ಮ ಭಾರ್ಗವ ತಪೋವನದ ಕಲಿ, ಸರ್ವದಮನ, ಹಿಂಸ್ರಜೀವಿಗಳಾರು ಈ ನಾಡಿನಲಿ ತಮ್ಮ ಕ್ಷುದ್ರತೆಯ ತೆರೆವರವರಿಗೆ ನೀನು ಯಮನ ಮೊಗವ ತೋರುತಲಿರುವೆ' ಎಂದು ಮೊದಲಾಗುವ ಶ್ರೀ ಶಿವರಾಮ ಕಾರಂತರನ್ನು ಕುರಿತ ಅಷ್ಟಷಟ್ಪದಿಯಲ್ಲಿ ಈ ಕನ್ನಡಗಲಿಯ ಮನೋಧರ್ಮವನ್ನು ಬಹು ಸ್ಪಷ್ಟವಾಗಿ ಚಿತ್ರಿಸಿರುತ್ತಾರೆ. ಕಾರಂತರ ಕೃತಿಗಳಲ್ಲಿ ಹಾಗೂ ಮಾತುಗಾರಿಕೆಯಲ್ಲಿ ವಿದಿತವಾಗುವ ಸತ್ಯನಿಷ್ಠೆ, ಕಪಟಾಚಾರ ಖಂಡನೆ, ಸಂಕಲ್ಪಸಿದ್ಧಿಗಳನ್ನು ಆ ವೇಳೆಗಾಗಲೇ ಶ್ರೀನಿವಾಸರು ಹಾಡಿ ಹೊಗಳಿರುವುದು ಅಭಿನಂದನೀಯವಾದುದು. 'ಕವಿಗೆ ಕವಿ ಮುನಿವಂ' ಎಂಬುದೊಂದು ಹೇಳಿಕೆ ನಮ್ಮಲ್ಲಿ ಉಂಟು. ಶ್ರೀನಿವಾಸರು ಸೋದರ ಸಾಹಿತಿಗಳನ್ನು ಕುರಿತು ವ್ಯಕ್ತಪಡಿಸಿರುವ ಈ ಸದಭಿಪ್ರಾಯಗಳನ್ನು ಕಂಡರೆ ಈ ಹೇಳಿಕೆಯನ್ನು 'ಕವಿಗೆ ಕವಿ ಮಣಿವಂ' ಎಂದು ಮಾರ್ಪಡಿಸಬೇಕು ಎನ್ನಿಸದೆ ಇರದು! ಸಾಹಿತ್ಯ ಪ್ರಪಂಚದಲ್ಲಿ ಯಾದರೂ ಸಹೃದಯತ್ವ ಮತ್ತು ಸೌಜನ್ಯಗಳು ಉಳಿಯದಿದ್ದರೆ ಅವು ಇನ್ನು ಬೇರೆ ಎಲ್ಲಿ ಬದುಕಲು ಸಾಧ್ಯವಾದೀತು?

ಹೊಸಗನ್ನಡ ಕಾವ್ಯ ಆರಂಭವಾದಾಗ ಹಲವಾರು ಮಂದಿ ಅದನ್ನು ಕಂಡು ಹೀಯಾಳಿಸಿದ್ದುಂಟು. ಈ ವಿಷಮವಾತಾವರಣವನ್ನು ಪ್ರಕೃತ ಕವಿಗಳು ಒಂದೆರಡು ಕವಿತೆಗಳಲ್ಲಿ ಬಹಳ ವ್ಯಂಗ್ಯವಾಗಿ ಚಿತ್ರಿಸಿರುತ್ತಾರೆ. 'ನೂತನ ಕವಿಗಳ ನೂಕುನುಗ್ಗಲಿನ ಸದ್ದನ್ನು ಕೇಳಿ ಯಮನು ನಿದ್ದೆಕೆಟ್ಟು ಎದ್ದು ವಿಚಾರಿಸಿದನಂತೆ. ಅವನ ಊಳಿಗದವರು 'ಒಡೆಯ ಇಷ್ಟು ದಿನ ಮೂಕು ಬಡಿದಿದ್ದ ಕನ್ನಡ ನುಡಿಯ ಸೊಕ್ಕು ಮಕ್ಕಳು ಕವಿತೆಮಾಳ್ಪರಂತೆ, ಸದ್ದು' ಎಂದರು. ಅದಕ್ಕೆ ತಕ್ಕ ಶಾಸ್ತಿಯೇನೆಂದು ಯಮನು ಆಲೋಚಿಸಿ, ಆ ಹೊಸಬರನ್ನು ಕಂಡರೆ ಆಗದಂತಹ ಒಬ್ಬ ಕುಹಕಿಯನ್ನು ಆ ಜನರ ಮಧ್ಯದಿಂದಲೇ ಆರಿಸಿ, ಕನ್ನಡದಲ್ಲಿ ಬರೆಯತೊಡಗಿದವರಿಗಾಗಿಯೇ ಒಂದು ನರಕವನ್ನು ನಿರ್ಮಿಸಿ ಅದಕ್ಕೆ ಅವನನ್ನು ನೇಮಿಸಿದನಂತೆ. ಆ ಅಭಿನವ ಚಿತ್ರಗುಪ್ತನನ್ನು ಕಂಡ ಕವಿಗಳು

ಅಂಜತೊಡಗಿದರಂತೆ. ಹೊಸ ಪಂಥವೊಂದು ಉದಿಸಿದಾಗ ಅಸೂಯಾಪರರಾದ ಜನ ಹೇಗೆ ವರ್ತಿಸುತ್ತಾರೆ ಎಂಬುದನ್ನು ಇಲ್ಲಿ ಕವಿಗಳು ಬಹಳ ಚಾತುರ್ಯದಿಂದ ಚಿತ್ರಿಸಿದ್ದಾರೆ. ಅಂಥವರು ಯಮನ ಭಟರೇ ಸರಿ ಎಂಬ ಹೋಲಿಕೆಯಂತೂ ಜಳ್ಳೆಂದು ಜರೆಯುವವರಿಗೂ ಒಂದು ಮಾತನ್ನು ಕವಿಗಳು ಹೇಳಿದ್ದಾರೆ. ಹುಟ್ಟಿದ ಮಗು ಅಲ್ಪಾಯುವೆಂದು ತಿಳಿದರೂ ಜೋಯಿಸರು, ಅದಕ್ಕೂ ಒಂದು ಜಾತಕ ಬರೆದು ಅರಸಿನ ಹಚ್ಚುವುದು ಉಂಟಷ್ಟೆ! 'ನಾಳೆ ಈ ಬದುಕು ಮುಗಿದು ಹೋಗುವುದು, ಕಾದಿದೆ ನಮಗೆ ಸೂತಕ'- ಎಂದು ಹೇಳಿ ಹೆತ್ತ ತಾಯಿಯ ಮನಸ್ಸನ್ನು ನೋಯಿಸುವವರಲ್ಲ ಅವರು. ಅಂತೆಯೇ ಸಾಹಿತ್ಯ ಲೋಕದಲ್ಲಿನ ಅಸೂಯಾಪರರನ್ನು ಕುರಿತು, 'ಇಷ್ಟೇಕೆ ಆತುರ ಬಂಧು? ಬರೆಯತೊಡಗಿದ ದಿನವೆ ಇದು ಉಳಿಯುವುದಿಲ್ಲೆಂದು ತೊರೆಯಲಾಗುವುದೆ ಕಾವ್ಯವ ನಾವು?' ಎಂದು ಸಮಾಧಾನವನ್ನು ಹೇಳಿ ಆತನ ಸಹನೆಯನ್ನು ಬೇಡುವರು. ಅಷ್ಟೇ ಅಲ್ಲ; ವಿಮರ್ಶಕರ ಕಟುವಾದ ನುಡಿಗಳನ್ನು ಕೇಳಿ ನೊಂದಿದ್ದ ತರುಣ ಲೇಖಕನನ್ನು ಕಂಡು 'ಇದು ನಾಲಗೆಯ ಚಪಲ. ಕವಿತೆಯನು ನುಡಿವುದಕೆ ನೀನಾಸೆಪಡುವಂತೆ ಬಯ್ಯುದರೊಳವರಿಗಾಸೆ. ಮಾವ ನೆಡವಂತೆ ಬೇವನೂ ನೆಡಬೇಕು; ಇದರ ಎಲೆ ಅದರ ಫಲ ನಾಡಿನೊಳಗಿರಬೇಕು' ಎಂದು ಧೈರ್ಯ ಹೇಳಿ ಬೆನ್ನು ತಟ್ಟುವರು. ತಮ್ಮ ಕಾವ್ಯ ರಚನೆಯಲ್ಲಿ ಶೈಥಿಲ್ಯವನ್ನು ಗುರುತಿಸಿ ಟೀಕಿಸಿದ ಮತ್ತೊಬ್ಬರನ್ನು ಕುರಿತು 'ನೀನಾಡಿದುದು ನಿಜದ ನುಡಿ ತಮ್ಮ' ಎಂದು ವಿನಯಪೂರ್ವಕವಾಗಿ ತಮ್ಮ ಕುಂದನ್ನು ಒಪ್ಪಿಕೊಂಡು, ಅದಕ್ಕೆ ಸೂಕ್ತವಾದ ಕಾರಣವನ್ನೂ ತಿಳಿಸಿ, ಅನಂತರ 'ಆದರೆ ಭಾವಯಾವಾಗಳೂ ಮಾತಿನಿಂದ ಮುಂಚೆಯೇ ಇಹುದು. ಮನದೊಳಿಹುದೆಲ್ಲಕೂ ಮಾತಿನಲಿ ಮೆಯ್ಯಹುದು ಸಾಧ್ಯವಲ್ಲೇನೊ? ಒಳಿತೂ ಅಲ್ಲ. ನುಡಿಯಾಚೆ ಭಾವವಿಹುದೇ ಕ್ಷೇಮ. ಭಾವದಾಚೆಗೆ ಜೀವ' ಎಂದು ಕಾವ್ಯದ ತತ್ವವನ್ನೇ ತಿಳಿಯದ ನುಡಿಗಳಲಿ ಸಾರಿ ಹೇಳುವರು. ಲೇಖಕನಾಗಲು ಬಯಸುವವನಿಗೆ ಎಂತಹ ತಾಳ್ಮೆ ಸಹನೆಗಳು ಅವಶ್ಯಕವೆನ್ನುವುದನ್ನು ಈ ಪ್ರಸಂಗಗಳಿಂದ ನಾವು ಮನಗಾಣಬಹುದು.

ಇಂಗ್ಲಿಷಿನ ವ್ಯಾಮೋಹದಿಂದ ಕನ್ನಡವನ್ನು ಕಡೆಗಣಿಸಿದ ಸಾಹಿತ್ಯ ಸಹೋದರನೊಬ್ಬನನ್ನು ಕುರಿತು ಕವಿಗಳು ಆಡಿರುವ ಮಾತುಗಳು ಅಪರಂಜಿಯಂತಿವೆ. 'ಈ ನಾಡು ಬಡತನವ ಸಹಿಸಿ ಹೊಟ್ಟೆಯ ಕಟ್ಟಿ ನಿನಗೆ ವಿದ್ಯೆಯನು ಕಲಿಸಿದುದಾವ ಆಸೆಯಲಿ?' ಎಂದು ಆಕ್ಷೇಪಿಸಿ, ಅಕ್ಕಸಾಲಿಗನು ಚಿನ್ನಕ್ಕೆ ಮಿರುಗು ಬರಲೆಂದು ಮೂಸೆಯಲ್ಲಿ ಕಾಯಲಿಟ್ಟರೆ, ಅದು ಮೂಸೆಗೇ ಮೆತ್ತಿಕೊಂಡರೆ ಹೇಗೆ ನಿಷ್ಫಲವಾದೀತೋ ಹಾಗೇಯೇ ಇಂಥವರ ಹಾಡು ಎನ್ನಿಸುತ್ತದೆ. ಆದಕ್ಕಾಗಿ ಅಂಥ ದಾರಿ ತಪ್ಪಿದ ಬಂಧುವನ್ನೂ ಪ್ರೀತಿಯಿಂದ ಕರೆದು 'ಯಾವುದನು ಹೇಳಬೇಕೋ ಅದನು ಬಂದಂತೆ ಹೇಳು, ಕೇಳಲು ನಾಡು ಕಾದಿಹುದು. ಆಂಗ್ಲ ಭಾಷೆಯೊಳಾಡಿ ಆಂಗ್ಲರನು ತಣಿಸುವರೆ ಆಂಗ್ಲಸೇವಕರಿಹರು' ಎಂದು ಭೋದಿಸುವರು. 'ನಮ್ಮದನು ಹಳ್ಳದಲಿ ಬಿಟ್ಟು ಹೆರರೊಪ್ಪಿಗೆಗೆ ದಣಿಯುವರೆ?' ಎಂಬ ಸಂದರ್ಭೋಚಿತವಾದ ಸೂಕ್ತಿಯಿಂದ ಈ ಕವಿತೆ ಮುಕ್ತಾಯವಾಗುವುದು. ಸ್ವತಃ ಇಂಗ್ಲಿಷ್ ಭಾಷೆಯಲ್ಲಿ ಪ್ರವೀಣರೆನ್ನಿಸಿದ ಶ್ರೀನಿವಾಸರು ಹೀಗೆ ಹೇಳುವುದರಲ್ಲಿ ಔಚಿತ್ಯವಿದೆ. ಅವರ ಕನ್ನಡದ ಅಭಿಮಾನ ಸ್ವಭಾವಸಿದ್ಧವಾದುದೇ ಹೊರತು ಸಮಯ ಸಾಧಕರ ಸೋಗಿನಂತಲ್ಲ.

ಸರ್ಕಾರದ ಉನ್ನತಹುದ್ದೆಗಳ ಗಡಿಬಿಡಿ ಮಧ್ಯ ಸಾಹಿತ್ಯಸೃಷ್ಟಿಗೆ ಅವಕಾಶವುಂಟೆ ಎಂಬ ಮಿತ್ರರ ಪ್ರಶ್ನೆಗೆ ಕವಿಗಳು ಕೊಟ್ಟಿರುವ ಉತ್ತರ ಎಲ್ಲರ ಕಣ್ಣುಗಳನ್ನೂ ತೆರೆಸುವಂತಿದೆ.

ತಮ್ಮ ಕಛೇರಿಯ ಕಾಗದ ಪತ್ರಗಳ ಹಿಂದೆಯೇ ಅವರ ಸಾಹಿತ್ಯದ ಸೆಲೆ ಹುದುಗಿದೆಯೆಂದು ಅವರ ಎಣಿಕೆ. 'ಮಾನವನ ಬಾಳು ಸೋಕಿದ ಎಲ್ಲ ತಾವಿನಲಿ ನೋವು ನಗೆಯುಪವನದಿ ಕಾದಿದೆ ರಸಕ್ರೀಡೆ' ಎಂದು ಅಚಲವಾದ ವಿಶ್ವಾಸವುಳ್ಳವರ ಅವರು, ಆದರೂ ತಾವಿರುವ ಕಛೇರಿಯ ಸುತ್ತಮುತ್ತಣ ಸೃಷ್ಟಿ ಒಮ್ಮೊಮ್ಮೆ ಹೇಗೆ ತಮ್ಮನ್ನು ತಣಿಸುತ್ತಿದೆಯೆಂಬುದನ್ನೂ ಅವರು ಮರೆತವರಲ್ಲ.

ಕವಿಹೃದಯಕ್ಕೆ ಒಂದೊಂದು ಉದಯವೂ ಅಭಯಪ್ರದವಾದದ್ದು. ಕಾರ್ತಿಕ ಮಾಸದಲ್ಲಿ ಶೀತ ಮುರಿದು ಸೂರ್ಯನ ಬೆಳಕಿನಲ್ಲಿ ವಿರಾಜಿಸುತ್ತಿದ್ದ ಒಂದು ಉದಯವನ್ನು ಕಂಡಾಗ ಅವರ ಎದೆ ಹಿಗ್ಗುತ್ತದೆ. ಪ್ರಕೃತಿಯಲ್ಲಿ ಒಂದು ಕಡೆ ರಾಗಿ ತೆನೆ ಹೊತ್ತು ಮಿಸುಕದೆ ನಿಂತಿದ್ದರೆ, ಮತ್ತೊಂದು ಕಡೆ ಹಸುರೇರಿ ನಿಂತ ಎಳೆ ಜೋಳ ಬೀಸಿ ಬರುವ ಗಾಳಿಯಲ್ಲಿ ಬಾಗಿ ಬಳುಕಿದ್ದೂ ಬಳುಕಿದ್ದೆ! ರಾಗಿಗೆ ಬಿಗುಮಾನವಾದರೆ ಜೋಳಕ್ಕೆ ಅಭಿಮಾನ ಉಕ್ಕೇರುತ್ತದೆ. ಈ ಸೃಷ್ಟಿ ವೈಚಿತ್ರ್ಯವನ್ನು ಕವಿಗಳು ಮನಸೆಳೆಯುವಂತೆ ವರ್ಣಿಸಿರುವರು. ಹಿಂದಿನ ದಿನ ತಿಳಿಯಾದ ಆಕಾಶ ಮತ್ತೆ ಮಾರನೆಯ ದಿನ ಮುಗಿಲಿನಿಂದ ಆವರಿಸಿಕೊಂಡಾಗ ಕವಿಗಳು ಅದಕ್ಕೂ ಒಂದು ಅರ್ಥ ಕಲ್ಪಿಸುವರು. 'ಧಣಿಗೆ ಈ ವರ್ಷ ಕೊಡಲಿದ್ದ ಸಾಲದ ಕಂತಕೊಟ್ಟು ಭಾರವ ಕಳೆದುಕೊಂಡೆನಂತೂ ಇಂತು ಎಂದು ಒಕ್ಕಲು ಹಗುರವಾಗೆ, ಕೊಡತಕ್ಕುದು ಗಡುವಿನಲ್ಲಿ ತೆರೆದುದರ ಬಡ್ಡಿ ಎಂದು ಒಕ್ಕಲು ಹಗುರವಾಗೆ, ಕೊಡತಕ್ಕುದು ಗಡುವಿನಲ್ಲಿ ತೆರೆದುದರ ಬಡ್ಡಿ ಇದು ಮಿಕ್ಕಿದೆ ಎಂದು ಹಣವಂತ ಮತ್ತೊಮ್ಮೆ ಬರುವಂದದಲಿ, ಮರಳಿ ಪಡೆಗೂಡಿರುವ ಮುಗಿಲು ನಿರ್ಬಂಧದಲಿ ನಭವನು ವಿರೋಧಿಸಿದೆ' ಎಂಬುದಾಗಿ ಪ್ರಕೃತಿಯ ವ್ಯಾಪಾರವನ್ನು ಲೌಕಿಕ ವ್ಯವಹಾರದೊಂದಿಗೆ ತಾಳೆ ಹಾಕಿ ನಿರೂಪಿಸಿರುವ ಈ ಸರಣಿ ಹೊಚ್ಚ ಹೊಸತಾದುದು. ಬೇರೊಂದು ದಿನ 'ರವಿಯೊಡನೆ ಹಸೆಯೇರಿ ಸುಖ ಬೆರೆತ ನಾಣಿಂದ ಮಿಗಿಲಾದ ಚೆಲುವಿನಲಿ ಕಂಗೊಳಿಸುತಿರ್ದಳುಷೆ' ಎಂದು ಕವಿಗಳ ಹೃದಯ ಇದ್ದಕ್ಕಿದಂತೆ ಹಿಗ್ಗುವುದು. ನಿಮಿಷ ಮಾತ್ರದಲಿ ರವಿಯೊಬ್ಬನೇ ದುಡಿತಕ್ಕಾಗಿ ತೆರಳಿರುವುದನ್ನು ಕಂಡು 'ಅಂಥ ಚೆಲುವಿನ ನೋಟ ಇಷ್ಟು ಬೇಗನೆ ಮುಗಿದು ಮರೆಯಾಯಿತೆ' ಎಂದು ನೊಂದುಕೊಳ್ಳುವರು. ಹಿಗ್ಗು ಕುಗ್ಗುಗಳ ಈ ಉಬ್ಬರವಿಳಿತಗಳನ್ನು ಕಂಡು ಮನಸ್ಸು ಖಿನ್ನವಾದರೂ ಅದನ್ನು ಬೆಳೆಯಗೊಡದೆ 'ಓಟದಲಿ ಇನಿಸು ನಿಲುವನು ಬೇಡಿ' ಸಮಾಧಾನವನ್ನು ಪಡೆಯುವುದು. ಇದೀಗ ಆಶಾವಾದಿ ಕವಿಯ ಮನೋಧರ್ಮ. 'ತುಂಬು ಬೆಳೆಯಿಂದ ಇಳೆ ಕಂಗೊಳಿಸುತ್ತಿರುವ ಒಂದು ಉದಯಕಾಲವನ್ನು ಕಂಡಾಗ ಕವಿಗೆ 'ವಿಶ್ವ ಜೀವನದ ಉಚ್ಛ್ವಾಸ ತುಂಬತಲಿಹುದು; ಸಂವತ್ಸರದ ಫಲದ ಉತ್ಸವದ ಐತರವ ಎದುರು ನೋಡುತಲಿಹುದು ಎಲ್ಲ ತಾಣದಿ ಪ್ರಕೃತಿ' ಎಂಬ ಭಾವ ಮೂಡಿಬರುತ್ತದೆ. ಇಂಥಹುದೇ ಮತ್ತೊಂದು ಉದಯವನ್ನು ಸಾವನದುರ್ಗದಲಿ ಕಂಡಾಗ ಕವಿಗೆ ಸುತ್ತ ಮುತ್ತಲೂ ಸಂತೃಪ್ತಿ ಆವರಿಸಿರುವುದು ವಿದಿತವಾಗುತ್ತದೆ. 'ಇಂದು ಇಳಿದಿರಬೇಕು ನೋಡೆ ಲೋಕದ ಭಾರ ಇಂದಾದರೂ ಕಾಣಬೇಕು ಮನುಜನ ಬಾಳು ಶಾಂತಿಯನು ಎಂದು ಮನಸ್ಸು ತಣಿಯುವುದಲ್ಲದೆ 'ಹುಡುಕಿದೊಡೆ ದೊರೆಯಬೇಕಿಲ್ಲೆ ಎಲ್ಲಿಯೊ ಸ್ವರ್ಗ' ಎಂದು ಕೃತಾರ್ಥವಾಗುವುದು. ಪ್ರಕೃತಿಯಲ್ಲಿ ತೋರಿಬರುವ ಒಂದೊಂದು ನೋಟವೂ ಕವಿಗೆ ರಸದೌತಣವೇ ಸರಿ. ನೋಡುವ ಕಣ್ಣು, ಕೇಳುವ ಕಿವಿ, ತಣಿಯುವ ತನುಮನಗಳು ಎಚ್ಚರವಾಗಿದ್ದರೆ ಇಂಥ ಚೆಲುವನ್ನು ಸರ್ವದಾ ಸವಿಯಬಹುದು. ಅಷ್ಟೇ ಅಲ್ಲ; ಆ ಬಾಹ್ಯ ಸೌಂದರ್ಯದ ಅಂತರ್ಯದಲ್ಲಿರುವ ದೇವರ ದರ್ಶನವೂ ಆದೀತು.

ಉಚ್ಚ ಅಧಿಕಾರ ಗಳಿಸುವುದು ಹೆಚ್ಚಲ್ಲ; ಅದು ದೊರೆತಾಗ ಎಚ್ಚರ ತಪ್ಪದೆ ಸ್ವಚ್ಛವಾಗಿ ಸೇವೆ ಸಲ್ಲಿಸುವುದು ಮುಖ್ಯವಾದುದು. ಈ ತತ್ವವನ್ನು ಕವಿಗಳು ಬಹಳ ಪರಿಣಾಮಕಾರಿಯಾಗಿ ತಿಳಿಯಹೇಳುವರು. ಹರಿಸೇವೆಗಾಗಿ ಬೀದಿ ಬೀದಿಗಳಲ್ಲಿ ಅಡ್ಡಾಡಿ ದೊರೆತಷ್ಟರಲ್ಲಿಯೇ ತೃಪ್ತಿ ಪಡೆಯುವವನು ಹರಿದಾಸನೆನ್ನಿಸಿದರೆ, ಹೊಟ್ಟೆ ಪಾಡಿಗಾಗಿಯೇ ತಿರುಪೆ ಬೇಡುವವನು ಭಿಕ್ಷುಕನೆನ್ನಿಸುತ್ತಾನೆ. ಒಬ್ಬನದು ದೇವರ ಸೇವೆಯಾದರೆ ಮತ್ತೊಬ್ಬನದು ಕೇವಲ ಹೊಟ್ಟೆಯ ಪಾಡು, ಇದನ್ನೆ ತಮ್ಮ ಅಧಿಕಾರಕ್ಕೂ ಅನ್ವಯಿಸಿ ಹೀಗೆ ವ್ಯಾಖ್ಯಾನ ಮಾಡುವರು.

ಆಡಳಿತದಲಿ ನನಗೆ ಸಂದು ಬಂದಿಹ ಕಾರ್ಯ
ಬರಿಯ ಜೀವಿಕೆಯೆಂದು ನೆನೆಯದಂದಿದಿ ಬುದ್ಧಿ
ಸತತ ಸರಿಯಾಗಿರಲಿ, ಅನುದಿನದ ಕೆಲಸವಿದ
ನಾಗೆಯ್ವ ಸೇವೆಯೊಂದೊಡೆಯನಿಗೆ ಸಲಿಸುವುದು
ಎನಗೆ ಮುಕ್ತಿಯ ದಾರಿ. ಇದ ಮರೆತೆನೇ ಮೊದ್ದು,
ಅಧಿಕಾರ ಹರಕು ಜೋಳಿಗೆಯ ತುಂಬುವ ಚೌರ್ಯ.

ಅಧಿಕಾರದ ಉನ್ನತವಾದಷ್ಟೂ ಹೊಣೆ ಹೆಚ್ಚಾಗುವುದಲ್ಲದೆ, ಉದಾತ್ತ ಆದರ್ಶವೂ ಇರಬೇಕೆಂಬ ತಿಳಿವು ಗ್ರಾಹ್ಯವಾದದ್ದು. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಇನ್ನೂ ಎರಡು ಬಿಡಿಕವಿತೆಗಳಿವೆ. ಪುಜಾರಿಯಾದವನು ದೇವರ ನೈವೇದ್ಯವನ್ನೆಲ್ಲ ತನ್ನ ಜನಗಳಿಗೇ ಹಂಚಿ ಉಳಿದವರನ್ನು ಮರೆತರೆ ಅದು ಹೇಗೆ ಅಪಚಾರವಾದೀತೋ ಹಾಗೆಯೇ ಅಧಿಕಾರಿಯಾದವನು ಸ್ವಜನಾಭಿಮಾನಿಯಾದರೆ ದೇಶದ್ರೋಹವನ್ನು ಮಾಡಿದಂತಾಗುವುದು. ಚಪ್ಪಡಿಯನ್ನು ಹೊದಿಸಿ ನಿರ್ಮಿಸಿರುವ ಮಾರಿಗುಡಿಯ ಮೇಲೆ ನಿಂತಿರುವ ಮೇಕೆ ಬೇವಿನ ಸೊಪ್ಪನ್ನು ಜಗಿಯುತ್ತ ತಾನು ಬಲಿಯಾಗಲಿರುವ ತನ್ನ ಬುಡದಲ್ಲಿರುವ ಮಾರಿಯನ್ನು ಮರೆಯುವುದು ಎಂಥ ಎಗ್ಗತನವೋ ಹಾಗೆಯೇ ಮನುಷ್ಯನಾದವನು ಉನ್ನತ ಪೀಠಗಳನ್ನೇರಿ, ಬುಡದ ದೇವರನ್ನು ಮರೆತರೆ, ಒಂದಲ್ಲ ಒಂದು ದಿನ ಅವನು ಮಣ್ಣುಮುಕ್ಕಬೇಕಾಗುವುದು. ಇಲ್ಲಿನ ತತ್ವ ಪ್ರತಿಪಾದನೆಯಲ್ಲಿ ಕವಿಗಳು ಅನುಸರಿಸಿರುವ ಈ ಲೌಕಿಕ ಸಾದೃಶ್ಯ ಸಂವಿಧಾನ ಮನಮೆಚ್ಚುವಂತಿದೆ.

ನಮ್ಮ ಸಮಾಜವನ್ನು ತಲೆತಗ್ಗಿಸುವಂತೆ ಮಾಡಿರುವ ಹರಿಜನ ಸಮಸ್ಯೆಯನ್ನು ಕಂಡು ಕವಿಗಳು ಕಣ್ಣೀರಿಟ್ಟಿರುವರು. 'ಕುಲದ ಹೆಮ್ಮೆಯ ಕಾಲಕೂಟ ಮತ್ತೂ ಜನಿಸಿ ಹೊಲೆಯರನು ಒಲ್ಲೆನೆನುತಿದೆ.' 'ನಮ್ಮ ಮತ ಸತ್ತ ಮರ, ಬೆಳೆವುದಕೆ ಹೂವುದಕೆ ಇಲ್ಲ ಇದರಲಿ ಪ್ರಾಣ . . . ಜಗವ ಪಾವನ ಮಾಡಬಲ್ಲ ಧರ್ಮದ ಗಂಗೆ ಮನೆಯ ಬಾವಿಗೆ ಕಡಿಮೆಯಾಯ್ತು.' 'ಮತದ ನದಿಯುದಕದಲಿ ಒಂದು ತೊಟ್ಟುಳಿದಿಲ್ಲ. ನಮ್ಮ ಹೃದಯದೊಳಿಂಗಿ' ಎಂಬ ಈ ಒಂದೊಂದು ಪಂಕ್ತಿಯಲ್ಲಿಯೂ ಕವಿಗಳು ಈ ಬಗ್ಗೆ ಎಷ್ಟು ಉಗ್ರವಾಗಿದ್ದಾರೆ ಎಂಬುದು ವೇದ್ಯವಾಗುತ್ತದೆ.

ಜನಸೇವೆ ಹೇಗೆ ಕವಿಯ ಕರ್ತವ್ಯವೋ ಹಾಗೆಯೇ ಮಾತೃಭೂಮಿಯ ಆರಾಧನೆಯೂ ಅವನ ಒಂದು ಧರ್ಮ. ಪ್ರಕೃತದಲ್ಲಿ ಈ ಕವಿಗಳಿಗೆ ಭರತಖಂಡದ ರಿಕ್ತಾವಸ್ಥೆಯನ್ನು ಕಂಡು ಹೃದಯ ಹಿಂಡಿದಂತಾಗುತ್ತದೆ.

'. . . ಎತ್ತ ಹೋಯ್ತು ಕೀರ್ತಿಯ ಜೊನ್ನ?
ಮರಳಿ ಬರುವುದು ಎಂದು ತಾಯೆ ಆ ಶಿತಪಕ್ಷ?

ಅಂದಿನವೊಲೆಂದು ನೀ ಮರಳಿ ನಿನ್ನೀ ಹಸಿದ
ಮಕ್ಕಳನು ಜಸದ ಬೆಳದಿಂಗಳಲಿ ಕುಳ್ಳಿರಿಸಿ
ಆ ಶಾಸ್ತ್ರ ಸಂಗೀತ ಕಾವ್ಯ ಕಲೆಗಳ ರಸದ
ಸವಿತುತ್ತನುಣಿಸುವೆ? ಎಂದು ಹಾಕುವ ರಕ್ಷೆ
ಎಂದೆಂದಿಗೂ ಸುಖಿಸಿ ಎಂದು ನಮ್ಮನು ಹರಸಿ?'

ಎಂಬುದಾಗಿ ಒಂದೇ ಸಮನೆ ಭರತಮಾತೆಯನ್ನು ಮೊರೆಯಿಡುವರು.

ಅನಿರೀಕ್ಷಿತವಾಗಿಯೋ ಅಪ್ರಯಾಸದಿಂದಲೋ ಕವಿತೆ ಹೊರಹೊಮ್ಮುವುದನ್ನು ಕಂಡು ಅದು ಹಕ್ಕಿಯ ಹಾಡಿನಂತೆ ಎತ್ತಲಿಂದಲೋ ಕೇಳಿಬರುವ ಗಾನ ಮಾತ್ರವೆಂದು ಭಾವಿಸುವರು. 'ಹತ್ತು ರೀತಿಯ ಹಕ್ಕಿ ನಿಲುವುದಕೆ ಬೀಡಾಗಿ ನಿಂತ ಮರವನು ನೋಡು. ಅದಕೊಂದು ದನಿಯಿಹುದೆ?' ಎಂದು ಪ್ರಶ್ನಿಸಿ, ಅದೇ ಮೇರೆಗೆ ತಮ್ಮ ಕವಿತೆಯ ಪಕ್ಷಿ 'ಈ ಬಾಳಮರನೆನಿಸಿ, ಭಾವಸಂಕುಲ ಬಂದು, ಇರಂತ ಹಾರುತ ಇಚ್ಛೆಯಂತೆ ಹಾಡುತಲಿಹುದು' ಎಂದು ವಿಸ್ಮಯಪಡುವರು. ಈ ಕನ್ನಡ ಕವಿಗೆ ಹೆಚ್ಚು ಜನರ ಮನ್ನಣೆ ಬೇಕಿಲ್ಲವಂತೆ! ಕನ್ನಡ ಜನ ಮೆಚ್ಚಿದರೆ ಸಾಕಂತೆ! ಮೆಚ್ಚದಿದ್ದರೂ ಸರಿಯೇ 'ಕಿರಿದೀತನನುಭವ ಅರಿವು, ಆದೊಡೆಯ ನಾಡು ನುಡಿಗಳ ಸೇವೆಯಲಿ ಅದನು ವಂಚಿಸದೆ ನುಡಿದನು. ತಾ ಬೆಳೆದು ಬೆಳೆವುದನು ನಡೆಸಿದನು ಎಂದು ನುಡಿಯಿರಿ; ನಿಮ್ಮ ಕನಿಕರವು ನನ್ನಾಸೆಯಾಳವನು ತುಂಬುವುದು; ನಂಬಿರಿ' ಎಂದು ಬಿನ್ನೈಸಿಕೊಳ್ಳುವರು. ಹಾಡುವುದು ತಮ್ಮ ಕರ್ತವ್ಯವೆಂದು ಬರೆಯುವರೇ ವಿನಾ ಅದನ್ನು ಮುಕ್ತಕಂಠದಿಂದ ಎಲ್ಲರೂ ಹೊಗಳಬೇಕೆಂಬ ನಿರೀಕ್ಷೆ ಕವಿಗಳಿಗೆ ಇಲ್ಲದಿರುವುದು ಅವರ ತೃಪ್ತ ಮನಸ್ಸನ್ನು ಪರಿಚಯಮಾಡಿ ಕೊಡುತ್ತದೆ.

ತಂದೆಯ ಆಶೀರ್ವಾದದಿಂದ ಬೆಳೆಸಿಕೊಂಡ ಕವಿಗಳಿಗೆ ಆ ಹಿರಿಯರು ತಮ್ಮ ಕಡೆಗಾಲದಲ್ಲಿ 'ಅಖಿಲಾಂಡ ಕೋಟಿ ಬ್ರಹ್ಮಾಂಡವನು ಪೊರೆವವನು ಶ್ರೀನಿವಾಸನು, ನಿನ್ನ ಮಕ್ಕಳನು ನಿನ್ನನು ಪೊರೆಯದಿರುವನೆ ಸುಮ್ಮನಿರು' ಎಂದು ತಮ್ಮ ತಾಯಿಗೆ ಹೇಳಿದ ಮಾತು ಹೇಗೆ ಫಲಿಸುತ್ತಿರುವುದೆನ್ನುವುದನ್ನು ಕಂಡು ದೇವರಲ್ಲಿ ಶರಣಾಗತರಾಗುವರು. ಗಜೇಂದ್ರನನ್ನು ರಕ್ಷಿಸಿದ ಆ ಭಗವಂತನನ್ನು ಮರೆಹೊಕ್ಕು 'ವಾಸನಾ ಪ್ರಾರಬ್ಧವನ್ನು ಹರಿಸಿ ನಿನ್ನ ಸೇವೆಗೆ ನನ್ನನುಳಿಸಿಕೊಂಡು ಹರಿ ದೊರೆ' ಎಂದು ಬೇಡಿಕೊಳ್ಳುವರು. ಕಂಬವನ್ನು ಸೀಳಿಕೊಂಡು ನರಸಿಂಹಾವತಾರವೆತ್ತಿ ಬಂದ ಆ ಸ್ವಾಮಿಯನ್ನು 'ಸಿಡಿಲಿನಂದದ ಬಡಿದು ಎದೆಯುಕ್ಕ ಕಂಬವನು ಬಡೆದು ನೀ ಬಾರದಿರೆ ಭಕ್ತಿ ಉಳಿಯುವುದೆಂತು? ಬದುಕನನುದ್ಧ್ರುಮೆಗೊಳಿಪ ಭೀಷಣಾಕೃತಿಯಾಂತು ಐಸಿರಿಯ ಕರುಳ ಬಗೆಯದೆ ಬಿಡಲು ನಂಬುವನೆ ಮಾನವನು ನಿನ್ನ?' ಎಂದು ಇಂದಿನ ಪರಿಸ್ಥಿತಿಗೆ ಅನುಗುಣವಾಗಿ ಮತ್ತೊಮ್ಮೆ ಮೈದೋರಬೇಕೆಂದು ವಿನಂತಿಮಾಡಿಕೊಳ್ಳುವರು. ಕವಿಗಳ ಆಸ್ತಿಕ ಮನೋಧರ್ಮವನ್ನು ನಿಚ್ಚಳವಾಗಿ ಕಾಣಬೇಕಾದರೆ ಅವರು ರಚಿಸಿರುವ 'ಶರಣಾಗತಿ' ಎಂಬ ಈ ಸಂಕಲನದ ಕಟ್ಟಕಡೆಯ ಅಷ್ಟಷಟ್ಪದಿಯನ್ನು ಓದಬೇಕು.

'ಕ್ಷಣವಾದರೂ ನಿನ್ನ ಮರೆಯದಂದದಿ ನನ್ನ
ಹೃದಯದುಯ್ಯಲೆಯೊಳಾಡು : ಎಲ್ಲ ಹೊತ್ತಿನಲಿ
ಸ್ಥಳದಲಿ ಅವಸ್ಥೆಯಲಿ, ಎನಗೆ ನೀನೇ ದಿಕ್ಕು
ಎಂಬರ್ಥ ಎಲ್ಲ ಎಣಿಕೆಗಳ ಹಾಸೂ ಹೊಕ್ಕು

ಆಗಿರಲಿ; ನಾ ನಿನ್ನ ಮಗುವೆಂಬ ಗೊತ್ತಿನಲಿ
ಎನಗೆ ಶಾಂತಿಯ ನೀಡು ಹೇ ಕೃಪಾ ಸಂಪನ್ನ.'

ಈ ಪ್ರಾರ್ಥನೆಯಲ್ಲಿ ಮಿಡಿಯುತ್ತಿರುವ ಕವಿಗಳ ಪಾರಮಾರ್ಥಿಕ ದೃಷ್ಟಿ ನಮ್ಮ ಆರ್ಷೇಯ ಸಂಸ್ಕೃತಿಗೆ ಸಹಜವಾದದ್ದು. ಪುರಾತನ ಮತ್ತು ನೂತನಗಳ ಸಮನ್ವಯದಿಂದ ಸಾಹಿತ್ಯ ಹೇಗೆ ಹೊನ್ನಾಗಬಲ್ಲುವೆಂಬುದನ್ನು ಶ್ರೀನಿವಾಸರ ಈ ಒಂದೊಂದೂ ರಚನೆಯಲ್ಲಿಯೂ ನಾವು ಕಾಣಬಹುದು.

'ಕಟ್ಟಿ ಯಮೇನೊ ಮಾಲೆಗಾರನ ಪೊಸ ಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೆ?' ಎಂದು ಅಂದು ಜನ್ನನು ನಿಟ್ಟುಸಿರೆಳೆದಂತೆ ಆಗದೆ, ಕನ್ನಡ ಜನರ ಏಳಿಗೆಗಾಗಿ, ಕನ್ನಡ ನುಡಿಯ ಮುನ್ನಡೆಗಾಗಿ ಬಳೆಗಾರನಂತೆ ಮಂಗಳ ದ್ರವ್ಯವನ್ನು ತಂದಿತ್ತಿರುವ ಶ್ರೀನಿವಾಸರ ಈ 'ಮಲಾರ'ವನ್ನು ನಾವು ಮನವೊಪ್ಪಿ ಓದಿದ್ದೇ ಆದರೆ ಶ್ರೀನಿವಾಸರ ಕಾವ್ಯ ಮನೋಧರ್ಮದ ವಿಶಿಷ್ಟ ಗುಣವೂ ನಮಗೆ ಅರಿವಾಗುವುದು. ತಮ್ಮ ಅಪಾರವಾದ ತಿಳಿವನ್ನು, ಗಾಢವಾದ ಅನುಭವವನ್ನು, ಶುಚಿ-ರುಚಿಗಳುಳ್ಳ ಭಾವನೆಗಳನ್ನು ಅತ್ಯಂತ ಸರಳವಾದ ನುಡಿಗಳಲ್ಲಿ ಹಿತಮಿತವಾಗಿ ಶ್ರೀನಿವಾಸರಂತೆ ಹೇಳುವ ಕವಿಗಳು ನಮ್ಮಲ್ಲಿ ವಿರಳ. ಇಲ್ಲಿನ ಅಷ್ಟಷಟ್ಪದಿಗಳೋ ಸ್ವಭಾವತಃ ಒಂದು ಪರಿಮಿತಿಯುಳ್ಳ ರಚನೆಗಳು, ಆದರೂ ಹದಿನಾಲ್ಕು ಪಂಕ್ತಿಗಳಲ್ಲಿಯೇ ಲೇಖಕರು ತಮ್ಮ ಸುಕುಮಾರ ಶೈಲಿಯ ಸಿದ್ಧಿಯನ್ನು ಸಾಧಿಸಿದ್ದಾರೆ. ಅಂತ್ಯ ಪ್ರಾಸಗಳನ್ನು ಹೊಂದಿಸುವುದರಲ್ಲಿ ಒಮ್ಮೊಮ್ಮೆ ಲಕ್ಷಣ ಮೀರಿದ ಚಿಹ್ನೆಗಳು ತೋರಿ ಬಂದರೂ ವಸ್ತುವಿನ ಆಯ್ಕೆಯಲ್ಲಿ, ವಿಷಯ ಪ್ರತಿಪಾದನೆಯಲ್ಲ, ನಿರ್ದಿಷ್ಟ ಗುರಿಯನ್ನು ಮುಟ್ಟುವುದರಲ್ಲಿ ಕವಿಗಳು ಅಸದೃಶವಾದ ಯಶಸ್ಸನ್ನು ಗಳಿಸಿದ್ದಾರೆ. ಕನ್ನಡದ ಪ್ರಾರಂಭದ ಅಷ್ಟಷಟ್ಪದಿಕಾರರಲ್ಲಿ ತಮ್ಮದೇ ಆದ ಈ ಸರಳತೆ ಸಹಜತೆಗಳಿಂದ ಶ್ರೀನಿವಾಸರು ನಡೆಸಿರುವ ಈ ಪ್ರಯೋಗಗಳು ಆಧುನಿಕ ಕನ್ನಡ ಕಾವ್ಯಕ್ಕೆ ಅಮೂಲ್ಯವಾದ ಕೊಡುಗೆಯಾಗಿವೆ. ಶ್ರೀ ಜಿ.ಪಿ. ರಾಜರತ್ನಂ ಅವರು ತಮ್ಮ ಅಷ್ಟ ಷಷ್ಪದಿಯೊಂದರಲ್ಲಿ ಹೇಳಿರುವಂತೆ* ''ನಿಮ್ಮ ಹೃದಯ ಮಂದಿರಕೀ 'ಮಲಾರ' ಮುಕ್ತಾದ್ವಾರ'' ಎಂಬ ಮಾತು ಅಕ್ಷರಶಃ ಸತ್ಯ.

* 'ಮಾಸ್ತಿಯವರಿಗೆ ಕಾಣಿಕೆ' - 'ಜೀವನ'ದ ವಿಶೇಷಾಂಕ (ಮಾರ್ಚ ೧೯೪೦)

'ಗೌಡರ ಮಲ್ಲಿ'

ಪ್ರೊ।। ಎಚ್. ಎಂ. ಶಂಕರನಾರಾಯಣರಾವ್

ಕನ್ನಡ ಸಾಹಿತ್ಯಕ್ಕೆ ಸಾವಿರದ ಐನೂರು ವರ್ಷಗಳ ಪರಂಪರೆಯಿದ್ದು, ಅದು ಸತ್ವ ಪೂರ್ಣವಾಗಿ ವೈವಿಧ್ಯಮಯವಾಗಿ ಬೆಳೆದು ಬಂದಿದ್ದರೂ, ಕಳೆದ ಶತಮಾನದ ಕೊನೆಯಲ್ಲಿ, ಈ ಶತಮಾನದ ಆದಿಭಾಗದಲ್ಲಿ ಅದರ ಪ್ರಗತಿ ಕುಂಠಿತವಾಗಿತ್ತು. ಇದಕ್ಕೆ ಕಾರಣ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ನಮ್ಮ ಬದುಕಿನ ಎಲ್ಲ ಕ್ಷೇತ್ರಗಳ ಮೇಲೆ ಬಿದ್ದಂತೆ ಸಾಹಿತ್ಯದ ಮೇಲೂ ಬಿದ್ದಿತ್ತು. ಇಂಗ್ಲಿಷ್ ಭಾಷಾ ಸಾಹಿತ್ಯದಲ್ಲಿ ಕೃತವಿದ್ಯರಾದವರಿಗೆ, ಆ ಸಾಹಿತ್ಯದ ವಿಸ್ತಾರ ವೈವಿಧ್ಯಗಳನ್ನು ಕಂಡವರಿಗೆ ಕನ್ನಡದಲ್ಲೇನಿದೆ ಎಂಬ ಭಾವನೆ ಮೂಡಿತ್ತು. ಸಂಸ್ಕೃತವೇ ಇವರ ಪಾಲಿಗೆ 'ಮೃತಭಾಷೆ' ಎನಿಸಿದ ಮೇಲೆ ಕನ್ನಡದ ವಿಷಯದಲ್ಲಿ ಹೇಳತಕ್ಕದ್ದೇನಿದೆ? ಇಂಗ್ಲಿಷ್ ಆಳರಸರ ಭಾಷೆ, ಆದುರಿಂದಲೇ ಭುಕ್ತಿ ಮುಕ್ತಿ ಎಂಬ ಭಾವನೆ ವಿದ್ವಾಂಸರಲ್ಲಿ ಜನ ಸಾಮಾನ್ಯರಲ್ಲಿ ಬೇರೂರಿತ್ತು. ಹೀಗಿರುವಲ್ಲಿ ಕನ್ನಡ ಕೇಳುವವರಿಲ್ಲದೆ, ಹತ್ತರೊಡನೆ ಹನ್ನೊಂದನೆಯದಾಗಿ ಮೂಲೆ ಗುಂಪಾಗಿತ್ತು. ಮೇಲಾಗಿ ಕನ್ನಡಿಗರ ದುರ್ದೈವವೋ ಎನ್ನುವಂತೆ ಕನ್ನಡವನ್ನು ಮಾತನಾಡುವ ಜನ ಇಪ್ಪತ್ತೊಂದು ಸರ್ಕಾರಗಳಲ್ಲಿ ಹರಿಹಂಚಾಗಿ ಹೋಗಿದ್ದರು.

ಆದರೆ ಪರಿಸ್ಥಿತಿ ಬಹಳ ಕಾಲ ಹೀಗೆಯೇ ಉಳಿಯಲ್ಲಿಲ್ಲ. ಮೈಸೂರಿನಲ್ಲಿ ಶ್ರೀಮನ್ಮಹಾರಾಜ ಚಾಮರಾಜ ಒಡೆಯರು ಕನ್ನಡ ಸಾಹಿತ್ಯಕ್ಕೂ ಅದರಲ್ಲಿಯೂ ನಾಟಕ ಸಾಹಿತ್ಯದ ಬೆಳವಣಿಗೆಗೂ ಕೊಟ್ಟ ಪ್ರೋತ್ಸಾಹ ಈಗ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಪರರ ಮಕ್ಕಳ ಚೆಲುವನ್ನು ನೋಡಿ ಸಂತೋಷಪಟ್ಟು, ಎಷ್ಟೇ ಹೊಟ್ಟೆ ಉರಿದುಕೊಂಡರೂ, ನಮ್ಮ ಮಗು ಎಷ್ಟೇ ಕುರೂಪವಾಗಿದ್ದರೂ ಅದನ್ನು ಸಿಂಗರಿಸಿ ಮೆರೆಸಬೇಕೆಂಬ ಆಸೆ ಮನುಷ್ಯ ಸಹಜವಾದುದಲ್ಲವೇ? ಇದೇ ರೀತಿಯಲ್ಲಿ ಇಂಗ್ಲಿಷ್ ಭಾಷಾ ಸಾಹಿತ್ಯದಲ್ಲಿ ಪಾರಂಗತರಾದವರು, ಆ ಸಾಹಿತ್ಯದ ಸೌಂದರ್ಯಕ್ಕೆ ಮರುಳಾದರೂ, ಇಂಗ್ಲಿಷಿನಲ್ಲಿ ಬರೆದರೆ, ಕೃತಿರಚನೆ ಮಾಡಿದರೆ ಅದರಿಂದ ಕೀರ್ತಿಯುಂಟಾಗುವುದಿಲ್ಲವೆಂದೂ ಕನ್ನಡದಲ್ಲಿ ಬರೆದದ್ದೇ ಶಾಶ್ವತವೆಂದೂ ಮನಗಂಡು ಹೊಸ ಸಾಹಿತ್ಯ ನಿರ್ಮಾಣಕ್ಕೆ ಕೈಯಿಟ್ಟರು. ವಿದ್ಯಾವಂತರ ಈ ಕಾರ್ಯ ಮೊದಲು ನಮ್ಮ ಪೂರ್ವ ಕವಿಗಳ ಕೃತಿಗಳನ್ನು ಸಂಗ್ರಹಿಸಿ ಪ್ರಕಟಿಸುವುದರಲ್ಲಿ, ಆ ಬಳಿಕ ಇಂಗ್ಲಿಷ್, ತನ್ಮೂಲಕ ಪಾಶ್ಚಾತ್ಯ ಭಾಷೆಗಳ ಸಾಹಿತ್ಯಪ್ರಕಾರಗಳನ್ನು ತಂದುಕೊಂಡು ಕನ್ನಡದಲ್ಲಿ ಸಾಹಿತ್ಯ ಸೃಷ್ಟಿ ಮಾಡುವುದರಲ್ಲಿ, ಅಲ್ಲಿನ ಕೃತಿಗಳನ್ನು ಅನುವಾದ ಮಾಡುವುದರಲ್ಲಿ ಪ್ರಾರಂಭವಾಯಿತು. ಕ್ರಮೇಣ ಇಂಗ್ಲಿಷ್ ಸಾಹಿತ್ಯದಿಂದ ಸ್ಫೂರ್ತಿ ಪಡೆದವರು, ಅಲ್ಲಿನ ಸಾರಸತ್ವವನ್ನು ಹೀರಿಕೊಂಡು ಕನ್ನಡದಲ್ಲಿ ಸ್ವತಂತ್ರವಾಗಿ ಕೃತಿರಚನೆ ಮಾಡತೊಡಗಿದರು. ಈ ಪೀಳಿಗೆಯಲ್ಲಿ ದೇಶಭಾಷಾಭಿಮಾನಗಳಿಂದ ಪ್ರೇರಿತರಾಗಿ, ವಿಪುಲವಾಗಿ ಸ್ವತಂತ್ರವಾದ ಕೃತಿರಚನೆಮಾಡಿ,

ಉಪನ್ಯಾಸಗಳಿಂದ ನಮ್ಮ ಜನರಲ್ಲಿ ಸಂಸ್ಕೃತಿಯನ್ನು ಹರಡಿ ಸದಭಿರುಚಿಯನ್ನುಂಟುಮಾಡಿ, ಕಿರಿಯ ಲೇಖಕರಿಗೆ ಪ್ರೋತ್ಸಾಹ ಕೊಟ್ಟು ಕನ್ನಡ ಸಾಹಿತ್ಯವನ್ನು ಬೆಳೆಸಿದ ಹಿರಿಯರಲ್ಲಿ ಶ್ರೀಮಾನ್ ಮಾಸ್ತಿ ವೆಂಕಟೇಶ ಐಯ್ಯಂಗಾರರಿಗೆ ಅಗ್ರಮರ್ಯಾದೆ ಸಲ್ಲುತ್ತದೆ.

ಶ್ರೀ ಮಾಸ್ತಿಯವರ ಪರಿಚಯ ನನಗೆ ಉಂಟಾದದ್ದು ನಲವತ್ತೊಂದು ವರ್ಷಗಳ ಹಿಂದೆ-ಅವರ 'ವಿಮರ್ಶೆ'ಯ ಮೊದಲನೆಯ ಭಾಗದ ಮೂಲಕ. ಶ್ರೀ ವಿ. ಸೀತಾರಾಮಯ್ಯನವರು ನಮಗೆ ಅದನ್ನು ಪಾಠ ಹೇಳಿದರು. ಹದಿನೇಳು ವರ್ಷದ ಅಷ್ಟೇನೂ ಪ್ರಬುದ್ಧನಲ್ಲದ ನನಗೆ, ಅದರಲ್ಲಿ ಪ್ರತಿಪಾದಿತವಾದ ವಿಷಯ ಎಷ್ಟರಮಟ್ಟಿಗೆ ಹಿಡಿಸಿತೋ ಈಗ ನೆನಪಿಲ್ಲ. ಆದರೆ ಆ ಗ್ರಂಥದ ಕೊನೆಯ ಪ್ರಬಂಧದ ವಾಚನದಿಂದ, ಆಸೆ ಮನದಲ್ಲಿ ಅಂಕುರಿಸಿತು. ಮಾರನೆಯ ವರ್ಷ ನಾನು ಇಂಟರ್‌ಮೀಡಿಯೆಟ್ ಪರೀಕ್ಷೆಗಾಗಿ ಓದಿದ ಇದೇ ಲೇಖಕರ 'ಸುಬ್ಬಣ್ಣ' ಎಂಬ ನೀಳ್ಗತೆ ನನ್ನ ಮನಸ್ಸನ್ನು ಸಂಪೂರ್ಣವಾಗಿ ಆವರಿಸಿತು. ಇದಕ್ಕೆ ವಿ.ಸೀ. ಅವರ ಬೋಧನೆ ಕಾರಣವೆಂದು ಹೇಳಬಹುದಾದರೂ ಕೃತಿಯಲ್ಲಿ ಮುಖ್ಯವಾಗಿ ಅಂತಸ್ಸತ್ವವಿರಲೇಬೇಕಷ್ಟೆ. ಅದರ ವಿವರಣೆ ಇಲ್ಲಿ ಅಪ್ರಕೃತ. ವರ್ಷದ ಕೊನೆಯಲ್ಲಿ (೧೯೩೨, ಫೆಬ್ರುವರಿ) ನ್ಯಾಷನಲ್ ಹೈಸ್ಕೂಲಿಗೆ ಮಾಸ್ತಿಯವರು ಬಂದಾಗಲೇ ನಾನು ಅವರನ್ನು ಮೊದಲು ಬಾರಿಗೆ ಕಂಡಿದ್ದು. ಸರ್ಕಾರದ ಉನ್ನತಾಧಿಕಾರದಲ್ಲಿದ್ದ ಅವರನ್ನು ಕಂಡರೆ ನಮಗೆ ಹೆದರಿಕೆ. ಕಥೆಯಲ್ಲಿ 'ನೋಟಿ'ನ ಮಾತು ಬರುತ್ತದೆ. ನಮ್ಮಲ್ಲಿಗೆ ಬಂದ ಅವರನ್ನು ಭಯದಿಂದಲೇ ನೋಟು ಆ ಕಾಲದಲ್ಲಿ ಇತ್ತೇ ಎಂದು ಪ್ರಶ್ನೆಮಾಡಿದೆ. ಆಗ ಅವರು ಏನು ಉತ್ತರ ಕೊಟ್ಟರೋ ನೆನಪಿಲ್ಲ. ಮತ್ತೆ ಅಳುಕಿನಿಂದ 'ಈ ಪ್ರಶ್ನೆ ಕೇಳಿದ್ದು ಅವಿವೇಕವಾಯಿತೇ' ಎಂದು ಕೇಳಿದೆ. ಇಲ್ಲ ಎಂದು ಹೇಳಿ ಸಣ್ಣವನಾದ ನನ್ನನ್ನು ಅವರು ಸಂತೈಸಿದರು. ಅಲ್ಲಿಂದೀಚೆಗೆ ಅವರ ಎಷ್ಟೋ ಉಪನ್ಯಾಸಗಳನ್ನು ಕೇಳಿ, ಮಾತನಾಡಿದ್ದೇನೆ. ಉಪಾಧ್ಯಾಯನಾಗಿ ಅವರ ಎಷ್ಟೋ ಗ್ರಂಥಗಳನ್ನು ಪಾಠ ಹೇಳಿ ಅನಿರ್ವಚನೀಯವಾದ ಆನಂದವನ್ನೂ ಸುಖವನ್ನೂ ಅನುಭವಿಸಿದ್ದೇನೆ. ತರಗತಿಗಳಲ್ಲಿ ನಾನು ಓದಿದ ಅವರ ಕಥೆಗಳನ್ನು ಕೇಳಿ, ತಮಗೆ ಸ್ಫೂರ್ತಿಬಂದಿತೆಂದು ಒಬ್ಬ ಕಥೆಗಾರರು ತಿಳಿಸಿ ನನಗೆ ಸಂತೋಷವನ್ನು ತಂದಿದ್ದಾರೆ. ಕನ್ನಡದಲ್ಲಿ ಒಂದೆರೆಡು ಒಳ್ಳೆಯ ಪುಸ್ತಕಗಳನ್ನು ಪ್ರಕಟಿಸಿರುವೆನೆಂದು ಮಾಸ್ತಿಯವರಿಗೆ ನನ್ನಲ್ಲಿ ಪ್ರೀತಿ. ಇದು ಕೇವಲ ವೈಯಕ್ತಿಕವಾದ ವಿಷಯವಾದರೂ ನಡೆದದ್ದು ಹೀಗೆ. ೧೯೫೫ರ ಫೆಬ್ರವರಿಯಲ್ಲಿ ನನ್ನ ಮಡದಿ ತೀರಿಕೊಂಡಿದ್ದಳು. ಇದಾದ ಒಂದೆರಡು ತಿಂಗಳ ಮೇಲೆ ಮೈಸೂರಿಗೆ ಬಂದಿದ್ದ ಮಾಸ್ತಿಯವರು ಒಂದು ದಿನ ಸಂಜೆ ನೂರಡಿ ರಸ್ತೆಯಲ್ಲಿರುವ ಕೃಷ್ಣ ಕಂಪನಿಯಲ್ಲಿ ಕುಳಿತಿದ್ದರು. ನಾನು ಆಗ ಅಲ್ಲಿ ಇದ್ದೆ. ಆ ಮಾತು ಈ ಮಾತು ಬಂದು ನಾನು ಹೆಂಡತಿಗೆ ಹೆದರುತ್ತೇನೆ ಎಂದೆ. 'ನಿಮ್ಮ ಮನೆಗೆ ಬಂದು ನಾನು ಈ ವಿಷಯವನ್ನು ದೃಢಮಾಡಿಕೊಳ್ಳಬೇಕಲ್ಲ' ಎಂದರು ಮಾಸ್ತಿಯವರು. ಈ ಮಾತಿಗೆ ಅಂಗಡಿಯ ಯಜಮಾನರಾದ ಶ್ರೀ ಸುಬ್ರಮಣ್ಯಂ ಅವರು 'ಈತ ಹೆಂಡತಿಯನ್ನು ಕಳೆದುಕೊಂಡು ನಾಲ್ಕು ತಿಂಗಳಾಯಿತು' ಎನ್ನಲು, ಅಯ್ಯೋ; ಎಂದು ತಕ್ಷಣವೇ ಕುಳಿತಲ್ಲಿಂದ ಎದ್ದ ಮಾಸ್ತಿಯವರು ನನ್ನನ್ನು ತಬ್ಬಿ ಹಿಡಿದು 'ನನ್ನಪ್ಪ, ಈ ದಿನ ಎಂಥ ಸುದ್ದಿ ಕೇಳಿದೆ. ಆದದ್ದಾಯಿತು, ದೈವಯತ್ನ. ನೀನು ಇನ್ನೊಂದು ಮದುವೆ ಮಾಡಿಕೊ' ಎಂದು ನನ್ನನ್ನು ಬಹುವಾಗಿ ಸಮಾಧಾನ ಮಾಡಿದರು. ಅಂದು ಅವರು ಆಡಿದ ಮಾತು ನನಗೆ ಸಂಜೀವನದಂತಿತ್ತು. ಬಹು ಬೆಲೆಯುಳ್ಳ ಆಸ್ತಿಯಂತೆ ಅವರ ಮಾತನ್ನು ಇಂದಿಗೂ ಕಾಪಾಡಿಕೊಂಡಿದ್ದೇನೆ. ನನ್ನಂಥ

ಎಷ್ಟು ಜನರಿಗೆ ಶ್ರೀ ಮಾಸ್ತಿಯವರು ಆದರ ಅಕ್ಕರ ಕನಿಕರಗಳನ್ನು ತೋರಿ ದಾರಿದೀಪವಾಗಿದ್ದಾರೋ? ಅದನ್ನು ಲೆಕ್ಕಮಾಡಬಲ್ಲವರಾರು? ಶ್ರೀ ಮಾಸ್ತಿಯವರು ವೈಯಕ್ತಿಕವಾಗಿ ನೂರು ಜನರ ಮೇಲೆ ಪ್ರಭಾವ ಬೀರಿದ್ದರೆ, ಸಾಹಿತ್ಯರಚನೆಯಿಂದ ಕನ್ನಡ ನಾಡಿನ ಸಾವಿರಾರು ಜನರ ಮೇಲೆ ಅವ್ಯಕ್ತವಾಗಿ ಅವರು ಪ್ರಭಾವ ಬೀರಿದ್ದಾರೆ. ಈ ನೆಲ ನನಗೆ ಜನ್ಮಕೊಟ್ಟು ಕಾಪಾಡಿತು, ಈ ಜನ ನನ್ನನ್ನು ಪ್ರೀತಿಯಿಂದ ಮರ್ಯಾದೆಯಿಂದ ಕಂಡರು, ಇವರ ಉದ್ಧಾರಕ್ಕಾಗಿ ನನ್ನ ಸತ್ವವೆಲ್ಲ ಮುಡಿಪು ಎಂಬ ಧ್ಯೇಯದಿಂದ ವರಕವಿಗಳಾದ ಇವರು ಕನ್ನಡದಲ್ಲಿ ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಸೃಷ್ಟಿಸಿದ್ದಾರೆ. ಸಣ್ಣ ಕಥೆಗಳ ಸೃಷ್ಟಿಗಂತೂ ಇವರು ಪಿತಾಮಹರಷ್ಟೆ. ವಸ್ತು ವೈವಿಧ್ಯ, ಪಾತ್ರರಚನೆಯ ದೃಷ್ಟಿಯಿಂದ ಇವರ ಕೃತಿಗಳು ಅನುಪಮವಾದವು. ಎಲ್ಲಕ್ಕಿಂತಲೂ ಮಿಗಿಲಾಗಿ ವಸ್ತು ಮತ್ತು ಪಾತ್ರಗಳನ್ನು ನೋಡುವ ಇವರ ದೃಷ್ಟಿಯಂತೂ ಅಪೂರ್ವವಾಗಿದ್ದು, ಇಂಥ ಬರವಣಿಗೆ ಕನ್ನಡದಲ್ಲಿ ಇನ್ನೊಂದಿಲ್ಲ ಎನಿಸುತ್ತದೆ.

*

ಶ್ರೀನಿವಾಸರ ಪದ್ಯ ಕೃತಿಗಳಲ್ಲಿ ಒಂದಾದ 'ಗೌಡರ ಮಲ್ಲಿ' ಬಹಳ ಕಾಲದಿಂದಲೂ ನನ್ನ ಮನಸ್ಸನ್ನು ಸೆರೆ ಹಿಡಿದಿದೆ. ಅದರ ವಿಷಯವಾಗಿ ನಾಲ್ಕು ಮಾತುಗಳನ್ನು ಹೇಳಲು ಯತ್ನಿಸಿದ್ದೇನೆ. 'ಗೌಡರ ಮಲ್ಲಿ' ಎಂಬ ನೀಳ್ಗವನ ರಾಜರಾಣಿಯರನ್ನು ಕುರಿತಾಗಲೀ ಅದ್ಭುತ ಘಟನೆಯನ್ನಾಗಿ ಕುರಿತು ವಿವೇಚನೆ ಮಾಡುವುದಿಲ್ಲ. ಗೌಡನೊಬ್ಬನು ತನ್ನ ಹೆಂಡತಿ ತೀರಿಕೊಳ್ಳಲು, ಚೆಲುವೆಯಾದ ಆದರೆ ಬಸವಿಯಾದ ಮಲ್ಲಿಯೊಡನೆ ಕೂಡಿ, ಸಂಸಾರಮಾಡಿ ಬದುಕನ್ನು ಮುಗಿಸಿದ್ದೇ ಕವನದ ವಸ್ತು. ಕಥೆಯ ಕೇಂದ್ರ ಪಾತ್ರ ಸಾಮಾನ್ಯಳೂ ಬಸವಿಯೂ ಆದ ಮಲ್ಲಿ. ಗೌಡನ ಹೆಸರನ್ನೂ ಕೂಡ ಕವಿಗಳು ತಿಳಿಸುವುದಿಲ್ಲ. ಗೌಡನನ್ನು ಕೂಡಿಸಲು ಯತ್ನಿಸದ ಪಿಲ್ಲಿ, ಸಂದರ್ಭಕ್ಕೆ ಉಚಿತವಾದ ಮಾತನ್ನು ಆಡಿ, ಮಲ್ಲಿಯ ಮನವೊಲಿಸಿ ಹೀಗೆ ಬಂದು ಹಾಗೆ ಹೋಗುತ್ತಾಳೆ. ಕವಿಗಳ ಕನಿಕರ ಸಹಾನುಭೂತಿ ಎಲ್ಲ ಮಲ್ಲಿಯ ಕಡೆಗೇ, ಮುಗ್ಧೆಯಾದ ಮಲ್ಲಿ ಕವನದ ಕೊನೆಯಲ್ಲಿ ಪರಿಪಕ್ವಜೀವವಾದದ್ದು, ವಸಂತಸೇನೆ ವಧುವಾದದ್ದನ್ನು ಸ್ವಲ್ಪ ಮಟ್ಟಿಗೆ ನೆನಪಿಗೆ ತರುತ್ತದೆ.

ಶರತ್ಕಾಲ, ಕಾರ್ತಿಕಮಾಸದ ವರ್ಣನೆಯಿಂದ ಕವನ ಮೊದಲಾಗುತ್ತದೆ. ಮಳೆನಿಂತಿದೆ. ಪೈರು ಹುಲುಸಾಗಿ ಬೆಳೆದು ಕೊಯ್ಲಿಗೆ ಬಂದಿದೆ. ಊರುಗೌಡ ಬೆಳೆಯನ್ನು ನೋಡಲು ಬಂದಿದ್ದನು. ಈಗ ಅವನ ಮನಸ್ಸಿಗೆ ದುಗುಡ. ಮೂರು ವರ್ಷಗಳ ಕಾಲ ಭೂಮಿಯಲ್ಲಿ ಸಮನಾಗಿ ಬೆಳೆ ಬಂದಿರಲಿಲ್ಲ. ಈಗ ಅದು ಬಂದಿರುವ ವೇಳೆಗೆ ಜೊತೆಗೆ ನಲಿಯುತ್ತಿದ್ದ ಜೀವ ಇಲ್ಲವಾಗಿದೆ. ಸತ್ತ ಹೆಂಡತಿಯನ್ನು ನೆನೆದು ಗೌಡನ ಮನಸ್ಸು ಮೃದುವಾಯಿತು; ಕಣ್ಣು ತೇವಗೊಂಡಿತು. ದೇವರು ತನ್ನ ವಿಷಯದಲ್ಲಿ ಹೀಗೇಕೆ ನಿಷ್ಕರುಣೆಯಾದ ಎಂದು ಗೌಡ ದೂರದ ಬಾನನ್ನು ನೋಡಿದರೆ, ಅವನ ಕಣ್ಣಿಗೆ ಬಿದ್ದ ದೃಶ್ಯವೇನು? 'ಹೊಲವ ಕಾಯುವ ಮಲ್ಲಿ; ತನ್ನೂರ ತಳವಾರ ಎರಚುಕ್ಕೆ ವೆಂಕಟನ ಮಗಳೆ?' ಅಲ್ಲ, ತಂಗಿ.

ಹದಿನೆಂಟರ ಹರೆಯದ ಮಲ್ಲಿಯ ರೂಪ ಗೌಡನ ಎದೆಯಲಿ ನಾಟಿತು. ಹೆಂಡತಿ ಸತ್ತ ಹದಿನೈದು ದಿನಗಳಲ್ಲಿ ಮನೆಯವರೆಲ್ಲ ಸೇರಿ ಬೇರೊಬ್ಬಳ ಕೈ ಹಿಡಿ ಎಂದು ಗೌಡನಿಗೆ

ಬೋಧಿಸಿದ್ದರು. ಗೌಡ ಲೋಕವನ್ನು ಕಂಡಿದ್ದವನು. ಲೋಕದ ಮಾತು ಹಾಗಿರಲಿ, ಕೈ ಹಿಡಿದು ಒಗ್ಗಿದ್ದ ಹೆಣ್ಣು ತೀರಿದ ಕೂಡಲೆ, ಅವಳ ಸ್ಥಳದಲ್ಲಿ ಮತ್ತೊಂದು ಹೆಣ್ಣನ್ನು ತರಲು ಮನಸ್ಸು ಒಪ್ಪುವುದೇ? ಅಲ್ಲದೆ ಸಮಷ್ಟಿ ಕುಟುಂಬದಲ್ಲಿ ತಾಯಿ, ಅಕ್ಕ ತಂಗಿಯರು ಅತ್ತಿಗೆ ನಾದಿನಿಯರು ಎಲ್ಲರೂ ಉಂಟು. ಅದೊಂದು ಹಾವಿನ ಹುತ್ತ. 'ತನ್ನ ಸುಖಕೆಂದು ಒಂದೂ ಅರಿಯದೆಳೆಹೆಣ್ಣು ಇಲಿಯ ಕರೆತಹುದೆ ಹಾವಿನ ಹುತ್ತಿಗೆ?' ಆದರೆ ಗೌಡನಿಗೆ ನಡುಹರೆಯ; ಹೆಣ್ಣಿನ ವಿಷಯದಲ್ಲಿ ಆಶೆಯಂಟು. ಅದರಲ್ಲಿಯೂ 'ಬೇಡಗಿನಲಿ ನಿಂತ ಎಳೆ ಹೆಣ್ಣ ಕಣ್ಣು' ಇವನನ್ನು ಆಕರ್ಷಿಸದೆ ಇರುವುದುಂಟೇ? ಹೆಂಡತಿ ಸತ್ತಾಗ ಗೌಡನಿಗೆ ವೈರಾಗ್ಯ ಬಂದಿತ್ತು, ನಿಜ. ಈ ವೈರಾಗ್ಯ ಹೀಗೆ ನಡೆದರೆ ಪ್ರಪಂಚ ಮುಂದುವರಿಯುವುದು ಹೇಗೆ?

ಗೌಡ ಊರಿಗೆ ಹಿರಿಯ. ಅಲ್ಲದೆ ಮಲ್ಲಿಯನ್ನು ಬೇರೆ ನೋಡುತ್ತಿದ್ದಾನೆ. ಹಾಗೆ ಅವಳನ್ನು ನೋಡುವಲ್ಲಿ ಅವನ ಭಾವವೇ ಬೇರೆಯಾಗಿತ್ತೆಂಬುದನ್ನು ಅವಳೇನು ಬಲ್ಲಳು? ಅವನನ್ನು ಮಾತನಾಡಿಸದಿದ್ದರೆ ಅವಿನಯವಾದೀತೆಂದು ಬಗೆದು ಮಲ್ಲಿ ದೂರದಲ್ಲಿ ನಿಂತು 'ಮೂರು ದಿನ ನಿಮಗೆ ಮೈಯ್ಯಲಿ ಚೆನ್ನಿರಲಿಲ್ಲವೆಂದು ಅಣ್ಣ ಹೇಳಿದ. ಈಗ ವಾಸಿಯೇ ಗೌಡರೇ?' ಎಂದು ಸಹಜವಾಗಿ ನುಡಿಸಿದಳು. ಜ್ವರ ಬಂದು ಮಲಗಿದ್ದ ಗೌಡನ ರೋಗವನ್ನು ಜನರು, ಹೆಂಡಿರಿಲ್ಲದ ವ್ಯಥೆ ಎಂದು ತರ್ಕಿಸಿದ್ದರು. ಈಗ ಆ ಮಾತು ಸತ್ಯವೆನಿಸಿತು. ಮಲ್ಲಿ ಬೇಡರ ಹೆಣ್ಣು. ಗೌಡ ಜಾತಿಯನ್ನು ಮರೆತು, ಹೆಣ್ಣು ಸತ್ಯವೆಂದು ಭಾವಿಸಿದ. ಲೋಕದ ರೀತಿಯೇ ಹೀಗೆ. ಗೌಡನ 'ಎದೆಯ ಸಾರಿತು ಹೆಣ್ಣ ನಗೆಯ ಸಂಚು.' ಮಲ್ಲಿ ಗೌಡನನ್ನು ಸಂಪೂರ್ಣವಾಗಿ ಆಕರ್ಷಿಸಿ, ತನಗೆ ಅರಿಯದಂತೆಯೇ ಅವನನ್ನು ತನ್ನ ವಶಕ್ಕೆ ತೆಗೆದುಕೊಂಡಳೆಂದ ಮೇಲೆ ಹೇಳತಕ್ಕದ್ದೇನಿದೆ?

ಮಲ್ಲಿ ನಿಂತಾ ರೀತಿ, ನಗುತ ನುಡಿದಾ ರೀತಿ,
ನಮ್ಮ ಗೌಡನ ಎದೆಯ ಹೊಕ್ಕು ಅಲ್ಲಿ
ಪಡೆಗಟ್ಟಿ ನಿಂತ ದುಮ್ಮಾನವನು ಚೆದರಿಸಿತು,
ಮೊಳೆಯಲಾಟದ ಆಸೆ ಮನಸಿನಲ್ಲಿ

ಮಲ್ಲಿಯ ಮಾತಿಗೆ ಗೌಡ ಉತ್ತರ ಹೇಳಿದನು–

ದುಗುಡವೇನೂ ಇಲ್ಲ ಈ ಹೊತ್ತು; ಅಂದರೆ
ಚೆನ್ನಾಗಿ ಗುಣವಾಗುವುದಕೆ ಮದ್ದು
ಏನೇನೂ ಹೇಳುತ್ತಿದ್ದಾರೆ; ಆ ಔಸದ
ಯಾರು ತರಬೇಕು? ಎಲ್ಲಿಂದ ಕದ್ದು?

ಇಷ್ಟೇ ಅಲ್ಲದೆ 'ಮುಡಿ ಹಾವ ಹೆಡೆ, ಅರ್ಧ ಹೆರೆ, ತಾರೆ ಸಂಪಿಗೆ ಕಳಿತತೊಂಡೆ, ಹೀಗೆ ಏನೇನೋ ವಿಷಯಗಳನ್ನು ಮಲ್ಲಿಗೆ ಅರ್ಥವಾಗುವ ರೀತಿಯಲ್ಲಿ ಹೇಳಿದನು. ಮಲ್ಲಿಗೆ ಇದ್ದ ಯೋಚನೆ ಒಂದೇ. ಊರ ಗೌಡ, ಹಿರಿಯ ಆರೋಗ್ಯವಂತನಾಗಿರಬೇಕೆಂಬುದು. ಅದು ಯಾವ ರೀತಿಯ ಸೋಜಿಗದ ಬೇರೆ ಆಗಿರಲಿ, ಅಣ್ಣನಿಗೆ ಹೇಳಿ ತರಿಸಿಕೊಡುತ್ತೇನೆಂದು ಮಲ್ಲಿ ತವಕಿಸಿದಳು. ಗೌಡನಿಗೆ ಗೊತ್ತು ಅದು ಎಲ್ಲೆಡೆಯಲ್ಲಿ ಸಿಕ್ಕತಕ್ಕ ಮದ್ದು ಅಲ್ಲ ಎಂದು.

ಮದ್ದೇನೊ ಸೋಜಿಗ; ಅಂದರೆಲ್ಲೆಡೆಯ ಇದೆ.
ಅಂದರೂ ಮುಪ್ಪಾಗ ಮೂರು ವೀಸ

ಮುಟ್ಟಬಾರದ ಹಾವು ಹೆರೆತೆರೆಯಾಗಿಹುದು
ದುಡುಕಿ ಹಿಡಿಯುವೆನೆನಲು ಬಹಳ ಮೋಸ.

ಗೌಡನನ್ನು ಬದುಕಿಸಬೇಕೆಂದು ಆಸೆಪಟ್ಟ ಮಲ್ಲಿ 'ಆ ಮದ್ದು ಎಲ್ಲ ಕಡೆಯೂ ಇದೆಯೆ? ಇಲ್ಲಿ ಇದ್ದರೆ ತೋರಿಸಿ. ಅದನ್ನು ನಾನು ತಂದು ನಿಮ್ಮ ತುಟಿಗೆ ಇಷ್ವೇನು' ಎಂದಳು. ಇಷ್ಟರ ವೇಳೆಗೆ ಗೌಡ ಮಲ್ಲಿಗೆ ಸಂಪೂರ್ಣವಾಗಿ ಮನಸೋತುಬಿಟ್ಟ. ಇದಕ್ಕೆ ತಕ್ಕಂತೆ ಪ್ರಕೃತಿಯೂ ಸಂಚು ಹೂಡಿತು. ಶರತ್ಕಾಲದ ಸುಂದರ ಸಂಜೆ ಮರದ ಮೇಲೆ ಎಲ್ಲಿಂದಲೋ ಹಾರಿ ಬಂದ ಹಕ್ಕಿಯ ಜೊತೆ, ಕೊಂಬೆಯ ಮೇಲೆ ಕುಳಿತು ಒಂದನ್ನೊಂದು ಸುಖಪಡಿಸುತ್ತಿವೆ. ಸಂಜೆ ಸೂರ್ಯ ಮುಳುಗಿ, ತಿಂಗಳ ಬೆಳಕು ಆಕಾಶವನ್ನು ತುಂಬಿ, ಲೋಕಕ್ಕೆ ಹೊಸ ಜೀವ ಚೆಲುವನ್ನು ತಂದಿದೆ. ಈ ದೃಶ್ಯವನ್ನು ನೋಡಿ, ಮಲ್ಲಿಯೊಡನೆ ಮಾತನಾಡಿದ ಮೇಲೆ ಗೌಡನ ಮನಸ್ಸಿನ ದುಗುಡ ಕಳೆಯಿತು, ಮನಸ್ಸು ತಣಿಯಿತು. ಅವಳ ನಗುಮುದ್ರೆ ಗೌಡನ ಮನಸ್ಸಿನ ಆಳದಲ್ಲಿ ಇಳಿಯಿತು. ಮಲ್ಲಿಗೆ ಏನು ಹೇಳಬೇಕೆನ್ನುವಷ್ಟರಲ್ಲಿ ಗೌಡನ ಕಣ್ಣಿಗೆ ಪಿಲ್ಲಿ ಬಿದ್ದಳು. ಅವಳ ಕಣ್ಣಿಗೆ ಬೀಳುವುದು ಗೌಡನಿಗೆ ಅಷ್ಟು ಹಿತವಲ್ಲದ ಕೆಲಸ. 'ಕಂಡುದಕೆ ಕಾಣದುದ ಬೆರಸಿ ಅದ ಕಹಿ ಮಾಡಿ, ಬಳ್ಳದೆ ಕೊಳಗೆದೆ' ಅಳೆಯುವವಳು ಇವಳು. ಆದ್ದರಿಂದ ಗೌಡನು 'ನಾಳೆಯೋ ನಾಡಿದ್ದೊ ಹೊಲಕೆ ಆಳನು ಬಿಡಲಿ ಅಣ್ಣನಿಗೆ ಹೇಳಕ್ಕ' ಎಂದು ಮಲ್ಲಿಗೆ ಹೇಳಿ, ತನ್ನ ಮರ್ಯಾದೆಯನ್ನು ಉಳಿಸಿಕೊಂಡು ಮನೆಗೆ ಹೋದನು.

ಗೌಡನ ಮನಸ್ಸು ಯಾವ ಸ್ಥಿತಿಯಲ್ಲಿತ್ತು ಎಂದು ಮೇಲೆ ಹೇಳಿತಷ್ಟೆ. ಮಲ್ಲಿ ಮಾತ್ರ ಮುಗ್ಧೆಯಾಗಿ ನಿಂತು, ಯಾವ ಕಾಮ ವಿಕಾರಕ್ಕೂ ಒಳಗಾಗದೆ, ಗೌಡನು ಕೋಪದಿಂದ ನಡೆದುದಾಗಿ ಭಾವಿಸಿದಳು. ಭಯ ಆ ಕ್ಷಣದಲ್ಲಿ ಅವಳ ಮನಸ್ಸಿನಲ್ಲಿ ಗುಡಿಕಟ್ಟಿತು. ಈ ಸಂದರ್ಭದಲ್ಲಿಯೇ ಗೌಡ ಮಲ್ಲಿಯರ ಒಲವಿನ ಅಭಿಮಾನದೇವತೆಯಾಗಿ ಪಿಲ್ಲಿ ಅಲ್ಲಿಗೆ ಬಂದಳು. ಕಾವಲಿಲ್ಲದ ಹೊಲದಲ್ಲಿ ಅವರೆ ತಟ್ಟೆಯ ಕದಿಯುವುದು ಅವಳ ಕೆಲಸ. ಈಗ ಈ ಸಂದರ್ಭವನ್ನು ಅವಳು ತನ್ನ ಕೆಲಸಕ್ಕಾಗಿ ಉಪಯೋಗಿಸಿಕೊಂಡಳು. ಗೌಡನ ಹೆಂಡತಿ ತೀರಿಕೊಂಡದ್ದು, ಮಲ್ಲಿ ಬಸವಿಯಾಗಿ ನರಸನೆಂಬ ಹೈದನನ್ನು ನಿರಾಕರಿಸಿದ್ದು ಅವಳಿಗೆ ಗೊತ್ತಿದ್ದ ವಿಷಯವೇ. ಹಾಗೆ ನೋಡಿದರೆ ಮಲ್ಲಿ ಇಂಥವನನ್ನೇ ಕೈಹಿಡಿಯಬೇಕೆಂದು ಅವಳ ಇಷ್ಟವಲ್ಲ. ಗೌಡ ಆಸೆಯಿಂದ ಮಲ್ಲಿಯನ್ನು ನೋಡಿ, ಮಾತನಾಡಿಸಿದ್ದನ್ನು ಆಕೆ ಸ್ವಪ್ರಯೋಜನಕ್ಕೆ ಉಪಯೋಗಿಸಿಕೊಂಡಳು.

'ಏನೆ ಮಲ್ಲೀ? ಒಳ್ಳೆಜಾಣೆ; ಗೌಡರ ಹಿಡಿದೆ;
ಆರು ತಿಂಗಳ ಹಿಂದೆ ನಮ್ಮ ಹೈದ
ಬಾಯೆನಲು ಒಲ್ಲೆನೆಂದೆ, ಪಾಪ, ಪ್ರಾಯದವ,
ಅಂತೆ ಉಗುಳನು ನುಂಗಿ ಸುಮ್ಮನಾದ.
ಬಸವಿಯಾದರೆ ಏನು? ಚೆಲುವಿ, ನೀ ಬಲು ಚೆದುರಿ;
ಬಡಪಾಪಿ ಹುಡುಗನಿಗೆ ಸೆರಗ ಹೊದಿಸಿ
ಒಡವೆ ವಸ್ತುವನೇನ ಪಡೆಯುವುದು? ದೊರೆಗೊಲಿಯೆ
ಬೆಳಗುವನು ಬರಿಕೈಯ ಕಡಗ ತೊಡಿಸಿ.
ಗೌಡನಿಗೆ ನಕ್ಕರೆ ತುಪ್ಪದನ್ನದ ಊಟ
ಪಟ್ಟೆಯಂಚಿನ ಸೇಲೆ ಕೈಯಲ್ಲಿದೆ.

ಪಿಲ್ಲಿ ಆಡಿದ ಮಾತು ಮಲ್ಲಿಗೆ ಅರ್ಥವಾಗಲಿಲ್ಲ. ಬಸವಿ, ಬೇಡಳಾದ ತಾನೆಲ್ಲಿ, ಊರ ಗೌಡನಾದ ಅವನೆಲ್ಲಿ? ಇದು ಕನಸಲ್ಲವೇ ಎಂದು ಅವಳ ಮನಸ್ಸು ಹೇಳಿತು. ಮಾರನೆಯ ಕ್ಷಣ ಅವನನ್ನು ಏಕೆ ಒಲಿಸಬಾರದು ಎಂದಿತು ಇನ್ನೊಂದು ಮನಸ್ಸು, ಮಲ್ಲಿ ಈಗ ಮಾತನ್ನು ತಿರುಗಿಸಿ, ಗೌಡನ ಆರೋಗ್ಯವನ್ನು ತಾನು ವಿಚಾರಿಸಿದ್ದನ್ನೂ, ಅವನು ಹೇಳಿದ ಔಷಧದ ವಿಷಯವನ್ನೂ ಪಿಲ್ಲಿಗೆ ತಿಳಿಸಿದಳು. ಔಷಧದ ವಿಷಯ ಪಿಲ್ಲಿಗೆ ಹೊಸದೇನಲ್ಲ, ಅವಳಿಗೆ ಬೇಕಾದ್ದು ಅದೇ. ಈ ಔಷಧಿಯ ನೆಪಮಾಡಿಕೊಂಡು ಪಿಲ್ಲಿ, ಮಲ್ಲಿಗೆ 'ಇಂದು ಸರಿರಾತ್ರಿ ಗೌಡನ ಕಾಲ ಹಿಡಿ ಒಮ್ಮೆ, ಗೌಡ ಆ ಕ್ಷಣದಿಂದ ಮಲ್ಲಿಯಾಳು' ಎಂದು ಉಪದೇಶ ಮಾಡಿದಳು. ಜೊತೆಗೆ ತನ್ನದೊಂದು ಸ್ವಂತ ಮಾತನ್ನು ಸೇರಿಸಲು ಮರೆಯಲಿಲ್ಲ. 'ಗೌಡನರಸಿತಿಯಾಗಿ ನನ್ನ ಮರೆಯದಿರು' ಎಂಬುದೇ ಆ ಮಾತು. ಪಿಲ್ಲಿಯ ಮಾತನ್ನು ಕೇಳಿ ಮಲ್ಲಿಗೆ ಬೆರಗು. ಗೌಡ ತನ್ನೊಡನೆ ಸರಸವಾಡಿದನೆಂಬ ಹೆಮ್ಮೆ. ಆ ಕ್ಷಣ ಮಲ್ಲಿಯ ಮನಸ್ಸು ಸುಖವನ್ನು ಅನುಭವಿಸಿತು. ಪಿಲ್ಲಿಯ ಉಪದೇಶ ಅವಳ ಮನಸ್ಸಿನಲ್ಲಿ ಗಾಢವಾಗಿ ನಾಟಿತು. ಅಂದಿನ ಸರಿರಾತ್ರಿ ಮಲ್ಲಿ ಗೌಡನನ್ನು ಕೂಡಿ, ಮಾರನೆಯ ದಿನ ಗೌಡ ತನ್ನ ಗಂಡು ಎಂದು ಊರಿಗೆ ಪ್ರಕಟಮಾಡಿದಳು.

ಮಲ್ಲಿಯ ಬದುಕಿನಲ್ಲಿ ಇಲ್ಲಿಗೆ ಒಂದು ಘಟ್ಟ ಮುಗಿಯಿತು. ಇದು ಒಂದು ರೀತಿಯ ಉತ್ಸಾಹ. ಯೌವನದ ಪ್ರಾದುರ್ಭಾವದಲ್ಲಿ ಎಲ್ಲ ಜೀವಿಗಳಿಗೂ ಸಹಜವಾದದ್ದೇ. ತಂದೆತಾಯಿಗಳಿಲ್ಲದ - ಇದ್ದರು ಎಂದು ಕಾವ್ಯದಲ್ಲಿ ಎಲ್ಲಿಯೂ ಹೇಳಿಲ್ಲ - ಅಣ್ಣನನ್ನೇ ನಂಬಿದ್ದ ಮಲ್ಲಿ ಈಗ ಹಾವಿನ ಹುತ್ತ ಸೇರಲು ಹೊರಟಿದ್ದಾಳೆ. ಗೌಡನಿಗೆ ಹೆಣ್ಣಿನ ಸಹವಾಸ ಹೊಸದೇನಲ್ಲ. ಮೇಲಾಗಿ ಅವನು ಗಂಡಸು. ಅವನನ್ನು ಕೇಳುವವರಾರು? ಮಲ್ಲಿ ಈಗ ತಾನೆ ಸಂಸಾರಕ್ಕೆ ಪ್ರವೇಶಿಸುತ್ತಿದ್ದಾಳೆ. ಅಲ್ಲಿ ತೃಪ್ತಿ ಪಡಿಸಬೇಕಾದ ಕೂಡಿಕೊಂಡ ಗಂಡಲ್ಲದೆ ಅತ್ತೆ, ಅತ್ತಿಗೆ, ನಾದಿನಿ, ಭಾವ ಮೈದುನ ಎಲ್ಲ ಇದ್ದಾರೆ. ಅಲ್ಲದೆ ಅವಳನ್ನು ತೂಗಿನೋಡಲು ಊರಿಗೆ ಊರೇ ಕಾದು ನಿಂತಿದೆ. ಗೌಡಮಲ್ಲಿಯರು ಐವತ್ತು ವರ್ಷಗಳ ಕಾಲ ಗಂಡಹೆಂಡತಿಯರಂತೆಯೇ ಬಾಳಿದರು ಎಂದು ಕಾವ್ಯ ಹೇಳುತ್ತದೆ. ಈ ಐವತ್ತು ವರ್ಷಗಳಲ್ಲಿ ಮಲ್ಲಿಯ ಬಾಳು ಹೇಗೆ ಹಸನಾಯಿತು, ಭವ್ಯತೆಗೆ ಏರಿತು ಎಂಬುದೇ ಇನ್ನುಳಿದ ಈ ಕಾವ್ಯದ ವಿಷಯ.

ಸಂಸಾರ ಮುಸುಕಿನ ಗುದ್ದು. ಹೊರಗಿನಿಂದ ಬಂದ ಹೆಣ್ಣು ಆಡಬಾರದ, ಅನುಭವಿಸಲಾರದ ಎಷ್ಟೋ ವಿಷಯಗಳು ಇರುತ್ತವೆ. ಹೆಣ್ಣಿನ ಸಹನೆಯಿಂದ, ತಾಳ್ಮೆಯಿಂದ, ಮುಖ್ಯವಾಗಿ ತ್ಯಾಗದಿಂದ ಸಂಸಾರ ಅಮೃತವಾಗುತ್ತದೆ. ಇಲ್ಲದಿದ್ದರೆ ವಿಷ. ಮಲ್ಲಿ ಈ ಕಹಿ ಪ್ರಸಂಗಗಳನ್ನು ಎದುರಿಸಿದಳು; ಮೆಟ್ಟಿನಿಂತಳು. ಮಗ ಮಲ್ಲಿಯನ್ನು ಕೂಡಿದ್ದು ಅವನ ತಾಯಿಗೆ ತುಂಬ ಅಸಮಾಧಾನ. ಈ ಮೊದಲು ಮದುವೆ ಮಾಡಿಕೋ ಎಂಬ ತಮ್ಮ ಮಾತನ್ನು ಮೀರಿ, ಈಗ ಕಡಿಮೆ ಜಾತಿಯ ಹೆಣ್ಣನ್ನು ಮದುವೆಯಾದದ್ದು ಈ ಅಸಮಾಧಾನಕ್ಕೆ ಕಾರಣ. ಅದು ಮಲ್ಲಿಯ ಮೇಲೆ ತಿರುಗಬಹುದಷ್ಟೆ. ಆದರೆ ಮಗ ಒಂಟಿಯಾಗಿ ನಿಲ್ಲಲಿಲ್ಲವಲ್ಲ ಎಂದು ತಾಯಿಗೆ ತುಸು ಸಮಾಧಾನ. ಮಲ್ಲಿ ಕೂಡಿ ಬಂದವಳು; ಮನೆಯನ್ನು ಆಳಲು ಬಂದವಳು ಎಂಬ ಭಯ ಅತ್ತಿಗೆ ನಾದಿನಿಯರಿಗೆ ಇಲ್ಲ. ಮೇಲಾಗಿ ಇವರಿಗೆ ಜೀತದಾಳೊಬ್ಬಳು ಸಿಕ್ಕರೆ ಏಕೆ ಬೇಡವೆನುತ್ತಾರೆ? ಅವರ ಪಾಲಿಗೆ ಮಲ್ಲಿ 'ಹಾವು ಹುಳು ಅಲ್ಲ; ಬರಿ ಮಿಡಿತೆ ಒಂದು.' ಈ ಕಷ್ಟಸನ್ನಿವೇಶಕ್ಕೆ ಬಗ್ಗಿ, ಮಲ್ಲಿ ಎಲ್ಲರನ್ನೂ

ತನ್ನ ಕಡೆಗೆ ಒಲಿಸಿಕೊಂಡಿದ್ದು ಅವಳ ಹೆಚ್ಚುಗಾರಿಕೆ.

ಗೌಡನನ್ನು ಕೂಡಿದ ಮೊದಲ ದಿನಗಳಲ್ಲಿ ಮಲ್ಲಿಗಿದ್ದ ಒಂದೇ ಒಂದು ಯೋಚನೆ 'ಶಿವನೆದುರಿನಲ್ಲಿ ಕುಳಿತ ನಂದಿಯಂತೆ' ತನ್ನ ಗಂಡನನ್ನು ನೋಡಿ ತಣಿಯುವುದು; ಅವನನ್ನು ತಣಿಸುವುದು. ಇದು ದೈವ ಸೃಷ್ಟಿ, ಸಹಜವಾದದ್ದು. ಮೊದಲು ಕಾಮ; ಸ್ವಾರ್ಥ ಪರವಾದದ್ದು. ಆ ಮೇಲೆ ಪ್ರೇಮ; ತ್ಯಾಗದ್ದು, ಪರಾರ್ಥದ್ದು. ಗೌಡ ಮಲ್ಲಿಯರು ಈ ಸೂತ್ರಕ್ಕೆ ಹೊರತಾಗಿ ನಿಲ್ಲಲಿಲ್ಲ. ಕೂಡಿಕೆಯ ಮೊದಲ ದಿನಗಳಲ್ಲಿ 'ಮೆಯ್ಯ ಸವಿಯುತ ಅವರು ಇರುವುದನೆ ಮರೆತರು, ಭೂಮಿಯೇ ಸ್ವರ್ಗಕ್ಕೆ ದತ್ತು ಹೋಗಿ.' ಇವು ಅವರ ಇರುವುದನೆ ಮರೆತರು, ಭೂಮಿಯೇ ಸ್ವರ್ಗಕ್ಕೆ ದತ್ತು ಹೋಗಿ.' ಇವು ಅವರ ಕನಸಿನ ದಿನಗಳು. ಗೌಡನಿಗೆ ಮಕ್ಕಳಿರಲಿಲ್ಲವೆಂದು ತೋರುತ್ತದೆ. ಮಲ್ಲಿಯಿಂದ ತಮ್ಮ ಪ್ರೇಮದ ಫಲವಾಗಿ ಗೌಡ ಎರಡು ಮಕ್ಕಳನ್ನೇನೋ ಪಡೆದ. ಹುಟ್ಟಿದ ತರುಣದಲ್ಲಿ ಗಂಡು ತೀರಿಕೊಂಡಿತು. ಆರು ವರ್ಷಗಳ ಕಾಲ ಸುಂದರವಾಗಿ ಬೆಳೆದ ಹೆಣ್ಣು ಒಂದು ದಿನ ಹಸು ತಿವಿದು, ಅಸು ನೀಗಿತು. ಎಲ್ಲ ದುಃಖಕ್ಕಿಂತ ಪುತ್ರಶೋಕ ತೀವ್ರವೆಂದು ಬಲ್ಲವರ ಹೇಳಿಕೆ. ಇದರಿಂದ ಹೆತ್ತ ಹೊಟ್ಟೆ ಉರಿಯಿತು; ಮಲ್ಲಿಗೇನೋ ದುಃಖವಾಯಿತು; ಅತ್ತಳು, ಕಣ್ಣೊರಸಿಕೊಂಡು ತನ್ನನ್ನೇ ತಾನು ಸಂತೈಸಿಕೊಂಡಳು. ಮಾತ್ರವಲ್ಲ, ತನ್ನ ದುಃಖವನ್ನು ಒತ್ತಿ ಹಿಡಿದು ನುಂಗಿಕೊಂಡು ಮಿಕ್ಕವರನ್ನು ಸಮಾಧಾನ ಮಾಡಿದಳು.

ಐವತ್ತು ವರ್ಷಗಳ ಕಾಲ ಗೌಡಮಲ್ಲಿಯರು ಕೂಡಿ ಬಾಳಿದರಂತೆ! ಇದು ಅಲ್ಪಕಾಲವೇನಲ್ಲ, ಸುದೀರ್ಘವಾದ ಕಾಲ. ಈ ಅವಧಿಯಲ್ಲಿ ಮಲ್ಲಿ ಗೌಡನಿಗೆ ಮಾತ್ರವಲ್ಲ, ಅತ್ತೆ ಅತ್ತಿಗೆ ನಾದಿನಿಯರಿಗೆ ಹೆಚ್ಚೇನು ಊರಿಗೇ ಮೆಚ್ಚಾದಳಂತೆ. ಇದಕ್ಕೆ ಮುಖ್ಯಕಾರಣ ತನ್ನನ್ನು ಹಿಂದು ಮಾಡಿಕೊಂಡು ಮನೆಯ ಹಿತವನ್ನೇ ಮುಂದಿಟ್ಟುಕೊಂಡು ಅವಳು ಮಾಡಿದ ತ್ಯಾಗ. ಮನೆಯ ಕೆಲಸವನ್ನು ಜೀತದಂತೆ ಮಾಡುತ್ತಿದ್ದಳು ಮಲ್ಲಿ. ಗೌಡನ ಊಟದಲ್ಲಿ ಪಾಲು ಬೇಡಿ, ಅದನ್ನು ಅವನು ಊಟ ಮಾಡಿದ ಮೇಲೆ ಸ್ವೀಕರಿಸುವಳು. ಅತ್ತೆಗೆ ಕಾಲಕಾಲಕ್ಕೆ ಎಲೆ ಅಡಿಕೆ ಕುಟ್ಟಿಕೊಡುವುದು, ಮೈ ಒತ್ತುವದು, ಅತ್ತಿಗೆ ನಾದಿನಿಯರಿಗೆ ಬಟ್ಟೆ ಒಗೆದುಕೊಡುವುದು, ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಡುವುದು. ಕೆಲಸಕ್ಕೇನು, ಒಂದೇ ಎರಡೇ - ಇವು ಗೊಣಗದೆ ಮಲ್ಲಿ ಮಾಡುತ್ತಿದ್ದ ಕೆಲಸಗಳು. ಅಷ್ಟೇ ಅಲ್ಲ, ಬತ್ತ ಕುಟ್ಟಿದರೆ, ರಾಗಿ ಬೀಸಿದರೆ, ಅತ್ತೆಯನ್ನು ಕೇಳಿ ಬಂದು ಹಿಡಿ ತನಗೆಂದಿಟ್ಟುಕೊಂಡು ಗುಡಿಗೊ ಭಿಕ್ಷಕ್ಕೊ ಕೊಡುತ್ತಿದ್ದಳಂತೆ. ಹೀಗಾಗಿ 'ದಿನದಿನಕೆ ಹಸನಾಯಿತವಳ ಬಾಳಿ' ಮಲ್ಲಿಯ ದಿನದಿನದ ಈ ಬೆಳವಣಿಗೆಯನ್ನು ಕಂಡು ಗೌಡನಿಗೆ ಆಶ್ಚರ್ಯ. ಏನೂ ಅರಿಯದ ಮಲ್ಲಿ ಹೇಗೆ ಬಂದಳು, ಹೇಗೆ ಪರಿವರ್ತನೆಗೊಂಡಳು!

ಕೆರೆ ದೇವಾಲಯಗಳನ್ನು ಕಟ್ಟಿಸುವುದು ಪುಣ್ಯದ ಕೆಲಸವೆಂದು ನಮ್ಮವರು ಭಾವಿಸಿದ್ದರು. ತಮ್ಮ ಜೀವಿತದ ಸಂಪಾದನೆಯೆಲ್ಲವನ್ನೂ ಈ ಧರ್ಮಕಾರ್ಯಕ್ಕಾಗಿ ವಿನಿಯೋಗಿಸಿ ತಮ್ಮ ಬದುಕು ಸಾರ್ಥಕವಾಯಿತೆಂದು ಅವರು ಭಾವಿಸುತ್ತಿದ್ದರು. ಸಾವಿರಾರು ವರ್ಷಗಳಿಂದ ನಮ್ಮ ದೇಶದಲ್ಲಿ ಬೆಳೆದುಬಂದಿರುವ ಭಾವನೆ ಇದು, ಗೌಡಮಲ್ಲಿಯರು ಈ ಭಾವನೆಯನ್ನು ಆಚರಣೆಯಲ್ಲಿ ತಂದರು. ಮಗಳು ತೀರಿದ ಸಮಯದಲ್ಲಿ ಊರಿಗೆ ಬಂದ ಬೋಯಿಗಳ ಗುಂಪೊಂದು, ಸ್ವಲ್ಪ ಧರ್ಮಕ್ಕೆ ಸ್ವಲ್ಪ ಧಾನ್ಯಕ್ಕೆ ಒಪ್ಪಿ ಊರ ಏರಿಯ ದಂಡೆಗೆ ಒಂದು ಕೊಳವನ್ನು ನಿರ್ಮಿಸಿದರು. ಊರಿಗೆ ಗೌಡ ಮಲ್ಲಿಯರ ಕೊಡುಗೆ ಇದು. ಶುಭ ಮುಹೂರ್ತದಲ್ಲಿ ಜಲದೇವಿ ಪೂಜೆ ನಡೆದಾಗ,

ಕೊಳವನ್ನು ಗೌಡರ ಬಾವಿ ಎಂದು ಕರೆಯುವಂತೆ ಮಲ್ಲಿ ಸೂಚಿಸಿದಳು. ಈ ಸೂಚನೆಗೆ ಗೌಡ ಆಗದೆಂದ. ಮಲ್ಲಿ 'ತೊತ್ತಾಗಿ ದುಡಿದ ರಾಗಿಗೆ ತೆಗೆದ ಬಾವಿ ಇದು;' ಇದಕ್ಕೆ ಅವಳ ಹೆಸರೇ ಇರಬೇಕೆಂದು ಗೌಡನ ವಾದ. ಕೊನೆಗೆ ಜೋಯಿಸರು 'ಬಾವಿಗೌಡರದು, ಗೌಡರು ಮಲ್ಲಿಯವರಾಗಿ; ಕೊಳವ ಮಲ್ಲಿಯರದು ಎನ್ನುವ.' ಎಂದು ನ್ಯಾಯ ಮಾಡಿದರು. ಕೊಳದ ಸಮೀಪದ ನೆಲವನ್ನು ಕೊಂಡು ಗೌಡ ತೋಪು ನೆಡೆಸಿದ. ಅಷ್ಟೇ ಅಲ್ಲ ಹತ್ತು ವರ್ಷಗಳ ಕಾಲ ಅದನ್ನು ಬೆಳೆಯಿಸಿ, ಅಲ್ಲಿಗೆ ಊರದೇವರನ್ನು ಬಿಜಮಾಡಿಸಿ, ವರ್ಷವರ್ಷವೂ ವನಭೋಜನವನ್ನು ನಡೆಸಿದನು. ತೋಪಿಗೆ ಮಲ್ಲಿಯ ತೋಪು ಎಂದು ಗೌಡ ಕರೆಯಬಯಸಿದಾಗ ಮಲ್ಲಿ ಹೇಳಿದ್ದೇನು?

. . . ಗೌಡನನು ಬಿಟ್ಟು ಬರಿ ಮಲ್ಲಿ
ಯಾವ ಕೆಲಸಕೆ ಬಹುದು? ಎಸೆಯಿರತ್ತ.
ಗೌಡರ ತೊಟ್ಟರೆ ಜೋಡು; ಕಳೆಯೆ ಬರಿ ಚಕ್ಕಳ;
ಬಹಳ ಮಾಡಲು ಸಲ್ಲ ಬರಿಯ ತೊತ್ತ.
'ತೋಪ ಗೌಡರ ಮಲ್ಲಿಯದು ಎನಲಿ,' ಎಂದಳು

ಆ ಹೆಸರೇ ತೋಪಿಗೆ ನಿಂತಿತು. ಒಲಿದ ಇವರು ಬಹಳ ವರ್ಷ ಇಲ್ಲಿ ಸರಸ ಸಲ್ಲಾಪ ನಡೆಸಿದರು. ಈ ತೋಪಿನಲ್ಲಿ ಮಲ್ಲಿ ಗೌಡನ ಹೆಸರಿನಲ್ಲಿ ಒಂದು ಮಂಟಪವನ್ನು ಎತ್ತಿಸಿದಳು. ಹೆಚ್ಚೇನು? ಮದುವೆಯಾದ ಹೆಣ್ಣು ಕೊಡಬಹುದಾದ ಎಲ್ಲ ಸುಖವನ್ನು ಮದುವೆಯಾಗದ ಮಲ್ಲಿ, ಗೌಡನಿಗೆ ಕೊಟ್ಟಳೆಂದರೆ ಆ ಮಾತು ಕಡಿಮೆಯಾಗುತ್ತದೆ. 'ಅಷ್ಟು ಚೆಲುವಿವರು ಸಿಸಹೊನ್ನಬೆಸುಗೆ.' ಚಾವಡಿಯಲ್ಲಿ ಊರ ಕೆಲಸದಲ್ಲಿ ಗೌಡ ಮಗ್ನನಾಗಿದ್ದಾಗ ಎಲೆ ಅಡಿಕೆ ಕೆಲಸವನ್ನು ಹೆಂಡಿರಾದವ ಮಾಡುವಳೇ? ಮಲ್ಲಿ ಈ ಕೆಲಸ ಮಾಡುತ್ತಿದ್ದಳು. ಗೌಡ ಎಲ್ಲಿದ್ದರೆ ಮಲ್ಲಿ ಅಲ್ಲಿ. ಅವನ ಸೇವೆ, ಅವನ ತೃಪ್ತಿ ಇವಳ ಗುರಿ. 'ಇಂತು ಬಾಳಿದರಿವರು; ಈ ಪ್ರೇಮ ಪರಮಾನ್ನ ಕೊನೆಗು ಬಿಸಿಯಾಗಿತ್ತು ಹಳಸಲಿಲ್ಲ.' ಈ ಮಾತಿನಿಂದ ಮಲ್ಲಿಯ ಸೇವೆ ಗೌಡನೊಬ್ಬನಿಗೇ ಮೀಸಲಾಗಿತ್ತು ಎಂದು ಅರ್ಥವಲ್ಲ. ಅದು ಸಮಗ್ರ ಕುಟುಂಬಕ್ಕೇ ಮೀಸಲಾಗಿತ್ತು. ಮಕ್ಕಳು ಬೆಳೆಯಲು ಮಲ್ಲಿ ತಾನೇ ಮುಖ್ಯಭಾಗವಹಿಸಿ ಅವರಿಗೆ ಬೇರೆ ಮದುವೆ ಮಾಡಿದಳು. ಮನೆಗೆ ಬಂದ ಸೊಸೆಯರು ಬೇರೆ ಅತ್ತೆಯರನ್ನೇ ಕಾಣರು. 'ತೊತ್ತಾಗಿ ಬಂದರೂ ಅತ್ತೆಯಾದಳು ಮಲ್ಲಿ.' ಆಕೆಗೆ ಒಲಿಯದವರಾರು? ಅಲ್ಪವನ್ನೇ ಕಾಣದ ಮನಸ್ಸು ಅವಳದು. ಈ ನಡುವೆ ಮಲ್ಲಿಯಿಂದ ಎಲ್ಲ ಸೇವೆಯನ್ನು ಕೊಂಡ ಗೌಡನ ತಾಯಿ ಬದುಕನ್ನು ಮುಗಿಸಿದಳು. ಮಲ್ಲಿಯ ವಿಷಯದಲ್ಲಿ ಅತ್ತೆ ಆಡಿದ ಕೊನೆಯ ಮಾತೇನು? 'ಮಗಳಾದೆ, ಸೊಸೆಯಾದೆ, ಮನೆಗೆ ನೀ ಸಿರಿಯಾದೆ, ಅಪರಂಜಿ ನೀ;' ಸಾರ್ಥಕವಾಯಿತು ಮಲ್ಲಿಯಬಾಳು. ಮುಗ್ಧೆಯಾದ ಮಲ್ಲಿ ಗೌಡನನ್ನು ಕೂಡಿ, ಸೊಸೆಯಾಗಿ, ಅತ್ತೆಯಾಗಿ, ಅಜ್ಜಿಯಾಗಿ ಬಾಳಿದಳು. ಹೆತ್ತ ಮಕ್ಕಳನ್ನು ಕಳೆದುಕೊಂಡಳು ಎನ್ನುವ ಕ್ಲೇಶಕರವಾದ ಅಂಶವನ್ನು ಬಿಟ್ಟರೆ, ಕಷ್ಟಸುಖಗಳನ್ನುಂಡ ಅವಳ ಬಾಳು ಈಗ ಪರಿಪಕ್ವವಾಗಿತ್ತು, ಪೂರ್ಣವಾಗಿತ್ತು.

ಕಾಲ ನಿಲ್ಲುತ್ತದೆಯೇ? ವೃದ್ಧನಾದ ಗೌಡನ ಅವಸಾನ ಸಮೀಪವಾಯಿತು. ಅವನು ದೇವರ ಸೇರಲು ಹೊರಟನಂತೆ! ಐವತ್ತು ವರ್ಷ ಅವರು ಗಂಡಹೆಂಡತಿಯರಂತೆ ಬದುಕಿದ್ದರು. ಈ ಅವಧಿಯಲ್ಲಿ ಅವರ ಜಾತಿ, ಮದುವೆ ಇಲ್ಲದ ಮಾತು ಎಲ್ಲ ಮರೆತು ಹೋಗಿದ್ದವು. ಹಿರಿಯೊಲವ ಹೆಸರನ್ನು ಇವರು ಮುಡಿದಿದ್ದರು. ಮಲ್ಲಿಗೆ ದುಃಖ - ಹಿಂದಿನ

ದಿನಗಳನ್ನು ನೆನೆದು ಹಾಗೂ ಗೌಡ ಹೋಗುವನೆಂದು; ಆದರೂ ಅವಳು ಅವನಿಗೆ ಧೈರ್ಯಹೇಳಿ ಅವನನ್ನು ಬೇಡಿದ ರೀತಿ ಅವಳ ಉದಾರಗುಣಕ್ಕೆ ಸಾಕ್ಷಿಯಾಗಿವೆ. ಕೈಹಿಡಿದವರಲ್ಲಿ ಯಾರಾದರೂ ಒಬ್ಬರು ಮುಂದೆ ಹೋಗಬೇಕು. ಈಗ ನೀನು ಹೋಗುತ್ತಿರುವೆ. ಅಲ್ಲಿ ನಿನ್ನ ಕೈಹಿಡಿದ ಹೆಂಡತಿ ಇದ್ದಾಳೆ. ಆದರೂ ಈ ಬಡವಿ ಮಲ್ಲಿಯ ನೆನಪಿರಲಿ. ನನ್ನ ದಿನ ಮುಗಿದು ಸನ್ನಿಧಿಗೆ ಬಂದಾಗ ಪರಿವಾರದವರು ಇವಳು ಯಾರು ಎನ್ನುವ ಮೊದಲೇ, ಇವಳು ನನ್ನವಳು ಎಂದು ಹೇಳಬೇಕು ನೀನು. 'ಗಂಡಿಂತು ನುಡಿಯುವುದು ಅಪಾರ ಚೆನ್ನು' ಮುಂದಿನ ಜನ್ಮದಲ್ಲಿ ಮದುವೆಯೇ ಆಗೋಣ. ಕೂಡಿಕೊಂಡವರೆಂಬ ಅಡ್ಡಗೀಟು; ಈ ಸಲಕೆ ತೊತ್ತೆಂಬ ತುಕ್ಕು ಸಾಕು. ನಾವಿಬ್ಬರೂ ಒಲಿದವರು ಎಂಬುದನ್ನು ಕಂಡಿರುವ ಸ್ವಾಮಿಗೆ ಮುಂದಿನ ಜನ್ಮಕ್ಕೆ ನಮ್ಮ ಪ್ರಾರ್ಥನೆಯನ್ನು ಸಲ್ಲಿಸುವುದು ಏನು ದೊಡ್ಡ ಮಾತು? ಗೌಡ ಮಲ್ಲಿಗೆ ಭಾಷೆ ಕೊಟ್ಟು ಪ್ರಾಣಬಿಟ್ಟನಂತೆ!

ಮಲ್ಲಿಯ ಜೀವನದಲ್ಲಿ ಇನ್ನು ಮೂರನೆಯ ಘಟ್ಟ-ಒಂಟಿ ಬದುಕು. ಗೌಡನ ಜೀವ ಸೇರವಾಗಿ ದೇವರಡಿ ಸೇರಲೆಂದು ಮಲ್ಲಿ ಬಹುದಿನದ ಬಾಳ ಮೇಲ್ಮೆಗೆ ತಕ್ಕ ರೀತಿಯಲ್ಲಿ ಅನ್ನದಾನ, ವಸ್ತ್ರದಾನಗಳ ಶಾಸ್ತ್ರವನ್ನು ಮುಗಿಸಿದ ಮೇಲೆ ಗೌಡನ ಸಂಸಾರಕ್ಕೆ ಸೂತ್ರಧಾರಳಾಗಿ ನಿಂತಳು. ಸಮಷ್ಟಿ ಕುಟುಂಬ ಹೊರಗೆ ನೋಡಲು ತುಂಬ ಚೆನ್ನ; ಆದರೆ ಒಳಗೆ ಮುಸುಕಿನ ಗುದ್ದು ಎಷ್ಟೋ! ಗೌಡನ ತಾಯಿ ತೀರಿಕೊಂಡಾಗ, ಗೌಡನ ತಮ್ಮಂದಿರು ಬೇರೆ ಆದರು, ಅದಕ್ಕೆ ಕಾರಣ ಅವರ ಹೆಂಡಂದಿರು. ಈಗ ಗೌಡನ ಮನೆಯನ್ನು ಪಾಲು ಮಾಡುವ ಮಾತನ್ನು ಒಬ್ಬ ಸೊಸೆ ಎತ್ತಿದಳು. ಆಕೆಗೆ ಮಲ್ಲಿ ಹೇಳಿದ ಮಾತೇನು?

ಅಮ್ಮ! ಈ ಬದಿಯಲ್ಲಿ ಕಾಲು ಹೊತು
ನಾನೊಂದು ಮುದಿಗೊಡ್ಡು ಇಹೆನು. ಅಯ್ಯೊ ಪಾಪ
ಎನ್ನಿ; ನಾ ಗೌಡ ಕಳೆದೆಸೆದ ಜೋಡು.
ನಾನಿರುವ ವರೆಗೆ ಜೊತೆಯಾಗಿ ಇರಿ; ಆಮೇಲೆ
ನಿಮ್ಮಿಷ್ಟದಂತಾಗಿ ನಿಮ್ಮ ಪಾಡು.

ಅಲ್ಲದೆ ಮಕ್ಕಳಿಗೆ 'ಅಪ್ಪ, ನಿಮ್ಮ ಮೊಮ್ಮಕ್ಕಳು ನಿಮ್ಮ ತೋಳ ನೆಲೆಗೆ ಬೆಳೆದಾಗ ಪಾಲಾಗಿ. ಆತುರದಲ್ಲಿ ಹಿರಿದರೆ ಅರ್ಧಕಾಳು ಆಳುಗಳ ಪಾಲಾಗುತ್ತದೆ' ಎಂದು ಬುದ್ಧಿ ಹೇಳಿದಳು. ಮಕ್ಕಳು ಅರಿತವರು, ಅಲ್ಲದೆ ಊರ ಹಿರಿಯರು. ತಾಯ ಮಾತನ್ನು ಮನ್ನಿಸಿ ಆಕೆಗೆ ಧೈರ್ಯ ಹೇಳಿದರು.

ದಿನಗಳು ಕಳೆಯಲು, ಮಲ್ಲಿಯ ಕಡೆಗಳಿಗೆ ಸಮೀಪಿಸಿತು. ಅವಳು ಸತ್ತಂದು ಊರಿಗೆ ಊರೇ ಗೋಳಿಟ್ಟಿತು. ಗೌಡನ ಕಾಲದೆಸೆ ನೋಡಿ ಅವಳನ್ನು ಮಣ್ಣುಮಾಡಿದರು. ಶ್ರೀಗಂಧ ಸುಟ್ಟು ಬೂದಿಯಾದರೂ, ಅದರ ಸುವಾಸನೆ ಬಹುಕಾಲ ಆ ಪ್ರದೇಶವನ್ನು ಆವರಿಸಿರುವಂತೆ, ಮಲ್ಲಿ ತೀರಿಕೊಂಡರೂ ಅವಳ ಸದ್ಗುಣಗಳೂ ಅವಳು ಮಾಡಿದ ಸತ್ಕಾರ್ಯಗಳೂ ಬಹುಕಾಲ ಅವಳು ಬದುಕಿ ಬಾಳಿದ ಗ್ರಾಮದಲ್ಲಿ, ಅದರ ಸುತ್ತಲ ಪ್ರದೇಶದಲ್ಲಿ ಹರಡಿದ್ದುವು. ಗೌಡ ತನ್ನನ್ನು ಕೂಡಿದ ದಿನ ಗುಡಿಯಲ್ಲಿ ಉತ್ಸವ ನಡೆಯುವಂತೆ, ದೇವಸ್ಥಾನದಲ್ಲಿ ಮಲ್ಲಿ ಒಂದು ಪುದುವಟ್ಟು ಹಾಕಿಸಿದ್ದಳು. ವರ್ಷವರ್ಷವೂ ಮಹಾನವಮಿ ಕಳೆದು, ದೀವಳಿಗೆ ಸಾಗಿದಾಗ ಆ ಊರ ದೇವಾಲಯದಲ್ಲಿ ಈ ನಲ್ಲನಲ್ಲೆಯರ ಹೆಸರಿನಲ್ಲಿ ದೇವಾಲಯದಲ್ಲಿ ಪೂಜೆ ನಡೆಯುವುದಂತೆ! ತಾವೇ ಕುಳಿಯನ್ನು ತೆಗೆಸಿ, ತಾವೇ ಗಿಡವನ್ನು ನೆಡಿಸಿ, ತಮ್ಮ ಒಡಲ ಕಷ್ಟದಿಂದ ಬೆಳೆಸಿದ ಇಷ್ಟೆ

ಎಣ್ಣೆಯ ದೀಪದಿಂದ ದೇವರಿಗೆ ಎಷ್ಟು ಜನ ದೀಪ ಹಚ್ಚುತ್ತಾರೆ? ಗೌಡ ಮಲ್ಲಿಯರು ಈ ಕೆಲಸ ಮಾಡಿದರು. ಅವರ ತೋಪಿನ ಆರು ಇಪ್ಪೆಯ ಮರದ ಎಣ್ಣೆಯಿಂದ ಒಂದು ಸಾವಿರ ದೀಪ ದೇವಾಲಯದಲ್ಲಿ ಉರಿಯುತ್ತವೆ. ಮಲ್ಲಿಯದು ಸಾರ್ಥಕವಾದ ಬದುಕು!

ಗೌಡ ಮಲ್ಲಿಯರ ಪ್ರೇಮ ಲೋಕಕ್ಕೆ ಆದರ್ಶವಾಗಲಿ.
    ಮಾನವಮಿ ದೀವಳಿಗೆ ಬರುವೆಲ್ಲ ಕಾಲಕೂ
ಗೌಡ ಮಲ್ಲಿಯರ ಹೆಸರಿಂದ ದೀಪ
    ಇಂತೆ ಬೆಳಗಲಿ ಬಿಡದೆ; ಜಗದೆ ಗಮಗಮಿಸಿರಲಿ
ಅವರ ಒಲವಿನ ನೆನವಿನಗರು ಧೂಪ.
ತಥಾಸ್ತು!
ಕೊನೆಯ ಮಾತು.

ಯಾವ ಅವಲೋಕನವೂ, ಕೃತಿಯನ್ನು ವಾಚನ ಮಾಡಿ ಸಹೃದಯನು ಪಡೆಯುವ ಆನಂದಕ್ಕೆ ಸರಿತೂಗಲಾರದು. ವಿಮರ್ಶಕನು ಎಷ್ಟೇ ಸುಸಮರ್ಥನಾದರೂ ವಿುವರ್ಶೆಗೆ ಒಳಪಡದ ಕಾವ್ಯಾಂಶವೊಂದು ಇದ್ದೇ ಇರುತ್ತದೆ. 'ಗೌಡರಮಲ್ಲಿ' ಚಿಕ್ಕ ಕೃತಿಯಾದರೂ ಮೇಲಿನ ಮಾತು ಇದಕ್ಕೂ ಅನ್ವಯಿಸುತ್ತದೆ. ಮೇಲಿನ ಅವಲೋಕನದಿಂದ ಕಾವ್ಯದ ಸ್ವರೂಪವೇನೆಂಬುದು ವಾಚಕರಿಗೆ ಸುಸ್ಪಷ್ಟವಾಗುತ್ತದೆ. ಮಲ್ಲಿಯ ಜೀವನದಲ್ಲಿ ಅಸಾಮಾನ್ಯವಾದ ಅದ್ಭುತವಾದ ಯಾವ ಘಟನೆಯೂ ಜರಗುವುದಿಲ್ಲ. ಗೌಡನನ್ನು ಕೂಡಿದ್ದೇ ಅವಳಿಗೆ ಒಂದು ಪವಾಡವೆನಿಸಿರಬೇಕು. ಈ ಕವನ ಸಣ್ಣಕಥೆಯ ರೂಪವನ್ನು ಧರಿಸಬಹುದಾಗಿತ್ತು ಎಂದು ಹೇಳುವವರು ಮೇಲಿನ ಮಾತನ್ನು ನೆನಪಿನಲ್ಲಿಡಬೇಕು. ಏಕೆಂದರೆ ಸಣ್ಣಕಥೆಯಲ್ಲಿ ಸಾಮಾನ್ಯವಾಗಿ ಘಟನೆಗೇ ಹೆಚ್ಚು ಪ್ರಾಶಸ್ತ್ಯ. ಹಾಗಾದರೆ ಈ ಕವನ ಏಕೆ ಆಕರ್ಷಕವಾಗಿದೆ? ಭವ್ಯತೆಯ ಒಂದೆರಡು ಮೆಟ್ಟಿಲನ್ನು ಮುಟ್ಟಿದೆ? ಇದಕ್ಕೆ ಕಾರಣ ನನಗೆ ಹೀಗೆಂದು ತೋರುತ್ತದೆ. ಗೌಡಮಲ್ಲಿಯರು, ಅದರಲ್ಲಿಯೂ ಮಲ್ಲಿ-ನಮ್ಮ ದೇಶದ ಆದರ್ಶದಾಂಪತ್ಯದ ಪ್ರತಿನಿಧಿಯಾಗಿ ನಿಲ್ಲುತ್ತಾಳೆ. ಇಂಥ ದಾಂಪತ್ಯ ಜೀವನ ಪ್ರತಿ ಹಳ್ಳಿಯಲ್ಲಿಯೂ ಸಾಮಾನ್ಯವಾಗಿತ್ತು. ನಾಡಿನ ಮೂಲೆಮೂಲೆಗಳಲ್ಲಿ ದೊರಕುವ ಮಾಸತಿಕಲ್ಲುಗಳೇ ಇದಕ್ಕೆ ಸಾಕ್ಷಿ. ಮಲ್ಲಿಯ ಜೀವನ ನಮ್ಮ ದೇಶದ ಹೆಣ್ಣುಗಳಿಗೆ ಒಗ್ಗಿ ಬಂದ ಜೀವನ. ಯಮನಿಂದ ಗಂಡನನ್ನು ಮತ್ತೆ ಪಡೆದು ಬಂದಳು ಎಂಬ ಅಂಶವನ್ನು ಬಿಟ್ಟರೆ, ಮಲ್ಲಿ ಸಾವಿತ್ರಿಯರಿಗೆ ಯಾವ ವ್ಯತ್ಯಾಸವೂ ಕಾಣಬರುವುದಿಲ್ಲ. ನಮ್ಮ ನಾಡಿನ ಹೆಣ್ಣುಮಕ್ಕಳು ತ್ಯಾಗದ ಪ್ರತೀಕ. ದಿನ ಕಳೆದಂತೆ, ದೇಹದ ಮೋಹ ಮಾಯವಾದಂತೆ, ಹೆಂಗಸು ತನ್ನ ಸ್ವಾರ್ಥವನ್ನು ಬದಿಗೊತ್ತಿ ಎಷ್ಟರ ಮಟ್ಟಿನ ಸೇವೆ ಸಲ್ಲಿಸುತ್ತಾಳೆ ಎಂಬ ಅರಿವು ಗಂಡಸಿನಲ್ಲಿ ಮೂಡುತ್ತದೆ. ಈ ವಿಷಯದಲ್ಲಿ ಅವಳು ದೇವತೆ. ಮಲ್ಲಿ ಅಳುಕಿನಿಂದಲೇ ಗೌಡನನ್ನು ಕೂಡಿದರೂ, ತನ್ನ ಮಕ್ಕಳು ಸತ್ತಾಗ ಕಣ್ಣೀರನ್ನು ಒರಸಿಕೊಂಡು ಇತರರನ್ನು ಸಮಾಧಾನಪಡಿಸಿದಳು. ಗೌಡನಿಗೆ ಅತ್ತಿಗೆ ನಾದಿನಿಯರಿಗೆ ಊರಿಗೆ ಮೆಚ್ಚಾದಳು. ಒಂದು ಸಮಯದಲ್ಲಿ ಬೀಳಲಿದ್ದ ಗೌಡನ ಮನೆಯನ್ನು ಎತ್ತಿ ಹಿಡಿದಳು. ಗೌಡನೊಡನೆ ಆಕೆ ಬಾಳಿದ ಐವತ್ತು ವರ್ಷಕಾಲವೂ ಆಕೆ ಮನೆಯಲ್ಲಿ ಮುಸುಕಿನ ಗುದ್ದನ್ನು ಅನುಭವಿಸಿರಬೇಕು. ಕಾವ್ಯದಲ್ಲಿ ಅದರ ಸೂಚನೆ ಇದ್ದರೂ, ಅದರ ಅಭಿವ್ಯಕ್ತಿ ಇಲ್ಲ. ಮಲ್ಲಿ ಈ ಕ್ಲೇಶಗಳನ್ನು ಆತ್ಮ ಕಲ್ಯಾಣಕ್ಕಾಗಿ ಸಹಿಸಿದಳು. ಕಾವ್ಯದ ಕೊನೆಗೆ ಬಂದಾಗ ಆ ಹಿರಿಯ ಜೀವನದ ವಿಷಯವನ್ನು ಕುರಿತು ಯಾರು ತಾನೆ ಮೆಚ್ಚಿಗೆಯ ಕಣ್ಣೀರನ್ನು ಸುರಿಸುವುದಿಲ್ಲ?

ಗದ್ಯ ಕವಿಗಳ ಒರೆಗಲ್ಲು ಎಂದು ಪ್ರಾಚೀನರು ಸಾರಿ ಹೇಳಿದ್ದರೂ, ಅದರಲ್ಲಿ ಸಿದ್ಧಿ ಪಡೆದವರು ಎಲ್ಲೋ ಬೆರಳಿನಲ್ಲಿ ಎಣಿಸುವಷ್ಟು ಮಂದಿ! ಸಂಸ್ಕೃತದ ಹಾಗೂ ನಮ್ಮ ಪ್ರಾಚೀನ ಸಾಹಿತ್ಯದ ಬಹುಭಾಗ ಇರುವುದು ಛಂದೋಬದ್ಧವಾದ ಪದ್ಯದಲ್ಲಿ ಎಂಬುದು ಗಮನಾರ್ಹವಾದ ವಿಷಯ. ಪದ್ಯದಲ್ಲಿ ಕವಿಯ ಮನಸ್ಸಿನಲ್ಲಿ ಮೂಡಿದ ಭಾವ ಸಂಗ್ರಹವಾಗಿ ಬಿಗಿಯಾಗಿ ಮೂಡಿಬರುತ್ತದೆ. ಅಲ್ಲದೆ ಭಾವವನ್ನು ಛಂದಸ್ಸಿನ ತೊಟ್ಟಿಲಲ್ಲಿಟ್ಟು ತೂಗಿದಾಗ, ಕೃತಿಗೆ ನಿಜವಾಗಿಯೂ ಒಂದು ಸೊಗಸು ಮೂಡಿ ಬರುತ್ತದೆ. 'ಗೌಡರ ಮಲ್ಲಿ' ಕವನದ ಸೊಗಸಿಗೆ ಕವನ ಮೂಡಿಬಂದಿರುವ ಛಂದಸ್ಸು ಒಂದು ಕಾರಣವೆಂದು ಭಾವಿಸುತ್ತೇನೆ. ಇಲ್ಲಿರುವ ನಾಲ್ಕು ಸಾಲುಗಳ ಪದ್ಯಗಳಿಗೆ, ಐದು ಮಾತ್ರೆಯ ಗಣಗಳನ್ನೂ, ಎರಡನೆಯ ಮತ್ತು ನಾಲ್ಕನೆಯ ಸಾಲುಗಳ ಅಂತ್ಯದಲ್ಲಿ ಪ್ರಾಸವನ್ನೂ ಅಳವಡಿಸಿರುವುದು ಕೃತಿಗೆ ಗಾಂಭೀರ್ಯವನ್ನು ತಂದಿದೆ.

ಈ ಕವನದ ಪರಿಮಿತವಾದ ಅವಕಾಶದಲ್ಲಿ ಲೇಖಕರ ಅನುಭವದ ಸಾರ ಘನೀಭೂತವಾಗಿ ಮಡುಕಟ್ಟಿ ನಿಂತಿದೆ. ಈ ಮೊದಲು ಈ ಅನುಭವದ ಸೂಕ್ತಿಗಳನ್ನು ಅಲ್ಲಲ್ಲೇ ಉದಾಹರಿಸಿದೆ. ಇದರ ಜೊತೆಗೆ ಅಲಂಕಾರಗಳು ಮಿತವಾಗಿ ಹಾಳತವಾಗಿ ಬಂದು ಕವಿತೆಯನ್ನು ಅಲಂಕರಿಸಿವೆ. ಸುಗ್ಗಿ ಕಾವ್ಯದ ಮೊದಲು ಬರುವ ಸುಗ್ಗಿಯ ವರ್ಣನೆ, ಮಲ್ಲಿ ಗೌಡನನ್ನು ಕೂಡಿದ ರಾತ್ರಿ ಬರುವ ಚಂದ್ರೋದಯದ ವರ್ಣನೆ ಇವು ಕಾವ್ಯಕ್ಕೆ ಸೊಗಸಾದ ಹಿನ್ನೆಲೆಯನ್ನು ತರುತ್ತವೆ.

ಮಾಸ್ತಿಯವರ ಬರವಣಿಗೆ ಸರಳವೆಂದು ಹೇಳುವುದುಂಟು. ಹಾಗೆಂದ ಮಾತ್ರಕ್ಕೆ ಅದು ಜಾಳು ಎಂಬ ಭಾವನೆ ವಾಚಕರಲ್ಲಿ ಮೂಡಬಹುದು. ಈ ಅಭಿಪ್ರಾಯಕ್ಕೆ ಅವರ ಕೃತಿಯಲ್ಲಿ ಯಾವ ಸಮರ್ಥನೆಯೂ ಖಂಡಿತವಾಗಿ ದೊರಕುವುದಿಲ್ಲ. ಮಾಸ್ತಿಯವರ ಸರಳತೆ ಅವರಿಗೇ ಮೀಸಲಾದದ್ದು. ಕವಿಯ ಮನಸ್ಸಿನಲ್ಲಿ ಮೂಡಿದ ಭಾವ, ಸಹೃದಯನನ್ನು ನೇರವಾಗಿ ಸೇರುವಂತೆ ಬರೆಯಬೇಕಾದುದೇ ಲೇಖಕವಾದವನ ಗುರಿಯಾಗಿರಬೇಕು. ಮಾಸ್ತಿಯವರ ಶೈಲಿ ಶುಭ್ರವೂ ಪರಿಷ್ಕಾರವೂ ಆದ ರೇಷ್ಮೆಯ ಬಟ್ಟೆಯಂತೆ ಪ್ರಸನ್ನವಾದದ್ದು. ರೇಷ್ಮೆಯ ಬಟ್ಟೆ ನಯವಾದದ್ದು, ಬೆಲೆಯುಳ್ಳದ್ದು, ಬಹಳ ಕಾಲ ಬಾಳಿಕೆ ಬರತಕ್ಕದ್ದು. ಈ ಮಾತು ಈ ಕೃತಿಗೂ ಅನ್ವಯಿಸುತ್ತದೆ. ಜನಪದಕ್ಕೆ ಸೇರಿದ ವಿಷಯ ತಾನೆ ಈ ಕೃತಿಯ ವಸ್ತು? ಆದ್ದರಿಂದ ಅಡ್ಡಗೀಟು, ಕೂಡಿಕೊಳ್ಳು, ಔಷಧ - ಇಂಥ ಆಡುಮಾತುಗಳು ಇಲ್ಲಿ ವಿಪುಲವಾಗಿ ಬಳಕೆಗೊಂಡಿವೆ. ಈ ಪ್ರಯೋಗಗಳಿಂದ ಕೃತಿಯ ಸೊಗಸು ಇಮ್ಮಡಿಸಿದೆಯೇ ಹೊರತು, ಕುಂದನ್ನು ತಂದಿಲ್ಲ.

ಕೃತಿಯ ಕೊನೆಯಲ್ಲಿ ಈ ಮಾತು ಬರುತ್ತದೆ-

> ಇಂತು ಬಹುದಿನ ನಡೆಯೆ ಈ ಗೌಡ ಈ ಮಲ್ಲಿ
> ದೇವರಾಗುವರೇನೊ ಜನದ ಮನದಿ.

ಹೌದು, ನನ್ನ ಪಾಲಿಗೆ ಮಲ್ಲಿ ದೇವತೆಯಾಗಿದ್ದಾಳೆ. ಕೃತಿಯನ್ನು ಓದಿ ಮುಗಿಸಿದಾಗ ಅವಳ ತ್ಯಾಗಮಯ ಬಾಳನ್ನು ನೆನೆದು ನನ್ನ ಕಣ್ಣು ಹನಿಗೂಡಿ ಮನಸ್ಸು ಸತ್ವಯುಕ್ತವಾಗಿ ತಿಳಿಯಾಗುತ್ತದೆ. ಒಂದು ಜನಾಂಗ ಒಂದು ಸಂಪ್ರದಾಯವನ್ನು ಪ್ರತಿನಿಧಿಸುವ ಈ ಕವನ ಎಲ್ಲ ಮನಸ್ಸನ್ನೂ ಹಸನುಗೊಳಿಸಿ ಮೇಲಕ್ಕೆತ್ತುವುದೆಂದು ನನ್ನ ನಂಬಿಕೆ. ಈ ಚಿತ್ರವನ್ನು ನೆನೆದು ಸೃಷ್ಟಿಸಿದ ಚೇತನ, ಉದಾರಚೇತನ.

ಸೋಜಿಗದ ಹೊಳಲು

ಕೆ. ಎಸ್. ನರಸಿಂಹಸ್ವಾಮಿ

'ಏನೆಂಥ ಕಾಲವದು' ಮತ್ತೆ ಬಹುದೆ? ಒಮ್ಮೆ
ಒಂದು ಜೀವಕೆ ಒಮ್ಮೆ ಮಾತ್ರ ಬಹುದು. ಬಂದು
ಈ ಬಾಳ ತನ್ನ ಆನಂದದಾಳಕೆ ಸೆಳೆದು
ಸುಖದಿಂದ ಉಸಿರ ಕಟ್ಟಿಸಿ ಮತ್ತೆ ಬಿಡಿಸುವುದು!

ಇದು ಕವಿತೆ, ಮಾಸ್ತಿಯವರ ಕವಿತೆ! ಅಬ್ಬರವಿಲ್ಲ, ಅಲಾಂಕಾರವಿಲ್ಲ, ಪದರಂಜನೆಯಿಲ್ಲ. ಇವು ಮೂರೂ ಇದ್ದು ಕವಿತೆ ಬೇರೆ ರೀತಿಯಲ್ಲಿ ಆಗಬಹುದು ಎನ್ನುವ ಆಕ್ಷೇಪಣೆಗೆ, ಇವು ಮೂರು ಇಲ್ಲದೆ ಇಲ್ಲಿ ಒಂದು ಬಾಳಿನ ಪುಣ್ಯದಿಂದ ಕವಿತೆ ಆಗಿದೆ ಎಂಬುದೇ ಸ್ವಸಂಪೂರ್ಣವಾದ ಉತ್ತರ. ಯಾವ ಧಾವಂತವೂ ಇಲ್ಲ; ಉಸಿರಿನ ಸಂಚಾರವೂ ಬದುಕಿನಲ್ಲಿರುವಂತೆ ಸ್ವಾಭಾವಿಕವಾಗಿದೆ. ಇಂಥ ಕವಿತೆಯನ್ನು ಕುರಿತು ಅರ್ಥವೇನು, ಉದ್ದೇಶವೇನು, ನೀತಿಯೇನು ಎಂದು ಕೇಳುವುದೇ ಅವಿವೇಕ.

ಕಥೆ ಹೇಳುವವರು ವೈದ್ಯಗಣಪೈಗಳು (ಮಾಸ್ತಿಯವರಲ್ಲ!). ಆದರೆ ಶೈಲಿಯಲ್ಲಿ ಮಾಸ್ತಿಯವರೇ ಕಾಣುತ್ತಿದ್ದಾರೆ, ಅವರಿರುವಂತೆ! ಛಂದಸ್ಸಿನ ಅಂಚಿನಲ್ಲಿ ಅವರ ಧ್ವನಿ ಕೇಳಿಬರುತ್ತಿದೆ,-ಗುಡುಗಿಲ್ಲದ ಘರ್ಜನೆಯಿಲ್ಲದ ಮಾನವಧ್ವನಿ. ಈ ಕವಿತೆಯಲ್ಲಿ ಕಾಣುವ ಒಟ್ಟು ಕಟ್ಟಡದ ರಚನೆ, ಸುಳಿವ ಸುದ್ದಿಗಳ ಸುತ್ತ ಸೊಂಪಾಗಿರುವ ಚೆಲುವು, ನಡುನಡುವೆ ಗಂಭೀರ ಸಮುದ್ರ ತಳವನ್ನೂ ಬೆಳಕು ಮಾಡುವ ಪ್ರತಿಭೆಯ ಮಿಂಚಿನ ಹನಿಗಳು, ಕವಿಗೆ ಅಧೀನವಾದ ಮಾತಿನ ವಿಚಕ್ಷಣೆ, ತೋರಿಕೆ ಇಲ್ಲದ ಸರಳತೆ, ಮತ್ತು ಇವೆಲ್ಲಕ್ಕೂ ಮೀರಿದ ನಿರ್ದುಷ್ಟ ಜೀವನಾಸಕ್ತಿ - ಇವು ಮಾಸ್ತಿಯವರಿಗೆ ಮಾತ್ರ ಸಾಧ್ಯ. ಅವರು ಕವಿತೆಯಲ್ಲಿ ಕಷ್ಟಪಡುವವರೂ ಅಲ್ಲ; ಕಷ್ಟ ಕೊಡುವವರೂ ಅಲ್ಲ. ಇದು ಅವರ ಸಾಹಿತ್ಯದ ಅಹಿಂಸಾಯೋಗ.

ಸುಲಭಶೈಲಿಯಲ್ಲಿ ಬಂದ ಕವಿತೆಯ ಕಡೆಗೆ ಮನಸ್ಸನ್ನು ಹಾಯಿಸುವುದು ಇಂದಿನ ಹಲಕೆಲವರು ವಿದ್ವಾಂಸರಿಗೇ ಇಷ್ಟವಿಲ್ಲ ಎಂಬುದನ್ನು ಕೇಳಿದ್ದೇನೆ. ಅಂಥವರಿಗಾಗಿಯೇ ಕ್ಲಿಷ್ಟಪ್ರಬಂಧಗಳೂ ಉಳಿದಿರುವುದು. ಆದರೆ ಮಾಸ್ತಿಯವರ ಈ ಕವಿತೆಯಲ್ಲಿ ಸುಲಭವಾಗಿರುವುದೇನು, ಮಾತೆ, ಕವಿತೆಯೇ, ಎಂಬುದನ್ನು ಅಂಥವರೂ ಹುಡುಕುವುದರಲ್ಲಿ ತಪ್ಪೇನು? ಕವಿತೆಯನ್ನು ಆಸ್ವಾದಿಸುವುದೊಂದೇ ಮುಖ್ಯ ವಿಷಯವಾಗಿರುವುದರಿಂದಲೂ, ಅಂಥ ರತ್ನ ಪರೀಕ್ಷೆಗೇ ಈ ಕವಿತೆಯನ್ನು ನಿಲ್ಲಿಸಿದರೂ ಅದರ ಗೌರವ ಹೆಚ್ಚಾಗುವುದರಿಂದಲೂ, ಒಂದೇ ದೃಷ್ಟಿಗೆ, ರುಚಿಗೆ, ನಿಲ್ಲುವುದೇ ಸರಿಯಾದದ್ದು ಎನ್ನುವ ತೀರ್ಮಾನ ಖಂಡಿತವಾಗಿ ಸಾಹಿತ್ಯಕ್ಕೆ ಒಪ್ಪುವುದಿಲ್ಲ.

ವೈದ್ಯಗಣಪೈಗಳು ಹೇಳಿದರೆಂಬ ಕಥೆ ಸುಲಭವಾಗಿದ್ದಷ್ಟು ಸುಂದರವಾಗಿದೆ.

ವೈದ್ಯರೂ ಅಂಥಹವರೇ. (ತಾವು ಪಂಜೆಯವರನ್ನು ಎಂದಾದರೂ ನೋಡಿದ್ದೀರಾ?) ಅವರ ಬಿಳಿಯ ಹುಬ್ಬು 'ಚಂದ್ರನನು ನೋಡುತಿಹ ಎರಡು ಚಂದ್ರರೋ' ಎನ್ನುವಷ್ಟು ಬೆಳ್ಳಗಿತ್ತಂತೆ. ಅವರು ಮನೆಯ ಮುಂದಿನ ಜಗಲಿಯ ಮೇಲೆ ಕುಳಿತು, ನಸ್ಯ ಮಾಡುತ್ತ, ತಮ್ಮಲ್ಲಿಗೆ ಬಂದ ಎಂಟುವರುಷದ ಬೆಂಗಳೂರ ಹೈದನನ್ನು 'ನೀನುಸರಸೂ ಮಗನೋ?' ಎಂದು ನಿಧಾನವಾಗಿ ವಿಚಾರಿಸಿಕೊಳ್ಳುವುದೂ, ಅವನ ಬಾಯಿಗೆ ಒಂದು ಚೂರು ಕಲ್ಲುಸಕ್ಕರೆಯನ್ನು ಹಾಕಿಸುವುದೂ, - ಈಗೀಗ ವಿರಳವಾಗುತ್ತಿರುವ - ಒಂದು ತಲೆಮಾರಿನ ಸೌಜನ್ಯವನ್ನು ಸೂಚಿಸುತ್ತದೆ.

ನಡುವೆ ಇನ್ನೂ ಯಾರೋ ಬರುತ್ತಾರೆ. ಸರಿ, ವೈದ್ಯರು ಬಾರಕೂರಿನ ಹಳೆಯ ಕಥೆಯನ್ನು ಪ್ರಾರಂಭಿಸುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಯುವ ಸೀತಾನದಿಯ ತೀರದಲ್ಲಿ ಬಾರಕೂರು. ಒಂದಾನೊಂದು ಕಾಲದಲ್ಲಿ ಅಲ್ಲಿ ಭೂತಾಲ ಪಾಂಡ್ಯ ರಾಜ ಅಧ್ವರ್ಯದಿಂದ ಆಳುತ್ತಿದ್ದನಂತೆ. ಆಗೊಂದು ದಿನ ಯಾವನೋ ಸಂನ್ಯಾಸಿ ಅರಮನೆಯ ಮುಂದೆ ಬಂದು 'ಭವತಿ, ಭಿಕ್ಷಾಂದೇಹಿ' ಎಂದು ಕೂಗಿದನಂತೆ. ತಿರಿದು ಬಾಳುವವರಿಗೆ ಅರಮನೆಯೇನು, ನೆರೆಮನೆಯೇನು? ಆದರೆ ಕವಿಯ ಮಾತಿದು:

ಅರಮನೆಯ ಭಿಕ್ಷೆ ಬೇಡುವರು ಮುಂಗಡೆ ಹೋಗಿ
ಎಲ್ಲ ಮನೆಯಲಿ ಕೇಳುವಂತೆ ಕೇಳುವುದುಂಟೆ?

ಆಗ ಕಾವಲುಗಾರ ಅವನನ್ನು ಕಂಡು ''ಪಕ್ಕದಲಿ ಹೋಗಿ ಕೇಳಣ್ಣ'' ಎನ್ನುತ್ತಾನೆ. ಭಿಕ್ಷೆ ನೀಡಲು ಪಕ್ಕದ ಬಾಗಿಲಲ್ಲಿ ವ್ಯವಸ್ಥೆಮಾಡಿದ್ದರು. ಇದು ಸಂನ್ಯಾಸಿಗೆ ಅರ್ಥವಾಗಲಿಲ್ಲ. ನಿಂತಲ್ಲಿಯೇ ಅವನು ಮತ್ತೊಮ್ಮೆ 'ಭವತಿ, ಭಿಕ್ಷಾಂದೇಹಿ' ಎಂದು ಕೂಗುಹಾಕುತ್ತಾನೆ. ಆ ಸಮಯದಲ್ಲಿ ರಾಜ ತನ್ನ ಕಿರಿಯ ರಾಣಿಯೊಂದಿಗೆ-(ಇಲ್ಲೂ ಅರ್ಥಪುಷ್ಟಿಯಿದೆ, ಲಾಭದೃಷ್ಟಿಯಿದೆ)-ಏಕಾಂತದಲ್ಲಿದ್ದಾನೆ. ಈ ಸರಸದ ನಡುವೆ ಆ ಸಂನ್ಯಾಸಿಯ ಕೂಗು ವಿರಸವಾಯಿತು. ದೊರೆ ದುಡುಕಿ 'ಯಾರಲ್ಲಿ! ಆತನನ್ನು ತೊಲಗಿಸಿ' ಎಂದು ಅಪ್ಪಣೆ ಮಾಡುತ್ತಾನೆ. ಸುಲಭಕೋಪಿಯಾದ ಸಂನ್ಯಾಸಿ - ಇಂಥವರಿಂದಲೇ ನಮ್ಮ ಎಷ್ಟೋ ಸಾಮ್ರಾಜ್ಯಗಳು ಹಾಳಾಗಿರುವುದು - 'ಇಷ್ಟರಲ್ಲೇ ನಿಮ್ಮ ಈ ಕೊಬ್ಬು ಮುರಿಯುವುದು, ಊರು ಹಾಳಾಗುವ್ವುದು' ಎಂದು ಶಾಪಹಾಕಿ 'ಮೊರೆಯುತ್ತ ಸಾಗಿದನು.' ಇದಕ್ಕೆ ರಾಣಿಯಾದವಳು ಹೆದರಿ, ಓಡಿಬಂದು ಸಂನ್ಯಾಸಿಯ ಕಾಲಿಗೆ ಬೀಳುತ್ತಾಳೆ. ವಿಧಿಯ ದೂತನಂತೆ ತಾನು ಹಾಗೆ ನುಡಿದದ್ದಾಯಿತೆಂದೂ, ಊರು ಹಾಳಾಗುವುದು ಅನಿವಾರ್ಯವೆಂದೂ, ಆದರೆ ಹೀಗೆ ಹಾಳಾಗುವ ಊರು ರಾಣಿಯ ಪುಣ್ಯದಿಂದ, ಹನ್ನೆರಡು ವರುಷಕ್ಕೆ ಒಂದು ಸಲ-ಒಂದು ರಾತ್ರಿ-ಪ್ರಾಚೀನ ವೈಭವದಿಂದ ಮೆರೆಯುತ್ತದೆಂದೂ ಆತ ಹೇಳಿ ಕಣ್ಮರೆಯಾಗುತ್ತಾನೆ. ಈ ಪ್ರಕರಣ ನಡೆದು ನಾಲ್ಕು ವರ್ಷ ಕಳೆಯುವುದರೊಳಗಾಗಿ ಶತ್ರುಸೇನೆಗೆ ಊರು ಬಲಿಯಾಗುತ್ತದೆ. ಸಂಪತ್ತಿನ ಸೀಮೆಯೆಲ್ಲ ಆ ಶಾಪದಿಂದಲೋ ಎಂಬಂತೆ ಪಾಳುಗೋಡೆಗಳ ಸಾಲುಸಾಲಗಿ ನಿಲ್ಲುತ್ತದೆ. ಆ ಶಾಪಕ್ಕೂ ಈ ಶತ್ರುಗಳ ಮುತ್ತಿಗೆಗೂ ಸಂಬಂಧವಿಲ್ಲದಿದ್ದರೂ ಒಂದು ಕ್ರಮ ಕಾಣುತ್ತಿದೆ. ಕಾರಣ ಹೇಗಿರಬಹುದೆಂದೂ ಕವಿಯನ್ನು ಕೇಳಿದರೆ ಅವರು ಹೇಳಿದ್ದಾರೆ: ''ಈ ಸಂಗತಿ ನಿಮಿತ್ತ ಮಾತ್ರ: ಆದರೆ ಊರೂರೆ ಪಾತಕವ ಮಾಡಿತ್ತು; ರಾಜ ಆ ಊರ ಮುಖ' ಎಂದು. ಹೀಗೆ ಭಾಗ್ಯದ ಸರೋವರ ಒಣಗಿ ಭೋಗದ ಕೆಸರು ಉಳಿಯುತ್ತದೆ; ಭೋಗದ ಕೆಸರಿನಲ್ಲಿ ರಾಜ್ಯಲಕ್ಷ್ಮಿ ಭೂಗತವಾಗುತ್ತಾಳೆ.

ಚಿತ್ರಾಪೂರ್ಣಿಮೆಯ ರಾತ್ರಿ ಬಾರಕೂರಿನ ಕಡೆ ಸುಳಿಯುವುದು ಅಪಾಯಕರವೆಂದೂ, ದೆವ್ವಗಳು ಕಾಡುವುವೆಂದೂ ಜನಕ್ಕೆ ತಿಳಿದಿತ್ತು. ವೈದ್ಯರೂ ಬಲ್ಲರು. ಆಗವರಿಗೆ ನಡುಹರೆಯ. ಅವರು ಆ ಕಾಲದಲ್ಲಿ.

‘ವೈದ್ಯಕಿಯ ವೃತ್ತಿಯಲಿ
ಕುಂದಾಪುರದ ಮೊದಲು ಮಂಗಳೂರಿನವರೆಗೆ
ಒಂದೂರ ಬಿಡದೆ ಸುತ್ತಿದೆನು. . . .
ಒಂದು ಸಲ. . . ಒಂದು ಸಂಜೆ
ನಮ್ಮೀ ಬಾರಕೂರತ್ತ ನಡೆದಿಹೆನು’

ಎಂದು ಹೇಳಿ ತಮ್ಮ ಕಥೆಯನ್ನು ಮೊದಲುಮಾಡುತ್ತಾರೆ. ವೈದ್ಯರು ಬಾರಕೂರ ತೋಪಿನ ಗುಡಿಯೊಂದರಲ್ಲಿ ತಂಗಿದ್ದಾರೆ.

ಅದರ ಮರಬಳ್ಳಿ
ಹೂತಿಹುವು ಸರಳಿಯದು ತೆಳುಹಸುರ ಹೂ ಇಲ್ಲಿ
ಬೆರೆಡೆ ಕರಂಡೆ; ಮಲ್ಲಿಗೆಯೆ ಎಂಬಂತಿಹುದು
ಹುಣುಗಲದ ಮರದಮೇಗಡೆ ಕೆಂಚ ಹೂ; ತೋಪ
ಅಂಚಿನಲಿ ಹೊನ್ನೆಮರ ಒಂದು. ಆ ಬೆಳಕಿನಲಿ
ಏನೋ ತೆರೆದಲಿ ಕಣ್ಗೆ ಚೆನ್ನ ಕಂಡಿತು.

ಕಣ್ಗೆ ಚೆನ್ನ ಕಂಡಿತು! ತಳಿತು ಯಾವುದೋ ಬೆರಗಿನಲಿ ನಿಂತ ಆ ಹೊನ್ನೆ ಮರವನ್ನು ಕಂಡು ವೈದ್ಯರಿಗೆ ಹಿಂದಣೂರಿನಲ್ಲಿ ತಾವು ಕಂಡಿದ್ದ ಪಾಲ್ಕಾಡಿನ ಚೆಲುವೆ ಮಲೆಯಾಳಿ ಗೌರಜ್ಜಿಯ ನೆನಪಾಗುತ್ತದೆ. (ಮಾಸ್ತಿಯವರ ಕವಿತೆಯಲ್ಲಿ ಅಲಂಕಾರವೆಂದರೆ ಇಷ್ಟೆ!) ‘ತಳಿತ ಸುರ ಹೊನ್ನೆಮರ ನಿಂತ ಪರಿ ಗೌರಜ್ಜಿ ನಿಂತ ಪರಿಯನು ಮನಕೆ ತರಲು, ಅವಳಿತ್ತ ಎಳೆ ಸುರುಳಿ ನೆನಪಾಗಿ, ಅದನು ಮೆಲ್ಲುವ ಎಂದು ಗುಡಿಯ ಬದಿಯಲಿ’ ವೈದ್ಯರು ವಿಶ್ರಮಿಸಿಕೊಳ್ಳುತ್ತಾರೆ. ಕಣ್ಣೆದುರಿಗೆ ಅಳಿಲು, ಹಾವರಾಣಿಯ ಪಿಳ್ಳೆ ಓಡಾಡಿದುವು. ಹಕ್ಕಿಗಳು ಗೂಡು ಸೇರಿದುವು. ಸುತ್ತ ತೆಂಗಿನ ತೋಟ. ‘ಭುವನೇಶ್ವರೀ ದೇವಿ ಸೀತಾನದಿಯ ಉಬ್ಬೆದೆಯ ನೀರಿನಲಿ ತೆಪ್ಪದಲಿ ಕುಳಿತೇನು ಸೂರ್ಯನೆಡೆ ಹೊರಟಳೋ’ ಎಂದು ತೋರಿತು. ಪಡುವಲ ಬೆಳಕು ಅರಿತು. ಹಾಗೆಯೇ ವೈದ್ಯರು ತಾವು ತಂದಿದ್ದ ತಾಂಬೂಲವನ್ನು ಹಾಕಿಕೊಂಡು, ಶೀತಾಸ್ಪದವಾಗದಿರಲೆಂದೇನೋ, ಬಗಲಲ್ಲಿದ್ದ ಸಂಪುಟವನ್ನು ತೆಗೆದು ಕಸ್ತೂರಿ ಮಾತ್ರೆಗಳಂತೆ ಕಂಡ ಒಂದೆರಡು ಮಾತ್ರೆಗಳನ್ನು ಬಾಯಲ್ಲಿ ಹಾಕಿಕೊಳ್ಳುತ್ತಾರೆ. (ಇಲ್ಲಿ ಮಾತ್ರೆಗಳ ಲೆಕ್ಕಾಚಾರ ಬೇರೆ ನಡೆಯುತ್ತದೆ) ಎಲೆ ಅಡಿಕೆ ಜಗಿಯುತ್ತಾ ಅವರಿಗೆ ಅದು ಚಿತ್ರಾಪೂರ್ಣಿಮೆಯ ಸಂಜೆ ಎಂಬುದರ ಅರಿವಾಗುತ್ತದೆ. ಏತರ ಅಮಲನಿಂದಲೋ ಕಣ್ಣು ಜೌಹಿಡಿದು, ಅಷ್ಟರಲ್ಲೇ ಇದ್ದ ಬಳಿಯಿಂದ ಏಳಲಾರದವರಾಗುತ್ತಾರೆ.

ಆಗ ಅವರ ಕಣ್ಣಿಗೆ ಬಿದ್ದ ನೋಟ ಇದು. ನಾಲ್ಕಾರು ಬೆಡಗಿಯರು ಮಕ್ಕಳು ಮರಿ, ಅಲಂಕರಿಸಿದ ತಟ್ಟೆಗಳನ್ನು ಹಿಡಿದು ಯಾವುದೋ ಗುಡಿಗೆ ಹೊರಟಿಹರು; ತಲೆಗೆ ಹೂ ಮುಡಿದಿಹರು. ಆ ಗುಂಪಿನಲ್ಲಿದ್ದ ಒಬ್ಬಾತನನ್ನು ಎತ್ತ ಹೊರಟಿರಿ ಎಂದು ವೈದ್ಯರು ಕೇಳುತ್ತಾರೆ. ಮಂಜುನಾಥನ ಗುಡಿಗೆ ಎಂದು ಆತ ಹೇಳುತ್ತಾನೆ. ಇವರು ಹಾಗೆಯೇ ಆ ದಿಕ್ಕನ್ನು ನೋಡುತ್ತಾರೆ. ತಿಂಗಳ ತಣ್ಣನೆಯ ಬೆಳಕಿನಡಿಗೆ ಹಿರಿದಾಗಿ ಬಾಳುವ ಊರೊಂದು

ಥಳಥಳಿಸಿತ್ತು; ಎದುರಲೆ ಮೂರುಕೇರಿ; ಮನೆಮನೆಯ ಮುಂದೆ ದೀಪ; ಮಧ್ಯದ ಕೇರಿಯಲ್ಲಿ ಒಂದು ದೇವಮಂದಿರ; ನೆಲೆಯಲ್ಲಿ ಚಿತ್ರಾಪೂರ್ಣಿಮೆಯ ತೇರು; ಒಳಗುಡಿಯಲ್ಲಿ ಪೂಜೆ. ಗುಂಪು, ಗದ್ದಲ, ಗಂಟೆಯ ಸದ್ದು, ಭಜನೆಯ ತಾಳ ಮದ್ದಲೆ, ಹಿರಿಮನೆಯ ಓಲಗ. ನುಡಿಯಬಾರದ ಆನಂದ.

ತಂಗಾಳಿ ಬೀಸುತಿರೆ
ಬೆಳುದಿಂಗಳೇನು ತೊಟ್ಟಿಲಲಿಟ್ಟು ತೂಗಿತೋ

ಎಂಬಂತೆ ಜೊಂಪೇರಿ, ಅಲ್ಲೆ ವೈದ್ಯರು ನಿದ್ರಾಧೀನರಾದರು. ಎಷ್ಟು ಹೊತ್ತು ಹಾಗೆ ಉರುಳಿದ್ದರೋ ಅವರಿಗೆ ತಿಳಿಯದು. ಇರುಳ ಹಬ್ಬಿನಲ್ಲಿ ಯಾರೋ ಬಂದು ಅವರನ್ನು ಎಬ್ಬಿಸಿದಂತಾಗಲು ವೈದ್ಯರು ಕಣ್ತೆರೆಯುತ್ತಾರೆ ಮೋಹಿನೀ ಭೂಮಿಯಲ್ಲಿ! ಎದುರಿಗೊಬ್ಬ ದೂತ. ಆತ ಕೇಳಿದ ನೀವೇಕೆ ಬೀದಿಯಲ್ಲಿ ಮಲಗಿದ್ದೀರಿ ಎಂದು ನಮ್ಮ ಒಡತಿ ಕೇಳುತ್ತಾಳೆ ಎಂದು. ಕಣ್ಣುಜ್ಜಿಕೊಂಡು ಮತ್ತೆ ನೋಡುತ್ತಾರೆ. ಎದುರಿಗೊಬ್ಬಳು ಜಗನ್ಮೋಹಿನಿ. ಗೌರಚ್ಚಿಯ ಅಕ್ಕನಂತೆಯೋ ಅತ್ತಿಗೆಯಂತೆಯೋ ಕಂಡಳು ಎಂದು ಇವರು ಹೇಳುತ್ತಾರೆ. ತಳಿತ ಸುರ ಹೊನ್ನೇಮರ, ಗೌರಚ್ಚಿ, ಜೊತೆಗೆ ಈ ಗೌರಚ್ಚಿಯಂತೆ ತೋರುವ ಮಾಯಾಂಗನೆ. ಏನು ಸ್ವಾಮಿ ಈ ತುಂಬಿದೂರಿನಲ್ಲಿ ಮಲಗಲು ನಿಮಗೆ ಸ್ಥಳವಿಲ್ಲವೆ, ಬೀದಿಯಲ್ಲಿ ಮಲಗುವರೆ, ಎಂದು ಆಕೆ ಕೇಳುತ್ತಾಳೆ; ಆ ಉಸಿರಿನಲ್ಲೇ 'ಚೆನ್ನ, ರಾಯರನು ಮನೆಗೆ ಕರೆತಂದು ಹಾಸಿಕೊಡು ಅಲ್ಲಿ ಮಲಗಲಿ' ಎಂದು ಆಳಿಗೆ ಅಪ್ಪಣೆಕೊಟ್ಟು ಹೋಗುತ್ತಾಳೆ. ವೈದ್ಯರು ಮುಗ್ಧರಾಗುತ್ತಾರೆ.

ಆ ಉಲಿಯ ಮೆಲುಪೊ ಆ ಉಲಿದ ನುಡಿಗಳ ನುಣುಪೊ:
(ಈ ಹ್ರಸ್ವಸ್ವರಗಳ ವೀಣಾಗಾನವನ್ನು ಕೇಳಿ!)

ಚೆನ್ನನ ಜೊತೆಯಲ್ಲಿ ವೈದ್ಯರು ಆಕೆಯ ಮನೆಗೆ ಹೋಗುತ್ತಾರೆ. (ದಾರಿಯಲ್ಲಿ ಮತ್ತೆ ಸುರಹೊನ್ನೆಮರ ಬರುತ್ತದೆ.) ಆಕೆಯ ಹೆಸರೇನು, ರಾಜಮಣಿ; ರಾಜಮಣಿ! ಆಕೆಯ ಮನೆಯಲ್ಲಿ ಇವರಿಗೆ ದಿವ್ಯವಾಗಿ ಅತಿಥಿ ಸತ್ಕಾರ ನಡೆಯುತ್ತದೆ. (ಆ ಊಟದ ವಿವರಗಳನ್ನು ಕಾಗದದ ಮೇಲೆ ಬರೆದರೆ ನಿಮಗೆ ಈಗಿನ ಸ್ಥಿತಿಯಲ್ಲಿ ಸಿಟ್ಟು ಬರಬಹುದು. ಕವಿತೆ ಓದಿ.) ವೈದ್ಯರು ಸುಖಾಸೀನರಾಗಿದ್ದಾರೆ. ಆ ಸಮಯದಲ್ಲಿ ಯಾವನೋ ಹೊಸಬ ಬಾಗಿಲಿಗೆ ಬಂದು ಸ್ವಾಮೀ, ಇದು ರಾಜಮಣಿಯವರ ಮನೆಯೇ?' ಎಂದು ಕೇಳುತ್ತಾನೆ. ಚೆನ್ನ ಆತನನ್ನು ಒಳಗೆ ಕರೆದು ''ಹೌದು, ಏನಾಗಬೇಕು?'' ಎಂದು ಎಚ್ಚರಿಸುತ್ತಾನೆ. ಆತ ''ಆಹ. . .ಏನು ಇಲ್ಲ. . .ಅ. . .ಅ. . . ಅ. . . .ನಾನು ಹಿಂದಿನ ಸಾರಿ ಇಲ್ಲಿಗೆ ಬಂದಿದ್ದಾಗ ಒಂದು ಪೆಟ್ಟಿಗೆಯನ್ನು ಬಿಟ್ಟು ಹೋಗಿದ್ದೆ. . . ಅದನ್ನು ಒಯ್ಯಲು ಮತ್ತೆ ಬಂದೆ' ಎಂದು ವಿವರಿಸುತ್ತಾನೆ. 'ನೋಡಿ ಬರುತ್ತೇನೆ ಇಲ್ಲಿ ಕುಳ್ಳಿರಿ' ಎಂದು ಹೇಳಿ ಚೆನ್ನ ಒಳಗೆ ಹೋಗುತ್ತಾನೆ. ವೈದ್ಯರು ಆಗ ಈ ಹೊಸ ವ್ಯಕ್ತಿಯನ್ನು ನೋಡುತ್ತಾರೆ. 'ಎಲಾ ಇವನನ್ನು ಎಲ್ಲೋ ನೋಡಿದ್ದೇನಲ್ಲ! ಇವ ಹಿಂದೆ ಮಂಗಳೂರಿಗೆ ಬಂದಿದ್ದ ರತ್ನಪಡಿ ವ್ಯಾಪಾರಿ, ಮೈಸೂರಿನವನಲ್ಲವೆ! ಇರಬೇಕು' ಎಂದು ಇವರ ಮನಸ್ಸು ಹೇಳುತ್ತಿದೆ. ಈ ಊಹೆ ಸರಿಯೆಂದು ಆತನ ಉತ್ತರದಿಂದ ಸ್ಪಷ್ಟವಾಗುತ್ತದೆ. ''ನೀವು ಇಲ್ಲಿಯೇ ಇರುವಿರೋ ಬರುವಿರೋ?' ಎಂದು ಅವರ ಪ್ರತಿ ಪ್ರಶ್ನೆ. ''ಇದು ನಿಜದ ಊರಲ್ಲ; ಊರದೈಯ'' ಎಂದು ಹೇಳಲು ಅವನಿಗೆ ಜೀವದಲ್ಲಿ ಭಯ; ಆದರೂ ಸ್ನೇಹಿತರು ಇಲ್ಲಿ ಸಿಕ್ಕಿಕೊಂಡರಲ್ಲ ಎನ್ನುವ ವ್ಯಸನ. ಅಷ್ಟು ಹೊತ್ತಿಗೆ ಚೆನ್ನ ಬಂದು ಆ ಸೆಟ್ಟಿಯನ್ನು ಕರೆದು 'ಅಗೋ ಅಲ್ಲಿ. .

ನೀವು ಹಿಂದೆಲ್ಲಿ ಇಟ್ಟಿದ್ದಿರೋ ಅಲ್ಲೇ ನಿಮ್ಮ ಪೆಟ್ಟಿಗೆಯಿದೆ. ಒಳಗೆ ಹೋಗಿ ತೆಗೆದುಕೊಂಡು ಹೋಗಬಹುದು' ಎಂದು ತಿಳಿಸುತ್ತಾನೆ. ಸೆಟ್ಟಿಗೆ ಭಯ; ಭಯಪಟ್ಟರೆ ಗಂಟು ಹೋಗಿಬಿಡುತ್ತದೆ! ಬೆಕ್ಕಿನಂತೆ ಒಳಗೆ ಹೋಗಿ ಫಕ್ಕನೆ ಪೆಟ್ಟಿಗೆಯನ್ನು ಹಿಡಿದುಕೊಂಡು ಆತ ಹೊರಗೆ ಬರುತ್ತಾನೆ. ಅಲ್ಲಿಂದ ಓಡುವ ಸಮಯದಲ್ಲಿ ಆತ ಇವರ ಕಿವಿಯಲ್ಲಿ ಕಡೆಯ ಎಚ್ಚರಿಕೆ ಕೊಡುತ್ತ

ಇದು ನಿಜದ ಊರಲ್ಲ;
ಅಂದಿನೂರಿನ ದೈಯ; ಬರುವುದಾದರೆ ಬನ್ನಿ
ಬರುವುದಕೆ ಆಗದಿದ್ದರೆ ನಿಮ್ಮ ಒಡವೆ ಅದೇನೆ
ಇದ್ದರೂ ಜೊತೆಯಾಗಿ ಮೈಗೆ ಸೋಕಿರುವಂತೆ
ಇರಿಸಿಕೊಳಿರಿ'

ಎಂದು ಹೇಳುತ್ತಾನೆ. ವೈದ್ಯರಿಗೆ ಇದೆಲ್ಲ ಅರ್ಥವಾಗುವುದೇ ಇಲ್ಲ. ಇವರಿಗೆ ಒಳ್ಳೆಯದನ್ನು ಬಯಸಿ ಅವನು ಹೇಳಿದ ಮಾತು 'ಮಾತಿನ ದೈಯ'ವಾಗಿ ಪರಿಣಮಿಸುತ್ತದೆ. ಆದರೆ 'ನಿಜದ ದೈಯ' ಹೆಣ್ಣಿನ ರೂಪಿನಲ್ಲಿ ಎದುರಿಗೆ ನಿಂತಿದ್ದರೆ ಅದನ್ನು ಹೆಣ್ಣೆಂದೇ ಇವರು ನಂಬುತ್ತಾರೆ. ನಂಬುವುದೇನು? ಇವರಿಗೆ ಸಂದೇಹವೇ ಇಲ್ಲ, ಮತ್ತೆ ರಾಜಮಣಿ ಬಾಗಿಲೆಡೆ ಬಂದು ಎದುರಿನಲಿ ಹೇಳಲಾಗದ ಒಂದು ಬೆಡಗ ನಿಲವಲಿ ನಿಂತು ಫಲಹಾರ ಆಯಿತೆ ಎಂದು ಕೇಳುತ್ತಾಳೆ. ಆ ಕೇಳುವೆಯ ಅಂದವೇ ಅಂದ! ಸೌಂದರ್ಯದ ಮಾಯೆಯಲ್ಲಿ ಬಿಳಿಹುಬ್ಬಿನ ಮುದುಕರು ಪ್ರೇಮಾಧೀನ ಯುವಕನಂತೆ ವ್ಯವಹರಿಸುತ್ತಾರೆ. ಇದೂ ನಿಜದ ಪ್ರಾಯವಲ್ಲ; ಪ್ರಾಯದ ದೈಯ. ಇಂಥ ಚೆಲುವೆ ಇಷ್ಟು ಹತ್ತಿರ ಬಂದು ಮೆಲ್ಲನುಲಿಯುತ್ತಿರುವಾಗ ಇವರ ಮನಸ್ಸು ಬುಟ್ಟಿಯಲ್ಲಿ ಬಿದ್ದ ಮೀನಿನಂತೆ ಮಿಲಿಮಿಲಿ ಹೊರಳುತ್ತದೆ. ಆ ಸಮಯದಲ್ಲಿ ಇನ್ನು ಯಾರಾದರೂ ದುಡುಕಿಗಳಿದ್ದರೆ ಏನಾಗಬಹುದಿತ್ತೋ - ಆದರೆ ಆ ಗಳಿಗೆಯ ನಡವಳಿಕೆಗೆ ಮಾತ್ರ ಯೌವನದ ಗಿಲೀಟು ಇವರ ಬಾಳಿಗೆ ಬಂದಿದ್ದರೂ, ಬಹುಕಾಲ ಧರ್ಮಮಾರ್ಗದಲ್ಲಿ ನಡೆದು ಮಾಗಿದ ಇವರ ಜೀವನದಲ್ಲಿ ಹೀಗೆ ತಮ್ಮನ್ನು ಕನಿಕರಿಸಿ ಮನೆಗೆ ಕರೆತಂದ ಹೆಣ್ಣಿನ ಚೆಲುವ ಕಣ್ಣಿಕ್ಕಿ ನೋಡುವುದು ಸರಿಯಲ್ಲ ಎನ್ನುವ ವಿವೇಕ ಹೊಳೆಯುತ್ತದೆ. ಮಾಯೆಯಲ್ಲಿ ಮುಳುಗಿದ್ದರೂ ಇಂಥ ಮಧುರವಾದ ಆಪತ್ ಸಮಯದಲ್ಲಿ ಇವರ ಮನಸ್ಸು ಚಲ್ಲುಬಡಿಯದೆ ಧರ್ಮದ ದಿಕ್ಕಿಗೆ ತಿರುಗುವುದು ಸ್ತುತ್ಯವಾಗಿದೆ. ಇದು ಖಂಡಿತವಾಗಿ ಮಾಸ್ತಿಯವರ ಮನೋಧರ್ಮವೆಂದು ಘೋಷಿಸ ಬಹುದು. ಸರಿ, ಅಷ್ಟು ಹೊತ್ತಿಗೆ ಚೆನ್ನ ಒಳಮನೆಯಲ್ಲಿ ಹಾಸಿಗೆ ಹಾಕಿ ಹೊರಡಲು ಅನುವಾಗುತ್ತಾನೆ. ರಾಜಮಣಿ ಮೆಲುದನಿಯಲ್ಲಿ 'ಅಲ್ಲಿ ಹೋಗಿ ಮಲಗಿರಿ' ಎಂದು ಸೂಚಿಸುತ್ತಾಳೆ. ಇವರು ಅಧೀನರಂತೆ ವರ್ತಿಸುತ್ತಾರೆ; ಆದರೆ ಏನನ್ನೋ ಮರೆತವರಂತೆ ಚೆನ್ನನನ್ನು ಕುರಿತು ''ಈ ರಾಜಮಣಿ ಯಾರು?'' ಎಂದು ಕೇಳುತ್ತಾರೆ. ಅವನು ''ಆಕೆ ನಮ್ಮೊಡತಿ, ನರ್ತಕಿ, ರಾತ್ರಿ ರಾಜಮಂದಿರದಲ್ಲಿ ಓಲಗವಿತ್ತು; ಅದನ್ನು ಮುಗಿಸಿಕೊಂಡು ಬರುವಾಗ ದಾರಿಯಲ್ಲಿ ನೀವು ಮಲಗಿದ್ದಿರಿ. ಆಕೆ ನಿಮ್ಮನ್ನು ಇಲ್ಲಿಗೆ ಕರೆತರುವಂತೆ ಆಜ್ಞೆ ಮಾಡಿದಳು'' ಎನ್ನುತ್ತಾನೆ. ''ನರ್ತಕಿಯಾದ ರಾಜಮಣಿ ವಾರವನಿತೆಯೆ ಸತ್ಯ.'' ಇಂಥ ಸೌಜನ್ಯದ ಹೆಣ್ಣು ಗರತಿಯಾದರೇನು, ಸೂಳೆಯಾದರೇನು, ಈಕೆಯ ನೋಟ ನಿಲವುಗಳನ್ನು ನೋಡಿದರೆ 'ಗರತಿಯರ ಗರತಿಯಂತಿಹಳು' ಎಂದು ವೈದ್ಯರ ವಿಮರ್ಶೆ. ರಾಜಮಣಿ ಇನ್ನೂ ಹತ್ತಿರ ಬರುತ್ತಾಳೆ. ಒಂದು ತೆರದ ನಗೆ ನೋಟದಲಿ ನೋಡುತ್ತಿದ್ದಾಳೆ.

ಚೆನ್ನ ಮಾರೆಯಾಗುತ್ತಾನೆ. ಆಕೆ ಇವರ ಮಂಚದ ಬಳಿಗೆ ಬಂದು ಬಹುಕಾಲ ದಿಟ್ಟಿಸುತ ನಿಂತಳು. ಕೊನೆಯಲಿ ತನ್ನ ಕೈಯಿಂದ ಇವರ ಗಲ್ಲವನ್ನು ಸೋಕಿದಳು.

ಅಷ್ಟೇ ಅವರ ನೆನಪು. ಗಲ್ಲವ ಬೆರಳು ಸೋಕಿದುದು. ಮಾಯೆ ಒಡೆಯಿತು. ಚಿತ್ರಾಪೂರ್ಣಿಮೆಯ ವೈಭವ ಅಂತರ್ಧಾನವಾಯಿತು. ಬೆಳಗಿನ ಹೊತ್ತಿಗೆ ಬಾರಕೂರು ಮತ್ತೇ ಪಾಳಾಯಿತು. ಸೀತಾನದಿ ಎಂದಿನಂತೆ ಹರಿಯುತ್ತಿದೆ. ವೈದ್ಯರು ತಮ್ಮನ್ನು ತಾವು ಅರಿಯುವ ಹೊತ್ತಿಗೆ ಅದೇ ಹೆಸರಿನ ಹೊಸ ಊರಿನ ಭಟ್ಟರ ಅಂಗಳದಲ್ಲಿ ಮಲಗಿದ್ದಾರೆ.

ಇರುಳೆಲ್ಲ ನಡೆದದ್ದು ಇವರಿಗೆ ಮಾತ್ರ ನಿಜ; ಉಳಿದವರಿಗೆ ಕಥೆ. ನಡೆದದ್ದು ಇಷ್ಟೆ ಎಂದು ಇತರರು ಹೇಳುತ್ತಾರೆ. ಬೆಳಗಿನ ಜಾವದಲ್ಲಿ ಹಳೆ ಊರಿನ ತೋಪಿನ ಬಳಿ ಮರದ ಬುಡದಲ್ಲಿ ವೈದ್ಯರು ಉರುಳಿದ್ದನ್ನು ಕಂಡು ಅವರ ಹಾರಾಡಿ ಮಾದ ಊರಿನವರಿಗೆ ತಿಳಿಸುತ್ತಾನೆ. ಭಟ್ಟರು ಓಡಿಬಂದು ವೈದ್ಯರನ್ನು ತಮ್ಮ ಅಂಗಳಕ್ಕೆ ಸಾಗಿಸಿದ್ದಾರೆ. ವೈದ್ಯರು ತಮ್ಮ ಅನುಭವವನ್ನು ಜನಕ್ಕೆ ತಿಳಿಸುತ್ತಾರೆ. ಬಾರಕೂರ ಕತೆ ಬಹುಜನಕೆ ಬರಿಯ ಕತೆ; ಇವರಿಗೆ ಮಾತ್ರ ನಿಜದನುಭವ.

ಬಾರಕೂರಿನ ಸ್ಥಳಪುರಾಣವನ್ನು ಅರಿತಿದ್ದರೂ, ಈ ವೈದ್ಯರು ಆ ಸಂಜೆ ಮೈ ಮರೆತು ಅಲ್ಲಿ ಉಳಿದದ್ದೇಕೆ ಎನ್ನುವುದಕ್ಕೆ ಉತ್ತರ ಕವನದ ಹಿನ್ನುಡಿಯಲ್ಲಿದೆ. ಆ ಸಂಜೆ ಮರದ ಬುಡದಲ್ಲಿ ಕುಳಿತು ತಾಂಬೂಲದೊಂದಿಗೆ ಸೇವಿಸಿದ ಮಾತ್ರೆಗಳು ಕಸ್ತೂರಿ ಮಾತ್ರೆಗಳಾಗದೆ ಅಫೀಮಿನ ಮಾತ್ರೆಗಳಾಗಿದ್ದವು. ಇವರು ಆ ಮಾತ್ರೆಗಳನ್ನೂ ಈ ಮಾತ್ರೆಗಳನ್ನೂ ಒಂದೇ ಬಣ್ಣದ ಎರಡು ಪ್ರತ್ಯೇಕ ಸಂಪುಟಗಳಲ್ಲಿಟ್ಟಿದ್ದರು. ಹಳೆಯೂರ ಕಡೆ ಇವರು ಹೊರಡುವ ಮುನ್ನ ಎಲೆ ಸುರಳು ಸುತ್ತಿಕೊಡುವಾಗ ಕಸ್ತೂರಿ ಮಾತ್ರೆ ಎಲ್ಲಿದೆ ಎಂದು ಗೌರಜ್ಜಿ ಕೇಳಿದ್ದಾಳೆ. ಚೀಲದ ಕೆಂಪು ಸಂಪುಟದಲ್ಲಿದೆ ತೆಗೆದುಕೋ ಎಂದು ಅವಸರದಲ್ಲಿ ಹೇಳಿದ್ದಾರೆ. ಇದಕ್ಕೆ ಬದಲು ಅದು ಬಿದ್ದು ಇಷ್ಟೆಲ್ಲ ಪ್ರಮಾದಕ್ಕೆ ಅವಕಾಶವಾಯಿತು. ಈ ಹಾಳುಸಂಜೆ ತಾಂಬೂಲ ಜಗಿಯುವಾಗ ವೈದ್ಯರು ಮಾತ್ರೆಗಳ ಗಣಿತವನ್ನು ಮನಸ್ಸಿನಲ್ಲೇ ಮಾಡಿಕೊಳ್ಳುವುದನ್ನು ನಾವು ಕವನದಲ್ಲಿ ನೋಡುತ್ತೇವೆ. ಇವರು ಹೇಳುವ ಕತೆ ಅಫೀಮಿನ ಅಮಲೆಂದು ಕೆಲವು ಜನ ಹೇಳಬಹುದು. ಇಂಥ ಕನಸನ್ನು ಅನುಭವಿಸಿದವರ ಮುಂದೆ ಹೀಗೆ ಹೇಳುವುದು ಅನ್ಯಾಯ.

ಸುಮ್ಮನೆ ಇದು ಈ ಕವಿತೆಯ ಪರಿಚಯ. ಅಲ್ಲಿನ ಸಂಗತಿಗಳ ವಿವರಗಳೆಲ್ಲ ತುಂಬ ಅಂದವಾಗಿವೆ. ನಮ್ಮ ಜನ ಇಂಥ ಕವಿತೆಯ ಚೆಲುವನ್ನು ಕಂಡು ಸಂತೋಷಪಡದೆ ಇರಲಾರರು. ಈ ಕಥನ ಕವನಗಳನ್ನು ಓದಲು ಬಾರದ ಮಂದಿ ಗದ್ಯವೆಂದು ಕರೆದು ತಮ್ಮ ವಿದ್ವತ್ತಿಗೆ ಗೌರವನ್ನು ತಂದುಕೊಂಡಿರಬಹುದು, ಮತ್ತು ಇಂಥ ಕವಿತೆಯ ಸರಳತೆ ನಮ್ಮ ಸಾಹಿತ್ಯದಲ್ಲಿ ಹೊಸದಾಗಿ ಬಂದು ಹಳೆಯ ಕಾಲದ ರಸಿಕರನ್ನು ಧೃತಿಗೆಡಿಸಬಹುದು, ಇಂಥವರನ್ನು ಕುರಿತಾಗಲಿ ಈ ಕವಿತೆ ಬರುತ್ತಿಲ್ಲ. ಆ ಮಾತಿರಲಿ,

ಲೋಕದಲಿ ಚೆಲುವು ಕಣ್ಣೆದುರು ಹೊಳೆ ಹರಿಯುತಿದೆ.
ಬಾಳ ದುಮ್ಮಾನದಲಿ ಸಿಲುಕಿ ಮನುಜನ ಜೀವ
ಹೊಳೆ ಹರಿವ ಚೆಲುವ ನೋಡುವ ಮನಸು ಇಲ್ಲದಿದೆ;
ಅರಳಿಟ್ಟು ದೊರೆಯಲಿಲ್ಲೆಂಬ ಕೋಪಕೆ ಕೂಸು
ಆಟದಾನೆಯನೆಸೆದು ಅಳುತ ಕುಳಿತಿರುವಂತೆ.

ಇದು ಕವಿತೆಯ ಪೊರೆಯನ್ನು ಬಿಟ್ಟ ಹೃದಯಧ್ವನಿ.

ಈ ಬಾಳ ಮೀರಿರುವ
ಬೇಲೆ ಬಾಳಲಿ ದಾರಿ ನಡವಂದು ನಮ್ಮಾತ್ಮ
ಈ ಲೋಕವನು ಹೊಕ್ಕು ಇಲ್ಲೊಂದು ಜಗವಿತ್ತೆ
ಎಂದು ಅಚ್ಚರಿಗೊಳ್ಳುವುದು; ಉತ್ತರ ಕ್ಷಣವೆ
ಇದನೊಪ್ಪಿಕೊಂಡು ನಡೆವುದು, ಒಮ್ಮೆ ರತ್ನವನು
ಕಳೆದುಕೊಂಬುದು ಒಮ್ಮೆ ನಲ್ಲೆಯನು ಕಾಂಬುದು,
ನಷ್ಟವನು ಕಂಡುಕೊಳ್ಳುವ ವೇಳೆ ಜಗವಿಲ್ಲ.
ಸುಖಕೆ ಮನವನು ತೆತ್ತು ಸೋತಂದು ಜಗವಿಲ್ಲ.

ಇದು ಅಲ್ಲಿಂದಾಚೆಗೆ ಬೆಳಗುವ ಸಾರಸ್ವತ ಜ್ಯೋತಿ. ಕೋಟೆಯೊಳಗಿನ ಕೋಟೆಯಂತಿರುವ ಕೃತಿ ರಚನೆಯಲ್ಲಿ ಕವಿ ಕಥೆಯನ್ನು ನಡೆಸುವುದು; ಕಥೆಗೆ ಕವಿತೆಗೆ ಈ ಸಂಚಾರದಲ್ಲಿ ಹೊಸ ಹೊಸ ಆವರಣಗಳ ನೆಳಲು ಬೆಳಕುಗಳನ್ನು ರಚಿಸುವುದು; ಕಥೆ ತೆಳ್ಳಗಾದೀತು ಎನ್ನುವ ಕಡೆ ಕವಿತೆಯ ಮಿಂಚನ್ನು ಹೊಡೆದು, ಕವಿತೆಯೂ ಸಾಲದು ಎನ್ನುವ ಕಡೆ ಕವಿಯೇ ಬಂದಿಳಿದು ಯಾಜಮಾನ್ಯವನ್ನು ವಸಿಸುವುದು; ಜೊತೆಗೆ ಉದ್ದಕ್ಕೂ ಕಾಣಸಿರುವ ಕುತೂಹಲ, ಸಂತೋಷ, ಕಲಾಸಕ್ತಿ, ಸ್ಥೈರ್ಯ, ಇಷ್ಟರಮೇಲೆ ಎಚ್ಚರದಿಂದ ನಿಜಪ್ರಪಂಚದಲ್ಲಿ ಮಾಯಾ ಪ್ರಪಂಚವನ್ನೂ, ಮಾಯಾ ಪ್ರಪಂಚದಲ್ಲಿ ನಿಜಪ್ರಪಂಚವನ್ನೂ ಆಡಿಸಿ ಬಿಡಿಸುವ ಇಂದ್ರಜಾಲ; ಇಷ್ಟು ಕಾಲ ತಮ್ಮ ಕಾವ್ಯ ಮಂದಿರದಲ್ಲಿ ತಂಗಿದ್ದ ರಸಿಕನನ್ನು ಕಡೆಯಲ್ಲಿ ಕಥೆಯಿಂದಲೂ ಕವಿತೆಯಿಂದಲೂ ಹೊರಗೆ ಕರೆದು ಪ್ರೀತಿಯಿಂದ ರಹಸ್ಯವಾಗಿ-

ಇನ್ನೊಂದು ಮಾತು; ಈ ಬಾಳಿನಲಿ
ನಮಗಿರುವ ಕರಣ ಈ ಜಗದ ಸುಖದುಃಖವನು:
ಸಹಿಸುವರೆ ಬೇಕೆಷ್ಟು ಅಷ್ಟು ಬಲವಾಗಿಹವು:
ಈ ಬಲವ ಮಿಕ್ಕ ಸುಖ ಕಷ್ಟ ಬರೆ ಸೋಲುವುವು.
ಸೋತುದೆ ಅಪಸ್ಮಾರದೊಳಗಾಳುವುವು. ಇದೇ
ಕಾರಣವೆ ಈ ಬಾಳ ಅನುಭವಕೆ ಹಿಂದಾದ
ಬೇರೊಂದು ಅನುಭವಕೆ ಸಮಯ ಬರೆ ಈ ಜೀವ
ದೇಹವನು ತೊರೆಯುವುದು.

ಎಂದು ಸೌಜನ್ಯದಿಂದ ಬೀಳ್ಕೊಡುವುದು - ಇವೆಲ್ಲ ಸಾಹಿತ್ಯದಲ್ಲಿ ತುಂಬ ಹಿರಿಯ ಸಂಪ್ರದಾಯ. ಆ ಸಂಪ್ರದಾಯದಲ್ಲಿ ಇದೊಂದು ಹಿರಿಯ ಕಾವ್ಯ.

*

'ಮಾಸ್ತಿಯವರಾಸ್ತಿ ಆ ಸಣ್ಣ ಕತೆಗಳೆ' ಎಂದು
ಸಾಂಬಶಾಸ್ತ್ರಿಗಳ ಸಿದ್ಧಾಂತ. ಕೇಶವಮೂರ್ತಿ
ಪರಿಚಿತ ಕವಿಗಳೆಲ್ಲ ಬರಿದೆ ರಾರಾಜಿಪರು
ಪ್ರಾಚೀನ ಪ್ರಾರಬ್ಧ ಹೊತ್ತು. ಅದ ಹೊಗಳುವರು
ಶ್ರೀನಿವಾಸರ ಕೃತಿಯನೇನೆಂದು ಮೆಚ್ಚುವರು?
ಗಡವಿಲ್ಲ, ದಲ್ಲಿಲ್ಲ, ಮೇಣ್-ಬತ್ತಿ ಹೊಗೆಯಿಲ್ಲ.

ಅಪ್ರಕೃತ ಸಂಸ್ಕೃತದವಾಂತರದ ಧಗೆಯಿಲ್ಲ.-
ಇಲ್ಲಿ ಜೀವನದಂತೆ ಕವಿತೆ: ಜೀವದ ಉಸಿರು
ಮಳೆ ಬಿದ್ದ ಸಂಜೆ ಬೀದಿಯಲಿ ಸಾವಿರ ಬೆಳಕು,
ಹಸುರು ನಗೆ, ಕೆಂಪು ಗಾಯಗಳು, ಬಂಡೆಯ ಸುತ್ತು
ಬೆಳೆದ ಮೂಗಿಂಗೆ ಈ ಸಹಜ ಕವಿತೆಯ ಮುತ್ತು
ಗ್ರಾಹ್ಯವಾದೀತೆ? ಇದಕಿಲ್ಲ ಕವಿತೆಯ ಹೆಸರು!
'ಶ್ರೀನಿವಾಸರ ಕವಿತೆ ಒಣ ಗದ್ಯವೇ' ಎಂದು
ಎಗರಿ ಬೀಳುವನು: ಈ ಸಂಶಯವೆ ಕವಿಕೀರ್ತಿ.

ಬಿನ್ನಹ

ಡಾ॥ ಎ. ಆರ್. ಕೃಷ್ಣಶಾಸ್ತ್ರಿ

ಮಾ॥ ಶ್ರೀನಿವಾಸರು ''ಕೆಲವು ಸಣ್ಣ ಕತೆಗಳ'' ಲೇಖಕರೆಂದು* ಕನ್ನಡಿಗರಿಗೇ ಆಗಲೇ ಪರಿಚಿತರಾಗಿದ್ದಾರೆ. ಈಗ ಇವರು ಬರೆದಿರುವ ಗ್ರಂಥದಿಂದ ಅವರಿಗೆ ಗದ್ಯ ಕಥೆಗಳ ಲೇಖನದಲ್ಲೆಷ್ಟು ಸಾಮರ್ಥ್ಯವಿದೆಯೋ ಪದ್ಯ ಕವನಗಳಲ್ಲಿಯೂ ಅಷ್ಟೇ ಸಾಮರ್ಥ್ಯವಿದೆ ಎಂಬುದು ವ್ಯಕ್ತವಾಗುವುದು.

ಇದರಲ್ಲಿ ಸುಮಾರು ಐವತ್ತು ಗೀತಿಕೆಗಳಿವೆ. ಪ್ರತಿಯೊಂದಕ್ಕೂ ಅನುಗುಣವಾದ ರಾಗವು ಆಯಾ ಗೀತಿಕೆಯ ಮೇಲೆ ತೋರಿಸಲ್ಪಟ್ಟಿದೆ. ಈ ರಾಗಗಳಲ್ಲಿಯೇ, ಕವಿಸಮ್ಮತವಾದ ಧಾಟಿಯಲ್ಲಿಯೇ, ಗಾನಮಾಡಲ್ಪಟ್ಟ ಕೆಲವು ಗೀತಿಕೆಗಳನ್ನು ನಾವು ಕೇಳಿದ್ದೇವೆ. ಆಗ ಅವುಗಳ ರಾಗ ರಸಮಾಧುರ್ಯಗಳಿಂದ ನಮ್ಮ ಕಿವಿಗಳೂ ಮನಸ್ಸೂ ಸೂರೆಹೋದುವೆಂದು ಸಂಕೋಚವಿಲ್ಲದೆ ಹೇಳುತ್ತೇವೆ.

'ರಂಗನಾಥವಿಜಯ' 'ರಂಗನಾಥವಿವಾಹ' ಎನ್ನದೆ ರಂಗನ ಮದುವೆಯನ್ನು 'ರಂಗನ ಮದವೆ'ಯೆಂದೇ ಕರೆದ ಮಾ॥ಶ್ರೀನಿವಾಸರು ತಮ್ಮ ಪದ್ಯಗಳನ್ನು ಎಂಥ ಸುಲಭವಾದ ಮಾತುಗಳಲ್ಲಿ ಬರೆದಿದ್ದಾರೆಂಬುದನ್ನೂ, ಅವುಗಳಿಗೆ ಎಂಥ ಸಣ್ಣ ಸಣ್ಣ ಸಾಮಾನ್ಯವಾದ ಹೆಸರುಗಳನ್ನು ಕೊಟ್ಟಿರುತ್ತಾರೆಂಬುದನ್ನೂ ನಾವು ಹೇಳಬೇಕಾಗಿಲ್ಲ.

ಇವರು,

''ಕನಕಪುರಂದರಚಂಡಿನಾನಕರ।
ವಿನುತ ಕಬೀರ ರವೀಂದ್ರ ಕವೀಂದ್ರರು॥
ಮನೆಯುಳಿಗದೋರ್ವ ಬಾಲನವರ।
ಇನಿನುಡಿಯತೆರದಿ ನುಡಿಯವು ತೊಡಗಿದೆ''॥

ಎಂದು ''ವಿಬುಧರಲ್ಲಿ'' ತಿಳಿಸಿರುತ್ತಾರೆ. ಮೇಲೆ ಕಂಡ ಕವಿಶ್ರೇಷ್ಠರ ಗ್ರಂಥಾವಲೋಕನದ ಫಲವನ್ನು ಇದರಲ್ಲಿ ಅಲ್ಲಲ್ಲಿ ಕಾಣಬಹುದು. ಆದರೆ ಇದರಲ್ಲಿ ಒಂದು ಸಂಗತಿ; ಕನಕ ಪುರಂದರರು ಪೂರ್ಣ ಜ್ಞಾನಿಗಳು, ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದವರು ಎಂದು ಎಲ್ಲರೂ ಒಪ್ಪುತ್ತಾರೆ. ಅವರಲ್ಲಿ ಇಂದ್ರಿಯಗಳ ಪರಾಧೀನತೆ, ಐಹಿಕಸುಖದ ಅಸ್ಥಿರತೆ, ಅಕಸ್ಮಾತ್ತಾಗಿ ಬರಬಹುದಾದ ''ಕಿಂಚಿತ್ತೂ ದಯವಿಲ್ಲ''ದ ''ಅಂತಕನ ದೂತರು'' ಬಾಹ್ಯಾಡಂಬರದ ನಿಷ್ಪ್ರಯೋಜಕತೆ ಮುಂತಾದವುಗಳ ಪ್ರಸ್ತಾಪವು ಮೇಲಿಂದ ಮೇಲೆ ಬರುತ್ತದೆ. ಅವರು ತತ್ತ್ವಾನು ಭವ ಮಾಡಿಕೊಂಡದ್ದು ಈ ಮಾರ್ಗವಾಗಿಯೇ ಎಂದು ತೋರುತ್ತದೆ. ಆದರೆ ಮಾ॥ಶ್ರೀನಿವಾಸರ

* 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟವಾಗಿರುವ ವಿಮರ್ಶೆ

ಕವಿತಾವೇಶಕ್ಕೆ ಇವು ಅಷ್ಟೊಂದು ಕಾರಣವಾಗಿ ತೋರುವುದಿಲ್ಲ;

''ಏನುಮೋಹ ಏನುಮಾಯ ಏನುಸೊಬಗು ಸೌಂದರ್ಯ ಇ
ದೇನು ಹಾಸ ವಿಲಾಸವಿದೇನಿದು!...''

ಎಂದು ಮನಸ್ಸನ್ನು 'ಉಲ್ಲಾಸ'ಗೊಳಿಸುವ ಜಗತ್ತಿನ ಸೌಂದರ್ಯವೂ ಅದರಲ್ಲಿ ಏನೋ ಒಂದು ದಿವ್ಯತರ ಶಕ್ತಿಯ ಇರುವುದರ ಯತ್ಕಿಂಚಿತ್ಸೂಚನೆಯೂ ಇವುಗಳಿಗೆ ಮೂಲವಿರಬಹುದೇ? ಶ್ರೀನಿವಾಸನೇ ಇಂತು ಪಾಡಿಸುವನು; ಆದರೆ ಅವನು 'ಗಾನಲೋಲ'; 'ಇಳೆಯೊಳಿಹುದು ಒಂದೇಮನ' ಆದರೆ 'ಅದರೊಳು ಸುಳಿಯಂತೆ ಕೊಳಲನು ಹರಿ ನುಡಿಸುವನು; ತಿಳಿವುದೊಮ್ಮೆ ಅದು, ತಿಳಿಯದಿನ್ನೊಮ್ಮೆ.' ಜಗತ್ತನ್ನು ನೋಡಿದರೆ 'ರಾಣಿಯ ಮನೆ' ಯಂತೆ ಮನೋಹರವಾಗಿದೆ, ಆದರೆ ಅದರಲ್ಲಿ ರಾಣಿಯೇ ಕಾಣುವುದಿಲ್ಲ. ಈ ಭಾವವನ್ನು ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ಪದ್ಯಗಳಲ್ಲಿಯೂ ನೋಡಬಹುದು. ಆದರೆ ಮೋಹಕರವಾದ ಸೌಂದರ್ಯದ ಮಧ್ಯದಲ್ಲಿ ನಿಸ್ಸಂಗವಾಗಿ ನಿಂತು ಅದರ ತತ್ವವನ್ನು ಅಳೆಯುವುದು ಕಷ್ಟಸಾಧ್ಯ; ಕಲ್ಲುಸಕ್ಕರೆಯ ಬೊಂಬೆಯು ಕ್ಷೀರಸಾಗರದಲ್ಲಿ ಈಜಿಕೊಂಡು ಹೋಗಿ ವಿಷ್ಣುವನ್ನು ದರ್ಶನ ಮಾಡುವುದು ಹೇಗೆ? ಅಥವಾ ಈ ಸಕ್ಕರೆಬೊಂಬೆಯ ಮಧ್ಯದಲ್ಲಿ ಕರಗದಿರುವ ತಿರುಳು ಇದೆಯೋ? ಇರಬಹುದು. ಮ॥ಶ್ರೀನಿವಾಸರು ದೇವಾಲಯದ ಹೊರಗಡೆ ನಿಂತು ಅದರ ಗೋಪುರದ ಮಹತ್ವವನ್ನೂ, ಶಿಲ್ಪನೈಪುಣ್ಯವನ್ನೂ ಮೆಚ್ಚುತ್ತ ಬೆರಗಾಗುತ್ತ ಒಳಗೆ ಇನ್ನೆಷ್ಟು ಸೌಂದರ್ಯವಿದೆಯೋ ನೋಡಬೇಕೆಂದು ಕುತೂಹಲ ಪರವಶರಾಗಿರುವವರಂತಿದ್ದಾರೆ. ಆದರೆ ದೇವಾಲಯದ ಮಹಾದ್ವಾರವು ಮುಚ್ಚಿದೆ. ಅದರ ಸಂದಿನಿಂದ ಒಂದೊಂದು ಸಲ ಸ್ವಲ್ಪಸ್ವಲ್ಪ ಅಸ್ಪಷ್ಟವಾಗಿ ಒಳಗಿರುವ ದಿವ್ಯ ಮೂರ್ತಿಯ ಸೌಂದರ್ಯವು ಕಂಡಂತಾಗುವುದು. ಅದನ್ನು ಭಾಗ್ಯವಶದಿಂದ ಸಾಕ್ಷಾತ್ತಾಗಿ ಪೂರ್ತಿಯಾಗಿ ಕಂಡರೆ ಆಗ ಮ॥ಶ್ರೀನಿವಾಸರೂ ಬೇರೊಂದರ್ಥದಲ್ಲಿ

''ಬಿನ್ನಹಕೆ ಬಾಯಿಲ್ಲವಯ್ಯಾ''

ಎಂದು ಹೇಳುವರು.

ಮತ್ತೊಂದು ಸಂಗತಿ; ಕಥೆಗಳು ಕನ್ನಡಕ್ಕೆ ಹೊಸತಲ್ಲದಿದ್ದರೂ ''ಕೆಲವು ಸಣ್ಣ ಕತೆಗಳು'' ಹೇಗೆ ಎಲ್ಲಾ ವಿಧದಲ್ಲಿಯೂ ನೂತನವಾಗಿವೆಯೋ, ಹಾಗೆಯೇ ಪದ್ಯಗಳೂ ಕೀರ್ತನೆಗಳೂ ದೇವರ ನಾಮಗಳೂ ಕನ್ನಡಕ್ಕೆ ಹೊಸತಲ್ಲದಿದ್ದರೂ ''ಬಿನ್ನಹ''ದ ಪದ್ಯಗಳು-ಅಥವಾ ಅವುಗಳಲ್ಲಿ ಸರ್ವಸಮ್ಮತವಾಗಿ ಕೆಲವು-ಎಲ್ಲಾ ವಿಧದಲ್ಲಿಯೂ ನೂತನವಾಗಿ ಆನಂದದಾಯಕವಾಗಿದೆ. ಅದರಲ್ಲಿ ಎಲ್ಲೆಲ್ಲಿ ನೋಡಿದರೂ ಬಾಹ್ಯಜಗತ್ತಿನ ಚಿತ್ರಗಳು ಚಿತ್ರಿತವಾಗಿವೆ. ಕವಿತೋದ್ಯಾನದಲ್ಲಿ ಚಿತ್ರಶಾಲೆಯೂ ಇದೆ. ಕವಿಯು ಕುಶಲನಾದ ಚಿತ್ರಗಾರನೂ ಆಗಿದ್ದಾನೆ.

ತೆಂಗಾಳಿ

ಡಾ|| ಡಿ. ಎಲ್. ನರಸಿಂಹಾಚಾರ್ಯ

ಉದಯಾದಿತ್ಯಾದಿ ✻ಲಾಕ್ಷಣಿಕರು ನಿರೂಪಿಸದೆ ಇರುವ ಕೆಲವು ವರ್ಣನೆಗಳು ಕನ್ನಡ ಕಾವ್ಯಗಳಲ್ಲಿ ಅಲ್ಲಲ್ಲಿ ದೊರೆಯುವುವು. ಈಗ ಇಂತಹ ವರ್ಣನೆಗಳಲ್ಲಿ ಕೆಲವನ್ನು ವಿಮರ್ಶೆ ಮಾಡೋಣ. ಇವುಗಳಲ್ಲಿ ಗಾಳಿಯ ವರ್ಣನೆಯನ್ನು ಮೊದಲು ತೆಗೆದುಕೊಳ್ಳೋಣ. ಇದನ್ನು ಋತು ವರ್ಣನೆ ಸಂಗಡಲೇ ವರ್ಣಿಸಬೇಕಾಗಿದ್ದಿತು. ಆದರೆ, ಇದರ ವರ್ಣನೆಯನ್ನು ಮಾಡಿರುವ ಕವಿಗಳು ಹೇರಳಲಾಗಿರುವುದರಿಂದ ಇದನ್ನು ಬೇರೆಯಾಗಿಯೇ ವಿಮರ್ಶಿಸಲಾಗಿದೆ.

ಗಾಳಿಯ ವರ್ಣನೆಯನ್ನು ನಮ್ಮ ಹಿಂದಿನ ಕವಿಗಳು ಹೆಚ್ಚು ಸ್ವಾಭಾವಿಕವಾಗಿ ಮಾಡಿಲ್ಲ. ವರ್ಣಿಸಿರುವ ಕವಿಗಳಲ್ಲಿ ಅನೇಕರು ಮಲಯಮಾರುತಗನ್ನು ವರ್ಣಿಸಿರುತ್ತಾರೆ. ಮಲಯ ಮಾರುತವು ನಮ್ಮ ಕವಿಗಳಿಗೆ ಕೋಗಿಲೆಯೂ ತಾವರೆಯೂ ಇದ್ದ ಹಾಗೆ. ಬೇಸಗೆಯ ಕಾಲದಲ್ಲಿ ಮರದ ನೆರಳಿನಲ್ಲಿ ವಿಶ್ರಮಿಸಿಕೊಂಡು ಕುಳಿತಿರುವಾಗ ಬೀಸುವ ಸುಖವನ್ನುಂಟುಮಾಡುವ ಗಾಳಿಯು ಎಲ್ಲಿಯೋ ಹೋಯಿತು! ಎಲ್ಲ ಕಡೆಯೂ ನಮಗೆ ಮಲಯಮಾರುತವೇ ದೊರಕುವುದೇನು? ಹೀಗಿರಲಾಗಿ ಕನ್ನಡ ಕವಿಗಳು ಎಲ್ಲರೂ ಮಲಯಮಾರುತವನ್ನು ಏಕೆ ವರ್ಣಿಸಿದಾರೋ? ಹೇಗಾದರೂ ಇರಲಿ, ಪರಿಶೀಲಿಸಿ ನೋಡುವುದು ನಮ್ಮ ಕರ್ತವ್ಯ.

> ಕೆದ ತ್ತುಂ ಮಣಲಂ ತೆಮಱಿಕೊಳುತುಂ ಭೂರೇಣುವಂ ಸೂಸುತುಂ
> ನದ ನದ್ಯಚ್ಛ ಜಲಂಗಳಂ ಕೆದಱುತುಂ ಭೂಜಂಗಳಂ ನುರ್ಗುತುಃ।
> ಪೊದ ಱಿಸೀಳುತುಮೆಯ್ದೆ ವಂಶ ವನಮಂ ಕಾಡಾನೆಯಂ ಪೋಲ್ತು ಪೊ
> ಕ್ಕುದು ಬೀಡಂ ಲಯ ಕಾಲ ಕಾಲ ವಿಚಲದ್ಭೀಮಾರುತಂ ಮಾರುತಂ।।
>
> -ಕಾವ್ಯವಲೋಕನ

ಕಾವ್ಯಾವಲೋಕನದಲ್ಲಿ ಉದಾಹೃತವಾಗಿರುವ ಗಾಳಿಯ ವರ್ಣನೆಯು ಆವ ಕವಿಕೃತವಾದುದೋ ತಿಳಿಯದು. ಈ ವರ್ಣನೆಯ ಇತರ ಕವಿಗಳ ವರ್ಣನೆಗಳಿಗಿಂತ ಹೆಚ್ಚು ಸ್ವಾಭಾವಿಕವಾಗಿರುವುದು. ಏಕೆಂದರೆ, ಗಾಳಿಯು ಬೀಸುವಾಗ ಅದು ಮಾಡುವ ಕೆಲಸಗಳೆಲ್ಲವೂ ಈ ವರ್ಣನೆಯಲ್ಲಿ ಹೃದಯಂಗಮವಾಗಿ ನಿರೂಪಿತವಾಗಿದೆ. ಈ ವರ್ಣನೆಯು ಮಂದಮಾರುತನ ವರ್ಣನೆಯಲ್ಲಿ ಸ್ವಲ್ಪ ರಭಸವಾಗಿ ಗಾಳಿಯು ಬೀಸುತ್ತಿರುವಾಗ ಭೂಮಿಯಿಂದ ಧೂಳೇಳುವುದೂ, ಜಲಾಶಯಗಳಲ್ಲಿ ಅಲೆಗಳು

✻ ಅಕ್ಟೋಬರು 1928ರ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾದ 'ಕರ್ಣಾಟಕ ಸಾಹಿತ್ಯದಲ್ಲಿ ಪ್ರಕೃತಿ ವರ್ಣನೆ' ಎಂಬ ಲೇಖನದ 'ಇತರ ವರ್ಣನೆಗಳು' ಭಾಗದಿಂದ ಆಯ್ದು ಸಂಗ್ರಹಿಸಲಾಗಿದೆ. ಪೂರ್ಣಪಾಠ ''ಪೀಠಿಕೆಗಳು-ಲೇಖನಗಳು'' ಗ್ರಂಥದಲ್ಲಿ ಅಚ್ಚಾಗಿದೆ.

ವೇಗವಾಗಿ ಒಂದಾದಮೇಲೊಂದು ದಡಕ್ಕೆ ತಾಗುವುದೂ, ಬಿದಿರು ಮೆಳೆಗಳಲ್ಲಿ ಹೊಕ್ಕು ಚೀತ್ಕಾರವನ್ನು ಮಾಡುವುದೂ - ಇವೆಲ್ಲವೂ ಸ್ವೇಚ್ಛೆಯಾಗಿ ಸಂಚರಿಸುವ ಆನೆಯ ವ್ಯಾಪಾರಗಳನ್ನು ಹೋಲುವುದಿಲ್ಲವೆ! ಆದುದರಿಂದಲೇ ಕವಿಯು, ''ಕಾಡಾನೆಯಂ ಪೋಲ್ತು ಪೊಕ್ಕುದು ಬೀಡಂ'' ಎಂದು ಗಾಳಿಯನ್ನು ವರ್ಣಿಸಿರುವುದು. ಇನ್ನು ಮಿಕ್ಕ ಮೂರು ವರ್ಣನೆಗಳು ಸ್ಥೂಲವಾಗಿ ಒಂದೇ ವ್ಯಾಪಾರಗಳನ್ನು ಸೂಚಿಸುತ್ತವೆ. ನೇಮಿಚಂದ್ರನ ''ಬಂದುದೆಲರೊಯ್ಯನೆ ರಯ್ಯನೆ ವಾರಿ ದೇಶದಿಂ''ಎಂಬ ಮಾತುಗಳು ಗಾಳಿಯ ಮಂಥಗಮನವನ್ನು ಸೂಚಿಸುವುದು. ದುರ್ಗಸಿಂಹನಿಗೆ ಸಮೀರಣನು ''ಪಥ ಪರಿಶ್ರಮವಾರಣ''ನಾಗಿದ್ದನು. ಚೌಂಡರಸನಿಗೆ ಮಂದಮಾರುತನು ''ಪಲವು ವಿನೋದ''ದಿಂದ ವನದಲ್ಲಿ ಸುಳಿಯುತ್ತಿದ್ದನು. ಷಡಕ್ಷರಿಯ ''ನಗಿಸುತ್ತುಂ ಮಲ್ಲಿಕಾ ಕಾಮಿನಿಯನಳಿ ರವ ವ್ಯಾಜದಿಂ'' ಎಂಬ ವರ್ಣನೆಯು ಗಂಭೀರವಾಗಿಲ್ಲ. ಲಕ್ಷ್ಮೀಶನು ಅರ್ಥಾಂತರ ನ್ಯಾಸದಿಂದ ಗಾಳಿಯನ್ನು ವರ್ಣಿಸಿದ್ದರೂ ಆತನ ಮನಸ್ಸಿನಲ್ಲಿ ಮನುಷ್ಯನ ದುಃಖಕಾಲದಲ್ಲಿ ಪ್ರಕೃತಿಯೂ ಭಾಗಿಯಾಗಿ ಅವನನ್ನು ಸಮಾಧಾನಪಡಿಸಲು ಪ್ರಯತ್ನಪಡುವುದೆಂಬ ಒಂದು ಭಾವವು ನಿರಂತರವೂ ಇರುವ ಹಾಗೆ ಕಾಣುತ್ತದೆ. ಇದರಿಂದಲೇ ಲಕ್ಷ್ಮೀಶನು (Pathetic fallacy) ಎಂಬ ಒಂದು ವಿಧವಾದ ವರ್ಣನೆಯಲ್ಲಿ ತನ್ನ ಪ್ರತಿಭಾಶಕ್ತಿಯನ್ನು ವಿಶೇಷವಾಗಿ ಪ್ರಕಟಿಸಿರುವನು. ಇನ್ನು, ಮಲಯಮಾರುತನ ವರ್ಣನೆಯನ್ನು ತೆಗೆದುಕೊಂಡರೆ ಹೆಚ್ಚು ರಂಜನೆಯನ್ನುಂಟುಮಾಡುವ ವಿಷಯಗಳಾವುವೂ ಇಲ್ಲ. ಕೆಲವು ವರ್ಣನೆಗಳ ಪದಗುಂಫನವಂತೂ ಒಂದು ನೂತನವಾದ, ಅಚಿರವಾದ ಆನಂದವನ್ನುಂಟುಮಾಡುವುದು.

ಅತ್ಯಂತ ಆಧುನಿಕವಾದ ಕನ್ನಡ ಸಾಹಿತ್ಯಲ್ಲಿರುವ ''ಶ್ರೀನಿವಾಸ''ರವರ ''ತೆಂಗಾಳಿ'' ಎಂಬ ಕವಿತೆಯು ಒಂದು ಅಪೂರ್ವವಾದ ಸೌಂದರ್ಯ ಸಂಪತ್ತಿಯಿಂದ ಕೂಡಿರುವುದು. ಇದು ಹೃದಯದಿಂದ ತಾನಾಗಿ ಹೊರಟುಬಂದ ಒಂದು ಗೀತವು. ಇದರಲ್ಲಿ ಪ್ರತಿಭೆಯೂ ಆವೇಶವೂ ವೇದಾಂತವೂ ಸಮ್ಮಿಳಿತವಾಗಿದೆ. ಮನಸ್ಸು ಎಷ್ಟೇ ಆಯಾಸಪಟ್ಟಿರಲಿ, ಎಷ್ಟೇ ಕೊರತೆಗಳಿಂದ ಕೆಳಕ್ಕೆ ಇಳಿದುಹೋಗಿರಲಿ, ಎಷ್ಟೇ ಚಿಂತೆಗಳಿಂದ ಕೃಶವಾಗಿರಲಿ - ಅವುಗಳೆಲ್ಲವನ್ನೂ ಪರಿಹರಿಸಿ ಅದನ್ನು ಒಂದು ಉನ್ನತವಾದ ಕವಿತಾ ಪ್ರಂಪಂಚದ ರಮಣೀಯವಾದ ಸ್ಥಾನದಲ್ಲಿ ತೊಡಕಿಸಿ ಅವ್ಯಕ್ತ ಸೌಂದರ್ಯ ನಿಧಿಯ ಸಂದರ್ಶನವನ್ನು ಉಂಟುಮಾಡಿಸುವ ಶಕ್ತಿಯು ಈ ಕವಿತೆಯಲ್ಲಿ ಸಂಪೂರ್ಣವಾಗಿರುವುದು. ಷೆಲ್ಲಿ ಕವಿಯ ''Ode to the West Wind'' ಎಂಬ ಕವಿತೆಯನ್ನು ಓದುವುದರಿಂದ ಎಷ್ಟು ಆನಂದವನ್ನು ಪಡೆಯಬಹುದೋ ಅಷ್ಟು ಆನಂದವನ್ನು ''ತೆಂಗಾಳಿ''ಯನ್ನು ಓದುವುದರಿಂದಲೂ ಪಡೆಯಬಹುದು. ಆ ಕವಿತೆಯ ಕೆಲವು ಭಾವಗಳು ಇದರಲ್ಲಿ ತಲೆದೋರಿದೆ. ಡ್ರಿಂಕ್ ವಾಟರ್ ಎಂಬವನ ಮಾತುಗಳಲ್ಲಿ, ಈ ಎರಡು ಕವಿತೆಗಳ ವಿಚಾರವಾಗಿ ಹೀಗೆ ಹೇಳಬಹುದು:

""Both are poetry, springing from the same imaginative activity, living through the same perfect selection and ordering of words, and in our response quickening the same ecstasy. Although we are accustomed to

look rather for the rhymed and stanzaic movement of the former in a lyric than for the stricter economy and uniformity of " Srinivasa's" verse, yet both have the essential qualities of a lyric - of pure poetry."

ಶ್ರೀರಾಮ ಪಟ್ಟಾಭಿಷೇಕ

ಪ್ರೊ|| ಜಿ. ವೆಂಕಟಸುಬ್ಬಯ್ಯ

ಮಾಸ್ತಿಯವರ ಕಾವ್ಯಗಳಲ್ಲೆಲ್ಲ ತುಂಬ ದೀರ್ಘವಾದ ಕಾವ್ಯ 'ಶ್ರೀರಾಮ ಪಟ್ಟಾಭಿಷೇಕ'; ಅವರೇ ಹೇಳುವಂತೆ 'ಹರೆಯದಲ್ಲಿ ಸಂಕಲ್ಪಿಸಿ ಇಳಿ ವಯಸ್ಸಿನಲ್ಲಿ ಆರಂಭಿಸಿ ಮುಪ್ಪಿನಲ್ಲಿ ಮಂಗಳಕ್ಕೆ ತಂದಿರುವ ಕಾವ್ಯ.' ವಾಲ್ಮೀಕಿ ರಾಮಾಯಣವನ್ನು ಅದು ಈಗಿರುವ ಸ್ವರೂಪದಲ್ಲಿ ಓದಿರುವವರಿಗೆ ಅಲ್ಲಿನ ಕಥೆಯ ವಿಕಾಸವಾಗುವ ರೀತಿಯಲ್ಲಿ ಅನೇಕ ಅನುಮಾನಗಳು ಬರುತ್ತವೆ. ರಾಮಾಯಣದಲ್ಲಿ ರಾಮನ ಬಾಯಿಂದಲೇ ಬರುವ ''ಆತ್ಮಾನಂ ಮಾನುಷಂ ಮನ್ಯೆ'' ಎಂಬ ವಾಕ್ಯ ಬಹು ವ್ಯಾಪಕವಾದ ಅರ್ಥವುಳ್ಳದ್ದು. ಈ ತಳಹದಿಯ ಮೇಲೆಯೇ ಈ ಮಹಾಕಾವ್ಯದ ಸತ್ವ ನಿಲ್ಲತಕ್ಕದ್ದು. ಆದರೆ ಕಾವ್ಯದಲ್ಲಿರುವ ಅನೇಕ ಪ್ರಸಂಗಗಳಲ್ಲಿ ಈ ವಾಕ್ಯವು ಕಾವ್ಯದಲ್ಲಿ ಎಲ್ಲಿಯೂ ಬರುವುದಿಲ್ಲವೇನೋ ಎಂಬ ದೃಷ್ಟಿಯುಳ್ಳಂಥ ವಿವರಣೆಗಳು ಬರುತ್ತದೆ. ಪಾಶ್ಚಾತ್ಯ ಪೌರಸ್ತ್ಯ ವಿದ್ವಾಂಸರಲ್ಲಿ ಅನೇಕರು ಈ ಎಲ್ಲ ವಿವರಗಳನ್ನು ಕೂಲಂಕಷವಾಗಿ ಅಭ್ಯಾಸಮಾಡಿ ವಾಲ್ಮೀಕಿ ಕೃತವೆಂಬ ರಾಮಾಯಣ ಮಹಾಗ್ರಂಥದಲ್ಲಿ ವಾಲ್ಮೀಕಿ ಕೃತವಲ್ಲದ ಅನೇಕ ಭಾಗಗಳು ಇವೆಯೆಂದೂ ಈ ಭಾಗಗವು ಯಾರಿಂದ 'ಪ್ರಕ್ಷಿಪ್ತ'ವಾಗಿದೆಯೆಂಬುದನ್ನು ಹೇಳಲಾಗುವುದಿಲ್ಲವೆಂದೂ ತೀರ್ಮಾನಕ್ಕೆ ಬಂದಿದ್ದಾರೆ; ಒಬ್ಬ ಉದಾತ್ತ ಮಾನವನ ಕಥೆಯಂತೆ ರಾಮಾಯಣವನ್ನೇ ಪುನರ್ರಚಿಸುವುದಾದರೆ ಅಲ್ಲಿರುವ ಅನೇಕ ಭಾಗಗಳನ್ನು ಬಿಡಬೇಕಾಗುತ್ತದೆ. ಇಂಥ ಪ್ರಯತ್ನ ಅಲ್ಲಲ್ಲಿ ನಡೆದಿವೆ. ಸಂಸ್ಕೃತ ರಾಮಾಯಣದ ಅಧಿಕೃತ ಆವೃತ್ತಿಯಲ್ಲಿ ಇದನ್ನೆಲ್ಲ ಕುರಿತ ವಿವರವಾದ ನಿರೂಪಣೆಯಿದೆ.

ಮಾಸ್ತಿಯವರು ರಾಮಾಯಣವನ್ನು ಈ ರೀತಿಯಿಂದಲೇ ಪರಿಶೀಲನೆ ಮಾಡಿ ಅವರ 'ಆದಿಕವಿ ವಾಲ್ಮೀಕಿ' ಎಂಬ ವಿಮರ್ಶನ ಗ್ರಂಥದಲ್ಲಿ ಈಗಾಗಲೇ ನಿರೂಪಣೆ ಮಾಡಿದ್ದಾರೆ. ಈಗ 'ಶ್ರೀರಾಮ ಪಟ್ಟಾಭಿಷೇಕ' ಎಂಬ ಈ ನೂತನ ಕೃತಿಯಲ್ಲಿ ಅವರು ಆ ದೃಷ್ಟಿಯಿಂದಲೇ ರಾಮಾಯಣದ ಕಥೆಯನ್ನು ಪದ್ಯದಲ್ಲಿ ಹೇಳಿದ್ದಾರೆ. ಇದು ರಾಮ ಪಟ್ಟಾಭಿಷೇಕವನ್ನು ಕುರಿತ ಕೃತಿಯಾದರೂ ಒಟ್ಟು ರಾಮಾಯಣವೇ ಸಿಂಹಾವಲೋಕನ ಕ್ರಮದಿಂದ ಇಲ್ಲಿ ಹೇಳಲ್ಪಟ್ಟಿದೆ. ಹನುಮಂತ, ಗುಹ, ಸುಮಂತ್ರ, ಶತ್ರುಘ್ನ, ಕಾಶಿ, ಕೈಕೆಯಿ, ಊರ್ಮಿಳೆ, ಮಂಥರೆ ಮುಂತಾದ ಮುಖ್ಯ ಪಾತ್ರಗಳು ಏನು ಹೇಳಿದರೂ ಏನು ಯೋಚಿಸಿದರು ಎಂಬುದರಲ್ಲಿ ಅಡಕವಾಗಿದೆ ರಾಮಾಯಣದ ಕತೆ. ಹೀಗೆ ಹಳೆಯ ಕತೆಗೆ ಹೊಸ ಚೌಕಟ್ಟು ಸಿಕ್ಕಿದೆ. ಕತೆ ಹೇಳುವ ಪ್ರತಿಯೊಬ್ಬರಿಗೂ ಬೇರೆಬೇರೆ ವಿಶಿಷ್ಟವಾದ ವ್ಯಕ್ತಿತ್ವವಿರುವುದರಿಂದ ಕತೆಯ ನಿರೂಪಣೆಯಲ್ಲಿ ಸಾಕಷ್ಟು ವೈವಿಧ್ಯ ದೊರೆಯುತ್ತದೆ.

''ವಾಲ್ಮೀಕಿ ರಚಿಸಿದ ಕೃತಿಯ
ತಿರುಳೆಂದು ನನಗೆ ತೋರಿದ ಮುಖ್ಯ ಕಥೆಯನು

ಕವಿಗುರುವ ಮನವೆಂಬ ನನಗೆ ತೋರಿದ ಮನದ
ಹಿರಿಪರಿಯನನುಸರಿಸಿ ನನ್ನೂಹೆ ನಿರ್ಮಿಸಿದ
ಹಲವು ಪೂರಕ ವಿವರದಿಂದೆ ಎಡೆಯನು ತುಂಬಿ
ಕನ್ನಡದ ಒಡ ಹುಟ್ಟಿಗೆಂದು ತಾಯ್ನುಡಿಯಲ್ಲಿ
ಇಲ್ಲಿ ಬರೆಯುತಲಿಹೆನು''

ಇದು ಕವಿಗಳ ದೃಷ್ಟಿ, ಇದಕ್ಕೆ ಕಾರಣ

''ಆದಿಕವಿ ಬರೆದ ಕತೆಯನು ಮರಳಿ ಬರೆವಂದು
ಕವಿ ಪರಂಪರೆ ತನ್ನ ತಿಳಿವು ತನ್ನಯ ರುಚಿಗೆ
ಚೆಂದ ಕಂಡಿತು ಎಂತು ಅಂತು ಅದಬೆಳೆಯಿಸಿತು.
ಬೆಳೆಯಿಸಿತು ; ಇನಿತಿನಿತು ಬೇರೆಯನೆ ಮಾಡಿತು.
ಬಹು ಜನರ ಕೈಯಾಟದಿಂದ ರಾಮನ ಕಥೆಗೆ
ಕೀರ್ತಿ ಬಂದಂತಿನಿತು ದೋಷವೂ ನೆರೆಯಿತು.
ಶಿಲ್ಪಿ ರಚಿಸಿದ ಮೂರ್ತಿಯೊಂದು ದೇವಾಲಯದಿ
ದೈವ ಪೀಠದಲಿ ವಿಗ್ರಹವಾಗಿ ನಿಂತುದೇ
ಪೂಜನಾರ್ಚನ ಅಲಂಕಾರ ಭೂಷಣ ಅದರ
ಮೂಲದಾಕಾರವನು ಮರೆಸಿ ಬಿಡುವೊಂದಂದ
ಬಳಿಕಿನಾಕೃತಿಗಳಿವು ಮೂಲ ರಚನೆಯ ಕೃತಿಯ
ಅರೆ ಮುಚ್ಚಿ ಅರೆ ತೋರಿ ಕೆಡಿಸಿದವು. ಬೇರೆತೆರ
ಹೇಳುವರೆ ಜಕ್ಕಣನ ಬೇಲೂರ ಮಂದಿರದ
ಪ್ರಾಕಾರದಲಿ ಭಕ್ತಜನ, ಇಲ್ಲಿ ಮಂಟಪ,
ಅಲ್ಲಿ ಕಿರಿ ದೇಗುಲ, ಇನ್ನೊಂದು ತಾಣದಲಿ
ಒಂದು ವಿಗ್ರಹ, ಎಂದು ನಿಲಿಸಿ ಕಟ್ಟಿಸಿ ಮನದ
ಭಕ್ತಿಯನು ಹರಿಸಿ ಆಚಾರ್ಯನಿಂಗಿತವನೇ
ಇಂಗಿಸಿದ ರೀತಿಯಾಯಿತು. ಋಷಿಯ ಶ್ರೀರಾಮ
ಸೀತೆ ಮರೆಯಾಗಿ ಋಷಿ ಬರೆದ ಆ ಕತೆಯೇನು
ಇದನು ತಿಳಿಯುವ ಸೌಖ್ಯ ಜನತೆಗಿಲ್ಲದೆ ಹೋಯ್ತು.''

ಶ್ರೀರಾಮ ಪಟ್ಟಾಭಿಷೇಕವು ನಂದಿಗ್ರಾಮದಲ್ಲಿ ಭರತನು ರಾಮನ ನಿರೀಕ್ಷೆಯಲ್ಲಿರುವುದನ್ನು ಚಿತ್ರಿಸುವ ಸನ್ನಿವೇಶದಿಂದ ಮೊದಲಾಗುತ್ತದೆ. ಈ ವೇಳೆಗೆ ಹದಿನಾಲ್ಕು ವರ್ಷ ಕಳೆದು ಹೋಗಿದೆ. ಅಯೋಧ್ಯೆಯಲ್ಲಿ ಯಾವ ಯಾವ ಜನ ಯಾವ ಯಾವ ರೀತಿಯಲ್ಲಿ ಅಲ್ಲಿಯ ತನಕ ಬಾಳಿದರು ಎಂಬುದು ನಮಗೆ ಅಗತ್ಯವಾಗಿ ಬೇಕಾದ ಚಿತ್ರ. ಅದನ್ನೇ ಮಾಸ್ತಿಯವರು ಸ್ಪಷ್ಟವಾಗಿ ಒದಗಿಸಿದ್ದಾರೆ. ಶತ್ರುಘ್ನನು ಈ ಸಮಯದಲ್ಲಿ ಗುಹನಿಗೆ ಕೈಕೆಯಿಯ ವಿಷಯವನ್ನು ವರ್ಣಿಸುವುದರಲ್ಲಿ ನಮಗೆ ಅರಮನೆಯ ಅಂತಃಪುರದ ಜೀವನದ ರೀತಿ ಭಾಸವಾಗುತ್ತದೆ.

ಚಿಕ್ಕಮ್ಮನವರ ಪರಿ ಅವರದೇ ಪರಿ
ಅವರು ಎಲ್ಲ ಸಂಗತಿಯಲೂ
ತೀವ್ರ. ಯಾವುದೊ ಒಂದು ವಿಷಗಳಿಗೆ; ಏನನೋ

ಬೇಡಿದರು. ಆಯಿತು. ಆದು ತಂದ ಕೇಡೆನಿತು
ನೋಡಿದರು; ಬೇಡಿದುದು ತಪ್ಪೆಂದು ಅರಿತರು
ಮರುಗಿ ಮಣ್ಣಾಗಿ ಕಣ್ಣೀರಾಗಿ ಕರಗಿದರು,
ಮಗ ಕೋಪಗೊಂಡನೆಂದಲ್ಲ; ರಾಜ್ಯವನೊಲ್ಲ
ಎಂದಲ್ಲ; ಜಟೆ ತಳೆದು ಚೀರ ಕೃಷ್ಣಾಜಿನದಿ
ಸಂನ್ಯಾಸದಲಿ ಇಲ್ಲಿ ಆಶ್ರಮದಿನಿಂದಿಹೆನೆ
ಎಂದಲ್ಲ; ತಾನು ಅಲ್ಲದ ಸಂಗತಿಯ ಬೇಡಿ,
ಕಣ್ಣಮಣಿಯೆಂದೆಣಿಸಿ ಉಕ್ಕಂದ ಒಲುಮೆಯಲಿ
ಮಗನಿಗೂ ಮಿಗಿಲೆಂದು ಕಂಡಿದ್ದ ತನ್ನ ಮಗು
ಶ್ರೀರಾಮ, ಹೆತ್ತವ್ವ ಕೌಸಲ್ಯೆಗೂ ಮಿಗಿಲು
ಚಿಕ್ಕವ್ವನಾದರೂ ತನಗೊಪ್ಪಿ ನಡೆದವನು,
ಕಾಡು ಸೇರುವುದಾಯಿತೇ ಎಂದು ದುಃಖದಲಿ,
ಅಕ್ಕ ಕೌಸಲ್ಯದೇವಿಯರಿಗೂ ಮಿಗಿಲಾಗಿ
ಬೆಂದು ಹೋದರು. ತಾಯಿ ಮಗು ಇವರ ನಗಲಿಸಿದ
ಘೋರಪಾತಕ ಇನಿತು ಘೋರವಾಯಿತು. ಅದು,
ಬರುವ ಜನ್ಮದಲ್ಲಲ್ಲ, ಇದೇ ಜನ್ಮ, ಈ ಕ್ಷಣವೆ.
ತನ್ನ ಒಬ್ಬನೆ ಮಗನ ತನ್ನಿಂದ ಅಗಲಿಸಿ
ತಾನು ತಾ ಹಡೆದ ಆ ಮಗು ತಾಯಿ ಮಗ ಅಲ್ಲ
ಎಂಬದೆ ಹಗೆಯ ಮಾಡಿಸಿತೆಂದುಕೊಂಡರು.
ಮಗ ಮರಳಿ ತನ್ನದಾಗಲು ಘೋರ ಪಾತಕವ
ತೊಳೆವುದೊಂದೇ ದಾರಿ ಎಂದು ಆ ದಿನ ಮೊದಲು
ಅಕ್ಕದಿರ ಬಳಿ ಒಬ್ಬ ತೊತ್ತೆಂಬ ತೆರನಾಗಿ,
ಹಿರಿ ರಾಣಿ ಎನಿತು ಬೇಸರದಿಂದ ನುಡಿದರೂ
ನಡೆದರೂ ತಾಳಿಕೊಂಡವರು, ರಾಮನ ತಾಯಿ
ತನ್ನೊಡತಿ ಎಂಬುದ ನಡೆದು ದಿನ ನೂಕಿಹರು.
ಜಟೆ ತಳೆದು ಇವರ ಮಗ, ಜಟೆಯಿಲ್ಲದೆಯೆ ಈಕೆ,
ಕಿರಿಯಣ್ಣ ಇಲ್ಲಿ ಈ ಆಶ್ರಮದಲ್ಲಿ, ಈ ತಾಯಿ
ಇಲ್ಲಿ ಅರಮನೆಯಲ್ಲಿ; ಶ್ರೀರಾಮನನುದ್ದೈವ
ಮರಳಿ ಸುಖವಾಗಿ ಕರೆತರಲೆಂದು ತಪಿಸಿಹರು''

ಈ ಚಿತ್ರಣದಲ್ಲಿ ನಮಗೆ ಅರಮನೆಯಲ್ಲಿ ಇನ್ನೂ ಇತರರು ಯಾವ ಯಾವ ರೀತಿ ರಾಮನ ನೀರಿಕ್ಷೆಯೆಂಬ ತಪಸ್ಸಿನಲ್ಲಿ ನಿರತರಾಗಿದ್ದರೆಂಬುದು ಧ್ವನಿತವಾಗುತ್ತದೆ.

ಅಯೋಧ್ಯಾನಗರದ ಜೀವನ ಎಂದೂ ಚೆನ್ನಾಗಿಯೇ ಇದ್ದಿರಬೇಕು. ಈ ಕೈಕೇಯಿಯ ಕೇಳಿದ ವರವೆಂಬ ಬರಸಿಡಿಲು ಬೀಳುವುದಕ್ಕೆ ಮುಂಚೆ, ಬಿದ್ದ ಬಳಿಕ ಕೆಲವು ಕಾಲ ಅಲ್ಲೋಲ ಕಲ್ಲೋಲವಾಗಿರಬೇಕು ಆ ಶಾಂತನಗರ. ಮತ್ತೆ ಸ್ವಲ್ಪ ಸ್ವಲ್ಪವಾಗಿ ಶಾಂತತೆಗೆ ಹಿಂದಿರುಗುತ್ತಾ ಮೊದಲ ಹಿರಿಮೆಯನ್ನೇ ಗಳಿಸಿಕೊಂಡಿರಬೇಕು. ಶ್ರೀರಾಮ ಇಲ್ಲಿಲ್ಲವೆನ್ನುವ ಒಂದು ಚಿಂತೆಯನ್ನು ಬಿಟ್ಟು ಬಹುಶಃ ಮಿಕ್ಕೆಲ್ಲ ವಿಷಯದಲ್ಲಿಯೂ

ಅಯೋಧ್ಯೆ ಮೊದಲಿನಂತೆಯೇ ಇದ್ದಿರಬೇಕು. ಇಂಥ ನಗರದಲ್ಲಿ ಅರಮನೆ ಜೀವನದ ಕೇಂದ್ರ. ಅಲ್ಲಿ ಇರುವ ಜನವೆಲ್ಲ ಎಂಥ ಸುಸಂಸ್ಕೃತ ಜೀವಗಳು. ಅವರ ನಡುವೆ ಬಾಳುವುದು ಎಂಥ ಪುಣ್ಯ. ಪ್ರತಿಯೊಬ್ಬನೂ,

''ನಿಃಸ್ವಾರ್ಥ ಒರೆಗಲ್ಲು
ಇವರ ಬಾಳುವೆಯ ಮಧ್ಯದ ಸೂತ್ರ ನಿಃಸ್ವಾರ್ಥ''

ಎಂಬಂತೆ ಬಾಳುತ್ತಿರಬೇಕಾದರೆ ಆ ಪರಸ್ಪರ ಸಂಬಂಧ ಹೇಗಿದ್ದಿರಬೇಕು. ಈ ಚಿತ್ರವನ್ನೇ ಕಟ್ಟುವುದು ಮಾಸ್ತಿಯವರ ಮುಖ್ಯ ದೃಷ್ಟಿಯಾಗಿದ್ದಂತೆ ಓದುಗನಿಗೆ ಕಂಡುಬರುತ್ತದೆ. ಅಯೋಧ್ಯೆಯ ಜೀವನ ಹೀಗೆ ಉನ್ನತಿಯುಕ್ತವಾದುದಾದರೆ ಅತ್ತ ಕಿಷ್ಕಿಂಧೆಯ ಜನರ, ಕಪಿಧ್ವಜರ ಬಾಳಿನ ಸೊಗಸೇನು! ಅದೂ ಇಲ್ಲಿ ನಿಚ್ಚಳವಾಗಿ ಮೂಡಿದೆ. ಕೊನೆಗೆ ಲಂಕೆಯಲ್ಲಿಯೂ ಜನಸಾಮಾನ್ಯರ ಚಿತ್ರ ಉನ್ನತ ಸಂಸ್ಕೃತಿವಂತರ ಚಿತ್ರವೇ ಆಗಿದೆ. ವಾಲಿ ಸುಗ್ರೀವರ ವಿರೋಧದ ಕಥೆಯನ್ನು ಸಿಕ್ಕು ಬಿಡಿಸಿ ಅದೊಂದು ವಾನರಕುಲ ಸಂಪ್ರದಾಯ ಎಂದು ಮಾಡಿರುವುದರಲ್ಲಿಯೂ ಔಚಿತ್ಯವನ್ನೇ ಕಾಣುತ್ತೇವೆ.

ಹೀಗೆ ರಾಮನನ್ನು ಮಾನವನೆಂದು ಚಿತ್ರಿಸುವುದು ಮೊದಲ್ಗೊಂಡು ಮಾಸ್ತಿಯವರು ಮಾನವ ಸಂಸಾರದ ಅತ್ಯುತ್ತಮ ಗುಣಗಳ ಆಗರವಾಗಿ ಅಯೋಧ್ಯೆಯ ಜನರ ಚಿತ್ರಣವನ್ನು ಮೂಡಿಸಿದ್ದಾರೆ. ಜೊತೆಗೆ ರಾಮನು ದೇವರ ಅವತಾರವಲ್ಲವೆಂದ ಮೇಲೆ ಅವನಿಂದ ಅವನಿಗಾಗಿ ನಡೆಯುವ ಎಲ್ಲ ಪವಾಡಗಳನ್ನು ಕಥೆಯಿಂದ ತೆಗೆದುಬಿಟ್ಟಿದ್ದಾರೆ. ಕಥೆಗೆ ಬೇಕಾದ ಇತರ ಸೂಕ್ತ ಏರ್ಪಾಡುಗಳನ್ನು ಮಾಡಿದ್ದಾರೆ. ಸುಮಂತನಿಗೆ ಒಬ್ಬ ಮೊಮ್ಮಗ ಇದ್ದ. ಅವನಿಗೆ ಹೆಸರಿಡುವುದನ್ನು ಅವನ ತಾಯಿ ಸೀತೆ ಹಿಂದಿರುಗುವ ತನಕ ಮುಂದೂಡಿದಳು ಎಂದು ಹೇಳಿ ಹೆಣ್ಣು ಮನಸ್ಸಿನ ನವಿರಾದ ಭಕ್ತಿಯ ಚಿತ್ರವನ್ನು ಬಿಡಿಸುತ್ತಾರೆ. ಶೂರ್ಪನಖಿಯ ವಿಚಾರದ ಕಥೆಯನ್ನು ಬೇರೆ ಮಾಡಿ ಕಿವಿ ಮೂಗುಗಳನ್ನು ಕತ್ತರಿಸುವ ಪ್ರಸಂಗವನ್ನು ಕೈ ಬಿಟ್ಟಿದ್ದಾರೆ. ಹನುಮಂತ, ಜಾಂಬವಂತ ಮುಂತಾದವರು ಕಪಿ ಕರಡಿಗಳಲ್ಲ, ಅವರು ಕಪಿಧ್ವಜ ಋಕ್ಷಧ್ವಜರಿರಬೇಕೆಂದು ಒಂದು ಕಲ್ಪನೆ - ನಾಗಚಂದ್ರನ ರಾಮಾಯಣದಲ್ಲಿದ್ದಂತೆ. ಹನುಮಂತನು ಸಮುದ್ರವನ್ನು ಹಾರಲಿಲ್ಲ ಈಜಿದನು ಎಂಬುದೊಂದು ದೃಷ್ಟಿ, ಲಂಕಾದಹನವಾಗಲಿಲ್ಲ, ಅದು ಅಸಹಜ ಎನ್ನುವ ದೃಷ್ಟಿ. ಇವೆಲ್ಲ ಇಲ್ಲಿ ಕಾಣುವ ವ್ಯತ್ಯಾಸಗಳು - ವಿಮರ್ಶೆಯಿಂದ ಹೊಳೆಯುವ ಸಹಜ ಭಾವನೆಗಳು.

ಹೀಗೆ ಈ ಹೊಸ ಕಾವ್ಯದಲ್ಲಿ ರಾಮಾಯಣದ ಮೊದಲ ಸ್ವರೂಪ ಹೇಗಿದ್ದಿತೆಂಬುದರ ಒಂದು ಸೂಕ್ಷ್ಮ ಚಿತ್ರ ನಮಗೆ ನೋಡಲು ಸಿಗುತ್ತದೆ.

ಇಲ್ಲಿಯ ಸರಳ ರಗಳೆಯ ಛಂದಸ್ಸಿನಲ್ಲಿ ಸ್ವಾತಂತ್ರ್ಯವನ್ನು ವಹಿಸಲಾಗಿದೆ. ಹೀಗೆ ಈಗ ಛಂದಸ್ಸನ್ನು ಕಾವ್ಯಕ್ಕೆ ಪಳಗಿಸುವ ಕಾರ್ಯ ಅನೇಕ ರೀತಿಗಳಲ್ಲಿ ನಡೆಯುತ್ತಿದೆ. ಅದನ್ನು ಕುರಿತು ವಿವರವಾಗಿ ಬೇರೆಡೆಯೇ ವಿವೇಚಿಸಬೇಕು.

ಇಷ್ಟಾದ ಮೇಲೆ ಜನ ಸಾಮಾನ್ಯರ ರುಚಿಗೆ ಈ ಕಥೆ ಹೇಗೆ ರುಚಿಸುತ್ತದೆ ಎಂಬುದು ಒಂದು ಪ್ರಶ್ನೆ. ಬಹುಕಾಲದಿಂದ ಜನ ಮೆಚ್ಚಿರುವ ಕಥಾ ಪ್ರಸಂಗದಲ್ಲಿರುವ ಪವಾಡಗಳೇ ದೈವತ್ವದ ಮುಖ್ಯ ಕುರುಹುಗಳೆನ್ನುವ ಮಂದಿಗೆ ಇದು ಹೇಗೆ ರುಚಿಸೀತೋ ಹೇಳಲು ಸಾಧ್ಯವಿಲ್ಲ. ಆದರೆ ಈ ಶತಮಾನದ ಮಾನವಶಾಸ್ತ್ರಗಳ ಅಧ್ಯಯನದ ಬೆಳಕಿನಲ್ಲಿ ರಾಮಾಯಣವನ್ನು ಪರಿಶೀಲಿಸಿದಾಗ, ರಾಮಾಯಣದ ಮೂಲ ಸ್ವರೂಪ ಹೇಗಿದ್ದಿರಬೇಕೆಂಬುದನ್ನು ಪರಿಶೀಲಿಸುವುದು ವಿದ್ಯಾವಂತನ ಲಕ್ಷಣವಾಗುತ್ತದೆ. ಈ ಕೆಲಸ

ಅಲ್ಪ ತಿಳಿವಳಿಕೆಯುಳ್ಳಂಥವರಿಂದ ಸಾಧ್ಯವಿಲ್ಲ. ಪರಿಣತ ಪ್ರಜ್ಞೆಯ ಸೃಷ್ಟಿಶೀಲ ಮನೋಭಾವದ ಪ್ರಶಮಾಯನ ದೃಷ್ಟಿಯುಳ್ಳ ಈ ಶತಮಾನದ ಕನ್ನಡದ ಅತ್ಯುತ್ತಮ ಲೇಖಕರಲ್ಲೊಬ್ಬರಾದ ಮಾಸ್ತಿಯವರಿಂದ ಅದು ಸಾಧ್ಯವಾಗಿದೆಯೆಂಬುದನ್ನು ಈ ಕೃತಿಯನ್ನು ಓದುವವರೆಲ್ಲರೂ ಮನಗಾಣಬಹುದು.

ಕಾವ್ಯದಲ್ಲಿ ಮಾಸ್ತಿ ಅವರ ಆಧ್ಯಾತ್ಮಿಕತೆ

ಡಾ।। ಪು. ತಿ. ನರಸಿಂಹಾಚಾರ್ಯ

ಈ ಪ್ರಬಂಧವು ಶ್ರೀ ಶ್ರೀನಿವಾಸರ ಕಾವ್ಯದಲ್ಲಿ ಕಂಡುಬರುವ ಆಧ್ಯಾತ್ಮಿಕ ದರ್ಶನವನ್ನು ಕುರಿತದ್ದು.

ಕವಿಯು ತನ್ನ ಅನುಭವಗಳನ್ನು ನುಡಿದರೆ ಅದು ಕಾವ್ಯವೆನಿಸಿಕೊಳ್ಳುತ್ತದೆ. ಇದು ಆತನು ತನಗೂ ತನಗಿಂತ ಸೊರಗಿರುವಂತೆ ಕಾಣುವ ಪ್ರಪಂಚಕ್ಕೂ ಇರುವ ಸಂತತವಾದ ಸಂಬಂಧವನ್ನು ಕುರಿತ ಮಾತೇ ಆಗಿದೆ. ಈ ಸಂಬಂಧವು ಎಷ್ಟೆಷ್ಟು ಸ್ವಾರ್ಥ ದೂರವಾಗುತ್ತದೋ ಕವಿಯ ಅನುಭವವೂ ಅಷ್ಟಷ್ಟು ಆಧ್ಯಾತ್ಮಕವಾಗಿರುತ್ತದೆ. ಅವನ ಕಾವ್ಯದ ಮಾತೂ ಈ ಆಧ್ಯಾತ್ಮಿಕಾನುಭವದ ವರ್ಣನೆಯೇ ಆಗುತ್ತದೆ.

ನಮಗೆ ಈ ವಿಶ್ವದಲ್ಲಿ ಅತ್ಯಂತ ಮೋಹಕವಾದ ವಸ್ತು ಥಿರೆ. ಇದನ್ನು ಬಿಟ್ಟರೆ ನಮ್ಮನ್ನು ಬಹುವಾಗಿ ಆಕರ್ಷಿಸುವುದು ಬಾನು. ಹಗಲಿದಲ್ಲಿ ಆಕಾಶವು ತನ್ನ ವಿರಾಟ ಸ್ವರೂಪವನ್ನು ಅಡಗಿಸಿಕೊಂಡು, ಸರಳವಾಗಿ ಆರ್ದ್ರನೀಲವಾಗಿ ಸೂರ್ಯತಾರಕೆಯನ್ನು ತೆರೆದು ಭೂಮಿಯನ್ನು 'ಕೃಪಾಪೂರಿತ ನಯನ'ದಿಂದ ಆವರಿಸುತ್ತದೆ. ಆದರೆ ಇರುಳಿನಲ್ಲಿ ಇದು ಅನೇಕ ನಕ್ಷತ್ರಪುಂಜಿತವಾಗಿ ಕ್ರಾಂತಿದರ್ಶಿನೀ ಯಾಮಿನೀ ಅವತಾರವನ್ನು ತಾಳುತ್ತದೆ. ಈ ಪುರಾತನ ತಮದ ತಲದಲ್ಲಿ ಕುಳಿತು ಅದಕ್ಕೂ ನನಗೂ ಒಂದು ಕಾರ್ಯ ಕಾರಣ ಸಂಬಂಧವನ್ನು ಕಲ್ಪಿಸಿಕೊಂಡು ನಾನು ಈ ರೀತಿಯಾಗಿ ಪದೇ ಪದೇ ಆಲೋಚಿಸಿದ್ದೇನೆ. ಇರುಳಿನ ಅಂತರಂಗದಲಿ ಉತ್ಪನ್ನವಾದ ಒಂದು ಮಹಾಕ್ರಾಂತಿಯ ಅವತಾರವೇ ಈ ತಾರೆಗಳು. ತನ್ನದು ಸಚ್ಚಿದಾನಂದ ಸ್ವರೂಪವೆಂದು ತಿಳಿದುಕೊಳ್ಳಲು ತಮಸ್ಸು ಹೀಗೆ ಜ್ಯೋತಿರ್ಮುಖವಾಗುತ್ತಿದೆ. ಈ ತಾರೆಯಿಂದ ತಿರೆಮಾಡಿ ಜೀವ ಉತ್ಪತ್ತಿಯಾಗಿ ಮಾನವ ಚೇತನದಲ್ಲಿ ಅದು ಪ್ರಸ್ಫುಟವಾಗುತ್ತಿರುವುದೆ ಜೋತಿರ್ಮುಖವಾದ ಮಹಾಕ್ರಾಂತಿಯ ನಿದರ್ಶನವೇ ಆಗಿದೆ. ಮಾನವ ದೇಹದಲ್ಲಿ ಈ ತಪಸ್ಸು 'ನಾನು ಇದ್ದೇನೆ' ಎಂದು ಮೊದಲು ಅರಿತುಕೊಂಡಿತು. ಈ ಭವ್ಯಭವಕ್ರಾಂತಿಯಾವರ್ತದಲ್ಲಿ ಎಲ್ಲರಂತೆ ನಾನೂ ಯಾವುದೋ ಒಂದು ಮಟ್ಟದಲ್ಲಿ ಭ್ರಮಿಸುತ್ತಿದ್ದೇನೆ- ಎಂದು, ಸೃಷ್ಟಿಯ ಪರಿವರ್ತನ ಶೀಲವಾದ ಈ ಚರದ್ರೂಪವು, ಈ ಮನಮೋಹನವಾದ ಕ್ರಾಂತಿಯು ಕವಿಯ ಊಹೆಯಲ್ಲಿ ನಟರಾಜನ ರುದ್ರನಾಟ್ಯವಾಗುತ್ತದೆ. ಈ ನಾಟ್ಯದ ಲಯಕ್ಕೆ ಸಿಕ್ಕದ ವಸ್ತು ಸೃಷ್ಟಿಯಲ್ಲಿ ಯಾವುದೂ ಇಲ್ಲ.

ಹೀಗೆ ಶಂಕರನ 'ಡಮರುಕ ಡಿಕ್ಕಿಯ ಶಬ್ದವಿತಾನವು ಕ್ರಮದಿಂ ಸೃಷ್ಟಿಯನ್ನೆಲ್ಲ ತುಂಬಿರಲು' ನಾನಿದ್ದೇನೆ ಎಂದುಕೊಳ್ಳುವ ಚೈತನ್ಯವು ಏಕಾದಶಕರಣಗಳ ಮೂಲಕ ತನ್ನೆಡೆಗೆ ಸತತವಾಗಿ ಪ್ರವಹಿಸುವ, ಲೋಕವಾಹಿನಿಯನ್ನು ಕುರಿತು ಎಂತು ವರ್ತಿಸುತ್ತದೆ, ಎಷ್ಟನ್ನು ಧರಿಸಬಲ್ಲದು, ಮುಂದಕ್ಕೆ ಎಷ್ಟನ್ನು ಬಿಡಬಲ್ಲದು, ತನ್ಮೂಲಕ ಮುಂದೆ ಹರಿಯುವ ಈ ಪ್ರವಾಹದ ಸ್ವರೂಪ ತಾನೆ ಎಂಥದು? ಯಾಮಿನೀ ನಕ್ಷತ್ರ

ಸ್ಥಿರಾಮಾರ್ಗಗಾಮಿನಿಯಾದ ಈ ಕ್ರಾಂತಿ ಭಾಗೀರಥಿಯ ಮಾನವ ಚೈತನ್ಯದ ಜಹ್ನು ಋಷಿಯ ಸ್ವಾಂತ ಕುಹರದಲ್ಲಿ ಮರೆಯಾಗಿ ಹೋಗುತ್ತಾಳೆಯೇ, ಇಲ್ಲವೇ ಅಲ್ಲಿ ತನ್ನ ವೇಗವನ್ನುಳಿದು ಶಾಂತಿಮುಖಳಾಗಿ ಮಂಗಳಕರಳಾಗಿ ಮುಂದೆ ಹರಿಯುತ್ತಾಳೆಯೇ? ಮಾನವ ಮನವು ಮಾನವ ಹೃದಯಕ್ಕೆ ಈ ತೆರನಾದ ಜಟಿಲ ಪ್ರಶ್ನೆಯನ್ನು ಹಾಕುತ್ತಲೇ ಇರುತ್ತದೆ. ಮಹಾನುಭಾವರ ಬಾಳಿಕೆಯಲ್ಲಿ ಇದರ ಅರ್ಥವನ್ನು ಹುಡುಕುತ್ತದೆ. ಮಹಾದರ್ಶನರ ಉಕ್ತಿಗಳಲ್ಲಿ ಇದರ ಭವಿಷ್ಯವನ್ನು ಕಂಡುಕೊಳ್ಳಲು ಯತ್ನಿಸುತ್ತದೆ.

ಮಾನವನ ಬಾಳಿಗೆ ಹರಿದು ಬರುವ ಈ ಕ್ರಾಂತಿಪ್ರವಾಹದ ಭವಿಷ್ಯವನ್ನು ಬಹು ಮನೋಹರವಾಗಿ ಶ್ರೀ ಶ್ರೀನಿವಾಸರು ಈ ರೀತಿಯಲ್ಲಿ ವರ್ಣಿಸಿದ್ದಾರೆ. ತಮ್ಮ 'ನಟರಾಜ' ನೆಂಬ ಪದ್ಯದಲ್ಲಿ,

ಕುಬ್ಜಮಾನಿಸನ ನಿನ್ನಯ ಮೃದುಪದ
ದಬ್ಜದ ತುದಿಯಿಂ ತುಳಿದಿಹೆ- ಉದಯದ
ಅಬ್ಜದವೊಲು ಮೊಗ ಕಣ್ಗಳು ನಗುತಿವೆ
ನಟರಾಜ ನಟರಾಜ

ಶಿವನ ನಾಟ್ಯದ ಪದಾಘಾತವು ಎಲ್ಲ ಸೃಷ್ಟಿಯ ಮೇಲೂ ಬಿದ್ದಿರುವಂತೆ ಮನುಷ್ಯನ ಮೇಲೂ ಬಿದ್ದಿದೆ. ಈತನ ಹೃದಯವು ಎಷ್ಟೆಷ್ಟು ಹಿರಿದಾಗುತ್ತದೆಯೋ ಅಷ್ಟಷ್ಟೂ ಈ ಪರಮ ಶಿವದ ಪದಾಘಾತವೂ ರುದ್ರವೂ ಭೀಕರವೂ ಆಗುತ್ತದೆ. ಕಾಲಿನ ತುಳಿತವು ಹೀಗೆ ಭೀಕರವಾಗಿದ್ದರೆ ಆ ಮಹಾನಟನ ವದನದಲ್ಲಿ ಮೂರ್ತಿವೆತ್ತ ದಯೆಯಂತೆ ಮಂದಸ್ಮಿತವಿದೆ. ಈ ಪ್ರಸನ್ನತೆಯು ಮೊಟ್ಟಮೊದಲು ಗೋಚರವಾಗುವುದು ಮನುಷ್ಯನ ಹೃದಯಕ್ಕೆ. ಕ್ರಾಂತಿಯು ತನ್ನ ಕಾಂತ ಸ್ವರೂಪವನ್ನು ಮೊಟ್ಟಮೊದಲು ಅರಿತುಕೊಳ್ಳುವುದು ಮಾನವ ಚೇತನದಲ್ಲಿ. ಈ ಕ್ರಾಂತಿ ವಿಶಿಷ್ಟವಾದ ಕಾಂತ ಸ್ವರೂಪವನ್ನೇ ''ಸ ಏವಂ ವಿಶ್ವತೋ ವೃತ್ವಾ ಅತ್ಯತಿಷ್ಠತ್ ದಶಾಂಗುಲಂ'' ಪುರುಷ ಸೂಕ್ತವು ವರ್ಣಿಸಿರುವುದು. ''ಬಹಿರಂ ತಶ್ಚ ಭೂತಾನಂ ಅಚರಂ ಚರಮೇವ ಚ।ಸೂಕ್ಷ್ಮತ್ವಾದ ವಿಜ್ಞೇಯಂ'' ಎಂಬ ಗೀತಾ ಶ್ಲೋಕದ ಅರ್ಥವೂ ಇದುವೇ ಎಂದು ತೋರುತ್ತದೆ. ಅನುಭವದ ಒಂದು ಹದದಲ್ಲಿ, ಒಂದು ದೃಷ್ಟಿಕೋನದಿಂದ ಪರಶಿವನ ತಾಂಡವದಾವರ್ತದಲ್ಲಿ ಪರಿಭ್ರಮಿಸುತ್ತಿರುವಂತೆ ತೋರುವ ''ಅಖಿಲ ಮಾರ್ತಾಂಡರು ಚಂದ್ರರು ಉಡುಗಣ'' ಸಕಲ ಚೇತನಾಚೇತನಾತ್ಮಕವಾದ ಸೃಷ್ಟಿ ಇವೆಲ್ಲವೂ ಮತ್ತೊಂದು ಹದದಲ್ಲಿ ಮತ್ತೊಂದು ದರ್ಶನದ ಬಗೆಯಿಂದ

''ಕಾಣುವ ಸೃಷ್ಟಿಯ ಕಾಣದೆ ಸುತ್ತಿಹ
ಆನಂದಾಬ್ಧಿಯ ಅಮೃತ ತುಂತುರು''

ಎಂದು ಗೋಚರವಾಗುತ್ತದೆ. ಈ ಸೂಕ್ಷ್ಮವನ್ನು ಕಂಡ ಕವಿ ಕಾಂತದರ್ಶನನಾಗುತ್ತಾನೆ.

'ಹೊರಗಾವುದೊ ಚೆಲುವ ಮುಗುಳರಳುತಿಹದು
ಒಳಗರಳುತಿಹುದಂತೆ ಅದನರಿವ ಶಕ್ತಿ?
ನಿರುತವೂ ನಡೆವವೀ ಎರಡು ವಿನ್ಯಾಸ
ಬೆಳೆವುದಿಂತನವರತ ಚೆಲುವಿನ ವಿಕಾಸ'

ಎಂಬ ತತ್ತ್ವದಲ್ಲಿ ಆತನ ಮನಸ್ಸು ನಿಲ್ಲುತ್ತದೆ.

ಹೀಗೆ ಸಮಸ್ತ ವಸ್ತುಗಳ ಅಸ್ತಿತ್ವವನ್ನು ತುಂಬಿಯೂ ಮಿಕ್ಕು ಅವನ್ನು ಆವರಿಸಿರುವ ಈ ದಿವ್ಯತೆಗೆ ನಾವು ಚೆಲುವು ಎಂದು ಹೆಸರಿಡಬಹುದು. ಈ ಚೆಲುವರಾಯನನ್ನು ಎಲ್ಲ

ಸೃಷ್ಟಿಯಲ್ಲೂ ಕಾಣಲು ತವಕಿಸುವ ಹಂಬಲವನ್ನು ನಾವು ಪ್ರೇಮವೆಂದು ಕರೆಯಬಹುದು. ಈ ಪ್ರೇಮವು ದೊರಕಿಸಿ ಕೊಡುವ ಚೆಲುವಿನ ಸಿದ್ಧಿಯನ್ನು ನಾವು ಆನಂದವೆನ್ನಬಹುದು. ತನ್ನಾತ್ಮದಲ್ಲಿ ಚೆಲುವಿನ ಈ ಕಾಂತಿಯನ್ನು ಕಂಡುಕೊಂಡ ಮಹಾನುಭಾವನು ಹೊರಗಿನ ಜಗತ್ತಿನಲ್ಲಿ ಎಲ್ಲೆಲ್ಲೂ ಇದನ್ನೇ ಕಾಣಲು ಸಹಜವಾಗಿ ಹಂಬಲಿಸುತ್ತಾನೆ. ಸೃಷ್ಟಿಯ ಎಲ್ಲ ವಸ್ತುಗಳ ಮೇಲೂ ಈ ಕ್ರಾಂತಿಯ ಮುದ್ರೆ ಇರುವಂತೆ ಈ ಶಾಂತಿಯ ಪ್ರಭಾವಲಯವಿದೆ ಎಂಬ ಅರಿವೂ ಆತನಿಗಂಟಾಗುತ್ತದೆ. ಅವನ ಬಾಳಿಗೆ ಹರಿದು ಬರುವ ಈ ಭವಕ್ರಾಂತಿವಾಹಿನಿಯು ಈತನ ಪ್ರೇಮದ ಸಾಮರ್ಥ್ಯದಿಂದ ತನ್ನ ವೇಗವನ್ನುಳಿದು ಚೆಲುವಿನ ಹೊನಳಾಗುತ್ತಾಳೆ. ನಲವಿನ ಕಡಲನ್ನೂ ಸೇರುತ್ತಾಳೆ. ಇಂಥ ಮಹಾತ್ಮನ ಬಗೆಯ ತೆರವನ್ನು ಶ್ರೀ ಶ್ರೀನಿವಾಸರು ತಮ್ಮ 'ಸಾತ್ವಿಕ'ನೆಂಬ ಪದ್ಯದಲ್ಲಿ ಅನುಪಮವಾಗಿ ವರ್ಣಿಸಿ ತಿಳಿಸಿದ್ದಾರೆ.

> 'ಮಾನವನ ಬಾಳು ಕಾಣುವ ಮನಕೆ
> ತಾಳೆ ಹೂವು
> ಅರಿತು ಮುಡಿಗಂಧ- ಮರೆತು ಹಿಡಿ ಮುಳ್ಳು
> ಬಾಳು ಇಂತೆ.'

ಮಾನವನ ಬಾಳೇಕೆ, ಎಲ್ಲ ಬದುಕೂ ಈ ಮುಳ್ಳಿನ ನೈಷ್ಠೂರ್ಯದಿಂದಲೂ, ಈ ದಿವ್ಯತೆಯ ಪರಿಮಳದಿಂದಲೂ ಕೂಡಿದೆ. ಒಂದನ್ನು ಕೌಶಲದಿಂದ ಬಿಟ್ಟು ಮತ್ತೊಂದನ್ನು ತನ್ನ ಬಾಳಿಗೆ ತಂದುಕೊಳ್ಳುವುದೇ ಬಲ್ಲವನ ಬಾಳಿನ ಮರ್ಮವಾಗಿದೆ. ಶ್ರೀ ಶ್ರೀನಿವಾಸರು ಗಂಧವನ್ನರಿದು ಮುಡಿಯುವ ರೀತಿ. ಸಾಮಾನ್ಯ ವಸ್ತುಗಳಲ್ಲಿ ದಿವ್ಯತೆಯನ್ನು ಕಾಣುವ ರೀತಿ ನಮ್ಮ ಸಂಸಾರಗಳಲ್ಲಿ ನಿತ್ಯ ಕಂಡುಬರುವ ಒಂದು ವಿರಸಭಾವದಿಂದ ಮನೆ ತೊರೆದು ದೇವಾಂತರವಾಸಿಯಾಗಿ ಪಡಬಾರದ ಕಷ್ಟಪಟ್ಟು ತಿರಿದು ತಿರುಗುತ್ತಾ ತನ್ನ ನಾಡಿಗೆ ಮರಳಿದ ಭಿಕಾರಿ ಸಂಗೀತಗಾರ, ಏನೊ ಒಂದು ಮೂಢ ನಂಬಿಕೆಯಿಂದ ಸುಧಾರಿತರಿಗೆ ಜುಗುಪ್ಸೆಯನ್ನುಂಟು ಮಾಡುವ ಒಂದು ವ್ರತವನ್ನು ಹಿಡಿದು ಹುಡುಗರ ನಗೆಗೆ ಪಾತ್ರಳಾಗದ ಒಬ್ಬ ಹೆಂಗಸು, ನಮ್ಮ ನಾಡಿನಲ್ಲಿ ಅತಿ ಸಾಮಾನ್ಯವಾಗಿ ಕಂಡುಬರುವ ದೇವರ ಆವೇಶವನ್ನು ಮೈಮೇಲೆ ತಂದುಕೊಳ್ಳುವ, ಮತ್ತು ದೇವರನ್ನು ಕಂಡೆನೆಂದು ಭ್ರಮೆಗೊಳ್ಳುವ ಒಬ್ಬ ಚಿತ್ರಗಾರ, ಯಾವ ಶಿಷ್ಟಾಚಾರಕ್ಕೂ ಸಲ್ಲದ ನಡತೆಯಿಂದ ಗೌಡರನ್ನು ಕೂಡಿದ ಬಸವಿ ಮಲ್ಲಿ ಇವರು ಈ ಕವಿಯ ದರ್ಶನದ ಬಗೆಯಿಂದ ಎಂಥ ದಿವ್ಯವ್ಯಕ್ತಿಗಳಾಗಿದ್ದಾರೆ! ಕಾಂತದರ್ಶಿಗಳ ರೀತಿ ಈ ಬಗೆಯದು.

ಈ ರೀತಿಯಾಗಿ ಎಲ್ಲದರ ಒಳಗನ್ನೂ ಹೊರಗನ್ನೂ ವ್ಯಾಪಿಸಿಯೂ ಹತ್ತೂ ಬೆರಳುಗಳ ದೂರ ಮಿಕ್ಕುನಿಂತಿರುವ ಈ ಕ್ರಾಂತಿವಿಶಿಷ್ಟ ಪ್ರಶಾಂತ ಸ್ವರೂಪವನ್ನು ಈ ಮಂದಹಾಸ ಸುಂದರನನ್ನು, ಪರಮಪುರುಷನನ್ನು, ನಾರಾಯಣನನ್ನು ಎಲ್ಲಾ ಕಡೆಯಲ್ಲೂ ಕಾಣುವ ಹಂಬಲಿಕೆಯು ಶ್ರೀ ಶ್ರೀನಿವಾಸರ ಸಂಸ್ಕೃತ ಸರಳ ಸುಂದರ ಶಾಂತಮುಖ ಜೀವನಕ್ಕೆ ಬಂದಿದೆ. ಅವರು ಬರೆದಿರುವ ಎಲ್ಲ ಮಾತಿನಲ್ಲಿಯೂ ಈ ಕಾಂತದರ್ಶನವು ಕಂಡುಬರುತ್ತದೆ. ಚೆಲುವರಾಯನನ್ನು ಕಾಣಬೇಕೆಂಬ ಅವರ ಆಸೆಯು ತೀರಲಾರದ ಆಸೆ. ಈ ಆಸೆಯ ತೀವ್ರತೆಯನ್ನು ನಾವು ಅವರ ಅನೇಕ ಕೃತಿಗಳಲ್ಲಿ ಕಾಣಬಹುದು.

ಚೆನ್ನಕೇಶವಾ ಜಗದೊಳೆಲ್ಲೆಡೆ
ನಿನ್ನ ಸೊಬಗನು ನೋಡಿ ನೋಡಿ
ಇನ್ನೊಮ್ಮೆ ನೋಡುವಾ ಚೆನ್ನಾಗಿ ನೋಡುವಾ
ಎನ್ನುವಾಸೆಯಿಂದೆ ತೀವಿ ಎನ್ನಮನ
ಕರಣಗಳೆಲ್ಲವೂ ಆಶಿಸುತಿಹುವಯ್ಯ
ಹರಿಯೇ ನಿನ್ನ ಸೇರಲೆಂದು

ಈ ಬಗೆಯು ಇವರ ಆಧ್ಯಾತ್ಮಿಕ ದರ್ಶನದ ಒಂದು ಪ್ರಮುಖ ಸೂತ್ರವಾಗಿದೆ. ವಿಶ್ವಾತ್ಮನ ಸೌಂದರ್ಯದ ಹುರುಳನ್ನು ಅರಿಯುವುದಕ್ಕೆ, ನನ್ನ ಹನ್ನೊಂದು ಇಂದ್ರಿಯಗಳು ಸಾಲವು. ಈ ಅಮೃತವಾಹಿನಿಯನ್ನು ನನ್ನ ಮೂಲಕ ಆನಂದವಾಹಿನಿಯಾಗಿ ಹರಿಯಿಸಲು ಒಂದು ಬಾಳು ಸಾಲದು ಎಂದುಕೊಂಡು ತಮ್ಮ ಚೈತನ್ಯವು ಜಗತ್ಪ್ರಾಣನಂತೆ ಹಗುರವಾಗಿ, ಜೀವ ಜೀವಗಳ ಒಳಹೊಕ್ಕು ಆ ಮನಗಳ ಮೂಲಕ ಈ ವಿಶ್ವದ ಸೌಂದರ್ಯದ ಅನೇಕಾನುಭವಗಳನ್ನು ಪಡೆಯುವುದಕ್ಕೆ, ಅನುಕೂಲವಾಗುವಂತೆ ಮಾಡಿಕೊಳ್ಳುವುದು ಇವರ ಪ್ರೇಮ ಸಾಧನೆಯಾಗಿದೆ. ಇಂತು ದೇಹಾಂತರದಲ್ಲಿ ಸಹಾನುಭೂತಿಯಿಂದ ತಾವು ಪಡೆದ ಊಂತದರ್ಶನದ ಅನುಭವಗಳೇ ಇವರ ಅನುಪಮವಾದ ಕತೆಗಳಾಗಿವೆ, ವ್ಯಕ್ತಿಚಿತ್ರಗಳಾಗಿವೆ, ನಾಟಕಗಳಾಗಿವೆ, ದಿವ್ಯ ಪುರುಷರ ಚರಿತ್ರೆಗಳಾಗಿವೆ. ಅವರ ಹೃದಯದಲ್ಲಿ ಹೊಕ್ಕ ಚೆಲುವಿನ ಹೊನಲು ಒಂದು ಬಾರಿ ಪೂರ್ಣವಾಗಿ ಆನಂದವಾಗಿ ಉಕ್ಕುತ್ತದೆ. ಇನ್ನೊಮ್ಮೆ ಪೂರ್ಣತೆಗೇರಲಾರದೆ ಹಂಬಲದಲ್ಲೇ ಮುಗಿಯುತ್ತದೆ. ಈ ವಿಫಲ ಸಫಲ ಅನುಭವಗಳೇ ಇವರ ಭಾವಗೀತೆಗಳಾಗಿವೆ. ಇವು ಎಲ್ಲವೂ ಇವರ ಆಧ್ಯಾತ್ಮಿಕ ದರ್ಶನದಿಂದ ಉತ್ಪನ್ನವಾದುವು. ಜಗತ್ತಿಗೂ ತಮಗೂ ಇರುವ ತದಿತರವಾದ ಸಂಬಂಧಗಳಲ್ಲಿ ಇವರಿಗೆ ಕುತೂಹಲ ಕಡಿಮೆ.

ಎಲರು ಮೆಲುಮೆಲನೆ ಎಲೆಗಳ ನಡುವೆ ಮರ್ಮರಿಸಿ
ಅಲುಗಿಸುತೆ ಲತೆಗಳನು ಮಲೆಯಿಂದೆ ಬರಲು
ಮಲೆಯ ಹೊಂದೆದಿರೆ ಪೀತ ವಸನದೊಲು ಪೊಂಬೆಳಗು
ನಲಿವುದೇತಕೆ ಇಂತು ಮರುಳಾಗಿ ಮನವು
ರಂಗನಾಥ, ಏನು ಇಂತುಬ್ಬುತಿದೆ ಹೃದಯ
ರಂಗದಲಿ ಸಂತಸವು ಈ ಉದಯದಿ.

ಎಂದು ಬಿನ್ನಹದ ಒಂದು ಪದ್ಯದಲ್ಲಿ ಇವರು ಕಾಮಿನೀ ಕಾಂಚನಾದಿ ಯಾವ ಭೋಗ ಸಾಮಗ್ರಿಗಳೂ ದೊರಕದೆ ಇದ್ದರೂ ಪ್ರಕೃತಿಯ ಚೆಲುವನ್ನು ನೋಡಿ ಪರಮ ಸುಖವನ್ನು ಅನುಭವಿಸಿದ ರೀತಿಯನ್ನು ಕುರಿತು ಹೇಳಿದ್ದಾರೆ. ಹೀಗೆ ತಮಗೂ ಜಗತ್ತಿಗೂ ಉಂಟಾದ ನಿರುಪಯುಕ್ತವಾದ ಸಂಬಂಧದಿಂದ ಆನಂದಿತರಾಗಿ ಈ ಅನುಭವಕ್ಕೆ ಮರುಳಾಗಿ ಕಾರಣವನ್ನು ಕಾಣದೆ ಏಕೆ ಎಂದು ರಂಗನಾಥನನ್ನು ಇವರು ಪ್ರಶ್ನಿಸುತ್ತಾರೆ. ಈ ಪ್ರಶ್ನೆಯಲ್ಲಿ ಈ ತೆರೆದ ಸಂಬಂಧವೇ ಮತ್ತೂ ಈ ಸಂಬಂಧದಿಂದ ಉಂಟಾಗುವ ಆನಂದವೇ ಮನುಷ್ಯನ ಪರಮಪುರುಷಾರ್ಥವೆಂಬ ಉತ್ತರವೂ ಧ್ವನಿತವಾಗುತ್ತದೆ.

ಸಾಲದು ಗೊಂಬೆ ಸಾಲದು ನಗನಟ್ಟು
ಸಾಲದು ಒಡವೆ ಸಾಲದು ತೊಡವು
ಸಾಲದು ಪ್ರೇಮವು ಸಾಕು ನೀನೆ- ಗೋ-

ಪಾಲ ಬಂದನಿಶ ಬಳಿಯೊಳು ಕುಳ್ಳಿರು
ನೀನೇ ಬೇಕೆನಗೆ ನೀನು ಬೇಕು
ನಿನ್ನ ಪ್ರೇಮವು ಸಾಲದು

ಎಂದು ಈ ಆನಂದ ಸ್ವರೂಪನನ್ನು ಇವರು ಬೇಡಿಕೊಳ್ಳುತ್ತಾರೆ. ಇತರರಿಗೆ ಈ ಹಂಬಲವು ತುಸು ಕಾಲದ ಮೇಲೆ ನೀಗಿ ಹೋಗಬಹುದು. ಶ್ರೀನಿವಾಸರಿಗಿದು ನಿರಂತರವಾದುದು.

ಮರೆಯೊಳು ಬಿರುತಿರೆ ಕಾಣೆನು ಎಂದೆನು
ಬರುವುದು ದಿಟವು ಎಲ್ಲರಲಿ ನೋಡಾ
ಸಿರಿ ಕಂಡದ ಕತ್ತೂರಿಯ ಲೇಪನದ
ಪರಿಮಳನೆಂದೆ. ಆದರು ಕೇಳದೆ
ಸೋತು ಸಾರಿದರು ಮನಸಿಗೆ- ಹರಿ
ಏತಕೆ ಬಾರನೊ ಎಂದು ಸಖಿಯರು

ಈ ಸೌಂದರ್ಯ ನಿರೀಕ್ಷೆಯು ಆನಂದದಲ್ಲಿ ಪರ್ಯವಸಾಯಿಯಾಗದೆ ಅಕೃತಾರ್ಥ ಭಾವವು ಉಳಿದರೆ ಇವರ ಈ ಭಾವವೂ ಅತ್ಯಂತ ಮನೋಹರವಾದ ವಿರಹಗೀತದಲ್ಲಿ ವ್ಯಕ್ತವಾಗುತ್ತದೆ.

ಕಾಳರಕ್ಕಸಿಯರ ಕರಿಯ ಸೀರೆಯಂತೆ ಕಱ್ತಲು
ಬೀಳುತಿಹುದು ವನದ ಮೇಲೆ ಮನವನಂತೆ ಮುಸುಕಿತು
ಆಳವಾಯ್ತು ಕಾಳಿಂದಿಯ ಕರಿಯ ನೀರ ಮಡುವಿನಂತೆ
ತಾಳ್ವೆವೆಂತು ಈ ವಿರಹದ ಬಾಳು ಬರಿದು ನಿನ್ನನುಳಿದು
ನಿನ್ನನಿದಿರು ನೋಡುತಾ ಇನ್ನು ಇಲ್ಲೆ ಕಾದಿಹೆವು.
ಚಿನ್ನ ನೀನು ಬರದೆ ಇರಲು ಕಾರಣವನು ಕಾಣೆವು.

ಈ ವಿರಹ ಭಾವವು ಇಲ್ಲಿಗೇ ನಿಲ್ಲುವುದಿಲ್ಲ.

ದಿನದ ಮೊದಲ ಆಗಸದಲಿ ಎಳನೇಸರು
ನಗುತೆ ಇರಲು
ಇನಿಸಾದರು ಮುಗಿಲು ಇರದೆ ಎಲ್ಲ ದೆಸೆಯು
ಬೆಳಗುತಿರಲು
ಅನುವಾಗುತೆ ಬೈಗುಪೊಳ್ತು ಬರಲು ನೆರೆವ
ಮರೆಯ ಮಳೆಯ
ಹನಿಯ ತೆರೆದ ಮರೆಯ ಮೆದುವ ಗಮನದಿಂದಲಿ
ಬರುತಲಿಹನು ಬರುತಲಿಹನು ಬರುತಲಿರುವನು
ಬರುತಲಿಹನು ಮೆಲುನಡೆಯಲಿ ಬರುತಲಿರುವನು

ಎಂಬ ಪೂರ್ಣಭಾವದ ನಚ್ಚಿನಲ್ಲಿ ನಿಲ್ಲುತ್ತದೆ. ನಿಜವಾಗಿ ನೋಡಿದರೆ ಚೆಲುವರಾಯನನ್ನು ಸೂಚಿಸುವ ವಸ್ತು ಸೃಷ್ಟಿಯಲ್ಲಿ ಯಾವುದಿದೆ? ಪ್ರಕೃತಿಯಲ್ಲಿ ವರ್ಣರೂಪಾತ್ಮಕವಾದ ಸೌಂದರ್ಯವಾಗಿ ತೋರಿ ನಮ್ಮಾತ್ಮಕ್ಕೆ ಆನಂದವನ್ನು ತರುತ್ತಾನೆ. ಮಾನವರಲ್ಲಿ ದಿವ್ಯಾತ್ಮ ದರ್ಶಕನಾಗಿ ನಮ್ಮ ಮಧುರ ಭಾವವನ್ನು ವ್ಯಕ್ತಗೊಳಿಸುತ್ತಾನೆ. ಪಾಪಾತ್ಮರಲ್ಲಿ ನಮಗೆ

ಕಾಣಬಂದು ನಮ್ಮಲ್ಲಿ ಅನುತಾಪವನ್ನು ಹುಟ್ಟಿಸುತ್ತಾನೆ. ಕ್ರೂರಾತ್ಮರಲ್ಲಿ ನಮ್ಮ ಅನುಕಂಪಕ್ಕೆ, ಕ್ಷುದ್ರರಲ್ಲಿ ನಮ್ಮ ಔದಾರ್ಯಕ್ಕೆ ...ಕ್ರುದ್ಧರಲ್ಲಿ ನಮ್ಮ ಕ್ಷಮೆಗೆ, ದುರ್ಬಲರಲ್ಲಿ ನಮ್ಮ ದಯೆಗೆ, ಹಿರಿಯರಲ್ಲಿ ನಮ್ಮ ಭಕ್ತಿಗೆ, ಕಿರಿಯರಲ್ಲಿ ನಮ್ಮ ವಾತ್ಸಲ್ಯಕ್ಕೆ ಸಕಲ ಚೇತನದಲ್ಲಿಯೂ ನಮ್ಮ ಭ್ರಾತೃಭಾವಕ್ಕೆ ಅವರ ಬಾಳುವೆಯನ್ನು ಹೊಕ್ಕು ನಿಂತಿರುವ ಈ ಚೆಲುವರಾಯನ ದರ್ಶನವು ಕಾರಣವಾಗುತ್ತದೆ. ನಿರ್ಜಿತರಾದುದರಿಂದ ನಿರ್ಬಲರಾದ, ಅಭಿಮಾನರಾಹಿತ್ಯದಿಂದ ನಿರ್ವೀರ್ಯರಾದ, ಮುಂದಿನ ಶುಭದಲ್ಲಿ ನಂಬಿಕೆಗಟ್ಟುದರಿಂದ ಅಲಸರಾದ, ಸೋತವರಿಗೆ ಗೆದ್ದ ಜನರು ತೋರುವ ನಿಕೃಷ್ಟ ಭಾವದಿಂದ ತೇಜೋಹೀನರಾಗಿ ಆತ್ಮ ಪ್ರತ್ಯಯವನ್ನಳಿದ ನಮ್ಮ ಜನತೆಯಲ್ಲಿ ಚೆನ್ನಕೇಶವನು ನಮಗೆ ತೋರಿ ಬಂದು ನಮ್ಮ ಅತ್ಯುತ್ಕಟ ದೇಶಾಭಿಮಾನವನ್ನು ಕೆರಳಿಸುತ್ತಾನೆ. ಈ ಶ್ರೀಕಾಂತನನ್ನು ಎಲ್ಲ ಕಡೆಯಲ್ಲಿಯೂ ಈ ಎಲ್ಲ ಬಗೆಗಳಲ್ಲಿಯೂ ನೋಡಿ ತಮ್ಮ ಕಾವ್ಯದಲ್ಲಿ ಶ್ರೀನಿವಾಸರು 'ಬರುತಲಿಹನು ಬರತಲಿಹನು ಬರುತಲಿರುವನು' ಎಂಬ ಡಂಗುರವನ್ನು ಹೊಡೆದಿದ್ದಾರೆ. ಈ ಜಗತ್ತಿನಲ್ಲಿ ಕ್ರಾಂತಿಯೊಂದನ್ನೇ ಕಾಣುವವರ ಬಗೆಗೆ ದೇವರಿದ್ದಾನೋ ಇಲ್ಲವೋ ಎಂಬ ಸಂಶಯಬರಬಹುದು. ಕಾಂತದರ್ಶನರಿಗೆ ಅವನ ಇರುವಿಕೆಯಿಲ್ಲಿ ಎಳ್ಳಷ್ಟು ಸಂಶಯವೂ ಇರುವುದಿಲ್ಲ. ಶ್ರೀ ಶ್ರೀನಿವಾಸರು ತಮ್ಮ 'ಜಿಜ್ಞಾಸೆ' ಎಂಬ ಪದ್ಯದಲ್ಲಿ ಇದನ್ನು ಚರ್ಚಿಸಿ ಈ ನಿಷ್ಕರ್ಷೆಗೆ ಬಂದಿದ್ದಾರೆ. ತಮ್ಮ 'ಗುರುವಿಗೆ' ಎಂಬ ಅಮೋಘವಾದ ಪದ್ಯದಲ್ಲಿ ತಮ್ಮ ಆತ್ಮಾರ್ಪಣವನ್ನು ಜಗದೀಶ್ವರನಿಗೆ ಮಾಡುವಾಗ:

ಒಳಗಿಂದ ಎಡೆಬಿಡದ ಪ್ರೇರಣೆಯ ಹಿಂಡುಗಳ
ಚಲನದಲಿ, ಹೊರಗಿಂದ ಒಳಿತು ಸೊಗಸೆಂಬುದರ
ಒಲವ ಗೆಲುವಂದದಲಿ, ಮನವ ನೀ ಕರಗಿಸುತೆ
ಸುಲಭದಲೆ ಬಾಳನುದ್ಧರಿಸುತಿಹೆಯೈಸೆ.
ಎನ್ನ ಹೃದಯದಿ ನಿಂದು ಎಲ್ಲ ಬದುಕಲಿ ಕಂಡು
ಎನ್ನ ಬದುಕನು ಒಳ್ಳಿದಕೆ ತಿದ್ದಿ ಪೊರೆಯುತಿಹ
ಸನ್ನುತಾ ಗುರುದೇವ ಲೋಕೇಶ ನಿನ್ನಡಿಗೆ
ಪನ್ನಗಾದ್ರಿನಿವಾಸ ನಮಿಸುವೆನು ತಂದೆ.

16335

ಎಂದು ತಮ್ಮ ಆಧ್ಯಾತ್ಮಿಕ ದರ್ಶನದ ಬಗೆಯನ್ನು ತಾವೇ ವರ್ಣಿಸಿದ್ದಾರೆ.

ಈ ತೆರದಲ್ಲಿ ಶ್ರೀನಿವಾಸರು ಒಂದು ಹೂವಿನಲ್ಲಿ, ಹಕ್ಕಿಯಲ್ಲಿ, ಮುಂಬೇಸಗೆಯ ಮಾರುತದಲ್ಲಿ, ಹಳೆಯದರಲ್ಲಿ, ಹೊಸದರಲ್ಲಿ, ಭೂತದಲ್ಲಿ, ಭವಿಷ್ಯದಲ್ಲಿ, ಎಲ್ಲ ಸೃಷ್ಟಿಯಲ್ಲಿ, ಅದರ ಅಸ್ತಿತ್ವಕ್ಕೆ ಕಾರಣವಾದ ಪರಮಶಿವನ ನರ್ತನ ಕ್ರಾಂತಿಯೊಂದನ್ನೇ ಕಾಣುವ ಬಗೆಯಿಂದ ಮುಂದುವರಿದು ಅದನ್ನು ಮಿಕ್ಕಿರುವ ಚೆಲುವನ್ನು ಕಂಡು ಸಕಲೇಂದ್ರಿಯಗಳ ಮೂಲಕವೂ ತಮ್ಮ ಆತ್ಮಕ್ಕೆ ಅದನ್ನು ತಂದುಕೊಂಡು ಪ್ರೇಮವಾಗಿ ಹರಿಯಗೊಡುವ ಶಾಂತಿಯಲ್ಲಿ, ಮುಗಿಯಗೊಡುವ ಸಾಧನೆಯಲ್ಲಿ ತೊಡಗಿದ್ದಾರೆ. ಭಗವದ್ಗೀತೆಯಲ್ಲಿ ಪರಮರುದ್ರವೂ, ಮನೋಹರವೂ, ಎಲಯ ವಿಲಾಸದರ್ಶಕವೂ ಆದ ಜ್ಞಾನಿಗಳು ದಿವ್ಯ ಚಕ್ಷುಸ್ಸಿನಿಂದ ನೋಡಬಯಸುವ ಭಗವಂತನ ಕ್ರಾಂತಿರೂಪವನ್ನು ನೋಡಿ ಅರ್ಜುನನು ಅದರಲ್ಲಿ ಸ್ವಲ್ಪ ಕಾಲದವರೆಗೆ ಮೋಹಗೊಂಡು ಬಣ್ಣಿಸಿ ಬಣ್ಣಿಸಿ ಕೊನೆಗೆ ಆ ಅನುಭವವನ್ನು ತಾಳಿಕೊಳ್ಳಲಾರದೆ, ಅದೇ ಅರ್ಜುನನೇ ಭಕ್ತನಾಗಿ ಮುಗ್ಧನಾಗಿ

ನಿನ್ನ ವಿರಾಟ್ ಸ್ವರೂಪವನ್ನು ಮರೆಸಿಕೊ, ನಿನ್ನ ಮೊದಲಿನ ಸರಳವಾದ ರೂಪವನ್ನು ತಾಳು ತಿರುಗಿ ಮನುಷ್ಯ, ದೇಹಧರನಾಗಿ, ಸೌಮ್ಯನಾಗಿ, ನಿನ್ನ ದಿವ್ಯತೆಯನ್ನು ತೋರು, ನಾನು ನಿನ್ನನ್ನು ಪ್ರಿಯಸಖ ಕೃಷ್ಣ ಎಂದು ಕರೆಯುವಂತಾಗಲಿ ಎಂದು ಹರಿಸಿಕೊಂಡಂತೆ, ಶ್ರೀ ಶ್ರೀನಿವಾಸರು ಹಕ್ಕಿಯಾಗಿ ಬಾ, ಹೊನಲಾಗಿ ಬಾ, ಹೆಣ್ಣಾಗಿ ಬಾ, ಚೆನ್ನೆಯಾಗಿ ಬಾ, ನಗೆಯಾಗಿ ಬಾ, ಹೂವಾಗಿ ಬಾ, ಸಖನಾಗಿ ತೋರು, ನಿನ್ನ ರುದ್ರರೂಪವನ್ನು ಮರೆಸಿಕೊ, ಸರಳನಾಗು, ನನಗೆ ಪರಿಚಿತವಾದ ಎಲ್ಲ ವಸ್ತುಗಳಲ್ಲೂ ನಿನ್ನ ಕಾಂತತೆಯನ್ನು ತೋರಿ ಕೃಪಾಪೂರಿತ ನಯನದಿಂದ ನನ್ನನ್ನು ಆವರಿಸು, ಎಂದು ವಿಶ್ವೇಶನಿಗೆ ಮೊರೆಯಿಡುವಂತೆ ತೋರುತ್ತದೆ. ಅವರ ಸೂಕ್ತಿಗಳಲ್ಲಿ ಈ ಸರಳತೆ, ಸ್ಪಷ್ಟತೆ, ಈ ಹಗಲಿನ ಚೆಲುವು, ಪ್ರೇಮಾರ್ದ್ರತೆ, ಅಂತರದ ಬೆಂತರನ ಕಂಡು ಧೃತಿಗೆಟ್ಟ ಕಾತರತೆ, ಮರೆಯ ದೈವವ ತಿಳಿದು ಪದತಳದಿ ಕೆಡೆದಾಡಿದ ಭಕ್ತಿಯ ಮಧುರ ಭಾವ ಇದು ಸಂತತವಾಗಿ ಕಂಡುಬರುತ್ತವೆ.

ಈ ಕೃತಿಗಳ ಮರೆಯಲ್ಲಿರುವ ಮನಸ್ಸು ಅಸಾಮಾನ್ಯವಾದ ಸಂಸ್ಕೃತಿಯನ್ನು ಪಡೆದದ್ದು, ಸೋಕಿದುದನ್ನು ದಿವ್ಯವಾಗಿ ತೋರಿಸಬಲ್ಲ ಶಕ್ತಿಯುಳ್ಳದ್ದು. ಇವರ ಈ ಕಾವ್ಯಗಳಲ್ಲಿ ಹರಡಿರುವ ತಿಳಿವಿನ ಬೆಳಕಿನಿಂದ ನಮ್ಮಾತ್ಮವನ್ನು ನಾವು ಮತ್ತಷ್ಟು ಸ್ಪಷ್ಟವಾಗಿ ಕಂಡುಕೊಳ್ಳುತ್ತೇವೆ. ಲೋಕಕ್ಕೂ ನಮಗೂ ಇರುವ ಸಂಬಂಧವನ್ನು ಸಮರಸಮಧುರವಾಗಿ ಮಾಡಿಕೊಳ್ಳಬೇಕೆಂಬ ಹಂಬಲವನ್ನು ಪಡೆಯುತ್ತೇವೆ. ಈ ಕವಿಯು ಕಾಂತದರ್ಶನರಾದುದರಿಂದಲೇ ಈ ದರ್ಶನವು ಅವಿರತವಾಗಿ ಈ ಕೃತಿಗಳಲ್ಲಿ ವ್ಯಕ್ತವಾಗುತ್ತಿರುವುದರಿಂದಲೇ ಇವರ ಕಾವ್ಯದಲ್ಲಿ ಮಿಂದ ಮನಸ್ಸು ಸಾಫಲ್ಯವನ್ನು ಪಡೆದಂತೆ, ಶುದ್ಧವೂ ರಸಾರ್ದ್ರವೂ ಪರಿತುಷ್ಟವೂ ಪ್ರಸನ್ನವೂ ಆಗುತ್ತದೆ.

ಶ್ರೀನಿವಾಸರ ನಾಟಕಗಳು

ಡಾ।। ರಂ.ಶ್ರೀ. ಮುಗಳಿ

ನಾನು ಕರ್ನಾಟಕ ಕಾಲೇಜಿನಲ್ಲಿ ಬಿ.ಎ. ಮೊದಲ ವರ್ಷದಲ್ಲಿ ಇದ್ದಾಗ ಹಲವು ಹುರುಪಿನ ಗೆಳೆಯರೊಡನೆ ಕನ್ನಡ ಚಟುವಟಿಕೆಗಳ ಗುತ್ತಿಗೆಯನ್ನೆ ಹಿಡಿದಂತಾಗಿತ್ತು. ಆಗ ಒಳ್ಳೆಯ ಪರಿಣಾಮಕಾರಿಯಾದ ಕನ್ನಡ ನಾಟಕವೊಂದನ್ನು ರಂಗಭೂಮಿಯ ಮೇಲೆ ತರಬೇಕೆಂದು ನಾವು ಯೋಚಿಸುತ್ತಿರುವಾಗ ಶ್ರೀನಿವಾಸರ ತಾಳೀಕೋಟೆ ಎಂಬ ನಾಟಕವು 'ರಂಗಭೂಮಿ'ಯಲ್ಲಿ ಪ್ರಕಟವಾದದ್ದು ನಮ್ಮ ಕಣ್ಣಿಗೆ ಬಿದ್ದಿತು. ಶ್ರೀನಿವಾಸರ ಬರವಣಿಗೆಯಿಂದ ಮುಗ್ಧರಾದ ನಾವು ಕನ್ನಡಿಗರ ಇತಿಹಾಸಕ್ಕೆ ಸಂಬಂಧಪಟ್ಟ ಈ ನಾಟಕವನ್ನು ಅಭಿನಯಿಸಬೇಕೆಂದು ಗೊತ್ತು ಮಾಡಿದೆವು. ಆದರೆ ನಮ್ಮಲ್ಲಿ ಹಲವರಿಗೆ ಇದು ಎಷ್ಟು ಯಶಸ್ವಿಯಾದೀತು ಎಂಬ ಬಗ್ಗೆ ಸಂಶಯವು ದಟ್ಟವಾಗಿದ್ದಿತು. ಹೊರಗಿನ ಹಲವು ಹಿತಚಿಂತಕರೂ 'ಈ ನಾಟಕವು ಸಪ್ಪಗಾಗಿದೆ, ಇದು ಬೇಡ' ಎನ್ನುತ್ತಿದ್ದರು. 'ಐತಿಹಾಸಿಕ ನಾಟಕದಲ್ಲಿಯ ಆವೇಶ - ಆರ್ಭಟಗಳು ಇದರಲ್ಲಿ ಎಷ್ಟೂ ಇಲ್ಲ' ಎಂದು ಒಬ್ಬಿಬ್ಬ ಉಗ್ರಗಾಮಿಗಳು ನಮ್ಮ ಉತ್ಸಾಹದ ಮೇಲೆ ತಣ್ಣೀರನ್ನು ಚೆಲ್ಲಿದರು. ಆದರೆ ನಾವು ನಮ್ಮ ನಿಶ್ಚಯದಿಂದ ಕದಲಲಿಲ್ಲ. ನಾಟಕದ ಸಿದ್ಧತೆ ನಡೆಯಿತು, ಕೊನೆಗೆ ಅತ್ಯಂತ ಯಶಸ್ವಿಯಾಗಿ ಅದು ಕೊನೆಗೊಂಡಿತು. ಅದರಲ್ಲಿಯ ವಿಶೇಷವೆಂದರೆ ಬಹುಶಃ ಎಲ್ಲ ನಟರು ಹೊಸಬರಾಗಿದ್ದರೂ ಚೆನ್ನಾಗಿ ಪಾತ್ರಗಳನ್ನು ಅಭಿನಯಿಸಿದರು. ಮೊದಲು ಕಾಲೇಜಿನಲ್ಲಿ ಯಾರ ಗುರುತೂ ಇಲ್ಲದೆ ಹೆಡಿಗೆ ರುಮಾಲನ್ನು ಸುತ್ತಿಕೊಂಡು ಒಬ್ಬೊಂಟಿಗರಾಗಿ ತಿರುಗುತ್ತಿದ್ದ ದಿವಗಂತ ಸಾಸನೂರ ಅವರು ಆಯುಷಾ ಎಂಬ ಸ್ತ್ರೀಪಾತ್ರವನ್ನು ವಹಿಸಿ ಸೊಗಸಾಗಿ ಮಾಡಿದರು. ಗಂಭೀರ ವಿದ್ಯಾರ್ಥಿಯಾಗಿ ಮೆರೆಯುತ್ತಿದ್ದ ನಾನು ರಾಮಕೃಷ್ಣನ ವಿನೋದಪಾತ್ರವನ್ನು ವಹಿಸಿ ನನ್ನ ಅಭಿನಯದ ಅಭಾವದಿಂದಲೇ ವಿನೋದವನ್ನ ತಕ್ಕಮಟ್ಟಿಗೆ ಹುಟ್ಟಿಸಿರಬೇಕು! ನನ್ನ ಇನ್ನೂ ಒಬ್ಬಿಬ್ಬ ಮಿತ್ರರು ತಮ್ಮ ಪಾತ್ರಗಳಲ್ಲಿ ಜೀವಕಳೆ ತುಂಬಿ ಅಭಿನಯ ಮಾಡಿದರು. ಕೊನೆಯ ಅಂಕದ ದಾರುಣದೃಶ್ಯವು ಎಷ್ಟು ಹೃದಯವೇದಕವಾಯಿತೆಂಬುದು ನನಗಿನ್ನೂ ನಿಚ್ಚಳವಾಗಿ ನೆನಪಿದೆ. ಎಲ್ಲ ದೃಶ್ಯಗಳ ಸ್ವಾರಸ್ಯವು ಅಂದಿನ ಪ್ರೇಕ್ಷಕರಿಗೆ ಅರಿಯದೆ ಹೋಗಿರಬಹುದು. ಆದರೆ ನಾಟಕದ ದುರಂತ ಸ್ವರೂಪವು ಎಲ್ಲರ ಮನಸ್ಸನ್ನು ಸೆರೆಹಿಡಿಯಿತೆಂದು ನನ್ನ ಭಾವನೆಯಿದೆ. ಹೀಗೆ ಶ್ರೀನಿವಾಸರ ನಾಟಕವೊಂದನ್ನು ಹಿಂದೆ ರಂಗಭೂಮಿಯಲ್ಲಿ ತಂದವರಲ್ಲಿ ಒಬ್ಬನಾದ ನಾನು ಇಂದು ಅವರೆಲ್ಲ ನಾಟಕಗಳನ್ನು ಕುರಿತು ಗುಣವಿಮರ್ಶೆಯನ್ನು ಬರೆಯುತ್ತಿರುವುದು ಒಂದು ಸುಯೋಗವೇ ಸರಿ.

ಈಗವರೆಗೆ ಶ್ರೀನಿವಾಸರ ಒಂಬತ್ತು* ನಾಟಕಗಳು ಪ್ರಕಟವಾಗಿವೆ. ಅವುಗಳಲ್ಲಿ ತಾಳೀಕೋಟೆ, ಶಿವಛತ್ರಪತಿ, ಕಾಕನಕೋಟೆ, ಯಶೋಧರಾ, ಮಂಜುಳ ಇವು ದೊಡ್ಡವು. ಶಾಂತಾ, ಸಾವಿತ್ರಿ, ಉಷಾ, ತಿರುಪಾಣಿ ಇವು ಅವಕ್ಕಿಂತ ಚಿಕ್ಕವು. ಈ ನಾಲ್ಕನ್ನು ಏಕಾಂಕದೃಶ್ಯಗಳೆಂದು ಕರೆಯಬಹುದು. ಈ ನಾಟಕಗಳ ವಿಷಯ, ಶೈಲಿ ಮುಂತಾದ್ದರಲ್ಲಿ ಒಂದು ವೈವಿಧ್ಯವಿದೆ, ಅಲ್ಲಲ್ಲಿ ಹೊಸ ರೀತಿಯಿದೆ. ತಾಳೀಕೋಟೆ, ಶಿವಛತ್ರಪತಿ, ಕಾಕನಕೋಟೆ ಇವು ಐತಿಹಾಸಿಕವಾಗಿದ್ದು ತಮ್ಮ ತಮ್ಮೊಳಗೆ ಬೇರೆ ಬೇರೆ ನಿಲುವಿನಲ್ಲಿವೆ. ಮಂಜುಳಾ ಒಂದು ಮಾತ್ರ ಸಾಮಾಜಿಕವಾಗಿದೆ. ತಿರುಪಾಣಿ ಹಾಗೂ ಯಶೋಧರಾ ಇವು ಮಹಾತ್ಮರ ಚರಿತ್ರೆಯನ್ನು ಕುರಿತಿದ್ದು ಆಧ್ಯಾತ್ಮಿಕವಾಗಿರುತ್ತವೆ. ಶಾಂತಾ, ಸಾವಿತ್ರಿ, ಉಷಾ ಇವು ಪ್ರಾಚೀನ ಕಥೆಗಳನ್ನು ಆಧರಿಸಿದ್ದು ಪೌರಾಣಿಕವಾಗಿವೆ. ಬಂಧದ ವಿಷಯದಲ್ಲಿ ಶಾಂತಾ, ಸಾವಿತ್ರಿ, ಉಷಾ, ತಿರುಪಾಣಿ, ಕಾಕನಕೋಟೆ ಇವುಗಳ ಗದ್ಯದ ಜೊತೆಗೆ ಪದ್ಯ ಅಥವಾ ಗೀತ ಅವಶ್ಯ ಭಾಗವಾಗಿ ಸೇರಿಕೊಂಡಿದೆ. ಯಶೋಧರಾ ಸಂಪೂರ್ಣ ಸರಳರಗಳೆಯ ಪದ್ಯದಲ್ಲಿದೆ. ತಾಳೀಕೋಟೆ ಪೂರ್ತಿ ಗದ್ಯವಾಗಿದೆ. ಮಂಜುಳಾ ಹಾಗೂ ಶಿವಛತ್ರಪತಿ ಇವು ಬಹುಮಟ್ಟಿಗೆ ಗದ್ಯವೆಂದೇ ಹೇಳಬೇಕು. ಒಂದೇ ವಿಷಯದ ವರ್ಗದಲ್ಲಿ ಬರುವ ನಾಟಕಗಳಲ್ಲಿಯೂ ಒಮ್ಮೊಮ್ಮೆ ಶೈಲಿ ತೀರ ಬೇರೆಯಾಗಿದೆ. ತಾಳೀಕೋಟೆಯ ಶೈಲಿ ಕಾಕನ ಕೋಟೆಯಲ್ಲಿಲ್ಲ. ತಿರುಪಾಣಿಯ ರೀತಿ ಯಶೋಧರಾ ನಾಟಕದಲ್ಲಿ ಕಾಣದು. ಅಂಥ ನಾಟಕ, ಇಂಥ ನಾಟಕ ಎಂದು ನಾವು ಮೇಲೆ ಬೇರ್ಪಡಿಸಿ ಹೇಳಿದ್ದರೂ ಶ್ರೀನಿವಾಸರ ಎಲ್ಲ ನಾಟಕಗಳ ಮೂಲಪ್ರೇರಣೆ ಒಂದೇ ಆಗಿದೆ. ಅದು ಜೀವನದಲ್ಲಿ ಅವರು ಕಂಡ ಲೇಸು ಎಂದರೆ ಜಗತ್ತಿನ ಹೋರಾಟದಲ್ಲಿ ಸತ್ಯ ಪ್ರೇಮ ಸೌಂದರ್ಯ ಮೊದಲಾದ ತತ್ವಗಳಿಗೆ ದೊರೆತ ಗೆಲವು ಎಂದು ಹೇಳಬಹುದು. ಈ ದರ್ಶನದ ಪ್ರಭಾವದಿಂದ ಎಲ್ಲ ನಾಟಕಗಳ ಪರಿಣಾಮ ರಮಣೀಯವಾಗಿವೆ. ಮೂಲದಲ್ಲಿಯೇ ಸುಖಾಂತವಾಗಿದ್ದ ಶಾಂತಾ, ಸಾವಿತ್ರಿಯಂಥ ದೃಶ್ಯಗಳಂತೂ ಸರಿಯೆ, ದುರಂತವಾಗಬಹುದಾಗಿದ್ದ 'ತಾಳೀಕೋಟೆ'ಯೂ, ಕೊನೆಯ ದೃಶ್ಯದಿಂದಲೂ 'ದೇವರು ಎಲ್ಲರಿಗೂ ಒಳ್ಳೆಯದನ್ನು ಮಾಡಲಿ' ಎಂಬ ಕೊನೆಯ ಭರತವಾಕ್ಯದಿಂದಲೂ ಸಾಂತ್ವನದಲ್ಲಿ ಕೊನೆ ಹೊಂದಿದೆ. ಇದರಿಂದ ಶ್ರೀನಿವಾಸರಿಗೆ ದುಃಖದ ಅರಿವು ಕಡಿಮೆಯೆಂದಲ್ಲ, ದುಃಖವನ್ನು ಗೆದ್ದು ನಿಲ್ಲುವ ಲೇಸು ಹೆಚ್ಚಿನದು ಎಂದು ಅವರ ಶ್ರದ್ಧೆ. ಈ ವಿಷಯದಲ್ಲಿ ಅವರ ದರ್ಶನವು ಸಂಸ್ಕೃತ ನಾಟಕಕಾರರ ದರ್ಶನಕ್ಕೆ ಸಮಾನವಾಗಿದೆ ಎಂದು ತಿಳಿದರೆ ತಪ್ಪಿಲ್ಲ.

ಈ ನಾಟಕಗಳ ಪ್ರೇರಣೆ ಒಂದೇ ಆಗಿದ್ದಂತೆ ಇವುಗಳ ವಸ್ತುರಚನೆಯ ಜೀವಾಳವೂ ಸಾಮಾನ್ಯವಾಗಿ ಒಂದೇ ಆಗಿದೆ. ಆ ಜೀವಾಳವು ಒಂದು ನೇರವಾದ ನಿರಲಂಕಾರವಾದ ಮಾರ್ಗದಲ್ಲಿದೆ. ಸಂವಿಧಾನದ ಚಮತ್ಕಾರ ಎಂದರೆ ಅದರ ವಕ್ರತೆ, ಜಟಿಲತೆ ಇವು ಶ್ರೀನಿವಾಸರ ಮಾರ್ಗದಲ್ಲಿ ಹೆಚ್ಚಾಗಿ ಕಾಣವು. ವಸ್ತು ರಚನೆಗಿಂತ ಸ್ವಭಾವ-ಸಂವಾದಗಳಲ್ಲಿ ಅವರ ಆಸಕ್ತಿ ಹೆಚ್ಚು. ಆದರೂ ಅವರ ನಾಟಕಗಳಲ್ಲಿ ಅಚ್ಚುಕಟ್ಟಾದ ವಸ್ತುಗಳಿದ್ದೇ ಇವೆ. ಅವುಗಳಲ್ಲಿ 'ಕಲೆಯನ್ನು ಮರೆಮಾಡುವ ಕಲೆ'ಯೊಂದು ಮೃದುವಾದ ಬೆಳಕಿಗೆ ಬಿದಿಗೆ ಚಂದಿರನಂತೆ ಬೆಳಗುತ್ತಿರುವುದು. ಅವರು ಬಹುಶಃ ಪ್ರಾರಂಭದಲ್ಲಿ ಬರೆದ ಶಾಂತಾ-

---

* ಜೀವನ ವಿಶೇಷ ಸಂಚಿಕೆಯಲ್ಲಿ (೧೯೪೦) ಪ್ರಕಟವಾದದ್ದು.

ಸಾವಿತ್ರಿ, ಈ ದೃಶ್ಯಗಳು ಕಥಾರಚನೆಯಲ್ಲಿ ಹೊಸದಾರಿಯನ್ನು ತುಳಿಯದಿದ್ದರೂ ತಮ್ಮ ನೇರವಾದ ಹಳೆಯ ದಾರಿಯನ್ನು ಬೆಳಗುತ್ತವೆ. ಅವುಗಳ ಸ್ವಭಾವ ನಿರೂಪಣೆ ಮುಖ್ಯಭಾಗವಾದರೂ ವಸ್ತುರಚನೆ ಉಚಿತವಾಗಿದೆ. ಸಾವಿತ್ರಿ ಬಹುಮಟ್ಟಿಗೆ ಪುರಾಣವಸ್ತುವನ್ನು ಅನುಸರಿಸಿದೆ, ಆದರೆ ಅದರಲ್ಲಿ ಸಾವಿತ್ರಿ-ಯಮಧರ್ಮರ ಸಂವಾದವು ತಡೆತಡೆದು ನಡೆಯುವಂತೆ ನಡುವೆ ಸಂದರ್ಭೋಚಿತವಾದ ದೃಶ್ಯಗಳನ್ನು ಸೇರಿಸಿದ್ದು ಚೆನ್ನಾಗಿದೆ. 'ಶಾಂತಾ' - ದೃಶ್ಯದಲ್ಲಿ ಕ್ರಮಬದ್ಧವಾದ ಪಾತ್ರಪೋಷಣೆಯುಂಟಾಗುವಂತೆ ಸನ್ನಿವೇಶಗಳು ನಿರ್ಮಾಣವಾಗಿವೆ. ಕೊನೆಯಲ್ಲಿ ವಿಭಾಂಡಕಮುನಿಯ ಕೋಪ ಶಮನವು ತುಸು ಲಗುಬಗೆಯಿಂದ ಆಗಿದ್ದರೂ ಮುಕ್ತಾಯದ ಕಲ್ಪನೆಯು ಒಳಿತಾಗಿದೆ. ಇದರಿಂದ ಸಣ್ಣ ಕತೆಗಳನ್ನು ಬರೆಯುವುದರಲ್ಲಿ ಹೇಗೋ ಹಾಗೆ ನಾಟಕಗಳನ್ನು ರಚಿಸುವುವರಲ್ಲಿ ಶ್ರೀನಿವಾಸರ ವಸ್ತು ರಚನೆಯ ರೀತಿ ಸಹಜವಾದುದು ಎಂದು ತಿಳಿಯುತ್ತದೆ. ಬಹುಮಟ್ಟಿಗೆ ಮೂಲದಲ್ಲಿ ಇದ್ದಂತೆ ಅಥವಾ ಜೀವನದಲ್ಲಿ ನಡೆದಂತೆ ಅವರು ಕಥೆಯನ್ನು ಕಟ್ಟುವರು. ಆದರೆ ಅವರು ಆರಿಸಿದ ಮೂಲಕವಾಗಲಿ, ಜೀವನಸಂಗತಿಯಾಗಲಿ ಅದರಲ್ಲಿ ನಿಸರ್ಗಕಾರ ಕಲೆಯು ಇದ್ದೇ ಇರುವುದು. ಇಂಥ ಕಥೆಗೆ ತಮ್ಮ ನಿರೂಪಣೆಯ ವಿಶಿಷ್ಟ ಬಗೆಯಿಂದ ಜೀವದುಂಬಿ ಅವರು ತಮ್ಮ ಸ್ವತಂತ್ರ ಪ್ರತಿಭೆಯನ್ನು ತೋರುತ್ತಾರೆ. ಇದಕ್ಕೆ ಮೇಲೆ ಉದಾಹರಿಸಿದ ದೃಶ್ಯಗಳನ್ನೂ ಉಷಾ, ತಿರುಪಾಣ, ಶಿವಛತ್ರಪತಿ ಈ ದೃಶ್ಯಗಳನ್ನೂ ನೋಡಬಹುದು. ಇವುಗಳ ರಚನೆಯಲ್ಲಿ ಕಲ್ಪನಾಂಶವು ಹೆಚ್ಚು ಕಡಿಮೆ ಇಲ್ಲವೆಂದಲ್ಲ. ಆದರೆ ಅದು ಕಥಾನಕದ ಮೂಲಸ್ವರೂಪವನ್ನೇ ಪಲ್ಲಟಿಸಿ ಬೆರಗಿನ ಅಥವಾ ತೊಡಕಿನ ವಸ್ತುವನ್ನು ನಿರ್ಮಿಸಿಹೋಗಿಲ್ಲ. ಹೀಗಿದ್ದರೂ ಕಾಕನಕೋಟೆ, ತಾಳೀಕೋಟೆ ಇವುಗಳಲ್ಲಿ ಕಲ್ಪಕತೆಯು ಸ್ವಾಭಾವಿಕವಾಗಿ ಹೆಚ್ಚಿದೆ. ಅವುಗಳ ಉಪಲಬ್ಧಮೂಲವೇ ಅಲ್ಪವಾಗಿದ್ದು ನಾಟಕಕಾರನ ಕಲ್ಪನೆಗೆ ಅದು ಅವಕಾಶಕೊಟ್ಟಿದೆ. ಮಂಜುಳಾ ನಾಟಕ ರಚನೆಗೆ ಇಂದಿನ ಸಾಮಾಜಿಕ ಜೀವನವು ಆಧಾರವಾಗಿದ್ದರೂ ಅದರ ವಸ್ತು ಬಹುಶಃ ಕವಿಕಲ್ಪಿತವಾಗಿದೆ. ಈ ಎಲ್ಲ ನಾಟಕ ವಸ್ತುಗಳನ್ನು ತೂಗಿ ನೋಡಲಾಗಿ, ಸಹಜ ರೀತಿಯಲ್ಲಿ ಉಷಾ, ತಿರುಪಾಣ, ಶಿವಛತ್ರಪತಿ ಇವು ಕಲ್ಪಿತ ರೀತಿಯಲ್ಲಿ ಯಶೋಧರಾ, ಮಂಜುಳಾ, ಕಾಕನಕೋಟೆ, ತಾಳೀಕೋಟೆ ಇವು ಸೊಗಸಾಗಿರುತ್ತವೆ. ಅವರ ಏಕಾಂಕದೃಶ್ಯಗಳಲ್ಲಿ ಉಷಾ, ತಿರುಪಾಣ ಮೇಲಾದುವು. ಹಿರಿಯ ನಾಟಕಗಳಲ್ಲಿ ಸುಖಾಂತವಾದ ಮಂಜುಳಾ, ದುರಂತವಾದ ತಾಳೀಕೋಟೆ ಇವು ವಸ್ತುನಿರ್ಮಾಣದ ದೃಷ್ಟಿಯಿಂದ ಹೆಚ್ಚು ಕಲಾಮಯವಾಗಿದೆಯೆಂದು ನನ್ನ ಎನಿಸಿಕೆ. ಇಂದಿನ ಸಮಾಜಿಕ ನಾಟಕಗಳಲ್ಲಿ ಒಂದು ಸಮಸ್ಯೆಯನ್ನು ಒಂದು ಪಕ್ಷದಿಂದ ಚಿತ್ರಿಸುವುದರಲ್ಲಿ ಮಾತ್ರ ತೃಪ್ತಿಯನ್ನು ಹೊಂದುವ ಬಗೆಯೊಂದಿದೆ. ಆದರೆ ಶ್ರೀನಿವಾಸರು ಮಂಜುಳಾ ನಾಟಕದಲ್ಲಿ ಒಬ್ಬ ಹೆಂಡತಿ ಇರುವಾಗಿನ ಎರಡನೆಯ ಮದುವೆಯ ಸಮಸ್ಯೆಯನ್ನು ಎಲ್ಲ ಸಂಬಂಧಪಟ್ಟವರ ಪರವಾಗಿ ಚಿತ್ರಿಸಿ ಅದರ ಕುಶಲವಾದ ಪರಿಹಾರವನ್ನೂ ತೋರಿಸಿದ್ದಾರೆ. 'ತಾಳೀಕೋಟೆ'ಯ ವಿಷಯ ಐತಿಹಾಸಿಕ, ಆದರೆ ಬಹುಭಾಗ ಕಾಲ್ಪನಿಕ. ಅದರಲ್ಲಿ ಘೋರದುರಂತ ನಾಟಕವೊಂದು ನಿರ್ಮಾಣವಾಗಿದೆ, ನಾಟಕಕಾರರ ಸೂಕ್ಷ್ಮ ಕಲೆಯ ಪರೀಕ್ಷೆಯಾಗಿದೆ. ಸ್ವಭಾವ, ಸನ್ನಿವೇಶ ಇವುಗಳ ಮೇಳದಿಂದ ಶ್ರೀನಿವಾಸರ ಎಲ್ಲ ನಾಟ್ಯವಸ್ತುಗಳಲ್ಲಿ ತಾಳೀಕೋಟೆ ಮಿಗಿಲಾದುದೆಂದು ನಾನು ತಿಳಿದಿರುತ್ತೇನೆ. ರಾಮರಾಜನು ತನ್ನ ಗುಪ್ತಪ್ರೇಮದ ಫಲವಾದ ರುಸ್ತುಂನಿಂದ ಕೊಲೆ ಹೊಂದಿದ ದುರಂತವು ತುಂಬಾ ಅಪರಿಹಾರ್ಯವಾಗಿ ಚಿತ್ರಿತವಾಗಿದೆ. ರುಸ್ತುಂ ಹಾಗೂ

ಅವನ ತಾಯಿ ಆಯಷಾ ಇವರು ರಾಮರಾಜನ ಕೊಲೆಯ ತರುವಾಯ ಯುದ್ಧರಂಗದಲ್ಲಿ ಕೂಡಿದ ಕೊನೆಯ ದೃಶ್ಯವು ಹೊಸಗನ್ನಡದ ಅತ್ಯಂತ ಕರುಣಪೂರಿತವಾದ ಸನ್ನಿವೇಶಗಳಲ್ಲಿ ಒಂದಾಗಿ ಚಿರಸ್ಮರಣೀಯವಾಗುವುದು. ಆದರೆ ಅದರ ಮುಂದೆ ಬಂದಿರುವ ನಾಟಕದ ಕೊನೆಯ ಸ್ಥಾನವು ಮೊದಲಿನ ದುರಂತಕ್ಕೆ ಅನುಗುಣವಾಗಿಲ್ಲವೆಂದೂ ಮಾಯದ ಗಾಯಕ್ಕೆ ಮುಲಮು ಪಟ್ಟಿಯನ್ನು ಹಚ್ಚಿದಂತೆ ಆಗಬಹುದೆಂದೂ ತೋರುತ್ತದೆ.

ಸ್ವಭಾವ ನಿರೂಪಣೆಯಲ್ಲಿ ಶ್ರೀನಿವಾಸರು ಇನ್ನೂ ಮೇಲಾದ ಕುಸುರುಗೆಲಸವನ್ನು ಮಾಡಿದ್ದಾರೆ. ಕಥಾವಸ್ತು ಸಾಮಾನ್ಯವಾಗಿರಲಿ, ಉಜ್ವಲವಾಗಿರಲಿ, ಅದರಲ್ಲಿಯ ವಿವಿಧ ವ್ಯಕ್ತಿಗಳು ಯಾವಾಗಲೂ ನಮ್ಮ ಮನಸ್ಸೆಳೆಯುವರು. ಹಿಂದೆ ಸೂಚಿಸಿದ ಲೇಸಿನ ಕಾಣ್ಕೆಯ ಪರಿಣಾಮದಿಂದ ಶ್ರೀನಿವಾಸರು ಚಿತ್ರಿಸಿದ ಬಹುವ್ಯಕ್ತಿಗಳು ಆದರ್ಶಪ್ರಧಾನವಾಗಿವೆ, ಉಚ್ಚಕೋಟಿಯ ಜೀವಗಳಾಗಿವೆ. ಆಯಾ ವ್ಯಕ್ತಿಗಳ ಗುಣಾತಿಶಯವನ್ನೂ ಸಾಧನಸಿದ್ಧಿಗಳನ್ನೂ ಅವರು ಬಹಳ ಚೆನ್ನಾಗಿ ಗ್ರಹಿಸಿ ಅಂತಃಕರಣದ ಸೂಕ್ಷ್ಮಪರಿಗಳನ್ನು ಸಹ ಬಿಡದೆ ಚಿತ್ರಿಸಿದ್ದಾರೆ. ಇಲ್ಲಿ ಅವುಗಳೊಡನೆ ಶ್ರೀನಿವಾಸರು ಹೊಂದಿದ ತಾದಾತ್ಮ್ಯವು ಅವರ ಆಳವಾದ ಜೀವನದ ತಿಳಿವಿಗೆ ಗುರುತಾಗಿದೆ. ಪುರಾಣಪಾತ್ರಗಳ ಹೃದಯಾವಿಷ್ಕರಣದ ವಿಷಯದಲ್ಲಿ ಅವರ ಕಾರ್ಯವು ತಲೆದೂಗುವಂತಹದು. ಸತ್ಯವಾನನ ಮರಣದ ದಿನ ಸಂಚಿತಳಾಗಿಯೂ ಧೈರ್ಯಗೆಡೆದ ಸಾವಿತ್ರಿ, ಹೆಂಗಸೆಂದರೆ ಗೊತ್ತಿಲ್ಲದೆ ಸ್ತ್ರೀಯ ಸೌಂದರ್ಯದಿಂದ ಪರವಶನಾದ ಋಷ್ಯಶೃಂಗ, ಕನಸಿನಲ್ಲಿ ಕಂಡು ವರಿಸಿದ ಪತಿಯ ಪ್ರೇಮಲೀಲೆಯಲ್ಲಿ ಮುಳುಗಿ ಏಳುವ ಉಷೆ - ಇವರೆಲ್ಲರ ಸೂಕ್ಷ್ಮಮನಶ್ಚಿತ್ರವು ಶ್ಲಾಘ್ಯವಾಗಿದೆ. ಆಯಾವ್ಯಕ್ತಿಗಳು ಬರೀ ಪಾತ್ರಗಳಾಗದೆ ಮಹಾಭಾವಗಳ ಸಂಕೇತಗಳೂ ಆಗುತ್ತವೆ. ತಿರುಪಾಣ, ಯಶೋಧರಾ ಇವುಗಳಲ್ಲಿ ಇನ್ನೂ ಎತ್ತರದ ವ್ಯಕ್ತಿಗಳ ಚಿತ್ರವಿದೆ. ತಮ್ಮ ಆಧ್ಯಾತ್ಮಿಕ ಜೀವನದ ಪರಿಪಾಕದಿಂದ ಶ್ರೀನಿವಾಸರು ಆಯಾವ್ಯಕ್ತಿಗಳನ್ನು ಸಜೀವವಾಗಿ ನಮ್ಮ ಕಣ್ಣಮುಂದೆ ನಿಲ್ಲಿಸಿದ್ದಾರೆ. ಹೊಲೆಯನಾಗಿ ಹುಟ್ಟಿದರೂ ಭಕ್ತಿಪಾರಮ್ಯದಿಂದ ದೇವನಲ್ಲಿ ಬೆರೆತ ತಿರುಪಾಣಿಯ ಸಿದ್ಧಜೀವನವು ಚೆಂದಾಗಿ ಚಿತ್ರಿತವಾಗಿದೆ. ಅವನೊಡನೆ ಬಂದ ಇತರ ವ್ಯಕ್ತಿಗಳು ಬೇರೆ ಬೇರೆ ಮಟ್ಟದಲ್ಲಿದ್ದ ಆತ್ಮಗಳಾಗಿ ವೈವಿಧ್ಯಪೂರ್ಣವಾಗಿವೆ. ಯಶೋಧರಾ ನಾಟಕದಲ್ಲಿ ಸಂಸಾರದಿಂದ ಓಡಿಹೋಗಿ ಬುದ್ಧನಾದ ಸಿದ್ಧಾರ್ಥ ಮತ್ತೆ ತನ್ನ ಸಂಸಾರವಿದ್ದ ನಗರಕ್ಕೆ ಬಂದಾಗಿನ ವೃತ್ತಿಯನ್ನೂ ಪತಿಭಕ್ತೆಯಾದರೂ ಮಾನಿನಿಯಾದ ಯಶೋಧರೆಯ ಸ್ವಭಾವವನ್ನೂ ನಾಟಕಕಾರರು ಕಲಾಪೂರ್ಣವಾಗಿ ಚಿತ್ರಿಸಿದ್ದಾರೆ. ಐತಿಹಾಸಿಕ ದೃಶ್ಯಗಳಲ್ಲಿ ಒಂದೊಂದು ಬಗೆಯ ಪಾತ್ರರಚನೆಯ ವೈಶಿಷ್ಟ್ಯವಿದೆ. ಕಾಕನಕೋಟೆಯ ವಾಸ್ತವವಾದ ಜಾನಪದ ಜೀವನ, ಶಿವಛತ್ರಪತಿಯಲ್ಲಿ ಉದಾತ್ತ ಚತುರನಾದ ರಾಜ್ಯಸ್ಥಾಪಕನ ಸಾಹಸ ಜೀವನ, ತಾಳೀಕೊಟೆಯಲ್ಲಿ ಪ್ರೇಮಜಾಲದಿಂದ ರಾಜ್ಯವಿನಾಶವಾದ ದುರಂತಜೀವನ - ಇವನ್ನು ಕಾಣುತ್ತೇವೆ. ಇವುಗಳಲ್ಲಿ ವೀರರಸದ ಅದ್ಭುತ ಉದ್ರೇಕವಾಗಲಿ ಹಿಂದಿನ ಕಾಲದ ಅಲ್ಲೋಲ-ಕಲ್ಲೋಲವಾಗಲಿ ತೋರಲಾರದು, ಆದರೆ ಅಲ್ಲಿ ನಿಜವಾದ ಮನೋವಿಶ್ಲೇಷಣವಿದೆ. ತಾಳೀಕೋಟೆಯ ದುರಂತಪಾತ್ರಗಳಾದ ಆಯಷಾ, ರಾಮರಾಜ, ರುಸ್ತುಂ ಇವರನ್ನು ಶ್ರೀನಿವಾಸರು ಜಾಣ್ಮೆಯಿಂದ ಕಂಡಿರಿಸಿದ್ದಾರೆ. ಖಲನಾಯಕನಂತಿದ್ದ ಉಸಮಾನನನ್ನು ಸಹ ಸಹಾನುಭೂತಿಯಿಂದ ನೋಡಿ ಅವರ ದೋಷಗಳ ಕೂಡ ಬೆರೆತ ಗುಣವನ್ನು ಚಿತ್ರಿಸಿದ ರೀತಿ ಮಾಸ್ತಿಯವರ ಸದ್ದರ್ಶನಕ್ಕೆ

ಅನುರೂಪವಾಗಿಯೇ ಇರುತ್ತದೆ. 'ಮಂಜುಳಾ' ಎಂಬುದೊಂದೇ ಅವರ ಈವರೆಗಿನ ಸಾಮಾಜಿಕ ನಾಟಕವಾದರೂ ಅದರ ಪಾತ್ರಗಳಲ್ಲಿ ವಾಸ್ತವತೆಯ ಜೀವಕಳೆಯಿದೆ. ಸಾಮಾಜಿಕ ಜೀವನವನ್ನು ಅವರು ತಮ್ಮ ಕಥೆಗಳಲ್ಲಿ ವಿವಿಧವಾಗಿ ಚಿತ್ರಿಸಿದ್ದರಿಂದ ಪಳಗಿದ ಕೈಯು ಈ ನಾಟಕದಲ್ಲಿ ಕಾಣುತ್ತದೆ. ಇದರಲ್ಲಿ ಸ್ತ್ರೀಪಾತ್ರಗಳು ಹೆಚ್ಚು ಹೃದಯಂಗಮವಾಗಿವೆ. 'ಲಂಬಾಣಿ ಲಂಕಿಣಿ' ಎಂದು ಕರೆಸಿಕೊಂಡ ಸೀತಮ್ಮ ಈ ನಾಟಕದ ಅಪೂರ್ವಸೃಷ್ಟಿ. ಪುಟ್ಟೂನ ಮನವೊಲಿಸಿ ಮಂಜುಳೆಯ ಕೂಡ ಅವನು ಹಿತವಾಗಿದ್ದು ಎರಡನೆಯ ಮದುವೆಯ ವಿಚಾರವನ್ನು ಬಿಟ್ಟುಕೊಡುವಂತೆ ಸೀತಮ್ಮ ತೋರಿದ ಚಾತುರ್ಯವು ಈ ನಾಟಕದ ಸ್ವಾರಸ್ಯವಾಗಿರುತ್ತದೆ. ಶ್ರೀನಿವಾಸರ ಪಾತ್ರರಚನೆಯಲ್ಲಿ ವೈವಿಧ್ಯ-ಸೂಕ್ಷ್ಮತೆಗಳು ಇದ್ದಂತೆ ಒಂದು ಸಾತ್ವಿಕತೆಯ ದರ್ಶನವೂ ಇದೆ ಎಂದು ಹಿಂದೆ ಸೂಚಿಸಿದೆ. ಸ್ತ್ರೀ ವಿಷಯದಲ್ಲಿ ಈ ದರ್ಶನವು ಸ್ಪೃಹಣೀಯವಾಗಿ ಮೂಡಿದೆ. ಸ್ತ್ರೀತ್ವದ ಸೌಂದರ್ಯ ಮಹಿಮೆ, ಪ್ರೇಮ, ತ್ಯಾಗ, ಕಷ್ಟಸಹನೆ ಈ ಮೊದಲಾದ ಹಲವು ಹಿರಿತನದ ಗುಣಗಳನ್ನು ಶಾಂತಾ, ಉಷಾ, ಅಯುಷಾ, ಯಶೋಧರಾ ಮುಂತಾದ ವ್ಯಕ್ತಿಗಳಲ್ಲಿ ಕಾಣಬಹುದು. ಈ ಬಗೆಯ ಪಾತ್ರರಚನೆ ಸಂವಾದ ಯೋಜನೆ ಇವುಗಳಲ್ಲಿ ಶ್ರೀನಿವಾಸರ ಕಲಾನಿರ್ಮಾಣವನ್ನೂ ಶೇಕ್ಸ್‌ಪಿಯರನ ಹಾಗೂ ಕಾಳಿದಾಸನ ನಾಟ್ಯಕೃತಿಗಳಿಗೆ ಹೋಲಿಸಬಹುದಾಗಿದೆ.

ಶ್ರೀನಿವಾಸರ ವಸ್ತುಯೋಜನೆಯಲ್ಲಿ ಸಹಜಕಲೆ, ಪಾತ್ರ ರಚನೆಯಲ್ಲಿ ಸೂಕ್ಷ್ಮ ಸೊಬಗು ಇದ್ದರೆ ಅವರ ಶೈಲಿಯಲ್ಲಿ ಮೋಹಕತೆಯು ತುಂಬಿಕೊಂಡಿದೆ. ಅವರ ಇರುವಿಕೆ ಹಿರಿಯದು, ಹಾಗೇ ಅವರ ಮಾತು ಹಿರಿಯದು. ಆ ಮಾತಿನಿಂದ ಅವರ ವಾಙ್ಮಯವು ಹಿರಿಯದು. ಕನ್ನಡ ಸರಸ್ವತಿಯು ಅವರ ವಾಣಿಗೆ ಅಂಥ ಅಪೂರ್ವ ಸವಿಯನ್ನು ನೀಡಿರುವಳೆಂದರೆ ಅತಿಶಯೋಕ್ತಿಯಾಗದು. ಅವರ ವಾಣಿಯಲ್ಲಿ ಒಂದು ನೇರವಾದರೂ ಸಾರವುಳ್ಳ ಚೆಲುವಿದೆ. ಅವರ ಬಗೆ ಎಷ್ಟು ಜಿನುಗಾಗಿರುವುದೋ ಮಾತು ಅಷ್ಟು ತಿಳಿಯಾಗಿದೆ. ಅವರ ಶೈಲಿ ಅವರ ಸಮಗ್ರಜೀವನದ ಒಂದು ಸಹಜಸಿದ್ಧಿ, ಬರೀ ಸಾಹಿತ್ಯಸೃಷ್ಟಿಯ ಒಂದು ಸೋಗಲ್ಲ. ಅದರಿಂದ ಅವರ ನಾಟಕಗಳ ಸಂವಾದಗಳೂ ವರ್ಣನೆಗಳೂ ಪ್ರಸನ್ನಮಧುರವಾಗಿವೆ. ಉಳಿದೆಲ್ಲ ವಿಷಯಗಳಲ್ಲಿ ಪಾಕವು ಹೆಚ್ಚುಕಡಿಮೆಯಾದರೂ ಅವರ ಶೈಲಿಯ ಅವ್ಯಾಹತವಾದ ಪರಿಪಾಕವು ಯಾವಾಗಲೂ ತುಂಬಿ ಹರಿಯುವ ಹೊಳೆಯಂತೆ ಸಾಗುತ್ತದೆ, ಅವರ ಸಂವಾದಗಳು ಸ್ಥೂಲದೃಷ್ಟಿಗೆ ಅಥವಾ ಹೊರಹೊಂಪಿನ ನೋಟಕ್ಕೆ ಸಪ್ಪಗೆಂದೂ ಸರ್ವಸಾಮಾನ್ಯವೆಂದೂ ತೋರಬಹುದು. ಆದರೆ ಒಟ್ಟಿನಲ್ಲಿ ಅವುಗಳಲ್ಲಿ ಸಹಜ ಚಮತ್ಕೃತಿಯೂ ಸೂಕ್ಷ್ಮವ್ಯಂಗವೂ ಕಾಣುವವು. ಕೆಳಗಿನ ಒಂದೆರಡು ಉದಾಹರಣೆಗಳು ಇದಕ್ಕೆ ಸಾಕ್ಷಿಯಾಗಿವೆ. ಶಾಂತಾ ದೃಶ್ಯದಲ್ಲಿ ನಡೆದ ಸಂವಾದ ಭಾಗವಿದು:

ಸುಖಲತಾ: ನಾನು ಹೇಳುವುದಿಲ್ಲ. ನನಗೆ ಈ ಒಯ್ಯಾರದ ಮಾತು ಬರುವುದಿಲ್ಲ.

ಲಲಿತಾ: ನಿನಗೆ ಮಾತು ಬರುವುದಿಲ್ಲ. ಒಯ್ಯಾರವೇ ಬೇಕಾದಷ್ಟು ಬರುತ್ತದೆ.

ಶಿವಛತ್ರಪತಿಯಲ್ಲಿ ನಡೆದ ಸಂವಾದ ಭಾಗವಿನ್ನೊಂದು:

ಸುಂದರಿ: ನೀವು ಬಹಳ ಕಪ್ಪು.

ಶಿವಾಜಿ: (ನಗುತ್ತ) ನಿಜ. ನಮ್ಮ ತಾಯಿ ನಿನ್ನಂತೆ ರೂಪವತಿಯಾಗಿದ್ದಿದ್ದರೆ ನನ್ನ ಮೋರೆ ಇನ್ನೂ ಸ್ವಲ್ಪ ಚೆನ್ನಾಗಿರುತ್ತಿತ್ತು.

ಈ ಬಗೆಯ ಮೃದುವಿನೋದವು ಅನೇಕ ಸಂಭಾಷಣೆಗಳಲ್ಲಿ ಮೂಡಿದೆ. ಹಲವು ಸಲ ಆತ್ಮಗತಗಳು ಅತಿ ದೀರ್ಘವಾಗಿಯೂ ಅಭಿನಯ ಗುಣವಿಲ್ಲದ ಗದ್ಯಮಯವಾಗಿಯೂ ಕಾಣಬಹುದು. ಆದರೆ ಎಲ್ಲಾ ಕಡೆಗೆ ಮಾತುಕಟ್ಟುವ ಮಹಿಮೆಯಿದೆ. ಬೇರೆ ಬೇರೆ ಸಂದರ್ಭಗಳಿಂದ ಎತ್ತಿದ ಕೆಳಗಿನ ಅವರ ಉಕ್ತಿಗಳನ್ನು ಉದಾಹರಿಸಬಹುದು. 'ಭಾವವಿಲ್ಲದೆ ಈ ಸೊಬಗು ಇಲ್ಲ ನಿಜ; ಆದರೆ ಭಾವದಂತೆ ಇಲ್ಲಿ ಏನೋ ಒಂದು ಇರುವುದರಿಂದಲ್ಲವೆ ಕಂಡನೆಂಬ ಭಾವ ಹುಟ್ಟುವುದು' 'ಪರಮಾತ್ಮನು ಹೃದಯದಲ್ಲೇ ಇದ್ದರೂ ಸರಿಯಾದ ಸಮಯ ಬಂದು ಮನಸ್ಸು ವಿಕಸಿಸುವ ವರೆಗೆ ಅವನು ಅಲ್ಲಿ ಇರುವನೆಂಬುದೇ ತೋರುವುದಿಲ್ಲ. ವಿಕಾಸವಾದಮೇಲೆ ಎಲ್ಲೆಡೆಯಲ್ಲಿಯೂ ಅವನೇ.' ಈ ಎರಡು ಉದಾಹರಣೆಗಳಲ್ಲಿ ಸೂಕ್ಷ್ಮವಾದ ಅನುಭವವು ಹೇಗೆ ಸರಳತಮವಾದ ಮಾತಿನ ರೂಪ ತಾಳಿದೆಯೆಂಬುದನ್ನು ನೋಡುವ ಹಾಗಿದೆ. ಸಣ್ಣ ಪುಟ್ಟ ವಾಕ್ಯಗಳಲ್ಲಿ ಸಂಕ್ಷೇಪದ ಸ್ವಾರಸ್ಯವು ಬಹಳ ಕಡೆ ಕಾಣುತ್ತದೆ. 'ಮನುಸನ ಮನಸಿಗೆ ದೇವರು ಬೆರಳಲ್ಲಿ ಹಿಡಿದ ಮೇಣ. ಹೆಂಗ ತಿದ್ದಿದರೆ ಹಂಗಾಗುತ್ತದೆ.' 'ಹೆಂಡತಿ ಅಂದರೆ ಮದಿವ್ಯಾದ ಸೂಳೆ, ಸೂಳೆ ಎಂದರೆ ಮದಿವ್ಯಾಗದ ಹೆಂಡತಿ.' (ಈ ಮಾತು ಮಂಜುಳಾ ನಾಟಕದ ಒಂದು ವಿಶಿಷ್ಟ ವ್ಯಕ್ತಿಯ ಬಾಯಿಂದ ಹೊರಟ ನಾಟ್ಯೋಕ್ತಿ) 'ಯಾವುದೊ ಸುಖಕ್ಕೆ ಆಸೆ ಪಡುತ್ತಿದ್ದೆ, ಬೇಕಾದುದೆಲ್ಲ ಇದೆ, ಸುಖವಿಲ್ಲ.' 'ತಾಯಕಾಣದ ತರುವಳಿ ಊರ ಹೆಣ್ಣನೆಲ್ಲ ತಾಯಂತು.' ಕೊನೆಯ ಉದಾಹರಣೆಯಲ್ಲಿ ಬಂದ ಹಾಗೆ ಗಾದೆಮಾತು, ಬಳಕೆನುಡಿ ಮುಂತಾದ ಜನಪದ ಭಾಷೆಯ ಅಂದಚಂದವನ್ನು ಆತ್ಮೀಕರಿಸಿ ಶ್ರೀನಿವಾಸರ ಮಾತು ಹೊರಹೊಮ್ಮುತ್ತದೆ. 'ಕಾಕನಕೋಟೆ'ಯಲ್ಲಿ ಕುರುಬರ ಮಾತಿನ ಒಂದು ಕನ್ನಡ ಬಗೆಯನ್ನು ಎಷ್ಟು ಗಾಢವಾಗಿ ಅವರು ಮೂಡಿಸಿರುವರೆಂಬುದು ಆಶ್ಚರ್ಯದ ಸಂಗತಿಯಾಗಿದೆ.

ಶ್ರೀನಿವಾಸರ ಹಲವು ನಾಟಕಗಳಲ್ಲಿ ಪದ್ಯ ಅಥವಾ ಹಾಡು ಗದ್ಯದ ಜತೆಗೆ ಇದ್ದೇ ಇರುತ್ತದೆ. ಅದು ಕಾವ್ಯ ಭಾಗ ಎಂದು ಮಾತ್ರವಾಗಿರದೆ ವಸ್ತು-ಪಾತ್ರಗಳ ವಿಕಾಸಕ್ಕೆ ಅವಶ್ಯಕವಾದ ಮುಖ್ಯಾಂಶವಾಗಿ ಕಂಡುಬಂದಿದೆ. ಪ್ರಾರಂಭದ ದೃಶ್ಯಗಳಿಂದ ಈಚಿನ ರೂಪಕಗಳವರೆಗೆ ಅದರ ಮುಖ್ಯತೆಯೂ ರಮಣೀಯತೆಯೂ ಹೆಚ್ಚುತ್ತ ಹೊರಟಿವೆ. ಮೊದಮೊದಲು ಕಂದ ವೃತ್ತಗಳು ಹೆಚ್ಚಾಗಿದ್ದು ಮುಂದೆ ಹೊಸಧಾಟಿಯ ಹಾಡು ಪ್ರಚುರವಾಗಿದೆ. ಕಂದ ವೃತ್ತಗಳ ಹಳಗನ್ನಡ ವೈಖರಿಯು ಹೊಸಗನ್ನಡ ಸಂವಾದಗಳೊಡನೆ ಹೊಂದಿಕೆಯಾಗದೆ ಹೋಗಬಹುದು. ಆದರೆ ಅವುಗಳಲ್ಲಿ ಕನ್ನಡ ರಂಗಭೂಮಿಯ ಒಂದು ಸಂಪ್ರದಾಯವು ಅಕ್ಲಿಷ್ಟವಾಗಿ ರೂಪಗೊಂಡಿದೆ. ಶ್ರೀನಿವಾಸರ ಶೈಲಿಯ ಪ್ರಸನ್ನತೆಯು 'ಅರಗಿಳಿ ಮಧುಮಾಸವ ತಾಂ । ತರುವಂದದಿ ಕುವರಿತಾರ ಋಷಿ ಕುವರನ ನೀಂ' ಎಂಬ ತರದ ಪದ್ಯಗಳಲ್ಲಿ ಕಾಣುತ್ತಿದ್ದರೂ ಆ ಶೈಲಿಗೆ ಅನುರೂಪವಲ್ಲದ ಸಂಸ್ಕೃತ ಪ್ರೌಢಿಮೆ 'ಡೋಲಾಯಂಗೊಳಿಸುತ್ತಲೈತರುತಿಹಂ ಸಾಂದ್ರಾಂಕು ತಾಂ ಚಂದ್ರಮಂ' ಇಂಥ ಸಾಲುಗಳಲ್ಲಿ ಇಳಿದಿದೆ. ಶ್ರೀನಿವಾಸರ ಕಾವ್ಯ ಹಾಗೂ ಶೈಲಿ ಅವರ ನಾಟಕ ಗೀತಗಳಲ್ಲಿ ಮೇಲ್ತರಗತಿಯವಾಗಿವೆ. ಈ ಗೀತಗಳು ಮುಖ್ಯ ಪಾತ್ರಗಳ ಅಂತರಂಗ ಭಾವಗಳನ್ನು ಅರಳಿಸುವವಲ್ಲದೆ ನಾಟಕಕಾರರ ಆಂತರಿಕ ಜೀವನವನ್ನೂ ಸೂಚಿಸುತ್ತವೆ. ಅದರಿಂದ ಆತ್ಮೀಯ ನಾಟ್ಯ ಕವನಗಳೆಂದು ಅವುಗಳನ್ನು ಕರೆದರೆ ತಪ್ಪಿಲ್ಲ. ಉದಾಹರಣೆಗೆ ಸಾವಿತ್ರಿಯಲ್ಲಿಯ 'ಏತರ ಭಯವಿದು ಎಂಬನು ಶ್ರೀಹರಿ,' ಶಾಂತಾದಲ್ಲಿಯ 'ಎಂತು

ನಾನು ಬಣ್ಣಿಸಲಿ ವಸಂತದ ಈ ಪೊಸಬೆಡಗನು', 'ಸುರಯಿಯ ಮರದಲಿ ಮರಿತಾರಗೆಯೊಲು' ಮುಂತಾದ್ದು, 'ನಿನ್ನರೂಪ ಪಟದಿ ನೋಡಿ ಎನ್ನ ಜೀವ ಮಾರುವೋದುದು,' ಉಷಾ ನಾಟಕದಲ್ಲಿಯ 'ಕನಸೇ ಎನ್ನ ಕನಸೆ', ಈ ಮೊದಲಾದ ಹಾಡುಗಳನ್ನು ಗಮನಿಸಬೇಕು. ತಿರುಪಾಣಿಯು ಗೀತನಾಟಕವೇನೊ ಎನ್ನುವಂತೆ ವಿವಿಧವಾದ ಹಾಡುಗಳಿಂದ ಕೂಡಿದೆ. ಭಕ್ತಿ ಪ್ರಧಾನವಾದ ದೃಶ್ಯದಲ್ಲಿ ಆ ಹಾಡುಗಳಿಗೆ ಔಚಿತ್ಯವಿದೆ. ಅವುಗಳಲ್ಲಿ ಪ್ರಮುಖವಾಗಿ 'ರಂಗಪ್ಪ ನೋಡು ಬರ್ತಾನೆ' ಎಂಬ ಕೋಲಾಟದ ಹಾಡು, ೩ನೆಯ ಸ್ಥಾನದ ಗೀತ ಸಮುದಾಯದಲ್ಲಿ ಕಾವೇರಿ-ಕೊಡಗಿನ ವರ್ಣನೆಯ ಹಾಡುಗಳು, 'ಈ ಕೀಳು ಲೋಕಗಳ ಅಂತರ್ಯದಿರವೇ' ಮುಂತಾದ ತಿರುಪಾಣಿಯ ಹಾಡು ಇವು ರಮ್ಯವಾಗಿವೆ. ಕಾಕನಕೋಟೆಯ ಜಾನಪದ ಗೀತಗಳಲ್ಲಿಯ ವರ್ಣನೆ, ಪದ ಲಾಲಿತ್ಯ, ಜನಜೀವನದ ಚಿತ್ರ ಬಹಳ ಮೆಚ್ಚುವಂಥವು. ನಾಟಕ ಸಂದರ್ಭದಿಂದ ಹೊರಪಡಿಸಿ ನೋಡಿದರೂ ಅವುಗಳ ಕಾಂತಿ ಅಳಿಯಲಾರದು. ಅವುಗಳಲ್ಲಿ 'ಬೆಟ್ಟದಾ ತುದಿಯಲ್ಲಿ' ಮೊದಲಾದ ಕಾಕನಕೋಟೆಯ ವರ್ಣನ ಗೀತ, ಕರಿಹೈದನ ಚರಿತ್ರೆಯುಳ್ಳ ಕೋಲಾಟದ ಹಾಡು ಇವನ್ನು ನೋಡಬೇಕು. 'ಯಶೋಧರಾ' ಇಡಿಯಾಗಿ ಸರಳರಗಳೆಯಲ್ಲಿ ಬರೆದ ಸುಂದರ ಕೃತಿಯಾಗಿದೆ. ಸರಳರಗಳೆಯಲ್ಲಿ ಕತೆಗಳನ್ನು ಹೇಳಿದ ಶ್ರೀನಿವಾಸರು ಯಶೋಧರಾ ನಾಟಕವನ್ನು ಅದೇ ಛಂದದಲ್ಲಿ ಸಲೀಲವಾಗಿ ಸುಲಭಹೃದ್ಯವಾಗಿ ಬರೆದಿದ್ದಾರೆ. ಹೊಸಗನ್ನಡದ ಕಾವ್ಯ ನಾಟಕಗಳಲ್ಲಿ ಈ ನಾಟಕದ ಸ್ಥಾನವು ಚಿರಂತನವಾದುದು.

ಶ್ರೀನಿವಾಸರ ನಾಟಕಗಳಲ್ಲಿ ನಾಟ್ಯ ರೀತಿಯ ನಿರೂಪಣೆಯಿದ್ದರೂ ಆತ್ಮೀಯ ಜೀವನದ ಪ್ರತಿಬಿಂಬವು ಮೂಡದೆ ಇಲ್ಲ. ಅವರು ಆರಿಸಿದ ಹಲವು ಸನ್ನಿವೇಶಗಳೂ ಪಾತ್ರಗಳೂ ಅವರ ವ್ಯಕ್ತಿಸ್ವರೂಪದ ಹೋರಾಟಕ್ಕೆ ಅವಕಾಶವನ್ನು ಕಲ್ಪಿಸಿವೆ. ಅವರ ತಿಳಿವಳಿಕೆಯ ಆಳ, ಸರ್ವಸಹಾನುಭೂತಿ, ಅಚಲವಾದ ದೇವಶ್ರದ್ಧೆ, ಸುಖ ಸಂತೋಷ ವೃತ್ತಿ, ಜಾನಪದ ಜೀವನದೊಡನೆ ತಾದಾತ್ಮ್ಯ- ಈ ಮುಂತಾದ ಗುಣಗಳನ್ನು ಅವರ ನಾಟ್ಯಕೃತಿಗಳ ಕಿಂಡಿಯೊಳಗಿಂದ ಒಳಹೊಕ್ಕು ನೋಡಬಹುದಾಗಿದೆ. ಇದನ್ನು 'ಮಾಸ್ತಿ ಮನಸ್ಸು' ಎಂದು ನಾಟಕಗಳನ್ನು ಓದುವಾಗ ಅಲ್ಲಲ್ಲಿ ಗುರುತಿಸಬಹುದು. ಇದಕ್ಕೆ ಕೆಳಗೆ ಕೆಲವು ನಿದರ್ಶನಗಳನ್ನು ಕೊಡಲಾಗಿದೆ. 'ನೆರೆಹೊರೆಯ ಮಕ್ಕಳು ಸೇರಿ ಮದುವೆಮನೆ ಮಠ ಎಂದು ಆಡುತ್ತಿರುವಾಗ ತಾಯಿ ಬಂದು ಮಗನನ್ನು ಕರೆದುಕೊಂಡು ಹೋದಹಾಗೆ, ತನ್ನ ವಸ್ತುವನ್ನು ಪರಮಾತ್ಮನು ಕೊಂಡು ಹೋದನು. ನಮ್ಮ ಆಟ ಕೆಟ್ಟು ನಾವು ದುಃಖಪಡುವೆವು, (ಸಾವಿತ್ರಿ)' 'ಪರಮಾತ್ಮನು ಕರುಣೆಯಿಂದ ನೋಡುವ ಸ್ಥಳದಲ್ಲೆಲ್ಲ ತಾಯಿ ಇರುವಳು' 'ಎಲ್ಲವನು ಧರಿಸಿ ಹಿಡಿದಿರುವ ಧರ್ಮವಾವುದು ಎಂದು ತಿಳಿಯುವರೆ, ತಾಳ್ಮೆಯಲಿ ಎಲ್ಲರಾಂತರ್ಯದಲಿ ಸುಳಿವ ಧರ್ಮದ ಅಡಿಯ ಸಪ್ಪುಳನು ಕೇಳಬೇಕು . . . ಧರ್ಮ ಬಹುಮುಖದಿಂದ ನುಡಿಯುವುದು, ಬಹುದೂರ ಹರಿಯುವುದು, ಬಹು ವೇಳೆ ಕಣ್ಣಿಂದ ಮರೆಯುವುದು. 'ಗಾಳಿಯಡಿ ಗುರುತ ಮರಳಿನ ಮೇಲೆ ಕಾಂಬವೊಲು ಸೂಕ್ಷ್ಮಧರ್ಮದ ಅರಿವು' (ಯಶೋಧರಾ).

ಶ್ರೀನಿವಾಸರು ವಿಶ್ವಸಂಸ್ಕೃತಿಯ ಸಾಧಕರು, ಉನ್ನತ ಜೀವನದ ದ್ರಷ್ಟಾರರು. ಅವರ ನಾಟಕಗಳಲ್ಲಿ ಹಲವು ಬಗೆಯಾಗಿ ತಮ್ಮ ಸಾಧನೆಯನ್ನೂ ದರ್ಶನವನ್ನೂ ಅವರು ನಿರೂಪಿಸಿದ್ದಾರೆ. ಜೀವನವು ಪರಮಾತ್ಮನ ನಾಟಕವೆಂಬುದು ಅವರಿಗೆ ಕೇವಲ

ಅಲಂಕಾರವಲ್ಲ, ಸತ್ಯದರ್ಶನ. ಅಂತೇ ಪರಮಾತ್ಮನ ನಾಟಕವನ್ನು ನೋಡಿ ಮೆಚ್ಚುವ ಭಕ್ತ, ಕವಿಯು ಬರೆದ ನಾಟಕಗಳಂತೆ ಅವರ ಎಲ್ಲ ಕೃತಿಗಳು ಜೀವನದ ರೂಪಕಗಳಾಗಿವೆ, ದರ್ಶನದ ಪ್ರತೀಕಗಳಾಗಿವೆ. ಕನ್ನಡಿಗರು ಅವರ ಕೃತಿಫಲಗಳನ್ನು ಸವಿದು ಹೃಷ್ಟಪುಷ್ಟರಾಗಿ ಕನ್ನಡ ಸಾಹಿತ್ಯವನ್ನೂ ಸಂಸ್ಕೃತಿಯನ್ನೂ ಬೆಳಸುವರೆಂದು ಬಯಸಬಹುದೇ?

ಶಾಂತಾ

ಡಾ|| ತ.ಸು. ಶಾಮರಾಯ

ಆಧುನಿಕ ಕನ್ನಡ ಸಾಹಿತ್ಯದ ನಂದನವನದಲ್ಲಿ ವಿಹರಿಸ ಹೊರಟ ರಸಿಕ ರಸಚೇತನಕ್ಕೆ ಆ ವನದ ಹೆಬ್ಬಾಗಿಲಿನ ಹತ್ತಿರದಲ್ಲಿಯೆ ಕೋಗಿಲೆಯ ಇನಿದನಿಯೊಂದು ಸುಖಾಗಮನ ದೊಡನೆ ಆಹ್ವಾನವನ್ನು ನೀಡುತ್ತದೆ. ಆ ದನಿ ಬಂದ ದಿಕ್ಕನ್ನು ಹಿಡಿದು ನಾಲ್ಕು ಹೆಜ್ಜೆ ಹೋಗುವಷ್ಟರಲ್ಲಿ, ಕಣ್ ಮನಗಳನ್ನು ಸೆಳೆದು ಹೃದಯವನ್ನು ಸೂರೆಗೊಳ್ಳಬಲ್ಲ ಸುಂದರ ಮಂದಾರವೊಂದು ಕಾಣಿಸುತ್ತದೆ. ಸುತ್ತಲೂ ದಟ್ಟವಾಗಿ ಹಬ್ಬಿಹರಡಿರುವ ಅದರ ಶಾಖೋಪಶಾಖೆಗಳು ಕೋಮಲ ಪಲ್ಲವದಿಂದ ತುಂಬಿ ನಳನಳಿಸುತ್ತಿವೆ. ಹೂ ಹಣ್ಣುಗಳಿಂದ ಬೀಗಿ ಬಿರಿಯುತ್ತಿರುವ ಆ ಕಲ್ಪವೃಕ್ಷ ಸಹಸ್ರ ಸಹಸ್ರ ಸಂಖ್ಯೆಯ ಹೃದಯಗಳಿಗೆ ಇಂಪು ತಂಪುಗಳ ತಣ್ಣೆಳಲನ್ನು ನೀಡುತ್ತಿದೆ. ಆ ಮರದ ಮೇಲಿನ ಕನ್ನಡವಕ್ಕಿ 'ಶ್ರೀನಿವಾಸ', 'ಶ್ರೀನಿವಾಸ' ಎಂದು ನಾಮ ಸಂಕೀರ್ತನೆ ಮಾಡುತ್ತಿದೆ. ಆ ವೃಕ್ಷದ ಸಾನ್ನಿಧ್ಯದಲ್ಲಿ ಸಹೃದಯನ ಹೃದಯಪಾತ್ರೆ ಕಾವ್ಯಾನಂದ ರಸದಿಂದ ತುಂಬಿ ಹೋಗುತ್ತದೆ.

'ಶ್ರೀನಿವಾಸ' ಎಂಬ ಕಾವ್ಯನಾಮದಿಂದ ಕನ್ನಡ ಸಾಹಿತ್ಯ ಜಗತ್ತಿಗೆಲ್ಲ ಚಿರ ಪರಿಚಿತರಾಗಿರುವ ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್ಯರು ಆಧುನಿಕ ಕನ್ನಡ ಸಾಹಿತ್ಯ ಅಂಕುರಿಸಿ, ಎರಡೆಲೆಯಾಗುತ್ತಿದ್ದ ಪರ್ವಕಾಲದಲ್ಲಿ ಅದಕ್ಕೆ ಮಾತೃಪೋಷಣೆಯನ್ನು ನೀಡಿದ ಹಿರಿಯ ಚೇತನಗಳಲ್ಲಿ ಓರ್ವರು. ನಮ್ಮ ಹಳೆಯ ಸಾಹಿತ್ಯದ ಸತ್ವದೊಡನೆ ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಬಂದ ನೂತನ ಭಾವನೆಗಳನ್ನು ಅಳವಡಿಸಿಕೊಂಡು, ಅವುಗಳ ವಿದ್ಯುದಾಲಿಂಗನದಿಂದ ಚಿರನೂತನವಾಗಿ ಪುನರುಜ್ಜೀವನಗೊಂಡ ಆಧುನಿಕ ಕನ್ನಡ ಸಾಹಿತ್ಯ 'ಶ್ರೀನಿವಾಸ'ರ ದೆಸೆಯಿಂದ ಅತ್ಯಂತ ಶ್ರೀಮಂತವಾಯಿತೆಂದು ಹೇಳಿದರೆ ಅದು ಅತಿಶಯೋಕ್ತಿಯಾಗದು. ಅವರ ಹೆಸರನ್ನು ಹೇಳುತ್ತಲೇ ನಮ್ಮ ಕಣ್ಣೆದುರಿಗೆ ಎದ್ದು ನಿಲ್ಲುವುದು ಅವರ 'ಸಣ್ಣ ಕತೆ'ಗಳು. ಈಗ ನಮ್ಮಲ್ಲಿ ಅತ್ಯಂತ ಪ್ರಚುರವಾಗಿರುವ ಈ ಸಾಹಿತ್ಯ ಪ್ರಕಾರ ಅವರು ಕನ್ನಡಕ್ಕೆ ನೀಡಿದ ಕೊಡುಗೆ. ಬೃಹತ್ತು ಮಹತ್ತುಗಳೆರಡರಲ್ಲಿಯೂ ಅವರಿಲ್ಲಿ ಅಗ್ರಗಣ್ಯರು ಅಸದೃಶರು, ಅದ್ವಿತೀಯರು. ಸಾಹಿತ್ಯದ ಇತರ ಪ್ರಕಾರಗಳೂ ಇವರ ಅದ್ಭುತ ಪ್ರತಿಭೆಯಿಂದ ವಂಚಿತವಾಗಿಲ್ಲ. ಭಾವಗೀತೆ, ಕಾದಂಬರಿ, ನಾಟಕ, ಜೀವನಚರಿತ್ರೆ, ವಿಮರ್ಶೆ ಇತ್ಯಾದಿ ಸಾಹಿತ್ಯದ ಎಲ್ಲ ಮುಖಗಳಲ್ಲಿಯೂ ಅವರು ಸಾರಸ್ವತ ಸೇವೆಯನ್ನು ಸಲ್ಲಿಸಿ ಕೃತಕೃತ್ಯರಾಗಿದ್ದಾರೆ. ಈ ಯಾವ ಮುಖವನ್ನೇ ತೆಗೆದುಕೊಳ್ಳಲಿ, ಕೋಮಲ ಪಲ್ಲವದಂತೆ ಮೃದು, ಮಧುರವಾದ ವಾಣಿ, ಸತ್ಯ, ಸೌಂದರ್ಯ, ಶಾಂತಿಗಳ ಪರಿಮಳವನ್ನು ಪಸರಿಸುವ ಭಾವ ಬಂಧುರತೆ; ಜೇನ್‌ಸವಿಯನ್ನು ಹೊಗಚೆಲ್ಲುವ ಹಸನ ಭಾವ- 'ಶ್ರೀನಿವಾಸ'ರು ನಿಸ್ಸಂದೇಹವಾಗಿಯೂ ಕನ್ನಡಿಗರ ಕಲ್ಪವೃಕ್ಷ.

'ಶ್ರೀನಿವಾಸ'ರ ಭಾವ ಭಾಷೆಗಳೆರಡು ವಿಶಿಷ್ಟ ಗುಣ ಪರಿಪೂರ್ಣವಾದವು. ತಿಳಿಯಾಗಿ, ಅಕ್ಲಿಷ್ಟವಾಗಿ, ಎಳೆಯ ಮಕ್ಕಳಿಗೂ ಅರ್ಥವಾಗಬಹುದಾದ ಅವರ ಸರಳವಾದ ನುಡಿಸಿರಿಗೆ ಅನನ್ಯ ಸಾಧಾರಣವಾದುದು; ಎಂತಹ ಗಹನ ವಿಚಾರಗಳೂ ಅವರ ಸರಳತೆಗೆ ಸೋತು, ಶರಣಾಗಿ, ಸುಲಿದ ಬಾಳೆಯಹಣ್ಣಿನಂತಾಗಿಬಿಡುತ್ತವೆ. ಭಾವದ ಭಾರದಿಂದ ಬಳಕುವ ಅವರ ಭಾಷೆ ಸ್ಪಷ್ಟವಾಗಿರುವಷ್ಟೆ ನಿರಾಡಂಬರವಾಗಿರುತ್ತದೆ, ಖಚಿತವಾಗಿರುತ್ತದೆ. ಅವರ ಭಾವವೂ ಅಷ್ಟೇ, ಸುಪ್ರಸನ್ನ ಸಲಿಲಾಂಬುವಿನಂತೆ ಶುದ್ಧಮನಸ್ಸಿನಿಂದ ಮೂಡಿಬಂದ ಸಾತ್ವಿಕ ಭಾವನೆಗಳನ್ನು ಒಳಗೊಂಡಿರುತ್ತದೆ. ಕೋಮಲ ಭಾವಗಳ ಎಳೆ ಬೆಳುದಿಂಗಳನ್ನು ಎಲ್ಲೆಲ್ಲಿಯೂ ಚೆಲ್ಲುವಂತಿರುವ ಅವರ ಲೇಖನಕಲೆಯನ್ನು ಕಂಡಾಗ ಒಮ್ಮೊಮ್ಮೆ, ಪ್ರಾಚೀನ ಕವಿಯೊಬ್ಬನು ಪಂಪ ಮಹಾಕವಿಯನ್ನು ಕುರಿತು ಹೇಳಿದ ''ಪಸರಿಪ ಕನ್ನಡಕ್ಕೊಡೆಯನೊರ್ವನೆ'' ಎಂಬ ಹೊಗಳಿಕೆಯನ್ನು 'ಶ್ರೀನಿವಾಸ'ರಿಗೂ ಅನ್ವಯಿಸಬೇಕೆನ್ನಿಸುತ್ತದೆ.

'ಶ್ರೀನಿವಾಸ'ರ ನಾಟಕ ಸಾಹಿತ್ಯವಷ್ಟನ್ನೆ ಪ್ರತ್ಯೇಕವಾಗಿ ತೆಗೆದುಕೊಂಡು ವಿವೇಚಿಸ ಹೊರಟಾಗಲೂ ಅವರ ಅಸಾಧಾರಣವಾದ ಪ್ರತಿಭಾಶಕ್ತಿ ಓದುಗರ ಮೆಚ್ಚಿಗೆ, ಗೌರವಗಳ ಕಾಣಿಕೆಗೆ ಅರ್ಹವಾಗುತ್ತದೆ. ಅವರ ನಾಟಕ ಸಾಹಿತ್ಯದತ್ತ ನೋಡಿ. ಅವರು ಈವರೆಗೆ ಇಪ್ಪತ್ತಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಸಾಮಾಜಿಕ, ಪೌರಾಣಿಕ, ಐತಿಹಾಸಿಕ ಇತ್ಯಾದಿ ವಿವಿಧ ರೀತಿಯ ನಾಟಕಗಳಿವೆ. ಷೇಕ್ಸ್‌ಪಿಯರ್ ಕವಿಯ ಹಲವು ಉತ್ತಮ ನಾಟಕಗಳನ್ನೂ ಅವರು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಕೆಲವು ನಾಟಕಗಳು ಗದ್ಯರೂಪವಾಗಿದ್ದರೆ ಮತ್ತೆ ಕೆಲವು ಗೀತರೂಪದಲ್ಲಿವೆ; ಗದ್ಯ ಪದ್ಯಾತ್ಮಕವಾದ ನಾಟಕಗಳೂ ಇವೆ. ಹೀಗೆ ಅವರ ನಾಟಕಗಳ ವಸ್ತು, ಶೈಲಿಗಳಲ್ಲಿ ಬೇಕಾದಷ್ಟು ವೈವಿಧ್ಯವಿದೆ, ಈ ನಾಟಕಗಳಲ್ಲೆಲ್ಲ 'ಶ್ರೀನಿವಾಸ'ರ ಕೋಮಲ ಮನೋಭಾವದ ಬೆಳುದಿಂಗಳು ವ್ಯಾಪಿಸಿ, ಅವುಗಳನ್ನು ಮನಮೋಹಕವಾಗಿ ಮಾಡಿವೆ.

'ಶ್ರೀನಿವಾಸ'ರ ಲೆಕ್ಕಣಿಯಿಂದ ಮೊದಮೊದಲು ಹರಿದು ಬಂದ ಕೃತಿಗಳು - ಕೃತಿಕಾರರ ವಯೋನುಗುಣವಾಗಿಯೋ ಏನೊ;- ಪ್ರಣಯ ಜೀವನದ ಸುಂದರ ಚಿತ್ರಣಗಳಾಗಿವೆ. ಅವರ ಸಣ್ಣಕಥೆಗಳಲ್ಲಿ 'ರಂಗಪ್ಪನ ಮದುವೆ,' 'ರಂಗಪ್ಪನ ದೀಪಾವಳಿ,' 'ರಂಗಪ್ಪನ ಕೋರ್ಟ್‌ಷಿಪ್' ಇತ್ಯಾದಿ ರಂಗಪ್ಪನ ಕಥಾಮಾಲೆಯೂ, ಅವರ ನಾಟಕಗಳಲ್ಲಿ 'ಶಾಂತಾ,' 'ಸಾವಿತ್ರಿ,' 'ಉಷಾ'ಗಳೂ ಇವಕ್ಕೆ ಸೊಗಸಾದ ಉದಾಹರಣೆಗಳು. ಇಲ್ಲಿನ ಸಣ್ಣ ಕಥೆಗಳಲ್ಲಿ ಹಸನ ಭಾವವು ಪ್ರಮುಖ ಪಾತ್ರವನ್ನು ಧರಿಸಿದ್ದರೆ, ನಾಟಕಗಳಲ್ಲಿ ನಿರ್ದುಷ್ಟವಾದ ಪ್ರಣಯ ಜೀವನ ಪ್ರಮುಖವಾಗಿದೆ. ಈ ಎರಡು ಪ್ರಕಾರಗಳಲ್ಲಿಯೂ ಪ್ರಣಯ ಜೀವನಕ್ಕೆ ಆಗತಾನೆ ಕಾಲಿಕ್ಕುತ್ತಿರುವ ನವದಂಪತಿಗಳು ನಮ್ಮ ಕಣ್ಣೆದುರು ಸುಳಿದಾಡುತ್ತಾರೆ. ಕಥಾಮಾಲೆಯ ದಂಪತಿಗಳು ನಮ್ಮ ಸುತ್ತುಮುತ್ತಿನ ಜೀವನದಿಂದ ಎದ್ದು ಬಂದವರಾದರೆ, ನಾಟಕದ ದಂಪತಿಗಳು ಪುರಾಣಗಳಿಂದ ಪುನರ್ಜನ್ಮ ಪಡೆದು ಬಂದವರು, ಎರಡು ಬಗೆಯವರೂ ಕೃತಿಕಾರರ ಪ್ರತಿಭೆಯಲ್ಲಿ ಮಿಂದು ಅವರ ಹೃದಯ ಕುಸುಮದಿಂದ ಸುವಾಸಿತರಾಗಿರುವರು. ಆಗ ತಾನೆ ಅರಳಿದ ಪುಷ್ಪದಂತೆ ಕಳಕಳಿಸುವ ಈ ಜೀವನ ಚಿತ್ರಣಗಳಲ್ಲಿ ಒಂದಾದ 'ಶಾಂತಾ'ವನ್ನು ಎತ್ತಿಕೊಂಡು, ಅದರ ಕಾವ್ಯ ಸೌಂದರ್ಯವನ್ನು ದಿಗ್ದರ್ಶಿಸುವ ನಮ್ರ ಪ್ರಯತ್ನವೊಂದನ್ನು ನಾನಿಲ್ಲಿ ಕೈಕೊಳ್ಳುತ್ತೇನೆ.

'ಶಾಂತಾ' ನಾಟಕದ ವಸ್ತು ವಾಲ್ಮೀಕಿರಾಮಾಯಣದ ಋಷ್ಯಶೃಂಗೋಪಾಖ್ಯಾನದಿಂದ ಎತ್ತಿಕೊಂಡದ್ದು. ಮೂಲಕಥೆ ಸಾಮಾನ್ಯವಾಗಿ ಎಲ್ಲರಿಗೂ ಚಿರಪರಿಚಿತವಾದುದು. ಅಂಗರಾಜ್ಯದಲ್ಲಿ ಭಯಂಕರವಾದ ಕ್ಷಾಮ ತಲೆದೋರಿತು. ಅದರ ನಿವಾರಣೆಯಾಗಬೇಕಾದರೆ ಋಷ್ಯಾಶ್ರಮದಲ್ಲಿರುವ ವಿಭಾಂಡಕ ಮುನಿಯ ಮಗ ಋಷ್ಯಶೃಂಗನನ್ನು ಅಂಗರಾಜ್ಯಕ್ಕೆ ಕರೆತರಬೇಕು, ಆತನಿದ್ದ ಕಡೆ ಮಳೆ ಬೆಳೆಗಳು ಸಮೃದ್ಧಿಯಾಗಿ ಇರುತ್ತವೆ. ಋಷ್ಯಾಶ್ರಮವನ್ನು ಬಿಟ್ಟು ಹೋಗಕೂಡದೆಂದು ಆತನ ತಂದೆಯ ಕಟ್ಟಾಜ್ಞೆ. ಪಿತೃಭಕ್ತನಾದ ಆತನನ್ನು, ಆತನ ತಂದೆಯಿಲ್ಲದ ವೇಳೆಯಲ್ಲಿ ಉಪಾಯದಿಂದ ಕರೆತರಬೇಕು. ಹೆಣ್ಣಿನ ಪರಿಚಯವೇ ಇಲ್ಲದಿದ್ದ ಆತನನ್ನು, ಆತನ ತಂದೆಯಿಲ್ಲದ ವೇಳೆಯಲ್ಲಿ, ವೇಶ್ಯೆಯರ ಚಾತುರ್ಯಕ್ಕೆ ವಶವರ್ತಿಯಾಗಿ ಮಾಡಿಕೊಂಡು, ಅಂಗದೇಶಕ್ಕೆ ಕರೆತರುತ್ತಾರೆ. ಇದರಿಂದ ದೇಶದ ಕ್ಷಾಮ ನಿವಾರಣೆಯಾಗುತ್ತದೆ. ಅಂಗರಾಜನು ತನ್ನ ಮಗಳಾದ ಶಾಂತಿಯನ್ನು ಋಷ್ಯಶೃಂಗನಿಗೆ ಕೊಟ್ಟು ಮದುವೆ ಮಾಡುತ್ತಾನೆ. ಇದು ಮೂಲದಲ್ಲಿರುವ ಕಥೆಯ ಸ್ಥೂಲರೇಖೆ.

ಮೇಲಿನ ಕಥೆಯನ್ನು 'ಶ್ರೀನಿವಾಸ'ರು ಅಲ್ಪಸ್ವಲ್ಪ ಬದಲಾವಣೆಗಳೊಡನೆ ನಾಟಕ ರೂಪಕ್ಕೆ ಪರಿವರ್ತಿಸಿದ್ದಾರೆ. ಮೂಲದಲ್ಲಿ ಬರುವ ಅಂಗರಾಜ್ಯಕ್ಕೆ ಬದಲಾಗಿ ನಾಟಕದಲ್ಲಿ ಕೇರಳರಾಜ್ಯ ಕ್ಷಾಮಕ್ಕೆ ತುತ್ತಾಗಿದೆ. ಈ ಪುಟ್ಟ ವ್ಯತ್ಯಾಸಕ್ಕೆ ಕಾರಣ ನಾಟಕಕಾರರ ಮಾತಿನಲ್ಲಿಯೇ ಹೇಳುವುದಾದರೆ ''ಕೇರಳ ಸುತೆಯರ ಚೆಲ್ವಿಂ ಮಾರನ ಸತಿಯೊಂದು ಚೆಲ್ವ ಪಡೆದುದು ನಾಣಂ''-ಕೇರಳದ ಹೆಣ್ಣುಗಳ ಸೌಂದರ್ಯ ರತಿಯನ್ನೂ ನಾಚಿಸುವಂತಹದು. ಜಿತೇಂದ್ರಿಯನಾದ ಋಷಿಕುಮಾರನನ್ನು ಮನಸೋಲಿಸುವಂತಹ ಸೌಂದರ್ಯ ಅಸಾಧಾರಣವಾದುದಾಗಿಯೆ ಇರಬೇಕು. ಪುರಾಣ ಪ್ರಸಿದ್ಧವಾಗಿರುವ ಕೇರಳ ಹೆಣ್ಣಿನ ರೂಪ ಸೌಂದರ್ಯವನ್ನು ಋಷಿಕುಮಾರನ ಆಕರ್ಷಣಾಸಾಧನವಾಗಿ ನಾಟಕದಲ್ಲಿ ಸ್ವೀಕರಿಸಿರುವುದು ಅತ್ಯಂತ ಉಚಿತವಾಗಿದೆ. ಋಷ್ಯಶೃಂಗನನ್ನು ರಾಜಧಾನಿಗೆ ಕರೆತರಲು ಮೂಲದಲ್ಲಿ ವೇಶ್ಯೆಯರು ನಿಯೋಜಿತರಾಗಿದ್ದರೆ, ನಾಟಕದಲ್ಲಿ ಸ್ವಯಂ ರಾಜಪುತ್ರಿಯೇ ತನ್ನ ಸಖಿಯರೊಡನೆ ಹೋಗುತ್ತಾಳೆ. ಗಂಡನ್ನು ಮೋಹಗೊಳಿಸಿ ಕರೆತರುವ ವಿದ್ಯೆ ವೇಶ್ಯೆಗೇ ಹೆಚ್ಚು ಸ್ವಾಭಾವಿಕವಾದರೂ, ಋಷಿಕುಮಾರನನ್ನು ಕರೆತರಲು ವೇಶ್ಯೆಯನ್ನು ಅಟ್ಟುವುದು ನಾಟಕಕಾರರ ಸಾತ್ವಿಕ ಮನಸ್ಸಿಗೆ ಅಷ್ಟಾಗಿ ಹಿಡಿಸಲಿಲ್ಲವೆಂದು ತೋರುತ್ತದೆ. ಆದ್ದರಿಂದಲೆ ಅವರು ರಾಜಕುಮಾರಿಯನ್ನೇ ಆ ಕಾರ್ಯಕ್ಕೆ ನೇಮಿಸಿದ್ದಾರೆ. ಅದು ಸ್ವಾಭಾವಿಕವಾಗಿ ತೋರುವಂತಹ ಒಂದು ಹೊಸ ಸಂಗತಿಯೂ ಇಲ್ಲಿ ಬರುತ್ತದೆ. ನಾಡಿನ ಜನರೆಲ್ಲ ''ಈ ರಾಜಕುಮಾರಿ ಹುಟ್ಟಿದ ಐದನೇ ವರ್ಷದ ಯೋಗ ಕೆಟ್ಟುದು. ಅದಕ್ಕೆ ಶಾಂತಿಯಾಗಬೇಕು'' ಎಂದು ಹೇಳುತ್ತಿದ್ದಾರಂತೆ. ತನ್ನ ದೆಸೆಯಿಂದ ಬಂದ ಕ್ಷಾಮ ತನ್ನಿಂದಲೇ ನಿವಾರಣೆಯಾಗಲೆಂದು ರಾಜಕುಮಾರಿಯ ಬಯಕೆ. ಶೈಶವದಲ್ಲಿಯೆ ತಾಯಿಯನ್ನು ಕಳೆದುಕೊಂಡ ಆ ಮಗಳನ್ನು ರಾಜನು ಅತಿಶಯವಾಗಿ ಪ್ರೀತಿಸುತ್ತಾನೆಂದು ಇಲ್ಲಿ ಕಲ್ಪಿಸಿರುವುದರಿಂದ ರಾಜನು ಆಕೆಯ ಹಟಕ್ಕೆ ಸೋತುದು ಸ್ವಾಭಾವಿಕವಾಗಿಯೂ ಇದೆ. ಆ ಬಾಲೆಯ ಅಂಕಿತನಾಮ 'ಚಂಚಲೆ'ಯೆಂದು ಇಲ್ಲಿ ವ್ಯವಹರಿಸಿರುವುದು ಧ್ವನಿಪೂರ್ಣವಾಗಿದೆ. 'ಶಾಂತಿ'ಯೆಂಬ ಹೆಸರು ನಾಟಕದ ಕೊನೆಯಲ್ಲಿ ವಿಭಾಂಡಕ ಮುನಿಯಿಂದ ಆಕೆಗೆ ಬಂದ ಅನ್ವರ್ಥನಾಮ. ಈ ರಾಜಕುಮಾರಿ ಮೂಲದಲ್ಲಿ ದಶರಥನ ಪುತ್ರಿಯಾಗಿದ್ದವಳು ನಾಟಕದಲ್ಲಿ ಕೇರಳ ರಾಜನ ಔರಸ ಪುತ್ರಿಯಾಗಿರುವುದೂ ಅತ್ಯಂತ

ಉಚಿತವಾಗಿಯೆ ಇದೆ.

ನಾಲ್ಕು ಸ್ಥಾನಗಳಲ್ಲಿ ಪ್ರಸರಿಸುವ ಈ ಪುಟ್ಟ ನಾಟಕದ ಸಂವಿಧಾನ ಕೌಶಲ ಹೃದಯಂಗಮವಾಗಿದೆ. ಸೂತ್ರಧಾರನಿಗೆ ಬದಲಾಗಿ ರಾಜಗುರುವು ನಾಟಕದ ಆರಂಭದಲ್ಲಿ ಕಾಣಿಸಿಕೊಂಡು ನಾಂದಿಯನ್ನು ಹಾಡುತ್ತಾನೆ. ಕೇರಳರಾಜ್ಯವು ಕ್ಷಾಮಪೀಡಿತವಾಗಿದೆ. ಅದರ ನಿವಾರಣೆಗೆ ಮೂರು ಮಹಾಯಾಗಗಳನ್ನು ಮಾಡಬೇಕಾಗಿದೆ. ದೇಶದ ದುಸ್ಥಿತಿಯಲ್ಲಿ ಯಾಗಸಾಮಾಗ್ರಿ ಒದಗುವುದು ಮಹಾ ಕಷ್ಟ. ಅದಕ್ಕೆ ತಕ್ಕ ಪುರೋಹಿತನನ್ನು ತರುವುದು ಮತ್ತೂ ಕಷ್ಟ. ಏಕೆಂದರೆ, ಅದಕ್ಕೆ ತಕ್ಕ ಅಧಿಕಾರಿಯಾದ ಋಷ್ಯಶೃಂಗ ಹದಿನೆಂಟು ವರ್ಷಗಳವರೆಗೆ ಸ್ತ್ರೀರೂಪವನ್ನೇ ನೋಡದಿದ್ದರೆ ಚಿರಂಜೀವಿಯಾಗುವನೆಂಬ ನಂಬಿಕೆಯಿಂದ ವಿಭಾಂಡಮುನಿ ಆತನನ್ನು ನಿರ್ಜನವಾದ ಪ್ರದೇಶವೊಂದರಲ್ಲಿ ಬೆಳಸುತ್ತಿದ್ದಾನೆ. ಯೌವನದಲ್ಲಿ ಪಾದಾರ್ಪಣ ಮಾಡುತ್ತಿರುವ ಆ ಋಷಿಕುಮಾರ ವೇದವೇದಾಂತ ಪಾರಂಗತನಾದರೂ ಸ್ತ್ರೀಯೆಂದರೆ ಏನೆಂಬುದನ್ನೇ ಅರಿಯ. ಆತನನ್ನು ಆಶ್ರಮದಿಂದ ಹೊರಗೆ ಕಾಲಿಡಕೂಡದೆಂದು ನಿಯಮಿಸಿ, ತಂದೆ ಆಶ್ರಮದಿಂದ ದೂರ ಹೋಗಿದ್ದಾನೆ. ಆ ನಿಯಮವನ್ನು ಮುರಿದು ಋಷ್ಯಶೃಂಗನು ಕೇರಳಕ್ಕೆ ಬರುವಂತೆ ಮಾಡುವ ಕೆಲಸ ಸುಲಭ ಸಾಧ್ಯವಿಲ್ಲ. ಅದು ಮೋಸದಿಂದ ನಡೆಯಬೇಕು. ಸುಂದರಿಯನ್ನು ಅವನಲ್ಲಿಗೆ ಕಳುಹಿಸಿ, ಅವರ ಮೂಲಕ ಆತನನ್ನು ರಾಜಧಾನಿಗೆ ಆಕರ್ಷಿಸಿ ಕರೆತರಬೇಕು. ಇದರ ನ್ಯಾಯನ್ಯಾಯಗಳನ್ನು ಮಹಾರಾಜನು ರಾಜಪುರೋಹಿತ, ಮಂತ್ರಿಗಳೊಡನೆ ವಿವೇಚಿಸುತ್ತಿರುವಾಗ, ರಾಜಕುಮಾರಿ ಚಂಚಲೆಯು ಪ್ರವೇಶಿಸಿ, ಋಷಿಕುಮಾರನನ್ನು ಕರೆತರುವ ಮಹತ್ಕಾರ್ಯವನ್ನು ತಾನೆ ವಹಿಸಿಕೊಳ್ಳುತ್ತಾಳೆ. ಇದು ಮೊದಲ ಸ್ಥಾನ.

ಎರಡನೆಯ ಸ್ಥಾನದ ಕಾರ್ಯರಂಗ ಋಷ್ಯಶೃಂಗಾಶ್ರಮದ ಬಳಿಯಲ್ಲಿಯದು. ದೃಶ್ಯದ ಆರಂಭದಲ್ಲಿ ರಂಗಸ್ಥಳದ ಮೇಲೆ ಕಾಣಿಸಿಕೊಳ್ಳುವ ಋಷ್ಯಶೃಂಗನು ಆಗತಾನೆ ಅವತರಿಸಿರುವ ವಸಂತಾಗಮನದಿಂದ ಉತ್ಸಾಹಮೂರ್ತಿಯಾಗಿದ್ದಾನೆ. ಸುತ್ತು ಮುತ್ತಿನ ಪ್ರಕೃತಿ ಸೌಂದರ್ಯ ಆತನಿಗೆ ಅಪಾರವಾದ ಆನಂದವನ್ನು ನೀಡುತ್ತಿದೆ. ಅದು ಕೇವಲ ತನ್ನ ಭಾವನೆ ಮಾತ್ರವೆಂದು ತಂದೆ ಒಮ್ಮೆ ಹೇಳಿದ್ದ ಮಾತು ಆತನ ಅಂತರಂಗಕ್ಕೆ ಈಗ ಒಪ್ಪಿಗೆಯಾಗುತ್ತಿಲ್ಲ. ಭಾವದ ಜೊತೆಯಲ್ಲಿ ಮತ್ತಾವುದೋ ಸೇರಿದೆಯೆಂದು ಆತನ ಎಣಿಕೆ. ಹಿಂದಿನ ಸಂಜೆ ಅವನು ಋಷ್ಯಾಶ್ರಮದ ಸಮೀಪದಲ್ಲೆಲ್ಲೋ ನಡೆದ ಕೊಳಲಗಾನವನ್ನು ಕೇಳಿ ಆನಂದಗೊಂಡಿದ್ದ. ಸುಖದ ತರಂಗಮಾಲೆಯೆಂಬಂತೆ ಗಾಳಿಯಲ್ಲಿ ತೇಲಿಬಂದ ಆ ಗಾನಸುಧೆಯ ಗುಂಗಿನಲ್ಲಿ ಆತ ಮುಳುಗಿ, ಸುಂದರವಾದೊಂದು ತಾಣದಲ್ಲಿ ಧ್ಯಾನಮಗ್ನನಾಗಿ ಕುಳಿತಿರುವಾಗ, ಚಂಚಲಕುಮಾರಿ ತನ್ನ ಗೆಳತಿಯರೊಡನೆ ಅಲ್ಲಿಗೆ ಬರುತ್ತಾಳೆ. ಸಮವಯಸ್ಸಿನ ಆ ಷೋಡಶವರ್ಷದ ಷೋಡಶಿಯರು ತಮ್ಮ ವಯಸ್ಸಿಗೆ ತಕ್ಕ ಸಂಭಾಷಣೆಯಿಂದ ಅಲ್ಲಿನ ವಾತಾವರಣವನ್ನೆಲ್ಲ ಶೃಂಗಾರರಸಮಯವಾಗಿ ಮಾಡುತ್ತಾರೆ. ಆ ಸರಸ, ಆ ನಗು, ಆ ಸಂಗೀತ, ಆ ರಸಿಕತೆ - ಈ ಲಲಿತ ಮನೋಹರವಾದ ದೃಶ್ಯ ಅನಸೂಯೆ, ಪ್ರಿಯಂವದೆಯರಿಂದ ಕೂಡಿದ ಶಕುಂತಲೆಯ ಚಿತ್ರವನ್ನು ಕಣ್ಣಿಗೆ ಕಟ್ಟುತ್ತದೆ. ಶಕುಂತಲೆಯ ಹೃದಯದಲ್ಲಿ ದುಷ್ಯಂತ ಪ್ರವೇಶಿಸಿರುವಂತೆ ಇಲ್ಲಿ ಋಷ್ಯಶೃಂಗ ಚಂಚಲೆಯ ಹೃದಯವನ್ನು ಹೊಕ್ಕಿದ್ದಾನೆ. ಆ ಪ್ರಣಯದ ಅಂಕುರಕ್ಕೆ ಅವಳ ಸಖಿಯರು ನೀರೆರೆಯುತ್ತಿದ್ದಾರೆ. ಅಷ್ಟರಲ್ಲಿ ಋಷ್ಯಶೃಂಗ ಕಣ್ಣಿಗೆ ಬೀಳಲು ಹೆಣ್ಣುಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಓಡಿಹೋಗುತ್ತಾರೆ. ಅವರನ್ನು ಕಂಡ ಋಷ್ಯಶೃಂಗ ಅವರನ್ನು ತನ್ನಂತೆಯೆ

ಇರುವ ಋಷಿಕುಮಾರರೆಂದು ಭ್ರಮಿಸುತ್ತಾನೆ. ಆದರೆ ಅವರ ಸೌಂದರ್ಯ - ಅದರಲ್ಲಿಯೂ ಚಂಚಲಕುಮಾರಿಯ ಸೌಂದರ್ಯ - ಪರವಸ್ತುವಿನ ಸೌಂದರ್ಯವೆಂದುಕೊಳ್ಳುತ್ತಾನೆ, ಆತ. ''ಸಂದೇಹವಿಲ್ಲ, ದೇವವೃಂದಮದೊಂದಿಲ್ಲಿ ವಿಹರಿಸಿ ತಕ್ಕುಂ'' ಎಂದುಕೊಳ್ಳುತ್ತಾನೆ. ನಾಯಕ ನಾಯಕಿಯರಲ್ಲಿ ಪ್ರಣಯ ಪ್ರವೇಶವಾಗಿದೆ, ಇಲ್ಲಿ.

ಮೂರನೆಯ ಸ್ಥಾನದಲ್ಲಿ ನಾಯಕ ನಾಯಕಿಯರು ಪರಸ್ಪರ ಸಂಧಿಸಿ, ಸಂಭಾಷಣೆ ಮಾಡುತ್ತಾರೆ. ಆ ವೇಳೆಗೆ ಚಂಚಲ ಕುಮಾರಿ ಅಲ್ಲಿಗೆ ಬಂದು ಹತ್ತು ದಿನಗಳಾಗಿವೆ. ಅವಳ ಹೃದಯ ಋಷಿಕುಮಾರನ ಮಾತು, ನೋಟ, ಮನಸ್ಸುಗಳಿಗೆ ಸೂರೆ ಹೋಗಿದೆ. ಆದರೆ ಆತನನ್ನು ಆಕರ್ಷಿಸಿ, ಕರೆದೊಯ್ಯಬೇಕೆಂಬ ಬಯಕೆ ಸಫಲವಾಗಿಲ್ಲ. ತನ್ನ ಕಾರ್ಯಸಿದ್ಧಿಯಾಗದೆ ಆಶಾಭಂಗದಿಂದ, ಊರಿಗೆ ಹಿಂದಿರುಗಬೇಕೆಂದುಕೊಂಡವಳು ಮತ್ತೊಮ್ಮೆ ''ಅವನನ್ನು ಬೆಳದಿಂಗಳ ರಾತ್ರಿಯಲ್ಲಿ ಒಂದು ಸಲ ನೋಡಿ, ಅವನ ಆ ಮಾತುಗಳನ್ನು ಕೇಳಿ; ಆ ಆನಂದವನ್ನು ಇನ್ನೊಂದು ಸಲ ತಿಳಿದು ಬಂದುಬಿಡುವೆನು'' ಎಂದು ತನ್ನ ಸಖಿಗೆ ಹೇಳುತ್ತಾಳೆ. ಅವನಿಲ್ಲದೆ ತಾನು ಸನ್ಯಾಸಿಯಾಗುವೆನೆಂಬಷ್ಟು ದೂರ ಪ್ರವಹಿಸಿದೆ, ಅವಳ ಮೋಹ ಪ್ರವಾಹ. ಇದನ್ನು ಕೇಳಿದ ಗೆಳತಿಯಾದ ಸುಂದರಿ, ಪುರುಷ ರೂಪದಲ್ಲಿರುವ ಅವಳನ್ನು ಕುರಿತು ''ಸನ್ಯಾಸ ತೆಗೆದುಕೊಳ್ಳುವ ಮುಖವೆ ಇದು? ಅದಕ್ಕೆ ಬದಲಾಗಿ ನಾನಾದರೂ ನಿನ್ನನ್ನು ವಿವಾಹವಾಗುವೆನು'' ಎಂದು ಪರಿಹಾಸ ಮಾಡುತ್ತಾಳೆ. ಚಂಚಲೆಯು, ಆ ಋಷಿಕುಮಾರನನ್ನು ಕೊಂಡೊಯ್ಯುವುದಕ್ಕೆ ಏನೇನು ಬೇಕೋ ಅದೆಲ್ಲವನ್ನು ಕರುಣಿಸುವಂತೆ, ದೇವದೇವನನ್ನು ಪ್ರಾರ್ಥಿಸುತ್ತಾಳೆ. ಅವಳ ಪ್ರಾರ್ಥನೆ ದೈವಕ್ಕೆ ಮುಟ್ಟಿತೋ ಎನ್ನುವಂತೆ ಋಷ್ಯಶೃಂಗನು 'ಚಂಚಲ ಕುಮಾರಾ' ಎಂದು ಕೂಗಿಕೊಂಡು ಅಲ್ಲಿಗೆ ಪ್ರವೇಶಿಸುತ್ತಾನೆ. ಅವರಿಬ್ಬರ ಸಂಭಾಷಣೆಯ ಸ್ವಾರಸ್ಯ ಮಾತಿಗೆ ಮೀರಿದುದು. ಋಷ್ಯಶೃಂಗನ ಮುಗ್ಧ ಮನೋಹರವಾದ ಈ ವಿಲಕ್ಷಣ ಪ್ರಶ್ನೆಯನ್ನು ನೋಡಿ - 'ಚಂಚಲ ಕುಮಾರಾ, ನಿನ್ನ ಬಳಿ ಇರುವುದರಿಂದ ನನಗೆ ಎಷ್ಟು ಸುಖವುಂಟೋ, ನನ್ನ ಬಳಿ ಇರುವುದರಿಂದ ನಿನಗೂ ಅಷ್ಟು ಸುಖವುಂಟೇ?' ಸರಳವಾದರೂ ಮೊನಚಾದ ಈ ಪ್ರಶ್ನೆಗೆ ಚಂಚಲೆ ಕೊಡುವ ಉತ್ತರ ''ಅದಕ್ಕೆ ಸಂದೇಹವೇನು?'' ಎಂಬ ಮೊಟುಕಾದ ಮರುಪ್ರಶ್ನೆ. ಅನ್ಯಮನಸ್ಕಳಾದ ಅವಳನ್ನು ಪ್ರಶ್ನಿಸಿ, ಅವಳ ಮನಸ್ಸು ಊರಿನಕಡೆ ಹೋಗಿತ್ತೆಂಬುದನ್ನು ಕೇಳಿ, ಆತ ''ನೀನು ಹತ್ತಿರವಿರುವಾಗ ನನ್ನ ಮನಸ್ಸು ಎಲ್ಲಿಗೂ ಹೋಗುವುದಿಲ್ಲ'' ಎಂದು ಆತ ಹೇಳುವುದು ಆತನ ಅಂತರಂಗಕ್ಕೆ ಹಿಡಿದ ಕನ್ನಡಿಯಂತಿದೆ. ತಾನು ಬಂದು ಹತ್ತು ದಿನಗಳಾಯಿತೆಂದು ಚಂಚಲೆಗೆ ಕರ್ತವ್ಯಜ್ಞಾನವಿದೆ. ಆದರೆ ಆತ ಅಜ್ಞಾತವಾದ ತನ್ನ ಪ್ರಣಯ ಭಾವನೆಯಲ್ಲಿ ''ಹತ್ತು ದಿನವಾಯಿತೆ? ನನಗೆ ತಿಳಿಯಲೇ ಇಲ್ಲ; ನಿನ್ನ ಸ್ನೇಹದ ಮಹಿಮೆಯನ್ನು ಏನೆನ್ನಲಿ?'' ಎನ್ನುತ್ತಾನೆ. ಅವಳು ಅಲ್ಲಿಯೆ ಇರಬೇಕೆಂಬ ಆಸೆ, ಆತನದು. ಅವಳ ಸಾನ್ನಿಧ್ಯದಲ್ಲಿ ಉತ್ಸಾಹದ ಮೂರ್ತಿಯಾಗಿರುವ ಆತ, ಆತನನ್ನು ಅಗಲಬೇಕೆಂಬ ದುಗುಡದಿಂದ ಖಿನ್ನಳಾಗಿರುವ ಆಕೆಯನ್ನು ಕುರಿತು ''ಊರಿಗೆ ಹೋಗುವಿಯಂತೆ, ನೀನು ಎಂದಿನಂತೆ ಉಲ್ಲಾಸದಿಂದ ಮಾತನಾಡು'' ಎನ್ನುತ್ತಾನೆ. ಹುಣ್ಣಿಮೆಯ ಚಂದ್ರ ಆಕಾಶವನ್ನೆಲ್ಲ ತುಂಬಿ ಆತನ ಕೈಗೆ ಸಿಕ್ಕುವಂತೆ ಆತನಿಗೆ ಕಾಣಿಸುತ್ತದೆಯಂತೆ! ಈ ಮಾತಿನಲ್ಲಿ ಅಡಗಿರುವ ಧ್ವನಿ ಗಮನಾರ್ಹವಾದುದು. ನಾಗರಿಕಳಾದ ಸುರಸುಂದರಿ ಅಡವಿಯ ಋಷಿಕುಮಾರನೊಬ್ಬನ ಕೈಹಿಡಿಯ

ಹೊರಟಿರುವುದು ಆಕಾಶದ ಚಂದ್ರ ಕೈಗೆಟಿಕಿದಂತಲ್ಲವೆ? ತಾನೂ ಚಂಚಲೆಯೂ ಬೆಳುದಿಂಗಳ ಸಮುದ್ರದಲ್ಲಿ ಮುಳುಗಿರುವಂತೆ ಆತನಿಗೆ ಭಾಸವಾಗುತ್ತಿದೆ. ಅಂತಹ ಸುಂದರ ರಾತ್ರಿ ಆತನಿಗೆ ಎಂದೂ ಕಾಣಿಸಿರಲಿಲ್ಲ. ಅದೇಕೆಂಬುದು ಆತನಿಗೆ ಗೊತ್ತಿಲ್ಲ. ಆದರೆ, ನಾಗರಿಕಳಾದ ಚಂಚಲೆಗೆ ಅದರ ಗುಟ್ಟು ಗೊತ್ತು-''ಪ್ರಿಯವಾದ ವಸ್ತು ಹತ್ತಿರವಿದ್ದರೆ, ಸುಂದರವಾದ ವಸ್ತು ಮತ್ತಷ್ಟು ಸುಂದರವಾಗಿ ಕಾಣುವುದು ಸಹಜ''. ಬೆಳುದಿಂಗಳಲ್ಲಿ ತನಗೆ ಮೂಡುತ್ತಿರುವ ಭಾವನೆಗಳ ಸಾಕಾರಮೂರ್ತಿಯೇ ಚಂಚಲೆಯೆನ್ನಿಸುತ್ತದೆ, ಆತನಿಗೆ. ''ನೀನು ಬಹು ಸುಂದರ, ನಿನ್ನಿಂದ ನನ್ನ ಈ ಜೀವನ ಸಂಪೂರ್ಣತೆಯನ್ನು ಹೊಂದಿತು'' ಎಂದು ಹೇಳಿ,

ಋಷ್ಯಶೃಂಗ: ನೀನು ನನ್ನ ಜೀವನದಲ್ಲಿ ಎಷ್ಟು ಕಷ್ಟ ಸಾಧ್ಯವಾದ ಫಲವನ್ನು ತಂದಿರುವೆ ಎಂಬುದನ್ನು ನಾನು ಹೇಳಲಾರೆ.

ಚಂಚಲ: ನೀನು ಹೇಳುವ ಮಾತು ನನಗೆ ಅರ್ಧ ತಿಳಿಯುತ್ತದೆ, ಅರ್ಧ ತಿಳಿಯುವುದಿಲ್ಲ. ಕಷ್ಟಸಾಧ್ಯವಾಗಿದ್ದುದು ಏನು? ನಾನೇನನ್ನು ತಂದೆ?

ಋಷ್ಯಶೃಂಗ: ನಾನು ಮೊದಲೆ ಹೇಳಿದ್ದೇನೆಯಲ್ಲ. ಈಗ ನಿನ್ನನ್ನು ನೋಡಿದರೆ ನಿನ್ನ ಬಣ್ಣ ಹಾಲ ಕೆನೆಯಲ್ಲಿ ಬೆಳದಿಂಗಳನ್ನು ನೊರೆತೆಯ್ದು ಹಚ್ಚಿದ ಹಾಗೆ ಇದೆ. ಇದನ್ನು ನೋಡದೆ ಇರುವವರು ಇದು ಹಾಗಿರಬಹುದೆಂದು ನೆನೆಯಲು ಸಾಧ್ಯವೆ?

ಚಂಚಲ: ಇನ್ನೇನು?

ಋಷ್ಯಶೃಂಗ: ನಿನ್ನ ತುಟಿಯು ನಮ್ಮ ಕುಟೀರದ ಹಿಂಗಡೆಯ ತೊಂಡೆ ಗಿಡದಲ್ಲಿ ಬಿಡುವ ಹಣ್ಣಿನ ಬಣ್ಣವಾಗಿದೆ.

ಚಂಚಲ: ಉಂ

ಋಷ್ಯಶೃಂಗ: ನಿನ್ನ ಬಳಿ ಬಂದರೆ ಹೂ ಬಿಟ್ಟ ಮಲ್ಲಿಗೆಯ ಬಳ್ಳಿಯ ಬಳಿನಿಂತಂತೆ ಆನಂದವಾಗುತ್ತದೆ.

ಚಂಚಲ: ಆಯಿತು.

ಋಷ್ಯಶೃಂಗ: ನಿನ್ನ ಕಣ್ಣಿನ ಮಾದರಿಯನ್ನೇ ಹೇಳಲಾರೆ. ನೀನು ನನ್ನನ್ನು ನೋಡಿದರೆ ನೀಳವಾದ ಎರಡು ಮಿಂಚಿನ ನಿಡಿದೋಳುಗಳು ನನ್ನನ್ನು ಹಿಡಿದಂತೆ ತೋರುವುದು.

ಚಂಚಲ: ಉಂ (ಸ್ವಲ್ಪ ನಗುವನ್ನು ಸೂಚಿಸುವಳು).

ಋಷ್ಯಶೃಂಗ: ನೀನು ಸ್ವಲ್ಪ ನಕ್ಕರೆ ಹಲ್ಲು ಈ ನೀರಿನಲ್ಲಿ ನಕ್ಷತ್ರದಂತೆ ಕಾಣುವುದು. ಮುಖವೆಲ್ಲ ನಗುವುದು; ಕಣ್ಣು ನಗುವಿನ ಕಾಂತಿಯಿಂದ ತುಂಬಿ ತೂಗುವುದು; ಮನಸ್ಸು ಅಲ್ಲೋಲ ಕಲ್ಲೋಲವಾಗುವುದು.

ಚಂಚಲ: ಹಾಗಾದರೆ ನಾನು ನಗುವುದಿಲ್ಲ.

ಋಷ್ಯಶೃಂಗ: ನೀನು ನಗದೇ ಇದ್ದರೂ ಚೆನ್ನಾಗಿಯೆ ಇರುತ್ತದೆ. ಅಲ್ಲೋಲ ಕಲ್ಲೋಲವಾಗುವುದೆಂದರೇನು? ಮನಸ್ಸಿನಲ್ಲಿ ಹೇಗೋ ಆಗುತ್ತದೆ. ಆದರೆ ಬಹಳ ಸುಖವುಂಟಾಗುತ್ತದೆ. ಅದು ನಿನ್ನ ನಗೆಯಲ್ಲಿ ವಿಶೇಷ.

ಈ ಸಂಭಾಷಣೆಯಲ್ಲಿ ಋಷ್ಯಶೃಂಗನ ಪಾತ್ರ ವೈಶಿಷ್ಟ್ಯವನ್ನು ನಾಟಕಕರ್ತರು ಎಷ್ಟು ಹೃದಯಂಗಮವಾಗಿ ಅರಳಿಸಿದ್ದಾರೆ! ಸಹಸ್ರ ಮಾತುಗಳಲ್ಲಿ ಚಿತ್ರಿಸಲಾಗದ ಋಷ್ಯಶೃಂಗನ,

ಮೂಕವಾದರೂ ಅದಮ್ಯವಾಗಿರುವ ಪ್ರಣಯ ಭಾವನೆ ಎಷ್ಟು ಚೆನ್ನಾಗಿ ಅಭಿವ್ಯಕ್ತವಾಗಿದೆ! ಈ ರಸನಿಮಿಷವನ್ನು ಸದುಪಯೋಗಪಡಿಸಿಕೊಂಡು, ಚಂಚಲೆಯೂ ಆ ಮುನಿಕುಮಾರನಲ್ಲಿ ಸ್ತ್ರೀತ್ವದ ಭಾವವನ್ನು ಬಿತ್ತಲು ಪ್ರಯತ್ನಿಸುತ್ತಾಳೆ. ಸ್ತ್ರೀಯೆಂದರೆ ಏನೆಂದೇ ತಿಳಿಯದ ಅವನೊಡನೆ ಅವನ ತಾಯಿಯ ಪ್ರಸಕ್ತಿಯನ್ನು ಎತ್ತಿ ''ಪರಮಾತ್ಮನು ಕರುಣೆಯಿಂದ ನೋಡುವ ಸ್ಥಳದಲ್ಲೆಲ್ಲ ತಾಯಿ ಇರುವಳು. . .ಅಂತಹ ತಾಯಿ ಸ್ತ್ರೀ'' ಎನ್ನುತ್ತಾಳೆ. ಅದನ್ನು ಮುಂದುವರಿಸಿ ಸ್ತ್ರೀ ವರ್ಣನೆಯ ಹಾಡೊಂದನ್ನು ಹಾಡುತ್ತಾಳೆ. ಆ ವರ್ಣನೆಯ ಮೂರ್ತಿ ಸ್ವರೂಪವನ್ನು ಚಂಚಲೆಯಲ್ಲಿ ಆತ ಪರಿಭಾವಿಸುತ್ತಾನೆ. ಸ್ತ್ರೀಯ ರೂಪು ಪುರುಷರ ರೂಪದಿಂದ ಭಿನ್ನವಾಗಿರುವುದೆಂದು ಹೇಳಿ, ಅದನ್ನು ಕಾಣಬೇಕಾದರೆ ತನ್ನೂರಿಗೆ ಬರುವಂತೆ ಆಕೆ ಆಹ್ವಾನಿಸುತ್ತಾಳೆ. ತನ್ನ ತಂಗಿ ತನಗಿಂತ ರೂಪವತಿಯೆಂದು ಹೇಳಿ, ಹೆಣ್ಣಿನ ರೂಪವನ್ನು ಕಾಣಬೇಕೆಂಬ ಅವನ ಬಯಕೆಯನ್ನು ಈಡೇರಿಸುವುದಕ್ಕಾಗಿ ತನ್ನ ಗಂಡುಡುಗೆಯನ್ನು ಕಿತ್ತೆಸೆದು ಸ್ವಸ್ವರೂಪದಿಂದ ಕಾಣಿಸಿಕೊಳ್ಳುತ್ತಾಳೆ. ಋಷ್ಯಶೃಂಗನು ಅಚ್ಚರಿಯಿಂದ ದಿಗ್ಭ್ರಮೆಗೊಂಡು, ರಾಜಧಾನಿಗೆ ಹೊರಟ ಆ ರಾಜಪುತ್ರಿಯನ್ನು ಹಿಂಬಾಲಿಸುತ್ತಾನೆ.

ನಾಲ್ಕನೆಯ ಸ್ಥಾನ ರಾಜಧಾನಿಯ ರಂಗಸ್ಥಳದಲ್ಲಿ ನಡೆವ ದೃಶ್ಯ. ಋಷ್ಯಶೃಂಗ ಅಲ್ಲಿಗೆ ಹೋಗಿ ಮೂರು ತಿಂಗಳಾಗಿದೆ. ಆತನ ಕೃಪೆಯಿಂದ ರಾಜ್ಯದ ಕ್ಷೋಭೆಯೆಲ್ಲ ನೀಗಿದೆ. ಸಂತುಷ್ಟನಾದ ರಾಜನು ತನ್ನ ರಾಜ್ಯವನ್ನೇ ಆತನಿಗೆ ಅರ್ಪಿಸಲು ಸಿದ್ಧನಾಗಿದ್ದಾನೆ. ಆದರೆ ಆ ಮುನಿಕುಮಾರನಿಗೆ ರಾಜಪದವಿಯೇತಕ್ಕೆ? ಚಂಚಲಕುಮಾರನನ್ನು ತನ್ನ ಜೊತೆಗೆ ಕಳುಹಿಸಿದರೆ ಸಾಕು. ಈ ಮಾತನ್ನು ಕೇಳಿದ ರಾಜನು ಬಹುಶಃ ಮನಸ್ಸಿನಲ್ಲಿಯೆ ನಕ್ಕು ''ತಾಪಸವರ್ಯ, ನನಗೆ ಕುಮಾರರೇ ಇಲ್ಲವಲ್ಲ'' ಎನ್ನುತ್ತಾನೆ. ಅದನ್ನು ಋಷ್ಯಶೃಂಗ ನಂಬುವುದಿಲ್ಲ. ತನ್ನ ಮಗಳನ್ನು ಆತನೊಡನೆ ಕಳುಹಿಸುವೆನೆಂದು ರಾಜ ಹೇಳಲು, ಅವಳು ಚಂಚಲಕುಮಾರ ಹೇಳಿದ್ದ ಅವನ ತಂಗಿಯೆಂದುಕೊಂಡು ''ಅಯ್ಯಾ, ನನಗೆ ಚಂಚಲಕುಮಾರ. . . ಬೇಕು ನನಗೆ ಇನ್ನಾರೂ ಬೇಡ'' ಎನ್ನುತ್ತಾನೆ. ಆದರೂ ರಾಜ ತನ್ನ ಮಗಳನ್ನು ಅಲ್ಲಿಗೆ ಕರೆಸುತ್ತಾನೆ. ಅವಳು ಬಂದು ''ನಾನು ನಿಮ್ಮ ಮಿತ್ರನಾದ ಚಂಚಲ. ನಿಮ್ಮ ಸೇವೆಗೆಂದು ಬಂದಿರುವ ಚಂಚಲೆ. ಇಬ್ಬರೂ ನಾನೆ'' ಎಂದು ಹೇಳುತ್ತಾಳೆ. ಋಷ್ಯಶೃಂಗನು ಎಲ್ಲೆಯಿಲ್ಲದ ಸಂತೋಷದಿಂದಿರುವಾಗ ವಿಭಾಂಡಕ ಮುನಿ ಅಲ್ಲಿಗೆ ಬರುತ್ತಾನೆ. ನಡೆದುಹೋಗಿರುವ ಘಟನೆಗಳಿಂದ ಆತನು ಸ್ವಲ್ಪ ಕುಪಿತನಾಗಿರುವನಾದರೂ, ಚಂಚಲೆಯನ್ನು ಕಂಡ ಮೇಲೆ ಆತನ ಕೋಪ ಶಮನವಾಗುತ್ತದೆ. ಮನೆಗೆ ಬಂದ ಸೊಸೆಗೆ ಕೆಲವು ಸಂಸಾರಗಳಲ್ಲಿ ಹೊಸದೊಂದು ನಾಮಕರಣ ಮಾಡುವಂತೆ ಆತನು ''ರಾಜ್ಯದ ಕ್ಷೋಭೆಗೆ ಶಾಂತಿಯನ್ನು ತಂದವಳೂ, ನನ್ನ ಆಗ್ರಹವನ್ನು ಇಷ್ಟು ಸುಲಭವಾಗಿ ಶಮನಗೊಳಿಸಿದವಳೂ ಆದ ಇವಳನ್ನು ಇಂದಿನಿಂದ ''ಶಾಂತಾ'' ಎಂದು ಕರೆಯುವುದು ಎಂದು ಹೇಳಿ, ನೂತನ ವಧೂವರರನ್ನು ಆಶೀರ್ವದಿಸುತ್ತಾನೆ. ಮಂಗಳದೊಡನೆ ನಾಟಕ ಮುಕ್ತಾಯವಾಗುತ್ತದೆ.

ಚಿಕ್ಕದಾದರೂ ಚೊಕ್ಕವಾಗಿರುವ ಈ ನಾಟಕ 'ಶ್ರೀನಿವಾಸ'ರ ಪ್ರತಿಭೆಗೆ ಇಟ್ಟ ಪುಟ್ಟ ಸೊಡರಿನಂತಿದೆ. ಉಚ್ಚನಾಗರಿಕತೆ ಸುಸಂಸ್ಕೃತಿಯ ಕೈಹಿಡಿದು ನರ್ತಿಸುವಂತಿರುವ ಈ ನಾಟಕ 'ಶ್ರೀನಿವಾಸ'ರ ಉತ್ತಮವಾದ ಅಭಿರುಚಿಯ ಒಂದು ಪ್ರತೀಕ. ನಾಟಕ ಕರ್ತರು

ತಮ್ಮ ಹೊಸ ಜವ್ವನದಲ್ಲಿ ಬರೆದಿರುವ ಕಿರು ನಾಟಕಗಳು ನಿರ್ದುಷ್ಟವಾದ ಪ್ರಣಯ ಜೀವನದ ಸುಂದರ ಪುಷ್ಪಗಳು. 'ಶಾಂತಾ', 'ಸಾವಿತ್ರಿ', 'ಉಷಾ' - ಈ ಹೆಸರುಗಳುಕೂಡ, ಯುವಕನೊಬ್ಬನು ಪ್ರಣಯ ತುಂಬಿದ ಪ್ರೇಮದಿಂದ ತನ್ನ ಮಡದಿಯನ್ನು ಹೆಸರಿಸಿ ಕರೆಯುವಂತೆ, ಸುವಾಸಿತವಾಗಿವೆ. ಇಂತಹ ಸುಂದರ ಸುವಾಸಿತ ಪುಷ್ಪಗಳನ್ನು ನೀಡಿದ ಕನ್ನಡಮ್ಮನ ಈ ಅಗ್ರಜ ಚಿರಾಯುವಾಗಲೆಂದು ದೇವದೇವನಲ್ಲಿ ನನ್ನ ಪ್ರಾರ್ಥನೆ.

ಕಾಕನ ಕೋಟೆ

ಗಿರೀಶ ಕಾರ್ನಾಡ್

'ಕಾಕನಕೋಟೆ'* ಯ ಕಥೆ ಸ್ವಲ್ಪದರಲ್ಲಿ ಹೀಗಿದೆ :

ಕಾಚ-ನಾಟಕದ ನಾಯಕ - ಕಾಡ ಕುರುಬರ 'ಬೂಡಿ'ನ (ಹಳ್ಳಿಯ) 'ಬುದ್ಧಿವಂತ.' ಅವನ ಬೂಡು ಒಬ್ಬ ಹೆಗ್ಗಡೆಯ ಪಾಳ್ಯದಲ್ಲಿದೆ. ಬೂಡಿನವರಿಂದ ಕಾಣಿಕೆ ಗಳಿಸಿ ಅದನ್ನು ಮೈಸೂರಿನ ಅರಸನಿಗೆ ಕಳುಹಿಸುವದು ಹೆಗ್ಗಡೆಯ ಕೆಲಸ. ಆದರೆ ಈಗ ಒಮ್ಮೆಲೆ ಈ ಹೆಗ್ಗಡೆ ತನಗಾಗಿ ಒಂದಕ್ಕೆರಡು ಪಟ್ಟು ಕಾಣಿಕೆ ಕೇಳುತ್ತಿದ್ದಾನೆ. ಮೈಸೂರ ಅರಸನಿಗೆ ಮುಟ್ಟಬೇಕಾದ ಕಾಣಿಕೆಗಿಂತ ಹೆಚ್ಚು ತನಗೆ ಮೊದಲು ತಲುಪಬೇಕೆಂದು ಎನ್ನುತ್ತಿದ್ದಾನೆ. ದುರ್ಬಲ ಕಾಡ ಕುರುಬರು ಪೇಚಿನಲ್ಲಿ ಬಿದ್ದಿದ್ದಾರೆ.

ಈ ಪೇಚಿನಿಂದ ಪಾರಾಗಲಿಕ್ಕೆ ಕಾಚ ಒಂದು ಉಪಾಯ ಹೂಡುತ್ತಾನೆ. ಅವನು ಮೈಸೂರಿನಲ್ಲಿದ್ದಾಗ ಒಮ್ಮೆ ಅರಸನ ಪ್ರಾಣ ಉಳಿಸಿದ್ದ. ಅದಕ್ಕೆ ಬದಲಾಗಿ ತಾನು ಕರೆಕಳಿಸಿದಾಗ ಬರಬೇಕು ಎಂದು ಅರಸನೆಡೆಯಲ್ಲಿ ಕೇಳಿಕೊಂಡಿದ್ದ. ಈಗ ಅದನ್ನು ನೆನೆದು, ತನ್ನ ಬೂಡನ್ನು ಈ ಸಂಕಟದಿಂದ ಪಾರುಮಾಡಲು ಬರಬೇಕು ಎಂದು ಅರಸನಿಗೆ ಹೇಳಿಕಳಿಸುತ್ತಾನೆ ಮತ್ತು ಅರಸ ಬರುವ ವರೆವಿಗೆ ಹೆಗ್ಗಡೆಯನ್ನು ಸುಮ್ಮನಿರಿಸಲಿಕ್ಕೆಂದು 'ಕಾಕ' ಎಂಬ ವ್ಯಕ್ತಿಯಾಗಿದ್ದಾನೆ. ಹೆಗ್ಗಡೆಗೆ ಹೋದಷ್ಟೇ ಕಾಣಿಕೆ ತನಗೂ ಬರಬೇಕು ಎಂದು ಕೇಳುತ್ತಿದ್ದಾನೆ - ಎಂದು ಹೆಗ್ಗಡೆಗೆ ತಿಳಿಸುತ್ತಾನೆ.

ಕಾಚನೇ ಕಾಕ ಎಂಬ ಮಾತು ಹೆಗ್ಗಡೆಗೆ ಗೊತ್ತಿಲ್ಲ.

ಆದರೆ ಬೂಡಿನ ಮಾವಯ್ಯ ಕಾಕನ ಮೇಲೆ ಮತ್ಸರ ತಳೆದು ಕಾಚನೇ ಕಾಕ ಎಂಬ ಮಾತನ್ನು ಅರಸನಿಗೆ ತಿಳಿಸುತ್ತಾನೆ. ರೊಚ್ಚಿಗೆದ್ದ ಹೆಗ್ಗಡೆ ತನ್ನ ಭೆಟ್ಟಿಗೆ ಬಂದ ಕಾಚನನ್ನು ಹಿಡಿದಿಡಲು ಯತ್ನಿಸುತ್ತಾನೆ. ಆದರೆ ಮೋನ ಎಂಬ ತರುಣನ ಸಹಾಯದಿಂದ ಕಾಕ

---

*ಶ್ರೀನಿವಾಸರ 'ಕಾಕನಕೋಟೆ' ನಾಟಕ ಮೊದಲು ಮುದ್ರಿತವಾದದ್ದು ೧೯೩೮ರಲ್ಲಿ. ಕಳೆದ ಇಪ್ಪತ್ತೇಳು ವರ್ಷಗಳಲ್ಲಿ ಈ ನಾಟಕದ ಪ್ರಯೋಗ ಕೈಬೆರಳುಗಳ ಮೇಲೆಣಿಸಬಹುದಾದಷ್ಟು ಕಡಿಮೆ ಸಲ ಆಗಿದೆ. ಕನ್ನಡ ರಂಗಭೂಮಿಯ ಇಂದಿನ ಶೋಚನೀಯ ಸ್ಥಿತಿ ನೋಡಿದಾಗ ಇದರಲ್ಲಿ ಆಶ್ಚರ್ಯವೆನಿಸುವಂಥದೇನೂ ಇಲ್ಲ. ನಿಜವಾಗಿ ಆಶ್ಚರ್ಯದ ಮಾತೆಂದರೆ ರಸಿಕರೂ ಈ ನಾಟಕವನ್ನು ದುರ್ಲಕ್ಷಿಸಿದ್ದು. ಶ್ರೀನಿವಾಸರ 'ತಾಳೀಕೋಟೆ', 'ಯಶೋಧರಾ' ನಾಟಕಗಳಿಗೆ ಸಿಕ್ಕಷ್ಟು ಪ್ರಸಿದ್ಧಿಯೂ ಈ ನಾಟಕಕ್ಕೆ ದೊರೆತಿಲ್ಲ. ಆದರೆ 'ಕಾಕನಕೋಟೆ' ಕನ್ನಡದ ಅತ್ಯುತ್ತಮ ನಾಟಕಗಳಲ್ಲೊಂದಾಗಿದೆ. ಇಂದಾದರೂ ಹೊಸ ನಾಟಕಕಾರರು ವಿಷಯ ನಿರೂಪಣೆ, ಭಾಷೆಯ ಉಪಯೋಗ ಮತ್ತು ತಾಂತ್ರಿಕ ರಚನೆ ಇವುಗಳ ಬಗ್ಗೆ ಹಲವಾರು ಮಹತ್ವದ ಸಂಗತಿಗಳನ್ನು ಈ ನಾಟಕದ ಅಭ್ಯಾಸದಿಂದ ಕಲಿಯಬಹುದಾಗಿದೆ.

ಪಾರಾಗುತ್ತಾನೆ. ಪಾರಾಗುವಾಗ ಹೆಗ್ಗಡೆಯ ಮಗ ಚಿಕ್ಕಯ್ಯನನ್ನು ಮತ್ತು ಹೆಗ್ಗಡೆಯ ಕರಣೀಕರನ್ನು ಸೆರೆಹಿಡಿದು ಒಯ್ಯುತ್ತಾನೆ. ಅವರು ಬೂಡಿನಲ್ಲಿ ಬಂದಿಗಳಾಗಿರುವವರೆಗೆ ಹೆಗ್ಗಡೆಗೆ ಬೂಡಿನ ಮೇಲೆ ದಾಳಿಮಾಡುವ ಧೈರ್ಯವಿಲ್ಲ.

ಆರು ದಿನಗಳ ನಂತರ ಅರಸ ರಣಧೀರ ಬೂಡಿಗೆ ಬರುತ್ತಾನೆ. ಅವನನ್ನು ಕರೆಯಲಿಕ್ಕೆ ಹೋದ ತಮ್ಮ ಗೌಡ 'ಕಾಚ ಕರೆದಿದ್ದಾನೆ' ಎನ್ನುವದಕ್ಕೆ ಬದಲಾಗಿ 'ಕಾಕ ಕರೆದಿದ್ದಾನೆ' ಎಂದು ಹೇಳಿದ್ದರಿಂದ ಅರಸ ಗೊಂದಲದಲ್ಲಿ ಬಿದ್ದಿದ್ದ. ಅರಸನಿಗೆ ಕಾಚನೇ ಕಾಕ ಎಂಬುದು ಗೊತ್ತಿರಲಿಲ್ಲ. ಹೀಗಾಗಿ ಆರು ದಿನ ತಡೆದಿದ್ದ.

ಅರಸನ ಆಗಮನದಿಂದ ಎಲ್ಲ ಸಂಕಟಗಳ ನಿವಾರಣೆಯಾಗುತ್ತದೆ. ಹೆಗ್ಗಡೆಯ ಮಗ ಚಿಕ್ಕಯ್ಯ ಕಾಕನ ಮಗಳಾದ ಮೊಲ್ಲೆಯನ್ನು ವರಿಸುತ್ತಾನೆ. ಅರಸ ರಣಧೀರ ಆ ಬೂಡನ್ನು ಹೆಗ್ಗಡೆಯ ಪಾಳ್ಯದಿಂದ ಬೇರ್ಪಡಿಸಿ, ಸ್ವತಂತ್ರಪಾಳ್ಯವನ್ನಾಗಿ ಮಾಡುತ್ತಾನೆ. ಬೂಡಿಗೆ 'ಕಾಕನಕೋಟೆ' ಎಂಬ ಹೆಸರಿಟ್ಟು ಚಿಕ್ಕಯ್ಯನನ್ನೇ ಅದರ ಹೆಗ್ಗಡೆಯಾಗಿ ನೇಮಿಸುತ್ತಾನೆ. ಆದರೆ ಬೂಡಿಗೊಂದು ಕೋಟೆ ಕಟ್ಟಿಸಬೇಕು ಎಂದಾಗ ಮಾತ್ರ ಕಾಡ ಕುರುಬರೆಲ್ಲ 'ಕೋಟೆ ಬೇಡ' ನಿಸರ್ಗದೊಡನೆ ರಮಿಸುವ ಬೂಡೇ ಇರಲಿ ಎಂದು ಬೇಡಿಕೊಳ್ಳುತ್ತಾರೆ.

ಎಲ್ಲವೂ-ಮೊದಲ ನೋಟಕ್ಕಂತೂ-ಆನಂದದಲ್ಲಿ ಕೊನೆಗೊಳ್ಳುತ್ತದೆ.

ಕತೆ ಸರಳವಾಗಿದೆ. ಕಥನವೂ ಸರಳವಾಗಿದೆ.* ಐತಿಹಾಸಿಕ ನಾಟಕಗಳಲ್ಲಿ ಅಪೇಕ್ಷಿಸಬಹುದಾದ ಯಾವ ಕೋಲಾಹಲವೂ ಇಲ್ಲಿಲ್ಲ. ಹೆಗ್ಗಡೆ ಕಾಚನನ್ನು ಬಂಧಿಸಲಿಕ್ಕೆ ಯತ್ನಿಸುವ ದೃಶ್ಯವೊಂದನ್ನು ಬಿಟ್ಟರೆ ನಾಟಕೀಯವೆನ್ನಬಹುದಾದ ಪ್ರಸಂಗಗಳೂ ಇಲ್ಲ. ಆದ್ದರಿಂದ ವಾಚಕನಿಗೆ ಇದು ಕೇವಲ 'ಕಾಚ' ಎಂಬ ಯಾವುದೋ ಒಬ್ಬ ವ್ಯಕ್ತಿಯ ಕತೆ ಎನ್ನಿಸುವ ಸಂಭವವಿದೆ.

ಆದರೆ ಕಾಚನ ಕತೆ ಎಂಬ ದೃಷ್ಟಿಯಿಂದ ನೋಡಿದಾಗಲೂ ನಾಟಕದಲ್ಲಿ ವೈಚಿತ್ರ್ಯವಾಗಲಿ, ಅಸಾಧಾರಣತೆಯಾಗಲಿ ಕಂಡುಬರುವುದಿಲ್ಲ. ಕಾಚನ\ ಹತ್ತಿರ ಜಾಣ್ಮೆಯಿದೆ, ಅನುಭವವಿದೆ, ಮಾತಿನ ಚಾತುರ್ಯವಿದೆ. ಆದರೆ ಅವನಿಲ್ಲಿ ಎದುರಿಸಬೇಕಾದ ಸಂಘರ್ಷದ ನಿವಾರಣೆಗೆ ಇವು ಯಾವವೂ ಉಪಯೋಗವಾಗುವದಿಲ್ಲ. ಅರಸ ರಣಧೀರ ಬರುವದರೊಳಗಾಗಿ ಹೆಗ್ಗಡೆ ಬೂಡನ್ನು ಸುಟ್ಟು ನೆಲಸಮ ಮಾಡದಂತೆ ನೋಡಿಕೊಳ್ಳುವ ಕೆಲಸವೊಂದನ್ನು ಮಾತ್ರ ಕಾಕ ಮಾಡುತ್ತಾನೆ. ಹೆಗ್ಗಡೆಯನ್ನು ತಡೆಯಲಿಕ್ಕೆ ಅರಸನೇ ಬರಬೇಕು. ಅಂದರೆ, ಕಾಕನಿಗೆ ಅರಸನ ಪರಿಚಯವಿತ್ತು ಎಂಬ ಒಂದೇ 'ಗುಣ' ಕೆಲಸಕ್ಕೆ ಬರುತ್ತದೆ.

ಬಹುಶಃ ಇದೇ ಕಾರಣಕ್ಕಾಗಿ 'ಕಾಕನಕೋಟೆ' ವಿಮರ್ಶಕರಿಂದ ಪಡೆಯಬೇಕಾದಷ್ಟು

---

* ಇಲ್ಲವೆನ್ನಲಿಕ್ಕೆ ಕತೆಯಲ್ಲಿ ಒಂದು ದೋಷವನ್ನು ತೋರಿಸಬಹುದು. ದೃಶ್ಯ ೫ರಲ್ಲಿ ಹೆಗ್ಗಡೆ, ಮಾವಯ್ಯ ಮಾತಾಡುವಾಗ ಮೋನ ಅಡಗಿ ಕೇಳುತ್ತಾನೆ. ಆಗ ಅವನು ಅಲ್ಲಿ ಇದ್ದದ್ದು ಇಬ್ಬರಿಗೂ ಗೊತ್ತಾಗುವುದಿಲ್ಲ. ಆದರೆ ಅದೇ ದೃಶ್ಯದಲ್ಲಿ ನಾಲ್ಕು ಪುಟಗಳ ನಂತರ ಮಾಚನಾಯಕ ಪೊದೆಯ ಮರೆಗೆ ಅಡಗಿ ಕಾಚ-ಗೌಡರ ಮಾತುಕತೆಯನ್ನು ಕೇಳುತ್ತಿರುವಾಗ ಮಾತ್ರ ಅವರಿಗೆ ಅವನು ಅಲ್ಲಿದ್ದದ್ದು ಗೊತ್ತಾಗುತ್ತದೆ. ಏನೇನೋ ಸುಳ್ಳು ಹೇಳಿ ಅವನಿಗೆ ಮೋಸಮಾಡುತ್ತಾರೆ. ಇದು ಮನೋರಂಜಕವೆನಿಸಿದರೂ, ನಾಟಕಕಾರರ ಈ ಪಕ್ಷಪಾತ ಕತೆಯಲ್ಲಿ ಸ್ವಲ್ಪ ಕೃತ್ರಿಮತೆ ತಂದಿದೆ.

ಮರ್ಯಾದೆ ಪಡೆದಿರಲಿಕ್ಕಿಲ್ಲ. ಮೊದಲ ನೋಟಕ್ಕೆ ನಾಟಕ ಅತಿ ಸರಳವೆನ್ನಿಸಿ, ಅದರಲ್ಲಿ ಯಾವ ಆಳವೂ ಇಲ್ಲ ಎನಿಸುತ್ತದೆ. (ಈ ದೃಷ್ಟಿಯಿಂದ ಅದನ್ನು ಚೈಕಾಫ್‌ನ ನಾಟಕಗಳಿಗೆ ಹೋಲಿಸಬಹುದು.)

ಆದರೆ ನಾಟಕದ ಸತ್ವದ ಪೂರ್ಣ ಅರಿವಾಗಬೇಕಾದರೆ ನಾವು ಇನ್ನಷ್ಟು ಕೆದರಿ ನೋಡಬೇಕು. ಭಾವಗೀತದ ಲಾಲಿತ್ಯದಿಂದೋಡುವ ಈ ನಾಟಕದಲ್ಲಿ ಮಹಾಕಾವ್ಯದ ಯೋಗ್ಯತೆಯ ಸಾಮಗ್ರಿಯಿದೆ. ಇಲ್ಲಿ ಕಾಕನ ಕತೆಯೇನೋ ಇದ್ದೇ ಇದೆ. ಅದರೊಡನೆ ಬೂಡಿನ ಕತೆಯೂ ಇದೆ. ಮತ್ತು ನಾಟಕದ ಒಟ್ಟು ಅರ್ಥವಾಗಬೇಕಾದರೆ ಕಾಕನ ಕತೆಯಷ್ಟೇ ಬೂಡಿನ ಕತೆಯನ್ನು ಅಭ್ಯಸಿಸುವದೂ ಅವಶ್ಯವಾಗಿದೆ.

ಇದೊಂದು 'ಐತಿಹಾಸಿಕ' ನಾಟಕ. ನಾಟಕದ ಮುನ್ನುಡಿಯಲ್ಲೇ ಲೇಖಕರು 'ಇದನ್ನು ಇತಿಹಾಸದ ಆಧಾರದಿಂದ ಬರೆದಿಲ್ಲ. . . ಇಲ್ಲಿ ಐತಿಹಾಸಿಕ ವ್ಯಕ್ತಿ ರಣಧೀರ ರಾಜರಲ್ಲದೆ ಮತ್ತೊಬ್ಬರಿಲ್ಲ' ಎಂದಿರುವಾಗ ಈ ವಿಶ್ಲೇಷಣ ಅಯೋಗ್ಯವಾಗಿ ತೋರಬಹುದು. ಆದರೆ 'ಕಾಕನಕೋಟೆ'ಗೆ ಈ ವಿಶೇಷಣವೇ ಯೋಗ್ಯವಾದದ್ದೆಂದು ನಮಗೆ ತೋರುತ್ತದೆ.

ಇತಿಹಾಸ ಸಾರ್ಥಕವಾಗಿ ಇತಿಹಾಸವಾಗಬೇಕಾದರೆ ಕೇವಲ ಕೆಲವೊಂದು ಅರಸರ, ನಾಯಕರ ಕತೆಗಳ ಸಾಲು ಆಗಿರಲಾರದು. ಒಂದು ಸಮಾಜದ ಇಲ್ಲವೆ ಸಮುದಾಯದ ಸಮಗ್ರ ಬದಲಾವಣೆಗಳೂ ಇತಿಹಾಸದ ವಸ್ತುವಾಗಿವೆ. ಜನರ ನಡೆ-ನುಡಿ, ನಂಬಿಕೆಗಳು, ಧಾರ್ಮಿಕ ವಿಧಿ-ಕಾಂಡಗಳು, ಸಾಹಿತ್ಯ, ಕಲೆ, ರಾಜಕೀಯ ಆರ್ಥಿಕ ಏರ್ಪಾಟುಗಳು ಇವೆಲ್ಲ ಇತಿಹಾಸದ ದ್ರವ್ಯ. ಇತಿಹಾಸದ ಈ ವ್ಯಾಖ್ಯೆ ಐತಿಹಾಸಿಕ ಕಾದಂಬರಿ-ನಾಟಕಗಳಿಗೂ ಸಲ್ಲುತ್ತದೆ. ಶೇಕ್ಸಪಿಯರ್, ಗಯಟೆ, ಶಿಲ್ಲರರ ಐತಿಹಾಸಿಕ ನಾಟಕಗಳು ಜನಜೀವನದ, ಸಂಸ್ಕೃತಿಯ ಜೀವಂತ ಚಿತ್ರಗಳಾಗಿವೆ.

ಆದರೆ 'ಕಾಕನಕೋಟೆ'ಯಂಥ ನಾಟಕಗಳ ಬಗ್ಗೆ ಮಾತನಾಡುವಾಗ ವಿಷಯ ಇನ್ನೂ ಜಟಿಲವಾಗುತ್ತದೆ. ಏಕೆಂದರೆ ಈ ನಾಟಕದಲ್ಲಿ ಬರುವ ಕಾಡ ಕುರುಬರು ಅಶಿಕ್ಷಿತರು. ಅವರಲ್ಲಿ ಲಿಖಿತ ಇತಿಹಾಸವಿಲ್ಲ.

ಮುದುಕ : ಹಿರಿಯರ ಅಂದದ ಕೇಳಿವಿನಿ. ಪಾಂಡ್ಯ
ಬಂದ ಅಂತ ಕುರುಬ ನಾಡು ಬಿಟ್ಟು ಕಾಡು ಸೇರಿದನಂತೆ.
ತೋಡ ಬಂದ ಅಂತ ಕಾಡಿನಾಗೆ ಸರಿಪಾಲು ಬಿಟ್ಟನಂತೆ. .

(ಪುಟ 24)*

ಇಲ್ಲಿ ಮುದುಕನೂ ಕೂಡ ಕಾಡ ಕುರುಬರ ಇತಿಹಾಸವನ್ನು 'ಹಿರಯೋರು ಅಂದದ ಕೇಳಿ' ಬಲ್ಲ ಅಷ್ಟೆ. ಹೀಗಿರುವುದರಿಂದ ಸುಶಿಕ್ಷಿತ ಸಮಾಜದ ಅಕ್ಷರಗಳಲ್ಲಿ ಹಿಡಿದಿಟ್ಟು ನೆನಪಿಡುವ ಚಿಕ್ಕ-ಪುಟ್ಟ ಸಂಗತಿಗಳಿಗೆ ಕಾಡ ಕುರುಬರ ಇತಿಹಾಸದಲ್ಲಿ ಸ್ಥಾನವೇ ಇಲ್ಲ. ಅಲ್ಲಿ ಅವರ ಜೀವನದ ಮೇಲೆ ಮಹತ್ವದ ಪರಿಣಾಮ ಮಾಡಿದ ಐತಿಹಾಸಿಕ ಘಟನೆಗಳಿಗೆ ಮಾತ್ರ ಎಡೆಯಿದೆ. ಅಲ್ಲದೆ ಇಂಥ ಘಟನೆಗಳು ಸಾಮುದಾಯಿಕ ಸ್ಮೃತಿಯಲ್ಲಿ ಬೇರೂರಿ, ಅವರ

---

* ಪುಟಸಂಖ್ಯೆ ಕೊಡುವಾಗ ನಾಟಕದ ಎರಡನೆಯ ಮುದ್ರಣ (೧೯೪೬) ವನ್ನು ಉಪಯೋಗಿಸಲಾಗಿದೆ.

ಕಲ್ಪನಾಶಕ್ತಿಯನ್ನು ಉಂಡು ಬೆಳೆದು 'ಪುರಾಣ-ಕಥೆ'(myths) ಗಳಾಗುತ್ತವೆ. ಪುರಾಣ-ಕತೆಗಳಾದಂತೆ ಅವುಗಳ ಐತಿಹಾಸಿಕ ಸ್ವರೂಪವೂ ಬದಲಾಗುತ್ತದೆ.

ಈ ದೃಷ್ಟಿಯಿಂದ ನೋಡಿದಾಗ 'ಕಾಕನಕೋಟೆ'ಯಲ್ಲಿ ರಣಧೀರನೊಬ್ಬನೇ ಐತಿಹಾಸಿಕ ವ್ಯಕ್ತಿಯಾಗಿರುವದು ಬಹಳ ಸಮರ್ಪಕವೇ ಆಗಿದೆ. ಸುಶಿಕ್ಷಿತ ಸಮಾಜ ಅವನ ನೆನಪನ್ನು ಐತಿಹಾಸಿಕ ವ್ಯಕ್ತಿಯೆಂದೇ ಕಾಪಾಡಿಕೊಂಡು ಬಂದಿದೆ. ಆದರೆ ಕಾಕ ಮಾತ್ರ ಈಗ ಪುರಾಣ ಪುರುಷ. ಆದ್ದರಿಂದ ಐತಿಹಾಸಿಕ ಸತ್ಯಾಸತ್ಯತೆಗಳ ಲೆಕ್ಕ ಅವನಿಗೆ ಹತ್ತುವದಿಲ್ಲ.

ಇಲ್ಲಿ ಪುರಾಣ-ಕತೆಯೆಂದರೇನು ಎಂಬ ಚರ್ಚೆಗೆ ಸ್ಥಳವಿಲ್ಲ. ಆದರೆ ಪುರಾಣ-ಕತೆಗಳ ಎರಡು ಗುಣಗಳನ್ನು ಮಾತ್ರ ನೆನಪಿಗೆ ತಂದುಕೊಳ್ಳಬಹುದು.

ಪುರಾಣ-ಕತೆಗಳು ಕೆಲವೊಂದು ಸಾಮಾಜಿಕ ಸಂಬಂಧಗಳ ಕಾರಣ ಪ್ರತೀಕ (orchetypes) ಗಳನ್ನು ವ್ಯಕ್ತಪಡಿಸುತ್ತವೆ. ಈ ಸಂಬಂಧ ತಂದೆ-ಮಕ್ಕಳದಾಗಿರಬಹುದು, ಗಂಡ-ಹೆಂಡಿರದಾಗಿರಬಹುದು, ಅಣ್ಣ-ತಮ್ಮಂದಿರುಗಳದ್ದಾಗಿರಬಹುದು, ನಾಯಕ ಮತ್ತು ಅವನ ಸಮಾಜದ್ದಾಗಿರಬಹುದು, ರಾಮ-ಸೀತೆ, ಕೌರವ-ಪಾಂಡವರು ಇಂಥವರ ಕತೆಗಳೆಲ್ಲ ಇಂಥ ಕೌಟುಂಬಿಕ ಸಂಬಂಧಗಳ ಕಾರಣಪ್ರತೀಕಗಳಾಗಿವೆ. 'ನಾಯಕ-ಸಮುದಾಯ'ದ ಸಂಬಂಧವನ್ನು ತೋರಿಸುವ ಕತೆಗಳಲ್ಲಿ ಹಲವು ಸಲ ನಾಯಕನ ಸಮುದಾಯ ಸಂಕಟದಲ್ಲಿ ಬಿದ್ದಿರುವದು, ನಾಯಕ ತನ್ನ ಬಲದಿಂದಲೊ, ಬೇರೆ ಯಾವ ಹೆಚ್ಚಿನ ಶಕ್ತಿಯ ಸಹಾಯದಿಂದಲೋ ಈ ಸಂಕಟವನ್ನೆದುರಿಸಿ ಸೋಲಿಸುವದು, ಸಂಕಟವನ್ನೆದುರಿಸಿ ಸೋಲಿಸುವದು, ಈ ಪ್ರಸಂಗ ಚಿತ್ರಿತವಾದದ್ದು ಕಂಡುಬರುತ್ತದೆ.

ಎರಡನೆಯದಾಗಿ ನಮಗರಿವಾಗದಂತೆಯೇ ನಮ್ಮ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡುವ ಶಕ್ತಿ ಪುರಾಣ - ಕತೆಗಳಲ್ಲಿರುತ್ತವೆ. ಅವುಗಳಲ್ಲಿ ನಮ್ಮ ಅನುಭವದ ಅರ್ಕ (essence) ಸಾಂಕೇತಿಕವಾಗಿ ಮೂಡಿರುವುದರಿಂದ ಅವುಗಳಿಗೊಂದು ಸಾರ್ವತ್ರಿಕತೆ ಬಂದುಬಿಟ್ಟಿರುತ್ತದೆ.*

'ಕಾಕನಕೋಟೆ'ಯ ವಿಷಯ ಐತಿಹಾಸಿಕ. ಆದ್ದರಿಂದ ಕಾಡ ಕುರುಬರ ಸಂದರ್ಭದಲ್ಲಿ ಅದಕ್ಕೆ ಪುರಾಣ-ಕತೆಯ ಸ್ವರೂಪ ಬಂದದ್ದರಲ್ಲಿ ಆಶ್ಚರ್ಯವಿಲ್ಲ. ನಾಟಕದ ಈ ಪೌರಾಣಿಕ ಸ್ವರೂಪವನ್ನು ಕಂಡುಹಿಡಿಯುವುದು ಈ ವಿಮರ್ಶೆಯ ಒಂದು ಉದ್ದೇಶವಾಗಿದೆ.

ಆದರೆ ಈ ಮೊದಲು ನಾವೊಂದು ಮುಖ್ಯ ಪ್ರಶ್ನೆಯನ್ನು ಎದುರಿಸಬೇಕಾಗಿದೆ; 'ಕಾಕನಕೋಟೆ'ಯಲ್ಲಿ ತೋರಿಸಿದ ಘಟನೆಗಳು ಕಾಡ ಕುರುಬರ ಇತಿಹಾಸದಲ್ಲಿ ಮಹತ್ವದ್ದಾಗಿವೆಯೇ? ವಿಶೇಷವಾಗಿ ಎಂದರೆ, ಪುರಾಣ-ಕತೆಗಳಲ್ಲಿ ಕಾಣಬಹುದಾದ ಸಾರ್ವತ್ರಿಕತೆ ಇಲ್ಲಿಯೂ ಕಾಣಬಹುದೇ?

2. ಬೂಡಿನ 'ಕತೆ':

ಇತಿಹಾಸದ ಮುಖ್ಯ ವಸ್ತು ಜನರ ಸಾಂಸ್ಕೃತಿಕ ಜೀವನ. 'ಕಾಕನಕೋಟೆ'ಯ ನಾಟಕದುದ್ದಕ್ಕೂ ಕಾಡ ಕುರುಬರ ಜೀವನದ ಬೇರೆ ಬೇರೆ ಅಂಶಗಳು ವರ್ಣಿತವಾಗಿವೆ. ಆದರೆ

---

* ಪುರಾಣ ಕತೆಗಳ ಈ ಸಂಕ್ಷಿಪ್ತ ವಿಶ್ಲೇಷಣೆಯಲ್ಲಿ ನಾನು 'ದೆನಿ ದ ರೂಜಮಂ' (Denis de Rougamount) ಅವರ Passion and Societiy ಗ್ರಂಥವನ್ನು ಅನುಸರಿಸಿದ್ದೇನೆ.

ಇಷ್ಟಕ್ಕೇ ನಿಲ್ಲದೆ, ಒಂದು ಹೆಜ್ಜೆ ಮುಂದೆ ಹೋಗಿ ನಾಟಕಕಾರರು ಕಾಡ ಕುರುಬರ ಅಂಥ ಸಂಸ್ಕೃತಿಯ ಭವಿತವ್ಯವೇನು ಎಂಬುದನ್ನೂ ಪರಿಶೀಲಿಸಿದ್ದಾರೆ. ಸಂಘರ್ಷದ ಪರಿಣಾಮವಾಗಿ ಕಾಡ ಕುರುಬರ ಸಮುದಾಯದಲ್ಲುಂಟಾದ ಬದಲಾವಣೆಯ ಪ್ರವಾಹ, ಮತ್ತು ಅದರ ಅರಿವಿಲ್ಲದೆ ತಮ್ಮ ಸಂಪ್ರದಾಯಕ್ಕಂಟಿ ಬಾಳುವ ಕಾಡ ಕುರುಬರ ಹಂಬಲ, ಇವೆರಡರ ತಾಕಲಾಟವನ್ನು ತೋರಿಸಿ, ನಾಟಕದಲ್ಲಿ ವ್ಯಂಗದ ಸೂಕ್ಷ್ಮ ಅಲೆಗಳನ್ನೆಬ್ಬಿಸಿದ್ದಾರೆ. ತಾಂತ್ರಿಕದೃಷ್ಟಿಯಿಂದ ಶ್ರೀನಿವಾಸರ ಈ ಪ್ರಯೋಗ ಅಭಿನವವಾಗಿದೆ, ಅಷ್ಟೇ - ಕನ್ನಡದಲ್ಲಂತೂ - ಅಪ್ರತಿಮವಾಗಿದೆ.

ಕೇವಲ ಕಾಡಕುರುಬರ ಜೀವನವಿಧಾನದ ಚಿತ್ರೀಕರಣವನ್ನಷ್ಟೇ ತೆಗೆದುಕೊಂಡರೂ ನಾಟಕ ಯಶಸ್ವಿಯಾಗಿದೆ. ಉದಾಹರಣೆಯಾಗಿ ಈ ಮುಂದಿನ ಮಾತುಗಳನ್ನೇ ತೆಗೆದುಕೊಳ್ಳಬಹುದು:

ಕಾಚ : ಅದು ಜಾಣ. ಗಂಡಾಗಲಿ ಹೆಣ್ಣಾಗಲಿ ಮನಸು ಕಾಯಬೇಕು. ಮನಸು ಕಾಯಬೇಕು, ಮನಸು ಬೆರೆಯಬೇಕು. ಮನಸು ಬೆರೆತ ಮೇಲೆ ಕಾಡಿಗೆ ಹೋಗಬೇಕು. ಕಾಡಿಗೆ ಹೋಗಿದ್ದು ಬೂಡಿಗೆ ಬರಬೇಕು, ಬೂಡಿಗೆ ಬಂದ ಮೇಲೆ ಜೊತೆಯಾಗಿ ನಡೀಬೇಕು. ಒಬ್ಬರು ಮೆಚ್ಚೀದೀವಿ ಅಂದರೆ ಸಾಲದು; ಇಬ್ಬರೂ ಮೆಚ್ಚಬೇಕು. ಇಬ್ಬರೂ ಮೆಚ್ಚಿದ ಮೇಲೆ ಮೈ ಕೂಡಬೇಕು. ಮಿಗ ನೋಡು, ಹಕ್ಕಿ ನೋಡು, ಆಕಾಸ ಬೂಮಿ ನೋಡು, ಅಂತ ಹಿರೇರು ಹೇಳ್ಯಾರು. (ಪುಟ ೧೨)

ಮೋನಿ : ಇದ್ದು ಕೆಟ್ಟರೆ ಅಯ್ಯೋ ಪಾಪಿ ಅಂತಾರೆ. ಸತ್ತು ಕೆಟ್ಟರೆ ಅಂದಾರೆ? ಈಗ ನಾ ಮೊಲ್ಲೆ ಅಂದರೆ ನೀನು ಆ ಅಂತೀಯ. ನೆರಳಾಗಿ ಮೊಲ್ಲೆ ಅಂದೆನೆ ಅಂಜಿಕೊಂಡು ಓಡುತೀಯ. ಒಡಲಿದ್ದು ಹಸಿದರೆ ಉಣ್ಣಬಹುದು; ಒಡಲಿಲ್ಲದೆ ಹಸಿದರೆ ಸೊರಗೋದೆ. ಸಾವು ಅಂತನ್ನೊಂದು ಸಿಗೋದಿಲ್ಲ ಮೊಲ್ಲೆ. ನನ್ನ ಮಾತು ಕೇಳು ನಾಲ್ಕು ದಿನ ತಡಕೊ. (ಪುಟ ೭೦)

ಮೊಲ್ಲೆ : ಯಾಕ ಹಂಗ ನೋಡತಿ ನನ್ನ? ಚಂದಾಗಿದೀನಾ?

ಚಿಕ್ಕಯ್ಯ : (ಈ ಸ್ಪಷ್ಟೋಕ್ತಿಯಿಂದ ನಾಚಿ ನಕ್ಕು ತಲೆಯನ್ನು ತಿರುಗಿಸಿ) ಚಂದಾಕೆ ಇದೀಯ ಯಾಕಿಲ್ಲ? (ಪುಟ ೪೮)

ಈ ಮಾತುಗಳಲ್ಲಿ ಕಾಡ ಕುರುಬರು ಲೈಂಗಿಕ ವಿಷಯಗಳ ಚರ್ಚೆಯಲ್ಲಿ ತೋರಿಸುವ ಸಹಜತೆ, ಅವರ ಸಾಂಪ್ರದಾಯಿಕ ಜಾಣ್ಮೆ, ಮೃತರ ಬಗ್ಗೆ ಅವರಿಗಿದ್ದ ನಂಬಿಕೆ-ಅಪನಂಬಿಕೆಗಳು, ಜೀವನದಲ್ಲಿ ಅವರಿಗಿರುವ ಶ್ರದ್ಧೆ ಎಲ್ಲ ಸ್ಪಷ್ಟವಾಗಿ ಮೂಡಿವೆ. (ಕೊನೆಯ ಉದಾಹರಣೆಯಲ್ಲಿ ಕಾಡ ಕುರುಬ ಹುಡಿಗಿಯ ಮುಗ್ಧತೆ ಮತ್ತು ಊರ ಹುಡುಗನ ಆತ್ಮ ಪ್ರಜ್ಞೆ (selfconsciousness) ಇವುಗಳನ್ನು ಹೇಗೆ ಸೂಕ್ಷ್ಮವಾಗಿ ತೋರಿಸಿದೆ, ನೋಡುವಂತಿದೆ). ಆದರೆ ಇಂಥ ಮಾತುಗಳು ಕಾಡ ಕುರುಬರ ಜೀವನವಿಧಾನದ ಬಗ್ಗೆ ಮಾತ್ರ ಕೆಲ ಮಾತುಗಳನ್ನು ಹೇಳಿ ನಿಲ್ಲುವುದಿಲ್ಲ. ನಾಟಕದ ಪಾತ್ರಗಳು ತಮ್ಮ ಸಮಾಜದೊಡನಿಟ್ಟುಕೊಂಡ ಸಮೀಪದ ಸಂಬಂಧವನ್ನೂ ಇವು ಎತ್ತಿ ತೋರಿಸುತ್ತವೆ. ಇನ್ನೂ 'ನಾಗರಿಕತೆ'ಯ ಗಾಳಿ - ಇದಕ್ಕೆ ಚಿಕ್ಕಯ್ಯನು ನಾಚುವುದು ಒಂದು ಉದಾಹರಣೆ - ಬಡಿದಿರದ್ದರಿಂದ 'ಬೂಡು' ತನ್ನ ಸಾಮಾಜಿಕ ಮೌಲ್ಯಗಳನ್ನು ಇನ್ನೂ ಉಳಿಸಿಕೊಂಡಿದೆ. ಈ ಮೌಲ್ಯಗಳು ಸರಿಯೋ ತಪ್ಪೋ ಎಂದು ಪ್ರಶ್ನಿಸದೆ, ಕಾಡ ಕುರುಬರೆಲ್ಲ

ಅದನ್ನು ಇದ್ದಕ್ಕಿದ್ದಂತೆ ಸ್ವೀಕರಿಸಿ ಅವನ್ನು ತಮ್ಮ ವೈಯಕ್ತಿಕ ನಡೆವಳಿಕೆಗೆ ಆಧಾರವಾಗಿಟ್ಟುಕೊಂಡಿದ್ದಾರೆ. ಹೀಗಾಗಿ ಕಾಚ ಗಂಡಸು-ಹೆಂಗಸರ ಸಂಬಂಧ ಹೇಗಿರಬೇಕೆಂದು ವಿವೇಚಿಸುವಾಗ ಅದು 'ಉಪದೇಶ' ವಾಗುವುದಿಲ್ಲ. ಅದು ಕಾಚನ 'ವೈಯಕ್ತಿಕ ಅಭಿಪ್ರಾಯ'ವಾಗುವುದಿಲ್ಲ. ಕಾಚನಾಡುವ ಮಾತು ಮತ್ತು ಮೂರನೆಯ ಉದಾಹರಣೆಯಲ್ಲಿ ಮೊಲ್ಲೆ ಕೇಳುವ 'ಯಾಕೆ ಹಂಗ ನೋಡತೀ ನನ್ನ? ಚಂದಾಗಿದೀನಾ?' ಈ ಪ್ರಶ್ನೆ ಇವೆರಡೂ ಒಂದೇ ಮೂಲ ನಂಬಿಗೆಯಿಂದ ಬಂದವು. ಇಂಥ ನಂಬಿಕೆಗಳ ಪಾತ್ರಗಳು ತಮ್ಮ ಸಮುದಾಯದ ಸಂಸ್ಕೃತಿಯೊಡನೆ ಹೇಗೆ ಸಮರಸವಾಗಿದೆ ಎಂಬುದನ್ನೇ ತೋರಿಸುತ್ತವೆ.

ಸ್ವಲ್ಪದರಲ್ಲಿ ಹೇಳಬೇಕಾದರೆ ಬೂಡಿನ ಭವಿತವ್ಯ ಮತ್ತು ಆ ಬೂಡಿನಲ್ಲಿರುವ ವ್ಯಕ್ತಿಗಳ ಭವಿತವ್ಯ ಇವೆರಡೂ ಒಂದರಲ್ಲೊಂದು ಹೆಣೆದುಹೋಗಿವೆ. ನಾಟಕಕಾರರು ಈ ಏಕರೂಪತೆಯನ್ನು ಹೇಗೆ ನಾಟಕೀಯವಾಗಿ ಉಪಯೋಗಿಸಿದ್ದಾರೆಂಬುದನ್ನು ಇನ್ನು ನೋಡಬಹುದು.

ಮೇಲೆ ಹೇಳಿದ ಸಾಮಾಜಿಕ ರೀತಿ - ನಿಯಮಗಳೊಡನೆ ಕಾಡ ಕುರುಬರ ಇನ್ನೊಂದು ನಂಬಿಕೆ ನಾಟಕದಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. ಅದೆಂದರೆ, ನಿಸರ್ಗಸಾನ್ನಿಧ್ಯದಲ್ಲಿ ಮನುಷ್ಯ ಬಾಳುವ ಜೀವನ ನಗರಜೀವನಕ್ಕಿಂತ ಮೇಲು ಎಂಬುದು. ನಾಟಕದ ಕೊನೆಯಲ್ಲಿ :

ಗೌಡ : ಹೌದು ನನ್ನ ದೇವರೆ, ಈಗ ನಮ್ಮ ಹಕ್ಕಳು ಕಾಡಾಗೆ ನಡೀತಿರಲೀಕೆ ಹರಿದಾರೀಲಿರೋ ಆನೆ ಕಂಪು ಮೂಗಿಗೆ ತಿಳೀತದೆ. ತರಗಿನೊಳಗೆ ತೆಕ್ಕಿ ಬಿದ್ದಿರೋ ಸರಪಾ ಕಣ್ಣಿಗೆ ಕಾಣುತದೆ. ಜಿಂಕೆ ಹಿಂದೆ ನಡಿಯೋ ಹುಲಿ ಹೆಜ್ಜೆ ಸಪ್ಪಳ ಕೊಂಬಿನ ದೂರದಲ್ಲಿ ಕಿವೀಗೆ ಕೇಳತದೆ. ಜೇನ ಹುಡುಕುತಾ ಹೋಗತಿದ್ರೆ ನೊಣ ಬಂದ ದಾರೀ ತೋರತದೆ. ಊರು ಕಟ್ಟಿ ನಿಂತಿವಿ, ಇದೊಂದು ಆಗಲ್ಲ. (ಪುಟ ೮೩)

ಕಾಚ: ಗೋಡೇಲಿ ಮಾಡಿದ ಕೋಟೆ ಏಸು ದಿನ ತಡೆದಾತು ನನ್ನೊಡೆಯ? ಈ ಕಾಡಿಗೆ ಕೋಟೆ ನಮ್ಮ ದಣೀ ಹೆಸರು. (ಪುಟ ೮೪)

ಆದರೆ ಇದಕ್ಕಾಗಿ ನಾಟಕಕಾರರಿಗೆ ಯಾವ ಒಂದು ಸಂದೇಶ ಕೊಡಬೇಕಾಗಿದೆ, ಹಳ್ಳಿಯ ಜೀವನದಲ್ಲಿರುವ ಘನತೆ ತೋರಿಸಿ, ಊರ ಜೀವನವನ್ನು ಕಡೆಗಣಿಸಬೇಕಾಗಿದೆ ಎಂದು ವಾದಿಸಿದರೆ ತಪ್ಪಾದೀತು. ನಾಟಕದ ಪಾತ್ರಗಳ ಅಭಿಪ್ರಾಯವನ್ನು ನಾಟಕಕಾರನ ಕೊರಳಿಗೆ ಕಟ್ಟುವದು ದೊಡ್ಡ ತಪ್ಪು. ಅಲ್ಲದೆ ನಾಟಕಕಾರರು ಯಾರ ಪಕ್ಷವನ್ನೂ ವಹಿಸಲಿಕ್ಕೆ ಯತ್ನಿಸಿಲ್ಲ. ಬೂಡಿನಲ್ಲಿ ಮಾವಯ್ಯಾನಂಥ ವಿಶ್ವಾಸಘಾತಕರಿದ್ದಾರೆ, ಊರಲ್ಲಿ ಚಿಕ್ಕಯ್ಯನಂಥ ಸಜ್ಜನರಿದ್ದಾರೆ.

ಹಾಗಾದರೆ ನಾಟಕದಲ್ಲಿ ಈ ಮಾತಿನ ಮೇಲೆ ಇಷ್ಟೇಕೆ ಭಾರ ಹಾಕಲಾಗಿದೆ? ಮೇಲೆ ಹೇಳಿದ ಮಾತು ನಾಟಕದ ಕೊನೆಯಲ್ಲಿ ಬರುತ್ತದೆ. ನಾಟಕದ ಆರಂಭದಲ್ಲೇ ಕಾಚ ನಿಸರ್ಗಸೌಂದರ್ಯವನ್ನು ಬಣ್ಣಿಸುವ ಸುಂದರ ಹಾಡೊಂದನ್ನು ಹಾಡುತ್ತಾನೆ. ಕಾಡ ಕುರುಬರು ನಿಸರ್ಗದಲ್ಲಿಟ್ಟ ಭಕ್ತಿಯನ್ನು ತೋರಿಸುವದಷ್ಟೇ ಉದ್ದೇಶವಾಗಿದ್ದರೆ, ಅದನ್ನು ಹೀಗೆ ಏಕೆ ಮತ್ತೆ ಮತ್ತೆ ಎತ್ತಿ ತೋರಿಸಲಾಗಿದೆ?

ಈ ಪ್ರಶ್ನೆಗೆ ಉತ್ತರ ಕಾಡ ಕುರುಬರ ಭವಿತವ್ಯದ ಬಗ್ಗೆ ನಾಟಕದಲ್ಲಿ ಮಾಡುವ

ಸೂಚನೆಗಳನ್ನು ಆಲೋಚಿಸಿದಾಗ ದೊರೆಯುತ್ತದೆ.

ಕಾಡ ಕುರುಬರಿಗೆ ಕಾಡು ಎಷ್ಟೇ ಪ್ರಿಯವಾಗಿರಲಿ, ಕಟ್ಟ ಕೊನೆಗೆ ಅವರ ನಗರೀಕರಣ (urbanization) ತಪ್ಪಿದ್ದಲ್ಲ, ಅದರೊಡನೆ ಅವರ ಸಹಜತೆ ಸಂಸ್ಕೃತಿಗಳ ವಿನಾಶವೂ ತಪ್ಪಿದ್ದಲ್ಲ ಎಂಬ ನಂಬಿಕೆ ನಾಟಕದ ಕೊನೆಯಲ್ಲಿ ಬರುತ್ತದೆ. ನಾಟಕದ ಉದ್ದೇಶ ಕಾಡ ಕುರುಬರ ಸಂಸ್ಕೃತಿಯ ಚಿತ್ರಣವಲ್ಲ, ಆ ಸಂಸ್ಕೃತಿ ಹೇಗೆ 'ಕರಗಿ' ಹೋಯಿತು ಎಂಬುದನ್ನು ತೋರಿಸುವದು. ಹೀಗಾಗಿ ಕತೆ ಆನಂದದಲ್ಲೇ ಕೊನೆಗೊಂಡರೂ ನಾಟಕದ ವಾತಾವರಣ ಅಂತ್ಯದಲ್ಲಿ ದುರಂತವಾಗಿದೆ.

ಇದನ್ನು ಮನಗಾಣಬೇಕಾದರೆ ಈ ಕೆಳಗಿನ ಘಟನೆಗಳನ್ನು ಪರಿಶೀಲಿಸಬಹುದು:

ಊರಿನವರಿಗಿದ್ದ ಸಾಮರ್ಥ್ಯ ಬೂಡಿನವರಿಗಿಲ್ಲ. ಊರ ಕುರುಬರನ್ನು ಬಗ್ಗಿಸುವದು ಬೂಡಿನವರಿಗೆ ಸಾಧ್ಯವಿಲ್ಲ. ಅದನ್ನು ಸಾಧಿಸಲಿಕ್ಕೆ ನಗರದ ಅರಸನೇ ಬರಬೇಕು. ಹೀಗೆ ಬೂಡಿನಿಂದ ಊರಿಗೆ, ಊರಿನಿಂದ ನಗರಕ್ಕೆ ಹೋದಂತೆ ಸಾಮರ್ಥ್ಯ ಹೆಚ್ಚಾದದ್ದು ಸ್ಪಷ್ಟವಾಗಿದೆ.

ಕಾಚ ಮೈಸೂರಿಗೆ ಹೋಗಿ ಬಂದಾಗ, ಮಾಮಯ್ಯ ಬೂಡಿನ ಬುದ್ಧಿವಂತನಾಗಿದ್ದ. ಹಾಗಾದರೆ ಮಾವಯ್ಯನನ್ನು ತೆಗೆದುಹಾಕಿ, ಕಾಚನಿಗೆ ಏಕೆ ಊರಿನ ಬುದ್ಧಿವಂತನನ್ನಾಗಿ ಮಾಡಲಾಯಿತು? ಈ ಪ್ರಶ್ನೆಗೆ ಉತ್ತರವಾಗಿ 'ಕಾಚನ ನಗರದ ಅನುಭವ' ಎಂಬಿಷ್ಟೇ ಮಾತು ನಾಟಕದಲ್ಲಿ ದೊರೆಯುತ್ತದೆ. ಒಮ್ಮೆ ಬುದ್ಧಿವಂತನ ಪದವಿ ದೊರತ ಮೇಲೆ ಕಾಚ ಈ ಪದವಿಗೆ ತನ್ನ ಯೋಗ್ಯತೆಯನ್ನು ಸಿದ್ಧಮಾಡಿ ತೋರಿಸಿದ ನಿಜ. ಆದರೆ ಮೂಲತಃ ಅವನಿಗೆ ಈ ಪದವಿ ದೊರೆಯಲಿಕ್ಕೆ ಅವನ ನಗರದ ಅನುಭವ, ಅರಸನೊಡನಿದ್ದ ಅವನ ಪರಿಚಯ ಇವೆರಡೇ ಕಾರಣವಾಗಿದ್ದವು.

ನಾಟಕದ ಕೊನೆಗೆ ಅರಸ ಬೂಡನ್ನು ಸ್ವತಂತ್ರ ಪಾಳ್ಯವನ್ನಾಗಿ ಮಾರ್ಪಡಿಸಿದಾಗ, ಆ ಪಾಳ್ಯಕ್ಕೆ ಹೆಗ್ಗಡೆಯಾಗಿ ನೇಮಿಸುವದು ಬೂಡಿನ ಗೌಡನನ್ನಲ್ಲ, ಊರ ಚಿಕ್ಕಯ್ಯನನ್ನು! ನಗರಜೀವನದಿಂದ ಬರುವ ವಿದ್ಯೆ- ಅನುಭವಗಳಿಗೆ ದೊರೆಯುವ ಮಹತ್ವ ಇವೆಲ್ಲವುಗಳಿಂದ ವಾಚಕರಿಗೆ ಸ್ಪಷ್ಟವಾಗುತ್ತದೆ. ಕಾಡ ಕುರಬರಿಗೂ ಸ್ಪಷ್ಟವಾಗಿರಲೇಬೇಕು. ಕಾಡ ಕುರುಬರಿಗೆ ಈ ತಾರತಮ್ಯದ ಅರಿವಾಗಿದೆ ಎಂದು ತೋರಿಸುವ ಇನ್ನೊಂದು ಘಟನೆ ನಾಟಕದಲ್ಲಿ ದೊರೆಯುತ್ತದೆ.

ಕಾಕನ ಮಗಳಾದ ಮೊಲ್ಲೆ ತನ್ನನ್ನು ಪ್ರೀತಿಸುವ ಒರಟು ಮೋನನನ್ನು ಬಿಟ್ಟು ಊರಿನ ಚಿಕ್ಕಯ್ಯನನ್ನು ವರಿಸುತ್ತಾಳೆ. ಇದನ್ನು ಸಾಂಕೇತಿಕವಾಗಿ ತೆಗೆದುಕೊಳ್ಳಬಹುದು. ಅರ್ಥಾತ್ ನಾಟಕದ ಯಾವುದಾದರೊಂದು ಘಟನೆಯನ್ನು ತೆಗೆದುಕೊಂಡು 'ಸಾಂಕೇತಿಕ'ವೆಂದು ಬಳಸುವುದರಲ್ಲಿ ಸಾಕಷ್ಟು ಅಪಾಯಗಳಿವೆ ನಿಜ. ಆದರೆ ಮೊಲ್ಲೆ ಒಬ್ಬಳೇ ಹೀಗೆ ಮಾಡಿಲ್ಲ. ಕಾಕನ ಹೆಂಡತಿಯೂ ಇದನ್ನೇ ಮಾಡಿದ್ದಳು. ತನ್ನ ಮೊದಲನೆಯ ಗಂಡ ಮಾವಯ್ಯನನ್ನು ಬಿಟ್ಟು, ಅವಳು ಮೈಸೂರನಿಂದ ಅದೇ ಆಗ ಮರಳಿದ ಕಾಚನನ್ನು ವರಿಸಿದ್ದಳು. ಅಂದರೆ ಎರಡು ತಲೆಮಾರಿನ ಹುಡಿಗೆಯರು - ಅದೂ ನಾಟಕದ ನಾಯಕ ಕಾಕನ ಮನೆಯಲ್ಲೆ! - ಬೂಡಿನ 'ಹೈದ''ನನ್ನು ಬಿಟ್ಟು, ಊರಿನ 'ತರುಣ'ನನ್ನು ವರಿಸುತ್ತಾರೆ. ಇದು ಯೋಗಾಯೋಗವಲ್ಲ.

ಇವೆಲ್ಲವಲ್ಲದೆ ಇನ್ನೊಂದು ಮುಖ್ಯ ಕಾರಣ ಬೂಡಿನ ನಗರೀಕರಣ ತಪ್ಪಿದ್ದಲ್ಲ ಎಂಬುದನ್ನೂ ಸ್ಪಷ್ಟವಾಗಿ ತೋರಿಸುತ್ತದೆ. ನಾಟಕ ನಡೆದಾಗ ಮತ್ತು ಅದರ ಮೊದಲಲ್ಲ

ಬೂಡು ಹೆಗ್ಗಡೆಯ ಪಾಳ್ಯದ ಭಾಗವಾಗಿತ್ತು. ಹೀಗಾಗಿ ಬೂಡಿಗೂ ಮೈಸೂರ ನಗರಕ್ಕೂ ಯಾವ ನೇರವಾದ ಸಂಪರ್ಕವೂ ಇರಲಿಲ್ಲ. ಆದರೆ ಒಮ್ಮೆ ಬೂಡು ಪಾಳ್ಯವಾಯಿತು, ಸ್ವತಂತ್ರ ಹೆಗ್ಗಡೆಯನ್ನು ಪಡೆಯಿತು ಎಂದಾಗ ಮೈಸೂರಿನೊಡನೆ ಅದರ ವ್ಯವಹಾರ ಬೆಳೆದೇ ಬೆಳೆಯುತ್ತದೆ. ಅದರೊಡನೆ ಹೈದರೆಲ್ಲ ನಗರದ ಜೀವನ ಕಾಣಬೇಕು, ಅಲ್ಲಿಯ ಮೌಲ್ಯಗಳನ್ನು ಕಲಿಯಬೇಕು ಇದು ತಪ್ಪಿದ್ದಲ್ಲ; ನಿಸರ್ಗದ ಸಾನ್ನಿಧ್ಯದಲ್ಲಿ ನಿಷ್ಪಾಪವಾಗಿ ಬೆಳೆದು ಬಾಳುವ ಹಂಬಲವಿರುವ ಈ ಜನರ ನಗರೀಕರಣವೂ ತಪ್ಪಿದ್ದಲ್ಲ. ಅವರ ಸಂಸ್ಕೃತಿ ಮೆಲ್ಲಮೆಲ್ಲನೆ ವಿನಾಶವಾಗಲೇಬೇಕು.

ಈ ವಿನಾಶದಲ್ಲಿ 'ಕಾಕನಕೋಟೆ'ಯ ಹೊಸ ಹೆಗ್ಗಡೆಯಾಗಿರುವ ಚಿಕ್ಕಯ್ಯನೂ ತನಗರಿವಾಗದೆಯೋ ಸಹಕರಿಸುತ್ತಾನೆ ಎಂದೂ ಅನುಮಾನಿಸಬಹುದಾಗಿದೆ. ದೃಶ್ಯ ಏಳರಲ್ಲಿ ಚಿಕ್ಕಯ್ಯನ ಮನೋರಂಜನೆಗಾಗಿ ಮೊಲ್ಲೆ 'ನೇಸರ ನೋಡು ನೇಸರ ನೋಡು' ಎಂದು ಹಾಡಿ, ಕುಣಿದು ತೋರಿಸಿದಾಗ, ಚಿಕ್ಕಯ್ಯನಿಗೆ ಮನೋರಂಜನೆಯಾಗುವ ಬದಲು ತಲೆನೋವು ಉಂಟಾಗುತ್ತದೆ. ಮೊಲ್ಲೆಯ ಭಾವನೆಯನ್ನೂ ಲೆಕ್ಕಿಸದೆ ಅವನು 'ನೇಸರ ನೋಡು ನೇಸರ ನೋಡು ಅಂತ ಅಂದದ್ದನ್ನೇ ಅಂತಿದ್ದರ ತಲೆ ಚಿಟಗುಟ್ಟುತ್ತದೆ' ಎಂದು ಅನ್ನುತ್ತಾನೆ; ಈ ಮಾತು ಗ್ರಾಹ್ಯವಾಗಿದೆ. ಕಾಡ ಕುರುಬರು ಹೊಸ ಹೆಗ್ಗಡೆಗೆ ಅವರ ಸಂಸ್ಕೃತಿಯ ಬಗ್ಗೆ ಯಾವ ಸಹಾನುಭೂತಿಯೂ ಇಲ್ಲ ಎಂಬುದೇ ಇಲ್ಲಿ ಸೂಚಿತವಾಗಿದೆ.

ಅಂತೂ ಕಾಡಕುರುಬರ ಭವಿತವ್ಯ ನಿರಾಶಾದಾಯಕವಾಗಿದೆ. ಆದರೆ ನಾಟಕದ ಕತೆ ಮಾತ್ರ ಆನಂದದಲ್ಲಿ, ಹಾಡಿನಲ್ಲಿ, ಕುಣಿತದಲ್ಲಿ ಕೊನೆಗೊಳ್ಳುತ್ತದೆ. ಇದರಿಂದ ನಾಟಕದಲ್ಲಿ ಎಂಥ ದುರ್ವಿಪಾಕ ಮೂಡುತ್ತದೆ ನೋಡಬೇಕು.

ಹೆಗ್ಗಡೆಗೆ ಬೇಕಾದುದನ್ನು ಕೊಟ್ಟು ಸುಮ್ಮನಿರೋಣ ಎಂದು ಮಾವಯ್ಯ ಎಂದಾಗ ಎಲ್ಲರೂ ಅವನ ಮೇಲೆ ಕೋಪಿಸಿಕೊಳ್ಳುತ್ತಾರೆ. ಹೆಗ್ಗಡೆಗೆ ಒಮ್ಮೆ ಬಗ್ಗಿದರೆ ಸಾಕು, ಇಂದಲ್ಲ ನಾಳೆ ಅವನ ಅನ್ಯಾಯ ಇನ್ನೂ ಬಲಿತು ತಮ್ಮನ್ನು ಕಾಡಿನಿಂದ ಹೊರಗೆ ಹಾಕೀತು ಎಂಬ ಭಯ ಕಾಡ ಕುರುಬರಿಗೆ.

ಆದರೆ 'ಮೋಜಿನ' ಮಾತೆಂಗುರೆ ಕಾಕನ ಸತ್ಕಾರ್ಯದ ಪರಿಣಾಮವಾಗಿ ಆಗುವದೂ ಅದೇ! ಕಾಡು ಬಿಟ್ಟು ಊರು ಸೇರುವದರ ಬದಲಾಗಿ, ಕಾಡೇ ಊರಾಗಲಿದೆ!

ಹೀಗೆ ನಾಟಕ ಎರಡು ಬೇರೆ ಬೇರೆ ಕೋನಗಳಿಂದ ನೋಡಿದಾಗ ಎರಡು ವಿರುದ್ಧ ಭಾವಗಳನ್ನು ಒಮ್ಮೆಲೇ ಮೂಡಿಸುತ್ತದೆ. ಕಾಕನ ಕತೆ ಎಂದಾಗ ಸುಖಮಯ ಕೊನೆ. ಬೂಡಿನ ಕತೆ ಎಂದಾಗ ದುರಂತ.

ಆದ್ದರಿಂದ ಕಾಕ ನಾಟಕದ ಕೊನೆಯಲ್ಲಿ 'ಗೋಡೇಲಿ ಮಾಡಿದ ಕೋಟೆ ಏಸುದಿನ ತಡೆದಾತು ನನ್ನೊಡೆಯ?' ಎಂದಾಗ ಅದ್ಭುತ ನಾಟಕೀಯ ವ್ಯಂಗ್ಯ ಮೂಡುತ್ತದೆ. ಬೂಡಿಗೆ ಊರಲ್ಲಿಯಂತೆ ಕೋಟೆ ಕಟ್ಟದೆ, ಬರೇ ಕೋಟೆಯ ಹೆಸರನ್ನು ಇಟ್ಟ ಮಾತ್ರಕ್ಕೆ ಬೂಡು ತನ್ನ ಸಂಸ್ಕೃತಿಯನ್ನು ಉಳಿಸಿಕೊಳ್ಳಲಾರದು ಎಂಬ ಮಾತು ಕಾಕನಿಗೂ ಹೊಳೆಯುವದಿಲ್ಲ, ಕಾಡ ಕುರುಬರಿಗೂ ಹೊಳೆಯುವುದಿಲ್ಲ. (ಇಲ್ಲಿ 'ಕೋಟೆ' ಎಂಬ ಒಂದೇ ಒಂದು ಶಬ್ದ ಎಷ್ಟೊಂದು ಧ್ವನಿಪೂರ್ಣವಾಗಿ ಬಳಸವಾಗಿದೆ ಎಂಬುದನ್ನು ಗಮನಿಸಬೇಕು)

ಬಹುಶಃ ರಣಧೀರ ಅರಸನ ಶರೀರರಕ್ಷಕನಾದ ಶಿಂಗಾ ಒಬ್ಬನಿಗೆ ಮಾತ್ರ ಈ ವ್ಯಂಗ್ಯದ ಅರಿವಾದಂತಿದೆ. ಅವನ ನಿಷ್ಠುರ ಜೀವನದೃಷ್ಟಿ ಕಾಡ ಕುರುಬರ ಭಾವನಾ ವಿವಶತೆಯನ್ನು ಹರಿದು ಅದರ ಅಂತರಂಗದಲ್ಲಿ ಇಣಕಿ ನೋಡುತ್ತದೆ:

ಶಿಂಗಾ : ಇಂತವರ ಮಾತೆಲ್ಲ ಒಂದೇ ರೀತಿ.
ರಣಧೀರ : ಒಂದೇ ರೀತಿ ಅಂದರೆ ?
ಶಿಂಗಾ : ಕೇಳೋ ಹೊತ್ತಿಗೆ ಚೆನ್ನಾಗಿರುತ್ತದೆ; ಮೂರು ಪಾಲು ನಿಜವಲ್ಲ.
ರಣಧೀರ : ಅಷ್ಟೇ ಅಂತೀಯಾ?
ಶಿಂಗಾ : ಅಷ್ಟೆ ಮಹಾಸ್ವಾಮಿ, ರಟ್ಟೇಲಿ ಬಲ ಇಲ್ಲದೋನು,
ರಾಮನಾಮ ಹೇಳಿ ಜಟ್ಟಿ ಆಗತಾನೆಯೇ ಪ್ರಭುವೇ?

ಶಿಂಗಾನ ಕೊನೆಯ ವಾಕ್ಯ ಕಾಡ ಕುರುಬರ ಅಸಹಾಯಕತೆಯ ಮೇಲೆ ಅಂತಿಮ ನಿರ್ಣಯವಾಗಿದೆ ಎನ್ನಬಹುದು.

ಕಾಡ ಕುರುಬರ ನಗರೀಕರಣವಾಯಿತೋ ಇಲ್ಲವೋ ಎಂಬುದು ಐತಿಹಾಸಿಕ ಪ್ರಶ್ನೆ. ಆದರೆ ಅದನ್ನು ವ್ಯಂಗ್ಯವಾಗಿ ತೋರಿಸುವದೊಂದೇ ನಾಟಕದ ಉದ್ದೇಶವಾಗಿದ್ದರೆ 'ಕಾಕನಕೋಟೆ' ಒಂದು ಮನೋರಂಜಕ - ಪ್ರಯೋಗ ಮಾತ್ರ ಆಗುತ್ತಿತ್ತು ಹೊರತು ಶ್ರೇಷ್ಠ ನಾಟಕವಾಗುತ್ತಿರಲಿಲ್ಲ. ಯಾವ ಶ್ರೇಷ್ಠ ಕೃತಿಯಲ್ಲೂ ಒಂದು ವಿಶ್ವವ್ಯಾಪಕ ದೃಷ್ಟಿಯಿರಬೇಕು. ಇಂತ ವಿಶ್ವವ್ಯಾಪಕತೆ ಮಾತ್ರ ಪ್ರೇಕ್ಷಕ ವಾಚಕರ ಕುತೂಹಲವನ್ನು ಕೆಣಕಿ ಅವರನ್ನು ನಾಟಕದ ಭಾವಪರಿಸರದಲ್ಲಿ ತನ್ಮಯಗೊಳಿಸಬಲ್ಲದು.

ಕಾಡ ಕುರುಬರು ಎದುರಿಸಬೇಕಾದ ಸಂಕಟವನ್ನು ಚಿತ್ರಿಸುವಾಗ ಮಾಸ್ತಿಯವರು ಅದರ ನಾಟಕೀಯ ಅಂಶಗಳಿಗೆ ಮಾತ್ರ ಬೆಲೆ ಕೊಟ್ಟಿಲ್ಲ. ಆ ಸಂಕಟದಲ್ಲಿ ಅಡಕವಾಗಿರುವ ನೈತಿಕಸಮಸ್ಯೆಗಳನ್ನೂ ಬಿಡಿಸಿ ತೋರಿಸಿದ್ದಾರೆ. ನಾಟಕದ ಈ ನೈತಿಕ ಅಂಶ ಅದನ್ನು ಬೂಡಿನ ಪರಿಮಿತ ಸಂದರ್ಭದಿಂದ ಬಿಡಿಸಿ, ಸಾರ್ವತ್ರಿಕ ಅರ್ಥವಿರುವ ರೂಪಕವನ್ನಾಗಿ ಮಾಡಿದೆ.

ತಮ್ಮ ಬಾಳನ್ನು ತಮಗೆ ಕಂಡಂತೆ ಬಾಳಲಿಚ್ಛಿಸುವ ಕಾಡ ಕುರುಬರಿಗೆ ಹೆಗ್ಗಡೆಯ ದುರಾಸೆ ಅಡ್ಡ ಬಂದಿದೆ. ನ್ಯಾಯ - ಹಕ್ಕುಗಳನ್ನು ನಂಬಿ ಬಡಿದಾಡಿದರೆ ಬೂಡಿನ ವಿನಾಶ ತಪ್ಪಿದ್ದಲ್ಲ; ಆದರ್ಶದ ಹೆಸರಿನಲ್ಲಿ ಮಾಡಬೇಕಾದ ಆತ್ಮಹತ್ಯೆಯೇ ಅದು. ಇನ್ನು ವಿನಾಶ ತಪ್ಪಿಸಬೇಕಾದರೆ ಅನ್ಯಾಯಕ್ಕೆ ಒಪ್ಪಿಗೆ ಕೊಡಬೇಕು. ಆ ಅನ್ಯಾಯವನ್ನೇ ಬೂಡಿನ ದಿನನಿತ್ಯದ ಜೀವನದ ಭಾಗವನ್ನಾಗಿ ಒಪ್ಪಿಕೊಳ್ಳಬೇಕು. ಆದರ್ಶ ಒಂದೆಡೆಗೆ, ಇನ್ನೊಂದೆಡೆಗೆ ಸಾಮರ್ಥ್ಯ. ಇತಿಹಾಸದ ಆರಂಭವಾದಾಗಿನಿಂದ ನಾಗರಿಕತೆ ಎದುರಿಸಬೇಕಾದ ಸಂಕಟ ಇದು. ಇಪ್ಪತ್ತನೆಯ ಶತಮಾನದಲ್ಲಂತೂ ಅದು ಇನ್ನಷ್ಟು ಭೀಕರವಾಗಿ ನಿಂತಿದೆ.* ಮತ್ತು ಈ ಭೀಕರ ಸಮಸ್ಯೆಯನ್ನೇ ಕೇಂದ್ರವಾಗಿಟ್ಟುಕೊಂಡಿದ್ದರಿಂದ ಈ 'ಕಾಕನಕೋಟೆ' ಕೇವಲ 'ಕುರುಬರ ಕತೆ' ಯಾಗದೆ ನಮ್ಮ ಅನುಭವಕ್ಕೂ ಸಮೀಪದ್ದಾಗಿದೆ.

---

* ಆದರೆ ಈ ರಾಜಕೀಯ, ನೈತಿಕ ಸಮಸ್ಯೆಯನ್ನು ರಾಷ್ಟ್ರದಂಥ ದೊಡ್ಡ ಘಟಕಗಳ ಸಮಸ್ಯೆಯೆಂದು ತೋರಿಸದೆ, ಚಿಕ್ಕ ಬೂಡೊಂದರದೆಂದು ತೋರಿಸಿ ಮಾಸ್ತಿಯವರು ಹಲವಾರು ತಾಂತ್ರಿಕ ಕ್ಲಿಷ್ಟತೆಗಳನ್ನು ಒಂದೇ ಏಟಿಗೆ ಬಿಡಿಸಿಬಿಟ್ಟಿದ್ದಾರೆ. ಹೀಗೆ ಮಾಡಿದ್ದರಿಂದ ಜನಾಂಗದ ನಡೆ-ನುಡಿ-ನಂಬಿಗೆಗಳನ್ನು ಚಿತ್ರಿಸುವುದು ಸುಲಭವಾಗಿದೆ. ನಾಟಕದಲ್ಲಿ ಏಕತೆ (unity) ಬಂದಿದೆ. ಎಲ್ಲಕ್ಕೂ ವಿಶೇಷವಾಗಿ ಎತ್ತಿಕೊಂಡ ಸಮಸ್ಯೆಗೆ ಸಮಂಜಸ ಪರಿಹಾರ ಒದಗಿಸುವುದಕ್ಕೂ ಎಡೆಯಾಗಿದೆ. ರಾಷ್ಟ್ರ-ರಾಷ್ಟ್ರಗಳ ಸಂಘರ್ಷದಲ್ಲಿ ನ್ಯಾಯ ಕೊಡುವವರು ಯಾರು? ಆದರೆ ಊರ ಹೆಗ್ಗಡೆ ದಾರಿ ತಪ್ಪಿದಾಗ, ಸಮನ್ವಯ ಸಾಧಿಸಲಿಕ್ಕೆ ರಣಧೀರ ಅರಸನೇ ಬರುತ್ತಾನೆ.

೩ : ಕಾಕನ 'ಕತೆ':

ಈಗ ನಾವು ನಾಟಕದ ಆರಂಭದಲ್ಲೆತ್ತಿದ ಪ್ರಶ್ನೆಗೆ ಮರಳಬಹುದು. ನಾಟಕದ ನಾಯಕ ಕಾಕ ಮಾಡಿದ್ದೇನು? ಅವನ ಕಾರ್ಯದ ಮಹತ್ವನೇನು? ಮೇಲಿನ ವಿಶ್ಲೇಷಣೆಯಲ್ಲಿ ಈ ಪ್ರಶ್ನೆಗಳಿಗೆ ಎರಡು ಉತ್ತರಗಳು ದೊರಕುತ್ತವೆ.

ಮೊದಲನೆಯದಾಗಿ, ನಾಟಕದ ಕತೆಯನ್ನಷ್ಟೇ ನೋಡಿದಾಗ, ಕಾಕನ ಮಹತ್ವ ಬೂಡಿನವರಿಗೆ ನೈತಿಕಧೈರ್ಯವನ್ನು ಕೊಡುವದರಲ್ಲಿದೆ. ಹೆಗ್ಗಡೆಯ ಸಾಮರ್ಥ್ಯ ಬೂಡಿನ ಭವಿತವ್ಯನ್ನೇ ವಿನಾಶದ ನೆರಳಿನಲ್ಲಿ ಹಾಕಿದಾಗ, ಕಾಕ ಅವರಿಗೆ ಆ ಅನ್ಯಾಯವನ್ನೆದುರಿಸುವ ಶಕ್ತಿ ಕೊಡುತ್ತಾನೆ.

ಕಾಚ : ಹೆಗ್ಗಡೆ ಬಂದು ಹಾಡೀಗೆ ಬೆಂಕಿ ಇಕ್ಕತೀನಿ ಅಂದರೆ ನಿಂತು ಕಾದಬೇಕು, ಸೋತರೆ ಓಡಬೇಕು. (ಪುಟ ೨೨)

ಸೋತರೂ ಅಡ್ಡಿಯಿಲ್ಲ, ಅನ್ಯಾಯಕ್ಕೆ ಎಡೆಕೊಡಲಾರೆವು ಎಂಬ ಧೈರ್ಯ ಕಾಡಕುರುಬರಲ್ಲಿ ಹುಟ್ಟುವದಕ್ಕೆ ಕಾರಣ ಕಾಕನೆ.

ಎರಡನೆಯದಾಗಿ, ಬೂಡಿನ ಭವಿಷ್ಯದ ದೃಷ್ಟಿಯಿಂದ ನೋಡಿದಾಗ, ರಣಧೀರ ಬರಲಿಕ್ಕೆ ಕಾರಣ ಕಾಕ. ಆದರಿಂದ ಬೂಡು ಪಾಳ್ಯವಾಗುತ್ತದೆ, ಕಾಡ ಕುರುಬರ ನಗರೀಕರಣ ಶೀಘ್ರವಾಗುತ್ತದೆ. ಕಾಡ ಕುರುಬರು ಏನು ಮಾಡಿದ್ದರೂ ಅವರ ನಗರೀಕರಣ ಅಪರಿಹಾರ್ಯವಾಗಿತ್ತು ಎಂಬುದನ್ನು ನಾವು ಮೊದಲೇ ನೋಡಿದ್ದೇವೆ. ಆದರೆ ಕಾಕನ ನೇತೃತ್ವದ ಪರಿಣಾಮವಾಗಿ ಕಾಡ ಕುರುಬರು ತಮ್ಮ ಘನತೆ-ಗೌರವಗಳನ್ನು ಕಳೆದುಕೊಳ್ಳದೆ ಬದಲಾವಣೆ ಹೊಂದುತ್ತಾರೆ.

ಹೀಗೆ ಕಾಡ ಕುರುಬರ ಜೀವನದಲ್ಲಿಯಷ್ಟೇ ಅವರ ಇತಿಹಾಸದಲ್ಲೂ ಕಾಕನ ಸ್ಥಾನ ಅತ್ಯಂತ ಮಹತ್ವದ್ದಾಗಿದೆ.

ಆದರೆ ಈ ಮೊದಲೇ ನೋಡಿದಂತೆ ಕಾಡ ಕುರುಬರಂಥ ಅಶಿಕ್ಷಿತ ಜನಾಂಗಕ್ಕೆ ಇತಿಹಾಸ ಮತ್ತು ಪವಾಡಗಳಲ್ಲಿ ಭೇದವಿಲ್ಲ. ಅವರ ಐತಿಹಾಸಿಕ ಪುರುಷರೆಲ್ಲ ಪುರಾಣ ಪುರುಷರಾಗುತ್ತಾರೆ. ಪುರಾಣಪುರುಷರಿಗೆಲ್ಲ ಬಹುಶಃ ಐತಿಹಾಸಿಕ ಮೂಲವಿರುತ್ತದೆ. ಅಂದರೆ ಇಂದಲ್ಲ ನಾಳೆ ಕಾಕನಿಗೂ ಪುರಾಣಪುರಷನ ಪದವಿ ತಪ್ಪಿದ್ದಲ್ಲ. ಅವರ ಇತಿಹಾಸದಲ್ಲಿ ಇಷ್ಟೊಂದು ಮಹತ್ವದ ಬದಲಾವಣೆಗಳಿಗೆ ಕಾರಣನಾದ ಕಾಕನಿಗೆ ಅವರ ಸಂಸ್ಕೃತಿಯಲ್ಲಿಯೂ ಒಂದು ಅಮರ-ಪದವಿ ಸಿಗಲೇಬೇಕು.

ಇದು ಕೇವಲ ವಿಮರ್ಶಕನ ಊಹೆಯ ಮಾತಲ್ಲ. ಶ್ರೀನಿವಾಸರೇ ಇದನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಈ 'ಐತಿಹಾಸಿಕ' ನಾಟಕವನ್ನು ಬರೆಯುವಾಗ, ಮಾಸ್ತಿಯವರು ಇತಿಹಾಸದ ಬೇರೆ ಬೇರೆ ಮುಖಗಳ ಸಮಗ್ರದರ್ಶನ ಹೇಗೆ ಮಾಡಿಸುತ್ತಾರೆ ಎಂಬುದು ಗೊತ್ತಾಗಬೇಕಾದರೆ ಈ ಅಂಶದ ಅಭ್ಯಾಸವೂ ಅತ್ಯವಶ್ಯ. ಅಲ್ಲದೆ ಈ ದರ್ಶನವನ್ನು ಮೂಡಿಸುವಾಗ ಮಾಸ್ತಿಯವರು ಉಪಯೋಗಿಸುವ ಸಾಧನಗಳು ಅವರು ಪಡೆದ ತಾಂತ್ರಿಕ ಪ್ರಭುತ್ವ ಎಷ್ಟು ಆಶ್ಚರ್ಯಕಾರಕವಾಗಿದೆ ಎಂಬುದನ್ನು ಇನ್ನೊಮ್ಮೆ ತೋರಿಸುತ್ತದೆ.

ನಾಟಕದ ಮೊದಲನೆಯ ದೃಶ್ಯದಲ್ಲೇ ಕಾಚ-ಕಾಕರಲ್ಲಿ ಭಿನ್ನತೆ ಸೂಚಿತವಾಗಿದೆ. ಕಾಚ ಬೂಡಿನ ಬುದ್ಧಿವಂತ. ಬೂಡಿನವರೆಲ್ಲ ಅವನನ್ನೇ ಕಾಕ ಎಂದು ಕರೆಯುತ್ತಾರೆ. ಆದರೆ ಗೌಡನ ವತಿಯಿಂದ ಬಂದ ಮಾಚಣ್ಣ - ಕರಣೀಕರ ಕಣ್ಣಲ್ಲಿ ಮಣ್ಣೆರಚಲಿಕ್ಕೆಂದು ಬೂಡಿನವರು ಅವರಿಗೆ ಕಾಕ ಕಾಚ ಬೇರೆಬೇರೆಯೆಂದು ಹೇಳುತ್ತಾರೆ. ಈ ಕಾಕ - ಕಾಚ ಭಿನ್ನತೆ

ಆರಂಭವಾಗುವದು ಈ ಕಪಟದಲ್ಲಿಯೇ ನಿಜ. ಆದರೆ ಕಾಚನೆಂದರೆ ಕೇವಲ ಬೂಡಿನ ಬುದ್ಧಿವಂತ, ಆದರೆ ಕಾಲ ಮಾತ್ರ ಅತಿಮಾನವೀ ಶಕ್ತಿಯುಳ್ಳ ರಹಸ್ಯಮಯ ವ್ಯಕ್ತಿ. ಈ ಭಾವ ನಾಟಕದಲ್ಲೆಲ್ಲ ಬರುತ್ತದೆ:

ಕಾಚ : ಒಡೆಯ ಇದ್ಯಾತರ ಮಾತು? ಕಾಕನ್ನ ಕರೆಯರೋದೇನಂತೆ. ನೀವು ಆಶೆ ಪಟ್ಟರಿ ಅಂತ ತಿಳಿದರೆ ಅವನೇ ಬರತಾನೆ. ಅಂದರೆ ಬರೋಕೆ ಮೊದಲೇ ಕನಸಿನಾಗ ಕಂಡು ಬೆಚ್ಚೀರ ಅಷ್ಟೆ. ಬೂಡಿನ ಹೊರಗಿನವರಿಗೆ - ಹೆಗ್ಗಡೆ, ಕರಣೀಕ, ರಣಧೀರರಿಗೆ - ಕಾಚ, ಕಾಕ ಬೇರೆ ಬೇರೆ. (ಪುಟ ೬)

ಬೂಡಿನವರದು ಇದಕ್ಕೆ ವಿರುದ್ಧ ಪರಿಸ್ಥಿತಿ. ತಮ್ಮ ಗೌಡ ರಣಧೀರ ಅರಸನನ್ನು ಕರೆಯಲಿಕ್ಕೆ ಹೋದಾಗ, 'ಕಾಚ ಕರೆದಿದ್ದಾನೆ' ಎಂದು ಹೇಳುವುದರ ಬದಲಾಗಿ 'ಕಾಕ ಕರೆದಿದ್ದಾನೆ' ಎಂದು ಹೇಳುತ್ತಾನೆ. ಕಾಕನೇ ಕಾಚ ಎಂಬುದನ್ನು ಹೇಳಲಿಕ್ಕೆ ಮರೆತು ಬಿಡುತ್ತಾನೆ. ಕಾಚ ಜೀವಂತ ಇರುವಾಗಲೇ ಅವರ ಅಂಕಿತನಾಮ ಅವನ ಸಮೀಪದವರಿಗೆ ಮರೆತುಹೋದರೆ ಇನ್ನೊಂದೆರಡು ಪೀಳಿಗೆಗಳಲ್ಲೇನು ಪರಿಸ್ಥಿತಿ?

ಕಾಕ ಪುರಾಣಪುರುಷನಾಗುವುದನ್ನು ತೋರಿಸಲು ಸುಲಭವಾಗುವಂತೆಯೋ ಏನೋ ನಾಟಕದಲ್ಲಿ 'ಕರಿ ಹೈದ' ಎಂಬ ಒಬ್ಬ ಪುರಾಣಪುರುಷನ ಕತೆ ಬರುತ್ತದೆ. ಅವನ ಹಾಡುಗಳನ್ನು ಹಾಡುತ್ತ ಕಾಡ ಕುರುಬರು ಕುಣಿಯುತ್ತಾರೆ. ಮನೋರಂಜನೆ ಮಾಡಿಕೊಳ್ಳುತ್ತಾರೆ. ೨, ೩, ಮತ್ತು ೫ ಈ ಮೂರು ದೃಶ್ಯಗಳಲ್ಲಿ 'ಕರಿ ಹೈದ'ನ ಬಗ್ಗೆ ಉದ್ದುದ್ದ ಹಾಡುಗಳು ಬರುತ್ತವೆ. ಕೇವಲ ಕಾಡ ಕುರುಬರ ಸಂಸ್ಕೃತಿಯ ಒಂದು ಅಂಗ ಎಂದೇ ಇದನ್ನೆಲ್ಲ ತೋರಿಸುವದಿದ್ದರೆ, 'ಕರಿ ಹೈದ'ನಿಗೆ ಇಷ್ಟೆಲ್ಲ ಮಹತ್ವವನ್ನು ಕೊಡುವ ಅವಶ್ಯಕತೆಯೇ ಇರಲಿಲ್ಲ. ಆದರೆ ಪುರಾಣಪುರುಷ ಕರಿಹೈದ ಮತ್ತು ಇತಿಹಾಸಪುರುಷ ಕಾಕ ಇವರಿಬ್ಬರಲ್ಲಿರುವ ಸಾಮ್ಯ ಮತ್ತೆ ಮತ್ತೆ ತೋರಿಸಿದ್ದರಿಂದ, ಕರಿಹೈದನ ಕತೆ ನಾಟಕದ ವಿಷಯದ ಬೆಳೆವಣಿಗೆಗೆ ಹಿನ್ನೆಲೆಯಾಗಿ, ಕಾಕನ ಪಾತ್ರಕ್ಕೆ ಪೋಷಕವಾಗಿ ಬರುತ್ತದೆ. ಅದರೊಡನೆ ಕಾಕನಿಂದ ಬೂಡಿನ ಮೇಲಾದ ಪರಿಣಾಮದ ಐತಿಹಾಸಿಕ ಮಹತ್ವವನ್ನೂ ಎತ್ತಿ ತೋರಿಸುತ್ತದೆ.

ದೃಶ್ಯ ೧ ಮತ್ತು ೩ ರಲ್ಲಿ ಕರಿಹೈದ ಹಿಂಸ್ರ ಹುಲಿಯನ್ನು ಬೆದರಿಸಿ, ಓಡಿಸಿದ ಎರಡು ಕತೆಗಳು ಬರುತ್ತವೆ. ಇದಕ್ಕೆ ಸಮಾಂತರವಾಗಿ (ಪುಟ ೭೭) ಕಾಕ ಹುಚ್ಚು ಹಿಡಿದು ಓಡುತ್ತಿದ್ದ ಆನೆಯೊಂದನ್ನು ಬೆದರಿಸಿ, ನಿಲ್ಲಿಸಿದ ಕತೆ ಬರುತ್ತದೆ. ಹೀಗೆ ಹಿಂಸ್ರ ಮನಃಸ್ಥಿತಿಯಲ್ಲಿದ್ದ ಪಶುಗಳನ್ನು ಬಗ್ಗಿಸುವ ಸಾಮರ್ಥ್ಯ ಇಬ್ಬರಲ್ಲೂ ತೋರಿಸಲಾಗಿದೆ.

ಇದೇ ಪ್ರಕಾರ ಕರಿಹೈದನ ಇನ್ನೊಂದು ಚರಿತ್ರವಿಶೇಷವನ್ನು ನೋಡಬಹುದು :

ಕಾಚ : ಕಾಡನು ಕಡಿದಾ ಹಾಡಿಯ ಮಾಡಿದ ಬೂಡನು ಕಟ್ಟಿದ ಕಿರಹೈದಾ (ಪುಟ ೩೬)

ಕರಿಹೈದ ಕಾಡನ್ನು ಬೂಡಿನಲ್ಲಿ ಪರಿವರ್ತಿಸಿದ. ಮುಂದೆ ಕಾಕನ ಪರಿಣಾಮವಾಗಿ ಬೂಡು ಊರಾಗಲಿದೆ. ಇಬ್ಬರ ಕಾರ್ಯಗಳಲ್ಲೂ ಹೀಗೆ ಒಂದು ಐತಿಹಾಸಿಕ ಅವಿಚ್ಛಿನ್ನತೆ (continuity) ಇದೆ.

ಹೀಗೆಲ್ಲ ಕಾಡ ಕುರುಬರ ಇತಿಹಾಸದಲ್ಲಿ ಕಾಕನಿಗೆ ದೊರೆಯಲಿರುವ ಸ್ಥಾನ ಎಂಥದೆಂಬುದನ್ನು ಈ ಕರಿಹೈದ - ಕಾಕರ ಸಾಮ್ಯದ ಮುಖಾಂತರ ನಾಟಕಕಾರರು

ಸೂಚಿಸಿದ್ದಾರೆ ಮತ್ತು ಹೆಚ್ಚಿನ ಮಾತೆಂದರೆ, ಅಲ್ಲಿಗೇ ನಿಲ್ಲದೆ ಇನ್ನೂ ಮುಂದೆ ಹೋಗಿ ಕಾಕ ಬಾಳಿರುವಾಗಲೇ ಅವನಿಗೆ ಪುರಾಣಪದವಿ ಹೇಗೆ ದೊರೆಯುತ್ತದೆ ಎಂಬುದನ್ನೂ ತೋರಿಸಿದ್ದಾರೆ. ಇದು ಸುಲಭವಾದ ಕೆಲಸವಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಪರಿವರ್ತನೆಯನ್ನು ಸಾಧಿಸಬೇಕಾದರೆ ನಾಟಕಕಾರ ನಾಯಕನ ಅನುಪಮ ವ್ಯಕ್ತಿತ್ವ ಚಿತ್ರಿಸಿದರೆ ಸಾಲದು - ಅವನನ್ನು ಹಿಂಬಾಲಿಸುವವರು ಅವನಲ್ಲಿಟ್ಟ ಭಕ್ತಿ - ವಿಶ್ವಾಸಗಳನ್ನು ತೋರಿಸಿದರೆ ಸಾಲದು. ನಾಯಕನನ್ನು ಜೀವಂತ ಪಾತ್ರವೆಂದು ತೋರಿಸುವಾಗಲೇ ಅವನಲ್ಲಿ ಪುರಾಣಪುರುಷನಲ್ಲಿರುವ ದೂರತೆಯನ್ನೂ ತೋರಿಸಬೇಕು.

ಈ ಜಟಿಲ ತಾಂತ್ರಿಕ ಸಮಸ್ಯೆಯನ್ನು ಶ್ರೀನಿವಾಸರು ಹೇಗೆ ಸುಲಭವಾಗಿ ಬಿಡಿಸಿದ್ದಾರೆ ಎಂಬುದನ್ನು ಕಾಣಲಿಕ್ಕೆ ಒಂದು ಉದಾಹರಣೆಯನ್ನು ತೆಗೆದುಕೊಂಡರೂ ಸಾಕು :

ದೃಶ್ಯ ಮೂರರ ಆರಂಭದಲ್ಲಿ -

'ಮೋನ ಕುಣಿಯುತ್ತಿದ್ದಾನೆ. ಒಬ್ಬ ಮುದುಕ ಸಣ್ಣ ತಮಟೆ ಹೊಡೆಯುತ್ತಾನೆ'

ಅದೇ ದೃಶ್ಯದ ಕೊನೆಯಲ್ಲಿ -

ಮೋನ ಮತ್ತೆ ಕುಣಿಯುತ್ತಾನೆ. ಅಷ್ಟೇ ಅಲ್ಲ.

'ಮಕ್ಕಳೆಲ್ಲ ಸೇರುತ್ತಾರೆ. ಹೇಳಿದ ಮಾತನ್ನೇ ಹೇಳುತ್ತ ಮೋನ ತೋರಿಸಿದಂತೆ ಕುಣಿಯುತ್ತಾರೆ'

ಈ ಎರಡು ಪ್ರಸಂಗಗಳಲ್ಲಿ ಭೇದವಿಷ್ಟೇ :

ಆರಂಭದ ಹಾಡು ಕರಿಹೈದನ ಬಗ್ಗೆಯಿದೆ :
'ಹೈದನ ಬಳಿಯೆಲ್ಲ ಎಂದಿಗೂ ಮುಂದಾ
ಬಳಿಯೆಲ್ಲ ಎಂದಿಗೂ ಬಾಳಿರಲಿ ಚಂದಾ'

(ಪುಟ ೧೯)

ನಂತರದ ಹಾಡು ಕಾಕನ ಬಗ್ಗೆ :
'ಕಾಕ ಇರಲಿ ನಮಗ
ಎಂದೆಂದಿಗು ಇರಲಿ!'

(ಪುಟ ೨೪)

ಈ ಎರಡೂ ಹಾಡುಗಳಲ್ಲಿಯ ಸಂಬಂಧ - ವಿಶೇಷತಃ 'ಎಂದಿಗೂ' ಮತ್ತು 'ಎಂದೆಂದೂ' ಈ ಸಾದೃಶಸಮಾನಾರ್ಥಕ ಶಬ್ದಗಳ ಉಪಯೋಗ ಒಳ್ಳೆ ಪರಿಣಾಮಕಾರಿಯಾಗಿದೆ.

ನಾಟಕದ ಕೊನೆಗೆ ಕಾಚ-ಕಾಕ ಭಿನ್ನತೆ ಇಲ್ಲವಾಗುತ್ತದೆ. ಹೆಗ್ಗಡೆ, ಕರಣೀಕ, ರಣಧೀರ ಎಲ್ಲರಿಗೂ ಕಾಚನೇ ಕಾಕ ಎಂಬುದು ಗೊತ್ತಾಗುತ್ತದೆ. ಆದರೆ ಆ ಅರಿವಿನೊಡನೆ 'ಕಾಚ'ನ ಕತೆಯೂ ಮುಗಿಯುತ್ತದೆ ಎನ್ನಬಹುದು. ನಾಟಕದ ಕೊನೆಗೆ ಉಳಿಯುವವ ಪುರಾಣಪದವಿಯ ಮೇಲೆ ಕಾಲಿಟ್ಟು ನಿಂತ 'ಕಾಕ' ಮಾತ್ರ. ಇದನ್ನೇ ಸಮರ್ಥಿಸುವಂತೆ ಅವನನ್ನು 'ಕಾಚ' ಎಂದು ಮಾತ್ರ ಬಲ್ಲ ರಣಧೀರ ಅರಸನೂ ಕೂಡ ಅವನ ಪಾಳ್ಯಕ್ಕೆ 'ಕಾಕನಕೋಟೆ' ಎಂಬ ಹೆಸರಿಡುತ್ತಾನೆ.

೪ : ಉಪಸಂಸಾರ :

ಇನ್ನು ಉಳಿದ ಪಾತ್ರಗಳ ಬಗ್ಗೆಯೇನು? ನಾಟಕದಲ್ಲಿ ಸುಮಾರು ಹದಿನಾಲ್ಕು ಪಾತ್ರಗಳು ಹೆಸರಿನಿಂದ ಕರೆಯುವಷ್ಟು ಪ್ರಮುಖವಾಗಿವೆ. ಆದರೆ ಕಾಕನ ಮಾನಸಿಕ,

ಸಾಮಾಜಿಕ, ಕೌಟುಂಬಿಕ ಜೀವನದಷ್ಟು ಸಮಗ್ರವಾಗಿ ಉಳಿದ ಯಾರ ಜೀವನವೂ ಚಿತ್ರಿತವಾಗಿಲ್ಲ. ಇದು ನಾಟಕದ 'ದೌರ್ಬಲ್ಯ'ವಾಗಿ ಕಾಣಬಹುದು. ಆದರೆ ನಾಟಕದ ವಸ್ತುವನ್ನು ನೋಡಿದಾಗ ಈ 'ದೌರ್ಬಲ್ಯ' ನಾಟಕಕಾರನ ಸಂಯಮದ ದ್ಯೋತಕವಾಗಿದೆ ಎನ್ನುವದು ಮನದಟ್ಟಾಗುತ್ತದೆ.

ನಾಟಕದಲ್ಲಿ ಕಾಡ ಕುರುಬರು ಎದುರಿಸಬೇಕಾದ ಜೀವನ-ಮರಣದ ಪ್ರಶ್ನೆ 'ರಾಜಕೀಯ' ರೂಪ ತಾಳಿ ಬಂದಿದೆ. ಹೀಗಿರುವಾಗ ಈ ಸಂಘರ್ಷದಲ್ಲಿ ತೊಡಗಿದವರ ವೈಯಕ್ತಿಕ ಜೀವನಕ್ಕೂ ಸಂಘರ್ಷಕ್ಕೂ ಸ್ಪಷ್ಟ ಸಂಬಂಧಿಸಿದ್ದ ಹೊರತು ಕೇವಲ ಪಾತ್ರ ಚಿತ್ರಣದ ಹುರುಪಿನಲ್ಲಿ ಪಾತ್ರಗಳ ವೈಯಕ್ತಿಕ ಜೀವನವನ್ನು ವರ್ಣಿಸುವುದು ಅಸಮರ್ಥನಿಯವಾದದ್ದು. ಸಂಘರ್ಷದ ಸ್ವರೂಪ ಸಾರ್ವಜನಿಕವಾದದ್ದು. ಅದರಲ್ಲಿ ಮೂಡುವದು ಪಾತ್ರಗಳ ಸಾರ್ವಜನಿಕ ವ್ಯಕ್ತಿತ್ವ ಮಾತ್ರ. ಅವರ ಕೌಟುಂಬಿಕ ಇಲ್ಲವೆ ವೈಯುಕ್ತಿಕ ಜೀವನವನ್ನು ತೋರಿಸುವುದು ಅನವಶ್ಯಕವಾದುದ್ದು. ಅಲ್ಲದೆ ಕಾಡಕುರುಬರ ಜೀವನವೂ ವ್ಯಕ್ತಿತ್ವ ನಿಷ್ಠವಾದದ್ದಲ್ಲ. ಆದ್ದರಿಂದಲೇ ಹೆಗ್ಗಡೆ ಮತ್ತು ಚಿಕ್ಕಯ್ಯ ಈ ತಂದೆ - ಮಕ್ಕಳ ಸಂಬಂಧ ಸ್ಪಷ್ಟವಾಗಿ ಬರದಿದ್ದರೂ, ಹೆಗ್ಗಡೆ ಮತ್ತು ಅವರ ಕರಣೀಕರ ನಡುವಿನ ಆತ್ಮೀಯತೆಯ ಹೃದಯಸ್ಪರ್ಶಿಯಾಗಿ ಬರುತ್ತದೆ. ಅದರೊಡನೆ ತನ್ನ ಒಡೆಯನ ಒಳಿತಿಗಾಗಿ ಮೋಸಮಾಡಿ, ಕರ್ತವ್ಯದ ಹೆಸರಿನಲ್ಲಿ ವೈಯಕ್ತಿಕ ಸರಿ ತಪ್ಪುಗಳ ಭಾವನೆಯನ್ನು ಬದಿಗಿಡುವ ಕರಣೀಕ ನಾಟಕದ ನೈತಿಕ ವಸ್ತುವಿನ ಇನ್ನೊಂದು ಮುಖವನ್ನು ತೋರಿಸುತ್ತಾನೆ.

ಇಲ್ಲವೆನ್ನಲಿಕ್ಕೆ ಮೂರು ಸಂಬಂಧಗಳು ಮಾತ್ರ ಇಲ್ಲಿ ಕೂಲಂಕಷವಾಗಿ ಪರೀಕ್ಷಿಸಲಾಗಿವೆ. ಮೊಲ್ಲೆ-ಕಾಕ, ಮೊಲ್ಲೆ-ಮೋನಿ, ಮೊಲ್ಲೆ - ಚಿಕ್ಕಯ್ಯ ಇವರ ಸಂಬಂಧ ಸಾರ್ವಜನಿಕ ಸಂಘರ್ಷಕ್ಕೆ ಕಾಕ ಕೇಂದ್ರವಾಗಿರುವಂತೆ, ಭಾವುಕ ಸಂಘರ್ಷಕ್ಕೆ ಮೊಲ್ಲೆ ಕೇಂದ್ರವಾಗಿದ್ದಾಳೆ. ಅವಳಿಗೆ ಆ ಸ್ಥಾನವನ್ನಿತ್ತು ಬೂಡಿನ ಗಂಡಸರೆಲ್ಲ ಜೀವನ್ಮರಣದ ಸಂಕಟದಲ್ಲಿ ತೊಡಗಿರುವಾಗ, ಬೂಡಿನ ಹೆಣ್ಣು ಜೀವನದ ಮಾತ್ರ ಸರಾಗವಾಗಿ ಜಗಳದ ಅರಿವಿರದಂತೆ ಹೇಗೆ ನಡೆಯುತ್ತದೆ ಎಂಬುದನ್ನು ನಾಟಕಕಾರರು ಸೂಕ್ಷ್ಮವಾಗಿ, ಅಷ್ಟೇ ವ್ಯಂಗ್ಯವಾಗಿ ತೋರಿಸಿದ್ದಾರೆ. (ಮೊಲ್ಲೆ - ಮೋನಿಯರು ಒಮ್ಮೆಯಾದರೂ ತಮ್ಮ ಬೂಡಿನ ಮೇಲಾಗುತ್ತಿರುವ ಅನ್ಯಾಯವನ್ನು ಚರ್ಚಿಸುವುದಿಲ್ಲ. ಆದರೆ ಚಿಕ್ಕಯ್ಯನ ಬಂಧನದಿಂದ ಅವನ ತಂದೆಗೆ ಉಂಟಾಗಿರಬಹುದಾದ ದುಡುಕಿನ ಬಗ್ಗೆ ಮಾತ್ರ ಸಾಕಷ್ಟು ಮಾತುಕತೆಯಾಗುತ್ತದೆ) ಇನ್ನು ಮೊಲ್ಲೆ-ಚಿಕ್ಕಯ್ಯರ ಸಂಬಂಧ ಹೆಚ್ಚು 'ರೊಮ್ಯಾಂಟಿಕ'ವಾಗಿ ಬಂದಿದೆ ನಿಜ. ಆದರೆ ಅದೂ ಕೊನೆಗೆ ಸಾರ್ವಜನಿಕ ಸಂಘರ್ಷದ ಪರಿಹಾರಕ್ಕೆ ಪೋಷಕವಾಗಿ ಬರುತ್ತದೆ. (ಇದಕ್ಕೆ ವಿರುದ್ಧವಾಗಿ ಮೊಲ್ಲೆಯ ಮೇಲೆ ಮನಸ್ಸಿಟ್ಟ ಮೋನನ ವಿಷಾದವನ್ನು ಮಾತ್ರ ನಾಟಕಕಾರರು 'ಮೋನನು ಮೊಲ್ಲೆ ಚಿಕ್ಕಯ್ಯನನ್ನು ನೋಡುತ್ತಿರುವ ರೀತಿಯಿಂದ ಖಿನ್ನನಾಗಿ . . . ನಡೆಯುವನು' ಎಂಬೊಂದು ವಾಕ್ಯದಲ್ಲಿ ಮುಗಿಸಿದ್ದಾರೆ. (ಪುಟ ೪೬)

ಹೀಗೆ ನಾಟಕದಲ್ಲಿ ಉಳಿದೆಡೆಗಳಲ್ಲಿ ಕಾಣುವ ಸಂಯಮ ಪಾತ್ರಸೃಷ್ಟಿಯಲ್ಲೂ ಕಾಣುತ್ತದೆ. ಆದ್ದರಿಂದಲೇ ನಾಟಕದ ಕಿರಣಕೇಂದ್ರ ಒಂದಿಷ್ಟು ಅಸ್ಪಷ್ಟವಾಗುವದಿಲ್ಲ; ನಾಟಕದ ಪರಿಣಾಮ ಒಂದಿಷ್ಟೂ ಹದಗೆಡುವುದಿಲ್ಲ.

ಈ ವಿಮರ್ಶೆಯನ್ನು ಮುಗಿಸುವ ಮೊದಲು ನಾಟಕದ ಭಾಷೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಕೇವಲ 'ಮನೋರಂಜನೆ'ಯ ಪಾತಳಿಯ ಮೇಲೂ

ನಾಟಕ ಅತ್ಯಂತ ಯಶಸ್ವಿಯಾಗಿದೆ. ಒಳ್ಳೆಯ ಹಾಡುಗಳಿವೆ. ನೃತ್ಯಗಳಿವೆ. ನಯನಮನೋಹರವಾದ ರಂಗಸಜ್ಜಿಗೆ ಆಸ್ಪದವಿದೆ. ಕಾಡ ಕುರುಬರು, ಊರ ಕುರುಬರು, ರಾಜಸಭೆಯವರು ಇವರ ವೇಷಭೂಷಣಗಳಲ್ಲಿ ವೈವಿಧ್ಯಕ್ಕೆ ಎಡೆಯಿದೆ.

ಆದರೆ 'ಮನೋರಂಜನೆ'ಯ ಪಾತಳಿಯಿಂದೆತ್ತಿ ಇದನ್ನು ಶ್ರೇಷ್ಠ ನಾಟಕಗಳ ಸಾಲಿನಲ್ಲಿ ಕೂಡಿಸಲು ಕಾರಣವೆಂದರೆ ಮಾಸ್ತಿಯವರ ಭಾಷೆ. 'ಕಾಕನಕೋಟೆ' ಐತಿಹಾಸಿಕ ನಾಟಕವಾಗಿದ್ದರಿಂದ ಅದರಲ್ಲಿ ನಮಗೆ ಇತಿಹಾಸದ ಪದರುಪದರುಗಳ ದರ್ಶನವಾಗುತ್ತದೆ. ಇತಿಹಾಸವೆಂದರೇನು? ಇದರ ಪರಿಣಾಮವೆಂಥದ್ದು? ಸಮಕಾಲಿನ ಘಟನೆಗಳೇ ಇತಿಹಾಸವಾಗಿ ಪರಿವರ್ತನೆಗೊಳ್ಳುವಾಗ ಅವು ಜನಾಂಗದ ಸಂಸ್ಕೃತಿಯಲ್ಲಿ ಯಾವ ಸ್ಥಾನವನ್ನು ಪಡೆಯಬಹುದು. ಮತ್ತು ಅವುಗಳ ಸ್ವರೂಪದಲ್ಲೇ ಯಾವ ಬದಲಾವಣೆಗಳಾಗಬಹುದು? ಇವೆಲ್ಲ ಪ್ರಶ್ನೆಗಳು ಈ ನಾಟಕದಲ್ಲಿ ಏಳುತ್ತವೆ. ಅರ್ಥಾತ್, ಈ ಪ್ರಶ್ನೆಗಳನ್ನು ಯಾವ ಪಾತ್ರಗಳೂ ಬಾಯಿಬಿಟ್ಟು ಚರ್ಚಿಸುವದಿಲ್ಲ. ಅಂಥ ಬುದ್ಧಿವಂತಿಕೆಯೂ ಅವರಲ್ಲಿಲ್ಲ. ಆದರೆ ಮಾಸ್ತಿಯವರು ಇವುಗಳನ್ನು ನಾಟಕದ ಕ್ರಿಯೆಯ ಮುಖಾಂತರ ಪರಿಶೀಲಿಸಿದ್ದಾರೆ ಮತ್ತು ಹೆಚ್ಚಿನ ಮಾತೆಂದರೆ, ಈ ಕ್ರಿಯೆ ಸಂವಾದದ ಮುಖಾಂತರವೇ ರೂಪುಗೊಳ್ಳುತ್ತದೆ.

ಈ ನಾಟಕದಲ್ಲಿ ರಂಗಸ್ಥಳದ ಮೇಲಾಗುವ ಘಟನೆಗಳು ಅತಿ ಕಡಿಮೆ, (ಚಿಕ್ಕಯ್ಯನ ಬಂಧನವೊಂದೇ ಇಂಥ ಘಟನೆ ಎಂದೂ ಹೇಳಬಹುದು) 'ಆಗುವದೆ'ಲ್ಲ ಮಾತಿನಲ್ಲೇ ಮೂಡುತ್ತದೆ. ಪ್ರತಿಯೊಂದು ಸಾಲು ಹೊಸ ಹೊಸ ತರಂಗಗಳನ್ನೆಬ್ಬಿಸಿ ನಾಟಕದ ಧ್ವನಿಪರಿಸರವನ್ನು ಇನ್ನಷ್ಟು ದೂರ ಹಬ್ಬಿಸುತ್ತದೆ. ಒಂದೆಡೆಗೆ ಮೇಲಿನ ಪ್ರಶ್ನೆಗಳ ಪರಿಶೀಲನೆ; ಇನ್ನೊಂದೆಡೆಗೆ ಪಾತ್ರಗಳ ವ್ಯಕ್ತಿತ್ವ ಚಿತ್ರಣ, ವಾತಾವರಣ ಸೃಷ್ಟಿ; ಮತ್ತೊಂದೆಡೆಗೆ ನಾಟಕದ ಕೇಂದ್ರಸ್ಥಾನದಲ್ಲಿರುವ ಸಂಘರ್ಷದ ವಿವರಣೆ; ನಾಟಕದುದ್ದಕ್ಕೂ ಹರಡಿರುವ ವ್ಯಂಗ್ಯ - ಹೀಗೆ ಸಂವಾದವು ವ್ಯಕ್ತಿ, ಸಮುದಾಯ, ಜನಾಂಗ ಎಲ್ಲ ಪಾತಳಿಗಳ ಮೇಲೆ ಒಮ್ಮೆಲೆ ಓಡಾಡುತ್ತದೆ. ಇದರೊಡನೆ ಅಲ್ಲಲ್ಲಿ ಸುಂದರ ನಿಸರ್ಗವರ್ಣನೆಗಳು ಬರುತ್ತವೆ. ಇವೆಲ್ಲವುಗಳಿಂದಾಗಿ ನಾಟಕ ಗದ್ಯದಲ್ಲೇ ಇದ್ದರೂ, ಭಾಷೆ ಮಾತ್ರ ಕಾವ್ಯದ ಶಕ್ತಿ - ಸೌಂದರ್ಯದಿಂದ ಅರಳುತ್ತದೆ.

ಅಲ್ಲದೆ ಸಂವಾದದಲ್ಲಿ ಇಂಥ ಕಾವ್ಯವಿದ್ದರೂ, 'ಇಗೊ, ಕಾವ್ಯಮಯ ಸಾಲು' ಎಂದು ಬೇರೆಯಾಗಿ ಎತ್ತಿ ತೋರಿಸಬಹುದಾದಂಥ ಸುಂದರ ಸಾಲುಗಳೂ ಬಹಳ ಕಡಿಮೆ. ಪ್ರತಿಯೊಂದು ಸಾಲಿನ ಶಕ್ತಿ-ಸೌಂದರ್ಯ ಸಂದರ್ಭದಿಂದಲೇ ಬರುತ್ತದೆ ಹೊರತು ಮನೋಹರ ಶಬ್ದಗಳ ಜೋಡಣೆಯಿಂದಲ್ಲ. ಇದು ನಾಟಕದ ಭಾವ-ಕ್ರಿಯಾ ಪರಿಸರಗಳು ಮತ್ತು ಸಂವಾದ ಹೇಗೆ ಬೆರೆತುಕೊಂಡಿವೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಇಷ್ಟೆಲ್ಲ ಎಂದಮೇಲೂ ಒಂದು ಮಾತನ್ನು ಒಪ್ಪಿಕೊಳ್ಳಲೇಬೇಕು. ಯಾವ ಶ್ರೇಷ್ಠ ಕೃತಿಯ ಮಹತ್ವವೂ ಅದರ ಒಂದೆರಡು ಅಂಶಗಳಲ್ಲೇ ಅಡಗಿರಲಾರದು. 'ಕಾಕನಕೋಟೆ'ಯಂಥ ಸಂಕೀರ್ಣ ನಾಟಕದ ಬಗ್ಗೆಯಂತೂ ಇಂಥ ಸುಲಭೀಕರಣ ಅಸಾಧ್ಯವೇ. ಎಷ್ಟು ವಿಶ್ಲೇಷಣೆ ಮಾಡಿದರೂ, ಕಟ್ಟಕೊನೆಗೆ ನಾಟಕದ ಒಟ್ಟು ಘನತೆಗೆ ಕಾರಣ ಅದರ ಬೇರೆ ಬೇರೆ ಅಂಗಗಳು ಪರಸ್ಪರ ಪೋಷಕವಾಗಿರುವದೇ ಆಗಿದೆ. ರಸಾನುಭವವುಂಟಾಗುವದು ಈ ಎಲ್ಲ ಅಂಗಗಳನ್ನು ನಿಯಮಿಸುವ 'ಜೀವ'ದಿಂದ. ಇಂಥ 'ಜೀವ' ಏರುವುದರಿಂದಲೇ ಇಪ್ಪತ್ತೆಳು ವರುಷಗಳಾದರೂ 'ಕಾಕನಕೋಟೆ' ಇನ್ನೂ ತನ್ನ ಮಹತ್ವ ಕಳೆದುಕೊಳ್ಳದೆ ಉಳಿದಿದೆ.

ರುದ್ರ ನಾಟಕಗಳು

ಡಾ|| ಸಾ. ಶಿ. ಮರುಳಯ್ಯ

ರುದ್ರನಾಟಕಗಳ ಜನ್ಮಸ್ಥಳ ಗ್ರೀಸ್. ಈ ದೃಶ್ಯ ಕಾವ್ಯ ಪ್ರಕಾರ ಗ್ರೀಕರ ಅಮೂಲ್ಯವಾದ ಕೊಡುಗೆ ವಿಶ್ವ ಸಾಹಿತ್ಯಕ್ಕೆ. ಈ ರಚನೆಯಲ್ಲಿ ಎರಡನೆಯ ಖ್ಯಾತಿ ಇಂಗ್ಲೆಂಡಿನದು. ಈಸ್ಕಿಲಸ್, ಸೊಫೋಕ್ಲೀಸ್-ಇವರಿಗಿಂತ ಯೂರಿಪಿಡೀಸ್‌ನ ನಾಟಕಗಳು ವಿಶೇಷ ಪ್ರಭಾವ ಬೀರಿವೆ. ಶೇಕ್ಸ್‌ಪಿಯರನ ಮೇಲೆ.[1] ಆದರೆ ಗ್ರೀಕ್ ರುದ್ರನಾಟಕಗಳಿಗೂ, ಶೇಕ್ಸ್‌ಪಿಯರನ ದುರಂತನಾಟಕಗಳಿಗೂ ಸ್ಥೂಲ ವ್ಯತ್ಯಾಸವಿದೆ. ಅವರ ನಾಟಕಗಳಿಗೆ ವಸ್ತು ಪುರಾಣ ಪುಣ್ಯಕಥೆಗಳಿಂದ ಆಯ್ದುದ್ದು; ಇವನಿಗೆ ಇತಿಹಾಸದಲ್ಲಿ, ಸಮಾಜದಲ್ಲಿ ಹೆಚ್ಚಾಗಿ ಕಲ್ಪನೆಯಲ್ಲಿ ಸಿಕ್ಕಿದ್ದು, ಅರಿಸ್ಟಾಟಲ್ ಹೇಳುವಂತೆ ಅಲ್ಲಿಯ ನಾಟಕಗಳಲ್ಲಿ ಸ್ವಸಂಪೂರ್ಣತೆ, ತುಂಬುಗಾಂಭೀರ್ಯ, ಪ್ರಮಾಣದಲ್ಲಿ ಸಾಕಷ್ಟು ಗಾತ್ರ ಉಳ್ಳದ್ದೂ ಆಗಿರಬೇಕು.[2] ಇವನಲ್ಲೂ ಈ ನಿಯಮಗಳಿವೆ. ಆದರೆ ಅಲ್ಲಿಲ್ಲದ ಹಾಸ್ಯರಸದ ಹಲವು ಬುಗ್ಗೆಗಳು ಇಲ್ಲಿ ಪುಟಿದಿರುವುದುಂಟು. ಗ್ರೀಕರ ನಾಟಕಗಳ ರುದ್ರನಾಯಕನು ತನ್ನ ದುರಂತಕ್ಕೆ ತಾನು ಕಾರಣನಲ್ಲ; ಯಾವುದೇ ಒಂದು ದೈವ ಶಕ್ತಿಯ ಪೂರ್ಣ ಕೈವಾಡಕ್ಕೋ, ವಿಧಿಯ ವಿಕೃತ ಲೀಲೆಗೋ ಬಲಿಯಾದರೆ, ಶೇಕ್ಸ್‌ಪಿಯರನ ದುರಂತನಾಯಕ ತನ್ನ ಗೋರಿಯನ್ನು ತಾನೇ ತೋಡಿ ಕೊಳ್ಳುತ್ತಾನೆ. ತಾನು ಸರ್ವಗುಣ ಸಂಪನ್ನನಾಗಿದ್ದರೂ ಯಾವುದೋ ಒಂದು ದುರಂತ ದೌರ್ಬಲ್ಯ (Tragic flaw) ದಿಂದ ಸಂಪೂರ್ಣವಾಗಿ ಪತನಪದವಿಯನ್ನು ಪಡೆಯುತ್ತಾನೆ. ಅಲ್ಲಿಯ ರುದ್ರನಾಯಕನು ಸಾಯಲೇಬೇಕೆಂಬ ನಿಯಮವಿಲ್ಲ, ಸಾವಿನಷ್ಟು ಯಾತನೆಯನ್ನನುಭವಿಸಿದರೆ ಸಾಕು. ಆದರೆ ಇಲ್ಲಿನ ನಾಯಕ ಸಾಯಲೇಬೇಕು, ಇಲ್ಲವಾದರೆ ಅದನ್ನು ದುರಂತನಾಟಕ ಎಂದು ಕರೆಯುವಂತಿಲ್ಲ. ಆದರೆ ಪ್ರೇಕ್ಷಕರ

---

1. ಗ್ರೀಕ್ ರತ್ನತ್ರಯದ ರುದ್ರನಾಟಕಗಳನ್ನು ಸೆನೆಕ ಎಂಬುವನು ಫ್ರೆಂಚ್‌ಗೆ ಭಾಷಾಂತರಿಸಿದ್ದರಿಂದ ಗ್ರೀಕ್ ಭಾಷೆಯನ್ನರಿಯದ ಶೇಕ್ಸ್‌ಪಿಯರ್ ಫ್ರೆಂಚ್ ಭಾಷಾಂತರಗಳ ಮೂಲಕ ಓದಿ ಸ್ಫೂರ್ತಿ ಪಡೆಯುತ್ತಾನೆ.
2. 'Tragedy is an imitation of an action that is serious, complete and of a certain magnitude; in language embellished with each kind of artistic ornament, the several kinds being found in separate parts of the play; in the form of action, not of narrative; through pity and fear effecting the proper katharsis, or purgation, of these emotions.'
   - Aristotle's Theory of Poetry and Fine Art, translated and with critical notes by S.H. Butcher. Page 240, New York, (1951)

ಕರುಣೆಯನ್ನು ಇಬ್ಬರು ರುದ್ರನಾಯಕರೂ ಕೆಣಕುತ್ತಾರೆ. ಗ್ರೀಕ್ ರುದ್ರನಾಯಕನಿಗೆ ಆತ್ಮ ವಿಶ್ಲೇಷಣೆಗೆ ಅವಕಾಶವಿಲ್ಲ, ಶೇಕ್ಸ್‌ಪಿಯರನ ದುರಂತನಾಯಕನ ಸುದೀರ್ಘವಾದ ಸ್ವಗತಗಳಲ್ಲಿ (Soliloquies) ತನ್ನನ್ನು ತಾನೇ ವಿಮರ್ಶಿಸಿಕೊಳ್ಳುವ ಅಥವಾ ತನ್ನ ಕಾರ್ಯವನ್ನು ತಾನೇ ಸಮರ್ಥಿಸಿಕೊಳ್ಳುವ ಅಧಿಕಾರ ಪಡೆದಿದ್ದಾನೆ. ಎರಡೂ ನಾಟಕಗಳ ವೀಕ್ಷಣೆಯಿಂದ ಪ್ರೇಕ್ಷಕರಿಗೆ ಅಂತ್ಯದಲ್ಲಿ ಭಾವಗಳ ವಿರೇಚನ ಆಗಿಯೇ ಆಗುತ್ತದೆ. ಆದರೆ ಗ್ರೀಕ್ ನಾಟಕಗಳು ರುದ್ರ ದಿವ್ಯ, ಶೇಕ್ಸ್‌ಪಿಯರನ ನಾಟಕಗಳು ದುರಂತ ರಮ್ಯ.

ರಂಗಭೂಮಿಯ ಮೇಲೆ ಹತ್ತೆಂಟು ಹೆಣಗಳನ್ನು ಉರುಳಿಸುವುದೇ ಒಂದು ಚಟವಾಗಿ ಶೇಕ್ಸ್‌ಪಿಯರನ ಅನಂತರ ರುದ್ರನಾಟಕದ ಅವನತಿ ಆರಂಭವಾಗುತ್ತದೆ. ಆದರೆ ಅದರ ಪುನರುತ್ಥಾನಕ್ಕೆ ಕೈಹಾಕಿ ಯಶಸ್ವಿಯಾದವನೆಂದರೆ ಹೆನ್ರಿಕ್ ಇಬ್ಸನ್. ದೈವಶಕ್ತಿಯ ಕೈವಾಡ ಮಾನವ ಹಸ್ತಕ್ಕಿಳಿದು, ದುರಂತಕ್ಕೀಡಾಗದಿದ್ದರೂ ಸಮಾಜದ ದ್ರೋಹ ದೌರ್ಜನ್ಯಗಳಿಗೆ ಗಂಡುಗೊಡಲಿಯನ್ನು ಬೀಸುತ್ತಾ ಪಾಶ್ಚಾತ್ಯ ಪ್ರಪಂಚದಲ್ಲೇ ಭೀಕರ ಬಿರುಗಾಳಿಯನ್ನು ಬೀಸಿದ ಕ್ರಾಂತಿಪುರುಷ ಅವನು. ಇಬ್ಸನ್ ರಂಗಭೂಮಿಯ ಮೇಲೆ ಕ್ರಾಂತಿಕಿಡಿಯನ್ನು ಸಿಡಿಸಿದರೆ,3 ವೈಚಾರಿಕತೆಯನ್ನೇ ಪ್ರಚುರಪಡಿಸಿ ಕಟ್ಟಿದವರು ಜಾರ್ಜ್ ಬರ್ನಾಡ್ ಷಾ;4 ಮರಣವನ್ನು ಸಂತೋಷದಿಂದ ಸ್ವಾಗತಿಸಿ, ಧ್ಯೇಯಕ್ಕಾಗಿ ದೇಹ ಸಮರ್ಪಣೆ ಮಾಡುವ ದಿವ್ಯಾಂತ ದೃಷ್ಟಿ ಟಿ.ಎಸ್.ಎಲಿಯಟ್‌ನದು.5

ಹೀಗೆ ಪಾಶ್ಚಾತ್ಯ ಪ್ರಂಪಚದಲ್ಲಿ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರವೇ ಆಗಿ ಬೆಳೆದು ಬಂದ ರುದ್ರನಾಟಕ ಪೌರಾತ್ಯರಲ್ಲಿ - ಮುಖ್ಯವಾಗಿ ಭಾರತೀಯರಲ್ಲಿ - ಹುಟ್ಟಲೇ ಇಲ್ಲ. ಕಾರಣ ಇವರ ಜೀವನ ದೃಷ್ಟಿ, ಆತ್ಮನ ಬಗೆಗಿನ ಕಲ್ಪನೆ, ಪುನರ್ಜನ್ಮದ ನಂಬಿಕೆ, ಮರಣ ಮುಕ್ತಿಗಾಗಿ ತೆರೆದ ದ್ವಾರ ಎಂಬ ಭಾವನೆ ಇವೆಲ್ಲವೂ ಇದ್ದಿರಬೇಕು. ಆದರೂ ಕಾವ್ಯಗಳಲ್ಲಿ ಈ ರುದ್ರಚ್ಛಾಯೆ ಇಲ್ಲದಿಲ್ಲ. ಜೈನ ಕವಿಗಳು ಪ್ರತಿ ನಾಯಕನಲ್ಲಿ ಈ ರೌದ್ರವನ್ನು ಬೆಳೆಸಿದ್ದಾರೆ. ಆಧರೆ ಗ್ರೀಕ್ ಮಾದರಿಯಲ್ಲಿ ರುದ್ರನಾಟಕವನ್ನು ಹೋಲುವ ಭಾರತೀಯ ನಾಟಕವೆಂದರೆ ಸರಸ್ವತಿ ಮುಖ ಹಾಸನಾದ ಭಾಸನ ಊರುಭಂಗ. ಹೀಗಿದ್ದರೂ ಪ್ರೇಕ್ಷಕನ ಮತಿಯನ್ನು ಮೂರ್ಛೆಗೊಳಿಸುವಷ್ಟು ಮಟ್ಟದ ರುದ್ರನಾಟಕಗಳು ನಮ್ಮಲ್ಲಿ ಬರಲಿಲ್ಲ; ಕನ್ನಡದಲ್ಲಂತೂ ಇಲ್ಲವೇ ಇಲ್ಲ. ಆದರೆ ಕನ್ನಡದ ಕಣ್ವ 'ಶ್ರೀ' ಯವರ ಸಾಹಸದಿಂದ ಈ ಸಾಹಿತ್ಯ ಪ್ರಕಾರ ಬೆಳಕು ಕಂಡಿತು. ಅವರಿಂದ ಸ್ಫೂರ್ತಿ ಪಡೆದ ಹಲವು ಪ್ರತಿಭಾವಂತರು ರುದ್ರನಾಟಕಗಳನ್ನು ರಚಿಸಿದರು. ಅದೇ ಪರಿಸರದಲ್ಲಿ ಮಾಸ್ತಿಯವರ ಕೋಮಲ-ರುದ್ರ-ನಾಟಕಗಳನ್ನು ಕಾಣುತ್ತೇವೆ

೨

ತಾಳೀಕೊಟೆ ಒಂದು ರುದ್ರನಾಟಕ. ಗ್ರೀಕ್ ಮತ್ತು ಶೇಕ್ಸ್‌ಪಿಯರ್ ನಾಟಕಗಳ ಛಾಯೆ ಇದೆ. ಆದರೂ ಇದು ಷಾ ಅವರ ನಾಟಕಕ್ಕೆ ಹೆಚ್ಚು ಸಮೀಪವರ್ತಿಯಾಗಿದೆ.

3. Doll's House; Enemy of the people Etc.
4. Saint John
5. Murder in the Cathedral

ವೈಚಾರಿಕತೆಯೇ ಇದರ ಮೂಲ ಬಂಡವಾಳ. ರಾಜಾಕಾಂಕ್ಷೆ ಮತ್ತು ಪ್ರಣಯಿನಿಯ ಪ್ರೇಮ-ಇವು ಕಥಾನಾಯಕ ರಾಮರಾಯನನ್ನು ಕಾಡಿದರೆ, ಧರ್ಮ ಮತ್ತು ರಾಷ್ಟ್ರಭಕ್ತಿ-ಇವು ಅವನ ಮಗ ರುಸ್ತುಂಷಹನನ್ನು ಪೀಡಿಸುತ್ತವೆ. ಇಂಥಹ ವಿಶುದ್ಧ ಅಂಶಗಳ ಹೋರಾಟ ರೌದ್ರತೆಯಲ್ಲಿ ಮುಗಿವು ಪಡೆಯುತ್ತದೆ.

ವಿವಾಹಕ್ಕೆ ಪೂರ್ವದಲ್ಲೇ ಅಯಷಾ ಎಂಬ ಮುಸಲ್ಮಾನ ಕನ್ಯೆಯನ್ನು ಕಾಮಿಸಿ ರಾಮರಾಯ ರಸ್ತುಂಷಹನನ್ನು ಪಡೆಯುತ್ತಾನೆ. ಆದರೆ ಅವಳ ವಿವಾಹಕ್ಕೆ ಬಂದ ಅಡ್ಡಿಗಳು ಹಲವು. ಮುಸಲ್ಮಾನರ ಹುಡುಗಿಯ ಲಗ್ನದಿಂದ ಹಿಂದೂ ಸಾಮ್ರಾಜ್ಯದಲ್ಲಿ ಒಂದು ಸಾಮಾಜಿಕ ಆಂಧೋಳನವೇರ್ಪಡಬಹುದು; ಅದರಿಂದಾಗಿ ಅರಮನೆಯಲ್ಲಾಗಲೀ, ಗುರುಮನೆಯಲ್ಲಾಗಲೀ ಇದಕ್ಕೆ ಸಮ್ಮತಿಸುವುದಿಲ್ಲ. ಇದು ನಿರ್ಭಾಗ್ಯಳಾದ ಅಯಷೆಯ ಬದುಕಿನ ಮೇಲೆ ತುಂಬಾ ಕೆಟ್ಟ ಪರಿಣಾಮವನ್ನುಂಟುಮಾಡುತ್ತದೆ. ನ್ಯಾಯಬದ್ಧವಲ್ಲದ ಶಿಶುವನ್ನು ತಾನು ಪಡೆದರೂ, ರಾಮರಾಯನಿಂದ ಅಗ್ನಿಸಾಕ್ಷಿಯಾಗಿ ತಾಳಿ ಕಟ್ಟಿಸಿಕೊಂಡ ಅಪುತ್ರವತಿಯಾದ ತಿರುಮಲಾಂಬೆ ಪ್ರೀತಿ ವಾತ್ಸಲ್ಯಗಳಿಗೆ ಪಾತ್ರವಾದರೂ, ಕಟ್ಟಾ ಮುಸಲ್ಮಾನ ಉಸ್ಮಾನನ ದುರ್ಬೋಧನೆಯ ಪರಿಸರದಲ್ಲಿ ಬೆಳೆದ ತುರುಕರಹುಡುಗ ಶುದ್ಧ ಹಿಂದೂ ಸಾಮ್ರಾಜ್ಯದ ಗಾದಿಯನ್ನೇರುವಂತಿಲ್ಲ. ಕಡೆಗೆ ಉಸ್ಮಾನ ಹಾಗೂ ಬಹುಮನಿಯವರ - ಪ್ರಧಾನವಾಗಿ ಬಿಜಾಪುರ ಸುಲ್ತಾನನ ಮಗಳ-ಪ್ರಲೋಭನೆಗೆ ಸಿಕ್ಕು, ರುಸ್ತುಂ ಜನ್ಮ ಕೊಟ್ಟವನೆಂಬ ಅರಿವಿಲ್ಲದಿದ್ದರೂ, ಸಾಕಿ ಸಲಹಿ ಪ್ರಸಿದ್ಧಿಗೆ ತಂದ ತಂದೆ ಎಂಬುದನ್ನು ಮರೆತು, ಧರ್ಮದ ನೆಪದಲ್ಲಿ ದ್ರೋಹವನ್ನೇ ಆಚರಿಸುತ್ತಾನೆ. ಅಂದರೆ ರಾಮರಾಯನನ್ನು ತಾನೇ ರಣರಂಗದಲ್ಲಿ ಮೋಸದಿಂದ ಕೊಲೆ ಮಾಡಿ ಶತ್ರುಪಕ್ಷಕ್ಕೆ ಜಯ ಲಭಿಸುವಂತೆ ಮಾಡುತ್ತಾನೆ. ಆದರೆ ಒಂದು ಕೈ ಮಾಡಿದ ಅನ್ಯಾಯದ ಫಲವನ್ನು ಮತ್ತೊಂದು ಅನುಭವಿಸುತ್ತದೆ. ಅದು ಅನಿವಾರ್ಯ. ಪ್ರಸಿದ್ಧ ಹಿಂದೂಸಾಮ್ರಾಜ್ಯವನ್ನು ಹಾಳು ಮಾಡುವುದೇ ತಮ್ಮ ಬದುಕಿನ ಧ್ಯೇಯವನ್ನಾಗಿಟ್ಟುಕೊಂಡಿದ್ದ ತುರುಕರು ವಿಶ್ವವಿಖ್ಯಾತವಾದ ವಿಜಯನಗರದ ವೈಜಯಂತಿಯನ್ನು ಚಿಂದಿ ಮಾಡುತ್ತಾರೆ; ಸಾಮ್ರಾಜ್ಯಲಕ್ಷ್ಮಿ ಸೂರೆಯಾಗುತ್ತಾಳೆ. ತಾನು ಎಣಿಸದ್ದೇ ಒಂದು ಈಗ ಆದದ್ದೇ ಒಂದು. ಪುಂಡರ ಲೂಟಿಗೆ ಬಲಿಯಾದ ತನ್ನ ರಾಜ್ಯ, ತನ್ನಿಂದಲೇ ಹತನಾದ ತನ್ನ ತಂದೆ, ವಿಷಪಾನದಿಂದ ಆತ್ಮಹತ್ಯೆ ಮಾಡಿಕೊಂಡ ತನ್ನ ತಾಯಿ, ಸ್ಮಶಾನ ಸದೃಶವಾದ ವಿಜಯನಗರದ ಹೊರವಲಯದಲ್ಲಿ ಅನಾಥ ಪ್ರೇತದಂತೆ ತಿರುಗುವಂತಾದ ತನ್ನ ದುಃಸ್ಥಿತಿ ಇವೆಲ್ಲವೂ ರುಸ್ತುಂಷಹನಿಗೆ ದುಃಖ ತರುತ್ತವೆ. ತಾಯಿ ತಿರುಮಲಾಂಬೆಯ ಕ್ಷಮೆ ಬೇಡಿ, ಅಳಿದುಳಿದ ಸಾಮ್ರಾಜ್ಯಕ್ಕೆ ಊರೆಗೋಲಾಗುವುದಾಗಿ ಭಾಷೆ ಕೊಟ್ಟು, ಅರ್ಥವಿಲ್ಲದ ಹಗಲುಗನಸು ಕಾಣುತ್ತಾನೆ. ಇಲ್ಲಿಗೆ ನಾಟಕ ಮುಗಿಯುತ್ತದೆ.

ರಾಮಕೃಷ್ಣಯ್ಯನ ಮಧ್ಯಸ್ತಿಕೆಯಲ್ಲಿ ಆಗುವ ತಿರುಮಳಾಂಬೆ ಮತ್ತು ರುಸ್ತುಂಷರ ಸಮಾಗಮ ಸನ್ನಿವೇಶ ಪ್ರಬಲ ಚಿಕಿತ್ಸೆಗೊಳಗಾಗಿದೆ, ವಿಮರ್ಶಕರೊಬ್ಬರು - ನಾಟಕದ ಕೊನೆಯ ಸ್ಥಾನವು ಮೊದಲಿನ ದುರಂತಕ್ಕೆ ಅನುಗುಣವಾಗಿಲ್ಲವೆಂದೂ ಮಾಯದ ಗಾಯಕ್ಕೆ ಮಲಮು ಪಟ್ಟಿಯನ್ನು ಹಚ್ಚಿದಂತೆ ಆಗಬಹುದೆಂದೂ ತೋರುತ್ತದೆ'[6] ಎಂದಿದ್ದಾರೆ. ಆದರೆ ವಾಸ್ತವವಾಗಿ ಅದು ಹಾಗಿಲ್ಲ. ದುರಂತದ ತೀವ್ರತೆಯನ್ನು ಹೆಚ್ಚಿಸುವುದೇ ಅಗಿದೆ. ಬದುಕಿನುದ್ದಕ್ಕೂ ಕಣ್ಣೀರಿನಲ್ಲಿ ಕೈತೊಳೆದು ಸುಖೋದಯಕ್ಕೆ ಮೊ ದಲೇ ಕಣ್ಮುಚಿದ ಆಯಷ್ಷೆಗಾಗಿ, ಸುಮಾರು ಮೂರು ಶತಮಾನಗಳ ತನಕ ಸರ್ವಶ್ರೇಷ್ಠ ಸಾಮ್ರಾಜ್ಯವಾಗಿ,

ಬಂಗಾರದ ಮಳೆಗರೆಸಿ ಮೆರೆದ ಪುಂಡರ ಲೂಟಿಗೆ ಸಿಕ್ಕು ಮಣ್ಣುಪಾಲಾದ ಜಗತ್ಪ್ರಸಿದ್ಧವಾದ ಕರ್ಣಾಟಕದ ಹಿಂದೂ ಸಾಮ್ರಾಜ್ಯಕ್ಕಾಗಿ ನಾವು ಕಣ್ಣೀರಿನ ಕೋಡಿಯನ್ನು ಹರಿಸುತ್ತೇವೆ. ತಿರುಮಳಾಂಬೆಯ ಬಗೆಗೆ ನಮ್ಮ ಕನಿಕರದ ಕಣ್ಣೀರು ಮೀಸಲಿದೆ. ಆದರೆ ಅಷ್ಟೇ ಮಟ್ಟದಲ್ಲಿ ರುಸ್ತುಮನಿಗಾಗಿ ನಾವು ಮರುಗುತ್ತೇವೆ. ಕೇವಲ ಅವನು ಪಶ್ಚಾತ್ತಾಪದಿಂದ ಪರಿಶುದ್ಧನಾದ ಎಂದಲ್ಲ; ಅವನು ಬದುಕಿ ಸತ್ತದ್ದರಿಂದ. ಗ್ರೀಕ್ ಮಾದರಿಯಲ್ಲಿ ನೋಡಿದರೆ ಸಾವಿಗಿಂತಲೂ ತೀವ್ರವಾದದ್ದು ಬರಿದಾದ ಬದುಕು. ಗುರುದಕ್ಷಿಣೆಯಾಗಿ ತನ್ನ ಹೆಬ್ಬೆರಳನ್ನೇ ಕತ್ತರಿಸಿಕೊಟ್ಟ ಏಕಲವ್ಯನದ್ದಲ್ಲ ದುರಂತ, ಅದಕ್ಕಿಂತಲೂ ಭಯಾನಕ ದುರಂತತೆ ಅಡಗಿರುವುದು 'ಕಂದಾ ನಿನ್ನ ಬೆರಳಗೆ ನನ್ನ ಕೂರಳ್'[7] ಎಂದುಕೂಂಡ ದ್ರೋಣರಲ್ಲಿ. ನಾವು ಹೆಚ್ಚಾಗಿ ಮರುಗುವುದು ಏಕಲವ್ಯನಿಗಾಗಿ ಅಲ್ಲ, ದ್ರೋಣನಿಗಾಗಿ! ಅದೇ ರೀತಿ ಸತ್ತ ರಾಮರಾಯನ ಬಗೆಗೆ ನಮಗೆ ಕನಿಕರವೇ ಇಲ್ಲ. ಪಾಪಿ! ತನ್ನನ್ನೇ ನಂಬಿದ್ದ ಜನತೆಗೆ, ಸಾಮ್ರಾಜ್ಯಕ್ಕೆ, ಧರ್ಮಕ್ಕೆ ಎಲ್ಲದಕ್ಕೂ ದ್ರೋಹ ಬಗೆದ ಅವನಿಗಾಗಿ ನಾವು ಚಿಂತಿಸುವುದೇ ಇಲ್ಲ. ಅಯಷೆಗಾಗಿ ಕೊರಗಿದರೂ ಅಷ್ಟೇ ಮಟ್ಟದಲ್ಲಿ ನಾವು ತಿರುಮಳಾಂಬೆ ಮತ್ತು ರುಸ್ತುಂಷಹರಿಗಾಗಿಯೂ ಮರುಗುತ್ತೇವೆ. ನಾಟಕದ ಕಡೆ ಕಡೆಯಲ್ಲಿ ರಾಮರಾಯನಿಗಿಂತ ರುಸ್ತುಂಷಹನೇ ರುದ್ರನಾಯಕನಾಗಿ ಪರಿಣಮಿಸುತ್ತಾನೆ. ಆದ್ದರಿಂದ ಕಡೆಯ ದೃಶ್ಯ ರೌದ್ರ ಪರಿಣಾಮವನ್ನು ಪ್ರಬಲಗೊಳಿಸಲು ಸಹಕಾರಿಯಾಗಿದೆ. ಅಂದಾಕ್ಷಣಕ್ಕೆ ತಾಳೀಕೋಟೆಯಲ್ಲಿ ದೋಷವಿಲ್ಲದಿಲ್ಲ. ರುಸ್ತುಂ ಹೆಣ್ಣು ಬೇಡಲು ಬಿಜಾಪುರಕ್ಕೆ ಹೋಗುವುದು, ಉಸ್ಮಾನನು ಬಿಜಾಪುರದವರೊಂದಿಗೆ ನಡೆಸುವ ಕಾರಾಸ್ಥಾನ ಮೊದಲಾದವು ನಾಟಕದ ಕ್ರಿಯೆಯ ದೃಷ್ಟಿಯಿಂದ ಸವಿಯಾಗಿ ಕಂಡರೂ ಲೌಕಿಕ ದೃಷ್ಟಿಯಿಂದ ನಾಟಕಕಾರರ ದೋಷಗಳೇ ಆಗಿ ಉಳಿಯುತ್ತವೆ. ಸುವಿಸ್ತಾರವೂ ಆದ ಸಾಮ್ರಾಜ್ಯದಲ್ಲಿ ಆಡಳಿತ ಭದ್ರತೆಯಾಗಲೀ, ಶತ್ರುವಿನ ಎಚ್ಚರವಾಗಲೀ ಇಲ್ಲ ಎಂದಾಗುತ್ತದೆ. ಅಂತೆಯೇ ಮಾತಿನಲ್ಲಿ ಕಂಡು ಬರುವ ನವುರು ರುದ್ರನಾಟಕಕ್ಕಲ್ಲ ಅನ್ನಿಸುತ್ತದೆ.

೩

ಮಾಸ್ತಿಯವರ ಮಾತಿನ ನವುರು, ನಯ ಹೆಚ್ಚಾಗಿ ಕಂಡು ಬರುವುದು 'ಅನಾರ್ಕಳಿ'ಯಲ್ಲಿ. ಅದರಿಂದಲೇ ಕಲಾದೃಷ್ಟಿಯಿಂದ ಅನಾರ್ಕಳಿ ಕವಿಯ ಸೋಲಿಗೆ ಸಾಕ್ಷಿಯಾಗಿ ನಿಂತಿದೆ. ಸರಳತೆಯೆನ್ನುವುದು ರುದ್ರನಾಟಕದ ಜಾತಕದಲ್ಲಿಲ್ಲ; ನಯದ ನುಡಿಗಳನ್ನೇ ಆಡಿ ತೋರುವುದು ಅವರ ಜಾಯಮಾನವೂ ಅಲ್ಲ. ಹಾಗೆ ಮಾಡಿದ್ದಾದರೆ ಕೋಣನನ್ನು ತಿನ್ನುವ ಮಾರಿಗೆ ಗಸಗಸೆ ಪಾಯಿಸ ಕೊಟ್ಟಂತೆ! ಅಂದರೆ ಅತಿಯಾದ ಸರಳತೆಯು ರುದ್ರನಾಟಕದ ರಚನೆಯಲ್ಲಿ ಒಂದು ದೋಷವೇ ಆಗುವುದರಿಂದ 'ಅನಾರ್ಕಳಿ' ಕಲಾದೃಷ್ಟಿಯಿಂದ, ಕ್ರಿಯಾದೃಷ್ಟಿಯಿಂದ, ಪರಿಣಾಮ ಪ್ರಭಾವ ದೃಷ್ಟಿಯಿಂದ ಸೋತಿದೆ. ವನಮಾಲಿ ಎಂಬಲ್ಲಿ ಬೆಳೆದ ಗ್ರಾಮೀಣ ಹಿಂದೂ ಕನ್ಯೆ ಆಗ್ರಾ ನಗರದಲ್ಲಿ ಅಕ್ಬರನ ಜನಾನಾ ಸೇರುವ ಮುನ್ನವೇ ಗೋಡೆ ಸೆರೆಯಾಗುತ್ತಾಳೆ; ಲೇಲಾಳ ಅಸೂಯೆಗೆ ಬಲಿಯಾಗುತ್ತಾಳೆ. ಇಲ್ಲಿ ಯಾರ ಬಗೆಗೂ ನಮಗೆ ಮರುಕ ಇಲ್ಲ. ಬಣ್ಣದ ಚಿಟ್ಟೆ ಸೆಲೀಂ, ಅವ್ಯವಹಾರಿ ಅಕ್ಬರ್,

ಅಪ್ರಯೋಜಕಳಾದ ರಾಣಿ, ಕಾಡು ಹರಟೆಯ ಗವಾರ್ಯ್, ವಿವೇಕವಿಲ್ಲದೆ ಬಣ್ಣಕ್ಕೆ ಬೆರಗಾಗಿ ಹಾಳಾದ ಅನಾರ್ಕಳಿ, ಈರ್ಷ್ಯೆಯಿಂದ ವಿಷ ತಿಂದು ಸತ್ತ ಲೇಲಾ - ಯಾರೂ ನಮ್ಮ ಕರುಣೆಯನ್ನು ಕೆಣಕುವುದಿಲ್ಲ. ಅನಾರ್ಕಳಿ ಈ ನಾಟಕದ ರುದ್ರನಾಯಕಿ, ಅವಳ ಆ ದುರಂತ ಚಿತ್ರಣವನ್ನು ಪರಿಣಾಮಕಾರಿಯಾಗಿ ನಾಟಕಕಾರರು ಚಿತ್ರಿಸಿಲ್ಲ. ಅಲ್ಪ ವರದಿಯೊಂದಿಗೆ ಅವರ ಕಾವು ಆರಿಯೇ ಹೋಗುತ್ತದೆ. ತಿಳುವಳಿಕೆಯಿಲ್ಲದ ಹಳ್ಳಿ ಹುಡುಗಿ ದುಡುಕಿದಳು, ಹಾಳಾದಳು, ಹೋದರೆ ಹೋಗ್ತಾಳೆ ಎಂಬ ಭಾವನೆ ಮೂಡುತ್ತದೆಯೋ ಹೊರತು 'ಅಯ್ಯೋ !' ಎಂಬ ಕಣ್ಣೀರು ಮಿಡಿಯುವುದಿಲ್ಲ. ಸೆಲೀಂ ಮತ್ತು ಜುಲೇಯಿಕಾರವರನ್ನು ಕೂಡಿಸಿರುವ ಸನ್ನಿವೇಶವಂತೂ ತುಂಬಾ ಕೃತಕ. ಅನಾರ್ಕಳಿ ಮತ್ತು ಲೇಲಾ ಹೋದ ಮೇಲೆ 'ಹಳೇ ಗಂಡನ ಪಾದವೇ ಗತಿ ಅಂದಂತೆ' ಸೆಲೀಂ ಮೊದಲೇ ಮೂಸಿಬಿಟ್ಟಿದ್ದ ಜುಲೇಯಿಕಾಳನ್ನು ಅಪ್ಪುತ್ತಾನೆ. ಒಟ್ಟಿನಲ್ಲಿ ರುದ್ರನಾಟಕದ ಪಾಕ ಕೆಟ್ಟರೂ ಕೆಡಲಿ, 'ದೇವರು ಎಲ್ಲರಿಗೂ ಒಳ್ಳೆಯದು ಮಾಡಲಿ' ಎಂಬ ತಾತ್ವಿಕ ಭಾವನೆ, ಅದಕ್ಕನುಗುಣವಾದ ಕವಿಮನೋಧರ್ಮ ಇವುಗಳಿಂದಾಗಿ ಶ್ರೇಷ್ಠ ಮಟ್ಟದ ಟ್ರಾಜಡಿಯೆನಿಸಬಹುದಾಗಿದ್ದ ಅನಾರ್ಕಳಿ ತುಂಬಾ ಸಪ್ಪೆಯ ಕಥೆಯಾಗಿ ಉಳಿದಿದೆ.

೪

ಒಂದು ದೃಷ್ಟಿಯಲ್ಲಿ ವೀಕ್ಷಿಸಿದರೆ ಅನಾರ್ಕಳಿಗಿಂತಲೂ 'ಋಷ್ಯಶೃಂಗ' ಗ್ರೀಕ್ ಮಾದರಿಯ ಟ್ರಾಜಡಿಯೆನ್ನಿಸುತ್ತದೆ. ವಿಭಾಂಡಕ ಮಹಾಮುನಿಯ ಪುತ್ರನಾದ ಈತ ಹದಿನೆಂಟು ವರ್ಷದ ಪ್ರಾಯದವನಾಗುವವರೆಗೂ ಹೆಣ್ಣಿನ ಮುಖದರ್ಶನವನ್ನೇ ಮಾಡದಿದ್ದರೆ ಅವನಿಗೆ ಸ್ಥಿರ ಜೀವತ್ವ ಲಭಿಸುತ್ತದೆಂದು ತಿಳಿದು ವಿಭಾಂಡಕ ಅವನನ್ನು ಒಂಟಿಯಾಗಿ ಆಶ್ರಮದಲ್ಲಿಟ್ಟಿರುತ್ತಾನೆ. ಆದರೆ ಕೇಗಳ ಸಾಮ್ರಾಜ್ಯವನ್ನೇ ಹಾಳು ಮಾಡುತ್ತಿದ್ದ ಕ್ಷಾಮ ನಿವಾರಣೆಗಾಗಿ ಮಹಾಯಾಗವೊಂದನ್ನು ಆಚರಿಸಬೇಕಾಗುತ್ತದೆ. ಅದಕ್ಕೆ ವಿಭಾಂಡಕ ಅಥವಾ ಅವನ ಮಗ ಋಷ್ಯಶೃಂಗ ಇವರೇ ಸಮರ್ಥ ಪುರೋಹಿತರೆಂದು ತಿಳಿದು ರಾಜಪುತ್ರಿ ಚಂಚಲೆ ಋಷ್ಯಶೃಂಗನನ್ನು ಕರೆತರಲು ನಿಯಮಿತಳಾಗುತ್ತಾಳೆ. ಋಷ್ಯಶೃಂಗ ಬರುತ್ತಾನೆ, ಯಜ್ಞ ನಡೆದು ದೇಶ ಕ್ಷೇಮವಾಗುತ್ತದೆ. ಆದರೆ ಸ್ಥಿರ ಜೀವತ್ವವನ್ನೇ ಹಾಳುಮಾಡಿಕೊಂಡ ಋಷ್ಯಶೃಂಗನ ಆತ್ಮಪತನ ಬಹುದೊಡ್ಡ ದುರಂತವೆನ್ನಿಸುತ್ತದೆ.

ಈ ನಾಟಕದ ಅಂತ್ಯದಲ್ಲಿ ಆಗಮಿಸುವ ವಿಭಾಂಡಕ ಮುನಿಯ ಅಭಿನಯ ತುಂಬ ಸಪ್ಪೆ. ಅಷ್ಟೆ ಮಟ್ಟದ್ದು ಉಷಾನಾಟಕದ ಬಾಣಾಸುರನ ನರ್ತನ. ಉತ್ತಮ ರುದ್ರನಾಟಕವಾಗಬಹುದಾಗಿದ್ದ ತಿರುಪಾಣ ದಿವ್ಯಾಂತವಾಗಿದೆ. ಇಷ್ಟೆಲ್ಲಾ ಸಮೀಕ್ಷೆಯಲ್ಲಿ ನಮಗೆ ತಿಳಿಯುವುದು ಮಾಸ್ತಿಯವರ ಮನೋಧರ್ಮ. ಅದಕ್ಕೆ ಅನುಗುಣವಾದ ರಚನೆ ಅವರ ಕೃತಿಗಳು. ಭದ್ರನಾಟಕಗಳಲ್ಲಿ ಅವರ ಯಶೋಧರಾ ಮೆಚ್ಚಿದಂತೆ, ರುದ್ರನಾಟಕಗಳಲ್ಲಿ ತಾಳೀಕೋಟೆ ಒಂದನ್ನು ಮಾತ್ರ ಮೆಚ್ಚಬಹುದಾಗಿದೆ.

ಯಶೋಧರಾ

ನಾ. ಡಿಸೋಜ

ಬುದ್ಧನ ಜೀವನಕ್ಕೆ ಸಂಬಂಧಪಟ್ಟಂತೆ ಕನ್ನಡದ ಲೇಖಕರು ಬರೆದಿರುವ ನಾಟಕಗಳಲ್ಲಿ ಕೆ. ವಿ. ಪುಟ್ಟಪ್ಪನವರ ''ಮಹಾರಾತ್ರಿ'', ಶಿವರಾಮ ಕಾರಂತರ ''ಕಿಸಾಗೋತಮಿ'' ಹಾಗೂ ''ಬುದ್ಧೋದಯ'', ಮತ್ತು ಶ್ರೀನಿವಾಸರ ''ಯಶೋಧರಾ'' ನಾಟಕಗಳು ಸಾಕಷ್ಟು ಜನಪ್ರಿಯವಾಗುವುದರ ಜೊತೆಗೆ ಸಾರ್ಥಕ ನಾಟಕಗಳೆಂದು ಕರೆಸಿಕೊಳ್ಳಲು ಯೋಗ್ಯವೂ ಆಗಿದೆ.

ಪುಟ್ಟಪ್ಪನವರ ''ಮಹಾರಾತ್ರಿ'' (ಮೊದಲ ಮುದ್ರಣ ೧೯೬೭) ರಾಜಕುಮಾರ ಸಿದ್ಧಾರ್ಥ ಬುದ್ಧನಾಗಲು ಹೊರಟ ಮಹಾರಾತ್ರಿಯನ್ನು ಕುರಿತು ಬರೆದ ನಾಟಕವಾಗಿದೆ. ಶಿವರಾಮ ಕಾರಂತರ ''ಬುದ್ಧೋದಯ'' (ಮೊದಲ ಮುದ್ರಣ ೧೯೪೬) ಸಿದ್ಧಾರ್ಥ; ರೋಗ, ಮುಪ್ಪು, ಸಾವನ್ನು ರಾಜಬೀದಿಯಲ್ಲಿ ಕಂಡು ಈ ನೋವು ನರಳಾಟಗಳಿಂದ ಮಾನವನನ್ನು ಮುಕ್ತಗೊಳಿಸಲು ಹೊರಡುವ ಘಟನೆಯ ಚಿತ್ರಣವಾಗಿದೆ. ಈ ನಾಟಕದ ಜೊತೆಗೇನೆ ಹೊರಬಂದ ''ಕಿಸಾಗೋತಮಿ'' ಬುದ್ಧನಿಂದ ಸಾಂತ್ವನ ಪಡೆದ ತಾಯಿಯೋರ್ವಳು ಬೆಳಕನ್ನು ಕಂಡ ಕತೆಯನ್ನು ಹೇಳುತ್ತದೆ. ಆದರೆ ಈ ನಾಟಕಗಳಿಗಿಂತ ತುಸು ಬೇರೆಯಾದ ಕಥಾವಸ್ತುವನ್ನುಳ್ಳ ಶ್ರೀನಿವಾಸರ ''ಯಶೋಧರ'' (ಮೊದಲ ಮುದ್ರಣ ೧೯೩೩) ಬುದ್ಧನ ಮಡದಿ ಯಶೋಧರೆಯ ಬಾಳಿನ ತಳಮಳವನ್ನು, ಅವಳ ತ್ಯಾಗ ಜೀವನವನ್ನು, ಅವಳಿಗೆ ಬುದ್ಧನಿಂದಾದ ಅನ್ಯಾಯವನ್ನು, ಯಶೋಧರೆಯ ಬಾಳಿನ ಸಫಲತೆಯನ್ನು ಚಿತ್ರಿಸುತ್ತದೆ.

ಮೇಲೆ ಹೇಳಿದ ನಾಲ್ಕೂ ನಾಟಕಗಳು ಗೀತರೂಪಕಗಳೇ ಆಗಿದ್ದು, ಕಾವ್ಯಮಯವಾದ ಶೈಲಿ, ಹೃದಯ ಮಿಡಿಯುವಂತಹಾ ಸನ್ನಿವೇಶ ನಿರ್ಮಾಣ, ಮನ ಕರಗುವ ಮಾತುಗಾರಿಕೆ, ಅದ್ಭುತವಾದ ಪಾತ್ರ ಸೃಷ್ಟಿಗಳಿಂದ, ಕನ್ನಡದ ಉತ್ತಮ ನಾಟಕಗಳೆನಿಸಿವೆಯಾದರೂ ಶ್ರೀನಿವಾಸರ ''ಯಶೋಧರ'' ಒಂದು ಹೆಜ್ಜೆ ಮುಂದೆ ಹೋಗಿ ಕನ್ನಡದ ಅಪೂರ್ವ ನಾಟಕವೆನಿಸಿಕೊಂಡಿದೆ. ವಿಶೇಷವಾಗಿ ಯಶೋಧರೆಯ ಪಾತ್ರ ನಿರೂಪಣೆಯ ದೃಷ್ಟಿಯಿಂದ, ಅವಳ ಮನಸ್ಸಿನ ನೋವನ್ನು, ಅವಳ ಮನದಲ್ಲಿ ಉದ್ಭವವಾದ ಸಮಸ್ಯೆಗಳನ್ನು, ಅವಳು ಕೊನೆಯಲ್ಲಿ ಕಂಡುಕೊಂಡ ಶಾಂತಿಯನ್ನು ಯಶಸ್ವಿಯಾಗಿ ನಿರೂಪಿಸುವುದರ ಮೂಲಕ ಶ್ರೀನಿವಾಸರು ಯಶೋಧರೆಗೆ ಬುದ್ಧನಿಗಿಂತ ಮಿಗಿಲಾದ ಒಂದು ಸ್ಥಾನವನ್ನು ಓದುಗರ ಮನಸ್ಸಿನಲ್ಲಿ ತಂದುಕೊಡುವುದರ ಜೊತೆಗೆ, ಒಂದು ಶ್ರೇಷ್ಠ ನಾಟಕವನ್ನು ನಮಗೆ ನೀಡಿದ್ದಾರೆ.

ಸಿದ್ಧಾರ್ಥ ಬುದ್ಧನಾಗಿ ಹತ್ತು ವರ್ಷಗಳು ಉರುಳಿವೆ. ರಾಹುಲ ಬೆಳೆದಿದ್ದಾನೆ. ಬುದ್ಧ ಭಗವಾನನಾಗಿ ಲೋಕದ ಎಲ್ಲಾ ಜನರಿಗೆ ಮುಕ್ತಿ ಮಾರ್ಗವನ್ನು ತೋರಿಸುತ್ತಿದ್ದಾನೆ. ಆದರೆ ಅವನ ಮಡದಿ ಯಶೋಧರೆ ಮಾತ್ರ ಕಪಿಲವಸ್ತುವಿನ ಅರಮನೆಯ ತನ್ನ ಅಂತಃಪುರದಲ್ಲಿ

ಬುದ್ಧನ ಒಂದು ಪಟವನ್ನು ಎದುರಿರಿಸಿಕೊಂಡು ಚಿಂತಾಮಗ್ನಳಾಗಿ ಕುಳಿತಿದ್ದಾಳೆ. ಯಶೋಧರ ನಾಟಕ ಹೀಗೆ ಪ್ರಾರಂಭವಾಗುತ್ತದೆ......

ಪರಿಚಾರಿಕೆಯಾದ ಅಂಬಿಕೆ ಒಡತಿಯ ಮನದಳಲನ್ನು ನೋಡಿ ಸಹಿಸಲಾರದೆ, ಹಳೆಯದಾದ ನೋವನ್ನು ಹೀಗೆ ಹೊಸದು ಮಾಡಿ ಕೊರಗಬೇಡಿರೆಂದು ಕೇಳಿಕೊಂಡಾಗ ಯಶೋಧರೆ...

"ಹಳದಾದ
ಈ ನನ್ನ ನೋವು ದಿನದಿನಕೆ ಹೊಸಹೊಸತಾಗಿ,
ಉಪವನದ ಅಶ್ವತ್ಥ ನೆಲೆಯ ಕಟ್ಟೆಯ ಕೆದರಿ
ಬೇರೂರಿ ಬೆಳೆದಂತೆ, ನನ್ನ ಜೀವವ ಸೀಳಿ
ಬೆಳೆಯುತಿರುವುದು ತಾಯಿ. ತಡೆಯಲಾರೆನು ನಾನು"

ಎಂದು ಉತ್ತರಿಸುತ್ತಾಳೆ.

ತನ್ನ ಅಣ್ಣ ತನ್ನನ್ನು ಬಿಟ್ಟು ಹೊರಟು ಹೋದನೆಂಬ ನೋವು ಬೇನೆ 'ಮೊದಲು ಮನೆಯನು ತುಂಬಿದವು' ಎನ್ನುತ್ತಾಳೆ ಯಶೋಧರೆ. ಈ ನೋವಿನ ಆಳ ಅಗಲ ವಿಸ್ತಾರವಾಗುತ್ತ ಹೋಯಿತು. ನಗರ, ಉಪವನೋದ್ಯಾನವನು ತುಂಬಿ, "ತುಂಬಿದವು ಸಾಗರದ ಕೂಪವನು; ಆಗಸದ ಆಶವರಿಯದ ಅಂತರಾಳವನು ತುಂಬಿದವು."

"ಲೋಕಕೇ ಶಾಂತಿಯನು ತರುವ ಚಂದ್ರನ ಕಾಂತಿ
ನನ್ನೊಳಗ ಬೆಳಗದವೊಲೆನ್ನ ಹೃದಯದ ಮಧ್ಯೆ
ಕತ್ತಲೆಯ ಕೋಟೆಯನು ಕಟ್ಟಿದವು...."

ಈ ಕಗ್ಗತ್ತಲೆಯಲ್ಲೇ ಯಾಂತ್ರಿಕವಾಗಿ ಬದುಕಿದ್ದ ಯಶೋಧರೆಯ ನೋವು ಬೇಗುದಿಯನ್ನು ಹೆಚ್ಚಿಸುವಂತಹ ಒಂದು ಕನಸನ್ನು ಹಿಂದಿನ ರಾತ್ರಿ ಅವಳು ಕಂಡಳು.

ಈ ಕನಸಿನಲ್ಲಿ ಸೊಗಸಿನ ತಾಣದಲ್ಲಿದ್ದ ಒಂದು ವೃಕ್ಷವು ಒಂದು ಬಿಳಲನ್ನು ಬಿಟ್ಟು ದೂರ ಸರಿದುದನ್ನು ಅಚ್ಚರಿಯಿಂದ ನೋಡಿ, ಅದರ "ಕುಡಿ ತಳಿರ ನೋಡಿ ಮೈಯ ಸವರಿ ಆಹಾ ಎಷ್ಟು ಚಂದವಾಗಿಹುದು ಎನ್ನುತ್ತಿರಲು" ದೂರ ಸರಿದ ಮರ ಎಳೆಯನಿಗೆ ಬಾ ಎಂದು ಕರೆಯುತ್ತಿರುವುದನ್ನು ಕಂಡಳು ಯಶೋಧರೆ. ಎಳೆಯ ಮರ ಮರುಕ್ಷಣದಲ್ಲಿ ಅದರತ್ತ ಹೋಯಿತು ಕೂಡ. ಹಿಂದೊಮ್ಮೆ ಇಂಥದೇ ಕನಸನ್ನು ಕಂಡಿದ್ದಳು ಈಕೆ. ನಿದ್ದೆ ತಿಳಿದು ಎದ್ದು ನೋಡಿದಾಗ ಅವಳ ಪ್ರಿಯಕರನಿರಲ್ಲಿಲ್ಲ. ಅದೇ ಭೀತಿಯಿಂದ ಈ ಬಾರಿ ಎದ್ದು ನೋಡಿದಳು. ರಾಹುಲನ ದರ್ಶನವಾಗಿ ಮನಸ್ಸಿಗೆ ಸಮಾಧಾನವಾಯಿತು. ಆದರೆ ನಾಳೆ ಏನಾಗುವುದೋ ಎಂಬ ಭೀತಿಯಲ್ಲಿ ಅವಳು ಈಗಲೂ ಬೇಯುತ್ತಿದ್ದಾಳೆ. ಅವಳ ವ್ಯಥೆ ಇಂದು ಹೆಚ್ಚಾಗಲು ಇದೂ ಒಂದು ಪ್ರಮುಖ ಕಾರಣವಾಗಿದೆ.

ಅಂಬಿಕೆ ಇಂತಹ ಭೀತಿ ಬೇಡವೆಂದು ಪರಿಪರಿಯಾಗಿ ಹೇಳಿದರೂ ಯಶೋಧರೆಯ ಮನಸ್ಸಿಗೆ ಸಮಾಧಾನವಾಗುವುದಿಲ್ಲ. ಸಿದ್ಧಾರ್ಥ ತನ್ನನ್ನು ಅಗಲಿ ಹೋಗುತ್ತಾನೆಂದು ಯಾರು ತಿಳಿದಿದ್ದರು ಎಂದು ಅವಳು ಅಂಬಿಕೆಗೆ ಕೇಳುತ್ತಾಳೆ. ಆಹಾರ, ಕೇಳಿ, ವಿಹಾರ, ಶಯನಾಸನ, ಎಲ್ಲ ಸುಖಗಳಲ್ಲಿ, ಎಲ್ಲ ಭೋಗಭಾಗ್ಯದಲ್ಲಿ ಮಡದಿಯ ಸುಖವನ್ನು ಮೊದಲು ನೋಡಿ ತಾ ಸುಖಿಸುತ್ತಿದ್ದ ಸಿದ್ಧಾರ್ಥ ಹೀಗೆ ತನ್ನನ್ನು ಬಿಟ್ಟು ಹೊರಟು ಹೋದನಲ್ಲ, ಮೋಡವಿಲ್ಲದ ಆಗಸದಿಂದ ಒಂದು ಸಿಡಿಲು ಬಡಿದು, ತನ್ನ ಸುಖವನ್ನು ಅಂತ್ಯಗೊಳಿಸಿತಲ್ಲ...ಎಂದು ಹಿಂದಿನದನ್ನು ನೆನೆದು ಕಣ್ಣೀರಿಡುತ್ತಾಳೆ ಯಶೋಧರೆ

"... ಎಲ್ಲಾ ಸುಖದಿ
ಜೊತೆಗೆ ಕರೆದವರು ಮುಕ್ತಿಯ ಸುಖಕೆ ಒಬ್ಬರೇ
ನಡೆದರಮ್ಮಾ; ನನ್ನ ಬಿಟ್ಟು ಮರೆಯಾದರು"

ಎಂದು ಯಶೋಧರೆ ಸಿದ್ಧಾರ್ಥ ಬುದ್ಧನಾಗುವ ಭರದಲ್ಲಿ ತನಗೆ ಬಗೆದ ದ್ರೋಹವನ್ನು ಅಂಬಿಕೆಯಲ್ಲಿ ತೋಡಿಕೊಳ್ಳುತ್ತಾಳೆ.

ಕ್ಷಣಗಳು ಉರುಳಿದ ಹಾಗೆ, ಶಾರಿಕೆಯೊಡನೆ ಹೂವು ತರಲೆಂದು ನಂದನಕ್ಕೆ ಹೋದ ಮಗ ರಾಹುಲ ಬರುತ್ತಾನೆ. ತಾಯಿ ಹಾಗೂ ಅಂಬಿಕೆಯರು ಅಳುತ್ತಿರುವುದನ್ನು ಗಮನಿಸಿ, ತಾಯಿಯ ಕಣ್ಣೀರಿಗೆ ಕಾರಣವನ್ನು ಕಲ್ಪಿಸಿಕೊಂಡು, ತಾನು ತಂದೆಯನ್ನು ಕರೆತರಲು ಹೋಗುವೆನೆಂದು ಹೇಳುತ್ತಾನೆ ರಾಹುಲ.

ಯಶೋಧರೆ ಬೆಚ್ಚಿ ಬೀಳುತ್ತಾಳೆ.

ರಾಹುಲ ತಾಯಿ, ತಾತನ ಒಪ್ಪಿಗೆ ಪಡೆದು ಅಂಬಿಕೆಯೊಡನೆ ಬುದ್ಧನನು ಕಾಣಲೆಂದು ಹೋಗುವುದೆಂದು ತೀರ್ಮಾನವಾಗುತ್ತದೆ.

*

ರಾಹುಲ, ಅಂಬಿಕೆಯರ ಪ್ರಯತ್ನದಿಂದೆಂಬಂತೆ ಬುದ್ಧ ಕಪಿಲವಸ್ತುವಿಗೆ ಆಗಮಿಸುತ್ತಾನೆ. ಬುದ್ಧನನ್ನು ಎದುರುಗೊಳ್ಳಲೆಂದು ಊರು ಊರೇ ಹೊರಟು ಹೋಗಿರಲು ಯಶೋಧರೆ ತನ್ನ ಅಂತಃಪುರದಲ್ಲಿಯೇ ಉಳಿದುಕೊಂಡು ತನ್ನ ಪುಣ್ಯವನ್ನು ಹಳಿಯುಕೊಳ್ಳುತ್ತಿದ್ದಾಳೆ.

ಸಿದ್ಧಾರ್ಥ ಚಿಕ್ಕಂದಿನಲ್ಲಿ ಕಪಿಲವಸ್ತುವಿನಲ್ಲಿದ್ದಾಗ ಅವನನ್ನು ಅಷ್ಟಿಷ್ಟು ತಿಳಿದವರು, ತಿಳಿಯದವರು, ಅರಮನೆಯಲ್ಲಿ ಒಂದಿಷ್ಟು ಸೇವೆ ಮಾಡಿದವರು, ಮಾಡದವರು, ದೂರದಲ್ಲಿ ನಿಂತು ಕೈ ಮುಗಿದವರು, ದಾರಿಯಲ್ಲಿ ನಿಂತು, ಅಗೋ ನೋಡು ರಾಜಕುಮಾರ ಸಿದ್ಧಾರ್ಥ ಎಂದು ಹೇಳಿದವರು, ಸಿದ್ಧಾರ್ಥನ ಹೆಸರನ್ನಷ್ಟೇ ಕೇಳಿದವರು, ಕೇಳದಿದ್ದವರು, ಎಲ್ಲರೂ ಸಂಭ್ರಮದಿಂದ ಸಡಗರದಿಂದ ನಮ್ಮ ರಾಜಕುಮಾರ, ನಮ್ಮ ಗುರು ಎಂದು ಅವನನ್ನು ನೋಡಲು ಧಾವಿಸಿರುವಾಗ-

"ದೇಹ, ಮನ, ಉಸಿರು ಎಲ್ಲವನು
ಅವನುಸಿರು ಮನ ದೇಹದಲಿ ಬೆರೆಸಿ ಒಂದಾಗಿ
ಬಾಳಿನೊಂದರ್ಧವಾಗಿದ್ದವಳು..."

-ಯಶೋಧರೆ, ತನ್ನಾಣ್ಮನನು ನೋಡುವುದು ಸಲ್ಲದೆಂದು ಅರಮನೆಯಲ್ಲೇ ಉಳಿದಾಗ, ಅಂಬಿಕೆ ಗುರುಗಳನ್ನು ನೋಡಬಹುದೆಂದು ಅರಿಕೆ ಮಾಡಿಕೊಳ್ಳುತ್ತಾಳೆ. ಅಂಬಿಕೆ ತನ್ನಾಣ್ಮನನು ಗುರುವೆಂದು ಕರೆದುದನು ಕೇಳಿ ಯಶೋಧರೆ-

"ಅಣ್ಮನನು ನೀನೂ ಗುರುವಾಗಿ ಮಾಡಿಕೊಂಡಿರುವೆಯಾ?"

ಎಂದು ಕೇಳುತ್ತಾಳೆ. ಈ ಪ್ರಶ್ನೆಗೆ ಅಂಬಿಕೆ ಆತನನ್ನು ನೋಡುವವರೆಗಷ್ಟೇ ಹಲವಾರು ಸಂಬಂಧಗಳು ನೆನಪಿಗೆ ಬರುತ್ತವೆ, ಆತನನ್ನು ನೋಡಿದ ಮೇಲೆ ಎಲ್ಲರೂ ಅವನನ್ನು ಗುರುವೆಂದು ಕರೆಯುತ್ತಾರೆ ಎನ್ನುತ್ತಾಳೆ.

ಈ ಮಾತು ಕೇಳಿ ಯಶೋಧರೆ ಮತ್ತೂ ನೋಯುತ್ತಾಳೆ. ಸಿದ್ಧಾರ್ಥ ಅವಳನ್ನು

ಬಿಟ್ಟು ಹೋದಾಗ ಲೋಕವನ್ನೇ ಬಿಟ್ಟನೆಂದು ಎಣಿಸಿದ್ದಳು ಆಕೆ. ಆದರೆ ಈಗ ನೋಡಿದರೆ ತನ್ನೊಬ್ಬಳನ್ನೇ ಆತ ಬಿಟ್ಟಂತೆ ಕಾಣತ್ತಿದೆ.

''ನಾನೊಬ್ಬಳೇ
ತ್ಯಾಜ್ಯಳಾತನಿಗೆ, ವರ್ಜ್ಯಳು. ನಾನು ಒಬ್ಬಳು
ಅವರ ಎನ್ನವನೆಂದು ಕರೆಯಾಲಾಗದ ಪಾಪಿ''

ಎಂದು ಯಶೋಧರೆ ಗೋಳಾಡುತ್ತಾಳೆ.

ಈ ಮಾತು ನಡೆಯುತ್ತಿರುವಾಗಲೇ ಹೊರಗೆ ದೂರದಲ್ಲಿ ಕಹಳೆ, ಓಲಗ, ವೇದ ಘೋಷ ಕೇಳಿಬರುತ್ತದೆ. ಅಂಬಿಕೆ ಕಿಟಕಿಯ ಬಳಿ ಸಾರಿ ಒಡೆಯರು ಬಿಜಗೆಯ್ಯುದನ್ನು ಹೇಳುತ್ತಾಳೆ. ಹಾಗೂ ಕಿಟಕಿಯ ಬಳಿನಿಂತು ಎಲ್ಲವನ್ನೂ ನೋಡಬಹುದೆಂದಾಗ ಯಶೋಧರೆ-

''ನಾನಲ್ಲಿ ನಿಂತು ನೋಡಿದೊಡೆ ಎನ್ನೀ ದೃಷ್ಟಿ
ಆ ದಿವ್ಯ ದೇಹವನು ಸೋಕಿ ಇನ್ನೇನಶುಭ
ತಾಗುವುದೋ, ನಾನಲ್ಲಿ ಬಂದು ನೋಡುವುದಿಲ್ಲ.
ನೀನೆನ್ನ ಕಣ್ಣಾಗು. ನೋಡಿದುದ ಬಣ್ಣಿಸು.
ಕಣ್ಣಿನಿಂದೀಂಟುವುದು ಕಿವಿಗಳಿಂದೀಂಟುವೆನು''

ಎಂದು ಹೇಳುತ್ತಾಳೆ.

ಹತ್ತು ವರುಷಗಳ ನಂತರ ಲೋಕ ಗುರುವಾಗಿ ತಿರುಗಿ ಬಂದಿರುವ ಪತಿಯನ್ನು ನೋಡಬೇಕೆಂಬ ಆಸೆಯನ್ನು ಅಲ್ಲೇ ಹುದುಗಿಸಿ, ಅಂಬಿಕೆಯ ಮೂಲಕವೇ ಎಲ್ಲವನ್ನೂ ಕೇಳಿ ತಿಳಿದುಕೊಳ್ಳುತ್ತಾಳೆ. ವಿವರ ವಿವರವಾಗಿ ಎಲ್ಲವನ್ನೂ ಹೇಳುವಂತೆ ಅಂಬಿಕೆಗೆ ಕೇಳಿಕೊಳ್ಳುತ್ತಾಳೆ ಯಶೋಧರೆ. ಅವರು ಎಲ್ಲಿ ನಿಂತಿದ್ದಾರೆ? ವೇಷ ಭೂಷಣವೇನು? ಅವರ ಬಳಿಯಲ್ಲಿ ಯಾರಿದ್ದಾರೆ? ಅವರ ಹೇಗೆ ಕಾಣಿಸುತ್ತಾರೆ? ಎಂದೆಲ್ಲ ಕೇಳುತ್ತಾಳೆ. ಅಂಬಿಕೆ ಬುದ್ಧನ ದಿವ್ಯ ರೂಪವನ್ನು ಬಣ್ಣಿಸಿದಾಗ-

''ಅಹ ಅಂಬಿಕೆ,
ಯಾವ ಪುಣ್ಯವ ಮಾಡಿ ನೀನಿದನು ನೋಡುತಿಹೆ?
ನಾನೇಕೆ ಮಾಡದಾದೆನೋ ಅದನು ಪೂರ್ವದಲಿ''

ಎಂದು ಹಲಬುತ್ತಾಳೆ. ಮರುಕ್ಷಣದಲ್ಲಿ ''ಸತಿಯಾದ ನಾರಿ ಸನ್ಯಾಸದಲ್ಲಿ ಪತಿಯ ನೋಡುವುದು ಸಲ್ಲದು'' ಎಂಬ ಧರ್ಮ ಮತದಲ್ಲೇ ತಪ್ಪಿರಬಹುದು ಎನಿಸುತ್ತದೆ ಅವಳಿಗೆ. ಬಾಳುಗಳ ಸೀಳಿ ಮನೆಗಳ ಮುರಿದು ಹೃದಯಗಳ ಪುಡಿಮಾಡಿ ತಣ್ಣೀರ ಕಾಲುವೆಯಲ್ಲಿ ಕದಡಿಸುವ ಈ ಧರ್ಮ ಮತಗಳು ಏತರ ಧರ್ಮ ಮತಗಳು? ಎಂದಾಕೆ ಸಂತಾಪದಿಂದ, ಸಂಕಟದಿಂದ ಕೆರಳಿ ಕೇಳುತ್ತಾಳೆ. ಮತ್ತೆ ಪತಿಯ ನೆನಪಾಗುತ್ತದೆ. ಬುದ್ಧನ ಬಗ್ಗೆ ಕೇಳುತ್ತಾಳೆ. ತನ್ನ ಮನಸಿನ ಕಣ್ಣುಗಳ ಮೂಲಕ ಆಣ್ಮನನ್ನು ಕಂಡು ಸಂತೋಷಪಡುತ್ತಾಳೆ. ಜೊತೆಗೇನೆ ತನ್ನಾಣ್ಮನಿಗೆ ತನ್ನ ನೆನಪಾಗಿಲ್ಲವೆಂದು ಊಹಿಸಿಕೊಂಡು ಸಂಕಟಪಡುತ್ತಾಳೆ. ಮತ್ತೆ-ಚೇತರಿಸಿಕೊಂಡು-

''ನನ್ನರಸನಿಗೆ
ಮನವೊಪ್ಪಿ ಚೆಲುವಾದ ನನ್ನ ಅಂದಿನ ವಸ್ತ್ರ

ಅಮೃತರುಚಿ ಚೀನಾಂಬರವನು ತೆಗೆದಿರಿಸು;
ಅವರ ಮನವೊಪ್ಪುವಂದದೊಳಂದು ಗೆಯ್ದಂತೆ
ಧಮ್ಮಿಲ್ಲವನು ರಚಿಸು, ಮೆಯ್ಯ ಸಿಂಗರಿಸು..''

ಎನ್ನುತ್ತಾಳೆ. ಅಂಬಿಕೆ ಮಂಗಳ ದ್ರವ್ಯಗಳನ್ನೊಯ್ದು ತನಗಾಗಿ ಬುದ್ಧನ ಪಾದದಲ್ಲಿ ಅರ್ಪಿಸಿದಾಗ ತಾನಿಲ್ಲಿ ''ನೆನವಿನಲಿ ಪೂಜಿಪೆನು'' ಎಂದು ಯಶೋಧರೆ ಅಂಬಿಕೆಗೆ ಹೇಳುತ್ತಾಳೆ. ಹತ್ತು ವರುಷಗಳ ಹಿಂದೆ ಬಿಟ್ಟು ಎಲ್ಲಿಗೋ ಹೋದ ಜೀವಕಳೆ ತಿರುಗಿ ಬಂದಿದೆ ಎಂದು ಶಾಕ್ಯರು ನಾಡಿನ ಕಣಕಣವೂ ಸಂಭ್ರಮದಿಂದ ಹಾಡಿ ಕುಣಿಯುತ್ತಿರುವಾಗ ತಾನೇಕೆ ಶೋಕಪಡಬೇಕು?

''   ನನ್ನೆದೆಯರಸು
ದೂರ ಹೋಗಿರ್ದವರು ಬಳಿಗೆ ಬಿಜಗೆಯ್ದುದೇ
ಸಂತೋಷವೆಂಬೆನು..''.

ಎಂದು ಕಣ್ಣನ್ನು ಒರೆಸಿಕೊಳ್ಳುತ್ತಾಳೆ.

ಬುದ್ಧನ ಜೊತೆಗೆ ಕಪಿಲವಸ್ತುವಿಗೆ ಆಗಮಿಸಿದ ಅವನ ಶಿಷ್ಯೆಯಲ್ಲಿ ಓರ್ವಳಾದ ಅಂಬಾಪಾಲಿ ಎಂಬ ನಗರ ಸ್ತ್ರೀ ಗುರುಪತ್ನಿಯನ್ನು ನೋಡಲೆಂದು ಬಂದು ಹೋಗುತ್ತಾಳೆ. ಇವಳು ಹೋಗುತ್ತಿರುವಂತೆಯೇ ಬುದ್ಧನ ಶಿಷ್ಯ ಆನಂದ ಬರುತ್ತಾನೆ.

ಯಶೋಧರೆ ಆನಂದನ ಕ್ಷೇಮ ಸಮಾಚಾರ ಕೇಳಿ ಮುಗಿಸಿ ಎಂದಾದರೂ ''ಅವರು'' ತನ್ನನ್ನು ನೆನೆಯುತ್ತಾರೆಯೇ ಎಂದು ಕೇಳುತ್ತಾಳೆ. ಪತಿ ತನ್ನನ್ನು ಸಂಪೂರ್ಣವಾಗಿ ಮರೆತುಬಿಟ್ಟಿದ್ದಾನೋ ಏನೋ ಎಂಬುದನ್ನು ಖಚಿತಪಡಿಸಿಕೊಳ್ಳಲು ಹೀಗೆಂದು ಕೇಳುತ್ತಾಳೆ ಯಶೋಧರೆ, ಆನಂದನ ಉತ್ತರವೂ ತೃಪ್ತಿಕರವಾಗಿರುವುದಿಲ್ಲ. ಯಶೋಧರೆ ''ಅವರೆನ್ನ ನೆನೆದಿಲ್ಲ''ಎಂಬ ತೀರ್ಮಾನಕ್ಕೆ ಬರುತ್ತಾಳೆ.

''.....ಒಬ್ಬಳನೆ ಅರ್ಧರಾತ್ರಿಯೊಳುಳಿದು
ತಪಕೆ ಸಾರಿದವರೆನ್ನನು ನೆನೆಯ ಬಹುದೆಂತು?''

ಎಂದು ಪ್ರಶ್ನಿಸುತ್ತಾಳೆ.

ಆದರೆ ಆನಂದ ಆ ರಾತ್ರಿ ಬುದ್ಧ ಬಹಳ ನೋವನ್ನುಂಡನೆಂದೂ, ''ಜಗತ್ತಿನ ಹಿತವನ್ನು ಸಾಧಿಸುವ ಕಾರ್ಯದಲಿ ಗುರುಗಳು ತಮ್ಮವರ ಸೌಖ್ಯವನು ಕಡೆಗಣಿಸಿದರೆಂದೂ'' ಹೇಳಿದಾಗ ಯಶೋಧರೆ ವ್ಯಂಗ್ಯವಾಗಿ ನುಡಿಯುತ್ತಾಳೆ-

''ಇರುವ ಮನೆಯನು ಸುಟ್ಟು ಊರ ಬೆಳಗುವರಂತೆ''

ಎಂದು. ಈ ಮಾತಿಗೆ ಆನಂದ-

''ಮನೆಯ ಸುಟ್ಟರೋ ತಮ್ಮ ದೀಪವನು ಕೊಟ್ಟರೋ
ಊರ ಬೆಳಗಿದುದು ನಿಜ''

ಎನ್ನುತ್ತಾನೆ.

ಯಶೋಧರೆಯ ಮನಸ್ಸಿನಲ್ಲಿ ನಿರಾಶೆ, ಬೇಸರ ಸಿಟ್ಟು ಇತ್ಯಾದಿಗಳಿವೆಯಾದರೂ ಆನಂದ ಬುದ್ಧನ ಹತ್ತಿರವಿದ್ದುದರಿಂದ ತಾನು ಮಾಡಲಾಗದೇ ಹೋದ ಶುಶ್ರೂಷೆಗಳನ್ನು ಅವನು ಮಾಡಿದನಲ್ಲ ಎಂದು ಸಂತಸವಾಗುತ್ತದೆ. ಯಾರಿಂದಲಾದರೂ ಆಣ್ಮನಿಗೆ ಸೇವೆ ಸಂದರೆ ಸಾಕು ಎನ್ನುತ್ತಾಳೆ. ಹಾಗೆಯೇ ಬಹಳಷ್ಟು ಬಹಳಷ್ಟು ಜನ ಬುದ್ಧನ ಹೆಸರು ಕೇಳಿ ಮನೆಬಿಟ್ಟು ಬಂದರೆಂದೂ ಉಪದೇಶ ಕೇಳಲು ಬಂದವರಲ್ಲಿ ಹಲವರು ಊರಿಗೇ

ಹಿಂತಿರುಗಲ್ಲಿಲ್ಲವೆಂದೂ, ಹೀಗೆಯೇ ಬೇರೆ ಬೇರೆ ವಿಧಗಳಲ್ಲಿ ''ಈ ಆರು ವರುಷದಲ್ಲಿ ಇವರ ಉಪದೇಶದಲಿ ಹತ್ತುಸಾವಿರ ಮಂದಿ ತ್ಯಾಗವನು ವರಿಸಿದರು''ಎಂದು ಆನಂದ ಹೆಮ್ಮೆಯಿಂದ ಹೇಳಿದಾಗ, ಹತ್ತು ವರುಷಗಳ ತನ್ನ ಏಕಾಂತತೆ, ನೋವು, ವಿರಹಗಳ ನೆನಪಾಗಿ ಯಶೋಧರೆ ನುಡಿಯುತ್ತಾಳೆ -

''ಹತ್ತು ಸಾವಿರ ಮನೆಯ ಬೆಳಕುಗಳು ನಂದಿದವು;
ಇಲ್ಲವೆ ಮುಸಕಾದವು. ಅಯ್ಯೋ ನನ್ನಂತೆ
ಎಷ್ಟು ಸಾವಿರ ಮಂದಿ ನೊಂದರೋ...''

ಎಂದು ಕೇಳುತ್ತಾಳೆ.

''ನೋವ ಬೀಜವ ಬಿತ್ತ ಹುಲುಸಾದ ಬೆಳೆ ತೆಗೆದು
ಬೇನೆಯನ್ನವ ಬಡಿಸಿ ಕಣ್ಣೀರುಗಳ ಕುಡಿಸಿ
ಹೆಮ್ಮೆ ಪಡುತಿರುವಿರೇ ತಪಸಿಗಳು?''

ಎಂದು ನೊಂದು, ವ್ಯಂಗ್ಯದನಿಯಲ್ಲಿ ಕೇಳಿ-

''ಮನಸಿನಲಿ
ಕಲ್ಮಷಗಳಿಹವೆಂದು ಮನೆಗಳನು ಬಿಟ್ಟೋಡಿ
ಹೆಂಡಿರನು ಮಕ್ಕಳನು ಬೇಯಿಸಲು ತ್ಯಾಗವೆ?
ವನದೊಳಿಹ ಪೊದೆಗಳನು ಜಯಿಸುವೊಡೆ ಕಿಚ್ಚಿಕ್ಕಿ
ಹುಲ್ಲೆ ಮರಗಳ ಸುಡುವ ನೀತಿಯಿದು''

ಎಂದು ಬುದ್ಧನ ಮಹಾಸಾಧನೆಯನ್ನೇ ಹಗುರವಾಗಿ ಕಾಣುತ್ತಾಳೆ. ಇಲ್ಲಿ ಯಶೋಧರೆಯ ಒಂದೊಂದು ಮಾತು ಅವಳು ಉಂಡ ನೋವನ್ನು ತಿಂದ ಬೇನೆಯನ್ನು ಹೊರ ಹಾಕುತ್ತದೆ.

ಅಷ್ಟರಲ್ಲಿ ಯಶೋಧರೆ ಗುರುಗಳನ್ನು ನೋಡಬಹುದಂತೆ ಎಂಬ ಸುದ್ದಿ ಹೊತ್ತು ಅಂಬಿಕೆ ಬರುತ್ತಾಳೆ. ಈಗಲೂ ಯಶೋಧರೆ ಹಿಂದಿನಂತೆಯೆ ಗಂಭೀರಳಾಗಿ ನಿಲ್ಲುತ್ತಾಳೆ. ಯೋಚಿಸುತ್ತಾಳೆ. ಬುದ್ಧ ಬರಲಿ ಎನ್ನಲಿಲ್ಲ, ಬರಹೇಳು ಎನ್ನಲಿಲ್ಲ. ''ಬರಲು ತಪ್ಪಿಲ್ಲ''ಎಂದ. ಹೇಗೆ ಹೋಗಲಿ? ಹೋಗಿ ಎದುರು ನಿಂತರೆ ಮಾತನಾಡಿಸುತ್ತಾನೋ ಇಲ್ಲವೊ? ಸೀತೆಯನ್ನು ಅಷ್ಟೆಲ್ಲ ಕಷ್ಟಪಟ್ಟು ಪಡೆದ ಶ್ರೀರಾಮ ಏನು ಮಾಡಿದ? ಹತ್ತಿರ ಬಂದಾಗ ಮುಖವನ್ನು ಬೇರೆಡೆಗೆ ತಿರುಗಿಸಲಿಲ್ಲವೇ? ತನ್ನ ಆಣ್ಮ ದೂರದಿಂದ ಬಂದಿದ್ದಾನಹುದು. ಆದರೆ-

''ನೂರು ಯೋಜನ ದೇಶದಂತರವ ಕಳೆದವರು
ಮನಸು ಮನಸಿನ ಮಧ್ಯದಭ್ಯಂತರವನಂತೆ
ಉಳಿಸಿಕೊಂಡಿರಬಹುದು...''

ಎಂದೆಲ್ಲ ಯೋಚಿಸುತ್ತಾಳೆ. ಅಂಬಿಕೆ, ಆನಂದರು ಅವಳಿಗೆ ಹಲವು ರೀತಿಗಳಲ್ಲಿ ತಿಳಿಯಹೇಳಲು ಯತ್ನಿಸುತ್ತಾರೆ. ಆದರೆ ಯಶೋಧರೆ ಖಚಿತವಾಗಿ ಒಂದು ಮಾತನ್ನು ಹೇಳುತ್ತಾಳೆ-

''ನಾನೊಂದು ವಸ್ತುವೆಂದವರು ಎಣಿಸುವುದಾಗೆ
ನಾ ಹೇಳಲೇಕೆ? ತಾವೇ ಇಲ್ಲಿ ಬರುವರು;
ನೋಡುತಿರು''

ಈ ವಿಷಯವನ್ನು ಬುದ್ಧನಿಗೆ ತಿಳಿಸುವ ಹೊಣೆಯನ್ನು ಹೊತ್ತ ಆನಂದ ಹೊರಟಾಗ ಯಶೋಧರೆ ಅವನಲ್ಲಿ ಅರಿಕೆ ಮಾಡಿಕೊಳ್ಳುತ್ತಾಳೆ-

'' ಎನಗಹಂಕೃತಿಯಿಲ್ಲ.
ಅಣ್ಣನಿಗೆ ಬೇಡವಾದೆನೆ ಎಂಬ ಬೆನೆಯಲಿ
ನುಡಿದಿಹೆನು. ಸರಿಯಾಗಿ ಬಿನ್ನಯಿಸು''

*

ಮುಂದಿನ ದೃಶ್ಯದಲ್ಲಿ ಬುದ್ಧನ ಆಗಮನವಾಗುತ್ತದೆ. ಆದರೆ ಇದಕ್ಕೆ ಮುನ್ನ ಪರಿಚಾರಿಕೆ ಅಂಬಿಕೆ ಬುದ್ಧ ಗುರು ಬರುವರೋ ಇಲ್ಲವೋ, ನಿಮಗಂತೂ ಅವರನ್ನು ನೋಡಬೇಕೆಂಬ ಆಸೆ ಬಲವತ್ತರವಾಗಿದೆ, ಅವರ ಸಜ್ಜೆಯಲ್ಲಿ ಕುಳಿತು ಮಧ್ಯಾಹ್ನ ಊರ ಜನರಿಗೆ ಬೋಧಿಸುವಾಗ ನೀವು ಅವರನ್ನ ನೋಡಿ ಎಂದಾಗ; ಯಶೋಧರೆ, ಅವರೂ ತನ್ನಂತೆಯೇ ಹತ್ತು ವರಷ ತನ್ನಿಂದ ಅಗಲಿದ್ದು ಬಂದಿರುವರು. ತನ್ನನ್ನು ನೋಡಬೇಕೆಂಬ ಆಸೆಗೆ ಸಿಕ್ಕಿ ಅವರು ತೊಳಲಾಡದಿರುವಾಗ ಅವರ ಹೆಂಡತಿಯಾದ ತಾನು ದೃಢಚಿತ್ತಳಾಗಿ ಇರಬೇಕಲ್ಲವೆ?

''ಕೇಸರಿಗೆ ಸತಿಯೆನಿಸಬೇಕೆಂಬ ಜೀವದೆದೆ
ಹರಿಣಿಯವೊಲಂಜು ಕುಳಿಯಾಗಿಹುದು ತಕ್ಕುದೆ?

ಆಸೆ ಇದೆ. ಅವಕಾಶವೂ ಇದೆ. ಆದರೆ ಮುಚ್ಚುಮರೆಯಲ್ಲಿ ಕೆಲಸ ಮಾಡಲಾರೆ ಎನ್ನುತ್ತಾಳೆ.

ಅಷ್ಟರಲ್ಲಿ ಅಂಬಾಪಾಲಿ ಬುದ್ಧ ಬರುತ್ತಿರುವ ಸುದ್ದಿ ಹೊತ್ತು ಬರುತ್ತಾಳೆ. ಯಶೋಧರಾ ಬುದ್ಧನನ್ನು ಬರಮಾಡಿಕೊಳ್ಳಲು ಸಂಭ್ರಮದಿಂದ ಸಿದ್ಧಳಾಗುತ್ತಾಳೆ.

ಬುದ್ಧ ಒಳ ಬರುತ್ತಾನೆ. ಅವನ ಪಾದದಡಿಯಲ್ಲಿ ಫಲಪುಷ್ಪಗಳನ್ನಿರಿಸಿ ಅಡಿಯ ಮುಟ್ಟಬಹುದೇ ಎಂದು ಕೇಳಿ, ಮುಟ್ಟಿದೊಡೆ ತಪ್ಪಲ್ಲ ಎಂದು ಬುದ್ಧ ಹೇಳಿದಾಗ ''ತಪ್ಪಲ್ಲದಿರುವುದೇ ಸಾಕನೆಗೆ'' ಎಂದು ಹೇಳಿ ಪಾದಮುಟ್ಟಿ ಕಣ್ಣಿಗೆ ಒತ್ತಿಕೊಳ್ಳುತ್ತಾಳೆ. ದೇವರು ಅಲ್ಲಿ ಮಂಡಿಸಬೇಕು ಎಂದು ಪೀಠವನ್ನು ನೀಡುತ್ತಾಳೆ.

ಬುದ್ಧ ಎಲ್ಲರಿಗೂ ಕುಳಿತುಕೊಳ್ಳಲು ಹೇಳಿ, ಯಶೋಧರೆ ನೋಡುವುದೋ ಬೇಡವೋ ಎಂಬ ಸಂಶಯದೊಳಿರುವರೆಂದು ಆನಂದ ಹೇಳಿದನೆಂದೂ, ಸನ್ಯಾಸಿಯಾದವನಿಗೆ ಈ ನಿಯಮವಿಲ್ಲವೆಂದೂ, ಬಹಳ ದಿನದಿಂದ ನೋಡದೆ ಇರುವುದರಿಂದ ನೋಡಲಿ ಎಂದು ಬಂದೆನೆಂದೂ ಹೇಳಿದಾಗ ಯಶೋಧರೆ-

''ಬೇಗೆಯಲ್ಲಿ ಬೆಂದ ಜೀವಕೆ ಇಂದು ತಣ್ಣಾಯ್ತು''

ಎಂದು ಉತ್ತರಿಸುತ್ತಾಳೆ.

''ಬಹುತೆರನ ಯೋಚನೆಯ ಮಾಡಿ ನೊಂದಿಹರೆಂದು,
ಆನಂದ ಹೇಳಿದನು. ಚಿಂತೆಯೇ ಕಷ್ಟ''

ಎಂದು ಯಶೋಧರೆಗೆ ಚಿಂತೆಯನ್ನು ಬಿಡುವಂತೆ ಉಪದೇಶಿಸುತ್ತಾನೆ. ಯಶೋಧರೆಯ ಒಲವು ತನ್ನ ಹೃದಯದ ನಂದಾದೀಪವಾಗಿ ಈಗಲೂ ಬೆಳಗುತ್ತಿದೆ ಎನ್ನುತ್ತಾನೆ ಬುದ್ಧ. ಅವಳಿಂದ ತಾನು ಪಡೆದು ಸುಖವನ್ನು, ಅರಿವನ್ನು, ಬೆಳಕನ್ನು

ನೆನೆಯುತ್ತಾನೆ ಬುದ್ಧ. ಪತಿಗೆ ಬೇಡದೇ ಹೋದೆನೆಂದು ನೆನೆದುದು ಸಾಕು ಎನ್ನುತ್ತಾನೆ. ಈ ಮಾತಿಗೆ- ಯಶೋಧರೆ, ಈ ನುಡಿಯಿಂದಲೇ ತನಗೆ ಶಾಂತಿಯು ಸಿಕ್ಕಿತು ಎನ್ನುತ್ತಾಳೆ.

ಆದರೂ ಅವಳ ಮನಸ್ಸಿನಲ್ಲಿ ಒಂದೆರಡು ಸಂದೇಹಗಳಿವೆ. ಈಗ ನನ್ನನ್ನು ನೋಡಬಹುದು ಅನ್ನುವುದಾದರೆ ಅಂದು ಮನೆಬಿಟ್ಟು ಕಾಡಿಗೆ ಏಕೆ ಹೋಗಬೇಕಿತ್ತು? ಏಳೆವೆಣ್ಣು...ಪತಿಯೇ ಪರದೈವ, ಗಂಡನೇ ಸರ್ವಸ್ವ, ಎಂದು ನಂಬಿ, ಸುಖವಾಗಿ ಇದ್ದವಳನ್ನು ದುಃಖದಲ್ಲಿ ಮುಳುಗಿಸಿ ಹೋದುದು ಏಕೆ? ಹೋಗುವಾಗ ನನಗೆ ಹೇಳಿ ಹೋಗಬಾರದಿತ್ತೆ? ಮುಕ್ತಿಮಾರ್ಗವನ್ನು ಹುಡುಕಿಕೊಂಡು ಹೊರಡುವವರು ಹೆಂಡತಿಗೆ ಹೇಳಬಾರದೆ? ಬೇಡವೆನ್ನಬಹುದು, ತಡೆಯಬಹುದು ಎಂಬ ಭೀತಿಯೆ? ಧರ್ಮದಲಿ ನಡೆಯುವ ಸತಿಯಾದವಳು ತಡೆಯುತ್ತಾಳೆಯೆ? ಇಷ್ಟೆಲ್ಲ ಪ್ರಶ್ನೆಗಳನ್ನೂ ಹಲವು ವರುಷಗಳಿಂದ ಮನಸ್ಸಿನಲ್ಲೇ ಇರಿಸಿಕೊಂಡಿದ್ದ ಯಶೋಧರೆ ಈಗ ಪತಿಗೆ ಕೇಳುತ್ತಾಳೆ. ಬಿರುಸಾದ ಈ ನುಡಿಯಿಂದ ಬುದ್ಧನನ್ನು ತಾನು ಸತ್ಕರಿಸುತ್ತಿದ್ದೇನೆ ಎಂಬುದನ್ನು ಬಾಯಿಬಿಟ್ಟು ನುಡಿದಾಗ ಬುದ್ಧ ''ಇದೇ ಎನಗೆ ಸತ್ಕಾರ'' ಎನ್ನುತ್ತಾನೆ.

ಯಶೋಧರೆ-

''ಎರಡನೆಯ ಜೀವ ಒಪ್ಪುವ ಮುನ್ನ ದಾಂಪತ್ಯ
ಮುಗಿಯಬಹುದೆಂತು?''

ಎಂದು ಕೇಳುತ್ತಾಳೆ ಬುದ್ಧನನ್ನು. ಈ ಎಲ್ಲ ಸಮಸ್ಯೆಗಳಿಗೂ ಬುದ್ಧ ದೀರ್ಘವಾದ ಉತ್ತರ ನೀಡುತ್ತಾನೆ.

''ಧರ್ಮ ಸೂಕ್ಷ್ಮವನರಿವ ಮನ ತನ್ನ ಸುಖದಿಂದ
ಧರ್ಮವನು ಅಳೆಯಲಾಗದು. ಮೂಲ ಸೂತ್ರವಿದು''

ಎನ್ನುತ್ತಾನೆ ಬುದ್ಧ. ತಾನು ಮೃತ್ಯು ಹುಟ್ಟು ಇತ್ಯಾದಿ ಪೀಡೆಗಳಿಂದ ಜೀವವನ್ನು ರಕ್ಷಿಸುವುದು ಹೇಗೆ ಎಂಬುದನ್ನು ಅರಿಯಲು ವನಕ್ಕೆ ಹೋದೆನಲ್ಲದೆ ಸಂಸಾರದಲ್ಲಿ ಹೇಸಿ ಹೋದವನಲ್ಲ. ನನ್ನ ಕೈ ಹಿಡಿದಾಕೆ ಧರ್ಮಿಷ್ಠೆ, ದೃಢಚಿತ್ತೆ, ಅನ್ನುವುದನ್ನು ಮೊದಲಿಂದ ಬಲ್ಲ ನಾನು ಧರ್ಮದಲ್ಲಿ ಅವಳು ನನಗೆ ನೆರವಾಗಿ ನಿಲ್ಲುತ್ತಾಳೆಂದೇ ಅರಿತಿದ್ದೆ. ಹೆಂಡತಿ, ತಾಯಿ ತಂದೆ, ಮಿತ್ರ ಪರಿವಾರ ನನ್ನನ್ನು ಹಿಡಿದು ನಿಲ್ಲಿಸಬಹುದೆಂದು ನಂಬಿ ನಾನು ಹಾಗೆ ಹೋಗಿದ್ದು ನಿಜ. ಇನ್ನು ಕಾಡಿಗೆ ಹೋಗಿಯೆ ತಿಳಿದು ಸಾಧಿಸಬೇಕೆ ಎಂಬ ಮಾತು ಅರ್ಧ ನಿಜ. ಇಲ್ಲಿದ್ದು ಧರ್ಮದಲ್ಲಿನಡೆಯುವವರು ಇರಬಹುದು. ಆದರೆ ಇದು ಎಲ್ಲರಿಂದ ಸಾಧ್ಯವಿಲ್ಲ. ಅಂದು ನಾನು ವನಕ್ಕೆ ಹೋಗದೇ ಇದ್ದಿದ್ದರೆ ನನಗೆ ಇಂದಿನ ಅನುಭವ ಬರುತ್ತಿರಲಿಲ್ಲ.. ಎನ್ನುತ್ತಾನೆ ಬುದ್ಧ. ಮುಂದೆ ಪತಿಯಾದವನು ಸತಿಯ ಸಮ್ಮತಿ ಪಡೆಯದೇ ದಾಂಪತ್ಯವನ್ನು ಮುಗಿಸಬಾರದು ಎಂಬು ಮಾತು ಸತ್ಯವೆಂದು ಒಪ್ಪಿ, ಧರ್ಮದಲ್ಲಿ ವೈರಾಗ್ಯವೇ ಮುಖ್ಯ ಎನ್ನುತ್ತಾನೆ. ನುಡಿದ ನುಡಿ ಮನಕೆ ಸಮ್ಮತವೆ? ಎಂದು ಕೇಳುತ್ತಾನೆ.

''   ಪತಿ ವರ್ಜಿಸಿದ
ಭಂಗಿತಳು ನಾನೆಂಬ ಭಯವೊಂದು ಹರಿಯಿತು.
ಉಳಿದುದನು ಮನ ಒಪ್ಪದಿಹುಮ''

ಎನ್ನುತ್ತಾಳೆ ಯಶೋಧರೆ.

ಆಗ ಮಗ ರಾಹುಲ ಬರುತ್ತಾನೆ. ತಂದೆಯಿಂದ ಉಪದೇಶ ಪಡೆಯುವಂತೆ

ಯಶೋಧರೆ ರಾಹುಲನಿಗೆ ಹೇಳುತ್ತಾಳೆ. ಬುದ್ಧ ಮಗನನ್ನು ಕೊಡುವುದಕ್ಕೆ ಮನಸ್ಸು ಒಪ್ಪುವುದೇ ಎಂದು ಕೇಳಿದಾಗ-

''ಎನ್ನನು ನೀವು ಬಿಡದಿರಲು
ಜಗವನೇ ನಿಮಗೆ ಬಿಡುವರೆ ನಾನು ಒಪ್ಪುವೆನು''

ಎಂದು ಉತ್ತರಿಸಿ ದೀಕ್ಷೆಯನ್ನು ಬೇಡುತ್ತಾಳೆ. ಬುದ್ಧ ಸ್ತ್ರೀಯರಿಗೆ ದೀಕ್ಷೆ ಎನ್ನುವುದಿಲ್ಲ ಎನ್ನುತ್ತಾನೆ. ಬುದ್ಧನ ಧರ್ಮವನ್ನು ಅರ್ಥವಿಸಿಕೊಂಡು, ಒಪ್ಪಿ, ಅದನ್ನು ತಾನೂ ಆಚರಿಸಿ, ಪತಿಯೊಡನೆ ಆ ಮಾರ್ಗವನ್ನು ಹಿಡಿಯಬೇಕು ಎಂಬ ನಿರ್ಧಾರಕ್ಕೆ ಬಂದು ಯಶೋಧರೆ ಈಗ ಮತ್ತೊಮ್ಮೆ ತುಸು ವ್ಯಗ್ರಳಾಗುತ್ತಾಳೆ.-

''ಜಗದೊಳರ್ಧವ ಬಿಟ್ಟು ಉಳಿದರ್ಧಮಾತ್ರಕೇ
ಅನ್ವಯಿಸುವುದು ಧರ್ಮವೆ? ಧರ್ಮ ಖಂಡವದು;
ಹೋಳು ಮಾಡಿದ ಧರ್ಮ''

ಎಂದು ಸಾರುತ್ತಾಳೆ. ಬುದ್ಧ ಸ್ತ್ರೀಯರಿಗೆ ದೀಕ್ಷೆ ಕೊಟ್ಟರೆ ತನ್ನ ಧರ್ಮದ ಆಯುಷ್ಯ ಅರ್ಧವಾಗುತ್ತದೆ ಎನ್ನುತ್ತಾನೆ. ಆಗ ಯಶೋಧರೆ-

''ಪುರುಷರನು ಮಾತ್ರ ಸಲಹುವುದಾಗೆ ಒಂದು ಯುಗ:
ಸ್ತ್ರೀ ಪುರುಷರನು ಸಲಹೆ ಅರ್ಧ ಯುಗ. ಇರ್ವರೂ
ಮುಕ್ತರಾಗಲಿ, ಅರ್ಧ ಯುಗವೆ ಸಾಕೆಂಬೆನು''

ಎನ್ನುತ್ತಾಳೆ. ಬುದ್ಧ ಈ ಮಾತಿಗೆ '' ಅಂತೆ ಆಗಲಿ'' ಎನ್ನುತ್ತಾನೆ. ಯಶೋಧರೆಯ ದೀರ್ಘ ತಪಸ್ಸು ಈ ರೀತಿಯಲ್ಲಿ ಫಲಪ್ರದವಾಗುತ್ತದೆ.

*

ಬುದ್ಧ ಲೋಕ ಹಿತಕ್ಕಾಗಿ ಅರಮನೆ, ಮಡದಿ, ಮಗುವನ್ನು ಬಿಟ್ಟು ಸಂಸಾರದ ಎಲ್ಲ ಸುಖಭೋಗಗಳನ್ನು ತ್ಯಜಿಸಿ ವನಕ್ಕೆ ಹೋಗಿ ತಪಸ್ಸು ಮಾಡಿ ಲೋಕಕ್ಕೇನೆ ತಿಳುವಳಿಕೆಯ ಬೆಳಕು ನೀಡಿದನಾದರೂ, ಇವನ ಕೈ ಹಿಡಿದ ಯಶೋಧರೆ ಇವನಿಂದಾಗಿ ಉಂಡ ನೋವು ಕಡಿಮೆ ಏನಲ್ಲ. ಗಂಡನಿಗೆ ತಾನು ಬೇಡವಾದೆನೆಂಬ ನೋವಿನ ಜೊತೆಗೆ ತನ್ನ ಸುಖಕ್ಕೆ ಬಂದೊದಗಿದ ತಡೆಯನ್ನು ನೆನೆದು ಅವಳು ತನ್ನ ಬಾಳನ್ನೇ ಹಳಿದುಕೊಂಡಿದ್ದು ಎಷ್ಟುಸಲವೋ. ಆದರೂ ಬುದ್ಧ ಕಾಡಿನಲ್ಲಿ ಮಾಡುತ್ತಿದ್ದುದನ್ನು ಯಶೋಧರೆ ಅರಮನೆಯಲ್ಲಿ ಸಾಧಿಸುತ್ತಾಳೆ.

ಬುದ್ಧನಿಂದ ಯಶೋಧರೆ ದೀಕ್ಷೆಯನ್ನು ಪಡೆದಳು ಎಂಬುದನ್ನು ಆನಂದನಿಂದ ಕೇಳಿದ ರಾಜ, ಸಿದ್ಧಾರ್ಥನ ತಂದೆ-

''ತನ್ನಾಣ್ಮ ಸಂನ್ಯಾಸವನು ಕೊಂಡನೆಂಬುದನು
ಕೇಳ್ದಂದೆ ಕಾಷಾಯ ವಸ್ತ್ರವನು ಧರಿಸಿದಳು.
ಅಂದು ತಾನೇ ಧರಿಸಿದಾ ದೀಕ್ಷೆಯನು ಇಂದು
ಗುರುವಾದ ಪತಿಯಿಂದ ಇನ್ನೊಮ್ಮೆ ಪಡೆದಿಹಳು''

ಎಂದು ಹೇಳುವುದರಲ್ಲಿ ಯಶೋಧರೆಯ ಹತ್ತು ವರುಷಗಳ ಕಠಿಣ ತಪಸ್ಸಿನ ಸಾರ್ಥಕತೆಯನ್ನು ಕಾಣಬಹುದು.

ರಾಜ ಮೊದಲ ದೃಶ್ಯದಲ್ಲಿ ತಂದೆಯನ್ನು ಕರೆತರಲು ಹೊರಟ ರಾಹುಲನಿಗೆ ಹೇಳುವ ಮಾತಿದು –

''ಬಹು ಹಿರಿಯ ಜೀವವಯ್ಯಾ ನಿನ್ನ ತಾಯಿಯದು:
ಬಹು ಹಿರಿಯ ತಪ ಪುಣ್ಯ...''

ಇಂತಹುದೇ ಒಂದು ಮಾತನ್ನು ನಾಟಕಕಾರರು ಅಂಬಾಪಾಲಿಯ ಬಾಯಿಂದ ಹೇಳಿಸಿದ್ದಾರೆ. ಅಂಬಾಪಾಲಿ ತನ್ನ ಗುರುಪತ್ನಿಯನ್ನು ನೋಡಲೆಂದು ಬಂದವಳು. ಯಶೋಧರೆಗೆ ವಂದಿಸಿ, ಅವಳ ಮಾತು ಕೇಳಿ, ಯಶೋಧರೆ ಆತಿಥ್ಯವನ್ನು ಪಡೆಯುವಂತೆ ಹೇಳಿದಾಗ, ಅಂಬಾಪಾಲಿ ಹೃದಯ ತುಂಬಿ ಬಂದು ಹೇಳುತ್ತಾಳೆ-

''. . . . ಎನಗಿನ್ನು ಸತ್ಕಾರಗಳೆ ಬೇಡ.
ತಮ್ಮನೂ ತಾವಿರುವ ತಾವನೂ ನೋಡುವುದೆ
ಕಣ್ಣುಮನಗಳಿಗೊಂದು ಹಬ್ಬವಾಗಿಹುದೆನಗೆ.
ಪ್ರೇಮದಲಿ ತಾವಾಡಿದೆರೆಡು ಮಾತಿನ ಕರುಣೆ
ಕುಡಿಯಿಡುವ ಲತೆಗೆರೆದ ಕುಡಿಕೆ ತಿಳಿನೀರಂತೆ
ಒಲಿದೋಡಿ ಬಂದ ಹಸುಳೆಗೆ ಕೊಟ್ಟ ಹಾಲಂತೆ
ಆಶೆಯಲಿ ಬಳಿಸಾರಿದೀ ಎನ್ನ ಚೇತನಕೆ
ಅಪ್ಯಾಯಮಾನವಾಗಿದೆ ತಾಯಿ...''

ಅಂಬಾಪಾಲಿ ಇಲ್ಲಿ ಮತ್ತೂ ಒಂದು ಮಾತನ್ನು ಹೇಳುತ್ತಾಳೆ. ಬುದ್ಧನ ತಪಸ್ಸಿಗೆ, ಅವನ ಪಾವನತೆಗೆ, ಅವನ ಮಹಾವ್ಯಕ್ತಿತ್ವಕ್ಕೆ ಸರಿಸಾಟಿಯಾದ ತಪಸ್ಸು, ವ್ಯಕ್ತಿತ್ವವನ್ನು ಯಶೋಧರೆಯು ಸಾಧಿಸಿದ್ದಳು ಎಂಬುದನ್ನು ಎತ್ತಿಹಿಡಿಯುವ ಒಂದು ಮಾತನ್ನು ಅಂಬಾಪಾಲಿ ಹೇಳುತ್ತಾಳೆ-

'' ಗುರುಗಳಲಿ
ಯಾವಕೃಪೆಯನು ಕಂಡೆನೋ ಅದೇ ಕೃಪೆಯನು
ಗುರು ಪತ್ನಿಯಲಿ ಕಂಡು ಆನಂದಿಸುತಲಿಹೆನು''

ಈ ವಿಧದಲ್ಲಿ ಯಶೋಧರೆ ಈ ನಾಟಕದ ನಾಯಕಿಯಾಗಿ ಮೆರೆದಿದ್ದಾಳೆ. ಈ ವಿರಾಗಿಣಿಯ ವ್ಯಕ್ತಿತ್ವವನ್ನು ಕಡೆಯುವಲ್ಲಿ ಶ್ರೀನಿವಾಸರು ಸಾಧಿಸಿರುವ ಹಿರೆಮೆ ಅಲ್ಪವಾದುದೇನಲ್ಲ. ಅಪೂರ್ವವಾದ, ಅನುಪಮವಾದ, ಅಲೌಕಿಕವಾದ ಒಂದು ಅನುಭವವನ್ನು ಓದುಗರಿಗೆ ತಂದುಕೊಡುವುದರಲ್ಲಿ ಈ ನಾಟಕ ಒಂದು ಪವಾಡ ಸದೃಶವಾದ ಕ್ರಿಯೆಯನ್ನು ನಡೆಸುತ್ತದೆ.

ಬುದ್ಧನ ಧರ್ಮ, ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲಲು ಕೆಲವಾರು ಪಾತ್ರಗಳನ್ನು ಶ್ರೀನಿವಾಸರು ನಾಟಕದಲ್ಲಿ ತಂದಿದ್ದಾರೆ. ಬುದ್ಧನ ಶಿಷ್ಯ ಮಾನಂದ, ಅಂಬಾಪಾಲಿ, ಆನಂದ, ಮಲ್ಲರಾಜ ಮತ್ತಿತರರು ಬುದ್ಧನ ನಿರ್ಮಲಾಂತಃಕರಣವನ್ನು ಪರಿಚಯ ಮಾಡಿಕೊಟ್ಟರೆ, ಕೌಂಡಿನ್ಯ, ಕೌಶಿಕರೆಂಬ ಬ್ರಾಹ್ಮಣ ತರುಣರು ಬುದ್ಧನ ಧರ್ಮದಲ್ಲಿರುವ ನಾಸ್ತಿಕತೆ-ಆಸ್ತಿಕತೆಗಳ ಕುರಿತು ಚರ್ಚಿಸುತ್ತಾರೆ. ಬುದ್ಧನನ್ನು ನೋಡಿ ಹಿಂತಿರುಗುವ ಓರ್ವ ಮುದುಕಿಗೆ, ಯುವತಿಗೆ, ಮಗುವಿಗೆ ಬುದ್ಧ ಮಹಾತ್ಮನಾಗಿ ಕಂಡರೆ ಭಾರದ್ವಾಜನೆಂಬ ಬ್ರಾಹ್ಮಣನಿಗೆ ಬುದ್ಧ 'ಸನಾತನ ಧರ್ಮವನ್ನು'ಹಳಿಯಲು ಬಂದ ಚಾರ್ವಾಕನಂತೆ ಕಾಣುತ್ತಾನೆ.

ನಾಟಕಕ್ಕೆ ಪೂರಕವಾಗಿ ಬರುವ ಈ ಪಾತ್ರಗಳು ನಾಟಕದ ಪೂರ್ಣ ಪರಿಣಾಮವನ್ನು ಪ್ರಖರಗೊಳಿಸುವಲ್ಲಿ ಯಶಸ್ವಿಯಾಗುತ್ತವೆ. ಬುದ್ಧನ ಜೀವನದ ಮೇಲೆ ಬೆಳಕು ಚೆಲ್ಲುವ ಈ ಕೃತಿ ಯಶೋಧರೆಯ ಬದುಕಿನಲ್ಲಿ ಕಳೆದು ಹೋದ ದುರಂತವನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಜೊತೆಗೆ ಹೆಣ್ಣಿನ ಜೀವಿತಕ್ಕೆ ಶಾಪವಾಗಿ ಪರಿಣಮಿಸಬಹುದಾದ ಕೆಲವೊಂದು ಸಮಸ್ಯೆಗಳತ್ತ ಬೆರಳು ತೋರಿಸುತ್ತದೆ. ಹೆಣ್ಣಿಗೆ ಧರ್ಮ ದೀಕ್ಷೆ ಇಲ್ಲವೆಂದು ಬುದ್ಧ ಹೇಳಿದಾಗ ಹೆಣ್ಣಿಗೆ ದೀಕ್ಷೆ ನೀಡುವುದರಿಂದ ತನ್ನ ಧರ್ಮದ ಆಯಸ್ಸು ಕಡಿಮೆಯಾಗುತ್ತದೆಂದು ಬುದ್ಧ ಹೇಳಿದಾಗ ಯಶೋಧರೆ ಕೊಡುವ ಉತ್ತರ ಅವಳು ಸ್ತ್ರೀ ಕುಲಕ್ಕೆ ಮಾಡಿದ ಮಹೋಪಕಾರದಂತಿದೆ. ಬುದ್ಧ ಬಂದು ಎದುರು ನಿಂತಾಗ ಅವಳು ಕೇಳುವ ಪ್ರಶ್ನೆಗಳು, ಬುದ್ಧ ಈ ಪ್ರಶ್ನೆಗಳಿಗೆಲ್ಲ ಉತ್ತರ ನೀಡಿದ ಮೇಲೂ '' .... ಉಳಿದುದನು ಮನ ಒಪ್ಪದಿಹುದು'' ಎಂಬ ಅವಳ ದಿಟ್ಟತನದ ಮರುನುಡಿ, ಬದ್ಧನ ಧರ್ಮ ಎಷ್ಟೊಂದು ಮನೆಗಳನ್ನು, ಹೆಂಗಸರನ್ನು, ಮಕ್ಕಳನ್ನು ದುಃಖದ ಪ್ರಪಾತಕ್ಕೆ ತಳ್ಳಿದೆಯೋ ಎಂಬ ಅವಳ ಊಹೆ ಕುಟುಂಬದ ಹಿತದಲ್ಲಿಯೇ ಲೋಕದ ಹಿತವಿದೆ ಎಂಬ ಸತ್ಯವನ್ನು ಎತ್ತಿ ಹಿಡಿಯುತ್ತವೆ.

ಕಾವ್ಯಮಯವಾದ, ಸರಳವಾದ, ಸಹಜವಾದ, ನೆಲಬಿಟ್ಟು ಆಕಾಶದಲ್ಲಿ ತೂರಾಡದೆ, ಉದ್ದಕ್ಕೂ ಗಟ್ಟಿ ನೆಲದ ಮೇಲೆಯೆ ಕಾಲೂರಿ ನಿಲ್ಲುವ ಈ ನಾಟಕ ಕನ್ನಡ ಶ್ರೇಷ್ಠ ನಾಟಕಗಳಲ್ಲಿ ಒಂದು ಎನ್ನುವುದರಲ್ಲಿ ಸಂದೇಹವಿಲ್ಲ.

ಶ್ರೀನಿವಾಸರು ತಮ್ಮ ಮುನ್ನುಡಿಯ ಕೊನೆಯಲ್ಲಿ ''ಈ ನಾಟಕವನ್ನು ರಂಗದಲ್ಲಿ ನೋಡಬೇಕೆಂದು ಆಸೆಯಿದೆ. ಎಂದಿನಂತೆ ಮಿತ್ರರ ನೆರವು ದೊರೆತರೆ ಇದೂ ಇಷ್ಟರಲ್ಲೇ ಆಗಬಹುದು'' ಎಂದಿದ್ದಾರೆ. ಈ ಲೇಖಕನಿಗೆ ತಿಳಿದಂತೆ ''ಯಶೋಧರೆ'' ಯ ಪ್ರಯೋಗ ಎಲ್ಲೂ ಆದಂತಿಲ್ಲ. ಈ ನಾಟಕವನ್ನು ರಂಗದ ಮೇಲೆ ತರುವುದು ಸುಲಭ ಕಾರ್ಯವೇನಲ್ಲ. ಆದರೆ ಈ ಸವಾಲನ್ನು ಯಾರಾದರೂ ಸ್ವೀಕರಿಸಬಲ್ಲರಾದರೆ ಅದೊಂದು ಯಶಸ್ವೀ ಪ್ರಯೋಗವಾಗುವುದರಲ್ಲಿ ಸಂದೇಹವಿಲ್ಲ.

ಯಶೋಧರಾ ನಾಟಕದ ಕಾವ್ಯಗುಣ

ಎಲ್.ಆರ್. ಹೆಗಡೆ

ಶ್ರೀನಿವಾಸರು ಒಳ್ಳೆಯ ಕವಿಗಳು. ಅವರು ಆರಿಸಿದ ವಸ್ತು ನಾಟಕಕ್ಕಿಂತ ಹೆಚ್ಚಾಗಿ ಕಾವ್ಯ ಪೋಷಣೆಗೆ ನೆರವಾಗುವಂಥದು. ಬುದ್ಧನಂತಹ ಮಹಾಮಹಿಮನ ಹಿರಿಯ ಜೀವನ ಬಹು ಉತ್ತಮ ಭಾವನೆಗಳಿಗೆ ಪುಟಕೊಡುವಂತಹದು. ನಾಗಚಂದ್ರ ಹೇಳಿದಂತೆ ಉದಾತ್ತನಾಯಕನಿಂದ ಕಾವ್ಯ ಉದಾತ್ತವಾಗುವುದು. ''ಕಾಲಾಯಸದಿಂದ ವಿನಿರ್ಮಿಸಿದ ಕಂಠಿಕೆ ಕಾಂಚನ ಮಾಲೆಯಂತು ಪಾದೇಯಮೆನಿಕ್ಕುಮೇ?'' ಎಂದುದರಲ್ಲಿ ಅರ್ಥಕ್ಕಿಂತ ಹೆಚ್ಚು ಸತ್ಯವಿದೆ. ಅದರಲ್ಲಿಯೂ ಯಶೋಧರೆಯಿಂದ ಸಿದ್ಧಾರ್ಥನು ಅಗಲಿದ ನಂತರ ಪುನಃ ಆತನು ಬುದ್ಧನಾಗಿ, ಹತ್ತುವರ್ಷಗಳ ಅಗಲಿಕೆಯ ನಂತರ ಯಶೋಧರೆಯನ್ನು ಕಾಣಬರುವ ಸನ್ನಿವೇಶ ಬಹು ಉತ್ಕಂಠೆಯನ್ನು ಉಂಟುಮಾಡುವ ಶಕ್ತಿಯುಳ್ಳದ್ದು. ಅದರ ಹಿನ್ನೆಲೆಯನ್ನು ರಚಿಸಿರುವುದರಲ್ಲಿ ಬುದ್ಧನ ಶಿಷ್ಯರಲ್ಲಿ ಕೆಲವರನ್ನೂ ಇನ್ನಿತರ ಆತನ ಕಥೆಗೆ ಸಂಬಂಧಿಸಿದವರನ್ನೂ ಅವರು ಬಳಸಿಕೊಂಡರೂ ಆ ಸನ್ನಿವೇಶಗಳು ಶ್ರೀನಿವಾಸರ ಕಲ್ಪನೆಯಿಂದ ನೂತನವಾಗಿ ಸ್ಪಷ್ಟವಾದವುಗಳು. ಅದರಂತೆ ಯಶೋಧರೆಗೆ ತನ್ನ ಮಗನೂ ಕೈತಪ್ಪಿ ಹೋಗುವನೋ ಎಂಬ ಹೆದರಿಕೆ ಸ್ವಾಭಾವಿಕವಾದರೂ ಬೇರೆಕಡೆ ಚಿತ್ರಿತವಾಗದಿರುವ ವಿಷಯ. ಇವೆಲ್ಲ ಈ ಕಾವ್ಯ ನಾಟಕಕ್ಕೆ ಸ್ವಂತಿಕೆಯ ಗೌರವವನ್ನು ತಂದಿವೆ. ಸರ್.ಎಡ್ವಿನ್ ಅರ್ನಾಲ್ಡರ 'ಲೈಟ್ ಆಫ್ ಏಶ್ಯಾ' ಎಂಬ ಕಾವ್ಯದಿಂದ ಶ್ರೀನಿವಾಸರಿಗೆ ಒಂದೆರಡು ಪ್ರೇರಣೆ ಬಂದಿದ್ದರೂ ಅದು ಮಹತ್ವದ ವಿಷಯವಲ್ಲ.

ಬುದ್ಧನನ್ನು ಕಳೆದುಕೊಂಡು ಹತ್ತು ವರ್ಷ ಕಳೆದ ಹಿನ್ನೆಲೆ ನಾಟಕದ ಪ್ರಾರಂಭದಲ್ಲಿ ಯಶೋಧರೆಯ ಶೋಕಕ್ಕೆ ಇದೆ. ಪತಿ ಅಗಲುವಾಗ ಒಂದು ಕನಸಾದಂತೆ ಮಗನು ಅಗಲುವನೆಂಬರ್ಥದ ಒಂದು ಕನಸು ಆಕೆಯಲ್ಲಿ ಕಾತರತೆಯನ್ನು ಹೆಚ್ಚಿಸಿದೆ.

> ನಾನು ಬದುಕಿರುವೆನೆಂತೋ ನಾನೇ ಕಾಣನೇ.
> ದೇಹವನು ಕೊಟ್ಟು ದೇವರು ಉಸಿರನೆಳೆಸುತಿರೆ
> ಉಸಿರೆಳೆಯು ತಿಹೆನಮ್ಮ. . . . .
> ಯಾವುದೋ ಬಾಳು ಇದು,

ಯಾರೋ ಬಾಳುತಲಿಹರು, ನಾನು ನೋಡುತಲಿಹೆನು. ಎಂಬಲ್ಲಿ ಸ್ವಲ್ಪ ಮಾತಿನಲ್ಲಿ ಬಹಳ ಭಾವನೆಯ ಶಕ್ತಿ ತುಂಬಿದೆ. ಅಶ್ವತ್ಥನೆಲೆಯ ಕಟ್ಟೆಯ ಕೆಪರಿ ಬೇರೂರಿ ಬೆಳೆದ ಮರದಂತೆ ತನ್ನ ಪತಿಯ ಅಗಲಿಕೆಯ ನೋವು ಎಂಬುದು ನವೀನ ಕಲ್ಪನೆಯಾಗಿದೆ. ನೋವಿನಿಂದ ಕೂಡಿದರೂ ಅಶ್ವತ್ಥದಂತೆ ಆ ನೆನಪು ಪವಿತ್ರ ಎಂಬ ಧ್ವನಿಯೂ ಅಲ್ಲಿದೆ.

ಆದರೆ ಪತಿ ಅಗಲಿದ ನಂತರ ನೋವಿನ ವರ್ಣನೆಯ ಅತ್ಯುಕ್ತಿಯಲ್ಲಿ ಭಾವನೆಗಿಂತ ಚಮತ್ಕಾರ ಹೆಚ್ಚು.

ಕಾವುನೋವುಗಳು. . . .
ತುಂಬಿದುವು ಸಾಗರದ ಕೂಪವನು; ಆಗಸದ
ಆಳವರಿಯದ ಅಂತರಾಳವನು ತುಂಬಿದವು;
ಸೂರ್ಯ ಮಂಡಲದಿಂದ ಹೊರಹೊಮ್ಮಿ ಬರುತಿರುವ
ಹೊನ್ನ ಕಿರಣದ ನಡುವೆ ಉಕ್ಕಾಗಿ ಸೇರಿದವು;

ವಟವೃಕ್ಷದ ಕನಸು ''ಲೈಟ್ ಆಫ್ ಏಶ್ಯಾ''ದಲ್ಲಿ ಯಶೋಧರೆಗೆ ಸಿದ್ಧಾರ್ಥನು ಅಗಲುವ ಸಂದರ್ಭದಲ್ಲಿ ಬಿದ್ದ ಕನಸಿನ ಪ್ರೇರಣೆಪಡೆದರೂ ಆಗಿನ ಸಂದರ್ಭ ಬೇರೆ. ಈ ಸಂದರ್ಭ ಬೇರೆ. ಕನಸಿನ ವಿಷಯವೂ ಬೇರೆಯೇ. ತನ್ನ ಏಕ ಮಾತ್ರ ಪುತ್ರನಾದ ರಾಹುಲನು ಕೈ ತಪ್ಪುವ ಕಾತರತೆಯ ಹಿನ್ನೆಲೆಯಿಂದ ಮೂಡಿ ಸುಂದರವಾಗಿದೆ.

ರಾಹುಲನು ಪಾಠವನ್ನು ಮುಗಿಸಿ, ಆಟದಲ್ಲಿ ಹೊತ್ತುಗಳೆಯದೆ ತನ್ನ ತಾಯ ಮೇಲಿನ ಪ್ರೀತಿಯಿಂದ ತಾಯಿಗೆ ಹೂ ಕೊಯ್ದು ತರಲು ಹೋದವನು ಹೂತಂದು

ಅದು ನೋಡು
ಎಲೆಯ ಮರೆಯಲಿ ಅವಿತುಕೊಂಡು ಕೇಳಿಸದಂತೆ
ನನ್ನ ಹಿಡಿ ನೋಡೋಣ ಎಂದು ಹೇಳುತಲಿತ್ತು
ಇಣಿಕಿನೋಡುತ್ತ ಹಿಡಿದುಕೊಳ್ಳುವರೋ ಎನ್ನುತ
ಆಟವಾಡುತಲಿತ್ತು; ಆಗ ಅದಹಿಡಿದೆನು.

ಎಂಬ ಹೂವಿನ ವರ್ಣನೆ ಸುಕುಮಾರ ಕಲ್ಪನೆಯಿಂದ ಕೂಡಿದೆ. ತಾಯ ಪಕ್ಕದಲಿದ್ದ ರಾಹುಲನನ್ನು ಗಿಡದಿಂದ ಹೂವನ್ನು ಕಿತ್ತ ರೂಪಕದಿಂದ ಬುದ್ಧನು ಎಳೆದುಕೊಳ್ಳುವೆನೆಂಬ ಭಾವ ಇಲ್ಲಿ ಸೂಚ್ಯವಾಗಿ ಬರುತ್ತದೆ. ಯಶೋಧರೆಯ ಆಗಿನ ಹೆದರಿಕೆಯೇ ಅದು.

ನಂತರ ನಿದ್ದೆಯಲಿ ಮುಳುಗಲಿನ್ನಾವ ಕನಸಿನ ಮೊಸಳೆ
ಹಿಡಿಯುವುದೋ; ಇನ್ನೆನಿತು ತೊಳಲಬೇಕೋ;

ಎಂಬ ಮಾತು ಯಶೋಧರೆಯ ತೀವ್ರವಾದ ಕಾತರತೆಯನ್ನೂ ಭೀಕರತೆಯನ್ನೂ ಸಮರ್ಪಕವಾಗಿ ಅನುಭವಕ್ಕೆ ತರುತ್ತದೆ.

ಶ್ರಾವಸ್ತಿಯಲ್ಲಿ
ವಿಸ್ತಾರವಾಗಿ ಚಿತ್ರದೆ ಗೆಯ್ದ ಗಿಳಿಯಂತೆ
ಕಂಗೊಳಿಪ ಆ ಹಸುರ ಸರಸಿಯೇ ಜೇತವನ

ಬುದ್ಧ ತಂಗಿದ ಜೇತವನದ ಈ ಹೋಲಿಕೆಯು ನೂತನವೂ, ಧ್ವನಿರಮ್ಯವೂ, ಚೇತೋಹಾರಿಯೂ ಆಗಿದೆ. ಬುದ್ಧನ ಮನಸ್ಸಿನಂತೆ ಶಾಂತವೂ, ಆಹ್ಲಾದಕಾರಿಯೂ ಆಗಿದೆ ಎಂದು ಸೂಚಿಸುತ್ತದೆ.

ಬುದ್ಧನ ಉಪದೇಶದ ಮಾತು ಬರುವಲ್ಲೆಲ್ಲ ಆ ಮಹಾತ್ಮನ ಶಾಂತಭಾವ, ಸಮಾಧಾನಗಳು ಸಮರ್ಪಕವಾದ ಕಾವ್ಯದ ಉಡುಪಿನಿಂದ ಮೈವೆತ್ತಿವೆ. ತೋರಿಕೆಗೆ ಭಾವನಾರಹಿತವಾಗಿ ಕಂಡರೂ ಸಮಸ್ತ ಜೀವಿಗಳ ಕಲ್ಯಾಣಾಂಕ್ಷೆಯಿಂದ ಕೂಡಿದ ಆ ಮಾತುಗಳು ಮಾನವ್ಯದ ಮಂದಾರವಾದ ಆತನ ಮನಸ್ಸಿನ ಹೂಗಳು. ಕೇಳಿದವರಿಗೆ ಸಂತೋಷವನ್ನೂ ಶಾಂತಿಯನ್ನೂ ಉಂಟುಮಾಡುವವು.

ತಿಳಿವಿನ ಚಿಲುಮೆ

ಅನುದಿನದ ಸುಖದುಃಕದಿಂದ ಬಗ್ಗಡವಾಗಿ
ಕೆಡುತಿರಲು ಸಾವಧಾನದಿ ಮನವ ನಿಲ್ಲಿಸುತ
ಕದಡು ತಳಕಿಳಿವಂತೆ ಭಾವ ತಿಳಿಯಪ್ಪಂತೆ
ಶಾಂತ ಚಿತ್ತವನು ಸಾಧಿಸಬೇಕು.

ಸಾಗರ ಹಾಗು ವಿಶಾಲ ಜೀವನದ ಕಲ್ಪನೆ ನೂತನವಲ್ಲ, ಆದರೆ ಉಪಯೋಗ ಇಲ್ಲಿ ನೂತನ ಹೊಗರಿನಿಂದ ಕಂಗೊಳಿಸುತ್ತದೆ.

ತೀರದಲಿ ನಿಂತು ಸಾಗರವ ನೋಡುವ ಕಣ್ಣೆ
ಬಂದೆ ಹರದಾರಿ ನೀರಿನ ಹರಹು ಕಾಣುವುದು
ನಾವೆಯಲಿ ಕುಳಿತು ಮುಂಬರಿದು ಹೋದಂತೆಲ್ಲ
ಹರಿದಾರಿ ಹರಿದಾರಿ ಎದುರುಗೊಳ್ಳುತಬಹುದು.

ಅದರಂತೆ ಹಿಮಗಿರಿಯನ್ನೇರುವ ರೂಪಕ. ತತ್ವಜ್ಞಾನದ ಉತ್ತುಂಗ ಶಿಖರವೇರುವುದರ ಸೂಚಕ. ಹಿರಿಯ ಬಾಳಿನ ಪ್ರತೀಕ. ಸಾಧಕನ ನೋಟ ಪ್ರಗತಿಯ ಕಡೆಗಿರಬೇಕು; ಹಿಂದಕ್ಕೆ ನೋಡಿ ಅಲ್ಪ ತೃಪ್ತತೆಯಿಂದಿರುವುದಲ್ಲ.

ಇಲ್ಲಿ ಬಂದ ವಿಶ್ವಜೀವನದ ವಟವೃಕ್ಷದ ಕಲ್ಪನೆಯೂ ನೂತನವಲ್ಲ. ಆದರೆ ಅದರ ಬೆಳವಣಿಗೆ, ಅರ್ಥದ ಶಾಖೆ, ಶ್ರೀನಿವಾಸರ ಸ್ವಂತರಚನೆಯಾಗಿ ಮಹೋಪಮೆಯ ಎತ್ತರಕ್ಕೆ ಏರಿದೆ. ಮಹಾರೂಪಕವಾಗಿದೆ.

ಕಪಿಲವಸ್ತುವಿನ ವರ್ಣನೆ ಬುದ್ಧನ ಬಾಲ್ಯ, ತಾರುಣ್ಯಗಳ ಸುಖದ ಜೊತೆ ಸೇರಿಬಂದು ಬಹು ಹೃದಯಂಗಮವಾಗಿದೆ.

ಗೋಮತಿಯ ತಿಳಿನೀರ ಹೊಳೆ ಅಂಚಿನಂತೆಸೆವ
ವರ್ಣವರ್ಣದ ಚೆಲುವಿನಾರಾಮಗಳ ಮಧ್ಯೆ
ಮುಗಿಲ ಮುಟ್ಟುವ ತೆರದೆ ಬೆಳೆದಿರುವ ಸೌಧಗಳ
ವೃಂದವಾ ಕಪಿಲವಸ್ತು.

ಈ ವರ್ಣನೆ, ಸರಳತೆ, ಪಾವಿತ್ರ್ಯ, ಶೋಭೆ ಭೌತಿಕ ಔನ್ನತ್ಯ ವೈವಿಧ್ಯಗಳ ಪ್ರತೀಕ.

ಉಪವನದಿ ನಾವು ನಡೆಯುವ ದಾರಿಗಳ ಬದಿಗೆ
ಕೆಂದಾವರೆಯ ಸರಸಿಯಿಲ್ಲಿ, ಬಿಳಿದಾವರೆಯ
ಸರಸಿಯಿನ್ನೊಂದರಲ್ಲಿ, ಇಲ್ಲಿ ಮಲ್ಲಿಗೆ, ಅಲ್ಲಿ
ಜಾಜಿ ಸೇವಂತಿಗೆ ಸಂಪಿಗೆ; ಒಂದು ಕಡೆ
ಮರದ ಸಾಲಿನ ನಡುವೆ ಮೂಡಲನು ನೋಡುತಿರೆ
ನೇಸರುದಯಿಸಿ ಬರುವ ಉತ್ಸವದ ಚೆಲು ನೋಟ;
ಇನ್ನೊಂದು ಕಡೆ ಅಂತೆ ಮರದ ಸಾಲಿನ ನಡುವೆ
ಅವನಸ್ತಮಾನದುಜ್ಜುಟೆ, ಇರುಳು ಸುಳಿದು ಬರೆ
ಚಂದ್ರನನು ಒಂದೊಂದುಗಳಿಗೆ ತಲೆಯಲಿ ಧರಿಸಿ
ತಂಗಿಯರು ತೊಡಲೆಂದು ಕೊಡುವುವೋ ಎಂಬಂತೆ
ಸಾಲಿನಲಿ ನಿಂತಿರುವ ತರುಜಾಜಿ. . .
ಚೆಲುವಿನಬ್ಧಿಯ ತೆರೆಯ ತೊಟ್ಟಿಲಲಿ ತೂಗಿದೆನು

ಆದರೆ ಈ ಸೌಂದರ್ಯ ಒಟ್ಟು ದೃಶ್ಯದ ಸಮಾವೇಶದಲ್ಲಿ ಸುಂದರ. ಒಂದು ತಾವರೆ ಒಣಗಿ ಉದುರಿದರೆ ಇನ್ನೊಂದು ಸಂಗಡಲೇ ಅದನ್ನು ಮರೆಯಿಸಿ ನಗುತ್ತಿರುತ್ತದೆ. ಒಂದು ಮರ ಲತೆ ಒಣಗಿದರೆ ಬೇರೆಯವು ಅದನ್ನು ಮರೆ ಮಾಡುತ್ತವೆ. ಒಂಟಿ ತಾವರೆ ಹೂವಿನ, ಒಂಟಿಗಿಡದ, ಜೀವನದ ರೀತಿಯಲ್ಲಿ ವಿಚಾರ ಮಾಡಿದರೆ ಕ್ಷಣಿಕ, ಅಸತ್ಯ ಆದುದರಿಂದಲೇ

ನೋಡಬಲ್ಲುದೆ ಮನಸು
ಸೃಷ್ಟಿಯಲಿ ಎಲ್ಲೆಡೆಯೂ ಜೀವಗಳ ಯಾವುದೋ

ಒಂದು ಸೌಂದರ್ಯ ಪರ್ಯಂತ ತೂಗುತಲಿಹುದು ಆ ಮನಸ್ಸು ಸತ್ಯ ಸೌಂದರ್ಯಗಳ ಆಗಮ, ಅದರಿಂದಲೇ ನಿತ್ಯದ ಆನಂದ. ಕೌಂಡಿನ್ಯನು ಕಾಲವನ್ನು ವರ್ಣಿಸಿದ ವಿಧಾನದ ಚಮತ್ಕಾರ ಗಮನಾರ್ಹವಾಗಿದೆ.

ಕಾಲವೆಂಬುದು ಇರವ ಕಣವ ಪೋಣಿಸಿದೊಂದು
ಹಾರ; ನೂರಾರು ಹನಿ ಒಂದರೊಡನೊಂದಿರಲು
ಎಲ್ಲವೂ ಎಳೆಯಾಗಿ ಕಾಂಬಂತೆ, ಮುತ್ತುಗಳು
ಸರದಿ ಕೋದಿರಲೊಂದು ಮೌಕ್ತಿಕದ ನಾಳವೂ,
ಕೊಳ್ಳಿ ಸುತ್ತುತಿರೆ ಬೆಂಕಿಯದೊಂದು ಚಕ್ರವೂ,
ಕಾಂಬಂತೆ ಬಿಡಿಬಿಡಿಯ ಅನುಭವದ ಕಣ ಹಲವು
ಒಂದನೊಂದನುಸರಿಸಿ ನಾನು ನೀನಾಗಿಹುದು;

ಧರ್ಮದ ಹೆಸರಿನ ಹೊಡೆದಾಟವನ್ನು ಜಾಬಾಲಿಯ ಬಾಯಲ್ಲಿ -

ದೈವಕೆ ನಿವೇದನ ಊಟವೆಂಬುದು ನಮಗೆ,
ಎಂಬಂತೆ ಈ ಎಲ್ಲ ಜಗಳವೂ ನೆಪಮಾತ್ರ
ಧರ್ಮವನು ಕುರಿತಿಹುದು.

ಎಂದು ಹೊಸ ಹೋಲಿಕೆಯಿಂದ ವ್ಯಾಖ್ಯಾನಿಸಿದ್ದಾರೆ.

೫ನೆಯ ಸ್ಥಾನದಲ್ಲಿನ ಯಶೋಧರೆ, ಅಂಬಿಕೆ ಇವರ ಸಂಭಾಷಣೆಯಲ್ಲಿ ಯಶೋಧರೆಯ ತೀವ್ರಮನೋವೇದನೆ ಜೋರಾದ ಶಕ್ತಿಯ ಶೈಲಿಯನ್ನೂ ನಾಟಕೀಯತೆಯನ್ನೂ ಪಡೆದಿದೆ. ತಾನು ಸನ್ಯಾಸಿಯಾದ ತನ್ನ ಪತಿಯನ್ನು ನೋಡಲಾಗದೆಂಬ ನಿರಾಶೆಯ ಆಳದಿಂದ ಸಿಡಿದೆದ್ದ ಅವಳ ಒಂದೊಂದು ಮಾತು ತೀವ್ರಶೋಕದಿಂದ ಪರ್ಯಾಪ್ತವಾಗಿದೆ. ತಪ್ತ ಹೃದಯದಿಂದ ಮಾತುಗಳು ಬಿಸಿನೀರಿನ ಕಾರಂಜಿಯಂತೆ ಚಿಮ್ಮುತ್ತವೆ. ಗುರುತಿದ್ದವರು, ಇಲ್ಲದವರು ಎಲ್ಲರೂ ಬುದ್ಧನನ್ನು ನೋಡಬಹುದು, ಆದರೆ ಅವರ ಬಾಳಿನರ್ಧವಾಗಿದ್ದ ನಾನು ನೋಡಬಾರದೆಂಬ ನಿರಾಶೆಯ ಕಿಡಿ ಅವಳನ್ನು ದಹಿಸುತ್ತದೆ.

ಅರಯಿಸುವರೆ
ಎನ್ನ ಮಾತ್ರವೆ ಅವರು ಬಿಟ್ಟಂತೆ ತೋರುತಿದೆ.
ನಾನು ಒಬ್ಬಳು
ಅವರ ಎನ್ನವನೆಂದು ಕರೆಯಲಾಗದ ಪಾಪಿ.

ಎನ್ನುವಾಗ ಯಶೋಧರೆಯ ಶೋಕದ ಆಳದ ಅನುಭವವಾಗುತ್ತದೆ. ಹೃದಯಾಂತರಾಳದಿಂದ ಬಂದ ಈ ಭಾಗದ ನುಡಿಗಳು ಕರುಣಾರಸವನ್ನು ಬಹುವಾಗಿ ಪೋಷಿಸುತ್ತವೆ.

ಕನಸಿನೊಳಂದು
ಊಳಿಗದ ಮಂದಿಯೂ ನನ್ನ ನುಳಿಯುವರೆಂದು ಕಾಣಲಿಲ್ಲ.

ಎಂದು ಯಶೋಧರೆ, ಅಂಬಿಕೆ ಬುದ್ಧನನ್ನು ಗುರು ಎಂದು ಮನ್ನಿಸಿದಳೆಂದು ಬೇಸರದಿಂದ, ಹೇಳುವಲ್ಲಿ ಬುದ್ಧ ತನಗೆ ಎಸಗಿದ ಅನ್ಯಾಯವನ್ನು ಮನಸಿಗೆ ಹಚ್ಚಿಕೊಂಡ ಅಸಹನೆ ಕಟುವಾಗಿ ನುಡಿಸುತ್ತದೆ.

ನೀವು ಮನವೊಪ್ಪಿ ಕೊಡದಿಹ ಒಂದು
ಲವಲೇಶ ಸುಖವನಾದರು ನಾನು ಒಲ್ಲೆನು
ಎರಡನೆಯ ಪಂಕ್ತಿಯಲಿ,
ಸುಖಿಸುವುದು ನನಗೆ ಅಭ್ಯಾಸವಾಗಿಹುದವ್ವ,
ಇಂದು ಆತುರ ಪಡೆನು.

ಯಾವಾಗಲೂ ದುಃಖದಲ್ಲಿ ಯಶೋಧರೆಯನ್ನು ಸ್ವಾಂತನ ಮಾಡುತ್ತಿದ್ದ ಅಂಬಿಕೆಯ ಈ ಹೊಸ ರೂಪಕವು ಆಕೆಯ ನಿಷ್ಠಾಭಾವವನ್ನು ಹೃದಯಂಗಮವಾಗಿ ನಿರೂಪಿಸುತ್ತದೆ.

ರಾಜ ವೀದಿಯಲ್ಲಿ ಬುದ್ಧ ಬರುವಾಗ ಯಶೋಧರೆ ಅಂಬಿಕೆಗೆ
ನೀನೆನ್ನ ಕಣ್ಣಾಗು, ನೋಡಿದುದ ಬಣ್ಣಿಸು.
ಕಣ್ಣಿನಿಂದೀಂಟುವುದ ಕಿವಿಗಳಿಂದೀಂಟುವೆನು.

ಎಂದು ಹೇಳುವುದು, ನಂತರ ಬುದ್ಧನ ವರ್ಣನೆಯನ್ನು ಕೇಳುವ ಆಕೆಯ ಆತುರ ಅಂಬಾಪಾಲಿ ಬುದ್ಧ ತನ್ನನ್ನುದ್ಧರಿಸಿದುದನ್ನು ಹೇಳಿದ್ದನ್ನು ಕೇಳಿದ ಆಕೆಯ ಸುಖ, ತಾನು ಬುದ್ಧನ ವೈಭವವನ್ನು ಕಣ್ತುಂಬ ನೋಡಲಾರೆನೆಂಬ ನಿರಾಶೆಯಲ್ಲಿ ಧರ್ಮದ ವಿರುದ್ಧವಾಗಿ ಆಡುವ ಕಠೋರನುಡಿ ಇವುಗಳ ರಚನೆ ನಾಟಕೀಯವೂ ಭಾವ ವ್ಯಂಜಕವೂ ಆಗಿ, ಕಾವ್ಯ, ನಾಟಕಗಳ ಸುಂದರ ಸಮನ್ವಯ ಸಿದ್ಧಿಸಿದೆ.

ಇದು ಯಾವ ಮತಧರ್ಮ? ಇದು ತಹುದೇನ?
ಬಾಳುಗಳ ಸೀಳಿ ಮನೆಗಳ ಮುರಿದು ಹೃದಯಗಳ
ಪುಡಿಮಾಡಿ ಕಣ್ಣೀರ ಕಾಲ್ವೆಯಲಿ ಕದಡಿಸುವ
ಈ ಧರ್ಮ ಮತಗಳೇತರ ಧರ್ಮ ಮತಗಳು?
ಲೋಕಗಳ ಶುಭವನಿವು ಸಾಧಿಸುವವೆನ್ನುವುದು
ಬರಿಯ ಭ್ರಾಂತಿಯ ಮಾತು.

ಇದು ಭಾವದ ವಿದ್ಯುಜ್ವಾಲೆಯ ಕಿಡಿ; ಸಪ್ಪೆ ಮಾತಿನ ಮಾಲೆಯಲ್ಲ.

ಆಕೆಯ ಮನದ ಕಣ್ಣಿನಲ್ಲಿ ಬುದ್ಧ ಸಂಜೆವೆಳಗೆ ತೊಟ್ಟ ಹಿಮಗಿರಿಯ ಶೃಂಗವು ವನಗಳನ್ನು ಹರಿಸುವಂತೆ ಕಾಣುತ್ತದೆ. ಬುದ್ಧನಿಗೆ ಕಾಣಿಕೆಗಳನ್ನು ಕಳಿಸಿ ಭಾವನೆಯ ದೇಹವನ್ನು ಇಲ್ಲಿಂದಲೇ ಅರ್ಪಿಸುವೆ ಎನ್ನುವಳು. ಹೀಗಿದ್ದರೂ ಆನಂದನು ಬಂದು 'ಗುರು ಜಗದ ಹಿತಕ್ಕಾಗಿ ತನ್ನ' ತನ್ನವರ ಸೌಖ್ಯ ಕಡೆಗಣಿಸಿದನು ಎಂದಾಗ ತಡೆಯಲಾರದೆ ಯಶೋಧರೆ,

ಇದು ಮನೆಯಸುಟ್ಟು ಊರ ಬೆಳಗುವರಂತೆ

ಎಂದು ಮನಸ್ಸಿನ ಕಹಿಯನ್ನು ವ್ಯಕ್ತಗೊಳಿಸಲು, ಆನಂದ ಮನೆಯ ಸುಟ್ಟರೊ ತಮ್ಮ ದೀಪವನು ಕೊಟ್ಟರೊ ಊರಬೆಳಗಿದುದು ನಿಜ ಎಂದು ಉತ್ತರ ಕೊಡುತ್ತಾನೆ.

ಹತ್ತುಸಾವಿರ ಮಂದಿ ತ್ಯಾಗವನು ವರಿಸಿದರು ಎಂದು ಆತನೆನ್ನಲು

ಅಯ್ಯೊ, ನನ್ನಂತೆ
ಎಷ್ಟು ಸಾವಿರ ಮಂದಿ ನೊಂದರೋ.

ಎಂದು ಯಶೋಧರೆ ಪರಿತಪಿಸುವುದು ನೈಜತೆಗಾಗಿ ಭಾವನೆಯನ್ನು ಅನುಭವಿಸುವುದರಿಂದಲೇ ಬರುವ ಮಾತು.

ಮನಸಿನಲಿ
ಕಲ್ಮಷಗಳಿಹವೆಂದು ಮನೆಗಳನು ಬಿಟ್ಟೋಡಿ
ವನದೊಳಿಹ ಪೊದೆಗಳನು ದಹಿಸುವೊಡೆ ಕಿಚ್ಚಿಕ್ಕಿ
ಹುಲ್ಲೆಮರಿಗಳ ಸುಡುವ ನೀತಿಯಿದು.

ಎಂದು ಹೊಸ ಕಲ್ಪನೆಯಿಂದ ವರ್ಣಿಸುವುದು ಯಶೋಧರೆಯ ಮನಸ್ಸಿನಲ್ಲಿ ನಿರಪರಾಧಿಯಾದ ತನ್ನನ್ನು ಬಿಟ್ಟು ತನ್ನ ಪತಿ ದ್ರೋಹ ಬಗೆದನೆಂಬ ಭಾವ ಸ್ಥಾಯಿಯಾಗಿದ್ದುದನ್ನು ಸೂಚಿಸುತ್ತದೆ. ಇಂಥ ಅನೇಕ ಹೊಸದಾದ, ಭಾವಪೂರಿತವಾದ ಅಲಂಕಾರಗಳು ಈ ಕೃತಿಯ ಯೋಗ್ಯತೆಯನ್ನು ಬಹುವಾಗಿ ಹೆಚ್ಚಿಸಿವೆ.

ಕೊನೆಯ ದೃಶ್ಯದಲ್ಲಿ ಬುದ್ಧನು ತಾನು ಯಶೋಧರೆಯನ್ನು ಪ್ರೇಮಹೀನನಾಗಿ ತ್ಯಜಿಸಿದ್ದಲ್ಲ ಎಂದೆನ್ನುವಾಗ ಯಶೋಧರೆಯ ಪ್ರೀತಿಯನ್ನು ವರ್ಣಿಸುವುದು ಅಪೂರ್ವ ರಮಣೀಯವಾಗಿದೆ.

ಆ ಪ್ರೇಮವಂದೆನ್ನ ಹೃದಯ ಸದ್ಮದೊಳಿಟ್ಟ
ಸಮ್ಮೋದದೊಂದು ನಂದಾದೀಪ ಈಗಳೂ
ಎನ್ನ ಅಂತರ್ಯವನು ತೃಪ್ತಿಯಲಿ ಬೆಳಗುತ್ತಿದೆ.
ಇರುಳು ತಮವನು ತಾಗಿ ಬಾಂದಳದ ಚೆಲುವಾಗಿ
ಬೆಳಕ ಬೀರಿದ ತಾರೆ, ಹಗಲು ನೇಸರ ನೆರೆದು,
ಮರೆಯಿಂದ ಜಗವ ಬೆಳಗುವ ಪೋಲಾ ತಣಿವೆನಗೆ
ಸಿದ್ಧಿಯಿಂದೊದವಿದ ಮನ! ಪ್ರಸಾದದಿ ಬೆರೆದು
ಬಳಿಸಾರಿ ಬಂದ ಆತ್ಮಗಳ ಸುಖಿಗೊಳಿಸುತಿದೆ.

ಹಗಲು ತಾರೆ ಕಾಣುವುದಿಲ್ಲ. ಆದರೆ ಅವು ಇಲ್ಲವೆಂದಲ್ಲ. ಅವು ಪ್ರತ್ಯೇಕವಾಗಿದ್ದರೂ ಪ್ರತ್ಯೇಕತೆಯ ಭಾವ ಮರೆಯಾಗಿದೆ. ಜ್ಞಾನ ಸೂರ್ಯ ಜೀವತಾರೆಗಳ ಪ್ರತ್ಯೇಕತೆಯ ಅಂಶವನ್ನು ಮರೆಮಾಡುತ್ತಾನೆ. ಯಶೋಧರಾಳ ಪ್ರೇಮ ಬುದ್ಧನ ಹೃದಯಾಕಾಶದ ಹಿರಿಯ ಪ್ರೇಮತಾರೆ. ಅದರ ಬೆಳಗು ಬುದ್ಧನ ಸಮಸ್ತ ಜೀವಿಗಳ ಪ್ರೇಮದೊಡನೆ ಲೀನವಾಗಿದೆ. ಯಶೋಧರೆಯ ಪ್ರೇಮವನ್ನು ಬುದ್ಧನು ತನ್ನ ತತ್ವದೊಡನೆ ಸಮನ್ವಯ ಮಾಡುವಂತೆ ಹೇಳಿರುವ ಈ ಹೋಲಿಕೆಯ ಕಲಾವಂತಿಕೆ ಬಹು ಹಿರಿದು.

ಈ ಕಾವ್ಯ ನಾಟಕದಲ್ಲಿ ಕರುಣರಸ ಯಶೋಧರೆಯನ್ನು ಅವಲಂಬಿಸಿಕೊಂಡು ನಾಟಕದ ಬಹುಭಾಗವನ್ನು ಆಕ್ರಮಿಸಿದೆ. ಕೆಲವೊಮ್ಮೆ ಅದು ಕ್ರೋಧಕ್ಕೆಡೆಕೊಟ್ಟಿದೆ. ಬುದ್ಧನನ್ನು ಅನುಸರಿಸಿ ಶಾಂತರಸ ಕೆಲವು ದೃಶ್ಯಗಳಲ್ಲಿ ಮೈವೆತ್ತಿವೆ. ಕೊನೆಗೆ ಶೋಕ, ಶಾಂತದಲ್ಲಿ ಪರ್ಯವಸಾನ ಹೊಂದುತ್ತದೆ.

ಯಶೋಧರಾ ಉತ್ತಮ ಕಾವ್ಯ. ಉತ್ತಮ ನಾಟಕವೂ ಹೌದು. ಬಹುತೇಕ ಸ್ವತಂತ್ರ ಸೃಷ್ಟಿಯಾದುದರಿಂದ ಇದರ ಮಹತ್ವ ಹೆಚ್ಚಿಗೆ ಉಂಟು. 'ಅವರ ಅಮರ ಕಾವ್ಯ' ಯಶೋಧರಾ ಪ್ರಕಟವಾದಾಗ ನನಗಾದ ಆನಂದ ಹೇಳತೀರದು. ಸರ್ ಎಡ್ವಿನ್ ಅರ್ನಾಲ್ಡರ

'ಲೈಟ್ ಆಫ್ ಏಶ್ಯಾ' ಕಾವ್ಯಕ್ಕೆ ಸರಿಗಟ್ಟುವ ಕನ್ನಡ ಕಾವ್ಯವೊಂದು ಬರಲಿ ಎಂದು ಹಾರೈಸುತ್ತಿದ್ದೆ. ಆ ಹಾರೈಕೆ ಸಫಲವಾಗಿತ್ತು ಎಂದು ಶ್ರೀ ಅ.ನ. ಕೃಷ್ಣರಾಯರು 'ಮಾಸ್ತಿಯವರು' ಎಂಬ ತಮ್ಮ ಲೇಖನದಲ್ಲಿ ಹೇಳಿದ್ದಾರೆ. 'ಲೈಟ್ ಆಫ್ ಏಶ್ಯಾ' ಕಾವ್ಯ, 'ಯಶೋಧರಾ' ಕಾವ್ಯ ನಾಟಕ. 'ಯಶೋಧರಾ'ದ ರಚನೆ ಅದಕ್ಕಿಂತ ಹೆಚ್ಚು ಕಲಾತ್ಮಕವಾದದ್ದು. 'ಲೈಟ್ ಆಫ್ ಏಶ್ಯಾ' ಬುದ್ಧನ ಸಂಪೂರ್ಣ ಜೀವನದ ಚರಿತ್ರೆಯ ಆಧಾರದಿಂದ ಬರೆದದ್ದು. ಇದು ಬಹು ಸ್ವಲ್ಪ ಕಥಾಭಾಗವನ್ನು ಬೆಳೆಸಿದ್ದು. ದೇವತೆಗಳು ಸಿದ್ಧಾರ್ಥನ ಕಿವಿಯಲ್ಲಿ ತೂರುವ 'ಹಾರಾಡುವ ಗಾಳಿಯಂತೆ' ನಾವು ಎಂಬ ಪದ ಯಶೋಧರೆಯ ಸುಂದರವಾದ ಸ್ವಪ್ನದ ಕಲ್ಪನೆಯ ವರ್ಣನೆ, ವಿರಹಿಣಿ ಯಶೋಧರೆಯ ಅವಸ್ಥೆಯ ವರ್ಣನೆ ಇಂಥ ಕೆಲ ಬಹು ಸುಂದರವಾದ ವರ್ಣನೆಗಳನ್ನು ಬಿಟ್ಟರೆ ಉಳಿದ ಕಡೆ 'ಲೈಟ್ ಆಫ್ ಏಶ್ಯಾ' ಅಷ್ಟು ಸುಂದರವಾಗಿಲ್ಲ. ಆ ಕಾವ್ಯದಲ್ಲಿ ಬುದ್ಧ ಬಂದನೆಂಬ ವಾರ್ತೆ ಕೇಳಿ ಯಶೋಧರೆ ಆನಂದೋದ್ರೇಕವನ್ನು ಅನುಭವಿಸುವ ವರ್ಣನೆ ಅಷ್ಟು ನೋವನ್ನುಂಡ ನಂತರ ಸಹಜವಾಗಿ ಕಾಣುವುದಿಲ್ಲ. ಅದೇ ಸನ್ನಿವೇಶದಲ್ಲಿ ಆನಂದವನ್ನು ತೋರಿಸುವಲ್ಲಿ ಪರಿಣತ ವಯಸ್ಸಿನ ನೋವಿನಿಂದ ಮಾಗಿದ ಭಾವನೆಯ ವರ್ಣನೆ.

ಎಂಥ ಸಂತಸದ ವಾರ್ತೆಯ ತಂದು ಸಲಹಿದಿರಿ
ಈ ಹಾರವನು ಕೊಳಿರಿ.

ಎಂಬ ಶಾಂತ, ಗಂಭೀರ ಆನಂದ ಪ್ರದರ್ಶನ 'ಯಶೋಧರಾ'ದಲ್ಲಿ ಹೆಚ್ಚು ಸಹಜವಾಗಿ ಬಂದಿದೆ. 'ಲೈಟ್ ಆಫ್ ಏಶ್ಯಾ'ಕ್ಕಿಂತ 'ಯಶೋಧರಾ'ದ ಗಾತ್ರ ಕಿರಿದಾದರೂ ತೂಕ ಹಿರಿದು.

ಸಾವಿತ್ರಿ

ಪ್ರೊ|| ಟಿ. ಎಸ್. ವೆಂಕಣ್ಣಯ್ಯ

ಇದು * 'ಒಂದು ಸಣ್ಣ ದೃಶ್ಯ.' ಗ್ರಂಥದ ಆಕಾರವು ಸಣ್ಣದಾದರೂ ಕಾವ್ಯದ ಯೋಗ್ಯತೆಯು ಸಣ್ಣದಲ್ಲ ಎಂಬುದಾಗಿ ಶ್ರೀನಿವಾಸರ ಕಾವ್ಯರಚನಾ ಸಾಮರ್ಥ್ಯವನ್ನರಿತಿರುವವರಿಗೆ ನಾವು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಈ ಕಾವ್ಯವನ್ನು ವಿಮರ್ಶಿಸುವುದಕ್ಕೆ ಮೊದಲು ಈ ನಾಟಕದ ವಿಷಯದಲ್ಲಿ ಸಹಜವಾಗಿ ಹುಟ್ಟಬಹುದಾದ ಒಂದು ಆಕ್ಷೇಪಣೆಯನ್ನು ಕುರಿತು ವಿಚಾರ ಮಾಡುವುದು ಅಗತ್ಯ. ಸಾವಿತ್ರಿಯ ಚರಿತ್ರೆಯು ಅತ್ಯಂತ ಪ್ರಖ್ಯಾತವಾದದ್ದು; ಆ ಕಥೆಯನ್ನವಲಂಬಿಸಿ ಅನೇಕ ಗದ್ಯ ಪದ್ಯ ಕಾವ್ಯಗಳೂ ನಾಟಕಗಳೂ ಆಗಲೇ ಹುಟ್ಟಿವೆ; ಹೀಗಿರುವಲ್ಲಿ ಪುನಃ ಹಾಡಿದ್ದನ್ನೇ ಹಾಡುವುದರಿಂದ ಏನು ಪ್ರಯೋಜನ? ಎಂಬುದಾಗಿ ಕೆಲವರು ಕೇಳಬಹುದು. ಗ್ರಂಥಕರ್ತರು ಇದಕ್ಕೆ ಯಾವ ಉತ್ತರವನ್ನೂ ಕೊಡದೆ ಪ್ರಶ್ನೆ ಕೇಳುವವರೇ ಆಲೋಚಿಸಿ ಊಹಿಸಲಿ- ಅಥವಾ ವಿಮರ್ಶಕರು ಹಾಗೆ ಪ್ರಶ್ನೆ ಕೇಳುವವರಿಗೆ ತಕ್ಕ ಉತ್ತರವನ್ನು ಕೊಡಲಿ ಎಂದು ನಗುತ್ತ ನಗುತ್ತ ಹೇಳಬಹುದು. ಅಥವಾ ಇಷ್ಟ ಬಂದರೆ, 'ಸಾವಿತ್ರಿಯ ಜೀವನ ಚರಿತ್ರೆಯಲ್ಲಿ ಒಂದು ಮರ್ಮವಿದೆ, ಆ ಮರ್ಮವು ನನಗೆ ಗ್ರಹಿಕೆಯಾದ ರೀತಿಯಲ್ಲಿ ಇತರರಿಗೆ ಗ್ರಹಿಕೆಯಾಗಿರುವುದೆಂದಾಗಲಿ ಅಥವಾ ಆಕೆಯ ಚರಿತ್ರೆಯು ಹೇಗೆ ಚಿತ್ರಿತವಾಗಬೇಕೆಂದು ನನಗೆ ತೋರುತ್ತದೆಯೋ ಹಾಗೆ ಇತರರಿಂದ ಚಿತ್ರಿತವಾಗಿದೆಯೆಂದಾಗಲಿ ನನಗೆ ಎನ್ನಿಸುವುದಿಲ್ಲ. ಆದುದರಿಂದ ಸಾವಿತ್ರಿಯ ಜೀವನ ಚರಿತ್ರೆಯನ್ನು ನಾನು ಈ ಕಾವ್ಯ ಚಿತ್ರದಿಂದ ಪ್ರಕಾಶ ಪಡಿಸಿರುತ್ತೇನೆ. ಈ ಪ್ರಯತ್ನವು ಸಫಲವಾದದ್ದೇ, ನಿಷ್ಫಲವಾದದ್ದೇ ಎಂಬುದನ್ನು ನಿರ್ಧರಿಸುವುದು ಸಹೃದಯರಾದ ಪಾಠಕರ ಕೆಲಸ' ಎಂದು ಉತ್ತರ ಕೊಟ್ಟರೂ ಕೊಡಬಹುದು.

ಶ್ರೀನಿವಾಸರು ಸಮಗ್ರ ಸಾವಿತ್ರಿಯ ಚರಿತ್ರೆಯನ್ನು ನಿರೂಪಿಸಲು ಪ್ರಯತ್ನಿಸಿಲ್ಲ. ಸಾವಿತ್ರಿಯು ಯಾವ, 'ಒಂದು ದಿನವು ಮಂಗಳವನ್ನು ನೋಡಲೆಂದು ಒಂದು ವರ್ಷದ ಕಠಿನ ಜೀವನವನ್ನು ನಡೆಯಿಸಿ'ದಳೋ, ಯಾವ ದಿನ ಸಾವಿತ್ರಿಯು ತನ್ನ ಪಾತಿವ್ರತ್ಯ ಮಹಿಮೆಯಿಂದ ಸತ್ಯವಾನನ ಜೀವವನ್ನು ಮೃತ್ಯು ಮುಖದಿಂದ ಹಿಂತಿರುಗಿಸಿದಳೋ ಆ ಒಂದು ದಿನದ ಚರಿತ್ರೆಯು ಈ ನಾಟಕದಲ್ಲಿ ಚಿತ್ರಿತವಾಗಿದೆ.

ಕವಿಯು ಪ್ರಖ್ಯಾತವಾದ ಇತಿವೃತ್ತವನ್ನವಲಂಬಿಸಿ ಕಾವ್ಯವನ್ನು ರಚಿಸುವಾಗ ಮೂಲಕಥೆಗೆ ಅಪೋಹ ಬಾರದಂತೆ ಎಚ್ಚರಿಕೆಯಿಂದಿರಬೇಕಾಗುತ್ತದೆ. ಮೂಲಕಥೆಯಿಂದಲೇ ಕಾವ್ಯವನ್ನು ನಿರ್ಮಿಸುವದು ಸಾಮಾನ್ಯವಾಗಿ ಅಸಾಧ್ಯ, ಉತ್ತಮ

* ಪ್ರಬುದ್ಧ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾದ ವಿಮರ್ಶೆ.

ಕವಿಯು ಮೂಲಕಥೆಯಲ್ಲಿಯ ಕೆಲವು ಅಂಶಗಳನ್ನು ಬಿಟ್ಟು, ಅದರಲ್ಲಿಲ್ಲದ ಕೆಲವು ಅಂಶಗಳನ್ನು ಸೇರಿಸಿ ಇದ್ದ ಅಂಶಗಳಲ್ಲಿ ಕೆಲವನ್ನು ಮಾರ್ಪಡಿಸಿ ತನ್ನ ಕಾವ್ಯವನ್ನು ರಸಾತ್ಮಕವಾಗಿ, 'ಆನಂದ ನಿಷ್ಯಂದಿ,' ಯಾಗಿರುವಂತೆ ಮಾಡುತ್ತಾನೆ. ಅಭಿಜ್ಞಾನ ಶಾಂಕುತಳಾದಿಗಳೇ ಇದಕ್ಕೆ ನಿದರ್ಶನವಾಗಿವೆ. ನಾಟಕದ ವಸ್ತುರಚನೆಯಲ್ಲಿ ಕವಿಯು ತೋರಿಸುವ ಜಾಣ್ಮೆಯಿಂದಲೇ ತಕ್ಕಮಟ್ಟಿಗೆ ಕವಿಯ ಸಾಮರ್ಥ್ಯವನ್ನು ನಿರ್ಣಯಿಸಬಹುದು.

ಮಹಾಭಾರತಾದಿ ಗ್ರಂಥಗಳಲ್ಲಿ ಈ ನಾಟಕದ ಕಥಾವಸ್ತುವಿಗೆ ಸಂಬಂಧಿಸಿರುವ ಅಂಶಗಳಿರುವುದು ಇಷ್ಟು ಮಾತ್ರ . . . .ಒಂದು ದಿನ ಸತ್ಯವಾನನು ಪದ್ಧತಿಯ ಪ್ರಕಾರ ಕಟ್ಟಿಗೆಯನ್ನು ತರಲು ಕಾಡಿಗೆ ಹೊರಟನು. ಸಾವಿತ್ರಿಗೆ ಆ ದಿನ ಸತ್ಯವಾನನ ಇಹಜೀವನ ಯಾತ್ರೆಯು ಮುಗಿಯುವುಧೆಂದು ಗೊತ್ತಿತ್ತು; ಆದಕಾರಣ ಹಿಂದಿನ ಮೂರು ದಿನಗಳಿಂದಲೂ ಆಕೆಯು ನಿರಶನ ವ್ರತದಿಂದಿದ್ದಳು. ಆ ದಿನ ಸಾವಿತ್ರಿಯು ಸತ್ಯವಾನನನ್ನು ಹಿಂಬಾಲಿಸಿದಳು. ಸತ್ಯವಾನನು ಕಟ್ಟಿಗೆಯನ್ನು ಕಡಿದಾದ ಮೇಲೆ ದಣಿದು ತಲೆನೋವನ್ನು ಹೊಂದಿ ಸಾಹಿತ್ರಿಯ ತೊಡೆಯಮೇಲೆ ತಲೆಯನ್ನಿಟ್ಟುಕೊಂಡು ಮಲಗಿದನು. ಸ್ವಲ್ಪ ಹೊತ್ತಿನಲ್ಲಿಯೇ ಯಮನು ಬಂದು ಅವನ ಜೀವವನ್ನು ಆಕರ್ಷಿಸಿಕೊಂಡು ಹೊರಟನು. ಸಾವಿತ್ರಿಯು ಯಮನನ್ನು ಹಿಂಬಾಲಿಸಿ ಆತನಿಂದ ಸತ್ಯವಾನನ ಜೀವವನ್ನು ಮಾತ್ರವೇ ಅಲ್ಲದೆ ಮತ್ತೆ ಕೆಲವು ವರಗಳನ್ನು ಪಡೆದುಕೊಂಡಳು. ಅನಂತರ ಸಾವಿತ್ರೀ ಸತ್ಯವಾನರು ಮನೆಗೆ ಬಂದು ಈ ವೃತ್ತಾಂತವನ್ನೆಲ್ಲ ತಿಳಿಸಲು ಎಲ್ಲರೂ ಆನಂದಪರವಶರಾದರು.

ಒಟ್ಟಿನ ಮೇಲೆ ನಾಟಕದ ಕಥೆಯೂ ಹೀಗೆಯೇ ಇದೆ. ಆದರೆ ಮೇಲೆ ಹೇಳಿದ ಕಥೆಯಲ್ಲಿಲ್ಲದ ಕೆಲವು ಅಂಶಗಳು ಸೇರಿವೆ; ಕೆಲವು ಅಂಶಗಳು ಬದಲಾವಣೆಯನ್ನು ಹೊಂದಿವೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಮಾತ್ರ ಇಲ್ಲಿ ಸೂಚಿಸಿ ಅವುಗಳ ಪ್ರಯೋಜನ ಅಥವಾ ಅವಶ್ಯಕತೆಯನ್ನು ಸಂಗ್ರಹವಾಗಿ ತಿಳಿಸುತ್ತೇವೆ.

೧. ಇತಿಹಾಸದ ಕಥೆಯಲ್ಲಿ ನಾರದರ ಪ್ರಸ್ತಾಪವಿಲ್ಲ. ನಾಟಕದಲ್ಲಿ ನಾರದರ ಪಾತ್ರವು ಅತ್ಯಂತ ಮುಖ್ಯವಾದದ್ದು. ಆ ಪಾತ್ರವನ್ನು ಕೈಬಿಟ್ಟರೆ ನಾಟಕವು ನಡೆಯುವಂತಿಲ್ಲ. ನಾರದರು ನಾಟಕಾರಂಭದಲ್ಲಿ ದೇವತಾಸ್ತುತಿಯನ್ನು ಮಾಡಿ ತಮ್ಮ 'ಸ್ವಗತ'ದಿಂದ ವಿಷ್ಕಂಭದ ಕಾರ್ಯವನ್ನು ನೆರವೇರಿಸಿ ಕಥೆಯ ಮಧ್ಯೆ ಆಗಾಗ ಪ್ರವೇಶಿಸಿ ಕೆಲವು ವೇಳೆ ಸಾವಿತ್ರಿಗೂ, ಕೆಲವು ವೇಳೆ ಆಕೆಯ ಅತ್ತೆ ಮಾವಂದಿರು, ತಾಯಿ ತಂದೆಗಳಿಗೂ ಧೈರ್ಯ ಹೇಳುತ್ತಾ, ಕೆಲವು ವೇಳೆ ಸಾವಿತ್ರಿಯ ಪ್ರಯತ್ನ ಸಫಲವಾಗಲೆಂದು ಜಗದೀಶನನ್ನು ಪ್ರಾರ್ಥಿಸುತ್ತಾ ನಾಟಕಕ್ಕೆ ಅತ್ಯಾವಶ್ಯಕವಾದ ಪಾತ್ರವಾಗಿ ಏರ್ಪಟ್ಟು ನಾಟಕಾಂತ್ಯದಲ್ಲಿ ಮಂಗಳವನ್ನು ಮಾಡುತ್ತಾರೆ.

೨. ಇತಿಹಾಸದಲ್ಲಿ ಉಕ್ತವಾಗಿರುವುದು ಸಾವಿತ್ರೀ ಸತ್ಯವಾನರು ಮನೆಗೆ ಹಿಂದಿರುಗಿ ಬಂದಮೇಲೆ ಅಡವಿಯಲ್ಲಿ ನಡೆದ ಸಂಗತಿಯೆಲ್ಲವೂ ಸತ್ಯವಾನನ ತಂದೆ ತಾಯಿಗಳಿಗೂ ಆಮೇಲೆ ಸಾವಿತ್ರಿಯ ತಂದೆ ತಾಯಿಗಳಿಗೂ ತಿಳಿಯಿತೆಂದು. ನಾಟಕದಲ್ಲಿ ಹಾಗಿಲ್ಲ; ಅವರೆಲ್ಲರೂ ಸಾವಿತ್ರೀ ಸತ್ಯವಾನರನ್ನು ಹುಡುಕಿಕೊಂಡು ಅಡವಿಗೆ ಹೋಗುತ್ತಾರೆ.

೩. ಇತಿಹಾಸದಲ್ಲಿ ಯಮನು ಸಾವಿತ್ರಿಗೆ ಪ್ರತ್ಯಕ್ಷನಾಗಿ ವರಗಳನ್ನು ಕೊಟ್ಟನೆಂದು ಹೇಳಿದೆ. ನಾಟಕದಲ್ಲಿ ಯಮನು ಸಾವಿತ್ರಿಗೆ ಮಾತ್ರವಲ್ಲದೆ ಎಲ್ಲರಿಗೂ ತ್ರೈಮೂರ್ತ್ಯಾತ್ಮಕವಾಗಿ ಕಾಣಿಸಿಕೊಳ್ಳುತ್ತಾನೆ.

ನಾಟಕದಲ್ಲಿ ಕಂಡುಬರುವ ಹೊಸ ವಿಷಯಗಳು ಅಸಂಭವವಾದುವಲ್ಲ. ಆ ದಿನ ಸಾವಿತ್ರಿಗೆ ಅನಿಷ್ಟ ಉಂಟಾಗುವುದೆಂಬುದು ನಾರದರಿಗೆ ಮೊದಲಿನಿಂದಲೂ ಗೊತ್ತಿತ್ತು; ನಾರದರು ವಿವಾಹಕ್ಕೆ ಪೂರ್ವದಲ್ಲಿಯೇ ಸಾವಿತ್ರಿಯ ಸ್ಥಿರಸಂಕಲ್ಪವನ್ನು ನೋಡಿ ಮುಗ್ಧರಾಗಿ ಹೋಗಿದ್ದರು. ಲೋಕಕಲ್ಯಾಣಕ್ಕಾಗಿಯೇ ತ್ರಿಲೋಕ ಸಂಚಾರವನ್ನು ಮಾಡುವ ನಾರದರು ಆ ಕಷ್ಟದ ದಿನದಲ್ಲಿ ಸಾವಿತ್ರಿಗೆ ತಮ್ಮ ಕೈಲಾದ ಸಹಾಯವನ್ನು ಮಾಡಲೋಸುಗ ಬರುವರೆಂಬುದು ಅಸಂಭವವಲ್ಲ; ಅತ್ಯಂತ ಸಹಜವಾದುದು. ಅಡವಿಗೆ ಹೋದ ಮಗನೂ ಸೊಸೆಯೂ ಹೊತ್ತು ಮೀರಿದರೂ ಬಾರದಿದ್ದುದರಿಂದ ಸತ್ಯವಾನನ ತಂದೆತಾಯಿಗಳು ಅವರನ್ನು ಹುಡುಕಿಕೊಂಡು ಅಡವಿಗೆ ಬಂದರೆಂದರೂ ಅಸಂಭವವಲ್ಲ; ಆ ದಿವಸ ಸಾವಿತ್ರಿಗೆ ತನ್ನ ಕೈಲಾದ ಸಮಾಧಾನವನ್ನು ಹೇಳಲೋಸುಗ ಪಕ್ಷಿಯೊಬ್ಬನೆ ಬರುವುದೂ ಅಸಂಭವವಲ್ಲ. ಆದುದರಿಂದ ಈ ಹೊಸ ಅಂಶಗಳಿಂದ ಮೂಲಕಥೆಗೆ ಯಾವ ಅಪೋಹವೂ ಬರುವುದಿಲ್ಲ. ನಾಟಕದ ವಸ್ತುವಿಗೆ ಅವಶ್ಯಕವಾದ ಕಥಾಭಾಗವು ಇತಿಹಾಸಾದಿಗಳಲ್ಲಿರುವುದು ಸಾವಿತ್ರೀ ಯಮರ ಸಂವಾದ ಮಾತ್ರ. ಅಷ್ಟರಿಂದ ನಾಟಕ ರಚನೆಯಾಗಲಾರದು. ಮೇಲೆ ಹೇಳಿದ ಅಂಶಗಳನ್ನು ಸೇರಿಸುವುದರಿಂದ ಕಥೆಯು ಪುಷ್ಟಿಯನ್ನು ಹೊಂದಿ ರಸವತ್ತಾಗಲು ಅವಕಾಶವಾಗಿರುತ್ತದೆ. ಅಲ್ಲದೆ, ಸಾವಿತ್ರೀ ಯಮರ ಸಂವಾದವು ದೀರ್ಘವಾದುದು. ಅದನ್ನು ಒಂದೇ ವೇಳೆಗೆ ನಾಟಕರಂಗದಲ್ಲಿ ತೋರಿಸುವುದಾದರೆ ಪ್ರೇಕ್ಷಕರಿಗೆ ವೈವಿಧ್ಯಾಭಾವದಿಂದ ಬೇಸರ ಉಂಟಾಗುವ ಸಂಭವವಿದೆ. ನಾಟಕದಲ್ಲಿ ಸಾವಿತ್ರೀ ಯಮರ ಸಂವಾದದ ಮಧ್ಯೆ ಬೇರೆ ಬೇರೆ ದೃಶ್ಯಗಳು ಬಂದು ವೈವಿಧ್ಯವನ್ನುಂಟುಮಾಡಿ ಬೇಸರಕ್ಕೆ ಅವಕಾಶವಿಲ್ಲದಂತೆ ಮಾಡಿರುತ್ತವೆ. ಇಷ್ಟೇ ಅಲ್ಲ. ಸಾವಿತ್ರಿಯು ಧರ್ಮವೀರಳು. ಆದಕಾರಣ ನಾಟಕದ ಪ್ರಧಾನರಸವು ಧರ್ಮವೀರವಾಗಬೇಕು. ಧರ್ಮವೀರವನ್ನು ಉಜ್ವಲಗೊಳಿಸಿ ತೋರಲು ಇರುವ ಮುಖ್ಯ ಸಾಧನ ಕರುಣಾರಸ. ದೃಶ್ಯಗಳೆಲ್ಲವೂ ಕರುಣಾರಸಪೂರಿತವಾಗಿರುವುದರಿಂದ ನಾಟಕದ ಪ್ರಧಾನರಸವನ್ನು ಪೋಷಿಸುತ್ತವೆ. ಯಮನು ಶ್ರೈಮೂರ್ತ್ಯಾತ್ಮನಾಗಿ ಎಲ್ಲರಿಗೂ ಪ್ರತ್ಯಕ್ಷನಾಗುವುದು ನಾಟಕದ ವಸ್ತುವಿಗೆ ಅವಶ್ಯಕವೆಂದು ನಮಗೆ ತೋರುವುದಿಲ್ಲ. ನಾಟಕ ಪ್ರದರ್ಶನ ದೃಷ್ಟಿಯಿಂದ ಇದರಿಂದ ಲಾಭವುಂಟೆಂಬುದರಲ್ಲಿ ಸಂಶಯವಿಲ್ಲ. ಬಹುಶಃ ಕವಿಗೆ ಯಮನ ವಿಚಾರವಾಗಿ ತಾನು ಒಪ್ಪುವ ಆಧ್ಯಾತ್ಮಿಕ ತತ್ವವನ್ನೂ ಈ ಸಂದರ್ಭದಲ್ಲಿಯೇ ಸೂಚಿಸಬೇಕೆಂಬ ಅಭಿಪ್ರಾಯವಿದ್ದರೂ ಇರಬಹುದು. ಈ ಕಲ್ಪನೆಯು ಹೃದಯಂಗಮವಾದುದು.

ನಾಟಕವಸ್ತು ರಚನೆಯಲ್ಲಿ ಉತ್ತಮವಾದ ಸನ್ನಿವೇಶಗಳನ್ನು ಕೂಡಿ ಪಾತ್ರಗಳ ಸಂಭಾಷಣೆಯಿಂದ ನಾಟಕವನ್ನು ರಸವತ್ತಾಗುವಂತೆ ಮಾತಬೇಕೆಂಬುದೇ ಕವಿಯ ಮುಖ್ಯ ಆಶಯ. ಇಲ್ಲಿ 'ಸಾವಿತ್ರಿ'ಯಿಂದ ಒಂದು ಸನ್ನಿವೇಶದ ಭಾಗವನ್ನು ಉದ್ಧರಿಸುತ್ತೇವೆ:

ಸತ್ಯವಾನ: ದೇವಿ ಈ ವನವು ಎಷ್ಟು ಚೆನ್ನಾಗಿದೆ ನೋಡಿದೆಯಾ?

ಸಾವಿತ್ರಿ: ಹೌದು.

ಸತ್ಯವಾನ: ಇಷ್ಟು ದಿನವಾಯಿತು, ನನಗೆ ವನವು ವಸಂತ ಋತುವಿನಲ್ಲಿ ಚೆನ್ನಾಗಿರುತ್ತದೆಯೋ ಗ್ರೀಷ್ಮ ಋತುವಿನಲ್ಲಿ ಚೆನ್ನಾಗಿರುತ್ತದೆಯೋ ಹೇಳುವುದಕ್ಕಾಗಿಲ್ಲ. ಬರುವ ವಸಂತ ಋತುವಿನಲ್ಲಿ ಈ ವಿಷಯವನ್ನು ನಿರ್ಧರಿಸಬೇಕೆಂದಿದ್ದೇನೆ.

ಸಾವಿತ್ರಿ: (ತಾನೇ) ದೇವದೇವ! (ಸತ್ಯವಾನನಿಗೆ) ಆಗಬಹುದು.

ಸತ್ಯವಾನ: ಮುಂದಿನ ವಸಂತ ಋತುವಿನ ವೇಳೆಗೆ ನಿನ್ನ ಈ ವ್ರತಗಳು ಮುಗಿದಿದ್ದರೆ ಅದು ಎಲ್ಲಾ ಋತುಗಳಿಗಿಂತಲೂ ಚೆನ್ನಾಗಿ ತೋರುವುದೇ ನಿಜ.

ಸಾವಿತ್ರಿ: ವ್ರತಗಳು ಇಂದಿಗೆ ಮುಗಿಯುವುವು.

ಈ ಸಂಭಾಷಣೆಯು ಕವಿಯಿಂದ ಕಲ್ಪಿತವಾದುದು. ಮಾತುಗಳು ಸಂದರ್ಭೋಚಿತವಾಗಿಯೂ ಸಂಕ್ಷೇಪವಾಗಿಯೂ ಭಾವವ್ಯಂಜಕಗಳಾಗಿಯೂ ಇವೆ. ಸತ್ಯವಾನನಿಗೆ ತಾನು ಆ ದಿನ ಇನ್ನು ಸ್ವಲ್ಪ ಹೊತ್ತಿಗೆ ಈ ಲೋಕಯಾತ್ರೆಯನ್ನು ಮುಗಿಸಬೇಕಾಗಿದೆ ಎಂಬ ಅರಿವಿಲ್ಲ. ಅವನು ಎಷ್ಟು ಆಶಾಯುಕ್ತನಾಗಿದ್ದಾನೆ! ನವಯೌವನಶಾಲಿಯಾದ ಆ ರಾಜಕುಮಾರನ ಮನಸ್ಸು ತನಗೆ ಅನುರೂಪಳಾದ ಪತ್ನಿಯ ಜೊತೆಯಲ್ಲಿರುವಾಗ ಸ್ವಾಭಾವಿಕವಾಗಿ ರಾಗಯುಕ್ತವಾದುದಾಗಿ ಸೌಂದರ್ಯಭಾವದಲ್ಲಿ ನಿಮಗ್ನವಾಗಿದೆ. ಸಾವಿತ್ರಿಗೆ ಉತ್ತರಕ್ಷಣದಲ್ಲಿ ಬರುವ ಗಂಡಾಂತರವು ತಿಳಿದಿದೆ. ಸತ್ಯವಾನನ ಆ ಆಶಾಯುಕ್ತವಾದ ಮಾತುಗಳನ್ನು ಕೇಳಿ ಸಾವಿತ್ರಿಗೆ ಮನಸ್ಸಿನಲ್ಲುಂಟಾದ ಕಳವಳವನ್ನು ಊಹಿಸಬಹುದೇ ಹೊರತು ಹೇಳಲಾಗುವುದಿಲ್ಲ. ವನದ ಸೌಂದರ್ಯವನ್ನು ನೋಡಿ ಸುಖಪಡುವ ದಿನವೇ ಅದು? ಜೀವವನ್ನು ಅಪಹರಿಸಲು ಮೃತ್ಯು ಸನ್ನಿಹಿತವಾಗಿರುವಾಗ ಮುಂದಿನ ವಸಂತ ಋತುವಿನ ಮಾತು! ಸಾವಿತ್ರಿಗೆ ಹೇಳುವುದಕ್ಕಿಲ್ಲ, ಅನುಭವಿಸುವುದಕ್ಕಿಲ್ಲ. ಎಂತಹ ಸಂಕಟದ ಸ್ಥಿತಿ! ಆ ವೀರರಮಣಿಯು ಪ್ರಯತ್ನ ಪುರಸ್ಸರವಾಗಿ ತನ್ನ ಹೃದಯದ ಪರಿತಾಪವನ್ನು - ಹಿಡಿಸಲಾರದ ಸಂಕಟವನ್ನು - ದಮನಮಾಡಿ, 'ಹೌದು,' 'ಆಗಬಹುದು,' ಎಂದು ಅತ್ಯಂತ ಸಂಕ್ಷೇಪವಾಗಿ ಉತ್ತರ ಕೊಡುವುದನ್ನು ನೋಡಿದರೆ ಕಲ್ಲೆದೆಯೂ ಕರಗದಿರಲಾರದು.

ಇಂತಹ ರಸಾತ್ಮಕವಾದ ವಾಕ್ಯಗಳನ್ನು ಸೃಷ್ಟಿಸುವ ಶಕ್ತಿಯು ಕವಿಗೆ ಹೇರಳವಾಗಿದೆ ಎಂಬುದಕ್ಕೆ ಹಲವು ನಿದರ್ಶನಗಳು ಈ ನಾಟಕದಲ್ಲಿ ದೊರೆಯುತ್ತವೆ. ಒಂದು ವಿಷಯದಲ್ಲಿ ಮಾತ್ರ ನಮ್ಮ ನಿರೀಕ್ಷಣೆಗೆ, ಆಶೆಗೆ, ಅತೃಪ್ತಿಯಾಗುತ್ತದೆ. ಆ ವಿಷಯವು ಸಾವಿತ್ರಿ ಯಮರ ಸಂಭಾಷಣೆ. ಸಾವಿತ್ರಿಯ ಉದ್ದೇಶವು ಮಾನವಶಕ್ತಿಗೆ ಮೀರಿದುದನ್ನು ಸಾಧಿಸತಕ್ಕದು - ವಿಧಿ ಬರೆದ ಬರಹವನ್ನು ತಪ್ಪಿಸುವುದು. ಈ ಉದ್ದೇಶವನ್ನು ಸಾಧಿಸುವುದಾದರೂ ಯಾರಿಂದ? ಯಾವನು ತನ್ನ ಕರ್ತವ್ಯ ನಿರ್ವಾಹದಲ್ಲಿ ದಯಾದಾಕ್ಷಿಣ್ಯಗಳಿಗೆ ಲಕ್ಷ್ಯಕೊಡುವುದಿಲ್ಲವೆಂದು ಇಡೀ ಜಗತ್ತೇ ಅರಿತಿರುವುದೋ ಆ ಯಮಧರ್ಮನಿಂದ! ಸಾವಿತ್ರಿಯ ಈ ಉದ್ದೇಶವು ಹೇಗೆ ಈಡೇರುವುದು? ಇದೊಂದು ಅದ್ಭುತವಾದ ಸಮಸ್ಯೆ - ಅಚಿಂತನೀಯವಾದುದೆಂದರೂ ತಪ್ಪಾಗಲಾರದು ಈ ವಿಷಯವು ಕವಿಯ ಗಮನಕ್ಕೆ ಬಾರದೇ ಹೋಗಿಲ್ಲ. ಸಾವಿತ್ರಿಯು ಎಂತಹ ಕಠಿನವಾದ ವ್ರತವನ್ನು ಆಚರಿಸಿದಳು! ಅದನ್ನು ಕೇಳಿ ನಾರದರೇ ಆಶ್ಚರ್ಯವನ್ನು ಹೊಂದಿದರು. ಎಷ್ಟು ಗುರುಹಿರಿಯರ ಆಶೀರ್ವಾದವನ್ನು ಶೇಖರಿಸಿದಳು! ಅಷ್ಟೂ ಸಾಲದ್ದಕ್ಕೆ ನಾರದ ಮಹರ್ಷಿಗಳ ಉದಾರ ಸಹಾಯ! ಇದೆಲ್ಲವನ್ನು ಕವಿಯು ಬಹು ಚೆನ್ನಾಗಿ ನಾಟಕದಲ್ಲಿ ನಿರೂಪಿಸಿರುತ್ತಾರೆ. ಇಷ್ಟಾದರೂ ಸಾವಿತ್ರಿ ಯಮರ ಸಂಭಾಷಣೆಯು ನಮ್ಮ ನಿರೀಕ್ಷಣಕ್ಕೆ ತೃಪ್ತಿಯನ್ನುಂಟುಮಾಡುವಷ್ಟು ಉಚ್ಚಭಾವಕ್ಕೆ ಹೋಗಿದೆ ಎಂದು ನಮಗೆ ಎನ್ನಿಸುವುದಿಲ್ಲ. ಪುರಾಣಗಳಲ್ಲಿ ಹೇಳಿರುವ ವಿಷಯಗಳನ್ನು ಸಾಮಾನ್ಯವಾಗಿ ನಮಗೆ ಅವುಗಳಲ್ಲಿರುವ

ಗೌರವದಿಂದ ನಾವು ಹೇಗೋ ಒಪ್ಪಿಕೊಳ್ಳುತ್ತೇವೆ. ಆ ವಿಧವಾದ ಒಪ್ಪಿಗೆಯನ್ನು ಕವಿಯು ವಾಚಕರಿಂದ ನಿರೀಕ್ಷಿಸಲಾಗದು.

ನಾವು ಈ ಲೇಖನದಲ್ಲಿ ನಾಟಕದ ಸ್ವಾರಸ್ಯವೆಲ್ಲವನ್ನೂ ತೋರಿಸುವ ಪ್ರಯತ್ನಮಾಡಿಲ್ಲ. ಒಂದೆರಡು ಸಂಗತಿಗಳನ್ನು ಮಾತ್ರ ಯಥಾಶಕ್ತಿಯಾಗಿ ನಿರೂಪಿಸಿರುತ್ತೇವೆ. ಇನ್ನೊಂದು ವಿಷಯವನ್ನು ಮಾತ್ರ ಇಲ್ಲಿ ನಿರೂಪಿಸುತ್ತೇವೆ. ಅದು ಕವಿಯ ಜಾಣ್ಮೆಯನ್ನು ತೋರಿಸತಕ್ಕುದಾಗಿದೆ. ಅದಾವುದೆಂದರೆ ನಾಟಕಾಂತ್ಯದಲ್ಲಿ ಯಮನು ತ್ರೈಮೂರ್ತ್ಯಾತ್ಮಕನಾಗಿ ದರ್ಶನವನ್ನು ಕೊಡುತ್ತಾನಷ್ಟೆ; ಆಗ ಸಾವಿತ್ರಿಯು ನಾವಾರಾದರೂ ಕೇಳಬಹುದಾದ ಪ್ರಶ್ನೆಯನ್ನು ಕೇಳುತ್ತಾಳೆ. ಅದಕ್ಕೆ ಏನು ಉತ್ತರ ದೊರೆಯುವುದೋ ಎಂದು ನಾವು ಅತ್ಯಂತ ಕುತೂಹಲಿಗಳಾಗಿರುತ್ತೇವೆ. ಆದರೆ ನಮ್ಮ ಆಶೆಯು ಒಂದೇ ಸಲಕ್ಕೆ ಭಂಗವಾಗುತ್ತದೆ. ಇದೂ ಒಂದು ಜೀವನ ವಿಮರ್ಶೆ, ಅದನ್ನು ಇಲ್ಲಿ ಉದ್ಧರಿಸುತ್ತೇವೆ.

ಸಾವಿತ್ರಿ: (ಮುಂದಕ್ಕೆ ಬಂದು ನಮಸ್ಕಾರ ಮಾಡುತ್ತಾ) ದೇವದೇವ, ಎಲ್ಲವೂ ನೀನೇ ಆಗಿರುವಲ್ಲಿ ವಿಧಿ ಎಂದೂ ಅಧಿಕಾರವೆಂದೂ ಹೇಳುತ್ತಾ ವೈಧವ್ಯದ ದುಃಖವನ್ನು ಲೋಕದಲ್ಲಿ ಏತಕ್ಕೆ ಇರಿಸಿರುವೆ? (ದೇವರು ಮರೆಯಾಗುವನು.)

ನಾರದ: ಪರಮಾತ್ಮನು ಮರೆಯಾದನು. ತಾಯಿ ಸಾವಿತ್ರಿ, ನೀನು ಕೇಳುವುದು ಇನ್ನೂ ಉತ್ತರವಿಲ್ಲದ ಪ್ರಶ್ನೆ, ಹೀಗೆ ಬಾ, ಅವನು ಎಷ್ಟು ತೋರುವನೋ ಅಷ್ಟು ಕೃಪೆಗೆ ಕೃತಜ್ಞರಾಗಿರೋಣ, (ಎಂದು ಭಜನೆ ಮಾಡುವನು.)

ಈ ನಾಟಕದಲ್ಲಿ ಬರುವ ಹಾಡುಗಳಲ್ಲಿ, ಅದರಲ್ಲಿಯೂ ನಾರದನು ಗಾನ ಮಾಡುವ ಹಾಡುಗಳಲ್ಲಿ, ಓಜಸ್ವಿತೆ ಮಾಧುರ್ಯಗಳ ಸಮ್ಮೇಳನದಿಂದ ಉಂಟಾದ ಒಂದು ಸ್ನಿಗ್ಧತೆಯು ತೋರಿಬರುತ್ತದೆ. ಪಾತ್ರಗಳ ಬಾಯಿಯಲ್ಲಿ ಬರುವ ಮಾತುಗಳು, ಹಿಂದೆ ಹೇಳಿದಂತೆ ಸಾಮಾನ್ಯವಾಗಿ, ಸಂಕ್ಷೇಪವಾಗಿಯೂ ಭಾವಗರ್ಭಿತವಾಗಿಯೂ ಸಂದರ್ಭೋಚಿತವಾಗಿಯೂ ಇರುತ್ತವೆ. ಪದ್ಯಗಳ ವಿಷಯದಲ್ಲಿ ಮಾತ್ರ ನಾವು ಸಂತುಷ್ಟಿಯನ್ನು ವ್ಯಕ್ತಪಡಿಸಲಾರದವರಾಗಿದ್ದೇವೆ. ಪದ್ಯ ರಚನಾಶಕ್ತಿಯು ಬಹುಮಟ್ಟಿಗೆ ವ್ಯುತ್ಪತ್ತಿ ಅಭ್ಯಾಸಗಳಿಂದ ಬರತಕ್ಕದ್ದು. ನಮ್ಮ ಕನ್ನಡ ಕವಿಗಳಿಗೆ - ಅವರಲ್ಲಿಯೂ ನಮ್ಮ ಪ್ರಾಚೀನ ಕವಿಗಳಿಗೆ - ಇನ್ನಾವ ಕವಿತಾಶಕ್ತಿ ಎಷ್ಟಾದರೂ ಇರಲಿ, ಪದ್ಯ ರಚನೆಯಲ್ಲಿ ಮಾತ್ರ ಅಪೂರ್ವವಾದ ಶಕ್ತಿ ಇರುತ್ತದೆ. ಚಂಪೂಕಾವ್ಯಗಳನ್ನು ಓದಿದವರಿಗೆ ಈ ನಾಟಕದ ವೃತ್ತಗಳಲ್ಲಿಯೂ ಕಂದಗಳಲ್ಲಿಯೂ ಶೈಥಿಲ್ಯಾದಿ ದೋಷಗಳು ಕಂಡು ಬರುವುವು.

ಈ ಕಾವ್ಯದಲ್ಲಿ ನಮಗೆ ತೋರುವ ಒಂದೆರಡು ಕಳಂಕಗಳಿರುವುವೆಂದು ಹೇಳಿದುದರಿಂದ ಯಾರೂ ನಮಗೆ ಅದರಲ್ಲಿ ಗೌರವವಿಲ್ಲವೆಂದು ಭಾವಿಸಲಾಗದು. ಕವಿಯು ಪ್ರತಿಭಾಸಮನ್ವಿತನಾಗಿ ಕಾವ್ಯರಚನಾಧಿಕಾರವನ್ನು ಪಡೆದಿರುವನೆಂಬುದನ್ನು ನಾವು ನಿರೂಪಿಸಿಯೇ ಇರುತ್ತೇವೆ. ಇಂತಹ ಉತ್ತಮ ಕಾವ್ಯಗಳು ಕನ್ನಡದಲ್ಲಿ ಹುಟ್ಟುತ್ತಿರುವುದು ಕನ್ನಡಿಗರ ಸೌಭಾಗ್ಯವೆಂಬುದರಲ್ಲಿ ಸಂಶಯವಿಲ್ಲ.

ಪ್ರಸಾರಿಕೆಗಳು

ಡಾ|| ಹೆಚ್.ಕೆ. ರಂಗನಾಥ್

ಪ್ರಸಾರ ಮಾಧ್ಯಮವನ್ನು ದುಡಿಸಿಕೊಳ್ಳುವಂತಹ ನಾಟಕವೋ, ನಾದಚಿತ್ರವೋ, ಶಬ್ದಚಿತ್ರವೋ, ಸಂಶೋಧಕ ಸಾಕ್ಷಿಚಿತ್ರವೋ ಕೈಗೆ ಬಂದಾಗ ಪ್ರಸಾರಕನಿಗೆ ಆಗುವ ಹಿಗ್ಗುದೊಡ್ಡದು. ತಮ್ಮ ಹಲವಾರು ಕೃತಿಗಳಿಂದ ಮಾಸ್ತಿಯವರು ಅಂತಹ ಹಿಗ್ಗನ್ನು ಪ್ರಸಾರಕನಿಗೆ ಕೊಟ್ಟಿದ್ದಾರೆ. ಇಪ್ಪತ್ತೈದು ವರುಷಗಳ ಹಿಂದೆಯೇ ಇರಬೇಕು. ನಾ. ಕಸ್ತೂರಿಯವರ ಮೇಲ್ ವಿಚಾರಣೆಯಲ್ಲಿದ್ದ ಮೈಸೂರು ಆಕಾಶವಾಣಿಯಿಂದ ಮಾಸ್ತಿಯವರ 'ತಿರುಪಾಣಿ' ಪ್ರಸಾರಗೊಂಡಿತು. ಕಲಾವಿದ ಹರಿನಾರಾಯಣರ ನೇತೃತ್ವದಲ್ಲಿ ನಡೆದ ಆ ಕಾರ್ಯಕ್ರಮ, ಮಾಡಿದವನಿಗೂ ಕೇಳಿದವನಿಗೂ ಹಬ್ಬವೇ ಎನಿಸಿತು. ಎಂದಿಗೂ ಜನಮನವನ್ನು ಸೆರೆಹಿಡಿಯುವಂತಹ ಕತೆ. ಅದನ್ನು ಬಿಡಿಸಿ ಹೇಳುವಂತಹ ರಸಭರಿತವಾದ ತಿಳಿಮಾತು. ಭಾವವುಕ್ಕಿಸುವಂತಹ ಗೀತೆ-ಕೋಲಾಟಗಳು. ಆ ಕೃತಿಯನ್ನು ಆದಷ್ಟೂ ಯಶಸ್ವಿಯಾಗಿ ಪ್ರಸಾರಗೊಳಿಸಬೇಕೆಂದು ಹಟತೊಟ್ಟು, ಕಲಾವಿದ-ಗಾಯಕರನ್ನು ತೂಗಿ, ತೂಗಿ ಆರಿಸಿ, ನಾಲ್ಕಾರು ದಿನಗಳ ಕಾಲ ಬಿಡುವಿಲ್ಲದೆ ರಿಹರ್ಸಲ್ ಮಾಡಿ, ನಿಷ್ಕೃಷ್ಟವಾದ ನಾದ ವಿಶೇಷ-ಧ್ವನಿ ವಿಶೇಷಗಳನ್ನು ಸಿದ್ಧಗೊಳಿಸಿ, ಅಳವಡಿಸಿ, ಧ್ವನಿಮುದ್ರಣದ ಸೌಕರ್ಯವಿಲ್ಲದ ಆ ಕಾಲದಲ್ಲಿ 'ಜೀವಂತ ಪ್ರಸಾರ' ಮಾಡಿದ ನೆನಪು ಇಂದಿಗೂ ಹಸಿರಾಗಿದೆ. ತುಂಬ ಶ್ರಮವಾಯಿತು-ನಿಜ-ಆದರೆ ಅದು ತಂದ ಆನಂದ! ಕೇಳಿದವರಿಂದ ಬಂದ ಪತ್ರಗಳ ಪ್ರಶಂಸೆ ಓದಿದಾಗ, ಅವುಗಳ ಕುರಿತು ಬಾನುಲಿಯ ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿ ಕೃತಜ್ಞತೆ ಅರ್ಪಿಸಿದಾಗ ಆದ ಹಿಗ್ಗು! ಮಾತಿಗೆ ನಿಲುಕದ ಎದೆಯುತ್ಸವ ಅದು.

'ಕಾಣದ ಕರ್ಮಕ್ಕೆ ಸಿಲುಕಿ' ಅಂತ್ಯಜನಾಗಿ ಹುಟ್ಟಿದ ಪಾಣ, ಶ್ರೀರಂಗದ ದೇಗುಲದ ಮುಂದೆ, ಒಳಗಿನ ಸ್ವಾಮಿಯ ಕರುಣೆ ಬೇಡಿ, ಧ್ಯಾನಿಸಿ, ನುತಿಸಿ, ಭಜಿಸುತ್ತ, ಹೆರವರಿಗೆ ಹೊರೆಯಾಗದೆಯೆ, ಮೂವತ್ತು ವರುಷಗಳ ಕಾಲ ತಪನಿಂದರಂತೆ. 'ಇವರ ಮೇಲೆ ಒಂದು ದಿನ, ದೇವಾಲಯದ ಚಾಕರನೊಬ್ಬನು ದಾರಿ ಬಿಡಲಿಲ್ಲವೆಂಬ ಕಾರಣದಿಂದ ಕಲ್ಲೆಸೆದನೆಂದೂ, ದೇವರು ಇದನ್ನು ಸಹಿಸಲಾರದೆ, ಭಕ್ತನನ್ನು ಒಳಗೆ ಕರೆತರಬೇಕೆಂದು ದೇವಾಲಯದ ಸರ್ವಾಧಿಕಾರಿಗೆ ಆಜ್ಞೆ ಮಾಡಿದನೆಂದೂ, ಸರ್ವಾಧಿಕಾರಿ ಲೋಕಸಾರಂಗರು ಹಾಗೆ ಮಾಡಲು, ತಿರುಪಾಣ, ದೇವರ ಮೂರ್ತಿಯಲ್ಲಿ ಐಕ್ಯವಾದರೆಂದೂ' ಮುಂದೆ ಆತನನ್ನು ಜನ ತಿರುಪ್ಪಾಣ ಆಳ್ವಾರ್ ಎಂದು ನುತಿಸಿದರೆಂದೂ ಇರುವ ಕಥಾದ್ರವ್ಯವನ್ನುಂಡು ಬೆಳೆದುಕೊಂಡ ಸಾರ್ಥಕ ಕೃತಿ ಇದು. ರಚಿಸಿದವರ ಬಗೆಯ ಪಕ್ವತೆಯನ್ನು ಸಾರುವಂತಹ ಸುಂದರ (ಸಂಗೀತ) ನಾಟಕ.

ಪಾಣಿಯ ಪಾತ್ರದ ದಿವ್ಯತೆಯನ್ನು ಸರಿಸಮಗಟ್ಟುವಂತೆ ಸರ್ವಾಧಿಕಾರಿ ಲೋಕ ಸಾರಂಗರ ಪಾತ್ರವಾದರೂ ಜೀವಂತ ನಿಂತಿದೆ. ತಮ್ಮ ವಿಷಯಕ್ಕೆ ವಿರಕ್ತರಾದರೂ, ದೇವರ

ವಿಷಯಕ್ಕೆ ಸಕ್ತರಾದ ಅವರು ಒಮ್ಮೆ, ಪಾಣಿಯ ವ್ಯಕ್ತಿತ್ವವನ್ನು ಕೂಡ ಮರೆಯಿಸುವಂತಹ ದಿವ್ಯತೆ ಮುಟ್ಟಿದ್ದಾರೆ ಎಂದರೂ ಸಲ್ಲುತ್ತದೆ. ಇಂಥ ಪಾತ್ರಗಳಿಗೆ ತಕ್ಕದಾದ, ಭಾವತೀವಿದ ಮೃದುಮಾತುಗಳು ಸುಕುಮಾರ ಭಾವಗಳನ್ನು (ಕೇಳುಗನ) ಬಗೆಯಲ್ಲಿ ಉಕ್ಕಿಸುತ್ತವೆ. ಸ್ವತಃ ಕವಿಯೇ, ಗಾಯಕನೇ ಆದ ಪಾಣ, ತನ್ನ ಸೋದರಳಿಯ ಹಾಗೂ ಭಾವನೊಂದಿಗೆ ಹಾಡುವ ಪದಗಳೂ; ಕುಣಿಯುವ ಕೋಲಾಟಗಳೂ, ನಾಟಕದ ಅಂಗಗಳಾಗಿ ಹೊಮ್ಮಿ ಬಂದಿದೆ. ಹತ್ತು ಕಾಲ ನಿಲ್ಲುವಂಥ ಪದಗಳು ಅವು. ಇನ್ನು ಮಾತೋ- ಅರಳಿದ ಮಲ್ಲಿಗೆಯ ಪರಿಮಳ ಅದಕ್ಕೆ.

ತಮ್ಮವರ 'ಗುಡಿಗೆ' ಅಣ್ಣನನ್ನು ಕರೆದೊಯ್ಯಲು ತಂಗಿ ಬರುತ್ತಾಳೆ. ಆಕೆಗೆ ಅಣ್ಣನನ್ನು ಕಂಡರೆ ತುಂಬುಪ್ರೀತಿ. ಆದರೂ ಈ ಸಂದರ್ಭದಲ್ಲಿ ಹುಸಿಮುನಿಸು ಆಕೆಗೆ-

ತಂಗಿ: ಅಣ್ಣಾವರನ ಬಿಟ್ಟಿದ್ದಾಯಿತಲ್ಲ.

ಪಾಣ: ಅಣ್ಣಾವರನ ಬಿಟ್ಟರೇನು, ಅಪ್ಪನ ಪಾದ ಕಟ್ಟಿಕೊಂಡೆನಲ್ಲೋ ಇವನೇನು- ಅವನೇನು- ಎಲ್ಲಾ ಒಬ್ಬನೇ.

ತಂಗಿ: ಅದು ಹೆಂಗಾದಾತು?

ಪಾಣ: ಅಮ್ಮಯ್ಯ, ಮನುಸನ ಮನಸಿಗೆ ದೇವರು, ಬೆರಳಲ್ಲಿ ಹಿಡಿದ ಮೇಣ. ಹೆಂಗೆ ತಿದ್ದಿದರೆ ಹಂಗಾಗುತದೆ.

ತಂಗಿ: ಎರಡು ದೇವರು ಒಂದೇ ಆದರೆ- ಗುಡಿಯಾಕೆ ಬೇರೆ?

ಪಾಣ: ನಮ್ಮ ಮನಸ್ಸಿನ ದೇವರು ಕಾಣೋ ಗುಡೀಗೆ ಹೋಗಲಿ ಅಂತ. ನನ್ನ ಮನಸ್ಸಿನಾಗೆ ದೇವರು ಅಣ್ಣನಾಗಲ್ಲ; ಮಾರಿ ಆಗಲ್ಲ- ರಂಗಪ್ಪ ಆದ.

ಅಥವ ಆ ಇನ್ನೊಂದು ಸನ್ನಿವೇಶ-

ಮಡಿಯಾಕೆ: ಅಯ್ಯೊ ನನ್ನಪ್ಪಾ- ಇವರೇನು ಇಲ್ಲೇ ಸಂಸಾರ ಹೂಡಿದರೇನೋ.

ತಂಗಿ: (ಒಂದು ಕಡೆಗೆ ಸರಿದು) ಹೋಗವ್ವಾ.

ಮಡಿಯಾಕೆ: ಅಯ್ಯೋ ನಾರಾಯಣಾ ನನ್ನನ್ನು ಮಾತಾಡಿಸಿದಳು- (ಎದ್ದು ಮುಖವನ್ನು ಗಂಟಿಕ್ಕಿಕೊಂಡು ಹೋಗುವಳು)

ಪಾಣ: ಅಮ್ಮಯ್ಯ, ನೀ ಜನರನ್ನ ಮಾತಾಡಿಸಬೇಡ. ಅವರು ದೇವಸ್ಥಾನಕ್ಕೆ ಹೋಗೋರು. ಮೈಲಿಗೆಗೆ ಹೆದರುತಾರೆ.

ತಂಗಿ: ಮಾತು ಅನ್ನೋದು ಅರಿವ್ಯಲ್ಲ- ನೀರಲ್ಲ. ನಾ ಮಾತಾಡಿದರೆ ಅವರು ಮೈಲಿಗೆಯಾಗುತಾರೆಯೆ ಅಣ್ಣ?

ಪಾಣ: ಮೈಲಿಗೆ ಆಗುತಾರೋ- ಇಲ್ಲೋ. ಆದಿವಿ ಅಂತ ತಿಳುಕೋತಾರೆ. ದೇವಸ್ಥಾನದಲ್ಲಿ ಮನಸು ಸುಕವಾಗಿರೋದಿಲ್ಲ.

ಮತ್ತೊಂದು ಸನ್ನಿವೇಶದಲ್ಲಿ, ಹಾಡುತ್ತ ನಿಂತ ಪಾಣಿಯ ಬಗೆಗೆ, ಕಾಳಿದಾಸ, ಕಾಂಚಿಪುರದಿಂದ ಬಂದಿದ್ದ ಆಳ್ವಾರರಿಗೆ ಹೇಳುತ್ತಾನೆ.

ಕಾಳಿದಾಸ: ಮೂವತ್ತು ವರುಷ ಒಂದೇ ಸಮನಾಗಿ ಇಲ್ಲಿ ದೇವರಿಗೆ ಸೇವೆ ಅರ್ಪಿಸಿದಾರೆ. ಈ ಕೃತಿಯೆಲ್ಲ ಅವರೇ ಮಾಡಿದವು. ನಿಂತ ಹಾಗೆಯೇ ಕವನ ಮಾಡುತ್ತಾರೆ.

ಆಳ್ವಾರ್: ಅಹ, ಏನಾಶ್ಚರ್ಯ.

ಕಾಳಿದಾಸ: ಅದರಲ್ಲಿ ಆಶ್ಚರ್ಯವಿಲ್ಲ ಸ್ವಾಮಿ, ಮನಸ್ಸಿನ ಭಕ್ತಿಯೇ ಬಾಯಲ್ಲಿ ಮಾತಾಗುತ್ತದೆ. ಅವರೇನು ಅಲ್ಲೋದಿಲ್ಲ- ನೂಲೋದಿಲ್ಲ.

ಆಳ್ವಾರ್: ಹಾಗಾದರೆ ಇವರು ಮಾಡಿದ ಹಾಡೆಲ್ಲ ನಷ್ಟವಾಗಿ ಹೋಗುತ್ತದಲ್ಲ.

ಕಾರಿದಾಸ: ದೇವರ ಪಾದಕ್ಕಿಟ್ಟ ಹೂವಿಗೆ ಹಾಗೆ. ಒಪ್ಪಿಸಿದ್ದೇ ಪುಣ್ಯ. ಆಮೇಲೆ ನಷ್ಟ ಹೇಗೆ?

ಇಂತಹ ಹತ್ತು ಹಲವಾರು ರಸಘಟ್ಟಗಳು ಅಡಿಗಡಿಗೆ ಎದೆಯಲ್ಲಿ ಆನಂದ ಉಕ್ಕಿಸುತ್ತವೆ. ಇನ್ನು ನಾಟಕದಲ್ಲಿನ ಅನೇಕ ಸಂಯೋಜನೆಗಳು ಪ್ರಸಾರದಲ್ಲಿ ಮಾತ್ರ ಫಲ ಕೊಡುವಂಥವು. ನಿಷ್ಕೃಷ್ಟವಾದ ನಾದ, ಧ್ವನಿ, ಶಬ್ದ ವಿಶೇಷಗಳ ಆಸರೆಯಿಂದ, ಶ್ರೀರಂಗದ ದೇವಸ್ಥಾನದ ಹಿನ್ನೆಲೆಯನ್ನು ಕಲ್ಪಿಸಲು ಸಾಧ್ಯವಾಯಿತಲ್ಲದೆ, ಪಾಣಿ ನಿಂತ ಬೀದಿ, ಸುತ್ತುಗಟ್ಟಿದ ಗುಂಪುಗಳು, ಕೋಲಾಟದ ಕುಣಿತ, ಗರ್ಭಗುಡಿಯಲ್ಲಿನ ಪೂಜಾದಿಗಳ ಸಂಭ್ರಮ, ದೇವಸ್ಥಾನದ ಬದಿಕಟ್ಟೆಯಲ್ಲಿ ಪ್ರತಿಷ್ಠಾಪಿಸಿದ್ದ ಆಳ್ವಾರ್ ಮೂರ್ತಿಗಳ ಬಗೆಗೆ ವೀಕ್ಷಕ ವಿವರಣೆ, 'ಸ್ವಂತಸೇವೆ'ಯ ಸರಸಘಟ್ಟ, ಅರ್ಚಕ ಕಲ್ಲೆಸೆದು ಪಾಣಿಗೆ ತಗುಲಿದ ಪ್ರಸಂಗ, ಲೋಕಸಾರಂಗನ ಯೋಗನಿದ್ರೆಯಲ್ಲಿನ ನನಸು, ಮತ್ತೆ ಅಂತಿಮವಾಗಿ ಭಕ್ತರ ಸಮ್ಮುಖದಲ್ಲಿ ಪಾಣಿ, ಮೂಲವರ ಬೆಳಕಿನಲ್ಲಿ ಬೆಳಕಾಗಿ ಲೀನವಾಗಿ ಹೋಗುವ ಸನ್ನಿವೇಶಗಳು ಪ್ರಸಾರ ಮಾಧ್ಯಮವನ್ನು ಚೆನ್ನಾಗಿ ದುಡಿಸಿಕೊಂಡು ಎಣಿಕೆಗೆ ಮೀರಿದ ಫಲ ಕೊಟ್ಟವು ಎಂದೇ, ಮಾಸ್ತಿಯವರು ತಮ್ಮ ನಡುಹರಯದಲ್ಲಿ ಕನ್ನಡಕ್ಕೆ ಕೊಟ್ಟ, ಬೆಲೆ ಕಟ್ಟಲಾಗದ ಈ ಪುಟ್ಟ ನಾಟಕ ಮತ್ತೆ ಮತ್ತೆ ಪ್ರಸಾರಗೊಂಡಿತು.

ಇಂಥದೇ ಬಗೆಯನ್ನು ಸೆರೆ ಹಿಡಿಯುವ 'ಐತಿಹಾಸಿಕ' ಕಥಾ ವಸ್ತುವಿನ ನೆಲೆಗಟ್ಟಮೇಲೆ ರಚನೆಗೊಂಡ ಸ್ವತಂತ್ರ ನಾಟಕ 'ಆನಾರ್ಕಳಿ' 1954 ರ ಸುಮಾರಿನಲ್ಲಿ, ಆಗತಾನೇ ಆಲ್ ಇಂಡಿಯಾ ರೇಡಿಯೋ ಪರಿಧಿಯೊಳಗೆ ಬಂದಿದ್ದ ಮೈಸೂರು ಆಕಾಶವಾಣಿಯಿಂದ ಪ್ರಸಾರಗೊಂಡಿತು. ಸ್ಥಾನದಿಂದ ಸ್ಥಾನಕ್ಕೆ, ಹೇಳಬೇಕಾದುದನ್ನೆಲ್ಲ ನೇರವಾಗಿ ಹೇಳುತ್ತ ಭಾವಗಳು ತೀವ್ರತೆಯ ತುದಿ ತಾಗಿದ ಈ ನಾಟಕದಲ್ಲಿಯಾದರೂ ಒಪ್ಪುವಂಥ ಪಾತ್ರ ನಿರ್ಮಿಸಿ, ಮಾತು ಗೀತೆಗಳ ಹಿತವಾದ ಸಂಯೋಜನೆಗಳಿಂದಾಗಿ ಕೇಳುಗನಲ್ಲಿ ರಸೋತ್ಕರ್ಷ ಮಾಡಿದ ನೆನಪಿದೆ. ಅದರ ಪ್ರಸಾರದಲ್ಲಿ ಪಾಲುಗೊಂಡಿರಲಿಲ್ಲ ನಾನು. ಕೃತಿಯನ್ನೀಗ ಮತ್ತೆ ಓದಿದಾಗ, ಮಾಸ್ತಿಯವರ ಪ್ರಸಾರ ಮಾಧ್ಯಮದ ಪ್ರಜ್ಞೆಯನ್ನು ಮೆಚ್ಚಿಕೊಳ್ಳುವಂತಾಗುತ್ತದೆ.

ಆಕಾಶವಾಣಿ ಬೆಂಗಳೂರು ಕೇಂದ್ರದಿಂದ ಮಾಸ್ತಿಯವರು ರಚಿಸಿದ ಹಲವಾರು ಕೃತಿಗಳು ಪ್ರಸಾರಗೊಂಡಿವೆ. ಶ್ರೀ ರಾಮಾನುಜಾಚಾರ್ಯರ ಜೀವನ, ಸಾಧನ ತತ್ವದರ್ಶನವನ್ನು ಕುರಿತು ಅವರು ರಚಿಸಿ ನಿರ್ದೇಶಿಸಿದ ಸಂಶೋಧಕ ಸಾಕ್ಷಿಚಿತ್ರ, ಮರೆಯದಂಥದು. ಆಚಾರ್ಯರ ಮಾಹಾನ್ ಜೀವನದ ಹಂತ ಹಂತಗಳನ್ನು ಅಷ್ಟು ಸಾರವತ್ತಾಗಿ ಅವರು ಚಿತ್ರಿಸಿದ್ದು ಸಹಜವೇ. ಆದರೆ ಆಚಾರ್ಯರ ಶ್ರೀ ಭಾಷ್ಯದ ತತ್ವಗಳನ್ನು ಮಥನಮಾಡಿ, ಗಹನವಾದ ವೇದಾಂತ ವಿಚಾರಗಳನ್ನೂ ವಿಶಿಷ್ಟಾದ್ವೈತ ಸಿದ್ಧಾಂತದ ನಿರ್ಣಯ ಸೂತ್ರಗಳನ್ನು, ಮಕ್ಕಳಿಗೆ ಕೂಡ ಅರ್ಥವಾಗುವಂತೆ ತಿಳಿಯಾಗಿ, ಮೋಹಕವಾಗಿ ಬಣ್ಣಿಸಿ ನಿರೂಪಿಸಿದ್ದು, ಮಾಸ್ತಿಯವರಿಗೆ ಮಾತ್ರ ಸಾಧ್ಯವೇನೋ ಎನ್ನಿಸಿದಂತಿದೆ. ಈ ಸಾಕ್ಷಚಿತ್ರಕ್ಕಾಗಿ ಆಚಾರ್ಯರ ಕಾರ್ಯಕ್ಷೇತ್ರದ ಕೆಲವು ಮೂಲ ಸ್ಥಾನಗಳಲ್ಲಿಯೇ, ಎಂದರೆ, ತಿರುಪತಿ, ಶ್ರೀ ಪೆರಂಬೂರು, ಕಂಚಿ, ಶ್ರೀರಂಗ, ಮೇಲುಕೋಟೆಗಳಲ್ಲಿ, ಮಂತ್ರಘೋಷ, ಪೂಜಾವಿಶೇಷ, ವಾದ್ಯ, ನಾದ, ಧ್ವನಿ ಹಾಗೂ ಶಬ್ದ ವಿಶೇಷಗಳನ್ನೂ ಸಂದರ್ಶನಗಳನ್ನೂ ಧ್ವನಿ ಮುದ್ರಿಸಿ ತರಿಸಿ, ಬೆಂಗಳೂರು ಕೇಂದ್ರ, ಆ ಕಾರ್ಯಕ್ರಮಕ್ಕೆ, ವಿಶಿಷ್ಟವಾದ

authenticityಯ ಮುದ್ರೆಯನ್ನೊತ್ತಿತು. ಎನ್ಕೆ, ಎಂ.ವಿ. ಚಕ್ರವರ್ತಿ, ಜಿ.ಪಿ. ರಾಜರತ್ನಂ ಹಾಗೂ ಸ್ವತಃ ಮಾಸ್ತಿಯವರು, ಕೃತಿಯಲ್ಲಿನ ಮಾತುಗಳಿಗೆ, ಉದ್ಧರಿಸಿದ ಆಚಾರ್ಯ ವಾಕ್ಯಗಳಿಗೆ ಜೀವ ತುಂಬಿದರು. ರೇಡಿಯೋ ಮಾಧ್ಯಮದ ನಿಜವಾದ ಕೊಡುಗೆ ಎಂದರೆ ಇಂತಹ ಧ್ವನಿಚಿತ್ರ-ಸಾಕ್ಷ ಚಿತ್ರಗಳು. ರಂಗದ-ಹಾಗೂ ರಜತ ಪರದೆಯ ಚೌಕಟ್ಟುಗಳನ್ನು ಮೀರಿ ಬೆಳೆದು, ಕೇಳುವವನ ಮನೋರಂಗದಲ್ಲಿ, ಆತನ ಸಂಸ್ಕಾರ ಅರಿವುಗಳಿಗೆ ಅನುರೂಪವಾದ ಚಿತ್ರ ಕಲ್ಪಿಸಿ, ರಸೋತ್ಕರ್ಷ ಮಾಡುವಲ್ಲಿ, ಧ್ವನಿ ಚಿತ್ರ-ಸಾಕ್ಷ ಚಿತ್ರಗಳ ಮಹತ್ತು ಬೃಹತ್ತುಗಳನ್ನೂ ಸರಿಗಟ್ಟುವಂತಹ ಪ್ರಸಾರ-ಪ್ರಕಾರ ಬೇರೊಂದು ಇಲ್ಲ. ಮಾಸ್ತಿಯವರು ರಚಿಸಿದ 'ಶ್ರೀ ರಾಮಾನುಜಾಚಾರ್ಯರು' ಅಂತಹದೊಂದು ಸಾರ್ಥಕ ಸಾಕ್ಷ ಚಿತ್ರ.

ಪುರಂದರದಾಸರ ಜೀವಿತವನ್ನು ಸಮಗ್ರವಾಗಿ ವಿವೇಚಿಸಿ, ಹರಿದಾಸ್ಯ ದೀಕ್ಷೆ, ಹರಿದಾಸ್ಯಸಾಧನ, ಹರಿದಾಸ್ಯಸಿದ್ಧಿ, ಅಂತ್ಯಮಂಗಲ ಎಂದು ನಾಲ್ಕು ಭಾಗಗಳಲ್ಲಿ ಮಾಸ್ತಿಯವರು ರಚಿಸಿದ ಪ್ರಸಾರ ಮಾಲಿಕೆ-'ಪುರಂದರದಾಸ' ಎಂಬ ಶೀರ್ಷಿಕೆಯಲ್ಲಿ, ದಾಸರ ಪುಣ್ಯದಿನದ ನಾಲ್ಕನೆಯ ಶತಮಾನೋತ್ಸವದ ಸಂದರ್ಭದಲ್ಲಿ, ೧೯೬೪ನೆಯ ವರ್ಷ ಪ್ರಸಾರಗೊಂಡಿತು.

ಪುರಂದರದಾಸರ ಜೀವನ, ಸಾಧನ, ಸಿದ್ಧಿ, ಸಾಹಿತ್ಯ, ಸಂಗೀತ, ಭಕ್ತಿ ಪಂಥ ಮೊದಲಾಗಿ ಅವರ ವಿಷಯ ಕುರಿತು ಹಲವಾರು ರಂಗ ನಾಟಕಗಳೂ, ಪ್ರಸಾರ ಚಿತ್ರಗಳೂ ರಚನೆಗೊಂಡಿವೆ. ಮಾಸ್ತಿಯವರ ಈ ಕೃತಿ ಮಾಲಿಕೆಯ ವೈಶಿಷ್ಟ್ಯವೆಂದರೆ, ಪುರಂದರರ ಜೀವನದಲ್ಲಿ 'ಪವಾಡ' ಎನಿಸಿಕೊಂಡ ಸಂಗತಿಗಳನ್ನೂ ತರ್ಕಕ್ಕೆ ಒಗ್ಗುವರೀತಿ, 'ಆಧುನಿಕ' ವಿಚಾರಕ್ಕೆ ಒಪ್ಪುವಂತೆ, ಲೌಕಿಕವಾಗಿ, ಸಹಜತೆಯ ಗಟ್ಟಿ ನೆಲದಮೇಲೆ ರಚಿಸಿ ನಿಲ್ಲಿಸಿದ್ದು. ಪ್ರಸಿದ್ಧವಾದ 'ಮೂಗುತಿ ಪವಾಡ'ದ ಪ್ರಸ್ತಾಪ ಮಾಡಿ ಮಾಸ್ತಿಯವರು ಹೀಗೆ ಬರೆದರು.

> 'ಈ ಕಥೆಯನ್ನು ಕೇಳಿದಂದಿನಿಂದಲೂ, ನನಗೆ ಇದೊಂದು ಪವಾಡ ಆಗಬೇಕಾದ ಕಾರಣವಿಲ್ಲ ಎಂದು ತೋರಿದೆ. ಒಬ್ಬ ಬ್ರಾಹ್ಮಣ ಯಾಚನೆಗೆ ಬಂದ. ಬಂದದ್ದು ಬ್ರಾಹ್ಮಣನ ವೇಷದ ದೇವರು ಎನ್ನಬೇಕಿಲ್ಲ, ಅಥವ ಎಂದೆವು. ಯಾವ ಯಾಚಕನೂ ಆ ವೇಷದಲ್ಲಿ ಬರುವ ದೇವರು ಹೇಗೆ ಹಾಗೆ ಇವನು ದೇವರು. ಮೂಗುತಿಯ ಬೆಲೆಯನ್ನು ಕೊಡದೆ, ನಾಯಕ ಮನೆಯತ್ತ ಹೊರಟಾಗ, ಯಾಚಕ ತನ್ನ ಮೂಗುತಿಯನ್ನು ತನಗೆ ಕೊಡು ಎಂದು ಕೇಳಿ ಹಿಂದಕ್ಕೆ ತೆಗೆದುಕೊಂಡ. ನಾಯಕ ಕೋಪವಾಗಿ ಮನೆಯತ್ತ ಹೊರಟದ್ದನ್ನು ನೋಡಿ, ಯಾಚಕ, ತನಗೆ ದಾನ ನೀಡಿದ ತಾಯಿ ಇವನ ಹೆಂಡತಿ ಇರಬೇಕು ಎಂದು ಊಹಿಸಿದ; ಇವನು ಹಿಂದೆಯೇ ಹೋದ. ಮನೆಯಲ್ಲಿ ನಡೆದ ಮಾತನ್ನು ಹೊರಗಿಂದ ಕೇಳಿ, ಸ್ವರಸ್ವತೀ ಬಾಯಿ ವಿಷ ಕುಡಿಯಲು ಒಳಗೆ ಹೋದಾಗ, ಮೂಗುತಿಯನ್ನು ಗವಾಕ್ಷದಿಂದ ಬಟ್ಟಲೊಳಕ್ಕೆ ಎಸೆದ. ಹೀಗೆಂದರೂ ಕಥೆ ಚೆನ್ನಾಗಿ ನಡೆಯುತ್ತದೆ. ಸಾಧ್ಯವಾಗಿ, ಲೌಕಿಕ ಘಟನೆಯಾಗಿ ಉಳಿಯುತ್ತದೆ. ಪವಾಡ ಅಲ್ಲದಿದ್ದರೂ ಇದು ಅದ್ಭುತವೇ. ಲಕ್ಷ ಲಕ್ಷ ಧನವುಳ್ಳ ಧನಿಕ ಕುರುಡುಕಾಸ ಕೊಡಲೊಲ್ಲದಿದ್ದ, ಭಿಕ್ಷೆ ಬೇಡಿ ಬಾಳುವ ಬಡವ, ತನ್ನ ಕೈಗೆ ಬಂದಿದ್ದ ಒಂದು ಬಹು ಬೆಲೆಯ ಒಡವೆಯನ್ನು ತ್ಯಾಗಮಾಡಿದ. ಆ ಧನಿಕನಿಗೆ ಇದು ಒಂದು ಅದ್ಭುತವೇ; ದೇವರ ವ್ಯಾಪಾರವೇ. ಘಟನೆ ಲೌಕಿಕವೇ; ಆದರೂ ಅದ್ಭುತ.

ಈ ದೃಶ್ಯದ ದೃಷ್ಟಿ ಇದೇ. ಆದರೆ ಇಲ್ಲಿ ವಿಷದ ಬಟ್ಟಲ ಮಾತನ್ನು ಬಿಟ್ಟು, ಮೂಗುತಿ ಸರಸ್ವತೀ ಬಾಯಿಯ ಕೈಗೆ ಬಂದದ್ದು ನಾಯಕನ ತಂಗಿ ತುಳಸಾಬಾಯಿಯ ಮೂಲಕ ಎಂದು ಮಾಡಿದೆ.'

ಪವಾಡದ ಮಾತನ್ನು ಜನ ನಂಬಿದ್ದಿರಬಹುದು. ಆದರೆ ಅಂಥದನ್ನು ನಂಬಲಾರದ ಇಂದಿನವರೂ, ಒಪ್ಪುವಂತೆ ಒಪ್ಪಹಾಕಿ, ನೋಡುವ ದೃಷ್ಟಿಯಲ್ಲಿಯೇ ನಾವೀನ್ಯತೆಯನ್ನು ಮಾಸ್ತಿಯವರು ಮೆರೆದಿದ್ದಾರೆ. ಹೊರಗೆ ನಿಂತಿದ್ದ ಭಿಕ್ಷುಕ, ಮೇಲಿನ ಗವಾಕ್ಷದಿಂದ ವಿಷದ ಬಟ್ಟಲೊಳಗೇ ನೇರವಾಗಿ ಬೀಳುವಂತೆ ಮೂಗುತಿಯನ್ನು ಗುರಿಯಿಟ್ಟು ಎಸೆದ ಎಂದರೆ ಕೂಡ, ಮನಸ್ಸು ಸುಲಭವಾಗಿ ಒಪ್ಪಲಾರದ ಪವಾಡವೇ ಆಗುತ್ತದೆ. ಎಂದೇ ಆ ಸಂದರ್ಭವನ್ನೂ ತಿದ್ದಿ, ಮಾಸ್ತಿಯವರು, ಭಿಕ್ಷುಕ, ಮೂಗುತಿಯನ್ನು, ಮನೆಯ ಒಳಕ್ಕೆ ಹೋಗುತ್ತಿದ್ದ ತುಳಸಾಬಾಯಿಯ ಕೈಗೆ ಕೊಟ್ಟು, ಮನೆಯ ಆ ತಾಯಿಗೆ ಮುಟ್ಟುವಂತೆ ಮಾಡಿದ್ದಾರೆ. ಭಿಕ್ಷುಕನ ಈ ಚರ್ಯೆಯೇ ಪವಾಡವೆನಿಸುತ್ತದೆ. ನಿಜ, ಇಂತಹ ಚರ್ಯೆ ಅಸ್ವಾಭಾವಿಕ-ಅದರಿಂದಲೇ ಅದು ಅದ್ಭುತ; ಮನಸ್ಸಿಗೆ ಒಪ್ಪಿಗೆಯಾಗುವಂತಹ ಅದ್ಭುತ.

ಇಂಥದೇ ಮತ್ತೊಂದು ಕಥೆಯೂ, ಮನಸ್ಸು ನಂಬುವಂತೆ ಸಹಜ ಕೃತಿಯಾಗಿದೆ-'ಹರಿದಾಸ್ಯ ಸಾಧನ'ದಲ್ಲಿ ಅದರ ವಿವರ ಹೀಗೆ:

'ಸಂಪ್ರದಾಯ, ದಾಸರ ಸಾಧನದ ವಿಷಯದಲ್ಲಿ ವಿಠಲದೇವರು ಒಮ್ಮೆ ಅವರಿಗೆ ಅವರ ಸೇವಕನ ಪ್ರತಿಯಾಗಿ ನೀರು ತಂದುಕೊಟ್ಟರೆಂದೂ, ತಡಮಾಡಿದೆಯಾ ಎಂದು ದಾಸರು ಅವರನ್ನು ತಲೆಯ ಮೇಲೆ ಮೊಟಕಿದರೆಂದೂ, ದೇವರು ಇವರ ವೇಷದಲ್ಲಿ ಒಬ್ಬ ವೇಶ್ಯೆಯ ಬಳಿ ಹೋಗಿ, ತನ್ನ ಕಡಗವನ್ನು ಕೊಟ್ಟು ಬಂದರೆಂದೂ, ಕಡಗ ಕಳವಾಯಿತು ಎಂದು ಹುಡುಕಿಸಿ, ಅಧಿಕಾರಿಗಳು, ದಾಸರು ಅದನ್ನು ಅವಳಿಗೆ ಕೊಟ್ಟದ್ದನ್ನು ತಿಳಿದು ದಾಸರನ್ನು ದೇವಾಲಯದಲ್ಲಿ ಒಂದು ಕಂಬಕ್ಕೆ ಕಟ್ಟಿಸಿ ಹೊಡೆದರೆಂದೂ ಒಂದು ಕಥೆಯಲ್ಲಿ ಹೇಳುತ್ತದೆ. ಹರಿದಾಸ ದೀಕ್ಷೆಯಲ್ಲಿ ಮೂಗುತಿಯ ಕಥೆಯನ್ನು ಮಾರ್ಪಡಿಸಿರುವಂತೆ, 'ಹರಿದಾಸ್ಯ ಸಾಧನ'ದಲ್ಲಿ ಈ ಕಥೆಯ ಸಂಗತಿಯನ್ನು ಲೌಕಿಕವಾಗಿ ಮಾರ್ಪಡಿಸಿದೆ. . .' ಅದು ಹೀಗೆ-

ಯಾರ ಹಂಗೂ ಇಲ್ಲದೆ, ಲೋಕ ತಿದ್ದುವ ಕಾರಣ, ದಾಸರು ನಿಂತನಿಂತಂತೆ ಕಟ್ಟಿ ಹಾಡಿದ ಪದಗಳು ಹುಳಿ ಮನಸ್ಸಿನ ಹಲವಾರು ಜನಗಳನ್ನು ರೊಚ್ಚಿಗೆಬ್ಬಿಸುತ್ತವೆ. ಅದರಲ್ಲಿಯೂ ಬೂಟಾಟಿಕೆಯ ಮೂರ್ತಿಯೇ ಆಗಿದ್ದ ಮಹಾಂತ, ಸುಳ್ಳುಮಾತಿನ ಒಂದು ಕಳ್ಳ ನಾಟಕವನ್ನೇ ಕಟ್ಟಿ, ಅವಸರ ಮಾಡಿ ದಾಸರನ್ನು ಶಿಕ್ಷಿಸುವ ಸಂದರ್ಭ, ಒಪ್ಪುವಂತೆ ರಚನೆಗೊಂಡಿದೆ. ದಾಸರೋ, ದೇವರು ತಮ್ಮಲ್ಲಿ 'ಮುಯ್ಯಿಗೆ ಮುಯ್ಯಿ ತೀರಿಸಿದ' ಎಲ್ಲರಲ್ಲಿಯೂ ದೇವರಿದ್ದಾನೆ. ಆ ದೃಷ್ಟಿ ತಪ್ಪಿ ಮೊಟಕಿದೆ. ದೇವರಿಗೇ ಮೊಟಕಿದಂತಾಯಿತು ತಾನೇ. ಎಂದೇ ಮುಯ್ಯಿಗೆ ಮುಯ್ಯಿ ತೀರಿಸಿಕೊಂಡ ಎಂಬ ಬಗೆಯಲ್ಲಿ ಬೆಳಕು ಕಾಣುತ್ತಾರೆ. ಮಹಾಂತನ ಕಡೆಯವರು ಕಟ್ಟಿದ ಕಳ್ಳನಾಟಕ, ಮಾಲತಿಯ ಮಾತಿನ ಕಾರಣ, ತಾನಾಗಿಯೇ ಕುಸಿದ ಮೇಲೆ, ಧರ್ಮಕ್ಕೆ ಜಯವಾಗಿ, ಪುಟವಿಟ್ಟ ಬಂಗಾರದಂತೆ ದಾಸರು ಇನ್ನೂ ಹತ್ತು ಪಟ್ಟು ಹೆಚ್ಚಾಗಿ ಬೆಳಗುತ್ತಾರೆ.

ಹೀಗೆ, ಸಂಪ್ರದಾಯ ಹಾಯಿಸಿ ತಂದ 'ಪವಾಡ'ಗಳನ್ನು ಪರಿಷ್ಕಾರಗೊಳಿಸಿ ಸಹಜ ಸಂಗತಿಗಳಾಗಿ ಮಾರ್ಪಡಿಸುವಲ್ಲಿ ಮಾಸ್ತಿಯವರು ಕೃಷ್ಣಪ್ಪನಾಯಕನ ಅಂಗಡಿ ಬೀರೆ

-ಮನೆ ಬೇರೆ ಎಂದು ಮಾಡಿದ್ದಾರೆ. ನಾಟಕದ ಕ್ರಿಯೆಗೆ ಇದು ಅನಿವಾರ್ಯ. ತಂಗಿ, ಭಾವ ಎಂದು ಮೊದಲಾಗಿ ಹೊಸ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ನಾಯಕ, ಮನೆತನದಿಂದ, ದಂಡಿಗೆ ಬೆತ್ತ ಗೋಪಾಳಬುಟ್ಟಿ ಹಿಡಿದ ಹರಿವಂಶದವನೇ, ಯಾವ ಕರ್ಮವೋ ಏನು ಕಾರಣವೋ, ಆತನ ಮನಸ್ಸಿನ ಮೇಲೆ ಮೋಡಕವಿದು ಸಂಸ್ಕೃತಿಯ ನೆನಪು ಮುಸಕಾಗಿ, ಕಟ್ಟಿ ಲೌಕಿಕನಾಗಿಬಿಟ್ಟಿದ್ದ. ಮೂಗುತಿಯ ಸಂಗತಿಯಿಂದಾಗಿ ಕವಿದೆಲ್ಲ ಕತ್ತಲೆ ತಟಕ್ಕನೆ ಕಳೆಯಿತು; ಮುಂದಿನ ದಾರಿ ಬೆಳಗಿತು. 'ಹರಿದಾಸ್ಯ ಸಾಧನ'ದಲ್ಲಿ ದಾಸರು, ಕುಹಕಿಗಳು ಹೊದೆಯಿಸಿದ ಕಳಂಕ ತೊಳೆದು ಹೊಳೆ ಹೊಳೆದರು. ಹರಿದಾಸ ಜೀವನ ಎಂದರೆ ಇಂತಹುದು ಎಂದು ಎಳೆ ಅಲುಗದ ರೀತಿ ನಡೆದು ತೋರಿದರು.

> 'ನಾವು ಒಂದು ಕಾಲದಲ್ಲಿ ನಾಯಕರಿಗೆ ವೈರಾಗ್ಯ ಬರಲಿ ಎಂದು ಪ್ರಾರ್ಥಿಸಿದೆವು. ಪ್ರಾರ್ಥಿಸಿದ್ದು ಹೆಚ್ಚಾಯಿತೆಂದು ಕಾಣುತ್ತದೆ. ಹರಿದಾಸರಿಗೆ ನಾವು ಬೇಡ ಎನ್ನುವಷ್ಟು ವೈರಾಗ್ಯ ಬಂದು ಬಿಟ್ಟಿತು' ಎಂದು ನುಡಿದ.

ಗುರು ವ್ಯಾಸರಾಯರಂತಹ ವಿರಾಗಿಗಳು, ಪುರಂದರದಾಸರ ಮನೆಯ ಮೇಲ್ ವಿಚಾರಣೆಯ ಹೊಣೆಯನ್ನು ಹೊರಬೇಕಾಯಿತು ಮುಂದಿನ ಘಟ್ಟದಲ್ಲಿ. ವ್ಯಾಸರಾಯ ಮಠದ ಆಸ್ಥಾನದಲ್ಲಿ, ಪಂಡಿತರ ಸನ್ನಿಧಿಯಲ್ಲಿ ದಾಸರ ಕೃತಿಗಳ ವಿವೇಚನೆ ನಡೆಯಿತು. ಗಹನವಾದ ಉಪನಿಷದ್ ಜ್ಞಾನವನ್ನು ಪಾಮರರಿಗೂ ತಿಳಿಯುವಂತಹ ತಿಳಿಮಾತುಗಳಲ್ಲಿ, ಅನುಭವದ ಅಮೃತಮಾಡಿ ಜನಪದಕ್ಕೆ ಊಡಿಸಿದ ಬಗೆಗೆ ಗುರು ಹೆಮ್ಮೆ ತಳೆದರು. 'ಪುರಂದರೋಪನಿಷತ್' ಎನಿಸಿದ ದಾಸ ಸಾಹಿತ್ಯವನ್ನು ಸರಸ್ವತೀ ಪೀಠದಲ್ಲಿ ಉಪನಿಷದ್ ಗ್ರಂಥಗಳ ಜೊತೆ ಜೊತೆ ಇಡಲು ಅಪ್ಪಣೆಮಾಡಿದರು. ಬ್ರಹ್ಮಾನುಷ್ಠಾನದಲ್ಲಿ ಗುರುವನ್ನೇ ಉದ್ಧರಮಾಡುವಂಥ ಸಿದ್ಧಿ ಪಡೆದರೆಂದು ಮೆಚ್ಚಿ ಹೊಗಳಿ ದಾಸರಿಗೆ ಹರಿದಾಸ ಪಟ್ಟ ಕಟ್ಟಿದರು. 'ನಾನು ಎನ್ನುವುದು ಸಂಸಾರ, ನೀನು ಎನ್ನುವುದು ಸುಖಸಾರ' ಎಂಬ ಪುರಂದರರ ವಾಕ್ಯವನ್ನು ಮತ್ತೆ ಮತ್ತೆ ಉದ್ಧರಿಸಿ ಆನಂದಿಸಿದರು. ಅಂದಿನ ದೊರೆ ಅಚ್ಯುತರಾಯ, ದಾಸರಿಗೆ 'ವರಕವಿ' 'ಗಾಯನ ಸಾರ್ವಭೌಮ' 'ನೃತ್ಯಕಲಾನಿಧಿ' ಎಂಬ ಅನ್ವರ್ಥ ಪ್ರಶಸ್ತಿಗಳನ್ನು ಒಪ್ಪಿಸಿ ಹೆಮ್ಮೆಗೊಂಡ. ದಾಸರಾದರೋ, ನಮ್ರತೆಯಿಂದ, ಒಪ್ಪುವಂತಹ ಜೇನು ನುಡಿಯಾಡಿ, ಆ ಮರ್ಯಾದೆ-ಪ್ರಶಸ್ತಿಗಳನ್ನೆಲ್ಲ ಗುರುವಿನ ಪದತಲದಲ್ಲಿ ಅರ್ಪಿಸಿ, ಹರಿದಾಸ ಧರ್ಮವನ್ನು ಮೆರೆದರು. ಇಂತಹ ದಿವ್ಯ ಸಿದ್ಧಿ ಪಡೆದು, ಕಾಲ ಕಳೆದಂತೆ, ಮೈಯಲ್ಲಿ ಹಣ್ಣಾಗಿ, ಬಗೆಯಲ್ಲಿ ಇನ್ನೂ ಇನ್ನೂ ಪಕ್ವವಾಗಿ, ಹರಿನಾಮವೇ ಉಸಿರಾಗಿ, ಶಾಂತಿಗಳಿಸಿ, ತುಂಗಭದ್ರಾ ತೀರದ ಮಂಟಪದಲ್ಲಿ ಋಷಿ ಜೀವನ ನಡೆಸುತ್ತ ಬ್ರಹ್ಮಾನಂದ ಸೌಖ್ಯವನ್ನುಂಡರು. ಅವರನ್ನು ಕಂಡವರ ಮೇಲೆ, ಮಂತ್ರದಂಥ ಮಾತು ಕೇಳಿದವರ ಮೇಲೆ ಅಮೃತದ ಸೋನೆ. ರಾಣಿಯನ್ನು ಹರಸಿ, ರಾಜ್ಯಕ್ಕೆ ಶುಭದ ವರವಿತ್ತು, ನೊಂದು ಬಂದವರ ಎದೆಯಲ್ಲಿ ನಿತ್ಯ ಶಾಂತಿಯನ್ನು ಮೊಳೆಯಿಸಿ, ದೇವರ ಮೂರ್ತಿಯನ್ನು ಕಣ್ಣಿನೊಳಗೆ ನಿಲ್ಲಿಸಿಕೊಂಡು, ಆತನ ನಾಮ ನಾಲಿಗೆಯ ಮೇಲಿಟ್ಟು ನಡೆದುಕೊಂಡ ಅವರ ಬಗೆಯ ಮನೋಜ್ಞವಾದ ಮಧುರ ಚಿತ್ರಣವಿದೆ 'ಅಂತ್ಯ ಮಂಗಲ'ದಲ್ಲಿ. ಜೀವ, ದೇವರ ಪಾದದಲ್ಲಿ ಸೇರಿದ ಮೇಲೆ ಬಂದ ಕನಕದಾಸರಿಗೆ ಆ ಎಲ್ಲ ವಿವರ ತಿಳಿಯುತ್ತದೆ.

ಅಪ್ಪಣ್ಣ: ಹಗುರ ಅಂದರೆ ಹಗುರಾಗಿತ್ತು ಹಿರೇರ ಮನಸು. ಹಾಡುತ್ಾ ಕುಣೀತಾ, ನಲಿಯುತಾ, ಕಲಿಯುತಾ, ಮುಂಜಾನೆ ಹಕ್ಕಿ ಅನ್ನೊ ಹಾಂಗೆ ಹಾರಿತ್ತು ಜೀವ.

ಮಧ್ವಪತಿ: ಹೌದು, ಕೊನೇ ಕ್ಷಣದಲ್ಲಿ ಅವರ ಕಣ್ಣಿಗೆ ಕಟ್ಟಿ ನಿಂತಿತ್ತು ದೇವರ ಮೂರ್ತಿ, ಆ

ಪಾದ ಆನಂದ, ಆ ನಖ ಆನಂದ ಅಂತ ಅನಂದ ಸೂಕ್ತ ಕಿವೀಲಿ ಕೇಳುತ್ತಾ, ಬಾಯಲ್ಲಿ ಹೇಳತಾ ರಂಗರಾಮು, ಪಾಂಡುರಂಗ ವಿಠಲ, ಶ್ರೀನಿವಾಸ ಅನ್ನತಾ ಕೊನೇ ಉಸಿರನ್ನ ನಿಸೂರಾಗಿ ಸೆಳೆದು, ನಿಸೂರಾಗಿ ಬಿಟ್ಟರು. ಅವರು ಸಾಯುತ್ತಿದಾರೆ ಅನ್ನೊಹಾಗಿರಲಿಲ್ಲ.

ಕನಕ: ಸಾಯಲಿಲ್ಲ ಮುದ್ದಣ್ಣ. ಸಾವಿನ ಭಯ ಇಲ್ಲ. ಸಾವೇ ಇಲ್ಲ. ಭೂಲೋಕ-ಕೈಸಾಲೆ-ವೈಕುಂಠ ಒಳಸಾಲೆ. ಇದು ಹೊರಸನ್ನಿಧಿ-ಅದು ಒಳ ಸನ್ನಿಧಿ. ಮೈ ಹೊರಗೆ ಬಿಡೋ ಮೆಟ್ಟು, ಉತ್ತರೀಯ, ಹೊಸಲೀಚೆ; ಹೊಸಲಾಚೆ, ಹೊಸಲು ಅನ್ನೋದು ಕಾಣದವರಿಗೆ ಸಾವು. ಹೊಸಲು ಅಂತ ಬಲ್ಲವರಿಗೆ ಹೆಜ್ಜೆ. ಅಣ್ಣನವರು ಈ ಲೋಕಾನ ಹೀಗೇ ಬಿಟ್ಟಾರು ಅಂತ ನಾ ತಿಳಿದಿದ್ದೆ.

ಮಧ್ವಪತಿ: ಹಾಗೇ ಬಿಟ್ಟರು.

ಕನಕ: ಮೈಬೇನೆ ಏನೂ ಇರಲಿಲ್ಲ?

ಅಪ್ಪಣ್ಣ: ಇಲ್ಲವೇ ಇಲ್ಲ. ಕಡೇ ನಾಲ್ಕು ದಿನ ಹೊರಗಡೆ ಮಲಗಿದರು. ಒಂದು ರಾತ್ರಿ ಹೊಳೇ ಬದೀಗೇ ಮಲಗಿದ್ದರು. 'ತುಂಗಭದ್ರಾ ತಾಯಿಯವರ ಮಾತು ಕೇಳಬೇಕೋ ಅಪ್ಪಣ್ಣಾ' ಅಂದರು. ಈ ಜುಳು ಜುಳು ಜುಳು ನಾದ ಅವರ ಕಿವಿಗೆ ಪೂರಾ ಇಂಪು. ಕೇಳಿ ಗುರುವೇ ಅಂದೆ. ನಾನೂ ಬದಿಯಾಗೇ ಇದ್ದೆ. ಮಧ್ಯರಾತ್ರೀಲಿ ಎಚ್ಚರಾಯಿತು. ತಾಯಿ ಏನು ಹೇಳತಾಳೆ ಗುರುವೇ ಅಂದೆ. ಮಾತು ಹೇಳೋದಿಲ್ಲೋ-ಲಾಲಿ ಹಾಡುತಾಳೆ ಅಂದರು.

ಕನಕ: ಅಲ್ಲ?

ಮಧ್ವಪತಿ: ಆ ಹದಿನೈದು ದಿನ ಅವರು ಅದೇನು ನಿಟ್ಟಿಸಿ ನೋಡಿದರೋ ಈ ಭೂಮೀನ ಆಕಾಶಾನ. ನೋಡಿನೋಡಿ ಕಣ್ಣು ತುಂಬಿಕೊಳ್ಳುತ್ತಿದ್ದಾರೆ ಅನ್ನೋಹಾಗಿತ್ತು. ಜ್ಞಾನಿ ಜೀವನ ವರ್ಣಿಸೋ ಭಾರತದ ಶ್ಲೋಕ ಆ ಇಪ್ಪತ್ತನ್ನ ಹತ್ತು ಸಲ ನನ್ನಿಂದ ಓದಿಸಿದರು. ಹತ್ತು ಸಲ ತಾವೇ ಅಂದುಕೊಂಡರು. ಜಯ ಜಯ ಗೀತಗಳನ್ನು ಹತ್ತು ಸಲ ಹಾಡಿಸಿದರು. ದೇವರ ಸನ್ನಿಧೀಲೆ ಇದ್ದು, ಕೊನೇಕ್ಷಣ, ಅಲ್ಲಿ ಮೈಲಿಗೆ ಆಗೋದು ಬೇಡ ಅಂತ ಹೊರಕ್ಕೆ ಬಂದರು.

ಅಪ್ಪಣ್ಣ: ಕಂದದೆ ಬೆಳಗಿದರು ನನ್ನ ಗುರು ಒಂದು ನಂದಾದೀಪ ಆಗಿ.

ಮನಸ್ಸಿನ ಮೇಲೆ ತಂಪು ಸುರಿಯುವ ಇಂಥ ಚಿತ್ರಗಳನ್ನು ರಚಿಸುವಲ್ಲಿ ಮಾಸ್ತಿಯವರ ಕೈ ಪರಿಣತಿ ಮುಟ್ಟುತ್ತದೆ. 'ಪುರಂದರದಾಸ' ಕೃತಿಮಾಲಿಕೆಯ ಮೂಲದ್ರವ್ಯವೇ ಹಾಗೆ. ಇನ್ನು ಮೋಡಿ ಹಾಕುವಂತಹ ಮಧುರ ಪದಬಂಧ. ಪ್ರಸಾರ ತಂತ್ರಗಳನ್ನು ದುಃಡಿಸಿಕೊಳ್ಳುವಂತಹ ಹತ್ತು ಹಲವಾರು ಸನ್ನಿವೇಶಗಳೂ ಇವೆ. ಆದರೆ ಅಂಥವು ಇಲ್ಲದಿದ್ದರೂ ನಾಟಕ ನಿಲ್ಲುತ್ತದೆ. ಕಾರಣ, ಸಂಪ್ರದಾಯ ಒಪ್ಪಿದ ಸಂಗತಿಗಳನ್ನು ಒರೆಗೆ ಹಚ್ಚಿ, ಅರಗುವಂತೆ ಮಾಡುವ ಚಿಕಿತ್ಸಾ ವಿಧಾನ; ಮೂಲದ್ರವ್ಯವನ್ನು ಪದರುಪದರಾಗಿ ಬಿಡಿಸಿ ಅಲ್ಲಿನ ಬಣ್ಣಬಣ್ಣಗಳನ್ನು ತೋರುವ ಜಾಣ್ಮೆ; ಇನಿತೂ ಮುಕ್ಕಾಗದಂತೆ, ಎಂತೆಂಥ ಮಧುರ ಭಾವಗಳನ್ನೂ ಹದವಾದ ಮಾತುಗಳಲ್ಲಿ ಇರಿಸಿ ಅಳಿಸುವ ಕಲಾವಂತಿಕೆ. ಹೌದು, ಬಳಸಿದ ಮಾತುಗಳ ಬಲವೊಂದೇ ಸಾಕು ನಾಟಕಕ್ಕೆ, ತಿಮ್ಮಣ್ಣಕವಿ, ಪುರಂದರದಾಸರನ್ನು ಕುರಿತು, ವ್ಯಾಸರಾಯರ ಸನ್ನಿಧಾನದಲ್ಲಿ ಆಡಿದ ಮಾತು, ಈ ನಾಟಕಮಾಲಿಕೆ ರಚಿಸಿದ ಮಾಸ್ತಿಯವರಿಗೂ ಅನ್ವಯಿಸುತ್ತದೆ.

'ಅವರ ಶಬ್ದಭಂಡಾರ ದೊಡ್ಡದು. ಆದರೂ ಅವರು ಸುಲಭವಾದ ಪದಗಳನ್ನೇ ಬಳಸುತ್ತಾರೆ. ಜನರ ಬಳಕೆಯ ಪಲುಕನ್ನು ಹಿಡಿಯುತ್ತಾರೆ. . . ಮಾತು ಇಷ್ಟು ಸುಲಭ, ಇಷ್ಟು ಚೆನ್ನ; ಭಾವ ಇಷ್ಟು ಲಲಿತ, ಇಷ್ಟು ಮಧುರ; ಚಿತ್ರ ಇಷ್ಟು ಸುಂದರ, ಇಷ್ಟು ಮನೋಹರ; ರಚನೆಯ ಕೌಶಲ ಇಷ್ಟು ಗಾಢ, ಇಷ್ಟು ಪ್ರಚಂಡ.'

ಇಂಥದೇ ಸಂತಜೀವನವನ್ನು ಕುರಿತು ಕಟ್ಟಿದ ಮತ್ತೊಂದು 'ಪ್ರಸಾರ ನಾಟಕ' - ಕನಕಣ್ಣ. ೧೯೬೫ರಲ್ಲಿ ಕನಕದಾಸರ ನಾನ್ನೂರನೆಯ ವರ್ಷದ ಉತ್ಸವದ ಸಲುವಾಗಿ, ಪ್ರಸಾರಕ್ಕೆಂದು ರಚಿಸಿದ ಕೃತಿ ಅದು. ಬಾಡದ ನಾಡಪ್ರಭುವಾಗಿದ್ದ ತಿಮ್ಮಣ್ಣ, ಕನಕದಾಸನಾದ ಮೇಲೆ ಗುರು ವ್ಯಾಸರಾಯರ ಬಳಿಗೆ ಸಾರಿ 'ಗುಹನಂತೆ' ನಡೆದುಕೊಂಡು ಇದ್ದುಬಿಟ್ಟ. ಸಂಸಾರ ತೊರೆದುಬಿಟ್ಟರೋ ಎಂದು ಅಳುಕಿ, ಆತನ ಹೆಂಡತಿ, ಮಕ್ಕಳು ಅರಸಿ ಬಂದಾಗ, ಗುರುಗಳು ಕನಕಣ್ಣನನ್ನು ಒಂದಿಗೆ ಕಳುಹಿಸಿ ಕೊಟ್ಟರು. ಆ ಮೊದಲು ವಿದ್ವತ್ ಸಭೆಯಲ್ಲಿ, ಕನಕಣ್ಣನ ಕೃತಿಗಳ ವಚನ - ವಿಮರ್ಶೆಯಾಗಿ, ಆತ, ಲೋಕದ ಗುರು, ಎಂದು ಗುರುತುಗೊಂಡ. ಭಗವಂತನ ಪ್ರೀತಿಗೆ ಒಳಗಾದ ಆ ಭಕ್ತನ ಹಿರಿಮೆ, ನಡೆನುಡಿಯಲ್ಲಿ, ನುಡಿನುಡಿಯಲ್ಲಿ ಹೊಳೆ ಹೊಳೆದು, ಹತ್ತು ಹಲವಾರು ಪವಾಡಗಳನ್ನು ಮೆರೆದು, ದೇಹ ಕಳಿತ ಮೇಲೆ ತಿರುಪತಿಗೆ ನಡೆದು ಶ್ರೀನಿವಾಸನಲ್ಲಿ 'ಐಕ್ಯವಾಗುವ'ವರೆಗೆ ಹದಿಮೂರು 'ಸ್ಥಾನ'ಗಳಲ್ಲಿ ಹರಹಿಕೊಂಡಿದೆ - ನಾಟಕ. ಮೊದಲನೆಯ 'ಸ್ಥಾನ'ದಲ್ಲಿಯೇ ಕನಕಣ್ಣ, ಕಾಗಿನೆಲೆಯ ಕೇಶವನನ್ನುದ್ದೇಶಿಸಿ, ಅಲ್ಲಿನವರೆಗಿನ ತನ್ನ ಕತೆಯನ್ನೆಲ್ಲ ತನಗೆತಾನೆ ಉದ್ದುದ್ದ ಹೇಳಿ ಕೊಳ್ಳುತ್ತಾನೆ. ಮುಂದೆ, ಅತ್ಯಂತ ನಾಟಕೀಯವಾಗಬಹುದಾಗಿದ್ದ ಸನ್ನಿವೇಶಗಳು, ರೊಟ್ಟಿ ಕಚ್ಚಿಕೊಂಡು ಹೋದ ನಾಯನ್ನು ಅಟ್ಟಿಹೋಗಿ ತುಪ್ಪ, ಬೆಲ್ಲ ಇಟ್ಟದ್ದು, ಹಾವಿಗೆ ಹಾಲು ಎರೆದದ್ದು, 'ಯಾರೂ ಇಲ್ಲದ ಎಡೆ' ಎಂದುದರಿಂದ ಬಾಳೆಹಣ್ಣು ತಿನ್ನಲಾರದೆ ಬಂದದ್ದು, ಈ ಎಲ್ಲ, ಬೇರೆಬೇರೆಯವರ ಬಾಯಿಂದ ಕತೆಗಳಾಗಿ ಬಂದು ಬಿಡುತ್ತವೆ. ವ್ಯಾಸರಾಯರ ಆಸ್ಥಾನದಲ್ಲಿಯಂತೂ ಹೊಗಳಿಕೆಯ ಹೊಳೆಯೇ ಹರಿದು ಕನಕ ಅದರಲ್ಲಿ ಕೊಚ್ಚಿಕೊಚ್ಚಿ ಹೋಗುತ್ತಾನೆ. 'ಪುರಂದರದಾಸ' ಕೃತಿಯಲ್ಲಿ ಪಾತ್ರಗಳಿಂದ ಮಾಡಿಸಿ ತೋರಿ ನಂಬಿಸಿದ ಮಾಸ್ತಿಯವರು ಇಲ್ಲಿ ಎಲ್ಲ ಸಂಗತಿಗಳನ್ನೂ ಆಡಿಸಿತೋರಿಸಿದ್ದಾರೆ. ಎಂದೇ ನಾಟಕ ಶ್ರವ್ಯಕಾವ್ಯದ ಪರಿಧಿಯಲ್ಲಿ ಬಂದುಬಿಡುತ್ತದೆ. ಆದರೂ ನಿಷ್ಕೃಷ್ಟವಾದ ಪ್ರಸಾರ ನಾಟಕವಾಗದೆಯೆ ಉಳಿದಿದೆ ಈ ಕೃತಿ. ಇದರಲ್ಲಿಯಾದರೂ ಮನಸ್ಸನ್ನು ಆಕರ್ಷಿಸುವ ಗುಣವೆಂದರೆ 'ಪವಾಡ' ಎನಿಸಿದ ಸಾಂಪ್ರದಾಯಿಕ ಕತೆಗಳನ್ನು ಸಹಜತೆಯ ನೆಲಗಟ್ಟ ಮೇಲೆ ನಿಲಿಸಿದ್ದು. 'ಕನಕನ ಕಿಂಡಿ'ಯ ಪ್ರಸಂಗ ಪವಾಡದ ಬಿಗಿತದಲ್ಲಿ, ಬಿಡುಗಡೆಯಾಗದಂತೆ ಬಂಧನಗೊಂಡದ್ದು ತಾನೆ. ಅದನ್ನೂ ಅಲುಗಿಸಿ, ಸಹಜತೆಗೆ ತಾಗಿಸುವ ಧೈರ್ಯಪ್ರವೃತ್ತಿ ಇಲ್ಲಿಯೂ ಕಾಣುತ್ತದೆ. ಪುರಂದರದಾಸರು ನಡೆದ ವಿಷಯ ಕುರಿತು ಕನಕನನ್ನು ಕೇಳಿದಾಗ

ಕನಕ : ಸ್ವಾಮಿಗಳು ನಾನು ನಿಂತಿದ್ದ ತಾವು ಗೋಡೇಲಿ ಒಂದು ಕಂಡಿ ಹೊಡೆಸಿದರು. ಉತ್ಸವ ದೇವರನ್ನು ಗೋಡೆ ಕಡೆ ಕಂಡಿಯತ್ತ ಮುಖ ಮಾಡಿ ನಿಲ್ಲಿಸಿದರು. ನಾ ನಿಂತ ಕಡೆ ನನಗೆ ದೇವರ ದರ್ಶನ ಆಯಿತು.

ಪುರಂದರ ದಾಸ : ಇದು ಪವಾಡ ಅಲ್ಲವೆ ಕನಕಣ್ಣ? ಗುಡಿ ಗೋಡೆ ಒಡೆಯುವುದು ಅಂದರೇನು? ಅಷ್ಟು ಜನರೆದುರಿಗೆ ನಿಮಗೆ ಇಂಥ ಮರ್ಯಾದೆ ತೋರಿಸೋದಂದರೇನು? ಆದರೆ ವಾದಿರಾಜರು ಮಹಾಧೀರರು - ಸರಿ ಅಂತ ಕಂಡದ್ದನ್ನ ನಡೆಸೋ ಧರ್ಮವೀರರು.

ಹಾಗೆ, ಸರಿ ಅಂತ ಕಂಡದ್ದನ್ನು ನಡಸೋ ಧರ್ಮವೀರರು, ಮಹಾಧೀರರು ಆದ ವಾದಿರಾಜರು, ಇಷ್ಟೆಲ್ಲ ಮಾಡುವುದಕ್ಕಿಂತ, ಕಳಂಕದ ಯಾವ ಸೋಂಕೂ ತಾಗದ ಭಾಗವತನೆನಿಸಿದ ಕನಕದಾಸನನ್ನು ನೇರವಾಗಿ ದೇಗುಲದ ಪ್ರಾಕಾರದೊಳಕ್ಕೇ ಕರೆಯಿಸಿಕೊಳ್ಳಬಹುದಾಗಿತ್ತಲ್ಲ, ಎನಿಸುವುದರಿಂದ, ನಾಟಕಕಾರರು ಹೇಳಿದುದನ್ನು ಒಪ್ಪಿಕೊಳ್ಳಲು ಸ್ವಲ್ಪ ಕಷ್ಟವಾಗುತ್ತದೆ. ಪವಾಡವನ್ನು ಲೌಕಿಕ ಕೃತಿಯನ್ನಾಗಿಸುವಲ್ಲಿ ಬೇರೆಯೇ, ಹೆಚ್ಚು ಒಪ್ಪಬಹುದಾದ ಸಾಧ್ಯತೆ ಇದೆಯೇನೋ ಎಂದು ಹುಡುಕುವಂತಾಗುತ್ತದೆ. ಅಥವಾ, ಪ್ರಶ್ನೆ ಮಾಡದೆ ಪ್ರಸಂಗವನ್ನು ಪವಾಡವೆಂದು ಒಪ್ಪಿಕೊಂಡರೆ ತಾನೆ ಏನು ನಷ್ಟ? ಅದಾದರೂ ಕನಕಣ್ಣನ ಭಕ್ತಿಯ ಬಲವನ್ನು ತೋರಿಸುವಂಥದು ತಾನೆ.

೧೯೬೨ರಲ್ಲಿ ಬೆಂಗಳೂರು ಕೇಂದ್ರ ಏರ್ಪಡಿಸಿದ್ದ ಪ್ರಸಾರ ನಾಟಕೋತ್ಸವದ ಸಲುವಾಗಿ ರಚನೆಗೊಂಡ ನಾಟಕ -'ಭಟ್ಟರ ಮಗಳು'. ಬರೆದವರ ಹೆಸರನ್ನು ಹೇಳದಿದ್ದರೂ ತನ್ನ ಕಾವ್ಯಮಯತೆ, ಸರಳತೆ, ಭಾವನಿರ್ಭರತೆಯಿಂದಾಗಿ ಮಾಸ್ತಿಯವರದೇ ಕೃತಿ ಎಂದು ಸಾರಿಕೊಳ್ಳುವಂತಹ, ಸರಳರಗಳೆಯ ಈ ನಾಟಕ, ಅತ್ಯಂತ ನಾಟಕೀಯವಾದ ಕಥಾದ್ರವ್ಯವನ್ನು ಒಳಗೊಂಡಿದೆ.

ನಾಟಕದ ಸಾರ್ವಭೌಮ ಪಾತ್ರವೆಂದರೆ ಭಟ್ಟರು. ಕಣ್ವಋಷಿಯಂಥ ಈತನನ್ನು ಹುಡುಕಿ ಮಾರ್ಗದರ್ಶನಕ್ಕಾಗಿ, ಸಾಂತ್ವನಕ್ಕಾಗಿ, ಮುಖ್ಯ ಪಾತ್ರಗಳು ಬರುತ್ತವೆ. ಹಾಗೆ ಅಲ್ಲಿಗೆ ಬಂದ ಯುವಕ ಮನ್ನಾರ್ ಎದೆಯ ಆಘಾತಕ್ಕೆ ಒಳಗಾಗಿದ್ದಾನೆ. ಕರುಣಾಜನಕ ಕಥೆ ಅವನದು. ಊರವರೆಲ್ಲ ಹೊರತು ಎಂದರೂ, ಅರಸಿಬಂದ ಅತ್ಯಂತ ಸುಂದರಿ ಅತ್ತುಳಾಯ್, ಬಾಯಿಬಿಟ್ಟು ನಿಂತ ಎಲ್ಲ ಶ್ರೀಮಂತ ತರುಣರನ್ನು ಧಿಕ್ಕರಿಸಿದ ಆ ಕಡುಬಡವೆ ಹುಡುಗಿಯನ್ನು ಒಲಿದೊಲಿದು ಮದುವೆಯಾಗಿದ್ದ ಆತ. ಮದುವೆಯಾದ ಮೂರನೆಯ ದಿನವೆ, ಹೆಂಡತಿಯನ್ನು ಶ್ರೀರಂಗದಲ್ಲಿ ಬಿಟ್ಟು, ಊರವರ ಬಲವಂತದಿಂದ ತಿರುವನಂತಪುರಕ್ಕೆ ಯಾತ್ರೆ ಹೋದ. ಮೂರು ದಿನಗಳಾದ ಮೇಲೆ ಊರಿನಿಂದ ಬಂದು ಕೂಡಿಕೊಂಡ 'ಗೆಳೆಯರು', ಆತ ಹೊರಟ ದಿನವೇ ಅತ್ತುಳಾಯ್ ಕಾವೇರಿಯಲ್ಲಿ ಕಾಲುಜಾರಿ ಕೊಚ್ಚಿಕೊಂಡು ಹೋದ 'ದುರ್ವಾರ್ತೆ' ತಿಳಿಸಿದಾಗ ಅವನ ಎದೆ ಒಡೆಯಿತು. ಹುಚ್ಚನಂತಾಗಿ ಭಟ್ಟರಲ್ಲಿಗೆ ಬಂದ. 'ದುಃಖದಲಿ ಬೆಂದು ಬಂದ ವೈರಾಗ್ಯಕ್ಕೆ ಮನಕೊಡದೆ' ಊರಿಗೆ ಹೋಗಿ ಹೆಂಡತಿಯ ಉತ್ತರಕ್ರಿಯೆ ಮಾಡು ಎಂದು ಭಟ್ಟರು ರಮಿಸಿ ಹೇಳಿದರು. ಊರವರ ಕಟಕಿಗೆ ಅಳುಕಿ, ಒಪ್ಪದೆ ನಿಂತ. ಕಡೆಗೆ ಕಾಂಚಿಪುರಕ್ಕೆ ತಿರುಪತಿಗೆ ಹೋಗಿ, ದೇವರ ಸೇವೆಯನ್ನಾದರೂ ಮಾಡಿ ಮನಸ್ಸಿನಲ್ಲಿ ಶಾಂತಿ ಮೊಳೆತ ಮೇಲೆ, ಹಿಂದಿರುಗಿ ಬಂದು 'ಸನ್ಯಾಸವನು ಕೊಳುವುದು ಯುಕ್ತವು' ಎಂದಾಗ, ಒಪ್ಪಿ ಮತ್ತೆ ಯಾತ್ರೆ ಹೋದ.

ಹೀಗೆ ಆದ ಹದಿನೈದು ದಿನಗಳಲ್ಲಿ, ಸ್ವತಃ ಅತ್ತುಳಾಯ್ ಹಾಗೂ ಅವಳ ತಾಯಿ ದುಃಖ ತಾಳಲಾರದೆ ಶಾಂತಿಯನ್ನರಸಿ ಭಟ್ಟರ ಸನ್ನಿಧಿಗೇ ಬಂದರು. ಮನ್ನಾರ್ ತಿರುವನಂತಪುರದಲ್ಲಿ ತೀರಿಕೊಂಡುಬಿಟ್ಟನೆಂದು ಊರಕುಹಕಿಗಳು ಆಕೆಗೂ ಸುಳ್ಳು ಹೇಳಿದ್ದಾರೆ. ಎದೆಯೊಡೆದು ಬಂದ ಸತಿಗೆ ಇಲ್ಲಿ ಬೆಳಕಿನ ಗೆರೆ ಕಾಣುತ್ತದೆ. ಯಾತ್ರೆ ಹೋದ ಗಂಡ, ತಿರುಪತಿಯಿಂದ ಮರಳಿ ಬರುತ್ತಾನೆ; ಭೇಟಿಯಾಗುತ್ತಾನೆ; ಮತ್ತೆ ಮನೆ ಬಂಗಾರವಾಗುತ್ತದೆ, ಎಂದು ಆಶೆಯಿಂದ ಆತನ ಬರವನ್ನು ಪ್ರತೀಕ್ಷಿಸುತ್ತಾಳೆ.

ಆದರೆ, ಬಂದಾಗ ಆತ ಸನ್ಯಾಸಿಯಾಗಿ ಬಂದುಬಿಟ್ಟ. ಭಟ್ಟರ ಮನೆಯಲ್ಲಿ ಮಗಳಾಗಿ ಉಳಿದಿದ್ದ ಅತ್ತುಳಾಯ್, ನೆಲದಮೇಲೆ ಇಕ್ಕಿದ್ದ ರಂಗವಲ್ಲಿಯ ರಚನೆ ಕಂಡಾಗ, ಇದು ತನ್ನ ಇನಿಯಳ ಕೈಜಾಣ್ಮೆಯೇ ಎಂದು ಗುರುತಿಸಿದ.

'ಅತ್ತುಳಾಯ್ ತೆರನೇ ಇಹುದು - ಸನ್ಯಾಸಿ ಆದರೂ
ಅತ್ತುಳಾಯ್; ಭ್ರಮೆ ನನ್ನ ಬಿಡಲಿಲ್ಲ -

ಎಂದಾಗ, ಆತನನ್ನು ನೋಡಿ, ಮಾತು ಕೇಳಿ ಹೌಹಾರಿದ ಆಕೆ, ಗುರುತಿಸಿದಳು.

ಅತ್ತುಳಾಯ್ : ಹಾ ಮನ್ನಾರ್

ಮನ್ನಾರ್: ಅತ್ತುಳಾಯ್: ಜೀವಿಸಿಹೆಯೋ - ಇಲ್ಲ, ಇದು ನನ್ನ ಭ್ರಾಂತಿಯೇ.

ಅತ್ತುಳಾಯ್: ಜೀವಿಸಿರುವೆನು ನಿನ್ನ ವೇಷವನು ನೋಡುತಿರೆ ಸತ್ತಿರಲು ಚೆನ್ನಿತ್ತು
ಎನಿಸುತಿದೆ-

ಎಂದು ಹಲುಬಿದಳು. ಬೇಗೆಗೆ ಬಿದ್ದ ಪತಂಗಗಳಂತೆ ಗಂಡಹೆಂಡಿರು ಚಡಪಡಿಸಿದರು. ಆದರೆ ಮನ್ನಾರ್ ಚೇತರಿಸಿಕೊಂಡ. ಯಾತ್ರೆಯಲ್ಲಿದ್ದಾಗ, ಕಂಡುಕೊಂಡ ಗುರುಗಳನ್ನು ಬೇಡಿ ಬೇಡಿ, ವಿಧಾಯಕವಾಗಿ ಸನ್ಯಾಸ ಸ್ವೀಕರಿಸಿದ್ದಾನೆ ಆತ. ಸನ್ಯಾಸಕ್ಕೆ ಅಪಚಾರ ಸಲ್ಲದು. ತನ್ನ ದಾರಿ ತಾನು ಕಂಡುಕೊಳ್ಳಬೇಕು, ಎಂದು ಹೊರಟಾತನನ್ನು ಭಟ್ಟರು, ನಾಲ್ಕು ಕಾಲ ಅಲ್ಲೇ ನಿಲ್ಲುವಂತೆ ಕೇಳಿಕೊಳ್ಳುತ್ತಾರೆ. ಊರಹೊರಗಿನ ಕೆರೆಯ ಮಂಟಪದಲ್ಲಿ ಉಳಿದುಕೊಳ್ಳುತ್ತಾನೆ ಆತ.

ಪ್ರಪಾತದಲ್ಲಿ ಬಿದ್ದಂತೆ ಮುಂದುಗಾಣದ ಅತ್ತುಳಾಯ್, ಆ ರಾತ್ರಿಯೇ ಒಬ್ಬಳಾಗಿ ಮಂಟಪಕ್ಕೆ ಬಂದು ಮುಂದೆ ಕುಳಿತು ನಡೆದುದನ್ನೆಲ್ಲಾ ನೆನಪು ಮಾಡಿ ಹಲುಬಿ, ತಿಳಿವಳಿಕೆ ತಪ್ಪಿದ ಕಾರಣದಿಂದ ಹೀಗೆ ಕೊಂಡ ಸನ್ಯಾಸ ಸರಿಯೆ ಎಂದು ಕೇಳುತ್ತಾಳೆ. ಆದರೆ ಆತನ ಮನಸ್ಸು ನಿಶ್ಚಿತ ನೆಲೆಯಲ್ಲಿದೆ. ನಾಲ್ಕು ತಿಂಗಳ ಹಿಂದೆ ತಾನೆ, ಆಕೆಯನ್ನು ಕೂಡಿ ಸಂಸಾರಿಯಾಗಲು ತಾಳದಂಥ ಆತುರ ತೋರಿದ ತನ್ನಲ್ಲಿ, ಇಂದು, ಏನು ಕಾರಣವೋ ವಿರಾಗ ಮೂಡಿದೆ-

ಏನು-

ಗುರುಗಳನು ಮುಟ್ಟಿ ಮನಪಡೆದ ಶಾಂತಿಯೋ
ದೀಕ್ಷೆಕೊಟ್ಟವರ ಹಿರಿತವಸಿನದು ಮಹಿಮೆಯೋ
ಆರೈಸಿ ಬಂದ ಔದಾಸೀನ್ಯ ಅಲ್ಲ ಇದು;
ಆರೈಸಿದುದು ಇಲ್ಲ - ಇದ ನಾನು ಬಲ್ಲೆನು.
ನನಗೀಗ ಸಂಸಾರ ಬೇಕು ಎನಿಸುತಲಿಲ್ಲ:
ಇಲ್ಲ ಅಷ್ಟೇ ಅಲ್ಲ; ಬೇಡ ಎನಿಸುತಲೆ ಇದೆ.
ನನ್ನ ದಾರಿಯನು ನಾನು ಹಿಡಿದಾಯ್ತು. ನಿನ್ನದನು
ನೀ ಹಿಡಿದು ನಡೆ ಎನ್ನಬೇಕು ನಾಲಿಗೆ
ನಿನ್ನ ಮುಖ ನೋಡಿ, ಇವಳದೆನ್ನುವ ದಾರಿ ಯಾವುದು
ಎಂದು ಮನ ಅದನು ತಡೆದಿದೆ-
ಈ ಮಾತು ಕೇಳಿ ಇನ್ನು ಯಾವ ಆಶೆ ಉಳಿದೀತು!

ನಿಂತು ಹಂಗಿಸಿದಳು ಆಕೆ-

ಏನಾಗುವಳೋ ಆಗಿಹೋಗಲಿ ನನಗೇನು
ಎನ್ನುವುದೆ ಸರಿಯಾದ ಸನ್ಯಾಸ - ನಿನ್ನ ಮಾತೀಗ ಸರಿ.

ಆಗಲಿ, ನೀನೆಂದಂತೆ ನನ್ನದಾರಿ ನಾನು ನೋಡಿಕೊಳ್ಳುತ್ತೇನೆ. ಎಂದು ಸರಸರನೆ ಸೋಪಾನ ಇಳಿದು ನೀರಿನಲ್ಲಿ ಹಾರಿಕೊಂಡಳು. ಹೀಗಾಗಬಹುದೆಂದು ಭಾವಿಸದಿದ್ದ ಸನ್ಯಾಸಿ, ಹೌಹಾರಿ, ಮೇಲಿನ ಬಟ್ಟೆ ಕಳೆದೆಸೆದು, ನೀರಿಗೆ ಧುಮುಕಿ, ಹುಡುಕಾಡಿ ಹಿಡಿದು, ಎರಡು ನಿಮಿಷಗಳಲ್ಲಿ ಆಕೆಯನ್ನು ಎತ್ತಿತಂದು ಮೆಟ್ಟಿಲ ಮೇಲೆ ಕೂರಿಸಿದ. ಸಾವಕಾಶವಾಗಿ ಚೇತರಿಸಿಕೊಂಡ ಆಕೆ, ನನ್ನನೇಕೆ ಎತ್ತಿ ತಂದೆ ಎಂದು ಕೇಳಿದಾಗ, ನೀನಲ್ಲ - ಯಾವ ಹೆಣ್ಣಾದರೂ ನನ್ನೆದುರೇ ನೀರಿಗೆಬಿದ್ದಾಗ ಸುಮ್ಮನಿರಲು ಸಾಧ್ಯವೆ ಎಂದು ಮರು ಪ್ರಶ್ನೆ ಮಾಡಿದ. ಆಕೆ, ವಿಧಿಯ ಇಂಥ ವಿಪರ್ಯಾಸವನ್ನು ಅಣಕಿಸಿದಳು.

ಜೊತೆಗೆ ಬಾ ಬದುಕೋಣ ಎಂದೆನು
ಅದು ನಿನಗೆ ಬೇಡವಾಗಿದೆ. ನೀನು ಇಲ್ಲದೆ,
ಬಾಳುವುದು ಬೇಡವಾಗಿದೆ ನನಗೆ. ಸಾಯುವೆನು
ಎಂದು ಗಂಗೆಯ ಮಡಿಲ ಸೇರಿದೆನು. ನೀ ನನ್ನ
ಅಲ್ಲಿಂದ ಸೆಳೆದು, ಜೀವಂತ ಹೆಣವಾಗಿರಲು
ದೂರ ನಿಲಿಸಿರುವೆ.
ಏನು ಮಾಡಲಿ ನಾನು -?

ಮನ್ನಾರ್: ಹೋಗಿ ಗುರುಗಳ ಕೇಳು
ಅತ್ತುಳಾಯ್ : ಗುರು, ದೈವ, ಪತಿ ಎಲ್ಲ
ನನಗೆ ನೀನೆ. ಸಾಯಬಿಡದವನು ನೀ ನನ್ನ ಕಾಪಾಡಲೇ ಬೇಕು. ನಾ
ಇನ್ನೂ ಬಿಡೆ ನಿನ್ನ

ಎಂದು ತಟಕ್ಕನೆ ಬಳಿಸಾರಿ, ಅಪ್ಪಿ, ಮುದ್ದಿಸಿ ಅವನನ್ನು ಕಟ್ಟಿಕೊಳ್ಳುತ್ತಾಳೆ ಅತ್ತುಳಾಯ್. ಆಕೆಯನ್ನು ನಿವಾರಿಸಲು ಸನ್ಯಾಸಿ ಅಸಮರ್ಥನಾಗುತ್ತಾನೆ.

ಮೂರು ತಿಂಗಳ ನಂತರ ಮುಂದಿನ ಸ್ಥಾನದಲ್ಲಿ, ಅತ್ತುಳಾಯ್ ಗರ್ಭವತಿಯಾಗಿರುವ ಸ್ಥಿತಿ ಅರಿಕೆಯಾಗುತ್ತದೆ. ಸನ್ಯಾಸಿ ಎಂದೋ ಹೊರಟುಹೋಗಿದ್ದಾನೆ. ಆಸರೆಯನ್ನರಸಿ, ತಾಯಿ ಮಗಳು, ಮತ್ತೆ ಭಟ್ಟರಲ್ಲಿಗೇ ಬಂದಿದಾರೆ. ಕುಹಕಿಗಳು ತುಂಬಿದ ಊರಲ್ಲಿ, ಒಡಲ ಕುಡಿ ಬೆಳೆಯಿಸುತ್ತ ನಿಲ್ಲುವುದು ಅಸಾಧ್ಯವಾಗಿದೆ. ಎಂದಿನಂತೆ ಭಟ್ಟರೇ, ಗುರುವಾಗಿ, ದೈವವ್ವಾಗಿ, ತಾಯಿಯೇ ಆಗಿ ಮಗಳ ಹೆಗಲಿಂದ ದೊಡ್ಡ ಹೊರೆ ಇಳಿಸಿ, ತಾವೆ ಎತ್ತಿಕೊಳ್ಳುತ್ತಾರೆ.

ಪ್ರಸವದಿನ ಬಹವರೆಗೆ ಇಲ್ಲಿ ಇರಿ. ಹೆತ್ತುದೇ
ಹಸುಳೆಯನು ನನಗೆ ಒಪ್ಪಿಸಿ ಊರಕಡೆ ಹೊರಡಿ.
ಮಗು ನನ್ನದಾಗಿರಲಿ - ಸಾನದನು ಸಾಕುವೆನು,

ಹೀಗೆ, ಈ ಕೃತಿಯ ಒಳವಸ್ತು ಸತ್ವದಿಂದ ಸಂಪುಷ್ಟವಾಗಿ ನಾಟಕಕ್ಕೆ ಹದವಾಗಿ ಒದಗುತ್ತದೆ. ಮೇಲೆ ಮಾಸ್ತಿಯವರ ಮೋಡಿಗೈ. 'ಕಾಣದ ಕೈಯಿನ ಆಟ'ವನ್ನು ಒಪ್ಪಿದರೂ, ಅವರು ಮಾನವನಲ್ಲಿರುವ, ಇರಬೇಕಾದ ದೇವಗುಣವನ್ನು ಗುರುತಿಸುತ್ತಾರೆ. ಭಟ್ಟರಂತಹ ನಡೆದಾಡುವ ದೇವರು ಕಾಣಬರುವವರೆಗೆ ಯಾವ ಸಂಗತಿಯೂ ಪವಾಡವಾಗಬೇಕಾಗಿಲ್ಲ; ಯಾರೂ ಅಯೋನಿಜೆ ಎನಿಸಿಕೊಳ್ಳಬೇಕಾಗಿಲ್ಲ. ಮಾನವನ

ಸಜ್ಜನಿಕೆಯಂತೆ ಪವಾಡ ಮಾಡುವ ಶಕ್ತಿ ಇನ್ನೊಂದು ಇಲ್ಲ ಎಂದು ನಂಬಿಸುತ್ತಾರೆ ಮಾಸ್ತಿಯವರು.

ಪ್ರಸಾರಕ್ಕಾಗಿಯೇ ರಚಿಸಿದ ನಾಟಕವಾದರೂ, 'ಭಟ್ಟರ ಮಗಳು' ನಿಷ್ಕೃಷ್ಟವಾದ ಪ್ರಸಾರ ನಾಟಕವಲ್ಲ. ಅತ್ತುಳಾಯ್ ನೀರಿಗೆ ಬಿದ್ದು, ಸನ್ಯಾಸಿ ಪತಿ ಎತ್ತಿತರುವ ಘಟ್ಟ, ಸೂಕ್ತ ಶಬ್ದ ವಿಶೇಷಗಳಿಗೆ ಎಡೆಮಾಡಿಕೊಟ್ಟರೂ, ಆ ಎಲ್ಲ ಸಂದರ್ಭವನ್ನು ರಂಗದ ಮೇಲೆ ಒಪ್ಪುವಂತೆ ಪ್ರದರ್ಶಿಸಲು ಸಾಧ್ಯವಿರುವುದರಿಂದ ಇದು ಪ್ರಸಾರ ನಾಟಕವೆನಿಸುವುದಿಲ್ಲ. ಆದರೆ ನಾಟಕ ದ್ರವ್ಯದ ಮಹತ್ತಿನಿಂದಾಗಿ, ಕೃತಿಯ ಕಾವ್ಯ ಗುಣದಿಂದಾಗಿ, ಎಳೆಯರಿಗೂ ತಿಳಿಯುವಂತಹ, ತಿಳಿದು ಭಾವವುಕ್ಕಿಸುವಂತಹ ಸುಖವಾದ ಸುಲಭ ನುಡಿಗಳಿಂದಾಗಿ, ಕೃತಿ ಪ್ರಸಾರದಲ್ಲಿಯೂ ಫಲ ಕೊಟ್ಟಿದೆ.

ಮಾಸ್ತಿಯವರು ಮತ್ತೂ ಎರಡು ನಾಟಕಗಳನ್ನು ಪ್ರಸಾರಕ್ಕಾಗಿ ರಚಿಸಿದ್ದಾರೆ. ಬೈಚೇಗೌಡ; ಕೆಟ್ಟ ಕನಸು.

ನೀತಿಚಿಂತಾಮಣಿಯ ಕತೆಯಂತೆ, ಮೊದಲ ನಾಟಕ, ಪಾಪಭೀರುವಾದ, ಸತ್ಯನಿಷ್ಠುರನಾದ ಒಕ್ಕಲಿಗನೊಬ್ಬ, ಇನ್ನೊಬ್ಬನ ಒಳಿತಿಗಾಗಿ ತಾನೆ ಕಹಿನುಂಗುತ್ತ ನಡೆದ ರೀತಿ ತೋರುತ್ತದೆ. ಬೈಚೇಗೌಡ, ಹಳ್ಳಿಯಲ್ಲಿ ಹಿರಿವಯಸ್ಸಿನ ರೈತ. ತೀರಿಕೊಂಡ ಹಳೆಯ ಶಾನುಭೋಗ ಗೌಡನನ್ನು ಸೋದರನಿಗಿಂತ ಹೆಚ್ಚಾಗಿ ನಡೆಸಿಕೊಂಡ. ಆದರೆ ಅವನ ಮಗ, ಸೀತಪ್ಪ, ಹರೆವಯಸ್ಸಿನ ಹೊಸ ಶಾನುಭೋಗ, ತಾನು ಕಂದಾಯಕ್ಕೆಂದು ಕೊಟ್ಟ ಹಣವನ್ನು ಗುಳುಂ ಮಾಡಿ, ತಾನು ಕೊಟ್ಟ ರಶೀತಿಯ ಸುದ್ದಿಯನ್ನೇ ಮರೆತು, ಭೂಮಿಯನ್ನು ಹರಾಜಿಗೆ ಹಾಕಿಸಿದಾಗ, ಹುಡುಗನನ್ನು ಹತೋಟಿಗೆ ತರಲು ಹುರುಡುಗಟ್ಟುತ್ತಾನೆ. ಇನ್ನೂ ಆಳಕ್ಕೆ ಬೀಳದಂತೆ ಈಗಲೇ ಬುದ್ಧಿಗಲಿಸುವುದು ಒಳ್ಳೆಯದೆಂದು ಆತನ ಎಣಿಕೆ.

ಆದರೆ ಸೀತಪ್ಪನ ತಾಯಿ, ಮಗನ ತಪ್ಪನ್ನು ಹೊಟ್ಟೆಯಲ್ಲಿ ಇಟ್ಟುಕೊಳ್ಳಬೇಕು; ಮನೆತನದ ಮಾನಭಂಗವಾಗದಂತೆ ಕಾಯಬೇಕು ಎಂದು ಹಲುಬಿ ಬೇಡಿದಾಗ, ತನ್ನಲ್ಲಿದ್ದ ಕೀಪರ್ ಕೆಲಸಕ್ಕೆ ಸೇರುತ್ತಾನೆ. ನಾಲ್ಕು ವರ್ಷ ಆಗುವುದರಲ್ಲಿ, ಅದೇ ಸೀತಪ್ಪ, ಹಿಂದಿನ ಹೀನಕೃತ್ಯವನ್ನೇ ಮುಂದುವರಿಸಿ, ಅರಗಿಸಿಕೊಳ್ಳಲಾರದೆ, ಕೈದಿಯಾಗಿ ಜೈಲಿಗೆ ಬಂದಾಗ ಬೈಚೇಗೌಡನಿಗೆ ಎದೆ ಭಾರವಾಗುತ್ತದೆ. ಕಾಲಕಳೆಯಿತು. ತನ್ನ ಹೆಂಡತಿ ಹೆತ್ತು ಸಾವಿನ ದವಡೆಯಲ್ಲಿದ್ದಾಳೆಂದು ಸುಳ್ಳುಹೇಳಿ, ಸೀತಪ್ಪ, ಗೌಡನ ದುಂಬಾಲುಬಿದ್ದು, ಒಂದೇ ರಾತ್ರಿ ಅವಕಾಶ ಕೊಟ್ಟರೆ ಯಾರೂ ಕಾಣದಂತೆ ಹಳ್ಳಿಗೆ ಹೋಗಿ ಆಕೆಯನ್ನು ಕಂಡು ಮುಂಜಾನೆ ಮರಳಿ ಬರುವುದಾಗಿ ನಂಬಿಸಿ ಹೊರಟವನು, ಹೇಳಿದ ಮಾತು ಉಳಿಸಿಕೊಳ್ಳದೆ ಹೋದಾಗ, ಹೌಹಾರಿದ ಗೌಡ, ಎವೆಯಿಕ್ಕದೆ ಕಾದು, ಮಾರನೆಯ ದಿನ ಕಾವಲಗೆಳೆಯನ ಒತ್ತಾಯದ ಮಾತಿಗೆ ಕಟ್ಟುಬಿದ್ದು, ತಾನೇ ಹಳ್ಳಿಗೆ ಧಾವಿಸಿಬಂದು ನೋಡಿದರೆ, ಸೀತಪ್ಪ ಐಷಾರಾಮಾಗಿ ಉಂಡು ಮಲಗಿದ್ದಾನೆ - ಕೊಟ್ಟ ಮಾತು ಮರೆತು! ಹೆಂಡತಿಯ ಜಡ್ಡಿನ ಸುದ್ದಿಯಲ್ಲಿ, ಬರೀ ಸುಳ್ಳು. ತನ್ನ ಮಾತಿನ ಆಣೆ ಇಟ್ಟು ಕರೆದರೂ, ಮುದಿತಾಯಿ ಅಷ್ಟು ಬುದ್ಧಿಹೇಳಿ ಬೇಡಿಕೊಂಡರೂ ಬರಲು ಒಪ್ಪದ ಸೀತಪ್ಪನನ್ನು ಕಡೆಗೊಮ್ಮೆ ಆತನ ಪುಟ್ಟ ಹೆಂಡತಿ ಹಟ ತೊಟ್ಟು ಹೊರಡಿಸುತ್ತಾಳೆ. ಏನೇನೂ ಆಗದಿದ್ದಂತೆ, ಆರಾಮಾಗಿ ಹೊರಟ ಆತನನ್ನು ಜೈಲಿಗೆ ಸೇರಿಸಿ, ಮನಸೊಪ್ಪದ ಇಂಥ ಕೆಲಸ ತನ್ನಿಂದ ಮತ್ತೆ ಆಗಕೂಡದೆಂಬ ನಿಶ್ಚಯದಿಂದ, ಗೌಡ, ತಾನೇ ಕೆಲಸ ಬಿಟ್ಟು ಕಾಣದಾಗುತ್ತಾನೆ.

ಸಂಸ್ಕಾರದಿಂದಲೇ ಸತ್ಯಕ್ಕಾಗಿ ಪಣತೊಟ್ಟು ನಿಂತಂತೆ ಕಾಣುವ ಬೈಚೇಗೌಡನ ಕುರಿತ ಈ ನಾಟಕ, ಮಾನವ ಮೌಲ್ಯಗಳಿಗೆ ನಿಂತಂತೆ ಮಾಸ್ತಿಯವರು ಕೊಡುವ ದೊಡ್ಡ ಬೆಲೆಗೆ ಸಾಕ್ಷಿ ನುಡಿಯುತ್ತದೆ. ಸುಕುಮಾರ ಭಾವಗಳು ಹಿತವಾದ ಮಾತುಗಳ ಮೂಲಕ ಹೊಳೆ ಹೊಳೆಯುತ್ತದೆ. ಹದಿಮೂರು ಸ್ಥಾನಗಳ ಈ ಅರ್ಧ ಗಂಟೆಯ ನಾಟಕ, ಪ್ರಸಾರಕ್ಕೆಂದೇ ಬರೆದಿದ್ದರೂ, ರಂಗದಲ್ಲಿಯೇ ಸೊಗಸಬಹುದು. ಕೇವಲ ಸೂತ್ರಧಾರನ ಸ್ಥಾಪನೆ, ಅಥವ ಕಡೆಯ ಸ್ಥಾನಗಳಲ್ಲಿ ಬರುವ ವಾಹನದ (ಜಟಕಾಗಾಡಿ) ಧ್ವನಿ ವಿಶೇಷಗಳಿಂದ ಅಷ್ಟೆ, ಪ್ರಸಾರ ತಂತ್ರದ ಒಂದೆರಡು ಚಿಹ್ನೆಗಳು ಕೃತಿಯಲ್ಲಿ ಕಾಣಿಸಿಕೊಳ್ಳುತ್ತವೆ. ಪ್ರಸಾರಾರ್ಹ ಗುಣಗಳನ್ನು ನಾಟಕ ಮೈಯುಂಡಿಲ್ಲ. ಶಾಲೆಯ ಹುಡುಗರು ಆಡಬಹುದಾದ, ಆಡಬೇಕಾದಂತಹ ಒಂದು ಒಳ್ಳೆಯ ನಾಟಕ, 'ಬೈಚೇಗೌಡ'.

'ಕೆಟ್ಟ ಕನಸು', ರಷ್ಯಾ ದೇಶದ ೧೯೧೭ನೆಯ ವಿಪ್ಲವದ ಹಿನ್ನೆಲೆಯಲ್ಲಿ ಅಲ್ಲಿನ ಜನ ಅನುಭವಿಸಿದ ಕಷ್ಟ, ಅವಮಾನ, ಮೂಕ ಸಂಕಟಗಳ 'ಐತಿಹಾಸಿಕ ಸತ್ಯ'ವನ್ನು ಚಿತ್ರಿಸುತ್ತದೆ. ಬಲವಂತವಾಗಿ ಸೈನ್ಯಕ್ಕೆ ಸೇರಿಸಿಕೊಂಡ ಹೊಸ ಯುವಕರನ್ನು ಧೂರ್ತ ನಾಯಕನೊಬ್ಬ (ಷೆಂಕೊ) ನಡೆಸಿಕೊಂಡ ಅತ್ಯಂತ ಹೀನಾಯದ ರೀತಿಯಿಂದ ರೋಸಿ, ಯಾವುದಕ್ಕೂ ಅಪ್ರಯೋಜಕ ಎಂದು ಬಗೆದಿದ್ದ ದಪ್ಪ ಚಾಳೀಸಿನ 'ಮುದಿ' ಯುವಕ - ಕೋಸ್ಪಿಕ್, ಅತ್ಯಂತ ನಾಟಕೀಯವಾಗಿ ಸೇಡು ತೀರಿಕೊಂಡ 'ಸತ್ಯಕತೆ'ಯನ್ನು ಕುರಿತು ಕಟ್ಟಿದ ನಾಟಕ ಇದು. ನಾಟಕದ ನಡೆಯಲ್ಲಿ ಮುಖ್ಯ ಘಟ್ಟಗಳಾದ ಸೈನಿಕ ಪೆರೇಡು, ಹೊಸ ಸೈನಿಕರ ಕವಾಯಿತು, ಒಬ್ಬೊಬ್ಬ ಸೈನಿಕನನ್ನು ಹೀನಾಯವಾಗಿ ಹಳಿದು ಹೀಯಾಳಿಸುತ್ತಿದ್ದ ಷೆಂಕೋವನ್ನು (ಇಂಥವನು ಬಳಸಬೇಕಾದ ಬೈಗುಳಗಳೂ ಮಾಸ್ತಿಯವರ ಬತ್ತಳಿಕೆಯಲ್ಲಿವೆ ಎಂಬುದನ್ನು ಆಡಿ, ತೋರಿದಾತ!) ಗುಂಡು ಹಾರಿಸಿ ಕೊಂದ ಸಂದರ್ಭ, ಪಡೆಯ ಮುಂದೆ - ವಿಚಾರಣೆ - ನಿರೂಪಣೆಗಳ ಸನ್ನಿವೇಶ ನಿಷ್ಕೃಷ್ಟವಾದ ರೇಡೀಯೋ ನಾಟಕದ ಗುರುತುಗಳೇ ಆಗಿವೆ. ಆದರೆ ಇಲ್ಲಿನ ಮೂಲದ್ರವ್ಯ, ರಚನಾ ವಿಧಾನ, ಮಾತಿನ ರೀತಿಯೇ ಮಾಸ್ತಿಯವರು ಮುಟ್ಟಿ ಚಿನ್ನ ಮಾಡಿದ ಹತ್ತು ಹಲವಾರು ವಸ್ತುಗಳಿಗಿಂತ ತೀರ ಭಿನ್ನವಾದುದು. ಅವರಿಂದ ನಿರೀಕ್ಷಿಸಿದ ತೃಪ್ತಿಯನ್ನು ತಾರದಂಥದು.

ಹೊಸಗನ್ನಡದ ಸಾಹಿತ್ಯದ ಇತರ ಪ್ರಕಾರಗಳಿಗೆ ಅವರು ರಚಿಸಿಕೊಟ್ಟ ಮಾನದಿಂದ, ಮಾಸ್ತಿಯವರ 'ಪ್ರಸಾರ ಸಾಹಿತ್ಯ', ಮೊತ್ತದಲ್ಲಿ ಚಿಕ್ಕದೇ; ಆದರೆ ಸತ್ವದಲ್ಲಿ ದೊಡ್ಡದು. ಭಾರತ ಸಂಸ್ಕೃತಿಯ ಬೆಲೆ ಹೆಚ್ಚಿಸಿದವರ - ಅದರಲ್ಲಿಯೂ ನಮ್ಮ ಸಂತದ್ರಷ್ಟಾರರ ಮಹಾನುಭಾವತೆಯನ್ನು ಬಿಂಬಿಸಿ, ಹುಚ್ಚೆದ್ದು ಎತ್ತಿತ್ತಲೋ ಧಾವಿಸುತ್ತಿರುವ ಜನಮನವನ್ನು ತಿದ್ದುವಲ್ಲಿ ಅದರ ಸಾರ್ಥಕತೆ. ಇದು ಅವರು ಆರಿಸಿಕೊಂಡ ಕಥೆ ದ್ರವ್ಯದ ಮೊತಾಯಿತು. ಅಂಥ 'ಹಳೆಯ' ವಸ್ತುವಿನ ಮೇಲೆ ಅತ್ಯಂತ ನವೀನ, ವೈಜ್ಞಾನಿಕ ಎನಿಸುವ ದೃಷ್ಟಿ ಬೀರಿ, ಚಿಕಿತ್ಸೆಮಾಡಿ, ಹೌದು ಎನ್ನುವ ರೀತಿ ಹೊಸದಾಗಿಸುವ ಕಲೆ, ಅದು ಅವರದೇ; ಬೆಲೆ ಕಟ್ಟಲಾಗದಂಥದು. ಇನ್ನು, ಕನ್ನಡವನ್ನು ಅವರು ಆಡಿಸಿ ದುಡಿಸಿಕೊಳ್ಳುವ ಪರಿ - ಅದು ತುಂಬ ಸೊಗಸು. ಇಂಥ ಸತ್ವದ ಕಾರಣ ಮಾಸ್ತಿಯವರ ಪ್ರಸಾರ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನ.

ಷೇಕ್ಸ್‌ಪಿಯರ್ ಅನುವಾದಗಳು

ಎಚ್.ಕೆ. ರಾಮಚಂದ್ರಮೂರ್ತಿ

ಕನ್ನಡ ನಾಟಕ ಹುಟ್ಟಿ ಬೆಳೆದುಬಂದದ್ದು ಬೇರೆ ಭಾಷೆಗಳ ಕೃತಿಗಳ ಕನ್ನಡಾನುವಾದದಿಂದಲೇ ಎಂಬ ಮಾತು ಸಾಹಿತ್ಯದ ಇತಿಹಾಸಜ್ಞರೆಲ್ಲರಿಗೂ ಗೊತ್ತಿರುವ ಸಂಗತಿ. ಈ ಮಾತನ್ನು ಚಿತ್ರಯುಕ್ತವಾಗಿ ವಿವರಿಸುತ್ತ ತ.ಸು. ಶಾಮರಾಯರು ಹೀಗೆ ಹೇಳುತ್ತಾರೆ: ''ಪರಭಾಷೆಯಿಂದ ನಮ್ಮ ಭಾಷೆಗೆ ತಂದುಕೊಳ್ಳುವಾಗ ಅಲ್ಲಿನ ಅತ್ಯುತ್ತಮವಾದುದನ್ನು ತಾನೇ ನಾವು ಆಯ್ದುಕೊಳ್ಳಬೇಕು? ಸಂಸ್ಕೃತ ನಾಟಕಕಾರರಲ್ಲಿ ಕಾಳಿದಾಸನು ಅಗ್ರಗಣ್ಯನಾದರೆ ಇಂಗ್ಲಿಷ್ ನಾಟಕಕಾರರಲ್ಲಿ ಷೇಕ್ಸ್‌ಪಿಯರನು ನಾಯಕಮಣಿಯೆಂದು ಜಗತ್ಪ್ರಸಿದ್ಧನಾಗಿದ್ದಾನೆ. ಈ ಇಬ್ಬರನ್ನೂ ಕನ್ನಡಕ್ಕೆ ತಂದುಕೊಳ್ಳುವ ಪ್ರಯತ್ನ ಏಕಕಾಲದಲ್ಲಿ ನಡೆಯಿತು. ಸಂಸ್ಕೃತ, ಇಂಗ್ಲಿಷಿನ ಹಾಗೆ, ನಮಗೆ ಪರಭಾಷೆ ಅಲ್ಲ. . .ಆದ್ದರಿಂದ ಕಾಳಿದಾಸನನ್ನು ಕನ್ನಡಕ್ಕೆ ತಂದುಕೊಳ್ಳುವುದು ನಮಗೆ ಅಷ್ಟೇನೂ ಕ್ಲೇಶಕರವಾಗುವುದಿಲ್ಲ. ಆದರೆ ಇದೇ ಧೈರ್ಯವನ್ನು ಷೇಕ್ಸ್‌ಪಿಯರ್ ವಿಚಾರದಲ್ಲಿ ನಾವು ವಹಿಸುವಂತೆ ಇಲ್ಲ. . .ಪರಕಾಯ ಪ್ರವೇಶ ಮಾಡಿದಂತೆ ಇಂಗ್ಲಿಷ್ ಕಾವ್ಯಗಳ ಅಂತರಂಗವನ್ನು ಗ್ರಹಿಸಿ, ಮೂಲದ ರಸನಿರೂಪಣೆ ಭಾಷಾಂತರದಲ್ಲಿ ಮೈದೋರುವಂತೆ ಮಾಡುವ ಕಾರ್ಯ ಥೇಮ್ಸ್‌ನದಿಯ ನೀರನ್ನು ಮೈಸೂರಿನ ಕುಕ್ಕನಹಳ್ಳಿ ಕೆರೆಗೆ ತರುವಷ್ಟೆ ಕಷ್ಟಕರವಾದುದು.''

ಈ ಕಷ್ಟಕರವಾದ ಸಮಸ್ಯೆ ಕೇವಲ ಇಂಗ್ಲಿಷ್ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರ ಮಾಡುವವರಿಗೆ ಮಾತ್ರ ಸೀಮಿತವಾದುದಲ್ಲ. ಒಂದು ಭಾಷೆಯ, ಅದರಲ್ಲೂ ಬೇರೆ ದೇಶಗಳ ನಾಗರಿಕತೆ-ಸಂಸ್ಕೃತಿಗಳ ನೆಲದಿಂದ ಹೊಮ್ಮಿದ ಭಾಷೆಯ, ವಿಶಿಷ್ಟ ರಸವು, ಲಯಗತಿ, ಅಭಿವ್ಯಕ್ತಿಯ ನವಿರನ್ನು ಇನ್ನೊಂದು ಭಾಷೆಗೆ ಭಾಷಾಂತರ ಮಾಡುವಾಗ ಈ ಕಷ್ಟವನ್ನು ಎಲ್ಲ ಭಾಷಾಂತರಕಾರರೂ ಎದುರಿಸ ಬೇಕಾಗುತ್ತದೆ. ಸುಪ್ರಸಿದ್ಧ ಕವಿ-ವಿಮರ್ಶಕ ಟಿ.ಎಸ್. ಎಲಿಯೆಟ್ ಇಟಲಿಯ ಮಹಾಕವಿ ದಾಂಟೆಯ ಶೈಲಿಯನ್ನು ಷೇಕ್ಸ್‌ಪಿಯರ್ ಉಪಯೋಗಿಸುವ ಭಾಷೆಯ ವಿಶಿಷ್ಟತೆಯೊಂದಿಗೆ ಹೋಲಿಸುತ್ತಾ, 'ದಾಂಟೆಯ ಕೃತಿಗಳನ್ನು ಇಂಗ್ಲಿಷ್‌ಗೆ ಭಾಷಾಂತರ ಮಾಡುವಾಗ ಉಂಟಾಗುವ ನಷ್ಟಕ್ಕಿಂತ ಷೇಕ್ಸ್‌ಪಿಯರ್‌ನನ್ನು ಇಟಾಲಿಯನ್‌ಗೆ ಅನುವಾದಿಸುವಾಗ ಹೆಚ್ಚು ನಷ್ಟವಾಗುತ್ತದೆ' ಎನ್ನುತ್ತಾನೆ. ಇದು ಷೇಕ್ಸ್‌ಪಿಯರ್‌ನನ್ನು ಕುರಿತ ಅತಿ ಪ್ರಶಂಸೆ, ದಾಂಟೆಯನ್ನು ಕುರಿತ ಟೀಕೆ, ಎಂದು ಯಾರೂ ಭಾವಿಸುವುದಿಲ್ಲ. ಏಕೆಂದರೆ ಎಲಿಯೆಟ್ ಮುಂದುವರಿಯುತ್ತಾ ಷೇಕ್ಸ್‌ಪಿಯರ್ ಬಳಸುವ ಪದ ಸಮುದಾಯದಲ್ಲಿ ಸಂಘಟಿತವಾಗುವ ಸ್ಪಷ್ಟ ಅರ್ಥಸೂಚನೆ, ಅಲೌಕಿಕ ಪರಿಣಾಮ ಇವನ್ನು ಬೇರೊಂದು ದೇಶದವನು ತನ್ನ ಭಾಷೆಯ ಮಾತುಗಳಲ್ಲಿ ಅಭಿವ್ಯಕ್ತಿಸುವುದಾದರೂ ಹೇಗೆ?' ಎಂದಿದ್ದಾನೆ. . . ಆಂಗ್ಲೋ ಸ್ಯಾಕ್ಸನ್ ಭಾಷೆಯಾದ ಇಂಗ್ಲಿಷ್‌ನಲ್ಲಿ ಬರೆದ ಷೇಕ್ಸ್‌ಪಿಯರ್‌ನ ಶೈಲಿ ಸುಲಭವಾಗಿ ಸ್ಪಷ್ಟವಾಗಿ

ಮಾತಿನ ಅರ್ಥವಂತಿಕೆಯನ್ನು ಬಿಟ್ಟುಕೊಡುವುದಿಲ್ಲ ಎಂದು ಅವನ ಅರ್ಥ. ಹೀಗೆ ಷೇಕ್ಸ್‌ಪಿಯರ್‌ನನ್ನು ಒಂದು ವೇಳೆ ಬೇರೊಂದು ಯೂರೋಪಿಯನ್ ಭಾಷೆಗೆ ಅನುವಾದ ಮಾಡಹೊರಟರೆ ಈ ಕ್ಲಿಷ್ಟ, ಸಂಕೀರ್ಣ ಸಮಸ್ಯೆಯನ್ನು ಎದುರಿಸಬೇಕಾಗಿರುವಾಗ, ಷೇಕ್ಸ್‌ಪಿಯರ್‌ನನ್ನು ಭಾರತೀಯ ಭಾಷೆಯೊಂದಕ್ಕೆ ತರ್ಜುಮೆ ಮಾಡುವ ಕೆಲಸವೇನು ಸುಲಭ ಸಾಧ್ಯವಲ್ಲ.

ಮಾಸ್ತಿಯವರು ಷೇಕ್ಸ್‌ಪಿಯರ್ ನಾಟಕಗಳನ್ನು ಕನ್ನಡಕ್ಕೆ ತರಲು ಮಾಡಿರುವ ಪ್ರಯತ್ನವನ್ನು ವಿವೇಚಿಸುವಾಗ ಈ ಮೇಲೆ ಹೇಳಿದ ಮಾತುಗಳನ್ನು ಮರೆಯಬಾರದು-ಈ ಸಮಸ್ಯೆಗಳನ್ನು ಮಾಸ್ತಿಯವರು ಅನುಲಕ್ಷಿಸಿದ್ದಾರೆಂಬುದನ್ನು ಅವರೇ ಹೀಗೆ ಹೇಳಿದ್ದಾರೆ, ತಮ್ಮ ಪೀಠಿಕೆಯಲ್ಲಿ: 'ನಾಮೂಲಂ ಲಿಖ್ಯತೇ ಕಿಂಚಿತ್ ನಾನಪೇಕ್ಷಿತಮುಚ್ಯತೇ' ಎಂದು ಮಲ್ಲಿನಾಥ ವ್ಯಾಖ್ಯಾನಕ್ಕೆ ಹಾಕಿದ ಸೂತ್ರ ಭಾಷಾಂತರಗಳಿಗೂ ಇನ್ನೂ ಚೆನ್ನಾಗಿ ಅನ್ವಯಿಸುತ್ತದೆ. ಇಂಗ್ಲಿಷ್‌ನಂಥ ದೂರದ ಭಾಷೆಯೊಂದರಿಂದ ಒಂದು ಉದ್ಗ್ರಂಥವನ್ನು ತಂದುಕೊಳ್ಳುವಲ್ಲಿ ಈ ಸೂತ್ರವನ್ನು ಪಾಲಿಸುವುದು ಅತ್ಯಂತ ಕಷ್ಟಸಾಧ್ಯ. ಕಷ್ಟಸಾಧ್ಯವಾದ ಈ ಗುರಿಯನ್ನು ಸಾಧಿಸುವುದರಲ್ಲಿ ಹಲವು ವೇಳೆ ಅರ್ಥಕ್ಕಿಂತ ಮುಖ್ಯವಾಗಿ ಭಾವವನ್ನು, ಕೆಲವು ವೇಳೆ ಭಾವಕ್ಕಿಂತ ಮುಖ್ಯವಾಗಿ ಮನೋಧರ್ಮವನ್ನು, ಪ್ರತಿ ಮಾಡುವುದು ಕರ್ತವ್ಯವಾಗುತ್ತದೆ' (ಹ್ಯಾಂಲೆಟ್ ಕನ್ನಡಾನುವಾದದ 'ಅರಿಕೆ')

ಸ್ವತಂತ್ರವಾದ ಹಲವಾರು ಅನನ್ಯ ಕೃತಿಗಳನ್ನು ಕನ್ನಡಕ್ಕೆ ಕೊಟ್ಟು ಅನಾದೃಶವಾದ ಕೀರ್ತಿಗೆ ಭಾಜನರಾಗಿರುವ ಮಾಸ್ತಿಯವರು ಷೇಕ್ಸ್‌ಪಿಯರ್ ಭಾಷಾಂತರದಂಥ ಅತ್ಯಂತ ಕಷ್ಟಕರವಾದ ಕೆಲಸಕ್ಕೆ ಏಕೆ ಕೈ ಹಾಕಿದರೆನ್ನುವ ಪ್ರಶ್ನೆ ಅವರನ್ನು ಪ್ರಚೋದಿಸಿದ ಪ್ರೇರಣೆ, ಅವರು ಎತ್ತಿಕೊಂಡ ಸವಾಲು ಇವು ಅವರಲ್ಲಿ ಅಂತರ್ಗತವಾಗಿರುವ ಸಾಹಿತ್ಯ ಪ್ರೇಮ, ಸಮನ್ವಯ ಮನೋಧರ್ಮ, ದೇಶಭಾಷೆಗಳ ಎಲ್ಲೆ ಕಟ್ಟನ್ನು ಮೀರಿ ನಿಲ್ಲಬಲ್ಲ ಅವರ ನಿಸ್ಸಂಕೋಚ ಪ್ರಕೃತಿ, ಸಹೃದಯತೆ ಇವುಗಳನ್ನು ಕುರಿತ ಮಾತೇ ಆಗಿದೆ. ಈ ಭಾಷಂತರಗಳ ಉದ್ದೇಶವನ್ನು ವಿವರಿಸುತ್ತಾ ಅವರು 'ಈ ಮಹಾಕವಿಯ ನಿರ್ಮಾಣಶಕ್ತಿ ಎಂಥದೆಂದು ಸ್ವಲ್ಪವಾದರೂ ತಿಳಿಯಬೇಕೆಂದು ಅವನ ಕೃತಿ ಬೇರೆ ಬೇರೆ ತೆರನವು ನಾಲ್ಕಾದರೂ ನೋಡ ದೊರೆಯಬೇಕು ಎಂಬ ಭಾವನೆಯಿಂದ ಈ ಭಾಷಾಂತರಕ್ಕೆ ಎರಡು ದುಃಖಾಂತ, ಎರಡು ಹರ್ಷಾಂತ, ನಾಟಕಗಳನ್ನು ಆರಿಸಿಕೊಂಡೆನು. . .ನಮ್ಮ ಆಂಗ್ಲ ವಿದ್ಯಾಪ್ರವೀಣರು ಈ ಮುನ್ನ ಇಂಥ ಭಾಷಾಂತರ ಇಪ್ಪತ್ತು ಮಾಡಬೇಕಾಗಿತ್ತು. ಮಾಡದೆ ಅವರು ಜೀವನದ ಬಹು ಒಳ್ಳೆಯ ಅವಕಾಶವೊಂದನ್ನು ಕಳೆದುಕೊಂಡರೆಂದು ನನಗೆ ತೋರುತ್ತದೆ. ಇದುವರೆಗಿನ ತಲೆಮಾರುಗಳು ಕಲಿತಷ್ಟು ಸಂಖ್ಯೆಯಲ್ಲಿ, ಕಲಿತಷ್ಟು ನಿಷ್ಠೆಯಿಂದ, ಮುಂದೆ ನಮ್ಮ ಜನ ಇಂಗ್ಲಿಷನ್ನು ಕಲಿತಾರು ಎಂದು ನಾವು ನಿರೀಕ್ಷಿಸುವಂತಿಲ್ಲ. ಇಂಗ್ಲಿಷನಲ್ಲಿ ಪ್ರೌಢದ ವಿದ್ಯೆ ಪಡೆದು ಈಗ ಪ್ರಾಯದಲ್ಲಿರುವ ನಮ್ಮ ಸೋದರರು ಇನ್ನು ಹತ್ತು ವರ್ಷದೊಳಗಾಗಿ ಷೇಕ್ಸ್‌ಪಿಯರ್‌ನ ಇನ್ನಿಪ್ಪತ್ತು ನಾಟಕಗಳನ್ನು ಕನ್ನಡಕ್ಕೆ ತರಬೇಕು. ಅದರಿಂದ ಅವರ ವಿದ್ಯಾರ್ಜನೆ ಸಾರ್ಥಕ ಆಗುತ್ತದೆ, ಕನ್ನಡಕ್ಕೆ ಸೇವೆ ಸಲ್ಲುತ್ತದೆ, ನಮ್ಮ ಜನರಿಗೆ ಉಪಕಾರ ಆಗುತ್ತದೆ.' ಎಂದಿರುವುದು ಗಮನಾರ್ಹವಾಗಿದೆ.

ಈಗ ಪ್ರಕಟವಾಗಿರುವ ಮಾಸ್ತಿಯವರ ಐದು ಭಾಷಾಂತರ ಕೃತಿಗಳಲ್ಲಿ ಅವರು ಅನುಸರಿಸಿರುವ ಮಾರ್ಗ, ಗಮನಿಸಿರುವ ಅಂಶ - ಇವು ಒಂದೇ 'ಪ್ಯಾಟರ್ನ್'ಗೆ ಒಳಪಡುವುದರಿಂದ, ಅವನ್ನು ಹೀಗೆ ಗ್ರಹಿಸಬಹುದು:

1 ಮೂಲ ನಾಟಕದ ಸಮಗ್ರ ಕಲ್ಪನೆಯನ್ನು ಗ್ರಹಿಸುವುದರ ಜತೆಗೆ, ಮಾತುಗಳನ್ನು ಪದಕ್ಕೆ ಪದವಿಟ್ಟಂತೆ ಭಾಷಾಂತರ ಮಾಡಿದ್ದಾರೆ - ಹೆಚ್ಚು ಕಡಿಮೆ, ಭಾಷಾಂತರ ಲೆಕ್ಕಾಚಾರಕ್ಕೆ ಹೊಂದಿಕೊಂಡಂತಿದೆ.

2 ಮೂಲ ನಾಟಕದ 'ಬ್ಲಾಂಕ್‌ವರ್ಸ್‌'ಗೆ ಹತ್ತಿರವಾದ ಸರಳರಗಳೆಯನ್ನೇ ಬಳಸಿ ಮಾತಿನ ನಡೆಗೆಯಲ್ಲಿ ಗತಿಯ ವೈವಿಧ್ಯ ಹಾಗೂ ಲಾಲಿತ್ಯಗಳನ್ನು ಹೊಂದಿಸಲು ಕಷ್ಟ ವಹಿಸಿ ಪ್ರಯತ್ನಿಸಿದ್ದಾರೆ - ಅಲ್ಲಲ್ಲಿ ಯಶಸ್ಸುಗಳಿಸಿದ್ದಾರೆ.

3 ಮಾಸ್ತಿಯವರ ಸ್ವತಂತ್ರ ಕೃತಿಗಳಲ್ಲಿನ ಶೈಲಿಯ ಬಂಧುರತೆ, ಸಲಿಲತೆ ಇಲ್ಲಿನ ವಾತಾವರಣಕ್ಕೆ ಸಂಪೂರ್ಣವಾಗಿ ಒಗ್ಗದೆ, ಒಂದು ವಿಚಿತ್ರ, ವಿಲಕ್ಷಣ ಶೈಲಿ ಸೃಷ್ಟಿಯಾಗಿದೆ - 'ಭಾವಕ್ಕಿಂತ ಮುಖ್ಯವಾಗಿ ಮನೋಧರ್ಮವನ್ನು ಪ್ರತಿಮಾಡುವ' ಮಾಸ್ತಿಯವರ ಪ್ರಯತ್ನ ಪರಿಣಾಮ ಸಾಧಿಸಿಲ್ಲ.

ಈ ಮಾತುಗಳಿಗೆ ಮಾಸ್ತಿಯವರ ಭಾಷಾಂತರಗಳಿಂದ ಕೆಲವು ಉದಾಹರಣೆಗಳನ್ನು ಕೊಡಬಹುದು. 'ಕಿಂಗ್ ಲಿಯರ್' ನಾಟಕದ ಪ್ರಥಮಾಂಕದಲ್ಲಿ (ದೊರೆ ತನ್ನ ಮಕ್ಕಳಿಗೆ ರಾಜ್ಯ ಹಂಚಿಕೊಡುವಾಗ ನಡೆಸುವ ''ಪ್ರೀತಿಯ ಪರೀಕ್ಷೆಯ'' ಸಂದರ್ಭದಲ್ಲಿ) ಗಾನೆರಿಲ್ ಆಡುವ ಮೂಲದ ಮಾತು ಹೀಗಿದೆ:

> Sir, I love you more than word can wield the matter;
>
> Dearer than eye-sight, space and liberty;

ಇದನ್ನು ಮಾಸ್ತಿಯವರ ಭಾಷಾಂತರದಲ್ಲಿ -

> ಪ್ರಭು, ನಿಮ್ಮ ನಾನಿನಿತು ಪ್ರೀತಿಪಳು, ಆ ಪರಿ
> ಶಬ್ದಗಳ ವಹನ ಶಕ್ತಿಯ ಮೀರಿಹುದು; ಕಣ್ಣು,
> ಈ ಲೋಕ, ಸ್ವಾತಂತ್ರ್ಯ, ಇವುಗಳಿಗೂ ಮಿಗಿಲಾಗಿ;

ಎಂದಾಗಿದೆ. ಮೂಲದ ಮೊದಲ ವಾಕ್ಯಕ್ಕೆ ಸ್ಪಷ್ಟವಾದ, ಸರಿಯಾದ ಅರ್ಥ ತುಂಬಿ ಬಂದಿದ್ದರೂ, ಎರಡನೆ ವಾಕ್ಯದಲ್ಲಿ ಬರುವ space and liberty ಅನ್ನುವ ಮಾತು ಅನುವಾದದಲ್ಲಿ ಸ್ಪಷ್ಟವಾಗುವುದಿಲ್ಲ-ಮೂಲದ ಆ ಎರಡು ಮಾತುಗಳಿಗೆ ''ಒಬ್ಬ ವ್ಯಕ್ತಿ ನಿಸ್ಸಂಕೋಚವಾಗಿ, ಅನಿರ್ಬಂದಿತವಾಗಿ ನಡೆಯಲು ಇರುವ ಅವನ ವ್ಯಾಪಕ ವೈಯಕ್ತಿಕ ಸ್ವಾತಂತ್ರ್ಯ''ವೆಂಬ ಅರ್ಥವಿದೆ. ಅದೇ ದೃಶ್ಯದಲ್ಲಿ ರೀಗನ್ (ತನ್ನ ಅಕ್ಕನ ಕುಟಿಲ ನೀತಿಯನ್ನೇ ಇನ್ನಷ್ಟು ಜಾಣತನದಿಂದ ಅನುಸರಿಸುವ ಸಂದರ್ಭದಲ್ಲಿ) ತಂದೆಯನ್ನು ಮುಖಸ್ತುತಿ ಮಾಡುತ್ತಾ ಹೀಗನ್ನುತ್ತಾಳೆ;

> I am made of that self metal as my sister,
> And prize me at her worth. In my true heart
> I find she names my very deeds of love;
> Only she comes too short; that I profess
> Myself an enemy to all other joys
> Which the most precious square of sense possesses,
> And I find I am alone felicitate
> In your dear highness' love

- ಈ ಮಾತುಗಳು

ಭಾಷಾಂತರದಲ್ಲಿ:

> ''ಅಪ್ಪಾಜಿ,

ನನ್ನ ಸೋದರಿಯ ಅದೆ ಲೋಹದ್ದಲಿ ಆಗಿಹೆನು
ನಾನು ನನ್ನನು ಅವಳ ಬೆಲೆಯನಿತೆ ಗಣಿಸುವೆನು,
ನನ್ನ ನಿಜದಾಂತರ್ಯದಲಿ ನನಗೆ ಕಾಣುತಿದೆ,
ನನ್ನೊಲವ ಕ್ರಿಯೆಯನೇ ಆಕೆ ಹೆಸರಿಸುತಿಹಳು.
ಇಷ್ಟೆ, ಅವಳೆನ್ನಡೆಯ ಮುಟ್ಟಿಲ್ಲ. ಕಾರಣ:
ಬುದ್ಧಿ ಯತ್ಯಂತ ಮೌಲ್ಯದ ವ್ಯಾಪ್ತಿ ಚೆನ್ನೆಂಬ
ಉಳಿದೆಲ್ಲ ಸುಖಕೆ ಹಗೆ ನುಡಿದು, ನಾ, ಪ್ರಿಯ ಪ್ರಭು,
ನಿಮ್ಮ ಪ್ರೀತಿಯೊಂದರಲೆ ಸುಖೀಭವಿಸುವೆನು

ಮೂಲದ ಮಾತುಗಳಲ್ಲಿ ಸ್ಪಂದಿತವಾಗುವ ಅರ್ಥದ ಸಮೃದ್ಧಿ, ವ್ಯಾಪಕವಾದ ವ್ಯಂಜ ಕತೆ ಇಲ್ಲಿ ನಷ್ಟವಾಗಿದೆ. ಹಾಗೆಯೇ ಮುಂದೆ ಲಿಯರ್ ಸೇವಕ ಕೆಂಟ್‌ನ ಮೇಲೆ ಕ್ರೋಧಗೊಂಡಾಗ-

Peace, Kent!
Come not between the Dragon and his wrath

ಎನ್ನುವ ಮಾತು-

''ಬಾಯ್ತೆರೆಯ ಬೇಡ, ಕೆಂಟ್,
ಭೂತನಿಗೆ ಅದರ ಕೋಪಕೆ ನಡುವೆ ಹಾಯದಿರು''-

ಎಂದಾಗ ಲಿಯರ್ ಪ್ರಭುವಿನ ಮಾತಿನಲ್ಲಿ ಬ್ರಿಟನ್ ದೇಶದ ಲಾಂಛನವಾದ ಡ್ರೇಗನ್ (ಮೊಸಳೆ ಅಥವಾ ಸರ್ಪಾಕಾರದ ರೆಕ್ಕೆ ಉಗುರು ಹೊಂದಿ ಬೆಂಕಿ ಉಗುಳುವ ಪುರಾಣ ಪ್ರಸಿದ್ಧ ಪ್ರಾಣಿ) ಭೂತದ ಕಲ್ಪನೆಯಾಗಲಿ, wrath ಎಂಬ ಪದಕ್ಕೆ, ''ಕೋಪಕ್ಕೆ ಪಾತ್ರನಾದ ವ್ಯಕ್ತಿ'' ಎಂಬ ಅರ್ಥವಾಗಲೀ ಸ್ಪಷ್ಟವಾಗುವುದಿಲ್ಲ. ನಾಟಕದ ನಾಲ್ಕನೆಯ ಅಂಕದಲ್ಲಿ ಲಿಯರ್ ಪ್ರಭು ಹುಚ್ಚು ತಿಳಿದೆದ್ದಾಗ, ಅಗಲಿದ್ದ ತನ್ನ ಪ್ರೀತಿಯ ಮಗಳು ಕಾರ್ಡಿಲಿಯಳನ್ನು ಗುರುತಿಸುವಾಗ ಹೀಗೆನ್ನುವನು. ಅವನು,

You do me wrong to take me out O th' grave;
Thou art a soul in bliss; but I am bound
Upon a wheel of fire, that my own tears
Do scald like molten lead

ಎನ್ನುವ ಮಾತಿಗೆ, ಪಡಿ ನುಡಿಯಾಗಿ ಅನುವಾದದಲ್ಲಿ,

''ತನ್ನ ಕುಣಿಯಿಂದ ಹೊರತಂದು ನನಗಪಕಾರ
ಮಾಡಿದಿರಿ. ನೀನು ಆನಂದದೊಳಗಿಹ ಒಂದು
ಆತ್ಮ. ನಾನೋ ಕಿಚ್ಚ ಚಕ್ರವೊಂದಕೆ ಕಟ್ಟು
ಬಿದ್ದಿಹೆನು; ನನ್ನ ಕಣ್ಣೀರು ಅದ ಕರಗಿರುವ
ಸೀಸವೆನೆ ಸುಡುತಿಹವು''

ಎಂದು ಹೊರಳಿದಾಗ ಮೂಲದ grave ಪದಕ್ಕಿರುವ ಸಾವು ಎನ್ನುವ ಅರ್ಥ 'ಕುಣಿ'ಯಲ್ಲಿ ತುಂಬಿ ಬರುವುದಿಲ್ಲ. wheel of fire ಎಂಬ ಅನನ್ಯವಾದ ಮಾತು ಭಾಷಾಂತರಕ್ಕೆ ಒಗ್ಗಿಲ್ಲ. ಗ್ರೀಕ್ ಪುರಾಣ, ಬೈಬಲ್ ಹಾಗೂ ಮಧ್ಯಯುಗದ ಪುರಾಣ ಕಟ್ಟು ಕಥೆಗಳಲ್ಲಿ ಬರುವ ನರಕದ ಕಲ್ಪನೆಗೆ ಸಂಭವಿಸಿದ ಮಾತು ಅದು - ಪಾಪಿಯಾದವನನ್ನು ಅಧೋಲೋಕದಲ್ಲಿ ಉರಿಯುವ ಚಕ್ರಕ್ಕೆ ಕಟ್ಟಿ ತಿರುಗಿಸುತಿದ್ದ, ಉತ್ಕಟ ವೇದನೆಯ ಚಿತ್ರ

ಅದು - 'ಕಿಚ್ಚು ಚಕ್ರ'ವೆನ್ನುವಾಗ ಮೂಲದ ಅರ್ಥ ವ್ಯಾಪಕತೆಯನ್ನು ಅದು ಪಡಿ ಮೂಡಿಸೀತೇ?

ಈ ದೊಷಗಳನ್ನು ಕೊರತೆಯನ್ನು ತೊರಿಸಿದ ಮಾತ್ರಕ್ಕೆ, ಮಾಸ್ತಿಯವರ ಭಾಷಾಂತರದಲ್ಲಿ, ಅಪೂರ್ವ ಒಳ್ಳೆಯ ಯಶಸ್ಸು ಸಾಧಿಸಿರುವ ಭಾಗಗಳನ್ನು ಕಡೆಗಾಣಿಸಿ ಬೀಸು ಮಾತನಾಡುವ ಪ್ರಯತ್ನವಲ್ಲ ನನ್ನದು. ಅದೇ ನಾಟಕದಲ್ಲಿ ಬರುವ ಗದ್ಯಭಾಗಗಳು ಬಹುಮಟ್ಟಿಗೆ ಮೂಲದ ಅರ್ಥವಂತಿಕೆಯನ್ನು ಅಚ್ಚುಕಟ್ಟಾಗಿ ಸಂಕೇತಿಸುವಂತಿವೆ. ಮೂಢನಾದ ತಂದೆಯ-ಕುರುಡು ನಂಬಿಕೆಯನ್ನು ಅಲ್ಲಗಳೆಯುವ ಅವನ ಅನೌರಸ ಪುತ್ರ (ದುಷ್ಟ) ಎಡ್ಮಂಡ್‌ನ ಮಾತುಗಳು ಹೀಗಿವೆ:

This is the excellent foppery of the world, that when we are sick in fortune, often the subject of our own behaviour, we make guilty of our disasters the sun, the moon, and stars. . .My father compounded with my mother under the dragon's tail, and my nativity was under Ursa major; so that it follows I am rough and behaviours. . .

ಇದನ್ನು ಮಾಸ್ತಿಯವರು ತುಂಬಾ ನವಿರಾಗಿ ಅರ್ಥಕ್ಕೆ ಸಂಗತವಾಗುವಂಥ ಸಂವಾದಿಯಾಗುವಂಥಾ ಪದೌಚಿತ್ಯಕ್ಕೆ ಬಗ್ಗಿಸಿ 'ಇದು ಲೋಕದ ಕಲೆ ಮಟ್ಟದ ಪೊಳ್ಳು ಬುದ್ಧಿ, ನಮ್ಮ ಸ್ಥಿತಿ ಕೆಟ್ಟಾಗ-ಬಹು ವೇಳೆ ಇದು ನಮ್ಮ ತಪ್ಪು ನಡೆದು ಪರಿಣಾಮ-ನಾವು ನಮ್ಮ ಹಾನಿಗೆ ಸೂರ್ಯ ಚಂದ್ರ ನಕ್ಷತ್ರಗಳನ್ನು ಹೊಣೆ ಮಾಡುವುದು-ನಮ್ಮಪ್ಪ ನಮ್ಮಮ್ಮನನ್ನು ಕೂಡಿದ ಲಗ್ನ ಕೇತು; ನಾನು ಹುಟ್ಟಿದ ಲಗ್ನ ಸಪ್ತರ್ಷಿಗಳದು; ಈ ಕಾರಣದಿಂದ ಸಿದ್ಧಿಸುವ ಫಲ ನಾನು ವರಟ ಕಾಯಕ ಆಗಿರುವುದು'' 'ಲಗ್ನ ಕೇತು' 'ಸಪ್ತರ್ಷಿ' ಇವು ಬೇರೊಂದು ಭಾಷೆಯ ಸಂಸ್ಕೃತಿಯ ಜಾಯಮಾನಕ್ಕೆ ಸೇರಿದ ಮಾತುಗಳೇ ಆದರೂ ಸಮಗ್ರ ಸನ್ನಿವೇಶದ ಕಲ್ಪನೆಯ ದೃಷ್ಟಿಯಿಂದ ಇಲ್ಲಿ ಅವು ಅಸಂಗತವೆನಿಸುವುದಿಲ್ಲ. ಹಾಗೆಯೇ ಹುಚ್ಚನಂತೆ ನಟಿಸುವ ಎಡ್ಗಾರ್ (ಲಿಯರ್ ತಪ್ಪಾಗಿ ಭಾವಿಸಿ, ನಿಷ್ಕರುಣೆಯಿಂದ ಮನೆಬಿಟ್ಟು ಓಡಿಸುವ ಅವನ ಸತ್ಪುತ್ರ)ನ ಅಸಂಗತ ಮಾತುಗಳು ಮೂಲದ ಅರ್ಥವಂತಿಕೆಯನ್ನು ಸ್ವಲ್ಪವೂ ಕುಗ್ಗಿಸುವುದಿಲ್ಲ.

''ಒಬ್ಬ ಆಳುಮಗನಾಗಿದ್ದೆ, ಕೊಬ್ಬಿದ ಮನಸು, ಕೊಬ್ಬಿದ ಬುದ್ಧಿ, ಬಾಚಿದ ಕುರುಳು; ಪಾಗಿನಲ್ಲಿ ಕುಚ್ಚು, ಒಡತೀ ಮನಸಿನದು ತಿನಸು ತೀರಿಸಿದೆ; ಅವಳೊಡನೆ ಕತ್ತಲ ಕೆಲಸ ನಡೆಸಿದೆ, ಎಷ್ಟು ಮಾತು ಆಡಿದೆ ಅಷ್ಟು ಆಣೆ ಮಾಡಿದೆ; ಮಾಡಿದ ಆಣೇನೆಲ್ಲ ಮುನ್ನನ ಸಾಕ್ಷಿ ಮುಂದೆ. . .ಗುಡಿಶಟ್ಟಿ ಗುಡಲಲ್ಲಿ ಹೆಜ್ಜೆ; ಸೇಲೇ ಮಡಿಕೇಲಿ ಕೈ, ಚುಂಗಡಿಯವನ ಕಡತದಲ್ಲಿ ಲೆಕ್ಕಣಿ, ಇಕ್ಕುವುದ ಬಿಟ್ಟು, ಹೊಲೆದೆವ್ವನ್ನ ಧಿಕ್ ಅನ್ನು. . .''

ಎಂದು ಮುಂತಾಗಿ ಮಾಸ್ತಿ ಭಾಷಾಂತರಿಸಿದಾಗ ಅವರು ನಾಟಕದ ಸನ್ನಿವೇಶದ ತಿರುಳನ್ನು, ರಸಘಟ್ಟಿಯನ್ನು ಎಷ್ಟೊಂದು ಸೂಕ್ಷ್ಮವಾಗಿ ಗ್ರಹಿಸಿದ್ದಾರೆಂಬುದು ಸ್ಪಷ್ಟವಾಗಿ ತೋರುತ್ತದೆ. ಇಂಥ ಔಚಿತ್ಯ ಪ್ರಜ್ಞೆಗೆ ಸಾಕ್ಷಿಯಾಗಿ 'ಹ್ಯಾಂಲೆಟ್' (ಅನುವಾದದಲ್ಲಿ) ನಾಟಕದಲ್ಲಿ ಹ್ಯಾಂಲೆಟ್ ಆಟಗಾರರನ್ನು (ಆಟಗಾರ ಇಂಗ್ಲಿಷಿನ 'ಪ್ಲೇಯರ್' ಮಾತಿಗೆ ಸಂವಾದಿಯಾಗಿದ್ದರೂ; ಕನ್ನಡದಲ್ಲಿ 'ನಟರು' ಅಂದಿದ್ದರೆ ಹೆಚ್ಚು ಅರ್ಥವತ್ತಾಗುತ್ತಿತ್ತೇನೊ) ಸ್ವಾಗತಿಸುವ, ಅವರಿಗೆ ನಾಟಕ ಪ್ರದರ್ಶನದ ಬಗ್ಗೆ ತಿಳಿಯ

ಹೇಳುವ ದೃಶ್ಯದ ಹಲವು ಭಾಗಗಳು ತುಂಬಾ ಯಶಸ್ವಿಯಾಗಿ ಮೂಡಿ ಬಂದಿವೆ. 'ಟ್ವೆಲ್ತ್ ನೈಟ್' (ದ್ವಾದಶ ರಾತ್ರಿ) ಫಾಲ್‌ಸ್ಟಫ್ ದೃಶ್ಯಗಳ ಕೆಲವು ಭಾಗಗಳಲ್ಲೂ ಈ ಔಚಿತ್ಯ ದೃಷ್ಟಿಯನ್ನು ನಾವು ಕಾಣಬಹುದು. ಆದರೆ "Learned the ban' ಕಂಚಿಯ ಪಂಡಿತನಾದಾಗ "Julius Caesar' ಗಜಪತಿಯಾದಾಗ, Brutus ಮೃಗರಾಜನಾದಾಗ - ಮೂಲವನ್ನು ಬಲ್ಲವರಿಗೆ ಕಸಿವಿಸಿಯಾದರೆ ಆಶ್ಚರ್ಯವೇನಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ ಮಾಸ್ತಿಯವರಲ್ಲಿ ಉತ್ತಮ ಭಾಷಾಂತರಕಾರನಿಗೆ ಬೇಕಾದ ಸ್ವಭಾವಾತ್ಮಕವಾದ ದೃಷ್ಟಿಯ ಚೇತನ ವಿಪುಲವಾಗಿದೆ. ಆದರೆ ಕಾಲಾತೀತವಾದ ಭೂತಕಾಲದ ಕಲ್ಪನೆಯೊಂದನ್ನು ಅದರ ಸ್ಥಾನದಲ್ಲಿರಿಸಿ ವೀಕ್ಷಿಸಲು ಸಾಧ್ಯವಾಗುವಂಥ ದೃಷ್ಟಿ, ಭೂತಕಾಲ ವರ್ತಮಾನ ಕಾಲಗಳ ನಡುವಣ ಭಿನ್ನತೆ, ಅನನ್ಯತೆಗಳನ್ನು ಗುರುತಿಸುವಂಥ ದೃಷ್ಟಿ ಕಣ್ಣೆಲೆ ಷೇಕ್ಸ್‌ಪಿಯರ್ ಭಾಷಾಂತರ ಕಾರ್ಯದಲ್ಲಿ ಸಂಪೂರ್ಣವಾಗಿ ಅವರ ನೆರವಿಗೆ ಸಿಕ್ಕಿದೆಯೆಂದು ಹೇಳುವುದು ಕಷ್ಟ. ಬಹು ಕಷ್ಟತರವಾದ ಕೆಲವು ಮೂಲ ಕೃತಿಗಳನ್ನು ಅವರು ಶ್ರಮ, ಶ್ರದ್ಧೆಗಳಿಂದ ಕನ್ನಡಕ್ಕೆ ತಂದುಕೊಟ್ಟಿದ್ದಾರೆ. ಇನ್ನೊಮ್ಮೆ ಷೇಕ್ಸ್‌ಪಿಯರ್‌ನನ್ನು ಅನುವಾದಿಸಬೇಕೆಂಬ ಆಸೆಯುಳ್ಳ ಪ್ರತಿಭಾವಂತರಿಗೆ ಅವರು ಗಳಿಸಿಟ್ಟಿರುವ ಮಹತ್ಕಾರ್ಯ ದಾರಿದೀಪವಾಗುತ್ತದೆ. ಅವರ ಭಾಷಾಂತರಗಳು, ಅನುವಾದದ ಗೌರಿಶಂಕರವನ್ನೇರಲು ಹೊರಟ ಸಾಹಸಿಗಳ ತಂಡಕ್ಕೆ, ಅಗ್ರಗಾಮಿಗಳ ತಂಡವೇರ್ಪಡಿಸಿಕೊಟ್ಟಿರುವ ಮುಂಚೂಣಿಯ ನೆಲೆಗಳಂತಿವೆ. ಇದು ಕೃತಜ್ಞತೆಯ ಮಾತು ಎಂದು ನನ್ನ ನಂಬಿಕೆ.

ಕೆಲವು ನಾಟಕಗಳು, ಕೆಲವು ಟಿಪ್ಪಣಿಗಳು

ಟಿ. ಶ್ರೀನಿವಾಸರಾಜು

'ಶ್ರೀನಿವಾಸ'ರ ಕೆಲವು ನಾಟಕಗಳನ್ನು ಕುರಿತ ಈ ಟಿಪ್ಪಣಿಗಳಲ್ಲಿ ರಂಗಸಾಧ್ಯತೆಗಳನ್ನು ಗಮನದಲ್ಲಿರಿಸಿಕೊಂಡಿದ್ದೇನೆ. ಮಾಸ್ತಿಯವರ ಮನೋಧರ್ಮ ಹೇಗೆ ನಾಟಕಗಳನ್ನು ನಿಯಂತ್ರಿಸಿದೆ ಎಂದು ಗುರುತಿಸುವ ಪ್ರಯತ್ನವೂ ಇದೆ. ಆದ್ದರಿಂದ ಪ್ರತಿಯೊಂದು ನಾಟಕದ ವಿವರವಾದ ಅಧ್ಯಯನಕ್ಕೆ ಹೋಗಿಲ್ಲ. ಕೆಲವು ಸಂದರ್ಭಗಳಲ್ಲಿ ವಿವರವಾದ ವಿಶ್ಲೇಷಣೆಯ ಕೊರತೆಯಿಂದ ಕೆಲವು ಮಾತುಗಳು ಹೇಳಿಕೆಗಳಾಗಿಯೂ ಕಂಡು ಬರಬಹುದು.

ಮಾಸ್ತಿಯವರು ಮುಖ್ಯವಾಗಿ ಉತ್ತಮ ಕಥಾಸಾಹಿತ್ಯವನ್ನು ಸೃಷ್ಟಿಸಿ, ನಮ್ಮ ಮನಸ್ಸು ಮತ್ತು ಬುದ್ಧಿಯನ್ನು ಭಾಷೆಯ ಶುಚಿತ್ವದಿಂದ ಮಾಗಿಸುವ ಕಲೆಗಾರರು. ಶಿಕ್ಷಕ ಮನೋಧರ್ಮ ಅವರ ಕೃತಿಗಳಲ್ಲಿ ಕಂಡುಬರುತ್ತದೆ.

ನವೋದಯ ಸಂದರ್ಭದ ಅನೇಕ ಬರಹಗಾರರಂತೆ ಮಾಸ್ತಿಯವರೂ ಹಲವಾರು ನಾಟಕಗಳನ್ನು ರಚಿಸಿದರು. ಅವರು ಇತ್ತೀಚೆಗೆ ಪ್ರಕಟಿಸಿದ ಕೆಲವು ನಾಟಕಗಳನ್ನು ಗಮನಿಸಿದರೆ ಅವುಗಳ ಸೀಮಿತ ಉದ್ದೇಶ ಸ್ಪಷ್ಟವಾಗುತ್ತದೆ.

ನಾಟಕ ನಾಟಕೀಯತೆಯನ್ನು ಒಳಗೊಂಡ ಭಾಷಕ ರಚನೆ, ನಾಟಕ ಕೃತಿಯನ್ನು ಸಾಹಿತ್ಯಕೃತಿಯೆಂದು ಪರಿಶೀಲಿಸುವಾಗಲೂ ಅದರ ರಂಗಸಾಧ್ಯತೆಗಳನ್ನು ಗಮನದಲ್ಲಿರಿಸಿಕೊಳ್ಳುವುದು ಅನಿವಾರ್ಯ. ಮಾಸ್ತಿಯವರು ತಮ್ಮ ಹಿಂದಿನ ನಾಟಕಗಳಂತೆ ಇಲ್ಲಿಯೂ ಕಥಾವಸ್ತುವನ್ನು ಪುರಾಣ, ಇತಿಹಾಸ ಮತ್ತು ಸಾಮಾಜಿಕ ಬದುಕಿನ ಸಂಗತಿಗಳಿಂದ ಆಯ್ಕೆ ಮಾಡಿಕೊಂಡಿದ್ದಾರೆ. ಆದರೆ ಕಂಪನಿ ರಂಗಭೂಮಿಯ ನಾಟಕ ರಚನೆಯ ಛಾಯೆಯಿಂದ ಮುಕ್ತರಾಗಲಿಲ್ಲ. ಆದ್ದರಿಂದ ರಂಗಭೂಮಿಯ ಹೊಸತನ ಈ ನಾಟಕಗಳಲ್ಲಿ ಕಂಡು ಬರುವುದಿಲ್ಲ. ಅವರು ಬದುಕಿನ ಶೋಧನೆಗಾಗಲಿ, ಅನ್ವೇಷಣೆಗಾಗಲಿ ಪ್ರಯತ್ನಿಸುವುದಿಲ್ಲ; ಅದಕ್ಕೆ ಬದಲಾಗಿ ದೈವ ಶ್ರದ್ಧೆಯಿಂದ ಕಥಾವಸ್ತುವಿನ ಮೂಲನಿಷ್ಠೆಗೆ ಬದ್ಧರಾಗುವ ಶುದ್ಧ ಅಭಿರುಚಿ ಕಂಡುಬರುತ್ತದೆ. ಅವರ ಈ ನಾಟಕಗಳು ಮುಖವಾಡ ಹಾಕಿಕೊಂಡ ಕಥಾಸಾಹಿತ್ಯವೇ ಆಗಿದೆ. ಅವರ ಕಥಾಸಾಹಿತ್ಯದಲ್ಲಿ ಕಂಡುಬರುವಂತೆ ಇಲ್ಲೂ ಮಾನವೀಯ ಅಂತಃಕರಣದ ಸ್ಪಂದನವನ್ನು ಕಾಣಬಹುದು. ಮಾಸ್ತಿಯವರ ನಾಟಕಗಳಲ್ಲಿ

---

1. ಬಾನುಲಿ ದೃಶ್ಯಗಳು (1974)
2. ಕಾಳಿದಾಸ (1982) ಮತ್ತು ಕನಕಣ್ಣ (1965)
3. ಅಜ್ಜನದಾರಿ (1982) ಭಟ್ಟರ ಮಗಳು (1969) ಮತ್ತು ವಿಮಲಾ ಮರಿಯನ್ (1985)

ವಸ್ತುವಿನ ವೈಭವೀಕರಣ ಗೋಚರಿಸದಿದ್ದರೂ, ಬದುಕಿನ ಎಲ್ಲ ಘಟನೆಗಳ ಹಿಂದೆ ಅಗೋಚರ ಶಕ್ತಿಯ ಕೈವಾಡ ಇದ್ದೇ ಇರುತ್ತದೆ ಎಂಬುದನ್ನು ಸ್ಪಷ್ಟವಾಗಿ ಕಾಣಬಹುದು.

ಮಾಸ್ತಿಯವರು ಪ್ರಕಟಿಸಿರುವ ಇತ್ತೀಚಿನ ನಾಟಕಗಳಲ್ಲಿ ನಾಟಕ ಬಂಧದ ಕೌಶಲ ಕಾಣುವುದಿಲ್ಲ; ಕಥಾವಸ್ತುವಿನ ಅಂತರಾಳದಲ್ಲಿರುವ ನಾಟಕೀಯತೆಯನ್ನು ಅನಾವರಣಗೊಳಿಸುವ ಗೋಜಿಗೆ ಹೋಗುವುದಿಲ್ಲ. ಎಲ್ಲೂ 'ಭಾಷೆ ನಾಟಕದ ಅಂಗ' ವಾಗುವುದಿಲ್ಲ. ಅಂದರೆ ಅವರ ನಾಟಕಗಳಲ್ಲಿ ಒತ್ತು ಬೀಳುವುದು ಕಥೆಯ ನಿರೂಪಣೆಯ ಮೇಲೇ ಹೊರತು ನಾಟಕ ಕ್ರಿಯೆಯ ಮೇಲಲ್ಲ.

'ಬಾನುಲಿ ದೃಶ್ಯಗಳು' ಎನ್ನುವ ಪುಸ್ತಕದಲ್ಲಿ ಏಳು ದೃಶ್ಯಗಳಿವೆ. ವಾಲ್ಟರ್‌ಸ್ಕಾಟ್, ಬೈರನ್, ಮಾರ್ಕ್‌ಟ್ವೆಯಿನ್, ಪ್ಯಾಸ್ಕಲನ ಜೀವನ ಸಂಗತಿಗಳನ್ನು ಕುರಿತ ದೃಶ್ಯಗಳಾಗಿವೆ. ಆದರೆ 'ಕೆಟ್ಟ ಕನಸು' ಎನ್ನುವ ಮೊದಲನೆಯ ದೃಶ್ಯ ''ರಷ್ಯಾ ದೇಶದ ೧೯೧೭ರ ವಿಪ್ಲವ ಆದ ಹೊಸದರಲ್ಲಿ ಆಡಳಿತ ಒಂದು ವ್ಯವಸ್ಥೆಗೆ ಬರುವ ಮೊದಲು ಜನತೆಗೆ ಎಷ್ಟು ಕಷ್ಟವಾಯಿತು ಎನ್ನುವುದನ್ನು ಕಾರ್ನ್ಸ್ಟಂಟೈನ್ ಪೆಸ್‌ಟ್‌ಸ್ಕಿ ಎಂಬ ಪ್ರಸಿದ್ಧ ರಷ್ಯನ್ ಲೇಖಕರು ತಮ್ಮ ಜೀವನ ಚರಿತ್ರೆಯ ಗ್ರಂಥದಲ್ಲಿ ವರ್ಣಿಸಿದ್ದಾರೆ. ಈ ಗ್ರಂಥದಲ್ಲಿ ಬರುವ ಒಂದು ಕಥನದ ಆಧಾರದ ಮೇಲೆ ಈ ದೃಶ್ಯ ರಚಿತವಾಗಿದೆ'' ಎಂದು ಪ್ರಾರಂಭದಲ್ಲಿ ಹೇಳಿದ್ದಾರೆ.

ಬಾನುಲಿಗೆ ಸಿದ್ಧಪಡಿಸಿದ ದೃಶ್ಯಗಳು ಎಂದ ಮೇಲೆ ಅವುಗಳಲ್ಲಿ ರಂಗಸಾಧ್ಯತೆಗಳನ್ನು ಅರಸುವುದು ಸಾಧುವಲ್ಲ, ಆದರೆ ಈ ನಾಟಕಗಳಲ್ಲಿ ಬಾನುಲಿ ನಾಟಕಗಳಿಗೆ ಬೇಕಾದ ಭಾಷೆ ಎಚ್ಚರ ಕಂಡುಬರುವುದಿಲ್ಲ. ಭಾಷೆಯ ಪೇಲವತೆಯಿಂದಲೇ ನಾಟಕಗಳು ಸೊರಗುತ್ತವೆ. ಈ ದುರ್ಬಲತೆ ಏಕನಾದವನ್ನು ಉಂಟುಮಾಡುತ್ತದೆ. ಮಾಸ್ತಿಯವರು ತಮ್ಮ ಬದುಕಿನಲ್ಲಿ ಗೌರವಿಸುವ ಮೇಲಿನ ನಾಲ್ವರಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. 'ಹಾಗ್‌ವೀಬರ್ ಪ್ರಸಂಗಗಳು' ದೃಶ್ಯದಲ್ಲಿ ಈ ಅಂಶ ಹೇಗೆ ಕೆಲಸಮಾಡಿದೆ ಎಂಬುದನ್ನು ಗಮನಿಸಬಹುದು.

ಸ್ಕಾಟ್: ಇದನ್ನ ನನ್ನ ಹೊಣೆ ಮಾಡಿದರೆ ಹೇಗೆ? ನಮ್ಮ ಅಳಿಯಂದಿರ ಸಹಾಯ ಇದೆ. ನಾಲ್ಕು ಕಡೆ ಹುಡುಕಿ ಕೆಲಸ ಸಂಪಾದಿಸಿ. ವಾರ ಎರಡು ವಾರ ಆದರೆ ಆಗಲಿ. ಅದುವರೆಗೆ ವೆಚ್ಚಕ್ಕೆ ನಾನು ಹಣ ಕೊಡುತ್ತೇನೆ.

ವೀಬರ್: ಸ್ವಾಮಿಗಳಲ್ಲಿ ಬೇಡುತ್ತೇನೆ. ನಿಮ್ಮ ಹಣ ತಕ್ಕೊಂಡು ಅಲ್ಲಿ ಇಲ್ಲಿ ಓಡಾಡುತ್ತಾ ಕಾಲ ಕಳೆಯೋದು ಬೇಡ ಅನ್ನಿಸುತ್ತೆ. ಹಣ ಹೇಗೂ ಕೊಡುತೀರಿ; ಏನಾದರೂ ಕೆಲಸಾನೂ ಹೇಳಿ. ಮಾಡುತ್ತೇನೆ. ಅದೇ ಕೆಲಸ ಅನ್ನತೇನೆ. ನೀವು ಕೊಡೋ ಹಣ - ಸಂಬಳ (ಪುಟ: 57)

ಈ ಬಾನುಲಿ ದೃಶ್ಯಗಳಲ್ಲಿ ಮಾಸ್ತಿಯವರ ವ್ಯಕ್ತಿತ್ವ ಅಲ್ಲಲ್ಲಿ ಇಣುಕಿ ಹಾಕಿರುವುದನ್ನು ಕಾಣಬಹುದು. ನೀರಸ ನಿರೂಪಣೆ ಎದ್ದು ಕಾಣುವ ಅಂಶ. ಬಾನುಲಿಗೆ ದೃಶ್ಯಗಳನ್ನು ಅಳವಡಿಸುವಾಗ ಅದರ ತಾಂತ್ರಿಕತೆಯ ಕಡೆಗಾಗಲಿ, ಪ್ರಸಾರ ಪ್ರಪಂಚದ ವಿಶಿಷ್ಟತೆಗಳನ್ನು ಬಳಸಿಕೊಂಡಿಲ್ಲ.

ಕಾಳಿದಾಸ ಮತ್ತು ಕನಕಣ್ಣ ನಾಟಕಗಳಲ್ಲೂ ನಿರೂಪಕನ ಚಪಲತೆಯನ್ನು ಕಾಣಬಹುದು. ಪರಂಪರೆಯಿಂದ ಹರಿದು ಬಂದ ಕಥೆಯನ್ನೇ ಎರಡೂ ನಾಟಕಗಳಿಗೆ ಆಧಾರವಾಗಿಟ್ಟುಕೊಂಡಿದ್ದಾರೆ. ಈ ನಾಟಕಗಳ ನಾಯಕರುಗಳು ಬಂದ ಸಾಮಾಜಿಕ

ಹಿನ್ನೆಲೆಯ ವಿಶಿಷ್ಟತೆಯನ್ನಾಗಲಿ, ಅವರ ಸಾಧನೆಯ ಪಥದಲ್ಲಿ ಕಂಡು ಬರುವ ಘರ್ಷಣೆಯಾಗಲಿ ಮುಖ್ಯವಾಗುವುದಿಲ್ಲ. ಪಾತ್ರ ನಿರ್ಮಾಣದಲ್ಲಿ, ಸಂಭಾಷಣೆಯಲ್ಲಿ ಉದ್ದೇಶ ಪೂರ್ವಕ ಸಂಯಮ ಕಂಡುಬರುತ್ತದೆ. ಅಂದಿನ ಸಮಾಜದ ಕೆಟ್ಟ ಸಂಪ್ರದಾಯಿಕ ಮೌಲ್ಯಗಳ ಬಗ್ಗೆ ಮೌನವಾಗುತ್ತಾರೆ. ಯಥಾಸ್ಥಿತಿಯ ಅಂಶಗಳ ಪುಷ್ಟೀಕರಣ ಇಲ್ಲೂ ಕಂಡುಬರುತ್ತದೆ.

''ನಾಟಕದ ನಾಯಕ ಕಾಳಿದಾಸ ಮಹಾಕವಿಯನ್ನು ಕುರಿತ ದಂತ ಕಥೆಗಳು, ಇತಿಹಾಸ ವಿವರಗಳು, ಅವನ ಕೃತಿಯಲ್ಲಿ ದೊರೆಯುವ ಅವನ ಅಭಿರುಚಿ ಅನುಭವ ಸೂಚನೆಗಳು ಇವುಗಳನ್ನು ಆಧಾರವಾಗಿರಿಸಿಕೊಂಡು ಕವಿಯನ್ನು ಕುರಿತ ಒಂದು ಚರಿತೆಯನ್ನು ನಿರ್ಮಿಸಿಕೊಂಡು ಅದನ್ನು ನಾಟಕವಾಗಿ ರಚಿಸಿದೆ'' ಎಂದು ಕಾಳಿದಾಸ ನಾಟಕದ ಮುನ್ನುಡಿಯಲ್ಲಿ ಅರಿಕೆಮಾಡಿಕೊಂಡಿದ್ದಾರೆ. ಕಾಳಿದಾಸನಲ್ಲಿದ್ದ ಕವಿ ಮನೋಧರ್ಮವನ್ನು ಮೊದಲಿನಿಂದಲೂ ಗುರುತಿಸಲು ಪ್ರಯತ್ನಿಸಿದ್ದಾರೆ.

> ಗುರು: . . . . ನೀ ಒಂದು ದಿನ
> ಕೊಳದ ನೀರಿನ ಮೇಲೆ ಮಂಜು, ಹೊಗೆಯೆಂಬಂದ, ಮುಚ್ಚಿರಲು,
> 'ಅಜ್ಜ, ಕೊಳದಡಿಗೆ ಉರಿಯನು ಹಾಕಿ ನೀರು ಕಾದಿದೆಯ' ಎಂದುದು
> ನಿನಗೆ ನೆನಪಿದೆಯೆ? ಇನ್ನೊಮ್ಮೆ ಇರುಳಿನಲಿ ನಕ್ಷತ್ರಗಳ ನೋಡಿ, ಬಾನ
> ಮುಚ್ಚಳದಾಚೆ ತುಂಬಿರುವ ಬೆಳಕು ಅದು, ನಮಗೆ ಕಂಡಿಗಳಿಂದ
> ಕಾಣುತಿದೆ. ಎಂದೊರಿದೆ. ಮತ್ತೊಮ್ಮೆ ಗಿರಿಯಿಂದ ಉತ್ತರಕ್ಕೆ
> ಹರಿಯುತಿಹ ಮೋಡಗಳ ನೋಡಿ, 'ಈ ಮೋಡಗಳ ಹಿರಿಹಿಂಡು ಇದ
> ನಡೆಸಿಕೊಂಡು ಹೋಗುವರಾರು ಕಾಣರು' ಎಂದು ಹೇಳಿದೆ. . .''
>
> (ಪುಟ: 10)

'ಕವಿಯ ಮನ'ದ ಈ ದೃಷ್ಟಿ ಅವನು ಮುಂದೆ ಮಹಾಕವಿಯಾಗಲು ಅನುವು ಮಾಡಿಕೊಟ್ಟಿತು ಎಂಬುದನ್ನು ತಿಳಿಸಿದ್ದಾರೆ. ಕಾಳಿದಾಸನ ಜಾತೀಯ ದ್ವಂದ್ವವಾಗಲಿ, ಕೆಳವರ್ಗದ ಕೀಳರಿಮೆಯಾಗಲಿ 'ಅಥೆಂಟಿಕ್' ಆಗಿ ಮೂಡಿಬಂದಿಲ್ಲ. ಇದರಿಂದ ನಾಟಕದ ಭಾವಲಹರಿಗೆ ಆತಂಕ ಉಂಟಾಗಿ ಪಾತ್ರಗಳ ಸಹಜ ವಿಕಾಸಕ್ರಮವನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಅವರದೇ 'ತಿರುಪಾಣಿ' ನಾಟಕದಲ್ಲಿ ಕಂಡುಬರುವಷ್ಟು ಬಹಿರಂಗ ತಿಕ್ಕಾಟ ಇಲ್ಲಿ ಕಾಣುವುದಿಲ್ಲ.

'ಕನಕಣ್ಣ', ಕನಕ ಹರಿದಾಸನಾಗಿ ಕೈವಲ್ಯ ಪಡೆದ ರೀತಿಯನ್ನು ತೋರಿಸುವ ನಾಟಕ. ಆಸ್ತಿಕ ಮನೋಧರ್ಮದ ವ್ಯಕ್ತಿತ್ವವೊಂದನ್ನು ಈ ನಾಟಕದಲ್ಲಿ ಕಾಣಬಹುದು. ಈಗಾಗಲೇ ಜನಜನಿತವಾಗಿರುವ ಸನ್ನಿವೇಶಗಳೇ ನಾಟಕದಲ್ಲಿ ಕನಕದಾಸನ ವ್ಯಕ್ತಿತ್ವವನ್ನು ಸಾರಿ ಹೇಳುವ ಸಂಗತಿಗಳಾಗಿವೆ. ಇಲ್ಲಿ ಯಾವುದೇ ರೀತಿಯ ಹೊಸ ಅರ್ಥದ ಹೊಳಪು (New Interpretation) ಗೋಚರಿಸುವುದಿಲ್ಲ. ಗಮನಾರ್ಹ ಸಂಗತಿಯೆಂದರೆ ಉಡುಪಿಯ ಶ್ರೀಕೃಷ್ಣ ಕನಕನಿಗಾಗಿ ಹಿಂದುಮುಂದಾಗಿ ಗೋಡೆಯ ಕಂಡಿಯಿಂದ ದರ್ಶನ ನೀಡಿದ ಎಂಬುದು ಜನಮನದ ದಂತ ಕಥೆ. ಆದರೆ ಮಾಸ್ತಿಯವರು ಇದನ್ನು ಇಲ್ಲಿ ವಾದಿರಾಜರ ಮೂಲಕ ಮಾಡಿಸಿದ್ದಾರೆ.

ಕನಕಣ್ಣ: ನಮ್ಮ ಸ್ವಾಮಿಗಳು ಈಗ ಪರ್ಯಾಯದಲ್ಲಿದ್ದಾರಲ್ಲ ಹೋಗಿ ದೇವರ ದರ್ಶನ

> ಮಾಡೋಣ ಅಂತ ಹೋದೆ. ಹೋಗತಾ ಸ್ನಾನ ಮುಗಿಸಿಕೊಂಡೇ ಗುಡಿ ಹತ್ತಿರ ನಡೆದೆ. ಒಳಗೆ ಪ್ರಾಕಾರೋತ್ಸವ ನಡೆಯುತ್ತಿತ್ತು. ವಾಡಿಕೆಯ ಜನಸಂದಣಿ ವೇದಘೋಷ ಆಗ್ತಾ ಇದೆ. ಈ ಹೊತ್ತಿನಲ್ಲಿ ನಾನ್ಯಾಕೆ ಅಲ್ಲಿ ಹೋಗೋದು ಅಂದೆ. ಗುಡಿ ಪಶ್ಚಿಮ ಗೋಡೆ ಬಳಿ ನಿಂತೆ. ಯಾರೋ ನೋಡಿದರು. ನನ್ನನ್ನು ಬಲ್ಲವರು, ಒಳಗೆ ಬನ್ನಿ ಎಂದರು. ನಾ ಒಲ್ಲೆ ಎಂದೆ. ಸ್ವಾಮಿಗಳಿಗೆ ನೀವು ಅಂದರೆ ತುಂಬ ಅಭಿಮಾನ ಅಂದರು. ಆಗಲಿ, ಆದರೂ ನಾ ಇಲ್ಲೆ ಅಂತ ನಾ ಅಲ್ಲೆ ನಿಂತೆ. ಅವರು ಹೋಗಿ ಸ್ವಾಮಿಗಳಿಗೆ ತಿಳಿಸಿದರು. ಅವರು ಕನಕಣ್ಣನವರ ಮಾತಿಗೆ ಪ್ರತಿ ಹೇಳಬೇಡಿ ಎಂದರು. ನಾನು ನಿಂತಿದ್ದ ತಾವು ಗೋಡೇಲಿ ಒಂದು ಕಿಂಡಿ ಹೊಡೆಸಿದರು. ಉತ್ಸವ ದೇವರನ್ನು ಗೋಡೆ ಕಂಡಿಯತ್ತ ಮುಖಮಾಡಿ ನಿಲ್ಲಿಸಿದರು. ನಾ ನಿಂತ ಕಡೆ ನಿನಗೆ ದೇವರ ದರ್ಶನ ಆಯಿತು. (ಪುಟ: 43)

ಇದು ಮೇಲುನೋಟಕ್ಕೆ 'ಪವಾಡ'ದ ಅಂಶವನ್ನು ತೆಗೆಯುವುದೇ ಆಗಿದ್ದರೂ ಕುರುಬರ ಜಾತಿಗೆ ಸೇರಿದ ಕನಕಣ್ಣನ ವ್ಯಕ್ತಿತ್ವದ ಪ್ರಭೆಯನ್ನು ವಾದಿರಾಜರಿಗೆ ಹಂಚಿಬಿಟ್ಟಿದ್ದಾರೆ. ಇಂಥಹ ಸಂದರ್ಭಗಳಲ್ಲಿ ಮಾಸ್ತಿಯವರ ಸನಾತನ ಮನೋಧರ್ಮ ಕೆಲಸಮಾಡುವ ರೀತಿಯನ್ನು ಗಮನಿಸಬಹುದು. 'ಕಾಳಿದಾಸ'ನಾಗಲಿ, 'ಕನಕಣ್ಣ'ನಾಗಲಿ ಯಥಾಸ್ಥಿತಿ ಮೌಲ್ಯಗಳ ಹಿರಿಮೆಯನ್ನು ಸಾರಿ ಹೇಳುವ ಶಬ್ದಚಿತ್ರಗಳಾಗಿವೆ. ಮನುಷ್ಯನಲ್ಲಿ ಸಹಜವಾಗಿ ಇರಬೇಕಾದ ರಾಗ-ದ್ವೇಷಗಳನ್ನು ದಾಖಲಿಸುವ ಹಂತದಲ್ಲಿ ಮೆದು ಧೋರಣೆಯನ್ನು ತಳೆದು ಅವಾಸ್ತವ ಕೃತಿಗಳನ್ನಾಗಿ ಮಾಡಿಬಿಡುತ್ತಾರೆ. ಇದರಿಂದ ನಾಟಕ ಕ್ರಿಯೆಯ ಶಕ್ತಿ ಊನಗೊಂಡಿದೆ.

ಮಾಸ್ತಿಯವರು ಅಜ್ಜನದಾರಿ, ಭಟ್ಟರ ಮಗಳು, ವಿಮಲಾ ಮರಿಯಾನ್ ನಾಟಕಗಳಲ್ಲಿ ಹೊಸದೇನನ್ನು ಶೋಧಿಸಲು ಪ್ರಯತ್ನಿಸಿಲ್ಲ.

'ಭಟ್ಟರ ಮಗಳು' ಗೀತ ನಾಟಕ. 'ಯಶೋಧರೆ' ನಾಟಕದ ಯಶೋಧರೆಯ ನೋವು ಒಂದು ಬಗೆಯದಾದರೆ 'ಭಟ್ಟರ ಮಗಳು' ನಾಟಕದ ಅತ್ತುಳಾಯ್‌ದು ಇನ್ನೊಂದು ಬಗೆಯ ನೋವು. ಕರುಣಾರಸ ಪ್ರಧಾನವಾದ ಕಥೆ. ನಾಟಕದ ಎಲ್ಲ ಪಾತ್ರಗಳು ಅತ್ತುಳಾಯ್ ಬದುಕಿನ ಚಿತ್ರವನ್ನು ಹೆಣೆಯುತ್ತವೆ. ಮಾಸ್ತಿಯವರು ಪುರಾಣದ ಆಂಡಾಳ್ ಕಥೆಯ ಆಧಾರದ ಮೇಲೆ ಈ ನಾಟಕವನ್ನು ರಚಿಸಿದ್ದಾರೆ. 'ಭಟ್ಟರ ಮಗಳು' ನಾಟಕದಲ್ಲಿ ಅತ್ತುಳಾಯ್ ಮತ್ತು ಮನ್ನಾರ್ ಸಂಪ್ರದಾಯ ಚೌಕಟ್ಟಿನಿಂದ ಹೊರಬರುವ ಅವಕಾಶವಿದ್ದರೂ, ಮಾಸ್ತಿಯವರ ಸಂಪ್ರದಾಯನಿಷ್ಠೆಯ, ದೈವಶ್ರದ್ಧೆಯ ಮನಸ್ಸು ಅದನ್ನು ಆಗಗೊಡುವುದಿಲ್ಲ. ಪ್ರೇಮಕ್ಕೆ ದೊರೆಯಬೇಕಾದ ವಿಜಯ, ತಪ್ಪುತಿಳುವಳಿಕೆಯ ನಂಬಿಕೆಗೆ ದೊರೆತಿದೆ. ಮನ್ನಾರ್ ತೆಗೆದುಕೊಂಡಿರುವ ಸಂನ್ಯಾಸವನ್ನು ಪ್ರಶ್ನಿಸಿ, ಒಟ್ಟಿಗೆ ಬದುಕಲು ಅತ್ತುಳಾಯ್ ಆಹ್ವಾನಿಸುತ್ತಾಳೆ.

ಅತ್ತುಳಾಯ್:. . ಕೊನೆಯಾಗಿ ಹೇಳು. ಸಂನ್ಯಾಸ ಇದೆ ಬಿಟ್ಟು ನೀ ನನ್ನೊಡನೆ ಬಾಳುವುದು ಸಾಧ್ಯವೇ? ಇಲ್ಲ ನೀ ನಿನ್ನ ದಾರಿಯ ಹಿಡಿದು ನಡೆದಿರಲು ನಾ ನನ್ನ ದಾರಿಯಲಿ ಹೋಗಬಹುದೆಂಬೆಯಾ? (ಪುಟ: 33)

ಎಂದಾಗ ಮನ್ನಾರ್ ದೈವವನ್ನು ಮುಂದಿಟ್ಟುಕೊಂಡು ಬದುಕಿನಿಂದ ವಿಮುಖನಾಗುತ್ತಾನೆ. ಅತ್ತುಳಾಯ್ ಜೀವನೋತ್ಸಾಹ ಕಮರುತ್ತದೆ. ಮನ್ನಾರ್ ಸಂನ್ಯಾಸ

ಸ್ವೀಕರಿಸಿದ ರೀತಿ, ಅವನ ದೃಢನಿಶ್ಚಯಕ್ಕೆ ನಾಟಕದಲ್ಲಿ ಸಮರ್ಥನೆ ಸಿಕ್ಕುವುದಿಲ್ಲ. ನಾಟಕೀಯತೆ ಇದ್ದರೂ ಅದನ್ನು ಸರಿಯಾಗಿ ಬಳಸಿಕೊಳ್ಳದ ರೀತಿ ಮತ್ತು ಭಾಷೆಯ ಸರಳೀಕರಣದ ಮೋಹನಾಟವನ್ನು ಸಫಲಗೊಳಿಸಿಲ್ಲ. ಸ್ವಯಂಪೂರ್ಣತೆಯ ಅಭಾವ ಕಂಡುಬರುತ್ತದೆ.

'ವಿಮಲಾ ಮರಿಯಾನ್' ಒಂದು ಸಾಮಾಜಿಕ ನಾಟಕ. ೧೯೨೯ರಲ್ಲಿ ಬರೆದ ಮಂಜುಳಾ ನಾಟಕದ ಒಂದು ಪಾತ್ರವನ್ನು ಬೆಳೆಸಿದ ನಾಟಕ. ನಾಟಕಗಳನ್ನು ಕುರಿತು ಮಾಸ್ತಿಯವರು ತಮ್ಮ ಕಲ್ಪನೆಯನ್ನು-

''ನಾಟಕದ ಸಂಗತಿ ಜೀವನದಲ್ಲಿ ನಡೆಯಬಹುದಾದ ರೀತಿಗೆ ಆದಷ್ಟು ಹತ್ತಿರವಾಗಿರುವುದು ಆ ಕಲ್ಪನೆಯ ತಿರುಳು. ಹೊಸ ರೀತಿಯ ನಾಟಕಗಳನ್ನು ನೋಡಿ ಬಳಕೆಯಾದ ಮನಸ್ಸುಗಳಿಗೆ ಈ ರೀತಿ ತೀರ ಸಪ್ಪೆ ಎಂದು ಕಾಣಬಹುದು. ಆದರೆ ಈ ರೀತಿಯ ಪರಂಪರೆ ಬಹು ಪೂರ್ವದ್ದು. ಬಹು ಎತ್ತರದ್ದು. ಇದರ ಹಿರಿಯರು ಸಂಸ್ಕೃತದಲ್ಲಿ ಕಾಳಿದಾಸ, ಇಂಗ್ಲಿಷಿನಲ್ಲಿ ಷೇಕ್ಸ್‌ಪಿಯರ್; ನಾನು ಈ ಹಿರಿಯರ ಪರಂಪರೆಯಲ್ಲಿ ಈಗ ಬರೆಯುತ್ತಿರುವ (೧೯೮೫) ಒಬ್ಬ ನಾಟಕಕಾರ'' ಎಂದು ಹೇಳಿಕೊಂಡಿದ್ದಾರೆ. ತುಂಬಾ ಸ್ಪಷ್ಟವಾಗಿ ಹೇಳಬೇಕಾದರೆ ಈ ಹಿರಿಯ ಪರಂಪರೆಯ ಅತಿ ಕಿರಿಯ ನಾಟಕಕಾರರು ಮಾಸ್ತಿ. ಬದುಕಿಗೆ ಹತ್ತಿರವಾದ ಸಂಗತಿಗಳನ್ನು ಆರಿಸಿಕೊಂಡಿದ್ದರೂ, ತೀರ ನೀರಸವಾದ ನಾಟಕಗಳನ್ನು ರಚಿಸಿದ್ದಾರೆ. 'ವಿಮಲಾ ಮರಿಯಾನ್' ಈ ರೀತಿಯ ಪರಂಪರೆಗೆ ಸೇರಿದ ನಾಟಕ. ನಾಟಕಕ್ಕೆ ಅವಶ್ಯಕವಾಗಿ ಬೇಕಾದ ಭಾಷೆಯಾಗಲಿ, ತರ್ಕವಾಗಲಿ, ದೃಶ್ಯವಿಂಗಡನೆಯಾಗಲಿ ಕಂಡುಬರುವುದಿಲ್ಲ.

ವಿಮಾಲಾ ಮತ್ತು ಮರಿಯಾನ್ ಗೆಳತಿಯರು. ವಿಮಲಾ ಲಚ್ಚೀ ಹೆಂಡತಿ, ಮರಿಯಾನ್ ಆನಂದನನ್ನು ಮದುವೆಯಾಗಬೇಕಾದವಳು. ಮನಸ್ಸಿನಲ್ಲಿ ಉಂಟಾದ ಸಂದೇಹದಿಂದ, ಮರಿಯಾನ್ ತಂದೆ ನಾಡಾರ್ ಅವರ ನಿರಾಕರಣೆಯಿಂದ ಮರಿಯಾನ್ ಮದುವೆ ನಿಲ್ಲುವ ಹಂತಕ್ಕೆ ಹೋಗುತ್ತದೆ. ಕೊನೆಗೆ ಎಲ್ಲವೂ ತಿಳಿಯಾಗಿ ಆನಂದ್ ಮನೆಯ ಸತ್ಕಾರದಲ್ಲಿ ಮುಕ್ತಾಯವಾಗುತ್ತದೆ. ಹನ್ನೆರಡು 'ಸ್ಥಾನ'ಗಳ ಈ ನಾಟಕದಲ್ಲಿ ಮೂರು ದೋಷಗಳು ಪರಿಹಾರವಾಗಿ, ಕೊನೆಗೆ ನಾಟಕದ 'ಮಂಗಳಾಚರಣ'ದಲ್ಲಿ ಆರ್ಯೆ ನಾಟಕಕ್ಕೆ 'ವಿಮಲಾ ಮರಿಯಾನ್' ಎಂದು ಕರೆಯುತ್ತಾಳೆ. ಸೂತ್ರಧಾರ ಇದಕ್ಕೆ ಒಪ್ಪಿಗೆ ಕೊಡುತ್ತಾನೆ.

ಮಾಸ್ತಿಯವರ 'ಅಜ್ಜನದಾರಿ' ಒಂದು ದೃಶ್ಯ ತೋರಣ. ಅವರೇ ಹೇಳುವಂತೆ-

> ''ಇದರಲ್ಲಿ ನಾನು ನಡೆದಾಡುವ ವೇಳೆ ಜನ ನನ್ನೊಂದಿಗೆ ಆಡಿದ ಮಾತು, ನನ್ನನ್ನು ಕುರಿತು ಆಡಿದ ಮಾತು, ನನಗೆ ಬಂದ ಹತ್ತಾರು ಅನುಭವ. ನಾನು ಮಕ್ಕಳು ತರಣರು ಹಿರಿಯರು ಹಲವರೊಂದಿಗೆ ನಡೆದು ಕೊಳ್ಳಬೇಕಾಗಿ ಬಂದ ಸಮಯದಲ್ಲಿ ಆದ ಸಂಗತಿ ಇಂಥವನ್ನು ಸಣ್ಣ ದೃಶ್ಯಗಳಾಗಿ ಗುರುತಿಸಿದ್ದೇನೆ. ಮೂರು ಪಾಲು ಇವು ನಡೆದ ಸಂಗತಿಯ ವರದಿಗಳು; ಕೆಲವರಲ್ಲಿ ಒಂದು ಮಾತು ಎರಡು ಮಾತು ಸೇರಿದೆ, ಬಿಟ್ಟು ಹೋಗಿದೆ, ಬೇರೆ ಆಗಿದೆ; ಮೊತ್ತದಲ್ಲಿ ಇದು ನನ್ನ ಮುಪ್ಪಿನ ದಿನಗಳ ಹತ್ತಾರು ಅನುಭವಗಳನ್ನು ತಿಳಿಸುವ ಬರಹದ ಗೊಂಚಲು ಅಥವಾ ಕೌಳಿಗೆ''

'ಅಜ್ಜನದಾರಿ'ಯಲ್ಲಿ ಅರವತ್ತೈದು ದೃಶ್ಯಗಳಿವೆ. ಮಾಸ್ತಿಯವರೇ ಇದನ್ನು ವರದಿ

ಎಂದು ಕರೆದಿರುವುದರಿಂದ ನಾಟಕದ ಗಂಧವನ್ನು ಇಲ್ಲಿ ಕಾಣಲು ಸಾಧ್ಯವಿಲ್ಲ. ಅವರೇ ''ಈ ದೃಶ್ಯಗಳ ಸಾಹಿತ್ಯಗುಣ ಬಹಳ ಅಲ್ಲ, ಎನ್ನುವುದನ್ನು ನಾನು ಬಲ್ಲೆ . . .ಲೇಖಕನ ಚಪಲಕ್ಕೆ ಈಡಾಗಿ ಈ ಮಾಲೆಯನ್ನು ಪ್ರಕಟಿಸುವ ಸಾಹಸವನ್ನು ಮಾಡಿದ್ದೇನೆ'' ಎಂದಿದ್ದಾರೆ. ಮಾಸ್ತಿಯವರ ಜೀವನ ಚರಿತ್ರೆಯನ್ನು ಬರೆಯುವವರು ಈ ದೃಶ್ಯಗಳನ್ನು ಬಳಸಿಕೊಳ್ಳುವುದರಲ್ಲಿ ಔಚಿತ್ಯವಿದೆ. ಈ ದೃಶ್ಯಗಳಲ್ಲಿ ಸಾಮಾನ್ಯವಾಗಿ .ಕೊಡೆ, ಗಾಜಿನಚೂರು, ಬೈಸಿಕಲ್, ಬಾಳೆಹಣ್ಣಿನ ಸಿಪ್ಪೆ, ಸಿಗರೇಟ್, ಚಾಕೂಲೇಟ್ ಮುಂತಾದುವು ಪದೇ ಪದೇ ಕಾಣಸಿಕೊಂಡು ಮಾಸ್ತಿಯವರು ಬದುಕಿದ ರೀತಿಯನ್ನು, ಮನೋಧರ್ಮವನ್ನು ಧ್ವನಿಸುತ್ತದೆ. ಈ ವಸ್ತು ಸಾಂಕೇತಿಕಗುಣವನ್ನು ಪಡೆದುಕೊಳ್ಳುತ್ತದೆ. ಈ ಕೆಳಗೆ ಸೂಚಿಸಿರುವ ಒಂದು ದೃಶ್ಯವನ್ನು ಗಮನಿಸಿದರೆ ಉಳಿದ ದೃಶ್ಯಗಳ ರೀತಿ ಸ್ಪಷ್ಟವಾಗುತ್ತದೆ.

ದೃಶ್ಯ 46

(ಪುಸ್ತಕದ ಅಂಗಡಿಯ ಮುಂದೆ ಶಂಕರ್, ನಾಡಿಗ್, ಇನ್ನಿಬ್ಬರು ಮಿತ್ರರು ನಿಂತಿದ್ದಾರೆ, ಅಜ್ಜ ಬರುತ್ತಾರೆ)

ಅಜ್ಜ: (ಬರುತ್ತ) ನಮಸ್ಕಾರ

ಮಿತ್ರರು: ನಮಸ್ಕಾರ ಸ್ವಾಮಿ

ಅಜ್ಜ: (ಇವರ ಜೊತೆಗೆ ನಿಂತು) ಏನು ಶಂಕರ್ ನೀವು ಇಲ್ಲಿದ್ದೀರಿ. ಮೈಸೂರಿನಲ್ಲಿಲ್ಲವೆ ಈಗಿರೋದು?

ಶಂಕರ್: ಹೌದು ಸ್ವಾಮಿ, ಇಲ್ಲಿ ಕೆಲಸ ಬಿತ್ತು. ಬಂದೆ.

ಅಜ್ಜ: ಇನ್ನೂ ಸರ್ವೀಸ್ ಇರಬೇಕಲ್ಲ

ಶಂಕರ್: ಕೆಲವು ವರ್ಷ ಇದೆ.

ಅಜ್ಜ: ಹಾಗಂತಲೇ ನನ್ನ ತಿಳಿವಳಿಕೆ. ಏನು ವಯಸ್ಸು ನಿಮಗೆ?

ಶಂಕರ್: ಕಡಮೆ ಏನಲ್ಲ ಸ್ವಾಮಿ, ಐವತ್ತು ನಾಲ್ಕು ಆಯಿತು.

ಅಜ್ಜ: ಐವತ್ತು ನಾಲ್ಕು ಬಹಳ ಅಲ್ಲ.

ಶಂಕರ್: ನನಗೆ ವಯಸ್ಸು ಅನ್ನಿಸತಾ ಇದೆ.

ಅಜ್ಜ: ಎಲಾ ಅಪ್ಪ. ಐವತ್ತು ನಾಲ್ಕು ವಯಸ್ಸು ಆಗಿ ಬಿಟ್ಟಿತು ಅಂತೀರಾ? ನನಗಿನ್ನೂ ಎಂಬತ್ತ ನಾಲ್ಕೇ?

(ಎಲ್ಲರೂ ನಗುತ್ತಾರೆ. ಅಜ್ಜ ಅವರಿಗೆಲ್ಲಾ) ನೀವು ಯಾರೂ ಎಂಬತ್ತ ನಾಲ್ಕಕ್ಕೆ ಮೊದಲು ವಯಸ್ಸು ಆಯಿತು ಅಂತ ಹೇಳಿಕೋಬೇಡಿ (ಎನ್ನುತ್ತ ಮುಂದಕ್ಕೆ ಹೋಗುತ್ತಾರೆ) (ಪುಟ: 46-47)

ರಂಗಭೂಮಿಯಲ್ಲಿ ಈ ನಾಟಕಗಳು, ದೃಶ್ಯಗಳು ಪ್ರಯೋಗವಾಗದ ಹೊರತು ಇವುಗಳ ಗುಣನಿರ್ಣಯವನ್ನು ಖಚಿತವಾಗಿ ಮಾಡಲು ಸಾಧ್ಯವಿಲ್ಲ. ಜೊತೆಗೆ ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಈ ನಾಟಕಗಳ ಔಚಿತ್ಯವೇನು? ಎಷ್ಟರ ಮಟ್ಟಿಗೆ ಪ್ರಸ್ತುತ ಸಮಸ್ಯೆಗಳ ಧ್ವನಿಯನ್ನು ಇವುಗಳಲ್ಲಿ ಕಾಣಬಹುದು? ಬದಲಾಗುತ್ತಿರುವ ಲೋಕಧರ್ಮಕ್ಕೆ

ಇವು ತಾಳಿ-ಬಾಳಿಯಾವೆ? ಎನ್ನುವ ಪ್ರಶ್ನೆಗಳಿಗೆ ಮಾಸ್ತಿಯವರ ನಾಟಕಗಳಲ್ಲಿ ಉತ್ತರ ಹುಡುಕುವುದು ಕಷ್ಟ. ಹೊಸಗನ್ನಡದ ಕಥಾ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ ಮಾಸ್ತಿಯವರ ನಾಟಕಗಳು ಅವರ ಸಮಗ್ರ ಸಾಹಿತ್ಯವನ್ನು, ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಬಲ್ಲವು.

ಮಾಸ್ತಿಯವರ ವಿಮರ್ಶೆ

ಡಾ|| ಜಿ.ಎಸ್. ಶಿವರುದ್ರಪ್ಪ

ಕನ್ನಡದ ಮೊದಲ ಪಂಕ್ತಿಯ ಕತೆಗಾರರಾದ ಮಾಸ್ತಿಯವರ ಸಣ್ಣ ಕತೆಗಳು ಮೊದಲು ಪ್ರಕಟವಾಗತೊಡಗಿದ್ದು ೧೯೧೮-೧೯ರಲ್ಲಿ. ಆದರೆ ಅವರ ಮೊದಲ ವಿಮರ್ಶೆಯ ಲೇಖನ ಪ್ರಕಟವವಾದದ್ದು, ೧೯೧೫ ರಷ್ಟು ಹಿಂದೆಯೇ ಎಂಬುದು ಸ್ವಾರಸ್ಯವಾದ ಸಂಗತಿಯಾಗಿದೆ. ಶ್ರೀಮತಿ ತಿರುಮಲಾಂಬಾ ಎಂಬ ಲೇಖಕಿಯರು ಸತೀ ಹಿತೈಷಿಣೀ ಗ್ರಂಥ ಮಾಲೆಯ ಮೂಲಕ ಪ್ರಕಟಿಸಿದ ಏಳು ಕಾದಂಬರಿಗಳನ್ನು ಕುರಿತು ಮಾಸ್ತಿಯವರು ಬರೆದ ವಿಮರ್ಶೆಯ ಲೇಖನ, ಮಂಗಳೂರಿಂದ ಪ್ರಕಟವಾಗುತಿದ್ದ ಕೃಷ್ಣಸೂಕ್ತಿ ಎಂಬ ಪತ್ರಿಕೆಯಲ್ಲಿ ಸುಮಾರು ೧೯೧೫ರಲ್ಲಿ ಪ್ರಕಟವಾಯಿತೆಂದು ತಿಳಿದು ಬರುತ್ತದೆ. ಶ್ರೀನಿವಾಸರು ಬರೆದ ಈ ಮೊದಲ ವಿಮರ್ಶನಾಲೇಖನದ ಧೋರಣೆ ಬಹುಮಟ್ಟಿಗೆ ಈ ದಿನ ಬರುತ್ತಿರುವ ವಿಮರ್ಶೆಗಳನ್ನು ಹೋಲುತ್ತದೆ. ಅದು ತುಂಬ ವಸ್ತುನಿಷ್ಠವಾಗಿಯೂ, ನಿಷ್ಪಕ್ಷಪಾತದ್ದೆಂಬಂತೆಯೂ ತೋರುತ್ತದೆಯಾದರೂ ಅಂದಿನ ಕಾಲಕ್ಕೆ ಕೊಂಚ ಕಟುವಾಯಿತೇನೋ ಎಂದು ಅನ್ನಿಸುತ್ತದೆ. ನಮಗೆ ಅನ್ನಿಸುವುದಿರಲಿ, ಮಾಸ್ತಿಯವರಿಗೇ ಅದನ್ನು ಬರೆದು ಪ್ರಕಟಿಸಿದ ಕೆಲವು ವರ್ಷಗಳ ಮೇಲೆ ಹಾಗೆ ಅನ್ನಿಸಿತೆಂಬುದು, ೧೯೨೩ರಂದು ಪ್ರಕಟವಾದ ಮೊದಲ ವಿಮರ್ಶೆಯ ಸಂಪುಟದ ಮುನ್ನುಡಿಯಲ್ಲಿ ದಾಖಲೆಯಾಗಿದೆ. 'ವಿಮರ್ಶೆ-೧'ರ ಮುನ್ನುಡಿಯಲ್ಲಿ ''ಸತೀ ಹಿತೈಷಿಣಿ'' ಮತ್ತು ಇನ್ನು ಇತರ ಗ್ರಂಥ ಮಾಲೆಗಳ ಕರ್ತ್ರಿಯವರಾದ ಶ್ರೀಮತಿ ತಿರುಮಲಾಂಬಾ ಅವರು ಅಸಾಧಾರಣವಾದ ದೇಶ ಸೇವೆಯನ್ನೂ, ಭಾಷಾ ಸೇವೆಯನ್ನು ಮಾಡಿಯೂ ಮಾಡುತ್ತಲೂ ಇದ್ದರೆಂಬುದನ್ನು ನಾನು ಬೇರೆ ಹೇಳಬೇಕಾಗಿಲ್ಲ. ಗ್ರಂಥಕರ್ತ್ರಿಯವರ ವಿಷಯದಲ್ಲಿ ಈ ಗೌರವ ಇಲ್ಲದಿದ್ದರೆ ನಾನು ಆ ವಿಮರ್ಶೆಯನ್ನು ಬರೆಯುತ್ತಿರಲಿಲ್ಲ. ಆದರೆ ಆ ವಿಮರ್ಶೆಯಲ್ಲಿ ಒಂದೆರಡು ಕಡೆ ಮಾತುಗಳು ಸ್ವಲ್ಪ ಕಠಿಣವಾದುವೆಂದು ಈಚೆಗೆ ನನಗೆ ತೋರಿದೆ. ನಮ್ಮಲ್ಲಿ ಇಂಗ್ಲಿಷನ್ನು ಕಲಿತು ಕನ್ನಡವನ್ನು ನೋಡುವವರು ಹೊಸದರಲ್ಲಿ ಇಂಗ್ಲಿಷಿನ ಉತ್ತಮ ಕೃತಿಗಳಿಗೆ ಸಮಾನವಾದ ಕೃತಿಗಳು ಕನ್ನಡದಲ್ಲಿ ಬರದೇ ಇದ್ದರೆ ಬಹಳ ಅಸಮಾಧಾನ ಪಡುವೆವು. ಈ ರೀತಿಯ ಗುಣಮಾಪನದ ಆಶಯವೇನೋ ಉಚ್ಚವಾದದ್ದು. ಆದರೆ ಹೀಗೆ ಮಾಪನ ಮಾಡುವಲ್ಲಿ ಯಾವ ಭಾಷೆಯಲ್ಲಾಗಲಿ ಬಹು ಜನರು ಬರೆದು ಬರಹದ ಸಂಪ್ರದಾಯಗಳು ಏರ್ಪಟ್ಟ ಮೇಲೆ ಉತ್ತಮ ಕಾವ್ಯ ಬಂದೀತಲ್ಲದೆ ಒಮ್ಮೆಗೆ ಬರಲಾರದು ಎಂಬುದನ್ನು ನಾವು ಮರೆತಂತಾಗುತ್ತದೆ. ಒಂಬತ್ತು ವರ್ಷದ ಹಿಂದೆ ಸತೀ ಹಿತೈಷಿಣೀ ಗ್ರಂಥಮಾಲೆಯನ್ನು ಕುರಿತು ವಿಮರ್ಶಿಸುವಲ್ಲಿ ಈ ಭಾವಕ್ಕೆ ನಾನು ಸಾಕಾದಷ್ಟು ಗಮನ ಕೊಡಲಿಲ್ಲ. ಅಲ್ಲದೆ ಆಗ್ಗೆ ನಾನು ಕನ್ನಡದಲ್ಲಿ ಒಂದೆರಡು ಪುಸ್ತಗಳನ್ನೂ ಬರೆದಿರಲಿಲ್ಲ'' - ಎನ್ನುತ್ತಾರೆ.

೧೯೨೩ರಂದು ಪ್ರಕಟವಾದ ತಮ್ಮ ವಿಮರ್ಶೆಯ ಮೊದಲ ಸಂಪುಟದಲ್ಲಿ

ಮಾಸ್ತಿಯವರು ಬರೆದ ಈ ಕೆಲವು ಮಾತುಗಳು ಹೊಸಗನ್ನಡ ವಿಮರ್ಶೆಯ ಇತಿಹಾಸದಲ್ಲಿ ತುಂಬ ಅರ್ಥಪೂರ್ಣವಾದ ನುಡಿಗಳಾಗಿವೆ. ಏಕೆಂದರೆ ಅಲ್ಲಿ ವಿಮರ್ಶೆಗೆ ಸಂಬಂಧಿಸಿದ ಕೆಲವು ಮುಖ್ಯ ಸಂಗತಿಗಳು ಸೂಚಿತವಾಗಿವೆ. ಮಾಸ್ತಿಯವರು ವಿಮರ್ಶೆಗೆ ಕೈ ಹಾಕಿದ ಅಂದಿನ ಕಾಲಕ್ಕೆ ಇಂಗ್ಲಿಷ್ ಸಾಹಿತ್ಯವನ್ನು ತಕ್ಕಮಟ್ಟಿಗೆ ಓದಿಕೊಂಡಿದ್ದ ಅವರಿಗೆ ಮತ್ತು ಅವರಂಥವರಿಗೆ, ಕನ್ನಡದಲ್ಲೂ ಆ ಮಟ್ಟದ ಕೃತಿಗಳು ಬರುವುದು ಯಾವಾಗ ಎಂಬ ಕಳಕಳಿ ಇದ್ದಂತೆ ಸೂಚಿತವಾಗಿದೆ. ಇಂಥ ಸ್ಥಿತಿಯಲ್ಲಿ ಅಂದು ಕನ್ನಡದಲ್ಲಿ ಬಂದ ಕೃತಿಗಳ ಬಗ್ಗೆ ಅಸಮಾಧಾನ ಉಂಟಾದದ್ದು ಸಹಜವಾಗಿದೆ. ಆದರೆ ನಿಜವಾದ ವಿಮರ್ಶೆಗೆ ಆ ಅಸಮಾಧಾನವಷ್ಟೆ ಹಿನ್ನೆಲೆಯಾಗಬ್ಬಾರದು. ಹೊಸದೊಂದು ಸಂಪ್ರದಾಯದಲ್ಲಿ ತಕ್ಕಷ್ಟು ಕೃತಿಗಳು ಬಂದು, ಅವುಗಳನ್ನು ಒಂದರ ಜತೆಗೊಂದು ಇರಿಸಿ ವಿಮರ್ಶೆಮಾಡುವಂತಹ ಅವಶ್ಯಕತೆ ಬರುವವರೆಗೂ ಕಾದು, ಸಾಹಿತ್ಯವನ್ನು ಮೊದಲು ಬೆಳೆಯಗೊಡಬೇಕು. ಎಂದರೆ ಸಾಹಿತ್ಯ ವಿಮರ್ಶೆ, ಸಾಕಷ್ಟು ಬೆಳೆದು ನಿಂತ ಸಾಹಿತ್ಯ ಸಂಪ್ರದಾಯದಲ್ಲಿ, ಆ ಸಾಹಿತ್ಯವನ್ನು ಕೇರಿ ತೂರುವ ಕಾರ್ಯವನ್ನು ಕೈಗೊಳ್ಳುವುದು ಸಹಜವಾದದ್ದು. ಸಾಹಿತ್ಯ ನಿರ್ಮಿತಿ ಮೊದಲು; ಸಾಹಿತ್ಯ ವಿಮರ್ಶೆ ಅನಂತರ. ಆದುದರಿಂದ ಹೊಸತೊಂದು ಸಾಹಿತ್ಯ ಪರಂಪರೆ ನಿರ್ಮಿತವಾಗುತ್ತಿರುವಾಗ, ವಿಮರ್ಶಕನಾದವನು ಅದು ಬೆಳೆದು ಒಂದು ಘಟ್ಟಕ್ಕೆ ಬರುವವರೆಗೂ ಕಾಯುವ ಸಮಾಧಾನವನ್ನು ಗಳಿಸಿಕೊಳ್ಳಬೇಕು. ಅಲ್ಲದೆ ವಿಮರ್ಶಕನಾದವನು ತಾನೇ ಒಂದೆರಡು ಪುಸ್ತಕಗಳನ್ನು ಬರೆದಿದ್ದರೆ, ಬರಹಗಾರನ ಸಮಸ್ಯೆಗಳು ಸ್ವಲ್ಪಮಟ್ಟಿಗೆ ಅರ್ಥವಾಗುವ ಸಂಭವ ಉಂಟು. ಸ್ವತಃ ತಾನೇ ಏನನ್ನೂ ಬರೆಯದೆ ಇತರರ ಕೃತಿಗಳನ್ನು ವಿಮರ್ಶೆಮಾಡುವವನಿಗಿಂತ, ಸ್ವತಃ ಲೇಖಕನಾಗಿದ್ದುಕೊಂಡು ಬರೆವಣಿಗೆಯ ಸಮಸ್ಯೆಗಳನ್ನು ಬಲ್ಲವನು ಮಾಡುವ ವಿಮರ್ಶೆ ಹೆಚ್ಚು ಸಹಾನುಭೂತಿಯದೂ, ಸಮತೂಕದ್ದೂ ಆಗಬಹುದು. ಇದರ ಜತೆಗೆ ವಿಮರ್ಶಕನು ಒಮ್ಮೆ ಒಂದು ಕೃತಿಯ ಬಗ್ಗೆ ಹೇಳಿದ ಮಾತು, ಆ ಕೃತಿಯ ಬಗ್ಗೆ ಕೊನೆಯ ಮಾತಾಗಿ ಉಳಿಯುತ್ತದೆ ಎಂದು ಭಾವಿಸದೆ, ಕಾಲಕ್ರಮದಲ್ಲಿ ತಾನು ಹೇಳಿದ ಮಾತು ಸರಿಯೆ ತಪ್ಪೇ ಎಂದು, ತನ್ನ ವಿಮರ್ಶೆಯನ್ನೂ ವಿಮರ್ಶಿಸಿಕೊಂಡು ನೋಡುವ ಸೌಜನ್ಯವೂ ಆತನಿಗೆ ಬೇಕು. ಮಾಸ್ತಿಯವರ 'ವಿಮರ್ಶೆ-ಭಾಗ ೧'ರ ಮುನ್ನುಡಿಯ ಕೆಲವು ಮಾತುಗಳಲ್ಲಿ ಇವಿಷ್ಟು ಅಂಶಗಳೂ ಎದ್ದು ಕಾಣುತ್ತವೆ.

ಮಾಸ್ತಿಯವರು ಕನ್ನಡದಲ್ಲಿ ಒಂದೆರಡು ಪುಸ್ತಕಗಳನ್ನೂ ಬರೆದಿರುವ ಕಾಲದಲ್ಲಿ ವಿಮರ್ಶೆಯನ್ನು ಬರೆದರೆಂಬುದು ಸ್ವಾರಸ್ಯವಾದ ಸಂಗತಿಯಾಗಿದೆ. ಎಂದರೆ ಮಾಸ್ತಿಯವರ ಸಾಹಿತ್ಯ ಕೃಷಿಯ ಆರಂಭವೇ ವಿಮರ್ಶೆಯಿಂದ ಆರಂಭವಾಯಿತೆಂಬ ಅರ್ಥ ಇದರಿಂದ ಹೊರಡುತ್ತದೆ. ಅದೇನೇ ಇರಲಿ, ೧೯೨೩ರಿಂದು ಪ್ರಕಟವಾದ ಅವರ ವಿಮರ್ಶೆಯ ಮೊದಲ ಸಂಪುಟದಲ್ಲಿ 'ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ' ಎಂಬ ಲೇಖನವೊಂದಿದೆ. ಬಹುಶಃ ವಿಮರ್ಶೆಯ ಮೂಲತತ್ವಗಳನ್ನು ಕುರಿತು ಕನ್ನಡದಲ್ಲಿ ಬಂದ ಲೇಖನಗಳಲ್ಲಿ ಇದೇ ಮೊದಲನೆಯದೆಂದು ತೋರುತ್ತದೆ. ವಿಮರ್ಶೆ ಎಂದರೇನು, ವಿಮರ್ಶೆಯ ಕಾರ್ಯ ಏನು ಎಂಬ ವಿಚಾರ ಇಪ್ಪತ್ತೈದು ಪುಟಗಳ ಈ ಲೇಖನದಲ್ಲಿ ನಿರೂಪಿತವಾಗಿದೆ. ಆದರೆ ಈ ಲೇಖನದಲ್ಲಿ ಪ್ರಸ್ತಾಪಿತವಾಗಿರುವ ಎಷ್ಟೋ ಸಂಗತಿಗಳು ಇಂದು ತೀರಾ ಪ್ರಾಥಮಿಕವೂ, ವಿಲಕ್ಷಣವೂ ಎಂಬಂತೆ ತೋರಬಹುದು. ಅದಕ್ಕೆ ಕಾರಣ ಇಂದು ವಿಮರ್ಶೆಯ ಸಿದ್ಧಾಂತ ಬಹುಮುಖವಾಗಿ ಬೆಳೆದಿರುವುದೇ ಕಾರಣ. 'ಕಾವ್ಯದಿಂದ ಬರಬೇಕಾದ ಸಂಪೂರ್ಣ

ಸಂಸ್ಕಾರ ಓದುಗನಿಗೆ ಬರುವಂತೆ ಮಾಡತಕ್ಕದ್ದು ವಿಮರ್ಶಕನ ಕಾರ್ಯದ ಮುಖ್ಯಾಂಶ ..'[1] ಕಾವ್ಯದಲ್ಲಿ ಕವಿ ಗ್ರಹಿಸಿಡುವ ತೇಜಸ್ಸನ್ನು ತಾನೇ ಪಡೆಯಲಾರದ ಜನರಿಗೆ ಸರಳವಾಗುವಂತೆ ಮಾಡತಕ್ಕದ್ದೆ' ವಿಮರ್ಶೆಯ[2] ಕಾರ್ಯ ಎಂಬ ಹೇಳಿಕೆಗಳು ಮಾಸ್ತಿಯವರ ದೃಷ್ಟಿಯಲ್ಲಿ ವಿಮರ್ಶೆ ಎಂದರೇನೆಂಬುದನ್ನೂ ಮತ್ತು ಮಾಸ್ತಿಯವರ ವಿಮರ್ಶೆಯ ವಿಧಾನವನ್ನೂ ಪರಿಚಯ ಮಾಡಿಕೊಡುತ್ತವೆ.

ಮಾಸ್ತಿಯವರು ಅನೇಕ ಕನ್ನಡ ಪುಸ್ತಕಗಳಿಗೆ ಆಗಾಗ ಬರೆದ ಮುನ್ನುಡಿಗಳನ್ನೆಲ್ಲಾ ಸಂಗ್ರಹಿಸಿ 'ಪೂಜನ' ಎಂಬ ಹೆಸರಿನಿಂದ ಪ್ರಕಟಿಸಿದ್ದಾರೆ. ಈ ಮುನ್ನುಡಿಗಳಲ್ಲಿ ಕೆಲವೆಡೆ ನಿಜವಾದ ವಿಮರ್ಶೆಯ ಹೊಳಹು ಇದ್ದರೂ, ನಮ್ಮ ಈ ಲೇಖನದ ಮಟ್ಟಿಗೆ ಅದನ್ನು ಕೈಬಿಟ್ಟು, ಅವರು ವಿಮರ್ಶೆ ಎಂಬ ಹೆಸರಿನಲ್ಲಿ ಪ್ರಕಟಿಸಿರುವ ನಾಲ್ಕು ಸಂಪುಟಗಳನ್ನೂ, ಜೊತೆಗೆ ಅವರ ಆದಿಕವಿ ವಾಲ್ಮೀಕಿ ಮತ್ತು ಭಾರತ ತೀರ್ಥವನ್ನೂ ಇಲ್ಲಿ ಅವರ ವಿಮಾರ್ಶಾ ಸಾಹಿತ್ಯವೆಂದು ಪರಿಗಣಿಸಲಾಗಿದೆ.

ಮಾಸ್ತಿಯವರ ವಿಮರ್ಶೆಯ ಬರಹಗಳನ್ನು ಮೂರು ವಿಭಾಗವನ್ನಾಗಿಸಿ ನೋಡಬಹುದು. ಒಂದು ಕನ್ನಡ ಮತ್ತು ಕನ್ನಡಕ್ಕೆ ಹತ್ತಿರದ ಸೋದರ ಭಾಷೆಗೆ ಸಂಬಂಧಿಸಿದ ಸಾಹಿತ್ಯ ಕೃತಿಗಳ ವಿಮರ್ಶೆ; ಎರಡು, ಭಾರತೀಯ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳ ವಿಮರ್ಶೆ; ಮೂರು, ಅನ್ಯದೇಶಿಯವಾದ ಸಾಹಿತ್ಯ ಕೃತಿಗಳ ವಿಮರ್ಶೆ.

ವೈಷ್ಣವದಾಸರ ಕೀರ್ತನೆಗಳು; ಕನ್ನಡ ನಾಡಿನ ಲಾವಣಿ ಸಾಂಗತ್ಯಗಳು : ಲಕ್ಷ್ಮೀಶನ ಕಾವ್ಯ; ಮುದ್ದಣ ಕವಿಯ ಶ್ರೀ ರಾಮಾಶ್ವಮೇಧ ಮತ್ತು ಸತೀ ಹಿತೈಷಿಣೀ ಗ್ರಂಥ ಮಾಲೆ - ಈ ಐದು ನೇರವಾಗಿ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳು. ತಮಿಳ ವೈಷ್ಣವ ಪ್ರಬಂಧಗಳು - ಕನ್ನಡದ ಸೋದರ ಭಾಷೆಯಾದ ತಮಿಳು ಸಾಹಿತ್ಯ ಕೃತಿಗೆ ಸಂಬಂಧಿಸಿದ್ದು. ಭಾರತೀಯ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಠಾಕೂರ ಕವಿವರರ ಗೀತಾಂಜಲಿ; ಕಾಳಿದಾಸನ ಮೇಘಸಂದೇಶ ಎಂಬ ಲೇಖನಗಳು, ಮತ್ತು ಆದಿಕವಿ ವಾಲ್ಮೀಕಿ, ಭಾರತ ತೀರ್ಥ - ಎಂಬೆರಡು ಪುಸ್ತಕಗಳು. ಇನ್ನು ಗಯಟೆ ಕವಿಯ ಕಾವ್ಯ ಮೀಮಾಂಸೆ ಮತ್ತು ನಾಟಕಗಳನ್ನು ಕುರಿತು ಎರಡು ಲೇಖನ; ಅಗಸ್ಟೀನ್, ಅರೀಲಿಯಸ್, ಡೇವಿಡ್ ಎಪಿಕ್ಟಿಟಸ್ ಮತ್ತು ಹಾಫೀಸ್‌ನನ್ನು ಕುರಿತ ಐದು ಲೇಖನಗಳು. ಇದು ಮಾಸ್ತಿಯವರ ವಿಮರ್ಶೆಯ ವಿಷಯ ವೈವಿಧ್ಯದ ಹರಹು.

ಈ ಎಲ್ಲ ಲೇಖನಗಳನ್ನು ನೋಡಿದರೆ ಕನ್ನಡ ವಿಮರ್ಶೆಯ ಆರಂಭ ಕಾಲದಲ್ಲಿ ಮಾಸ್ತಿಯವರ ಉದ್ದೇಶ, ಎಷ್ಟು ಘನವಾದದ್ದು ಎಂಬುದು ಕಾಣುತ್ತದೆ. ಇಲ್ಲಿ ಕಾಣುವುದು ಕನ್ನಡ ವಿಮರ್ಶೆಯ ಮೊದಲ ದಿನಗಳಲ್ಲಿ ಒಳ್ಳೆಯ ಸಂಪ್ರದಾಯದ ಸಸಿ ನಡುವ ಪ್ರಯತ್ನಗಳನ್ನು. ಕನ್ನಡಿಗನ ಅರಿವು, ಪೂರ್ವ-ಪಶ್ಚಿಮವೆಂಬ ಬೇಧವಿಲ್ಲದೆ ಎಷ್ಟು ದಿಕ್ಕಿನಿಂದ ಪುಷ್ಟವಾಗಿ ಬೆಳೆಯಬೇಕು ಎನ್ನುವುದರ ಸೂಚನೆ ಈ ಲೇಖನಗಳಲ್ಲಿವೆ. ನಿಜವಾದ ಕನ್ನಡಿಗ ತನ್ನ ಕನ್ನಡತನದ ಅರಿವನ್ನು ನಡುವೆ ಇರಿಸಿಕೊಂಡು, ಕನ್ನಡೇತರವಾದ ಭಾರತೀಯ ಸಾಹಿತ್ಯದ, ಮತ್ತು ಭಾರತೀಯ ಪರಂಪರೆಯ ಪರಿಚಯ ಮಾಡಿಕೊಂಡು,

1. ವಿಮರ್ಶೆ ೧ - ಪು. 8

2. ವಿಮರ್ಶೆ ೧ - ಪು. 17

ಇಡೀ ಜಗತ್ತಿನ ಸಾಹಿತ್ಯದಿಂದ ಪುಷ್ಟಿ ಪಡೆಯಬೇಕಾಗಿದೆ ಎಂಬುದನ್ನು ಈ ಲೇಖನಗಳ ಮೊತ್ತ ಸೂಚಿಸುತ್ತದೆ. ಆದುದರಿಂದಲೆ ಕನ್ನಡ ವಿಮರ್ಶೆಯ ಆರಂಭದ ದಿನಗಳಲ್ಲಿ, ಈ ಬಗೆಯ ದೃಷ್ಟಿ ವೈಶಾಲ್ಯದ, ವ್ಯಕ್ತಿತ್ವ ಪುಷ್ಟತೆಯ ಅಗತ್ಯವನ್ನು ಮಾಸ್ತಿಯವರು ತಮ್ಮ ವಿಮರ್ಶಾ ಲೇಖನಗಳ ಮೂಲಕ ತೋರಿಸಿಕೊಟ್ಟಿದ್ದಾರೆ.

ವಾಲ್ಮೀಕಿ ಮತ್ತು ವ್ಯಾಸರ ಮಹಾಕೃತಿಗಳನ್ನು ಕುರಿತು 'ಆದಿಕವಿ ವಾಲ್ಮೀಕಿ' ಮತ್ತು 'ಭಾರತ ತೀರ್ಥ' ಎಂಬ - ಈ ಎರಡು ಕೃತಿಗಳನ್ನು ಮೀರಿಸುವ ವಿಮರ್ಶಾತ್ಮಕ ಕೃತಿಗಳು, ಈ ವಿಷಯದ ಮೇಲೆ ಕನ್ನಡದಲ್ಲಿ ಇನ್ನೂ ಬಂದಿಲ್ಲ. ಅದರಲ್ಲೂ ೧೯೩೩ ರಷ್ಟು ಹಿಂದೆಯೆ ಬಂದ ಆದಿಕವಿ ವಾಲ್ಮೀಕಿ, ಭಾರತ ತೀರ್ಥಕ್ಕಿಂತ ಹೆಚ್ಚು ಸಮರ್ಪಕವಾದ ಕೃತಿ ಎನ್ನಿಸುತ್ತದೆ. ರಾಮಾಯಣವನ್ನು ಕುರಿತು ಇಷ್ಟು ಸಮಗ್ರವಾದ ವಿಮರ್ಶೆ ಕನ್ನಡದಲ್ಲಿ ಇಲ್ಲ. ಈ ಎರಡು ಕೃತಿಗಳಲ್ಲಿಯೂ ಮಾಸ್ತಿಯವರ ವಿಸ್ತಾರವಾದ ಅಧ್ಯಯನ, ಅವರ ರಸಜ್ಞತೆ ಎದ್ದು ಕಾಣುವಂತಿದೆ. ಭಾರತದ ಯಾವ ಒಬ್ಬ ಸಾಹಿತಿಗಾಗಲಿ ವಿಮರ್ಶಕನಿಗಾಗಲಿ, ಇಡೀ ಭಾರತೀಯ ಸಂಸ್ಕೃತಿಯ ಸಾರದಂತಿರುವ ಈ ಎರಡು ಮಹಾ ಕೃತಿಗಳ ಅಧ್ಯಯನ ಎಷ್ಟು ಅಗತ್ಯ ಎಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ.

ಮಾಸ್ತಿಯವರ ವಿಮರ್ಶೆಯ ಪ್ರಧಾನ ಗುಣ ಅದು ವರ್ಣನಾತ್ಮಕವಾದದ್ದು; ಕವಿಗಳ ಹಾಗೂ ಕೃತಿಗಳ ವಿಚಾರದಲ್ಲಿ ರುಚಿಯನ್ನು ಹುಟ್ಟಿಸುವಂಥಾದ್ದು; ರುಚಿಯನ್ನು ಹುಟ್ಟಿಸುವುದರ ಜೊತೆಗೆ ಓದುಗರ ರುಚಿಯನ್ನು ತಿದ್ದುವ ಉದ್ದೇಶ ಉಳ್ಳದ್ದು. ಅವಗುಣಗಳ ಕಡೆಗೆ ಅಷ್ಟಾಗಿ ಕಣ್ಣು ಹೊರಳದೆ ಗುಣವನ್ನು ಪ್ರಶಂಸೆಮಾಡುವ ನಿದರ್ಶನಗಳೇ ವಿಶೇಷವಾಗಿವೆ ಇವರ ಬರಹಗಳಲ್ಲಿ. ಅವರು ವಿಮರ್ಶೆಗೆ ಆರಿಸಿಕೊಂಡ ವಿಷಯಗಳಲ್ಲಿಯೇ ನಿರ್ದುಷ್ಟತೆ ಇದೆ ಎಂದು ಇದರರ್ಥವಲ್ಲ; ಆದರೆ ಅವರು ಆರಿಸಿಕೊಂಡ ವಿಷಯಗಳಲ್ಲಿ ಒಳಿತೇನಿದೆ, ಸೊಗಸೇನಿದೆ ಅದರ ಕಡೆಗೆ ಅವರಿಗೆ ವಿಶೇಷ ಗಮನ. ಕನ್ನಡವಲ್ಲದ ಬೇರೆ ಭಾಷೆಯ ಸಾಹಿತ್ಯ ವಿಷಯಗಳನ್ನು ಅತ್ತ ಸರಿಸಿ, ಕನ್ನಡ ಕವಿಕೃತಿಗಳ ಬಗೆಗೆ ಅವರು ಬರೆದ ಲೇಖನಗಳನ್ನು ನೋಡಿದರೂ - ಸಮಕಾಲೀನವಾದ, ಸತೀ ಹಿತೈಷಿಣೀ ಗ್ರಂಥ ಮಾಲೆಯನ್ನು ಕುರಿತ ಅವರ ಮೊದಲ ವಿಮರ್ಶಾ ಲೇಖನವನ್ನು ಬಿಟ್ಟು - ಉಳಿದ ಹಳೆಯ ಸಾಹಿತ್ಯದ ಬಗೆಗಂತೂ ಏನೂ ದೋಷವೇ ಇಲ್ಲವೆಂಬಂತಹ ಉದಾರತೆ ಅವರಲ್ಲಿದೆ. ನಿದರ್ಶನಕ್ಕೆ ಮುದ್ದಣ ಕವಿಯನ್ನು ಕುರಿತು ಅತಿ ಪ್ರಶಂಸೆಯ ಅವರ ಲೇಖನವನ್ನು ನೋಡಬಹುದು; ಲಕ್ಷ್ಮೀಶನ ಜೈಮಿನಿ ಭಾರತದ ಸೊಗಸನ್ನು ಪರಿಚಯ ಮಾಡಿಕೊಡುವ ಲೇಖನವನ್ನಾಗಲಿ, ಕನ್ನಡದ ವೈಷ್ಣವ ದಾಸರನ್ನು ಕುರಿತ ಲೇಖನವನ್ನಾಗಲಿ ನೋಡಬಹುದು. ಮುದ್ದಣದ ಬಗ್ಗೆ ಸಮರ್ಥವಾದ ಲೇಖನವನ್ನು ಬರೆದು, ಶ್ರೀ ಎಸ್.ವಿ. ರಂಗಣ್ಣನವರು, ಮಾಸ್ತಿಯವರ ಲೇಖನವನ್ನೂ ಉಜ್ಜಿ ನೋಡಿರುವ ಪ್ರಸಂಗವನ್ನು ಕನ್ನಡದ ಓದುಗರೆಲ್ಲ ಬಲ್ಲರು. ಲಕ್ಷ್ಮೀಶನ ಹಾಗೂ ವೈಷ್ಣವ ದಾಸರ ಕೀರ್ತನೆಗಳ ಬಗೆಗೂ ಮಾಸ್ತಿಯವರು ಉತ್ಸಾಹದ, ಪ್ರಶಂಸೆಯ ವರ್ಣನಾತ್ಮಕ ವಿಮರ್ಶೆಯನ್ನು ಮಾಡಿದಾರೆಯೆ ಹೊರತು, ಅಲ್ಲಿ ಮೌಲ್ಯಮಾಪನದ ಪ್ರಯತ್ನ ಕಾಣದು ಎಂದು ಹೇಳಬೇಕಾಗಿದೆ. ಇದಕ್ಕೆ ಕಾರಣ ಮಾಸ್ತಿಯವರು ಈ ಬಗೆಯ ಮೌಲ್ಯಮಾಪನ ವಿಮರ್ಶೆಯನ್ನು ಮಾಡಲಾರರು ಎಂಬುದಲ್ಲ; ಹಳೆಯ ಕವಿ ಕೃತಿಗಳು ತಕ್ಕಮಟ್ಟಿಗೆ ಉತ್ತಮ ಕೃತಿಗಳೇ ಆಗಿದ್ದುವು ಎಂಬ ಅವರ ನಂಬಿಕೆಯೆ ಕಾರಣ. 'ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ' ಎಂಬ ಲೇಖನದಲ್ಲಿ ಅವರು ತಮ್ಮ ಆ ನಂಬಿಕೆಯನ್ನು ಪ್ರಕಟಪಡಿಸಿದ್ದಾರೆ. ನಮ್ಮಲ್ಲಿ ಹಿಂದೆ ವಿಮರ್ಶೆ

ಬೆಳೆಯದಿರಲು ಕಾರಣವೇನೆಂಬುದನ್ನು ಚರ್ಚಿಸುತ್ತಾ 'ನಮ್ಮಲ್ಲಿ ಹಿಂದೆ ದುಷ್ಟ ಗ್ರಂಥಗಳು ಪ್ರಚಾರವಾಗುವುದಕ್ಕೆ ಅವಕಾಶವಿರಲಿಲ್ಲ. ಕವಿಯಾಗಬೇಕೆಂದವನು ತನ್ನ ಶಕ್ತಿಯನ್ನು ಸಭೆಗಳ ಮುಂದೆ ಸ್ಥಾಪಿಸಬೇಕಾಗಿತ್ತು. ತಿಳಿದವರ ಸಭೆಗಳು, ಅದರಲ್ಲೂ ಇತರ ಕವಿಗಳು ಇರುತ್ತಿದ್ದಂಥವು; ಇಂಥ ಸಭೆಗಳ ಮುಂದೆ ಬಹಳ ಒಳ್ಳೆಯ ಕಾವ್ಯವಲ್ಲದೆ ಯಾವುದೂ ಉಳಿಯುತ್ತಿರಲಿಲ್ಲ. ಇದಾದಮೇಲೆ ಇದು ಒಳ್ಳೆಯ ಗ್ರಂಥ, ಇದು ಅಲ್ಲ ಎಂದು ಹೇಳಬೇಕಾಗಿರಲಿಲ್ಲ .. . ಒಳ್ಳೆಯದಲ್ಲದ ಗ್ರಂಥಕ್ಕೆ ಉಳಿವೆ ಇಲ್ಲ. . .ಹೀಗೆ ಸಭೆಗಳ ನಿರ್ದಾಕ್ಷಿಣ್ಯ ತಿರಸ್ಕಾರದಿಂದಲೂ, ಪ್ರತಿಗಳನ್ನು ಮಾಡುವುದರಲ್ಲಿ ಇದ್ದ ಕಷ್ಟಗಳಿಂದಲೂ, ಒಳ್ಳೆಯ ಗ್ರಂಥಗಳು ಮಾತ್ರ ಪ್ರಾಚುರ್ಯಕ್ಕೆ ಬಂದು, ಜನರಲ್ಲಿ ಒಳ್ಳೆಯ ಗ್ರಂಥಗಳ ಸ್ವಾರಸ್ಯವನ್ನು ತಿಳಿಯುವ ಶಕ್ತಿ ಹಬ್ಬಿದ್ದರಿಂದ ಅಸಾಧು ಪ್ರವೃತ್ತಿಗಳನ್ನು ತಿದ್ದುವುದಕ್ಕಾಗಿ ವಿಮರ್ಶೆ ಬೇಕಾಗಿರಲಿಲ್ಲ'[3] - ಎನ್ನುತ್ತಾರೆ. ಪಂಡಿತರ ಸಭೆಗಳ ಮುಂದೆ ಬಂದು ಅಂಗೀಕೃತವಾಗಬೇಕಾಗಿದ್ದ ಕಾರಣದಿಂದ, ಹಿಂದಿನ ಕೃತಿಗಳೆಲ್ಲಾ ಉತ್ತಮ ಕೃತಿಗಳೇ ಆಗಿದ್ದುವು ಎನ್ನುವುದು, ಒಳ್ಳೆಯದಲ್ಲದ ಕಾವ್ಯ ಯಾವುದೂ ಉಳಿಯುತ್ತಿರಲಿಲ್ಲವಾದ ಕಾರಣ ಜನಕ್ಕೆ ವಿಮರ್ಶೆಯ ಅಗತ್ಯವಿರಲಿಲ್ಲ ಎನ್ನುವುದೂ ತೀರ ವಿಲಕ್ಷಣವಾದ ತರ್ಕವಾಗಿದೆ. ಕನ್ನಡ ಸಾಹಿತ್ಯವನ್ನು ಸಮಗ್ರವಾಗಿ ಬಲ್ಲ ಯಾರೂ ಈ ತರ್ಕವನ್ನು ಒಪ್ಪಲಾರರು. ಆದ ಕಾರಣ, ಹಿಂದಿನ ಸಾಹಿತ್ಯದಲ್ಲಿ ಒಳ್ಳೆಯದಲ್ಲದ ಕಾವ್ಯವೇ ಇಲ್ಲ ಎಂಬ ಮೂಲಭೂತವಾದ 'ನಂಬಿಕೆ'ಯಿಂದ ಹೊರಟ ಮಾಸ್ತಿಯವರ ವಿಮರ್ಶೆ ಬಹುಮಟ್ಟಿಗೆ ವರ್ಣನಾತ್ಮಕ ಮಾತ್ರವಾಗಿರುವುದು ಸಹಜವಾಗಿದೆ. ಆದರೆ ಒಳ್ಳೆಯ ಅಂಶಗಳನ್ನು ತೋರಿಸುವಲ್ಲಿ, ವ್ಯಾಖ್ಯಾನಿಸುವಲ್ಲಿ ಮಾಸ್ತಿಯವರು ಪಡುವ ಸುಖವನ್ನು ಮತ್ತು ಅವರ ರಸಜ್ಞತೆಯನ್ನು ಶಂಕಿಸುವಹಾಗಿಲ್ಲ.

ಮಾಸ್ತಿಯವರ ವಿಮರ್ಶೆ ಪ್ರಧಾನವಾಗಿ ವರ್ಣನಾತ್ಮಕವಾದುದಾದರೂ, ಕನ್ನಡ ವಿಮರ್ಶೆಯ ಆರಂಭದ ದಿನಗಳಲ್ಲಿ ಬಂದ ಅವರ ವಿಮರ್ಶಾ ಲೇಖನಗಳಲ್ಲಿ, ತೌಲನಿಕ ವಿಮರ್ಶೆ, ವ್ಯಾಖ್ಯಾನ ವಿಮರ್ಶೆ, ಸಂಶೋಧನ ವಿಮರ್ಶೆ ಮತ್ತು ಪ್ರಾಯೋಗಿಕ ವಿಮರ್ಶೆಯ ಪ್ರಯತ್ನಗಳೂ ಕ್ವಚಿತ್ತಾಗಿ ಕಾಣಸಿಕೊಂಡಿವೆ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಒಂದು ಕೃತಿಯ ಬಗೆಗೆ ರುಚಿ ಹುಟ್ಟಿಸಬೇಕಾದರೆ, ವಿಮರ್ಶಕನಾದವನು ತನ್ನ ರುಚಿ ಸಾಮರ್ಥ್ಯದ ಬಗ್ಗೆ ನಂಬಿಕೆ ಹುಟ್ಟಿಸಬೇಕು. ಮಾಸ್ತಿಯವರ ರುಚಿ ಸಾಮರ್ಥ್ಯದ ಬಗ್ಗೆ ಈ ಎಲ್ಲ ಲೇಖನಗಳೂ ವ್ಯಾಖ್ಯಾನದಂತಿವೆ. ಇವಕ್ಕೆ ನಿದರ್ಶನವಾಗಿ ಕಾಳಿದಾಸನ ಮೇಘದೂತವನ್ನು ಕುರಿತು, ಲಕ್ಷ್ಮೀಶನ ಜೈಮಿನಿ ಭಾರತವನ್ನು ಕುರಿತು ಅವರು ಬರೆದ ಲೇಖನಗಳನ್ನು ನೋಡಿದರೆ ಸಾಕು. ಕವಿ ಕೃತಿಯನ್ನು ಶ್ರದ್ಧೆಯಿಂದ, ತೆರೆದ ಮನಸ್ಸಿನಿಂದ ಓದಿ, ಅದರ ಸೊಗಸನ್ನು ತಾವೂ ಸವಿದು ಅದನ್ನು ಇತರರಿಗೆ ಪರಿಚಯ ಮಾಡಿಕೊಡುವ, ಪ್ರಿಯವಾದ, ನಯವಾದ ವಿಧಾನ ತುಂಬ ಸೊಗಸಾಗಿದೆ. ಮೇಘದೂತವನ್ನು ಕಾವ್ಯದ ಪದ್ಯಾನುವಾದಗಳೂ, ತಮಿಳು ವೈಷ್ಣವ ಪ್ರಬಂಧಗಳನ್ನು ಕುರಿತ ಲೇಖನದಲ್ಲಿ ಆಳ್ವಾರುಗಳ ಗೀತಗಳ ಪದ್ಯಾನುವಾದದಲ್ಲಿ ಕಂಡುಬರುವ ವಿವಿಧ ಪ್ರಯೋಗಗಳೂ ತುಂಬ

3. ವಿಮರ್ಶೆ - ೧; ಪು. 2-3

ಹೃದ್ಯವಾಗಿವೆ. ವಿಮರ್ಶೆಯ ನೆಪದಲ್ಲಿ ನಡೆದ ಈ ಪದ್ಯಾನುವಾದಗಳು ಅನುವಾದಕರಿಗೆ ಮಾರ್ಗದರ್ಶಕವಾಗಿರುವುದು ಮಾತ್ರವಲ್ಲದೆ, ಹೊಸ ಕಾವ್ಯ ಪ್ರಯೋಗದ ಅಂದಿನ ದಿನಗಳಲ್ಲಿ ಕನ್ನಡ ಕಾವ್ಯಕ್ಕೆ ಒಂದು ಕೊಡುಗೆ ಕೂಡಾ ಆಗಿವೆ ಎಂದು ನಮ್ಮ ಭಾವನೆ. ಹಾಗೆಯೇ ಗೀತಾಂಜಲಿಯ ಪರಿಚಯದಲ್ಲಿ ಮಾಡಿದ ಟ್ಯಾಗೂರರ ಕವಿತೆಯ ಗದ್ಯಾನುವಾದಗಳು, ಡೇವಿಡ್, ಆಗಸ್ಟೀನ್, ಅರಿಲೀಯಸ್, ಹಾಫಿಂಸ್ - ಇತ್ಯಾದಿಯವರ ಕೃತಿಯಿಂದ ಮಾಡಿಕೊಂಡಿರುವ ಅನುವಾದ ಭಾಗಗಳು, ಆಯಾ ಕವಿಗಳ ಕೃತಿ ಪರಿಚಯಕ್ಕೆ ತುಂಬ ಉಚಿತವಾದವುಗಳಾಗಿವೆ. ಕೃತಿ ಪರಿಚಯದ ವರ್ಣನಾತ್ಮಕ ವಿಧಾನದಲ್ಲಿ, ಮಾಸ್ತಿಯವರು ಮೂಲ ಲೇಖಕರನ್ನು ಎಷ್ಟು ಸಹೃದಯತೆಯಿಂದ, ಶ್ರದ್ಧೆಯಿಂದ ಅಭ್ಯಸಿಸಿದ್ದಾರೆ, ಆಯಾ ಕವಿ ಕೃತಿಗಳ ಅಂತರಂಗವನ್ನು ಮುಟ್ಟಿ ಮಿಡಿಯಬಲ್ಲವರಾಗಿದ್ದಾರೆ ಎಂಬುದು ವ್ಯಕ್ತವಾಗಿದೆ. ಅಷ್ಟೇ ಅಲ್ಲದೆ, ಮಾಸ್ತಿಯವರ ಅನುವಾದಗಳ ಮೂಲಕ ಪರಿಚಯವಾಗುವ ಅನ್ಯದೇಶದ ಸಾಸಿತ್ಯ ಭಾಗಗಳನ್ನು ಓದಿದ ನಮಗೆ, ಮೂಲದಲ್ಲಿ ಆ ಕೃತಿಗಳು ಇನ್ನೆಷ್ಟು ಸೊಗಸಾಗಿದ್ದೀತು ಎಂಬ ಕುತೂಹಲ ಹಾಗೂ ಆಸಕ್ತಿ ಹುಟ್ಟುತ್ತದೆ. ಹೀಗೆ ನಮ್ಮ ಸಾಹಿತ್ಯದ ಬಗ್ಗೆ ಮತ್ತು ವಿದೇಶೀಯವಾದ ಸಾಹಿತ್ಯದ ಬಗ್ಗೆ ರುಚಿ ಹುಟ್ಟಿಸುವ ಕಾರ್ಯವನ್ನು ಮಾಸ್ತಿಯವರ ವಿಮರ್ಶೆ ಯಶಸ್ವಿಯಾಗಿ ಮಾಡುತ್ತದೆ.

ಮಾಸ್ತಿಯವರು ಕನ್ನಡದ, ಭರತ ಖಂಡದ ಮತ್ತು ಪಾಶ್ಚಾತ್ಯ ಕಾವ್ಯ ಸಮುದಾಯವನ್ನು ತಕ್ಕ ಮಟ್ಟಿಗೆ ಪರಿಚಯ ಮಾಡಿಕೊಂಡ ಕಾರಣದಿಂದ, ಅವರ ಕಣ್ಣಿಗೆ ಈ ಹಲವು ಸಾಹಿತ್ಯ ಕೃತಿಗಳ ಕೆಲವಂಶಗಳಲ್ಲಿ ಮನೋಧರ್ಮದ ಹಾಗೂ ಅಭಿವ್ಯಕ್ತಿಯ ಸಾಮ್ಯ ಕಂಡು ಬಂದಿದೆ. ಈ ಸಾಮ್ಯವನ್ನು ಗುರುತಿಸುವ ಪ್ರಯತ್ನದಲ್ಲಿ ತೌಲನಿಕ ವಿಮರ್ಶೆಯ ಅಂಶಗಳು ಅವರ ವಿಮರ್ಶೆಯ ಲೇಖನಗಳಲ್ಲಿ ಕಾಣಸಿಕೊಂಡಿವೆ. ಟ್ಯಾಗೂರರ ''ಗೀತಾಂಜಲಿ ಕಾವ್ಯವು ವೈಷ್ಣವ ಸಂಪ್ರದಾಯದಲ್ಲಿ ಹಿಂದಣ ದಾಸರು ಬರೆದ ಗೀತೆಗಳ ಮಾರ್ಗದಲ್ಲಿ ಒಂದು ಹೊಸ ರೂಪ'' ಎಂದು ಸಾಮ್ಯವನ್ನು ಗುರುತಿಸಿದ ಇವರು ಯಹೋದ್ಯರ ಡೇವಿಡ್ ಮಹಾರಾಜನ ಕೀರ್ತನೆಗಳನ್ನು ಕರ್ಣಾಟಕದ ವೈಷ್ಣವ ಗೀತೆಗಳೊಂದಿಗೆ ಹೋಲಿಸಿ ''ಕರ್ನಾಟಕದ ವೈಷ್ಣವ ಗೀತೆಗಳಲ್ಲಿ ಉತ್ತಮವಾದವುಗಳಲ್ಲಿ ಕಾಣುವಂತೆ ಇಲ್ಲಿಯೂ ಕಾವ್ಯ ಸೌಂದರ್ಯ ಕಾಣುತ್ತದೆ. ನಮ್ಮ ವೈಷ್ಣವ ಗೀತೆಗಳು ಮಾನವನ ಇತಿಹಾಸದಲ್ಲಿ ಈ ಗೀತೆಗಳಾದ ಹಲವು ಶತಮಾನಗಳ ಮೇಲೆ ಬಂದವು. ಅಲ್ಲದೆ ಜನತೆಯೂ ಬೇರೆ. ಈ ಕಾರಣದಿಂದ ಈ ಗೀತೆಗಳಲ್ಲಿ ವೈಷ್ಣವ ಗೀತೆಗಳಿಂದ ಬೇರೆಯ ರೀತಿಯ ಒಂದು ಶಕ್ತಿ ಇದೆ. ಇಲ್ಲಿಯ ದೇವರು ನಿಷ್ಠುರ ದೈವ. ಇಲ್ಲಿಯ ಭಾವನೆ ಕಠಿಣವಾದದ್ದು. ಹಗೆಯನ್ನುವವನಿಗೆ ಕೇಡನ್ನು ಬಯಸತಕ್ಕದ್ದು. ಆದರೂ ಇದು ಉತ್ತಮವಾದ ಗೀತವೆ''5 ಎನ್ನುತ್ತಾರೆ. ಪಾಶ್ಚಾತ್ಯ ಹಾಗೂ ಪೌರಾತ್ಯ ಸಂಪ್ರದಾಯದ ಅನುಭಾವ ಸಾಹಿತ್ಯದಲ್ಲಿ, ಭಕ್ತಿಮಾರ್ಗದಲ್ಲಿ ಒಂದು ಬಗೆಯ ಸಾಮ್ಯವನ್ನು ಕಾಣುವುದು ಅಷ್ಟೇನೂ ಆಶ್ಚರ್ಯದ ಸಂಗತಿಯಲ್ಲ. ಆದರೆ ಹಾಗೆ ಸಾಮ್ಯವನ್ನು ಗುರುತಿಸುವುದರ ಜೊತೆಗೆ ಸತ್ವದೊಳಗಣ ಭೇದಗಳನ್ನು ವಿಚಾರ ಮಾಡುವುದು ವಿಶೇಷ ರೀತಿಯದು. ಈ ವಿಶೇಷತೆಯನ್ನು ತೌಲನಿಕ ವಿಧಾನದ ಈ ವಿಮರ್ಶೆಯಲ್ಲಿ ಮಾಸ್ತಿಯವರು ಮಾಡಿ ತೋರಿಸಿದ್ದಾರೆ. ವಾಲ್ಮೀಕಿ

4. ವಿಮರ್ಶೆ: ಭಾಗ ೨. ಪುಟ ೮೦

5. ವಿಮರ್ಶೆ: ಭಾಗ ೩. ಪುಟ ೧೯

ರಾಮಾಯಣವನ್ನು ಕುರಿತು ೧೯೩೪ರಷ್ಟು ಹಿಂದೆಯೆ ಪ್ರಕಟಿಸಿದ 'ಆದಿಕವಿ ವಾಲ್ಮೀಕಿ' ಯಲ್ಲಿ ರಾವಣನ ಪಾತ್ರವನ್ನು ಪಾಶ್ಚಾತ್ಯ ದುರಂತನಾಯಕ ತತ್ವದ ಹಿನ್ನೆಲೆಯಲ್ಲಿ ವಿವೇಚಿಸಿದ್ದಾರೆ. ಹಾಗೆಯೆ ಷೇಕ್ಸ್‌ಪಿಯರ್, ಮಿಲ್ಟನ್, ಹೋಮರ್ ಮೊದಲಾದ ಮಹಾಕವಿಗಳು ಚಿತ್ರಿಸಿರುವ 'ಪ್ರತಿ ನಾಯಕ' ಪಾತ್ರದೊಂದಿಗೆ, ವಾಲ್ಮೀಕಿಯ 'ಪ್ರತಿ ನಾಯಕ'ನನ್ನು ತುಲನೆಗೆ ಇರಿಸಿ ಚರ್ಚಿಸಿರುವುದು ವಿಶೇಷದ ಸಂಗತಿಯಾಗಿದೆ. ನಮ್ಮ ದೇಶದ ಮಹಾಕೃತಿಯೊಂದನ್ನು, ಅನ್ಯ ದೇಶದ ಮಹಾಕವಿ ಕೃತಿಗಳೊಡನೆ ಹೋಲಿಸಿ ನೋಡಬೇಕಾದದ್ದರ ಔಚಿತ್ಯವನ್ನೂ, ಆವಶ್ಯಕತೆಯನ್ನೂ ಮಾಸ್ತಿಯವರ ಈ ಪ್ರಯತ್ನ ಸೂಚಿಸುವುದಲ್ಲದೆ, ಅವರ ವಿಸ್ತಾರವಾದ ಅಧ್ಯಯನ ಹಾಗೂ ಅಭಿರುಚಿಗೆ ಈ ಬಗೆಯ ವಿಮರ್ಶೆ ಸಾಕ್ಷಿಯಾಗಿದೆ.

ಮಾಸ್ತಿಯವರ ವರ್ಣನಾತ್ಮಕ ವಿಮರ್ಶೆ ವ್ಯಾಖ್ಯಾನ ವಿಮರ್ಶೆಯಾದಾಗ ಅದು ತೆರೆಯುವ ರಮ್ಯತೆಯೆ ಬೇರೆ. ಒಂದು ಪದದ ಔಚಿತ್ಯ, ಒಂದು ವಾಕ್ಯದಲ್ಲಿನ ಶಬ್ದಸಮುದಾಯದ ಸೊಗಸು, ಒಂದು ಪ್ರಸಂಗದ ಸೊಗಸು - ಇಂಥವುಗಳನ್ನು ಎತ್ತಿಕೊಂಡು ವಿವರಿಸುವ ರೀತಿ ವಿಶೇಷವಾದದ್ದು. ಅದಕ್ಕೆ ನಿದರ್ಶನಗಳನ್ನು ಅವರ ಲೇಖನದಲ್ಲಿ ಹುಡುಕಬೇಕಾಗಿಲ್ಲ; ಕಣ್ಣಿಟ್ಟೆಡೆ ಅವು ಕಾಣುತ್ತವೆ. ಅವೆಲ್ಲವನ್ನೂ ಹೇಳಿ ವಿಲಂಬಿಸುವ ಅಗತ್ಯ ಇಲ್ಲಿ ಇಲ್ಲದು. ಆದರೂ ಒಂದೆರಡನ್ನು ಬೆರಳಿಟ್ಟು ತೋರಿಸುವುದು ಅಗತ್ಯ. ಜೈಮಿನಿ ಭಾರತವನ್ನು ಕುರಿತು ಬರೆಯುವಲ್ಲಿ ಒಂದೆಡೆ ಒಂದು ಪದವನ್ನು ಕುರಿತ ವಿವರಣೆ ಹೀಗಿದೆ: ''ಧರ್ಮರಾಜನು ತನ್ನ ಕುಲದ ನೃಪರ ಸಾಧು ಚಾರಿತ್ರ ತನ್ನಿಂದ ಸೊಗಡಾಗದೆ ಇರಲೆಂದು ಹೇಳುತ್ತಾನೆ. ಅಲ್ಲಿ ಸೊಗಡು ಎನ್ನುವ ಮಾತಿನಿಂದ ಬರುವ ಅರ್ಥ ಇನ್ನು ಯಾವ ಮಾತಿನಿಂದಲೂ ಬರಲಾರದು. ಜಿಡ್ಡಾಗಬಾರದು, ವಾಸನೆ ಬರಬಾರದು ಎಂಬ ಎರಡು ಭಾವ ಬರುವಂತೆ ಕವಿಯು ಈ ಮಾತನ್ನು ಉಪಯೋಗಿಸಿದ್ದಾನೆ''6 ಮಾತಿನ ಸೊಗಸು ಅಥವಾ ಶೈಲಿಯನ್ನು ಕುರಿತು ''ಅತಸೀ ಕುಸುಮ ಗಾತ್ರನಂ ಕಮಲ ನೇತ್ರ ಎಂಬಲ್ಲಿ ಮಾತು ಮೃದುವಾಗಿರುವುದಲ್ಲದೆ ಗಾತ್ರನಂ ನೇತ್ರನಂ ಎಂಬ ಪ್ರಾಸದಿಂದ ಕಿವಿಗೆ ಸುಖ ಕೊಡುವುದರಲ್ಲಿ ಕವಿಯು ನಾನೇ ಎಂಬ ಬೇರೆ ಬೇರೆಯ ಸ್ವರಗಳನ್ನು ತಂದಿರುವುದೂ, ವದನ ರದನ ಎಂದು ಬೇರೆ ಬೇರೆ ಅಕ್ಷರಗಳಿಂದ ಆರಂಭಿಸುವ ಪದಗಳನ್ನು ಹಾಕಿರುವುದೂ ಆತನ ಸ್ವಂತ ಸೌಂದರ್ಯ ಜ್ಞಾನವನ್ನು ತೋರಿಸುತ್ತದೆ.''7 ಎಂದು ವಿವರಿಸುವ ಪ್ರಯತ್ನ ಗಮನಿಸಬೇಕಾದದ್ದು. ಸೀತೆಯ ಅಗ್ನಿ ಪ್ರವೇಶದ ಸಂದರ್ಭವನ್ನು ಕುರಿತು ವಿಚಾರ ಮಾಡುವಲ್ಲಿ, 'ಆದಿಕವಿ ವಾಲ್ಮೀಕಿ' ಎಂಬ ಕೃತಿಯಲ್ಲಿ, ಮಾಸ್ತಿಯವರ ವ್ಯಾಖ್ಯಾನ ಅನನ್ಯವಾದದ್ದು. ಸೀತೆಯ

ಅಗ್ನಿಪ್ರವೇಶದ ಸಂದರ್ಭ, ರಾಮಾಯಣದ ಕತೆಯಲ್ಲಿ ತುಂಬಾ ಚರ್ಚಾಸ್ಪದವಾದ ಸಂಗತಿಯಾಗಿದೆ ರಾಮನ ನಡವಳಿಕೆಯ ದೃಷ್ಟಿಯಿಂದ. ಸೀತೆ ಅಗ್ನಿಯನ್ನು ಪ್ರವೇಶಮಾಡಿದ್ದು ಅಗ್ನಿ ತನ್ನನ್ನು ಸುಡಲಿ ಎಂದಲ್ಲ; ಅಗ್ನಿ ತನ್ನನ್ನು ರಕ್ಷಿಸಲಿ ಎಂದು ಅಗ್ನಿಯನ್ನು ಹೊಕ್ಕಳು ಎಂಬ ಮಾತನ್ನು ಹೇಳಿ, ಮಾಸ್ತಿಯವರು ''ಅಗ್ನಿಯನ್ನು ಹೊಕ್ಕದ್ದು ಸೀತೆ ಮಾತ್ರವಲ್ಲ. ಅವಳ ಜೊತೆಯಲ್ಲಿ ರಾಮನೂ ಒಂದು ಅಗ್ನಿಯನ್ನು ಹೊಕ್ಕನು. ಅವಳು ಬದುಕಿಕೊಂಡಾಗ ಅವನೂ ಬದುಕಿಕೊಂಡನು''8 - ಎನ್ನುತ್ತಾರೆ. ಈ ಸಂದರ್ಭವನ್ನು ಕುರಿತ

6. ವಿಮರ್ಶೆ; ಭಾಗ. ೪ ಪುಟ ೨೦
7. ಅಲ್ಲೇ ಪುಟ ೨೦
8. ಆದಿಕವಿ ವಾಲ್ಮೀಕಿ ಪುಟ ೧೩೧-೧೩೨

ಈ ವ್ಯಾಖ್ಯಾನ ಅಪೂರ್ವವೂ, ಅತ್ಯಂತ ಧ್ವನಿಪೂರ್ಣವೂ ಆದುದೆಂದು ನಮ್ಮ ಭಾವನೆ. ಒಂದು ಜೀವ ಎರಡು ದೇಹಗಳೆಂಬಂತೆ ಬದುಕಿದ ರಾಮ-ಸೀತೆಯರ ದಾಂಪತ್ಯದಲ್ಲಿ, ಆ ಬದುಕಿನ ಒಂದು ಭಾಗ ಅಗ್ನಿ ಪ್ರವೇಶದಂಥ ನಿಷ್ಠುರ ಪರೀಕ್ಷೆಗೆ ಒಳಗಾಗಬೇಕಾದಾಗ, ಅದೇ ವ್ಯಕ್ತಿತ್ವದ ಮತ್ತೊಂದು ಭಾಗವಾದ ರಾಮನ ಜೀವ, ಆ ಸಂದರ್ಭದಲ್ಲಿ ನಿರ್ಭಾವವಾಗಿ ತಣ್ಣಗಿರುವುದು ಸಾಧ್ಯವೇ ಇಲ್ಲ ಎಂಬುದನ್ನು ಗ್ರಹಿಸುವ ಪ್ರತಿಭಾಶಾಲಿಯಾದ ಸಹೃದಯನಿಗೆ ಈ ವ್ಯಾಖ್ಯಾನ ಅತ್ಯಂತ ಅರ್ಥಪೂರ್ಣವಾದುದೆಂದು ತಿಳಿಯುತ್ತದೆ. ಶ್ರೀ ಕುವೆಂಪು ಅವರ 'ರಾಮಾಯಣ ದರ್ಶನಂ' ದಲ್ಲಿ ಇದೇ ಅಗ್ನಿ ಪ್ರವೇಶದ ಸಂದರ್ಭ, ಸೀತೆ ಅಗ್ನಿಯನ್ನು ಹೊಕ್ಕ ನಂತರ ಹಿಂದೆಯೇ ರಾಮನೂ ಅದೇ ಅಗ್ನಿಯನ್ನು ಹೊಕ್ಕು ಆಕೆಯನ್ನು ಕೈಹಿಡಿದು ಹೊರಕ್ಕೆ ಕರೆದುಕೊಂಡು ಬಂದನೆಂಬಂತೆ ಚಿತ್ರಿತವಾಗಿದೆ. ಹೆಣ್ಣಾದ ಸೀತೆಯ ಶೀಲವನ್ನು ತಾನು ಶಂಕಿಸಿದಂತೆ, ಗಂಡಾದ ತನ್ನ ಶೀಲವನ್ನು ಇತರರು ಶಂಕಿಸಬಹುದೆನ್ನುವ, ಆ ಕಾರಣ ತಾನೂ ಅದೇ ಪರೀಕ್ಷೆಗೆ ಒಳಗಾದನೆನ್ನುವ ಸೂಚನೆ ಕುವೆಂಪು ಅವರಲ್ಲಿ ಕಾಣುತ್ತದೆ. ಮಾಸ್ತಿಯವರು ಈ ಸಂದರ್ಭವನ್ನು ಕುರಿತು 'ಆದಿಕವಿ ವಾಲ್ಮೀಕಿ' ಯಲ್ಲಿ ಮಾಡಿದ ವ್ಯಾಖ್ಯಾನದ ವಾಚ್ಯ ರೂಪದಂತೆ 'ರಾಮಾಯಣ ದರ್ಶನ' ದಲ್ಲಿರುವ ಈ ಬದಲಾವಣೆಗೆ, ಮಾಸ್ತಿಯವರ ವ್ಯಾಖ್ಯಾನವೇನಾದರೂ ಪ್ರೇರಣೆ ನೀಡಿತೋ ಹೇಗೆ ಎಂಬ ಸಂಶಯ ಓದುಗರಲ್ಲಿ ಬರುವ ಸಂಭವ ಉಂಟು.

ಮಾಸ್ತಿಯವರ ವಿಮರ್ಶೆಯ ಭಾಷೆ ಮೂಲತಃ ಕಥನಾತ್ಮಕವಾಗಿದೆ. ತುಂಬ ಪರಿಣತರಾದ ಹಿರಿಯರೊಬ್ಬರು, ಕಿರಿಯರಿಗೆ ಹೇಳುವ ಕಿವಿ ಮಾತಿನಂತಿದೆ ಇವರ ಬರವಣಿಗೆಯ ಧಾಟಿ. ಮಾರ್ಗದರ್ಶಿಯಾದವನು ಪ್ರವಾಸಿಗಳಿಗೆ ಒಂದು ಸ್ಥಳದ ಅಥವಾ ಶಿಲ್ಪದ ಪರಿಚಯ ಮಾಡಿಕೊಡುವಲ್ಲಿ ತಳೆಯುವ ಧೋರಣೆ ಇವರ ವಿಮರ್ಶೆಯ ಬರಹದಲ್ಲಿದೆ. ಅವ್ಯಗ್ರವಾಗಿ, ಸಾವಧಾನವಾಗಿ ಒಂದೊಂದರ ಸೊಗಸನ್ನು ಬಿಡಿಸಿ ಬಿಡಿಸಿ, ತಾವೂ ಸವಿಯುತ್ತ, ಬೇರೆಯವರಿಗೂ ಸವಿ ಹುಟ್ಟಿಸುವ ಉದ್ದೇಶದಿಂದ ಪ್ರೇರಿತವಾಗಿದೆ ಈ ಬರವಣಿಗೆ. ಈ ಸಂದರ್ಭದ ಸೊಗಸನ್ನು ನೋಡಿ; ಈ ಮಾತಿನ ಹದವನ್ನು ನೋಡಿ; ಈ ವರ್ಣನೆಯ ಔಚಿತ್ಯವನ್ನು ಗಮನಿಸಿ - ಎಂಬುದು ಈ ಶೈಲಿಯ ಲಕ್ಷಣ. ಇದಕ್ಕಿಂತ ಮಿಗಿಲಾಗಿ ಇವರು ಸಾಹಿತ್ಯವನ್ನು ಸಮೀಕ್ಷಿಸುವಾಗ ಅದನ್ನು ಕೇವಲ ಸಾಹಿತ್ಯವೆಂದಷ್ಟೇ ನೋಡುವುದಿಲ್ಲ; ಅದು ಒಂದು ಜನ ಜೀವನದ, ನಾಡಿನ ಸಂಸ್ಕೃತಿಯ ಒಂದು ಅನಿವಾರ್ಯವಾದ ಭಾಗವೆಂಬಂತೆ ನೋಡುತ್ತಾರೆ. ಸಾಹಿತ್ಯ ಎಂಬುದು ಒಂದು ಜನತೆಯ ಬದುಕಿನ ಸಾಂಸ್ಕೃತಿಕ ಸಂದರ್ಭದಲ್ಲಿ ಹೇಗೆ ಮಹತ್ವದ್ದಾಗಿದೆ ಎಂಬುದನ್ನು ತಿಳಿಯಪಡಿಸುವುದರ ಕಡೆಗೆ ಇವರ ಲಕ್ಷ್ಯ ವಿಶೇಷವಾದದ್ದು. ಕನ್ನಡ ನಾಡಿನ ವೈಷ್ಣವ ದಾಸರ ಕೀರ್ತನೆಗಳನ್ನು ದಾಸರು ಮನೆಮನೆಬಾಗಿಲಲ್ಲಿ ಹಾಡಿ ಭಿಕ್ಷೆ ಬೇಡುವ ಸಂಪ್ರದಾಯವನ್ನು ಕುರಿತು ''ಪೂರ್ವದಲ್ಲಿ ಹೀಗೆ ಭಿಕ್ಷೆಗೆ ಹೋಗುವುದರ ಉದ್ದೇಶ ಹೊಟ್ಟೆಯ ಪಾಡನ್ನು ನೋಡುವುದಾಗಿರಲಿಲ್ಲ. ಜನರಿಗೆ ಮನೋರಂಜನೆಯನ್ನುಂಟು ಮಾಡುವುದೂ ಜೀವನದ ಮುಖ್ಯ ತತ್ವಗಳನ್ನು ತಿಳಿಸಿ ಒಳ್ಳೆಯದು ಕೆಟ್ಟದ್ದು ಎಂಬುದನ್ನು ತೋರಿಸಿಕೊಟ್ಟು ಸರಿಯಾದ ಮಾರ್ಗದಲ್ಲಿ ನಡೆಯುವುದನ್ನು ಹೇಳಿ ಕೊಡುವುದೂ ಈ ಏರ್ಪಾಡಿನ ಉದ್ದೇಶವಾಗಿತ್ತೆಂಬುದು ಸ್ವಲ್ಪ ಯೋಚನೆಯಿಂದ ತಿಳಿಯುವುದು''- ಎಂದು ಈ ಸಂಪ್ರದಾಯದ ಸಾಂಸ್ಕೃತಿಕ ಮಹತ್ವವನ್ನು ವ್ಯಾಖ್ಯಾನಿಸಿದ್ದಾರೆ. ರಾಮಾಯಣ ಮತ್ತು ಮಹಾಭಾರತವನ್ನು ಕುರಿತು ಅವರು ಬರೆದ ಎರಡು ಕೃತಿಗಳಲ್ಲಿ,

ರಾಮಾಯಣ, ಮಹಾಭಾರತಗಳು ಹೇಗೆ ಭಾರತೀಯ ಸಂಸ್ಕೃತಿಯ ಪ್ರತಿನಿಧಿಗಳಾಗಿವೆ ಎಂಬುದನ್ನು ಸೊಗಸಾಗಿ ಪ್ರತಿಪಾದಿಸಿದ್ದಾರೆ. ರಾಮಾಯಣ ಮಹಾಭಾರತದಲ್ಲಿ ಎಲ್ಲ ಕಾಲಕ್ಕೂ ಎತ್ತಿಕೊಂಡು ಚರ್ಚಿಸಿದ ಧರ್ಮಸೂಕ್ಷ್ಮಗಳು ಯಾವುವು; ವಿವಾದಕ್ಕೆ ಒಳಗಾಗಿರುವ ಸಂದರ್ಭಗಳು ಮತ್ತು ಸಮಸ್ಯೆಗಳು ಯಾವುವು; ಜನಾಂಗದ ಚರಿತ್ರೆಯ ದೃಷ್ಟಿಯಿಂದ, ಧಾರ್ಮಿಕ ದೃಷ್ಟಿಯಿಂದ ಅವುಗಳ ಅಭ್ಯಾಸ ಇದುವರೆಗೂ ಯಾವ ರೀತಿ ನಡೆದಿದೆ ಮತ್ತು ಯಾವ ರೀತಿಯಲ್ಲಿ ನಡೆಯಬೇಕು ಎಂಬುದನ್ನು 'ಆದಿಕವಿ ವಾಲ್ಮೀಕಿ' ಮತ್ತು 'ಭಾರತ ತೀರ್ಥ'ಗಳಲ್ಲಿ ವಿಸ್ತೃತವಾಗಿ ಚರ್ಚಿಸಿ, ಸೂಚಿಸಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಮಾಸ್ತಿಯವರ ವಿಮರ್ಶೆಯ ಪ್ರಧಾನ ಗುರಿ, ಸಾಹಿತ್ಯದ ಬಗ್ಗೆ ರುಚಿಯನ್ನು ಹುಟ್ಟಿಸುವುದು ಮತ್ತು ಅವರ ರುಚಿಯನ್ನು ತಿದ್ದುವುದರ ಮೂಲಕ ಬದುಕನ್ನು ಹಸನುಗೊಳಿಸುವುದು.

ಮಾಸ್ತಿಯವರ ವಿಮರ್ಶೆಯಲ್ಲಿ ಸಾಹಿತ್ಯವನ್ನು 'ವಿಮರ್ಶಿ'ಸುವುದರೊಂದಿಗೆ, ನಮ್ಮ ಇಂದಿನ ಬದುಕಿನ ವಿಮರ್ಶೆ ಕೂಡಾ ಬೆರತುಕೊಂಡಿದೆ. ರವೀಂದ್ರರ ಗೀತಾಂಜಲಿಯ ಬಗ್ಗೆ ಬರೆಯುವಾಗ 'ಠಾಕೂರರು ಹತ್ತು ವರ್ಷದ ಹಿಂದೆ ಗೀತಾಂಜಲಿಯನ್ನು ಇಂಗ್ಲಿಷಿನಲ್ಲಿ ಅಚ್ಚು ಹಾಕಿಸಿ ಈಚೆಗೆ ಆ ಭಾಷೆಯಲ್ಲಿ ಹತ್ತಾರು ಪುಸ್ತಕಗಳನ್ನು ಪ್ರಕಟಿಸಿರುತ್ತಾರೆ. ಇಂಗ್ಲಿಷನ್ನು ಬಲ್ಲ ಪಾಶ್ಚಾತ್ಯ ಪ್ರಪಂಚ ಈ ಗ್ರಂಥಗಳನ್ನು ಓದಿ ಸಂತೋಷಪಟ್ಟಿದೆ. ನಾವಾದರೋ ಗೌಳಿಗನ ಮನೆಯ ಮಕ್ಕಳು ಹಾಲಿನ ರುಚಿಯನ್ನು ಕಾಣದಂತೆ ಠಾಕೂರರ ಈ ಗ್ರಂಥಗಳ ರುಚಿಯನ್ನು ಅರಿಯಲಾರದೆ ಇದೇವೆ'10- ಎಂದು ನಮ್ಮ ಜನದ ಸ್ವಭಾವವನ್ನು ಟೀಕಿಸಿದ್ದಾರೆ. ಇನ್ನೊಂದೆಡೆ 'ಈ ಕಾವ್ಯ ಪೂರ್ವದೇಶದ್ದು, ಈ ಕಾವ್ಯ ಪಶ್ಚಿಮ ದೇಶದ್ದು ಎನ್ನಬೇಡಿ. ಇಲ್ಲದ ಭೇದವನ್ನು ಊಹಿಸಬೇಡಿ. ಪ್ರಪಂಚದ ಕಾವ್ಯವೆಲ್ಲ ಒಂದೇ.' ಎಂದು ಬುದ್ಧಿ ಹೇಳುತ್ತಾರೆ. ಮತ್ತೊಂದೆಡೆ ಜನಪದಕಾವ್ಯ ಸಂಗ್ರಹ-ಪ್ರಕಟಣೆಗಳ ಅಗತ್ಯವನ್ನು ಹೇಳುತ್ತ 'ಈಗ ನಮ್ಮ ಕಾವ್ಯ ಪ್ರಪಂಚದಲ್ಲಿ ಹೊಸ ಮಾರ್ಗಗಳನ್ನು ಕಂಡು ಮುಂದುವರಿಯುವ ಅಪೇಕ್ಷೆಯೂ ಶಕ್ತಿಯೂ ಜನರಲ್ಲಿ ಉಂಟಾಗುವಂತೆ ಮಾಡುವುದು ಅವಶ್ಯಕವಾಗಿದೆ. ಹೀಗೆ ಮಾಡುವುದರಲ್ಲಿ ನಮ್ಮ ದೇಶದಲ್ಲಿ ವಾಡಿಕೆಯಾಗಿರುವ ಸಾಂಗತ್ಯ, ಲಾವಣಿ ಮುಂತಾದುವನ್ನು ಸೇರಿಸಿ ಪ್ರಕಟಮಾಡುವುದು ಅತಿ ಮುಖ್ಯವಾದ ಕೆಲಸ'12- ಎಂದು ಸೂಚಿಸುತ್ತಾರೆ. ಬೇರೊಂದೆಡೆ ''ಭರತವರ್ಷದ ಸಂಸ್ಕೃತಿ ಪ್ರಪಂಚದ ಚರಿತ್ರೆಯಲ್ಲಿ ತನ್ನ ಪಾಲಿಗೆ ಬಂದಿರುವ ಕೆಲಸವನ್ನು ಮಾಡಿ ಕೃತಾರ್ಥವಾಗಬೇಕಾದರೆ ನಮ್ಮ ದೇಶದ ಎಲ್ಲ ನಾಡುಗಳ ಮಹನೀಯ ಜೀವಗಳ ತಪಸ್ಸಿದ್ಧಿ ಒಟ್ಟುಗೂಡುವುದು ಅವಶ್ಯಕ. ಒಂದೊಂದು ನಾಡ ಜನವೂ ಉಳಿದೆಲ್ಲನಾಡುಗಳ ಹಿರಿಯರ ವಾಣಿಯ ಪರಿಚಯವನ್ನು ಮಾಡಿಕೊಳ್ಳಬೇಕು'13 - ಎಂದು ಹಾರೈಸುತ್ತಾರೆ. ವಿಮರ್ಶೆಯ ಹೆಸರಿನ ಈ ಕೆಲವು ಉಪದೇಶ, ಹಾರೈಕೆಗಳು ಕಾವ್ಯ ವಿಮರ್ಶೆಗೆ ಈ ಲೇಖನಗಳನ್ನು ಉಪನ್ಯಾಸಗಳೆಂದು

---

9. ವಿಮರ್ಶೆ, ಭಾಗ೧. ಪು. ೨೭
10. ವಿಮರ್ಶೆ ಭಾಗ-೨. ಪು. ೪೧
11. ವಿಮರ್ಶೆ ಭಾಗ-೪. ಪು. ೪೭
12. ವಿಮರ್ಶೆ. ಭಾಗ೧. ಪು. ೬೯
13. ವಿಮರ್ಶೆ. ಭಾಗ೪. ಪು. ೧೧೦

ಕರೆದಿರುವುದು ಸಿರಿ ಎಂದೂ ಅನ್ನಿಸಬಹುದು. ಆದರೆ ಸಾಹಿತ್ಯ ಎನ್ನುವುದು ಒಂದು ಜನತೆಯ ಬದುಕಿನ ಅಭಿವ್ಯಕ್ತಿ; ಈ ಬದುಕು ಎನ್ನುವುದು ಅವರ ದೈನಂದಿನ ನಡವಳಿಕೆಯ, ನಂಬಿಕೆಗಳು, ಭಾವನೆಗಳ, ಬೆಲೆಗಳ ಒಂದು ಮೊತ್ತ, ಒಂದರ ವಿಮರ್ಶೆಯನ್ನು ಮಾಡುವಾಗ, ಒಂದು ಕಾಲಕ್ಕೆ ಈ ಜನದ ಬದುಕು ಹೇಗಿತ್ತು, ಅದರ ಅಭಿವ್ಯಕ್ತಿಯಾದ ಸಾಹಿತ್ಯ ಹೇಗಿತ್ತು ಎಂಬುದರ ಪರಿಚಯ ಮಾಡಿಕೊಡುತ್ತೇವೆ, ಇಂದಿನ ನಮ್ಮ ಬದುಕು ಹೇಗಿದೆ, ಹೇಗಾಗಬೇಕು; ಮತ್ತು ನಾಳಿನ ಬದುಕು ಹೇಗೆ ಹಸನಾಗಬೇಕು ಎನ್ನುವ ಸಾಂಸ್ಕೃತಿಕ ಕಳಕಳಿ ಮಾಸ್ತಿಯವರ ವಿಮರ್ಶೆಯ ಲೇಖನಗಳಲ್ಲಿ ಸ್ಪಷ್ಟವಾಗಿದೆ. ಕಾವ್ಯದ ಬಗ್ಗೆ ರುಚಿ ಹುಟ್ಟಿಸುವ, ಕನ್ನಡ ನಾಡಿನ ಜನ ಹೇಗೆ ಸಮಗ್ರವಾದ ವ್ಯಕ್ತಿತ್ವವನ್ನು ಬೆಳೆಯಿಸಿಕೊಳ್ಳಬೇಕೆಂಬ ನಿರ್ದೇಶನ ನೀಡುವ ಮಾಸ್ತಿಯವರ ವಿಮರ್ಶೆ ತುಂಬ ಅರ್ಥವತ್ತಾದುದಾಗಿದೆ.

ಶ್ರೀನಿವಾಸರ ವಿಮರ್ಶೆ

ಡಾ|| ಸಿ.ಪಿ. ಕೃಷ್ಣಕುಮಾರ್

ಇಂದು ಕನ್ನಡ ಸಾಹಿತ್ಯ ನಾನಾಮುಖವಾಗಿ ಬೆಳೆದಿದೆ, ಬೆಳೆಯುತ್ತಿದೆ; ಸಾಹಿತ್ಯ ನಿರ್ಮಾಣ ಈ ಹೊತ್ತು ಸುಲಭೋದ್ಯಮವೂ ಆಗಿದೆ. ಇದಕ್ಕೆ ಕಾರಣವೇನೆಂದರೆ, ಈಗ ಬರೆಯುವವರಿಗೆ ಒಂದು ಪರಂಪರೆ, ಒಂದು ನೆಲೆಗಟ್ಟು ಪೂರ್ವಸಿದ್ಧವಾಗಿ ಸಿಕ್ಕುತ್ತದೆ. ಆದರೆ ಸುಮಾರು ಐವತ್ತು ವರ್ಷಗಳ ಹಿಂದೆ ನವೋದಯ ಕಾಲದಲ್ಲಿ ಬರೆಯತೊಡಗಿದ ಲೇಖಕರ ಮೇಲೆ ಒಂದು ಪರಂಪರೆಯನ್ನು ನಿರ್ಮಿಸುವ ಗುರುತರವಾದ ಹೊಣೆಯಿತ್ತು; ಒಂದರ್ಥದಲ್ಲಿ ಅವರು ಎಲ್ಲವನ್ನೂ ಶೂನ್ಯದಿಂದ ರೂಪಿಸಬೇಕಾಗಿತ್ತು. ಅವರು ನಡೆಸಿದ ಹೋರಾಟ, ಹಾಗೂ ಸವೆದ ಮಾರ್ಗ ಹೊಸಗನ್ನಡ ಸಾಹಿತ್ಯಕ್ಕೆ ತಳಹದಿಯಾಗಿದೆ. ಹಾಗೆ ನೂತನ ಪ್ರಸ್ಥಾನ ಪ್ರವರ್ತಕರಾದ ಹಿರಿಯರಲ್ಲಿ ಶ್ರೀನಿವಾಸರೊಬ್ಬರು. ಅವರು ಕನ್ನಡ ಸಣ್ಣಕತೆಗಳ ಜನಕ ಎನ್ನುವುದು ಪ್ರಸಿದ್ಧವಾದ ಸಂಗತಿ. ಅಂತೆಯೆ ವಿಮರ್ಶೆಯ ಕ್ಷೇತ್ರದಲ್ಲೂ ಅವರದು ಮುಂಚೂಣಿಯ ಹೆಸರು. ಅರ್ಧ ಶತಮಾನದಷ್ಟು ಹಿಂದಕ್ಕೆ ಹೋಗುವ ಅವರ ವಿಮರ್ಶೆಗೆ ವಿಶೇಷವಾದ ಐತಿಹಾಸಿಕ ಮೌಲ್ಯವಿದೆ.

ಶ್ರೀನಿವಾಸರ ವಿಮರ್ಶೆಯ ಹರಹು ದೊಡ್ಡದು; ಅದು ಕನ್ನಡದ ಕೃತಿಗಳಿಗಷ್ಟೆ ಸೀಮಿತವಾಗದೆ, ವಿಶ್ವಸಾಹಿತ್ಯವನ್ನು ಆಲಿಂಗಿಸುತ್ತದೆ; ಅವರ ವಿಸ್ತಾರವಾದ ಅಧ್ಯಯನ, ಅನುಸಂಧಾನಗಳನ್ನು ಪ್ರಕಟಿಸುತ್ತದೆ. ಕನ್ನಡಿಗರಿಗೆ ವಿಶ್ವಸಾಹಿತ್ಯದ ಕೆಲವು ಅಮೂಲ್ಯ ರತ್ನಗಳನ್ನು ಪರಿಚಯಿಸುವ ಮಹತ್ವದ ಕಾರ್ಯವೊಂದನ್ನು ಶ್ರೀನಿವಾಸರು ತಮ್ಮ ವಿಮರ್ಶೆಯ ಮೂಲಕ ಮಾಡಿದ್ದಾರೆ. ಅವರ ವಿಮರ್ಶೆಯ ಸ್ವರೂಪವನ್ನು ಕುರಿತು ಹೇಳುವುದಾದರೆ, ಅದು ಬಹುಮಟ್ಟಿಗೆ ವರ್ಣನಾತ್ಮಕವಾದುದು; ವಿಶ್ಲೇಷಣೆ, ಒಳನೋಟಗಳಿಗಿಂತ ಪರಿಚಯ, ಆಸ್ವಾದನಗಳಿಗೆ ಅದರಲ್ಲಿ ಹೆಚ್ಚು ಪ್ರಾಶಸ್ತ್ಯ. ಕೆಲವು ಕಡೆ ಅವರು ತುಂಬ ಸೊಗಸಾದ, ಆಳವಾದ ವಿಮರ್ಶೆಯನ್ನು ಕೊಟ್ಟಿದ್ದಾರೆ; ಎಲ್ಲ ಕಡೆಯೂ ಹಾಗಿಲ್ಲವೆಂಬುದೇ ಕೊರತೆ. ಒಟ್ಟಿನಲ್ಲಿ ಅವರದು ಸದಭಿರುಚಿ, ಸಹಾನುಭೂತಿಗಳನ್ನುಳ್ಳ ಸಹೃದಯ ವಿಮರ್ಶೆ. ಆದರೆ ಒಂದಂಶವನ್ನು ಮುಖ್ಯವಾಗಿ ಗಮನಿಸಬೇಕು; ಆಸ್ವಾದನದ ವಿಷಯದಲ್ಲಿ ಅವರು ಸಮರ್ಥರಾದರೂ, ಎಲ್ಲೆಲ್ಲಿ ತೀರ್ಪು ಕೊಡಲು ಹೊರಡುತ್ತಾರೋ ಅಲ್ಲೆಲ್ಲ ಎಡವುತ್ತಾರೆ; ಅತಿ ಪ್ರಶಂಸೆಯ ಕಡೆಗೆ ತುಯ್ಯುತ್ತದೆ ಅವರ ವಿಮರ್ಶೆ. ಆದ್ದರಿಂದ ಅವರ ವಿಮರ್ಶೆಯ ಉಪಯುಕ್ತತೆಯಿರುವುದು, ಅರಿವು ಆಸ್ವಾದನಗಳ ಭಾಗದಲ್ಲಿ; ತೀರ್ಪಿನ ಭಾಗದಲ್ಲಲ್ಲ.

ಶ್ರೀನಿವಾಸರ ಸುಸಂಸ್ಕೃತ ಮನೋಧರ್ಮ, ಯಾವ ಸಂದಿಗ್ಧತೆಗೂ ಎಡೆಗೊಡದ ತಿಳಿಯಾದ ಮತ್ತು ಮೆದುವಾದ ಶೈಲಿ, ಅವರ ಇತರ ಸಾಹಿತ್ಯ ಪ್ರಕಾರಗಳಲ್ಲಿರುವಂತೆ ವಿಮರ್ಶೆಯಲ್ಲೂ ಸುವ್ಯಕ್ತವಾಗಿದೆ. ಅವರ ವ್ಯಕ್ತಿತ್ವ ಹಾಗೂ ಬರವಣಿಗೆಯ ಲಕ್ಷಣವನ್ನು ಒಂದು ಮಾತಿನಲ್ಲಿ ಹೇಳಬಹುದಾದರೆ, ಅದು ಋಜುತ್ವ ಜೊತೆಗೆ, ಶ್ರೀನಿವಾಸರು

ಕವಿಯೆಂಬುದನ್ನು ಅವರ ವಿಮರ್ಶೆಯೂ ಮತ್ತೆ ಮತ್ತೆ ನೆನಪು ಮಾಡುತ್ತದೆ.

ಈಗ ಒಂದೊಂದಾಗಿ ಶ್ರೀನಿವಾಸರ ವಿಮರ್ಶ ಪ್ರಬಂಧಗಳನ್ನು ನೋಡಬಹುದು. 'ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ' ಎಂಬ ಪ್ರಬಂಧ ವಿಮರ್ಶೆಯ ತಾತ್ವಿಕ ಭಾಗಕ್ಕೆ ಸಂಬಂಧಿಸಿದ್ದು. ಇದರಲ್ಲಿ ವಿಮರ್ಶೆಯ ಸ್ವರೂಪ ಮತ್ತು ಪ್ರಯೋಜನ, ಕವಿಗೂ ವಿಮರ್ಶಕನಿಗೂ ಇರುವ ಭೇದ, ವಿಮರ್ಶಕನ ಅರ್ಹತೆಗಳು ಮುಂತಾದ ವಿಷಯಗಳನ್ನು ಸಮಗ್ರವಾಗಿ, ಬಹಳ ಅಚ್ಚುಕಟ್ಟಾಗಿ ವಿಶದಪಡಿಸಲಾಗಿದೆ. ವಿಮರ್ಶೆಯ ಮೀಮಾಂಸೆಯನ್ನೆಲ್ಲ ಒಂದು ಕಡೆ ಸಂಗ್ರಹವಾಗಿ ನೋಡಬೇಕೆಂದರೆ ಈ ಪ್ರಬಂಧದತ್ತ ಕೈ ಮಾಡಬಹುದು. ಪಾಶ್ಚಾತ್ಯ ವಿಮರ್ಶೆಯನ್ನೋದಿದವರಿಗೆ ಇದರಲ್ಲಿ ಹೊಸ ವಿಚಾರಗಳು ಕಡಿಮೆ ಎನಿಸಿದರೂ, ಕನ್ನಡದಲ್ಲಿ ಮೊಟ್ಟಮೊದಲ ಬಾರಿಗೆ ವಿಮರ್ಶೆಯ ಕಾರ್ಯವನ್ನು ವಿವರಿಸುವ ಲೇಖನವೆಂಬ ದೃಷ್ಟಿಯಿಂದ ಇದು ಬೆಲೆಯುಳ್ಳದ್ದಾಗಿದೆ. ಇದು ಸುಮಾರು ಐವತ್ತು ವರ್ಷಗಳ ಹಿಂದಿನ ಬರಹವೆಂಬುದನ್ನು ಮರೆಯಬಾರದು. ಕನ್ನಡದಲ್ಲಿ ವಿಮರ್ಶೆಯ ಕಲ್ಪನೆಯೇ ಇರದಿದ್ದ ದಿನಗಳವು. ಎಂತಲೇ, ಪಾಶ್ಚಾತ್ಯರಿಂದ ಗ್ರಹಿಸಿದ ವಿಷಯಗಳನ್ನು ಸ್ವಂತ ಚಿಂತನದೊಡನೆ ಮೇಳವಿಸಿ, ಮುಂದಿನ ವಿಮರ್ಶೆಗೆ ಮಾರ್ಗದರ್ಶಕವಾಗುವಂತಹ ಸೂತ್ರ ಸಂಹಿತೆಯೊಂದನ್ನು ರಚಿಸುವ ಆವಶ್ಯಕತೆಯನ್ನು ಶ್ರೀನಿವಾಸರು ಮನಗಂಡಿರಬೇಕು; ಅದನ್ನವರು ಈ ಪ್ರಬಂಧದ ಮೂಲಕ ಪೂರೈಸಿದುದು ಪ್ರಶಂಸನೀಯವಾಗಿದೆ.

ವಿಮರ್ಶೆಯ ಬಗ್ಗೆ ಎಷ್ಟೋ ಉಪಾದೇಯವಾದ ವಿಚಾರಗಳನ್ನು ಶ್ರೀನಿವಾಸರು 'ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ'ದಲ್ಲಿ ಪ್ರಸ್ತಾಪಿಸಿದ್ದಾರೆ. ನಮ್ಮಲ್ಲಿ ಹಿಂದಿನ ಕಾಲದಲ್ಲೂ ವಿಮರ್ಶೆಯಿತ್ತು, ರಾಜಾಸ್ಥಾನಗಳು ಮತ್ತು ಸಭೆಗಳು ವಿಮರ್ಶಕರ ಕೆಲಸವನ್ನು ಮಾಡುತಿದ್ದುವು ಎಂದು ಅವರು ಹೇಳುತ್ತಾರೆ: ''ಸಭೆಗಳ ವಿಚಕ್ಷಣತೆಯಿಂದ ನಮ್ಮ ಹಿಂದಣ ಸಾಹಿತ್ಯವೆಲ್ಲ ತಕ್ಕಮಟ್ಟಿಗೆ ಪುಷ್ಟವಾದ ಗ್ರಂಥವನ್ನು ಮಾತ್ರ ಒಳಗೊಳ್ಳಬಹುದಾಯಿತು.'' ವಿಮರ್ಶೆಯ ಮೂಲವನ್ನು ಕುರಿತು, ''ಕಾವ್ಯದ ಮೂಲವೇ ವಿಮರ್ಶೆಯ ಮೂಲ. . .ಕಾವ್ಯಕ್ಕೂ ವಿಮರ್ಶೆಗೂ ಕವಿಯ ಆವೇಶವೇ ಮೂಲ'' ಎಂದು ಅವರು ಅಭಿಪ್ರಾಯಿಸುತ್ತಾರೆ. ಕವಿಯಲ್ಲಿ ವಿಮರ್ಶನ ಶಕ್ತಿ ಇರುವುದಿಲ್ಲವೇ ಎಂಬ ಪ್ರಶ್ನೆಗೆ ಅವರ ಉತ್ತರ: ''ಉನ್ನತಾವೇಶದಲ್ಲೆಲ್ಲ ನಿರ್ಮಾಣ ಶಕ್ತಿಯೊಡನೆ ವಿಮರ್ಶನಾ ಶಕ್ತಿಯೂ ಲೀನವಾಗಿರುತ್ತದೆ'' ಮತ್ತು ''ವಿಮರ್ಶೆಯೆಂಬುದು ಕವಿಯಲ್ಲಿಯೇ ಇರತಕ್ಕ ಒಂದು ಲಕ್ಷಣ. . . .ವಿಮರ್ಶೆ ಇಲ್ಲದೆ ಕಾವ್ಯರಚನೆ ಆಗುವುದಿಲ್ಲ.'' ವಿಮರ್ಶೆಯ ಕಾರ್ಯವಿದು: ''ಕಾವ್ಯದಿಂದ ಬರಬೇಕಾದ ಸಂಪೂರ್ಣ ಸಂಸ್ಕಾರ ಓದುವವನಿಗೆ ಬರುವಂತೆ ಮಾಡತಕ್ಕದ್ದು ವಿಮರ್ಶಕನ ಕಾರ್ಯದ ಮುಖ್ಯಾಂಶ. . .ಅವನು ಕವಿಯ ಅವಸ್ಥೆಯನ್ನು ತನ್ನ ಅಂತರ್ಯದಲ್ಲಿ ಅನುಭವಿಸುವುದಕ್ಕೆ ಯತ್ನಮಾಡಬೇಕು. ಇದರಿಂದ ಅವನಿಗೆ ಕಾವ್ಯದ ಆಶಯ ತಿಳಿಯುವುದು; ಇದು ಅವನು ಏರಬೇಕಾದ ಮೊದಲ ಸೋಪಾನ. . .ಆಮೇಲೆ. . .ಕವಿಯ ಭಾವವನ್ನು ವಿವರಿಸುವುದಕ್ಕೆ ಯತ್ನಮಾಡಬಹುದು. ಇದು ಎರಡನೆಯ ಸೋಪಾನ. . .ಇದಾದ ಮೇಲೆ ಅದರಲ್ಲಿ ತಪ್ಪು ನೆಪ್ಪು ಕಾಣಬಹುದು. ಮುಖ್ಯವಾಗಿ ಗ್ರಂಥವನ್ನು ಚೆನ್ನಾಗಿ ತಿಳಿದು ಇತರರಿಗೆ ಅದರ ಆಶಯ ತಿಳಿಯುವಂತೆ ಮಾಡುವುದೇ ವಿಮರ್ಶಕನ ಕಾರ್ಯ'' ವಿಮರ್ಶೆಯ ಸ್ವರೂಪವನ್ನು ಈ ಮಾತುಗಳು ಸ್ಪಷ್ಟಪಡಿಸುತ್ತವೆ:

''ರಸಗಳನ್ನು ಅನುಭವಿಸುವುದು ರಾಗಗಳ ಸ್ವಭಾವ; ಅವುಗಳನ್ನು ವಿವರಿಸುವುದು ಬುದ್ಧಿಯ ಕೆಲಸ. . .ವಿಮರ್ಶೆಯ ಈ ಎರಡನೆಯ ಭಾಗ ಅದರ ಮೊದಲನೆಯ ಭಾಗವಾದ ಭಾವಗ್ರಹಣಕ್ಕೆ ಪ್ರಾಮುಖ್ಯತೆಯಲ್ಲಿ ಸಮನಾದದು. . .ಎರಡೂ ಸೇರಿದರೆ ಮಾತ್ರ ವಿಮರ್ಶೆ ಸಫಲವಾಗುವುದು.'' ವಿಮರ್ಶೆಯ ಸಾರವೆಂದರೆ, ''ಸಾಹಿತ್ಯರಸದ ಬುದ್ಧಿ ದ್ವಾರವಾದ ಅನುವಾದ''ವೆನ್ನುತ್ತಾರೆ ಶ್ರೀನಿವಾಸರು. ಅವರ ಪ್ರಕಾರ, ಪ್ರಶಂಸೆ, ದೋಷ ಕಥನ, ರಸವರ್ಣನೆ, ಖಂಡನೆ, ಜೀವನ ಚರಿತ್ರೆ, ಕವಿಯ ಎಲ್ಲ ಕೃತಿಗಳ ಪರಿಗಣನೆ, ಸಾಧಾರಣ ಸಾಹಿತ್ಯ ಚರ್ಚೆ-ಇವೆಲ್ಲ ವಿಮರ್ಶೆ ಧರಿಸುವ ರೂಪಭೇದಗಳು, ವಿಮರ್ಶಕನಲ್ಲಿ ಊಹೆ, ಪ್ರತಿಭೆಗಳೂ ಸಹಾನುಭೂತಿ ತಾಳ್ಮೆ ಔದಾರ್ಯಗಳೂ ಇರಬೇಕೆಂದೂ ಅವರ ಪ್ರತಿಪಾದನೆ. ವಿಮರ್ಶೆ ಎಂತಹ ಸೂಕ್ಷ್ಮಕ್ರಿಯೆಯೆಂಬುದನ್ನು ಅವರು ಪರಿಣಾಮಕಾರಿಯಾಗಿ ತಿಳಿಯ ಹೇಳುತ್ತಾರೆ: 'ವಿಮರ್ಶೆ ಕೌಶಲಾಪೇಕ್ಷೆಯಲ್ಲಿ ನೇತ್ರ ವೈದ್ಯನಂತೆ ನೇತ್ರ ವ್ಯಾಧಿಗೆ ಶಸ್ತ್ರ ವೈದ್ಯವನ್ನು ಮಾಡಲು ಕವಿರಾಜನಾದರೂ ಹಿಂಜರಿಯಬೇಕು; ಇಂಥದರಲ್ಲಿ ಕೊಡಲಿಯನ್ನು ಹಿಡಿದು ಸೌದೆಯನ್ನು ಸೀಳಲು ಕಲಿತ ಕೈಯಿಂದ ಕಣ್ಣು ಸರಿಮಾಡುವೆನೆಂದು ಶಲ್ಯವನ್ನು ತರುವರೆ?' ವಿಮರ್ಶಕನ ಮೇಲಿರುವ ಹೆಚ್ಚಿನ ಜವಾಬ್ದಾರಿಯನ್ನು ಈ ನುಡಿಗಳು ಸೂಚಿಸುತ್ತವೆ: 'ಅಲ್ಪಜ್ಞಾನ ಅಲ್ಪಪರಿಶ್ರಮದಿಂದ ಉಂಟಾದ ಕಾವ್ಯಕ್ಕಿಂತ ಅಲ್ಪಜ್ಞಾನ ಅಲ್ಪಪರಿಶ್ರಮದಿಂದ ಉಂಟಾಗುವ ವಿಮರ್ಶೆಯಿಂದ ಬರುವ ಹಾನಿ ಹೆಚ್ಚು'; ಆದ್ದರಿಂದ, 'ಕವಿಗಿಂತಲೂ ವಿಮರ್ಶಕನು ತನ್ನ ಶಕ್ತಿಯ ವಿಷಯದಲ್ಲಿ ಅಧಿಕವಾದ ಯೋಚನೆಯುಳ್ಳವನಾಗಿರಬೇಕು.' ವಿಮರ್ಶೆಯಿಂದಾಗುವ ಪ್ರಯೋಜನಗಳಿವು: ''ಶಕ್ತರಾದ ವಿಮರ್ಶಕರಿಂದ ಸದ್ಯ ಇರುವ ಸಾಹಿತ್ಯ ಎಲ್ಲರಿಗೂ ಚೆನ್ನಾಗಿ ತಿಳಿಯುವುದಲ್ಲದೆ ಮುಂದಕ್ಕೆ ಒಳ್ಳೆಯ ಸಾಹಿತ್ಯ ಬರುವುದು ಸಾಧ್ಯವಾಗುವುದು.'' ಕೆಟ್ಟ ವಿಮರ್ಶೆಯ ಬಗ್ಗೆ ಶ್ರೀನಿವಾಸರಾಡಿರುವ ಮಾತುಗಳು ಗಮನಾರ್ಹವಾಗಿವೆ: ''ಸಂಸ್ಕಾರವಿಲ್ಲದೆ ಬರೆಯುವ ವಿಮರ್ಶೆ ಹಾನಿಕರ. . .ನಮ್ಮ ಈಗಣ ಸೀಮೆಯಲ್ಲಿ ಈ ತಿಳಿವಿನ ಚಿನ್ನೆ ಕಾಣಲಿಲ್ಲ. ಕುಹಕ, ಕುಚೋದ್ಯ, ಭಾವಲಾಘವ, ಅಪ್ರಬುದ್ಧರು ಪರಸ್ಪರ ಅವಹೇಳನದಲ್ಲಿ ಉಪಯೋಗಿಸುವ ಅಹಹಾ ಉಹುಹೂ ಎಂಬಂಥ ಮಾತುಗಳು. . .'' ಕನ್ನಡದಲ್ಲಿ ಈ ಹೊತ್ತಿಗೂ ಇಂತಹ ವಿಮರ್ಶೆಯೇ ಚಲಾವಣೆಯಲ್ಲಿದೆ ಎಂಬುದು ಎಂಥ ವಿಷಾದದ ಸಂಗತಿ!

ಶ್ರೀನಿವಾಸರ ಉಳಿದ ಪ್ರಬಂಧಗಳು ಆನ್ವಯಿಕ ವಿಮರ್ಶೆಗೆ ಸಂಬಂಧಿಸಿದವು. ಅವರು ಯಾವ ಕೃತಿಯನ್ನೆ ವಿಮರ್ಶಿಸಲಿ, ಮೂಲದಿಂದ ಸಮೃದ್ಧವಾಗಿ ಉದ್ಧೃತಿಗಳನ್ನು ಕೊಟ್ಟು, ಅದರ ಸಾಂದ್ರವಾದ ಪರಿಚಯ ಓದುಗನಿಗೆ ದೊರೆಯುವಂತೆ ಮಾಡುತ್ತಾರೆ. ಹೀಗಾಗಿ, ವಿಮರ್ಶೆ ಮೂಲಕೃತಿಗೆ substitute ಆಗುವುದೂ ಉಂಟು; ಇದರಿಂದ ಲಾಭ ನಷ್ಟಗಳೆರಡೂ ಸಂಭವಿಸುತ್ತವೆ.

'ವೈಷ್ಣವದಾಸರ ಕೀರ್ತನೆಗಳು' ಪ್ರಬಂಧದಲ್ಲಿ, ಕೀರ್ತನೆಗಳನ್ನು 'ವ್ಯಂಜಕ ಕಾವ್ಯ'ಗಳೆಂದು ಕರೆದು, ''ಕೇವಲ ಸ್ತೋತ್ರವೇ ಆದರೆ ಅಂಥ ಕವನವನ್ನು ಸಾಹಿತ್ಯವೆಂದು ಎಣಿಸಬೇಕಾದದ್ದೂ ಇಲ್ಲ. ಕವನವು ಸಾಹಿತ್ಯವೂ ಆಗಬೇಕಾದರೆ ಅದರಲ್ಲಿ ಮನೋರಂಜನ ಮಾಡುವ ಉದ್ದೇಶವೂ ಗೌಣವಾಗಿಯಾದರೂ ಸೇರಿರಬೇಕು. ಈ ರೀತಿಯ ಕವನಗಳು ದಾಸರ ಪದಗಳಲ್ಲಿ ಅನೇಕವಾಗಿ ಇವೆ'' ಎಂದಿದ್ದಾರೆ ಶ್ರೀನಿವಾಸರು. ಇದು ಒಪ್ಪಬೇಕಾದದ್ದು. ''ವೈಷ್ಣವ ಸಂಪ್ರದಾಯದ ಪರಮ ಭಕ್ತನಿಗೆ ಪ್ರಪಂಚದ ಸೌಂದರ್ಯದ ವಿಷಯದಲ್ಲಿ ಅನಭಿಜ್ಞತೆಯಾಗಲಿ ಅಶ್ರದ್ಧೆಯಾಗಲಿ ಇರಲಿಲ್ಲ'' ಎಂಬ ಮಾತು

''ಜನಾಂಗದ ಚರಿತ್ರೆಯ ಆರಂಭದಲ್ಲಿ ಸಾಹಿತ್ಯವೂ ತತ್ತ್ವವೂ ಮತವೂ ಒಂದೇ ಆಗಿರುವುವು'' ಎಂಬ ಮಾತು, ಮನನಯೋಗ್ಯವಾಗಿವೆ. ಈ ಬರಹದಲ್ಲಿ ಒಂದು ಒಳ್ಳೆಯ ಭಾಗವೆಂದರೆ, ''ಸಾವಧಾನದಿ ಹರಿದಳು ಯಮುನಾ'' ಎಂಬ ಸಾಲಿಗೆ ಶ್ರೀನಿವಾಸರು ಮಾಡಿರುವ ಮನೋಜ್ಞವಾದ ವ್ಯಾಖ್ಯಾನ: ''ಪತಿಯ ಮನೆಗೆ ಹೋಗಬೇಕೆಂದು ಪರ್ವತ ಪ್ರಾಂತ್ಯದಿಂದ ಆತುರವಾಗಿ ಇಳಿದು ಬಂದ ಯಮುನೆಯೂ ಪರಮಾತ್ಮನ ಗಾನವನ್ನು ಕೇಳಿ ಸಾವಧಾನವಾಗಿ ಹರಿಯುತ್ತಾಳೆ..... ಬೃಂದಾನವನದ ಬಳಿ ಭೂಮಿಯು ಚಪ್ಪಟೆಯಾಗಿರುವುದರಿಂದ ನದಿ ಸಾವಾಧಾನವಾಗಿ ಹರಿಯುವುದೆಂದು ಇಲ್ಲಿ ಸಂಕೇತವನ್ನಿಟ್ಟುಕೊಂಡು ದಾಸರು ಅದನ್ನು ಎಷ್ಟು ಅಂದವಾಗಿ ವರ್ಣಿಸಿ ನದಿಯ ಸಾವಧಾನತೆಗೆ ಎಂತ ಅರ್ಥವನ್ನು ಕಲ್ಪಿಸಿದಾರೆ!'' ಇಂಥ ಕಡೆ ವಿಮರ್ಶೆ ಸಾರ್ಥಕವಾಗುತ್ತದೆ.

ಶ್ರೀನಿವಾಸರದು ಬರಿಯ ಹೊಗಳಿಕೆಯ ಮನೋಭಾವ, ಅವರಿಗೆ ದೋಷಗಳು ಕಾಣಿಸುವುದಿಲ್ಲ ಎಂದು ಯಾರಾದರೂ ಭಾವಿಸಿದರೆ ತಪ್ಪಾಗುತ್ತದೆ. ನೇತ್ಯಾತ್ಮಕ ವಿಮರ್ಶೆಯಲ್ಲಿ ಅವರಿಗೆ ದಕ್ಷತೆಯಿಲ್ಲವೆಂದಲ್ಲ; ಅಷ್ಟಾಗಿ ಒಲವಿಲ್ಲ. ಎಂತಲೇ ಅದು ವಿರಳ. 'ಸತೀಹಿತೈಷಿಣೀ ಗ್ರಂಥಮಾಲೆ' ಯನ್ನು ಕುರಿತು ಅವರು ಬರೆದಿರುವ ಪ್ರಬಂಧ ಇಂಥ ವಿಮರ್ಶೆಗೊಂದು ನಿದರ್ಶನವಾಗಿದೆ. ಸತ್ಯವನ್ನು ಹೇಳುವಾಗಲೂ ಶ್ರೀನಿವಾಸರು ಅದನ್ನು ಪ್ರಿಯವಾಗಿ ಮೃದುವಾಗಿ, ಸದ್ಭಾವದಿಂದ ಹೇಳುತ್ತಾರೆಂಬುದು ಮುಖ್ಯವಾದ ಸಂಗತಿ. ಸತೀ ಹಿತೈಷಿಣೀ ಗ್ರಂಥ ಮಾಲೆಯಲ್ಲಿ ಪ್ರಕಟವಾದ ತಿರುಮಲ್ಲಮ್ಮನವರ ಕೆಲವು ಕಾದಂಬರಿಗಳನ್ನು ಈ ಬರಹದಲ್ಲಿ ವಿವೇಚಿಸಿ, ಅವುಗಳ ದೌರ್ಬಲ್ಯವನ್ನು ಚೆನ್ನಾಗಿ ಮನಗಾಣಿಸಿದ್ದಾರೆ. 'ಸುಶೀಲೆ' ಕಾದಂಬರಿ 'ಕೇವಲ ಸಾಮಾನ್ಯವಾದುದಾಗಿದೆ'' ಎಂಬುದು ಅವರ ನಿಲುವು. ''ನೀತಿಯನ್ನು ಬೋಧಿಸುವುದಕ್ಕೆ ಪಾತ್ರಗಳ ಬಾಯಲ್ಲಿ 'ಲೆಕ್ಚರು' ಗಳನ್ನು ಇಟ್ಟಿರುವ ಸಂದರ್ಭಗಳು ಬಹಳವಾಗಿವೆ'' ಎಂದು ಆಕ್ಷೇಪಿಸಿ, ಪಾತ್ರಗಳಲ್ಲಿ ಮತ್ತು ಅವುಗಳ ನಡೆನುಡಿಗಳಲ್ಲಿ ಕಂಡುಬರುವ ಅಸಂಭಾವ್ಯತೆಯನ್ನು ಎತ್ತಿಹೇಳಿ, ಭಾಷೆಯ ಅನಗತ್ಯ ಕ್ಲಿಷ್ಟತೆಯನ್ನು ಟೀಕಿಸಿದ್ದಾರೆ. ಈ ಸಂದರ್ಭದಲ್ಲಿ, ಕತೆ ಕಾದಂಬರಿಗಳ ಭಾಷೆ ಹೇಗಿರಬೇಕೆಂಬುದರ ಬಗೆಗೆ ಶ್ರೀನಿವಾಸರು ಹೇಳಿರುವ ಮಾತುಗಳು ಬಹಳ ಗಮನಾರ್ಹವಾಗಿವೆ; ಭಾಷೆಯನ್ನು ಗ್ರಾಂಥಿಕ ಭಾಷೆಯನ್ನಾಗಿ ಮಾಡಲು ಪ್ರಯತ್ನಪಟ್ಟು ಕರ್ಕೋಟಕನಿಂದ ಕಡಿಯಲ್ಪಟ್ಟ ನಳನಂತೆ ಗಂಟುಗಂಟಾಗಿ ಮಾಡದೆ ಸಾಮಾನ್ಯ ಭಾಷೆಯ ಗ್ರಾಮ್ಯಾಂಶವನ್ನು ಮಾತ್ರ ಬಿಟ್ಟು ಗೌರವಕ್ಕೆ ಎಷ್ಟೋ ಅಷ್ಟು ಅದನ್ನು ಬಲಪಡಿಸಿ ಸರಳವಾಗಿ ಬರೆದರೆ ಪುಸ್ತಕ ಕೇಳುವುದಕ್ಕೂ ಓದುವುದಕ್ಕೂ ಇಂಪಾಗಿರುವುದು.'' ಅಂತೂ ''ಸತೀ ಹಿತೈಷಿಣೀ ಗ್ರಂಥಮಾಲೆ'ಯ ಕುರಿತ ಈ ಬರಹ ಶ್ರೀನಿವಾಸರ ವಿಮರ್ಶನ ಶಕ್ತಿಯ ಇನ್ನೊಂದು ಮುಖವನ್ನು ತೋರುತ್ತದೆ.

ಜನಪದ ಸಾಹಿತ್ಯವನ್ನು ಕುರಿತು ವಿಚಾರ ಮಾಡಿದ ಮೊದಲಿಗರಲ್ಲಿ ಶ್ರೀನಿವಾಸರೊಬ್ಬರು. ಈ ದೃಷ್ಟಿಯಿಂದ ಅವರ 'ಕನ್ನಡ ನಾಡಿನ ಲಾವಣಿ ಸಾಂಗತ್ಯಗಳು' ಪ್ರಬಂಧವನ್ನು ನೋಡಬೇಕು. ಇದರಲ್ಲಿ ಅವರು ಒಂದೆಡೆ ಆಡಿರುವ ಈ ಮಾತುಗಳು ಅವರ ವಿವೇಕಪೂರ್ಣವಾದ, ಉದಾರವಾದ ನಿಲುವಿಗೆ ದ್ಯೋತಕವಾಗಿದ್ದು ಸಂಕುಚಿತ ದೃಷ್ಟಿಯವರ ಕಣ್ತೆರೆಯಿಸುವಂತಿವೆ: ''ಉತ್ತಮ ಕಾವ್ಯದಿಂದ ಲಕ್ಷಣಗಳನ್ನು ಕಲಿತೆವು: ಆಮೇಲೆ ಆ ಲಕ್ಷಣದಂತೆ ಬರೆದರೆಯೇ ಉತ್ತಮ ಕಾವ್ಯವೆಂದು ಹಠಮಾಡುತ್ತಿದ್ದೇವೆ.

ನ್ಯಾಯವಾಗಿ ನೋಡಿದರೆ, ಕಾವ್ಯ ಧರಿಸಬಹುದಾದ ರೂಪಗಳಿಗೆ ಮೊದಲು ಕೊನೆಯಿಲ್ಲ; ಯಾವ ರೂಪವನ್ನು ಅದು ಧರಿಸಿದರೂ ಅದು ರಸವನ್ನೊಳಗೊಂಡಿದ್ದರೆ ಉತ್ತಮ ಕಾವ್ಯ.''

ಶ್ರೀನಿವಾಸರು ನಿರ್ಮಲವಾದ ಹಾಸ್ಯವನ್ನು ಮಿಂಚಿಸಬಲ್ಲರು. ''ಕಾಂತೇ ನೀ ಬಾರೆಂದೇಕಾಂತಕ್ಕೆ ಕರೆದು ಆ! ಕಾಂತೆಯೊಳಿಂತೆಂದನು'' ಎಂಬ ಯಾರೋ ಕಟ್ಟಿದ ಎರಡು ಪಂಕ್ತಿಗಳ ಬಗ್ಗೆ ಅವರು ತಮಾಷೆ ಮಾಡುತ್ತಾರೆ: ''ಗುರು ಕಾಂತೆಯನ್ನು ಕರೆದದ್ದು, ಏಕಾಂತಕ್ಕೆ ಕರೆದದ್ದು ಕಾಂತ ಎಂಬ ಪ್ರಾಸಕ್ಕಾಗಿ ಹೊರತು ಮತ್ತೆ ಯಾವ ದುರುದ್ದೇಶದಿಂದಲೂ ಅಲ್ಲ.'' ಹಿಂದಿನವರ ಅತಿಪ್ರಾಸಪ್ರಿಯತೆಯನ್ನು ಕುರಿತ ಒಳ್ಳೆಯ ವಿಡಂಬನವಿದು.

'ಗಯಟೆಯವರ ಮಾತಿನಲ್ಲಿ ಕಾವ್ಯಮೀಮಾಂಸೆ' ಹಾಗೂ 'ಗಯಟೆ ಕವಿಯ ಮಾತು : ನಾಟಕಗಳನ್ನು ಕುರಿತು' ಎಂಬ ಎರಡು ಪ್ರಬಂಧಗಳಲ್ಲಿ, ಆಯಾ ಪ್ರಕಾರದ ಬಗೆಗೆ ಗಯಟೆಯ ಅಮೂಲ್ಯ ವಿಚಾರಧಾರೆಯನ್ನು ಶ್ರೀನಿವಾಸರು ಕನ್ನಡಕ್ಕೆ ತಂದು ಕೊಟ್ಟಿದ್ದಾರೆ. ಈ ಪ್ರಯತ್ನದಲ್ಲಿ ತಮ್ಮ ಉದ್ದೇಶವೇನೆಂಬುದನ್ನು ಅವರೇ ಹೇಳಿ ಕೊಂಡಿದ್ದಾರೆ: ''ನಮ್ಮ ಜನರಿಗೆ ಪಾಶ್ಚಾತ್ಯ ಕವಿಗಳ ಕಾವ್ಯಮೀಮಾಂಸೆಯ ರೀತಿಯನ್ನು ತಿಳಿಸುವುದಕ್ಕೂ ಅದರ ಜೊತೆಯಲ್ಲಿ ಈ ಪಾಶ್ಚಾತ್ಯ ಕವಿವರರ ಒಂದು ಚಿತ್ರವನ್ನು ತೋರಿಸುವುದಕ್ಕೂ ಪ್ರಯತ್ನ ಮಾಡಿದೆ.'' ಇದು ಬಹು ಶ್ಲಾಘ್ಯವಾದ ಕೆಲಸ. ಈ ದಿಶೆಯಲ್ಲಿ ಮಾಡಬೇಕಾದ್ದು ಇನ್ನೂ ಬೆಟ್ಟದಷ್ಟಿದೆ. ಇತೀಚೆಗೆ ಇಲಿಯಡ್ ಮುಂತಾದವರ ವಿಚಾರಗಳನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡಲಾಗಿದೆ; ಅದು ಏನೇನೂ ಸಾಲದು. ಅನುವಾದದ ಮೂಲಕ ಅಥವಾ ಮುಖ್ಯ ವಿಚಾರಗಳನ್ನು ಸಂಗ್ರಹಿಸುವುದರ ಮೂಲಕ ಪಾಶ್ಚಾತ್ಯ ಕಾವ್ಯಮೀಮಾಂಸೆಯನ್ನೆಲ್ಲ ಕನ್ನಡಕ್ಕೆ ತರಬೇಕಾಗಿದೆ. ಶ್ರೀನಿವಾಸರು ಬಹಳ ಹಿಂದೆಯೇ ಒಂದು ಮೇಲ್ಪಂಕ್ತಿ ಹಾಕಿ ಕೊಟ್ಟಿದ್ದಾರೆ.

'ಠಾಕೂರ ಕವಿವರರ ಗೀತಾಂಜಲಿ', 'ಹಾಫೀಸ್ ಕವಿಯನ್ನು ಕುರಿತು', 'ಡೇವಿಡ್ ಮಹಾರಾಜನ ಕೀರ್ತನೆಗಳು,' ಎಪಿಕ್ಟಿಟಸ್ ಗುರುವಿನ ಉಪದೇಶ, 'ಅರೀಲಿಯಸ್ ಚಕ್ರವರ್ತಿಯ ಆಲೋಚನೆ', 'ಅಗಸ್ಟೀನ್ ಸಾಧುವಿನ ಬಿನ್ನಪ' - ಈ ಲೇಖನಗಳಲ್ಲಿ ಶ್ರೀನಿವಾಸರು ವಿಮರ್ಶಕರಿಗಿಂತ ಹೆಚ್ಚಾಗಿ ಒಳ್ಳೆಯ ಭಾಷಾಂತರಕಾರರಾಗಿ ತೋರುತ್ತಾರೆ. ಆಯಾ ಕವಿಯ ರುಚಿಯನ್ನು ಕನ್ನಡಿಗರಿಗೆ ಉಂಟು ಮಾಡಬೇಕೆಂಬ ಉದ್ದೇಶದಿಂದ ಅವರು ಮೂಲದ ಭಾಗಗಳನ್ನು ವಿಪುಲವಾಗಿ ಕನ್ನಡಿಸಿ ಕೊಟ್ಟಿದ್ದಾರೆ; ಅವರ ಅನುವಾದ ಸರಳ ಸುಂದರವಾದುದು, ಅಚ್ಚಗನ್ನಡದ ಕಂಪು ಸೂಸುವಂಥದು.

ಟಾಗೂರರ 'ಗೀತಾಂಜಲಿ', ''ವೈಷ್ಣವ ಸಂಪ್ರದಾಯದಲ್ಲಿ ಹಿಂದಣ ದಾಸರು ಬರೆದ ಗೀತೆಗಳ ಮಾರ್ಗದಲ್ಲಿ ಒಂದು ಹೊಸ ರೂಪ''ಎನ್ನುತ್ತಾರೆ ಶ್ರೀನಿವಾಸರು. ನಿಜ, ಭಾರತೀಯ ಪರಂಪರೆಗೆ ಅದರಲ್ಲಿರುವ ಅನುಭವಗಳು ಹೊಸವಲ್ಲ. ಟಾಗೂರರ ಕೀರ್ತಿದುಂದುಭಿ ಪಶ್ಚಿಮದಲ್ಲಿ ಮೊಳಗುತ್ತಿದ್ದಾಗ, ಭಾರತದಲ್ಲಿ ಅವರ ಹೆಸರಿನ್ನೂ ಅಪರಿಚಿತವಾಗಿತ್ತು. ಅದನ್ನು ಕುರಿತು ಶ್ರೀನಿವಾಸರು ''ನಾವಾದರೋ ಗೌಳಿಗನ ಮನೆಯ ಮಕ್ಕಳು ಹಾಲಿನ ರುಚಿಯನ್ನು ಕಾಣದಂತೆ ಠಾಕೂರರ ಗ್ರಂಥಗಳ ರುಚಿಯನ್ನು ಅರಿಯಲಾರದೆ ಇದ್ದೇವೆ'' ಎಂದು ಉಪಮೆಯೊಂದರ ಮೂಲಕ ಹೇಳುತ್ತಾರೆ.

ಅವರಿಗೆ ಕಾಳಿದಾಸನ ಮೇಲೆ ಅತೀವ ಅಭಿಮಾನವಿರುವಂತೆ ತೋರುತ್ತದೆ. ಎಂತಲೇ ಒಂದೆಡೆ ''ಕಾಳಿದಾಸನು ತಿರುಗಿ ಬರಲಿಲ್ಲ . . . ಕಾಳಿದಾಸನಂತೆ ಶ್ರೇಷ್ಠರಾದ ಕವಿಗಳೇ ಇಲ್ಲ; ಅವನನ್ನು ತನ್ನವನೆಂದು ಹೇಳುವ ದೇಶವು ಮರ್ಯಾದೆಯಿಂದ

ಗಣಿಸಬಹುದಾದ ಕವಿಗಳು ಕೂಡ ನಮ್ಮ ಸೀಮೆಯಲ್ಲಿ ಈಚೆಗೆ ಇಲ್ಲದೆ ಹೋದರು'' ಎಂದು ವಿಷಾದಿಸುತ್ತಾರೆ. ಇದನ್ನೊಪ್ಪುವುದು ಸಾಧ್ಯವಿಲ್ಲ. ಕನ್ನಡದಲ್ಲೆ ಪಂಪ, ನಾರಣಪ್ಪ ಇಲ್ಲವೆ? ಕಾಳಿದಾಸನಿಗೆ ಇವರೇನು ಕಡಿಮೆ?

'ಹಾಫೀಸ್ ಕವಿಯನ್ನು ಕುರಿತು' ಪ್ರಬಂಧದಲ್ಲಿ, ಅವನ ಕೆಲವು ಭಾಗಗಳನ್ನು ಇಂಗ್ಲಿಷಿನಿಂದ ಅನುವಾದಿಸಿ ಶ್ರೀನಿವಾಸರು ಹೇಳುತ್ತಾರೆ: ''ಭಾಷಾಂತರಗಳನ್ನು ನೋಡಿದರೆಯೇ ಹಾಫೀಸನ ಕವಿತಾಶಕ್ತಿ ಎಷ್ಟು ಅದ್ಭುತವಾದುದು, ಅವನ ಭಾವನೆ ಎಷ್ಟು ಅಗಾಧವಾದುದು ಎಂದು ಆಶ್ಚರ್ಯವಾಗುತ್ತದೆ.'' ಹಾಫೀಸನ ಕವಿತಾಶಕ್ತಿ ಅದ್ಭುತವಾದದು ಎಂಬ ಮಾತು ತುಸು ಹೆಚ್ಚಾಯಿತೆನಿಸುತ್ತದೆ. ಇತರ ಜನಾಂಗಗಳ ಉತ್ತಮ ಕಾವ್ಯದ ವ್ಯಾಸಂಗ ಏತಕ್ಕೆ ಅವಶ್ಯಕವೆಂಬುದನ್ನು ಶ್ರೀನಿವಾಸರು ಸಮರ್ಪಕವಾಗಿ ಪ್ರತಿಪಾದಿಸುತ್ತಾರೆ : ''ವಿಶ್ವ ಸಂಸಾರದಲ್ಲಿ ಒಂದೊಂದು ದೇಶವೂ ಒಂದೊಂದು ವ್ಯಕ್ತಿಯಂತೆ. ಒಂದೊಂದು ಕಾಲದಲ್ಲಿ ಸಂಸಾರದ ಭರಣ ಶಕ್ತಿ ಬೇರೆ ಬೇರೆ ದೇಶದಲ್ಲಿ ತೋರಬಹುದು. ಆಗ ಇತರ ದೇಶಗಳು ತಮ್ಮ ಜೀವನವನ್ನು ಆ ದೇಶದ ಜೀವನದಿಂದ ಪೋಷಿಸಿಕೊಳ್ಳಬೇಕು. ಈ ಕಾರಣದಿಂದ ಒಂದೊಂದು ಜನಾಂಗವೂ ಇತರ ಜನಾಂಗಗಳ ಉತ್ತಮ ಕಾವ್ಯಗಳನ್ನು ಪಠಿಸುವುದು ಆವಶ್ಯಕ . . . ಕಾವ್ಯದ ಮೂಲವನ್ನೇ ಓದುವುದು ಸಾಧ್ಯವಾದರೆ ಒಳ್ಳೆಯದೇ ಆಯಿತು. ಹಾಗೆ ಓದುವುದಕ್ಕೆ ಆಗದಿದ್ದರೆ ಭಾಷಾಂತರವನ್ನಾದರೂ ಓದಬೇಕು.'' ಕಾವ್ಯಕ್ಕೆ ಅನಗತ್ಯವಾಗಿ ತಾತ್ವಿಕ ಅರ್ಥವನ್ನು ಆರೋಪಿಸುವುದು ಹಾನಿಕರವೆಂಬ ಅವರ ಎಚ್ಚರಿಕೆ ಬಹಳ ಗ್ರಾಹ್ಯವಾದದ್ದು: ''ನೀತಿಗೆ ವಿರೋಧವಾಗುವುದಲ್ಲಾ ಎಂಬ ಭಯದಿಂದ ಪ್ರಮುಖವಾದ ಕಾವ್ಯವನ್ನು ಪರೋಕ್ಷಾರ್ಥ ಕಲ್ಪನೆಯ ಮೂಲಕ ವೇಂದಾಂತವೂ ಗ್ರಂಥವಾಗಿ ಮಾಡಿ ಬಿಟ್ಟರೆ ಅದು ಕಾವ್ಯವೂ ಆಗಲಾರದು, ವೇದಾಂತವೂ ಆಗಲಾರದು . . ಮಾತು ಮಾತಿಗೂ ತತ್ತ್ವದ ಅರ್ಥವನ್ನು ತರಲು ಯತ್ನ ಮಾಡಿದರೆ ಉತ್ತಮ ಕಾವ್ಯಕ್ಕೆ ಅಪಾರ್ಥವನ್ನು ಮಾಡದ ಹಾಗೆ ಮಾತ್ರ ಆಗುವುದು.'' •

ಡೇವಿಡ್, ಎಪಿಕ್ಟಿಟಸ್, ಅರೀಲಿಯಸ್, ಅಗಸ್ಟೀನ್ - ಈ ಸಂತ ಚತುಷ್ಟರ ಸಾಹಿತ್ಯವನ್ನು ಶ್ರೀನಿವಾಸರು ಭಾಷಾಂತರದ ಮೂಲಕ ಪರಿಚಯಿಸಿರುವುದು ಅವರ ಒಂದು ದೊಡ್ಡ ಉಪಕಾರ. ಕನ್ನಡದಲ್ಲಿ ಅವರೊಬ್ಬರೇ ಈ ಕೆಲಸವನ್ನು ಮಾಡಿರುವರು.

'ಮುದ್ದಣ ಕವಿಯ ರಾಮಾಶ್ವಮೇಧ' ಪ್ರಬಂಧದಲ್ಲಿ ಶ್ರೀನಿವಾಸರ ವಿಮರ್ಶೆ ತೂಕ ತಪ್ಪಿ ಸ್ತೋತ್ರದತ್ತ ವಾಲಿರುವುದು ಆಶ್ಚರ್ಯದ ಸಂಗತಿ. ವಾಸ್ತವವಾಗಿ, 'ಶ್ರೀ ರಾಮಾಶ್ವಮೇಧಂ' ಕಾವ್ಯದಲ್ಲಿ ಹೊಸತನ ತಕ್ಕಮಟ್ಟಿಗಿದ್ದರೂ ಅದು ಶ್ರೇಷ್ಠ ದರ್ಜೆಯ ಕಾವ್ಯವೇನಲ್ಲ. ಆದರೆ ಶ್ರೀನಿವಾಸರು ಅದೊಂದು ಅದ್ವಿತೀಯ ಮಹಾಕಾವ್ಯವೆಂಬಂತೆ ತೀರ್ಪು ಕೊಟ್ಟಿರುವುದು ಅರ್ಥವಾಗದ ಸಮಸ್ಯೆಯಾಗಿದೆ. ಈ ಭಾಗಗಳನ್ನು ನೋಡಬಹುದು ; ''ಕತೆಯನ್ನು ಹೇಳುವುದರಲ್ಲಿಯೂ ಪ್ರಕೃತಿಯ ಸೌಂದರ್ಯವನ್ನು ವರ್ಣಿಸುವುದರಲ್ಲಿಯೂ ಜೀವತತ್ತ್ವವನ್ನು ವಿಮರ್ಶಿಸುವುದರಲ್ಲಿಯೂ ಪಾಠಕರ ಹೃದಯದಲ್ಲಿ ವಿವಿಧ ಪರಿಣಾಮಗಳನ್ನು ಉಂಟುಮಾಡುವುದರಲ್ಲಿಯೂ ಈ ಕವಿಗೆ ಇರುವ ಅಸದೃಶವಾದ ಶಕ್ತಿ ಇಲ್ಲಿ ಪೂರ್ಣ ಪರಿಪಾಕವನ್ನು ಹೊಂದಿದೆ.'' ''ಈ ಕವಿ ಪ್ರಕೃತಿಯ ಸೌಂದರ್ಯದ ವರ್ಣನೆಯಲ್ಲಿ ಯಾವ ಸೌಲಭ್ಯವನ್ನೂ ಕೌಶಲವನ್ನೂ ತೋರಿಸುವನೋ ಮನುಷ್ಯ ಸ್ವಭಾವ ನಿರೂಪಣದಲ್ಲಿಯೂ ಅದೇ ಸೌಲಭ್ಯವನ್ನೂ ಕೌಶಲ್ಯವನ್ನೂ ತೋರಿಸುವನು.''

''ಮುದ್ದಣಕವಿ ಕನ್ನಡ ಭಾಷೆಯಲ್ಲಿ ಮಾತ್ರವಲ್ಲ, ಪ್ರಪಂಚದ ಇನ್ನು ಯಾವ ಭಾಷೆಯಲ್ಲಾದರೂ ಕವಿಗೋಷ್ಠಿಯ ಅಗ್ರಸ್ಥಾನಗಳಲ್ಲಿ ಒಂದಕ್ಕೆ ಅಧಿಕಾರಿ ಎಂದು ಪಾಠಕರಿಗೆ ತೋರುವುದು. ಪ್ರಕೃತಿ ಸೌಂದರ್ಯದ ವರ್ಣನೆಯಲ್ಲಿ ಈತನು ಕಾಳಿದಾಸ ಷೇಕ್ಸ್‌ಪಿಯರರಿಗಿಂತ ಬಹಳ ಕಡಿಮೆಯಾದವನಲ್ಲ . . . ಇವನ ಕನ್ನಡದ ಶೈಲಿಯ ಸೊಗಸು ರಸ್ಕಿನ್ ಡಿಕ್ವಿನ್ಸಿಗಳ ಇಂಗ್ಲಿಷ್ ಶೈಲಿಯ ಸೊಗಸಿಗೆ ಸಮಾನವಾಗುತ್ತದೆ.'' ಈ ಅತಿಶಯೋಕ್ತಿಗಳಿಗೆ ಏನು ಹೇಳುವುದು? ''ಮಾಮರ ನೆಳದಳಿರ ರಸಮಂ ಪಿರಿದು ಕಳಕಂಠನ ಕಂಠನಾಳಕ್ಕೆಳಿದುಬ್ಬಸಮಂ ಕಳೆದು. . .'' ಎಂಬ ವರ್ಣನೆಯನ್ನು ಉದಾಹರಿಸಿ, ಶ್ರೀನಿವಾಸರು ಹೇಳುತ್ತಾರೆ : ''ಈ ವರ್ಣನೆ, ಉತ್ತಮ ಕವಿತೆಯ ಸರ್ವಲಕ್ಷಣಗಳಿಂದ ಸಂಪನ್ನವಾಗಿ ಕವಿಗೆ ಸಾಹಿತ್ಯದಲ್ಲಿ ಅತ್ಯುತ್ತಮವಾದ ಸ್ಥಾನವನ್ನು ಕೊಡತಕ್ಕುದಾಗಿದೆ''. ''ಅಡಿಗಡಿಗೆ ಬದ್ಧ ಬದಸಿಂ ಪಗೆದು ಪತ್ತುವಿಡಿಸಿ . . .'' ಎಂಬ ವರ್ಣನೆಯ ಬಗ್ಗೆ ಅವರ ನಿರ್ಣಯವಿದು : ''ಈ ವರ್ಣನೆ ಭಾವನೆಯಲ್ಲಿಯೂ ಊಹೆಯಲ್ಲಿಯೂ ಶೈಲಿಯಲ್ಲಿಯೂ ಸಾಹಿತ್ಯ ಸಾಮ್ರಾಜ್ಯದ ಎಲ್ಲೆಯನ್ನು ಮುಟ್ಟಿರುವುದು.'' ಶ್ರೀನಿವಾಸರ ವಿಮರ್ಶನಶಕ್ತಿಯನ್ನೆ ಶಂಕಿಸುವಂತೆ ಮಾಡುತ್ತದೆ ಅವರ ಇಲ್ಲಿನ ಬರವಣಿಗೆ. ಬಹುಶಃ ಮುದ್ದಣನ ವೈಯುಕ್ತಿಕ ಜೀವನವನ್ನು ಕುರಿತ ಅನುಕಂಪ ಅವರ ಕಾವ್ಯದ ಮೇಲಿನ ಅಭಿಮಾನಾತಿರೇಕವಾಗಿ ಪರಿಣಮಿಸಿರಬೇಕು. ಇದು ವಿಮರ್ಶೆಯ ಆದರ್ಶವಲ್ಲ ಎಂದಷ್ಟೇ ಹೇಳಬಹುದು.

''ಲಕ್ಷೀಶನ ಕಾವ್ಯ' ಹಾಗೂ 'ಮೇಘ ಸಂದೇಶ' ಪ್ರಬಂಧಗಳಲ್ಲಿ ಶ್ರೀನಿವಾಸರ ಅತ್ಯುತ್ತಮ ವಿಮರ್ಶೆಯನ್ನು ಕಾಣುತ್ತೇವೆ. ಕಾಲದ ದೃಷ್ಟಿಯಿಂದ ಇವು ಈಚಿನವು. ಶ್ರೀನಿವಾಸರು ಆ ಕಾವ್ಯಗಳ ಸ್ವಾರಸ್ಯವನ್ನು ಆರ್ದ್ರಹೃದಯದಿಂದ ಸವಿದು ವಿವರಿಸಿದ್ದಾರೆ; ಅವುಗಳ ರಸಸ್ಥಾನಗಳನ್ನು ನಿರ್ದೇಶಿಸಿದ್ದಾರೆ.

ಲಕ್ಷ್ಮೀಶನ ಜನಪ್ರಿಯತೆಗೆ ಕಾರಣಗಳನ್ನು ಅವರು ಸಮಂಜಸವಾಗಿ ತಿಳಿಸುತ್ತಾರೆ. ''ಅವನು ಒಳ್ಳೆಯ ಕತೆಗಾರ''ನೆಂಬುದು ಮೊದಲನೆಯ ಕಾರಣವೆಂದೂ, ಈ ಗ್ರಂಥವು ''ಹಲವು ಕತೆಗಳ ಗೊಂಚಲು ಅಥವಾ ಮಾಲಿಕೆ'' ಎಂದೂ ಅವರ ಹೇಳಿಕೆ. ''ಲಕ್ಷ್ಮೀಶಕವಿಯು ಎಲ್ಲಕ್ಕಿಂತ ಮೊದಲು ಕಥನ ಕುಶಲನು.'' ಅವನ ಕೃತಿಯ ಭಕ್ತಿರಸಪ್ರಾಧಾನ್ಯವನ್ನು ಸೂಚಿಸಿ, ''ಈ ಕಾವ್ಯವು ಕೃಷ್ಣ ಚರಿತೆಯ ಅಮೃತ''ವೆನ್ನುತ್ತಾರೆ. ಆದರಲ್ಲಿರುವ ವಿಸ್ತಾರವಾದ ಯುದ್ಧಗಳ ವರ್ಣನೆ ಜನಪ್ರಿಯತೆಗೆ ಇನ್ನೊಂದು ಕಾರಣವೆಂದು ಸೂಚಿಸುತ್ತಾರೆ: ''ಸರಿಯಾಗಿ ನೋಡಿದರೆ ಜೈಮಿನಿ ಭಾರತದ ಅರ್ಧಕಾವ್ಯವೇ ಕದನಗಳ ಉತ್ಸಾಹದ್ದು.'' ಲಕ್ಷ್ಮೀಶನ ವಸ್ತು ಸೌಂದರ್ಯ ಜ್ಞಾನ ಶ್ರೀನಿವಾಸರ ಮೆಚ್ಚುಗೆಗೆ ಪಾತ್ರವಾಗಿದೆ. ''ಪುಷ್ಪವತಿಯಾಗಿ ವಿಕಸಿತ ವಸಂತಲಕ್ಷ್ಮಿಯ ತೆರದೊಳು'' ಎಂಬ ಸೀತಾ ವರ್ಣನೆಯ ಔಚಿತ್ಯವನ್ನು ಅವರು ಸರಿಯಾಗಿ ಗುರುತಿಸಿದ್ದಾರೆ: ''ಸೀತೆ ಇಷ್ಟು ಚೆಲುವಾಗಿ ಕಂಡದ್ದನ್ನು ವರ್ಣಿಸುವುದು ನಮಗೆ ತಕ್ಕುದೆ? ಎಂದು ನಮಗೆ ತೋರಬೇಕು. ಕವಿ ಹೇಳುತ್ತಾನೆ: ದೇವಿ, ಹಾಗೆ ಕಂಡದ್ದು ರಾಘವನ ಕಣ್ಗೆ. ಇನ್ನು ಯಾವನ ಕಣ್ಣಿಗಾದರೂ ಆ ರೂಪು ಹಾಗೆ ಕಂಡರೆ ಅದು ಅವನ ದುರದೃಷ್ಟ.'' ಲಕ್ಷ್ಮೀಶನ ಹಾಸ್ಯಕ್ಕೆ ಹತ್ತಿರದಲ್ಲಿ ಕಣ್ಣೀರಿದೆ ಎಂಬುದೂ ಗಮನಾರ್ಹವಾದ ಉಕ್ತಿ.

ಲಕ್ಷ್ಮೀಶನ ಜೈಮಿನ ಭಾರತದ ಮೇಲ್ಮೆಯನ್ನು ಶ್ರೀನಿವಾಸರು ತೌಲನಿಕವಾಗಿ ಹೀಗೆ ಸ್ಥಾಪಿಸುತ್ತಾರೆ: ''ಸಂಸ್ಕೃತದ ಜೈಮಿನಿಭಾರತಕ್ಕೆ ಅಷ್ಟೇನೂ ಪ್ರಾಶಸ್ತ್ಯ ಬಂದಿಲ್ಲ. ಕನ್ನಡದ

ಗ್ರಂಥವಾದರೆ ಅಭಿಜ್ಞರಾದ ಯಾರಿಗಾದರೂ ಮೆಚ್ಚಾಗುವ ಗ್ರಂಥ. ಈ ವ್ಯತ್ಯಾಸಕ್ಕೆ ಕಾರಣ ಲಕ್ಷ್ಮೀಶನ ಕವಿತಾಶಕ್ತಿ. ಈ ಶಕ್ತಿ ಸಂಸ್ಕೃತದ ಮೂಲದಿಂದ ಇವನಿಗೆ ಇರಲಿಲ್ಲ; ಇವನಿಂದ ಸ್ಕೃಂತದ ಮೂಲಕ್ಕೆ ಸೇರಿ ಕನ್ನಡದಲ್ಲಿ ಹೊಸ ಕಾವ್ಯವನ್ನು ಹರಡಿತು.''

ಕಾಳಿದಾಸನ 'ಮೇಘಸಂದೇಶ'ವನ್ನು ವಿವೇಚಿಸುತ್ತ' ಅದರಲ್ಲಿ ''ಪ್ರೇಮ ವಿಜ್ಞಾನ, ಸೌಂದರ್ಯಗ್ರಹಣಶಕ್ತಿ, ದೇಶಪ್ರೇಮ, ಧರ್ಮವಿಮರ್ಶೆ, ಭಗವದ್ಭಕ್ತಿ, ಉಚ್ಚವಾದ ವಿನಯ ಪ್ರಕಟವಾಗಿವೆಯೆಂದು ಶ್ರೀನಿವಾಸರು ಹೇಳುತ್ತಾರೆ. ಇದು ಒಂದು ಭಾವಗೀತೆಯೆಂಬುದನ್ನು ಅವರು ಕಾವ್ಯಾರಂಭದಲ್ಲೆ ಲಕ್ಷಿಸಿ, ವಿವರಿಸುತ್ತಾರೆ : ''ಭಾವಗೀತೆಯಾದ್ದರಿಂದ ಇಲ್ಲಿ ಕತೆಗೆ ಅವಕಾಶವಿಲ್ಲ. ಆದ ಕಾರಣ ಕವಿಯು ಯಕ್ಷನ ಹೆಸರು, ಕುಲ, ಗೋತ್ರ, ನಡೆದ ವಿಷಯ ಇವುಗಳಿಗಾಗಿ ಮಾತನ್ನು ವ್ಯರ್ಥ ಮಾಡದೆ ಭಾವಗೀತೆಯ ನಾಯಕನ ಅವಸ್ಥೆಯನ್ನು ಮಾತ್ರ ತಿಳಿಸಿ ಮುಂದಕ್ಕೆ ಹೊರಡುತ್ತಾನೆ.'' ಕಾಳಿದಾಸ ''ನೀರಿನಲ್ಲಡಿಯಿಟ್ಟೊಡನೆ ಜೀವವನ್ನು ಒಳಕ್ಕೆಳೆಯುವ ಮೊಸಳೆಯಂತೆ ಮೊದಲಲ್ಲೇ ನಮ್ಮನ್ನು ರಸದ ಪ್ರವಾಹದೊಳಕ್ಕೆ ಎಳೆಯುತ್ತಾನೆ'' ಎಂದು ಕೊಂಡಾಡಿದ್ದಾರೆ. ಕವಿಯ ಪದಪ್ರಯೋಗದಲ್ಲಿರುವ ಔಚಿತ್ಯವನ್ನು ವಿಶದಪಡಿಸುವಲ್ಲಿ ಶ್ರೀನಿವಾಸರ ಸೂಕ್ಷ್ಮಸಂವೇದನೆ ವ್ಯಕ್ತವಾಗುತ್ತದೆ: ''ಅಂತಸ್ಸಾರನಾದ ನಿನ್ನನ್ನು ಗಾಳಿ ಅಲುಗಾಡಿಸಲಾರದು ಎನ್ನುವಲ್ಲಿ ಯಕ್ಷನು ಮೋಡವನ್ನು 'ಘನ' ಎಂದು ಕರೆಯುತ್ತಾನೆ. ಸಂತೃಪ್ತರಿಗೆ ನೀನು ಶರಣನು ಎನ್ನುವಾಗ 'ಪಯೋದ' ಎಂದು ಕರೆಯುತ್ತಾನೆ. ಮಾತು ಆ ಸಂದರ್ಭಕ್ಕೆ ಉಚಿತವಾಗಿದೆ.'' 'ಮೇಘಸಂದೇಶ'ದ ಕೆಲವು ವರ್ಣನೆಗಳು ಔಚಿತ್ಯದ ಗೆರೆಯನ್ನು ದಾಟಿವೆಯೆಂಬ ಆಕ್ಷೇಪಣೆಗೆ ಅವರು ಉತ್ತರ ಕೊಡುವ ಪರಿಯಿದು: ''ಭೋಗಸಾಗರದಲ್ಲಿರುತ್ತ ಬರೆದ ಕಾವ್ಯದಲ್ಲಿ ಈ ವಿಷಯಗಳು ಇಷ್ಟು ಮಿತವಾಗಿ, ಇಷ್ಟು ನಿರ್ಮಲವಾಗಿ ಬಂದಿರುವುದಕ್ಕೆ ನಾವು ಸಂತೋಷಪಡಬೇಕು.'' ''ಇಷ್ಟು ಸಣ್ಣದಾದರೂ ಈ ಕಾವ್ಯದಲ್ಲಿ ಕಾಳಿದಾಸನ ಹೃದಯದ ಸುಂದರವಾದ ಒಂದು ಭಾವಚಿತ್ರ ಸಿಕ್ಕುತ್ತದೆ. ಅವನ ದೇಶಪ್ರೇಮ, ಧರ್ಮಪ್ರೇಮ, ದೈವಭಕ್ತಿ, ಉದಾರ ಹೃದಯ, ಮಾನವನ ಜೀವನವನ್ನು ಕುರಿತ ಕನಿಕರ, ಪ್ರಕೃತಿಯಲ್ಲಿ ಮಾಡಿದ ಈಶ್ವರಾನುಷ್ಠಾನ, ಅವನ ಸೌಂದರ್ಯಗ್ರಹಣ ಶಕ್ತಿ, ಕವಿ ಮನೋವೃತ್ತಿ, ರಸಿಕತೆ, ಆಡಂಬರವಿಲ್ಲದ ಪಾಂಡಿತ್ಯ, ನಿಸ್ಸೀಮವಾದ ಕಲಾಕೌಶಲ್ಯ'' ವಿದಿತವಾಗುತ್ತವೆಂದು ಶ್ರೀನಿವಾಸರ ಪ್ರಶಂಸೆ. 'ಮೇಘಸಂದೇಶ'ದ ರಮ್ಯತೆಯನ್ನೆಲ್ಲ ಅವರ ವಿಮರ್ಶೆ ತೆರೆದು ತೋರಿದರೂ, ''ಈ ಕಾವ್ಯವು ಪ್ರಪಂಚದ ಅತ್ಯುತ್ತಮ ಭಾವಗೀತೆಗಳಲ್ಲಿ ಒಂದಾಗಿದೆ. ಸಂಸ್ಕೃತ ಸಾಹಿತ್ಯದಲ್ಲಿ ಇದರ ಜೊತೆಗೆ ನಿಲ್ಲುವ ಬೇರೆ ಗ್ರಂಥವಿರುವಂತೆ ಕಾಣುವುದಿಲ್ಲ; ಪ್ರಪಂಚದ ಸಾಹಿತ್ಯದಲ್ಲಾಗಲಿ ಇದರ ಜೊತೆಗೆ ತೂಗುವ ಯೋಗ್ಯತೆಯನ್ನುಳ್ಳ ಗ್ರಂಥ ಹಲವು ಇಲ್ಲ'' ಎಂಬ ನಿರ್ಣಯ ಅತ್ಯುಕ್ತಿಯ ಅಂಚಿನಲ್ಲಿದೆ.

''ತಮಿಳು ವೈಷ್ಣವ ಪ್ರಬಂಧಗಳು' ಎಂಬ ಲೇಖನದಲ್ಲಿ, ಆಳ್ವಾರುಗಳ ಪ್ರಬಂಧಗಳು ಹೇಗೆ ಮತದೃಷ್ಟಿಯನ್ನೂ ಮೀರಿದ ಕಾವ್ಯಗಳಾಗಿವೆಯೆಂಬುದನ್ನು ಸ್ಪಷ್ಟಪಡಿಸಲಾಗಿದೆ. ''ಈ ಕೃತಿಗಳಲ್ಲಿ ತತ್ತ್ವವಿಚಾರವೂ ಮತಪ್ರಕ್ರಿಯೆಯೂ ಅತ್ಯುತ್ತಮವಾದ ಕಾವ್ಯವಾಗಿ ಕಾಣುತ್ತವೆ'' ಎಂದು ಹೇಳುತ್ತಾರೆ ಶ್ರೀನಿವಾಸರು. ನಮ್ಮಾಳ್ವಾರರ ಒಂದು ಕೃತಿಯನ್ನು ಕುರಿತು ಅವರ ತೀರ್ಮಾನವಿದು: ''ಈ ಕೃತಿಗೆ ಸಮಾನಾದ ಕೃತಿ ಧಾರ್ಮಿಕ ಸಾಹಿತ್ಯದಲ್ಲಾಗಲಿ ಧಾರ್ಮಿಕವಲ್ಲದ ಸಾಹಿತ್ಯದಲ್ಲಾಗಲಿ

ದೊರೆಯುವುದು ದುರ್ಲಭ.'' ಇಂಥ ಕಡೆಗಳಲ್ಲಿ ಶ್ರೀನಿವಾಸರು ಮುಗ್ಗರಿಸುವುದು.

ಒಟ್ಟಿನಲ್ಲಿ, ಶ್ರೀನಿವಾಸರ ವಿಮರ್ಶೆಯ ಕೆಲವು ಭಾಗಗಳು ಕನ್ನಡ ವಿಮರ್ಶೆಯ ಪರಂಪರೆಗೆ ಉತ್ತಮವಾದ ಕೊಡುಗೆಯನ್ನಿತ್ತಿವೆ*. ಅವರು ಕನ್ನಡದ ಗಣ್ಯ ವಿಮರ್ಶಕರಲೊಬ್ಬರಾಗಿದ್ದಾರೆ; ಅದಕ್ಕಿಂತ ಮಿಗಿಲಾಗಿ, ಕನ್ನಡ ವಿಮರ್ಶನ ಕ್ಷೇತ್ರದ ಆದ್ಯರಲ್ಲೊಬ್ಬರರಾಗಿ ಮಾನ್ಯರಾಗಿದ್ದಾರೆ. ಆದರೆ ಉಳಿದ ಕೆಲವು ಸಾಹಿತ್ಯ ಪ್ರಕಾರಗಳಲ್ಲಿ ಅವರು ಪಡೆದಿರುವ ಸಿದ್ಧಿ, ಯಶಸ್ಸುಗಳನ್ನು ವಿಮರ್ಶೆಯಲ್ಲಿ ಪ್ರಾಯಶಃ ಪಡೆದಿಲ್ಲ ಎಂದರೆ ಅದೇನೂ ದೂಷಣೆಯಾಗಲಾರದು. ಎಲ್ಲ ಪ್ರಕಾರಗಳಲ್ಲೂ ಏಕ ಪ್ರಕಾರವಾದ ಸಿದ್ಧಿಯನ್ನು ಮುಟ್ಟಿದ ಜನ ಎಲ್ಲಿದ್ದಾರೆ ಸಾಹಿತ್ಯ ಜಗತ್ತಿನಲ್ಲಿ?

---

* ಅವರ ಆದಿಕವಿ ವಾಲ್ಮೀಕಿ, ಭಾರತತೀರ್ಥ, ಕರ್ಣಾಟಕ ಜನಪದ ಸಾಹಿತ್ಯ ಮುಂತಾದ ಕೃತಿಗಳನ್ನೂ ಒಳಗೊಳ್ಳಬೇಕಾಗುತ್ತದೆ, ಅವರ ವಿಮರ್ಶೆಯ ಪೂರ್ಣ ಸಮೀಕ್ಷೆ. ಇಲ್ಲಿ 'ವಿಮರ್ಶೆ'ಯ ನಾಲ್ಕು ಭಾಗಗಳನ್ನು ಮಾತ್ರ ಗಮನಿಸಲಾಗಿದೆ.

355

ಆದಿಕವಿ ವಾಲ್ಮೀಕಿ

ಡಾ|| ಕೆ. ವಿ. ಪುಟ್ಟಪ್ಪ

ಋಷಿಕವಿ ವಾಲ್ಮೀಕಿಯ* ಸಮುದ್ರೋಪಮ ಮಹಾಗಾನಕ್ಕೆ ಜಗತ್ತು 'ಮಹಾಕಾವ್ಯ' ಎಂದು ನಾಮಕರಣ ಮಾಡಿದೆ. ಏಕೆಂದರೆ ರಾಮಾಯಣವು ಪುರಾಣವಾದರೂ ಅದೊಂದು ಬೃಹದ್ ಭಾವಗೀತೆಯಂತಿದೆ. ಅದು ಒಬ್ಬನೆ ಕವಿಯ ಕೃತಿಯೂ ಆಗಿದೆ; ಬಹುಕಾಲದ ಸಂಸ್ಕೃತಿಯ ಒಂದು ದೊಡ್ಡ ಜನಾಂಗದ ಮನಃಕೃತಿಯೂ ಆಗಿದೆ. ಮೊದಲನೆಯ ಕಾರಣಕ್ಕಾಗಿ ಅದು ಭಾವಗೀತೆಯಂತಿದ್ದರೆ ಎರಡನೆಯ ಕಾರಣಕ್ಕಾಗಿ ಪುರಾಣದಂತಿದೆ. ಆದ್ದರಿಂದಲೇ ಅದಕ್ಕೆ ಮಹಾಕಾವ್ಯ ಎಂಬ ಬಿರುದು ಸರ್ವಾಂಗಸುಂದರವಾಗಿ ಒಪ್ಪುತ್ತಿದೆ. ಏಕಾಗ್ರತೆ, ಏಕಮುಖತೆ, ಐಕ್ಯತೆ, ರಾಗತೀಕ್ಷ್ಣತೆ, ಆದರ್ಶಪ್ರಿಯತೆ, ರಸಾವೇಶ ಇವುಗಳ ದೃಷ್ಟಿಯಿಂದ ಅದೊಂದು ಭಾವಗೀತೆ, ವಿಪುಲತೆ, ಬಹುಳತೆ, ವಿವಿಧತೆ, ದೇವತ್ವ, ದೈತ್ಯತ್ವ, ಮಹತ್ವ ಇವುಗಳ ದೃಷ್ಟಿಯಿಂದ ಅದೊಂದು ಪುರಾಣ. ಅದರ ಸೂತ್ರ ಭಾವಗೀತೆಯದು; ಅದರ ಗಾತ್ರ ಪುರಾಣದ್ದು. ಕವಿ ಕೋಕಿಲನಾದ ವಾಲ್ಮೀಕಿಯ ಹೈಮಾಚಲ ಸಂಗೀತದಲ್ಲಿ ಸರೋವರದ ಸೌಂದರ್ಯವಿದೆ; ಸತ್ಪತಿಯ ಗಾಂಭೀರ್ಯವಿದೆ. ಅಂತಹ ಚಾರುಲಾಲಿತ್ಯ ಮತ್ತು ಧೀರ ಗೌರವಗಳು ಸಮನ್ವಯವಾಗಿರುವ ಮತ್ತೊಂದು ಮಹತ್ಕೃತಿಯ ಹೆಸರು - ತಟಕ್ಕನೆ ನೆನಪಿಗೆ ಸಿಕ್ಕುವುದಿಲ್ಲ. ವಿಚಾರಿಸಿದರೂ ದೊರೆಯುವ ನಂಬಿಕೆಯಿಲ್ಲ.

ಅಂತಹ ಕವಿಯೂ ಅಂತಹ ಕೃತಿಯೂ ನಮಗೆ ಲಭಿಸಿರುವುದು ನಮ್ಮ ಹೆಮ್ಮೆ, ನಮ್ಮ ಪುಣ್ಯ. ಕವಿಯೂ ಕೃತಿಯೂ ಎಂದು ಬೇರೆಬೇರೆಯಾಗಿ ಹೇಳಿದರೂ ನಿಜವಾಗಿಯೂ ನಮ್ಮ ಪಾಲಿಗೆ ಅವೆರಡಕ್ಕೂ ಭೇದವಿಲ್ಲ. ವಾಲ್ಮೀಕಿಯೆಂದರೆ ರಾಮಾಯಣ; ರಾಮಾಯಣವೆಂದರೆ ವಾಲ್ಮೀಕಿ. ಕವಿ ತನ್ನ ಕೃತಿಯಲ್ಲಿ ಲೀನನಾಗಿ ಹೋಗಿದ್ದಾನೆ. ಅವನ ಜೀವನಕಥೆಯೂ ರಾಮಾಯಣದಲ್ಲಿ ಒಂದಂಶವಾಗಿ ಬಿಟ್ಟಿದೆ. ವಾಲ್ಮೀಕಿಯ ಕೃತಿ ಅದು ಹುಟ್ಟಿದಂದು 'ಕವಿ ಕೃತಿ'ಯಾಗಿತ್ತು; ಈಗ 'ಪ್ರಕೃತಿ'ಯಾಗಿದೆ. ಭಾರತೀಯರ ಬಾಳುವೆಯನ್ನು ಲೋಕದಲ್ಲಿ ಪರ್ವತ ಅರಣ್ಯ ಸಮುದ್ರ ಆಕಾಶಗಳಿರುವಂತೆ ರಾಮಾಯಣವೂ ಇದೆ. ಅವುಗಳನ್ನು ಯಥಾಶಕ್ತಿಯಾಗಿ ಉಪಯೋಗಿಸಿಕೊಳ್ಳುವಂತೆ ರಾಮಾಯಣವನ್ನು ಉಪಯೋಗಿಸಿಕೊಳ್ಳಬಹುದು. ಆ ಪರ್ವತದ ಬಂಡೆಗಳಿಂದ ಸಾಮರ್ಥ್ಯವಿರುವವರು ಯಾರು ಬೇಕಾದರೂ ಶಿಲ್ಪಕೃತಿಗಳನ್ನು ಕಡೆಯಬಹುದು. ಆ ಅರಣ್ಯದ ಅಂಶದಿಂದ ಉದ್ಯಾನಗಳನ್ನು ರಚಿಸಬಹುದು. ಅಂತೂ ವಾಲ್ಮೀಕಿಯ ಕೃತಿ ಪ್ರಕೃತಿಯ ಮೂಲಭೂತ ವಸ್ತುಗಳಂತೆ, ಶಕ್ತಿಗಳಂತೆ ಅಪೌರುಷೇಯವಾಗಿ ಹೋಗಿದೆ. ಆದ್ದರಿಂದಲೇ ಅದಕ್ಕೆ ಐದನೆಯ ವೇದದ ಪಟ್ಟವೂ ದೊರಕಿದೆ. ಆದ್ದರಿಂದಲೇ ತರುವಾಯ

* ಜೀವನ (೧೯೪೦) ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ ಲೇಖನ

ಬಂದ ಮಹಾಕವಿಗಳೂ ಕೂಡ ಕೃತಿಚೌರ್ಯದ ಅಪವಾದ ಭೀತಿ ಲವಲೇಶವೂ ಇಲ್ಲದೆ ವಾಲ್ಮೀಕಿ ಸೃಷ್ಟಿಯನ್ನು ವಿನಿಯೋಗಿಸಿಕೊಂಡಿದ್ದಾರೆ. ಶಿಲ್ಪ ಕೃತಿಯನ್ನು ಮೆಚ್ಚಿ ಬಣ್ಣಿಸುವ ಪ್ರೇಕ್ಷಕರು ಅದಕ್ಕೆ ಶಿಲೆಯನ್ನು ದಯಪಾಲಿಸಿದ ಪರ್ವತೇಶ್ವರನನ್ನು ಮರೆಯುವಂತೆ ಆದಿಕವಿಯನ್ನು ಮರೆತರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಅಷ್ಟರ ಮಟ್ಟಿಗೆ ಆದಿಕವಿ ತನ್ನ ಕೃತಿಯೊಳಡಗಿ ಅದರ ನಿಗೂಢ ಗರ್ಭಗಹ್ವರದಲ್ಲಿ ವಿಸ್ಮೃತಿ ಸಮಾಧಿಯಲ್ಲಿದ್ದಾನೆ. ವಲ್ಮೀಕದಿಂದ ಹೊರ ಬಂದಿದ್ದನಂತೆ ಆ ವ್ಯಾಧಕವಿ. ಕೃತಿಯನ್ನು ರಚಿಸಿದ ಮೇಲೆ ಮತ್ತೆ ವಲ್ಮೀಕವಾಸಿಯಾಗಿದ್ದಾನೆ!

ಅದೊಂದು ವಿಧಿಲೀಲೆ, ಕವಿಯ ಕೀರ್ತಿಯೆ ಕವಿಗೆ ಅಡ್ಡವಾಗುತ್ತದೆ. ಬೂದಿಯೆ ಬೆಂಕಿಗೆ ಮರೆಯಾಗುವಂತೆ, ಪೂಜೆಯೂ ಒಮ್ಮೊಮ್ಮೆ ಪ್ರಚ್ಛನ್ನತಿರಸ್ಕಾರವಾಗುವುದುಂಟು. ಮಿಲ್ಟನ್ನನನ್ನು ಸ್ತುತಿಸುವವರ ಸಂಖ್ಯೆ ಏರಿದಂತೆಲ್ಲ ಅವನನ್ನು ಓದುವವರ ಸಂಖ್ಯೆ ಇಳಿಯುತ್ತದಂತೆ! ಹೊಗಳುವ ಸಾವಿರ ಮಂದಿಯಲ್ಲಿ ಒಬ್ಬನಾದರೂ 'ಪ್ಯಾರಡೈಸ್ ಲಾಸ್ಟ್' ಕಾವ್ಯವನ್ನು ಪೂರ್ತಿಯಾಗಿ ಅಧ್ಯಯನ ಮಾಡಿರುತ್ತಾನೆಂದು ಹೇಳುವುದಕ್ಕೆ ಧೈರ್ಯ ಬರುವುದಿಲ್ಲವಂತೆ, ನಮ್ಮ ಆದಿಕವಿಗೂ ಆದಿಕಾವ್ಯಕ್ಕೂ ಅಂಥಾ ಪೂಜೆ ತಕ್ಕಮಟ್ಟಿಗೆ ಆಗಿದೆ; ಆಗುತ್ತಿದೆ. ಆದಿಕವಿಗೂ ಆದಿಕಾವ್ಯಕ್ಕೂ ನಾನಾ ವಿಧಗಳಿಂದ, ನಾನಾಮುಖಗಳಿಂದ, ಗೀರ್ವಾಣ ಭಾಷೆಯಲ್ಲಿ ಮಾತ್ರವಲ್ಲದೆ ದೇಶ ಭಾಷೆಗಳಲ್ಲಿಯೂ, ಕೀರ್ತನೆ ದೊರೆಯುತ್ತಿದೆ, ಆ ಪೂಜೆಯಲ್ಲಿ ಬೇಕಾದಷ್ಟು ಉತ್ಸಾಹವಿರುತ್ತದೆ, ಬೀದಿಯ ಮೆರವಣಿಗೆಯಲ್ಲಿರುವಂತೆ, ಆದರೆ ರಾಮಾಯಣದಂತಹ ಪವಿತ್ರ ಪರ್ಣಶಾಲೆಯ ಸಂವೀಕ್ಷಣೆಯ ಯಾತ್ರೆಗೆ ಅವಶ್ಯವಾಗಿರಬೇಕಾದ ವಿರಾಮಶೀಲತೆ, ಕ್ರಮದೃಷ್ಟಿ, ವಿಚಾರಬುದ್ಧಿ ಇವುಗಳು ಸಾಕಾಗುವಷ್ಟು ಪ್ರಮಾಣದಲ್ಲಿಲ್ಲವೆಂದು ತೋರುತ್ತದೆ. ಮಹಾಕವಿಯ ಅಪೇಕ್ಷೆ ಬರಿಯ ಆರಾಧನೆಯಲ್ಲ; ಆತನಿಗೆ ಮಹದಾನಂದವೆಂದರೆ ತನ್ನ ಕೃತಿಯ ಪಕ್ಷದಲ್ಲಿ ಬುದ್ಧಿಯುತವಾದ ಸಹೃದಯ ರಸಾನುಭೂತಿ. ರಾಮನಿಗೆ ಅವತಾರದ ಪಟ್ಟಕಟ್ಟಿದ ಮಾತ್ರದಿಂದಾಗಲಿ, ಆಂಜನೇಯನಿಗೆ ತುಪ್ಪದಾರತಿಯೆತ್ತಿದ ಮಾತ್ರದಿಂದಾಗಲಿ, ಅಥವಾ ಮಂದಿರದಲ್ಲಿರುವ ಸೀತಮ್ಮನವರ ವಿಗ್ರಹಕ್ಕೆ ಮುತ್ತಿನ ಹಾರ ಮಾಡಿಸಿ ಹಾಕಿದ ಮಾತ್ರದಿಂದಾಗಲಿ, ಕವಿಯಾದ ವಾಲ್ಮೀಕಿಗೆ ಕೃತಿಸಾರ್ಥಕತೆಯುಂಟಾಗುವದಿಲ್ಲ. ಅವನು ಅಂದು ಹಾಡಿದ ರಾಮಯಣವು ಇಂದು ಮತ್ತೊಮ್ಮೆ ನಮ್ಮಲ್ಲಿ ಮೂಡಿದ ಹೊರತೂ ಅವನಿಗೆ ಸಂಪೂರ್ಣ ತೃಪ್ತಿಯಿಲ್ಲ. ಏಕೆಂದರೆ ಕೃತಿಯ ರಸಾಸ್ವಾದನೆಯೂ ಕೃತಿ ರಚನೆಯಂತೆಯೇ ಒಂದು ಸೃಷ್ಟಿಕಾರ್ಯ. ಓದುವ ಅಥವಾ ಕೇಳುವ ನಮ್ಮ ಒಬ್ಬೊಬ್ಬರ ಹೃದಯದಲ್ಲಿ ರಾಮಾಯಣ ರಚನೆಯಾದರೇನೇ ವಾಲ್ಮೀಕಿಗೆ ತೃಪ್ತಿ. ಅದೇ ಆತನಿಗೆ ನಿಜವಾದ ಪೂಜೆ; ಅದಕ್ಕಿಂತ ಬೇರೆ ಕೀರ್ತಿಯಿಲ್ಲ. ಓದುವವರಲ್ಲಿ ರಾಮಾಯಣದ ಪುನಃ ಸೃಷ್ಟಿಯಾಗಬೇಕು ಎಂದು ನಾನು ಹೇಳುತ್ತಿರುವುದು ಅಲಂಕಾರಿಕವೆಂದು ಖಂಡಿತವಾಗಿಯೂ ತಿಳಿಯಬಾರದು. ಅಲಂಕಾರವೇನೂ ಇಲ್ಲ, ವಾಸ್ತವವನ್ನೇ ವರ್ಣಿಸುತ್ತಿದ್ದೇನೆ.

ಒಮ್ಮೆ ಆಗಿಹೋದ ಚರಿತ್ರೆ ಮತ್ತೆ ನಡೆಯಲಾರದು. ಆದರೆ ವಾಲ್ಮೀಕಿಯ ಮಹಾಕೃತಿ ಚರಿತ್ರೆಯಲ್ಲ, ಕಾವ್ಯ; ಕಾಲದೇಶಾತೀತವಾಗಿರುವದರಿಂದ ನಿರಂತರವಾಗಿ ನಡೆಯುತ್ತಿರುವ ಶಾಶ್ವತಘಟನಾ ಪರಂಪರೆ. ಅಕ್ಬರನ ಆಳ್ವಿಕೆಯೊಡನೆ ಹನುಮಂತನ ಸಮುದ್ರ ಲಂಘನವನ್ನು ಚಾರಿತ್ರಿಕವಾಗಿ ಹೋಲಿಸಿದರೆ ಎಂತಹ ಅವಿವೇಕವಾಗುತ್ತದೆ!

ಒಂದು ಚರಿತ್ರೆ; ಮತ್ತೊಂದು ಕಾವ್ಯ, ಚರಿತ್ರೆ ಒಂದು ವೇಳೆ ಕವಿಯ ಅನುಭವವಾಗಿ ಕಾವ್ಯವಾಗಬಹುದು. ಆದರೆ ಕಾವ್ಯ ಚರಿತ್ರೆಯಾಗಲಾರದು. ಅದನ್ನು ಚರಿತ್ರೆ ಓದಿದಂತೆ ಓದಬಾರದು.

ಹಾಗಾದರೆ ಹೇಗೆ ಓದಬೇಕು? ಏನು ಮಾಡಿದರೆ ವಾಲ್ಮೀಕಿಯ ಕೃತಿಗೆ ಸಾರ್ಥಕತೆ ಬರುತ್ತದೆ? ಆದಿಕವಿಯ ದರ್ಶನವನ್ನು ಹೇಗೆ ಗ್ರಹಿಸಬೇಕು? ರಾಮನನ್ನು ಅವತಾರವನ್ನಾಗಿ ಗ್ರಹಿಸಿ ಓದಬೇಕು? ಬೇಡವೇ? ಬೇಡವೆಂದರೆ ಮತ್ತೆ ಹೇಗೆ ತಿಳಿಯಬೇಕು? ಬೇಕು ಎಂದರೆ ಯಾವ ರೀತಿಯಲ್ಲಿ ಅವನನ್ನು ಅವತಾರವೆಂದು ಗ್ರಹಿಸಬೇಕು? ವಾಲ್ಮೀಕಿಯ ದಂಡಕಾರಣ್ಯದಲ್ಲಿ ದಾರಿ ತಪ್ಪದೆ ಹೇಗೆ ಸಂಚರಿಸಬೇಕು? ಅಲ್ಲಿ ನಿಜವಾದ ಮರವಾವುದು? ಬಂದಿಳಿಕೆ ಯಾವುದು? ಕೋಗಿಲೆ ಯಾವುದು? ಅದರಂತೆ ವೇಷಹಾಕಿಕೊಂಡಿರುವ ಅನ್ಯಪಕ್ಷಿ ಯಾವುದು? - ಮಾಸ್ತಿಯವರ 'ಆದಿಕವಿ ವಾಲ್ಮೀಕಿ'ಯನ್ನು ಓದಿದರೆ ಅಲ್ಲಿ ಉತ್ತಮನಾದ ಮಾರ್ಗದರ್ಶಿ ದೊರೆಯುತ್ತಾನೆ.

('ಆದಿಕವಿ ವಾಲ್ಮೀಕಿ' ಬರಿಯ ವಿಮರ್ಶಗ್ರಂಥವಲ್ಲ; ಅದೊಂದು ರಸಕೃತಿ. ಕವಿಕೃತಿಯೆ ವಿಷಯವಾಗಿರುವ ಕವಿಕೃತಿ. ಆದ್ದರಿಂದ ಅದರ ಓದು ಬೇಸರವಾಗುವುದಿಲ್ಲ. ವಾಲ್ಮೀಕಿ ರಾಮಾಯಣಕ್ಕಾಗಿ ಮಾತ್ರವಲ್ಲ ಅದಕ್ಕಾಗಿಯೂ ಅದನ್ನು ಓದಬೇಕು. ಎಚ್ಚರಿಕೆಯಿಂದ ಸಾವಧಾನವಾಗಿ ಓದಬೇಕು. ಅದು ಅವಸರದಿಂದ ಹೊಗಳಿ ಬಂದ ಪುಸ್ತಕವಲ್ಲ. ಬಹುಕಾಲದ ಅಧ್ಯಯನ, ಅವಲೋಕನ, ಮನನ, ಧ್ಯಾನ. ತಪಸ್ಸುಗಳ ಪುಷ್ಪರೂಪವಾಗಿ ಫಲಿಸಿದೆ. ಕನ್ನಡಿಗರ ಸುದೈವದಿಂದ ಅದು ಕನ್ನಡದಲ್ಲಿ ಬಂದಿದೆ. ಲೋಕದ ಯಾವ ಉದ್ದಾಮ ಸಾಹಿತ್ಯಕ್ಕಾದರೂ ಅದು ಶ್ರೇಷ್ಠ ರತ್ನವಾಗಬಹುದಾದ ವಿಮರ್ಶಗ್ರಂಥ.) ಅಂತಹ ತಪಸ್ಸಿನ ಕೃತಿಯನ್ನು ಇತರ ಪುಸ್ತಕಗಳಂತೆ ಲಘುವಾಗಿ ಕಾಣುವುದೂ ಮತಿಗೌರವಕ್ಕೆ ಕುಂದು. ಈ ಸ್ವಲ್ಪಾವಕಾಶದ ಉಪನ್ಯಾಸದಲ್ಲಿ ಅದರ ಮಹತ್ತನ್ನು ತೋರಿಸುವುದು ಸಾಧ್ಯವಲ್ಲ. ಇಲ್ಲಿ ಆ ಪ್ರಯತ್ನಕ್ಕೆ ಕೈ ಹಾಕಿಯೂ ಇಲ್ಲ. ಹೆಬ್ಬಾಗಿಲೇ ತೆರೆದಿರುವಾಗ ಬಾಗಿಲಲ್ಲಿ ನಿಂತುಕೊಂಡು ಒಳಗಣದನ್ನು ಬಣ್ಣಿಸಿ ಹೇಳುವ ಗಾಂಪನವೇಕೆ? ಕುತೂಹಲ ಕೆರಳಿದವರು ಒಳಹೊಕ್ಕು ಕಾಣಬಹುದು.

ಮಾಸ್ತಿಯವರು ದಂಡಕಾರಣ್ಯವನ್ನು ಉದ್ಯಾನವನ್ನಾಗಿ ಮಾಡಿಲ್ಲ. ಅಷ್ಟು ಅರಸಿಕರಲ್ಲ ಅವರು. ಅರಣ್ಯದ ಮಹತ್ತು ಬೃಹತ್ತು ಸಂಪತ್ತು ವಿಪತ್ತುಗಳು ಉದ್ಯಾನಕ್ಕೆ ಎಂದೆಂದಿಗೂ ಬರಲಾರವು. ಆದರೆ ಅವರು ದಂಡಕಾರಣ್ಯಕ್ಕೆ ದಾರಿ ಕಡಿದಿದ್ದಾರೆ. ದರ್ಶನೀಯ ಸ್ಥಾನಗಳನ್ನು ಕೈಮರ ನೆಟ್ಟು ಸೂಚಿಸಿದ್ದಾರೆ. ರಾಮಾಯಣವೆಂಬುದು ದಂಡಕಾರಣ್ಯವೆಂದು ಹೆದರಬೇಡಿ; ಅತ್ರಿ ಅನಸೂಯೆಯರ ಆಶೀರ್ವಾದ ಪಡೆದ ರಾಮನಂತೆ ಮುಂದೆ ನುಗ್ಗಿ; ವಿರಾಧ ರಾಕ್ಷಸನಂತೆ ಮೊದಲು ಕ್ಲಿಷ್ಟತೆ ಕಂಡರೂ ತರುವಾಯ ಆ ರಾಕ್ಷಸನ ಮೈಯ್ಯಿಂದಲೇ ಗಂಧರ್ವನು ಮೂಡಿದಂತೆ ರಸಾಸ್ವಾದನೆಯ ಮಹದಾನಂದವೂ ಮಹದ್‌ವ್ಯಕ್ತಿ ಪರಿಚಯದ ಮಹಿಮೆಯೂ ರಸ ಋಷಿ ವಾಲ್ಮೀಕಿಯ ದರ್ಶನಕೃಪೆಯ ಮನಶ್ಶಾಂತಿಯೂ ನಿಮ್ಮಲ್ಲಿ ಆವಿರ್ಭವಿಸುತ್ತವೆ ಎಂದು ಮನಗಾಣುವಂತೆ ಹೇಳಿದ್ದಾರೆ. ಅವರ ಶೈಲಿ, ಅವರ ವಿಚಾರಸರಣಿ, ಅವರ ಸೂಕ್ಷ್ಮ ಪರಿಶೀಲನೆ, ವಿಷಯ ಸಂಯೋಜನೆ, ವಾದ ಸೌಜನ್ಯ, ವ್ಯಾಖ್ಯಾನ ರಮಣೀಯತೆ, ಫಣಿಗಮನದಂತೆ ನುಣ್ಣಗೆ ಮುಂಬರಿವ ಒಂದು ಉದ್ದೇಶದ, ಒಂದು ಆದರ್ಶದ ಕ್ರಮವಿನ್ಯಾಸ - ಇವುಗಳು ಎದುರಾಳಿಯ ಭಿನ್ನಭಿಪ್ರಾಯಗಳನ್ನು ಕೂಡ ಒಲಿಸಿ, ಒಪ್ಪಿಸಿ, ಒಮ್ಮೊಮ್ಮೆ ಪುಸಲಾಯಿಸಿ,

ಒಮ್ಮೊಮ್ಮೆ ವಂಚಿಸಿಯೂ, ತಮ್ಮ ಗುರಿಗೆ ಮುನ್ನುಗ್ಗುತ್ತವೆ. ಸೋತ ಎದುರಾಳಿಯೂ ಗೆದ್ದಂತೆ ನಲಿಯುತ್ತಾನೆ. ಮಾಸ್ತಿಯವರ ಮೋಹನ ಕಲೆಗೆ ಅವರ "ಆದಿಕವಿ ವಾಲ್ಮೀಕಿ"ಯೂ ಒಂದು ಹಿರಿಯ ಸಾಕ್ಷಿ.

ಶ್ರೀಯುತರು ನನಗೆ ಬಹಳ ಹಿರಿಯರಾದರೂ ನನ್ನನ್ನು ಅಕ್ಕರೆಯ ಗೆಳೆಯನಂತೆ ಕಾಣುತ್ತಾರೆ. ಚಿಕ್ಕ ತಮ್ಮನಿಗೆ ತಂದುಕೊಡುವಂತೆ ಒಮ್ಮೊಮ್ಮೆ ಪೆಪ್ಪರಮೆಂಟುಗಳನ್ನು ತಂದುಕೊಡುತ್ತಾರೆ. ನನಗೆ ಅವರಲ್ಲಿರುವ ಗೌರವ, ಸ್ನೇಹ, ಪ್ರೀತಿಗಳು ಮೌನದಿಂದ ಮಾತ್ರ ನಿವೇದಿತ. ಅವರ ಸಾಹಿತ್ಯ ಬಹಳ ದೊಡ್ಡದು; ಅವರು ಅದಕ್ಕಿಂತಲೂ ದೊಡ್ಡವರೆಂದು ನನ್ನ ಭಾವನೆ. ದುಂಬಿಯ ಉಸಿರಿಗೂ ವಿಕಂಪಿಸುವ ಹೂವಿನ ತುಟಿಯ ಜೇನುಹನಿಯಂತೆ ಅವರ ಬಾಳು ಸುಸೂಕ್ಷ್ಮ, ಸುಮಕೋಮಲ, ಸುಮಧುರ, ಸುಸಂಸ್ಕೃತ ಎಂದು, ಸರ್ವವಿಧದಿಂದಲೂ ಹಾಗೆಯೇ ಇದ್ದ, ಪವಿತ್ರಸ್ಮರಣೆಯ ಪರಮಪೂಜ್ಯ ದಿವಂಗತ ಶ್ರೀ ವೆಂಕಣ್ಣಯ್ಯನವರು ಹೇಳುತ್ತಿದ್ದರು. ಆ ಬಾಳು, ಆ ಉಸಿರು ಬಹುಕಾಲ ಬಾಳಲಿ. ನಮಗೆಲ್ಲರಿಗೂ ಒಂದು ಆಶೀರ್ವಾದವಾಗಿ, ಆವೇಶವಾಗಿ, ಆದರ್ಶವಾಗಿ, ಅಕ್ಕರೆಯ ಆಶ್ರಯವಾಗಿ, ನಿರಾಶೆಯಲ್ಲಿ ಉತ್ಸಾಹವಾಗಿ, ಅತ್ಯುತ್ಸಾಹದಲ್ಲಿ ವಿವೇಕವಾಗಿ, ಅತಿವಿವೇಕದ ಮಂದಸಮಯದಲ್ಲಿ ಹಿಂದುಳಿಯದ ಸನ್ಮತಿಯಾಗಿ ಆ ಬಾಳು, ಆ ಉಸಿರು ಬಹುಕಾಲ ನಮಗುಳಿಯುವಂತೆ ದೇವರ ದೇವನು ದಯೆಗೈಯಲಿ.

ವಿಮರ್ಶಾತ್ಮಕ ಪ್ರಬಂಧಗಳು

ಪ್ರೊ|| ತೀ.ನಂ. ಶ್ರೀಕಂಠಯ್ಯ

ಶಿಲ್ಪಿಯಾದವನು ಯಾವುದಾದರೂ * ಒಂದು ಪ್ರತಿಮೆಯನ್ನು ತನ್ನ ಮುಂದಿಟ್ಟುಕೊಂಡು ಕೆಲಸ ಮಾಡಬೇಕಾಗಿಲ್ಲ. ಚಿತ್ರವು ಅವನ ಹೃದಯದಲ್ಲಿ ಮೂಡುವುದು. ಅವನ ಮನಸ್ಸು ಅದರಲ್ಲಿ ಲೀನವಾಗುತ್ತದೆ. ಅವನಿಗೆ ಇತರ ಎಲ್ಲ ಧ್ಯಾಸಗಳೂ ಹೊರಟು ಹೋಗಿ ಬಿಡುತ್ತವೆ. ಆಗ ಅವನು ತನ್ನ ಕೆಲಸ ಯಾವುದು ಎನ್ನುವುದರ ಸ್ವರೂಪಜ್ಞಾನವನ್ನು ಕೂಡ ಜನಕ್ಕೆ ಹೊಸದಾಗಿ ಮಾಡಿಕೊಡಬೇಕಾಗುತ್ತದೆ. ಇದು ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಶಿಲ್ಪಿಗೆ ತನ್ನ ವ್ಯಕ್ತಿಯು ಅಷ್ಟು ಪೂಜ್ಯವಾದುದಲ್ಲ. ಇದು ಜನತೆಯ ದೇಹವಲ್ಲದೆಂಬ ಯೋಚನೆಗಳು ಬರುವುದೇ ಇಲ್ಲ. ಅವನ ಮನಸ್ಸಿನ ತೃಪ್ತಿಗಾಗಿ ಅವನು ಕೆಲಸ ಮಾಡುತ್ತಾನೆ. ಅಷ್ಟು ಅವನ ಕೃತಿಗಳ ಪರಿಣಾಮವಾಗಿ ಅವನ ಮನಸ್ಸಿನ ಭಾವಗಳು ಮೂರ್ತಿಗಳಾಗಿ ಜನರ ಕಣ್ಮುಂದೆ ನಿಲ್ಲುತ್ತವೆ. ಸಾಹಿತಿಯೂ ಅಷ್ಟೇ. ಅವನಿಗೆ ಕಲೆಯ ಈ ಮರ್ಮವು ತಿಳಿದಿರುವುದರಿಂದ ಅವನ ಭಾವಗಳು ತಾವಾಗಿಯೆ ಪದದ ರೂಪದಲ್ಲಿಯೊ, ಕಾವ್ಯದ ರೂಪದಲ್ಲಿಯೊ, ನಾಟಕದ ರೂಪದಲ್ಲಿಯೋ ಹೊರ ಹೊಮ್ಮುತ್ತವೆ.

ವೆಂಕಟೇಶಯ್ಯಂಗಾರ್ಯರಿಗೆ ಹಲವು ನಾಮಗಳು. ಶ್ರೀನಿವಾಸ, ಮಾಸ್ತಿಯವರು, ಇತ್ಯಾದಿ. ಇವರು ತಮ್ಮ ಕೆಲವು ಕೃತಿಗಳಲ್ಲಿ ಮಾಸ್ತಿ ವೆಂಕಟೇಶಯ್ಯಂಗಾರ್ ಎಂದು ಹೆಸರನ್ನು ಹಾಕಿರುತ್ತಾರೆ. ಕೆಲವದರಲ್ಲಿ ಶ್ರೀನಿವಾಸ ಎಂದು ಹಾಕಿರುತ್ತಾರೆ, ತಮ್ಮ ವಿಮರ್ಶೆ ಗ್ರಂಥಗಳ ಮೇಲೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಎಂದು ಬರೆದಿದ್ದಾರೆ. ಕವಿ ಸ್ವತಂತ್ರನು, ವಿಮರ್ಶಕ ಅವನ ಜವಾಬ್ದಾರಿ ದೊಡ್ಡದು ಎಂದು ತಮ್ಮ ಜವಾಬ್ದಾರಿಯನ್ನು ತೋರಿಸುವ ಉದ್ದೇಶದಿಂದ ಸ್ಪಷ್ಟವಾದ ಹೆಸರನ್ನು ಕೊಡಬೇಕಾಗುತ್ತದೆಂದು ಹಾಗೆ ಮಾಡಿರುತ್ತಾರೆ. ಇದು ಹೇಗಾದರೂ ಇರಲಿ. ಮಿಕ್ಕ ಚಿತ್ರಗಳಲ್ಲಿ ಹೊಸ ದಾರಿಯನ್ನು ತೋರಿರುತ್ತಾರೆ. ವಿಶ್ವ ವಿಶಾಲವಾದ ದಾರಿಯನ್ನೇ ತೋರಿಸಿದ್ದಾರೆ. ಅವರ ವಿಮರ್ಶಾತ್ಮಕ ಸಾಹಿತ್ಯವನ್ನು ತೆಗೆದುಕೊಂಡರೆ, ಯಾರಿಗಾದರೂ ಅವರ ವಿಮರ್ಶೆ ಮಾಡಿರುವ ವಿಷಯಗಳಲ್ಲಿ ತೀವ್ರಾಸಕ್ತಿಯನ್ನು ಹುಟ್ಟಿಸುವುದು.

ಇದು ಕಥೆಗಾರರೂ ಹೌದು. ಅತ್ಯಂತ ಮುದ್ದಾದ ಅನೇಕ ಕಥೆಗಳನ್ನು ಬರೆದಿದ್ದಾರೆ. ಇವರು ಸಾಹಿತ್ಯ ಎಂಬ ಒಂದು ಗ್ರಂಥವನ್ನು ಬರೆದಿದ್ದಾರೆ. ಅದರಲ್ಲಿ ಪಾಶ್ಚಾತ್ಯ ಸಾಹಿತ್ಯವನ್ನು ವ್ಯಾಸಂಗ ಮಾಡಿ, ಅಲ್ಲಿಯ ವಿಮರ್ಶೆಗಳನ್ನು ಕಂಡು ಆ ಸಾಹಿತ್ಯದ ಹುರುಳನ್ನು ಏನೆಂದು ಅರಿತಿದ್ದಾರೆ. ಯಾವನಾದರೂ ಒಬ್ಬ ಕವಿಯು ಯಾವ ಗುರಿಯನ್ನಿಟ್ಟುಕೊಳ್ಳಬೇಕೆಂದು ತೋರಿಸುವುಕ್ಕಾಗಿ 'ಸಾಹಿತ್ಯವನ್ನು' ಬರೆದಿದ್ದಾರೆ.

---

* ಜೀವನ (೧೯೪೦) ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ ಲೇಖನ

ಇದರಲ್ಲಿ ಜನಸಾಮಾನ್ಯನ ಬಾಳು ತಿದ್ದಬೇಕಾದರೆ ಸಾಹಿತ್ಯದ ವ್ಯಾಸಂಗ ಅತ್ಯಾವಶ್ಯಕವೆಂಬುದನ್ನು ತಿಳಿಸಿದ್ದಾರೆ. ಇಷ್ಟೇ ಅಲ್ಲದೆ ಕವಿಗಳಿಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಕವಿಯೂ ಕೂಡ ಒಳ್ಳೆಯ ಬಾಳನ್ನು ಬಾಳಬೇಕು ಎಂಬುದನ್ನು ಬಹಳ ನಯವಾದ ಮಾತುಗಳಲ್ಲಿ ತಿಳಿಸಿದ್ದಾರೆ. ಇದಕ್ಕಿಂತ ವಿಸ್ತಾರವಾದ ಲೇಖನಗಳನ್ನು ಒಂದೊಂದಾಗಿ ಬರೆಯುತ್ತಾ ಬಂದಿರುತ್ತಾರೆ. ಕಾವ್ಯ ಪರಿಚಯದ ಲೇಖನಗಳು, ವಿಮರ್ಶೆ, ಮೊದಲನೇ ಭಾಗ, ಎರಡನೇ ಭಾಗ, ಮೂರನೇ ಸಂಪುಟ ಬಂದಿದೆ. ನಾಲ್ಕನೆಯದು ಬೇಗ ಬರಲೆಂದು ಹಾರೈಸುತ್ತೇನೆ. ಇದನ್ನು ಓದಿದರೆ ಇವರ ದೃಷ್ಟಿ ಎಷ್ಟು ವಿಶಾಲವಾಗಿದೆ ಎಂಬುದು ತಿಳಿಯುತ್ತದೆ. ಕೆಲವರ ಹಾಗೆ ವಿಮರ್ಶೆಗೆಂದೇ ಅವರು ಈ ಪುಸ್ತಕಗಳನ್ನು ಬರೆದದ್ದಲ್ಲ. ಆ ಪುಸ್ತಕಗಳು ಎಂಟಾರು ವರ್ಷಗಳ, ಇತರ ಸಾಹಿತ್ಯಗಳ ವ್ಯಾಸಂಗದ ಫಲ. ಇತರ ಸಾಹಿತ್ಯಗಳನ್ನು ಮನನ ಮಾಡಿ, ಅವನ್ನು ಜೀರ್ಣಿಸಿಕೊಂಡು, ನಮ್ಮ ಜನಕ್ಕೂ ಆ ಸಾಹಿತ್ಯಗಳ ಪರಿಚಯವಾಗಲೆಂಬ ಆಸೆಯಿಂದ ಇವನ್ನು ಬರೆದಿರುತ್ತಾರೆ. ಈ ಕವಿ ಕನ್ನಡನಾಡಿನವರು. ಆದರೂ ಇವರ ದೃಷ್ಟಿ ಭರತಖಂಡದ ಮೇಲೆ ಮಾತ್ರವೇ ಅಲ್ಲ, ಇಡೀ ಜಗತ್ತಿನ ಸಾಹಿತ್ಯದ ಮೇಲೆ ಇದೆ ಎನ್ನಬಹುದು. ಉದಾಹರಣೆಗಾಗಿ, ಡೇವಿಡ್, ಪಿಟಲ್ಸಿನ ಉಪದೇಶ, ಮಾರ್ಕಸ್ ಅರಿಲಿಯಾಸ್, ಅಗಸ್ಟೇನ್ ಸಾಧು, ಪರ್ಶಿಯಾ ದೇಶದ ಹಾಫಿಸ್, ಕಾಳಿದಾಸ, ಷೇಕ್ಸ್‌ಪಿಯರ್, ಗಯಟೆ, ಬಹಳ ಪೂರ್ವದವರಾದ ಆಳ್ವಾರುಗಳು. ಹೀಗೆ ಇವರ ದೃಷ್ಟಿಯು ಒಂದು ಕಡೆ ನಿಲ್ಲುವುದೇ ಅಲ್ಲ. ಎಲ್ಲಿ ಹುರುಳುಂಟು, ಎಲ್ಲಿಸಾರವುಂಟ ಅವನ್ನು ಹುಡುಕಿ, ಅವನ್ನು ಆರಿಸಿ ತಂದು ನಮಗೆ ಕೊಟ್ಟಿರುತ್ತಾರೆ. ಅವರ ವಿಮರ್ಶೆಯೂ ಹಾಗೆಯೇ. ಅವರ ಭಾವಗಳು ಓದುವವರ ಕಣ್ಣುಮುಂದೆ ಬಂದು ನಿಲ್ಲುವುವು. ಅವಶ್ಯಕವಾದ ಕಡೆ ಅವರೇ ವಿಸ್ತಾರವಾದ ಅನುವಾದವನ್ನು ಕೊಡುತ್ತಾರೆ. ಕವಿ ರವೀಂದ್ರನಾಥ ಠಾಕೂರರ ವಿಮರ್ಶೆಯನ್ನು ಬಹಳ ಸೊಗಸಾಗಿ ಬರೆದಿರುತ್ತಾರೆ. ನಮ್ಮ ನಾಡ ಸಾಂಗತ್ಯ, ಲಾವಣಿಗಳು ಇವು ಶೇಖರವಾಗುವುದಕ್ಕೆ ಇವರೇ ಪ್ರೇರಕರು. ಲಾವಣಿಗಳ ಮತ್ತು ನಾಡ ಸಾಂಗತ್ಯದ ವಿಷಯವಾಗಿ ಅವರು ಬರೆದಿರುವ ಲೇಖನವನ್ನು ಓದಿದ ಮೇಲೆ ಈ ಪದಗಳು ಎಂದೋ ಇದ್ದವು ಎಂದುಕೊಂಡಿರುತ್ತಿದ್ದ ನಾನು, ಮನೆಯಲ್ಲಿ ನನ್ನ ತಂಗಿಯು ಹಾಡುತ್ತಿದ್ದ ಇದೇ ಪದಗಳನ್ನು ವಿಶೇಷ ಆಸಕ್ತಿಯಿಂದ ಹೇಳಿಸಿ ಕೇಳಲಾರಂಭಿಸಿದೆನು.

ನಾನು ಈಗ ತಿಳಿಸಿರುವ ಗ್ರಂಥಗಳಿರುವ ಕವಿಯ ಮನೋಧರ್ಮವು ವ್ಯಕ್ತವಾಗುತ್ತದೆ. ಮಾಸ್ತಿಯವರ ಲೇಖನಗಳನ್ನೋದಿದರೆ 'ಭಕ್ತಿ'ಯು ಅವರ ಮನಸ್ಸನ್ನು ಆಕರ್ಷಿಸಿದೆ ಎಂಬುದು ಇವರ ಲೇಖನದಿಂದ ಚನ್ನಾಗಿ ವ್ಯಕ್ತವಾಗುತ್ತದೆ. ಬಿನ್ನಹವನ್ನು ಓದಿದರೆ ಮಾಸ್ತಿಯವರ ಮನಸ್ಸಿನ ಆಳವು ತಿಳಿಯುವುದು. ಭಕ್ತಿಯು ಇವರನ್ನು ಆಕರ್ಷಿಸಿದ್ದರೂ ಇವರು ವಿಜ್ಞಾನವನ್ನು ಬಿಟ್ಟವರಲ್ಲ. ತಿಳಿವು ಹರಡಬೇಕು. ಜನದ ಬದುಕು ಉತ್ತಮವಾಗಬೇಕು. ಜನದ ಮನಸ್ಸು ಒಳ್ಳೆಯ ಸಂಸ್ಕಾರವನ್ನು ಪಡೆಯಬೇಕು. ಮೊದಲು ಜನರಲ್ಲಿ ವಾಚನಾಭಿಲಾಷೆಯು ಮೂಡಬೇಕು. ಅನಂತರ ವಿಮರ್ಶೆ, ವಿಮರ್ಶೆಯಿಂದ ಕಾವ್ಯ. ಕಾವ್ಯದಿಂದ ಜೀವನ. ಜೀವನವು ಮುಂದೆ ಬೆಳೆದರೆ ಸಂಸ್ಕೃತಿ ಎಂಬುದೇ ಇವರ ಅಭಿಲಾಷೆ. ಭಕ್ತಿವಿಜ್ಞಾನಗಳ ವಿಷಯವನ್ನು ಹೇಳುವಾಗ ಓದುವವರಿಗೆ ಗಾಬರಿಯಾಗುವ ರೀತಿಯಿಲ್ಲಿ ಕೆಲವರು ತಿಳಿಸುವುದುಂಟು. ಆದರೆ ಇವರು ಮನುಷ್ಯನ ಹೃದಯದ ಮೇಲೆ ಒಳ್ಳೆಯ ಪರಿಣಾಮವಾಗಲು ಎಷ್ಟು ಬೇಕೋ ಅಷ್ಟನ್ನು ಮಾತ್ರ ಮುಂದಾಗಿ ತಿಳಿಸಿಬಿಡುತ್ತಾರೆ.

ರವೀಂದ್ರನಾಥ ಠಾಕೂರರ ವಿಷಯವಾಗಿ ಬರೆಯುವಾಗ ಇವರು ಬಂಗಾಳಕ್ಕೆ ಹೋಗಿ ಕವಿಗಳನ್ನು ನೋಡಿಕೊಂಡು ಬಂದರು. ಆ ಮಹಾಕವಿಯ ಪ್ರಶಂಸೆ ಮಾಡುವಾಗ ಅವನ ಹೃದಯದ ಜೀವಾಳವನ್ನು ಹಾಡಿದ್ದಾರೆ. ದೇಶದೇಶವನ್ನೆಲ್ಲಾ ಸುತ್ತಿ ಬಂದವರಿಗೆ ತಮ್ಮ ಮನೆಯ ಸೊಗಸು ಗೊತ್ತಾಗುವುದಿಲ್ಲ. ಆದರೆ ಮಾಸ್ತಿಯವರು ಹಾಗಿಲ್ಲ. ಪಾಶ್ಚಾತ್ಯ ಸಾಹಿತ್ಯದ ವ್ಯಾಸಂಗವನ್ನು ಮಾಡಿ ಅಲ್ಲಿನ ತಿರುಳನ್ನು ಕನ್ನಡಿಗರಿಗೆ ತಿಳಿಸಿರುವುದೂ ಅಲ್ಲದೆ, ನಮ್ಮ ನಾಡಿನ ಮಹಾ ಕಾವ್ಯವಾದ ರಾಮಾಯಣವನ್ನು ರಚಿಸಿದ ಆದಿಕವಿ ವಾಲ್ಮೀಕಿಯನ್ನು ಕುರಿತು ಬಹಳ ದೊಡ್ಡದಾದ ಒಂದು ಗ್ರಂಥವನ್ನು ಬರೆದಿದ್ದಾರೆ. ಮಾಸ್ತಿಯವರ ಆದಿಕವಿ ವಾಲ್ಮೀಕಿಯ ವಿಷಯವನ್ನು ಶ್ರೀ ಕೆ.ವಿ.ಪುಟ್ಟಪ್ಪನವರು ಈಗಾಗಲೇ ತಮಗೆ ಹೃದಯಂಗಮವಾಗುವ ರೀತಿಯಲ್ಲಿ ತಿಳಿಸಿರುತ್ತಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಮಾಸ್ತಿಯವರು ಕನ್ನಡನಾಡಿನ ಹಿರಿಯ ಕವಿಗಳು, ಅವರ ದೃಷ್ಟಿ, ವಿಶ್ವದೃಷ್ಟಿ, ಇವರಿಂದ ಕನ್ನಡ ನಾಡಿನ ಸೇವೆಯು ಅಪಾರವಾಗಿ ನಡೆದಿದೆ. ಇವರಿಂದ ಇನ್ನೂ ಹಲವು ಕಾಲ ಇದೇ ರೀತಿ ಕನ್ನಡದ ಸೇವೆಯು ನಡೆಯುವಂತೆ ಭಗವಂತನು ಅನುಗ್ರಹಿಸಲೆಂದು ಆಶಿಸುತ್ತೇನೆ.

ಭಾರತ ತೀರ್ಥ

ಗುಂಡ್ಮಿ ಚಂದ್ರಶೇಖರ ಐತಾಳ

ಕನ್ನಡದಲ್ಲಿ ವ್ಯಾಸ ಮಹಾಭಾರತವನ್ನು ಕುರಿತು ಹೆಚ್ಚು ಗ್ರಂಥಗಳಿಲ್ಲ. ಹೇಳಿಕೊಳ್ಳ ಬಹುದಾದ ಗ್ರಂಥಗಳು ಎರಡೇ ಎರಡು. ಒಂದು ಶ್ರೀ ಎ.ಆರ್. ಕೃಷ್ಣಶಾಸ್ತ್ರಿಗಳ 'ವಚನಭಾರತ'; ಎರಡನೆಯದು ಶ್ರೀ ಮಾಸ್ತಿಯವರ 'ಭಾರತ ತೀರ್ಥ.' 'ವಚನ ಭಾರತ' ೧೯೫೦ರಲ್ಲೂ, 'ಭಾರತ ತೀರ್ಥ' ೧೯೫೭ರಲ್ಲೂ ಪ್ರಸಿದ್ಧವಾದುವು. ಎರಡೂ ಶ್ರೇಷ್ಠ ಕೃತಿಗಳು. 'ವಚನ ಭಾರತ' ಮಹಾಭಾರತದ ಸಾರವನ್ನೆಲ್ಲ ಬಟ್ಟಿ ಇಳಿಸಿದರೆ, 'ಭಾರತ ತೀರ್ಥ' ಅಂಬುಧಿಯ ಅಗಲದ ಮಹಾಭಾರತವನ್ನು ಅಂಗೈಯಲ್ಲಿಟ್ಟು ಆಪೋಶನ ಮಾಡುವಂತೆ ಅದರ ಮಹಾತ್ಮ್ಯವನ್ನು ಸಾರರೂಪವಾಗಿ ಹೇಳಿದೆ.

ರಾಮಾಯಣ, ಮಹಾಭಾರತದ ಬಗೆಗೆ ಮಾತನಾಡಬೇಕಾದರೂ, ಬರೆಯ ಬೇಕಾದರೂ ಸಾಧಾರಣ ಸಂಸ್ಕಾರ ಸಾಲದು. ಅವುಗಳನ್ನು ಜೀವಮಾನವೆಲ್ಲ ಪಾರಾಯಣ ಮಾಡಿ ಅರಗಿಸಿಕೊಂಡವರು ಏನಾದರೂ ಸ್ವಲ್ಪ ಹೇಳಬಹುದು. ಅದರಿಂದಲೇ, ಸಂಸ್ಕೃತ ಸಾಹಿತ್ಯ ಸಮುದ್ರದಲ್ಲಿ ಈಜಾಡಿದ F. Max Muller, "Life seems too short to read such a gigantic work as a whole' ಎಂದು ಉದ್ಗಾರವೆತ್ತಿದ. ಅದರಿಂದಲೇ ಭಾರತ ತೈಲದಿಂದ ತುಂಬಿರುವ ಜ್ಞಾನಮಯವಾದ ಪ್ರದೀಪವನನ್ನು ಪ್ರಜ್ವಲಿಸಿದ ವಿಶಾಲ ಬುದ್ಧಿಯ ವ್ಯಾಸ ಮಹರ್ಷಿಯನ್ನು ಭಾರತೀಯರು ಅಭಿವಂದಿಸಿದರು.

ನಮೋಽಸ್ತು ತೇ ವಿಶಾಲಬುದ್ಧೇ
ಫುಲ್ಲಾರವಿಂದಾಯತ ಪತ್ರನೇತ್ರ।
ಯೇನ ತ್ವಯಾ ಭಾರತ ತೈಲಪೂರ್ಣಃ
ಪ್ರಜ್ವಾಲಿತೋ ಜ್ಞಾನಮಯ ಪ್ರದೀಪಃ॥

ಮಹಾಭಾರತವನ್ನು ಪಂಚಮವೇದ ಎಂದು ಕೊಂಡಾಡಿದರು. ಅದು ಪ್ರಪಂಚದ ಮಹಾಕಾವ್ಯಗಳಲ್ಲೆಲ್ಲ ಅತ್ಯಂತ ದೊಡ್ಡದು ಎಂಬ ಕೀರ್ತಿಯನ್ನು ಪಡೆಯಿತು. ಒಂದು ಲಕ್ಷ ಶ್ಲೋಕ ಪರಿಮಾಣವುಳ್ಳ ಮಹಾಭಾರವುಳ್ಳ ಕೃತಿಯೆನಿಸಿತು. 'ಮಹತ್ವಾತ್ ಭಾರವತ್ವಾಚ್ಚ ಮಹಾಭಾರತಮುಚ್ಯತೇ' ಎಂದು ಅದರ ಮಹಾಭಾರತದ ಗಾತ್ರವನ್ನೂ, ಗುಣದಲ್ಲಿ ಅದರ ಮಹತ್ವಪೂರ್ಣತೆಯನ್ನೂ ಅರಿತು ಹೊಗಳಿದರು. ಇತ್ತೀಚೆಗೆ ಪೂನಾದ ಭಂಡಾರ್ಕರ್ ಭಂಡಾರ್ಕರ್ ರಿಸರ್ಚ್ ಇನ್‌ಸ್ಟಿಟ್ಯೂಟಿನಲ್ಲಿ ಡಾ. ವಿ. ಎಸ್. ಸುಕ್ತಂಕರ್ ಅವರ ನೇತೃತ್ವದಲ್ಲಿ ವೈಜ್ಞಾನಿಕವಾಗಿ ಸಂಪಾದಿತವಾದ ಮಹಾಭಾರತ ಹತ್ತೊಂಬತ್ತು ಸಂಪುಟಗಳಲ್ಲಿ ಪ್ರಕಟವಾಗಿದೆ. ಅದರ ಬೆಲೆ ಸಾವಿರ ರೂಪಾಯಿಗೂ ಮಿಕ್ಕಿದೆ. ಇದರ ಅದ್ಭುತ ಗಾತ್ರ, ಮಹತ್ವಗಳನ್ನು ಪರಿಭಾವಿಸಲು ಇದೂ ಒಂದು ಸಾಕ್ಷಿಯಾಗಬಲ್ಲುದು.

ಪಂಪನಂಥ ಮಹಾಕವಿ 'ವ್ಯಾಸ ಮುನೀಂದ್ರ ರುಂದ್ರ ವಚನಾಮೃತವಾರ್ಧಿಯನ್ ಈಸುವೆನ್, ಕವಿ ವ್ಯಾಸನೆನ್ ಎಂಬ ಗರ್ವಮೆನಗಿಲ್ಲ' ಎಂದು ವಿನಯವನ್ನು ಮೆರೆದು ಆ ಬೃಹತ್ತನ್ನು ಕನ್ನಡದ ಕನ್ನಡಿಯಲ್ಲಿ ಅಳವಡಿಸಿದ. ಕುಮಾರ ವ್ಯಾಸನಂಥ ಮಹಾಕವಿ, 'ವೀರ ನಾರಾಯಣನೆ ಕವಿ, ಲಿಪಿಕಾರ ಕುವರ ವ್ಯಾಸ' ನೆಂದು ಅದನ್ನು 'ಕೃಷ್ಣ ಚರಿತೆ' ಯಾಗಿ ಕಂಡು 'ತಿಳಿಯೆ' ಹೇಳಿದ. ನೂರಾರು ಭಾರತೀಯ ಕವಿಗಳು ಮೊಗೆಮೊಗೆದು ಕುಡಿದರೂ ಆರದ ಅಕ್ಷಯ ಪಾತ್ರೆ ವ್ಯಾಸ ಮಹಾಭಾರತ. ಭಾಸ, ಭಾರವಿ, ಕಾಳಿದಾಸ, ಪಂಪ, ಕುಮಾರವ್ಯಾಸ ಮೊದಲಾದ ಮಹಾಕವಿಗಳು ಅದರ ಆಶ್ರಯದಲ್ಲಿ ಬೆಳೆದ ಕವಿ ಕಲ್ಪವೃಕ್ಷಗಳು.

ಇಂಥ ಒಂದು ಮಹಾಕಾವ್ಯವನ್ನು ಓದುವುದೇ ಒಂದು ಮಹಾಸಾಹಸ; ಓದಿದುದನ್ನು ಅರಗಿಸಿಕೊಂಡು ಅದನ್ನು ಪುನಃ ಕನ್ನಡದಲ್ಲಿ ಹೇಳುವುದು ಮಹಾಕಾರ್ಯ. ಇಂಥ ಮಹಾಕಾವ್ಯವನ್ನು ಕುರಿತು ಶ್ರೀ ಮಾಸ್ತಿಯವರು ತಮ್ಮ ಅನನ್ಯವಾದ ತಿಳಿ ಸರಳ ಮಾತಿನಲ್ಲಿ ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟಿದ್ದಾರೆ. ಮಹಾಭಾರತದ ತೀರ್ಥೋದಕವನ್ನು ಕನ್ನಡ ಸಾರಸ್ವತ ಸಹೃದಯರಿಗೆ ತಾವು ಕೈಕೊಂಡ ರಸಯಾತ್ರೆಯ ಕೊನೆಯಲ್ಲಿ ಸಮಾರಾಧನೆ ಮಾಡಿದ್ದಾರೆ. ಭಾರತಕಾವ್ಯ ಪುಷ್ಕರಕ್ಕಿಂತ ಮಿಗಿಲಾದ ಪುಣ್ಯತೀರ್ಥ; ಮನುಜ ಕುಲವೇ ಈ ತೀರ್ಥದಲ್ಲಿ ಸ್ನಾನಮಾಡಿ ಉದ್ಧಾರವಾಗಬಹುದು ಎಂದು ಮಾಸ್ತಿಯವರು ಮಹಾಭಾರತಕಾರನ ಸೂಕ್ತಿಯಿಂದ ಗ್ರಂಥವನ್ನು ಉಪಸಂಹಾರ ಮಾಡುತ್ತಾರೆ; ಅವರ ಗ್ರಂಥದ ಹೆಸರಿಗೆ ಕಾರಣವಾದ ಮಾತು ವ್ಯಾಸನದೇ ಎಂಬುದನ್ನು ತೋರಿಸುತ್ತಾರೆ:

ಅಗಾಧೇ ವಿಮಲೇ ಶುದ್ಧೇ ಕ್ಷಮಾಸತ್ಯ ದೃತಿಹ್ರದೇ
ಸ್ನಾತವ್ಯಂ ಭಾರತೇ ತೀರ್ಥೇ ಸತ್ತ್ವಮಾಲಂಬ್ಯ ಶಾಶ್ವತಂ॥

'ಭಾರತ ತೀರ್ಥ'ದಲ್ಲಿ ಮೊದಲು ಮಿಂದವರು ಮಾಸ್ತಿಯವರು. ಅವರು ಅಲ್ಲಿಂದ ಆ ತೀರ್ಥದ ಬಿಂದಿಗೆಯನ್ನು ಕನ್ನಡಿಗರಿಗೆ ಹಂಚಲು ತಂದಿದ್ದಾರೆ. ಆ ಬಿಂದಿಗೆಯಿಂದ ಈಚೆಗೆ ತೆಗೆಯುವ ತೀರ್ಥದ ಸೌಟಾಗುವ, 'ಉದ್ಧರಣೆ'ಯ ಕೆಲಸವನ್ನು ಮಾತ್ರ ನಾನಿಲ್ಲಿ ಮಾಡುವುದು ಪ್ರಸ್ತುತ ಉದ್ದೇಶ.

'ಭಾರತ ತೀರ್ಥ'ದಲ್ಲಿ ಮೊದಲು ಮಹಾಭಾರತದ ರಚನೆಯ ಕುರಿತು ಹೇಳಿ, ಅದರ ಕಥೆಯನ್ನು ಸಂಕ್ಷಿಪ್ತವಾಗಿ ವಿವರಿಸಿ, ಮುಖ್ಯ ಮುಖ್ಯ ಪಾತ್ರಗಳನ್ನೆಲ್ಲ ಪರಿಚಯಿಸಿ, ಉಪಾಖ್ಯಾನಗಳ ವಿಚಾರವಾಗಿ ನಿರೂಪಿಸಿ, ಮಹಾಭಾರತದ ಕೆನೆಯಂತಿರುವ ತತ್ತ್ವ, ನೀತಿಗಳನ್ನು ಎತ್ತಿ ಎತ್ತಿ ಲೇಖಕರು ತೋರಿಸಿದ್ದಾರೆ. 'ಆಂಗ್ಲೇಯ ಪ್ರಮುಖ ಲೇಖಕ ಥಾಮಸ್ ಕಾರ್ಲೈಲ್ ತನ್ನ ಕಾಲಕ್ಕೆ ಆ ಜನಾಂಗದ ಬಹು ಹಿರಿಯ ಆಸ್ತಿ ಆದ ಷೇಕ್ಸ್‌ಪಿಯರ್ ಮತ್ತು ಇಂಡಿಯಾ ಚಕ್ರಾಧಿಪತ್ಯ ಎರಡರಲ್ಲಿ ಚಕ್ರಾದಿಪತ್ಯಕ್ಕಿಂತ ಷೇಕ್ಸ್‌ಪಿಯರ್ ಹೆಚ್ಚಿನ ಬೆಲೆಯ ವಸ್ತು' ಎಂದು ಹೇಳಿದನು. . . . 'ರಾಮಾಯಣ ಮಹಾಭಾರತಗಳು ನಮ್ಮ ಜನಾಂಗಕ್ಕೆ ಇಂಥ ಆಸ್ತಿ; ಬೆಲೆಯಿಂದಲೂ ಭದ್ರತೆಯಿಂದಲೂ ಉಳಿದ ಯಾವ ಆಸ್ತಿಗಿಂತಲೂ ಶ್ರೇಷ್ಠವಾದವು' - ಈ ಆಸ್ತಿಯ ಬೆಲೆ ಎಷ್ಟು ದೊಡ್ಡದು ಎಂಬುದನ್ನು ಕನ್ನಡದ ಆಸ್ತಿ ಮಾಸ್ತಿಯವರು ಕನ್ನಡಿಗರಿಗೆ ಬೆರಳಿಟ್ಟು ತೋರಿಸಿದ್ದಾರೆ. ಭಾರತತೀರ್ಥವನ್ನು ಕನ್ನಡದ ಮನೆ ಮನೆಗೂ, ಮನ ಮನಕ್ಕೂ ವಿತರಣೆ ಮಾಡಿದ್ದಾರೆ.

೨

ಈ ಮಹಾಭಾರತ ಸಂಹಿತೆ ಮೂಲತಃ ೨೪,೦೦೦ ಶ್ಲೋಕ ಪರಿಮಾಣ ಮಾತ್ರವಾಗಿತ್ತು ಎಂಬುದನ್ನು ಅನುಕ್ರಮಣಿಕಾ ಅಧ್ಯಾಯ ಹೇಳುತ್ತದೆ.

ಚತುರ್ವಿಂಶತಿ ಸಾಹಸ್ರೀಂ ಚಕ್ರೇ ಭಾರತಸಂಹಿತಾಂ
ಉಪಾಖ್ಯಾನೈರ್ವಿನಾ ತಾವದ್ಭಾರತಂ ಪ್ರೋಚ್ಯತೇ ಬುಧೈಃ ।।

ವ್ಯಾಸಋಷಿ ಮಾಡಿದುದು ಈ ಭಾರತವನ್ನಂತೆ; ಉಪಾಖ್ಯಾನಗಳು ಸೇರಿ ಮಹಾಭಾರತವಾಯಿತಂತೆ.

ಉಪಾಖ್ಯಾನಗಳ ವಿಚಾರ ಹೇಳಿ ಮಾಸ್ತಿಯವರು ಒಂದೊಂದೇ ಮುಖ್ಯ ಪಾತ್ರಗಳ ಪರಿಚಯವನ್ನು ಅವರವರ ಗುಣಗುಣಗಳ ಮೂಲಕ ಕಥೆಯ ಒಡಲಿನಿಂದ ಎತ್ತಿ ಎತ್ತಿ ತೋರಿಸಿದ್ದಾರೆ. ಕೆಲವೇ ಮಾತುಗಳಲ್ಲಿ ಆ ಪಾತ್ರಗಳ ಸಂಪೂರ್ಣ ಪರಿಚಯವಾಗುವ ಹಾಗೆ ಪರಿಚಯಿಸಿದ್ದಾರೆ:

'ಭೀಷ್ಮನ ಮಾತನ್ನು ಷೇಕ್ಸ್‌ಪಿಯರ್ ಶಬ್ದಗಳಲ್ಲಿ ಹೇಳುವುದಾದರೆ, ಇವನ ಹಗಲೂಟ ಇರುಳೂಟ ಇನ್ನೆಲ್ಲ ಆಹಾರ ದುಃಖದಿಂದಲೇ ತುಂಬಿ ಕಹಿಕವಳವಾಯಿತು.'

'ಭಾರತಗ್ರಂಥದ ಭೀಷ್ಮನು ಮೇರುಮಂದರಗಳಂತೆ, ವಿಂಧ್ಯ ಹಿಮಾಚಲಗಳಂತೆ ಭೂಮ್ಯಂತರಿಕ್ಷಗಳ ಮಧ್ಯದ ಸ್ಥಳವನ್ನು ತುಂಬಿ ನಿಲ್ಲುವ ಮಹಾವ್ಯಕ್ತಿ. . .ದೇವವ್ರತನ ಚರಿತೆ ಭೀಷ್ಮವಾದ ಪ್ರತಿಜ್ಞೆಯಿಂದ ಅನಾದೃಶ್ಯ ಸ್ವರ್ಣಪಾಕಕ್ಕೆ ಬಂದು ಅದೇ ಪಾಕದ ವಿಭವದಲ್ಲಿ ಕೊನೆಯನ್ನು ಸಾರುತ್ತದೆ.'

ಇನ್ನೊಂದು ಅಂಥ ಪಾತ್ರ ವಿದುರನದು. ಅವನು

ಕೃಷ್ಣದ್ವೈಪಾಯನಾತ್ಮಜಃ

ಸಹಜ್ಞೋ ವಿದುರೋನಾಮ ಕೃಷ್ಣದ್ವೈಪಾಯನಾತ್ಮಜಃ
ಧೃತರಾಷ್ಟ್ರಸ್ಯಚ ಭ್ರಾತಾ ಪಾಂಡೋಶ್ಚಾಮಿತ ಬುದ್ಧಿಮಾನ್।।

ಅವನು ಅಮಿತ ಬುದ್ಧಿವಂತನಾದುದರಿಂದಲೇ ತಾನು ತಿಳಿದ ಲೋಕನೀತಿಯನ್ನು ಕೆಟ್ಟುಹೋಗುತ್ತಿದ್ದ ಧೃತರಾಷ್ಟ್ರನಿಗೆ ಹೇಳುತ್ತಾನೆ. ಇದು 'ವಿದುರನೀತಿ' ಎಂದು ಪ್ರಸಿದ್ಧವಾಗಿದೆ. 'ಶೀಲವಿದ್ದವನು ಸರ್ವವನ್ನೂ ಜಯಿಸುವನು, ಮನುಷ್ಯರಿಗೆ ಶೀಲಮುಖ್ಯ.'

'ಮದ್ಯ ಕುಡಿದು ಬಿದ್ದವನು ಎದ್ದು ನಿಲ್ಲುವ ಆಶೆಯಿದೆ, ಧನಮದದಿಂದ ಬಿದ್ದವನು ಏಳುವ ಸಂಭವವಿಲ್ಲ.'

'ಕೊಡಲಿಯಿಂದ ಕಡಿದ ಮರ ಮರಳಿ ಚಿಗುರುವುದು; ಕೆಟ್ಟ ಮಾತಿನಿಂದ ಕಡಿದ ಸ್ನೇಹ ಮತ್ತೆ ಚಿಗುರಲಾರದು.'

'ಯಾವ ಕಾರ್ಯ ರಾತ್ರಿ ನಿದ್ರೆ ಕೆಡಿಸುವುದಿಲ್ಲ; ಅಂಥ ಕಾರ್ಯವನ್ನು ಮಾತ್ರ ಮನುಷ್ಯನು ಹಗಲಲ್ಲಿ ಮಾಡಬೇಕು.'

'ನೂಲ ಎಳೆ ಒಂದಾದರೆ ಸುಲಭವಾಗಿ ಕಿತ್ತುಹೋಗುತ್ತದೆ; ಹಲವು ನೂಲೆಳೆ ಒಟ್ಟಿಗೆ ಸೇರಿದ್ದರೆ ಬಹುವರ್ಷದ ಎಳೆದಾಟವನ್ನು ತಡೆದುಕೊಳ್ಳುತ್ತವೆ. ಹಲವು ಮರ ಗುಂಪಾಗಿ ನಿಂತರೆ ಎಲ್ಲವೂ ಉಳಿದುಕೊಳ್ಳುತ್ತವೆ.'

'ಲೋಕದಲ್ಲಿ ಪ್ರಿಯವನ್ನು ನುಡಿಯುವ ಜನ ಸುಲಭವಾಗಿ ಸಿಕ್ಕುವರು; ಪ್ರಿಯವಲ್ಲದಿದ್ದರೂ ಹಿತವೆಂಬುದನ್ನು ಹೇಳುವವರೂ ಅಪೂರ್ವ, ಕೇಳುವವರೂ ಅಪೂರ್ವ.'

ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ತ್ಯಜೇತ್ ಕುಲಂ
ಕುಲಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್॥

'ಒಂದು ಕುಲವನ್ನು ರಕ್ಷಿಸುವುದಕ್ಕಾಗಿ ಒಬ್ಬ ಮನುಷ್ಯನನ್ನು, ಒಂದು ಗ್ರಾಮವನ್ನು ರಕ್ಷಿಸುವುದಕ್ಕಾಗಿ ಒಂದು ಕುಲವನ್ನು, ಒಂದು ದೇಶವನ್ನು ರಕ್ಷಿಸುವುದಕ್ಕಾಗಿ ಒಂದು ಗ್ರಾಮವನ್ನು, ಆತ್ಮವನ್ನು ಉಳಿಸಿಕೊಳ್ಳುವುದಕ್ಕಾಗಿ ಲೋಕವನ್ನು ಬಿಡಬೇಕು.'

'ಅಣ್ಣಾ, ಸಾವಿರವಿದ್ದವನು ಬದುಕುವನು; ನೂರು ಇದ್ದವನೂ ಬದುಕುವನು; ಹೇಗೂ ಜೀವಿಸದೆ ಹೋಗುವುದಿಲ್ಲ; ನೀನು ಅತಿ ಆಸೆಯನ್ನು ಮಾಡಬೇಡ. ಭೂಮಿಯಲ್ಲಿ ಬೆಳೆಯುವ ಎಲ್ಲಾ ಪ್ರೀಹಿಯನ್ನೂ, ಸುವರ್ಣ, ಪಶು, ಸ್ತ್ರೀ ಸಂಪತ್ತನ್ನು ಒಬ್ಬ ಮನುಷ್ಯನಿಗೆ ಕೊಟ್ಟರೂ ಸಾಕು ಎನ್ನಿಸುವುದಿಲ್ಲ.'

ವಿದುರನು ಹೇಳಿದ ನೀತಿಯೆಲ್ಲ ವ್ಯರ್ಥವಾಯಿತೆಂಬುದೇ ಭಾರತದ ಕಥೆ. ಅವನು ಕೇಳಿದ್ದರೆ ಮುಂದೆ ಕಥೆ ಇಲ್ಲವಾಗುತ್ತಿತ್ತು. ಮಹಾಭಾರತ ಯುದ್ಧಾಂತದಲ್ಲಿ ವಿದುರ ಆಶ್ರಮವಾಸಿಯಾದ; ಕಠಿಣ ತಪಸ್ಸನ್ನಾಚರಿಸಿದ. ಮಾತನಾಡಿಸಲು ಹೋದ ಯುಧಿಷ್ಠಿರನಲ್ಲಿ ತನ್ನ ಸತ್ತ್ವವನ್ನೆಲ್ಲ ತುಂಬಿ ವಿದುರ ಯೋಗಿಯಾದ. 'ಬಹುಕಾಲದ ಅನಂತರ ಹತ್ತಿರಕ್ಕೆ ಬಂದ ಮಗನನ್ನು ಸೋಕಿದ ಆನಂದವೋ, ಯಾವುದೋ ವಿದುರನ ಕಣ್ಣನ್ನು ಮುಚ್ಚಿದ್ದಿತು; ಅವನ ದೇಹವನ್ನು ಸುಲಿದು ಜೀವನಕ್ಕೆ ಬಿಡುಗಡೆಯನ್ನು ತಂದಿದ್ದಿತು.' ಎಂದು ವಿದುರನ ಅಂತ್ಯವನ್ನು ಪರಿಚಯಿಸುತ್ತಾರೆ.

'ಮನುಷ್ಯನ ಯೋಗ್ಯತೆಗೆ ಹುಟ್ಟು ಮುಖ್ಯ ಕಾರಣವಲ್ಲ; ಗುಣ ಮುಖ್ಯ, ಎನ್ನುವುದನ್ನು ತನ್ನ ಜೀವನದ ಪ್ರತಿಕ್ಷಣವೂ ತೋರಿಸಿ ಬಾಳಿದ ಈ ಮಹಾಪುರುಷನು ಜೀವನದಲ್ಲಿ ಹೇಗೋ ಹಾಗೆ ಸಾವಿನಲ್ಲಿಯೂ ಅನ್ಯರಿಗೆ ಅಸಾಧ್ಯವಾದ ಒಂದು ಮಹಿಮೆಯನ್ನು ಪ್ರಕಟಿಸಿದನು.'

'ಧೃತರಾಷ್ಟ್ರನು ಒಬ್ಬರಾದ ಮೇಲೆ ಒಬ್ಬರು ತನ್ನ ಮಕ್ಕಳೆಲ್ಲ ಸತ್ತ ಸಂಗತಿಯನ್ನು ಆ ಹದಿನೆಂಟು ದಿನವೂ ಕೇಳಿದನು. ಎಲ್ಲ ಮುಗಿದ ಮೇಲೆ ರಾಷ್ಟ್ರದ ಯಃಕಶ್ಚಿತ್ ಗ್ರಾಮವಾಸಿಯಂತೆ ತಾನೂ ಆ ಎಲ್ಲ ಕೇಡಿನ ಕೇವಲ ಒಬ್ಬ ಪ್ರೇಕ್ಷಕನಾದನು. . . ದುಃಖದ ಊಟದ ಬಹುಭಾಗ ಇವನ ಹೊಟ್ಟೆಯನ್ನು ಸೇರಿತು'-ಧೃತರಾಷ್ಟ್ರನನ್ನು ಮಾಸ್ತಿಯವರು ಹೀಗೆ ಪರಿಚಯಿಸಿದ್ದಾರೆ.

'ಸತ್ಯವತಿ ಭೀಷ್ಮನನ್ನು. . .ಪ್ರಾಯದ ಹೆರಗಂಡನ್ನು ಮಗನೆಂದು ಕರೆಯುತ್ತ ಮನೆಗೆ ಬಂದ ಈ ತಾಯಿ ಅವನನ್ನು ಹೆತ್ತು ತೊಡೆಯ ಮೇಲಿಟ್ಟುಕೊಂಡು ಎದೆಗಿಕ್ಕಿ ಹಾಲುಣಿಸಿದ ತಾಯಿ ಎಂಬಂತೆ ಗುರುಭಾವದಿಂದ ನಡೆದುಕೊಂಡಳು. . .ಭೀಷ್ಮನು ಎಲ್ಲ ಕೆಲಸವನ್ನೂ ತಾಯಿ ಸತ್ಯವತಿಯ ಮತದಂತೆ ನಡೆಸಿದನಂತೆ! ಈ ಪವಿತ್ರ ವರ್ತನೆಯ ಮಹತ್ಪುಣ್ಯಕ್ಕೆ ಇವರಿಬ್ಬರೂ ಅಧಿಕಾರಿಗಳು'-ಇಲ್ಲಿಯ ಧರ್ಮ ಸೂಕ್ಷ್ಮವನ್ನು ಮಾಸ್ತಿಯವರು ಪರಿಶೀಲಿಸಿದ ತಿಳಿನೋಟವನ್ನು ಪರಿಭಾವಿಸಿರಿ.

'ಗಾಂಧಾರಿ ಕುರುಡನ ಹೆಂಡತಿಯಾದಳು; ಮದುವೆಯಾಗಲು ಬರುತ್ತ ಅವನಿಗೆ ತಕ್ಕ ಹೆಂಡತಿಯಾಗಿರಲು ಕಣ್ಣಿಗೆ ಭದ್ರವಾಗಿ ಬಟ್ಟೆಯ ಪಟ್ಟಿಯನ್ನು ಕಟ್ಟಿಕೊಂಡು ತಾನೂ

ಕುರುಡಳಾದಳು. ಮತ್ತೆ ಆ ಪಟ್ಟಿಯನ್ನು ಬಿಚ್ಚಲಿಲ್ಲ; ಲೋಕವನ್ನು ನೋಡಲಿಲ್ಲ. ಅವನು ಹುಟ್ಟಿನಿಂದ ಕುರುಡ; ಇವಳು ಸಮ್ಮತಿಯಿಂದ ಕುರುಡಿ. ಇದು ಎಂಥ ಮನೋನಿಶ್ಚಯ! ಇನ್ನೆಂಥ ದೃಢ ಸಂಕಲ್ಪ! ಹೇಳಿದರೆ ನಂಬುವುದು ಕಷ್ಟ. . .ತನ್ನ ಗಂಡನಿಗೆ ಇಲ್ಲದ ಒಂದು ಸಂತೋಷ ತನಗೆ ಬೇಡ.'- ಇದು ಮಾಸ್ತಿಯವರು ಗಾಂಧಾರಿಯನ್ನು ಕಂಡ ಬಗೆ.

'ಕುಂತಿ ಮಕ್ಕಳನ್ನು ಬಹು ಪ್ರೀತಿಯಿಂದ ನೋಡಿಕೊಂಡಳೆನ್ನುವುದು ಚೆನ್ನಾಗಿ ಕಾಣುತ್ತದೆ. ಹೊತ್ತು ಹೊತ್ತಿನ ಊಟದಲ್ಲಿ ಭೀಮನಿಗೆ ಹೆಚ್ಚು ಆಹಾರಬೇಕು ಎನ್ನುವುದನ್ನು ತಿಳಿದು ಮೊದಲಿನಿಂದಲೂ ಅವಳು ಅವನ ಹೊಟ್ಟೆಯನ್ನು ನೋಡಿಕೊಂಡಳು. ಒಳ್ಳೆಯ ತಾಯಲ್ಲಿ ಇದು ಮೊದಲ ಲಕ್ಷಣ. . .ಅರಗಿನ ಮನೆಯಿಂದ ತಪ್ಪಿಸಿಕೊಂಡು ಇವರೆಲ್ಲ ಕಾಡಿನಲ್ಲಿ ತಕ್ಕಷ್ಟು ದೂರ ನಡೆದಮೇಲೆ ಭೀಮನು, 'ಇನ್ನು ಸ್ವಲ್ಪ ದೂರ ಹೋಗೋಣ. ಇಲ್ಲಿಯೇ ನಿಂತರೆ ಶತ್ರುಗಳು ಹಿಂದಟ್ಟಿಕೊಂಡು ಬಂದಾರು' ಎಂದನು. ಕುಂತಿಗೆ ನಡೆದು ಸಾಕಾಗಿತ್ತು. ಅವಳು ಅಲ್ಲಿಯೇ ಕುಳಿತಳು. 'ನನಗೆ ಶತ್ರುಗಳು ಕೌರವರಲ್ಲ. ನನ್ನ ಮಕ್ಕಳೇ ನನಗೆ ಶತ್ರುಗಳಾಗಿದ್ದಾರೆ. ನನ್ನನ್ನು ನಡೆಸಿ ಕೊಲ್ಲಬೇಕೆಂದಿರುವ ಇವನೇ ನನಗೆ ಶತ್ರು' ಎಂದಳು. ನೂರು ಜನರನ್ನು ಕುರಿತ ನೂರುವರ್ಷದ ಚರಿತ್ರೆಯಲ್ಲಿ ಇಂಥ ಒಂದು ಸಂಗತಿಯನ್ನು ಗುರುತಿಸಿರುವುದು ಮಹರ್ಷಿಯ ಮಾನವ ಸ್ವಭಾವ ವಿಜ್ಞಾನವನ್ನು ಬೆಳಗಿ ತೋರುತ್ತದೆ. ಮಹಾಭಾರತದಲ್ಲಿ ಬರುವ ಸ್ತ್ರೀಯರಲ್ಲಿ ದ್ರೌಪದಿಯ ಚಿತ್ರ ಹೊರತು ಇನ್ನು ಯಾರ ಚಿತ್ರವೂ ವಿಸ್ತಾರದಲ್ಲಿ ಕುಂತಿಯ ಚಿತ್ರದ ಜೊತೆಗೆ ಬರಲಾರದು. ಬಂದಿರುವಷ್ಟು ವಿವರದಿಂದ ಈ ತಾಯ ನೋವು, ಕರುಳು, ಸಾಹಸ ನಮ್ಮ ಜನದ ಮನಸ್ಸನ್ನು ಎಷ್ಟು ಚೆನ್ನಾಗಿ ಮುಟ್ಟಿದವೆಂದರೆ, ಈ ಹೊತ್ತಿಗೂ ನಮ್ಮ ಹಳ್ಳಿಗಳ ಜನರಿಗೆ ಕುಂತೀದೇವಿ ತಾಯಿತನದ ಪ್ರತಿನಿಧಿ. ಒಂದು ಕಾಡಿನಲ್ಲಿ ಅವಳು ಮಕ್ಕಳಿಗೆ ಅನ್ನಮಾಡಿ ಹಾಕಿದ್ದಾಳೆ; ಒಂದು ಬೆಟ್ಟದ ಮೇಲೆ ಭೀಮನು ಅವಳಿಗೆ ಗದೆಯಿಂದ ಒಂದು ಸರೋವರವನ್ನು ತೋಡಿಕೊಟ್ಟಿದ್ದಾನೆ; ಒಂದು ಕಡೆ ಅವಳು ಸಂಬಾರವನ್ನು ರುಬ್ಬಿದ ಒರಳಿದೆ. ಭುಜದೆತ್ತರಕ್ಕೆ ಬೆಳೆದ ಶೂರರಾದ ಮಕ್ಕಳನ್ನು ಪ್ರೀತಿಯ ಬಲದಿಂದ ತನ್ನ ಅಂಕೆಯಲ್ಲಿ ಇಟ್ಟುಕೊಂಡು ಆಳಿದ, ಆಳುವ ತಾಯಿ ಮೂರುಲೋಕದಲ್ಲಿ ಒಬ್ಬಳೇ ಒಬ್ಬಳು: ಅವಳ ಹೆಸರು ಕುಂತಿ'- ಇದು ಮಾಸ್ತಿಯವರು ಕುಂತೀದೇವಿಯನ್ನು ಚಿತ್ರಿಸಿದ ರೀತಿ.

ಕುಂತೀದೇವಿ ಯುಧಿಷ್ಠಿರನಿಗೆ ಸಂದೇಶ ಕಳುಹಿಸುವಾಗ ವಿದುಲಾ ಎಂಬ ಕ್ಷತ್ರಿಯ ಮಾತೆಯ ಕತೆಯನ್ನು ಹೇಳಿ ಕಳುಹಿಸುತ್ತಾಳೆ. ಅವಳಿಗೆ ಸಂಜಯನೆಂಬೊಬ್ಬ ಮಗನಿದ್ದನು. ಅವನು ಒಮ್ಮೆ ಯುದ್ಧದಲ್ಲಿ ಸೋತು ಓಡಿಬಂದನು. ಆಗ ಆ ತಾಯಿ ಆ ಮಗನಿಗೆ ಹೀಗೆ ಹೇಳಿದಳಂತೆ:

> ಯಸ್ಯ ವೃತ್ತಂ ನ ಜಲ್ಪಂತಿ ಮಾನವಾ ಮಹದದ್ಭುತಂ
> ರಾಶಿವರ್ಧನ ಮಾತ್ರಂಸ ನೈವಸ್ತ್ರೀ ನ ಪುನಃ ಪುಮಾನ್॥
> ದಾನೇ ತಪಸಿ ಶೌರ್ಯೇಚ ಯಸ್ಯನ ಪ್ರಥಿತಂ ಯಶಃ
> ವಿದ್ಯಾಯಾಂ ಅರ್ಥಲಾಭೇವಾ ಮಾತುರುಚ್ಚಾರ ಏವಸಃ॥
> ಶ್ರುತೇನ ತಪಸಾ ವ್ಯಾಪಿ ಶ್ರೀಯಾ ವಾ ವಿಕ್ರಮೇಣ ವಾ
> ಜನಾನ್ಯೋಭಿ ಭವತ್ಯನ್ಯಾನ್ ಕರ್ಮಣಾ ಹಿ ಸವ್ವೈ ಪುಮಾನ್॥

''ಮನುಷ್ಯರು 'ಆಹಾ! ಎಂಥ ಅದ್ಭುತ ಕಾರ್ಯವನ್ನು ಮಾಡಿದನು' ಎಂದು ನಿನ್ನನ್ನು ಹೊಗಳದ ಮೇಲೆ ನೀನು ಇದ್ದು ಆದುದೇನು? ರಾಶಿಯಲ್ಲಿ ಇರುವ ಕಾಳಿನಂತೆ ಜನರ

ಗುಂಪಿನಲ್ಲಿ ನೀನೊಬ್ಬ ಮನುಷ್ಯನಾದೆ. ಅಂಥ ಮನುಷ್ಯನು ಹೆಣ್ಣೂ ಅಲ್ಲ, ಗಂಡೂ ಅಲ್ಲ. ದಾನದಲ್ಲಿ, ತಪಸ್ಸಿನಲ್ಲಿ, ಶೌರ್ಯದಲ್ಲಿ ಯಶಸ್ಸು ಪ್ರಥಿತವಾಗದಿದ್ದರೆ, ವಿದ್ಯೆಯಲ್ಲಿ ಅರ್ಥಲಾಭದಲ್ಲಿ ಆದರೂ ಹೆಸರು ತಾರದೆ ಇದ್ದರೆ, ಮನುಷ್ಯನು ತಾಯ ಮೈ ಎಸೆದ ಒಂದು ಕಸ ಅಷ್ಟೆ. ಓದಿನಿಂದ ಅಥವಾ ತಪಸ್ಸಿನಿಂದ, ಇಲ್ಲ ಶ್ರೀಯಿಂದ, ಇಲ್ಲವೆ ಪರಾಕ್ರಮದಿಂದ, ಯಾವನು ಉಳಿದವರನ್ನು ಹಿಂದಕ್ಕೆ ಹಾಕುತ್ತಾನೋ ಅವನು ಪುರುಷನು.''

ಮಾಧೂಮಾಯ ಜ್ವಲಾತ್ಯಂತಂ ಆಕ್ರಮ್ಯ ಜಹಿ ಶಾತ್ರವಾನ್
ಜ್ವಲ ಮೂರ್ಧವ್ಯ ಮಿತ್ರಾಣಾಂ ಮುಹೂರ್ತಮಪಿ ವಾ ಕ್ಷಣಮ್‌॥

'ಹೊಗೆಯಾಡುತ್ತಿರಬೇಡ; ಆದಷ್ಟು ಉರಿ. ಶತ್ರುಗಳ ಮೇಲೆ ನುಗ್ಗು; ಅವರನ್ನು ಕೊಲ್ಲು. ಒಂದು ಮುಹೂರ್ತವೊ ಒಂದು ಕ್ಷಣವೊ ಅಮಿತ್ರರ ಮಂಡೆಯ ಮೇಲೆ ಜ್ವಲಿಸು.' ಇಂಥ ಮಾತೆಯ ಮಾತುಕೇಳಿ ಸಂಜಯ ಯುದ್ಧಕ್ಕೆ ಹೋಗುತ್ತಾನೆ. ಮುಂದೇನಾಗುತ್ತದೆ ಎಂದು ಹೇಳುವುದಿಲ್ಲ. ಇದು ಭಾರತದ ಒಳ ತಿರುಳು. ಒಂದು 'ಮಿನಿ' ಭಾರತ; ಮಹಾಭಾರತದ ಹೃದಯವಾಗಿದೆ ಎಂಬುದನ್ನು ಮಾಸ್ತಿಯವರು ತೋರಿಸಿಕೊಟ್ಟಿದ್ದಾರೆ.

ಮುಂದೆ ಅರ್ಜುನನ ಪಾತ್ರವನ್ನು ಪರಿಚಯಮಾಡಿದ ರೀತಿ ಸುಂದರವಾಗಿದೆ; 'ಯುಧಿಷ್ಠಿರನದು ಒಂದು ಪಕ್ಕಕ್ಕೆ ಅತಿ, ಭೀಮನದು ಇನ್ನೊಂದು ಪಕ್ಕಕ್ಕೆ ಅಷ್ಟೇ ಅತಿ, ಈ ಎರಡು ಅತಿಗಳ ಮಧ್ಯೆ ಒಂದು ಸಮವಾದ ಮಾರ್ಗವನ್ನು ಹಿಡಿಯುವುದು ಅರ್ಜುನನ ಸ್ವಭಾವ. . .ಈ ಅರ್ಜುನೋರ್ವಶ್ಯೀ ಪ್ರಸಂಗ ಒಂದು ಪ್ರಾ [illegible] ಕಲ್ಪನೆ. ಅರ್ಜುನನು ಬೃಹನ್ನಳೆಯ ವೇಷದಲ್ಲಿದ್ದಾಗ ನಿಜವಾಗಿ ಷಂಡನಾಗಿರಲಿಲ್ಲ; ಅಜ್ಞಾತವಾಸದ ಸಲುವಾಗಿ ನಿಷ್ಠುರ ಬ್ರಹ್ಮಚರ್ಯವನ್ನು ಆಚರಿಸಿದನು,. . . . .ನಿಜವಾಗಿ ನೋಡಿದರೆ ಊರ್ವಶಿ ಹತ್ತಿರ ಬಂದಾಗ ಅವಳನ್ನು ಬೇಡ ಎಂದು ಹೇಳಿದ್ದರೆ ಅದು ಎಷ್ಟು ಆಶ್ಚರ್ಯಕ್ಕೆ ಕಾರಣವೋ ಅದಕ್ಕಿಂತ ಅರಮನೆಯಲ್ಲಿ ಅಂಥ ಎಂಥ ಚೆಲುವೆಯರ ಮಧ್ಯೆ ಬರಿಯ ಸ್ತ್ರೀಯರೇ ಇರುವೆವು ಎಂಬ ತಿಳಿವಳಿಕೆಯಲ್ಲಿ ಅವರು ಆಡಿದ ಆಟ ಹೇಳಿದ ಮಾತುಗಳನ್ನು ನೋಡುತ್ತ ಕೇಳುತ್ತ ಅವರಿಗೆ ನೃತ್ಯಗೀತಗಳನ್ನು ಕಲಿಸುತ್ತ ಗಂಡಾದವನು ಷಂಡನೆಂದೇ ತೋರುವಂತೆ ಬಾಳಿದನೆನ್ನುವುದು ಇದು ಹೆಚ್ಚು ಆಶ್ಚರ್ಯದ ಮಾತು.'

'ಭೀಷ್ಮನನ್ನು ಕೆಡಹಬೇಕಾಗಿ ಬಂದಾಗ ಅರ್ಜುನನು ಆಡಿದ ಮಾತು ಕಲ್ಲೆದೆಯನ್ನು ಕರಗಿಸುವಂಥದು:

ಗುರುಣಾ ಕುರುವೃದ್ಧೇನ ಕೃತಪ್ರಜ್ಞೇನ ಧೀಮತಾ
ಪಿತಾಮಹೇನ ಸಂಗ್ರಾಮೇ ಕಥಂ ಯೋದ್ಧಾಸ್ಮಿ ಮಾಧವ॥
ಕ್ರೀಡತಾ ಹಿ ಮಯಾ ಬಾಲ್ಯೇ ವಾಸುದೇವ ಮಹಾ ಮನಾಃ
ಪಾಂಸುದೂಷಿತ ಗಾತ್ರೇಣ ಮಹಾತ್ಮಾ ಪರುಷೀಕೃತಃ॥
ಯಸ್ಯಾಹಮಧಿರುಹ್ಯಾಂಕಂ ಬಾಲಃ ಕಿಲ ಗದಾಗ್ರಜ
ತಾತೇತ್ಯವೋಚಂ ಪಿತರಂ ಪಿತುಃ ಪಾಂಡೋಃ ಮಸಾತ್ಮನಃ॥
ನಾಹಂ ತಾತಸ್ತವಪಿತುಸ್ತಾತೋಽಸ್ಮಿ ತವಭಾರತ
ಇತಿ ಮಾಬ್ರವೀತ್ ಬಾಲ್ಯೇ ಯಃ ಸವಧ್ಯಂ ಕಥಂ ಮಯಾ॥

ಮಗುವಾಗಿದ್ದ ದಿನದಲ್ಲಿ ಧೂಳಿನಲ್ಲಿ ಆಡಿ ಮಣ್ಣಾದ ಮೈಯಿಂದ ಇವನು ತಾತನ ಮೈಯನ್ನು ಮಣ್ಣು ಮಾಡಿದ್ದನು; ಅಪ್ಪಾ ಎಂದು ಕರೆದಿದ್ದನು. ಅವನು ಈ ಧೂಳನ್ನು ಒಪ್ಪಿಕೊಂಡು ತಾನು ಅಪ್ಪನಲ್ಲ, ಅಪ್ಪನ ಅಪ್ಪ ಎಂದು ಈ ತಬ್ಬರಿ ಮಗುವಿಗೆ

ಅರಿಯಿಸಿದ್ದನು.'

'ಕುರುಕ್ಷೇತ್ರದ ಯುದ್ಧರಂಗದಲ್ಲಿ ಭಗವದ್ಗೀತೆಯ ಬೋಧನೆ ಸಾಧ್ಯವೇ ಎಂಬ ವಿಚಾರದಲ್ಲಿ ಸಂದೇಹವುಂಟು. ಮಾಸ್ತಿಯವರು ಅದಕ್ಕೆ ಹೀಗೆ ಸಮಾಧಾನ ಹೇಳಿದ್ದಾರೆ; 'ಆ ಗ್ರಂಥದಲ್ಲಿ ಉಕ್ತವಾಗಿರುವ ಸಂಗತಿಯನ್ನು ಅವನು ತನ್ನ ಈ ಬಂಧುವಿಗೆ ಬೇರೆ ಬೇರೆ ಹತ್ತಾರು ಸಂದರ್ಭದಲ್ಲಿ ಹೇಳಿರಬೇಕೆನ್ನುವುದರಲ್ಲಿ ಸಂದೇಹವಿಲ್ಲ.'

ದ್ರೌಪದಿ ವಿರಾಟನರಮನೆಯಲ್ಲಿದ್ದಾಗ ಭೀಮನಿಗೆ ತನ್ನ ಸಂಕಟವನ್ನು ಹೀಗೆ ಹೇಳಿಕೊಂಡಳು; 'ನಾನು ನಿಮ್ಮ ಐವರಿಗೆ ಅಂಜಿದವಳಲ್ಲ. ಅತ್ತೆ ಕುಂತಿಯ ಎದುರಿಗೆ ಹೆದರಿ ನಿಂತವಳಲ್ಲ. ಈಗ ಈ ವಿರಾಟನ ಅರಮನೆಯಲ್ಲಿ ಇವರು ಕೇಳಿದ ಗಂಧವನ್ನು ತೇದು ಎದುರಿಗಿಟ್ಟು, ಇವರು ಒಪ್ಪುವರೊ ಇಲ್ಲವೊ ಎಂದು ಹೆದರಿ ಎದುರಿಗೆ ನಿಲ್ಲುತ್ತಿದ್ದೇನೆ. ನೋಡು ಭೀಮ! ಈ ಅರಮನೆಯ ಜನಕ್ಕೆ ಗಂಧವನ್ನು ತೇದು ತೇದು ಈ ನನ್ನ ಅಂಗೈ ಜಡ್ಡು ಕಟ್ಟಿದೆ' ಎಂದು ಕೈಯನ್ನು ತೋರಿಸಿದಳು. ಭೀಮನು ಆ ಕೈಯನ್ನು ತೆಗೆದುಕೊಂಡು ತನ್ನ ಕಣ್ಣಿಗೆ ಒತ್ತಿಕೊಂಡನಂತೆ. ದಾಂಪತ್ಯ ಪ್ರೇಮದ ಬಹು ಸುಂದರ ಚಿತ್ರ ಇದು. ಇಂಥದು ಲೋಕದ ಸಾಹಿತ್ಯದಲ್ಲಿ ಬಹಳ ಇರಲಾರದು. ಅದರ ನಾಯಕ ಭೀಮ ಎಂದರೆ ಅನೇಕರು ನಂಬಲಾರರು. ಭೀಮನ ಸ್ವಭಾವವನ್ನು ಕುರಿತು ನೂರು ಶ್ಲೋಕಗಳನ್ನು ಬರೆದಿದ್ದರೂ ಕವಿ ಅದನ್ನು ಈ ಒಂದು ವಿವರದಿಂದ ವರ್ಣಿಸುವಷ್ಟು ಚೆನ್ನಾಗಿ ವರ್ಣಿಸುವುದು ಆಗಿರಲಾರದು' - ಇದನ್ನು ಗುರುತಿಸಿ ತೋರಿಸಿದ ಮಾಸ್ತಿಯವರ ಸಹೃದಯತೆ ದೊಡ್ಡದು.

ಸಂಧಿಯ ಪ್ರಸ್ತಾಪ ಬಂದಾಗ ಭೀಮ ಮೊದಲು ಸಾಧ್ಯವಾದರೆ ಸಂಧಿ ಮಾಡಿಕೊಳ್ಳುವುದೇ ಸರಿ ಎಂದು ಹೇಳಿದನಂತೆ! 'ನಿನ್ನಿಂದ ಇಂಥಮಾತು ಕೇಳುವುದು ಆಶ್ಚರ್ಯ' ಎಂದು ಕೃಷ್ಣನು ಕೆಣಕಿದಾಗ ಭೀಮನು, 'ನಿನಗೆ ಆಶ್ಚರ್ಯವಾಗುವುದು ಸಹಜ. ನೀನು ನನ್ನನ್ನು ಕಾಣೆ. ಕೊಳದಲ್ಲಿ ಈಜದವನಿಗೆ ನೀರಿನ ಆಳ ಹೇಗೆ ತಿಳಿಯಬೇಕು? ಯುದ್ಧ ಬಂದರೆ ಅದನ್ನು ಮಾಡುವುದರಲ್ಲಿ ನಾನು ಯಾರಿಗೂ ಹಿಂದೆ ನಿಲ್ಲುವುದಿಲ್ಲ; ಆದರೆ ಹಗೆಗಳು ನ್ಯಾಯಕ್ಕೆ ಒಪ್ಪಿ ಬಂದರೆ ಅದನ್ನೂ ನಾನು ಒಪ್ಪಿಕೊಂಡೇನು' ಎಂದನು - ಭೀಮನ ಈ ಮುಖವನ್ನು ತಿರುಗಿಸಿ ತೋರಿಸಿ ಮಾಸ್ತಿಯವರು ಭೀಮನಿಗೆ ತುಂಬ ಉಪಕಾರ ಮಾಡಿದ್ದಾರೆ.

ಗದಾಯುದ್ಧದಲ್ಲಿ 'ದುರ್ಯೋಧನನ ತೊಡೆಗೆ ಪೆಟ್ಟು ಹಾಕು' ಎಂದು ಕೃಷ್ಣ ಹೇಳಿದುದು ಕೃಷ್ಣ ಚಾರಿತ್ರ್ಯಕ್ಕೂ ಧಕ್ಕೆ; ಭೀಮಸೇನನ ಗಂಡಿಗೂ ಮರ್ಯಾದೆಯಲ್ಲ. ಮಾಸ್ತಿಯವರು ಇದು ಪ್ರಕ್ಷಿಪ್ತವಿರಬೇಕು ಎಂದು ಸರಿಯಾಗಿ ಊಹಿಸಿದ್ದಾರೆ. ಅದಕ್ಕೆ ಅವರು ಕೊಡುವ ಸಮರ್ಥನೆ, 'ಗದೆಯಿಂದ ಯುದ್ಧ ಮಾಡುವಲ್ಲಿ ತೊಡೆಯಮೇಲೆ ಹೊಡೆಯುವುದು ತಪ್ಪೇ ಆಗಿದ್ದ ಪಕ್ಷದಲ್ಲಿ ಶಪಥ ಮಾಡುವಾಗ ಭೀಮನಿಗೆ ಈ ಯೋಚನೆ ಬರಬೇಕಾಗಿರಲಿಲ್ಲ. ಅಲ್ಲದೆ ಅವನು ಮಾಡಿದ್ದ ಶಪಥವನ್ನು ನಡಸು ಎಂದು ಕೃಸ್ಣನು ಹುಬ್ಬಿನಿಂದ ಸನ್ನೆ ಮಾಡಿ ಅವನನ್ನು ಪ್ರೇರಿಸಬೇಕಾದ ಕಾರಣವಿಲ್ಲ.'

ಯುಧಿಷ್ಠಿರನನ್ನು ಪರಿಚಯಿಸುವಾಗ 'ಯಕ್ಷಪ್ರಶ್ನೆ'ಯ ಸನ್ನಿವೇಶದಿಂದ ಪ್ರಾರಂಭಿಸುತ್ತಾರೆ. ಯಕ್ಷನು ಪ್ರಶ್ನೆ ಕೇಳಿದಾಗ ಯುಧಿಷ್ಠಿರ ಏನು ಉತ್ತರಕೊಟ್ಟ ಎಂಬುದರಿಂದ ಅವನ ಉದಾತ್ತ ವ್ಯಕ್ತಿತ್ವ ವ್ಯಕ್ತವಾಗುತ್ತದೆ; ಅವುಗಳಲ್ಲಿ ಈ ಮೂರು ಪ್ರಶ್ನೋತ್ತರಗಳನ್ನು ನೋಡಬಹುದು;

೧. ಭೂಮಿಗಿಂತ ಗುರುತರವಾದದ್ದು, ನಭಕ್ಕಿಂತ ಎತ್ತರವಾದದ್ದು, ವಾಯುವಿಗಿಂತ ಶೀಘ್ರತರವಾದದ್ದು, ಮನುಜಕುಲಕ್ಕೆ ಬಹುತರವಾದದ್ದು ಯಾವುದು?

ಮಾತಾ ಗುರುತರಾ ಭೂಮೇಃ ಪಿತಾ ಉಚ್ಚತರಶ್ಚಖಾತ್
ಮನಃ ಶೀಘ್ರತರಂ ವಾಯೋಃ ಚಿಂತಾ ಬಹುತರೀ ನೃಣಾಂ॥

ಭೂಮಿಗಿಂತ ಹಿರಿಯಳು ತಾಯಿ. ಗಗನಕ್ಕೂ ಎತ್ತರ ತಂದೆ. ಗಾಳಿಗಿಂತ ವೇಗ ಮನಸ್ಸು. ಮನುಷ್ಯರಿಗೆ ಬಹುತರ ಚಿಂತೆ.

೨ ಪುರುಷನು ಯಾರು?

ದಿವಂ ಸ್ಪೃಶತಿ ಭೂಮಿಂಚ ಶಬ್ದಃ ಪುಣ್ಯಸ್ಯ ಕರ್ಮಣಾ
ಯಾವತ್ ಸಶಬ್ದೋ ಭವತಿ ತಾವತ್ ಪುರುಷ ಉಚ್ಯತೇ॥

ಪುಣ್ಯಕರ್ಮದ ಕೀರ್ತಿ ಭೂಮಿಸ್ವರ್ಗಗಳನ್ನು ಯಾವಾಗ ಮುಟ್ಟುತ್ತದೆ, ಆಗ ಅವುಗಳ ಕರ್ತ ಪುರುಷನೆನಿಸಿಕೊಳ್ಳುತ್ತಾನೆ.

೩. ಸರ್ವಧನಿ ಯಾರು?

ತುಲ್ಯೆ ಪ್ರಿಯಾ ಪ್ರಿಯೇ ಯಸ್ಯ ಸುಖದುಃಖೇ ತಥೈವಚ
ಅತೀತಾನಾಗತೇ ಚೋಭೇ ಸವೈ ಸರ್ವಧನೀ ನರಃ॥

ಯಾವನಿಗೆ ಪ್ರಿಯ ಅಪ್ರಿಯಗಳು, ಸುಖದುಃಖಗಳು, ಕಳೆದು ಹೋದದ್ದು ಕೈಸೇರದೆ ಇರುವುದೂ ಒಂದೇ ಸಮ ಅವನು ಸರ್ವಧನೀ.

ಇದಕ್ಕೆಲ್ಲ ಕಲಶಪ್ರಾಯವಾಗಿ ಅವನು ನಕುಲನು ಬದುಕಲಿ ಎಂದುದು ಅವನ ಧರ್ಮನಿಷ್ಠೆಗೆ ಹೆಗ್ಗುರುತು.

'ಅಶ್ವತ್ಥಾಮೋ ಹತಃ ಕುಂಜರಃ' ಎಂದುದೂ ಪ್ರಕ್ಷಿಪ್ತ ಎಂದು ಮಾಸ್ತಿಯವರ ಅಭಿಪ್ರಾಯ. ಮಹಾಪ್ರಸ್ಥಾನದ ಸಂದರ್ಭದಲ್ಲಿ ತನ್ನ ಜತೆಯಲ್ಲಿ ಬಂದ ನಾಯಿಯನ್ನು ಸೇರಿಸದಿದ್ದಲ್ಲಿ ಅಂಥ ಸ್ವರ್ಗವೂ ತನಗೆ ಬೇಡ ಎಂದ ದಯಾಮಯಿ ಧರ್ಮರಾಯ. ದಯೆಯೇ ಧರ್ಮದ ಮೂಲ ಎಂದು ಧರ್ಮರಾಯನಷ್ಟು ಚೆನ್ನಾಗಿ ತಿಳಿದವರಿಲ್ಲ; ಅದರಂತೆ ಅವನಷ್ಟು ಚೆನ್ನಾಗಿ ಬದುಕಿದವರಿಲ್ಲ. 'ಆನೃಶಂಸ್ಯಂ ಪರೋ ಧರ್ಮಃ' ಎಂದ. ಯುಧಿಷ್ಠಿರನ ಬಗೆಗೆ ಮಾಸ್ತಿ ಹೇಳುತ್ತಾರೆ; 'ಉಳಿದವರು ಯುದ್ಧದಲ್ಲಿ ಪರಾಕ್ರಮಿಗಳಾದಂತೆ ಯುಧಿಷ್ಠಿರನು ಕಾರುಣ್ಯದಲ್ಲಿ ಪರಾಕ್ರಮಿಯಾದನು.'

ಮುಂದೆ ದ್ರೌಪದಿಯನ್ನು ಮಾಸ್ತಿಯವರು ಹೀಗೆ ಪರಿಚಯಿಸುತ್ತಾರೆ: 'ಅಪರಿಚಿತನಾದ ತರುಣನೊಬ್ಬನ ಹಿಂದೆ ಸ್ವಯಂವರ ಮಂಟಪದಿಂದ ಹೊರಟ ಹೆಣ್ಣು ತಾನು ಹುಟ್ಟಿದ ಅರಮನೆಯ ಭೋಗವನ್ನು ಎಷ್ಟು ನಿಶ್ಚಿಂತೆಯಿಂದ ತೊರೆದು ನಡೆದಳೊ ಅಷ್ಟೇ ನಿಶ್ಚಿಂತೆಯಿಂದ ಐವರು ಪತಿಗಳು ಮುಂದೆ ನಡೆಯುವ ಚಿತ್ರ ಕಣ್ಣೆದುರಿಗೆ ಇದ್ದಾಗ ಸಮಾಧಾನವಾಗಿ ಇಹದೇಹವನ್ನು ತ್ಯಜಿಸಿದಳು. ಗಂಡು ವೀರನಾದರೆ ಹೇಗೆ ನಡೆಯಬೇಕು ಎನ್ನುವ ಮಾತಿಗೆ ಮಹಾಭಾರತ ಹಲವು ಜನರ ಚಿತ್ರದಿಂದ ಹಲವು ರೀತಿಯ ಉತ್ತರವನ್ನು ಹೇಳುವಂತೆ ಕಾಣುತ್ತದೆ. ಹೆಣ್ಣು ವೀರಳಾದಾಗ ಹೇಗೆ ನಡೆಯಬೇಕು ಎಂದು ಕೇಳಿದರೆ ಅದು ಹೇಳುವುದು ಒಂದೇ ಉತ್ತರ: ದ್ರೌಪದಿಯಂತೆ ನಡೆಯಬೇಕು.'

ಮುಂದೆ ದುರ್ಯೋಧನನ ಪಾತ್ರ ಪರಿಚಯ: 'ದುರ್ಯೋಧನನು ತನ್ನ ಜೀವನದ ಒಂದು ದುರ್ದೈವದಿಂದ ಕೆಟ್ಟವನಾಗಿ ಬೆಳೆದನು. . .ಕೃತಿ ಇವನನ್ನು ಬಹುಸಲ ಸುಯೋಧನ

ಎನ್ನುತ್ತದೆ. ಚೆನ್ನಾಗಿ ಯುದ್ಧ ಮಾಡುವವನು, ಪ್ರತಿಭಟಿಸಲು ಕಷ್ಟವಾದವನು' ಎಂದರ್ಥ. ಈ ಸೂಕ್ಷ್ಮವನ್ನು ಗಮನಿಸಿರುವುದು ಮಾಸ್ತಿಯವರ ಸಹೃದಯತೆಗೆ ಉತ್ತಮ ಸಾಕ್ಷಿಯಾಗಿದೆ.

'ನಮ್ಮನ್ನು ಗೆಲ್ಲುವುದು ಅಷ್ಟು ಸುಲಭವಲ್ಲ. ಹಾಗೆ ಗೆದ್ದರೂ! ಸಂತೋಷ; ಕ್ರಮವಾಗಿ ಯುದ್ಧಮಾಡಿ ನಾವು ಸಾಯುವುದಕ್ಕೆ ಸಿದ್ಧ. ರಣರಂಗದಲ್ಲಿ ಸಾಯುವುದು ಕ್ಷತ್ರಿಯನಿಗೆ ಶ್ರೇಯಸ್ಸು, ಧರ್ಮ, ಸದ್ಗತಿಯ ಮಾರ್ಗ. ಶತ್ರುಗಳ ಮುಂದೆ ತಲೆಬಾಗಿ ನಿಲ್ಲುವುದಕ್ಕಿಂತ ಅದೇ ಒಳ್ಳೆಯದು. ವೀರನಾದ ನಾನು ಧರ್ಮಕ್ಕಾಗಿ ಬ್ರಾಹ್ಮಣರಿಗೆ ತಲೆಬಾಗುವೆನು. ಉಳಿದ ಯಾವ ಕಾರಣಕ್ಕೂ ಬೇರೆ ಯಾವನಿಗೂ ನಮಿಸುವುದಿಲ್ಲ.' ಎಂಬ ಸುಯೋಧನನ ಆತ್ಮಗೌರವ ನಿಷ್ಠೆಯನ್ನು ಮಾಸ್ತಿಯವರು ಎತ್ತಿ ಹಿಡಿದಿದ್ದಾರೆ.

''ಕೃಪಾಚಾರ್ಯನು, 'ಕ್ಷತ್ರಿಯನೊಂದಿಗೆ ಸ್ಪರ್ಧಿಸಬೇಕಾದರೆ ನೀನು ಕ್ಷತ್ರಿಯನಾಗಿರಬೇಕು, ನಿನ್ನ ಕುಲವನ್ನು ಹೇಳು' ಎಂದನು. ಕರ್ಣನಿಗೆ ಉತ್ತರ ಹೇಳಲು ಆಗಲಿಲ್ಲ. . .ದುರ್ಯೋಧನನು ಎದ್ದುನಿಂತು ಕರ್ಣನಿಗೆ ಅಲ್ಲಿಯೇ ಪಟ್ಟ ಕಟ್ಟಿದನು. 'ಈಗ ಇವನು ಕ್ಷತ್ರಿಯನು; ಇವನಿಗೆ ಯುದ್ಧಮಾಡುವುದಕ್ಕೆ ಅಪ್ಪಣೆ ಕೊಡಿ' ಎಂದನು. . .ಕರ್ಣನಿಗೆ ಅವಮಾನವಾಗುವಂತೆ ಕೃಪನು ಆಡಿದ ಮಾತು ದುರ್ಯೋಧನನ ದೊಡ್ಡ ಮನಸ್ಸಿಗೆ ಸಣ್ಣತನದ ಮಾತೆಂದು ಕಾಣಿಸಿತು.''

ಜನರು, 'ದೊರೆಗಳೆ, ನಿಮ್ಮ ಮಗ ನಮ್ಮ ವಿಷಯದಲ್ಲಿ ಯಾವ ತಪ್ಪನ್ನೂ ಮಾಡಲಿಲ್ಲ. ನಮ್ಮನ್ನು ಸರಿಯಾಗಿ ನೋಡಿಕೊಂಡನು. ರಾಜ್ಯವನ್ನು ಧರ್ಮದಿಂದ ಆಳಿದನು.' ಎಂದು ಧೈರ್ಯ ಹೇಳಿದರು. -ಇಲ್ಲಿ ಜನರ ದೃಷ್ಟಿಯಿಂದ ದುರ್ಯೋಧನನೇನಾಗಿದ್ದನೆಂಬುದನ್ನು ಎತ್ತಿ ಹೇಳಿ ಅವನು ಯಾವುದೋ ಒಂದು ದುರ್ಗುಣದಿಂದ ಲೋಕದ ಎದುರು ಕೆಟ್ಟವನೆನಿಸಬೇಕಾಯಿತು ಎಂಬುದನ್ನು ಮಾಸ್ತಿಯವರು ಚೆನ್ನಾಗಿ ನಿರೂಪಿಸಿದ್ದಾರೆ. ಈ ಸಹೃದಯತೆ ಸಾಮಾನ್ಯ ವಿಮರ್ಶಕರಿಗೆ ಬರುವುದಿಲ್ಲ. ಕೆಟ್ಟ ಎಂದರೆ ಆಳಿಗೊಂದು ಕಲ್ಲು ಹಾಕುವುದೇ ಲೋಕ ರೂಢಿ.

ಅಕ್ಷಯವಸ್ತ್ರದಾನದ ಪ್ರಸ್ತಾಪವನ್ನೆತ್ತಿಕೊಂಡು ಮಾಸ್ತಿಯವರು ಕೊಟ್ಟ ಸಮಾಧಾನ ಪ್ರತಿಭಾಪೂರ್ಣವಾಗಿದೆ: 'ಈ ಸಂಗತಿ ನಡೆದದ್ದೇ ಆದರೆ ಇದರ ಅರ್ಥ ಇಷ್ಟೇ ಇರಬೇಕು. ಅವನು ಅದೆಷ್ಟು ಸೆಳೆದರೂ ವಸ್ತ್ರವನ್ನು ತೆಗೆಯಲಾಗಲಿಲ್ಲ. ಏತರಿಂದಲೋ ನಾವು ಊಹಿಸಬೇಕಾದದ್ದಿಲ್ಲ. ಊಹಿಸಲೇಬೇಕೆಂದು ಯಾರಾದರೂ ಬಯಸುವುದಾದರೆ, ತನ್ನ ಮರ್ಯಾದೆಯ ರಕ್ಷಣೆಗಾಗಿ ದ್ರೌಪದಿ ಅದನ್ನು ಹಿಡಿದಿದ್ದ ಪಟ್ಟು ಅಷ್ಟು ಗಟ್ಟಿಯಾಗಿತ್ತು, ಎನ್ನಬಹುದು.'

ಕರ್ಣನ ಬಗೆಗೆ ಬರೆಯುತ್ತ ಮಾಸ್ತಿಯವರು, 'ದುರ್ಯೋಧನನಿಗೆ ಸೋದರನಾಗಿ ಹುಟ್ಟಿದ ಒಬ್ಬ ಸೋದರನಿಗಿಂತ ಹೆಚ್ಚಾಗಿ ಹತ್ತಿರದ ಬಂಧುವಾದವನು ಕರ್ಣ' ಎನ್ನುತ್ತಾರೆ. ಕರ್ಣ ಪಾತ್ರದ ಸಾರಸರ್ವಸ್ವವನ್ನು ಲೇಖಕರು ಈ ಒಂದು ಮಾತಿನಲ್ಲಿ ಹಿಡಿದಿಟ್ಟಿದ್ದಾರೆ: 'ದುರ್ಯೋಧನನ ದುರುದೃಷ್ಟ ಇವನ ವಿಕ್ರಮಕ್ಕೆ ಒಂದು ರಾಹು ಆಯಿತು.'

ಮಾಸ್ತಿಯವರು ಕೃಷ್ಣನ ಪಾತ್ರವನ್ನು ವಿಮರ್ಶಿಸುತ್ತ ಅವನ ಪವಾಡಗಳೆಲ್ಲ ಆ ಮೇಲೆ ಸೇರಿದ ಸಂಗತಿಗಳು ಎನ್ನುತ್ತಾರೆ: 'ಭಾರತದ ಕೃಷ್ಣನ ಸರಿಯಾದ ಒಂದು ಮೂರ್ತಿ ನಮಗೆ ದೊರೆಯಬೇಕಾದರೆ ನಾವು ಈ ಸಂಗತಿಗಳನ್ನು ಬಿಡಬೇಕು. ಅವನು ಬಹು ಹಿರಿಯನಾದ ಒಬ್ಬ ಮಾನುಷ ವ್ಯಕ್ತಿ ಎಂದು ಅವನ ಚರಿತೆಯನ್ನು ನೋಡಬೇಕು.' ಕೃಷ್ಣನ

ಸರ್ವಸಾಮರ್ಥ್ಯವನ್ನು, ಅವನ ಸುದರ್ಶನ ಚಕ್ರವನ್ನು ಪ್ರಸ್ತಾಪಿಸುತ್ತ 'ಧರ್ಮಕ್ಕಾಗಿ ಹೊರುವ ಎಲ್ಲ ಆಯುಧವೂ ವಿಷ್ಣುವಿನದೇ' ಎಂಬ ಮಾತನ್ನು ಮಾಸ್ತಿಯವರು ಹೇಳಿದ್ದಾರೆ. 'ಜೂಜು ನಡೆಯುವುದೆಂಬ ಮಾತು ತಿಳಿದಿದ್ದರೆ ನಾನು ಬಂದು ಅದು ಅನರ್ಥಕರವೆಂದು ತಿಳಿಸಿ ಅದನ್ನು ತಪ್ಪಿಸುತ್ತಿದ್ದೆನು' ಎಂದು ಅವನು ಆಮೇಲೆ ಯುಧಿಷ್ಠಿರನಿಗೆ ಹೇಳಿದನು.'

ಕೃಷ್ಣ ಸಂಧಾನದ ಸಂದರ್ಭದಲ್ಲಿ ಅವನು ಎಷ್ಟು ಉದಾತ್ತವಾಗಿ ನಡೆದುಕೊಂಡ ಎಂಬುದನ್ನು ಲೇಖಕರು ಚೆನ್ನಾಗಿ ಹೇಳಿದ್ದಾರೆ. ''ಸರ್ವ ಪೃಥಿವಿ, ಆನೆ, ಕುದುರೆ, ರಥ ಸಮೇತವಾಗಿ ನಾಶವಾಗುವ ಗತಿ ಒದಗಿದೆ. ಅದನ್ನು ಮೃತ್ಯುಪಾಶದಿಂದ ಬಿಡಿಸುವವನು ಉತ್ತಮ ಪುಣ್ಯವನ್ನು ಗಳಿಸುತ್ತಾನೆ. ಕೈಯಲ್ಲಾದಷ್ಟು ಪ್ರಯತ್ನಮಾಡಿ ಒಂದು ಒಳ್ಳೆಯ ಕಾರ್ಯವನ್ನು ಸಾಧಿಸಲಾಗಲಿಲ್ಲ ಎನ್ನು, ಯತ್ನ ಮಾಡಿದವನು ಆ ಕಾರ್ಯವನ್ನು ಸಾಧಿಸಿದ ಪುಣ್ಯವನ್ನು ಪಡೆಯುತ್ತಾನೆ. ಇದರಲ್ಲಿ ಸಂದೇಹವಿಲ್ಲ. ಆದಕಾರಣ ಸಂಗ್ರಾಮದಲ್ಲಿ ಸಾಯುವುದಕ್ಕೆ ಕಾದಿರುವ ಕುರುಶೃಂಜಯರಲ್ಲಿ ನಾನು ಸಮಾಧಾನವನ್ನು ತರಲು ನಿರ್ವಂಚನೆಯಿಂದ ಯತ್ನ ಮಾಡುತ್ತೇನೆ.'' ''ಕೃಷ್ಣನಿಗೆ ಯುದ್ಧ ಇಷ್ಟವಲ್ಲ ಎನ್ನುವುದಕ್ಕೆ ಬಹು ಪ್ರಬಲವಾದ ಮತ್ತೊಂದು ಪ್ರಮಾಣ ಅವನು ಯುದ್ಧದಲ್ಲಿ ಆಯುಧ ಹಿಡಿಯುವುದಿಲ್ಲ ಎಂದು ನಿಶ್ಚಯ ಮಾಡಿಕೊಂಡದ್ದು. . .ಹೀಗೆ ಕೃಷ್ಣನು ತನ್ನ ಜೀವನದಲ್ಲಿ ಧರ್ಮದ ಸೇವೆಯೊಂದಿಗೆ ಅಹಿಂಸಾ ತತ್ತ್ವವನ್ನು ಸಮನ್ವಯ ಮಾಡಿದನು.''

೩

ಇಲ್ಲಿಗೆ ಗ್ರಂಥದ ಮೂರನೆಯ ಎರಡು ಭಾಗ ಮುಗಿಯಿತು. ಮುಂದಿನ ಮೂರನೆಯ ಒಂದು ಭಾಗದಲ್ಲಿ ಮಾಸ್ತಿಯವರು ಮಹಾಭಾರತದಲ್ಲಿ ವ್ಯಾಸ ಹೇಳಬೇಕೆಂದಿದ್ದ ಜೀವನ ಧರ್ಮ, ಮಾನವ ಧ್ಯೇಯ, ಲೋಕನೀತಿ ಏನು ಎಂಬುದನ್ನು ಒಂದೊಂದಾಗಿ ವಿವರಿಸಿದ್ದಾರೆ.

ಅವುಗಳಲ್ಲಿ ಮೊದಲನೆಯದು 'ಧರ್ಮಂಚರ' ಎಂಬುದಾಗಿದೆ. 'ಧರ್ಮಲಾಭಾತ್ ಪರಂ ನ ಸ್ಯಾತ್ ತಸ್ಮಾತ್ ಧರ್ಮಂ ಚರ ಉತ್ತಮಂ' ಇದು ಭಾರತದ ಸಾರತತ್ತ್ವ.'' ಎರಡನೆಯದು 'ಅದ್ಯೈವ ಕುರು' ಎಂಬ ಗುರಿ.

ಅದ್ಯೈವ ಕುರು ಯತ್ ಶ್ರೇಯೋ ಮಾ ತ್ವಾಂ ಕಾಲೋತ್ಯಗಾದಯಂ
ಅಕೃತೇಷ್ವೇವ ಕಾರ್ಯೇಷು ಮೃತ್ಯುರ್ವೈ ಸಂಪ್ರಕರ್ಷತಿ॥

ಯಾವುದು ಒಳ್ಳೆಯದು ಅದನ್ನು ಈಗಲೇ ಮಾಡು; ಈ ಕ್ಷಣ ನಿನ್ನ ಕೈಯಿಂದ ಮಿಂಚಿ ಹೋಗುವುದು ಬೇಡ; ಮಾಡಬೇಕೆಂದಿರುವ ಕೆಲಸಗಳು ಹಾಗೆಯೇ ಉಳಿಯುತ್ತವೆ; ಸಾವು ಮನುಷ್ಯನನ್ನು ಕೊಂಡು ಹೋಗುತ್ತದೆ. ಹುಟ್ಟಿನಿಂದ ಎಲ್ಲರೂ ಬ್ರಾಹ್ಮಣರೇ ಎಂಬ ಮಹಾವಾಕ್ಯವನ್ನು ಮಹಾಭಾರತ ಹೇಳುತ್ತದೆ:

ನ ವಿಶೇಷೋऽಸ್ತಿ ವರ್ಣಾನಾಂ ಸರ್ವಂ ಬ್ರಾಹ್ಮಮಿದಂ ಜಗತ್
ಬ್ರಾಹ್ಮಣಾಃ ಪೂರ್ವ ಸೃಷ್ಟಾಹಿ ಕರ್ಮಭಿಃ ವರ್ಣತಾಂ ಗತಾಃ॥

ಇಂದ್ರಿಯ ನಿಗ್ರಹವನ್ನು ಕುರಿತು ಹೇಳುತ್ತ, 'ತನ್ನ ಎಲ್ಲ ಸಂಪತ್ತನ್ನೂ ಆತ್ಮದ ಕ್ಷೇಮಕ್ಕಾಗಿ ವಿನಿಯೋಗಿಸಬೇಕು' ಎಂದಿರುವುದನ್ನು ಉಲ್ಲೇಖಿಸುತ್ತಾರೆ. 'ಯದ್ಭೂತ ಹಿತಮತ್ಯಂತಂ ತತ್ಸತ್ಯಮಿತಿಧಾರಣಾ' ಜೀವಗಳಿಗೆ ಯಾವುದು ಹಿತ, ಆ ವಸ್ತು ಸ್ಥಿತಿವಾಚನವೇ ಸತ್ಯ. ಇದರ

ಇನ್ನೊಂದು ರೂಪ ಹೇಳಿದ ಮಾತನ್ನು ನಡೆಯಿಸುವುದು. ಕನ್ನಡ ಜನಪದ ಸಾಹಿತ್ಯದಲ್ಲಿ ಪ್ರಸಿದ್ಧವಾಗಿರುವ ಗೋವಿನ ಕಥೆಯ ಪುಣ್ಯಕೋಟಿ ಭಾರತದ ಒಂದು ಆಖ್ಯಾನದ ನಾಯಕಿ ಎಂದು ಮಾಸ್ತಿ ಮಹಾಭಾರತದ ಸತ್ಯಸ್ವರೂಪ ದೊರೆತರೆ ಅದಕ್ಕೆ ಸ್ವಲ್ಪವೂ ಬೆಲೆಯಿಲ್ಲ ಎಂದು ಅಂತಸ್ಸಾಕ್ಷಿ ಮುಖ್ಯವೆಂದು ಭಾರತ ಹೇಳಿದೆ. ''ಮನುಷ್ಯನಿಗೆ ಧರ್ಮದಿಂದ, ಯಜ್ಞದಿಂದ, ವೇದಾಧ್ಯಯನದಿಂದ, ಶಾಸ್ತ್ರಾಭ್ಯಾಸದಿಂದ ದೊರೆಯಬಹುದಾದ ಎಲ್ಲ ಫಲ ಕ್ಷಮೆ ಒಂದರಿಂದ ಕೈಸೇರುತ್ತದೆ.' ಕ್ಷಮೆಯಿಂದಲೇ ಮನುಷ್ಯನು ಬ್ರಹ್ಮದಲ್ಲಿ ನಿಲ್ಲುವುದು.'' ತ್ಯಾಗ ಸುಖವನ್ನು ಕೊಡುತ್ತದೆ. 'ಸುಖಾನಾಂ ತುಷ್ಟಿ ರುತ್ತಮಾ'. ತನ್ನ ಹೆಂಡಿರನ್ನು ಹೊರತು ಬೇರೆ ಹೆಂಗಸನ್ನು ಕಾಮಿಸದ ಗೃಹಸ್ಥನು ಬ್ರಹ್ಮಚಾರಿ ಎಂದು ಬ್ರಹ್ಮಚರ್ಯದಲ್ಲಿ ಹೇಳುತ್ತದೆ. ಮನುಷ್ಯನು ಹಣಕ್ಕಿಂತ ನಡತೆಯನ್ನು ಹೆಚ್ಚು ಎಚ್ಚರದಿಂದ ಕಾದುಕೊಳ್ಳಬೇಕು; ಹಣ ಬರುತ್ತದೆ ಹೋಗುತ್ತದೆ; ಹೋದ ನಡತೆ ಬರುವುದಿಲ್ಲ ಎನ್ನುತ್ತದೆ ಭಾರತ.

''ಒಬ್ಬ ಮನುಷ್ಯನ ಆಯುಸ್ಸನ್ನು ಅವನ ಅತಿಮಾನ ಅತಿವಾದ ಅತ್ಯಾಗ ಕ್ರೋಧ, ಆತ್ಮವಿಧಿತ್ಸಾ, ಮಿತ್ರದ್ರೋಹ ಈ ಆರು ತೀಕ್ಷ್ಣವಾದ ಚೂರಿಗಳು ಕತ್ತರಿಸುತ್ತವೆ; ಮನುಷ್ಯರನ್ನು ಕೊಲ್ಲುವವು ಇವೇ, ಮೃತ್ಯು ಅಲ್ಲ.''

ಮುಂದೆ 'ಸಮಾಜ ಧರ್ಮವೇನು ಎಂದು ಹೇಳಿದ್ದಾರೆ. ಸಮಾಧಾನ, ದಾನ, ನಿಯಮ ಪರಿಪಾಲನ, ಸಾಕ್ಷಿ ಪ್ರಾಮಾಣ್ಯ, ದಾಕ್ಷಿಣ್ಯ, ವಿನಯ, ಉದಾತ್ತವರ್ತನೆ, ಅವರ ಪೂಜನ - ಇವು ಸಮಾಜ ಸರಿಯಾಗಿ ನಡೆಯಲು ಅವಶ್ಯಕ ಎಂದು ಮಹಾಭಾರತ ಹೇಳುತ್ತದೆ.

'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬುದರ ನಿಜವಾದ ಅರ್ಥವನ್ನು ಮಾಸ್ತಿಯವರು ವಿವರಿಸಿದ್ದಾರೆ: ''ಇಲ್ಲಿ 'ಸ್ವಾತಂತ್ರ್ಯ' ಶಬ್ದದ ಅರ್ಥ ತನ್ನ ಪಾಡನ್ನು ತಾನು ನೋಡಿಕೊಳ್ಳುವುದು ಎನ್ನುವುದು. 'ಅರ್ಹತಿ' ತರವಾದದ್ದು ಎಂಬ ಅರ್ಥದಲ್ಲಿ ಇಲ್ಲಿ ಬಂದಿದೆ. . .ಎಂದರೆ ಸ್ತ್ರೀಯಾದವಳು ತನ್ನ ಪಾಡನ್ನು ತಾನು ನೋಡಿಕೊಳ್ಳುವಂತೆ ಬಿಡುವುದು ಯೋಗ್ಯವಲ್ಲ ಎಂದು.''

ಮದುವೆಯ ವಿಚಾರವಾಗಿ ಮಹಾಭಾರತ ಹೀಗೆನ್ನುತ್ತದೆ: ''ಹೇಗೇ ಆದರೂ ಗಂಡು ಹೆಣ್ಣಿನ ಸಂಬಂಧ ಒಂದುಸಲ ನಡೆಯಿತೆಂದರೆ ಅದನ್ನು ಇಬ್ಬರೂ ಜೀವಾವಧಿಯ ಸಂಬಂಧವಾಗಿ ನಡೆಸಿಕೊಳ್ಳುವುದೇ ಧರ್ಮ.''

ರಾಷ್ಟ್ರದ ಬಗೆಗೆ ಮಹಾಭಾರತ ಹೀಗೆ ಹೇಳುತ್ತದೆ: ''ಒಳ್ಳೆಯ ರಾಜ್ಯದಲ್ಲಿ ಅಧಿಕಾರಿಗಳ ಸಂಖ್ಯೆ ಬಹಳವಾಗಬಾರದು!''

ಪ್ರಜೆಗಳನ್ನು ಕುರಿತು ಹೀಗೆನ್ನುತ್ತದೆ: ''ಅಧರ್ಮಿಗಳು ಸುಖವಾಗಿರುತ್ತ ಧರ್ಮಿಷ್ಠರು ಕಷ್ಟಕ್ಕೆ ಸಿಕ್ಕಿ ತೊಳಲುತ್ತ ಇರುವುದನ್ನು ನೋಡಿ ಜನಜನವೇ ದಾರಿ ತಪ್ಪುತ್ತದೆ!''

''ರಾಷ್ಟ್ರಜೀವನ ಕ್ಷೇಮದಿಂದ ನಡೆಯಬೇಕಾದರೆ ಒಬ್ಬ ನಾಯಕನಿರಬೇಕು, ಒಂದು ಮಂತ್ರವಿರಬೇಕು.''- ಈ ಮಾತುಗಳೆಲ್ಲ ಇಂದಿನ ಯುಗಕ್ಕೆ ಹೋಲಿಸಿ ಕೊಂಡಾಗ, ಲೋಕದ ಅಶಾಂತಿಯನ್ನು ಪರಿಭಾವಿಸಿದಾಗ ಎಷ್ಟೊಂದು ಸತ್ಯ ಎನ್ನಿಸುವುದು.

೪

ಮಹಾಭಾರತದ ಕಟ್ಟಕಡೆಯಲ್ಲಿ ವ್ಯಾಸಮಹರ್ಷಿ ಹೀಗೆ ಸಮಾಪ್ತಿ ಹಾಡಿದ್ದಾನೆ:

ಊರ್ಧ್ವ ಬಾಹುಃ ವಿರೋಮ್ಯೇಷ ನತು ಕಶ್ಚಿತ್ ಶ್ರುಣೋತಿ ಮಾಂ:
ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ?॥
ನ ಜಾತು ಕಾಮಾತ್ ನ ಭಯಾತ್ ನ ಲೋಭಾತ್
ನ ಧರ್ಮಂ ತ್ಯಜೇತ್ ಜೀವಿತಸ್ಯಾಪಿ ಹೇತೋಃ॥
ಧರ್ಮೋ ನಿತ್ಯಃ ಸುಖದುಃಖೇತ್ವನಿತ್ಯೇ
ಜೀವೋ ನಿತ್ಯಃ ಹೇತುರಸ್ಯಹ್ಯ ನಿತ್ಯಃ॥

''ಮನುಷ್ಯನ ಈಪ್ಸಿತಗಳಾದ ಅರ್ಥವೂ ಕಾಮವೂ ಧರ್ಮದಿಂದಲೇ ದೊರೆಯುತ್ತವೆ. ಹೀಗಿದ್ದರೂ ಮನುಷ್ಯರು ಏಕೆ ಧರ್ಮವನ್ನು ಮೀರುತ್ತೀರಿ? ಯಾವುದೋ ಒಂದು ಸುಖದ ಬಯಕೆಗಾಗಿ, ಏನನ್ನೋ ಕಳೆದುಕೊಂಡೆವೆಂಬ ಭೀತಿಗಾಗಿ, ಯಾವುದರ ವಿಷಯದಲ್ಲಿಯೋ ಮೋಹದಿಂದ ಧರ್ಮವನ್ನು ಬಿಡುವುದು ಬೇಡ; ಜೀವಿತಕ್ಕಾಗಿ ಕೂಡ ಧರ್ಮವನ್ನು ತ್ಯಜಿಸಲು ಸಲ್ಲದು. ಈ ಬಯಸುವ ಬಯಕೆಗಳು ಕಳೆದುಕೊಳ್ಳಬಾರದೆಂದು ಭದ್ರವಾಗಿ ಕಟ್ಟಿಕೊಂಡಿರುವ ಈ ಸಂಪತ್ತು, ಈ ಮೋಹ, ಇವೆಲ್ಲ ಎಷ್ಟೇ ರುಚಿಯಾದರೂ ಕೊಂಚಕಾಲದ ಸುಖವನ್ನು ಕೊಡತಕ್ಕವು. ಧರ್ಮ ನಿತ್ಯಸುಖಕ್ಕೆ ಕಾರಣ. ಜೀವಕ್ಕೆ ಎಂತೂ ಹಾನಿಯಲ್ಲ; ಆದರ ಹೇತು ಅನಿತ್ಯ. ಈ ಅನಿತ್ಯವಾದದ್ದು ಹೋದರೂ ನಿತ್ಯವಾದದ್ದು ಇದ್ದೇ ಇರುತ್ತದೆ.'' -ಎಂದು ವ್ಯಾಸಮಹರ್ಷಿ ಕೈಗಳನ್ನು ಮೇಲಕ್ಕೆತ್ತಿ ಲೋಕಕ್ಕೆ ಕೂಗಿ ಹೇಳಿದನಂತೆ; ಆದರೂ ಲೋಕ ನನ್ನ ಮಾತನ್ನು ಕೇಳುತ್ತಿಲ್ಲ ಎನ್ನುತ್ತಾನೆ.

ಕೃಷ್ಣ ದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಂ
ಕೋ ऽನ್ಯೋಹಿ ಭುವಿ ಮೈತ್ರೇಯ ಮಹಾಭಾರತ ಕೃತ್ ಭವೇತ್॥

ಕೃಷ್ಣನನ್ನು ಭಗವದವತಾರ ಎಂದು ಗುರುತಿಸಿ ಲೋಕಕ್ಕೆ ಹೊಗಳಿ ಹಾಡಿದ ಈ ಮಹನೀಯನನ್ನು ಲೋಕ ಕೃಷ್ಣದ್ವೈಪಾಯನ ಎಂದೇ ಕರೆಯಿತು. ಕನ್ನಡಕ್ಕೆ ಮಹಾಭಾರತತೀರ್ಥವನ್ನು ವಿತರಣೆ ಮಾಡಿದ ಮಾಸ್ತಿಯವರು ನಿಜವಾಗಿಯೂ ಮಹಾನುಭಾವರೆಂದು ನಮಗೆ ಗೋಚರಿಸುತ್ತಾರೆ.

''ಆರಂಭದ ಆಂಗ್ಲ ಸಾಹಿತ್ಯ'' ಮತ್ತು "ನಮ್ಮ ಸಾಹಿತ್ಯದ ಆರಂಭ''

ಎಚ್.ಎಸ್.ರಾಘವೇಂದ್ರ ರಾವ್

ಆಧುನಿಕ ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಮೊದಮೊದಲ ಬರವಣಿಗೆ ನಡೆಸಿದ ಮಾಸ್ತಿಯವರು ಅನ್ಯಸಾಹಿತ್ಯ ಪರಿಚಯ ಮತ್ತು ಕನ್ನಡ ಸಾಹಿತ್ಯ ಚರಿತ್ರೆಯ ಕ್ಷೇತ್ರದಲ್ಲಿ ನಡೆಸಿದ ಎರಡು ಪ್ರಯತ್ನಗಳನ್ನು ಪುಸ್ತಕರೂಪದಲ್ಲಿ ಹೊರತಂದಿದ್ದಾರೆ. ಇವುಗಳಲ್ಲಿ ಮೊದಲನೆಯದು 'ಆರಂಭದ ಆಂಗ್ಲ ಸಾಹಿತ್ಯ' ಮತ್ತು ಎರಡನೆಯದು 'ನಮ್ಮ ಹೊಸ ಸಾಹಿತ್ಯದ ಆರಂಭ'. ೧೯೨೭ರಷ್ಟು ಹಿಂದೆಯೇ ರಚಿತವಾದ ಈ ಕೃತಿಗಳು ಪುಸ್ತಕರೂಪದಲ್ಲಿ ಪ್ರಕಟವಾಗಿರುವುದು ೧೯೪೮ ರಲ್ಲಿ. ಮೊದಲ ಪುಸ್ತಕದಲ್ಲಿ ಅಡಕವಾಗಿರುವ ಲೇಖನಗಳು ಮೂವತ್ತರ ದಶಕದ ಕೊನೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದರೆ, ಎರಡನೆಯ ಪುಸ್ತಕದ ಸಂಕ್ಷಿಪ್ತ ಇಂಗ್ಲಿಷ್ ರೂಪ ೧೯೩೧ ರಲ್ಲಿ ಮಾಸ್ತಿಯವರೇ ಸಿದ್ಧಪಡಿಸಿದ 'ಸೆನ್ಸಸ್ ರಿಪೋರ್ಟ್' ನಲ್ಲಿ ಪ್ರಕಟವಾಗಿತ್ತು. ಎರಡೂ ಪುಸ್ತಕಗಳ ಕೊನೆಯಲ್ಲಿ ಲೇಖಕರು ಹೊಸದೊಂದು ಅಧ್ಯಾಯವನ್ನು ಸೇರಿಸಿ, ತಮ್ಮದೇ ಬರವಣಿಗೆಯ ಪುನರವಲೋಕನ ಹಾಗೂ ಮುಂದುವರಿಕೆಗಳಿಗೆ ಅವಕಾಶ ಮಾಡಿಕೊಂಡಿದ್ದಾರೆ.

ಮೇಲುನೋಟಕ್ಕೆ ಎರಡೂ ಕೃತಿಗಳು ಸಾಹಿತ್ಯಚರಿತ್ರೆಯಂತೆ ತೋರಿದರೂ ವಾಸ್ತವದಲ್ಲಿ ಅವುಗಳ ನಡುವೆ ಅಂತರವಿದೆ. ಒಂದರಲ್ಲಿ ಅವರು ಪ್ರೇಕ್ಷಕರಾದರೆ ಎರಡನೆಯದರಲ್ಲಿ ಪಾತ್ರಧಾರಿ. ಆರಂಭದ ಆಂಗ್ಲಸಾಹಿತ್ಯದ ಬಗೆಗೆ ಅವರು ಹೇಳುವ ಮಾತುಗಳು. ಆ ಭಾಷೆ-ಸಾಹಿತ್ಯಗಳ ನಿಷ್ಠಾವಂತ ಜಾಣ ವಿದ್ಯಾರ್ಥಿಯೊಬ್ಬನು, ತನಗೆ ಅಂದು ಲಭ್ಯವಿದ್ದ ಹಲವು ಮೂಲಗಳಿಂದ ಆಯ್ದುತೆಗೆದ ಮಾಹಿತಿಗಳ ಸಂಗ್ರಹ. ಆದರೆ ಮಾಸ್ತಿಯವರು ಹಲವು ಕಡೆ, ಆರಂಭ ಕಾಲದ ಇಂಗ್ಲಿಷ್ ಮತ್ತು ತಮ್ಮ ಬರವಣಿಗೆಯ ಕಾಲದ ಕನ್ನಡದ ಸ್ಥಿತಿ-ಗತಿಗಳನ್ನು ಹೋಲಿಸುವುದರ ಮುಖಾಂತರ ಮಹತ್ವದ ಒಳನೋಟಗಳನ್ನು ನೀಡುತ್ತಾರೆ. ಹೊಸಗನ್ನಡ ಸಾಹಿತ್ಯದ ಆರಂಭದ ಬಗ್ಗೆ ಬರೆಯುವಾಗ ಅವರ ವೈಯಕ್ತಿಕ ಗ್ರಹಿಕೆ ಮತ್ತು ಜವಾಬ್ದಾರಿಗಳು ಹೆಚ್ಚು ಮಹತ್ವಪೂರ್ಣವಾಗುತ್ತವೆ. ಏಕೆಂದರೆ ಅಲ್ಲಿ ಅವರು ನಿರೂಪಕರು ಮಾತ್ರ ಅಲ್ಲ; ತಮ್ಮ ಹಿರಿಯರು ಮತ್ತು ಗೆಳೆಯರು ಹಿಡಿದಿರುವ ಸಾಹಿತ್ಯಮಾರ್ಗದ ಸಮರ್ಥನೆಯನ್ನು ಮಾಡುವ, ಹಾಗೆ ಹಿಂದಿನ ಪರಂಪರೆಯನ್ನು ಖಂಡಿಸದೆ ಇರುವ ಹೊಣೆಗಾರಿಕೆಗಳು ಅವರದಾಗುತ್ತವೆ. ಸೃಜನಶೀಲ ಲೇಖಕರಾಗಿಯೂ ಅವರು ತೋರಿಸುವ ಪ್ರಬುದ್ಧತೆ

ಹಾಗೂ ಸಮತೋಲನದ ಧೋರಣೆಗಳು ಇಂಥ ಕಡೆ ಅವರ ನೆರವಿಗೆ ಬರುತ್ತದೆ. ಹೊಸಗನ್ನಡ ಸಾಹಿತ್ಯ ಸಿದ್ಧಿ ಹಾಗೂ ಸಾಧ್ಯತೆಗಳ ಬಗ್ಗೆ ಅವರು ಅಂದು ಹೇಳಿದ ಮಾತುಗಳನ್ನು ಮರುಪರಿಶೀಲನೆ ಮಾಡುವ ಅವಕಾಶ ಅವರಿಗೆ ದೊರೆತಂತೆಯೇ ನಮಗೆ ಸಿಗುತ್ತವೆ. ಪ್ರಸ್ತುತ ಲೇಖನದ ಮೊದಲ ಭಾಗದಲ್ಲಿ 'ಆರಂಭದ ಆಂಗ್ಲ ಸಾಹಿತ್ಯ' ಕೃತಿಯ ಪರಿಚಯ ಮಾಡಿಕೊಟ್ಟ ನಂತರ ಇನ್ನೊಂದು ಪುಸ್ತಕದ ಹೆಚ್ಚು ವಿವರವಾದ ಪರಿಶೀಲನೆ ನಡೆಸಲಾಗುವುದು.

ಹೊಸಗನ್ನಡದಲ್ಲಿ ಯಾವುದಾದರೊಂದು ವಿಷಯವನ್ನು ಕುರಿತು, ಸರಳವಾದ, ತರ್ಕಬದ್ಧವಾದ ಗದ್ಯದಲ್ಲಿ ಬರೆಯುವುದು ಅಂದಿನ ದಿನಗಳಲ್ಲಿ ಒಂದು ಸವಾಲು ಆಗಿತ್ತು. ಅಂಥ ಬರವಣಿಗೆಗೆ ಉಚಿತವಾದ ವಾಕ್ಯರಚನೆ, ಶಬ್ದಕೋಶಗಳನ್ನು ಕೂಡ ಇನ್ನೂ ರೂಢಿಸಿಕೊಳ್ಳಬೇಕಾಗಿತ್ತು. ಒಂದು ಕಡೆ ಆಡುಮಾತು ಮತ್ತು ಅತಿ ಗ್ರಾಂಥಿಕತೆಗಳ ನಡುವೆ ಇರುವ ದ್ವಂದ್ವವನ್ನು, ಇನ್ನೊಂದು ಕಡೆ ಹಲವು ಉಪಭಾಷೆಗಳ ವಲಯದಲ್ಲಿ ಗ್ರಾಹ್ಯವಾಗಬಹುದಾದ ಪ್ರಮಾಣಭಾಷೆಯೊಂದನ್ನು (Standard Language) ರೂಪಿಸುವ ಸಮಸ್ಯೆಯನ್ನು ಅವರು ಎದುರಿಸಬೇಕಾಗಿತ್ತು. ಎಷ್ಟೋ ವರ್ಷಗಳ ಹಿಂದೆಯೇ ಬರೆದ ಈ ಕೃತಿಯನ್ನು ಪ್ರಕಟಿಸಬೇಕೋ ಬಾರದೋ ಎಂಬ ಪ್ರಶ್ನೆಯನ್ನು ಅವರು ಅಂದೇ ಕೇಳಿಕೊಳ್ಳುತ್ತಾರೆ:

''ನಮ್ಮ ಸಾಹಿತ್ಯವನ್ನು ಕುರಿತು ಎಂಥದೂ ಒಂದು ಚರಿತ್ರೆ ಇನ್ನೂ ಬಂದಿಲ್ಲ. ಅದರ ಚರಿತ್ರೆ ಒಂದನ್ನು ಬರೆಯದೆ ಇಂಗ್ಲಿಷ್ ಸಾಹಿತ್ಯದ ಚರಿತ್ರೆ ಒಂದನ್ನು ಬರೆಯುವುದು ಇದು ಏನು ಕೆಲಸ?''

ಹಾಗೆಯೇ ಈ ಬರವಣಿಗೆಯೂ ಇಂಗ್ಲಿಷ್ ತಿಳಿಯಲಾರದವರಿಗೋಸ್ಕರ ಬರೆದುದೆಂಬ ನಿಜವಾದ, ಇಂದಿಗೂ ಮೌಲಿಕವಾದ ಕಾರಣವನ್ನು ಅವರು ಕೊಡುತ್ತಾರೆ.

''ಆಂಗ್ಲಸಾಹಿತ್ಯದ ಚರಿತ್ರೆಯನ್ನು ಇಂಗ್ಲಿಷಿನಲ್ಲಿ ಓದಿರುವ, ಅಥವಾ ಓದಬಲ್ಲ ಸಾಹಿತ್ಯಪ್ರೇಮಿಗಳಿಗೆ ಈ ಲೇಖನಗಳಿಂದ ಆಗಬೇಕಾದ್ದೇನೂ ಇಲ್ಲ. ಇಂಥವರಲ್ಲದ ನನ್ನ ಕನ್ನಡ ಸೋದರರಿಗೆ ಈ ವಿಷಯದಲ್ಲಿ ಕೆಲವು ಸಂಗತಿ ತಿಳಿದಿರಲಿ ಎಂಬ ಅಪೇಕ್ಷೆಯಿಂದ ಮಾತ್ರ ಈ ಪುಸ್ತಕವನ್ನು ಪ್ರಕಟಿಸುತ್ತಿದ್ದೇನೆ.''

ಹಾಗೆ ನೋಡಿದರೆ ವಿಜ್ಞಾನ ಮತ್ತು ಪರಿಸರಗಳನ್ನು ಕುರಿತಂತೆ ಶ್ರೀ ಪೂರ್ಣಚಂದ್ರ ತೇಜಸ್ವಿಯವರು ಇಂದು ಮಾಡುತ್ತಿರುವಂಥ ಮಹತ್ವದ ಕೆಲಸವನ್ನು ಮಾಸ್ತಿಯವರು ಹಾಗೂ ಅವರಂಥ ಕೆಲವು ಹಿರಿಯರು ಬೇರೆಬೇರೆ ಕ್ಷೇತ್ರಗಳಲ್ಲಿ ಅಂದು ಮಾಡಿದರು. ನಮ್ಮ ಕುತೂಹಲವನ್ನು ಕೆರಳಿಸಬಹುದಾದ, ಮೆಚ್ಚಿಗೆ, ಗೌರವಗಳನ್ನು ಮೂಡಿಸಬೇಕಾದ ಸಂಗತಿಯೆಂದರೆ, ಆರಂಭದ ಆಂಗ್ಲಸಾಹಿತ್ಯವನ್ನು ಕುರಿತ, ಇಂಥ ಇನ್ನೊಂದು ಪುಸ್ತಕ ಕನ್ನಡದಲ್ಲಿ ಅರವತ್ತು ವರ್ಷಗಳ ನಂತರವೂ ಬಂದಿಲ್ಲವೆನ್ನುವುದು.

ಮುಖ್ಯವಾಗಿ ಈ ಕೃತಿಯು ಐದು ಬಿಡಿಲೇಖನಗಳು ಹಾಗೂ ಒಂದು ಸಮಾರೋಪವನ್ನು ಒಳಗೊಂಡಿದೆ. 'ಆಂಗ್ಲೇಯರ ಪ್ರಾಚೀನ ಸಾಹಿತ್ಯ'. 'ಮಧ್ಯ ಇಂಗ್ಲಿಷ್ ಸಾಹಿತ್ಯ' 'ಆಂಗ್ಲೇಯ ನಾಟಕದ ಪೂರ್ವ ಚರಿತ್ರೆ' 'ಆಂಗ್ಲೇಯ ಗದ್ಯದ ಆರಂಭ ಚರಿತ್ರೆ' ಮತ್ತು 'ಇಂಗ್ಲಿಷ್ ನಾವಲಿನ ಬೆಳವಣಿಗೆ ' ಎಂಬುವು ಐದು ಲೇಖನಗಳು. ಎಲ್ಲ ಸಂದರ್ಭಗಳಲ್ಲೂ ನಿಶ್ಚಿತವಾದ ಕಾಲಖಂಡವನ್ನು ಗಮನದಲ್ಲಿಟ್ಟುಕೊಂಡು, ಆಯಾ

ಕಾಲದಲ್ಲಿನ ಬೇರೆಬೇರೆ ಸಾಹಿತ್ಯ ಪ್ರಕಾರಗಳ ಪರಿಚಯ ಮಾಡಿಕೊಳ್ಳುವುದು ಸಹಜವಾಗಿಯೇ ಸಾಧ್ಯವಾಗಿಲ್ಲ. ಎಂದರೆ ಇಂಗ್ಲಿಷ್ ನಾಟಕಗಳ ಆರಂಭದ ಬಗ್ಗೆ ಬರೆಯಬೇಕಾದಾಗ, ಹದಿನಾರನೆಯ ಶತಮಾನದ ಷೇಕ್ಸ್‌ಪಿಯರ್‌ನ ಪ್ರಸ್ತಾಪವನ್ನು ಮಾಡದೆ, ಕಾದಂಬರಿಯ ಉಗಮದ ಬಗ್ಗೆ ಬರೆಯುವಾಗ ಹತ್ತೊಂಬತ್ತನೆಯ ಶತಮಾನದ ವಾಲ್ಟರ್‌ಸ್ಕಾಟನ ಕೃತಿಗಳನ್ನು ಕುರಿತು ಬರೆಯಲಾಗಿದೆ. ಎಂದರೆ ಇಲ್ಲಿ ಪ್ರತಿಯೊಂದು ಸಾಹಿತ್ಯ ರೂಪವನ್ನೂ ಪ್ರತ್ಯೇಕವಾಗಿ ಪರಿಶೀಲಿಸಿ ಅದರದರ ಪ್ರಾರಂಭದ ಹಂತವನ್ನು ಪರಿಚಯಿಸಲಾಗಿದೆ. ಕುತೂಹಲದ ಸಂಗತಿಯೆಂದರೆ ಮಾಸ್ತಿಯವರಿಗೆ ಪರಮಪ್ರಿಯವಾದ, ಅವರ ವಿಶೇಷ ಗಮನವನ್ನು ಪಡೆದಿರಬೇಕಾದ ಸಣ್ಣಕಥೆಯ ಉಗಮವನ್ನು ಕುರಿತ ಲೇಖನ ಇಲ್ಲಿ ಗೈರುಹಾಜರಾಗಿರುವುದು. ಬೇರೆಬೇರೆ ಪ್ರಕಾರಗಳ ಹಿನ್ನೆಲೆಯಲ್ಲಿ ಸಾಹಿತ್ಯಚರಿತ್ರೆಯನ್ನು ರೂಪಿಸುವ ಇಂಥದೊಂದು ಪ್ರಯತ್ನ ಅಂದಿನ ಸಂದರ್ಭದಲ್ಲಿ ಹೊಸದು.

ಜನಾಂಗದ ಇತಿಹಾಸ, ಭಾಷೆಯ ಇತಿಹಾಸ ಮತ್ತು ಸಾಹಿತ್ಯದ ಇತಿಹಾಸಗಳು ಪರಸ್ಪರ ಓತಪ್ರೋತವಾಗಿ ಬೆರೆತಿರಬಹುದೆಂಬ ತಿಳುವಳಿಕೆ ಮಾಸ್ತಿಯವರಿಗೆ ಸ್ಪಷ್ಟವಾಗಿದೆ. ಆದ್ದರಿಂದಲೇ, ಶಿಲಾಯುಗದ ನಿವಾಸಿಗಳು , ಕೆಲ್ಟರು, ಆಂಗ್ಲೋಸ್ಯಾಕ್ಸನ್ನರು, ನಾರ್ಮನ್ನರ ಭಾಷೆಯಾದ ಫ್ರೆಂಚಿನೊಂದಿಗೆ ಅವರಿಗಾದ ಸಂಪರ್ಕ ಮುಂತಾದ ಸಂಗತಿಗಳ ವಿವರವಾದ ಪರಿಚಯವಿದೆ.

'ಕ್ರೈಸ್ತಕಾವ್ಯ' ಮತ್ತು 'ಕ್ರೈಸ್ತವಲ್ಲದ ಕಾವ್ಯ', 'ಹಾಡುವ ಕವಿತೆಗಳು' ಮತ್ತು 'ಹಾಡಲಾರದ ಕವಿತೆಗಳು' ಮುಂತಾದವನ್ನು ಕುರಿತು ಬರೆಯುವಾಗ, ಹಿನ್ನೆಲೆಯಲ್ಲಿ ಅವರ ಕನ್ನಡ ಸಾಹಿತ್ಯವನ್ನು ಕುರಿತು ಚಿಂತಿಸುತ್ತಿರುತ್ತಾರೆ. ಮಾಸ್ತಿಯವರ ಬರವಣಿಗೆಯಲ್ಲಿ ಹಲವು ಬಾರಿ ಆಗುವಂತೆ ಒಳನೋಟಗಳು ಮತ್ತು ಮಾಹಿತಿಗಳು ಪರಸ್ಪರ ಸೇರಿಕೊಂಡು ಬರುವುದರಿಂದ ಯಾವುದು ಎಲ್ಲಿದೆ ಎಂದು ಹುಡುಕಿತೆಗೆಯುವುದು ಕಷ್ಟವಾಗಬಹುದು. ಆದ್ದರಿಂದಲೇ ಪ್ರತಿಯೊಂದು ಲೇಖನದ ಬಗ್ಗೆಯೂ ಪ್ರಾಥಮಿಕ ಪರಿಚಯ ಮಾಡಿಕೊಡದೆ ಎಲ್ಲದರ ಹಿಂದೆಯೂ ಇರುವ ಒಳನೋಟಗಳು ಹಾಗೂ ವಿಧಾನದ ಅನನ್ಯತೆಗಳನ್ನು ಸಂಗ್ರಹವಾಗಿ ಹೇಳಲಾಗಿದೆ.

1. ಪ್ರತಿಯೊಂದು ಸಂದರ್ಭದಲ್ಲಿಯೂ ಅವರ ಗಮನವಿರುವುದು ಆಯ ಪ್ರಕಾರದ ವಿಶಿಷ್ಟತೆ ಹಾಗೂ ಅದಕ್ಕೆ ಅನುಗುಣವಾದ ವಿಕಸನ ಕ್ರಮದ ಕಡೆಗೇ ಹೊರತು ಪ್ರತ್ಯೇಕ ಲೇಖಕರ ಸಾಧನೆಯ ಕಡೆಗೆ ಅಲ್ಲ. ಉದಾಹರಣೆಗೆ ನಾಟಕದ ಬಗ್ಗೆ ಬರೆಯುವಾಗ ಅದೊಂದು 'ದೃಶ್ಯಮಾಧ್ಯಮ' ಎಂಬ ಅಂಶವನ್ನು ಅವರು ಯಾವಾಗಲು ಮರೆಯುವುದಿಲ್ಲ. ಕಂಪನಿಗಳ ಇತಿಹಾಸ, ನಾಟಕವನ್ನು ಆಡುತ್ತಿದ್ದ ರೀತಿ ರಂಗಭೂಮಿಯ ರಚನೆ, ಅದರ ಭಾಷೆಯ ಸ್ವರೂಪ, ಗದ್ಯ-ಪದ್ಯ ಸಂಗೀತಗಳ ಸಂಮಿಶ್ರಣ, ನಟರು ತಮ್ಮ ಕುಶಲತೆಯನ್ನು ತೋರಿಸುತ್ತಿದ್ದ ಬಗ್ಗೆ - ಮುಂತಾದ ವಿವರಗಳನ್ನೇ ದಾಖಲೆ ಮಾಡುತ್ತಾರೆ. ಹಾಗೆಯೇ ಕಾದಂಬರಿಯನ್ನು ಕುರಿತು ಬರೆಯುವಾಗಲೂ. ಅದು ಹೇಗೆ ನಾಟಕಕ್ಕಿಂತ ಅಥವಾ ಇತರ ಗದ್ಯಕ್ಕಿಂತ ಬೇರೆ ಎಂಬುದನ್ನು ಒತ್ತುಕೊಟ್ಟು ಹೇಳುತ್ತಾರೆ. ಪ್ರತಿಯೊಬ್ಬ ಕಾದಂಬರಿಕಾರನೂ ಆ ಪ್ರಕಾರವನ್ನು ಬಳಸಿದ ರೀತಿಯ ಬಗ್ಗೆ ವಿವರಣೆಗಳು ಬರುತ್ತದೆ (ಆದರೆ ಅದೇಕೋ ರಂಗಭೂಮಿ ಮತ್ತು ನಾಟಕ ಪ್ರಕಾರಗಳನ್ನು

ಕುರಿತ ಈ ತಿಳಿವಳಿಕೆಯು ಮಾಸ್ತಿಯವರ ಸ್ವಂತ ನಾಟಕಗಳ ಗುಣದಲ್ಲಿ ಪ್ರತಿಫಲಿತವಾಗಿಲ್ಲ. ಪ್ರಾಯಶಃ ಶ್ರೀರಂಗ, ಕೈಲಾಸಂ ಅವರಂತೆ ಇಂಗ್ಲೆಂಡಿಗೆ ಹೋಗಿ ನಾಟಕಗಳನ್ನು ನೋಡುವ ಅವಕಾಶ ಸಿಗದೆ ಹೋಗಿದ್ದು ಇದಕ್ಕೆ ಕಾರಣವಿರಬಹುದು).

2. ಸಾಹಿತ್ಯಪ್ರಕಾರ ಮತ್ತು ಕೃತಿಗಳನ್ನು ಕುರಿತು ಮಾತನಾಡುವಾಗಲೂ ಅವುಗಳ ಹಿಂದಿನ ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳ ಕಡೆಗೆ ಅವರು ತಪ್ಪದೆ ಗಮನ ಕೊಡುತ್ತಾರೆ. ಇಲ್ಲಿನ ಜಾಣತನವೆಂದರೆ ಪರೋಕ್ಷವಾಗಿ ಭಾರತೀಯ ಸನ್ನಿವೇಶದ ಮೇಲೆಯೂ ಬೆಳಕು ಚೆಲ್ಲುವುದು. ಉದಾಹರಣೆಗೆ ಆಂಗ್ಲೋಸ್ಯಾಕ್ಸನ್ನರು ಮತ್ತು ನಾರ್ಮನ್ನರ ನಡುವಿನ ಹೋರಾಟದ ಫಲವಾಗಿ ಫ್ರೆಂಚ್, ಇಂಗ್ಲಿಷಿನ ಮೇಲೆ ಬೀರಿದ ದುಷ್ಪರಿಣಾಮವನ್ನು ಓದುವಾಗ, ಭಾರತೀಯ ಓದುಗರ ಮನಸ್ಸಿನಲ್ಲಿ ಅದೇ ಇಂಗ್ಲಿಷರು ಕಟಕಟೆಯಲ್ಲಿ ನಿಂತುಬಿಡುತ್ತಾರೆ. ಅವರ ಭಾಷಾಭಿಮಾನದ ಮಾತುಗಳು ಅವರಿಗೆ ತಿರುಗುಬಾಣವಾಗುತ್ತದೆ:

'ನಾರ್ಮನನಾದ ರಾಜನ ಭಾಷೆಯು ಫ್ರೆಂಚು ಭಾಷೆ. ಪಂಡಿತರಾದ ಮತೀಯರ ಭಾಷೆ, ಮತಭಾಷೆ ಲ್ಯಾಟಿನ್. ಇವುಗಳ ಮಧ್ಯ ಸಾಮಾನ್ಯ ಜನರ ಮಾತಾದ ಇಂಗ್ಲಿಷಿಗೆ ಅವಕಾಶವಿರಲಿಲ್ಲ'

''ತನ್ನ ಭಾಷೆಯನ್ನು ಬಿಟ್ಟು ಇತರ ಭಾಷೆಯನ್ನು ಅವಲಂಬಿಸಿರುವ ದೇಶವು ಇಂಗ್ಲೆಂಡ್ ಅಲ್ಲದೆ ಪ್ರಪಂಚದಲ್ಲಿ ಮತ್ತೊಂದಿರಲಾರದು''

ಈ ಮಾತುಗಳು ವಿವರಣೆಯನ್ನು ಬೇಡದಷ್ಟು ಸ್ಪಷ್ಟವಾಗಿವೆ. ಹೀಗೆಯೇ ಕ್ರೈಸ್ತಮತದ ಪ್ರಚಾರ, ಶಿಕ್ಷಣ ಪದ್ಧತಿಯಲ್ಲಾದ ಸುಧಾರಣೆ. ಮಹಿಳೆಯರ ಸ್ಥಾನಮಾನಗಳನ್ನು ಕುರಿತ ಆಲೋಚನೆಗಳು ಸಾಹಿತ್ಯಚರಿತ್ರೆಯ ಗತಿಯನ್ನು ನಿಯಂತ್ರಿಸಿದ ಬಗೆಯು ಸಮರ್ಥವಾಗಿ ನಿರೂಪಿತವಾಗದೆ.

3. ಸಾಹಿತ್ಯ ಕೃತಿಗಳಿಂದ, ಹಳೆಯ ಪದ್ಯಗಳಿಂದ ಆಯ್ದ ಭಾಗಗಳನ್ನು ಮಾಸ್ತಿಯವರೇ ಅನುವಾದಿಸಿದ್ದಾರೆ. ಅಂಥ ಕಡೆ ಅವರ ಸೃಜನಶೀಲ ಸಾಮರ್ಥ್ಯ ಹಾಗೂ ಪರಿಮಿತಿಗಳೆರಡೂ ಗೊತ್ತಾಗುತ್ತವೆ.

4. ಈ ಪುಸ್ತಕದ ಸಮಾರೋಪ ಎಂಬ ಭಾಗವನ್ನು ೧೯೭೮ ರಷ್ಟು ಈಚೆಗೆ ಬರೆದಿರುವುದರಿಂದ ಹಾಗೂ ಅದರಲ್ಲಿ 'ಫಲಶ್ರುತಿ'ಯ ಇಂಥ ಅಧ್ಯಯನ ಪ್ರಯೋಜನಗಳು ಲೇಖಕರೇ ಪಟ್ಟಿ ಮಾಡಿರುವುದರಿಂದ, ಅದು ಗಣನೀಯವಾಗಿದೆ.

ಅವರ ಪ್ರಕಾರ ಆ ಅಂಶಗಳು ಈ ರೀತಿ ಇವೆ:

ಅ) ಜನತೆ ಎಷ್ಟೋ ಆದಿಮ ಆದರೂ ಅದರದು ಒಂದು ಸಾಹಿತ್ಯ ಇರುತ್ತದೆ ಮತ್ತು ಆದಿಮ ಜನತೆಗಳ ಸಾಹಿತ್ಯ ತುಂಬ ಸರಳವಾಗಿರುತ್ತದೆ. (ಆಗ ಬೆಳಕಿಗೆ ಬರುತ್ತಿದ್ದ, ಸಾಹಿತ್ಯಾಸಕ್ತರ ಗಮನ ಸೆಳೆಯುತ್ತಿದ್ದ ಕನ್ನಡ ಜನಪದ ಸಾಹಿತ್ಯದ ಬಗೆಗೆ ಮಾಸ್ತಿಯವರು ಬೆಳೆಸಿಕೊಂಡ ಆರೋಗ್ಯಕರವಾದ ಧೋರಣೆಯ ಹಿನ್ನೆಲೆಯಲ್ಲಿ ಈ ಮಾತು ಮುಖ್ಯ:).

ಆ) ಭಾಷೆಯ ಕಾಲದಿಂದ ಕಾಲಕ್ಕೆ ಮಾರ್ಪಡುವ ಕ್ರಮದ ದಾಖಲೆಯಾಗಿ ಸಾಹಿತ್ಯವು ಕೆಲಸಮಾಡುತ್ತದೆ. ಆದರೆ ಇಂಗ್ಲಿಷ್ ಅನುಭವಿಸಿದಷ್ಟು ತೀವ್ರವಾದ ಸ್ಥಿತ್ಯಂತರಗಳನ್ನು ಕನ್ನಡ ಅನುಭವಿಸಿಲ್ಲ. (ಅವರು ಹೀಗೆನ್ನಲು 'ವಡ್ಡಾರಾಧನೆ'ಗಿಂತ ಹಿಂದಿನ ಕನ್ನಡದ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಸಿಗದಿರುವುದೇ ಕಾರಣವೆಂದು ತೋರುತ್ತದೆ.

'ಕನ್ನಡದಲ್ಲಂತೂ ನೃಪತುಂಗನ ಕನ್ನಡಕ್ಕೆ, ಕೃಷ್ಣರಾಜನ ಕನ್ನಡಕ್ಕೆ, ದಿಟದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಎರಡೂ ಒಂದೇ ಭಾಷೆಯ ಒಂದೇ ರೂಪ' ಎಂಬ ಮಾತಂತೂ ಮನನೀಯವೂ ಆಗಿದೆ)

ಇ) ಆದಿಮ ಜನಾಂಗಗಳ ಸಾಹಿತ್ಯದ ಬೆಳವಣಿಗೆ ಬಹಳ ಸಾವಧಾನವಾಗಿ ನಡೆಯುತ್ತದೆ. ಇಲ್ಲಿ ಹೊರದೇಶದ ಸಾಹಿತ್ಯದ ಅಭ್ಯಾಸ ಕವಿಯ ಸಹಜಶಕ್ತಿಗೆ ಪ್ರಚೋದಕವಾಗಿ, ಅವನ ಕಾವ್ಯಸೃಷ್ಟಿಗೆ ಕಾರಣವಾಗುತ್ತದೆ. (ಇಂಗ್ಲಿಷ್ ಭಾಷೆ, ಸಾಹಿತ್ಯಗಳ ಬಗೆಗಿನ ಮಾಸ್ತಿಯವರ ನಿಲುವು ಈ ಬಗೆಯದೇ.)

ಈ) ಸಾಹಿತ್ಯದಲ್ಲಿ ಸಹಜವಾದ ಅಭಿವೃದ್ಧಿ ಹೇಗೆ ಸಂಭವಿಸುತ್ತದೆ ಎನ್ನುವುದರ ಅರಿವು, ಸಾಹಿತ್ಯದ ಅರಿವು ಜನಜೀವನದಲ್ಲಿ ಆದ ಅಭಿವೃದ್ಧಿಯ ಪ್ರತಿಫಲನ ಮಾತ್ರ. ಅನಗತ್ಯವಾದುದರ ಅನುಕರಣೆ ಅಪಾಯಕಾರಿಯಾದುದು:

''ಬೇರೆ ಜನರ ಜೀವನದಲ್ಲಿ ಜ್ಞಾನದಲ್ಲಿ ಮೂಡಿದ ಮಾರ್ಪಾಡಿನಿಂದ ಅಲ್ಲಿ ಸಾಹಿತ್ಯಕ್ಕೆ ಒಂದು ರೂಪ ಬರಬಹುದು. ಆ ಕಾರಣದಿಂದ ಇನ್ನೊಂದು ಜನತೆ ಆ ರೂಪದ ಸಾಹಿತ್ಯವನ್ನು ಸೃಷ್ಟಿಸಲು ತೊಡಗಬಾರದು. ಈ ಜನತೆಯ ಲೇಖಕ ತನ್ನ ಜನತೆಯ ತಿಳಿವಿಗಾಗಿ, ಸಂತೋಷಕ್ಕಾಗಿ ಉದ್ಧಾರಕ್ಕಾಗಿ, ಈ ಜನತೆಯ ಧ್ವನಿಯಾಗಿ ಕೃತಿ ರಚಿಸಬೇಕು.'' (ಮಾಸ್ತಿಯವರ ಸ್ವಂತ ಬರವಣಿಗೆಯ ಮೂಲಮಂತ್ರದಂತಿರುವ ಈ ಮಾತುಗಳು, ನವ್ಯಸಾಹಿತ್ಯದ ಬಗ್ಗೆ ಅವರು ಬೆಳೆಸಿಕೊಂಡಿದ್ದ ಅಸಹನೆಯ ನೆಲೆಗೂ ಕಾರಣಕೊಡುತ್ತವೆ.)

ಆದರೆ ಎಲ್ಲೋ ಒಂದು ಕಡೆ, ಆಂಗ್ಲಸಾಹಿತ್ಯ ಹಾಗೂ ಕನ್ನಡ ಸಾಹಿತ್ಯ ಎರಡನ್ನೂ ಮಾಸ್ತಿಯವರು, ಇಂದಿಗೂ ವಸಾಹತುಶಾಹಿಯ ಸಂದರ್ಭದಲ್ಲಿ ಪರಕೀಯರು ನೀಡಿದ ದೃಷ್ಟಿಕೋನದಿಂದಲೇ ನೋಡುತ್ತಿರುವರೇನೋ ಎಂಬ ಅನುಮಾನಕ್ಕೂ ಅವಕಾಶ ದೊರೆಯುತ್ತದೆ. ಉದಾಹರಣೆಗೆ ೧೯೭೪ರಲ್ಲಿ ಅವರು ಹೇಳುವ ಈ ಮಾತುಗಳನ್ನು ಗಮನಿಸಿ:-

''ಪಂಪನ ಭಾರತದಲ್ಲಿ ದಿಟವಾದ ಉನ್ನತಿಯನ್ನು ಮುಟ್ಟಿದ ನಮ್ಮ ಸಾಹಿತ್ಯ ಆಮೇಲೆ ಬಹುಪಾಲು ಅನುವಾದ ಅನುಕರಣಗಳಲ್ಲಿ ತೊಡಗಿ, ಇಲ್ಲ ನಿಂತಲ್ಲಿ ನಿಂತಿತು, ಇಲ್ಲ ಹಿಂದಕ್ಕೆ ನಡೆಯಿತು. ಕ್ರಿ.ಶ. ೧೬೦೦ ರಿಂದ ೧೯೦೦ ಅಂತರದಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಕಾಣುವ ಮುಂಬರಿವಿನ ಹತ್ತರಲ್ಲಿ ಒಂದಂಶ ಕನ್ನಡ ಸಾಹಿತ್ಯದಲ್ಲಿ ೯೦೦ ರಿಂದ ೧೯೦೦ ಅಂತರದಲ್ಲಿ ಕಾಣುವುದಿಲ್ಲ'' (ಪುಟ 71)

ವಚನಕಾರರು, ಕುಮಾರವ್ಯಾಸರೂ ಸೇರಿದಂತೆ ಕನ್ನಡ ಸಾಹಿತ್ಯದ ನಿಕಟ ಪರಿಚಯವಿರುವ ಮಾಸ್ತಿಯವರು ಹೀಗೆ ಬರೆಯಬೇಕಾದರೆ ಸಾಕಷ್ಟು ಯೋಚನೆ ಮಾಡಿರಲೇಬೇಕು. ಅಥವಾ ೧೯೦೦-೭೪ರ ಅವಧಿಯಲ್ಲಿ ಆಗಿರುವ ಹೊಸಗನ್ನಡದ ಕೆಲಸ ನಿಜವಾಗಿಯೂ ಮಹತ್ವಪೂರ್ಣವೆಂಬ ಸ್ವಅಭಿಮಾನ ಇದಕ್ಕೆ ಕಾರಣವೋ?

ಹೀಗೆ ಹೇಳುವಾಗಲೂ ಪರಭಾಷೆ ಒಂದರ ಪ್ರಾಮುಖ್ಯದಿಂದ ದೇಶಭಾಷೆಗೆ ಒದಗಿದ ದುರ್ಗತಿಯನ್ನೂ ಇದೇ ಸಮಾರೋಪದಲ್ಲಿ ಮಾಸ್ತಿ ಹೆಸರಿಸುತ್ತಾರೆ. ಹೀಗೆ ಮೇಲುನೋಟಕ್ಕೆ ಪರಸ್ಪರ ವಿರೋಧವೆನ್ನಿಸುವ ಆ ಅನಿಸಿಕೆಗಳು, ವಾಸ್ತವದಲ್ಲಿ ತೀರ ಸಂಕೀರ್ಣವೂ, ವಸ್ತುಸ್ಥಿತಿಯಲ್ಲೇ ಅಡಗಿರುವ ಪರಸ್ಪರ ವಿರೋಧಗಳನ್ನು

ಒಳಗೊಳ್ಳುವಂಥದೂ ಆಗಿವೆ.

ಒಂದು ಅರ್ಥದಲ್ಲಿ ಈ ಮೊದನೆಯ ಪುಸ್ತಕವು ಹೊಸಗನ್ನಡ ಸಾಹಿತ್ಯದ ಆರಂಭವನ್ನು ಕುರಿತಾದ ಎರಡನೆಯ ಪುಸ್ತಕಕ್ಕೆ ಸೂಕ್ತ ಹಿನ್ನೆಲೆಯನ್ನು ಒದಗಿಸುತ್ತದೆ. ತಾತ್ವಿಕವಾಗಿ ಹಾಗೂ ಅವಲೋಕನ ವಿಧಾನದಲ್ಲಿ ಇಲ್ಲಿನ ಮಾದರಿಯೇ ಅಲ್ಲಿಯೂ ಬಳಕೆಯಾಗಿದೆ. ಆದರೆ ಅದು ಸುದೂರ ಇತಿಹಾಸವಲ್ಲ. ಹೆಚ್ಚುಕಡಿಮೆ ಸಮಕಾಲಿಕವಾದ ವಿವರಗಳನ್ನು ಆಧರಿಸಿ ಬರೆಯಲಾದ ಸಾಹಿತ್ಯ ತತ್ವ, ವಿಮರ್ಶೆ ಹಾಗೂ ಸಮೀಕ್ಷೆಗಳ ಅರ್ಥಪೂರ್ಣವಾದ ಸಂಯೋಜನೆ. ಅದರ ಪರಿಚಯವನ್ನು ಮುಂದಿನ ಭಾಗದಲ್ಲಿ ಮಾಡಿಕೊಡಲಾಗಿದೆ.

೨

ಹೊಸಗನ್ನಡ ಸಾಹಿತ್ಯದ ಆರಂಭವನ್ನು ಕುರಿತು, ಆ ಯುಗದ ಅತ್ಯಂತ ಸೃಜನಶೀಲರಾದ ಹಾಗೆಯೇ, ಅವರಿಗೆ ಸಹಜವಾದ ದೇಶ-ಕಾಲ ಸಂದರ್ಭ-ದೃಷ್ಟಿಕೋನಗಳ ಮಿತಿಯಿಂದ ಬದ್ಧರಾದ ಲೇಖಕರೊಬ್ಬರು ಬರೆದಾಗ, ಅಂಥ ಬರವಣಿಗೆಯು ಕುತೂಹಲಕಾರಿಯಾಗಿರುತ್ತದೆ. ನಮಗೆ ಇಂದು ಇರುವ ಹಿನ್ನೋಟದ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಅವರ ಬರವಣಿಗೆಯ ಮೇಲೆ ತೀರ್ಪು ಕೊಡಬಾರದು. ಆದರೆ ಸ್ವತಃ ಮಾಸ್ತಿಯವರು ತಾವು ೧೯೭೯ರಲ್ಲಿ ಬರೆದಿರುವ ಸುಮಾರು ಹತ್ತುಪುಟಗಳ ಸಮಾರೋಪದಲ್ಲಿ ಅಂಥ ಹಿನ್ನೋಟವನ್ನು ಉಪಯೋಗಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ, ತೀರ ಈಚೆಗೆ ಎಂದರೆ. ೧೯೬೦,೭೦ ರ ದಶಕದಲ್ಲಿ ಆದ ಪರಿವರ್ತನೆಯ ಬಗ್ಗೆ ಕೂಡ ತಮ್ಮ ಅನಿಸಿಕೆಗಳನ್ನು ಹೇಳಿದ್ದಾರೆ. ಗ್ರಂಥದ ವಿಮರ್ಶಾತ್ಮಕ ಪರಿಶೀಲನೆಗೆ ಮೊದಲು ಅದರ ಸ್ವರೂಪವನ್ನು ಸಂಗ್ರಹವಾಗಿ ತಿಳಿಸುವುದು ಸೂಕ್ತ.

ಹದಿನಾಲ್ಕನೆಯ ಅಧ್ಯಾಯವು ಈಚೆಗೆ ಬರೆದ ಸಮಾರೋಪವಾದರೆ, ಹದಿಮೂರನೆಯದು, ೧೯೩೧ ರಲ್ಲಿ ಬರೆದ ಸಮಾರೋಪ. ಉಳಿದ ಹನ್ನೆರಡು ಅಧ್ಯಾಯಗಳಲ್ಲಿ, ಆಧುನಿಕ ಕ್ರಮವಾಗಿ ಶೈಕ್ಷಣಿಕ ಹಿನ್ನೆಲೆ, ಸಮಗ್ರ ಕನ್ನಡ ಸಾಹಿತ್ಯಕ್ಕೆ ಆದ ನಾಂದಿ, ಕಾವ್ಯ, (ಎರಡು ಅಧ್ಯಾಯಗಳು) ಛಂದಸ್ಸು, ಗದ್ಯ ಸಾಹಿತ್ಯ, (ಕಥೆ, ಕಾದಂಬರಿಗಳೂ ಸೇರಿದಂತೆ) ನಾಟಕ, ವೃತ್ತ ಪತ್ರಿಕೆಗಳು, ಸಾಹಿತ್ಯ ಸಂಶೋಧನೆ, ಭಾಷಣ ಕಲೆ, ಗಮಕ ಮತ್ತು ಭಾಷಶೈಲಿಗಳನ್ನು ಕುರಿತ ವಿವೇಚನೆಯಿದೆ. ಪರಿವಿಡಿಯಿಂದಲೇ ಸ್ಪಷ್ಟವಾಗುವಂತೆ ಕೆಲವು ಅಧ್ಯಾಯಗಳು ತಾತ್ವಿಕವಾದರೆ ಬೇರೆ ಕೆಲವು ಸಮೀಕ್ಷೆಯ ಸ್ವರೂಪವನ್ನು ತಳೆದಿವೆ. ಬರೆಯುವಾಗ ತನಗಿರುವ ಮಾಹಿತಿಗಳ ಅಲಭ್ಯತೆ, ಅತಿ ಸಾಮೀಪ್ಯದಿಂದ ಉಂಟಾಗಬಹುದಾದ ಅಪಾಯಗಳ ತಿಳಿವಳಿಕೆ ಅವರಿಗಿದೆ. ತನ್ನ ಪುಸ್ತಕವು ವಿವರವಾದ ಆಧುನಿಕ ಸಾಹಿತ್ಯಚರಿತ್ರೆಯೊಂದರ ಕೊನೆಯ ಅಧ್ಯಾಯವಾಗಬಹುದು ಎಂದು ಅವರೇ ಹೇಳಿಬಿಡುತ್ತಾರೆ, ಉಪನ್ಯಾಸವೊಂದರ ಸಂದರ್ಭದಲ್ಲಿ. ಆ ಮಾತು ಸಮರ್ಥನೀಯವೂ ಹೌದು. ಮಾಸ್ತಿಯವರು ಎಂದಿನಂತೆ ಒಂದು ವಿಷಯದ ಪರ-ವಿರೋಧಗಳೆರಡನ್ನೂ ತಮ್ಮ ಗ್ರಹಿಕೆಯ ಮಿತಿಗಳೊಳಗೆ ನಿರ್ಲಿಪ್ತವಾಗಿ ಪರಿಶೀಲಿಸಿ ಬರೆಯುವುದರಿಂದ ಅವರೊಂದಿಗೆ, ಆ ಹಂತದಲ್ಲಿ ಚರ್ಚೆ ತೆಗೆಯುವುದು ಕಷ್ಟ.

ವಿವಾದಗಳೇನಿದ್ದರೂ ಅವರ ಗ್ರಹಿಕೆ, ಸಂವೇದನೆಗಳ ಮಿತಿಯನ್ನು ಕುರಿತಂತೆಯೇ ಇರುತ್ತವೆ.

ಇಂಥ ಯಾವುದೇ ಬರವಣಿಗೆಗೆ ಸಹಜವಾದ ಕೆಲವು ಮಿತಿಗಳೊಳಗೆ ಕೆಲವು ಮಹತ್ವದ ಒಳನೋಟಗಳನ್ನು ಈ ಕೃತಿಯು ನೀಡುತ್ತದೆ. ಸಾಹಿತ್ಯದ ಹಿನ್ನೆಲೆ ಹಾಗೂ ಸಾಮಾಜಿಕ ಸಂದರ್ಭಗಳೆರಡರ ದೃಷ್ಟಿಯಿಂದಲೂ ಹಳೆಯ ಮೈಸೂರಿಗೆ ಹೆಚ್ಚಿನ ಮಹತ್ವ ದೊರೆತಿದೆ. ಆದ್ದರಿಂದಲೇ ಬ್ರಿಟಿಷರ ಆಡಳಿತ ಹಾಗೂ ಇಂಗ್ಲಿಷಿನ ದುಷ್ಪರಿಣಾಮವನ್ನು ಕುರಿತಂತೆ ಬಹು ಕಟುವೆನ್ನಬಹುದಾದ ಮಾತುಗಳು ಕೇಳಿಬರುವುದಿಲ್ಲ. ಉತ್ತರ ಕರ್ನಾಟಕ ಹಾಗೂ ಕರಾವಳಿಗಳು, ಪ್ರಮುಖರಾದ ಲೇಖಕರ ಹೆಸರುಗಳನ್ನು ಪ್ರಸ್ತಾಪಿಸುವುದಕ್ಕಾಗಿ ಮಾತ್ರ ಬರುತ್ತವೆ. ಆದರಾಚೆಗಿನ ಅವುಗಳ ವಾಸ್ತವತೆಗೆ ಗಮನ ದೊರೆತಿಲ್ಲ. 'ಹಕ್ಕಿಹಾರುತಿದೆ ನೋಡಿದಿರಾ', 'ಸುಗ್ಗಿಬರುತಿದೆ', 'ಇಂಗ್ಲಿಷ್ ಗೀತೆಗಳು' ಮುಂತಾದ ಕೆಲವು ಅಪವಾದಗಳನ್ನು ಬಿಟ್ಟರೆ ನಿದರ್ಶನಗಳಿಗಿಂತಲೂ ತೀರ್ಮಾನಗಳಿಗೆ, ವಿವರಗಳಿಗಿಂತಲೂ ಸೂತ್ರರೂಪದ ಮಾತುಗಳಿಗೆ ಮಹತ್ವಕೊಟ್ಟಿರುವುದು ಈ ಬರಹದ ಸಾಮಾನ್ಯ, ಅನಿವಾರ್ಯ ಲಕ್ಷಣ. ಆದರೆ ತೀರ್ಮಾನಗಳ ಹಿಂದೆ ವಿಸ್ತೃತವಾದ ಅಧ್ಯಯನ ಇರುವುದರಿಂದ ಒಟ್ಟು ಬರವಣಿಗೆಗೆ ಬೆಲೆ ಬಂದಿದೆ.

ಹೊಸದರ ಅಗತ್ಯವನ್ನು ಎತ್ತಿ ಹಿಡಿಯುತ್ತಲೇ, ಪರಂಪರೆಯೊಂದಿಗಿನ ಸಂಬಂಧವನ್ನು ಕಡಿದುಕೊಳ್ಳದೆ ಇರುವುದು ಮಾಸ್ತಿಯವರ ಮನೋಧರ್ಮದ ಪ್ರಧಾನ ನೆಲೆ. ಆದರೆ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಹೊಸ ಪ್ರಯೋಗಗಳನ್ನು ಮಾಡಿ, ಕನ್ನಡ ಸಾಹಿತ್ಯಕ್ಕೆ 'ಹೊಸಹುಟ್ಟು' ನೀಡುವ ಕೆಲಸದಲ್ಲಿ ತಮ್ಮ ಸಂಗಡಿಗರೊಂದಿಗೆ ತೊಡಗಿದ್ದ ಅವರು ಸ್ವ-ಮಾರ್ಗದ ಸಮರ್ಥನೆಯನ್ನು ಮಾಡಿಕೊಳ್ಳುವುದು ಅನಿವಾರ್ಯವಾಗಿತ್ತು. ಆದ್ದರಿಂದಲೇ ಮಾಸ್ತಿಯವರು ಒಟ್ಟು ಭಾರತೀಯ ಸಂಸ್ಕೃತಿಯ ಧಾರ್ಮಿಕ/ಸಾಹಿತ್ಯಕ ಹಿನ್ನೆಲೆಗೆ ಕೊಡುವಷ್ಟು ಮಹತ್ವವನ್ನು ಅಥವಾ ಪಾಶ್ಚಾತ್ಯ ಲೇಖಕರ ಪ್ರಭಾವಕ್ಕೆ ನೀಡಿದ ಮಹತ್ವವನ್ನು, ಒಟ್ಟಂದದಲ್ಲಿ ಕನ್ನಡ ಸಾಹಿತ್ಯ ಕೃತಿಗಳ ಪರಂಪರೆಗೆ ನೀಡಿದಂತೆ ತೋರುವುದಿಲ್ಲ. ಅವರ ಬದುಕು ಮತ್ತು ಬರವಣಿಗೆಯಲ್ಲಿ ರಾಮಾಯಣ, ಮಹಾಭಾರತ, ಕಾಳಿದಾಸ, ಷೇಕ್ಸ್‌ಪಿಯರ್ ಮುಂತಾದವರು ವಹಿಸಿದ ಪಾತ್ರವನ್ನು ಗಮನಿಸಿದಾಗ ನನ್ನ ಮಾತು ಸ್ಪಷ್ಟವಾಗುತ್ತದೆ.

ಪ್ರತಿಯೊಬ್ಬ ಲೇಖಕರ ಕೃತಿಗಳ ಬಗ್ಗೆ ಮಾಸ್ತಿಯವರು ಕೊಟ್ಟಿರುವ ಸಂಕ್ಷಿಪ್ತ ಪರಿಚಯದ ಬಗ್ಗೆ ಹೆಚ್ಚಿಗೆ ಹೇಳುವುದು ಸಾಧ್ಯವಿಲ್ಲ. ಆದರೆ ಅಂಥ ಕಡೆ ಅವರು ತುಂಬಾ ಸೂಕ್ಷ್ಮವಾದ ಅನುಕಂಪದಿಂದ ಕೂಡಿದ ಒಳನೋಟಗಳನ್ನು ನೀಡುವರೆಂದು ಹೇಳಲೇಬೇಕು. ಉದಾಹರಣೆಗೆ, ಅ.ನ.ಕೃ. ಅವರನ್ನು ಕುರಿತು,

''ಶ್ರೀಯುತ ಎ.ಎನ್.ಕೃಷ್ಣರಾವ್ ಶಕ್ತರಾದ ಕತೆಗಾರರು. ಇವರು ಸಮಾಜದ ಸುಧಾರಣೆಯಲ್ಲಿ ಬಹಳ ಮನಸ್ಸುಳ್ಳವರು. ಕತೆಗಳಲ್ಲೆಲ್ಲ ಉದ್ದೇಶವನ್ನಿಟ್ಟು ಕೊಂಡಿರುತ್ತಾರೆಂದು ಕಾಣುತ್ತದೆ. ಉದ್ದೇಶ ಊಹೆಯ ಶಾಖದಲ್ಲಿ ಕರಗಿ ಕತೆಯಲ್ಲಿ ಸೇರಬೇಕಾಗಿದೆ' (ಪುಟ 27)

ಅಥವಾ ಕೈಲಾಸಂ ಬಗ್ಗೆ,

''ಇವರು ಬದುಕನ್ನು ಅರಿವಿನಿಂದ ನೋಡುತ್ತಾರೆ, ಆದ್ದರಿಂದ ಇವರಿಗೆ ಬದುಕಿನ ಎಲ್ಲ ಅಂಶಗಳೂ ಸ್ಪಷ್ಟವಾಗಿ ಕಾಣುತ್ತವೆ. ಉಳಿದವರಿಗೆ ಅಸ್ಫುಟವಾಗಿ ಕಾಣುವ

ವಿಷಯವನ್ನು ಇವರು ದೇಹಸಹಿತ ನೋಡುವುದಕ್ಕೆ ಯತ್ನಿಸುತ್ತಾರೆ. ಉಳಿದವರಿಗೆ ದೇಹವಾಗಿ ಕಾಣುವ ವಿಷಯವನ್ನು ಇವರು ಆತ್ಮದೊಂದಿಗೆ ನೋಡುವುದಕ್ಕೆ ಯತ್ನಿಸುತ್ತಾರೆ. ಇದರಿಂದ ಇತರರು ತಪ್ಪು ಮಾತ್ರವನ್ನು ನೋಡುವ ಕಡೆ ಇವರು ಆ, ತಪ್ಪನ್ನು ಬುಡರೆಂಬೆಕೊಂಬೆಗಳ ಸಹಿತ ನೋಡಿ ಮುನುಷ್ಯನ ಸ್ವಭಾವ ಹೀಗೆ ಎಂದು ಅರಿಯುತ್ತಾರೆ. ಆದ್ದರಿಂದ ಇವರಿಗೆ ಏನು ತಪ್ಪಿದರೂ ಸಮಾಧಾನ ತಪ್ಪುವುದಿಲ್ಲ. ಇದೇ ಕಾರಣದಿಂದ ಇವರಿಗೆ ಜನರ ವಿಷಯದಲ್ಲಿ ಆಕ್ರೋಶವಿರುವುದಿಲ್ಲ. ಆಕ್ರೋಶವೆನ್ನುವುದು ಬದುಕನ್ನು ಅರೆದೃಷ್ಟಿಯಿಂದ ನೋಡುವುದರ ಫಲ. ಕಣ್ಣನ್ನೂ ಮನಸ್ಸನ್ನೂ ಚೆನ್ನಾಗಿ ಬಿಟ್ಟು ನೋಡುವವರಿಗೆ ತಪ್ಪನ್ನು ನೋಡಿದಾಗ ಕೋಪ ಬರುವುದಿಲ್ಲ. ಕನಿಕರ ಉಂಟಾಗುತ್ತದೆ.''

(ಪುಟ 34)

ಹೀಗೆಯೇ ಹಲವು ನಿದರ್ಶನಗಳನ್ನು ಕೊಡಬಹುದು. ಕುತೂಹಲದ ಸಂಗತಿಯೆಂದರೆ ಕೈಲಾಸಂ ಬಗ್ಗೆ ಬರೆಯುವಾಗಲೂ ಒಟ್ಟು ಪ್ರಗತಿಶೀಲ ಸಾಹಿತ್ಯದ ಬಗೆಗಿನ ತಮ್ಮ ಆಕ್ಷೇಪಣೆಯನ್ನು ತಿಳಿಸುವುದಷ್ಟೇ ಅಲ್ಲ, ಸ್ವತಃ ತಮ್ಮ ಕತೆಗಳ ಹಿಂದಿನ ಮನೋಧರ್ಮವನ್ನು ನಿಚ್ಚಳವಾಗಿ ಸೂಚಿಸುತ್ತಾರೆ. ಅವರು ಕೈಲಾಸಂ ಅವರಲ್ಲಿ ಮೆಚ್ಚುವ ಗುಣಗಳು, ಅವರದೇ ಕಥೆಗಳಲ್ಲಿ ಅದರ ಹತ್ತು ಪಟ್ಟು ಕಂಡುಬರುತ್ತದೆ.

ವ್ಯಕ್ತಿಗಳ ಬಗ್ಗೆ ಮತ್ತು ಕೃತಿಗಳ ಬಗ್ಗೆ ಅವರು ಹೇಳುವ ಅಭಿಪ್ರಾಯಗಳಿಗಿಂತ, ಅಂದಿನ ಸಾಹಿತಿಗಳು ಎದುರಿಸುತ್ತಿದ್ದ ಕೆಲವು ತಾಂತ್ರಿಕ ಸಮಸ್ಯೆಗಳ ಬಗೆಗೆ ಹಾಗೆಯೇ ಸಾಹಿತ್ಯದ ತಾತ್ವಿಕತೆಯ ಬಗ್ಗೆ ಅವರಾಡುವ ಮಾತುಗಳು ಹೆಚ್ಚು ಮುಖ್ಯವೆಂದು ತೋರುತ್ತದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಗುರುತಿಸಬಹುದು.

1. ಹನ್ನೆರಡನೆಯ ಅಧ್ಯಾಯದಲ್ಲಿ ಕಾವ್ಯಭಾಷೆ ಮತ್ತು ಕಾವ್ಯಶೈಲಿಗಳನ್ನು ಕುರಿತು ಹೇಳಿರುವ ಮಾತುಗಳು ಮನನೀಯವಾದವು. ಶೈಲಿಯ ಆಧುನಿಕತೆ, ಸಾಂಪ್ರದಾಯಕತೆ ಹಾಗೂ ವೈಯಕ್ತಿಕತೆ ಎಂಬ ಮೂರು ನೆಲೆಗಳನ್ನೂ ಕುರಿತು ಮಾತನಾಡುತ್ತಾ, ಕ್ರಮವಾಗಿ ಬಿ.ಎಂ.ಶ್ರೀ., ಡಿ.ವಿ.ಜಿ., ಬೇಂದ್ರೆಯವರಲ್ಲಿ ಅದನ್ನು ಗುರುತಿಸುತ್ತಾ, ಕೊನೆಗೆ ಅವರುಗಳ ಅತ್ಯುತ್ತಮ ಕಾವ್ಯದಲ್ಲಿ ಈ ಮೂರು ಅಂಶಗಳ ಹಿತಕರ ಸಂಯೋಜನೆ ಇದೆಯೆಂಬ ನಿಲುವನ್ನು ಅವರು ತಳೆಯುತ್ತಾರೆ. ಬೇಂದ್ರೆಯವರ ಶೈಲಿಯ ಬಗ್ಗೆ ಅವರು 'ನಾದಲೀಲೆ'ಯ ಮುನ್ನುಡಿಯಲ್ಲಿ ಹೇಳಿರುವ ಮಹತ್ವದ ಮಾತುಗಳಿಗೆ ಪೂರಕವಾದ ಈ ಮಾತುಗಳನ್ನು ಗಮನಿಸಬೇಕು.

'ಶ್ರೀ ಬೇಂದ್ರೆಯವರು ಜನದ ಬಾಳ್ವೆಯಿಂದ ನೇರವಾಗಿ ಕಾವ್ಯವನ್ನು ತರುವವರು. ಆದ್ದರಿಂದ ಇವರ ಮಾತೂ ಬಳಕೆಯಿಂದ ನೇರವಾಗಿ ಬರುತ್ತದೆ. ಇವರ ಕಾವ್ಯಸ್ವಭಾವದಿಂದ ರೂಪುಗೊಂಡ ಬರವಣಿಗೆಯಲ್ಲಿ ಇದು ಮುಖ್ಯ ಲಕ್ಷಣ. ಇವರ ಕವಿತೆಯ ವಾಕ್ಯಗಳು ಬೆಟ್ಟವನ್ನೊಡೆದು ಬಂಡೆಗಳನ್ನು ತಂದು ಕಾಡಿನಲ್ಲಿ ಕಟ್ಟಿರುವ ಮಲ್ಲೇಶ್ವರ ದೇವಾಲಯ, ಹೂವನ್ನು ಕುರಿತೋ, ಚಿಂತೆಯನ್ನು ಕುರಿತೋ ಕಟ್ಟಿರುವ ಇವರ ಕವಿತೆಯೂ ಮುಖ್ಯವಾಗಿ ಕಟ್ಟಡದ ಭಾವನೆಯನ್ನುಂಟು ಮಾಡುತ್ತದೆ. ಇದು ಧೀರವಾದ ಶಿಲ್ಪ. ಬಾಳಂತೆ ಅತಿ ನಯವಲ್ಲದ ಕಟ್ಟಡ. ಒಳಗೆ ಇರುವುದು ಕೆಲವು ವೇಳೆ ಭೈರವನೊ ಕೆಲವು ವೇಳೆ ಸುಂದರೇಶನೊ ಆಗಿ ಕಾಣುವ ಶಿವನ ರೂಪ.' (ಪುಟ 49)

ಬೇಂದ್ರೆಯವರ ಕವಿತೆಯ ವಸ್ತು, ರೂಪ ಮತ್ತು ಶೈಲಿಗಳ ಸ್ವರೂಪವನ್ನು ಕುರಿತ ಇಷ್ಟು ಮಹತ್ವದ ಮಾತುಗಳು ಇಂದಿಗೂ ಕಡಿಮೆಯೇ.

ಹೀಗೆಯೇ, 'ಶಿವನಿಗಿಂತ ತಾನು ಹೆಚ್ಚೆಂಬ ಅವನ ವಾಹನದಂತೆ' ಮುಂದೆ ಬಂದಿರುವ 'ಅತಿ' ಶೈಲ, ನಿದ್ದೆಯಲ್ಲಿರುವವರ ಮಾತಿನಂತೆ ಅಸ್ಪಷ್ಟವಾಗಿ ಅರ್ಥಮಸಕಾಗಿರುವ ಶೈಲಿ, ವ್ಯಾಕರಣದ ನಿಯಮಗಳನ್ನು ಗಟ್ಟಿಹಿಡಿದು ಭಾಷೆಯ ಜೀವಂತತೆಯನ್ನು ಮರೆಯುವ ಶುಷ್ಕ ವೈಯ್ಯಾಕರಣಗಳ ಟೀಕೆ, ಬಳಕೆಯ ಮಾತನ್ನು ಸಾಹಿತ್ಯದಲ್ಲಿ ತರುವುದರ ಔಚಿತ್ಯ ಅನೌಚಿತ್ಯಗಳನ್ನು ಕುರಿತಾದ ಅಭಿಪ್ರಾಯಗಳು, ಬರವಣಿಗೆಯಲ್ಲಿ ಅಕ್ಷರ ಸಂಯೋಜನೆಯಾಗಬೇಕಾದ ರೀತಿ, ಕನ್ನಡದ ಸಾಮರ್ಥ್ಯವನ್ನೂ ಕುರಿತಾದ ಆತ್ಮ ವಿಶ್ವಾಸವನ್ನು ತೋರಿಸುವ ಅನಿಸಿಕೆಗಳು ಮುಂತಾದವು ಇಂಥಿಗೂ ಚರ್ಚೆಗೆ ವಸ್ತುವಾಗುವಷ್ಟು ತಾಳಿಕೆಯ ಗುಣವನ್ನು ಒಳಗೊಂಡಿವೆ.

2. ಹೊಸಗನ್ನಡ ಕವಿತೆಯ ಛಂದಸ್ಸಿನ ಬಗ್ಗೆಯೂ, ತೀ.ನಂ.ಶ್ರೀ.ಯವರಿಗಿಂತ ಬಹಳ ಮುಂಚಿತವಾಗಿ ಅಷ್ಟೇ ಸಾರಭೂತವಾದ ಮಾತುಗಳನ್ನು ಮಾಸ್ತಿಯವರು ಹೇಳಿದ್ದಾರೆ. ನಡುಗನ್ನಡ ಕವಿತೆಗೂ ಹೊಸದಕ್ಕೂ ಇರುವ ವ್ಯತ್ಯಾಸ ಛಂದೋಬಂಧದ ಅನಿಯತತೆಯಲ್ಲಿದೆಯೇ ಹೊರತು ಲಯವಿನ್ಯಾಸದ ಅನನ್ಯತೆಯಲ್ಲಿ ಅಲ್ಲವೆಂಬ ಮಾತನ್ನು ಮಾಸ್ತಿ ಹೀಗೆ ಹೇಳುತ್ತಾರೆ.

''ಮೂರು, ನಾಲ್ಕು, ಐದು ಮಾತ್ರೆಗಳ ಗುಂಪು ಕನ್ನಡದ ಮಾತಿನ ಸಹಜವಾದ ಪಡಿಯಚ್ಚು . ಷಟ್ಪದಿಗಳು ಇಂಥ ಗಣಗಳ ಯೋಜನೆಯಿಂದ ಸೃಷ್ಟಿಯಾಗುತ್ತವೆ. ಆದರೆ ಪಡಿಯಚ್ಚನ್ನು ಉಪಯೋಗಿಸಿ ಷಟ್ಪದಿಯನ್ನು ಮಾತ್ರವಲ್ಲ, ಅದೇ ಸೂತ್ರವನ್ನನುಸರಿಸಿದ ಬೇರೆ ಸಂಖ್ಯೆಯ ಪಾದದ ಪದ್ಯಗಳನ್ನು ಬರೆಯಬಹುದು. ಈಗ ಮಾಡುತ್ತಿರುವುದು ಇದೇ ಕೆಲಸ. ಷಟ್ಪದಿಗಳು ಕಥೆ ಹೇಳುವುದಕ್ಕೆ ಬಹಳ ಅನುಕೂಲ. ಅವುಗಳನ್ನು ಓದುವುದರಲ್ಲಿ ಮಾತು ಅಲ್ಲಲ್ಲಿ ಅನುಕೂಲವಾಗಿ ನಿಲ್ಲುತ್ತದೆ. ಈಗ ಬರೆಯುತ್ತಿರುವ ಗೀತೆಗಳಲ್ಲಿಯೂ ಮಾತು ಉಸುರಿಗೆ ಅನುಕೂಲವಾದ ಸ್ಥಾನಗಳಲ್ಲಿ ನಿಲ್ಲುವಂತೆ ಬೇರೆ ಬೇರೆ ಸಂಖ್ಯೆಯ ಸಾಲುಗಳಲ್ಲಿ ಜೋಡಿಯಾಗುತ್ತದೆ; ಕಟ್ಟಡ ಬೇರೆ; ಇಟ್ಟಿಗೆ ಅದೇ'' (ಪುಟ ೨೩).

ಹೊಸಗನ್ನಡ ಕವಿತೆಯ ಛಂದಸ್ಸಿನ ರಹಸ್ಯವನ್ನು ಇಷ್ಟು ಅಡಕವಾಗಿ ಇಂದಿಗೂ ವಿವರಿಸಲಾಗಿಲ್ಲ. ಮಾಸ್ತಿಯವರು ಖಂಡಿತವಾಗಿಯೂ ಆಗ ಪ್ರಯೋಗಪರತೆ, ಹೊಸತನಗಳ ಪರವಾಗಿ ಇದ್ದರು.

3. ಯಥಾಪ್ರಕಾರ, ಹಿಂದಿನ ಪುಸ್ತಕದ ಹಾಗೆಯೇ ಕೆಲವು ಆಕ್ಷೇಪಣೆಗಳನ್ನು ಎತ್ತಬಹುದು, ಗ್ರಂಥವನ್ನು, ತೀರ ಈಚೆಗೆ ಬರೆದಿರುವ ಸಮಾರೋಪದ ಬಗ್ಗೆಯೇ. ಗ್ರಂಥವನ್ನು ಬರೆದವರು ಮೂವತ್ತೈದರ ಮಾಸ್ತಿಯಾದರೆ, ಈ ಸಮಾರೋಪವನ್ನು ಬರೆದವರು ಎಂಬತ್ತೇಳರ ಮಾಸ್ತಿ. ಸಹಜವಾಗಿಯೇ ಮುಕ್ತತೆಯ ಜಾಗದಲ್ಲಿ ಸ್ಥಗಿತತೆ ತಲೆದೋರಿದ್ದರೂ, ವೈಚಾರಿಕತೆ ಮತ್ತು ತರ್ಕಶುದ್ಧಿಗಳು ಮಾಯವಾಗಿಲ್ಲ. ಸಾಹಿತ್ಯವನ್ನು ನವ್ಯ-ನವೋದಯವೆಂದು ವಿಂಗಡಿಸಿರುವುದು ತಮಗೆ ಸಮ್ಮತವಾಗಿಲ್ಲವೆಂದು ಹೇಳುತ್ತಲೇ, ದಲಿತ ಸಾಹಿತ್ಯದ ಬಗ್ಗೆ ಈ ರೀತಿಯ ಮಾತುಗಳನ್ನು ಆಡುತ್ತಾರೆ.

'ತೀರ ಈಚೆಗೆ ನಮ್ಮ ಮಿತ್ರರು ಕೆಲವರು ನಮಗೆ ದಲಿತಸಾಹಿತ್ಯ ಬೇಕು ಎಂದು ಹೇಳುತ್ತಿದ್ದಾರೆ. ಸಾಹಿತ್ಯವೇ ಹೌದಾದರೆ ಇವರು ದಲಿತ ಎಂದು ಕರೆಯುವ ಸಾಹಿತ್ಯ

ಹಿರಿಯರು ಹೆಸರಿಸಿದ ಒಂಭತ್ತು ರಸಗಳಲ್ಲಿ ಒಂದರಲ್ಲಿ ಅಥವಾ ಎರಡರಲ್ಲಿ ಸೇರಿ ಇರುತ್ತದೆ. ದಲಿತ ಸಾಹಿತ್ಯ ನಮ್ಮಲ್ಲಿ ಒಂದು ವಿಶಿಷ್ಟ ಅನುಭವದ ಚೇತನದ ಭಾವಕ್ಕೆ ರೂಪು ಕೊಡುವ ಸಾಹಿತ್ಯ. ಈ ಜನದ ಅನುಭವ ಎಷ್ಟೇ ವಿಶಿಷ್ಟವಾದರೂ ಮಾನವ ಸ್ವಭಾವದ ಎಲ್ಲೆಯ ಒಳಗೆ ಇರುತ್ತದೆ. ರಸಗಳು ಈ ಸ್ವಭಾವವನ್ನು ಪೂರ್ಣವಾಗಿ ಒಳಗೊಂಡಿರುವುದು ದಿಟವಾದರೆ, ಇವರು ರಚಿಸಿದ ಸಾಹಿತ್ಯ ಅವುಗಳ ಎಲ್ಲೆಯಲ್ಲಿ ಸೇರಿರುವುದು ಅನಿವಾರ್ಯ ಇಷ್ಟೆಲ್ಲ ಮಾತಿನ ಅಭಿಪ್ರಾಯ ಇಷ್ಟು ಸಾಹಿತ್ಯದಲ್ಲಿ ಗುಂಪು ಕಟ್ಟುವುದುಬೇಡ''

(ಪು೬೧).

ಇಂಥ ಕಡೆ ಸರಳತೆಗೆ ಹೆಸರಾದ ಮಾಸ್ತಿಯವರು ದಲಿತಸಾಹಿತ್ಯ ಬೇಕೆನ್ನುತ್ತಿರುವರೋ, ನಿರಾಕರಿಸುವರೋ ತಿಳಿಯುವುದಿಲ್ಲ.

4. ಇದೇ ರೀತಿಯಲ್ಲಿ ವಿಮರ್ಶೆಯ ಕ್ಷೇತ್ರದಲ್ಲೂ ನಮ್ಮ ಸಾಹಿತ್ಯ ತೀರ ಈಚೆಗೆ ದಾರಿತಪ್ಪಿದೆಯೆಂದು ಹೇಳುತ್ತಾ ಕೆಲವು ಕಾರಣಗಳನ್ನು ನೀಡುತ್ತಾರೆ. ಪಾಶ್ಚಾತ್ಯ ಸಾಹಿತ್ಯ ಮತ್ತು ವಿಮರ್ಶೆಗಳ ಅನುಕರಣದಿಂದ ಮೂಡಿಬಂದಿರುವ ಮನೋಧರ್ಮ, ಹೊಲಸು ಸಂಗತಿಗಳನ್ನು ಸಂಕೋಚವಿಲ್ಲದೆ ಹೇಳುವ ಪ್ರವೃತ್ತಿ, ವಿಮರ್ಶಕರು ರೊಮ್ಯಾಂಟಿಸಿಸಂ ಮತ್ತು ರಿಯಲಿಸಂಗಳ ಭೇದವನ್ನು ಕನ್ನಡದಲ್ಲಿಯೂ ಕಾಣುವುದು. ''ನಾವು ನಮಗೆ ಚೆನ್ನಕಂಡಂತೆ ಬರೆಯುತ್ತೇವೆ. ಬರೆದುದನ್ನು ಕಷ್ಟವಾದರೂಪಟ್ಟು ಅರ್ಥಮಾಡಿಕೊಳ್ಳುವುದು ನಿಮ್ಮ ಕೆಲಸ'' ಎಂದು ಬರಹಗಾರರು ಓದುಗರಿಗೆ ಹೇಳುವುದು ಮುಂತಾದ ಸಂಗತಿಗಳನ್ನು ಅವರು ಪ್ರಶ್ನಿಸುತ್ತಾರೆ. ಈ ತೇಲುಮಾತುಗಳಲ್ಲಿ ಹೊಸಗನ್ನಡ ಸಾಹಿತ್ಯದ ಕಳೆದ ಮೂವತ್ತು ವರ್ಷಗಳಲ್ಲಿ ಚರ್ಚಿತವಾದ ಪ್ರಮುಖ ವಾಗ್ವಾದಗಳಿರುವುದನ್ನು ಎಲ್ಲರೂ ಬಲ್ಲರು. ಮಾಸ್ತಿಯವರು ಈಜುವುದನ್ನು ನಿಲ್ಲಿಸಿ, ಹೊಳೆದಂಡೆಯ ಸುರಕ್ಷಿತ ಅಂತರದಿಂದ ಈ ಮಾತುಗಳನ್ನು ಆಡಿದ್ದಾರೆ. ಅವರು ಹೆಸರಿಸುವ ಸಮಸ್ಯೆಗಳನ್ನು ಗಂಭೀರವಾಗಿ ಅನುಸಂಧಾನ ಮಾಡಿದವರೇ ಅವರ ನಂತರದ ತಲೆಮಾರಿನ ಹಿರಿಯ ಲೇಖಕರಾಗಿದ್ದಾರೆ.

5. ಸಮಾರೋಪದ ಮತಿಗಳೇನೆ ಇರಲಿ, ಒಟ್ಟು ರೀತಿಯು ಈ ಶತಮಾನದ ಮೊದಲ ಮೂರು ದಶಕಗಳಲ್ಲಿ ನಡೆಯುತ್ತಿದ್ದ ಸಾಹಿತ್ಯಕ ಪರಿವರ್ತನೆಯ ಸ್ವರೂಪವನ್ನು ಒಳಗಿನವನಾಗಿ (insider) ನೋಡುವ ಅವಕಾಶ ಪಡೆದ ಹಿರಿಯರೊಬ್ಬರ ಅನಿಸಿಕೆಗಳ ದಾಖಲೆಯಾಗಿ, ಹಲವು ಸಮರ್ಥ ಒಳನೋಟಗಳನ್ನು ನೀಡುವ ಈ ಕೃತಿಯು ಚಾರಿತ್ರಕವಾಗಿ ಮಾತ್ರವಲ್ಲ. ಇಂದಿನ ಸಮಸ್ಯೆಗಳ ಸಂದರ್ಭದಲ್ಲೂ ಅರ್ಥಪೂರ್ಣವಾಗಿದೆ; ಉಪಯುಕ್ತವಾಗಿದೆ. ನಂತರದ ವರ್ಷಗಳಲ್ಲಿ ಎಸ್.ಅನಂತನಾರಾಯಣ, ಆರ್. ವೈ. ಧಾರವಾಡಕರ್, ಶ್ರೀನಿವಾಸ ಹಾವನೂರ್, ತೀ.ನಂ.ಶ್ರೀಕಂಠಯ್ಯ, ರಂ.ಶ್ರೀ.ಮುಗಳಿ ಮುಂತಾದವರು ಬೇರೆಬೇರೆ ಕ್ಷೇತ್ರಗಳಲ್ಲಿ ಮಾಡಿದ ಮಹತ್ವದ ಸಾಧನೆಗೆ, ಭಿತ್ತಿ ನಿರ್ಮಾಣದ ಕೆಲಸವನ್ನು ಮಾಸ್ತಿಯವರ ಈ ಕೃತಿಯು ಯಶಸ್ವಿಯಾಗಿ ಮಾಡಿದೆ.

ಪ್ರಸಂಗ

ಪ್ರೊ|| ಜಿ. ಪಿ. ರಾಜರತ್ನಂ

ಶ್ರಿಯಃಕಾಂತಾಯ ಕಲ್ಯಾಣನಿಧಯೇ ನಿಧಯೇಽರ್ಥಿನಾಂ
ಶ್ರೀವೇಂಕಟನಿವಾಸಾಯ ಶ್ರೀನಿವಾಸಾಯ ತೇ ನಮಃ

'ಶ್ರೀನಿವಾಸ' ಎಂಬ ಅರ್ಥಗರ್ಭಿತವಾದ ಕಾವ್ಯನಾಮದಿಂದ ಕನ್ನಡ ನಗರವನ್ನು ಸಂಪನ್ನವಾಗಿ ಮಾಡುತ್ತಿರುವ ಶ್ರೀಮಾನ್ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ಯರ ಕೃತಿಗಳನ್ನು ಸಮಾಲೋಕನ ಮಾಡಿದಾಗಲೆಲ್ಲ ನನಗೆ ಪಂಪಕಪಿಯ ಒಂದು ಪದ್ಯ ನೆನಪಿಗೆ ಬರುತ್ತದೆ:

ತಳಿರೊಳ್ ನೀನೆ ಬೆಡಂಗನ್ನೆ ನನೆಗಳೊಳ್ ನೀಂ ನೀ   ನೈ ಪುಷ್ಪಸಂ
ಕುಳದೊಳ್ ನೀನೆ ವಿಳಾಸಿಯ್ಯೆ ಮಿಡಿಗಳೊಳ್ ನೀಂ ಚೆಲ್ವನೈ ಪಣ್ತಪ
ಣ್ಣಳಿನೋಪೋ ಪೆ   ತೇನೊ ನೀನೆ ಭುವನಕ್ಕರಾಧ್ಯನೈ ಭೃಂಗಕೋ
ಕಿಳಕೀರಪ್ರಿಯ ಚೂತರಾಜ ತರುಗಳ್ ನಿನ್ನಂತೆ ಚೆನ್ನಂಗಳೇ

ವಸಂತಕಾಲದ ನವೋದಯದಂದು ಎಲ್ಲೆಲ್ಲಿಯೂ ಚಿಗುರು, ಮೊಗ್ಗು, ಹೂ ಕಾಯಿ, ಹಣ್ಣು ವಿಜೃಂಭಿಸಿದರೂ ಚಿಗೂರೂ ಮೊಗ್ಗೂ ಹೂವೂ ಕಾಯೂ ಹಣ್ಣೂ ಏಕತ್ರವಾಗಿ ಕಂಡವರ ಕಣ್ಮನಗಳನ್ನು ಅಪಹರಿಸುವ ವಿಶಿಷ್ಟತೆ ಇರುವುದು ಮ್ಹಾವಿನ ಮರಕ್ಕೆ ಮಾತ್ರ.

ತಳಿರೂಳ್ಗೊಂಬಿನೊಳೂಳ್ವ ಕೋಕಿಳಕುಳಂ ಪುಗೊಂಬಿನೊಳ್ಪಾಡುತಿ
ರ್ಪಳಿವೃಂದಂ ತು ಗಿರ್ದ ಬಲ್ಮಿಡಿಯ ತೂಗುಂಗೊಂಬಿನೊಳ್ಪಾಯ್ದು
ಬಂಡುಳಿಸುತ್ತಿರ್ಪ ಶುಕಾಳಿ ತಮ್ಮ ಬೆಸದಿಂ ತಂತಮ್ಮ ಠಾಣಾಂತರಂ
ಗಳೊಳಿರ್ದಂಗಜತಂತ್ರದಂತೆಸೆವಿನಂ ಚೆಲ್ವಾದುದಿಮ್ಮಾವುಗಳ್

ಕೋಗಿಲೆಗಳಿಗೂ ದುಂಬಿಗಳಿಗೂ ಗಿಳಿಗಳಿಗೂ (ಮನುಷ್ಯರಿಗೂ ಎಂಬದನ್ನು ಪ್ರತ್ಯೇಕವಾಗಿ ಹೇಳಬೇಕಾದ್ದಿಲ್ಲ)-ಒಂದೇ ಸಮನಾಗಿ ಆನಂದವನ್ನು ಕೊಡುವುದು ಇಮ್ಮಾವಿನ ಹಿರಿಮೆ. ಯಾವುಯಾವುದಕ್ಕೆ ಎಲ್ಲೆಲ್ಲಿ ಏನೇನು ಬೇಕೋ ಅದನ್ನು ಅವು ಪಡಕೊಳ್ಳುತ್ತವೆ.

ಅದರ ಹಾಗೆಯೇ, ಹೊಸಗನ್ನಡ ಸಾಹಿತ್ಯದ ನವೋದಯ ಕಾಲದಲ್ಲಿ ಮೊಳಕೆಯೊಡೆದು ಚಿಗುರಿದ 'ಶ್ರೀನಿವಾಸ' ಸಹಕಾರ ವೃಕ್ಷದಲ್ಲಿ, 'ಮಾಸ್ತಿ' ಮಾವಿನ ಮರದಲ್ಲಿ ಕತೆ, ನಾಟಕ, ಪದ್ಯ, ವಿಮರ್ಶೆ, ಉಪನ್ಯಾಸ, ಕಾದಂಬರಿ ಮೊದಲಾದ ಹಲವಾರು ರಸವತ್ ಫಲಗಳು ನಾಡಿಗೆ ಲಭಿಸಿವೆ. ಅವುಗಳಲ್ಲಿ ಒಬ್ಬೊಬ್ಬರಿಗೆ ಒಂದೊಂದು ಹೆಚ್ಚು ಇಷ್ಟ ಎಂದು ಕಂಡುಬಂದರೂ, ಇವರ ಬರವಣಿಗೆಗಳಲ್ಲಿ ಯಾರಿಗೂ ಯಾವುದೂ 'ಅನಿಷ್ಟ'ವಾಗಿಲ್ಲ.

ಶ್ರೀನಿವಾಸರ ಬರವಣಿಗೆಗಳಲ್ಲಿ ಸಣ್ಣಕತೆಗಳ ಸಂಕಲನ ಹೇಗೋ, ಪದ್ಯಗಳ ಸಂಕಲನ ಹೇಗೋ, ಹಾಗೆಯೇ ಅವರು ಕಾಲಕಾಲಕ್ಕೆ ಸಂದರ್ಭೋಚಿತವಾಗಿ ಅಂದಂದಿನ ವ್ಯವಹಾರಕ್ಕೆ ಹೊಂದಿದ ಹಾಗೆ ಆಡಿದ ಹಾಗೂ ಬರೆದ ಬಿಡಿ ಬಿಡಿ 'ಸಲ್ಲಾಪ'ಗಳ ಸಂಕಲನ ತನ್ನದೇ ಆದ ಒಂದು ಸೊಗಸನ್ನು ಒಳಕೊಂಡಿರುತ್ತದೆ.

ಈ ಸಂಕಲನಗಳನ್ನು ಅವರು 'ಪ್ರಸಂಗ' ಎಂದು ಕರೆದಿರುತ್ತಾರೆ. ಇದುವರೆಗೆ ಇಂಥ ಐದು ಸಂಕಲನಗಳು ಪ್ರಕಟವಾಗಿವೆ. ಈ ಪ್ರಸಂಗಗಳ ಸ್ವರೂಪ ರೂಪ ಗುಣ ವಿಭವಾದಿಗಳನ್ನು ನನ್ನ ಮಾತಿನಲ್ಲಿ ಕೊಂಡಾಡುವುದಕ್ಕಿಂತ, ಆ ಪುಸ್ತಕಗಳಿಗೆ 'ಮುನ್ನುಡಿ'ಯಾಗಿ ಅವರೇ ಬರೆದಿರುವ ಕೆಲವು ಮಾತುಗಳನ್ನು ಎತ್ತಿಕೊಡುವುದು ಮೇಲೆಂದು ನನಗೆ ತೋರುತ್ತದೆ. ಏಕೆಂದರೆ ಅಲ್ಲಿ ಅವರು ಹೇಳಿರುವುದನ್ನು ನಾನು ಪೂರ್ತಿಯಾಗಿ ಒಪ್ಪಿಕೊಂಡಿದ್ದೇನೆ. ಅವರು ಹೇಳುತ್ತಾರೆ.

ಈ ಪುಸ್ತಕ ನನ್ನ ಹಲವು ಭಾಷಣ ಲೇಖನಗಳ ಒಂದು ಸಂಕಲನ.

'' 'ಕನ್ನಡದ ಮುಂಬರಿವು' ರಾಜಸೇವಾಸಕ್ತ ಬೆಳ್ಳೂರ ಮೈಲಾರ ಶ್ರೀಕಂಠಯ್ಯನವರ ಗೌರವಾರ್ಥವಾಗಿ ಸಂಪಾದಿಸಿದ 'ಸಂಭಾವನೆ' ಗ್ರಂಥಕ್ಕಾಗಿ ಬರೆದ ಲೇಖನ.'ನಮ್ಮ ಹೊಸ ಸಾಹಿತ್ಯದ ಅಶ್ವಿನೀದೇವತೆಗಳು' ಮೈಸೂರು ಮಹಾರಾಜ ಕಾಲೇಜಿನ ಬೆಳ್ಳಿಯ ಹಬ್ಬದ ಸಂದರ್ಭದಲ್ಲಿ ಪ್ರಬುದ್ಧ ಕರ್ಣಾಟಕಕ್ಕಾಗಿ ಬರೆದ ಲೇಖನ 'ಸಾಹಿತ್ಯದ ಗುರಿ' 1940 ರ ಸಾಹಿತ್ಯ ಸಮ್ಮೇಲನದ ಲೇಖಕಗೋಷ್ಠಿಯಲ್ಲಿ ಮಾಡಿದ ಅಧ್ಯಕ್ಷ ಭಾಷಣ. 'ಜೀವನವನ್ನು ಕುರಿತ ಸಾಹಿತ್ಯ'1946 ರ ಸಮ್ಮೇಲನದ ಕಾಲದಲ್ಲಿ ಮದರಾಸಿನ ಆಕಾಶವಾಣಿಯಲ್ಲಿ ಏರ್ಪಾಡಾಗಿದ್ದ ಒಂದು ಸಮುಚ್ಚಯದಲ್ಲಿ ಮಾಡಿದ ಹ್ರಸ್ವ ಆಲಾಪ. ಉಳಿದವು ನಾನು ಸಂಪಾದಿಸುತ್ತಿರುವ 'ಜೀವನ' ಮಾಸಪತ್ರಿಕೆಯಲ್ಲಿ ಆಗಾಗ ಪ್ರಕಟವಾದ ಲೇಖನಗಳು.

''ಒಂದೊಂದು ಸಂದರ್ಭದ ಪ್ರಸಕ್ತ ಸಂಗತಿಯನ್ನು ಕುರಿತವು ಎಂಬ ಕಾರಣದಿಂದ ಇವನ್ನು ನಾನು 'ಪ್ರಸಂಗ' ಎಂದು ಕರೆದಿದ್ದೇನೆ. 'ಕಾಸೆರಿ' ಎಂಬುದು ಫ್ರೆಂಚ್ ಭಾಷೆಯಲ್ಲಿ ಪ್ರಸಿದ್ಧವಾಗಿರುವ ಒಂದು ಲೇಖನ ಜಾತಿ. ಅದನ್ನು ಇಂಗ್ಲಿಷಿನಲ್ಲಿ 'ಡಿಸ್‌ಕೋರ್ಸ್' ಅಥವಾ 'ಟಾಕ್' ಎಂದು ಕರೆಯುತ್ತಾರೆಂದು ಕಾಣುತ್ತದೆ. ಇದನ್ನು ನಾವು ಆಲಾಪ ಎಂಬ ಶಬ್ದದಿಂದ ನಿರ್ದೇಶಿಸಬಹುದು. ಈ ಭಾಷಣ ಲೇಖನಗಳು ಸುಮಾರು ಈ ಜಾತಿಯಾಗುತ್ತವೆ. ಆದರೆ 'ಆಲಾಪ' ಎಂಬಲ್ಲಿ ಒಂದು ಸಂದರ್ಭದ ಪ್ರಸಕ್ತವಿಚಾರ ಎಂಬ ಧ್ವನಿ ಬರುವುದಿಲ್ಲ. ಆದ್ದರಿಂದ ಇಲ್ಲಿ 'ಪ್ರಸಂಗ' ಎಂಬ ಹೆಸರು ಹೆಚ್ಚು ಉಚಿತವೆಂದು ಕಂಡಿದೆ.

ಆ ಪ್ರಸಂಗ ಕೆಲವದರಲ್ಲಿ ಒಂದು ಚರ್ಚೆಯ ಸರಣಿ ಕಾಣಬರುತ್ತದೆ. ಸಾಹಿತ್ಯದ ಕೃತಿಗಳು ಸದ್ಯದ ಕಾಲದ ಸಮಸ್ಯೆಗಳನ್ನು ಹರಿಸಬೇಕೆಂದು ಬಯಸುವ ನಮ್ಮ ಮಿತ್ರರು ಕೆಲವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಲ್ಲಿ ಪ್ರಕಟಿಸಿದ ಕೆಲವು ಭಾವನೆಗಳನ್ನು ತಿದ್ದುವುದಕ್ಕೆ ಈ ಚರ್ಚೆಗಳನ್ನು ಮಾಡಬೇಕಾಯಿತು. ವಾದದ ಧ್ವನಿ ಇದ್ದರೂ ಲೇಖನಿಗಳಲ್ಲಿ ವ್ಯಕ್ತಿಗಳನ್ನು ಕುರಿತು ಟೀಕಿಸುವ ಉದ್ದೇಶ ಇಲ್ಲ. ಸಾಹಿತ್ಯದಲ್ಲಿ ಕೆಲವು ವೇಳೆ ಚರ್ಚೆ ಅವಶ್ಯಕವಾಗಿರುತ್ತದೆ. ಆದರೆ ಎಲ್ಲ ವೇಳೆಯೂ ಚರ್ಚೆ ಮರ್ಯಾದೆಯನ್ನು ಮರೆಯದೆ ನಡೆಯಬೇಕು, ಮತ್ತು ನಡೆಯುವುದು ಸಾಧ್ಯ. ನಾನು ಈ ನಿಯಮವನ್ನು ಪಾಲಿಸಿದ್ದೇನೆ ಎಂದು ನಾನು ನಂಬಿದ್ದೇನೆ. ಎಲ್ಲರೂ ಅದನ್ನು ಪಾಲಿಸಲೆನ್ನುವುದು

ಸಾಹಿತ್ಯಪ್ರೇಮಿಗಳ ಹಾರೈಕೆಯಾಗಿರಬೇಕು.

'' ಈ ಭಾಷಣ ಲೇಖನಗಳಲ್ಲಿ ನಾನು ಪ್ರಕಟಿಸಿರುವ ಅಭಿಪ್ರಾಯಗಳನ್ನು ಪಾಠಕರು ತಾಳ್ಮೆಯಿಂದ ಕಾಣಬೇಕೆಂದು ನನ್ನ ಪ್ರಾರ್ಥನೆ. ಯಾವುದೇ ಒಂದು ಸಂಗತಿಯ ಬೇರೆ ಬೇರೆ ಮುಖದ ಅಭಿಪ್ರಾಯವನ್ನು ಅರಿತುಕೊಳ್ಳಬೇಕಾದರೆ ಸಹನೆ ತೀರ ಅವಶ್ಯಕ. ಹೀಗೆಂದುದರಿಂದ ಸಹನೆಗೆ ಅಸಾಧ್ಯವಾದ ಯಾವುದಾದರೂ ಮಾತನ್ನು ಗ್ರಂಥದಲ್ಲಿ ಹೇಳಿದೆ ಎಂದು ನಾನು ಒಪ್ಪಿಕೊಂಡಿದ್ದೇನೆಂದು ಯಾರೂ ಗ್ರಹಿಸಬಾರದು. ಸಾಹಿತ್ಯವನ್ನು ಅರಿಯಬಯಸುವವರು ವಿನಯಕ್ಕೆ ಹೀಗೆ ಅಪಾರ್ಥ ಮಾಡುವುದಾದರೆ ನಡೆಯಹೊರಟವರು ಮೊದಲ ಹೆಜ್ಜೆಯಲ್ಲಿ ಮುಗ್ಗುರಿಸಿದಂತಾದೀತು.''*

'ಪ್ರಸಂಗ'ದ 2ನೇ ಸಂಪುಟ 1963 ರಲ್ಲಿ ಪ್ರಕಟವಾಯಿತು. ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ದೊರೆಯುವ ಸಂಭವ ಕಂಡ ದಿನ ಆರಂಭವಾಗಿ 1951 ರವರೆಗಿನ ನಮ್ಮ ರಾಜಕೀಯ ಪರಿಸ್ಥಿತಿಯನ್ನು ಕುರಿತು ಇವರು 'ನಮ್ಮ ರಾಜಕೀಯ ಚೆನ್ನವಾಗಬೇಕೆಂದರೆ ನಮ್ಮ ಜನ ರಾಜ್ಕೀಯ ವಿಷಯಗಳನ್ನು ಕುರಿತು ವಿವರ ವಿವರವಾಗಿ ಯೋಚಿಸುವುದನ್ನು ಕಲಿಯಬೇಕು' ಎಂಬ ಉದ್ದೇಶದಿಂದ 'ಜೀವನ' ಪತ್ರಿಕೆಯಲ್ಲಿ ಆಗಿಂದಾಗ ಬರೆದ 42 ಲೇಖನಗಳು ಇಲ್ಲಿ ಇವೆ.

1965 ರಲ್ಲಿ ಪ್ರಕಟವಾದ 'ಪ್ರಸಂಗ'ದ ಮೂರನೇ ಸಂಪುಟದಲ್ಲಿ ಧರ್ಮಕ್ಕೂ ಸಾಹಿತ್ಯಕ್ಕೂ ಸಂಬಂಧಪಟ್ಟ ಹಾಗೆ 38 ಲೇಖನಗಳಿರುವುದರ ಜೊತೆಗೆ ಶ್ರೀನಿವಾಸರ ಸಾಹಿತ್ಯಜೀವನಕ್ಕೆ ಸಂಬಂಧಿಸಿದ ಮೂರು ಸ್ವಾರಸ್ಯವಾದ ಲೇಖನಗಳಿವೆ.

ಎರಡು ಮೂರನೇ ಸಂಪುಟಗಳಲ್ಲಿರುವ ವಿಷಯ ವೈವಿಧ್ಯವನ್ನು 1967 ರಲ್ಲಿ ಪ್ರಕಟವಾದ ನಾಲ್ಕನೆಯ ಸಂಪುಟದಲ್ಲಿಯೂ ಕಾಣಬಹುದು. 'ಐವತ್ತು ವರ್ಷಗಳಲ್ಲಿ ಮೂವತ್ತು ಸಂಗತಿಗಳಲ್ಲಿನ ಮನಸ್ಸು ಹರಿದ ರೀತಿಯನ್ನು ತೋರಿಸುವ ಈ ಲೇಖನ ಸಂಗ್ರಹ' ಎಂದು ಅವರೇ ತಮ್ಮ ಪುಸ್ತಕವನ್ನು ವರ್ಣಿಸಿದ್ದಾರೆ.

ಅದೇ ಪುಸ್ತಕದಲ್ಲಿ ಅವರು ''ಹಲವು ವಿಷಯಗಳನ್ನು ಕುರಿತು ಇತರ ಲೇಖನ ಬೇರೆಯವು ಇವೆ. ಅನುಕೂಲ ಕಂಡಂತೆ, ಸಾಧ್ಯವಾದರೆ, ಇಂಥ ಲೇಖನಗಳನ್ನು ಮುಂದೆ ಪ್ರಕಟಿಸಬಹುದು. ಮುಂದು ಎಂದೂ ಯಾರಿಗೂ ಅನಿಶ್ಚಿತ. 'ಬಹುದು' ಶಬ್ದದ ಅರ್ಥ, ಇದುವರೆಗಿನ ಕೆಲಸವನ್ನು ಮಾಡಿಸಿದ ದೈವ ಅದನ್ನು ಮಾಡಿಸಿದರೆ ಇದಾಗುತ್ತದೆ ಎನ್ನುವುದು'' ಎಂದರು.

ಅವರು ನಂಬಿರುವ ದೈವ ಅದನ್ನು ಮಾಡಿಸಿತು ಎನ್ನುವ ಹಾಗೆ, 1971 ರಲ್ಲಿ ಬೆಂಗಳೂರಿನ ಪುರೋಗಾಮಿ ಸಾಹಿತ್ಯ ಸಂಘವು ''ವಿಚಾರ'' ಎಂಬ ಸಂಪುಟದಲ್ಲಿ 'ಪ್ರಸಂಗ' ಸಂಪುಟಗಳಲ್ಲಿರುವಂತಹ ಇನ್ನಷ್ಟು ಲೇಖನಗಳನ್ನು ಸಂಕಲನ ಮಾಡಿ ಪ್ರಕಟಿಸಿತು.

ಈ ಐದು ಸಂಪುಟಗಳೂ ಮಾಸ್ತಿಯವರ ಮನೋಧರ್ಮವನ್ನು ನೇರವಾಗಿ ತಿಳಿಯಲು ಅನುಕೂಲವಾದ ಐದು ಬೆರಳಿನ ಕೈಪಿಡಿಯಿದ್ದ ಹಾಗಿವೆ. ಈ ಕೈಪಿಡಿಯ ವಿಸ್ತಾರ ಸುಮಾರ ಸಾವಿರದ ಐದುನೂರು ಪುಟಗಳಷ್ಟಾಗುತ್ತವೆ.

ಈ ಸಂಪುಟಗಳಲ್ಲಿ ಇರುವುದು - ಅವರೇ ತಮ್ಮ 'ವಿಚಾರ'ದ ಮುನ್ನುಡಿಯಲ್ಲಿ

---

* ಪ್ರಸಂಗ - ೧; ೧೯೪೬

ಹೇಳಿರುವ ಹಾಗೆ- ''ಆಯಾ ಸಂದರ್ಭದಲ್ಲಿ ತೋಚಿದ ಮಾತು ಆದ್ದರಿಂದ ಬಹುಪಾಲು ತಾತ್ಕಾಲಿಕ ಆದರೂ, ಪುಸ್ತಕದ ಐದು ಭಾಗಗಳಲ್ಲಿ ಉಕ್ತವಾಗಿರುವ ವಿಷಯ ಹಲವು ತತ್ಕಾಲಿಕ ಮಾತ್ರ ಅನ್ವಯಿಸುವುದಿಲ್ಲ. ಇದರಲ್ಲಿ ನಾನು ವಿಜ್ಞಾಪಿಸಿರುವ ಹತ್ತಾರು ಸಂಗತಿ ಇನ್ನೂ ಒಂದೆರಡು ದಶಕದಷ್ಟು ಕಾಲವಾದರೂ ಗಮನಕ್ಕೆ ಅರ್ಹವಾಗಿರುತ್ತವೆ.'' ಅಷ್ಟೇ ಅಲ್ಲ, 'ಸರ್ವದೇಶದಶಾಕಾಲೇಷ್ವವ್ಯಾಹತ ಪರಾಕ್ರಮಾ . . . ವರ್ಧತಾ ಮಭಿವರ್ಧತಾಂ' ಎನ್ನಿಸಿಕೊಳ್ಳಲೂ ಅರ್ಹವಾದ ವಿಷಯಗಳ ಪ್ರಸ್ತಾಪವೂ ಅಲ್ಲಲ್ಲಿ ಉಂಟು.

ಮಾಸ್ತಿಯವರ ಮಾತುಗಳ ತೂಕವನ್ನು ಮೆಲುಕಾಡಿದಾಗಲೆಲ್ಲ ನನಗೆ ಅವರದೇ 'ಚೆನ್ನಬಸವನಾಯಕ' ಕಾದಂಬರಿಯಲ್ಲಿ ಕಾಣಬರುವ ನಗರದ ನೇಮಯ್ಯನ ನೆನಪಾಗುತ್ತದೆ.

ನೇಮಯ್ಯನನ್ನು ಮೊದಲ ಬಾರಿಗೆ ಕಂಡ ಮೈಸೂರು ಅರಮನೆಯ ವೀರಣ್ಣನಿಗೆ 'ಈ ಮನುಷ್ಯ ಹೆಜ್ಜೆಹೆಜ್ಜೆಗೂ ಎಷ್ಟು ವಿವೇಕದಿಂದ ನಡೆದುಕೊಳ್ಳುತ್ತಿದ್ದಾನೆ' ಎಂದು ಬಹು ಮೆಚ್ಚಿಕೆಯಾಯಿತಂತೆ.

''ನಿಸ್ವಾರ್ಥಬುದ್ಧಿ, ಶುದ್ಧ ಮನಸ್ಸು, ರಾಜಭಕ್ತಿ, ದೇಶಪ್ರೇಮ, ನೇಮಯ್ಯನ ದಿನದ ನಡೆಯನ್ನು ಯಾವ ವಿವರದಲ್ಲೂ ಕುಂಟದಂತೆ ಸುಷ್ಟವಾಗಿ ಮಾಡಿದ್ದವು. ಮನಸ್ಸು ಚೆನ್ನಾಗಿರುವಾಗ ಮಾತು ತಪ್ಪುವುದು ಸಾಧ್ಯವಿಲ್ಲ. ನೇಮಯ್ಯ ಲೋಕದ ಎಲ್ಲ ಜೀವಗಳ ವಿಷಯದಲ್ಲಿಯೂ ಮನಸ್ಸನ್ನು ಚೆನ್ನಮಾಡಿಕೊಂಡಿದ್ದನು. ಆದ್ದರಿಂದ ಯಾರು ಯಾವ ಮಾತನ್ನು ಹೇಳಲಿ ಇವನು ಅದಕ್ಕೆ ಉತ್ತರ ಕೊಟ್ಟರೂ ಅದು ನಿರ್ದಿಷ್ಟವಾಗಿ, ಸ್ಪಷ್ಟವಾಗಿ ಬರುವುದು. ಶ್ರುತಿಯಾಗಿರುವ ವಾದ್ಯವನ್ನು ಚೇಷ್ಟೆಗೆಂದು ಮುಟ್ಟಿದರೂ ಸ್ವರ ಶ್ರುತಿಯಲ್ಲಿಯೇ ಹೊರಡುವಂತೆ ಸ್ವಭಾವ ಪರಿಶುದ್ಧವಾಗಿಯೇ ಇರುವುದು'' ಎಂದು ಕಾದಂಬರಿಕಾರರು* ನೇಮಮಯ್ಯನಿಗೆ ಪ್ರಶಸ್ತಿ ಪತ್ರವನ್ನು ಕೊಟ್ಟಿರುತ್ತಾರೆ.

ನೇಮಯ್ಯನನ್ನು ಬಹಳ ಕಾಲದಿಂದ ಬಲ್ಲ ರಾಮಾಶಾಸ್ತ್ರಿ ಒಂದು ಸಂದರ್ಭದಲ್ಲಿ ಆತನ ಶುದ್ಧಮನಸ್ಸನ್ನು ಕಂಡು ಮೆಚ್ಚಿ ''ನೀವೊಬ್ಬರು ನೇಮಯ್ಯ, ದೇವರಂಥ ಮನುಷ್ಯ. ಯಾವ ಹೊತ್ತಿನಲ್ಲಿ ಮುಟ್ಟಿದರೂ ಅಪಶ್ರುತಿ ನುಡಿಯೋದಿಲ್ಲ'' ಎನ್ನುತ್ತಾನೆ.

ನೇಮಯ್ಯನಂತಹ ಮಹಾಜೀವವನ್ನು ಭಾವಿಸಿದ ಶ್ರೀನಿವಾಸರ ಯಾವ ಬರಹವನ್ನು ಯಾವ ಹೊತ್ತಿನಲ್ಲಿ ಮುಟ್ಟಿದರೂ ಅದು ಅಪಶ್ರುತಿ ನುಡಿಯುವುದಿಲ್ಲ ಎಂಬುದಕ್ಕೆ 'ಪ್ರಸಂಗ' ಸಂಪುಟಗಳೂ 'ವಿಚಾರ'ವೂ ಸಾಕ್ಷಿ. ಸ್ವಭಾವ ಪರಿಶುದ್ಧವಾದ ಮೇಲೆ ಮನುಷ್ಯನ ಮಾತು ಎಂಥ ಹೊತ್ತಿನಲ್ಲಿಯೂ ಶುದ್ಧವಾಗಿಯೇ ಇರುತ್ತದೆ ಎಂಬುದಕ್ಕೆ ಇವು ನಿದರ್ಶನ.

---

* ಪುಟ ೧೧೩ - ೧೧೪

ವಿಚಾರ

ಬಿ.ವಿ.ವೈಕುಂಠರಾಜು

ಮಾಸ್ತಿಯವರ ಕತೆ, ಕವನಗಳಲ್ಲಿ ಕಂಡುಬರುವ ನೇರ ಹಾಗೂ ಸರಳ ಬರವಣಿಗೆ ಅವರ ವೈಚಾರಿಕ ಬರಹಗಳಲ್ಲಿಯೂ ಗಮನ ಸೆಳೆಯುವ ಪ್ರಧಾನ ಅಂಶ. ಎಂತಹ ಸಮಸ್ಯೆಯನ್ನೂ ಸರಳಗೊಳಿಸಿ, ವಿಶ್ಲೇಷಿಸಿ ತಮ್ಮ ಅಭಿಪ್ರಾಯವನ್ನು ಸೂಕ್ಷ್ಮವಾಗಿ, ನಾಜೂಕಾಗಿ ತಿಳಿಸುವುದು ಅವರ ಸ್ವಭಾವ. ಕೆಲವು ಬಾರಿ ತಮ್ಮ ಅಭಿಪ್ರಾಯಗಳನ್ನು ನೇರವಾಗಿ ಹೇಳಿದರೆ ಎಲ್ಲಿ ಜನಕ್ಕೆ ಚುಚ್ಚುವುದೋ ಎನ್ನುವ ಅಂಜಿಕೆಯಿಂದ, ನೇರವಾಗಿ ಹೇಳಬೇಕಾದುದನ್ನು ಸುತ್ತಿ ಬಳಸಿ ಹೇಳಿ ಅದರ ಬಿಸಿಯನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಾರೆ. ಸಾಹಿತ್ಯ ಹಾಗೂ ಸಾಹಿತ್ಯ ಸಂಬಂಧ ವಿಷಯಗಳ ಮೇಲೆ ಅವರು ಬರೆಯುವಾಗಲಂತೂ ಎಲ್ಲಿಲ್ಲದ ಹುಷಾರುತನ ಕಂಡುಬರುತ್ತದೆ. ಆದರೆ ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಬರೆಯುವಾಗ, ಆ ಸಮಸ್ಯೆ ಹತ್ತಿರದ ಜನಕ್ಕೆ ಸಂಬಂಧಿಸದಿದ್ದರೆ (ರಾಜ್ಯದ ಎಲ್ಲೆಯಾಚೆ) ಸ್ವಲ್ಪ ಮೈಚಳಿಬಿಟ್ಟು ಬರೆಯುತ್ತಾರೆ. ಎಂದರೆ ತಮ್ಮ ಸುತ್ತಮುತ್ತಿನ ಜನಕ್ಕೆ ಚುಚ್ಚಿ ಹೇಳುವುದು, ಅವರಿಗೆ ನೋವು ಮಾಡುವುದು ಮಾಸ್ತಿಯವರಿಗೆ ಒಗ್ಗದ ವಿಚಾರ.

ಮಾಸ್ತಿಯವರು 'ಜೀವನ' ಪತ್ರಿಕೆಯಲ್ಲಿ ಬರೆಯುತ್ತಿದ್ದ ಸಂಪಾದಕೀಯಗಳಿಗೆ (ಅನೇಕ ಜನರಿಗೆ ಜೀವನ ಪತ್ರಿಕೆ ಹಿಡಿಸಿದುದು ಅದರಲ್ಲಿಯ ಲೇಖನ, ಕತೆ, ಕವನಗಳಿಗಿಂತ ಹೆಚ್ಚಾಗಿ ಮಾಸ್ತಿಯವರ ಸಂಪಾದಕೀಯಗಳಿಂದಲೇ) ಇದು ಸಾಮಾನ್ಯವಾಗಿ ಅನ್ವಯವಾಗಬಹುದಾದರೂ, ಈ ಮಾತುಗಳನ್ನು ಹೇಳುವಾಗ ಮುಖ್ಯವಾಗಿ ನಾನು ಅವರ ಇತ್ತೀಚಿನ ಲೇಖನಗಳ ಸಂಕಲನ 'ವಿಚಾರ'ವನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದೇನೆ. ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾದ ಈ ಲೇಖನಗಳು ಬಹುಮಟ್ಟಿಗೆ ಮಾಸ್ತಿಯವರ ವಿಚಾರ ಧಾಟಿಯನ್ನು ಪ್ರತಿನಿಧಿಸುತ್ತದೆ.

ಲೇಖನಗಳನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿರುವ ಈ ಸಂಗ್ರಹದಲ್ಲಿ ಮೊದಲಭಾಗ ಕೇವಲ ಒಂದು ಲೇಖನವನ್ನು ಮಾತ್ರ ಒಳಗೊಂಡಿದೆ. ಇಡೀ ಸಂಗ್ರಹದಲ್ಲಿಯೇ ಅತ್ಯಂತ ದೊಡ್ಡದಾದ ಈ ಲೇಖನ 'ಸಾಹಿತ್ಯಕ್ಕೆ ಸನ್ಮಾನ'ದಲ್ಲಿ (25 ಪುಟ) ಭಾರತೀಯ ಜ್ಞಾನಪೀಠದವರು ಪ್ರತಿವರ್ಷ ಉತ್ತಮ ಸಾಹಿತಿಗೆ ನೀಡುತ್ತಿರುವ ಒಂದು ಲಕ್ಷರೂಪಾಯಿ ಬಹುಮಾನ ಹಾಗೂ ಸಾಹಿತ್ಯ ಅಕಾಡೆಮಿ ಲೇಖಕರಿಗೆ ನೀಡುತ್ತಿರುವ ಪ್ರಶಸ್ತಿಗಾಗಿ ಸಾಹಿತ್ಯ ಕೃತಿಗಳನ್ನು ಆಯ್ಕೆ ಮಾಡುವ ವಿಧಾನವನ್ನು ಮಾಸ್ತಿಯವರು ಸುದೀರ್ಘವಾಗಿ ಚರ್ಚಿಸಿದ್ದಾರೆ.

ಲೇಖಕರಿಗೆ, ಉತ್ತಮ ಸಾಹಿತ್ಯ ಕೃತಿಗಳಿಗೆ ಪ್ರಶಸ್ತಿಗಳನ್ನು ನೀಡುವುದನ್ನು ಯಾರೂ ಪ್ರಶ್ನಿಸಲಾರರು. ಆದರೆ ಈ ಪ್ರಶಸ್ತಿಗಳನ್ನು ನೀಡುವಾಗ ಯೋಗ್ಯರನ್ನು ಆರಿಸಲಾಗುತ್ತಿದೆಯೆ ಎನ್ನುವ ಪ್ರಶ್ನೆ ಎಲ್ಲ ಪ್ರಶಸ್ತಿಗಳ ವಿಚಾರದಲ್ಲಿಯೂ ಉದ್ಭವಿಸುತ್ತದೆ.

ಜಗತ್ತಿನ ಅತ್ಯುಚ್ಚ ಸಾಹಿತ್ಯ ಪ್ರಶಸ್ತಿಯಾದ ನೊಬೆಲ್ ಪ್ರಶಸ್ತಿಯನ್ನು ನೀಡುವುದರಲ್ಲಿಯೂ ರಾಜಕೀಯವಿದೆ, ಪ್ರಭಾವ ಬೀರಬಲ್ಲವರು ಮಾತ್ರ ಅದನ್ನು ಪಡೆಯಬಲ್ಲರು ಎನ್ನುವ ಮಾತುಗಳು ಕೇಳಿಬರುತ್ತಿದೆ. ಆದ್ದರಿಂದ ನಮ್ಮ ರಾಷ್ಟ್ರದಲ್ಲಿಯೂ ಪ್ರಶಸ್ತಿಗಳು ಟೀಕಾತೀತವೇನಲ್ಲ. ಸಾಹಿತ್ಯ ಅಕಾಡೆಮಿ ಪ್ರತಿವರ್ಷ ಪ್ರಶಸ್ತಿಗಳನ್ನು ಪ್ರಕಟಿಸಿದಾಗ ಪಿಸುಮಾತು ಕೇಳಿಬರುತ್ತದೆ. ಆದರೆ ಈ ಅತೃಪ್ತಿ, ಅಸಮಾಧಾನ ಪಿಸುಮಾತಿನಲ್ಲಿಯೇ ಪರ್ಯವಸಾನಗೊಳ್ಳುವುದು ದುರದುಷ್ಟಕರ. ಏನೋ ತಪ್ಪು ನಡೆದಿದೆ ಎಂದೆನಿಸಿದಾಗ ಅದನ್ನು ನಿರ್ಭೀತಿಯಿಂದ ಖಂಡಿಸುವವರು ವಿರಳವಾದ್ದರಿಂದಲೇ, ಪ್ರಶಸ್ತಿ ನೀಡಿಕೆಯಲ್ಲಿರಬಹುದಾದ ರಾಜಕೀಯ ಅದಕ್ಕಂಟಿಕೊಂಡೇ ಕುಳಿತಿದೆ. ಆದರೆ ಮಾಸ್ತಿಯವರು ಸ್ವಲ್ಪ ಸಂಕೋಚದಿಂದಲಾದರೂ ಸರಿ ಈ ವಿಷಯವನ್ನು ವಿವರವಾಗಿ ವಿವೇಚಿಸಿದ್ದಾರೆ. ಸಂಕೋಚವಿರುವುದಕ್ಕೆ ಕಾರಣ - ಜ್ಞಾನಪೀಠ ಪ್ರಶಸ್ತಿಗಾಗಿ ಒಮ್ಮೆ ಇವರ ಪುಸ್ತಕವನ್ನು (ನವರಾತ್ರಿ) ಪರಿಗಣನೆಗೆ ತೆಗೆದುಕೊಳ್ಳಲಾಗಿತ್ತು. ತಮಗೆ ಪ್ರಶಸ್ತಿ ನೀಡದಿರುವುದರಿಂದ ಹೀಗೆ ಟೀಕೆಮಾಡುತ್ತಾರೆ ಎಂದು ಎಲ್ಲಿ ಜನ ಶಂಕಿಸುತ್ತಾರೋ ಎನ್ನುವ ಅನುಮಾನ ಬಂದರೂ (ಅದನ್ನು ಅವರೇ ಹೇಳಿಕೊಂಡಿದ್ದಾರೆ) ತಾವು ಹೇಳಬೇಕೆನಿಸಿದುದನ್ನು ಹೇಳಿಬಿಟ್ಟಿದ್ದಾರೆ.

ಶ್ರೀಮತಿ ರಮಾದೇವಿಯವರು ನೀಡಿದ ದತ್ತಿಯ ಫಲವಾಗಿ ಭಾರತೀಯ ಜ್ಞಾನಪೀಠದವರು ಭಾರತೀಯ ಭಾಷೆಗಳಲ್ಲಿ ಪ್ರಕಟವಾದ ಅತ್ಯುತ್ತಮ ಕೃತಿಗೆ ಒಂದು ಲಕ್ಷರೂಪಾಯಿ ಪ್ರಶಸ್ತಿಯನ್ನು ನೀಡುತ್ತಾರೆ. ಈ ಪ್ರಶಸ್ತಿಗೆ ಆಯ್ಕೆಮಾಡುವ ನಿರ್ಣಾಯಕರಿಗೆ ಎಲ್ಲ ಭಾಷೆಗಳ ಪರಿಚಯವಿರುತ್ತದೆಯೆ? ಇಲ್ಲದಿದ್ದರೆ ಹನ್ನೆರಡು ಭಾಷೆಗಳಲ್ಲಿ ಅತ್ಯುತ್ತಮವಾದುದನ್ನು ಆರಿಸುವುದು ಹೇಗೆ? ಭಾಷಾಂತರಗಳ ಆಧಾರದ ಮೇಲೆ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗುತ್ತದೆಯೇ? ಭಾಷಾಂತರ ಮಾಡಿಸಿದರೂ ಭಾಷಾಂತರ ಸರಿಯಾಗಿದೆ ಎಂದು ನಿರ್ಧರಿಸುವವರು ಯಾರು? ಇತ್ಯಾದಿ ಪ್ರಶ್ನೆಗಳು ಉದ್ಭವಿಸುತ್ತವೆ. ಮಾಸ್ತಿಯವರು ಈ ಸಮಸ್ಯೆಗಳನ್ನು ವಿವೇಚಿಸಿ ಈಗಿನ ವಿಧಾನದಲ್ಲಿ ಆಗಬೇಕಾದ ಮಾರ್ಪಾಡುಗಳನ್ನು ಸೂಚಿಸಿದ್ದಾರೆ. ಸಾಮಾನ್ಯವಾಗಿ ಇಂತಹ ಪ್ರಶಸ್ತಿ ನೀಡಿಕೆಗೆ ಅನುಸರಿಸಬೇಕಾದ ವಿಧಾನಗಳನ್ನು ವಿವೇಚಿಸುತ್ತಾ ಅವರು, ''ಕನ್ನಡ, ಬಂಗಾಳಿ, ಮಲೆಯಾಳಿ ಹೀಗೆಯೇ ಒಂದೊಂದು ಭಾಷೆಯ ಪರವಾಗಿ ದಕ್ಷ ಸಾಹಿತಿಗಳ ಸಣ್ಣ ಸಮಿತಿಗಳು ತಮ್ಮ ಭಾಷೆಯ ಅತ್ಯುತ್ತಮ ಗ್ರಂಥಗಳೆಂದು ಕೆಲವು ಗ್ರಂಥಗಳನ್ನು ಸೂಚಿಸುತ್ತವೆ. ಈ ಸಮಿತಿಗಳ ಸದಸ್ಯರು ಪ್ರಾಮಾಣಿಕರು, ನಿಷ್ಪಕ್ಷಪಾತವಾಗಿ ತಮ್ಮ ಅಭಿಪ್ರಾಯದಂತೆ ಒಳ್ಳೆಯದೆಂದು ಕಂಡ ಪುಸ್ತಕಗಳನ್ನು ಸೂಚಿಸುತ್ತಾರೆ ಎಂದು ಇಟ್ಟುಕೊಳ್ಳೋಣ. ಇದನ್ನು ಹೇಗೆ ಇಟ್ಟುಕೊಳ್ಳುವುದು ಎಂದು ಆಕ್ಷೇಪಿಸಿ ಪ್ರಯೋಜನವಿಲ್ಲ. ಏಕೆಂದರೆ ಒಲ್ಲದವರು ಈ ಶಂಕೆಯನ್ನು ಯಾವ ಮೂರು ಜನರ ವಿಷಯಕ್ಕೂ ಒಡ್ಡಬಹುದು. ಸಮಿತಿಗಳ ಸದಸ್ಯರು ಪ್ರಾಮಾಣಿಕರು ಎಂದೇ ಇಟ್ಟುಕೊಳ್ಳೋಣ. ಇದಾದಮೇಲೆ ಹನ್ನೆರಡು ಭಾಷೆಯ ಪುಸ್ತಕಗಳನ್ನು ಹೋಲಿಸುವುದು ಹೇಗೆ? ಭಾಷಾಂತರ ಮಾಡಿಸುವುದು ಒಂದೇ ದಾರಿ. ಯಾವ ಭಾಷೆಗೆ ಭಾಷಾಂತರ? ಇಂಗ್ಲಿಷಿಗೋ, ಹಿಂದಿಗೋ ಮಾಡಿಸಿಯಾರು. ಈ ಭಾಷಾಂತರ ಮಾಡುವವರು ಮೂಲದ ಭಾಷೆಯನ್ನು ಚೆನ್ನಾಗಿ ಬಲ್ಲವರಾಗಿರಬೇಕು. ಇಂಗ್ಲಿಷನ್ನು ಅಥವಾ ಹಿಂದಿಯನ್ನು ಚೆನ್ನಾಗಿ ಬರೆಯುವವರಾಗಿರಬೇಕು. ಹನ್ನೆರಡು ಜನ ಸಮಸಮನಾಗಿ ಈ ಶಕ್ತಿಯುಳ್ಳ ಜನರನ್ನು ನಾವು ಪಡೆದಿದ್ದೇವೆಯೇ?

''ಪಡೆದಿದ್ದೇವೆ ಎಂದೇ ಇಟ್ಟುಕೊಳ್ಳೋಣ. ಹನ್ನೆರಡು ಭಾಷೆಯ ಈ ಭಾಷಾಂತರಗಳನ್ನು ಒಬ್ಬರು ನೋಡಿ ಅವುಗಳಲ್ಲಿ ಯಾವುದು ಅತ್ಯುತ್ತಮ ಗ್ರಂಥ ಎಂದು ಹೇಳಿಯಾರೇನೋ. ಇದೇನೂ ಬಹಳ ರುಚಿಯ ಕೆಲಸ ಅಲ್ಲ. ಇದನ್ನು ಮಾಡಬೇಕೆಂದರೆ ತುಂಬ ಶ್ರಮ ಬೇರೆ ಆಗುತ್ತದೆ. ಆದರೂ ಯಾರೋ ಒಬ್ಬರು ಈ ಕೆಲಸವನ್ನು ಮಾಡಿದರು ಎನ್ನಬಹುದು. ಒಂದು ಸಮಿತಿಯ ಹಲವು ಸದಸ್ಯರು ಈ ಕೆಲಸವನ್ನು ನಿರ್ವಂಚನೆಯಿಂದ ಮಾಡಿಯಾರೆ? ನನಗೆ ಇದು ಸಾಧ್ಯ ಅಲ್ಲ ಎಂದು ತೋರುತ್ತದೆ. ಒಬ್ಬರು ಕಷ್ಟಪಟ್ಟು ತಮ್ಮ ಮನಸ್ಸನ್ನು ನಿಶ್ಚಯಕ್ಕೆ ತಂದುಕೊಳ್ಳುತ್ತಾರೆ. ತಮ್ಮ ಅಭಿಪ್ರಾಯವನ್ನು ಹೇಳುತ್ತಾರೆ. ಉಳಿದವರು ಭಾಷಾಂತರಗಳನ್ನು ಚೆನ್ನಾಗಿಯೇ ಮೇಲೆಮೇಲೆಯೇ ನೋಡಿ ಮುಗಿಸಿದ್ದು ಈ ಒಬ್ಬರ ಅಭಿಪ್ರಾಯಕ್ಕೆ ತಮ್ಮ ಸಮ್ಮತಿಯನ್ನೋ ಅಸಮ್ಮತಿಯನ್ನೋ ಸೂಚಿಸುತ್ತಾರೆ. ಒಬ್ಬರ ಸಮ್ಮತಿ ಇಲ್ಲವೆಂದರೂ ವಿಷಯ ಚರ್ಚೆ ಆಗಬೇಕು. ಬಹುಜನರ ಅಭಿಪ್ರಾಯದಂತೆ ನಿರ್ಣಯ ಆಗಬೇಕು''-ಎಂದಿದ್ದಾರೆ.

ವಾಸ್ತವವಾಗಿ ಜ್ಞಾನಪೀಠದ ಪ್ರಶಸ್ತಿ ನೀಡಿಕೆಗಾಗಿ ಈ ವಿಧಾನವನ್ನು ಅನುಸರಿಸುತ್ತಿಲ್ಲ. ಇದು ಸ್ವತಃ ಮಾಸ್ತಿಯವರ ಅನುಭವಕ್ಕೆ ಬಂದಿದೆ. 1967 ರಲ್ಲಿ ಮಾಸ್ತಿಯವರ 'ನವರಾತ್ರಿ' ಪ್ರಶಸ್ತಿಗೆ ಪರಿಗಣಿಸಲ್ಪಟ್ಟ ಪುಸ್ತಕಗಳಲ್ಲಿ ಒಂದು. ಜ್ಞಾನಪೀಠದ ಕಾರ್ಯದರ್ಶಿಗಳು ಮಾಸ್ತಿಯವರಿಗೆ ಒಂದು ಪತ್ರ ಬರೆದು ''ಜ್ಞಾನಪೀಠ ತಮ್ಮ ''ನವರಾತ್ರಿ''ಗ್ರಂಥವನ್ನು ಇಂಗ್ಲಿಷ್ ಹಿಂದೀ ಭಾಷೆಗಳಿಗೆ ಭಾಷಾಂತರ ಮಾಡಿಸುವುದೇ ಎಂದು ಯೋಚಿಸುತ್ತದೆ. ಇಂಗ್ಲಿಷ್‌ಗೆ ತಾವೇ ಭಾಷಾಂತರ ಮಾಡಬಲ್ಲಿರಿ ಎಂದು ಸೂಚನೆ ಬಂದಿದೆ. ಹಿಂದಿಗೆ ಭಾಷಾಂತರ ಮಾಡುವುದಕ್ಕೆ ತಮಗೆ ತಕ್ಕವರು ತೋರುವ ಯಾರನ್ನಾದರೂ ಆರಿಸಿ ಹೇಳುವಿರಾ? '' ಎಂದು ಕೇಳಿದ್ದರು. ಅದರಂತೆ ಮಾಸ್ತಿಯವರು ತಾವೇ ನವರಾತ್ರಿಯನ್ನು ಇಂಗ್ಲಿಷಿಗೆ ಭಾಷಾಂತರಿಸಿ, ಹಿಂದಿಗೆ ಅನುವಾದ ಮಾಡಲು ಒಬ್ಬರ ಹೆಸರನ್ನು ಸೂಚಿಸಿದರು. ಸಿದ್ಧವಾದ ಇಂಗ್ಲಿಷ್ ಭಾಷಾಂತರವನ್ನು ಜ್ಞಾನಪೀಠದವರು ತರಿಸಿಕೊಳ್ಳುವ ಸೌಜನ್ಯವನ್ನೂ ತೋರಿಸಲ್ಲಿಲ್ಲ. ಎಂದಮೇಲೆ ಎಲ್ಲ ಭಾಷೆಗಳಿಂದ ಒಂದು ಅತ್ಯುತ್ತಮ ಪ್ರಬಂಧವನ್ನು ಆರಿಸಲು ಹೇಗೆ ಸಾಧ್ಯ? ಆದ್ದರಿಂದಲೇ ಮಾಸ್ತಿಯವರು ''ನಿಜದಲ್ಲಿ ಹನ್ನೆರಡು ಭಾಷೆಗಳ ಉತ್ತಮ ಗ್ರಂಥಗಳ ಮಧ್ಯೆ ಅತ್ಯುತ್ತಮತೆಯನ್ನು ನಿರ್ಧರಿಸುವ ಕ್ರಮ ಅಸಮರ್ಪಕ ಆಗಿದೆ. ಎಂದರೆ ಸನ್ಮಾನ ಪಡೆದ ಗ್ರಂಥ ಜೊತೆಗೆ ಕೊನೆಗೆ ಬಂದ ಗ್ರಂಥಗಳಿಗಿಂತ ಶ್ರೇಷ್ಠಗ್ರಂಥ ಎಂದು ಹೇಳಲು ಆಧಾರ ಸಾಲದು''ಎಂದು ಹೇಳಿರುವ ಮಾತು ನಿಜ.

ಪ್ರಶಸ್ತಿಗಾಗಿ ಒಮ್ಮೆ ಪರಿಶೀಲಿಸಿದ ಪುಸ್ತಕಗಳನ್ನು ಮೂರನೆಯ ವರ್ಷ ಪರಿಗಣನೆಗೆ ತೆಗೆದುಕೊಳ್ಳದಿರುವ ವಿಷಯವನ್ನು ಮಾಸ್ತಿಯವರು ಪ್ರಸ್ತಾಪಿಸಿ ''ಇದು ಸರಿಯಲ್ಲ ಎಂದು ಕಾಣುತ್ತದೆ. ಮೊದಲು ಕೊನೆಗೆ ಬಂದ ಹನ್ನೆರಡು ಪುಸ್ತಕದಲ್ಲಿ ಶ್ರೇಷ್ಠವಾದ ನಾಲ್ಕರಲ್ಲಿ ಒಂದು ಮಾತ್ರ ಸನ್ಮಾನ ಪಡೆದರೂ ಅದರ ಜತೆಯ ಮೂರು ಪುಸ್ತಕಗಳು ಉತ್ತಮ ಗ್ರಂಥಗಳೆಂದು ಇವರು ಒಪ್ಪಿದಂತಾಯಿತು. ಎರಡನೆಯ ವರ್ಷ ಬರುವ ಹನ್ನೆರಡು ಪುಸ್ತಕಗಳಲ್ಲಿ ಉತ್ತಮವಾದ ನಾಲ್ಕು ಪುಸ್ತಕಗಳೊಂದಿಗೆ ಹಿಂದಿನ ವರ್ಷದ ಈ ಮೂರು ಪುಸ್ತಕಗಳನ್ನು ಸೇರಿಸಿಕೊಂಡು ಸನ್ಮಾನರ್ಹತೆಯನ್ನು ನಿರ್ಧರಿಸಬೇಕೆಂದು ನನಗೆ ತೋರುತ್ತದೆ. ಪುಸ್ತಕಗಳು ಆ ವರ್ಷ ಸನ್ಮಾನ ಪಡೆದ ಪುಸ್ತಕದಷ್ಟು ಶ್ರೇಷ್ಠವಲ್ಲವೆಂದರೂ ತಮ್ಮಷ್ಟಕ್ಕೆ ತಾವು ಶ್ರೇಷ್ಠವೇ. ಮೂರನೆಯ ವರ್ಷದ ಕೊನೆಗೆ ಬಂದಿರುವ ಪುಸ್ತಕಗಳಷ್ಟೇ

ಶ್ರೇಷ್ಠವಾಗಿರಬಹುದು. ಅವಕ್ಕಿಂತ ಹೆಚ್ಚು ಶ್ರೇಷ್ಠವಾಗಿಯೇ ಇರಬಹುದು. ಒಂದು ಸಾರಿ ಸನ್ಮಾನಕ್ಕೆ ಗಣನೆಗೆ ತಂದುಕೊಂಡ ಪುಸ್ತಕವನ್ನು ಮತ್ತೊಮ್ಮೆ ಗಣನೆಗೆ ತಂದುಕೊಳ್ಳುವುದಿಲ್ಲ ಎನ್ನುವುದು ಯುಕ್ತವೆಂದು ಕಾಣುವುದಿಲ್ಲ''ಎಂದಿದ್ದಾರೆ. ಇದು ಸ್ವೀಕರಿಸಬಹುದಾದ ಸೂಚನೆ (ಆದರೆ ಸ್ವೀಕರಿಸುವವರು ಯಾರು?) ''ಆದರೆ ಇವರ (ರಮಾದೇವಿಯವರ) ಈ ಮಹಾದಾನ ನಿಜವಾಗಿ ಸಾರ್ಥಕವಾಗಬೇಕಾದರೆ ಈ ಸನ್ಮಾನವನ್ನು ಯಾರಿಗೆ ಕೊಡುವುದು ಎಂದು ನಿರ್ಣಯಿಸುವ ಇಂದಿನ ಕ್ರಮದಲ್ಲಿ ಹಲವು ಮಾರ್ಪಾಡಾಗಬೇಕು''.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಲು ಅನುಸರಿಸುವ ವಿಧಾನವಂತೂ ವಿಚಿತ್ರವಾದುದು. ಒಂದೊಂದು ಭಾಷೆಯಲ್ಲಿ ಕೆಲವು ವ್ಯಕ್ತಿಗಳನ್ನಿರಿಸಿಕೊಂಡು ಅವರುಗಳಿಗೆ ಪತ್ರಬರೆದು ಪ್ರಶಸ್ತಿಗೆ ಯೋಗ್ಯವಾದ ಕೆಲವು ಪುಸ್ತಕಗಳ ಹೆಸರುಗಳನ್ನು ಸೂಚಿಸುವಂತೆ ತಿಳಿಸುತ್ತಾರೆ. ಹೆಚ್ಚು ಸಂಖ್ಯೆಯಲ್ಲಿ ಯಾವ ಪುಸ್ತಕಗಳನ್ನು ಸೂಚಿಸಿರುತ್ತಾರೋ ಆ ಪುಸ್ತಕಗಳ ಪಟ್ಟಿ ಸಿದ್ಧವಾಗುತ್ತದೆ. ಆ ಪಟ್ಟಿಯನ್ನು ಕೆಲವರಿಗೆ ಕಳುಹಿಸಿ ಅವುಗಳಲ್ಲಿ ಉತ್ತಮವಾದ ಪುಸ್ತಕವನ್ನು ಸೂಚಿಸುವಂತೆ ತಿಳಿಸುತ್ತಾರೆ. ಹೆಚ್ಚಿನ ಸಂಖ್ಯೆಯ ಮತಗಳು ಯಾವ ಪುಸ್ತಕಕ್ಕೆ ಬರುತ್ತವೋ ಅದಕ್ಕೆ ಪ್ರಶಸ್ತಿ ಲಭಿಸುತ್ತದೆ. ಅಕಾಡೆಮಿ: ಪ್ರಶಸ್ತಿ ನೀಡಲು ಪ್ರಾರಂಭಿಸಿದ ಕೆಲವು ವರ್ಷಗಳಲ್ಲಿ ಮಾಸ್ತಿಯವರು ಸಾಹಿತ್ಯ ಅಕಾಡೆಮಿಯಲ್ಲಿದ್ದರು. (ಅವರು ಚೆನ್ನಬಸವನಾಯಕ ಕಾದಂಬರಿಯ ವಿಷಯವಾಗಿ ನಡೆದ ರಾದ್ಧಾಂತದಿಂದ ಅದರಿಂದ ಹೊರಬಂದರು) ''ಒಂದು ಗ್ರಂಥ ಒಳ್ಳೆಯದೆನ್ನುವುದಕ್ಕೆ ಓಟಿನ ಸಂಖ್ಯೆ ಏಕೈಕ ಕಾರಣವಾಗಬಾರದು''ಎನ್ನುವ ದೃಷ್ಟಿಯಿಂದ ಈಗಿನ ಪದ್ಧತಿಯಲ್ಲಿ ಹಲವು ಮಾರ್ಪಾಡುಗಳನ್ನು ತರಲು ಪ್ರಯತ್ನ ನಡೆಸಿದವರು. ಅವರ ಸೂಚನೆಗಳಲ್ಲಿ ಒಂದೆರಡು ಈಗ ಈಡೇರಿರಬಹುದು. ಆದರೆ ಓಟಿನ ಆಧಾರ ಇನ್ನೂ ಉಳಿದುಕೊಂಡಂತೆ ತೋರುತ್ತದೆ. ಯಾವ ಪುಸ್ತಕಕ್ಕೆ ಪ್ರಶಸ್ತಿ ನೀಡಬೇಕು ಎನ್ನುವ ವಿಚಾರವಾಗಿ ಹಲವು ವಿಮರ್ಶಕರನ್ನೂ, ವಿದ್ವಾಂಸರನ್ನೂ ಒಂದುಗೂಡಿಸಿ ಅವರು ನಡೆಸಿದ ಚರ್ಚೆಯ ಆಧಾರದ ಮೇಲೆ ಒಂದು ಪುಸ್ತಕಕ್ಕೆ ಪ್ರಶಸ್ತಿ ನೀಡಿದರೆ ಯೋಗ್ಯವೆನಿಸಬಹುದು. ಈಗಿನ ಓಟಿನ ಕ್ರಮದಲ್ಲಿ ಇತರ ಚುನಾವಣೆಗಳಂತೆಯೇ ಇಲ್ಲಿಯೂ ಕ್ಯಾನ್ವಾಸ್ ನಡೆಯುತ್ತಿರುವುದರಿಂದ ಪ್ರಭಾವಶಾಲಿಗಳಿಗೆ ಮಾತ್ರ ಪ್ರಶಸ್ತಿ ದೊರಕುತ್ತಿದೆ ಎನ್ನುವ ಮಾತಿನಲ್ಲಿ ಸತ್ಯಾಂಶವಿಲ್ಲದಿಲ್ಲ. ಅಲ್ಲದೆ ಈಗ ಕೃತಿಗಿಂತ ಲೇಖಕರನ್ನೇ ಹೆಚ್ಚು ದೃಷ್ಟಿಯಲ್ಲಿಟ್ಟುಕೊಂಡು ಪ್ರಶಸ್ತಿಗಳನ್ನು ನೀಡುತ್ತಿರುವುದನ್ನು ಗಮನಿಸಬಹುದು. ಹೀಗಾದರೆ ಪ್ರಶಸ್ತಿ ನೀಡುವುದರ ಉದ್ದೇಶ ಈಡೇರುತ್ತದೆಯೆ? ಮಾಸ್ತಿಯವರಂತೆ ಅನೇಕ ಲೇಖಕರು ಈ ವಿಷಯವಾಗಿ ಹೋರಾಟ ನಡೆಸಿದರೆ ಈಗಿನ ಪದ್ಧತಿ ಬದಲಾಗಬಹುದು. ಜೊತೆಗೆ ಮಾಸ್ತಿಯವರು ಸೂಚಿಸಿರುವಂತೆ ಪ್ರಶಸ್ತಿಯ ಮೊತ್ತವನ್ನು (ಈಗಿನ 5000 ದಿಂದ 25000 ರೂಪಾಯಿಗಳಿಗೆ) ಹೆಚ್ಚಿಸಬಹುದು.

೨

ಭಾಷಾವಾರು ಪ್ರಾಂತ್ಯಗಳು ರಚನೆಯಾದಮೇಲೆ, ಆಯಾ ಭಾಷಾ ಪ್ರದೇಶದಲ್ಲಿ ಆಯಾ ಭಾಷೆಯವರು ಒಟ್ಟುಗೂಡಿ ಕೆಲಸಮಾಡಬಲ್ಲರು ಎನ್ನುವುದು ಎಲ್ಲರ ನಿರೀಕ್ಷೆಯಾಗಿತ್ತು. ಹಲವೆಡೆ ಈ ನಿರೀಕ್ಷೆ ಸ್ವಲ್ಪಮಟ್ಟಿಗೆ ಈಡೇರಿದ್ದರೂ ಕಳೆದೆರಡು

ವರ್ಷಗಳಿಂದ ಆಂಧ್ರದಲ್ಲಿ ನಡೆಯುತ್ತಿರುವ ಪ್ರತ್ಯೇಕ ತೆಲಂಗಾಣ ಚಳುವಳಿ ಭಾಷಾವಾರು ಪ್ರಾಂತ್ಯಗಳು ನಿರ್ಮಾಣವಾದ ಸಿದ್ಧಾಂತವನ್ನೇ ಅಲುಗಾಡಿಸಿ ಭಾಷೆಯೊಂದೇ ಜನರನ್ನು ಒಂದುಗೂಡಿಸಲು ಸಾಧ್ಯವಾಗಲಾರದು ಎನ್ನುವುದನ್ನು ತೋರಿಸಿಕೊಟ್ಟಿತು. ಇದರ ಪ್ರಭಾವ ಮೈಸೂರಿಗೂ ವಿಸ್ತರಿಸಿ ರಾಜ್ಯವನ್ನು ಎರಡು ಭಾಗಗಳನ್ನಾಗಿ ಒಡೆಯಬೇಕೆಂದು ಕೆಲವರು ಹೇಳಲಾರಂಭಿಸಿದರು. ಈಗೀಗ ಈ ಮಾತು ಎಲ್ಲಿಯೂ ಕೇಳಿ ಬರುತ್ತಿಲ್ಲ. ಆದರೆ ಆ 'ಒಡಕುದನಿ' ಹೊರಟಾಗ ಹಿಂದೆ ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಜನರಿಗೆ ಸ್ವಲ್ಪ ಗಾಬರಿಯೇ ಆಯಿತು. ಹಲವು ದಶಕಗಳ ಹಿಂದೆಯೇ 'ನಾನು ಧಾರವಾಡದವನು, ನಾನು ಮೈಸೂರಿನವನು ಎನ್ನದಿರಿ'' ಎಂದು ಹೇಳಿದ್ದ ಮಾಸ್ತಿಯವರಿಗೆ ಈ ಮಾತು ಸ್ವಾಭಾವಿಕವಾಗಿ ಕಸಿವಿಸಿಯನ್ನುಂಟು ಮಾಡಿರಲೇಬೇಕು. ಆ ಸಮಯದಲ್ಲಿ ಸಭೆಯೊಂದರಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಮಾಸ್ತಿಯವರು ತಮ್ಮ ಸ್ವಭಾವಕ್ಕನುಗುಣವಾಗಿ ''ಕನ್ನಡ ನಾಡು ಒಂದುಗೂಡಲಿ ಎಂದು ಹತ್ತು ಜನ ಹಿರಿಯರೊಂದಿಗೆ ಒಂದು ಕಾಲದಲ್ಲಿ ನಾನು ದುಡಿದೆನು. ದೈವಕೃಪೆಯಿಂದ ನಾಡು ಒಂದುಗೂಡಿತು. ಈ ಒಕ್ಕೂಟದಿಂದ ಸಾಧಿಸಬೇಕಾದ ಶುಭ ಬಹಳವಿದೆ. ನಮ್ಮ ಜನ ಅದನ್ನು ಸಾಧಿಸಲು ಮನಸ್ಸು ಮಾಡಬೇಕು. ಇದನ್ನು ಬಿಟ್ಟು ಉತ್ತರ ಕರ್ನಾಟಕ ಪೂರ್ವದ ಮೈಸೂರು ಎಂದು ಎರಡು ಬಣವಾಗಿ ಕಾದಾಡುವ ಮನೋಧರ್ಮ ಒಳ್ಳೆಯದಲ್ಲ'' ಎಂದು ತಮ್ಮ ಅಭಿಪ್ರಾಯವನ್ನು ಸೌಜನ್ಯದಿಂದ ವ್ಯಕ್ತಪಡಿಸಿದರು. ಈ ಮಾತು ಕೆಲವರಿಗೆ ಬಿಸಿ ಮುಟ್ಟಿಸಿತು. ಒಬ್ಬರಂತೂ (ಸಹಿ ಹಾಕದೆ) ಮಾಸ್ತಿಯವರಿಗೆ ಅಹಿತಕರ ಧಾಟಿಯಲ್ಲಿ ಪತ್ರ ಬರೆದರು. (ಈ ಪತ್ರವನ್ನು ಮಾಸ್ತಿಯವರು ಪ್ರಕಟಿಸಿದ್ದಾರೆ. ಆ ಪತ್ರದ ಬಗ್ಗೆ ಅವರ ಪ್ರತಿಕ್ರಿಯೆ -''ಹತ್ತು ಜನಕ್ಕೆ ತಿಳಿಯಬೇಕಾದ ಸಂಗತಿ. ಒಂದು ವಿಷಯವನ್ನು ಕುರಿತು ಇರಬಹುದಾದ ಹತ್ತು ಅಭಿಪ್ರಾಯಗಳಲ್ಲಿ ಈ ಲೇಖಕರದು ಒಂದು ಅಭಿಪ್ರಾಯ. ಇವರು ಯಾರು? ಇವರ ಅಭಿಪ್ರಾಯದ ಬೆಲೆ, ಇವರ ತಿಳಿವಳಿಕೆ ಅನುಭವವನ್ನು ಅವಲಂಭಿಸುತ್ತದೆ. ಹೆಸರು ಮರೆಸಿಕೊಂಡು ಇಂಥ ಒಂದು ಕಾಗದವನ್ನು ಬರೆದರೆ ಆ ಅಭಿಪ್ರಾಯಕ್ಕೆ ಏನು ಬೆಲೆ ಕೊಡುವುದು ಎನ್ನುವುದು ಕಾಗದವನ್ನು ನೋಡಿದವರಿಗೆ ತಿಳಿಯುವುದಿಲ್ಲ) ''ಹಳೆಯ ಮೈಸೂರು ಸೇರಿಸಿಬಿಟ್ಟದ್ದ ಹಣ ಹೊಸದಾಗಿ ಸೇರಿಬಂದ ಇತರ ಪ್ರದೇಶಗಳಿಗಾಗಿ ವೆಚ್ಚವಾಗಿದೆ. ಪೂರ್ವದ ಸಂಸ್ಥಾನದ ಪ್ರದೇಶದ ಕ್ಷೇಮಕ್ಕಾಗಿ ಗಮನ ದೊರೆಯುತ್ತಿಲ್ಲ'' ಎನ್ನುವ ಇಬ್ಭಾಗವಾದಿಗಳ ವಾದಕ್ಕೂ ಮಾಸ್ತಿಯವರ ಉತ್ತರ ಸಿದ್ಧ -''ಪ್ರಾಂತ್ಯವನ್ನು ಎರಡು ಭಾಗ ಮಾಡಿದ ಮಾತ್ರಕ್ಕೆ ಈಗ ನಡೆದಿದೆ ಎನ್ನುವ ಅನ್ಯಾಯ ಕೊನೆಗಾಣುವುದಿಲ್ಲ. ಈಗ ನಮಗೆ ತೋರುತ್ತಿರುವ ಕಷ್ಟದಂಥ ಕಷ್ಟ ತಪ್ಪುವುದಿಲ್ಲ. ಮೈಸೂರು ಸಂಸ್ಥಾನ ಬೇರೆಯಾಗಿದ್ದ ದಿನದಲ್ಲಿಯೂ ಈ ರೀತಿಯ ಮಾತು ಕೇಳಿಬರುತ್ತಿತ್ತು. ಒಂದು ಜಿಲ್ಲೆಯ ವರಮಾನ ಹೆಚ್ಚು, ಇನ್ನೊಂದು ಜಿಲ್ಲೆಯದು ಕಡಿಮೆ. ಅದರ ಹಣ ಇದರಲ್ಲಿ ವೆಚ್ಚವಾಗುತ್ತಿತ್ತು. ಒಂದು ಪ್ರಾಂತ್ಯ ಇರುವುದರ ಅರ್ಥವೇ ಇದು. ಒಂದು ರಾಷ್ಟ್ರ ಎನ್ನುವುದರ ಅರ್ಥವೂ ಇದೇ. ಪುಣ್ಯವಂತ ಪ್ರದೇಶದ ವರಮಾನದ ಉಳಿಕೆಯ ಭಾಗ ಬರ ಪ್ರದೇಶದ ಏಳಿಗೆಗಾಗಿ ವಿನಿಯೋಗವಾಗುತ್ತದೆ. ಒಟ್ಟು ರಾಷ್ಟ್ರ ಉಳಿಯಬೇಕಾದರೆ, ಒಟ್ಟು ಪ್ರಾಂತ್ಯ ಉಳಿಯಬೇಕೆಂದರೆ, ಇಂಥ ವಿನಿಯೋಗವನ್ನು ಮಾಡಲೇಬೇಕು. ಪುಣ್ಯವಂತ ಪ್ರಾಂತವಾಗಲಿ, ಪುಣ್ಯವಂತ ಪ್ರಾಂತ ಭಾಗವಾಗಲಿ 'ಈ ವೆಚ್ಚ ನನಗೆ ಬೇಡ ನಾನು ಬೇರೆ ರಾಷ್ಟ್ರ ಆಗುತ್ತೇನೆ. ನಾನು ಪ್ರಾಂತ ಆಗುತ್ತೇನೆ'. ಎನ್ನುವುದು ಯುಕ್ತವಲ್ಲ... ಎಷ್ಟೋ

ಕಷ್ಟದಿಂದ ಹಿರಿಯರು ಒಂದುಗೂಡಿಸಿದ ಕರ್ನಾಟಕವನ್ನು ಈ ಮಿತ್ರರೆಲ್ಲರೂ ಉಳಿದೆಲ್ಲ ನಾಯಕರೂ ಸರ್ವಪ್ರಯತ್ನದಿಂದ ಒಂದಾಗಿ ಉಳಿಸಬೇಕು.''-ಮಾಸ್ತಿಯವರ ಅಭಿಪ್ರಾಯವನ್ನು ಒಪ್ಪದಿದ್ದವರೂ ಕೂಡ ಅವರ ತರ್ಕಬದ್ಧ ಮಾತಿನ ಹಿಂದಿರುವ ಕಳಕಳಿ ಮತ್ತು ಕರ್ನಾಟಕದ ಬಗ್ಗೆ ಅವರಿಗಿರುವ ಅವ್ಯಾಜ ಪ್ರೇಮವನ್ನು ಮೆಚ್ಚಿಕೊಳ್ಳಲೇಬೇಕು.

೩

ರಾಮಸ್ವಾಮಿ ನಾಯಕರು ಮತ್ತು ಕಮ್ಯೂನಿಷ್ಟರು ಮಾಸ್ತಿಯವರ ತಲೆ ಕೆಡಿಸಿರುವ ವ್ಯಕ್ತಿಗಳು. ಈ ಇಬ್ಬರನ್ನು ಮಾಸ್ತಿಯವರು ಅನೇಕ ಲೇಖನಗಳಲ್ಲಿ ಪ್ರಸ್ತಾಪಿಸಿದ್ದಾರೆ. ನಾಯಕರ ವಿಷಯವಾಗಿ ಮಾಸ್ತಿಯವರು ಹೊಂದಿರುವ ಅಭಿಪ್ರಾಯಗಳಿವು:

'ಬ್ರಾಹ್ಮಣ ಜಾತಿಯನ್ನು ಕುರಿತ ಹೀಯಾಳಿಕೆ ರಾಮಸ್ವಾಮಿ ನಾಯಕರ ಜೀವನದ ಬಹು ಮುಖ್ಯಾಂಶ,' (ರಾಮಸ್ವಾಮಿ ನಾಯಕರು, ದೇವರು, ಪುಟ ೫೬)

'ತಮಿಳುನಾಡಿನಲ್ಲಿ ಇತ್ತೀಚೆಗೆ ಬ್ರಾಹ್ಮಣ ಜಾತಿಯ ಜನರನ್ನು ಕುರಿತು ಈ ನಿಲುವನ್ನು ತಳೆದ ಜನ ಹೆಚ್ಚುತ್ತಿದ್ದಾರೆಂದು ಕಾಣುತ್ತದೆ. ಬಹಿರಂಗ ಸಭೆಯಲ್ಲಿ ಒಟ್ಟು ಈ ಜಾತಿಯನ್ನು ಬೈಯುವ ಪರಿಪಾಠ ಬಹಳವಾಗಿದೆ.' (ಪುಟ ೫೭)

'ಈಗ ಶ್ರೀ ನಾಯಕರು ದೇವಾಲಯಗಳ ಗರ್ಭಗುಡಿಯೊಳಕ್ಕೆ ಯಾರು ಬೇಕಾದರೂ ಹೋಗಲು ಅವಕಾಶವಿರಬೇಕು ಎಂದು ಒಂದು ಚಳುವಳಿಯನ್ನು ನಡೆಸಲು ನಿಶ್ಚಯಿಸಿದ್ದಾರಂತೆ.' (ಪುಟ ೫೭)

'ತಮಿಳುನಾಡಿನಲ್ಲಿ ರಾಮಸ್ವಾಮಿ ನಾಯಕರು, ಅವರ ಜೊತೆಗೆ ಹಿರಿಯರು, ಬ್ರಾಹ್ಮಣ ಜಾತಿಯ ಜನವನ್ನು ಹಗೆಗಳೆಂದು ಭಾವಿಸುವುದನ್ನು ಒಂದು ವ್ರತವಾಗಿ ಬೆಳೆಸಿಕೊಂಡು ಬಂದಿದ್ದಾರೆ. ಇದರ ಅಂಗವಾಗಿ ಸಂಸ್ಕೃತ ಭಾಷೆಯನ್ನು ಕುರಿತು ಅಸೂಯೆಯ ನಿಲುವನ್ನು ತಳೆದ್ದಿದ್ದಾರೆ.' (ಭಾಷಾವಿರಸ- ೭೯)

ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಮಾಸ್ತಿಯವರು ತಳುಕಿನ ವೆಂಕಣ್ಣಯ್ಯ ಸ್ಮಾರಕ ಉಪನ್ಯಾಸ ನೀಡಿದಾಗಲೂ ನಾಯಕರ ಬಗ್ಗೆ ಇದೇ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ರಾಮಸ್ವಾಮಿ ನಾಯ್ಕರ ಜೀವನ, ರಾಜಕೀಯ ಮತ್ತು ಸಾಮಾಜಿಕ ಸಿದ್ಧಾಂತಗಳನ್ನು ಅಭ್ಯಾಸಮಾಡಿದ್ದರಿಂದ ಉಂಟಾದ ಪ್ರತಿಕ್ರಿಯೆಗಳಲ್ಲಿ ಇವು. 'ನಾಯಕ ಮಹನೀಯರ ವಿಷಯ ನಮ್ಮ ನಾಡಿನ ಜನರಿಗೆ ಅಷ್ಟಾಗಿ ತಿಳಿದಿರಲಾರದು. ನನಗಾದರೂ ಈ ವಿಷಯದಲ್ಲಿ ತಿಳಿದಿರುವುದು ಸ್ವಲ್ಪವೇ' ಎಂದು ಮಾಸ್ತಿಯವರೇ ಒಪ್ಪಿಕೊಂಡಿದ್ದಾರೆ. ತಂಜಾವೂರಿನಲ್ಲಿ ನಾಯಕರ ಪ್ರತಿಮೆಯ ಅಡಿಯ ಪೀಠದಲ್ಲಿರುವ ವಾಕ್ಯಗಳು ಮಾಸ್ತಿಯವರನ್ನು ರೇಗಿಸಿವೆ. ಆ ಮಾತುಗಳೆಂದರೆ-'ದೇವರನ್ನು ಕಲ್ಪಿಸಿದವನು ಮುಟ್ಠಾಳ. ದೇವರ ವಿಚಾರ ಪ್ರಚಾರ ಮಾಡುವವನು ಅಯೋಗ್ಯ. ದೇವರಿಗೆ ನಮಸ್ಕಾರ ಮಾಡುವವನು ಕಾಡುಮೃಗ.'

''ತಂಜಾವೂರಿನಂಥ ಒಂದು ದೊಡ್ಡ ಊರಿನಲ್ಲಿ, ಎಲ್ಲ ಜನರೂ ನಡೆದಾಡುವ ಸ್ಥಳದಲ್ಲಿ ಜನನಾಯಕ ಒಬ್ಬರ ಪ್ರತಿಮೆಯನ್ನು ಸ್ಥಾಪಿಸಿ ಮರ್ಯಾದೆ ತರುವುದು ಯುಕ್ತ. ಆದರೆ ಆ ನಾಯಕರ ಮಾತು ಎಂದು ಇಂಥ ವಾಕ್ಯಗಳನ್ನು ಕೊರೆಯುವುದು ಯುಕ್ತವಾಗುವುದಿಲ್ಲ''-ಎನ್ನುವುದು ಮಾಸ್ತಿಯವರ ಅನಿಸಿಕೆ. ಅಷ್ಟೇ ಅಲ್ಲ ''ಇಂಥ

ಶಿಲ್ಪವನ್ನು ಪ್ರಾಂತ ಸರ್ಕಾರದ ಮುಖ್ಯಮಂತ್ರಿ ಅನಾವರಣ ಮಾಡಿದರೆನ್ನುವುದು ವಿಷಾದಕರ.''

ವಿಷಯಗಳನ್ನು ಪ್ರತಿಪಾದಿಸುವ ರೀತಿಯಲ್ಲಿ ಮಾಸ್ತಿಯವರು ಒಂದು ಧ್ರುವವಾದರೆ ನಾಯಕರು ಇನ್ನೊಂದು ಧ್ರುವ. ಆದರೆ ಎಲ್ಲರೂ ತಮ್ಮ ಧಾಟಿಯಲ್ಲಿಯೇ ವಿಚಾರಮಾಡಬೇಕು ಎಂದು ಮಾಸ್ತಿಯವರು ನಿರೀಕ್ಷಿಸುವುದು ಹೇಗೆ? ಅಲ್ಲದೆ ನಾಯಕರು ಬ್ರಾಹ್ಮಣದ್ವೇಷಿ ಎನ್ನುವ ಅಭಿಪ್ರಾಯವನ್ನು ಮೂಡಿಸುವುದು ಸರಿಯಲ್ಲ. ಈ ವಿಚಾರವನ್ನು ಚರ್ಚಿಸಬೇಕಾದರೆ ನಾಯಕರ ರಾಜಕೀಯ, ಸಾಮಾಜಿಕ ಸಿದ್ಧಾಂತವನ್ನೇ ಚರ್ಚಿಸಿ ಅನಂತರ ಒಂದು ಅಭಿಪ್ರಾಯವನ್ನು ಕೊಡಬಹುದು. ಹಾಗೆ ಮಾಡದೆ ಅವರ ಬಗ್ಗೆ ತೀರ್ಪುಕೊಡುತ್ತಾ ಹೋಗುವುದು ಸಮಂಜಸವಾಗಲಾರದು. ಅಲ್ಲದೆ ತಮಿಳುನಾಡಿನಲ್ಲಿ ಬ್ರಾಹ್ಮಣರನ್ನು ದ್ವೇಷಿಸುವುದೇ ಹೆಚ್ಚುತ್ತಿದೆ ಎಂದರೆ ಅರ್ಥವೇನು? ಇದು ತಮಿಳುನಾಡಿನ ಬ್ರಾಹ್ಮಣರ ಅಭಿಪ್ರಾಯವೇ ಅಥವಾ ಮಾಸ್ತಿಯವರ ಅಭಿಪ್ರಾಯವೇ?

ಮಾಸ್ತಿಯವರ ಈ 'ತೀರ್ಪುಮನೋಭಾವ' ಕಮ್ಯೂನಿಸ್ಟರ ಬಗೆಗೆ ಇನ್ನೂ ಒಂದು ಕೈ ಹೆಚ್ಚು. ಕಮ್ಯೂನಿಸ್ಟರು ಮತ್ತು ಕಮ್ಯೂನಿಸ್ಟ್ ನಾಯಕರನ್ನು ಕುರಿತು ಮಾಸ್ತಿಯವರು ವ್ಯಕ್ತಪಡಿಸುವ ಅಭಿಪ್ರಾಯಗಳು ಕೆಲವು:

''ಶ್ರೀ ಡಾಂಗೆ ಕಾಂಗ್ರೆಸ್ಸಿಗೆ ಕೇಡನ್ನು ಬಯಸುವರು. ಕಾಂಗ್ರೆಸ್ ಎರಡು ತಂಡವಾಗಿ ಕಾದುತ್ತಿರುವಾಗ ಒಂದು ತಂಡಕ್ಕೆ ಉತ್ತೇಜನ ಕೊಡುವ ಇವರ ಮಾತಿನ ಉದ್ದೇಶ ಕಾಂಗ್ರೆಸ್ಸನ್ನು ನಾಶಮಾಡಬೇಕು ಎನ್ನುವುದಷ್ಟೆ.'' (ಪ್ರಧಾನಿಯವರ ಹಿತಶತ್ರುಗಳು-ಪುಟ ೫೩)

''ನಂಬೂದಿರಿಪಾದ್‌ರವರು ಒಂದು ಕಾಲದಲ್ಲಿ ಕಾಂಗ್ರೆಸ್ ಪಕ್ಷದ ಪ್ರಮುಖರಾಗಿದ್ದ ಕೆಲಸಗಾರರಾಗಿದ್ದು, ಪಕ್ಷದ ಇತರ ಪ್ರಮುಖರು ತಮ್ಮನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲವೆಂಬ ಕಾರಣದಿಂದ ಪಕ್ಷವನ್ನು ಬಿಟ್ಟು ಬೇರೆ ದಾರಿ ಹಿಡಿದ ರಾಜಕೀಯರು. ಬೇರೆ ದಾರಿ ಇವರನ್ನು ಕಮ್ಯೂನಿಸ್ಟ್ ನಾಯಕರನ್ನಾಗಿ ಮಾಡಿತು. ಅದರಲ್ಲಿಯೂ ಉಗ್ರ ಕಮ್ಯೂನಿಸ್ಟ್ ಆನ ಮಾರ್ಕ್ಸ್ ಪಕ್ಷಕ್ಕೆ ಒಯ್ದಿತು. ಆ ದಿನ ಅವರಿಗೆ ಅಕ್ರಮವೇ ಕ್ರಮ. ಎದುರಾಳಿ ಕೊಲೆ ಧರ್ಮ ಎಂದು ಸಾರುವ ಈ ವಾಮಪಕ್ಷದ ನಾಯಕತ್ವದ ಪಟ್ಟವನ್ನು ಕೊಟ್ಟಿದೆ'' (ನಂಬೂದಿರಪಾದ್ ಮಾರ್ಗ-ಪುಟ ೯೩)

''ಮಾರ್ಕ್ಸ್ ಕಮ್ಯೂನಿಸ್ಟ್ ಪಕ್ಷ ಕಮ್ಯೂನಿಸ್ಟ್ ಮನೋಧರ್ಮವನ್ನು ಉಲ್ಬಣ ಸ್ಥಿತಿಗೆ ಒಯ್ಯುವ ಪಕ್ಷ. ಕಾರ್ಮಿಕರು ಏನು ಮಾಡಿದರೂ ಇವರಿಗೆ ಒಪ್ಪಿಗೆ (ಅಜಯ್‌ಮುಖರ್ಜಿ ಮಾರ್ಗ-ಪುಟ ೯೭)

''ಇಂಗ್ಲಿಷ್‌ನಲ್ಲಿ 'the tail wagging the dog' ಎಂಬ ಒಂದು ಹಾಸ್ಯದ ಮಾತಿದೆ. ಬಾಲ ನಾಯನ್ನು ಆಡಿಸೋದು. ನಾಯಿ ಬಾಲವನ್ನು ಆಡಿಸುವುದು ಉಂಟು. ಬಾಲ ನಾಯಿಯನ್ನು ಆಡಿಸುವುದೂ ಉಂಟೇ? ಉಂಟು ನೋಡಿ. ಉಪಮುಖ್ಯಮಂತ್ರಿ ಜ್ಯೋತಿಬಸು ಬಾಲ; ಮುಖ್ಯಮಂತ್ರಿ ಅಜಯ್‌ಮುಖರ್ಜಿ ನಾಯಿ. ಬಾಲ ನಾಯಿಯನ್ನು ಆಡಿಸುತ್ತಿದೆ; ನಾಯಿ ಆಡುತ್ತಿದೆ.''(ಪುಟ ೧೦೦)

ಈ ಅಭಿಪ್ರಾಯಗಳನ್ನು ತಕ್ಷಣ ನೋಡಿದಾಗ ಯಾರಾದರೂ ಜನಸಂಘದ ನಾಯಕರು ಹೇಳಿರುವರೇನೊ ಎನ್ನಿಸುತ್ತದೆ. 'ಅಕ್ರಮವೇ ಕ್ರಮ, ಎದುರಾಳಿ ಕೊಲೆಧರ್ಮ' ಎಂದು ಯಾವುದಾದರೂ ರಾಜಕೀಯ ಪಕ್ಷ ಪ್ರತಿಪಾದಿಸಲು ಸಾಧ್ಯವೇ?

ರಾಜಕೀಯ ಪಕ್ಷವೊಂದರ ರಾಜಕೀಯ ಸಿದ್ಧಾಂತವನ್ನು ತಿಳಿದುಕೊಳ್ಳದೆ ಹೀಗೆ ತೀರ್ಮಾನ ಕೊಡುತ್ತಾ ಹೋದರೆ ಅದಕ್ಕೆ ಯಾವ ಬೆಲೆಯೂ ಇರುವುದಿಲ್ಲ. ಸಾಹಿತ್ಯ ಸಂಬಂಧ ವಿಷಯಗಳನ್ನು ಕುರಿತು ಮಾಸ್ತಿಯವರು ತೀವ್ರವಾಗಿ ಯೋಚಿಸಿದಷ್ಟು ಈ ವಿಷಯಗಳು ಮೇಲೆ ಯೋಚಿಸಿಲ್ಲ ಎನ್ನುವುದು ಸ್ಪಷ್ಟ. ಈ ಲೇಖನದ ಮೊದಲಲ್ಲಿ ಸಾಹಿತ್ಯ ಸಂಬಂಧ ವಿಷಯಗಳ ಮೇಲೆ ಮಾಸ್ತಿಯವರು ಬರೆಯುವಾಗಲಂತೂ ಎಲ್ಲಿಲ್ಲದ ಹುಷಾರುತನ ಕಂಡುಬರುತ್ತದೆ. ಆದರೆ ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಬರೆಯುವಾಗ ಆ ಸಮಸ್ಯೆ ಹತ್ತಿರದ ಜನಕ್ಕೆ ಸಂಬಂಧಿಸದಿದ್ದರೆ ಸ್ವಲ್ಪ ಮೈಚಳಿ ಬಿಟ್ಟು ಬರೆಯುತ್ತಾರೆ ಎಂದು ನಾನು ಹೇಳಿದುದು ಅವರ ಈ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡೇ.

ರಾಮಸ್ವಾಮಿ ನಾಯಕರ ಬಗ್ಗೆಯಾಗಲೀ ಅಥವಾ ಕಮ್ಯೂನಿಸ್ಟ್‌ರ ಬಗ್ಗೆಯಾಗಲೀ ಮಾಸ್ತಿಯವರು ಈ ರೀತಿಯ ಅಭಿಪ್ರಾಯಗಳನ್ನು ನೀಡುವುದಕ್ಕೆ ಅವರ ಸಂಪ್ರದಾಯಕ್ಕೇ ಅಂಟಿಕೊಂಡಿರುವ ಆ ಸ್ವಭಾವ. ಆದ್ದರಿಂದಲೇ ನಾಯಕರ ಅಥವಾ ಕಮ್ಯೂನಿಸ್ಟರ ವಿಚಾರಧಾರೆಯನ್ನು ಕಂಡರೆ ಸಿಡಿಮಿಡಿ. ಅವರ ಸಂಪದ್ರಾಯ ಶರಣತೆಗೆ ಈ ಮಾತುಗಳು ಸಾಕ್ಷಿ 'ಉಚ್ಚ ನೀಚ'ಎಂಬ ಭಾವವನ್ನು ತೆಗೆದು ಹಾಕುವುದು ಸುಧಾರಣೆಗಳಲ್ಲಿ (ಸಮತಾವಾದದ ಸುಧಾರಣೆಗಳು) ಒಂದು ಎಂದು ಹೇಳಿದ್ದಾಗಿದೆ. ಹೀಗೆಂದರೆ ಏನು? ಉಚ್ಚ ನೀಚ ಸ್ಥಿತಿಗಳೇ ಇಲ್ಲದಂತೆ ಮಾಡುವುದೆಂತು? ಇದು ಸಾಧ್ಯವಿಲ್ಲ. ಒಂದು ಮೈಯಲ್ಲೇ ತಲೆ ಕಾಲು ಇವೆ. ತಲೆ ಉಚ್ಚ, ಕಾಲು ನೀಚ ಇಷ್ಟೆ: ಉಚ್ಚ ಎಂದು ತಲೆಯ ಕಷ್ಟಸುಖವನ್ನು ಮಾತ್ರ ನೋಡಿಕೊಂಡು ಕಾಲನ್ನು ನೀಚ ಎಂದು ಅನಾದರಿಸುವುದು ವಿವೇಕವಲ್ಲ, ಉಚ್ಚನೀಚದ ಭೇದಭಾವ ಹೋಗಬೇಕೆನ್ನುವುದರ ಅರ್ಥ ಉಚ್ಚ ಆದದ್ದು, ತಾನು ಉಚ್ಚ ಎಂದು ಅಹಂಕಾರ ಪಡಬಾರದು. ನೀಚ ತಾನು ನೀಚ ಎಂದ ಹೀನಾಯ ಪಡಬಾರದು ಎನ್ನುವುದು, ತಲೆಕಾಲು ಎರಡೂ ದೇಹಕ್ಕೆ ಅವಶ್ಯಕವಾದ ಭಾಗಗಳು. ದೇಹದ ಬಾಳಿಗೆ ಸಾಧನಗಳಾಗಿವೆ. ಹೀಗೆಯೇ ರಾಷ್ಟ್ರದ ಜೀವನದಲ್ಲಿ ಬೇರೆ ಬೇರೆ ಅಂತಸ್ತಿನ ಕೆಲಸ ಇರುತ್ತದೆ. ರಾಷ್ಟ್ರವನ್ನಾಳುವ ಜನರನ್ನು ಹಿಡಿದು ಕಸಗುಡಿಸುವ ಜನರವರೆಗೆ ಎಲ್ಲರೂ ರಾಷ್ಟ್ರಜೀವನದಲ್ಲಿ ಅವಶ್ಯಕವಾದ ಕೆಲಸವನ್ನು ಮಾಡುತ್ತಾರೆ. ನಾವು ಆಳುವವರು ಎಂದು ಒಂದು ಸಮುದಾಯ ಅಹಂಕಾರ ಪಡಕೂಡದು; ಇನ್ನೊಂದು ಸಮುದಾಯ ನಾವು ಕಸಗುಡಿಸುವ ಜನ ಎಂದು ಹೀನಾಯವೂ ಪಡಕೂಡದು.''

ತರ್ಕದ ದೃಷ್ಟಿಯಿಂದ ಮಾಸ್ತಿಯವರ ಈ ಮಾತು ಸರಿ. ಆದರೆ ಕಸಗುಡಿಸುವವನ ಮಕ್ಕಳು, ಮರಿಮಕ್ಕಳು ಕಸಗುಡಿಸುವವರಾಗಿಯೇ ಬದುಕಬೇಕೆ? ಆಳುವ ಜನರ ಮಕ್ಕಳು ಎಂತಹ ದಡ್ಡರಾಗಿಯೇ ಇದ್ದರೂ ಆಳುವವರಾಗಿಯೇ ಮುಂದುವರಿಯಬೇಕೆ? ಎನ್ನುವುದಕ್ಕೆ ಮಾಸ್ತಿಯವರು ಉತ್ತರ ನೀಡಿಲ್ಲ. ಅಲ್ಲದೆ ಮಾಸ್ತಿಯವರು ಒಪ್ಪಿಕೊಂಡಿರುವ 'ತಲೆ ಉಚ್ಚ, ಕಾಲು ನೀಚ' ಸಿದ್ಧಾಂತ ಎಂದೋ ಬಿದ್ದು ಹೋಗಿದೆ. ಒಂದ ದೇಹದಲ್ಲಿ ಒಂದು ಭಾಗ ಉಚ್ಚ, ಇನ್ನೊಂದು ಭಾಗ ನೀಚ ಎಂದರೆ ಅರ್ಥವೇನು?

ಕಾಂಗ್ರೆಸ್ ಪಕ್ಷ ಒಡೆದುದನ್ನು ರಾಷ್ಟ್ರಪತಿ ಗಿರಿಯವರು ಸಾಕ್ಷ್ಯನೀಡುವುದಕ್ಕಾಗಿ ತಾವೇ ವರಿಷ್ಠ ನ್ಯಾಯಾಲಯಕ್ಕೆ ಹೋದುದನ್ನು, ಬ್ಯಾಂಕುಗಳ ರಾಷ್ಟ್ರೀಕರಣವನ್ನು ಕುರಿತು ಮಾಸ್ತಿಯವರು ವಿಚಾರ ಮಾಡುವಾಗಲೆಲ್ಲ ಕಂಡುಬರುವುದು ಅವರ ಈ ಸಂಪ್ರದಾಯ ಮನೋಭಾವವೇ. ಎಲ್ಲ ಕ್ಷೇತ್ರಗಳಲ್ಲಿಯೂ ಹೊಸ ಮೌಲ್ಯಗಳು ಬರುತ್ತಿರುತ್ತವೆ. ಈ ಹೊಸ ಮೌಲ್ಯಗಳನ್ನು ಒಪ್ಪಿಕೊಳ್ಳಲು ಮನಸ್ಸು ಸಿದ್ಧವಿಲ್ಲದಿದ್ದಾಗ ಆಗುವ ಕಿರಿಕಿರಗೆ ಮಾಸ್ತಿಯವರ ವಿಚಾರವೇ ಒಂದು ದೃಷ್ಟಾಂತ.

೪

ಮಾಸ್ತಿಯವರ ಸಂಕೋಚ ಸ್ವಭಾವಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ 'ಸಿನಿಮಾನೀತಿ' ಯನ್ನು (ಪುಟ ೧೫೮) ಕುರಿತು ಇವರು ಮಾಡಿರುವ ವಿಚಾರ. ಭಾರತೀಯ ಚಿತ್ರಗಳಲ್ಲಿ ನಗ್ನತೆ, ಚುಂಬನಗಳಿಗೆ ಅವಕಾಶ ಕೊಡಬೇಕೆ ಬೇಡವೇ ಎನ್ನುವುದರ ಬಗ್ಗೆ ವಿಚಾರ ಮಾಡಿ ವರದಿ ಸಲ್ಲಿಸಲು ಕೇಂದ್ರ ಸರ್ಕಾರ ನ್ಯಾಯಮೂರ್ತಿ ಖೋಸ್ಲ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕಮಾಡಿತ್ತು. ಕತೆ ಮತ್ತು ಸನ್ನಿವೇಶಗಳ ದೃಷ್ಟಿಯಿಂದ ಅವಶ್ಯವೆನಿಸಿದರೆ, ಅನಿವಾರ್ಯವೆನಿಸಿದರೆ ನಗ್ನತೆ, ಚುಂಬನಗಳಿಗೆ ಅವಕಾಶ ಕೊಡಬೇಕು ಎಂದು ಈ ಸಮಿತಿಯು ಅಭಿಪ್ರಾಯಪಟ್ಟಿತು. ಸಮಿತಿಯ ವರದಿ ಪ್ರಕಟವಾದಾಗ ವಿಪುಲ ಚರ್ಚೆ ನಡೆಯಿತು. ಈ ಚರ್ಚೆಯಿಂದಲೇ ಮಾಸ್ತಿಯವರ ಮನಸ್ಸು ಮುದುಡಿರಬೇಕು. ಈ ವಿಚಾರವಾಗಿ ಸಂಕೋಚದಿಂದಲೇ ಬರೆದಿದ್ದಾರೆ: ''ಬೆತ್ತಲೆ ಇರುವುದು ಬಹುಪಾಲು ಮಾನವನ ಆದಿಯ ಅವಸ್ಥೆಯ ಒಂದು ಕುರುಹು. ಬಟ್ಟೆ ನಾಗರೀಕತೆಯ ಒಂದು ಲಕ್ಷಣ. ಎಲ್ಲರೂ ನೋಡುವಂತೆ ಗಂಡು ಹೆಣ್ಣು ಕಲೆಯುವುದು ಮೃಗಗಳ ಲಕ್ಷಣ., ಸುಸಂಸ್ಕೃತವಂಥ ಸಾಮಾಜಗಳು ಈ ವಿಷಯದಲ್ಲಿ ನಿಯಮಗಳನ್ನು ಬೆಳೆಸಿಕೊಂಡು ಬಂದಿವೆ. ಆಂಗ್ಲ ಸಮಾಜದಲ್ಲಿ ಗಂಡ ಹೆಂಡತಿ ಹತ್ತು ಜನರೆದುರಿಗೆ ಒಬ್ಬೊರನ್ನೊಬ್ಬರು ಮುತ್ತಿಕ್ಕಬಹುದು. ನಮ್ಮಲ್ಲಿ ಇದು ಕ್ರಮ ಎನಿಸಿಲ್ಲ. ಆ ಸಮಾಜದ ರೀತಿಯೇ ಸರಿ, ಈ ಸಮಾಜದ ರೀತಿ ಸರಿಯಲ್ಲ ಎಂದು ಯಾರೂ ಹಠ ಮಾಡಬಾರದು. ಅಲ್ಲಿಯ ಹತ್ತು ಸಮಸ್ತರು ಅದು ಅಲ್ಲಿ ಸರಿ ಹೇಳುತ್ತಾರೆ, ಅದು ಅಲ್ಲಿ ಸರಿ. ಇಲ್ಲಿಯ ಹತ್ತು ಸಮಸ್ತರು ಇಲ್ಲಿ ಬೇರೆ ಯಾವುದೋ ಸರಿ ಎಂದು ಹೇಳವ ದಿನ ಒಂದು ಬರಬಹುದು, ಆಗ್ಗೆ ಅಲ್ಲಿಯಂತೆ ಇಲ್ಲಿಯೂ ಆಡೋಣ. ಅದುವರೆಗೆ ಇಲ್ಲಿ ಹತ್ತು ಜನಕ್ಕೆ ಯಾವುದು ಸಮ್ಮತ ಅದನ್ನು ಮಾಡೋಣ'' ಎಂದು ಹೇಳುವ ಮಾಸ್ತಿಯವರು ಬೆತ್ತಲೆ, ಚುಂಬನಗಳಿಲ್ಲದ ಈಗಿನ ಭಾರತೀಯ ಚಿತ್ರಗಳನ್ನು ನೋಡಬೇಕಿತ್ತು. ನಗ್ನತೆ, ಚುಂಬನಗಳನ್ನು ಪರೋಕ್ಷವಾಗಿ ಸೂಚಿಸುವ ಹಲವಾರು ದೃಶ್ಯಗಳು, ಸಾಮಾನ್ಯವಾಗಿ ಎಲ್ಲ ಚಿತ್ರಗಳಲ್ಲಿಯೂ ಇರುತ್ತವೆ. ಈ ಪರೋಕ್ಷಕ್ಕಿಂತ ಪ್ರತ್ಯಕ್ಷ ಎಷ್ಟೋ ಮೇಲು.

ಹತ್ತುಜನ ಒಪ್ಪಿಕೊಂಡರೆ ಆಗಲಿ ಎಂದು ಮಾಸ್ತಿಯವರು ಹೇಳುವುದರ ಹಿನ್ನಲೆಯಲ್ಲಿ ಹತ್ತು ಜನ ಒಪ್ಪುವುದಿಲ್ಲ ಎನ್ನುವ ಅರ್ಥವಿದೆ. ಸದ್ಯಕ್ಕೆ ಒಂದು ವೇಳೆ ಹತ್ತು ಜನ ಒಪ್ಪದಿದ್ದರೂ ಎಂಟೊಂಬತ್ತು ಜನರಾದರೂ ಒಪ್ಪುತ್ತಿದ್ದಾರೆ. ಹತ್ತುಜನ ಒಪ್ಪುವ ದೂರವಿಲ್ಲ.

೫

ಮಾಸ್ತಿಯವರ ಸ್ವಭಾವ ಮೃದು. ಕರ್ಕಶವಾದುದನ್ನು ಅವರು ಹೇಳಲಾರರು. ಚಳುವಳಿ, ದಾಂಧಲೆ ಅವರಿಗೆ ಹಿಡಿಸವು. ಬದುಕು ಶುದ್ಧವಾಗಿರಬೇಕು, ಶುಚಿಯಾಗಿರಬೇಕು ಎನ್ನುವುದು ಅವರ ಹಂಬಲ. ಆ ದೃಷ್ಟಿಯಿಂದಲೇ ಅವರು ಎಲ್ಲ ವಿಚಾರಗಳನ್ನು ವಿಚಾರಮಾಡುವುದು. ಅನೇಕ ವಿಚಾರಗಳಲ್ಲಿ ಅವರ ಅಭಿಪ್ರಾಯವನ್ನು ನಾವು ಒಪ್ಪಬಹುದು, ಬಿಡಬಹುದು. ಆದರೆ ಅವರ ವಿಚಾರದ ಹಿಂದಿನ ಶುದ್ಧ ಮನಸ್ಸನ್ನು

ಯಾರೂ ಪ್ರಶ್ನಿಸಲಾರರು. ಆ ಮನಸ್ಸು ಯಾರಿಗೂ ನೋವುಂಟುಮಾಡುವಂತಹುದಲ್ಲ. ಇಂದಿರಾ ಗಾಂಧಿ ಎಂದು ಹೇಳುವುದಕ್ಕೆ ಇಂದಿರಾ ತಾಯಿ ಎಂದು ಹೇಳುವುದೇ ಅವರ ಸ್ವಭಾವ. (ನಮಗೆ ಇದು ಕೃತಕವೆನಿಸಬಹುದು. ಒಬ್ಬರಂತೂ ಹೀಗೇಕೆ ಕೃತಕವಾಗಿ ಬರೆಯುತ್ತೀರಿ ಎಂದು ಪತ್ರವನ್ನು ಬರೆದಿದ್ದಾರೆ. ಆದರೆ ಹಾಗೆ ಕರೆಯುವುದೇ ನನಗೆ ಚೆನ್ನು ಎಂದು ಮಾಸ್ತಿಯವರು ಹೇಳುತ್ತಾರೆ.) ಅವರ ಎಲ್ಲ ಬರವಣಿಗೆಗಳಲ್ಲಿಯೂ ಈ ಸ್ವಭಾವವನ್ನು ಕಾಣುತ್ತೇವೆ. ವಿಷಯಗಳನ್ನು ಇಷ್ಟು ನವಿರಾಗಿ ಹೇಳುವವರು ನಮ್ಮಲ್ಲಿ ಅಪರೂಪ.

ಭಾವ

ಹಂಪ. ನಾಗರಾಜಯ್ಯ

ಭಾವ ಎಂಬ ಈ ಪುಸ್ತಕದಲ್ಲಿ ನನ್ನ ಜೀವನವನ್ನು ಕುರಿತು ನನ್ನ ಭಾವವೇನೆಂಬುದನ್ನು ಬರೆದಿಡಲು ಯೋಚನೆ ಮಾಡಿದ್ದೇನೆ. ಲೋಕದಲ್ಲಿ ಹಿರಿಯ ಸ್ಥಾನಗಳಲ್ಲಿ ಹುಟ್ಟಿ, ವಿಸ್ತಾರವಾದ ಕಾರ್ಯರಂಗಗಳಲ್ಲಿ ಕೆಲಸ ಮಾಡಿ, ಮಹನೀಯ ಗುಣಗಳನ್ನು ಪ್ರಕಟಿಸಿ, ಬಹು ಜನರಿಂದ ಮನ್ನಣೆ ಪಡೆದವರು ಆತ್ಮಚರಿತೆಗಳನ್ನು ಬರೆಯುವುದುಂಟು. ನನ್ನ ಬಾಳುವೆ ಅಂಥದಲ್ಲ. ಎಂದ ಮೇಲೆ ಇಂಥ ಬಾಳುವೆಯನ್ನು ಕುರಿತು ಏನನ್ನಾದರೂ ಹೇಳಬೇಕಾದ ಕಾರಣ ಏನಿರಬಹುದೆಂದು ಯಾರಿಗಾದರೂ ತೋರಬೇಕು. ಈ ಮಾತನ್ನು ಇನ್ನು ಯಾರೇ ಆದರೂ ಒಪ್ಪತಕ್ಕದ್ದೆ. ಆದರೆ ಲೋಕದ ದೃಷ್ಟಿಯಿಂದ ಹಿರಿಯದಾದ ಜೀವನವನ್ನು ಕುರಿತು ಲೋಕ ಮೆಚ್ಚುವುದಾಕ್ಕಾಗಿ ಬರೆಯುವ ಆತ್ಮಚರಿತ್ರೆ ಒಂದು ರೀತಿ. ಇನ್ನೊಂದು ರೀತಿಯ ಆತ್ಮಚರಿತೆಗಳಲ್ಲಿ ಯಾವ ಒಂದು ಜೀವನದ ವಿಷಯವಾಗಿ ಆಗಲಿ ಅನುಭವವನ್ನು ಬರೆದಿರುವುದುಂಟು. ಹತ್ತು ಜನದ ದೃಷ್ಟಿಯಿಂದ ಒಂದು ಬದುಕು ದೊಡ್ಡದಲ್ಲದೆ ಹೋಗಬಹುದು. ಲೋಕ ಅದರ ಅನುಭವದ ಸ್ವರೂಪವೇನೆಂದು ತಿಳಿಯುವುದೂ ನೋಡುವುದೂ ಒಂದು ದೃಷ್ಟಿಯಿಂದ ಒಳ್ಳೆಯದು. ದೊಡ್ಡವರ ಸಂಖ್ಯೆ ಕಡಿಮೆ. ಅವರ ಕಷ್ಟ ಸುಖವನ್ನು ಅವರು ನೋಡಿಕೊಳ್ಳಬಲ್ಲರು; ತಿಳಿದುಕೊಳ್ಳಬಲ್ಲರು. ಸಾಮಾನ್ಯರ ಸಂಖ್ಯೆ ಬಹು ದೊಡ್ಡದು. ಅವರ ಕಷ್ಟ ಸುಖವನ್ನು ಪ್ರಪಂಚ ನೋಡಿಕೊಳ್ಳಬೇಕಾಗುತ್ತದೆ. ಏಬ್ರಹಾಂ ಲಿಂಕನ್ನನು ಒಂದು ಸಲ ಹೇಳಿದ ಮಾತು ಇಲ್ಲಿ ಪ್ರಕೃತವಾಗುತ್ತದೆ. ಒಂದು ಸಭೆಯಲ್ಲಿ ಅವನನ್ನು ಕಂಡ ವೃದ್ಧೆಯೊಬ್ಬಳು, 'ಇವನು ಎಂಥ ಸಾಮಾನ್ಯನಂತೆ ಕಾಣುತ್ತಾನೆ' ಎಂದಳಂತೆ. ಈ ಮಾತು ಏಬ್ರಹಾಂನ ಕಿವಿಗೆ ಬಿತ್ತು. ಅವನು, 'ಹೌದು ತಾಯಿ, ನಾನು ಬಹು ಸಾಮಾನ್ಯನು. ಆದರೆ ದೇವರಿಗೆ ಇಂಥ ವ್ಯಕ್ತಿಯೆಂದರೆ ಬಹಳ ಇಷ್ಟವೆಂದು ಕಾಣುತ್ತದೆ. ಅವನು ಲೋಕದ ತುಂಬ ಇಂಥವರನ್ನೇ ಮಾಡಿದ್ದಾನೆ.' ಎಂದು ಹೇಳಿದನಂತೆ. ಈ ಸಾಮಾನ್ಯ ವ್ಯಕ್ತಿತ್ವದ ಸಾಮಾನ್ಯ ಅನುಭವವೇನು ಎನ್ನುವುದನ್ನು ತಿಳಿದೇ ಸಮಾಜ ಬಹುಜನಕ್ಕೆ ಯಾವುದು ಒಳ್ಳೆಯದೆಂಬುದನ್ನು ಗ್ರಹಿಸಿಬಹುದು, ಪ್ರಯೋಗಿಸಬಹುದು, ನಡೆಸಬಹುದು. ಈ ಕಾರಣದಿಂದ ಮಹನೀಯವಲ್ಲದಿದ್ದರೂ, ಇಂಥ ಒಂದು ಬಾಳುವೆಯ ಅನುಭವವನ್ನು ಲೋಕ ಅರಿಯುವುದು ಅವಶ್ಯಕ.

ಇಂತ ಬಾಳುವೆಗಾದರೂ ತನ್ನ ಅನುಭವವನ್ನು ಮೆಲುಕು ಹಾಕುವುದರಲ್ಲಿ ಒಂದು ಪ್ರಯೋಜನವೂ ಸಂತೋಷವೂ ಉಂಟು. ಎಷ್ಟು ಸಣ್ಣ ಬದುಕಾದರೂ ಅವರ ದೃಷ್ಟಿಯಿಂದ ಅದು ಬಹು ಮುಖ್ಯ. ಅದು ದೊಡ್ಡದಲ್ಲದಿರಬಹುದು; ನೆರೆಯ ಬದುಕು ದೊಡ್ಡದಿರಬಹುದು. ಆದರೂ ಆ ದೊಡ್ಡ ಬದುಕಿನ ಅನುಭವಕ್ಕಿಂತ ಈ ಸಣ್ಣ ಬದುಕಿಗೆ ತನ್ನ ಅನುಭವ ದೊಡ್ಡದಾಗಿರುತ್ತದೆ. ದೊಡ್ಡದಲ್ಲದಿದ್ದರೂ ಮುಖ್ಯವಾಗಿರುತ್ತದೆ. ನಿಜವಾಗಿ

ನೋಡಿದರೆ, ಎಷ್ಟು ಸಣ್ಣದಾದರೂ ಈ ಬದುಕು ಲೋಕದ ಬದುಕಿನಲ್ಲಿ ಒಂದು ಅಂಗ. ವಿಶ್ವದ ಜೀವನ ತನ್ನನ್ನು ತಾನು ನೋಡಿಕೊಳ್ಳುವುದಕ್ಕೆ ಈ ಕೋಟ್ಯಾಂತರ ಜೀವನದಲ್ಲಿ ಆಕಾರಗೊಂಡಿದೆ. ಅದರಲ್ಲಿ ಈ ಒಂದೊಂದು ಕಣವೂ ಒಂದು ಕೇಂದ್ರ. ಸೃಷ್ಟಿಯೆಲ್ಲಾ ಒಂದು, ಈ ಒಂದು ಬದುಕೇ ಒಂದು. ನಾನಿದ್ದರೆ ಮೂರು ಲೋಕವುಂಟು ಎಂಬ ಮಾತಿಗೆ ಇದೇ ಸಾಧುವಾದ ಅರ್ಥ. ನಾನಿಲ್ಲದೆ ಏನಿದ್ದರೇನು, ಏಷ್ಟಿದ್ದರೇನು? ಈ ಕಾರಣದಿಂದ ನಾನು ಎಂಬುದರ ವಿಷಯದಲ್ಲಿ ಒಂದೊಂದು ಜೀವಕ್ಕೆ ಮಮತೆ ಹೇಗೋ ಹಾಗೆ ಅಭಿಮಾನವೂ ಇರುತ್ತದೆ. ಅದನ್ನು ಕುರಿತು ವಿಚಾರ ಮಾಡುವುದರಲ್ಲಿ ಮನುಷ್ಯನಿಗೆ ಸುಖವುಂಟು. ಹಸುಳೆ ತನ್ನ ಪಾಡಿಗೆ ತಾನು ಕುಳಿತು ತನ್ನ ಕಾಲಿನ ಬೆರಳುಗಳನ್ನು ಹಿಡಿದುಕೊಂಡು ಪರೀಕ್ಷಿಸುವಂತೆ ಮನುಷ್ಯನಿಗೆ ತನ್ನ ಜೀವನದ ವಿಷಯವನ್ನು ತಾನು ವಿಚಾರಿಸಿ ನೋಡುವುದು ಒಂದು ರೀತಿ ಕೇಳಿ ಅಥವಾ ವಿನೋದ ವ್ಯವಹಾರ. ಇಂಥ ಪರೀಕ್ಷೆಯಿಂದ ಪ್ರಯೋಜನ ಕೂಡ ಉಂಟು. ಎಲ್ಲ ಜೀವನದಲ್ಲೂ ತಪ್ಪುಗಳಾಗಿರುತ್ತವೆ. ಎಲ್ಲ ಜೀವನದಲ್ಲೂ ಅದನ್ನು ಕಾಯುವ ಶಕ್ತಿಯ ಒಂದು ಕರುಣೆ ಅಲ್ಲಲ್ಲಿ ಕಂಡಿರುತ್ತದೆ. ಎಲ್ಲ ಜೀವನವೂ ಮುಂದಕ್ಕೆ ಯಾವ ದಾರಿಯನ್ನು ಹಿಡಿಯುವುದೆಂದು ಯೋಚನೆ ಮಾಡಬೇಕಾಗಿರುತ್ತದೆ. ಈ ಸಂತೋಷ ಈ ಪ್ರಯೋಜನವನ್ನು ಪಡೆಯಬೇಕೆಂದು ಪ್ರಯತ್ನ ಪಡುವುದು ಎಷ್ಟು ಸಣ್ಣ ಜೀವನಕ್ಕಾದರೂ ಒಳ್ಳೆಯದೇ. ಎಲ್ಲ ಜೀವನವೂ ಈ ರೀತಿಯ ಪರಿಶೀಲನೆಯನ್ನು ಬರೆದಿಡಬೇಕಾದ್ದಿಲ್ಲ. ಕೆಲವರು ಬರೆದಿಡುವುದು ಎಲ್ಲರ ಪರವಾಗಿ ಬರೆದಂತೆ ಆಗಬಹುದು. ಜೀವನ ಎಷ್ಟು ಮಟ್ಟಿಗೆ ಸಾಮಾನ್ಯ ರೀತಿದಾದರೆ ಅಷ್ಟು ಮಟ್ಟಿಗೆ ಅದು ಈ ರೀತಿಯ ಪ್ರಾತಿನಿಧ್ಯವನ್ನು ಸಾಧಿಸುತ್ತದೆ. ನಾನು ಪರಿಶೀಲಿಸುವ ಜೀವನ ಈ ರೀತಿಯಾಗಿ ಬಹು ಜನದ ಜೀವನದ ಪ್ರತಿನಿಧಿ ಎಂದು ನನ್ನ ನಂಬಿಕೆ. (ಭಾವ೧, ಪುಟ೧-೩)

-ಮಾಸ್ತಿಯವರು ಈ ಮಾತುಗಳನ್ನು ಅವರ ಆತ್ಮಕಥೆಗೆ ಪ್ರಾಸ್ತವಿಕವೆಂದು ಬರೆದಿದ್ದಾರೆ. ಅವರು ಹೊಸಗನ್ನಡ ಬೆಳವಣಿಗೆಯಲ್ಲಿ ಮೊದಲಿಂದ ಬಹುವಾಗಿ ಪಾಲುಗೊಂಡವರು. ಕಳೆದ ಅರ್ಧಶತಮಾನದ ಕನ್ನಡ ಸಾಹಿತ್ಯದಲ್ಲಿ ಅವರ ಬರಹವಿಲ್ಲದ ವರ್ಷವಿಲ್ಲ. ಕಥೆಗಾರರಾಗಿ, ಕವಿಯಾಗಿ, ವಿಮರ್ಶಕರಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ, ಪತ್ರಿಕಾಕರ್ತರಾಗಿ - ಹೀಗೆ ಒಂದಲ್ಲ ಒಂದು ಬಗೆಯಲ್ಲಿ ಉದ್ದಕ್ಕೂ ಅಯ್ವತ್ತು ವರ್ಷಗಳಿಂದ ಅವರ ಲೇಖಣಿ ಅವಿಶ್ರಾಂತವಾಗಿ ಹೊಸಗನ್ನಡದ ಗಡಿಯನ್ನು ಹಿಗ್ಗಿಸುತ್ತಾ ನಡೆದಿದೆ. ಇವುಗಳಲ್ಲಿ ಒಂದೊಂದು ಕ್ಷೇತ್ರದಲ್ಲೂ ಅವರ ಕಾಣಿಕೆ, ಕೃಷಿ ಹಿರಿದು. ಆದರೆ ಇವೆಲ್ಲ ಒಂದು ತೂಕವಾದರೆ, ಅವರ ಆತ್ಮಕಥೆಯೇ ಒಂದು ತೂಕವೆಂದು ತಿಳಿಯಬೇಕಾಗುತ್ತದೆ.

ಮಾಸ್ತಿಯವರದು ಗಟ್ಟಿಯಾದ ದೊಡ್ಡಬದುಕು. ಎಂಬತ್ತು ವರ್ಷಗಳ ತುಂಬು ಜೀವನ ನಡೆಸಿದ್ದಾರೆ. ಅವರ ಈ ನಿಡುಬಾಳು ಹೊರನೋಟಕ್ಕೆ ಒಮ್ಮೊಗನಾಗಿ ನೇರ ಗುರಿಯತ್ತ ಸಾಗಿದಂತೆ ತೋರಿದರೂ ಒಳನೋಟಕ್ಕೆ ಹಾಗಿಲ್ಲ. ಅದು ತನ್ನ ಸುತ್ತ ಮುತ್ತಲ ಹತ್ತೂ ಜನರ ಬಾಳಿಗೆ ಚೆನ್ನಾಗಿಸಿ ಹೊರಟದ್ದಲ್ಲ. ತಾನು ನಡೆದಾಡುವ ನೆಲದ ನಿಸರ್ಗದ ಚೆಲುವಿಗೆ ಕುರುಡಾಗಿಲ್ಲ. ಹಲವು ಮೊಗನಾಗಿ ಹರಹಿನಿಂದ ಹರಿದಿದೆ. ಆ ಬಾಳಿನಲ್ಲಿ ವೈವಿಧ್ಯವಿದೆ, ವ್ಯಾಪಕತೆಯಿದೆ. ಅವರ ಬಾಳಿನ ನಿರೂಪಣೆಯೆಂದರೆ ಸಹಜವಾಗಿಯೇ ಕುತೂಹಲದ ಗಣಿಯೆಂದು ಅರಿಯಬಹುದು.

'ಭಾವ' ಅದರ ನಿಡುಬಾಳಿನ ಚರಿತೆ. ಅದು ಮೂರು ಸಂಪುಟಗಳ ಹಿರಿಯ ಹೊತ್ತಗೆ.

ಮೂರು ಸಂಪುಟಗಳು ಸೇರಿದರೆ ಭಾವದ ಒಟ್ಟು ಪುಟಗಳು ೧೩೫೭ (೪೫೭+೪೦೦+೫೦೦). ಅವರಿಗೇ ಈ ಗಾತ್ರ ಗಾಬರಿಯುಂಟು ಮಾಡಿರಬೇಕು: 'ಉದ್ದ ಹೆಚ್ಚು. ಆದರೆ ಇದು ನನ್ನ ಜೀವನವನ್ನು ಕುರಿತ ನನ್ನ ಭಾವ. ಈ ಭಾವ ಸ್ವಭಾವವನ್ನು ಅವಲಂಬಿಸುತ್ತದೆ.' ಅವರು ಜೀವನ ಚರಿತೆಯನ್ನು ಬರೆದುದು ಕೂಡ ಹಲವು ಗೆಳೆಯರ ಒತ್ತಾಸೆ ಸೂಚನೆಗಳಿಗೆ ಕಟ್ಟುಬಿದ್ದು. ಅವರ ಬದುಕು ಒಂದು ಜೀವನ ಚರಿತೆಗೆ ವಸ್ತು ಆಗಬಲ್ಲದೊ ಇಲ್ಲವೊ ಎಂಬ ಅನುಮಾನ ಅವರಿಗೆ ಆದರೆ ಅವರ ಜೀವನ ಕುರಿತ ಅನೇಕ ಭಾವಗಳಿವೆ, ಅವನ್ನು ಕುರಿತು ಬೇಕಾದರೆ ಬರೆಯಬಹುದೆನ್ನಿಸಿತು. ಆದರಿಂದಾಗಿ ಈ ಹೊತ್ತಗೆಗೆ ಭಾವ ಎಂಬ ಒಪ್ಪವಾದ ಹೆಸರು. ಜೊತೆಗೆ ಈ ವಿಷಯದ ಬರಹಕ್ಕೆ ತೊಡಗಿದಂದು ಭಾವ ಸಂವತ್ಸರ ಬೇರೆ ನಡೆಯುತ್ತಿತ್ತು. ಭಾವ ಎಂಬ ಹೆಸರು ಮತ್ತೂ ಅನ್ವರ್ಥಕವಾಗಿ ಹೊಂದಿಕೊಂಡಿತು. 'ಭಾವ'ದ ಬರವಣಿಗೆ ಮುಗಿಯಬೇಕಾದರೆ ಸಾಕಷ್ಟು ಸಮಯ ತೆಗೆದುಕೊಂಡಿತು.

ಈ ಲೇಖನದ ಆರಂಭದಲ್ಲೇ ಉದಾಹರಿಸಿರುವ ಮಾತುಗಳನ್ನು ಮನನೀಯವಾಗಿರುವುದಲ್ಲದೆ ಜೀವನ ಚರಿತೆಯ ಉದ್ದೇಶ ಪ್ರಯೋಜನಾದಿಗಳನ್ನು ನಿರುಕಾಗಿ ತಿಳಿಸುತ್ತವೆ. ಯಾವ ಮನುಷ್ಯನೂ ತನ್ನ ಬಗೆಗೆ ನಿರೂಪಿಸುವಾಗ ಬುದ್ಧಿವಂತನಾಗಿ ಉಳಿಯಲಾರ ಎಂದು ಹೇಳಿದ್ದಾರೆ. ಮಮತೆ ವಿವೇಕವನ್ನು ಕೆಡಿಸುತ್ತದೆಂಬುದನ್ನು ತಿಳಿಸಿದ್ದಾರೆ. ಆದರೆ ಅವರು ಹೆಬ್ಬೊತ್ತಗೆ ಬರೆವಾಗ ಈ ಮಾತನ್ನು ನೆನಪಿನಲ್ಲಿಟ್ಟುಕೊಂಡೇ ಎಚ್ಚರದಿಂದ ರಚಿಸಿದ್ದಾರೆ. ಹೀಗಿದ್ದೂ ಮಾತೊ ವಿಷಯವೊ ಎಳೆ ತಪ್ಪಿದೆಯೆಂದು ತಿಳಿದು ಹೀಗೆ ಹೇಳಿದ್ದಾರೆ: ಈ ಪುಸ್ತಕದಲ್ಲಿ ಮಾತೋ ವಿಷಯವೋ ಹೀಗೆ ತಪ್ಪಿತು ಎಂಬಲ್ಲಿ ಓದುವವರು ಕ್ಷಮೆ ತಾಳಬೇಕೆಂದು ನಾನು ವಿನಯದಿಂದ ಬೇಡುತ್ತೇನೆ. ಇವು ಯಾವುದರಿಂದಲೇ ಆಗಲಿ ಬೇಸರ ಆದ ಹೊತ್ತಿನಲ್ಲಿ ಸೋದರ ಜೀವಿಗಳು, ಇದು ಎದುರಲ್ಲಿರುವ ಒಬ್ಬ ವ್ಯಕ್ತಿಯ ಜೀವನ ಎಂದು ಭಾವಿಸದೆ, ಕಲ್ಪನೆಯ ಒಬ್ಬ ವ್ಯಕ್ತಿಯ ಕತೆಯೆಂದು ಓದುವುದಾಗಿಲಿ, ಆಸಕ್ತಿಗೆ ಅನುಚಿತ ಎಂದು ಕಾಣಬಹುದಾದ ಸಂಗತಿ ಈ ಅನಾಸಕ್ತಿಗೆ ಬರಿಯ ಕತೆ ಎಂಬ ಕಾರಣದಿಂದ ಕ್ಷಮ್ಯವಾಗಿ ಕಂಡೀತು. ಮುಖ್ಯವಾಗಿ ಆತ್ಮಸ್ತುತಿಯ ಅಹಂಕಾರದ ಛಾಯೆ ಕಾಣುವ ಭಾಗಗಳಲ್ಲಿ ಪುಸ್ತಕದ ಈ ತೆರನ ಸಹನೆಯನ್ನು ಕಡ್ಡಾಯವಾಗಿ ಬಯಸುತ್ತದೆ.'

ಅವರ ಬದುಕನ್ನು ಕುರಿತು ಅವರ ಭಾವವನ್ನು ತಿಳಿಸುವ 'ಭಾವ'ದ ಮೂರು ತೆನೆಗಳಲ್ಲಿ ಮೊದಲನೆಯದು ಓದು ಮುಗಿದು ಮೈಸೂರು ಸಂಸ್ಥಾನದ ಅಧಿಕಾರಿ ವರ್ಗದಲ್ಲಿ ಒಂದು ಸ್ಥಾನ ದೊರೆತವರೆಗಿನ ಚರಿತವನ್ನು ಬಿತ್ತರಿಸುತ್ತದೆ. ಎರಡನೆಯದು ಹದಿನೆಂಟು ವರ್ಷ ಅಧಿಕಾರಿಯಾಗಿ ಕೆಲಸ ಮಾಡಿದ್ದು, ಸರಕಾರ ಆ ಮುನ್ನ ಅವರು ಕಾಣದಿದ್ದ ಅಕೌಂಟ್ಸ್ ಇಲಾಖೆಯ ಮುಖ್ಯ ಅಧಿಕಾರಿಯಾಗಿ ನೇಮಿಸಿದ್ದು ಮೊದಲಾದ ಅಧಿಕಾರಕ್ಕೆ ಸಂಬಂಧಿಸಿದ ಚರಿತೆ ಹೇಳುತ್ತದೆ. ಮೂರನೆಯ ತೆನೆಯಲ್ಲಿ ಎರಡು ಎಸಳುಗಳಿವೆ. ಅಕೌಂಟ್ಸ್ ಅಧಿಕಾರಿಯಾಗಿ ನೇಮನ ಪಡೆದಂದಿನಿಂದ ಮೊದಲಾಗಿ ಮಂತ್ರಿ ಸ್ಥಾನ ದೊರೆಯಲಿಲ್ಲವೆಂಬ ಕಾರಣದಿಂದ ಅವರಾಗಿ ಅಧಿಕಾರದಿಂದ ನಿವೃತ್ತಿ ಪಡೆದಲ್ಲಿಗೆ ಮೊದಲ ಎಸಳು ತಿಳಿಸುತ್ತದೆ. ಎರಡನೆಯ ಎಸಳು ಬಿಡುಗಡೆ ಪಡೆದಂದಿನಿಂದ ಈಚಿನ ಬಿಡುವಿನ ಬದುಕನ್ನು ಬಣ್ಣಿಸುತ್ತದೆ.

ಭಾವದ ಮೂರೂ ತೆನೆಗಳು ಸೇರಿ, ಅವರು ಮೊದಲಲ್ಲಿ ನೆನದುದಕ್ಕಿಂತ

ಲಂಬವಾದ ಒಂದು ಚರಿತೆಯಾಗಿ ಬೆಳೆದೂ ಕೆಲವು ವಿವರಗಳು ಕೈಬಿಟ್ಟು ಹೋಗಿವೆ. ಅವರ ಬದುಕಿನ ಎಲ್ಲ ಅನುಭವವೂ ಅಡಕವಾಗಿಲ್ಲ: 'ಜೀವನದ ಒಂದು ನಿಕಟ ಭಾಗ ಎನ್ನಲು ಬಾರದ ಹಲವು ಸಂಗತಿಯನ್ನು ಇದರಲ್ಲಿ ತರದೆ ಬಿಟ್ಟಿದೆ. ಹಾಗೆಯೇ ನನಗೆ ಇಷ್ಟರಾದ, ಪರಿಚಿತರಾದ ಹಲವು ಮಹನೀಯರ ವ್ಯಕ್ತಿಚಿತ್ರಗಳನ್ನೂ ಕೊಡದೆ ಉಳಿಸಿದೆ.' ಇದರಂತೆ ಅವರು ಬರೆಹಗಾರರಾಗಿ ತಳೆದ ಅನುಭವ, ಪಡೆದ ಪ್ರಭಾವ ಕುರಿತ ಪ್ರಸ್ತಾಪ ಇದರಲ್ಲಿ ಕಡಿಮೆ. ಬರೆಹಗಾರನ ಬದುಕನ್ನು ಇದರಲ್ಲಿ ಬೇಕೆಂದೇ ಮೊಟಕುಗೊಳಿಸಿದ್ದಾರೆ. ಈ ವಿಷಯ ಕುರಿತು ಈ ಮುನ್ನ ಹೊರಬಂದಿರುವ ಪ್ರಸಂಗದ ಎರಡು ತೆನೆಗಳಲ್ಲಿ ಹೇಳಿದ್ದಾಗಿದೆ.

ಭಾವದ ಮೂರೂ ಭಾಗಗಳು ಒಟ್ಟಂದದಿಂದ ಕಂಗೊಳಿಸುತ್ತವೆ, ಅಷ್ಟು ಅಚ್ಚುಕಟ್ಟಾದ ಹೊಂದಾಣಿಕೆಯ ನೆಯ್ಗೆಯಿದೆ. ಒಂದೊಂದೇ ತೆನೆಯನ್ನು ತನಿತನಿಯಾಗಿ ಓದಿದಾಗಲೂ ಅದರ ಚೆಲವು ಸ್ವಾರಸ್ಯ ಇದ್ದದ್ದೇ. ಆದರೂ ಮೊದಲ ತೆನೆಯಲ್ಲಿ ಮಾಸ್ತಿಯಲ್ಲಿ ಮೊದಲಿಟ್ಟ ಈ ಜೀವ ಹೇಗೆ ಬೆಳೆಯಿತೆಂಬ, ಅದರ ವಿಕಾಸದ ಸಮಗ್ರ ಚಿತ್ರವನ್ನು ನೋಡುವ ತವಕ ಮೂಡುತ್ತದೆ. ಮೂರನೆಯ ತೆನೆಯ ಕಡೆಯ ಪುಟದ ತನಕ ಈ ಕುತೂಹಲ ತಣ್ಣಗಾಗುವುದಿಲ್ಲ. ಬತ್ತದ ಈ ಆಸಕ್ತಿಯ ನಿರೂಪಣೆಯ ಯಶಸ್ಸಿನ ಗುಟ್ಟು ಮಾಸ್ತಿಯವರ ಕತೆಗಾರಿಕೆ ಕಲೆ. ಅವರ ಆ ಕತೆಗಾರರ ಕೈಚಳಕ ಹೊತ್ತಗೆಯ ಮೊದಲಿಂದ ತುದಿ ತನಕ ಹಾಸುಹೊಕ್ಕಾಗಿದೆ. ಎಲ್ಲಿ ಯಾವ ಪುಟ ತೆರೆದರೆ ಅಲ್ಲಿ ಈ ಕಲೆ ಕಾಣುತ್ತದೆಯಾದರೂ ಒಂದು ಉದಾಹರಣೆ ನೋಡಬಹುದು; 'ಅವರಿಗೆ ಒಬ್ಬ ಮಗ, ಅವನ ಹೆಸರು ವೆಂಕಟಕೃಷ್ಣಯ್ಯ ಎಂದು. ಪ್ರಾಯ ಬಂದಾಗ ಹುಡುಗನಿಗೆ ಮದುವೆ ಆಯಿತು. ಅವರ ಹೆಂಡತಿ ಸಮೀಪದ ಒಬ್ಬ ಹೆಣ್ಣು ಮಗಳು. ಇವರಿಗೆ ಇಬ್ಬರು ಮಕ್ಕಳು, ತಾನು ಆಳ್ವಿಕೆಯಲ್ಲಿ ಮಗನು ಬೆಳೆಯುತ್ತಿರಲಾಗಿ ಸೊಸೆಯಾದವಳಿಗೆ ವಿಶೇಷ ಸ್ವಾತಂತ್ರ್ಯವಿರಲಿಲ್ಲ. ಒಂದು ಸಲ . . . .'' (ಭಾವ-೧, ಪುಟಗಳು ೭-೮). ಅವರ ಯಾವುದೇ ಕತೆ ಕಾದಂಬರಿ ಓದಿದಂತೆ ಭಾವವನ್ನೂ ಅಷ್ಟೇ ಗೆಲುವಾಗಿ ಓದಬಹುದು.

ಹುಟ್ಟಿ ಬೆಳೆದ, ಓದು ಬರೆಹ ಕಲಿತ, ಊರ ಕೇರಿಗಳ, ಸಾಕಿಸಲಹಿದ ನಂಟರಿಷ್ಟರ, ಒಡನಾಡಿ ಒಡನೋದಿಗಳ, ಕಲಿಸಿದ ಹಿರಿ ಕಿರಿಯ ಗುರುಗಳ, ಬೇರೆ ಬೇರೆ ಅಧಿಕಾರಗಳಲ್ಲಿದ್ದುದರ, ಆ ಅವಧಿಯಲ್ಲಿ ಅಧಿಕಾರ ನಿಮಿತ್ತ ಸಂಚರಿಸಿದ ಸ್ಥಳಗಳ ಹೆಸರು ವಿವರ ಪರಿಚಯ ಮಾಡಿಕೊಡುತ್ತಾರೆ. ಅರವತ್ತು ವರ್ಷದ ಹಿಂದಿನ ಹಳೆಯ ಗೆಳೆಯರೊಡನೆ ಕಳೆದ ದಿನಗಳನ್ನು ನೆನಪಿಸುತ್ತಾರೆ. ಅವರ ಜಿಗುಟಾದ ನೆನಪಿನ ಕಸುವು ಕಂಡು ಅಚ್ಚರಿ ಮೆಚ್ಚುಗೆ ಒಡನೊಡನೆ ಮೂಡುತ್ತವೆ. ಯಾವ ಸಣ್ಣ ಸಂಗತಿಯನ್ನು ಮರೆಯರು, ಬಿಡರು. ಉಪನಯ ಉಪಾಕರ್ಮದಿಂದ ಹಿಡಿದು ಇತರ ನೂರಾರು ಅನುಭವ ಅನ್ನಿಸಿಕೆಗಳನ್ನು ಬಣ್ಣಿಸಿದ್ದಾರೆ. ಅವುಗಳೆಲ್ಲದರ ವಿಶ್ಲೇಷಣೆ ಈ ಪರಿಮಿತ ಸಮೀಕ್ಷೆಯಲ್ಲಿ ಸಾಧ್ಯವಿಲ್ಲ. ಒಂದು ಸ್ಥೂಲ ಹಕ್ಕಿ ನೋಟಕ್ಕೆ ದಕ್ಕಿದ ಕೆಲವು ಸನ್ನಿವೇಶ ಪ್ರಸಂಗಗಳನ್ನಷ್ಟೇ ಬಿಡಿಸಿ ನೋಡಿದೆ.

ಭಾವದಲ್ಲಿ ಎಲ್ಲಕ್ಕೂ ಮೊದಲು ಎದ್ದು ಕಾಣುವುದೆಂದರೆ ದೈವದ ಮಾತು. ಈ ಹೆಬ್ಬೊತ್ತಗೆಯಲ್ಲಿ ನನ್ನ ಸ್ಥೂಲ ವಿಹಂಗಮ ನೋಟಕ್ಕೆ ಸುಮಾರು ಇನ್ನೂರು ಕಡೆ ದೈವದ ಪ್ರಸ್ತಾಪವಿದೆ. ಮೊದಲ ತೆನೆಯ ಮುನ್ನುಡಿಯ ಕಡೆಯಲ್ಲೇ ಈ ನುಡಿಗಳಿವೆ; 'ಬಾಳ ಕಷ್ಟದಿಂದ ಕುಸಿದು ಭೂಗತವೇ ಆಗುವ ಹೊತ್ತಿನಲ್ಲಿ ಚೇತನವನ್ನು ಯಾವುದೋ ಶಕ್ತಿ, ಯಾವುದೋ ಕರುಣೆ ಹಿಡಿದುಕೊಳ್ಳುತ್ತದೆ, ಎತ್ತಿ ನಿಲ್ಲಿಸುತ್ತದೆ. ನಿಂತೆ ಎಂದು

ಹೇಳಿಕೊಳ್ಳುವಲ್ಲಿ ಚೇತನ ಆ ನಿಂತದ್ದು ತನ್ನ ವ್ಯಾಪಾರ ಎನ್ನುತ್ತಿರುವಂತೆ ಕಾಣುತ್ತದೆ. ಇದು ಕಾಣುವ ಪಾಡು ಅಷ್ಟೆ. ಸ್ವಲ್ಪ ಯೋಚಿಸಿದರೆ ಚೇತನ ಇದನ್ನು ತಿಳಿಯಬಲ್ಲದು. ನನ್ನ ಚೇತನಕ್ಕೆ ದೈವ ಈ ತಿಳಿವನ್ನು ಅನುಗ್ರಹಿಸಿದೆ, ನನ್ನ ಬಾಳಿನಲ್ಲಿ ತಪ್ಪೇನಾಗಿದೆ ಅದಕ್ಕೆಲ್ಲ ನನ್ನ ಸ್ವಭಾವ ಕಾರಣ; ಒಳಿತೇನಾಗಿದೆ ಅದೆಲ್ಲದರ ಕಾರಣ ದೈವ ಕೃಪೆ'. ಇಲ್ಲಿ ಅನೇಕರಿಗೆ ಕಟರೆಯಾಗುವಷ್ಟು ಅತಿಯೆಂಬಂತೆ, ಬೇಸರ ಬರುವಷ್ಟು ದೈವದ ಮಾತು ಬಂದಿದೆಯೆಂದು ತೋರಬಹುದು, ಅಂತಹವರಿಗೆ ಮೇಲಿನ ಮಾತು ಉತ್ತರ ಕೊಟ್ಟೀತು. ಇದೂ ಸಮಾಧಾನ ನೀಡದಿದ್ದಲ್ಲಿ ಭಾವದ ಮೂರನೆಯ ತೆನೆಯ ಮುಗಿತಾಯದ ಮೂರು ಪುಟಗಳನ್ನು ನೋಡಬೇಕು.

ಮುಖ್ಯವಾಗಿ ಈ ಸಾಲುಗಳನ್ನು ಅವಲೋಕಿಸಬೇಕು: 'ಬರಬರುತ್ತಾ ನನ್ನ ಮನಸ್ಸಿಗೆ ನನ್ನ ಒಂದೊಂದು ಉಸಿರೂ ನನಗೆ ದೈವದ ಅನುಗ್ರಹದಿಂದ ಬರುತ್ತಿದೆ, ನನ್ನ ಒಂದೊಂದು ಎಣಿಕೆಯೂ ಅದೇ ಮೂಲದಿಂದ ಬರುತ್ತಿದೆ, ಮಾತೆಲ್ಲ ಬರುವುದು ಅಲ್ಲಿಂದಲೇ, ಎಲ್ಲ ಕ್ರಿಯೆಯ ಪ್ರೇರಣೆ ಅಲ್ಲಿಂದಲೇ ಬರುತ್ತಿದೆ ಎನ್ನುವುದು ಮನದಟ್ಟಾಯಿತು. . . ಇಂಥ ಹೊತ್ತಿನಲ್ಲಿ ಎಂದಲ್ಲ, ಎಲ್ಲಿ ತೋಚಿದರೆ ಅಲ್ಲಿ, ಮನಸ್ಸಿನಲ್ಲಿ ದೈವವನ್ನು ಕುರಿತು ನಂಬಿಕೆಯನ್ನು ಕೊಡು, ಭಕ್ತಿಯನ್ನು ಕೊಡು, ಧೈರ್ಯ ಕೊಡು, ಶಕ್ತಿ ಕೊಡು, ಸೇವೆ ಮಾಡಿಸಿಕೋ, ಉದ್ಧಾರ ಮಾಡು ಎಂದು ಬೇಡುವುದನ್ನೇ ವಾಡಿಕೆ ಮಾಡಿಕೊಂಡೆನು. . . .ಎಚ್ಚರದ ಹೊತ್ತಿನಲ್ಲಿ, ಸಾಧ್ಯವಾದಷ್ಟು ವೇಳೆ, ಈ ಕ್ಷಣದ ಬಾಳುವೆ ಏನಿದೆ ಇದು ನಿನ್ನ ಕೃಪೆ ಎಂದು ಮತ್ತೆ ಮತ್ತೆ ಹೇಳಿಕೊಳ್ಳುತ್ತಿದ್ದೇನೆ.'

ಈ ವಿಚಾರಕ್ಕೆ ಸೇರಿದಂತೆ ಒಂದು ಸಾಮತಿ ಕೊಟ್ಟಿದ್ದಾರೆ; 'ನಾನು ನಮ್ಮ ನಾಯಿ 'ದಾಸ'ನನ್ನು ಸರಪಳಿಯಲ್ಲಿ ಹಿಡಿದು ನಡೆದು ಹೋದದ್ದುಂಟು. ಅದು ತೀರ ಅವಿವೇಕಕ್ಕೆ ಹೋದರೆ ನಾನು ಅದನ್ನು ತಡೆದು ಸೆಳೆಯುತ್ತೇನೆ. ಇಲ್ಲವಾದರೆ ಸರಪಳಿ ಇರುವಷ್ಟು ದೂರ ಅದು ಸ್ವತಂತ್ರ, ಅದರ ರುಚಿಯನ್ನನುಸರಿಸಿ ನಡೆದುಕೊಳ್ಳಬಹುದು. ದೇವರಿಗೆ ನನ್ನ ಜೀವ, ನನಗೆ ನಮ್ಮ ನಾಯ ಜೀವ ಹೇಗೆ, ಹಾಗೆ ಸೇರಿದೆ. ಅವನು ನನ್ನನ್ನು ನೋಡಿಕೊಳ್ಳುವುದು ಹಾಗೆಯೇ ಎಂದು ತೋರುತ್ತಿದೆ. ನಾನು ನನ್ನ ದೈವ ಹಿಡಿದಿರುವ ಸರಪಳಿಯ ಸ್ವಾತಂತ್ರ್ಯದಲ್ಲಿ ಬಾಳುತ್ತಿರುವುದು ಹಾಗೆಯೇ.'

ಅವರಿಗೆ ದೈವದ ಅನುಗ್ರಹದಿಂದ ಎಷ್ಟೋ ಕಹಿ, ನೋವು ತಪ್ಪಿದೆಯೆಂಬ ಭಾವ ಬೇರೂರಿದೆ. ಕಾನಕಾನಹಳ್ಳಿಯ ಕಂದಕದಲ್ಲಿ ನಡೆದ ದಿನಗಳಲ್ಲಿ, ಹಾವುಗಳಿರುವ ತಾಣವಾಗಿದ್ದು, ಒಂದು ದಿನವೂ ಒಂದು ಹಾವೂ ಅವರಿಗೆ ಕಾಣಲಿಲ್ಲ. ಯಾವುದೋ ಕರುಣೆ ಕಾಪಾಡುತ್ತಿರುವ ಹೊತ್ತಿನಲ್ಲಿ ಕೇಡು ತಾನಾಗಿಯೇ ದೂರ ನಿಲ್ಲುತ್ತದೆನ್ನುತ್ತಾರೆ. ಅದರಂತೆ ಅದೇ ಊರಿನಲ್ಲಿ ಒಮ್ಮೆ ಹೊಳೆ ತುಂಬಿ ಹರಿದಾಗ ಹುಡುಗರ ಹುರಿದುಂಬಿಸುವಿಕೆಗೆ ಪಕ್ಕಾಗಿ ನೀರಿಗಿಳಿದು ಈಜತೊಡಗಿದರು, ಪ್ರವಾಹದಲ್ಲಿ ಸಿಕ್ಕಿಬಿದ್ದರು. ಆದರೆ ದೈವ ತಾನಾಗಿ ಕಾಪಾಡಿದ್ದರಿಂದ, ಘಟ್ಟದ ಮೆಟ್ಟಲಿನ ಕೊನೆಯ ಕಲ್ಲನ್ನು ಹಿಡಿದುಕೊಂಡು, ಏರಿ ಮೇಲಕ್ಕೆ ಬಂದರು. ಇದೇ ರೀತಿ- ಇನ್ನೊಮ್ಮೆ ಸಿವಿಲ್ ಸರ್ವಿಸು ಪರೀಕ್ಷೆಗೆ ಕೊನೆಯ ಪತ್ರಿಕೆಗೆ ಉತ್ತರ ಬರೆಯಲು ಹೋಗದೆ ನಿಂತಾಗ ಆತ್ಮೀಯರೊಬ್ಬರು ಬಂದು ಗದರಿಸಿ ಕಳಿಸಿದರು. ಧೈರ್ಯ ಕುಸಿದು ಬಿದ್ದಿದ್ದ ಆ ಹೊತ್ತಿನಲ್ಲಿ, ದೈವ ಸ್ಪಷ್ಟವಾಗಿ ಕೈಯಾಡಿಸಿದ ಸಂದರ್ಭಗಳಲ್ಲಿ ಇದೂ ಒಂದೆಂಬಂತೆ ಅವರಿಗೆ ಮತ್ತೆ ಧೈರ್ಯ ಬರುವಂತೆ ಮುಂದಿನ ಬಾಳು ನೇರ ಆಗುವಂತೆ ಗೆಳೆಯರು ಮಾಡಿದರು.

ನಿಷ್ಕಾರಣ ದೇವ ವ್ಯಾಪಾರ ನಡೆದುದೆಂದು ನಿದರ್ಶನಕ್ಕೆ ಲೋವರ್ ಸೆಕೆಂಡರೀ ಪರೀಕ್ಷೆ ದಿವಸ ಮರೆತು, ಮೈಸೂರು ದೊಡ್ಡ ಮಾರುಕಟ್ಟೆಯ ಗಡಿಯಾರ ನೋಡುತ್ತಾ ಥಟ್ಟನೆ ನೆನಪಾಗಿ ಓಡಿ ಅರ್ಧ ಗಂಟೆ ಕಳೆಯುವ ಮುನ್ನ ಪರೀಕ್ಷೆ ಕೋಣೆ ಪ್ರವೇಶಿಸಿದ್ದನ್ನು ಹೇಳಿದ್ದಾರೆ. ಮತ್ತೊಮ್ಮೆ ಒಂದು ಹಳ್ಳಿಯಲ್ಲಿ ಜಲಶಂಕೆ ತೀರಿಕೊಂಡು ಬರಲು ಇರುಳಲ್ಲಿ ಬಯಲಿಗೆ ಹೋದರು. ತುಂಬ ದೂರ ಹೊರಟಾಗ ಬಂಧುವೊಬ್ಬರು ಕತ್ತಲಲ್ಲಿ ತುಂಬ ದೂರ ಹೋಗುವುದು ಬೇಡ, ಅಲ್ಲೇ ಕೂತುಕೋ ಎಂದರು. ಅಲ್ಲೇ ಕುಳಿತರು. ಬೆಳಿಗ್ಗೆ ಕೆರೆ ಕಡೆ ಹೊರಟರು. ಆಗ ನೋಡುತ್ತಾರೆ, ರಾತ್ರಿ ಇನ್ನೆರಡು ಹೆಜ್ಜೆ ಮುಂದೆ ಹೋಗಿದ್ದರೆ ಇಪ್ಪತ್ತು ಅಡಿ ಆಳದ ಕೆಸರಿರುವ ಹಾಳು ಬಾವಿಯಿತ್ತು! ಭಾವ ೨ ರಲ್ಲಿ ದೇವರನ್ನು ಕುರಿತು ನಿಲುವು, ರಾಮಾಯಣ ಪಾರಾಯಣ, ಅಗಡಿ ಸಾಧುಗಳು, ತಿರುಪತಿ ಯಾತ್ರೆ, ಶಿವ ವಿಷ್ಣು ಅಲ್ಲ, -ಮುಂತಾದ ಭಾಗಗಳು ಸೇರುತ್ತವೆ.

ಹುರುಪುಕೊಟ್ಟ ಹಿರಿಯರನ್ನೂ, ಅಕ್ಕರೆ ತೋರಿದ ಜನರನ್ನೂ ಎದೆದುಂಬಿ ನೆನೆಯುತ್ತಾರೆ. ತಮ್ಮನ್ನು ಚೆನ್ನಾಗಿ ಕಂಡ ಅತ್ತೆ ಮಾವಂದಿರನ್ನು ಕುರಿತು ಒಂದು ಕಡೆ ಹೀಗೆ ಬರೆಯುತ್ತಾರೆ; 'ಇದನ್ನು ನೆನೆದರೆ ನನಗೆ ಆ ಗಂಡ ಎಷ್ಟು ಹಿರಿಯ ಸ್ವಭಾವದ ಮನುಷ್ಯ, ಅವರ ಈ ಹೆಂಡತಿ ಅಷ್ಟೇ ಹಿರಿಯ ಸ್ವಭಾವದ ಸ್ತ್ರೀ ಎನ್ನಿಸುತ್ತದೆ. ನಾನೀಗ ವಯಸ್ಸಾದ ಮನುಷ್ಯ. ಅವರ ದಿನ ಮುಗಿದು ಅವರಿಬ್ಬರೂ ದೇವರ ಸನ್ನಿಧಿ ಸೇರಿದ್ದಾರೆ. ನನ್ನ ನಮನದಿಂದ ಅವರಿಗೆ ಆಗಬೇಕಾದದ್ದು ಏನೂ ಇಲ್ಲ. ಆದರೂ ಇಲ್ಲಿ ಆ ಕೃತಜ್ಞತೆಯ ನಮನವನ್ನು ನನ್ನ ತೃಪ್ತಿಗಾಗಿ ಒಪ್ಪಿಸುತ್ತೇನೆ. ವಾತ್ಸಲ್ಯಮೂರ್ತಿ ಆ ಮಾವ, ತ್ಯಾಗರೂಪಿಣಿ ಆ ಅತ್ತೆ, ನನ್ನ ಮನಸ್ಸಿಗೆ ಲೋಕವನ್ನು ಕಾಯುತ್ತ ದೈವ ಒಂದಿದೆ ಎನ್ನುವುದಕ್ಕೆ ಪ್ರಮಾಣವಾಗಿ ನೆನಪಾಗಿ ಉಳಿದಿದ್ದಾರೆ. ಆ ಮಾವನಿಗೆ ನಮೋ! ಆ ಅತ್ತೆಗೆ ನಮೋ!'

ಮಾಸ್ತಿಯವರು ಎಳೆಯದಂದಿನಿಂದ ಬಹಳ ಸೂಕ್ಷ್ಮ, ಒಳ್ಳೆಯದನ್ನು ಮಾಡುವುದಕ್ಕೆ ಹೋಗಿ ತಪ್ಪು ಮಾಡಿದ ಎಂದು, ಕಿರಿಯಂದು ಶಾಲೆಯಲ್ಲಿ, ದಂಡನೆಗೆ ಗುರಿಯಾದ ಸಂದರ್ಭದ ನೆನಪು ಅವರ ಎದೆಯಾಳದಲ್ಲಿ ಇಂದಿಗೂ ಅಚ್ಚಳಿಯದೆ ನಿಂತಿದೆ. ಭಾವದಲ್ಲಿ ಇಂತಹ ಎಷ್ಟೋ ಸಂಗತಿಗಳು ಸೇರಿವೆ. ಅವುಗಳಲ್ಲಿ ಕೆಲವು ಸಂಗತಿಗಳು ಕೇವಲ ಅಷ್ಟರಲ್ಲೇ ನಿಲ್ಲುವುದಿಲ್ಲ. ಅವು ಬರೆದವರ ಬದುಕಿನ ರೀತಿ ನೀತಿಗಳನ್ನೂ ಬಿಂಬಿಸುತ್ತವೆ. ಒಂದು ನಿದರ್ಶನ, ಅವರ ಒಡನೋದಿಯೊಬ್ಬ, ಅವನು ಬಡವ ಅಹುದು, ಮುಖ್ಯಾಧಿಕಾರಿಗಳನ್ನು ಕಾಡಿ ಬೇಡಿ ಕಡುಬಡವನೆಂದು ಅರಿಕೆ ಮಾಡಿ, ಉಚಿತ ವಿದ್ಯಾಭ್ಯಾಸ ಸೌಲಭ್ಯಗಿಟ್ಟಿಸಿಕೊಂಡ. 'ನನಗೆ ನಾನೂ ಇವನಂತೆ ಮಾಡಿದ್ದರೆ ಫ್ರೀಷಿಪ್ ಸಿಕ್ಕುತ್ತಿತ್ತೋ ಏನೋ ಎಂದು ತೋಚಿತು.' ನಾನು ಸಾಹೇಬರನ್ನು ಹಾಗೆ ಕಾಡಲಿಲ್ಲ, ಅಷ್ಟೇ ಅಲ್ಲ, ಅಷ್ಟು ಹಠ ಮಾಡಿ ಅವರನ್ನು ಬೇಡುವ ಸ್ವಭಾವದವನೂ ಆಗಿರಲಿಲ್ಲ. ನಮ್ಮಲ್ಲಿ ಒಬ್ಬೊಬ್ಬನೂ ನಿರ್ಮಾಣವಾಗಿರುವ ರೀತಿ ಒಂದಿದೆ. ನನ್ನ ರೀತಿಯಿದು, ಕೊಡುವವರು ಕೊಟ್ಟರೆ ಸಮ; ಕೊಡಲಿಲ್ಲ ಅವರಿಷ್ಟ. ಅಂದೂ ಅಷ್ಟೆ, ಎಂದೂ ಅಷ್ಟೆ. ನ್ಯಾಯವಾಗಿ ತಿಳಿಸಬೇಕಾದಷ್ಟನ್ನು ತಿಳಿಸಿ, ಕೊಟ್ಟರೆ ತೆಗೆದುಕೊಳ್ಳುವುದು, ಇಲ್ಲವೆಂದರೆ ಸುಮ್ಮನಾಗಿರುವುದು; ಇದು ನನ್ನ ಮನೋಧರ್ಮ.'

ತಿಳಿಯಾದ ಕನ್ನಡ ಮಾತುಗಳು ಹೊತ್ತಗೆಯ ಮೂರು ತೆನೆಗಳುದ್ದಕ್ಕೂ ಕೋದುಕೊಂಡಿವೆ; ಮುಮ್ಮೊದಲು, ಕಾಳುಕಡಿ, ಚಟ್ಟೇಕಾರ, ಮನೆಕಟ್ಟು, ಪಡಿ, ಮುದಿಕೊರಡು, ಪಿಳ್ಳೆ, ಮಶಿ ಕುಡಿಕೆ, ಎಲೆಪೆಂಡೆ, ಬೊಂಕು, ಮೋಡು, ನಾಕಾಲಿ, ನಿರಕು,

ಸಿಂಪಿ(ದರ್ಜಿ), ತಕ್ಕಾಳಿ ಹಣ್ಣು, ತಪ್ಪಲೆರೊಟ್ಟಿ ಮುಂತಾದವು ನೂರಾರಿವೆ. ಅನ್ಯದೇಶ್ಯ ಶಬ್ದಗಳೂ ಅನೇಕ ಸೇರಿವೆ: ಪೋಲೀಸ್, ಜವಾನ, ದಫೇದಾರ, ಸೇಕದಾರ, ಸುಲ್ತಾನ, ದಿವಾನ, ಪೆರಿಯಾತ್ (ದೊಡ್ಡಮನೆ), ಇನಾಮತಿ, ತುಪಾಕಿ, ಸವಾರಿ, ಪಾಟಿ, ದತ್ತು, ಸಮನ್ಸ್, ಅನ್ಯಾಕಾರಿ, ಲಗಾಮು, ತಿರುಮಂಗೈ, ನೇಮನ, ಮುನ್‌ಸೀಫ್, ಬದಲಿ, ಪ್ಲೇಗು, ದೌತಿ, ರೊಕ್ಕ, ಲ್ಯಾಂಪ್, ಚಿಮ್ನಿ, ಅಟ್ಲಾಸು, ಟೈಂಪೀಸು, ಮೋಜಣಿದಾರ ಇತ್ಯಾದಿ. ಇವುಗಳಲ್ಲಿ ಅರಬ್ಬಿ, ಪಾರಸಿ, ದಖ್ಖನಿ ಮತ್ತು ಇಂಗ್ಲಿಷ್ ಶಬ್ದಗಳಿವೆ. ಶಬ್ದಶಾಸ್ತ್ರಾಧ್ಯಯನ ದೃಷ್ಟಿಯಿಂದ ಇವು ಸ್ವಾರಸ್ಯವಾದ ಶಬ್ದಗಳು. ಕುದುರೆ ಸವಾರಿ ಕಲಿತದ್ದು, ಜಮಾಬಂದಿ ಮಾಡಿದ್ದು, ಚಿರತೆಯ ಬೇಟೆಗೆ, ಸಾಹೇಬರ ಜೊತೆ ಹೋಗಿದ್ದು, ಟಿ. ಚೌಡಯ್ಯನವರ ಮೊತ್ತಮೊದಲ ಸಂಗೀತ ಕಚೇರಿ, ನಾಲ್ಕೈದು ಸಲ ಕಾಯಿಲೆ ಮಲಗಿದ್ದು, ಬಾಬಾಬುಡನ್, ಜಗಳಗಂಟ ಪ್ಲಾಂಟರ್ ಮೊದಲಾದ ಸ್ವಾರಸ್ಯಗಳನ್ನು ಇಲ್ಲಿಯೇ ಹೆಸರಿಸಬಹುದು.

ಹೊತ್ತಗೆಯ ಹಿರಿಮೆ ಸಾರುವ ಹಲವಾರು ಸಂಗತಿ ಪ್ರಸಂಗಗಳಲ್ಲಿ ಹಳ್ಳಿಯ ಹಳೆಯ ಬಾಳಿನ ಚಿತ್ರಣ ಒಂದು ಈಗೀಗ ಕಡಮೆಯಾಗುತ್ತಾ, ಕ್ರಮೇಣ ಕಣ್ಮರೆಯಾಗತೊಡಗಿರುವ ಗ್ರಾಮ ಜೀವನದ ಚಿತ್ರಗಳು ಹಲವೆಡೆ ಅರಳಿ ನಿಂತು ಲೇಖಕರ ನಿಕಟ ಪರಿಚಯವನ್ನು ತೋರುತ್ತವೆ. ಹಳ್ಳಿಯ ಆಟ (ಉಪ್ಪರಪಟ್ಟಿ)-ಪಾಟ ವಿನೋದಗಳನ್ನು, ಹಳ್ಳಿಯ ಹಬ್ಬ ಹರಿದಿನಗಳನ್ನೂ, ಹಳ್ಳಿಯ ಹಿರಿಯ ಕಿರಿಯರ ಬಾಳಿನ ರೀತಿ ನೀತಿಗಳನ್ನು ನಿರವಿಸುತ್ತಾರೆ. ವರ್ಷದಲ್ಲಿ ಊರ ಕೆರೆ ಕೋಡಿ ಹರಿದ ದಿನ ನಡೆಯುತ್ತಿದ್ದ ಗಂಗಮ್ಮನ ಪೂಜೆ, ಮಳೆ ಬರಲಿ ಎಂದು ಬೇಡಿ, ಬಂದಾಗ ಉಬ್ಬಿ ನಿಂದ ಒಕ್ಕಲ ಮಕ್ಕಳು ಹೊಲಗಳ ಮೇಲೆ ಬೂದಿ ಚೆಲ್ಲಿ ಬಯಲಿನಲ್ಲಿ ಪಾನಕ ಚರುವು ಹಂಚುವುದು, ಮಹಾನವಮಿಹಬ್ಬ, ಕಾಮನಹಬ್ಬ, ಮೊದಲಾದುವು ಇಲ್ಲಿವೆ. ಇವಲ್ಲದೆ, ನಾನು ಕೂಡ ನಮ್ಮ ಹಳ್ಳಿಯಲ್ಲಿ ಎಳೆಯಂದು ಕಂಡು ಸುಖಿಸಿದ, ಒಂದು ಮಾರಮ್ಮನ ಹಬ್ಬವನ್ನು ಭಾವದ ಮೊದಲ ತೆನೆಯಲ್ಲಿ ಕಣ್ಣಿಗೆ ಕಟ್ಟಿದ್ದಾರೆ.

'ಸಮೃದ್ಧಿಯ ಭಾವವನ್ನು ಮೂಡಿಸುತ್ತಿದ್ದ ಇನ್ನೊಂದು ಸಂದರ್ಭ ಊರಮಾರಿಯ ಹಬ್ಬದ ದಿನ ಒಕ್ಕಲು ಮನೆತನಗಳ ಸುಮಂಗಲೀ ಹೆಣ್ಣುಮಕ್ಕಳುಗಳು ಮನೆ ಮನೆಯಿಂದ ತಲೆಯ ಮೇಲೆ ದೊಡ್ಡ ದೊಡ್ಡ ತಟ್ಟೆಗಳಲ್ಲಿ ಹಿಡಿಯುವಷ್ಟು ತಂಬಿಟ್ಟಿನ ಅಚ್ಚುಗಳನ್ನು ಇಟ್ಟುಕೊಂಡು ಬೀದಿಯಲ್ಲಿ ಸೇರಿ ಹಾಡುಗಳನ್ನು ಹಾಡಿಕೊಂಡು ಮೆರವಣಿಗೆ ನಡೆದು ಮಾರಮ್ಮನ ಗುಡಿಯ ಬಳಿಗೆ ನಡೆಯುತ್ತಿದ್ದದ್ದು. ಹಬ್ಬಕ್ಕಾಗಿ ಮಿಂದು ಹೊಸಬಟ್ಟೆಯನ್ನುಟ್ಟು ಶೃಂಗಾರ ಮಾಡಿಕೊಂಡು ಚೆನ್ನಾಗಿ ಬೆಳಗಿದ ತಟ್ಟೆಗಳಲ್ಲಿ ಬೇರೆ ಬೇರೆ ಗಾತ್ರದ ಅಚ್ಚಿನ ತಂಬಿಟ್ಟು, ಒಂದೊಂದರಲ್ಲೂ ಒಂದು ಹಣತೆ ಎಂಬಂತೆ ಇಷ್ಟು ತುಪ್ಪ ಅದರಲ್ಲಿ ಉರಿಯುತ್ತಿರುವ ಬತ್ತಿ ಇದನ್ನು ಹೊತ್ತ ಹೆಣ್ಣು ಮಕ್ಕಳು ಸಾಲಾಗಿ ಹೋಗುತ್ತಿರುವುದೂ ಆ ತಂಬಿಟ್ಟಿನ ಅಚ್ಚು, ಅದರ ಬಣ್ಣ ಇದೂ, ಈಗ ನನ್ನ ಕಣ್ಣಿಗೆ ಪ್ರತ್ಯಕ್ಷ ಎಂಬಂತೆ ಇವೆ, ತಂಬಿಟ್ಟು ಹೊಸಬೆಲ್ಲದ ಬಣ್ಣವಾಗಿ ಇರುತ್ತಿತ್ತು. ಅದರ ಅಚ್ಚು ಈಗ ಪೇಟೆಯಲ್ಲಿ ಸಿಕ್ಕುವ ಬೆಲ್ಲದ ಅಚ್ಚಿನಂತೆ ಇರುತ್ತಿತ್ತು. ಮೂವತ್ತು ತಲೆಯ ಮೇಲಿನ ಮುನ್ನೂರು ದೀಪಸಾಲಿಗೆ ಬೀದಿಯಲ್ಲಿ ಮೆರವಣಿಗೆ ಹೋಗುತ್ತಿದ್ದದ್ದು ಬಹು ಸುಂದರವಾದ ದೃಶ್ಯ ಆಗಿತ್ತು.'

ಭಾವದಲ್ಲಿ ಹತ್ತಾರು ಕಡೆ ಪ್ರಕೃತಿಯ ಭಾವಚಿತ್ರಗಳೇ ಸಿಗುತ್ತವೆ. ಚಿತ್ರಗಾರನಂತೆ ಕಣ್ಣೆದುರಿನದನ್ನು ಹಿಡಿದು ತೋರಿಸಿರುವುದಕ್ಕೆ ಶೀರ್ಯದ ಬಂಗಲೆಯಲ್ಲಿ

ಉದಯ-ಬೆಳದಿಂಗಳ ರಾತ್ರಿ, ಚಿಕ್ಕಂದಿನಲ್ಲಿ ಆರಂಭದ ವ್ಯಾಸಂಗ ಆದ ಶಿವಾರಪಟ್ಟಣದ ಊರ ಮುಂದಿನ ಬಯಲ ಚೆಲುವು, ಜ್ಯೋತಿರ್ಲಿಂಗ ದರ್ಶನಾವಸರದ ರೈಲು ಪ್ರಯಾಣದ ಕಾಲದಲ್ಲಿ ಸಮುದ್ರದ ಸೊಗಸು, ಅಧಿಕಾರಾವಧಿಯ ಪ್ರಯಾಣ-ಪ್ರವಾಸಗಳಲ್ಲಿ ಕಂಡುಂಡ ನೆಲದ ಸಿರಿ-ಓದುಗರಿಗೂ ಹರ್ಷದ ನೆನಪು. ಬಾಳೆಹೊನ್ನೂರಿನಿಂದ ಚಿಕ್ಕಮಗಳೂರಿಗೆ ಒಮ್ಮೆ ಬೈಸಿಕಲ್ಲು ಹತ್ತಿ ಹೊರಟಾಗ ಆದ ಅನುಭವವಿದು: 'ಮಾರ್ಗ ಬೆಟ್ಟದ ಸಾಲಿನ ಭುಜದಲ್ಲಿ ಏರಿ ಇಳಿದು ಬಾಗಿ ಬಳುಕಿ ಹರಿಯುವುದು. ದಟ್ಟವಾದ ಕಾಡಿನ ಮಧ್ಯೆ ಬೆಟ್ಟದ ಪಕ್ಕದಲ್ಲಿ ಹಾಯುವ ಈ ಮಾರ್ಗ ಕಣ್ಣಿಗೆ ಬಹು ಚನ್ನಾಗಿರುತ್ತದೆ. ಇತ್ತಲೊ ಅತ್ತಲೋ ಇರುವ ಬೆಟ್ಟದ ಕೋಡು, ಅದನ್ನು ಹೊದೆದಿರುವ ಹಚ್ಚ ಹಸುರು, ಎದುರುಗಡೆಗಿರುವ ತಪ್ಪಲು, ಅದರ ಮಡಿಲಲ್ಲಿ ತುಂಬಿರುವ ನಿಬಿಡವನ, ಇಲ್ಲಿ ಮೇಲಿಂದ ಹರಿದು ಬರುತ್ತಿರುವ ನೀರು, ಇಲ್ಲಿ ತಗ್ಗಿನಲ್ಲಿ ಹರಿಯುತ್ತಿರುವ ಸರಳು, ಒಂದು ಕಾಫಿ ತೋಟ, ಒಂದು ಬಂಗಲೆ, ಒಂದು ಮನೆ, ಒಂದು ಗುಡಿಸಲು, ಮಧ್ಯೆ ಸಂಗಮೇಶ್ವರ ಮೈಲಿಮನೆಯಂಥ, ಮಲೆನಾಡಿಗೆ ದೊಡ್ಡದೇ ಆದ ಊರು. ಇಂಥ ನೆಲದಲ್ಲಿ ಸೈಕಲ್ ಸವಾರಿ ಒಂದು ಹರ್ಷದ ವ್ಯಾಪಾರ.' ಈ ನೆಲ ಹೇಗೆ ನರುಗಂಪಿನ ಉಗ್ರಾಣವೆಂಬ ಕವಿ ಸಹಜ ಬಣ್ಣನೆ ಭಾವದ ಮೂರನೆಯ ತೆನೆಯಲ್ಲಿ ಪುಟ ೨೦೬ರಲ್ಲಿ ಬರುತ್ತದೆ.

ನೆನಪು ಕಹಿಯಲ್ಲ ನಿಜ. ಆದರೆ ಎಲ್ಲ ನೆನಪೂ ಸಿಹಿಯಲ್ಲ, ಭಾವದ ಮೊದಲ ತೆನೆಯಲ್ಲಿ ಬಡವನ ಬವಣೆ ಪಟ್ಟದ್ದಿದೆ. ವಾರಾನ್ನದ ಹುಡುಗನಾಗಿ 'ಅನ್ನದಾತ ಸುಖೀಭವ' ಎಂದು ಹಾರೈಸಿ ಬೆಳೆದ ಮಾತಿದೆ. ತಾವೇ ಅಡಿಗೆ ಮಾಡಿಕೊಂಡುದೂ ಉಂಟು. ಅವರ ಒಟ್ಟು ಬಾಳಿನ ನಡೆದು ಬಂದ ದಾರಿಯ ಅವಲೋಕನದಲ್ಲಿ ವಿಶಿಷ್ಟ ಸ್ಮರಣೆಗಳೂ, ಸಾವು ನೋವಿನ ದಾರುಣ ಅನುಭವಗಳೂ ಕಂಡುಬರುತ್ತವೆ. ಒಮ್ಮೆ ಅವರ ತಾತನವರೊಂದಿಗೆ ಆಲೆಮನೆಗೆ ಹೋಗಿ ಕಬ್ಬಿನಹಾಲು ಕುಡಿದು ಬಿಸಿಬೆಲ್ಲ ತರುವಾಗ ದಾರಿಯಲ್ಲೇ ಈ ಹುಡುಗ ತಿಂದು ಮುಗಿಸಿದ್ದ! ಮುಪ್ಪಿನ ತಾತನಿಗೆ ನಿರಾಶೆ ಆಯಿತು! ಈ ಮೊಮ್ಮಗನಿಂದ ಆ ತಾತನಿಗೆ ನಿರಾಶೆಯಾಯಿತಲ್ಲಾ ಎಂಬ ಕೊರಗು ನಿಂತಿತು. ಈಗಲೂ ಹೊಸ ಬೆಲ್ಲದ ದಿನಗಳಲ್ಲಿ ಈ ವಿಷಯ ನೆನಪಿಗೆ ಬರುವುದು. ಹಾಗೆಯೇ ಮಳವಳ್ಳಿಯಲ್ಲಾದ ಕಹಿ ನೆನಪು; ಹಾಲನ್ನು ಮಜ್ಜಿಗೆ ಎಂದು ತಿಳಿದು 'ನನಗೆ ಹಾಕಿ' ಎಂದರು, ಚಿಕ್ಕಮಾವ ಒಂದು ಕೆಟ್ಟ ಮಾತೆಂದರು. ತಿಳಿಯದೆ ತಪ್ಪು ಮಾಡಿದ್ದರೂ ಗದರಿಕೆ ಅತಿಯಾಯಿತೆಂದು ತಲ್ಲಣಿಸಿದರು.

ಭಾವವನ್ನು ಓದಿದವರು ಯಾರೂ ಮರೆಯಲಾಗದ ನೆನಪುಗಳು ಕೆಲವಿವೆ. ಒಡನೋದಿ ಬಡ ಲಿಂಗಪ್ಪನ ಬಗೆಗಿನ ಮರುಕ, ಕರಿಬಸವಶಾಸ್ತ್ರಿಗಳ ಪಾಠದ ರೀತಿ, ವರದಾಚಾರ್ಯರ ಅಭಿನಯ, ಮದರಾಸಿನ ಬಾಳು, ಮಹಾರಾಜಾ ಕಾಲೇಜು, ಸೆಂಟ್ರಲ್ ಕಾಲೇಜು ವಿದ್ಯಾರ್ಥಿಜೀವನ ಹಾಗೂ ಅಲ್ಲಿ ಕಲಿಸಿದ ಗುರುಗಳು (ಅದರಲ್ಲಿಯೂ ಟೇಟ್ ಸಾಹೇಬರು), ಇಂಗ್ಲಿಷ್ ಉಪಾಧ್ಯಾಯರಾಗಿ ಸ್ವಲ್ಪ ಕಾಲ ಇದ್ದುದು, ಆಂಗ್ಲರ ಅವಿವೇಕ ದರ್ಪ ದಬ್ಬಾಳಿಕೆಯ ಧೂರ್ತತನ ಹಾಗೂ ಮದ ಸೊಕ್ಕಿದ ಕಠಿಣ ವರ್ತನೆ, ಅಭೇದಾನಂದರು, ಆನಿಬೆಸೆಂಟರು ನಾಯರವರು ಮಾಡಿದ ಸ್ವದೇಶಿ ಚಳುವಳಿಗೆ ಸ್ಫೂರ್ತಿ ಸಂದೇಶ ನೀಡಿದ ಧಾರ್ಮಿಕ ಬುನಾದಿಯ ಮೇಲೆ ನಿಂತ ಭಾಷಣಗಳು, ಜನಪದ ಸಾಹಿತ್ಯ ಪ್ರಸ್ತಾಪ - ಇವೆಲ್ಲ ಮನಸೆಳೆಯುತ್ತವೆ. ಅವರಿಗೆ ಇಸ್ಪೀಟು ಆಟದ ಮೋಹ. ಇಂದಿಗೂ ಗಾಂಧಿಬಜಾರಿನ ಕೊನೆಯ ಕ್ಲಬ್ಬಿನಲ್ಲಿ ನಿತ್ಯ ಸಾಯಂಕಾಲ ಹೋಗಿ ಒಂದೆರಡು ಗಂಟೆ ಆಡುವುದು ವಾಡಿಕೆ. ಆದರೆ ಓದುಗರಾಗಿದ್ದಾಗಲೂ ಈ ಚಟ ಇದ್ದು ಅದಕ್ಕೆ ಮುಗಿತಾಯ

ಆಡಿದ ಪ್ರಸಂಗ ತಿಳಿಸಿದ್ದಾರೆ. ಕಲಿಯುವ ಕಾಲದಲ್ಲಿ ದಾರಿ ಗುರಿ ಎಲ್ಲ ಅದೇ ಆಗಿರಬೇಕೆಂಬ ಮಾತನ್ನು, ಓದುವ ಕಾಲದಲ್ಲಿ ಹಗಲೂ ರಾತ್ರಿ ಇಸ್ಪೀಟು ಆಡುವ ಹುಡುಗರು ಮರೆಯದೆ ಗಮನಿಸಬೇಕು.

ಮಾಸ್ತಿಯವರು ಋಜು ಸ್ವಭಾವದ ಸಾತ್ವಿಕರು. ಹಾಗೆಂದು ಸಪ್ಪೆಯಲ್ಲ, ಸಮಯ ಬಂದಾಗ ತಿರುಗಿ ಬೀಳುತ್ತಾರೆ. ಅಂತಹ ಆರೇಳು ಸಂಗತಿಗಳು ಭಾವದಲ್ಲಿವೆ. ಒಂದು ಉದಾಹರಣೆ; ಅವರು ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಿನ ಘಟನೆ. ಕ್ರೈಸ್ತರ ಶಾಲೆ. ಪ್ರಾರ್ಥನೆ ಕ್ರೈಸ್ತ ಗುರುವನ್ನು ಕುರಿತದ್ದು. ಅದನ್ನೇ ಎಲ್ಲರೂ ಹೇಳಬೇಕೆಂದು ಒತ್ತಾಯ. ಹಿಂದೂ ವಿದ್ಯಾರ್ಥಿ ಉಪಾಧ್ಯಾಯರಿಗೆ ರುಚಿಸಲಿಲ್ಲ. ಇಷ್ಟವಿಲ್ಲವೆಂದು ಹೇಳಲಾರರು. ಅಲ್ಲದೆ ಮೇಲಿನ ಕ್ರೈಸ್ತ ಅಧಿಕಾರಿಗಳಿಗೆಲ್ಲಾ ಇದು ತಿಳಿದು ಎಲ್ಲರೂ ಹೇಳಬೇಕು, ತಪ್ಪದೆ ಭಾಗವಹಿಸಬೇಕೆಂಬ ಹಠ ತೋರಿದರು. ಇದರಿಂದ ಹಿಂದೂಗಳ ಮನಸ್ಸು ಮಲೆಯುತ್ತಿತ್ತು. ಹೀಗಿರುವಾಗ 'ಒಂದು ದಿನ ನಮ್ಮ ತರಗತಿಯಲ್ಲಿ ಬಿಡುವಿನ ಹೊತ್ತಿನಲ್ಲಿ ನಮ್ಮ ಶಾಲೆಯ ಮಾತು ಪ್ರಸ್ತಾಪಕ್ಕೆ ಬಂದು ನಮ್ಮ ಜೊತೆಯ ಕ್ರೈಸ್ತ ಹುಡುಗ ಮಿಷನರಿಗಳನ್ನು ತುಂಬ ಹೊಗಳಿದ. ಅವನ ಮಾತು ಹೆಚ್ಚಾಯಿತು. ಅದಕ್ಕೆ ಪ್ರತಿಯಾಗಿ ನಾನು, ಅದೆಲ್ಲ ಸರಿ, but they have brought a nasty religion like Christianity into our country' ಎಂದೆ. ಹೊರಗಿಂದ ಬಂದು ಇವರು ನಮ್ಮ ಜನರನ್ನು ಕ್ರೈಸ್ತರನ್ನಾಗಿ ಜಾತಿ ಕೆಡಿಸುತ್ತಿದ್ದಾರೆ ಎಂದು ನನ್ನ ಅರ್ಥ. ಈ ಮಾತಿನ ಚುರುಕು ಬಿಸಿ ಸಂಬಂಧಪಟ್ಟವರಿಗೆ ತಟ್ಟಿತು.

ಮಾಸ್ತಿಯವರು ಅನೇಕ ವ್ಯಕ್ತಿಗಳನ್ನು, ಅವರು ಹಿರಿಯರಿರಬಹುದು ಕಿರಿಯರಿರಬಹುದು, ಚಿತ್ರಗಾರನಂತೆ ಬಿಡಿಸುತ್ತಾರೆ. ಕೆಲವರ ಬಗೆಗೆ ಅವರು ಹೇಳುವುದು ಒಂದೆರಡೇ ಮಾತು. ಆದರೆ ಅಷ್ಟೇ ಮಾತಿನಲ್ಲಿ ಆ ಮೂರ್ತಿ ಮೈದಾಳಿ ನಿಂತಿರುತ್ತದೆ: 'ಸಣ್ಣ ಸಂಗತಿ. ಆದರೆ ಜೀವನದಲ್ಲಿ ಇದು ಎಂಥ ದೊಡ್ಡ ಮಾತಾಗುತ್ತದೆ. ಹಿರಣ್ಯ ಗೌಡ ನನಗೆ ಇಂದಿಗೂ ಅವನ ಅಂದಿನ ಪ್ರೇಮದ ಕಾರಣದಿಂದ ತುಂಬ ಪ್ರಿಯನಾಗಿದ್ದಾನೆ. ೧೯೨೮ರ ಇನ್‌ಪ್ಲುಯೆನ್ಸಾ ಉಪದ್ರವದಲ್ಲಿ ಅವನು ತೀರಿಕೊಂಡನು. ಆ ವೇಳೆಗೆ ಗ್ರಾಮದಲ್ಲಿ ಪಟೇಲನಾಗಿ ಹಲವು ವರ್ಷ ಸೇವೆ ಸಲ್ಲಿಸಿ ದೊಡ್ಡ ಮನುಷ್ಯನೆಂದು ಆ ಸುತ್ತಿಗೆಲ್ಲ ಹೆಸರು ಗಳಿಸಿದ್ದನು. ತುಂಬ ಒಳ್ಳೆಯ ಜೀವ. ದೇವರು ಅನುಗ್ರಹಿಸಿದ್ದರೆ ಊರಿಗೆ ಇನ್ನಷ್ಟು ಸೇವೆ ಸಲ್ಲಿಸಿ ಮತ್ತಷ್ಟು ಹೆಸರು ಗಳಿಸುತ್ತಿದ್ದನು. . .ನನಗೆ ಅವನು ಶಾಶ್ವತವಾದ ಒಂದು ಸ್ಮೃತಿಯಾಗಿ ನಿಂತಿದ್ದಾನೆ. ಭಯದಲ್ಲಿ ಧೈರ್ಯ ನೀಡುವ ಭಗವತ್ ಕೃಪೆಯ ಸಂಕೇತ ಆಗಿದ್ದಾನೆ.' ಅಕ್ಕಿ ಕೊಡುತ್ತಿದ್ದ ಸಂತೇ ಪೇಟೆಯ ಅಕ್ಕಿ ಅಂಗಡಿ ಮಲ್ಲಪ್ಪ ಎಂಬ ವರ್ತಕರನ್ನು ಕುರಿತು: 'ಮಲ್ಲಪ್ಪ ದುರ್ದೈವದಿಂದ೧೯೧೮ರ ಇನ್‌ಪ್ಲುಯೆನ್ಸಾ ಸಾಂಕ್ರಾಮಿಕ ದಿನಗಳಲ್ಲಿ ತೀರಿಕೊಂಡರು. ಆಮೇಲೆ ಇವರ ಮೂರ್ತಿ ಕಣ್ಣಿಗೆ ಕಾಣಲಿಲ್ಲವಾದರೂ ಮನಸ್ಸಿನ ಮುಂದೆ, ಒಂದು ಕಾಲದಲ್ಲಿ ನಮಗೆ ತೋರಿದ ಆದರದ ಅಕ್ಕರೆಯ ಮೂರ್ತಿಯಾಗಿ, ಈಚೆಗೆ ಸಾವಿರ ಸಲನಿಂತಿದೆ.' (ಆಂಜನೇಯ ಶೆಟ್ಟರು, ಟೇಟ್ ಸಾಹೇಬರು,.ಗೆಳೆಯ ವೆಂಕಟರಂಗನ್, ಕೆ. ಹನುಮಂತಯ್ಯನವರು, ಕರ್ನಲ್ ದೇಶರಾಜ ಅರಸ್, ಶ್ರೀಮತಿ ಸಾಕಮ್ಮನವರು, ಎ.ಸಿ. ನಿರ್ವಾಣಿಗೌಡ, ಅರಳಗುಪ್ಪೆ ಚಂದ್ರೇಗೌಡ - ಮೊದಲಾದವರು ಹೀಗೆ ನೆನಪಿನಲ್ಲಿ ನಿಲ್ಲುತ್ತಾರೆ.)

ಹರಹಿನ ಬದುಕಿನ ಆಳದಿಂದ ಎಷ್ಟೋ ಮಾತುಗಳು ಅಣಿ ಮುತ್ತುಗಳಂತೆ ಮೂಡಿಬಂದಿವೆ; ತಪ್ಪು ತಿಳಿವಳಿಕೆ ಮನುಷ್ಯನನ್ನು ದುರ್ಬಲ ಪ್ರಾಣಿಯನ್ನಾಗಿ

ಮಾಡುತ್ತದೆ,' 'ಮನುಷ್ಯನ ಬಾಳಿನ ಅತ್ಯುನ್ನತ ಸಂಪತ್ತು ಐಶ್ವರ್ಯವಲ್ಲ, ಅಧಿಕಾರವಲ್ಲ, ಜೊತೆಯ ಜನರ ಪ್ರೇಮ; 'ಸಿವಿಲ್ ಸರ್ವೀಸ್ ಆಂಗ್ಲ ಪ್ರಭುತ್ವದ ಬಲರಟ್ಟೆ, ಬಲಮುಷ್ಟಿ, ಅದರ ಶಕ್ತಿ ಹೆಚ್ಚು, ಅದರ ಅಹಂಕಾರವೂ ಅಷ್ಟೇ ಹೆಚ್ಚು.' 'ಕಾಸುಳ್ಳವರು ಅದನ್ನು ಇಟ್ಟುಕೊಂಡು ಪಡೆಯುವ ಸುಖಕ್ಕಿಂತ ಕೊಟ್ಟು ಪಡೆಯಬಹುದಾದ ಸುಖ ದೊಡ್ಡದು,' 'ಬಲಾತ್ಕಾರದಿಂದ ಉತ್ಸವ ನಡೆಸಿದರೆ ಅದು ಸರಿಯಾಗಿ ನಡೆದ ಉತ್ಸವ ಅಲ್ಲ. ಎರಡು ಪಕ್ಷದವರೂ ಒಪ್ಪಿ ನಡೆಸುವುದೇ ಸರಿಯಾದ ಉತ್ಸವ,' 'ದೇವರ ಪೂಜೆಗೆ ಮೈ ಶುದ್ಧಿ ಮಾಡಿಕೊಳ್ಳುತ್ತೇವೆ. ಮನಸ್ಸು ಶುದ್ಧಿಯಾಗಿರಬೇಡವೆ?' 'ವ್ಯಥೆ ಪಡುವುದು ಸರಿಯಲ್ಲ, ಸರಿ, ಆದರೆ ವ್ಯಥೆ ತಪ್ಪಿದ್ದಲ್ಲ.' 'ಹೊರಗಿನಷ್ಟೇ ದಿಟವಾಗಿ ಒಳಗೂ ಒಂದಿದೆ.'

ಮಾಸ್ತಿಯವರ ಕನ್ನಡ ಪ್ರೇಮ ಇಂದು ನಿನ್ನೆಯದಲ್ಲ. ಮಗುವಿನಿಂದಲ್ಲದಿದ್ದರೂ ೧೯೨೨ರಿಂದ ಬೆಳೆದು ಬಂದಿದೆ. ಅದಕ್ಕೆ ಎರಡು ಬಲವಾದ ಕಾರಣಗಳು ಇಂತಿವೆ. ಒಂದು ಸಲ ಹಳ್ಳಿಯಲ್ಲಿ ಜಮಾಬಂದಿ ವೇಳೆ ಒಬ್ಬ ಒಕ್ಕಲಮಗ ಮಾಡಿದ್ದ ಅದೇನೋ ಸಂಗತಿ ತಪ್ಪು ಎನ್ನುವ ಮಾತಿಗೆ ಅವನನ್ನು ಕುರಿತು 'ಏನಪ್ಪಾ, ಇದು ಮಾಡಬಾರದು ಎಂತ ನಿನಗೆ ತಿಳಿಯಲಿಲ್ಲವೇ?' ಎಂದರು. ಅವನು 'ಇಲ್ಲ, ಸ್ವಾಮಿ, ಎಂದನು. ನಾನು ಯಾಕಯ್ಯಾ, ರೂಲ್ಸ್ ಇದೆಯಲ್ಲ, ಇದನ್ನು ತಿಳಕೊಳ್ಳಬೇಡವೇ?' ಎಂದರು. ಅವನು 'ನಿಮ್ಮ ರೂಲ್ಸು ಗೀಲ್ಸು ಎಲ್ಲಾ ಇಂಗ್ಲಿಷ್‌ನಲ್ಲಿದೆ ಸ್ವಾಮಿ; ನಾನೇನು ತಿಳ್ಕೊಳ್ಳೋದು?' ಎಂದನು. ಸಂಗತಿ ಸಣ್ಣದು. ಮನಸ್ಸಿಗೆ ಹೊಸತಾದುದೂ ಅಲ್ಲ. ಆದರೆ ಆ ಕ್ಷಣ ಅವನ ಮಾತು ನನ್ನ ಮೇಲೆ ಪ್ರಚಂಡ ಪರಿಣಾಮ ಮಾಡಿತು. ನಾನು, ಹೌದಲ್ಲಾ, ನಾನು ಸರ್ಕಾರ ಎಂತ ಮಾಡುವ ಎಲ್ಲ ಕೆಲಸವನ್ನೂ ಇಂಗ್ಲಿಷಿನಲ್ಲಿ ಮಾಡಿದರೆ ನಮ್ಮ ಜನಕ್ಕೆ ಹೇಗೆ ತಿಳಿಯಬೇಕು? ಇಂಥ ಗ್ರಾಮದ ಇಂಥ ಜನ ಬೆವರು ಸುರಿಸಿ ಬೆನ್ನು ಮುರಿಯ ದುಡಿದು ಗಳಿಸಿದ ಆರು ಕಾಸಿನಲ್ಲಿ ಮೂರು ಕಾಸನ್ನು ಸರ್ಕಾರಕ್ಕೆ ಕೊಟ್ಟು ನಮಗೆಲ್ಲ ಸಂಬಳ ಕೊಡಿಸಿ ಸುಖವಾಗಿ ನೋಡಿಕೊಳ್ಳುತ್ತಾರೆ. ನಾವು ಹೆಸರಿಗೆ ಜನತೆಯ ಸೇವಕರು. ದಿಟದಲ್ಲಿ ಸ್ವೇಚ್ಛಾವರ್ತಿ ಚಂಡ ಪ್ರಭುಗಳು. ಇವರಿಗೆ ದಂಡ ಹಾಕಿದ್ದೇವೆ ಎಂದು ನಾವು ಬರೆಯುವ ಆಜ್ಞೆ ಕೂಡ ಇಂಗ್ಲಿಷಿನಲ್ಲಿರುತ್ತದೆ? ಈ ಮಾತು, ಈ ಚಿಂತನೆ ಅವರನ್ನು ಕನ್ನಡದ ಕಿಂಕರರನ್ನಾಗಿಸಿತು. ಇದೇ ಭಾವವನ್ನು ಮುಂದೆ ಒಬ್ಬ ಹರಿಜನ ತರುಣ, ಗ್ರಾಮದ ತೋಟಿಯಾಗಿದ್ದವನು ಬಲಪಡಿಸಿದನು. ಆ ತೋಟಿ ಎಂಡಾರ್ಸ್‌ಮೆಂಟ್ ಎಂಬುದು ತಿಳಿಯದೆ ಮುಂಡೇರಾಸ್ ಎಂದು ತದ್ಭವ ಮಾಡಿಕೊಂಡಿದ್ದ. ಆಗ 'ಆಡಳಿತದ ನಾವು ನಮ್ಮ ಅಪ್ಪಣೆಗಳನ್ನು ನಮ್ಮ ಜನರಿಗೆ ಅವರಿಗೆ ತಿಳಿಯದ ಭಾಷೆಯಲ್ಲಿ ತಿಳಿಸುತ್ತಿರುವುದು ಬಹು ಅವಿವೇಚನೆಯ ವರ್ತನೆ' ಎನ್ನಿಸಿತು, 'ಕನ್ನಡ ಮಾತೆ ನನ್ನ ಹೆತ್ತತಾಯಂತೆ ಒಂದು ದಿಟವಾದ ದೈವ ಆದಳು.'

ತಮ್ಮ ರಾಜನಿಷ್ಠೆಯನ್ನು ಭಾವದ ಎರಡನೆಯ ತೆನೆಯಲ್ಲಿ ತೋರಿದ್ದಾರೆ: 'ಪ್ರಭುಗಳ ವಿಷಯಕ್ಕೆ ನನ್ನ ಮನಸ್ಸು ಎಂದಿನಿಂದಲೂ ಏಕ ರೀತಿ ವರ್ತಿಸಿದೆ, ನನಗೆ ಮೈಸೂರು ಲೋಕಮಾತೆ ನನ್ನ ಮಾತೆಯಾಗಿರುವ ಭೂಪ್ರದೇಶ. ಅದರ ಪ್ರಭು ಈ ಪ್ರದೇಶದ ಸೇವೆಗೆಂದು ಜನ್ಮ ತಳೆದ ಉನ್ನತ ಮಾನವ. ಈ ಪ್ರಭು ಮೂರ್ಧಾಭಿಷಿಕ್ತರಾಜರು. ನಮ್ಮ ಧರ್ಮದಲ್ಲಿ ಹೀಗೆ ಅಭಿಷಿಕ್ತರಾದ ಪುರುಷರಲ್ಲಿ ದೈವದ ಒಂದು ಅಂಶ ಮನೆ ಮಾಡಿರುತ್ತದೆ ಎಂದು ನಂಬಿಕೆ. ನಮ್ಮ ಧರ್ಮದ ಈ ನಂಬಿಕೆಯನ್ನು ನನ್ನ ಬುದ್ಧಿ ಒಪ್ಪಿದೆ. ಪ್ರಭುಗಳು ಸ್ವತಃ ನನಗೆ ಒಂದು ಮರ್ಯಾದೆಯನ್ನು ದಯಪಾಲಿಸಿದ ಒಡೆಯರು ಸಹ.' ಪಟ್ಟಾಭಿಷೇಕದ ಉತ್ಸವದಲ್ಲಿ ಕೊಟ್ಟ ಜರಿ ಶಾಲನ್ನು ದಿನದ

ಪಾರಾಯಣದ ಹೊತ್ತಿನಲ್ಲಿ ಇಂದಿಗೂ ಹಾಕಿಕೊಂಡು ಪ್ರಭುವಿಗೆ ಶುಭವಾಗಲೆಂದು ಬಯಸುವರು. ರಾಜಪದವಿ ತಪ್ಪಿದ್ದಕ್ಕಾಗಿ ಪರಿತಪಿಸಿದ್ದಾರೆ. ಇದು ಹೊಸ ಪೀಳಿಗೆಯವರಿಗೆ ಹಿಡಿಸದಿರಬಹುದಾದರೂ ಅದು ಅವರ ಭಾವವೆಂಬುದನ್ನು ಮರೆಯಬಾರದು.

ಭಾವದಲ್ಲಿ ಹಲವು ಮೊಗಗಳ ಕಾಣ್ಕೆಯಿದೆ. ಈ ಆತ್ಮಚರಿತೆಯಲ್ಲಿ ಒಬ್ಬ ಆದರ್ಶ ಪುತ್ರನನ್ನು, ಉತ್ತಮ ವಿದ್ಯಾರ್ಥಿಯನ್ನು, ಆದರ್ಶ ಪತಿಯನ್ನು, ನಿಷ್ಪಕ್ಷಪಾತ ದಕ್ಷ ಅಧಿಕಾರಿಯನ್ನು, ಆದರ್ಶ ಪಿತನನ್ನು, ಒಬ್ಬ ಸತ್ಯಪ್ರಿಯ ವ್ಯಕ್ತಿಯ ಸರಳ ಜೀವನವನ್ನು ಕಾಣುತ್ತೇವೆ. ಹೀಗೆಂದು ಈ ಭಾವದಲ್ಲಿ ಬಿರುಕುಗಳೇ ಇಲ್ಲವೆಂದಲ್ಲ. ಒಂದು ನೋಟಕ್ಕೆ ಇಲ್ಲಿ ಒಬ್ಬ ಅಧಿಕಾರಿಯ ಬದುಕಿದೆಯೇ ಹೊರತು ಹಿರಿಯ ಬರಹಗಾರನ ಬಾಳಿನ ವಿವರವಿದೆಂದು ಎನ್ನಿಸದಲ್ಲಾ ಎಂಬ ಉದ್ಗಾರ ಬರಬಹುದು. ಇದಕ್ಕೆ ಉತ್ತರ ಈ ಲೇಖನದಲ್ಲಿ ಹೇಳಿದೆ. ಪ್ರಬುದ್ಧ ಕರ್ನಾಟಕ ಮತ್ತು ಹಿಂದೂ ಪತ್ರಿಕೆಗಳ ವಿಚಾರದಲ್ಲಿ ಅವು ತಮಗೆ ಆಗದ, ಪ್ರಚಾರ ಕೊಡದ ಪತ್ರಿಕೆಗಳೆಂದು ಅವರು ಆಡಿರುವ ಮಾತುಗಳನ್ನು ಒಪ್ಪುವುದು ಕಷ್ಟವಾಗಬಹುದು. ಮಂತ್ರಿ ಪದವಿ ತಪ್ಪಿದುದಕ್ಕಾಗಿ ತೋರುವ ತಳಮಳ ಅಧಿಕಾರ ಮೋಹದ ಪರಿಣಾಮವೆಂದು ತೋರಬಹುದು. ಕೆಲವು ದೂರುಗಳು ತೀರ ಸಣ್ಣವೆಂದು ಕಾಣಬಹುದು. ಅಲ್ಲಲ್ಲಿನ ಕೆಲವು ಹೇಳಿಕೆಗಳು ಕಣ್ಣು ಕಟ್ಟಿದ ಕುದುರೆಯಂತೆ ಒಂದೇ ನಿಟ್ಟಿನ ಆಲೋಚನೆಯ ಫಲವೆಂದು ಅನ್ನಿಸಬಹುದು. ಈ ಬಗೆಯ ಭಿನ್ನಾಭಿಪ್ರಾಯಗಳನ್ನು ಕುರಿತು ಚರ್ಚಿಸಲು ಇದು ಎಡೆಯಲ್ಲ. ಇದರಂತೆ ಎಡತೋಳು ಇಲ್ಲವೆ, ಬಲ ತೋಳುಗಳ ನಡುಕ, ದರ್ಶನ ಆಗುವುದು, ನಿದ್ರೆಯಲ್ಲಿ ವಿಚಿತ್ರ ಕನಸು ಬೀಳುವುದು, ವಿಚಿತ್ರ ಅನುಭವ ಆಗುವುದು ಓದುಗರಿಗೆ ವಿಚಿತ್ರವಾಗೇ ತೋರಬಹುದು.

ಇಲ್ಲಿ ಕೆಲವು ಕಡೆ ಬರುವ ಇಂಗ್ಲಿಷ್ ಸಂಭಾಷಣೆ ಅತಿಯಾಯಿತೆನ್ನಿಸಬಹುದು. ಕೆಲವರಿಗೆ ಅದು ಅನವಶ್ಯಕವೆನ್ನಿಸಲೂ ಬಹುದು. ಇಂಗ್ಲಿಷ್ ಬಾರದ ಕನ್ನಡಿಗರಿಗೆ ಅದರಿಂದ ಯಾವ ಪ್ರಯೋಜನವೂ ಇಲ್ಲ: ಇಂಗ್ಲಿಷಿನಲ್ಲೇ ಅವರು ಹಿಂದೆ ಈ ಸಂಭಾಷಣೆ ನಡೆಸಿದ್ದಿರಬಹುದು, ಅದನ್ನು ಹಾಗೆಂದು ತಿಳಿಸಿ, ಕನ್ನಡದಲ್ಲೇ ಅದರ ತಿರುಳನ್ನು ತಿಳಿಸಬಹುದಿತ್ತು-ಎಂದೆಲ್ಲಾ ಅನ್ನಿಸಬಹುದು. ಇಂಥ ಆಕ್ಷೇಪಗಳಿಗೆ ಈ ಲೇಖನದಲ್ಲಿ ಹಿಂದೆ ಒಂದು ಉದಾಹರಣೆ ಕೊಟ್ಟಿರುವುದನ್ನು ಮತ್ತೆ ಇಲ್ಲಿ ತಿಳಿಸಬಹುದು: 'ಇದು ನನ್ನ ಜೀವನವನ್ನು ಕುರಿತ ನನ್ನ ಭಾವ. ಈ ಭಾವ ಸ್ವಭಾವವನ್ನು ಅವಲಂಬಿಸುತ್ತದೆ.' ಅಲ್ಲದೆ ಮಾತೂ ವಿಷಯವೂ ಎಳೆ ತಪ್ಪಿದ ಕಡೆ ಕ್ಷಮೆ ಇರಬೇಕೆಂದು ವಿನಯದಿಂದ ಬೇಡಿದ್ದಾರೆ.

''ನನ್ನ ಜೀವನ ಒಟ್ಟಿನಲ್ಲಿ ಸುಖವುಂಡ, ಜಯಕಂಡ ಜೀವನ ಎನ್ನಬಹುದು. . . . ಮಾಸ್ತಿಯಲ್ಲಿ ಹುಟ್ಟಿದ ಈ ಮಗು ಈ ದಿನ ನಾನು ಈಗ ಇರುವ ಸ್ಥಿತಿಯಲ್ಲಿರುವುದು ದೈವಾನುಗ್ರಹ ಎನ್ನುವುದು ಯಾರೇ ಆದರೂ ಒಪ್ಪಬಹುದಾದ ಮಾತು. . .ಸದ್ಯದಲ್ಲಿ ನನ್ನ ದೇಹಸ್ಥಿತಿ ಚೆನ್ನಾಗಿದೆ. ದೇಹದ ಶಕ್ತಿಗಳು ಪರಿಮಾಣದಲ್ಲಿ ಕಡಿಮೆ ಆಗಿವೆ ಹೊರತಾಗಿ ಯಾವುದೂ ನಷ್ಟ ಆಗಿಲ್ಲ. ಮನಸ್ಸು ಬುದ್ಧಿ ಎಂದಿನಂತಿವೆ. ಹೊರಗೆ ಹೋಗಿ ದುಡಿಯುವ ಪ್ರವೃತ್ತಿ ಕಡಮೆಯಾಗಿದೆ. ಇರುವ ಕಡೆ ಮಿತವಾಗಿ ಒಂದಷ್ಟು ದುಡಿಯಬಹುದು. ದೈವ ಅನುಗ್ರಹಿಸಿದರೆ, ಈ ಮುನ್ನ ಆರಂಭಿಸಿ ಅರ್ಧಮರ್ಧ ಆಗಿ ನಿಲ್ಲಿಸಿರುವ ಹತ್ತಾರು ಸಣ್ಣ ಪುಟ್ಟ, ಕೆಲವೊಂದು ತಕ್ಕಷ್ಟು ದೊಡ್ಡ, ಬರಹ ನಡೆಯಬೇಕು. ಇದು ನಡೆಯುವುದು ಬಿಡುವುದು ದೈವ ಚಿತ್ತ.''

ಅವರು ತಮ್ಮ ನಿಡುಬಾಳಿನುದ್ದಗಲಕ್ಕೂ ನೆಮ್ಮಿ ನಂಬಿ ನಡೆದ ದೈವ, ನೂರು ವರುಷ ಹದುಳದಿಂದ ಬಾಳಿ, ಬರೆಯಬೇಕೆಂದು ಅಂದುಕೊಂಡಿರುವುದನ್ನೆಲ್ಲಾ ಬರೆದು ಮುಗಿಸುವಂತೆ ಇಂಬಾಗಿ ನಿಂತು ಹರಸಲಿ - ಇದು ಭಾವ ಓದಿ ಮುಗಿಸಿದ ಎಲ್ಲ ಓದುಗನ ಹಾರೈಕೆ.

ಭಾವದಿಂದ ಬಂದ ಭಾವ

ಗೋಪಾಲ ಮಧ್ವ ಕಾಲನಾಡ

ಹದಿನಾಲ್ಕು ವರುಷದ ಬಾಲಕನಾಗಿದ್ದಾಗಲೇ 'ಸುಬ್ಬಣ್ಣ'ಓದಿ ಮೋಹಿತನಾದ ನಾನು ವರುಷವರುಷವೂ ಓದಿದೆ, ಈಗಲೂ ಓದುವೆ. ಈ ಸುಬ್ಬಣ್ಣನನ್ನು ಸೃಷ್ಟಿಸಿದ ಬ್ರಹ್ಮನ ಭಾವ ಎಂಥದಿರಬೇಕು, ಹೃದಯ ಸಂಸ್ಕಾರವೆಂಥದಿರಬಹುದು, ಎಂದು ನನ್ನ ಭಾವ ತವಕ ಪಡುತ್ತಿರುವ ಸಮಯಕ್ಕೆ ಸರಿಯಾಗಿ 'ಭಾವ' ಪ್ರಕಟವಾಯಿತು. ಭಾವ (ಸಂವತ್ಸರ)ದಲ್ಲಿಯೇ ಹುಟ್ಟಿದ ನಾನು 'ಭಾವ'ಸಾಗರದಲ್ಲಿ ತಲ್ಲೀನನಾದೆ. ಶ್ರೇಷ್ಠ ಸಾಹಿತ್ಯ ನಿರ್ಮಿಸಿ ಉಪಕಾರ ಮಾಡಿ ಕನ್ನಡಕ್ಕೊಂದು ಆಸ್ತಿಯಾಗಿ ನಿಂತಿರುವ ಮಾಸ್ತಿಯವರು 'ಭಾವ'ಪ್ರಕಟಿಸಿ ಮಹದುಪಕಾರ ಮಾಡಿದ್ದಾರೆ. ಭಾವನೆಯುಳ್ಳ ಪ್ರತಿಯೊಬ್ಬ ಅವಶ್ಯ ಓದಲೇಬೇಕಾದ ಗ್ರಂಥಗಳಿವು. ಹೇಗೆ ಒಬ್ಬನ ಜೀವನ ಮೊಗ್ಗು ಅರಳಿ ಸುಂದರ ಪುಷ್ಪವಾಗಿ ಸಾರ್ಥಕತೆ ಪಡೆಯುತ್ತದೆ, ಅದರ ವಿಕಾಸ ಕಾರ್ಯದಲ್ಲಿ ಸೃಷ್ಟಿ ಪ್ರಯತ್ನವೆಷ್ಟು, ಎಂಬುದನ್ನು ಭಾವದಲ್ಲಿ ಕಂಡುಕೊಂಡೆನು. ಹಳ್ಳಿಯ ಮುಗ್ಧ ಬಾಲಕ ಶೀನಪ್ಪ ''ಶ್ರೀನಿವಾಸ''ನಾಗಿ ನಾಡಿನ ತುಂಬೆಲ್ಲ ತ್ರಿವಿಕ್ರಮನಾಗಿ ಹೇಗೆ ನಿಲ್ಲಲು ಶಕ್ತನಾದ ಎನ್ನುವ ವಿಷಯ ಕಾವ್ಯಮಯವಾಗಿ ಸುಂದರವಾಗಿ ಪ್ರಾಮಾಣಿಕವಾಗಿ ನಿರೂಪಿತವಾಗಿದೆ.

ಮಾಸ್ತಿ ಭಾವದಲ್ಲಿ ಎದ್ದು ಕಾಣುವ ಒಂದು ಅಂಶ ಕೃತಜ್ಞತೆ. ಕೃತಜ್ಞತೆಯ ಬೀಜಾರೋಪಣವಾದರೇನೇ ಕೃತಕೃತ್ಯತೆಯ ಫಲ ದೊರಕುವುದು. ಎಳೆಯ ಬಾಲಕ ಶೀನಪ್ಪ ತನಗೆ ನಾಲ್ಕು ಅಕ್ಷರ ಕಲಿಸಿ ಸಾಹಿತ್ಯಾಭಿರುಚಿಯನ್ನು ಹುಟ್ಟಿಸಿದ ಶ್ರೀನಾರಣಪ್ಪ ಮಾಸ್ತರರ ಉಪಕಾರ ಸ್ಮರಿಸುವುದು ಹೆಜ್ಜೆ ಹೆಜ್ಜೆಗೂ ನೋಡುತ್ತೇವೆ. ಅದನ್ನು ಓದಿದಾಗಲೆಲ್ಲಾ ನನ್ನ ಭಾವ ಹೀಗೆ ಹೇಳಿತು: ''ಒಂದು ಹಳ್ಳಿಯಲ್ಲಿ ಮಾಸ್ತರನಾಗಿ ಮಾಸ್ತಿಯವರಂಥ ಒಬ್ಬ ವ್ಯಕ್ತಿಯ ವಿಕಾಸಕ್ಕಾಗಿ ಪರಿಶ್ರಮ ಮಾಡುವುದರಲ್ಲಿರುವ ಸಾರ್ಥಕತೆ ಇನ್ನಾವ ರೀತಿಯ ಆಡಂಬರ ಜೀವನದಲ್ಲಿಲ್ಲ''ಎಂದು.

ವಾರದ ಹುಡುಗನಾಗಿ ಸೀನಪ್ಪ ಮೊದಲು ನೊಂದುಕೊಂಡದ್ದು ಕಾಣುತ್ತದೆ. ಅವರ ಮುಂದಿನ ಜೀವನ ಓದಿದಾಗ ಆ ನೋವು ಮಾಯವಾಗಿ ಒಂದು ಮಾಹಾ ಸತ್ಯಕಂಡುಕೊಂಡದ್ದು ಕಾಣುತ್ತದೆ. ಸಮಾಜದಿಂದ ಬೇಡಿ ಪಡೆದುಕೊಂಡು ವಿದ್ಯಾರ್ಜನೆಮಾಡಿ ಆ ಋಣವನ್ನು ಸಮಾಜದ ಸೇವೆ ಮಾಡಿ ಮುಟ್ಟಿಸಬೇಕು ಎಂಬ ತತ್ವ ಕಂಡುಕೊಂಡು ಆ ರೀತಿ ಬಾಳಿ ತೋರಿದ್ದಾರೆ. ಇಂದಿಗೂ ನಮಗೆ ವಾರನ್ನ ನೀಡಿದ ಮಹನೀಯರ ಸ್ಮರಣೆ ಉಳಿಸಿಕೊಂಡು ಮುಂದಿನ ತಮ್ಮ ಜೀವಮಾನವೆಲ್ಲಾ ತಮ್ಮ ಮನೆಯನ್ನೇ ಅನ್ನ ಛತ್ರವಾಗಿ ಮಾಡಿದ್ದನ್ನು ನೋಡುತ್ತೇವೆ. ವಾರನ್ನದಿಂದ ಜೀವಿಸಿ ವಿದ್ಯಾರ್ಜನೆ ಮಾಡಿ ಸಮಾಜದ ಔನತ್ಯವನ್ನು ಸಂಪಾದಿಸಿದ ಬಳಿಕ ಬಹಳಷ್ಟು ಜನ ತಮ್ಮ

ಜೀವನದಲ್ಲಿ ಆ ಅನುಭವವನ್ನು ಕಹಿ ನೆನಪೆಂದು ಭಾವಿಸಿ ಮರೆಯಲು ಪ್ರಯತ್ನ ಮಾಡಿದಾಗ ಈ ಶ್ರೀನಿವಾಸ ಆ ಅನುಭವವನ್ನು ಹಸಿರಾಗಿ ಉಳಿಸಿಕೊಂಡು ಘನತೆಯ ಗೋಪುರದ ಮೇಲೆ ನಿಂತುಕೊಂಡು ಅಂಥ ಸಹಾಯ ನೀಡಿದ ಮಹನೀಯರೊಬ್ಬರು ಭೇಟಿಯಾದಾಗ ಅಭಿಮಾನದಿಂದ ''ನಿಮ್ಮ ಮನೆಗೆ ವಾರದೂಟಕ್ಕೆ ಬರುತ್ತಿದ್ದ ಹುಡುಗ ನಾನು''ಎಂದು ಹೇಳಿಕೊಳ್ಳುವ ಭಾವ ಭವ್ಯವಾದದ್ದು.

ಸತ್ಯ ನಿಷ್ಠೂರತೆಯನ್ನು ಕಾಣುತ್ತೇವೆ ಭಾವದಲ್ಲಿ. ಬೇರೆಯವರ ಮನಸ್ಸು ನೊಂದೀತು ಎಂದು ವಿಚಾರಿಸಿ ನಯವಾದ ರೀತಿಯಲ್ಲಿ ಸತ್ಯ ಪರಿಪಾಲನೆ ಮಾಡಿದ್ದು ಕಾಣುತ್ತೇವೆ. ಈ ನಯ ಎಂಬುದು ಇವರಿಗೆ ಅತಿ ಚಿಕ್ಕಂದಿನಿಂದಲೇ ಮೈಗೂಡಿಸಿಕೊಂಡು ಬಂದಿದೆ. ಒಮ್ಮೆ ಒಬ್ಬ ಹೆಮ್ಮೆಯ ವಿದ್ಯಾರ್ಥಿ ಇಂಗ್ಲಿಷಿನಲ್ಲಿ ಭಾಷಣ ಬಿಗಿದಾಗ ಅದು ಎಲ್ಲರಿಗೂ ಬೇಸರ ತರಿಸಿದೆ. ಅವನು ಭಾಷಣ ಮುಗಿಸಿದ ಬಳಿಕ ಶ್ರೀ ಮಾಸ್ತಿಯವರು ಇದ್ದ ವಿಷಯ ಸರಿಯಾಗಿ ಹೇಳಿ, ''ನಾನು ಏನೂ ಮಾತಾಡದೆ ಇದ್ದಿರಬಹುದು. ಆದರೆ ಅದು ಮಾತಾಡಿದ ಮಿತ್ರರ ವಿಷಯದಲ್ಲಿ ವಂಚನೆಯ ವರ್ತನೆ ಆಗುತ್ತಿತ್ತು''ಎಂದು ಮಾತನಾಡಿ ಮುಗಿಸುತ್ತಾರೆ. ಇದು ಇನ್ನೂ ಹೈಸ್ಕೂಲ್ ವಿದ್ಯಾರ್ಥಿ ಇದ್ದಾಗ ಮುಟ್ಟಿದ ಎತ್ತರ.

ಇವರು ಹೈಸ್ಕೂಲಿನಲ್ಲಿದ್ದಾಗ ದೇಶದಲ್ಲಿಯ ರಾಜಕೀಯ ಚಟುವಟಿಕೆ ಎಂಥವನನ್ನೂ ಕಾರ್ಯ ಪ್ರವೃತ್ತನನ್ನಾಗಿ ಮಾಡುವಂಥದಿತ್ತು. ಇವರಂಥ ಬುದ್ಧಿ ಜೀವಿಯ ಮೇಲೆ ಆಗದೇ ಇದ್ದೀತೇ? ಆದರೆ ತಮ್ಮ ಅಳತೆಯ ಅರಿವು ಇಟ್ಟುಕೊಂಡು ಕರ್ತವ್ಯಪಾಲನೆ ಮಾಡಿದ್ದಾರೆ. ಅವರೇ ಹೇಳುತ್ತಾರೆ: '' ಆ ವರ್ಷಗಳಲ್ಲಿ ನನ್ನ ಗುರಿ ಒಂದೇ ಒಂದು. ಚೆನ್ನಾಗಿ ಓದಬೇಕು. ಚೆನ್ನಾಗಿ ಪ್ಯಾಸ ಮಾಡಬೇಕು. ಮುಂದಕ್ಕೆ ಯಾವುದೋ ಒಂದು ಕೆಲಸಕ್ಕೆ ಸೇರಿ ಊರಿನಲ್ಲಿ ಕಷ್ಟದಲ್ಲಿ ಸೊರಗುತ್ತಿದ್ದ ತಂದೆಗೆ ತಾಯಿಗೆ ಅನ್ನ ಹಾಕಬೇಕು. ಈ ಒಂದು ಗುರಿಯಲ್ಲಿ ಮನಸ್ಸಿಟ್ಟ ನನಗೆ ಆಗ್ಗೆ ಇಂಥ ಚಳುವಳಿಗಳಲ್ಲಿ ಭಾಗವಹಿಸುವ ಕಡೆ ಮನಸ್ಸು ಹರಿಯಲಿಲ್ಲ''. ಈ ಪ್ರಜ್ಞೆಯನ್ನು ಅವರ ಜೀವನದುದ್ದಕ್ಕೂ ಕಾಣುತ್ತೇವೆ. ಸರ್ಕಾರಿ ಸೇವೆಯಲ್ಲಿಯೇ ಆಗಲಿ ಕರ್ತವ್ಯ ಪ್ರಜ್ಞೆ ಸದಾ ಜಾಗೃತವಿದೆ. ರಾಮಾಯಣ, ಪಾರಾಯಣ, ಪಾರಾಯಣದ ಮಟ್ಟಕ್ಕೇನೇ ಉಳಿಯದೆ ನಿತ್ಯ ಜೀವನದಲ್ಲಿ ಇಳಿದು ಬಂದುದೇ ಇವರ ಜೀವನದ ವೈಶಿಷ್ಟ್ಯ. ಶ್ರೀ ರಾಮಚಂದ್ರರ ಆದರ್ಶವಿಟ್ಟುಕೊಳ್ಳುವುದಕ್ಕೆ ಮೊದಲು ಎದೆ ಬೇಕು. ಅದನ್ನು ಇಟ್ಟುಕೊಂಡು ಸಾಧಿಸುವುದಂತೂ ದೂರದ ಮಾತು. ಮಾಸ್ತಿಯವರು ಬಹಳಷ್ಟು ಸಾಧಿಸಿದ್ದಾರೆ. ದೊಡ್ಡ ಹುದ್ದೆಯನ್ನು ಬಿಟ್ಟುಕೊಡುವಾಗ ಅವರು ತಾಳಿದ ನಿಲುವು ಶ್ರೀರಾಮನ ನಿಲುವಿನ ಧಾಟಿಯದು ಎಂದು ನನಗೆನಿಸಿತು. ತಮಗೆ, ತಮ್ಮ ಹುದ್ದೆಗೆ ಸರಿಯಾಗಿ ದುಡಿಯಲು ಮಂತ್ರಿಸ್ಥಾನ ದೊರಕದ ನೋವು ಕಾರಣವಾಗಬಹುದು ಎಂದು ತಿಳಿದು ರಾಜೀನಾಮೆ ನೀಡುವುದರ ಭವ್ಯ ನಿಲುವಲ್ಲದೆ ಮತ್ತೇನು?

ಇವರ ಅಂತಃಕರಣ ಶುದ್ಧ. ತಾಯಿ, ತಂದೆ, ತಾತ, ಬಂಧುಬಳಗ ಗುರುವರ್ಗದಲ್ಲಿ ಇವರು ತಮ್ಮ 'ಭಾವ'ದ ಪ್ರತಿಯೊಂದು ಪುಟದಲ್ಲಿಯೂ ಅಂತಃಕರಣ ತೋರುವುದನ್ನು ನೋಡುತ್ತೇವೆ. ಅದೇ ರೀತಿ ಎಲ್ಲರಲ್ಲಿಯೂ ಅವರವರ ಪ್ರತಿನಿಧಿಗಳನ್ನು ಗುರುತಿಸಿ ಅಂತಃಕರಣ ಹರಿಸಿದ್ದಾರೆ. ಒಬ್ಬ ಮುದುಕ ಶಾಸ್ತ್ರಿಗಳಲ್ಲಿ ತಮ್ಮ ತಾತನನ್ನು ಕಂಡದ್ದು ಶುದ್ಧ ಅಂತಃಕರಣ. ಇವರ ಜೀವನದಲ್ಲಿ ಚಿಕ್ಕಂದಿನಿಂದಲೂ ಕಾಣುವ ಒಂದು ವಿಶೇಷ ಉತ್ಕರ್ಷದ ಒಂದೊಂದು ಘಟ್ಟವನ್ನು ಏರಿದ ಕ್ಷಣದಲ್ಲಿಯೇ ಇವರಿಗೆ ತಮ್ಮ ಹಿರಿಯರು ಗುರುಗಳು

ಬಂಧುಗಳ ಸ್ಮರಣೆಯಾಗಿ ಅವರ ಆಶಯ ಆಶೀರ್ವಾದವೇ ಇದಕ್ಕೆ ಕಾರಣ ಎಂದು ಹೇಳಿದ್ದಾರೆ. ಆ ಶುಭ ಅಥವಾ ದುಃಖದಾಯಕ ಪ್ರಸಂಗದಲ್ಲಿ ದೈವ ಹೀಗೆ ಮಾಡಿತು ಎಂದುಕೊಂಡಾರೆ ಹೊರತು ಯಾವ ವ್ಯಕ್ತಿಗೂ ಅದರ ದೋಷ ಹೊರಿಸಿಲ್ಲ.

ತಮ್ಮ ಕಣ್ಣಿಗೆ ಕಂಡ ಯಾವ ಚೆಲುವನ್ನೇ ಆಗಲಿ, ಅನುಭವಕ್ಕೆ ಬಂದ ಒಳ್ಳೆಯದನ್ನೇ ಆಗಲಿ, ಹತ್ತು ಸಮಸ್ತರಿಗೆ ತಿಳಿಯಪಡಿಸುವ ತವಕ ಇವರ ಜೀವನದುದ್ದುಕ್ಕೂ ಕಾಣುತ್ತದೆ. ಭಾರತ ಬಿಂದೂರಾಯರ ವಚನವಾಗಲಿ, ಚೌಡಯ್ಯನವರ ಪಿಟೀಲವಾದನವಾಗಲೀ, ಶ್ರೀ ಪುಟ್ಟಪ್ಪನವರ ಕಾವ್ಯಶಕ್ತಿಯನ್ನು ಗುರುತಿಸುವುದರಲ್ಲಿಯಾಗಲಿ ಈ ಗುಣ ಕಾಣುತ್ತದೆ.

ಯಾವುದೇ ಘಟನೆಯನ್ನಾಗಲಿ ಹೇಳಿಕೆಯನ್ನಾಗಲಿ ಇವರು ಬೇರೊಬ್ಬರ ಅನುಭವ ಬಳಸಿ ನಂಬಿದುದೇ ಇಲ್ಲ. ದೇವರ ಬಗ್ಗೆ ಕೂಡ ಇವರ ನಿಲುವು ಹೀಗಿತ್ತೆಂಬುದು ಕಾಣುತ್ತದೆ. ಅಲ್ಲಿಯೂ ಯಾವ ಅನುಭವದಿಂದಲೇ ನಿಲುಗಡೆಗೆ ಬಂದಿದ್ದಾರೆ. ಆದರೆ ಇವರು ಪುಣ್ಯವಂತರು. ಇವರಿಗೆ ಅತೀಂದ್ರಿಯ ಅನುಭವ-ದರ್ಶನದ ಸೌಕರ್ಯವಿದೆ. ಅಗಡಿಯ ಸಾಧುಗಳ ಅನುಗ್ರಹ, ತಿರುಪತಿಯಲ್ಲಿ ಇವರಿಗಾದ ಅನುಭವಗಳು, ಇವರ ನಿಲುವು ಯೋಗ್ಯ ಎನ್ನುವ ರೀತಿಯಲ್ಲಿ ಸಾಕ್ಷಿ ಹೇಳುತ್ತದೆ. ದೈವದ ಮೇಲೆ ಪೂರ್ಣ ನಂಬಿಕೆ ನಿಲ್ಲುವಂಥ ಪ್ರಸಂಗಗಳು ಇವರ ಜೀವನದುದ್ದಕ್ಕೂ ಕಾಣುತ್ತವೆ.

ಇವರು ಎಷ್ಟು ವಿನಯಶೀಲರೋ, ಎಷ್ಟು ನಿಗರ್ವಿಗಳೋ, ಅಷ್ಟೇ ಸ್ವಾಭಿಮಾನಿಗಳು. ಚಿಕ್ಕ ಹುಡುಗ ಆಗಿದ್ದಾಗಲೇ ಈ ಗುಣ ಎದ್ದು ಕಾಣುತ್ತದೆ. ಎಂದೂ ಇವರು ತಮ್ಮನ್ನು ಇಳಿಸಿಕೊಂಡ ಪ್ರಸಂಗ ಕಾಣೆವು. ನೌಕರಿ ಜೀವನದಲ್ಲಿ ಒಂದು ಮಾತು ಹೇಳಿಕೊಳ್ಳುವುದಾಗಲಿ ಅಥವಾ ಒಂದು ಕೃತಿ ಮಾಡಿದ್ದರಾಗಲಿ ಇವರಿಗೆ ಸಾಕಷ್ಟು ಲೌಕಿಕ ಗೌರವ ದೊರಯಬಹುದಿತ್ತು. ಆದರೆ ಇವರ ಸ್ವಾಭಿಮಾನ ಅದನ್ನು ಮಾಡಿಸಿಲ್ಲ. ಇವರ ಸ್ವಾಭಿಮಾನದ ಅಗ್ನಿಪರೀಕ್ಷೆ ಇವರಿಗೆ ಮಂತ್ರಿಪದವಿ ಸಿಗದ ಸಂದರ್ಭ. ಕರ್ತವ್ಯ ಪ್ರಜ್ಞೆ, ಸ್ವಾಭಿಮಾನ ಹಾಗೂ ನಂಬಿಕೆಗಳ ಕೈ ಮೇಲಾಗಿ ಇವರು ಒಂದು ದೊಡ್ಡ ಹುದ್ದೆಯನ್ನು ಬಿಟ್ಟು ಕೊಟ್ಟರು. ಮಂತ್ರಿ ಪದವಿ ದೊರಕದೆ ಇದ್ದುದಕ್ಕೆ ಬಹಳಷ್ಟು ನೊಂದುಕೊಂಡಿದ್ದಾರೆ. ಅಂದರೆ ಆ ಪದವಿಗೆ ಏರಬೇಕಾದ ಸಕಲ ಗುಣಗಳೂ ಅರ್ಹತೆಗಳೂ ತಮ್ಮಲ್ಲಿ ಸಂಪೂರ್ಣವಾಗಿದ್ದು ಆ ಶಕ್ತಿಗಾಗಲಿ, ಗುಣಕ್ಕಾಗಲಿ, ಬುದ್ಧಿಗಾಗಲಿ ಸರಿಯಾದ ಗೌರವ ಸಲ್ಲಲಿಲ್ಲವಲ್ಲಾ ಎಂಬ ಕೊರಗು, ತಮ್ಮಲ್ಲಿ ಅಡಗಿದ ಈ ಶಕ್ತಿಯ ಬಗ್ಗೆ ಅವರಿಗೆ ಅಭಿಮಾನ, ಅದನ್ನು ಲೌಕಿಕ ರೀತಿಯಲ್ಲಿ ನೋಡಿದರೆ ಸರಿಯಾಗದು.

ಇನ್ನೊಂದು ಪ್ರಸಂಗ ಚಿಕ್ಕಮಗಳೂರಿನಲ್ಲಿ ಡೆಪ್ಯೂಟಿ ಕಮಿಷನರ್ ಆಗಿದ್ದಾಗ ಅಲ್ಲಿಯ ಆಂಗ್ಲ ಕ್ಲಬ್ಬಿಗೆ ಸದಸ್ಯರಾಗಲು ನಿರಾಕರಿಸಿದ್ದು. ಕೇವಲ ಅಧಿಕಾರಿಯೆಂದು ಮೆಂಬರ್ ಮಾಡಿಕೊಳ್ಳಲು ಮುಂದಾದಾಗ ಇವರು ನಿರಾಕರಿಸಿದ್ದು ಸ್ವಾಭಿಮಾನ, ಸ್ವಜನ ಅಭಿಮಾನಕ್ಕೆ, ನಿದರ್ಶನ. ಆದರೆ ಆ ಜನರೊಡನೆ ಆ ಬಳಿಕ ವ್ಯವಹರಿಸಿದ ರೀತಿ ಔದಾರ್ಯ ತೋರಿಸುತ್ತದೆ.

ಇವರ ನಿಸ್ಪೃಹ ಭಾವ ಚೊಕ್ಕ ಚಿನ್ನ. ತಾವು ಅಧಿಕಾರದಲ್ಲಿದ್ದಾಗ ಅದರ ಬಲದ ಮೇಲೆ ಯಾವ ಇತರ ಅನುಕೂಲತೆಗಳನ್ನು ಮಾಡಿಕೊಳ್ಳಲು ಇವರು ಹವಣಿಸಿಲ್ಲ. ಇವರಿಗೆ ಸರ್ಕೀಟಿಗೆ ಹೋದಲ್ಲಿ ಕೊಟ್ಟ ದ್ರಾಕ್ಷಿಹಣ್ಣು ಇತ್ಯಾದಿಗಳನ್ನು ಮನೆಗೆ ತರಲೂ ಕೂಡ ಇವರ ಭಾವ ಅಳುಕಿದೆ. ಏಕೆ ತರಬಾರದು, ಮಕ್ಕಳು ತಿನ್ನುತ್ತವೆ, ಎಂದು ಹಿರಿಯರು ಕೇಳಿದಾಗ,

ಬೇಕಾದರೆ ಹಣಕೊಟ್ಟು ತಂದು ಮಕ್ಕಳಿಗೆ ಕೊಡೋಣ ಎಂದು ಹೇಳಿ ನಿರ್ಮಲ ನಿಸ್ಪೃಹ ಭಾವ ಮೆರೆಸಿದ್ದಾರೆ. ತಮ್ಮ ಕುದುರೆಗೆ ಹುಲ್ಲು ತರಿಸಿದ್ದಕ್ಕೂ ರೊಕ್ಕ ಕೊಟ್ಟು ಬರುವಂಥ ಪ್ರವೃತ್ತಿ ಇವರದು.

ಇವರು ತಮ್ಮ ಮಿತ್ರರೊಡನೆ ನಡೆದುಕೊಂಡ ರೀತಿ ಅನುಕರಣೀಯ. ಗೆಳೆತನ ಮೂಡಿ ಗೆಳೆಯರ ಬಳಗ ಎಂದು ಕಟ್ಟಿಕೊಂಡವರಿಗೆ ಅದರ ರುಚಿ ಸ್ವಾರಸ್ಯ ತಿಳಿಯುತ್ತದೆ. ಗೆಳೆಯ ವೆಂಕಟರಂಗನ್‌ರ ಜೊತೆ ಅವರು ಒಂದು ಪ್ರಸಂಗದಲ್ಲಿ ನಡೆದುಕೊಂಡಂತೆ ನಾನು ಅಂಥದೇ ವ್ಯಕ್ತಿತ್ವದ ಮಿತ್ರರೊಡನೆ ಹೆಚ್ಚು ಕಡಮೆ ಅಂಥದೇ ಪ್ರಸಂಗದಲ್ಲಿ ಶ್ರೀ ಮಾಸ್ತಿಯವರಂತೇ ವ್ಯವಹರಿಸಿದ ಪ್ರಸಂಗ ನೆನಪಾಗಿ ಅದನ್ನು ಓದುತ್ತಿದ್ದಂತೆಯೇ ರೋಮಾಂಚನವಾಯಿತು. ಅಭಿಮಾನವೂ ಆಯಿತು. ನನ್ನ ಆ ಮಿತ್ರ ಇಂದು ಮುಂಬೈಯಲ್ಲಿದ್ದು ಇಂದಿಗೂ ನನ್ನ ಅವನ ಸ್ನೇಹ ದೃಢವಾಗಿ ನಿಂತಿದೆ.

ಶ್ರೀ ಬೇಂದ್ರೆಯವರ ಕಾವ್ಯಶಕ್ತಿಯನ್ನು ಸಮರ್ಥ ರೀತಿಯಲ್ಲಿ ಗ್ರಹಿಸಿ ಬಾಯಿತುಂಬಾ ಹೊಗಳಿ ಅವರಲ್ಲಿ ಬಂಧುವನ್ನು ಗುರುತಿಸಿ ನಡೆದುಕೊಂಡ ರೀತಿ ಹೃದಯ ತುಂಬಿ ಬರಿಸುತ್ತದೆ. ಗುಣದ ವಿಷಯದಲ್ಲಿ ಇವರ ಉದಾರಭಾವ ಅಸದಳ. ಭಾವಜೀವಿಗೆ ಸಮಾಜದ ಕ್ಷುದ್ರತೆಯಾಗಲಿ ಅಲ್ಪತನವಾಗಲಿ ಸೋಕದು ಎಂದು ನನ್ನ ಭಾವನೆ.

ಇನ್ನೊಂದು ವಿಷಯ, ಇವರಿಗೆ ಚಿಕ್ಕಂದಿನಲ್ಲಿ ದೊರೆತ ಎಲ್ಲ ಮಿತ್ರರ ಬಗೆಗೂ ಒಂದು ಮಾತು ಹೇಳಿ ಶ್ರೀನಿವಾಸರು ಒಬ್ಬ ತಮ್ಮ ಹೈಸ್ಕೂಲ್ ಸಹಪಾಠಿ ಮಿತ್ರ ಲಿಂಗಪ್ಪನನ್ನು ಮುಂದೆ ಏಕೋ ಮರೆತುಬಿಟ್ಟಿದ್ದಾರೆ. ನಾನು ಮತ್ತೆ ಮತ್ತೆ ಹುಡುಕಾಡಿದೆ, ಅವನ ಬಗೆಗೆ ಮುಂದೆ ಏನೂ ಸಿಕ್ಕಲಿಲ್ಲ. ಅವನು ಎಂಥ ಮಿತ್ರನಿದ್ದ ಎನ್ನುವುದನ್ನು ಸಾಕಷ್ಟು ಸಹಾನುಭೂತಿಯಿಂದ ಬರೆದಿದ್ದು ಭವಿಷ್ಯ ಜೀವನದಲ್ಲಿ ಅವನು ಹೇಗೆ ಜಾರಿಕೊಂಡನೋ ತಿಳಿಯಲಿಲ್ಲ.

ಶ್ರೀನಿವಾಸರು ಸುದ್ವೈವಿಗಳು. ಸಾಹಿತಿ ಭಾವಗಳನ್ನು ಸರಿಯಾಗಿ ಅಭಿವ್ಯಕ್ತ ಪಡಿಸಲು ಸಾಮರ್ಥ್ಯಬೇಕು. ಆ ಸಾಮರ್ಥ್ಯ ದೈವಾನುಗ್ರಹ ಎಂದು ನನ್ನ ತಿಳುವಳಿಕೆ. ಈ ಅರ್ಥದಲ್ಲಿ ಶ್ರೀನಿವಾಸರು ಪೂರ್ಣ ಸುದ್ವೈವಿಗಳು. ಅಂದರೆ ಒಳಗಿನ ಭಾವಗಳನ್ನು ಸರಿಯಾಗಿ ವ್ಯಕ್ತ ಪಡಿಸುವ ಕಲೆ, ಸಾಮರ್ಥ್ಯ ಸಂಪೂರ್ಣವಾಗಿ ಅವರಿಗೆ ಸಾಧಿಸಿದೆ. ಎಂತಲೇ ನಾಡು ಅವರಿಂದ ಅಮೂಲ್ಯ ಕೃತಿರತ್ನಗಳನ್ನು ಪಡೆಯಿತು. 'ಭಾವ' ವಂತೂ ಒಂದು ಅಪೂರ್ವ ಆತ್ಮಕಥೆ.

ಒಂದು ಮನೆಯಲ್ಲಿ ಒಬ್ಬ ಹಿರಿಯ ಪೌರುಷವಂತನಾಗಿ ಬಾಳಿ ಸಮಾಜದ ಋಣವನ್ನು ಸಾಕಷ್ಟು ತೀರಿಸಿ ಪುಣ್ಯವಂತನಾಗಿ ಬದುಕು ಸಾಗಿಸಿ ಇಳಿವಯಸ್ಸಿನಲ್ಲಿ ತನ್ನ ಚಿಕ್ಕ ಚಿಕ್ಕ ಮೊಮ್ಮಕ್ಕಳನ್ನು ಮುಂದೆ ಕೂರಿಸಿಕೊಂಡು ತನ್ನ ಸಾಧನೆಗಳನ್ನು ಸಿದ್ಧಿಗಳನ್ನು ಬಣ್ಣಿಸಿ ಹೇಳುವ ಆ ಹಿರಿಯನಲ್ಲಿ ಯಾವ ಭಾವವಿರಬೇಕು? ಸ್ವಪ್ರತಿಷ್ಠೆಯದಾಗಲಿ ಆತ್ಮಸ್ತುತಿಯದಾಗಲಿ ಸೋಂಕು ಇರದು. ಏಕೆಂದರೆ ಅವನ ಸಾಧನೆ ಸಿದ್ಧಿಗಳು ಸಮಸ್ತರ ಕಣ್ಮುಂದೆಯೆ ಇರುತ್ತವೆ. ಗೊತ್ತಿದ್ದ ಸಹೃದಯರು ತಾವೇ ಮುಂದಾಗಿ ಹೇಳುತ್ತಿರುತ್ತಾರೆ. ಆದರೆ ಅಲ್ಲಿ ಕೇವಲ ಒಂದು ಕಳಕಳಿ ಕಾರ್ಯ ಮಾಡುತ್ತಿರುತ್ತದೆ. ನನ್ನ ಮೊಮ್ಮಕ್ಕಳು ಪೌರುಷವಂತರಾಗಿ ಬಾಳಲಿ, ಸಮಾಜದ ಋಣ ತೀರಿಸಲು ಮುಂದಾಗಲಿ, ಸತ್ಯವಂತರಾಗಲಿ ಎಂಬ ಆಶಯ ಹಿರಿಯನಿಂದ ಹೇಳಿಸುತ್ತದೆ. ಆ ಮೊಮ್ಮಕ್ಕಳು ಸಲ್ಲಿಸುವ

ಗೌರವದಿಂದಾಗಲಿ ನಮನದಿಂದಾಗಲಿ ಅವನಿಗೆ ಏನೂ ಆಗಬೇಕಾದ್ದಿರುವುದಿಲ್ಲ. ಆ ಹಿರಿಯನ ಆಶಯದಂತೆ ಅವರು ಬಾಳಿದರೆ, ಸಾಕು ಆ ಹಿರಿಯನಿಗೆ. ಈ ಭಾವ ''ಭಾವ''ದ ಹಿಂದೆ ಇರಬಹುದು. ನಾನೊಬ್ಬ ಚಿಕ್ಕ ಮೊಮ್ಮಗ. ಹಿರಿಯ ಅಜ್ಜಂದಿರಾದ ಶ್ರೀ ಶ್ರೀನಿವಾಸರ ಜೀವಭಾವ ನನ್ನ ಮೇಲೆ ತುಂಬ ಪ್ರಭಾವ ಬೀರಿದೆ. ಅವರಷ್ಟು ಎತ್ತರ ಮುಟ್ಟಿ ಸೇವೆ ಸಲ್ಲಿಸಲು ಆಗದಿದ್ದರೂ ಅವರು ಹಿಡಿದ ದಾರಿ ತುಳಿಯುವ ಸಾಹಸ ಮಾಡುತ್ತೇನೆ. ಅವರ ಭವ್ಯಜೀವಕ್ಕೆ ನನ್ನ ಅನಂತ ಪ್ರಣಾಮಗಳು.

ಸಂಪಾದಕೀಯ

ಎಚ್ಚೆಸ್ಕೆ

'ನಾನು ಕನ್ನಡದ ಕೆಲಸ ಪ್ರಾರಂಭ ಮಾಡಿದಾಗ ಇನ್ನೂ ನಮಗೆ ಇಂಗ್ಲಿಷಿನ ವ್ಯಾಮೋಹ ಹೋಗಿರಲಿಲ್ಲ. ನನ್ನ ಮಾತನ್ನು ಜನ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ ಎಂದು ನಾನು ಬೇಸರಪಟ್ಟುಕೊಳ್ಳುವುದಿಲ್ಲ. ಮುಸಲ್ಮಾನರಲ್ಲಿ ಮೋಜನ್ ಎಂಬೊಬ್ಬ ಮನುಷ್ಯ ಇರುತ್ತಾನಂತೆ. ಬೆಳಗಾಗ ಜನರನ್ನು ಪ್ರಾರ್ಥನೆಗೆ ಕೂಗಿ ಎಬ್ಬಿಸುವುದು ಅವನ ಕೆಲಸ. ''ನಾನು ಕೂಗಿದಾಗ ಹೆಚ್ಚು ಜನ ಕೇಳಲಿಲ್ಲ'' ಎನ್ನುವ ಮಾತನ್ನು ಅವನು ಆಡುವಂತಿಲ್ಲ. ಇತರರು ಮಲಗಿದ್ದಾಗ ಕೂಗಿ ಎಬ್ಬಿಸುವ ಕೆಲಸ ಅವನದು. ಕನ್ನಡ ನಾಡಿನಲ್ಲಿ ನಾನು ಮಾಡಿದುದು ಈ 'ಮೋಜನ್'ನ ಕೆಲಸ.'[1]

ಮಾಸ್ತಿಯವರ 'ಜೀವನ' ಪತ್ರಿಕೆಯನ್ನು-ಅದರಲ್ಲೂ ಮುಖ್ಯವಾಗಿ ಅವರ ಸಂಪಾದಕೀಯವನ್ನು-ನೆನಸಿಕೊಂಡಾಗಲೆಲ್ಲ, ಮಾಸ್ತಿಯವರು ಹೇಳಿದರೆಂದು ಎಲ್.ಎಸ್. ಶೇಷಗಿರಿರಾಯರು ಬರೆದಿರುವ ಮೇಲಣ ಮಾತು ನನಗೆ ನೆನಪಿಗೆ ಬರುತ್ತದೆ. ಮಾಸ್ತಿಯವರು ಬಹುಕಾಲ ನಡೆಸಿ ಬೆಳಸಿದ 'ಜೀವನ' ಪತ್ರಿಕೆಯಲ್ಲಿ ಅವರು ಬರೆಯುತ್ತಿದ್ದ ಸಂಪಾದಕೀಯ ಲೇಖನಗಳ ಮೂಲಕ ಮಾಡಿದ್ದು ಮೋಜನನ ಕೆಲಸವೇ.

ಪತ್ರಿಕೆಗಳಲ್ಲಿ ಪ್ರಕಟವಾಗುವ ಸುದ್ದಿ ಸಂಪಾದಕೀಯಗಳೆಂದರೆ ಅನೇಕರಿಗೆ ತಾತ್ಸಾರ. ಅವರ ದೃಷ್ಟಿಯಲ್ಲಿ ಪತ್ರಿಕೆಯೆಂಬುದು ಒಂದು ಅವಶ್ಯವಾದ ಅನಿಷ್ಟ; ವಿಶ್ವದ ಕಸವೆಲ್ಲ ಬಂದು ತುಂಬುವ ಬುಟ್ಟಿ. ಆದಷ್ಟು ಬೇಗ ಅದನ್ನು ಕೊಡವಿ ನಿವಾರಿಸಿಕೊಳ್ಳುತ್ತಿದ್ದರೆ ಕ್ಷೇಮ. ನೆನಪಿನಲ್ಲಿಟ್ಟುಕೊಂಡಿರಬೇಕಾದ್ದು ಅದರಲ್ಲಿ ಏನೂ ಇಲ್ಲವೆಂದೇ ಅವರ ಅಭಿಪ್ರಾಯ.

ಆದರೆ ದಿನದಿನವೂ ಸಂಭವಿಸುವ ಸಾವಿರಾರು ಘಟನೆಗಳು ಅರ್ಥಹೀನವಲ್ಲ. ಇಂದು ಇತಿಹಾಸವೆನಿಸಿರುವುದೆಲ್ಲ ನೆನ್ನೆಯ ಸುದ್ದಿ. ಅರ್ಥಟಿಸುವ ಕಡಲಿನೊಳಕ್ಕೆ ಸತತವಾಗಿ ಬಂದು ತುಂಬುತ್ತಿರುವ ನದಿಗಳ ಜಲರಾಶಿಯಂತೆಯೇ ಪತ್ರಿಕಾ ಸುದ್ದಿ ಕೂಡ: ಬಿಡಿಬಿಡಿಯಾಗಿ ಅರ್ಥಹೀನ. ಇಡಿಗೊಳಿಸಿದಾಗ ಇತಿಹಾಸ, ಮನುಕುಲದ ಆಶೆ, ನಿರಾಶೆ, ಸ್ವಾರ್ಥ, ಮೋಹ, ಡಂಭ, ಆದರ್ಶ, ಧರ್ಮಾಧರ್ಮಗಳ ಘರ್ಷಣೆ-ಇಂಥ ಹಲವೆಂಟು ತಾಕಲಾಟಗಳೇ ಸಂಸ್ಕೃತಿ ನಾಗರಿಕತೆಗಳ ಕಚ್ಚಾ ಸಾಮಗ್ರಿ. ಈ ಕಸದಲ್ಲಿ ರಸ ಕಾಣುವುದಕ್ಕೂ ಅವಶ್ಯವಾಗಿ ಇರಬೇಕು - ಏನೂತನ ಕಾಣ್ಕೆ.

ಜೀವನದಾರ್ಶನಿಕರಾದ ಮಾಸ್ತಿ ಶ್ರೀನಿವಾಸರ ಕತೆಗಳು ಬಹುತೇಕ ಲೋಕವಾರ್ತೆ.

---

1. ಎಲ್.ಎಸ್. ಶೇಷಗಿರಿರಾವ್: ಮಾಸ್ತಿ ವೆಂಕಟೇಶ ಅಯ್ಯಂಗಾರ್, ನವೋದಯ ಪ್ರಚಾರ ಪುಸ್ತಕ ಮಾಲೆ-೨. ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜ್, ಉಡುಪಿ ೧೯೫೭, ಪು- ೧

ರಂಗಣ್ಣ, ಮಂಗಮ್ಮ, ಕಲ್ಮಾಡಿಯ ಕೋಣ-ಇವೆಲ್ಲಾ ಏನು ಮತ್ತೆ? ಕವಿಯ ಬಾಳ ಕೊನೆಯ ದಿನ, ಒಂದು ಹಳೆಯ ಕತೆ, ಉಗ್ರಪ್ಪನ ಉಗಾದಿ - ಮುಂತಾದ ಹಲವಾರು ಪ್ರಸಂಗಗಳ ವರದಿಯೊಪ್ಪಿಸಿರುವ ಶ್ರೀನಿವಾಸರು ಮಾನಸಿಕವಾಗಿ ಆಯಾ ವ್ಯಕ್ತಿಗಳ ಸಂದರ್ಶನ ನಡೆಸದಿದ್ದರೆ ಆ ರಸ ಪರಿಪಾಕ ನಮಗೆ ಲಭ್ಯವಾಗುತ್ತಿತ್ತೆ? ಅವೆಲ್ಲ ಒಂದು ದೃಷ್ಟಿಯಲ್ಲಿ ಹಳೆಯ ಕಾಲದ ಪತ್ರಿಕಾ ವಾರ್ತೆಗಳೇ. ಕಾಲವನ್ನು ಹಿಂತಳ್ಳಿ, ಘಟನೆ ನಡೆದಂದಿಗೆ ನಾವು ಹೋಗುವುದು ಸಾಧ್ಯವಾದರೆ ಅವೆಲ್ಲ ಬಿಸಿಬಿಸಿ ಸುದ್ದಿಗಳೇ.

ಸಮಕಾಲೀನ ಲೋಕವಾರ್ತೆಯ ವರದಿಕಾರನಿಗೆ, ವಿಮರ್ಶಕನಿಗೆ ಸಂಸ್ಕೃತಿಯೂ ಸಮಚಿತ್ತವೂ ಸಹೃದಯತೆಯೂ ಸಾಹಿತ್ಯ ಗುಣವೂ ಲಭ್ಯವಾದರೆ ಏನಾದೀತೆಂಬುದಕ್ಕೆ 'ಜೀವನ' ಪತ್ರಿಕೆಯ ಸಂಪಾದಕರಾಗಿ ಮಾಸ್ತಿಯವರು ತಿಂಗಳು ತಿಂಗಳೂ ಬರೆಯುತ್ತಿದ್ದ ಲೇಖನಗಳು ಉದಾಹರಣೆ. ನಾಳೆಯ ಇತಿಹಾಸಕಾರನಿಗೂ ಸಾಹಿತ್ಯ ರಚಕನಿಗೂ ವಸ್ತುವಾಗಬಹುದಾದ ಹಲವೆಂಟು ಸುದ್ದಿಗಳ ಕಲಾತ್ಮಕ ವಿವೇಚನೆ.

ಎರಡನೆಯ ಮಹಾಯುದ್ಧ ಕಾಲದಲ್ಲಿ ಧಾರವಾಡದಲ್ಲಿ ಹುಟ್ಟಿ ಮೂರು ವರ್ಷ ಕಾಲ ಬಲು ಚೆನ್ನಾಗಿ ನಡೆದು, ಹಣ ಕಾಗದಗಳ ಮುಗ್ಗಟ್ಟಿನಿಂದಾಗಿ ತ್ರೈಮಾಸಿಕವಾಗಿ ಕುಂಟಲಾರಂಭಿಸಿ, ಹಾಗೆ ನಡೆಯುವುದೂ ಅಸಾಧ್ಯವೆನಿಸಿದ್ದ ಜೀವನ ಪತ್ರಿಕೆಯನ್ನು ಮಾಸ್ತಿಯವರು ಬೆಂಗಳೂರಿಗೆ ತಂದು ಅದಕ್ಕೆ ಪುನರ್ಜನ್ಮ ನೀಡಿದಾಗ, ಇವರು ಹೀಗೇಕೆ ಮಾಡಿದರೆಂದು ಅಂದುಕೊಳ್ಳದವರೂ ಇಲ್ಲದಿರಲಿಲ್ಲ. ಯುದ್ಧಕಾಲದ ಖಾಕಿಯ ಬಣ್ಣದ ಕಾಗದದ ಕೃಶಾಂಗ ಪತ್ರಿಕೆಯನ್ನು ಕಂಡಾಗ ಅನೇಕರಿಗೆ ನಿರಾಶೆಯೇ ಆಗಿತ್ತು. 'ಇದನ್ನು ಹೀಗೆ ಬಾಳಿಸುವುದಕ್ಕಿಂತ ಬಾವಿಗೆ ತಳ್ಳುವುದು ಮೇಲು' ಎಂದು ಮಾಸ್ತಿಯವರಿಗೆ ಕಾಗದ ಬರೆದವರೂ ಉಂಟು.

ಯುದ್ಧ ಮುಗಿಯುವ ವೇಳೆಗೆ ದೇಶದಲ್ಲಿ ಸಂಭವಿಸಿದ್ದ ಕಲ್ಲೋಲವನ್ನು ಕಂಡು ಮಾಸ್ತಿಯವರ ಮನಸ್ಸು ತಲ್ಲಣಿಸುತ್ತಿತ್ತು. ಹೊಸದಾಗಿ ನಾಡು ಕಟ್ಟುವ ಕನಸು ಕಾಣುತ್ತಿದ್ದ ಆ ದಿನಗಳಲ್ಲಿ ಸಾಹಿತಿ ತನ್ನ ಚಿಂತೆಯನ್ನು ಹರಿಸದಿರುವುದು ಹೇಗೆ ಸಾಧ್ಯ? 'ರಾಷ್ಟ್ರ ಜೀವನದ ವಿಷಯ, ಮತ್ತು ಕರ್ನಾಟಕ ಜೀವನದ ವಿಷಯ'ಗಳನ್ನು, ತಿಂಗಳು ತಿಂಗಳೂ ಅವರಿಗೆ 'ತೋಚಿದ ಸಂಗತಿಯನ್ನು ಟಿಪ್ಪಣಿಗಳ ರೂಪದಲ್ಲಿ' ಪ್ರಕಟಿಸಿದರು. 'ಪ್ರಕಟವಾಗಲು ಮೊದಲಾದ ಒಡನೆಯೇ ಇವು ಜನಕ್ಕೆ ರುಚಿಸಿದುವು. ಬರಬರುತ್ತ ಈ ಭಾಗ ಪತ್ರಿಕೆಯ ಒಂದು ಅವಶ್ಯ ಅಂಗ ಆಯಿತು. ಯಾವುದೋ ಕಾರಣದಿಂದ ಒಂದು ತಿಂಗಳು ಟಿಪ್ಪಣಿ ಇಲ್ಲದೆ ಹೋದಾಗ ಒಬ್ಬ ಮಿತ್ರರು ''ಪತ್ರಿಕೆ ತಿಲಕವನ್ನಿಟ್ಟುಕೊಳ್ಳಲು ಮರೆತ ಸ್ತ್ರೀಯ ಮುಖದಂತೆ ಇತ್ತು'' ಎಂದು ಪತ್ರ ಬರೆದರು.[2]

ಟಿಪ್ಪಣಿಗಳಲ್ಲಿ ಬರುತ್ತಿದ್ದ ಸಂಗತಿಗಳು ನಾನಾ ತೆರನಾದವು. ಅವುಗಳಲ್ಲಿ 'ಲೋಕಜೀವನ, ರಾಷ್ಟ್ರಜೀವನ, ಕರ್ಣಾಟಕ ಜೀವನದ ಅನೇಕ ಸಂಗತಿಗಳನ್ನು ಕುರಿತ' ಮಾಸ್ತಿಯವರ 'ಯೋಚನೆಗಳಿಗೆ ರೂಪು' ಬಂದುವು. ಈ ಎಲ್ಲ ವಿಷಯದಲ್ಲೂ ಅವರು 'ಕರ್ಣಾಟಕದ ಸಂಸ್ಕೃತಿ ಸದ್ಯದಲ್ಲಿ ಒಂದು ತಗ್ಗಿನ ಮಟ್ಟಕ್ಕೆ ಇಳಿದಿದೆ. ಅದು ಎತ್ತರವನ್ನು ಕಂಡ ದಿನದಲ್ಲಿ ಬಹು ಎತ್ತರವನ್ನು ಮುಟ್ಟಿತ್ತು. ನಮ್ಮ ಜನ ಜೀವನದ ವ್ಯವಸ್ಥೆಯಲ್ಲೆಲ್ಲಾ ಅದರ ಮಹಿಮೆ ಕಾಣುತ್ತಿತ್ತು. ಅದರ ಪ್ರಭಾವ ಈಗ ಸುಮಾರು ಐವತ್ತು ವರ್ಷದ ವರೆಗೂ

---

2. ಜೀವನ ಸಂಪಾದಕೀಯ, ಮೇ ೧೯೪೫

ನಮ್ಮ ಜನತೆಯ ಜೀವನವನ್ನು ಬೆಳಗಿತು. ಆ ತಲೆಮಾರಿನಲ್ಲಿ ಎಳೆಯನಾಗಿದ್ದ ನನಗೆ, ಅಂದಿನ ಸಾಮಾನ್ಯರೆಂಬ ಜನರಲ್ಲಿ ಬಹು ಸಾಮಾನ್ಯವಾಗಿ ಹರಡಿದ್ದ ಒಳ್ಳೆಯ ಎಣಿಕೆ, ಒಳ್ಳೆಯ ಮಾತು, ಒಳ್ಳೆಯ ನಡತೆ ಎಷ್ಟು ಶ್ರೇಷ್ಠತರ ನೀತಿಯ ಸ್ವರೂಪ ಎನ್ನುವುದು ನಾನೇ ಅರಿಯದೆ ಅಚ್ಚರಿಗೆ, ತೃಪ್ತಿಗೆ ಕಾರಣವಾಗಿತ್ತು. ಆ ಜನದ ಜೀವನ ಚೆನ್ನವಾಗುವಂತೆ ಮಾಡಿದ ಭಾವನೆ ನಮ್ಮ ಪುರಾತನ ಸಂಸ್ಕೃತಿಯ ಪರಿಪಕ್ವ ಫಲಗಳು. ಅವಕ್ಕಿಂತ ಹೆಚ್ಚಿನ ಸತ್ಯ ಲೋಕದಲ್ಲಿ ಇಲ್ಲ ಎಂದು ನನ್ನ ತಿಳುವಳಿಕೆ. ಲೋಕದ ಜೀವನವನ್ನು ಅವುಗಳ ಬೆಳಕಿನಲ್ಲಿ ನೋಡಿ ನಿಷ್ಕಲ್ಮಷ ಮನಸ್ಸಿನಿಂದ ವಿಚಾರಿಸಿ ನನ್ನ ಬುದ್ಧಿಗೆ ಏನು ತೋಚುತ್ತದೆ ಎನ್ನುವುದನ್ನು ನಮ್ಮ ಜನಕ್ಕೆ ವಿಜ್ಞಾಪಿಸುವುದು ಇಂಥ ಪತ್ರಿಕೆಯ ಸಂಪಾದಕನ ಕರ್ತವ್ಯ ಎಂದು ನನಗನಿಸಿತು. ಟಿಪ್ಪಣಿಗಳಲ್ಲಿ ನಾನು ಈ ಕೆಲಸ ಮಾಡಿದೆ' ಎಂದು ಮಾಸ್ತಿಯವರೇ ತಮ್ಮ ಸಂಪಾದಕೀಯ ಲೇಖನದಲ್ಲಿ ಹೇಳಿಕೊಂಡಿದ್ದಾರೆ.[3] ಪುಸ್ತಕ ರೂಪದಲ್ಲಿ ಒಟ್ಟು ಸುಮಾರು ೨೫೦೦ ಪುಟಗಳ ಐದು ಸಂಪುಟಗಳಲ್ಲಿ ಪ್ರಕಟವಾಗಿರುವ ಈ ಟಿಪ್ಪಣಿಗಳಲ್ಲಿ ಉದ್ದಕ್ಕೂ ಮಾಸ್ತಿಯವರ ಈ ದೃಷ್ಟಿ ನಿಚ್ಚಳವಾಗಿ ಮೂಡಿದೆ.

೧೯೫೧ ರಿಂದ ೧೯೬೭ರ ವರೆಗಿನ ಕಾಲ ನಮ್ಮ ರಾಷ್ಟ್ರದ ಇತಿಹಾಸದಲ್ಲಿ ಬಹಳ ಮಹತ್ವದ್ದು. ಸ್ವತಂತ್ರ ಭಾರತದೇಶ ಗಣರಾಜ್ಯವಾಗಿ ಇತಿಹಾಸ ನಿರ್ಮಿಸತೊಡಗಿ, ಯೋಜನೆಗಳ ಮೆಟ್ಟಲೇರಿ ಸ್ವರ್ಗವನ್ನೇ ನಿಲುಕಿಸಲು ಯತ್ನಿಸಿದ ಕಾಲ. ನೆಹರೂ, ಶಾಸ್ತ್ರಿ, ಇಂದಿರಾಗಾಂಧಿ - ಹೀಗೆ ಮೂರು ಮಂದಿ ಪ್ರಧಾನಿಗಳನ್ನು ಕಂಡ ಭಾರತದೇಶ ಆ ಸಮಯದಲ್ಲಿ ಎರಡು ಯುದ್ಧಗಳನ್ನೂ ನಡೆಸಬೇಕಾಯಿತು. ಮೊದಲಿನದು ೧೯೬೨ ರಲ್ಲಿ-ಚೀನೀ ಪ್ರಭುತ್ವದ ವಿರುದ್ಧ; ಎರಡನೆಯದು ೧೯೬೫ ರಲ್ಲಿ- ಅದೇ ಪಾಕೀಸ್ತಾನದ ವಿರುದ್ಧ. ಕರ್ನಾಟಕದ ಇತಿಹಾಸದಲ್ಲೂ ಇವು ಮಹತ್ವದ ವರ್ಷ. ಭಾರತದ ರಾಜ್ಯ ಪುನರ್ವಿಂಗಡಣೆಯ ಪರಿಣಾಮವಾಗಿ ಕರ್ನಾಟಕವೂ ಪುನರ್ಜನ್ಮ ತಳೆದದ್ದು ಆಗ. ಸುಮಾರು ಎರಡು ದಶಕಗಳ ಮಹತ್ವಪೂರ್ಣ ಇತಿಹಾಸದ ರಸಮಯ ವಿವೇಚನೆಯನ್ನೊಳಗೊಂಡಿರುವ ಈ ಲೇಖನಗಳು ಸುಸಂಸ್ಕೃತ ಜೀವವೊಂದರ ಸ್ಪಂದನದ ಪ್ರತೀಕ.

ಮಾಸ್ತಿಯವರ ಸಂಪಾದಕೀಯ ಟಿಪ್ಪಣಿಗಳನ್ನೋದುವುದೆಂದರೆ ಕಾಲವನ್ನು ಹಿಂತಳ್ಳಿ ಕೈಕೊಂಡ ರಸಯಾತ್ರೆ. ವಿಶ್ವದಲ್ಲಿ ಆಗಿಹೋದ ಘಟನೆಗಳನ್ನೆಲ್ಲ ಮತ್ತೆ ನೋಡುವುದು ಸಾಧ್ಯವೇ? ಎಂಬುದು ಅನೇಕರ ಮನಸ್ಸಿನಲ್ಲಿ ಪದೇ ಪದೇ ನುಸುಳಿ ಮಾಯವಾಗುವ ಕುತೂಹಲ. ಇಂದು ನಾವು ಕಣ್ಣಾರೆ ಕಾಣುವುದೆಲ್ಲ ಇಂದೇ ನಡೆಯುತ್ತಿದೆಯೆಂದಾಗಲಿ, ನಾವು ಕಂಡದ್ದೆಲ್ಲ ಸತ್ಯವೆಂದಾಗಲಿ ಸಾಧಿಸುವುದಕ್ಕಾಗುವುದಿಲ್ಲ. ರಾತ್ರಿಯ ಆಕಾಶದಲ್ಲಿ ಮಿನುಮಿನುಗುವ ಕಿರುತಾರೆಯೊಂದನ್ನು ಕಂಡಾಗ ಆ ನಕ್ಷತ್ರ ಆ ಸಮಯದಲ್ಲಿ ಅಲ್ಲೇ ಇರುತ್ತದೆಯೆಂದು ನಾವು ಭಾವಿಸುತ್ತೇವೆ. ಆದರೆ ವಾಸ್ತವವಾಗಿ ನಾವು ಕಾಣುತ್ತಿರುವುದು ಅಂದಿನ ನಕ್ಷತ್ರವನ್ನಲ್ಲ. ಆ ನಕ್ಷತ್ರದಿಂದ ಹೊರಟ ಬೆಳಕಿನ ಕಿರಣ ತನ್ನ ಗೊತ್ತಾದ ವೇಗದಲ್ಲಿ ಸಾಗಿ ನಮ್ಮ ಕಣ್ಣ ಮೇಲೆ ಬೀಳುವುದಕ್ಕೆ ಎಷ್ಟೋ ವರ್ಷಗಳೇ ಬೇಕಾಗುವುದೆಂಬುದನ್ನು ನೆನೆದಾಗ ನಾವು ಕಂಡದ್ದು ಅಷ್ಟು ವರ್ಷಗಳ ಹಿಂದೆ ಇದ್ದ ನಕ್ಷತ್ರವನ್ನು-ಎಂಬುದು ನಿಜ. ಆ ನಕ್ಷತ್ರ

3. ಜೀವನ ಸಂಪಾಧಕೀಯ; ಮೇ ೧೯೫೫

ಚೂರು ಚೂರಾಗಿ ಹೋಗಿದ್ದರೂ ಅದು ನಮ್ಮ ಕಣ್ಣಿಗೆ ಕಾಣಿಸದೆ ಹೋಗುವುದು ಎಷ್ಟೋ ವರ್ಷಗಳ ನಂತರ. ಅದುವರೆಗೂ ಇದು ಇಲ್ಲವೆಂಬ ಕಲ್ಪನೆ ಕೂಡ ನಮಗೆ ಬರುವುದಿಲ್ಲ. ಆದ್ದರಿಂದ ಇದು ನಾವು ಕಂಡದ್ದು, ನೆನ್ನೆ ಆಗಿಹೋದದ್ದು-ಎಂಬುದೆಲ್ಲ ನಮ್ಮದೆ ಆದ ಕಾಲದ ಪರಿಕಲ್ಪನೆಯ ಚೌಕಟ್ಟಿನಿಂದ ಸೀಮಿತವಾದ್ದು. ಬೆಳಕಿಗಿಂತ ವೇಗವಾಗಿ ಚಲಿಸುವ ವಾಹನವೊಂದರಲ್ಲಿ ಕೂತು ಆಕಾಶದಲ್ಲಿ ನೇರವಾಗಿ ಹೋಗುವುದು ಸಾಧ್ಯವಾಗುವುದಾದರೆ, ಹಿಂದೆ ನಡೆದುಹೋದ ಘಟನೆಗಳನ್ನೆಲ್ಲ ಆ ನೌಕೆಯಿಂದ ವೀಕ್ಷಿಸುವುದು ಸಾಧ್ಯ. ಆ ಘಟನೆಗಳು ನಡೆದಾಗ ಆ ಸ್ಥಳದಿಂದ ಹೊರಟು ಅನಂತದಲ್ಲಿ ಸಾಗುತ್ತಿರುವ ಬೆಳಕಿನ ಕಿರಣಗಳ ವೇಗವನ್ನೂ ಸೋಲಿಸಿ ಅವುಗಳಾಚೆಗೆ ಹೋಗಿ ನಿಂತಾಗ ಆ ಘಟನೆಗಳನ್ನು ನಾವು ಕಾಣಬಹುದು. ಆಗಿನ ನಮ್ಮ ದೃಷ್ಟಿಯಲ್ಲಿ ಆ ಘಟನೆಗಳು ಆಗಲೇ ನಡೆಯುತ್ತಿವೆಯೆಂದೇ ಲೆಕ್ಕ. ಆದರೆ ಇದೆಲ್ಲ ಕೇವಲ ಊಹಾಪೋಹ. ಏಕೆಂದರೆ ಬೆಳಕಿಗಿಂತ ವೇಗವಾಗಿ ಚಲಿಸುವ ಮಾತಿರಲಿ, ಬೆಳಕಿನಷ್ಟೇ ವೇಗದಲ್ಲಿ ಚಲಿಸುವ ವಾಹನವನ್ನು ಕೂಡ ಮಾನವನಿನ್ನೂ ಕಂಡುಹಿಡಿದಿಲ್ಲ.

ಆದರೆ ಇಂಥ ಯಾವ ವೈಜ್ಞಾನಿಕ ಸಾಧನೆಗಳ ಸಹಾಯವೂ ಇಲ್ಲದೆಯೇ ಗತ ಕಾಲದ ಘಟನೆಗಳನ್ನು ನಾವು ಅವಲೋಕಿಸುವುದು ಸಾಧ್ಯ. ಮಾಸ್ತಿಯವರ ಸಂಪಾದಕೀಯಗಳು ಹೆಚ್ಚಿನ ವೆಚ್ಚವಿಲ್ಲದೆ, ದೈಹಿಕ ಮಾನಸಿಕ ಹಿಂಸೆಯಿಲ್ಲದೆ ನಮಗೆ ಆ ದೃಶ್ಯಗಳನ್ನೊದಗಿಸುತ್ತವೆ. ಆ ಘಟನೆಗಳು ಗರಿಗೆದರಿ ನಮ್ಮ ಮುಂದೆ ನಿಲ್ಲುತ್ತವೆ. ಅವು ಹಿಂದೆ ಸಂಭವಿಸಿದ ಸಂಗತಿಗಳೆಂಬುದನ್ನು ಮರೆಯಿಸುತ್ತವೆ. ಈಗಲೇ ಅವು ಸಂಭವಿಸುತ್ತಿರುವಂತೆಯೇ ಭಾಸವಾಗುತ್ತದೆ. ಆ ಘಟನೆಗಳು ಸಂಭವಿಸಿದಾಗ ಮಾಸ್ತಿಯವರು ಆಡಿದ ಎಷ್ಟೋ ಭವಿಷ್ಯದ ನುಡಿಗಳು ಇಂದು ನಿಜವಾಗಿ ಪರಿಣಮಿಸಿವೆಯೆನ್ನುವುದು ಅವರ ಈ ಟಿಪ್ಪಣಿಗಳ ಬೆಲೆಯನ್ನು ಬಹಳವಾಗಿ ಹೆಚ್ಚಿಸುತ್ತದೆ.

೧೯೫೧ರ ಒಂದು ಟಿಪ್ಪಣಿಯನ್ನು ನೋಡಿ: 'ಕೌರವರ ಸಭೆಯಲ್ಲಿ ನ್ಯಾಯವನ್ನು ಬೇಡಿ ಹೋಗಬೇಡ ಎಂದು ಕೃಷ್ಣನಿಗೆ ವಿದುರನು ಹೇಳಿದನಂತೆ. U.N.O. ಸಂಸ್ಥೆಯ ಎದುರಲ್ಲಿ ಸೂಕ್ತಿ ದುರುಕ್ತಿ, ಸಚ್ಚರಿತ ದುಶ್ಚರಿತ ಇವೆರಡೂ ಸಮ. ಸಂಸ್ಥೆ ಮೊದಲು ಸರಿಯಾಗಿದ್ದು ಆಮೇಲೆ ಕೆಡುತ್ತಾ ಬಂದಿದೆ ಎನ್ನುವುದಕ್ಕೂ ಅವಕಾಶವಿಲ್ಲ. ಮೊದಲಿನಿಂದಲೂ ಇದರ ಯೋಗ್ಯತೆ ಇಷ್ಟೆ.'[4] ವಿಶ್ವಸಂಸ್ಥೆಯ ಬಗ್ಗೆ ಮಾಸ್ತಿಯವರು ಇಪ್ಪತ್ತು ವರ್ಷಗಳ ಹಿಂದೆ ಬರೆದ ಮಾತು ಇಂದಿಗೂ ನಿಜವಲ್ಲವೆ?

ವಿಶ್ವಸಂಸ್ಥೆಯ ರೀತಿನೀತಿಗಳು ದಿನದಿನವೂ ನಮ್ಮ ಅನುಭವಕ್ಕೆ ಬರುತ್ತಿರುವ ವಿಚಾರ. ಆದರೆ ನಾವೆಲ್ಲ ಮರೆತಿರಬಹುದಾದ ಇನ್ನೊಂದು ಸಂಗತಿಯನ್ನು ಕುರಿತ ಒಂದು ಟಿಪ್ಪಣಿಯನ್ನು ನೋಡಿ. ಎರಡನೆಯ ಮಹಾ ಸಂಗ್ರಾಮದಲ್ಲಿ ಜಪಾನನ್ನು ಸೋಲಿಸಿದ ಅಮೆರಿಕದ ಜನರಲ್ ಮೆಕಾರ್ಥರನ್ನು ಕೊರಿಯಾ ಸಂಗ್ರಾಮದಲ್ಲಿ ವಿಶ್ವಸಂಸ್ಥೆಯ ಸೇನಾನಿಯಾಗಿ ನೇಮಿಸಲಾಗಿತ್ತೆಂಬುದೂ ಅಮೆರಿಕದ ಅಧ್ಯಕ್ಷರಾಗಿದ್ದ ಟ್ರೂಮನರು ಅವರನ್ನು ಆ ಸ್ಥಾನದಿಂದ ಬಿಡಿಸಿ ಸೇನಾಧಿಪತ್ಯಕ್ಕೆ ಬೇರೆಯವರನ್ನು ನೇಮಿಸಿದ್ದರೆಂಬುದೂ ಇಂದು ನಮಗೆ ಮುಖ್ಯ ಸಂಗತಿಗಳೆನಿಸದಿರಬಹುದು. ಆದರೆ ಆ ಸಂದರ್ಭದಲ್ಲಿ ಮಾಸ್ತಿಯವರು ಬರೆದ ಟಿಪ್ಪಣಿಯಲ್ಲಿ ಈ ಪ್ರಸಂಗದ ವರದಿಯೊಂದಿಗೆ ಮಾನವ ಸ್ವಭಾವದ

4. ಮೇ ೧೯೫೧

ನಿರೂಪಣವನ್ನೂ, ಸಾರ್ವಜನಿಕ ಕ್ಷೇತ್ರದಲ್ಲಿ ಕಾರ್ಯೋನ್ಮುಖರಾದ ಅಧಿಕಾರಿಗಳು ಅನುಸರಿಸಬೇಕಾದ ನೀತಿ ಸಂಹಿತೆಯನ್ನೂ ಕಾಣಬಹುದು. ದೀರ್ಘಕಾಲಿಕವಾಗಿ ಅಮುಖ್ಯವೆನಿಸಬಹುದಾದ ಘಟನೆಯೊಂದರಲ್ಲಿ ಚಿರಂತನ ಸತ್ಯವೊಂದನ್ನು ಮಾಸ್ತಿಯವರು ಸೆರೆಹಿಡಿದಿಟ್ಟಿದ್ದಾರೆ. 'ಜಯ ಮಾದಕ ವಸ್ತು' ಎನ್ನುತ್ತಾರೆ ಮಾಸ್ತಿ. 'ಆದರಿಂದ ಜನರಲರ ತಲೆ ತಿರುಗಿತೆಂದು ಹೇಗೋ ಹಾಗೆ ತನ್ನಿಂದ ಜಯವನ್ನು ಪಡೆದ ಅಧ್ಯಕ್ಷ ಟ್ರೂಮನ್ ಮಹಾಶಯರೂ ತನಗಿಂತ ಸಣ್ಣವರೆಂದು ಕಂಡರು. ಜನರಲ್ ಮೆಕಾರ್ಥರ್ ತಾನು ಅಲೆಕ್ಸಾಂಡರ್, ಸೀಜರ್, ನೆಪೋಲಿಯನ್, ಹಿಟ್ಲರ್ ಇವರ ಸಾಲಿನ ಸೇನಾನಿಯೆಂದು ತಿಳಿದಿರಬೇಕು; ತಾನು ಏನು ಮಾಡಿದರೂ ತನ್ನ ಸರಕಾರ ಅದನ್ನು ಸಹಿಸಿಕೊಳ್ಳುತ್ತದೆ ಎಂದು ಯೋಚಿಸಿರಬೇಕು. ಇಲ್ಲಿ ಮಾಸ್ತಿಯವರು ಒಕ್ಕಣಿಸಿರುವುದು ಮೆಕಾರ್ಥರ್ ಪ್ರಸಂಗವನ್ನು ಮಾತ್ರವಲ್ಲ; ಲೋಕದ ಮಂದಿಯ ಸ್ವಭಾವವನ್ನು. ಪ್ರಾಸಂಗಿಕವಾಗಿ ಅವರ ಲೇಖನಿಯಿಂದ ಹೊರಬರುವ ಮಾತುಗಳ ಮಹತ್ತ್ವವನ್ನು ಅರಿಯಬೇಕಾದರೆ ಇಡೀ ಟಿಪ್ಪಣಿಯನ್ನೇ ಇಲ್ಲಿ ಕೊಡಬೇಕಾದೀತು. ಆದರೆ ಸಣ್ಣ ಲೇಖನವೊಂದರಲ್ಲಿ ಅದು ಸಾಧ್ಯವಿಲ್ಲ. 'ಸರಕಾರದ ಧೋರಣೆ ತಪ್ಪು ಎಂದು ಕಂಡರೆ ಸರಕಾರದ ಅಧಿಕಾರಿ ತನ್ನ ಮೇಲಿನ ಅಧಿಕಾರಿಗಳಿಗೆ ತಕ್ಕ ರೀತಿಯಲ್ಲಿ ವರದಿ ಮಾಡಿ ಅವರು ಧೋರಣೆಯನ್ನು ತಿದ್ದಿಕೊಳ್ಳುವಂತೆ ಮಾಡಬೇಕು. ತಾಳ್ಮೆ ಉಳ್ಳವನಾದರೆ ನಾಲ್ಕು ಸಲ, ಇಲ್ಲದವನಾದರೆ ಒಂದು ಸಲ, ಈ ಪ್ರಯತ್ನ ಮಾಡಿ ಪ್ರಯತ್ನ ನಿಷ್ಫಲವಾದರೆ, ನಾನು ಈ ಕೆಲಸ ಮಾಡಲಾರೆ ನನಗೆ ಬೇರೆ ಕೆಲಸ ಕೊಡಿ ಎನ್ನಬಹುದು. ಅಥವಾ ಈ ಅಯೋಗ್ಯ ಸರಕಾರದೊಂದಿಗೆ ವ್ಯವಹರಣೆ ಬೇಡ ಎಂದರೆ ತನ್ನ ಅಧಿಕಾರದಿಂದ ನಿವೃತ್ತಿಯನ್ನೇ ಬೇಡಬಹುದು. ಹೀಗೆ ಮಾಡದೆ ಅವನು ತನ್ನ ಅಭಿಪ್ರಾಯಭೇದವನ್ನು ಬೀದಿಯಲ್ಲಿ ಬೇಡಬಹುದು. ಹೀಗೆ ಮಾಡದೆ ಅವನು ತನ್ನ ಅಭಿಪ್ರಾಯಭೇದವನ್ನು ಬೀದಿಯಲ್ಲಿ ಸಾರಿದರೆ, ಅವನ ನಡತೆ ಅವಿಶ್ವಾಸಿಯದಾಗುತ್ತದೆ.'[5] ಎಂಬ ಮಾತು ಮಾಸ್ತಿಯವರ ಆಳವಾದ ಆಡಳಿತಾನುಭವವನ್ನೂ ಸಮಚಿತ್ತವನ್ನೂ ಎತ್ತಿ ತೋರಿಸುತ್ತದೆ.

ಬ್ರಿಟಿಷರು ಭಾರತವನ್ನಾಳುತ್ತಿದ್ದ ಕಾಲದಲ್ಲಿ ಮೈಸೂರು ಸಂಸ್ಥಾನದ ಸರ್ಕಾರದಲ್ಲಿ ಹಿರಿಯ ಹುದ್ದೆಯಲ್ಲಿದ್ದು, ರಾಜಸೇವಾಸಕ್ತ ಎಂಬ ಬಿರುದು ಕೂಡ ಗಳಿಸಿ, ತಮಗೆ ನ್ಯಾಯವಾಗಿ ಸಲ್ಲಬೇಕಾಗಿದ್ದ ಮೇಲಧಿಕಾರ ದೊರಕಲಿಲ್ಲವೆಂದು ಸೇವಾವಧಿ ಪೂರೈಸುವುದಕ್ಕೂ ಮುಂಚೆಯೇ ನಿವೃತ್ತಿ ಪಡೆದುಕೊಂಡ ಮಾಸ್ತಿಯವರ ತೀಕ್ಷ್ಣ ದೃಷ್ಟಿಗೆ ಆ ಕಾಲದ ಯಾವ ಘಟನೆಯೂ ಬೀಳದಿರಲಿಲ್ಲ. ಯಾವ ಸಾರ್ವಜನಿಕ ವ್ಯಕ್ತಿಯನ್ನೂ ಇವರು ವಿಮರ್ಶಿಸದಿರಲಿಲ್ಲ. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಕೊನೆಯ ವೈಸ್‌ರಾಯಿಯಾಗಿ ಅಧಿಕಾರ ನಡೆಸಿ, ದೇಶವನ್ನು ವಿಭಜಿಸಿ ಅದಕ್ಕೆ ಸ್ವಾತಂತ್ರ್ಯ ದಾನಮಾಡಿದ ಲಾರ್ಡ್‌ಮೌಂಟ್‌ಬ್ಯಾಟನ್‌ರಿಂದ ಭಾರತಕ್ಕೆ ಅನ್ಯಾಯವಾಯಿತೆಂಬುದನ್ನು ಇಂದು ಅನೇಕರು ಅರಿತುಕೊಂಡಿರಬಹುದು. ಆದರೆ ಮಾಸ್ತಿಯವರು ಇದನ್ನು ಅಂದೇ ಕಂಡಿದ್ದರು. 'ಹಲವು ಸಂಗತಿಗಳಲ್ಲಿ ಪ್ರಕಟವಾಗುವ ನಮ್ಮ ದೇಶದ ದುರ್ದೈವ ನಮಗೆ ಸ್ವಾತಂತ್ರ್ಯ ಬರುವ ದಿನದಲ್ಲಿ ಮೌಂಟ್ ಬ್ಯಾಟನರಂಥ ಗವರ್ನರ್ ಜನರಲ್ಲರನ್ನು ತಂದಿತು. ಮಿತ್ರನಂತೆ ಕಂಡ, ಪ್ರಾಯಶಃ ಮಿತ್ರನಾಗಿಯೇ ನಡೆದ, ಈ ಗವರ್ನರ್ ಜನರಲ್, ಹಿಂದೂಗಳನ್ನು ಕೆಡಿಸಿದರು; ಮುಸ್ಲಿಮರನ್ನು ಬಾಳಿಸಲಿಲ್ಲ; ಆಂಗ್ಲರಿಗಾದರೋ ಬಹಳ ಉಪಕಾರ ಮಾಡಲಿಲ್ಲ.

೫. ಜೂನ್ ೧೯೫೧

ಇತಿಹಾಸಕ್ಕೆ ಒಂದು ಸಮಸ್ಯೆಯನ್ನು ದಾನ ಮಾಡಿ ಹೋದರು.'' ಇದು ಮೌಂಟ್‌ಬ್ಯಾಟನ್ ಬಗ್ಗೆ ಮಾಸ್ತಿಯವರು ನೀಡಿರುವ ನಿರ್ಣಯ.

ಭಾರತಮಿತ್ರ ಮೌಂಟ್‌ಬ್ಯಾಟನರದು ಒಂದು ಬಣ್ಣವಾದರೆ ಇತರ ಅನೇಕ ಪಾಶ್ಚಾತ್ಯರದು ಬಗೆಬಗೆಯ ಬಣ್ಣ. 'ಸಾಮ್ರಾಜ್ಯದ ಕೊನೆಗಾಲದಲ್ಲಿ ಮಿಸ್‌ಮೇಯೋ ಎಂಬ ಅಮೆರಿಕ ಹೆಣ್ಣು ಒಬ್ಬಾಕೆ ಭರತವರ್ಷಕ್ಕೆ ಬಂದು ಅಲ್ಲಿ ಕುಳಿತು ಇಲ್ಲಿ ಸುಳಿದು ನಮ್ಮ ಜನಾಂಗದ ಯೋಗ್ಯತೆಯನ್ನು ಅಳೆದೆನೆಂದು ಅಹಂಕರಿಸಿ 'ಮದರ್ ಇಂಡಿಯಾ[6]' ಎಂದು ವ್ಯಂಗ್ಯವಾದ ಹೆಸರಿನ್ನಿಟ್ಟು ಒಂದು ಪುಸ್ತಕವನ್ನು ಪ್ರಕಟಿಸಿದಳು. ಆ ಪುಸ್ತಕದ ಪಲ್ಲವಿ, ಭರತವರ್ಷ ಸ್ವತಂತ್ರವಾಗುವುದಕ್ಕೆ ಅರ್ಹವಲ್ಲ - ಎನ್ನುವುದು. ಹಿಂದುಗಳು ಮುಟ್ಠಾಳರು, ಮುಸ್ಲಿಮರು ಶಕ್ತರು, ಆಂಗ್ಲರು ಧರ್ಮಪ್ರಭುಗಳು; ಈ ಮಾತುಗಳು ಕೀರ್ತನದ ನುಡಿಗಳು. ಈ ಮಾತುಗಳನ್ನು ಹೇಳುವುದರಲ್ಲಿ ಆಕೆ ನಾಚಿಕೆಯನ್ನು ಮರೆತಳು; ಹೇಸಿಕೆಯನ್ನು ಕಾಣಳು. ಈಕೆಯ ಪುಸ್ತಕವನ್ನು ಗಾಂಧೀಜೀ A drain inspector's report ಎಂದು ವರ್ಣಿಸ ಬೇಕಾಯಿತು. ಮಿಸ್ ಮೇಯೋ ತೀರಿಕೊಂಡಳು; ಆಂಗ್ಲ ಸಮ್ರಾಜ್ಯವೂ ಕಣ್ಣುಮುಚ್ಚಿತು; ಆದರೆ ಅವಳ ವಂಶ ಇನ್ನೂ ಬಾಳುತ್ತಿದೆ. ಆಕೆಯಂಥ ಆಂಗ್ಲೇಯ ಅಮೆರಿಕನ್ ಪಕ್ಷವಾದಿ ಶ್ವೇತವರ್ಣಗಳು ಸಾಮ್ರಾಜ್ಯದ ಮೂಳೆಯನ್ನು ಕಡಿಯುತ್ತ ಹಿಂದೂಗಳನ್ನು ಹಳಿಯುತ್ತ, ಮುಸ್ಲಿಮರನ್ನು ಹೊಗಳುತ್ತ ತಮ್ಮ ಸತ್ಯವಂತಿಕೆ ಎಷ್ಟು ಎಂಬುದನ್ನು ಪ್ರಕಟಿಸುತ್ತಿದ್ದಾರೆ. ಡೇವಿಡ್ ಲಿಲಿಯನ್‌ಥಾಲ್ ಎಂಬೊಬ್ಬ ಮಹಾಶಯರು ಇದಕ್ಕೆ ನಿದರ್ಶನ. . . ಮಿಸ್ ಮೇಯೋ ತೀರಿಕೊಂಡಳೆನ್ನಬೇಡಿ. ಲಿಲಿಯನಥಾಲ್ ಮಹಾಶಯರ ರೂಪದಲ್ಲಿ ಆ ಕುಮಾರಿ ಗಂಡಾಗಿ ನಡೆಯುತ್ತಿದ್ದಾಳೆ'.[7]

ಮೇಲೆ ಉದಾಹರಿಸಿದ ಸಂಪಾದಕೀಯವನ್ನು ಬರೆದ ಕೆಲವೇ ತಿಂಗಳುಗಳಲ್ಲಿ ಮಾಸ್ತಿಯವರು ನಾಗಾ ಜನರ ಸಮಸ್ಯೆಯ ವಿಚಾರವಾಗಿ ಬರೆಯುತ್ತಾ ಆಡುವ ಮಾತು ಅವರ ಇತಿಹಾಸ ದರ್ಶನವನ್ನೇ ಓದುಗರ ಮುಂದೆ ಇರಿಸುತ್ತದೆ. ನಾಗಾಜನರ ನಡುವೆ ಸೇರಿಕೊಂಡು ಅವರನ್ನು ಎತ್ತಿಕಟ್ಟಿ ಭಾರತಕ್ಕೆ ಕಿರುಕುಳ ಕೊಡುತ್ತಿದ್ದ ಜನರ ಪೀಳಿಗೆ ಇಂದು ನಿನ್ನೆಯದಲ್ಲ. ಅದು ಹಿಂದಿನಿಂದ ಬಂದದ್ದು. ವಿಶ್ವದ ಎಲ್ಲೆಡೆಯಲ್ಲೂ ಇದ್ದದ್ದು, ಈಗಲೂ ಇರುವಂಥದು. 'ನಾಗರಿಗೆ ಸ್ವಾತಂತ್ರ್ಯ ಬೇಕೋ ಇಲ್ಲವೋ, ಅವರ ಈ ಮಾತಿನಿಂದ ಭರತವರ್ಷಕ್ಕೆ ಸ್ವಲ್ಪ ತೊಂದರೆಯಾದರೆ ಒಂದು ಜಾತಿಯ ಆಂಗ್ಲರಿಗೆ ತುಂಬ ಸಂತೋಷ. ಈ ಜನ ಅಮೆರಿಕಾದಲ್ಲಿ ಅಂತಃಕಲಹವನ್ನು ಪ್ರೋತ್ಸಾಹಿಸಿದವರು; ಸಂಯುಕ್ತ ಅಮೆರಿಕಾ ರಾಷ್ಟ್ರ ದಕ್ಷಿಣಾರ್ಧ ಉತ್ತರಾರ್ಧ ಬೇರೆ ಆಗುವಂತೆ ಕಂಡಾಗ ಸಂತೋಷಪಟ್ಟವರು; ಎರಡಾಗದೆ ರಾಷ್ಟ್ರ ಒಂದಾಗಿ ನಿಂತಾಗ ದುಃಖ ಪಟ್ಟವರು. ರಷ್ಯಾದ ಜನತೆ ಚಕ್ರವರ್ತಿಯನ್ನು ಕೊನೆಗಾಣಿಸಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದಾಗ ಆ ಪ್ರಭುತ್ವವನ್ನು ಉರುಳಿಸುವುದಕ್ಕೆ ಯತ್ನ ಮಾಡಿದವರು. ಬರ್ಮಾ ದೇಶವನ್ನು ಬಿಟ್ಟು ಹೊರಡಬೇಕಾದಾಗ ಅಲ್ಲಿಯ ಕರೇನ್ ಜನತೆಯಲ್ಲಿ ವಿದ್ರೋಹದ ಚಳವಳಿಯನ್ನು ಹೊತ್ತಿಸಿ ಹೊರಬಿದ್ದವರು. ಎಲ್ಲಿಯಾದರೂ ಜಗಳ ಆಗದಿದ್ದರೆ ಇವರಿಗೆ ತೃಪ್ತಿಯಿಲ್ಲ. ಒಂದು ಜನತೆ ಬದುಕಿದರೆ ಇವರು ನೋಡಿ ಸಹಿಸಲಾರರು. . .[8] ಮಾಸ್ತಿಯವರ ಕ್ರಾಂತಿದೃಷ್ಟಿಯ ಈ ಮಾತುಗಳನ್ನೋದಿದಾಗ ಮೈ ಜುಮ್ಮೆನ್ನುತ್ತದೆ. ಮಿಂಚು ಹೊಳೆದಾಗ ಸುತ್ತಲ ಏರುತಗ್ಗುಗಳೆಲ್ಲ ಧಿಗ್ಗನೆದ್ದು

6. ಅಕ್ಟೋಬರ್ ೧೯೫೧
7. ಅಕ್ಟೋಬರ್ ೧೯೫೧
8. ಫೆಬ್ರುವರಿ 1952

ದೃಗ್ಗೋಚರಿಸುವಂತೆ ಸಾಮ್ರಾಜ್ಯಶಾಹಿಯ ಇಡೀ ಇತಿಹಾಸವೇ ಅವರ ಈ ಮಾತಿನಲ್ಲಿ ನಿಚ್ಚಳವಾಗಿ ತೋರಿ, ಮರೆಯಾಗುತ್ತದೆ.

ಪಶ್ಚಿಮದ ಜನರಿರಲಿ, ಪಶ್ಚಿಮದ ಮಾನಸಪುತ್ರರ ವಿಚಾರವಾಗಿ ಮಾಸ್ತಿಯವರು ಬರೆಯುವುದನ್ನು ಓದಿ. 'ಈ ಟಿಪ್ಪಣಿಗಳಲ್ಲಿ ಅನೇಕ ವೇಳೆ ನಮ್ಮ ಜನ ಯಾವ ವಿಷಯವನ್ನೂ ಸ್ವತಂತ್ರವಾಗಿ ಪರಿಶೀಲಿಸುವ ಅಭ್ಯಾಸವನ್ನು ಮಾಡಬೇಕು ಎಂದು ಮತ್ತೆ ಮತ್ತೆ ಹೇಳುತ್ತಿರುವುದಾಗಿದೆ. ಹೊರಗಿನ ಜನ ನಮ್ಮ ಸಮಾಜ ವ್ಯವಸ್ಥೆಯನ್ನು ದೂರಿದರೆ ನಾವೂ ದೂರಿ, ಹೊಗಳಿದರೆ ನಾವೂ ಹೊಗಳಿ, ಎಲ್ಲ ಹೊತ್ತಿನಲ್ಲಿಯೂ ಹೊರಗಿನವರನ್ನು ಒಪ್ಪಿಸುವ ಯತ್ನದಲ್ಲಿ ನಿಲ್ಲುವುದು ನಮಗೆ ಕ್ಷೇಮವಲ್ಲ. ನಮ್ಮ ಸನ್ನಿವೇಶ ಬೇರೆ, ನಮ್ಮ ಇತಿಹಾಸ ಬೇರೆ, ನಮ್ಮ ಇಂದಿನ ಪರಿಸ್ಥಿತಿಯೂ ಬೇರೆ. ಯಾವ ಪ್ರಕೃತಿಗೋ ಒಪ್ಪಿದ ಔಷಧಿಯನ್ನು ಬೇರೆ ಯಾರಿಗೋ ಕೊಟ್ಟು ಚಿಕಿತ್ಸೆ ಮಾಡುವುದು ವೈದ್ಯವಲ್ಲ. ಭಾರತೀಯರು ತಮ್ಮ ಸ್ಥಿತಿಯನ್ನು ತಾವೇ ತಿಳಿದುಕೊಳ್ಳಬೇಕು. ಇಂದಿನ ಕುಂದುಕೊರತೆಗಳಿಗೆ ನಿವಾರಣೆ ಏನೆಂದು ತಾವೆ ನಿಶ್ಚಯಿಸಬೇಕು.''[9]

ಹೀಗೆಂದ ಮಾತ್ರಕ್ಕೆ ಪಶ್ಚಿಮದಿಂದ ಬಂದದ್ದನ್ನೆಲ್ಲ ತಳ್ಳಬೇಕೆಂಬುದು ಮಾಸ್ತಿಯವರ ಮನೋಭಾವವಲ್ಲ. ಇತರರು ಹಿಡಿದ ದಾರಿಯನ್ನು 'ಅಪರಾಮರ್ಶದಿಂದ ಒಪ್ಪಿಕೊಳ್ಳುವುದು ಸಲ್ಲದು' ಎಂದಷ್ಟೇ ಅವರು ನುಡಿಯುತ್ತಾರೆ. ಅವರು ಹಿಡಿದ ಹಾದಿ ಒಳ್ಳೆಯದಾದರೆ ಅದು ಏಕೆ ಬೇಡ? ಅವರೇ ಒಂದು ಸಂದರ್ಭದಲ್ಲಿ ಹೀಗೆ ಹೇಳುತ್ತಾರೆ: 'ವಿವರವನ್ನು ಕುರಿತ ಮೂರು ದಿನದ ಜಗಳವನ್ನು ಮರೆತು ಜನರ ಶುಭಕ್ಕಾಗಿ ಒಂದುಗೂಡಿ ನಡೆಯುವ ಮನೋಧರ್ಮ ರಾಜಕೀಯದಲ್ಲಿ ಚಾತುರ್ಯ, ಮಂಗಲಸೂತ್ರ. ಡೆಮಾಕ್ರಸಿಯನ್ನು ಅನುಷ್ಠಿಸುತ್ತಿರುವ ಪಶ್ಚಿಮ ದೇಶಗಳಲ್ಲಿ ಇಂಥ ಸಹನೆ ದಿನದಿನವೂ ಕಾಣುತ್ತದೆ. ಇದನ್ನು ನಮ್ಮ ಜನ ತಿಳಿಯಬೇಕು; ಕಲಿಯ ಬೇಕು; ಅಭ್ಯಾಸ ಮಾಡಿಕೊಳ್ಳಬೇಕು. ಪಶ್ಚಿಮ ದೇಶಗಳು ನಮ್ಮ ಜನಕ್ಕೆ ವ್ಯವಹಾರ ಕೌಶಲವನ್ನು ಕಲಿಸಿಕೊಡುವ ಧರ್ಮವ್ಯಾಧನ ಸ್ಥಾನದಲ್ಲಿವೆ ಎಂದು ಈ ಮೊದಲು ಈ ಪತ್ರಿಕೆಯಲ್ಲಿ ಹೇಳಿದ್ದುಂಟು. ಭರತವರ್ಷದ ರಾಜಕೀಯ ಪ್ರಮುಖರು ಪಾಶ್ಚಾತ್ಯ ರಾಜಕೀಯದಿಂದ ಸಹನೆಯ ಸೂತ್ರವನ್ನು ಗ್ರಹಿಸಬೇಕಾಗಿದೆ.[10]

ಆದರೆ ನಮ್ಮ ಜನ ಡೆಮಾಕ್ರಸಿಯ ಅರ್ಥವನ್ನೂ ಗಾಂಭೀರ್ಯವನ್ನೂ ಇನ್ನೂ ತಿಳಿದುಕೊಂಡಿಲ್ಲ. ರಾಷ್ಟ್ರದ ಶಾಸನಸಭೆಯ ಸದಸ್ಯರಾದವರು 'ತಮ್ಮ ಸ್ಥಳದ ಗಂಭೀರವನ್ನು ಕಾಣರೇನೋ' ಎಂದು ಶಂಕೆ ಮೂಡುವಂತೆ ವರ್ತಿಸುವುದನ್ನು ಕಂಡಾಗ ಮಾಸ್ತಿಯವರ ಲೇಖನಿ ಕನಲುತ್ತದೆ. ಒಬ್ಬ ಮಹನೀಯರು 'ಒಂದಲ್ಲ ಎರಡು ಸಲ ಸಭೆಯ ಕೆಲಸದ ಸಂದರ್ಭಗಳನ್ನು ವಿಷಯ ಮಾಡಿಕೊಂಡು ಇಂಗ್ಲಿಷಿನಲ್ಲಿ ಪಂಕ್ತಿಗಳನ್ನು ಕಟ್ಟಿ ಓದಿ ಹೇಳಿದರಂತೆ. ಅಂಥ ವೇಳೆಯಲ್ಲಿ ಸಭೆ ನಕ್ಕಿತು. 'ಇಂಥ ಪಂಕ್ತಿಗಳನ್ನು ಓದಿ ಹೇಳಿ ಜನರನ್ನು ನಗಿಸಿ' ಅವರು ಕವಿಶಬ್ದದ ಗೌರವವನ್ನು ತಗ್ಗಿಸಿದರು ಎಂದು ಮಾಸ್ತಿಯವರಿಗೆ ಎನಿಸಿತು. 'ಒಟ್ಟಿನಲ್ಲಿ ಈ ನಮ್ಮ ಹಿರಿಯರು ತಾವು ಬಾಳುತ್ತಿರುವುದು ಇಂಗ್ಲೆಂಡಿನಲ್ಲಲ್ಲ. ತಮ್ಮಂತೆ ಇಂಗ್ಲಿಷ್ ಬಲ್ಲ ಹತ್ತು ಜನಕ್ಕಾಗಿ ಅಲ್ಲ. ತಾವು ಭರತವರ್ಷದ ಜನತೆಯ ಪ್ರತಿನಿಧಿಗಳು,

9. ಫೆಬ್ರುವರಿ 1952

10. ಏಪ್ರಿಲ್ 1952

ಸೇವಕರು ಎನ್ನುವುದನ್ನು ಹೆಚ್ಚು ಜ್ಞಾಪಕ ಇಟ್ಟುಕೊಂಡರೆ ಇವರ ಹಾಸ್ಯ ಮತ್ತಷ್ಟು ಎತ್ತರದ ಮಟ್ಟವನ್ನು ಮುಟ್ಟಬಹುದು. ಅದನ್ನು ಕೇಳಿ ನಕ್ಕ ಸಭೆಯ ಗೌರವ ಇದಕ್ಕಿಂತ ಹೆಚ್ಚು ಆಗಬಹುದು.[11]

ಡೆಮಾಕ್ರಸಿ ಅಥವಾ ಪ್ರಜಾಪ್ರಭುತ್ವ ಉಳಿದೆಲ್ಲ ರಾಷ್ಟ್ರರಚನೆಗಳಿಗಿಂತ ಶ್ರೇಷ್ಠವಾದ್ದು-ಎಂಬುದು ಮಾಸ್ತಿಯವರ ನಂಬಿಕೆ. 'ಆದರೆ ಅದನ್ನು ಬರಿಯ ಆಕಾರದಲ್ಲಿ ಪಡೆದು ಪ್ರಯೋಜನವಿಲ್ಲ. ಅದನ್ನು ಜನಾಂಗದ ಸಮಗ್ರ ಜೀವನದಲ್ಲಿ ಸಮಸ್ತ ವಿವರದಲ್ಲಿ ಸಾಧಿಸುವ ಯತ್ನ ಅವಶ್ಯಕ. ಈ ಬಗ್ಗೆ ಜನತೆಯೂ ಎಚ್ಚರಗೊಳ್ಳಬೇಕು.[12] ಆದರೆ ಆಗುತ್ತಿರುವುದು ಹಾಗಲ್ಲ. 'ಆಡಳಿತದಲ್ಲಿ ಹತ್ತು ಬುದ್ಧಿ ಯೋಚಿಸಿ ಒಂದು ನಿರ್ಣಯಕ್ಕೆ ಬರುತ್ತಿಲ್ಲ. ಒಂದೊ ಎರಡೊ ಬುದ್ಧಿ ಯೋಚಿಸುತ್ತವೆ. ಉಳಿದೆಲ್ಲ ಬುದ್ಧಿ ಅದಕ್ಕೆ, ಧಾರ್ವಾಡದಲ್ಲಿ ಹೇಳುವಂತೆ, ''ಗೋಣು ಹಾಕು''ತ್ತಿವೆ. ಏಕಮತ ಎನ್ನುವುದು ಇದಲ್ಲ; ಇದು ಐಕ್ಯಮತದ ಹೆಣ. ಮೈಗೆ ವಾತ ಬಡಿದು ತಲೆ ಮಾತ್ರ ಓಲಾಡುತ್ತಿರುವ ಒಂದು ದುರವಸ್ಥೆ.[13]

ಭಾರತದಲ್ಲಿ ಪ್ರಜಾಪ್ರಭುತ್ವ ನಡೆಯುತ್ತಿರುವ ರೀತಿಯ ಬಗ್ಗೆ ಪದೇ ಪದೇ ತಮ್ಮ ಆತಂಕ ವ್ಯಕ್ತಪಡಿಸಿರುವ ಮಾಸ್ತಿಯವರ ದೃಷ್ಟಿಗೆ ನಮ್ಮ ರಾಜಕೀಯ ಪಕ್ಷಗಳ ವ್ಯವಹಾರಗಳೂ ಬೀಳದೆ ಇಲ್ಲ. ಕಾಂಗ್ರೆಸಿನೊಳಗೆ ಪದೇ ಪದೇ ಉದ್ಭವಿಸುತ್ತಿದ್ದ ಅಸಮಾಧಾನ, ಅನೇಕರು ಕಾಂಗ್ರೆಸ್ಸನ್ನು ತ್ಯಜಿಸಿ ಹೊಸ ಪಕ್ಷ ರಚಿಸುತ್ತಿದ್ದ ವಿಧಾನ ಇವುಗಳ ಬಗ್ಗೆ ಕೂಡ ಯಾವ ಪೂರ್ವಾಗ್ರಹವಾಗಲಿ ದಾಕ್ಷಣ್ಯವಾಗಲಿ ಇಲ್ಲದೆ ಮಾಸ್ತಿಯವರು ಬರೆದಿದ್ದಾರೆ: 'ಕಾಂಗ್ರೆಸ್ಸನ್ನು ಬಿಟ್ಟು ಹೊಸ ಪಕ್ಷ ಮಾಡುತ್ತಿರುವ ಹಲವರು ಹೆಸರಾಂತ ಕಾಂಗ್ರೆಸ್ಸಿಗರು; ಕಾಂಗ್ರೆಸ್ಸಿನಲ್ಲಿ ಉಳಿದಿರುವ ಮಹನೀಯರಂತೆಯೇ ಇದುವರೆಗೆ ಆ ಸಂಸ್ಥೆಯಲ್ಲಿ ದುಡಿದವರು; ಕಷ್ಟನಷ್ಟಗಳನ್ನು ಸಹಿಸಿ ಸ್ವಾತಂತ್ರ್ಯವನ್ನು ಸಾಧಿಸಿದವರು. ಇವರೆಲ್ಲ ಸೇರಿದ್ದ ಕಾಂಗ್ರೆಸ್ಸು ದೇಶಕ್ಕೆ ಸ್ವಾತಂತ್ರ್ಯವನ್ನು ತಂದಿತು. ಇಷ್ಟು ಜನ ಬಿಟ್ಟ ಮೇಲೆ ಉಳಿದ ಕಾಂಗ್ರೆಸ್ಸು ಆ ಹಿಂದಿನ ಕಾಂಗ್ರೆಸ್ ಹೇಗೆ ಆದೀತು? ''ಕಾಂಗ್ರೆಸ್ ಸ್ವಾತಂತ್ರ್ಯವನ್ನು ಸಾಧಿಸಿತು, ಅದಕ್ಕೇ ಓಟು ಕೊಡಿ'' ಎಂದರೆ, ಈ ಬಿಟ್ಟ ಜನಕ್ಕೆ ಓಟು ಕೊಡಬೇಡಿ ಎಂದು ಅರ್ಥ ಆಗುತ್ತದೆಯೇ? ಸ್ವಾತಂತ್ರ್ಯ ತಂದ ಕಾಂಗ್ರೆಸಿನ ಎಂಟು ಕಳೆ ಒಂದು ಕಡೆ ಇದೆ. ಇನ್ನೆಂಟು ಕಳೆ ಮೂರು ಕಡೆ ಚದರಿದೆ. ಒಂದು ಕಾಂಗ್ರೆಸ್ 'ಎ' ಆದರೆ, ಉಳಿದವು ಕಾಂಗ್ರೆಸ್ 'ಬಿ', ಕಾಂಗ್ರೆಸ್ 'ಸಿ', ಕಾಂಗ್ರೆಸ್ 'ಡಿ'. ಆಂಗ್ಲ ಇತಿಹಾಸದಲ್ಲಿ ಒಂದು ಪ್ರತಿನಿಧಿ ಸಭೆ ಕ್ರಮವಾಗಿ ಏರ್ಪಟ್ಟಿದ್ದು ಕಾಲಕ್ರಮದಲ್ಲಿ ಹಲವರು ಪ್ರತಿನಿಧಿಗಳು ಕೆಟ್ಟು ಬಿಟ್ಟು ಕೆಲವರೆ ಉಳಿದುಕೊಂಡರು. ಅವರಿಗೆ The Rump ಎಂದು ಹೆಸರಾಯಿತು. Rump ಎಂದರೆ ತುದಿಯಲ್ಲಿ ಉಳಿದದ್ದು. ಸ್ವಾತಂತ್ರ್ಯವನ್ನು ಸಾಧಿಸಿದ ಕಾಂಗ್ರೆಸ್ಸಿಗೆ ಇಂದಿನ ಕಾಂಗ್ರೆಸ್ಸು Rump ಅಥವಾ ಕಿಂಚನ್ಮಾತ್ರ ಹೆಚ್ಚು.[14]

---

11. ಅಕ್ಟೋಬರ್ 1952

12. ಅಕ್ಟೋಬರ್ 1952

13. ಮಾರ್ಚ್ 1953

14. ಅಕ್ಟೋಬರ್ 1951

ಪಾಕಿಸ್ತಾನದ ವಿಕಾರ ಪ್ರಭುತ್ವ, ಸೂಯೆಜ್ ಕಾಲುವೆಯ ಹಗರಣ, ಅರಬ್ಬೀ ರಾಷ್ಟ್ರಗಳ ರಾಜಕೀಯ, ಅಮೆರಿಕದ ನೀತಿ ಮುಂತಾದವುಗಳಿಂದ ಹಿಡಿದು, ಸರ್ವೋದಯ, ಸೆಕ್ಯುಲರಿಸಂ, ಬಿ.ಸಿ.ಜಿ. ರಾಷ್ಟ್ರೀಕರಣ, ಕೇರಳದ ರಾಜಕೀಯ, ನೆಹರೂ ನಾಸ್ತಿಕ್ಯಗಳವರೆಗೆ ಯಾವ ವಿಷಯವನ್ನೂ ಮಾಸ್ತಿಯವರು ಬಿಟ್ಟಿಲ್ಲವಷ್ಟೇ ಅಲ್ಲ. ಪ್ರತಿಯೊಂದು ವಿಚಾರವನ್ನು ಕುರಿತು ಬರೆಯುವಾಗಲೂ ಅವರ ವಿಶಾಲವಾದ ಅನುಭವ, ಆಳವಾದ ವಿದ್ವತ್ತು, ಸ್ವತಂತ್ರವಾದ ಆಲೋಚನೆ - ಇವುಗಳಿಂದಾಗಿ ಅದು ಸ್ಫುಟವಾಗಿ ಮೂಡುತ್ತದೆ. ಅಕ್ಟೋಬರ್ ೧೯೬೨ರಲ್ಲಿ ರಾಷ್ಟ್ರದ ಅರ್ಥನೀತಿಯನ್ನು ಕುರಿತು ಅವರು ಬರೆದಿರುವ ಲೇಖನ ಒಂದು ಉದಾಹರಣೆ. 'ಪಶ್ಚಿಮದ ರಾಷ್ಟ್ರಗಳು ಕೈಗಾರಿಕೆಯಲ್ಲಿ ಕ್ರಮಕ್ರಮವಾಗಿ ಬೆಳೆದುವು. ಆ ರಾಷ್ಟ್ರಗಳ ಅನುಭವವನ್ನು ಬಳಸಿಕೊಂಡು ನಾವು ಅವು ಬೆಳೆದುದಕ್ಕಿಂತ ಸ್ವಲ್ಪ ಬೇಗನೆ ಬೆಳೆಯಬಹುದು. ಆದರೆ ಅಲ್ಲಿ ನೂರು ವರ್ಷದಲ್ಲಿ ಬೆಳೆದ ಎತ್ತರವನ್ನು ಇಲ್ಲಿ ಹತ್ತು ವರ್ಷದಲ್ಲಿ ಬೆಳೆದೇವು ಎನ್ನುವುದು ಭ್ರಾಂತಿ. ಮಾವಿನ ಮರ ನಾಡ ಮರವಾದರೆ ಹತ್ತು ವರ್ಷದಲ್ಲಿ ಫಲ ಕೊಟ್ಟೀತು; ಕಸಿಯಾದರೆ ನಾಲ್ಕು ವರ್ಷದಲ್ಲಿ ಕೊಡಬಹುದು; ನಾಲ್ಕು ನಿಮಿಷದಲ್ಲಿ ಸೊಸಿ ಕಾಣುವುದು ಅಕ್ಕಬಿಕ್ಕ ಆಟದಲ್ಲಿ ಅಷ್ಟೆ. ಕೈಗಾರಿಕೆಯೆಂದರೆ ಹಣ ಅಷ್ಟೇ ಅಲ್ಲ-ಸಾಮಗ್ರಿ, ಯಂತ್ರ, ದುಡಿಯುವ ಜನ, ನೋಡಿಕೊಳ್ಳುವ ಜನ, ಬಲ್ಲ ಜನ, ಇಷ್ಟೆಲ್ಲಾ ಇರಬೇಕು. ನಾವು ಸಾಮಗ್ರಿಯನ್ನು ಹೇಗೋ ಒದಗಿಸಿಯೇವು. ಆದರೆ ಅದಕ್ಕೆ ಒಂದು ಮಿತಿಯುಂಟು. ಯಂತ್ರ ಎಲ್ಲವನ್ನೂ ಹೊರಗಿನಿಂದ ತರಬೇಕು. ಯಾವ ಒಂದು ಭಾಗ ಬರದೆ ನಿಂತರೂ ಆ ಯಂತ್ರ ಉಪಯೋಗವಿಲ್ಲ. ಯಂತ್ರಗಳನ್ನು ಹೇಗೆ ನಡೆಸುವುದು ಎಂದು ಬಲ್ಲ ಜನ ಈಗ ತಾನೆ ಒದಗುತ್ತಿದ್ದಾರೆ. ಏನೇ ಮಾಡಿದರೂ ಇದಕ್ಕೆ ತಕ್ಕಷ್ಟು ಕಾಲ ಬೇಕು. ನಮ್ಮವರೇ ಒದಗುವವರೆಗೆ ಹೊರಗಿನ ಜನರನ್ನು ಇರಿಸಿಕೊಳ್ಳೋಣ. ಎಂದರೆ ನಮ್ಮಲ್ಲಿ ನೂರಾರು ಜನಕ್ಕೆ ಕೊಡುವ ಸಂಬಳವನ್ನು ಹೊರಗಿನ ಒಬ್ಬನಿಗೆ ಕೊಡಬೇಕಾಗುತ್ತದೆ; ಅವನೋ ರಾಜಭೋಗವನ್ನು ನಿರೀಕ್ಷಿಸುತ್ತಾನೆ. ಹೀಗೆ ನಡೆದ ಕೈಗಾರಿಕೆಯಿಂದ ನಿರೀಕ್ಷಿಸಿದ ಫಲ ದೊರೆಯುವುದು ಹೇಗೆ?''[15] -ಎಂಬ ಮಾತುಗಳಲ್ಲಿ ಅವರು ರಾಷ್ಟ್ರದ ಅಭಿವೃದ್ಧಿಯ ಸಮಸ್ಯೆಯ ನಿಜವಾದ ಸ್ವರೂಪವನ್ನು ವಿವೇಚಿಸಿದ್ದಾರೆ.

ಹೀಗೆ ಯಾವ ವಿಚಾರವನ್ನೇ ತೆಗೆದುಕೊಳ್ಳಲಿ-ಅದರ ಮೇಲೆ ಮಾಸ್ತಿಯವರು ತಮ್ಮ ವ್ಯಕ್ತಿತ್ವದ ಮುದ್ರೆಯನ್ನೊತ್ತುತ್ತಾರೆ. ಅಡಕೆಯ ಫಲ ಕೊಯ್ಯುವವರು ಒಂದು ಮರದ ತುದಿಯಿಂದ ಇನ್ನೊಂದು ಮರಕ್ಕೆ ಜಿಗಿಯುವಂತೆ, ಒಂದು ವಿಚಾರವನ್ನು ಚರ್ಚಿಸುತ್ತ ಅದರಿಂದ ಇನ್ನೊಂದು ವಿಚಾರಕ್ಕೆ ಜಿಗಿದು, ಅವೆರಡಕ್ಕೂ ಇರುವ ಸಂಬಂಧವೇನೆಂಬುದನ್ನು ತೋರಿಸುವುದು ಮಾಸ್ತಿಯವರ ಟಿಪ್ಪಣಿಗಳ ಇನ್ನೊಂದು ವೈಶಿಷ್ಟ್ಯ. ಈ ಮಾತಿಗೆ ಸಮರ್ಥನೆ ನೀಡಲು ಹೆಚ್ಚು ಕಷ್ಟಪಡಬೇಕಿಲ್ಲ. ಯಾವ ಪುಟವನ್ನು ತೆರೆದರೂ ಇದಕ್ಕೆ ದೃಷ್ಟಾಂತ ದೊರಕೀತು. 'ಸ್ವತಂತ್ರವಾಗಿ ಬಾಳಲು ತಕ್ಕಷ್ಟು ಬುದ್ಧಿ ಬೆಳೆಯುವ ಮೊದಲು ಸ್ವಾತಂತ್ರ್ಯ ಬಂದು ಹಲವು ದೇಶ ಕೆಟ್ಟದ್ದು ಇಂದಿನ ಇತಿಹಾಸದಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಪಾಕಿಸ್ತಾನ, ಬರ್ಮಾ, ಲಾವೋಜ್, ಕಾಂಗೋ ಇದಕ್ಕೆ ಉದಾಹರಣೆಗಳು. ನಿನ್ನೆ ಮೊನ್ನೆಯ ಉದಾಹರಣೆ ಆಲ್ಜೀರಿಯ.

15. ಅಕ್ಟೋಬರ್ 1962

'ನಮ್ಮ ರಾಷ್ಟ್ರದಲ್ಲಿ ಇಂಥ ತೊಂದರೆಯಾಗಲಿಲ್ಲ ಎಂದು ನಮ್ಮ ನಾಯಕರು ಆಗಾಗ್ಗೆ ಹೇಳುತ್ತಿರುತ್ತಾರೆ. ಆದರೆ ಇವರ ಹೆಮ್ಮೆಗೆ ಇವರು ಕೊಟ್ಟುಕೊಳ್ಳುವ ಕಾರಣ ಸರಿಯಾದ್ದೆಂದು ಹೇಳುವಂತಿಲ್ಲ. ನಮ್ಮಲ್ಲಿ ಗೊಂದಲ ಇಲ್ಲದೇ ಇರುವುದು ನಮ್ಮ ಜನರ ಪ್ರಜ್ಞೆ, ಸಂಯಮದ ಫಲ ಅಲ್ಲ; ಅಪ್ರಜ್ಞೆ, ನಿರುದ್ಯಮಗಳ ಫಲಮಾತ್ರ. ಇದಕ್ಕೆ ಒಳ್ಳೆಯ ನಿದರ್ಶನ, ಭಾಷೆಯನ್ನು ಕುರಿತು ನಾವು ಬೆಳೆಸಿಕೊಳ್ಳುತ್ತಿರುವ ಗೊಂದಲ.

ಉದಾಹರಣೆಗಾಗಿ ಕನ್ನಡದ ಮಾತನ್ನು ತೆಗೆದುಕೊಳ್ಳೋಣ. ಭಾಷಾನುಗುಣ ಪ್ರಾಂತಗಳನ್ನು ನಾವು ಬಯಸಿದ್ದರ ಕಾರಣ, ಕನ್ನಡ ಪ್ರದೇಶದ ಆಡಳಿತ, ಸಮಸ್ತ ವ್ಯವಹಾರ ಕನ್ನಡದಲ್ಲಿ ನಡೆದು, ರಾಷ್ಟ್ರಜೀವನದ ವಿವರವೂ ಕನ್ನಡ ಜನಕ್ಕೆ ಕನ್ನಡದಲ್ಲಿ ತಿಳಿದು, ಈ ನಮ್ಮ ಜನ ರಾಷ್ಟ್ರ ಜೀವನದಲ್ಲಿ ತಮ್ಮಿಂದ ಎಷ್ಟು ಸಾಧ್ಯ ಅಷ್ಟು ಪೂರ್ಣವಾದ ಭಾಗವನ್ನು ವಹಿಸಲಾಗಲಿ ಎನ್ನುವುದು. ಈ ಉದ್ದೇಶ ಫಲಿಸಬೇಕಾದರೆ ಭಾಷೆಗಳ ವಿಷಯದಲ್ಲಿ ರಾಷ್ಟ್ರ ಹೇಗೆ ನಡೆದುಕೊಳ್ಳಬೇಕು ಎಂದು ನಮ್ಮ ನಾಯಕರು ಇನ್ನೂ ಯೋಚಿಸಿಲ್ಲ.

'ಇದರ ಪರಿಣಾಮ, ಕನ್ನಡದ ಅಭಿಮಾನಿಗಳೆನ್ನುವವರು ಕನ್ನಡ ಕನ್ನಡ ಎಂದು ಮೊರೆಯುವುದು, ನರಳುವುದು; ರಾಷ್ಟ್ರ, ಲೋಕ ಎಂದು ವಿಶಾಲವಾದ ದೃಷ್ಟಿಯುಳ್ಳವರೆಂದು ಭ್ರಮಿಸಿರುವ ಜನ, ''ಬರಿಯ ಕನ್ನಡದಿಂದ ಏನೂ ಆಗುವುದಿಲ್ಲ; ರಾಷ್ಟ್ರಭಾಷೆ ಒಂದಿರಬೇಕು; ಲೋಕದೊಂದಿಗೆ ವ್ಯವಹರಿಸಲು ಒಂದು ಭಾಷೆ ಇರಬೇಕು'' ಎಂದು ಮೂದಲಿಸುವುದು ಉಗ್ಗಡಿಸುವುದು.

'ಮಗುವನ್ನು ಹೇಗೆ ಸಾಕುವುದು ಎಂದು ಅಪ್ಪ ಅಮ್ಮ ಚರ್ಚೆ ನಡಸುತ್ತ, ಮಗು ಅನ್ನ ನೀರು ಇಲ್ಲದೆ ಸೊರಗುವಂತೆ, ಈ ಎರಡು ದೃಷ್ಟಿಯ ಜನರ ವಿವಾದದಲ್ಲಿ ಕನ್ನಡ ಎಂದಿನಂತೆ ಭೂಗತವಾಗಿಯೇ ಬಿದ್ದಿದೆ.[16]

ಭಾರತ ಸ್ವಾತಂತ್ರ್ಯದಿಂದ ನಾಡಿನ ಭಾಷೆಗೆ ಬಿಗಿಯುವ ಇವರ ವಿಚಾರಧಾರೆ ಮುಂದೆ ಹಲವು ಪುಟ ಹೀಗೆಯೇ ಸಾಗುತ್ತದೆ. ಭಾಷೆಯ ಬಗ್ಗೆ ತಳೆಯಬೇಕಾದ ಧೋರಣೆ ಎಂಥದಾಗಿರಬೇಕೆಂದು ವಿವರಿಸುವ ಈ ಸಂಪಾದಕೀಯದಲ್ಲಿ ಮಾಸ್ತಿಯವರ ದೇಶಪ್ರೇಮವೂ ಭಾಷಾಭಿಮಾನವೂ ವೈಜ್ಞಾನಿಕ ವಿವೇಚನೆಯೂ ಸಂಗಮಿಸಿವೆ. ಯಾವ ವಿಷಯವನ್ನಾದರೂ ಲೀಲಾಜಾಲವಾಗಿ ವಿಶ್ಲೇಷಿಸಿ ಕರತಲಾಮಲಕದಂತೆ ಕಾಣಿಸುವುದು ಮಾಸ್ತಿಯವರ ಬರಹಗಳ ವೈಶಿಷ್ಟ್ಯ.

ಭಾರತ ಪ್ರಜಾಪ್ರಭುತ್ವದ ಹತ್ತೆಂಟು ಹುಳುಕುಗಳನ್ನು ಎತ್ತಿ ಆಡಿರುವ ಮಾಸ್ತಿಯವರು ಒಮ್ಮೆಯಾದರೂ ನಿರಸನ ಮನೋಭಾವ ತಳೆದವರಲ್ಲ. 'ಹೀಗಾದರೆ ರಾಷ್ಟ್ರಕ್ಕೆ ದಾರಿ ಯಾವುದು?' ಎಂದು ಉದ್ಗರಿಸಿ ಅಷ್ಟಕ್ಕೆ ಕೈಚೆಲ್ಲಿ ಕೂರುವವರಲ್ಲ. 'ಜನ ಸ್ವಾರ್ಥದಿಂದ ನಡೆಯುತ್ತಾರೆ, ಆದ್ದರಿಂದ ಎಲ್ಲ ಕೆಲಸವನ್ನೂ ಸರಕಾರ ಮಾಡತಕ್ಕದ್ದು' ಎನ್ನುವ ಮನೋಧರ್ಮ ಮೂಲತಃ ಅತಂತ್ರ ಎನ್ನುವುದನ್ನು ಸರಕಾರ ಕಂಡುಕೊಳ್ಳಬೇಕು.

'ಜನರು ಸ್ವಾರ್ಥದಿಂದ ನಡೆಸುವ ಕೆಲಸವನ್ನು ಸರಕಾರ ಕೈಗೆ ತೆಗೆದುಕೊಂಡು ತಾನು ನಿಸ್ವಾರ್ಥವಾಗಿ ನಡೆಸಿ ಜನರನ್ನು ಉದ್ಧಾರ ಮಾಡಿಯೇನು ಎಂಬ ಭ್ರಾಂತಿಯನ್ನು ಸರಕಾರ ಬಿಡಬೇಕು.

ಜನಾಂಗವನ್ನೇ ಕುರಿತು ಇಂಥ ಅಪನಂಬಿಕೆ ತಪ್ಪು. ಯಾವ ಮನುಷ್ಯನೂ ತೀರ

---

16. ಆಗಸ್ಟ್ 1962

ನಿಃಸ್ವಾರ್ಥಿಯಾಗಿ ಬದುಕಲಾರ. ಕೆಲವರ ಸ್ವಾರ್ಥ ಸ್ವಲ್ಪ ಅತಿಯಾಗಬಹುದು. ಅಂಥವನ್ನು ಸುತ್ತಿನ ಜನ ಅವರ ಪರವಾಗಿ ತಡೆಯಬೇಕು, ತಿದ್ದಬೇಕು. ಸರಕಾರ ಇದಕ್ಕೆ ಬೇಕಾದ ಏರ್ಪಾಡು ಮಾಡಬೇಕು.

'ಚೆನ್ನಾಗಿ ದುಡಿಯುವುದು, ನ್ಯಾಯವಾದ ಮಾರ್ಗದಿಂದ ಆದಷ್ಟನ್ನು ಗಳಿಸುವುದು, ಗಳಿಸಿದ್ದರಲ್ಲಿ ತನಗೆ ತನ್ನವರಿಗೆ ಬೇಕಾದಷ್ಟನ್ನು ಮಿತವಾಗಿ ಉಳಿಸಿಕೊಂಡು ಅದಕ್ಕೆ ಹೆಚ್ಚಿನದನ್ನು ದಾನ ಮಾಡುವುದು. ಈಗ ಮನುಷ್ಯನ ಸ್ವಭಾವ ರೀತಿ ಇರುವಲ್ಲಿ ಈ ಕ್ರಮವನ್ನು ಪ್ರಚಾರ ಮಾಡುವುದೇ ಕ್ಷೇಮದ ಮಾರ್ಗ.

''ಉದ್ಧರೇತ್ ಆತ್ಮನಾ ಆತ್ಮಾನಾಂ'' ಎನ್ನುವ ಮಾತು ಇಲ್ಲಿ ಚೆನ್ನಾಗಿ ಅನ್ವಯಿಸುತ್ತದೆ. ಜನ ತಾವೇ ಪ್ರೌಢವಾಗಿ ನಡೆದುಕೊಳ್ಳದಿದ್ದರೆ ಸರಕಾರ ತಾನು ಹಾಗೆ ನಡೆಯಿಸಿಯೇನು ಎಂದುಕೊಂಡು ಜಯಿಸಲಾರದು. ನಾಯಕರು ಮಾತ್ರ ದಕ್ಷರಾಗಿ ಜನತೆ ಅವರ ಕೈಗೊಂಬೆಗಳಾಗಿ ಇರುವ ಸ್ಥಿತಿ ಒಳ್ಳೆಯ ಸ್ಥಿತಿಯಲ್ಲ. ಜನಾಂಗದ ನಲವತ್ತು ಕೋಟಿಯಲ್ಲಿ ನಾಲ್ಕು ಕೋಟಿಯಾದರೂ ಜಾಣರಿರಬೇಕು.

ಅದರಲ್ಲಿ ನಾಲ್ಕು ಲಕ್ಷ ಪ್ರತಿನಿಧಿಗಳಾಗಿ ನಡೆಯಬಲ್ಲ ದಕ್ಷರಾಗಿರಬೇಕು. ಅದರ ನಾಲ್ಕು ಸಾವಿರ ಜನ ಶಾಸನಸಭೆಗೆ ಸದಸ್ಯರಾಗಲಿ. ಇದರಲ್ಲಿ ನಾನೂರು ಜನ ಮಂತ್ರಿಗಳಾಗಬಹುದು. ದೇಶದ ಬಾಲು ಚೆನ್ನವಾಗುವುದು ನಾನೂರು ಮಂತ್ರಿಗಳಿಂದಲ್ಲ, ನಾಲ್ಕು ಸಾವಿರ ಪ್ರತಿನಿಧಿಗಳಿಂದಲ್ಲ, ನಾಲ್ಕು ಕೋಟಿ ಜನಾಂಗದ ಪ್ರಯತ್ನದಿಂದ.

'ನಮ್ಮ ಪ್ರಜಾಪ್ರಭುತ್ವ ಈ ನಾಲ್ಕು ಕೋಟಿ ಜನರನ್ನು ಸಿದ್ಧಪಡಿಸುವ ಕಡೆಗೆ ಪ್ರಯತ್ನ ಮಾಡಬೇಕು. ನಾಲ್ಕು ಸಾವಿರ ಜನ, ನಲವತ್ತು ಕೋಟಿ ಹಸುಳೆಗಳ ಕೈಗೆ ಬಿಡದೆ ಕಾಪಾಡುತ್ತೇವೆ, ಎನ್ನುವ ದೃಷ್ಟಿಯಿಂದ ನಡೆಯಬಾರದು.'[17]

ವಿಜ್ಞಾನ ಯುಗದಲ್ಲಿ ಅತಿವೇಗದಿಂದ ಪರಿವರ್ತನೆ ಹೊಂದುತ್ತಿರುವ ಸಮಾಜಕ್ಕೆ ಆರ್ಷೇಯ ಸಮಾಜದ ಶಾಶ್ವತವಾದ ಮೌಲ್ಯಗಳನ್ನು ಜೋಡಿಸುವುದೇ ಮಾಸ್ತಿಯವರು ಈ ಟಿಪ್ಪಣಿಗಳ ಮೂಲಕ ಕೈಕೊಂಡ ಕಾರ್ಯ. ಸಮಸ್ಯೆಗಳನ್ನು ಇವರು ನೋಡುವ ದೃಷ್ಟಿ ನೇರ, ಸರಳ, ವ್ಯಕ್ತಿವಿಶಿಷ್ಟ. ಅನೇಕ ಸಂದರ್ಭಗಳಲ್ಲಿ ಪರಿಸ್ಥಿತಿಯ ಸಂಕೀರ್ಣತೆಯನ್ನು ಇವರು ಕಾಣದೆ ಇದ್ದದ್ದೂ ಉಂಟು. ಆದರೆ ಎಲ್ಲೂ ಅಪ್ರಾಮಾಣಿಕತೆಯಿಲ್ಲ. ಜೀವನದ ಬಗ್ಗೆ ಅಶ್ರದ್ಧೆಯಿಲ್ಲ. ಪೂರ್ವಾಗ್ರಹದ ನಿಲವಿಲ್ಲ. ಅವರ ದೃಷ್ಟಿಯನ್ನು ನೀವು ಒಪ್ಪದಿರಬಹುದು. ಆದರೆ ಅದಕ್ಕೆ ದುರುದ್ದೇಶವನ್ನು ಆರೋಪಿಸಲಾರಿರಿ. ಅವರ ಟಿಪ್ಪಣಿಗಳ ಬಗ್ಗೆ ಅನೇಕರು ಅನೇಕ ಬಗೆಯಲ್ಲಿ ಟೀಕೆ ಮಾಡಿದ್ದುಂಟು. ಅವು ತುಂಬ ಉಗ್ರವೆಂದು ಅಂದಿರುವುದುಂಟು. ಆದರೆ ಅಲ್ಲಿ ಬಂದದ್ದು ಮಾಸ್ತಿಯವರ 'ಸ್ವಂತ ಅಭಿಪ್ರಾಯಗಳು. ಅವು ಮುಖ್ಯವಾಗಿ ಒಬ್ಬ ವ್ಯಕ್ತಿಯ ಅಭಿಪ್ರಾಯಗಳು. ಆ ವ್ಯಕ್ತಿಯ ಸ್ವಭಾವ, ಅನುಭವ, ಕಲ್ಪನೆಗಳನ್ನು ಅನುಸರಿಸಿ, ಅವನ ಅಭಿಪ್ರಾಯಗಳು ಒಂದು ರೂಪವನ್ನು ಪಡೆಯುತ್ತವೆ. ಆ ಸ್ವಭಾವ, ಅನುಭವ, ಕಲ್ಪನೆಗಳು ದೋಷಯುಕ್ತವಾಗಿದ್ದರೆ ಅಂಥ ದೋಷ ಆ ಅಭಿಪ್ರಾಯಗಳಲ್ಲಿ ಪ್ರತಿಬಿಂಬಿಸುತ್ತವೆ. ಆದರೆ ವ್ಯಕ್ತಿ ತನ್ನ ನಿಲುಕಿದ ಮಾತನ್ನು ಸತ್ಯವಾಗಿ ತಕ್ಕಷ್ಟು ಯುಕ್ತವಾದ ನುಡಿಗಳಲ್ಲಿ ನುಡಿದರೆ ಆ ದೋಷಗಳು ದೋಷಗಳಾಗಬಹುದು ಹೊರತಾಗಿ ಪಾತಕವಾಗುವುದಿಲ್ಲ.'[18]

---

17. ಏಪ್ರಿಲ್ 1964
18. ಮೇ 1951

ಮಾಸ್ತಿಯವರು ೨೫೦೦ ಪುಟಗಳ ಈ ಸಾಹಿತ್ಯದಲ್ಲಿ ಎಲ್ಲೂ ಅಂಥ ಪಾತಕ ಮಾಡಿಲ್ಲ. ತಮಗೆ ಪವಿತ್ರವೆನಿಸಿದ್ದನ್ನು ಎಲ್ಲೂ ಬಿಟ್ಟುಕೊಟ್ಟಿಲ್ಲ, ಅದಕ್ಕೆ ದ್ರೋಹ ಬಗೆದಿಲ್ಲ. ವರ್ಷೇ ವರ್ಷೇ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನ ಮೂರು ದಿನಗಳ ಪರಿಷೆ ಎಂದು ಟೀಕಿಸುವವರು ನಮ್ಮ ದೇಶದಲ್ಲಿ ಆರ್ಷೇಯವಾಗಿ ಬಂದು ಪರಿಷೆಗಳನ್ನು ಹೇಯವೆಂದು ಪರಿಗಣಿಸುತ್ತಾರೆ. ಮಾಸ್ತಿಯವರು ಆ ಮಾತನ್ನೆ ಎತ್ತಿಕೊಂಡು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಅವರ ಜೀವನದೃಷ್ಟಿಯ ಮೇಲೆ ಬೆಳಕು ಚೆಲ್ಲುತ್ತವೆ: 'ಸಮ್ಮೇಳನ ಮೂರು ದಿವಸದ ಪರಿಷೆ ಮಾತ್ರ ಆಗಬಾರದು' ಎಂದು ನಮ್ಮ ಮಿತ್ರರು ಹಲವರು ಹೇಳುವುದುಂಟು. ಪರಿಷೆಯೆನ್ನುವುದು ಕಡಿಮೆಯ ರೀತಿಯ ಒಂದು ಜನಸಂಘಾತ, ಇದರಲ್ಲಿ ಇರುವುದು ಬರಿಯ ಗದ್ದಲ ಎಂದು ಈ ಮಿತ್ರರ ತಿಳುವಳಿಕೆ. ಒಂದು ಪರಿಷೆ ಕೂಡ ದೈವವನ್ನು ಕುರಿತ ಯಾವುದೋ ಒಂದು ಕಲ್ಪನೆಯ ಸುತ್ತ ನಡೆಯುತ್ತದೆ; ನೆರೆಯವರ ಮನಸ್ಸಿಗೆ ದೈವದ ಸ್ಮೃತಿಯನ್ನು ತರುತ್ತದೆ; ಚೇತನದಲ್ಲಿ ಸಂಭ್ರಮವನ್ನು ಮೂಡಿಸುತ್ತದೆ. ಒಂದು ವರ್ಷದ ದಿನ ನಡೆಯುವುದಕ್ಕೆ ಬೇಕಾದ ಭಕ್ತಿಯ ಶ್ರದ್ಧೆಯ ಬುತ್ತಿಯನ್ನು ಜನರಿಗೆ ಕಟ್ಟಿಕೊಡುತ್ತದೆ. ಕನ್ನಡಿಗರಿಗೆ ಕನ್ನಡ ದೈವ. ಪರಿಷತ್ ಸಮ್ಮೇಳನ ಅದನ್ನು ಕುರಿತು ನಮ್ಮ ಜನಕ್ಕೆ ಇಷ್ಟನ್ನು ಮಾಡಿದರೆ ಎಷ್ಟೋ ಉಪಕಾರ ಆಯಿತೆನ್ನಬೇಕು.'[19]

ನಾಡು, ನುಡಿ, ರಾಷ್ಟ್ರ, ವಿಶ್ವಗಳ ಎರಡು ದಶಕಗಳ ಚರಿತ್ರೆ ಇಲ್ಲಿದೆ. ಸುಸಂಸ್ಕೃತವಾದ ಜೀವವೊಂದರ ಮಿಡಿತವಿಲ್ಲಿದೆ. ಇಲ್ಲಿ ಕಾಣುವುದು ಲೋಕದ ಅಂತಃಕರಣ. ಸಾಹಿತಿಯಾದ ಇವರು ಪತ್ರಿಕೋದ್ಯಮದ ಲೆಕ್ಕಣಿಕೆ ಹಿಡಿದು, ಆ ಉದ್ಯಮದಲ್ಲಿ ನಿರತರಾದವರಿಗೆ ಒಂದು ಆದರ್ಶವನ್ನು ಹಾಕಿಕೊಟ್ಟದ್ದು ಮಾತ್ರವೇ ಅಲ್ಲ, ಸಾಹಿತ್ಯದ ಮಡಿದೃಷ್ಟಿಯನ್ನು ಹೋಗಲಾಡಿಸಿ ಸಾಹಿತ್ಯಕ್ಕೂ ಲೋಕಜೀವನಕ್ಕೂ ಇರುವ ಅವಿನಾ ಸಂಬಂಧವನ್ನು ಇಲ್ಲಿ ತೋರಿಸಿಕೊಟ್ಟಿದ್ದಾರೆ. ವಿಚಾರ, ವಿವೇಕ, ಮೃದುಹಾಸ್ಯ, ಸಜ್ಜನಿಕೆ, ಮರ್ಯಾದೆ ಕೆಡದಂಥ ಟೀಕೆ, ಜನಜೀವನದಲ್ಲಿ ಶ್ರದ್ಧೆ, ನಾಡಿನ ಬಗ್ಗೆ ಅಭಿಮಾನ - ಎಲ್ಲವೂ ಬೆರೆತಿರುವ ಈ ಲೇಖನಗಳು ಕನ್ನಡ ಗದ್ಯಕ್ಕೊಂದು ವಿಶಿಷ್ಟ ಕೊಡುಗೆ.

---

19. ಮೇ ೧೯೫೧

ಸಾಹಿತ್ಯ ಲಾಲನೆ

ಸೂರ್ಯನಾರಾಯಣ ಚಡಗ

ಸಾರ್ಥಕ ಬದುಕಿಗೆ ಅತೀ ಅವಶ್ಯಕ ಸಾಹಿತ್ಯ ತೀರ್ಥ. ಸಾಹಿತ್ಯ ತೀರ್ಥದ ನಿರ್ಮಾಪಕ ನಿಷ್ಠಾವಂತ ಸಾಹಿತಿ. ಸಾಹಿತಿಯ ಪ್ರತಿಭೆಯ ಸಾಮರ್ಥ್ಯವನ್ನು ಅರಿತು ಅತ್ಯಂತ ವಿಶ್ವಾಸದಿಂದ ಆ ತೀರ್ಥವನ್ನು ಪರಿಶುದ್ಧವೆಂದು ಸ್ವೀಕರಿಸುವನು ಶ್ರದ್ಧಾವಂತ ಓದುಗ. ಈ ಯುಕ್ತಾಯುಕ್ತ ವಿವೇಚನೆಯಲ್ಲಿ ಎಲ್ಲರ ಕರ್ತವ್ಯವೂ ದೊಡ್ಡದು. ಸಾಮಾನ್ಯನಿಗಿಂತ ಹೆಚ್ಚಿನ ಅನುಭವವುಳ್ಳ ಸಾಹಿತಿಯು ಪ್ರತಿಭೆ ಸಾಮರ್ಥ್ಯಗಳು ಮಹತ್ತಮವಾದುದು. ಸಾರ್ಥಕ ಸಾಹಿತಿಯ ಒಂದು ಕೃತಿಯ ವಿಶೇಷ ಗುಣಗಳನ್ನು ತಿಳಿದು ಅವನ್ನು ಸದುಪಯೋಗ ಪಡೆಸಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಳ್ಳುವ ಓದುಗನೂ ಅಷ್ಟೇ ಮಹತ್ವದ ವ್ಯಕ್ತಿಯೇ ಆಗುತ್ತಾನೆ.

ಸಾಹಿತ್ಯದ ಸ್ಥಾನಮಾನ ಅತ್ಯಂತ ಮಹತ್ವದ್ದಾಗಿದೆ. ಆ ಬಗ್ಗೆ ಜಿಜ್ಞಾಸೆ ಅನಗತ್ಯ. ಮಾನವನ ಉನ್ನತ ಸಾಧನೆಗೆ. . . .ಜೀವನ ಶುದ್ಧಿಗೆ. . . ಬುದ್ಧಿ ವಿಕಾಸಕ್ಕೆ. . . ಸಂಸ್ಕಾರದ ಪೂರ್ಣ ಊರ್ಜಿತಕ್ಕೆ. . . ಸುಧಾರಿಸಿದ ಸಹ ಬಾಳ್ವೆಗೆ. . .ಯುಗಧರ್ಮದ ನೀತಿಗನುಗುಣವಾದ ಪ್ರಗತಿಪರ ಮುನ್ನಡೆಗೆ. . . ಸಾಹಿತ್ಯ ಅಷ್ಟೇ ಅವಶ್ಯಕ. ಸಾಹಿತ್ಯದ ನಿಕಟ ಸಂಪರ್ಕದಿಂದ ಜೀವನದ ಮೂಲ ಮೌಲ್ಯಗಳನ್ನು ಸಚೇತನಗೊಳಿಸುವ ಸಾಧ್ಯತೆ ಇದೆ. ಮಾನವನೊಡನೆ ಸಂಬಂಧವನ್ನು ಕಲ್ಪಿಸುವಲ್ಲಿ ಸಾಹಿತ್ಯ ಉತ್ತಮ ಮಾಧ್ಯಮ. ಸಂಸ್ಕೃತಿಯ ಪ್ರತಿರೂಪವಾದ ಶಾಂತಿ, ಸಹನೆ, ದಯೆ, ಮಾನವ ಪ್ರೇಮ, ವಿಶ್ವ ಪ್ರೇಮ ಎಲ್ಲವೂ ಸಾಹಿತ್ಯವನ್ನು ಅವಲಂಬಿಸಿಯೇ ಇವೆ ಎನ್ನುವುದರಲ್ಲಿ ಉತ್ಪ್ರೇಕ್ಷೆ ಇಲ್ಲ. ಆ ಸಾಹಿತ್ಯವನ್ನು ನಿರ್ಮಿಸಿದ ಸಾಹಿತಿಯೂ ಆಗ ಹೆಚ್ಚಿನ ಮಹತ್ವದ ವ್ಯಕ್ತಿಯಾಗುವುದು ಸಹಜವೇ ಆಗಿದೆ. ಮಾನವೀಯತೆಯನ್ನು ಮಾನವನ ವಿಕಾಸವನ್ನು ಪ್ರಗತಿಯ ಪ್ರಮಾಣವನ್ನು. . .ನಾಗರಿಕತೆಯ ಸ್ವರೂಪವನ್ನು. . .ಸಂಸ್ಕೃತಿಯ ಮಟ್ಟವನ್ನು ಅಳೆಯುವುದಕ್ಕೆ ಸುಲಭ ಸಾಧನ ಸಾಹಿತ್ಯ.

ವಾಚನಾಭಿರುಚಿಯ ಪರಿಣಾಮವು ಪುಸ್ತಕದ ಬಗ್ಗೆ ಒಲವು ಹುಟ್ಟಿಸುತ್ತದೆ. ಒಲವು ಹೆಚ್ಚಿದಂತೆ ಕೃತಿಯ ಬಗ್ಗೆ ಗೌರವ ಭಾವನೆ ಸಹಜವಾಗುತ್ತದೆ. ಓದುಗನ ಅಭಿರುಚಿಗೆ ತಕ್ಕಂತಹ ಒಳ್ಳೆಯ ಕೃತಿಯಿಂದ ಅವನ ಒಲವು ಲೇಖಕನತ್ತ ವಾಲುತ್ತದೆ. ಮನವನ್ನು ಆಕ್ರಮಿಸಿಕೊಂಡಿರುವ ಸಾಹಿತ್ಯ ಪ್ರಭೆಯ ಒತ್ತಿನಲ್ಲೆ ಲೇಖಕನ ಸ್ಪಷ್ಟ ರೂಪು ಗೋಚರವಾಗುತ್ತದೆ. ಅವನ ಮನಸ್ಸನ್ನು ಪೂರ್ಣವಾಗಿ ಲೇಖಕನ ವ್ಯಕ್ತಿತ್ವವು ಆಕ್ರಮಿಸಿಕೊಂಡಾಗ ಅವನ ಬಗ್ಗೆ ಅಭಿಮಾನ ಹುಟ್ಟುತ್ತದೆ. ಸಂತೋಷ ಸಮಾಧಾನವನ್ನು ವ್ಯಕ್ತಪಡಿಸುವ ವಿಧಾನ ಕುರಿತು ಯೋಚಿಸುತ್ತಾನೆ. ವಿಚಾರವಂತ ಮನೋಧರ್ಮವೇ ಹಾಗೆ.

ಒಳ್ಳೆಯದನ್ನು ಒಳ್ಳೆಯದಿದೆ ಎಂದು ಹೇಳುವ ವಿಶಾಲ ಮನೋಭಾವದಲ್ಲಿ ವಿವೇಚನೆ ಕೆಲಸ ಮಾಡುತ್ತದೆ. ''ನಿಮ್ಮ ಕೃತಿಯನ್ನು ನಾನು ಓದಿದ್ದೇನೆ; ಓದಿ ಸಂತೋಷ ಪಟ್ಟಿದ್ದೇನೆ'' ಎನ್ನುವುದನ್ನು ಲೇಖಕನಿಗೆ ತಿಳಿಸುವುದಕ್ಕೆ ಹಾತೊರೆಯುತ್ತಾನೆ. ಇಂತಹ ಸಂದರ್ಭದಲ್ಲಿ ಪತ್ರವ್ಯವಹಾರ ಅನುಕೂಲ ಮಾಧ್ಯಮ. ಕೃತಿ ಗೌರವಕ್ಕೆ ತಲೆಬಾಗಿ. . .ಲೇಖಕನ ವ್ಯಕ್ತಿತ್ವಕ್ಕೆ ಆಕರ್ಷಿತನಾಗಿ ಪತ್ರದ ಮೂಲಕ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ. ಅನಂತರವೇ ಅವನಿಗೆ ಸಮಾಧಾನ. ಪತ್ರ ವ್ಯವಹಾರದ ಈ ಸುಲಭ ಮಾರ್ಗ ಒಂದು ಶುಚಿಯಾದ ಕ್ರಮ. ಓದುಗನ ಮನಸ್ಸಿನ ಬೆಳವಣಿಗೆ ಮತ್ತು ಲೇಖಕನ ಕೃತಿಯ ಮಹತ್ವದ ಆಕರ್ಷಣೆ ಇದಕ್ಕೆ ಪ್ರಚೋದನೆ.

ಜನಪ್ರಿಯ ಲೇಖಕನ ಕೃತಿಗಳನ್ನು ಓದಿ ಬಹಳಷ್ಟು ಮಂದಿ ಮೆಚ್ಚಿ ಪತ್ರ ಬರೆಯುತ್ತಾರೆ. ಅವುಗಳು ವೈಯಕ್ತಿಕವಾಗಿಯೂ ಇರಬಹುದು, ಅಭಿಮಾನದ ಒತ್ತಡದಲ್ಲಿ ಪತ್ರದ ಒಕ್ಕಣಿಕೆಯಲ್ಲಿ ಸಾಹಿತ್ಯಕ ಅಂಶವೂ ಅಡಗಿರಬಹುದು. ಅಭಿಪ್ರಾಯಗಳನ್ನು ವ್ಯಕ್ತಪಡಿಸುವಲ್ಲಿ ವಿಮರ್ಶೆಯ ಗುಣವೂ ಸೇರಿರಬಹುದು. ವಿಮರ್ಶೆಯ ಒರೆಗಲ್ಲಿಗೆ ಹಚ್ಚುವ ಉದ್ದೇಶ ಓದುಗನಿಗೆ ಇಲ್ಲದಿದ್ದರೂ ಪತ್ರದಲ್ಲಿ ವ್ಯಕ್ತಪಡಿಸಬಹುದಾದ ಅಭಿಪ್ರಾಯಗಳಲ್ಲಿ ಮೌಲಿಕ ವಿಚಾರ ಕಂಡುಬರುವ ಸಾಧ್ಯತೆ ಇದೆ. ಅಂತಹ ನೂರಾರು ಪತ್ರಗಳು ಲೇಖಕನಿಗೆ ಬರುವುದು ಸಹಜ. ಅಂತಹ ಪತ್ರಗಳು ಒಂದು ಪುಸ್ತಕವಾಗಿ ಪ್ರಕಟಿಸುವುದಕ್ಕೆ ಯೋಗ್ಯ ಎನ್ನುವುದು ಲೇಖಕ ಯೋಚಿಸುವುದರಲ್ಲಿಯೂ ವೈಚಾರಿಕತೆಯಿದೆ. ತಮಗೆ ಬಂದಿರುವ ಪತ್ರಗಳಲ್ಲಿರುವ ಸತ್ವವನ್ನು ಮನಗಂಡು ಅವನ್ನು ಅಭಿಮಾನದಿಂದ ಪ್ರಕಟಿಸುವ ಉತ್ಸಾಹವೂ ಒಂದು ಉಚಿತವಾದ ರೀತಿ. ಅಂತಹ ಪುಸ್ತಕ ಸಾಹಿತ್ಯಕ್ಕೊಂದು ವಿಶೇಷವಾದ ಕೊಡುಗೆಯಾಗುತ್ತದೆ.

ಕನ್ನಡದ ಎಲ್ಲಾ ಲೇಖಕರೂ ತಮಗೆ ಬಂದಿರುವ ಓದುಗರ ಪತ್ರಗಳನ್ನು ಸಂಕಲಿಸಿ ಪ್ರಕಟಿಸುವ ಶ್ರಮಕ್ಕೆ ಹೋಗಲಿಲ್ಲ. ಆದರೆ ಶ್ರೀ ಮಾಸ್ತಿಯವರು ಓದುಗರು, ಹಿತೈಷಿಗಳು ಆಗಾಗ ಅವರ ಕೃತಿಯನ್ನು ಓದಿ ಮೆಚ್ಚಿಕೊಂಡು ಬರೆದ ಪತ್ರಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿರುವುದು ಅತ್ಯಂತ ಸಂತೋಷದ ಸಂಗತಿ. ಪ್ರಾಯಶಃ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮಾಸ್ತಿಯವರು ಪ್ರಕಟಿಸಿದ ಪತ್ರಗಳ ಸಂಕಲನ ''ಸಾಹಿತ್ಯಲಾಲನೆ'' ಮೊದಲ ಪ್ರಕಟಣೆ.

೧೯೬೭ರಲ್ಲಿ ಪ್ರಕಟವಾದ ''ಸಾಹಿತ್ಯಲಾಲನೆ'' ಪುಸ್ತಕದ ಮೊದಲನೆಯ ಪತ್ರ-ಶ್ರೀ ಪಿ.ಎಚ್. ಕೃಷ್ಣರಾಯರು ೧೯೧೩ರಲ್ಲಿ, ಮಾಸ್ತಿಯವರು ಆಂಗ್ಲ ಕತೆಗಾರ ಆರ್.ಎಲ್. ಸ್ಟೀವನ್‌ಸನ್‌ರ ಬಗ್ಗೆ ಬರೆದ ಒಂದು ಇಂಗ್ಲಿಷ್ ಲೇಖನವನ್ನು ಓದಿದಾಗ ಬರೆದದ್ದು. ಪುಸ್ತಕದ ಕೊನೆಯಲ್ಲಿ ಪ್ರಕಟವಾಗಿರುವ ಪತ್ರ ಮಾಸ್ತಿಯವರ ತಮಿಳು ಮಿತ್ರರಾದ ಡಾ. ಶ್ರೀನಿವಾಸನ್ ಅವರು ''ಚೆನ್ನಬಸವನಾಯಕ''ದ ತಮಿಳು ಭಾಷಾಂತರವನ್ನು ಓದಿದಾಗ ಬರೆದದ್ದು. ಅದು ೧೯೬೬ರಲ್ಲಿ. ಈ ಪತ್ರಗಳ ಕಾಲಾವಧಿ ಐವತ್ತಮೂರು ವರ್ಷಗಳು. ಸಂಕಲನದಲ್ಲಿ ಪ್ರಕಟವಾಗಿರುವ ನೂರ ಎಪ್ಪತ್ತು ಪತ್ರಗಳಲ್ಲಿ ಇಂಗ್ಲಿಷ್ ಭಾಷೆಯ ಪತ್ರಗಳೂ ಸೇರಿವೆ. ಸ್ನೇಹಿತರು, ಹಿತೈಷಿಗಳು, ಅಪರಿಚಿತ ಸಹೃದಯ ಓದುಗರು ಅವರ ಕೃತಿಯನ್ನು ಮೆಚ್ಚಿ ಬರೆದ ಪತ್ರಗಳೇ ''ಸಾಹಿತ್ಯಲಾಲನೆ''. ಬೇರೆ ಬೇರೆ ಮನೋಧರ್ಮದ ಪ್ರತಿಷ್ಠಿತ . . . ವ್ಯಕ್ತಿಗಳ ಪತ್ರಗಳ ಜೊತೆಗೆ ಅಪರಿಚಿತ ಸಾಮಾನ್ಯ ಓದುಗರ ಪತ್ರಗಳನ್ನೂ ಸೇರಿಸಿ ಸಮನ್ವಯ ಭಾವನೆಯಿಂದ ವ್ಯಕ್ತಿಯ ಸ್ಥಾನಮಾನವನ್ನು.ಗಣನೆಗೆ ತಂದುಕೊಳ್ಳದೆ ಅವುಗಳೆಲ್ಲವನ್ನೂ ಪುಸ್ತಕದಲ್ಲಿ ಅಳವಡಿಸಿದ ಮಾಸ್ತಿಯವರ ಮನೋಧರ್ಮ ಅನುಕರಣೀಯ. ಸಾಹಿತ್ಯ ಲಾಲನೆಯ ಮುನ್ನುಡಿಯಲ್ಲಿ ಓದುಗರ ಪ್ರೀತಿವಿಶ್ವಾಸವನ್ನು

ನೆನೆದು ಮಾಸ್ತಿಯವರು ಹೀಗೆ ಬರೆದಿದ್ದಾರೆ :

> ಈ ಪುಸ್ತಕ ನನ್ನ ಲೇಖನಗಳನ್ನು ಕುರಿತು ಮಿತ್ರರು, ಹಿರಿಯರು ನನಗೆ ಆಗಿಂದಾಗ ಬರೆದ ಪತ್ರಗಳ ಸಂಗ್ರಹ. ಒಂದೆರಡನ್ನು ಬಿಟ್ಟರೆ ಉಳಿದ ಎಲ್ಲವೂ ನನ್ನ ಬರಹವನ್ನು ಕುರಿತು ಒಪ್ಪಿಗೆಯನ್ನು ಪ್ರಕಟಿಸುತ್ತವೆ. ಪ್ರೀತಿಯ ಈ ಮಾತುಗಳಿಂದ ತೃಪ್ತಿ ಸಂತೋಷ ಪ್ರೋತ್ಸಾಹ ದೊರೆತಿದ್ದರೂ ನಾನು ಎಂದಾದರೂ ಇವುಗಳ ಕಾರಣದಿಂದ ಅಹಂಕಾರ ಪಟ್ಟಿದ್ದೇನೆಂದು ನನಗೆನ್ನಿಸಿಲ್ಲ. ವಿಶ್ವಾಸಿಗಳಲ್ಲದ ಕೆಲ ಜನ ಒಮ್ಮೊಮ್ಮೆ ನನ್ನ ಕೆಲಸವನ್ನು ತೆಗಳಿದಾಗ ಮಾತ್ರ ಈ ವಿಶ್ವಾಸಿಗಳ ಒಪ್ಪಿಗೆಯ ಮಾತು ನೆನೆಪಿಗೆ ಬಂದು, ಆಯಿತು ಇವರ ಮಾತು ಹೀಗಾದರೂ, ಇವರಂತೆಯೇ ಬಲ್ಲ ಬೇರೆ ಮಿತ್ರರು ಒಳ್ಳೆಯ ಮಾತನ್ನಾಡಿದ್ದಾರಲ್ಲ, ಅಷ್ಟೇ ಸಧ್ಯಕ್ಕೆ ಸಾಕು ಎಂದು ಮನಸ್ಸು ಸಮಾಧಾನ ಕಂಡಿದೆ. ಎಂದರೆ ಇಂತಹ ಮಾತು ಉಬ್ಬಿಸಿ ಕೆಡಿಸಲಿಲ್ಲ; ಕುಗ್ಗದಂತೆ ತಡೆದು ಕಾಪಾಡಿತು. ಹೀಗೆ ಕಾಪಾಡಿದ ಅಕ್ಕರೆಯ ಕುರುಹು ಎಂದೆ ಈ ಸಂಗ್ರಹವನ್ನು ಈಗ ಪ್ರಕಟಿಸುತಿದ್ದೇನೆ. ಇದೆಷ್ಟು ಜನ ನನ್ನ ಮೇಲೆ ತನ್ನ ಪ್ರೇಮದ ಈ ಹೂ ಮಳೆಯನ್ನು ಸುರಿಸಿದವರು! ಎಷ್ಟು ಬೇರೆ ಬೇರೆ ವಯಸ್ಸಿನವರು, ವೃತ್ತಿಗಳವರು, ಸ್ಥಳಗಳವರು! ಎಷ್ಟು ಬೇರೆಬೇರೆ ಮನೋಧರ್ಮದವರು! ಇಷ್ಟು ಪ್ರೀತಿಗೆ ಒಬ್ಬ ಮನುಷ್ಯ ಅರ್ಹನಾಗುವುದು ಸಾಧ್ಯವೆ? ನನ್ನ ಮನಸ್ಸು ಚೆನ್ನಾಗಿ ಬಲ್ಲದು; ನಮ್ಮ ಜನ ನನ್ನ ವಿಷಯಕ್ಕೆ ನನ್ನ ಯೋಗ್ಯತೆಗೆ ಮಿಂಚಿದ ಪ್ರೇಮವನ್ನು ತೋರಿದ್ದಾರೆ. ಅದರಿಂದಲೇ ನಾನು ಎಷ್ಟಾದರೂ ಬೆಳೆದೆ, ಏನಾದರೂ ಸೇವೆ ಸಲ್ಲಿಸಿದೆ. ಇದೇ ನನ್ನ ಜನ್ಮವನ್ನು ಎಷ್ಟು ಮಟ್ಟಿಗಾದರೂ ಸಾರ್ಥಕವೆನ್ನಿಸಿತು.

ಈ ಮಾತು ಮಾಸ್ತಿಯವರ ಒಳ್ಳೆಯ ಗುಣಗಳನ್ನು ಪ್ರಕಟಿಸುವುದಕ್ಕೆ ಅತ್ಯಂತ ಉಚಿತ ನಿದರ್ಶನವಾಗಿದೆ.

ಈ ಪುಸ್ತಕಕ್ಕೆ ''ಸಾಹಿತ್ಯಲಾಲನೆ'' ಎಂದು ಹೆಸರು ಇಟ್ಟಿರುವ ಬಗ್ಗೆ ಮಾಸ್ತಿಯವರು ಹೀಗೆ ಹೇಳಿದ್ದಾರೆ :

> ೧೯೧೩ರಲ್ಲಿ ನಾನು ಇನ್ನೂ ಓದುತ್ತಿದ್ದೆ. ೧೯೬೭ರಲ್ಲಿ ಮುದುಕನೇ ಆಗಿದ್ದೇನೆ. ಆದರೆ ಈ ಒಪ್ಪಿಗೆ ಎನ್ನುವುದು ಆಗಲೂ ಅವಶ್ಯಕವಾಗಿತ್ತು; ಈಗಲೂ ಅವಶ್ಯಕವಾಗಿದೆ. ಪ್ರಶಂಸೆ ಎಂದಲ್ಲ; ಸ್ತುತಿ ಎಂದಲ್ಲ. ನನ್ನ ಬರಹ ಎದುರಾಳಿಗೆ ಸಂತೋಷಕೊಟ್ಟಿದೆ ಎಂಬ ಆಶ್ವಾಸನೆಗಾಗಿ. ಈ ಆಶ್ವಾಸನೆಯಿಂದ ಈಗ ನನ್ನ ಲೇಖನ ಕಾರ್ಯಕ್ಕೆ ಉತ್ತೇಜನ ದೊರೆಯುವ ಸಂಭವ ಇಲ್ಲ. ಆದರೆ ಐವತ್ತು ವರ್ಷಗಳ ಹಿಂದೆ ದೊರೆಯಿತು; ತುಂಬ ದೊರೆಯಿತು. ಅದರ ಫಲವಾಗಿ ನಾನು ಲೇಖನ ಕರ್ಮದಲ್ಲಿ ಸುಖವನ್ನು ಕಂಡೆನು. ಉತ್ಸಾಹದಿಂದೆ ಮುಂದುವರಿದೆನು. ಈ ಕಾರಣದಿಂದ ನನಗೆ ಮಿತ್ರರ ಹಿರಿಯರ ಈ ಮಾತೆಲ್ಲ ನನ್ನ ಸಾಹಿತ್ಯವನ್ನು ಲಾಲಿಸಿದವವೆಂದು ಕಂಡಿದೆ. ಆದ್ದರಿಂದಲೇ ಸಂಗ್ರಹಕ್ಕೆ ''ಸಾಹಿತ್ಯ ಲಾಲನೆ'' ಎಂದು ಹೆಸರಿಸಿದ್ದೇನೆ

ಈ ಮಾತು ಮಾಸ್ತಿಯವರ ಸದ್ಭಾವನೆಯನ್ನು ವ್ಯಕ್ತಪಡಿಸುತ್ತದೆ.

೨೯೯ ಪುಟಗಳ ಸಾಹಿತ್ಯಲಾಲನೆ ಕೃತಿ ಮಾಸ್ತಿಯವರ ಬರಹ ಅಲ್ಲ. ಅವರು ಪ್ರಕಾಶಕರು ಅಷ್ಟೆ. ಅವರ ಕೃತಿಗಳನ್ನು ಓದಿದವರು ಆಗಾಗ ಬರೆದ ಪತ್ರಗಳ ಸಂಕಲನವೇ ಆ ಪುಸ್ತಕ. ನೂರಎಪ್ಪತ್ತು ಪತ್ರಗಳಲ್ಲಿಯೂ ವಿಷಯಕ್ಕೆ ಪ್ರಾಧಾನ್ಯತೆ ಇದೆ. ಒಂದೆರಡು

ಪತ್ರಗಳು ಮಾಸ್ತಿಯವರ ಬರಹದ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ್ದರೂ ಉಳಿದೆಲ್ಲವು ಅವರ ಕೃತಿಯನ್ನು ಮೆಚ್ಚಿ ಬರೆದ ಪತ್ರಗಳು. ಹೆಚ್ಚಿನವರು ಗಣ್ಯರು. ಅನೇಕರು ಹೆಸರಾಂತ ಸಾಹಿತಿಗಳು. ಕೆಲವರು ಸಾಹಿತ್ಯಾಭಿಮಾನಿಗಳು. ಜೊತೆಗೆ ಕೃತಿಯ ಪ್ರಭಾವಕ್ಕೆ ಒಳಗಾದ ಸಾಮಾನ್ಯ ಓದುಗರೂ ಇದ್ದಾರೆ. ಮಾಸ್ತಿಯವರ ದೃಷ್ಟಿಯಲ್ಲಿ ಎಲ್ಲರ ಪತ್ರಗಳಿಗೂ ಒಂದೇ ಬೆಲೆ. ಎಲ್ಲರ ಪ್ರೀತಿ ವಿಶ್ವಾಸವೂ ಅವರಿಗೆ ಮಹತ್ವದ್ದಾಗಿದೆ. ಯಾರ ವ್ಯಕ್ತಿತ್ವದ ಬಗ್ಗೆ ಕೂಡಾ ಮಾಸ್ತಿಯವರಿಗೆ ತಾರತಮ್ಯ ಭಾವನೆ ಇಲ್ಲ. ಈ ಮನೋಭಾವವೇ ಅವರ ಹಿರಿಮೆ. ಆ ಕಾರಣದಿಂದಲೇ ಮಾಸ್ತಿಯವರು ಕನ್ನಡದ ಆಸ್ತಿ.

ಹೊಗಳಿಕೆ ಅತ್ಯಂತ ಪ್ರಿಯವಾದ ವಿಚಾರ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ತೆಗಳಿಕೆಯು ಅಪ್ರಿಯವೆಂದು ಮಾಸ್ತಿಯವರು ಯಾವ ಸಂದರ್ಭದಲ್ಲೂ ಭಾವಿಸಿದವರಲ್ಲ. ಪತ್ರಗಳ ಬಳಕೆಯಲ್ಲಿ ಮಾಸ್ತಿಯವರ ಬಗ್ಗೆ ಸಹೃದಯ ಮಿತ್ರರೂ ತೋರಿದ ಅಭಿಮಾನದ ಉತ್ತರವೇನು ಎಂಬುದು ಸ್ಪಷ್ಟವಾಗುತ್ತದೆ. ಗಣ್ಯ ವ್ಯಕ್ತಿಗಳ ಪತ್ರಗಳನ್ನು ಓದುತ್ತಿದ್ದಂತೆ ಮಾಸ್ತಿಯವರ ವ್ಯಕ್ತಿತ್ವ ಕಣ್ಮುಂದೆ ನಿಲ್ಲುತ್ತದೆ. ಕನ್ನಡ ಸಾಹಿತ್ಯದ ವಿಸ್ತಾರ ವೈವಿಧ್ಯಗಳನ್ನು ಹೆಚ್ಚಿಸಿದ ಆಚಾರ್ಯ ಮಾಸ್ತಿಯವರ ಕೃತಿಗಳ ಬಗ್ಗೆ ಗೌರವ ಭಾವನೆ ಉಂಟಾಗುತ್ತದೆ.

ಮಾಸ್ತಿಯವರ ಸಾಹಿತ್ಯವನ್ನು ಲಾಲಿಸಿದ ಕೆಲವು ಪತ್ರಗಳ ಕೆಲವು ಮುಖ್ಯ ಸಾಲುಗಳನ್ನು ಗಮನಿಸುವುದು ಅಗತ್ಯವೆನಿಸದೆ ಇರದು.

೧೯೨೦ ಮಾಸ್ತಿಯವರ ''ಕೆಲವು ಸಣ್ಣ ಕತೆಗಳು'' ಪ್ರಕಟವಾಯಿತು. ಆ ಪುಸ್ತಕವನ್ನು ಓದಿ ಮಿತ್ರರಾದ ಶ್ರೀ ಟಿ. ವೆಂಕಟರಂಗನ್ ಅವರು ಇಂಗ್ಲಿಷಿನಲ್ಲಿ ಬರೆದ ಪತ್ರದ ಕೆಲವು ವಾಕ್ಯಗಳು:

> I have got your book. There cannot be two opinions about your stories. They have the magic touch of genius about them. I have read them in manuscript and magazine so often. They are still new, still fresh. They have made me laugh, aye, weep too. They have the great quality to purify and elevate the soul. This will make your stories live you ever.

ಮಾಸ್ತಿಯವರು ಹಿಂದೆ ಆಗಾಗ ಇಂಗ್ಲಿಷಿನಲ್ಲಿಯೂ ಲೇಖನ ಬರೆಯುವ ವಾಡಿಕೆಯನ್ನಿಟ್ಟುಕೊಂಡಿದ್ದರು. ಆಗ ಹಿರಿಯರಾದ ಶ್ರೀ ಡಿ.ವಿ.ಜಿ. ಅವರು 'The Karnataka and the Indian Review of Reviews' ಎಂಬ ಆಂಗ್ಲ ಪತ್ರಿಕೆಯನ್ನು ನಡೆಸುತ್ತಿದ್ದರು. ಆ ಪತ್ರಿಕೆಗೆ ಒಂದು ಲೇಖನವನ್ನು ಬಯಸಿ ಶ್ರೀ ಡಿ.ವಿ.ಜಿ. ಅವರು ಇಂಗ್ಲಿಷಿನಲ್ಲಿ ಬರೆದ ಪತ್ರ :

> It will be a very great help to me if you will give me the essay on Hafiz in three or four days; So that I might be free to attend to other work. I am not certain about my writing any article for the coming issue, and when I have as article from you, I need not trouble whether I have any others or not.

೧೯೩೨ರಲ್ಲಿ ಮಾಸ್ತಿಯವರು ಮಧುಗಿರಿಯಲ್ಲಿದ್ದರು. ಆಗ ಅವರ ಕವನ ಮತ್ತು ಕತೆಗಳನ್ನು ಬಹಳವಾಗಿ ಮೆಚ್ಚಿಕೊಂಡಿದ್ದ ಶ್ರೀ ಟಿ.ಎಸ್. ವೆಂಕಣ್ಣಯ್ಯನವರು 'ಪ್ರಬುದ್ಧ ಕರ್ನಾಟಕ'ಕ್ಕೆ ಒಂದು ಲೇಖನ ಬೇಕೆಂದು ಬರೆದ ಪತ್ರ:

> ಈ ವರ್ಷದ ಮೊದಲನೆಯ ಸಂಚಿಕೆಯು ಆಗಸ್ಟ್ ೧೫ನೇ ತಾರೀಖಿನೊಳಗಾಗಿ ಪ್ರಕಟವಾಗುತ್ತದೆ. ಎಂದರೆ ವಿನಾಯಕನ ಹಬ್ಬಕ್ಕೆ ಸುಮಾರು

ಒಂದು ತಿಂಗಳು ಮುಂಚೆಯೇ ಪಾಠಕರ ಕೈ ಸೇರುತ್ತದೆ. ಅದರಲ್ಲಿ ನಿಮ್ಮ ಸಣ್ಣಕತೆಯನ್ನು ಪ್ರಕಟಮಾಡುವುದಕ್ಕೆ ಹಿಂದಿನ ಪ್ರತಿಬಂಧಕವಿರುವುದಿಲ್ಲವಾದ್ದರಿಂದ ಅದನ್ನು ಇನ್ನು ಎಂಟು ಹತ್ತು ದಿನಗಳೊಳಗಾಗಿ ಕೃಷ್ಣಶಾಸ್ತ್ರಿಗಳಿಗೆ ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ. ಅಲ್ಲದೆ ಇನ್ನೂ ಅಚ್ಚಾಗದೆ ಇರುವ ಹಾಡುಗಳಲ್ಲಿ ಒಂದೆರಡನ್ನು ಅನುಕೂಲವಾದರೆ ಪ್ರಕೃತಿ ಚಿತ್ರಿತವಾಗಿರುವುದನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ನೀವು ಒಪ್ಪುವುದಾದರೆ ದಯವಿಟ್ಟು ಅವುಗಳನ್ನು ಕಳುಹಿಸಬೇಕೆಂದು ಕೋರುತ್ತೇನೆ.

ರಾಮಾಶ್ವಮೇಧದ ಮೇಲೆ ವಿಮರ್ಶೆಯೊಂದನ್ನು ಬರೆಯಬೇಕೆಂದು ಉದ್ದೇಶವಿರುವುದೆಂಬುದಾಗಿ ಹಿಂದೆ ಒಂದು ಸಲ ಹೇಳಿದ್ದೀರಿ. ಅವಕಾಶವಾದರೆ ಇನ್ನು ಒಂದೆರಡು ತಿಂಗಳೊಳಗಾಗಿ ಅದನ್ನು ಬರೆದು ಕಳುಹಿಸಬೇಕೆಂದು ವಿನಂತಿ.

ಮಾಸ್ತಿಯವರು ''ಬಿನ್ನಹದ'' ಎರಡು ಗೀತೆಗಳನ್ನು ಮತ್ತು ''ಕೃಷ್ಣಮೂರ್ತಿಯ ಹೆಂಡತಿ'' ಎಂಬ ಕಥೆಯನ್ನು ಟಿ.ಎಸ್. ವೆಂಕಣ್ಣಯ್ಯನವರಿಗೆ ಕಳುಹಿಸಿದಾಗ ಇಂಗ್ಲಿಷಿನಲ್ಲಿ ಬರೆದ ಪತ್ರದ ಕೆಲವು ಸಾಲುಗಳು :

> Many thanks for kindly sending the songs. I like the first one immensely. It contains a beautiful sentiment. I do not know why - it may be due to my peculiar temperment - I could not enjoy the 2nd song as well as I did the 1st one. . .
>
> I read the short story. It is very interesting and impressive.

''ಸಾವಿತ್ರಿ'' ಸಣ್ಣ ದೃಶ್ಯವನ್ನು ಕುರಿತು ಟಿ.ಎಸ್. ವೆಂಕಣ್ಣಯ್ಯನವರು ೧೯೨೩ರಲ್ಲಿ ಬರೆದ ಪತ್ರ :

> The drama is really fine. I propose reviewing it myself in the ensuing issue of the Prabuddha Karnataka.

ಆ ಸಂದರ್ಭದಲ್ಲೇ ಶ್ರೀ ಎ.ಆರ್. ಕೃಷ್ಣಶಾಸ್ತ್ರಿಗಳವರು ಮಾಸ್ತಿಯವರ ಕವನ ಕುರಿತು ಬರೆದ ಒಂದು ಪತ್ರದ ವೈವಿಧ್ಯತೆ:

> I feel that the 1st ನುಡಿ in ಶ್ರೀನಿವಾಸ's song 'ಅರಸುವುದು ಜಗವು' etc. viz., ಬರೆವನಿವ etc. - ill suits with the grand sentiments expressed in the 2nd and 3rd verses. Please let me know if you have got any objections to omit it. It will then be excellent as a 'ಪ್ರಾರ್ಥನೆ' in the first page.
>
> The other song 'ನೀನೆನ್ನ ಜೊತೆಯಲಿ' etc. is now printed and appears in the 13th page of the 'ಸಂಕ್ರಾಂತಿಯ ಸಂಚಿಕೆ'. I hope your health is quite good now.

೧೯೨೪ರಲ್ಲಿ ಮಾಸ್ತಿಯವರ 'ಸಾವಿತ್ರಿ' ಕೃತಿಯ ವಿಮರ್ಶೆ ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾಯಿತು. ಆಗ ಶ್ರೀ ವೆಂಕಣ್ಣಯ್ಯನವರನ್ನು ವಂದಿಸಿ ಮಾಸ್ತಿಯವರು ಪತ್ರ ಬರೆದಾಗ ವೆಂಕಣ್ಣಯ್ಯನವರು ಬರೆದ ಉತ್ತರ :

> You have taken my criticism of ಸಾವಿತ್ರಿ in a generous spirit and I thank you for it. I have made an honest and frank statement - I may be wrong - regarding my view of the verses in the Drama. It is a general statement that I have made.

ಶ್ರೀ ಬಿ.ಎಂ. ಶ್ರೀಕಂಠಯ್ಯನವರು ಮಾಸ್ತಿಯವರಿಗೆ ಬರೆದ ಈ ಪತ್ರ ಅವರ

''ಸಾಹಿತ್ಯ'' ಪುಸ್ತಕ ಪ್ರಕಟವಾದಾಗ. ಅಂದಿನ ಪ್ರಸಿದ್ಧ ಸಾಹಿತಿಗಳು ಇಂಗ್ಲಿಷಿನಲ್ಲೇ ಪತ್ರ ಬರೆಯುತ್ತಿರುವುದನ್ನು ಇಲ್ಲಿ ಗಣನೀಯವಾಗಿ ಸ್ಮರಿಸಿಕೊಳ್ಳಬಹುದು. ಬಿ.ಎಂ. ಶ್ರೀಕಂಠಯ್ಯನವರು ಈ ಪತ್ರ ಬರೆದದ್ದು ೧೯೨೪ರಲ್ಲಿ :

So kind of you to send me your "Sahitya'. I have read it three times now and admire the beautiful style in which you have presented the chief points about the Art of literature. It is possible to differ on small points -e.g. your defence of the monotony of Kannada Poetry - but I believe all your positions will be accepted. After creative work you have every right to speak authoritatively in criticism.

P.S. I am glad to notice your short stories have been prescribed by the Benaras Hindu University for their "Admission Exam' it won't bring you money, but I hope something finer-pleasure.

ಶ್ರೀ ಮುತ್ತುಕದಹಳ್ಳಿ ನರಸಿಂಗರಾಯ ಗೋಪಾಲರಾವ್ ಅವರು ಮಾಸ್ತಿಯವರು ಓದಿದ ಹಳ್ಳಿಯ ಶಾಲೆಯಲ್ಲಿ ಅದೇ ಉಪಾಧ್ಯಾಯರ ಕೈಯಲ್ಲಿ ವಿದ್ಯೆ ಕಲಿತು ಪ್ಯಾಸಾಗಿದ್ದ ಹಿರಿಯರು. ಇವರು ಹೊಸಸಾಹಿತ್ಯದಲ್ಲಿ ಕೆಲಸ ಮಾಡುತ್ತಿದ್ದರು. ಅವರು ೧೯೨೫ರಲ್ಲಿ ಮಾಸ್ತಿಯವರಿಗೆ ಬರೆದ ಪತ್ರದಲ್ಲಿರುವ ಶ್ರೇಯೋಭಿಲಾಷೆಯ ಕೆಲವು ಮಾತುಗಳು ಮನನೀಯ :

ಪ್ರಿಯ ಶ್ರೀನಿವಾಸ, ಎಂದು ನಿಮ್ಮನ್ನು ಕರೆವಷ್ಟು ಸಲಿಗೆ ವಹಿಸಬಹುದೆಂದು ತೋರುತ್ತದೆ. ಏಕೆಂದರೆ ನಾವಿಬ್ಬರೂ ಬಾಲ್ಯದಲ್ಲಿ ಒಂದೇ ಶಾಲೆಯಲ್ಲಿ ಒಬ್ಬರೇ ಗುರುವಿನಲ್ಲಿ ಓದಿದವರು.

ನೀವು ಸಿವಿಲ್ ಸರ್ವಿಸ್ಸು, ಎಂ.ಎ. ಮೊದಲಾದ ಕಠಿಣ (ನಿಮಗೆ ಸುಲಭವಾಗಿಯೇ ಇದ್ದಿರಬಹುದು) ಪರೀಕ್ಷೆಗಳಲ್ಲಿ ಉತ್ತೀರ್ಣರಾದುದನ್ನು ಕೇಳಿ ಅತ್ಯಾನಂದಭರಿತನಾಗಿ ನಿಮಗೆ ಅಪಾರ ಆಯುರಾರೋಗ್ಯೈಶ್ವರ್ಯಗಳು ಪ್ರಾಪ್ತವಾಗಲೆಂದು ಹರಸಿದೆನು. ನೀವು ಕೋಲಾರದಲ್ಲಿ ಅ।। ಕಮೀಷನರ್ ಆಗಿದ್ದಾಗ, ಗುರುವರ್ಯರನ್ನೊಮ್ಮೆ ಬೀದಿಯಲ್ಲಿ ಸಂಧಿಸಿ ಒಡನೆಯೇ ಅವರಿಗೆ ದಂಡವತ್ಪ್ರಣಾಮ ಮಾಡುವುದಕ್ಕೆ ಹೋದ ಹಾಗೆ ಅವರೇ ಹೇಳಿದರು. ನಿಮ್ಮ ವಿನಯಾದಿ ಸೌಶೀಲ್ಯ ಗುಣಗಳಿಗೆ ನಾನು ಅತ್ಯಂತ ಸಂತೋಷ ಪಟ್ಟಿದ್ದೇನೆ.

ಕರ್ನಾಟಕವೆಂಬ ಪತ್ರಿಕೆಯಲ್ಲಿ ರಾಮಾಶ್ವಮೇಧದ ಪ್ರಶಂಸೆಯನ್ನು ನೋಡಿ . . . ನನಗೆ ನಿಮ್ಮಲ್ಲಿದ್ದ ಆದರ ಭಾವವು ಇಮ್ಮಡಿಯಾಯಿತು.

ಮಧುರವಾಣಿಯಲ್ಲಿ ರಂಗನ ಮದುವೆ ಮೊದಲಾದ ಕತೆಗಳನ್ನೋದಿದಾಗ ಅವು ನಿಮ್ಮವೆಂದು ಮೊದಲು ನನಗೆ ತೋರಲಿಲ್ಲ. ಆದರೆ ಪುಸ್ತಕ ರೂಪವಾಗಿ ನಿಮ್ಮ ಸಣ್ಣ ಕತೆಗಳು ಪ್ರಕಟವಾದ ಮೇಲೆ ಬಾದಷಹನ ತೀರ್ಪು, ರಂಗಸಾಮಿಯ ಅವಿವೇಕ, ಬೀದಿಯಲ್ಲಿ ಹೋಗುವ ನಾರಿ, ಮೊದಲಾದವು ನನ್ನ ಮನಸ್ಸಿನ ಮೇಲೆ ವಿಶೇಷ ಪರಿಣಾಮವನ್ನುಂಟು ಮಾಡಿದುವು. ನೀವು ಕನ್ನಡ ಸಾಹಿತ್ಯಕ್ಕೆ ಹೊಸ ಕಳೆಯನ್ನು ತಂದಿರುವಿರಿ.

ಮಾಸ್ತಿಯವರ ಅರುಣ ಪದ್ಯ ಸಂಗ್ರಹವನ್ನು ಓದಿದ್ದ ಶ್ರೀ ಉಗ್ರಾಣ ಮಂಗೇಶರಾಯರು ಅವರಿಂದ ಒಂದು ಪದ್ಯವನ್ನು ತಮ್ಮ ಒಂದು ಕಾವ್ಯಸಂಕಲನದಲ್ಲಿ

ಸೇರಿಸಲು ಅನುಮತಿ ಬಯಸಿ ೧೯೨೫ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಿಂದ ಬರೆದ ಪತ್ರ. ಅಂದಿನ ಕನ್ನಡದ ಲೇಖಕರಿಗೆ ಇಂಗ್ಲಿಷಿನ ವ್ಯಾಮೋಹ ಎಷ್ಟಿತ್ತು ಎನ್ನುವುದನ್ನು ಇಲ್ಲಿ ಗ್ರಹಿಸಬಹುದು.

> Though I don't know you personally I have long known you through your short stories, essays, and poems which appeared from time to time in the Prabuddha Karnataka of which I am an ordent reader. There is a new charm about anything you write, and I wish to give a specemen of it to school children by including in my anthology an extract from one of your pieces from "Aruna', I refer to the "ನೀತಿ' and I have just selected five stanzas from it.
>
> Will you kindly permit me to include it, in the second edition of my "Kavya Ratnakara'.

೧೯೨೭ರಲ್ಲಿ ಮಾಸ್ತಿಯವರು ಮದ್ರಾಸ್ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಕರ್ನಾಟಕದ ಜನತೆಯ ಸಂಸ್ಕೃತಿಯ ಕುರಿತು ನಾಲ್ಕು ಉಪನ್ಯಾಸಗಳನ್ನು ಕೊಟ್ಟರು. ಹಿಂದಿರುಗಿದ ಮೇಲೆ ಮಾಸ್ತಿಯವರು ಬರೆದ ವಂದನೆಯ ಪತ್ರಕ್ಕೆ ಆಗ ವೈಸ್‌ಛಾನ್ಸೆಲರ್ ಆಗಿದ್ದ ಶ್ರೀ ವೆಂಕಟರತ್ನಂನಾಯಡು ಅವರು ಬರೆದ ಕಾಗದ:

> You have done a favour to the University; and we all feel grateful for it. I regret that the arrangements were so inadequate; but I trust that you will, in your goodness, overlook the short comings.
>
> Could time and convenience permit it I shall esteem it a favour if a summary of your lectures could be presented in the form of an article or a discourse for the University magazine in English. I am sure it will prove very suggestive and useful to others.

ಪ್ರಬುದ್ಧ ಕರ್ನಾಟಕದಲ್ಲಿ ಸುಬ್ಬಣ್ಣ ಮೊದಲು ಪ್ರಕಟವಾಯ್ತು. ಆಗ ಡಿ.ವಿ.ಜಿ. ಅವರು ಆ ಪುಸ್ತಕದ ಕುರಿತು ಬರೆದ ಮೊದಲನೆಯ ಪತ್ರ :

> I am writing this with eyes still moist. Your story in the latest P.K. has made them so, I have just finished reading it, and I feel I owe it to my own heart to acknowledge, that which has so poignantly touched its chords.

ಶ್ರೀ ಬಸರವಾಳು ಶ್ರೀಕಂಠಯ್ಯನವರು, ಶ್ರಿ ಬಿ.ಎಂ.ಶ್ರೀ ಅವರ ಬಾಲ್ಯ ಸ್ನೇಹಿತರು. ಇವರು ಕನ್ನಡದಲ್ಲಿ ಶ್ರದ್ಧೆ ತಳೆದಿದ್ದ ಹಿರಿಯರು. ಸುಬ್ಬಣ್ಣ ಕತೆಯನ್ನು ಓದಿದಾಗ ಹಿರಿಯರಾದ ಅವರು ಬರೆದ ಪತ್ರ :

> ಎಲ್ಲಾ ಮೆಟ್ಟಿಲುಗಳನ್ನು ಮಿಡಿದು, ಎಲ್ಲಾ ತಂತಿಗಳನ್ನು ಮೀಟಿ, ನಿರ್ಜೀವದ ವೀಣೆಯಿಂದ ಮಾತನಾಡಿಸುವ ಹಾಗೂ ಗಾಯನ ಮಾಡಿಸುವ ನಿಪುಣರ ಬೆರಳುಗಳಂತೆ ತಮ್ಮ ಲೇಖಣಿಯು ವಾಚಕರ ಅಂತರಂಗವನ್ನು ಕಲಕಿ ಅವರನ್ನು ರೇಗಿಸುತ್ತದೆ, ನಗಿಸುತ್ತದೆ, ಅಳಿಸುತ್ತದೆ. ಸೂತ್ರದ ಬೊಂಬೆಯಂತೆ ಆಡಿಸುತ್ತದೆ. ಇದಕ್ಕೆ 'ಸುಬ್ಬಣ್ಣ'ನೆಂಬ ಕಾದಂಬರಿಯು ಸಾಕ್ಷಿಯು.

ಕನ್ನಡದ ಹಿರಿಯ ಕತೆಗಾರರಲ್ಲಿ ಒಬ್ಬರಾದ ಶ್ರಿ ಕೆ. ಗೋಪಾಲಕೃಷ್ಣರಾಯರು ಮಾಸ್ತಿಯವರ ಬರಹಗಳನ್ನು ಬಹಳವಾಗಿ ಮೆಚ್ಚಿಕೊಂಡವರು. ಅವರು ಬರೆದ ಪತ್ರ :

> ತಮ್ಮ ಕತೆಗಳನ್ನು ಓದುತ್ತಿರುವಲ್ಲಿ ತಾವೆದುರಲ್ಲಿ ಕುಳಿತು ಹೇಳುತ್ತಿರುವಂತೆ ಭಾಸವಾಗುತ್ತಿತ್ತು. ತಮ್ಮ ವಿಶಾಲ ಹೃದಯ, ಸೌಜನ್ಯ

ನಮ್ಮಗಳಿಗೆ ಮೇಲ್ಪಂಕ್ತಿಯಾಗಿದೆ. ನಿಮ್ಮ 'ರಾಮು' ವಿನಂತೆ ನಾನೂ ಒಬ್ಬ. ತಾವು ನನ್ನನ್ನು ಪ್ರಿಯ ಮಿತ್ರನೆಂದು ಸಂಭಾವಿಸಿರುವಿರಿ. ಆ ಅರ್ಹತೆ ನನಗಿಲ್ಲ. ತಮ್ಮ ಜ್ಯೋತಿಯಿಂದ ನನ್ನ ಪುಟ್ಟ ದೀಪವನ್ನು ಹಚ್ಚಿಕೊಳ್ಳಲು ಬಂದಿರುವವನು.

೧೯೩೮ರಲ್ಲಿ ಹೆಸರಾಂತ ಲೇಖಕರಾದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಮಾಸ್ತಿಯವರಿಗೆ ಬರೆದ ಪತ್ರ :

ಮಹಾಶಯರೆ, ನನ್ನ ಪರಿಚಯವನ್ನು ನಾನೇ ತಮಗೆ ಮಾಡಿ ಕೊಡುವುದಕ್ಕಾಗಿ ಈ ಪತ್ರ ಬರೆದಿದ್ದೇನೆ. ತಮಗೆ ಪರಿಚಿತಿಯಿಲ್ಲದ ಎಷ್ಟೋ ಸಾವಿರಾರು ಈಗ ತಾನೆ ಕಣ್ಣು ಬಿಡುತ್ತಿರುವ ಭಾಷಾಸೇವಕರಿಗೆ ತಾವು ಬೆಳಕಾಗಿದ್ದೀರಿ. ಏಕಲವ್ಯನು ದ್ರೋಣಾಚಾರ್ಯರನ್ನು ಅವರಿಗೆ ತಿಳಿಯದೆಯೇ ಗುರುವಾಗಿ ಪೂಜಿಸಿದಂತೆ ನಾನು ತಮ್ಮನ್ನು ನನ್ನ ಭಾಷಾಗುರು ಮತ್ತು ಸಾಹಿತ್ಯ ಸೇವೆಯ ಮಾದರಿ ಎಂದು ಅರಿತಿದ್ದೇನೆ.

೧೯೩೧ರಲ್ಲಿ ಶಿವಮೊಗ್ಗೆಯಲ್ಲಿ ರೆವಿನ್ಯೂ ಸಬ್‌ಡಿವಿಜನ್ ಅಧಿಕಾರದಲ್ಲಿದ್ದ ಶ್ರೀ ಎಸ್.ಎಸ್. ಹಿರಿಯಣ್ಣನವರು ಮಾಸ್ತಿಯವರ ''ಕೆಲವು ಸಣ್ಣ ಕತೆಗಳು'' ಓದಿ ಸಂತೋಷ ವ್ಯಕ್ತಪಡಿಸಿ ಬರೆದ ಕಾಗದ :

Yesterday evening when I was camping at Honnali, I found I had nothing to read and sent for some book. To my luck somebody gave me your 'ಸಣ್ಣ ಕತೆಗಳು'. I began with the first page and could end only with the last. I may honestly say that I never spent an hour or two of more innocent enjoyment than when reading the delightful history of Rangappa's Deepavali, and his experiences on an easy choir by the river bank in the cool of the evening. Will you permit me to say what I liked in your book. It was the first two or three stories regarding Rangappa's experiences in love and marriage.

ಸಾಹಿತ್ಯಕ್ಕೆ ಎಷ್ಟೋ ಸೇವೆ ಸಲ್ಲಿಸಬೇಕಾಗಿದ್ದ ಶ್ರೀ ಪೇಜಾವರ ಸದಾಶಿವರಾಯರು ವಿದ್ಯೆಗಾಗಿ ವಿದೇಶಕ್ಕೆ ಹೋದವರು ಸ್ವಲ್ಪ ಕಾಲದಲ್ಲೆ ಅವರು ತೀರಿಕೊಂಡರು. ಆ ತರುಣ ಮಿತ್ರರು ೧೯೩೨ರಲ್ಲಿ ಮಾಸ್ತಿಯವರಿಗೆ ಬರೆದ ಪತ್ರ :

ಸಾಹಿತ್ಯ ಕ್ಷೇತ್ರದ ಪಿತಾಮಹರಾದ ತಾವು ನಡೆದು ಸವೆಯಿಸಿದ ದಾರಿಯಲ್ಲೇ ನಾವೂ ಕಾಲಿಡಲು ಯತ್ನಿಸಿದ್ದೇವೆ. ತಪ್ಪೋ, ಒಪ್ಪೋ ತಿಳಿಯದು. ಅವರು ಮಂಗಳೂರಿನ ಮಿತ್ರ ಮಂಡಲಿಯವರು ಪ್ರಕಟಿಸಿದ ನಾಲ್ಕನೆಯ ಕವಿತಾಗುಚ್ಛ ಅವರ ಪ್ರತಿಯೊಂದನ್ನು ಇಂದು ತಮಗೆ ಕಳುಹಿಸಿದ್ದೇನೆ. ವಾಗ್ದೇವಿಯ ತುರುಬಿಗೇರಿಸಲು ಯೋಗ್ಯವೋ ಅಯೋಗ್ಯವೊ ಹೇಳಲಾರೆ. ಓದಿ ತಾವೇ ತಿಳಿಸಬೇಕು.

ಮಡಕೇರಿ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಶಿವರಾಮ ಕಾರಂತರ ಪರಿಚಯ ಮಾಸ್ತಿಯವರಿಗಾಯ್ತು. ೧೯೩೩ರಲ್ಲಿ ಅವರು ಬರೆದ ಒಂದು ಪತ್ರದ ಕೆಲವು ಮಾತುಗಳು :

ಇತ್ತ ನಾಲ್ಕಾರು ದಿನಗಳ ಕಾಲ ನಿಮ್ಮ ಒಡನಾಟದಲ್ಲಿ ಸಂತೋಷಗೊಂಡೆ. ನಿಮ್ಮ ಜೀವದ ಆಳ ಸಿಗತೊಡಗಿದೆ. ಅಂತೆಯೇ ಪ್ರೇಮ ಬೆಳೆದಿದೆ. ನನ್ನನ್ನು ನಿಮ್ಮ ಊರಲ್ಲಿ ಬೆಳಕಿಗೆ ತರಲು ನೀವು ಅನಾವಶ್ಯಕ ಶ್ರಮ ವಹಿಸಿದಿರಿ. ನನ್ನ ಕೃತಿಗಳನ್ನು ಕೊಂಡಾಡಿದಿರಿ. ಆದರೆ ಅದು ನನಗೆ ಬೇಕಿಲ್ಲ. ನಾನೆಷ್ಟಾದೆನೆಂದು ತಿಳಿಯುವ

ಆತುರವಿಲ್ಲ ನನಗೆ. ನಾನೇನಾಗಬೇಕು ಎಂದು ತಿಳಿಯುವ ಕಾಲಕ್ಕೆ, ನನ್ನ ಒಂದು ಬರಹದ ವಿಚಾರವಾಗಿಯೂ ತಾವು ತಪ್ಪನ್ನು ತೋರಿಸಿಕೊಡಲಿಲ್ಲ. ಗೆಳೆಯರು ತೋರಿಸದೆ ಹೋದರೆ ಇನ್ನಾರು ತೋರಿಸಬೇಕು? ಆ ಕೆಲಸವನ್ನು ಮುಂದಾದರೂ ನಿರ್ದಾಕ್ಷಿಣ್ಯವಾಗಿ ಮಾಡಬೇಕೆಂದು ಬೇಡುತ್ತೇನೆ.

೧೯೩೫ರ ಸುಮಾರಿಗೆ ಶ್ರೀ ಟಿ.ಪಿ. ಕೈಲಾಸಂ ಅವರು ಮುಂಬಯಿ ಪ್ರಾಂತ್ಯದ ಪ್ರವಾಸದಲ್ಲಿದ್ದಾಗ ಮಾಸ್ತಿಯವರ 'ಸಾವಿತ್ರಿ' ನಾಟಕವನ್ನು ಕುರಿತು ಬರೆದ ಪತ್ರ :

> I have been here in Bombay quite some time. I have been staging a few plays with a few local enthusiasts. As many here are anxious to see your "Savitri' staged, I have undertaken to do it for them.
>
> I do hope I am not troubling you, but I shall be ever so grateful if you can have a copy posted to me c/o above.

ಇಂತಹ ನೂರಾರು ಪತ್ರಗಳು ಸಂಕಲನದಲ್ಲಿವೆ. ಪತ್ರಗಳನ್ನು ಬರೆದವರು ಬೇರೆ ಬೇರೆ ವ್ಯಕ್ತಿಗಳು. ಸಂದರ್ಭಗಳೂ ಬೇರೆ ಬೇರೆ, ವಿಷಯಗಳಲ್ಲೂ ಬೇರೆ ಬೇರೆ ತರವಿದೆ. ಆದರೆ ಎಲ್ಲರ ಉದ್ದೇಶವೂ ಒಂದೇ. ಎಲ್ಲರ ಪ್ರೀತಿ ವಿಶ್ವಾಸದಲ್ಲೂ ಒಳ್ಳೆಯ ಭಾವನೆ ಇವೆ. ಯಾರದೂ ಹೆಚ್ಚಲ್ಲ. ಯಾರೂ ಕಮ್ಮಿ ಇಲ್ಲ. ಈ ಲೇಖನದಲ್ಲಿ ಎಲ್ಲವನ್ನೂ ಅಳವಡಿಸುವಂತಿಲ. ಆದರೆ ಮಾಸ್ತಿಯವರ ಸಾಹಿತ್ಯವನ್ನು ಲಾಲಿಸಿದವರಲ್ಲಿ ಹೆಚ್ಚಿನವರು ಎತ್ತರಕ್ಕೆ ಬೆಳೆದ ವ್ಯಕ್ತಿಗಳೇ ಆಗಿದ್ದಾರೆ. ಬೇರೆ ಬೇರೆ ಭಾಷೆಯ ಗಣ್ಯ ವ್ಯಕ್ತಿಗಳೂ ಕನ್ನಡದ ಮಾಸ್ತಿಯವರ ಬಗ್ಗೆ ಅಧಿಕ ವಿಶ್ವಾಸ ತೋರಿದ್ದಾರೆ. ನೂರಾಎಪ್ಪತ್ತು ಪತ್ರಗಳಲ್ಲಿ ಕೆಲವನ್ನು ಮೇಲೆ ಉದ್ಧರಿಸಿದ್ದೇನೆ. ಮತ್ತೆ ಅತ್ಯಂತ ಆತ್ಮೀಯತೆಯ ಪತ್ರ ಬರೆದವರು - ಸಿ. ರಾಜ ಗೋಪಾಲಚಾರ್ಯ, ಕೆ.ವಿ. ಪುಟಪ್ಪ, ಮಂಜೇಶ್ವರ ಗೋವಿಂದ ಪೈ, ಪು.ತಿ. ನರಸಿಂಹಾಚಾರ್, ರಂ. ಶ್ರೀ. ಮುಗಳಿ, ಅಜ್ಜಂಪುರದ ಸೀತಾರಾಂ, ಮೊಳಹಳ್ಳಿ ಶಿವರಾವ್, ಎನ್.ಎಸ್. ಸುಬ್ಬರಾವ್, ಡಾ. ಅನಂತ ಕೃಷ್ಣಶರ್ಮ, ಎಚ್. ಕೆ. ರಾಜರಾವ್, ಮೋಕ್ಷಗುಂಡ ಕೃಷ್ಣಮೂರ್ತಿ, ಕೆ.ಪಿ. ಪುಟ್ಟಣ್ಣ ಚೆಟ್ಟಿ, ಕೇರಳದ ಕವಿ ವಲ್ಲತ್ತೋಳ್, ರವೀಂದ್ರನಾಥ ಠಾಕೂರರ ಮಗ ರಥೀಂದ್ರನಾಥ ಠಾಕೂರ, ಹೊಯಿಸಳ, ಎಂ. ಎನ್. ಕೃಷ್ಣರಾವ್, ತ.ಸು. ಶಾಮರಾಯರು, ಎಂ.ಎನ್. ಕಾಮತ್, ಅ.ನ.ಕೃ., ತಮಿಳು ಲೇಖಕ ಕೆ.ಎನ್. ವೆಂಕಟರಮಣಿ, ಎಂ.ವಿ. ಸೀತಾರಾಮಯ್ಯ, ಖಾಸಾ ಸುಬ್ಬರಾವ್, ಅಶ್ವತ್ಥ, ಬೆಳ್ಳೆ ರಾಮಚಂದ್ರರಾವ್ ಮುಂತಾದವರು.

''ಇದೆಷ್ಟು ಜನ ನನ್ನ ಮೇಲೆ ತಮ್ಮ ಪ್ರೇಮದ ಹೂ ಮಳೆಯನ್ನು ಸುರಿಸಿದವರು'' ಎಂದು ಮಾಸ್ತಿಯವರು ಮುನ್ನುಡಿಯಲ್ಲಿ ಹೇಳಿದ್ದಾರೆ. ಅಂತಹ ಪ್ರೇಮದ ಹೂ ಮಳೆಯನ್ನು ಸುರಿಸುವ ಅವಕಾಶ ಸಿಕ್ಕಿದ್ದೇ ಅವರೆಲ್ಲರ ಪುಣ್ಯವಲ್ಲವೆ?

''ನಮ್ಮ ಜನ ನನ್ನ ವಿಷಯಕ್ಕೆ ನನ್ನ ಯೋಗ್ಯತೆಗೆ ಮಿಂಚಿದ ಪ್ರೇಮವನ್ನು ತೋರಿದ್ದಾರೆ'' ಎನ್ನುವ ಮಾತು ಮಾಸ್ತಿಯವರದು. ಇದು ಅವರ ದೃಷ್ಟಿ. ಆದರೆ ಅವರ ಯೋಗ್ಯತೆಗೆ ತಕ್ಕುದಾದ ಪ್ರೇಮವನ್ನೆ ತೋರಿದ್ದಾರೆ, ಅವರ ವಿಶ್ವಾಸಕ್ಕೆ ಪಾತ್ರರಾದವರು. ಅದು ಅವರ ದೃಷ್ಟಿ.

ಕನ್ನಡ ಪ್ರಭ ದಿನಪತ್ರಿಕೆಯ ಸಾಹಿತ್ಯ ಸಲ್ಲಾಪ ವಿಭಾಗದಲ್ಲಿ 'ಸಾಹಿತ್ಯ ಲಾಲನೆ'ಯ ಕುರಿತು ಬರೆಯುತ್ತಾ ಡಾ. ಹಾ.ಮಾ. ನಾಯಕರು ಕೊನೆಯಲ್ಲಿ ಹೀಗೆ ಹೇಳಿದ್ದಾರೆ -

ಕನ್ನಡಿಗರ ಲಾಲನೆಯಲ್ಲಿ ಬೆಳೆದ ಅನೇಕರು ತಮಗೆ ಏನೂ ಆಗಿಲ್ಲ ಎಂದು ಸದಾ ದೂರುತ್ತಿರುತ್ತಾರೆ. ತಮಗೆ ತೋರಿದ ಅಲ್ಪ ಪ್ರೀತಿಯನ್ನು ಮಾಸ್ತಿಯವರು ಮಹತ್ವದ್ದಾಗಿ ಗಣಿಸುತ್ತಾರೆ. ವ್ಯತ್ಯಾಸ ಇಲ್ಲಿದೆ. ಇಲ್ಲಿಯೇ ಮಾಸ್ತಿ ಭಿನ್ನವಾಗಿದ್ದಾರೆ. ಈ ಭಿನ್ನತೆಯಲ್ಲಿಯೇ ಅವರ ಹಿರಿಮೆ ಅಡಿಗಿದೆ. ಅವರ ಜೀವನ ಸೂತ್ರ ರೂಪುಗೊಂಡಿದೆ.

ಹಾ.ಮಾ. ನಾಯಕರ ಈ ಮಾತು ಮಾಸ್ತಿಯವರ ವಿಚಾರದಲ್ಲಿ ಸುಸ್ಪಷ್ಟ. ಮಾಸ್ತಿಯವರ ಕತೆಗಳನ್ನು ಬಹಳವಾಗಿ ಮೆಚ್ಚಿಕೊಂಡವರಲ್ಲಿ ಅಜ್ಜಂಪುರದ ಶ್ರೀ ಸೀತಾರಾಂ ಒಬ್ಬರು. ಅವರು ಬರೆದ ಕತೆಗಳನ್ನು ಮಾಸ್ತಿಯವರೂ ಮೆಚ್ಚಿಕೊಂಡಿದ್ದರು. ಅವರು ಬರೆದ ಕತೆಗಳನ್ನು ಸಂಗ್ರಹಿಸಿ ಪ್ರಕಟಿಸುವಲ್ಲಿ ಅವಕ್ಕೆ ಮಾಸ್ತಿಯವರು ಮುನ್ನುಡಿ ಇರಬೇಕೆಂದು ಬಯಸಿ ಅಜ್ಜಂಪುರ ಸೀತಾರಾಂ ಅವರು ಆಗ ಮಾಸ್ತಿಯವರಿಗೆ ಒಂದು ಪತ್ರ ಬರೆದರು. ದೀರ್ಘವಾದ ಆ ಪತ್ರದ ಕೆಲವು ಮಾತುಗಳನ್ನು ಮಾತ್ರ ಇಲ್ಲಿ ಉದ್ಧರಿಸಿ ಈ ಲೇಖನವನ್ನು ಮುಗಿಸುತ್ತೇನೆ. ಸೀತಾರಾಂ ಅವರ ಅಭಿಪ್ರಾಯ ಸಾಹಿತ್ಯ ಕ್ಷೇತ್ರದಲ್ಲಿ ದುಡಿಯುವ ಎಲ್ಲ ಲೇಖಕರ ಅಭಿಪ್ರಾಯವೂ ಆಗಿದೆ ಎಂಬುದನ್ನು ಅರಿತೇ ನಾನು ಅದಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದ್ದೇನೆ.

> ''ಮಹಾಶಯ, ಸಣ್ಣಕತೆಗಳ ಹಾದಿಗೆ ನನ್ನನ್ನು ಎಳೆದದ್ದು ತಮ್ಮ ಅಮೋಘವಾದ, ಅನುಪಮವಾದ, ಅನನುಕರಣೀಯವಾದ ಕತೆಗಳು. ಇಂದಿಗೆ ಹನ್ನೆರಡು ವರ್ಷಗಳ ಹಿಂದೆ ಅವುಗಳ ಜಾಲದಲ್ಲಿ ಸಿಕ್ಕಿ, ಇಂದಿಗೂ ಅದರಿಂದ ತಪ್ಪಿಸಿಕೊಂಡಿರುವೆನೆಂದು ಹೇಳಲಾರೆ. ತಪ್ಪಿಸಿಕೊಳ್ಳುವ ಆಸೆಯೂ ಇಲ್ಲ. ಅಂದಿನಿಂದ ತಮ್ಮ ಕತೆಗಳ ಸೊಗಸು, ಲಾಲಿತ್ಯ, ರೀತಿ, ಶೈಲಿ ಇವುಗಳ ಗುಟ್ಟನ್ನು ರಕ್ತಗತ ಮಾಡಿಕೊಳ್ಳಲು ಪ್ರಯತ್ನಪಟ್ಟಿದ್ದೇನೆ. ತಾವು ಧೈರ್ಯದಿಂದ ನುಗ್ಗುವ ಹಾದಿಯಲ್ಲಿ ನಾನು ತಪ್ಪು ತಪ್ಪು ಹೆಜ್ಜೆಗಳನ್ನಿಡುತ್ತಾ ನಡೆಯಲು ಸಾಹಸಪಟ್ಟಿದ್ದೇನೆ. ಸಣ್ಣ ಕತೆಗಳ ಕಲಾ ವ್ಯವಸಾಯದಲ್ಲಿ ನಾನು ತಮ್ಮನ್ನು ಮನಸಾ ಗುರುವಾಗಿ ಸ್ವೀಕರಿಸಿದ್ದೇನೆ. ಇದು ಅತ್ಯುಕ್ತಿಯಲ್ಲ, ಮುಖಸ್ತುತಿಯಲ್ಲ, ಉಪಚಾರದ ಮಾತಲ್ಲ, ಸತ್ಯವಾದ ಮಾತು.''

ಅಜ್ಜಂಪುರದ ಶ್ರೀ ಸೀತಾರಾಂ ಅವರೊಂದಿಗೆ ದನಿಗೂಡಿಸುವ ಅವಕಾಶವನ್ನು ನಾನು ಉಪಯೋಗಿಸಿಕೊಂಡಿದ್ದೇನೆ. ಈ ಭಾಗ್ಯ ಕನ್ನಡ ಸಾಹಿತ್ಯಕ್ಷೇತ್ರದ ಅನೇಕರಿಗೆ ಲಭಿಸುವುದೇ ಒಂದು ಪುಣ್ಯ ವಿಶೇಷವಲ್ಲವೇ?

ಶ್ರೀಕೃಷ್ಣಕರ್ಣಾಮೃತ

ಡಾ॥ ಎನ್. ಎಸ್. ಅನಂತರಂಗಾಚಾರ್ಯ

ನಿಗಮದೂರನೂ ಮಹಾಮಹಿಮನೂ ಆದ ಪರಮಾತ್ಮನು ತನ್ನ ಪರಮ ಸೌಲಭ್ಯವನ್ನೂ ಕೋರಿ ನಿಜಭಕ್ತರೊಡನೆ ಬೆರೆತು ಅವರಿಗೆ ಪರಮಾನಂದವನ್ನುಂಟು ಮಾಡಲು ಮನುಷ್ಯ ಸಜಾತೀಯನಾಗಿ ಅವತರಿಸುತ್ತಾನೆ. ಹೀಗೆ ಅವನು ಮಾಡುವ ಅವತಾರಗಳು ಅಸಂಖ್ಯವಾದುವು.

ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮನಂ ಸೃಜಾಮ್ಯಹಮ್ ॥

ಎಂದು ಗೀತೆಯಲ್ಲಿ ಭಗವಂತನು ತನ್ನ ಅವತಾರದ ಕೆಲವನ್ನು ಸೂಚಿಸಿದ್ದಾನೆ. ಅವತಾರಗಳಲ್ಲಿಯೂ ಭಗವಂತನು ತನ್ನ ಪರ ಸ್ವಭಾವದೊಡನೆ ಕೂಡಿರುತ್ತಾನೆ. ತನ್ನ ದಿವ್ಯ ಸ್ವರೂಪವನ್ನು ಹೊಂದಿಯೇ ಇರುತ್ತಾನೆ. ಸಾಧು ಸಂರಕ್ಷಣೆಯೇ ಭಗವಂತನ ಅವತಾರಗಳ ಮುಖ್ಯ ಪ್ರಯೋಜನ. ಇಂಥ ಅಸಂಖ್ಯವಾದ ಅವತಾರಗಳಲ್ಲಿ ದಶಾವತಾರಗಳು ಮುಖ್ಯವಾದುವು. ಅವುಗಳಲ್ಲಿಯೂ ಕೃಷ್ಣಾವತಾರ ಪೂರ್ಣಾವತಾರ. ಭಕ್ತರು ಶ್ರೀ ಕೃಷ್ಣನ ಕಲ್ಯಾಣಗುಣಗಳಲ್ಲಿ, ದಿವ್ಯ ಚೇಷ್ಟಿತಗಳಲ್ಲಿ, ಲೀಲಾವಿಹಾರಗಳಲ್ಲಿ ಮಗ್ನರಾಗಿ ತಮ್ಮನ್ನೇ ಮರೆತಿದ್ದಾರೆ.

ಕೃಷ್ಣ ಎಂಬ ಶಬ್ದವೇ ಅವನು ಸಕಲರ ಹೃನ್ಮನಗಳನ್ನು ಅಪಹರಿಸುವವನೆಂಬುದನ್ನು ಸೂಚಿಸುತ್ತದೆ, ಅವನಲ್ಲಿರುವ 'ಕರ್ಷಕತ್ವ' ಮತ್ತಾರಲ್ಲಿಯೂ ಇಲ್ಲ. 'ಕೃಷ್ಣಾತ್ಪರಂ ಕಿಮಪಿ ತತ್ತ್ವಮಹಂ ನಜಾನೇ' ಎಂದೂ 'ಕೃಷ್ಣಾಂ ಕೃಷ್ಣಾಮೃತಾಬ್ಧೌ ಪರಿಣಯತಿ' ಎಂದೂ ಅನುಭಾವಿಗಳೂ ಅನುಭವಿಸಿದ್ದಾರೆ. ಕೃಷ್ಣನ ದಿವ್ಯ ಚೇಷ್ಟಿತಗಳನ್ನೂ ಲೀಲಾ ವಿನೋದಗಳನ್ನೂ ವರ್ಣಿಸುವ ಭಾಗವತ ವಿಷ್ಣು ಪುರಾಣಾದಿಗಳು ಪರಮ ಪವಿತ್ರವಾಗಿದೆ.

ತವ ಕಥಾಮೃತಂ ತಪ್ತ ಜೀವನಂ
ಕವಿಭಿರೀಡಿತಂ ಕಲ್ಮಷಾಪಹಮ್ ।
ಶ್ರವಣಮಂಗಲಂ ಶ್ರೀಮದಾತತಂ
ಭುವಿಗೃಣಂತಿ ತೇ ಭೂರಿದಾ ಜನಾಃ ॥

ಎಂದು ಭಾಗವತದಲ್ಲಿ ಶ್ರೀಕೃಷ್ಣಕಥಾಮೃತದ ಮಹಿಮೆಯನ್ನು ವರ್ಣಿಸಿದೆ. ಇತರರಲ್ಲಿ ಕಾಣದ ಪರಮ ಸೌಲಭ್ಯವನ್ನು ಶ್ರೀಕೃಷ್ಣನಲ್ಲಿ ಭಕ್ತೋತ್ತಮರು ಕಂಡು ವಿಸ್ಮಿತರಾಗಿದ್ದಾರೆ. ಜ್ಞಾನಿಗಳೂ, ಸಂತರೂ, ಭಕ್ತರೂ ಮತ್ತು ಕವಿಗಳೂ ಶ್ರೀಕೃಷ್ಣನ ಸೌಲಭ್ಯ ಸೌಜನ್ಯಗಳನ್ನು ಸ್ಮರಿಸುವುದರಿಂದಲೇ ಮೈಮರೆತು ಪರವಶರಾಗಿದ್ದಾರೆ. ತನ್ನ ಪರತ್ವವನ್ನೂ ಮಹಿಮೆಯನ್ನೂ ಮರೆಮಾಡಿಕೊಂಡು ಬಂದ ಭಗವಂತನು ಗೊಲ್ಲರ ಹಟ್ಟಿಯಲ್ಲಿ ಗೊಲ್ಲ ಗೊಲ್ಲತಿಯರ ನಡುವೆ ಪ್ರಕೃತ ಶಿಶುವಿನಂತೆ ಬೆಳೆದುದನ್ನು ನೆನೆದರೇ

ಮನಸ್ಸು ಕರಗಿ ನೀರಾಗಿ ಹೋಗುವುದು.

ಭಗವತ್ಪ್ರೇಮದ ಮಡುವಿನಲ್ಲಿ ಮುಳುಗಿದ ಆಳ್ವಾರರುಗಳು, ಅವರಲ್ಲಿಯೂ ನಮ್ಮಾಳ್ವಾರ್‌ರವರು ಶ್ರೀಕೃಷ್ಣಾನುಸಂಧಾನದಲ್ಲಿ ತಮ್ಮನ್ನೇ ಮರೆತಿದ್ದಾರೆ.

'ತನ್ನನ್ನು ಕಾಣಲು ತವಕಿಸುವ ತೀವ್ರಭಕ್ತರಿಗೆ ಅವನು ಪರಮಸುಲಭ; ಅನ್ಯರಿಗೆ ದುರ್ಲಭ. ಲಕ್ಷ್ಮೀದೇವಿಯೂ ಅವನನ್ನೇ ನಿತ್ಯವೂ ಬಯಸುವವಳಾಗಿದ್ದಾಳೆ. ಇಂಥ ಲೋಕನಿರ್ವಾಹಕನಾದ ಸರ್ವಸ್ವಾಮಿ ಯಶೋದೆಯ ಮನೆಯಲಿ ನವನೀತವನ್ನು ಕದ್ದಾಗ ತಾಯಿ ಗದರಿಸಿದರೆ ಅಳುವುದಕ್ಕೂ ಆಗದಂತೆ ಭಯಪಟ್ಟು ನಿಂತವನು! ಈ ಸೌಲಭ್ಯ ಎಂಥದು! ವರ್ಣನೆಗೆ ದೊರಕುವುದೇ?'

ಸಂಸಾರ ಬಂಧ ಸ್ಥಿತಿ ಮೋಕ್ಷಕ್ಕೆ ಕಾರಣನಾದ ತಾನೇ ಹೀಗೆ ಬಂಧನಕ್ಕೊಳಗಾದದು ಒಂದು ಪರಮಾಶ್ಚರ್ಯ! ಇದಕ್ಕಿಂತ ಹೆಚ್ಚಿನ ಸೌಲಭ್ಯವನ್ನು ಎಲ್ಲಿ ತಾನೇ ಕಾಣಬಹುದು?

ಪರಾತರ ವಸ್ತು ಮಾಡಿದ ಲೀಲಾವಿಹಾರಗಳು ಒಂದೇ ಎರಡೇ? ಅವು ಅಸಂಖ್ಯವಾದವು. ಪಾಂಡವಧೂತನಾಗಿ ಕೈಯಲ್ಲಿ ಚಾವಟಿಯನ್ನು ಹಿಡಿದು ತೇರನ್ನು ನಡೆಸಿದ; ಆಯುಧವಾಗದ ಆ ಚಾವಟಿಯನ್ನಾಡಿಸುವುದರಿಂದಲೇ ಹದಿನೆಂಟು ಅಕ್ಷೋಹಿಣೆಯ ಸೈನ್ಯವೂ ಅಳಿಯುವಂತೆ ಮಾಡಿದನವನು. ಇಂದಿಗೂ 'ಪಾಂಡವ ದೂತ' ಎಂದು ಹೇಳುವಂತೆ ಅವನು ನಡೆದುಕೊಂಡ. ಇದೂ ಸೌಲಭ್ಯದ ಪರಾಕಾಷ್ಠೆಯೇ!

ಶ್ರೀಕೃಷ್ಣನ ದಿವ್ಯಚೇಷ್ಟಿತಗಳ ವರ್ಣನೆಯನ್ನು ಆಳ್ವಾರರುಗಳು ಅನುಪಮವಾಗಿ ಮಾಡಿದ್ದಾರೆ. ಹಲವು ಸಂದರ್ಭದಲ್ಲಿ ಶ್ರೀಕೃಷ್ಣನು ಹಲವರೊಡನೆ ನಡೆದುಕೊಂಡ ರೀತಿಯನ್ನವರು ಮನಸ್ಸಿಗೆ ತಂದುಕೊಂಡಿದ್ದಾರೆ. ಬೇರೆ ಬೇರೆ ಭಂಗಿಯಲ್ಲಿ ಅವನನ್ನು ಸಾಕ್ಷಾತ್ಕರಿಸಿ ವರ್ಣಿಸಿದ್ದಾರೆ, ಅವರ ಅನುಭವಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಬಹುದು.

'ಗೋವರ್ಧನವನ್ನೆತ್ತಿ ಹಿಡಿದು ಕಲ್ಮಳೆಯನ್ನು ನಿವಾರಿಸಿ ಪಶುಗಳ ಮುಂದೆಗೊದಗಿದ ವಿಪತ್ತನ್ನು ಹೋಗಲಾಡಿಸಿದ ಹಿರಿಯನನ್ನು ಎಲ್ಲ ಕಾಲದಲ್ಲಿಯೂ ಸ್ತುತಿಸಿ, ಸ್ತುತಿಸಿ.'

'ನಿತ್ಯಸೂರಿಗಳು ವ್ಯಾಪಕವಾಗಿ ಸ್ತುತಿಸುತ್ತಿರುವ ಪರಂಜ್ಯೋತಿಯನ್ನು, ರಾಸಕ್ರೀಡೆಯಲ್ಲಿ ಗೋಪಕನ್ನಿಕೆಯರೊಡನೆ ಕೈಕೈ ಹಿಡಿದು ನರ್ತಿಸುವ ಮಣಿವಣ್ಣನನ್ನು ಪಾಲ್ಕೋಡವನ್ನು ಹೊತ್ತು ಕುಣಿಯುವವನನ್ನು ನಾನು ಧ್ಯಾನಿಸುವೆ'.

'ಗೋಪಕುಲದ ಚಿಗುರಾಗಿದ್ದವನು; ಅವರಿಂದ ಏಟುಗಳನ್ನು ತಿಂದವನು; ಆಶ್ಚರ್ಯಭೂತನಾದ ಉಪಕಾರಕ; ಮಾಣಿಕ್ಯ ಜ್ಯೋತಿ. ಈ ಶುದ್ಧವಾದ ಅಮೃತವನ್ನು ಪಾನ ಮಾಡಿ ಸನ್ನ ಜನ್ಮದ ಕಾರಣವಾದ ಅಜ್ಞಾನವನ್ನು ನೀಗಿಕೊಂಡೆನು.'

ಅಂದಿನಿಂದ ಇಂದಿನವರೆಗೆ ನಮ್ಮ ಸಂತರೆ, ಜ್ಞಾನಿಗಳು, ಮತ್ತು ಕವಿಗಳು ಕೃಷ್ಣಾನುಸಂಧಾನ ಮಾಡಿದ್ದಾರೆ. ತಮ್ಮ ಧ್ಯಾನಕ್ಕನುಸಾರವಾಗಿ, ಪ್ರತಿಭೆಗನುಸಾರವಾಗಿ ಕೃಷ್ಣನ ಲೀಲಾಚೇಷ್ಟಿತಗಳನ್ನು ಹೊಚ್ಚ ಹೊಸದಾಗಿ ಕಂಡಿದ್ದಾರೆ. ಶಿಶುವಾದ ಕೃಷ್ಣನ, ಕುಮಾರ ಕೃಷ್ಣನ, ಚೆಲುವನಾದ ತರುಣ ಕೃಷ್ಣನ, ಗೊಲ್ಲತಿಯರೊಡನೆ ನಲಿದ ಕೃಷ್ಣನ, ಭಕ್ತರನ್ನನುಗ್ರಹಿಸಿದ ಕೃಷ್ಣನ, ರಾಧೆಯ ನಲ್ಲನಾದ ಕೃಷ್ಣನ, ಪರದೈವವಾದ ಕೃಷ್ಣನ ವಿವಿಧ ವಿಹಾರ ಲೀಲಾಚೇಷ್ಟಿತಗಳನ್ನು ಮನಮೋಹಕವಾಗಿ ಚಿತ್ರಿಸಿದ್ದಾರೆ. ಇಂಥ ಭಾವಪೂರ್ಣ ಕೃತಿಗಳಲ್ಲಿ ಶ್ರೀಕೃಷ್ಣಕರಣಾಮೃತವೂ ಒಂದಾಗಿದೆ.

೨

'ಶ್ರೀಕೃಷ್ಣ ಕರ್ಣಾಮೃತ' ಎಂಬ ಹೆಸರನ್ನು ಈ ಕೃತಿಗೆ ಕವಿ ಕೊಟ್ಟಿರುವುದು ಅನ್ವರ್ಥವಾಗಿದೆ. ಇಲ್ಲಿರುವ ಮುನ್ನೂರು ಶ್ಲೋಕಗಳೂ ಮುಕ್ತಕಗಳು. ಒಂದೊಂದು ಶ್ಲೋಕವೂ ಸ್ವತಂತ್ರವಾಗಿ ಒಂದೊಂದು ಭಾವವನ್ನು ಬಿಂಬಿಸುತ್ತದೆ. ಕೃಷ್ಣನ ಚರಿತೆಯನ್ನು ಮೊದಲಿಂದ ಕ್ರಮವಾಗಿ ಪ್ರತಿಪಾದಿಸುವ ರೀತಿಯನ್ನು ಇದು ಹೊಂದಿಲ್ಲ. ಒಂದೊಂದು ಶ್ಲೋಕವೂ ಒಂದೊಂದು ಕಾವ್ಯವಾಗಿದೆ. ಹಿಂದಿನ ಮುಂದಿನ ಶ್ಲೋಕಗಳ ಅಪೇಕ್ಷೆ ಇಲ್ಲದೆ ಪೂರ್ಣವಾದ ಚಿತ್ರವೊಂದನ್ನು ಒಂದೊಂದು ಶ್ಲೋಕವೂ ಕೊಡುತ್ತದೆ. ಹೀಗಾಗಿ ಇಲ್ಲಿ ಎಷ್ಟು ಶ್ಲೋಕಗಳಿವೆಯೋ ಅಷ್ಟು ಸಂದರ್ಭಗಳು, ಅಷ್ಟು ಚಿತ್ರಗಳು ಇಲ್ಲಿವೆ. ಈ ಅಂಶವನ್ನು ಬಹಳ ಪ್ರಭಾವ ಪೂರ್ಣವಾಗಿ ಮಾಸ್ತಿಯವರು ಹೀಗೆ ಹೇಳಿದ್ದಾರೆ -

''ಕೃತಿಯಲ್ಲಿ ಬರುವ ಕೃಷ್ಣನ ಮೂರ್ತಿ ಹಲವು ವಯಸ್ಸಿನವು, ಹಲವು ಸಂದರ್ಭದವು. ಅಂಬೆಗಾಲಿಡುವ ಕೃಷ್ಣ. ಬೆಣ್ಣೆಯನ್ನು ಹಿಡಿದಿರುವ ಕೃಷ್ಣ, ಅಂಗಳದ ಮಣಿ ಶಿಲೆಯಲ್ಲಿ ನೆರಳಲ್ಲಿ ಬೆಣ್ಣೆಯನ್ನು ಕಂಡು ಅದನ್ನು ತುಡುಕ ನೋಡಿ ಅದು ದೊರೆಯಲಿಲ್ಲವೆಂದು ಅಳುವ ಕೃಷ್ಣ, ಹಾಲ ಬೇಡುವ, ಬೆಣ್ಣೆ ಕೇಳುವ ಕೃಷ್ಣ, ಸಂಜೆ ಬಂದ ದನಗಳ ಮಂದೆಯಲ್ಲಿ ನುಗ್ಗಿ ತಾಯ ಕೈಗೆ ಸಿಕ್ಕದೆ ಓಡುವ ಕೃಷ್ಣ, ಮಣ್ಣು ತಿಂದನೆಂದು ಬಲರಾಮ ಚಾಡಿ ಹೇಳವುದು, ಅದು ಸುಳ್ಳು ಎಂದು ಸ್ಥಾಪಿಸಲು ತಾಯಿಗೆ ತನ್ನ ಬಾಯಿ ತೆರೆದು ತೋರಿದ ಕೃಷ್ಣ, ದನಕಾಯಲು ಹೋಗಿರುವ ಕೃಷ್ಣ, ಗೊಲ್ಲ ಚೆಲುವೆಯರೊಡನೆ ಆಟವಾಡುವ ಕೃಷ್ಣ, ರಾಮಾವತಾರದ ಕಥೆ ಕೇಳುತ್ತಾ ಸೀತಾಪಹರಣದ ಮಾತು ಬಂದಾಗ ಇದು ಬೇರೆ ಅವತಾರ ಎಂಬುದನ್ನೇ ಮರೆತು ಲಕ್ಷ್ಮಣ ನನ್ನ ಧನುಸ್ಸೆಲ್ಲಿ, ಧನುಸ್ಸೆಲ್ಲಿ ಎಂದ ಕೃಷ್ಣ, ಗೋವರ್ಧನೋದ್ಧಾರಿ ಕೃಷ್ಣ, ಕಂಸ ಸಂಹಾರಿ ಕೃಷ್ಣ ಹೀಗೆ ಕಾವ್ಯದ ಮುನ್ನೂರು ಶ್ಲೋಕದಲ್ಲಿ ಮುನ್ನೂರು ಚಿತ್ರ ದೊರೆಯುತ್ತದೆ. ಶ್ರೀಕೃಷ್ಣ ಕರ್ಣಾಮೃತ ಕೃಷ್ಣನನ್ನು ಕುರಿತು ಕಥೆಗಳ ಮಾಲೆ, ಚಿತ್ರಶಾಲೆ.'

ಈ ಉತ್ತಮವಾದ ಕೃತಿಯ ಸರಳವಾದ ಕನ್ನಡ ಗದ್ಯಾನುವಾದವನ್ನು ಮಾನ್ಯ ಮಾಸ್ತಿಯವರು ರಚಿಸಿಕೊಟ್ಟು ಪರಮೋಪಕಾರ ಮಾಡಿದ್ದಾರೆ. ಗ್ರಂಥದಿಂದ ತಾವು ಪಡೆದುಕೊಂಡ ಸುಖ ಸಂತೋಷಗಳನ್ನು ತಮ್ಮ ಸೋದರ ಚೇತನರಿಗೂ ದೊರಕಿಸಿ ಕೊಡುವ ಉದ್ದೇಶದಿಂದ ಈ ಅನುವಾದ ಬಂದಿದೆ. ಅರ್ಥದಲ್ಲಿ ಮೂಲದ ಪದಗಳನ್ನೇ ಅನೇಕ ಕಡೆ ಉದ್ದೇಶಪೂರ್ವಕವಾಗಿ ಕೊಟ್ಟು ಗ್ರಂಥವನ್ನು ಅಭ್ಯಾಸ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ.

ಮಾನ್ಯ ಮಸ್ತಿಯವರ ಕವಿ ಹೃದಯ ಈ ಉತ್ತಮ ಕೃತಿಗೆ ಮಾರುಹೋಗಿದೆ. ಕೃಷ್ಣ ಕರ್ಣಾಮೃತದ ಪರಿಚಯವು ತಮಗುಂಟಾದ ಬಗೆಯನ್ನು ಅವರು ಗ್ರಂಥಾರಂಭದಲ್ಲಿ ತಿಳಿಸಿರುವುದು ಸ್ವಾರಸ್ಯವಾಗಿದೆ. ಚಮತ್ಕಾರ ಪೂರ್ಣವಾದ ನುಡಿಗೆ ಪರವಶವಾಗುವ ಸಹೃದಯತೆ ಅವರದು. ಅದರೊಡನೆ ಭಕ್ತಿ ಭಾವವೂ ಅವರಲ್ಲಿ ಉಜ್ವಲವಾಗಿರುವ ಕಾರಣ ಈ ಕೃತಿಯಿಂದ ತುಂಬ ಸುಖ ಸಂತೋಷಗಳನ್ನು ಪಡೆದಿದ್ದಾರೆ. ಕವಿಯ ಬಗೆಗೆ ಅವರ ಪೂಜ್ಯ ಭಾವನೆ ಮತ್ತು ಗೌರವಗಳೇ ಈ ಮನೋಹರ ಕಾವ್ಯವನ್ನು ಕನ್ನಡಕ್ಕೆ ಅನುವಾದ ಮಾಡಲು ಪ್ರೇರಣೆ ನೀಡಿವೆ. 'ಏಕಃ ಸ್ವಾದುನ ಭುಂಜೀತ' ಎಂಬ ಸಾಧೂಕ್ತಿಗನುಸಾರವಾಗಿ ಮಾನ್ಯ ಮಾಸ್ತಿಯವರು ಈ ಸುಂದರ ಕಾವ್ಯದ ಸರಳ ಗದ್ಯಾನುವಾದವನ್ನು ರಚಿಸಿದ್ದಾರೆ.

ಈ ಕಾವ್ಯ ಹೇಗೆ ಸಹಜ ಸರಳವಾಗಿದೆಯೋ ಹೇಗೆ ರಸಭರಿತವಾಗಿದೆಯೋ ಹಾಗೆಯೇ ಮೂಲದ ಸೊಗಸನ್ನು ಅನುವಾದದಲ್ಲಿಯೂ ಮೂಡಿಸಿದ್ದಾರೆ. ತಮ್ಮ ಅನುಭವ ಎಲ್ಲರ ಅನುಭವಕ್ಕೂ ನಿಲುಕುವಂತೆ ಮಾಡಿದ್ದಾರೆ. ತಾವು ಹೇಗೆ ಉತ್ತಮ ಕವಿಗಳೋ, ವಿಮರ್ಶಕರೋ, ಕತೆಗಾರರೋ ಹಾಗೆಯೇ ಉತ್ತಮ ಅನುವಾದಕರೆಂಬುದನ್ನೂ ಸ್ಥಾಪಿಸಿದ್ದಾರೆ. ಈ ಅನುವಾದದ ಸೊಗಸನ್ನು ಕೃತಿಯ ಉದ್ದಕ್ಕೂ ಕಾಣಬಹುದು. ಇವುಗಳಲ್ಲಿ ಕೆಲವನ್ನು ಕೆಳಗೆ ಉಲ್ಲೇಖಿಸಿದೆ.

ಮಣಿನೂಪುರವಾಚಲಂ ವಂದೇತಚ್ಚರಣಂ ವಿಭೋಃ।
ಲಲಿತಾನಿಯ ದೀಯಾನಿ ಲಕ್ಷ್ಮಾಣಿವ್ರಜವೀಥಿಷು ।। ೧೬ ।।

'ನಂದವ್ರಜದ ಬೀದಿಗಳಲ್ಲಿ ಲಲಿತವಾದ ಹೆಜ್ಜೆಯ ಗುರುತುಗಳನ್ನು ಮಾಡಿದ ಪ್ರಭುವಿನ ಮಣಿನೂಪುರಗಳದನಿಯ ಆ ಚರಣಗಳಿಗೆ ವಂದಿಸುತ್ತೇನೆ.'

ಮಮಚೇತಸಿ ಸ್ಫುರತುವಲ್ಲವೀವಿಭೋಃ
ಮಣಿನೂಪುರ ಪ್ರಣಯಿ ಮಂಜುಶಿಂಜಿತಂ।
ಕಮಲವನೇಚರ ಕಲಿಂದ ಕನ್ಯಕಾ
ಕಲಹಂಸಕಂಠ ಕಲಕೂಜಿತಾ ದೃತಂ ।। ೧೭ ।।

'ಕಮಲವನದಲ್ಲಿ ಚಲಿಸುವ ಯಮುನೆಯ ಕಲಹಂಸಗಳ ಕೊರಲ ಕಲಕೂಜಿತದಿಂದ ಮರ್ಯಾದೆ ಪಡೆಯುವಂಥದಾದ ವಲ್ಲವೀ ವಿಭುವಿನ ಮಣೀನೂಪುರದ ಸ್ನೇಹಯುಕ್ತ ಮಧುರ ಧ್ವನಿ ನನ್ನ ಚೇತಸ್ಸಲ್ಲಿ ಸ್ಫುರಿಸಲಿ.'

'ಮಾರ್ಧಾಭಿಷಿಕ್ತ ಮಧುರಾಕೃತೀನಾಂ
ಬಾಲಂಕದಾ ನಾಮ ವಿಲೋಕಾಯಿಷ್ಯೇ ।। ೨೩ ।।

'ಎಲ್ಲ ಮಧುರಾಕೃತಿಗಳ ಪಟ್ಟದರಸಾದ ಬಾಲನನ್ನು ಅದೆಂದಿಗೆ ನಾನು ನೋಡುತ್ತೇನೊ.'

ಸಂಸ್ಕೃತ ಪದಗಳ ಪುಂಜವನ್ನು ಕನ್ನಡಕ್ಕೆ ಅನುವಾದ ಮಾಡುವಾಗ ಕನ್ನಡದ ನುಡಿಗಟ್ಟನ್ನು ಬಳಸಿ ಮೂಲದ ಅರ್ಥ ಪೂರ್ಣವಾಗಿ ಸ್ಫುರಿಸುವಂತೆ ಮಾಡಿರುವುದು ಇಲ್ಲಿ ನಾವು ಕಾಣುವ ವೈಶಿಷ್ಟ್ಯ. ಇವುಗಳನ್ನು ನೋಡಿ :

'ಗತಂಚ ಗಂಭೀರ ವಿಲಾಸ ಮಂಥರಂ'
- ಗಂಭೀರವಾದ ವಿಲಾಸದಿಂದ ತೂಕವಾದ ನಡೆಯನ್ನೂ,
'ವದಂತಿ ಗೋಪಿಕಾಃ'
- ಹೊಗಳಿ ನುಡಿಯುತ್ತಾರೆ
'ನೀರಂಧ್ರ ದೈನ್ಯೋನ್ಯತ ಮುಗ್ಧಕಂಠಂ'
- ಸಂಪೂರ್ಣವಾದ ದೈನ್ಯದ ದೆಸೆಯಿಂದ ಗದ್ಗದವಾದ ಎತ್ತಿನ ದನಿಯಿಂದ'
'ಯಶ್ಚಾಪಲಂ ಚ ಮಮವಾಗವಿವಾದ ಗಮ್ಯಂ'
- 'ಈ ಬೇಡವೆಂದರೂ ಬಿಡದ ಮುಷ್ಕರದ ಆಸೆ ಆಗುತ್ತದೆ'
'ಬಾಲ್ಯಾಧಿಕಾನಿಮದ ವಲ್ಲಭ ಭಾಷಿಕಾನಿ'
- 'ನಿನ್ನ ವಯಸ್ಸಿಗೆ ಮೀರಿ ಹರೆಯದ ನಲ್ಲನಂತೆ ನೀನು ಆಡಿದ ಮಾತುಗಳು'
'ಹಾ ಹಾ ಕದಾನುಭವಿತಾಸಿ ಪದಂ ದೃಶೋರ್ಮೇ'

–'ಅದೆಂದು ನೀನು ನನ್ನ ಕಣ್ಣುಗಳ ನೋಟದ ವಸ್ತುವಾಗುವೆ'
'ಕಿಮಿಹಶೃಣುಮಃ ಕಸ್ಯಬ್ರೂಮಃ ಕಥಂಕೃತಮಾಶಯಾ'
–'ಏನನ್ನೆ ಕೇಳೋಣ; ಯಾರಿಗೆ ಹೇಳೋಣ; ಆಶೆ ಹೀಗೆ ಮಾಡಿತಲ್ಲಾ.'
'ಚಪಲಚಪಲ ನೇತ್ರಂ'
–'ಚಂಚಲವೆಂದರೆ ಚಂಚಲವಾದ ನೋಟದ'
'ಕಮಲಾಪಾಂಗೋದಗ್ರಪ್ರಸನ್ನ ಜಗಜ್ಜಡಂ'
–'ಕಮಲವರ್ಣದ ಕಡೆಗಣ ನೋಟದಿಂದ ಜಗದ ಜಡತೆಯನ್ನು ತಿಳಿ ಮಾಡಿರುವ'
'ಅಹೋ ಬಾಲಂ ಕಿಮೇತನ್ಮಹಃ'
–'ಅಹೋ ಈ ಎಳೆಯ ತೇಜ ಇದು ಯಾವು [illegible]'

ಇಂಥ ಉದಾಹರಣೆಗಳನ್ನು ಕೃತಿಯ ಉದ್ದಕ್ಕೂ ಒಂದೊಂದು ಪದ್ಯದಲ್ಲಿಯೂ ಕೊಡಬಹುದು. ಕನ್ನಡದ ಅನುವಾದ ಮೂಲದ ಭಾವವನ್ನು ಹೇಗೆ ಮಿಂಚಿಸಿದೆಯೆಂಬುದನ್ನು ಇದರಿಂದ ಕಾಣಬಹುದು. ಈ ಸರಸ ಮಧುರವಾದ ಕೃತಿಯ ಅನುವಾದ ಅಷ್ಟೇ ಸರಸ ಮಧುರವಾಗಿ ಬಂದಿದೆ. ಸಂಸ್ಕೃತ ಶ್ಲೋಕವನ್ನು ಬಿಟ್ಟು ಅನುವಾದ ಮಾತ್ರವನ್ನು ಓದಿದರೂ ಮೂಲದ ರಸಾನುಭವಕ್ಕೆ ಕುಂದಿಲ್ಲದಿರುವುದು ಗಮನಾರ್ಹ. ಈ ಕೆಳಗಿನ ಅನುವಾದಗಳನ್ನು ನೋಡಿ –

'ಸರಸತೆಯ ಭಾವವನ್ನು ಹೊತ್ತಾತಗಳು ಹಲವು ಸಾವಿರವೇ ಇರಲಿಲ್ಲ! ಕಮನೀಯತೆಯ ಪರಿಣತಿಯ ಸ್ವರ್ಗರಾಜ್ಯವನ್ನು ಕುರಿತ ವ್ರತ ವಹಿಸಿಕೊಂಡವರೂ ಅಂತೆಯೇ ಇರಲಿ, ಅಡ್ಡಿ ಇಲ್ಲ! ನಾನು ಅವರೊಂದಿಗೆ ವಿವಾದದಲ್ಲಿ ತೊಡಗುವುದಿಲ್ಲ. ಅಥವಾ ನನಗೆ ಪ್ರಿಯವಾಗಲೆಂದು ಇದನ್ನು ಹೇಳುತ್ತಿಲ್ಲ. ರಮಣೀಯತೆಯ ಪರಿಣತಿ ನಿನ್ನಲ್ಲಿ ಎಲ್ಲೆ ಮುಟ್ಟಿದೆ ಎನ್ನುವುದು ಸತ್ಯ.'

'ಗೊಲ್ಲರ ಹೆಣ್ಣುಗಳು ನಾಚಿಕೆಯನ್ನು ತೊರೆದು ನಿನ್ನಲ್ಲಿ ಆಸಕ್ತರಾಗಿ ರತಿಯರಾದರು; ಜೇನಿಂದ ತುಂಬಿತು ಗೀತ; ಚಪಲದ ಹೊರೆ ಅವರ್ಣನೀಯವಾಗಿ ಮಧುರವಾಯಿತು. ಮಾಧುರ್ಯವನ್ನು ಚೆಲ್ಲುತ್ತ ನನ್ನಂತಹವನ ಮಾತುಗಳ ಗುಂಭ ಬಹುವಾಗಿ ವಿಜೃಂಭಿಸಿದೆ. ಇದು ನ್ಯಾಯವೆ; ನೀನು ಸಾರಿದೆ; ಚಪಲವಾಗಿದ್ದ ಜನ್ಮ ಸಫಲವಾದವು.'

'ಓ ಸಂಧ್ಯಾವಂದನವೆ, ನಿನಗೆ ಒಳ್ಳಿತಾಗಲಿ; ಓ ಸ್ನಾನವೇ, ನಿನಗೆ ನಮಸ್ಕಾರ; ಓ ದೇವತೆಗಳೆ, ಪಿತೃಗಳೆ, ನಿಮ್ಮನ್ನು ತಣಿಸುವ ಕರ್ಮದಲ್ಲಿ ನಾನು ಶಕ್ತನಲ್ಲ; ನನ್ನನ್ನು ಮನ್ನಿಸಿರಿ. ಯಾವುದೋ ಒಂದು ಸ್ಥಲದಲ್ಲಿ ಕುಳಿತು ಕಂಸಾರಿಯಾದ ಯಾದವ ಕುಲೋತ್ತಂಸನನ್ನು ನೆನೆನೆನೆದು, ಪಾಪವನ್ನು ಕಳೆದುಕೊಳ್ಳುತ್ತೇನೆ. ಇದು ಸಾಕು ಎಂದು ನನ್ನ ತಿಳಿವಳಿಕೆ. ಬೇರೆಯದರಿಂದ ನನಗೆ ಆಗಬೇಕಾದ್ದೇನು?'

ಈ ಅನುವಾದ ಎಷ್ಟು ಸೊಗಸಾಗಿದೆ! ಇಲ್ಲಿ ಮೂಲದ ಸೊಗಸು ಹೇಗೆ ಒಡಮೂಡಿದೆ! ಪ್ರತಿಯೊಂದು ಶ್ಲೋಕದ ಅನುವಾದವೂ ಹೀಗ ಸಹಜ ಸುಂದರವಾಗಿದೆ. ಮಾಸ್ತಿಯವರು ಸಂಸ್ಕೃತದಿಂದ ಮಾಡಿರುವ ಈ ಅನುವಾದ ಸ್ವತಂತ್ರವಾದ ಕಾವ್ಯದ ಸ್ವರೂಪವನ್ನು ತಳೆದಿದೆ; ಹಾಗೂ ಮನೋಹಕವಾಗಿ ಮೂಲದ ರಸಾನುಭವನ್ನು ಪರಿಪೂರ್ಣವಾಗಿ ಮಾಡಿಸಿಕೊಡುತ್ತದೆ.

ನಿಘಂಟಿಗೆ ಡಾ॥ ಮಾಸ್ತಿ ಕೊಡುಗೆ

ಎನ್. ಬಸವಾರಾಧ್ಯ

ಕನ್ನಡ ಸಾಹಿತ್ಯಕ್ಕೆ ಹಲವಾರು ಮುಖಗಳಿಂದ ಸೇವೆಯನ್ನು ಸಲ್ಲಿಸುತ್ತಿರುವ ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಕನ್ನಡ ಶಬ್ದಭಂಡಾರಕ್ಕೆ ಅನೇಕ ಅಪೂರ್ವ ಶಬ್ದಗಳನ್ನು ತುಂಬಿದ್ದಾರೆ. ತಾವು ನಾಡಿನಾದ್ಯಂತ ಸಂಚರಿಸಿದಾಗ ಪ್ರಾದೇಶಿಕವಾಗಿ ಚಾಲ್ತಿಯಲ್ಲಿದ್ದ ಶಬ್ದಗಳನ್ನು ಸಾರ್ವತ್ರಿಕವಾಗಿಸಲು ಪ್ರಯತ್ನಿಸಿದ್ದಾರೆ. ಕಣ್ಮರೆಯಾಗುತ್ತಿದ್ದ ಹಲವಾರು ಕನ್ನಡ ಶಬ್ದಗಳು ಶ್ರೀಯುತರ ಬರವಣಿಗೆಯಲ್ಲಿ ಜೀವಂತವಾಗಿವೆ. ಜತೆಗೆ ಹಲವಾರು ಹೊಸ ಶಬ್ದಗಳನ್ನು ಸೃಷ್ಟಿಸಿ ಚಲಾವಣೆಗೆ ತಂದಿರುವುದು ಅವರ ಕೃತಿಗಳಲ್ಲಿ ಕಂಡುಬರುತ್ತದೆ.

ಕನ್ನಡ ಅತ್ಯಂತ ಸಂಪದ್ಭರಿತವಾದ ಭಾಷೆ. ಸುಮಾರು ಎರಡು ಸಾವಿರ ವರ್ಷಗಳಿಗಿಂತಲೂ ಮಿಗಿಲಾದ ಪ್ರಾಚೀನತೆಯುಳ್ಳ ಈ ಭಾಷೆಯಲ್ಲಿ ವಿಪುಲವಾಗಿ ದೇಶ್ಯ ಶಬ್ದಗಳು ತುಂಬಿ ಹೋಗಿವೆ. ಆದರೆ ಕಾಲ ಕಳೆದಂತೆ ಈ ಅಸಂಖ್ಯಾತವಾದ ದೇಶ್ಯ ಶಬ್ದಗಳು ಬಳಕೆಯಿಲ್ಲದೆ ಕಣ್ಮರೆಯಾಗುತ್ತಾ ಬಂದವೆ. ಇಂತಹ ಶಬ್ದಗಳನ್ನು ಕಾವ್ಯಗಳಲ್ಲಿ ಮೇಲಿಂದ ಮೇಲೆ ಬಳಸದೆ ಹೋದರೆ ಅವು ಕ್ರಮೇಣ ಭಾಷೆಯಿಂದ ಬಿಟ್ಟು ಹೋಗುವ ಸಂಭವವುಂಟು. ಇದನ್ನು ಮನಗಂಡ ಡಾ॥ ಮಾಸ್ತಿಯವರು ಕನ್ನಡ ಶಬ್ದಗಳ ಕೆಚ್ಚನ್ನು, ಕಿಮ್ಮತ್ತನ್ನು, ಗತ್ತನ್ನು ರಕ್ಷಿಸಿಕೊಂಡು ಬಂದಿದ್ದಾರೆ.

ಭಾಷೆ ಪ್ರಗತಿಗಾಮಿ. ಅದರಲ್ಲೂ ಜೀವಂತಭಾಷೆ ಪ್ರವಾಹದಂತೆ ಮುಂದುವರಿಯುತ್ತಲೇ ಇರುತ್ತದೆ. ಅದು ಕೇವಲ ತನ್ನ ಭಾಷೆಯ ಶಬ್ದಗಳನ್ನಷ್ಟೇ ಅಲ್ಲದೆ, ತಾನು ಸಂಪರ್ಕ ಪಡೆದಿರುವ ಅನ್ಯಭಾಷೆಗಳಿಂದಲೂ ಹೇರಳವಾಗಿ ಶಬ್ದಗಳನ್ನು ಎರವಲಾಗಿ ಪಡೆಯುವುದುಂಟು. ಹಳಗನ್ನಡ ಕಾಲದಲ್ಲಿ ಸಂಸ್ಕೃತ ಶಬ್ದಗಳೂ, ನಡುಗನ್ನಡ ಕಾಲದಲ್ಲಿ ಪರ್ಷಿಯನ್, ಅರಾಬಿಕ್, ಪೋರ್ಚುಗೀಸ್, ತಮಿಳು, ಮರಾಠಿ, ತೆಲುಗು ಮೊದಲಾದ ಭಾಷೆಗಳ ಶಬ್ದಗಳೂ, ಹೊಸಗನ್ನಡ ಕಾಲದಲ್ಲಿ ಇಂಗ್ಲಿಷ್ ಮೊದಲಾದ ಭಾಷೆಗಳ ಶಬ್ದಗಳೂ ಕನ್ನಡಕ್ಕೆ ಬಂದಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಇಷ್ಟೇ ಅಲ್ಲದೆ ಈ ಬೇರೆ ಬೇರೆ ಭಾಷೆಗಳ ಪ್ರತ್ಯಯಗಳನ್ನು ಉಪಸರ್ಗಗಳನನ್ನ ಸೇರಿಸಿಕೊಂಡು ಕನ್ನಡದಲ್ಲಿ ಹೊಸಶಬ್ದಗಳನ್ನು ಸೃಷ್ಟಿಸಿರುವುದನ್ನು ಕಾಣಬಹುದು. ಯಾವುದೇ ಜೀವಂತ ಭಾಷೆಗಾದರೂ ಈ ಕ್ರಮ, ಈ ವಿಧಾನ ಅನಿವಾರ್ಯ, ಅತ್ಯವಶ್ಯ.

ಹಲವಾರು ಭಾಷೆಗಳಿಂದ ಶಬ್ದಗಳನ್ನು ಎರವಲಾಗಿ ಪಡೆಯುವುದು, ಹೊಸ ಶಬ್ದಗಳನ್ನು ಸೃಷ್ಟಿಸುವುದು ಅವಶ್ಯವಾದರೂ ಈ ಭಾಷೆಯ ಮೂಲ ಶಬ್ದಗಳನ್ನು ಕೈಬಿಡುವುದು ಸಾಧುವಲ್ಲ. ಈ ದೃಷ್ಟಿಯಿಂದ ನೋಡಿದಾಗ ಕನ್ನಡದ ಹಲವಾರು ಪ್ರಾಚೀನ ಶಬ್ದಗಳು ಇಂದು ಚಲಾವಣೆಯಲ್ಲಿಲ್ಲದಿರುವುದು ಕಂಡು ಬರುತ್ತದೆ. ಈ ಶಬ್ದಗಳನ್ನು ಸಂದರ್ಭೋಚಿತವಾಗಿ, ಸಾರ್ವತ್ರಿಕವಾಗಿ ಬಳಕೆಗೆ ತರುವುದು ಕನ್ನಡಿಗರ ಕರ್ತವ್ಯ.

ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು 'ನಮ್ಮ ನುಡಿ' ಎಂಬ ಗ್ರಂಥದಲ್ಲಿ ಈ ಎಲ್ಲ ವಿವರಗಳನ್ನು ಸವಿಸ್ತಾರವಾಗಿ ವಿವರಿಸಿದ್ದಾರೆ. ಅಸಂಖ್ಯಾತ ಶಬ್ದಗಳನ್ನು ಪಟ್ಟಿ ಮಾಡಿ ಕೊಟ್ಟಿದ್ದಾರೆ. 'ಕನ್ನಡದ ದೂರ ಸಾರಿದ ನಂಟು ನುಡಿ', 'ಬಳಕೆ ತಪ್ಪಿದ ಪದಗಳು', 'ನಷ್ಟವಾಗಿರುವ ಪದಗಳು' ಇವುಗಳನ್ನು ಉಲ್ಲೇಖಿಸಿ ಕನ್ನಡಕ್ಕೆ ಇದರಿಂದಾಗಿರುವ ಅಪಾರ ನಷ್ಟವನ್ನು ಎತ್ತಿ ತೋರಿಸಿದ್ದಾರೆ. ಜೊತೆಗೆ ಇತರ ಭಾಷೆಗಳೊಡನೆ ಕನ್ನಡಕ್ಕಿರುವ ಸಂಬಂಧವನ್ನು, ಈ ಭಾಷೆಗಳ ಕೊಳು ಕೊಡೆಯನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಕನ್ನಡದ ನುಡಿಗಟ್ಟುಗಳನ್ನು, ಅಂಕಿತನಾಮಗಳನ್ನು ಕುರಿತು ವಿವೇಚಿಸಿದ್ದಾರೆ. ಪ್ರಾದೇಶಿಕವಾಗಿ ಕಂಡುಬರುವ ಶಬ್ದಗಳನ್ನು ಪಟ್ಟಿಮಾಡಿ ಅವು ಸಾರ್ವತ್ರಿಕವಾಗಿ ಹೇಗೆ ಬಳಕೆಯಲ್ಲಿಲ್ಲ ಎಂಬುದನ್ನು ತೋರಿಸಿದ್ದಾರೆ. ಕನ್ನಡ ಶಾಸನಗಳಲ್ಲಿ ದೊರೆಯುವ ಅಚ್ಚಗನ್ನಡ ಅಂಕಿತನಾಮಗಳನ್ನು ಕುರಿತು ವಿವೇಚಿಸಿದ್ದಾರೆ. ಉದಾಹರಣೆಗಾಗಿ ಕೆಲವನ್ನು ನೋಡಬಹುದು.

ಗಂಡಸರವು: ಆಚಿರಾಜ, ಎಕ್ಕಲದೇವ, ಎರೆಗ, ಐಚುಗ, ಒಡ್ಡುಗ, ಕನ್ನೆಯ, ಕೇತಿಶೆಟ್ಟಿ, ಕೋಬಿಗೌಡ, ಕಂಚರಸ, ಕುಂದಮರಸ, ಕೂಚಿರಾಜ, ಕೇಶಿಮಯ್ಯ, ಗಟ್ಟಯ್ಯ, ಗೋನರಸ, ಚಟ್ಟ, ಜೂಜ, ಡಾಕರಸ, ತಿಕ್ಕ, ತೂದಪಿಳ್ಳೆ, ತೈಲಪ, ದಾಮ, ದೋಣ, ನೊಳಂಬ, ಪೋಲಾಳ್ವ, ಬರ್ಮಿಶೆಟ್ಟಿ, ಬೂಚಣ, ಬೂತುಗ, ಮದ್ದಿರಾಜ, ಮಸಣಗಾವುಂಡ, ರಾಚಮಲ್ಲ, ರೇವಣ, ವೈಜರಸ, ಸಿಂಗಿಮಯ್ಯ, ಸಂಕಗೌಡ, ಹುಳ್ಳ, ಹೆಲ್ಲಿಗ.

ಹೆಂಗಸರವು : ಅಳಿಯಾದೇವಿ, ಐಚಲೆ, ಕಂತಿ, ಗಂತಿ, ಚಟ್ಟಲೆ, ಜಕ್ಕಲೆ, ದಣ್ಣಲೆ, ಸೊಕ್ಕಿಯಬ್ಬೆ, ಪೋಚಿಕಬ್ಬೆ, ಬಾಚಲದೇವಿ, ಮಾಚಲೆ, ರಾಜಲೆ, ಲಚ್ಚಲೆ, ಶಾಂತಲೆ, ಸಾವಿಯಬ್ಬೆ.

ಪ್ರಾದೇಶಿಕವಾಗಿ ರೂಢಿಯಲ್ಲಿರುವ ಶಬ್ದಗಳು ಬೇರೆ ಪ್ರಾಂತದವರಿಗೆ ಎಷ್ಟು ದಿಗ್ಭ್ರಮೆಯನ್ನುಂಟು ಮಾಡುತ್ತದೆಯೆಂಬುದಕ್ಕೆ 'ನಮ್ಮ ನುಡಿ' ಗ್ರಂಥದಿಂದ ಈ ಒಂದು ಉದಾಹರಣೆಯನ್ನು ನೋಡಬಹುದು. ಕಾಸರಗೋಡಿನಲ್ಲಿ ಒಮ್ಮೆ ನಾನು ಮಿತ್ರರ ಮನೆಗೆ ಬಂದ ಒಬ್ಬರನ್ನು ''ನೀವು ಎಲ್ಲಿಂದ ಬಂದಿದೀರಿ?'' ಎಂದು ಕೇಳಿದೆ. ಅವರು ''ಸ್ವರ್ಗದಿಂದ'' ಎಂದರು. ಇದು ನನಗೆ ಹಾಸ್ಯದ ಮಾತು ಎಂದು ಕಂಡಿತು. ಆದರೆ ಅವರ ರೀತಿಯಲ್ಲಿ ಹಾಸ್ಯವೇನೂ ಕಾಣಲಿಲ್ಲ. ಹಾಸ್ಯ ಮಾಡಿದರೆ ಮಾಡಲಿ, ನಾನು ಬೇಸರ ತೋರಿಸುವುದು ಬೇಡ, ಎಂದು ಕೊಂಡ ನಾನು, ''ಇಲ್ಲಿಗೆ ಯಾವ ದಿಕ್ಕಿನಲ್ಲಿದೆ ಸ್ವರ್ಗ?'' ಎಂದೆ 'ಅವರು' ಕೈಚಾಚಿ ತೋರಿಸಿದರು. ಕೈಚಾಚಿದ್ದು ಆಕಾಶಕ್ಕಲ್ಲ. ದಿಟವಾಗಿಯೇ ಈ ಹೆಸರ ಊರು ಒಂದು ಇರಬೇಕು ಎಂದುಕೊಂಡು ನಾನು ''ಹತ್ತಿರದಲ್ಲೇ ಮರ್ತ್ಯ ಪಾತಾಳಾನೂ ಇವೆಯೇ ಸ್ವಾಮಿ?'' ಎಂದೆ. ಅವರು ''ಇವೆ'' ಎಂದರು.

ಎತ್ತರದ ಒಂದು ಹರವು. ಅಲ್ಲಿಂದ ನೆಲ ಇಳಿಜಾರಾಗಿ ತಗ್ಗಿ ತಗ್ಗಿ ಒಂದು ತಪ್ಪಲಿಗೆ ಮುಟ್ಟಿದೆ. ನಮ್ಮ ಹಿರಿಯರು ಆ ತಲೆಯ ಮೇಲೆ ಕೆಲವು ಮನೆ ಕಟ್ಟಿದರು. ಯಾರೋ ಹಾಸ್ಯಪರರು ಕೊಪ್ಪಲುಗಳನ್ನು ಸ್ವರ್ಗ, ಮರ್ತ್ಯ, ಪಾತಾಳ ಎಂದು ಕರೆದರು. ಈಗ ಅವೇ ಹೆಸರುಗಳಾಗಿವೆ.

ಇವು ದಿಟವಾಗಿ ಊರುಗಳ ಹೆಸರುಗಳು ಎಂದು ಕಾಣದ ಜನ ಈ ಹೆಸರುಗಳಿಂದ

ಸ್ವಲ್ಪ ಗೊಂದಲಕ್ಕೆ ಬೀಳುವುದು ತಪ್ಪಿದ್ದಲ್ಲ. ''ರಾಯರು ಎಲ್ಲಿಗೆ ಹೋದರು?'' ಎಂದರೆ ''ಸ್ವರ್ಗಕ್ಕೆ ಹೋದರು'' ಎನ್ನುವ ಉತ್ತರ ಅವಲಕ್ಷಣವಾಗಿ ಕೇಳುತ್ತದೆ. ಹೆಸರಿಟ್ಟವರು, ಅದನ್ನು ಒಪ್ಪಿಕೊಂಡವರು, ಈ ವಿಷಯ ಯೋಚನೆ ಮಾಡಲಿಲ್ಲ; ಅಥವಾ ಮಾಡಿದರು, ಅವಲಕ್ಷಣವನ್ನು ಲಕ್ಷಿಸಲಿಲ್ಲ.

ಇತ್ತೀಚೆಗೆ ಆಗಿರುವ ಇಂಥ ಹೆಸರು ಇಡಾಣೆಯನ್ನು ಇಲ್ಲಿ ಹೇಳಬಹುದು. ತುಂಗಭದ್ರಾ ಜಲಾಶಯದ ಕಟ್ಟೆಯ ಎರಡು ತುದಿಯ ಗುಡ್ಡಗಳ ಮೇಲೆ ಎರಡು ಪ್ರವಾಸಿ ಮಂದಿರಗಳನ್ನು ಕಟ್ಟಿ ನಮ್ಮ ಪ್ರಭುವರ್ಗ ಅವನ್ನು ವೈಕುಂಠ ಕೈಲಾಸ ಎಂದು ಕರೆದಿದೆ. ಏನು ಅಲ್ಲಿ ಇಳಿದಾಗ ವೈಕುಂಠ ಕೈಲಾಸಗಳ ಆನಂದವನ್ನು ಅನುಭವಿಸುತ್ತೀರಿ ಎಂದು ಅದರ ಅರ್ಥ ಇರಬೇಕು. ಆದರೆ ಎಂಜಿನಿಯರು ಎಲ್ಲಿ ಎಂದರೆ ಕೈಲಾಸದಲ್ಲಿ ವೈಕುಂಠದಲ್ಲಿ ಎಂದು ಉತ್ತರ ಬಂದಾಗ, ಈ ನಾಮಕರಣದ ಪರಿಯನ್ನು ಕಾಣದವರ ಮಾತು ಹಾಗಿರಲಿ, ಕಂಡವರಿಗೂ ಸ್ವಲ್ಪ ಪೆಚ್ಚೆನ್ನಿಸಬೇಕು. ಇಂಥ ಅರ್ಥ ಬರಬೇಕೆಂದರೆ ಪೂರ್ವಿಕರು ಭೂಕೈಲಾಸ, ಭೂವೈಕುಂಠ ಎನ್ನುತ್ತಿದ್ದರು.

ಕನ್ನಡದಲ್ಲಿ ರೂಢಮೂಲವಾಗಿರುವ ಅಸಂಖ್ಯಾತ ಮರ, ಗಿಡ, ಸೊಪ್ಪು, ಗಡ್ಡೆ, ಹೂವು, ಹಣ್ಣು, ಕಾಯಿ, ಪ್ರಾಣಿ ಮುಂತಾದುವುಗಳ ಒಂದು ದೀರ್ಘವಾದ ಪಟ್ಟಿಯನ್ನೇ ಕೊಟ್ಟಿದ್ದಾರೆ. ಕೈಬಿಟ್ಟುಹೋಗಿ, ಕಣ್ಮರೆಯಾಗಿರುವ ಶಬ್ದಗಳಿಗಾಗಿ ವಿಷಾದಿಸಿ ಈ ಮಾತುಗಳನ್ನು ಹೇಳಿದ್ದಾರೆ.

''ಕನ್ನಡದ ಶಬ್ದಭಂಡಾರವೇನೂ ಚಿಕ್ಕದಲ್ಲ. ಆದರೆ ಬಳಕೆಯಿಲ್ಲದ ಕಾರಣ ಸಾವಿರ ಮಾತು ಮರೆತುಹೋಗಿವೆ. ಶಬ್ದಭಂಡಾರ ಸಾಕಾದಷ್ಟು ಇರುವುದಲ್ಲದೆ ಭಾಷೆ ಹೊಸ ಪದಗಳನ್ನು ಮಾಡಿಕೊಳ್ಳುವ ಕ್ರಮವನ್ನು ಇಟ್ಟುಕೊಂಡಿದೆ. ಇರುವ ಪದಗಳನ್ನೇ ಬಳಸದೆ ನಿರುದ್ಯಮಿಯಾದ ಭಾಷೆ ಹೊಸಪದಗಳನ್ನೇನು ಮಾಡಹೋದೀತು? ಹೀಗಾಗಿ ಕನ್ನಡದ ಶಬ್ದಭಂಡಾರ ಉಪಯೋಗದಲ್ಲಿಲ್ಲದ ಆಯುಧಶಾಲೆಯಂತೆ ಆಗಿ, ಇರುವ ಪದಗಳು ತುಕ್ಕು ಹಿಡಿಯುತ್ತ ಹೊಸ ಪದಗಳು ಬಾರದೆ, ವ್ಯರ್ಥವಾಗಿ ಕೆಡುತ್ತಿದೆ. ಈ ಸ್ಥಿತಿ ಈಗ ತಿದ್ದಬೇಕು. ಇದು ಕನ್ನಡದ ಲೇಖಕರು ಮಾಡಬೇಕಾದ ಕೆಲಸ.''

ಈ ಮೇಲಿನ ಮಾತುಗಳು ಯಥಾರ್ಥವಾದುವು. ಕನ್ನಡ ಶಬ್ದ ಭಂಡಾರಕ್ಕೆ ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ಕೊಟ್ಟಿದ್ದಾರೆ. ಅವರ ಪ್ರತಿಯೊಂದು ಬರವಣಿಗೆಯಲ್ಲೂ ಈ ಅಂಶವನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಮಾಸ್ತಿಯವರ ಉಪನ್ಯಾಸಗಳು

ಡಾ॥ ವಿ.ಕೃ. ಗೋಕಾಕ್

ಕನ್ನಡದ ಪುನರುಜ್ಜೀವನದ ಕಾಲವು ವಿಚಿತ್ರವಾಗಿದೆ. ಇಂದಿನ ಸಾಹಿತಿಯು ಗ್ರಂಥಗಳನ್ನು ಬರೆಯುವದಲ್ಲದೆ ಅವುಗಳನ್ನು ತಿಳಿಸಿ ಹೇಳಲು ಸದಾ ಸರ್ವದಾ ಸಿದ್ಧನಾಗಿರಬೇಕು. ಅಚ್ಚು ಹಾಕಿಸುವಾಗ ಪುಸ್ತಕದಲ್ಲಿ ಮುದ್ರಣ ದೋಷಗಳುಳಿಯದಂತೆ ತನ್ನ ಹಗಲು ರಾತ್ರಿಗಳನ್ನು ಸಾಹಿತಿಯು ಮುದ್ರಣಶಾಲೆಯಲ್ಲಿ ಕಳೆಯಬೇಕು. ಅಚ್ಚಾಗಿ ಪುಸ್ತಕವು ಸಿದ್ಧವಾದ ಮೇಲೆ ಮಾರಾಟ ಮಾಡುವ ಗತಿಯೇನು? ವ್ಯವಸ್ಥಿತವಾಗಿ ಈ ಕೆಲಸವನ್ನು ಮಾಡುವವರಾರೂ ಸಿಕ್ಕದಿದ್ದರೆ ಮಾಸ್ತಿಯವರಂತೆ ಮನೆಯಲ್ಲಿ ಪುಸ್ತಗಳನ್ನೂ ಲೆಕ್ಕಪತ್ರವನ್ನೂ ಇಟ್ಟುಕೊಂಡು ಬೇಡಿದ ಏಜಂಟರಿಗೆ ಮಾತ್ರ ಪ್ರತಿಗಳನ್ನು ಕೊಡುತ್ತಾ ಕಾಲ ಕಳೆಯಬೇಕು. ಇಷ್ಟೇ ಅಲ್ಲ, ಇಂಥಿಂಥ ಪುಸ್ತಕಗಳನ್ನು ಬರೆದವರೆಂದು ಜನರಿಗೆ ಪರಿಚಯವಾದರೂ ಆಗಲೆಂದು ಕರೆ ಬಂದಾಗೆಲ್ಲ ಕರ್ನಾಟಕವನ್ನು ಸುತ್ತಿಕೊಂಡು ಬರಲು ಸಿದ್ಧವಾಗಿರಬೇಕು!

ಆದರೆ ಇನ್ನೊಂದು ದೃಷ್ಟಿಯಿಂದ ನೋಡಿದರೆ, ಹೀಗೆ ಮಾಡುವದರಲ್ಲಿಯೇ ಇಂದಿನ ಸಾಹಿತ್ಯದ ಸಾಫಲ್ಯವಿದೆ, ಸಾಹಿತಿಗಳ ಸಮಾಧಾನವಿದೆ. ಈ ಪುನರುಜ್ಜೀವನದ ಚಳವಳಿಗೆ ಈಗಾಗಲೆ ಸಿಕ್ಕ ಸ್ಥಾನಮಾನಗಳ ಶ್ರೇಯಸ್ಸಿನ ಅರ್ಧದಷ್ಟಾದರೂ ಇಂದಿನ ಸಾಹಿತಿಗಳ ಸಾರ್ವಜನಿಕ ಜೀವನಕ್ಕೆ ಸಲ್ಲುವುದೆಂದರೆ ಅತಿಶಯೋಕ್ತಿಯಾಗಲಾರದು. ಸಾಹಿತಿಗಳ ಸಂಚಾರವೇ ಏಕೀಕರಣಕ್ಕೆ ಪುಟಕೊಟ್ಟಿದೆ; ಬಗೆ ಬಗೆಯ ಕನ್ನಡಗಳನ್ನು ಒಂದುಗೂಡಿಸುತ್ತದೆ; ಜಾಗೃತಿಯಾಗದ ಭಾಗಗಳಲ್ಲೆಲ್ಲ ಹೊಸಕಾಲದ ಹೊಂಬೆಳಕನ್ನು ಸೂಸಿದೆ.

ಶ್ರೀ ಬಿ.ಎಮ್. ಶ್ರೀಕಂಠಯ್ಯನವರು ವಿಶ್ವವಿದ್ಯಾಲಯದ ಜೀವನದಲ್ಲಿ ಕೀರ್ತಿಯನ್ನು ಗಳಿಸಿದವರು; ಮಾಸ್ತಿಯವರು ಅಧಿಕಾರಿಗಳು, ಡೆಪ್ಯುಟಿ ಕಮಿಶನರು; ಡಿ.ವಿ.ಜಿ. ಯವರು ರಾಜಕಾರಣಪಟುಗಳೆಂದು ಹೆಸರಾದವರು. ಯಾವ ವಿಷಯವನ್ನು ಕುರಿತು ಅವರು ಮಾತನಾಡಿದರೂ ಕೇಳಬೇಕೆಂಬ ಲವಲವಿಕೆಯು ಜನರಲ್ಲಿ ಉತ್ಪನ್ನವಾಗುವದು ಸಹಜವಾಗಿದೆ. ಆದರೆ ಇಂಥ ಮಹನೀಯರೆಲ್ಲ ಎದ್ದು ನಿಂತು ಕನ್ನಡದ ಬಗ್ಗೆ ಮಾತನಾಡಹತ್ತಿದಾಗ, ಕವಿತೆಗಳನ್ನು ಅಂದು ತೋರಿಸಿದಾಗ, ಊರೆನ್ನದೆ ಹಳ್ಳಿಯೆನ್ನದೆ ಕನ್ನಡದ ಕರೆ ಬಂದಲ್ಲೆಲ್ಲ ಸಂಚರಿಸಿದಾಗ; ಮೈಸೂರಿನ ಕನ್ನಡಿಗರಿಗೆ ಹೊಸಗನ್ನಡದ ಬೆಲೆಯು ಗೊತ್ತಾಗಿದ್ದರಲ್ಲಿ ಏನಾಶ್ಚರ್ಯ? ಮೊದಲಿನಿಂದ ನಡೆದುಕೊಂಡು ಬಂದಿದ್ದ ಕನ್ನಡದ ಕಾರ್ಯವು ಇಂಥ ಮಹನೀಯರ ಕೈಯಲ್ಲಿ ಒಂದು ಹೆಚ್ಚಳವನ್ನು ಪಡೆಯಿತು. ಇವರೆಲ್ಲ ಕರ್ನಾಟಕದ ಬೇರೆ ಭಾಗಗಳಲ್ಲಿ ಸಂಚರಿಸಿದಾಗ, ತಮ್ಮಲ್ಲಿ ಮಿಡಿಯುತ್ತಿರುವ ಆಸೆಯೇ ಉಳಿದವರಲ್ಲಿಯೂ ಅಂಕುರಿಸಿದೆಯೆಂಬುದು ಎಲ್ಲ ಕನ್ನಡಿಗರಿಗೆ ಗೋಚರವಾಯಿತು. ಅಸಹಕಾರದ ಚಳುವಳಿಯಿಂದ ಬಂದೊದಗಿದ

ಜನಜಾಗ್ರತಿಯ ತಳಹದಿಯ ಮೇಲ್ಕಾಣಿಸಿದ ಮಹನೀಯರಂಥವರನೇಕರು ಕನ್ನಡದ ಮಂದಿರವನ್ನು ಕಟ್ಟಿದರು. ಗಾರುಡಿಗನ ಮೋಡಿ, ಕೋಕಿಲ ಕಂಠ, ವಿನೋದ, ವಾಗ್‌ವೈಖರಿ, ಇವೆಲ್ಲ ಕೂಡಿ ಇಂದಿನ ಸಾಹಿತ್ಯಕ್ಕೆ ಬೇಕಾದ ವಾಚಕವೃಂದವನ್ನು ಒದಗಿಸಿಕೊಟ್ಟವು.

ಮಾಸ್ತಿಯವರ ಮಾತುಗಾರಿಕೆಯಲ್ಲಿ ಒಂದು ಅನನ್ಯವಾದ ಮಾಧುರ್ಯವಿದೆ, ಮಾರ್ಧವವಿದೆ. ತಮ್ಮ ಕೆಲಸವನ್ನು ಮುಗಿಸಿಕೊಂಡು ಉಳಿದ ವೇಳೆಯಲ್ಲಿ ಸಾಧ್ಯವಿದ್ದಾಗೆಲ್ಲ ಅವರು ಕನ್ನಡ ನಾಡಿಗೆ ತಮ್ಮ 'ನವಿಲು ಗರಿ'ಯ ಬರವಣಿಗೆಯನ್ನಲ್ಲದೆ ಮುತ್ತಿನಂತಹ ಮಾತುಗಾರಿಕೆಯನ್ನೂ ಬೀರಿದ್ದಾರೆ. ಅವರ ಶ್ರದ್ಧೆಯೂ ಆತ್ಮ ವಿಶ್ವಾಸವೂ ವಿನಯವೂ ಧ್ರುವನಂತೆ ಅಚಲವಾದುವು. ಅವರ ಮಾತಿನಲ್ಲಿ ತೋರುವ ನಯವಿನಯವು ಬರಿ ಮೈಸೂರಿನ ಶಿಷ್ಟಾಚಾರವಲ್ಲ, ಅವರ ವ್ಯಕ್ತಿತ್ವದಿಂದ ಮೆಲ್ಲನೆ ಹೊರಸೂಸಿ ಬರುವ ಸಂಸ್ಕೃತಿಯೆಂದು ಹೇಳಬಹುದು. ವಿಡಂಬನೆಯ ಅವರ ಮಾತಿನಲ್ಲಿ ಕರುಣ ಮಿಳಿತ ವ್ಯಂಗ್ಯೋಕ್ತಿಯಾಗಿ ಹೊರಬೀಳುತ್ತದೆ. ಅವರ ವಿನೋದಕ್ಕೆ ಮೊನೆಯಿದೆ, ಆದರೆ ಅದು ಚುಚ್ಚುವಂತಹದಲ್ಲ. ಎಚ್ಚರಗೊಳಿಸುವಂತಹದು. ಸತ್ಯವು ಕಹಿಯೆಂಬ ಮಾತು ನಿಜವಿದ್ದರೂ ಸತ್ಯವನ್ನು ಪ್ರಿಯವಾಗಿ ಹೇಳುವ ಕಲೆಯು ಅವರಿಗೆ ಚೆನ್ನಾಗಿ ಸಾಧಿಸಿದೆ. ಸಭೆಯಲ್ಲಾಗಲಿ ಸಂಭಾಷಣೆಯಲ್ಲಾಗಲಿ, ಈ ರೀತಿಯನ್ನು ಬಿಟ್ಟು ಮಾತನಾಡಿದ್ದನ್ನು ನಾನಿನ್ನೂ ಕೇಳಬೇಕಾಗಿದೆ. ಜೀವನದ ಯಾವ ಅನುಭವವನ್ನು ಹೇಳುವದಿದ್ದರೂ ಅಷ್ಟೆ, ಅವರ ಮನಸ್ಸಿನ ಗುಣವಂತಹದು.

ಇವರು ಮಾತನಾಡುವ ವಿಷಯಗಳಾವುವು? ಯಾವ ವಿಷಯದ ಮೇಲೂ ಇವರು ಮಾತನಾಡಬಲ್ಲರು. ರಸಸಿದ್ಧಿಯನ್ನು ಪಡೆದ ನಾಲಗೆಗೆ ಅಪರಿಚಿತವಾವುದೂ ಇಲ್ಲ. ನಮ್ಮ ಕೋಟನ್ನು ತೂಗು ಹಾಕಲು ಯಾವ ಗೂಟವಾದರೇನೆಂಬಂತೆ ಮನಸ್ಸಿನಲ್ಲಿ ಕುದಿಯುತ್ತಿದ್ದ ಮಾತನ್ನು ಬಯಲಿಗಿಡಲು ಯಾವ ವಿಷಯವಾದರೇನು? ಮಾಸ್ತಿಯವರು ಸಂಪ್ರದಾಯ ಶರಣರೆಂದು ಅವರ ಮಾತನ್ನು ಕೇಳಿದ ಕೆಲವರು ತಿಳಿಯುವದುಂಟು. ಆದರೆ 'ರಾಮಾಯಣ'ವನ್ನು ಕುರಿತು ಅವರು ಮಾತಾಡುವುದನ್ನು ಕೇಳಿದ ತಜ್ಞರು ಈ ಮಾತನ್ನು ಒಪ್ಪಲಾರರು. ಅಲ್ಲದೆ ಮಾಸ್ತಿಯವರೇ ತಮ್ಮ ಬೇರೆ ಕೆಲವು ಉಪನ್ಯಾಸಗಳಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಮಹತ್ವವನ್ನು ಬಣ್ಣಿಸುತ್ತಾರೆ. ಪಾಶ್ಚಾತ್ಯ ಸಾಹಿತ್ಯದ ಹಿರಿಮೆಯನ್ನು ಕುರಿತು ಅವರು ಲೇಖನಗಳನ್ನೂ ಬರೆದಿದ್ದಾರೆ. ಪಾಶ್ಚಾತ್ಯರಿಂದ ಶಿಸ್ತನ್ನೂ ವಿಜ್ಞಾನವನ್ನೂ ಕಲಿಯದೆ ಗತ್ಯಂತರವಿಲ್ಲವೆಂದು ಹೆಜ್ಜೆ ಹೆಜ್ಜೆಗೆ ಸಾರುತ್ತಾರೆ.

ಆದರೆ ಭಾರತದ ಬಗ್ಗೆ ಮಾತಾಡುವಾಗೆಲ್ಲ ಮಾಸ್ತಿಯವರ ದನಿಯು ತುಂಬಿ ಬರುತ್ತದೆ. ಯಕ್ಷಪ್ರಶ್ನೆಯ ಸಂದರ್ಭದಲ್ಲಿಯ ಭೀಮಾರ್ಜುನರಂತೆ ಪಾಶ್ಚಾತ್ಯ ರಾಷ್ಟ್ರಗಳಿದ್ದರೆ ಭಾರತವು ಧರ್ಮರಾಜನಂತೆಂಬುದು ಅವರ ಅಚಲ ಶ್ರದ್ಧೆಯಾಗಿದೆ. ಅವರ ಮಾತಿನಲ್ಲಿ, ಕೃತಿಯಲ್ಲಿ, ಜೀವಿತದಲ್ಲಿ ಇದೇ ಶ್ರದ್ಧೆಯೇ ತಿರುಳಾಗಿ ನಿಂತಿದೆ. ಭಾರತದ ಋಷಿಗಳು ಗಳಿಸಿದ ದಿವ್ಯಾನುಭವವನ್ನು ತ್ಯಜಿಸಿ ಮುಂದೆ ಸಾಗಲು ಪ್ರಯತ್ನಿಸಿದರೆ ನಾವು ಜೀವನ್ಮೃತರೇ ಸರಿ. ಪಾಶ್ಚಾತ್ಯ ಸಂಸ್ಕೃತಿಯ ಬಾಹ್ಯಾಡಂಬರಕ್ಕೆ ಮೋಹಿಸುವದೆಂದರೆ ಮಾಯಾಮೃಗಕ್ಕೆ ಮನಸೋತಂತೆ. ನಮ್ಮ ಪರಂಪರೆಯ ಅಂತರಾಳವನ್ನು ನೆನೆದು ಅದನ್ನು ಅರಗಿಸಿಕೊಂಡು ಮಾತ್ರ ನಾವು ಮುಂದೆ ಸಾಗಬಹುದು.

ಅನೇಕ ಮತಗಳ ತವರಮನೆಯಾದ ಕರ್ನಾಟಕವು ಭರತಖಂಡಕ್ಕೆ ಮಹತ್ವದ

ಸೇವೆಯನ್ನು ಸಲ್ಲಿಸಬೇಕಾಗಿದೆಯೆಂದು ಅವರ ತಿಳಿವಳಿಕೆಯಾಗಿದೆ. ಅವರು ಕನ್ನಡದ ಸಾಹಿತ್ಯ ಇಲ್ಲವೇ ಸಂಸ್ಕೃತಿಯ ಬಗ್ಗೆ ಮಾತನಾಡುವಾಗೆಲ್ಲ ಈ ತಿಳುವಳಿಕೆಯು ಹೊರ ಮೂಡುತ್ತದೆ. ಜೈನ ಕವಿಯಾಗಲಿ, ಶಿವಶರಣರಾಗಲಿ, ದಾಸರಾಗಲಿ - ಅವರೆಲ್ಲರ ಕೃತಿಗಳನ್ನೆಲ್ಲ ಇದೇ ದೃಷ್ಟಿಯಿಂದ ಮಾಸ್ತಿಯವರು ಪರಿಶೀಲಿಸಿದ್ದಾರೆ. ನಮ್ಮ ಇಂದಿನ ಸಾಹಿತಿಗಳು ಉಳಿದ ಯಾವ ಪ್ರಾಂತದ ಇಲ್ಲವೇ ದೇಶದ ಸಾಹಿತಿಗಳಿಗಿಂತಲೂ ಕಡಿಮೆಯಿಲ್ಲ. ಇದನ್ನೇ ಇಂದು ಉಳಿದವರು ತಿಳಿಯುವಂತೆ ನಾವು ದುಡಿಯಬೇಕು. ನಮ್ಮ ಉಜ್ವಲ ಪರಂಪರೆಯನ್ನು ಮುಂದೆ ಸಾಗಿಸಿಕೊಂಡು ಹೋಗಬೇಕು.

ಹೀಗೆ ಪ್ರಾಂತೀಯತೆ, ರಾಷ್ಟ್ರೀಯತೆ, ವಿಶ್ವಪ್ರೇಮ, - ಈ ಮೂರು ಭಾವನೆಗಳು ಸಮನಾಗಿ ಬೆರೆತುಕೊಂಡು ಮಾಸ್ತಿಯವರ ವ್ಯಕ್ತಿತ್ವಕ್ಕೆ ಒಂದು ಕಳೆಯನ್ನು ಕೊಟ್ಟಿವೆ. ವೇದಾಂತದಲ್ಲಿ ಬೆರೆತ ಅವರು ವ್ಯವಹಾರವನ್ನು ಮರೆತಿಲ್ಲ. ವ್ಯಕ್ತಿಗೆ ಶಾಂತಿ ಬೇಕು; ಜಗತ್ತಿಗೆ ಸುಖಬೇಕು: ಈ ಬೇಡಿಕೆಯು ಎಲ್ಲ ಮಾನವರ ಹೃದಯದಿಂದ ತುಂಬಿ ಬರುವಂತೆ ಮಾಡುವದೇ ಇಂದಿನ ದ್ರಷ್ಟಾರರ ಹಾಗೂ ವಕ್ತಾರರ ಕೆಲಸವಾಗಿದೆ. ಇದು ಇವತ್ತು ಸಾಧಿಸದಿದ್ದರೂ ನಾಳೆ ಸಾಧಿಸಬಹುದಲ್ಲ? ರಾಮಾಯಣದ ಬಗ್ಗೆ ಮಾತನಾಡಲಿ ಇಲ್ಲವೇ ಇಲಿಯಡ್‌ನ ಬಗ್ಗೆ ಮಾತನಾಡಿಲಿ - ನಮ್ಮ ಕೌಟುಂಬಿಕ, ಸಾಮಾಜಿಕ, ರಾಜಕೀಯ ಹಾಗೂ ಆಂತರಿಕ ಜೀವನದಲ್ಲಿ ಶಾಂತಿ-ಸುಖಗಳನ್ನು ತಂದು ಹೇಗೆ ನಿಲ್ಲಿಸಬಹುದೆಂಬುದನ್ನೇ ಮಾಸ್ತಿಯವರು ವಾಡಿಕೆಯಾಗಿ ಹೇಳುತ್ತಾರೆ. ವಸ್ತುವು ಹೀಗೆ ಏಕಮೇವವಾದರೂ, ಒಮ್ಮೊಮ್ಮೆ ಉಪನ್ಯಾಸದ ವಿಷಯದ ಪುನರಾವೃತ್ತಿಯಾದರೂ ಅವರ ಮಾತುಗಾರಿಕೆಯ ರೀತಿಯು ಚಿರ ನವೀನವಾಗಿದೆ.

ಈ ರೀತಿಯ ಬಗ್ಗೆ ಹಿಂದೆ ಒಂದೆರಡು ಮಾತು ಹೇಳಿದೆ. ಸರ್ವಸಾಮಾನ್ಯರಿಗೂ ಚಿತ್ತಾಕರ್ಷಕವಾಗುವಂತೆ ಇವರ ಉಪನ್ಯಾಸಗಳಲ್ಲಿ ಉದಾಹರಣೆಗಳೂ ಉಪಮೆಗಳೂ ತುಂಬಿಕೊಂಡಿರುತ್ತವೆ. 'ಕರ್ನಾಟಕ ಜನತೆಯ ಸಂಸ್ಕೃತಿ'ಯ ಮೇಲೆ ಮಾಸ್ತಿಯವರ ಉಪನ್ಯಾಸವನ್ನು ಕೇಳಿದ ಒಬ್ಬರು: ''ಇವರು ಸಣ್ಣ ಕತೆಯ ಜನಕರೆಂಬುದು ನಿಜ ನೋಡಿರಿ! ಮಾತುಮಾತಿಗೆ ಕತೆಗಳನ್ನು ತಂದು ಕಠಿಣವಾದುದನ್ನೆಲ್ಲ ಸುಲಭವಾಗಿಸಿ ಬಿಡುತ್ತಾರೆ'' ಎಂದು ಉದ್ಗಾರ ತೆಗೆದರು. ಮಾಸ್ತಿಯವರು ಎಲ್ಲ ಧರ್ಮಗಳ ಸಾಹಿತ್ಯವನ್ನು ಸೂಕ್ಷ್ಮವಾಗಿ ಅಭ್ಯಸಿಸಿದ್ದಾರೆ. ಬುದ್ಧ ದೇವ, ಏಸುಕ್ರಿಸ್ತ, ರಾಮಕೃಷ್ಣರು - ಇವರೆಲ್ಲ ತಮ್ಮ ಜ್ಞಾನವನ್ನು ಜನತೆಗೆ ಹೇಗೆ ದಯಪಾಲಿಸಿದರು? ಕಥೆಗಳ ಮಾರ್ಗವಾಗಿ ಉಚಿತ ಉದಾಹರಣೆಗಳನ್ನು ಕೊಟ್ಟು. ಸಾಹಿತ್ಯದಲ್ಲಿ ಕಾಳಿದಾಸ - ಶೇಕ್ಸಪಿಯರರ ಮಾರ್ಗವನ್ನು ತುಳಿಯಬೇಕೆಂದು ಮಾಸ್ತಿಯವರು ನಿಶ್ಚಯಿಸಿದಂತೆ ಮಾತಿನಲ್ಲಿ ಈ ಮಹಾತ್ಮರ ರೀತಿಯು ಅವರಿಗೆ ಸಮ್ಮತವಾಗಿರಬೇಕು. ಅಂತೇ ಅವರು ಇಷ್ಟು ಯಶಸ್ವಿಯಾಗಿ ಅದನ್ನು ಉಪಯೋಗಿಸುತ್ತಾರೆ. ತಮ್ಮ ಕಾಣ್ಕೆಯನ್ನು ಮೇಲೆ ಹೇಳಿದ ಪುಣ್ಯಪುರುಷರನ್ನು ನೆನೆದು ಅವರಿಂದ ಪಡೆದುಕೊಂಡ ರೀತಿಯಲ್ಲಿ ವಿಶದಪಡಿಸುತ್ತಾರೆ. ಜೀವನ, ಸಾಹಿತ್ಯ, ಉಪನ್ಯಾಸ - ಇವೆಲ್ಲ ವಿವಿಧಾಂಗಗಳಲ್ಲಿ ಮಾರ್ಗವೇ ಮಾಸ್ತಿಯವರು ಒಪ್ಪಿದ ವಿಧಾನ. ದೇಸಿಯು ಅದರಲ್ಲಿ ಅಂಗವಾಗಿ ಮಾತ್ರ ಬರುತ್ತದೆ.

ಮಾರ್ಗವನ್ನೊಪ್ಪಿಕೊಂಡ ಸಾಹಿತಿಯಾಗಲಿ ಉಪನ್ಯಾಸಕಾರನಾಗಲಿ ಉದ್ವಿಗ್ನನಾಗುವದು ಸಾಧ್ಯವಿಲ್ಲ. ಅಂತೆ ಮಾಸ್ತಿಯವರ ಮಾತುಗಾರಿಕೆಯು ಹಳ್ಳದಂತೆ ಕೊಚ್ಚಿಕೊಂಡು ಬರುವದಿಲ್ಲ. ಮಹಾಪೂರ ಬಂದ ನದಿಯಂತೆ ತೇಲಿಸಿಕೊಂಡು

ಹೋಗುವದಿಲ್ಲ, ಇಲ್ಲವೆ ತಳದಲ್ಲಿ ನೀರನ್ನಿಟ್ಟುಕೊಂಡ ಬಾವಿಯಂತೆ ಕೇಳಿ ತಣಿಯಲು ಬಂದವರನ್ನು ಸೇದಿ ಹಗ್ಗ ಹಾಕಲು ಹಚ್ಚಿಸುವದಿಲ್ಲ. ಒಂದೆರಡು ಕ್ಷಣ ಮಳಲನ್ನು ಸುರಿಸಿದಾಗ ಮಾತ್ರ ನೀರು ತೋರಿಸುವ ಒರತೆಯಂತೆ ಸಹ ಮಾಸ್ತಿಯವರ ಮಾತುಗಾರಿಕೆಯಾಗಿರುವುದಿಲ್ಲ. ನಿಧಾನವಾಗಿ, ಒಂದೇ ಸಮನೆ ಹರಿಯುತ್ತಿರುವ ಹೊಳೆಯದು. ಅದರ ಪಾತ್ರದಲ್ಲಿ ಹೆಚ್ಚಿಲ್ಲ, ಕಡಿಮೆಯಿಲ್ಲ. ಹೊಳೆಯು ಹರಿಯುತ್ತಿರುವಾಗ ಯಾರೂ ಅದರಲ್ಲಿ ತಮ್ಮ ದೋಣಿಯನ್ನು ಬಿಟ್ಟು ಕುಳಿತುಕೊಂಡು ಸಾಗಬಹುದು. ಹೊಳೆಯಲ್ಲಿ ಸುಳಿಗಳಿಲ್ಲ, ಮಡವುಗಳಿಲ್ಲ, ಚಕ್ರಗಳಿಲ್ಲ, ಬಂಡೆಗಲ್ಲುಗಳಿಲ್ಲ. ಹಸಿರು ಹಾಸಿದ ದಂಡೆಗಳ ನಡುವೆ ನಿರಾಯಾಸವಾಗಿ ಹೊಳೆಯು ಹರಿಯುತ್ತಿರುತ್ತದೆ. ನಿರ್ಮಲೋಕದ ಕೆಳಗೆ ಲಕಲಕನೆ ಒಮ್ಮೊಮ್ಮೆ ಹೊಳೆದು ತಳವು ಕಾಣಿಸಿಕೊಳ್ಳುತ್ತದೆ.

ಇಂಥ ಶೈಲಿಗೆ ಹಾವಭಾವಗಳಿಗೆ, ಕೈ ಬೀಸಾಡುವದೇಕೆ, ಮೈ ಹೊರಳಿಸಾಡುವದೇಕೆ? ದೇಶವು ಆತ್ಮದ ವಾಹನವಾಗಿ ನಾಲಿಗೆಯು ಸರಸ್ವತಿಯು ಅಲುಗಾಡಿಸಿದ ಕುಡುಹವಾದರೆ ಸಾಕು. ಇದಕ್ಕಿಂತ ಹೆಚ್ಚಿನದೇನು ಬೇಕು?

ಇಂದಿನ ವಾಗ್ಮಿಗಳಿಗೆ ಆಂಗ್ಲ ಭಾಷೆಯ ಮೇಲಿನ ಪ್ರಭುತ್ವವು ಅವಶ್ಯವಾಗಿದೆ. ನಮ್ಮ ಪ್ರಾಂತದ ಸಾಹಿತ್ಯವನ್ನು ಹೊರಗಿನವರಿಗೆ ತಿಳಿಸಿಕೊಡಬೇಕಾದರೆ ಇಂಗ್ಲಿಷಿನಲ್ಲಿ ನಾವು ಅದರ ಬಗ್ಗೆ ಮಾತನಾಡಬೇಕು, ಬರೆಯಬೇಕು. ಈ ಎರಡೂ ರೀತಿಯಲ್ಲಿ ಮಾಸ್ತಿಯವರು ಕೆಲಸಮಾಡುತ್ತ ಬಂದಿದ್ದಾರೆ. ಈಗ ಸುಮಾರು ಹನ್ನೆರಡು ವರ್ಷಗಳ ಹಿಂದೆ ಅವರು ಧಾರವಾಡ ಕಾಲೇಜಿನ ಸಂಘದ ವಾರ್ಷಿಕೋತ್ಸವದ-ಅತಿಥಿಗಳಾಗಿ ಬಂದಿದ್ದರು. ಅಲ್ಲಿ ಬಂದ ಮೇಲೆ ಇಂಗ್ಲಿಷಿನಲ್ಲಿ ಮಾತನಾಡಬೇಕಾಗುವದೆಂಬುದು ಗೊತ್ತಾಯಿತು. 'ಕರ್ನಾಟಕ ಕಾಲೇಜಿನ ಪ್ರೊಫೆಸರಿಗೆ ನಾನು ಕನ್ನಡದಲ್ಲಿ ಮಾತನಾಡಿದರೆ ತಿಳಿಯುವದಿಲ್ಲವೆಂಬುದು ನನಗೆ ಗೊತ್ತಿದ್ದಿಲ್ಲವೆಂದು' ಹೇಳಿ ಅವರು ಇಂಗ್ಲಿಷಿನಲ್ಲಿ ತಮ್ಮ ಭಾಷಣವನ್ನು ಪ್ರಾರಂಭಿಸಿದರು. ಮುಂಬಯಿಯಲ್ಲಿ ಪಿ.ಇ.ಎನ್. ಮಂಡಳದ ಮುಂದೆ ಅವರ ಕನ್ನಡ ಸಾಹಿತ್ಯವನ್ನು ಕುರಿತು ಮಾತನಾಡಿದುದನ್ನು ನಾನು ಕೇಳಿದ್ದೇನೆ. ತಮ್ಮ ಭಾಷಣವನ್ನು ಬರೆದುಕೊಂಡು ಬಂದಾಗ, ಮಾಸ್ತಿಯವರಿಗೆ ಕಟ್ಟಿಹಾಕಿದ ಹಾಗಾಗುತ್ತದೆ. ಸಾಂಗಲಿಗೆ ಬಂದಾಗ ಅವರ ಎರಡು ಭಾಷಣಗಳು ಇಂಗ್ಲಿಷಿನಲ್ಲಾದವು. ಕೇಳಿದವರೆಲ್ಲ ತಲೆದೂಗಿದರು. ಇವರ ಇಂಗ್ಲಿಷಿನಲ್ಲಿ ಅಪ್ಪಿತಪ್ಪಿ ಒಂದಾದರೂ ತಪ್ಪು ಸಿಗಬಹುದೆಂದು ತಜ್ಞರು ಕೆಲವರು ಕಿವಿ ತೆರೆದು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ತಾಸುಗಟ್ಟಲೆ ಕೂತರು. ಅವರೆಲ್ಲ ನಿರಾಶರಾಗಬೇಕಾಯಿತು. ನಿರಾಯಾಸವಾಗಿ ನಿರರ್ಗಳವಾಗಿ ಸೆಲೆಯಂತೆಯೋ ತೊರೆಯಂತೆಯೋ ಅವರ ಇಂಗ್ಲಿಷು ಸ್ವಚ್ಛಂದವಾಗಿ ಹರಿದುಬರುತ್ತದೆ. ಇಲ್ಲಿ ಇಂದ್ರ ಚಾಪಗಳು ಮೂಡಿರುವುದಿಲ್ಲ; ಆದರೆ ಸೂರ್ಯನ ಪ್ರತಿಬಿಂಬವು ಮಾತ್ರ ತೊರೆಯ ಹೃದಯವನ್ನೆಲ್ಲ ಬೆಳ್ಳಿಯಾಗಿಸಿರುತ್ತದೆ. ಹಿಮಾಲಯದಿಂದ ಹರಿದುಬಂದ ಹೊನಲ ಮಿನುಗನ್ನು ಉಳಿದ ಚೆಲುವು ಸರಿಗಟ್ಟಬಹುದು, ಮೀರಲಾರದು. ಆಕ್ಸಫರ್ಡಿಗಾಗಲಿ ಕೇಂಬ್ರಿಜ್ಜಕ್ಕಾಗಲಿ ಮಾಸ್ತಿಯವರು ಹೋಗಿ ಬಂದವರಲ್ಲ. ಆದರೆ ಅಲ್ಲಿಯ ರೀತಿಗಳು ಅವರ ಮಾತಿನಲ್ಲಿ ಎದ್ದು ಕಾಣುತ್ತವೆ.

ಹಿರಿಯರನ್ನು ಮನ್ನಿಸುವುದರಲ್ಲಿಯೂ ಕಿರಿಯರನ್ನು ಹುರಿದುಂಬಿಸುವದರಲ್ಲಿಯೂ ಮಾಸ್ತಿಯವರನ್ನು ಮೀರಿದವರಿಲ್ಲ. ಮುದವೀಡು

ಕೃಷ್ಣರಾಯರನ್ನು ಬೆಳಗಾವಿ ಸಮ್ಮೇಳನದ ಅಧ್ಯಕ್ಷ ಪದವಿಗೆ ಆರಿಸುವಾಗ ಅವರು ಮಾಡಿದ ಭಾಷಣವು ಎಷ್ಟೊಂದು ವಿನಯಪೂರ್ಣವಾಗಿತ್ತು, ವಿನೋದಪೂರ್ಣವಾಗಿತ್ತು! ತಮ್ಮನ್ನು ನಿಷ್ಕಾರಣವಾಗಿ ಅಲ್ಲಗಳೆದುಕೊಳ್ಳದೆ ಮಾಸ್ತಿಯವರು ಉಳಿದವರಿಗೆ ಸಲ್ಲಬೇಕಾದುದನ್ನು ಸಲ್ಲಿಸುತ್ತಾರೆ. ಒಮ್ಮೆ ಕೆಲವು ಸ್ನೇಹಿತರೊಡನೆ ಅವರು ಬೇರೆ ಬೇರೆ ಊರುಗಳಿಗೆ ಹೋಗಿ (ಅನೇಕ ವರ್ಷಗಳಿಂದ ಮುಟ್ಟಿಸಬೇಕಾದ 'ಸಾಲ'ವನ್ನು ಮುಟ್ಟಿಸಲೆಂದು ಅವರೇ ಹೇಳಿದರು!) ಉಪನ್ಯಾಸಗಳನ್ನಿತ್ತರು. ಮೊದಲು ತಮ್ಮ ಜೊತೆಗಿದ್ದ ತರುಣ ಸಾಹಿತಿಗಳನ್ನು ಮಾತನಾಡಿಸಲೆಬ್ಬಿಸಿ ಕೊನೆಗೆ ಅವರು ತಮ್ಮ ಕಾರ್ಯಕ್ರಮವನ್ನು ಇಟ್ಟುಕೊಳ್ಳುತ್ತಿದ್ದರು. ಅಲ್ಲದೆ ತಾವು ಮಾತನಾಡುತ್ತಿರುವಾಗ ಪ್ರತಿ ಸಲ ತಮಗಿಂತ ಮೊದಲು ಮಾತನಾಡಿದ ತರುಣ ಸ್ನೇಹಿತರು ಒಂದಿಲ್ಲ ಒಂದು ರೀತಿಯಿಂದ ಹೆಚ್ಚು ಯೋಗ್ಯತೆಯವರೆಂದು ತಪ್ಪದೆ ಹೇಳುತ್ತಿದ್ದರು. ಕೊನೆಗೆ ಒಮ್ಮೆ ಅವರಿಗೇ ಈ ವಿಚಾರವು ಬಿದ್ದಿತು. ಅವರು ಉತ್ಕಟವಾಗಿ ಅನಿಸಿಕೊಂಡ ಮಾತದು, ನೈಜವಾದ ಅಂತಃಕರಣದಿಂದ ಹೇಳಿದ್ದು. ಹಾಗಾದರೆ ಇದರಲ್ಲಿ ಸತ್ಯವಿದೆಯೇ? ಇದೆ. ಇರದೆ ಏನು? ಒಮ್ಮೆಲೆ ಅವರಿಗೆ ರಾಮಾಯಣದಲ್ಲಿಯ ಒಂದು ಸನ್ನಿವೇಶವು ನೆನಪಾಯಿತು. ಹನುಮಂತನು ಸಮುದ್ರವನ್ನು ದಾಟಿ ಹಾರಿ ಬಂದ ಮೇಲೆ ಎಲ್ಲರೂ ಅವನ ಪರಾಕ್ರಮನ್ನು ವರ್ಣಿಸತೊಡಗಲು, ಆಗ ಹನುಮಂತ ಹೇಳಿದನಂತೆ: ''ನನ್ನೊಡೆಯ ಸುಗ್ರೀವನ ಆಶ್ರಯದಲ್ಲಿ ನನಗಿಂತ ಕಿರಿಯರಿಲ್ಲ,' ಎಂದು! ಇಲ್ಲೆಂದು ಹೇಳುವದು ಹೇಗೆ? ಉಳಿದವರನ್ನು ಒರಗೆ ಹಚ್ಚುವ ಕಾಲವಿನ್ನೂ ಬಂದಿರಲಿಲ್ಲ. ಅವರಲ್ಲಿ ಎಷ್ಟು ಜನ ಹೆಚ್ಚಿನವರು ಕಂಡುಬರುವರೋ ಯಾರಿಗೆ ಗೊತ್ತು! ಹನುಮಂತನಾಡಿದ ಮಾತು ಬರಿ ಉಪಾಚಾರವಲ್ಲ, ಮನಸ್ಸಿನಲ್ಲಿ ಬಲವತ್ತರವಾಗಿ ಬಂದ ವಿಚಾರವೆಂದು ಮಾಸ್ತಿಯವರು ಹೇಳಿದರು.

ಇಂದಿನ ತರುಣ ಸಾಹಿತಿಗಳಲ್ಲಿ ಹಲವರು ಹನುಮಂತರಾಗಿರಬಹುದು, ಕೆಲವರು ಹಾರಗುಬ್ಬಿಗಳಾಗಿರಬಹುದು. ಆದರೆ ಮಾಸ್ತಿಯವರ ಸಾಹಿತ್ಯದಲ್ಲಿ ಮಾತ್ರ ಬಲಭೀಮನ ಸಾಮರ್ಥ್ಯವಿದ್ದುದು ನಿಜ. ಇಂದಿನವರು ಹನುಮಂತನನ್ನು ಮೀರುವದು ಹಾಗಿರಲಿ, ಅವನಷ್ಟು ಎದೆಗಾರಿಕೆಯನ್ನು ತೋರಿಸಿದರೂ ಅವರ ಪ್ರಯತ್ನಕ್ಕೆ ಯಶಸ್ಸು ದೊರೆತಂತಾಯಿತೆಂದು ನಾವು ಭಾವಿಸಬಹುದು.

ಮಾಸ್ತಿಯವರ ಮಾತುಗಾರಿಕೆ

ಪ್ರೊ|| ಕೆ.ವಿ. ರಾಘವಾಚಾರ್

ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಭಾವಚಿತ್ರ ಅನಾವರಣ ಮಹೋತ್ಸವದ ಸಂದರ್ಭದಲ್ಲಿ * ಮಾತನಾಡಬೇಕೆಂದು ನನಗೆ ಕರೆ ಬಂದಾಗ ಮೊದಲು ಒಪ್ಪಲಿಲ್ಲ. ಆದರೆ ಹಿನ್ನೆನವಿನಿಂದ, ಈಗಿನ ಎಲ್ಲ ಬಗೆಯ ಹೊಸ ಕನ್ನಡ ಸಾಹಿತ್ಯದ ಆಗಿಗೆ ದುಡಿದು ಹೆಸರು ಗಳಿಸಿದ ಹಿರಿಯರಿಗೆ ಭಕ್ತಿ ಸಮರ್ಪಿಸುವ ಅವಕಾಶವನ್ನು ಕಳೆದುಕೊಳ್ಳುವುದು ದೌರ್ಭಾಗ್ಯವೇ ಸರಿ ಎಂದರಿತು ಕಿರಿಯನಾದ ನಾನೂ ಅವರ ಕಿರುವಡಿಯಲ್ಲಿ ಒಂದು ಎಸಳನ್ನು ತಂದೊಪ್ಪಿಸಬೇಕೆಂದು ಮುಂದೆ ಬಂದಿದ್ದೇನೆ. ಮೌನದ ಕಾಣಿಕೆಯ ಜೊತೆಗೆ ಮಾತಿನ ಪೋಣಿಕೆಯೂ ಇರಲೆಂದು ಬಯಸಿ ಮಾತರಿಯದ ಮೂಕ ನಾನು ಮಾಸ್ತಿಯವರ ಮಾತುಗಾರಿಕೆಯನ್ನು ಕುರಿತು ಹೇಳುವ ಸಾಹಸಕ್ಕೆ ತೊಡಗಿದ್ದೇನೆ. ನಾನು ಅವರನ್ನು ಮೊದಲು ಕಂಡದ್ದು ಸುಮಾರು ಇಪ್ಪತ್ತು ವರ್ಷಗಳ ಕೆಳಗೆ, ನಾನು ಇನ್ನೂ ಹುಡುಗನಾಗಿದ್ದಾಗ. ಅಂದಿನಿಂದ ಅವರು ನನ್ನನ್ನು ಒಂದೇ ಬಗೆಯ ವಾತ್ಸಲ್ಯದಿಂದ ಕಾಣುತ್ತಿದ್ದಾರೆ; ಸಂದರ್ಭಬಿದ್ದಾಗ ಸಲಿಗೆ ವಹಿಸಿ ಬುದ್ಧಿ ಹೇಳಿದ್ದಾರೆ. ಅವರ ಈ ತವರೊಲವೂ ತಿದ್ದೂ ನನ್ನ ಬಾಳ ಕೊನೆಯವರೆಗೂ ದೊರೆಯುವ ಭಾಗ್ಯ ನಡೆದು ಬರಲೆಂಬುದೇ ನನ್ನ ಹೆಬ್ಬಯಕೆ. ಇಪ್ಪತ್ತು ವರ್ಷಗಳ ಬಯಕೆ ಇದ್ದರೂ ಅವರ ಕೃತಿರಾಶಿಗಳನ್ನೆಲ್ಲ ಓದಿದ್ದರೂ ಹಲವೊಮ್ಮೆ ಅವರ ಮಾತು ಕತೆಗಳನ್ನು ಕೇಳಿದ್ದರೂ ಅವರ ಹೃದಯದ ಆಳವನ್ನಾಗಲಿ ಪ್ರತಿಭೆಯ ಮುಗಿಲನ್ನಾಗಲೀ ಪೂರ್ತಿ ಕಂಡು ಮುಟ್ಟಿರುವೆನೆಂದು ಹೇಳಲಾರೆ. ನಾನು ಎಲ್ಲ ಬಗೆಯಿಂದ ಕಿರಿಯನಿರುವುದೂ ಒಂದು ಕಾರಣವಾದರೂ, ಮುಖ್ಯ ಕಾರಣ - ಕರ್ತ ಕೃತಿಗಿಂತ ದೊಡ್ಡವನು, ಕಾವ್ಯದಲ್ಲಿ ಇಳಿದಿರುವುದಕ್ಕಿಂತ ಕವಿ ಹೃದಯದಲ್ಲಿ ಹೆಚ್ಚು ತುಂಬಿದೆ. ಹಿರಿಯರ ಹಿರಿಮೆ ಆಳವಿಲ್ಲದ್ದು, ಅರಿವು ಮೀರಿದ್ದು. ಆದರೂ ನನ್ನ ತೊದಲು ನುಡಿಗಳಿಂದಲೇ ಅವರ ಒಂದು ತನಿಗುಣವನ್ನು-ಅವರ ಮಾತುಗಾರಿಕೆಯ ಹಿರಿಮೆಯನ್ನು ಹೇಳತೊಡಗಿದ್ದೇನೆ.

'ಮಾತುಗಾರಿಕೆ'ಯಲ್ಲಿ ನಾಲಗೆಯಾಟದ ಬೆಡಗೂ ಕೈಯೋಟದ ಬೆಡಗೂ ಸೇರುತ್ತದೆ. ಅದರಲ್ಲಿಯೂ ಮಾಸ್ತಿಯವರ ವಿಷಯದಲ್ಲಿ ಆ ಮಾತನ್ನು ಹಾಗೆ ವ್ಯಾಪಕಾರ್ಥದಲ್ಲಿ ಬಳಸುವುದು ಸುಲಭ. ಆಡುವ ಮಾತಿಗೂ ಬರೆಯುವ ಮಾತಿಗೂ ಅಂತರ ಬಹಳ ಕಡಿಮೆ ಅವರಲ್ಲಿ; ಇಲ್ಲವೇ ಇಲ್ಲವೆಂದರೂ ತಡೆದೀತು. ಎಂದರೆ, ಅವರ ಬರಹದಲ್ಲಿ ಕೇವಲ ಗ್ರಂಥಸ್ಥ ಪದಗಳು ಅಪರೂಪ; ಅವರ ಆಡುನುಡಿ ಸಾಹಿತ್ಯ ಮಟ್ಟಕ್ಕೆ ಏರಿದೆ. ಜನ ನುಡಿಗೆ ಜೀವಕೊಟ್ಟು ಸಾಹಿತ್ಯದಲ್ಲಿ ಕುಣಿಸಿದ ಹಿರಿಮೆ ಮಾಸ್ತಿಯವರದು. ಜನದ ಬದುಕು ಸಾಹಿತ್ಯದಲ್ಲಿ ನುಡಿಯಬೇಕಾದರೆ, ಬೆಳಗಬೇಕಾದರೆ ಜನದ ಮಾತು ಅಲ್ಲಿ

* ಜೀವನ (೧೯೪೦) ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ ಲೇಖನ.

ನುಡಿಯಬೇಕು, ಬೆಳಗಬೇಕು. ಇಂಗ್ಲಿಷ್ ಸಾಹಿತ್ಯದಲ್ಲಿ ಈ ನಂಬಿಕೆಯಿಂದ ಬರೆಯತೊಡಗಿದ ವರ್ಡ್ಸ್‌ವರ್ತ್ ಕವಿಯ ಮೇಲೆ ಮೊದ ಮೊದಲು ಕೆಲವರು ಹೊರಿಸಿದ ದೂರೇ ನಮ್ಮಲ್ಲೂ ಕೆಲವೆಡೆಯಿಂದ ಕೇಳಬಂದುವು, ಪ್ರಾರಂಭದಲ್ಲಿ. ಒಂದೇ ಬಾವಿಯ ನೀರಿನ ಸವಿಗೆ ಪಳಗಿಹೋದ ನಾಲಗೆಗೆ ಮತ್ತೊಂದು ಬಾವಿಯ ನೀರಿನ ಸವಿ ಎಷ್ಟು ಇನಿದಾಗಿದ್ದರೂ-ಬೇಗ ರುಚಿಸದಂತೆ, ಕೇವಲ ಪ್ರೌಢಮಾರ್ಗದ ಸಂಪ್ರದಾಯ ಶೈಲಿಗೆ ಮಾತ್ರ ಒಗ್ಗಿದ್ದ ಅಭಿರುಚಿಗೆ ಈ ಹೊಸಬಗೆಯ ಸ್ವಾಭಾವಿಕ ಸರಳ ಬರವಣಿಗೆ ಸಪ್ಪೆಯಾಗಿ ತೋರಿತು. ಒಡವೆಯ ಮೆರಗು ಮೆಚ್ಚಿದ ಕಣ್ಣು ಒಡಲ ಚೆಲುವನ್ನು ಕಾಣಲಾರದಂತೆ, ಅಲಂಕಾರ ಭಾಷೆಗೆ ಅಭ್ಯಾಸವಾಗಿಬಿಟ್ಟು ಜನನುಡಿವ ಕಳೆನುಡಿಗಳ, ಜೀವನುಡಿಗಳ ಸಹಜ ಸೌಂದರ್ಯವನ್ನು ಕಾಣಲಾರದೆ ಹೋಗಿದ್ದೇವೆ. ಗ್ರಂಥದ ಪಾಂಡಿತ್ಯ, ಶಬ್ದಗಳ ಮೋಹಕ್ಕೆ ಕಟ್ಟುಬಿದ್ದು ಬಳಕೆ ನುಡಿಗಳ ನೇರಮಟ್ಟನ್ನೂ ಹಿರಿಹುರುಳನ್ನೂ ಅರಿಯದವರಾಗಿದ್ದೇವೆ. ನಾಡ ನುಡಿಯನ್ನು ಬಡವು ಮಾಡಿಬಿಟ್ಟಿದ್ದೇವೆ. ಹೀಗೆ ಈ ನಮ್ಮ ರುಚಿ ವೈಪರೀತ್ಯವೇ ಇಂಥ ಸಲ್ಲದ ದೂರುಗಳಿಗೆ ಕಾರಣ. 'ಅರುಹನ ಮೂರ್ತಿಯಂತಿರೆ ನಿರಾಭರಣಂ ಮೆರೆಯಲ್ಕೆ ಪೇಳ್ದಪೆನ್' ಎಂಬ ಜನ್ನನ ವಾಕ್ಯ ಮಾಸ್ತಿಯವರ ಮಾತುಗಳಿಗೆ ಬಲು ಚೆನ್ನಾಗಿ ಒಪ್ಪುತ್ತದೆ.

ಮಾಸ್ತಿಯವರ ಬದುಕಿನಲ್ಲೆಂತೊ ಅವರ ಮಾತಿನಲ್ಲೂ ಅಂತೆಯೆ ಬಿರುಸು, ಒರಟು, ರಭಸ, ಆರ್ಭಟ, ಆಡಂಬರ, ಕಾಠಿನ್ಯ ಜಟಿಲತೆ ಇವೊಂದರ ಸುಳಿವೂ ಇಲ್ಲ. ಎಲ್ಲೆಡೆಯೂ ನಮಗೆ ಅರಿವಾಗುವುದು ಅವರ ನಯ, ನವುರು, ಮೆಲುಪು, ಲಾಲಿತ್ಯ, ಮಾರ್ದವ, ಸರಳತೆ, ಸೌಲಭ್ಯ. ಮನನೋಯಿಸುವ ಮೆದುಳು ಸೋಲಿಸುವ ಪದ ಪ್ರಯೋಗ ಅವರಲ್ಲಿ ಇಲ್ಲವೇ ಇಲ್ಲವೆನ್ನಬಹುದು. ಅವರ ಸರಳ ಸುಲಭ ಶೈಲಿಯನ್ನು ನಾವು ಎಷ್ಟು ಮಟ್ಟಿಗೆ ಮೆಚ್ಚಿಕೊಂಡಿದ್ದೇವೆ ಎಂಬುದಕ್ಕೆ ಒಂದು ಉದಾಹರಣೆ ಕೊಡಬಹುದು, ಒಮ್ಮೆ ಅವರು 'ವರ್ತ್ಮನಿ' ಎಂಬ ಪದವನ್ನು ಪ್ರಯೋಗಿಸಿದ್ದು ನೋಡಿ ನಮ್ಮಲ್ಲಿ ಕೆಲವರಿಗೆ ಬಲು ಬೆರಗಾಯಿತು. ಈ ಅಸಾಧಾರಣ ಕಠಿಣ ಸಂಸ್ಕೃತ ಪದ ಪ್ರಯೋಗಕ್ಕಾಗಿ ಕೆಲವು ಹುಡುಗಾಟದ ಟೀಕೆಗಳೂ ನಡೆದುವು. ಕೆನೆಹಾಲು ಸವಿಯೆಂದು ನಾಲಗೆಯ ರುಚಿಯನ್ನು ತಿದ್ದಿ, ಕೊನೆಗೆ ಈ ಕಬ್ಬಿಣದ ಕಡಲೆಯನ್ನು ಕಡಿಯುವುದಕ್ಕೆ ಕೂಡಬೇಕೆ!

ಮಾಸ್ತಿಯವರದು ತೆರೆಯೆದ್ದು ಕಲಕಿದ ಕಡಲಮೊರೆತವಲ್ಲ. ಅವರ ಮಾತಿನ ಸರಿ ಆಳವಾದ ತುಂಬು ನೀರಗುಣ್ಪಿನ ಹೊನಲಿನಂತೆ. ಅಲ್ಲೋಲ ಕಲ್ಲೋಲವೆದ್ದ ಕ್ಷುಬ್ಧ ಸಾಗರದ ಘೋಷಾಘಾತದಿಂದ ಕಿವುಡು ಬಿದ್ದ ಕಿವಿ ಪ್ರಶಾಂತವಾದ ಮಹಾ ನದಿಯ ಗಂಭೀರ ಪ್ರವಾಹದ ಇಂಚರವನ್ನು ಅರಿಯುವುದು ಕಷ್ಟ. ಕಿವಿಗೊಟ್ಟು ಕೇಳಬೇಕು. ಅವರ ಮಾತು ಚಾವಟಿಯಿಂದ ಹೊಡೆದೆಬ್ಬಿಸುವಂಥದಲ್ಲ. ತಾಯಿ ಮಗುವನ್ನು ತಟ್ಟಿ ಎಬ್ಬಿಸುವಂಥದು. ಜಡ್ಡುಗಟ್ಟಿದ ಮೈಗೆ ಮೆಲ್ಲೇಟು ಹತ್ತದಂತೆ, ನಯಮಾತಿನ ಮೆಲುಮಟ್ಟು ಮನಕ್ಕೆ ತಟ್ಟುವುದು ಒಮ್ಮೊಮ್ಮೆ ಕಷ್ಟವಾದೀತು. 'ನಾನು ಮೆತ್ತಗೆ ಮಾತಾಡುತ್ತೇನೆ, ನಯವಾಗಿ ಹೇಳುತ್ತೇನೆ-ಮನನೋಯಿಸಬಾರದೆಂದು. ಆದರೆ, ಅದರಿಂದಲೇಯೋ ಏನೋ ಎಷ್ಟೋ ಸಲ ನನ್ನ ಅರ್ಥವನ್ನೇ ಜನರು ಸರಿಯಾಗಿ ಹಿಡಿಯುಂತೆ ಕಾಣುವುದಿಲ್ಲ' ಎಂದು ಅವರು ಒಮ್ಮೆ ಹೇಳಿದ್ದುಂಟು. ಪಂಪ ಹೇಳಿರುವ 'ಹಿತಮಿತವಚನ' ಎಂಬ ಮಾತು ಮಾಸ್ತಿಯವರಿಗೂ ಸಲ್ಲುತ್ತದೆ. ಎರಡು ಮಾತಿಗೆ ಎಡೆಯಿರುವಾಗ ಅವರು ಬಳಸುವುದು ಒಂದೇ ಮಾತು. ಅರ್ಥ ಮಾತಿನಲ್ಲಿ ಕೆಲಸವಾಗುವುದಾದರೆ ಒಂದು ಮಾತನ್ನು ಪೂರಾ

ಆಡರು, ಆದರೆ, ಆಡಬೇಕಾದ ಮಾತನ್ನು ಆಡದೆ ನುಂಗರು. ಅವರದು ನೇರವಾದ ನಿರುಕಾದ ಮಾತು; ಕಿರಿಚು ಬಳಸುಗಳಿಲ್ಲ; ಅಡಕ ನುಡಿ, ತಿಳಿ ಹುರುಳು.

ಅವರ ಕಳೆಮುಖದಲ್ಲಿ ಕಾಣುವ ನೆಮ್ಮದಿ, ತುಟಿಯಲ್ಲಿ ತುಳುಕುವ ನಸುನಗೆ, ಅವರ ಮಾತುಮಾತಿನಲ್ಲೂ ಮೂಡಿ ಕಾಣುತ್ತದೆ. ಅಗ್ಗದ ಹುಸಿನಗೆಯಲ್ಲ; ನೋವರಿಯದ ನೆಮ್ಮದಿಯಲ್ಲ. ಅವರ ಎದೆಯಾಳದ ಅಳಲು ನೋವುಗಳೇನೋ ನಾವರಿಯೆವು, ನೋವರಿಯದ ಬದುಕು ಬದುಕಲ್ಲ. ಬಾಳಿಗೆ ಬೆಲೆ ಬರಬೇಕಾದರೆ, ಹದ ಬರಬೇಕಾದರೆ, ಒಂದು ಜೀವ ದೊಡ್ಡದಾಗಬೇಕಾದರೆ ಅದಕ್ಕೆ ನೋವಿನ ಸಂಸ್ಕಾರ ಆಗಿರಬೇಕು. ಕಬ್ಬನ್ನು ಕಡಿದು ಹಿಂಡಿ ಕಾಯಿಸಿದರೂ ಅದರ ಸವಿಯನ್ನು ಬಿಡದು ಎಂಬುದು ಖಂಡ ಸತ್ಯ ಮಾತ್ರ. ಸಂಪೂರ್ಣ ಸತ್ಯ-ಹಾಲು ಬರಬೇಕಾದರೆ ಕಬ್ಬನ್ನು ಹಿಂಡಬೇಕು; ಬೆಲ್ಲವಾಗಬೇಕಾದರೆ ಕಾಯಬೇಕು, ಕುದಿಯಬೇಕು. ಆದರೆ ಎಚ್ಚರ! ಹದ ಮೀರಿದರೆ ಕೆಟ್ಟೀತು. ಅತಿ ಕಾದರೆ ಸೀದುಹೋದೀತು, ಕಯ್ಯಾದೀತು. ಹಿರಿಯರ ನೋವು ತಾಯ ಹೆರಿಗೆ ನೋವಿದ್ದಂತೆ. ಬರಿಯ ಬಾಳು ತುಂಬಲೆಂದು, ಕುಡಿ ಚಿಗುರಲೆಂದು, ಮನೆ ಬೆಳಗಲೆಂದು ತಾಯಿ ನೋವು ತಿನ್ನುತ್ತಾಳೆ. ಆ ನೋವಿನಲ್ಲೂ ಒಂದು ಸುಖವೆ ತಾಯಿಗೆ, ಹತ್ತು ಜನ ಬದುಕಲೆಂದು, ದೇಶ ದೊಡ್ಡದಾಗಲೆಂದು ಲೋಕ ಉದ್ಧಾರವಾಗಲೆಂದು ನೋವಿನ ನೊಗ ಹೊತ್ತ ಹಿರಿಯರು ಹಲವರಿದ್ದಾರೆ. 'ನೋವು ನನಗಿರಲಿ, ನಲಿವು ನಿಮಗಿರಲಿ' ಎನ್ನುವ ಮಹನೀಯರಲ್ಲಿ ಮಾಸ್ತಿಯವರೊಬ್ಬರು. ಯಾರ ವಿಷಯವಾಗಿಯೂ ಕಠಿನವಾಗಿ ನೆನೆಯರು, ನುಡಿಯರು. ಒಬ್ಬರಿಂದ ನಿರೀಕ್ಷಿಸಿದ ಕೆಲಸ ನಡೆಯದೆ ಹೋದಾಗ 'ಅವರು ಮಾಡಲಿಲ್ಲ ಎನ್ನಲಾರೆ; ಪಾಪ! ಮಾಡುವುದಕ್ಕೆ ಅವಕಾಶವಾಗಲಿಲ್ಲ ಎಂದು ತೋರುತ್ತೆ' ಎಂದು ಹೇಳುವಷ್ಟು ನಯ ಅವರದು. ಮತ್ತೊಬ್ಬರ ಮನಸ್ಸು ನೋಯಿಸಬಾರದೆಂಬ ಅವರ ಮನೋವೃತ್ತಿಗೆ ಅವರ ತಿರುಪಾಣಿಯಲ್ಲಿ ಬರುವ ಒಂದು ಪ್ರಸಂಗ ಕನ್ನಡಿಯಂತಿದೆ. (ಪಾಣಿಯ ತಂಗಿ ಗುಡಿಯ ಮುಂದೆ ಮಡಿಯಾಕೆಯೊಬ್ಬಳನ್ನು ಮಾತಾಡಿಸಿದಾಗ)

ಪಾಣಿ: ಅಮ್ಮಯ್ಯ, ನೀ ಜನರನ್ನ ಮಾತನಾಡಿಸಬೇಡ, ಅವರು ದೇವಸ್ಥಾನಕ್ಕೆ ಹೋಗೋರು, ಮೈಲಿಗೆಗೆ ಹೆದರುತಾರೆ.

ತಂಗಿ: ಮಾತು ಅಂತನ್ನೋದು ಅರಿವ್ಯಲ್ಲ ನೀರಲ್ಲ. ನಾ ಮಾತಾಡಿದರೆ ಅವರು ಮೈಲಿಗೆಯಾಗುತಾರೆಯೇ ಅಣ್ಣ?

ಪಾಣಿ: ಮೈಲಿಗೆ ಆಗುತ್ತಾರೊ ಇಲ್ಲೋ, ಆದಿವಿ ಅಂತ ತಿಳುಕೋತಾರೆ. ದೇವಸ್ಥಾನದಲ್ಲಿ ಮನಸ್ಸು ಸುಕವಾಗಿರೋಲ್ಲ. . . . . ಪಾಪ ಇಂತವರ ಬದುಕು ಕಷ್ಟ.

ಉಪಮೆ ಎಲ್ಲ ಅಲಂಕಾರಗಳಿಗೂ ಮೂಲ ಎಂದು ಹೇಳುವುದುಂಟು. ಅಷ್ಟೇ ಅಲ್ಲ. ಸಕಲ ಭಾವಗಳಿಗೂ ಜ್ಞಾನಗಳಿಗೂ ಈ ಉಪಮಾದೃಷ್ಟಿಯೇ ಮೂಲವೆನ್ನಬಹುದು. ಸಾಮಾನ್ಯವಾಗಿ ನಮ್ಮ ಅನುಭವಗಳೆಲ್ಲ ಹೋಲಿಕೆ ಮಾರಿಕೆಗಳಾಗಿ (ಸಾದೃಶ್ಯ ವೈದೃಶ್ಯಗಳಾಗಿ) ಎಂಗಡವಾಗುತ್ತವೆ. ಹೋಲಿಕೆ ಮಾರಿಕೆಗಳು ಒಂದೇ ಇರವಿನ ಎರಡು ನೋಟಗಳು. ಉಪಮೆ ಒಂದು ಸಣ್ಣ ವಾಕ್ಯದಷ್ಟು ಅಡಕವಾಗಿರಬಹುದು. ಒಂದು ದೊಡ್ಡ ಕತೆಯಷ್ಟು ಹರವಿರಬಹುದು. ಬರವಣಿಗೆಯಲ್ಲಿ ಹೇಗೆಯೋ ಹಾಗೆಯೇ ಮಾತಿನಲ್ಲೂ, ಮನೆಯಲ್ಲಿ ಕೆಳೆಯರೊಡನೆ ಹೇಗೆಯೋ ಹಾಗೆಯೇ ವೇದಿಕೆಯ ಮೇಲೆ ಸಭಿಕರ ಮುಂದೆಯೂ ಮಾಸ್ತಿಯವರು ಯಾವುದಾದರೊಂದು ಉಪಮೆಯನ್ನಾಗಲಿ ಕತೆಯನ್ನಾಗಲಿ ತರದೆ ಇರುವುದು ಅಪರೂಪ. ಒಂದು ಕತೆಯನ್ನೋ ಸಂಗತಿಯನ್ನೋ

ತೆಗೆದುಕೊಂಡು ಅದರ ಸುತ್ತ ಕಟ್ಟಡ ಕಟ್ಟುತ್ತ ಮಾತನಾಡುವುದು ನನ್ನ ವಾಡಿಕೆಯಾಗಿಬಿಟ್ಟಿದೆ ಎಂದು ಅವರೇ ಒಮ್ಮೆ ಹೇಳಿದ್ದಾರೆ.

ಆಧುನಿಕ ಜೀವನದ ಸಮಸ್ಯೆಗಳಿಗೆ ಅನ್ವಯಿಸುವಂತೆ ಯಕ್ಷ ಪ್ರಶ್ನೆಯ ಪ್ರತಿಪಾದನೆ; ಪಾಶ್ಚಾತ್ಯ ನಾಗರಿಕತೆಯನ್ನು ಮರ್ಮವರಿಯದೆ ಅನುಕರಣ ಮಾಡಿದರೆ ನಮಗೆ ಸಿಕ್ಕುವುದು ಸತ್ತ ರಾಕ್ಷಸನ ಹೆಣವೇ ಹೊರತು ನಾವು ಬಯಸಿದ ಜೀವಂತ ಸುಂದರ ವಸ್ತುವಲ್ಲ ಎಂಬ ವಿಷಯದಲ್ಲಿ ಮಾರೀಚ ಮಾಯಾಮೃಗದ ಉಪಮೆ; ಸಾಹಿತ್ಯಕ್ಷೇತ್ರದಲ್ಲಿ ಎಲ್ಲ ಮಟ್ಟದ ಎಲ್ಲ ಬಗೆಯ ಬರಹಗಾರರಿಗೂ ಸ್ಥಾನವುಂಟು ಎನ್ನುವುದಕ್ಕೆ ಮೂಲವಿಗ್ರಹ, ಉತ್ಸವ ಮೂರ್ತಿ, ದ್ವಾರಪಾಲಕ, ಸುತ್ತಣ ಗೊಂಬೆ, ಕಂಬ, ಗೋಡೆ, ಹಾಸುಗಲ್ಲು-ಎಲ್ಲವೂ ಸೇರಿ ರೂಪುಗೊಂಡ ದೇವರಗುಡಿಯ ಸಾಮ್ಯ; ಹೊತ್ತು ಮೂಡಿ ಬಿಸಿಲು ತಗುಲಿದೊಡನೆ ಕರಗಿ ಮಾಯವಾಗಲಿರುವ ಇಬ್ಬನಿಯ ಕಣ ತನ್ನ ಸಡಿಲ ಜೀವನವನ್ನು ಬಿಗಿಹಿಡಿದು ಹುಲ್ಲುಗರಕೆಯ ಮೇಲೆ ಇರುವತನಕವಾದರೂ ನಲಿದು ಕಂಗೊಳಿಸುವ ನೋಟ - ಇಂಥ ನೂರಾರು ಮಾಸ್ತಿಯವರ ನೆನಪು ಬಂದಾಗಲೆಲ್ಲ ಕಣ್ಣ ಮುಂದೆ ನಿಲ್ಲುತ್ತವೆ, ಕಟ್ಟುತ್ತವೆ. ಒಮ್ಮೆ, ಸಾಹಿತ್ಯದಲ್ಲಿ ಹಿರಿಯರ ವಾದ ವಿವಾದಗಳನ್ನು ಬಗೆಹರಿಸುವ ಪ್ರಯತ್ನದಿಂದ ತರುಣನೊಬ್ಬನು ಬರೆದಿದ್ದ ಬರಹವೊಂದರ ಮಾತು ಬಂತು. ಆಗ ಮಾಸ್ತಿಯವರು 'ಈ ಹುಡುಗ ದೊಡ್ಡವರಿಗೆ ಬುದ್ಧಿ ಹೇಳ ಹೊರಟಿರುವುದು ಹೇಗಿದೆ ಎಂದರೆ; ಅಪ್ಪ ಅಮ್ಮ ಮನೆಯಲ್ಲಿ ಹೋರಾಡುತ್ತಿರುವಾಗ ಆಡುವುದಕ್ಕೆ ಹೋಗಿದ್ದ ಮಗು ಬಂದು 'ಯಾಕೆ ಕಾದಾಡುತೀರಿ; ಕೊಂಚ ತಾಳಿ; ನಾನು ಎಲ್ಲ ಕೇಳಿ ಸಮಾಧಾನ ಮಾಡುತೇನೆ' ಎಂದು ಹೇಳಿದ ಹಾಗೆ ಇದೆ ಎಂದರು. ದೇವರ ಕರುಣೆಯ ವಿಷಯವಾಗಿ ಮಾತಾಡುತ್ತಾ ಒಮ್ಮೆ ಒಂದು ತಾಯಿ-ಮಗುವಿನ ಚಿತ್ರಕೊಟ್ಟರು-ಎಂದೂ ಅಚ್ಚಳಿಯದಂಥ ಚಿತ್ರ; ಬೆಳಗಿನಜಾವ ಚಳಿಯಲ್ಲಿ ಬೀದಿ ನಲ್ಲಿಯ ಹತ್ತಿರ ತಾಯಿಯೊಬ್ಬಳು ಪಾತ್ರೆ ತಿಕ್ಕುತ್ತಿದ್ದಳು; ಅವಳ ಮಗು ಮಗ್ಗುಲಲ್ಲೇ ಆಟವಾಡುತ್ತಿತ್ತು; ತಾಯಿ ಒಂದು ಪಾತ್ರೆ ಬೆಳಗಿಟ್ಟು ಮತ್ತೊಂದು ಪಾತ್ರೆ ಬೆಳಗುತ್ತಿದ್ದಳು, ತಿರುಗಿ ನೋಡಿದರೆ, ಬೆಳಗಿಟ್ಟಿದ್ದ ಪಾತ್ರೆಗೆಲ್ಲ ಮಗು ಮಣ್ಣು ಮೆತ್ತಿ ಆಟವಾಡುತ್ತಿತ್ತು; ಆ ಮಣ್ಣು ಮಾಡಿದ ಪಾತ್ರೆಯನ್ನು ತೊಳೆದುಕೊಂಡು ಬರುವುದರೊಳಗೆ ಮತ್ತೊಂದು ಬೆಳಗಿದ ಪಾತ್ರೆಗೆ ಮಣ್ಣು ಮೆತ್ತಿಟ್ಟಿತ್ತು ಮಗು; ನೋಡುತ್ತಾಳೆ ಹೆತ್ತ ತಾಯಿ; ಏನು ಮಾಡುವುದು ಮಗುವನ್ನು ಎತ್ತಿಕೊಂಡು ಮುದ್ದಿಟ್ಟು ದೂರ ಕೂಡಿಸಿ ಪಾತ್ರೆಗಳನ್ನೆಲ್ಲ ಮತ್ತೆ ತೊಳೆದಳು. ದೇವರೂ ತನ್ನ ಮಕ್ಕಳ ವಿಷಯದಲ್ಲಿ ಹೀಗೆಯೇ ನಡೆದುಕೊಳ್ಳುತ್ತಿರಬೇಕು. ಭಗವಂತ ತನ್ನ ಅಪಾರ ಪ್ರೇಮದಲ್ಲಿ, ಅವ್ಯಾಜ ಕರುಣೆಯಲ್ಲಿ ನಮ್ಮನ್ನು ನಿತ್ಯವೂ ತೊಳೆದು ಶುದ್ಧ ಮಾಡುತ್ತಾನೆ. ನಾವು ನಮ್ಮ ಅಜ್ಞಾನದಿಂದ ಮತ್ತೆ ಕೊಳೆ ಮಾಡಿಕೊಳ್ಳುತ್ತೇವೆ. ಈ ಮಡಿ ಮೈಲಿಗೆಯ ಆಟ ನಡೆಯುತ್ತದೆ. ದೇವರು ನಮ್ಮ ಕೊಳಕು ಕಂಡು ಎಂದಾದರೂ ಮುನಿದನೋ ಅಂದು ಮುಗಿಯಿತು ನಮ್ಮ ಕತೆ.

ಇಂಥ ಚಿತ್ರಗಳು ಹತ್ತಾರು ಅವರ ಬರಹದಲ್ಲಿ ಬಂದಿವೆ. ನೂರಾರು ಅವರ ಮಾತಿನಲ್ಲಿ ಬಂದಿವೆ. ಸಾವಿರಾರು ಅವರ ತಲೆಯಲ್ಲಿ ತುಂಬಿರಬೇಕು. ಅವೆಲ್ಲವೂ ಕನ್ನಡಿಗರ ಕಣ್ಣಿಗೂ ಕಿವಿಗೂ ಬೀಳಲೆಂಬುದೇ ನಮ್ಮೆಲ್ಲರ ಹಾರೈಕೆ. ಇವುಗಳಲ್ಲಿ ಮತ್ತೊಂದು ತನಿಗುಣವುಂಟು. ಹಳೆಯ ಉಪಮೆಗಳನ್ನೂ ಹಳೆಯ ಕತೆಗಳನ್ನೂ ಈಗಿನ ಪ್ರಪಂಚಕ್ಕೂ ಜೀವನಕ್ಕೂ ಅನ್ವಯಿಸಿ ಹೇಳುವ ಮಾಸ್ತಿಯವರ ಶೈಲಿಯಲ್ಲಿ ಅವರ ಹಿರಿಯ ಬಾಳಿನ ಮತ್ತೊಂದು ಹಿರಿಗುಣವನ್ನು ಕಾಣಬಹುದು - ಹಳತು ಹೊಸತುಗಳ ಹೊಂದಿಕೆ.

ಮಾಸ್ತಿಯವರ ಮಾತಿನ ಅಚ್ಚುಕಟ್ಟನ್ನು ಅವರ ಬಾಯಿಂದಲೇ ಕೇಳಬೇಕು. ಅವರು ಏನಾದರೊಂದು ಸಂಗತಿಯನ್ನಾಗಲಿ, ಕತೆಯನ್ನಾಗಲಿ ಹೇಳುವುದಕ್ಕೆ ಮೊದಲು ಮಾಡಿದರೆ ಕೊನೆ ಮುಟ್ಟುವವರೆಗೆ ಕೇಳುವವರ ಕಿವಿ ಕೊನರುತ್ತ ಇರುತ್ತದೆ. ಕೇಳುವವರ ತವಕದಷ್ಟೇ ಹೇಳುವವರ ತವಕವೂ. ಊಟ ಮಾಡುತ್ತಿರುವಾಗ ಒಂದು ವಿಷಯ ನೆನಪಾಯಿತೆನ್ನಿ. ಅದನ್ನು ಆಗಲೆ ಹೇಳದೆ ಆಮೇಲೆ ಹೇಳುತ್ತೇನೆಂದು ಸುಮ್ಮನಾದರೆನ್ನಿ. ಊಟವಾದ ಮೇಲೆ ಹೊಟ್ಟೆಯ ಭಾರದಲ್ಲಿ ಅಡಕೆಲೆಯ ಅಮಲಿನಲ್ಲಿ ಕೇಳುವವರಿಗೆ ಅದರ ನೆನಪು ನಂದುಹೋಗಿರಬಹುದು. ಆದರೆ ಮಾಸ್ತಿಯವರು ಮರೆಯರು. ಇದ್ದಕ್ಕಿದ್ದ ಹಾಗೆ 'ಅದನ್ನು ಹೇಳಲೋ' ಎಂದು ಆರಂಭಿಸುತ್ತಾರೆ. ಮತ್ತೊಮ್ಮೆ, 'ಆ ಕತೆ ಕೇಳಿದ್ದೀರ ನೀವು? ಚೆನ್ನಾಗಿದೆ ಅಲ್ಲ' ಎಂದು ಕೇಳುತ್ತಾರೆ. 'ಹೌದು ಸರ್' ಎಂದು ಯಾರಾದರೂ ಉತ್ತರವನ್ನು ಕೊಡುತ್ತಾರೆ. ಕೆಲವರಿಗೆ ಅದು ಗೊತ್ತಿಲ್ಲದೆ ಇರಬಹುದು. ಆದರೆ, ಹೇಳಿ ಎಂದು ಕೇಳುವುದಕ್ಕೆ ಹಿಂಜರಿದು ಸುಮ್ಮನಿರಬಹುದು. ತುಸು ಹೊತ್ತಾದ ಮೇಲೆ ತವಕ ತಡೆಯಲಾರದೆ ಯಾರಾದರೂ 'ಏನ್ ಸಾರ್ ಆ ಕತೆ' ಎಂದು ಕೇಳಿದರೆ, ಮಾಸ್ತಿಯವರ ಮುಖ ಅರಳಿ ಕಣ್ಣು ಮಿಂಚಿ 'ಹಾಗೆ ಕೇಳಿ ಮತ್ತೆ; ಹೇಳಿ ಎಂದು ಯಾರಾದರೂ ಕೇಳುತ್ತಾರೆಯೇ ಎಂದು ನಾನೂ ಅಷ್ಟು ಹೊತ್ತಿನಿಂದ ನೋಡುತ್ತಾ ಇದ್ದೆ' ಎಂದು ಲವಲವಿಕೆಯಿಂದ ಕತೆ ಹೇಳುತ್ತಾರೆ. ಅವರ ಮಾತಿನ ಒಲವು, ನಯ, ಹದ ತುಸು ತಪ್ಪಿದರೂ ಸರಿಯೆ, ಅದೇ ವಿಷಯ ಮತ್ತೊಬ್ಬರ ಬಾಯಲ್ಲಿ ಅಭಾಸ್ಯವಾಗಿ ಬಿಡಬಹುದೆಂದರೆ, ಮಾಸ್ತಿಯವರು ಎಷ್ಟು ಸೂಕ್ಷ್ಮ ವಿಷಯವನ್ನಾದರೂ ಎಷ್ಟು ಗಾಂಭೀರ್ಯದಿಂದ ತೆಗೆದುಕೊಂಡು ಹೋಗುತ್ತಾರೆ, ತೇಲಿಸಿ, ನವುರಾಗಿ ಹಗುರವಾಗಿ ಸಾಗಿಸುತ್ತಾರೆ ಎಂದು ಬೇರೆ ಹೇಳಬೇಕಾಗಿಲ್ಲ. ಗೆಳೆಯರೊಡನೆ ಮಾತಿಗೆ ಕುಳಿತರೆಂದರೆ ಅವರ ಮಾತಿಗೆ ಕೀಳಾದ್ದು, ಮೇಲಾದ್ದು, ಕಿರಿದಾದ್ದು ಯಾವುದೂ ಇಲ್ಲ. ಬಾಳಿನ ಹಾಸುಹೊಕ್ಕಾಗಿ ಹೆಣೆದ ನೋವು ನಲಿವುಗಳೆಲ್ಲವೂ ಅವರ ಮಾತುಕತೆಗಳಲ್ಲಿ ತೋಡಿ ಉಕ್ಕುತ್ತವೆ. ಅವರ ಮಾತು ತಾಕದ ತಳವಿಲ್ಲ, ಮುಟ್ಟದ ಮುಗಿಲಿಲ್ಲ, ಹಾರದ ಹರವಿಲ್ಲ.

''ಮುತ್ತಿನಂಥ ಮಾತು; ಮಾತನಾಡಿದರೆ ಮುತ್ತು ಸುರಿಯುತ್ತದೆ' ಎಂದು ಹೇಳುವುದುಂಟು ನಮ್ಮಲ್ಲಿ, ಅದು ಬರಿಯ ಪ್ರಾಸದ ಪೋಣಿಕೆ ಮಾತ್ರವಲ್ಲ ಎಂಬುದು ಮಾಸ್ತಿಯವರಂಥ ಸರಸ ರಸಿಕರ ಮಾತಿನಿಂದ ಕಾಣಬಹುದು. ಶ್ರೀವೈಷ್ಣವರನ್ನು ಮೂರು ನಾಮದವರು ಎಂದು ನಮ್ಮಲ್ಲಿ ಕರೆಯುವುದುಂಟು. ಮಾಸ್ತಿಯವರು ಶ್ರೀವೈಷ್ಣವರು. ಅವರ ನೆತ್ತಿಯ ಮೇಲಿನ ನಾಮದಿಂದ ಮಾತ್ರವಲ್ಲದೆ ಬೇರೆ ಬಗೆಯೂ ಅವರು ಮೂರು ನಾಮದವರು. ಅವರ ಎರಡು ನಾಮಗಳಂತೂ ಕನ್ನಡಿಗರೆಲ್ಲರಿಗೂ ತಿಳಿದೇ ಇದೆ - ಕಾವ್ಯನಾಮ ಶ್ರೀನಿವಾಸ, ವ್ಯವಹಾರ ನಾಮ ವೆಂಕಟೇಶ ಅಯ್ಯಂಗಾರ್, ಅವರ ಮೂರನೆ ನಾಮ ಇನ್ನೂ ಮುದ್ದಾದದ್ದು. ಮಾಸ್ತಿಯವರನ್ನು ಮನೆಯಲ್ಲಿ ಮುತ್ತಣ್ಣ ಎಂದು ಕರೆಯುತ್ತಾರೆ. * ಈ ಮುತ್ತ ಅಣ್ಣರ ಮುತ್ತಿನಂಥ ಮಾತುಗಳು ಬಿಡದೆ ಸುರಿಯುತ್ತಿರಲಿ ಕನ್ನಡಮ್ಮನ ಮಡಿಲಿಗೆ, ಕನ್ನಡದ ಬೊಕ್ಕಸಕ್ಕೆ.

---

* 'ಮಾಸ್ತಿಯವರು' ಎನ್ನುವುದೂ ಅವರಿಗೆ ಒಂದು ದೊಡ್ಡ ಹೆಸರಾಗುತ್ತಾ ಬರುತ್ತಿದೆ. ಇದೂ ಸೇರಿ ನಾಲ್ಕು ಆಯಿತಲ್ಲ? ಏನು ಮಾಡುತ್ತೀರಿ? ಎಂದು ಗೆಳೆಯರೊಬ್ಬರು ಕೇಳಿದರು. ಅವರಿಗೆ ಸಮಾಧಾನ: ಮಾಸ್ತಿಯವರು ತೆಂಗಲೆ ಸಂಪ್ರದಾಯಕ್ಕೆ ಸೇರಿದವರು. ಅವರು ಈ ನಾಲ್ಕನೆಯ ಅಡ್ಡನಾಮ ಅವರ ಮೂರು ನಾಮಗಳಿಗೆ ಪೀಠವಾಯಿತೆಂದು ಇಟ್ಟುಕೊಳ್ಳೋಣ.

ಮಾತುಗಾರ ರಾಮಣ್ಣ

ಎಮ್. ರಾಮಚಂದ್ರ

ಮಾಸ್ತಿಯವರು ತಮ್ಮ 'ಶ್ರೀರಾಮ ಪಟ್ಟಾಭಿಷೇಕ'ದ ಮುನ್ನುಡಿಯಲ್ಲಿ ಆ ಕಾವ್ಯವನ್ನು ಕುರಿತು ಹೀಗೆ ಹೇಳಿದ್ದಾರೆ. ''. . .ನಾನು ಹರೆಯದಲ್ಲಿ ಸಂಕಲ್ಪಿಸಿ, ಇಳಿ ವಯಸ್ಸಿನಲ್ಲಿ ಆರಂಭಿಸಿ, ಮುಪ್ಪಿನಲ್ಲಿ ಮಂಗಳಕ್ಕೆ ತಂದಿರುವ ಕಾವ್ಯ . . . ''. ಅವರ ಗದ್ಯ ಕೃತಿ 'ಮಾತುಗಾರ ರಾಮಣ್ಣ'ನಿಗೂ ಈ ಮಾತು ಅನ್ವಯಿಸುತ್ತದೆ. ಪ್ರಕಟವಾದ ಕಾಲ (1985)ಕ್ಕಿಂತ ಸುಮಾರು ಮೂವತ್ತು ವರ್ಷಗಳ ಹಿಂದೆ ತೊಡಗಿ, ಇಪ್ಪತ್ತು ವರ್ಷಗಳ ಕಾಲ ತಡೆತಡೆದು ಮುಂಬರಿದು, ಅಚ್ಚಿಗಿಂತ ಆರು ವರ್ಷಗಳ ಮೊದಲು ಬರೆದು ಮುಗಿಸಿದ ಪುಸ್ತಕ ಇದಾಗಿದೆ. ನೂರ ಅರವತ್ತು ಪುಟಗಳ ಈ ಪುಸ್ತಕಾವತರಣಕ್ಕೆ ಅಷ್ಟೊಂದು ದೀರ್ಘ ಕಾಲಾವಕಾಶವೇ ಎಂದು ಆಶ್ಚರ್ಯವಾಗಬಹುದು. ಆದರೆ ಅದರ ಸಾರವನ್ನು ಸತ್ವವನ್ನೂ ಮನಗಂಡಾಗ, ಮನದಣಿಯೆ ಉಂಡಾಗ ಅಷ್ಟೇ ಸಂತೋಷವೂ ಆಗುತ್ತದೆ. ಏಕೆಂದರೆ ಮಾಸ್ತಿಯವರು ಸಂಕಲ್ಪಿಸಿದ ವರ್ಷವೇ - ಸುಮಾರು 1955 - ಪುಸ್ತಕ ಪ್ರಕಟವಾಗುತ್ತಿದ್ದರೆ ಅದು ಅವರ ಅರವತ್ತನಾಲ್ಕು ವರ್ಷಗಳ ಜೀವನಾನುಭವವನ್ನು ಮಾತ್ರ ಹೇಳುತ್ತಿತ್ತು. ಆದರೆ 1985ರಲ್ಲಿ ಪ್ರಕಟವಾದುದರಿಂದ ಆ ಪುಸ್ತಕದಲ್ಲಿ ಅವರ ತೊಂಬತ್ತೈದು ವರ್ಷಗಳ ನಿಡುಬಾಳಿನ ಬಗೆಬಗೆಯ ಅನುಭವಗಳು ಹರಳುಗಟ್ಟಿವೆ. ವಾಚಕನಿಗೆ ಹೆಚ್ಚು ಕಡಿಮೆ ಇಮ್ಮಡಿಯಾಗಿ ಮಾಸ್ತಿಯವರ ಸಹಚರ್ಯೆ ಒದಗಿ ಬರುತ್ತದೆ. ಈ ಪುಸ್ತಕಕ್ಕೆ ಮತ್ತೂ ಒಂದು ವೈಶಿಷ್ಟ್ಯವಿದೆ; ಇದು ಅವರ ಅಂತಿಮ ಕೃತಿ. ಪ್ರಕಟವಾದ ಒಂದೇ ವರ್ಷದಲ್ಲಿ ಅವರು ಕಣ್ಮರೆಯಾದರು. ಈ ಅವಧಿಯಲ್ಲಿ ಮಾಸ್ತಿಯವರು ಬೇರೇನನ್ನೂ ಬರೆಯಲಿಲ್ಲ. ಆದುದರಿಂದ ತಾವು ಅಕ್ಕರೆಯಿಂದ ಕಂಡ ಕನ್ನಡದ ಸೋದರ-ಸೋದರಿಯರಿಗೆ ಮಾಸ್ತಿಯವರು ನೀಡಿದ ಸ್ಥಿರವಾದ ಚರಮ ಸಂದೇಶವೇ 'ಮಾತುಗಾರ ರಾಮಣ್ಣ'.

'ಮಾತುಗಾರ ರಾಮಣ್ಣ' ಸಾರದಲ್ಲಿ ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ವನ್ನೂ ಚಿತ್ರಣದಲ್ಲಿ ಅವರದೇ 'ಜ್ಞಾಪಕ ಚಿತ್ರಶಾಲೆ'ಯನ್ನು ಹೋಲುವ ಪುಸ್ತಕ. ಮಂಕುತಿಮ್ಮನಂತೆ ರಾಮಣ್ಣನಾದರೂ 'ಸುಶಿಕ್ಷಿತ'ನೇನೂ ಅಲ್ಲ. ಆದರೆ ಸುಸಂಸ್ಕೃತ ವ್ಯಕ್ತಿ. ಬಾಳಿನ ಬೇವುಬೆಲ್ಲಗಳನ್ನು ಉಂಡು, ಕಪ್ಪು ಬಿಳುಪುಗಳನ್ನು ಕಂಡು ಮೈಗೂಡಿಸಿಕೊಂಡ ಗಟ್ಟಿಜೀವ. ಮಾಸ್ತಿಯವರೇ ಹೇಳುತ್ತಾರೆ: ''ರಾಮಣ್ಣನವರು ಕಲ್ಪನೆಯಿಂದ ಒಂದು ವ್ಯಕ್ತಿ, ದಿಟದಲ್ಲಿ ನನ್ನ ಚೇತನದ ಒಂದು ಭಾಗ. ನನ್ನ ಜೀವನದಲ್ಲಿ ನಾನು ಕಂಡ, ಕೇಳಿದ ಹತ್ತಾರು ಸಂಗತಿಗಳ ವರದಿಗಳು ಈ ಒಂದು ವರದಿಯಲ್ಲಿ ಒಂದುಗೂಡಿವೆ''. ಮೂರ್ತಿ ರಾಮಣ್ಣನದು, ಮಾತು ಮಾಸ್ತಿಯವರದು. ಡಿ.ವಿ.ಜಿ.ಯವರು 'ಜ್ಞಾಪಕ ಚಿತ್ರಶಾಲೆ'ಯ ವಿವಿಧ ಸಂಪುಟಗಳಲ್ಲಿ ಅನೇಕ ವ್ಯಕ್ತಿಗಳನ್ನು ಬಣ್ಣಿಸಿ, ಆಯಾವ್ಯಕ್ತಿಗಳ ಅಂತರಂಗಕ್ಕೆ ಕ್ಷ-ಕಿರಣಗಳನ್ನು ಬೀರುವಂತೆಯೇ ಮಾಸ್ತಿಯವರೂ ರಾಮಣ್ಣನ ಮುಖೇನ ವ್ಯಕ್ತಿಹೃದಯ

ಬಿಂಬಗ್ರಹಣವನ್ನು ಬಹು ಸ್ಫುಟವಾಗಿ ಮಾಡಿದ್ದಾರೆ. ಡಿ.ವಿ.ಜಿ.ಯವರ ಬರವಣಿಗೆಗಳಲ್ಲಿ ಕಾಣುವಷ್ಟು ವಿಸ್ತಾರ, ಇಲ್ಲಿ ಇಲ್ಲದಿರಬಹುದು. ಆದರೆ ಇದೊಂದು ಬಗೆಯ ಸ್ಥಾಲೀ ಪುಲಾಕ ನಿರ್ದೇಶನ. ಮಾಸ್ತಿಯವರ ಅಸಂಖ್ಯ ಗದ್ಯ-ಪದ್ಯ ಕೃತಿಗಳಲ್ಲಿ ಓದುಗರು ಕಂಡಿರಬಹುದಾದ ವಿಸ್ತೃತ ಜೀವನದ ವಿವಿಧ ಮುಖಗಳೇ ಈ ಪುಸ್ತಕದಲ್ಲಿ, ಅವರಿಗೇ ವಿಶಿಷ್ಟವಾದ ಸಭ್ಯ ಸರಳ-ಸುಂದರ ಭಾಷೆಯಲ್ಲಿ ಏಕತ್ರ ಸಮಾಹಿತವಾಗಿವೆ.

ಮಾಸ್ತಿಯವರ ಎಷ್ಟೋ ಕತೆಗಳಲ್ಲಿ ಎತ್ತಿ ಹೇಳಬಹುದಾದ ವಸ್ತು ಅಥವಾ ಘಟನೆ ಎಂಬುದು ಇರುವುದಿಲ್ಲ. ತಾವು ಕಂಡ ಯಾವುದೋ ಒಂದು ನೋಟ, ಕೇಳಿದ ಯಾವುದೋ ಸುದ್ದಿ, ಎಲ್ಲೋ ಯಾರೋ ಆಡಿದ ಒಂದು ಮಾತು, ಮಾಸ್ತಿಯವರ ಕತೆಗಾರಿಕೆಯ ಚಿಪ್ಪಿಗೆ ಸ್ವಾತಿಯ ಮಳೆಹನಿಯಾಗುತ್ತದೆ. ಮುತ್ತಿನಂತಹ ಕಥೆ ಎದ್ದು ಬರುತ್ತದೆ. (ಉದಾ: ಹೇಮಕೂಟದಿಂದ ಬಂದ ಮೇಲೆ, ಕವಿಯ ಬಾಳ ಕೊನೆಯ ದಿನ, ಇತ್ಯಾದಿ) 'ಮಾತುಗಾರ ರಾಮಣ್ಣ' ಒಂದು ಕತೆಯೋ ಕಾದಂಬರಿಯೋ ಅಲ್ಲವಾದರೂ ನಿರೂಪಣೆಯಲ್ಲಿ ಮಾಸ್ತಿಯವರ ಛಾಪು ಇದ್ದೇ ಇದೆ. ಪುಸ್ತಕದ ಪ್ರಸ್ತಾವನೆಯಲ್ಲಿ ಕೆ.ಎಸ್. ನಿಸಾರ್ ಅಹಮ್ಮದರು ಬರೆದಿರುವಂತೆ, '' 'ಮಾತುಗಾರ ರಾಮಣ್ಣ' ಸಾಹಿತ್ಯದ ಇಂಥ ಪ್ರಕಾರಕ್ಕೆ ಸೇರುತ್ತದೆ ಎಂದು ನಿರ್ದೇಶಿಸಿ ಹೇಳುವುದು ಕಷ್ಟ. ಕಥೆಯೇ? ವಾಸ್ತವ ಘಟನೆಗಳ ಸರಮಾಲೆಯೆ? ಒಂದು ಕಾಲದ ಬಾಳಿನ ರೀತಿ ರಿವಾಜುಗಳ ವಿವರಣೆ, ವಿಮರ್ಶೆಯೆ? ಸ್ಮೃತಿ ಚಿತ್ರವೆ? - ಇವೆಲ್ಲವೂ ಹೌದು, ಆದರೆ ಇವುಗಳಲ್ಲಿ ಯಾವುದೇ ಒಂದು ಪ್ರತ್ಯೇಕ ವಿಭಾಗಕ್ಕೆ ಹೊಂದತಕ್ಕದ್ದಲ್ಲ . . . ಇಲ್ಲಿ ವಾಸ್ತವಾನುಭವ ಮತ್ತು ಕಲ್ಪನೆ ಒಂದರೊಡನೊಂದು ಹಾಸುಹೊಕ್ಕಾಗಿ ಬೆರೆತು ಅಪೂರ್ವವಾದ ನೆಯ್ಗೆಯ ನಯವನ್ನು, ಹಲವು ಬಣ್ಣಗಳ ಮಿಂಚಿತೆಯ ಚೆಲುವನ್ನು ಅನುಭವಕ್ಕೆ ತರುತ್ತದೆ.''

ರಾಮಣ್ಣ ಮಾಸ್ತಿಯವರ ಈ ಹಿಂದಿನ 'ಸುಬೇದಾರ ಪ್ಯಾದೆ ಮಾತು' ಮತ್ತು 'ಸೋರಲೀ ಪ್ರಸಂಗ' ಎಂಬ ಸಣ್ಣ ಕತೆಗಳಲ್ಲಿ ಕಾಣಸಿಕೊಂಡಿದ್ದಾನೆ. ಮಾಸ್ತಿಯವರು ಸೃಷ್ಟಿಸಿದ ಅಸಂಖ್ಯ ಪಾತ್ರಗಳಲ್ಲಿ ರಾಮಣ್ಣನ ಪಾತ್ರ ಅವರ ಮನೋಧರ್ಮಕ್ಕೆ ತೀರ ಹೊಂದಿಕೊಳ್ಳುತ್ತದೆ. ಆದುದರಿಂದಲೇ ಅವರು ರಾಮಣ್ಣನನ್ನು ತಮ್ಮ 'ಚೇತನದ ಒಂದು ಭಾಗ' ಎಂದು ವರ್ಣಿಸಿದುದು. ಪುಸ್ತಕದಲ್ಲಿ ವಿವೃತವಾದ ವಿಷಯ, ಮಾಸ್ತಿಯವರ ಅನೇಕ ಕೃತಿಗಳಲ್ಲಿ ಅಲ್ಲಲ್ಲಿ ಉಕ್ತವಾದದ್ದೇ ಆಗಿವೆ. ಮುಖ್ಯವಾಗಿ ಅವರ ಆತ್ಮ ಚರಿತ್ರೆ 'ಭಾವ'ದ ಮೂರು ಸಂಪುಟಗಳನ್ನೂ 'ಅಂತರಗಂಗೆ' ಮತ್ತು 'ಧರ್ಮರಕ್ಷಣೆ' ಎಂಬ ಗ್ರಂಥಗಳನ್ನೂ ಇಲ್ಲಿ ಭಟ್ಟಿಯಿಳಿಸಿದಂತೆ ಕಾಣುತ್ತದೆ. ಈ ಪುಸ್ತಕದ ಹೆಚ್ಚುಗಾರಿಕೆ ಅದು.

ಮಾಸ್ತಿಯವರು ತಮ್ಮ ಪೂರ್ವ ವಯಸ್ಸಿನ ವೃತ್ತಿ ಜೀವನದಲ್ಲಿ ಅಂದಿನ ಮೈಸೂರು ಸರಕಾರದ ಒಬ್ಬ ವರಿಷ್ಠ ಅಧಿಕಾರಿಯಾಗಿದ್ದರು. ಕಾರ್ಯನಿಮಿತ್ತವಾಗಿ ನಾಡಿನ ಬಹುಭಾಗವನ್ನು ಸುತ್ತಿ ವಿಧವಿಧದ ಜನರನ್ನೂ ಜೀವನವನ್ನೂ ಕಂಡವರು. ಅಂದಿನ ಆ ಅನುಭವ ಈ ಪುಸ್ತಕಕ್ಕೆ ತಳಹದಿಯಾಗುತ್ತದೆ. ಇದರಲ್ಲಿ ಮಾಸ್ತಿಯವರು ತಮ್ಮನ್ನು ಒಬ್ಬ ಇಂಜಿನಿಯರ್ ಎಂದು ಕಲ್ಪಿಸಿಕೊಳ್ಳುತ್ತಾರೆ. ಆ ಇಂಜಿನಿಯರ್ ಮಹಾಶಯನಿಗೆ, ಮೊದಲು ಗ್ರಾಮವಾಸಿ ಶ್ಯಾನುಭೋಗನಾಗಿದ್ದು, ಆಮೇಲೆ ಆ ಚಾಕರಿಯನ್ನು ಬಿಟ್ಟು ಪೇಟೆಯಲ್ಲಿರುವ ಮಕ್ಕಳೊಂದಿಗೆ ನೆಲೆಸಿ, ಶೇಷ ಜೀವನವನ್ನು ಕಳೆಯುವುದಕ್ಕಾಗಿ ಬಂದ ರಾಮಣ್ಣನ ಪರಿಚಯವಾಗುತ್ತದೆ. ಪ್ರತಿನಿತ್ಯವೆಂಬಂತೆ ಅವರಿಬ್ಬರೂ ಒಂದು ಕಡೆ ಸಂಧಿಸುತ್ತಾರೆ. ಬಾಳಿನಲ್ಲಿ ತಾವಿಬ್ಬರೂ ಕಂಡು ಉಂಡದ್ದನ್ನು ಒಬ್ಬರಿಗೊಬ್ಬರು

ಹಂಚಿಕೊಳ್ಳುತ್ತಾರೆ. ದಿಟದಲ್ಲಿ ರಾಮಣ್ಣನ ಮಾತೇ ಹೆಚ್ಚು. ಇಂಜಿನಿಯರ್ ಅಲ್ಲಿ ಇಲ್ಲಿ ಒಂದು ಪ್ರಶ್ನೆ, ಒಂದು ಆಶ್ಚರ್ಯ, ಒಂದು ವಿವರಣ ಚಿಹ್ನೆಯಾಗಿ ಬರುತ್ತಾರೆ. ಇಬ್ಬರು ಅನುಭವ ವೃದ್ಧರ, ವಯೋವೃದ್ಧರ ಪ್ರಶ್ನೋತ್ತರಗಳ ಮಂಥನದಿಂದ ಎದ್ದು ಬರುವ ನವನೀತ ವಾಚಕನಿಗೆ ಲಭಿಸುತ್ತದೆ.

'ಮಾತುಗಾರ ರಾಮಣ್ಣ' ಅನೇಕ ಘಟನೆಗಳ, ಅನೇಕ ಶೀಲ, ಸ್ವಭಾವಗಳ ಒಂದು ಚಿತ್ರಶಾಲೆ. ಒಂದು ಘಟನೆಯ ನಿರೂಪಣ. ಆಮೇಲೆ ಒಂದು ಜೀವನಾನುಭವದ ಫಲಶ್ರುತಿ. ಒಂದು ವ್ಯಕ್ತಿ ಹೃದಯದ ಅನಾವರಣ. ಆ ಬಳಿಕ ಒಂದು ಜೀವತತ್ವದ ವಿವರಣ - ಈ ಕ್ರಮದಲ್ಲಿ ನಡೆಯುತ್ತದೆ ರಾಮಣ್ಣನ ಮಾತುಗಾರಿಕೆ. ''ಅನುಭವದ ಪಾಲೊಳು ವಿಚಾರಮಂಥನವಾಗೆ . . . ಎಂಬುದು 'ಮಂಕುತಿಮ್ಮ'ನ ಒಂದು ಸೂಕ್ತಿ. ರಾಮಣ್ಣನ ನೀತಿಯಾದರೂ ಅದೇ ಆಗಿದೆ: ''ಓದು ದೊಡ್ಡದು ಸರಿ, ಆದರೆ ಮನುಷ್ಯ ಓದಿ ಕಲಿಯೋದಕ್ಕಿಂತ ಹೆಚ್ಚು ಸಂಗತೀನ ತಾನೇ ಬದುಕಿ ಕಲೀತಾನೆ. ಸುತ್ತಿನ ಬದುಕನ್ನು ನೋಡಿ ಕಲೀತಾನೆ.'' ಎಂದು ಆರಂಭದಲ್ಲೇ ಇಂಜಿನಿಯರ್ (ಮಾಸ್ತಿ) ರಾಮಣ್ಣನ ಗಟ್ಟಿತನವನ್ನು ಎತ್ತಿ ಆಡುತ್ತಾರೆ. ಪುಸ್ತಕ ಜ್ಞಾನದೊಂದಿಗೆ ಲೋಕಾನುಭವವೂ ಬೆರೆತಾಗ ವ್ಯಕ್ತಿತ್ವ ಘನವಾಗುತ್ತದೆ. ಕಾಂತಿಯುಕ್ತವೆನಿಸುತ್ತದೆ. ಈ ಅನುಭವ ಅನೇಕ ಮುಖವಾಗಿ ಲಭಿಸುತ್ತದೆ ಎಂಬುದಕ್ಕೆ ರಾಮಣ್ಣನ ಜೀವನವೇ ನಿದರ್ಶನವಾಗುತ್ತದೆ.

ಮಾಸ್ತಿಯವರು ಈ ಪುಸ್ತಕದಲ್ಲಿ ಚಿತ್ರಿಸಿರುವ ಆವರಣ ಈ ಶತಮಾನದ ಮೊದಲ ಐದು ದಶಕಗಳದ್ದು. ಆದರೆ ದೃಷ್ಟಿ ಮತ್ತು ಸಮಷ್ಟಿ ಜೀವನದ ಸಾರ್ವಕಾಲಿಕ ಅಂಶಗಳನ್ನು, ಒಳಿತು ಕೆಡುಕುಗಳ ಎರಡು ಮಗ್ಗುಲನ್ನೂ ಅದರಲ್ಲಿ ಕಾಣುತ್ತೇವೆ. ಒಳ್ಳೆಯದನ್ನು ಮಾಸ್ತಿಯವರು ಎಷ್ಟು ಉತ್ಸಾಹದಿದ ಎತ್ತಿ ಹೇಳುತ್ತಾರೋ, ಒಳ್ಳೆಯದಲ್ಲದ್ದನ್ನೂ ಅಷ್ಟೇ ಸಭ್ಯತೆ -ಸಂಯಮಗಳಿಂದ ಸೂಚಿಸುತ್ತಾರೆ. ಒಂದು ಕಾಲದ ಸಮಾಜ ವ್ಯವಸ್ಥೆ, ಜೀವನ ದೃಷ್ಟಿ ಮತ್ತು ಮೌಲ್ಯ, ಸಜ್ಜನರ ವರ್ಚಸ್ಸು, ಚರಿತ್ರಹೀನರ ನಡವಳಿಕೆ, ಅಧಿಕಾರಿಗಳ ಕಾರ್ಯವಿಧಾನ, ಅಧೀನರಾದವರ ಅಶರಣತೆ, ದೊಡ್ಡವರ ಸಣ್ಣತನ, ಸಣ್ಣವರ ದೊಡ್ಡತನ, ವಿವಿಧ ಕ್ಷೇತ್ರಗಳಲ್ಲಿ ಲಂಚ-ರುಷುವತ್ತುಗಳ ಗುಪ್ತ ವ್ಯವಹಾರ, ಹೊನ್ನು-ಹೆಣ್ಣು-ಮಣ್ಣುಗಳಿಗಾಗಿ ಪರದಾಟ, ಬಡಿದಾಟ, ಅವಿಭಕ್ತ ಕುಟುಂಬ ಜೀವನ, ದಾಂಪತ್ಯದ ಸುಖ ದುಃಖ, ಒಡೆದ ಮನೆಗಳ ಪಾಡು, ಪೀಠಗಳ ನಿರ್ವಹಣೆ, ಅರಮನೆ - ಗುರು ಮಠ ರೀತಿ ರಿವಾಜು - ವಿದೇಶೀ ವ್ಯಾಮೋಹ, ಆಧುನಿಕತೆಯ ಆಕರ್ಷಣೆ - ಹೀಗೆ ಪುಸ್ತಕದ ಪುಟಗಳನ್ನು ತೆರೆಯುತ್ತಿರುವಂತೆಯೇ ಬದುಕಿನ ನೂರಾರು ಚಿತ್ರಗಳು, ಬಗೆಬಗೆಯ ಬಣ್ಣಗಳಲ್ಲಿ, ಆಕಾರಗಳಲ್ಲಿ, ಒಂದರ ಹಿಂದೆ ಒಂದರಂತೆ ಕಣ್ಣಮುಂದೆ ಸುಳಿಯುತ್ತವೆ. ನೆನಪಿನ ಆಳಕ್ಕೆ ಇಳಿಯುತ್ತವೆ. ಅಲ್ಲಿ ಅಚ್ಚೊತ್ತಿ ನಿಲ್ಲುತ್ತವೆ.

ಮಾಸ್ತಿಯವರ ಸಮೃದ್ಧ ಜೀವನಾನುಭವದ ಮೂರ್ತರೂಪಗಳು ಪುಸ್ತಕದ ಪುಟಗಳಿಂದ ಎದ್ದು ಬಂದು ಓದುಗನ ಬದುಕಿಗೊಂದು ಕೈದೀವಿಗೆಯನ್ನೂ, ಊರುಗೋಲನ್ನೂ ಒದಗಿಸುತ್ತವೆ.

ಮಾಸ್ತಿಯವರ ಕೊನೆಯ ಪುಸ್ತಕ ಎಂಬುದಕ್ಕಾಗಿ ಅಲ್ಲ. ಅದರ ಅಂತಸ್ಸತ್ವಕ್ಕಾಗಿಯೂ ಓದಬೇಕಾದ ಪುಸ್ತಕ - 'ಮಾತುಗಾರ ರಾಮಣ್ಣ'.

ಉದಯವಾಣಿ, ಮೇ 20, 1990

ಮೂರು ಧಾರ್ಮಿಕ ಕೃತಿಗಳು

ಅರಳುಮಲ್ಲಿಗೆ ಪಾರ್ಥಸಾರಥಿ

ಕಾಲಪ್ರವಾಹದಲ್ಲಿ ಭಾರತದ ಉದ್ದಗಲಕ್ಕೂ ಓತಪ್ರೋತವಾಗಿ ಹರಡಿಕೊಂಡಿರುವ ಧರ್ಮ, ದೈವ, ಮೂವತ್ಮೂರು ಕೋಟಿ ದೇವತೆಗಳು, ಗುರುಪೀಠಗಳು, ಕ್ಷೇತ್ರಪ್ರತೀತಿಗಳು, ಜ್ಯೋತಿಷ್ಯನಂಬಿಕೆಗಳು, ಭಕ್ತಿಯ ನೆಲೆಯಲ್ಲಿ ಹುಟ್ಟಿ, ಭಯವಾಗಿ ಪರಿವರ್ತಿತವಾಗಿ, ಮೌಢ್ಯವಾಗಿ ಮಡುಗಟ್ಟಿ ಕಡೆಗೆ ಜಡ್ಡು ಹಿಡಿದ ಕಂದಾಚಾರದ ಕಂದಕದಲ್ಲಿ ಉಸಿರುಕಟ್ಟಿನಿಂತಂತಹ, ನಿಂತನೆಲದ ಅಸ್ತಿತ್ವವನ್ನೇ ಪ್ರಶ್ನೆ ಮಾಡುವಂತಹ ಪರಿಸ್ಥಿತಿಯತ್ತ ಜಾರುತ್ತಿರುವ ಪ್ರಸ್ತುತ ಭಾರತೀಯ ಧಾರ್ಮಿಕ, ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ, ಪರಂಪರೆಯ ಶ್ರೇಷ್ಠ ಮೌಲ್ಯಗಳ ಬಗ್ಗೆ ಅಪಾರ ಗೌರವವಿಟ್ಟುಕೊಂಡೂ, ಅದರ ವಿಲೋಮ ಪರಿಣಾಮಗಳತ್ತ ಚಿಕಿತ್ಸಕ ಬುದ್ಧಿಯಿಂದ ನೋಡುವ ಧಾರ್ಮಿಕ ಸಾಹಿತ್ಯ ಬಹು ಅಪರೂಪವಾಗುತ್ತಿರುವ ಈಚಿನ ದಿನಗಳಲ್ಲಿ ಮಾಸ್ತಿಯವರ 'ಧರ್ಮಸಂರಕ್ಷಣೆ' ಹಾಗೂ 'ಅಂತರಗಂಗೆ' ಕೃತಿಗಳು ಕನ್ನಡದಲ್ಲಷ್ಟೇ ಅಲ್ಲದೆ ಇಡೀ ಭಾರತೀಯ ಸಾಹಿತ್ಯದಲ್ಲಿ ಆಧುನಿಕ ಮನೋಧರ್ಮದ ಉತ್ತಮ ಧಾರ್ಮಿಕ ಕೃತಿಗಾಗಿ ಮೂಡಿಬಂದಿವೆ.

ಹಾಗೆಯೇ 'ರಾಮಾಯಣ' 'ಮಹಾಭಾರತ'ಗಳ ಕಥೆಯನ್ನು ಚರ್ವಿತಚರ್ವಣ, ಕಲ್ಪನಾಭಾಸಗಳ, ಅತಿರೇಕ ಚಿತ್ರಗಳ ಮೂಲಕ ನೀಡುವಂತಹ ನೂರಾರು ಕೃತಿಗಳು ಬರುತ್ತಿದ್ದು, ಮೂಲ ರಾಮಾಯಣದ ಮಹತ್ವವನ್ನು ಸರಳವಾಗಿ ತಿಳಿಸುವ ಕೃತಿಗಳು ಇಲ್ಲದಂತಾಗಿರುವಾಗ ಮಾಸ್ತಿಯವರ 'ಸಂಕ್ಷಿಪ್ತ ವಾಲ್ಮೀಕಿರಾಮಾಯಣ' ಮೂಲಕ್ಕೆ ಬದ್ಧವಾಗಿದ್ದೂ, ಓದಿಸಿಕೊಳ್ಳುವ ಕಲಾತ್ಮಕ ಅನುವಾದವಾಗಿದೆ.

ಈ ಶತಮಾನದ ಪ್ರಾರಂಭದಲ್ಲಿ ಕಥಾಸಾಹಿತ್ಯವನ್ನು ಬರೆಯತೊಡಗಿದ ಮಾಸ್ತಿಯವರು, ಎಂಟನೆಯ ದಶಕದ ಸುಮಾರಿಗೆ ಬರೆದಿರುವ ಈ ಮೂರು ಕೃತಿಗಳು ಅವರ ಧಾರ್ಮಿಕ, ಸಾಂಸ್ಕೃತಿಕ ಅನುಭವಗಳ ಪರಿಪಕ್ವಕೃತಿಗಳಾಗಿವೆ. ಎಂಟು ದಶಕಗಳ ಕಾಲ ತುಂಬುಜೀವನವನ್ನು ನಡೆಸಿ, ತನ್ನ ಬದುಕಿನ ಕೊಂಬೆ ಕೊಂಬೆಗಳಲ್ಲೂ ಧರ್ಮದ ಹೂಹಸಿರು ಹಣ್ಣುಗಳನ್ನು ನೀಡುತ್ತಾ ಬಂದು, ಅನುಭವ, ಕಾಣ್ಕೆ ಹಾಗೂ ದರ್ಶನಗಳ ಸಮೃದ್ಧ ವ್ಯಕ್ತಿತ್ವದಿಂದ ಅನುಭಾವಿಯಾಗಿ ರೂಪುಗೊಳ್ಳುತ್ತಿದ್ದ ಮಾಸ್ತಿಯವರಿಂದ ಈ ಕೃತಿಗಳು ಮೂಡಿಬಂದಿರುವುದು ಇವುಗಳ ಮಹತ್ವಕ್ಕೆ ಇನ್ನೊಂದು ಕಾರಣ. ಕತೆಗಾರರಾಗಿ, ಕವಿಯಾಗಿ ಪತ್ರಿಕೋದ್ಯಮಿಯಾಗಿ, ಆಡಳಿತಗಾರರಾಗಿ, ಸಾಹಿತಿಗಳಾಗಿದ್ದ ಮಾಸ್ತಿಯವರು ಈ ಕೃತಿಗಳ

1. ಸಂಕ್ಷಿಪ್ತ ವಾಲ್ಮೀಕಿ ರಾಮಾಯಣ
2. ಅಂತರಗಂಗೆ
3. ಧರ್ಮ ಸಂರಕ್ಷಣೆ

ರಚನೆಯ ಕಾಲಕ್ಕೆ ದಾರ್ಶನಿಕರೂ ಆಗಿದ್ದು, ಈ ಕೃತಿಗಳು ಮೌಲಿಕವಾಗಿ ಅವರ ಉತ್ಕೃಷ್ಟ ಕೃತಿಗಳ ಸಾಲಿನಲ್ಲಿ ನಿಲ್ಲುತ್ತದೆ.

ವೇದಕಾಲದಿಂದ ಬಂದಿರುವ ಧಾರ್ಮಿಕ ಸತ್ವಗಳನ್ನು ಸಂಪೂರ್ಣ ಅರಗಿಸಿಕೊಂಡಿದ್ದ ಮಾಸ್ತಿಯವರು, ಈ ಕೃತಿಗಳಲ್ಲಿ ಸಮಾಜಮುಖಿಯಾಗಿ ಧರ್ಮ ಹೇಗೆ ಕ್ರಿಯಾತ್ಮಕವಾಗಿ ಹರಿಯಬೇಕು ಎಂಬುವತ್ತ ಸಮರ್ಥವಾಗಿ ಮಾರ್ಗದರ್ಶನ ಮಾಡಿದ್ದಾರೆ.

ಸಾಮಾನ್ಯವಾಗಿ ರಾಮಾಯಣ, ಭಾರತ, ಗೀತೆ ಹಾಗೂ ಸಾಮಾನ್ಯ ಧರ್ಮಸಂದೇಶಗಳಲ್ಲಿ ಕಂಡುಬರುವ ಉದ್ಘೋಷ, ಭೋರ್ಗರೆತದ ಧ್ವನಿಗಳು, ಶಬ್ದದ ಓಘ, ಓದುಗರ ಅಂತರಂಗದ ಸೂಕ್ಷ್ಮತೆಗಳನ್ನು ಮುಚ್ಚಿಬಿಡುವ ಸಾಧ್ಯತೆಯಿರುವುದರಿಂದ ಮಾಸ್ತಿಯವರು ಈ ಎಚ್ಚರಿಕೆಯ ಹಿನ್ನೆಲೆಯಲ್ಲೇ ಸರಳ, ಸಹಜ ಹದದಲ್ಲಿ, ಕಲಾತ್ಮಕ ವಿಶ್ಲೇಷಣೆಗೆ ತೊಡಗಿ ಧಾರ್ಮಿಕ ನೆಲೆಗಟ್ಟಿನ ಮೇಲೆ ನಡೆಯುವ ಎಲ್ಲ ವಿದ್ಯಮಾನಗಳನ್ನೂ ನಿಷ್ಪಕ್ಷಪಾತವಾಗಿ ಕಾಣಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಧರ್ಮ, ಸಂಸ್ಕೃತಿಗಳನ್ನೇ ವಸ್ತುವನ್ನಾಗಿ ಹೊಂದಿರುವ ಸಾಹಿತ್ಯದಲ್ಲಿ ಸಾಹಿತ್ಯಸಹಜವಾದ ಸೂಕ್ಷ್ಮತೆ, ಕೌಶಲ್ಯ, ಲಜ್ಜೆ ಹಾಗೂ ವಿವೇಕ ಹಿಂದೆ ಸರಿದು ಕಡೆಗೆ ಅದೊಂದು ಮತೀಯ ಪ್ರಚಾರವೈಭವವಾಗಿ ಪರಿಣಮಿಸುವ ಮಾದರಿಯೇ ಹೆಚ್ಚುತ್ತಿರುವ ಈ ದೇಶದಲ್ಲಿ ಅದೊಂದು ಸಾಮಾಜಿಕ ಬದಲಾವಣೆಯ, ಮನುಷ್ಯನ ಮನಸ್ಸಿನ ಸಂಸ್ಕರಣ ಮಾಡಬಲ್ಲ ಮುಖ್ಯ ಸಾಧನವಾಗಬಹುದೆಂಬುದನ್ನು ಈ ಕೃತಿಗಳ ಮೂಲಕ ಮಾಸ್ತಿಯವರು ಸಮರ್ಥವಾಗಿ ಸಮರ್ಥಿಸಿದ್ದಾರೆ. ಸಮಗ್ರ ಧಾರ್ಮಿಕ ಸಾಹಿತ್ಯದ ಅಣಿಮುತ್ತು ಒಳಕಾಳುಗಳನ್ನು ತೆಗೆದು ಅದರ ಅಂತರಂಗದ ಒಂದೊಂದೂ ಗೆರೆಗಳನ್ನು ಗುರುತಿಸುತ್ತಾ ಹೊರಡುವ ಮಾಸ್ತಿಯವರು ಧರ್ಮ ಬರಿಯ ಹೇಳಿಕೆಯ, ತೋರಿಕೆಯ ವಸ್ತುವಲ್ಲ. ಅದೊಂದು ಬದುಕನ್ನು ಬದುಕಬೇಕಾಗಿರುವ ಪರಿ, ಅಪೂರ್ವ ಕಾಣ್ಕೆಯಾಗಬಲ್ಲ ವಿಶಿಷ್ಟ ಅನುಭವ ಎಂಬುದನ್ನು ಈ ಕೃತಿಗಳಲ್ಲಿ ನಿರೂಪಿಸಿದ್ದಾರೆ.

ವೇದಕಾಲದ ಕಥೆಗಳನ್ನು, ದೈವದ ಸುತ್ತ ಪ್ರಚಲಿತವಿರುವ ಕಥೆಗಳನ್ನು, ಸ್ವಾಮಿಬಾಬಾಗಳ ಚಲನವಲನಗಳನ್ನೂ ಮಂಡಿಸುತ್ತಲೇ, ಅವುಗಳ ಪ್ರಕ್ಷಿಪ್ತ ಭಾಗಗಳನ್ನೂ, ವಿಕಟ ಸ್ವರೂಪವನ್ನೂ ವಿಕೃತ ರೂಪಗಳನ್ನೂ ವಿಡಂಬಿಸುತ್ತಾ, ಟೀಕಿಸುತ್ತಾ, ಆತಂಕಪಡುತ್ತಾ, ಇಡೀ ದೈವಿಕ ಧಾರ್ಮಿಕ ಪ್ರಪಂಚವನ್ನು ಪರಿವೀಕ್ಷಿಸುವ ಉತ್ತಮ ಮಾದರಿ ಈ ಕೃತಿಗಳು. 'ಅಂತರಗಂಗೆ' ಕೃತಿಯ ಉದ್ದೇಶವನ್ನು ಕುರಿತು ಲೇಖಕರ;

''ನಮ್ಮ ಧರ್ಮ ಸಂಸ್ಕೃತಿಗಳ ವಿಷಯದಲ್ಲಿ ಆಸಕ್ತಿಯುಳ್ಳವರಿಗೆ ವೇದಗಳ ಕಾಲದಿಂದ ಈವರೆಗೆ ನಮ್ಮ ದೇಶದಲ್ಲಿ ಧರ್ಮಸಂಸ್ಕೃತಿಗಳ ಸೇವೆಯನ್ನು ಮಾಡಿದ ಮಹನೀಯ ಚೇತನರ ವಚನಗಳ ರೂಪವನ್ನು ತಿಳಿಸುವುದು. ಅವರು ಪ್ರಚಾರ ಮಾಡಿದ ಧರ್ಮಸಂಸ್ಕೃತಿಗಳ ಪ್ರಭಾವದಿಂದ ನಮ್ಮ ಜನಾಂಗ ಬೇರೆಬೇರೆ ಕಾಲದಲ್ಲಿ ಮುಟ್ಟಿದ ಎತ್ತರವನ್ನು ರೂಪಿಸುವುದು; ಈಗ ನಮ್ಮ ಸ್ಥಿತಿ ಎಷ್ಟೇ ಕೆಟ್ಟದಾಗಿದ್ದರೂ ನಮ್ಮ ಪೂರ್ವಾರ್ಜಿತ ಆಧ್ಯಾತ್ಮಿಕ ಸಂಪತ್ತು ಎತ್ತರವಾಗಿಯೇ ಇದೆ, ಬಳಸಲು ಈಗಲೂ ಕೈಗೆ ಎಟುಗುವುದಾಗಿ ಇದೆ. ಆದರಿಂದ ನಾವು ನಮ್ಮ ಜನಾಂಗಜೀವನವನ್ನು ತಿದ್ದಿಕೊಂಡು ಮತ್ತೆ ಉನ್ನತವಾಗಿ ಮಾಡುವುದು ಸಾಧ್ಯ'' ಎಂದು ತೋರಿಸುವುದು. 'ಧರ್ಮಸಂರಕ್ಷಣೆ' ಗ್ರಂಥದ ಮುನ್ನುಡಿ ಈ ಗ್ರಂಥಗಳು ಹೇಗೆ ಕ್ರಿಯಶೀಲವಾಗಬಲ್ಲವು ಎನ್ನುವುದನ್ನು ನಿರೂಪಿಸುತ್ತದೆ. ''ಇಂದಿನ ನಮ್ಮ ರಾಷ್ಟ್ರಜೀವನದಲ್ಲಿ ನೂರು ದೋಷ ಇವೆ. ದೋಷ

ಇಲ್ಲದ ದೇಶ ಒಂದೂ ಇಲ್ಲ. 'ನ ಕಶ್ಚಿನ್ನಾ ಪರಾಧ್ಯತಿ' ದೋಷ ಇವೆ ಎಂದು ಒಟ್ಟು ಸಂಸ್ಕೃತಿಯನ್ನೇ ತಿಪ್ಪೆಗೆ ಎಸೆಯುವ ಕ್ರಮ ವಿವೇಕವಲ್ಲ. ದೋಷವನ್ನು ತಿಳಿದು ಅದನ್ನು ಸರಿಪಡಿಸುವ ಕ್ರಮ ಯಾವುದು ಯೋಚಿಸಿ, ತಕ್ಕ ಪರಿಷ್ಕರಣ ನಡೆಸಿ, ಬಾಳುವುದು ಒಂದೇ ಯುಕ್ತವಾದ ಮಾರ್ಗ. ಈ ಮಾರ್ಗ ಯಾವುದು ಎಂಬುದನ್ನು ಈ ಪ್ರಬಂಧದಲ್ಲಿ ನನ್ನಿಂದ ಆದಷ್ಟು ವಿವೇಚನೆಯಿಂದ ವಿಜ್ಞಾಪಿಸಿದ್ದೇನೆ''.

ಸಂಕ್ಷಿಪ್ತ ವಾಲ್ಮೀಕಿ ರಾಮಾಯಣ:

ಕೃತಿಯ ಹೆಸರೇ ಸ್ವಯಂ ವಿದಿತ. ರಾಮಾಯಣದ ಕಥೆ ಅನೇಕರಿಗೆ ಗೊತ್ತಿದ್ದರೂ, ವಾಲ್ಮೀಕಿ ಹೇಳಿದ ಮೂಲರಾಮಾಯಣದ ಪರಿಚಯ ಬಹುಜನರಿಗೆ ಇಲ್ಲ ಎನ್ನುವ ಕೊರತೆಯನ್ನು ನಿವಾರಿಸುವಲ್ಲಿ ಮಾಸ್ತಿಯವರು ಮಾಡಿದ ಪ್ರಯತ್ನವೇ ಈ ಕೃತಿ. ಮೂಲರಾಮಾಯಣ ಎಂದು ಪ್ರಚಲಿತವಿರುವ ಗ್ರಂಥದಲ್ಲಿ ವಾಲ್ಮೀಕಿಯ ರಚನೆಯ ಜೊತೆಗೆ ಬೇರೆಯವರ ರಚನೆಯೂ ಸೇರಿಬಿಟ್ಟಿದ್ದು ಮಾಸ್ತಿಯವರು ಈ ಪ್ರಕ್ಷಿಪ್ತ ಭಾಗಗಳನ್ನು ಗ್ರಹಿಸಿ ಅವನ್ನು ಇಲ್ಲಿ ಕೈಬಿಟ್ಟಿದ್ದಾರೆ. ಹಾಗೆಯೇ ವಾಲ್ಮೀಕಿಯದ್ದೆಂದು ಒಪ್ಪಬಹುದಾದ ಭಾಗಗಳಲ್ಲಿಯ ಹಲವು ವಿವರಗಳನ್ನು ಗ್ರಂಥ ಸಂಕ್ಷೆಪದ ದೃಷ್ಟಿಯಿಂದ ಬಿಟ್ಟಿದ್ದಾರೆ. 'ಮೂಲರಾಮಾಯಣ' ಇಪ್ಪತ್ನಾಲ್ಕುಸಾವಿರ ಶ್ಲೋಕಗಳ ಗ್ರಂಥ ಎನ್ನುವುದೇ ಪ್ರತೀತಿಯಾದರೂ, ಮಾಸ್ತಿಯವರ ದೃಷ್ಟಿಯಲ್ಲಿ ಇದು 'ನಿಷ್ಕರ್ಷೆಯ ಅಂಕೆ' ಎಂದಲ್ಲ: ''ಉತ್ತರಕಾಂಡ ಆಮೇಲೆ ಯಾವಾಗಲೋ ರಚಿತವಾಗಿ ವಾಲ್ಮೀಕಿಯದ್ದೆಂದು ಅಂಗೀಕೃತವಾಗಲಿಲ್ಲ. ಉತ್ತರಕಾಂಡದ ಏಳುಸಾವಿರ ಶ್ಲೋಕಗಳನ್ನು ಬಿಟ್ಟರೆ ಉಳಿದ 17,000 ಶ್ಲೋಕಗಳಲ್ಲಿ ''ಪ್ರಕ್ಷಿಪ್ತ ಎಂದು ಶಂಕಿಸಬಹುದಾದ ಭಾಗಗಳ ಶ್ಲೋಕಗಳ ಸಂಖ್ಯೆ ಒಟ್ಟು ಸುಮಾರು ಆರುಏಳುಸಾವಿರ. ವಾಲ್ಮೀಕಿಯದೇ ಹೌದು ಎಂದು ಖಂಡಿತವಾಗಿ ಹೇಳಬಹುದಾದ ಶ್ಲೋಕಗಳ ಸಂಖ್ಯೆ ಸುಮಾರು ಹತ್ತುಹನ್ನೊಂದು ಸಾವಿರ''. ಈ ಹತ್ತು ಹನ್ನೊಂದು ಸಾವಿರ ಶ್ಲೋಕಗಳಲ್ಲಿ ಅನೇಕ ಪ್ರಸಂಗಗಳು ಮಹಾಕಾವ್ಯದ ಧಾಟಿಯಲ್ಲಿ ವಿಸ್ತೃತವಾಗಿರುವುದರಿಂದ ಈ ಭಾಗಗಳನ್ನು ಮಾಸ್ತಿಯವರು ಕೈಬಿಟ್ಟರೂ ಕಥೆ ಚೆನ್ನಾಗಿಯೇ ನಡೆದಿದ್ದು ಮೂಲಕಥೆಯ ಓಟ ಹಾಗೂ ಒಟ್ಟಂದಗಳು ಪರಿಣಾಮಕಾರಿಯಾಗಿ ಉಳಿದುಬಂದಿವೆ. ಮೂಲದಲ್ಲಿ ಹತ್ತುಮಾತಿದ್ದರೆ, ಮಾಸ್ತಿಯವರದು ಅದರಲ್ಲಿ ಒಂದು ಮುತ್ತಿನಂತಹ ಮಾತು. ಕೆಲವು ವೇಳೆ ಮಾಸ್ತಿಯವರ ಸ್ವೋಪಜ್ಞತೆ ಎಲ್ಲಿಯವರೆಗೂ ಹೋಗುತ್ತದೆಂದರೆ ''ರಾವಣ ಮಾರೀಚನ ಬಳಿ ಎರಡು ಸಲ ಬಂದ ಎನ್ನುವುದು, ಸುಗ್ರೀವ ವಾಲಿಯೊಡನೆ ಎರಡು ಸಲ ಕಾದಿದ ಎನ್ನುವುದು, ಒಪ್ಪಬಹುದಾದ ಮಾತಲ್ಲ'' ಎಂದು ಮೂಲದ ಸಂದರ್ಭಗಳನ್ನೇ ಸ್ವೀಕಾರಾರ್ಹವಲ್ಲ ಎನ್ನುತ್ತಾರೆ. ರಾಮಾಯಣದ ಮೂಲಕಥನವಾವುದು, ಯಾವುದಲ್ಲ ಎಂಬ ವಿವೇಚನೆಯ ಹಿನ್ನೆಲೆಯಲ್ಲಿ ಮಾಸ್ತಿಯವರು ನೀಡುವ ಕಾರಣಗಳು ಸಾಮಾನ್ಯ ಓದುಗರಲ್ಲಿ ವಿಶ್ವಾಸ ಮೂಡಿಸಬಲ್ಲ ಧ್ವನಿ ಪಡೆದಿವೆ.

ಆದರೆ ಈ ಸಂಕ್ಷೇಪಣ ಕ್ರಿಯೆಯಲ್ಲಿ ಮಾಸ್ತಿಯವರು ಕೆಲವು ಶ್ಲೋಕಗಳನ್ನು ತಾವೇ ರಚಿಸಿದ್ದಾರೆ ''ಸಂಕ್ಷೇಪಣ ಕರ್ಮದಲ್ಲಿ ಸಂಗತಿ ರಕ್ಷಣಕ್ಕಾಗಿ ಅಲ್ಲಲ್ಲಿ ಕೆಲವು ಶ್ಲೋಕಗಳನ್ನು ರಚಿಸಬೇಕಾಯಿತು. ಇದರಲ್ಲಿ ನಾನು ಸ್ವಲ್ಪ ಸ್ವಾತಂತ್ರವನ್ನು ವಹಿಸಿದ್ದೇನೆ''.

ಮಾಸ್ತಿಯವರ ಈ ಅನುವಾದ, ಮೂಲ ರಾಮಾಯಣದಲ್ಲಿ ಆಸಕ್ತಿಯಿರುವ

ವಿದ್ವಾಂಸರಿಗೂ, ರಾಮಾಯಣ ಕಥೆಯನ್ನು ಸರಳವಾಗಿ ಓದಿ ಅರ್ಥಮಾಡಿಕೊಳ್ಳಬಯಸುವ ಸಾಮಾನ್ಯ ಓದುಗರಿಗೂ ಹೆಚ್ಚು ಪ್ರಯೋಜನಕಾರಿಯಾಗಿದೆ.

'ಅಂತರಗಂಗೆ' - 'ಧರ್ಮಸಂರಕ್ಷಣೆ':

ಮಾಸ್ತಿಯವರ ಧಾರ್ಮಿಕ ದೃಷ್ಟಿ ಅನನ್ಯವಾದದ್ದು. ಭಾರತೀಯ ಸಂಸ್ಕೃತಿಯ ಬಗ್ಗೆ ವಿಶಿಷ್ಟವಾದ ಶ್ರದ್ಧೆ, ಅಧ್ಯಯನ, ಗೌರವಗಳಿದ್ದ ಮಾಸ್ತಿಯವರಿಗೆ ಭಾರತೀಯ ಧರ್ಮಸಂಸ್ಕೃತಿಗಳನ್ನು ತಮ್ಮ ಬದುಕಿನ ಮೂಲ ತುಡಿತದ ಮಟ್ಟದಲ್ಲಿ ಪ್ರತಿಸ್ಪಂದಿಸಿ, ಸಾಹಿತ್ಯದ ಭಾಷೆಯಲ್ಲಿ ಧಾರ್ಮಿಕ ವಿವರಣೆಗಳನ್ನು ನೀಡುತ್ತಾ ನಡೆಯುವ, ಆ ಮೂಲಕ ಕಲಾತ್ಮಕ ಚಿತ್ರಣವನ್ನು ಸಾಧ್ಯವಾಗಿಸುವ, ಇಷ್ಟಾಗಿಯೂ ವಾಸ್ತವಿಕ ಅಂಶಗಳಿಗೆ ಎಲ್ಲೂ ಮುಕ್ಕಾಗದಂತೆ ನೋಡಿಕೊಳ್ಳ ಬಲ್ಲ ಜಾಣ್ಮೆ ಸಿದ್ಧಿಸಿದೆ.

ಈ ಎರಡು ಕೃತಿಗಳ ರಚನೆಗೆ ಕಾರಣವಾದ ಸಂಗತಿಯೊಂದನ್ನು ಮಾಸ್ತಿಯವರು ಪ್ರಸ್ತಾಪಿಸಿದ್ದಾರೆ. ಒಮ್ಮೆ ಮಣಿಪಾಲಿನ ಒಂದು ಸಭೆಯಲ್ಲಿ ಮಾತನಾಡುತ್ತಾ ಅವರು ''ಭಾರತೀಯ ಸಂಸ್ಕೃತಿಯ ಮಹೋನ್ನತ ಸಾಧನೆಗಳನ್ನು ಹೇಳಿ, ಇಂದಿನ ದುರವಸ್ಥೆಯನ್ನು ತಿಳಿಸುತ್ತಾ, ಈ ದುರವಸ್ಥೆಯಿಂದ ಬಿಡಿಸಿಕೊಂಡು ಹೊಸಕಾಲಕ್ಕೆ ತಕ್ಕಂತೆ ತಮ್ಮ ಪೂರ್ವಾರ್ಜಿತ ಸಂಸ್ಕೃತಿಯನ್ನು ತಿದ್ದಿಕೊಂಡು, ಯಕ್ಷಪ್ರಶ್ನೆಗೆ ಸರಿಯಾಗಿ ಉತ್ತರಿಸುವ ಮೂಲಕ ತಾನೂ ಬದುಕಿ, ತನ್ನ ತಮ್ಮಂದಿರನ್ನೂ ಬದುಕಿಸಿಕೊಂಡ ಯುಧಿಷ್ಠಿರನಂತೆ ಲೋಕದ ರಾಷ್ಟ್ರಗಳ ಅಣ್ಣ ರಾಷ್ಟ್ರವಾಗಿ ನಡೆದುಕೊಳ್ಳಬೇಕು'' ಎಂದಿದ್ದರು. ಇದಾದ ಕೆಲವೇ ದಿನಗಳಲ್ಲಿ ಅವರಿಗೆ ಒಂದು ಪತ್ರಬಂತು. ಅದು 'ಪೂಜ್ಯ ಶ್ರೀ ಮಾಸ್ತಿಯವರ ಸನ್ನಿಧಿಯಲ್ಲಿ ಅನಂತಪ್ರೇಮ ಹಾಗೂ ವಿನಯಪೂರ್ವಕ ಪ್ರಣಾಮಗಳು, ಸನ್ಮಾನ್ಯ ಪೂಜ್ಯರೇ' ಎಂದು ಪ್ರಾರಂಭವಾಗಿ ''ನೀವೇ ಹೇಳಿದಂತೆ ನೀವು ಮುದುಕರಲ್ಲ, ಹುರುಪಿನ ಯುವಕರೇ ಆಗಿರುವಿರಿ. ಆದರೆ ಮಾತಿಗೆ, ಬುದ್ಧಿಗೆ ಹಳೆಯ ಜಾಡಿನ ಮುದಿತನ ಬರಬಾರದು. ಮುದ್ರಿಸಿದ್ದನ್ನೇ ಹಾಡುವ ಗ್ರಾಮಾಫೋನ್ ರಿಕಾರ್ಡ್ ಆಗಬಾರದೆಂಬುದು ನನ್ನ ಆಶಯ'' ಎಂದು ವ್ಯಂಗ್ಯವಾಗಿ ಹೇಳುತ್ತಾ 'ವೇದೋಪನಿಷತ್ತುಗಳನ್ನು ಬರೆದ ಜನ ಇಲ್ಲದ ದೇವರುಗಳನ್ನು ಸೃಷ್ಟಿಸಿ, ಈ ಜನರನ್ನು ಮೌಢ್ಯದಲ್ಲಿ ಇಟ್ಟಿರುವ ''ಅಂಶ ತಿಳಿಸಿ'' ಮಠಾಧಿಪತಿಗಳು, ಸ್ವಾಮಿಗಳು, ಬಾಬಾಗಳು, ಇನ್ನೂ ಎಷ್ಟು ಕಾಲ ಈ ದೇಶದ ಜನರನ್ನು ಮೌಢ್ಯದಲ್ಲಿ ಇಡಬೇಕೆಂದು ಮಾಡಿದ್ದಾರೋ ತಿಳಿಯದ'' ಎಂದೆಲ್ಲಾ ಹೇಳುತ್ತಾ ಕಡೆಗೆ 'ಮಾಸ್ತಿಯವರೇ, ತಾವು ಹಿರಿಯರು, ಜ್ಞಾನಿಗಳು, ವಿಚಾರವಂತರು, ಮಾರ್ಗದರ್ಶನ ಮಾಡುವವರು, ದೇವರ ಅಸ್ತಿತ್ವವನ್ನು ಕಂಡವರು, ದೇವರ ಅಡ್ರೆಸ್ಸನ್ನು ದಯಮಾಡಿ ತಿಳಿಸುವಿರಾ'' ಎಂದು ಪತ್ರ ಮುಗಿಸಿದ್ದರು. ಹೀಗೆ ವಿನಯದಿಂದ ಆರಂಭವಾಗಿ, ಒಡನೆಯೇ ಅವಿನಯ ನುಗ್ಗಿ ಕಡೆಗೆ ವ್ಯಂಗ್ಯದಲ್ಲಿ ಪರ್ಯವಸಾನವಾಗಿರುವ ಪತ್ರ ಕಂಡ ಮಾಸ್ತಿಯವರಿಗೆ ಕೋಪದ ಬದಲಿಗೆ ಕನಿಕರ ಮೂಡುತ್ತದೆ. ಮಾತೃಭೂಮಿಯ ಬಗ್ಗೆ ಕಿರಿಯ ಸೋದರನೊಬ್ಬ ಇಂಥ ತಪ್ಪು ಭಾವನೆಗಳನ್ನು ಬೆಳೆಸಿಕೊಂಡಿದ್ದಾರಲ್ಲಾ ಎಂಬ ವ್ಯಥೆಯಾಗುತ್ತದೆ. ''ನನ್ನನ್ನು ಈ ಕೆಲಸಮಾಡಲು ಪ್ರೇರೇಪಿಸಿದ್ದು, ವಯಸ್ಸಿನಿಂದ ನನಗೆ ಕಿರಿಯರಾದ ಒಬ್ಬ ಮಿತ್ರರು ನನಗೆಂದು ಬರೆದ ಒಂದು ಪತ್ರ'' ಎಂದು ಮಾಸ್ತಿಯವರು 'ಅಂತರಗಂಗೆ' ಹಾಗೂ 'ಧರ್ಮಸಂರಕ್ಷಣೆ' ಕೃತಿಗಳ ಸ್ಫೂರ್ತಿಮೂರ್ತಿಯ ಪತ್ರದ ಬಗ್ಗೆ ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ.

ಈ ಪತ್ರ, ಅದರ ಹಿಂದಿರುವ ವಿಷಾದ, ಇಂತಹ ಜನರಲ್ಲಿರುವ ಅರೆ ತಿಳಿವಳಿಕೆ,

ಪಾಶ್ಚಾತ್ಯನಾಗರೀಕತೆಯ ಅರೆಬೆಂದ ಪ್ರಭಾವ, ಇವುಗಳನ್ನು ನಾಡಿ ಹಿಡಿದಂತೆ ಹಿಡಿಯುವ ಮಾಸ್ತಿಯವರು, ಈ ಘಟನೆಯೊಂದನ್ನು ನಿಮಿತ್ತ ಮಾಡಿಕೊಂಡು ಎರಡು ಸಮಗ್ರ ಕೃತಿಗಳನ್ನು ರಚಿಸುತ್ತಾರೆ.

ಮಾಸ್ತಿ ಮೂಲಭೂತವಾಗಿ ವಾಸ್ತವವಾದಿ. ಪ್ರೇಮದಲ್ಲಿ, ಕಾವ್ಯದಲ್ಲಿ, ಕಥೆಯಲ್ಲಿ ಎಲ್ಲೂ ದಂತಗೋಪುರಗಳಲ್ಲಿ ಅಡಗಿಕೊಳ್ಳದ ಮಾಸ್ತಿ, ಹಾಗೆಯೆ ಸಾಂಸ್ಕೃತಿಕ, ಧಾರ್ಮಿಕ ಚಿಂತನೆಯಲ್ಲಿಯೂ ವಾಸ್ತವದ ಗಟ್ಟಿ ನೆಲದ ಮೇಲೆ ನಿಂತೇ ಸ್ಪಷ್ಟವಾಗುತ್ತಾ ಹೋಗುತ್ತಾರೆ. ಮಾಸ್ತಿಯವರು ಸಂಪೂರ್ಣ ಸಂಪ್ರದಾಯ ಶರಣರಲ್ಲ, ಹಾಗೂ ಮುಕ್ತ ವಿಚಾರಧಾರೆಯನ್ನು ಹೊಂದಿರುವ ವಸ್ತುನಿಷ್ಠ ಚಿಂತಕರು ಎಂಬುದು ಅವರ ''ಅಂತರಗಂಗೆ'' ಹಾಗೂ 'ಧರ್ಮಸಂರಕ್ಷಣೆ' ಕೃತಿಗಳಲ್ಲಿ ಕಂಡುಬರುತ್ತದೆ.

ಸಾಹಿತ್ಯ ಮತ್ತು ತತ್ವಜ್ಞಾನ ಜಗತ್ತಿನಲ್ಲಿ ವಿಚಾರವಂತಿಕೆ ಪ್ರಾರಂಭವಾದ ದಿನದಿಂದಲೂ ತಮ್ಮ ತಮ್ಮ ಪ್ರಾಧಾನ್ಯತೆಗಾಗಿ, ಉತ್ತಮತೆಯ ಸ್ಥಾನಮಾನಕ್ಕಾಗಿ ಪರಸ್ಪರ ಸೆಣಸುತ್ತಲೇ ಇವೆ. ಭಾರತೀಯ ಸಾಹಿತ್ಯ ಇತಿಹಾಸದಲ್ಲಿ, ಬಹುತೇಕ ಎಲ್ಲ ಸಾಹಿತ್ಯದ ಅಂತಿಮ ಗುರಿಯಾಗಿ ಒಂದು ಸಂಸ್ಕೃತಿ ಅಥವಾ ಧಾರ್ಮಿಕ ಮೌಲ್ಯದ ಸಮರ್ಥನೆ ಬಹುಕಾಲದವರೆಗೆ ನಡೆದುಬಂತು. ಭಾರತದ ಎಲ್ಲ ಭಾಷೆಯಲ್ಲೂ ಕಳೆದ ಎಂಟುಹತ್ತು ಶತಮಾನಗಳಲ್ಲಿ ಬಂದಿರುವ ಸಾಹಿತ್ಯದಲ್ಲಿ ಗುಪ್ತಗಾಮಿನಿಯಾಗಿ ತತ್ವಜ್ಞಾನದ ಸೂಕ್ಷ್ಮ ಎಳೆಗಳು ಸರಸ್ವತಿಯಂತೆ ಹರಿದುಬಂದಿವೆ.

ಈ ಶತಮಾನದ ಮೊದಲ ದಶಕದಲ್ಲಿ ಕಥೆಗಳನ್ನು ಬರೆಯ ತೊಡಗಿದ ಮಾಸ್ತಿ, ಎಂಟನೆಯ ದಶಕದಲ್ಲಿ ರಚಿಸಿರುವ ಈ ಕೃತಿಗಳು ವಿಸ್ಮಯಕರವಾದ ಮಾಸ್ತಿಯವರ ವ್ಯಕ್ತಿತ್ವದ ಎತ್ತರಬಿತ್ತರಗಳ, ವ್ಯಾಪ್ತಿ-ದೀಪ್ತಿಗಳ, ಅದ್ಭುತ - ದೃಷ್ಟಾಂತವಾಗುತ್ತವೆ. ಮಾಸ್ತಿಯವರ ಸರಳ ಬರವಣಿಗೆ. ಭಾರತೀಯ ಧರ್ಮ, ಸಂಸ್ಕೃತಿ ಸಂಬಂಧ ವಿಚಾರಗಳ ಬಗೆಗಿರುವ ಸಮೃದ್ಧ ಪರಿಕಲ್ಪನೆ ಹಾಗೂ ಈ ಸಂಸ್ಕೃತಿಯ ಒಳಹೊರಗಿರುವ ವಿರೋಧಾಭಾಸಗಳ ಸ್ಪಷ್ಟ ತಿಳುವಳಿಕೆ, ಈ ಮೂರೂ ಉತ್ತಮ ಹದದಲ್ಲಿ ಸಹಸ್ಪಂದಿಸಿ ಪರಿಣಮಿಸಿರುವ ಕೃತಿಗಳು ಅಂತರಗಂಗೆ ಹಾಗೂ ಧರ್ಮಸಂರಕ್ಷಣೆ. ಈ ಕೃತಿಗಳನ್ನು ಓದುತ್ತಾ ಹೋದಂತೆಲ್ಲಾ ಮಾಸ್ತಿಯವರು, ಬರಹಗಾರರಾಗಿ, ಚರಿತ್ರಕಾರರಾಗಿ, ಸಮಾಜಶಾಸ್ತ್ರಜ್ಞರಾಗಿ, ಕವಿಯಾಗಿ, ಚಿಕಿತ್ಸಕಬುದ್ಧಿಯ ವಿಮರ್ಶಕರಾಗಿ, ವೇದಾಂತಿಯಾಗಿ, ಕಡೆಗೆ ಸಾಧನದ ಮಾರ್ಗ ಕಂಡುಕೊಂಡ ದಾರ್ಶನಿಕರಾಗಿ ಕಂಡುಬರುತ್ತಾರೆ.

ಅಂತರಗಂಗೆ :

ಭಾರತದ ಆಧ್ಯಾತ್ಮಿಕ ಸಂಪತ್ತಿನ ಸಮೃದ್ಧ ತಿಳಿವಳಿಕೆಯನ್ನು ಮೂಡಿಸುವ ಕೃತಿ 'ಅಂತರಗಂಗೆ'. ಇದರ ಪ್ರಸ್ತಾವನೆಯಲ್ಲೇ ಭಾರತೀಯ ಜನಾಂಗವನ್ನು - ಸಂಸ್ಕೃತಿಯನ್ನು ಇತಿಹಾಸದುದ್ದಕ್ಕೂ ಮುಕ್ತಕಂಠದಿಂದ ಕೊಂಡಾಡಿರುವ ವಿಶ್ವದ ಮಹಾಚೇತನಗಳ ವಿಚಾರಗಳಿವೆ. ಅಪರೋಕ್ಷ ಜ್ಞಾನಿಗಳಾದ ಋಷಿಗಳು ಪ್ರಶಾಂತವಾಗಿ ಹಾಡಿದ ತತ್ವಗಳೇ ವೇದಗಳ ಅರ್ಥವಾಗಿ, ಉಪನಿಷತ್ತುಗಳ ಸಾರವಾಗಿ ಬಂದಿದ್ದು ಮಾಸ್ತಿಯವರು ಈ ತತ್ವಾರ್ಥಗಳನ್ನು ಕನ್ನಡಿಸಿರುವ ಪರಿ ಸುಂದರವಾಗಿದೆ. ವೇದದ ಸರಿಯರ್ಥವನ್ನು, ಹಿರಿಯರ್ಥವನ್ನು, ಪರಿಪರಿ ಅರ್ಥವನ್ನು ಹೃದಯಂಗಮವಾಗಿ ಮಾಸ್ತಿಯವರು ಇಲ್ಲಿ ಬಿಚ್ಚಿಡುತ್ತಾರೆ.

'ಸತ್ಯವನ್ನು ನುಡಿ, ಧರ್ಮವನ್ನು ನಡೆಸು, ಅಭ್ಯಾಸವನ್ನು ಅಲಕ್ಷಿಸಬೇಡ, ಸಂತತಿ

ಮುಂದುವರೆಸು, ಕರ್ತವ್ಯದತ್ತ ಗಮನವಿರಲಿ, ದೇವತೆಗಳಿಗೆ, ಪಿತೃಗಳಿಗೆ ಸಲ್ಲಿಸಬೇಕಾದುದನ್ನು ಎಚ್ಚರದಿಂದ ಸಲ್ಲಿಸು. ತಾಯಿಯನ್ನು ದೇವರಂತೆ ಕಾಣು, ತಂದೆಯನ್ನು, ಆಚಾರ್ಯರನ್ನು, ಅತಿಥಿಗಳನ್ನು ದೇವರೆಂದು ಕಾಣು.'

''ಸೂರ್ಯ ಮುಳುಗಿದಾಗ ಕಿರಣಗಳು ಅವನಲ್ಲಿ ಅಡಗುವಂತೆ ನಿದ್ದೆಯಲ್ಲಿ ಮನುಷ್ಯನ ಸರ್ವಶಕ್ತಿಯೂ ಮನಸ್ಸಿನಲ್ಲಿ ಅಡಗುತ್ತದೆ. ಪ್ರಾಣ ಮಾತ್ರ ಎಚ್ಚತ್ತಿರುತ್ತದೆ''.

ಈ ಕೃತಿಯ ೫೨ನೇ ಪುಟದಿಂದ ೧೪೫ನೇ ಪುಟದವರೆಗೂ ಅರಳಿಕೊಳ್ಳುವ ಈ ರೀತಿಯ ಮಾತುಗಳನ್ನು ಮಾಸ್ತಿಯವರು ಪ್ರಾಚೀನ ಮನೀಷಿಗಳ ವಿಚಾರಧಾರೆಯಿಂದ ಆಯ್ದು ಅರ್ಥವಾಗುವ ಸರಳ ಭಾಷೆಯಲ್ಲಿ ಮಂಡಿಸಿ, ಕನ್ನಡದ ವೇದಸಾಹಿತ್ಯಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ. ಮುಂದೆ ರಾಮಾಯಣ, ಭಾರತಗಳ ಕಥಾ ರೂಪರೇಖೆಗಳನ್ನು ಕೊಟ್ಟು ವಾಲ್ಮೀಕಿಯ ಕಾವ್ಯಸಿದ್ಧಿಯನ್ನು ವಿಶ್ಲೇಷಿಸುವ ಮಾಸ್ತಿಯವರು ಗೀತೆಯ ಬಗ್ಗೆ ನಡೆಸುವ ವಿವೇಚನೆ ಚೇತೋಹಾರಿ.

''ಮನುಷ್ಯನ ಆತ್ಮ, ದೇಹ ಎಂಬ ಒಂದು ರಥದಲ್ಲಿ ಕುಳಿತ ರಥಿಕ. ಬುದ್ಧಿ ರಥದ ಸಾರಥಿ. ಇಂದ್ರಿಯಗಳು ಕುದುರೆಗಳು, ಮನಸ್ಸು ಹಿಡಿತಕ್ಕೆ ಬಂದವನು ಇಂದ್ರಿಯಗಳನ್ನು ಅಡಗಿಸಿ ಇಡುತ್ತಾನೆ. ಅವನ ಬುದ್ಧಿ ಸಾರಥಿಯಾಗಿ ಅವನನ್ನು ನಡೆಸುತ್ತದೆ. ವಿಜ್ಞಾನ ಸಾರಥಿಯಾಗಿ ನಡೆಯುವ ವಿಜ್ಞಾನಿ ಸಿದ್ಧಿಯನ್ನು ಮುಟ್ಟುತ್ತಾನೆ''

ಮಾಸ್ತಿಯವರ ದೃಷ್ಟಿಯಲ್ಲಿ ಒಟ್ಟು ಭಗವದ್ಗೀತೆಯೇ ರಥದ ಈ ಉಪಮಾನದ ವಿಸ್ತೃತರೂಪ. ಅರ್ಜುನ ರಥಿಕ. ಕೃಷ್ಣ ಸಾರಥಿ, ಅರ್ಜುನನ ಚಿತ್ತ ಚಪಲವಾದಾಗ ಕೃಷ್ಣ ಅವನ ಬುದ್ಧಿ ಆಗಿ ಅವನನ್ನು ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗುತ್ತಾನೆ.

ಮಾಸ್ತಿ ನಂತರದ ಪುಟಗಳಲ್ಲಿ ಪುರಾಣಗಳ ಸ್ವರೂಪವನ್ನು ವಿಶ್ಲೇಷಿಸುತ್ತಾರೆ. ''ಪುರಾಣಗಳು ಹದಿನೆಂಟು ಇದ್ದರೂ ಜನರಲ್ಲಿ ವಿಶೇಷವಾಗಿ ಪ್ರಚಾರದಲ್ಲಿರುವುವು ವಿಷ್ಣುಪುರಾಣ ಹಾಗೂ ಭಾಗವತಪುರಾಣ. ಹದಿನೆಂಟು ಪುರಾಣಗಳಲ್ಲದೆ ಹದಿನೆಂಟು ಉಪಪುರಾಣಗಳೂ ಇವೆ''. ವಿಷ್ಣುಪುರಾಣ, ಭಾಗವತಗಳನ್ನು ಪರಿಚಯಿಸುವ ಮಾಸ್ತಿಯವರು ಮುಂದುವರೆದು 'ಗಣಪತಿ' ಪರಿಕಲ್ಪನೆ, ನರಕದ ಕಲ್ಪನೆ, ಆಗಮಗಳನ್ನು ಪ್ರಸ್ತಾಪಿಸಿ, ಪಾಂಚರಾತ್ರಾಗಮದ ಜಿತಂತೇ ಸ್ತೋತ್ರಮಾಲೆಯ ಸಾರಾಂಶವನ್ನು ಕನ್ನಡದಲ್ಲಿ ನೀಡಿದ್ದಾರೆ. ಆರಾಧನಾ ವೈಶಿಷ್ಟ್ಯ, ವಿಷ್ಣುಸಹಸ್ರನಾಮ, ತಂತ್ರಗಳು, ತಂತ್ರಪ್ರಕಾರ ಪ್ರಕ್ರಿಯೆಗಳು, ಇವುಗಳ ಸಂಕ್ಷೇಪ ವಿಚಾರಗಳಿವೆ.

ಹೀಗೆ ವೇದ ಪುರಾಣ ಕಾಲದ ವಿಸ್ಮಯಗಳ ದರ್ಶನದ ನಂತರ ಮಾಸ್ತಿಯವರು ಓದುಗರಿಗೆ ಇತಿಹಾಸದ ಗ್ಯಾಲರಿಯ ಪರಿಚಯ ಮಾಡಿಸುತ್ತಾರೆ. ಮೊದಲಿಗೆ ಅಲೆಗ್ಯಾಂಡರನ ಪ್ರವೇಶ, ಆಗಿದ್ದ ಪರಿಸ್ಥಿತಿ, ನಂತರ ಚಂದ್ರಗುಪ್ತ, ಅವನ ಮೊಮ್ಮಗ ಅಶೋಕ, ಚಾಣಕ್ಯ, ಅವನ ಅರ್ಥಶಾಸ್ತ್ರಗಳನ್ನು ಮಾಸ್ತಿಯವರು ಓದುಗರಿಗೆ ಪರಿಚಯಿಸುತ್ತಾರೆ. ಭಕ್ತಿಮಾರ್ಗದ ಒಡಲಲ್ಲಿ ಮೂಡಿಬಂದ ಆಳ್ವಾರರ ಕೃತಿಗಳನ್ನು ಮಾಸ್ತಿಯವರು 'ಸುಲಿದ ಬಾಳೆಯ ಹಣ್ಣಿನಂದದಿ' ಅನುವಾದಿಸಿದ್ದಾರೆ.

ಕಾವ್ಯಪ್ರಚಾರಕ್ಕೆ ಕಾಲಿಡುವ ಮಾಸ್ತಿ, ವಾಲ್ಮೀಕಿ, ಕುಶೀಲವರು, ಕಾಳಿದಾಸರನ್ನು ತೋರಿಸುತ್ತಲೇ ಕಾಳಿದಾಸನ ರಘುವಂಶ ಹಾಗೂ ಅಭಿಜ್ಞಾನ ಶಾಕುಂತಲದ ಮಹತ್ವವನ್ನು ನಿರೂಪಿಸುತ್ತಾರೆ.

ಸಿದ್ಧಾಂತದ ಅಧ್ಯಾಯ ತೆರೆದುಕೊಳ್ಳುತ್ತಲೇ ಶಂಕರಾಚಾರ್ಯಗಳು,

ರಾಮಾನುಜಾಚಾರ್ಯರು, ಮಧ್ವಚಾರ್ಯರು, ದೇವಾಲಯಗಳು, ವೀರಶೈವಮತ, ವಚನಸಾಹಿತ್ಯ ಹಾಗೂ ಸ್ತೋತ್ರಸಾಹಿತ್ಯಗಳ ವೈಶಿಷ್ಯ, ಸಾಧನೆ ಹಾಗೂ ಸಾರ್ಥಕತೆಗಳು ಮನವರಿಕೆಯಾಗುತ್ತವೆ.

ನಂತರ ವಿಜಯನಗರ ಸಾಮ್ರಾಜ್ಯವನ್ನು ಧರ್ಮ ರಕ್ಷಕ ರಾಜ್ಯವನ್ನಾಗಿ ನೋಡುವ ಮಾಸ್ತಿಯವರು, ವಿದೇಶೀ ಪ್ರವಾಸಿಗರು ನೀಡಿರುವ ಕೃಷ್ಣದೇವರಾಯನ ಚಿತ್ರಣವನ್ನು ಕಣ್ಣಿಗೆಕಟ್ಟುವಂತೆ ಕನ್ನಡದಲ್ಲಿ ಕಾಣಿಸುತ್ತಾರೆ. ಸಾಮ್ರಾಜ್ಯದ ಕಲಾಶ್ರೀಮಂತಿಕೆ, ಧೀಮಂತಿಕೆ, ನೃತ್ಯಶಿಲ್ಪ, ಸಂಗೀತ, ಸಾಹಿತ್ಯಗಳ ವೈಭವಗಳನ್ನು ಹೇಳುತ್ತಾ ಮಾಸ್ತಿಯವರು ಪುರಂದರದಾಸರ ಜೀವನದರ್ಶನವನ್ನು ಮೂಡಿಸುತ್ತಾರೆ. ಪ್ರಾಸಂಗಿಕವಾಗಿ ಹರಿದಾಸರ ಏಳೆಂಟು ಹಾಡುಗಳನ್ನು ನಿದರ್ಶನಕ್ಕಾಗಿ ಕೊಟ್ಟಿದ್ದಾರೆ.

ಹೀಗೆ ವೇದಕಾಲದಿಂದ ನಿತ್ಯನಿರಂತರ ಹರಿದುಬಂದಿದ್ದ ಭಾರತೀಯ ಸಂಸ್ಕೃತಿಯ ಒಳಗೆ ವಾಯುವ್ಯ ದಿಕ್ಕಿನಿಂದ ಬಂದೆರಗಿದ ಮಹಮ್ಮದೀಯರ ಧಾಳಿ, ಇಸ್ಲಾಂ ಧರ್ಮದ ಆಗಮನ, ಕಾಶ್ಮೀರದಲ್ಲಿ ರಾಜಸಿಕಂದರ್ ಅತ್ಯಂತ ಕ್ರೂರ ರೀತಿಯಲ್ಲಿ ಹಿಂದುಗಳನ್ನು ನಡೆಸಿಕೊಂಡ ರೀತಿ ಇವುಗಳನ್ನು ಚಿತ್ರಿಸುವ ಮಾಸ್ತಿ ಈ ಅಧ್ಯಾಯದ ಕಡೆಯಲ್ಲಿ ಹೇಳುವ ''ಈ ಕ್ರಮಗಳಾವುವೂ ಮಹಮ್ಮದ್‌ಗುರು ಉಪದೇಶಿಸಿದ ಮತದ ಒಂದು ಅಂಶ ಅಲ್ಲ. ಅವನ ಮತವನ್ನು ಪ್ರಸಾರಮಾಡುತ್ತೇವೆ ಎಂಬ ಭ್ರಾಂತಿಯಿಂದ ಅಲ್ಪ, ಕ್ರೂರ ಬುದ್ಧಿಯ ಮಹಮ್ಮದೀಯರು ಹಿಡಿದ ತಪ್ಪು ಹಾದಿ ಅಷ್ಟೇ. ಇಂಥ ತಪ್ಪು ಎಲ್ಲ ಮತಗಳಲ್ಲಿಯೂ ನಡೆದಿದೆ'' ಎಂಬ ಮಾತುಗಳು ಅವರ ಧಾರ್ಮಿಕ ವಿವೇಚನಾ ಶಕ್ತಿಗೆ ನಿದರ್ಶನವಾಗಿದೆ.

ಹತ್ತನೇಶತಮಾನದ ಕಡೆಯಲ್ಲಿ ಘಸ್ನಿಮಹಮದ್ ಧಾಳಿಮಾಡಿದ ಒಂದೆರಡು ಶತಮಾನಗಳಲ್ಲಿಯೇ ಯೂರೋಪಿನಿಂದ ಭಾರತಕ್ಕೆ ಪೋರ್ಚುಗೀಸರು, ಫ್ರೆಂಚರು, ಆಂಗ್ಲರು ವ್ಯಾಪಾರಕ್ಕೆಂದು ಬಂದು ಪಾದ್ರಿಗಳ ಮೂಲಕ ಕ್ರೈಸ್ತಧರ್ಮ ಪ್ರಚಾರಮಾಡಲು ಪ್ರಾರಂಭಿಸಿದ ವೈಖರಿಯನ್ನು ಮಾಸ್ತಿ ನಿರೂಪಿಸಿದ್ದಾರೆ. ಗೋವಾದಲ್ಲಿ ಕ್ರೈಸ್ತಧರ್ಮದ ಹೆಸರಿನಲ್ಲಿ ಪೋರ್ಚುಗೀಸರು ನಡೆಸಿದ ಭಯಂಕರ 'ಇನ್‌ಕ್ವಿಜಿಷನ್' ನ ವಿವರವನ್ನು ನೀಡುವ ಮಾಸ್ತಿ 'ಕ್ರಿಸ್ತನ ಹೆಸರಿನ ಧರ್ಮವನ್ನು ಇಂತಹ ಅಧರ್ಮ ಕೃತ್ಯಗಳಿಂದ ಹರಡಲು ಯತ್ನಿಸಿದ ಪೋರ್ಚುಗೀಸರು ಕ್ರಿಸ್ತನಿಗಾಗಲೀ, ಅವನ ಧರ್ಮಕ್ಕಾಗಲೀ ಒಳ್ಳೆಯದನ್ನು ಮಾಡಲಿಲ್ಲ'' ಎನ್ನುತ್ತಾರೆ. ಅಲ್ಲಿಂದ ಮುಸ್ಲಿಂ ಕ್ರೌರ್ಯ ಹೆಚ್ಚಿ ಹಿಂದೂಗಳಿಗೆ ಉಳಿಗಾಲ ಇಲ್ಲ ಎಂಬ ಸ್ಥಿತಿ ಬಂದಾಗ ಮಹಾರಾಷ್ಟ್ರದಲ್ಲಿ ತಲೆ ಎತ್ತಿದುದನ್ನು, ಚಕ್ರಾಧಿಪತ್ಯ ಸ್ಥಾಪಿಸಿದುದನ್ನೂ ಪ್ರಸ್ತಾಪಿಸುತ್ತಾರೆ. ಮಹಾರಾಷ್ಟ್ರದ ಭಕ್ತಿಪಂಥದ ಜ್ಞಾನದೇವ, ನಾಮದೇವ, ಏಕನಾಥ, ತುಕಾರಾಮ, ರಾಮದಾಸ ಇವರುಗಳ ಸಾಧನೆಯ ಸಂಕ್ಷಿಪ್ತ ಚಿತ್ರಣವನ್ನು ಮಾಸ್ತಿ ನೀಡುತ್ತಾರೆ. ಹಾಗೆಯೇ ಸುಧಾರಕ ಪಂಥಗಳ ರಾಮಾನಂದ, ಕಬೀರ, ಮೀರಾ, ಚೈತನ್ಯದೇವರ ಸಾಧನೆಗಳು, ಅಸ್ಸಾಮಿ ಕವಿ ಶಂಕರದೇವ, ಬಂಗಾಳೀಕವಿ ರಾಮಪ್ರಸಾದಸೇನನ, ಭಕ್ತಚಂಡೀದಾಸನ, ಗುಜರಾತಿ ಕವಿಗಳಾದ ನರಸಿಂಹ ಮೆಹತಾ, ದಯಾರಾಮರ, ತಮಿಳುನಾಡಿನ ತಾಯುಮಾನವಾರ್ ಅವರ ಭಕ್ತಿಗೀತೆಗಳ ಕನ್ನಡ ಅನುವಾದವನ್ನು ಮಾಸ್ತಿ ಈ ಅಧ್ಯಾಯದಲ್ಲಿ ಮಾಡಿದ್ದಾರೆ.

ಸಿಖ್‌ಮತದ ಉಗಮ, ಪರಂಪರೆಗಳನ್ನು ಪ್ರಸ್ತಾಪಿಸುವ ಮಾಸ್ತಿಯವರು ಸಿಖ್‌ಧರ್ಮದ, ನಾನಕ್‌ಗುರುವಿನ ಉಪದೇಶವನ್ನು ಚೊಕ್ಕವಾಗಿ ಕನ್ನಡೀಕರಿಸಿದ್ದಾರೆ ''ಧರ್ಮ ಶಬ್ದಗಳಲ್ಲಿಲ್ಲ, ಯಾತ್ರೆಗಳಲ್ಲಿಲ್ಲ, ಆಸನಗಳಲ್ಲಿಲ್ಲ, ಧ್ಯಾನದಲ್ಲಿಲ್ಲ,

ಪೀಠಸ್ಥಾನಗಳಲ್ಲಿಲ್ಲ, ಸುತ್ತಣ ಅಶುದ್ಧ ಜೀವನದ ಮಧ್ಯೆ ಶುದ್ಧನಾಗಿ ಬಾಳು, ನಿನಗೆ ಧರ್ಮದ ದಾರಿ ಕಾಣುತ್ತದೆ''

''ಹೊರಗಿನಿಂದ ಬರುವ ಅಶುಚಿ ಅಶುಚಿ ಅಲ್ಲ, ಲೋಭದಿಂದ ಹೃದಯ ಅಶುಚಿಯಾಗುತ್ತದೆ, ಹುಸಿಯಿಂದ ನಾಲಿಗೆ, ಮತ್ತೊಬ್ಬರ ಸಂಪತ್ತು ಮತ್ತು ಪರಪತ್ನಿಯ ಚೆಲುವನ್ನು ನೋಡುವುದರಿಂದ ಕಣ್ಣು ಅಶುಚಿ, ಪರನಿಂದೆ ಕೇಳುವುದರಿಂದ ಕಿವಿ ಅಶುಚಿಯಾಗುತ್ತದೆ''

''ಬಾಳಿನ ಮುಖ್ಯ ಉದ್ದೇಶ ದೇವರನ್ನು ಕುರಿತ ಭಕ್ತಿ. ದೇವರ ಭಕ್ತರು ಎಲ್ಲರನ್ನೂ ಪ್ರೀತಿಯಿಂದ ಕಾಣುತ್ತಾರೆ. ಇತರರ ಸೇವೆಮಾಡದ ದೈವಭಕ್ತಿ ಸುಳ್ಳು''.

''ಸಿಖ್ ಜನರ ಕೂಟ ಖಾಲ್ಸ. ಖಾಲ್ಸದ ಜನ ಯಾರು? ದೇವರ ಹೆಸರನ್ನು ನೆನೆಯುವುದರಲ್ಲಿ ಮುಳುಗಿರುವವನು. ಗುರುವಿನ ಭಕ್ತನಾಗಿರುವನು. ಯಾರನ್ನೇ ಕುರಿತು ಕೆಡುನುಡಿ ನುಡಿಯದವನು. ಪರಸ್ತ್ರೀ ಪರಧನವನ್ನು ಬಯಸದಿರುವನು. ಉಕ್ಕಿನಂತೆ ದೃಢನಾಗಿರುವವನು. ಬಡವರಿಗೆ ನೆರವು ನೀಡುವನು''.

ಹೀಗೆ ಸಿಖ್‌ಧರ್ಮದ ಸಾರಸಂಗ್ರಹವನ್ನು ಮಂಡಿಸುವ ಮಾಸ್ತಿಯವರು ಮುಂದೆ ದೇಶಭಾಷೆಗಳಲ್ಲಿ ಸಾಹಿತ್ಯನಿರ್ಮಾಣದ ಅಗತ್ಯ ಹಿನ್ನೆಲೆಯನ್ನು ಸಂಗ್ರಹಿಸುತ್ತಾರೆ. ತಮಿಳಿನ ಶಿಲಪ್ಪದಿಕಾರಂ, ಕಂಬರಾಮಾಯಣ, ಹಿಂದಿಯ ರಾಮಚರಿತಮಾನಸ, ತಿರುಕ್ಕುರಳ್, ವಂಗಭಾಷೆಯ ಕೃತ್ತಿವಾಸನ ರಾಮಾಯಣ, ಆಂಧ್ರಭಾಗವತ, ಕನ್ನಡದ ಪಂಪಭಾರತ, ಕುಮಾರವ್ಯಾಸಭಾರತ, ಜೈಮಿನೀಭಾರತ, ಸರ್ವಜ್ಞನವಚನಗಳು, ರತ್ನಾಕರವರ್ಣಿಯ 'ಭರತೇಶವೈಭವ', ಅನುಭವಾಮೃತ, ಕನ್ನಡಜನಪದ ಸಾಹಿತ್ಯ ಮುಂತಾದುವನ್ನು ಇಲ್ಲಿ ಸ್ಮರಿಸುತ್ತಾರೆ.

'ಹೊಸ ಕಾಲ' ಎಂಬ ಅಧ್ಯಾಯ ರಾಜಾರಾಮಮೋಹನರಾಯ್ ಹಾಗೂ ದಯಾನಂದ ಸರಸ್ವತಿ, ಬ್ರಹ್ಮಸಮಾಜ, ಆರ್ಯಸಮಾಜ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಅರವಿಂದಯೋಗಿ, ರಮಣಮಹರ್ಷಿ, ರಾಮದಾಸರು, ಗಾಂಧೀಜಿ ಇವರುಗಳ ಚಿಂತನೆ, ಸಾಧನೆ, ದರ್ಶನಗಳನ್ನು ಸಂಕ್ಷೇಪವಾಗಿ ಕೊಡುತ್ತದೆ. ವಿವೇಕಾನಂದರ ಧೀರಗಂಭೀರವಾಣಿಯನ್ನು, ಅವರ ನಡೆನುಡಿಗಳನ್ನು ಮಾಸ್ತಿಯವರು ಪ್ರಭಾವಪೂರ್ಣ ಕನ್ನಡದಲ್ಲಿ ಪಡಿಮೂಡಿಸಿದ್ದಾರೆ.

ಹೀಗೆ ಸಹಸ್ರಾರು ವರ್ಷಗಳ ಕಾಲ ಹರಿದುಬಂದ ಜ್ಞಾನಗಂಗೆ, ಅದನ್ನು ನೀಡಿದ ದ್ರಷ್ಟಾರರು, ಅವರ ಸಂವೇದನೆ, ಅನುಭಾವ ಹಾಗೂ ಆದರ್ಶ ಚಿಂತನೆಗಳು, ಹಿಂದೂ ಜೀವನಕ್ರಮ, ನಂಬಿಕೆಗಳು, ತೀರ್ಥಕ್ಷೇತ್ರಗಳು, ಸಂಹಿತೆಗಳು, ಸದಾಚಾರಗಳು, ನೀತಿಮಾತುಗಳು, ಇವುಗಳ ಅದ್ಭುತ ಮೆರವಣಿಗೆಯನ್ನೇ ಮಾಸ್ತಿಯವರು ಈ ಕೃತಿಯಲ್ಲಿ ಹೊರಡಿಸಿದ್ದಾರೆ. ಇದೊಂದು ಮಹಾಮೆರವಣಿಗೆಯಾಗಿ ಸನಾತನ ಧರ್ಮದ ಸಮಗ್ರ ಚಿತ್ರಣದ ದಿಬ್ಬಣದಂತೆ ಕಂಡುಬಂದು, ಮಾಸ್ತಿಯವರು ಈ ಮೆರವಣಿಗೆಯ ರೂವಾರಿಯಾಗಿ ಕಾಣಿಸಿಕೊಳ್ಳುತ್ತಾರೆ.

ಧರ್ಮಸಂರಕ್ಷಣೆ

ವರ್ತಮಾನದ ಬದುಕಿಗೆ ಸ್ಪಂದಿಸದ ಭಾವನೆಗಳಿಗೆ ಹಳಹಳಿಸುವುದು ಮಾಸ್ತಿಯವರ ಜಾಯಮಾನವಲ್ಲ. ಕುಮಾರವ್ಯಾಸವನ್ನು, ಪುರಂದರದಾಸರನ್ನು, ಆಳ್ವಾರರನ್ನು, ವೇದ ಉಪನಿಷತ್ತುಗಳನ್ನು ಓದುತ್ತಾ, ಅದರಿಂದ ಪುಳಕಿತರಾಗುವ ನಾವು

ಯಾವ ಕಾಲಕ್ಕೆ ಸೇರಿದವರು, ಎಂಬ ಮೂಲಭೂತ ಚಿಂತನೆ ಈ ಕೃತಿಯ ಅಂತರಂಗದಲ್ಲಡಗಿದೆ. ಆದರೆ ಈ ವೈಭವಗಳಷ್ಟೇ, ಓದಷ್ಟೇ ಹೆಮ್ಮೆಯ ಮ್ಯೂಜಿಯಂ ವಸ್ತುಗಳಾಗಿ ಬಿಡುವ ಸಾಧ್ಯತೆಯೂ ಇದ್ದು ಅವು ಹಾಗಾಗದಂತೆ, ನಮ್ಮ ಪ್ರಸ್ತುತ ಬದುಕನ್ನು ಉದ್ದೀಪನಗೊಳಿಸಬಲ್ಲ ಚೈತನ್ಯಶಕ್ತಿಗಳಾಗುವಂತೆ ಅವುಗಳನ್ನು ಪಡೆದುಕೊಳ್ಳಬೇಕು ಎನ್ನುವ ಮನೋಧರ್ಮ ಮಾಸ್ತಿಯವರದ್ದು. ಸಾಂಸ್ಕೃತಿಕ ಪರಂಪರೆಯ ವೈಭವೀಕರಣಕ್ಕಿಂತಲೂ, ಅವುಗಳ ಪ್ರಸ್ತುತೆಯನ್ನು, ಸಾರ್ವಕಾಲಿಕ ಸತ್ಯವನ್ನು, ಸೂಕ್ಷ್ಮ ಅಂತರಾರ್ಥಗಳನ್ನು ಗ್ರಹಿಸಿ, ಅವುಗಳ ಮೂಲಕ ನಾವು ನಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾ ಹೋಗಬೇಕೆನ್ನುವುದೇ ಮಾಸ್ತಿಯವರ ಮನದಾಶಯ. ಎಲ್ಲ ಕಾಲಗಳನ್ನೂ ಸದ್ಯತನದ ಸತ್ಯ ಮಾಡಬಲ್ಲ ಸಂತರ ಮನೋಭೂಮಿಕೆ ಮಾಸ್ತಿಯವರದು.

ಸಾಮ್ರಾಜ್ಯಶಾಹಿ ಐರೋಪ್ಯ ಪ್ರಭಾವದಿಂದ, ಆಂಗ್ಲ ಪರಿಸರದಿಂದ, ಪಾಶ್ಚಾತ್ಯ ನಾಗರೀಕತೆಯಿಂದ ಪ್ರಭಾವಿತರಾಗಿರುವ ಅನೇಕ ಆಧುನಿಕರಿಗೆ, ಭಾರತದ ಪ್ರಾಚೀನ ಇತಿಹಾಸ, ಧರ್ಮ, ಸಂಸ್ಕೃತಿ ಎಲ್ಲಾ ಅಸಹ್ಯವಾಗಿ ಕಾಣುತ್ತದೆ. ಹಾಗೆಯೇ ಇನ್ನು ಕೆಲವರಿಗೆ ಭಾರತದಲ್ಲಿಯ ಪ್ರತಿ ಸಾಂಸ್ಕೃತಿಕ ಆಚರಣೆಯೂ ಪರಮಪವಿತ್ರವಾಗಿ ಕಂಡುಬರುತ್ತದೆ. ಮಾಸ್ತಿಯವರ ಆಶಯವೇನೆಂದರೆ ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಬಂದ ಜನ, ಅದರಲ್ಲಿ ಲೋಪದೋಷಗಳಿದ್ದಲ್ಲಿ ಹೊರಗೆ ಹೋಗಿ ನಿಂತು ಹೇಸಿಗೆ ಪಡದೆ, ಒಳಗೆ ನಿಂತೇ ಅದನ್ನು ಪೃಥಕ್ಕರಣ ಮಾಡಿ, ರಚನಾತ್ಮಕ ಸರಿಪಡಿಕೆಯನ್ನು ಸೂಚಿಸುವುದು ಸೂಕ್ತ ಎಂದು. ಹಾಗೆಯೇ ಎಲ್ಲ ಆಚರಣೆಗಳನ್ನು ಸಾರಾಸಗಟು ಶ್ರೇಷ್ಠವೆನ್ನದೆ, ಕೆಲವು ಅಸಹ್ಯ ಪದ್ಧತಿಗಳನ್ನೂ, ವಿರೋಧಾಭಾಸಗಳನ್ನೂ ನಿವಾರಿಸುತ್ತಾ ಯಾವುದು ಗ್ರಾಹ್ಯ, ಯಾವುದು ಅಗ್ರಾಹ್ಯ ಎನ್ನುವ ವಿವೇಚನೆ ವಿವೇಕವನ್ನು ಪಡೆದುಕೊಳ್ಳುವುದು. ಮಾಸ್ತಿ ಇಂದಿನ ಜನಾಂಗದಿಂದ ಬಯಸುವುದು ಇದನ್ನೇ. ಈ ಚಿಂತನೆಯ ಫಲವೇ ಅವರ 'ಧರ್ಮಸಂರಕ್ಷಣೆ' ಕೃತಿ.

ಧರ್ಮಸಂರಕ್ಷಣೆಯಲ್ಲಿ ಭಾರತೀಯ ಧರ್ಮದ ತಿರುಳಾದ ಉಪನಿಷತ್ತಿನ ಸಾರಭಾಗ ಕನ್ನಡದಲ್ಲಿ ರಸವತ್ತಾಗಿ ಮೂಡಿಬಂದಿದೆ.

'ಏಕಂ ಸತ್ ವಿಪ್ರಾಃ ಬಹು ಧಾ ವದಂತಿ' 'ಕಸ್ಮೈ ದೇವಾಯ ಹವಿಷಾ ವಿಧೇಮ' 'ಪುರುಷಸೂಕ್ತ' ಗಳ ಸತ್ಯಾರ್ಥಗಳನ್ನು ತಿಳಿಸುವ ಮಾಸ್ತಿ, ಭಗವಂತನ ವಿವಿಧ ಅವತಾರಗಳ ಕಥೆಯ ಹಿಂದಿನ ಸಂಕೇತಾರ್ಥಗಳನ್ನು ಸಾರಸ್ಯಕರವಾಗಿ ನಿರೂಪಿಸುತ್ತಾರೆ. ರಾಮಾಯಣದ 'ಪ್ರಕ್ಷೇಪ' ಭಾಗಗಳನ್ನು ಸಾದುರವಾಗಿ ವಿವರಿಸಿದ್ದಾರೆ. ದಕ್ಷಯಜ್ಞದ ಪ್ರಸಂಗ, ಕಾರ್ತಿಕೇಯನ ಜನನ, ಮೋಹಿನೀ ರೂಪವನ್ನು ಶಿವ ಬೆನ್ನಟ್ಟಿದ ಪ್ರಸಂಗ, ಅದರ ಫಲವಾಗಿ ಜನಿಸಿದ ಅಯ್ಯಪ್ಪನ ಪ್ರಸಂಗ, ಮಗಳಾದ ಸರಸ್ವತಿಯನ್ನು ಬ್ರಹ್ಮ ಮೋಹಿಸಿದ ಪ್ರಸಂಗ, ಶಿವ ಬ್ರಹ್ಮನ ತಲೆಕಡಿದದ್ದು, ರಾಮೇಶ್ವರದ ಪ್ರತಿಷ್ಠೆಯ ಕಥೆ, ಮೊದಲು ಷಣ್ಮುಖನಾಗಿದ್ದ ದೇವತೆ ರಾತ್ರೋರಾತ್ರಿ ರಾಮಾನುಜಾಚಾರ್ಯರ ಆದಿಶೇಷಾವತಾರ ಚಮತ್ಕಾರದಿಂದ ತಿರುಪತಿ ಶ್ರೀನಿವಾಸನಾದ ಐತಿಹ್ಯ, ಗೋಕರ್ಣದ ಕಥೆ, ಇವುಗಳನ್ನು ನಿದರ್ಶಿಸುವ ಮಾಸ್ತಿಯವರು ಈ ಕಥೆಗಳ ಹಿಂದಿರುವ ವಿರೋಧಾಭಾಸವನ್ನು, ತರ್ಕಬದ್ಧವಿಲ್ಲದ, ಯಾವುದೋ ಛಲದಿಂದ ಬಂದ ಸಂಗತಿಗಳನ್ನು, ಇದರಿಂದ ಇತಿಹಾಸಕ್ಕೆ ಹೇಗೆ ಅಪಚಾರವಾಗುತ್ತದೆ ಎಂಬುದನ್ನು ತಿಳಿಸುತ್ತಾರೆ. ಇಂದಿನ ನಮ್ಮ ಶುಷ್ಕ ಆಚಾರ, ಜಾತಿವೈಷಮ್ಯ, ಅದರ ಫಲರೂಪದ ವಿಕೃತಿಗಳು, ಹೀಗೆ ಅನೇಕ ಸಾಮಾಜಿಕ ಸಮಸ್ಯೆಗಳಿಗೆ

ಸ್ಪಂದಿಸುವ ಮಾಸ್ತಿಯವರು ನಿರ್ದಿಷ್ಟ ಸಾಮಾಜಿಕ ಅನುಭವಗಳ ಕ್ರೋಢೀಕರಣವನ್ನು ಈ ಕೃತಿಯಲ್ಲಿ ಮಾಡಿದ್ದಾರೆ.

'ಗುರುಗಳು, ಗುರುಪೀಠಗಳು' ಅಧ್ಯಾಯ ಈ ಕೃತಿಯ ಉತ್ತಮ ಭಾಗಗಳಲ್ಲೊಂದು, ತಾವು ಸ್ವತಃ ಶ್ರೀವೈಷ್ಣವರೇ ಆದರೂ, ತೆಂಗಲೆ, ವಡಗಲೆ ಪಂಗಡಗಳ, ವಿರೋಧಿ ಬಣಗಳಾಗಿ ಕಾದುತ್ತಾ ಬಂದಿರುವುದನ್ನು, ನಾಮ ಹಾಕುವ ವಿಚಾರಕ್ಕೆ ಸುಪ್ರೀಂ ಕೋರ್ಟಿಗೆ, ಕಡೆಗೆ ಲಂಡನ್ನಿನ ನ್ಯಾಯಾಲಯಕ್ಕೆ ಹೋಗಿರುವುದನ್ನು ವಸ್ತುನಿಷ್ಟವಾಗಿ ಪ್ರಸ್ತಾಪಿಸುತ್ತಾರೆ. 'ಸ್ವಾಮಿಗಳ ಚರಿತ'ದ ಬಗ್ಗೆ ಮಾಸ್ತಿಯವರು ಅತ್ಯಂತ ಸ್ಪಷ್ಟ ಮಾತುಗಳಲ್ಲಿ, ವಸ್ತುನಿಷ್ಠವಾಗಿ ಇರುವ ವಿಷಯವನ್ನು ಇದ್ದಂತೆಯೇ ಹೇಳುತ್ತಾ ಒಂದು ರೀತಿಯ ಕ್ರಾಂತೀಕಾರೀ ಲೇಖಕರಾಗಿ ಮೂಡಿಬಂದಿದ್ದಾರೆ. ಮೂಢನಂಬಿಕೆಗಳು, ಭಯದ ಮೌಢ್ಯತೆ, ಜ್ಯೋತಿಷ್ಯ ನಂಬಿಕೆಗಳು, ಪವಾಡಗಳು, ಸಿದ್ಧಿಗಳು ಇವುಗಳನ್ನು ವೈಜ್ಞಾನಿಕವಾಗಿ ಚರ್ಚೆಗೆ ಒಡ್ಡಿಕೊಳ್ಳುವ ಮಾಸ್ತಿಯವರು ಯಾವ ಮುಚ್ಚುಮರೆಯೂ ಇಲ್ಲದೆ ಸತ್ಯವನ್ನು ಬಿಚ್ಚಿಡುತ್ತಾ, ಅವಾಸ್ತವ ಸಂಗತಿಗಳನ್ನು ತುಂಡಖಂಡಿಸುವ ರೀತಿ ಅಚ್ಚರಿಮೂಡಿಸುತ್ತದೆ.

ಮಾಸ್ತಿಯವರ ಈ ಕೃತಿ ತನ್ನದೇ ಆದ ವಿಚಾರ ಲಹರಿಯಿಂದಾಗಿ, ಸ್ವಭಾವ ನಿರೂಪಣೆಯಿಂದಾಗಿ, ವಸ್ತುನಿಷ್ಠ ವಿಶ್ಲೇಷಣೆಯಿಂದಾಗಿ, ಹಾಗೂ ನಿರ್ದಾಕ್ಷಿಣ್ಯ ಬರವಣಿಗೆಯಿಂದಾಗಿ ಕನ್ನಡದ ಧಾರ್ಮಿಕ ಸಾಹಿತ್ಯದಲ್ಲಿ ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿದೆ. ಧರ್ಮ, ಹಾಗೂ ಸಂಸ್ಕೃತಿಗಳ ಇತಿಹಾಸ ಕೇವಲ ಕೆಲವೇ ಅರ್ಚಕರ ಅಥವ ಮಠಾಧಿಪತಿಗಳ ಇತಿಹಾಸವಾಗದೇ ಸಮಾಜದ ಇಲ್ಲವೇ ಸಮುದಾಯದ ಸಮಗ್ರ ಇತಿಹಾಸವಾಗಿಯೂ ಇಲ್ಲಿ ಮೂಡಿಬಂದಿರುವುದು ಈ ಕೃತಿಯ ಮತ್ತೊಂದು ವೈಶಿಷ್ಟ್ಯ.

ಮಾಸ್ತಿ ಕೃತಿಗಳಲ್ಲಿ ಹೆಣ್ಣು ಪಡೆದ ಸ್ಥಾನ

ಗೀತಾ ರಾಮಾನುಜಂ

ಮಾಸ್ತಿಯವರು ವೈಚಾರಿಕ ಮನೋಭಾವವುಳ್ಳವರಾಗಿ ತಮ್ಮ ಕೃತಿಗಳ ಮೂಲಕ ಮಾರ್ಗದರ್ಶನ, ಸಾಮಾಜಿಕ ಮೌಲ್ಯ ಹಾಗೂ ಮಾನವೀಯ ಲಕ್ಷಣಗಳನ್ನು ಕೇವಲ ಪರಿಚಯ ಮಾತ್ರ ಮಾಡಿಸಿಲ್ಲ. ಅವರ ಬಗ್ಗೆ ಚಿಂತನೆ ಮಾಡುವ ಹಾಗೂ ಮಾಡಿದ್ದಾರೆ. ಅದರಲ್ಲೂ ಹೆಣ್ಣಿನ ಸ್ಥಾನಮಾನದ ಬಗ್ಗೆ ಅವರ ಮನೋಧರ್ಮ ವಿಚಾರ ಪೂರ್ಣವಾದುದು. ಪುರುಷ ಪ್ರಧಾನ ಸಮಾಜದಲ್ಲಿ ಅವರ ದೃಷ್ಟಿಕೋನ ವಿಶಿಷ್ಟ ಎಂಬುದು ಅವರ ಕೃತಿಗಳ ಮೂಲಕ ಮನದಟ್ಟಾಗುತ್ತದೆ. ಹೆಣ್ಣು ಹುಟ್ಟಿನಿಂದಲೇ ವಿದ್ಯಾಸಂಪನ್ನಳು ಎಂಬ ಕಾಳಿದಾಸನ ಮಾತು ಮಾಸ್ತಿಯವರು ವಾಸ್ತವಿಕವಾಗಿ ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸಿರುವರು; ಅಂದರೆ ''ಸತ್ಯಕ್ಕಾಗಿ, ಶಾಶ್ವತ ಮೌಲ್ಯಕ್ಕಾಗಿ ಅವರ ಚಿಂತನ'' ಎಂಬ ಪು.ತಿ.ನ. ಅವರ ಅಭಿಪ್ರಾಯ ಅಕ್ಷರಶಃ ಸತ್ಯ.

ಮಾಸ್ತಿಯವರ 'ಯಶೋಧರ' ನಾಟಕದಲ್ಲಿ ಹೆಣ್ಣಿನ ಸ್ಥಾನಮಾನದ ಬಗ್ಗೆ ಇರುವ ಅವರ ಮನೋವಿಚಾರ ತಿಳಿನೀರಿನಂತೆ ಗೋಚರವಾಗುತ್ತದೆ. ಈ ನಾಟಕವು ಸಮಾಜದಲ್ಲಿ ಗಂಡು ಹೆಣ್ಣಿಗೆ ಮೀಸಲಾದ ಮೌಲ್ಯಗಳನ್ನು ಹಿಡಿದೆತ್ತಿ ತೋರಿಸುವ ಕನ್ನಡಿಯಾಗಿದೆ. ಒಂದೆಡೆ ಸಂಸ್ಕೃತಿಯನ್ನು, ಮತ್ತೊಂದೆಡೆ ಸ್ತ್ರೀ - ಪುರುಷರ ಸಮಾನತೆಯ ಮೌಲ್ಯಗಳನ್ನು ಪ್ರತಿನಿಧಿಸುತ್ತದೆ. ಯಶೋಧರೆಯನ್ನು ಹೆಣ್ಣಿನ ಪ್ರತಿನಿಧಿಯಾಗಿಟ್ಟು ಹಲವು ವಿಚಾರಭರಿತ ಸಂಘರ್ಷದ ಮೂಲಕ ಅವರನ್ನು ಜಾಗೃತಗೊಳಿಸಲು ಯತ್ನಿಸಿರುವರು.

ಬುದ್ಧನು ಮೋಕ್ಷದಾರಿ ಬಯಸಿ ಯಶೋಧರೆಗೆ ಹೇಳದೆ ಕೇಳದೆ ದಾಂಪತ್ಯ ಜೀವನವನ್ನು ತೊರೆದು ಹೋದಬಗ್ಗೆ ಯಶೋಧರೆ ಈ ರೀತಿ ಹೇಳುತ್ತಾಳೆ. ''ಪತಿ ತೆರಳಬಾರದೆಂದೆ ಪತ್ನಿ ತಡೆಯುವಡೆ, ಕೆಡೆದು ನಡೆವುದು ಪತಿಗೆ ತಕ್ಕದೇ? ಎರಡುಸಿರು ಒಂದಾಗಿ ಬೆರೆವ ಎಂದೊಪ್ಪಿ ಜೊತೆಯಾಗಿರುವ ಎರಡರಲಿ ಒಂದು ಸಂಬಂಧ ಸಾಕೆನಲಾಗಿ ಅಲ್ಲಿಗೇ ಅವರ ಒಪ್ಪಂದ ಕೊನೆಯಾಗುವುದೇ? ಎರಡನೆಯ ಜೀವವೊಪ್ಪುವ ಮುನ್ನ ದಾಂಪತ್ಯ ಮುಗಿಯಬಹುದೆಂತು?'' ಬುದ್ಧನನ್ನು ಹೀಗೆ ದಾಂಪತ್ಯ ಧರ್ಮದ ಬಗ್ಗೆ ಪ್ರಶ್ನಿಸಿ, ಒಂದು ಪಕ್ಷ ಹೋಗುತ್ತೇನೆ ಎಂದು ಹೇಳಿದ್ದರೆ ''ಧರ್ಮದಲಿ ನಡೆಯೆ ಸತಿಯಾದವಳು ತಾನು ತಡೆಯಾಗಿ ನಿಲುವಳೇ?'' ಎಂದು ಕೇಳಿದ ಯಶೋಧರೆಯ ಈ ಪ್ರಶ್ನೆಯಲ್ಲಿ ಸತಿ ಧರ್ಮದ ಬಗ್ಗೆ ವಿಶ್ವಾಸರಹಿತ ಪತಿಯ ಭಾವನೆಯ ಬಗ್ಗೆ ತಳೆದ ಅಂತರಾತ್ಮದ ನೋವನ್ನು ಅತಿಸೂಕ್ಷ್ಮವಾಗಿ ವೀಕ್ಷಿಸಿರುವರು. ಬುದ್ಧ ಮತ್ತು ಯಶೋಧರೆಯ ಮಾತುಕಥೆ ಹೀಗೆ ನಡೆದಿರುವಾಗ ಬುದ್ಧನ ಶಿಷ್ಯ ಆನಂದನು ಅವರಿಬ್ಬರ ನಡುವೆ ತಾನೇಕೆ ಎಂದು ಗ್ರಹಿಸಿ ಹೊರಗಿರುವೆನೆಂದು ತಿಳಿಸಿದಾಗ ಬುದ್ಧನು ಒಪ್ಪಿದರೂ, ಯಶೋಧರೆ ಸಮ್ಮತಿಸದೆ ಹೀಗೆ ನುಡಿವಳು, ''ಸನ್ಯಾಸಿ ಪತಿ ಅವನ ಪೂರ್ವಾಶ್ರಮದ ಸತಿ

ಇರ್ವರೇ ಜೊತೆಯೊಳಿದ್ದರು ಎನಲು, ಜನತೆಯಲಿ ಅಲ್ಲಸಲ್ಲದ ಮಾತು ಬರಬಹುದು. ಆಣ್ಮಗೆ ಇಂತ ಒಂದು ಅಪಖ್ಯಾತಿ ಬರುವಂತೆ ನಡೆಯುವೆನೇ?'' ಅಂದರೆ ಹೆಣ್ಣು, ಗಂಡ ತನ್ನನ್ನು ತೊರೆದು ಹೋದನೆಂದರೂ ಅವನ ಸ್ಥಾನಮಾನಕ್ಕೆ ಅನಾವಶ್ಯಕವಾಗಿ ಕುಂದುತರಲು ಒಪ್ಪುವವಳಲ್ಲ, ಎಂಬ ಅವಳ ಮನೋಧರ್ಮ ಇಲ್ಲಿ ಬೆಳಗಿದೆ.

ಆದರೂ ಹೆಣ್ಣಿನ ಬಗ್ಗೆ ಇರುವ ಅಸಮಂಜಸ ಮನೋಭಾವನೆಯನ್ನು ಬುದ್ಧನ ಕೆಲವು ಮಾತುಗಳ ಮೂಲಕ ಸ್ಪಷ್ಟೀಕರಿಸಿರುವರು. ಯಶೋಧರೆ ತನಗೂ ದೀಕ್ಷೆ ನೀಡಬೇಕೆಂದು ಬುದ್ಧನಲ್ಲಿ ವಿನಂತಿಸಿದಾಗ, ಮಾಸ್ತಿಯವರು ಎಂತಹ ವಿಚಾರಸ್ಫೋಟ ಸೃಷ್ಟಿಸಿರುವರೆಂದರೆ ಅದು ಎಲ್ಲಾ ಯುಗಕ್ಕೂ ಅನ್ವಯಿಸಬಲ್ಲದು. ಹಾಗೂ, ಹೆಣ್ಣಿನ ಜಾಗೃತಿಗೆ ತಳಪಾಯವಾಗಬಲ್ಲದು. ಬುದ್ಧ ಸ್ತ್ರೀಗೆ ದೀಕ್ಷೆ ಕೊಡಲಾರೆ ಎಂದಾಗ ''ಜಗದೊಳರ್ಧವ ಬಿಟ್ಟು ಉಳಿದರ್ಧ ಮಾತ್ರಕೆ ಅನ್ವಯಿಸುವುದು ಧರ್ಮವೇ?'' ಎಂದಾಗ ಬುದ್ಧ ''ಸ್ತ್ರೀಯರಿಗೆ ದೀಕ್ಷೆ ಕೊಟ್ಟ ನಾನು ಮೊಳೆಯಿಟ್ಟ ಧರ್ಮ ದಾಯುಷ್ಯದಲ್ಲಿ ಅರ್ಧ ಅಳಿಯುವುದು'' ಎಂದಾಗ ಅದಕ್ಕವಳ ಪೂರ್ಣಪ್ರಜ್ಞೆಯ ಮಾತುಗಳು ''ಪುರುಷರನು ಸಲಹುವುದಾಗಿ ಒಂದು ಯುಗ, ಸ್ತ್ರೀ ಪುರುಷರನು ಸಲಹೆ ಅರ್ಧಯುಗ, ಇರುವರೂ ಮುಕ್ತರಾಗಲಿ, ಅರ್ಧಯುಗವೇ ಸಾಕೆಂಬೆನೊ'' ಎಂದು ಹೇಳಿ, ಹೆಣ್ಣು ಎಲ್ಲಾ ಕಠಿನ ನಿಯಮಗಳನ್ನು ಆಚಾರ ವಿಚಾರಗಳನ್ನು ಪರಿಪಾಲಿಸುವ ಶಕ್ತಿಯನ್ನು ಪಡೆದಿದ್ದಾಳೆ, ಆದರೆ ಅವಕಾಶ ಬಂದಿಲ್ಲ ಎಂದು ಹೇಳಿ ಕೊನೆಗೂ ದೀಕ್ಷೆಯನ್ನು ಪಡೆಯುತ್ತಾಳೆ. ಇದರಿಂದ ಗಂಡಾಗಲಿ, ಹೆಣ್ಣಾಗಲಿ ಯಾರೂ ಹೆಚ್ಚಲ್ಲ, ಕಡಿಮೆಯಲ್ಲ ಎಂಬ ವಿಚಾರ ಗೋಚರವಾಗುತ್ತದೆ.

ಇಂಥ ಮನೋಧರ್ಮವನ್ನು ಬುನಾದಿಯಾಗಿಸಿ ನೂರಾರು ಕತೆ, ಕಾದಂಬರಿ, ನಾಟಕಗಳನ್ನು ರಚಿಸಿದ ಇವರ ಕೃತಿಗಳಲ್ಲಿ ಹೆಣ್ಣಿನಲ್ಲಿರುವ ಆದರ್ಶ, ಮೌಲ್ಯಗಳು ಹಾಗೂ ಮನೋಭಾವನೆಗಳನ್ನು ಕುರಿತು ಚಿಂತನ ಮಾಡುವ ರೀತಿ ಪ್ರಚೋದಿಸಿದ್ದಾರೆ. ಆದರೆ ಇಲ್ಲಿ ಕೆಲವನ್ನು ಸೂಕ್ಷ್ಮವಾಗಿ ಅವಲೋಕಿಸಬಹುದಾಗಿದೆ.

ವಿಪರ್ಯಾಸ

ಮಾಸ್ತಿಯವರ ಚಾರಿತ್ರಿಕ ಸಣ್ಣಕತೆ 'ನಿಜಗಲ್ಲಿನ ರಾಣಿ' ಯಲ್ಲಿ, ರಾಮರಸ ನಾಯಕನ ಇಬ್ಬರು ಅರಸಿಯರು ರಾಜ್ಯದ ಸುರಕ್ಷತೆಗಾಗಿ ಸಂದರ್ಭಕ್ಕನುಸಾರವಾಗಿ ತ್ಯಾಗ ಮಾಡಬೇಕಾದಾಗ ಹಿಂಜರಿಯದ ಶಿರೋಮಣಿಯರು. ಹಿರಿಯ ರಾಣಿ ಲಕುಮವ್ವೆಗೆ ಹತ್ತು ವರುಷಗಳಾದರೂ ಮಕ್ಕಳಾಗಲಿಲ್ಲವೆಂದ ಮೇಲೆ ಊರಿನ ಮುಖಂಡರ ಅಭಿಪ್ರಾಯದಂತೆ ದತ್ತು ತೆಗೆದುಕೊಳ್ಳಬೇಕೆಂದು ಅರಸನಲ್ಲಿ ವಿನಂತಿಸಿದರೆ ಆತ ನಿರಾಕರಿಸಿದನು. ಆದರೆ ರಾಮರಸ ನಾಯಕನ ಆಳ್ವಿಕೆಯಲ್ಲಿ ಸುಖ, ಸಂತೋಷ, ಸುರಕ್ಷತೆ ಕಂಡ ಪ್ರಜೆಗಳಿಗೆ ಅವನ ವಂಶ ಅಲ್ಲಿಗೇ ಕೊನೆಯಾಗುವುದು ಇಷ್ಟವಿರಲಿಲ್ಲ. ಇಲ್ಲಿ ವಿಪರ್ಯಾಸದ ಮಾತೆಂದರೆ ಪ್ರಜೆಗಳನ್ನು ತನ್ನ ಮಕ್ಕಳನ್ನಾಗಿ ಭಾವಿಸಿದ ರಾಮರಸನಿಗೆ. . .ಪ್ರಜೆಗಳಲ್ಲಿ ಅನಾಥ ಕೂಸೊಂದನ್ನು ತನ್ನದಾಗಿಸಿಕೊಳ್ಳಲು ಸ್ವಾರ್ಥ ತಡೆಯಿತು. ಆದರೆ ಲಕುಮವ್ವೆ. . .ರಾಮರಸ ರಾಜ್ಯವನ್ನೇ ಆಳಿದರೆ, ಅವಳು ಒಂದು ಹೆಜ್ಜೆ ಮುಂದೆ ಸಾಗಿ ತನ್ನ ಸ್ಥಾನಕ್ಕೆ ಚೆಲುವೆಯಾದ ಗಿರಿಜವ್ವೆಯನ್ನು ತಂದಳು. ಗಿರಿಜವ್ವೆಯೇನೋ ಗಂಡು ಮಗುವೊಂದನ್ನು ರಾಜ್ಯಕ್ಕೆ ಕೊಟ್ಟಳು. ಆದರೆ ಅದರ ಜೊತೆಗೆ ದುಶ್ಚಟಗಳ ತಮ್ಮ 'ಕಸ್ತೂರಿನಾಯಕ'ನು ರಾಜ್ಯಕ್ಕೆ

ಮಾರಕನಾಗಿ ಬಂದನು. ಮರಾಠರ ದಳಪತಿಯೊಡನೆ ಸಂಧಿ ನಡೆಸಿ ನಾಯಕನನ್ನು ಮೋಸದಿಂದ ಕೊಂದನು. ನಂತರ ನಿಜಗಲ್ಲಿನ ಆಳ್ವಿಕೆ ತನಗೇ ಸೇರಬೇಕೆಂದು ಮರಾಠರ ದಳಪತಿಯನ್ನು ಕೇಳಿದಾಗ, ಗಿರಿಜವ್ವೆಯ ಚೆಲುವಿಗೆ ಮನಸೋತ ಮರಾಠರ ದಳಪತಿ ಅವಳು ತನ್ನ ವಶವಾದರೆ ಈ ರಾಜ್ಯವನ್ನು ಕಸ್ತೂರಿ ನಾಯಕನಿಗೆ ಒಪ್ಪಿಸುವುದಾಗಿ ಹೇಳಿದ. ಗಿರಿಜವ್ವೆಗೆ ತಮ್ಮ ಹೀಗೆ ಸುದ್ದಿ ತಿಳಿಸಿ. ಅವಳು ಒಪ್ಪಬೇಕಾದ್ದು ಅನಿವಾರ್ಯವೆಂದಾಗ, ಆಗಬಹುದೆಂದವಳು, ತಾನು ದಳಪತಿಯ ವಶವಾಗುವುದಾಗಲಿ, ರಾಜ್ಯ ಕಸ್ತೂರಿಗೆ ಒಪ್ಪಿಸುವುದಾಗಲಿ ಕೊತ್ತಳದ ಬಲಿ ಊರಜನರ ಸಮ್ಮುಖದಲ್ಲಿ ಆಗಬೇಕೆಂದಳು. ಮರುದಿನ ಕೊತ್ತಳದ ಬಳಿ ಇಬ್ಬರೂ ಬಂದು ಸೇರುತ್ತಾರೆ. ತಮ್ಮನ ಮೇಲೆ ಅದೆಷ್ಟು ಕ್ರೋಧಿತಳಾಗಿದ್ದಳೆಂದರೆ ಬಲವಾದ ಅಪ್ಪುಗೆಯಲ್ಲಿ ಸೆರೆಹಿಡಿದು ''ನನ್ನ ನಿನ್ನಿಂದ ರಾಮರಸನ ಮನೆ ಕೆಟ್ಟಿತು. ನಮ್ಮನ್ನು ಹೆತ್ತವರಿಗೆ ಅಪಕೀರ್ತಿ ಬಂತು. ಕಸ್ತೂರಿ, ನಾವು ಬದುಕಬಾರದು'' ಎಂದು ಅವನನ್ನು ಎಳೆದುಕೊಂಡು ಕ್ಷಣ ಮಾತ್ರದಲ್ಲಿ ಗೋಡೆಯ ಹೊರಗೆ ಧುಮುಕಲು ಬಂಡೆಯ ಮೇಲೆ ಬಿದ್ದ ಇಬ್ಬರ ತಲೆಯು ಹೋಳಾಯಿತು. ಆದರೆ ರಾಜ್ಯ ಸುರಕ್ಷಿತವಾಯಿತು! ಇಬ್ಬರು ವೀರರಮಣಿಯರಲ್ಲಿ ಇಂತಹ ಮನೋಭಾವನೆಯಿಂದ ಪ್ರಜೆಗಳು ಸುರಕ್ಷಿತರಾದರು. ಆದರೆ ಒಂದು ಮಾತು ಇಲ್ಲಿ ಗಮನಿಸಬೇಕಾದ್ದೇನೆಂದರೆ, ರಾಮರಸ ನಾಯಕನು. . .ಸ್ವಾರ್ಥವನ್ನು ತೊರೆದು ದತ್ತು ಸ್ವೀಕಾರ ಮಾಡಿದ್ದರೆ. . . ಕತೆ ಬೆಳೆಯುತ್ತಿರಲಿಲ್ಲ ಅಲ್ಲವೇ! ಆದರೆ ಮಾನವಕುಲ ಬೆಳೆಯುತ್ತಿತ್ತಲ್ಲವೇ ಅಂದರೆ ಇದರ ಮೂಲಕ ತಿಳಿಯುವುದೇನೆಂದರೆ ಮಾನವಕುಲ ಮತ್ತಷ್ಟು ಬೆಳೆಯಬೇಕಾದರೆ ಹೆಣ್ಣಿನೊಡನೆ ಪುರುಷನು ಸಹಕರಿಸಬೇಕಾಗಿರುವುದು ಅತಿ ಮುಖ್ಯವಾದ ಅಂಶವೆಂಬುದನ್ನು ಗಂಭೀರ ಧ್ವನಿಯಲ್ಲಿ ತಿಳಿಸಿದ್ದಾರೆ.

ಇನ್ನು 'ನಳಿನಿಯ ತಂದೆ', 'ಚೆನ್ನಮ್ಮ', 'ಮೊಸರಿನ ಮಂಗಮ್ಮ' ಹಾಗೂ ಅನೇಕ ಕೃತಿಗಳ ಮೂಲಕ ಹೆಣ್ಣು ಎಂತಹ ಕಷ್ಟ ಕಾರ್ಪಣ್ಯಗಳನ್ನಾದರೂ ತಡೆದುಕೊಳ್ಳಬಲ್ಲ ಶಕ್ತಿ ಅವಳಲ್ಲಿದೆ. ಹಾಗಾಗಿ ಈಸಬಲ್ಲಳು ಇದ್ದು ಜಯಿಸಬಲ್ಲಳು ಎಂಬುದನ್ನು ಬಹಳ ಸೂಕ್ಷ್ಮವಾಗಿ ಚಿತ್ರಿಸಿರುವರು.

'ನಳಿನಿಯ ತಂದೆ' ಕತೆಯಲ್ಲಿ ನಳಿನಿಯ ತಂದೆ, ತಾಯಿ ಲಕ್ಷ್ಮಿಯನ್ನು ದಾಂಪತ್ಯ ಜೀವನದಲ್ಲಿ ಸ್ವೀಕರಿಸುವ ರೀತಿ ಬಹಳ ಕೀಳು ಮಟ್ಟದ್ದು. ಅದಕ್ಕೆ ಎರಡು ಕಾರಣಗಳುಂಟು. ಒಂದು ಲಕ್ಷ್ಮಿ ಆಸ್ತಿವಂತರ ಏಕೈಕ ಪುತ್ರಿಯಾಗಿ ಅವನ ವಶವಾದದ್ದು, ಹಾಗೂ ಅತೀ ಎಳೆಯ ವಯಸ್ಸಿನಲ್ಲೇ ಮದುವೆಯಾದ ಕಾರಣ. . . ಲಕ್ಷ್ಮಿಗೆ ಗಂಡ ಎಂದರೆ ಕೇವಲ ತನ್ನನ್ನಾಳುವ ವ್ಯಕ್ತಿ ಎಂದೆನಿಸಿ ಹೆದರಿ ನಡೆಯುತ್ತಿದ್ದ ರೀತಿ, ಇದರಿಂದಾಗಿ ಲಕ್ಷ್ಮಿಯ ಹಣವನ್ನೆಲ್ಲಾ ವೇಶ್ಯೆಗೆ ಸುರಿಯುತ್ತಿದ್ದನಲ್ಲದೆ ಅವಳ ಒಡವೆಯನ್ನೂ ಸಹ ವೇಶ್ಯೆಗಾಗಿ ಕದಿಯುವನು. ಅನುಭವವೇ ಪಾಠ ಕಲಿಸಿದಂತಾಗಿ ಲಕ್ಷ್ಮಿ ಜಾಗೃತಳಾಗಿ ಗಂಡನಿಗೆ ಬೇಕಾದ್ದು ಹಣ ಎಂದರಿತು, ತಿಂಗಳು ತಿಂಗಳು ಎಲ್ಲೇ ಇದ್ದರೂ ಹಣ ಕಳಿಸುವುದಾಗಿ ಹೇಳಿ, ಅವನ ದುಷ್ಟ ನೆರಳು ಕಿಂಚಿತ್ತೂ ತನ್ನ ಮಗಳ ಮೇಲೆ ಬೀಳದಂತೆ ಬಹುದೂರ ಸರಿದು, ಉಪಾಧ್ಯಾಯಿನಿಯಾಗಿ ಕೆಲಸ ಮಾಡಿ ಸಾಕಿ, ಸಲಹಿ ದೊಡ್ಡವಳನ್ನಾಗಿ ಮಾಡುವಳು. ಇನ್ನೇನು ವಿವಾಹ ಕೈಗೊಳ್ಳಬೇಕೆಂದಾಗ ಮಗಳ ಮೇಲಿದ್ದ ಆಸೆಯ ಮೇಲೆ ಗಂಡ ಹಿಂತಿರುಗುವನು. ಆದರೆ ನಿರ್ದಾಕ್ಷಿಣ್ಯವಾಗಿ ಮಗಳ ಭವಿಷ್ಯಕ್ಕಾಗಿ ಪೂರ್ಣ ಮನಸ್ಸಿನಿಂದ ಅವನನ್ನು ಹಿಂತಿರುಗಿಸುವಳು. ಏನೂ ಅರಿಯದ ಮುಗ್ಧೆಯಂತಿದ್ದ ಲಕ್ಷ್ಮಿ ಇಂತಹ ಮನಃಸ್ಥೈರ್ಯವನ್ನು ಪಡೆಯಬಲ್ಲಳೆಂದರೆ ಇದಕ್ಕೆ ಕಾರಣ

ಹೆಣ್ಣು ಕರ್ತವ್ಯ ನಿಷ್ಠಳು ಹಾಗೂ ಹುಟ್ಟಿನಿಂದಲೇ ವಿದ್ಯಾಸಂಪನ್ನಳಾದ್ದರಿಂದ, ವ್ಯಾವಹಾರಿಕ ಜ್ಞಾನ ವಿನಾಕಾರಣ ಮೂಡಿದ ಮೌಲ್ಯಗಳಿಂದ ಕ್ಷಣಕಾಲ ಮರೆಯಾಗಿದ್ದರೂ ಕಾಲಕ್ಕನುಗುಣವಾಗಿ, ಬೀಜ ಮೊಳಕೆವೊಡೆಯುವಂತೆ ಸ್ಫೋಟಿಸುತ್ತದೆ ಎಂಬುದು ಖಚಿತವಾಗಿದೆ.

'ಮೊಸರಿನ ಮಂಗಮ್ಮ'ದಲ್ಲಿಯೂ ಗಂಡ ಥಳುಕು ಹೆಣ್ಣಿನ ಹಿಂದೆ ಬಿದ್ದು, ಮಂಗಮ್ಮನ ಮಡಿಲಿಗೆ ಮಗುವೊಂದ ಹಾಕಿ ಒಬ್ಬಂಟಿಗಳಾಗಿ ಬದುಕಬೇಕಾದ ಸ್ಥಿತಿಯೊಂದನ್ನು ಕಾಣುವೆವು. ಆದರೂ ಮಗನನ್ನು ಸಾಕಬೇಕೆಂಬ ಹಂಬಲದಿಂದ, ಗಂಡ ತನ್ನನ್ನು ತೊರೆದ ದುಃಖವನ್ನು ನುಂಗಿಕೊಂಡು ಸಾಕಿ ಸಲಹಿ ಕೊನೆಗೆ ಸೊಸೆಯನ್ನು ತರುವಳು. ಆದರೆ ಅದೇ ಮಗ ತಾಯಿಯನ್ನು ದೂಷಿಸಿ ಹೆಂಡತಿಯ ವಶವಾಗುವನು. ಇಲ್ಲಿ ಮೊಸರಿನ ಮಂಗಮ್ಮಳ ಮೂಲಕ ಗಂಡ ಬಯಸುವುದೇನು ಹೆಣ್ಣು ಅರಿಯಬೇಕಾದ್ದೇನು ಎಂಬುದನ್ನು ಖಚಿತ ಪಡಿಸುವರು. ಗಂಡು ಯಾವಾಗಲೂ ಬಳಕುವ ಥಳುಕಿನ ಪ್ರಪಂಚವನ್ನು ಆಶಿಸಿ ಕರ್ತವ್ಯಗಳನ್ನು ತೊರೆದು ನಂತರ ಜೀವನ ನಡೆಸುವ ರೀತಿ ಸರ್ವಸಾಮಾನ್ಯ. ಇದು ಹೆಚ್ಚು ಆರ್ಥಿಕವಾಗಿ ಕೆಳದರ್ಜೆಯಲ್ಲಿ ಕಾಣಬಹುದೆಂಬುದು ಸ್ಪಷ್ಟವಾಗಿದೆ. 'ಗಂಡ ಹೆಂಡತಿಯ ವಶದಲ್ಲೇ ಇರಬೇಕಾದರೆ ತಕ್ಕಮಟ್ಟಿಗೆ ಥಳುಕಿನವಳಾಗಿರಬೇಕು.' ಎಂಬ ದಾಂಪತ್ಯ ಗುಟ್ಟೊಂದನ್ನು ಇಲ್ಲಿ ನೋಡಬಹುದು. ಆದರೆ ಮಗನೂ ಕೂಡ ಥಳುಕು ಹೆಂಡತಿಯನ್ನೇ ಬಯಸಿ, ಮೊಸರು ಮಾರಿ, ದೇಹ ಸವೆದು ಮಮತೆಯನ್ನು ಉಣ್ಣಿಸಿದ ಒಡ್ಡುತಾಯಿಯನ್ನು ತೊರೆವನು. ಹಾಗಾಗಿ ಅತ್ತೆ ಸೊಸೆಯರ ಕಚ್ಚಾಟ ಗಂಡು ವಿಮರ್ಶಿಸುವಂತಾಗಿ, ಅವರವರ ಸ್ಥಾನ ಅವರಿಗೆ ನೀಡಿದ್ದೇ ಆದರೆ ಅತ್ತೆ ಸೊಸೆಯರ ಕಚ್ಚಾಟ ಎಂದೂ ಆಗಲಾರದು. ಇದರ ಒಟ್ಟು ಗೂಢಾರ್ಥ ಗಂಡಿಗೆ ಥಳುಕು ಹೆಣ್ಣು ಬೇಕೇಹೊರತು ಬೆಳಕು ಬೀರಬಲ್ಲ ಹೆಣ್ಣಲ್ಲ ಎಂಬುದು.

ಇಂತಹುದೇ ಒಂದು ಸನ್ನಿವೇಶ ಚೆನ್ನಮ್ಮನಲ್ಲಿ ಸ್ವಲ್ಪ ಭಿನ್ನವಾಗಿ ಚಿತ್ರಿಸಿರುವರು. ಗಂಡ ವ್ಯಭಿಚಾರಿಯಾಗಿರುವುದಲ್ಲದೇ ಹೆಂಡತಿಯನ್ನೂ ಸಹ ಅದಕೊಪ್ಪಿಸಲು ಪ್ರಯತ್ನಿಸಿ, ಸೋತು, ಅವಳ ಮೇಲೆ ಸೇಡು ತೀರಿಸಿಕೊಳ್ಳಲು ಸಲ್ಲದ ಅಪವಾದ ಹೊರಿಸಿ ಸೆರೆಮನೆಯ ವಾಸವಾಗುವುದು ಚೆನ್ನಮ್ಮನಿಗೆ. ಆದರೆ ಸೆರಮನೆಯ ವಾಸ ಮುಗಿದು ಹೊರಗೆ ಬಂದವಳೇ ಕ್ರೂರಪಶುವಾದ ಗಂಡನ ಹಂಗು ತನಗಿನ್ನು ಬೇಡವೆಂದು ನಿರ್ಧರಿಸಿ ಒಬ್ಬಂಟಿಗಳಾಗಿ. . . ತವರಿನ ಕಡೆ ನಡೆಯುವಳು. ಇತ್ತ ಗಂಡ ಕೊಲೆಯ ಅಪರಾಧದಲ್ಲಿ ಸೆರೆಮನೆ ಸೇರುವನು. ಅಂದರೆ ಬಾಳಬೇಕೆಂಬ ಮನಸ್ಸು ಮಾಡಿದವಳಿಗೆ ಖಂಡಿತ ದಾರಿಯಾಗುತ್ತದೆ. ಹಾಗೂ ಇಲ್ಲಿ ತಿಳಿಸಿದ ಮೂರು ಕಥೆಗಳಿಂದಲೂ ನಮಗೆ ತಿಳಿಯುವುದು ಹೆಣ್ಣು ಒಬ್ಬಂಟಿಗಳಾಗಿ ಬಾಳುವುದೆಂದರೆ ಶೀಲ ಕೆಡಬೇಕಾದ್ದು ಎಂಬ ಮಾತನ್ನು ಸುಳ್ಳುಮಾಡಿ ಧೃತಿಗೆಡದೆ ಒಬ್ಬಂಟಿಗಳಾಗಿ ಬಾಳಿದರೂ ತನ್ನ ಶೀಲ ಉಳಿಸಿಕೊಳ್ಳಬಲ್ಲಳು ಎಂಬುದು.

ನಮ್ಮ ಸಮಾಜದಲ್ಲಿ ಮೌಲ್ಯಗಳ ಅಳಿವಿಗೂ, ಉಳಿವಿಗೂ ಹೆಣ್ಣೇ ಕಾರಣವೆಂಬುದು ಚಿರಪರಿಚಿತ ಸತ್ಯ. 'ರಂಗಸ್ವಾಮಿಯ ಅವಿವೇಕ'ದಲ್ಲಿ ಮಾಸ್ತಿಯವರು ಇಂತಹ ಒಂದು ಮೌಲ್ಯ ನಾಶವಾಗುವುದರ ಬಗ್ಗೆ ಸೂಕ್ಷ್ಮವಾಗಿ ತಿಳಿಸುವರು. ರಂಗಸ್ವಾಮಿಗೆ ತನ್ನ ಹೆಂಡತಿ, ಸೀತಾ ಗುಣ ಸಂಪನ್ನಳೂ ಹಾಗೂ ತಕ್ಕಮಟ್ಟಿಗೆ ರೂಪವತಿಯಾದರೂ ರಂಗಸ್ವಾಮಿ ಸ್ಪುರದ್ರೂಪಿಯಾದ್ದರಿಂದ ಸೀತಾ ತನಗೆ ತಕ್ಕ ಹೆಂಡತಿಯೇ ಎಂಬ ಪ್ರಶ್ನೆ

ಅವನಲ್ಲಿ ಮೂಡುತ್ತಿತ್ತು. ಇದಕ್ಕನುಗುಣವಾಗಿ ನರಸಿಂಹಮೂರ್ತಿಯ ಪತ್ನಿಯಾದ ಸುಂದರಿ ಹಾಗೂ ಚುತುರೆ ಇಂದಿರಾದೇವಿಯನ್ನು ಕಂಡ ಮೇಲಂತೂ ಕಿಂಚಿತ್ತೂ ಹಿಂಜರಿಯದೆ ಸ್ಫುರದ್ರೂಪಿಯಾದ ಗಂಡೆಂಬ ದುರಭಿಮಾನದಿಂದ ಇಂದಿರಾದೇವಿ ತನಗೆ ತಕ್ಕ ಹೆಂಡತಿಯೆಂದು ನಿರ್ಧರಿಸಿ ಅವಳನ್ನು ತನ್ನವಳನ್ನಾಗಿಸಿಕೊಳ್ಳಲು ಹಂಬಲಿಸಿದನು. ಹೀಗಾಗಿ ಸದವಕಾಶವನ್ನು ಉಪಯೋಗಿಸಿಕೊಂಡು ಗಂಡನಿಲ್ಲದ ಸಮಯದಲ್ಲಿ ಅವಳ ಮನೆಗೆ ಹೋದಾಗ, ಸಮಯಕ್ಕೆ ಸರಿಯಾಗಿ ಎಚ್ಚೆತ್ತು ಇಂದಿರಾದೇವಿ ಅವನನ್ನು ನಿರಾಕರಿಸುವಳು. ಲಜ್ಜಿತನಾಗಿ ತಾನು ಸೀತೆಗೆ ಎಂತಹ ದ್ರೋಹ ಬಗೆಯಲು ಯತ್ನಿಸಿದ್ದೆನೆಂದು ಅರಿವಿಗೆ ಬಂದು ಪಶ್ಚಾತಾಪ ಪಡುವ ರೀತಿ ಮನನೀಯ. ಆದರೆ ಇಂದಿರಾದೇವಿ ಕ್ಷಣ ಕಣ್ಣು ಮುಚ್ಚಿದರೆ ಇವನ ಸೀತಳಿಗೆ ಅನ್ಯಾಯವಾಗುತ್ತಿರಲಿಲ್ಲವೇ? ಆದರಿಂದಾಗಿ ಸೀತಳ ಬಾಳು ಹಾಳು. ಅದಕ್ಕಿಂತ ಹೆಚ್ಚಾಗಿ ಇಂದಿರಾದೇವಿಯ ಬಾಳು ನಾಶವಾಗುತ್ತಿತ್ತು. ಎಷ್ಟು ಕಾಲ ಪರಪುರುಷನೊಬ್ಬನು ಅವಳ ಸೌಂದರ್ಯವನ್ನು ಆರಾಧಿಸಬಲ್ಲನು ಎಂಬುದನ್ನು ರಂಗಸ್ವಾಮಿಯ ಪಶ್ಚಾತ್ತಾಪದಲ್ಲೇ ವ್ಯಕ್ತಪಡಿಸಿರುವರು. ಅಂದರೆ ಹೆಣ್ಣಿಗೊಂದು ಎಚ್ಚರವನ್ನು ಹೇಳಿರುವರು. ಅದೂ ಅಲ್ಲದೆ ಹೆಣ್ಣು ಯಾವಾಗಲೂ ತಾನು ಗಂಡನಿಗೆ ತಕ್ಕವಳಾಗಬೇಕೆಂದು ಬಯಸುವಳು. ಆದರೆ ಗಂಡು ತನಗೆ ತಕ್ಕ ಹೆಂಡತಿ ದೊರಕುವಳೇ ಎಂಬ ಶೋಧನೆಯಲ್ಲಿ ಜೀವನವನ್ನು ಮುಗಿಸುತ್ತಾನೆ.

ಆದರೆ 'ವೆಂಗಟಿಗನ ಹೆಂಡತಿಯಲ್ಲಿ' ಮಾಸ್ತಿಯವರು ಹೆಣ್ಣಿನ ಉಳಿವಿಗೆ ಗಂಡು ಜವಾಬ್ದಾರನಾದರೆ ಸಮಾಜಕ್ಕೆ ಮತ್ತಷ್ಟು ಒಳಿತಾಗಬಹುದೆಂಬುದನ್ನು ವ್ಯಕ್ತಪಡಿಸಿರುವರು. ಯಾಕೆಂದರೆ ಗಂಡ ಕುಡುಕನಾದರೂ, ಕೊಲೆಗಾರನಾದರೂ, ಮುಪ್ಪಿನವನಾದರೂ, ಹೆಣ್ಣಿಗೆ ಇಷ್ಟ ಇರಲಿ, ಇಲ್ಲದಿರಲಿ, ಸಮಾಜಕ್ಕೋಸ್ಕರ ಹೊಂದಿಕೊಂಡು ಹೋಗಬೇಕೆಂಬ ಮನೋಭಾವದ ಹೊರೆಯನ್ನು ಅವಳ ಹೆಗಲ ಮೇಲೇರಿಸಿರುವುದು ಸಹಜ. ಶೇಕಡ ೯೫ರಷ್ಟು ಹೆಣ್ಣು ಇಂತಹ ಕಟ್ಟುಪಾಡುಗಳಿಗೆ ಬಲಿಯಾಗಿರುವಳು. ಇನ್ನು ಐದರಷ್ಟು ಇದಕ್ಕೆ ಹೊರತಾಗಿರಬಹುದು. ಸಾಮಾನ್ಯವಾಗಿ ಹೆಣ್ಣು ಅಕಸ್ಮಾತ್ ಎಡವಿದರೆ. . .ಗಂಡು ಸ್ವೀಕರಿಸುವನೇ ಎಂಬ ಈ ಪ್ರಶ್ನೆಗೆ, ಸ್ವೀಕರಿಸುವುದೇ ಅವನ ಧರ್ಮವೆಂಬುದು ಈ ಕತೆಯ ಮೂಲಕ ಮಾಸ್ತಿಯವರು ಖಚಿತಪಡಿಸಿದ್ದಾರೆ. ಏಕೆಂದರೆ ಹೆಣ್ಣು ಗಂಡಿನ ಪ್ರೀತಿ ಕೇವಲ ದೇಹ ಸಂಪರ್ಕದ್ದಲ್ಲ. ಅವರ ಮನೋಧರ್ಮದಲ್ಲಿದೆ ಎಂಬುದೇ ಜೀವನ ಸತ್ಯ. ಇಂತಹ ಮನೋಧರ್ಮವುಳ್ಳವರಾದ್ದರಿಂದಲೇ ಮಹಾಭಾರತದ ಪಾಂಡುಪುತ್ರರು ಪಾಂಚಾಲಿಯನ್ನು ನಿರಂತರವಾಗಿ ಪ್ರೀತಿಸಿ ಗೌರವಿಸಿದರು. ಈ ಕತೆಯಲ್ಲಿ ವೆಂಕಟಿಗನು ಮಡದಿ ಶ್ರೀಮಂತಿಕೆಗೆ ಬಲಿಯಾಗಿ ಗಂಡನನ್ನು ತೊರೆದು ಶ್ರೀಮಂತನ ಜೊತೆ ಸೇರಿ, ಅವನು ಸತ್ತಾಗ ತನ್ನ ತಪ್ಪನ್ನರಿತು ಕೂಸೊಂದ ಕೈಯಲ್ಲಿ ಹಿಡಿದು ಮರಳಿ ವೆಂಕಟಿಗನ ಹತ್ತಿರವೇ ಬರುವಳು. ಅಂದರೆ ಗಂಡನ ಮೇಲಿದ್ದ ಒಲವು ಸಾಯಲಿಲ್ಲವೆಂಬುದು ಖಚಿತ. ಹಾಗೂ ಒಲವಿಗಿಂತ ಅವನ ವಿಶ್ವಾಸವನ್ನು ಬಲ್ಲವಳಾಗಿರಬೇಕು. ಕೊನೆಗೆ ಬಿಚ್ಚುಮನಸ್ಸಿನಿಂದ ಕೂಸೊಂದ ಹಿಡಿದು ಬಂದ ಮಡದಿಯನ್ನು ಸ್ವೀಕರಿಸುವ ಪುರುಷ ಶಕ್ತಿಯನ್ನು ಎತ್ತಿ ಹಿಡಿಯಲೆತ್ನಿಸಿರುವರು ಮಾಸ್ತಿ.

ಇಷ್ಟೆಲ್ಲಾ ಬಹುಮುಖ ಪಾತ್ರವಹಿಸಬಲ್ಲ ಈ ಹೆಣ್ಣು ಯಾರು? ಅವಳ ಶಕ್ತಿ

ಎಂಥದ್ದು ಎಂಬ ಪ್ರಶ್ನೆ ಮೂಡುವುದು ಅನಿವಾರ್ಯ. ಅದಕ್ಕೆ ಉತ್ತರಿಸುವುದಂತೂ ಅಷ್ಟು ಸುಲಭವಲ್ಲ. ಆದರೆ ಮಾಸ್ತಿಯವರು 'ಗೌತಮಿ ಹೇಳಿದ ಕತೆ' ಯಲ್ಲಿ ಮಾಲಿನಿ ತನ್ನ ಭಾವೀ ಪತಿಯನ್ನು ಕಳೆದುಕೊಂಡು, ಕಾಮೋದ್ವೇಗದಲ್ಲಿ ಹುಚ್ಚಳಂತಾಗಿ ಭಾವೀಪತಿಯ ತಮ್ಮನಂತಿದ್ದ ದತ್ತನಲ್ಲಿ ಪ್ರಣಯಯಾಚನೆ ಮಾಡಿದಾಗ, ಅವಳನ್ನು ಕುರಿತು, ''ನೀನು ಹೆಣ್ಣು, ಆದಿಶಕ್ತಿ, ನಿನಗೆ ಪತನವೆಂಬುದಿಲ್ಲ. . .ನಾನು ಹೆಣ್ಣಲ್ಲ. ನನಗೆ ನಿನಗಿರುವ ಆತ್ಮಶುದ್ಧಿಯಿಲ್ಲ'' ಎಂದು ದತ್ತನ ಮೂಲಕ ಹೇಳುವ ಮಾತುಗಳು, ಕೇವಲ ದತ್ತ ಅವಳಿಂದ ಪಾರಾಗುವುದಕ್ಕಲ್ಲ ಅಥವಾ ಕತೆಯ ಬೆಳವಣಿಗೆಗಲ್ಲ, ಇದು ಮಾಸ್ತಿಯವರು ಹೆಣ್ಣಿನ ಸ್ವರೂಪಗಳಲ್ಲಿ ಕಂಡ ಸತ್ಯಾಂಶ.

ಭಾಗ : ಮೂರು

ಅಂತಃಕರಣ

ನಾಡಿನ ಪ್ರೇಮಪುತ್ಥಳಿ

ಬಿ.ಎಂ. ಶ್ರೀಕಂಠಯ್ಯ

ಮಾಸ್ತಿಯವರು ಕನ್ನಡನಾಡಿನ *ಪ್ರೇಮಪುತ್ಥಳಿ. ಅವರ ನಯ, ಅವರ ನಗೆ, ಅವರ ಶೈಲಿ, ಅವರ ನಿಷ್ಠೆ, ಅವರ ದೊಡ್ಡ ದೃಷ್ಟಿ, ಎಲ್ಲರನ್ನು ಸರಿಮಾಡಿಕೊಂಡು ಎಲ್ಲರಿಗೂ ಸರಿಯಾಗಿದ್ದುಕೊಂಡು, ಎಲ್ಲರಲ್ಲಿಯೂ ಗುಣವನ್ನು ಕಂಡುಕೊಂಡು, ಕನ್ನಡಿಗರೆಲ್ಲರೂ ತಮ್ಮ ಮನೆಯವರೆಂಬಂತೆ ಹೊಂದಿಕೊಂಡು, ಕನ್ನಡನಾಡನ್ನು ಸುತ್ತಿ, ಕನ್ನಡಿಗರನ್ನೆಲ್ಲಾ ನೋಡಿ ತಿಳಿದು, ಪ್ರತಿಯೊಬ್ಬರ ರಹಸ್ಯವನ್ನೂ ಅರಿತುಕೊಂಡು, ಕನ್ನಡ ನಾಡಿನ, ಕನ್ನಡ ನುಡಿಯ ಶಕ್ತಿಯನ್ನೂ ತಿಳಿದು, ನಮ್ಮ ನಾಡು ಮೊದಲಿನಂತೆಯೇ ಸೊಬಗಿನ ಬೀಡಾಗಿ ಶಕ್ತಿಯಿಂದ ತುಂಬಿ ತುಳುಕುವಂತಾಗಲೆಂದು ಹಾರೈಸುತ್ತಾ, ಹಗಲೂ ಇರುಳೂ ಅವರ ನುಡಿಯ ಸೇವೆಯನ್ನು ಮಾಡುತ್ತಿರುವುದನ್ನು ನಾನು ಹೊಸದಾಗಿ ತಿಳಿಸಬೇಕಾಗಿಲ್ಲ. ನಮ್ಮ ನುಡಿ, ನಮ್ಮ ನಾಡು, ನಮ್ಮ ಹಿಂದಿನ ಹಿರಿಮೆ, ನಮ್ಮ ಸಂಸ್ಕೃತಿ ಇದುವರೆಗೂ ಯಾವನವಿರಿನಿಂದ ಬಂದಿತು, ನಮ್ಮಲ್ಲಿ ವಿಶ್ವವ್ಯಾಪಕದೃಷ್ಟಿಯಿಂದ ಬೆಳವಣಿಗೆಯಿಂದ ಸಾಹಿತ್ಯದ ಮೇಲೆಯೂ ಪರಿಣಾಮವಾಯಿತು, ಇವೇ ಮೊದಲಾದ ವಿಷಯಗಳನ್ನು ಕುರಿತು ಅವರೊಡನೆ ಮಾತನಾಡುವುದೇ ಒಂದು ಸೊಗಸು. ಅವರು ತಮಿಳು, ಇಂಗ್ಲಿಷು, ಸಂಸ್ಕೃತ ಮೊದಲಾದ ಹೊರ ಸಾಹಿತ್ಯಗಳ ಒಳಹೊಕ್ಕು ಆ ಸಾಹಿತ್ಯಗಳಲ್ಲಿ ಕಂಡುಬರುವ ಸುಖವನ್ನು, ಶಕ್ತಿಯನ್ನು, ಮೇಲ್ಮೆಯನ್ನು, ಸೌಂದರ್ಯವನ್ನು ಕನ್ನಡ ಸಾಹಿತ್ಯದಲ್ಲಿಯೂ ಕಂಡುಕೊಂಡು ನಮ್ಮ ನುಡಿಯಲ್ಲಿಯೂ, ನಮ್ಮ ಸಂಸ್ಕೃತಿಯಲ್ಲಿಯೂ ಶಕ್ತಿಯುಂಟು, ತೇಜಸ್ಸುಂಟು ಎಂಬುದನ್ನು ಹೆಮ್ಮೆಯಿಂದ ಜನರಿಗೆ ತೋರಿಸಿಕೊಡುತ್ತಿದ್ದಾರೆ. ಶ್ರೀನಿವಾಸರು ನಮ್ಮ ನಾಡಿಗೇ ಹೆಮ್ಮೆಯಾಗಿರುತ್ತಾರೆ. ಮಾಸ್ತಿಯವರ ನಡೆನುಡಿಗಳನ್ನು ನೋಡಿದಾಗೆಲ್ಲಾ ಅವರು ನನಗೆ ಇಬ್ಬರು ಇಂಗ್ಲಿಷ್ ಕೃತಿಕಾರರನ್ನು ನೆನಪಿಗೆ ತರುತ್ತಾರೆ. ಅವರನ್ನು ಏನೋ ಒಂದು ರೀತಿ ಹೊಗಳುವುದಕ್ಕಾಗಿ ನಾನು ಈ ರೀತಿಯಾಗಿ ಹೇಳುತ್ತಿಲ್ಲ. ಮೊದಲನೆಯದಾಗಿ ಷೇಕ್ಸ್‌ಪಿಯರ್ ಕವಿ. ಯಾವ ಒಂದು ರೀತಿಯಲ್ಲಿಯೂ ಯಾರಿಗೂ ಸುಳಿವು ಕಾಣಿಸಿಕೊಳ್ಳದೇ, ದೊಡ್ಡ ಹೃದಯವನ್ನು ಬೆಳೆಸಿ, ತನ್ನಲ್ಲಿ ಅಖಂಡ ಸತ್ಯವನ್ನು ಕಂಡುಕೊಂಡು ವಿಶ್ವದಲ್ಲಿಯೂ ಅದೇ ಅಖಂಡ ಸತ್ಯವನ್ನು ಕಂಡು ಜನಗಳಿಗೆ ಸರಳವಾದ, ನಯವಾದ, ಸುಖವಾದ ರೀತಿಯಲ್ಲಿ ತನ್ನ ಭಾವನೆಗಳನ್ನು ತಿಳಿಸಿ, ಜನರ ಮಧ್ಯೆ ತಾನು ಓಡಾಡುವಾಗ, ಇವನು ನಿಜವಾಗಿಯೂ ದೊಡ್ಡ ಬರಹಗಾರನೇ ಎಂದು ಕೆಲವರಿಗೆ ಸಂದೇಹ ಬರುವಂತೆ ಜೀವಿಸಿದ್ದ ಆ ಮಹಾಕವಿ. ನಾವು ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ಎಂ.ಎ. ಪರೀಕ್ಷೆಗಳನ್ನು ಮಾಡಿರುತ್ತೇವೆ. ಅವನು ಏನು ಮಾಡಿರುತ್ತಾನೆ? ಅವನು ನಮಗಿಂತ ಬುದ್ಧಿವಂತನೇ ಎಂದೂ ಸಹ ಅವನ ಕುಲದವರು ಅನ್ನುತ್ತಿದ್ದರೋ ಏನೋ. ಆದರೆ, ದಿನಗಳು ಕಳೆದಹಾಗೆಲ್ಲಾ, ಜನರು ಅವನ ಕವಿತೆಯನ್ನು

* ಜೀವನ (೧೯೪೦) ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ ಭಾಷಣ ಸಂಗ್ರಹ

ಓದಿದಹಾಗೆಲ್ಲಾ, ಅವನ ಆಳ, ಅವನ ಹೃದಯ ಘನತೆ, ಅವನ ಭಾಷೆಯ ಸರಣಿ, ಅವನ ಕವಿತೆಯ ಸೌಂದರ್ಯ, ಅಡಕವಾಗಿರುವ ಭಾವಗಳು, ಇವೆಲ್ಲಾ ಜನರಿಗೆ ಗೋಚರವಾಗಿ ಇಂದು ಕೃತಿಕಾರನೆಂದರೆ ಅವನೇ ಎನ್ನತ್ತಿದ್ದೇವೆ. ಮಾಸ್ತಿಯವರು ಷೇಕ್ಸ್‌ಪಿಯರ್ ಕವಿಗೆ ಸಮಾನರೆಂದು ನಾನು ಹೇಳುತ್ತಿಲ್ಲ. ಆದರೆ ಇವರ ಕವಿತೆಗಳಲ್ಲಿ ಷೇಕ್ಸ್‌ಪಿಯರ್ ಕವಿ ಹೃದಯವನ್ನು, ರೀತಿಯನ್ನು ನಾವು ಕಾಣಬಹುದು. ಇನ್ನೊಬ್ಬ ಕವಿ, ನನಗೆ ಬಹು ಪ್ರಿಯವಾದ ಮ್ಯಾಥ್ಯೂ ಅರ್ನಾಲ್ಡ್. ಅವನ ಮಾತುಗಳೆಂದರೆ ಸಂಸ್ಕೃತಿಯ ಹಾಡು (Culture) ಅವನ ಕವಿತೆಯನ್ನು ಓದುವಾಗ (Sweetness and light) ಜೀವನದ ಇಂಪು, ಬೆಳಕು ಇವುಗಳ ಮೂರ್ತಿಮತ್ತಾಗಿ ನಮ್ಮ ಕಣ್ಣೆದುರಿನಲ್ಲಿ ಸುಳಿಯುತ್ತವೆ. ನಮ್ಮ ಶ್ರೀನಿವಾಸರ ಕವಿತೆಯಲ್ಲಿಯೂ ನಾವು ನಮ್ಮ ನಾಡಿನ ಸಂಸ್ಕೃತಿ ನಮ್ಮ ನಾಡಿನ ಜೀವನ ಮಾಧುರ್ಯವನ್ನೂ ಬೆಳಕನ್ನೂ ನೋಡುತ್ತೇವೆ. ಶ್ರೀನಿವಾಸರದು ವಿಶ್ವದೃಷ್ಟಿ. ಅವರ ಅಂತರಂಗ ಬಹಳ ದೊಡ್ಡ ಕ್ಷೇತ್ರದಲ್ಲಿ ನಡೆದುಕೊಂಡು ಹೋಗುತ್ತದೆ. ಈ ದಿನ ಕುಮಾರವ್ಯಾಸ, ನಾಳೆ ವಾಲ್ಮೀಕಿ, ನಾಳಿದ್ದು ಪುರಂದರದಾಸರು, ಆಳ್ವಾರುಗಳು ಇಂತಹ ಮಹಾನುಭಾವರ ಹೃದಯದ ಆಳವನ್ನು ತಿಳಿದು ಆನಂದಿಸುವರು. ಇನ್ನೊಮ್ಮೆ ಮಹಾಕವಿ ಗಯಟೆ, ಮಾರ್ಕ್ ಅರಿಲಿಯಸ್ ಏನು ಹೇಳುತ್ತಾನೆಂದು ನೋಡುವುದು. ಅಗಸ್ಟಿನ್, ಡೇವಿಡ್ ಇವರ ಜೀವನ ಸ್ವಾರಸ್ಯವನ್ನು ಸಾರುವುದು. ಇತರ ಸಾಹಿತ್ಯಗಳ ವ್ಯಾಸಂಗದಿಂದ ತಮಗುಂಟಾದ ಅನುಭವ ನಮ್ಮ ನಾಡಿನವರಿಗೂ ಆಗಲೆಂದು ಮುದ್ದಾದ ಕನ್ನಡದಲ್ಲಿ ಪುಸ್ತಕಗಳನ್ನು ಬರೆಯುತ್ತಿದ್ದಾರೆ. ಅವರು ಚಿಕ್ಕವರಿಗೆ ಚಿಕ್ಕವರು, ದೊಡ್ಡವರಿಗೂ ಚಿಕ್ಕವರು. ಇವರ ಹೃದಯವು ಬಹು ವಿಶಾಲವಾದುದು. ಇತರ ದೇಶಗಳವರನ್ನು ನೋಡಿ ನಾವು ಕಲಿಯಬೇಕಾದುದೇನಿದೆ, ಇತರರನ್ನು ಬೇಡತಕ್ಕದ್ದೇನಿದೆ, ಎಲ್ಲವೂ ನಮ್ಮಲ್ಲಿಯೇ ಇದೆ ಎಂದು ಕೆಲವರು ಭಾವಿಸುತ್ತಾರೆ. ಆದರೆ ಮಾಸ್ತಿಯವರು ಹಾಗಲ್ಲ. ಗುಣ ಎಲ್ಲಿಯೇ ಇರಲಿ, ಯಾರಲ್ಲಿಯೇ ಇರಲಿ, ಅದನ್ನು ಸೆಳೆದು ತಮ್ಮದನ್ನಾಗಿ ಮಾಡಿಕೊಳ್ಳುತ್ತಾರೆ.

ಕೆಲವು ಕಾಲದ ಹಿಂದೆ ಕನ್ನಡದಲ್ಲಿ ಬರಹಗಾರನ ಪಾಡು ಕಷ್ಟವೇ ಆಗಿದ್ದಿತು. ಕನ್ನಡಭಾಷೆಯ ಭವಿಷ್ಯದಲ್ಲಿ ಜನರಿಗೆ ಸ್ವಲ್ಪ ಅವಿಶ್ವಾಸವೂ ಸಹ ಉಂಟಾಗಿದ್ದಿತು. ಆದರೆ ಇಂದು ಭೀತಿಯಿಲ್ಲ. ಕನ್ನಡನುಡಿಯ ಸೇವೆಮಾಡಲು ಹಲವರು ಮುಂದೆ ಬರುತ್ತಿದ್ದಾರೆ. ಮಾಸ್ತಿಯವರಂತೂ ಕನ್ನಡನುಡಿಗೆ ಪ್ರಾಶಸ್ತ್ಯವೇ ಇಲ್ಲದ ಕಾಲದಲ್ಲಿಯೇ ಪುಸ್ತಕಗಳನ್ನು ಬರೆಯತೊಡಗಿದ್ದರು. ಕನ್ನಡ ನಾಡನ್ನು ಹಿಂದೆ ಆವರಿಸಿದ್ದ ಕತ್ತಲೆ ಈಗ ಬೆಳದಿಂಗಳಾಗಿದೆ. ಕನ್ನಡದ ಜನ ತನ್ನ ಶಕ್ತಿಯನ್ನರಿತುಕೊಂಡಿದೆ. ಮಾಸ್ತಿಯವರು ರಚಿಸಿರುವ ಕಾವ್ಯಗಳು, ಅವುಗಳ ಸೊಗಸು, ಅವರ ಪ್ರತಿಭೆ, ಈ ವಿಷಯವಾಗಿ ನನಗಿಂತಲೂ ಎಳೆಯ ಕಣ್ಣಿನವರು, ಹೊಸ ಕಣ್ಣಿನವರು ಹಲವರು, ವಿದ್ವನ್ಮಣಿಗಳು ಈ ದಿನ ಮಾತನಾಡತಕ್ಕವರಿದ್ದಾರೆ. ನಾನು ಆ ವಿಷಯವನ್ನು ಹೆಚ್ಚು ಪ್ರಸ್ತಾಪಿಸುವುದಿಲ್ಲ. ಆದರೆ ಇನ್ನೊಂದು ಮಾತನ್ನು ಹೇಳಿ ಈ ಭಾವಚಿತ್ರವನ್ನು ಅನಾವರಣ ಮಾಡುತ್ತೇನೆ.

ಇಷ್ಟೊಂದು ಕೃತಿಗಳನ್ನು ರಚಿಸಲು ನೀವು ಹೊತ್ತನ್ನು ಎಲ್ಲಿಂದ ತರುತ್ತೀರಿ ಎಂದು ನಾನು ಮಾಸ್ತಿಯವರನ್ನು ಆಗಾಗ ಕೇಳುತ್ತಿರುತ್ತೇನೆ. ಅವರೇನೂ ಪುಸ್ತಕ ಪಿಶಾಚಿಗಳಲ್ಲ. ಮನೆಯಲ್ಲಿ ಮಕ್ಕಳೊಡನೆ ವಿನೋದವಾಗಿ ಬೇಕಾದಷ್ಟು ಹೊತ್ತು ಕಾಲವನ್ನು ಕಳೆಯುತ್ತಾರೆ. ಹೊರಕ್ಕೆ ಬಂದರೆ ಸ್ನೇಹಿತರು. ಎಲ್ಲರೊಡನೆಯೂ ಸರಸ. ಯಾರಿಗೆ ಬೇಕಾದರೂ ತಮ್ಮ ಅಮೂಲ್ಯವಾದ ಸಲಹೆಯನ್ನು ಕೊಟ್ಟು ಅವರ ಸುಖದಲ್ಲಿ ತಾವೂ

ಸಂತೋಷಪಡತಕ್ಕವರು, ಅವರು. ನಾವ್ಯಾರಾದರೂ ಬಾಗಿಲ ಬಳಿ ಸಿಕ್ಕರೆ ಸಾಕು. ಮೆಲ್ಲಗೆ ಮಾತನಾಡಿಸುತ್ತಾ ಮಹಡಿಯ ಮೇಲಕ್ಕೆ ಹತ್ತಿಸಿ, ಅಲ್ಲಿ ಕಾಫಿ, ಮಾತುಕತೆಗಳಾದನಂತರ ನಾವು ಕೆಳಗಿಳಿದು ಬರುವುದರಲ್ಲಿ ಯಾವುದೋ ಮಾಯದಲ್ಲಿ ಅವರ ಮೋಟಾರು ಕಾರು ಬಂದು ನಮ್ಮನ್ನ ಮನೆಗೆ ತೆಗೆದುಕೊಂಡು ಹೋಗಲು ಸಿದ್ಧವಾಗಿ ನಿಂತಿರುತ್ತದೆ. ಇವರು ತಮ್ಮ ಕಾಲವನ್ನು ಅನೇಕರಿಗೆ ಕೊಡತಕ್ಕವರು. ಅಲ್ಲದೆ ಸರ್ಕಾರದಲ್ಲಿ ಬಹಳ ಜವಾಬ್ದಾರಿಯ ಅಧಿಕಾರ ಸ್ಥಾನದಲ್ಲಿದ್ದಾರೆ. ಸರ್ಕಾರೀ ಕೆಲಸಕಾರ್ಯಗಳು, ಸ್ನೇಹಿತರೊಡನೆ ಮಾತುಕತೆಗಳು, ಇವುಗಳ ಜತೆಗೆ, ಪುಸ್ತಕವನ್ನು ಓದುವುದಕ್ಕೆ ಬರೆಯುವುದಕ್ಕೆ ಇವರಿಗೆ ಕಾಲವೆಲ್ಲಿದೆ ಎಂದು ನಾನು ಯೋಚಿಸುತ್ತೇನೆ. ಇವರು ಗ್ರಂಥಗಳನ್ನು ಯಾವ ಮಾಯದಲ್ಲಿಯೋ ರಚಿಸಿಬಿಡುತ್ತಾರೆ. ಹೆಂಗಸರು ಸಾಮಾನ್ಯವಾಗಿ ವರ್ಷಕ್ಕೆ ಒಂದು ಮಗುವನ್ನು ಹೆರುತ್ತಾರೆ. ಕೆಲವರು ವರ್ಷಕ್ಕೆ ಎರಡು ಮಕ್ಕಳನ್ನು ಹೆರಬಹುದು. ಪ್ರತಿವರ್ಷವೂ ನೀವು ಎರಡು ಮಕ್ಕಳನ್ನು ಹೆರುತ್ತಿದ್ದೀರಲ್ಲಾ ಎಂದು ನಾನು ಇವರನ್ನು ಆಗಾಗ ಹಾಸ್ಯಮಾಡುತ್ತೇನೆ. ಷೇಕ್ಸ್‌ಪಿಯರ್ ವರ್ಷಕ್ಕೆ ಒಂದು ಎರಡು ನಾಟಕವನ್ನು ಬರೆಯುತ್ತಿದ್ದನಂತೆ. ಈ ಮಹಾರಾಯರು ವರ್ಷಕ್ಕೆರಡು ಪುಸ್ತಕಗಳನ್ನು ಅದು ಹೇಗೆ ಬರೆಯುತ್ತಾರೆಯೋ ನಾನು ಬೇರೆ ಕಾಣೆ. ಒಂದು ಬಗೆಯ ಕೃತಿಗಳಲ್ಲಿ - ಎಲ್ಲಾ ಬಗೆಯವು. ಸಣ್ಣ ಕತೆ, ಸಣ್ಣ ನಾಟಕ, ವಿಮರ್ಶೆ, ಸಣ್ಣ ಗೀತೆಗಳು, ಪದಗಳು, ದೊಡ್ಡ ಕಾವ್ಯಗಳು, ದೊಡ್ಡವರ ಜೀವನ ಚರಿತ್ರೆಗಳು, ಪ್ರತಿಯೊಂದು ರಚನೆಯಲ್ಲಿಯೂ ಭಾವಗಳು ತುಂಬಿ ತುಳುಕುತ್ತಿವೆ; ಸರಳ ಶೈಲಿ ಹರಿದು ಹೋಗುತ್ತದೆ.

ಇವರಿಗೆ ಹಿರಿಯರ ಮಾತು ಎಂದರೆ ಬಹು ಗೌರವ. ಯಾವ ಕೆಲಸಕ್ಕೇ ಆಗಲಿ ಇವರು ಮುಂದೆ ನುಗ್ಗುತ್ತಾರೆ. ಎಲ್ಲರನ್ನು ಪ್ರೀತಿಯಿಂದ ಕಂಡು, ಎಲ್ಲರ ಪ್ರೀತಿಯನ್ನು ಗಳಿಸಿರುತ್ತಾರೆ. ಇಂದು ನಮ್ಮ ನಾಡಿನಲ್ಲಿ ಇವರನ್ನು ಪ್ರೀತಿಸುವವರು ಅಸಂಖ್ಯಾತ ಮಂದಿ. ಮಾಸ್ತಿಯವರು, ಕನ್ನಡ ನಾಡು ಬೆಳೆಯಬೇಕು, ಕನ್ನಡ ನುಡಿ ಬೆಳೆಯಬೇಕು, ಕನ್ನಡಿಗರ ಸಂಘಟನೆಯಾಗಬೇಕು ಎಂದು ತಮ್ಮ ತನು ಮನ ಧನಗಳನ್ನು ತೆತ್ತು ಕನ್ನಡಕ್ಕಾಗಿ ನಿರಂತರವೂ ದುಡಿಯುತ್ತಿದ್ದಾರೆ. ಹೋದ ವರ್ಷ ತಾನೇ ಒಂದು ರೂಪಕ್ಕೆ ಬಂದ ಈ ಸಂಘದ ವಿಷಯದಲ್ಲಿ ಈ ರೀತಿ ಕನ್ನಡನಾಡಿನ ಸಾಹಿತಿಗಳನ್ನು ಕೂಡಿಸಬೇಕೆಂದು ಮಾಸ್ತಿಯವರೂ, (ಶ್ರೀ ಗುಂಡಪ್ಪನವರೂ, ನಾನೂ, ಇತರ ಮಿತ್ರರೂ) ಹತ್ತು ಹದಿನೈದು ವರ್ಷಗಳಿಂದಲೂ ಆಶಿಸುತ್ತಿದ್ದೆವು. ಇನ್ನೂ ಕಾಲ ಬಂದಿಲ್ಲ. ಹೊಂದಿಕೆಯಿಂದ ಎಲ್ಲರೂ ಪಡಕೊಂಡು ಕೆಲಸ ಸಾಗಿಸಿಕೊಂಡು ಹೋಗುವ ಕಾಲ ಬಂದಿಲ್ಲ. ಭಿನ್ನ ದೃಷ್ಟಿಗಳನ್ನಿಟ್ಟಿದ್ದರೂ ನುಡಿಗಾಗಿ ಎಲ್ಲರೂ ಒಟ್ಟಾಗಿ ಸೇರಿ ಕೆಲಸ ಮಾಡುವ ಸ್ವಭಾವವು ನಮ್ಮಲ್ಲಿನ್ನೂ ಬಂದಿಲ್ಲದೇ ಇರಬಹುದು. ದುಡುಕಬಾರದು. ಸರಿಯಾದ ತಳಪಾಯದ ಮೇಲೆ ಮನೆಯನ್ನು ಕಟ್ಟಬೇಕು ಎಂಬುದಾಗಿ ಅಳೆದು ಸುರಿದು ನೋಡಿದ್ದಾಯಿತು. ಇಂದು ಸಾಹಿತಿಗಳ ಸಂಘಟನೆಗೆ ತಳಪಾಯ ಹಾಕಿದ್ದಾಯಿತು. ಆ ಸಂಘದ ಆಶ್ರಯದಲ್ಲಿ ನಡೆಯುವ ಸಮ್ಮೇಳನದಲ್ಲಿ ಮಾಸ್ತಿಯವರ ಭಾವಚಿತ್ರವನ್ನು ಅನಾವರಣ ಮಾಡುವ ಭಾಗ್ಯ ನನಗೆ ಲಭಿಸಿದೆ. ಇವರ ಭಾವಚಿತ್ರ ಕನ್ನಡಿಗರಿಗೆ ಸ್ಫೂರ್ತಿದಾಯಕವಾಗಿರುತ್ತದೆ, ಇದು ಕನ್ನಡದ ಏಳಿಗೆಗೆ ಸೂಚನೆಯಾಗಿ ನಿಲ್ಲುತ್ತದೆ, ಎಂದು ನನಗೆ ಭರವಸೆಯಿದೆ. ಅತ್ಯಂತ ಸಂತೋಷದಿಂದ, ನನ್ನ ಮಿತ್ರವರ್ಯರ ಭಾವಚಿತ್ರವನ್ನು ಅನಾವರಣ ಮಾಡುತ್ತೇನೆ. ಭಗವಂತನು ಅವರಿಗೆ ಆಯುರಾರೋಗ್ಯ ಐಶ್ವರ್ಯಗಳನ್ನೂ, ಇನ್ನೂ ಉನ್ನತ ಪದವಿಗಳನ್ನೂ ಕರುಣಿಸಿ ಚಿರಕಾಲ ಅವರಿಂದ ಕನ್ನಡತಾಯಿ ಸೇವೆಯನ್ನು ಮಾಡಿಸಲೆಂದು ಬೇಡುತ್ತೇನೆ.

ಮಿತ್ರ ವೆಂಕಟೇಶ ಅಯ್ಯಂಗಾರ್

ಪಿ. ಎಚ್. ಕೃಷ್ಣರಾವ್

ನನಗೆ ಮಾಸ್ತಿ ವೆಂಕಟೇಶಯ್ಯಂಗಾರ್ ಪರಿಚಯವಾದದ್ದು ೧೯೦೯ರಲ್ಲಿ ಮೈಸೂರು ಮಹಾರಾಜಾ ಕಾಲೇಜ್‌ನಲ್ಲಿ F.A. ಪರೀಕ್ಷೆ ಪಾಸ್ ಮಾಡಿಕೊಂಡು ಅವರೂ, ತಿರುಚನಾಪಲ್ಲಿ S.P.G. ಕಾಲೇಜಿನಲ್ಲಿ F.A. ಪಾಸ್ ಮಾಡಿಕೊಂಡು ನಾನೂ ಬೆಂಗಳೂರು Central Collegeಗೆ B.A., ಕ್ಲಾಸಿಗೆ ಸೇರಿದೆವು. ಆದ್ದರಿಂದ ಅವರು ಬರೆದಿರುವ ''ಭಾವ'' ಪುಸ್ತಕದಲ್ಲಿನ ಮೊದಲನೆಯ ಭಾಗದ ಅವರ ಬಾಲ್ಯದ ವಿಚಾರ ನನಗೆ ಅಷ್ಟಾಗಿ ತಿಳಿಯದು. ಬಡತನದಲ್ಲಿ ಬಹಳ ಕಷ್ಟಪಟ್ಟು ಮೈಸೂರಿನಲ್ಲಿ ವಾರಾನ್ನ ಮಾಡಿಕೊಂಡು ಓದಿದರೆಂದು ಕೇಳಿದ್ದೆ. ಆದರೆ ಎಷ್ಟು ಕಷ್ಟಪಟ್ಟರು ಎನ್ನುವುದನ್ನು ''ಭಾವ''ದಲ್ಲಿ ಓದಿ ಮನಸ್ಸು ಕರಗಿತು. ಬೆಂಗಳೂರಿನಲ್ಲಿಯೂ ಸಹ Subjudge ವರದರಾಜಯ್ಯಂಗಾರರ ಮನೆಯಲ್ಲಿ ಉಚಿತವಾಗಿದ್ದುಕೊಂಡೇ ಓದುತ್ತಿದ್ದರೆನ್ನುವುದು ಗೊತ್ತಾಯಿತು.

ಆಗಿನ B.A., ಕ್ಲಾಸಿನಲ್ಲಿ ಓದುತ್ತಿದ್ದವರು ಕೇವಲ ೪೦ ಜನ. ಅದರಲ್ಲಿ ಎಂಟುಹತ್ತು ಜನರದ್ದು ಒಂದು ಗುಂಪು. Central College Tiffin Roomsನಲ್ಲಿ ಒಂದು ರೂಮು ಈ ಗುಂಪಿಗೆ ಕೊಟ್ಟಿದ್ದರು. ಅಲ್ಲಿ ಸೇರುತ್ತಿದ್ದವರ ಪೈಕಿ ವೆಂಕಟೇಶಯ್ಯಂಗಾರ್, ವೆಂಕಟರಂಗನ್, ಟಿ.ಎಸ್. ವೆಂಕಟಾಚಾರ್, ಆಸೂರು ಶ್ರೀನಿವಾಸಾಚಾರ್ ಇವರು ಮುಖ್ಯಸ್ಥರು. ಪ್ರತಿ ಶನಿವಾರ ಮಧ್ಯಾಹ್ನ ಆ ರೂಮಿನಲ್ಲಿ ಕಲೆತು ನಾವೇ ತಿಂಡಿ ಮಾಡಿ ತಿಂದು ಚರ್ಚೆಯಲ್ಲಿ ತೊಡಗುತ್ತಿದ್ದೆವು. ಎಲ್ಲರೂ ಬಡವರೇ, ಅವರವರ ಮನೆಯಿಂದ ತಿಂಡಿ ಮಾಡುವುದಕ್ಕೆ ಒಂದೊಂದು ಸಾಮಾನು ತರಬೇಕು. ಉದಾಹರಣೆಗೆ, ಬೋಂಡಾ ಮಾಡಬೇಕಾದರೆ, ಒಬ್ಬರು ಕಡಲೇ ಹಿಟ್ಟು, ಮತ್ತೊಬ್ಬರು ಎಣ್ಣೆ ಇತ್ಯಾದಿ ತರಬೇಕು. ತಿಂಡಿಯಾದ ಮೇಲೆ ಅವರವರಿಗೆ ತೋಚಿದ ಒಂದು ವಿಷಯವನ್ನು ಒಂದು ಚೀಟಿಯಲ್ಲಿ ಗುರ್ತು ಹಾಕಿ ಮಡಿಸಿ ಒಂದು ಟೋಪಿಯಲ್ಲಿ ಹಾಕಿ ಕುಲುಕಬೇಕು. ಚೀಟಿ ಎತ್ತಿದ ಮೇಲೆ ಯಾರ ಕೈಗೆ ಯಾವ ವಿಷಯದ ಚೀಟಿ ಬರುತ್ತದೆಯೋ ಆ ವಿಷಯವನ್ನು ಕುರಿತು ಹತ್ತು ನಿಮಿಷ ಮಾತನಾಡಬೇಕು. ಇದರಿಂದ ನಮ್ಮ ವಿಚಾರಕ್ಕೆ ಬಲವಾಯಿತು ಮತ್ತು ಭಾಷಣ ಮಾಡುವ ಅಭ್ಯಾಸವಾಯ್ತು.

ಈ ಗುಂಪಿನಲ್ಲಿ ಬಹಳ ಆತ್ಮೀಯರಾಗಿದ್ದವರು ಮೂವರು. ನಾನು, ವೆಂಕಟೇಶಯ್ಯಂಗಾರ್, ವೆಂಕಟರಂಗನ್. ನಮ್ಮನ್ನು ತ್ರಿಮೂರ್ತಿಗಳೆಂದು ಹಾಸ್ಯ ಮಾಡುತ್ತಿದ್ದರು. ವೆಂಕಟೇಶಯ್ಯಂಗಾರ್ ಇದ್ದದ್ದು ಚಾಮರಾಜಪೇಟೆಯಲ್ಲಿ, ನಾನು, ವೆಂಕಟರಂಗನ್, Central College Hostelನ ಒಂದೇ ರೂಮಿನಲ್ಲಿ.

ಆಗ Mysore University ಇರಲಿಲ್ಲ. B.A., ಪರೀಕ್ಷೆಗೆ ಮದರಾಸಿಗೆ ಹೋಗಬೇಕಾಗಿತ್ತು. ವೆಂಕಟೇಶಯ್ಯಂಗಾರ್‌ರ ಸೋದರಮಾವ ರಂಗಸ್ವಾಮಯ್ಯಂಗಾರ್ಯರು

ಮತ್ತು ವರದರಾಜಯ್ಯಂಗಾರರ ಮಗ ಕೃಷ್ಣಸ್ವಾಮಯ್ಯಂಗಾರರು, ಇನ್ನೂ ಕೆಲವರು ತಂಬೂಚೆಟ್ಟಿ ಬೀದಿಯಲ್ಲಿ ರೂಮು ಮಾಡಿಕೊಂಡಿದ್ದರು. ನಾವು ಅವರಲ್ಲಿಯೇ ತಂಗಿದೆವು. B.A., ಪಾಸಾದ ನಂತರ M.A., ಪರೀಕ್ಷೆಗಾಗಿ, ನಾನು ವೆಂಕಟೇಶ ಅಯ್ಯಂಗಾರರು ಮದ್ರಾಸಿನಲ್ಲಿಯೇ ಎರಡು ವರ್ಷ ಇರಬೇಕಾಯಿತು. Presidency College ಮತ್ತು Christian College, ಈ ಎರಡು ಕಾಲೇಜಿನವರು ಸೇರಿ ಇಂಗ್ಲಿಷ್ Litrature ನಲ್ಲಿ M.A. ಗೆ ಶಿಕ್ಷಣ ಕೊಡುತ್ತಿದ್ದರು. ನನಗೆ Presidency Collegeಸ್ಥಳ ದೊರೆಯಿತು. ವೆಂಕಟೇಶಯ್ಯಂಗಾರರಿಗೆ Christian ಕಾಲೇಜಿನಲ್ಲಿ ಕೆಲವು ಪಾಠಗಳಿಗೆ ಅವರು Presidency College ಬರಬೇಕಾಗಿತ್ತು. ಮತ್ತೆ ಕೆಲವಕ್ಕೆ ನಾನು Christian Collegeಗೆ ಹೋಗಬೇಕಾಗಿತ್ತು. ಆದ್ದರಿಂದ ಪ್ರತಿ ದಿನ ನಾವು ಭೇಟಿಯಾಗುತ್ತಿದ್ದೆವು. ನನಗೆ Victoria College hostelನಲ್ಲಿ ರೂಮು ದೊರೆಯಿತು. ಅವರು ಸುಂಕವಾರ ಪೇಟೆಯಲ್ಲಿ Bucking ham canal ಪಕ್ಕದ ಒಂದು ಮನೆಯ ಮಹಡಿಮೇಲೆ ಕೆಲವರೊಂದಿಗೆ ರೂಮ್ ಮಾಡಿಕೊಂಡಿದ್ದರು. Bucking ham canalನ ದುರ್ಗಂಧ ಮದ್ರಾಸಿನಲ್ಲಿದ್ದವರಿಗೇ ಗೊತ್ತು. ಮದ್ರಾಸಿನಲ್ಲಿಯೂ ಸಹ ನಮ್ಮದೊಂದು ತಿಂಡಿಪೋತರ ಗುಂಪು. ಈ ಗುಂಪಿಗೆ Victoria Hostel ನಲ್ಲಿ ನನ್ನೊಂದಿಗಿದ್ದ ಈಗ ರೈಲ್ವೇ ಇಲಾಖೆಯಿಂದ ನಿವೃತ್ತರಾಗಿರುವ ಹೆಚ್. ರಂಗಾಚಾರ್ ಮತ್ತು ವಿದ್ಯಾ ಇಲಾಖೆಯಲ್ಲಿದ್ದ ದಿವಂಗತ ರಾಜಾರಾವ್ ಮತ್ತು ಎಂ.ಎಸ್. ರಾಜಗೋಪಾಲರಾವ್ ಸೇರಿದ್ದರು. ಈ ಗುಂಪಿನ ಉದ್ದೇಶವೂ ಸರಳ, ವಾರಕ್ಕೊಂದು ಸಲ Beachನಲ್ಲಿ ಒಂದಾಗಿ ಸೇರಿ ತಿಂಡಿ ತಿನ್ನುವುದು. ಹೆಸರು "eating club" ಎಲ್ಲರೂ ಚಂದ ಹಾಕಬೇಕು. ತಿಂಡಿ ತರುವುದು ನನ್ನ ಕೆಲಸ. ಈ ಸಮಯದಲ್ಲಿಯೇ ನನ್ನ ಮತ್ತು ವೆಂಕಟೇಶಯ್ಯಂಗಾರರ ಮೈತ್ರಿ ಬೆಳದದ್ದು.

M.A., ಪರೀಕ್ಷೆಗೆ ಕೂಡುವ ವರುಷದಲ್ಲಿಯೇ ಅಂದರೆ ೧೯೨೪ರಲ್ಲಿ Mysore Civil Service ಪರೀಕ್ಷೆಯೂ ಬಂತು. ಆ ಪರೀಕ್ಷೆಗೂ ಕೂಡುವುದೆ ಇಲ್ಲವೆ ಎನ್ನುವ ಯೋಚನೆ, ವೆಂಕಟೇಶಯ್ಯಂಗಾರರು M.A., ಮತ್ತು Civil Service ಎರಡು ಪರೀಕ್ಷೆಗಳಿಗೂ ಕೂಡುವುದು ಎಂದು ನಿರ್ಧರಿಸಿದರು. ನನಗೆ ಆ ಧೈರ್ಯವಿಲ್ಲ. ಎರಡು ಪರೀಕ್ಷೆಗಳಿಗೂ ಏಕ ಕಾಲದಲ್ಲಿ ಕುಳಿತರೆ ಎರಡರಲ್ಲಿಯೂ ಫೈಲ್ ಆಗಬಹುದು ಎನ್ನುವ ಹೆದರಿಕೆ. ಅವರಿಗೆ ಆ ಹೆದರಿಕೆ ಇಲ್ಲ. ಎರಡು ಪರೀಕ್ಷೆಗೂ ಕೂತರು. ಎರಡರಲ್ಲಿಯೂ ಮಾಮೂಲಿನಂತೆ First Classನಲ್ಲಿ First ಆಗಿ ಪ್ಯಾಸಾದರು. ನಾನು ೧೯೧೪ರಲ್ಲಿ M.A., ಪಾಸ್ ಮಾಡಿ ೧೯೧೬ರಲ್ಲಿ Civil Service ಪಾಸ್ ಮಾಡಿದೆ.

ಇಲ್ಲಿ ಮದರಾಸ್‌ನಲ್ಲಿನ ನಮ್ಮ ಜೀವನದ ಒಂದು ತಮಾಷೆ ವಿಷಯ ಹೇಳುತ್ತೇನೆ. ನಾವಿಬ್ಬರು ಒಂದೇ ತರಹ ಬಟ್ಟೆಯಲ್ಲಿ ಕೋಟು ಹೊಲಿಸಬೇಕೆಂದು ಬಟ್ಟೆ ಅಂಗಡಿಗೆ ಹೋದೆವು. ಆಗಾಗಲೇ ಕತ್ತಲೆ ಆಗಿತ್ತು. ನಾವು ಬಟ್ಟೆ ಆರಿಸಿದ್ದು ಕಂದು ಬಿಳುಪು ಅಥವಾ Cream Colour ಎಂದು ತಿಳಿದಿದ್ದೆವು. ಕೋಟು ತಯಾರಾದ ಮೇಲೆ ನೋಡಿದರೆ ಅದು ಅಚ್ಚ ಹಳದಿ. ಮೈಸೂರಿನವರು ಅಂತಹ ಕೋಟು ತೊಟ್ಟದ್ದೇ ಇಲ್ಲ. ಆ ಕೋಟನ್ನು ಧರಿಸಿ ನಾವು ಬೆಂಗಳೂರಿಗೆ ಬಂದಮೇಲೆ ನಮ್ಮನ್ನು ಗುರ್ತಿಸಬೇಕಾದರೆ ಆ ಕೋಟಿನಿಂದಲೇ. ನಾನು ದೊಡ್ಡಪೇಟೆಯಲ್ಲಿ ಮಾರ್ಕೆಟ್‌ನ ಹತ್ತಿರ ಇರಬಹುದು, ವೆಂಕಟೇಶಯ್ಯಂಗಾರ್ ಮೈಸೂರ್ ಬ್ಯಾಂಕ್‌ನ ಹತ್ತಿರ ಇರಬಹುದು. ಇಷ್ಟು ದೂರದಿಂದಲೇ ನಾವು ಒಬ್ಬರನ್ನೊಬ್ಬರು ಗುರ್ತಿಸಬಹುದಿತ್ತು.

ಅವರು Civil Service ಸೇರಿದ ಮೇಲೆ ನಾನು Palghat Victoria College ನಲ್ಲಿ ಇಂಗ್ಲೀಷ್ Lecturer ಆಗಿ ಸೇರಿದೆ. ನಾನು ಬೆಂಗಳೂರಿಗೆ ಬಂದಾಗ ೧೯೧೬ನೇ ಇಸವಿಯ Civil Service ಪರೀಕ್ಷೆಗೆ ನಾನು ಕೂಡುವುದೆ ಇಲ್ಲವೆ ಎಂಬ ಪ್ರಶ್ನೆ. ನಾನು ಕೂಡಬೇಕು ಎಂದು ವೆಂಕಟೇಶಯ್ಯಂಗಾರ್ ಅಭಿಪ್ರಾಯ. ರ್‍ಯಾಂಕ್ ಎಲ್ಲಿ ಬರುತ್ತೆ ಎಂಬ ಅಧೈರ್ಯ ನನಗೆ, ನಿನಗೆ ಬಂದೇ ಬರುತ್ತೆ ಎಂದು ಒತ್ತಾಯ ಮಾಡಿ ನನ್ನನ್ನು ಪರೀಕ್ಷೆಗೆ ಕೂಡಿಸಿದವರು ವೆಂಕಟೇಶಯ್ಯಂಗಾರರು. Form ತಂದು ನನ್ನ ಕೈಲಿ ಭರ್ತಿಮಾಡಿಸಿ, ತನ್ನ ಕೈಯಿಂದ ೫೦ರೂ. ಕೊಟ್ಟು ಪರೀಕ್ಷೆಗೆ ಕಟ್ಟಿಸಿದರು. ನನ್ನಲ್ಲಿ ಅವರಿಗಿದ್ದ, ಮತ್ತು ನನ್ನಲ್ಲಿ ನನಗೇ ಇಲ್ಲದ, ನಂಬಿಕೆಯಿಂದ ನಾನು ೧೯೧೬ರಲ್ಲಿ Civil Service Pass ಮಾಡಿ ಕೆಲಸಕ್ಕೆ ಸೇರಿದೆ. ಆ ೫೦ ರೂಪಾಯಿ ಇದುವರೆಗೆ ನಾನು ಅವರಿಗೆ ಹಿಂದಿರುಗಿ ಕೊಟ್ಟಿಲ್ಲ. ಅದನ್ನು ಕೊಟ್ಟ ಮಟ್ಟಿಗೆ ನನ್ನ ಋಣ ತೀರುವುದಿಲ್ಲ.

ವಿಧಿವಿಲಾಸ ವಿಚಿತ್ರ! ನಾನು Lower Secondary Pass ಮಾಡಿದ ದಿನದಿಂದ ನನಗೆ ಡಾಕ್ಟರ್ ರಾಗಬೇಕೆಂದು ಇಚ್ಛೆ. B.A., ಪಾಸ್ ಮಾಡಿದ ನಂತರ Medical College ಗೆ ಸೇರಬೇಕೆಂದು ಮದ್ರಾಸಿಗೆ ಹೋದೆ. ಮೇಲೆ ಹೇಳಿದ ವೆಂಕಟೇಶ ಅಯ್ಯಂಗಾರ್ಯರ ಮಾವ ರಂಗಸ್ವಾಮಿ ಅಯ್ಯಂಗಾರರು Medical Schoolನಲ್ಲಿ ಓದುತ್ತಿದ್ದರು. ನಾನು Medical College ಗೆ ಸೇರಬೇಕೆಂದು ಅವರಿಗೆ ತಿಳಿಸಿದಾಗ, ಬೇಡ ಎಂದು ಹೇಳಿದವರು ಅವರೇ. ''ನಿನ್ನ ಯೋಗ್ಯತೆ ನನಗೆ ಗೊತ್ತು ನಿನಗೆ ಗೊತ್ತಿಲ್ಲ, M.A., ಪರೀಕ್ಷೆ ಮಾಡು'' ಎಂದು ಬುದ್ಧಿವಾದ ಹೇಳಿದವರು ಅವರೆ. ಆದ್ದರಿಂದ ನನ್ನ ಜೀವನವೇ ಬದಲಾಯಿಸಿತು. ನಾವು ಬಯಸುವುದು ಒಂದು, ದೇವರ ಚಿತ್ತ ಮತ್ತೊಂದು.

ನನ್ನ ಜೀವನವನ್ನು ಬದಲಾಯಿಸಿದ್ದು ಮತ್ತೊಂದು ಘಟನೆ. ನನ್ನ ೧೭ನೆಯ ವಯಸ್ಸಿನಲ್ಲಿ ತಿರುಚನಾಪಲ್ಲಿಯಲ್ಲಿ F.A. Classನಲ್ಲಿದ್ದಾಗ ನಮ್ಮ ತಂದೆ ತೀರಿಹೋದರು. ನಾನು ಕೆಲಸಕ್ಕೆ ಸೇರಬೇಕೆಂದು ಅವರ ಸ್ನೇಹಿತರ ಇಚ್ಛೆ. ಆಗಿನ ಕಾಲದಲ್ಲಿ B.A. ಪಾಸ್ ಮಾಡಿದವರಿಗೂ ದೊರಕುತ್ತಿದ್ದುದು ತಿಂಗಳಿಗೆ ೨೫ರೂ ಸಂಬಳ. ನಮ್ಮ ತಂದೆಯವರು Station Master ಆಗಿ ಯಶಸ್ವಿಯಾಗಿ ಕೆಲಸ ಮಾಡಿದ್ದರಿಂದಲೂ ಮತ್ತು ಮೇಲ್ಪಟ್ಟವರ ವಿಶ್ವಾಸಕ್ಕೆ ಪಾತ್ರರಾಗಿದ್ದರಿಂದಲೂ ನನಗೆ ಪ್ರತಮತಃ ೩೬ರೂ ಸಂಬಳ ಕೊಡಿಸುವುದಾಗಿ ಹೇಳಿದರು. ಈ ವಿಷಯವನ್ನು ಮದ್ರಾಸಿನಲ್ಲಿ Law ಪರೀಕ್ಷೆಗೆ ಓದುತ್ತಿದ್ದ ನಮ್ಮಣ್ಣ ಶ್ರೀನಿವಾಸರಾಯರಿಗೆ ತಿಳಿಸಿದೆ. ನಾವೂ ಬಡವರು. ವೆಂಕಟೇಶಯ್ಯಂಗಾರರಷ್ಟು ಬಡತನದ ಬೇಗೆಯಲ್ಲಿ ಬೆಳೆಯದಿದ್ದರೂ ಕಷ್ಟದಲ್ಲಿಯೇ ಬೆಳೆದವರು. ನಮ್ಮ ಅಣ್ಣ ಹೇಳಿದರು. 'ನೀನು ಮುಂದೆ ಓದಬೇಕೆಂದು ನನ್ನ ಇಷ್ಟ, ಓದಿಗೆ ಬೇಕಾದ ಹಣವನ್ನು ನಾನು ಕೊಡುತ್ತೇನೆಂದು', ಅವರು ಮದ್ರಾಸಿನಲ್ಲಿ ಹುಡುಗರಿಗೆ ಪಾಠ ಹೇಳಿ ಸಂಪಾದಿಸಿದ್ದ ಹಣದಲ್ಲಿ ತಿಂಗಳಿಗೆ ೧೨ ರೂ. ಕಳುಹಿಸುತ್ತಿದ್ದರು. ತಿರುಚನಾಪಲ್ಲಿ Station Master ಮನೆಯಲ್ಲಿ ನನಗಾಗಿ ಒಂದು ರೂಮು ಬಿಟ್ಟುಕೊಟ್ಟಿದ್ದರು. ಅಲ್ಲಿ ಓದುವುದು, ಕಾಲೇಜ್ Hostelಗೆ ಊಟಕ್ಕಾಗಿ ತಿಂಗಳಿಗೆ ಎಂಟು ರೂ ಕೊಡುವುದು. ಉಳಿದ ನಾಲ್ಕು ರೂ. ನನ್ನ ಇತರ ಖರ್ಚಿಗೆ. ಕಾಲ ಚೆನ್ನಾಗಿತ್ತು. ಇದರಲ್ಲಿಯೇ ಜೀವನ ನಡೆಸಿ ದೇವರದಯದಿಂದ First Classನಲ್ಲಿ Pass ಮಾಡಿದೆ. ನನ್ನ ಜೀವನದ ಮಾರ್ಗವನ್ನೇ ಬದಲಾಯಿಸಿದ್ದು ನಮ್ಮ ಅಣ್ಣನವರ ಔದಾರ್ಯ. Station Master ಆಗುವುದರ ಬದಲು, ಡಾಕ್ಟರ್ ಆಗುವುದರ ಬದಲು, ನಾನು Mysore Civil Service ಸೇರಿದೆ.

ಕೊನೆಯದಾಗಿ ಒಂದು ಮಾತು. ವೆಂಕಟೇಶಯ್ಯಂಗಾರ್ಯರಲ್ಲಿ ನನಗೆ ಬಹಳ ಗೌರವ. ಯಾವುದಾದರೂ ಒಂದು ವಿಷಯವನ್ನು ಚರ್ಚಿಸಿದರೆ ಮಾತನಾಡುವವರು ಅವರು, ಕೇಳುವವನು ನಾನು, ಭಿನ್ನಾಭಿಪ್ರಾಯವಿದ್ದರೂ ಗೆಲ್ಲುತ್ತಿದ್ದವರು ಅವರೇ. ಒಂದು ಸಮಸ್ಯೆ ಮುಂದಿಟ್ಟು ಅವರ ಅಭಿಪ್ರಾಯ ಸೂಚಿಸಿ ನೀನೇನು ಹೇಳುತ್ತೀಯಾ? ಎಂದು ನನ್ನನ್ನು ಕೇಳಿದರೆ ನಾನು ಸಾಮಾನ್ಯವಾಗಿ ಸುಮ್ಮನಿರುತ್ತಿದ್ದೆ. ನಾನು ಸುಮ್ಮನಿದ್ದರೆ ನನಗೆ ಒಪ್ಪಿಗೆ ಇಲ್ಲ ಎಂದು ಅವರು ಅರ್ಥಮಾಡಿಕೊಳ್ಳುತ್ತಿದ್ದರು. ಈ ಗೌರವದಿಂದ ಅವರಲ್ಲಿದ್ದ ನನ್ನ ಪ್ರೀತಿಗೆ ಕೊರತೆ ಇಲ್ಲ. ನಾನು, ವೆಂಕಟೇಶ ಅಯ್ಯಂಗಾರ್, ವೆಂಕಟರಂಗನ್ ತ್ರಿಮೂರ್ತಿಗಳು ಎಂದು ಮೇಲೆ ಹೇಳಿದನಷ್ಟೇ. ಒಂದು ಸಲ ನಾನು ವೆಂಕಟೇಶಯ್ಯಂಗಾರರಿಗೆ ಹೇಳಿದೆ ''ನಿನ್ನಲ್ಲಿ ನನಗೆ ಗೌರವ ವೆಂಕಟರಂಗನ್‌ನಲ್ಲಿ ಪ್ರೀತಿ' ಎಂದು. ಆದಕ್ಕೆ ಅವರ ಉತ್ತರ ''ನಿನ್ನ ಗೌರವ ಯಾರಿಗೆ ಬೇಕಾಗಿದೆಯಯ್ಯಾ? ನನಗೆ ಬೇಕಾದ್ದು ನಿನ್ನ ಪ್ರೀತಿ'' ಅವರಲ್ಲಿ ನನಗಿರುವುದು ಪ್ರೀತಿ ಮತ್ತು ಗೌರವ. ದೇವರ ಮಹಿಮೆಯನ್ನು ತಿಳಿದು ಅವನಲ್ಲಿ ನಿಶ್ಚಲವಾದ ಪ್ರೇಮವನ್ನಿಟ್ಟಿರುವ ಭಕ್ತಿಯಂತೆ.

ಅನೇಕ ಪುಸ್ತಕಗಳಲ್ಲಿ ವೆಂಕಟೇಶಯ್ಯಂಗಾರರು ನಮ್ಮ ಸ್ನೇಹದ ವಿಷಯವಾಗಿ ಬರೆದು ನನಗೂ ಒಂದು ಸ್ಥಾನ ಕೊಟ್ಟಿದ್ದಾರೆ. ''ಹೂವಿನಿಂದ ನಾರು ಸ್ವರ್ಗಕ್ಕೆ'' ಎಂಬಂತೆ ಜೀವನದಲ್ಲಿ ನಮ್ಮ ಮಾರ್ಗಗಳು ಬೇರೆ ಬೇರೆಯಾದವು. ಅವರು ಪ್ರಸಿದ್ಧ ಸಾಹಿತಿಗಳಾದರು. ನಾನು ಕೇವಲ ಸಾಮಾನ್ಯ ಮನುಷ್ಯ. ಆದ್ದರಿಂದ ಕೆಲವು ರಂಗಗಳಲ್ಲಿ ಈಚೆಗೆ ನಮ್ಮ ಸಂಪರ್ಕ ಕಡಿಮೆಯಾಯಿತು. ಆದರೂ ಅವರನ್ನು ಕಂಡಾಗಲೆಲ್ಲಾ ನನ್ನನ್ನು ಪ್ರೀತಿಯಿಂದ ಸ್ವಾಗತಿಸುವುದು ಅವರ ಸ್ವಭಾವ. ನನ್ನ ಸ್ನೇಹಿತರಲ್ಲಿ ಒಬ್ಬ ''ಒಳ್ಳೆಯ'' ಮನುಷ್ಯ (Good man) ಯಾರು ಎಂದು ನನ್ನನ್ನ ಕೇಳಿದರೆ ವೆಂಕಟೇಶ ಅಯ್ಯಂಗಾರರು ಎನ್ನುತ್ತೇನೆ. ಅವರು ಸಾಧುಸಜ್ಜನ ವರ್ಗಕ್ಕೆ ಸೇರಿದವರು. ಅವರ ಜೀವನವನ್ನೇ ಶ್ರೇಯಸ್ಸಿನ ಸಾಧನವಾಗಿ ಬಳಸಿದ್ದಾರೆ. ಇದೇ ರೀತಿಯಲ್ಲಿ ಅವರು ಚಿರಾಯುವಾಗಿ ಬಾಳಲಿ, ದೇವರು ಅವರನ್ನು ಸುಖವಾಗಿಟ್ಟಿರಲಿ ಎಂದು ದೇವರಲ್ಲಿ ನನ್ನ ಪ್ರಾರ್ಥನೆ.

ಸಾಧನೆಗಳ ಕೆಲವು ವೈಶಿಷ್ಟ್ಯಗಳು

ಸಿ.ಕೆ. ವೆಂಕಟರಾಮಯ್ಯ

ರಾಜಸೇವಾ ಪ್ರಸಕ್ತ ಡಾಕ್ಟರ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರವರ ಸಾಧನೆಗಳ ವೈಶಿಷ್ಟ್ಯಗಳ ವಿಚಾರವಾಗಿ ಕೆಲವು ಸಂಗತಿಗಳನ್ನು ಸಂಕ್ಷಿಪ್ತವಾಗಿ ಸೂಚಿಸುವುದು ಮಾತ್ರವೇ, ಈ ಲೇಖನದ ಉದ್ದೇಶವಾಗಿದೆ. ನಾನು ಇಷ್ಟಪಡುವಷ್ಟು ಸಂಗತಿಗಳಿಂದ ಕೂಡಿ ನನ್ನ ಮನಸ್ಸಿಗೆ ತೃಪ್ತಿಯನ್ನುಂಟುಮಾಡುವ ದೀರ್ಘಲೇಖನವನ್ನು ಬರೆಯುವುದು, ನನ್ನ ಈಗಿನ ದೇಹಸ್ಥಿತಿಯ ದೆಸೆಯಿಂದ ನನಗೆ ಶಕ್ಯವೇ ಇಲ್ಲದಂತಾಗಿದೆ. ಇದಕ್ಕಾಗಿ ನನಗೆಷ್ಟು ಸಂಕೋಚವೂ ವಿಷಾದವೂ ಆಗಿವೆಯೆಂಬುದನ್ನು ವಿವರಿಸಲಾರೆ.

ಕನ್ನಡ ನಾಡಿನಲ್ಲಿ ವಯೋವೃದ್ಧರೂ ಜ್ಞಾನವೃದ್ಧರೂ ಆಗಿರುವವರಲ್ಲಿ ಅಗ್ರಗಣ್ಯರಾಗಿರುವ ಕೆಲವೇ ಮಂದಿ ಪ್ರಾಜ್ಞರಲ್ಲಿ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರವರೂ ಒಬ್ಬರು. ನಮ್ಮ ಸಂಸ್ಕೃತಿಯ ಹಲವಾರು ಒಳ್ಳೆಯ ಸಂಪ್ರದಾಯಗಳನ್ನು ಆಸ್ಥೆಯಿಂದ ಪಾಲಿಸುತ್ತಿರುವುದು ಅವರ ವೈಶಿಷ್ಟ್ಯದಂತಿರುವ ಗುಣಗಳಲ್ಲೊಂದು. ಅವರು ಹಿರಿಯ ಬಂಧುಗಳಲ್ಲಿ ಮತ್ತು ಇತರ ಗುರುಹಿರಿಯರಲ್ಲಿ ಪ್ರೀತಿ ಗೌರವಗಳಿಂದ ವರ್ತಿಸಿದ ಅನೇಕ ನಿದರ್ಶನಗಳನ್ನು ನೋಡಿ ನಲಿದವನು ನಾನು. ಅವರು ತಮ್ಮ ವಿದ್ಯಾಗುರುಗಳಾಗಿದ್ದ ರಾಜಸೇವಾಸಕ್ತ ಶ್ರೀ ಬಿ.ಎಂ. ಶ್ರೀಕಂಠಯ್ಯನವರನ್ನು ಕನ್ನಡದ ಕಣ್ವರೆಂದು ಬಣ್ಣಿಸಿ ಭಕ್ತಿಯಿಂದ ಬರೆದ ಕವಿತೆಯನ್ನು ಮೊಟ್ಟ ಮೊದಲನೆಯ ಸಾರಿ ಓದಿದಾಗ ನನಗಾದ ಅನುಭವವನ್ನೂ ಆನಂದವನ್ನೂ ಎಂದೂ ಮರೆಯುವಂತಿಲ್ಲ. ಅದನ್ನು ಓದಿದುದಕ್ಕಿಂತ ಹಿಂದೆ ನಾನು ಅವರ ಹಲವು ಕೃತಿಗಳನ್ನು ಓದಿ ಹರ್ಷಿಸಿದ್ದೆ. ಆದರೂ, ''ಶ್ರೀ'' ಯವರನ್ನು ಕನ್ನಡದ ಕಣ್ವರೆಂದು ಬಣ್ಣಿಸಿದ್ದ ಆ ಕವಿತೆಯನ್ನು ಮೊಟ್ಟ ಮೊದಲನೆಯ ಸಾರಿ ಓದಿದಾಗ ಆನಂದಾಧಿಕ್ಯದಿಂದ ನನ್ನ ಮನಸ್ಸೇ ಒಂದು ಬಗೆಯಾಯಿತು. ಅದಕ್ಕೆ ಬಹುಕಾಲ ಹಿಂದಿನಿಂದಲೂ ನಾನು ಅವರಿಗೆ ತಮ್ಮ ವಿದ್ಯಾಗುರುಗಳಲ್ಲಿದ್ದ ಪ್ರೀತಿ ಗೌರವಗಳ ನಿದರ್ಶನಗಳನ್ನು ಕಂಡಿದ್ದೆ.

ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರವರು ಗುರುಹಿರಿಯರಲ್ಲಿ ಭಕ್ತಿ ಗೌರವಗಳನ್ನು ತೋರುವಂತೆಯೇ, ತಮಗಿಂತ ಕಿರಿಯರಲ್ಲಿ ವಾತ್ಸಲ್ಯ ಮಮತೆಗಳನ್ನು ತೋರಿ ಅವರ ಅಣ್ಣನಂತಿರುವುದೂ ಒಂದು ವೈಶಿಷ್ಟ್ಯ. ಈ ವೈಶಿಷ್ಟ್ಯದ ಸತ್ಪರಿಣಾಮವು ಬಹುಮುಖವಾದುದೆನ್ನಲು ಸಂದೇಹವೇ ಇಲ್ಲ. ಯಾವ ಬಗೆಯ ಕ್ಷುಬ್ಧ ಸನ್ನಿವೇಶವೇ ಒದಗಿದರೂ - ಹಿರಿಯರಲ್ಲಿ ಗೌರವದಿಂದಲೂ ಕಿರಿಯರಲ್ಲಿ ವಾತ್ಸಲ್ಯದಿಂದಲೂ ವರ್ತಿಸಿ - ಸಂಬಂಧಪಟ್ಟವರನ್ನೆಲ್ಲ ತಮ್ಮ ಆದರದ ಸವಿನುಡಿಗಳಿಂದ ಸಮಾಧಾನಪಡಿಸಿ ಶಾಂತವಾತಾವರಣವನ್ನು ಮತ್ತೆ ಕಲ್ಪಿಸುವ ಕೌಶಲ್ಯದಲ್ಲಿ ಅವರು ನಿಸ್ಸೀಮರಾಗಿರುವುದೂ, ಆ ಬಹುಮುಖಗಳಲ್ಲೊಂದು. ಅದಕ್ಕೆ ಉದಾಹರಣೆಗಳಾಗಿ ನಾನು ಕಂಡು ಸಂತಸಗೊಂಡಿರುವ ಸನ್ನಿವೇಶಗಳಲ್ಲೊಂದನ್ನು ಇಲ್ಲಿ ಸೂಚಿಸಬಹುದಾಗಿದೆ: ಅವರು

೧೯೨೯ನೆಯ ಸಂವತ್ಸರದಲ್ಲಿ ಬೆಳಗಾಂವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಒಂದು ಚರ್ಚಾ ವಿಷಯದ ಸಂಬಂಧವಾಗಿ ಭಿನ್ನಾಭಿಪ್ರಾಯವುಂಟಾಗಿ ಬಿಸಿಯೇರಿತು. ಹಲವು ಹಿರಿಯರಿಗೇ ತಮ್ಮ ತಮ್ಮಲ್ಲಿ ಪರಸ್ಪರವಾಗಿ ಅಸಮಾಧಾನ, ಕಿರಿಯರನೇಕರ ಬೆಂಬಲ, ವಾದ ಪ್ರತಿವಾದಗಳಲ್ಲಿ-ಎದುರು ಪಕ್ಷದವರ ವಾದವು ಸರಿಯಲ್ಲವೆಂಬುದನ್ನು ಪ್ರತಿಪಾದಿಸುವ ಉತ್ಸಾಹಭರದಲ್ಲಿ ಅನವಶ್ಯವಾಗಿ ಬಿರುನುಡಿಗಳ ಬಾಣ ಪ್ರಯೋಗ; ಎದುರು ಪಕ್ಷದವರ ಮೇಲೆ. ಆ ಬಗೆಯ ಕ್ಷುಬ್ಧ ಸನ್ನಿವೇಶದಲ್ಲಿ, ಅಧ್ಯಕ್ಷರು ಉಭಯ ಪಕ್ಷಗಳ ಪ್ರತಿನಿಧಿಗಳಲ್ಲಿ ಉದ್ರೇಕಗೊಂಡವರು ಆ ರೀತಿ ಅನವಶ್ಯವಾಗಿ ಎದುರು ಪಕ್ಷದವರನ್ನು ಬಿರುನುಡಿಗಳಿಂದ ಟೀಕಿಸದೆಯೇ ಉಳಿದ ಪ್ರತಿನಿಧಿಗಳಂತೆ ಶಾಂತರೀತಿಯಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಬಹುದಾಗಿದ್ದ ಸಂಗತಿಯನ್ನು ಸಾಂತ್ವನ ವಚನಗಳಿಂದ ತಿಳಿಸಿ, ಪರಿಸ್ಥಿತಿಯು ವಿಕೋಪಕ್ಕೆ ಹೋಗುತ್ತಿದ್ದುದನ್ನು ತಪ್ಪಿಸಿದ ಜಾಣ್ಮೆಯೂ ಅನುನಯವೂ ಶ್ಲಾಘನೀಯವೇ ಸರಿ. ಅಧ್ಯಕ್ಷರಿಗಿಂತ ವಯಸ್ಸಿನಲ್ಲಿ ಹಿರಿಯರಾಗಿದ್ದವರಲ್ಲೇ ಅನೇಕರು ಅವುಗಳನ್ನು ಶ್ಲಾಘಿಸಿದರು. ಒಳ್ಳೆಯ ಪರಿಣಾಮವೂ ಆಯಿತು, ಅಧ್ಯಕ್ಷರ ಸಾಂತ್ವನ ವಚನಗಳಿಂದ ಬಿರುನುಡಿಗಳಿಲ್ಲದೆಯೇ ಚರ್ಚೆಯು ಮುಂದೆ ಸಾಗಿತು. ಪರಸ್ಪರವಾಗಿ ಟೀಕೆಮಾಡಿದ ಪ್ರತಿನಿಧಿಗಳು ಮತಭೇದ ಮತಿಭೇದಗಳ ಪರಿಣಾಮವಾಗಿ ತಮತಮಗೆ ಸರಿತೋರಿದ್ದುದನ್ನು ಎತ್ತಿ ಹಿಡಿದು ಸಮರ್ಥಿಸುವ ಉದ್ದೇಶದಿಂದ ಹಾಗೆ ಬಿರುನುಡಿಗಳನ್ನಾಡಿ ಟೀಕೆ ಮಾಡಿದ್ದರೇ ಹೊರತು, ಯಾವ ಬಗೆಯ ವ್ಯಕ್ತಿವಿರೋಧವಾಗಲಿ, ಯಾವ ಬಗೆಯ ಸಣ್ಣತನವಾಗಲಿ ಅದಕ್ಕೆ ಕಾರಣವಾಗಿರಲಿಲ್ಲ. ಆದರೂ ಚರ್ಚೆ ಮುಗಿದ ಮೇಲೆ ಬಹುಮತ ದೊರೆಯದೆ ಹೋಗಿದ್ದ ಪಕ್ಷದವರ ಮನಸ್ಸು ಇನ್ನೂ ಸಮಾಧಾನ ಹೊಂದಿರಲಿಲ್ಲ. ಅಷ್ಟೇ ಅಲ್ಲ. ಒಟ್ಟಿನ ಮೇಲೆ, ಆಗಿನ ವಾತಾವರಣವೇ ಏನೋ ಒಂದು ಬಗೆಯಲ್ಲಿ ಬೇಸರ ತರುವಂತಿದ್ದ ವಾತಾವರಣ. ಆ ಬಗೆಯ ಪರಿಸ್ಥಿತಿಯಲ್ಲಿ, ಮುಂದಿನ ಕಾರ್ಯಕ್ರಮದಂತೆ ಎರಡು ಭಾಷಣಗಳು ನಡೆಯಬೇಕಾಗಿದ್ದುವು. ಮೊದಲನೆಯ ಭಾಷಣವೇ ನನ್ನಿಂದ ನಡೆಯಬೇಕೆಂದು ಗೊತ್ತಾಗಿದ್ದರೂ, ನಾನು ಅಧ್ಯಕ್ಷರ ಬಳಿಗೆ ಹೋಗಿ, ನಾನು ಭಾಷಣ ಮಾಡಬೇಕಾಗಿದ್ದುದನ್ನು ತಪ್ಪಿಸಿ ಉಪಕಾರಮಾಡಬೇಕೆಂದು ಅವರನ್ನು ಕಿವಿಮಾತಿನಲ್ಲಿ ಕೇಳಿಕೊಂಡೆ; ಆಗ ಸುಮಾರು ಏಳು ಗಂಟೆಯಾಗಿದ್ದ ಕಾರಣ, ಒಂದೇ ಭಾಷಣದಿಂದ ಅಂದಿನ ಕಾರ್ಯಕ್ರಮವು ಮುಕ್ತಾಯವಾಗುವಂತೆ ಮಾಡಬೇಕೆಂದೂ ಹೇಳಿಕೊಂಡೆ. ಅದಕ್ಕೆ ಅವರು ಸಮ್ಮತಿಸಲಿಲ್ಲ. ಅಷ್ಟೇ ಅಲ್ಲ, ಅವರು ಅಕ್ಕರೆಯಿಂದ ನನ್ನ ಬೆನ್ನು ಸವರಿ, ''ಕೂಡದು, ನಾನು ನಿಮ್ಮ ಭಾಷಣ ಅವರ ಭಾಷಣ - ಎರಡನ್ನೂ ಕೇಳಬೇಕು. ನಾನು ಅಧ್ಯಕ್ಷ; ನನಗಿಂತ ಕಿರಿಯರಾದ ನೀವು ನನ್ನ ಮಾತು ಮೀರಬಾರದು, ನಾನು ಈಗ ಹೇಳೋ ಮಾತಿನಂತೆ ನಡಸಬೇಕು. ನೀವು ಬೆಳಗ್ಗೆ ನನಗೆ ತಿಳಿಸಿದ 'ಕನ್ನಡಿಗರ ಸಾಧನೆಗಳು' ಎಂಬ ವಿಷಯದ ಮೇಲೆ ಭಾಷಣ ಮಡೋದು ಬೇಡ. ಸಭಿಕರನ್ನು ಚೆನ್ನಾಗಿ ನಗಿಸೋ ಅಂಥ ಯಾವುದಾದರೂ ವಿಷಯದ ಮೇಲೆ ಮಾತನಾಡಿ. ''ಈಗ ಅಂಥ ಭಾಷಣವೇ ಬೇಕು'' ಎಂದು ಪ್ರೀತಿಯಿಂದ ಹೇಳಿದರು. ನಾನು ಬೆಕ್ಕಸ ಬೆರಗಾದೆ. ಅವರ ಮಾತುಗಳಿಗೆ ಉತ್ತರವಾಗಿ, ''ತಾವು ಅಧ್ಯಕ್ಷರು ಮಾತ್ರವೇ ಅಲ್ಲ. ನನ್ನ ಅಣ್ಣನಂತೆ ಕೂಡ, ನಾನು ತಮ್ಮ ಮಾತು ಮೀರೋದಿಲ್ಲ. ಆದರೆ ನಾನು ಸಿದ್ಧತೆ ಮಾಡಿಕೊಂಡಿರೋ ವಿಷಯಬಿಟ್ಟು,

ಯೋಚನೆಗಾಗಲಿ ಅವಕಾಶವಿಲ್ಲದೇ ಇರೋ ಈಗಿನ ಸ್ಥಿತಿ ಯಲ್ಲಿ ಹೊಸ ವಿಷಯ ಈಗಲೇ ಆರಿಸಿಕೊಂಡ್ರೂಹ್ಯಾಗೆ ಮಾತಾನಾಡಲಿ?'' ಎಂದು ಹೇಳಿದೆ ನಾನು. ಅವರು ನಸುನಕ್ಕು ಮತ್ತೊಮ್ಮೆ ನನ್ನ ಬೆನ್ನು ಸವರಿ, ''ನಿಮಗೆ ಸಿದ್ಧತೆ ಬೇಕೆ ? ಖಂಡಿತ ಬೇಡ. ನಾನು ಅದನ್ನು ನಂಬೋದಿಲ್ಲ. ಜನರನ್ನ ನಗಿಸೋ ಅಂಥ ಭಾಷಣ ಮಾಡಿದರೆ ಸರಿ. ಹಾಸ್ಯರಸ ಕುರಿತು ಮಾತಾಡಿ, ಸಂಸ್ಕೃತ ನಾಟಕಗಳ ವಿದೂಷಕರ ಉತ್ತಮ ಹಾಸ್ಯ ಉದಾಹರಿಸಿ'' ಎಂದರು. ನಾನು ಅಪ್ರತಿಭನಾಗಿ, ''ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಕನ್ನಡಿಗರ ಸಾಧನೆಗಳು' ಎಂಬ ವಿಷಯ ಕೈ ಬಿಟ್ಟು ಸಂಸ್ಕೃತ ನಾಟಕಗಳಿಗೆ ಸಂಬಂಧಪಟ್ಟ ವಿಷಯದ ಮೇಲೆ ಭಾಷಣ ಮಾಡೋದು ಅನುಚಿತವಲ್ಲವೆ?'' ಎಂದು ಕೇಳಿದಾಗ ಅವರು ನಗುತ್ತ, ''ಕನ್ನಡಕ್ಕೂ ಸಂಸ್ಕೃತಕ್ಕೂ ಸಂಬಂಧವಿಲ್ಲವೇನು, ಹಾಗಾದರೆ? ಸಾಹಿತ್ಯ ಸಮ್ಮೇಳನ, ಸಾಧನೆಗಳು, ನಾಟಕ, ಸಂಬಂಧ, ವಿಷಯ, ಭಾಷಣ - ಈ ಮಾತುಗಳು ಕನ್ನಡದ ಮಾತುಗಳೇನು? ನೀವೇ ಈ ಮಾತುಗಳನ್ನು ಈಗ ಬಳಸಲಿಲ್ಲವೆ? ನಾನು ಹೇಳಿದಂತೆ ಹಾಸ್ಯರಸ ಕುರಿತು ಮಾತನಾಡಿ,'' ಎಂದವರೇ ಸಭಿಕರನ್ನು ಕುರಿತು ನನ್ನ ವಿಷಯವಾಗಿ-ನಾನು ಎಂದೂ ಮರೆಯಲಾರದಷ್ಟು-ಒಳ್ಳೆಯ ಮಾತುಗಳನ್ನಾಡಿ, ಭಾಷಣದ ವಿಷಯವನ್ನೂ ತಿಳಿಸಿದರು. ನನ್ನ ಭಾಷಣ ಸಾಮರ್ಥ್ಯವನ್ನು ಕುರಿತು ಅಧ್ಯಕ್ಷರು ಹೇಳಿದ ಮೆಚ್ಚಿಕೆಯ ಮಾತುಗಳಿಗಾಗಿ ನನ್ನ ಕೃತಜ್ಞತೆಯ ವಂದನೆಗಳನ್ನು ಸೂಚಿಸಿದ ಬಳಿಕ, ''ಮಾನ್ಯ ಅಧ್ಯಕ್ಷರು ಹೇಳಿದಂತೆ ನಾನು ಹಾಸ್ಯರಸವನ್ನು ಕುರಿತು ಮಾತನಾಡುವವನಿದ್ದೇನೆ. ನಾನಾ ರಸಗಳ ವಿಚಾರವನ್ನಾಗಲಿ, ಅವುಗಳ ಸ್ಥಾಯೀ ಭಾವಗಳೇ ಮುಂತಾದವುಗಳ ವಿಚಾರವನ್ನಾಗಲಿ ವಿವರಿಸದೆ ಹಾಸ್ಯರಸದ ವಿಚಾರವನ್ನಷ್ಟೇ ತಿಳಿಸಿ, ಭಾಸ ಕಾಳಿದಾಸ ಮಹಾಕವಿಗಳ ಕೃತಿಗಳಲ್ಲಿಯ ವಿದೂಷಕವಾಣಿಗಳಲ್ಲಿ ವಿಶೇಷವಾಗಿ ನಗಿಸಿ ನಲಿಸುವಂತಿರುವ ವಾಣಿಗಳನ್ನು ಮಾತ್ರವೇ ಉದಾಹರಿಸಿ ವಿವರಿಸುತ್ತೇನೆ'' ಎಂದು ಹೇಳಿ ದೊಡನೆಯೇ ವೃದ್ಧರೊಬ್ಬರು ''ಸದ್ಯ ಬದುಕಿದ್ವಿ'' ಎಂದು ಗಟ್ಟಿಯಾಗಿಯೇ ಹೇಳಿದರು. ಸಭಿಕರಲ್ಲಿ ಅನೇಕರು ಅದನ್ನು ಅನುಮೋದಿಸಿದಂತೆ ಚಪ್ಪಾಳೆ ತಟ್ಟಿದರು. ಅಧ್ಯಕ್ಷರೂ ನಗುತ್ತ, ನನ್ನ ಕಡೆಗೆ ನೋಡಿದರು. ಆ ನೋಟದಲ್ಲಿ ''ನಾನು ಗೆದ್ದೆ, ನೀನು ಸೋತೆ'' ಎಂಬ ಭಾವವೇ ತುಂಬಿದ್ದಂತೆ ತೋರಿ ನನ್ನ ಮನಸ್ಸಿಗೂ ಹರ್ಷವಾಯಿತು. ಅವರ ಇಂಗಿತಜ್ಞತೆಯ ವೈಶಿಷ್ಟ್ಯವನ್ನೂ ಸಭಿಕರ ಮನೋಧರ್ಮದ ನಾಡಿಯನ್ನೇ ಹಿಡಿದು ನುಡಿದಂತಿದ್ದ ಅವರ ಸಾಮರ್ಥ್ಯವೂ ನನಗೆ ಮನದಟ್ಟಾದುವು. ಅಲ್ಲದೆ, ಅವರು ಇಂಗಿತಜ್ಞತೆಯಿಂದ ನನಗೆ ಹೇಳಿದ ಸಲಹೆಯಿಂದ ನನಗೆ ಮಹೋಪಕಾರವಾಯಿತು. ಏಕೆಂದರೆ, ನಾನು ಭಾಷಣವನ್ನು ಮುಂದುವರಿಸಿ ವಿದೂಷಕ ವಾಣಿಗಳನ್ನು ಉದಾಹರಿಸಿ ವಿವರಿಸಿದಾಗ, ಸಭಿಕರ ನಗೆಯ ಹೊನಲೇ ಹರಿಯಿತು. ಅವರಲ್ಲಿ ಹಲವರಿಗಾಗಿದ್ದ ಬೇಸರವೆಲ್ಲ ಪರಿಹಾರವಾಗಿ ಅವರ ಮುಖಗಳು ಹರ್ಷದಿಂದ ಬೆಳಗಿದುವು. ಸಮಾರೋಪದ ಮಾತುಗಳಲ್ಲಿ ಅಧ್ಯಕ್ಷರೂ, ಅನಂತರ (ನನ್ನ ವಿದ್ಯಾ ಗುರುಗಳು) ರಾಜ ಸೇವಾಸಕ್ತ ಶ್ರೀ ಬೆಳ್ಳಾವೆ ವೆಂಕಟನಾರಣಪ್ಪನವರೂ, ಪ್ರಸಿದ್ಧ ವಾಗ್ಮಿಗಳೂ ದೇಶಾಭಿಮಾನಿಗಳೂ ಆಗಿದ್ದ ಶ್ರೀ ಮುದವೀಡು ಕೃಷ್ಣರಾಯರೇ ಮುಂತಾದ ಹಿರಿಯರೂ, ನನ್ನ ಭಾಷಣವನ್ನು ಕುರಿತು ಆಡಿದ ಮೆಚ್ಚಿಕೆಯ ಮಾತುಗಳಿಂದ ಮತ್ತು ನಗೆಯ ಮೋಡಿಯಿಂದ ಬೇಸರವೆಲ್ಲ ಪರಿಹಾರವಾಗಿ ಹೊಸ ಹುರುಪುಂಟಾಯಿತೆಂದು ಸೂಚಿಸುದುದರಿಂದ ನನಗಾದ ಸಂತೋಷ ಅಷ್ಟಿಷ್ಟಲ್ಲ. ನಾನು ಬೇರೆ ವಿಷಯದ ಮೇಲೆ ಮಾತನಾಡ ಬೇಕೆಂದಿದ್ದನ್ನು ತಪ್ಪಿಸಿ ಹಾಸ್ಯರಸವನ್ನು ಕುರಿತು ಮಾತುನಾಡಬೇಕೆಂದು

ಅಧ್ಯಕ್ಷರೇ ಹೇಳಿದ್ದುದನ್ನು ನಾನು ಅವರಿಗೆ ತಿಳಿಸಿದೆ. ಅವರೆಲ್ಲರೂ ಅಧ್ಯಕ್ಷರ ಇಂಗಿತಜ್ಞತೆಯನ್ನು ಸಮಯ ಸ್ಫೂರ್ತಿಯನ್ನೂ ಶ್ಲಾಘಿಸಿದಾಗ, ನನಗೆ ರೆಕ್ಕೆಗಳು ಮೂಡಿದಂತಾಯಿತು. ಶ್ರೀ ಮುದವೀಡು ಕೃಷ್ಣರಾಯರಂತೂ ''ಭಲೋ ಸಲಹೆ, ಭಲೋ ಭಾಷಣ! ನೀವು ಬೇರೆ ವಿಷಯ ಮಾತಾಡಿದ್ದರೆ, ಅಥವಾ ರಸಗಳ ಸ್ಥಾಯಿ ಭಾವಗಳ ಭಾರ ಹೇರಿದ್ದರೆ ಬಹಳ ಜನ ಬೇಸರದಿಂದ ಎದ್ದೇ ಹೋಗ್ತಿದ್ರು'' ಎಂದರು, ಎಲ್ಲರೂ ನಕ್ಕೆವು.

ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರವರು ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಪ್ರಥಮಸ್ಥಾನವನ್ನು ಪಡೆದು ತೇರ್ಗಡೆ ಹೊಂದಿ ಸರ್ಕಾರದ ಹುದ್ದೆಗೆ ನೇಮಕವಾದುದಕ್ಕೆ ಮುಂಚಿನಿಂದಲೂ ಆ ಬಳಿಕವೂ ಅನೇಕ ಶ್ರೇಷ್ಠ ಗ್ರಂಥಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಸೇವೆಯನ್ನು ಸಲ್ಲಿಸಿದ್ದಾರೆ. ಇಂಗ್ಲಿಷ್ ಭಾಷೆಯನ್ನು ಕಲಿತು ಪ್ರೌಢ ವ್ಯಾಸಂಗ ಮಾಡಿದ ಕನ್ನಡಿಗರಲ್ಲಿ ಮತ್ತು ಸರ್ಕಾರದ ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದ ಕನ್ನಡಿಗರಲ್ಲಿ ಮುಕ್ಕಾಲು ಪಾಲಿನಷ್ಟು ಜನರಿಗೆ ಕನ್ನಡದಲ್ಲಿ ಅಭಿಮಾನವಿಲ್ಲದಿದ್ದ ಕಾಲದಲ್ಲಿ ಕನ್ನಡದ ಮೇಲೆ ಅಭಿಮಾನ ತೋರಿ ಕನ್ನಡದಲ್ಲಿ ಗ್ರಂಥ ರಚನೆ ಮಾಡಿ ತಮಗಿಂತ ಕಿರಿಯರಿಗೆ ಮಾರ್ಗದರ್ಶನ ಮಾಡಿದ ಕೆಲವೇ ಮಂದಿ ಮಹನೀಯರಲ್ಲಿ ಅವರೂ ಒಬ್ಬರು; ಕನ್ನಡದಲ್ಲಿ ಮಾತನಾಡುವುದೇ ತಮ್ಮ ಗೌರವಕ್ಕೆ ಹಾನಿಯೆಂದು ವಿದ್ಯಾವಂತರಾದ ಕನ್ನಡಿಗರಲ್ಲೇ ಬಹುಮಂದಿಗಳು ಭಾವಿಸಿದ್ದ ಕಾಲದಲ್ಲಿ ಆ ರೀತಿ ಭಾಷಾಭಿಮಾನತೋರಿ, ಸರ್ಕಾರದ ಭಾರಿಭಾರಿ ಹುದ್ದೆಗಳಗೇರಿದಾಗಲೂ ಕನ್ನಡದಲ್ಲಿ ಮಾತನಾಡುವುದೂ ಕನ್ನಡದಲ್ಲಿ ಗ್ರಂಥರಚನೆ ಮಾಡುವುದೂ ಹೆಮ್ಮೆಯ ವಿಷಯಗಳೆಂದು ಭಾವಿಸಿ ಅದಕ್ಕನುಗುಣವಾಗಿ ವರ್ತಿಸಿದುದೂ ಅವರ ವೈಶಿಷ್ಟ್ಯಗಳಲ್ಲೊಂದು. ಇದು ಕೇವಲ ಉಪಚಾರಕ್ಕಾಗಿ ಹೇಳಿರುವ ಹೊಗಳಿಕೆಯ ಮಾತಲ್ಲ; ಕನ್ನಡದ ಮೇಲೆ ಪ್ರೀತಿ ತೋರಿದವರನ್ನು ಕಂಡರೆ, ಆಂಗ್ಲಭಾಷಾಪರಿಣತರಲ್ಲಿ ಅನೇಕರಿಗಿದ್ದ ತಿರಸ್ಕಾರ ಭಾವನೆಯ ತೆಗಳಿಕೆಯ ಮಾತುಗಳ ಕಹಿಯನ್ನು (ವಿದ್ಯಾರ್ಥಿ ದಿಶೆಯಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘಕ್ಕೆ ಸೇವೆ ಸಲ್ಲಿಸುತ್ತಿದ್ದ ಕಾಲದಿಂದಲೂ) ಅನುಭವಿಸಿರುವ ನಾನು ಅವರಿಗೆ ನ್ಯಾಯವಾಗಿ ಸಲ್ಲಲೇಬೇಕಾಗಿರುವ ಶ್ಲಾಘನೆಯ ಕಾಣಿಕೆಯಾಗಿ ಹೇಳಿರುವ ಮಾತು. ಮುಂಬಯಿ ನಗರದಲ್ಲಿ ನಾನು ವ್ಯಾಸಂಗಮಾಡುತ್ತಿದ್ದಾಗ ಅಲ್ಲಿಯ ಹೈಕೋರ್ಟಿನ ನ್ಯಾಯಮೂರ್ತಿಗಳು ತಮ್ಮ ನ್ಯಾಯಪೀಠದಲ್ಲಿ ಕುಳಿತಿದ್ದಾಗ ಮಾತ್ರವೇ ಇಂಗ್ಲಿಷ್ ಭಾಷೆಯಲ್ಲಿ ಮಾತನಾಡುತ್ತಿದ್ದು, ಅದರಿಂದ ಕೆಳಕ್ಕಿಳಿದ ಮರುಕ್ಷಣದಲ್ಲೇ ಸ್ವಭಾಷಾ ಪ್ರೇಮದಿಂದ ಮರಾಠಿ ಭಾಷೆಯಲ್ಲಿ ಮಾತನಾಡುತ್ತಿದ್ದುದನ್ನು ಕಂಡು ಹರ್ಷಿಸಿ, ದೊಡ್ಡ ಹುದ್ದೆಗಳ ಕನ್ನಡಿಗರು ಹಾಗೆ ಕನ್ನಡದಲ್ಲಿ ಮಾತನಾಡುವುದನ್ನು ನೋಡ ಬಯಸಿದವನು ನಾನು. ಆದುದರಿಂದ, ಕನ್ನಡದಲ್ಲಿ ಮಾತನಾಡುತ್ತಿದ್ದುದರ ಜೊತೆಗೆ ಕನ್ನಡದಲ್ಲಿ ಶ್ರೇಷ್ಠ ಗ್ರಂಥಗಳನ್ನು ರಚಿಸಿ ಪ್ರಸಿದ್ಧರಾಗಿದ್ದ ದೊಡ್ಡ ಹುದ್ದೆಯವರನ್ನು ಕಂಡಾಗ ನನಗೆ ಅಮಿತವಾದ ಸಂತೋಷವುಂಟಾದುದು ಸಹಜವೇ ತಾನೆ! ಸಾಹಿತ್ಯ ಕ್ಷೇತ್ರದಲ್ಲಿ ಖ್ಯಾತಿಯು ವೃದ್ಧಿಯಾಗಿ ಸರ್ಕಾರದ ಭಾರಿ ಭಾರಿ ಹುದ್ದೆಗಳಿಗೇರಿ ಸರ್ಕಾರಿ ಶಾಖೆಯ ಮುಖ್ಯಾಧಿಕಾರ ಪದವಿಯಲ್ಲಿದ್ದಾಗಲೂ- ಅದಕ್ಕೆ ಮೊದಲೂ- ನಿಗರ್ವಿಗಳಾಗಿ ಎಲ್ಲರೊಡನೆಯೂ ಸೌಜನ್ಯ ಸರಳತೆಗಳಿಂದ ವರ್ತಿಸುತ್ತಿದ್ದುದು ಡಾಕ್ಟರ್ ಮಾಸ್ತಿವೆಂಕಟೇಶ ಅಯ್ಯಂಗಾರ್ಯರವರ ಮತ್ತೊಂದು ವೈಶಿಷ್ಟ್ಯ, ಅಂದಿನಿಂದ ಇಂದಿನವರೆಗೂ ಒಂದೇ ಸಮಾವಾಗಿರುವುದು ದೊಡ್ಡ

ವೈಶಿಷ್ಟ್ಯ. ನನ್ನ ಭಾವನೆಯಲ್ಲಿ ಈ ವಿಶೇಷ ಗುಣವು ಬಹಳ ದೊಡ್ಡದು. ಶ್ರೀಮಂತರಲ್ಲಾಗಲೀ ದೊಡ್ಡ ಅಧಿಕಾರದಲ್ಲಿರುವವರಲ್ಲಾಗಲೀ ಈ ದೊಡ್ಡ ಗುಣ ಇರುವವರ ಸಂಖ್ಯೆಯೇ ತೀರ ಕಡಮೆ. ಶ್ರೀಮಾನ್ ಮಾಸ್ತಿವೆಂಕಟೇಶ ಅಯ್ಯಂಗಾರ್ಯರವರ ಪ್ರೀತಿ ವಾತ್ಸಲ್ಯಗಳ ಸುಯೋಗವನ್ನು ಪಡೆದಿರುವವರೆಲ್ಲರೂ ಅವರ ಸೌಜನ್ಯ ಸರಳತೆಗಳೂ ಅವರ ಉದಾತ್ತಭಾವನೆಗಳೂ ಎಷ್ಟೆಂಬುದನ್ನು ಚೆನ್ನಾಗಿ ಬಲ್ಲರಾದುದರಿಂದ ಅವುಗಳನ್ನು ವಿವರಿಸಬೇಕಾದ ಅಗತ್ಯವೇ ಇಲ್ಲ; ಅವುಗಳಿಂದ ಕಿರಿಯರು ಪ್ರಭಾವಿತರಾಗಿರುವುದನ್ನು ಸೂಚಿಸಬೇಕಾದ ಅಗತ್ಯವೂ ಇಲ್ಲ. ಶ್ರೀಮಾನ್ ವೆಂಕಟೇಶ ಅಯ್ಯಂಗಾರ್ಯರವರ ಮತ್ತೊಂದು ವೈಶಿಷ್ಟ್ಯವೆಂದರೆ, ಅವರು ಮೋಟಾರುಕಾರಿನಲ್ಲಿ ಹೋಗುತ್ತಿದ್ದಾಗ ನಡೆದು ಹೋಗುತ್ತಿದ್ದ ತಮ್ಮ ಪರಿಚಯಸ್ಥರನ್ನು ಕಂಡ ಕೂಡಲೆ ಮೋಟಾರು ಕಾರನ್ನು ನಿಲ್ಲಿಸಿ ಅವರನ್ನು (ಮೋಟಾರು ಕಾರಿನಲ್ಲಿ) ತಮ್ಮೊಡನೆ ಕುಳ್ಳಿರಿಸಿಕೊಂಡು, ಅವರೊಡನೆ ಆದರದಿಂದ ಮಾತನಾಡುತ್ತ ಅವರು ಹೋಗಬೇಕಾಗಿದ್ದೆಡೆಯಲ್ಲಿಳಿಸಿ ಅವರನ್ನು ನಗೆ ಮುಖದಿಂದ ಬೀಳ್ಕೊಂಡು ಹೋಗುತ್ತಿದ್ದ ಸೌಜನ್ಯ. ಆಗಾಗ ಹೀಗೆ ಉಪಕೃತರಾಗುತ್ತಿದ್ದವರಲ್ಲಿ ಅವರೊಡನೆ ಸಂಭಾಷಿಸಿದ ರಸದೂಟದ ಸೌಖ್ಯವನ್ನನುಭವಿಸಿದವರಲ್ಲಿ-ನಾನೂ ಒಬ್ಬನೆಂದು ಹೇಳಿಕೊಳ್ಳಲು ನನ್ನ ಮನಸ್ಸಿಗೆ ಅತ್ಯಂತ ಸಂತೋಷವಾಗುತ್ತದೆ; ಆ ಸವಿ ನೆನಪೆಂದಿಗೂ ಮಾಸದು. ಹಾಗೆ ಅವರಿಂದ ಉಪಕೃತವಾಗಿ ಹರ್ಷಿಸಿದ ಪ್ರತಿಯೊಂದು ಸಲವೂ ನಾನು, ''ಭಗವಂತ! ನಿನ್ನ ಕೃಪೆಯಿಂದ ನಾನೆಂದಾದರೂ ಕಾರನ್ನು ಕೊಂಡುಕೊಳ್ಳೋಕೇನಾದ್ರೂ ಸಾಧ್ಯವಾದರೆ, ಅಣ್ಣ ಮಾಸ್ತಿಯವರ ಮೇಲ್ಪಂಕ್ತಿ ಅನುಸರಿಸೋ ಹಾಗೆ ಒಳ್ಳೇ ಬುದ್ಧಿ ಕೊಡಪ್ಪಾ'' ಎಂದು ನನ್ನ ಮನಸ್ಸಿನಲ್ಲೇ ಹೇಳಿಕೊಳ್ಳುತ್ತಿದ್ದುದೂ ಉಂಟು; ಕಾರನ್ನಿಡುವುದೆಂದಿಗೂ ನನಗೆ ಶಕ್ಯವಾಗಲಾರದೆಂದು ಮರುಕ್ಷಣವೇ ನನಗೆ ತೋರಿ ಲಜ್ಜೆಯಾಗುತ್ತಿದ್ದುದೂ ಉಂಟು; ಮುಂದೆ ಅನೇಕ ವರ್ಷಗಳ ಮೇಲೆ ದೇವರ ಕೃಪೆಯಿಂದ ಮೋಟಾರು ಕಾರನ್ನು ಕೊಂಡಾಗ ಅವರ ದೊಡ್ಡ ಮೇಲ್ಪಂಕ್ತಿಯನ್ನು ಅನುಸರಿಸಿ ಸಂತೋಷ ತೃಪ್ತಿಗಳನ್ನು ಪಡೆದುದ್ದೂ ಉಂಟು. ಒಂದು ಒಳ್ಳೆಯ ಕೆಲಸದ ನಿಮಿತ್ತವಾಗಿ, ಹಿರಿಯರಾದ ಡಾಕ್ಟರ್ ಸಿ.ಬಿ. ಶೇಷಗಿರಿರಾಯರು ಮಿತ್ರರುಗಳಾದ ಶ್ರೀ ಎಸ್.ಜಿ. ಶಾಸ್ತ್ರಿಯವರು, ಶ್ರೀ ಪಿ.ಎಚ್. ಕೃಷ್ಣರಾಯರವರೇ ಮುಂತಾದವರು ಮತ್ತು ನಾನು ಅವರೊಡನೆ ಒಟ್ಟುಗೂಡಿ, ಪ್ರತಿತಿಂಗಳೂ ಯಥಾಶಕ್ತಿಯಾಗಿ ಚಂದಾಹಣವನ್ನು ನಮ್ಮಲ್ಲಿ ಪ್ರತಿಯೊಬ್ಬರೂ ಅವರ ವಶಕ್ಕೆ ಸಲ್ಲಿಸುವ ಮೂಲಕವೂ, ಅವರೂ ಪ್ರತಿ ತಿಂಗಳೂ ಸೇರಿಸಿದ ತಮ್ಮ ಸ್ವಂತ ಚಂದಾ ಹಣದ ಮೂಲಕವೂ ಒಂದು ಸಣ್ಣ ನಿಧಿಯನ್ನು ಶೇಖರಿಸಿ ವಿನಿಯೋಗಿಸಿದ ಪ್ರಸಂಗವನ್ನೂ ಇಲ್ಲಿ ಸಂತೋಷದಿಂದ ಸೂಚಿಸುತ್ತೇನೆ. ಚಂದಾ ಹಣಗಳ ಮೂಲಕ ಪ್ರತಿ ತಿಂಗಳೂ ಸಂಗ್ರಹವಾಗುತ್ತಿದ್ದ ಮೊಬಲಗುಗಳು ಶ್ರೀಮಾನ್ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ಯರವರ ವಶದಲ್ಲಿರಬೇಕೆಂದು - ಅವರನ್ನೊಪ್ಪಿಸಿ -ನಾವೆಲ್ಲರೂ ಸೇರಿ ಗೊತ್ತು ಮಾಡಿಕೊಂಡಿದ್ದ ಕಟ್ಟುಪಾಡು. ಆಗಿನ ಸಮಯದಲ್ಲಿ ಕನ್ನಡ ಪುಸ್ತಕಗಳನ್ನು ಪ್ರಕಟಿಸುತ್ತಿದ್ದ ಪ್ರಕಾಶಕರ ಸಂಖ್ಯೆಯೇ ತೀರ ಕಡಮೆ. ಆದುದರಿಂದ, ಗ್ರಂಥಕರ್ತರೇ ತಮ್ಮ ತಮ್ಮ ಗ್ರಂಥಗಳನ್ನು ಸ್ವಂತ ವೆಚ್ಚದಲ್ಲಿ ಮುದ್ರಣ ಮಾಡಿಸಿ ಮುದ್ರಣವಾದ ಪ್ರತಿಗಳನ್ನು ಮಾರಾಟಕ್ಕಾಗಿ ಪುಸ್ತಕ ವ್ಯಾಪಾರಿಗಳಲ್ಲಿಟ್ಟು ಮಾರಾಟವಾದ ಪ್ರತಿಗಳ ಬೆಲೆಗಳ ಒಟ್ಟು ಮೊಬಲಗಿನ ಮೇಲೆ ಶೇಕಡ ಇಪ್ಪತ್ತೈದರಿಂದ ಮೂವತ್ತುಮೂರರವರೆಗೆ ಸೋಡಿಯನ್ನು

(ಕಮೀಷನ್) ಕೊಡುವುದಕ್ಕೇ ಒಪ್ಪಿಕೊಳ್ಳಬೇಕಾಗಿದ್ದ ಕಾಲವದು. ಹಾಗೆ ಮಾಡಲು ತಕ್ಕಷ್ಟು ಹಣದ ಅನುಕೂಲವಿಲ್ಲದವರು ಶ್ರೇಷ್ಠ ಗ್ರಂಥಗಳನ್ನು ಬರೆದರೂ ಅವು ಮುದ್ರಣವಾಗುವಂತಿರಲಿಲ್ಲ. ಅದೊಂದು ದೊಡ್ಡ ಕೊರತೆ. ಆ ಬಗೆಯ ಗ್ರಂಥಗಳು ಮುದ್ರಣವಾಗುವ ಸೌಕರ್ಯವನ್ನು ನಮ್ಮಿಂದ ಶಕ್ಯವಿದ್ದಷ್ಟುಮಟ್ಟಿಗೆ ಒದಗಿಸುವ ಮೂಲಕ ಆ ಗ್ರಂಥಕರ್ತರಿಗೆ ನೆರವಾಗಬೇಕೆಂದ ನಾವು ನಿಧಿಯನ್ನು ಸಂಗ್ರಹಿಸಿದ ಉದ್ದೇಶ. ಮುದ್ರಣಕ್ಕಾಗಿ ಆಯ್ಕೆಯಾದ ಹಸ್ತಲಿಖಿತ ಪ್ರತಿಯನ್ನು ಉತ್ತಮ ರೀತಿಯಲ್ಲಿ ಹಸನಾದ ಕಾಗದದ ಮೇಲೆ ಅಚ್ಚು ಹಾಕಿಸಿ ಅಂದವಾಗಿ ರಟ್ಟು ಹಾಕಿಸಿದ ಒಂದು ಸಾವಿರ ಪ್ರತಿಗಳು ಮಾತ್ರವೇ ಸಿದ್ಧವಾಗಬೇಕು, ಅಂದರೆ ವೆಚ್ಚವನ್ನು ನಮ್ಮ ಪುಟ್ಟ ನಿಧಿಯ ಹಣದಿಂದ ವಹಿಸಬೇಕು, ಹಾಗೆ ಸಿದ್ಧವಾದ ಸಾವಿರ ಪ್ರತಿಗಳನ್ನೂ ಸಂಬಂಧಪಟ್ಟ ಗ್ರಂಥಕರ್ತರಿಗೆ, ಅವರ ಮೇಲೆ ಹಣದ ಭಾರವೇನೂ ಬೀಳದಂತೆ, ಉಚಿತವಾಗಿ ಕೊಡಬೇಕು - ಎಂಬಿವು ನಾವು ಅನುಸರಿಸಿದ ನಿಯಮಗಳು. ಅದಕ್ಕನುಸಾರವಾಗಿ ಅನೇಕ ಪುಸ್ತಕಗಳು ಪ್ರಕಟವಾದುವು. ಶ್ರೀಮಾನ್ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ಯರವರು ಸರ್ಕಾರದ ದೊಡ್ಡ ಹುದ್ದೆಯ ಸಂಬಂಧವಾದ ತಮ್ಮ ಕೆಲಸದ ಜೊತೆಗೆ ನಿಧಿಸಂಬಂಧವಾದ ಕಾರ್ಯಕಲಾಪಗಳನ್ನೂ ಸಂತೋಷವಾಗಿ ವಹಿಸಿಕೊಂಡು ಎಲ್ಲರ ಮನಸ್ಸಿಗೂ ಸಂಪೂರ್ಣವಾಗಿ ಸಮರ್ಪಕವಾಗಿರುವಂತೆ ವಿಚಕ್ಷಣೆಯಿಂದ ನಿರ್ವಹಿಸಿದರು. ಬೇರೆ ಬೇರೆ ಸ್ವಭಾವಗಳುಳ್ಳ ಜನರೊಡನೆ ಪ್ರೀತಿವಿಶ್ವಾಸಗಳಿಂದಲೂ ಸೌಜನ್ಯದಿಂದಲೂ ಹೊಂದಿಕೊಂಡು ಉತ್ಸಾಹ ಸಂತೋಷಗಳಿಂದ ಹಾಗೆ ಶ್ರಮಿಸುದ್ದುದು ಅವರ ಮಹತ್ತರ ವೈವಿಷ್ಟ್ಯವೆಂದು ಹೇಳಿ - ವಯಸ್ಸಿನಲ್ಲಿ ಅವರಿಗಿಂತ ಹಿರಿಯರೂ ಮದರಾಸಿನಲ್ಲಿ 'ಸಿವಿಲ್ ಸರ್ಜನ್' ಹುದ್ದೆಯಲ್ಲಿದ್ದು ವಿಶ್ರಾಂತರಾದ ಮೇಲೆ ಬೆಂಗಳೂರಿನಲ್ಲಿ ನೆಲಸಿದ್ದ ಕನ್ನಡಿಗರೂ ಆಗಿದ್ದ - ಡಾಕ್ಟರ್ ಸಿ.ಬಿ. ರಾಮರಾಯರವರು ಅವರ ವಿಚಾರವಾಗಿ ತಮ್ಮ ಮೆಚ್ಚಿಕೆಯನ್ನು ಸೂಚಿಸಿದ್ದರು. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಕೆಲಸ ಮಾಡಿದಾಗಲೂ, ''ಜೀವನ''ವೆಂಬ ಹೆಸರಿನ ಮಾಸಪತ್ರಿಕೆಯ ಸಂಪಾದಕರಾಗಿ ಕೆಲಸ ಮಾಡಿದಾಗಲೂ ತಮ್ಮ ''ಮಹತ್ತರ ವೈಶಿಷ್ಟ್ಯ''ದ ಪರಿಣಾಮವಾಗಿ ಉತ್ಸಾಹ ಸಂತೋಷಗಳಿಂದಲೂ, ದಕ್ಷತೆ ವಿಚಕ್ಷಣೆಗಳಿಂದಲೂ ಶ್ರಮಿಸಿ ಕನ್ನಡ ನಾಡು ನುಡಿಗಳಿಗೆ ಅಮೋಘ ಸೇವೆಯನ್ನು ಸಲ್ಲಿಸಿದರು. ಮುಂದೆ ಯಥಾ ಕಾಲದಲ್ಲಿ ಅವರಿಗೆ ''ರಾಜಾಸೇವಾ ಪ್ರಸಕ್ತ'' ಎಂಬ ಬಿರುದು ಶ್ರೀಮನ್ಮಹಾರಾಜರವರಿಂದ ಲಭಿಸಿತು. ಅವರು ತಮ್ಮ ಮಾಸಪತ್ರಿಕೆಯಲ್ಲಿಯ ಸಂಪಾದಕೀಯ ಲೇಖನಗಳಲ್ಲಿ ಮತ್ತು ತಮ್ಮ ಭಾಷಣಗಳಲ್ಲಿ, ಕನ್ನಡ ನಾಡಿನ ಏಕೀಕರಣ ನಡೆಯಬೇಕಾಗಿದ್ದ ವಿಚಾರವನ್ನೂ ಕನ್ನಡಕ್ಕೆ ಲಭಿಸಬೇಕಾದ ಸ್ಥಾನಮಾನಗಳ ವಿಚಾರವನ್ನೂ ಕುರಿತು ಹೃದಯಂಗಮವಾಗಿ ಚರ್ಚಿಸಿ ತಮ್ಮ ದೇಶಾಭಿಮಾನವನ್ನೂ ಭಾಷಾಭಿಮಾನವನ್ನೂ ವ್ಯಕ್ತಗೊಳಿಸಿದರು. ಆದರಿಂದ ಅವರ ಜನ ಪ್ರಿಯತೆಯು ವೃದ್ಧಿಯಾಯಿತು. ಈಚೆಗೆ, ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಸನ್ಮಾನ ಲಭಿಸಿದ ಸಂತೋಷದ ಸಂಗತಿಯನ್ನೂ ಇಲ್ಲಿ ಸೂಚಿಸಬಹುದಾಗಿದೆ. ಕನ್ನಡಿಗರ ಬಹುಕಾಲದ ಹೊಂಗನಸಾಗಿದ್ದ ಕನ್ನಡ ನಾಡಿನ ಏಕೀಕರಣವು ೧೯೫೬ನೆಯ ಸಂವತ್ಸರದಲ್ಲಿ ಬಹುಮಟ್ಟಿಗೆ ನನಸಾದುದು ನಿಜವಾದರೂ, ಅದು ಇನ್ನೂ ಅಪೂರ್ಣವಾರುವುದಕ್ಕಾಗಿ ಮತ್ತು ನಮ್ಮ ಕನ್ನಡ ರಾಜ್ಯದಲ್ಲಿ ಕನ್ನಡಕ್ಕೆ ಸಲ್ಲಬೇಕಾದ ಸ್ಥಾನಮಾನಗಳು ಇನ್ನೂ

ಲಭಿಸಿಲ್ಲದಿರುವುದಕ್ಕಾಗಿ, ಇತರ ಅನೇಕರಿಗಿರುವಂತೆಯೇ ಅವರಿಗೂ ಆತಂಕವಿದ್ದೇ ಇದೆ. ಈಗಲೂ ಅವರು ಕನ್ನಡ ನಾಡು ನುಡಿಗಳ ಪುರೋಭಿವೃದ್ಧಿಗಾಗಿ ತಮ್ಮಿಂದ ಶಕ್ಯವಿರುವ ಹಲವು ರೀತಿಗಳಲ್ಲಿ ಉತ್ಸಾಹ ಶ್ರದ್ಧೆಗಳಿಂದ ಶ್ರಮಿಸುತ್ತ ಮಾರ್ಗದರ್ಶನ ಮಾಡುತ್ತಿದ್ದಾರೆ. ಅವರು ಚಿರಕಾಲ ಆರೋಗ್ಯ ದೃಢಕಾಯರಾಗಿದ್ದು ಹೀಗೆ ಮಾರ್ಗದರ್ಶನ ಮಾಡುತ್ತ, ಕನ್ನಡಿಗರಿಗೆ ಸ್ಫೂರ್ತಿಯನ್ನು ನೀಡುತ್ತಿರುವಂತೆ ಭಗವಂತನು ಅನುಗ್ರಹಿಸಲೆಂದು ನಾನು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಶ್ರೀನಿವಾಸ

ನವರತ್ನ ರಾಮರಾವ್

'ರಾಜಸೇವಾಪ್ರಸಕ್ತ' ಮಾಸ್ತಿ ವೆಂಕಟೇಶಯ್ಯಂಗಾರ್ಯರ ಆಪ್ತ ಸ್ನೇಹಿತ ನಾನೆಂದು ಹೇಳಲು ಅವರು ಒಪ್ಪಿಗೆ ಕೊಡುವರೆಂದು ನಾನು ನಂಬಿದ್ದೇನೆ. ನನಗೆ ಅವರ ಪರಿಚಯಕ್ಕಿಂತ ಬಹಳ ಹಳೆಯದು ಅವರಿಗೆ ನನ್ನ ಪರಿಚಯ. ನಲವತ್ತೇಳು ವರ್ಷಗಳ ಹಿಂದೆ (೧೯೫೧ರಲ್ಲಿ ಅವರು ಬರೆದದ್ದು) ನಾನು ತಾಲ್ಲೂಕು ಅಮಲ್ದಾರನಾಗಿ ಮೊದಲು ಅಧಿಕಾರ ವಹಿಸಲು ಕೃಷ್ಣರಾಜಪೇಟೆಗೆ ಕುದುರೆ ಹತ್ತಿ, ಆಲೂರಿನ ಇಕ್ಕಟ್ಟಿನ ರಸ್ತೆಗಳ ಮೂಲಕ, ಸವಾರಿಮಾಡುತ್ತ ಹೋದಾಗ ಆನಂದವಾಗಿದ್ದ ಹುಡುಗರ ಗುಂಪಿನಲ್ಲಿ ಹತ್ತು ವರ್ಷದ ಹುಡುಗ ಮಾಸ್ತಿಯೂ ಒಬ್ಬರಾಗಿದ್ದು, ನನ್ನನ್ನು ನೋಡಿರಬೇಕು. ನನ್ನ ಸ್ನೇಹಿತರು ಸ್ವರ್ಗವಾಸಿ ಕೃಷ್ಣಸ್ವಾಮಿ ಅಯ್ಯಂಗಾರ್ಯರ ಮಗಳನ್ನು ಮಾಸ್ತಿ ಇಷ್ಟರಲ್ಲೇ ಕೈ ಹಿಡಿಯುವ ಮದುಮಗನಾಗುವರೆಂದು ಮೊದಲು ಕೇಳಿದೆ. ದೇವರ ಅನುಗ್ರಹ; ಮಾಸ್ತಿಯವರು ಮೈಸೂರು 'ಸಿವಿಲ್ ಸರ್ವಿಸ್' ಪರೀಕ್ಷೆಗೆ ಕೂತು, ಮೊದಲನೆಯ ತರಗತಿಯಲ್ಲಿ ಉತ್ತೀರ್ಣರಾಗುವ ನಿರೀಕ್ಷೆಯಲ್ಲಿದ್ದರು. ಮದುವೆಯೂ ಆಯಿತು; ಮೊದಲನೆಯ ತರಗತಿಯಲ್ಲಿ ಜಯಧ್ವಜ ಹಾರಿಸಿದ್ದೂ ಆಯಿತು; ಸಂತೋಷವಾಯಿತು. ನಾನು ಮದುವೆಗೆ ಹೋಗಿರಲಿಲ್ಲ. ಆದರೆ ಮದುವೆಗೆ ಹೋಗಿದ್ದ ನನ್ನ ಮಿತ್ರರೊಬ್ಬರು ಮದುವಣಿಗನನ್ನು 'ತೀಕ್ಷ್ಣಬುದ್ಧಿಯ ತರುಣ. ತನ್ನ ವಿಷಯವಾಗಿ ಹೇಳಿಕೊಳ್ಳಲು ಆತನಿಗೆ ಅಂಶಗಳೆಷ್ಟೋ ಇದ್ದುವು' ಮೊದಲಾಗಿ ವರ್ಣಿಸಿದರು. ಇದರಿಂದ ಜಾಣ ಹುಡುಗ; ತನ್ನ ಸಿಂಹನಾದದಿಂದ, ಪರಿಣಾಮಕಾರಿಯಾಗಿ ಮನಮುಟ್ಟುವಂತೆ ಮಾತನಾಡಬಲ್ಲವನೆಂದು ನಾನು ಭಾವಿಸಿದೆ. ಏಕೆಂದರೆ ನನ್ನ ಮಿತ್ರರು 'ಕಣಿವೆ ಕೆಳಗಿನವರು'; ಸುಲಭವಾಗಿ ಮೈಸೂರಿನವರಿಗೆ ಶಹಬಾಸ್‌ಗಿರಿ ಕೊಡುವವರಲ್ಲ. ಇದರ ಮೇಲೆ ಅವರಿಗೆ ಕಿವಿ ಕೇಳಿಸುತ್ತಿರಲಿಲ್ಲ.

ನಾನು ಬೆಂಗಳೂರು ಅಠರಾ ಕಛೇರಿಯಲ್ಲಿ 'ಅಸಿಸ್ಟೆಂಟ್ ಕಮಿಷನರ್' ಆಗಿ 'ಅಸಿಸ್ಟೆಂಟ್ ಸೆಕ್ರೆಟರಿ' ಕೆಲಸ ಮಾಡುತ್ತಿದ್ದೆ. 'ಜನರಲ್ ಅಂಡ್ ರೆವೆನ್ಯೂ ಸೆಕ್ರೆಟೇರಿಯಟ್'ಗೆ 'ಅಸಿಸ್ಟೆಂಟ್ ಕಮಿಷನರ್' ಆಗಿ ಅಧಿಕಾರ ವಹಿಸಿಕೊಳ್ಳಲು ಮಾಸ್ತಿಯವರು ಬಂದರು. ಆಗಲೆ ನಾನವರನ್ನು ಮೊದಲನೆ ಸಲ ಕಂಡದ್ದು; ಕಂಡಕೂಡಲೆ ಆಕರ್ಷಿತನಾದೆ. ಚುರುಕಾದ, ಸಂಭಾವಿತ ಸ್ವಭಾವವನ್ನು ಹೊರಸೂಸುತ್ತಿದ್ದ. ನಾನು ಕಿವುಡನಾಗದ್ದರಿಂದ ಆತ ಸ್ವರವನ್ನೇರಿಸಬೇಕಾಗಿರಲಿಲ್ಲ. ನಾವಿಬ್ಬರೂ ಹೆಚ್ಚಾಗಿ ಒಟ್ಟಿಗೇ ಇರುತ್ತಿದ್ದೆವು. ಅಭಿರುಚಿ, ದೃಷ್ಟಿ, ಆದರ್ಶ, ಸಾಧನೆ - ಎಲ್ಲದರಲ್ಲೂ ನಾವಿಬ್ಬರೂ ಹೆಚ್ಚು ಕಡಿಮೆ ಒಂದೇ ಎಂಬುದನ್ನು ಕಂಡುಕೊಂಡೆವು. ನಾವಿಬ್ಬರೂ ಪ್ರೇಮಪಾತ್ರರಾದ ಒಬ್ಬ ಗುರುವಿನ ಪಾದಗಳ ಬಳಿ ಕುಳಿತು, ಅವರಿಂದ ಜೀವನದಲ್ಲಿ ಮಹತ್ವವೂ, ಗಂಭೀರವೂ, ಆದವುಗಳನ್ನು ಪೂಜ್ಯ ಭಾವದಿಂದ ಕಾಣುವುದನ್ನು ಕಲಿತೆವು, ಸಾಹಿತ್ಯವನ್ನು ಕಲಿತೆವು.

ನಾವಿಬ್ಬರೂ ಮಹಾಮಿತ್ರರಾದೆವು; ನನ್ನ ಮಟ್ಟಿಗೆ ಇಷ್ಟು ಹೇಳಬಲ್ಲೆ - ನಾನು ಒಂದೊಳ್ಳೆ ಪುಸ್ತಕವನ್ನು ಓದಿದಾಗ, ನನಗೆ ಸಂತೋಷವನ್ನುಂಟುಮಾಡಿದ, ನನ್ನ ಆತ್ಮವನ್ನೇರಿಸಿದ, ಏನನ್ನಾದರೂ ನೋಡಿದಾಗ, ನಾನು ಮಾಸ್ತಿಯವರನ್ನು ನೆನೆಸಿಕೊಳ್ಳುತ್ತಿದ್ದೆ; ನನ್ನ ಆನಂದವನ್ನು ಅವರಿಗೂ ಹಂಚಲು ಬಯಸುತ್ತಿದ್ದೆ.

ಕನ್ನಡವೆಂದರೆ, ಕನ್ನಡ ಸಾಹಿತ್ಯವೆಂದರೆ, ಅವರಿಗೆಷ್ಟು ಪ್ರೀತಿಯೆಂಬುದನ್ನು ನಾನು ಮೊದಲು ಕಂಡುಕೊಂಡ ಸಂದರ್ಭ ನನಗೆ ನೆನಪಿದೆ. ಅವರು 'ಸೆಕ್ರೆಟೇರಿಯಟ್' ಬಿಟ್ಟು ಕೋಲಾರ ಜಿಲ್ಲೆಯ ಯಾವುದೋ ಒಂದು ಅಧಿಕಾರ ಸ್ಥಾನಕ್ಕೆ ವರ್ಗವಾದರು. ಆದರೂ ಅವರು ನನ್ನನ್ನು ಆಗಾಗ ಭೇಟಿ ಮಾಡುತ್ತಿದ್ದರು. ಒಮ್ಮೆ ಇಬ್ಬರೂ ಶ್ರೀನಿವಾಸಪುರದ ಪ್ರವಾಸಿ ಮಂದಿರದಲ್ಲಿ ಒಂದು ದಿನವಿದ್ದೆವು. ಮಾಸ್ತಿಯವರು ನಿರ್ಭಾಗ್ಯ ಪ್ರತಿಭಾಶಾಲಿ, 'ಮುದ್ದಣ'ನೆಂಬ ಕಾವ್ಯನಾಮದಿಂದ - ಕಾರಣ ತಂದೆ ತಾಯಿಗಳಿಟ್ಟ ಹೆಸರನ್ನು ಕೇಳಿದವರಿಲ್ಲ; ಯಾರ ದೃಷ್ಟಿಗೂ ಬೀಳದ ಅಜ್ಞಾತ. ಆತ ಸತ್ತಮೇಲೆ, ಆ ದುರಂತ, ಅಕಾಲ ಮರಣದ ನಂತರ, ಕಣ್ಣೀರನ್ನು ಸುರಿಸುತ್ತ ಸಾರ್ವಜನಿಕರಾತನ ಪ್ರತಿಭೆಗೆ ತಲೆ ಬಾಗಿದರು. ಬರೆದಿದ್ದ 'ರಾಮಾಶ್ವಮೇಧ'ವನ್ನು ವಿಮರ್ಶೆ ಮಾಡಿ, ಇಂಗ್ಲಿಷಿನಲ್ಲಿ ಒಂದು ಪ್ರಬಂಧವನ್ನು ರಚಿಸಿದ್ದರು; ಅದನ್ನು ನನಗೆ ಕೊಟ್ಟರು. ನಾನು ಹಳಗನ್ನಡದ ಗುಣಾವಗುಣಗಳನ್ನು ಕುರಿತು ಏನು ಹೇಳಲೂ ಸಮರ್ಥನಲ್ಲ. ಮಾಸ್ತಿಯವರು ಸುಂದರ ರಾಮಾಶ್ವಮೇಧದ ಮೇಲೆ ಸುಖಾವಹವಾದ ಬೆಳಕನ್ನು ಬೀರಿದ್ದರು. ಆ ಇಂಗ್ಲಿಷ್ ಪ್ರಬಂಧವೇ ಪರಮೋತ್ತಮ ಕೌಶಲದ ಕೃತಿಯಾಗಿತ್ತು, ವಿಮರ್ಶೆಯಾಗಿತ್ತು.

ವರ್ಷಗಳು ಉರುಳಿದಂತೆಲ್ಲ ನಮ್ಮ ಪರಸ್ಪರ ವಿಶ್ವಾಸ ಬೆಳೆಯಿತು, ಶುದ್ಧಗೊಂಡಿತು. ವಿಶಾಲ ಜಗತ್ತಿಗೀ ವಿಚಾರದಲ್ಲಿ ಆಸಕ್ತಿ ಇರಬೇಕಾಗಿಲ್ಲವಾದರೂ, ನಮ್ಮಿಬ್ಬರಿಗೂ ಅತಿಶಯವಾಗಿತ್ತು. ಕೆಲವು ವರ್ಷಗಳನ್ನು ಹಾದು, ನನಗೆ ಮಹಾಕೌತುಕವನ್ನುಂಟು ಮಾಡಿದ, ಸಂಭ್ರಮೋತ್ಸವದಲ್ಲಿ ಮೈಮರೆಸುವಂತೆ ಮಾಡಿದ ಕಾಲಕ್ಕೆ ಬರುತ್ತೇನೆ. ಆಗಲೆ ನಾನು ಮಾಸ್ತಿಯವರು ಕನ್ನಡ ದೋಜಕಲ್ಲೊಬ್ಬರೆಂದೂ, ಕನ್ನಡ ಸಾಹಿತ್ಯದಲ್ಲಿ ನವೀನ ಮಾರ್ಗಗಳನ್ನು ಕಂಡು, ಪರಿಶೋಧನೆಗಳನ್ನು ಮಾಡಿದವರಲ್ಲೊಬ್ಬರೆಂದೂ, ಅರಿತದ್ದು.

ನಾವಿಬ್ಬರೂ ಕಡೂರಿನಿಂದ ಚಿಕ್ಕಮಗಳೂರಿಗೆ ಪ್ರಯಾಣ ಮಾಡುತ್ತಿದ್ದೆವು. ಊಟ, ವಿಶ್ರಾಂತಿಗಾಗಿ, ಸಕ್ಕರೆ ಪಟ್ಟಣದಲ್ಲಿ ತಂಗಿದೆವು. ಲೋಕಾಭಿರಾಮವಾಗಿ ಜನರನ್ನು ಕುರಿತೂ, ಪುಸ್ತಕಗಳನ್ನು ಕುರಿತೂ ಮಾತನಾಡುತ್ತ, ಮಧ್ಯಾಹ್ನದ ಶಖೆಯ ದಗೆಯ ಕಾಲವನ್ನು ಕಳೆದೆವು. ಮಾತನಾಡುತ್ತಾ, ಆಡುತ್ತ ನಾನು 'ಸಣ್ಣ ಕತೆಗಳಿಲ್ಲದೆ ಕನ್ನಡ ಬಡವಾಗಿದೆ'. ಬಂಗಾಲಿ, ಮರಾಠಿ, ಇತ್ತೀಚಿನ ಸಾಹಿತ್ಯದಲ್ಲಿ ಇದೊಂದು ವಿಶಿಷ್ಟ ಲಕ್ಷಣವಾಗಿದೆ' ಅಂದೆ. ಮಾಸ್ತಿಯವರು ಕ್ಷಣಕಾಲ ಆಲೋಚನಾ ಮೂಢರಾಗಿದ್ದು ''ನಿಜ, ಇದು ವಿಷಾದಕರ. ಇತ್ತೀಚೆಗೆ ಅಂತಹ ಕೃತಿಯೊಂದು ಬಂತು; ಅದನ್ನು ನೀವು ನೋಡಿದ್ದಿರಾ? ಇಲ್ಲವೇ?'' ಅಂದರು. ಆ ಪುಸ್ತಕ ತಮ್ಮಲ್ಲಿತ್ತಲ್ಲಾ ಎಂದು ಸಂತೋಷಪಟ್ಟರು. 'ಇಲ್ಲಿಂದ ಹೊರಡುವವರೆಗೂ ಬೇಸರದ ಭಾರ ಕಡಿಮೆಮಾಡಲು ಇಷ್ಟವಿದ್ದರೆ ಇದನ್ನೋದಿ' ಎಂದು ಪುಸ್ತಕವನ್ನು ಕೊಟ್ಟರು. ಸಣ್ಣದಾದರೂ, ಅಚ್ಚುಕಟ್ಟು ಚೆನ್ನಾಗಿತ್ತು. ''ಶ್ರೀನಿವಾಸರ ಸಣ್ಣ ಕತೆಗಳು'' ಎಂದು ಆಡಂಬರವಿಲ್ಲದ ಹೆಸರು ಆ ಪುಸ್ತಕಕ್ಕೆ. ಹಾಳೆಗಳನ್ನು ತಿರುವಿ ಹಾಕುತ್ತ ''ಇಂದಿರಾ'' ಎಂಬ ಕತೆಯನ್ನು ಓದಿದೆ. ಈ

ಕತೆಗಳಲ್ಲೆಲ್ಲ ರತ್ನ ಪ್ರಾಯವಾದ ಕತೆ; ನನ್ನ ಅಭಿಪ್ರಾಯದಲ್ಲಿ ಇದು ಸಾವಿನ ಅನಂತರ ನೆನೆಹಿಗೆ ಬರುವ ಮುತ್ತುಗಳಂತೆ ಖಿನ್ನ ಕೋಮಲವಾದುದು. ಅದನ್ನು ಗಟ್ಟಿಯಾಗಿ ಓದಿದೆ. ಕಾರಣ ಆ ಸವಿಗನ್ನಡ ನಾಲಿಗೆ ಮೇಲಿಟ್ಟ ಜೇನುತುಪ್ಪ. ಆ ಸುಖಾನುಭವಕ್ಕೆ ಮಾಸ್ತಿಯವರನ್ನು ಭಾಗಿಯನ್ನಾಗಿ ಮಾಡಬಯಸಿದೆ. ಆದರೆ ಆ ಹೃದಯವಿದ್ರಾವಕತೆ ನನ್ನ ಗಂಟಲನ್ನು ಕಟ್ಟಿತು; ಮುಂದುವರಿಯಲಾರದೆ ಹೋದೆ ''ಯಾರು ಈ ಶ್ರೀನಿವಾಸ''ನೆಂದು ಮಾಸ್ತಿಯವರನ್ನು ಕೇಳಿದೆ. '' ನನಗೆ ಗೊತ್ತು; ಆದರೆ ಅದನ್ನು ಬಯಲಿಗಿಡುವುದಿಲ್ಲವೆಂದು ಮಾತು ಕೊಟ್ಟಿದ್ದೇನೆ'' ಅಂದರು ಮಾಸ್ತಿ. ಪುಸ್ತಕವನೆನರವಲಾಗಿ ಪಡೆದು ಆ ರಾತ್ರಿಯೇ ಓದಿದೆ. ಆ ಕತೆಗಳಿಂದ ನಾನು ಮೋಹಿತನಾದೆ; ಪಾತ್ರಗಳು ನನ್ನ ಬೆನ್ನಹತ್ತಿದುವು; ಬೆಳಗಿನ ಝಾವವದವರೆಗೂ ನಡೆಯಿತೀ ಲೀಲೆ. ಇದನ್ನು ಮಾಸ್ತಿಯವರೇ ಬರೆದಿರಬೇಕೆಂಬುದು ನನ್ನ ಮನಸ್ಸಿಗೆ ಖಂಡಿತವಾಯಿತು. ಇಂತಹ ಮಾಂತ್ರಿಕ ಮತ್ತಿನ್ನಾರೂ ಆಗಿರಲಾರರು. ಮಾಸ್ತಿಯವರನ್ನಂದು ಇಳಿ ಹೊತ್ತಿನಲ್ಲಿ ಕಂಡಾಗ ''ನಿಮ್ಮ ಇಂದ್ರಜಾಲದಿಂದ ನನ್ನ ಕಣ್ಣೀರನ್ನು ಕದ್ದಿರಿ, ನಿದ್ದೆಯನ್ನು ಕದ್ದಿರಿ'' ಎಂದು ಅಪಾದಿಸಿದೆ. ಅವರು ಕೊಂಚವೂ ವಿಷಾದಗೊಳ್ಳದೆ 'ನಾನು ಅಪರಾಧಿ' ಎಂದರು. ಮಾಸ್ತಿಯವರೇ ''ಶ್ರೀನಿವಾಸ''ರೆಂದು ನಾನು ಕಂಡುಕೊಂಡದ್ದು ಹೀಗೆ. ಇನ್ನು ಮುಂದೆ ಮಾಸ್ತಿಯವರನ್ನು ''ಶ್ರೀನಿವಾಸ''ನೆಂದೇ ಸಂಭಾವಿಸುವುದಾದರೆ ನನಗೇನೂ ಆಶ್ಚರ್ಯವಿಲ್ಲ.

ಪ್ರತಿಭೆಯು ಕ್ರಮವಾಗಿ ಹೇಗೆ ವಿಕಾಸವಾಗುತ್ತದೆ; ಮನ್ನಣೆ ಹೇಗೆ ಬೆಳೆಯುತ್ತದೆ ಎಂಬುದನ್ನು ಕಾಣುವ ಯೋಗ ಕೆಲವರಿಗೆ ಮಾತ್ರ – ಈ ಆನಂದ ಭಾಗ್ಯ ನನ್ನದಾಗಿದೆ. ನನ್ನ ಸ್ನೇಹಿತರ ಕೃತಿಗಳನ್ನೆಲ್ಲ ಇಲ್ಲಿ ಪಟ್ಟಿ ಮಾಡುವುದೂ ಇಲ್ಲ, ವಿಮರ್ಶೆ ಮಾಡಿ ಅವುಗಳ ಬೆಲೆ ಕಟ್ಟುವುದೂ ಇಲ್ಲ. ಅಥವಾ ಅವರ ದೈವದತ್ತವಾದ ವರಪ್ರಸಾದಗಳನ್ನಾಗಲಿ, ಅವರ ಶೀಲಸ್ವಭಾವಗಳನ್ನಾಗಲಿ, ವಿಭಜಿಸುವ ಕೆಲಸಕ್ಕೆ ಕೈ ಹಾಕುವುದಿಲ್ಲ. ಆದರೆ ಕೆಲವು ಸಣ್ಣ ನೆನಪುಗಳನ್ನು ಕುರಿತು ಹೇಳುತ್ತೇನೆ; ಸಾರ್ವಜನಿಕರಿಗಿವು ಪ್ರಿಯವಾದಾವೆಂದು ನಂಬುತ್ತೇನೆ.

ಕೆಟ್ಟ ಹವೆಯಲ್ಲಿ ಪ್ರಯಾಣ ಮಾಡಿ, ಒಂದು ರಾತ್ರಿ ನೆಲ್ಲೆಗೆರೆಯ ರಸ್ತೆ ಪಕ್ಕದ ಪ್ರವಾಸಿ ಮಂದಿರದಲ್ಲಿ ವಿಶ್ರಾಂತಿಗಾಗಿ ಇಳಿದೆವು. ಕಾಟಾಚಾರದ ಊಟ ಮುಗಿಸಿ, ವಿಶ್ರಾಂತಿ ಗೃಹದ ಸಹಿಸಲಸಾಧ್ಯವಾದ ಅಡ್ಡಪಟ್ಟಿಗಳ ಮಂಚದ ಹಾಸಿಗೆಗಳ ಮೇಲೆ ಬಿದ್ದುಕೊಂಡು, ಸೊಳ್ಳೆಗಳ ಸಂಗೀತ ಶ್ರವಣ ಮಾಡುತ್ತ, ಜಾಗರಣೆ ಮಾಡಿದೆವು. ಕೊಂಚ ಹೊತ್ತು ಆ ಮಾತು – ಈ ಮಾತಾಯಿತು. ಸದ್ದಿಲ್ಲದೆ ನಿದ್ರಾದೇವಿಯ ಅನುಗ್ರಹಕ್ಕಾಗಿ ಪ್ರಯತ್ನ ಮಾಡಿದೆವು; ಪ್ರಯೋಜನವಾಗಲಿಲ್ಲ. ಮಾಸ್ತಿಯವರೆದ್ದು ಕೂತರು; ಹುಚ್ಚಾಟಿಕೆಯಾಗಿ ''ನನಗೊಂದು ಕತೆಯನ್ನು ಹೇಳಿ'' ಅಂದರು. 'ಕತೆ ಹೇಳುವ ಭಾಗ್ಯ ನಿಮ್ಮದು, ನನ್ನದಲ್ಲ' ಅಂದೆ. ಆದರೂ ಒಮ್ಮೆ ಪ್ರಯತ್ನ ಮಾಡುವೆನೆಂದು ಹೇಳಿ, 'ನಿಮ್ಮಂತಲ್ಲ, ಕಣ್ಣಗಲಿಸಿ, ನಿದ್ದೆ ಮಾಡಿಸುವ ಕತೆ' ಅಂದು, ಚಿಕ್ಕಂದಿನಲ್ಲಿ ನನ್ನನ್ನು ಚಕಿತಗೊಳಿಸಿದ ಕತೆಗಳ ನೆನಪಿಗೆ ಚೂರುಪಾರುಗಳನ್ನು ಜೋಡಿಸಿ, ದೆವ್ವದ ಕತೆಯೊಂದನ್ನು ಸೃಷ್ಟಿಸಿದೆ. ಹೊರಗಣ ಹವೆಯಿಂದ ಪ್ರೇರಿತವಾಗಿ ಸನ್ನಿವೇಶವನ್ನು ಮಲೆನಾಡಿನಲ್ಲಿ ಹಾಕಿದೆ. ಆ ಕತೆಯನ್ನು ಹೇಳುವುದರಲ್ಲೂ ಅದರ ನಿದ್ರಾಜನಕ ಗುಣಕ್ಕೆ ವಶನಾದೆ. ಇಂತಹ ಅದೃಷ್ಟ ಮಾಸ್ತಿಯವರಿಗಿಲ್ಲ. ಮಾರನೆಯ ಬೆಳಿಗ್ಗೆ ಮಾಸ್ತಿಯವರು ''ನಿಮ್ಮಕತೆ ನನ್ನ ಮನಸ್ಸಿನ ಮೇಲೆ ಅಸಾಧ್ಯ ಪರಿಣಾಮ ಮಾಡಿತು.

ರಾತ್ರಿಯೆಲ್ಲ ಅವಲಕ್ಷಣದ ಮುದಿ ಹೆಣ್ಣು ದೆವ್ವವೆ! ಮನಸ್ಸಿನ ಸೂಕ್ಷ್ಮಾನುಭವ ಶಕ್ತಿ ಅಲೌಕಿಕದ ಅಂಚಿನ ಮೇಲೆ ಇನ್ನೂ ಇದೆ'' ಅಂದರು. ಕೆಲವು ಸಾಮಾನ್ಯ ಸಣ್ಣ ಕವಿತೆಯ (ಪದ್ಯದ) ಸಾಲುಗಳನ್ನೋದಿದ ಬರ್ನ್ಸ್. ಅವುಗಳಲ್ಲೇನೂ ಅತಿಶಯವಾದದ್ದಿರಲಿಲ್ಲ. ಆದರೂ ಅವು ಅವನ ಹೃದಯ ಸೂಕ್ಷ್ಮ ತಂತಿಗಳನ್ನವು ಮೀಟಿದುವು. ಬರ್ನ್ಸ್‌ನ ಈ ಪ್ರತಿಕ್ರಿಯೆ ನೆನಪಿಗೆ ಬರುತ್ತದೆ. ನನ್ನ ದೆವ್ವದ ಕಲಬೆರಕೆ ಕತೆ ಕೇಳಿದ ಮಾಸ್ತಿಯವರ ಪ್ರತಿಕ್ರಿಯೆ ನೋಡಿದರೆ ಅದು ಅವರ ಸಹಾನುಭೂತಿಯುಳ್ಳ ಸಂವೇದನ ವಾಹಕದ ಮೇಲೆ ಬಿದ್ದಿರಬೇಕು. ಆಮೇಲೆ ಅದು ಪರಮೋತ್ತಮವಾದೊಂದು ಸಣ್ಣ ಕತೆ ರಚಿಸಲು ಅವರಿಗೆ ಸ್ಫೂರ್ತಿ ಕೊಟ್ಟಿರಬೇಕು.

ಇನ್ನೊಮ್ಮೆ ನಾನವರಿಗೆ ಅಪೂರ್ವ ವೃದ್ಧ ಗೃಹಸ್ಥನೊಬ್ಬನ ಜೀವನ ಕತೆ ಹೇಳಿದೆ. ನಾನು ಆತನಿಂದಲೇ ಪಿಟೀಲು ಬಾರಿಸುವುದನ್ನು ಕಲಿತದ್ದು. ಆ ಕಥೆಯ ಸಂಕಟಾನುಭವ, ನಮ್ರತಾಶೌರ್ಯ, ಮಾಸ್ತಿಯವರ ಕರುಳನ್ನು ಬಲವಾಗಿ ಅಲುಗಿಸಿದುವು. ಅವರು ''ಇದನ್ನೇ ನೀವೊಂದು ಕತೆಯಾನ್ನಾಗಿ ಬರೆಯಿರಿ'' ಎಂದು ನನಗೆ ಹೇಳಿದರು. ಇದು ನನ್ನಿಂದ ಸಾಧ್ಯವೆಯೆಂದೂ, ಹೇಗೆ ಆರಂಭಿಸಬೇಕೆಂದೂ, ನಾನು ಆಶ್ಚರ್ಯಚಕಿತನಾಗಿದ್ದೆ. ಮಾಸ್ತಿಯವರು ನನ್ನ ಸಮಸ್ಯಾ ಪರಿಹಾರ ಮಾಡಿದರು. ತಾವೇ 'ಸುಬ್ಬಣ್ಣ'ನನ್ನು ಬರೆದರು. ಕನ್ನಡ ಸಾಹಿತ್ಯ ಪ್ರಪಂಚಕ್ಕಿತ್ತರು. ಅದೊಂದು ನೀಳ್ಗತೆ; ಪ್ರಚಂಡವಾಗಿ ಮನಕರಗಿಸುವಂತಹ ಕತೆ; ಇಂತಹ ಇನ್ನೊಂದು ಕತೆಯನ್ನು ನಾನು ಓದಿಲ್ಲ.

ಮಾಸ್ತಿಯವರು ಅಪಾರವಾಗಿ ಪದ್ಯ ಬರೆದಿದ್ದಾರೆ. ಗದ್ಯ, ಪದ್ಯಗಳನ್ನೂ ರಚಿಸಿದ್ದಾರೆ, ಲಾವಣಿಗಳನ್ನೂ ಹೇಳಿದ್ದಾರೆ. ಸುನೀತಗಳನ್ನೂ ನಿರ್ಮಿಸಿದ್ದಾರೆ. ವರ್ಣ ಕವನಗಳನ್ನೂ ರಚಿಸಿದ್ದಾರೆ. ಭಾಸರ್, ವಡ್ಸ್‌ವರ್ಥ್‌ಗಳಂತೆ ವ್ಯಾಖ್ಯಾನ ವ್ಯಾಕರಣ ರಚಿಸಿದ್ದಾರೆ; ಐತಿಹಾಸಿಕ ಕಾದಂಬರಿ ಬರೆದಿದ್ದಾರೆ. ಕನ್ನಡ ಕಾವ್ಯ ಕುರಿತು ಟೀಕೆ ಮಾಡುವ ಅಧಿಕಾರ ನನಗಿಲ್ಲ. ಆದರೆ ಮಾಸ್ತಿಯವರ ಕವನಗಳೆಂದರೆ ನನಗೆ ಪ್ರಿಯ. ಅವರ ಗದ್ಯವಾದರೋ ನಾನೋದಿರುವ ಮಟ್ಟಿಗೆ ಶ್ರೇಷ್ಠವರ್ಗಕ್ಕೆ ಸೇರಿದ್ದು. ಅವರ ಸಣ್ಣ ಕತೆಗಳಲ್ಲಿ ಕೆಲವು ಯಾವ ಸಾಹಿತ್ಯಕ್ಕಾದರೂ ಸಮಾನಾಗಿ ನಿಲ್ಲತಕ್ಕವು. (ಅವರ 'ಮಸುಮತ್ತಿ'ಯನ್ನು ನನ್ನ ಗುರು ಶ್ರೀ ಟೆಟರಿಗಾಗಿ ಭಾಷಾಂತರ ಮಾಡಿದೆ. ಮಾಸ್ತಿಯವರ ನನ್ನ ಮೆಚ್ಚಿಕೆ ನನ್ನ ವಿವೇಚನಾ ಶಕ್ತಿಗಿಂತ ಹೆಚ್ಚಾಗಿ ವಾತ್ಸಲ್ಯದ ಫಲವೆಂದು ಅವರ ಮನಸ್ಸು ಒಲಿದಿತ್ತು. ಶ್ರೀ ಟೆಟರು ಕತೆಯನ್ನು ಬಹಳವಾಗಿ ಮೆಚ್ಚಿಕೊಂಡರು. ಅದರಲ್ಲಿ ಜನರನ್ನು ಪ್ರಬಲವಾಗಿ ಕೆರಳಿಸುವ, ದೇಶಭಕ್ತಿ, ಭೂತಕಾಲದಲ್ಲಿ ಪೂಜ್ಯಭಾವ, ಭವಿಷ್ಯದಲ್ಲಿ ಆಶೆ, ಮೊದಲಾದ ಲಕ್ಷಣಗಳಿವೆಯೆಂದು ಹೇಳಿದರು. ಭಾಷಾಂತರದಲ್ಲಿ ಮೂಲಕ್ಕೆಳ್ಳಷ್ಟೂ ಕುಂದುಂಟಾಗಿಲ್ಲವೆಂದೂ, ಪ್ರತಿಯಾಗಿ ಲಾಭವಾಗಿದೆಯೆಂದೂ ಅವರು ಭಾವಿಸಿದರು. ಇಂಗ್ಲಿಷ್ ರೂಪದಲ್ಲಿ ಈ ಕತೆ 'ತ್ರಿವೇಣಿ'ಯಲ್ಲಿ ಪ್ರಕಟವಾಯಿತು. ಇದು ಶ್ರೀ ರಾಜಾಜಿಯವರ ಹೃದಯವನ್ನಾಕರ್ಷಿಸಿತು; ಅವರದನ್ನು ದಾಕ್ಷಿಣಾತ್ಯವಾಚಕರಿಗಾಗಿ ತಮಿಳಿಗೆ ಭಾಷಾಂತರ ಮಾಡಿದರು.)

ಮಾರ್ಗದರ್ಶಕ ಮಾಸ್ತಿ

ಕೆ. ಸಂಪದ್ಗಿರಿರಾವ್

ಸುಮಾರು ಅರವತ್ತು ವರ್ಷಗಳ ಹಿಂದೆ ಇದ್ದ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಅಜ ಗಜಾಂತರ - ಈಗಿನ ಯುವಕರು ಅದನ್ನು ಊಹಿಸಿಕೊಳ್ಳುವುದೂ ದುಸ್ತರ. ಅದರಲ್ಲಿಯೂ ಕನ್ನಡ ಸ್ಥಾನಮಾನಗಳು, ನಮ್ಮ ಶಿಕ್ಷಣ ಕ್ಷೇತ್ರದಲ್ಲಿಯೂ ಸಾರ್ವಜನಿಕ ಜೀವನದಲ್ಲಿಯೂ ಈಗಿನವರು ನಂಬಲಾಗದಷ್ಟು ದುಃಸ್ಥಿತಿಯಲ್ಲಿತ್ತು. ಶಿಕ್ಷಣವನ್ನು ಪಡೆದು ಮುಂದಕ್ಕೆ ಬರಬೇಕೆಂದು ಆಕಾಂಕ್ಷೆಯುಳ್ಳವರು ಕನ್ನಡವನ್ನು ದುರ್ಲಕ್ಷಿಸುವುದೇ ಒಂದು ದೊಡ್ಡಸ್ತಿಕೆಯ ವಿಷಯವೆಂದು ಭಾವಿಸಿದ್ದರು. ಸುಶಿಕ್ಷಿತ ಅಂದರೆ ಇಂಗ್ಲಿಷು ಭಾಷೆಯನ್ನು ಚೆನ್ನಾಗಿ ಬಲ್ಲವ. ಆದ್ದರಿಂದ ನಮ್ಮ ವಿದ್ಯಾವಂತರು ಕನ್ನಡದಲ್ಲಿ ಬರೆಯುವ ಮಾತಿರಲಿ, ಸಭೆಗಳಲ್ಲಿ ಕನ್ನಡದಲ್ಲಿ ನಾಲ್ಕು ವಾಕ್ಯಗಳನ್ನು ಆಡಲೂ ಅಶಕ್ತರಾಗಿದ್ದರು - ಪ್ರಯತ್ನವನ್ನು ಮಾಡುವವರಾಗಿರಲಿಲ್ಲ. ಇದರ ಬಗೆಗೆ ಸಂಕೋಚವನ್ನೂ ತಾಳುತ್ತಿರಲಿಲ್ಲ. ಇಂಗ್ಲಿಷಿನಲ್ಲಿ ಮಾತಾಡುವುದು - ಅದು ತಪ್ಪೊ ಒಪ್ಪೋ - ಪ್ರತಿಷ್ಠೆಯ ಕುರುಹಾಗಿತ್ತು. ಕನ್ನಡದಲ್ಲಿ ಭಾಷಣವನ್ನು ಮಾಡುವವರು ಸಾಮಾನ್ಯವಾಗಿ ಕನ್ನಡ ಪಂಡಿತರು - ಅಶಿಕ್ಷಿತ ಹಳ್ಳಿಯ ಜನ! ಬೆಂಗಳೂರಿನಲ್ಲಿ ೧೯೧೫ರಲ್ಲಿ ಸೇರಿದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆದ ಭಾಷಣಗಳೂ ಇಂಗ್ಲಿಷಿನಲ್ಲಿಯೇ ಆದವು.

ಈ ಪರಿಸ್ಥಿತಿಯಲ್ಲಿ ಕನ್ನಡಕ್ಕೆ ಕನ್ನಡ ನಾಡಿನಲ್ಲಿ ಪ್ರಾಶಸ್ತ್ಯವಿರಬೇಕೆಂಬ ಧೀರರು ಬಹಳ ವಿರಳರು. ಇಂತಹವರಲ್ಲಿ ಮಾಸ್ತಿಯವರೊಬ್ಬರೆಂದು ನಾವು ಕೃತಜ್ಞತೆಯಿಂದ ನೆನೆಯಬೇಕು. ಆ ಕಾಲದಲ್ಲಿಯೇ - ಅಂದರೆ ಸುಮಾರು ೧೯೧೨ರಲ್ಲಿಯೇ - ಮಾಸ್ತಿಯವರು ಕನ್ನಡದಲ್ಲಿ ನಿಷ್ಠೆಯನ್ನು ತಾಳಿ ಅದನ್ನು ಬೆಳೆಸಿದ್ದರಲ್ಲಿ ಒಂದು ಕೌತಕವೂ ಇದೆ. ಎಲ್ಲ ಪರೀಕ್ಷೆಗಳಲ್ಲಿಯೂ - ಮೆಟ್ರಿಕ್ಯುಲೇಷನಿಂದ ಬಿ.ಎ. ವರೆಗೂ ಪ್ರಥಮ ಸ್ಥಾನವನ್ನು ಗಳಿಸಿ ಇವರು ಉತ್ತೀರ್ಣರಾದವರು. ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯದಲ್ಲಿ ಎಂ.ಎ. ಪದವಿಯನ್ನು ಪಡೆದವರು - ಇಂತಹವರು ಕನ್ನಡದಲ್ಲಿ ಬರೆಯುವುದೆಂದರೇನು? ಇದು ಅವರ ಸಮಕಾಲೀನರಾದವರಿಗೆ ಒಂದು ಸೋಜಿಗವಾಗಿತ್ತು - ಹುಚ್ಚುತನವೆಂದೂ ಅನಿಸಿತು. ಈ ಕಾರಣದಿಂದ ಇಂಗ್ಲಿಷ್ ಮೋಹ ಕವಿದಿದ್ದ ಕಾಲದಲ್ಲಿ ಅದರಿಂದ ಪಾರಾಗಿ ಕನ್ನಡಕ್ಕೆ ಸೇವೆ ಸಲ್ಲಿಸಬೇಕೆಂದು ಧೀರ ವೃತಿಯಿಂದ ಹೊರಟು ಮಾರ್ಗದರ್ಶನ ಮಾಡಿದ ಮಾಸ್ತಿಯವರು ಎಲ್ಲ ಕನ್ನಡ ಪ್ರೇಮಿಗಳಿಗೂ ವಂದ್ಯರಾಗಿದ್ದಾರೆ.

ಮಾರ್ಗದರ್ಶನ ಮಾಡಿದ್ದಲ್ಲದೆ ಆಧುನಿಕ ಕನ್ನಡ ಸಾಹಿತ್ಯಕ್ಕೆ - ಗುಣದಲ್ಲಿಯೂ, ಪ್ರಮಾಣದಲ್ಲಿಯೂ - ಶ್ರೇಷ್ಠವಾದ ಕಾಣಿಕೆ ಅವರಿಂದ ಸಂದಿದೆ. ಸಣ್ಣ ಕಥೆಗಳಿಗೆ ಅವರೇ ನಾಂದಿ ಹಾಕಿಕೊಟ್ಟರೆಂಬುದಂತೂ ಪ್ರಸಿದ್ಧವಾದ ವಿಷಯ. ಸಾಹಿತ್ಯ ಚರಿತ್ರಾಕಾರರೆಲ್ಲರೂ ಇದನ್ನು ಒಪ್ಪಿಕೊಂಡಿದ್ದಾರೆ. ಆದರೆ ಇಷ್ಟೇ ಅಲ್ಲದೆ ಎಲ್ಲ ಪ್ರಕಾರಗಳಲ್ಲಿಯೂ ಸಾಹಿತ್ಯ

ರಚನೆ ಮಾಡಿ ಆಧುನಿಕ ಸಾಹಿತ್ಯವನ್ನು ಶ್ರೀಮಂತವನ್ನಾಗಿ ಮಾಡಿದ್ದಾರೆ. ಕಾದಂಬರಿ, ನಾಟಕ, ಪದ್ಯ, ಗೀತೆಗಳು, ವಿಮರ್ಶೆ, ಜೀವನ ಚರಿತ್ರೆ, ಪ್ರಬಂಧ, ಭಾಷಾಂತರ - ಹೀಗೆ ನಾನಾ ವಿಧದಲ್ಲಿ ಅರವತ್ತಕ್ಕೂ ಮಿಗಿಲಾಗಿ ಪುಸ್ತಕಗಳನ್ನು ತಾವೇ ಪ್ರಕಟಿಸಿ, ಪ್ರಕಟನೆಯ ಕಷ್ಟನಷ್ಟಗಳನ್ನು ಅನುಭವಿಸಿದ್ದಾರೆ. ಉನ್ನತ ಸರಕಾರಿ ಹುದ್ದೆಗಳಲ್ಲಿದ್ದುಕೊಂಡು ತಮ್ಮ ಬಿಡುವಿನ ವೇಳೆಯಲ್ಲಿ ಈ ಸೇವೆಯನ್ನೂ ಸಲ್ಲಿಸಿದ್ದಾರೆ. ತಮ್ಮ ಉದ್ಯೋಗ ಕ್ಷೇತ್ರಗಳಲ್ಲಿಯೂ ದಕ್ಷರೆಂದೇ ಹೆಸರನ್ನೂ ಪಡೆದರು. ರಾಜ್ಯದ ಮಂತ್ರಿ ಪದವಿ ಇವರಿಗೆ ಒದಗಬೇಕಾದ ಸಂಭವವಿದ್ದಾಗ ಅದರಿಂದ ವಂಚಿತರಾದರು. ರಾಜ್ಯದ ಆಡಳಿತಗಾರರಾಗಿ ರಾಜಮಾನ್ಯರಾಗಿದ್ದ ಅವರಿಗೆ ಕ್ರಮಪ್ರಾಪ್ತವಾಗಿ ಬರಬೇಕಾಗಿದ್ದ ಪದವಿ ಬರದೆ ಹೋಯಿತು. ಆತ್ಮ ಗೌರವವನ್ನು ಕಾಪಾಡಿಕೊಳ್ಳಲು, ಇನ್ನೂ ಮೂರುವರೆ ವರ್ಷ ಉದ್ಯೋಗದಲ್ಲಿರುವ ಅವಕಾಶವಿದ್ದರೂ, ನಿವೃತ್ತಿಯನ್ನು ಬೇಡಿ ಪಡೆದುಕೊಂಡರು. ಅವರಿಗೆ ಆದ ಆ ಅವಮಾನಕ್ಕೆ ಇವರು ತಾಳಿದ್ದ ಕನ್ನಡ ಭಾಷಾ ಸೇವೆ ಒಂದು ಕಾರಣವಾಯಿತೆಂದು ಹೇಳಲು ಆಧಾರವಿದೆ. ಈ ಬಗೆಯಲ್ಲಿ ತ್ಯಾಗಮಾಡಿದ ಧೀರರೂ ಆಗಿದ್ದಾರೆ ಮಾಸ್ತಿಯವರು. ಇದು ನಡೆದದ್ದು ೧೯೪೪ ಏಪ್ರಿಲ್‌ನಲ್ಲಿ.

ಎಂಬತ್ತು ವರ್ಷಗಳು ದಾಟಿ, ಚಂದ್ರ ಮಾಡಿದ ಮಾಸ್ತಿಯವರು, ವಯೋಧರ್ಮಕ್ಕನುಸಾರವಾಗಿ ಅವರ ದೇಹ ಶಕ್ತಿ ಕುಗ್ಗಿದ್ದರೂ, ಯುವಕರ ಹುರುಪಿನಿಂದ ಸಾಹಿತ್ಯ ಸೇವೆಯನ್ನು ಮುಂದುವರಿಸುತ್ತಿದ್ದಾರೆ.

ನಿವೃತ್ತರಾದ ಮೇಲೆ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಅವರ ಸದಸ್ಯ ಸಂಪತ್ತನ್ನೂ ಪ್ರಭಾವವನ್ನೂ ಕನ್ನಡನಾಡಿನಲ್ಲೆಲ್ಲಾ ಬೆಳಸಿದರು. ಕರ್ಣಾಟಕ ಏಕೀಕರಣಕ್ಕಾಗಿ ಶ್ರಮಿಸಿದರು. ಇದರಲ್ಲಿ ರಾಜಕೀಯಕ್ಕಿಂತಲೂ ಅವರದು ಸಾಂಸ್ಕೃತಿಕ ದೃಷ್ಟಿ, ಕನ್ನಡದ ಪ್ರೇಮ ಜನರಲ್ಲಿ ವೃದ್ಧಿಯಾಗಬೇಕು - ಕನ್ನಡದಲ್ಲಿ ಅತ್ಯುತ್ತಮವಾದ ಪುಸ್ತಕಗಳು ರಚನೆಯಾಗಬೇಕು, ಇಂಗ್ಲಿಷ್ ಕಲಿಯದವರಿಗೂ ಯಾವ ಲೋಪವೂ ಆಗಬಾರದು, ಇದೇ ಅವರ ಹಂಬಲ. ಪರಿಶುದ್ಧವಾದ ಜೀವನವನ್ನು ನಡೆಸುತ್ತ ಇತರರಲ್ಲಿರುವ ಗುಣವನ್ನು ಕಂಡು ಅದನ್ನು ಮೆಚ್ಚಿ ಪ್ರೋತ್ಸಾಹಿಸುವುದು ಅವರ ದೊಡ್ಡ ಗುಣವಾಗಿದೆ.

ಇಂತಹ ಸುಸಂಸ್ಕೃತವೂ ಸಾರ್ಥಕವೂ ಆದ ಜೀವನವನ್ನು ನಡೆಸುತ್ತಿರುವ ಮಾಸ್ತಿಯವರು ಕನ್ನಡನಾಡಿನ ಮಹಾ ಆಸ್ತಿಯಲ್ಲದೆ ಮತ್ತೇನು?

ಎರಡು ಸಂದರ್ಭಗಳು

ಶ್ರೀರಂಗ

ಸುಮಾರು ೪೫ ವರ್ಷಗಳ ಹಿಂದಿನ ನೆನಪು. ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ೧೯೨೪ರಲ್ಲಿ ನಾನು ಜ್ಯೂನಿಯರ್ ಬಿ. ಎ. ವಿದ್ಯಾರ್ಥಿಯಾಗಿದ್ದಾಗ ಯಾರೋ ಯಾವ ಕಾರಣಕ್ಕೊ ಒಂದು ಕನ್ನಡ ಪುಸ್ತಕವನ್ನು ನನಗೆ ತೋರಿಸಿದರು. ಅದಕ್ಕೆ ಕಾರಣವೆಂದರೆ ಬಿ. ಎ. ಪರೀಕ್ಷೆಗೆ ನಾನು ಸಂಸ್ಕೃತವನ್ನು ಮುಖ್ಯ ಭಾಷೆಯನ್ನಾಗಿ, ಕನ್ನಡವನ್ನು ಗೌಣ ಭಾಷೆಯನ್ನಾಗಿ ಆರಿಸಿಕೊಂಡಿದ್ದೆ. ಕನ್ನಡವು ಪುಣೆ ನಗರದಲ್ಲಿ ಕಲಿಯುತ್ತಿದ್ದ ನನ್ನಂತಹ ಕನ್ನಡಿಗರಿಗೆ ನಿಜವಾಗಿಯೆ 'ಗೌಣ' ಭಾಷೆಯಾಗಿತ್ತು. ನಾನು ಕನ್ನಡವನ್ನೇ ಆಯ್ದುಕೊಂಡುದು ಕನ್ನಡದ ಅಭಿಮಾನದಿಂದಿರಲಿಲ್ಲ. ಕನ್ನಡವನ್ನೇ ಕಲಿಸುವ ಅಧ್ಯಾಪಕರಿದ್ದಿರಲಿಲ್ಲ, ವಾರಕ್ಕೆ ಎರಡು 'ಪೀರಿಯಡ್ ಫ್ರಿ' ಎಂಬುದಕ್ಕೆ. ಹೀಗಿರುವಾಗ ಈ ಪುಸ್ತಕವನ್ನು ನಾನು ಬರೀ ಕುತೂಹಲದಿಂದ ನೋಡಿದೆ. ಅದರಲ್ಲಿ ನಾಲ್ಕು ಕತೆಗಳಿದ್ದುವೆಂದು ನೆನಪು; ಎರಡು ಕತೆಗಳ ಹೆಸರುಗಳು ಹೀಗಿದ್ದುವು; 'ರಂಗಪ್ಪನ ಕೋರ್ಟ್‌ಷಿಪ್' ಮತ್ತು 'ರಂಗಪ್ಪನ ದೀಪಾವಳಿ'.

ಈ ಹೆಸರುಗಳು ನನಗೆ ತಮಾಷೆಯಾಗಿ ಕಂಡದುರಿಂದ ಓದಿದೆ, ಚಿಕ್ಕ ಚಿಕ್ಕ ವಾಕ್ಯಗಳು, ಕತೆಯುದ್ದಕ್ಕೂ ಹಾಸ್ಯದ ಸರಣಿ, ಅವಿವಾಹಿತ ತರುಣನಾದ ನನಗೆ ಮೋಜೆನ್ನಿಸುವ ವಿವರಗಳು - ಇವುಗಳಿಂದ ನನಗೆ ಬಹಳೇ ಮೆಚ್ಚುಗೆಯಾಯಿತು.

ಈ ಕತೆಗಳನ್ನು ಬರೆದವರ ಬಗ್ಗೆ ಆಗ ನನ್ನಲ್ಲಿ ಕುತೂಹಲ ಮೂಡಿರಲಿಲ್ಲ. 'ಶ್ರೀನಿವಾಸ' ಎಂಬುದು ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಎಂಬುವವರ ಕಾವ್ಯನಾಮ ಎಂದು ತಿಳಿಯಲು ನನಗೆ ಮುಂದೆ ಆರು ವರ್ಷಗಳು ಬೇಕಾದುವು. ಇಂಗ್ಲೆಂಡಿನಿಂದ ಮರಳಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ನೌಕರಿ ಹಿಡಿದು ದಿ. ಪ್ರೊ. ಸಾಸನೂರು ಮುಂತಾದವರ ಪರಿಚಯವಾದ ಮೇಲೆಯೆ ನನಗೆ ಈ ಬಗ್ಗೆ ಹೆಚ್ಚು ಮಾಹಿತಿ ದೊರೆತದ್ದು. ಆದರೆ ೧೯೩೦ರಲ್ಲಿ ನಾನು 'ಕನ್ನಡ ನಾಟ್ಯವಿಲಾಸಿ ಸಂಘ'ದ ಸ್ಥಾಪನೆಗೆ ತೊಡಗಿದಾಗ 'ತಾಳೀಕೋಟೆ' ನಾಟಕವನ್ನೆ ಆರಿಸಿಕೊಂಡುದು ಒಂದು ಸೋಜಿಗದ ವಿಷಯವಾಗಿದೆ. (ಗಾಂಧಿಯವರ ಬಂಧನದ ನಿಮಿತ್ತ ಸಂಘದ ಪ್ರಾರಂಭೋತ್ಸವ ಆಗ ನಡೆಯಲಿಲ್ಲ) 'ರಂಗಪ್ಪನ ಕೋರ್ಟ್‌ಷಿಪ್'ವನ್ನು ಮೆಚ್ಚಿದ್ದಕ್ಕೂ ಇದಕ್ಕೂ ಸಂಬಂಧವಿರಬಹುದೆ.

ಇನ್ನೊಂದು ಸಂದರ್ಭ. ೧೯೩೪ರಲ್ಲಿ ನನ್ನ ವಿವಾಹದ ಒಂದು ತಿಂಗಳ ನಂತರ ನಾವು ನವ-ದಂಪತಿಗಳು ಬೆಂಗಳೂರಿಗೆ ಬಂದಿದ್ದೆವು. ಒಂದು ಸಾಯಂಕಾಲ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನನ್ನ ಭಾಷಣವಿದ್ದಿತು. ಆ ದಿನ ಮಧ್ಯಾಹ್ನದ ಊಟಕ್ಕೆ ಶ್ರೀ ಮಾಸ್ತಿಯವರು ನಮ್ಮನ್ನು ಆಮಂತ್ರಿಸಿದ್ದರು. ಸಾಯಂಕಾಲ ಭಾಷಣದ ಸಂದರ್ಭದಲ್ಲಿ ಮೊದಲು ಶ್ರೀ ಮಾಸ್ತಿ ಅವರು 'ಈ ದಿನ ನಮ್ಮಲ್ಲಿ ಶ್ರೀ ಜಹಗೀರದಾರರಿಗೆ ಖಾರವಾದ ಸಾರವನ್ನು ಉಣ್ಣಿಸಿದ್ದೇನೆ. ಅವನ ನಾಲಗೆ ಹಣ್ಣಾಗಿರುವ ಸಂಭವವಿದೆ' ಎಂಬ ಆಶಯದ

ಮಾತನ್ನು ಹೇಳಿದರು. ಮುಂದೆ ನನ್ನ ಭಾಷಣವಾಯಿತು. ಅದು ಅಲ್ಲಿ ನೆರೆದ ಅನೇಕರ ದೃಷ್ಟಿಯಿಂದ ಅತ್ಯಂತ 'ಖಾರ' ಎನ್ನಿಸಿತು. ನನಗೂ ಶ್ರೋತೃಗಳ ಮುಖಚರ್ಯೆಯಿಂದ ತಿಳಿದಿತ್ತು. ಆದುದರಿಂದ ಕೊನೆಗೆ ನಾನು 'ಈ ಹೊತ್ತಿನ ನನ್ನ ಭಾಷಣದಲ್ಲಿ ಏನಾದರೂ ಖಾರ ಇದ್ದರೆ ಅದರ ಜವಾಬ್ದಾರಿ ಶ್ರೀ ಮಾಸ್ತಿ ಅವರ ಮೇಲೆ' ಎಂದಂತೆ ನೆನಪು.

ಅಂದಿನಿಂದ ಇಂದಿನವರೆಗೆ ಬೇರೆ ಬೇರೆ ಸಂದರ್ಭಗಳಲ್ಲಿ, ಬೇರೆ ಬೇರೆ ಕಾರಣಗಳಿಗಾಗಿ ನನಗೆ ಶ್ರೀ ಮಾಸ್ತಿ ಅವರ ನಿಕಟ ಪರಿಚಯದ ಅವಕಾಶ ದೊರೆತಿದೆ. ೩೫-೪೦ ವರ್ಷಗಳ ಮುಂಚೆ ಶ್ರೀ ಮಾಸ್ತಿ ಅವರ ಹಿರಿಯರೆ ಆಗಿದ್ದರು; ನಾವು ಕಿರಿಯರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಲಾಪಗಳಲ್ಲಿ ನಮಗೂ ಅವರಿಗೂ ಭಿನ್ನಾಭಿಪ್ರಾಯವಾಗುತ್ತಿದ್ದಿತು. ಭಿನ್ನಾಭಿಪ್ರಾಯವೆಂದರೆ ಅಗೌರವವಲ್ಲ ಎಂಬ ವಿವೇಕವುಳ್ಳ ಕೆಲವೇ ಹಿರಿಯರಲ್ಲಿ ಶ್ರೀ ಮಾಸ್ತಿ ಅವರು ಒಬ್ಬರಾಗಿದ್ದರು. ಹಿರಿತನವೆಂದರೇನೇ ಅಧಿಕಾರ ಎಂದು ಎಂದಿಗೂ ತಿಳಿಯದೆ, ಎಲ್ಲರೊಡನೆಯೂ ಸಮನಾಗಿ ವರ್ತಿಸುವ ನಗೆಮೊಗದ ಶ್ರೀನಿವಾಸರು ವಯೋವೃದ್ಧ ತರುಣರಾಗಿ ಉಳಿದಿದ್ದರೆ ಆಶ್ಚರ್ಯವೇನು?

ಹೃದಯ ಕೃತಜ್ಞತೆಯಿಂದ ನಮ್ರವಾಗುತ್ತದೆ.

ಪು. ತಿ. ನರಸಿಂಹಾಚಾರ್

ಪೂಜ್ಯ ಮಾಸ್ತಿಯವರನ್ನು ನೆನೆದಾಗ ನನ್ನಂತೆ ಅನೇಕರ ಹೃದಯ ಕೃತಜ್ಞತೆಯಿಂದ ತುಂಬ ನಮ್ರವಾಗುತ್ತದೆ. ನಮ್ಮ ನಾಡು, ನಮ್ಮ ಜನ ಮತ್ತು ಸಂಸ್ಕೃತಿಗಳಿಗೆ ಅವರಷ್ಟು ಒಲಿದಿರುವವರು ವಿರಳ.

ಸಂಸ್ಕೃತದಲ್ಲೋ, ಇಂಗ್ಲಿಷಿನಲ್ಲೋ ಅದ್ದಿ ಮುಳುಗಿರುವ ಶ್ರೀಮಂತರಿಗೂ ಅಧಿಕಾರ ಸಂಪನ್ನರಿಗೂ ಕನ್ನಡದಲ್ಲಿ ಅಭಿಮಾನ ಸಹಜವಾಗಿಯೇ ತುಂಬ ಕಡಿಮೆ, ನಾವು ಸ್ವರಾಜ್ಯದಲ್ಲಿ ಸ್ವತಂತ್ರಜೀವನನ್ನು ನಡೆಸುತ್ತಿರುವ ಈ ಕಾಲದಲ್ಲೂ ಸಹ. ಅರವತ್ತು ವರ್ಷದ ಕೆಳಗೆ ಅದರ ದುರವಸ್ಥೆ ಹೇಳುವಂತಿಲ್ಲ. ಅದು ಆಗ ಪರರ ಮತ್ತು ತನ್ನವರ ಕರುಣೆಯ ಶಿಶು, ಇನ್ನೆಂದಿಗದು ತನ್ನ ಸ್ವಂತಕ್ಕೆ ಬಂದು ವಿರಾಜಿಸುತ್ತದೋ ಹೇಳಲು ಬರುವಂತಿಲ್ಲ. ನಮ್ಮ ಜನ ತಮ್ಮ ದೇಹಪುಷ್ಟಿಗೆ 'ತಕ್ಕ ಆಹಾರವನ್ನೂ, ಬುದ್ಧಿಯ ಪುಷ್ಟಿಗೆ ತಕ್ಕ ಬೋಧೆಯನ್ನೂ, ಆತ್ಮಪುಷ್ಟಿಗೆ ತಕ್ಕ ಭಾವನೆಗಳನ್ನೂ ಪಡೆದು ಕ್ರಿಯಾಶೀಲರಾದಾಗ ಅವರು ನಮ್ಮ ನುಡಿಗೆ ತಕ್ಕ ಮಾನಮರ್ಯಾದೆಯನ್ನು ಕೊಟ್ಟು ತಾವೂ ಬದುಕಿಯಾರು, ಎಂದರೆ ಇಂಥ ಮಮತೆ ನಾಡಿನ ತುಂಬು ಜೀವನವನ್ನು ಸೂಚಿಸುತ್ತದೆ. ಶ್ರೀಮಾಸ್ತಿಯವರು ಪ್ರರೂಢಾತ್ಮರು, ಪ್ರೌಢಾತ್ಮರು. ೮೦ ತುಂಬಿರುವ ಈ ಪೂಜ್ಯರು ಆ ಕಾರ್ಪಣ್ಯಕಾಲದಲ್ಲೂ ತಮ್ಮ ಹೃದಯದಲ್ಲಿ ಈ ಕನ್ನಡನಾಡು ನುಡಿ ಮತ್ತು ಜೀವನದ ವಿಷಯದಲ್ಲಿ ಈ ಮಮತೆಯನ್ನು ಹೇಗೆ ಪಡೆದರೋ ಅದೊಂದು ಆಶ್ಚರ್ಯಕರವಾದ ವಿಷಯ. ಅವರು ಹಾಗೆ ಪಡೆದುದು ನಮ್ಮ ನಾಡಿನ ಅದೃಷ್ಟ, ನಮ್ಮಂಥವರ ಭಾಗ್ಯ. ೧೯೨೪ರಲ್ಲಿ ಪ್ರಕಟವಾದ ಅವರ 'ಅರುಣ'ವೆಂಬ ಪದ್ಯ ಸಂಕಲನದ ಮುನ್ನುಡಿಯಲ್ಲಿ ನಮ್ಮ ತಾಯ್ನುಡಿಯಾದ ಕನ್ನಡವನ್ನು ಕುರಿತ ಈ ಚೆಲುವಾದ ಪದ್ಯ ಬರುತ್ತದೆ:

''ವೀಣೆಯ ತಂತಿಯಿಂದುಗುವ
ಸುಂದರ ಸುಸ್ವನದಂತೆ ಚೆಲ್ವು, ನೀ
ತಾರ್ಣದ ಕೇಳಿಯೊಳ್ ನಗುವ
ಬಾಲೆಯರಿಂಚರದಂತೆ ಮಂಜುಳಂ।
ಜಾಣನ ಭಾರದಿಂ ಕೆಡದ ಬಾಲನ
ಮೆಲ್ಲುಲಿವೊಲ್ಪಿ ಮೋಹಕಂ
ವಾಣಿಯ ಕೂರ್ಮೆಯಿಂ ಬೆಳೆದು
ಪೆರ್ಚಿದ ಭಾಷೆಯಿದೆಮ್ಮ ಕನ್ನಡಂ॥''

ಅವರ ಕಾವ್ಯವೆಲ್ಲ ಕನ್ನಡ ಮೇಲಣ ಗೌರವಾನ್ವಿತವಾದ ಈ ಅಭಿಮಾನ ಮತ್ತು ಪ್ರೇಮದಿಂದ ಪ್ರವೃತ್ತವಾಗಿದೆ. ಈ ಪ್ರೇಮದಲ್ಲಿ ದ್ವೇಷ ಬೆರೆತಿಲ್ಲದಿರುವುದೂ ದಿವ್ಯವಾದ

ವಿನಯ ಬೆರೆತಿರುವುದೂ ಸಹ ಆಶ್ಚರ್ಯಕರವಾದ ವಿಷಯವೇ. ಅವರು ಉನ್ನತಾಧಿಕಾರದಲ್ಲಿದ್ದಾಗಲೂ ಮತ್ತು ಸ್ವಂತ ಇಚ್ಛೆಯ ಮೇಲೆಗೆ ಅವಧಿಗೆ ಮುನ್ನವೇ ನಿವೃತ್ತರಾದ ಮೇಲೂ ಕನ್ನಡ ಕವಿಗಳ ಮತ್ತು ಅವರ ಕಾವ್ಯದ ವಿಷಯದಲ್ಲಿ ಸಹಔದಾರ್ಯದಿಂದ ನಡೆದುಕೊಳ್ಳುವುದನ್ನು ಎಲ್ಲಿ ಕಲಿತರೋ. ಅವರ ವ್ಯಕ್ತಿತ್ವವನ್ನು ನೆನೆದಾಗ ಎಷ್ಟೋ ಸುಭಾಷಿತಗಳು ನೆನಪಿಗೆ ಬರುತ್ತವೆ. ಗೂಢವಾಗಿ ದಾನ, ಮನೆಗೆ ಬಂದವರ ಸಂಕೋಚವನ್ನು ಮುರಿಯುವಂಥ ಸಂಭ್ರಮದ ಆತಿಥ್ಯ, ಪ್ರಿಯವನ್ನು ಮಾಡಿದರೂ ಹೇಳದೆ ಮೌನವಾಗಿದ್ದು ಬಿಡುವುದು, ಪರರ ಗುಣಗಳನ್ನು ಪ್ರಶಂಸಿಸುವುದು, ಸಿರಿಬಂದಾಗ ಗರ್ವಪಡದಿರುವುದು, ಹೆರರ ಅವಗುಣಗಳ ಬಗ್ಗೆ ಅನಾಸ್ಥೆಯಿಂದಿರುವುದು ಈ ಅಸಿಧಾರಾವ್ರತವನ್ನು ಪುಣ್ಯವಂತರಾದ ಆತ್ಮಶಾಲಿಗಳು ಮಾತ್ರ ನಡೆಸಬಲ್ಲರು. ಮಾಸ್ತಿಯವರು ಈ ಅಸಾಧಾರಾವ್ರತಗಳ ಪಂಕ್ತಿಗೆ ಸೇರತಕ್ಕವರು. ಮಂದಿಯನ್ನು ಕಳೆಗೆಡಿಸುದರಲ್ಲೇ ತಮ್ಮ ಹಿರಿಮೆಯನ್ನು ಕಾಣುವವರು ಹೆಜ್ಜೆ ಹೆಜ್ಜೆಗೆ ಕಣ್ಣಿಗೆ ಬೀಳುತ್ತಾರೆ; ತೇಜೋವರ್ಧಕರು ಅಪೂರ್ವ. ನಮ್ಮ ನಾಡಿನ ದೊಡ್ಡದುರಂತವದು. ಸಾವಿರಾರು ವರ್ಷಗಳ ಕಾಲ ಸ್ವಾತಂತ್ರ್ಯವನ್ನು ಕಳೆದುಕೊಂಡು ನಾವು ಪರಾಧೀನದಲ್ಲಿ ಪಳಗಿರುವುದರಿಂದ ಹೀಗಾಗಿದೆಯೇನೋ. ಅಸ್ವಸಂತ್ರರಿಗೂ ಕೃಪಣರಿಗೂ ಸನ್ ಮೌಲ್ಯಾನುವರ್ತನೆ ಕಷ್ಟ. ಆದರೆ ಈ ಅಸ್ವಾತಂತ್ರ್ಯ ಮತ್ತು ಕಾರ್ಪಣ್ಯಗಳಿಂದ ಮುಕ್ತರಾಗುವುದು ಸಂಯಮಿಗಳಾದ ದೈವ ಭಕ್ತರಿಗೂ ಧ್ಯೇಯಸಂಪನ್ನರಿಗೂ ಸಾಧ್ಯ. ಮಾಸ್ತಿಯವರನ್ನು ಶ್ರೀಮದ್ರಾಮಾಯಣ ಕಾಪಾಡುತ್ತಿದೆ. ಅದೆ ಅವರಿಗೆ ಪಿತೃದತ್ತವಾದ ಮಹದಾಸ್ತಿ. ವಾಲ್ಮೀಕಿ ಮಹರ್ಷಿ ಶ್ರೀರಾಮನಲ್ಲಿ ಅನೇಕ ದಿವ್ಯಗುಣಗಳಿತ್ತೆಂದು ಒಂದು ಮೌಲ್ಯಶ್ರೇಣಿಯನ್ನೇ ಕೊಟ್ಟಿದ್ದಾರೆ ಮಾಸ್ತಿಯವರು. ತಮ್ಮ ಮನಸ್ಸಿನಲ್ಲಿ ಈ ಮೌಲಿಕ ಗುಣಗಳನ್ನೂ ಅದಕ್ಕೆ ಆಕರನಾಗಿರುವ ಆ ಮಹಾಪುರುಷನನ್ನೂ ಸರ್ವದಾ ಇಟ್ಟುಕೊಂಡು ಆರಾಧಿಸುತ್ತಿರುವುದರಿಂದ ಈ ಸೌಜನ್ಯ, ಆ ಆದರ, ಈ ತೇಜೋವರ್ಧಕ ಗುಣಗಳನ್ನು ಸಹಜವಾಗಿ ಪಡೆದುಕೊಂಡಂತಿದೆ. ಸತ್ಪುರುಷರ ಸಹಜವಾದ ಸುಖಕ್ಕಿಂತ ಬೇರೊಂದು ಉತ್ತಮ ಸುಖ ಈ ಜಗತ್ತಿನಲ್ಲಿ ದೊರೆಯದು ಎಂದು ಒಂದು ಸುಭಾಷಿತ ಹೇಳುತ್ತದೆ. ಮಾಸ್ತಿಯವರು ಈ ಸುಖದ ಸವಿಯನ್ನು ಬಹು ಚೆನ್ನಾಗಿ ಬಲ್ಲರು. ಅವರ ಮಾತುಗಳಲ್ಲೂ ಕತೆಗಳಲ್ಲೂ ಅವರು ರಚಿಸಿರುವ ವಿಪುಲ ಸಾಹಿತ್ಯರಾಶಿಯಲ್ಲೂ ಈ ಅಪೂರ್ವಸುಖದ ಸೋಂಕು ನಮಗೆ ಲಭಿಸುತ್ತದೆ. ವ್ಯಾಸ, ವಾಲ್ಮೀಕಿ, ಕಾಳಿದಾಸ, ಗಯಟೆ, ಷೇಕ್ಸ್‌ಪಿಯರ್, ಶ್ರೀರಾಮಕೃಷ್ಣ, ರವೀಂದ್ರ, ಗಾಂಧಿ, ಆಳ್ವಾರುಗಳು, ಸಾಧುಸಂತರು ಈ ಮಹಾಮಹಿಮರಿಗೆಲ್ಲಾ ಇವರು ಆತಿಥೇಯರಾಗಿ ತಮ್ಮ ಸಾರಸ್ವತ ಸಂಪತ್ತಿನಿಂದ ಆರಾಧಿಸಿದ್ದಾರೆ. 'ವಾಗ್ದೇವತಾಚರಿತ ಚಿತ್ರಿತ ಚಿತ್ತಸದ್ಮ' ರಾರು ನಮ್ಮೀ ಕನ್ನಡ ನಾಡಿನಲ್ಲಿ ಎಂದು ಯಾರಾದರೂ ಪ್ರಶ್ನಿಸಿದಲ್ಲಿ ನಾವು ದಿಟ್ಟವಾಗಿ ಈ ಮಹಿಮರನ್ನು ತೋರಿಸಬಹುದಾಗಿದೆ.

16335

ಮಾಸ್ತಿಯವರು ರಚಿಸಿರುವ ಗ್ರಂಥಗಳ ಪ್ರಮಾಣ ಕಡಿಮೆಯಾದದ್ದೇನೂ ಅಲ್ಲ. ಅವುಗಳ ವಿಸ್ತಾರ ಸಾವಿರಾರು ಪುಟಗಳಲ್ಲಿ ಹರಡಿದೆ. ಇನ್ನೂ ಈ ನಿರ್ಮಾಣ ಅವಿಚ್ಛಿನ್ನವಾಗಿ ನಡೆಯುತ್ತಲೇ ಇದೆ. ಅವರದು ಬಹು ಮುಖ ಪ್ರತಿಭೆ. ಕತೆಗಳಂತೂ ಲೋಕ ವಿಶ್ರುತವಾಗಿವೆ. ಕನ್ನಡ ಸಾಹಿತ್ಯದಲ್ಲಿ ಏಕೆ ವಿಶ್ವಸಾಹಿತ್ಯದಲ್ಲೇ ಇವುಗಳ ಜತೆಗೆ ಇರಿಸಲು ಅರ್ಹವಾದ ಕತೆಗಳು ಬಹಳವಾಗಿ ಸಿಕ್ಕಲಾರವು. ಮಾಸ್ತಿಯವರು ಎರಡು

ಸಂಪುಟಗಳಲ್ಲಿ ಇವನ್ನು ಅಂದವಾಗಿ ಪ್ರಕಟಿಸಿ ಜನಕ್ಕೆ ಮಹೋಪಕಾರ ಮಾಡಿದ್ದಾರೆ. ಬೆಲೆ ತುಂಬ ಸುಲಭ ಎನ್ನಬೇಕು. ಜತೆಗೆ ಇನ್ನೂ ಹತ್ತೊಂಭತ್ತು ಸಂಪುಟಗಳಲ್ಲಿ ಅವರ ಬರಹಗಳೆಲ್ಲ ಸಂಗ್ರಹವಾಗಿ ಪ್ರಕಟವಾಗಿದೆ. ಎಲ್ಲ ಸಂಸ್ಕೃತಿ ಸಂಪನ್ನರ ಮನೆಗಳ ಮತ್ತು ವಿದ್ಯಾಶಾಲೆಗಳ ಪುಸ್ತಕಭಂಡಾಗಾರದಲ್ಲಿ ರಾರಾಜಿಸಬೇಕಾದ ಗ್ರಂಥಗಳಿವು. ಇವುಗಳ ತುಂಬ ಸನ್ಮನುಷ್ಯರ ಸದ್ಭಾವ ಒಂದು ಅಪೂರ್ವ ಸೌರಭದಂತೆ ಹರಡಿದೆ.

ಮಾಸ್ತಿಯವರಿಗೆ ತಾವು ಭಾರತೀಯರೆಂದೂ ಕನ್ನಡಿಗರೆಂದೂ ತುಂಬ ಹೆಮ್ಮೆ. ಗೋಖಲೆಯವರು ಒಂದು ಅಮೋಘವಾದ ಮಾತನ್ನಾಡಿ ಹೋಗಿದ್ದಾರೆ: ಇಂಗ್ಲಿಷಿನವರು ಇಂಗ್ಲೆಂಡಿನಲ್ಲಿ ಹೇಗಿದ್ದಾರೋ ನಾವು ಭಾರತೀಯರು ಭಾರತದಲ್ಲಿ ಹಾಗಿರಬೇಕು ಎಂದು. ಮಾಸ್ತಿಯವರ ಮಾತಿನ ಸರಣಿಯೂ ಈ ರೀತಿಯದು. ಆದರೆ ನಾವು ಭಾರತೀಯರು, ಭಾರತದಲ್ಲಿ ಇಂಗ್ಲಿಷಿನವರಂತೆ ಬಾಳಬೇಕೆಂಬ ಚಟದಲ್ಲಿ ವೃಥಾ ಬಳಲಿ ನಮ್ಮ ಸಕಲಶಕ್ತಿಗಳನ್ನೂ ಅಪವ್ಯಯ ಮಾಡುತ್ತಿರುವಂತಿದೆ. ಜನದಿಂದ ಮೂಲಶಕ್ತಿಯನ್ನು ಪಡೆದು ಅದನ್ನು ಬುದ್ಧಿ ಮತ್ತು ಆತ್ಮಸ್ತರಗಳಲ್ಲಿ ಶೋಧಿಸಿ ಸಂಸ್ಕರಿಸಿ ಬಳಸಿ ಭಾರತ ತನ್ನ ಎಲ್ಲ ಸಂಸ್ತರಗಳಲ್ಲೂ ಶ್ರೀಮಂತವಾಗಿ ಶೋಭಿಸುವಂತೆ ಮಾಡಬೇಕೆಂಬ ವಿಪುಳಾತ್ಮರ ಕಾಂಕ್ಷೆ ಎಂದಿಗೆ ಸಫಲವಾಗುತ್ತದೋ ನೋಡಬೇಕು. ಮಾಸ್ತಿಯವರ ವಿಚಾರಧಾರೆಯಲ್ಲಿ ಈ ಕಾಂಕ್ಷೆ ಹೊಳವು ಹಾಕುತ್ತಲೇ ಇರುತ್ತದೆ.

ನಮ್ಮ ನಾಡು ತುಂಬ ಹಿರಿಮೆಯುಳ್ಳದ್ದು. ನಮ್ಮ ಜನ ತುಂಬ ಒಳ್ಳೆಯ ಜನ, ನಮ್ಮ ಅಲ್ಪತನದಿಂದ ನಮ್ಮ ಹಿರಿಯರ ಹಿರಿಮೆ ಅಳಿಯುತ್ತದೆ, ನಾವೂ ಕೆಡುತ್ತೇವೆ, ಎಚ್ಚರಿಕೆ; ಪೌರುಷದಿಂದಲೂ, ಭೀತಿಯಳಿದ ತಾಳ್ಮೆಯಿಂದಲೂ, ಧೃತಿಯಿಂದಲೂ ದುರಭಿಮಾನವಿಲ್ಲದ ಆತ್ಮಾಭಿಮಾನದಿಂದಲೂ, ಕರ್ತವ್ಯ ತತ್ಪರತೆಯಿಂದಲೂ, ಸಂಪನ್ನರಾಗಿ ಲೋಕದ ಎಲ್ಲ ಶ್ರೀಮಂತ ಜನರಂತೆ ನೀವೂ ಬಾಳಿರಿ, ಜಗತ್ತನ್ನೂ ಬಾಳಿಸಿರಿ ಎನ್ನುತ್ತದೆ 'ಶ್ರೀನಿವಾಸ' ವಾಣಿ. ಒಂದೊಂದು ವೇಳೆ ಇವರ ದೈವಭಕ್ತಿ ಸಹ ದೇಶಭಕ್ತಿಯ ಒಂದು ಪ್ರಕಾರವೋ ಎನಿಸುತ್ತದೆ. ಇವರ ಸಾಹಿತ್ಯವನ್ನು ಓದುತ್ತಿದ್ದರೆ, ದೈವವನ್ನು ಒಲಿಸಿಕೊಳ್ಳುವುದಕ್ಕೆ ನಾಮಜಪ ಒಂದು ಉಪಾಯ. ಮಾಸ್ತಿಯವರು ಊರುಗಳ ಹೆಸರನ್ನು ಹೇಳಿಕೊಂಡೇ ನಾಡದೇವಿಯನ್ನು ಆರಾಧಿಸುವಂಥ ಜಾಣ್ಮೆಯನ್ನು ಹಲವಾರು ಪದ್ಯಗಳಲ್ಲೂ ಕಥನ ಕವನಗಳಲ್ಲೂ ಕತೆಗಳಲ್ಲೂ ತೋರಿದ್ದಾರೆ. ಅವುಗಳಲ್ಲಿ ಬಹು ಸಮೀಚೀನವಾಗಿರುವುದು 'ಕೊಂಬು' ಎಂಬ ಕವನ (ಚೆಲುವು ಪುಟ ೫೪) ''ಅರಳಮಲ್ಲಿಗೆ, ಮಲ್ಲಿಗೆವಾಳು, ಮಲ್ಲಿಗೇನ ಹಳ್ಳಿ; ಸಿರಸಿ ಸಂಪಿಗೆ, ಕೂಡುಮಲ್ಲಿಗೆ ಹುಲ್ಲೆಹಳ್ಳಿ, ಹರವು'' ಹೀಗೆ ಹೆಸರನ್ನು ನೆನೆನೆನೆದು ಸವಿಯುತ್ತ ಹೋಗುತ್ತದೆ ಮಾಸ್ತಿಯವರ ಮನಸ್ಸು. ನಮ್ಮ ತಾತಂದಿರು ಇಟ್ಟ ಈ ಹೆಸರುಗಳು ''ಜೇನು ಸರಿಯವೊಲು ಇನಿದು, ಬಲ್ಲವರ ಹಾಡಿನವೊಲು ಮೆಲಿತು'' ''ನಾಡೊಳಂದೊಗೆದ ಸೊಗದರವಿಂದದ ಮಾಧುರ ಮಕರಂದ! ಕೋಡಿಯಿಂದುದುರಿ ಹನಿ ಹರಳಾಯಿತು ಮೋದವೀಯಲೆಂದು'' ಈಗ ಭಾವ ನಾಡಿನ ದುಸ್ಥಿತಿಯನ್ನು ನೆನೆದು ವಿಷಾದಕ್ಕೆ ತಿರುಗುತ್ತದೆ, ಮತ್ತು ನಮ್ಮ ಉತ್ಸಾಹೀ ತರುಣರನ್ನು ನೋಡಿ ಆಸೆಗೊಂಡು ಜಾಗರ ಧ್ವನಿಯನ್ನು ನಿನದಿಸುತ್ತದೆ: ''ಕತ್ತಲು ಮುಚ್ಚಿಹ ಬಾಳಿರುಳಾಟಿಕೆ ಆಸೆಯ ಚಂದ್ರನನು! ಮತ್ತೆ ತನ್ನಿರಿ, ಬೆಳಕಲಿ ನಡೆಯಿರಿ; ಹೇಸಿ ಸೋಂಬತನವ'' ''ಮುತ್ತು ಮಾಣಿಕವ ಜೋಳದ ತೆರದಲಿ ಹರಿಯಿಸಿ ನಾಡಿನಲಿ! ಉತ್ತಮ ಚರಿತೆಂಉ ಚಿತ್ರಪತಾಕೆಯ ಮೆರೆಯಿಸಿ ಬಾನಿನಲಿ'' ಈ ಕವಿ ವಾಣಿಯನ್ನು ನಮ್ಮ ತರುಣರು

ವ್ಯರ್ಥವಾಗಲು ಪ್ರಾಯಶಃ ಬಿಡರು. ಹಾಳೂರನ್ನು ನೋಡಿ ಕವಿ ವಿಷಾದಗೊಳ್ಳುವ ಭಾವದಲ್ಲೂ ನಾಡಪ್ರೇಮ ಶೋಭನವಾಗಿ ಬೆಳಗುತ್ತದೆ. ''ಹಾಳೂರು'' ಎಂಬ ಪದ್ಯ (ಅರುಣ ಪುಟ ೧೪) ಇದಕ್ಕೆ ಸಮೀಚೀನವಾದ ಉದಾಹರಣೆ. ''ಅಂಗಳದೊಳೆಡೆಬಿಡದೆ ಬಗೆಬಗೆಯ ಮುಳ್ಳು! ರಂಗವಲ್ಲಿಗೆ ಬದಲು ಉಗಿನಿ ಹಂಬು॥'' ''ಇಂದುವಿಗೆ ಕಳೆಯೆಲ್ಲ ತುಂಬಿರಲು ಕಂಡು। ಚೆಂದಮಾಮ ಬಾ ಬಾ ಎಂಬರಿಲ್ಲ'' ''ಕಂದಕದಿ ನೀರೊಣಗಿ ವಿಗಡಿಸಲಿ ಕಾಡು। ಇಂದು ಈ ಊರಿಗೆ ಹಗೆಗಳಿಲ್ಲ'' ಕೊನೆಯ ಸಾಲಿನ ಶೋಕಹಾಸವನ್ನು ಏನೆಂದು ವರ್ಣಿಸೋಣ? ಮಮತೆಯಿಲ್ಲದೆ ಮರುಕವೆಂತು ಸಾಧ್ಯ? ಆದರೆ ನೋಡಿದರೆ ಸಂತೋಷವನ್ನು ತಂದು ಹೆಸರಿಗೆ ತಕ್ಕಂತೆ ಚಂದವನ್ನೂ ತೋರುವ ಹಳ್ಳಿಗಳೂ ಉಂಟು. ಅಂಥ ಒಂದು ಹಳ್ಳಿ ಕೋಗಿಲೆ ಮಾಸ್ತಿಯವರ ನಾಡೊಲವಿನ ಪದ್ಯಗಳಿಗೆ ಕಳಸವಿಟ್ಟಂತಿದೆ ಈ ಪದ್ಯ. ''ಕೋಗಿಲೆ ಕೋಗಿಲೆ ಎಂಥ ಹೆಸರು ಊರಿ 'ಗೆತಳಿರು' ಹೂವು ಸೊಗಯಿಸೆ। ಪರಿಮಳಿಸುವ ವನದಲಿ। ಮಲೆಯ ನೀರು ಸೇರಿ ನಡೆವ ಸರಳಿನೊಂದು ಬದಿಯಲ್ಲಿ ॥ ಅಲ್ಲಿ ಇಹುದು ಕೋಗಿಲೆ! ಎಂಥ ಸೊಗಸ ಊರದು, ಮೆಲ್ಲನುಸುರ ಹೆಸರನು । ಅಂತ ಸೊಗಸ ಹೆಸರದು ॥ ''ನಮ್ಮ ಜನದ ಮನದ ನಯ ಸಂತಸವನು ಸಾರುವ । ಚಿನ್ನದಂತ ಹೆಸರು ಮೆರೆವ ಶಾಂತಿಯೋಣಿ ಕೋಗಿಲೆ ॥ ಕೋಗಿಲೆ ಎಂಥ ಹೆಸರು ಊರಿಗೆ; ಹೋಗಿ ನೋಡು, ಊರನು। ಶಾಂತಿಯೊಂದು ನೆಲೆಯನು'' ಈ ಹಾಡು ಯಾವುದೋ ಒಂದು ಊರನ್ನು ಕುರಿತ ಹಾಡಲ್ಲ ಎಲ್ಲರಿಗೂ ಅವರವರ ಪ್ರೇಮದ ಊರನ್ನು ಕುರಿತದ್ದು, ನಮ್ಮೂರಿನಂಥದು.

ಸ್ವಾಭಿಮಾನ, ಸ್ವದೇಶಾಭಿಮಾನ, ಸ್ವಸಂಸ್ಕೃತಿ ಮತ್ತು ಸ್ವಭಾಷಾಭಿಮಾನಗಳು ಎಲ್ಲ ಮಾನವರ ಹೃದಯದಲ್ಲೂ ಇದ್ದೇ ಇರುತ್ತವೆ, ಆದರೆ ತುಂಬ ಸೀಮಿತವಾಗಿವೆ. ಸ್ವಾರ್ಥದಿಂದ ಸ್ವಾಭಿಮಾನದ ಎಲ್ಲೆಯನ್ನು ದೇಶಾಭಿಮಾನ, ವಿಶ್ವಮಾನ, ಮತಾಭಿಮಾನ, ವಿಶ್ವಜೀವಾಭಿಮಾನಕ್ಕೆ ವಿಸ್ತರಿಸುವುದು ಕಷ್ಟದ ಕೆಲಸ. ಎಲ್ಲ ಹಿಗ್ಗುವಿಕೆಗೂ ಒಂದು ಮಿತಿಯುಂಟು. ಈ ಗುಣವನ್ನು ವೃದ್ಧಿಸಿಕೊಳ್ಳುವುದು ಆತ್ಮ ಸಂಸ್ಕಾರದ ಪ್ರಶ್ನೆ. ಎಲ್ಲ ಸಂಸ್ಕಾರಗಳೂ ಸ್ವಸುಖದ ಬಲಿಯನ್ನು ಅಷ್ಟೋ ಇಷ್ಟೋ ಬೇಡುತ್ತವೆ. ಮಾಸ್ತಿಯವರು ಈ ಬೇಡುವಿಕೆ ಕೊಡುವಿಕೆಗಳ - ಈ ಬಲಿದಾನದ - ಒಂದು ವಾದ - ವಿವಾದವನ್ನು ತಮ್ಮ ''ವಾಮನ'' (ಮನವಿ ೧೩) ಎಂಬ ಮನೋಹರವಾದ ಗೀತದಲ್ಲಿ ಹೇಳಿದ್ದಾರೆ. ಮೊದಮೊದಲು ಬರುವಂದು ಮೆದುಗಮನದಲ್ಲಿ ಬಂದು । ಎದೆವುಗುವ ಸೊಬಗಿಂದೆ ಇನಿದನಿಯ ನಗೆಯಿಂದೆ । ಎದುರಿನಲಿ ನಿಂದಿರುತೆ ಎದೆಯ ಕುಂದಿಸದಂತೆ । ಮೊದಲು ಸ್ವಲ್ಪವನು ಕೇಳು ಹರಿಯೇ, ಮೊದಲು ಸ್ವಲ್ಪವನು ಕೇಳು ॥ ಮೊದಲು ಸ್ವಲ್ಪವ ಕೊಡಲು ಮನವು ತಾನೊಪ್ಪುವುದು । ಅದನ್ನು ಸ್ವೀಕರಿಸಿ ಹಿರಿದಾಗು ಅಲ್ಲಿಯೆ ದೊರೆಯೆ । ಹೃದಯದಾಗ ಸವನೆಲ್ಲವ ನೀನೆ ತುಂಬು ದೊರೆ । ಇದಕೆ ಮನ ಒಪ್ಪಬಹುದು ಹರಿಯೇ, ಇದಕೆ ಮನ ಒಪ್ಪಬಹುದು'' ಮಹಾತ್ಮಾ ಗಾಂಧೀಜಿಯವರ ಜೀವನ ಒಳಮೊರೆಯಂತಿದೆಯಲ್ಲವೆ ಈ ಮೊರೆ? ದೇವರೇಕೆ । ಎಲ್ಲ ದಿವ್ಯಮೌಲ್ಯಗಳಿಗೂ ಇದು ಅನ್ವಯಿಸುತ್ತದೆ. ನಮ್ಮ ಸ್ವಾಭಿಮಾನ ದೇಶಾಭಿಮಾನವಾಗಿ ತ್ರಿವಿಕ್ರಮನಾಗಬಲ್ಲ ವಾಮನರೂಪದ ಸ್ವಾಭಿಮಾನವಾದರೆ, ಅದು ಮೊದಲು ಸ್ವಲ್ಪವನ್ನು ಕೇಳಿ ನಮ್ಮದೆಲ್ಲವನ್ನೂ ಆಕ್ರಮಿಸಿ ನಮ್ಮನ್ನು ಧನ್ಯರನ್ನಾಗಿ ಮಾಡುತ್ತದೆ. ಅದು ದುರಭಿಮಾನ ನಿಷ್ಠವಾದರೆ ತನ್ನ ಹಿಗ್ಗನ್ನು ಕಳೆದುಕೊಂಡು ಆತ್ಮ ಕಂಟಕವಾಗುತ್ತದೆ. ನಾಡಿಗೇ ಅಹಿತವಾಗುತ್ತದೆ. ಮಾಸ್ತಿಯವರ ಸ್ವಾಭಿಮಾನಗಳು ವಾಮನ ತ್ರಿವಿಕ್ರಮರ ಬೆಳವಣಿಗೆಯ

ರೀತಿಯದು, ಸಂಯಮಿಗಳಿಗೆ ಮಾತ್ರ ಲಭ್ಯವಾಗತಕ್ಕದ್ದು. ''ಕೋಗಿಲೆ'' ಮುಂತಾದ ಪದ್ಯಗಳಲ್ಲಿ ವಾಮನ ತ್ರಿವಿಕ್ರಮರ ಪವಾಡವಿದೆ.

ಈಗ ಮಾಸ್ತಿಯವರ ದೇಶಭಕ್ತಿಯ ಮತ್ತೊಂದು ಪ್ರಕಾರವಾದ ದೈವಭಕ್ತಿಯನ್ನು ಕುರಿತು ಒಂದೆರಡು ಮಾತು ಅಪ್ರಕೃತವಾಗಲಾರದು. ಮಾಸ್ತಿಯವರು ದೈವಭಕ್ತರೆಂಬುದು ಅವರ ವ್ಯಕ್ತಿತ್ವ ಮತ್ತು ಸಾಹಿತ್ಯಗಳ ಪರಿಚಯವಿದ್ದವರೆಲ್ಲರಿಗೂ ವಿದಿತ. ಇದರಲ್ಲಿ ಹರಿಹರ ಮುಂತಾದ ಯಾವ ಭೇದವೂ ಇಲ್ಲ. ಪರಮಾತ್ಮ ಸರ್ವರಲ್ಲೂ ಅಂತರ್ಯಾಮಿಯಾಗಿರುವುದರಿಂದ ಯಾವ ಹೆಸರಿನಿಂದ ಕರೆದರೂ ಅದು ಅವನಿಗೆ ಸಮ್ಮತವೇ. ಈಶ್ವರಸ್ವರೂಪವನ್ನು ಇಂಥದೆಂದು ಹೇಳಲಾಗುವುದಿಲ್ಲ. ಭಕ್ತಿಯನ್ನು ನಿರ್ವಂಚಿಸುವುದೂ ಕಷ್ಟ. ಅದನ್ನು ಭೂಮದ ಹಿನ್ನೆಲೆಯಲ್ಲಿ ಸ್ವಮಿತಿ ಜ್ಞಾನ ಮತ್ತು ಸ್ವವಿಕಾಸೋದ್ಯಮ ಪ್ರವೃತ್ತಿಯೆಂದು ಕರೆಯಬಹುದು. ಶ್ರೀ ಮಾಸ್ತಿಯವರ ದೈವಭಕ್ತಿ ಅವರು ಮಾನವನಾಗಿ ತನ್ನ ಮಿತಿಗಳನ್ನು ಅರಿತುಕೊಂಡಿರುವುದರ ಮತ್ತು ಈ ಮಿತಿಗಳು ಭೂಮಾಭಿಗಮನಕ್ಕೆ ಅಡ್ಡಬರಬಾರದೆಂಬ ಹಂಬಲದ ಕುರುಹು ಇದು. ಎಲ್ಲ ಸಮಯದಲ್ಲೂ ಅವರ ಬೆಂಬಲಕ್ಕೆ ನಿಂತು ತಾರಕವಾಗಿದೆ, ಆತ್ಮ ಸಂಸ್ಕಾರವಾಗಿದೆ. ಎದೆಗುಂದಿದಾಗ ಅದು ಧೈರ್ಯವನ್ನು ಕೊಡುತ್ತದೆ, ಕಷ್ಟ ಒದಗಿದಾಗ ಸೈರಣೆಯನ್ನು ಕೊಡುತ್ತದೆ. ಚೆಲುವನ್ನು ಕಂಡಾಗ ಅದಕ್ಕೆ ಒಲಿಯುವ ಸೂಕ್ಷ್ಮಭಾವ ಸಂವೇದನೆಯನ್ನು ಅನುಗ್ರಹಿಸುತ್ತದೆ. ''ನೀನು ಮಂತ್ರಿಸಿದ ಮಣ್ಣಿನಗೊಂಬೆ ಮನುಜನೆನಿಸಿ ಕೊಂಡಿದೊ ನಡೆದಿಹೆನಾ'' ''ನೀ ಕೈಯಾಡಿಸಿ ನಡೆಸಿದ ವಸ್ತು ಒಳಿತಿರಲೇ ಮುಗಿವುದು, ಮತ್ತೇನು?। ''ನಿನ್ನ ನೋಟ ವಚಿಸಿತು : 'ಶುಭಮಸ್ತು' 'ನಿನ್ನಂಗುಲಿ ಮಂಗಲ ಸುರಧೇನು'' ''ಮೆತ್ತನ ಹಾಸಿಗೆ ಮುಳ್ಳಿನೊಲಾಗಿ। ಬೇನೆಯ ಕಣೆ ಆತ್ಮವನೇ ತಾಗಿ, ಇನ್ನು ಏನುಗತಿ ಎನ್ನುವ ವೇಳೆ, ಕೈ ಹಿಡಿದಿರು ಕರುಣೆ, ನೀನಾಗಿ. ''ಮಂಗಳದಲ್ಲಿ ವಿಶ್ವಾಸ, ದೈವಕರುಣೆಯಲ್ಲಿ ಈ ನಿಷ್ಠೆ, ಮಾಸ್ತಿಯವರನ್ನು ಈವರೆಗೆ ನಡೆಸಿಕೊಂಡು ಬಂದಿದೆ, ಸನ್ಮನುಷ್ಯರಾಗಿ ಬಾಳಿಸುತ್ತಿದೆ, ಸಹೃದಯತೆಯಿಂದಲೂ ಮಾನವೀಯತೆಯಿಂದಲೂ ವರ್ತಿಸುವಂತೆ ಮಾಡುತ್ತಿದೆ, ಮತ್ತು ಸೃಷ್ಟಿಯಲ್ಲಿ ಕಂಡುಬರುವ ಚೆಲುವೆಲ್ಲವನ್ನೂ ''ಕಾಣುವ ಸೃಷ್ಟಿಯ ಕಾಣದೆ ಸುತ್ತಿಹ ಆನಂದಾಬ್ಧಿಯ ಅಮೃತದ ತುಂತುರು'' ಎನಿಸುತ್ತಿದೆ.

ಅಣ್ಣ ಮಾಸ್ತಿ

ಅ.ನ.ಕೃಷ್ಣರಾಯ

ಅಣ್ಣ ಮಾಸ್ತಿಯವರ* ಪರಿಚಯ ನನಗೆಂದಾಯಿತೋ ನೆನಪಿಲ್ಲ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಇರಬಹುದು. ಆದರದು ನನ್ನ ಜೀವನದ ಸುದಿನವೆಂಬುದರಲ್ಲಿ ಸಂದೇಹವಿಲ್ಲ.

ಮಿತ್ರರೊಬ್ಬರೊಮ್ಮೆ "ಅಲ್ಲಮಪ್ರಭು, ಬಸವಣ್ಣನವರ ವ್ಯಕ್ತಿತ್ವಗಳನ್ನು ವಿಮರ್ಶಿಸುತ್ತಾ 'ಪ್ರಭುದೇವರನ್ನು ಕಂಡರೆ ತಂದೆಯನ್ನು ಕಂಡಂತಾಗುತ್ತದೆ, ಬಸವಣ್ಣನವರನ್ನು ಕಂಡರೆ ಪ್ರೀತಿಯ ಅಣ್ಣನನ್ನು ಕಂಡಂತಾಗುತ್ತದೆ" ಎಂದರು. ಆಚಾರ್ಯ ಶ್ರೀಯವರು, ಮಾಸ್ತಿಯವರನ್ನು ಕಂಡಾಗ ನನ್ನ ಅನುಭವ ಇದೇ ಆಯಿತು. ಮಾಸ್ತಿಯವರ ಬಗ್ಗೆ ನಾವು ವಹಿಸುವ ಸಲಿಗೆ ಶ್ರೀಯವರಲ್ಲಿ ತೋರಲು ಏಕೋ ಏನೋ ಮನಸ್ಸು ಹಿಂದೆಗೆಯುತ್ತಿತ್ತು.

ಮಾಸ್ತಿ ಇಂದು ಕನ್ನಡದ ಆಸ್ತಿ. ಐವತ್ತಕ್ಕೂ ಮಿಕ್ಕು ಗ್ರಂಥಗಳನ್ನು ಬರೆದಿದ್ದಾರೆ; ಹಲವು ಸಮ್ಮೇಳನಗಳ ಅಧ್ಯಕ್ಷಸ್ಥಾನ ವಹಿಸಿದ್ದಾರೆ; ಇವರು ಮಾಡಿರುವ ಉಪನ್ಯಾಸಗಳಿಗಂತೂ ಲೆಕ್ಕವೇ ಇಲ್ಲ. ಕನ್ನಡನಾಡಿನಲ್ಲಿ ಮಾತ್ರವಲ್ಲದೆ ಹೊರಗೂ ಮಾಸ್ತಿಯೆಂದರೆ ಒಂದು ಪೂಜ್ಯವಾದ, ಪ್ರಿಯವಾದ ಹೆಸರು. ಮಾಸ್ತಿಯನ್ನೊಮ್ಮೆ ಕಂಡವರು ಅವರನ್ನಪ್ಪಿಕೊಳ್ಳಲು ಧಾವಿಸುತ್ತಾರೆ.

ಮಾಸ್ತಿಯವರನ್ನು ಒಮ್ಮೆ ಎಲ್ಲಿಯಾದರೂ ಕಂಡವರು ಮರೆಯುವಂತಿಲ್ಲ. ವ್ಯಕ್ತಿ ಅಜಾನುಬಾಹುವಲ್ಲ, ದೃಢಕಾಯನಲ್ಲ; ಕುಬ್ಜವಾಮನನೂ ಅಲ್ಲ. ಸಾಧಾರಣ ಭಾರತೀಯ. ಅವರನ್ನು ನೋಡಿದಾಗ ಮೊದಲು ಕಣ್ಣಿಗೆ ಬೀಳುವುದು ಅವರ ಹಣೆಯ ಮೇಲೆ ವಿರಾಜಿಸುವ ತ್ರಿನಾಮ.

ಈ ವ್ಯಕ್ತಿಗೆ ಇಂಥ ಆಕರ್ಷಕಶಕ್ತಿ ಎಲ್ಲಿಂದ ಬಂತು? ಹೃದಯಗಳನ್ನಾಕರ್ಷಿಸಿ ಸೆರೆಹಿಡಿಯುವ ಇಂದ್ರಜಾಲ ಹೇಗೆ ಸಾಧಿಸಿತೆಂದು ಹಲವು ಸಲ ವಿಚಾರ ಮಾಡಿದ್ದೇನೆ. ಅವರ ಬಗ್ಗೆ ನನಗೆ ತಿಳಿದಿರುವ ಒಂದೆರೆಡು ಕತೆಗಳು ಈ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ಬಿಡಿಸಬಹುದು.

ಒಮ್ಮೆ ನಾನೂ ಮಾಸ್ತಿಯವರೂ ಆದವಾನಿಗೆ ಸಾಹಿತ್ಯ ಪರಿಷತ್ತಿನ ಅಧಿವೇಶನಕ್ಕೆ ಹೊರಟೆವು. ಗುಂತಕಲ್ಲು ನಿಲ್ದಾಣದಲ್ಲಿ ರೈಲು ಬದಲಾಯಿಸಿ ಮುಂಬಯಿ ಮೆಯಿಲ್ ಹತ್ತಬೇಕಾಗಿತ್ತು. ಜನಜಂಗಳಿ ನೋಡಿ ಮಾಸ್ತಿಯವರು ಸ್ತಬ್ಧರಾಗಿ ನಿಂತರು. ರೈಲು ಹೊರಟು ಹೋಗುವುದೆಂಬ ಭೀತಿಯಿಂದ ನಾನು ಅವರನ್ನು ಒಳಗೆ ದಬ್ಬಬೇಕಾಯಿತು. ಇಬ್ಬರೂ ನಿಂತೇ ಪ್ರಯಾಣ ಬೆಳೆಸಿದೆವು. ಎದುರುಗಿದ್ದ ಹಾಸಿಗೆ ಸುರುಳಿಯ ಮೇಲೆ

* 'ಕನ್ನಡ ಕುಲ ರಸಿಕರು' ಕೃತಿಯಿಂದ ಸಂಗ್ರಹಿಸಲಾಗಿದೆ.

ಮಾಸ್ತಿಯವರನ್ನು ಕೂಡಿಸಬೇಕಾದರೆ ನನಗೆ ಸಾಕು ಸಾಕಾಗಿ ಹೋಯಿತು. ಮಾಸ್ತಿಯವರು ಗೊಣಗಿಕೊಂಡೇ ಕುಳಿತರು. ಅವರ ಪಕ್ಕದಲ್ಲಿ ಸೀಟಿನ ಮೇಲೆ ಕುಳಿತಿದ್ದ ಒಬ್ಬ ದಪ್ಪ ಮುಂಡಾಸಿನವನು ಮಾತಿಗೆ ಆರಂಭಿಸಿದ. ಮಾಸ್ತಿ ನಗುನಗುತ್ತ ಅವನ ಚರಿತ್ರೆ ಹೊರಡಿಸಿದರು. ಆತ ಸೇಂದಿ ಕಂಟ್ರ್ಯಾಕ್ಟರ್. ನಾನು ಅವನಿಗೆ ಮಾಸ್ತಿಯವರ ಪರಿಚಯ ಮಾಡಿಕೊಳುತ್ತಾ 'ಇವರು ಮೈಸೂರಿನಲ್ಲಿ ಎಕ್ಸೈಜ್ ಕಮೀಷನರಾಗಿದ್ದರು' ಎಂದೆ. ಕಂಟ್ರ್ಯಾಕ್ಟರ್ ಮಠದ ಗುರುಗಳನ್ನು ಕಂಡರೆ ಏಳುವಂತೆ ಎದ್ದುನಿಂತು, ತನ್ನ ಪೀಠದಲ್ಲಿ ಕೂಡಬೇಕೆಂದು ಮಾಸ್ತಿಯವರನ್ನು ಅಂಗಲಾಚಿದ. ಮಾಸ್ತಿ ಶಯ್ಯಾಪೀಠ ಬಿಟ್ಟೇಳಲ್ಲಿಲ್ಲ. ನನ್ನ ತುಂಟತನ ಕಂಡು ನಸುನಗುತ್ತಾ ಇಂಗ್ಲಿಷಿನಲ್ಲಿ 'ಅವರು ನಿಮ್ಮ ಮಾಸ್ತಿಯನ್ನು ಗೌರವಿಸುತ್ತಿಲ್ಲ. ತಮ್ಮ ಎಕ್ಸೈಜ್ ಕಮೀಷರನ್ನು ಗೌರವಿಸುತ್ತಿದ್ದಾರೆ' ಎಂದರು.

ಇನ್ನೊಮ್ಮೆ ಫ್ರಾನ್ಸಿನಿಂದ ಬಂದಿದ್ದ ನನ್ನ ನಾದಿನಿ (ಆಕೆ ಫ್ರೆಂಚ್ ಹೆಣ್ಣುಮಗಳು) ಬೆಂಗಳೂರಿನ ಕೆಲವು ಶ್ರೇಷ್ಠ ಜೇಷ್ಠ ಸಾಹಿತಿಗಳನ್ನು ನೋಡಬಯಸಿದಳು. ಇಬ್ಬರು ಸಾಹಿತ್ಯಾಚಾರ್ಯರ ಭೆಟ್ಟಿ ಮಾಡಿಸಿದೆ. ಒಬ್ಬರು ಆಕೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೆಲಸ ದೊರೆಕಿಸಲು ಬಂದಿದ್ದಾಳೆ ಎಂದು ಭಾವಿಸಿ ಅದೇ ರೀತಿಯಲ್ಲಿ ಮಾತನಾಡಿಸಿದರು. ಇನ್ನೊಬ್ಬರು ಆಕೆಯ ಯೋಗಕ್ಷೇಮವನ್ನೂ ವಿಚಾರಿಸದೆ ತಮ್ಮ ಆತ್ಮಕಥೆಯನ್ನು ಸಾದ್ಯಂತವಾಗಿ ನಿರೂಪಣೆ ಮಾಡಿದರು. ಹೆಣ್ಣುಮಗಳು ಬೇಸತ್ತಿದ್ದಳು. ಕೊನೆಯದಾಗಿ ಮಾಸ್ತಿಯವರ ಭೆಟ್ಟಿಗೆ ಆಕೆಯನ್ನು ನಾನು ಬಲವಂತದಿಂದ ಕರೆದುಕೊಂಡು ಹೋಗಬೇಕಾಯಿತು. ಪರಿಚಯ ಮಾಡಿಕೊಟ್ಟದ್ದೂ ಆಯಿತು. ಹತ್ತೇ ನಿಮಿಷಗಳಲ್ಲಿ ಮಾಸ್ತಿ ಆಕೆಯ ಊರು, ಮನೆ, ತಂದೆ ತಾಯಿ, ಶಿಕ್ಷಣ ಎಲ್ಲ ವಿಷಯಗಳ ಬಗ್ಗೆ ಪ್ರಶ್ನೆಮಾಡಿ ತಿಳಿದುಕೊಂಡರು. ಫ್ರಾನ್ಸ್‌ದೇಶದ ಸಾಹಿತ್ಯ, ಜನತೆಯ ಬಗ್ಗೆ ಪ್ರಶ್ನೆಮಾಡಿ ತಿಳಿದುಕೊಂಡರು. ಫ್ರಾನ್ಸ್‌ದೇಶದ ಸಾಹಿತ್ಯ, ಜನತೆಯ ಬಗ್ಗೆ ತಮಗಿರುವ ಗೌರವ ವ್ಯಕ್ತ ಪಡಿಸಿದರು. ಕೂಡಲೆ ಒಳಗೆ ಹೋಗಿ ಸೌಭಾಗ್ಯವತಿಯನ್ನು ಕರೆದುಕೊಂಡು ಬಂದು 'ಈ ನಿಮ್ಮ ಫ್ರೆಂಚ್ ಸೋದರಿಯ ಪರಿಚಯ ಮಾಡಿಕೊಳ್ಳಿ' ಎಂದರು. ಪತಿಗೆ ತಕ್ಕ ಸತಿ. ಆ ತಾಯಿ ಅತಿಥಿಯನ್ನು ಒಳಗೆ ಕರೆದೊಯ್ದು ಉಪಚರಿಸಿ ಮನೆ, ವಸ್ತ್ರ, ಒಡವೆ, ಸಂಸಾರ ಚಿತ್ರವೆಲ್ಲವನ್ನೂ ತೋರಿದರು.

ಭೇಟಿ ಮುಗಿಸಿಕೊಂಡು ನಾವು ಹೊರಗೆ ಬಂದೆವು. ನನ್ನ ನಾದಿನಿಯ ಕಣ್ಣು ತುಂಬ ನೀರು. ಬುದ್ಧಿಜೀವಿಗಳಾದ ಫ್ರೆಂಚ್ ಜನ ಭಾವನಾಪರವಶರಾಗುವುದು ವಿರಳ. ನನ್ನ ನಾದಿನಿಯ ಹೃದಯ ತುಂಬಿಹೋಗಿತ್ತು. 'ಎಂಥ ಜನ'. 'ಎಂಥ ಸಂಸಾರ'. 'ಇದೇ ನಿಜವಾದ ಭಾರತ' ಎಂದಳು.

ಒಂದು ಸಲ ಒಂದು ವಿನೋದ ಪ್ರಸಂಗ ನಡೆಯಿತು. ನಾನು ಧಾರವಾಡಕ್ಕೆ ಹೊರಟ್ಟಿದ್ದೆ. ಅದೇ ಗಾಡಿಯಲ್ಲಿ ಮಾಸ್ತಿಯವರು ಶಿವಮೊಗ್ಗೆಗೆ ಹೊರಟ್ಟಿದ್ದರು. ಬೀರೂರಿನವರೆಗೆ ಒಟ್ಟಿಗೆ ಇಬ್ಬರೂ ಪ್ರಯಾಣ ಮಾಡಬೇಕಾಗಿತ್ತು. ಇಬ್ಬರೂ ಮಲಗಲ್ಲಿಲ್ಲ. ಹರಟೆಯಲ್ಲಿ ಸುಖವಾಗಿ ಕಾಲ ಕಳೆದವು. ಬೀರೂರಿನಲ್ಲಿ ಇಳಿದು ಶಿವಮೊಗ್ಗೆಯ ಗಾಡಿಗೆ ಹೋದರು. ಅವರು ಹೋದ ಬಳಿಕ ನಾನು ಹಾಸಿಗೆ ಉರುಳಿಸಲು ಹವಣಿಸುತ್ತಿದ್ದಾಗ ನನ್ನ ಕೈಗೊಂದು ಜಪಮಾಲೆ ಮಾಸ್ತಿಯವರು ಕುಳಿತಿದ್ದ ಸ್ಥಳದಲ್ಲಿ ಸಿಕ್ಕಿತು. ಜಪಮಾಲೆ ಅವರದೆಂದು ಭಾವಿಸಿ ನಾನು ಶಿವಮೊಗ್ಗೆಯ ಗಾಡಿಯ ಬಳಿಗೆ ಹೋಗಿ 'ನಿಮ್ಮ ಜಪಮಾಲೆ' ಎಂದೆ. ಮಾಸ್ತಿಯವರು ಅದನ್ನು ಕೈಗೆ ತೆಗೆದುಕೊಂಡು ಪರೀಕ್ಷಿಸಿ

ನೋಡಿ 'ಇದು ನನ್ನದಲ್ಲ. ಯಾರೋ ಮುಸ್ಲಿಂ ಭಕ್ತರದು. ಇಂಥ ಮಾಲೆ ನಾವು ಉಪಯೋಗಿಸುವುದಿಲ್ಲ'ಎಂದರು. ನನ್ನ ಅವಿವೇಕಕ್ಕೆ ನನಗೆ ನಾಚಿಕೆಯಾಯಿತು. ಮಾಸ್ತಿಯವರು ಮಾತು ಮುಂದುವರಿಸಿ 'ನಾನಷ್ಟು ಹಳೆಯಕಾಲದವನೇ? ತೀರಾ ನನ್ನ ಗತಯುಗಕ್ಕೆ ಸೇರಿಸಬೇಡೀಪ್ಪ'ಎಂದು ಪರಿಸ್ಥಿತಿಯ ಕನರನ್ನು ಮಾಸ್ತಿಯವರ ನಗೆ ಹೋಗಲಾಡಿಸಿತು.

ಮಾಸ್ತಿಯವರ ಮುಖಚರ್ಯೆದಲ್ಲಿ ಪ್ರಕಟವಾಗುವುದು ಅವರ ಸರಳ, ನಿಷ್ಕಲ್ಮಷ ಸ್ಮಿತವದನ. ಮಾಸ್ತಿಯವರ ಹಾಗೆ ನಗೆಬಲ್ಲವರು ವಿರಳ. ಬಾಳುವಿನ ನಗೆ ಕಂಡಿದ್ದವರಿಗೇ ಗೊತ್ತು, ನಗೆಯ ಅಮಾನುಷ ಲೀಲಾವಿಲಾಸ. ಮಾಸ್ತಿಯವರದು ತುಟಿಯಂಚಿನ ನಗೆಯಲ್ಲ. ಅದು ಹೃದಯದಿಂದ ತುಂಬಿ ಬರುತ್ತದೆ. ಈ ಜೀವದ ಮನುಸ್ಸು ಕನ್ನಡಿಯಂತೆ ಪರಿಶುದ್ಧವೆಂದು ಅವರ ನಗೆ ಸಾರಿ ಸಾರಿ ಹೇಳುತ್ತದೆ.

ದೊಡ್ಡವರ ಮನಸ್ಸನ್ನು ಸಾಮಾನ್ಯವಾಗಿ ಹೂವಿಗೆ ಹೋಲಿಸುವುದುಂಟು. ಅನೇಕ ಸಮಯಗಳಲ್ಲಿ ಇದು ಉತ್ಪ್ರೇಕ್ಷೆ. ಮಾಸ್ತಿಯವರಿಗನ್ವಯಿಸಿದಲ್ಲಿ ಇದು ಸಹಜೋಪಮೆ.

ಧಾರಾವಾಡದ ಸಾಹಿತ್ಯ ಮಿತ್ರರು, ನಾನು ಒಮ್ಮೆ ಮಾಸ್ತಿಯವರು ಮತ್ತು ಅವರ ಕೃತಿಗಳ ಮೇಲೆ ಭಾಷಣಮಾಡಬೇಕೆಂದರು. ನಾನು ಸಂತೋಷದಿಂದೊಪ್ಪಿ ಮೂರುವರೆ ಗಂಟೆ ಭಾಷಣ ಮಾಡಿದೆ - ಹೇಳಬೇಕಾದದ್ದು ಇನ್ನೂ ಇತ್ತು. 'ಸಂಯುಕ್ತ ಕರ್ನಾಟಕದ'ವರದಿಗಾರರು ಅದೇ ರಾತ್ರಿ ನನ್ನಲ್ಲಿ ಬಂದು ತಮ್ಮ ವರದಿ ತೋರಿಸಿ ನನ್ನ ತಿದ್ದುಪಡಿ, ಸೇರ್ಪಡೆಗಳನ್ನಂಗೀಕರಿಸಿ ಮಾರನೆಯ ದಿನ ತಮ್ಮ ಪತ್ರಿಕೆಯಲ್ಲಿ ಸುಮಾರು ಎರಡೂವರೆ ಕಾಲಮಿನಷ್ಟು ವರದಿ ಪ್ರಕಟಿಸಿದರು.

ಮಾಸ್ತಿಯವರ ಕಣ್ಣಿಗೆ ವರದಿ ಬಿತ್ತು. ಬೆಂಗಳೂರಿಗೆ ನಾನು ಹಿಂತಿರುಗಿದ ಕೆಲವು ದಿವಸಗಳ ಮೇಲೆ ಕೋಟೆಯಲ್ಲಿ ಅವರ ಭೇಟಿ ಅಕಸ್ಮಾತ್ತಾಗಿ ಲಭಿಸಿತು. ಜತೆಯಲ್ಲಿದ್ದ ತಮ್ಮ ಬೀಗರಿಗೆ ನನ್ನ ಪರಿಚಯ ಮಾಡಿಕೊಡುತ್ತಾ, 'ನನ್ನ ಮೇಲೆ ಇವರು ಮೂರು ಗಂಟೆ ಉಪನ್ಯಾಸ ಮಾಡಿದ್ದಾರೆ ಎಂದರು. ಅವರ ಧ್ವನಿಯಲ್ಲಿ ಆಶ್ಚರ್ಯ, ಆನಂದ, ಉತ್ಸಾಹ ತುಂಬಿ ತುಳುಕುತ್ತಿತ್ತು. 'ಅದೇನು ಹೆಚ್ಚಿನ ವಿಷಯ ಸರ್'ಎಂದೆ. 'ನಿಮ್ಮಂಥ ಮಿತ್ರರಿರುವುದೇ ನನ್ನ ಹೆಮ್ಮೆ'ಎಂದರು

ಆದರೆ ನಾನಷ್ಟು ಕುಸುಮಕೋಮಲನಲ್ಲ. ಸತ್ಯಕ್ಕೆ ಒರಟುತನ ಬೇಕೆನ್ನುವುದು ನನ್ನ ಆಗಿನ ಮತವಾಗಿತ್ತು. ಮಾಸ್ತಿಯವರ 'ಶಿವ ಛತ್ರಪತಿ' ನಾಟಕ ಪ್ರಕಟವಾದಾಗ ಅದನ್ನು ತೀವ್ರವಾಗಿ ಖಂಡಿಸಿ ವಿಮರ್ಶೆ ಬರೆದೆ. ಮಾಸ್ತಿಯವರು ತುಂಬ ನೊಂದುಕೊಂಡರೆಂದು ಉಭಯ ಮಿತ್ರರು ತಿಳಿಸಿದರು. ವಿಮರ್ಶೆ ಪ್ರಕಟವಾದ ಕೆಲವು ದಿನಗಳಲ್ಲಿಯೇ ಅವರೂ ನಾನೂ ಒಂದು ಸಮಾರಂಭದಲ್ಲಿ ಸೇರಿದ್ದೆವು. ಮಾಸ್ತಿಯವರ ವರ್ತನೆಯಲ್ಲಿ ಎಳ್ಳಷ್ಟೂ ಬದಲಾವಣೆಯಾಗಿರಲ್ಲಿಲ್ಲ. ಅವರ ಅಮರ ಕಾವ್ಯ 'ಯಶೋಧರಾ'ಪ್ರಕಟವಾದಾಗ ನನಗಾದ ಆನಂದ ಹೇಳತೀರದು. ಸರ್ ಎಡ್ವಿನ್ ಅರ್ನಾಲ್ಡರ 'ಲೈಟ್ ಆಫ್ ಏಷ್ಯಾ'ಕಾವ್ಯಕ್ಕೆ ಸರಿಗಟ್ಟುವ ಕನ್ನಡ ಕಾವ್ಯವೊಂದು ಬರಲಿ ಎಂದು ಹಾರೈಸುತ್ತಿದ್ದೆ. ಆ ಹಾರೈಕೆ ಸಫಲವಾಗಿತ್ತು, ಯಶೋಧರಾ ಕಾವ್ಯವನ್ನು ಮುಕ್ತಕಂಠದಿಂದ ಹೊಗಳಿ ವಿಮರ್ಶೆ ಬರೆದೆ. ಮಾಸ್ತಿಯವರಿಗಾದ ಆನಂದ ವರ್ಣಿಸಲಸದಳ.

ಸಂತೋಷವಾದರೆ ಸಂಕೋಚವಿಲ್ಲದೆ ಸೂಚಿಸುವ ಸರಳ ಸ್ವಭಾವ; ನೋವಾದರೆ ಒಳಗೆ ನುಂಗಿಕೊಂಡು ಮೌನವಾಗಿ ಅನುಭವಿಸುವ ಸಂಯಮ ಮಾಸ್ತಿಯವರ ಜೀವನದ

ನಂದಾದೀಪ.

ಕನ್ನಡಿಗರು ಕನ್ನಡಿಗರನ್ನು, ಕನ್ನಡ ಸಾಹಿತಿಗಳನ್ನು ಪ್ರೀತಿಸುವ ರೀತಿಯನ್ನು ಮಾಸ್ತಿಯವರಿಂದ ಕಲಿಯಬೇಕು. ಯಾರು ಏನೇ ಬರೆದು ತೆಗೆದುಕೊಂಡು ಹೋದರೂ, ಅದರಲ್ಲಿ ಒಂದು ಒಳ್ಳೆಯ ಗುಣವನ್ನು ಹುಡುಕಿ ಪ್ರಶಂಸಿಸುವ ಔದಾರ್ಯ. ನಾನು ೧೯೩೭ರಲ್ಲಿ 'ಕಿಡಿ' ಎಂಬ ಕಥಾಸಂಗ್ರಹ ಬರೆದೆ. ಮುನ್ನುಡಿಗೆ ಮಾಸ್ತಿಯವರ ಮರೆಹೊಕ್ಕೆ. ಸರ್ಕಾರದ ಕೆಲಸದ ಹೊರೆಯಲ್ಲಿಯೂ ಬಿಡುವು ಮಾಡಿಕೊಂಡು ಮುನ್ನುಡಿ ಬರೆದುಕೊಟ್ಟರು. ಅದರಲ್ಲಿ ಹೇಳಿದ್ದಾರೆ....'ನಮ್ಮ ಸಣ್ಣ ಕತೆಗಳ ವ್ಯಾಪ್ತಿಯನ್ನು ವಿಸ್ತಾರಪಡಿಸುವುದರಲ್ಲಿ ಶ್ರೀ.ಅ.ನ.ಕೃಷ್ಣರಾಯರು ಶ್ಲಾಘ್ಯವಾದ ಕೆಲಸವನ್ನು ಮಾಡಿದ್ದಾರೆ. ಈ ಮೊದಲೇ ಇವರ ಇತರ ಗ್ರಂಥಗಳಿಂದ ನಮ್ಮ ಜನರಿಗೆ ಇವರ ಪರಿಚಯ ಆಗಿದೆ. ಕೃಷ್ಣರಾಯರು ತಮ್ಮ ಸುತ್ತಣ ಬಾಳನ್ನು ಕೌತುಕದಿಂದ ನೋಡತಕ್ಕವರು; ಅದರ ಅಂಶಗಳನ್ನು ಕುತೂಹಲರಾಗಿ ಗ್ರಹಿಸುವರು; ಅದರಿಂದ ತಮ್ಮ ಮನಸ್ಸಿನಲ್ಲಿ ಹೊಮ್ಮುವ ಭಾವನೆಗೆ ಪ್ರತಿಭೆಯಿಂದ ಆಕಾರ ಕೊಡಬಲ್ಲರು....ಜೀವನದ ವ್ಯಕ್ತಿಗಳನ್ನು ಬರಹದಲ್ಲಿ ಹೀಗೆ ತರುವುದು ಹಿರಿಯ ಶಕ್ತಿ. ಇದರೊಂದಿಗೆ ಇವರ ಲೇಖನದಲ್ಲಿ ನೊಂದವರೊಡನೆ ನೋಯುವ ಕನಿಕರ, ಬಾಳಿನ ಅಲ್ಪತನವನ್ನು ಸಹಿಸದ ಒಂದು ಕೆಚ್ಚು, ಆಸೆಯಿಂದ ಕೂಡಿದ ಮುನ್ನೋಟ, ಮುಂದುವರಿಯಬೇಕೆಂಬ ಉತ್ಸಾಹ ಇವು ಕಾಣುತ್ತವೆ. ಇವೆಲ್ಲ ನಮ್ಮ ಸಾಹಿತ್ಯದಲ್ಲಿ ಅವಶ್ಯಕವಾಗಿ ಪ್ರಕಾಶವಾಗಬೇಕಾದ ಗುಣಗಳು. ಈ ಪುಸ್ತಕದಲ್ಲಿ ಈ ಗುಣಗಳು ಹಲವು ವ್ಯಕ್ತವಾಗಿದೆ...ನಮ್ಮ ಸಾಹಿತ್ಯದ ಬೆಳವಣಿಗೆಯನ್ನು ಆಕಾಂಕ್ಷೆಯಿಂದ ನೋಡುತ್ತಿರುವವರಿಗೆ ಇವರ ಲೇಖನಗಳಿಂದ ಒಂದು ರೀತಿಯಲ್ಲಿ ಆಸೆ ಮೊಳೆಯುತ್ತದೆ.

ನನ್ನ ಸಂಗ್ರಹಕ್ಕೆ ಇಷ್ಟೊಂದು ಒಳ್ಳೆಯ ಮಾತು ಹೇಳಿಸಿಕೊಳ್ಳುವ ಯೋಗ್ಯತೆ ಇದೆಯೋ ಇಲ್ಲವೋ ನಾನು ಕಾಣೆ. ಆದರೀ ಮಾತುಗಳು ಹೇಳಿದವರ ಹಿರಿತನ, ತಿಳಿಮನಸ್ಸು, ಕನ್ನಡದ ಮೇಲಣ ಅವ್ಯಾಜ ಪ್ರೇಮವನ್ನು ತೋರುತ್ತಿವೆ. ಮಾಸ್ತಿಯವರಿಗೆ ವಂದನೆಯರ್ಪಿಸುತ್ತಾ ನಾನು ಆಗ ಹೇಳಿದೆ.... 'ಅಂತಹ ನಿರ್ಮಲಾಂತಃಕರಣದ ಕನಸುಗಾರರು ನಮ್ಮ ಸಾಹಿತ್ಯದ, ನಮ್ಮ ಜನತೆಯ, ನಮ್ಮ ಸಂಸ್ಕೃತಿಯ ಸೇವೆ ಮಾಡುತ್ತಿರುವುದು ನಮ್ಮೆಲ್ಲರಿಗೂ ದೊಡ್ಡ ಹೆಮ್ಮೆಯ ವಿಷಯವೇ ಆಗಿದೆ,' ಎಂದು. ಇಂದಿಗೂ ನನ್ನ ಮನಸ್ಸು ಹೇಳುತ್ತಿರುವುದು ಅದೇ ಮಾತು.

ಈ ಮಧ್ಯೆ ನಾನೂ ಮಾಸ್ತಿಯವರೂ ಕೆಲವು ಸಲ ವಾದಿ ಪ್ರತಿವಾದಿಗಳಾಗಿ ಹೋರಾಡಿದ್ದೇವೆ. ವಾದದ ಮಾತು ಹೃದಯಗಳನ್ನು ಕಲುಷಿತಮಾಡಿಲ್ಲ. ನಾನು ಅನಾರೋಗ್ಯದಿಂದ ಮಲಗಿದ್ದೇನೆಂದು ತಿಳಿದರೆ ಸಾಕು, ನನ್ನ ಬಳಿಗೆ ಮೊದಲು ಧಾವಿಸುವುದು ಈ ಹಿರಿಯಣ್ಣನ ಜೀವ.

ಮಾಸ್ತಿಯವರಿಂದ ನಮ್ಮ ನಾಡಿನ ಹಿರಿಮೆ ಬೆಳೆಯಿತು. ಅವರ ಪರಿಶುದ್ಧ ಅಂತರಂಗದ ಪ್ರತೀಕಗಳಾಗಿ ನಿಂತಿವೆ ಅವರ ಹಲವು ಕೃತಿಗಳು. ಆದರೆ ಅವರ ಸ್ನೇಹ, ಸೌಜನ್ಯ, ಕರುಣೆ ಹಲವರ ಜೀವನವನ್ನು ಹಸನುಮಾಡಿದೆ. 'ಹೇಳದೆ ಧರ್ಮದ ಕಲಿಸುವ ಗುರುವಾಗಿ' ಪ್ರೇಯಸ್ಸಿನ ಮಾರ್ಗದಲ್ಲಿ ಶ್ರೇಯಸ್ಸಿಗೆ ಒಯ್ದಿದ್ದಾರೆ ಮಾಸ್ತಿಯವರು ಹಲವು ಮಿತ್ರರ ಬಾಳನ್ನು.

ಈ ಅಣ್ಣ ಚಿರಕಾಲ ಬಾಳಿ ಬದುಕಿ ಹೀಗೆಯೇ ತನ್ನ ನಗೆ ಬೆಳದಿಂಗಳನ್ನು ಚೆಲ್ಲಿ ನಮ್ಮನ್ನು ನಲಿಸಲಿ. ಅವರ ಬಾಳಿನೊಂದಿಗೆ ಬೆರೆತ ನಮ್ಮ ಬಾಳೂ ಅದೇ ನಂದನ ವನದಲ್ಲಿ ವಿಹರಿಸಲಿ.

ಹಿರಿಯಣ್ಣ ಮಾಸ್ತಿ

ನಿರಂಜನ

ಕನ್ನಡದ ಹಿರಿಯ ಬರಹಗಾರ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರಿಗೆ ಯಾವ ವಿಶೇಷಣ ಒಪ್ಪುತ್ತದೆ? ಪೂಜ್ಯ? ರಾಜ ಸೇವಾ ಪ್ರಸಕ್ತ ? ಅಕಾಡಮಿ ಪ್ರಶಸ್ತಿ ವಿಜೇತ? ಡಾಕ್ಟರ್? ಅಣ್ಣ? ಒಂದೊಂದೂ ಒಪ್ಪವಿಡುವ ಗುಣವಾಚಕವೇ. ಮಾಸ್ತಿ ಮತ್ತು ಶ್ರೀನಿವಾಸ. ಆಶ್ಚರ್ಯ! ಬರಿಯ ಶ್ರೀನಿವಾಸ ಎಂದರೆ ಚಿತ್ರ ಪೂರ್ಣವಾಗುವುದಿಲ್ಲ. 'ಮಾಸ್ತಿಯವರು' ಎನ್ನಬೇಕು. ಸಾಹಿತಿ ಶ್ರೀನಿವಾಸರಿಗಿಂತ ಮಾನವ ಮಾಸ್ತಿ ದೊಡ್ಡವರು ಎಂದೆ? ಛೆ! ಛೆ! ಇದು ಅರ್ಥವಿಲ್ಲದ ತಾರತಮ್ಯ. ಮಾಸ್ತಿಎಂಬುದೇ ಬಹುಜನಸಮ್ಮತವಾದ ಶುಭನಾಮ. ಎರಡು ಎರಡೂವರೆ ಕೋಟಿ ಕನ್ನಡಿಗರ ಪ್ರೀತ್ಯಾದರಗಳಿಗೆ ಪಾತ್ರರಾದ ರಸಋಷಿಯನ್ನು ಮಾಸ್ತಿ ಎಂಬ ಎರಡೇ ಅಕ್ಷರಗಳಿಂದ ಕರೆಯುವುದಾದರೂ ಹೇಗೆ? ಸಲ್ಲದು. ಹಿರಿಯಣ್ಣ ಮಾಸ್ತಿ ಎನ್ನಬೇಕು. ಅದೇ ಸೊಗಸು.

ಜೂನ್ ೬ ರ ವೇಳೆಗೆ ಹಿರಿಯಣ್ಣ ಮಾಸ್ತಿಯವರಿಗೆ ೮೧ ತುಂಬಿತು. ನಂಬುವುದು ಕಷ್ಟ. ತಮ್ಮ ಹೊಸ ಕೃತಿ 'ಭಾವ'ದ ಪ್ರಕಟಣೆಯ ಏರ್ಪಾಟು ಮಾಡಲು ತಾವೇ ಮುದ್ರಣಾಲಯಕ್ಕೆ ಬಂದಿದ್ದರಂತೆ. ದಿನವೂ ಸಂಜೆ ತಪ್ಪದೆ ಗಾಂಧಿಬಜಾರಿನ ದಾರಿಯಾಗಿ ಬಸವನಗುಡಿಯ ಕ್ಲಬ್ಬಿಗೆ ಅವರು ಬರುವರೆಂಬುದಕ್ಕೆ ಸಾಕ್ಷ್ಯ ನುಡಿಯ ಬಲ್ಲವರು ಸಹಸ್ರಾರು ಜನ. ಈಗಲೂ ನೇರ ನಡಿಗೆ, ಚಿಕಿತ್ಸಕನೋಟ, ಮೋಹಕನಗೆ, ಏನೇನೂ ಬಳಲಿಕೆ ತೋರದ ಗಂಟಲು. ೮೧ ಎಂದರೆ ನಂಬುವುದು ಹೇಗೆ? ಆದರೂ ದಾಖಲೆ, 'ಶ್ರೀಮಾನ್ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರು ಖರಸಂವತ್ಸರದ ಜ್ಯೇಷ್ಠಶುದ್ಧ ದ್ವಿತೀಯೆಯಂದು (೬-೬-೧೮೯೧) ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಮಾಸ್ತಿಯಲ್ಲಿ ಜನ್ಮವೆತ್ತಿದರು,' ಎನ್ನುತ್ತದೆ. ಇದ್ದೀತು, ಇದ್ದೀತು. . . .

ವಾಸ್ತವವಾಗಿ ವಯಸ್ಸಿನ ಗೊಂದಲಕ್ಕೆ ಕೈಹಾಕಬೇಕಾದುದೇ ಇಲ್ಲ. ಯಾಕೆಂದರೆ ಹಿರಿಯಣ್ಣ ಮಾಸ್ತಿಯವರು ಕಾಲದ ಪರೀಕ್ಷೆಯಲ್ಲಿ ಎಂದೋ ಉತ್ತೀರ್ಣರಾಗಿ, ಅಜರರು ಅಮರರು ಎನಿಸಿದ್ದಾರೆ. ನಿನ್ನೆ, ಇಂದು, ನಾಳೆ ಈ ಮೂರು ಅವಸ್ಥೆಗಳಲ್ಲೂ ವರು ವಂದ್ಯರು.

ಯಾಕೆ? ಸಹಸ್ರಾರು ವರ್ಷ ಕಳೆದ ಮೇಲೂ ಜಕಣಾಚಾರಿಯನ್ನು ನಾವು ನೆನಪಿಟ್ಟಿರುವುದಾದರೂ ಯಾಕೆ? ಆಧುನಿಕ ಕನ್ನಡ ಸಾಹಿತ್ಯದ ಮಹಾಸೌಧದ ಶಿಲ್ಪಿ ಶ್ರೇಷ್ಠರಲ್ಲವೆ ಶ್ರೀನಿವಾಸರು? ಮಾರ್ಗಪ್ರವರ್ತಕರಲ್ಲವೆ? ಅವರ ಹೆಜ್ಜೆ ಪಾಡನ್ನೇ ಅಲ್ಲವೆ ದೊಡ್ಡವರ ದಾರಿ ಎಂದು ಗುರುತಿಸಬೇಕಾದದ್ದು?

ಅಧ್ಯಯನದಲ್ಲಿ ಮಾಸ್ತಿಯವರು ಮೊದಲ ಪರೀಕ್ಷೆಯಿಂದ ಕೊನೆಯುವರೆಗೂ ಪ್ರಪ್ರಥಮ ಸ್ಥಾನವನ್ನು ಯಾರಿಗೂ ಬಿಟ್ಟುಕೊಡಲಿಲ್ಲವಂತೆ. ಎಲ್ಲರಿಂದಲೂ ಸಲಾಂ ಸಂಪಾದಿಸಿದ ವಸ್ತಾದಿಯೇ ಸರಿ! ಸಾಹಿತ್ಯದಲ್ಲಿ ಅವರಿಗೆ ಪ್ರಾಪ್ತವಾದದ್ದೂ ಪ್ರಪ್ರಥಮ

ಸ್ಥಾನವೇ ಅಲ್ಲವೇ? ಅವರು ಸರಕಾರೀ ಉದ್ಯೋಗದಲ್ಲಿದ್ದುದು, ಜಮಾಬಂದಿಗೆ ಹೋಗುತ್ತಿದ್ದುದು, ನಿಷ್ಠೆ ನಿಸ್ಪೃಹತೆಗಳಿಗಾಗಿ ಪ್ರಖ್ಯಾತರಾದುದು, ಆಡಳಿತದ ಏಣಿಯಲ್ಲಿ ಮೇಲಕ್ಕೆ ಏರಿದ ಅವರಿಗೆ ಮಂತ್ರಿ ಪದವಿ ಲಭಿಸಬೇಕಾಗಿದ್ದುದು - ಇದೊಂದೂ ಇಂದಿಗಾಗಲೀ, ನಾಳೆಗಾಗಲೀ ಮುಖ್ಯವಲ್ಲ. ಇದು ಮಸಕಾಗಿ ಮರೆಯಾಗುವ ಮುಖ. ಜಾಜ್ವಲ್ಯಮಾನವಾದದ್ದು, ವೈಭವದಿಂದ ಕೂಡಿದ್ದು, ಉನ್ನತ ಪೀಠದಲ್ಲಿ ವಿರಾಜಮಾನವಾಗಿರುವ ಅವರ ಸಾಹಿತ್ಯಬಿಂಬ. ಅದರೆದುರು ಅಕ್ಕರಪ್ರಿಯರು ಸ್ತುತಿ ಪಾಠಕರಾಗಬಹುದು; ಎಲ್ಲ ವಿಶೇಷಣಗಳ ಮಾಲೆ ಕೋದು ಪರಾಕು ನುಡಿಯಬಹುದು. ಅಂತಹ ಹಿರಿಮೆಯನ್ನು ಗಳಿಸಿದ್ದಾರೆ ಮಾಸ್ತಿಯವರು ತಮ್ಮ ಕಲಾ ಸೃಷ್ಟಿಗಳಿಂದ, ಪೂಜನ-ಚಿಂತನಗಳಿಂದ, ಅಖಂಡ ತಪಸ್ಸಿನಿಂದ.

೧೯೧೦ ರಲ್ಲಿ ಬರೆದ ಮೊದಲ ಕಥೆಯಾದ 'ರಂಗಪ್ಪನ ಮದುವೆ' ಯಿಂದ ಇತ್ತೀಚೆಗೆ ಪ್ರಕಟವಾದ 'ವಿಚಾರ' ದ ತನಕ, ಅರವತ್ತು ವರ್ಷಗಳ ಕಾಲ ಅವರು ಸೃಷ್ಟಿಸಿರುವ ಸಾಹಿತ್ಯದ ಹರವು ತಲೆದೂಗಿಸುವಂಥಾದ್ದು; ಲೋಕವೇದಿಕೆಯ ಕೀರ್ತಿಶಾಲಿ ಬರೆಹಗಾರರಿಗೆ ಸರಿ ದೊರೆಯಾಗುವಂಥಾದ್ದು.

ಪಂಪ ಹೇಗೋ ಹಾಗೆ:

ಕನ್ನಡಕಾವ್ಯ ಪ್ರಪಂಚದಲ್ಲಿ ಆದಿಕವಿ ಪಂಪ ಹೇಗೋ, ಕನ್ನಡ ಕಥಾ ಕ್ಷೇತ್ರದಲ್ಲಿ ಶ್ರೀನಿವಾಸರು ಹಾಗೆ!

ಕನ್ನಡ ಸಾಹಿತ್ಯೇತಿಹಾಸದಲ್ಲಿ ಮಾಸ್ತಿಯವರಿಗಿರುವ ಸ್ಥಾನವನ್ನು ಮೇಲಿನ ದೇಜಗೌ ನುಡಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಗುರುತಿಸುವುದು ಆಗದ ಮಾತು. ಈ ಕಥಾಕ್ಷೇತ್ರದ ವಿಸ್ತಾರದಲ್ಲಿಯೇ ಶಿಖರಪ್ರಾಯವಾದ ಎರಡು ಕಾದಂಬರಿಗಳನ್ನೂ ಮಾಸ್ತಿಯವರು ರಚಿಸಿದರು: 'ಚೆನ್ನಬಸವನಾಯಕ' ಹಾಗೂ 'ಚಿಕವೀರ ರಾಜೇಂದ್ರ,' ಕಾದಂಬರಿಯ ಶ್ರೇಷ್ಠ ಗುಣಗಳು ಈ ಕೃತಿಗಳಲ್ಲಿರುವುದರಿಂದಲೇ, ನೂರು ಟೀಕಾಸ್ತ್ರಗಳಿಂದ ಮೈ ಕುಕ್ಕಿಸಿಕೊಂಡರೂ ಇವು ಇಂದಿಗೂ ಶೋಭಾಯಮಾನವಾಗಿವೆ.

'ಇಂದಿರೆಯೊ, ಅಲ್ಲವೊ' 'ಮೊಸರಿನ ಮಂಗಮ್ಮ' 'ವೆಂಕಟಶಾಮಿಯ ಪ್ರಣಯ' 'ಹೇಮಕೂಟದಿಂದ ಬಂದ ಮೇಲೆ' ಮತ್ತಿತರ ಹಲವಾರು ಸಣ್ಣಕತೆಗಳು, ಕನ್ನಡ ಮಾತ್ರವಲ್ಲ ಇಡಿಯ ಭಾರತೀಯ ಸಾಹಿತ್ಯಕ್ಕೆ, ಆ ಮೂಲಕ ಲೋಕಸಾಹಿತ್ಯಕ್ಕೆ, ಮಾಸ್ತಿಯವರು ನೀಡಿರುವ ಕಾಣಿಕೆ, ಅವರ 'ಸುಬ್ಬಣ್ಣ' ನೀಳ್ಗತೆ ಮೂರು ತಲೆಮಾರಿನ ಓದುಗರ ಮನಸ್ಸನ್ನು ಸೂರೆಗೊಂಡಿದೆ ಎಂದರೆ ಅದೇನು ಕಡಿಮೆಯಾಯಿತೆ?

ಪ್ರಗತಿಶೀಲತೆಯ ಬೀರುಗಾಳಿ ಬೀಸಿದಾಗ, 'ಉಳ್ಳವರ ಸುಖಸಂತೋಷಗಳನ್ನಷ್ಟೆ ಶ್ರೀನಿವಾಸರು ಚಿತ್ರಿಸುತ್ತಾರೆ' ಎಂಬ ಟೀಕೆ ಕೇಳಿ ಬಂತು. ಇದೆಷ್ಟು ಹಾಸ್ಯಾಸ್ಪದವೆಂಬುದಕ್ಕೆ ಶ್ರೀನಿವಾಸರು ಚಿತ್ರಿಸಿದ ಪಾತ್ರಗಳ ಕುಲಗೋತ್ರಗಳ ಪಟ್ಟಿಯೊಂದೇ ಸಾಕು.

ಮಾಸ್ತಿಯವರ ಪ್ರಾಮಾಣಿಕತೆಗೆ ಎದುರು ಮಾತಿಲ್ಲ. ಕಲಾವಿದನ ಹಿರಿಮೆಗೆ ಇದಕ್ಕಿಂತ ಬೇರೆ ಒರೆಗಲ್ಲು ಬೇಕೆ? ಅವರು ಚಿತ್ರಿಸಿದ್ದು ಬದುಕಿನ ಸುಖದುಃಖಗಳನ್ನು. ಚಿತ್ರಣದುದ್ದಕ್ಕೂ ಮಾನವೀಯತೆಯ ನಸುಬೆಳಕು, ಅನುಕಂಪದ ಬೆಳದಿಂಗಳು. ಸಾಹಿತ್ಯ ಅಮೂಲ್ಯವೆನ್ನಿಸುವುದಕ್ಕೆ ಈ ದರ್ಶನ ಸಾಲದೆ?

ತಮ್ಮ ಅಭಿವ್ಯಕ್ತಿಗೆ ನಾಟಕದ ಪ್ರಕಾರವನ್ನೂ ಮಾಸ್ತಿ ಬಳಸಿದರು. 'ಯಶೋಧರಾ' 'ತಿರುಪಾಣಿ' 'ಕಾಕನಕೋಟೆ' 'ಶಿವಛತ್ರಪತಿ' 'ಮಾಸತಿ' ಮತ್ತಿತರ ನಾಟಕಗಳು

ಮಾಸ್ತಿಯವರ ರಸಸೃಷ್ಟಿಗಳು.

ಅದರಂತೆಯೇ, ಕಾವ್ಯ ಪ್ರಪಂಚದಲ್ಲಿ ಅವರ ದುಡಿಮೆಯ ಫಲ: ಅನೇಕ ಸುನೀತಗಳು, ಖಂಡ ಕಾವ್ಯಗಳಾದ 'ಮೂಕನ ಮಕ್ಕಳು' 'ಗೌಡರ ಮಲ್ಲಿ,' ಬೇರೆ ಕಥನಕವನಗಳು ಇವು ಮಾಸ್ತಿಯವರ ಹುಲುಸಾದ ಕಾವ್ಯಕೃತಿಗೆ ದೃಷ್ಟಾಂತಗಳು.

ಅವರು ಹಾಗೂ ಅವರ ಸಂಗಡಿಗರು ದುಡಿದ ಪುನರುದಯದ ಕಾಲದಲ್ಲಿ 'ಪರಸ್ಪರ ಪ್ರಶಂಸೆ'ಯೇ 'ವಿಮರ್ಶೆ' ಎನಿಸಿಕೊಂಡಿತ್ತು. ಅಂತಹ ಉನ್ಮಾದದ ವೇಳೆಯಲ್ಲಿ ವಿವೇಚನಾ ಪರರಾಗಿ ಮಾಸ್ತಿಯವರು ಹಲವು ವಿಮರ್ಶಾತ್ಮಕ ಲೇಖನಗಳನ್ನು ಬರೆದುದೊಂದು ಹೆಚ್ಚುಗಾರಿಕೆ.

ಕಾಲದ ಬೆಲೆ ಏನು? ಒಂದು'ವಸ್ತು' ಕುಲಿಮೆಯಲ್ಲಿ ಕುದಿದು ದ್ರವವಾಗಲು ಹಿಡಿಯುವ ವೇಳೆ ಎಷ್ಟು?

ತಮ್ಮ 'ಚೆನ್ನಬಸವನಾಯಕ' ಕೃತಿಯನ್ನು ಕುರಿತು ಶ್ರೀನಿವಾಸರೇ ಆಡಿರುವ ಕೆಲವು ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು.

'' ಈ ಕತೆಯನ್ನು ಬರೆಯುವ ಯೋಚನೆ ನನಗೆ ನಾನು ೧೯೨೦-೨೧ರಲ್ಲಿ ಚಿಕ್ಕ ಮಗಳೂರಿನಲ್ಲಿ ಸಬ್‌ಡಿವಿಷನ್‌ಆಫೀಸರ್ ಆಗಿದ್ದಾಗ ಬಂದಿತು. . . .ಆಗಲೇ ನಾನಿದನ್ನು ಬರೆಯಬೇಕು; ಅವಕಾಶವಿರಲಿಲ್ಲ. ಬೆಂಗಳೂರಿಗೆ ಬಂದಮೇಲೆ೧೯೨೨ ರಲ್ಲಿ ನಾನು ಇದರ ಒಂದು ಪರಿಜನ್ನು ಹಾಕಿಕೊಂಡೆನು; ೧೯೨೪ ರಲ್ಲಿ ಅರವತ್ತು ಪುಟಗಳನ್ನು ಬರೆದೆನು. ಆದರೆ ಒಟ್ಟಿಗೆ ಇದಕ್ಕಾಗಿಯೇ ಕುಳಿತುಕೊಳ್ಳದೆ ಕೆಲಸ ಮುಂಬರಿಯುವಂತಿರಲಿಲ್ಲ; ಆದ್ದರಿಂದ ಅದು ಅಲ್ಲಿಗೆ ನಿಂತಿತ್ತು.

ಆಮೇಲೆ ದಿನ ಕಳೆದಂತೆ ಸರಕಾರದ ಕೆಲಸ ಹೆಚ್ಚು ಹೆಚ್ಚಿನ ಪ್ರಮಾಣದಲ್ಲಿ ನನ್ನ ಶಕ್ತಿಯನ್ನೂ ತೆಗೆದುಕೊಂಡಿತು. ಹತ್ತೊಂಬತ್ತು ವರುಷ ಕಳೆದು ಸರಕಾರದ ಕೆಲಸ ಮುಗಿದಾಗ ಪರಿಷತ್ತಿನ ಕೆಲಸ ಐದು ವರುಷದ ದಿನ ನನ್ನ ಜೀವನವನ್ನು ಆಕ್ರಮಿಸಿಬಿಟ್ಟಿತು.

''ಅದೂ ಬಿಟ್ಟ ಮೇಲೆ ಕತೆ ಮುಂದುವರಿಯುವುದು ಸಾಧ್ಯವಾಯಿತು. . . . ''

ನಾಡನ್ನು ಕಟ್ಟಬೇಕು ಕನ್ನಡ ಜನಪದವನ್ನು ಒಂದಾಗಿ ಬೆಸೆಯಬೇಕು, ಸಾಹಿತ್ಯ ಪರಿಷತ್ತನ್ನು ಬಲಪಡಿಸಿ ಕನ್ನಡಕುಲದ ವಾಣಿಯಾಗಿ ಮಾಡಬೇಕು ಎಂದು ಕರ್ನಾಟಕದ ಉದ್ದಗಲದಲ್ಲಿ, ಧರ್ಮೋಪದೇಶಕನ ಉತ್ಸಾಹದಿಂದ ಮಾಸ್ತಿ ಓಡಾಡಿದರು. ಆದರೆ, ಬಾಹ್ಯ ಚಟುವಟಿಕೆಗಳ ಕೇಂದ್ರವಾಗಿದ್ದಾಗಲೂ ಕತೆಯೊಂದು ಒಳ ಮನಸ್ಸಿನಲ್ಲಿ 'ನೆನೆಯು'ತ್ತಲಿತ್ತು. . . .

ಮಾಸ್ತಿಯವರ ಚಿಂತನಪರತೆ ಅವರನ್ನು ಕ್ರಿಯಾಶೀಲವನ್ನಾಗಿ ಮಾಡಿದುದು ಕನ್ನಡದೊಂದು ಭಾಗ್ಯ. ಸಾಹಿತ್ಯಕವಲ್ಲದ ಅವರ ಚಟುವಟಿಕೆಗಳಿಗೆ ಪದರಗಳು ಎರಡು: ಒಂದು, ಜನತೆಯ ನಿತ್ಯ ಜೀವನದಲ್ಲಿ ತಾಯ್ನುಡಿಗಿರಬೇಕಾದ ಪ್ರಾಶಸ್ತ್ಯಕ್ಕೆ ಸಂಬಂಧಿಸಿದ್ದು; ಇನ್ನೊಂದು, ರಾಷ್ಟ್ರಜೀವನದಲ್ಲಿ ಪ್ರತಿಯೊಬ್ಬ ಪ್ರಜೆಯೂ ವಹಿಸಬೇಕಾದ ಪಾತ್ರವನ್ನು ಕುರಿತದ್ದು.

ಸ್ವತಃ ಕನ್ನಡದ ಶ್ರೇಷ್ಠ ಗದ್ಯಲೇಖಕರಾದ ಮಾಸ್ತಿಯವರು ಕನ್ನಡ ಭಾಷೆಯ ಶಕ್ತಿ ಸಾಮರ್ಥ್ಯಗಳನ್ನು ಚೆನ್ನಾಗಿ ಬಲ್ಲರು. ಜನಸಮುದಾಯದ ಬದುಕು ಹಸನಾಗಬೇಕಾದರೆ ರಾಜ್ಯದ ಆಡಳಿತ ಭಾಷೆ ಕನ್ನಡವಾಗಬೇಕು. ನಾಳೆಯ ವೇಳೆಗೆ ಹೆಚ್ಚು ಧೀಮಂತವಾಗಬೇಕಾದರೆ ಅದಕ್ಕೆ ಶಿಕ್ಷಣ ಮಾತೃಭಾಷೆಯಲ್ಲಿ ದೊರೆಯಬೇಕು. ಹರಿ ಹಂಚಿ

ಹೋದ ಕನ್ನಡನಾಡು ಒಂದಾಗಬೇಕೆಂದು ಹಿಂದೆ ಎಷ್ಟೊಂದು ಪರಿಣಾಮಕಾರಿಯಾಗಿ ಹೋರಾಡಿದರೋ ಭಾಷೆಗೆ ಸಂಬಂಧಿಸಿಯೂ ಅವರದು ಅಷ್ಟೇ ಬಲವಾದ ಆಗ್ರಹ.

ಲೋಕದ ಕಾರ್ಯರಂಗದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿರುವ ಭಾರತದಲ್ಲಿ ನಿರ್ವಹಿಸಬೇಕಾದ ಪಾತ್ರ ಯಾವುದು? ಈ ಬಗೆಗೆ ಮಾಸ್ತಿಯವರದು ಸ್ಫುಟವಿಚಾರ:

''ಭರತವರ್ಷದ ಮಕ್ಕಳು, ಮೊದಲಾಗಿ, ಮುಖ್ಯವಾಗಿ, ತಮ್ಮ ದೇಶದ ದೃಷ್ಟಿ ಯಾವುದು ಎಂದು ಯೋಚನೆ ಮಾಡಬೇಕು. ಬೇರೆ ದೇಶಗಳಲ್ಲಿ ಸಂಸ್ಕೃತಿ ಅನುಭವಗಳಿಂದ ಈ ದೃಷ್ಟಿಯನ್ನು ತಿದ್ದುಕೊಳ್ಳುವುದು ಅವಶ್ಯಕವೆನಿಸಬಹುದು. ಹಾಗೆ ಕಂಡಾಗ ಅದನ್ನು ತಿದ್ದಿಕೊಳ್ಳಬೇಕು; ಹಿಂತೆಗೆಯಬಾರದು. ಆದರೆ, ಮೂಲತಃ ದೃಷ್ಟಿ ಭರತವರ್ಷದ್ದಾಗಬೇಕು, ಇದು ಸಿದ್ಧಿಸಬೇಕಾದರೆ ನಾವೆಲ್ಲ ನಮ್ಮ ಪೂರ್ವಾರ್ಜಿತ ಸಂಸ್ಕೃತಿಯ ಸ್ವರೂಪವನ್ನು ಮನದಟ್ಟು ಮಾಡಿಕೊಳ್ಳಬೇಕು.''

ಈ ರೀತಿಯ ಪ್ರತಿಪಾದನೆಯನ್ನು ಮಾಸ್ತಿಯವರು ಲೇಖನಗಳ ಮೂಲಕ ಉಪನ್ಯಾಸಗಳ ಮೂಲಕ ಪರಿಣಾಮಕಾರಿಯಾಗಿ ಮಾಡುತ್ತಾರೆ. ಇಂತಹ ಕಾರ್ಯಶೀಲತೆ ಸಾಹಿತ್ಯ ಸೃಷ್ಟಿಗೆ ಅಡ್ಡಿಯಾಗುವುದಿಲ್ಲ. ಉದಾಹರಣೆಗೆ, ದೀರ್ಘಕಾಲ ಅವರು ನಡೆಸಿಕೊಂಡು ಬಂದ 'ಜೀವನ' ಮಾಸಪತ್ರಿಕೆ. ಇಲ್ಲಿ ಸಂಪಾದಕ ಮಾಸ್ತಿಯವರು ರಾಷ್ಟ್ರದ ಆಗುಹೋಗುಗಳಿಗೆ ಸಂಬಂಧಿಸಿ ನಿರ್ಭೀತಿಯಿಂದ ಬರೆದರು. ಕುಸುರು ತನದ ಜೊತೆಗೆ ಕೂರಲಗಿನ ತೀಕ್ಷ್ಣತೆಯೂ ಅವರ ಲೇಖನಿಯಲ್ಲಿ ಕಂಡು ಬಂದುದು ಈ ಸಂಪಾದಕೀಯ ಬರವಣಿಗೆಯಲ್ಲೇ.

ಮಾಸ್ತಿಯವರದು ಹಿರಿಯ ಸಂಸಾರ. ಅವರ ಪ್ರೋತ್ಸಾಹ ನೆರವುಗಳಿಂದ ಸಾಹಿತ್ಯ ಕೃಷಿ ಮಾಡಿದವರು ಅನೇಕ, ಅವರನ್ನು ಗುರು ಭಕ್ತಿಯಿಂದ, ಪೂಜ್ಯರೆಂಬ ಆದರ ಭಾವದಿಂದ ನೋಡುವವರ ಸಂಖ್ಯೆ ದೊಡ್ಡದು.

ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷತೆ, ಅಖಿಲ ಭಾರತ ಲೇಖಕರ ಸಮ್ಮೇಳನದ ಅಧ್ಯಕ್ಷತೆ, ಇಂತಹ ಗೌರವಗಳನ್ನು ಪಡೆದ ಮಾಸ್ತಿಯವರಿಗೆ ಕೇಂದ್ರ ಸಾಹಿತ್ಯ ಅಕಾಡಮಿಯ ಪಾರಿತೋಷಕ ದೊರೆಯಲಿಲ್ಲ ಎಂಬ ಕೊರಗು ಕನ್ನಡದ ಅನೇಕರನ್ನು ಕಾಡಿತು. ತಡವಾಗಿಯಾದರೂ, ಅದೊಂದು ಲೋಪವನ್ನು ಅಕಾಡಮಿ ಸರಿಪಡಿಸಿತು. ಶ್ರೀನಿವಾಸರ ಸಣ್ಣಕತೆಗಳ ಸಂಕಲನಕ್ಕೇ ಪಾರಿತೋಷಕ ದೊರೆತು, ಅವರ ಕತೆಗಾರಿಕೆಯ ಮೇಲ್ಮೆಗೆ ಪೂಜೆ ಸಂದಂತಾಯಿತು.

ಅರವತ್ತಕ್ಕೆ ಅರಳು ಮರುಳು ಎನ್ನುತ್ತಾರೆ. ಸಾಮಾನ್ಯ ಜನರ ವಿಷಯದಲ್ಲಿ ಹಾಗಿರಬಹುದು. ಮಾಸ್ತಿಯವರಿಗಾದರೋ ಅರವತ್ತು ಪ್ರಬುದ್ಧಾವಸ್ಥೆ. ಹೆಚ್ಚೆಂದರೆ ಈಗಿನದು ಇಳಿಮುಖವಾಗುತ್ತಿರುವ ಯೌವನಾವಸ್ಥೆ. ಮಧ್ಯವಯಸ್ಸು ಬರಲು ಇನ್ನೂ ಬಹಳ ದಿನ ಕಾಯಬೇಕು.

ಮೊದಲೊಮ್ಮೆ ಹೇಳಿದಂತೆ ಮಾಸ್ತಿಯವರ ವಿಷಯದಲ್ಲಿ ವಯಸ್ಸಿನ ಗೋಜು ಅರ್ಥವಿಲ್ಲದ್ದು. ಅವರು ಕಾಲದ ಪರೀಕ್ಷೆಗೆ, ಎಂದೋ ಅಣಿಯಾಗಿನಿಂತ ಹಿರಿಯಣ್ಣ.

ಪಾರಿಜಾತ ಹೂವು

ಬಸವರಾಜ ಕಟ್ಟೀಮನಿ

ಡಾ. ಮಾಸ್ತಿ 'ಶ್ರೀನಿವಾಸ'ರು ನಮಗೆ ತಮ್ಮ ಸಣ್ಣ ಕಥೆಗಳಿಂದಲೂ ಪ್ರಿಯರಾದವರು, ವೈಯಕ್ತಿಕವಾಗಿಯೂ ಪ್ರಿಯರಾದವರು, ಆದರಣೀಯರಾದವರು.

ಚಿಕ್ಕವನಾಗಿದ್ದಾಗ ಶ್ರೀನಿವಾಸರ ಸಣ್ಣಕಥೆಗಳನ್ನೂ ನಾಟಕಗಳನ್ನೂ ಓದಿ ನಾನು ಮುಗ್ಧನಾದುದಿತ್ತು. ಅವರು ಬರೆದ ಎಲ್ಲ ಕಥೆಗಳನ್ನೂ ಕಾದಂಬರಿಗಳನ್ನೂ ಓದಿದ್ದೇನೆ. ಕವಿತೆಗಳನ್ನು ಮಾತ್ರ ಓದವುದಕ್ಕಾಗಲಿಲ್ಲ.

ಶ್ರೀ ಮಾಸ್ತಿಯವರನ್ನು ನಾನು ಮೊದಲು ನೋಡಿದುದು ಮೂವತ್ತು ವರ್ಷಗಳ ಹಿಂದೆ, ಧಾರವಾಡ ಸಾಹಿತ್ಯ ಸಮ್ಮೇಳನದ ಸಮಯದಲ್ಲಿ. ಆಗ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದಂತೆ ನೆನವು. ಮೈಸೂರು ಸಂಸ್ಥಾನದ ಪ್ರಜೆಗಳ ರಾಜಭಕ್ತಿ ನಮಗೆ ಅರ್ಥವಾಗುತ್ತಿರಲ್ಲಿಲ್ಲ. ಶ್ರೀಮಾನ್ ಮಾಸ್ತಿಯವರೂ 'ರಾಜಸೇವಾಸಕ್ತ'ರಾಗಿದ್ದರು. ಆ ಕಾಲದಲ್ಲಿ ನಾನು ಗದುಗಿನ ವಾರಪತ್ರಿಕೆಯೊಂದರಲ್ಲಿ ಉಪಸಂಪಾದಕನಾಗಿದ್ದೆ. ಸಾಹಿತ್ಯ ಸಮ್ಮೇಳನದ ವಿಚಾರವಾಗಿ ಬರೆಯುವಾಗ ಪರಿಷತ್ತಿನ ರಾಜಭಕ್ತಿಯನ್ನು ಕುರಿತೂ ಆ ಪತ್ರಿಕೆಯಲ್ಲಿ ಕೊಂಚ ಟೀಕೆ ಬಂದಿತ್ತು. ಶ್ರೀ ಮಾಸ್ತಿಯವರು ಅದನ್ನೋದಿ ನೊಂದುಕೊಂಡದ್ದು ಸಹಜ. ಸಮ್ಮೇಳನದಲ್ಲಿ ಮಾತಾನಾಡುವಾಗ ಅವರು ಆ ಪತ್ರಿಕೆಯ ಹೆಸರು ಹೇಳಿ, ಅದರ ಟೀಕೆಯ ಬಗೆಗೆ ಅಸಮಾಧಾನ ವ್ಯಕ್ತಗೊಳಿಸಿದರು. ''ಇಂಥ ಅವಿನಯ ಬರವಣಿಗೆ ಸಾಧುವಲ್ಲ'' ಎಂಬುದಾಗಿ ಅವರು, ತಮ್ಮ ನಯವಾದ ಭಾಷೆಯಲ್ಲಿಯೇ ಹೇಳಿದರು.

ಆ ಟೀಕೆಯಲ್ಲಿ 'ಅವಿನಯ'ವೇನಿದ್ದಿತೆಂಬುದು ನಮಗೆ ತಿಳಿಯಲ್ಲಿಲ್ಲ. ತಮಗೆ ಸರಿಯೆಂದು ತೋರಿದ ವಿಚಾರವನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸುವ ಸ್ವಾತಂತ್ರ್ಯ ಪತ್ರಿಕೆಗಳಿಗಿಲ್ಲವೆ? ಎಂದುಕೊಂಡು, ನಾವು ಆ ವಿಷಯವನ್ನು ಅಷ್ಟಕ್ಕೇ ಬಿಟ್ಟುಕೊಟ್ಟೆವು.

'ಉಷಾ' ಮತ್ತು 'ಸ್ವತಂತ್ರ' ಪತ್ರಿಕೆಗಳ ಸಂಪಾದಕನಾಗಿದ್ದ ಕಾಲದಲ್ಲಿ ನಾನು ಬೆಂಗಳೂರಿನಲ್ಲಿಯೇ ಇದ್ದೆನಾದರೂ ಶ್ರೀ ಮಾಸ್ತಿಯವರನ್ನು ಭೆಟ್ಟಿಯಾಗಿ ಮಾತನಾಡುವ ಸಾಹಸಕ್ಕೆ ತೊಡಗಲ್ಲಿಲ್ಲ. ಅವರು ಅತ್ಯಂತ ಕೋಮಲ ಮನಸ್ಸಿನವರು,ನಾನಾಗರೋ ಹಿಂದುಮುಂದೆ ನೋಡದೆ ಸ್ಪಷ್ಟವಾಗಿ ಮಾತನಾಡತಕ್ಕವನು, ನಮ್ಮಂಥವರ ನುಡಿಗಳಿಂದ ಅಂಥ ಹಿರಿಯರ ಮನಸ್ಸು ನೋಯಿಸುವುದು ಸರಿಯಲ್ಲವೆಂದುಕೊಂಡು ನಾನು ಅವರಿಂದ ದೂರದಲ್ಲಿಯೇ ಇದ್ದುಬಿಟ್ಟೆ.

ಶ್ರೀ ಮಾಸ್ತಿಯಪರನ್ನು ನೋಡಿದಾಗಲೆಲ್ಲ ನನಗೆ ಪಾರಿಜಾತದ ಹೂವನ್ನು ನೋಡಿದಂತಾಗುತ್ತಿತ್ತು. ಅವರ ವ್ಯಕ್ತಿತ್ವ, ಅವರ ಮಾತು, ಅವರ ಸಾಹಿತ್ಯ ಕೃತಿ ಎಲ್ಲವೂ ಪಾರಿಜಾತದಂತೆಯೆ. ಆ ಹೂವನ್ನು ದೂರದಿಂದ ನೋಡಿಯೇ ಆನಂದ ಪಡಬೇಕು. ಕೊಂಚ

ಒರಟುತನದಿಂದ ಅದನ್ನು ಮುಟ್ಟಿದರೂ ಸಹ ಅದರ ಅಂದ ಕೆಡುತ್ತದೆ.

ಅವರ ಮನಸ್ಸು ನೋಯಿಸಬಾರದೆಂದು ನಾನು ಎಷ್ಟೇ ಎಚ್ಚರಿಕೆ ವಹಿಸಿದರೂ, ಪತ್ರಿಕೆಯಲ್ಲಿನ ಕೆಲವು ಲೇಖನಗಳಿಂದಲೂ ವಿಮರ್ಶೆಗಳಿಂದಲೂ ಅವರು ನೊಂದುಕೊಳ್ಳುವ ಪ್ರಸಂಗಗಳು ಬಾರದಿರಲಿಲ್ಲ. ಅವರ 'ನವರಾತ್ರಿ'ಯನ್ನು ಕೊಂಚ ಕಠೋರವಾಗಿಯೇ ವಿಮರ್ಶಿಸಿ ಮಿತ್ರರೊಬ್ಬರು ಬರೆದಿದ್ದ ಲೇಖನ 'ಉಷಾ'ದಲ್ಲಿ ಪ್ರಕಟವಾಯಿತು. ಸಂಪಾದಕನಾಗಿ ಆ ಬರಹವನ್ನು ಪ್ರಕಟಿಸುವುದು ನನ್ನ ಕರ್ತವ್ಯವೇ ಆಗಿದ್ದಿತು. ಆದರೂ, ಮನಸ್ಸಿನ ಒಂದು ಮೂಲೆಯಲ್ಲಿ ತುಂಬಾ ಕಳವಳ. ಪಾರಿಜಾತ ಪುಷ್ಪದೊಡನೆ ಈ ರೀತಿ ವರ್ತಿಸುವುದು ಸರಿಯೆ? ಸರಿಯೆ? ಎಂದು.

ಆಗ ಪ್ರಗತಿಶೀಲ ಸಾಹಿತ್ಯದ ಚಳುವಳಿ ರಭಸದಿಂದ ನಡೆಯುತ್ತಿತ್ತು. ಮಾಸ್ತಿ, ಡಿ.ವಿ.ಜಿ. ಮೊದಲಾದವರ ಕೃತಿಗಳಲ್ಲಿ ಬಡಜನರ ಜೀವನದ ಚಿತ್ರಣವೇ ಇಲ್ಲ, ಅವರು ಪ್ರತಿಗಾಮಿಗಳು, ಸಂಪ್ರದಾಯಶೀಲರು - ಎಂದೆಲ್ಲ ಟೀಕೆ ಬರುತ್ತಿತ್ತು. ಅದು, ಸಾಧುವಾದ ಟೀಕೆಯಲ್ಲವೆನ್ನುವುದು ನನಗೆ ಕೆಲದಿನಗಳಲ್ಲಿಯೇ ಮನವರಿಕೆಯಾಯಿತು. ಮಾಸ್ತಿಯವರ ಕಥೆಗಳಲ್ಲಿ ಬಡಜನರ ಬಾಳೂ ಚಿತ್ರಿತವಾಗಿದ್ದಿತು. ಕಲಾತ್ಮಕವಾದ ರೀತಿಯಲ್ಲಿ, ಗುಲ್ಲು-ಗಲಭೆ-ಆರ್ಭಟ ಅವರಿಗೆ ಹಿಡಿಸುತ್ತಿರಲಿಲ್ಲ. ಅಲ್ಲದೆ, ಲಲಿತಸಾಹಿತ್ಯದಲ್ಲಿ ಇಂಥ ಬಿರುಸಿನ ಪ್ರಚಾರಕ್ಕೂ ಆಸ್ಪದವಿಲ್ಲವೆಂಬ ಸತ್ಯಾಂಶ ಹೊಳೆಯುತ್ತಲೂ ಅವರ ವಿರುದ್ಧವಾಗಿ ನಡೆದಿದ್ದ ಚಳವಳಿಯಿಂದ ನಾನು ದೂರ ಸರಿದೆ. ಶ್ರೀ ಎಲ್. ಎಸ್. ಶೇಷಗಿರಿರಾಯರ ಬರಹಗಳಿಂದ, ಶ್ರೀ ಮಾಸ್ತಿಯವರ ಸಾಹಿತ್ಯ ಕೃತಿಗಳ ನಿಜವಾದ ಮೌಲ್ಯವನ್ನು ನಾನು ಕಂಡುಕೊಂಡೆ. ಅವರಿಗೆ ನನ್ನ ಧನ್ಯವಾದಗಳು.

ಬೆಂಗಳೂರು ತ್ಯಜಿಸಿ, ಹಳ್ಳಿಗೆ ಹಿಂತಿರುಗಿ ಲಲಿತಸಾಹಿತ್ಯದ ರಚನೆಯಲ್ಲಿ ನಿರತನಾದೆ. ನನ್ನ ಕಥಾ ಸಂಕಲನವೊಂದನ್ನು ಪೂಜ್ಯ ಮಾಸ್ತಿಯವರಿಗೆ ಅರ್ಪಿಸುವುದರ ಮೂಲಕ ಅವರ ಬಗೆಗೆ ನನ್ನಲ್ಲಿದ್ದ ಆದರದ ಭಾವನೆಯನ್ನು ವ್ಯಕ್ತಗೊಳಿಸಬೇಕೆನ್ನಿಸಿತು. ಅವರ ಅನುಮತಿ ಕೇಳಿ ಕಾಗದ ಬರೆದೆ. ಅವರು ಅತ್ಯಂತ ಪ್ರೀತಿಯಿಂದ ಉತ್ತರ ಬರೆದರು.

'ಚೆನ್ನಬಸವನಾಯಕ'ಪ್ರಕಟವಾಯಿತು. ನಾನು ಯಾವುದೋ, ಆವೇಶದಲ್ಲಿ ಅದನ್ನು ವಿಮರ್ಶಿಸಿ ಒಂದು ಭಯಂಕರವಾದ ಲೇಖನ ಬರೆದು ಹಾಕಿದೆ. ಅದನ್ನು ಯಾವ ಪತ್ರಿಕೆಯವರೂ ಪ್ರಕಟಿಸುವಂತಿರಲಿಲ್ಲ. ಆದರೂ, ಒಂದು ಪತ್ರಿಕೆ ಪ್ರಕಟಿಸಿಯೇ ಬಿಟ್ಟಿತು.

ಬಾಣ ಬಿಟ್ಟುದುದಾಗಿತ್ತು. ಅದನ್ನು ಹಿಂತೆಗೆದುಕೊಳ್ಳುವಂತೆಯೂ ಇರಲಿಲ್ಲ.

ಪಾರಿಜಾತವನ್ನು ನೋಯಿಸಿದೆನೇ? ಎಂದು ನನಗೆ ತುಂಬಾ ವ್ಯಥೆ.

ಇಷ್ಟೆಲ್ಲ ರಾಮಾಯಣ ನಡೆದರೂ ಪ್ರತ್ಯಕ್ಷವಾಗಿ ಮಾತನಾಡಿರಲಿಲ್ಲ. ಸಭೆ-ಸಮ್ಮೇಳನಗಳಲ್ಲಿ ಅವರನ್ನು ದೂರದಿಂದ ನೋಡುತ್ತಲೇ ಇದ್ದೆ. ಭಾಷಣ ಕೇಳಿ ತಲೆದೂಗುತ್ತಿದ್ದೆ. ಭೆಟ್ಟಿಯ ಸಂದರ್ಭ ಬಂದಾಗಲೆಲ್ಲ ನುಣ್ಣಗೆ ಜಾರಿಕೊಂಡು ಬಿಡುತ್ತಿದ್ದೆ!

ಆದರೆ, ಕಡೆಗೂ ಅವರು ನನ್ನನ್ನು ಹಿಡಿದುಬಿಟ್ಟರು; ತಮ್ಮ ಅಪಾರ ಮಮತೆಯ ಸೆರೆಯಲ್ಲಿ ಬಂಧಿಸಿದರು!

ಆ ಕಥೆ ಹೀಗೆದೆ:

ಅ.ನ.ಕೃ. ಅಧ್ಯಕ್ಷತೆ ವಹಿಸಿದ್ದ ಉಡುಪಿ ಸಾಹಿತ್ಯ ಸಮ್ಮೇಳನದ ಸಮಯ. ನಾವು ಕೆಲವು ಮಿತ್ರರು ಮೆಡಿಕಲ್ ಕಾಲೇಜ್ ವಿದ್ಯಾರ್ಥಿನಿಲಯದ ಮೂರನೆಯ ಮಹಡಿಯಲ್ಲಿ ಬಿಡಾರ ಹೂಡಿದ್ದೆವು. ಶ್ರೀ ಮಾಸ್ತಿಯವರೂ ಸಮ್ಮೇಳನಕ್ಕೆ ಆಗಮಿಸಿದ್ದುದು ನನಗೆ ಗೊತ್ತೇ

ಇದ್ದಿತಾದರೂ ಆಗಲೂ ನಾನು ಅವರ ಸಮೀಪಕ್ಕೆ ಸುಳಿದಿರಲ್ಲಿಲ್ಲ. ಆದರೆ, ನಾನು ಬಂದದ್ದು ಅವರಿಗೆ ಹೇಗೆ ಗೊತ್ತಾಯಿತೋ ಏನೋ? ನನ್ನನ್ನು ನೋಡಬಯಸುವುದಾಗಿ ಹೇಳಿ ಕಳುಹಿಸಿದರು. ಇನ್ನು ಅವರಿಂದ ತಪ್ಪಿಸಿಕೊಳ್ಳುವುದು ಶಕ್ಯವೇ ಇರಲ್ಲಿಲ್ಲ. ಎಂತಲೇ, ನಾನು ಮೆಟ್ಟಿಲಿಳಿದು ಅವರನ್ನು ಭೆಟ್ಟಿಯಾಗಲು ನಡೆದಿದ್ದಂತೆಯೆ, ಕೆಳಗಿನ ಕೋಣೆಯ ಎದುರು ನಿಂತಿದ್ದ ಬೇಂದ್ರೆಯವರು ನನ್ನನ್ನು ಕಂಡು ಮಾತಿಗೆ ತೊಡಗಿದರು. ಅವಸರದಿಂದ ಅಲ್ಲಿಂದ ಹೊರಡುವುದು ಸರಿಯೆನಿಸುವಂತಿರಲ್ಲಿಲ್ಲ. ಅವರ ಹರಟೆಯನ್ನಾಲಿಸಿ ನಗುನಗುತ್ತ ನಾವು ಕೆಲವರು ಅಲ್ಲಿ ನಿಂತಿದ್ದಂತೆಯೇ ಶ್ರೀ ಮಾಸ್ತಿಯವರು ಅಂಥ ಇಳಿವಯಸ್ಸಿನಲ್ಲಿಯೂ ಮೂರು ಮಹಡಿಗಳ ಮೆಟ್ಟಲುಗಳನ್ನೇರಿ ನಮ್ಮ ಕೊಠಡಿಗೆ ಹೋಗಿ ಅಲ್ಲಿ ನಾನಿಲ್ಲದಿದ್ದುದರಿಂದ ಮತ್ತೆ ಕೆಳಗೆ ಬಂದಾಗ ಬೇಂದ್ರೆಯವರ ಜೊತೆಯಲ್ಲಿ ನಿಂತಿದ್ದ ನನ್ನನ್ನು ಕಂಡು ಹತ್ತಿರ ಬಂದು, ವಾತ್ಸಲ್ಯದಿಂದ ಭುಜ ಸ್ಪರ್ಶಿಸುತ್ತ ಹೇಳಿದರು:

''ನಿಮ್ಮನ್ನು ನೋಡಲು ನಿಮ್ಮ ರೂಮಿಗೆ ಹೋಗಿ ಬಂದೆ.''

ಆ ಮಾತು ಕೇಳಿ ನನಗಾದ ವ್ಯಸನ ಅವರ್ಣನೀಯ. ಮೂರು ಮಹಡಿಗಳ ಮೆಟ್ಟಲು ಏರಿ ಹೋಗುವಾಗ ನಲವತ್ತರ ವಯಸ್ಸಿನ ನನಗೇ ಏದುಸಿರು ಬರುತ್ತಿತ್ತು. ಎಪ್ಪತ್ತರ ಇಳಿವಯದ ಹಿರಿಯರು ನನಗಾಗಿ ಇಷ್ಟು ಕಷ್ಟ ಪಡುವಂತಾಯಿತೇ?

''ನಿಮ್ಮ ಕರೆ ಬಂದ ತಕ್ಷಣವೇ ನಾನು ನಿಮ್ಮ ಕಡೆಗೇ ಹೊರಟಿದ್ದೆ. ಹಾದಿಯಲ್ಲಿ'' ಎನ್ನುತ್ತಿದ್ದಂತೆಯೇ ಮಾಸ್ತಿಯವರು ತಮ್ಮ ಸಹಜ.ನಗೆ ತುಳುಕಿಸುತ್ತ,

''ಈಗೇನಾಯಿತು? ನಾನು ನಿಮ್ಮ ಕಡೆಗೆ ಬಂದರೂ ಒಂದೇ, ನೀವು ನನ್ನ ಕಡೆಗೆ ಬಂದರೂ ಒಂದೇ ಅಲ್ಲವೆ?'' ಎಂದರು. ''ಚೆನ್ನಾಗಿದ್ದೀರಾ ಆರೋಗ್ಯವೆ? ಹಳ್ಳಿಯಲ್ಲಿಯೇ ಇದ್ದೀರಾ?'' ಎಂದು ವಿಚಾರಿಸಿದರು. ಮನೆಯ ಹಿರಿಯರು ಮಕ್ಕಳನ್ನು ಪ್ರೀತಿಯಿಂದ ಕೇಳುವಂಥ ಧಾಟಿ. ಅಮೃತವೆಂದರೆ ಹೇಗಿರುವುದೋ ತಿಳಿಯದು. ಆದರೆ, ಮಾಸ್ತಿಯವರ ಮಾತನ್ನಾಲಿಸುತ್ತಿದ್ದರೆ ಅವರ ಹೃದಯಾಂತರಾಳದಿಂದ ಅಮೃತದ ಧಾರೆಯೇ ಹರಿದುಬಂದಂತೆ ಭಾಸವಾಗುತ್ತದೆ.

ಎರಡು ವರ್ಷಗಳ ತರುವಾಯ ಪುನಃ ಅವರ ದರ್ಶನ. ೧೯೬೭ರ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ ಟಿಕೀಟು ದೊರಕಿಸಿ ವಿಧಾನ ಸಭೆಗೆ ಹೋಗಬೇಕೆಂಬ ಗೀಳು ಅಂಟಿಸಿಕೊಂಡು ಪ್ರಮುಖ ಸಾಹಿತಿಗಳ ಬೆಂಬಲ ಶಿಫಾರಸು ದೊರಕಿಸುತ್ತ ಅಲೆಯುತ್ತಿದ್ದಾಗ ಮಟಮಟ ಮಧ್ಯಾಹ್ನದಲ್ಲಿ ಬಸವನಗುಡಿಯ ಹತ್ತಿರ ಬಂದಿದ್ದು, ಅಂಥ ಸಮಯದಲ್ಲಿ ಮಾಸ್ತಿಯವರಂಥ ವೃದ್ಧರನ್ನು ನೋಡಲು ಹೋಗಬಾರದೆಂಬುದೇನೊ ಹೊಳೆಯದೆ ಗವಿಪುರ ವಿಸ್ತರಣದಲ್ಲಿನ ಅವರ ಮನೆಗೆ ನುಗ್ಗಿ ಕರೆಗಂಟೆಯ ಗುಂಡಿ ಒತ್ತಿದಾಗ-ಕೈಗಡಿಯಾರದಲ್ಲಿ ಒಂದು ಗಂಟೆ. ನಿವೃತ್ತ ಅಧಿಕಾರಿಗಳೆಲ್ಲ ಉಂಡು ವಿರಮಿಸುವ ಹೊತ್ತು. ನಿವೃತ್ತರಷ್ಟೇ ಏಕೆ, ನಮ್ಮಂಥ ನಡುಹರಯದವರೂ ಪಟ್ಟಾಗಿ ಊಟ ಹೊಡೆದು ನಿದ್ರೆ ತೆಗೆಯುವ ಅಪರಾಹ್ನ ಕಾಲ.

ಮಹಿಳೆಯೊಬ್ಬರು ಬಂದು ಬಾಗಿಲು ತೆಗೆದರು.

''ಯಜಮಾನರಿದ್ದಾರೆಯೇ ಅಮ್ಮನವರೆ?''

''ಇದ್ದಾರೆ, ಬನ್ನಿ.'' ಮಾಸ್ತಿಯವರದೇ ಧಾಟಿ. ಅಂಥದೇ ತುಂಬು ಸೌಜನ್ಯ. ಒಳಗೆ ಹೋಗಿ ನೋಡಿದರೆ ವಿರಾಮ ಕುರ್ಚಿಯಲ್ಲಿ ಪುಸ್ತಕ ಓದುತ್ತ ಕುಳಿತಿದ್ದರು ಮಾಸ್ತಿಯವರು.

ಅಂಥ ಅವೇಳೆಯಲ್ಲಿ ಹೋಗಿದ್ದರೂ ಅಸಮಾಧಾನ ಪಟ್ಟುಕೊಳ್ಳದೆ ತಮಗೆ ಸಹಜವಾದ ಆತ್ಮೀಯತೆಯಿಂದಲೇ ಬರಮಾಡಿಕೊಂಡರು.

ಚುನಾವಣೆಯ ವಿಚಾರ ಅವರಿಗೆ ಹಿಡಿಸಲ್ಲಿಲ್ಲ.

''ಸಾಹಿತಿಗಳು ಈ ಗದ್ದಲಕ್ಕೆಲ್ಲ ಹೋಗಬಾರದು. ಬರೆಯುವುದು ನಮ್ಮ ಕೆಲಸ. ಅಷ್ಟು ಮಾಡಿದರೆ ಸಾಕು. 'ಮಣ್ಣು ಮತ್ತು ಹೆಣ್ಣು' ಓದಿದ್ದೇನೆ. ಅಂಥ ಇನ್ನೂ ಹತ್ತು ಕಾದಂಬರಿ ಬರೆಯಿರಿ. ಜನ ಓದಿ ಸಂತೋಷಪಟ್ಟುಕೊಳ್ಳುತ್ತಾರೆ. ನಿಮಗೇಕೆ ಈ ಅಸೆಂಬ್ಲಿಯ ಹುಚ್ಚು?'' ಎಂದು ಸ್ಪಷ್ಟವಾಗಿಯೇ ಹೇಳಿದರು. ಕಾಫಿಕೊಟ್ಟು ಉಪಚರಿಸಿದರು.

''ಬರ್‍ತೇನೆ ಸ್ವಾಮೀ'' ಎಂದರೆ, ಭುಜದ ಮೇಲೆ ಕೈಯಿರಿಸಿ ''ಬನ್ನಿ'' ಎಂದರು!

ಅವರ ಹಿತವಚನದಿಂದ ನನ್ನ ಹುಚ್ಚು ಹೋಗಲಿಲ್ಲ. ಟಿಕೀಟೇ ಸಿಕ್ಕಲಿಲ್ಲ. ವಿಧಾನ ಸಭೆಯ ಪ್ರವೇಶ ತಾನಾಗಿಯೇ ತಪ್ಪಿತು. ಆ ಮಾತು ಬೇರೆ.

ಅನಂತರ ಅವರನ್ನು ನೋಡಿದ್ದು ೧೯೬೦ರಲ್ಲಿ; ಆರುವರ್ಷಗಳ ತರುವಾಯ. ಮಿತ್ರರೊಬ್ಬರ ಜೊತೆಯಲ್ಲಿ ಒಂದು ಸಂಜೆ ಅವರನ್ನು ನೋಡಲು ಹೋಗಿದ್ದಾಗ ಅವರು ಮನೆಯಲ್ಲಿರಲ್ಲಿಲ್ಲ. ಕ್ಲಬ್ಬಿನಲ್ಲಿ ಸಿಕ್ಕಬಹುದೆಂದು ಗೊತ್ತಾಗುತ್ತಲೂ ನಾವು ನೇರವಾಗಿ ಅಲಿಲಗೆ ಹೋಗಿದ್ದೆವು. ಆ ಕ್ಲಬ್ಬಿನಲ್ಲಿ ಅಂದು ಏನೋ ವಿಶೇಷ ಸಮಾರಂಭವಿದ್ದಂತಿದ್ದಿತು. ಶ್ರೀ ಮಾಸ್ತಿಯವರ ಮೊಗವೂ ಎಂದಿಗಿಂತ ಹೆಚ್ಚಾಗಿಯೇ ಪ್ರಸನ್ನವಾಗಿದ್ದಿತು.

''ಯಾವುದಾದರೂ ಸಭೆಯಿದೆಯೇ ಸ್ವಾಮೀ?''

''ನನ್ನ ಸ್ನೇಹಿತರೆಲ್ಲಾ ಸೇರಿ ನನಗಾಯೇ ಸಭೆ ಏರ್ಪಡಿಸಿದ್ದಾರೆ. ಇವೊತ್ತು ನನ್ನ ಹುಟ್ಟುಹಬ್ಬ. ನಿಮ್ಮಂಥ ಪ್ರಿಯ ಮಿತ್ರರು ಇಂದೇ ಅಕಸ್ಮಾತ್ ಬಂದದ್ದೂ ಸಂತೋಷ'' ಎಂದು ಹೇಳಿದರು. ಸಭೆಗಾರಂಭವಾಗುತ್ತಲೂ ನಮ್ಮನ್ನು ವೇದಿಕೆಗೆ ಕರೆದು, ತಮ್ಮ ಎಡಬಲಗಳಲ್ಲಿ ಅಕ್ಕರೆಯಿಂದ ಕೂಡ್ರಿಸಿಕೊಂಡರು. ಆ ಹಿರಿಯರ ಬಗೆಗೆ ನಮ್ಮಲ್ಲಿದ್ದ ಗೌರವ ಭಾವನೆಗಳನ್ನು ವ್ಯಕ್ತಗೊಳಿಸುವ ಸುಯೋಗ ಬಂದುದಕ್ಕೆ ನಾವೂ ಹರ್ಷಿಸಿದೆವು.

ಮತ್ತೆ ಅವರ ದರ್ಶನ ಕೆಲವು ತಿಂಗಳುಗಳ ತರುವಾಯ, ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ನನಗೆ ಸೋವಿಯೆತ್ ಪ್ರಶಸ್ತಿ ಬಂದುದಕ್ಕಾಗಿ ಅಂದು ಸಮಾರಂಭ. ಮಾಸ್ತಿಯವರು, ತಿ.ತಾ. ಶರ್ಮರು ಇವರಂಥ ಹಿರಿಯರು ಅಂದು ಬಂದು ಸಭಿಕರ ನಡುವೆ ಕುಳಿತು ನನ್ನನ್ನು ಹರಿಸಿದುದು ನನ್ನ ಭಾಗ್ಯ.

ದೂರದಿಂದಲೇ ಅವರಿಗೆ ಕೈ ಮುಗಿದೆ.

ಅಂಥ ಮಹನೀಯರಿಗೆ ಜನ್ಮ ವಿತ್ತ ಕನ್ನಡ ತಾಯಿ ಧನ್ಯೆ!

ಹಿರಿಯ ಚೇತನ

ಕೃಷ್ಣಮೂರ್ತಿ ಪುರಾಣಿಕ

ಪೂಜ್ಯ ಶ್ರೀ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರನ್ನು ನಾನು ಕಂಡದ್ದು 'ಶ್ರೀನಿವಾಸ'ರ ಮುಖಾಂತರದಿಂದ. ಮಾಸ್ತಿಯವರ ಹೃದಯವನ್ನು ಅದರ ಆಳ ವಿಸ್ತಾರಗಳನ್ನು ತಿಳಿಸಿ ಕೊಟ್ಟವರೆ 'ಶ್ರೀನಿವಾಸ'ರು. ಪ್ರೌಢಶಾಲೆಯ ಕೊನೆಯ ವರ್ಗದಲ್ಲಿ ಪರಿಚಿತವಾದ 'ಶ್ರೀನಿವಾಸ'ರು ನನ್ನ ಕಾಲೇಜು ಜೀವನ ಮುಗಿಯುವ ಹೊತ್ತಿಗೆ ಚಿರಪರಿಚಿತರಾದವರು. ನನ್ನ ಅಭಿಮಾನದ ಮೂರ್ತಿಯಾದರು. ನಾನು ಅವರನ್ನು ಕಂಡಿರಲಿಲ್ಲ. ಕಾಣಬೇಕೆಂಬ ಅಪೇಕ್ಷೆ ತುಂಬಾ ಇತ್ತು. ಆದರೆ ಬೆಂಗಳೂರಿಗೆ ಹೋಗುವುದೇನು ಸುಲಭವೆ? ಅಲ್ಲದೆ ಅವರು ದೊಡ್ಡ ಅಧಿಕಾರಿಗಳೂ ಇರುವರೆಂದು ಕೇಳಿದ ಮೇಲೆ ನನ್ನನ್ನು ತಣ್ಣೀರಿನಲ್ಲಿ ಮುಳುಗಿಸಿದಂತಾಯಿತು. ನಾನು ಅವರನ್ನು ಪ್ರತ್ಯಕ್ಷ ಕಾಣುವ ಯೋಗವನ್ನು ಯೋಗಾಯೋಗಕ್ಕೆ ಬಿಟ್ಟುಕೊಟ್ಟೆ.

ನನಗೆ ಅವರ ಕಥೆಗಳ ಹುಚ್ಚೇ ಹಿಡಿದಂತಾಗಿತ್ತು. ಇಂಥ ಕತೆಗಳನ್ನು ಬರೆಯಲು ನನಗೆ ಸಾಧ್ಯವೆ? ಎಂದು ಮನಸ್ಸು ಯೋಚಿಸುತ್ತಿತ್ತು. ಅದು ಅಸಾಧ್ಯವೆಂದೆನ್ನಿಸಿದಾಗ ನಾನು ಮತ್ತೆ ಮತ್ತೆ ಅವರ ಕಥೆಗಳನ್ನು ಓದುತ್ತಿದ್ದೆ. ಪಾರಾಯಣವನ್ನೇ ಮಾಡುತ್ತಿದ್ದೆ ಅನ್ನಬಹುದು. ಇದಕ್ಕೆ ಅವರ ಕಥಾವಸ್ತುಗಳು, ಮಧುರವಾದ, ಸರಳವಾದ, ಖಚಿತವಾದ ಶೈಲಿ ಕಾರಣವಾಗಿಬೇಕು. ಶ್ರೀನಿವಾಸರ ಶೈಲಿಯಲ್ಲಿ ಬೆಡಗಿಲ್ಲ; ಬಿನ್ನಾಣವಿಲ್ಲ. ಆವೇಶ ತುಂಬಿದ ಮಾತುಗಳಿಲ್ಲ. ಎಲ್ಲವೂ ನೇರ. ಈ ಕಥಾಸಾಹಿತ್ಯದಿಂದ ನಾನು ತುಂಬಾ ಪ್ರಭಾವಿತನಾದೆ. ಅವರ ಪಾತ್ರಸೃಷ್ಟಿಯ ಪ್ರತಿಭೆಯೇ ಅಂತಹುದು. ಈ ಕತೆಗಳಲ್ಲಿಯ ಪಾತ್ರ ಪರಿವಾರವೆಲ್ಲ ಜೀವಕಳೆ ತುಂಬಿಕೊಂಡು ನಮ್ಮ ಮುಂದೆ ಬಂದು ನಿಲ್ಲುವವು. ಜನಜೀವನದ ವಾಣಿ ಇವರ ಕತೆಗಳಲ್ಲಿ ಜೀವಂತವಾಣಿ. ಶ್ರೀನಿವಾಸರ ಕಥೆಯನ್ನು ಹೇಳುತ್ತಾರೆ. ಕಥೆ ಪ್ರಾರಂಭವಾದ ಕೂಡಲೆ ಮರೆಯಾಗಿ ನಿಲ್ಲುತ್ತಾರೆ. ಕಥೆ ತನ್ನ ಪರಿವಾರದೊಂದಿಗೆ ಮುಂದೆ ಸಾಗುತ್ತದೆ. ಈ ಕಥೆಗಳನ್ನು ಹೇಳುವುದರಲ್ಲಿ, ಪಾತ್ರ ಸೃಷ್ಟಿಸುವಲ್ಲಿ ಶ್ರೀನಿವಾಸರ ರೀತಿಯೇ ಬೇರೆ.

ಅನುಕಂಪ ಈ ಸಾಹಿತ್ಯದ ಜೀವಾಳ. ಅವರ ಪಾತ್ರ ವೈವಿಧ್ಯದಲ್ಲಿ ಅಪರಂಪಾರಶಕ್ತಿ ಇದೆ. ಸಣ್ಣ, ದೊಡ್ಡ, ಮುಖ್ಯ, ಅಮುಖ್ಯ ಸಹಸ್ರಾರು ಪಾತ್ರಗಳಲ್ಲಿ ಕೂಡ ಈ ಕತೆಕಾರನ ದೃಷ್ಟಿಯಲ್ಲಿ ಅನುಕಂಪದ ಕಿರಣ ಸೂಸಿಬರುತ್ತದೆ. ಅವರು ಸೃಷ್ಟಿಸಿದ ಅತ್ಯಂತ ಚಿಕ್ಕ ಪಾತ್ರ ಕೂಡ ತನ್ನ ಉಪಯುಕ್ತತೆಯನ್ನು ಸಾರಿ ಹೇಳುತ್ತದೆ. ಕತೆಕಾರನ ಕುಂಚವು ಅನುಕಂಪದ ಮಸಿಯಲ್ಲಿ ಅದ್ದಿ ಹೃದಯವಂತಿಕೆಯನ್ನು ಚಿತ್ರಿಸುತ್ತದೆ. ಹೃದಯವನ್ನು ತೀಗುತ್ತದೆ. ಇದೇ ಈ ಹಿರಿಮೆ.

ಹುಟ್ಟು ಕತೆಕಾರರಲ್ಲದವರಿಗೆ ಈ ಸಿದ್ಧಿ ಸಾಧಿಸುವುದು ಅಪರೂಪ. ಶ್ರೀನಿವಾಸರು

ಹುಟ್ಟು ಕತೆಗಾರರೆಂದು ನಿರ್ವಿವಾದವಾಗಿ ಹೇಳಬಹುದು. 'ರಂಗಪ್ಪನ ದೀಪಾವಳಿ' 'ರಂಗಸಾಮಿಯ ಅವಿವೇಕ' 'ಇಂದಿರೆಯೋ ಅಲ್ಲವೊ' 'ಮಸುಮತ್ತಿ' 'ವೆಂಕಟಶಾಮಿಯ ಪ್ರಣಯ' 'ನಿಜಗಲ್ಲಿನ ರಾಣಿ' 'ನಮ್ಮ ಮೇಸ್ಟರು' ಮೊದಲಾದ ಕತೆಗಳನ್ನು ಓದಿದವರು ಅವನ್ನು ಮರೆಯುವುದೇ ಸಾಧ್ಯವಿಲ್ಲ.

ನನ್ನ ಮೊದಲಿನ ಕೆಲವು ಕಥೆಗಳಲ್ಲಿ ಈ ಪ್ರಭಾವ ಬೀರಿದ ಸೂಕ್ಷ್ಮತೆ ಕಂಡುಬರದೇ ಇಲ್ಲ. ಶ್ರೀನಿವಾಸ ಕಥಾಮೋಡಿ ಅಂತಹುದು.

ಅದೇ ಬೆಳೆಯುವ ಕತೆಗಾರರ ಬೆನ್ನು ತಟ್ಟಿ ಕಥಾ ಸಾಹಿತ್ಯ ಲೋಕದಲ್ಲಿ ಯಾತ್ರಿಕರನ್ನಾಗಿ ಮಾಡುವ ಹಿರಿಯ ಚೇತನ ಈ ಮಹಾಸಾಹಿತ್ಯ ಯಾತ್ರಿಕನದು.

ನಾನು ಬರೆದ 'ಜೀವಜೇನು' ಕಥಾಸಂಗ್ರಹವನ್ನು ಅರ್ಪಿಸುವ ಸಮಯದಲ್ಲಿ ಆ ಪುಸ್ತಕದ ಮುನ್ನುಡಿಯಲ್ಲಿ ನಾನು ಬರೆದಿದ್ದು ಹೀಗೆ ''. . .ಕನ್ನಡ ಸಾಹಿತ್ಯದಲ್ಲಿ ಈ ಪ್ರಭೇದವನ್ನು ರಸಪೂರ್ಣವಾಗಿ ಬಳಸಿಕೊಂಡು ಸಣ್ಣ ಕತೆಗಳ ಸ್ವರೂಪಕ್ಕೆ ಒಂದು ಚಿರಸ್ಥಾಯಿ ಸ್ಥಾನವನ್ನು ಕಲ್ಪಿಸಿಕೊಟ್ಟವರು ಹಿರಿಯರಾದ, ಪೂಜ್ಯರಾದ, ವಿಖ್ಯಾತರಾದ ಶ್ರೀಮಾಸ್ತಿ ವೆಂಕಟೇಶ್ ಅಯ್ಯಂಗಾರ್ಯರು. ಈ 'ಜೀವಜೇನು' ಕೃತಿಯನ್ನು ಈ ಹಿರಿಯ ಜೀವಿಗೆ ಅರ್ಪಿಸಿದ್ದೇನೆ. ನನ್ನ ಬರಹದಲ್ಲಿ ವಿಶ್ವಾಸ ವ್ಯಕ್ತಮಾಡಿ, ಆಗಾಗ ನನ್ನನ್ನು ತಮ್ಮ ಅಮೃತವಾಣಿಯಿಂದ ಉತ್ತೇಜನಗೊಳಿಸಿದ ಆತ್ಮೀಯ ಹಿರಿಯರಿಗೆ ನಾನು ಸಲ್ಲಿಸಿದ ಈ ಗೌರವವು ನನ್ನ ಕೃತಜ್ಞತೆಯಾಗಿದೆ.

ಮಾಸ್ತಿಯವರು ಕನ್ನಡದ ಬಹು ದೊಡ್ಡ ಆಸ್ತಿ. ಭಗವಂತನು ಅವರಿಗೆ ದೀರ್ಘ ಜೀವನವನ್ನು ದಯಪಾಲಿಸಲಿ''

ಮಾಸ್ತಿಯವರ ಹೃದಯ ವೈಶಾಲ್ಯಕ್ಕೆ ಮಿತಿ ಇಲ್ಲ. ನನ್ನ ಕಥಾಸಂಕಲನವನ್ನು ಸ್ವೀಕರಿಸಿ ಬರೆದ ಕಾಗದದಲ್ಲಿಯೆ ಒಂದೆರಡು ಮಾತುಗಳನ್ನು ತಿಳಿಸುತ್ತದ್ದೇನೆ. ''. . .ನಿಮ್ಮ ಕಥಾ ಸಂಕಲನವನ್ನು ನನಗೆ ಅರ್ಪಿಸಿದ್ದೀರೆನ್ನುವುದು ನನಗೆ ಹೆಮ್ಮೆಯ ವಿಷಯ. ನಿಮ್ಮಂಥ ಸ್ನೇಹಿತರು ಪ್ರೀತಿಯಿಂದ ಕಂಡು ನನ್ನನ್ನು ಒಂದು ಪದಾರ್ಥವಾಗಿ ಮಾಡಿದ್ದೀರಿ. ನಿಮ್ಮ ಕೆಲಸ ಇನ್ನಷ್ಟು, ಮತ್ತಷ್ಟು ಹಸನಾಗುವಂತೆ ಅದರಿಂದ ಜನಕ್ಕೆ ಇನ್ನಷ್ಟು ಮತ್ತಷ್ಟು ಶುಭ ಆಗುವಂತೆ ದೇವರು ಅನುಗ್ರಹಿಸಲಿ. . . . .'' (೨೬-೯-೧೯೬೩).

ಕತೆಗಾರ 'ಶ್ರೀನಾವಾಸ'ರ ಪ್ರಭಾವದಿಂದ ನಾನು ಸಾಹಿತ್ಯ ಪ್ರವೇಶ ಮಾಡುವ ಹೊತ್ತಿಗೆ ಈ ಚೇತನದ ಕಾವ್ಯಶಕ್ತಿಯ ಬೆಳದಿಂಗಳ ತಂಪನ್ನು ಅನುಭವಿಸುವಂತಾಯಿತು:

ಸಾಹಿತ್ಯದ ಈ ಪ್ರಭೇದದಲ್ಲಿಯೂ ಅವರು ಕಾವ್ಯಶೈಲಿಯಲ್ಲಿ ಹೇಳುವ ಕತೆಗಳು ಸುಂದರ, ಸುಮಧರ, ಹೃದಯಸ್ಪರ್ಶಿ. ಸಂಸ್ಕಾರ, ಸಂಸ್ಕೃತಿಯ ಒಳ್ಳೆಯ ಅಚ್ಚು. ನಾನು ಈಗಲೂ ನನ್ನ ವಿದ್ಯಾರ್ಥಿಗಳಿಗೆ ಅವರ 'ಮದಲಿಂಗನ ಕಣಿವೆ. ಲೇಪಾಕ್ಷಿ, ಮುರಿದು ಬಿದ್ದ ವೀರಕಲ್ಲು, ನೀಲಗಾರ ಮಾದ, ಮಾಂಬಿ, ತರಿ, ಚಿಕ್ಕಮಲ್ಲಮ್ಮ ಮೊದಲಾದ ಕವನಗಳನ್ನು ಅಂದು ತೋರಿಸುತ್ತೇನೆ. ಈಗಲೂ ನನ್ನ ಕಣ್ಣಮುಂದೆ ಚಿಕ್ಕಮಲ್ಲಮ್ಮ ಕಟ್ಟಿ ನಿಂತಿದ್ದಾಳೆ.' ಮಲ್ಲಮ್ಮಾ ಮಲ್ಲಮ್ಮಾ, ಎಲ್ಲಿ ಹೋದೆಯೇ ಮಲ್ಲಮ್ಮ ಎನ್ನುವ ನುಡಿ ಹೃದಯವನ್ನು ಹಿಂಡುತ್ತದೆ.

'ಸಾಮಾನ್ಯವಾದ ಪದವನ್ನು ಬಳಸಿದರೂ ಅದಕ್ಕೆ ಹೊಸ ಅರ್ಥವನ್ನು ಕೊಡಬಲ್ಲ ಶಕ್ತಿಯನ್ನು 'ಶ್ರೀನಿವಾಸ'ರ ಬರಹದಲ್ಲಿ ಕಾಣಬಹುದು' ಎನ್ನುವ ಸ್ನೇಹ ಶ್ರೀ ಎಲ್. ಎಸ್. ಶೇಷಗಿರಿರಾವ್ ಅವರ ಮಾತು ಶ್ರೀನಿವಾಸರ ಕಾವ್ಯಪ್ರಪಂಚಕ್ಕೂ ಅನ್ವಯಿಸುತ್ತದೆ.

'ಯಶೋಧರಾ' ಒಂದು ರಸಗಟ್ಟಿ. ''ಒಳಗೆ ಬೆಳಗುವ ಬೆಳಕ ಸರಿಪಡಿಕೊಳ್ಳಬೇಕು'' ಎಂಬ ಬುದ್ಧನ ಉಪದೇಶದ ಹದವನ್ನು ಇಂಥ ಮಾತುಗಳಲ್ಲಿ ಹಿಡಿಯುವ ತಪಸ್ಸು ಮಾತ್ರ ಅವರದು. ಅವರ ಭಾವಗೀತೆಗಳು, ಅಷ್ಟ ಷಟ್ಪದಿಗಳು ಸುಮಧುರ ಶೈಲಿಯ ಜೇನ ಹನಿಗಳೆಂದೇ ಹೇಳಬೇಕು. ಜೇನ ಹನಿಯನ್ನು ನಾಲಿಗೆಯ ಮೇಲೆ ಇಟ್ಟುಕೊಂಡರೆ ಅದು ಅಂತರಂಗದಲ್ಲಿಳಿಯುವದು ಅದರ ಗುಣಧರ್ಮ. 'ಕರಿ' ಗೆ ಕವಿಯ ಹೇಳುವ ಮಾತು ಇದು.

ಪದ್ಯಕೆಂದು ಮರುಗಬೇಡ
ಬಣ್ಣವಾದ ಬಾಳು ಹೊಗಳೆ
ಗದ್ಯಕೂಡ ಹೃದ್ಯವಹುದು
ಕುನ್ನಿ ಇದನು ನೆನೆದು ಬದುಕು.

ಹೃದಯದಲ್ಲಿ ಮೂಡಿ ಬಂದು ಮಾತುಗಳು ಹೃದಯಕ್ಕೆ ತಲಪುವದೆ ಈ ಕಾವ್ಯದ ವೈಶಿಷ್ಟ್ಯ.

ಕತೆಗಳಲ್ಲಿ, ಕವನಗಳಲ್ಲಿ, ಸರಳ ರಗಳೆಯಲ್ಲಿ, ನಾಟಕಗಳಲ್ಲಿ ತೋರಿದ ಸೂಕ್ಷ್ಮ ಸಂವೇದನೆಯನ್ನೇ ಮಾಸ್ತಿಯವರು ತಮ್ಮ ಕಾದಂಬರಿಗಳಲ್ಲಿಯೂ ತೋರಿದ್ದಾರೆ. ''ಸುಬ್ಬಣ್ಣ'' ಕಾದಂಬರಿಯಂತೆ ಕಾಣುವ ಸಣ್ಣಕತೆಯೇ ಆಗಿದೆ. ಅದರಲ್ಲಿಯ ಘಟನೆಗಳಲ್ಲಿ ಮಿಡಿಯುವ ಸೂತ್ರಬದ್ಧತೆ ಕಲಾವಿದನ ಕುಂಚದಿಂದ ಬರೆದ ಪ್ರಮಾಣಬದ್ಧ ಸುಂದರ ಚಿತ್ರದಂತಿದೆ.

ನೊಂದ ಜೀವಿಗಳು, ಜೀವನದ ಕಹಿ ಕಷಾಯಗಳನ್ನುಂಡ ವ್ಯಕ್ತಿಗಳು, ದುಃಖ ದುಗುಡ ದುಮ್ಮಾನಗಳಲ್ಲಿ ಬಾಳು ಸಾಗಿಸುವವರ ಹೃದಯಚಿತ್ರಣದಲ್ಲಿ ಮಾಸ್ತಿಯವರದು ಎತ್ತಿದ ಕೈ.

ಸಂಗೀತಕ್ಕಾಗಿ ಪಡಬಾರದ ದುಃಖಪಟ್ಟ ಸುಬ್ಬಣ್ಣ, ಲೋಕಹಿತಕ್ಕಾಗಿ ಬಲಿಯಾದ ಬುದ್ಧನ ಮಡದಿ ಯಶೋಧರಾ, ಪತಿಗಾಗಿ ಮಡಿಯಲು ಸಿದ್ಧಳಾದ ಶಾಂತವ್ವ, ಜೀವನದ ಮೌಲ್ಯವನ್ನು ಪಟ್ಟು ಹಿಡಿದು ಸತ್ತ ಗೌರಮ್ಮ ಈ ಎಲ್ಲ ವ್ಯಕ್ತಿಗಳು ಜೀವನದಲ್ಲಿ ಕೊರಗಿದವರೆ. ಆ ಕೊರಗಿನಲ್ಲಿ ಜೀವನದ ಮೌಲ್ಯವನ್ನು ತಿಳಿಸಿದವರು.

'ಶ್ರೀನಿವಾಸ'ರ ಜೀವನದ ದೃಷ್ಟಿ ಅನುಪಮವಾದುದು. ಅಲ್ಲಿ ನೋವು ರಸವಾಗಿ ಚಿಮ್ಮುತ್ತದೆ; ಗೋಳಿನ ಕಂತೆಯಾಗಿ ಗೋಗರೆಯುವದಿಲ್ಲ. ವ್ಯಕ್ತಿಯ ಒಳನೋಟದ ಕಸಿ ಶ್ರೀನಿವಾಸರಿಗೆ ಸೇರಿದ್ದು. ಹೊರಗಿನ ಆಡಂಬರ ದೂರವೆ. ಜೀವನದಲ್ಲಿ ಹೋರಾಟದ ಅರ್ಥವನ್ನು ಅವರು ಮಾಡಿಕೊಳ್ಳುತ್ತಾರೆ. ಆದರೆ ಹೋರಾಟ ಚಿತ್ರಣವೇ ಸಾಹಿತ್ಯದ ಗುರಿಯಲ್ಲ. ಜೀವನವು ಈ ತಳಮಳದಲ್ಲಿಯೂ ಪ್ರಗತಿ ಮುಖವಾಗಿ ಸಾಗಬೇಕು. ಇದು ಶ್ರೀನಿವಾಸರ ಸಾಹಿತ್ಯ ದೃಷ್ಟಿ. ಅವರ ಸಮಗ್ರ ಸಾಹಿತ್ಯದಲ್ಲಿ ಇದಕ್ಕೆ ಸಮೀಚೀನವಾದ ಉದಾಹರಣೆಗಳು ಸಿಕ್ಕುತ್ತವೆ. ಶ್ರೀನಿವಾಸರಿಗೆ ಜೀವ ಜೀವಿಗಳ ಸಮಸ್ಯೆಗಳ ಅರಿವು ಇದೆ. ಆದರೆ ಈ ಸಮಸ್ಯೆಗಳ ನಿರೂಪಣೆಗಾಗಿ ಈ ಸಾಹಿತ್ಯ ರಚನೆಯಾಗಲಿಲ್ಲ. ಇಲ್ಲವೇ ಸಮಾಜ ಸುಧಾರಕರ ಮಾತಿನ ದಾಳಿಯೂ ಈ ಸಾಹಿತ್ಯದಲ್ಲಿಲ್ಲ. ಈ ಸಮಸ್ಯೆಯನ್ನು ಎದುರಿಸಿದ ಜೀವಿಯ ಉತ್ಕರ್ಷ ಸಾಧನೆಯನ್ನು ಸೂಕ್ಷ್ಮವಾಗಿ ಹೇಳುವುದೇ ಈ ಸಾಹಿತಿಯ ಹಿರಿಮೆ.

ಕಾರುಣ್ಯ ಇವರ ಲೆಕ್ಕಣಿಕೆಯಿಂದ ಇಳಿಯುವ ರಸಜೇನು. ದಯಾಭರಿತ ಶಿವನ, ಮಾಧವನ, ಮಂದಾರ ಹೂವಿನ ಕೃಷಾಸ್ಪರ್ಶ. ಸುಂಗಧ ಪರಿಸರಣವೇ ಈ ಮಹತಿ. ಇಲ್ಲಿ

ರಭಸದ ಓಟವಿಲ್ಲ; ಸಮಾಧಾನದ ಮೆಲ್ಲುಲಿ ಇದೆ. ಇವರ ಸಾಹಿತ್ಯವನ್ನು ಓದುವಾಗ ನಮಗೆ ಇವರ ಹತ್ತಿರವೇ ನಿಂತಂತೆ ಆಗುತ್ತದೆಂಬ ಮಾತಿನಲ್ಲಿ ತಥ್ಯವಿಲ್ಲದಿಲ್ಲ.

'ಚೆನ್ನ ಬಸವನಾಯಕ' ಚಾರಿತ್ರ್ಯಕ ಕಾದಂಬರಿಯಲ್ಲಿ ಕೂಡ ಇತಿಹಾಸಕ್ಕೆ ಅಪಚಾರವಾಗದ ಕಲಾಕೃತಿಯಾಗಿ ಮಾರ್ಪಡಿಸುವಲ್ಲಿ ಮಾಸ್ತಿಯವರ ಕೈ ಕುಸುರು ಬಳ್ಳಿಯನ್ನು ಹಬ್ಬಿಸಿದೆ. ಇದೇ ಮಾತು 'ಚಿಕ್ಕವೀರ ರಾಜೇಂದ್ರ'ಕ್ಕೂ ಅನ್ವಯಿಸುತ್ತದೆ.

ಒಂದು ಮಾತನ್ನು ಹೇಳಿದರೆ ಶ್ರೀನಿವಾಸ ಸಾಹಿತ್ಯದ ಬಗೆಗೆ ಎಲ್ಲವನ್ನೂ ಹೇಳಿದಂತಾಗದಿದ್ದರೂ ಮುಖ್ಯವಾದುದನ್ನು ಹೇಳಿದಂತಾಗುತ್ತದೆ. ಅದೇ ಅನುಕಂಪ. ಈ ಕಾರುಣ್ಯ ದೃಷ್ಟಿ, ಕರುಣಾ ಸೃಷ್ಟಿ, ಸಾಹಿತ್ಯದ ತಳಪಾಯ. ಇದು ಗಟ್ಟಿಯಾದ ಕಾಂಕ್ರೀಟ್. ಈ ಗಟ್ಟಿಯಿಂದ ಏಳುವ ಕಾರಂಜಿಯೇ ರಸದ ಬುಗ್ಗೆ. ಇದು ರಸಋಷಿಯ ಯೋಗಿ ಮನಸ್ಸಿನಿಂದ ಬರುವ ಹೃದಯವಂತಿಕೆಯ ಸಂವೇದನೆ. ಈ ತಂಬೂರಿಯ ಶ್ರುತಿ ಸುಮಧುರ, ಪೂಜ್ಯ. ಈ ರಸಗವಳದ ರುಚಿ; ಶುಚಿ, ಪಾವನ.

ವಾಲ್ಮೀಕಿಯ ಬಗ್ಗೆ ಹೇಳುವಾಗ ಮಾಸ್ತಿಯವರು ಹೇಳಿದ ಮಾತು ಈ ರೀತಿ ಇದೆ. ''.....ನೋವರೊಳನು ತಾಪ ಕಾವ್ಯದಲಿ ಮುಖ್ಯಮಂಡನ ವೆಂದೆಯೆಲೆ! ಅದು ನಿನ್ನ ಹಿರಿಮೆ ಹಿರಿ ಜೀವವೆ!''

ವಾಲ್ಮೀಕಿ ಮಹರ್ಷಿಗಳು 'ಶ್ರೀನಿವಾಸ'ರ ಸಾಹಿತ್ಯವನ್ನು ಓದಿದ್ದರೆ ಆ ಮಹಾನುಭಾವರೇ ಈ ಮಾತುಗಳನ್ನು ಕನ್ನಡದ ಹಿರಿಯ ಚೇತನ ಮಾಸ್ತಿಯವರಿಗೇ ಹೇಳುತ್ತಿದ್ದರು.

ಮಾಸ್ತಿಯವರ ವೈವಿಧ್ಯಪೂರ್ಣವಾದ ಸಾಹಿತ್ಯಸೇವೆಯ ಸಿಂಹಾವಲೋಕನ ಮಾಡುವುದು ಕೂಡ ಈ ಚಿಕ್ಕ ಲೇಖನದಲ್ಲಿ ಸಾಧ್ಯವಿಲ್ಲ. ಈ ಲೇಖನವೊಂದು ಸೇವೆ.

ಈ ವ್ಯಕ್ತಿಯ ಜೀವನದ ವಿಶಾಲತೆಯೆ ಸಾಹಿತ್ಯದಲ್ಲಿ ಒಡಮೂಡಿದೆ ಎನ್ನಬಹುದು. ಔದಾರ್ಯ ಇವರ ಹೃದಯ ಸಂಪತ್ತು. ಸದಾ ಹಸನ್ಮುಖಿ. ಸರಳತೆಗೆ ಸರಳತೆಯ ಪಾಠಕಲಿಸುವ ರೀತಿ. ತುಂಬಿದ ಕೊಡ.

ಸ್ನೇಹ ಸಂವರ್ಧನೆಯೇ ಇವರ ಬಾಳಬದುಕು. ಹಿರಿಯತನದಲ್ಲಿರಬೇಕಾದ ಕಾರುಣ್ಯ, ಈ ಹಿರಿ ಅಣ್ಣನ ಹೃದಯವಂತಿಕೆ. ಈ ಹೃದಯ ಸಾನ್ನಿಧ್ಯದ ರಸಗಂಗೆಯಲ್ಲಿ ಮಿಂದು ಪುನೀತರಾದವರು ಧನ್ಯರು. ಆ ಧನ್ಯತೆ ನನ್ನದು.

೨

ಮಾಸ್ತಿಯವರನ್ನು ಬೇಂದ್ರೆಯವರ ಮನೆಯಲ್ಲಿ ಕಂಡೆ.

'ಶ್ರೀನಿವಾಸ'ರ ಮುಖಾಂತರ ಗಾಢ ಪರಿಚಯವಾದ ಮಾಸ್ತಿ ಅವರನ್ನು ಕಾಣಬೇಕೆಂದು ಹಂಬಲ ಬಹಳ ದಿನಗಳ ಮೇಲೆ ಈಡೇರಿತು. ಯೋಗಾಯೋಗ ಕೂಡಿಬಂತು.

ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಮಾಸ್ತಿಯವರು ಈ ಕಡೆ ಪ್ರಚಾರಕ್ಕಾಗಿ ಪ್ರವಾಸ ಕೈಗೊಂಡಾಗ ಅಂದು ಧಾರವಾಡಕ್ಕೆ ಬಂದಿದ್ದರು. ಬೇಂದ್ರೆಯವರು ನನ್ನ ಪರಿಚಯ ಮಾಡಿಕೊಟ್ಟ ಮೇಲೆ 'ಏನು ಗೋಕಾಕದಲ್ಲಿರುತ್ತೀರಾ? ಓಹೋ

ಚೆನ್ನಾಯಿತು! ನನಗೆ ಹೇಗೊ ಗೋಕಾಕಕ್ಕೆ ಬರುವದಿತ್ತು' ಎಂದು ನಕ್ಕರು.

ಅವರ ಗೋಕಾಕಕ್ಕೆ ಬಂದಾಗ ನನ್ನ ಮಗುವು ಜ್ವರ ಬಂದು ಮಲಗಿತ್ತು. ಮಾಸ್ತಿಯವರು ಮಗುವನ್ನು ತೊಟ್ಟಿಲಲ್ಲಿ ನೋಡಿ ಮೈಮೇಲೆ ಕೈಯಾಡಿಸಿ 'ಔಷದ ಉಪಚಾರ ಆಗಿದೆಯೆ?' ಎಂದು ಕೇಳಿ ತಾವೂ ಒಂದೆರಡು ಔಷಧಿಗಳನ್ನು ನನ್ನ ಹೆಂಡತಿಗೆ ಹೇಳಿದರು.

ಇದಾವ ಕೆಲವಾರು ತಿಂಗಳಾದ ಮೇಲೆ ಅವರು ಧಾರವಾಡದ ಒಂದು ದೊಡ್ಡ ಸಭೆಯಲ್ಲಿ ವೇದಿಕೆಯ ಮೇಲೆ ಮಂಡಿತರಾಗಿದ್ದರು. ನನ್ನನ್ನು ದೂರದಿಂದ ನೋಡಿದವರೇ ಕರೆಯಿಸಿ ಕೇಳಿದರು, ನಿನ್ನ ಮಗುವಿಗೆ ಕಾಯಿಲೆ ಗುಣವಾಯಿತೆ? ಈಗ ಚೆನ್ನಾಗಿ ಓಡಾಡುತ್ತಿದೆಯೆ? ನಿನ್ನ ಸೌಭಾಗ್ಯವತಿಗೆ ಆರೋಗ್ಯವೆ? ಮೊದಲಾಗಿ ಕೇಳಿದರು. ನಾನು ಚಕಿತನಾದೆ. ಈ ದೊಡ್ಡ ಮನುಷ್ಯನ ಹೃದಯದಲ್ಲಿ ಎಂತಹ ಕಾರುಣ್ಯ! ಎಂದು ಅವರಿಗೆ ಮನಸ್ಸಿನಲ್ಲಿಯೇ ನಮಿಸಿದೆ.

ಈ ಅನೇಕ ವರುಷಗಳಲ್ಲಿ ಇಂಥ ಸಂದರ್ಭಗಳು ಬಂದಿದೆ. ಆಗೆಲ್ಲ ಅವರು ಮಾತಾಡಿ ಅಮೃತಧಾರೆಯನ್ನು ಸುರಿಸಿದ್ದಾರೆ. ತಮ್ಮ ಸುಕೋಮಲ ಮನಸ್ಸನ್ನು ವ್ಯಕ್ತ ಮಾಡಿದ್ದಾರೆ.

ಇತ್ತೀಚೆಗೆ ನಾವಿಬ್ಬರೂ ಒಟ್ಟಿಗೆ ಸಭೆಯಲ್ಲಿ ಕೂಡುವ ಯೋಗಾಯೋಗಗಳು ಬಂದಿವೆ. ಆಗಲೂ ಅವರ ಆಶೀರ್ವಾದದಿಂದ ನಾನು ಧನ್ಯತೆ ಪಡೆದಿದ್ದೇನೆ. ಒಮ್ಮೆ ಅವರು ಅಧ್ಯಕ್ಷರಾಗಿರುವ ಕವಿಸಮ್ಮೇಳನದ ಕೊನೆಗೆ ನಾನು ವಾಚನಮಾಡುವದಿತ್ತು. ವೇಳೆ ಕೇವಲ ಏಳೇ ನಿಮಿಷಗಳು ಉಳಿದವು. ನನ್ನಲ್ಲಿ ಅಧೀರತೆ ಮೂಡಿತು. ಆಗ ಮಾಸ್ತಿಯವರು ಒಂದು ಚೀಟಿಯನ್ನು ಬರೆದು ಕಳಿಸಿದರು. ಅದರಲ್ಲಿ 'ನೀವು ಪೂರ್ತಿಯಾಗಿ ನಿಮ್ಮ ಕವನವನ್ನು ಓದಬೇಕು; ಅಧ್ಯಕ್ಷ ಭಾಷಣಕ್ಕೆ ಒಂದು ನಿಮಿಷ ಸಾಕು.' ನನ್ನ ಹೃದಯದಲ್ಲಿ ಜೇನು ಕಡೆದಂತಾಯಿತು.

ಇನ್ನೊಮ್ಮೆ ಬೆಂಗಳೂರಿಗೆ ಹೋದಾಗ ಅವರು ನನ್ನ ಮೈಮೇಲೆ ಕೈಯಾಡಿಸುತ್ತ, ''ಇದೇನು ಕೃಷ್ಣಮೂರ್ತಿ! ಇಷ್ಟು ಇಳಿದು ಹೋಗಿದ್ದೀಯಾ?'' ಕೇಳಿದರು.

ನನ್ನ ಮಗಳು ಗೌರಿ ಎಂಬುವಳು ಮೈ ಸುಟ್ಟುಕೊಂಡು ಚಿಂತೆಯನ್ನು ತಂದ ಸಮಯವದು. ಈ ಅಪಾರ ದುಃಖವನ್ನು ಈ ಹಿರಿಯನೆದುರು ತೋಡಿಕೊಂಡೆ.

ಮಾಸ್ತಿಯವರು ಎಲ್ಲವನ್ನೂ ಕೇಳಿ,

''ನಿನ್ನ ಕಾದಂಬರಿ, ಕಥೆ, ಸಿನೇಮಾ ಚಿತ್ರಗಳೆಲ್ಲ ದೇವರ ಆಶೀರ್ವಾದವೆಂದೆಯಲ್ಲವೆ?'' ಎಂದು ಥಕ್ಕನೆ ಕೇಳಿದರು.

''ಹೌದು! ಭಗವಂತನ ಕೃಪಾಪ್ರಸಾದದಲ್ಲಿ...''

''ಅಂತೂ ಸುಖ ಕೊಟ್ಟಾಗ ಅದು ಭಗವಂತನ ಪ್ರಸಾದ! ನೀನು ಅದನ್ನು ಸ್ವೀಕರಿಸಿದ್ದೀ! ಮತ್ತೆ ಈ ದುಃಖವನ್ನು ಭರಿಸಲು ಯಾಕೆ ಹಿಂಜರಿಯುತ್ತೀ! ಎಲ್ಲವೂ ದೇವನ ಇಚ್ಛೆ...'' ಹೀಗೆ ಹೇಳಿದ ಅವರ ಕಣ್ಣು ತೇವವಾಗಿತ್ತು.

ದುಃಖಾರ್ತರನ್ನು ತಿದ್ದುವ ಜೀವನದ ಈ ಸಾಮರ್ಥ್ಯವು ನನ್ನನ್ನು ಬೆರಗುಗೊಳಿಸಿತು. ತೀರಾ ಮೊನ್ನೆಮೊನ್ನೆ ಅವರನ್ನು ಭೆಟ್ಟಿಯಾದಾಗ ಈ ಮಗಳ ವಿಷಯವನ್ನು ಕೇಳಿದರು.

ಇಂಥ ಹಿರಿಯ ಹೃದಯ ಮಾಸ್ತಿಯವರದು.

ಪ್ರೀತಿಯ ಹಾಲಿನ ಕೆನೆಯಲ್ಲಿ ಕಲ್ಲುಸಕ್ಕರೆ ಬೆರೆಸಿದಂತಹ ಮಾತುಗಳು ಮಾಸ್ತಿಯವರವೇ.

ಅ.ನ.ಕೃಷ್ಣರಾಯರು ಅಧ್ಯಕ್ಷತೆ ವಹಿಸಿದ್ದ ಮಣಿಪಾಲ ಸಾಹಿತ್ಯ ಸಮ್ಮೇಲನಕ್ಕೆ ನಾನು ಮನೆಯವರೊಡನೆ ಹೋಗಿ ಮೆಡಿಕಲ್ ಹಾಸ್ಟೇಲ ಒಂದು ಕೊಠಡಿಯಲ್ಲಿ ತಂಗಿದ್ದೆ. ಮಾಸ್ತಿಯವರು ಬಂದದ್ದು ತಿಳಿಯುತ್ತಲೇ ಹೋಗಿ ಭೆಟ್ಟಿಯಾದೆ. ಅಂದಿನಿಂದ ಮೂರುದಿನಗಳವರೆಗೆ ನಮ್ಮ ಯೋಗಕ್ಷೇಮ ವಿಚಾರ ಮಾಡುತ್ತಲೇ ಇದ್ದರು. ಇದು ನನ್ನೊಬ್ಬನಿಗೆ ಮಾತ್ರ ಮೀಸಲಿರಲ್ಲಿಲ್ಲ. ಆ ದಿನ ಅವರು ಮೂರು ಮಹಡಿಗಳ ಮೆಟ್ಟಲನ್ನೇರಿ ಕೆಳಗೆ ಬಂದಾಗ ನಾನು ಸಂಧಿಸಿದಾಗ ''ಬಸವರಾಜ ಕಟ್ಟೀಮನಿ ಅವರನ್ನು ಕಾಣಲಿಕ್ಕೆ ಹೋಗಿದ್ದೆ. ಬಹುಶಃ ಅವರು ನನ್ನ ಕೋಣೆಯ ಕಡೆಗೆ ಹೋದರೇನೊ?'' ಎಂದರು. ಇದು ಅವರ ಸರಳರೀತಿ.

ಅವರ ಸಂಪರ್ಕದಲ್ಲಿ ಬಂದವರಿಗೆಲ್ಲ ಇಂಥ ಅನುಭವಗಳು ಆಗದೇ ಇಲ್ಲ.

ಮಾಸ್ತಿಯವರ ಹೃದಯ ಸಮುದ್ರದಲ್ಲಿ ದುಃಖದ ಮೊಸಳೆಗಳೂ ಇವೆ; ಆನಂದದ ತೆರೆಗಳನ್ನು ಉಕ್ಕಿಸುವ ಸುಖದ ದೋಣಿಗಳೂ ತೇಲುತ್ತವೆ. ಆದರೆ ಈ ವ್ಯಕ್ತಿ ದುಃಖದಿಂದ ಕಂಗೆಡುವದಿಲ್ಲ; ಸುಖದಿಂದ ಹಿಗ್ಗುವುದಿಲ್ಲ. ಎಷ್ಟೆಷ್ಟು ಬೇಕೋ ಅಷ್ಟಷ್ಟು ಅದಕ್ಕೆ.

ಈ ಸ್ಥಿತಪ್ರಜ್ಞೆ ಅಗಾಧವಾಗಿದೆ.

ಅವರಿಗೆ ಬಹುದೊಡ್ಡ ವಿಯೋಗವಾದಾಗ ನಾನು ಬೆಂಗಳೂರಿನಲ್ಲಿ ಅವರನ್ನು ಹೋಗಿ ಕಂಡೆ. ''ಓ! ಏನು? ಎಷ್ಟು ದೂರ ಗೋಕಾಕಿನಿಂದ ಬಂದಿರಾ ಕೃಷ್ಣಮೂರ್ತಿ!'' ಎಂದು ಕುಶಲ ಪ್ರಶ್ನೆಯನ್ನೇ ಮಾಡಿದರು. ದುಃಖದ ತೆರೆಗಳನ್ನು ಹಿಂದೆ ಅದುಮಿ ನಗೆಯ ಹೊನಲನ್ನು ಮುಂದೆ ತರುವ ಮನಸ್ಸಿನ ಆಳ ಅದೆಷ್ಟು ದೊಡ್ಡದು! ಸುಖದ ಕೊನೆಯಲ್ಲಿ ದುಃಖ; ದುಃಖದ ಅಂತ್ಯದಲ್ಲಿ ಸುಖ. ಎನ್ನುವ ಶರಣರ ಮಾತು ಖಚಿತವಾಗಿಸಿದ್ದಾರೆ ಮಾಸ್ತಿ.

ಮಾಸ್ತಿ ಶರಣರಲ್ಲಿ ಶರಣರು.

ತೀರಾ ಇತ್ತೀಚೆಗೆ ಆದ ಒಂದು ಅನುಭವವನ್ನು ವಿವರಿಸಿ ಈ ಲೇಖನ ಸೇವಾಕಾರ್ಯವನ್ನು ನಿಲ್ಲಿಸುತ್ತೇನೆ. ಬರೆದಷ್ಟೂ ಇನ್ನೂ ಉಳಿಯುತ್ತದೆ. ಉಳಿಯಬೇಕೇಕೆ ಎಂದು ಮತ್ತೆ ಬರೆದರೂ ಮತ್ತೂ ಉಳಿಯುತ್ತದೆ. ''ಎಳೆಯ ಮಗುವಿನ ಮೊಗದ ನಗೆಯಿಹುದು ಮೊಗದೆ'' ಎಂದು ಮಾಸ್ತಿಯವರು ಗಾಂಧೀಜಿಯನ್ನು ಕುರಿತು ಬರೆದಿದ್ದಾರೆ. ಈ ಮಾತು ಅವರಿಗೇ ಬೇಕಾದಷ್ಟು ಅನ್ವರ್ಥಕವಾಗುತ್ತದೆ.

ನಾನು ಬೆಂಗಳೂರಿಗೆ ಹೋದಾಗಲೆಲ್ಲಾ ಈ ಹಿರಿಯ ಚೇತನದ ದರ್ಶನ ಮಾಡಿಕೊಳ್ಳದೇ ಬರುವುದಿಲ್ಲ. ಈ ಸಲ ಬೆಂಗಳೂರಿಗೆ ಹೋದಾಗ ಮಾಸ್ತಿಯವರು ಒಂದು ದುಃಖದಲ್ಲಿರುವ ಸಂಗತಿ ತಿಳಿಯಿತು, ರೇಡಿಯೋ ಕಾರ್ಯಕ್ರಮವನ್ನು ಮುಗಿಸಿ ನೇರವಾಗಿ ಅವರ ಮನೆಗೆ ಹೋದೆ. ಶ್ರೀಮತಿ ಪಂಕಜಾ ಶ್ರೀನಾಥ ಅವರು ಮನೆಯಲ್ಲಿ ಹೋಗಿ ನಾನು ಭೆಟ್ಟಿಗೆ ಬಂದಿರುವುದಾಗಿ ತಿಳಿಸಿದರು. ಆದರೆ ಮಾಸ್ತಿಯವರು ಮನೆಯಲ್ಲಿ ಇರಲ್ಲಿಲ್ಲ. ಕ್ಲಬ್ಬಿಗೆ ಹೋಗಿದ್ದರು. ಶ್ರೀಮತಿ ಪಂಕಜಾ ಶ್ರೀನಾಥ ಅವರು ನನ್ನನ್ನು ಕ್ಲಬ್ಬಿನ ವರೆಗೆ ಕಳಿಸಲು ನೆರವಾದರು.

ನಾನು ಒಳಗೆ ಹೋದೆ. ಮಾಸ್ತಿಯವರು ಕಾರ್ಡುಗಳನ್ನು ಕೂಡಿಸುತ್ತಿದ್ದರು.

ಮೂರು ನಾಲ್ಕು ಜನ ಅಲ್ಲಿಯೇ ಕುಳಿತಿದ್ದರು. ಅಚ್ಚರಿಯ ಸಂಗತಿಯೆಂದರೆ ಅಲ್ಲಿ ಕುಳಿತವರಿಗೆ ಮಾಸ್ತಿಯವರ ದುಃಖದ ಸಂಗತಿಯೇ ಗೊತ್ತಿರಲ್ಲಿಲ್ಲ. ನಾನು ಆ ಮಾತನ್ನು ಅಲ್ಲಿ ಕೇಳಬಾರದಾಗಿತ್ತೇನೊ, ಕೇಳಿದೆ. ಮಾಸ್ತಿಯವರು ನನ್ನನ್ನು ಒಮ್ಮೆ ನೋಡಿ,

''ನಿಮಗೆ ಈ ಆಟ ಆಡಲು ಬರುತ್ತದೆಯೇ ಕೃಷ್ಣಮೂರ್ತಿ? ಬನ್ನಿ! ಆಡೋಣ!'' ಎಂದು ಎಲೆಗಳನ್ನು ಹರವಿದರು.

ಇದು ಮಾಸ್ತಿಯವರ ವ್ಯಕ್ತಿತ್ವ. ಕನ್ನಡಿಗರ ಮಧ್ಯದಲ್ಲಿರುವ ಹಿರಿಯ ಚೇತನ ಮಾಸ್ತಿ.

‘ಶ್ರೀನಿವಾಸ’ ಯಾರು?

ರಾ. ಶಿ.

ಮಾನ್ಯ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಇಂದು ಕನ್ನಡವಿರುವೆಡೆಯಲ್ಲೆಲ್ಲಾ ಮನೆಮಾತಾಗಿದ್ದಾರೆ. ಭಾರತದ ಹಲವಾರು ಭಾಷಾ ಪ್ರವೀಣರು ಸೇರುವೆಡೆಯಲ್ಲೆಲ್ಲಾ ಗೌರವಾನ್ವಿತ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಅಂತರಾಷ್ಟ್ರೀಯ ಭಾಷಾ ಸಮ್ಮೇಳನಗಳವರಿಗೂ ಮಾಸ್ತಿಯವರ ಪರಿಚಯ ಉಂಟು. ಆದರೆ ಈ ಮಹನೀಯರು ಕನ್ನಡ ಸಾಹಿತ್ಯರಂಗವನ್ನು ಹೇಗೆ ಪ್ರವೇಶಿಸಿದರು ಅಂತೀರಿ? ಗುಟ್ಟಾಗಿ.

ಹಾಯ್‌ಸ್ಕೂಲ್ ಕಾಲೇಜಿನ ತರಗತಿಯಲ್ಲಿ ಓದುವಾಗ ನನ್ನ ಮನೋಧರ್ಮವಿದ್ದ ವಿದ್ಯಾರ್ಥಿಗಳಿಗೆಲ್ಲಾ ಇಂಗ್ಲಿಷ್ ಪುಸ್ತಕಗಳು ಮತ್ತು ಪತ್ರಿಕೆಗಳು ಹೊಸ ಉತ್ಸಾಹವನ್ನೂ ನವ ಚೈತನ್ಯವನ್ನೂ ಉಂಟುಮಾಡುತ್ತಿದ್ದುವು. ಆಗ ಕನ್ನಡದಲ್ಲಿ ಪ್ರಕಟವಾಗುತ್ತಿದ್ದ ಹಳೆಯ ಸಂಪ್ರದಾಯದ ಸಾಹಿತ್ಯ ಪ್ರಕಾರಗಳು ಕಿಂಚಿತ್ತಾದರೂ ನಮ್ಮ ಮನ ಸೆಳೆಯುತ್ತಿದ್ದಿಲ್ಲ.

ಆಚಾರ್ಯ ಶ್ರೀಯವರ ‘‘ಇಂಗ್ಲಿಷ್ ಗೀತೆಗಳು’’ ಪ್ರಕಟವಾಯಿತು. ನಮ್ಮ ಮನಸ್ಸನ್ನು ಇಷ್ಟು ಹಿತವಾಗಿ ನಲಿಸಬಲ್ಲ ಇಂತಹ ಗೀತೆಗಳನ್ನು ಕನ್ನಡದಲ್ಲಿ ರಚಿಸಲು ಸಾಧ್ಯ ಎಂದು ಆಗ ನಮಗೆ ಮನವರಿಕೆಯಾಯಿತು. ಆದರೆ ಅವು ಪದ್ಯ-ಸರ್ವಜನ ಸಾದರವನ್ನೂ ಪಡೆಯುವುದು ಅಸಂಭವ. ಮುದ್ದಣನ ಟೀಕೆಯನ್ನು ಕೇಳಿದ್ದೀರಲ್ಲಾ; ಪದ್ಯಗಳ ವಿಷಯದಲ್ಲಿ,

ಆ ಸುಮಾರಿಗೆ ಪತ್ರಿಕೆಗಳಲ್ಲಿ ಸಣ್ಣಕತೆಗಳು ಪ್ರಕಟವಾದುದು. ಆ ತನಕ ಸ್ಟ್ರಾಂಡ್ ಮತ್ತು ಆರ್ಗೆಸಿ ಪತ್ರಿಕೆಗಳಲ್ಲಿ ಮುಳುಗಿದ್ದ ನಮಗೆ ಅದೇ ತೆರನ, ನಮ್ಮ ಜನಜೀವನವನ್ನು ಬಳಸಿಕೊಂಡಿದುದರಿಂದ, ಅದಕ್ಕೂ ಅತಿ ಹೆಚ್ಚಾಗಿ ಮನಮುಟ್ಟುವ ಆ ಕತೆಗಳನ್ನೂ ಓದುವಾಗ, ನನಗನಕ, ಈರುಳ್ಳಿ ಪಕೋಡಾ ತಿಂದ ಹಾಗಾಯಿತು. ತಿಂದ ಎಷ್ಟೋ ಹೊತ್ತಿನ ಮೇಲೂ ಅದರ ಘಮ ಘಮ ತೇಗಿದಾಗ ಹತ್ತಿರ ಸುಳಿದಾಡುತ್ತಿರುತ್ತದೆಯಲ್ಲವೇ, ಹಾಗೆಯೇ ಈ ಕತೆಗಳು. ಇವನ್ನು ಬರೆದ ಪುಣ್ಯಾತ್ಮನಾರು? ಎಂಬುದು ಸಹಜ ಕುತೂಹಲ. ಪ್ರಕಟವಾಗಿದ್ದ ಹೆಸರು ‘ಶ್ರೀನಿವಾಸ’. ಆದರೆ ಶ್ರೀನಿವಾಸ ಯಾರು? ಈ ಕಾವ್ಯನಾಮದ ಹಿಂದೆ ರಹಸ್ಯವೊಂದಡಗಿತ್ತು. ಆ ರಹಸ್ಯವು ಸಾಕಷ್ಟು ಗುಟ್ಟಾಗಿಯೂ ಇತ್ತು. ಸ್ವಲ್ಪ ಕಾಲ. ಆಗ ನನ್ನ ಮನೋಧರ್ಮಕ್ಕನುಗುಣವಾಗಿ ‘‘ಶ್ರೀನಿವಾಸನು ಯಾರು?’’ ಎಂಬ ಮಹತ್ತರ ಗಂಭೀರವಾದ ಸಂಶೋಧನೆಯನ್ನು ಕೈಗೊಂಡೆ! ಅದರ ಫಲಿತಾಂಶವನ್ನು ೧೯೩೩ರಲ್ಲಿ ಕನ್ನಡ ಜನತೆಯ ಮುಂದಿಟ್ಟೆ.

ಶ್ರೀನಿವಾಸರು ಯಾರು?

ಈಗ ಅಂತಹ ಸಂಶೋಧನೆಗಳಿಗೆ ಅಗತ್ಯವಿಲ್ಲ. ‘ಶ್ರೀನಿವಾಸ’ ಎಂಬ ಕಾವ್ಯ

ನಾಮವು ಮಾನ್ಯ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರದು ಎಂದು ಕನ್ನಡ ಕೂಸು ಕೂಡ ತಿಳಿದಿದೆ. ಕನ್ನಡದ ಎಳೆಯ ಕೂಸಿಗೂ ಸುಲಭವಾಗಿ ಅರ್ಥವಾಗುವಂತೆ, ಅದರ ಚಂಚಲ ಮನಸ್ಸನ್ನೂ ಸೆರೆಹಿಡಿಯುವಂತೆ, ''ಶ್ರೀನಿವಾಸ''ರು ಬರೆದಿದ್ದಾರೆ. ಕನ್ನಡದ ಮುಪ್ಪಿನ ಮುದುಕರಿಗೂ ''ಶ್ರೀನಿವಾಸ''ರು ಬರೆದುದರ ಅಂತರಾರ್ಥವನ್ನು ಇನ್ನೂ ವ್ಯಾಸಂಗಮಾಡಿ ಸರಿಯಾಗಿ ತಿಳಿದುಕೊಳ್ಳಬೇಕು ಎಂದನಿಸುವಂತೆ ಬರೆದಿದ್ದಾರೆ. ಬರೆಯುತ್ತಿದ್ದಾರೆ. ಕನ್ನಡಿಗರಿರುವ ಎಲ್ಲ ಊರುಕೇರಿಗಳಲ್ಲೂ ಶ್ರಮವನ್ನು ಗಮನಿಸದೆ ಸುತ್ತಾಡಿ ಮಾತನಾಡಿ ಬಂದಿದ್ದಾರೆ; ಶ್ರೀ ಮಾಸ್ತಿವೆಂಕಟೇಶ ಅಯ್ಯಂಗಾರ್ಯರು.

ಶ್ರೀನಿವಾಸನು ಯಾರು? ಎಂದು ಅಂದು ಸಂಶೋಧನೆಯನ್ನು ನಡಿಸಿದೆ.

ಈಗ ಶ್ರೀನಿವಾಸನು ಇವರು ಎಂದು ಹೇಳುವ ಅಗತ್ಯವೇ ಇಲ್ಲ. ಆದರೂ,

ಶ್ರೀನಿವಾಸನು ಯಾರು?
ನಾಲ್ವತ್ತು ವರುಷಗಳ ಹಿಂದೆ ಮಗು ಮರ್ಕಟವು
ಈ ಪ್ರಶ್ನೆಯನು ಕೇಳಿತು
ಚೇಷ್ಟೆಯು ಮರ್ಕಟಕೆ ಸಹಜ ಸ್ವಭಾವ
ಉತ್ತರಿಸಿತದೇ ಪ್ರಶ್ನೆಯನು
ಇರಬಹುದು ''ನಾನೇ'' ಎನುತ
ನಗೆ ರೆಂಬೆಯನು ಹಿಡಿದು ಕುಪ್ಪಳಿಸಿತು

*

ಕಳೆದುವು ನಾಲ್ವತ್ತು ವರುಷಗಳು
ನಲವತ್ತರ ''ಮಂಡಲದ'' ಮಂಡಲಿಗಳು ಕೂಡ
ಮಾಡಲಾರದ ಸಾಹಿತ್ಯ ಕೃಷಿಯ ''ಶ್ರೀನಿವಾಸ''ರು ಮಾಡಿದರು
ವಿಧವಿಧದ ಬೆಳೆಗಳು
ಎಲ್ಲದರಲು ತುಂಬಿತ್ತು ''ಮಧು''
ಹಿತವೀವ, ತಂಪೆರೆವ ಹೂಗಳು
ಸೂಸುವುವು ಸತ್ಯ ಸೌಂದರ್ಯದ ಕಂಪು
ನಿಜ ಅನುಭವದ ರಸಫಲಗಳು
ಅರಿವ ಹಗುರಾಗಿಸುವ ಸಾಧಕಗಳು
ಹಿತ ಬಾಳ ಮರ್ಮವನು
ಬಾಳಿನ ಮೂಲ ಧರ್ಮವನು
''ಶ್ರೀನಿವಾಸ''ರು ಕನ್ನಡದ ಗಿಂಡಿಯಲಿ ಪ್ರವಹಿಸಿದರು
ಶ್ರೀ ಮಾಸ್ತಿಯವರು ನುಡಿದಂತೆ ಬಾಳಿ ಸಾಕ್ಷ್ಯ ನೀಡಿಹರು.
''ಶ್ರೀನಿವಾಸ'' ರು
ಇವರು.
ಮಾನ್ಯ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು

''ಕೌಸಲ್ಯಾ ಸುಪ್ರಜಾ ರಾಮ, ಪೂರ್ವಾ ಸಂಧ್ಯಾ ಪ್ರವೃತ್ತತೇ
ಉತ್ತಿಷ್ಠ ನರಶರ್ದೂಲ, ಕರ್ತವ್ಯಂ ದೇವಮಾಹ್ನಿಕಂ''
ಏಳುಮಲೆಯ ಶ್ರೀನಿವಾಸನಿಗೆ
ಸುಪ್ರಭಾತವ ಕೋರಿದನಂದು ಶ್ರೀರಾಮನೂ ಕೂಡ
ಪವಿತ್ರವಾದ ಆ ಹೆಸರ ಮುಂದಿಟ್ಟು
ಗುಟ್ಟಾಗಿ ಆಡಿ ಇಟ್ಟು
ಕನ್ನಡದ ಸುಪ್ರಭಾತವನ್ನು ಹಾಡಿದರು ಇವರು.
ಗುಟ್ಟು ರಟ್ಟಾಯಿತು. ಹಿರಿ ಕೀರ್ತಿ ದೊರೆಯಿತು.
ಆದರೂ ''ಇದೆಲ್ಲ ಶ್ರೀನಿವಾಸನ ಆಣತಿ'' ಎಂದೆನುವ
ಅನುಭಾವೀ ವಿನಯವಂತರು. . .

*

ಅಂದು ''ಇರಬಹುದು ನಾನೇ'' ಎಂದ ಮರ್ಕಟ ಮಗು
''ಶ್ರೀನಿವಾಸ''ನ ನೆರಳ ಹಿಡಿದು ಕುಂಟುತ್ತ ನಡೆದು
''ನಾನೇ'' ಎನುವ ಭ್ರಮೆಯ ಹರಿವುದೇ ಬಾಳಗುರಿ
ಎನುವುದನು ಕಲಿಯಿತು, ಏಳ್ಮಲೆಯ ಹೆಸರಿನವನಿಂದ
''ಶ್ರೀನಿವಾಸ''ರು ಇವರು
ತುಂಟ ಮಗುವಿಗೂ ನಂಟರಾಗುವ
ವೆಂಕಟೇಶ ಅಯ್ಯಂಗಾರ್ಯರು.

ಸ್ಥಿತಪ್ರಜ್ಞ

ಕೋ. ಚೆನ್ನಬಸಪ್ಪ

ಕಳೆದ ನವರಾತ್ರಿಯ ಉತ್ಸವದಲ್ಲಿ ಹೆಂಡತಿ ಮಕ್ಕಳೊಡನೆ ಶ್ರೀ ಮಾಸ್ತಿಯವರ ಮನೆಗೆ ಹೋಗಿದ್ದೆ. ಒಂದು ಘಂಟೆ ಅವರೊಡನೆ ಮಾತನಾಡಿದ ಮೇಲೆ ಹೊರಡಲು ಮೇಲೆದ್ದೆವು. ಮಾಸ್ತಿಯವರು,

''ಸ್ವಲ್ಪ ತಡಿ ತಾಯಿ'' ಎಂದರು, ನನ್ನ ಎರಡನೆಯ ಮಗಳನ್ನು ಉದ್ದೇಶಿಸಿ, ನಾವು ನಿಂತೆವು. ಅವರು ತಮ್ಮ ಕೋಣೆಯೊಳಗೆ ಹೋಗಿ ಅವರ ''ಹ್ಯಾಮ್‌ಲೆಟ್'' ನಾಟಕದ ಅನುವಾದ ಗ್ರಂಥವನ್ನು ತಂದು ನನ್ನ ಮಗಳ ಕೈಯಲ್ಲಿಟ್ಟರು. ಅದು ಅವಳಿಗೆ ಪಠ್ಯ ಪುಸ್ತಕವಾಗಿ ಗೊತ್ತಾಗಿತ್ತು.

''ಒಳ್ಳೆಯದಾಗಲಿ ತಾಯಿ ದೇವರು ಒಳ್ಳೆಯದು ಮಾಡಲಮ್ಮ'' ಎಂದು ಬಾಯ್ತುಂಬ ಮನತುಂಬ ಹರಸಿದರು.

ಆ ಪುಸ್ತಕದ ಮುಖ ಪುಟದ ಮೇಲೆ ''ಚಿರಂಜೀವಿ ಸೌಭಾಗ್ಯವತಿ ಮಂಜುಳಾ ತಾಯಿಗೆ ಆಶೀರ್ವಾದ ಪೂರ್ವಕ, -ಶ್ರೀನಿವಾಸ'' ಎಂದು ಬರೆದಿದ್ದರು. ಮಂಜುಳಾ ಕೇವಲ ಹದಿನಾರು ವರ್ಷದವಳು. ಆದರೂ ಮಾಸ್ತಿ ಅವರು ''ಚಿರಂಜೀವಿ ಸೌಭಾಗ್ಯವತಿ''ಎಂಬ ವಿಶೇಷಣಗಳಿಂದಲೇ ಆಕೆಗೆ ಆಶೀರ್ವದಿಸಬೇಕು! ಹೆಸರಿನ ತರುವಾಯ ''ತಾಯಿ'' ಎಂಬ ಪದ ಸೇರಬೇಕು!! ಅದನ್ನು ಓದಿ ಆಮೇಲೆ ನಾನು ಹೇಳಿದೆ:

''ನೋಡಿದೆಯಾ ಮಾಸ್ತಿಯವರ ಮನಸ್ಸು. ಹೆಣ್ಣು ಮಕ್ಕಳೆಂದರೆ ಅವರಿಗೆ ಎಷ್ಟು ಗೌರವ, ಎಷ್ಟೇ ಚಿಕ್ಕವರಾದರೂ ಹೆಣ್ಣು ಮಕ್ಕಳು ಅವರಿಗೆ ''ತಾಯಿ'' ಆಗಿಯೇ ಕಾಣುತ್ತಾರೆ. ಅವರ ಬರವಣಿಗೆಯಲ್ಲೆಲ್ಲ ಇದೇ ಭಾವ ಎದ್ದು ಕಾಣುತ್ತದೆ'' ಎಂದೆ.

''ಅವರ ನೀಳ್ಗತೆಯಲ್ಲಿ ಆಗಲಿ ಸಣ್ಣ ಕತೆಗಳಲ್ಲಿ ಆಗಲಿ ಕಾದಂಬರಿಗಳಲ್ಲಿ ಆಗಲಿ ಹೆಣ್ಣುಮಕ್ಕಳನ್ನು ಚಿತ್ರಿಸಿದಾಗ ನಮ್ಮ ಸ್ತ್ರೀಯರ ಆ ತಾಯ್ತನವನ್ನು ಎಷ್ಟು ಕೋಮಲವಾಗಿ ನಯವಾಗಿ ನವುರಾಗಿ ಚಿತ್ರಿಸುತ್ತಾರೆ! ಮಾಡಬಾರದ ಕೆಲಸ ಮಾಡಿದ ಹೆಂಗಸಿನ ನಡತೆಯನ್ನು ಪ್ರಸ್ತಾಪಿಸುವಾಗಲೂ ಅಕ್ಷರಶಃ ಮೈ ತುಂಬ ಎಚ್ಚರಿಕೆ ವಹಿಸುತ್ತಾರೆ. ಒಂದು ಮಾತು ಆಡಿದರೆ ಹೆಚ್ಚು ಒಂದು ಬಿಟ್ಟರೆ ಕಡಿಮೆ ಅಷ್ಟು ತೂಕ ಮಾಡಿ ಬರೆಯುತ್ತಾರೆ. ಬಹು ವಿವಾದಕ್ಕೆ ಕಾರಣವಾಗಿ ದೊಡ್ಡ ಕೋಲಾಹಲ ಎಬ್ಬಿಸಿದ ''ಚೆನ್ನಬಸವನಾಯಕ'' ಕಾದಂಬರಿಯಲ್ಲಿ ವೀರಮ್ಮಾಜಿಯ ನಡತೆಯ ಬಗ್ಗೆ ಬರೆಯುವಾಗಲೂ ಅದೇ ಎಚ್ಚರಿಕೆ ಮೂಡಿದೆ. ಆ ಕಾದಂಬರಿಯನ್ನು ಬಹು ಎಚ್ಚರಿಕೆಯಿಂದ ಓದಿದ್ದೇನೆ. ಆ ನಾಯಕಿ ದಾರಿ ತಪ್ಪಿದ್ದಳೆಂದು ಎಲ್ಲಿಯೂ ಬಾಯಿ ಬಿಟ್ಟು ಹೇಳುವುದಿಲ್ಲ. ನಡೆದ ಸಂಗತಿಯಿಂದ ತಪ್ಪಿರಬಹುದು ಎಂದು ಓದುಗರು ತಮಗೆ ತಾವೇ ಊಹಿಸಿಕೊಳ್ಳಬೇಕು. ಸ್ತ್ರೀ ನಡತೆಯನ್ನು ಕುರಿತು ಹೀಗೆ ಅವರು ಬರೆಯುವುದು ಅವರ ಹುಟ್ಟುಗುಣ. ಅದು ಕಷ್ಟಪಟ್ಟು ಕಲಿತ

ಕಲಿಕೆಯಲ್ಲ. ಅದು ಅವರ ಜೀವನ ಉಸಿರು.

ನವರಾತ್ರಿಗಾಗಿ ಬೊಂಬೆಗಳನ್ನು ಕೂಡಿಸಿದ್ದರು. ಆ ಬೊಂಬೆಗಳ ಹಿಂದಿನ ಗೋಡೆಯ ಮೇಲೆ ಒಂದು ಭಾವ ಚಿತ್ರ ತೂಗು ಹಾಕಲಾಗಿತ್ತು. ಅದನ್ನು ನೋಡಿ;

''ಅಮ್ಮನವರೆಂದು ಕಾಣುತ್ತದೆ'' ಎಂದಳು ನನ್ನ ಮಡದಿ.

''ಹೌದು ತಾಯಿ. ಇಂದಿಗೆ ಒಂದು ವರ್ಷವಾಯಿತು ಆಕೆ ಹೋಗಿ. ಐವತ್ತೊಂಬತ್ತು ವರ್ಷ ಜೊತೆಯಾಗಿ ಬಾಳಿದೆವು. ಆದರೆ ಅದೆಲ್ಲ ಇನ್ನೂ ನಿನ್ನೆ ಮೊನ್ನೆಯಂತೆ ಕಾಣುತ್ತದೆ. ಆಕೆ ಎಷ್ಟು ಸೇವೆ ಮಾಡಿದಳು ಪಾಪ! ಈಗ ನನ್ನ ಹೆಸರಿನಲ್ಲಿ ಏನೇನು ಪ್ರಕಟವಾಗಿದೆಯೋ ಅದನ್ನೆಲ್ಲ ಬರೆದುಕೊಂಡು ಅಚ್ಚಿಗೆ ಸಿದ್ಧ ಮಾಡಿದವಳೇ ಆಕೆ. ಆಕೆ ಬರೆದುಕೊಳ್ಳದಿದ್ದರೆ ಇಷ್ಟೆಲ್ಲ ಪುಸ್ತಕ ಕನ್ನಡಕ್ಕೆ ಸಿಗುತ್ತಿರಲಿಲ್ಲ.''

ಹಾಗೆಯೇ ಒಂದು ನಿಮಿಷ ಸುಮ್ಮನಾಗಿ ಮತ್ತೆ ಮಾತು ಮುಂದುವರಿಸಿದರು.

''ಅಷ್ಟೆಲ್ಲ ಸೇವೆ ಮಾಡಿಸಿಕೊಳ್ಳಲು ನನಗೇನು ಅರ್ಹತೆಯಿದೆ ಎನ್ನಿಸುತ್ತದೆ. ಆದರೆ ನಮ್ಮ ಯೋಗ್ಯತೆ ಅರ್ಹತೆಯನ್ನು ನೋಡಿ ನಮ್ಮ ಹೆಣ್ಣು ಮಕ್ಕಳು ಪತಿ ಸೇವೆ ಮಾಡುವುದಿಲ್ಲ. ಪತಿಯಾಗಿದ್ದದ್ದೇ ಅರ್ಹತೆ. ಆ ಪತಿ ಒಂದು ವೇಳೆ ಅಯೋಗ್ಯನಾಗಿದ್ದರೂ ನಮ್ಮ ತಾಯಂದಿರು ಗಂಡನ ಸೇವೆ ಮಾಡಿಯೇ ಮಾಡುತ್ತಾರೆ. ಅದು ಅವರ ದೊಡ್ಡಗುಣ''

''ನಿಮಗೀಗ ತುಂಬ ತೊಂದರೆಯಾಗಿರಬೇಕು ಅವರು ಹೋದ ಮೇಲೆ'' ಎಂದೆ ನಾನು.

''ಸ್ವಾಮಿ ಇಚ್ಛೆ ಹಾಗಿತ್ತು. ಅದನ್ನು ತಪ್ಪಿಸಲು ಯಾರಿಂದ ಸಾಧ್ಯ? ಆಕೆ ಹೋದ ಸ್ವಲ್ಪೇ ದಿನಗಳಲ್ಲಿ ನನ್ನ ಮೊದಲ ಅಳಿಯ ಕೆಲಸದಿಂದ ರಿಟೈರ್ ಆಗಿ ಇಲ್ಲಿಗೆ ಬಂದರು. ನಾನು ಒಬ್ಬನೇ ಇರುವುದೇನು? ನೀವು ಇಲ್ಲೇ ಇದ್ದು ಬಿಡಿ ಅಂದೆ. ಇಲ್ಲಿಯೇ ಇದ್ದಾರೆ. ನನ್ನ, ಮುದುಕನನ್ನ ನೋಡಿಕೊಳ್ತಾರೆ. ನನ್ನ ಯೋಗಕ್ಷೇಮದ ಹೊಣೆ ಸ್ವಾಮಿಯದು''

ಕನ್ನಡ ನಾಡಿಗೆ ಮಾಸ್ತಿಯವರು ಮಾತ್ರ ಗೊತ್ತು. ಅವರ ಆ ಹೆಸರು ಅಷ್ಟು ಚೆನ್ನಾಗಿ ಗೊತ್ತುಮಾಡಿದ ಗ್ರಂಥಗಳನ್ನು ಬರೆದುಕೊಂಡವರು ಅವರ ಸಹ ಧರ್ಮಿಣಿ ಎಂಬುದು ಬಹು ಜನರಿಗೆ ಗೊತ್ತೇಯಿಲ್ಲ. ಕಣ್ಣಿಗೆ ಕಾಣುವುದು ಮನ್ನಣೆ ಕೈಗೊಳ್ಳುವುದು ಬಾವುಟವೇ ಹೊರತು ಬಾವುಟವನ್ನು ಎತ್ತಿ ಹಿಡಿದಿರುವ ಗಳುವಲ್ಲ. ಹಾಗೆಯೇ ಮಾಸ್ತಿಯವರ ಮಡದಿ ಕೂಡ.

ಹೀಗೆ ಅರವತ್ತು ವರ್ಷ ಸೇವೆ ಮಾಡಿದ ತಪಸ್ವಿನಿ ತೀರಿದಾಗ ಮಾಸ್ತಿಯವರ ಮನಸ್ಸಿಗೆ ಹೇಗಾಗಿರಬೇಡ? ಒಮ್ಮೆ ಶ್ರೀ ಅನಕೃ ಹೇಳಿದರು:

''ಅವರ ಸ್ಥಿತಪ್ರಜ್ಞೆ, ಆಶ್ಚರ್ಯಕರವಾದುದು ಕೋಚೆ! ಅವರಿಗೆ ಸಮಾಧಾನ ಪಡಿಸುವ ಪ್ರಯತ್ನದಲ್ಲಿ ನಾನೇ ತಳಮಳಗೊಂಡೆ. ಆದರೆ ಅವರು ನಮಗೇ ಸಮಾಧಾನ ಹೇಳಿದರು!''

ಶ್ರೀ ಅನಕೃ ಅವರು ಹೇಳಿದ ಈ ಮಾತಿನಿಂದ ಮಾಸ್ತಿಯವರ ಮನಸ್ಸಿನ ಒಂದು ಅಪರಿಚಿತ ಮುಖದರ್ಶನ ನಮಗಾಗುತ್ತದೆ. ದುಃಖವನ್ನು ಭರಿಸಲು ಎಷ್ಟು ಶಕ್ತರೆಂಬುದರ ಮೇಲೆ ಒಬ್ಬರ ದೊಡ್ಡಸ್ತಿಕೆಯನ್ನು ನಿರ್ಣಯಿಸಬಹುದು. ಇದೇ ವರ್ಷ ಅವರ ಒಬ್ಬ ಮೊಮ್ಮಗಳು ತೀರಿದಳು. ಆ ವಿಚಾರವಾಗಿ ಮಾತನಾಡಿದರೆ:

''ಏನೋ ಅಚಾತುರ್ಯವಾಯಿತು. ಕೈಮೀರಿ ಹೋಯಿತು. ದೈವೇಚ್ಛೆ, ಯತ್ನವಿಲ್ಲ'' ಎನ್ನುತ್ತಾರೆ.

ಸಾವಲ್ಲಿ ಕೂತಿದ್ದಾಗ ಮಾಸ್ತಿಯವರು ಮಕ್ಕಳೊಡನೆ ಅಳಿಯಂದಿರೊಡನೆ ತಮಿಳಿನಲ್ಲಿ ಮಾತನಾಡಿದ್ದು ಕೇಳಿದ ನನ್ನ ಮಡದಿ:

''ನಿಮ್ಮ ಮನೆ ಮಾತು ತಮಿಳೇ?'' ಎಂದು ಆಶ್ಚರ್ಯದಿಂದ ನುಡಿದಾಗ ಶ್ರೀ ಮಾಸ್ತಿಯವರು:

''ನಮ್ಮೂರು ಮಾಸ್ತಿ ಕೋಲಾರ ಜಿಲ್ಲೆಯಲ್ಲಿ ರಾಜ್ಯದ ಗಡಿಯಲ್ಲಿದೆ ತಾಯಿ. ಸ್ವಲ್ಪ ದೂರ ಈ ಕಡೆ ಬಂದರೆ ಮದ್ರಾಸ್ ರಾಜ್ಯ ಸಿಗುತ್ತದೆ. ನಮ್ಮೂರಿನಲ್ಲಿ ಒಂದು ಬೀದಿಯಲ್ಲಿ ಕನ್ನಡ ಇನ್ನೊಂದರಲ್ಲಿ ತೆಲಗು ಮತ್ತೊಂದರಲ್ಲಿ ತಮಿಳು. ಮೂರೂ ಭಾಷೆಯ ಜನರಿದ್ದಾರೆ. ಆದರೆ ಎಲ್ಲರೂ ಅಣ್ಣ ತಮ್ಮಂದಿರಂತೆ ಇದ್ದಾರೆ. ಹೀಗೆ ನಮ್ಮ ದೇಶದ ಎಲ್ಲ ಭಾಷೆಯ ಜನರೂ ಅನ್ಯೋನ್ಯವಾಗಿ ಹೊಂದಿಕೊಂಡು ಹೋಗಬೇಕು. ಹಾಗಾದರೆ ಈ ದೇಶ ಸುಂದರವಾಗುತ್ತದೆ. ಮಾತು ಮನಸುಗಳನ್ನು ಒಂದುಗೂಡಿಸಬೇಕೇ ಹೊರತು ಒಡೆಯಬಾರದು''

ನಾವು ಹೊರಡಲು ಎದ್ದು ನಿಂತೆವು. ಹ್ಯಾಂಲೆಟ್ ನಾಟಕ ಮತ್ತು ಸಣ್ಣ ಕತೆಗಳು ಗ್ರಂಥಗಳನ್ನು ಆಶೀರ್ವದಿಸಿಕೊಟ್ಟು:

''ಅನುವಾದ ಸರಳವಾಗಿದೆ. ಕಷ್ಟವಿಲ್ಲ. ಅನುವಾದದ ಕೆಲಸ ಮೂಲ ಕವಿಯ ಅಭಿಪ್ರಾಯವನ್ನು ಅದಷ್ಟು ಸರಿಯಾಗಿ ನಮ್ಮ ಭಾಷೆಯಲ್ಲಿ ಮೂಡಿಸುವುದು. ಹಾಗೆ ಮೂಡಿಸುವಾಗ ಸುಂದರವಾದ ಮಾತಿನಲ್ಲಿ ಹೇಳಬೇಕು. ನಮ್ಮ ಭಾಷಾ ಶುದ್ಧಿ ಭಾಷಾ ಸೌಂದರ್ಯದ ಕಡೆಗೇ ಗಮನ ಕೊಟ್ಟು ಮೂಲ ಕೃತಿಯನ್ನು ಕೆಡಿಸಬಾರದು. ಮೂಲ ಕೃತಿಯ ಛಾಯೆ ಯಥಾವತ್ತಾಗಿ ಬಂದರೆ ಸಾಕು. ಇದು ಸುಲಭವಾಗಿ ಅರ್ಥವಾಗುತ್ತದೆ ಮಗು'' ಎಂದರು.

''ನಿಮ್ಮ ಯಾವ ಬರವಣಿಗೆಯೂ ಅಷ್ಟೇ. ನಿಮ್ಮ ಇಡೀ ಬರವಣಿಗೆಯಲ್ಲಿ ಪಂಜು ಹಚ್ಚಿ ಹುಡುಕಿದರೂ ದೀರ್ಘ ವಾಕ್ಯಗಳಾಗಲೀ ಕಠಿಣ ಶಬ್ದಗಳಾಗಲೀ ಸಿಗುವುದಿಲ್ಲ. ಒತ್ತಕ್ಷರಗಳನ್ನೂ ನೀವು ಹೆಚ್ಚಾಗಿ ಬಳಸುವುದಿಲ್ಲ. ಕಣ್ಣಿಗೆ ನಾಲಗೆಗೆ ಕೂಡ ಕಷ್ಟಕೊಡುವುದಿಲ್ಲ ನಿಮ್ಮ ಭಾಷೆ! ಬುದ್ಧಿಗೆ ಮನಸ್ಸಿಗೆ ಕಷ್ಟ ಕೊಟ್ಟೀತೇ? ಐದನೆ ತರಗತಿ ಓದಿದ ಮಗು ನಿಮ್ಮ ಕತೆಗಳನ್ನೆಲ್ಲ ಸರಾಗವಾಗಿ ಓದೀತು'' ಎಂದೇ ನಾನು.

ಈ ಮಾತಿಗೆ ಅವರು ಏನೂ ಹೇಳಲಿಲ್ಲ. ಎಳೆಯ ಮಗುವಿನಂತೆ ನಕ್ಕರು. ಅವರಿಗೆ ಆ ಮಾತು ಒಪ್ಪಿತು ಎಂದು ನಾನಂದುಕೊಂಡೆ.

''ದೀಪಾವಳಿ ವಿಶೇಷ ಸಂಚಿಕೆಯಲ್ಲಿ ಬಂದಿದ್ದ 'ಕುಚೇಲನ ಭಾಗ್ಯ' 'ಚಟ್ಟೇಕಾರನ ತಾಯಿ' ತುಂಬ ಚೆನ್ನಾಗಿ ಬಂದಿದೆ. ಕುಚೇಲನ ಭಾಗ್ಯದಲ್ಲಿ ಪುರಾಣದ ಕಥೆಗೆ ಒಂದು ನೂತನ ತಿರುವು ಕೊಟ್ಟಿದ್ದೀರಿ. ನಾನು ಎರಡು ಸಾರಿ ಓದಿದೆ, ಮಕ್ಕಳಿಗೆ ಓದಿ ಹೇಳಿದೆ. ಇನ್ನೂ ಓದಬೇಕೆನಿಸಿತು. ಇದೇ ರೀತಿ ಇತರ ಪುರಾಣ ಕತೆಗಳನ್ನು ಪುನರಪಿ ಹೇಳಿದರೆ ತುಂಬ ಸೊಗಸಾಗುತ್ತದೆ.''

ಶ್ರೀ ಕೃಷ್ಣಪರಮಾತ್ಮ ಏನೋ ಒಂದು ಪವಾಡ ಮಾಡಿಬಿಟ್ಟ, ಕುಚೇಲನ ಬಡತನ ನೀಗಿದ ಎಂಬುದಕ್ಕಿಂತ ನಾನು ಹೇಳಿರುವಂತೆ ಆಯಿತು. ಎಂದರೆ ಶ್ರೀಕೃಷ್ಣನ ಹಿರಿಮೆಗೆ, ಮಹಿಮೆಗೆ ಕುಂದೇನು ಬಂತು?

''ಚಟ್ಟೇಕಾರನ ತಾಯಿ ಕತೆ ವಾಸ್ತವವಾಗಿ ನಡೆದದ್ದೋ ಅಥವಾ ಕಾಲ್ಪನಿಕವೋ?''

''ನಿಜವಾದ ಸಂಗತಿಗೆ ಸ್ವಲ್ಪ ಕಲ್ಪನೆ ಸೇರಿಸಿದ್ದೇನೆ. ಕೊನೆ ಕೊನೆಗೆ ಬರುವ ಆಸ್ಪತ್ರೆಯಲ್ಲಿ ನಡೆಯಿತು ಎಂಬ ಕತೆ ನನ್ನ ಕಲ್ಪನೆ. . .''

ಶ್ರೀ ಮಾಸ್ತಿಯವರನ್ನು ಮೊಟ್ಟಮೊದಲು ನಾನು ಯಾವಾಗ ನೋಡಿದೆನೋ ಸರಿಯಾಗಿ ನೆನಪಿಲ್ಲ. ಆದರೆ ೧೯೩೩-೩೪ರಲ್ಲಿ ಅವರ ''ಸುಬ್ಬಣ್ಣ'' ಕತೆಯನ್ನು ಓದಿದ್ದೆ. ೧೯೩೫-೩೬ರಲ್ಲಿ ಮೊಟ್ಟಮೊದಲು ಅವರನ್ನು ನೋಡಿದ ಹಾಗೆ ನೆನಪು. ೧೯೪೪-೪೫ರಲ್ಲಿ ಪ್ರಗತಿಶೀಲ ಸಾಹಿತ್ಯದ (ಬಿರು) ಗಾಳಿ ಎದ್ದಾಗ ಒಗರು ತುಂಬಿದ ಯುವಕರಾಗಿದ್ದ ನಾವು ಶ್ರೀ ಮಾಸ್ತಿಯವರ ಬರವಣಿಗೆಯನ್ನು ಕಟುವಾಗಿ ಟೀಕಿಸಿದ್ದುಂಟು. ನಮ್ಮದು ಅನುದಾರವಾದ ಖಂಡನೆ ಎಂದು ಈಗ ನನಗೆ ಅನ್ನಿಸುತ್ತದೆ. ಅವರ ''ನವರಾತ್ರಿ'' ಕಥನ ಕವನಗಳನ್ನು ವಿಮರ್ಶಿಸುತ್ತಾ ''ಕತ್ತಲೆಯ ನವರಾತ್ರಿ'' ಎಂದು ಕರೆದವು. ''ಇದೇನು ಪದ್ಯವೋ ಗದ್ಯವೋ? ಗದ್ಯ ಕೆಟ್ಟು ಪದ್ಯವಾಯಿತೋ?'' ಎಂದು ಕೇಳಿದೆವು. ಶ್ರೀ ಮಾಸ್ತಿಯವರ ಕತೆಗಳನ್ನು ಅವರ ಅನನುಕರಣೀಯ ಸರಳ ತಿಳಿಯಾದ ಕನ್ನಡವನ್ನು ಮನಸಾರೆ ಮೆಚ್ಚಿದ ನಾವು ಅವರ ಕವಿತೆ ''ಮಲಾರ''ವನ್ನು ಕುರಿತು ''ಇದೇನು ಕವಿತೆ?'' ಎಂದು ಮೂದಲಿಸಿದೆವು. ಇಷ್ಟೆಲ್ಲ ಕಂಡಾಪಟ್ಟೆ ಬರೆದರೂ ಅವರೆಂದರೆ ನಮಗೆ (ಪ್ರಗತಿಶೀಲ ಸಾಹಿತಿಗಳಿಗೆ) ತುಂಬ ಗೌರವ. ಪೂಜ್ಯ ಬುದ್ಧಿ, ಈ ಗೌರವದಲ್ಲಿ ಕಾಪಟ್ಯವಿರಲಿಲ್ಲ. ಆ ವಿರೋಧದಲ್ಲಿ ದ್ವೇಷವಿರಲಿಲ್ಲ, ನಮ್ಮ ವಿರೋಧ ಕೇವಲ ತಾತ್ವಿಕವಾದುದು.

ಒಮ್ಮೆ ನಾನವರೊಡನೆ ಮಾತನಾಡುತ್ತಾ, ''ನಮ್ಮ ಸಮಾಜದಲ್ಲಿ ಬಡತನ, ಅಜ್ಞಾನ, ಅನಾರೋಗ್ಯ, ದುರ್ನಡತೆ ತುಂಬಿಕೊಂಡಿದೆ. ಸಮಾಜದ ಈ ಸ್ಥಿತಿಯನ್ನು ಸಾಹಿತಿ ಎತ್ತಿ ತೋರಿಸಬೇಡವೇ?'' ಹುರಿಯುವ ಹರಳು ಸಿಡಿಯುವಂತೆ ಪ್ರಶ್ನೆ ಕೇಳಿದೆ.

''ಬೇಡ ಎಂದು ಯಾರು ಹೇಳುತ್ತಾರೆ?''

''ಹಾಗಾದರೆ ನಿಮ್ಮ ಕತೆ, ಕಾವ್ಯ, ಕಾದಂಬರಿಗಳಲ್ಲಿ ಈ ವಸ್ತು ಏಕಿಲ್ಲ?'' ಎಂದೆ.

ಈ ಮಾತು ನೆನೆಸಿಕೊಂಡರೆ ನನಗೇ ನಗೆ ಬರುತ್ತದೆ. ಒಬ್ಬ ಸಾಹಿತಿ ಇದನ್ನೆ ಇಂಥಾದನ್ನೇ ಹೀಗೆಯೇ ಬರೆಯಬೇಕೆಂದು ಕೇಳುವ ನನ್ನ ಅಂದಿನ ಧೈರ್ಯವೇ ಧೈರ್ಯ! ಯಾರಿಗೆ ಏನು ಗೊತ್ತಿದೆಯೋ ಅದನ್ನು ಅವರು ಸರಿಯಾಗಿ ಮಾಡಬೇಕು. ಕಮ್ಮಾರ ಬಡಗಿ ಕೆಲಸ ಮಾಡಬಲ್ಲ ಎಂದು ಆಕ್ಷೇಪಿಸಬಹುದೇ? ಅಥವಾ ಸಿಂಪಿಗನಿಗೆ ಕ್ಷೌರ ಮಾಡಲು ಬರಲಿಲ್ಲವೆಂದು ಕುಪಿತರಾಗುವುದು ಸಾಧುವೋ? ಹಾಗೆಯೇ ಅಂದಿನ ಪ್ರಸಿದ್ಧ ಸಾಹಿತಿಗಳು ತಾವು ಕಂಡ ಬಾಳನ್ನು, ಬದುಕನ್ನು, ಸತ್ಯವನ್ನು ತಮಗೆ ತೋರಿದ ರೀತಿಯಲ್ಲಿ ಬರೆದು ತೋರಿಸಿದರು, ಬಡತನ, ಅಜ್ಞಾನ ಅನಾರೋಗ್ಯ ಅವರು ಅನುಭವಿಸಲಿಲ್ಲ. ಅದನ್ನು ಅವರು ನಮ್ಮಷ್ಟು ಹತ್ತಿರದಿಂದ ಕಾಣಲಿಲ್ಲ. ಕಾಣದ ವಿಚಾರ ಕುರಿತು ಮಾತನಾಡುವುದು ಜೀವನದಲ್ಲೂ, ಸಾಹಿತ್ಯದಲ್ಲೂ ಸಾಧುವಲ್ಲ ಎಂಬುದು ನನಗೇಕೆ ಆಗ ತಿಳಿಯಲಿಲ್ಲವೋ ಕಾಣೆ!

ನನ್ನ ಮೇಲಿನ ಪ್ರಶ್ನೆಗೆ ಶ್ರೀ ಮಾಸ್ತಿಯವರು ಅವರಿಗೆ ಸಹಜವಾದ ಸರಳ ಮಾತಿನಿಂದ ಹೇಳಿದರು: ''ನೀವು ಬರೆಯಿರಿ, ನಾನು ಓದಿ ಸಂತೋಷಪಡುತ್ತೇನೆ. ಚೆನ್ನಾಗಿದ್ದರೆ, ಇತರರೂ ಓದುತ್ತಾರೆ'' ಎಂದು.

ಇದು ನನ್ನ ಪ್ರಶ್ನೆಗೆ ತಕ್ಕ ಉತ್ತರ ಎಂದು ಆಗ ನನಗೆ ಅನಿಸಲಿಲ್ಲ. ಇದಕ್ಕಿಂತ ಸಮರ್ಪಕ ಉತ್ತರವನ್ನು ಅಷ್ಟು ಮೃದುವಾಗಿ ಹೇಳುವುದೇ ಸಾಧ್ಯವಿರಲಿಲ್ಲ. ಎಂದು ನನಗೀಗ ತೋರುತ್ತದೆ. ''ನೀವು ಬರಿಯಿರಿ'' ಎಂಬ ಮಾತಿನಲ್ಲಿ ಎಲ್ಲವೂ ಧ್ವನಿರೂಪದಲ್ಲಿ ಅರ್ಥಗರ್ಭಿತವಾಗಿದೆ. ಈ ಮಾತು ಅವರ ಎಲ್ಲ ಮಾತಿನಂತೆ ಸರಳ; ತಿಳಿ. ಆದರೆ ಒಂದಿಷ್ಟು ಆಳವಾಗಿ ಯೋಚನೆ ಮಾಡಿದರೆ ಈ ಒಂದೇ ಮಾತಿನಲ್ಲಿ ಎಷ್ಟು ಮಾತು ಅಡಗಿವೆ!

''ನನಗೆ ಗೊತ್ತಿರುವುದನ್ನು ನಾನು ಬರೆದಿದ್ದೇನೆ. ನನಗೆ ಗೊತ್ತಿಲ್ಲದ ವಿಚಾರ ಬರೆಯಲಾರೆ. ನಿಮಗೆ ಗೊತ್ತಿದ್ದ ವಿಚಾರ ನೀವು ಬರೆಯಿರಿ. ಅದು ಚೆನ್ನಾಗಿದ್ದರೆ ಸಾಹಿತ್ಯವಾಗುತ್ತದೆ. ಜನ ಓದುತ್ತಾರೆ. ಬರೆದದ್ದು ಉಳಿದು ಬಾಳೀತು. . . .'' ಇತ್ಯಾದಿ ದೊಡ್ಡ ವ್ಯಾಖ್ಯಾನವನ್ನೇ ಮಾಡಬಹುದು.

ಶ್ರೀ ಮಾಸ್ತಿಯವರು ಬರೆದದ್ದು ಹೇಗೆ ಉತ್ತಮ ಸಾಹಿತ್ಯವೋ ಹಾಗೆಯೇ ಅವರಾಡುವ ಮಾತೂ ಉತ್ತಮ ಸಾಹಿತ್ಯವಾಗಬಲ್ಲದು, ಎಂಬುದಕ್ಕೆ ಅನೇಕ ನಿದರ್ಶನಗಳನ್ನು ಅವರೊಡನೆ ಮಾತನಾಡಿದಾಗ ಕಂಡಿದ್ದೇನೆ. ಮಾತು ಸವಿಯಾಗಿ ಮೂಡಿ ಮನಸ್ಸಿಗೆ ಹಿತವಾದಾಗ ಸಾಹಿತ್ಯ ಎನಿಸುತ್ತದೆ. ಸಾಹಿತ್ಯ (ಅಂದರೆ ಬರೆದ ಮಾತು) ಮತ್ತು ಮಾತು (ಅಂದರೆ ಬರೆಯದ ಬರಿದೆ ಆಡಿದ ಮಾಡು) ಹಿತವಾಗಲು ಬೇಕಾದ ವಿಕಾರಕ್ಕೆ ಒಳಗಾಗದ ಮನಸ್ಸು. ಏರು ಇಳುವಿನಿಂದ ತಲ್ಲಣಗೊಳ್ಳದ ಸಮಚಿತ್ತ ಮಾಸ್ತಿಯವರಿಗಿದೆ. ದೇವರು ಅವರಿಗೆ ಹೆಂಗರುಳಿನ ಮನಸ್ಸು ಕೊಟ್ಟಿದ್ದಾನೆ. ಅಷ್ಟೇ ಮೃದುವಾದ ಕಂಠ ಕೊಟ್ಟಿದ್ದಾನೆ. ಸೌಮ್ಯರೂಪ ಕೊಟ್ಟಿದ್ದಾನೆ. ಅವರೊಡನೆ ಕೂತು ಮಾತನಾಡಿದರೆ ಪ್ರಿಯ ಸಖನೊಡನೆ ಕೂಡಿ ಮಾತನಾಡಿದಂತೆ ಆಗುತ್ತದೆ! ಇವೆಲ್ಲವೂ ಅವರ ಬರವಣಿಗೆಗೆ ಬಾಳಿಗೆ ಆಧಾರವಾಗಿ ಆತುಕೊಂಡಿದೆ. ಅವರ ಬಾಳು ಆದ್ದರಿಂದಲೇ ಅಷ್ಟು ಮಧುರವಾಗಿದೆ. ಕಹಿಯನ್ನು ಉಣ್ಣಬೇಕಾಗಿ ಬಂದಾಗಲೂ- ಅಂಥ ಭರಿಸಲಾರದ ಅತಿ ಕಠಿಣ ಪ್ರಸಂಗಗಳು ಬಂದಿರುವುದನ್ನು ಅವರ ಆತ್ಮ ಕಥೆ ''ಭಾವ'' ಎಂಬ ಗ್ರಂಥವನ್ನು ಓದಿದರೆ ಗೊತ್ತಾಗುತ್ತದೆ - ಅದನ್ನೆಲ್ಲ ಸಹಿಸಿಕೊಂಡಿದ್ದಾರೆ. ಅವರ ಆತ್ಮ ಅಷ್ಟು ಪಕ್ವ ಸ್ಥಿತಿಯನ್ನು ಪಡೆಯದೆ ಇದ್ದಿದ್ದರೆ ಅಷ್ಟೆಲ್ಲ ದುರ್ಭರ ಪ್ರಸಂಗಗಳನ್ನು ಬಾಳಿನ ಬಗ್ಗೆ ಈ ಸಮಾಜದ ಬಗ್ಗೆ ತಿರಸ್ಕಾರದ ದ್ವೇಷ ಇಲ್ಲದೆ ಭರಿಸುವ ಶಕ್ತಿ ಉಂಟಾಗುತ್ತಿರಲಿಲ್ಲ. ರೋಷ ದ್ವೇಷ ಎಂಬುವು ಮಾಸ್ತಿಯವರ ಮನಸ್ಸಿನ ಯಾವ ಮೂಲೆಯಲ್ಲೂ ಕಾಣದು.

ಶ್ರೀ ಕುವೆಂಪು ಅವರ ''ಶೂದ್ರ ತಪಸ್ವಿ'' ರೂಪಕ ಪ್ರಕಟವಾದಾಗ ಶ್ರೀ ಮಾಸ್ತಿಯವರು ಅದರ ವಿಮರ್ಶೆಯನ್ನು ''ಜೀವನ''ದಲ್ಲಿ ಬರೆದರು. ಅದು ದೊಡ್ಡ ಕೋಲಾಹಲಕ್ಕೆ ಕಾರಣವಾಯಿತು. ಶೂದ್ರ ತಪಸ್ವಿಯ ಎರಡನೆಯ ಮುದ್ರಣ ಬರೆದಾಗ ಶ್ರೀ ಕುವೆಂಪು ಅವರು ಒಂದು ''ಮಾನ್ನುಡಿ''ಯನ್ನು ಬರೆದು ಶ್ರೀ ಮಾಸ್ತಿಯವರ ದೃಷ್ಟಿಯನ್ನು ನಿರ್ದಾಕ್ಷಿಣ್ಯವಾಗಿ ಕಟುವಾಗಿ ಖಂಡಿಸಿದರು. ಇವೆರಡನ್ನೂ ಸಾಹಿತಿಗಳೂ ಓದುಗರೂ ಒಂದೊಂದು ಪಕ್ಷವನ್ನು ವಹಿಸಿದ್ದುಂಟು. ಅದು ಒಂದು ದೊಡ್ಡ ಕಾದಾಟದ ಸಂಗತಿಯಾಯಿತು. ಆಗ ಸಹಜವಾಗಿ ಶ್ರೀ ಮಾಸ್ತಿಯವರಿಗೂ ಶ್ರೀ ಕುವೆಂಪು ಅವರಿಗೂ ವೈಮನಸ್ಸು ಆಗಿದೆ ಎಂದು ಭಾವಿಸುವ ಅವಕಾಶವಿತ್ತು. ಇಂಥ ಸಂದರ್ಭದಲ್ಲಿಯೇ ಶ್ರೀ ಕುವೆಂಪು ಅವರಿಗೆ ಶ್ರೀ ರಾಮಾಯಣ ದರ್ಶನಕ್ಕಾಗಿ ಸಾಹಿತ್ಯ ಅಕಾಡೆಮಿ ಅವರು ಸಂಭಾವನೆಯನ್ನು ಕೊಟ್ಟಿದ್ದಕ್ಕಾಗಿ ಬೆಂಗಳೂರಿನಲ್ಲಿ ಸತ್ಕಾರ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಅಂದು ಮಳೆ ಹಿಡಿದುಕೊಂಡಿತ್ತು. ಸಭೆಗೆ ಜನ ಬಂದಾರೋ ಎಂಬ

ಸಂಶಯ. ಅಂಥ ಮಳೆಯಲ್ಲೂ ಶ್ರೀ ಮಾಸ್ತಿಯವರು ಛತ್ರಿ ಹಿಡಿದುಕೊಂಡು ಸಭೆಗೆ ಬಂದಿದ್ದರು.

''ಮಳೆಯಿದ್ದರೂ ನೀವು ಬಂದಿದ್ದೀರಿ'' ಎಂದೆ ನಾನು.

''ಪುಟ್ಟಪ್ಪನವರಿಗೆ ಸನ್ಮಾನ ಮಾಡಿದರೆ ಎಂಥ ಮಳೆಯಲ್ಲೂ ಬರುತ್ತೇನೆ. ದಿನವೂ ಏರ್ಪಡಿಸಿರಿ'' ಎಂದು ಹೃತ್ಪೂರ್ವಕವಾಗಿ ಹೇಳಿದರು. ಆಗ ನನಗೆ ಅನಿಸಿತು, ಈ ಮಹಾರಾಯರ ಮನಸ್ಸು ಎಷ್ಟು ತಿಳಿ ಎಂದು. ಈ ಮಾತನ್ನು ಹೇಳುವಾಗ ಮಾಸ್ತಿ ಅವರಿಗೆ ಮಾನವ ಸಹಜವಾದ ರಾಗ ದ್ವೇಷಗಳಿಲ್ಲವೇ ಇಲ್ಲವೆಂದಲ್ಲ. ಅವರಿಗೂ ಕೋಪ ಬರುತ್ತಿತ್ತು, ಉಚಾಯಿಸಿ ಮಾತನಾಡುತ್ತಿದ್ದರು. ಎಂಬುದನ್ನು ಅವರು ಯಾವ ಮುಚ್ಚು ಮರೆಯಿಲ್ಲದೆ ತಮ್ಮ ಆತ್ಮಕಥೆ ''ಭಾವ'' ಎಂಬ ಮೂರು ಸಂಪುಟಗಳಲ್ಲಿ ಹೇಳಿದ್ದಾರೆ. ಆದರೆ ಅವರ ದೊಡ್ಡಸ್ತಿಕೆ ಏನೆಂದರೆ, ತಪ್ಪಾಯಿತು ಎಂದು ಕಂಡುಬಂದರೆ ಕೂಡಲೇ ಅದನ್ನು ತಿದ್ದಿಕೊಳ್ಳಲು ಹವಣಿಸುತ್ತಾರೆ. ಆ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ.

ಇತ್ತೀಚೆಗೆ ಒಂದು ಸಮಾರಂಭದಲ್ಲಿ ಅವರು ಅಧ್ಯಕ್ಷತೆ ವಹಿಸಿದ್ದರು. ನಾನು ಮಾತನಾಡಿದೆ. ವಿಷಯ: ಶ್ರೀ ಅರವಿಂದರ ಜೀವನ ಮತ್ತು ಸಂದೇಶ. ಹೈಸ್ಕೂಲ್ ಮಕ್ಕಳಿಗೆ ಬೇಕಾದಷ್ಟೇ ಸಂಗತಿಯನ್ನು ಅವರಿಗೆ ನಿಲುಕುವಷ್ಟೇ ಮಟ್ಟಕ್ಕೆ ಇಳಿದು ಮಾತನಾಡಿದೆ. ಅಧ್ಯಕ್ಷರ ಭಾಷಣದಲ್ಲಿ ನನ್ನ ಬಗ್ಗೆ ಅವರು ನಾಲ್ಕು ಒಳ್ಳೆಯ ಮಾತನಾಡಿದರು. ಸಭೆ ಮುಗಿದ ಮೇಲೆ;

''ದೊಡ್ಡ ಮಾತನಾಡಿದಿರಿ. ಅದು ನಿಮ್ಮ ಭಾವ'' ಎಂದೆ ನಾನು.

''ಅದು ನಿಜವಲ್ಲದಿದ್ದರೆ ಸುಮ್ಮನೆ ಹೇಳೇನೆ? ನೀವು ನನ್ನನ್ನು ''ಹಿರಿಯರು ಬಲ್ಲವರು'' ಎಂದಿರಿ. ನಾನು ನಿಮ್ಮನ್ನು ''ಜಾಣರು, ಚೆನ್ನಾಗಿ ಓದಿಕೊಂಡಿದ್ದಾರೆ, ಮಾತನಾಡುತ್ತಾರೆ'' ಎಂದೆ. ಹೀಗೆ ಒಬ್ಬರ ಗುಣವನ್ನು ಇನ್ನೊಬ್ಬರು ಗುರುತಿಸಬೇಕು. ಇದು ಒಳ್ಳೆಯ ನಡತೆ'' ಎಂದರು.

''ಇದನ್ನು ಪರಸ್ಪರ ಪ್ರಶಂಸೆ ಎಂದು ಆಕ್ಷೇಪಿಸಬಹುದು'' ಎಂದೆ.

''ನೀವು ಒಳ್ಳೆಯವರೆಂದು ನಾನು ಹೇಳುವುದು; ನಾನು ದೊಡ್ಡವನೆಂದು ನೀವು ಹೇಳುವುದರಲ್ಲಿ ತಪ್ಪೇನಿದೆ? ಇದು ಬಿಟ್ಟು ನಿಮ್ಮನ್ನು ನಾನು ನನ್ನನ್ನು ನೀವು ಬೈಯ್ದು ಮಾತನಾಡುವುದು ಸರಿಯೋ? ಚೆನ್ನಬಸಪ್ಪಾ ನಾನು ಹೇಳ್ತೇನೆ ಕೇಳಿ; ನಮ್ಮ ಜನ ಬೇಕಾದಷ್ಟು ಕೆಟ್ಟದನ್ನು ಮಾತನಾಡಿಕೊಳ್ತಾರೆ. ಅದರಿಂದ ಮನಸ್ಸು ಬೇಕಾದಷ್ಟು ಕೆಡಿಸಿಕೊಳ್ತಾರೆ ಅದರಿಂದ ಏನು ಒಳ್ಳೆಯದಾಗಿದೆ? ಹಾಗೆ ಬೈಯ್ದಾಡುವುದಕ್ಕಿಂತ ಹೀಗೆ ಹೊಗಳಿ ಮಾತನಾಡಿದರೆ ಕೆಟ್ಟದ್ದೇನು? ಆದರೆ, ಸುಮ್ಮ ಸುಮ್ಮನೆ ಸ್ವಾರ್ಥಕ್ಕಾಗಿ ಹೊಗಳುವುದು ಮುಖ ಸ್ತುತಿ, ಅದು ಸಲ್ಲ'' ಎಂದು ತಮ್ಮ ಮಾತನ್ನು ಸಮರ್ಥಿಸಿದರು.

ನಿಜವಾದರೂ ಕೆಟ್ಟ ಮಾತನಾಡುವುದಕ್ಕಿಂತ ಸುಳ್ಳಲ್ಲದ ಒಳ್ಳೆಯ ಮಾತನಾಡುವುದು ಶ್ರೇಯಸ್ಕರ ಎಂಬುದು ಮಾಸ್ತಿಯವರ ಭಾವ. ಇದನ್ನು ಒಪ್ಪದಿರಲು ಸಾಧ್ಯವಿಲ್ಲ. ನಮ್ಮ ನಮ್ಮ ಅನುಭವದ ಒರೆಗಲ್ಲಿಗೆ ಹಚ್ಚಿ ನೋಡಿದರೆ ತಾನೇ ಗೊತ್ತಾಗುತ್ತದೆ, ಮಾಸ್ತಿಯವರ ಮಾತು ನಿಜ ಎಂಬುದಾಗಿ, ಬಹುಶಃ ಅವರ ಈ ಒಳ್ಳೆಯ ಮಾತು, ಮನಸ್ಸುಗಳೇ ಅವರನ್ನು ಅತ್ಯಂತ ಪ್ರಿಯವಾದ ವ್ಯಕ್ತಿಯನ್ನಾಗಿ ಮಾಡಿವೆ. ಕರ್ನಾಟಕದ ನಾನಾ ಭಾಗಗಳಲ್ಲಿ ಅಕ್ಷರಶಃ ಅಸಂಖ್ಯಾತ ಆತ್ಮೀಯರ ಬಳಗವನ್ನು ಗಳಿಸಿಕೊಂಡಿದ್ದಾರೆ.

ಶ್ರೀ ಮಾಸ್ತಿಯವರು ಚಿಕ್ಕಂದು ಕಷ್ಟವನ್ನು ಸೋಸಿದವರು: ಬಡತನ ಕಂಡವರು. ಆ ಮೇಲೆ ದೈವ ಬಲದಿಂದ ಒಳ್ಳೆಯ ದಿನ ಕಂಡರು. ದೊಡ್ಡ ಅಧಿಕಾರ ವಹಿಸಿದರು. ಆಗ ದೇವರು ಅವರಿಗೆ ಯಾವುದಕ್ಕೂ ಕೊರತೆ ಮಾಡಲಿಲ್ಲ. ಆ ನಡೆಯುವ ಕಾಲದಲ್ಲಿ ಅವರು ಉದಾರವಾಗಿ ಸಹಾಯ ಮಾಡಿದರು. ಶ್ರೀ ಜಿ.ಪಿ. ರಾಜರತ್ನಂ ಅವರು ತಮ್ಮ ''ಹತ್ತು ವರುಷ'' ಎಂಬ ಆತ್ಮಕಥೆಯಲ್ಲಿ ಶ್ರೀ ಮಾಸ್ತಿಯವರಿಂದ ಸಂದ ಸಹಾಯವನ್ನು ಪ್ರಸ್ತಾಪಿಸಿದ್ದಾರೆ. ಅವರಿಂದ ಸಹಾಯ ಪಡೆದವರ ಪೈಕಿ ಶ್ರೀ ದ.ರಾ. ಬೇಂದ್ರೆಯವರೂ ಒಬ್ಬರು. ಶ್ರೀ ಮಾಸ್ತಿ ಅವರು ಏನೂ ಬರೆಯದೆ, ಈ ಇಬ್ಬರು ಬರಹಗಾರರನ್ನು ಉಳಿಸಿಕೊಟ್ಟಿದ್ದರೂ ಕನ್ನಡಿಗರ ಚಿರಕೃತಜ್ಞತೆಗೆ ಪಾತ್ರರಾಗಿರುತ್ತಿದ್ದರು.

ಇದೇ ಮೇ ೨೫ಕ್ಕೆ ಮಾಸ್ತಿಯವರಿಗೆ ಎಂಬತ್ತು ವರ್ಷ ತುಂಬಿತು. ಆ ಘಟನೆ ಯಾರ ಗಮನಕ್ಕೂ ಬಾರದೆ ದಾಟಿ ಹೋಯಿತು. ತಾ: ೨೬-೫-೭೧ರಂದು ''ಜ್ಞಾನ ಗಂಗೋತ್ರಿ''ಯ ದ್ವಿತೀಯ ಸಂಪುಟವನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಅವರು ಅಂದೇ ಎಂಬತ್ತೊಂದರಲ್ಲಿ ಕಾಲಿಟ್ಟ ದಿನ ಎಂದು ಹೇಳಿದರು. ''ನೂರು ವರ್ಷ ತುಂಬಿದಾಗ ಆನಂದ ಪ್ರಾಪ್ತಿಯಾಗುತ್ತದೆ ಎಂದು ದೊಡ್ಡವರು ಹೇಳಿದ್ದಾರೆ. ಆದರೆ ನನಗೆ ಎಂಬತ್ತು ತುಂಬಿದಾಗಲೇ ಆ ಆನಂದ ಪ್ರಾಪ್ತಿಯಾಗಿದೆ, ನಾನು ಭಾಗ್ಯ ಶಾಲಿ'' ಎಂದರು.

ಅವರನ್ನು ಪಡೆದ ಕನ್ನಡ ನಾಡೂ ಭಾಗ್ಯಶಾಲಿ ಎಂದು ನಾವು ಸೇರಿಸಬೇಕು. ಎಂಬತ್ತು ತುಂಬಿದರೂ ಮಾಸ್ತಿಯವರು ಬೆನ್ನು ಬಾಗಿಲ್ಲ ಅಷ್ಟೊಂದು ವಯಸ್ಸಾದ ಹಾಗೆ ಕಾಣುವುದೇ ಇಲ್ಲ. ಸದಾ ಹಸನ್ಮುಖಿಗಳಾದ ಅವರ ಮುಖದ ಮೇಲೆ ಮುಪ್ಪಿನ ಛಾಯೆ ಸುಳಿದಿಲ್ಲ. ಕಣ್ಣು, ಕಿವಿ, ಇನ್ನೂ ಚುರುಕಾಗೆಯೇ ಇವೆ - ಹಲ್ಲೂ ಸಹ!

ಯಾರಾದರೂ ಬಂದು ''ನಮಸ್ಕಾರ ಸಾರ್'' ಎಂದರೆ, ಗುರುತು ಸಿಕ್ಕರೆ

''ನಮಸ್ಕಾರ ಚೆನ್ನಾಗಿದೀರಾ? ಮಡದಿ ಮಕ್ಕಳು ಕ್ಷೇಮವೇ?'' ಎಂದು ಆತ್ಮೀಯವಾಗಿ ವಿಚಾರಿಸುತ್ತಾರೆ. ಅಕಸ್ಮಾತ್ ಗುರುತು ಹತ್ತದಿದ್ದರೆ:

''ನಾನು ಮುದುಕ ವಯಸ್ಸಾಗಿದೆ. ಮರೆತಿದ್ದೇನೆ. ನೀವಾರು ದಯೆಯಿಟ್ಟು ನೆನಪು ಮಾಡಿ ಕೊಡಿ'' ಎಂದು ಸರಳ ಮುಗ್ಧ ನಗೆ ನಗುತ್ತಾರೆ. ಅವರ ಆ ನಗೆಯೇ ಬಂದವರನ್ನು ಸುಮ್ಮನೆ ಆಕರ್ಷಿಸಿ ಬಿಡುತ್ತದೆ.

ಶ್ರೀ ಮಾಸ್ತಿ ಅವರು ನೂರು ತುಂಬುವುದನ್ನು ಕಣ್ಣಾರೆ ಕಾಣುವ ಭಾಗ್ಯ ಕನ್ನಡ ನಾಡಿಗೆ ಬರಲಿ.

ಮಾಸ್ತಿಯವರು

ಅಶ್ವತ್ಥ

ಶ್ರೀಮಾಸ್ತಿಯವರೂ ನಾನೂ ಒಂದನೆಯ ತಾರೀಖು ಹನ್ನೊಂದು ಗಂಟೆಗೆ ಕಾಶಿಯನ್ನು ತಲುಪುತ್ತೇವೆ. ಡಾಕ್ಟರ ಬಾದಾಮಿಯವರಲ್ಲಿ ಉಳಿಯುವ ಯೋಚನೆ ಇದೆ. ಶ್ರೀ ಮಾಸ್ತಿಯವರು ನಿಮ್ಮನ್ನು ನೋಡಲು ಉತ್ಸುಕರಾಗಿರುವರು...ಅ.ನಾ.

ಈ ಕಾಗದ ಮುಟ್ಟಿದುದು ಎರಡನೆಯ ತಾರೀಖಿನ ಮಧ್ಯಾಹ್ನ ಒಂದು ಗಂಟೆಗೆ; ಇನ್ನೂ ಯುದ್ಧಕಾಲದ ಅಂಚೆಯ ವ್ಯವಸ್ಥೆಯೆ. ನನಗೆ ಮಾಸ್ತಿಯವರನ್ನು ಕಾಣುವ ಉತ್ಸುಕತೆ. ಅವರಿಗೆ ನನ್ನನ್ನು ನೋಡುವುದರ ನೂರರಷ್ಟು. ಸರಿ, ಬೇಗನೆ ಬಟ್ಟೆಗಳನ್ನು ತಗಲು ಹಾಕಿಕೊಂಡು ಹನುಮಾನ ಘಾಟಿನಿಂದ 'ರಿಕ್ಷ'ಮಾಡಿಕೊಂಡು ವಿಶ್ವವಿದ್ಯಾಲಯದ ಆವರಣದಲ್ಲಿ ಡಾ.ಬಾದಾಮಿಯವರ ಮನೆಗೆ ಹೋದೆ. ಅಲ್ಲಿ ಮಾಸ್ತಿಯವರು ಇರಲಿಲ್ಲ. ಮನೆಯವರು 'ಡಾ. ಬಾದಾಮಿಯವರು ಊರಿನಲ್ಲಿಲ್ಲ; ಅದಕ್ಕಾಗಿ ಅವರು ಮೈಸೂರ ಛತ್ರಕ್ಕೆ ಹೋದರು,'ಎಂದರು. ನನಗೆ 'ಎಲ! ಇಷ್ಟೊಂದು ಕನ್ನಡಿಗರು ಇಲ್ಲಿ ಇದ್ದೂ ಇವರು ಛತ್ರಕ್ಕೆ ಹೋಗುವಂತೆ ಆಯಿತಲ್ಲ! ಬಾದಾಮಿಯವರು ಇಲ್ಲದ ಪಕ್ಷಕ್ಕೆ ಅವರ ಮನೆಯ ಆತಿಥ್ಯವನ್ನು ಒಪ್ಪಿಕೊಳ್ಳಬಾರದಾಗಿತ್ತೆ? ಇವರದ್ದು ಇಷ್ಟು ದಾಕ್ಷಿಣ್ಯಪ್ರಕೃತಿಯಲ್ಲ!'ಎನ್ನಿಸಿತು.

ಮೈಸೂರು ಛತ್ರವಿರುವುದು ಹನುಮಾನ ಘಾಟಿನಲ್ಲೆ. ನಮ್ಮ ಮನೆಯಿಂದ ಅಲ್ಲಿಗೆ ಒಂದು ನಿಮಿಷದ ನಡೆಗೆ. ನಾನೇ ನೇರವಾಗಿ ಹಿಂದಿರುಗಿ ಛತ್ರವನ್ನು ಹೊಕ್ಕಾಗ ಅಲ್ಲಿಯ ಅಡಿಗೆಯ ನಾರಣಪ್ಪ ಆರಾಮು ತೆಗೆದುಕೊಳ್ಳುತ್ತಿದ್ದ. ನಾನು 'ಮಾಸ್ತಿಯವರು ಯಾವ ಕೋಣೆಯಲ್ಲಿದ್ದಾರೆ?' ಎಂದು ಕೇಳಿದೆ. ಅವನು ''ಯಾರು, ಡೆಪ್ಯುಟಿ ಕಮೀಷನರು ವೆಂಕಟೇಶ ಆಯ್ಯಂಗಾರ್ಯರೆ?' ಎಂದು ಕೇಳಿ ಕೋಣೆಯ ಸಂಖ್ಯೆಯನ್ನು ಹೇಳಿದ. ಕದವನ್ನು ತಟ್ಟುತ್ತಲೆ ಒಳಗಿನಿಂದ 'ಬನ್ನಿ ಸ್ವಾಮಿ!'ಎಂಬ ಉತ್ತರ ನಯವಾದ ಧ್ವನಿಯಲ್ಲಿ ಕೇಳಿಸಿತು. ಬಾಗಿಲನ್ನು ನೂಕಿಕೊಂಡು ಒಳಹೊಕ್ಕಾಗ, ಅಗೊ, ಅಲ್ಲಿಯೇ ನಿಂತಿದ್ದರು ನನ್ನ ಮುಂದೆ ಮಾಸ್ತಿಯವರು! ಬೆಟ್ಟು ಅಗಲದ ಕೆಂಪು ಅಂಚಿನ ಕಚ್ಚೆಪಂಚೆಯನ್ನುಟ್ಟು, ಮಾಸಲು ನೀಲಿಯ ಷರಟನ್ನು ಹಾಕಿದ್ದ, ನಸುಭಾಗಿದಂತೆ ಕಂಡ ಸಣ್ಣ ಶರೀರ, ಎಣ್ಣೆಗೆಂಪಿನ ಮೊಗದ ಸುಕ್ಕುಕೆನ್ನೆಗಳು ಕನ್ನಡಕದ ಹಿಂದೆ ಹೊಳಪಾದ ಕಣ್ಣುಗಳು, ಯೋಚನೆಯ ಹುಬ್ಬುಗಳು, ಅಡ್ಡಗೆರೆ ಕಂಡು ಕೊಂಚ ಉಬ್ಬಿದ ಹಣೆ, ಅದರ ಮೇಲೆ ದೊಡ್ಡ ಕೆಂಪು ಬಿಳಿ ನಾಮಗಳು, ಅರೆಬೋಳಾದ ಮುಂತಲೆ, ಕೆದರಿದ ಕೂದಲಿನ ಹಿಂತಲೆ. ನಾಲ್ಕು ಬಾರಿ ಮಡಸಿದ ಒದ್ದೆಯ ಪಂಚೆಯೊಂದನ್ನು ಎರಡೂ ಕೈಗಳಲ್ಲೂ ಎತ್ತಿಹಿಡಿದು ಹರಿವಿಹಾಕುವುದಕ್ಕೆ ಅಣಿಯಾಗಿದ್ದರು. ಹುಂ, ಈ ಸರಳ ವ್ಯಕ್ತಿಯೇ ಆ ಸುಪ್ರಸಿದ್ಧ ಸಾಹಿತಿ, ಮಾಸ್ತಿಯವರು. ನಾನು ಒಳಹೊಕ್ಕಾಗ ಅವರು ಮುಖವನ್ನು ಕೊಂಚ ಮೇಲೆತ್ತಿನೋಡಿ',

ಮುಗುಳುನಗೆಯಿಂದ ಬರಮಾಡಿಕೊಂಡು ಹತ್ತಿರದ ಕುರ್ಚಿಯೊಂದನ್ನು ತೋರಿಸಿದರು. ಪಂಚೆಯನ್ನು ಹರುವುತ್ತಲೇ ಕುಶಲ ಪ್ರಶ್ನೆಗಳಾದುವು. ಮೇಜಿನ ಮೇಲೆ ಇನ್ನು ಅಷ್ಟು ಹಿಂಡಿದ ಬಟ್ಟೆಗಳಿದ್ದುದರಿಂದ ನಾನೂ ಸಹಾಯಮಾಡಲು ಮುಂದುವರಿದೆ. ಅದಕ್ಕೆ ಅವರು 'ಸರಿ' ಇಷ್ಟು ಮಾಡಿಕೊಳ್ಳದೆ ಏನು. ನೀವು ಕುಳಿತುಕೊಳ್ಳಿ' ಎಂದು ಮಾತನಾಡುತ್ತಲೇ ಅವನ್ನು ಒಂದೊಂದಾಗಿ ವರಾಂಡಕ್ಕೆ ಸಾಗಿಸುತ್ತಿದ್ದರು. ಹಾಗೆ ಅವರು ಹೊರಗೆ ಹೋದಾಗ ನಾನು ಕೋಣೆಯ ಸುತ್ತಲೂ ನೋಡಿದೆ. ಅಲ್ಲಿದ್ದ ಕಬ್ಬಿಣದ ಮಂಚದ ಮೇಲೆ ಸ್ವಲ್ಪ ಬಿಚ್ಚಿದ ಸಣ್ಣ ಸುರುಳಿಯ ಹಾಸಿಗೆಯು, ಅವರು ಕೆಲವು ಸಮೀಕ್ಷನೇ ವಿಶ್ರಮಿಸಿಕೊಂಡಿರಬಹುದೆಂದು ಸೂಚಿಸುತ್ತಿತ್ತು. ಮೇಜಿನ ಮೇಲೆ ಕೆಲವು ಪ್ರಸಾದದ ಬಾಳೆಯ ಹಣ್ಣುಗಳು ಗುಡ್ಡೆಯಾಗಿ ಬಿದ್ದಿದ್ದುವು. ಕೋಣೆಯ ಒಂದು ಕಡೆ ಗೋಡೆಯ ಅಂಚಿನಲ್ಲಿ ಒಂದು ರೈಲು-ಚಂಬು, ಪೆಟ್ಟಿಗೆ, ಬುಟ್ಟಿ. ಪುಸ್ತಕಗಳ ಸಾಲು ಕಾಣುತ್ತಿದ್ದವು. ಕ್ಲೋಸುಕಾಲರಿನ ಕೋಟು, ಕಂಬಳಿಯ ಟೋಪಿ ಗೂಟದ ಮೇಲೆ ನೇತಾಡುತ್ತಿದ್ದುವು. ಒಂದು ಜತೆ ದಪ್ಪ ಎಕ್ಕಡ ಬಾಗಿಲಿನ ಹಿಂದೆ. ಇಷ್ಟೇ ಈ ನಿವೃತ್ತ ಅಧಿಕಾರಿಗಳ ಪ್ರಯಾಣಸೌಕರ್ಯ.

ಬಟ್ಟೆ ಹರವಿದ ಮೇಲೆ ಮಾಸ್ತಿಯವರು ಮೇಜಿನ ಮೇಲಿದ್ದ ಹಣ್ಣಿನಲ್ಲಿ ಎರಡನ್ನು ಕೊಟ್ಟರು. ಅನಂತರ ಪಕ್ಕದ ಕೋಣೆಯ ಕಡೆಗೆ ಬಾಗಿ 'ನಾರಾಯಣಸ್ವಾಮಿ' ಎಂದರು ಮಲಗಿದ್ದು ಆಗತಾನೆ ಎದ್ದ ಕೆಂಪು ಕಣ್ಣಿನ ಅಯ್ಯರು ಹೊರಗೆ ಬಂದರು. ಅವರು ನನಗೆ ಕಲಕತ್ತೆಯ ಪರಿಚಯ. ಆದರೆ ಈಗ ಅವರ ಮೈಬೊಜ್ಜು ಕೊಂಚ ಕರಗಿದ್ದಿತು. ಅಲ್ಲಿ ಇದ್ದ ಒಂದೆರಡು ಹಲ್ಲೂ ಹೋಗಿ ಕೃತಕ ಹಲ್ಲುಗಳನ್ನು ಕಟ್ಟಿಸಿಕೊಂಡಿದ್ದರು. ಅಲ್ಲಿದ್ದ ಜುಟ್ಟು ಈಗ ಕ್ರಾಪಿಗೆ ಎಡೆಮಾಡಿಕೊಟ್ಟದ್ದಿತು. ಕಣ್ಣಿಗೆ ಕನ್ನಡಕವೂ ಹೊಸದು, ಇಷ್ಟೆ. ಇಲ್ಲದಿದ್ದರೆ ಅದೇ ವೇಷ್ಟಿ, ಅದೇ ಷರಟು, ಅದೇ ವ್ಯಕ್ತಿ.

ಮಾತುಕತೆಯಲ್ಲಿ ಊಟದ ಮಾತು ಬಂದಿತು. ಮಾಸ್ತಿಯವರು 'ಅದಕ್ಕೆಲ್ಲ ಈಗ ಸರಿಯಾಗಿದೆ. ಮೊದಲು ಎರಡು ಹೊತ್ತು ಹತ್ತಿರದ ಮದರಾಸು ಹೋಟಲಿನಲ್ಲಿ ಊಟ ಆಯ್ತು. ಈಗ ನಾರಾಯಣಸ್ವಾಮಿ ಶಾಸ್ತ್ರಿಗಳೊಬ್ಬರನ್ನು ಪತ್ತೆಹಚ್ಚಿ ಏರ್ಪಾಡುಮಾಡಿದ್ದಾರೆ' ಅಂದರು. ಅಯ್ಯರು 'ಹೇಗಿದ್ದರೂ ಅವರು ಅಷ್ಟು ಕರ್ಮವನ್ನೇನೋ ಮಾಡಿಸಬೇಕು. ಅದರ ಜತೆಗೆ ಇದೂ ಅವರಿಗೆ, ನಮಗೆ ಅನುಕೂಲವಾದಂತೆ ಆಗುತ್ತದೆ' ಅಂದರು. ನಾನು 'ನೀವು ಇಲ್ಲಿಗೆ ಬಂದು ಛತ್ರ, ಹೋಟಲು ಅಂತ ಇಷ್ಟು ಪಾಡುಪಟ್ಟಿದ್ದೇ ಸಾಕು, ಇನ್ನು ನಮ್ಮ ಮನೆಗೇ ಬಂದುಬಿಡಿ' ಅಂದೆ. ಮಾಸ್ತಿಯವರು ''ಛತ್ರದಲ್ಲಿ ನಮಗೇನೂ ಅನಾನುಕೂಲವಿಲ್ಲ. ಅಲ್ಲದೆ ಶಾಸ್ತ್ರಿಗಳಿಗೆ ಹೇಳಿ ಬಿಟ್ಟಿದ್ದಾಯಿತು. ಬದಲಾಯಿಸಿದರೆ 'ನೋಡಿದೆಯಾ, ಸ್ನೇಹಿತರು ಸಿಕ್ಕೊಡನೆ ನಮ್ಮನ್ನು ಒತ್ತರಿಸಿದರು' ಅಂದು ಅಸಮಾಧಾನಗೊಂಡಾರು'' ಅಂದರು. ''ಶಾಸ್ತ್ರಿಗಳ ಪರಿಚಯ ನನಗಿದೆ. ಅವರನ್ನು ಒಪ್ಪಿಸುತ್ತೇನೆ'' ಎಂದು ಭರವಸೆಯನ್ನು ಕೊಟ್ಟಮೇಲೆ ಮಾಸ್ತಿಯವರು ''ಅವರಲ್ಲಿಗೆ ಒಂದು ಹೊತ್ತಾದರೂ ಹೋಗಬೇಕು. ಇಲ್ಲದಿದ್ದರೆ ಏನು ದೊಡ್ಡಸ್ತಿಕೆ ಅಂದುಕೊಂಡಾರು!'' ಅಂದರು. ಈ ಲೌಕಿಕದ ಬಗ್ಗೆ ಒಪ್ಪಿಗೆಯಾಯಿತು.

ಆಗ ಮೂರುವರೆ ಗಂಟೆಯ ಸಮಯವಾಗಿದ್ದು ನಾನು 'ನಮ್ಮ ಮನೆಗೆ ಹೋಗೋಣ, ಕೊಂಚ 'ಚಹ ತೆಗೆದುಕೊಳ್ಳಬಹುದು' ಎಂದೆ. ಮಾಸ್ತಿಯವರು ''ಯಾಕೆ,

ಹೋಟಲಿನಲ್ಲೇ ಒಂದು ಲೋಟ ಕಾಫಿ ತೆಗೆದುಕೊಂಡು ಬಿಡೋಣ. ಈಗ ಜಂಗಮವಾಡಿ ಮಠಕ್ಕೆ ಹೋಗುವದಿದೆ. ಸ್ವಾಮಿಗಳು ನನಗೆ ಹಿಂದೆ ಪರಿಚಯ''ಅಂದರು. ಈ ಮಾತಿನಲ್ಲಿ ಕಾಫಿಯ ಬಗ್ಗೆ ಪಕ್ಷಪಾತವನ್ನು ಕಂಡು ನಾನು ''ನಮಗೆ ಕಾಫಿ ಅಭ್ಯಾಸವಿಲ್ಲ. ಅದಕ್ಕೆ ಏರ್ಪಾಡು ಮಾಡಲು ಪುರುಸೊತ್ತು ಇರಲ್ಲಿಲ್ಲ.'' ಅಂದೆ. ''ಅದಕ್ಕೇನು ಪರವಾಯಿಲ್ಲ. ನಾರಾಯಾಣಸ್ವಾಮಿ ಕೊಂಚ ಪುಡಿಯನ್ನು ಇಟ್ಟೇ ಇರುತ್ತಾರೆ. ಸುಮ್ಮನೆ ಯಾಕೆ ಹೊತ್ತು ಮಾಡೋಣ, ತೊಂದರೆ ಬೇರೆ ಅಂತ''ಎಂದರು. ನಾನು ''ತೊಂದರೆ ಹೇಗಾದೀತು. ಪುಡಿ ಇದೆ ಅಂದ ಮೇಲೆ ಅನಕೂಲವಾಯಿತು. ಹೆಚ್ಚು ಹೊತ್ತಾಗುವದಿಲ್ಲ''ಅಂದೆ. ಮಾಸ್ತಿಯವರು ''ಸರಿ, ಹಾಗಾದರೆ''ಅಂದು ಟೋಪಿಯನ್ನು ಅರ್ಧ ನಿಮಿಷದಲ್ಲಿ ಹಾಕಿಕೊಂಡರು. ಅಯ್ಯರೂ ಮೇಲುವಸ್ತ್ರವನ್ನು ಎಸೆದುಕೊಂಡು ಕಾಫಿ ಪುಡಿಯ ಸಣ್ಣ ಡಬ್ಬಿಯನ್ನು ಹಿಡಿದುಕೊಂಡರು. ಹೊರಟೆವು. ಹಾದಿಯಲ್ಲಿ ಮಾಸ್ತಿಯವರು ಸಣ್ಣ ಕತೆಯೊಂದರ ಬಗ್ಗೆ ಒಳ್ಳೆಯ ಮಾತನಾಡಿದರು. ನಾನು ''ಅದೇನು ತಮ್ಮ ದಾರಿಯನ್ನು ಅನಸರಿಸಿದುದು ತಾನೆ?''ಎಂದೆ. ಮಾಸ್ತಿಯವರು ನಸುನಗುತ್ತ 'ಅದು ಹೇಗೆ? ಅದು ಹೇಗೆ?' ಎಂದು ಪ್ರಶ್ನಿಸಿದರು. ನಾನು ''ಸಣ್ಣ ಕತೆಗಳ ಬಗ್ಗೆ ತಾವು ದೊಡ್ಡ ಮೇಲುಪಂಕ್ತಿಯನ್ನು ಹಾಕಿಬಿಟ್ಟಿದ್ದೀರಿ''ಎಂದೆ. ಆಗ ಮಾಸ್ತಿಯವರು 'ಓ!'ಎಂದು ಸುಮ್ಮನಿದ್ದರು. ಆಗ ಅವರ ಕಣ್ಣಿನಲ್ಲಿ ಕಂಡುದ್ದು ಗರ್ವವಲ್ಲ, ಸದಭಿಮಾನದ ಹೆಮ್ಮೆ.

''ಮಠಕ್ಕೆ 'ರಿಕ್ಷ'ದಲ್ಲಿ ಹೋಗೋಣವೆ?'' ಎಂದು ನಾನು ಸೂಚಿಸಿದೆ. ಅದಕ್ಕೆ ಮಾಸ್ತಿಯವರು ''ಮಠ ಎಷ್ಟು ದೂರ?'' ಎಂದರು. ನಾನು 'ಮುಕ್ಕಾಲು ಮೈಲಿಯ ಮೇಲಾದೀತು' ಎನ್ನಲು ಅವರು ''ನಡೆದು ಬಿಟ್ಟರೇ ಆಯಿತು. ರಿಕ್ಷದವನು ನಮ್ಮ ಮುಂದೇ ಪೇಡಲನ್ನು ತುಳಿಯುತ್ತ ಭಂಗಪಡುವುದು ಏತಕ್ಕೋ ನನಗೆ ಸರಿಬೀಳದು.'' ಅಂದರು. ಕಾಶಿಯ ಸಣ್ಣ ಬೀದಿಯಲ್ಲಿ ಅಡಚಣೆಗಳ ಮೇಲೆ ಅಡಿ ಇಡುತ್ತ, ಕೊಳೆಗಳನ್ನು ಹಳ್ಳಕೊಳ್ಳಗಳನ್ನು ದಾಟುತ್ತ, ಕಾಲುದಾರಿಯಿಂದ ರಸ್ತೆಗೋ, ರಸ್ತೆಯಿಂದ ಕಾಲು ದಾರಿಗೋ ಸಮಯೋಚಿತವಾಗಿ, ಸ್ಥಳೋಚಿತವಾಗಿ, ಬದಲಾಯಿಸಿಕೊಳ್ಳುತ್ತ, ವಾಹನಪ್ರಾಣಿಗಳಿಂದ ನುಣುಚಿಕೊಳ್ಳುತ್ತ, ಮಠವನ್ನು ಸೇರಿದೆವು. ಅಲ್ಲಿ ಹೊರಗಿನಿಂದ ಸ್ವಾಮಿಯವರಿಗೆ ಮಠದ ಆಳಿನೊಡನೆ ಚೀಟಿಯನ್ನು ಕಳುಹಿಸುವುದೆಂದು ನಿರ್ಧರಿಸಿದ ಮೇಲೆ ನನ್ನ ಬಳಿ ಕಾಗದವಿದ್ದುದರಿಂದ ನಾನು ಕೊಂಚ ಹರಿದು 'ಮಾಸ್ತಿ ವೆಂಕಟೇಶ ಅಯ್ಯಂಗಾರ್' ಎಂದು ಬರೆದೆ. ಮಾಸ್ತಿಯವರು ಭುಜದ ಮೇಲಿನಿಂದ ನೋಡಿ, ಸೀಸದ ಕಡ್ಡಿಯನ್ನು ತೆಗೆದುಕೊಂಡು 'ಮತ್ತು ಸ್ನೇಹಿತರು' ಎಂದು ಸೇರಿಸಿದರು. ಕೊಂಚ ಹೊತ್ತಾದ ಮೇಲೆ ಸ್ವಾಮಿಯವರ ಶಿಷ್ಯರಲ್ಲಿ ಒಬ್ಬಾತನು ಬಂದು ನಮ್ಮ ಕಡೆ ಅತ್ತಿತ್ತ ನೋಡಿ ಅನುಮಾನಿಸುತ್ತ 'ಮಾಸ್ತಿ ವೆಂಕಟೇಶ ಅಯ್ಯಂಗಾರ್ರು!' ಅಂದನು. ಮಾಸ್ತಿಯವರು ನಸುನಗುತ್ತ ಮುಂದೆ ಹೆಜ್ಜೆ ಇಟ್ಟು 'ನಾನೇ' ಅಂದರು. ಸ್ವಾಮಿಯವರು ಪೂಜೆಯಲ್ಲಿದ್ದುದರಿಂದಲೂ ಮಠವನ್ನು ನೋಡುವ ಅಗತ್ಯವಿದ್ದುದರಿಂದಲೂ ಶಿಷ್ಯರು ಅನೇಕರು ನಮ್ಮನ್ನು ಮಠದ ಒಳಗೆಲ್ಲ ಕರೆದುಕೊಂಡು ಹೋಗಿ ತೋರಿಸಿದರು. ಮಾಸ್ತಿಯವರು ಅಲ್ಲಿಯ ಸಮಾಧಿಗಳ, ಪಠಗಳ, ವಿಶೇಷಗಳ ವಿಚಾರವನ್ನೆಲ್ಲ ಕೇಳಿ ತಿಳಿದುಕೊಂಡು, ಪೂಜೆ ನಡೆಯುತ್ತಿದ್ದ ಶಿವಲಿಂಗಕ್ಕೆ ಕೈ ಮುಗಿದು ಪುಸ್ತಕ ಭಂಡಾರವನ್ನು ನೋಡಿ ಆನಂದಿಸಿ ವಾಚನಾಲಯಕ್ಕೆ ಬಂದರು. ಅಲ್ಲಿ ಮಠವು ನಡೆಸುತ್ತಿದ್ದ ಹಸ್ತ

ಪತ್ರಿಕೆಯನ್ನು ನೋಡುತ್ತ 'ಇದು ಯಾರು ಜಿ.ಬಿ. ಶಿವಲಿಂಗಪ್ಪ?' ಎಂದು ಕೇಳಿದರು. 'ಶಿಷ್ಯರ ಪೈಕಿ ಮುಂದಾಳು 'ನಾನು' ಎಂದ ಮೇಲೆ ಮಾಸ್ತಿಯವರು ''ನಿಮ್ಮ ಊರು ಯಾವುದು?'' ಅಂದರು. ಶಿಷ್ಯನು 'ಗುಡ್ಡ' ಅಂದ. 'ನಿಮ್ಮ ತಂದೆಯ ಹೆಸರು?' ಮತ್ತೆ ಕೇಳಿದರು. 'ಬಸಪ್ಪ'. ಮಾಸ್ತಿಯವರು ''ಹಾಗಾದರೆ ನಿಮ್ಮ ಹೆಸರು 'ಗು.ಬ. ಶಿವಲಿಂಗಪ್ಪ' ಎಂದಿರಬೇಕು. ಜಿ.ಬಿ. ಅಲ್ಲ'' ಎಂದು ನಗುತ್ತ ಹೇಳಿ ಎಲ್ಲರನ್ನೂ ನಗಿಸಿದರು.

ಸ್ವಾಮಿಯವರಲ್ಲಿಗೆ ಹೋದ ಮೇಲೆ ಮೊದಲು ಮಾತುಗಳಾದವು. ಮಾಸ್ತಿಯವರು ''ಇತ್ತಕಡೆ ಬಂದುದು ಕನ್ನಡಿಗರ ಪರಿಚಯಕ್ಕಾಗಿ'' ಎಂದು ತಿಳಿಸಿದರು. ಮತ್ತೆ ''ನಾನು ಈಗ ಕನ್ನಡಿಗನು ಮಾತ್ರವೇ ಅಲ್ಲದೆ ಪರಿಷತ್ತಿನ ಉಪಾಧ್ಯಕ್ಷನಾಗಿದ್ದು ಇದು ನನ್ನ ಕರ್ತವ್ಯವೇ ಆಗಿದೆ''ಎಂದು ಸೇರಿಸಿದರು. ಪರಿಷತ್ತಿನ ವಿಚಾರವು ಸಹಜವಾಗಿಯೇ ಬಂತು. ಸ್ವಾಮಿಗಳು ''ಸದಸ್ಯರ ಸಂಖ್ಯೆಯನ್ನು ಇಷ್ಟು ಹೆಚ್ಚಿಸಿ ದೊಡ್ಡ ಕೆಲಸ ಮಾಡಿದಿರಿ'' ಅಂದರು.

''ಅಷ್ಟೇನು ಅಲ್ಲ. ಏನೋ ಯಥಾನುಶಕ್ತಿ ಯತ್ನಿಸಿದ್ದೇನೆ''ಮಾಸ್ತಿಯವರು ನಮ್ರತೆಯಿಂದ ನುಡಿದರು.

''ಹಾಗೆನ್ನಬೇಡಿ, ಅದು ಎಷ್ಟು ದೊಡ್ಡದೆಂದು ಆ ವಿಚಾರವನ್ನರಿತವನಿಗೇ ಗೊತ್ತು. ದ್ರಾವಿಡ ಭಾಷೆಗಳ ಪರಿಷತ್ತು ಯಾವುದಕ್ಕೂ ಇರದ ಇಷ್ಟೊಂದು ಸದಸ್ಯ ಬಲವಿರುವುದು ನಿಮಗೆ ಹೆಮ್ಮೆಯ ಮಾತು.''

''ನನಗೆ ಇಷ್ಟು ದೊಡ್ಡ ಕರ್ನಾಟಕದಲ್ಲಿ ಈ ಸಂಖ್ಯೆಯ ಐದು ಸಾವಿರವಾದರೂ ಆಗಬೇಕೆಂದು ಆಸೆ. ಆದರೆ ಅದು ಸಾಧ್ಯವಾಗದೆ ಇರುವುದು ಒಂದು ಕೊರತೆ.''

''ಈ ವರ್ಷ ಆ ಗುರಿಯ ಸಾಧನೆಯನ್ನೂ ಕಂಡೀರಿ. ಅದಕ್ಕೆ ತಕ್ಕ ಶಕ್ತಿ, ಉತ್ಸಾಹ, ಪ್ರೋತ್ಸಾಹ, ಚಾತುರ್ಯ ಎಲ್ಲವೂ ನಿಮ್ಮಲ್ಲಿ ಇದೆ.''

''ಇಲ್ಲ ಈ ವರ್ಷ ಯಾರಾದರೂ ಚಿಕ್ಕ ವಯಸ್ಸಿನವರಿಗೆ ಈ ಜವಾಬುದಾರಿಯನ್ನು ಹೊರಿಸಬೇಕು ಅಂತ ಮಾಡಿದ್ದೇನೆ. ಆದಷ್ಟು ದುಡಿಯುವುದಕ್ಕಂತೂ, ನಾನು ಇದ್ದೇನಲ್ಲ.''

''ಹಾಗಾಗಬಾರದು. ಇನ್ನೂ ನಿಮ್ಮ ಮುಂದಾಳುತನದ ಅಗತ್ಯವಿದೆ. ಭಿನ್ನಾಭಿಪ್ರಾಯದವರನ್ನು ಕೂಡಿಸುವುದು ಸ್ವಲ್ಪ ಜನರಿಗೇ ಸಾಧ್ಯ. ನೋಡಿದಿರೋ 'ಕರ್ಣಾಟಕ-ಕರ್ನಾಟಕ' , 'ಹಿಂದಿ-ಕನ್ನಡ' ಈ ವಿಷಯಗಳು ಪರಿಷತ್ತಿನ ಒಗ್ಗಟ್ಟು, ಏಳ್ಗೆಗಳಿಗೆ ಎಷ್ಟೊಂದು ಕುಂದು ತಂದಿರಬಹುದು. ಇಂತಹ ಸಂದರ್ಭಗಳಲ್ಲಿ ಲೌಕಿಕದಿಂದ ಪರಿಷತ್ತನ್ನು ನಡೆಸಿಕೊಂಡು ಬರುವುದು ಅಗತ್ಯ.'' ಸ್ವಾಮಿಗಳು ಕೆಲವು ವ್ಯಕ್ತಿಗಳ ಭಾಗವನ್ನು ನಿರ್ದೇಶಿಸಿದರು. ಮಾಸ್ತಿಯವರು ಪ್ರಯಾಸದಿಂದ ಆ ವ್ಯಕ್ತಿಯನ್ನು ಒಳಗೆ ಹಾಕಿಕೊಳ್ಳಲು ಯತ್ನಿಸಿದರು. ಸ್ವಾಮಿಯವರು ''ನನಗೆ ನಿಮ್ಮ ಸ್ವಭಾವವು ಗೊತ್ತು. ನೀವು ಸ್ನೇಹಿತರನ್ನು ಬಿಟ್ಟುಕೊಡುವವರಲ್ಲ. ಆದರೆ ಇದು ವ್ಯಕ್ತಿ ದೋಷದ ಮಾತಲ್ಲ-ಈ ಸಂದರ್ಭದಲ್ಲಿ''. ಅಂದರು.

''ಹೌದು ಆ ವಿಷಯಗಳಲ್ಲಿ ಚರ್ಚೆಯ ಮಿತಿಮೀರಿ ಆಯಿತೆಂದೇ ನನಗೂ ಅನ್ನಿಸುತ್ತದೆ.''

''ಅಲ್ಲದೆ ಚರ್ಚಾಸ್ಪದವಾದ ವಿಷಯಗಳಲ್ಲಿ ಪರಿಷತ್ತು ವೈಯಕ್ತಿಕ

ಅಭಿಪ್ರಾಯಗಳನ್ನು ಸಮರ್ಥಿಸುವಂತೆ ತೋರಿಸಿಕೊಂಡು. ತನ್ನ ಪತ್ರಿಕೆಗಳಲ್ಲಿ ಒಂದು ಅಭಿಪ್ರಾಯಕ್ಕೇ ಪ್ರಾಮುಖ್ಯತೆ ಕೊಡುವುದು ಸರಿಯಲ್ಲ.''

''ನಿಜ.''

''ಈಗ ನೋಡಿ, ಪರಿಷತ್ಪತ್ರಿಕೆಯಲ್ಲಿ..''ಸ್ವಾಮಿಯವರು ಮತದ ವಿಚಾರದಲ್ಲಿ ಲೇಖಕನೊಬ್ಬನು ತೋರಿಸಿದ ತಪ್ಪು ಅಭಿಪ್ರಾಯವನ್ನು ಸೂಚಿಸಿದರು. ಮತ್ತೆ ''ಇಂತಹ ವಿಷಯಗಳಲ್ಲಿ ಪ್ರಕಟನೆಯಾಗಬೇಕಾದಾಗ ಪರಿಷತ್ತು ಆಯಾ ಮತದ ವಿದ್ವಾಂಸರ ಅಭಿಪ್ರಾಯವನ್ನೂ ತೆಗೆದುಕೊಂಡು ಪರೀಕ್ಷಿಸುವುದು ಹಿತವಲ್ಲವೆ?''

''ಹೌದು. ಈ ವಿಷಯವು ನನ್ನ ಗಮನಕ್ಕೇ ಬಂದಿರಲ್ಲಿಲ್ಲ. ಮುಂದಾದರೂ ಈ ದೃಷ್ಟಿಗೆ ಗಮನ ಕೊಡಬೇಕು.''

''ಇನ್ನೊಂದು ಮಾತು. ಈಚೆಗೆ ಪರಿಷತ್ಪತ್ರಿಕೆಯ ಘಟ್ಟವು ಕೆಳಗಿಳಿದಿದೆ. ಇದರಲ್ಲಿ ವಿದ್ವತ್ತಿಗೆ ಸಹಜವಾಗಿ ಅವಕಾಶವಿರಬೇಕು. ಆಂಧ್ರ ಪರಿಷತ್ತಿನ ಪತ್ರಿಕೆಯು ಬಹಳ ಚೆನ್ನಾಗಿದೆ.''

ಮಾಸ್ತಿಯವರು ನಾಲಿಗೆಯನ್ನು ಕಚ್ಚಿಕೊಂಡವರಂತೆ ಒಂದು ಕ್ಷಣ ಸುಮ್ಮನಿದ್ದು ''ನೋಡಿ, ಕೆಲಸಕ್ಕೆ ತಕ್ಕ ಪರಿಶ್ರಮವಿರುವವರನ್ನು ಕಾಡಿಬೇಡಿದರೂ ಅವರಿಗೆ ಪುರುಸೊತ್ತು ಇಲ್ಲ. ಉತ್ಸಾಹವೂ ಇಲ್ಲ. ಉತ್ಸಾಹವಿರುವ ಹುಡುಗರಿಗೂ ಅಡ್ಡಿಯಾಗಿ ನಾವೇನು ಮಾಡೋದು? ಇದು ನಮ್ಮ ಸಂಕಟ. ಆದರೂ ತಾವು ಹೇಳಿದುದಕ್ಕೆ ಗಮನವನ್ನು ಕೊಡಲೇಬೇಕು.''

''ಇನ್ನೊಂದು ವಿಚಾರ. ಪರಿಷತ್ಪತ್ರಿಕೆಯಲ್ಲಿ ಇರುವ ಸ್ವಲ್ಪ ಪುಟ ಉದ್ಧುದ್ಧವಾದ ಹಳೆಯ 'ಚಾವುಂಡರಾಯ ಪುರಾಣ' 'ಮರುಳಸಿದ್ಧ ಕಾವ್ಯ' ಇವುಗಳಿಗೆ ಸ್ಥಳ ಕೊಡುವುದಕ್ಕಿಂತಲೂ ಅವನ್ನು ಬೇರೆಯಾಗಿ ಸಂಪಾದಿಸಬೇಕು. ಆಗ ಇತರ ವಿಷಯಕ್ಕೆ ಪತ್ರಿಕೆಯಲ್ಲಿ ಜಾಗ ಸಿಕ್ಕುತ್ತದೆ.''

''ತಮ್ಮದು ಒಳ್ಳೆಯ ಸಲಹೆ. ಪತ್ರಿಕೆಯ ಮಂಡಲಿಯ ಮುಂದೆ ಇಡುತ್ತೇನೆ.''

ಹೀಗೆ ಪರಿಷತ್ತಿನ ಬಗ್ಗೆ ಹೊರಬಿದ್ದ ಹಲವಾರು ಸಲಹೆ ಟೀಕೆಗಳನ್ನು ಮಾಸ್ತಿಯವರು - ಪರಿಷತ್ತಿನ ಉಪಾಧ್ಯಕ್ಷರು - ಉತ್ಸುಕತೆಯಿಂದ ಗ್ರಹಿಸಿದರು. ಉಚಿತವಾದ ರೀತಿಯಲ್ಲಿ ಸ್ವಾಮಿಗಳಿಗೆ ಸಮಾಧಾನ ಹೇಳಿ ತೃಪ್ತಿಪಡಿಸಿದರು. ಸಮ್ಮೇಳನದ ವಿಷಯವು ಬಂದಿತು. ಮಾಸ್ತಿಯವರು ''ಈ ಬಾರಿ ಸಮ್ಮೇಳನ ಮದರಾಸಿನಲ್ಲಿ ನಡೆಯುತ್ತದೆ. ತಾವು ಅಲ್ಲಿಗೆ ದಯಮಾಡಿಸಿ ನಮ್ಮನ್ನು ಆಶೀರ್ವದಿಸಿ ಉತ್ತೇಜನ ಕೊಡಬೇಕು''ಎಂದು ಮದುವೆಯ ಆಹ್ವಾನದ ಒಕ್ಕಣೆ ವಿಶ್ವಾಸಗಳಿಂದ ಕೇಳಿಕೊಂಡರು. ಸ್ವಾಮಿಗಳು ಅನಿವಾರ್ಯವನ್ನು ಸೂಚಿಸಿದಾಗ ''ತಾವು ಒಂದು ಸಂದೇಶವನ್ನಾದರೂ ಕಳುಹಿಸಿಕೊಡಿ. ಕಾಶಿಯ ಮಠದಿಂದ ಬಂದ ಆಶೀರ್ವಾದವೆಂದು ನಾವು ಹೆಮ್ಮೆಪಟ್ಟು ಸಂತೋಷಿಸುತ್ತೇವೆ''ಅಂದು, ''ಒಂದು ಬಾರಿ ಸಮ್ಮೇಳನವೇ ತಮ್ಮ ಆಶ್ರಯದಲ್ಲಿ ಜರಗುವಂತೆ ಕೃಪೆ ಮಾಡಿಬಿಡಿ. ಕನ್ನಡದ ಬಾವುಟವು ಕಾಶಿಯಲ್ಲಿ ಹಾರಾಡಲಿ''ಎಂದು ಸೂಚನೆ ಕೊಟ್ಟರು. ಸ್ವಾಮಿಗಳು ''ಅದೇನೋ ವಿಚಾರ ಮಾಡಬಹುದು. ಆದರೆ ಕನ್ನಡಿಗರಿಗೆ ಇದು ಬಲು ದೂರ. ನಮ್ಮ ಕಡೆಯಿಂದ ನಾವು ಯಾವುದೊಂದರಲ್ಲೇ ಅಭಿಮಾನಪಡುವವರಲ್ಲದಿದ್ದರೂ ಇಲ್ಲಿಯ ವರಮಾನ ದೃಷ್ಟಿಯಿಂದ ನೋಡಿದರೆ ಭಕ್ತರಲ್ಲಿ ಹೆಚ್ಚಾದ ಕನ್ನಡಿಗರಿಗೆ ಉತ್ತೇಜನ ಕೊಡುವದು

ದೋಷವೆನಿಸಲಾರದು''ಎಂದರು. ಈ ಸಮಯದಲ್ಲಿ ಮಾಸ್ತಿಯವರು ''ಈ ಸಂಸ್ಥೆಯು ಆಜೀವ ಸದಸ್ಯತನದಿಂದ ಪರಿಷತ್ತಿಗೆ ಸಹಾಯವಾಗುವಂತೆ ಕೃಪೆ ಮಾಡವದಾದರೆ ತುಂಬ ಸಂತೋಷ''ಎಂದು ಬೇಡಿಕೊಂಡರು. ಸ್ವಾಮಿಗಳು ಒಪ್ಪಿದರು. ಸ್ವಾಮಿಗಳು ''ಇನ್ನು ಎಷ್ಟು ದಿನ ಇಲ್ಲಿ ಇರುವುದಾಗುತ್ತದೆ?''ಎಂದು ಪ್ರಶ್ನಿಸಿದರು. ಮಾಸ್ತಿಯವರು ಆಗಿನ ನಿರ್ಧಾರದಂತೆ ಬಲಿಪಾಡ್ಯದ ಹಿಂದಿನ ದಿನ ಹೊರಡಬೇಕಾಗಿತ್ತು. ಆದರೆ ಸ್ವಾಮಿಗಳು ''ಇದೇನು, ಒಳ್ಳೆ ಅಮಾವಾಸ್ಯೆಯ ದಿನವೇ ಹೊರಡಬೇಕೆಂದು ಮಾಡಿದ್ದೀರಿ? ಒಂದೆರಡು ದಿನ ತಡೆಯಲಾಗುವುದಿಲ್ಲವೆ? ದೀಪಾವಳಿಗಾಗಿ ಜನರು ಇಲ್ಲಿಗೆ ಹೊರಗಿನಿಂದ ಬರುತ್ತಾರೆ. ಹೀಗಿರುವಲ್ಲಿ ಬಂದಿರುವವರೂ ನೀವು ಮುಂದಾಗಿ ಹೊರಡುವುದು ಏಕೆ''? ಎಂದರು. ಮಾಸ್ತಿಯವರು ''ತಾವು ಹಾಗೆ ಅಪ್ಪಣೆ ಕೊಡಿಸಿದ ಮೇಲೆ ಹೋಗುವುದು ಹೇಗೆ? ನಿಂತುಬಿಡುತ್ತೇನೆ''ಎಂದು ಪ್ರಯಾಣವನ್ನು ಆ ಕ್ಷಣವೇ ಮುಂದುಹಾಕಿದರು. ಮತ್ತಷ್ಟು ಮಾತುಗಳಾಗಿ ನಾವು ಹೊರಬಿದ್ದಾಗ ದಾರಿಯಲ್ಲಿ ಮಾಸ್ತಿಯವರು ''ನೋಡಿ, ಅವರು ಎಷ್ಟು ಒಳ್ಳೆಯ ಸೂಚನೆಗಳನ್ನಿತ್ತರು? ಹೀಗೆ ಸಾರ್ವಜನಿಕ ಹಿತಕ್ಕಾಗಿ, ಅಹಿತದ ಮಾತುಗಳನ್ನಾಡುವ ಧೈರ್ಯಮಾಡಿ ತಿದ್ದಲು ಯತ್ನಿಸುವವರು ಎಷ್ಟು ಕಡಿಮೆ? ಅವರ ಮಾತಿನಲ್ಲಿ ಒಂದಾದರೂ ಒಣ ಟೀಕೆ ಇರಲಿಲ್ಲ.''ಎಂದು ಸಂತೋಷದಿಂದ ಕೃತಜ್ಞತೆಯನ್ನು ಸೂಚಿಸಿದರು.

ರಾತ್ರಿ ಊಟವಾದ ಮೇಲೆ ನಾನು ''ವೀಳೆಯದೆಲೆ ತರಿಸಿದ್ದೀಯಾ?''ಎಂದು ನಮ್ಮವಳನ್ನು ಕೇಳಿದೆ. ನಮಗೆ ಈ ಅಭ್ಯಾಸವಿಲ್ಲದೆ ಅವಳಿಗೆ ಇದು ಮನಸ್ಸಿಗೆ ಬಂದಿರಲ್ಲಿಲ್ಲ. ಅವಳಿಂದ ಉತ್ತರವು ಬೇಗನೆ ಬಾರದಿದ್ದುರಿಂದ ವಿಷಯವನ್ನು ಊಹಿಸಿ ಮಾಸ್ತಿಯವರು 'ಓ, ಈ ದಿನ ಶನಿವಾರ, ನಾನು ಎಲೆಯನ್ನು ಹಾಕುವದಿಲ್ಲ.''ಎಂದರು.

ಮಾರನೆಯ ದಿನ ಬೆಳಿಗ್ಗೆ ನಾವು ಮಹಾತ್ಮ ಬುದ್ಧನ ಉಪದೇಶ ಮಾಡುತ್ತಿದ್ದ ಸ್ಥಳವಾದ ಸಾರನಾಥಕ್ಕೆ ಹೊರಟೆವು. ಕಾಶಿಯ ಮೇರೆಗೆ ಬಂದಾಗ ಗಾಡಿಯ ಕುದರೆಯು ನಿಂತು ಅನುಮಾನಿಸಿತು. ಗಾಡಿಯವನು ಏನೋ ಎರಡು ಮಾತನ್ನು ಹೇಳಲು ಮತ್ತೆ ತನ್ನ ಓಟಕ್ಕೆ ಮೊದಲು ಮಾಡಿತು. ಮಾಸ್ತಿಯವರು ''ಅವನು ಹೇಳಿದುದೇನು?''ಎಂದು ಕೇಳಿದರು. ನಾನು ಭಾಷಾಂತರ ಮಾಡಿ ''ಮಗು, ಇದೇ ಕಡೆಯಲ್ಲ ಈಗ. ಇನ್ನೂ ಬಲು ದೂರವಿದೆ. ಮುಂದೆ ನಡೆಯಪ್ಪ. ಎಂದ'' ಎಂದೆನು. ಆಗ ಮಾಸ್ತಿಯವರು ''ಆಹಾ! ಇವರ ಬಾಂಧವ್ಯ ಎಷ್ಟು ಮಧುರ!''ಅಂದರು.

ದಾರಿಯಲ್ಲಿ ಆ ಪುಸ್ತಕ ಈ ಪುಸ್ತಕದ ಮಾತು ಬಂದಿತು. ಮಾಸ್ತಿಯವರು 'ಕೆಲವು ಸಣ್ಣಕತೆಗಳ'ಬಗ್ಗೆ ಮಾತನಾಡುತ್ತ ''ನಾನು ಶ್ರೀನಿವಾಸನೆಂದೇ ಮರೆಸಿಕೊಂಡಿದ್ದುದು ಓದುಗರು ಅದು ಅಧಿಕಾರಿಯೊಬ್ಬನು ಬರೆದುದೆಂದು ಮೆಚ್ಚಿಕೊಳ್ಳದಿರಲಿ ಅಂತ''ಎಂದರು. ಅವರ ಇತ್ತೀಚಿನ ಕಥನ ಕವನಗಳ ಮೇಲೆ ಮಾತು ತಿರುಗಿ ನಾನು 'ಅಗಡಿಯ ಸಾಧುಗಳು'ಬಹಳ ಹೃದ್ಯವಾಗಿದೆ ಎಂದೆ. ಅವರು ''ಅದು ನಿಮಗೆ ರುಚಿಸುತ್ತದೆಯೆ? ನನ್ನ ಗೆಳೆಯರಲ್ಲಿ ಕೆಲವರಿಗೆ ಅದರಲ್ಲಿ ಏನೂ ಕಾಣುವುದಿಲ್ಲ. ಒಬ್ಬರಂತೂ ಆ ಕವನಗಳ ಬಗ್ಗೆ ತೀರ ಕಟುವಾಗಿಯೇ ಬರೆದಿದ್ದಾರೆ. ಅವರಿಗೆ ಅಲ್ಲಲ್ಲಿ ಒಂದೆರಡು ಸಾಲು 'ಕವನ'ಮಾತ್ರ ಸಿಕ್ಕುತ್ತವಂತೆ. ಆ ಸಾಲುಗಳಲ್ಲಿರುವುದೂ, ಇನ್ನಿತರ ಸಾಲುಗಳಲ್ಲಿ ಇಲ್ಲದಿರುವುದೂ ಏನೋ ನನಗಂತೂ ತಿಳಿಯದು. ನೋಡಿ, ಮುಖ್ಯವಾಗಿ ನಾನು ಕಾರಣಾಂತರದಿಂದ ಕೆಲವರಿಗೆ ಅಹಿತವಾಗುವ ಗತಿ ಬಂದಿದೆ. ಅವರು ತಮ್ಮ

ಅಸಮಾಧಾನವನ್ನು ಮತ್ತೆ ಹೇಗೆ ಸೂಚಿಸಬೇಕು? ಒಳಗಿನದನ್ನೆಲ್ಲ ಬಿಚ್ಚಿ ಹೇಳುವುದು ನನಗೆ ಹಿತವಿಲ್ಲದ ಕೆಲಸ. ಅವರಿವರ ಗುಳ್ಳೆಯನ್ನು ಚುಚ್ಚುವುದು ನನ್ನಿಂದ ಆಗದು. ಅವರೇ ನಿಧಾನವಾಗಿ ಬುದ್ಧಿ ತಿಳಿದುಕೊಳ್ಳಲಿ'' ಎಂದು ವ್ಯಸನವನ್ನು ಸೂಚಿಸಿದರು.

ಸಾರನಾಥವನ್ನು ಸೇರಿ ನಾವು ವಿಹಾರದ ಪಾಳುಗಳನ್ನು ನೋಡಲು ಹೊರಟೆವು. ಮಾಸ್ತಿಯವರೇ ನಮಗೆ ಮುಂದಾಗಿ ನಡೆಯುತ್ತ ಅವನ್ನೆಲ್ಲ ಆಗಲೇ ನೋಡಿದ್ದವರೊ ಎನ್ನುವಂತೆ ''ಇದು ಹೆಣ್ಣು ಭಿಕ್ಷುವಿನ ಸಮಾಧಿ, ಇದು ಗಂಡಿನದು''ಎನ್ನುತ್ತ ಅವುಗಳ ವ್ಯತ್ಯಾಸ, ಇತರ ಭಾಗಗಳ ವೈಶಿಷ್ಟ್ಯವನ್ನು ಸುಲಭವಾಗಿ ಊಹಿಸಿ ಹೇಳುತ್ತ ಹೋದರು. ಭಗವಾನ್ ಬುದ್ಧನು ಕುಳಿತು ಉಪದೇಶಿಸುತ್ತಿದ್ದ ಸ್ಥಳವನ್ನು ಸೇರಿ, ಮುರಿದ ಕಲ್ಲು-ಛತ್ರಿಯ ಮೋಟನ್ನು ಕಂಡು ಮರಗಿದ್ದಾಯಿತು. ಮಾಸ್ತಿಯವರು 'ಆಹಾ ಈ ಸ್ಥಳದಲ್ಲಿ ಭಗವಾನನು ಬೋಧಿಸುತ್ತಿರುವಾಗ ಇಗೋ, ಇದೇ ದಾರಿಯಿಂದ ಕಾಶಿಯ ಪಂಡಿತರು ಬಂದು ಶಾಸ್ತ್ರಗಳನ್ನು ಉದ್ಧರಿಸುತ್ತ ಸಮಾಧಾನ ಕೇಳಿ 'ಅವನೊಡನೆ ವಾಗ್ವಾದ ಮಾಡಿ ಅವನನ್ನು ಮೆಚ್ಚಿಕೊಂಡು ಹೋಗುತ್ತಿದ್ದ ದೃಶ್ಯವು ಹೇಗಿರಬೇಕು?''ಅಂದು ಭಾವನಾವಶರಾದರು. ಆ ಪಾಳುಗಳಲ್ಲಿ ಕೆಲವು ಬಿಸಿಲು ಮಳೆಗಾಳಿಗಳಿಂದ ರಕ್ಷಣೆಯಿಲ್ಲದೆ ಇರುವುದನ್ನು ಕಂಡು ''ಎಲಾ, ಇದೆಲ್ಲವನ್ನೂ ಹೆಮ್ಮೆಯಿಂದ ರಕ್ಷಿಸಿಕೊಳ್ಳುವ ಸರಕಾರವು ಎಂದಿಗೆ ಬಂದೀತೋ ಏನೋ!''ಎಂದು ತವಕಿಸಿದರು. ನಾವು ಪಾಳುಗಳನ್ನು ದಾಟಿ ಹೊಸದಾಗಿ ಕಟ್ಟಲ್ಪಟ್ಟ ಗುಡಿಯ ಕಡೆಗೆ ಹೋದೆವು. ಅಲ್ಲಿ ಸಿಲೋನಿನಲ್ಲಿರುವ ಬೋಧಿವೃಕ್ಷದ ಅಂಟಿನಿಂದ ಇಲ್ಲ ವೃಕ್ಷವಾಗಿ ಬೆಳೆದಿದ್ದ ಬುದ್ಧ ಗಯದ ಬೋಧಿಯ ಮೊಮ್ಮಗುವನ್ನು ನೋಡಿ ಮಾಸ್ತಿಯವರು ಭಕ್ತಿಯಿಂದ ಪ್ರದಕ್ಷಣೆ ಮಾಡಿ ನಮಸ್ಕರಿಸಿ ''ನಾರಾಯಣಸ್ವಾಮಿ, ಇದರ ಮೂರೇ ಮೂರು ಎಲೆಗಳನ್ನು ಕಿತ್ತುಕೊಳ್ಳಿ. ನನ್ನ ಬಳಿ ಇರಲಿ''ಎಂದು ಕಿತ್ತ ಎಲೆಗಳನ್ನು ಜೇಬಿನಲ್ಲಿ ಇಟ್ಟುಕೊಂಡರು. ಅನಂತರ ಗುಡಿಯೊಳಗೆ ಪ್ರವೇಶಿಸಿದೆವು. ಅಲ್ಲಿಯ ಆವರಣವು ಅವರಿಗೆ ಸಂತೋಷವನ್ನುಂಟುಮಾಡಿತು. ಅಲ್ಲಿಯ ಗೋಡೆಗಳ ಮೇಲೆ ಜಪಾನಿ ಕಲಾವಿದನೊಬ್ಬನು ಅನೇಕ ಚಿತ್ರಗಳನ್ನು ರಚಿಸಿದ್ದನು. ಆದರೆ ಈಗ ಕೊಂಚ ಸುಣ್ಣದ ಕೆಲಸ ನಡೆಯುತ್ತಿದ್ದು ಅವುಗಳಿಗೆ ಪರದೆ ಹಾಕಿದ್ದರು. ಅಲ್ಲಿಯವರ ಅಪ್ಪಣೆ ಪಡೆದು ಪರದೆಯನ್ನು ವಾರೆಯಾಗಿಸಿ ಸಾಧ್ಯವಾದಷ್ಟನ್ನು ನೋಡಿದ್ದಾಯಿತು. ಇಲ್ಲೂ ಮಾಸ್ತಿಯವರು ತಮ್ಮ ತಿಳವಳಿಕೆಯಿಂದ ಆ ಚಿತ್ರಗಳ ವಿಷಯವನ್ನು ಹೇಳಿದರು. ಮೂರ್ತಿಯ ಮುಂದೆ ನಾವು ನಿಂತಿರುವಾಗ ಒಂದು ಬಂಗಾಳಿಯ ಸಂಸಾರವೂ ದರ್ಶನಕ್ಕಾಗಿ ಬಂದಿತು. ದೊಡ್ಡವರು ನಮಸ್ಕರಿಸುವುದಕ್ಕೆ ಮುಂಚೆಯೇ ಅವರ ಸಣ್ಣ ಮಕ್ಕಳೆರಡೂ ನಮಸ್ಕರಿಸಿದುವು. ಮಾಸ್ತಿಯವರು ''ನೋಡಿದಿರಾ, ಮಕ್ಕಳನ್ನು ಹೇಗೆ ಬೆಳೆಸಿದ್ದಾರೆ?''ಅಂದರು. ಗುಡಿಯಿಂದ ಹೊರಗೆ ಬಂದಾಗ ''ಬುದ್ಧನ ಈ ಪ್ರತಿಮೆಗೆ ಅವನ ಸಹಜವಾದ ಮುಖಮುದ್ರೆಯಿಲ್ಲ; ವಿಷಾದಕರ''ಅಂದುಕೊಂಡರು.

ಎದುರಿಗೆ ಬಿರ್ಲಾ ವಿದ್ಯಾಸಂಸ್ಥೆ. ಅದರ ಆವರಣದಲ್ಲಿ ಎರಡು ಕಲ್ಲು ಕಂಬಗಳು ಇದ್ದುವು. ಅವುಗಳ ಮೇಲೆ ಬುದ್ಧನ ಉಪದೇಶದ ಸಾರಾಂಶವು ಹಿಂದಿ ಮತ್ತು ಇಂಗ್ಲಿಷುಗಳಲ್ಲಿ ಬರೆಯಲ್ಪಟ್ಟಿದ್ದಿತು. ಮಾಸ್ತಿಯವರು ಅದನ್ನು ಓದಿ ''ಇದು ಚೆನ್ನಾಗಿದೆ, ಕೊಂಚ ಬರೆದುಕೊಂಡುಬಿಡಿ''ಎಂದು ನಾರಾಯಣಸ್ವಾಮಿಗೂ, ನನಗೂ ಹೇಳಿದರು. ನಕಲನ್ನು ಮಾಡಿಕೊಳ್ಳುವಾಗ ಅವರಲ್ಲಿಗೂ ನನ್ನಲ್ಲಿಗೂ ನಡೆದಾಡುತ್ತ ಸರಿಯಾಗಿ ಬರೆದುಕೊಳ್ಳುವುದನ್ನು ಪರೀಕ್ಷಿಸುತ್ತಿದ್ದರು. ಇನ್ನು 'ಮ್ಯೂಸಿಯಮ್ಮಿ'ನ ಕಡೆಗೆ ಬರುವಾಗ

ಇದ್ದ ಕಿತ್ತಲೆಯ ಹಣ್ಣು ಒಂದನ್ನು ಸುಲಿದು ನಾರಾಯಣಸ್ವಾಮಿ ಹಂಚಿದರು. ಮಾಸ್ತಿಯವರು ಎರಡು ತೊಳೆಗಳನ್ನು ತಿಂದು ಉಳಿದ ಎರಡನ್ನು ಮೋಟಾರಿನ ಬಳಿ ಆಡುತ್ತಿದ್ದ ಆ ಬಂಗಾಳಿ ಮಕ್ಕಳಿಗೆ ಕೊಟ್ಟರು. ಮಾಸ್ತಿಯವರೂ ನಾನು ಮುಂದಾಗಿ 'ಮ್ಯೂಸಿಯಂ ಹೊಕ್ಕೆವು. ಅಲ್ಲಿ ಕಲ್ಲು-ಛತ್ರಿ ಮತ್ತು ಇತರ ಶಿಲ್ಪಗಳ ದರ್ಶನವಾಯಿತು. ಅಯ್ಯರ್ ಹೊತ್ತಾಗಿ ಬಂದುದನ್ನು ಕಂಡು ಮಾಸ್ತಿಯವರು ''ಎಲ್ಲಿ ಹಿಂದುಳಿದು ಏನು ಮಾಡುತ್ತಿದ್ದಿರಿ?''ಎಂದರು ಸಂಶಯದಿಂದ. ಅಯ್ಯರು ''ಹಾಗಿ ಒಂದು ಬಟ್ಟಲು ಚಹ ತಗೊಂಡೆ''ಅಂದರು. ಅದಕ್ಕೆ ಮಾಸ್ತಿಯವರು ''ಹುಂ, ನನಗೂ ಹೇಳಿದ್ದರೆ? ನನ್ನ ಬಾಯಿಯೂ ಒಣಗಿದೆ'' ಅಂದು ನಸುನಕ್ಕರು. ಅಯ್ಯರು ''ನೀವು ರಸ್ತೆಯ ಪಕ್ಕದ ಚಹವನ್ನು ಒಪ್ಪುತ್ತೀರಾ? ಅದು ಹಾಗಿದೆ, ಹೀಗಿದೆ ಅಂದು ನನಗೂ ಇಲ್ಲದಂತೆ ಮಾಡುತ್ತಿದ್ದಿರಿ.''ಅಂದರು. ಎಲ್ಲರೂ ನಕ್ಕೆವು. ಸಾರನಾಥದಿಂದ ಹೊರಡುವಾಗ ಮಾಸ್ತಿಯವರು 'ಇಲ್ಲಿ ಭಗವಾನ್ ಬುದ್ಧನು ನಿರ್ವಾಣನಾಗಿಲ್ಲ, ಜೀವಂತನಾಗಿದ್ದಾನೆ, ಇನ್ನೂ ಉಪದೇಶಿಸುತ್ತಲೇ ಇದ್ದಾನೆ''ಎಂದು ಹೇಳಿದರು.

ಮನೆಗೆ ಬಂದೊಡನೆ ಅವರು ನಮ್ಮವಳನ್ನು ಸಂಬೋಧಿಸಿ ''ಏನು ತಾಯಿ, ಅಡಿಗೆ ನಮಗೆ ಸಿದ್ಧವಾಗಿದೆಯೆ? ನಾವೂ ಅದಕ್ಕೆ ಸಿದ್ಧವಾಗಿದ್ದೇವೆ.'' ಅಂದರು.

ಅದೇ ಸಂಜೆ ವಿಶ್ವವಿದ್ಯಾಲಯದಲ್ಲಿ ಕನ್ನಡಿಗರ ಕೂಟ. ಮಾಸ್ತಿಯವರ ಭಾಷಣವಾಗಬೇಕಾಗಿತ್ತು. ನಾವು ಗಾಡಿ ಮಾಡಿಕೊಂಡು ಪ್ರೊ.ಅಸುಂಡಿಯವರ ಮನೆಗೆ ಹೋದೆವು. ಅಸುಂಡಿಯವರು ಊರಿನಲ್ಲಿರಲಿಲ್ಲ. ಅಲ್ಲಿ ಕನ್ನಡ ಸಂಘದ ಉಪಾಧ್ಯಕ್ಷರು ಭೇಟಿಯಾದರು. ಉಪಹಾರವಾಯಿತು. ಮಾಸ್ತಿಯವರು ತಿಂಡಿಯನ್ನು ಮುಟ್ಟಲಿಲ್ಲ, ಆದರೆ ಕಾಫಿಯನ್ನು ಬಿಡಲಿಲ್ಲ. ಅಸುಂಡಿಯವರ ಮನೆಯಿಂದ ವಿಜ್ಞಾನದ ಕಾಲೇಜಿಗೆ ಹೋಗುವಾಗ ಇದಿರಿಗಿಲ್ಲದ ಅಸುಂಡಿಯವರ ವಿಷಯವಾಗಿ ''ನೋಡಿ, ಇವರು ಎಷ್ಟು ಚಿಕ್ಕವಯಸ್ಸಿನಲ್ಲಿ ಹೆಂಡತಿಯನ್ನು ಕಳೆದುಕೊಂಡು ಮತ್ತೆ ಮದುವೆ ಮಾಡಿಕೊಳ್ಳದೆ ಒಂಟಿಯಾಗಿಯೇ ಇದ್ದುಬಿಟ್ಟಿದ್ದಾರೆ! ಇಂತಹವರಲ್ಲಿ ನನಗೆ ವಿಶೇಷ ಮೆಚ್ಚಿಕೆ''ಅಂದರು.

ಉಪನ್ಯಾಸಕ್ಕೆ ಮುಂಚೆ ನೆರದಿದ್ದ ಕನ್ನಡಿಗರೆಲ್ಲರ ಪರಿಚಯವನ್ನು ವ್ಯಕ್ತಿಶಃ ಮಾಡಿಕೊಂಡರು. ಒಬ್ಬೊಬ್ಬರೊಂದಿಗೆ ಮಾತಾನಾಡುವಾಗಲೂ ಅವರ ಸ್ಥಳ, ತಂದೆ, ಬಂಧುಗಳನ್ನು ವಿಚಾರಿಸಿದರು. ಆಗ ಅವರಿಗೆ ಸ್ಥಳ, ಇಲ್ಲವೆ ಬಂಧುಗಳು ಹೇಗಾದರೂ ಗೊತ್ತೇ ಇರುತ್ತಿದ್ದಿತು. ಇದರಿಂದ ಅವರು ಎಷ್ಟು ಆಸಕ್ತಿಯಿಂದ ಕನ್ನಡಿಗರ ಪರಿಚಯ ಮಾಡಿಕೊಂಡಿದ್ದರೆಂಬುದು ಗೊತ್ತಾಗುತ್ತಿದ್ದಿತು.

ಉಪಾಧ್ಯಕ್ಷರು ಮಾತನಾಡುತ್ತ ''ಕನ್ನಡಿಗರಿಗೆ ಮಾಸ್ತಿಯವರ ಪರಿಚಯವನ್ನು ಮಾಡಿಕೊಡುವುದು ಅನವಶ್ಯಕ. ಆದುದರಿಂದ ಅವರಿಗೆ ನಮ್ಮ ಸಂಘದ ಪರಿಚಯ ಮಾಡಿಕೊಡುತ್ತೇನೆ''ಎಂದರು. ನಾರಾಯಣಸ್ವಾಮಿಯವರ ನಾಲ್ಕು ಮಾತಾದ ಮೇಲೆ ಮಾಸ್ತಿಯವರ ಸ್ವಾರಸ್ಯವಾದ ಭಾಷಣ. ಔತಣದ ಊಟದಲ್ಲಿ ಚಟ್ನಿ, ಉಪ್ಪಿನಕಾಯಿಯಂತೆ ಸಣ್ಣ ಕತೆಗಳು. ಒಂದು ಒಂದೂವರೆ ಗಂಟೆ ಕೇವಲ ನಿಮಿಷಗಳಂತೆ ಕಳೆದುವು. ಕೇಳಿದವರ ಪೈಕಿ ಒಬ್ಬರು ''ಇಂತಹ ಕನ್ನಡದ ಮಾತನ್ನು ಕೇಳಿ ಎಷ್ಟು ಕಾಲವಾಗಿದ್ದಿತೋ ಏನೋ?'' ಅಂದರು. ಅವರಲ್ಲಿ ಒಬ್ಬಾತ ಮಾತ್ರ ತನ್ನ ಹಿರಿಮೆಯನ್ನು ಮೆರೆಯಿಸಲು ಟೀಕೆಯೊಂದನ್ನು ನುಡಿದು ತನ್ನ ಅಜಾಗರೂಕತೆಯನ್ನು ವ್ಯಕ್ತಪಡಿಸಿದ. ಆದರೆ ಅವನು ನುಡಿದ ಕಟುನುಡಿಯು ಅಲ್ಲಿದ್ದ ಕನ್ನಡಿಗರೆಲ್ಲರನ್ನೂ ಬೇಸರಪಡಿಸಿತು, ರೇಗಿಸಿತು. ಮಾಸ್ತಿಯವರು ತಣ್ಣಗಿದ್ದು

ಅವನಿಗೆ ಸಮಾಧಾನ ಹೇಳಲು ಯತ್ನಿಸಿದರು. ನಿಷ್ಪ್ರಯೋಜನವಾಗಿ ಆತನ ಈ ಒರಟುತನವು ಮಾಸ್ತಿಯವರನ್ನು ಮುಂದೆರಡು ದಿನಗಳಲ್ಲೂ ಕಾಡುತ್ತಿತ್ತು. ಅವರು ಪದೇ ಪದೇ ಆ ವಿಷಯಕ್ಕೆ ತಿರುಗುತ್ತಿದ್ದರು. ನಾನು ಈ ಪ್ರತಿ ಸಂದರ್ಭದಲ್ಲೂ 'ಆತನ ನಿಷ್ಕಾರಣ ಟೀಕೆಗೆ ಉದಾಸೀನವೇ ಸರಿಯಾದ ಉತ್ತರ' ಎಂದರೂ ಅವರಿಗೆ ಸಮಾಧಾನವಾಗಲೇ ಇಲ್ಲ.

ಮೂರನೆಯ ದಿನ ಅಮವಾಸ್ಯೆ. ಮಾಸ್ತಿಯವರೂ ಅಯ್ಯರೂ ತರ್ಪಣ ಕಾರ್ಯಕ್ರಮಕ್ಕೆ ಶಾಸ್ತ್ರಿಗಳೊಡನೆ ಏರ್ಪಾಡು ಮಾಡಿದ್ದರು. ಆ ದಿನ ಬೆಳಿಗ್ಗೆ ಎಂಟು ಗಂಟೆಗೆ ಮುಗಿಸಿಕೊಂಡು ಕಾಫಿಗೆ ಬರುವರೆಂದು ನನಗೆ ಹೇಳಿದ್ದರು. ನಾನು ಎಂಟೂವರೆಯ ವರೆಗೆ ಕಾಯ್ದು ಇವರ ಸುಳಿವನ್ನು ಕಾಣದೆ ನೋಡಿಬರಲು ಮೈಸೂರ ಘಾಟಿನ ಗಂಗಾತೀರಕ್ಕೇ ಹೋದೆ. ಅಲ್ಲಿ ಆ ದಿನ ವಿಶೇಷ ಗಲಾಟೆ. ಇವರನ್ನು ಪತ್ತೆ ಹಚ್ಚಿದಾಗ ಅಯ್ಯರು ಆಗಲೇ ಕೆಲಸ ಮುಗಿಸಿ ಮೇಲೆ ಬಂದು ಬಹಳ ಹೊತ್ತಿನಿಂದ ಕುಳಿತವರಂತೆ ಕಂಡರು. ಆದರೆ ಮಾಸ್ತಿಯವರು ಮಗುಟವನ್ನುಟ್ಟು, ನಾಮವನ್ನು ಹಾಕಿಕೊಂಡು, ಕೈ ಮುಗಿದುಕೊಂಡು ಕೆಳಮೆಟ್ಟಿನ ಮೇಲೆ ಪ್ರದಕ್ಷಿಣೆ ಸುತ್ತುತ್ತಲೇ ಇದ್ದರು. ಶಾಸ್ತ್ರಿಗಳು ನಾನು ಬಂದ ಅರೆನಿಮಿಷದಲ್ಲಿ ಹೊರಟುಹೋದರು. ಮಾಸ್ತಿಯವರು ಮಾತ್ರ ಇನ್ನೂ ಅರ್ಧಗಂಟೆ ಕರ್ಮವನ್ನು ನಡೆಸುತ್ತಲೇ ಇದ್ದರು. ಅವರಿಗೆ ಶಾಸ್ತ್ರಿಗಳು ನಿಮಿತ್ತ ಮಾತ್ರ- ಅಷ್ಟೆ. ಎಲ್ಲವೂ ಮುಗಿದು ಬಟ್ಟೆ ಹಿಂಡಿಕೊಂಡು ಮೇಲೆ ಬಂದ ಮೇಲೆಯೇ ನಾನು ಅವರ ಕಣ್ಣಿಗೆ ಬಿದ್ದುದು. ಕಂಡವರೆ ಕ್ಷಮಾಸೂಚಕವಾಗಿ ''ಏನು, ಬಹಳ ಹೊತ್ತಾಯಿತೋ? ನಡೆಯಿರಿ ಬೇಗ ಹೋಗಿ ಬಿಡೋಣ'' ಎಂಬ ಚುರುಕಾಗಿ ಹೊರಟರು.

ಆ ಸಂಜೆ ಜಂಗಮವಾಡಿಯ ವಿದ್ವತ್ಸಭೆಯ ವಾರ್ಷಿಕೋತ್ಸವ. ಮಾಸ್ತಿಯವರು ಕಾಶಿಯಲ್ಲಿ ಇರುವ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಲು ಏರ್ಪಾಡು 'ಹರಾತುರಿ'ಯಿಂದ ನಡೆದಿದ್ದಿತು. ಅವರೇ ಮುಖ್ಯ ಅತಿಥಿಗಳು. ಮತ್ತೊಂದು ಉಪಯುಕ್ತವಾದ ಚಿಕ್ಕ ಭಾಷಣ ಮಾಡಿದರು. ಮನೆಗೆ ಹೋಗುವಾಗ ''ಆತ ಈ ದಿನ ಬರಲ್ಲಿಲ್ಲವೆ?'' ಎಂದು ಕೇಳಿದರು. ಮತ್ತೆ ಆ ದಿನ ಟೀಕಿಸಿದವನ ಮೇಲೆ ಅವರ ಗಮನವು ಹೋಯಿತು.

ಮರುದಿನ ಬೆಳಿಗ್ಗೆಯ ಹೊತ್ತಿಗೆ ನಮ್ಮ ಮನೆಗೆ ಇನ್ನಷ್ಟು ಅತಿಥಿಗಳು ಬಂದಿದ್ದರು. ಗಂಡ ಹೆಂಡತಿ, ಎರಡು ಮಕ್ಕಳು ಮತ್ತು ಅರವತ್ತು ವರ್ಷದ ತಾಯಿಯೊಬ್ಬರು. ಮಾಸ್ತಿಯವರು ಕಾಫಿಗೆ ಬಂದವರು ಅತಿಥಿಗಳೊಡನೆ ಅದರಲ್ಲಿಯೂ ಅರವತ್ತು ವರ್ಷದ ತಾಯಿಯೊಡನೆ- ಬಹಳ ಸಲಿಗೆಯಿಂದ ಸ್ವಾರಸ್ಯವಾಗಿ ವಿನೋದವಾಗಿ ಹರಟೆಹೊಡೆಯಲು ಮೊದಲುಮಾಡಿದರು. ಅಂದಿನ ಕಾರ್ಯಕ್ರಮದ ಹೊತ್ತನ್ನೂ, ಅಷ್ಟು ಕೆಲಸವನ್ನೂ ಮುಗಿಸಿಕೊಂಡು ಎರಡು ಗಂಟೆಗೆ ರೈಲಿಗೆ ಹೊರಡಬೇಕೆಂಬುದನ್ನೂ ಅವರು ಮರೆತಂತೆ ನನಗೆ ತೋರಿತು. ಒಂದೆರಡು ಬಾರಿ ನಾನು ತೋರಿಸಿದ ಗಡಿಯಾರವೂ ಅವರ ಗಮನಕ್ಕೆ ಬರಲೇ ಇಲ್ಲ. ಇಲ್ಲಿಯವರೆಗಾಗಲೇ ನಮ್ಮ ಅನುಭವಕ್ಕೆ ಬಂದಿದ್ದಂತೆ ಮಾಸ್ತಿಯವರು ಇವರನ್ನೂ ಬಲ್ಲರು. ಇನ್ನೂ ವಿಶೇಷವೆಂದರೆ ಇಬ್ಬರೂ ಕೃಷ್ಣರಾಜಪೇಟೆಯವರೆ. ಮಾತನಾಡುತ್ತ ನೆರೆಹೊರೆಯೆಂದೇ ಸಿದ್ಧಾಂತವಾಯಿತು. ಹಿಂದಿನ ದಿನಗಳನ್ನೆಲ್ಲ ಅಳೆದು ಸುರಿದರು. ಮಾತಿಗೆ ಮಾತು ಬಂದು ಇವರಿಬ್ಬರಿಗೂ ಪರಿಚಿತವಾದ ಮೂರನೆಯ ಸಂಸಾರ - ಒಬ್ಬ ವರದರಾಜಯ್ಯನವರದು- ಚರ್ಚೆಯಾಯಿತು. ಆಗ ಮಾಸ್ತಿಯವರು ''ಅವರಿಗೆ ಮಂಗಳಾ ಅಂತ ಒಬ್ಬಳು ಮಗಳು ಇರುವಳಲ್ಲವೆ ?'' ಎಂದು ಕೇಳಿದರು. ತಾಯಿಯು

''ಮಂಗಳಾ ಮೊನ್ನೆ ಹೋಗಿಬಿಟ್ಟಳು-ಹೆತ್ತು.''ಎಂದರು. ಒಡನೆಯೇ ಮಾಸ್ತಿಯವರು ಚಕಿತರಾಗಿ ''ಏನು, ಆ ಮಗು ಹೋಗಿಬಿಟ್ಟಳೆ? ಅಯ್ಯೋ!'' ಅಂದರು. ಅನಂತರ ನಮ್ಮಗಳನ್ನು ಉದ್ದೇಶಿಸಿ ''ನೋಡಿ, ಒಂದು ಸಲ ವರದರಾಜಯ್ಯನವರು ಈ ಮಗಳನ್ನು ಕರೆದುಕೊಂಡು ನಮ್ಮ ಮನೆಗೆ ಬಂದರು, ಬೆಂಗಳೂರಿಗೆ. ಹುಡುಗಿಯು ಬೆಳೆದಿದ್ದಳು. ಮದುವೆಯಾಗಿರಲಿಲ್ಲ. ಅವರು ಬಂದಿದ್ದ ಉದ್ದೇಶ್ಯ, ಆಗ ತಾನೇ ಹೆಂಡತಿ ಸತ್ತು ಕೊಂಚ ಕಾಲವಾಗಿದ್ದ ಲಕ್ಷ್ಮೀನಾರಾಯಣಪ್ಪನಿಗೆ ನನ್ನಿಂದ ಒಂದು ಮಾತನ್ನು ಹೇಳಿಸಿ ಆ ಹುಡುಗಿಯನ್ನು ಅವನಿಗೆ ಕೊಡಿಸಬೇಕು ಅಂತ. ಮಾತುಕತೆಯಾಯಿತು. ನಾನು ಅವನಿಗೆ ಹೇಳಲು ಒಪ್ಪಿಕೊಂಡೆ. ತಂದೆಯೂ ಮಗಳೂ ಹೊರಹೊರಟರು. ಆಗ ಮಗಳು ತಂದೆಗೆ ಏನೋ ಪಿಸುಮಾತನ್ನು ಹೇಳಿದಳು. ತಂದೆ ಮೆಲು ನುಡಿಯಲ್ಲಿ 'ಸಾಕು ಸುಮ್ಮನಿರು'ಅಂದಂತೆ ನನಗೆ ಕೇಳಿಸಿತು. ನನಗೆ ಹುಡುಗಿಯು ಎರಡನೆಯ ವರಕ್ಕೆ ಏನಾದರೂ ಒಪ್ಪುವುದಿಲ್ಲವೋ ಏನೋ. ನಾನು ಏನು ಮಾಡುತ್ತಿದ್ದೇನೆ ಅನ್ನಿಸಿತು. ನಾನು ವರದರಾಜಯ್ಯನವರನ್ನು 'ಅದು ಏನು? ಎಂದು ಕೇಳಿದೆ. ಅವರು ಹೇಳಲು ಅನುಮಾನಿಸಿದರು. 'ಏನೂ ಇಲ್ಲ.'ಅಂದರು. ಹುಡುಗಿಯನ್ನು ಸಂಬೋಧಿಸಿ 'ಏನಮ್ಮ ಅದು?' ಎಂದು ಕೇಳಿದೆ. ಅವಳು ನಾಚಿಕೊಂಡು ಕತ್ತೆತ್ತಿ ನಮ್ಮ ಸಂಪಿಗೆಯ ಮರದ ಕಡೆಗೆ ನೋಡಿ 'ಒಂದು ಸಂಪಿಗೆಯ ಹೂ ಕೇಳಿದೆ' ಎಂದಳು. ಆ ಹೆಣ್ಣುಮಗಳಿಗೆ ಹೂವೆಂದರೆ ಎಷ್ಟು ಆಸೆ ನೋಡಿ. ನಾನು 'ಅಷ್ಟೇನೆ? ಇದಕ್ಕೇಕೆ ಸಂಕೋಚ?'' ಎಂದು ನಾಲ್ಕು ಹೂವನ್ನು ನಾನೇ ಕುಯ್ದುಕೊಟ್ಟೆ. ಆ ಮಂಗಳೆಯು ಹೋಗಿಬಿಟ್ಟಳೆ? ಅವಳ ಎದೆಯಲ್ಲಿ ಇನ್ನೆಷ್ಟು ಆಸೆಗಳು ತುಂಬಿದ್ದವೋ ಏನು ಪಾಪ! ಹೋಗಿಬಿಟ್ಟಳಲ್ಲ!''ಎಂದು ಒಂದೇ ಸಮನೆ ಮರುಗಿದರು. ಅನಂತರ ಇನ್ನಷ್ಟು ಮಾತುಕತೆಗಳಾದವು. ಈ ಕನ್ನಡಿಗರಿಂದ ಪರಿಷತ್ತಿಗೆ ಸದಸ್ಯತ್ವದ ಕಾಣಿಕೆಯೂ ವಸೂಲಾಯಿತು. ನಾವು ವಿಶ್ವವಿದ್ಯಾಲಯಕ್ಕೆ ಮಾಳವೀಜಿಯವರನ್ನು ನೋಡಲು ಹೊರಟೆವು. ದಾರಿಯಲ್ಲಿ ಮಾಸ್ತಿಯವರು ಮತ್ತೆ ನೆನಸಿಕೊಂಡು ''ಮಂಗಳಾ ಹೋಗಿಬಿಟ್ಟಳಂತಲ್ಲ! ಅವಳು ಹೂ ಕೇಳಿದುದು ಈ ದಿನ ಅನ್ನುವ ಹಾಗಿದೆ. ಈಗ ಮರವೋ ಹೂ ಜಗಿದು ನಿಂತಿದೆ. ಆದರೆ ಮುಡಿಯಲು ಅವಳೇ ಇಲ್ಲ. ಛೇ!''ಎಂದು ಇನ್ನೂ ವ್ಯಸನಪಟ್ಟರು.

ಮಾಳವೀಯರ ವಿಷಯವಾಗಿ ಮಾತನಾಡುತ್ತ ಮಾಸ್ತಿಯವರು ''ಈತ ಈಗಿನ ಕಾಲದ ಮಹರ್ಷಿಗಳಲ್ಲಿ ಒಬ್ಬ''ಎಂದರು. ನಮ್ಮ ಪೈಕಿ ಒಬ್ಬರು ''ನೋಡಲು ಹೋದವರನ್ನೆಲ್ಲ ಮಾಳವೀಯವರು 'ವಿಶ್ವವಿದ್ಯಾಲಯವನ್ನು ನೋಡಿದಿರಾ? ಅದಕ್ಕೆ ನೀವು ಏನನ್ನು ಕೊಡುತ್ತೀರಿ?' ಎಂದು ಕೇಳುತ್ತಾರೆ.'' ಎಂದರು. ಮಾಸ್ತಿಯವರು ''ನಾನೇ ಭಿಕ್ಷುಕ. ಇಲ್ಲಿಗೆ ಬಂದಿರುವುದೂ ಭಿಕ್ಷಾಟನೆಗೆ ಎನ್ನುತ್ತೇನೆ'' ಅಂದರು. ಮಾಳವೀಯರ ಕೋಣೆಯೊಳಗೆ ಹೋದಾಗ ಆ ವೃದ್ಧರು ಚೈತನ್ಯ ಸಾಲದೆ ಮಲಗಿಯೇ ಇದ್ದರು. ಮೈತುಂಬ ಹೊದಿಕೆ. ಮುಖ ಮಾತ್ರ ಕಾಣುತ್ತಿದ್ದಿತು. ನಾನು ಪರಿಚಯದ ಎರಡು ಮಾತನ್ನು ಹೇಳಿದೆ. ಮಾಳವೀಯರು ಮಾಸ್ತಿಯವರನ್ನು ನೋಡಿ ''ನೀವು ಬಂದುದು ಬಹಳ ಸಂತೋಷ''ಎಂದರು. ಮಾಸ್ತಿಯವರು ''ತಮ್ಮನ್ನು ಕಂಡು ಆಶೀರ್ವಾದ ಪಡೆಯಲು ಬಂದೆ'' ಎಂದರು. ಮಾಳವೀಯರು ''ನಿಮ್ಮ ಮೇಲೆ ದೇವರು ಅನುಗ್ರಹಿಸಲಿ!''ಅಂದರು. ಮಾಸ್ತಿಯವರು ಮಲಗಿದ ವ್ಯಕ್ತಿಯ ಕಾಲಿನ ಕಡೆಗೆ ಸರಿದು, ತಮ್ಮ ತಲೆಯ ಟೋಪಿಯನ್ನು

ತೆಗೆದು, ಮಾಳವೀಯರ ಪಾದಗಳಿಗೆ ಒತ್ತಿದರು. ಅನಂತರ ಹಿಂದೆಯೇ ಸೂಚಿತವಾಗಿದ್ದ ಪ್ರಶ್ನೆಗಳು ಹೊರಬಂದುವು. ಮಾಸ್ತಿಯವರು ಉತ್ತರವಾಗಿ ''ಊರಿನಿಂದ ನನ್ನ ಕೈಲಾದುದನ್ನು ಕಳುಹಿಸುತ್ತೇನೆ''ಎಂದರು; ''ತಾನೂ ಭಿಕ್ಷುಕ''ಎಂದಲ್ಲ.

ಹೊರಬಂದಾಗ ''ಇಂತಹವರ ಆಶೀರ್ವಾದ ನಮಗೆ ಬಹಳ ಮುಖ್ಯವಾಗಿ ಬೇಕು''ಅಂದರು. ಮುಂದೆ ಹೋಗುತ್ತ ಒಬ್ಬರು ದಾರಿಯಲ್ಲಿನ ಹಾಸ್ಟಲುಗಳ ಗಾತ್ರಕ್ಕೆ ಮಾಸ್ತಿಯವರ ಗಮನವನ್ನು ಎಳೆದರು. ಮಾಸ್ತಿಯವರಾದರೋ ''ಇವೇನೋ ದೊಡ್ಡವೆ. ಆದರೆ ನಾನು ಇವು ಸಣ್ಣವು ಎನ್ನುತ್ತೇನೆ. ನಮ್ಮದು ದೊಡ್ಡದೇಶ. ಘನತೆಯ ದೇಶ. ಅದಕ್ಕೆ ಇನ್ನೂ ದೊಡ್ಡ ಕಟ್ಟಡಗಳು ಇನ್ನೂ ದೊಡ್ಡ ಕೆಲಸಗಳು ಸರಿಹೋಗುತ್ತವೆ''ಎಂದು ಹೆಮ್ಮೆಯಿಂದ ಹೇಳಿದರು.

ನಾವು ಡಾ.ಬಾದಾಮಿಯವರ ಮನೆಗೆ ಹೋದೆವು. ಹಳೆಯ ಸ್ನೇಹಿತರ ಭೇಟಿಯಾಯಿತು. ಆ ದಿನ ಬಲಿಪಾಡ್ಯಮಿಯಾಗಿ ಮಾಸ್ತಿಯವರಿಗೆ ಅಲ್ಲೇ ಒತ್ತಾಯದ ಊತಣ ದೊರಕಿತು. ಬಾದಾಮಿಯರು ಮಧ್ಯಾಹ್ನದ ರೈಲಿಗಿಂತಲೂ ರಾತ್ರಿಯದೇ ಉತ್ತಮವೆಂದರು. ಅವರ ಸೂಚನೆಯಂತೆ ಮಾಸ್ತಿಯವರು ಪ್ರಯಾಣವನ್ನು ಮುಂದೆ ಹಾಕಿದರು.

ಮೈಸೂರು ಛತ್ರದಿಂದ ರೈಲ್ವೆ ನಿಲ್ದಾಣಕ್ಕೆ ಹೊರಡುವಾಗ ಮಾಸ್ತಿಯವರು ಎಲ್ಲರನ್ನೂ ಬೀಳ್ಕೊಂಡರು. ಅತ್ತಿತ್ತ ನೋಡಿ ಜಂಗಮವಾಡಿಯ ಮಠದ ಸ್ವಾಮಿಗಳು ಕೊಟ್ಟಿದ್ದ ಹೂವಿನ ಹಾರವನ್ನು ತೆಗೆದು ನನ್ನ ಕೈಲಿಟ್ಟು ''ಇದು ಬಾಡುವವರೆಗೆ ನಿಮ್ಮ ಮನೆಯಲ್ಲಿ ಇಳಿಹಾಕಿರಿ''ಎಂದರು. ನಾನು ''ಅದು ಹೇಗೆ ಬಾಡೀತು?''ಅಂದೆ.

ರೈಲಿನಲ್ಲಿ ಬಹಳ ಗಲಾಟೆ. ಎರಡನೆಯ ತರಗತಿಯಲ್ಲಿಯೂ ಕೂಡ ಮಾಸ್ತಿಯವರಿಗೆ ಸ್ಥಳ ಸಿಕ್ಕುವುದು ಪ್ರಯಾಸವಾಯಿತು. ಅವರು ಕುಳಿತುಕೊಂಡ ಮೇಲೆ ''ನೋಡಿ ಇಲ್ಲೇ ಹೀಗೆ. ಮೂರನೆಯ ತರಗತಿಯಲ್ಲಿ ಏನು ಗತಿಯೋ! ಈಗಲಾದರೂ ಇದರಲ್ಲಿ ಹೋಗುತ್ತಿದ್ದೇನೆ. ಹಿಂದೆ ದೇವರು ಕೊಟ್ಟಿದ್ದಾಗ ಮೊಂಡತನದಿಂದ ಇಲ್ಲೆಲ್ಲ ಮೂರನೆಯದರಲ್ಲೇ ಓಡಾಡಿದೆ. ಆದರೆ ನನಗಾಗಿ ನನಗೆ ವ್ಯಸನವಿಲ್ಲ. ಪಾಪ, ಆ ನನ್ನ ಬಡ ಹೆಂಗಸನ್ನು ಬಹಳ ಪ್ರಯಾಸಪಡಿಸಿದೆ. ಈಗ ನೆನಸಿಕೊಂಡರೆ ಮನಸ್ಸು ಕನಿಕರಪಡುತ್ತದೆ'' ಎಂದು ಮರುಗಿದರು. ಅನಂತರ ''ನೀವೆಲ್ಲರೂ ಕಷ್ಟ ಪಟ್ಟಿರಿ. ನಿಮಗೆಲ್ಲ ನನ್ನ ಧನ್ಯವಾದಗಳು. ನಮಸ್ಕಾರ'' ಅಂದರು. ನಾನು ''ಒಂದು ವೇಳೆ ಕಷ್ಟಪಟ್ಟಿದ್ದೇ ನಿಜವಾದರೂ, ಪಡಬಾರದೇಕೆ? ಅದನ್ನು ನಮ್ಮಿಂದ ಕೇಳಲು ನಿಮಗೆ ಅರ್ಹತೆಯಿಲ್ಲವೇ? ಅದು ಸಾರ್ಥಕವಲ್ಲವೆ?'' ಎಂದೆ. ಅತಿಥಿಗಳೂ ನಾವೂ 'ನಮಸ್ಕಾರ, ನಮಸ್ಕಾರ' ಎನ್ನುವಾಗ ರೈಲು ಹೊರಟಿತು.

ಮನೆಗೆ ಹಿಂದಿರುಗುವಾಗ ಜತೆಯಲ್ಲಿದ್ದ ಶಾಸ್ತ್ರಿಗಳು ''ಇವರು ನಿಮಗೆ ಅಂದೇ ತುಂಬ ಪರಿಚಯವಾಗಿದ್ದರೆ?'' ಎಂದು ಕೇಳಿದರು. ನಾನು ''ಅವರ ವಿಷಯ ಕೇಳಿದ್ದೆ. ಆದರೆ ವ್ಯಕ್ತಿಯ ಪರಿಚಯವು ಈಗಲೇ ಅಷ್ಟು ಆದದ್ದು'' ಅಂದೆ.

ಮಾಸ್ತಿ ವೆಂಕಟೇಶಯ್ಯಂಗಾರ್ಯರು

ಕಂದಾಡೆ ಶಾಮಣ್ಣ

ಯಾವ ವ್ಯಕ್ತಿಯ ಜೀವನ ಪ್ರಕಾಶವು ಹೇಗೆ ರೂಪುಗೊಳ್ಳುವುದೆಂಬುದನ್ನು ಆತನ ಬಾಲ್ಯದಲ್ಲಿ ಅರಿಯಲಾದೀತು, ಯೌವನಾವಸ್ಥೆಯಲ್ಲಂತೂ ನಾವರಿಯಲೇಬೇಕು. ವೆಂಕಟೇಶಯ್ಯಂಗಾರ್ಯರು ಸಾಮಾನ್ಯ ವರ್ಗದ ಕುಟುಂಬದಲ್ಲಿ ಹುಟ್ಟಿದರು, ಬಡತನದಲ್ಲಿಯೇ ಬೆಳೆದರು. ಯಾವ ತರಗತಿಯಲ್ಲಿಯೂ ಸಹಪಾಠಿಗಳಲ್ಲಿ ತಾವೇ ಮೊದಲು, ಮೊದಲು ಮೈಸೂರು; ಬಿ.ಎ. ತರಗತಿಗೆ ಬಂದನಂತರ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಇವರ ವ್ಯಾಸಂಗ, ೧೯೧೦ ರಿಂದ ೧೯೧೨ನೇ ಇಸವಿಗಳಲ್ಲಿ. ಆ ಕಾಲದಲ್ಲಿ ಇವರ ಬುದ್ಧಿಶಕ್ತಿಯಲ್ಲದೆ, ನಯವಿನಯ ಸೌಜನ್ಯಾದಿ ಗುಣಗಳು ಅನೇಕ ಸಹಪಾಠಿಗಳನ್ನಾಕರ್ಷಿಸಿದ್ದವು. ಇವರ ಗಾಢವಾದ ಸ್ನೇಹವು ಏಳೆಂಟು ಮಂದಿಗೆ ಲಭ್ಯವಾಯಿತು. ಅವರಲ್ಲೊಬ್ಬನಾದ ನನಗೆ ''ಆ ಕಾಲವು ಕಳೆದುಹೋಯಿತಲ್ಲ, ಮತ್ತೆ ಬರಲಾರದೆ?'' ಎಂಬ ಹಂಬಲವುಂಟಾಗುವುದರಲ್ಲಿ ಹೆಚ್ಚೇನು?

ತರಗತಿಯ ಪಾಠಕ್ರಮವು ಮುಗಿದ ನಂತರವೂ, ಒಂದೊಂದು ಸಲ ಪಾಠಗಳ ಮಧ್ಯದಲ್ಲೂ, ಚತುರೋಕ್ತಿ, ಲಘುಹಾಸ್ಯ, ಟೀಕೆಗಳಿಂದ ಕೂಡಿದ ಸಂಭಾಷಣೆಗಳು ಪ್ರತಿನಿತ್ಯವೂ ನಡೆಯುತ್ತಲೇ ಇದ್ದವು. ರಜಾದಿನಗಳಲ್ಲಿ ನಾವು ೮, ೧೦ ಮಂದಿ ಒಂದೆಡೆ ಸೇರದೆ ಇದ್ದ ದಿನವೇ ಇಲ್ಲ. ಸೆಂಟ್ರಲ್ ಕಾಲೇಜಿನ ಆವರಣದ ದಕ್ಷಿಣಭಾಗದಲ್ಲಿ ಎಂಟೇ ಚದರಡಿ ವಿಸ್ತೀರ್ಣದ ಹದಿನಾರು ಕೊಠಡಿಗಳನ್ನುಳ್ಳ Tiffin rooms ಎಂಬ ಕಟ್ಟಡವೊಂದಿತ್ತು. ನಿಶ್ಯಬ್ದವಾದ ಸ್ಥಳದಲ್ಲಿ ವ್ಯಾಸಂಗ ಮಾಡಬಹುದೆಂದು ನಂಬಿ ಕೊಠಡಿಯೊಂದನ್ನು ನಾನು ಅಧಿಕಾರಿಗಳ ಅನುಮತಿಯಿಂದ ನನ್ನ ವಶದಲ್ಲಿಟ್ಟುಕೊಂಡಿದ್ದೆ. ಅದರಲ್ಲಿ ಆರಂಭವಾದುವು ನಮ್ಮ ಸಂಭಾಷಣೆಗಳು, ಸುಭಾಷಿತಗಳು, ಚರ್ಚೆಗಳು. ಆಗಾಗ ಕೊಂಚ ಸಂಗೀತದ ಮಾದರಿಗಳು. ಕ್ರಮವಾಗಿ ಇದೇ ಒಂದು ಚರ್ಚಾಕೂಟ (Debating Society) ಎನಿಸಿ, ಪ್ರಿನ್ಸಿಪಾಲ್ ಟೀಟ್ ಸಾಹೇಬರ ಗಮನವನ್ನಾಕರ್ಷಿಸಿತು. ಕೆಲವು ದಿನಗಳಲ್ಲಿ ಅವರು Central College Debating Society ಎಂಬ ಸಂಘವನ್ನು ಸ್ಥಾಪಿಸುವಂತೆ ನಮ್ಮನ್ನು ಪ್ರೋತ್ಸಾಹಿಸಿ, ತಾವೇ ಅಧ್ಯಕ್ಷರಾಗಿರಲು ಸಮ್ಮತಿಸಿ, ಪ್ರೊಫೆಸರ್ ಮೆಟ್‌ಕಾಫರನ್ನು ಉಪಾಧ್ಯಕ್ಷರಾಗಿರಲು ಪ್ರೇರಿಸಿದರು. ಅನಂತರ ಪ್ರತಿವಾರವೂ ನಮ್ಮ ಚರ್ಚೆಗಳು ಮೇಲ್ಮಟ್ಟದ ರೀತಿಯಿಂದ ನಡೆಯುತ್ತಿದ್ದವು. ಮಾಸ್ತಿಯವರೇ ಕಾರ್ಯದರ್ಶಿಗಳು. ಒಂದು ವರ್ಷಕಾಲ ಈ ಸಂಘವು ನಡೆದನಂತರ ಮೇಲೆ ಹೇಳಿದ ಉಪಾಧ್ಯಕ್ಷರು ಯಾವುದೋ ಕ್ರಮಲೋಪವುಂಟಾಯಿತೆಂದು ಹೇಳಿ ತಾವು ರಾಜಿನಾಮೆಯನ್ನಿತ್ತರು. ಕಾರ್ಯದರ್ಶಿಗಳಿಂದಲೇ ಲೋಪವೂ, ತಮ್ಮ ವಿಷಯದಲ್ಲಿ

ಅಲಕ್ಷ್ಯವೂ, ಉಂಟಾಯಿತೆಂದರು. ಮಾಸ್ತಿಯವರಿಗಾಗ ಕೇವಲ ಇಪ್ಪತ್ತು ವರ್ಷ. ಆದರೂ ದುಡುಕದೆ, ವಾಗ್ವಾದಗಳಿಗವಕಾಶವನ್ನೀಯದೆ, ಗಂಭೀರಗೌರವ ಪತ್ರ ವ್ಯವಹಾರದಲ್ಲೇ ಈ ಪ್ರಸಂಗವನ್ನು ನಡೆಸಿದರು. ತಮ್ಮ ನಿಲುವನ್ನು ಸಡಲಿಸಲಿಲ್ಲ; ತಮ್ಮ ವಾದವನ್ನೇ ಸ್ಥಾಪಿಸಿದರು. ಪ್ರೊ. ಮೆಟ್‌ಕಾಫರ ಗೌರವವನ್ನೂ ಕಡಮೆಮಾಡದೆ ಪ್ರಸಂಗವನ್ನು ಮುಕ್ತಾಯಗೊಳಿಸಿದರು.

ನಾನಾ ವಿಷಯಗಳನ್ನು ಕುರಿತು ಚರ್ಚೆಗಳ ಅನಂತರವೂ, ಮಧ್ಯದಲ್ಲಿಯೂ, ಹರಟೆಯೂ ನಡೆಯುತ್ತಿತ್ತು, ವಯೋನುಗುಣವಾಗಿ. ಸಾಯಂಕಾಲ ವ್ಯಾಯಾಮಾನಂತರ ಕೊಂಚ ಅಲೆದಾಟ, ಜಿಲೇಬಿ ಮುಂತಾದ ತಿಂಡಿಗಳ ರುಚಿಯೂಟ. ಬೆಂಗಳೂರು ಆಗಲೂ ದೊಡ್ಡದು. ನಮ್ಮ ನಮ್ಮ ಬಿಡಾರಗಳು ದೂರ ದೂರದಲ್ಲಿದ್ದುವೆಂಬುದು ನಮ್ಮ ವ್ಯಾಕುಲಕ್ಕೆ ಕಾರಣ. ಸಂಭಾಷಣೆಗಳಲ್ಲಿ ತಾವು ನೋಡಿದ ಕುಟುಂಬಗಳ ವೈಶಿಷ್ಟ್ಯ, ಹಿರಿಯರ, ಕಿರಿಯರ ಸ್ವಭಾವಗಳು, ಅವರ ಮಾತುಗಳ ಸರಣಿ, ಇವುಗಳನ್ನೆಲ್ಲಾ ಇವರು ವರ್ಣಿಸುತ್ತಿದ್ದ ರೀತಿಯನ್ನು ಕಂಡವರಿಗೆ ಇವರು ಮುಂದಿನ ಕಾಲದಲ್ಲಿ ಉತ್ತಮ ಕತೆಗಾರರೂ, ಬಹುಮುಖ ಸಾಹಿತಿಗಳೂ ಆದಾರೆಂದು ತೋರಬಾರದೇ? ನಮ್ಮ ಮಂದಬುದ್ಧಿಗೆ ಅದೇನೂ ತೋರಲಿಲ್ಲ. ಈತ ತನ್ನ ಸ್ವಭಾವಿಕವಾಗಿ ಪ್ರೀತ್ಯಾದರಗಳಿಂದ ಜನರನ್ನು ಆಕರ್ಷಿಸುವನೆಂದು ಮಾತ್ರವೇ ತೋರಿತು.

ಆಗ ಇಲ್ಲಿನ ಕಾಲೇಜುಗಳೆಲ್ಲ ಮದರಾಸಿನ ವಿಶ್ವವಿದ್ಯಾಲಯಕ್ಕೆ ಒಳಪಟ್ಟವು. ಬಿ.ಎ. ಪರೀಕ್ಷೆಯಲ್ಲಿ ಈತನು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಸಹ ಪ್ರಥಮ ಸ್ಥಾನವನ್ನು ಪಡೆದ. ಕೊಂಚಕಾಲವೇ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಭಾಷೆಯ ಪ್ರಾಧ್ಯಾಪಕನಾಗಿದ್ದು, ಬಳಿಕ ಆಂಗ್ಲ ಸಾಹಿತ್ಯದಲ್ಲಿ ಎಂ.ಎ. ಪರೀಕ್ಷೆಯಲ್ಲೂ ಯಶಸ್ವಿಯಾಗಿ ಉತ್ತೀರ್ಣನಾದ. ಅನಂತರ ಸಿವಿಲ್ ಸರ್ವಿಸ್ ಪರೀಕ್ಷೆ, ಒಡನೆಯೇ ಸರಕಾರದ ಉದ್ಯೋಗ, ಎಲ್ಲವೂ ತಿಳಿದೇ ಇದೆ.

ಪ್ರಚಂಡ ಜ್ಞಾನವನ್ನು, ಪ್ರಾಪಂಚಿಕ, ವಿಶೇಷವಾಗಿ ಸಾಮಾಜಿಕ ವಿಷಯಗಳಲ್ಲಿ ಉತ್ತಮ ರೀತಿಯ ಅನುಭವವನ್ನು ಪಡೆದವರು ಇವುಗಳನ್ನು ಜನಸಾಮಾನ್ಯಕ್ಕೆ ಹೇಗೆ ಧಾರೆಯೆರೆಯುವರು? ಎಂಬುದನ್ನು ಕೆಲವರು ತಮ್ಮೊಳಗೆ ಪ್ರಶ್ನಿಸುತ್ತಿದ್ದಾಗಲೆ 'ಶ್ರೀನಿವಾಸರ ಸಣ್ಣ ಕತೆಗಳು' ಪ್ರಕಟವಾದುವು. ಆಂಗ್ಲ ಭಾಷೆಯಲ್ಲಿ ಅಷ್ಟು ಪಾಂಡಿತ್ಯವನ್ನು ಪಡೆದವರು ಸರಳ ಕನ್ನಡದಲ್ಲಿ ತಮ್ಮ ಕೃತಿಗಳೆಲ್ಲವನ್ನು ರಚಿಸುತ್ತಿರುವರೆಂಬುದನ್ನು ಕಂಡು ಸಂತೋಷಗೊಂಡ ಪ್ರಬುದ್ಧರೂ ಸಾಮಾನ್ಯರೂ ''ಇದೇನು ಭಾಷಾ ಪ್ರೇಮವೋ, ದೇಶಪ್ರೇಮವೋ, ಜನಸಮುದಾಯಕ್ಕೆ ತಮ್ಮಲ್ಲಿರುವುದನ್ನೆಲ್ಲ ಧಾರೆಯೆರೆಯುವ ಔದಾರ್ಯವೋ?'' ಎಂದು ಅಚ್ಚರಿಗೊಳ್ಳುವಂತಿದೆ.

ಮಾಸ್ತಿಯವರು ಸಂಗೀತ ಮತ್ತು ನಾಟಕಪ್ರೇಮಿಗಳು. ಚೌಡಯ್ಯನವರ ಪಿಟೀಲುವಾದನದ ಕಚೇರಿಯನ್ನು ಇತರ ಕೆಲವು ವಿದ್ವಾಂಸರ ಕಚೇರಿಗಳನ್ನೂ ತಮ್ಮ ಮನೆಯಲ್ಲಿಯೇ ಮಾಡಿಸಿದರು. ಅಲ್ಲಿಯೇ ನಡೆಸಿದ ಸಾಹಿತ್ಯಗೋಷ್ಠಿಗಳು ಅನೇಕ. ತಾವು ಬರೆದ ಒಂದೆರಡು ನಾಟಕಗಳ ಪ್ರಯೋಗವನ್ನು ತಮ್ಮ ಖರ್ಚಿನಿಂದಲೇ ನಡೆಸಿ ರಂಗಸ್ಥಳದ ಏರ್ಪಾಡನ್ನು ಮಾಡಿದರು. ಹಲವಾರು ವರ್ಷಗಳ ಕಾಲ ಬೆಂಗಳೂರು ನಗರದಲ್ಲಿನ 'ಅಮೆಚ್ಯುರ್ ನಾಟಕ ಮಂಡಲಿ'ಯ ಅಧ್ಯಕ್ಷರಾಗಿ ಅದರ ಕಾರ್ಯ ಕ್ರಮಗಳನ್ನು

ಅತಿಶಯವಾದ ಶ್ರದ್ಧಾಶಕ್ತಿಗಳಿಂದ ಮಂಡಲಿಯನ್ನು ನಡೆಸಿದರು. ಅದರ ಸದಸ್ಯರಲ್ಲಿಯೂ ನಟವೃಂದದಲ್ಲಿಯೂ ನಾನೂ ಒಬ್ಬ ಮುಖ್ಯನಾಗಿದ್ದು, ಒಂದೊಂದು ವೇಳೆ ಚರ್ಚೆಯ ಸಮಯದಲ್ಲಿ, ನಾವು ಪ್ರಯೋಗಿಸುತ್ತಿರುವ ಮಾಸ್ತಿಯವರ ನಾಟಕಗಳಲ್ಲಿನ ಭಾಷೆಯನ್ನು ಕುರಿತು ಕೊಂಚ ಕಟುವಾಗಿಯೇ ಟೀಕೆಮಾಡಿದೆ. 'ಇವರಿಗೆ ಶೃಂಗಾರರಸ ಅರ್ಥವಾಗಿರುವುದೇ?' ಎಂದು ಪ್ರಶ್ನಿಸಿದೆ. 'ಇವರ ಲಲಿತವಾದ ಭಾಷೆಯಿಂದ ವೀರರಸದ ಪೋಷಣೆಯಾದೀತೇ?' ಎಂದೆ! ಕೆಲವು ದಿನಾನಂತರ ಮಾಸ್ತಿಯವರನ್ನು ಸಂಧಿಸಿದಾಗ 'ನನ್ನ ಕಟುವಾದ ಟೀಕೆಯಿಂದ ನಿಮಗೆಷ್ಟು ಬೇಸರವಾಯಿತೋ?' ಎಂದು ನಾನು ಅನ್ನಲು, ಅವರು ನಕ್ಕು 'ಇಂಥಾ ಟೀಕೆಗಳೇ ನನಗೆ ಶಕ್ತಿಯನ್ನೀಯಾವುದಯ್ಯಾ! ಕಠಿಣ ಟೀಕೆಯಿಲ್ಲದಿದ್ದರೆ ನನ್ನ ಬರವಣಿಗೆಯು ಹೇಗೆ ಅಭಿವೃದ್ಧಿಯಾಗಬೇಕು? ಇಂಥಾದ್ದನ್ನೆಲ್ಲ ಸಹಿಸುವ ಶಕ್ತಿ ನನಗಿರುವುದರಿಂದಲೇ ನಾನು ಹೀಗೆ ಬಾಳುತ್ತಿದ್ದೇನೆ' ಎಂದರು. ಕಟುವಾಗಿ ಟೀಕಿಸಿದವರ ಮೇಲೆ ಔದಾರ್ಯವನ್ನೇ ತೋರುವುದು ದೊಡ್ಡಗುಣವಲ್ಲವೇ?

ಮಾಸ್ತಿಯವರ ಕೃತಿಗಳ ವಿಷಯಕವಾದ ವಿಮರ್ಶೆಗಳನ್ನು ಉತ್ತಮ ಸಾಹಿತಿಗಳಿಗೆ ಬಿಡೋಣ. ಈ ಲೇಖನವು ವ್ಯಕ್ತಿ ಪರಿಚಯಕ್ಕೆ ಮಾತ್ರ ಮೀಸಲು. ನಾವು ಬಿ.ಎ. ತರಗತಿಯಲ್ಲಿದ್ದಾಗಲೇ ನಮ್ಮ ಪರಮ ಮಿತ್ರನಾದ ಆನೂರು ಶ್ರೀನಿವಾಸಾ ಚಾರ್ಯನೆಂಬಾತ ಪ್ಲೇಗ್‌ಗೆ ತುತ್ತಾಗಿ ತೀರಿಕೊಂಡ. ಮೂರು ನಾಲ್ಕು ದಿನವೂ ನಾವು ನಾಲ್ಕುಮಂದಿ (ಮಾಸ್ತಿಯವರಲ್ಲದೆ P.H. ಕೃಷ್ಣರಾಯರೂ ಇದ್ದರು) ಹೋಗಿ ರೋಗಿ ಮಿತ್ರನನ್ನು ನೋಡಿಕೊಂಡು ಬರುತ್ತಿದ್ದೆವು. ಅವನ ಮರಣಾನಂತರ ಕೊಂಚಕಾಲ ದುಃಖಪಟ್ಟೆವು. ಆ ಕುಟುಂಬದವರಿಗೆ ''ವಾಹಕರಿಲ್ಲವೆಂದು ನೀವು ಚಿಂತಿಸಲಾಗದು. ಗತಿಸಿದಾತನ ಮಿತ್ರರು ನಾವು ನಾಲ್ವರಿದ್ದೇವೆ'' ಎಂದು ಮಾಸ್ತಿಯವರೇ ನುಡಿದರೆಂದು ನನ್ನ ನೆನಪು. ಕೊಂಚ ಹೊತ್ತಿನಲ್ಲಿಯೇ ಇದಕ್ಕಾಗಿ ನಿಯೋಜಿಸಲ್ಪಟ್ಟ ವಾಹಕರು ಬಂದರು.

ನಮ್ಮ ಮಿತ್ರಮಂಡಲಿಯಲ್ಲಿ ಮತ್ತೊಬ್ಬನು ಬೊಂಬಾಯಿಯಲ್ಲಿ L.L.B ಗಾಗಿ ವ್ಯಾಸಂಗ ಮಾಡುತ್ತಿರಲು (ಟಿ. ವೆಂಕಟರಂಗನ್) ಅವರ ಖರ್ಚುವೆಚ್ಚಗಳು ಸುಸೂತ್ರವಾಗಿ ನಡೆಯಲು ಆತನಿಗೆ ಮಾಸ್ತಿಯವರು ತಿಂಗಳಿಗೆ ಮೂವತ್ತು ರೂ.ಗಳಿಗೆ ಕಡಿಮೆಯಿಲ್ಲದಂತೆ ಕಳುಹಿಸಿಕೊಡುತ್ತಿದ್ದರು. ಆ ವರ್ಷಗಳಲ್ಲಿ (೧೯೧೩-೧೪) ಮಾಸ್ತಿಯವರ ಉದ್ಯೋಗಕ್ಕೆ ಆರಂಭ.

ಎಂಭತ್ತುವರ್ಷ ತುಂಬಿರುವ ಕಾಲದಲ್ಲಿ, ದೇಹಾರೋಗ್ಯವನ್ನೂ ಬುದ್ಧಿಶಕ್ತಿಯನ್ನೂ ಕುಂದಿಲ್ಲದ ಕಾಪಾಡಿಕೊಂಡು, ತಮ್ಮ ಆರುಮಂದಿ ಹೆಣ್ಣುಮಕ್ಕಳನ್ನು, ಅವರ ಮಕ್ಕಳನ್ನು ಅವರ ಮಕ್ಕಳನ್ನೂ ಲಾಲನೆ ಪಾಲನೆ ಮಾಡುತ್ತಾ, ಸರ್ವರೊಡನೆ ಸಂಭಾಷಣೆಯನ್ನು ಒಂದು ಲಲಿತಕಲೆಯನ್ನಾಗಿ ಮಾಡಿಕೊಂಡಿರುವ ಮಾಸ್ತಿಯವರಿಗೆ ಸಾಹಿತ್ಯ ಅವರ ಜೀವನದ ಉಸಿರು, ಇಸ್ಪೇಟ್ ಆಟ ಒಂದು ಹವ್ಯಾಸ.

ಮುತ್ತಣ್ಣಾಗೆ ಮುತ್ತು

ವಿಜಯವಲ್ಲಿ

''ಮುತ್ತಣ್ಣ'' ಈ ಮುದ್ದಾದ ಹೆಸರನ್ನು ನಮ್ಮ ತಂದೆಯವರಿಗೆ ನಾಮಕರಣ ಮಾಡಿದವಳು-ನಮ್ಮಕ್ಕ, ಇಂದಿರ. ಅವಳೇ ನಮಗೆಲ್ಲ ಹಿರಿಯಳು; ನಾವಾರುಜನ ಅಕ್ಕ-ತಂಗಿಯರು.

ಈಗ ಹಾಗೇ ನೆನೆಸಿಕೊಂಡರೆ ನಮ್ಮ ಮನೆ, ನಮ್ಮ ಚಿಕ್ಕಂದಿನಲ್ಲಿ ಹೇಗೆ ಜನರಿಂದ ತುಂಬಿತುಳುಕುತ್ತಿತ್ತು! ಅಷ್ಟು ಮಂದಿಯನ್ನೂ, ಜೊತೆಗೆ ಆಗಾಗ್ಗೆ ಬೆಂಗಳೂರಿಗೆ ಬರುವ, ನಮ್ಮಲ್ಲೇ ನಾಲ್ಕಾರು ದಿನ ತಂಗುವ, ಇನ್ನಷ್ಟು ಮಂದಿಯನ್ನು ನಮ್ಮ ಮನೆ ಹೇಗೆ ಸುಧಾರಿಸಿತು? ಎಂದು ಆಶ್ಚರ್ಯವಾಗುತ್ತದೆ. ಆಗ ನಮ್ಮಜ್ಜಿ ಮನೆಯ ಯಜಮಾನಿ. ನಮ್ಮ ತಾಯಿಯವರಿಗೆ ಎಲ್ಲವನ್ನು ಕಲಿಸಿದವರೇ ಆಕೆ. ಆಗಾಗ್ಗೆ ಅಜ್ಜಿ ಹೇಳುವರು, ''ನಿಮ್ಮಮ್ಮ ಹದಿನಾಲ್ಕು ವರ್ಷ ವಯಸ್ಸಿನ ಹುಡುಗಿ ಈ ಮನೆಗೆ ಬಂದಾಗ. ಏನೂ ಅರಿಯದ ಹುಡುಗಿ ಪಾಪ; ತಾಯಿಲ್ಲದ ಮಗು. ನಾನೂ ಹೆಣ್ಣು ಮಕ್ಕಳನ್ನು ಹಡೆಯುವ ಭಾಗ್ಯ ಪಡೆದು ಬರಲಿಲ್ಲ. ಹಾಗೆಂದೇ ನಿಮ್ಮಮ್ಮನಿಗೆ ಮನೆಯ ಎಲ್ಲ ಆಡಳಿತವನ್ನು ಹೇಗೆ ಸುಧಾರಿಸಬೇಕು; ಇಂದಿರುವುದು ನಾಳೆಗಿರಲಿ ಎಂದು ಹೇಗೆ ಒಪ್ಪ-ಓರಣ ಮಾಡಬೇಕು, ಎಂದೆಲ್ಲ ನಿಧಾನವಾಗಿ ಕಲಿಸಿದೆ. ಅವಳೂ ಬಲು ಜಾಣೆ; ಬಲು ತಾಳ್ಮೆ. ಎಲ್ಲವನ್ನು ಚಾಚೂ ತಪ್ಪದೆ ಕಲಿತಳು. ಈಗ ನನ್ನದೇನು ಇನ್ನು? ಅವಳೇ ಎಲ್ಲವನ್ನೂ ಸುಧಾರಿಸಬಲ್ಲಳು''- ಎಂದು.

ಇದು ನಾನು ನಮ್ಮಕ್ಕ ಆರೇಳು ವರ್ಷ ವಯಸ್ಸಿನ ಮಕ್ಕಳಾಗಿದ್ದಾಗ ಹೇಳುತ್ತಿದ್ದ ಮಾತು. ಇನ್ನು ಸ್ವಲ್ಪ ದಿನಗಳಾದಮೇಲೆ ಅಮ್ಮನೇ ಎಲ್ಲವನ್ನೂ ನಿರ್ವಹಿಸುತ್ತಿದ್ದರು. ಅಜ್ಜಿ ''ಹೀಗೆ ಮಾಡೋಣವೆ, ಪಂಕಜ?'' ಎಂದು ತಮ್ಮ ಸೊಸೆಯನ್ನು ಕೇಳುತ್ತಿದ್ದರು; ಈ ಕಾಲ. ಈ ಎಲ್ಲ ಕಾಲದಲ್ಲಿಯೂ ಇಷ್ಟು ದೊಡ್ಡ ಮನೆಯ, ಹೊಣೆಯ ಭಾರ ವಹಿಸಿದವರು ನಮ್ಮ ತಂದೆ - ಮುತ್ತಣ್ಣ. ಮುತ್ತಣ್ಣ ನಮಗೆ ಮಾತ್ರ ಮುತ್ತಣ್ಣ ಅಲ್ಲ. ಊರೂರಿಗೇ ಅವರು ಮುತ್ತಣ್ಣ ಹಾಗೂ ಶೀನಣ್ಣ. ನಮ್ಮ ತಾಯಿ ಮನ್ನಿ.

ದೊಡ್ಡಮನೆ ಎಂದು ಏಕೆ ಹೇಳಿದೆನೆಂದರೆ, ನಮ್ಮದು ''ಪೆರಿಯಾತ್ತ್'' ಎಂದರೆ ''ಹಿರಿಮನೆ''-ಪೂರ್ವಿಕರ ಕಾಲದಿಂದಲೂ ಬಂದ ಹೆಸರದು. ನನಗೆ ಜ್ಞಾಪಕವಿದ್ದ ದಿನದಿಂದ ಮನೆಯಲ್ಲಿ ನಮ್ಮ ತಾಯಿ-ತಂದೆ, ಅಜ್ಜಿ, ಇಬ್ಬರು ಚಿಕ್ಕಪ್ಪಂದಿರು, ಮೂವರೋ ನಾಲ್ವರೋ ಓದುವ ಹುಡುಗರು ಇಷ್ಟು ನಮ್ಮ ಸಂಸಾರ. ಯಾರದಾದರೂ ಸಂಸಾರ ಇದಕ್ಕಿಂತ ಚಿಕ್ಕದಾಗಿರುತ್ತದೆ ಎನ್ನುವುದು ನಮಗೆ ಗೊತ್ತೇ ಇಲ್ಲ. ನಮ್ಮ ತಾತ-ಎಂದರೆ ನಮ್ಮ ತಾಯಿಯವರ ತಂದೆ-ಅವರ ಮನೆಯಲ್ಲೂ ಮನೆತುಂಬ ಜನ.

ಮುತ್ತಣ್ಣ ಬಹಳ ಆದರ್ಶವಾದಿ. ಯಾರಲ್ಲೂ ತಪ್ಪು ಸುಳ್ಳು ಮುಂತಾದ ದುರ್ಗುಣಗಳನ್ನು ಅವರು ಸಹಿಸರು. ತಮ್ಮ ಮಕ್ಕಳಲ್ಲಂತೂ ತೀರ ಸಹಿಸರು. ಅದೇ ವೇಳೆಗೆ ದೇವರ ಸ್ತೋತ್ರ, ಇದೇ ವೇಳೆಗೆ ಪಾರಾಯಣ ಮುಗಿಸಿ, ಅಷ್ಟೇ ವೇಳೆಗೆ ಊಟಕ್ಕೆ ಕುಳಿತು ಕಚೇರಿಗೆ ತೆರಳುವರು ಮುತ್ತಣ್ಣ. ಅವರಿಗಿಂತ ಮುಂಚೆ ಕಾಲೇಜು ಸ್ಕೂಲುಗಳಿಗೆ ಹೋಗುವವರ ಊಟವೆಲ್ಲ ಮುಗಿದಿರುತ್ತಿತ್ತು. ಮನೆಯಲ್ಲಿ ನಮ್ಮ ತಾಯಿ, ನಮ್ಮಜ್ಜಿ ಇಬ್ಬರೂ ಬಹಳ ಮಡಿಯಿಂದ, ಅಷ್ಟೇ ಗಡಿಬಿಡಿಯಿಂದ ಅಡಿಗೆ ಮನೆಯಲ್ಲಿ ಈ ಎಲ್ಲ ಪೂರೈಕೆಗೆ ತಯಾರು ನಡೆಸಿರುವರು. ಮನೆಯಲ್ಲಿ ಆಳು-ಕಾಳು, ಕೆಲಸದವರು ಎಲ್ಲ ಅನುಕೂಲ ಉಂಟು. ಹೆಣ್ಣು ಮಕ್ಕಳು ತಮ್ಮ ತಾಯಿಗೆ ಸಹಾಯಮಾಡುತ್ತಾರೆ, ಮನೆಗೆಲಸದಲ್ಲಿ ಎಂದು ನಮಗೆ ಗೊತ್ತೇ ಇಲ್ಲ.

ನಾವು ದೊಡ್ಡವರಾಗುತ್ತ, ಸ್ಕೂಲು, ಪಾಠ, ಸಂಗೀತ, ಇವೆಲ್ಲಾ ನಮ್ಮ ದೈನಂದಿನ ಕೆಲಸಕಾರ್ಯಗಳಾದುವು. ಆಟಕ್ಕಂತೂ, ನಮ್ಮನ್ನು ಹಿಡಿದುಹಾಕುವವರೇ ಇಲ್ಲ; ಅಷ್ಟು ಆಟಪಾಟ ನಮ್ಮದು. ಸದಾ ಸಂಪಿಗೆಮರದ ಮೇಲೆಯೇ ಇರುತ್ತಿದ್ದೆವು. 'ನಮ್ಮ ತಂದೆ ಹೀಗಂದರು, ನಮ್ಮ ತಂದೆ ಹಾಗಂದರು ಎಂದೆಲ್ಲ ನಮ್ಮ ಗೆಳತಿಯರು ಶಾಲೆಯಲ್ಲಿ ಹೇಳಿದಾಗ, ನಮ್ಮ ತಂದೆಯವರೇಕೆ ನಮ್ಮನ್ನು ಹಾಗೆಲ್ಲ ಮಾತಾಡಿಸುವುದಿಲ್ಲ' ಎಂದು ನಾವು ನೊಂದದ್ದುಂಟು. ನಮಗೆ ಮಕ್ಕಳಾದ ಮೇಲೆಯೇ ನಮಗೆ ತಿಳಿದದ್ದು, ಮುತ್ತಣ್ಣಾಗೆ ತಮ್ಮ ಮಕ್ಕಳ ಮೇಲೆ ಎಷ್ಟು ಪ್ರೀತಿ ಎಂದು. ಮನೆಯ ಎಲ್ಲ ಕೆಲಸಗಳನ್ನು ನಮ್ಮ ತಾಯಿಯವರೇ ತೂಗಿಸಿಕೊಂಡು ಹೋಗುವರು. ಅದಕ್ಕೆಂದು ಅವರವರು ಏನು ಮಾತಾಡಿಕೊಳ್ಳುವರೋ, ಎಷ್ಟು ವಾಗ್ವಾದ ಮಾಡುವರೋ, ಇಲ್ಲವೆ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿತ್ತೋ, ನಮಗೆ ಗೊತ್ತಿಲ್ಲ.

ಕನ್ನಡ, ಕತೆ-ಪದ್ಯ-ಬರಹ-ವಿಮರ್ಶೆ-ನಾಟಕ, ಎಂದು ಮಾತಾಡಲು ಯಾರೇ ಬರಲಿ, ನಮ್ಮ ಮನೆಯಲ್ಲಿ ಅವರಿಗೆ ಸುಸ್ವಾಗತ. ಹಾಗೆಂದು ಬೇರೆ ಭಾಷೆಯ ಜನರನ್ನು ಕಂಡರೆ ಹಗೆಯೆಂದಲ್ಲ. ಮೇಡಮ್ ಸೋಫಿಯಾ ವಾಡಿಯಾ ಹಾಗೂ ಶ್ರೀ ವಾಡಿಯಾ, ಇವರು ಬೆಂಗಳೂರಲ್ಲಿ ಪಿ.ಇ.ಎನ್. ಸಭೆ ಕರೆದಾಗಲೆಲ್ಲಾ ನಮ್ಮ ಮನೆಯಲ್ಲೂ ಒಂದು ಪಾರ್ಟಿ-ಉಪಹಾರ, ವಿಚಾರವಿನಿಮಯ. ಮುತ್ತಣ್ಣ ಹೇಳುವರು -''ಹೆಚ್ಚೇನೂ ಬೇಡ, ಒಂದು ಸಿಹಿ, ಒಂದು ಖಾರ, ಬಾಳೆಹಣ್ಣು ಬಿಸ್ಕತ್ತು, ಮತ್ತೆ ಕಾಫಿ'' ಇಷ್ಟಾದರೆ ಸಾಕು ಎಂದು. ಈ ಸಿಹಿ ಮುತ್ತಣ್ಣಾಗೆ ಬಹಳ ಇಷ್ಟವಾದ ಸಕ್ಕರೆಪೊಂಗಲು, ಅಥವಾ ಮತ್ತೇನೆ ಆಗಿರಬಹುದು - ಜಹಾಂಗೀರ್ ಜಿಲೇಬಿ ಮುಂತಾಗಿ, ಬಂದವರನ್ನೆಲ್ಲ ಆದರಿಸಿ, ತಿನ್ನಿಸುವುದಷ್ಟೇ ಮುತ್ತಣ್ಣಾ ಕೆಲಸ. ಜೊತೆಯಲ್ಲಿ ತಿನ್ನೋಣವೆಂದು ಒಂದು ಚೂರು ತಿಂದರೂ, ಅವರಿಗೆ ತಲೆನೋವು ಸಿದ್ಧ.

ಹಾಗೆಯೇ ತಾವೊಂದು ನಾಟಕ ಬರೆದರೆ, ಅಲ್ಲದೆ ತಮ್ಮ ಸ್ನೇಹಿತರ್‍ಯಾರಾದರೂ ಹತ್ತು ಜನಕ್ಕೆ ಓದಿ ಹೇಳಬೇಕೆಂದು ಇಷ್ಟಪಟ್ಟರೆ, ನಮ್ಮ ಮನೆಯಲ್ಲಿ ಅದೊಂದು ಸಣ್ಣ ಸಭೆ, ಉಪಹಾರ ಉಂಟು. ಹೀಗೆ ಕನ್ನಡ ಬರೆಯುವವರು, ಓದುವವರು, ಉತ್ತೇಜನ ಪಡೆಯುವವರು, ಎಲ್ಲರಿಗೂ ನಮ್ಮ ಮನೆಯಲ್ಲಿ ಸುಸ್ವಾಗತ. ನಮ್ಮ ತಾಯಿಯವರು ಈ ಯಾವ ಮಾತಿಗೂ - ಅಷ್ಟೇ ಏಕೆ, ಮಾಸ್ತಿಯವರ ಯಾವ ಮಾತಿಗೂ- ಇಲ್ಲ ಎಂದದ್ದು ನಾವು ಕಾಣೆವು.

ನಮ್ಮ ಮನೆಯಲ್ಲಿ ಊಟದ್ದೇ ಒಂದು ಮೋಜು. ಊಟದ ಮನೆಯಲ್ಲಿ ಒಂದು

ಸಾಲಲ್ಲಿ ನಾವೆಲ್ಲ ಹೆಣ್ಣು ಮಕ್ಕಳು-ಎದುರು ಸಾಲಿನಲ್ಲಿ ನಮ್ಮ ಚಿಕ್ಕಪ್ಪಂದಿರು, ಓದುವ ಹುಡುಗರು ಎಲ್ಲ ಕೂಡುವರು. ಮಧ್ಯೆ ಮುತ್ತಣ್ಣ. ಪಕ್ಕದಲ್ಲಿ ಯಾರಾದರೂ ಗೆಳೆಯರು ಯಾವಾಗಲೂ ಉಂಟು. ಇವರಿಗಿದಿರಾಗಿ ದೇವರ ಮಂಟಪ. ನಾವ್ಯಾರಾದರೂ ನಮ್ಮ ತಾತನ ಮನೆಗೆ ಹೋದಾಗಲೋ, ಇಲ್ಲ ನಮ್ಮ ಚಿಕ್ಕಮ್ಮನ ಮಕ್ಕಳು ಯಾರಾದರೂ ನಮ್ಮಲ್ಲಿ ಬಂದಾಗಲೋ, ನಮ್ಮ ಸಾಲಿನಲ್ಲಿ ಅಷ್ಟೇಮಣೆ ಅಷ್ಟೇ ತಟ್ಟೆ ಇದ್ದರೂ ಇರಬಹುದು, ಕಡಿಮೆ ಹೆಚ್ಚು ಆಗಬಹುದು, ಇದು ಮುತ್ತಣ್ಣಾಗೆ ತಿಳಿಯುವುದೇ ಇಲ್ಲ ಎಂದು ನಮ್ಮೆಲ್ಲರ ಎಣಿಕೆ. ಸದ್ದಿಲ್ಲದೆ ಊಟ. ಮಾತಾಡಿದರೆ ಅದು ನಮ್ಮ ತಂದೆ ಅವರ ಸ್ನೇಹಿತರ ನಡುವೆಯೆ. ಹೀಗೆ ಕುಳಿತು ಊಟ ಮಾಡುವಾಗ, ಯಾರಿಗೇ ಆಗಲಿ ಒಂದು ಹೋಳು ಹೆಚ್ಚು, ಒಂದು ಮಿಳ್ಳೆ ತುಪ್ಪ ಕಡಿಮೆ ಆಗಬಾರದು. ಇವರಾರಿಗೂ ಬಡಿಸದೆ ಇದ್ದ ಪಲ್ಯವನ್ನೋ ಫಲಹಾರವನ್ನೋ ಮುತ್ತಣ್ಣಾವರಿಗೆ ಬಡಿಸಲಾಗದು. ಅಷ್ಟು ಕಟ್ಟುನಿಟ್ಟು.

ಈ ನಿಯಮದಲ್ಲಿ, ಹತ್ತು ಜನರ ಮಧ್ಯೆ ಹನ್ನೊಂದನೆಯವರಾಗಿ ಬೆಳೆದ ಮಕ್ಕಳು ನಾವು. ನಾವು, ಬೇರೆಬೇರೆ ಮನೆಗಳ ಜನರನ್ನು ನೋಡಿದಾಗ, ಅಲ್ಲಿ ಅವರು ಮಕ್ಕಳು-ಸೊಸೆಯರಲ್ಲಿ ಭೇದಭಾವ ಮಾಡಿದಾಗ, ಬಚ್ಚಿಟ್ಟೋ ಮುಚ್ಚಿಟ್ಟೋ ತಿಂದಾಗ, ನಮಗೆ ಅಚ್ಚರಿಯೇ ಆಗುವುದು. ತಮ್ಮ ಮಕ್ಕಳನ್ನು ಹೊಕ್ಕ ಮನೆಗಳಿಗೆ ಕಳಿಸಿಕೊಡುವಾಗ ಮುತ್ತಣ್ಣ ಹೇಳುವ ಬುದ್ಧಿಮಾತು ಇದು; 'ಜಾಣೆಯಾಗಿರಮ್ಮ, ನಿನ್ನನ್ನು ಜನ ಮೂಗಿಯೆಂದರೂ ತಪ್ಪಿಲ್ಲ, ಅತ್ತೆಯ ಮನೆಯ ಜನರೊಡನೆ ವಾದಕ್ಕೆ ನಿಲ್ಲಬೇಡ.'

ಮುತ್ತಣ್ಣ ನಮ್ಮನ್ನು 'ಲೇ, ಬಾರೇ ಹೋಗೆ' ಎಂಬ ರೀತಿಯಲ್ಲಿ ಮಾತಾಡಿಸಿದವರೇ ಅಲ್ಲ. ಅವರ ಬಾಯಿಂದ ''ಡೀ'' ಎಂದು ಬಂದಿತೆಂದರೆ ನಾವೇನೋ ಮಾಡಬಾರದ್ದು ಮಾಡಿದ್ದೇವೆ ಎಂದರ್ಥ. ಹಾಗವರು ''ಡೀ'' ಎಂದು ಗದರಿದರೆ ನಮಗೆ ಬಹಳ ಅಪಮಾನ. ಅಂದೆಲ್ಲ ಮುನಿಸಿಕೊಂಡೇ ಇರುತ್ತಿದ್ದೆವು. ನಮ್ಮ ಆರ್ಭಟ, ಜಗಳ ಕಚ್ಚಾಟ - ಮಕ್ಕಳೆಂದ ಮೇಲೆ ಇದ್ದೇ ಇರುತ್ತಲ್ಲ-ಇವೆಲ್ಲಾ ಮುತ್ತಣ್ಣ ಮನೆಯಲ್ಲಿಲ್ಲದಾಗಲೇ. ನಾವ್ಯಾವ್ಯಾವ ತರಗತಿ ಓದಿದೆವು, ಹೇಗ್ಹೇಗೆ ಓದಿ ಮುಗಿಸಿದೆವು ಇವೆಲ್ಲ ಮುತ್ತಣ್ಣಗೆ ಮುಟ್ಟುವುದು ನಮ್ಮ ತಾಯಿಯವರ ಮೂಲಕವೇ. ಅವರಿಂದಲೇ ನೇರವಾಗಿ ಬಹುಮಾನ ಪಡೆದವಳೆಂದರೆ ನನ್ನ ಕೊನೆಯ ತಂಗಿ ಶಾನ್ತಾ. ಅವಳಿಗೆ ಮುದ್ದು ಹೆಚ್ಚಾಯಿತೋ, ಲಕ್ಷ್ಯ ಕಡಿಮೆ ಆಯಿತೋ, ಅಂತೂ ಅವಳು ಬಡಪೆಟ್ಟಿಗೆ ಬಾಲಬೋಧೆ ಮುಗಿಸಲಿಲ್ಲ. 'ನೀನು ಬಾಲಬೋಧೆ ಮುಗಿಸಿದರೆ ನಿನಗೆ ಒಂದು ಪುಟ್ಟ ಬೆಳ್ಳಿ ಲೋಟ - ಹಾಲು ಕುಡಿಯಲು' ಎಂದರು ಮುತ್ತಣ್ಣ. ತಗೊಳ್ಳಿ! ಹತ್ತು ಹದಿನೈದು ದಿನಗಳಲ್ಲಿ ಮುಗಿಸಿಯೇ ಬಿಟ್ಟಳು; ಬೆಳ್ಳಿ ಲೋಟ ಗಿಟ್ಟಿಸಿಯೇ ಬಿಟ್ಟಳು.

ತಮ್ಮ ಮಕ್ಕಳು ಒಡವೆ-ತೊಡವೆಗಳನ್ನು ಹಾಕಿಕೊಂಡು ಮಿರು ಮಿರುಗುವುದು ಎಂದರೆ, ಮುತ್ತಣ್ಣಗಾಗದು. ಲೋಯರ್ ಸೆಕೆಂಡರಿ ಪರೀಕ್ಷೆಗೆ ಓದುವಷ್ಟು ದೊಡ್ಡವರಾದಾಗಲೂ, ಎಂದರೆ ೮-೯ ವರ್ಷದ ಹುಡುಗಿಯರಾದಾಗಲೂ ನಮಗೆ ಒಡವೆಗಳೇ ಇಲ್ಲ. ಶಾಲೆಯಲ್ಲಿ ನಮ್ಮ ಗೆಳತಿಯರೆಲ್ಲ ನಾಲ್ಕು ನಾಲ್ಕು ಜೋಡಿ ಚಿನ್ನದ ಬಳೆಗಳು, ವಜ್ರದ ಓಲೆಗಳು, ಎರಡೆಳೆ ನಾಕೆಳೆ ಸರಗಳು, ಇವನ್ನೆಲ್ಲಾ ಹಾಕಿಕೊಂಡು ಬರುವರು. 'ನಿಮ್ಮ ತಂದೆ ಅಷ್ಟು ದೊಡ್ಡ ಕೆಲಸದಲ್ಲಿದ್ದಾರೆ. ನಿವ್ಯಾಕೆ ಏನೂ ಮಾಡಿಸಿಕೊಂಡಿಲ್ಲ' ಎಂದು ಕೇಳುವರು. ನಾವು ಅವರಿಗೆ ಅದೆಲ್ಲ ಇಷ್ಟವಿಲ್ಲ ಎನ್ನುವೆವು.

'ಒಡವೆ ಬೇಕೇನಮ್ಮ' -ಎಂದು ಮುತ್ತಣ್ಣ ನಮ್ಮನ್ನು ಕೇಳಿದಾಗ ಕೂಡ 'ಬೇಡ ಬೇಡ' ಎನ್ನುವೆವು ಬಿಂಕದಿಂದ. ಮದುವೆ ನಿಶ್ಚಯವಾದಾಗಲೇ ಒಡವೆಗಳು ನಮ್ಮದೆಂದೂ ನಮಗೆ ಬಂದದ್ದು.

ನಮ್ಮ ಮನೆಯ ಹಿರಿಯ ಮೊಮ್ಮಗ ರಾಮಭದ್ರ. ಈ ಮಗು ನಂದಗೋಕುಲದ ಗೋಪಿಯರ ಮಧ್ಯೆ ಬೆಳೆದ ಕೃಷ್ಣನಂತೆ ನಮ್ಮೆಲ್ಲರ ಮಡಿಲಲ್ಲಿ ಬೆಳೆದವನು. ಮುಂದಿನ ವರ್ಷದಲ್ಲಿ ಮೇ, ಜೂನ್, ಜುಲೈ ತಿಂಗಳಲ್ಲಿ ಇನ್ನು ಮೂರು ಮೊಮ್ಮಕ್ಕಳು ಹುಟ್ಟಿದರು. ಇವರಲ್ಲಿ ಒಂದು ಮಗುವಂತೂ ಬಹಳ ಸೂಕ್ಷ್ಮ. ಕಾಡ್‌ಲಿವರ್ ಎಣ್ಣೆ ಮೈಗೆಲ್ಲ ಸವರಿ, ಬಿಸಿಲಲ್ಲಿ ಮಲಗಿಸಿ, ಸ್ನಾನ ಮಾಡಿಸಬೇಕು. ಮಕ್ಕಳಿಗೆಂದು ನೋಡಿಕೊಳ್ಳಲು ಆಯಾ ಒಬ್ಬಾಕೆಯನ್ನು ನೇಮಿಸಿಕೊಂಡಿದ್ದರು. ಹೀಗೆ ಮನೆಯ ಅನುಕೂಲಕ್ಕೆ, ಬಂದು-ಹೋಗುವ ಜನರ ಮನ್ನಣೆಗೆ ಅಮ್ಮ ಏನೇ ಮಾಡಲಿ, ಅವಕ್ಕೆಲ್ಲ ಮುತ್ತಣ್ಣ ಅಸ್ತು ಎನ್ನುವರು.

ಮುತ್ತಣ್ಣನ ಮೊಮ್ಮಕ್ಕಳೆಲ್ಲಾ ಓದು ಬರಹ ಕಲಿತದ್ದು ಇಲ್ಲೇ. ಒಬ್ಬಿಬ್ಬರು ದೆಹಲಿ. ಅಲಹಾಬಾದ್, ಅಂತ ದೂರ ಇದ್ದವರಷ್ಟೆ ತಮ್ಮ ಕೈ ಮಕ್ಕಳನ್ನು ಜೊತೆಗಿಟ್ಟುಕೊಂಡಿದ್ದರು. ಈ ಮಕ್ಕಳು ತಮ್ಮ ತಂದೆ-ತಾಯಿ ಊರೂರು ಸುತ್ತುತ್ತ, ರಜದಲ್ಲಿ ಬಂದು-ಹೋಗುತ್ತ ಇಲ್ಲಿ-ಗವೀಪುರದ ನಮ್ಮ ಮನೆಯಲ್ಲಿ-ತಮ್ಮನ್ನು ಬಿಟ್ಟಿದ್ದವೆಂದು ಈ ಮನೆಗೆ H.Q. ಳಳ ಅಂತ ಹೆಸರಿಟ್ಟರು. ಹಾಗೆಯೇ ಇದು ಮುಖ್ಯ ಕಚೇರಿಯೂ ಹೌದು. ನಾವೆಲ್ಲ ಎಲ್ಲೆಲ್ಲಿಂದಲೂ ನಮ್ಮ ತಾಯಿಯವರಿಗೆ ಕ್ಷೇಮ ಸಮಾಚಾರಕ್ಕೆ ಕಾಗದ ಬರೆದರೆ ಸಾಕು. ಆ ಸುದ್ದಿ ಮಿಕ್ಕೆಲ್ಲ ಅಕ್ಕ ತಂಗಿಯರಿಗೆ, ಮತ್ತೆ ಮುತ್ತಣ್ಣಾಗೆ ಮುಟ್ಟುವುದು.

ಮುತ್ತಣ್ಣ ತಮ್ಮ ಮಕ್ಕಳೊಂದಿಗೆ ಪತ್ರ ವ್ಯವಹಾರ ಮಾಡಿದವರೇ ಅಲ್ಲ. ಹಾಗೇನಾದರೂ ಬರೆದರೆನ್ನಿ, ಅದು ಮೂರೇ ಸಾಲು:

ಸೌ. ವಿಜಯಮ್ಮನಿಗೆ ಆಶೀರ್ವಾದ.

ಗುರುತ ಹಾಕಿರುವ ಕಡೆ ರುಜುಮಾಡಿ ಕಳಿಸು. ಇತ್ಯಾದಿ

-ಮುತ್ತಣ್ಣ

ಇದನ್ನು ಕಳಿಸಿಕೊಡುವ ಕವರಿನಲ್ಲಿ ಒಂದು ವಿಳಾಸ ಬರೆದ ಕವರ್ರೂ ಇರುತ್ತದೆ - ಯಾವಾಗಲೂ. ಇಂಟು ಹಾಕಿದ ಕಡೆ ರುಜುಮಾಡಿ, ಅದೇ ಕವರಿನಲ್ಲಿಟ್ಟು ಕಳಿಸುವುದಷ್ಟೇ ನಮ್ಮ ಕೆಲಸ.

ನಾವಾರು ಮಂದಿಯೂ ಹೆಣ್ಣುಮಕ್ಕಳೇ ಆದೆವಲ್ಲ ಎಂದು, ಅವರೆಂದೂ ನೊಂದದ್ದಿಲ್ಲ. ನಮ್ಮಿಂದಾಗಿ ಎಷ್ಟೋ ಕಷ್ಟಗಳನ್ನು ಅನುಭವಿಸಿದರು; ಎಷ್ಟೋ ಅವಮಾನಗಳನ್ನು ಸಹಿಸಿಕೊಂಡರು; ಕೆಟ್ಟಮಾತುಗಳನ್ನು ಕೇಳಿದರು - ಇದರಿಂದಾಗಿ ಅವರೆಂದೂ ನಮ್ಮ ಮೇಲೆ ಕುಪಿತರಾದವರಲ್ಲ; ಬೇಸರಿಸಿದವರಲ್ಲ. ದೇವರಂತಹವರು ಮುತ್ತಣ್ಣ. ಯಾರೇ ಆಗಲಿ, ಯಾವ ಕಾರಣದಿಂದಲಾಗಲಿ, ಆಡಬಾರದ್ದನ್ನು ಆಡಲಿ, ಮಾಡಬಾರದ್ದನ್ನು ಮಾಡಲಿ, ನೋಡಿಯೂ ನೋಡದಂತೆ ಇದ್ದುಬಿಡುವರು. ಬಹಳ ಕೆಟ್ಟೆನಿಸಿದಾಗ ''ಶ್ರೀನಿವಾಸ''-''ಶ್ರೀನಿವಾಸ'' ಎಂದುಕೊಳ್ಳುವರು.

ಎಲ್ಲವೂ ಭಗವಂತನ ಇಚ್ಛೆಯೆಂದೇ ಮುತ್ತಣ್ಣ ನಂಬಿಕೆ. ಇಂದು ಹೀಗಿರಬೇಕೆಂದು ಅವನಾಜ್ಞೆ; ನಾಳೆ ಹೇಗಿರಬೇಕಾಗಬಹುದು? ನಾಡಿದ್ದು? ಮತ್ತೇನು ದಾರಿಯೋ-ಎಲ್ಲ ಅವನು ಬಿಟ್ಟ ದಾರಿ ಎಂದು ನಂಬುವರು. ಆ ದಾರಿ ಇವರಿಗೆ ಒಳಿತು.

ಮುತ್ತಣ್ಣ ತಮ್ಮ ಮನೆಯಲ್ಲಿ ಅತಿಥಿ, ಅಭ್ಯಾಗತರನ್ನು ಸತ್ಕರಿಸುವುದು ಅದೊಂದು ಚೆನ್ನ. ಒಂದೆರಡು ಅಂತಹ ಪ್ರಸಂಗಗಳನ್ನು ಹೇಳಿದರೆ ಮಾತ್ರ ಆ ಸುಖವನ್ನು ಎಲ್ಲರೂ ಅನುಭವಿಸಲು ಸಾಧ್ಯ.

ಅದೊಬ್ಬರು ಅಜ್ಜ-ಹಣ್ಣು ಹಣ್ಣು ಮುದುಕರು. ಕಣ್ಣು ಕಾಣದು; ಕಿವಿ ಕೇಳದು. ಅವರಿಗೆ ಅವರ ಮಗ-ಸೊಸೆ ಮಾಡಿದ ಆದರ ಸಾಕಾಯಿತೇನೋ, ಒಂದು ಕೋಲು, ಒಂದು ಪಂಚೆ ಸಹಿತ ನಮ್ಮ ಮನೆಗೆ ಬಂದರು. ಇಂತಹ ಮುದುಕರನ್ನು ಕಂಡರೆ ಮುತ್ತಣ್ಣಾಗೆ ತಮ್ಮ ಸೇವೆ ಪಡೆಯದೆಯೇ ದೈವಾಧೀನರಾದ, ಈಗಿದ್ದಿದ್ದರೆ ಹೀಗಿದ್ದರಬಹುದಾದ, ತಮ್ಮ ತೀರ್ಥರೂಪರನ್ನು ಕಂಡಂತೆಯೇ ಆಗುವುದು.

''ಮಾಸ್ತಿ ಮನೆ ಇದೇನೇ?''

''ಹೌದು''

ಇಷ್ಟೆಂದು - ನಾವು ಯಾವಾಗಲೂ ಇಂತಹ ಯಾರೇ ಬಂದರೂ, ಮುತ್ತಣ್ಣನವರ ವರೆಗೆ ಬಿಡದೆ, ನಾವೇ, ಒಂದೋ ಎರಡೋ ರೂಪಾಯಿಕೊಟ್ಟು ಕಳಿಸಿಬಿಡುವೆವು. ಮುತ್ತಣ್ಣ ಇದ್ದಾಗಲೇ ಬಂದವರ ಅದೃಷ್ಟ. ಅವರು ಐದೋ-ಹತ್ತೋ ರೂಪಾಯಿ ಗಳಿಸುವರು. ಈ ಅಜ್ಜ ಕೊಂಚಕ್ಕೆ ಕದಲಲಿಲ್ಲ. ಮಾತಾಡುತ್ತಿರುವಾಗಲೇ ಮುತ್ತಣ್ಣ ಮಹಡಿಯಿಳಿದು ಬಂದರು. ಇನ್ನು ತೀರಿತು. ನಮ್ಮ ಕಾರುಬಾರೆಲ್ಲ ಅಲ್ಲಿಗೆ ಮುಕ್ತಾಯ. ಅಜ್ಜ ಏನೇನೋ ಬಹಳ ಹೊತ್ತು ಮಾತಾಡಿದರು. ಈ ಎಲ್ಲ ಮಾತಿನ ಪ್ರತಿಫಲವೆಂದರೆ, ಕ್ಲಬ್ಬಿಗೆ ಹೋಗುವಾಗ ಮುತ್ತಣ್ಣ-''ಈ ತಾತ ಇನ್ನು ನಾಲ್ಕಾರು ದಿನ ನಮ್ಮಲ್ಲೇ ಉಳಿಯುವರಂತೆ. ನೀವೆಲ್ಲ ಮಕ್ಕಳು ಅವರನ್ನು ಚೆನ್ನಾಗಿ ನೋಡಿಕೊಳ್ಳೀಮ್ಮ'' ಎಂದದ್ದು.

ಅಜ್ಜ ತೀರ ಅಸಹಾಯ ಸ್ಥಿತಿಯಲ್ಲಿದ್ದರು. ಒಂದು ಹೆಜ್ಜೆ ಇಡಬೇಕಾದರೂ ಸಹ ಯಾರಾದರೂ ಕೋಲು ಹಿಡಿದು ಕರೆದೊಯ್ಯಬೇಕು. ಸ್ನಾನ-ಪಾನಾದಿಗಳು-ಕೈಕಾಲು ತೊಳೆಯಲು ಎಂದು ದಿನದಲ್ಲಿ ಹತ್ತಾರು ಬಾರಿ ಓಡಾಡುವರು. ಅದು ಹಾಗಿರಲಿ ಎಂದರೆ ಅದೇ ತರಹ ರಾತ್ರಿಯಲ್ಲೂ ಏಳುವರು. ಒಮ್ಮೆ ಎರಡು ಬಾರಿ ಗಂಡು ಹುಡುಗರು ಎದ್ದು ಹೋಗುವರು. ಆಮೇಲೆ ಅವರಿಗೆಲ್ಲ ನಿದ್ದೆ. ಮಧ್ಯರಾತ್ರಿಯಲ್ಲಿ ಎದ್ದರೆ ನಮ್ಮ ಚಿಕ್ಕಮ್ಮ ಅವರನ್ನು ಗೇಟಿನಾಚೆ ಕರೆದೊಯ್ಯಬೇಕು; ಕಾಯಬೇಕು; ಪುನಃ ಕರೆತರಬೇಕು. ಒಂದಲ್ಲ ನಾಲ್ಕಲ್ಲ, ಹತ್ತು ದಿನ ಈ ತೆರನಾಗಿ ನಡೆಯಿತು. ನಮಗೋ ಹೆದರಿಕೆ. ತಪರಾಕಿಗೆ ನಾಲ್ಕು ಬಿಗಿದು ಮೈಮೇಲಿದ್ದ ಒಡವೆಗಳನ್ನು ಆ ರಾತ್ರಿಯಲ್ಲಿ ದೋಚಿದರೆ? ಯಾರಾದರೂ ಮನೆ ಒಳಗೆ ನುಗ್ಗಿ ಬಚ್ಚಿಟ್ಟುಕೊಂಡರೆ? ಏನು ಗತಿ? ಹೀಗೆ ಯೋಚಿಸಿ ನಮ್ಮಜ್ಜಿಯನ್ನು ಛೂ ಬಿಟ್ಟೆವು. ಮಾರನೆ ದಿನ ಅಜ್ಜ ಮರಳಿ ತಮ್ಮ ಮಗನಲ್ಲಿಗೆ ತೆರಳಿದರು.

ಈಗ ಹೇಳುವ ವಿಚಿತ್ರ ನಡೆದಾಗ, ನಾನಿರಲಿಲ್ಲ H. Q. ದಲ್ಲಿ. ಆದರೆ ನಡೆದುದು ಹೀಗೆ: ಅದೊಂದು ದಿನ ಬೆಳಿಗ್ಗೆ ಆರುವರೆ ಗಂಟೆ. H. Q. ಮುಂದೆ Taxi ಯೊಂದು ಬಂದು ನಿಂತಿತು. ಅದರಿಂದ ಠಾಕುಠೀಕಾದ ಒಬ್ಬಾತ, ತಮ್ಮ ಮನೆಯಾಕೆ ಮಗುವಿನ ಸಹಿತ ಇಳಿದರು. ''ಮಾಸ್ತಿ ಶ್ರೀನಿವಾಸರ ಮನೆ ಇದೇನೇ'' ಎಂದರು. ಹೌದು ಎಂದಳು ನನ್ನ ತಂಗಿ. ಹಾಸಿಗೆ ಟ್ರಂಕು ಸಹಿತ ಒಳಗೆ ಬಂದರು. ಆಕೆ ಬಹಳ ಸೊಗಸುಗಾತಿ. ಯಾರದು ಟ್ಯಾಕ್ಸಿಯಲ್ಲಿ ಎಂದು ನೋಡಲು ಬಂದ ನಮ್ಮ ತಾಯಿಯವರಿಗೆ, ಈ ದಂಪತಿಗಳನ್ನು ಕಂಡು ಏನೋ ಅನುಮಾನ ಆದರೂ ತಮ್ಮ ಪತಿಗೆ ತಿಳಿದವರೆಷ್ಟೋ ಮಂದಿ ತಮಗೆ ತಿಳಿಯದು; ಮತ್ತೆ ಪರಿಚಯವೂ ಇಲ್ಲ. ಹಾಗೆಯೇ ಆದರದಿಂದ ಕರೆದು ಡ್ರಾಯಿಂಗ್ ರೂಂನಲ್ಲಿ

ಕೂರಿಸಿದರು. ಹಾಸಿಗೆ ಟ್ರಂಕು ಇದ್ದದ್ದು ನೋಡಿ ಮುಂದಿನ ಕೊಠಡಿಯನ್ನು ಬಿಟ್ಟುಕೊಟ್ಟರು. ನಮ್ಮ ಹುಡುಗರೆಲ್ಲಾ ಕಾಲೇಜು, ಹೈಸ್ಕೂಲುಗಳಲ್ಲಿ ಓದುತ್ತಲಿದ್ದವರು. ಈ ಎಳೆಯ ಮಕ್ಕಳ ಮುಂದೆ ಅರ್ಧ ನಗ್ನತೆ ತೋರುವ, ತೀರ ತೆಳ್ಳನೆಯ ನೈಲಾನ್-ಪೈಲಾನ್ ಉಟ್ಟ ಈ ಹೆಂಗಸು, ಕುಲುಕಿ ಬಳುಕುವಳಲ್ಲಾ ಎಂದು ನನ್ನ ತಂಗಿಗೆ ಸಂಕೋಚ. ಮುತ್ತಣ್ಣ ಎದ್ದು ಬರುವತನಕ ಎಲ್ಲರೂ ಸುಮ್ಮನೆಯೇ ಇದ್ದರು. ಮುಖ ತೊಳೆದನಂತರ ಕಾಫಿ ತಿಂಡಿಯೂ ಆಯಿತು. ಮುತ್ತಣ್ಣ ಬಂದರು. ನಮಸ್ಕಾರ-ನಮಸ್ಕಾರ ಆಯಿತು. ಏನು ಮಾತಾಡಿದರೋ ಗೊತ್ತಿಲ್ಲ. ಈ ದಂಪತಿಗಳು ಮೂರು-ನಾಲ್ಕು ದಿನ ನಮ್ಮಲ್ಲಿರುವರು ಎಂದಾಯಿತಂತೆ. ಮನೆಯೆಲ್ಲಾ ನೋಡುತ್ತೇವೆ ಎಂದರಂತೆ ನನ್ನ ತಂಗಿ ಜೊತೆಯಲ್ಲಿ. ಮಹಡಿ ಹತ್ತಿ ಎಲ್ಲಾ ಕಡೆ ನೋಡಿದರು. ನಮ್ಮ ತಂದೆಯವರ ಕೊಠಡಿಗೂ ಬಂದರು. ಆತ ಮಗುವನ್ನೆತ್ತಿಕೊಂಡು ಶಥಪಥ ಹಾಕುತ್ತಿದ್ದರು. ಆಕೆ ರೂಮಿನಲ್ಲಿದ್ದ-ಈಗಲೂ ಅವೆಲ್ಲಾ ಅಲ್ಲಲ್ಲೆ ಇವೆ-ಕೆತ್ತನೆ ಕೆಲಸ, Photographಗಳು ಎಲ್ಲವನ್ನೂ ನೋಡುತ್ತ ಇದ್ದರು. ಒಮ್ಮೆ ನನ್ನ ತಂಗಿ ಏಕೋ ಸ್ವಲ್ಪ ಹೊರಗೆ ಬಂದಾಗ, ಸದ್ದಿಲ್ಲದೆ ಮೇಜಿನ ಮೇಲಿದ್ದ ಬೀರುವಿನ ಬೀಗದ ಕೈ ತೆಗೆದು, ಬೀರುವನ್ನು ತೆಗೆಯಲು ಪ್ರಯತ್ನಿಸಿದ್ದಾರೆ. ಸದ್ದು ಕೇಳಿ ನನ್ನ ತಂಗಿ ಅರ್ಧದಲ್ಲೇ ಒಳಗೆ ಬಂದು-ಏನೂ ತಿಳಿಯದವಳಂತೆ ಆಯ್ತಲ್ಲಮ್ಮ ನೋಡಿದ್ದು; ಬನ್ನಿ ಇನ್ನು ಕೆಳಗೆ ಹೋಗೋಣ'' ಎಂದಿದ್ದಾಳೆ. ದೈವವೇ ಅಂದು ನಮಗೆ ಸಹಾಯ. ಮುತ್ತಣ್ಣ ಹತ್ತಿರ ಅಧರ್ಮದ ಅಸತ್ಯದ ಒಂದು ತುಣುಕೇನಾದರೂ ಇದ್ದಿದ್ದರೆ ಅಂದು ನಮ್ಮ ಮನೆಯಲ್ಲಿ ದೋಚಿಹೋಗುತ್ತಿತ್ತೋ ಏನೋ! ಹೀಗೆರಡು ದಿನ ಕಳೆಯಿತು. ಮೂರನೆಯ ದಿನ ನನ್ನ ತಂಗಿ ಮೆಲ್ಲಗೆ ''ಎಷ್ಟು ದಿನ ನಿಮ್ಮ ಕಾರ್ಯಕ್ರಮ? ಎಲ್ಲೆಲ್ಲಿ ಹೋಗಿಬರುವಿರಿ? ಬೆಂಗಳೂರಿನಲ್ಲಿ ಎಷ್ಟು ದಿವಸದ ಕೆಲಸ ಇದೆ?'' ಎಂದೆಲ್ಲ ಕೇಳಿದಳಂತೆ. ''ಏನೋ ಗೊತ್ತಿಲ್ಲ ನಮ್ಮ ಯಜಮಾನರನ್ನು ಕರೆದು ಕೇಳಿ'' ಎನ್ನುವಳೊಮ್ಮೆ. ''ಮದ್ರಾಸಿನಿಂದ ಮನಿಯಾರ್ಡರ್ ಬರಬೇಕು'' ಎನ್ನುವಳೊಮ್ಮೆ. ಅಂದೆಲ್ಲ ಕಾದಿದ್ದಾಯಿತು. ಮಾರನೆಯ ದಿನವೂ ಕಾದರು ಮನಿಯಾರ್ಡರೂ ಇಲ್ಲ; ಏನೂ ಇಲ್ಲ.

ಮಾರನೆ ಬೆಳಗ್ಗೆ ಕುಲಕುತ್ತ-ಬಳಕುತ್ತ ಬಂದು ನಮ್ಮ ತಂದೆ ಡ್ರಾಯಿಂಗ್ ರೂಂನಲ್ಲಿದ್ದರೆ-ತಾನೂ ಅಲ್ಲೇ ಬಂದು ಕುಳಿತಳು ಆಕೆ. ಆತನೂ ಬಂದರು ಮಗುವಿನೊಡನೆ. ಏನೇನೋ ಮಾತಾಡುತ್ತಾ ತಮ್ಮ ಮಗುವಿಗೆ ಅಂದು ಮೊದಲ ಹುಟ್ಟಿದ ಹಬ್ಬ ಎಂದಿದ್ದಾರೆ. ಮುತ್ತಣ್ಣ ಬಂದು ನಮ್ಮ ತಾಯಿಯವರಿಗೆ ಹೇಳಿದರು ''ಇಂದು ಮನೆಯಲ್ಲಿ ಪಾಯಸ, ಮತ್ತೇನಾದರು ಸಿಹಿ ಮಾಡಿಬಿಡಿ. ಹಾಗೇ ಅಂಗಡಿಯಿಂದ ಮಗುವಿಗೆ ಒಳ್ಳೆಬಟ್ಟೆ ಒಂದು ಬೆಳ್ಳಿಲೋಟಾ ತಂದುಕೊಡಿ'' ಎಂದು. ನಮ್ಮ ತಾಯಿ ಅಡಿಗೆ ಮುಗಿಸಿ, ಅಂಗಡಿಗೂ ಹೋಗಿ ಬಂದರು. ಈ ತರುಣದಲ್ಲಿ ಈ ಹೆಂಗಸು ತನ್ನ ಮಗುವಿಗೆ ನೀರೆರೆಯುತ್ತೇನೆ ಎಂದಿದ್ದಾರೆ. ಬೆಳಿಗ್ಗೆಯೇ ಎಲ್ಲರ ಸ್ನಾನವೂ ಮುಗಿದಿದ್ದರಿಂದ ಬಚ್ಚಲ ಒಲೆಗೆ ಪುನಃ ಉರಿಹಾಕಬೇಕು. ಈ ಸುದ್ದಿ ನಮ್ಮಜ್ಜಿಗೆ ತಿಳಿಯಿತು. ''ಏನಿದು ಹುಡುಗಾಟ. ಗುರುತು-ಪರಿಚಯವಿಲ್ಲದ ಯಾರೋ ಗೂಂಡಾ ಅವನ ಹೆಂಡತಿ ಹೌದೋ ಅಲ್ಲದ ಒಂದು ಹೆಂಗಸು, ಮಗು ಬಂತೆಂದರೆ ಇಷ್ಟು ಮಾಡುವಿರಾ ನೀವೆಲ್ಲ. ಶೀನ ಬರಲಿ ನಾನು ಹೇಳುತ್ತೇನೆ'' ಎಂದವರೇ ಬಚ್ಚಲು ಮನೆಗೆ ಹೋಗಿ ಬಾಗಿಲು ಹಾಕಿಕೊಂಡರು, ತಮ್ಮ ಸ್ನಾನಕ್ಕೆಂದು. ಪುನಃ ನನ್ನ ತಂಗಿ ಹೋಗಿ ನೋಡಿದಾಗ ಬಚ್ಚಲು ಮನೆಯಲ್ಲಿನ ಪಾತ್ರೆಗಳೆಲ್ಲ

ಬರಿದು!

ಮಧ್ಯಾಹ್ನ ಊಟದವೇಳೆಗೆ ಈ ಎರಡು-ಮೂರು ದಿನವೂ ಬಂದಾತ ಇಂದು ಬರಲಿಲ್ಲ. ಈಕೆ ರೇಗಿಕೊಂಡು ಎಲ್ಲರನ್ನು ಶಪಿಸುತ್ತ ಕೊಠಡಿಯಲ್ಲಿ ಬಾಗಿಲುಹಾಕಿ ಮಲಗಿದವರು ಏಳಲಿಲ್ಲ. ಮುತ್ತಣ್ಣನೂ ಕಾದು ಕಾದು ಸಾಕಾಗಿ ಊಟಮಾಡಿದರು. ಮನೆಯಲ್ಲಿ ಎಲ್ಲರ ಊಟವೂ ಇವರನ್ನು ಬಿಟ್ಟೇ ಆಯಿತು. ಎಲ್ಲೇ ಇದ್ದರೂ, ಮೊದಲದಿನದ ಅನುಭವದಿಂದ ಮನೆಮಂದಿಯೆಲ್ಲಾ ಇವರಮೇಲೆ ಒಂದು ಕಣ್ಣಿಟ್ಟೇ ಇದ್ದರು. ನನ್ನ ತಂಗಿಯಂತೂ ಸರ್ಪ ಕಾವಲು. ನಾಲ್ಕು ಗಂಟೆಗೆ-ಸಂಜೆ-ನಮ್ಮ ಮನೆಯಲ್ಲಿ ಮಧ್ಯಾಹ್ನದ ಉಪಹಾರ ಸಿದ್ಧ ಮಾಡೋಣವೆಂದು ನನ್ನ ತಂಗಿ ಬಂದಳಂತೆ. ಹಾಲ್‌ನಲ್ಲಿ-ಡ್ರಾಯಿಂಗ್ ರೂಂನಲ್ಲೆಲ್ಲಾ ಒಂದು'ಗಬ್ಬು ವಾಸನೆ!! ಏನಿದು ಏನಿದು ಎಂದು ಎಲ್ಲೆಲ್ಲೂ ಹುಡುಕಿದಳಂತೆ. ಏನೆಂದು ತಿಳಿಯಲೇ ಇಲ್ಲ. ಮುಂದಿನ ರೂಮಿನ ಬಾಗಿಲು ಮುಚ್ಚಿದ್ದು ಮುಚ್ಚಿದ ಹಾಗೆಯೇ ಇತ್ತು. ಆಗಲೇ ಕಾಲೇಜಿನಿಂದ ಬಂದ ನನ್ನ ತಂಗಿಯ ಮಗ ಧೈರ್ಯಮಾಡಿ ಬಾಗಿಲು ತಳ್ಳಿದ. ಒಳಗೆ ಇದ್ದ ನೋಟವನ್ನು ನೋಡಿ ಇವರಿಗೆಲ್ಲ ಎದೆ ಧಸಕ್ಕೆಂದಿತು. ಊಟದ ಪಾತ್ರೆಯೊಂದು; ಅದರ ಬೇರೆ ಬೇರೆ ಬಟ್ಟಲುಗಳೆಲ್ಲ ಚಲ್ಲಾಪಿಲ್ಲಿಯಾಗಿ ಬಿದ್ದಿವೆ. ಶಾಕಾಹಾರವಲ್ಲದ ಏನೇನೋ ಊಟಗಳು ಅಲ್ಲೆಲ್ಲಾ ಬಿದ್ದಿವೆ. ಹೇಗೆ ಒಪ್ಪ ಓರಣ ಮಾಡುವುದೋ ತಿಳಿಯಲಿಲ್ಲ. ಅಲ್ಲಿ ನಿದ್ದೆಯ ಸೋಗು ಹಾಕಿ ಮಲಗಿದ್ದ ಆಕೆಯೂ ಇಲ್ಲ! ಅವರ ಮಗುವೂ ಇಲ್ಲ!! ಆತ ಮೊದಲೇ ಇಲ್ಲ!! ಯಾವಾಗ ಆತ ಬಂದರೋ; ಈ ವಿಚಿತ್ರ ಊಟ ಯಾವಾಗ ತಂದರೋ; ಅರ್ಧರ್ಧ ಉಂಡದ್ದನ್ನು ಬಿಟ್ಟು ಯಾವಾಗ ಗಾಡಿ ಬಿಟ್ಟರೋ ಭಗವಂತನೇ ಬಲ್ಲ. ಮನೆಯ ಸಾಮಾನೆಲ್ಲ ನೋಡಿ ಕೊಳ್ಳಿ ಎಂದ ನಮ್ಮ ಹುಡುಗ. ಸದ್ಯ-ಏನೂ ಹೋಗಿರಲಿಲ್ಲ.

ಇವಿಷ್ಟು ಸಮಾಚಾರ ಹೊತ್ತು, ಮದ್ರಾಸಿನಲ್ಲಿ ಅವರ ಮನೆ ಎಲ್ಲಿ ಎಂದು ವಿಚಾರಿಸು ಎಂದು ನನಗೆ ಪತ್ರ ಬಂದಿತು. ಆ ಹೆಸರಾಂತ ರಸ್ತೆಯಲ್ಲಿ ಆ ನಂಬರಿನ ಮನೆಯೇ ಇಲ್ಲ. ಆತನ ಹೆಸರನ್ನೇ ಯಾರೂ ಕೇಳಿ-ಅರಿಯರು, ಆಕೆಯಂತೂ ಯಾರಿಗೂ ಗೊತ್ತಿಲ್ಲ. ಇನ್ನು ಕೂಲಂಕಷವಾಗಿ ವಿಚಾರಿಸಿದ್ದರಲ್ಲಿ ಆತ ತಾನು ಹೇಳಿಕೊಂಡಂತೆ ಲಾಯರಲ್ಲ! ಆಕೆ ಆತನ ಹೆಂಡತಿಯಲ್ಲ!! ಆ ಮಗು ಅವರಿಬ್ಬರದಲ್ಲ !!! ಇಷ್ಟು ನಾನು ಬೆಂಗಳೂರಿಗೆ ತಿಳಿಸಿದೆ. ಮುತ್ತಣ್ಣಾಗೆ ಇದು ತಿಳಿದಾಗ ''ಪಾಪ, ಏನೋ ಗ್ರಹಚಾರ'' ಎಂದರಂತೆ.

ನಮ್ಮ ಹುಡುಗಿ ಒಂದು ಸಲ ಆರೇಳು ಆಟಗಳಲ್ಲಿ ಗೆದ್ದು ಎಲ್ಲಾದರಲ್ಲೂ ಮೊದಲ ಸ್ಥಾನ ಪಡೆದಿದ್ದಳು - ಆದರೆ ಶಾಲೆಯಲ್ಲಿ ಅವಳಿಗೆ ಆ ವರ್ಷ ಬಹುಮಾನವಾಗಿ ಕೊಟ್ಟದ್ದು ಒಂದು ಪುಟ್ಟ ಫೌನ್‌ಟನ್ ಪೆನ್ನು ಮಾತ್ರ. ಹುಡುಗಿಗೆ ಮುಖ ಚಿಕ್ಕದಾಯಿತು. ಪ್ರಪಂಚವೇ ತನಗೆ ಅನ್ಯಾಯಮಾಡಿತು ಎಂದವಳ ಎಣಿಕೆ. ಈ ಸುದ್ದಿ ಅಜ್ಜಿಯ ಮೂಲಕ ತಾತನಿಗೆ - ಮುತ್ತಣ್ಣಾಗೆ ತಿಳಿಯಿತು. ಆಗವರೆಂದರು, ''ನಿನಗೆ ಬರಬೇಕಾದ ಮರ್ಯಾದೆ ಅಷ್ಟು ಜನರ ಮಧ್ಯೆ ನಿನ್ನ ಸ್ಕೂಲಿನ ಪರ ನೀನು ಮೊದಲಸ್ಥಾನ ಗಳಿಸಿದೆಯಲ್ಲ ಆಗಲೇ ಬಂದುಬಿಟ್ಟಿತು. ಮೊದಲ ಬಹುಮಾನ ಬೆಲೆಯ ಮೇಲೆ ನಿರ್ಧರಿಸುವುದು ಸರಿಯಲ್ಲ. ಸಣ್ಣದೊಂದು ಗುಂಡುಸೂಜಿ ಕೊಟ್ಟರೂ ಅದು ಮೊದಲ ಬಹುಮಾನವೇ'' ಎಂದು.

ನಮ್ಮ ತಾಯಿ ಈ ಎಲ್ಲದರಲ್ಲೂ ನಮ್ಮ ಮುತ್ತಣ್ಣಾಗೆ ಅರ್ಧಾಂಗಿ; ಈ ಎಲ್ಲ

ಕಾರುಬಾರು ನಡೆಸುವವರು ಮುತ್ತಣ್ಣ. ನಮ್ಮ ತಾಯಿ ತೀರಿಕೊಂಡದ್ದು ಇವರಿಗೆ ಬಹು ದೊಡ್ಡ ಆಘಾತವೇ. ತಮ್ಮಮ್ಮ ತೀರಿಕೊಂಡಂದು, '' ಇದುವರೆಗೆ ನಾನು ಮಗುವಿನಂತಿದ್ದೆ, ಇಂದಿನಿಂದ ಮುದುಕನಾಗಿಬಿಟ್ಟೆ'' ಎಂದರು. ನಮ್ಮ ತಾಯಿ ತೀರಿಕೊಂಡಂದು ''ಆಸ್ಪತ್ರೆಯಿಂದ ಗುಣವಾಗಿ ಬರುವೆ ಎಂದು ಕಳಿಸಿದೆ. ಕೈ ಬೆರಳ ಸಂದಿನಿಂದ ನುಸುಳಿ ಹೋಗಿಬಿಟ್ಟರಲ್ಲಮ್ಮ'' ಎಂದು ಒದ್ದಾಡಿದರು.

ಇಂತಹ ದುಃಖದಲ್ಲಿಯೂ ನಾವಾರೂ ಕಣ್ಣೀರಿಟ್ಟು ಗೋಳಾಡುವುದು ಮುತ್ತಣ್ಣಾಗೆ ಇಷ್ಟವಿಲ್ಲ. ಅದು ಸಂಸ್ಕೃತಿಯಲ್ಲ. ತಾವೂ ಹಾಗೇ ಮಾರನೆದಿನ ಬಂದ ತಮ್ಮ ಸ್ನೇಹಿತರನ್ನೆಲ್ಲಾ ತಾವೇ ಸಂತಯಿಸಿದರು. ಇಂದಿಗೂ ಯಾರೇ ಬಂದರೂ ನಮ್ಮ ಮನೆಯಲ್ಲಿ ಎಲ್ಲ ಕೆಲಸಕಾರ್ಯಗಳೂ ಎಂದಿನಂತೆ ನಡೆಯುತ್ತ ಇರುವುದನ್ನು ನೋಡಬಹುದು. ಈಗೊಬ್ಬ ಮರಿಮಗ ಇದ್ದಾನೆ ಮುತ್ತಣ್ಣಾಗೆ, ಅವನು Great-Grand-Son ಹುಟ್ಟಿ ತಮ್ಮನ್ನು Great ಮಾಡಿದ ಎನ್ನುತ್ತಾರೆ ಮುತ್ತಣ್ಣ.

ಈ ಮುತ್ತಣ್ಣ, ನಿಮಗಾಗಿ, ನಮಗಾಗಿ, ಎಲ್ಲರಿಗಾಗಿ ನೂರ್ಕಾಲ ಬಾಳಿ, ತಮ್ಮ ಆಶೀರ್ವಾದವನ್ನು ನಮಗೆ ನೀಡುತ್ತಿರಲಿ ಎಂದು ಆ ಶ್ರೀನಿವಾಸನಲ್ಲಿ ಪ್ರಾರ್ಥಿಸುತ್ತೇನೆ.

ಆರ್ಯ ಮರ್ಯಾದೆಯ ದಂಪತಿಗಳು

ಭಾರತಿ

ಐವತ್ತು ವರ್ಷಗಳ ಹಿಂದಿನಮಾತು. ಎಂತಹ ದಿನಗಳವು? ನಾವೂ ನಮ್ಮಣ್ಣ ಕಿಟ್ಟಿಯೂ ಮದರಾಸಿನ ನಿವಾಸಿಗಳಾಗಿದ್ದಾಗ ಸಂಜೆಯಾದರೆ ಸಾಕು ಮೂರು ನಾಲ್ಕು ಗಂಟೆಗಳ ಕಾಲ ಮಿತ್ರಗೋಷ್ಠಿ ನೆರೆದು ಸರಸ ಸಲ್ಲಾಪಗಳೋ, ಕಾವ್ಯಾಲಾಪಗಳೋ, ಸಂಗೀತ ಶ್ರವಣವೋ, ಮತ್ತಾವುದಾದರೂ ಪ್ರಸಂಗ - ಅಂತೂ ಏನಾದರೂ ಸತ್ಕಾಲಕ್ಷೇಪ. ಆಗಾಗ ಹೊರಗಿನ ವಿಹಾರಗಳೂ ಉಂಟು. ಆ ಸಮಯಗಳಲ್ಲಿ ಹೊಸದಾಗಿ ಕಂಡ ಪುಸ್ತಕಗಳನ್ನು ಕೊಂಡುತರುವುದು ಓದುವುದು ಪದ್ಧತಿಯಾಗಿತ್ತು. ಒಂದು ದಿನ ನಮ್ಮಣ್ಣ ಕತೆಗಳ ಪುಸ್ತಕವೊಂದನ್ನು ಕೊಂಡುತಂದ. 'ಇವು ಬಹಳ ಚೆನ್ನಾಗಿವೆ. ಸಂಜೆಗೆ ಅವರೆಲ್ಲ ಬರಲಿ ಓದುತ್ತೇನೆ' ಎಂದು ಹೇಳಿದ. ಪುಸ್ತಕದ ಮೇಲೆ ''ಕೆಲವು ಸಣ್ಣಕತೆಗಳು'' ಅಂಚಿನ ಕೊನೆಗೆ ''ಶ್ರೀನಿವಾಸ'' ಎಂದಿತ್ತು.

ಮಿತ್ರಗೋಷ್ಠಿಯಲ್ಲಿ ಸಹೋದ್ಯೋಗಿಗಳಾದ ಇಬ್ಬರು ತಮಿಳರು ಒಬ್ಬರು ಕನ್ನಡಿಗರು ಇದ್ದರು. ಇನ್ನು ಕೆಲವರು ಸಾಹಿತ್ಯ ಪ್ರೇಮಿಗಳು ಕಲೆತು ಅಂದಂದಿನ ಕಾಲಯಾಪನೆ ಹೇಗೆಂದು ನಿಶ್ಚಯಿಸುವರು. ಹಿರಿಯರಾದ ಬೆನಗಲ್ ರಾಮರಾಯರ ಮನೆ ಸಮೀಪದಲ್ಲೇ ಇತ್ತು. ಅವರೂ ಆಗಾಗ ಬಂದು ಗೋಷ್ಠಿಯಲ್ಲಿ ಪ್ರಮುಖರಾಗಿರುತ್ತಿದ್ದರು. ಅಣ್ಣ ಕತೆಪುಸ್ತಕ ನನ್ನ ಕೈಗೆ ಕೊಡಲಿಲ್ಲ. ಸಂಜೆಯಾದೀತೆಯೆಂದು ಬೇಗ ಬೇಗ ಮನೆಗೆಲಸಗಳನ್ನು ಮುಗಿಸಿ ಕಾದಿದ್ದೆ. ಒಬ್ಬೊಬ್ಬರಾಗಿ ಎಲ್ಲರೂ ಬಂದರು. ಏಳುಗಂಟೆಗೆ ಸಭೆಸೇರಿತು. ಅಣ್ಣ ಹೊಸ ಪುಸ್ತಕವನ್ನು ಎಲ್ಲರಿಗೂ ತೋರಿಸುತ್ತಾ ''ಈವತ್ತು ಇದೇ ಕಾರ್ಯಕ್ರಮ. ನಾನೇ ವಾಚಕ'' ಅಂದಾಗ ಮಿತ್ರರೊಬ್ಬರು ''ಯಾರು ಬರೆದದ್ದು?'' ಎಂದು ಕೇಳಿದರು. ''ಯಾರೋ ಏನೋ ಗೂಢನಾಮ ''ಶ್ರೀನಿವಾಸ'', ಅಂಕಿತನಾಮ ಯಾವದೋ ತಿಳಿಯುವುದಿಲ್ಲ. ವಸ್ತು ಚೆನ್ನಾಗಿದೆ. ಓದುತ್ತೇನೆ ಕೇಳಿ' ಆರಂಭಿಸಿದ. ಕನ್ನಡಿಗರ ಸಹವಾಸ ಬಲದಿಂದ ತಮಿಳು ಮಿತ್ರರೂ ಸಾಮಾನ್ಯನಾಗಿ ಕನ್ನಡವನ್ನು ಅರ್ಥಮಾಡಿಕೊಳ್ಳುವ ಮಟ್ಟಿಗೆ ಪಳಗಿದ್ದರು. ಸಂಕೋಚ ಪಡದೆ ಪ್ರಯತ್ನಮಾಡಿ ತಪ್ಪೋನೆಪ್ಪೋ ಕನ್ನಡದಲ್ಲಿ ಆಗಾಗ ಮಾತನ್ನೂ ಆಡುತ್ತಿದ್ದರು. ರಂಗಪ್ಪನನ್ನು ಕುರಿತ ಮೊದಲಿನ ಮೂರು ಕತೆಗಳು ಮುಗಿದವು. ಎಲ್ಲರ ಮುಖಗಳಲ್ಲೂ ವಿಸ್ಮಯ ಕುತೂಹಲಗಳಿಂದ ತುಂಬಿದ ಮಂದಹಾಸ. ನಡುನಡುವೆ ಮೆಚ್ಚುನುಡಿಗಳು ''ಯಾರಪ್ಪ ಈ ಕತೆಗಾರ ರಸಿಕ ಭೂಪತಿ'' ಆ ರಂಗಪ್ಪ ಹಾಗಿರಲಿ ತಾನೇ ಕಿಲಾಡಿ ರಂಗಪ್ಪನಾಗಿದ್ದಾನಲ್ಲಾ!

ಎರಡು ದಿನಗಳಲ್ಲಿ ಓದುಮುಗಿಸಬೇಕೆಂದಿದ್ದ ಮೊದಲಿನ ನಿಶ್ಚಯ ಬದಲಾಗಿ

ಒಂದೇದಿನ ಎಲ್ಲ ಕತೆಗಳನ್ನೂ ಓದಿಬಿಡಬೇಕು ಎಂದಾಯಿತು. ಎರಡು ಸಲ ಎಲ್ಲರಿಗೂ ಕಾಫಿ ಸೇವೆಯಾಯಿತು. ರಾತ್ರಿ ಹನ್ನೆರಡು ಗಂಟೆಗೆ ವಾಚನ ಮುಗಿಯಿತು. ಅಂದಿಗೇ ಅದು ಸಾಕಾಗಲಿಲ್ಲ. ನಾಳೆಯೂ ಅದೇ, ನಾಳಿದ್ದೂ ಅದೇ. ಒಂದುವಾರ ಬೇರೆ ಏನೂ ನಡೆಯಲಿಲ್ಲ. ಕತೆಗಳ ಆಕರ್ಷಣೆ ಎಲ್ಲರದ್ದೂ ಒಂದೇ ವಿಧವಾಗಿ ಆಗಲಿಲ್ಲ. ಮೊದಲಿನ ಕತೆಗಳಲ್ಲಿ ಹೆಚ್ಚು ಸ್ವಾರಸ್ಯವನ್ನು ಕಂಡರು ರಾಮನಾಥಯ್ಯರು. ಅವರ ಇಷ್ಟವನ್ನು ಹೀಗೆ ಹೇಳುವರು ''ತಲೆಬಾಚು ಅಂದರಂತೆ'' ವಾಸಿಯಂಗೋ ಸಾರ್. ಹೆಂಗಸರ ಮಾತು, ಸರಸ, ಅಮ್ಮಯ್ಯ, ರತ್ನ, ಇವೆಲ್ಲ ಅವರಿಗೆ ಬಹಳ ಮೆಚ್ಚಿಕೆ. ವಿಶ್ವನಾಥಯ್ಯರ ಮೆಚ್ಚಿಕೆ ಇನ್ನೊಂದು ಬಗೆ. ''ಅಂದ ಅವಿವೇಕಂ ವುಡಾದೇಂಗೋ ಸಾರ್'' ಅವರ ಮಾತು ''ರಂಗಸಾಮಿಯ ಅವಿವೇಕ'' ವನ್ನು ಕುರಿತದ್ದು, ಬೇರೇ ಅರ್ಥದಲ್ಲಿ ಎಲ್ಲರೂ ನಕ್ಕರು. ರಾಮನಾಥಯ್ಯರು ''ಇಂದ ಬ್ರಹ್ಮಚಾರಿಕೂ ಅಂದ ಅವಿವೇಕಿಕೂ'' ಮಧ್ಯದಲ್ಲಿಂತಹ ಪರಿಹಾಸೋಕ್ತಿಗಳು. ಶ್ರೀನಿವಾಸರಾಯರಿಗಂತೂ ''ನಮ್ಮ ಮೇಷ್ಟ್ರು'' ಬಹಳ ಇಷ್ಟ. ಒಬ್ಬ ಮಿತ್ರರಿಗೆ 'ವೆಂಕಟರಾಯನ ಪಿಶಾಚ' ಇನ್ನೊಬ್ಬರಿಗೆ 'ಹಳೆಯ ಕತೆ' ಹೀಗೆ ಎಲ್ಲರ ಇಷ್ಟವನ್ನೂ ಪೂರೈಸಬೇಕು. ವೈವಿಧ್ಯತೆಯಿಂದ ಒಂದೊಂದು ಕತೆಯೂ ತಂತ್ರಚಾತುರ್ಯದಿಂದ ಸೋಜಿಗವಾಗಿವೆ. ಆದರೂ ಕಡೆಯದಾದ ''ಇಂದಿರೆಯೋ ಅಲ್ಲವೋ'' ನನ್ನ ಮನಸ್ಸಿನ ಮೇಲೆ ಹೆಚ್ಚು ಪರಿಣಾಮವನ್ನುಂಟುಮಾಡಿತು. ಪುಸ್ತಕ ನನ್ನ ಕೈಗೆ ಬಂದಮೇಲೆ ಎಷ್ಟು ಸಲ ಆ ಕತೆಗಳನ್ನು ಓದಿದೆನೋ ಲೆಕ್ಕವಿಲ್ಲ. ಹೀಗೆ ಬೇರೆ ಬೇರೆ ಸ್ವಭಾವಗಳ ಅಭಿರುಚಿಗಳ ವ್ಯಕ್ತಿಗಳ ಮನಸ್ಸುಗಳನ್ನು ಒಂದೇ ಪ್ರಮಾಣದಲ್ಲಿ ಒಲಿಸಿ ಸೆರೆಹಿಡಿದ ಆ ಕತೆಗಳ ಶಕ್ತಿ ಎಷ್ಟಿರಬೇಕು? ಮಕ್ಕಳಿಗೂ ಸುಲಭವಾಗಿ ಅರ್ಥವಾಗುವ ಸರಳ ಸುಂದರ ಪದಗಳು, ಅವುಗಳನ್ನು ಹೊಂದಿಸಿದ ವಾಕ್ಯಗಳು. ಇವುಗಳಿಂದ ರೂಪಿತವಾದ ಗಂಭೀರ ಭಾವ ಕಳೆತುಂಬಿದ ವಸ್ತು. ಇವುಗಳ ಪರಸ್ಪರ ಹೊಂದಿಕೆ ಆ ಶಕ್ತಿ ಸಂಪನ್ನತೆಗೆ ಕಾರಣವಲ್ಲವೇ? ''ವಾಗರ್ಥಾ ವಿವಸಂಪೃಕ್ತೌ'' ಎಂಬ ಮಹಾಕವಿಯ ಮಾತು ಈ ಜಾಣತನದಲ್ಲಿ ನಿಜವಾಯಿತಲ್ಲವೇ? ಸಣ್ಣ ಕತೆಗಳಲ್ಲಿ ಇಂತಹ ಸಮಾಧಾನ ಸಿಗುವುದೆಂದರೆ ರಚನಾ ಸಾಮರ್ಥ್ಯ ಅಸಾಧಾರಣ! ಬಿ. ವೆಂಕಟಾಚಾರ್ಯರ ಕಾದಂಬರಿಗಳ ಮಹತ್ವದ ಕಾಲವದು. ಅಂತಹ ಕಾಲದಲ್ಲಿ ಸಣ್ಣಕತೆಗಳು ಆ ಮಟ್ಟದಲ್ಲಿ ಜನಪ್ರಿಯವಾಗುವುದೆಂದರೆ ನಿಜವಾಗಿಯೂ ಆಶ್ಚರ್ಯವೇ.

ಆ ಸುಖ ಸಂಕಥಾ ವಿನೋದ ಕಾಲಕ್ಷೇಪದ ಆ ರಸನಿಮಿಷಗಳು ಅರ್ಧ ಶತಮಾನ ಕಳೆದಮೇಲೂ ಒಂದೊಂದು ಮಾತೂ ಮರೆಯಲಾಗದಂತೆ ಮನಸ್ಸಿನಲ್ಲಿ ಸ್ಥಿರವಾಗಿವೆ. ಕತೆಗಳನ್ನು ನೆನೆದಾಗ ಅವರೆಲ್ಲ ಕಾಣುತ್ತಾರೆ, ಅವರಲ್ಲಿ ಕೆಲವರು ಗತಿಸಿದ್ದಾರೆ. ನಮ್ಮ ಅಣ್ಣ ಕಂದಾಡೆ ಕೃಷ್ಣಯಂಗಾರ್ಯರೂ ಗತಿಸಿ ಇಪ್ಪತ್ತು ವರ್ಷಗಳಾದುವು. ಆದರೂ ಆಗಾಗ ಮದರಾಸು, ಆ ನಿವಾಸ, ಮಹಡಿಯ ಮೇಲಿನ ಸಂಭಾಂಗಣ, ಇವು ಮನಸ್ಸಿಗೆ ಬಂದಾಗ ಅವರೆಲ್ಲ ಜೀವಿಸಿ ಕಣ್ಮುಂದೆ ಸುಳಿಯುತ್ತಾರೆ. ಆ ಮಾತುಕತೆಗಳು ಕತೆಗಳ ವಾಚನ ಕಿವಿಗಳಲ್ಲಿ ಧ್ವನಿಸುತ್ತವೆ. ರಸನಿಮಿಷಗಳು ಹೆಚ್ಚು ಔದಾರ್ಯವನ್ನು ನಮ್ಮ ಮೇಲೆ ತೋರಲಿಲ್ಲ. ನಾವು ನೀಲಗಿರಿಗೆ ಹೋಗಬೇಕಾಯಿತು. ನಮಗಿಂತ ಮೊದಲೇ ಅಣ್ಣ ಉದ್ಯೋಗದಿಂದ ಬಿಡುಗಡೆಹೊಂದಿ ಬೆಂಗಳೂರು ಸೇರಿದ. ದೇಶೀಯ ವಿದ್ಯಾಶಾಲೆ ಆತನ ಸೇವಾ ಕ್ಷೇತ್ರವಾಯಿತು. ಒಂದೆರಡು ವರ್ಷಗಳಲ್ಲೇ ನಾವು ನಮ್ಮೂರಿಗೇ ಬಂದೆವು. ಕಾರಣಾಂತರದಿಂದ ನಾನು ಮೈಸೂರು 'ಸ್ಯಾನಿಟೋರಿಯಂ'ನಲ್ಲಿ ಚಿಕಿತ್ಸೆ

ಪಡೆಯಬೇಕಾಯಿತು. ಆಗ ಬೇಸರವನ್ನು ಕಳೆಯುವುದಕ್ಕೆ ಸಾಧನ ಪುಸ್ತಕಾವಲೋಕನವಲ್ಲದೆ ಮತ್ತೇನು? ನನ್ನಲ್ಲಿದ್ದ ಪುಸ್ತಕಗಳ ಜೊತೆಗೆ ಬೃಹದಾಕಾರದ ಪುಸ್ತಕವೊಂದು ಬಂದು ಸೇರಿತು. ಕೈಯಲ್ಲಿ ಹಿಡಿದುಕೊಳ್ಳಲಾಗದಷ್ಟು ತೂಕ. ಒಳಗಿನ ವಿಷಯ ಸಾಮಗ್ರಿಗಳ ತೂಕ ಎಷ್ಟು ಮಾತ್ರವೋ ನೋಡೋಣವೆಂದು ಹಾಳೆಗಳನ್ನು ಮಗುಚುತ್ತಿದ್ದಾಗ ಒಂದು ಸಂಪುಟದಲ್ಲಿ ಶ್ರೀನಿವಾಸರ ಸಣ್ಣಕತೆಗಳು ಸಿಕ್ಕಿದುವು. ಹೆಸರುವಾಸಿ ಪಡೆದ ಮೇಲುಮಟ್ಟದ ಸಾಹಿತ್ಯಸೇವೆಯನ್ನು ಸಲ್ಲಿಸಿದ ''ಮಧುರವಾಣೀ'' ಪತ್ರಿಕೆಯ ಐದಾರು ಸಂಪುಟಗಳನ್ನು ಒಟ್ಟಾಗಿ ಸೇರಿಸಿ ಹೊಲಿದಿದ್ದ ಆ ದೊಡ್ಡ ಪುಸ್ತಕದಲ್ಲಿ ಎಲ್ಲ ಜಾತಿಯ ಬರಹಗಳೂ ತುಂಬಿದ್ದವು. ಕೆಲವು ವಿಮರ್ಶೆಗಳೂ ಇದ್ದುವು. ಅವುಗಳಲ್ಲಿ ನಂಜನಗೂಡು ತಿರುಮಲಾಂಬಾ ಅವರ ಕತೆ ಕಾದಂಬರಿಗಳನ್ನು ಕುರಿತ ಒಂದು ವಿಮರ್ಶೆ ಇತ್ತು. ಕುತೂಹಲದಿಂದ ಅದನ್ನೋದಿದಾಗ ಎಂತಹ ಪರಿಶೀಲನೆ? ಎಂತಹ ಸಮರ್ಥನೆ ಅನ್ನಿಸಿತು. ಗುಣ ದೋಷಗಳ ನಿರೂಪಣೆಯೇ ವಿಮರ್ಶೆಯ ಉದ್ದೇಶವೆಂಬುದು ಆ ವಿಮರ್ಶೆಯಿಂದ ಸ್ಪಷ್ಟವಾಗುತ್ತಿತ್ತು. ವಿಮರ್ಶೆಯಲ್ಲಿನ ಮುಖ್ಯ ವಿಚಾರ ''ಸತೀ ಹಿತೈಷಿಣೀ ಗ್ರಂಥಮಾಲೆ''ಯ ಪುಸ್ತಕಗಳು ಹೆಚ್ಚಾಗಿ ಸ್ತ್ರೀಯರಿಗಾಗಿಯೇ ಬರೆಯುತ್ತ ಸ್ತ್ರೀಧರ್ಮ ನೀತಿಗಳನ್ನು ಪ್ರತಿಪಾದಿಸುತ್ತವೆ. ಆ ಉಪದೇಶಗಳು ದೀರ್ಘ ಉಪನ್ಯಾಸಗಳು. ಅವುಗಳ ಸಾರಾಂಶ - ಸತೀತ್ವ ರಕ್ಷಣೆಗೆ ವೈರಾಗ್ಯವೇ ಮುಖ್ಯಾಧಾರವೆಂಬುದು. ಆಶೆಗಳನ್ನು ಅದುಮಿಡಬೇಕು. ಅಲಂಕಾರಪ್ರಿಯರಾಗಬಾರದು ಇತ್ಯಾದಿ. ಇಂತಹ ವೈರಾಗ್ಯಮನೋಧರ್ಮ ಆಚರಣೆ ಯೌವನವತಿಯಾದ ಸತಿಗೆ ಸಾಧ್ಯವೇ? ಸದ್ಗುಣಗಳು ಭೂಷಣವಾಗಿದ್ದರೂ ಅವುಗಳೊಂದಿಗೆ ಆಕೆಗೆ ಕೈ ಬಳೆಗಳೂ ಭೂಷಣವೇ. ಸಭ್ಯಶೃಂಗಾರದಿಂದ ಶೋಭಿತಳಾಗಿ ಸುಖ ಸಂತೋಷಗಳನ್ನು ಅನುಭವಿಸುವುದು ಸಹಜಧರ್ಮವೇ ಆದೀತು. ಸನ್ಯಾಸೀ ಮನೋಧರ್ಮವನ್ನು ಬೆಳೆಸಿಕೊಂಡು ನಡೆದು ಕೊಳ್ಳುವುದು ಅಷ್ಟು ಸಹಜವಾಗಲಾರದು.'' ಈ ವಿಮರ್ಶೆ ಶ್ರೀನಿವಾಸರದು, ಆ ಮಾತುಗಳು ಇನ್ನೂ ಚೆನ್ನಾಗಿದ್ದಿರಬಹುದು. ಆ ಕ್ರಮವೇ ಬೇರೆ. ಓಹೋ! ಇವರು ಕತೆಗಾರರು ಮಾತ್ರವಲ್ಲ. ಒಳ್ಳೆಯ ವಿಮರ್ಶಕರು. ಈ ವ್ಯಕ್ತಿ ವಿದ್ಯಾವಿನಯಶೀಲಗಳಿಂದ ಅಗ್ರಗಣ್ಯನಾಗಿರಬಹುದು. ಇಂತಹ ಪ್ರತಿಭಾಶಾಲಿಯನ್ನು ನೋಡುವುದು ಯಾವಾಗ? ಆಸ್ಪತ್ರೆಯಿಂದ ಮನೆಗೆ ಬಂದ ಒಂದೆರಡು ತಿಂಗಳಲ್ಲೇ ಶ್ರೀನಿವಾಸರ ಪ್ರಥಮ ಸಂದರ್ಶನವಾಯಿತು. ಸಂಶಯ ನಿವೃತ್ತಿಯಾಯಿತು.

ಅವರಿಗೆ ಸಾಹಿತ್ಯದಲ್ಲಿದ್ದಷ್ಟೇ ಸಂಗೀತದಲ್ಲೂ ಒಲವಿದೆ ಎಂದು ಆ ದಿನ ಗೊತ್ತಾಯಿತು. ಅಂದು ಏನೋ ಉತ್ಸವ ಮನೆಯಲ್ಲಿ. ಮಧ್ಯಾಹ್ನದ ಮೇಲೆ ನಮ್ಮ ದೊಡ್ಡಣ್ಣ ಶಾಮಣ್ಣ ಇಬ್ಬರು ಮಿತ್ರರನ್ನು ಮನೆಗೆ ಕರೆದುಕೊಂಡು ಬಂದರು. ಉಪಹಾರ ಉಪಚಾರಗಳಾದಮೇಲೆ ಸಂಗೀತವನ್ನು ಕೇಳಲು ಎಲ್ಲರೂ ಕುಳಿತರು. ಒಬ್ಬರು ಅಣ್ಣನ ಸಹಪಾಠಿಗಳು. ಮಾಸ್ತಿ ವೆಂಕಟೇಶಯ್ಯಂಗಾರ್ಯರು, ಶಾಮಣ್ಣ ಪರಿಚಯಮಾಡಿಕೊಡುತ್ತಾ ಇವರೇಮ್ಮಾ ''ಶ್ರೀನಿವಾಸ'' ಅಂದರು. ಇನ್ನೊಬ್ಬರು ಯು.ತಿ. ನಾರಾಯಣ ಮೂರ್ತಿಗಳು. ಸಂಗೀತವೆಂದರೆ ಪ್ರಾಣ ಅವರಿಗೆ. ನಮ್ಮ ಸ್ವಜನರು ಎಂದು ಮಾಸ್ತಿಯವರಲ್ಲಿ ಅಭಿಮಾನವಾಗಿ ''ನಾನು ಯಾರೋ ಅಂದುಕೊಂಡಿದ್ದೆ'' ಅಂದಾಗ, ಅವರೇ ಹೇಳಿದರು - ಸ್ವಜನಮಾತ್ರವಲ್ಲಮ್ಮಾ ನಾನು ನಿಮಗೆ ಬಂಧುವೂ ಹೌದು.

ಕೃಷ್ಣಸ್ವಾಮಯ್ಯಂಗಾರ್ರು ನನ್ನ ಮಾವಂದಿರು. ಹಾಗೇನು? ಅವರ ಸೊಸೆ ನನಗೆ ನಾದಿನಿ. ಯಜಮಾನರ ದೊಡ್ಡಮ್ಮನ ಮಗಳೂ ಈ ಬಾಂದವ್ಯಕ್ಕಿಂತ ಹೆಚ್ಚಾಗಿ ಸಂಗೀತ ಸಾಹಿತ್ಯಗಳ ಬಾಂದವ್ಯದಿಂದ ಬಳಕೆ. ಕ್ರಮೇಣ ಹೆಚ್ಚುತ್ತಾ ಬಂತು. ನಮ್ಮ ಬಂಧುವರ್ಗಕ್ಕೆ ಸೇರಿದ ವೆಂಕಟರಂಗನ್ ಮಾಸ್ತಿಯವರ ಪರಮ ಮಿತ್ರರು. ಎಳೆತನದಿಂದ ಅವರಿಗೆ ಸಲಿಗೆ ಇತ್ತು. ಅಪೇಕ್ಷೆಯಾದಾಗ ಇಬ್ಬರೂ ಬಂದು ಸಂಗೀತವನ್ನು ಕೇಳುತ್ತಿದ್ದ ದಿನಗಳೆಷ್ಟೋ. ಆಗ ಅವರಿಗೆ ಇಷ್ಟವಾದದ್ದು, ಇವರಿಗೆ ಇಷ್ಟವಾದದ್ದು ಎಲ್ಲ ಆಗಬೇಕು.

ಮಾಸ್ತಿಯವರ ಗೃಹಲಕ್ಷ್ಮಿ

ಅವರು ಮೊದಲು ಒಂದು ಕುದುರೆಗಾಡಿಯನ್ನಿಟ್ಟುಕೊಂಡಿದ್ದರು. ಒಂದು ದಿನ ಆಫೀಸಿಗೆ ಹೋಗುವ ಮೊದಲು ಮಡದಿಮಕ್ಕಳನ್ನು ವಿಶ್ವೇಶ್ವರಪುರದಲ್ಲಿದ್ದ ಮಾವನವರ ಮನೆಗೆ ಬಿಟ್ಟು ಹೋಗಲು ಗಾಡಿಯಲ್ಲಿ ಬರುತ್ತಿದ್ದರು. ದಾರಿಯಲ್ಲಿ ನನ್ನನ್ನು ಕಂಡು ಕೂಡಲೇ ಗಾಡಿಯನ್ನು ನಿಲ್ಲಿಸಿ ತಮ್ಮ ಸತೀಮಣಿಯ ಪರಿಚಯವನ್ನು ಮಾಡಿಕೊಟ್ಟರು. ಸೌ|| ಪಂಕಜಮ್ಮ ಮಾರನೆಯ ದಿನವೇ ಮನೆಗೆ ಬರಲು ಆಹ್ವಾನಿಸಿದರು. ಸ್ವಾಮ್ಯಕ್ಕೆ ಸಾಕಾರವಿತ್ತ ಸಾಧ್ವೀರತ್ನ ಮಾಸ್ತಿಯವರ ಗೃಹಲಕ್ಷ್ಮಿ. ನಾವು ಮನೆಗೆ ಹೋದಾಗ ಮಾಡಿದ ಆದರಾತಿಥ್ಯದಿಂದ ಸಣ್ಣವರಾದ ನಮ್ಮನ್ನು ಇವರಿಷ್ಟು ದೊಡ್ಡವರನ್ನಾಗಿ ಮಾಡುತ್ತಿದ್ದಾರಲ್ಲಾ ಎಂದು ನನಗೆ ಸಂಕೋಚವಾಯಿತು. ಸಲಿಗೆ ಹೆಚ್ಚಿದಂತೆ ಅವರೆಷ್ಟು ಸಲ ನಮ್ಮ ಮನೆಗೆ ಬರುತ್ತಿದ್ದರೋ, ನಾವೆಷ್ಟು ಸಲ ಅವರ ಮನೆಗೆ ಹೋಗಿಬರುತ್ತಿದ್ದೆವೋ; ನಲವತ್ತೈದು ವರ್ಷಗಳ ಸ್ನೇಹ ಬಾಂಧವ್ಯದಲ್ಲಿ ಆ ಗಣತಕ್ಕೆ ಬೆಲೆಯುಂಟೆ? ಪರಸ್ಪರ ವಿಶೇಷ ಸಂದರ್ಭಗಳೆಷ್ಟೋ ಬಂದುವು. ಕೆಲವು ಮಾತ್ರ ನೆನಪಿನಲ್ಲಿವೆ.

ಮೈಸೂರಿನ ಪ್ರಖ್ಯಾತ ಪಿಟೀಲುವಾದಕ ಚೌಡಯ್ಯನವರು ಮೊದಲನೆಯ ಸಲ ಬೆಂಗಳೂರಿಗೆ ಬಂದರು. ಗಾಯನಸಮಾಜ ಕಛೇರಿಯನ್ನೇರ್ಪಡಿಸಿತ್ತು. ಶ್ರೋತೃಗಳು ಅಧಿಕವಾಗಿಯೇ ನೆರೆದಿದ್ದರು. ಮಾಸ್ತಿಯವರಿಗೆ ಚೌಡಯ್ಯನವರ ಪರಿಚಯ ಸ್ವಲ್ಪ ಹಳೆಯದಾಗಿದ್ದಿರಬಹುದು. ನಾನು ಅಂದೇ ಅವರನ್ನು ನೋಡಿದ್ದು. ಎಲ್ಲ ಮುಗಿದು ವೇದಿಕೆಯಿಂದ ವಾದಕರು ಕೆಳಗೆ ಬರುವವರೆಗೂ ಕಾದಿದ್ದು ಮಾಸ್ತಿಯವರು ಕುಶಲ ಪ್ರಶ್ನೆಮಾಡಿ ''ನಾಳೆ ಇದೇ ಸಮಾರಾಧನೆ ನಮ್ಮ ಮನೆಯಲ್ಲಿ ಆಗಬಹುದಷ್ಟೆ'' ಎಂದು ಕೇಳಿದಾಗ, ಅದಕ್ಕೇನು ಸಂತೋಷವಾಗಿ ಆಗಬಹುದು ಎಂಬ ಉತ್ತರ ಸಿಕ್ಕಿತು. ಅಲ್ಲಿದ್ದವರಿಗೆ ಅಲ್ಲಿಯೇ ಆಹ್ವಾನ. ನಮಗೆ ಅಷ್ಟೇ ಸಾಲದೆಂದು ಅವರಿಗೆ ತೋರಿತೋ ಹೇಗೋ ಮಾರನೇ ದಿನ ಮನೆಗೆ ಬಂದು ಸ್ವಲ್ಪ ಮುಂಚೆಯೇ ಬರಬೇಕು ಅಂದರು. ಜೊತೆಗೆ ಗೆಳೆಯ ವೆಂಕಟರಂಗನ್ ಇದ್ದರು. ಬಹುಶಃ ಇಬ್ಬರೂ ಆಫೀಸಿಗೆ ರಜಾಹಾಕಿ ಮನೆ ಮನೆಗೆ ಹೋಗಿ ಆಹ್ವಾನಿಸುವ ಕರ್ತವ್ಯ ತಾವೇ ವಹಿಸಿಕೊಂಡಿದ್ದರೇನೊ. ಐದುಗಂಟೆಗೆ ಸಭೆ ಆರಂಭವಾಗಬೇಕಾಗಿತ್ತು. ಒಂದು ಗಂಟೆ ಮೊದಲೇ ಸಭೆ ಬಂಧು ಮಿತ್ರರಿಂದ ತುಂಬಿತ್ತು. ಕಲಾವಿದರ ಆಗಮನಕ್ಕಾಗಿ ಬೇಕಾದ ಸಿದ್ಧತೆಯೆಲ್ಲಾ ಆಗಿತ್ತು. ಆಹ್ವಾನಗೌರವ ನೀಡಿ ಒಳಗೆ ಕರೆತರುವುದಕ್ಕಾಗಿ ಮಾಸ್ತಿಯವರೇ ಮುಖ್ಯರಾಗಿ ಒಂದು ಗುಂಪು ಹೊರಗೆ ಕಾದಿತ್ತು. ಐದು ಗಂಟೆಯಾಯಿತು. ಇನ್ನೇನು ಬರುತ್ತಾರೆ ಎಂಬ ತವಕ ಎಲ್ಲರಿಗೂ. ಆದರೆ ಆ ತವಕ ಸಂದೇಹಕ್ಕೆಡೆಗೊಟ್ಟಿತು. ''ಏಕೆ ತಡೆದರೋ! ಮರೆತುಬಿಟ್ಟರೋ ಹೇಗೊ! ಇಲ್ಲ ಇಲ್ಲ. ಅದು ಸಾಧ್ಯವಿಲ್ಲ. ಮಾತಿಗೆ ತಪ್ಪುವುದಿಲ್ಲ ಬಂದೇ ಬರುತ್ತಾರೆ. ಸಂದೇಹಕ್ಕೆ ಆಶಾವಾದ

ಜೊತೆಗೂಡಿದ ಒಂದು ರೀತಿಯ ಮೈತ್ರೀಭಾವ ಸೂಚನೆಯ ಮಾತುಗಳು ಒಳಗಿದ್ದವರಿಗೂ ಕೇಳಿ ಬಂದುವು. ಒಂದುಗಂಟೆ ಕಾದು ಸಾಕಾಗಿ ಮಿತ್ರರೊಬ್ಬರು ಒಳಗೆ ಬಂದರು.'' ಇದು ಸರಿಯಲ್ಲ ರಂಗಣ್ಣ! ಇಷ್ಟುಹೊತ್ತು ಇವರನ್ನೆಲ್ಲಾ ಕೂಡಿಸಿಕೊಂಡು ಬರಿಯ ಬೇಸರಿಕೆಯನ್ನು ಹೊರೆಸಿ ಕಳಿಸುವುದೇ ಅಂದರು ಮಾಸ್ತಿಯವರು. ಗೆಳೆಯ ರಂಗಣ್ಣ ದೃಷ್ಟಿಯನ್ನು ನನ್ನ ಕಡೆಗೆ ಹಾಯಿಸಿ ಕಣ್ಸನ್ನೆಯಲ್ಲೇ ಮಿತ್ರರಿಗೆ ಏನೋ ಸೂಚನೆಮಾಡಿದರು. ಇಂಗಿತಗಳಲ್ಲೇ ಒಂದು ನಿಶ್ಚಯಕ್ಕೆ ಬಂದು ಇನ್ನು ಕಾಯುವುದಕ್ಕೆ ಅರ್ಥವಿಲ್ಲ ಅಂದುಕೊಂಡರು. ನಮ್ಮ ಹಿರಿಯ ಬಂಧು ರಂಗಣ್ಣ ''ರಾಜಮ್ಮ ಸ್ವಲ್ಪ ಹೀಗೆ ಬರಬೇಕು'' ಅಂದಾಗ ಆ ಮರ್ಯಾದೆಯ ಕರೆಗೆ ನನಗೆ ಸಂಕೋಚವಾಯಿತು. ಆರು ವರ್ಷದ ಹುಡುಗಿಯಿಂದ ನನ್ನನ್ನು ತಂಗಿಯಂತೆ ತಿಳಿದು 'ರಾಜೀ'ಯೆಂದು ಕರೆಯುತ್ತಿದ್ದ ನಮ್ಮ ರಂಗಣ್ಣನಿಗೆ ನಾನೀಗ ಬಹಳ ದೊಡ್ಡವಳಾಗಿ ತೋರಿದೆನೇ? ಅದು ಸಮಯವಲ್ಲವಾದುದರಿಂದ ಆ ಸಂಕೋಚವನ್ನೊಂದು ಕಡೆ ಹಾಗೆಯೇ ಉಳಿಸಿಕೊಂಡೆ. ಮೊದಲೇ ಸ್ವಭಾವತಃ ವಿನಯವಂತರಾದ ಮಾಸ್ತಿಯವರು ಇನ್ನೂ ಅದನ್ನು ಹೆಚ್ಚುಮಾಡಿ ರಾಜಮ್ಮ! ನೀವೀಗ ನನ್ನ ಮರ್ಯಾದೆಯನ್ನುಳಿಸದಿದ್ದರೆ ಹೇಗೆ? ಇವರೆಲ್ಲ ನಿರಾಶೆಯಿಂದ ಎದ್ದು ಹೋಗುವುದು ನನಗೆ ಇಷ್ಟವಿಲ್ಲ ಅಂದರು. ರಂಗಣ್ಣ ವೀಣೆತರಿಸೋಣವೇನಮ್ಮ! ಅನ್ನುತ್ತಾರೆ. ಇವರಿಗೇನು ಉತ್ತರ ಕೊಡಲಿ? ಇದಕ್ಕೆ ಒಪ್ಪುವುದು ಸರಿಯೇ? ನನ್ನ ಸಹಾನುಭೂತಿಗಿಂತ ಹೆಚ್ಚಾಗಿ ಸ್ವಪ್ರತಿಷ್ಠೆಯನ್ನು ಸ್ಥಾಪನೆ ಮಾಡಿದಂತಾಗುವುದಿಲ್ಲವೇ? ಒಂದು ವೇಳೆ ಮಧ್ಯದಲ್ಲಿ ಆ ಕಲಾವಿದರೇ ಬಂದುಬಿಟ್ಟರೆ ಅವರೇನೆಂದುಕೊಳ್ಳಬಹುದು? ಈ ಸಂದಿಗ್ಧದಲ್ಲಿ ಮನಸ್ಸು ತರ್ಕಿಸುತ್ತಿದೆ. ಆಗ ಒಬ್ಬರು ಓಡಿಬಂದು ಅವರು ಬರುತ್ತಿದ್ದಾರೆ ಎಂದು ತಿಳಿಸಿದರು. ಮನೆಮುಂದಿನ ದಾರಿಯ ಕೊನೆಗೆ ಇಬ್ಬರು ಅವರಿಗಾಗಿ ಕಾಯುತ್ತ ನಿಂತಿದ್ದರು. ಎಲ್ಲರ ಮುಖದಲ್ಲೂ ಹೊಸಕಳೆ ಮೂಡಿತು. ನಾನೂ 'ಬದುಕಿದೆಯಾ ಬಡಜೀವವೇ' ಅಂದುಕೊಂಡೆ.

ಬಂದವರನ್ನು ಯಾರೂ ಯಾವ ಪ್ರಶ್ನೆಯನ್ನು ಮಾಡಲಿಲ್ಲ. ಅವರೇ ಕೈ ಮುಗಿದು ''ಕ್ಷಮಿಸಬೇಕು'' ಎಂದಷ್ಟು ಮಾತ್ರ ನುಡಿದು ತಮಗಾಗಿ ಸಿದ್ಧವಾಗಿದ್ದ ಸ್ಥಳದಲ್ಲಿ ಕುಳಿತು ಶ್ರುತಿಮಾಡಿದರು. ಗೊಂದಲದ ಆತಂಕ ತುಂಬಿದ್ದ ಸಭೆಯಲ್ಲಿ ಶುದ್ಧ ಮೌನತುಂಬಿತು. ವಾದನಕ್ಕೆ ಮೊದಲುಮಾಡಿ ಚೌಡಯ್ಯನವರು ಸಮಯ ಸ್ಫೂರ್ತಿಬಂದವರಂತೆ! 'ಮಾಕೇಲರಾ ವಿಚಾರಮು'' ಕೀರ್ತನೆ ಆರಂಭಿಸಿದರು. ಆಗ ಮೆಲ್ಲಗೆ ಪಿಸುಮಾತು ನನ್ನಬಾಯಲ್ಲಿ ಹೊರಟಿತು. 'ವಿಚಾರ ಬಗೆಹರಿಯಿತು ಮಹರಾಯ' ಪಕ್ಕದಲ್ಲಿ ಕುಳಿತಿದ್ದ ಸೌ|| ಪಂಕಜಮ್ಮ ಮೆಲ್ಲಗೆ ನಗುತ್ತಾ ಮೃದುವಾದ ಒಂದು ಏಟನ್ನು ಬೆನ್ನಮೇಲೆ ಹಾಕಿದರು. ಸೂಕ್ಷ್ಮವಾಗಿ ಇದನ್ನು ಗಮನಿಸಿದ ಗೆಳೆಯರಿಬ್ಬರೂ ಒಳಗೊಳಗೆ ನಗುತ್ತಿದ್ದಂತೆ ಕಂಡಿತು. ಮೂರುಗಂಟೆಯ ಕಾಲ ಸಂಗೀತ ಸುಖಾನುಭವದಲ್ಲಿ ಕಳೆಯಿತು. ಕಡೆಯಲ್ಲಿ ಅದಕ್ಕೆ ಮುಖ್ಯಕಾರಣರಾದ ಕಲಾವಿದರಿಗೆ ಯಥೋಚಿತ ಸನ್ಮಾನ, ಸದಸ್ಯರಿಗೆಲ್ಲ ಗಂಧ ಪುಷ್ಪತಾಂಬೂಲಗಳ ಸತ್ಕಾರ. ಅಂದಿನ ಆ ಸಂತೋಷ ಕೂಟದ ಹಿನ್ನೆಲೆ ಯಾರ ಮನಸ್ಸಿನಲ್ಲೂ ಉಳಿಯಲಿಲ್ಲ. ನನಗೂ ಪೂರ್ಣ ಸಮಾಧಾನವೇ ಆಗಿತ್ತು. ಆದರೆ ಒಬ್ಬರಿಗೆ ಮಾತ್ರ ಆ ಹಿನ್ನೆಲೆ ಹಾಗೆಯೇ ಉಳಿದು ಮನಸ್ಸಿಗೆ ತೊಂದರೆ ಕೊಡುತ್ತಿತ್ತೆಂದು; ಅದನ್ನು ನಿವಾರಿಸಿಕೊಳ್ಳಲು ಕೆಲವೇ ದಿನಗಳಲ್ಲಿ ಅವರು ಮಾಡಿದ ಏರ್ಪಾಟಿನಿಂದ ತಿಳಿಯಿತು.

ಅಂದು ಕಲಾವಿದರ ಆಗಮನಕ್ಕೆ ಮುಂಚೆ ಮಿತ್ರರಿಬ್ಬರೂ ನನ್ನೊಂದಿಗೆ ಮಾಡಿದ ಪ್ರಸ್ತಾಪವನ್ನು ತಿಳಿದಿದ್ದ ಸೌ॥ ಪಂಕಜಮ್ಮನವರಿಗೆ ಆ ವಿಷಯ ಅಲ್ಲಿಗೇ ಮುಗಿಸಿ ಬಿಡುವುದು ಸೂಕ್ತವೆನಿಸಲಿಲ್ಲ. ಅದಕ್ಕಾಗಿ ಒಂದು ದಿನ ಹೆಂಗಸರ ಕೂಟವನ್ನೇರ್ಪಡಿಸಿ ನನ್ನನ್ನು ಕರೆಸಿಕೊಂಡರು. ಹಿಂದಿನ ಸಭೆಗೆ ಸಮಾನವಾಗಿಯೇ ಆ ಸಭೆಯೂ ಚೆನ್ನಾಗಿ ನಡೆಯಿತು. ಕಡೆಯಲ್ಲಿ ಅವರ ಪ್ರೀತಿಯ ಸನ್ಮಾನವೂ ಆಯಿತು. ಆ ಪ್ರಿಯ ಸೋದರಿಯ ನೆನಪಿನದಾಗಿ ಅವರಿತ್ತ ವಸ್ತು ಈಗಲೂ ನನ್ನಲ್ಲಿ ಜೋಪಾನವಾಗಿದೆ. ಎಂಟು ಗಂಟೆಗೆ ಮಾಸ್ತಿಯವರು ಬಂದರು. ಸಭೆ ಮುಕ್ತಾಯವಾಗಿತ್ತು. ಅವರು ನಾನು ಕೇಳಬೇಡವೆ? ಅಂದಾಗ ಅವರಿಗಾಗಿ ಪುನಃ ವಾದ್ಯವನ್ನು ಹಿಡಿದು ಅವರಿಗಿಷ್ಟವಾಗಿದ್ದ ಎರಡು ದೇವರನಾಮಗಳನ್ನು ''ಸಾಮಾನ್ಯವಲ್ಲ ಶ್ರೀ ಹರಿಸೇವಾ'' ''ನಾನಿನ್ನ ಧ್ಯಾನದೊಳಿರುತಿರೆ'' ಹಾಡಿದ ಮೇಲೆ ಪರಸ್ಪರ ಧನ್ಯವಾದಗಳು ಮಾತುಕತೆಗಳು ಮುಗಿದು ಮಾಸ್ತಿಯವರೇ ಕಾರಿನಲ್ಲಿ ನನ್ನನು ಕರೆತಂದು ಮನೆಗೆ ಮುಟ್ಟಿಸಿದರು.

ಕೆಲವು ವರ್ಷ ಅವರನ್ನು ಮೈಸೂರಿಗೆ ವರ್ಗಾಯಿಸಿದ್ದಾಗ ಸ್ವಗೃಹವನ್ನು ಬಾಡಿಗೆಗೆ ಕೊಟ್ಟಿದ್ದರು. ಪುನಃ ಬೆಂಗಳೂರಿಗೇ ಹಿಂತಿರುಗಿ ಬಂದಾಗ ಒಂದೆರಡು ಕಡೆ ಬಾಡಿಗೆ ಮನೆಗಳಲ್ಲಿ ಇರಬೇಕಾಯಿತು. ಶಂಕರಪುರದಲ್ಲೇ ಅವರು ಒಂದು ಬಂಗಲೆಯಲ್ಲಿದ್ದಾಗ, ಕಾರ್ಯದ ನಿಮಿತ್ತ ಒಂದು ದಿನ ಹೋಗಿದ್ದೆ. ಮಕ್ಕಳೆಲ್ಲ ಹೊರಗೆ ಆಡುತ್ತಿದ್ದರು. ಒಳಗೆ ನಡುಮನೆಯಲ್ಲಿ ಸೌ॥ ಪಂಕಜಮ್ಮ ಚಟ್ನಿಪುಡಿಯನ್ನು ಮಾಡುವ ಕೆಲಸದಲ್ಲಿ ನಿರತರಾಗಿದ್ದರು. ಅಡಿಗೆಯ ಅಯ್ಯಂಗಾರ‍್ರ ಸಹಾಯ ಪಡೆದು ಆತನು ಕುಟ್ಟುವುದು, ಇವರು ಕೈಯಿಂದ ತಳ್ಳುವುದು ಹೀಗೆ ವಸ್ತು ಸಿದ್ಧವಾಗುತ್ತಿತ್ತು. ಹುಡುಗರಿಂದ ನನ್ನ ಬರುವಿಕೆಯನ್ನು ತಿಳಿದು ಆ ಕೆಲಸವನ್ನು ನಿಲ್ಲಿಸಿ ಅಲ್ಲಿಗೇ ಕರೆಸಿಕೊಂಡರು. ನಿಮ್ಮ ಕೆಲಸ ಮುಗಿಸಿ, ನನಗೇನೂ ಆತುರವಿಲ್ಲ ಯಜಮಾನರನ್ನು ನೋಡಬೇಕಾಗಿದೆ ಅಂದ ಮೇಲೆ ಅವರು ತಮ್ಮ ಕೆಲಸಕ್ಕೆ ತೊಡಗಿದರು. ಅಯ್ಯಂಗಾರ‍್ರು ಒನಕೆಯಿಂದ ಕುಟ್ಟುತ್ತಿದ್ದಾಗ ಆಯತಪ್ಪಿ ತಳ್ಳುತ್ತಿದ್ದ ಬೆರಳುಗಳ ಮೇಲೆ ಏಟುಬಿತ್ತು. ಸರಕ್ಕನೆ ಕೈ ಹಿಂದಕ್ಕೆ ಬಂತು. ಐಯ್ಯಂಗಾರ‍್ರ ಮುಖ ಪೆಚ್ಚಾಯಿತು. ಕೂಡಲೇ ನಾನು ಕೈ ತಣ್ಣೀರಿನಲ್ಲಿಡಿ ಒದ್ದೆ ಬಟ್ಟೆಯನ್ನು ಕಟ್ಟಿ ಎಂದು ಬಟ್ಟೆಯ ಚೂರಿಗಾಗಿ ಹುಡುಗರನ್ನು ಕರೆಯಲು ಎದ್ದೆ. ಅವರದನ್ನು ಗ್ರಹಿಸಿ ಬೇಡ ಬೇಡ ಅಷ್ಟು ನೋವೇನೂ ಇಲ್ಲ ಅನ್ನುತ್ತಾ ಬನ್ನಿ ಅಯ್ಯಂಗಾರ‍್ರೇ ಇದನ್ನು ಮುಗಿಸಿಬಿಡೋಣ, ಯಜಮಾನರು ಬರುವ ಹೊತ್ತಾಯಿತು ಎಂದು ಕೆಲಸವನ್ನು ಮುಗಿಸಿ ಕೈತೊಳೆದುಕೊಂಡು ಬಂದು ಕುಶಲ ಪ್ರಶ್ನೆ ಮಾಡಿ ಬಂದ ಕಾರಣವನ್ನು ಕೇಳಿದರು. ''ಅದನ್ನು ತಿಳಿಸುತ್ತೇನೆ. ಇದೆಂತಹ ತಾಳ್ಮೆ ನಿಮ್ಮದು? ಹೀಗೆಯೇ ಬಿಟ್ಟರೆ ಕೈ ಭಾವು ಬರುತ್ತದೆ. ನೋವು ಹೆಚ್ಚಾಗುತ್ತದೆ. ಈಗಲಾದರೂ ತಣ್ಣೀರಿನ ಬಟ್ಟೆ ಸುತ್ತಿ ಅಂದರೆ ಅದಕ್ಕೆ ಹೀಗೆ ಉತ್ತರ ಬಂತು. ''ಅವರು ಬರುವ ಹೊತ್ತು. ಏನೋ ಪ್ರಮಾದವಾದಂತೆ ಅವರಿಗೆ ತೋರುತ್ತದೆ. ಗಂಡಸರು ಮನೆಗೆ ಬರುವ ಹೊತ್ತಿನಲ್ಲಿ ಮನೆಯಲ್ಲಿ ಅವರ ಸಂತೋಷವನ್ನು ಕೆಡಿಸುವ ಹಾಗಿರಬಾರದು'' ಇದನ್ನು ಕೇಳಿದ ಮೇಲೆ ಮಕ್ಕಳನ್ನು ಕರೆಯುವುದು ಬೇಡ ಅಂದುದಕ್ಕೆ ಕಾರಣ ಗೊತ್ತಾಯಿತು. ವಿನಯದ ಗಣಿಯಾದ ಪುರುಷನಿಗೆ ಇಂತಹ ಕ್ಷಮಾವತಿಯೇ ಸರಿಯೆಂದು ಆ ಬ್ರಹ್ಮನ ಬುದ್ಧಿ ಚಾತುರ್ಯ ಜಾಗರೂಕವಾಗಿದ್ದರಬೇಕು, ಅಂದುಕೊಳ್ಳುತ್ತಾ ವಿಧಾತನಿಗೆ ಮನಸ್ಸಿನಲ್ಲೇ ಪ್ರಣಾಮಗಳನ್ನು ಸಲ್ಲಿಸಿದೆ.

ಮಾಸ್ತಿಯವರ ಸಾರಥ್ಯದಲ್ಲೇ ಕಾರು ಒಳಕ್ಕೆ ಬರುತ್ತಿತ್ತು. ಅವರ ಕಡೆಯ ಮಗಳು ಚೆಂಡನ್ನು ತರಲು ಅಡ್ಡವಾಗಿ ಓಡಿಬರುತ್ತಿದ್ದಳು. ಹೇಗೋ ಮಾಡಿ ಕಾರನ್ನು ತಡೆದು ''ಹಿಂದಕ್ಕೆ ಹೋಗು'' ಎಂದು ಗದರಿಸಿದರು. ಭಯದಿಂದ ಮಗು ಅಲ್ಲಿಯೇ ನಿಂತುಕೊಂಡಿತು. ಕಾರು ಸರಾಗವಾಗಿ ಸ್ವಸ್ಥಾನ ಸೇರಿತು. ಹೊರಾಂಗಣದಲ್ಲಿ ನಿಂತು ಅವರ ಮಡದಿ ನಾನು ಇಬ್ಬರೂ ನೋಡುತ್ತಿದ್ದೆವು. ''ಓಹೋ ಏನಮ್ಮಾ ಚೆನ್ನಾಗಿದ್ದೀರಾ'' ಅನ್ನುತ್ತಾ ಮನೆಯೊಳಕ್ಕೆ ಬಂದರು. ಮಕ್ಕಳೂ ಆಟವನ್ನು ಬಿಟ್ಟು ಒಳಕ್ಕೆ ಬಂದರು. ತುಂಬು ವಾತ್ಸಲ್ಯದ ನೋಟದಿಂದ ದೂರದಲ್ಲಿ ನಿಂತ ಮಗುವನ್ನು ಹತ್ತಿರಕ್ಕೆ ಕರೆದು ಮುದ್ದುಮಾಡಿ 'ಕಾರಿಗೆ ಅಡ್ಡವಾಗಿ ಹಾಗೆ ಓಡಿ ಬರಬಹುದೇನಮ್ಮ!' ಎಂದು ಸಮಾಧಾನಮಾಡಿ ನಮ್ಮ ಕಡೆ ನೋಡಿ 'ನಾನು ಅಷ್ಟು ಗದರಿಸಬಾರದಾಗಿತ್ತು' ಅಂದುದಕ್ಕೆ ಆ ತಂದೆಯ ಶೀಘ್ರ ಪಶ್ಚಾತ್ತಾಪಕ್ಕೆ ಆಶ್ಚರ್ಯವಾಗಿ 'ಎಷ್ಟಾದರೂ ದೊಡ್ಡ ಜೀವ, ಸಣ್ಣವರಿಗೆ ಈ ಸುಲಭತನ ಹೇಗೆ ಬಂದೀತು?' ಮನಸ್ಸು ಹಾಗೆ ಹೇಳಿತು.

ಉಡುಪನ್ನು ಬದಲಾಯಿಸಿ ಉಪಹಾರ ಸೇವನೆ ಮುಗಿಸಿ ಬಂದ ಮೇಲೆ ಸಮಾಧಾನವಾಗಿ ಕುಳಿತು ಒಬ್ಬರೇ ಬಂದಿದ್ದೀರಲ್ಲಾ ಏನು ವಿಶೇಷ? ಎಂದು ಕೇಳಲು ಹಿಂದೆಯೇ ಅವರ ಸತಿ ಏನೋ ಪುಸ್ತಕ ತಂದಿದ್ದಾರೆ ನಿಮಗಾಗಿ ಕಾದಿದ್ದಾರೆ ಅಂದರು. ಪ್ರಬುದ್ಧ ಕರ್ನಾಟಕದಲ್ಲಿ ಅಚ್ಚಾಗಿದ್ದ ನನ್ನ 'ತಪಸ್ವಿನೀ' ಕಾವ್ಯ ನಾಟಕವನ್ನು ಪುಸ್ತಕ ರೂಪದಲ್ಲಿ ಹೊರತರುವ ಉದ್ದೇಶದಿಂದ ಹಿರಿಯರ ಕೈಲಿ ಮುನ್ನುಡಿಯೊಂದನ್ನು ಬರೆಸೋಣವೆಂದು ನಾನು ಅವರಲ್ಲಿಗೆ ಹೋದ ಕಾರಣವನ್ನು ತಿಳಿಸಿದೆ. ಪುಸ್ತಕವನ್ನು ಕೊಟ್ಟಾಗ (ಅದು ಹಸ್ತಪ್ರತಿ) ಸಂತೋಷದಿಂದ ನನ್ನ ಇಷ್ಟವನ್ನು ಒಪ್ಪಿಕೊಂಡರು. ಹಾಗೆಯೇ ಅಕ್ಷರಗಳನ್ನು ನೋಡುತ್ತ 'ನಿಮ್ಮ ಅಕ್ಷರ ಚೆನ್ನಾಗಿದೆ. ಸುಲಭವಾಗಿ ಓದಬಹುದು. ನನ್ನದು ಸ್ವಲ್ಪ ತೊಡಕು ಅಲ್ಲವೇ? '' ಅಂದ ಮಾತಿಗೆ ನಿಮ್ಮ ಮುನ್ನುಡಿ ನೋಡಿದಾಗಲಲ್ಲವೇ ಅದು ತಿಳಿಯಬೇಕಾದರೆ; ಅಕ್ಷರಗಳು ಮುಖ್ಯವೇ ಅಭಿಪ್ರಾಯ ಮುಖ್ಯವೇ? ಇದಕ್ಕೆ ಉತ್ತರ, ಎರಡೂ ಒಳ್ಳೆಯದಾಗಿದ್ದರೆ ಚೆನ್ನ.'' ಅಂದಿನ ಅನುಭವದಲ್ಲಾದ ಎಲ್ಲಿಯೂ ಓದಿ ಕಲಿಯದಿದ್ದ ಸಹನೆ ಪಶ್ಚಾತ್ತಾಪಗಳ ಪಾಠಗಳು ಚೆನ್ನಾಗಿ ಇಂದಿಗೂ ನೆನಪಿನಲ್ಲುಳಿದುಕೊಂಡಿವೆ.

ಇದನ್ನು ಮೀರಿಸಿದ ಇನ್ನೊಂದು ಪಾಠ. ಒಂದು ದಿನ ನಮ್ಮ ಮನೆಯ ಆರಕ್ಷತೆಗೆ ಕರೆಯಲು ಬೆಳಗ್ಗೆ ಎಂಟು ಗಂಟೆಗೇ ಅವರ ಮನೆಗೆ ಹೋದೆ. ನಮ್ಮ ಅಣ್ಣನ ಮಗುವಿನ ವರ್ಧಂತಿ ಆ ದಿನ. ಸೌ॥ ಪಂಕಜಮ್ಮ ಮನೆಯಲ್ಲಿರಲಿಲ್ಲ. ಸ್ವಲ್ಪ ಹೊತ್ತು ಕುಳಿತುಕೊಂಡಿರಿ, ಈಗಲೇ ಬರುತ್ತಾರೆ ಎಂದು ಹಿರಿಯ ಮಗಳು ಹೇಳಿದಳು. ಸೌ॥ ಪಂಕಜಮ್ಮ ಜಟಕಾದಿಂದ ಇಳಿದು ಒಳಕ್ಕೆ ಬಂದರು. ಕೆರೆಯಲ್ಲಿ ಸ್ನಾನಮಾಡಿ ಬಂದವರೇ ನೀರು ಮನೆಗೆ ಹೋಗಿ ಪುನಃ ಸ್ನಾನಮಾಡಿ ಬಂದರು. ಹಿಂದಿನವರ ಪದ್ಧತಿ, ಬಹಿಷ್ಠೆಯಾರಾದವರು ಕೆರೆಗೆ ಸ್ನಾನಕ್ಕೆ ಹೋಗುವುದು. ಮನೆಯಲ್ಲಿ ಆಮೇಲೆ ಮಾಡಲಿ ಬಿಡಲಿ ಕೆರೆಯ ನೀರಿನಲ್ಲಂತೂ ಮುಳುಗಿ ಬರಬೇಕು. ಅದು ಆಗಿನವರ ಶಿಷ್ಟಾಚಾರ, ಸಂಪ್ರದಾಯ, ಏನಾದರನ್ನಬಹುದು. ಇಬ್ಬರೂ ಜೊತೆಯಲ್ಲೇ ಕಾಫಿ ಸೇವನೆ ಮಾಡುತ್ತಾ ಹೀಗೆ ಮಾತು ನಡೆಯಿತು. ಇದೇನು ಪಂಕಜಮ್ಮ! ಈ ಕಾಲದಲ್ಲಿ ಇಷ್ಟೆಲ್ಲಾ ಆಚಾರ ಯಾರು ಮಾಡುತ್ತಾರೆ? ಬೆಂಗಳೂರೇನು ನದೀತೀರವೇ? ಯಾವ ಪುರುಷಾರ್ಥಕ್ಕೆ ಈ ಹಿಂಸೆ ಮಾಡಿಕೊಳ್ಳಬೇಕು?

ಹಿರಿಯರ ಕಾಲದಿಂದ ಬಂದ ಪದ್ಧತಿ. ಮನೆಯಲ್ಲೇ ಸ್ನಾನ ಮಾಡದರೆ ಅಡಿಗೆ ಮನೆಯಲ್ಲಿ ಏನನ್ನೂ ಮುಟ್ಟುವಹಾಗಿಲ್ಲ.

ಆಗ ನಾನಂದುಕೊಂಡಿದ್ದು 'ಓಹೋ ಅತ್ತೆ ಮನೆಯ ಸೊಸೆ. ಅವರ ಆಜ್ಞೆಯನ್ನು ತಲೆಯಲ್ಲಿ ಹೊತ್ತಿರಬೇಕು.' ಮನಸ್ಸು ತಡೆಯದೆ ನಾಲಿಗೆ ನುಡಿಯಿತು. ನಿಮ್ಮ ಅತ್ತೆಯವರಿಗೆ ಹೆಣ್ಣು ಮಕ್ಕಳಿಲ್ಲವೇ?

ಈ ಮಾತು ಅವರಿಗೆ ಸರಿಯೆಂದೆನಿಸಲಿಲ್ಲ. ಸಹಿಸಲೂ ಇಲ್ಲ. ನಮ್ಮ ಅತ್ತೆಯವರು ಪಟ್ಟಿರುವ ಕಷ್ಟಗಳಲ್ಲಿ ಇದು ಯಾವ ಲೆಕ್ಕಕ್ಕೆ? ತಿಂಗಳಿಗೆ ಒಂದು ದಿನ ಕೆರೆಗೆ ಹೋಗುವುದೇ ನಮಗೆ ಕಷ್ಟವಾದರೆ ಅದೇ ದಿನ ಪದ್ಧತಿಯಾಗಿದ್ದವರ ಪಾಡೇನು? ಒದ್ದೆ ಬಟ್ಟೆಯಲ್ಲೇ ಮನೆಗೆ ನಡೆದು ಬರುತ್ತಿದ್ದರಲ್ಲಾ! ಈ ಸಣ್ಣ ವಿಷಯಕ್ಕಾಗಿ ಅವರನ್ನು ನೋಯಿಸಬೇಕೇ? ಎಂದು ಅವರೆಂದಾಗ ನನ್ನ ಸಣ್ಣತನಕ್ಕೆ ನನಗೇ ನಾಚಿಕೆಯಾಯಿತು. ಅವರ ಅತ್ತೆಯವರು ಬಡತನದ ಭವಣೆಯನ್ನು ಕಂಡವರು. ಈಕೆಯೋ ಶ್ರೀಮಂತ ಪುತ್ರಿ; ಶ್ರೀಮಂತ ಗೃಹಿಣಿ. ಇಂತಹ ಪದವಿಯಲ್ಲಿ ಎಷ್ಟೋ ಅಟ್ಟಹಾಸದಿಂದ ಇರಬಹುದಲ್ಲವೇ? ಮೊದಲೇ ತಿಳಿಸಿದಂತೆ ಆಕೆಯು ಸಾಧ್ವೀರತ್ನ ಸಹಾನಾಮೂರ್ತಿ, ಕ್ಷಮೆಗೆ ಸಾಕ್ಷಿ. ಅತ್ತೆಯವರ ಸಮಾಧಾನಕ್ಕಾಗಿ ಕಾಯ ಕಷ್ಟವನ್ನು ಗಣಿಸದೆ ಇಷ್ಟಪಟ್ಟು ನಡೆದುಕೊಂಡ ಸಹಿಷ್ಣು. ಬೇರೆಯವರು ಮಾಡಿದರೆ ಅತ್ತೆಯವರ ಉಪಯೋಗಕ್ಕೆ ಬರುವುದಿಲ್ಲವೆಂದು ಸಾರಿನ ಪುಡಿ ಮುಂತಾದುವನ್ನು ತಾವೇ ಕಯ್ಯಾರ ಮಾಡುತ್ತಿದ್ದರು. ಸಾಹಿತ್ಯ ರಚನೆಯ ಸುಖಾನುಭದಲ್ಲಿ ಮಗ್ನರಾಗಿದ್ದಾಗ ಅವರ ಪತಿ ದೇವರಿಗೆ ಇವರ ಆ ರಚನಯ ಸುಗಂಧದ ಸ್ಪರ್ಶ ಸುಖಾನುಭವವೂ ಆಗಾಗ ಆಗಿರಬೇಕು. ಎರಡು ರಚನೆಗಳೂ ಸಾರವಸ್ತುಗಳೇ. ಹಿತಪರಿಣಾಮಗಳೇ. ಹಿರಿಯರನ್ನೊಲಿಸುವ ಕಾರಣ ಮಾತ್ರವಲ್ಲ. ಅವರಿಗೆ ಆ ಪದ್ಧತಿಗಳು ರೂಢಿಯಾಗಿ ಹಾಗೆಯೇ ಅವರನ್ನು ಪಳಗಿಸಿದ್ದುವು. ಆದರೂ ಆಧುನಿಕ ರೀತಿ ನಾಗರಿಕ ಜೀವನ ಇವುಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಅಂದರೆ ಅವರದು ನಾಗರಿಕ ಜೀವನವಾಗಿರಲಿಲ್ಲವೆಂದು ಅರ್ಥವಲ್ಲ. ಅವರದು ಆರ್ಯ ಧರ್ಮದ ಅತ್ಯೊತ್ತಿದ ನಾಗರಿಕ ಜೀವನ. ಸತೀತ್ವದ ಮೂಲ ತತ್ವಗಳನ್ನೇ ಪ್ರತಿಪಾದಿಸುವ ಯೋಗ ಜೀವನ. ಆ ತತ್ವಗಳಿಗೇ ಸಂಚಕಾರ ಬರುತ್ತಿರುವ ಧರ್ಮ ಸಂಕರದ ಈ ಸುಧಾರಣೆಗಳ ಮುನ್ನೋಟದಲ್ಲಿ ಇನ್ನು ಮುಂದೆ ಅಂತಹ ಜೀವನಗಳನ್ನು ಯಾರೂ ನೋಡುವಂತಿಲ್ಲ; ಹಳೆಯ ಮಾತುಗಳಿಂದ ಮಾತ್ರ ತಿಳಿಯಬಹುದು. ನನಗಾದರೂ ಆಂಗ್ಲ ಭಾಷಾ ಪರಿಚಯವಿಲ್ಲ. ಸೌ॥ ಪಂಕಜಮ್ಮ ಆ ಭಾಷೆಯನ್ನು ಪರಿಚಯ ಮಾಡಿಕೊಂಡಿದ್ದರು. ಸಂಗೀತ ಸಾಹಿತ್ಯಗಳಲ್ಲಿ ಅವರಿಗಿದ್ದ ಅಭಿರುಚಿಯೂ ಸಾಮಾನ್ಯವಾದುದಲ್ಲ. ಅವರ ಪ್ರಜ್ಞೆ ಲೋಕಾನುಭವ ಅವರ ಒಂದೊಂದು ಮಾತಿನಲ್ಲೂ ಒಂದೊಂದು ಆಚರಣೆಯಲ್ಲೂ ವ್ಯಕ್ತವಾಗುತ್ತಿದ್ದವು. ನಿರಾಡಂಬರ ಸರಳ ಜೀವನ ಅವರದು. ಶುದ್ಧ ಸಾತ್ವಿಕ ಮನೋವೃತ್ತಿ. ಐಹಿಕ ಸುಖ ಲಾಲಸೆಗೆ ಸಾಕಷ್ಟು ಅನುಕೂಲಗಳಿದ್ದರೂ ಅವರ ದೃಷ್ಟಿ ಪಾರಮಾರ್ಥಿಕದ ಕಡೆಗೇ ಇದ್ದು ಜೀವನವನ್ನು ಗೆದ್ದರು. ತಾವೇ ಗೆಲ್ಲಬೇಕು ಎಂದು ಯಾರೊಂದಿಗಾಗಲೀ ಮಾತಿನಿಂದ, ಕೃತಿಯಿಂದ ಪ್ರತಿಭಟನೆಗೆ ನಿಂತವರಲ್ಲ. ಮೌನದಿಂದ ಸೋತು ಸೋತು ಗೆದ್ದಿದ್ದಾರೆ. ಸಾಧ್ವೀತನದ ಶಕ್ತಿ ಕಾಣುವುದು ಇಂತಹ ಗೆಲುವಿನಲ್ಲಿ! ಈ ಸತ್ಯವನ್ನು ತಮ್ಮ ಜೀವನದಲ್ಲಿ ಸಾರಿ ಸತೀತ್ವವನ್ನು ಪಾಲಿಸಿದ ಸಾಧ್ವೀಮಣಿಯರನ್ನು ನನ್ನ ಜೀವಮಾನದಲ್ಲಿ ಕೆಲವರನ್ನಾದರೂ ಕಂಡಿದ್ದೇನೆ. ಅವರ ವಿಶ್ವಾಸಕ್ಕೆ ಪಾತ್ರಳಾಗಿದ್ದೇನೆ ಎಂದು ಹೇಳಿಕೊಳ್ಳುವ

ಹೆಮ್ಮೆ ನನ್ನದು. ಎಲ್ಲ ಸ್ತ್ರೀವಾಚಕಗಳಲ್ಲಿ ''ಸಾಧ್ವೀ'' ಎಂಬ ಸಂಬೋಧನೆ ನನಗೆ ಹಿತವಾಗಿ ರಮ್ಯವಾಗಿದೆ. ಸ್ತ್ರೀತ್ವದ ಒಂದು ಚಿತ್ರವನ್ನು ಸಾಧ್ವೀತ್ವದ ಪ್ರಯೋಗದಲ್ಲಿ ರೂಪಿಸಿಕೊಳ್ಳಬಹುದು. ಸತೀತ್ವದ ಅಸದೃಶ ಸತ್ಯದ ಮಹಿಮಾಕಾರವನ್ನೇ ''ಸಾಧ್ವಿ'' ಎಂಬ ಪದ ಕಣ್ಮುಂದೆ ನಿಲಿಸುತ್ತದೆ.

ಸೌ|| ಪಂಕಜಮ್ಮ ಹಳೆಯ ರೂಢಿಗಳಲ್ಲಿ ಪಳಗಿದ್ದರು ಅಂದುದಕ್ಕೆ ಒಂದೆರಡು ಉದಾಹರಣೆಗಳು ಸಾಕು. ಅತ್ತೆಯವರು ಇಲ್ಲದಿದ್ದಾಗಲೂ ಅವರು ಅವುಗಳನ್ನು ಬಿಟ್ಟವರಲ್ಲ. ಮಾಸ್ತಿಯವರು ''ಮಂಜುಳಾ'' ನಾಟಕವನ್ನು ಬರೆದು ಒಂದು ದಿನ ತಮ್ಮ ಮಿತ್ರ ಪರಿವಾರವನ್ನು ಕರೆದು ಆ ನಾಟಕವನ್ನು ಓದಿದರು. ವಾಚನಾರಂಭಕ್ಕೆ ಪೂರ್ತಿ ಶೀಕಿಕೆಯಾಗಿ ಬಂದವರಿಗೆ ಸಮಯೋಚಿತ ಸತ್ಕಾರ. ಸಭೆ ಸೇರಿದ್ದು ಮಹಡಿಯ ಮೇಲೆ. ಸತ್ಕಾರದ ಪರಿಕರಗಳು ಕೆಳಗಿನಿಂದ ಮೇಲಕ್ಕೆ ಬರಬೇಕು. ಕೆಳಗೆ ಪಾಕಶಾಲೆಯಲ್ಲಿ ಸೌ|| ಪಂಕಜಮ್ಮ ಕೋಸಂಬರಿ, ಪಾನಕ, ನೀರುಮಜ್ಜಿಗೆ ಇತ್ಯಾದಿ ಕನ್ನಡಿಗರ ಸುಲಭ ಸತ್ಕಾರ ವಸ್ತುಗಳನ್ನು ಅಣಿ ಮಾಡಿದ್ದರು. ಮಾಸ್ತಿಯವರು ಕೆಳಗೆ ಬಂದು ಮಹಡಿಯ ಮೇಲಿನ ಆಚರಣೆಯಿಂದ ತಮ್ಮ ಸಹಾಯ ಹಸ್ತವೂ ಇರಲಿಯೆಂದು ಒಂದು ಪಾತ್ರೆಯನ್ನು ಕೈಗೆ ತೆಗೆದುಕೊಳ್ಳುವ ಪ್ರಯತ್ನ ಮಾಡುವ ಮೊದಲೇ ''ಯಾವ ಯಾವ ಕೈಯಿಂದಲೋ ಮುಟ್ಟಬೇಕೇ'' ಎಂಬ ಮಾತು ಅವರ ಪ್ರಯತ್ನವನ್ನು ತಡೆಯಿತು. ಅಲ್ಲಿಯೇ ಕುಳಿತಿದ್ದ ನಾನು ''ಇದೇನು ಪಂಕಜಮ್ಮ! ಉತ್ತಮ ಸಾಹಿತ್ಯವನ್ನು ರಚಿಸುವ ತಿಂಗಳಿಗೆ ಸಾವಿರ ರೂಪಾಯಿಗಳನ್ನು ತರುವ ಪವಿತ್ರ ಹಸ್ತಗಳಲ್ಲವೇ ಅವು? ಅಂದಾಗ, ಅವರು ಅದು ಸರಿಯೇ ಆದರೂ ಕೈ ತೊಳೆಯದೆ ಇವುಗಳನ್ನು ಮುಟ್ಟಬಾರದು. ಇವೂ ಅಷ್ಟೇ ಪವಿತ್ರ ಅಲ್ಲವೇ? ಅಂದರು. ಮಾಸ್ತಿಯವರು ಹಾಗಾದರೆ ಕೈತೊಳೆದು ಬರುತ್ತೇನೆ'' ಎಂದು ನೀರುಮನೆಗೆ ತಿರುಗುವುದರೊಳಗೇ ''ಆ ನೀರು ಬೇಡ, ನಾನೇ ಹಾಕುತ್ತೇನೆ'' ಎಂದು ಒಳಗಿನ ಬೆಳ್ಳಿಯ ಚೊಂಬಿನ ಮಡಿ ನೀರನ್ನು ಕೈಗೆ ಹಾಕಿದರು. ನಗುತ್ತಾ ಮಾಸ್ತಿಯವರು ತಮ್ಮ ಸಹಾಯವನ್ನು ಮುಂದುವರೆಸಿದರು. ಅವರು ಅನುಸರಿಸಿದ್ದ ನಿಷ್ಠೆ ಹಳೆಯ ಕಂದಾಚಾರವಾಗಲಿ, ಗೊಡ್ಡುತನವೇ ಆಗಲಿ, ಅದರಲ್ಲಿ ಈ ನಂಬಿಕೆಯಲ್ಲಿ ಸನಾತನ ಶಿಷ್ಟಾಚಾರದ ಶುದ್ಧ ಹೃದಯವಿತ್ತು. ಶ್ರದ್ಧೆ ಇತ್ತು. ಒಂದು ಆದರ್ಶವಿತ್ತು. ಆರ್ಯ ಸಂಸ್ಕೃತಿಯ ಮೂಲಗುರಿ, ಆ ವಿಶಿಷ್ಟತೆ, ಅವರ ದೈವಭಕ್ತಿಯಲ್ಲಿ ಧರ್ಮ ಶ್ರದ್ಧೆಯಲ್ಲಿ ಎದ್ದು ಕಾಣುತ್ತಿದ್ದುವು. ನಿಸ್ಸಂಕೋಚದ ನಿಷ್ಕಳಂಕ ಮನೋವೃತ್ತಿಗೆ ಅನುಗುಣವಾದ ಶುದ್ಧಾಚರಣೆ. ಪವಿತ್ರತೆ ಎಂದರೆ ಇದು. ಇಲ್ಲಿದೆ ''ಆರ್ಯ ಮರ್ಯಾದೆ'' ಎಂಬ ಮಾತಿನ ಅರ್ಥ. ಜೀವನಸಿದ್ಧಿಗೆ ಹಿಡಿದ ಮಾರ್ಗಕ್ಕೆ ಬೇಕಾದ ಬೆಳಕು ಆ ಮರ್ಯಾದೆಯಲ್ಲಿ ಗೋಚರವಾಗುತ್ತದೆ. ಆ ಸಿದ್ಧಿಯೇ ನಿಜವಾದ ''ಜೀವನ ಸೌಂದರ್ಯ.'' ಈ ವೈಖರಿಯಲ್ಲೇ ಆ ಸಾಧ್ವೀಮಣಿಯ ನಿತ್ಯ ಜೀವನ ವಿಕಾಸವಾಗುತ್ತ ಬಂದಿತ್ತು.

ಶಿವಮೊಗ್ಗ ಸಾಹಿತ್ಯ ಸಮ್ಮೇಳನ ದ.ರಾ. ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ನಡೆಯಿತು. ನಾನು ಆಗ ಮಹಿಳಾಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದೆ. ಎಲ್ಲರೂ ಒಟ್ಟಾಗಿಯೇ ಪ್ರಯಾಣ ಮಾಡಿದೆವು. ಸೌ|| ಪಂಕಜಮ್ಮ ಅಭಿಮಾನದ ಬಲಾತ್ಕಾರದಿಂದ ಆ ಉತ್ಸವಕ್ಕೆ ಬಂದರು. ಊರು ಸೇರುವವರೆಗೂ ಹಾಲನ್ನು ಬಿಟ್ಟು ದಾರಿಯಲ್ಲಿ ಮತ್ತೇನನ್ನೂ ತೆಗೆದುಕೊಳ್ಳಲಿಲ್ಲ. ಸ್ನೇಹಿತರ ಮನೆಯಲ್ಲಿ ತಂಗಿದರು. ಒಂದು ಹೊತ್ತಾದರೂ ಎಲ್ಲಿಯೂ ಊಟ ಮಾಡಲಿಲ್ಲ. ಸ್ವಯಂ ಪಾಕ. ಆದರೂ ತಪ್ಪದೆ ಉತ್ಸವದ ಎಲ್ಲ ಕಾರ್ಯಕಲಾಪಗಳನ್ನು

ನೋಡಿ ಕೇಳಿ ಸಂತುಷ್ಟರಾದರು. ನನ್ನಲ್ಲಿ ಅವರಿಟ್ಟಿದ್ದ ಅಭಿಮಾನವಾದರೂ ಅಸಾಮಾನ್ಯ. ಜೀವನ ಪತ್ರಿಕೆಯನ್ನು ಬೇರೊಬ್ಬರಿಗೆ ವಹಿಸಿಕೊಟ್ಟು ವಿರಮಿಸಿದ ದಿನ ಒಂದು ವಿತರಣೋತ್ಸವವನ್ನು ದಂಪತಿಗಳು ನಡೆಸಿದರು. ಅಂದು ನಾನು ಹೋದಾಗ ಅವರಿಗಾದ ಸಂತೋಷವೆಷ್ಟೋ. ಕೆಲವೇ ವರ್ಷಗಳಲ್ಲಿ ಅವರ ಜೀವನ ಯಾತ್ರೆ ಮುಗಿಯಿತು. ಆ ಸುದ್ದಿ ತಿಳಿದಾಗ ಇನ್ನು ಮಾಸ್ತಿಯವರ ಶಕ್ತಿ ಸರ್ವಸ್ವವೂ ಉಡುಗಿತು, ಎಂದು ಸಹಜವಾಗಿ ಎಲ್ಲರೂ ಅಂದುಕೊಳ್ಳುವಂತೆ ನಾವೂ ಅಂದುಕೊಂಡೆವು. ನನಗೆ ಅನಾರೋಗ್ಯವಾಗಿ ಆ ಪ್ರಿಯ ಸೋದರಿಯ ಅಂತ್ಯದರ್ಶನ ಮಾಡಲು ಆಗಲಿಲ್ಲ. ಶ್ರೀ ಶರ್ಮರು ಹೋಗಿಬಂದರು. ''ಮಾಸ್ತಿಯವರಿಗೆ ಬಹಳ ದುಃಖವಾಗಿರಬೇಕು; ಇನ್ನವರು ಬೇಸರದ ದಿನಗಳನ್ನು ನೂಕಬೇಕು'' ಎಂದು ನುಡಿದಾಗ ''ಲೋಕದಲ್ಲಿ ಸಾಮಾನ್ಯರು ಆಚರಿಸುವಂತೆ ನಾವು ಅವರನ್ನು ಭಾವಿಸುತ್ತೇವೆ. ನಾವು ತಿಳಿದಿರುವುದಕ್ಕಿಂತ ಅವರು ಬಹಳ ದೊಡ್ಡವರು. ಸ್ಥಿತಪ್ರಜ್ಞರು ಹೇಗೆ ನಡೆದುಕೊಳ್ಳಬೇಕೋ ಹಾಗೆಯೇ ಅವರು ನಡೆದುಕೊಂಡರು. ಅವರಿಗೆ ಸಮಾಧಾನ ಹೇಳುವ ಯೋಗ್ಯತೆಯಾದರೂ ಯಾರಿಗಿದೆ? ಅವರಿಗೆ ಅದರ ಅಗತ್ಯವೂ ಇಲ್ಲ. ಹಾಗೆ ಹೇಳ ಹೋದವರಿಗೆ ''ಮನುಷ್ಯ ಎಷ್ಟು ಆಸೆ ಪಡುವುದು? ಅದನ್ನು ಎಲ್ಲಿಗಾದರೂ ಮುಗಿಸಬೇಕಷ್ಟೇ, ಸಾಕು. ಇದರಲ್ಲಿ ಅನ್ಯಾಯವೇನೂ ಇಲ್ಲ''ಯೆಂದೂ ತಾವೇ ಸಮಾಧಾನ ಹೇಳಿದರು. ಈ ಉತ್ತರದಿಂದ, ಇದು ಮಹಾನುಭಾವರಾದ ಮಾಸ್ತಿಯಂತವರಿಗೇ ಸಾಧ್ಯವಲ್ಲದೆ ಇತರರಿಗೆ ಊಹಿಸುವುದಕ್ಕೂ ಸಾಧ್ಯವಲ್ಲ. ಅವರು ಮೆಚ್ಚಿದ, ನಾಡು ಮೆಚ್ಚಿದ ''ಸುಬ್ಬಣ್ಣ'' ಹಾಗೆಯೇ ಸಮಾಧಾನ ತಂದುಕೊಂಡಿದ್ದಾನೆ. ಲಲಿತಾ ಲೋಕವನ್ನು ಬಿಟ್ಟು ಹೋದಾಗ ಸುಬ್ಬಣ್ಣ ಅಳಲಿಲ್ಲ. 'ಇದೇ ಸರಿ' ಅಂದುಕೊಂಡ. ಅಪ್ರಯೋಜಕನೆಂದೆನಿಸಿಕೊಂಡಿದ್ದ ಸುಬ್ಬಣ್ಣನನ್ನೇ ಆ ಮಟ್ಟದ ವೇದಾಂತಿಯನ್ನಾಗಿ ಮಾಡಿದ ಸಾಹಿತ್ಯ ಸೃಷ್ಟಿಕರ್ತನಿಗೆ ಅಂತಹ ಮನೋದಾರ್ಢ್ಯ ಸಹಜ ಸಿದ್ಧವಲ್ಲದೆ ದೌರ್ಬಲ್ಯ ಸೋಂಕಲು ಸಾಧ್ಯವೇ? ಈಗಲೂ ಅವರು ಎಂದಿನಂತೆಯೇ ನಗೆಮೊಗದಿಂದ ನುಡಿಯುತ್ತಾರೆ ನಡೆಯುತ್ತಾರೆ. ಒಂದು ದಿನ ಮನೆಗೆ ಬಂದಿದ್ದಾಗ ಅವರನ್ನು ಗೆಳತಿ ಪಂಕಜಮ್ಮನನ್ನು ಕುರಿತು ಅವರೇ ಏನಾದರೂ ಬರೆದಿರಬಹುದು ಎಂದು ನಾನು ಊಹಿಸಿ ಹಾಗೇಯೇ ಕೇಳಿದೆ. ''ನಾನೇನೂ ಬರೆಯಲಿಲ್ಲ. ನೀವು ಬರೆಯಿರಿ'' ಎಂದು ನನಗೇ ಹೇಳಿದರು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ನನಗೆ ನೆನಪಿಗೆ ಬಂದ ಸಂಗತಿಗಳನ್ನು ಬರೆದಿದ್ದೇನೆ. ಆ ಸ್ನೇಹಮಯಿ ಸೋದರಿಯ ಆತ್ಮಕ್ಕೆ ಇದು ಪ್ರೀತಿಯಾದೀತು.

ಇನ್ನು ಅಣ್ಣ ಮಾಸ್ತಿಯವರನ್ನು ಕುರಿತು ಹೆಚ್ಚಾಗಿ ಹೇಳುತ್ತಾ ಹೋದರೆ ಅದು ದೊಡ್ಡ ಪುಸ್ತಕವಾದೀತು. ಎಷ್ಟೇ ಸಂಕ್ಷೇಪ ಮಾಡಿದರೂ ದೊಡ್ಡವರ ವಿಚಾರ ದೊಡ್ಡದೇ ಆಗುತ್ತದೆ. ಯಾರನ್ನಾಗಲಿ ಪೂಜ್ಯಭಾವದಿಂದ ನಾವು ಪ್ರಸ್ತಾಪ ಮಾಡಿ ಮಾತನಾಡುವಾಗ ''ಅವರು ಬಹಳ ದೊಡ್ಡ ಮನುಷ್ಯರು ಅನ್ನುತ್ತೇವೆ. ಬಹಳ ಒಳ್ಳೆಯವರು, ಅದೃಷ್ಟವಂತರು,'' ಹಾಗೆ ನಮಗೆ ಅಭ್ಯಾಸಕ್ಕೆ ಬಂದಿರುವ ಮೆಚ್ಚು ನುಡಿಗಳು ಬಾಯಲ್ಲಿ ಬರುತ್ತವೆ. ನಮಗಿಷ್ಟರಾದವರನ್ನು ಕುರಿತು ಅವರ ಯೋಗ್ಯತೆಯ ಪ್ರಮಾಣ ಇಷ್ಟೇ ಎಂದು ನಿಶ್ಚಯಿಸಿ ಹೇಳಲಾರೆವು. ಮಾಸ್ತಿಯವರನ್ನು ಯಾರಿಗೆ ಹೋಲಿಸೋಣ? ಒಂದೊಂದು ಗುಣವನ್ನು ಒಬ್ಬೊಬ್ಬರಿಗೆ ಹೋಲಿಸಿ ಅವರಿಗೆ ಸಮಾನರಾದ ವಿದ್ಯಾಜ್ಞಾನ ಸಂಪನ್ನರು,

ಇವರನ್ನು ಮೀರಿಸಿದ ಉದಾರಿಗಳು, ಅವರನ್ನು ಸರಿಗಟ್ಟುವ ವಿನಯಶೀಲರು, ಆ ಮಟ್ಟದ ಪ್ರತಿಭಾವಂತರು; ಎಂದು ಹೋಲಿಸುತ್ತಾ ಹೋದರೆ ಗುಣಗಳಿಂದ ಘನತೆವೆತ್ತ ಕೆಲವು ಗಣ್ಯ ಮನನೀಯರ ನೆನಪಾದೀತು. ಅವರ ಯೋಗ್ಯತಾ ಸಿದ್ಧಿ ಪ್ರಮಾಣಕ್ಕೆ ಸಿಗುವುದಿಲ್ಲ. ಅದನ್ನು ತೂಕ ಮಾಡುವ ತಕ್ಕಡಿಯೂ ಇಲ್ಲ, ಹಾಗೆ ಮಾಡುವ ಪ್ರಯತ್ನ ಬುದ್ಧಿವಂತಿಕೆಯಾಗದೆ ದಡ್ಡತನವಾದೀತು. ಹಿಮಾಲಯವನ್ನು ನಮ್ಮೂರ ಗುಡ್ಡಕ್ಕೆ, ಮಹಾನದಿಯನ್ನು ನಾವು ದಾಟುವ ಕಾಲುವೆಗೆ, ಹೋಲಿಸುವಂತೆ ಆದೀತು. ಸಜ್ಜನರು ಶ್ರೇಷ್ಠ ಮಾನವರು ಅನ್ನಿಸಿಕೊಂಡವರ ಆದರ್ಶವೇನು? ಸಾಧನೆ ಏನು? ಅದಕ್ಕಾಗಿ ಅತಿಶಯವಾಗಿ ಅವರಲ್ಲಿದ್ದ ಶಕ್ತಿ ಸಾಹಸಗಳೇನು ಎಂದು ವಿಚಾರಮಾಡಿ ಉದಾತ್ತ ಜೀವನವನ್ನು ನಡೆಸಿದ ಧನ್ಯಾತ್ಮರನ್ನು ಕೆಲವರನ್ನಾದರೂ ನಾವು ತಿಳಿದಿದ್ದರೆ ನಮ್ಮ ಮಾಸ್ತಿಯವರಿಗೆ ಅವರ ಪಕ್ಕದಲ್ಲಿಯೇ ಮಣೆ ಹಾಕುತ್ತೇವೆ. ಆದರ್ಶ ಜೀವನದಿಂದ ಭಾರತೀಯತ್ವಕ್ಕೆ ನಿದರ್ಶನವಾಗಿ ಹೆಸರಾಂತ ಮಾದರೀ ಮನೆತನಗಳಲ್ಲಿ ಮಾಸ್ತಿಯವರ ಮನೆತನದ ಮಾದರಿಯೂ ಸ್ಮರಣೀಯವಾಗಿರುತ್ತದೆ. ಅವರ ಸೌಮ್ಯ ಸೌಜನ್ಯ ಸೌಹಾರ್ದಶೀಲವನ್ನು ಅವರ ಮಾತುಗಳಿಂದಲೇ ತಿಳಿಯಬೇಕು. ಸಣ್ಣ ಕತೆಗಳಿಂದ ಮೊದಲಾಗಿ ದಿನ ದಿನಕ್ಕೆ ಬೆಳೆದು ಅಗಾಧ ಸಾಹಿತ್ಯ ರಾಶಿಯೇ ನಮ್ಮ ಮುಂದಿದೆ. ಅದು ಇನ್ನು ದೊಡ್ಡದಾಗುತ್ತದೆ. ಭಾರತೀಯ ಮನೋಧರ್ಮ, ಅವರ ತಪೋಮಯ ಜೀವನ, ಆ ತ್ಯಾಗ ಮಹಿಮೆ, ಇವುಗಳನ್ನು ತಿಳಿಯಲು ಇಂದಿನ ಸಾಹಿತ್ಯದಲ್ಲಿ ಸಹಾಯವೇನಾದರೂ ಉಂಟೇ ಎಂದು ಯಾರಾಗಾದರೂ ಕುತೂಹಲವಿದ್ದರೆ ಅಂತವರು ಆಸಕ್ತಿಯಿಂದ ಮಾಸ್ತಿಯವರಂತಹ ಸಾಹಿತ್ಯಾರಾಧಕರ ಸಾಹಿತ್ಯವನ್ನು ಪರಿಚಯ ಮಾಡಿಕೊಳ್ಳಬೇಕು. ಆ ಮೂಲಕ ಅವರನ್ನು ದರ್ಶಿಸಬೇಕು. ಆ ರಾಶಿಯಲ್ಲಿ ನಾವೆಲ್ಲಿದ್ದೇವೆ ಎಂದು ಗಮನಿಸಬೇಕು. ಹಾಗೆ ನಮ್ಮ ಸ್ವರೂಪ ದರ್ಶನವೂ ಆಗುತ್ತದೆ. ಇಂತಹವರ ಕಾಲದಲ್ಲಿ ನಾವೂ ಇದ್ದೇವಲ್ಲ ಎಂದು ಹೆಮ್ಮೆಯಿಂದ ಅವರ ಪ್ರತ್ಯಕ್ಷ ದರ್ಶನ ಮಾಡಿ ಪಾದಗಳಿಗೆರಗಿ ಆಶೀರ್ವಾದ ಭಾಗ್ಯವನ್ನು ಹೊಂದುವ ಧನ್ಯತೆಗೆ ಪಾತ್ರರಾಗಬೇಕು.

ಆ ಧನ್ಯತೆ ನನಗೆ ಮೇಲಿಂದಮೇಲೆ ಲಭಿಸುತ್ತಾ ಬಂದಿದೆ. ಆ ರಾಶಿಯಲ್ಲಿ ಎಲ್ಲ ರೀತಿಗಳೂ ಎಲ್ಲ ನೀತಿಗಳೂ ಉಂಟು. ಯಾರಿಗೆ ಯಾವ ಸಂದೇಹವಾದರೂ ಅದಕ್ಕೆ ಪರಿಹಾರ ಅದರಲ್ಲಿ ಸಿಗುತ್ತವೆ. ಎಷ್ಟೇ ಮಹತ್ವವಾದ ಜನರ ಮನಸ್ಸನ್ನಾಕರ್ಷಿಸುತ್ತಿದ್ದರೂ ಕನ್ನಡಿಗರಿಗೆ ಅವರು ಹಿರಿಯಣ್ಣ ಮಾಸ್ತಿಯವರೇ. ನನಗಾದರೂ ಸಣ್ಣ ಕತೆಗಳ ''ಶ್ರೀನಿವಾಸ''. ಆ ಹೆಸರೂ ಮೊದಲಿನ ಅವ್ಯಕ್ತ ಪರಿಚಯವೂ ಒಂದು ರೀತಿಯಲ್ಲಿ ಕೃತಜ್ಞತೆಯನ್ನು ತುಂಬುತ್ತದೆ. ಅವರ ಅಭಿಮಾನ ಪ್ರೋತ್ಸಾಹಗಳಿಂದ ಹೇಗೆ ಬೆಳೆಯುತ್ತ ಬಂದೆ ಎಂಬುದನ್ನೂ ಚೆನ್ನಾಗಿ ಗ್ರಹಿಸಿದ್ದೇನೆ. ಆ ಪೂಜ್ಯರಿಗೆ ನನ್ನ ಕೃತಜ್ಞತೆಗಳನ್ನು ಹೇಗೆ ತಿಳಿಸಲಿ? ನಾಡಿನ ಚಿರಂಜೀವಿಗಳಿಗೆಲ್ಲಾ ಅವರ ಆಶೀರ್ವಾದ ಭಾಗ್ಯ ಇನ್ನೂ ದೀರ್ಘಕಾಲ ಲಭಿಸುತ್ತಿರುವಂತೆ ಭಗವದನುಗ್ರಹವನ್ನು ಹಾರೈಸುತ್ತಾ ಧನ್ಯಜೀವಿ ಪವಿತ್ರಾತ್ಮ ಅಣ್ಣ ಶ್ರೀನಿವಾಸರಿಗೆ ಮನಸಾ ಶಿರಸಾ ನಮಸ್ಕಾರಗಳನ್ನು ಅರ್ಪಿಸಿದರೆ ಕೃತಜ್ಞತೆ ಸಂದಂತಾಯಿತಲ್ಲವೇ?

ಎರಡು ನೆನಪುಗಳು

ಅನುಪಮಾ ನಿರಂಜನ

ಒಂದು ಭಾನುವಾರ. ಬೆಳಗಿನ ಹನ್ನೊಂದು ಗಂಟೆಯ ವೇಳೆಗೆ ಶ್ರೀ ನಿರಂಜನರೂ ಮತ್ತು ನಾನು ಮಾಸ್ತಿಯವರ ಮನೆ ತಲುಪಿದೆವು. ಗವಿಪುರ ವಿಸ್ತರಣದ ಹಳೆಯ ಕಾಲದ ಗಟ್ಟಿಮುಟ್ಟಾದ ಮನೆ. ಮನೆಯ ಮುಂದಿನ ಜಗಲಿಗೆ ಜಾಲರಿಯಿತ್ತು.

ನಾನು ಮೆಟ್ಟಿಲ ಮೇಲೆ ನಿಂತು ಮೆಲ್ಲನೆ ಬಾಗಿಲು ಬಡಿದಾಗ, ಮಧ್ಯವಯಸ್ಕ ಮಹಿಳೆಯೊಬ್ಬರು ಬಂದು ಅಗಣಿ ತೆಗೆದರು.

''ಮಾಸ್ತಿಯವರಿದ್ದಾರೆಯೇ?'' ಶ್ರೀ ನಿರಂಜನರ ಪ್ರಶ್ನೆ.

''ಇದಾರೆ. ತಾವು?''

''ನನ್ಹೆಸರು ನಿರಂಜನಾಂತ. ಇವರು ಅನುಪಮಾ.''

''ಓ, ಬನ್ನಿ. ಒಳಗೆ ಕೂತ್ಕೊಳ್ಳಿ.''

ಜಗಲಿ ದಾಟಿ ನಾವಿಬ್ಬರೂ ಹಜಾರದೊಳಗೆ ಕಾಲಿರಿಸಿದೆವು. ಮರದ ಸ್ಕ್ರೀನೊಂದರಿಂದ ಹಜಾರ ಇಬ್ಭಾಗವಾಗಿತ್ತು. ಬಲಬದಿಯ ಕೋಣೆ ಮಾಸ್ತಿಯವರದು. ಅಲ್ಲಿ ನಾಲ್ಕಾರು ಕುರ್ಚಿಗಳಿದ್ದುವು. ನಾವು ಸುತ್ತಲೂ ವೀಕ್ಷಿಸುತ್ತಾ ಕುಳಿತೆವು.

ಒಂದೆರಡು ನಿಮಿಷ ಕಳೆಯುವುದರೊಳಗೆ ಮಾಸ್ತಿಯವರು ಸರಸರನೆ ಒಳಬಂದರು. ಬಿಳಿಯ ಕಚ್ಚೆಪಂಚೆ, ಷರಟು, ಹಸನ್ಮುಖಿ. ಕರುಣೆ ತುಂಬಿತುಳುಕುವ ಕಣ್ಣುಗಳು.

ನಾವು ಎದ್ದುನಿಂತೆವು, ''ನಮಸ್ಕಾರ'' ಎಂದೆವು.

''ದಂಪತಿಗಳು ಬಂದ್ಬಿಟ್ಟಿದೀರ, ತುಂಬಾ ಸಂತೋಷ. ಕುತ್ಕೊಳ್ಳಿ.''

ಮಾತು ಸಾಹಿತ್ಯದ ಕಡೆಗೆ ಹರಿಯಿತು. ಹಿಂದಿನ, ಇಂದಿನ ಸಾಹಿತ್ಯದ ತುಲನೆಮಾಡುತ್ತಾ ಮಾಸ್ತಿಯವರು ಮಾತಾಡುವುದನ್ನು ಕೇಳುವುದೇ ಒಂದು ಸೊಗಸಾದ ಅನುಭವ.

''ಈಗ ಅವಸರದ ಬರವಣಿಗೆಯೇ ಜಾಸ್ತಿ. ಇದರಿಂದ ಸಾಹಿತ್ಯದ ಗುಣ, ಮಟ್ಟ, ಕಡಿಮೆಯಾಗುತ್ತಾ ಇದೆ. ನಮ್ಮ ಕಾಲದಲ್ಲಿ ನಾವು ಬರೀತಿದ್ದದ್ದು ಆತ್ಮತೃಪ್ತಿಗೋಸ್ಕರ. ಸಾಹಿತ್ಯ ಸಾಧನೆ ಮಾಡೋದೇನು ಸುಲಭವೇ? ಅದೊಂದು ತಪಸ್ಸು ಇದ್ದ ಹಾಗೆ.''

ಮುಂದೆ ಮಾಸ್ತಿಯವರ ಪುಸ್ತಕಗಳನ್ನು ಟೀಕಿಸಿದವರ ಪ್ರಸ್ತಾಪ ಬಂತು. ಆಗ ಮಾಸ್ತಿಯವರೆಂದರು :

''ಹೊಗಳಿಕೆ, ಟೀಕೆ ಇವೆರಡನ್ನೂ ನಾನು ಒಂದೇ ಅಂತ ತಿಳ್ದಿದೀನಿ. ಟೀಕೆ ಮಾಡಿದೋರ ಬಗ್ಗೆ ಸ್ವಲ್ಪವಾದ್ರೂ ಕೋಪವಿಲ್ಲ. ಕೋಪವಾದರೂ ಯಾಕೆ? ಅವರವರ ಅಭಿಪ್ರಾಯ ಅವರಿಗೆ, ಅಲ್ಲವೆ?''

ಸೌಜನ್ಯದ ಮೂರ್ತಿ ಮಾಸ್ತಿಯವರಿಗೆ ಸಿಟ್ಟು ಕೂಡ ಹತ್ತಿರ ಸುಳಿಯದು. ಪ್ರಪಂಚವೆಲ್ಲಾ ತನ್ನದು ಎನ್ನುವ ವಿಶಾಲ ದೃಷ್ಟಿ. ಶತ್ರುಗಳಾಗಲೀ ಸ್ನೇಹಿತರಾಗಲೀ ಒಂದೇ ಮನೋಭಾವ - ಪ್ರೀತಿ, ವಾತ್ಸಲ್ಯಗಳದ್ದು.

ಮಾಸ್ತಿಯವರು ಮೇಲೆದ್ದು ಮಗಳನ್ನು ಕರೆದರು. ಆಗ ಶ್ರೀ ನಿರಂಜನ, ''ನಮಗೇನೂ ಬೇಡಿ. ದಯವಿಟ್ಟು ತೊಂದರೆ ತಕೋಬೇಡಿ,'' ಎನ್ನುವ ಹೊತ್ತಿಗೆ, ನಾವು ಮುಂಚೆ ಕಂಡಿದ್ದ ಮಹಿಳೆ ಅಲ್ಲಿಗೆ ಬಂದರು.

''ಇವರು ನೋಡು ಅಪರೂಪಕ್ಕೆ ಬಂದಿದಾರೆ. ಕಾಫಿ ತಂದ್ಕೊಡು,'' ಎಂದು ಮಾಸ್ತಿ ನುಡಿದು ಅನಂತರ ನಮ್ಮತ್ತ ತಿರುಗಿ, ''ಈಕೆ ನನ್ನ ಮಗಳು, ನನ್ನ ಹೆಂಡ್ತಿ ಹೊರಟು ಹೋದಮೇಲೆ ನನ್ನ ನೋಡ್ಕೊಳ್ಳೋರು ಯಾರೂ ಇಲ್ಲ ಅಂತ ಅನ್ಕೊಂಡಿದ್ದೆ. ಅಳಿಯ, ಮಗಳು ಈಗ ನನ್ನೊತೇಲೇ ಇದಾರೆ. ಸಹಾಯ ಇಲ್ವಲ್ಲಾ ಅಂದ್ಕೊಂಡಾಗ ಆ ಪರಮಾತ್ಮ ಹ್ಯಾಗೋ ಅದನ್ನ ಒದಗಿಸ್ತಾನೆ.''

ಅಳಿದ ಹೆಂಡತಿಯ ನೆನಪಿನಿಂದ ಅವರ ಕಣ್ಣುಗಳು ಕಿರಿದಾದುವು. ಹಣೆಯ ಗೆರೆಗಳು ಆಳವಾದುವು. ಆದರೆ ಆ ಮೋಡ ಒಂದು ಕ್ಷಣದಲ್ಲಿ ಚೆದುರಿ, ಮಾಸ್ತಿಯವರ ಮುಖದಲ್ಲಿ ಮತ್ತೆ ಹೂ ನಗೆಯ ಬಿಸಿಲು ಹರಡಿತು.

ಕಾಫಿ ಕುಡಿದ ಬಳಿಕ ನಿರಂಜನ ಕೇಳಿದರು :

''ನಿಮ್ಮ 'ಭಾವ' ಕೃತಿಯ ಮೂರು ಸಂಪುಟಗಳು ನಮಗೆ ಬೇಕಾಗಿತ್ತು.''

ಮಾಸ್ತಿಯವರು ತಮ್ಮ ಪುಸ್ತಕಗಳ ಪ್ರಕಾಶಕರೂ ಹೌದು. 'ಭಾವ'ವನ್ನು ನಾವು ಕೊಂಡ ಬಳಿಕ, ಮಾಸ್ತಿಯವರು ತಮ್ಮ ಸಣ್ಣ ಕತೆಗಳ ಸಂಕಲನವೊಂದನ್ನು ನಾವು 'ಬೇಡಬೇಡ' ಎಂದರೂ ನಮ್ಮಿಬ್ಬರ ಹೆಸರು ಬರೆದು ಕೊಟ್ಟರು.

ನಾವು ಅಲ್ಲಿಂದ ಹೊರಟಾಗ ಮಾಸ್ತಿಯವರು ಬಾಗಿಲ ಬಳಿಯವರೆಗೂ ಬಂದು, ''ಮತ್ತೆ ಬನ್ನಿ,'' ಎಂದು ನುಡಿದಾಗ, ಅವರ ಮುಖದಲ್ಲಿ ಹರಡಿದ ವಾತ್ಸಲ್ಯದ ಬೆಳದಿಂಗಳು ನನ್ನ ನೆನಪಿನಲ್ಲಿ ಇನ್ನೂ ಹಸುರಾಗಿದೆ.

*

''ದಯವಿಟ್ಟು ಜ್ಞಾನಗಂಗೋತ್ರಿಯ ಎರಡನೆಯ ಸಂಪುಟದ ಬಿಡುಗಡೆಯನ್ನು ತಾವು ನೆರವೇರಿಸಿಕೊಡಬೇಕು. ಅನಾರೋಗ್ಯದ ನಿಮಿತ್ತ ನಾನು ತಮ್ಮನ್ನು ಕಾಣಲು ಬರುತ್ತಿಲ್ಲ,'' ಎಂದು ಮೇ ತಿಂಗಳಿನ ಒಂದು ದಿನ ಶ್ರೀ ನಿರಂಜನ ಮಾಸ್ತಿಯವರಿಗೆ ಬರೆದು ಕಳುಹಿಸಿದ್ದರು.

ಅದನ್ನು ಓದಿದ ಮಾಸ್ತಿಯವರು ಆತಂಕದಿಂದ, ''ನಿರಂಜನರಿಗೆ ಮೈ ಸರಿಯಲ್ಲದ ಸಮಾಚಾರ ನನಗೇಕೆ ಯಾರೂ ತಿಳಿಸಲಿಲ್ಲ? ಅವರನ್ನ ನಾನು ಮೊದಲು ನೋಡಬೇಕು. ಅನಂತರ ಬೇರೆ ಸಮಾಚಾರ,'' ಎಂದರಂತೆ.

ಜ್ಞಾನಗಂಗೋತ್ರಿಯ ಆಡಳಿತಾಧಿಕಾರಿ ಮಾಸ್ತಿಯವರನ್ನು ನಮ್ಮ ಮನೆಗೆ, ಹತ್ತೂವರೆಯ ವೇಳೆಗೆ ಕರೆತರುತ್ತಾರೆ ಎಂದು ತಿಳಿಯಿತು. ನನಗೆ ಮಾಸ್ತಿಯವರು ನಮ್ಮಲ್ಲಿಗೆ ಬರುತ್ತಾರೆಂಬ ಸಂತೋಷ ಒಂದೆಡೆಗಾದರೆ, ಅವರು ಬಂದಾಗ ನಾನು ನನ್ನ

ಚಿಕಿತ್ಸಾಲಯದಲ್ಲಿರುತ್ತೇನಲ್ಲಾ ಅವರನ್ನು ಸತ್ಕರಿಸಲು ಸಾಧ್ಯವಿಲ್ಲವಲ್ಲಾ ಎಂಬ ಬೇಸರ ಒಂದೆಡೆ.

ನಾನು ಆಡಳಿತಾಧಿಕಾರಿಯವರನ್ನು ಕೇಳಿಕೊಂಡೆ :

''ನಮ್ಮ ಮನೆಯಿಂದ ವಾಪ್ಸು ಹೋಗುವಾಗ ಕ್ಲಿನಿಕ್‌ನ ಮುಂದೆ ಕಾರು ನಿಲ್ಲಿಸಿ ನನ್ನನ್ನು ಕರೆಯಿರಿ ನಾನು ಹೊರಬಂದು ಮಾಸ್ತಿಯವರಿಗೆ ಧನ್ಯವಾದ ಹೇಳುತ್ತೇನೆ.''

ಸುಮಾರು ಹನ್ನೊಂದು ಗಂಟೆಯ ವೇಳೆಗೆ ಆಡಳಿತಾಧಿಕಾರಿ ಕ್ಲಿನಿಕ್‌ನ ನನ್ನ ಕೋಣೆಯೊಳಗೆ ಇಣುಕಿ, ''ಮಾಸ್ತಿ ಬಂದಿದಾರೆ,'' ಎಂದರು.

ನಾನು ರೋಗಿಯ ಪರೀಕ್ಷೆ ಮುಗಿಸಿ ಹೊರಬಂದೆ. ಕಾರಿನಲ್ಲಿ ಕುಳಿತಿರುವ ಮಾಸ್ತಿಯವರನ್ನು ಕಾಣಲು ಧಾವಿಸಿದ ನನಗೆ ಕಂಡುದು, ಕ್ಲಿನಿಕ್‌ನ ಮುಂದೆ ಕೊಡೆಬಿಡಿಸಿ ನಿಂತ ಮಾಸ್ತಿ.

''ನಮಸ್ಕಾರ. ನೀವ್ಯಾಕೆ ಕೆಳಗಿಳಿದಿರಿ? ನಾನೇ ಬರ್ತಿದ್ದೇ,'' ಎಂದು ನಾನು ಸಂಕೋಚದ ಮುದ್ದೆಯಾಗಿ ಹೇಳಿದೆ.

''ಅದರಲ್ಲೇನಮ್ಮ? ಹೀಗೇ ಇಳಿದೆ. ನಿಮ್ಮ ಆಸ್ಪತ್ರೆ ನೋಡಿದ ಹಾಗೂ ಆಯ್ತು'' ಎಂದರು ಮಾಸ್ತಿ.

ಹಿರಿಯ ಚೇತನಕ್ಕೆ ಜೋಡಿಯಾದ ವಿಶಾಲ ಹೃದಯ.

''ದಯಮಾಡಿ ಒಳಗೆ ಬನ್ನಿ. ನೀವು ಬಂದಾಗ ನಾನು ಮನೆಯಲ್ಲಿರೋಕೆ ಸಾಧ್ಯವಿಲ್ಲದೆ ಹೋಯ್ತು. ನಿಮಗ್ಯಾವ ಸತ್ಕಾರವನ್ನೂ ಮಾಡಲಿಲ್ಲ, ಕ್ಷಮಿಸಬೇಕು,'' ಎಂದೆ ನಾನು, ಅವರನ್ನು ಒಳಗೆ ಕರೆದೊಯ್ಯುತ್ತಾ.

ಮಾಸ್ತಿಯವರು ಅಲ್ಲಿ ನೆರೆದಿದ್ದ ರೋಗಿಗಳನ್ನು ಕಂಡು, ''ಇವರ ಸತ್ಕಾರಕ್ಕಿಂತ ಬೇರೆ ಸತ್ಕಾರ ಹೆಚ್ಚೇನಮ್ಮ?'' ಎಂದರು.

ಒಳಗಿನ ಕೊಠಡಿಯ ಕುರ್ಚಿಯಲ್ಲಿ ಅವರು ಕುಳಿತುಕೊಂಡರು :

''ನಿಮ್ಮ ಯಜಮಾನ್ರನ್ನ ನೋಡಿಬಂದೆ. ಅವರು ಬೇಗ ಹುಶಾರಾಗುತ್ತಾರೆ. ಭಗವಂತ ನಿಮ್ಮನ್ನ ಕಾಪಾಡುತ್ತಾನೆ,'' ಎಂದು ಅವರು ನುಡಿದಾಗ, ಅವರ ವಾತ್ಸಲ್ಯಕ್ಕೆ ನನ್ನ ಗಂಟಲು ಕಟ್ಟಿತು. ನಾನು ಮಾತನಾಡದೆ ಸುಮ್ಮನೆ ಕುಳಿತೆ. ಮಾಸ್ತಿ ಮುಂದುವರೆಸಿದರು:

''ನಾನೀಗ ಹೆಚ್ಚಾಗಿ ಸಮಾರಂಭಗಳಿಗೆ ಹೋಗೋದಿಲ್ಲ. ವಯಸ್ಸಾಯ್ತು ನೋಡಿ. ನಿರಂಜನರಿಗೆ ಇಲ್ಲ ಅನ್ನೋಕಾಗ್ದೆ ಜ್ಞಾನಗಂಗೋತ್ರಿ ಸಮಾರಂಭಕ್ಕೆ ಒಪ್ಕೊಂಡಿದೀನಿ.''

''ಉಪಕಾರ ಆಯ್ತು'' ಎಂದೆ ನಾನು.

ಮಾಸ್ತಿ ಮೇಲೆದ್ದರು : ''ನಾನಿನ್ನು ಬರ್ತೀನಿ ತಾಯಿ. ನನ್ನಿಂದ ನಿಮ್ಮ ಕೆಲ್ಸಕ್ಕೆ ತೊಂದರೆಯಾಗಬಾರ್ದು.''

ಇದು ತೊಂದರೆ ಎನ್ನಬಹುದಾದರೆ, ಇಂಥದು ನೂರು ಸಾರಿ ಬರಲಿ, ಎಂದು ನಾನು ಮನಸ್ಸಿನಲ್ಲೇ ಅಂದುಕೊಂಡೆ.

*

ಈ ನೆನಪುಗಳನ್ನು ಮೆಲುಕಾಡಿಸುವಾಗ, ಸಹೃದಯ ಮಾಸ್ತಿಯವರ ಚಿತ್ರ ಮತ್ತೆ

ಮತ್ತೆ ಕಣ್ಣಿಗೆ ಕಟ್ಟುತ್ತದೆ. ಅವರು ಕನ್ನಡದ ದೊಡ್ಡ ಸಂಪತ್ತು: ಸಾಧನೆಯ ಮೇರುಪರ್ವತವನ್ನೇರಿದರೂ ಅಹಂಭಾವ ಕಂಡರಿಯದ ಮಹಾನುಭಾವರು. ನಿಜ ಜೀವನದಲ್ಲಿ ಸರಳರು, ತೃಪ್ತರು, ನೀತಿವಂತರು, ತಮಗಿಂತ ಬಹು ಕಿರಿಯರನ್ನು ಸ್ವತಃ ತಾವೇ ಕಾಣಲು ಬರುವ ಇವರ ಹೃದಯವಂತಿಕೆ, ಹಿರಿತನದ ಪರಾಕಾಷ್ಠೆ.

ರಸಯಾತ್ರೆ

ಜಿ. ಟಿ. ನಾರಾಯಣರಾವ್

ದೊಡ್ಡದಾಗಿ ಬದುಕಿ ಬಾಳಿ, ದೊಡ್ಡವರ ಪರಿಚಯ ಮಾಡಿಕೊಂಡು, ಅವರ ಸಂತೋಷಗಳನ್ನು ತಮ್ಮ ಬಳಿಗೆ ಬಂದವರಿಗೆ ದಾನ ಮಾಡಿ ಒಂದು ಜೀವನವನ್ನು ಕೃತಾರ್ಥವಾಗಿ ಮಾಡಿಕೊಂಡಿರುವ ಮಾಸ್ತಿಯವರ ಬದುಕು ಒಂದು ಮಹಾಕೃತಿ. ಇಂಥಲ್ಲಿ ಬಾಳು, ಕೃತಿ ಸಮರಸ, ಸಮತತ್ವವಾಗುತ್ತವೆ ; ಫಲಿಸುತ್ತವೆ.*

ರಾಜ್ಯ ಸರಕಾರದಿಂದ ಪ್ರಶಸ್ತಿ ಪಡೆದ (೧೯೬೬) ಸಾಹಿತಿಗಳಿಗೆ ಒಂದು ಅಭಿನಂದನ ಸಮಾರಂಭವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಏರ್ಪಡಿಸಿದ್ದರು (೧೦-೩-೧೯೬೬). ಆಗ ಭಾಷಣ ಮಾಡಲು ಆಹ್ವಾನಿತರಾದವರಲ್ಲಿ ನಾನೂ ಒಬ್ಬ. ಸಭೆಗೆ ಆಗಮಿಸಿದ್ದ ಮಾಸ್ತಿಯವರನ್ನು ಪರಿಷತ್ತಿನ ಅಧ್ಯಕ್ಷರು ವೇದಿಕೆಗೆ ಕರೆದೊಯ್ದು ನಾಲ್ಕು ಆಶೀರ್ವಚನ ಹರಸಬೇಕೆಂದು ಕೋರಿದರು. ಸಮಾರಂಭ ಮುಗಿದ ತರುವಾಯ ಮಾಸ್ತಿಯವರು ನನ್ನೆಡೆಗೆ ಬಂದು ಮೆಲು ಮಾತಿನಲ್ಲಿ ''ನಿಮ್ಮ ಯೋಜನೆ ಸರಿಯಾದದ್ದು, ಔಚಿತ್ಯಪೂರ್ಣವಾದದ್ದು'' ಎಂದರು. ಆದದ್ದಿಷ್ಟು. ಆರು ಸಾಹಿತಿಗಳಿಗೆ ಅಂದು ಶುಭಾಶಂಸನೆ. ಆರು ಜನ ಭಾಷಣಕಾರರು. ಇವರಲ್ಲಿ ಕೆಲವರಿಗೆ ವಿಷಯ ಸರಿಯಾಗಿ ತಿಳಿಯದೇ ಅಥವಾ ತಿಳಿದದ್ದನ್ನು ಹೇಳುವಾಗ ಭಾಷೆ ಸರಿಯಾಗಿ ಹೊಂದದೇ ರಸಭಂಗವಾಗಿತ್ತು. ನಾನು ಹೇಳಬೇಕಾದುದನ್ನು ಬರೆದುಕೊಂಡು ಹೋಗಿ ಓದಿದ್ದೆ.

''ನೀವು ನಮ್ಮ 'ಜೀವನ' ಪತ್ರಿಕೆಗೆ ಹಿಂದೆ ಕತೆಗಳನ್ನು ಬರೆಯುತ್ತಿದ್ದವರಲ್ಲವೇ?'' ಮಾಸ್ತಿಯವರ ಮಾತು.

''ಹೌದು ಸ್ವಾಮೀ.'' ಇದು ೧೯೫೧-೫೨ರ ಮಾತು. ಅವರ ಪ್ರಖರ ಜ್ಞಾಪಕ ಶಕ್ತಿ ನಿಜವಾಗಿಯೂ ಅದ್ಭುತ. ಇಲ್ಲಿಗೇ ಮುಗಿಯಲ್ಲಿಲ್ಲ.

'' ನೀವು ಮಡಿಕೇರಿಯವರು, ತಿಮ್ಮಪ್ಪಯ್ಯನವರ ಮಗ. ಈಗ ಇಲ್ಲೇ ಕೆಲಸದಲ್ಲಿದ್ದೀರೆಂದು ಕೇಳಿದೆ. ಬಿಡುವು ಮಾಡಿಕೊಂಡು ಮನೆಗೆ ಬನ್ನಿ. ತಿಮ್ಮಪ್ಪಯ್ಯನವರು ಚೆನ್ನಾಗಿದ್ದಾರಾ? ಈಗಲೂ ಸೈಕಲ್ ಬಿಡುತ್ತಾರಾ?'' ಅವರ ಈ ಸಹಜ ವಿನಯ ಸೌಜನ್ಯಗಳಿಗೆ ನಾನು ಮಾರು ಹೋದೆ. ಅವರ ಪರಿಚಿತ ಸಹಸ್ರರಲ್ಲಿ ದೂರದ ಅಂಚಿನಲ್ಲಿದ್ದ ನಮ್ಮ ವಿಷಯದ ಅನೆಷ್ಟು ಬಿಡಿ ವಿವರಗಳ ನೆನಪು ಇವರಿಗೆ! ಆ ವೇಳೆಗೆ ನಾನು ಬೆಂಗಳೂರಿನಲ್ಲಿ ನೆಲೆಸಿ ಒಂದು ವರ್ಷ ಸಂದಿತ್ತು. ನನ್ನ ಮನೆ ಮಾಸ್ತಿಯವರ

* ''ಮಹನೀಯರು'' ಗ್ರಂಥದಲ್ಲಿ ವಿಸೀ. ಪುಟ ೧೩೩

ಮನೆಯ ಸಮೀಪದಲ್ಲಿಯೇ ಇದ್ದರೂ ಅಳುಕಿನಿಂದ ಅವರನ್ನು ನೋಡಲು ಅದುವರೆಗೂ ಹೋಗಿರಲಿಲ್ಲ. ಚಿಕ್ಕಂದಿನಿಂದಲೂ ನಾನು ಶ್ರೀ ಮಾಸ್ತಿ, ಕಾರಂತ, ಸಿ.ಕೆ.ವೀ, ವಿಸೀ ಮೊದಲಾದ ಮಹನೀಯರ ಉಜ್ವಲ ಭಾಷಣಗಳನ್ನು ಕೇಳಿ ಅವರ ವಿಚಾರ ಧಾರಗೆ ಕನ್ನಡದ ಸೊಗಸಿಗೆ ಮಾರು ಹೋಗಿದ್ದೆ; ಅವರ ಕೃತಿಗಳನ್ನು ಓದಿ ಪ್ರಭಾವಿತನಾಗಿದ್ದೆ. ಜೊತೆಯಲ್ಲೇ ಇವರೆಲ್ಲರೂ ನನಗೆ ಅತಿ ಅಲಭ್ಯರು ಎಂಬ ಭಾವವೂ ಬೆಳೆದು ಬಂದಿತ್ತು.

ಮುಂದಿನ ಆದಿತ್ಯವಾರ ಅವರ ಮನೆಗೆ ಹೋದೆ. ನಡುಕೋಣೆಯಲ್ಲಿ ಮುದ್ರಿತ ಫಾರ್ಮುಗಳ ರಾಶಿಯ ಮಧ್ಯೆ ಮಾಸ್ತಿಯವರು ತುದಿಗಾಲಿನಲ್ಲಿ ಕುಳಿತಿದ್ದರು. ಹುಲುಸಾದ ಬೆಳೆ ಬಂದಿದೆ; ಕಟುವಾಗಿ ಕಣಕ್ಕೆ ತಂದಿದ್ದಾರೆ; ಸುತ್ತಲೂ ಮೆದೆಯೊಟ್ಟಿದ್ದಾರೆ; ನಡುವೆ ತೃಪ್ತ ರೈತ ನಿಂತಿದ್ದಾನೆ. ಇಂಥ ಒಂದು ಪೂರ್ಣ ದೃಶ್ಯವನ್ನು ನಾನು ಕಂಡೆ. ಒಂದೊಂದು ಒಟ್ಟಿನಿಂದಲೂ ಒಂದೊಂದು ಫಾರ್ಮನ್ನು ಅವರು ಕ್ರಮಬದ್ಧವಾಗಿ ತೆಗೆಯುವರು, ಓರಣವಾಗಿ ಜೋಡಿಸುವರು, ಅಲ್ಲಿಗೆ ಒಂದು ಪುಸ್ತಕವಾಯಿತು. ಅದನ್ನು ಎಚ್ಚರಿಕೆಯಿಂದ ಬೇರೆಯಾಗಿ ಇಡುವರು. ನನ್ನನ್ನು ಕಂಡವರೇ ಎದ್ದು ನಿಂತು "ಬಂದಿರಾ! ಬನ್ನಿ" ಎಂದು ಸ್ವಾಗತಿಸಿ ಒಳ ಹಜಾರಕ್ಕೆ ಕರೆದೊಯ್ದರು. ನನ್ನನ್ನು ಮೊದಲು ಕೂರುವಂತೆ ಮಾಡಿ ಮತ್ತೆ ತಾವು ಕುಳಿತರು. ಪಕ್ಕದ ಗೋಡೆಯಲ್ಲಿ ರವೀಂದ್ರನಾಥ ಠಾಕೂರರ ಸ್ವಹಸ್ತ ಲಿಖಿತ Thou hast made me known to friends whom I knew not ... ಚರಣಕ್ಕೆ ಚೌಕಟ್ಟು ಕಟ್ಟಿ ತೂಗಲಾಗಿತ್ತು. ಸ್ವತಃ ಕವಿಗಳೇ ಅದನ್ನು ಮಾಸ್ತಿಯವರಿಗೆ ಬರೆದು ಕೊಟ್ಟಿದ್ದಂತೆ.

ಹಿಂದಿನ ದಿನಗಳನ್ನು ಮಾಸ್ತಿಯವರು ಸ್ಮರಿಸಿಕೊಂಡರು. ಚಿಕ್ಕವೀರ ರಾಜೇಂದ್ರ ಕಾದಂಬರಿಯನ್ನು ಬರೆಯುವ ಮುನ್ನ ಮಡಿಕೇರಿಗೆ ತಾವು ಬಂದದ್ದು; ಅಪ್ಪುಕಳದ ಅರಮನೆ, ಉಡುವತ್ತು ಮೊಟ್ಟೆ ಇಲ್ಲೆಲ್ಲ ನನ್ನ ತಂದೆಯವರ ನೆರವಿನಿಂದ ಅಂಡಲೆದು ವಿಷಯ ಸಂಗ್ರಹ ಮಾಡಿದ್ದು ಮುಂತಾದುವನ್ನೆಲ್ಲ ಸಂತೋಷದಿಂದ ಹೇಳಿದರು.

"ತಿಮ್ಮಪ್ಪಯ್ಯನವರಿಗೆ ಹೇಳಿ, ಈ ಪ್ರಾಯದಲ್ಲಿ (೬೭) ಅವರು ಸೈಕಲ್ ತುಳಿಯುವುದು ಒಳ್ಳೆಯದಲ್ಲ. ನಾನು ಹೇಳಿದ್ದೇನೆ ಎಂದು."

ನಾನು ಎದ್ದೆ. "ನಿಮಗೆ ನನ್ನಿಂದ ಏನಾದರೂ ಆಗಬೇಕಾಗಿದ್ದರೆ ಹೇಳಿ. ಕರಡು ತಿದ್ದುವುದು, ಮುದ್ರಣಾಲಯಕ್ಕೆ ಹೋಗುವುದು ಇವನ್ನೆಲ್ಲ ನಾನು ಮಾಡಬಲ್ಲೆ."

ಅವರು ತಮ್ಮ ಆತ್ಮೀಯ ಮಲ್ಲಿಗೆ ಮೊಗ್ಗು ಅರಳುವ ನಗು ಸೂಸಿ ನುಡಿದರು: "ಇವೆಲ್ಲವೂ ನನಗೆ ಪ್ರಿಯವಾದ ಕೆಲಸಗಳು. ಹೊತ್ತು ಹೋಗುತ್ತದೆ. ಜೊತೆಗೆ ಆರೋಗ್ಯವೂ ಚೆನ್ನಾಗಿರುತ್ತದೆ ನೋಡಿ."

"ಇಲ್ಲ ಇಲ್ಲ. ಈ ಕೆಲಸಗಳಿಂದ ನಿಮಗೆ ಬಿಡುವು ದೊರೆತರೆ ಇನ್ನಷ್ಟು ಸೃಷ್ಟ್ಯಾತ್ಮಕ ಕಾರ್ಯ ನಡೆಸಬಹುದು. ಆ ದೃಷ್ಟಿಯಿಂದ ಹಾಗೆ ಹೇಳಿದೆ."

"ಇವೆಲ್ಲವೂ ಒಂದೇ ಸೃಷ್ಟ್ಯಾತ್ಮಕ ಕಾರ್ಯದ ವಿವಿಧ ಭಾಗಗಳು. ಇವು ಚೆನ್ನಾಗಿದ್ದರೆ ತಾನೇ ಅದು ಚೆನ್ನ?" ಅವರ ಮಾತೇ ಹಾಗೆ. ತೋರ್ಕೆಗೆ ಬಲು ಸರಳ. ಯೋಚಿಸಿದಷ್ಟೂ ಅದರಿಂದ ಹೆಚ್ಚಿನ ಅರ್ಥ ಸ್ಫುರಣವಾಗುತ್ತದೆ. ಎಚ್ಚೆಸ್ಕೆಯವರೆಂದಂತೆ "ಮಾಸ್ತಿಯವರನ್ನು ಮೊದಲ ಬಾರಿಗೆ ನೋಡಿದ ಯಾರಿಗಾದರೂ ಇವರ ಸಾಹಿತ್ಯ ಸಿದ್ಧಿಯ ಅರಿವಾಗುವುದಿಲ್ಲ. ಇವರ ಲೇಖನಿಗೂ ಮೂರ್ತಿಗೂ ಅಷ್ಟೊಂದು ವ್ಯತ್ಯಾಸ."

ಇನ್ನೆರಡು ವಾರ ಕಳೆದ ಮೇಲೆ ಪುನಃ ಅವರ ಮನೆಗೆ ಹೋದೆ, ನನ್ನಿಂದ ಏನಾದರೂ ಕೆಲಸ ಆಗಬೇಕೆ ಎಂದು ಕೇಳಲು. ಅವರು ಒಂದು ಕ್ಷಣ ಯೋಚಿಸಿದರು. ನೇರವಾಗಿ ಮಾತಾಡಿದರು ''ಒಂದು ವಿಚಾರ ನಾನು ನಿಮ್ಮಲ್ಲಿ ಪ್ರಸ್ತಾಪಿಸಿದರೆ ಅದು ಸರಿಯೋ ಅಲ್ಲವೋ ತಿಳಿಯದು.''

''ನೀವು ಅಂಥ ಯಾವ ಸಂಕೋಚವನ್ನೂ ನನ್ನ ವಿಷಯದಲ್ಲಿ ಇಟ್ಟುಕೊಳ್ಳಬೇಡಿ. ನನ್ನಿಂದ ಆಗುವಂಥ ಕೆಲಸವಾದರೆ ಹೇಳಿ - ಖಂಡಿತ ಸಂತೋಷದಿಂದ ಮಾಡಲು ಪ್ರಯತ್ನಿಸುತ್ತೇನೆ.''

''ನನ್ನ ಜೀವನ ಬೆಳೆದು ಬಂದ ಬಗೆಯನ್ನು ಬರೆಯಬೇಕೆಂದು ಹಿಂದೊಮ್ಮೆ ಮನಸ್ಸಾಯಿತು. ನಾನು ಹೇಳಿದುದನ್ನು ಬರೆದುಕೊಳ್ಳುವ ಮಹನೀಯರೊಬ್ಬರು ಅಂದು ಸಿಕ್ಕಿದರು. ಆದರೆ ಮಧ್ಯೆ ವಿಘ್ನ ಬಂದು ಕೆಲವು ವರ್ಷಗಳ ಹಿಂದೆ ಆ ಕೆಲಸ ನಿಂತುಹೋಯಿತು. ಈಗ ಆ ಕೆಲಸವನ್ನು ನೀವು ಮುಂದುವರಿಸುವುದಾದರೆ ಬಹಳ ಸಂತೋಷ.''

''ಸಂತೋಷದಿಂದ ಮಾಡುತ್ತೇನೆ ಸ್ವಾಮೀ.''

''ಇಲ್ಲಪ್ಪ. ನೀವು ಯುನಿವರ್ಸಿಟಿ ಪ್ರೊಫೆಸರ್. ನಾನು ಹೇಳಿದ್ದನ್ನು ನೀವು ಬರಕೊಳ್ಳುವುದೆಂದರೇನು. ಇದು ಸರಿಯೇ? ನಾನೇನೋ ನೀವು ಕೇಳಿದ್ದಕ್ಕೆ ಹೇಳಿಬಿಟ್ಟೆ.''

''ಈ ಕೆಲಸವನ್ನು ನನಗೆ ನೀವು ಒಪ್ಪಿಸಿರುವುದೇ ಅನುಗ್ರಹ ಎಂದು ತಿಳಿಯುವವ ನಾನು. ಆದ್ದರಿಂದ ಈ ವಿಚಾರ ತಾವು ಎಳ್ಳಷ್ಟೂ ಸಂಕೋಚಪಡಬಾರದು. ಒಂದೇ ವಿಚಾರ. ಕಾಲೇಜು ಇರುವ ದಿವಸಗಳಂದು ನಾನು ರಾತ್ರಿ ವೇಳೆಯಲ್ಲೂ ರಜಾ ದಿವಸಗಳಲ್ಲಿ ನೀವು ಹೇಳಿದ ವೇಳೆಯಲ್ಲೂ ಬಂದು ಬರೆದುಕೊಳ್ಳುತ್ತೇನೆ.''

''ಸಂಜೆ ಹೊತ್ತು ನೀವು ದಣಿದು ಮನೆಗೆ ಮರಳಿರುತ್ತೀರಿ. ನನಗೂ ಕ್ಲಬ್ ಇದೆ. ರಜಾ ದಿನಗಳಲ್ಲಿ ಮಾತ್ರ ನಡೆಯಲಿ, ಹೇಳಿ. ನಿಧಾನವಾಗಿಯೇ ಮುಂದುವರಿಯಲಿ. ಅಪರಾಹ್ನ ೩ ಗಂಟೆಗೆ ಆರಂಭಿಸೋಣವೆ?''

''ಆಗಬಹುದು. ಮುಂದಿನ ಆದಿತ್ಯವಾರ ಬರುತ್ತೇನೆ.'' ಮಹತ್ತನ್ನು ಸಾಧಿಸಿದಾಗ ಒದಗುವ ಉತ್ಸಾಹದ ನಡೆಯಿಂದ ಪುಟಿಯುತ್ತ ಮನೆಗೆ ಮರಳಿದೆ.

ಮುಂದಿನ ಆದಿತ್ಯವಾರ. ೨ ಗಂಟೆ ೫೯ ಮಿನಿಟಿಗೆ ಸರಿಯಾಗಿ ನಾನು ಅವರ ಗೇಟಿನ ಬಳಿಗೆ ಹೋದೆ. ಹೊರ ಜಗಲಿಯಲ್ಲಿ ಬಾಗಿಲಿನ ಹಿಂದೆ ನನ್ನ ಬರವನ್ನೇ ಕಾಯುತ್ತ ನಿಂತಿದ್ದರು ಅಜ್ಜಯ್ಯ. ''ನಮಸ್ಕಾರ, ದಯಮಾಡಿ'' ಅವರದೇ ಮೊದಲ ಮಾತು. ನಾನು ಚಪ್ಪಲಿಗಳನ್ನು ಜಗಲಿಯ ಮೂಲೆಯಲ್ಲಿ ಇಡಲು ಹೋದಾಗ ಅವರೆಂದರು ''ಬೇಡಿ, ಇಲ್ಲಿಡಬೇಡಿ. ಪೇಟೆ, ಕದ್ದುಬಿಡುತ್ತಾರೆ. ಒಳಗೇ ಇಡುವಿರಂತೆ.'' ನಡುಮನೆಯಲ್ಲಿ ಬಾಗಿಲ ಮರೆಯಲ್ಲಿ ಇಟ್ಟೆ. ನಾನು ಮುಂದೆ ನಡೆಯಬೇಕು, ಅವರು ಹಿಂದೆ ಬರಬೇಕು - ಇದು ಅವರ ನಯ. ನಡುಮನೆ ದಾಟಿ ಒಳಕೋಣೆ ಹಾದು ಮೆಟ್ಟಲು ಏರಿ ಮಹಡಿ ತಲುಪಿದ್ದಾಯಿತು. ಅಲ್ಲೆಲ್ಲ ಪುಸ್ತಕಗಳ ರಾಶಿ. ಬೀರುಗಳಲ್ಲಿ ಓರಣವಾಗಿಟ್ಟ ಹಲವಾರು ಗ್ರಂಥಗಳು. ಒಂದು ಸೋಫದ ಮೇಲೆ ನನ್ನನ್ನು ಕೂರಲು ಹೇಳಿದರು. ಅವರು ನಿಂತೇ ಇರುವಾಗ ನಾನು ಹೇಗೆ ಕೂರಲಿ? ಭುಜತಟ್ಟಿ ಕೂರಿಸಿ ಎದುರಿಗೆ ಒಂದು ಕಾಲುಮಣೆ ತಂದಿಟ್ಟರು. ಹಿಂದೆಂದೋ ಬರೆಸಿದ್ದ ಸುಮಾರು ೪೦ ಪುಟಗಳಷ್ಟು ವಿಷಯವನ್ನು ನನಗೆ

ಕೊಟ್ಟು ''ಹೀಗೆ ಮೇಲಿಂದ ಮೇಲೆ ನೋಡಿ. ಇದೇ ಧಾಟಿಯಲ್ಲಿ ಮುಂದುವರಿಸಬೇಕು'' ಎಂದರು. ಬರೆಯುವ ಕಾಗದ ಸಿದ್ಧವಾಯಿತು. ಮುಂದಿನ ಐದು ನಿಮಿಷಗಳಲ್ಲಿ ಅವರು ತಯಾರಾಗಿ ನನ್ನ ಎದುರಿನ ಕುರ್ಚಿಯಲ್ಲಿ ಕುಳಿತರು. ವೀರನಾರಾಯಣನೇ ಕವಿ!

ಈ ಘಟನೆಯನ್ನು ಕುರಿತು ''ಭಾವ'' ಗ್ರಂಥದ ಮುನ್ನುಡಿಯಲ್ಲಿ ಮಾಸ್ತಿಯವರು ಬರೆದಿರು (೧೭-೧೨-೧೯೬೮) ಮಾತುಗಳಿವು ''ಮೂರು ವರ್ಷಗಳ ಹಿಂದೆ ಗೆಳೆಯ ಶ್ರೀ ಜಿ.ಟಿ. ನಾರಾಯಣರಾವ್ ಇದರ ಪ್ರಸ್ತಾಪ ತೆಗೆದು ನಾನು ಹೇಳುವುದಾದರೆ ತಾವು ಬರೆದುಕೊಳ್ಳುವುದಾಗಿ ಮಾತು ಕೊಟ್ಟರು. ತುಂಬ ಹಿಂದು ಮುಂದು ನೋಡಿ ಇವರು ಈ ಕೆಲಸವನ್ನು ಮಾಡುವುದನ್ನು ನಾನು ಒಪ್ಪಿದೆನು. ವಾರದಲ್ಲಿ ಒಂದು ದಿನ, ಭಾನುವಾರ, ಕೆಲವು ವಾರಮಧ್ಯೆ ಬರಬಹುದಾದ ರಜಾದಿನ, ತಪ್ಪದೆ ಬಂದು ಹೇಳಿದ್ದನ್ನು ಬರೆದುಕೊಂಡು ಈ ಮಿತ್ರರು ಹಲವು ತಿಂಗಳಲ್ಲಿ ಪುಸ್ತಕದ ಹಸ್ತಪ್ರತಿಯ ಆರು ನೂರು ಪುಟವನ್ನು ಸಿದ್ಧ ಮಾಡಿದರು.''

ಅವರು ಅರೆತೆರೆದ ಕಣ್ಣುಗಳಿಂದ ಧ್ಯಾನಸ್ಥರಾಗಿರುವಂತೆ ಕುಳಿತಿರುತ್ತಿದ್ದರು. ದೃಷ್ಟಿ ಅಂತರ್ಮುಖಿಯಾಗಿ ಹಿಂದೆ ನಡೆದ ಸಂಗತಿಗಳನ್ನು, ಚಲನಚಿತ್ರದಲ್ಲಿ ಕಾಣುವಂತೆ, ನೋಡುತ್ತಿದ್ದಿರಬೇಕು. ಬಾಯಿ ಆ ಚಿತ್ರಕ್ಕೆ ಸರಿಹೊಂದುವ ಮಾತನ್ನು ಸಾವಕಾಶವಾಗಿ ಪೋಣಿಸುತ್ತಿತ್ತು. ಅರ್ಥಕ್ಕೆ ಲೋಪ ಬರದಂತೆ ಬರೆದುಕೊಳ್ಳಲು ಅನುಕೂಲಿಸುವಂತೆ ವಾಕ್ಯಗಳನ್ನು ಒಡೆದು ಹೇಳುವರು; ಸ್ವಲ್ಪ ತಡೆದು ಮುಂದುವರಿಸುವರು. ನಾನು ತಲೆ ಆಡಿ ಹಾಕಿ ಲೇಖನಿಯನ್ನು ಓಡಿಸುತ್ತಿದ್ದೆ. ಇನ್ನೊಮ್ಮೆ ಹೇಳಿ ಎಂದು ನಾನು ಕೇಳುವ ಅವಕಾಶವೇ ಒದಗುತ್ತಿರಲಿಲ್ಲ - ಅಷ್ಟರಮಟ್ಟಿಗೆ ಪರೇಂಗಿತಜ್ಞರು ಮಾಸ್ತಿಯವರು. ಇನ್ನು ಆ ವಾಕ್ಯಗಳೋ ಸಹಜವಾಗಿ ಒಪ್ಪಪಡೆದು ಪೂರ್ಣ ಸಿದ್ಧವಾಗಿ ಕೋದ ಶಬ್ದ ಮುತ್ತುಗಳ ಸುಂದರ ಮಾಲೆಗಳೇ, ಅವು ತಾವೇ ತಾವಾಗಿ ಹೊರಹೊಮ್ಮಬೇಕು. ಠಾಕೂರರ ಮಾತು, This little flute of a reed thou hast carried over hills and dales, and has breathed through it melodies eternally new. ಇದರ ಪೂರ್ಣ ಅರ್ಥ ಮಾಸ್ತಿಯವರ ಸಮ್ಮುಖದಲ್ಲಿ ನನಗೆ ನಿರಂತರವಾಗಿ ಆಗುತ್ತಿತ್ತು. ಪದವಿಟ್ಟಳಿಪದೊಂದಗ್ಗಳಿಕೆಯನ್ನು ನಾನು ಪ್ರತ್ಯಕ್ಷ ಕಂಡದ್ದು ಅಲ್ಲಿ. ಬಿಡು ಸಮಯದಲ್ಲಿ ನಾನು ಕೇಳಿದ್ದುಂಟು. ''ಇದರ ರಹಸ್ಯವೇನು?'' ಎಂದು. ''ಮೊದಲು ಅನುಭವ, ಮತ್ತೆ ಮನಸ್ಸಿನಲ್ಲಿ ಅದರ ಮಥನ ಸಾಕಷ್ಟು ಆಗಿರುತ್ತದೆ. ನಾನು ನಂಬಿರುವ ದೈವ ಅಪ್ಪಣೆ ಕೊಡಿಸಿದಂತೆ ಮಾತು ಹೊರಡುತ್ತದೆ.'' ''ಭಾವ''ದ ಮೂರನೆಯ ಸಂಪುಟದಲ್ಲಿ ಇದನ್ನು ಮಾಸ್ತಿಯವರೇ ವಿವರಿಸಿದ್ದಾರೆ (೪೯೮) ''ಬರಬರುತ್ತ ನನ್ನ ಮನಸ್ಸಿಗೆ ನನ್ನ ಒಂದೊಂದು ಉಸಿರೂ ನನಗೆ ದೈವದ ಅನುಗ್ರಹದಿಂದ ಬರುತ್ತಿದೆ, ನನ್ನ ಒಂದೊಂದು ಎಣಿಕೆಯೂ ಅದೇ ಮೂಲದಿಂದ ಬರುತ್ತಿದೆ, ಮಾತೆಲ್ಲ ಬರುವುದೂ ಅಲ್ಲಿಂದಲೇ, ಎಲ್ಲ ಕ್ರಿಯೆಯ ಪ್ರೇರಣೆ ಅಲ್ಲಿಂದಲೇ ಬರುತ್ತಿದೆ, ಎನ್ನುವುದು ಮನದಟ್ಟಾಯಿತು.''

''ಭಾವ''ವನ್ನು ಬರೆದುಕೊಳ್ಳಲು ಅವರು ನನಗೆ ಹೇಳುತ್ತಿದ್ದಾಗ ಸಾಮಾನ್ಯವಾಗಿ ಅವರ ಮುಖದ ಮೇಲೆ ವಿಶೇಷ ಪರಿವರ್ತನೆಯನ್ನಾಗಲೀ ಭಾವವನ್ನಾಗಲೀ ನಾನು ಕಾಣುತ್ತಿರಲಿಲ್ಲ. ಆದರೆ ಎರಡು ಸಲ ವಿಶೇಷವಾಗಿ ನಾನು ಗಮನಿಸಿದ ಉದ್ವೇಗವನ್ನು ಇಲ್ಲಿ ಉಲ್ಲೇಖಿಸಬೇಕು.

ಮೊದಲನೆಯದು ಮಾಸ್ತಿಯವರ ದೊಡ್ಡ ಸೋದರಮಾವ ವೆಂಕಟರಾಮ ಅಯ್ಯಂಗಾರ್ಯರನ್ನು ಕುರಿತ ನೆನಪು - ಮಾಸ್ತಿಯವರ ವಿದ್ಯಾಭ್ಯಾಸ ನಡೆದದ್ದು ತೀರ ಬಡತನದಲ್ಲಿ. ಬಲು ಸೂಟಿಯೂ ಬುದ್ಧಿವಂತನೂ ಆಗಿದ್ದ ಈ ಹುಡುಗ ಜೀವನದಲ್ಲಿ ಬಹಳ ಎತ್ತರ ಏರುತ್ತಾನೆ ಎಂದು ಹಿರಿಯರಿಗೆ ಈತನಲ್ಲಿ ಅಪಾರ ಅಭಿಮಾನ, ವಿಶ್ವಾಸ. ವೆಂಕಟರಾಮ ಅಯ್ಯಂಗಾರ್ಯರು ಪೊಲೀಸ್ ಜಮೆದಾರರು. ಬರುತ್ತಿದ್ದ ಪಗಾರದಲ್ಲಿ ಅವರ ಸಂಸಾರವನ್ನೇ ನೆಮ್ಮದಿಯಿಂದ ಸುಧಾರಿಸಿಕೊಂಡು ಹೋಗುವುದು ಕಷ್ಟಕರವಾಗಿದ್ದಾಗ ಅಳಿಯನ ವಿದ್ಯಾಭ್ಯಾಸಕ್ಕೂ ಆ ದಂಪತಿಗಳು ಅಷ್ಟಿಷ್ಟು ಹಣವನ್ನು ಪೂರೈಸುತ್ತಿದ್ದುದು ಸಾಮಾನ್ಯ ತ್ಯಾಗವೇನಲ್ಲ. ಮೈಸೂರಿನಲ್ಲಿ ವಾರಾನ್ನ ನಡೆಸಿ ಮಾಸ್ತಿಯುವರ ವಿದ್ಯಾರ್ಜನೆ ನಡೆಯುತ್ತಿತ್ತು. ''ಶಾಲೆಯಲ್ಲಿ ತರಗತಿಗೆ ಫಸ್ಟ್ ಆದೆನಾದರೂ... ಫ್ರೀಶಿಪ್ ಸಿಕ್ಕದ್ದರಿಂದ ನಾನು ಮಾವ ವೆಂಕಟರಾಮ ಅಯ್ಯಂಗಾರ್ಯರಿಗೆ ಒಂದು ಹೊರೆ ಆದೆನು. ಮಾವನಿಗೆ ಈ ಹೊರೆಯನ್ನು ಹೊರುವುದು ಸುಲಭವಾಗಿರಲಿಲ್ಲ. ಅವರ ತಮ್ಮ, ನನ್ನ ಚಿಕ್ಕ ಸೋದರಮಾವ, ಬೆಂಗಳೂರಿನಲ್ಲಿ ಓದುತ್ತ ಇದ್ದುದರಿಂದ ಅಲ್ಲಿಗೆ ತಿಂಗಳು ತಿಂಗಳು ಸ್ವಲ್ಪ ಹಣ ಹೋಗಬೇಕಾಗಿತ್ತು. ಹೀಗಾಗಿ ನನ್ನ ಹಿರಿಯ ಮಾವ ತಮ್ಮ ಸಣ್ಣ ಸಂಬಳದಿಂದ ದೊಡ್ಡ ಒಂದು ಭಾಗವನ್ನು ನಮ್ಮ ವಿದ್ಯೆಗಾಗಿ ವೆಚ್ಚ ಮಾಡಬೇಕಾಯಿತು. ಆಗ ನನಗೆ ಇದು ಅಷ್ಟಾಗಿ ಮನಮುಟ್ಟಲಿಲ್ಲ. ಈಗ ಮುಟ್ಟುತ್ತಿದೆ. ಬರುತ್ತಿದ್ದ ಇಪ್ಪತ್ತು ರೂಪಾಯಿಯಲ್ಲಿ ಈ ನನ್ನ ಮಾವ ಏನಿಲ್ಲವೆಂದರೂ ಆರೂವರೆ ರೂಪಾಯಿಯಷ್ಟು ಹಣವನ್ನು ನನಗೆ ತನ್ನ ತಮ್ಮನಿಗೆ ತಿಂಗಳು ತಿಂಗಳೂ ಕಳುಹಿಸುತ್ತಿದ್ದರಲ್ಲ! ಇವರ ವಾತ್ಸಲ್ಯ ಎಷ್ಟು ದೊಡ್ಡದು! ಇವರ ತ್ಯಾಗ ಎಷ್ಟು! ಮಾವ ತ್ಯಾಗ ಮಾಡಿದರು, ವಾತ್ಸಲ್ಯ ತೋರಿದರು: ತಮ್ಮನಿಗೆಂದು, ಸೋದರಳಿಯನಿಗೆಂದು ಈ ದೊಡ್ಡ ರೀತಿಯಲ್ಲಿ ನಡೆದರು. ಆದರೆ ಗಂಡ ಹೀಗೆ ನಡೆದುಕೊಂಡರೆ ಅವರ ಹೆಂಡತಿ ನನ್ನ ಸೋದರತ್ತೆ ಅದನ್ನು ಒಪ್ಪಿಕೊಂಡು ಸಮಾಧಾನವಾಗಿ ಇದ್ದರಲ್ಲ. ಇದನ್ನು ನೆನೆದರೆ ನನಗೆ ಆ ಗಂಡ ಎಷ್ಟು ಹಿರಿಯ ಸ್ವಭಾವದ ಮನುಷ್ಯ, ಅವರ ಈ ಹೆಂಡತಿ ನನ್ನ ಸೋದರತ್ತೆ ಅಷ್ಟೇ ಹಿರಿಯ ಸ್ವಭಾವದ ಸ್ತ್ರೀ ಅನ್ನಿಸುತ್ತದೆ. ನಾನೀಗ ವಯಸ್ಸಾದ ಮನುಷ್ಯ - ಅವರ ದಿನ ಮುಗಿದು ಅವರಿಬ್ಬರೂ ದೇವರ ಸನ್ನಿಧಿಯನ್ನು ಸೇರಿದ್ದಾರೆ, ನನ್ನ ನಮನದಿಂದ ಅವರಿಗೆ ಆಗಬೇಕಾದದ್ದು ಏನೂ ಇಲ್ಲ. ಆದರೂ ಇಲ್ಲಿ ಈ ಕೃತಜ್ಞತೆಯನ್ನು ನಮನವನ್ನು ನನ್ನ ತೃಪ್ತಿಗಾಗಿ ಒಪ್ಪಿಸುತ್ತೇನೆ. ವಾತ್ಸಲ್ಯ ಮೂರ್ತಿ ಆ ಮಾವ, ತ್ಯಾಗ ರೂಪಿಣಿ ಆ ಅತ್ತೆ, ನನ್ನ ಮನಸ್ಸಿಗೆ ಲೋಕವನ್ನು ಕಾಯುತ್ತ ದೈವ ಒಂದಿದೆ ಎನ್ನುವುದಕ್ಕೆ ಪ್ರಮಾಣವಾಗಿ ನೆನಪಾಗಿ ಉಳಿದಿದ್ದರೆ. ಆ ಮಾವನಿಗೆ ನಮೋ! ಆ ಅತ್ತೆಗೆ ನಮೋ!''*

ಎರಡನೆಯದು ಅವರ ತಾತ ಕೊನೆಯುಸಿರೆಳೆದುದನ್ನು ಹೇಳಿದಾಗ. ''ಹತ್ತೇ ನಿಮಿಷದ ಹಿಂದೆ ಎದ್ದು ಕುಳಿತು ಆಚಾರವಾಗಿ ಜಲಶಂಕೆ ತೀರಿಸಿಕೊಂಡ ಈ ಮೈಯಿಂದ ಇಷ್ಟು ಬೇಗನೆ ಉಸಿರು ಹೊರಟುಹೋದೀತೆಂದು ನಾವು ನಂಬಲಾರದೆ ಹೋದೆವು. ಆದರೇನು? ಉಸಿರು ಹೋಗಿತ್ತು. ಒಂದು ನೋವಿಲ್ಲ, ಒಂದು ನುಡಿ ಇಲ್ಲ; ಬೇನೆ ಆಯಾಸ ಲವಲೇಶ ಇಲ್ಲ. ತಾತನಿಗೆ ಕೊನೆಯ ಕ್ಷಣದವರೆಗೆ ಬುದ್ಧಿ ತಿಳಿಯಾಗಿತ್ತು. ತೀರ್ಥ ತಾ

---

* 'ಭಾವ' ಮೊದಲನೆಯ ಸಂಪುಟ - ೧೪[illegible]೧೪೭

ಎಂದಾಗ ತಾನು ಇನ್ನು ಕೆಲವು ಕ್ಷಣದಲ್ಲಿ ತೀರಿಕೊಳ್ಳುವೆನೆಂದೂ ತಿಳಿದಿತ್ತು. ದೈವದ ನಂಬಿಕೆಯಲ್ಲಿ ಎಂಬತ್ತು ವರ್ಷ ಬಾಳಿದ್ದ ಮುದುಕ ದೈವದ ನಂಬಿಕೆಯಲ್ಲೇ ನಿಂತ ಮನಸ್ಸಿನಲ್ಲಿ ಸಮಾಧಾನವಾಗಿ ದೇಹ ಬಿಟ್ಟರು. ಅನಾಯಾಸ ಮರಣ ಏನಾ ದೈನ್ಯ ಜೀವನ ಪೂರ್ವಿಕರ ಬಯಕೆ. ತಾತನ ಜೀವನ ಬಡವನ ಜೀವನ ಆಗಿತ್ತು. ಆದರೂ ಅದರಲ್ಲಿ ದೈನ್ಯವಿರಲಿಲ್ಲ ಎಂದರೂ ಒಟ್ಟು ಆ ಜೀವನವನ್ನು ನಾನು ಕಾಣೆನು. ಮರಣವನ್ನೋ ಹತ್ತಿರದಲ್ಲೇ ಇದ್ದು ಪ್ರತ್ಯಕ್ಷ ನೋಡಿದೆನು. ಅದು ತೀರ ಅನಾಯಾಸದ ಮರಣ. ಅವರು ನಂಬಿದ್ದ ದೈವ ಕೊನೆಯ ಕ್ಷಣದಲ್ಲಿ ಅವರ ಜೀವನವನ್ನು ಕೈ ಹಿಡಿದು ಕರೆದುಕೊಂಡು ತನ್ನ ಪಾದವನ್ನು ಸೇರಿಸಿಕೊಂಡಿತು.''*

ಈ ವಿವರಗಳನ್ನು ಹೇಳುವಾಗ ಅವರ ಧ್ವನಿಯಲ್ಲಿ ಹೆಚ್ಚಿನ ಮಾರ್ದವತೆ ಗಮನಾರ್ಹವಾಗಿ ಮೂಡುತ್ತಿತ್ತು. ದೃಷ್ಟಿ ಇನ್ನಷ್ಟು ಅಂತರ್ಮುಖಿಯಾಗುತ್ತಿತ್ತು. "Yes. very good and simple souls. They sacrificed so that we may prosper'' ಎಂದು ಸ್ವಗತವಾಗಿ ಹೇಳುತ್ತ ಕಣ್ಣಂಚನ್ನು ಒರೆಸಿಕೊಳ್ಳುತ್ತಿದ್ದರು. ಅನುಕಂಪಕ್ಕೆ ಮೃದುತ್ವವಕ್ಕೆ ಪರ್ಯಾಯ ಪದ ಮಾಸ್ತಿ.

ತಾವು ಆ ಆತ್ಮವೃತ್ತವನ್ನು ಹೇಳುತ್ತಿದ್ದಾಗ ಅವರಾಗಲೀ ನಾನಾಗಲೀ ಗಡಿಯಾರ ನೋಡಿದವರಲ್ಲ. ನೋಡುವ ಅವಶ್ಯಕತೆಯೇ ಇರಲಿಲ್ಲ. ಯಾವುದೋ ಒಂದು ಘಟ್ಟಕ್ಕೆ ಬರಬೇಕು. ಆಗ ಅವರು ''ಇನ್ನು ಮುಂದಿನ ಸಲ ಹೇಳುತ್ತೇನೆ'' ಎಂದು ವರ್ತಮಾನ ಪ್ರಪಂಚಕ್ಕೆ ಇಳಿಯುವರು. ಆಗ ಗಂಟೆ ಸರಿಸುಮಾರಾಗಿ ೪ ಆಗಿರುತ್ತಿತ್ತು. ''ಇಲ್ಲ ಸ್ವಾಮೀ. ನಾನು ಇನ್ನೂ ಒಂದೆರಡು ಗಂಟೆ ಬರೆದುಕೊಳ್ಳಬಲ್ಲೆ.''

''ಇದು ನಿಮಗೆ ಹಿಡಿಸುತ್ತದೆಯೇ?''

''ಬಲು ಚೆನ್ನಾಗಿ. ಒಂದು ಜೀವ ಅವೆಷ್ಟು ಪ್ರಭಾವಗಳಿಂದ ಪೋಷಿತವಾಗಿ ಸ್ವಂತಿಕೆಯನ್ನು ಬೆಳೆಸಿಕೊಂಡು ಮೇಲೆ ಬರುತ್ತದೆ ಎಂಬುದು ತುಂಬ ಕುತೂಹಲಕಾರಿಯಾಗಿದೆ.''

''ತುಂಬ ಸಂತೋಷ. ನಿಮ್ಮ ಈ ಪ್ರತಿಕ್ರಿಯೆ ನನಗೊಂದು ಟಾನಿಕ್ಕಿನಂತೆ. ಮುಂದಿನ ಸಲ ಹೇಳುತ್ತೇನೆ. ಹಿಂದಿನ ಸಂಗತಿಗಳನ್ನು ಒಂದೇ ಸಲ ತೀರ ಹೊರಗೆಳೆಯಬಾರದು. ದೈವ ನಡೆಸಿದಂತೆ ಮುಂದುವರಿಯಲಿ.'' ಅವರು ಏಳುವರು. ನಾನು ಎರಡೋ ಮೂರೋ ಗಂಟೆ ಕಾಲವೇ ಕುಳಿತು ಅಲುಗಾಡದೇ ಬರೆಯಬಲ್ಲೆ, ಆದರೂ ನನಗೆ ಹೊರೆಯಾಗಬಾರದು. ಇದು ಅವರ ಇಂಗಿತ. ಆದರೆ ಅದನ್ನು ಹೇಳಲಾರರು, ಕಾರ್ಯತಃ ಮಾಡಿ ತೋರಿಸುವರು. ಆಗ ಅವರ ಸಾಯಂಕಾಲದ ಉಪಾಹಾರದ ವೇಳೆ. ಘಮಘಮಿಸುವ ದೋಸೆ, ತುಪ್ಪ, ಅಯ್ಯಂಗಾರ್ ಚಟ್ನಿ, ಕಾಫಿ ಬರುತ್ತವೆ. ನನಗೂ ಅವನ್ನು ಅವರ ಸೌಭಾಗ್ಯವತಿಯವರು ತಂದುಕೊಡುತ್ತಾರೆ. ಕೊಡುವ ಆ ಅಮ್ಮನ ಕೈ ತುಂಬ ದೊಡ್ಡದು. ಮೊದಲ ವಾರ ನಾನು ಅವನ್ನೆಲ್ಲ ರುಚಿಯಾಗಿ ತಿಂದೆ. ಆದರೆ ಮತ್ತೆ ಹೇಳಿದೆ ''ಇದು ನನ್ನ ಆಹಾರದ ನಿಯಮಕ್ಕೆ ಸರಿ ಹೊಂದುವುದಿಲ್ಲ. ಸಾಯಂಕಾಲ ತಿಂಡಿ ತಿಂದರೆ ಅಪಥ್ಯವಾಗುತ್ತದೆ. ಇಲ್ಲಿಗೆ ಬರುವ ಮುನ್ನ ಟೀ ಸೇವಿಸಿ ಹೊರಡುವುದು ವಾಡಿಕೆ. ಹೀಗೆ ಹೇಳಿದೆ ಎಂದು ತಾವು ಬೇಸರಿಸಬಾರದು.''

---

* 'ಭಾವ' ಎರಡನೆಯ ಸಂಪುಟ - ೩೬೯

''ಆಹಾರದ ವಿಷಯ ನಿಯಮವಿರುವುದು ಬಲು ಸರಿಯಾದ ಕ್ರಮ. ನಾನು ಅದನ್ನು ಒಪ್ಪತಕ್ಕವನೇ. ಆದರೆ ಮನೆಯಾಕೆಗೂ ನನಗೂ ನಿಮ್ಮನ್ನು ಹಾಗೆಯೇ ಕಳಿಸುವುದು ಒಪ್ಪದಲ್ಲ!''

''ಒಂದು ಗಂಟೆ ಕಾಲ ತಮ್ಮೊಡನೆ ಕಳೆಯುವ ಈ ಸಂತೋಷವೇ ನನಗೆ ಯೋಗ್ಯ ಪ್ರತಿಫಲ.''

''ನಾರಾಯಣರಾವ್, ನಿಮ್ಮ ಈ ದೃಷ್ಟಿಯನ್ನು ನಾನು ಮೆಚ್ಚುತ್ತೇನೆ. ಹಾಗೆಯೇ ಆಗಲಿ.''

ಅವೆಷ್ಟೋ ವಾರಗಳು ಹೀಗೆ ಸಂದವು. ನನ್ನ ಒಡನಾಟ ಅವರಿಗೆ ತುಂಬ ಹಿಡಿಸುತ್ತಿತ್ತೆಂದು ಪ್ರತಿಸಲವೂ ನನಗೆ ಅನ್ನಿಸುತ್ತಿತ್ತು. ಅದೇ ನನಗೆ ಪರಮಾನಂದಕರ ಪ್ರತಿಫಲ. ಒಂದು ಆದಿತ್ಯವಾರ ನಾನು ಹತ್ತು ಮಿನಿಟು ಮುಂಚಿತವಾಗಿ (ಅಂದರೆ ೨ ಗಂಟೆ ೫೦ ಮಿನಿಟಿಗೆ) ಅವರ ಮನೆಗೆ ಹೋದೆ - ಹಿಂದಿನ ವಾರ ಬರೆದದ್ದನ್ನು ಇನ್ನೊಮ್ಮೆ ಓದಿಕೊಳ್ಳಬೇಕು ಎಂಬ ಉದ್ದೇಶದಿಂದ. ಅಜ್ಜಯ್ಯನ ಮಾಮೂಲು ದರ್ಶನ ಆಗಲಿಲ್ಲ. ಇನ್ನೂ ಎಂಟೊಂಬತ್ತು ನಿಮಿಷಗಳು ಉಳಿದಿದ್ದುವಷ್ಟೆ. ಆದರೆ ಈ ವೇಳೆಗೆ ಮನೆಯವನೇ ಆಗಿಹೋಗಿದ್ದ ನನಗೆ ನನ್ನ ಕೆಲಸದೆಡೆಗೆ ಸಾಗಲು ಅಡಚಣೆ ಏನೂ ಇರಲಿಲ್ಲ. ನಾಯಿಗೆ ನನ್ನ ಗುರುತಿದ್ದುದರಿಂದ ಬಾಲ ಆಡಿಸಿತು. ಪಂಜರದ ಗಿಳಿ ಹಿಂದೆ ಮುಂದೆ ತಿರುಗಿ ನಾನು ಬಂದುದಕ್ಕೆ ಹರ್ಷ ವ್ಯಕ್ತಪಡಿಸುವಂಥ ಧ್ವನಿ ಹೊರಡಿಸಿತು. ಮಹಡಿಗೆ ಹೋದೆ. ಅಜ್ಜಯ್ಯನ ಹಾಸಿಗೆ ಖಾಲಿ ಆಗಿತ್ತು. ಅವರು ವಿಶ್ರಾಂತಿ ತಿಳಿದೆದ್ದು ಶೌಚಕ್ರಿಯೆಗೆ ಹೋಗಿರಬೇಕೆಂದು ಊಹಿಸಿಕೊಂಡೆ. ಹಿಂದಿನ ಬರವಣಿಗೆಯ ಹಾಳೆಗಳನ್ನು ತೆಗೆದುಕೊಂಡು ಓದುತ್ತ ಕೂತೆ. ಗಂಟೆ ಮೂರು ಹೊಡೆದದ್ದು ಕೇಳಿಸಿತು, ಮತ್ತೆ ಐದು ನಿಮಿಷಗಳೂ ಸಂದವು. ಇವರೇಕೆ ಇನ್ನೂ ಬರಲಿಲ್ಲ ಎಂದು ಎದ್ದು ನೋಡುವಾಗಲೇ ಅವರು ಬಂದರು, ಅದೇ ಮಂದಹಾಸ. ''ಹೋದೆ, ನಿಂತೆ, ನೋಡಿದೆ, ಕಾದೆ. ನೀವು ಬರಲಿಲ್ಲ. ಪಾಪ ಏನೋ ತೊಂದರೆ ಆಗಿರಬೇಕು ಎಂದು ಹಿಂತಿರುಗಿದೆ. ಅಲ್ಲೇ ಹೊರಜಗಲಿ ಮೂಲೆಯಲ್ಲಿ ನಿಮ್ಮ ಚಪ್ಪಲಿ ಕಂಡೆ. ಓ ಮೊದಲೇ ಬಂದಿದ್ದಾರೆ ಅಂದುಕೊಂಡು ಬಂದೆ. ನನ್ನ ಗಡಿಯಾರ ತಪ್ಪಾಗಿರಲೂಬಹುದು.''

''ಇಲ್ಲ ಇಲ್ಲ. ನಿಮ್ಮ ವಾಚೂ ನನ್ನ ವಾಚೂ ಸರಿಯಾದ ಕಾಲವನ್ನೇ ತೋರಿಸುತ್ತಿವೆ. ನಾನೇ ಒಂದಷ್ಟು ಹೊತ್ತು ಮೊದಲೇ ಬಂದೆನಷ್ಟೇ.''

ಅಂದಿನ ಬೈಠಕ್ಕು ಮುಗಿದು ಮರುಳುತ್ತಿದ್ದಾಗ ನಾನು ಕಂಡದ್ದೇನು? ನನ್ನ ಚಪ್ಪಲಿಗಳು ನಡುಮನೆಯಲ್ಲಿ ಭದ್ರವಾಗಿ ಉಪಸ್ಥಿತವಾಗಿದ್ದುವು. ಎಣೆಯಿಲ್ಲದ ಅವರ ಈ ಸೌಜನ್ಯಕ್ಕೆ ಒಂದೇ ಒಂದು ಉಪಮೆ ಆಗ ನನಗೆ ಹೊಳೆದದ್ದು ''ರಾಜ ರಾಜರ ಗಂಡ ಶಬರಿ ಎಂಜಲನುಂಡ.''

ನನ್ನ ಹಳೆಯ ಸಂಗೀತ ಮಿತ್ರರಾದ ಶ್ರೀ ಕಾಂಚನ ವೆಂಕಟ ಸುಬ್ರಹ್ಮಣ್ಯ ಅಯ್ಯರ್ ಮತ್ತು ಅವರ ಬಳಗದವರು ೧೯೬೭ರ ಡಿಸೆಂಬರಿನಲ್ಲಿ ಆಕಸ್ಮಾತ್ತಾಗಿ ನನ್ನ ಮನೆಗೆ ಬಂದರು. ಇವರು ಸಂಗೀತ ವಿದ್ವಾಂಸರು. ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿಯ ಸಮೀಪದ ಕಾಂಚನ ಎಂಬ ಗ್ರಾಮದಲ್ಲಿ ಒಂದು ಸಂಗೀತ ಶಾಲೆಯನ್ನು ಸ್ಥಾಪಿಸಿ ಅದನ್ನು ಗುರುಕುಲ ಕ್ರಮದಲ್ಲಿ ನಡೆಸುತ್ತಿದ್ದರು. ಮುಂದಿನ ತ್ಯಾಗರಾಜ ಆರಾಧನಾ ಮಹೋತ್ಸವಕ್ಕೆ (ಜನವರಿ

೧೯೬೮) ಅಧ್ಯಕ್ಷರೂ ಮುಖ್ಯ ಅತಿಥಿಗಳೂ ಆಗಿ ಪೂಜ್ಯ ಮಾಸ್ತಿಯವರನ್ನು ಬರಮಾಡಿಕೊಳ್ಳಬೇಕೆಂಬುದು ಅವರ ಹಂಬಲ. ಅಜ್ಜಯ್ಯನವರನ್ನು ಒಪ್ಪಿಸುವ ಹೊಣೆ ನನ್ನದಾಗಬೇಕೆಂದು ಅವರ ಆಸೆ. ಮಾಸ್ತಿಯವರ ಮನೆಗೆ ನಾವು ಹೋದೆವು.

''ನಾನು ಸಭೆ ಭಾಷಣ ಇವನ್ನೆಲ್ಲ ಬಿಟ್ಟು ಬಹಳ ಕಾಲವಾಯಿತು. ಅದೂ ಅಷ್ಟು ದೂರದ ಪ್ರಯಾಣವನ್ನು ಈ ವಯಸ್ಸಿನಲ್ಲಿ (೭೭) ನಾನು ಮಾಡಲಾರೆ'' ಎಂದರು ಮಾಸ್ತಿ.

ಆದರೆ ಕಾಂಚನದವರು ಸುಲಭವಾಗಿ ಸೋಲೊಪ್ಪುವವರಲ್ಲ. ನಾನು ಅಸಹಾಯನಾಗಿ ಸುಮ್ಮನೆ ಕುಳಿತಿದ್ದೆ. ಮಾಸ್ತಿಯವರು ಕೊನೆಗೆ ಅಂದರು ''ನಮ್ಮ ನಾರಾಯಣ ರಾವ್ ಜೊತೆಯಲ್ಲಿ ಬರುವುದಾದರೆ ನಾನು ಬರುತ್ತೇನೆ.''

ನನಗೆ ಈ ಯಾತ್ರೆ ಬಲು ಪ್ರಿಯ. ಮಡಿಕೇರಿ ನನ್ನೂರು. ಪುತ್ತೂರು ನನ್ನ ಮಾವಂದಿರ ಊರು. ಉಪ್ಪಿನಂಗಡಿ, ಕಾಂಚನ ಮುಂತಾದ ವಲಯಗಳೆಲ್ಲವೂ ನನಗೆ ಚಿರಪರಿಚಿತ. ಈ ದಾರಿಯಲ್ಲಿ ಪೂಜ್ಯರನ್ನು ಒಂದು ಸಂಗೀತ ಸಮಾರಂಭಕ್ಕೆ ಕೊಂಡೊಯ್ಯುವುದು ಭಾಗ್ಯವೆಂದುಕೊಂಡೆ. ಕಾಂಚನದಲ್ಲಿ ಆ ಸಮಾರಂಭದಂದು ಸಂಗೀತ ಹಾಡಲು ಆಹ್ವಾನಿತ ಗಾನಪಟುಗಳಾಗಿ ನನ್ನ ಮಿತ್ರರೂ ಶ್ರೇಷ್ಠ ಸಂಗೀತ ವಿದ್ವಾಂಸರೂ ಆದ (ಬೆಂಗಳೂರಿನ) ಶ್ರೀ ಕುರೂಡಿ ವೆಂಕಣ್ಣಾಚಾರ್ಯರು ಬರುವವರಿದ್ದರು. ಇವರೆಲ್ಲರನ್ನೂ ಒಂದು ಬಾಡಿಗೆ ಕಾರಿನಲ್ಲಿ ಕರೆದು ತರುವ ಹೊಣೆಯನ್ನು ನನಗೆ ವಹಿಸಿ ಕಾಂಚನದವರು ಊರಿಗೆ ಮರಳಿದರು.

ಇದು ನಡೆದು ನಾಲ್ಕೈದು ವಾರಗಳುರುಳಿದುವು. ಒಂದು ಶನಿವಾರ ರಾತ್ರಿ ೧೦ ಗಂಟೆಯ ವೇಳೆ-ಮಹಡಿಯ ಮೇಲಿನ ನನ್ನ ಮನೆಯ ಹೊರಬಾಗಿಲನ್ನು ಯಾರೋ ಬಲು ಮೃದುವಾಗಿ ತಟ್ಟುತ್ತಿದ್ದಂತೆ ಭಾಸವಾಯಿತು. ಸದಾ ಕದನ ಕುತೂಹಲಿಗಳಾಗಿದ್ದ ನನ್ನ ಮಕ್ಕಳು ''ಯಾರದು?'' ಎಂದು ಗರ್ಜಿಸಿದರು.

''ನಾನು, ಮಾಸ್ತಿ ಬಂದಿದ್ದೇನೆ ತಾಯಿ'' ಎಂದು ಮೆಲುನುಡಿ ನನ್ನ ಹೆಂಡತಿಗೆ ಕೇಳಿಸಿದಾಗ ನಮ್ಮ ಸ್ಥಿತಿ ಏನಾಗಿರಬೇಡ; ''ಸದಾ ಇವರು ಹೀಗೆಯೇ;'' ಒಳಕೋಣೆಯಿಂದ ಓಡಿ ಬಂದೆ ಗಾಬರಿಯಾಗಿ. ''ಏನು ಸ್ವಾಮಿ, ಇಷ್ಟು ಹೊತ್ತಿನಲ್ಲಿ ಇಲ್ಲಿವರೆಗೆ? ಹೇಳಿ ಕಳಿಸಿದ್ದರೆ ನಾನೇ ಬರುತ್ತಿದ್ದೆನಲ್ಲ?'' ನನ್ನ ಮಾತು.

''ಸರಿಯಪ್ಪ, ನಾಳೆ ಅಲ್ಲಿಗೆ ಹೋಗಬೇಕಷ್ಟೆ, ಏನು ಏರ್ಪಾಡು ಎಂದು ಹೇಳಲಿಲ್ಲವಲ್ಲ?''

''ಎಲ್ಲಿಗೆಂದು ತಿಳಿಯಲಿಲ್ಲವಲ್ಲ?''

''ಅದೇ ಕಾಂಚನಕ್ಕೆ; ಕಾರ್ಯಕ್ರಮವೇನಾದರೂ ರದ್ದಾಯಿತೇನು?''

''ಅದು ನಾಳೆ ಅಲ್ಲ, ಮುಂದಿನ ಆದಿತ್ಯವಾರ. ನಾಳೆ ನಾಡಿದ್ದಾಗಿ ನಾನೇ ತಮ್ಮಲ್ಲಿಗೆ ಬಂದು ಎಲ್ಲ ವಿವರವನ್ನು ಹೇಳುವವನಿದ್ದೆ.''

ಮಾಸ್ತಿ ನಕ್ಕರು. ನಿಸಾರ್ ಅಹಮದರ ಮಾತಿನಲ್ಲಿ
ಕೂಗು ಹುಸಿಮುನಿಸುಗಳ ನಡುವೆ ತುಟಿಗಳ ಮೊಗ್ಗೆ
ಬಿರಿಸಿ ನಕ್ಕಾಗಿವರು ಥೇಟ್ ಜುಲೈ ತಿಂಗಳಿನ ಶಿವಮೊಗ್ಗೆ;
ಚಣಕ್ಕಷ್ಟು ಚಳಿನೂಲು, ಒಂದಿಷ್ಟು ಹೂ ಬಿಸಿಲು
ಹೊರಗೆ ಕಚಪಿಚ ಕೆಸರು, ಒಳಗೆ ಬೆಚ್ಚನೆ ಸೂರು.

ಅವರೆಂದರು ''ಕಾಲವನ್ನು ಕಾಯ್ದಿಟ್ಟು ನೆನಪಿಸುವ ನನ್ನ ಮಿದುಳಿನ ಭಾಗ Oversmart ಆಗಿಬಿಟ್ಟಿದೆ;'' ತಾವೂ ನಕ್ಕರು ನಮ್ಮನ್ನೂ ನಗಿಸಿದರು. ಅಲ್ಲಿಂದ ಆ ಕಿಷ್ಕಿಂಧೆ ಮೆಟ್ಟಿಲು ದ್ವಾರ ಇಳಿಯುವಾಗ ನಾನು ಮುಂದೆ ಅವರು ಹಿಂದೆ. ರಸ್ತೆಗೆ ಬಂದೆವು. ನನ್ನನ್ನು ಹಿಂದೆ ಹೋಗಲು ಹೇಳಿದರು. ''ತಾವು ಬರಿತಲೆಯನ್ನು ಬಿಟ್ಟುಕೊಂಡು ಈ ರಾತ್ರಿ ಹೋಗುವುದು ತರವಲ್ಲ. ಶೀತವಾದೀತು'' ಎಂದೆ. ಅವರು ವಸ್ತ್ರ ಸುತ್ತಿಕೊಂಡರು. ಅವರ ಗೇಟ್‌ವರೆಗೂ ಜೊತೆಯಲ್ಲಿ; ಹೋಗಿ ಹಿಂತಿರುಗಲು ಹೊರಟೆ. ''ಒಳ್ಳೇದಪ್ಪ. ಹುಷಾರಾಗಿ ಹೋಗಿ. ಶೀತ ಆದೀತು'' ಎಂದು ಎಚ್ಚರ ಹೇಳಿ ನಿಂತರು. ನಾನು ರಸ್ತೆಯ ತಿರುಗಾಸಿನಲ್ಲಿ ಮರೆ ಆಗುವವರೆಗೂ ಅವರು ಹಾಗೆಯೇ ನಿಂತಿದ್ದರು.

ನಮ್ಮ ಕಾಂಚನ ಪ್ರಯಾಣದ ಕಾರ್ಯಕ್ರಮ ಸಿದ್ಧವಾಯಿತು. ಗೆಳೆಯರೂ ಸಾಹಿತ್ಯ ಪ್ರೇಮಿಗಳೂ ಆದ ಶ್ರೀ ಗುಂಡ್ಮಿ ರಾಮಕೃಷ್ಣ ಐತಾಳರ ಕಾರು. ಪಯಣಿಗರು ಶ್ರೀ ಮತ್ತು ಶ್ರೀಮತಿ ಮಾಸ್ತಿಯವರು, ವೆಂಕಣ್ಣಾಚಾರ್ಯರು ಮತ್ತು ಅವರ ಮಗ, ಐತಾಳರು, ನಾನು ಮತ್ತು ನನ್ನ ಇಬ್ಬರು ಚಿಕ್ಕಮಕ್ಕಳು, ಕಾರಿನ ಡ್ರೈವರ್, ಅಂಬಾಸಿಡರ್ ಕಾರಿಗೂ ಇದು ತುಂಬಲಾರದ ಬಳಗ. ವೃದ್ಧ ದಂಪತಿಗಳಿಗೆ ಇದರಿಂದ ದೀರ್ಘ ಪ್ರಯಾಣ ಖಂಡಿತವಾಗಿಯೂ ತ್ರಾಸವಾಗುತ್ತದೆ. ಆದರೆ ಸ್ವತಃ ಮಾಸ್ತಿಯವರೇ ಇವರೆಲ್ಲರೂ ಬರುವುದನ್ನು ಸಂತೋಷದಿಂದ ಸ್ವಾಗತಿಸಿದ್ದರು. ಅವರ ಔದಾರ್ಯ ಶ್ರೀಮಂತಿಕೆ ಆ ಮಟ್ಟದ್ದು.

ನಾವು ಬೆಂಗಳೂರನ್ನು ಬಿಟ್ಟದ್ದು ಬೆಳಿಗ್ಗೆ ೬-೩೦ ಗಂಟೆಗೆ. ಹಳೇ ಮೈಸೂರಿನ ಗಡಿ ದಾಟಿ ಕೊಡಗನ್ನು ಪ್ರವೇಶಿಸುವ ವರೆಗೂ ದಾರಿ ಕರೆಯ ಪ್ರತಿಯೊಂದು ಹಳ್ಳಿ, ಅದರ ಹೆಸರಿನ ಐತಿಹ್ಯ, ಅಲ್ಲಿನ ವೈಶಿಷ್ಟ್ಯ, ಅಲ್ಲಿಗೆ ಹೋಗಲಿರುವ ದಾರಿ ಇವನ್ನು ಮಾಸ್ತಿಯವರು ವಿವರಿಸುತ್ತಿದ್ದಾಗ ನಮ್ಮ ಬೆರಗು ಹಲವು ಬಗೆಯದು - ಅವರ ನೆನಪಿನ ಹರವು ಆಳ, ಅವರು ಅದನ್ನು ವಿವರಿಸುವ ಕೌಶಲ, ಅವರ ಹಿಂಗದ ಉತ್ಸಾಹ ಒಂದೊಂದು ನಮಗೆ ಪವಾಡದಂತೆ ಕಾಣುತ್ತಿತ್ತು. ಶ್ರೀರಂಗಪಟ್ಟಣದ ಬಳಿ ಒಳದಾರಿ ಹಿಡಿದು ಹುಣಸೂರು ಮಾರ್ಗದೆಡೆಗೆ (ಇದು ಕೃಷ್ಣರಾಜಸಾಗರದ ಮೂಲಕ ಹೋಗುತ್ತದೆ) ಹೋಗುತ್ತಿದ್ದಾಗ ಹಾದಿ ತಪ್ಪಿತು. ಆಗ ಜೊಂಪಿನಿಂದ ತಿಳಿದೆದ್ದು ಸರಿದಾರಿ ತೋರಿಸಿದರು ಮಾಸ್ತಿ; ಅಂದು ಮಧ್ಯಾಹ್ನದ ಊಟ ಶುಂಠಿಕೊಪ್ಪನ ಶ್ರೀ ಮಂಜುನಾಥಯ್ಯನವರಲ್ಲಿ. ಮಂಜುನಾಥಯ್ಯ ದಂಪತಿಗಳ, ಅವರ ಮಕ್ಕಳ, ಮೊಮ್ಮಕ್ಕಳ ಯೋಗಕ್ಷೇಮವನ್ನು ಅಜ್ಜಯ್ಯನವರು ವಿಚಾರಿಸಿಕೊಂಡ ಬಗೆ ಅದ್ವಿತೀಯವಾದದ್ದು. ಇತರರ ವಿಚಾರದಲ್ಲಿ ಅಷ್ಟೊಂದು ಸವಿವರ ಆಸಕ್ತಿ ಇವರಿಗೆ. ನನ್ನ ತಂದೆಯವರೂ ಆಹ್ವಾನಿತರಾಗಿ ಅಲ್ಲಿಗೆ ಬಂದಿದ್ದುದು ಮಾಸ್ತಿಯವರಿಗೆ ಬಲುಪ್ರಿಯವಾಯಿತು. ''ಈಗಲೂ ಸೈಕಲ್ ಬಿಡುತ್ತೀರಾ? ಬಿಡಬೇಡಿ ಎಂದು ನಾನು ಹೇಳಿದೆ ಎಂದು ನಿಮಗೆ ತಿಳಿಸಲು ನಿಮ್ಮ ಮಗನೊಡನೆ ಹೇಳಿದ್ದೆ. ಈ ಪ್ರಾಯದಲ್ಲಿ ಸ್ವಲ್ಪ ಎಚ್ಚರ ತಪ್ಪಿದರೂ ಪ್ರಮಾದವಾಗುತ್ತದೆ.''

ಅಂದೇ ಸಾಯಂಕಾಲ ನಾಲ್ಕು ಗಂಟೆಗೆ ನಾವು ಪುತ್ತೂರನ್ನು ತಲುಪಿದೆವು. ಮೊಕ್ಕಾಂ ನನ್ನ ಮಾವಂದಿರಾದ ಶ್ರೀ ಎ.ಪಿ. ಸುಬ್ಬಯ್ಯನವರಲ್ಲಿ. ಇವರು ಮಾಸ್ತಿಯವರ ಹಳೆಯ ಸಾಹಿತ್ಯ ಮಿತ್ರರು. ಸುದೀರ್ಘಪ್ರಯಾಣಾನಂತರ ಮಾಸ್ತಿಯವರು ಕಾರಿನಿಂದ ಹಗುರಾಗಿ ಇಳಿಯುವಾಗ ಮುಂಜಾನೆಯ ಉತ್ಸಾಹದಿಂದಲೇ ಮಾತಾಡುತ್ತಿದ್ದಾಗ ಯಾರಿಗಾದರೂ

ಅವರ ಆರೋಗ್ಯ ಆಶ್ಚರ್ಯವನ್ನೂ ಹೆಮ್ಮೆಯನ್ನೂ ತರುವಂತಿತ್ತು. ನಮ್ಮ ಮಾವನ ಮನೆಯಲ್ಲಿ ಒಂದು ಸಾಹಿತಿಗಳ ಕೂಟವೇ ಸೇರಿತು. ಆದರೆ ಪುರಸೊತ್ತೆಲ್ಲಿ? ಆಗಲೇ ಮಾಸ್ತಿಯವರು ಕರ್ಣಾಟಕ ಸಂಘದ ಸಭೆಗೆ ದಯಮಾಡಿಸಬೇಕಾಗಿತ್ತು. ಅದಾದ ತರುವಾಯ ರೋಟರಿ ಕ್ಲಬಿನಲ್ಲಿ ಭಾಷಣ. ಕೊನೆಯದಾಗಿ ವೆಂಕಣ್ಣಾಚಾರ್ಯರ ಸಂಗೀತ ಸಭೆಯ ಅಧ್ಯಕ್ಷತೆ. ಇವನ್ನೆಲ್ಲ ಅದೇ ಮಾಸ್ತಿ ದಿವ್ಯ ಸಂಸ್ಪರ್ಶದಿಂದ ನೆರವೇರಿಸಿ ರಾತ್ರಿ ೧೦ ಗಂಟೆಗೆ ಅಜ್ಜಯ್ಯ ಮರಳಿದರು. ಬಾಸ್ವೆಲ್ ಮತ್ತೇ ಹುಟ್ಟಲಿಲ್ಲವಲ್ಲ, ಮಾಸ್ತಿಯವರಂಥ ಜಾನ್ಸನ್ನರ ದೈನಂದಿನ ಮಾತು ಕತೆ ಆಖ್ಯಾನಗಳು ಕ್ಷಣಿಕ ಘಟನೆಗಳಾಗಿ ಮಿಂಚಿ ಬೆಳಗಿ ಮರೆಯಾಗಿ ಹೋಗುವುವವಲ್ಲ ಎಂದು ಪದೇ ಪದೇ ನನಗೆ ಅನಿಸುತ್ತಿತ್ತು.

ಡಾ|| ಶಿವರಾಮ ಕಾರಂತರು, ಮಾಸ್ತಿಯವರು ಪುತ್ತೂರಿಗೆ ಬರುವಾಗ, ತಾವು ಪೂರ್ವಯೋಜಿತ ಕಾರ್ಯಕ್ರಮಾನುಸಾರ ಪರ ಊರಿಗೆ ಹೋಗಬೇಕಾಗಿರುವುದನ್ನು ಕುರಿತು ಮಾಸ್ತಿಯವರಿಗೆ ಮೊದಲೇ ತಿಳಿಸಿದ್ದರು. ಮಾಸ್ತಿಯವರೆಂದರು "ಲೀಲಾ ತಾಯಿಯವರನ್ನು ನೋಡಿ ಮಾತಾಡಿಸಿಕೊಂಡು ಬರಬೇಕು." ಸೋಮವಾರ ಬೆಳಿಗ್ಗೆ ಬಾಲವನಕ್ಕೆ ಹೋಗಿ ಶ್ರೀಮತಿ ಲೀಲಾ ಕಾರಂತರನ್ನು ನೋಡಿ ಮಾತಾಡಿದ್ದಾಯಿತು. ಅಲ್ಲಿಂದ ವಿವೇಕಾನಂದ ಕಾಲೇಜು. ವಿದ್ಯಾರ್ಥಿಗಳ ಮಹಾಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದ ತರುವಾಯ ಕಾಂಚನದೆಡೆಗೆ ಕಾರನ್ನು ಓಡಿಸಿದೆವು. ಅಂದು ಬೆಳಿಗ್ಗೆ ೧೧-೩೦ ಗಂಟೆಗೆ ಸರಿಯಾಗಿ ತ್ಯಾಗರಾಜರ ಪಂಚರತ್ನ ಕೀರ್ತನೆಗಳ ಸಾಮೂಹಿಕ ಹಾಡುಗಾರಿಗೆ ಪ್ರಾರಂಭ, ಆ ಮೊದಲೇ ನಾವು ಕಾಂಚನವನ್ನು ತಲುಪಿರಬೇಕು ಎಂಬುದು ಕಾರ್ಯಕ್ರಮ. ಆದರೆ ಒಂದಷ್ಟು ನಿಮಿಷ ತಡವಾಗಿಯೇ ನಾವು ಸಭಾ ಮಂದಿರವನ್ನು ತಲುಪಿದೆವು. ಕ್ಲುಪ್ತವೇಳೆಗೆ ಸಾಮೂಹಿಕ ಗಾನ ಪ್ರಾರಂಭವಾಗಿದ್ದುದರಿಂದ ನಮ್ಮನ್ನು ಬರಮಾಡಿಕೊಳ್ಳಲು ಗಣ್ಯರು ಯಾರೂ ಎದುರಿಗಿರಲಿಲ್ಲ. ಆ ಸೆಖೆಯಲ್ಲಿ ಕಾರಿನಿಂದ ಇಳಿದ ಅಜ್ಜಯ್ಯ ಮಂದಿರದ ಹೊರಜಗುಲಿಯಲ್ಲಿ ಕಾಲು ಚಾಚಿ ಕುಳಿತರು. ಒಳಗೆ ಬನ್ನಿರೆಂದು ಯಾರೋ ಕರೆದರು. ಆದರೆ ಅದು ಸಭಾಮರ್ಯಾದೆಗೆ ಭಂಗವೆಂದು ಇವರು ಒಪ್ಪಲಿಲ್ಲ. ನಾವೆಲ್ಲರೂ ಅಲ್ಲೇ ಜಗಲಿಯಲ್ಲಿ ಹರಡಿ ಕುಳಿತೆವು. ಎಂದುರೋ ಮಹಾನುಭಾವುಲು ಆಗ ಒಳಗಿನಿಂದ ಪ್ರವಹಿಸುತ್ತಿದ್ದುದು ಸಾಂಕೇತಿಕವೆಂದು ನನಗೆ ಅನ್ನಿಸಿತು. ಮಾಸ್ತಿಯವರು ಆ ಸಂಗೀತ ಸುಖ ಸವಿಯುತ್ತ ಮೃದುವಾಗಿ ತಾಳ ಹಾಕುತ್ತ ತನ್ಮಯರಾದರು. ಕೀರ್ತನೆಯ ಕಾರ್ಯಕ್ರಮ ಮುಗಿದ ತರುವಾಯ ಕಾಂಚನದ ಯಜಮಾನರು ಮಂದಿರದಿಂದ ಹೊರಬಂದು ಮಾಸ್ತಿಯವರನ್ನೂ ನಮ್ಮೆಲ್ಲರನ್ನೂ ಸ್ವಾಗತಿಸಿದರು. ಭೋಜನಾನಂತರ ಮಹಾಸಭೆ. ಅದಕ್ಕೆ ಅಧ್ಯಕ್ಷರು ಮಾಸ್ತಿಯವರು. ಕಾಂಚನ ಗುರುಕುಲದ ಶಿಷ್ಯ ಶಿಷ್ಯೆಯರಿಂದ ಸಂಗೀತ, ಮಾಸ್ತಿಯವರಿಂದ ಭಾಷಣ, ಕೊನೆಗೆ (ರಾತ್ರಿ ೯-೩೦ ಗಂಟೆಗೆ) ಅಂದಿನ ಮುಖ್ಯ ಸಂಗೀತಗಾರರೂ ಆಹ್ವಾನಿತರೂ ಆದ ವೆಂಕಣ್ಣಾಚಾರ್ಯರಿಂದ ಸಂಗೀತ - ಇವಿಷ್ಟು ಮುಗಿದು ರಾತ್ರಿಯ ೧೧ ಗಂಟೆಗೆ ಕಾಂಚನದವರ ಮನೆಗೆ ಮರುಳುವಾಗ ನನಗೆ ಬಹಳ ಸಂಕಟವಾಗಿತ್ತು - ಈ ಹಿರಿಯರನ್ನು ಇಲ್ಲಿವರೆಗೆ ಕರೆದು ತಂದು ಅಚಾತುರ್ಯವೆಸಗಿದೆನೇ ಎಂದು. ನನಗೆ ಮಾಸ್ತಿಯವರ ಎಣೆಯಿಲ್ಲದ ಸೌಜನ್ಯದ ಅರಿವಾದದ್ದು ಅಲ್ಲಿ - ಒಂದು ಮಾತಿನಲ್ಲಾಗಲೀ ಒಂದು ಕೃತಿಯಲ್ಲಾಗಲೀ ಕೊನೆಗೆ ಒಂದು ನೋಟದಲ್ಲಾಗಲೀ ಅವರು ಅಸಮಾಧಾನದ ರೇಖೆಯನ್ನೂ ತೋರ್ಪಡಿಸಲಿಲ್ಲ. "ಒಳ್ಳೆಯದನ್ನು ನೋಡಿ, ಒಳ್ಳೆಯದನ್ನು ಕೇಳಿ,

ಒಳ್ಳೆಯದನ್ನು ಹೇಳಿ'' ಇದು ಅವರ ಜೀವನ ಮಂತ್ರ. ಮರುದಿನ ಅಲ್ಲಿಂದ ಹಿಂದಕ್ಕೆ ಹೊರಟಾಗ ತೀರ ನಾಚಿಕೆ ಅಪಮಾನಗಳಿಂದ ನಾನು ಮಾಸ್ತಿಯವರಿಗೆ ಹೇಳಿದೆ ''ನನಗೂ ತಿಳಿದಿರಲಿಲ್ಲ ಹೀಗೆಂದು. ತಾವು ಮನ್ನಿಸಬೇಕು.''

''ಏನು ಏನಾಯ್ತು? ಎಲ್ಲವೂ ಚೆನ್ನಾಗಿ ಆಯಿತಲ್ಲ!'' ಮಾಸ್ತಿಯವರನ್ನು ಕುರಿತು ಪುತಿನರವರು ಬರೆದಿರುವ ಮಾತು ಗಮನಾರ್ಹವಾಗಿದೆ. ''ಗೂಢವಾಗಿ ದಾನ, ಮನೆಗೆ ಬಂದವರ ಸಂಕೋಚ ಮುರಿಯುವಂಥ ಸಂಭ್ರಮದ ಆತಿಥ್ಯ, ಪ್ರಿಯವನ್ನು ಮಾಡಿದರೂ ಹೇಳದೇ ಮೌನವಾಗಿ ಇದ್ದುಬಿಡುವುದು, ಪರರ ಗುಣಗಳನ್ನು ಪ್ರಶಂಸಿಸುವುದು, ಸಿರಿಬಂದಾಗ ಗರ್ವ ಪಡದಿರುವುದು, ಹೆರರ ಅವಗುಣಗಳ ಬಗ್ಗೆ ಅನಾಸ್ಥೆಯಿಂದಿರುವುದು ಈ ಅಸಿಧಾರಾವ್ರತವನ್ನು ಪುಣ್ಯವಂತರಾದ ಆತ್ಮಶಾಲಿಗಳು ಮಾತ್ರ ನಡೆಸಬಲ್ಲರು. ಮಾಸ್ತಿಯವರು ಈ ಅಸಿಧಾರಾವ್ರತಿಗಳ ಸಾಲಿಗೆ ಸೇರತಕ್ಕವರು.''

''ಭಾವ''ದ ಬರವಣಿಗೆಯ ಗತಿ ತೀರ ನಿಧಾನವಾದುದಾಗಿತ್ತು. ಆದರೆ ನಾನು ಬೇರೆ ಏನೂ ಮಾಡುವಂತಿರಲಿಲ್ಲ. ಬರವಣಿಗೆಯ ಒಂದು ಘಟ್ಟ ಮುಟ್ಟಿದಾಗ ಮಾಸ್ತಿಯವರ ಶ್ರೀಮತಿಯವರೂ ಶ್ರೀ ಅಶ್ವತ್ಥನಾರಾಯಣ ಎಂಬ ತರುಣ ಮಿತ್ರರೂ ಪ್ರತಿದಿನವೂ ಅದನ್ನು ಬರೆದುಕೊಳ್ಳಲು ಒದಗಿ ಬಂದದ್ದು ಒಂದು ಪುಣ್ಯ. ಆದಿತ್ಯವಾರದ ನನ್ನ ಪಾಲಿನ ಸುಖ ನನಗೇ ಮೀಸಲಾಗಿರಬೇಕು ಎಂದು ಕೋರಿದೆ. ಹಾಗೆ ಹೋದಾಗಲೆಲ್ಲ ಹಿಂದೆ ಇತರರು ಬರೆದಿಟ್ಟುದನ್ನು ನಾನು ಕುತೂಹಲದಿಂದ ಓದುತ್ತಿದ್ದೆ. ''ಗಟ್ಟಿಯಾಗಿಯೇ ಓದಿರಂತಲ್ಲ. ನಾನೂ ಕೇಳುತ್ತೇನೆ'' ಎನ್ನುವರು ಮಾಸ್ತಿ. ನಾನು ಓದಬೇಕು, ಅವರು ಕೇಳಬೇಕು."Does it interest you, Narayana Rao?'' ಎಂದು ಪದೇ ಪದೇ ಅವರು ಕೇಳುತ್ತಿದ್ದರು. ದಾಕ್ಷಿಣ್ಯಕ್ಕಾಗಿ ನಾನು ಕಷ್ಟ ಪಡಬಾರದು ಎಂದು ಅವರ ಮನೋಗತ. ನಾನು ಆ ಘಟನೆಗಳ ಸ್ವಾರಸ್ಯವನ್ನು ಅವನ್ನು ನಿರೂಪಸಿರುವ ಭಾಷೆಯ ನವುರನ್ನು ಎಳೆ ಎಳೆಯಾಗಿ ಬಿಡಿಸಿ ನನಗೆ ಅವು ಹೇಗೆ ಮನೋಜ್ಞವಾಗಿವೆ ಎಂದು ಹೇಳುವಾಗ ಅವರು ಮೆಚ್ಚುಗೆಯ ನಗು ಸೂಸುವರು "Because you have absolute love for me'' ಎನ್ನುವರು.

''ಸಾಹಿತ್ಯ ರಂಗದಲ್ಲಿ ಬರುವ ಕೆಟ್ಟ ಪುಸ್ತಕಗಳನ್ನು ನೀವು ಖಂಡಿಸಿ ನಾಲ್ಕು ಮಾತುಗಳನ್ನು ಏಕೆ ಹೇಳಬಾರದು?'' ಎಂದು ಒಮ್ಮೆ ಕೇಳಿದೆ.

''ಬರೆದಾತ ಅದು ಕೆಟ್ಟ ಪುಸ್ತಕ ಆಗಬೇಕೆಂದು ಬರೆದನೇ? ಅದನ್ನು ಸಾರ್ವಜನಿಕವಾಗಿ ಖಂಡನೆ ಮಾಡಿ ಅವನಿಗೆ ನಾನೇಕೆ ನೋವುಂಟು ಮಾಡಬೇಕು? ಹೀಗೆ ಮಾಡಿದರೆ ಮುಂದೆ ಎಂದೂ ಅವನಿಂದ ಒಳ್ಳೆ ಪುಸ್ತಕ ಬರಲಾರದು. ಕಾಲವೇ ಕೆಟ್ಟ ಪುಸ್ತಕವನ್ನು ತಳ್ಳಿ ಹಾಕಿ ಬಿಡುವುದು.''

''ಅಂಥ ಒಬ್ಬ ಲೇಖಕ ನಿಮ್ಮ ಎದುರೇ ಬಂದು ಅಭಿಪ್ರಾಯ ಕೇಳಿದರೆ ಏನು ಮಾಡುತ್ತೀರಿ?''

''ಖಂಡಿತವಾಗಿಯೂ ಅವನಿಗೆ ಬಿಡಿಸಿ ಹೇಳುತ್ತೇನೆ. ಅವನು ಎಲ್ಲಿ ತಪ್ಪಿದ್ದಾನೆ ಎಂಬುದನ್ನು ನನಗೆ ತೋಚಿದಂತೆ ತಿಳಿಸುತ್ತೇನೆ. ಇಲ್ಲಿಯೂ ಅವನಿಗೆ ನೋವುಂಟು ಮಾಡುವುದು ನನ್ನ ಉದ್ದೇಶವಲ್ಲ.''

ಈಚೆಗೆ ಕಟ್ಟೀಮನಿಯವರು ಮಾಸ್ತಿಯವರನ್ನು ಪಾರಿಜಾತ ಪುಷ್ಪಕ್ಕೆ ಹೋಲಿಸಿ ನಾಲ್ಕು ಮಾತು ಬರೆದಿದ್ದಾರೆ. ಅದು ತೀರ ಸರಿಯಾದ ಹೋಲಿಕೆ ಎಂದು ನನಗನ್ನಿಸಿದೆ.

ಒಂದು ಸಲ ಗೆಳೆಯ ವೆಂಕಣ್ಣಾಚಾರ್ಯರು ಶ್ರೀನಿವಾಸರ ಹಾಡುಗಳನ್ನು ಶುದ್ಧ ಕರ್ಣಾಟಕ ಸಂಗೀತದ ಕ್ರಮದಲ್ಲಿ ೩ ತಾಸುಗಳ ಕಾಲ ಕಚೇರಿಯಲ್ಲಿ ಹಾಡಿದರು. ಇದು ನಡೆದದ್ದು ಮಾಸ್ತಿಯವರ ಮನೆಯಲ್ಲೇ. ಈ ಹಾಡುಗಳು ಸಮರ್ಥರ ಬಾಯಿಯಲ್ಲಿ ಶಾಸ್ತ್ರೀಯ ಹಾಡುಗಾರಿಕೆಗೆ ಅವೆಷ್ಟು ಪರಿಪೂರ್ಣವಾಗಿವೆ ಪಕ್ವವಾಗಿವೆ ಎಂದು ನಮಗಾಗ ತಿಳಿಯಿತು.

ಹೀಗೆ ಬೆಳೆದು ಬಂದ ನಮ್ಮ ಬಾಂಧವ್ಯದ ಪರಿಣಾಮವಾಗಿ ನಮಗೆ ತಿಳಿಯದೇ ನಾವು ಮಾಸ್ತಿ ಕುಟುಂಬದ ಆಂತರ್ಯದ ಸದಸ್ಯರಾದೆವು. ''ಮುದುಕರಾದ ನಮ್ಮನ್ನು ನೀವೆಲ್ಲರೂ ವಿಚಾರಿಸಿಕೊಂಡು ನಡೆಸಿಕೊಂಡು ಹೋಗಬೇಕು. ನಮಗೆ ಇನ್ನು ಯಾರಿದ್ದಾರೆ?'' ಎಂದು ಆ ವೃದ್ಧ ದಂಪತಿಗಳು ತುಂಬಿದ ಮನದಿಂದ ಆಗಾಗ ಹೇಳುವುದಿತ್ತು.

೧೯೬೮ರ ತರುಣದಲ್ಲಿ ಒಂದು ವಿಶೇಷ ಘಟನೆ ನಡೆಯಿತು. ಈಗ ಮೈಸೂರು ವಿಶ್ವವಿದ್ಯಾಲಯದ ಪ್ರೊ|| ದೇ. ಜವರೇಗೌಡರಿಂದ ನನಗೆ ಒಂದು ಆಹ್ವಾನ ಬಂದಿತು - ನಾನು ಕನ್ನಡ ವಿಶ್ವಕೋಶದ ವಿಜ್ಞಾನ ಸಂಪಾದಕನಾಗಿ ಅವರ ಸಂಸ್ಥೆಯನ್ನು ಸೇರಬೇಕೆಂದು ಅದರ ಸಾರ. ಈ ವಿಚಾರವನ್ನು ಮಾಸ್ತಿಯವರೊಡನೆ ಪ್ರಸ್ತಾಪಿಸಿದೆ. ''ಜವರೇಗೌಡರು ಹಿಡಿದ ಕೆಲಸ ಸಾಧಿಸುವ ಖ್ಯಾತಿವಂತ. ಕನ್ನಡಕ್ಕಾಗಿ ತುಂಬ ದುಡಿಯುತ್ತಿದ್ದಾರೆ. ನೀವು ಹೋಗಿ ಅವರ ಕೈಗಳನ್ನು ಬಲಗೊಳಿಸಬೇಕು. ನಿಮ್ಮಿಂದ ಈ ಕೆಲಸ ಆಗುತ್ತದೆ'' ಎಂದರು. ಮತ್ತೆ ಸ್ವಲ್ಪ ತಡೆದು ''ಆದರೆ ಇದರಿಂದ ಅನಿವಾರ್ಯವಾಗಿ ನಿಮ್ಮಿಂದ ನಾನು ದೂರವಾಗಬೇಕಾಗುತ್ತದೆ. ಆದರೆ ಕನ್ನಡದ ಕೆಲಸ ಬೇರೆಲ್ಲದಕ್ಕಿಂತಲೂ ದೊಡ್ಡದು. ನೀವು ಒಪ್ಪಿಕೊಳ್ಳಿ'' ಎಂದು ಖಚಿತವಾಗಿ ನಿರ್ದೇಶಿಸಿದರು. ನಾನು ಒಪ್ಪಿ ನಿರ್ವಹಿಸಲೇಬೇಕಾಗಿದ್ದ ಇತರ ಹೊಣೆಗಾರಿಕೆಗಳ ಪರಿಣಾಮವಾಗಿ ಆ ಗಳಿಗೆಯಲ್ಲಿ ಪ್ರೊ|| ಜವರೇಗೌಡರ ಕರೆಯನ್ನು ಮನ್ನಿಸುವ ಸ್ಥಿತಿಯಲ್ಲಿ ಇರಲಿಲ್ಲ. ಮುಂದೆ ಕಾಲ ಪಕ್ವವಾದಾಗ (ಜೂನ್ ೧೯೭೯) ನಾನು ಮೈಸೂರಿಗೆ ಹೊರಟೆ. ಆಶೀರ್ವಾದ ಪಡೆಯಲು ಮಾಸ್ತಿಯವರಲ್ಲಿಗೆ ಹೋದೆವು. ''ಈಗ ಹತ್ತು ವರ್ಷಗಳ ಹಿಂದೆಯೇ ಆಗಬೇಕಾಗಿದ್ದ ಕೆಲಸವದು. ವಿಶ್ವಕೋಶದ ನಿರ್ಮಾಣ ಇನ್ನು ಖಂಡಿತ ಬೇಗ ಬೇಗ ಆಗುತ್ತದೆ'' ಎಂಬ ಪ್ರವಾದಿ ನುಡಿ ಆಡಿದರು. ಅವರ ಈ ಪ್ರೀತ್ಯಾಭಿಮಾನಗಳಿಗೆ ನಾನು ಏನು ಹೇಳಲಿ! ಪುತಿನರವರ ಮಾತೇ ಸರಿ ''ಪೂಜ್ಯ ಮಾಸ್ತಿಯವರನ್ನು ನೆನೆದಾಗ ನನ್ನಂತೆ ಅನೇಕರ ಹೃದಯ ಕೃತಜ್ಞತೆಯಿಂದ ನಮ್ರವಾಗುತ್ತದೆ. ನಮ್ಮ ನಾಡು, ನಮ್ಮ ಜನ, ನಮ್ಮ ಸಂಸ್ಕೃತಿಗಳಿಗೆ ಅವರಷ್ಟು ಒಲಿದಿರುವವರು ವಿರಳ''.

ಮಾಸ್ತಿಯವರು ೧೯೧೬ರಷ್ಟು ಹಿಂದೆಯೇ ಕನ್ನಡದ ಕೆಲಸವನ್ನು ಕುರಿತು ತಳೆದಿದ್ದ ಸ್ಪಷ್ಟ ನಿಲುವನ್ನು ಅವರ ಮಾತಿನಲ್ಲಿಯೇ ನೋಡಬಹುದು ''ಇಂಥ ಕೆಲಸವನ್ನು ಮಾಡಿ ಎಂದು ನಾವು ಹೇಳಬಹುದಾದದ್ದು ಆಧುನಿಕ ವಿಚಾರಗಳನ್ನು ಬಲ್ಲ ಈಗಿನ ಜನತೆಗೆ ಮಾತ್ರ. ಇವರಲ್ಲಿ ಒಂದು ಪ್ರಾರ್ಥನೆ ಮಾಡುತ್ತೇನೆ. ಆ ಪ್ರಾರ್ಥನೆ ಇದು. ಈ ವಿದ್ಯಾವಂತ ಜನ ಜೀವನದಲ್ಲಿ ನೆಲೆಸಿದ ಒಡನೆ ಆರಂಭದ ಕೆಲವು ವರ್ಷವನ್ನು, ಎಂದರೆ ಅದರಲ್ಲಿ ತಮಗಿರುವ ವಿರಾಮ ಕಾಲವನ್ನು, ಕನ್ನಡವನ್ನು ಚೆನ್ನಾಗಿ ಅಭ್ಯಾಸ ಮಾಡುವುದಕ್ಕೂ ಜೊತೆಗೆ ತಮ್ಮ ಅಭಿರುಚಿಯ ವಿಷಯವೊಂದರಲ್ಲಿ ಹೊಸ ತಿಳುವಳಿಕೆಯನ್ನು

ಗ್ರಹಿಸುವುದಕ್ಕೂ ವಿನಿಯೋಗಿಸಬೇಕು. ಅಭ್ಯಾಸದ ಗ್ರಹಣದ ಈ ಕೆಲವು ಎಂದರೆ ಸುಮಾರು ಹತ್ತು ವರ್ಷಗಳ ಅನಂತರ ಇವರು ನಮ್ಮ ಸಾಹಿತ್ಯಕ್ಕೆ ತಮ್ಮಿಂದಾದ ಸೇವೆಯನ್ನು ಸಲ್ಲಿಸಲು ತೊಡಗಬೇಕು. ಇವರಲ್ಲಿ ಕೆಲವರಿಗೆ ಬಂಕಿಂ ಚಂದ್ರರಂತೆ, ರವೀಂದ್ರನಾಥರಂತೆ ಕೃತಿಕಾರರಾಗುವ ಭಾಗ್ಯ ಇರಬಹುದು. ಭಾಗ್ಯ ಇತ್ತೇ ಸಂತೋಷ, ಇಲ್ಲವೇ ನಷ್ಟವಿಲ್ಲ. ಇವರ ಈ ಕಾರ್ಯ ತಳಹದಿ ಹಾಕುತ್ತದೆ. ಉತ್ತಮ ಕೃತಿರಚನೆ ಸುಲಭವಾಗುತ್ತದೆ, ಮುಂದೆ ಬರುತ್ತದೆ.*

ಮಾಸ್ತಿಯವರನ್ನು ಕುರಿತ ಈ ಮುಂದಿನ ಆಖ್ಯಾನಕವನ್ನು ದೇಜಗೌರವರ ''ತೀನಂಶ್ರೀ'' ಗ್ರಂಥದಿಂದ (೨೪-೨೫) ಆಯ್ದಿದೆ; ಶ್ರೀ ಮಾಸ್ತಿಯವರು ಹೇಳಿದ್ದೆಂದು ಬರೆದುಕೊಂಡಿರುವ ಮತ್ತೊಂದು ಕತೆ ತುಂಬ ಧ್ವನಿಪೂರ್ಣವಾಗಿದೆ. ಆ ಕತೆಯನ್ನು ಕೆ.ಎಚ್. ರಾಮಯ್ಯನವರು ಮಾಸ್ತಿಯವರಿಗೆ ಎಂದೋ ಹೇಳಿದ್ದರಂತೆ-''ನಮ್ಮ ಜನ ಗೂಡ್ಸ್ ಬಂಡಿಗಳ ಹಾಗೆ, ವಿಶ್ವೇಶ್ವರಯ್ಯನವರು ಒಳ್ಳೆ ಎಂಜಿನ್ ಹಾಗೆ. ಎಂಜಿನ್ ಬಂಡಿಗಳನ್ನು ಒಂದು ಸಲ ಎಳೆಯಿತು, ಇವು ಜಗ್ಗಲಿಲ್ಲ. ಇನ್ನೊಂದು ಸಲ ಎಳೆಯಿತು. ಜಗ್ಗಲಿಲ್ಲ. ಇನ್ನೊಂದು ಸಲ ಎಳೆದಾಗ ಎಂಜಿನ್ನೇ ಕಳಚಿಕೊಂಡು 'ಹೊರಟೇ ಹೋಯಿತು.' ಬಂಡಿಗಳು ಇದ್ದ ಕಡೆಯೇ ಇದ್ದುಬಿಟ್ಟವು; (ಇಷ್ಟು ಕಥೆಯನ್ನು ಹೇಳುವಾಗ ಮುಂದಿನ ವಿಸ್ತರಣ ಆ ಕ್ಷಣದಲ್ಲಿ ಮಾಸ್ತಿಯವರಿಗೆ ಹೊಳೆಯಿತಂತೆ) ಬಂಡಿಗಳು ಯಾಕೆ ಕದಲಲಿಲ್ಲ ಗೊತ್ತೆ? ಎಂಜಿನ್ ಕೊಕ್ಕೆ (hook) ಬಂಡಿಗಳಿಗೆ ಸರಿಯಾಗಿ ತಗುಲಿರಲಿಲ್ಲ! ಈ ಕೊಕ್ಕೆ ಯಾವುದು? ಕನ್ನಡ ಮಾತು. ವಿಶ್ವೇಶ್ವರಯ್ಯನವರು ತಮ್ಮ ಉದ್ದೇಶಗಳನ್ನು ಧ್ಯೇಯಗಳನ್ನು ಜನಕ್ಕೆ ತಿಳಿಯುವ ಹಾಗೆ ಕನ್ನಡದಲ್ಲಿ ಹೇಳಿ ಜನಸಾಮಾನ್ಯರ ಮನಸ್ಸಿಗೆ ಹತ್ತಿಸಿದ್ದರೆ ಅವರ ಪ್ರಗತಿಯ ಭಾವನೆಗಳಲ್ಲಿ ಜನಗಳೂ ಭಾಗಿಗಳಾಗುತ್ತಿದ್ದರು. ಆದರೆ ವಿಶ್ವೇಶ್ವರಯ್ಯನವರ ಭಾವನೆಗಳೆಲ್ಲ, ಆಲೋಚನೆಯೆಲ್ಲ ಇಂಗ್ಲಿಷಿನಲ್ಲಿ; ಜನ ಸಾಮಾನ್ಯಕ್ಕೂ ಅವರಿಗೂ ಬಿಗಿಯಾದ ಸಂಬಂಧ ಏರ್ಪಡಲಿಲ್ಲ.

ನನ್ನ ಕಾರ್ಯಕ್ಷೇತ್ರ ಮೈಸೂರಾದರೂ (ಜೂನ್ ೧೯೮೬ ರಿಂದ) ವಿಶ್ವಕೋಶ ಮುದ್ರಣಕಾರ್ಯಕ್ಕೆ ಆಗಾಗ ನಾನು ಬೆಂಗಳೂರಿಗೆ ಹೋಗಬೇಕಾಗುತ್ತಿತ್ತು. ಹೀಗೆ ಒಂದು ಸಲ ಹೋಗಿದ್ದಾಗ ಡಾ||ರಂ.ಶ್ರೀ. ಮುಗಳಿಯವರ ಬಳಿಗೆ ಹೋಗಿದ್ದೆ (ಬೆಂಗಳೂರು ವಿಶ್ವವಿದ್ಯಾಲಯ). ''ನಿಮಗೆ ಗೊತ್ತೇ? ಮಾಸ್ತಿಯವರ ಮನೆಯವರು ಇಂದು ಮುಂಜಾನೆ ತೀರಿಕೊಂಡರಂತೆ'' ಎಂದು ಅವರು ಹೇಳಿದಾಗ ನನಗೆ ಬಲುತೀವ್ರ ಆಘಾತವಾಯಿತು. ಆಗ ಅಪರಾಹ್ನದ ೩ ಗಂಟೆ. ಗೆಳೆಯ ರಾಮಕೃಷ್ಣ ಐತಾಳರೂ ಇನ್ನಿಬ್ಬರು ಮಿತ್ರರೂ ಆ ಕ್ಷಣವೇ ಮಾಸ್ತಿಯವರ ಮನೆಗೆ ಹೋದೆವು. ಅವರನ್ನು ನಾವು ಹೇಗೆ ಮಾತಾಡಿಸುವುದು? ಸಾಂತ್ವನ ನುಡಿಗಳನ್ನು ಹೇಗೆ ಹೇಳುವುದು ಎಂದು ತಿಳಿಯದೇ ಅಳುಕಿನಿಂದ ಮನೆಯನ್ನು ಪ್ರವೇಶಿಸಿದೆವು. ಚಿರಪರಿಚಿತ ಗಿಳಿ ಪಂಜರದೊಳಿರಲಿಲ್ಲ. ನಾಯಿ ಬಗುಳಲೂ ಇಲ್ಲ ಬಾಲ ಆಡಿಸಲೂ ಇಲ್ಲ. ಮೂಕ ಶೋಕ ಸಾರ್ವತ್ರಿಕವಾಗಿ ವ್ಯಾಪಿಸಿ ಮಹಾತಾಯಿಯ ನಿರ್ಗಮನದಿಂದ ಉಂಟಾದ ಶೂನ್ಯವನ್ನು ಸಂಕೇತಿಸುತ್ತಿತ್ತು. ನಡುಮನೆ, ಅಧೇ ಸೋಫಾ.

---

* ''ಪ್ರಸಂಗ'' ನಾಲ್ಕನೆಯ ಸಂಪುಟ-೧೧

ಮಾಸ್ತಿಯವರು ಅದರ ಎಡ ಅಂಚಿನಲ್ಲಿ ಕುಳಿತಿದ್ದಾರೆ. ಉತ್ತರ ಕ್ರಿಯೆಗಳು ಆ ಬೆಳಗ್ಗೆಯೇ ಮುಗಿದು ಹೋಗಿದ್ದುವು. ಅವರು ಮುಖವನ್ನು ಕೈಗಳಿಂದ ಮುಚ್ಚಿಕೊಂಡಿದ್ದರು. ''ಬಂದಿರಾ! ಬನ್ನಿ. ಕೂತುಕೊಳ್ಳಿ'' ಅದೇ ನಯ ಅದೇ ಆತ್ಮೀಯತೆ.

''ಬಹಳ ಸಂಕಟವಾಯಿತು ಕೇಳಿ.''

''ಇದುವರೆಗೆ ಒಂದೇ ಬಂಡಿಯ ಎರಡು ಎತ್ತುಗಳಾಗಿ ನಾವು ಅದನ್ನು ಎಳೆಯುತ್ತಿದ್ದೆವು. ದೈವ ಒಂದನ್ನು ಬರಮಾಡಿಕೊಂಡಿತು. ಉಳಿದಿರುವ ಒಂದು ಎತ್ತು ಆ ದೈವ ಅಪ್ಪಣೆ ಕೊಡಿಸುವವರೆಗೂ ಎಳೆಯುತ್ತ ಮುಂದೆ ಸಾಗಬೇಕು.''

''ತುಂಬ ಪರಿಪಕ್ವವಾದ ಜೀವ. ಪುಣ್ಯವಂತ ಜೀವ. ಹಿಂದೂ ಮಹಿಳೆ ಇದಕ್ಕಿಂತ ಹೆಚ್ಚಿನದೇನನ್ನು ಬಯಸುತ್ತಾಳೆ.''

''ನಿಜ ನಿಜ. ದೊಡ್ಡದಾಗಿ ಬಾಳಿದಳು. ದೊಡ್ಡ ಮನೆ ನಡೆಸಿದಳು.''

ಅಷ್ಟರಲ್ಲಿ ಬಲುಸೂಟಿಯಾಗಿ ಉಡುಪು ಧರಿಸಿದ್ದ ಒಬ್ಬ ತರುಣ ಲಗುಬಗೆಯಿಂದ ಒಳಗೆ ಬಂದ. ''ನಮಸ್ಕಾರ, ಸಾರ್. ತಾವೇ ಮಾಸ್ತಿಯವರಲ್ಲವೇ?'' ಉತ್ಸಾಹ ತುಳುಕುತ್ತಿತ್ತು ಧ್ವನಿಯಲ್ಲಿ.

''ನಮಸ್ಕಾರ, ಹೌದಪ್ಪಾ ನಾನೇ ಮಾಸ್ತಿ. ಕೂತುಕೊಳ್ಳಿ.''

''ಕೇಂದ್ರ ಅಕಾಡಮಿಯಿಂದ ತಮಗೆ ಬಹುಮಾನ ಬಂದಿತಲ್ಲ ಸಾರ್! ಸಣ್ಣ ಕತೆಗಳ ಆ ಪುಸ್ತಕದ ಒಂದು ಪ್ರತಿ ಬೇಕೆಂದು ನಾನು ಎಲ್ಲ ಅಂಗಡಿಗಳನ್ನೂ ತಲಾಸು ಮಾಡಿದೆ ಸಾರ್.''

''ಆಮೇಲೆ?''

''ಎಲ್ಲಿಯೂ ದೊರೆಯಲಿಲ್ಲ, ಸಾರ್.''

''ಹೌದಪ್ಪಾ ಅವರೇಕೆ ಅದನ್ನಿಡುತ್ತಾರೆ. ಅವರಿಗೆ ಅದು ಖರ್ಚಾಗದ ಮಾಲು. ಮಾರಿ ಬರುವ ಲಾಭವೂ ಕಡಿಮೆ.''

''ನಾನು ಸತ್ಯಶೋಧನ ಪುಸ್ತಕ ಭಂಡಾರಕ್ಕೆ ಹೋದಾಗ ನಿಮ್ಮಲ್ಲಿ ಅದು ದೊರೆಯಬಹುದೆಂದು ಹೇಳಿ ನಿಮ್ಮ ವಿಳಾಸ ಕೊಟ್ಟರು ಸಾರ್. ಹಾಗಾಗಿ ಬಂದೆ. ತಮ್ಮಲ್ಲಿ ಅದು ಸಿಕ್ಕಬಹುದೇ?''

ಮಗಳನ್ನು ಕರೆದು ಆ ಪುಸ್ತಕದ ಒಂದು ಪ್ರತಿಯನ್ನು ತರಿಸಿದರು. ಆತನಿಗೆ ಕೊಟ್ಟಾಗ ''ಇದರ ಬೆಲೆ ಎಷ್ಟು ಸಾರ್?'' ಎಂದು ಅವನು ಕೇಳಿದ.

''ಅದರ ಒಳಗೆ ಬರೆದಿದೆ ನೋಡಿ.''

ಎರಡು ರೂಪಾಯಿ ನೋಟೊಂದನ್ನು ಹೊರತೆಗೆದು ಅವರಿಗೆ ಕೊಡಲು ಹೋದ. ಅಲ್ಲೇ ಮೇಜಿನ ಮೇಲಿಡಲು ಸೂಚಿಸಿದರು. ಪುನಃ ಮಗಳನ್ನು ಕರೆದು ಆತನಿಗೆ ರಶೀತಿಯನ್ನೂ ಎಂಟಾಣೆ ಬಾಕಿಯನ್ನೂ ಕೊಡಲು ಹೇಳಿದರು. ಕೆಲಸ ಮುಗಿಯಿತು. ''ತುಂಬ ಉಪಕಾರವಾಯಿತು ಸಾರ್, ಬರುತ್ತೇನೆ. ನಮಸ್ಕಾರ ಸಾರ್'' ತರುಣ ಎದ್ದ.

''ಒಳ್ಳೇದಪ್ಪ, ನಮಸ್ಕಾರ.''

ದುಃಖೇಷ್ವನುದ್ವಿಗ್ನಮನಾಃ (ದುಃಖಗಳಲ್ಲಿ ಉದ್ವೇಗವಿಲ್ಲದ ಮನಸ್ಸುಳ್ಳವನು) ಎಂಬುದರ ಈ ಪರಮೋತ್ಕೃಷ್ಟ ನಿದರ್ಶನವನ್ನು ಕಂಡ ನಮ್ಮ ಮನಃಸ್ಥಿತಿ ಹೇಗಿರಬೇಡ?

ಮಾಸ್ತಿಯವರೊಡನೆ ನಾನು ಕಳೆದ ಒಂದೊಂದು ನಿಮಿಷವೂ ರಸಯಾತ್ರೆಯೇ. ಇಂಥ ಪರಿಪಕ್ವ ಸುಸಂಸ್ಕೃತ ಕಲಾಭಿಜ್ಞ ಜೀವ ನಿಜವಾಗಿಯೂ ಈ ನೆಲದ ಮೇಲೆ ಎಲ್ಲರಂತೆ ಬಾಳಿ ಬದುಕಿತೇ, ಎಲ್ಲರಂತೆ ಸುಖದುಃಖ ಅನುಭವಿಸಿ ಆ ಹಿರಿಮೆ ಉಳಿಸಿಕೊಂಡಿತ್ತೇ ಎಂದು ಶತಮಾನಗಳ ತರುವಾಯ ಜನ ಆಶ್ಚರ್ಯಪಡುವಂಥ ಚೇತನ ಅವರದು. ನೂರು ವಸಂತಗಳನ್ನು ಮೀರಿ ಅವರು ಬಾಳಲಿ. ಸದಾ ಅವರ ಆಶೀರ್ವಾದದ ರಕ್ಷೆ ನಮಗಿರಲಿ.

ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್

ಸುಬ್ಬಣ್ಣ ರಂಗನಾಥ ಎಕ್ಕುಂಡಿ

'**ದೊ**ಡ್ಡವರದೆಲ್ಲವೂ ದೊಡ್ಡದೆಂಬುವ ಮಾತು ಸುಳ್ಳಲ್ಲ.' ಹೀಗೆಂದು ಶ್ರೀನಿವಾಸರು ಕನ್ನಡ ಜನದ ಸಾಂಸ್ಕೃತಿಕ ಹಿರಿಮೆಯನ್ನು ಕುರಿತು ಬಣ್ಣಿಸಿ ಬರೆದಿದ್ದಾರೆ. ಅದೇ ಮಾತನ್ನು ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಜೀವನ ಮತ್ತು ಸಾಹಿತ್ಯಕ್ಕೂ ಅಕ್ಷರಶಃ ಅನ್ವಯಿಸಬಹುದು. ಇವರು ಹೊಸಗನ್ನಡ ಸಾಹಿತ್ಯ ಪ್ರಪಂಚಕ್ಕೆ ಸಲ್ಲಿಸಿದ ಕಾಣಿಕೆ ವೈವಿಧ್ಯಪೂರ್ಣವೂ ವೈಭವಪೂರ್ಣವೂ ಆಗಿದೆ. ಕನ್ನಡ ಸಾಹಿತ್ಯದಲ್ಲಿಯೇ ಹೊಸಬೆಡಗಿನಲ್ಲಿ, ಹೊಸಬೆರಗಿನಲ್ಲಿ, ಕಾಲಿಟ್ಟ ಸಣ್ಣಕಥೆಗಳನ್ನು ಇವರೇ ಮೊದಲಿಗೆ ಬರೆದವರು. ಆದ್ದರಿಂದಲೆ ಇವರನ್ನು ಸಣ್ಣ ಕಥೆಗಳ ಜನಕನೆಂದು ಕರೆಯುತ್ತಾರೆ. ಇವರಿಗಿಂತಲೂ ಮೊದಲು ಕೆಲವರು ಕತೆಗಳನ್ನು ಬರೆದಿರಬಹುದು. ಅವು ಸಣ್ಣವೂ ಇರಬಹುದು. ಆದರೆ ಸಣ್ಣಕತೆ ಎಂಬ ಸಾಹಿತ್ಯ ಪ್ರಕಾರವನ್ನು ಸಾರ್ಥಕವಾಗಿ, ಕಲಾಪೂರ್ಣವಾಗಿ, ಶ್ರೀಮಂತವಾಗಿ ಸೃಷ್ಟಿಸಿದವರು ನಮ್ಮ 'ಶ್ರೀನಿವಾಸ'ರೆ. ಪ್ರಪಂಚದ ಸಣ್ಣಕಥೆಗಳ ಸಾಹಿತ್ಯದಲ್ಲಿ ಸರಿಸಮವಾಗಿ ನಿಲ್ಲಬಲ್ಲ ಸಣ್ಣ ಕತೆಗಳನ್ನು ಕನ್ನಡಕ್ಕೆ ನೀಡಿದವರು ಇವರು. 'ರಂಗಪ್ಪನ ಕಥೆಗಳು, ಕಲ್ಮಾಡಿಯಕೋಣ, ಮೊಸರಿನ ಮಂಗಮ್ಮ, ಇಂದಿರೆಯೊ ಅಲ್ಲವೋ, ಹೇಮಕೂಟದಿಂದ ಬಂದ ಮೇಲೆ, ಕವಿಯ ಬಾಳ ಕೊನೆಯ ದಿನ' ಹೀಗೆ ಒಂದಲ್ಲ ಎರಡಲ್ಲ ನೂರಾರು ಕತೆಗಳನ್ನು ಬರೆದು - ಬರೆದ ಒಂದೊಂದು ಕತೆಯೂ ಒಂದೊಂದು ಕಲಾಕೃತಿಯೆನಿಸಿ, ನಮ್ಮ ಸಾಹಿತ್ಯ ಪ್ರಪಂಚಕ್ಕೆ ಒಂದು ಹೊಸ ನಿಧಿಯನ್ನು ಇವರು ನೀಡಿದರು.

ಸಣ್ಣಕತೆಗಳಲ್ಲದೆ 'ಚನ್ನಬಸವನಾಯಕ' ದಂತಹ ಕಾದಂಬರಿಯನ್ನೂ 'ಸುಬ್ಬಣ್ಣ'ದಂಥ ನೀಳ್ಗತೆಯನ್ನೂ ನೀಡಿದ್ದಾರೆ. ನನ್ನ ಕಾಲೇಜು ದಿನಗಳಲ್ಲಿ ಸಾಂಗ್ಲಿಯಲ್ಲಿ ಆಕಸ್ಮಾತ್ತಾಗಿ ಒಂದು ಸಂಜೆ ಮಿತ್ರರೊಬ್ಬರು 'ಸುಬ್ಬಣ್ಣ'ದ ಒಂದು ಪ್ರತಿಯನ್ನು ತಂದುಕೊಟ್ಟರು. ಏನಿರಬಹುದು ನೋಡೋಣವೆಂದು ಕುತೂಹಲದಿಂದ ಪ್ರಾರಂಭಿಸಿದ ನನಗೆ ಅದು ಮುಗಿಯುವವರೆಗೆ ಬಿಡುವ ಮನಸ್ಸಾಗಲಿಲ್ಲ. ಆ ನೀಳ್ಗತೆಯನ್ನು ಮುಗಿಸಿದಾಗ ನನ್ನ ಅಂತಃಕರಣದಲ್ಲಿಯೆ ಒಂದು ವಿಕ್ಷಣ್ಣತೆ, ಒಂದು ಹದ, ಬದುಕಿನ ಕುರಿತು ಒಂದು ಅನುಕಂಪ, ಮೊಳಕೆಯೊಡೆದಂತೆನಿಸಿತು. ಈ ಕಾದಂಬರಿ ನೀಳ್ಗತೆಯಲ್ಲದೆ, ನಾಟಕಗಳನ್ನು ಕೂಡ ರಚಿಸಿದ್ದಾರೆ. ಕರ್ನಾಟಕದ ಸಂಸ್ಕೃತಿಯನ್ನು ಕುರಿತು, ಕನ್ನಡ ನುಡಿಯನ್ನು ಕುರಿತು, ಪಾಂಡಿತ್ಯ ಪೂರ್ಣವಾದಂಥ ಪುಸ್ತಕಗಳನ್ನು ಬರೆದಿದ್ದಾರೆ. ರವೀಂದ್ರನಾಥ ಠಾಕೂರರ ಜೀವನ ಚರಿತ್ರೆ ಬರೆದು ಅವರ ಸಾಹಿತ್ಯದ ಪರಿಚಯ ನೀಡಿದ್ದಾರೆ. ರಾಮಾಯಣ ಮತ್ತು ಮಹಾಭಾರತಗಳಂತೂ ನಮ್ಮ ದೇಶದ ಸಂಸ್ಕೃತಿಯ ಎರಡು ಕಣ್ಣುಗಳಿದ್ದಂತೆ ಎಂದು ಪಂ. ನೆಹರು ಒಮ್ಮೆ ಹೇಳಿದ್ದರು. ವಾಲ್ಮೀಕಿ ಮತ್ತು ವ್ಯಾಸರ

ಈ ಕೃತಿಗಳ ಬಗ್ಗೆ ಡಾ|| ಮಾಸ್ತಿಯವರಿಗೆ ತುಂಬ ಅಭಿಮಾನ.

ಹಲವು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಅವರ ಮನೆಯಲ್ಲಿ ಭೆಟ್ಟಿಯಾದಾಗ ಅವರು ಆಡಿದ ಮಾತುಗಳು ನನಗಿನ್ನೂ ನೆನಪಿವೆ. ''ಕಾವ್ಯ, ಸಾಹಿತ್ಯ, ಮತ್ತು ಸಂಸ್ಕೃತಿಯ ಕ್ಷೇತ್ರಗಳಲ್ಲಿ ದುಡಿಯುವವರು ಅವಶ್ಯವಾಗಿ ರಾಮಾಯಣವನ್ನು ಓದಬೇಕು. ಒಳ್ಳೆಯ ಬಾಳನ್ನು ಬಾಳಬೇಕೆನ್ನುವವನೂ, ರಾಮಾಯಣವನ್ನು ಓದಬೇಕು. ನಮಗೆ ಸಂಸ್ಕೃತ ಅರ್ಥವಾಗಲಿ, ಅಥವಾ ಅರ್ಥವಾಗಲು ಕಷ್ಟವಾದರೂ ಚಿಂತೆಯಿಲ್ಲ, ರಾಮಾಯಣದಿಂದ ನಿತ್ಯದಲ್ಲಿಯೂ ಕೆಲವು ಶ್ಲೋಕಗಳನ್ನಾದರೂ ಓದುವ ರೂಢಿ ಇಟ್ಟುಕೊಳ್ಳಬೇಕು. ಈ ರೂಢಿಯಿಂದ ನಮಗೆ ಅಪಾರ ಲಾಭವಿದೆ. ಶ್ರದ್ಧೆ ಇದ್ದೊ, ಇಲ್ಲದೆಯೊ, ಓದಿದರೂ ರಾಮಾಯಣವು ನಮ್ಮ ಬದುಕಿಗೆ ಒಂದು ಹದವನ್ನೂ ಮೆರುಗನ್ನೂ ಧನ್ಯಭಾವವನ್ನೂ ನೀಡುತ್ತದೆ. ಶ್ರದ್ಧೆ ಇದ್ದು ಓದಿದರಂತೂ ಇನ್ನೂ ಒಳ್ಳೆಯದು. ಅಂಥವರಿಗೆ ವಾಲ್ಮೀಕಿಗಳ ಅನುಗ್ರಹವಾದೀತು''

ಮಹಾಭಾರತದ ಕುರಿತು ಭಾರತ ತೀರ್ಥವನ್ನು ಬರೆದರು. ವಾಲ್ಮೀಕಿಗಳ ರಾಮಾಯಣದ ಕಥೆ ಬರೆದರು. ಹೀಗೆ ಡಾ|| ಮಾಸ್ತಿಯವರು ನಮ್ಮ ಬದುಕಿನಲ್ಲಿಯೂ ಸಂಸ್ಕೃತಿಯಲ್ಲಿಯೂ ಪವಿತ್ರವಾದ ಮತ್ತು ಸಾರ್ಥಕವಾದ ಕೃಷಿಮಾಡಿ, ಹೊಸ ನಾಡನ್ನು ಹೊಸ ಬದುಕನ್ನು ಹೊಸ ಸಾಹಿತ್ಯವನ್ನು ನಿರ್ಮಿಸುವ ತಪಸ್ಸು ಮಾಡಿದರು. ಇದಲ್ಲದೆ ವಿಮರ್ಶೆಯೆಂಬ ಪ್ರಬಂಧಗಳನ್ನು ಅವರು ಬರೆದರು. ಡಾ|| ಮಾಸ್ತಿಯವರು ಸ್ವತಃ ದೊಡ್ಡ ವಿದ್ವಾಂಸರು. ನಮ್ಮ ದೇಶದ ಮತ್ತು ಅನ್ಯ ದೇಶಗಳ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡವರು. ಶೇಕ್ಸಪಿಯರನ ನಾಟಕಗಳನ್ನೂ ಹಲವಾರು ಮಹತ್ವದ ದೃಶ್ಯಗಳನ್ನೂ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಇಂಗ್ಲಿಷಿನ ಕಾದಂಬರಿಯ ಪ್ರಕಾರಗಳನ್ನು ಕುರಿತು ನಿಬಂಧ ಬರೆದಿದ್ದಾರೆ. ಹರಿದಾಸ ಸಾಹಿತ್ಯವನ್ನು ಕುರಿತು ಬರೆದಿದ್ದಾರೆ. ಹೀಗೆ ಸಣ್ಣ ಕತೆ, ಕಾದಂಬರಿ, ನೀಳ್ಗತೆ, ನಾಟಕ, ವಿಮರ್ಶೆ, ಪ್ರಬಂಧ, ನಿಬಂಧ - ಒಂದಲ್ಲ ಎರಡಲ್ಲ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಅವರು ಅತ್ಯಂತ ವೈಭವದಿಂದ ಕೈಯಾಡಿಸಿದ್ದಾರೆ.

ಕಾವ್ಯದಲ್ಲಿಯೂ ಅಷ್ಟೇ ರಸವತ್ತಾಗಿ ಕೃಷಿಮಾಡಿದ್ದಾರೆ. ಅವರ ಅನೇಕ ಕವನ ಸಂಗ್ರಹಗಳು ಅವರ ಕಾವ್ಯ ಪ್ರತಿಭೆಗೂ, ಪ್ರಪಂಚವನ್ನೂ ಬದುಕನ್ನೂ ಅನುಕಂಪದಿಂದ ನೋಡುವ ರಸಾದ್ರ್ರ ಹೃದಯವಂತಿಕೆಗೂ, ನಿದರ್ಶನಗಳಾಗಿವೆ. ಭಾವಗೀತೆಗಳನ್ನಲ್ಲದೆ, ಸುಂದರವಾದ ಸುನೀತಗಳನಲ್ಲದೆ, ಅವರು ಕಥನಕವನಗಳನ್ನೂ ವಿಪುಲವಾಗಿ ಬರೆದರು. ಅವರು ಮೈಸೂರಿನ ಸರಕಾರಿ ಸೇವೆಯಲ್ಲಿದ್ದಾಗಲೂ, ಅದರಿಂದ ನಿವೃತ್ತರಾದಾಗಲೂ, ನಾಡಿನುದ್ದಗಲಕ್ಕೂ ಸಂಚರಿಸಿದರು. ಇದರ ಫಲವಾಗಿ, ಅವರಿಗೆ ಭಿನ್ನ ಜನಗಳ ಸ್ವಭಾವಗಳ ಸಂಪರ್ಕದಿಂದ ಉಂಟಾದ ಅನೇಕ ರಸಮಯ ಅನುಭವಗಳನ್ನೂ ಅವರು ನಿರ್ಮಿಸಿದ ಸಾಹಿತ್ಯದಲ್ಲಿ ನಾವು ಕಾಣುವದು ಸ್ವಾಭಾವಿಕವಾಗಿದೆ. ಈಚೆಗೆ ಅವರು 'ಭಾವ'ಎಂಬ ಆತ್ಮಚರಿತ್ರೆಯನ್ನು ಕೂಡ ಬರೆದಿರುವರು. ಈ ಕೃತಿಯು ಕನ್ನಡಕ್ಕೆ ಅಪೂರ್ವವಾದ ಒಂದು ಕಾಣಿಕೆಯಾಗಿದೆ. ಅದರಲ್ಲಿ ಡಾ||ಮಾಸ್ತಿಯವರ ಪರಿಪಕ್ವವಾದ ವ್ಯಕ್ತಿತ್ವವನ್ನೂ ಸುಸಂಕೃತವಾದಂಥ ಬದುಕಿನ ಘನತೆಯನ್ನೂ ಓದುಗರು ಕಾಣುವರು.

ಸ್ವತಃ ಒಳ್ಳೆಯ ಸಾಹಿತ್ಯವನ್ನು ನಿರ್ಮಿಸಿದ್ದಲ್ಲದೆ ಡಾ|| ಮಾಸ್ತಿಯವರು ಒಳ್ಳೆಯ ಸಾಹಿತಿಗಳ ನಿರ್ಮಾಣಕ್ಕೂ ಕಾರಣರಾಗಿದ್ದಾರೆ. ಅವರು ಪತ್ರಿಕೋದ್ಯಮಕ್ಕೆ

ಕೈಹಾಕಿದಾಗಲೂ, ಹಾಕುವ ಮೊದಲೂ, ಅವರು ಸಾಹಿತಿಗಳಿಗೆ ಸ್ಫೂರ್ತಿಯಾಗಿದ್ದರು. ಕನ್ನಡದಲ್ಲಿ ಹೆಸರಾಂತ -ನಗೆ ಬರಹಗಳನ್ನು ಬರೆದ ಗೊರೂರು ರಾಮಸ್ವಾಮಿ ಅಯ್ಯಂಗಾರರ 'ನಮ್ಮ ಊರಿನ ರಸಿಕರು' ಡಾ|| ಮಾಸ್ತಿಯವರ ಆಶೀರ್ವಾದದಿಂದಲೆ ಅಚ್ಚಾಯಿತು. ಅವರ ಧೀಮಂತ ಸಂಪರ್ಕದಲ್ಲಿ ಬಂದ ಶ್ರೀ.ಪು.ತಿ.ನ; ಆನಂದ; ಗೊರೂರು, ಶ್ರೀನಿವಾಸಮೂರ್ತಿ, ಇವರೆಲ್ಲ ಕನ್ನಡದ ಹೆಸರಾಂತ ಬರಹಗಾರರು. ಪ್ರತಿಭೆಯುಳ್ಳ ಲೇಖಕರನ್ನು ಕಂಡುಹಿಡಿಯುವದು ಸೂಕ್ಷ್ಮವಾದ ಕಷ್ಟದ ಕೆಲಸ. ಅವರನ್ನು ಹುರಿದುಂಬಿಸಿ ಅವರ ಕೃತಿಗಳನ್ನು ಪ್ರಕಟಿಸಿ ಸಂತೋಷಪಡುವ ಔದಾರ್ಯ ಮತ್ತು ಅಭಿಮಾನವುಳ್ಳ ಜನ ತೀರ ಅಪರೂಪ. ಆದರೆ ಡಾ|| ಮಾಸ್ತಿ ತಮ್ಮ ಕೃತಿಗಳನ್ನಷ್ಟೇ ಪ್ರಕಟಿಸಿಕೊಂಡು ತೃಪ್ತರಾಗುವ ಜಾಯಮಾನದವರಲ್ಲ. ಅದಕ್ಕಿಂತ ಹೆಚ್ಚು ಸಂತೋಷವನ್ನು ಇನ್ನೊಬ್ಬರ ಕೃತಿಗಳನ್ನು ಪ್ರಕಟಿಸಿ ಅನುಭವಿಸುವವರು. ಅವರು 'ಜೀವನ' ಪತ್ರಿಕೆಯ ಸಂಪಾದಕರಾಗಿ ಕನ್ನಡ ಸಾಹಿತ್ಯ ಪ್ರಪಂಚದಲ್ಲಿಯೂ ಪತ್ರಿಕೋದ್ಯಮದಲ್ಲಿಯೂ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿದರು.

ಕೆ. ಗೋಪಾಲಕೃಷ್ಣರಾಯರು, ಗೊರೂರು ರಾಮಸ್ವಾಮಿ ಅಯ್ಯಂಗಾರರು, ಪು.ತಿ.ನ. ಮೊದಲಾದ ಪ್ರಸಿದ್ಧ ಲೇಖಕರು ಅನೇಕ ಸಂದರ್ಭಗಳಲ್ಲಿ ಶ್ರೀ ಮಾಸ್ತಿಯವರ ಸ್ಫೂರ್ತಿಪ್ರದವಾದಂಥ ಮಾರ್ಗದರ್ಶನವನ್ನು ಕೃತಜ್ಞತೆಗಳಿಂದ ಸ್ಮರಿಸಿದ್ದಾರೆ. ಜೀವನ ಪತ್ರಿಕೆಯನ್ನು ಕೈಗೆತ್ತಿಕೊಂಡ ಹೊಸದರಲ್ಲಿಯೆ ಕನ್ನಡ ಸಾಹಿತ್ಯಕ್ಕೆ ವಿಶೇಷವಾದ ರೀತಿಯ ಸೇವೆ ಸಲ್ಲಿಸುವಂಥ ಸಾಂಸ್ಕೃತಿ ಮಾಸ ಪತ್ರಿಕೆ ಅದಾಗಬೇಕೆಂದು ಹೆಗ್ಗುರಿಯಿಟ್ಟುಕೊಂಡಿದ್ದರು. ಅವರ ಸಮರ್ಥ ಮಾರ್ಗದರ್ಶನದಲ್ಲಿ ಆ ಪತ್ರಿಕೆ ಕನ್ನಡದಲ್ಲಿಯೆ ಒಂದು ವಿಶಿಷ್ಟ ಸ್ಥಾನವನ್ನು ಪಡೆಯಿತು. ಪ್ರಪಂಚದಲ್ಲೆಲ್ಲ ಹಬ್ಬಿದ ಇಂಗ್ಲಿಷ್ ಭಾಷೆಯಲ್ಲಿಯೂ ಕೂಡ ಇಂಥ ಪತ್ರಿಕೆಗಳನ್ನು ನಡೆಸುವದು ಅತ್ಯಂತ ಕಷ್ಟಸಾಧ್ಯವೆಂಬ ಮನವರಿಕೆ ಅವರಿಗಿದ್ದಿತು. Strand, Encounter ಮುಂತಾದ ಪತ್ರಿಕೆಗಳು ಕೂಡ ಆರ್ಥಿಕ ಮುಗ್ಗಟ್ಟಿನ ಬಂಡೆಗಲ್ಲುಗಳಿಗೆ ಹಣೆ ಬಡಿದುಕೊಂಡವು. ಆದರೂ ಒಳ್ಳೆಯದು ಎಲ್ಲ ಕಾಲದಲ್ಲೂ ಪುರಸ್ಕರಿಸಲ್ಪಡುತ್ತದೆ ಎಂಬ ವಿಶ್ವಾಸದಿಂದಲೆ ಅವರು ಪತ್ರಿಕೋದ್ಯಮಕ್ಕೆ ಕಾಲಿರಿಸಿದರು.

ಜೀವನ ಪತ್ರಿಕೆ ಓದಿದವರಿಗೆ ಮೂರು ಸಂಗತಿಗಳು ಚಿರಸ್ಮರಣೀಯವಾಗಿವೆ. ಮೊದಲನೆಯದಾಗಿ ಕನ್ನಡ ಪತ್ರಿಕೋದ್ಯಮದಲ್ಲಿ ಅದು ಉಂಟು ಮಾಡಿದ ಅತ್ಯಂತ ಸುಸಂಸ್ಕೃತವಾದ ಅಭಿರುಚಿ. ಅದರಲ್ಲಿ ಬಂದ ಲೇಖನಗಳೆಲ್ಲ ಸಮರ್ಥವಾದ ಲೇಖಕರಿಂದ ಬರೆಯಲ್ಪಟ್ಟವುಗಳು. ಸಾಹಿತ್ಯ, ಸಂಗೀತ, ಲಲಿತಕಲೆ, ಇತಿಹಾಸ, ಆತ್ಮಚರಿತ್ರೆ ಮತ್ತು ಪ್ರಗಲ್ಭ ವಿಚಾರಗಳ ಪ್ರಬಂಧಗಳು. ಇವೆಲ್ಲವೂ ಅವಕ್ಕನುಗುಣವಾದ ಭಾಷೆಯಲ್ಲಿ ನಿರೂಪಿತವಾಗಿ ಜನರಿಗೆ ಆ ಪತ್ರಿಕೆ ಓದುವದೇ ಒಂದು ಹಬ್ಬ ಎನಿಸುವಷ್ಟು ಸಂತೋಷವಾಗುತ್ತಿತ್ತು. ಎರಡನೆಯದಾಗಿ ಈ ಪತ್ರಿಕೆ ಹೊಸ ಪೀಳಿಗೆಯ ಲೇಖಕರ ಒಂದು ಬಳಗವನ್ನೇ ನಿರ್ಮಿಸಿತು. ಕಾವ್ಯಾನಂದ, ಶಿವೇಶ್ವರ ದೊಡ್ಡಮನಿ, ಬಾಗಲೊಡಿ ದೇವರಾಯರು, ಬಿಳಿಗಿರಿ ಮುಂತಾದ ಅನೇಕ ಲೇಖಕರು ಈ ಪತ್ರಿಕೆಯ ಮೂಲಕವೇ ಕನ್ನಡ ಜನಮನವನ್ನು ಆಕರ್ಷಿಸಿದರು. ಗುಣವನ್ನು ಕಂಡು ಬೆನ್ನುತಟ್ಟುವ ಡಾ|| ಮಾಸ್ತಿಯವರು ಇಂಥವರ ಎಷ್ಟೋ ಕೃತಿಗಳನ್ನು ಪ್ರಕಟಿಸಿದರೂ ಕೂಡ, ಮೂರನೆಯದಾಗಿ ಪ್ರಚಲಿತ

ಸಮಸ್ಯೆಗಳನ್ನು ಕುರಿತು ಡಾ।। ಮಾಸ್ತಿಯವರು ಬರೆಯುತ್ತಿದ್ದ ತೂಕದ ಸಂಪಾದಕೀಯಗಳು. ಅವರ ಸಣ್ಣ ಕತೆಗಳಲ್ಲಿ ಕಂಡು ಬರುವ ಆತ್ಮೀಯತೆ ಮತ್ತು ಲಾಲಿತ್ಯವೆ ಅವರ ಸಂಪಾದಕೀಯದಲ್ಲಿಯೂ ಕಂಡುಬರುತ್ತಿತ್ತು. ಸಂಪಾದಕೀಯದ ವಿಷಯಗಳು ರಾಜಕೀಯವೆ ಇರಲಿ, ಏಕೀಕರಣವೆ ಇರಲಿ, ಸಾಹಿತ್ಯಿಕ ಇಲ್ಲವೆ ಸಾಮಾಜಿಕ-ಸಮಸ್ಯೆ ಇರಲಿ ಅವರು ಬಳಸುವ ಶೈಲಿಯು ಬಹುತೂಕವಾಗಿದ್ದಲ್ಲದೆ ಒಳ್ಳೆಯ ಮನವೊಲಿಸುವ ಮತ್ತು ವಿಚಾರಪರತೆಯಿಂದ ಕೂಡಿದ ಶೈಲಿಯಾಗಿರುತ್ತಿತ್ತು. ಇಂದಿಗೂ ಕೂಡ ಪತ್ರಿಕೋದ್ಯಮದಲ್ಲಿ ಇಂಥ ನಿರ್ವಿಕಾರವಾದ ಶೈಲಿಯನ್ನು ಕಾಣುವದು ವಿರಳವಾಗಿದೆ.

ಡಾ।। ಮಾಸ್ತಿಯವರು ಕನ್ನಡಕ್ಕೆ ಮಾಡಿದ ಮತ್ತೊಂದು ಮಹದುಪಕಾರವೆಂದರೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅದರ ಪ್ರಭಾವಲಯವನ್ನು ಹೆಚ್ಚು ವಿಸ್ತಾರಗೊಳಿಸಿದರು. ಕನ್ನಡ ನಾಡಿನಲ್ಲೆಲ್ಲ ಸಂಚರಿಸಿ ಅದರ ಸದಸ್ಯ ಸಂಪತ್ತನ್ನು ಹೆಚ್ಚಿಸಿದರು. ಕನ್ನಡ ನುಡಿಯ ಮತ್ತು ಜನರ ಸೇವೆಗಾಗಿ ಅವರು ಉತ್ಸಾಹದಿಂದ ದುಡಿದ ಫಲವಾಗಿಯೇ ಪರಿಷತ್ತಿನ ಘನತೆಯೂ ಸಫಲತೆಯೂ ಹೆಚ್ಚು ಪ್ರಾತಿನಿಧಿಕವಾಯಿತು. ನಾಡಿನ ಎಲ್ಲ ಕಡೆಯ ಜನರಿಗೂ ಒಂದಲ್ಲ ಒಂದು ರೀತಿಯಲ್ಲಿ ಇದು ನಮ್ಮ ಹೆಮ್ಮೆಯ ಸಂಸ್ಥೆ. ಇದನ್ನು ನಾವು ಬೆಳೆಸಿಕೊಳ್ಳಬೇಕು, ಎಂದು ಹೇಳಿಕೊಳ್ಳುವಂತಾಯಿತು.

ಜೀವನ ಪತ್ರಿಕೆಯಲ್ಲಿ ಅವರು ಮಾಡಿದ ಇನ್ನೊಂದು ಮಹದುಪಕಾರವೆಂದರೆ ನವರತ್ನ ರಾಮರಾಯರ ಆತ್ಮ ಚರಿತ್ರೆಯ ಪುಟಗಳನ್ನು ಪ್ರಕಟಿಸಿದ್ದು. ಮೊದಮೊದಲು ಅವುಗಳನ್ನು ಪತ್ರಿಕೆಯಲ್ಲಿ ಕ್ರಮಶಃ ಪ್ರಕಟಿಸಿ, ಕೊನೆಗೆ ಪುಸ್ತಕ ರೂಪದಲ್ಲಿ ಕೆಲವು ನೆನಪುಗಳನ್ನು ಹೊರಗೆ ತಂದರು. ಈ ಮೂಲಕ ಒಬ್ಬ ಪ್ರತಿಭಾಶಾಲಿಯ ನಿಕಟ ಪರಿಚಯ ನೀಡಿದ್ದಲ್ಲದೆ ಕನ್ನಡ ಸಾಹಿತ್ಯಕ್ಕೆ ಮತ್ತೆ ಮತ್ತೆ ಓದಬಹುದಾದಂಥ ಗ್ರಂಥವೊಂದನ್ನು ನೀಡಿದರು. ಆಗಾಗ ಜೀವನದ ವಿಶೇಷ ಸಂಚಿಕೆಗಳನ್ನು ಹೊರಡಿಸಿ ಓದುಗರಲ್ಲಿ ಹೊಸ ದೃಷ್ಟಿಯನ್ನು ಮೂಡಿಸಲು ನೆರವಾಗುತ್ತಿದ್ದರು.

ನಾನು ಡಾ।। ಮಾಸ್ತಿಯವರನ್ನು ಮೊದಲು ನೋಡಿದಾಗ ಅವರಿನ್ನೂ ಡಾಕ್ಟರೇಟ ಪಡೆದಿರಲ್ಲಿಲ್ಲ. ಬರಿಯ ಶ್ರೀನಿವಾಸರಾಗಿದ್ದರು. ಪ್ರೊ।। ವಿ.ಕೃ. ಗೋಕಾಕರು ಆಕ್ಸಫರ್ಡಿನಿಂದ ಅದ್ಭುತ ಯಶಸ್ಸನ್ನು ಪಡೆದು ಆಗತಾನೆ ಮರಳಿದ್ದರು. ಅಂದು ಹುಬ್ಬಳ್ಳಿಯಲ್ಲಿ ಶ್ರೀ ಸತ್ಯಬೋಧ ವಾಚನಾಲಯದ ಕಾರ್ಯಕರ್ತರು ಸತ್ಕಾರ ಕೂಟವೊಂದನ್ನು ಸಾರ್ವಜನಿಕ ಸಭೆಯೊಂದನ್ನೂ ಏರ್ಪಡಿಸಿದ್ದರು. ಅಂದು ಅವರು ಪ್ರೊ. ಗೋಕಾಕರೊಂದಿಗೆ, ಪ್ರೊ. ಧ್ರುವರೊಂದಿಗೆ ಬಂದಿದ್ದರು. ಆ ದಿನ ಪ್ರೊ. ಗೋಕಾಕರು ಮಾತನಾಡಿದ ಸಂದರ್ಭದಲ್ಲಿಯೆ ಶ್ರೀನಿವಾಸರ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು. ಅಂದಿನವರೆಗೆ ಬರಿಯ ಪತ್ರಿಕೆಗಳ ಮೂಲಕ ಪರಿಚಿತರಾದ ಶ್ರೀನಿವಾಸರನ್ನು ಪ್ರತ್ಯಕ್ಷವಾಗಿ ಕಂಡು ನಮಗೆ ಆನಂದವಾಯಿತು. ಆಮೇಲೆ ನಾನು ಅವರನ್ನು ಕಂಡದ್ದು ವಿಲಿಂಗ್ಡನ್ನ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವದಲ್ಲಿ. ಅಂದು ಅವರು ನಮ್ಮ ಸಂಘದ ಮುಖ್ಯ ಅತಿಥಿಗಳಾಗಿದ್ದರು. ಹುಬ್ಬಳ್ಳಿಯಲ್ಲಿ ಅರ್ಥಮಾಡಿಕೊಳ್ಳುವದಕ್ಕಿಂತಲೂ ಇಲ್ಲಿ ಈಗ ಅವರನ್ನು ಅರ್ಥಮಾಡಿಕೊಳ್ಳುವದು ನನಗೆ ಹೆಚ್ಚು ಸುಲಭವಾಯಿತು. ಏಕೆಂದರೆ ಇಷ್ಟು ಹೊತ್ತಿಗಾಗಲೆ ಅವರು ಸಣ್ಣ ಕತೆಗಳನ್ನೂ ಕವಿತೆಗಳನ್ನೂ, ಸುಬ್ಬಣ್ಣವನ್ನೂ ಬರೆದು ಪ್ರಸಿದ್ಧರಾಗಿದ್ದರು. ಅಂದು ಪ್ರೊ।। ಮುಗಳಿಯವರು ಅವರನ್ನು ಸಭೆಗೆ ಪರಿಚಯ

ಮಾಡಿಕೊಡುತ್ತ ''ಸಣ್ಣ ಕತೆಗಳನ್ನು ಬರೆದ ದೊಡ್ಡವರಿವರು''ಎಂದರು. ಪ್ರೊ|| ಗೋಕಾಕರು, ''ಶ್ರೀ ಮಾಸ್ತಿಯವರು ಕನ್ನಡದ ಆಸ್ತಿ''ಎಂದು ಹೇಳಿದರು. ಆ ಮಾತು ಈಗ ಜನಜನಿತವಾಗಿದೆ. ಅಂದು ಕಿಕ್ಕಿರಿದು ತುಂಬಿದ ನಮ್ಮ ಸಭೆಯಲ್ಲಿ 'ಬದುಕಿನ ಎರಡು ದೃಷ್ಟಿಗಳು'ಎಂಬುದರ ಕುರಿತು ಅವರು ಅಮೋಘವಾಗಿ ಮಾತನಾಡಿದರು. ಉಪನಿಷತ್ತಿನ ಒಂದು ಕಥೆಯನ್ನು ದೃಷ್ಟಾಂತವಾಗಿ ಹೇಳುತ್ತ, ಒಂದು ಸಂದರ್ಭದಲ್ಲಿ ದೇವತೆಗಳಿಗೂ ಹುಲ್ಲು ಕಡ್ಡಿಯನ್ನು ಅಲುಗಿಸಲು ಆಗಲಾರದ್ದನ್ನು ವಿವರಿಸಿದರು. ಆದ್ದರಿಂದ ಜೀವನದಲ್ಲಿ ಪಡೆಯುವ ಪ್ರತಿಯೊಂದು ಯಶಸ್ಸಿಗೂ ಕಾರಣನಾದ ಭಗವಂತ ಇದ್ದಾನೆ. ಅವನಲ್ಲಿ ಶ್ರದ್ಧೆಯಿಂದ ವಿಶ್ವಾಸದಿಂದ ನಡೆದುಕೊಳ್ಳಬೇಕು ಎಂದು ಹೇಳಿದರು. ಈ ಶ್ರದ್ಧೆ ಭಕ್ತಿ ಆಸ್ತಿಕ್ಯಗಳು ಜೀವನದ ಒಂದು ದೃಷ್ಟಿ. ಇದಕ್ಕೆ ವಿರುದ್ಧವಾಗಿ W.E. ಹೆನ್ಲಿ ಕವಿಯ ಒಂದು ಪದ್ಯವನ್ನು ಸಭೆಯಲ್ಲಿ ಹೇಳಿದರು. ಅವರ ನೆನಪಾದರೂ ಎಂಥದು! ಆ ಇಡೀ ಪದ್ಯವನ್ನು ಹೇಳಿ ಪೌರುಷ ಆತ್ಮವಿಶ್ವಾಸಗಳೆಂದರೆ ಏನೆಂಬುದನ್ನು ವಿವರಿಸಿದರು. ಆ ಪದ್ಯದಲ್ಲಿ ಹೆನ್ಲಿ ಹೇಳುತ್ತಾನೆ, ''ಹಲವಾರು ಸಂಕಟಗಳಿಗೆ ತಲೆಯೊಡ್ಡಿ ನಿರ್ಭಯವಾಗಿ ನಿಂತಿದ್ದೇನೆ. ಅನಿರೀಕ್ಷಿತವಾದಂಥ ಕಷ್ಟಗಳಿಂದಲೂ ವಿಧಿಯ ಹೊಡೆತದಿಂದಲೂ ನನ್ನ ತಲೆಯಿಂದ ನೆತ್ತರು ಸುರಿಯುತ್ತಿದೆ. ಪರಿಪರಿಯಲ್ಲಿ ನಾನು ವೇದನೆ ಪಡುತ್ತಿದ್ದೇನೆ. ಎಷ್ಟು ನೆತ್ತರು ಸುರಿದರೂ ಈ ತಲೆಯನ್ನು ನಾನು ವಿಧಿಗೆ ಬಾಗಿಸಲಾರೆ'' ''ಇಂಥ ಆತ್ಮವಿಶ್ವಾಸ ಹೆನ್ಲಿಯಲ್ಲಿ ಅತಿಯಾಯಿತೇನೋ.' ಎಂದರು ಮಾಸ್ತಿ. ''ಶ್ರದ್ಧೆ ಆಸ್ತಿಕ್ಯವಿಲ್ಲದ ಆತ್ಮವಿಶ್ವಾಸದಿಂದ ತಲೆಯ ನೆತ್ತರು ಮಾತ್ರ ಸುರಿದೀತು'' ಎಂದು ಶ್ರೀ ಮಾಸ್ತಿ ಎಚ್ಚರಿಸಿದರು. ಅಂದು ನಮಗೆ ಶ್ರೀಮಾಸ್ತಿಯವರ ಉಪನ್ಯಾಸ ಕೇಳಿದ ನಂತರ ಕಾಲೇಜಿನ ಹುಡುಗಾಟಿಕೆಯ ದಿನಗಳಲ್ಲೂ ಬದುಕನ್ನು ಕುರಿತು-ಗಂಭೀರವಾಗಿ ಯೋಚಿಸುವ ಒಂದು ಪ್ರಜ್ಞೆ ಮೂಡಿದಂತೆನಿಸಿತು.

ಮತ್ತೊಮ್ಮೆ ಹಲವು ವರ್ಷಗಳ ಹಿಂದೆ ನಮ್ಮ ಆಪ್ತರೊಬ್ಬರ ಸಂಗಡ ಬೆಂಗಳೂರು ಮೈಸೂರುಗಳನ್ನು ಸುತ್ತಾಡಿಕೊಂಡು ಬರುವ ಸುಯೋಗ ನನಗೆ ಒದಗಿತ್ತು. ಈ ಸಂದರ್ಭವನ್ನು ಬಳಸಿಕೊಂಡ ನಮಗೆ, ಆಗ ಡಾ|| ಮಾಸ್ತಿಯವರನ್ನು ಕಾಣುವ ಭಾಗ್ಯವು ಒದಗಿಬಂದಿತು. ಆಗ ಬೆಂಗಳೂರಿನಲ್ಲಿ ಶ್ರೀ ತೀ.ನಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಮಂಟಪವೆಂಬ ಸಹೃದಯರ ಗೋಷ್ಠಿಯೊಂದು ಆಗಾಗ ಸಭೆಗಳನ್ನು ಕರೆದು ಸಾಹಿತ್ಯ ಸಂಸ್ಕೃತಿ ಮೊದಲಾದ ವಿಷಯಗಳ ಕಾರ್ಯಕ್ರಮವನ್ನು ಏರ್ಪಡಿಸುತ್ತಿತ್ತು. ಪಾರಸಿ ಸಾಹಿತ್ಯವನ್ನು ಕನ್ನಡಕ್ಕೆ ತಂದ ಶ್ರೀ ಮ. ವಾಸುದೇವಮೂರ್ತಿಗಳು ಅದರ ಕಾರ್ಯದರ್ಶಿಗಳಾಗಿದ್ದರೆಂದು ನೆನಪು. ನಾನು ಬೆಂಗಳೂರಿಗೆ ಬರುವ ವಿಷಯ ಅವರಿಗೆ ಹೇಗೋ ತಿಳಿದು ಪರಿಷತ್ತಿನಲ್ಲಿ ಸಾಹಿತ್ಯ ಮಂಟಪದ ವತಿಯಿಂದ ನನ್ನ ಕಾವ್ಯವಾಚನದ ಒಂದು ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಇಷ್ಟೊತ್ತಿಗಾಗಲೆ ಜೀವನ ಪತ್ರಿಕೆಯಲ್ಲಿ ಶ್ರೀ ಮಾಸ್ತಿಯವರು ನನ್ನ ಅನೇಕ ಕಥನಕವನಗಳನ್ನು ಪ್ರಕಟಿಸಿದ್ದಲ್ಲದೆ ಅವುಗಳ ಸತ್ವವನ್ನು ಕುರಿತು ತಮಗೆ ಸಹಜವಾದ ಔದಾರ್ಯದಿಂದಲೂ ಪ್ರೀತಿ ವಿಶ್ವಾಸಗಳಿಂದಲೂ ನಾಲ್ಕು ಒಳ್ಳೆಯ ಮಾತುಗಳನ್ನು ಬರೆದಿದ್ದರು. ಹೀಗಾಗಿ ಸಹೃದಯರ ಒಂದು ದೊಡ್ಡ ಪರಿವಾರವೆ ಅಂದು ನನಗೆ ಪರಿಚಿತರಾದರು. ಶ್ರೀ ತೀ.ನಂ. ಶ್ರೀ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅಂದು ಸಭೆಯಲ್ಲಿ ಮತ್ಸ್ಯಗಂಧಿ, ಬುದ್ಧದೇವ ಮತ್ತು ಬೆಳಕು ಎಂಬ ಪದ್ಯಗಳನ್ನು ಓದಿದೆನು. ಕಾರ್ಯಕ್ರಮ ಬೆಳಕಿನಿಂದಲೇ ಮುಗಿಯಬೇಕೆಂದು ಸೂಚಿಸಿದವರು ಶ್ರೀ ಮಾಸ್ತಿಯವರೆ.

ಅಂದಿನ ಕಾವ್ಯವಾಚನದಿಂದ ಅವರಿಗಾದ ಲಾಭಕ್ಕಿಂತ ನನ್ನದೇ ಹೆಚ್ಚೆಂದು ನನಗೆ ಮನವರಿಕೆಯಾಯಿತು. ಇಂಥ ಸಹೃದಯರ ಸ್ನೇಹಿತರ ಪ್ರೀತಿ ಲಾಭದ ಅನುಕೂಲತೆ ಮಾಡಿಕೊಟ್ಟವರು ಶ್ರೀ ಮಾಸ್ತಿಯವರೆ.

ಮಾರನೆಯ ದಿನ ಹ.ವೆಂ.ನಾಗರಾಜರಾಯರ ನೆರವಿನಿಂದ ಗವಿಪುರ ವಿಸ್ತರಣದಲ್ಲಿರುವ ಶ್ರೀ ಮಾಸ್ತಿಯವರ ಮನೆಗೆ ಹೋಗಿದ್ದೆವು. ಅಲ್ಲಿ ಸುಮಾರು ೧ ತಾಸಿನವರೆಗೆ ಅತ್ಯಂತ ಆತ್ಮೀಯವಾಗಿ ಮಾತನಾಡಿದೆವು. ಆಗಲೆ ನಮಗೆ ಶ್ರೀ ಮಾಸ್ತಿಯವರ ಹೃದಯ ವೈಶಾಲ್ಯ, ಪ್ರೀತಿ, ಸ್ನೇಹಪರತೆ ಮತ್ತು ಆತ್ಮೀಯತೆಗಳ ನಿಕಟ ಪರಿಚಯವಾಯಿತು. ತಮ್ಮ ಪತ್ರಿಕೆಯಲ್ಲಿ ಬರೆಯುವ ಲೇಖಕರ ಶ್ರಮವೆಲ್ಲ ಬರಿಯ ಪ್ರೀತಿಯ ಶ್ರಮವಾಗಿದೆಯೆಂದೂ (Love's Labour), ಅದಕ್ಕೆ ಸಾಕಷ್ಟು ಪ್ರತಿಫಲ ಸಲ್ಲಿಸಬೇಕಾದ್ದು ನ್ಯಾಯವೆಂದೂ ಆದರೆ ಪತ್ರಿಕೆ ನಡೆಯುತ್ತಿರುವ ರೀತಿಯಲ್ಲಿ ಅದು ತುಂಬಾ ಕಷ್ಟವೆಂದೂ ಬಹಳ ಪರಿತಪಿಸಿದರು. ಬರಹಗಾರರಿಗೆ ಸಂಭಾವನೆಯನ್ನೂ ಪ್ರತಿಫಲವನ್ನೂ ಕೊಡಬೇಕೆಂಬ ಉತ್ಕಟವಾದ ಆತುರತೆ ಅವರಲ್ಲಿ ಎದ್ದುಕಾಣುತ್ತಿತ್ತು. ಆದರೆ ಜೀವನ ಪತ್ರಿಕೆಯ ಆಯವ್ಯಯ ಪತ್ರದ ಅಂಕಿ ಸಂಖ್ಯೆಗಳು ಅತ್ಯಂತ ನಿರುತ್ಸಾಹಕವಾಗಿದ್ದವು; ಪತ್ರಿಕೆ ಅಷ್ಟು ಚೆನ್ನಾಗಿ ನಡೆದಿದ್ದರೂ ಕೂಡ. ಈ ಸಂದರ್ಭದಲ್ಲಿ ಇನ್ನೊಂದು ಸಂಗತಿಯನ್ನು ಕುರಿತು ಅವರು ಬಹಳ ದುಃಖಿಸಿದರು. ದಿವಂಗತ ಗೆಳೆಯ ಶಿವೇಶ್ವರ ದೊಡ್ಡಮನಿ ಜೀವನ ಪತ್ರಿಕೆಯಲ್ಲಿ 'ಜನಪದ ಸಾಹಿತ್ಯ ಮತ್ತು ಜೀವನ ಸೌಂದರ್ಯ' ಎಂಬ ಲೇಖನ ಮಾಲೆಯನ್ನು ಬರೆದು ಪ್ರಕಟಿಸಿದ್ದರು. ಅವರು ನವಿಲೂರಿನಲ್ಲೂ ಧಾರವಾಡದ ಸುತ್ತಲಿನ ಹಳ್ಳಿಗಳಲ್ಲೂ ಜನಪದ ಕಾವ್ಯವನ್ನು ಸಂಗ್ರಹಿಸಿದ್ದರು. ಕೆಲವು ಕಾಲ ಹುಬ್ಬಳ್ಳಿಯಲ್ಲಿ ಕಮ್ಯುನಿಸ್ಟ್ ಪಾರ್ಟಿಯ ಮುಖಪತ್ರವಾದ 'ಜನಶಕ್ತಿ'ಯಲ್ಲಿ ನಿರಂಜನರೊಂದಿಗೆ ಕೂಡಿ ಕೆಲಸಮಾಡಿದ್ದರು. ಶ್ರೀ ಮಾಸ್ತಿಯವರು ಅವರ ಲೇಖನಗಳನ್ನು ಮೆಚ್ಚಿಕೊಂಡು ಪ್ರತಿಫಲವಾಗಿ ಸ್ವಲ್ಪ ಹಣವನ್ನು ಕಳಿಸಿದ್ದರು. ಅಷ್ಟರೊಳಗೆ ಶಿವೇಶ್ವರ ದೊಡ್ಡಮನಿ- ವಿಷಯಜ್ವರಕ್ಕೆ ತುತ್ತಾಗಿ ತೀರಿಕೊಂಡಿದ್ದರಿಂದ ಹಣ ವಾಪಾಸು ಬಂದಿತು. ನಮ್ಮ ಮಾತು ಕತೆಗಳ ಉದ್ದಕ್ಕೂ ಅವರ ಅನಕಂಪ ದುಃಖ ಮತ್ತು ಸಹಾನುಭೂತಿಗಳು ನಮಗೆ ಕಂಡುಬಂದವು. ಎಷ್ಟು ಒಳ್ಳೆಯ ಜೀವ ಎಷ್ಟು ಎಳೆತನದಲ್ಲಿ ತೀರಿಕೊಂಡರು,'' ಎಂದು ಬಹಳ ದುಃಖಿಸಿದರು

ಕಾವ್ಯದ ಗೊತ್ತುಗುರಿಯನ್ನು ಕುರಿತು ಮಾತಾನಾಡುವ ಸಂದರ್ಭದಲ್ಲಿ ಶ್ರೀ ಮಾಸ್ತಿಯವರು ಅಂದು ವಾಲ್ಮೀಕಿ ರಾಮಾಯಣದಿಂದ ಒಂದು ಶ್ಲೋಕವನ್ನು ಉದಾಹರಿಸಿದರು. ಮರುಕ, ಅನುಕಂಪ ಇರವ ಹೃದಯಕ್ಕೆ ಪ್ರಪಂಚ ಎಷ್ಟು ಭವ್ಯವಾಗಿ ತೋರುವುದು, ಎಂದು ಬಣ್ಣಿಸಿದರು. ಕಾವ್ಯದ ಸಫಲತೆ ಮತ್ತು ಸಾರ್ಥಕತೆ ಕಾವ್ಯವನ್ನು ಬರೆಯುವ ರಸಾರ್ದ್ರ ಹೃದಯದ ಅನುಭವದ ಶ್ರೀಮಂತಿಕೆಯಲ್ಲಿ ಅಡಗಿದೆಯೆಂದು ಹೇಳಿದರು. ಅವರಲ್ಲಿ ಕಾಫಿ ಕುಡಿದು ಕಾವ್ಯ ವಿಚಾರವನ್ನು ಮಾತಾಡಿ ಅವರೊಡನೆ ಅಷ್ಟು ಹೊತ್ತು ಕಳೆದದ್ದು ನನಗೊಂದು ಅಪೂರ್ವ ಅನುಭವವೆನಿಸಿತು. ಹೊರಡುವ ಮೊದಲು ನನ್ನ ಕೈಯಲ್ಲೊಂದು ಚೆಕ್ಕನ್ನು ಇರಿಸಿ ತಮ್ಮ ಗ್ರಂಥದ ಪ್ರತಿಯೊಂದನ್ನು ಕಾಣಿಕೆ ನೀಡಿ ಹೇಳಿದರು, ''ಸುಬ್ಬಣ್ಣಾ ಇದು ನಮ್ಮ ಪತ್ರಿಕೆ ಮತ್ತು ನಾನು ನೀಡುವ ಸಂಭಾವನೆ ಪ್ರತಿಫಲ ಅತ್ಯಲ್ಪವಾದವು'' ಎಂದರು. ಆಗ ನಾನು ಅವರಿಗೆ, ''ನಿಮ್ಮ ಆಶೀರ್ವಾದಕ್ಕಿಂತ ದೊಡ್ಡ

ಪ್ರತಿಫಲ ನನಗೆ ಬೇರೆ ಇಲ್ಲ''ಎಂದು ಹೇಳಿ ಕೈಮುಗಿದು ಬೀಳ್ಕೊಂಡೆನು. ನನ್ನೊಡನಿದ್ದ ನಮ್ಮ ಬಂಧುಗಳು ಅವರ ಔದಾರ್ಯ ಮತ್ತು ಆತ್ಮೀಯ ಆತಿಥ್ಯಗಳಿಗೆ ಮನಸೋತು ''ಎಂಥ ಅಂತಃಕರಣದ ದೊಡ್ಡವರು ಶ್ರೀಮಾಸ್ತಿಯವರು'' ಎಂದರು.

ಇದಾದ ಕೆಲ ದಿನಗಳ ಮೇಲೆ ಶ್ರೀ ಮಾಸ್ತಿಯವರೇ ನಮ್ಮ ಊರಿಗೆ ಬಂದರು. ನಮ್ಮ ಶಾಲೆಯ ವಾರ್ಷಿಕೋತ್ಸವದ ಮುಖ್ಯ ಅತಿಥಿಯಾಗಿ. ಆ ಸಂದರ್ಭವನ್ನಂತೂ ಎಂದಿಗೂ ಮರೆಯಲಾರೆವು. ಅಂದು ಅವರು ಮಾಡಿದ ಉಪನ್ಯಾಸವು ನಾವು ಕೇಳಿದ ಉಪನ್ಯಾಸಗಳಲ್ಲಿಯೇ ಸುಂದರವೂ ವಿಚಾರಪೂರ್ಣವೂ ಆಗಿದ್ದಿತು. ನಮ್ಮ ಊರಿನ ತೀರ ಸಮೀಪದಲ್ಲಿ ಕಡಲಿದೆಯೆಂದು ತಿಳಿದು ಅಲ್ಲಿ ಹೋಗಿಬರುವ ಅಪೇಕ್ಷೆಯನ್ನು ವ್ಯಕ್ತಪಡಿಸಿದರು. ಅಲ್ಲಿಯ ಮೀನುಗಾರರ ಗುಡಿಸಲುಗಳನ್ನೂ ಬದುಕನ್ನೂ ನಿರೀಕ್ಷಿಸಿದರು. ಇಂಥ ಇಳಿ ವಯಸ್ಸಿನಲ್ಲೂ ಅವರಿಗೆ ಚುರುಕಾಗಿ ನಡೆಯುವ ಚಪಲ. ಇನ್ನೊಬ್ಬರ ಬದುಕನ್ನು ತಿಳಿದುಕೊಳ್ಳಬೇಕೆನ್ನುವ ಚಪಲ ಕಂಡು ನಮ್ಮಲ್ಲಿಯ ಎಷ್ಟೋ ಜನರಿಗೆ ಅಚ್ಚರಿಯಾಯಿತು. ಕಡಲ ತೀರದಲ್ಲಂತೂ ಅವರು ಭಾವಪರವಶರಾಗಿ ನಿಂತು, ಅಲ್ಲಿಯ ಸೌಂದರ್ಯಕ್ಕೆ ಮಾರುಹೋದರು. ಅವರ ಕವಿ ಹೃದಯವನ್ನೂ ಅನುಭಾವ ದೃಷ್ಟಿಯನ್ನೂ ಆ ಸಂದರ್ಭದಲ್ಲಿ ನಾವು ಅರಿತುಕೊಂಡೆವು. ''ಈ ಕಡಲಿನ ಲಯ ಬದ್ಧವಾದ ಧ್ವನಿಯನ್ನು ಕೇಳಿದಾಗ, ಇದಕ್ಕೂ ಒಂದು ಭಾಷೆಯಿದೆ-ಎಂದು ಅನಿಸುತ್ತದೆ. ಇದರ ಭಾಷೆ ನಮಗೆ ತಿಳಿದಿದ್ದರೆ ಎಷ್ಟು ಚೆನ್ನಾಗಿತ್ತು''ಎಂದರು. ಇನ್ನೊಂದು ಸಂದರ್ಭದಲ್ಲಿ ಅವರು ಈ ಸೀಮೆಯ ನುಡಿಯ ಪ್ರಯೋಗಗಳನ್ನು ತಿಳಿದುಕೊಳ್ಳುವ ಆತುರವನ್ನು ವ್ಯಕ್ತಪಡಿಸಿದರು. ಇಲ್ಲಿ ಮಹಾಪೂರಕ್ಕೆ ನೆಗಸು ಎನ್ನುತ್ತಾರೆ. ಕೂಡಲೆ ಶ್ರೀ ಮಾಸ್ತಿಯವರು, ''ಎಷ್ಟು ಚೆಲುವಾದ ನುಡಿಯಿದು.'' ಎನ್ನುತ್ತ ಆ ಪ್ರಯೋಗದ ಬೇರುಬೇರನ್ನೆಲ್ಲ ಬಿಡಿಸಿ ತೋರಿಸಿದರು ''ನೆಗಸು-ನೆಗೆ ನೀರನ್ನು ಹೊಳೆಯಲ್ಲಿ ನೆಗೆಸುತ್ತ, ಪುಟಿಸುತ್ತ, ಉಬ್ಬಿಸುತ್ತ ಬರುವದೆ ನೆಗಸು''ಎಂದರು. ಆಗಲೆ ನನಗೆ ಆ ಪದ ಅರ್ಥವಾದದ್ದು.

ಮತ್ತೆ ನಾನು ಅವರನ್ನು ಕಂಡದ್ದು ಮಣಿಪಾಲದ ಸಾಹಿತ್ಯ ಸಮ್ಮೇಲನದಲ್ಲಿ. ಅಲ್ಲಿಯೂ ಕೂಡ ಅವರು ಮಾತನಾಡಿದರು. ನಯವಾದ ನವುರಾದ ಮಾತು. ಅವರ ಮಾತಿನಲ್ಲಾಗಲೀ ಬರಹದ ಶೈಲಿಯಲ್ಲಾಗಲೀ ನಾವು ಕಾಣುವದು ಒಂದೇ ರೀತಿ. ಸೊಗಸಾದ ಸವಿಯಾದ ಸುಸಂಸ್ಕೃತವಾದ ಹೃದಯವಂತಿಕೆ. ಈಚೆಗೆ ಪರಿಷತ್ತಿನ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಬೆಂಗಳೂರಿಗೆ ಹೋಗಿದ್ದೆ. ಅಲ್ಲಿಯ ವಸತಿಗೃಹವೊಂದರಲ್ಲಿ ಬಿಡಾರ ಮಾಡಿದಲ್ಲಿ ಮಧ್ಯಾಹ್ನ ಅಕಸ್ಮಾತ್ತಾಗಿ ಶ್ರೀ ಬೇಂದ್ರೆಯವರೊಡನೆ ಶ್ರೀ ಮಾಸ್ತಿಯವರೂ ಬಂದರು. ಅವರಿಗೆ ನಮಸ್ಕರಿಸಿ ಕುಶಲ ಪ್ರಶ್ನೆ ಮಾಡುತ್ತಿದ್ದಂತೆಯೇ ಶ್ರೀ ಮಾಸ್ತಿಯವರು ನಮ್ಮ, ನಮ್ಮ ಪರಿಚಿತರ ಮತ್ತು ನಮ್ಮೂರಿನ ಕೆಲ ಸ್ನೇಹಿತರ ಬಗ್ಗೆ ವಿವರವಾಗಿ ವಿಚಾರಿಸಿದರು. ಡಾ|| ಮಾಸ್ತಿಯವರ ಅಂತಃಕರಣವೇ ಹಾಗೆ! ಆ ಬುದ್ಧಿಯ ಹರಿತಕ್ಕೆ ಆ ಹೃದಯದ ಪ್ರೀತಿ ಒಲವುಗಳು ಒಪ್ಪವಾಗಿದೆ. ತೀರ ಈಚೆಗೆ ಕೆಲ ದಿನಗಳ ಹಿಂದೆ ನಮ್ಮ ಸ್ನೇಹಿತರಾದ ಶ್ರೀ ಎಲ್.ಎಮ್. ಇನಾಮದಾರ-ಒಂದು ಪವಾಡವನ್ನೇ ಸಾಧಿಸಿದರು. ಸಂತತಿ ನಿಯಂತ್ರಣದ ಪ್ರಚಾರಕ್ಕೆಂದು ಈಚೆಗೆ ಧಾರವಾಡದಲ್ಲಿ ಅವರು ಒಂದು ಕವಿ ಸಮ್ಮೇಲನ ಏರ್ಪಡಿಸಿದ್ದರು. ಅದಕ್ಕೆ ಡಾ|| ಮಾಸ್ತಿಯವರನ್ನೇ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು. ಆ ಕಾರ್ಯವನ್ನು ಅವರು ಬಹು ವಿಜೃಂಭಣೆಯಿಂದಲೂ ಗಾಂಭೀರ್ಯದಿಂದಲೂ ನೆರವೇರಿಸಿಕೊಟ್ಟರು. ಸ್ವತಃ

ಸುಂದರವಾದ ಪದ್ಯವನ್ನು ಬರೆದದ್ದಲ್ಲದೆ ಅವರು ಸಂಯಮ ಮತ್ತು ಸ್ವನಿಯಂತ್ರಣಗಳ ಮಹತ್ವವನ್ನು ಕುರಿತು ತಿಳಿಸಿದರು. ಸಮಾರಂಭದ ಕೊನೆಯಲ್ಲಿ ಶ್ರೀ ಬೇಂದ್ರೆ ನಮ್ಮೊಡನೆ ಹೀಗೆ ಹೇಳಿದರು, ''ಡಾ|| ಮಾಸ್ತಿ ಇತ್ತ ಕಡೆಗೆ ಬರದೆ ಎಷ್ಟೋ ದಿನಗಳಾಗಿದ್ದವು. ಅವರನ್ನು ಒಮ್ಮೆ ಈ ಕಡೆ ಕರೆಸಬೇಕೆಂಬ ನನ್ನ ಆಸೆ ಈಗ ಪೂರೈಸಿತು'' ಎಂದು ಸಂತೋಷಪಟ್ಟರು. ಆ ಸಂತೋಷ ನಮ್ಮದೂ ಕೂಡ ಆಗಿತ್ತು.

ಪರಿಷತ್ತಿನ ಉಪಾಧ್ಯಕ್ಷರು

ಬೈಕಾಡಿ ವೆಂಕಟಕೃಷ್ಣರಾಯ

೧೯೪೨ ಜನವರಿ ತಾರೀಕು ೨೦. ಬೆಂಗಳೂರಲ್ಲಿ ಸೇರಿದ ಕನ್ನಡ ಸಾಹಿತ್ಯ ಪರಿಷತ್ತಿನ ಸಕಲ ಸದಸ್ಯರ ವಾರ್ಷಿಕಾಧಿವೇಶನ ಸರ್ವಾನುಮತದಿಂದ ರಾಜ ಸೇವಾ ಪ್ರಸಕ್ತ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರನ್ನು ಪರಿಷತ್ತಿನ ಉಪಾಧ್ಯಕ್ಷರನ್ನಾಗಿ ಆರಿಸಿತು - ಆ ತನಕ ಉಪಾಧ್ಯಕ್ಷರಾಗಿದ್ದವರು ದಿವಂಗತ ಬಿ.ಎಂ.ಶ್ರೀಕಂಠಯ್ಯನವರು - ಶ್ರೀಯವರ ನಿವೃತ್ತಿಯ ಕಾಲಕ್ಕೆ ಅವರ ಹೆಗಲಿಂದ ಕನ್ನಡದ ಈ ಪಲ್ಲಕಿಯ ಹೊರೆ ಹೊರಲು ಆಗತಾನೆ ಸರಕಾರದ ಉನ್ನತ ಹುದ್ದೆಯಿಂದ ನಿವೃತ್ತಿ ಹೊಂದಿದ್ದ ಮಾಸ್ತಿಯವರು ಸಿದ್ಧರಾಗಿದ್ದುದು ಕನ್ನಡಿಗರ ಭಾಗ್ಯವಾಗಿತ್ತು-ಅಂದಿನಿಂದ ಮತ್ತೆ ಸುಮಾರು ಐದು ಆರು ವರ್ಷಗಳ ಕಾಲ ಮಾಸ್ತಿಯವರು ಪರಿಷತ್ತಿನ ಉಪಾಧ್ಯಕ್ಷರಾಗಿದ್ದರು.

ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಕನ್ನಡದ ಶ್ರೀನಿವಾಸರನ್ನು ನಾನು ಕಂಡದ್ದೇನೆ-ಅವರ ಕೈಕೆಳಗೆ ದುಡಿದಿದ್ದೇನೆ. ನನ್ನ ಕಣ್ಣನ್ನು ತೆರೆಯಿಸಿದ, ನನ್ನ ಪಾಲಿಗೆ ಹಿರಿಯರಂತಿದ್ದವರಲ್ಲಿ ಓರ್ವರು ಶ್ರೀನಿವಾಸರು - ಇನ್ನೋರ್ವರು ಕಾರಂತರು. ನಾನು ಪರಿಷತ್ತಿನ ಉಪಾಧ್ಯಕ್ಷರನ್ನು ಕಂಡ ಕತೆ ಹೀಗಿದೆ:

೧೯೪೩-ಜೀವನದ ಯಾವುದೋ ಒಂದು ನೋವನ್ನು ಮರೆಯಲು ನಾನು ಬೆಂಗಳರನ್ನು ಸೇರಿದ್ದೆ. ಬೆಂಗಳೂರ ಹವೆ, ಅಲ್ಲಿ ಸೌಜನ್ಯ ಶೀಲಜನ, ಆ ಸುಂದರವಾದ ನಗರ ಎಲ್ಲವೂ ನನ್ನನ್ನು ಆಕರ್ಷಿಸಿದ್ದುವು-ಬೆಂಗಳೂರಲ್ಲಿಯೇ ನೆಲಸಿದರಾದೀತು ಎಂಬ ಹಂಬಲ-ಆದರೆ ಉದ್ಯೋಗ ಬೇಕಲ್ಲ-ಅದೇ ಸುಮಾರಿಗೆ ಕಾರಂತರ 'ಮರಳಿ ಮಣ್ಣಿಗೆ' ಪ್ರಕಟವಾಗಿದ್ದು, ಕೊಂಡು ಓದಲು ತ್ರಾಣವಿರಲಿಲ್ಲ. ಹೀಗಾಗಿ, ಅಷ್ಟಷ್ಟೇ ಓದಿಬರಲು-ಪರಿಷತ್ತಿನ ಪುಸ್ತಕ ಭಂಡಾರಕ್ಕೆ ಹೋಗುತ್ತಿದ್ದೆ-

ಅದೊಂದು ದಿನ ಪರಿಷತ್ತಿನ ಸಭಾಂಗಣದಲ್ಲಿ ಗಮಕಿ ಶ್ರೀ ಕಳಲೆ ಸಂಪತ್ಕುಮಾರಾಚಾರ್ಯರಿಂದ (ಈಗ ದಿವಂಗತರು) ಭಾರತ ವಾಚನದ ಕಾರ್ಯಕ್ರಮ ಏರ್ಪಟ್ಟಿತ್ತು. ಗಮಕ ಎಂದರೇನೆಂದರಿಯದ ನನಗೆ ಈ ಕಾರ್ಯಕ್ರಮ ಹೆಚ್ಚು ಹಿಡಿಸಿತು. ಆಚಾರ್ಯರ ಕಂಠ ಕಂಚಿನಂತಹದ್ದು. ಆದರೆ ಪರಿಷತ್ತಿನ ಸಭಾಂಗಣದೊಳಗೆ ಪ್ರವೇಶ ಇತರರಿಗಿದೆಯೊ ಇಲ್ಲವೊ ಎಂಬ ಸಂದೇಹದಿಂದ ನಾನು ಹೊರಗೇ ಉಳಿದಿದ್ದೆ-ಅಷ್ಟರಲ್ಲಿ ತೆಳ್ಳಗಿನ ಆದರೆ ನೇರ ನಡಿಗೆಯ-ಸುಂದರವಾದ ಆಕರ್ಷಕ ಮುಖ ಮುದ್ರೆಯುಳ್ಳ-ಜರಿಯ ಕಚ್ಚೆ ಪಂಚೆ, ತುಂಬು ಕುತ್ತಿಗೆಯ ಕೋಟು, ಹಣೆಯಲ್ಲಿ ಉದ್ದನೆಯ ನಾಮ, -ತಲೆಗೆ ಟೋಪಿ ಧರಿಸಿದ ಓರ್ವ ವ್ಯಕ್ತಿ-ಮೊದಲ ನೋಟಕ್ಕೇ ಯಾರೂ ತಲೆಬಾಗಬೇಕು-ನನ್ನ ಹತ್ತಿರ ಬಂದರು. ''ಒಳಗೆ ದಯಮಾಡಿಸಿ'' ಎಂದರು. ತೀರ ಒರಟು ಮಾತಿನ, ವಾತಾವರಣದಲ್ಲಿ ಬೆಳೆದ ಒರಟನಂತೆಯೇ ಇದ್ದ ನನಗೆ ಈ ನಯವಾದ ನುಡಿ ಶ್ರುತಿ ಮಾಡಿದ ವಾದ್ಯದ

ಇಂಪಾದ ಗಾನದಂತೆ ಕೇಳಿಸಿತು. ನಾನು ಪರಿಷತ್ತಿನ ಒಳ ಆವರಣವನ್ನು ಪ್ರವೇಶಿಸಿದೆ. ಹತ್ತು ವರ್ಷ ಈ ಪರಿಷತ್ತಿನ ತಂಪಿನ ನೆರಳಲ್ಲಿ ಬೆಳೆದೆ. ನನ್ನ ಮನಸ್ಸು ದೇಹ ಎಲ್ಲ ಬೆಳೆಯಿತು - ಈ ಬೆಳವಣಿಗೆ ನನ್ನ ಬದುಕಿನ ಬಹು ಮುಖ್ಯವಾದ ಒಂದು ಅಂಶ. ಅದಕ್ಕೆ ಆಸರೆ ಇತ್ತವರು ಈ ಹಿರಿಯರು, ಅಂದಿನ ಪರಿಷತ್ತಿನ ಉಪಾಧ್ಯಕ್ಷರು, ಕನ್ನಡದ ಶ್ರೀನಿವಾಸರು.

ಶ್ರುತಿ ಮಾಡಿದ ವಾದ್ಯದ ಗಾನ ಎಂದೆ. ಇದು ಮಾಸ್ತಿಯವರೇ ಅವರ ಚೆನ್ನಬಸವನಾಯಕದಲ್ಲಿ ನೇಮಯ್ಯನ ಪಾತ್ರದ ಬಗೆಗೆ ಹೇಳಿದ ನುಡಿಗಳು. ಶ್ರುತಿಯಾಗಿರುವ ವಾದ್ಯವನ್ನು ಚೇಷ್ಟೆಗೆಂದು ಮುಟ್ಟಿದರೂ ಸ್ವರ ಶ್ರುತಿಯಲ್ಲಿಯೇ ಹೊರಡುವಂತೆ, ಸ್ವಭಾವ ಪರಿಶುದ್ಧವಾದ ಮೇಲೆ ಮನುಷ್ಯನ ಮಾತು ಎಂತ ಹೊತ್ತಿನಲ್ಲೂ ಶುದ್ಧವಾಗಿಯೇ ಇರುತ್ತದೆ - ಮಾಸ್ತಿಯವರನ್ನು ಬಲ್ಲವರು ಈ ಗುಣವನ್ನು ಅರವಲ್ಲಿ ಕಂಡಿದ್ದಾರೆ.

ಬೆಂಗಳೂರಲ್ಲಿಯೇ ನೆಲಸುವುದು ಎಂದು ನಾನು ನಿರ್ಧರಿಸಿ ಪರಿಷತ್ತಿನ ಒಂದು ಉದ್ಯೋಗಕ್ಕೆ ಅರ್ಜಿ ಹಾಕಿದೆ. ಅರ್ಜಿಯು ಅಂಗೀಕಾರವಾಗಿ ಒಂದು ಗೊತ್ತಾದ ದಿನ ಪರಿಷತ್ತಿನ ಉಪಾಧ್ಯಕ್ಷರಿಂದ ''ಇಂಟರ್‌ವ್ಯೂ'' ಎಂದು ಗೊತ್ತಾಗಿತ್ತು. ಆಗಿನ ಕಾರ್ಯದರ್ಶಿಗಳು ದಿ|| ಬಂಕಾಪುರದ ವೆಂಕೋಬರಾಯರು. ವಯಸ್ಸಾಗಿದ್ದರೂ ನೆರಿ ತಪ್ಪದ ಸೂಟು, ಜರಿಪೇಟ ಧರಿಸಿದ ಈ ಕಾರ್ಯದರ್ಶಿಗಳನ್ನು ಕಂಡಾಗಲೇ, ಉಪಾಧ್ಯಕ್ಷರು ಇನ್ನೂ ಬಿಮ್ಮಗಿರಬೇಕು. ಮೈಸೂರ ಸರಕಾರದ ನಿವೃತ್ತ ಅಧಿಕಾರಿಗಳಲ್ಲವೆ? ಹಾಗೆಂದು ನಾನು ಕೊಂಚ ಬಾಡಿಗೆಯ ಉಡುಪಿನ ನೆರವಿನಿಂದ ಡೌಲಾಗಿಯೇ ಇಂಟರ್‌ವ್ಯೂಗೆ ತೆರಳಿದ್ದೆ- ಪರಿಷತ್ತಿನ ಹೊರ ದ್ವಾರದಲ್ಲಿ, ಚಾರಕನ ಅಪ್ಪಣೆಗಾಗಿ ಕಾದಿದ್ದೆ-

ಸಂಪತ್ಕುಮಾರಾಚಾರ್ಯರ ಭಾರತ ವಾಚನದ ಕಾರ್ಯಕ್ರಮದಂದು ಪರಿಷತ್ತಿನ ಸಭಾಂಗಣದೊಳಗೆ ಹೋಗಲು ನನಗೆ ಲೈಸನ್ಸ್ ನೀಡಿದ ವ್ಯಕ್ತಿ, ಕೈಯಲ್ಲಿ ಒಂದು ಹೂವಿನ ತಟ್ಟೆ ಹಿಡಿದುಕೊಂಡು ಬಂದರು, ಕೆಲವು ಹೊತ್ತಿನ ಮೇಲೆ ಪರಿಷತ್ತಿನಿಂದ ಅನತಿ ದೂರದಲ್ಲಿದ್ದ ಶ್ರೀನಿವಾಸ ಗುಡಿಯತ್ತ ತೆರಳಿದರು. ಪರಿಷತ್ತಿನ ಕಚೇರಿಯ ಬಾಗಿಲು ಮುಚ್ಚುವ ವೇಳೆ ಬಂದರೂ ನಾನು ಹೊರದ್ವಾರದಲ್ಲಿಯೇ ಉಳಿದಿದ್ದೆ-ಚಾರಕ ಮಹಾಶಯನನ್ನು (ಅವನ ಹೆಸರು ಹನುಮಯ್ಯ) ವಿಚಾರಿಸಲಾಗಿ -''ಸಾಹೇಬರು ಹೊರಟು ಹೋದ್ರಲ್ಲ ಸಾಮಿ, ಶ್ರೀನಿವಾಸ ದೇವರ ಗುಡಿಗೆ'' ಎಂದ. ನನ್ನ ಅರ್ಜಿಯ ಗತಿ ಏನು ಎಂದು ಯೋಚಿಸುತ್ತಿರುವಾಗಲೇ ನನ್ನನ್ನು ಕೆಲಸಕ್ಕೆ ತೆಗೆದುಕೊಳ್ಳಲು ನಿರ್ಧಾರವಾಗಿತ್ತು. ಉಪಾಧ್ಯಕ್ಷರು ನನ್ನ ಕನ್ನಡ ಬರಹ ನೋಡಿಯೇ ತೀರ್ಮಾನಿಸಿದ್ದರು ಎಂದು ತಿಳಿಯಿತು.

ನನ್ನ ಪರಿಷತ್ತಿನ ಪ್ರವೇಶ ಹೀಗೆ ನಡೆಯಿತು- ಇದಾದ ಹದಿನೈದು ದಿನಗಳ ನಂತರ ಮತ್ತೆ ಮಾಸ್ತಿಯವರು ಪರಿಷತ್ತಿಗೆ ಬಂದಿದ್ದರು. ಹಳೆ ಮಾದರಿಯ ಒಂದು ಫೋರ್ಡ್ ಮೋಟಾರ್ ಕೂಡ ಆಗ ಅವರಿಗಿತ್ತು ಎಂದು ನೆನೆಪು ನನಗೆ ಪರಿಷತ್ತಿನ ಒಳಗೆ ಪ್ರವೇಶಿಸುವಾಗಲೇ ಕೈಮುಗಿದುಕೊಂಡೇ ಬಂದ ಈ ಹಿರಿಯರನ್ನು ಕಂಡಾಗ ನನಗೆ ತಿಳಿಯದೆಯೇ ನಾನು ಎದ್ದು ನಿಂತೆ, ಕೈಮುಗಿದೆ. ''ದಕ್ಷಿಣ ಕನ್ನಡ ಜಿಲ್ಲೆಯವರು ನೀವೇನೋ- ಒಳ್ಳೆಯದು ಕೆಲಸ ಮಾಡಿ'' ಎಂದು ನನ್ನ ಬೆನ್ನು ತಟ್ಟಿದರು. ಅಂದಿನಿಂದ

ನಾನು ಪರಿಷತ್ತಿನ ಸಿಬ್ಬಂದಿಯಲ್ಲಿ ಓರ್ವ. ಉಪಾಧ್ಯಕ್ಷರ ನೆಚ್ಚಿನ ಆಪ್ತ ಕಾರ್ಯದರ್ಶಿ ಎಂದರೆ ತಪ್ಪಲ್ಲ. ನನಗೆ ದೊರೆತ-ಶ್ರೀನಾವಾಸರ ಸಾನಿಧ್ಯ-ಸಾಮಿಪ್ಯ-ಮಲ್ಲಿಗೆಯ ಜತೆಯ ಬಾಳೆ ನಾರಿನಂತೆ ದೇವರ ಪಾದ ಸೇರಿತು.

ಸಣ್ಣ ಕತೆಗಾರ ಶ್ರೀನಿವಾಸ-'ಜೀವನ'ದ ಮಾಸ್ತಿ,-ನವರತ್ನ ರಾಮರಾಯರ ಗೆಳೆಯ ವೆಂಕಟೇಶ ಅಯ್ಯಂಗಾರ್-ಚೆನ್ನ ಬಸವ ನಾಯಕದ ಕಾದಂಬರಿಕಾರ ಪರಿಚಯವನ್ನು ನಾನು ಮಾಡಿಕೊಡಲು ಶಕ್ತನಲ್ಲ. ಆದರೆ ಪರಿಷತ್ತಿನ ಉಪಾಧ್ಯಕ್ಷ ಮಾಸ್ತಿಯವರನ್ನು ಕಂಡಿದ್ದೇನೆ. ಮನೆಯ ಮುತ್ತಣ್ಣ ಮಾಸ್ತಿಯನ್ನು ಕಂಡಿದ್ದೇನೆ-ಕಂಡಿದ್ದೇನೆ ಎಂದರೆ ಶ್ಯಾನುಭೋಗರ ಮಗಳ ಮದುವೆಗೆ ಬಂದ ಆನೆಯನ್ನು ಕಂಡ ಕುರುಡರಂತೆ-ಆ ಕತೆಯನ್ನೆ ಇಲ್ಲಿ ಹೇಳುತ್ತೇನೆ.

★

''ನಮ್ಮ ಸಾಹಿತ್ಯ ಪರಿಷತ್ತು ಸ್ಥಾಪಿತವಾಗಿ ಈಗ ೨೭ ವರ್ಷಕ್ಕೆ ಸ್ವಲ್ಪ ಹೆಚ್ಚಾಗಿದೆ. ಕನ್ನಡದ ಸ್ಥಿತಿ ಇಂದಾದರೂ ಬಹಳವೇನೂ ತೃಪ್ತಿಕರವಾಗಿಲ್ಲ. ೧೯೧೫ರಲ್ಲಿ ಅದರ ಅವಸ್ಥೆ ಇನ್ನೂ ಕಷ್ಟವಾಗಿತ್ತು. . . . .ಕನ್ನಡದ ಜನ ಉದ್ಧಾರವಾಗುವುದು ಕನ್ನಡದ ಮೂಲಕವೇ-ಉಳಿದ ಭಾಷೆಗಳು ನಮಗೆ ಬೇಕು; ಎಲ್ಲ ಕಡೆಯಿಂದಲೂ ನಮಗೆ ಭಾವ, ಜ್ಞಾನ, ಬರಬೇಕಾಗಿದೆ. ಆದರೆ ಯಾವ ಕಡೆಯಿಂದ ಅವು ಬಂದರೂ ಬರತಕ್ಕದ್ದೂ ಕನ್ನಡಕ್ಕೆ, ಕನ್ನಡದ ಜನಕ್ಕೆ ಕನ್ನಡ ನಾಡಿನ ಕನ್ನಡ ಜನತೆಯ ಬಾಳುವೆಗೆ ಅವು ಪೋಷಕವಾಗಿ ಬರಬೇಕು.

ಕನ್ನಡದ ಕನ್ನಡತನ ಉಳಿಯುವುದಕ್ಕೆ, ಬೆಳೆಯುವುದಕ್ಕೆ ಕನ್ನಡಗರು ಮೊದಲು ಸಾಧಿಸಬೇಕಾಗಿರುವುದು, ಕನ್ನಡ ಜನತೆಯು ಏಕೀಕರಣ. ಕರ್ನಾಟಕದ ಇತಿಹಾಸದಲ್ಲಿ ಬೆರೆತು ಬಂದಿರುವ ಒಂದು ದುರ್ದೈವದ ಎಳೆಯಿಂದ ಕನ್ನಡನಾಡು ಹತ್ತಾರು ಭಾಗವಾಗಿ ಹತ್ತಾರು ಆಡಳಿತದಲ್ಲಿ ಸಿಕ್ಕಿ, ಕನ್ನಡದ ಜನ ಒಂದು ಸಮೂಹವಾಗಿ ಕೆಲಸ ಮಾಡುವುದು ನಮ್ಮ ಪಾಲಿಗೆ ಇಲ್ಲವಾಯಿತು. ಈ ಕೊರತೆಯನ್ನು ನಿವಾರಿಸಬೇಕೆಂದೇ ಈಗ ಮೂವತ್ತು ವರ್ಷದ ಹಿಂದೆ ನಮ್ಮ ಹಿರಿಯರು ಪರಿಷತ್ತನ್ನು ಸ್ಥಾಪಿಸಿದರು.

ಹತ್ತಾರು ಕಡೆ ನಡೆದ ಸಮ್ಮೇಳನಗಳಿಗೆ ಪ್ರಾಂತ ಪ್ರಾಂತಗಳ ಜನರು ಒಂದು ಕಡೆ ನೆರೆದು ಪರಸ್ಪರ ಭೇದಗಳನ್ನು ಮರೆಯುವುದನ್ನು-ತಾವು ಒಂದು ನಾಡಮಕ್ಕಳೆಂಬುದನ್ನು ಉಪಾಸಿಸುವುದನ್ನು-ಕಲಿತರು. ಪರಿಷತ್ತಿನ ಮೂಲ ಸ್ವರೂಪದ ಈ ಮುಖ್ಯ ಲಕ್ಷಣವನ್ನು ನಮ್ಮ ಜನರೆಲ್ಲ ಸದಾ ನೆನಪಿನಲ್ಲಿಡಬೇಕು. ಕನ್ನಡದ ಜನತೆಗೆ ಒಂದು ಕೂಡುವ ಕೇಂದ್ರ, ಸಂಸ್ಥೆಯಾಗಿ ಈಗ ಕನ್ನಡ ನಾಡಿನಲ್ಲಿ ಇರತಕ್ಕದ್ದು ನಮ್ಮ ಪರಿಷತ್ತು ಒಂದೇ.''

ಈ ಸಂದೇಶವನ್ನು ಕನ್ನಡ ನಾಡಿನ ಮೂಲೆಮೂಲೆಗೂ ಸಾರುತ್ತಾ ಉಪಾಧ್ಯಕ್ಷ ಮಾಸ್ತಿಯವರು ಪರಿಷತ್ತಿನ ದುಡಿತಕ್ಕೆ ಹೆಗಲು ಕೊಟ್ಟರು. ಸದಸ್ಯತ್ವ ಕೇವಲ ಆರನೂರು ಇತ್ತು. ಇದು ನಮಗೆ ಹಿತವಲ್ಲ, ಕ್ಷೇಮವಲ್ಲ. ಎಲ್ಲ ಪ್ರಾಂತಗಳಿಂದಲೂ ಸದಸ್ಯರು ಬಂದುದೇ ಇಲ್ಲ ಅಥವಾ ಅತ್ಯಲ್ಪ ಸಂಖ್ಯೆಯಲ್ಲಿ ಬಂದಿದ್ದಾರೆ. ನಾವು ಸದಸ್ಯರ ಸಂಖ್ಯೆ ಹೆಚ್ಚಿಸಬೇಕು. ಅದರಲ್ಲಿಯೂ ಮುಖ್ಯವಾಗಿ ದಕ್ಷಿಣ ಕನ್ನಡ, ಉತ್ತರ ಕನ್ನಡ ಭಾಗಗಳಿಂದ. ಮಾಸ್ತಿಯವರು ಈ ಕೂಗನ್ನು ಕನ್ನಡ ನಾಡಿನ ತುತ್ತು ತುದಿಗೂ ಮುಟ್ಟಿಸಿದರು. ಎಲ್ಲರನ್ನೂ ಸದಸ್ಯರಾಗಿ ಎಂದು ಬೇಡಿದರು. ತಮ್ಮ ಪ್ರಾಂತ, ನಗರಗಳ ಸಮುದಾಯದ ಪರಿಸ್ಥಿಯೇನು, ಅದನ್ನು ಸರಿಪಡಿಸುವುದು ಹೇಗೆ ಈ ಬಗ್ಗೆ ಕೈಗೊಳ್ಳಬೇಕಾದ ಕಾರ್ಯಕ್ರಮ ಏನು,

ಎಂಬುದನ್ನೂ ಪರಿಷತ್ತಿಗೆ ತಿಳಿಸಿ ಕೇಂದ್ರ ಸಂಸ್ಥೆಗೆ ಸದಸ್ಯರಾಗಿ ಅದರ ಸಂಪತ್ತು ಬೆಳೆಸಿ ಅಂದರು.

ಆರುನೂರರ ಸಂಖ್ಯೆ ಒಂದೆರಡು ವರ್ಷಗಳಲ್ಲಿ ಎರಡು ಸಾವಿರದ ಐನೂರಕ್ಕೆ ಏರಿತು. ಮಾಸ್ತಿಯವರಿಗೆ ತೃಪ್ತಿಯಾಗಲಿಲ್ಲ. ಹತ್ತು ಸಾವಿರವಾದರೂ ಆಗಬೇಕು ಎಂದರು. ಜನ ಆಶ್ವಾಸನೆ ಕೊಟ್ಟಿತು. ಆದರೆ ಕೆಲಸ ಸಾಗಲಿಲ್ಲ.

ಹಲವರು ಪರಿಷತ್ತೇ ಈ ಕೆಲಸ ಮಾಡಬಹುದಲ್ಲ ಎಂದರು. ಕೆಲವರು ನಮಗೆ ಕನ್ನಡ ಬರುವುದಿಲ್ಲ, ನಮಗೇಕೆ ಪರಿಷತ್ತು, ಎಂದು ಔದಾಸೀನ್ಯದ ಮಾತು ಆಡಿದರು.

ಪರಿಷತ್ತು ಅಂದರೆ ಅದರ ಸದಸ್ಯ ಸಮುದಾಯವಲ್ಲದೆ ಬೇರೆ ಯಾವುದೇ ಒಂದು ವಸ್ತುವಲ್ಲ. ಎಲ್ಲ ಪ್ರಾಂತ್ಯಗಳ ಸದಸ್ಯರು ಸಾಕಾದಷ್ಟು ಜನ ಸೇರಿದರೆ ಪರಿಷತ್ತು ಆಡುವ ಮಾತು ಕನ್ನಡ ನಾಡಿನ ಎಲ್ಲ ಜನರ ಮಾತಾಗುತ್ತದೆ. ಸಂಸ್ಥಾನಗಳ ಪ್ರಜೆಗಳು ಸದಸ್ಯರಾಗಿದ್ದರೆ ಸಂಸ್ಥಾನಗಳ ರಾಜರಲ್ಲಿ ನಾವು ಕುಂದುಕೊರತೆ ಹೇಳಬಹುದು. ಕನ್ನಡ ಎನ್ನುವುದು ಒಂದು ನುಡಿಯ ಹೆಸರಲ್ಲದೆ ನಾಡಿನ ಹೆಸರೂ ಹೌದು. ಹೊರಗಡೆ ಬಳಸುವ ಭಾಷೆ ಕನ್ನಡದಲ್ಲವದವರೂ, ಮನೆಯಲ್ಲಿ ಕನ್ನಡ ಮಾತಾಡುತ್ತಾರೆ. ಇಂತಹವರೂ ಪರಿಷತ್ತಿಗೆ ಸೇರಬೇಕು - ಎಂದು ಕನ್ನಡ ಜನರಲ್ಲಿ ಪರಿಷತ್ತಿನ ಬಗೆಗೆ ಇದ್ದ ಉದಾಸೀನತೆಯನ್ನು ಹೋಗಲಾಡಿಸಲು ಮಾಸ್ತಿಯವರು ಪ್ರಯತ್ನಿಸಿದರು.

ಕನ್ನಡ ನಾಡಿನ ಒಂದು ನೂರು ಮುಖ್ಯವಾದ ಊರುಗಳಲ್ಲಿ ಒಡನೆ ಕನ್ನಡ ಸಂಘಗಳು ಏರ್ಪಟ್ಟು ನಮ್ಮ ಸಾಹಿತ್ಯ ಸಂಸ್ಕೃತಿಗಳ ಪುನರುಜ್ಜೀವನಕ್ಕಾಗಿ ದುಡಿಯಬೇಕು.

ಮಂಗಳೂರ ಯಕ್ಷಗಾನ, ಮಂಗಳೂರ ಕಂಬಳ, ಕೊಡಗಿನ ಬೊಳಕಾಟ, ವಿಚಾರನೃತ್ಯ, ಬೆಳವೂಲದ ಕರಡಿ ವಾದ್ಯ, ಮೈಸೂರ ದೊಡ್ಡಾಟ, ಬಯಲನಾಟಕ ಇವು ಜನತೆಯ ಮುಂದೆ ಬರಬೇಕು. ಕರ್ನಾಟಕ ಸಂಘಗಳು ಇವನ್ನ ಬೆಳಕಿಗೆ ತರಬೇಕು.

ಎಲ್ಲ ಕನ್ನಡ ಸಂಘಗಳೂ ಪರಿಷತ್ತಿನ ಅಂಗ ಸಂಸ್ಥೆಗಳಾಗಬೇಕು. ಹೀಗೆ ಕನ್ನಡ ಸಂಘಗಳನ್ನು ಎಚ್ಚರಿಸಿ ಉಪಾಧ್ಯಕ್ಷ ಮಾಸ್ತಿ ಮನವಿ ಮಾಡಿಕೊಂಡರು.

ಗಮಕ ಕಲೆ, ಪ್ರಚಾರ ಉಪನ್ಯಾಸ ಮುಂತಾದ ಹಲವು ಕೆಲಸಗಳಿಗಾಗಿ ಕನ್ನಡ ನಾಡಿನ ಪುಣ್ಯವಂತರನ್ನು ಕಂಡು, ಕಾಡಿ ಬೇಡಿ, ಹತ್ತು ಸಾವಿರ ರೂಪಾಯಿಗಳ ನಿಧಿಯೆತ್ತಿ ಪರಿಷತ್ತಿನ ಕಣಜವನ್ನು ಬೆಳೆಸಿದರು.

ಹಲವು ಸರಕಾರಗಳನ್ನು ಬೇಡಿ ಸಹಾಯ ಪಡೆದರು. ಸ್ವತಃ ಮೈಸೂರ ಸರಕಾರದ ನಿವೃತ್ತ ಅಧಿಕಾರಿಗಳಾಗಿ ಮೈಸೂರು ಸರಕಾರದಿಂದ ಹೆಚ್ಚು ಸಹಾಯ ಪಡೆದು ಪರಿಷತ್ತಿನ ನಿಧಿ ಹೆಚ್ಚಿಸಿದರು.

ಶ್ರೀ ಮಾಸ್ತಿ ಐದು ವರುಷ ಉಪಾಧ್ಯಕ್ಷರಾಗಿದ್ದರು-ಮೊದಲನೆಯ ವರ್ಷದ ಅನುಭವದಲ್ಲೇ ಅವರಿಗೆ ಕಹಿ ಹುಟ್ಟಿತು. ಪರಿಷತ್ತು ಹತ್ತೊಂಬತ್ತನೆಯ ಕಚೇರಿ ಎಂದು ಒಂದು ಕೂಗು, ಜರತಾರಿ ರುಮಾಲುಗಳ ಗುಂಪು ಎಂದು ಇನ್ನೊಂದು ಕೂಗು, ಬ್ರಾಹ್ಮಣರ ಗುಂಪು ಎಂದು ಮತ್ತೊಂದು. 'ಮಾಸ್ತಿಮಠ' ಎಂದು ಮುಂತಾದ ಹಲವು ವಿರೋಧ ಪಕ್ಷಗಳನ್ನು ಶ್ರೀಯುತರು ಉತ್ತರಿಸಬೇಕಾಯ್ತು. ಆಗಲೇ ಬೆಂಗಳೂರಿನಲ್ಲಿ ಒಂದು ಪ್ರಚಂಡವಾದ ಪ್ರಗತಿಶೀಲ ಸಾಹಿತಿಗಳ ಬಿರುಗಾಳಿ ಎದ್ದುದು. ಇದಕ್ಕೆಲ್ಲ ಮಾಸ್ತಿಯವರು ಕೊಟ್ಟ ಉತ್ತರ ಒಂದೇ ಒಂದು:

"ಎಲ್ಲರೂ ಟೀಕೆ ಮಾಡುವವರಾದರೆ ಕೆಲಸ ಮಾಡುವವರು ಯಾರು? ಪರಿಷತ್ತನ್ನು ಕುರಿತು ಜನತೆಯ ಮನಸ್ಸಿನಲ್ಲಿರುವ ಆಸೆ ಬಹುಮಟ್ಟಿಗೆ ಕಟ್ಟುವ ಕೆಲಸಕ್ಕೆ ಉಪಯೋಗವಾಗಬೇಕು, ಇದರ ಅಂಗವಾಗಿ ಟೀಕೆಯ ರೂಪದಲ್ಲಿ ಸ್ವಲ್ಪ ಮಟ್ಟಿಗೆ ವಿನಿಯೋಗವಾಗಬಹುದು. ಹೀಗೆ ಟೀಕೆ ಮಾಡುವಲ್ಲಿ ಕೂಡ ಯಾವ ಮಾತನ್ನು ವಿಶ್ವಾಸದಿಂದ ಆಡಬಹುದೆಂಬುದನ್ನು ಮಾತ್ರ ಪರಿಷತ್ತಿನ ಚಾಲಕರು ಸದಸ್ಯರಲ್ಲಿ ಹೇಳಿಕೊಳ್ಳಬೇಕಾಗಿದೆ.

ಪರಿಷತ್ತನ್ನು ಕುರಿತು ಟೀಕೆ ಬಹಳವಾಗಿ ಪತ್ರಿಕೆಯಲ್ಲಿ ಬರಲು ಪ್ರಾರಂಭವಾಯಿತು. ಇದನ್ನ "ನುಡಿ"ಯಲ್ಲಿಯೇ ಪ್ರಕಟಿಸುವಂತೆ ಕಳಿಸಿ ಅಥವಾ ಬೇರೆ ಕಡೆ ಪ್ರಕಟವಾದ ಅದರ ಒಂದು ಪ್ರತಿ ಪರಿಷತ್ತಿಗೆ ಕಳಿಸಿ. 'ಸಂಸ್ಥೆಯ ಸದಸ್ಯರು ಒಂದು ಕುಟುಂಬದಂತೆ ನಡಕೊಳ್ಳಬೇಕು. ಇದು ಧ್ಯೇಯವನ್ನು ಸಾಧಿಸುವ ಮಾರ್ಗ, ಪ್ರಜಾಪ್ರಭುತ್ವದ ಮುಖ್ಯ ಸೂತ್ರ, ಸಭಾಮರ್ಯಾದೆಯ ಮೂಲತತ್ವ' ಎಂದರು ಮಾಸ್ತಿ.

೧೯೪೪ ರಲ್ಲಿ ಮಾಸ್ತಿಯವರು ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸಕ್ಕೆಗೊಂಡರು. ಆಗ ಕಾರ್ಯದರ್ಶಿಗಳಾಗಿದ್ದ ಶ್ರೀ ಕ.ವೆಂ.ರಾಘವಾಚಾರ್ಯರೂ, ನಾನೂ ಜತೆಯಲ್ಲಿದ್ದೆವು. ಇವರ ಐದು ವರ್ಷಗಳ ಅವಧಿಯಲ್ಲಿ ಇವರು ಸುತ್ತದೆ ಬಿಟ್ಟ ಕನ್ನಡದ ಭಾಗ ಯಾವುದೂ ಇರಲಿಲ್ಲ. ಕೆಲವು ಕಡೆ ನನಗೂ ಇವರ ಜತೆಯಲ್ಲಿ ತಿರುಗುವ ಭಾಗ್ಯ ದೊರಕಿತ್ತು. ಎಲ್ಲ ಕಡೆಯ ಹಿರಿಯ ಕಿರಿಯರು ಆದಿಯಾಗಿ ಇವರಿಗೆ ಕೊಟ್ಟ ಮನ್ನಣೆ ನೋಡಿ ನಾನೇ ಚಕಿತನಾದೆ. ಧಾರವಾಡದಲ್ಲಿ ದೀಕ್ಷಿತ ವಕೀಲರ ಮನೆ, ಮಂಗಳೂರಲ್ಲಿ ಅಡಿಗರ ಮನೆ, ಸುಂಟಿಕೊಪ್ಪದಲ್ಲಿ ಮಂಜುನಾಥಯ್ಯನವರ ಮನೆ, ಮಡಿಕೇರಿಯಲ್ಲಿ ವೆಂಕಪ್ಪಯ್ಯನವರ ಮನೆ, ಇಂತಹ ಕಡೆಗಳಲ್ಲಿ ಮಾಸ್ತಿಯವರು ಅವರ ಬಂಧುಗಳಿಗಿಂತ ಹೆಚ್ಚು ಆದರಿಸಲ್ಪಡುತ್ತಿದ್ದರು. ಇದು ನಾನು ಜೊತೆಯಲ್ಲಿದ್ದು ಕಂಡ ನೋಟ. ಇಲ್ಲಿ ಗಮನಿಸಬೇಕಾದ ಒಂದು ವಿಚಾರವಿದೆ. ಇವರ ಪ್ರವಾಸದ ಯಾವತ್ತೂ ಖರ್ಚನ್ನು ಇವರ ಸ್ವಂತದಿಂದಲೇ ನಿರ್ವಹಿಸಿದ್ದಾರೆಯೇ ಹೊರತು, ಪರಿಷತ್ತಿಗೆ ಈ ಹೊರೆಯನ್ನು ಹೊರಿಸಿಲ್ಲ.

ಮಾಸ್ತಿಯವರೇನು ಅಂತಹ ಪುಣ್ಯವಂತರಲ್ಲ. ಸತ್ಯದಿಂದ ಪ್ರಾಮಾಣಿಕವಾಗಿ ಸರಕಾರದಲ್ಲಿ ಕೆಲಸ ಮಾಡುತ್ತಿದ್ದುದರಿಂದ ಇವರು ಹೆಚ್ಚು ದುಡಿದು ಪುಣ್ಯವಂತರಾಗುವುದು ಸಾಧ್ಯವಾಗಿಲ್ಲ. ಆದರೂ ಸಂಸ್ಥೆಯ ಹಣ ಮಿತಿಯಾಗಿ ಉಪಯೋಗಿಸಬೇಕು ಎಂದು ಯಾವತ್ತೂ ಖರ್ಚನ್ನು ತಾವೇ ವಹಿಸುತ್ತಿದ್ದರು.

ಉಡುಪಿಯಲ್ಲಿ ಪ್ರವಾಸ ಮಾಡುತ್ತಿದ್ದಾಗ ಮಿತ್ರರೊಬ್ಬರು ಅಥವಾ ಕೆಲವು ಮಂದಿ ಪರಿಷತ್ತಿನ ಕುರಿತು ಕೆಲವು ಸಲ್ಲದ ಮಾತು ಆಡಿದರು. ಪರಿಷತ್ತಿನಲ್ಲಿ ಕೆಲವು ಬದಲಾವಣೆಗಳಾಗದೆ ತಾವು ಸದಸ್ಯರಾಗಲು ಸಾಧ್ಯಲಿಲ್ಲವೆಂದರು. "ಹುಚ್ಚು ಬಿಡದೆ ಮದುವೆ ಆಗದು, ಮದುವೆ ಆಗದೆ ಹುಚ್ಚು ಬಿಡದು" ಅದರ ಹಾಗೆ. ಮಾಸ್ತಿ ಹಲವು ಸಂದರ್ಭಗಳಲ್ಲಿ ಹಲವು ಕಡೆಗಳಲ್ಲಿ ಕನ್ನಡಿಗರಿಗೆ ಹೇಳಿದ ಮಾತನ್ನೇ ಇಲ್ಲಿಯೂ ಹೇಳಿದರು.

"ಪರಿಷತ್ತಿನ ಒಳಕ್ಕೆ ಬನ್ನಿ, ಅಲ್ಲಿ ನಿಮ್ಮ ಅಭಿಪ್ರಾಯವನ್ನು ಪ್ರಚಾರ ಮಾಡಿ, ಅಲ್ಲಿ ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡಿ. ವಿಚಾರ ವಿನಿಮಯವಿಲ್ಲದೆ, ಭಾವನೆ ಹೊಸತಾಗಿದೆ, ವ್ಯಕ್ತಿಯಾಗಲಿ ಸಂಸ್ಥೆಗಾಗಲಿ, ಬೆಳೆವಣಿಗೆ ಎನ್ನುವುದಿಲ್ಲ. ಪರಿಷತ್ತು ಒಬ್ಬ

ವ್ಯಕ್ತಿಯಲ್ಲ, ಹತ್ತೂ ಜನರ ಮನಸ್ಸನ್ನು ಪ್ರತಿಬಿಂಬಿಸುವ ಒಂದು ಸಂಸ್ಥೆ. ನಾಡಿನ ಶುಭಕ್ಕಾಗಿ ನಾವು ಆ ಮನಸ್ಸನ್ನು ತಿದ್ದಿಕೊಳ್ಳುತ್ತ ನಡೆಯಬೇಕಾಗಿದೆ.''

ಮಾಸ್ತಿಯವರ ಕಾಲದಲ್ಲಿ ಪರಿಷತ್ತು ಸಾಧಿಸಿದ ಒಂದು ಗಣನೀಯ ಸಾಧನೆ ಎಂದರೆ ಅದರ ಸದಸ್ಯ ಸಂಪತ್ತು ಹೆಚ್ಚಿದ್ದು. ಪರಿಷತ್ತಿನ ಗದ್ದುಗೆಯನ್ನು ಮಾಸ್ತಿಯವರು ಏರುವಾಗ್ಗೆ ಅದರ ಸದಸ್ಯ ಸಂಪತ್ತನ್ನು ಒಟ್ಟು ಸುಮಾರು ೯೫೦ ಆಗಿತ್ತು. ಕೇವಲ ಐದೇ ವರ್ಷಗಳಲ್ಲಿ ಅದು ೨,೫೦೦ ಕ್ಕೆ ಏರಿತು. ಇದಕ್ಕೆ ಕಾರಣರು ಮಾಸ್ತಿಯವರು. ನಾಡಿನ ಉದ್ದಗಲವೆಲ್ಲ ಸಂಚರಿಸಿ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಚಾರವನ್ನು ಕೈಗೊಂಡರಲ್ಲದೆ ಪರಿಷತ್ತಿನ ಸದಸ್ಯ ಸಂಪತ್ತನ್ನು ಹೆಚ್ಚಿಸಿದರು. ಅದರ ನಿಧಿಯನ್ನು ಬೆಳೆಸಿದರು. ಪರಿಷತ್ತಿನ ಕಾರ್ಯಗಳು ಹೆಚ್ಚಾಗಿ ಕರ್ಣಾಟಕದಾದ್ಯಂತ ಪ್ರಚಾರಕ್ಕೆ ಬಂದುದು, ನಾಡಿನ ಮೂಲೆ ಮೂಲೆಗಳಿಂದ ಪರಿಷತ್ತಿಗೆ ಹೆಚ್ಚಿನ ಸಹಕಾರ ದೊರೆತುದೂ, ಮಾಸ್ತಿಯವರ ಕಾಲದಲ್ಲೇ ಎಂದರೆ ತಪ್ಪಲ್ಲ. ಅಂದರೆ ಉಳಿದವರ ಕಾಲದಲ್ಲಿ ಏನೂ ನಡೆಯಲಿಲ್ಲ ಎಂದು ಊಹಿಸಬಾರದು.

ಮೈಸೂರು ಸರಕಾರದ ಹಿರಿಯ ಅಧಿಕಾರಿಯೋರ್ವರಾಗಿದ್ದು ತನ್ನ ಮಿತ್ರರನ್ನೆಲ್ಲ ಪರಿಷತ್ತಿನ ಸಹಾಯಕ ಸದಸ್ಯರನ್ನಾಗಿ ಸೇರಿಸಿದರು. ಸಹಾಯಕ ಸದಸ್ಯರ ಸಂಪತ್ತು ಕೇವಲ ೧೪ ಇದ್ದದ್ದು ಮಾಸ್ತಿಯವರ ಕಾಲದಲ್ಲಿ ೨೭೦ ಕ್ಕೆ ಏರಿತು. ಹಾಗೆಯೇ ಆಜೀವ ಸದಸ್ಯರ ಸಂಖ್ಯೆಯೂ ಏರಿತು. ಗರ್ಗೇಶ್ವರಿ ನಾಗರಾಜರಾಯರು, ಆಗಿನ ದಿವಾನರಾಗಿದ್ದ ನ್ಯಾಮತಿ ಮಾಧವರಾಯರು, ಜಿ.ವೆಂಕಟಕೃಷ್ಣರಾಯರು, ಮುಂತಾಗಿ ಅನೇಕ ಹಿರಿಯ ಮೈಸೂರ ಅಧಿಕಾರಿಗಳು ಮಾಸ್ತಿಯವರ ಕಾಲದಲ್ಲಿ ಪರಿಷತ್ತಿನ ಸಹಾಯಕ ಸದಸ್ಯರಾಗಿದ್ದರು.

ಪರಿಷತ್ತಿನ ಪ್ರಚಾರ ನಾಡಿನ ಒಳಗೂ ಹೊರಗೂ ನಿರಂತರವಾಗಿ ನಡೆಯುವಂತೆ ಇದ್ದ ಅಂದಿನ ಏರ್ಪಾಟುಗಳಲ್ಲಿ ಒಂದು ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆ ಬೆಂಗಳೂರಿನ ಹೊರಗೆ ಕರ್ಣಾಟಕದ ಯಾವುದೇ ಭಾಗದಲ್ಲಿ ಸೇರುವಂತೆ ಏರ್ಪಾಟು ಮಾಡುವುದು. ಈ ಸಂದರ್ಭವನ್ನೇ ಉಪಯೋಗಿ ಕೊಂಡು ಆ ಸ್ಥಳದ ಸಂಘಸಂಸ್ಥೆಗಳು ತಮ್ಮಲ್ಲಿ ಸಾಹಿತ್ಯೋತ್ಸವಗಳನ್ನು ಏರ್ಪಡಿಸುವುದು. ಪರಿಷತ್ತಿನ ದತ್ತಿ ನಿಧಿಯ ಉಪನ್ಯಾಸಗಳು ಕಡ್ಡಾಯವಾಗಿ ಬೆಂಗಳೂರಿನಿಂದ ಹೊರಗೆ ನಡೆಯುತ್ತಿದ್ದುವು. ಇಂತಹ ಒಂದು ಉಪನ್ಯಾಸ ಮಾಸ್ತಿಯವರ ಕಾಲದಲ್ಲಿ ನಡೆದುದು ನನ್ನ ನೆನಪಿನಲ್ಲಿದೆ. ಆ ನಿಧಿ ಪರಿಷತ್ತಿಗೆ ಒದಗುವಂತೆ ಮಾಡಿದವರೂ ಮಾಸ್ತಿಯವರೇ. ಅದು ಶ್ರೀ ಜಾವಳಿ ಗಣೇಶರಾಯರ ದತ್ತಿಯ ಉಪನ್ಯಾಸ. ಈ ಉಪನ್ಯಾಸ ಚಿಕ್ಕಮಗಳೂರಿನಲ್ಲಿ ನಡೆಯಿತು. ಇಂತಹದೇ ವರ್ಷ ನಡೆಯಿತೆಂದು ಖಚಿತವಾಗಿ ಹೇಳಲಾರೆ. ಉಪನ್ಯಾಸ ಮಾಡಿದವರು ಮಾಸ್ತಿಯವರ ಆತ್ಮೀಯ ಗೆಳೆಯರಾಗಿದ್ದ ದಿ|| ನವರತ್ನ ರಾಮರಾಯರು, ಚಿಕ್ಕಮಗಳೂರಿನಲ್ಲಿ ಆಗ ಡೆಪ್ಯುಟಿ ಕಮಿಷನರಾಗಿ ಮಾಸ್ತಿಯವರ ಗೆಳೆಯರಾದ (ಬಹುಶಃ ಅವರ ಸಹ ಉದ್ಯೋಗಿಗಳೂ ಆಗಿದ್ದರೆಂದು ತೋರುತ್ತೆ.) ಶ್ರೀ ಜಿ. ನಾಗರಾಜರಾಯರು ಇದ್ದರು. ಅವರೇ ಈ ಉಪನ್ಯಾಸವನ್ನು ಏರ್ಪಡಿಸಿದ್ದರು. (ಜಿ. ಎಂದರೆ ಗರ್ಗೇಶ್ವರಿ. ಮಾಸ್ತಿಯವರು 'ಜಿ'ಯನ್ನು ಒಪ್ಪಲಾರರು) ಗರ್ಗೇಶ್ವರಿ ನಾಗರಾಜರಾಯರು ಎಂದೇ ಹೇಳಬೇಕು. ಡಿ.ಸಿ.ಸುಬ್ಬರಾಯಪ್ಪ ಎಂದರೆ ಹಾಗಲ್ಲ ದೊಡ್ಡಬಳ್ಳಾಪುರದ ಚಿಕ್ಕಸುಬ್ಬರಾಯಪ್ಪನವರು ಎನ್ನುತ್ತಾರೆ. ನಿಮ್ಮ ಊರು ಹೆಸರು, ಪರಂಪರೆ ಎಲ್ಲ

ಹೆಮ್ಮೆಯಿಂದ ಹೇಳಿ-ಇದೇನು ಪರಂಗಿ ಸಂಪ್ರದಾಯ ಒಂದು ಅಕ್ಷರದಿಂದ ವ್ಯಕ್ತಿಯನ್ನು ಗುರುತಿಸುವುದು-ಇದು ಮಾಸ್ತಿಯವರ ಧರ್ಮ.

ಪರಿಷತ್ತಿನ ಕೆಲಸಕ್ಕಾಗಿ ಪ್ರತಿದಿನ ಎಂಬಂತೆ ನಾನು ಮಾಸ್ತಿಯವರು ಮನೆಗೆ ಹೋಗುತ್ತಿದ್ದೆ. ತನ್ನ ಓರ್ವ ಮಗನಂತೆ ಅವರು ನನ್ನನ್ನು ನೋಡಿದ್ದರು. ನನ್ನ ಬಿಡಾರವೂ ಗವಿಪುರದಲ್ಲೇ. ಅವರ ಮನೆಯ ಪಕ್ಕದಲ್ಲೇ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದ ಶ್ರೀ ಕ.ವೆಂ. ರಾಘವಾಚಾರ್ಯರ ಮನೆಯ ಹಿಂದೆಯೇ ಇತ್ತು. ಈ ಕಾರಣಗಳಿಂದ ಅವರ ಮನೆಯವರಿಗೂ ನನ್ನ ಮನೆಯವರಿಗೂ ತುಂಬ ಒಡನಾಟ, ಪರಿಚಯವಿತ್ತು. ತಾಯಿ ಪಂಕಜಮ್ಮನವರು, ನಮ್ಮನ್ನೆಲ್ಲ ಅವರ ಬಂಧುಗಳಂತೆ ನೋಡಿಕೊಂಡಿದ್ದರು.

ಪರಿಷತ್ತಿನ ಉಪಾಧ್ಯಕ್ಷ ಪದವಿಯಿಂದ ಅವರು ನಿವೃತ್ತರಾದಮೇಲೂ ಅವರ ನೆರಳಾಗಿ ಕೆಲಸ ಮಾಡುವ ಭಾಗ್ಯ ನನ್ನದಾಗಿತ್ತು. ಅವರು ಪರಿಷತ್ತಿನ ಅಧಿಕಾರದಲ್ಲಿಷ್ಟು ವರ್ಷ ಅವರ ಯಾವುದೇ ಮುದ್ರಣದ ಕೆಲಸ ಪರಿಷತ್ತಿನ ಅಚ್ಚುಕೂಟದಲ್ಲಿ ನಡೆಸಲು ಅವರು ಒಪ್ಪಲಿಲ್ಲ. ಅವರ ಮುದ್ರಣದ ಕಾರ್ಯಗಳೆಲ್ಲ ಬೆಂಗಳೂರ ಪ್ರೆಸ್ಸಿನಲ್ಲಿ ನಡೆಯುತ್ತಿತ್ತು. ಪರಿಷತ್ತಿನಿಂದ ನಿವೃತ್ತರಾದಮೇಲೆ ಮೆಲ್ಲನೆ ''ಜೀವನ''ದ ಮುದ್ರಣ ನಮ್ಮ ಪರಿಷತ್ತಿನ ಅಚ್ಚುಕೂಟಕ್ಕೆ ಬರುವಂತೆ ಮಾಡಿಕೊಂಡೆ. 'ಸುಬ್ಬಣ್ಣ'ದ ಒಂದು ಮುದ್ರಣವೂ ನಮ್ಮಲ್ಲೇ ನಡೆಯಿತು. 'ಚೆನ್ನಬಸವನಾಯಕ'ವನ್ನು ನಾವೇ ಮುದ್ರಿಸಿದೆವು (ಆಗ ನಾನು ಪರಿಷತ್ತಿನ ಅಚ್ಚುಕೂಟದ ವ್ಯವಸ್ಥಾಪಕ) ಈ ಕಾರಣದಿಂದಲೂ ನಾನು ಶ್ರೀನಿವಾಸರ ಗವಿಪುರದ ನಿಲಯದ ನಿತ್ಯದ ಅತಿಥಿ. ಹಲವು ಸಂದರ್ಭಗಳಲ್ಲಿ 'ಜೀವನ'ದ ಅಗ್ರ ಲೇಖನ ಅವರು ಹೇಳಿ ನಾನು ಬರಕೊಂಡು ಬಂದದ್ದೂ ಉಂಟು. ಶ್ರೀ ಆರ್.ಎಸ್. ರಾಮರಾಯರು ಅದರ ವ್ಯವಸ್ಥಾಪಕರಾಗಿದ್ದರು.

ಮಾಸ್ತಿಯವರ ಕನ್ನಡದ ಬರಹ ಬಹಳ ಮುದ್ದಾದುದು. ಅವರು ಕರಡು ತಿದ್ದುವದೇ ಒಂದು ಚಂದ, ಅದೇ ಒಂದು ಕಲೆ. ಆದರೆ ಎಲ್ಲ ಸಾಹಿತಿಗಳಂತೆಯೇ ಇವರಿಗೂ ಹೊಸ ಹೊಸ ಭಾವನೆಗಳು, ವಿಚಾರಗಳು ಮೂಡಿ ಬರುವುದು ಮುದ್ರಣಕ್ಕೆ ಸಿದ್ಧವಾದ ಫಾರಂ ಯಂತ್ರಕ್ಕೆ ಸಿದ್ಧಗೊಳಿಸಿದಾಗಲೇ. ಆಗಲೇ ಇವರು ಕರಡು ಪ್ರತಿಯಲ್ಲಿ ಸಾಮೂಲವಾಗಿ ಬದಲಾವಣೆ ಮಾಡಬೇಕು-ಇದರ ಕಷ್ಟ ಅಚ್ಚುಕೂಟ ನಡೆಸುವವರು ಮಾತ್ರಬಲ್ಲರು-

ಬೈದು+ಕಾಡಿ=ಬೈಕಾಡಿ ಎಂಬ ಬಿರುದನ್ನು ದಿವಂಗತ ಡಿ.ಎಲ್.ಎಸ್. ರಿಂದ ನಾನು ಪಡೆದದ್ದೂ ಇಂತಹದೇ ಒಂದು ಸಂದರ್ಭದಲ್ಲಿ.

ಮಂಗಳೂರತ್ತ ಕಡೆಯಿಂದ ಯಾರೇ ಬರಲಿ ಅವರನ್ನು ಮಾಸ್ತಿಯವರಲ್ಲಿಗೆ ನಾನು ಕರೆದೊಯ್ಯುತ್ತಿದ್ದೆ. ಇದು ಅವರಿಗೆ ತುಂಬ ಸಂತೋಷ. ತ್ರಿವೇಣಿಯ ರಾಮಕೋಟೀಶ್ವರರಾಯರು, ಮೇಡಂ ಸೋಫಿಯವಾಡಿಯ, ಮಂಗಳೂರು ಕೆ. ಆರ್. ಕಾರಂತರು, ಮದ್ರಾಸಿನ ಡಾ|| ರಾಮರಾಯರು. ಹೀಗೆ ಅವರಲ್ಲಿಗೆ ಬರುವ ಅತಿಥಿಗಳ ಸಂಖ್ಯೆ ಬಹಳ. ಅವರನ್ನೆಲ್ಲ ಸತ್ಕರಿಸಬೇಕು. ಅವರ ಮನೆಯಲ್ಲಿ ಯಾವದೇ ಸತ್ಕಾರ ಕೂಟ ನಡೆಯಲಿ ಅದರಲ್ಲಿ ನಾನು ಸ್ವಯಂ ಸೇವಕ. ಹೀಗೆ ಅವರ ಮನೆಯವರಲ್ಲಿ ಓರ್ವ ನಾನು ಎನ್ನುವಂತಿದ್ದೆ. ಆದ್ದರಿಂದಲೇ ಮುತ್ತಣ್ಣನನ್ನು ನಾನು ಕಂಡಿದ್ದೇನೆ ಎಂದೆ-

ಮುತ್ತಣ್ಣ-ಮನೆಯಲ್ಲಿ- ಮಾಸ್ತಿಯವರನ್ನು ಅವರ ತಾಯಿ, ಅವರ ಮಕ್ಕಳು ಎಲ್ಲ ಪ್ರೀತಿಯಿಂದ ಕರೆಯುತ್ತಿದ್ದ ಹೆಸರು. ಮಾಸ್ತಿಯವರೇ ಹಿರಿಯರು ಎಂದರೆ ಅವರ ತಾಯಿ

ಮೊನ್ನೆ ಮೊನ್ನೆಯತಕನ ಬದುಕಿದ್ದರು. ಈ ಮುತ್ತಣ್ಣ ಊರ ಹೊರಗೆ ಸಂಚಾರಕ್ಕೆ ಎಲ್ಲಿಗೆ ಹೊರಡಬೇಕಾದರೂ ತಾಯಿಯ ಪಾದ ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆದು ಹೊರಡಬೇಕು. ಹಿಂತಿರುಗುವುದು ಒಂದಿನ ತಡವಾದರೆ ಮುತ್ತಣ್ಣ ಬಂದನೇ ಎಂದು ಈ ತಾಯಿ ನಮ್ಮನ್ನು ಕೇಳಬೇಕು - ಹೀಗಿತ್ತು ಆ ತಾಯಿ ಮಕ್ಕಳ ಪ್ರೇಮ.

ಮಗಳು ಶಾಂತಾ (ಈಗ ಅಮೆರಿಕೆಯಲ್ಲಿದ್ದಾರೆ) ಮುತ್ತಣ್ಣ ಎಂದು ಬಾಯಿ ತುಂಬ ಕರೆದರೆ ಪಂಜರದ ಗಿಣಿಯೂ ತಾರಿತವ್ವ-ಮುತ್ತಣ್ಣ ಎನ್ನುತ್ತಿತ್ತು. (ಈಗ ಆ ಗಿಣಿಯೂ ಇಲ್ಲ).

ಇನ್ನು ಅವರ ವ್ಯಕ್ತಿ ಜೀವನ ನಾನು ಕಂಡಂತೆ ಹೇಳುವುವಾದರೆ ಇಷ್ಟೊಂದು ಪವಿತ್ರವಾದ ಆಚಾರವಂತ ಹಿರಿಯರನ್ನು ನಾನು ನನ್ನ ಜೀವನದಲ್ಲೇ ಕಂಡಿಲ್ಲ ಎನ್ನಬೇಕು. ಆದಿಕವಿ ವಾಲ್ಮೀಕಿ ಗ್ರಂಥ ಬರೆದ ಶ್ರೀನಿವಾಸರು ರಾಮಾಯಣವನ್ನು ನಿತ್ಯ ಪಾರಾಯಣಕ್ಕೆ ಇಟ್ಟುಕೊಂಡಿದ್ದರು. ರಾಮನವಮಿಯ ಕಾಲದಲ್ಲಿ ಅದನ್ನು ಒಂದು ವ್ರತವಾಗಿ ಆಚರಿಸುತ್ತಿದ್ದರು. ವಿಷ್ಣು ಸಹಸ್ರನಾಮ, ವೆಂಕಟೇಶ್ವರ ಸ್ತೋತ್ರ - ಇವು ಅವರ ನಿತ್ಯಪಾರಾಯಣದ ವಸ್ತುಗಳು. ನವರತ್ನ ರಾಮರಾಯರ ಕೊನೆಯ ಗಳಿಗೆಗಳಲ್ಲಿ ಅವರ ಜತೆ ಇದ್ದು ಅವರ ಅಪೇಕ್ಷೆಯಂತೆ ದೇವರ ಸಹಸ್ರ ನಾಮಗಳನ್ನು ಹೇಳಿದರು - ಅವರ ಅಪೇಕ್ಷೆಯಂತೆ ''ಉತ್ತಾರಣೋ ದುಷ್ಕೃತಿಹಾ ಪುಣ್ಯೋ ದುಃಸ್ವಪ್ನನಾಶನಃ'' ಎಂಬ ದೇವರ ಹೊಗಳಿಕೆಯನ್ನು ಮತ್ತೊಮ್ಮೆ ಹೇಳಿದರು - 16335

ಸರಕಾರದ ಅಧಿಕಾರಿಯಾಗಿದ್ದರೂ, ಕ್ಲಬ್ಬುಗಳ ಜೀವನ ನಡೆಸಿದ್ದರೂ, ಈಗಲೂ ಬಸವನಗುಡಿ ಕ್ಲಬ್ಬಿನ ಸಂದರ್ಶನ ಬಿಡದಿದ್ದರೂ - ಅಲ್ಲೂ ಆಚಾರ ದೋಷವಿಲ್ಲ. ಹೆಚ್ಚೆಂದರೆ ಮಜ್ಜಿಗೆ ನೀರು ಕುಡಿದಾರು. ಹೊಗೆಬತ್ತಿಯ ಮುಖ ಕೂಡ ಬದುಕಿನಲ್ಲಿ ನೋಡಿದ್ದಾರೋ ಇಲ್ಲವೊ? ನೇಮಯ್ಯ - ಶಾಸ್ತ್ರಿ ಮುಂತಾದ ಆದರ್ಶ ಪಾತ್ರಗಳನ್ನು ತಮ್ಮ ಕೃತಿಗಳಲ್ಲಿ ಸೃಷ್ಟಿಸಿದ ಶ್ರೀನಿವಾಸರು ತಮ್ಮ ಜೀವನದಲ್ಲೂ ಅದೇ ಆಗಿದ್ದರು ಎಂದರೆ ಹೆಚ್ಚಿಗೆ ಹೇಳಿದಂತಾಗಲಿಲ್ಲ.

ತಮ್ಮ ಬದುಕಿನ ಉದ್ದಕ್ಕೂ ಪವಿತ್ರವಾದ ಆದರ್ಶವಾದ ಬಾಳನ್ನು ನಡೆಸಿದ ಈಗಲೂ ನಡೆಸುತ್ತಿರುವ ಈ ಹಿರಿಯ ಜೀವ ತನ್ನ ಕೃತಿಗಳ ಮೂಲಕ ಆದರ್ಶ ಪಾತ್ರಗಳನ್ನೇ ಜನತೆಗೆ ನೀಡಿ ನಡೆ-ನುಡಿ ಎರಡೂ ಒಂದೇ ಎಂದು ತೋರಿಸಿದ ಕನ್ನಡದ ಶ್ರೀನಿವಾಸರು - ಕಿರಿಯರಿಗೆ ಹಿರಿಯರು, ಹಿರಿಯರಿಗೂ ಹಿರಿಯರು - ಮಾಸ್ತಿ ಎಂದರೆ ಕನ್ನಡದ ಆಸ್ತಿ ಎಂದರೆ ಹೇಳಬೇಕಾದ್ದನ್ನು ಹೇಳಿದಂತಾಯ್ತು.

ವೃದ್ಧೋಪಸೇವೆ

ಸ. ವೆಂಕಟಾಚಲಪತಿ

ಯುವಕರು ವೃದ್ಧೋಪಸೇವೆಗೆ ಒತ್ತಾಯವಿಲ್ಲದೆ ಮುಂದೆ ಬರಬೇಕಾದವರು. ಇದನ್ನು ನೇಮವೆಂದು ತಿಳಿದು ಮಾಡಿದರೆ ಅವರಿಗೆ ಲಭಿಸುವ ಶ್ರೇಯಸ್ಸು ಎಂಥಾದ್ದು ಎಂದು ಬಣ್ಣಿಸಲು ಮಾತು ಸಿಕ್ಕೀತೆ? ವೃದ್ಧರಿಗೆ ಪರಿಚರ್ಯೆಮಾಡುವ ಅವಕಾಶವೇನಾದರೂ-ನಮ್ಮ ಪ್ರಯತ್ನವಿಲ್ಲದೆ, ಸೇವೆ ಬಯಸುವ ವೃದ್ಧರ ಕೋರಿಕೆಯಂತೆಯೋ ಇಲ್ಲವೆ ಅಂಥ ಸಂದರ್ಭವನ್ನು ಬಲ್ಲ ಹೆರವರ ಸಲಹೆಯಂತೆಯೇ-ಎಂದರೆ ಅದನ್ನು ಸ್ವಾಗತಿಸಿ ಉಪಯೋಗಿಸಿಕೊಳ್ಳದ ಯುವಕನು ಮಂದಭಾಗ್ಯ. ಸೇವೆ ಬಯಸುವ ವೃದ್ಧರು ವಯಸ್ಸಿನಿಂದ ಮುಪ್ಪೇರಿದವರಾಗಿರಬಹುದು. ವಯಸ್ಸಿನ ಜೊತೆಗೆ ಮೇಧಾಶಕ್ತಿಯಿಂದಲೂ ಮುಪ್ಪೇರಿರಬಹುದು. ವಯೋಮಾತ್ರದಿಂದ ವೃದ್ಧರಾದವರು ಉಪಾಯಜ್ಞರಾಗಿ, ಸೇವೆಯ ಭಾಗ್ಯವನ್ನು ಖಾತರಿ ಪಡಿಸಿಕೊಳ್ಳಲು ಯುವಕರಿಗೆ ಕತೆ ಹೇಳುತ್ತಲೋ ಸ್ವಾರಸ್ಯ ಸಂಭಾಷಣೆಯಲ್ಲಿ ತೊಡಗಿಯೋ ಯುವಕರನ್ನು ಸೆಳೆಯಬಹುದು. ಯುವಕನು ಕಿವಿಯನ್ನು ಮುದುಕನ ಅನುಭಾವಾಮೃತಕ್ಕೆ ಕೊಟ್ಟು, ಕೈಯನ್ನು, ಸಂವಾಹನ ಕ್ರಿಯೆಗೆ ಬಳಸಬಹುದು. ಇಂಥ ವೃದ್ಧರನೇಕರನ್ನು ನಾನು ನೋಡಿದ್ದೇನೆ. ಅವರ ಸಿರಿ ಬಾಯಿಂದ ಹೊರಟ ಹೊಸ ಹೊಸ ಗಾದೆಗಳನ್ನೂ ಸುಭಾಷಿತಗಳನ್ನೂ ಚಾಟು ಶ್ಲೋಕಗಳನ್ನೂ ಕೇಳುತ್ತ, ಕಾಲೊತ್ತುವುದರಲ್ಲಿ ಕೈಗಳನ್ನು ಸಾರ್ಥಕಪಡಿಸಿಕೊಳ್ಳುತ್ತ ಸಂತೋಷಪಟ್ಟಿದ್ದೇನೆ. ಅವರ ಸಹವಾಸ ಶಾಶ್ವತವಾಗಿರಲೆಂದು ದೇವರಲ್ಲಿ ಮೊರೆಯಿಟ್ಟಿದ್ದೇನೆ. ಅವರು ಪರಸ್ಥಳಕ್ಕೆ ದೀರ್ಘಕಾಲ ಪ್ರವಾಸ ಹೋದಾಗಲೋ, ಪರಲೋಕವಾಸಿಗಳಾದಾಗಲೋ ಹತಭಾಗ್ಯನಾದೆನೆಂದು ಹಲುಬಿದ್ದೇನೆ. ಆದರೆ ಇಂಥ ವೃದ್ಧರು ನನ್ನ ಈಗಣ ಲೇಖನಕ್ಕೆ ವಿಷಯರಲ್ಲ. ವಯೋಧಿಕ್ಯದಿಂದ ಬಂದ ತುಸು ಮುಪ್ಪಿನ ಜೊತೆಗೆ ಮುಪ್ಪೇರದ ಪ್ರತಿಭಾ ಸಂಪನ್ನರಾದವರು ಕೂಡ ಯುವಕರ ಸೇವೆಗೆ ಹೇಗೆ ಅರ್ಹರೆಂಬುದೂ, ಅಂಥ ಜ್ಞಾನ ವೃದ್ಧರಿಗೆ, ಶೀಲ ವೃದ್ಧರಿಗೆ ಯುವಕರಿಂದ ಸಲ್ಲುವ ಸೇವೆ- ಅದು ಸ್ವಲ್ಪವಾದರೂ- ಹೇಗೆ ಸಾಹಿತ್ಯಕ್ಕೂ ಸಮಾಜಕ್ಕೂ ರಾಮಸೇತುವೆಗೆ ಅಳಿಲ ಸೇವೆಯಂತೆ ಉಪಕಾರವಾಗುತ್ತದೆಯೆಂಬುದೂ ಈ ಲಘು ಲೇಖನಕ್ಕೆ ವಿಷಯ. ಸೇವೆಗೆ ಬಹುಮುಖಗಳುಂಟು; ವಾರ್ಧಕ್ಯಕ್ಕೂ ಪ್ರತಿಭೆಗೂ ಕಾಣಿಕೆಯಾಗಿ ಸಲ್ಲತಕ್ಕದ್ದು ಈ ಸೇವೆ. ಸೇವಕನು ಪಡೆತಕ್ಕದ್ದು ಧನದ್ರವ್ಯಕ್ಕಿಂತ ಹೆಚ್ಚಾಗಿ ತೃಪ್ತಿಧನ.

ಸೇವೆಗೆ ವಯಸ್ಸಿನ ಅಂತರ ಬಹಳ ಹೆಚ್ಚಾಗಿರಬೇಕೆಂದು ಯುವಕರು ಭಾವಿಸಬೇಕಾಗಿಲ್ಲ. ನಮಗಿಂತ ಒಂದೆರಡು, ನಾಲ್ಕಾರು, ಏಳೆಂಟು ವರ್ಷ ದೊಡ್ಡವರ

ಮುಂದೆ ನಾವು ಕಿರಿಯರಲ್ಲವೆ? ದಾಶರಥಿ ರಾಮಚಂದ್ರನು ತಮ್ಮಂದಿರಿಗಿಂತ ವಯಸ್ಸಿನಲ್ಲಿ ಎಷ್ಟು ಮಾತ್ರ ದೊಡ್ಡವನು? ಆದರೆ ರಾಮನ ಗುಣ ಯೋಗ್ಯತೆ ತಮ್ಮಂದಿರನ್ನು ಬಹು ಮರ್ಯಾದೆಯಲ್ಲಿ ನಡೆಸಿ ಅವರವರ ಕರ್ತವ್ಯಕ್ಕೆ ನೆಲೆಯನ್ನೂ ಬೆಲೆಯನ್ನೂ ತೋರಿಸಿತಲ್ಲವೆ? ರಾಮಾಯಣವನ್ನು ಓದಿದವರಿಗೆ ವೃದ್ಧೋಪ ಸೇವೆಯಿಂದ ಎಂಥ ಫಲವುಂಟೆಂಬುದು ವಿಷದಪಡುತ್ತದೆ. ವೃದ್ಧೋಪಸೇವೆ ಮಾಡದವನ ಮಾತು ಪೊಳ್ಳುಮಾತಾಗುತ್ತದೆ; ಶೀಲ ಶೋಧನೆಯರಿಯದ ನಡತೆ ಅವನದು.

ಇಷ್ಟು ಪೀಠಿಕೆ ಸಾಕು. ಅರವತ್ತೆರಡು ವರ್ಷ ದಾಟಿದ ನನಗೆ ನನ್ನ ಯುವದಶೆಯಲ್ಲಿ ಕೆಲವು ವೃದ್ಧರಿಗೆ ಪರಿಚರ್ಯೆ ನಡೆಸುವ ಅವಕಾಶ ಬಂತು. ಇಂದಿಗೂ ಆ ಭಾಗ್ಯ ನಡೆದು ಬರುತ್ತಿದೆ. ಈ ಸೇವಾವಕಾಶವನ್ನು ಹೇಗೆ ಬಳಸಿಕೊಂಡೆ, ಆ ಸೇವೆಗೆ ಪ್ರತಿಫಲವೇನು ಎಂಬುದನ್ನು ಶ್ರೀಮಾನ್ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರಿಗೆ ಸಂಬಂಧಪಟ್ಟಂತೆ ಒಂದೆರಡು ಸಂಗತಿಗಳನ್ನು ಇಲ್ಲಿ ಅರಿಕೆ ಮಾಡುತ್ತೇನೆ.

೧೯೩೦-೩೧ರಲ್ಲಿ ಕೆಲವರು ಕನ್ನಡ ಭಾಷಾಭಿಮಾನಿಗಳ ಮನೆಗೆ ನಾನು ಚಂದಾ ವಸೂಲಿ ಮಾಡಲು ನನ್ನ ಬಂಧುಗಳಲ್ಲೊಬ್ಬರಾದ ಶ್ರೀಮಾನ್ ಬಿ.ರಾಮಯ್ಯನವರ ಕೋರಿಕೆಯಂತೆ ಹೋಗಿ ಬರುತ್ತಿದ್ದೆ. ತಾವು ಇಟ್ಟುಕೊಂಡಿದ್ದ ಲೆಕ್ಕದ ಪುಸ್ತಕದಿಂದ ಹೆಸರುಗಳನ್ನು ಹೇಳಿ ನನ್ನನ್ನು ಅಟ್ಟುತ್ತಿದ್ದರು. ನಾನು ಸಂತೋಷದಿಂದ ಹೋದವರ ಮನೆಯಿಂದ ತಂದ ಹಣವನ್ನು ಲೆಕ್ಕದ ಪುಸ್ತಕದಲ್ಲಿ ಜಮಾ ಕಟ್ಟಿಕೊಳ್ಳುತ್ತಿದ್ದರು. ಈ ಬಂಧುಗಳೂ ಮಾಸ್ತಿಯವರೂ ಸ್ನೇಹಿತರು. ನಾನು ಹೋಗಿ ಕಂಡು ಬರುತ್ತಿದ್ದವರಲ್ಲಿ ಕೆಲವರು ಮುಂದೆ ಕೊಟ್ಟಿರುವ ಪಟ್ಟಿಯಲ್ಲಿ ಸೇರಿದ ಮಾನ್ಯರು-ಶ್ರೀ ಬಿ.ಎಂ. ಶ್ರೀಕಂಠಯ್ಯನವರು, ಶ್ರೀ ಎಸ್.ಜಿ. ಶಾಸ್ತ್ರಿಗಳು, ಡಾ।। ಸಿ.ಬಿ. ರಾಮರಾಯರು, ಶ್ರೀ ಬಿ.ಕೆ. ಗರುಡಾಚಾರ್ಯರು. ಮಿಕ್ಕವರು ಪ್ರಾಯಶಃ ನೇರವಾಗಿ ಚಂದಾ ಹಣ ಕಳಿಸುತ್ತಿದ್ದರು; ಇಲ್ಲವೆ ನನ್ನ ಬಂಧುಗಳು ವಸೂಲಿಗೆ ಬೇರೆ ಏರ್ಪಾಟು ಮಾಡಿದ್ದರು. ನನ್ನ ಬಂಧುಗಳಿಗೆ ನನ್ನ ಮೇಲೆ ಅಕ್ಕರೆ ನನ್ನನ್ನು ಊಳಿಗಕ್ಕೆ ಹಚ್ಚುವಷ್ಟು ಗಟ್ಟಿ. ನನಗೂ ಅವರ ಅಕ್ಕರೆ ಆಣತಿಯಂತೆ ತೋರುತ್ತಿತ್ತು. ಈ ಬಂಧು ವೃದ್ಧೋಪಸೇವೆಯಿಂದ ನನಗೆ ಆದ ಉಪಕಾರ ಬೆಟ್ಟದಷ್ಟು. ಗಣ್ಯರ ಸನ್ನಿಧಿಯಲ್ಲಿ ನಿಂತು ಅವರ ಘನೋದಾರ ಚರಿತೆಯನ್ನು ವೀಕ್ಷಿಸುವುದು. ಇದೆಲ್ಲ ಶ್ರೀ ಮಾಸ್ತಿಯವರ ಏರ್ಪಾಟಿನಂತೆ ನಡೆಯುತ್ತಿರುವ ಚಟುವಟಿಕೆ ಎಂದು ನನಗೆ ಕ್ರಮೇಣ ತಿಳಿಯಿತು. ಹೀಗೆ ನನಗೆ ಪರೋಕ್ಷವಾಗಿಯಾದರೂ ಮಾಸ್ತಿಯವರಿಗೆ ಸೇವೆಸಲ್ಲಿಸುವ ಸುಯೋಗ ಘಟಿಸಿತು.

ಈ ಲೇಖಕನ ಸಹಾಯ ನಿಧಿಯ ವಿಷಯ ಮಾಸ್ತಿಯವರ 'ಭಾವದಲ್ಲಿ ಬಂದಿದೆ-ಭಾಗ೨, ಪುಟ೩೬೦-೬೩. ಈ ನಿಧಿಯಿಂದ ಪ್ರಕಟವಾದ ಮೊದಲನೆಯ ಪ್ರಕಟನೆ ಶ್ರೀ ಕೆ.ವಿ.ಪುಟ್ಟಪ್ಪನವರ 'ಕೊಳಲು' ಎಂಬ ಅವರ ಕವಿತೆಗಳ ಮೊದಲ ಸಂಗ್ರಹ. ನಿಧಿಯಿಂದ ಮಂಗಳಾರಂಭವಾಗಿ ಕೊಳಲನ್ನು ನುಡಿಸುವ ಪ್ರೇರಣೆ ಬಂದದ್ದು ಮೈಸೂರಿನ ಶ್ರೀ ರಾಮಕೃಷ್ಣಾಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಸಿದ್ಧೇಶ್ವರಾನಂದರವರಿಂದ. ಹೀಗೆ ಯತಿಗಳೊಬ್ಬರ ಹೆಸರು ಕನ್ನಡದ ಏಳಿಗೆಗೋಸ್ಕರ ನಡೆದೊಂದು ಚಟುವಟಿಕೆಯಲ್ಲಿ ಸೇರಿತು. ತರುಣ ಕವಿಯೊಬ್ಬನ ಭಾವ ಕವಿತೆಗಳ ಆದಿ ಸಂಕಲನವನ್ನು ನಿಧಿಯ ಮೊದಲ ಪ್ರಕಟನೆಯಾಗಿ ಆದರರಿಂದ ಜನ ಬರಮಾಡಿಕೊಂಡರು. ಮಾಲೆಯ ಎರಡನೆಯ

ಪುಸ್ತಕವೇ ಶ್ರೀ ದ.ರಾ. ಬೇಂದ್ರೆಯವರ ''ಗರಿ'' ಎಂಬ ಕವಿತೆಗಳ ಸಂಗ್ರಹ-೧೯೩೪ ರಲ್ಲಿ 'ಗರಿ'ಯಲ್ಲಿ ನಿಧಿಯ ಸಹಾಯಕರ್ತರ ಪರವಾಗಿ ಮಾಸ್ತಿಯವರ ಬಿನ್ನಹ ಹೀಗಿದೆ: ''ಈ ಸಂದರ್ಭದಲ್ಲಿ ನಾನು ಕವಿ ಕಾವ್ಯ ಪಕ್ಷಪಾತಿಗಳಾದ ಶ್ರೀಗಳಾದ ಬಿ.ಎಂ. ಶ್ರೀಕಂಠಯ್ಯನವರು, ಎಸ್.ಜಿ. ಶಾಸ್ತ್ರಿಗಳು, ರಾವ್ ಬಹದ್ದೂರ್ ಡಾ॥ ಸಿ.ಬಿ. ರಾಮರಾಯರವರು, ಬಿ.ಪುಟ್ಟಯ್ಯನವರು, ಸಿ.ಕೆ.ವೆಂಕಟರಾಮಯ್ಯನವರು, ಪಿ.ಎಚ್. ಕೃಷ್ಣರಾಯರವರು, ಟಿ. ಗೋವಿಂದರಾಯರವರು, ಬಿ.ಕೆ. ಗರುಡಾಚಾರ್ಯರು ಈ ಹಿರಿಯರು ಮತ್ತು ಮಿತ್ರರ ಇಷ್ಟವನ್ನು ನಡೆಯಿಸಿರುವ ನಿಮಿತ್ತಮಾತ್ರನಾಗಿದ್ದೇನೆ.''

'ಗರಿ' ಪ್ರಕಟವಾದ ಮೇಲೆ ಇನ್ನೂ ಹತ್ತಾರು ಪುಸ್ತಕಗಳು ಬಂದವು. ಸ್ವಲ್ಪಕಾಲ ಈ ನಿಧಿ ಸಂಗ್ರಹ ಕಾರ್ಯದಲ್ಲಿ ನನಗೆ ಹೇಗೋ ಪಾತ್ರ ದೊರೆಯಿತು-ದೈವಾಯತ್ತವಾಗಿ ಬರತಕ್ಕದ್ದರಲ್ಲಿ ಶುಭಗಳೂ ಇರುತ್ತವೆ ಎಂಬ ಪಾಠ ನನ್ನ ಅನುಭವದ ಪುಸ್ತಕಕ್ಕೆ ಸೇರಿತು.

ತರುಣ ಬರಹಗಾರರಿಗೂ ದ್ರವ್ಯಾನುಕೂಲವಿಲ್ಲದ ಜೊತೆಯ ಲೇಖಕರಿಗೂ ನೆರವಾಗುವುದು ಹೇಗೆ ಎಂಬುದು ಎಲ್ಲ ಕಾಲಕ್ಕೂ ಇರುವ ಪ್ರಶ್ನೆ. ನಾಲ್ಕಾರು ಮಂದಿ ಸ್ನೇಹಿತರು ಸಹಕರಿಸಿ ಒಂದು ನಿಧಿಯನ್ನು ಶೇಖರಿಸಿ ಕಾರ್ಯಮಾಡುವುದನ್ನು ಯೋಚಿಸಿದ ಮಾಸ್ತಿಯವರ ಈ ಪ್ರಯತ್ನ ಒಂದು ಒಳ್ಳೆಯ ಮಾರ್ಗದರ್ಶನವಾಯಿತು.

ಮಾಸ್ತಿಯವರ 'ಭಾವ'ದಲ್ಲಿ ಇನ್ನೊಂದು ಬೋಧಪ್ರದವಾದ ಸಂಗತಿ ಬರುತ್ತದೆ. ನೆರವು ವೈಯಕ್ತಿಕವಾದದ್ದಾದರೆ ನೆರವು ಪಡೆದವರೂ, ನೆರವು ಕೊಟ್ಟವರೂ, ಈ ವ್ಯಾಪಾರವನ್ನು ನೋಡುವ ಹೆರವರೂ ಯಾವ ಮನೋಧರ್ಮವನ್ನು ತಳೆಯಬೇಕು ಎಂಬುದು ಆಗ ಈಗ ನನ್ನ ಮನಸ್ಸಿಗೆ ಬರುತ್ತಿದ್ದ ಪ್ರಶ್ನೆ. ನೆರವು ಪಡೆದವರು ಸಂಕೋಚ ಪಡದೆ ನೆರವನ್ನು ಒಪ್ಪಿಕೊಳ್ಳಬೇಕೆಂಬುದು ಮಾಸ್ತಿಯವರ ನಿಲವು. ಸಹಾಯಕರ್ತರು ನಿರಹಂಕಾರಿಗಳಾಗಿ ಸಹಾಯ ನೀಡಬೇಕು ಎಂಬುದೇ ತತ್ತ್ವ. 'ಭಾವ'ದಲ್ಲಿ ಬಂದಿರುವ ಸಂಗತಿ ಇದು:

೧೯೪೬ ರಲ್ಲಿ ಧಾರವಾಡದ ಮಿತ್ರರು ಬೇಂದ್ರೆಯವರ ೫೦ನೆಯ ಜನ್ಮೋತ್ಸವವನ್ನು ಆಚರಿಸಿ ಮಾಸ್ತಿಯವರನ್ನು ಸಭಾಧ್ಯಕ್ಷರಾಗಿರಲು ಕೋರಿದರು. ಸಭೆಯಲ್ಲಿ ಬೇಂದ್ರೆಯವರು ತಮ್ಮ ಮಾತಿನಲ್ಲಿ-''ಅಣ್ಣ ಮಾಸ್ತಿಯವರು ನನಗೆ ನೆರವಾಗಿ ನಿಂತರು, ನಾನು ನೆರವನ್ನು ತೆಗೆದುಕೊಂಡೆನು. ಕೆಲವು ಜನ ನಾನು ಪರಾವಲಂಬಿ ಆದೆ ಎಂದು ನನ್ನನ್ನು ಹಳಿಯುತ್ತಾರೆ. ನಾನು ಪರಾವಲಂಬಿ ಆದೆ, ಎಂದು ಒಪ್ಪುತ್ತೇನೆ'' ಎಂದು ಹೇಳಿ, ''ಪರಾವಲಂಬಿಗಳಾಗದೆ ಇವರು ಬಾಳುವಂತೆ ಬಾಳಲು ನನ್ನಿಂದ ಆಗಲ್ಲಿಲ್ಲ. ಇದು ನನ್ನ ದೈವ'' ಎಂದು ಸಂಕೋಚಪಟ್ಟುಕೊಂಡರಂತೆ. ಆಗ ಮಾಸ್ತಿಯವರು ಸಹಾಯ ಸಂದರ್ಭವನ್ನೂ ಸಹಾಯ ತತ್ತ್ವವನ್ನೂ ವಿವರಿಸಿದ್ದೇ ಹೀಗೆ-''ನನ್ನ ಸೋದರ ಬೇಂದ್ರೆಯವರು ತಮ್ಮ ದೃಷ್ಟಿಯಿಂದ ಯಾವುದನ್ನು ನೆರವು ಎನ್ನುತ್ತಾರೆ ಅದು ನನ್ನ ದೃಷ್ಟಿಯಿಂದ ಕಾವ್ಯಕ್ಕೆ ಒಪ್ಪಿಸಿದ ಕಾಣಿಕೆ. ಪರಾವಲಂಬನ ಎಂಬ ಶಬ್ದ ಈ ಸಂದರ್ಭಕ್ಕೆ ಹೊಂದುವುದೇ ಇಲ್ಲ. ಕಾಸುಳ್ಳವನಿಂದ ಕವಿ ಕಾಸು ತೆಗೆದುಕೊಳ್ಳುವುದು ಪರಾವಲಂಬನ ಆದರೆ ಎಲ್ಲ ಕವಿಗಳೂ ಎಲ್ಲ ಕಾಲದಲ್ಲೂ ಪರಾವಲಂಬಿಗಳೇ'' ಎಂದು ಹೇಳಿ, ಪರಾವಲಂಬನ ಶಬ್ದಕ್ಕೆ ತತ್ತ್ವಮುಖದ ಇನ್ನೊಂದು ಅರ್ಥವಿರುವುದನ್ನು ಸೂಚಿಸಿದರು. ನಾವೆಲ್ಲ ಪರಾವಲಂಬಿಗಳು. ಪರ ನಮ್ಮನ್ನೆಲ್ಲಾ ನೋಡಿಕೊಳ್ಳುತ್ತಿದೆ. . . .ನಾನು

ಸ್ವಾವಲಂಬಿ ಎನ್ನುವವನ ಪಾಡು ಏನು ಎನ್ನುವುದನ್ನು ನಾನು ಹೇಳುವುದಿಲ್ಲ. ಪರ ಇಂಥ ಜೀವನಕ್ಕೆ ಈ ಅಹಂಕಾರ ಅಳಿಯುವಂತೆ ಪಾಠ ಕಲಿಸಿದ ಮಾತು ಪುರಾಣಗಳಲ್ಲಿ ಬಂದಿದೆ'' (ಭಾವ, ಭಾಗ ೨,ಪುಟ ೩೮೭-೮೮) ಸ್ವಾವಲಂಬನ ಪರಾವಲಂಬನ ಎಂಬೀ ಮಾತುಗಳನ್ನು ಸಂದರ್ಭೋಚಿತವಲ್ಲದ ರೀತಿಯಲ್ಲಿ ಬಳಸುವವರ ಮನೋಧರ್ಮವನ್ನು ತಿದ್ದಲು ಹೊರಟ ಮಾಸ್ತಿಯವರ ಅಂದಿನ ಮಾತು ಇಂದಿಗೂ ಅವಶ್ಯವಾದ ಬುದ್ಧಿವಾದ.

ಈ ಹೊತ್ತು ಕನ್ನಡದ ಗ್ರಂಥರಚನೆ, ಗ್ರಂಥ ಪ್ರಕಾಶನ ಹುಲುಸಾಗಿವೆ. ಬಹು ಪುಟಗಳ ಬಹು ಬೆಲೆಯ ಪುಸ್ತಕಗಳು ಪ್ರಕಟವಾಗುತ್ತಲಿವೆ. ಎರವಲು ತಂದೋದಿದ ಪುಸ್ತಕಗಳನ್ನು ''ಕೊಂಡಾಡುವ'' ಬಾಯಿ ಹೆಚ್ಚುತ್ತದೆ. ಶ್ರೀ ಜಿ.ಪಿ.ರಾಜರತ್ನಂ ಅವರ ಬಯಕೆಯಂತೆ ''ಕೊಂಡು ಆಡುವ'' ಅಳವು ಎಷ್ಟು ಜನಕ್ಕಿದೆ? ಹಣವಿದ್ದವರಿಗೆ ಪುಸ್ತಕದಲ್ಲಿ ಅಕ್ಕರೆಯಿಲ್ಲ. ಪುಸ್ತಕದಲ್ಲಿ ಅಕ್ಕರೆಯಿದ್ದವರಿಗೆ ಕೊಳ್ಳಲು ಕೈಯಲ್ಲಿ ಹಣ ಸಾಲದು. ಪ್ರಕಾಶಕರು ಕೈಸುಟ್ಟುಕೊಳ್ಳುವ ಸ್ಥಿತಿ ಈಗ ತಪ್ಪಿದೆಯೆ? ಇವೆಲ್ಲ ಇಂದಿಗೂ ಯಕ್ಷ ಪ್ರಶ್ನೆಗಳೇ. ಕನ್ನಡ ಪುಸ್ತಕಗಳ ಪ್ರಕಟವಂತೂ ಆಗುತ್ತವೆ. ಆದರೆ ಮಾರಾಟಕ್ಕೆ ಏರ್ಪಾಟು? ಈ ಅರ್ಥ ವ್ಯವಸ್ಥೆ ಹೇಗೆಂಬುದು ಬಹು ಜಟಿಲವಾದ ಪ್ರಶ್ನೆ. ಆದರೆ ಕನ್ನಡ ಲೇಖಕರಿಗೆ ಶುಭೋದಯವನ್ನು ಹಾರೈಸಿ ಮಾರ್ಗದರ್ಶನ ಮಾಡಿದ ಹಿರಿಯರಾದ ಮಾಸ್ತಿಯವರನ್ನೂ ಅವರಿಗೆ ಬೆಂಬಲ ನಿಂತ ಸ್ನೇಹಿತರನ್ನೂ ನೆನೆಯದಿರಬಹುದೆ? ತಳಪಾಯದಲ್ಲಿ ನಡೆದ ಕೆಲಸ ಯಾವಾಗಲೂ ಅರುಗಾಗಿಯೇ ಇರುತ್ತದೆ. ಹೊರಕ್ಕೆ ತೋರುವುದು ಮೇಲ್ಕಟ್ಟಡ, ಉಪ್ಪರಿಗೆ. ಅದರ ಅಡಿಯಲ್ಲಿ ಆದ್ಯರ ದೂರದೃಷ್ಟಿ, ಪರಿಶ್ರಮ, ಕಾತರತೆ ಅಡಗಿರುತ್ತವೆ.

ಈಗ ನಾನು ಮಾಸ್ತಿಯವರಿಗೆ ಸಲ್ಲಿಸಿದ ಪ್ರತ್ಯಕ್ಷ ಸೇವೆ- ನನಗೆ ತಕ್ಕಷ್ಟು ಪ್ರತಿಫಲ ಸಂದ ಸೇವೆ. ೧೯೪೬-೪೭ ರಲ್ಲಿ ನಾನು ಸ್ವಲ್ಪಕಾಲ ಅನಾರೋಗ್ಯ ನಿಮಿತ್ತ ವಿಶ್ರಾಂತಿಯಲ್ಲಿದ್ದೆ. ಹೊತ್ತು ಕಳೆಯುವುದು ಕಷ್ಟವಾಗಿತ್ತು. ಒಂದು ದಿನ ಮಾಸ್ತಿಯವರು ನನ್ನ ಯೋಗಕ್ಷೇಮವನ್ನು ವಿಚಾರಿಸಿ, ನನ್ನ ಸಂದರ್ಭವನ್ನು ತಿಳಿದು, ''ನನಗೊಬ್ಬ ಬರುದುಕೊಳ್ಳುವವರು ಬೇಕಾಗಿತ್ತು. ಹೇಳುವ ಕತೆ ಕಾದಂಬರಿ ಮನಸ್ಸಿನಲ್ಲಿ ಅಣಿಯಾಗಿವೆ. ನಾನೇ ಕುಳಿತು ಬರೆಯಲಾರೆ. ನೀನು ಹೇಗೂ ಬಿಡುವಾಗಿರುವೆಯಲ್ಲ. ಆರೇಳು ತಿಂಗಳು ಬಂದರೆ ಉಪಕಾರವಾಗುತ್ತದೆ'' ಎಂದರು. ಹೀಗೆ ವೃದ್ಧೋಪಸೇವೆಗೆ ಅಣಿಯಾಗಿದ್ದ ನನ್ನನ್ನು ಬರಮಾಡಿಕೊಂಡರು. ಪ್ರತಿ ದಿನವೂ ಮಧ್ಯಾಹ್ನ೩-೩೦ ರಿಂದ ೪-೩೦ ಅಥವಾ ೫ ರ ವರೆಗೆ ಅವರು ಹೇಳಿದ್ದನ್ನು ಬರೆದುಕೊಳ್ಳುವುದು ನನಗೆ ಇಷ್ಟವಾದ ಕಾಯಕವಾಯಿತು. ''ಭಾರತ ತೀರ್ಥ''ವನ್ನೂ ನಡುನಡುವೆ ೧೦-೧೨ ಸಣ್ಣಕತೆ ನೀಳ್ಗತೆಗಳನ್ನು ಕಡೆಗೆ ಧಾರವಾಹಿಯಾಗಿ ''ಚೆನ್ನಬಸವನಾಯಕ'' ಕಾದಂಬರಿಯನ್ನು ಬರೆಸಿದರು. ಒಂದೊಂದು ವಸ್ತುವಿಗೆ ಒಂದೊಂದು ಮನೋಧರ್ಮವಾಗಬೇಕು. ಹಾಗೆಯೇ ಕಥಾವಸ್ತು ಸಂದರ್ಭಗಳಿಗೆ ತಕ್ಕಂತೆ ಶೈಲಿ ಮಾರ್ಪಡಬೇಕು. ನನ್ನ ಇಲ್ಲಮೆಯಲ್ಲಿ ಅವರ ಚಿತ್ರಕ್ಕೆ ಬಿಡುವಿಲ್ಲ. ವಸ್ತು ಚಿಂತನ, ಭಾವಮಂಥನ, ತಕ್ಕ ಕಥನಶೈಲಿಯ ಯೋಚನೆ. ನಾನು ಬಂದೊಡನೆ ಎಂದೂ ವ್ಯರ್ಥ ಕಥಾಕಾಲಕ್ಷೇಪಕ್ಕೆ ಹೊತ್ತಿಲ್ಲ. ಹಿಡಿದ ಕೆಲಸವನ್ನು ಕೆಡಿಸುವ ಒಂದು ಮಾತೂ ಅಡ್ಡ ಹಾಯಲಿಲ್ಲ. ತದೇಕಚಿತ್ತ, ತನ್ಮಯವಾದ ಮಾತು. ನನ್ನೆದುರಿಗೆ ಕುಳಿತ ಮಾಸ್ತಿ, ನನಗೆ ಹೊರಗಡೆ ಪರಿಚಿತರಾದ ಸರಳ

ಮಾಸ್ತಿ ಇವರಲ್ಲ; ಕಾವ್ಯಯೋಗದಲ್ಲಿ ಕುಳಿತಾಗ ಮೂರ್ತಿ ಬೇರೆ ಬಗೆ. ಸುಮಾರು ಒಂದು ವರ್ಷದಲ್ಲಿ ಅವರು ನಾಗಾಲೋಟದಲ್ಲಿ ಕೃತಿ ರಚನೆ ಮಾಡಿದರು. ನನ್ನ ಲೇಖನಿ ಅವರ ಕಥನ ಗತಿಗೆ ಹೇಗೋ ಹೊಂದಿಕೊಂಡಿತು. ನಡನಡುವೆ ಕೇಳಿಸಿದ ಒಂದೊಂದು ಮಾತನ್ನು ಜ್ಞಾಪಿಸುವ ಚಪಲಕ್ಕೆ ಕಡಿವಾಣವಿಟ್ಟುಕೊಂಡೆ. ಅವರ ಕಥನ ಗತಿಯನ್ನು ನಿಲ್ಲಿಸಿದರೆ ಹೇಗೋ ಎಂದು ಮನಸ್ಸು ಅಳುಕಿತು. ಆಮೇಲೆ ಆ ಮಾತನ್ನು ಸೇರಿಸಿಕೊಳ್ಳಲಾದೀತು ಎಂದು ಎಡೆಬಿಟ್ಟು ಬರೆದುಕೊಳ್ಳುತ್ತ ಹೋದೆ. ನನಗೆ ಆಗ ವ್ಯಾಸರ ಮುಂದೆ ಕುಳಿತು ಮಹಾಭಾರತವನ್ನು ಬರೆದುಕೊಂಡ ಗಣಪತಿಯ ಕಥೆ ಜ್ಞಾಪಕಕ್ಕೆ ಬರುತ್ತಿತ್ತು. ''ತಡೆಬಡೆಯಿಲ್ಲದೆ ನಾನು ಬರೆದುಕೊಳ್ಳುವಂತೆ ನೀವು ಭಾರತವನ್ನೊರೆದರೆ ಬರೆದುಕೊಳ್ಳುತ್ತೇನೆ'' ಎಂದು ವಿಘ್ನೇಶ್ವರನು ಪಣವಿಟ್ಟು ಬರೆಯಲು ಕುಳಿತುಕೊಂಡನಂತೆ. ವ್ಯಾಸರಿಗೂ ಗಣಪತಿಗೂ ಆದಂಥ ಒಡಂಬಡಿಕೆಯೇನೂ ಮಾಸ್ತಿಯವರಿಗೂ ನನಗೂ ಆಗಲಿಲ್ಲ. ಆದರೆ ಲೇಖನಾವಸರದಲ್ಲಿ ಎಡೆಬಿಟ್ಟು ಮುನ್ನುಗ್ಗುವ ಉಪಾಯ ಹೊಳೆಯಿತಲ್ಲ, ಗೆದ್ದುಕೊಂಡೆ! ನನ್ನ ವ್ಯಾಸರಿಗೆ ನಾನು ಬರೆದದ್ದನ್ನು ತಿದ್ದುವಾಗ ಹೇಗೋ ಅಲ್ಲಲ್ಲಿ ತೆರವು ಕಾಣುತ್ತದೆ; ''ನ್ಯೂನಂ ಸಂಪೂರ್ಣತಾಂ ಯಾತಿ'' ಎಂದು ನಾನು ತೆಪ್ಪಗಿದ್ದೆ. ಆದರೆ ಅಂಥ ''ನ್ಯೂನ''ಗಳು ಹೆಚ್ಚಾಗಿರಲಿಲ್ಲವೆಂದು ನನ್ನ ನಂಬಿಕೆ. ಲಿಪಿಕಾರನನ್ನು ಅವರೇನೋ ಅಭಿನಂದಿಸಿ ಬೀಳ್ಕೊಟ್ಟರು. ಅವರ ಸೌಜನ್ಯ ದೊಡ್ಡದು.

ಹೀಗೆ ವೃದ್ಧರಾದ ಶ್ರೀ ಮಾಸ್ತಿಯವರಿಗೆ ನನ್ನ ಸೇವೆ ಸಲ್ಲಲು ಅವಕಾಶವಾಯಿತಲ್ಲ ಎಂದು ನನ್ನಲ್ಲಿ ಧನ್ಯತಾ ಭಾವ ತುಂಬಿಕೊಂಡಿತು. ಆಮೇಲೆ ವಿಧಿ ನನಗೆ ಬೇರೆಕಡೆ ಕಾಯಕವಿಟ್ಟದ್ದರಿಂದ, ನನ್ನ ಸೇವೆ ಈಗ ಅನ್ಯತ್ರ, ನಡೆಯುತ್ತಿದೆ.

ದಾಸಾನುದಾಸ ಶ್ರೀನಿವಾಸ

ಮ.ಗ.ಶೆಟ್ಟಿ

ನಾನು ಅಂಕೋಲೆಯ ಎಡ್ವರ್ಡ ಹೈಸ್ಕೂಲಿನಲ್ಲಿ ನಾಲ್ಕನೆಯ ವರ್ಗದ ವಿದ್ಯಾರ್ಥಿಯಾಗಿದ್ದಾಗ ಮಾಸ್ತಿ ಅವರು ಬರೆದ ''ಕೆಲವು ಸಣ್ಣ ಕತೆಗಳು'' ಎಂಬ ಪುಸ್ತಕ ನಮಗೆ ಪಠ್ಯ ಪುಸ್ತಕವಾಗಿತ್ತು. ಆಗ ನಾನು ಹದಿಮೂರು ವಸಂತಗಳನ್ನು ದಾಟಿ ಹದಿನಾಲ್ಕರಲ್ಲಿ ಕಾಲಿಕ್ಕುತ್ತಿದ್ದೆ. ರವೀಂದ್ರನಾಥರು ಹೇಳಿದ ಹಾಗೆ ಆ ಕಾಲವೆಂದರೆ ಇಂದಿನ ಅಂಗಿ ನಾಳೆಗೆ ಸಾಲದು ಎನ್ನುವಂತೆ ಶೀಘ್ರವಾಗಿ ಬೆಳೆಯುವ ಕಾಲ.

ನನ್ನ ಊರು ಗೋಕರ್ಣದ ಹತ್ತಿರದ ಬಂಕಿಕೋಡ್ಲು ಎಂಬ ಗ್ರಾಮ. ಹಳ್ಳಿಯಿಂದ ಬಂದ ನನಗೆ ರಂಗಪ್ಪನ ಹೊಸಹಳ್ಳಿ ನಮ್ಮ ಹಳ್ಳಿಯೇ ಇರಬೇಕು ಎಂದು ಭಾಸವಾಗುತ್ತಿತ್ತು. ಹೊಂಗೇನ ಹಳ್ಳಿಯ ಮಾರಕ್ಕನ ತೋಪಿನ ಮಾವಿನ ಕಾಯಿಯ ಹುಳಿಯಂತೆ ಬ್ರಹ್ಮರಂಧ್ರಕ್ಕೇರಿಸುವ ಮಾವಿನ ಕಾಯಿಯ ಹುಳಿ-ನಮ್ಮ ಊರಿನ ಮಾವಿನ ಕಾಯಿಯಲ್ಲಿಯೂ ಇತ್ತು. ಊಟಕ್ಕೆ ಎಲೆ ಇಲ್ಲದಿದ್ದಾಗ ಬೇಕಾದ ಆಕಾರದ ಎಲೆಯನ್ನು ಒದಗಿಸುವ ಕಮಲಗಳನ್ನು ಹುಡುಕಲು ಮಾಲೂರಿನಿಂದ ಬೇರಿಕೆಗೆ ಹೋಗುವ ರಾಜಮಾರ್ಗಕ್ಕೆ ಒಂದು ಮೈಲು ಎಡಕ್ಕೆ ಇರುವ ಸರಸ್ಸಿಗಾಗಲೀ, ಯಾವಾಗಲೂ ತಿಳಿನೀರಿನಿಂದ ತುಂಬಿದ ಮಾಸ್ತಿಯ ತಾವರೆ ಕೆರೆಗಾಗಲೀ ಹೋಗಬೇಕಾದ ಆವಶ್ಯಕತೆ ಇರಲಿಲ್ಲ. ನಮ್ಮೂರ ಕೆರೆಮನೆ ಪಟೇಲರ ಮನೆಯ ಹತ್ತಿರವೂ ಇತ್ತು. ಬಂಕಿಕೋಡು ಗ್ರಾಮಕ್ಕೂ ಮುಂಬಯಿಗೂ ಸಂಪರ್ಕ ಹೆಚ್ಚಿಗೆ ಇದ್ದುದರಿಂದಲೂ-ಸಾರಸ್ವತ ಸಮಾಜವು ಲೆಕ್ಕಣಿಕೆಯನ್ನು ಹಿಡಿದೇ ಹುಟ್ಟಿದುದರಿಂದಲೂ-ಇಂಗ್ಲಿಷು ಬೆರೆತ ಕನ್ನಡ ಮಾತನ್ನಾಡಲು ನಮ್ಮ ಊರಿನಲ್ಲಿ ಅನೇಕ ರಾಮರಾಯರ ಮಕ್ಕಳಿದ್ದರು. ಈ ಕಾಲದಲ್ಲಿ ತ್ರಿಕರಣ ಶುದ್ಧಿ ಇಲ್ಲದ ಜನ-ಹೆಣ್ಣು ಮಕ್ಕಳನ್ನು ಕಂಡಾಗ ಕುರ್ಚಿಯಿಂದ ಏಳದ ಜನ-ಎಲ್ಲ ಕಡೆಯಲ್ಲಿ ಇದ್ದಾರೆ.

ಈ ಪುಸ್ತಕ ಕಲಿಸಿದ ಉಪಾಧ್ಯಾಯರು ದಿವಂಗತ ಎಂ.ಎನ್. ಭಟ್ಟರು. ನಾಟಕ ನಿರ್ದೇಶನಕ್ಕೆ ಆ ಭಾಗದಲ್ಲೆಲ್ಲ ತುಂಬ ಪ್ರಶಸ್ತಿ ಪಡೆದ ವ್ಯಕ್ತಿಗಳು. ಅವರು ಯಾವ ಪಾಠವನ್ನು ಕಲಿಸಿದರೂ ಅದರಲ್ಲಿ ಓದು ಒಕ್ಕಾಲು ಇದ್ದರೆ ಹಾಸ್ಯ ಮುಕ್ಕಾಲು ಪಾಲು ಇತ್ತು. ಅಂಥವರ ಕೈಗೆ ರಂಗಪ್ಪನ ದೀಪಾವಳಿ, ರಂಗಪ್ಪನ ಕೋರ್ಟಶಿಪ್, ಒಂದು ಹಳೆಯ ಕತೆ, ವೆಂಕಟರಾಯನ ಪಿಶಾಚದಂಥ ಕತೆಗಳು ಸಿಕ್ಕರೆ ಕೇಳಬೇಕೆ? ವರ್ಗದಲ್ಲಿ ನಗು ತೆರೆ ತೆರೆ ತೆರೆಯಾಗಿ ಹರಿಯುತ್ತಿತ್ತು. ಈ ಶಿಕ್ಷಕರಿಗೆ ಹಿಮ್ಮೇಳವಾಗಿ ನಮ್ಮ ವರ್ಗದಲ್ಲಿ ಒಬ್ಬಿಬ್ಬ ಮದುವೆಯಾದವರೂ ಇದ್ದರು. ಇಂದಿನ ಹಾಗೆ ನಮ್ಮ ವರ್ಗದಲ್ಲಿ ಕೇವಲ ಚಿಕ್ಕ ಹುಡುಗರೇ ಇರಲಿಲ್ಲ. ಹೀಗೆ ಒಬ್ಬಿಬ್ಬರಾದರೂ ಸಂಸಾರದ ರುಚಿಯನ್ನು ಕಂಡವರಿದ್ದುದರಿಂದ ನಮಗೆ ಅರ್ಥವಾಗದಿದ್ದ ಸಂದರ್ಭದಲ್ಲಿ ಆ ಮಾತು ಅವರಿಗೆ ಅರ್ಥವಾಗಿ ಒಳಗೊಳಗೇ

ನಗಬೇಕೆಂದು ಅವರು ಮಾಡುತ್ತಿದ್ದ ಪ್ರಯತ್ನಗಳು ಅಯಶಸ್ವಿಯಾಗಿ ಮೀಸೆಯಿಂದ ಮುಚ್ಚಿದ ಬಾಯಿ ನಗುವಿನ ಹೊಳೆಯನ್ನು ಹರಿಯಿಸುತ್ತಿತ್ತು. ಆಗ ನಾವೂ ಅವರಿಗೆ ಸಹಾನುಭೂತಿ ಪೂರ್ವಕವಾಗಿ ಅರ್ಥವಾಗದಿದ್ದರೂ ನಗುತ್ತಿದ್ದೆವು.

ಹೀಗೆ ನನ್ನ ಮತ್ತು ಮಾಸ್ತಿ ಅವರ ಪರಿಚಯವಾದದ್ದು ಹದಿನಾಲ್ಕರ ಹರೆಯದಲ್ಲಿ. ಅವರು ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಉತ್ತರ ಕನ್ನಡದಲ್ಲಿ ಸಂಚಾರ ಮಾಡಿದಾಗ ಅವರ ಜೊತೆಗಿದ್ದು ತೀರ ಹತ್ತಿರದಿಂದ ನೋಡಿದ್ದೇನೆ. ಅವರ ತಿಳುವಳಿಕೆಯ ಮಾತಿಗಾಗಿ ಮನ ಸೋತಿದ್ದೇನೆ. ಅದಕ್ಕೂ ಹೆಚ್ಚಾಗಿ ಅವರು ಇಳಿದುಕೊಂಡ ಮನೆಯಲ್ಲಿ ಅಲ್ಲಿಯ ಮುದುಕರು, ಹೆಂಗಸರು, ಮಕ್ಕಳನ್ನು ಕಂಡು ಅವರೊಡನೆ ಹೊಂದಿಕೊಳ್ಳುವ ಆ ಮನೋಭಾವ ನನ್ನಲ್ಲಿ ಮತ್ಸರವನ್ನುಂಟುಮಾಡಿತ್ತು. ಸಾಹಿತಿಯಾಗಿ ಬದುಕುವುದರ ಜೊತೆಗೆ ಅವರ ಬದುಕಿನ ರೀತಿಯಲ್ಲಿಯೇ ಸಾಹಿತ್ಯವಿತ್ತು, ಸಂಸ್ಕೃತಿ ಇತ್ತು. ೧೯೫೮ರಿಂದ ಈಚೆಗಿನ ಹನ್ನೆರಡು ವರ್ಷಗಳಲ್ಲಿ - ಮುಂಬಯಿ, ಗುಜರಾತ, ಗೋವೆಯಲ್ಲಿ ಕಳೆದ ಐದಾರು ವರ್ಷಗಳನ್ನು ಬಿಟ್ಟು - ಬೆಂಗಳೂರಿನಲ್ಲಿ ಉಳಿದ ನಾಲ್ಕಾರು ವರ್ಷಗಳಲ್ಲಿ - ನಾನು ಅವರ ನೆರೆಯಲ್ಲಿಯೇ ಇದ್ದೇನೆ. ದಿನಾಲು ಅವರ ಮನೆಯ ಎದುರು ಸುಳಿದಾಡುವ ಗಾಳಿಯಲ್ಲಿ ಇದ್ದ ಸೌಜನ್ಯ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕೆಂದು ನಾನು ಮಾಡಿದ ಪ್ರಯತ್ನವೆಲ್ಲ ನಿಷ್ಫಲವಾಗಿದೆ. ನನ್ನ ಪರಿಚಿತರು, ಅವರನ್ನು ಕಾಣಲೆಳಸಿದಾಗ ಅನೇಕಸಲ ಅವರಲ್ಲಿಗೆ ಹೋಗಿದ್ದೇನೆ. ಭಾರತೀಯ ಸಂಸ್ಕೃತಿಯ ಪ್ರತೀಕವಾದ ಅವರ ಮನೆಯ ಜೀವನದಲ್ಲಿ ಕೆಲಹೊತ್ತು ಅಲೆದು ಧನ್ಯನಾಗಿದ್ದೇನೆ. ಅವರ ಜೀವದ ಜೀವನವಾದ 'ಜೀವನ'ವನ್ನು ಕೈಗೊಪ್ಪಿಸುವ ದಿನ ಅವರ ಮನೆಯಲ್ಲಿ ನಡೆದ ಸಮಾರಂಭದಲ್ಲಿ ನನ್ನ ಕಣ್ಣು ತೇವವಾಗಿದೆ.

ಈ ಲೇಖನಕ್ಕೆ ಒಂದು ಮಿತಿ ಇದೆ. ಅವರ ಕೆಲವು ಸಣ್ಣಕತೆಗಳ ಬಗ್ಗೆಯಾಗಲೀ, ಅವರ ಜೀವನದ ಬಗ್ಗೆಯಾಗಲೀ ನಾನು ಬರೆಯಲು ಹೊರಟಿಲ್ಲ. ಕೆಲವು ಸಣ್ಣಕತೆಯ ಪ್ರಸ್ತಾವನೆಯನ್ನು ಮುಕ್ತಾಯಗೊಳಿಸುತ್ತ ಇನ್ನು ಬರಲೇ ಎಂದು ಅಪ್ಪಣೆ ಕೇಳುವಾಗ ಅವರು ಬಳಸಿದ ಒಂದು ಶಬ್ದ - 'ದಾಸಾನುದಾಸ ಶ್ರೀನಿವಾಸ' - ಎಂಬುದರ ಪ್ರಾಸಕ್ಕಾಗಿ ಆಗ ನನ್ನ ಮನಸ್ಸು ಸೆಳೆದಿತ್ತು. ಈ ಶಬ್ದದ ಹಿನ್ನೆಲೆಯಲ್ಲಿ ಇದ್ದ ''ದೇಶಬಾಂಧವರ ದಾಸಾನುದಾಸ'' ಎಂಬುದನ್ನು ಮನನ ಮಾಡಿದಷ್ಟೂ ಈಗ ವಿಶೇಷ ಅರ್ಥವನ್ನು ಕೊಡುತ್ತದೆ; ನರುಗಂಪನ್ನು ಬೀರುತ್ತದೆ. ಅವರ ಮಾತುಗಳಿಂದಲೇ ಎತ್ತಿ ಬರೆಯುತ್ತಿದ್ದೇನೆ - ಬೆಲ್ಲದ ಗಣಪಗೆ ಬೆಲ್ಲದ ನೈವೇದ್ಯ ನೀಡುವವರ ಹಾಗೆ.

ಅವರು ಹುಟ್ಟುವ ಸಂದರ್ಭದಲ್ಲಿಯೇ ದೇವರು ಆ ಮನೆಗೆ ಎಲ್ಲ ದುಃಖಗಳನ್ನೂ ಕೊಟ್ಟು ಇನ್ನೇನೂ ಕೊಡಲು ಸಮರ್ಥನಾಗದೆ ಕೈಕಟ್ಟಿ ಕುಳಿತಿದ್ದ. ಅವರು ಹುಟ್ಟಿದ ಕಾಲಕ್ಕೆ ಅವರ ತಂದೆ ಅಧಿಕಾರವನ್ನು ಕಳೆದುಕೊಂಡಿದ್ದರು. ಅವರ ಒಬ್ಬ ಅಣ್ಣ ತೀರಿಕೊಂಡಿದ್ದ. ಅವರ ಮನೆತನ ಎಂದೂ ಕಾಣದ ಬಡತನವನ್ನು ತಬ್ಬಿತ್ತು.

ಆದರೆ ಮಾಸ್ತಿಯವರು ಸಂಪನ್ನರಾದ ಬಳಿಕ ಅವರು ತಮ್ಮ ಕುಟುಂಬದ ಯಾರನ್ನೂ ಮರೆಯಲಿಲ್ಲ. ''ನನ್ನ ಕೈ ಬೆರಳುಗಳು ಹಿರಿದು ಕಿರಿದು ಆಗಿದ್ದರೂ ಅದು ತನ್ನದೇ ಆಗಿರುವಂತೆ ನಮ್ಮ ಆಪ್ತರಲ್ಲಿ ಯಾರು ಕಿರಿಯರಾಗಿದ್ದರೂ ಅವರನ್ನು

ಒಂದು ಸಲ ತಾಯಿ ಇವರನ್ನು ಎತ್ತಿಕೊಂಡು ಬೀದಿಯಲ್ಲಿ ಹೋಗುತ್ತಿದ್ದಾಗ ಒಂದು ಬೆಕ್ಕು ಒಂದು ಕೋಳಿಯ ಮೇಲೆ ಹಾರಿ ಅದನ್ನು ಕಚ್ಚಿಕೊಂಡದ್ದು ಕೋಳಿ ಕೂಗಿಕೊಂಡದ್ದು ಅವರ ಮನಸ್ಸಿನ ಮೇಲೆ ತುಂಬ ಪರಿಣಾಮ ಮಾಡಿತು. ವಾಲ್ಮೀಕಿಗೆ ರಾಮಾಯಣ ಬರೆಯಲು ಇಂತಹದೇ ಒಂದು ಘಟನೆ ಪ್ರೇರೇಪಿಸಿತ್ತು. ಮಾಸ್ತಿಯವರು ರಾಮಾಯಣ ಬರೆದರು. ದೇಶದ ಉದ್ದಗಲಗಳನ್ನು ಸಂಚರಿಸಿ ಭಾಷಣ ಮಾಡಿದರು. ರಾಮಾಯಣವನ್ನೇ ಬದುಕಿಸಿದರು.

ತಾಯಿಯ ಇಳಿಯ ವಯಸ್ಸಿನಲ್ಲಿ ಅವಳನ್ನು ಬಿಟ್ಟು ಹೋಗುವುದು ಹೇಗೆ ಎಂದು ದೂರದ ಸ್ಥಳಗಳಿಗೆ ಭಾಷಣಕ್ಕೆ ಹೋಗುವುದನ್ನೂ ಬಿಟ್ಟುಬಿಟ್ಟರು.

ಮಾಸ್ತಿ ಅವರು ಒಂದೆಡೆಯಲ್ಲಿ ''ಎಷ್ಟು ಸಣ್ಣ ಬದುಕಾದರೂ ಅದರ ದೃಷ್ಟಿಯಿಂದ ಅದು ಬಹು ಮುಖ್ಯ; ಅದು ದೊಡ್ಡದಲ್ಲದಿರಬಹುದು, ನೆರೆಯ ಬದುಕು ದೊಡ್ಡದಿರಬಹುದು. ಆದರೂ ಆ ದೊಡ್ಡ ಬದುಕಿನ ಅನುಭವಕ್ಕಿಂತ ಈ ಸಣ್ಣ ಬದುಕಿಗೆ ತನ್ನ ಅನುಭವ ದೊಡ್ಡದಾಗಿರುತ್ತದೆ. ದೊಡ್ಡದಲ್ಲದಿದ್ದರೂ ಮುಖ್ಯವಾಗಿರುತ್ತದೆ. ನಿಜವಾಗಿ ನೋಡಿದರೆ ಎಷ್ಟು ಸಣ್ಣದಾದರೂ ಈ ಬದುಕು ಲೋಕದ ಬದುಕಿನಲ್ಲಿ ಒಂದು ಅಂಗ. ವಿಶ್ವದ ಜೀವನ ತನ್ನನ್ನು ತಾನು ನೋಡಿಕೊಳ್ಳುವುದಕ್ಕೆ ಈ ಕೋಟ್ಯಾಂತರ ಜೀವನದಲ್ಲಿ ಆಕಾರಗೊಂಡಿದೆ. ಅದರಲ್ಲಿ ಈ ಒಂದೊಂದು ಕಣವೂ ಒಂದು ಕೇಂದ್ರ. ಸೃಷ್ಟಿಯೆಲ್ಲಾ ಒಂದು, ಈ ಒಂದು ಬದುಕೇ ಒಂದು. ನಾನಿದ್ದರೆ ಮೂರು ಲೋಕವುಂಟು ಎಂಬ ಮಾತಿಗೆ ಇದೇ ಸಾಧುವಾದ ಅರ್ಥ'' ಎಂದಿದ್ದಾರೆ.

ಅವರು ಇದರ ಸಮರ್ಥನೆಗಾಗಿಯೋ ಏನೋ ಎನ್ನುವಂತೆ ಎಬ್ರಹಾಂ ಲಿಂಕನ್ನನ ಒಂದು ಮಾತನ್ನು ಉದಾಹರಿಸಿದ್ದಾರೆ. ಲಿಂಕನ್ ಒಂದು ಸಭೆಯಲ್ಲಿದ್ದಾಗ ಅವನನ್ನು ಕಂಡ ವೃದ್ಧೆಯೊಬ್ಬಳು ''ಇವನು ಎಂಥ ಸಾಮಾನ್ಯನಂತೆ ಕಾಣುತ್ತಾನೆ'' ಎಂದು ಉದ್ಗರಿಸುತ್ತಿದ್ದಳಂತೆ. ಆಗ ಲಿಂಕನ್ 'ಹೌದು ತಾಯೀ, ನಾನು ಬಹು ಸಾಮಾನ್ಯ. ಆದರೆ ದೇವರಿಗೆ ಇಂಥ ವ್ಯಕ್ತಿಯೆಂದರೆ ಬಹು ಇಷ್ಟವೆಂದು ಕಾಣುತ್ತದೆ. ಅವನು ಲೋಕದ ತುಂಬ ಇಂಥ ಜನವನ್ನೇ ಮಾಡಿದ್ದಾನೆ'' ಎಂದು ಹೇಳಿದನಂತೆ.

''ಸ್ವಾಮೀ, ಕತೆಯಲ್ಲಿ ಉಪಕತೆ ಹೇಳಲು ಇದೊಂದು ಹರಿಕಥೆಯಲ್ಲದಿದ್ದರೂ ದೇಶ ಬಾಂಧವರ ದಾಸಾನುದಾಸ ಎಂದು ಹೇಳಿಕೊಳ್ಳುವ ಮನೋಧರ್ಮದ ಹಿನ್ನೆಲೆಯಲ್ಲಿ ಈ ಹಿರಿಯ ಜೀವ ಯಾವ ಒಂದು ಸತ್ಯವನ್ನು ಕಂಡುಕೊಂಡಿದೆ'' ಎಂಬುದು ಈ ಮಾತಿನಿಂದ ವಿಶದವಾದೀತು ಎಂದು ಭಾವಿಸಿದ್ದೇನೆ.

ಅಧಿಕಾರದಲ್ಲಿದ್ದಾಗಲೂ ತನ್ನ ಮೇಲಿನ ಅಧಿಕಾರಿಗಳಿಗೆ 'ಜೀಯಹಸಾದ' ಎಂದವರಲ್ಲ. ಬಡವರಿಗೊಂದು ಬಲ್ಲಿದರಿಗೊಂದು ನೀತಿಯನ್ನು ಅನುಸರಿಸಿದವರಲ್ಲ. ಶೃಂಗೇರಿ ಮಠದ ಏಜಂಟನು ಮಠದ ಉತ್ಪನ್ನದ ಹತ್ತರಲ್ಲೊಂದು ಪಾಲು ನಿವೃತ್ತಿವೇತನ ಪಡೆದರೂ ಸಾಲ ಕೊಟ್ಟವರಿಂದ ಸರಿಯಾದ ಕಾಗದಪತ್ರಗಳನ್ನು ಮಾಡಿಸದೇ ಇದ್ದುದರಿಂದ, ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಉದ್ಯುಕ್ತರಾಗಿದ್ದರು. ಕಂದಾಯವನ್ನು ಕೊಡದಿದ್ದ ಚಿಕ್ಕಪುಟ್ಟ ರೈತರಿಗೆ ನೋಟೀಸು ಕೊಟ್ಟಹಾಗೆ ಮಂತ್ರಿಮಂಡಳದಲ್ಲಿ ಹೊಕ್ಕು ಬಳಕೆಯಿದ್ದ ದೈವುಳ್ಳವರೆನಿಸಿಕೊಂಡವರಿಗೂ ನೋಟೀಸು ಕೊಡಿಸಲು ಅವರು ಹಿಂದೆ ಮುಂದೆ ನೋಡಲಿಲ್ಲ. ಕೊಪ್ಪ ತಾಲೂಕಿನ ಒಂದು ಗ್ರಾಮದಲ್ಲಿ

ಪ್ರತಿವರ್ಷ ನಡೆಯುತ್ತಿದ್ದ ಉತ್ಸವವನ್ನು ಮೈಲೀಬೇನೆ ಬಂದ ಕಾರಣದಿಂದ ಊರಿನಲ್ಲಿ ರೋಗರುಜಿನ ಹಬ್ಬಬಾರದು ಎಂಬ ವಿಚಾರದಿಂದ ನಿಲ್ಲಿಸಿಯೇ ಬಿಟ್ಟರು. ದೊಡ್ಡ ಬೋರೇ ಮಠದ ವರಮಾನಕ್ಕಾಗಿ ನೆರಳಿಲ್ಲದ, ತಂಪಿಲ್ಲದ, ಬಿಸಿಲ ಬಯಲಲ್ಲಿ ನಡೆಯಿಸಬೇಕೆಂದಿದ್ದ ದನಗಳ ಜಾತ್ರೆಯನ್ನು ನಿಲ್ಲಿಸಿ ''ವರುವರುಷವೂ ಗಿಡಹಚ್ಚಿ ಮೂರು ನಾಲ್ಕು ವರ್ಷಗಳಲ್ಲಿ ತಂಪು ನಿರ್ಮಾಣ ಮಾಡಿ; ಬಳಿಕ ಮೂಕ ದನಗಳ ಜಾತ್ರೆ ಮಾಡುವಿರಂತೆ'' ಎಂದು ಆ ಜನಕ್ಕೆ ಹೇಳಿಬಿಟ್ಟರು.

ಚಿಕ್ಕಮಗಳೂರಿನ ಡೆಪ್ಯುಟಿ ಕಮೀಷನರ ಆದಾಗ ಪ್ರಪ್ರಥಮವಾಗಿ ಜಿಲ್ಲೆಯ ಸಮಸ್ಯೆಯನ್ನು ಚರ್ಚಿಸಲು ಪ್ರಮುಖರನ್ನೆಲ್ಲ ಕರೆದು ಅವರಿಗೆ ಉಪಹಾರದ ಏರ್ಪಾಟು ಮಾಡಿದರು. ಆಗ ಮುನ್ಸಿಪಲ್ ಕೌನ್ಸಿಲರ ಆಗಿದ್ದ ಓರ್ವ ಹರಿಜನ ತನ್ನಷ್ಟಕ್ಕೆ ತಾ ಒಂದೆಡೆಯಲ್ಲಿ ನಿಂತುದನ್ನು ಗಮನಿಸಿ ಅವನ ಬಳಿಯಲ್ಲಿಯೇ ಕುರ್ಚಿ ಹಾಕಿಸಿ ತಾನೂ ಕೂತು ಉಪಹಾರ ತೆಗೆದುಕೊಂಡರು. ಚಿಕ್ಕಮಗಳೂರಿನ ಕಾಫಿ ಕ್ಯೂರಿಂಗ ಕಂಪನಿ ಇವರ ಮುಂಧೋರಣೆಯ ಫಲ; ಯಾಕಂದರೆ ಅಂದು ಚಿಕ್ಕಮಗಳೂರಿನ ಕಾಫಿ ಕ್ಯುಲರ್ ಆಗಲು ಮಂಗಳೂರಿನ 'ಪಿಯರ್ಸ ಲೆಸ್ಲಿ' ಎಂಬ ಆಂಗ್ಲರ ಕಂಪನಿಗೆ ಹೋಗುತ್ತಿತ್ತು.

ಸರಕಾರದಲ್ಲಿದ್ದಷ್ಟು ಕಾಲ ದಾಕ್ಷಿಣ್ಯಪರರಾಗದೆ ಸೇವೆ ಸಲ್ಲಿಸಿ ಆತ್ಮಾಭಿಮಾನಕ್ಕೆ ಕುಂದುಬರುತ್ತದೆಂಬ ಭಾವನೆ ಕಂಡೊಡನೆಯೇ ನಿವೃತ್ತಿ ಹೊಂದಿದರು.

ಕನ್ನಡ ತಾಯ್ ನೋಟ:

ಅವರ ನಿವೃತ್ತಿ ನಂತರ ಕನ್ನಡ ಸಾಹಿತ್ಯ ಪರಿಷತ್ತಿಗೆ ಆರು ವರ್ಷಕಾಲ ಉಪಾಧ್ಯಕ್ಷರಾಗಿ ದುಡಿದು ಕನ್ನಡನಾಡಿನ ಮೂಲೆ ಮೂಲೆಯನ್ನೆಲ್ಲ ಸಂಚರಿಸಿ ಜಾಗ್ರತಿಮಾಡಿದರು; ಪರಿಷತ್ತಿನ ಸದಸ್ಯ ಸಂಪತ್ತನ್ನು ಹೆಚ್ಚಿಸಿದರು. ತಾನು ತಮಿಳು ಕನ್ನಡಿಗ ಎಂದಂದುಕೊಂಡು ಕರ್ನಾಟಕದಲ್ಲಿರುವ ಭಾಷಾ ಅಲ್ಪ ಸಂಖ್ಯಾತರು ಹೇಗೆ ನಡೆದು ಕೊಳ್ಳಬೇಕು ಎಂಬುದಕ್ಕೆ ಮಾದರಿಯಾಗಿ ಮೇಲ್ಪಂಕ್ತಿಯಾಗಿ ನಿಂತರು.

ಜೀವನ ಸಂಪಾದಕೀಯ:

ಧಾರವಾಡದಲ್ಲಿ ಬೇಂದ್ರೆ, ಗೋಕಾಕ, ಮುಗಳಿ ಅವರಿಂದ ಸ್ಥಾಪಿತವಾದ 'ಜೀವನ' ಮಾಸ ಪತ್ರಿಕೆ ಮಾಸ್ತಿ ಅವರ ಮಡಿಲಿಗೆ ಬಂದಿತು. ೧೯೫೧ ರಿಂದ ಈಚೆಗೆ ಹದಿನೈದು ವರ್ಷಗಳ ಕಾಲ ಬರೆದ ಸಂಪಾದಕೀಯಗಳನ್ನೆಲ್ಲ ಪುಸ್ತಕ ರೂಪದಿಂದ ೧೯೭೦ರಿಂದೀಚೆಗೆ ಪ್ರಕಟಪಡಿಸಿದರು. ಅವು ನಿವೃತ್ತ ಸರಕಾರಿ ಅಧಿಕಾರಿಯೊಬ್ಬ ಬರೆದ ಬರಹಗಳಾಗಿರದೆ ದೇಶಬಾಂಧವರ ಸತ್ವಶಾಲಿ ಮಾರ್ಗದರ್ಶಕರು ಬರೆದ ಬರಹಗಳಾಗಿವೆ. ಅವರು ಎಂದೋ ಬರೆದ ಮಾತು ಇಂದಿಗೂ ಸತ್ಯವಾಗಿವೆಯೆಂಬುದನ್ನು ಕೆಳಗಿನ ಕೆಲ ಅವತರಣಿಕೆಗಳಿಂದ ಸ್ಪಷ್ಟವಾಗುವುದು.

ಕನ್ನಡಕ್ಕೆ ಅಗ್ರ ಪಟ್ಟ:

ಎಲ್ಲ ಕೆಲಸವೂ ಕನ್ನಡದಲ್ಲಿ ನಡೆದರೆ ನಾವು ಭಾರತವರ್ಷದ ಭಾಗವಾಗಿರ ಬೇಡವೇ? ಲೋಕದೊಡನೆ ಸಂಬಂಧ ಇರಿಸಿಕೊಳ್ಳಬೇಡವೇ ಎಂದು ಕೇಳೋಣ ಬೇಡ. ಪ್ರಾಂತದ ಜೀವನಕ್ಕೆ ಕನ್ನಡವೇ ಸಾಧನ. ಭಾರತೀಯವಾದ ಜೀವನಕ್ಕೆ ಅವಶ್ಯವಾದ ಬೇರೆ

ಭಾಷೆಯನ್ನು ಬಳಸೋಣ; ಲೋಕದೊಂದಿಗೆ ಸಂಬಂಧ ಇರಿಸಿಕೊಳ್ಳುವುದಕ್ಕೆ ಬೇರೆ ಭಾಷೆಯನ್ನು ಇರಿಸಿಕೊಳ್ಳೋಣ.

ಈಗ ನಮ್ಮ ಕಲಿಕೆ ತಲೆಯನ್ನು ಕೆಳಗೆ ಹಾಗಿ ಕೈಗಳ ಮೇಲೆ ನಡೆಯುತ್ತಿರುವ ದೊಂಬನಂತೆ ನಡೆಯುತ್ತಿದೆ. ಕನ್ನಡ ಪ್ರಮುಖವಾಗಿ ಹಿಂದೀ ಇಂಗ್ಲಿಷ ಅದಕ್ಕೆ ನೆರವಾಗಿ ನಿಂತಾಗ ಅದು ಕಾಲ ಮೇಲೆ ನಡೆಯುತ್ತಿದೆ.

ಕಾಲ ಮೇಲೆ ನಡೆಯುವುದೇ ಸಹಜವಾದ ನಡೆ. ಕೈಯ್ಯಮೇಲೆ ನಡೆಯುವುದು ಸ್ವಲ್ಪ ಹೊತ್ತಿನ ಆಟ ಆಗಬಹುದು; ಬೇರೇನೂ ಆಗಲಾರದು. ಜೀವನ ಹೀಗೆ ಸಹಜವಾದಾಗ ಜನತೆಯ ಬಾಳು ಎಷ್ಟು ಚೆನ್ನವಾಗಬಹುದೆನ್ನುವುದನ್ನು ನೋಡುವುದಕ್ಕೆ ಬಹುಕಾಲ ಬೇಕಾಗುವದಿಲ್ಲ. ನಮ್ಮ ಕಣ್ಣೆದುರಿಗೇ ನಮ್ಮ ಜೀವನ ಸೊಗಸಾಗುತ್ತದೆ; ಜನತೆ ಪುಷ್ಟವಾಗುತ್ತದೆ, ಸಾರ್ವಜನಿಕವಾದ ಎಲ್ಲ ಕೆಲಸ ಮೈಗೂಡುತ್ತದೆ.

(ಡಿಸೆಂಬರ ೧೯೫೨)

ಪಶ್ಚಿಮದ ಮಾನಸ ಪುತ್ರರು:

ಇಂಗ್ಲಿಷು ಕಲಿತ ನಮ್ಮ ಜನರ ನಡೆಯನ್ನು ಕುರಿತು ಜಾನ್‌ವುಡ್ ರೋಫರು ತಮ್ಮ ಶಕ್ತಿ ಮತ್ತು ಪುಸ್ತಕದಲ್ಲಿ (Shakti and Shakta by Sri J.S. Woodroffe) ಹೇಳಿದ ಎಚ್ಚರಿಕೆಯ ಮಾತು ಗಮನಾರ್ಹವಾಗಿದೆ.

''ಭರತವರ್ಷದ ವಿದ್ಯಾವಂತ ಜನ ಮೊದಮೊದಲು ಸಂಪೂರ್ಣವಾಗಿ, ಆಮೇಲೆ ಬಹುಮಟ್ಟಿಗೆ, ತಮ್ಮ ಆಂಗ್ಲೇಯ ಗುರುವರ್ಗಕ್ಕೆ ಅಧೀನರಾಗಿದ್ದರು. ನಿಜವಾಗಿ ಆ ಆಂಗ್ಲರು ಇವರನ್ನು ಸೃಷ್ಟಿಸಿದರೆನ್ನಬೇಕು. ಇವರು ಅವರ ಮಾನಸಪುತ್ರರು. ಇವರ ತಿಳುವಳಿಕೆಯಲ್ಲಿ ಆಂಗ್ಲವಾದದ್ದು ಪಾಶ್ಚಾತ್ಯವಾದದ್ದು ಮಾತ್ರ ಸರಿ; ಹಿಂದೂ ಧರ್ಮತತ್ವ ಅವಿದ್ಯಾವಂತರಾದ ಹೆಂಗಸರಿಗೆ, ಹಳ್ಳಿಗರಿಗೆ, ದೇಶೀಯ ಪಂಡಿತರಿಗೆ ಯೋಗ್ಯ; ಆಂಗ್ಲ ವಿದ್ಯೆಯನ್ನು ಬಲ್ಲವರಿಗೆ ಪದಾರ್ಥವಲ್ಲ. ಆ ಆಂಗ್ಲ ಉಪಾಧ್ಯಾಯರ ಪ್ರಭಾವ ಪ್ರಬಲವಾಗಿದ್ದಾಗ ಇವರಿಗೆ ಅವರ ಮಾತು ವೇದವಾಕ್ಯ. ಅವರಿಗೆ ತಿಳಿದದ್ದು ಅತ್ಯಲ್ಪ ಇದ್ದಿರಬಹುದು. ಆದರೂ ಅವರು ವೇದವನ್ನು ಹುಚ್ಚರ ಮಾತೆಂದರೆ, ಉಪನಿಷತ್ತುಗಳನ್ನೂ ಕಡಿಮೆಯ ಬುದ್ಧಿಯ ನುಡಿಗಳು ಎಂದರೆ, ಸ್ಮೃತಿಪುರಾಣ ತಂತ್ರಗಳು ಹೀಗೆ ಹಾಗೆ ಎಂದರೆ, ಅವರು ಶಿಷ್ಯರಾದ ಈ ಜನ, ಎಲ್ಲೋ ಒಂದೊಂದು ಸಲ ಟೀಕೆ ಕಠಿಣವಾಯಿತೆಂದು ನಿವೇದಿಸಿದರೂ, ಮೊತ್ತದಲ್ಲಿ ಆ ಟೀಕೆಯೆಲ್ಲ ಸತ್ಯ ಎಂದು ಒಪ್ಪಿಕೊಳ್ಳುವರು.

(ಜೀವನ ಫೆಬ್ರವರಿ ೫೨)

ಆಡಳಿತದ ಭಾಷೆ:

''ಅಧಿಕಾರಿ, ಸೇವಕ, ಕಚೇರಿ, ಇಂಗ್ಲಿಷನ್ನು ವರಿಸಿದ್ದರಿಂದ ಜನ ತಮ್ಮ ಪ್ರಾರ್ಥನೆಗಳನ್ನು ಇಂಗ್ಲಿಷಿನಲ್ಲಿ ಸಲ್ಲಿಸಬೇಕಾಯಿತು. ಅವರಿಗೆ ಉತ್ತರ ಇಂಗ್ಲಿಷಿನಲ್ಲೇ ಹೋಗುವುದು ವಾಡಿಕೆಗೆ ಬಂದಿತು. ಅರ್ಜಿ ಕಳುಹಿಸುವುದಕ್ಕೆ ಲಾಯರುಗಳ ಸಹಾಯ, ಉತ್ತರವನ್ನು ಅರ್ಥಮಾಡಿಕೊಳ್ಳುವುದಕ್ಕೆ ಏನಿಲ್ಲವೆಂದರೂ ಅಷ್ಟು ಇಂಗ್ಲಿಷ ಬಲ್ಲವರ ಸಹಾಯ, ತೀರ ಅವಶ್ಯಕ ಆದ ಸ್ಥಿತಿ ಬಂಗಿತು.

ಇದು ನಮಗೆ ದಾಸ್ಯದಿಂದ ಒದಗಿದ ದುರ್ಗತಿ. ಇದರಿಂದಾದ ನಷ್ಟ ಅಷ್ಟಿಷ್ಟಲ್ಲ. ಮಹಾತ್ಮಾ ಗಾಂಧಿಯವರು ಈ ವಿಷಯದಲ್ಲಿ ಈ ಮಾತುಗಳನ್ನು ಅಪ್ಪಣೆ ಕೊಡಿಸಿದರು.

"We write to each other in faulty English and from this our M.As. are not free-It is worth noting that, by receiving English education, we have enslaved the nation. Hypocracy, tyranny etc. have increased; English knowing Indian have not hesitated to cheat and Strike terror into the people. Now, if we are doing anything for the people at all, we are paying only a portion of the debt due to them.

Is it not a painful thing, that if I want to go to a court of justice, I must employ the English langauge as a medium; that when I become a barrister, I may not speak my mother-tongue and that some one else should have to translate to me from my own langauge? Is not this absolutely absurd? Is it not a sign of slavery? Am I to blame the English for it or myself? It is we English knowing men, that have enslaved India. The curse of the nation will not rest not upon the English but upon us."

"We shall have to pay dearly for our continuous disregard of the mother tongue. The nation has suffered much by reason of it. It is the duty of the learned class to deliver the nation from the agony."

ಕೇಂದ್ರದೊಡನೆ ವ್ಯವಹಾರವಿದೆಯೆನ್ನುವುದಾಗಲಿ, ಟೈಪರೇಟರಬೇಕು ಎನ್ನುವುದಾಗಲೀ, ಆಡಳಿತ ಭಾಷೆ ಕನ್ನಡವಾಗಲು ಅಡ್ಡಿಯಾಗಬಾರದು.

(ಜೀವನ ಮೇ ೧೯೫೪)

ಹೊರಗಿನವರ ಸಹಾಯ:

ಪಂಚವಾರ್ಷಿಕ ಯೋಜನೆಗಾಗಿ ನಾವು ಅಮೆರಿಕದ ಸಹಾಯ ಪಡೆಯಲು ಹೊರಟಿದ್ದೇವೆ. "World Bank" ಬೇರೆ ನಮಗೆ ಸಾಲ ಕೊಡುತ್ತದೆ. ನಮ್ಮದಲ್ಲದ ಈ ಸಹಾಯದ ಹಣವನ್ನು ನಂಬಿ ನಾವು ಮುಂದುವರಿಯಲು ತೊಡಗಿದ್ದೇವೆ.

ದುಡಿಯುವ ಮನುಷ್ಯ ಭಿಕ್ಷೆ ತೆಗೆದುಕೊಳ್ಳಬಾರದು, ಅಮೆರಿಕ ನಮಗೆ ಕೊಡುವ ಸಹಾಯ ಭಿಕ್ಷೆಯ ಲಕ್ಷಣದ್ದಾದರೆ ಅದನ್ನು ತೆಗೆದುಕೊಳ್ಳುವುದರಲ್ಲಿ ನಾವು ನಮ್ಮ ಆತ್ಮವನ್ನು ಕಳೆದುಕೊಳ್ಳುತ್ತೇವೆ.

ಸರಕಾರದ ಹಣದ ಆಡಳಿತದಲ್ಲಿ ಎಚ್ಚರಿಕೆ ಮೇಲ್ವಿಚಾರಣೆ ಸಾಲದೆ ಹೋಗಿ ಲಕ್ಷ ಹಣ, ಕೋಟಿ ಹಣ ಈ ಮುನ್ನ ನಷ್ಟವಾದದ್ದುಂಟು. ಮೊತ್ತದಲ್ಲಿ ಅಧಿಕಾರಿ ವರ್ಗ, ವಿಚಾರಕ ವರ್ಗ ಸತ್ಯವಂತವಾಗಿದ್ದರೂ ಅಲ್ಲಲ್ಲಿ ಇರುವ ಅಸತ್ಯವಂತ ಅಧಿಕಾರಿ ವಿಚಾರಕರ ಸ್ವಾರ್ಥದಿಂದ ಸರ್ಕಾರದ ಯೋಜನೆಗಳಲ್ಲಿ ಬರಬಹುದಾದ ಲಾಭದ ಬಹುಭಾಗ ನಷ್ಟವಾಗುತ್ತದೆ.

ಸರಿಯಾದ ಕಾಲಕ್ಕೆ ಸಾಲದ ಕಂತುಗಳನ್ನು ಕೊಡದಿದ್ದರೆ ಬಡ್ಡಿಯ ದರ ಮತ್ತಷ್ಟು ಹೆಚ್ಚುತ್ತದೆಂದು ಕಾಣುತ್ತದೆ. ಇದನ್ನಂತೂ ಗಳಿಕೆಯಿಂದ ನಾವು ಸರಿತೂಗಿಸುವೆವೆನ್ನುವುದು ಬರಿಯ ಮಾತು.

ದೇಶ ಈ ಋಣದಿಂದ ಮುಕ್ತವಾಗುವುದು ಎಂದು? ಆಗುವುದು ಎಂತು?

ಹೊರಗಿನವರ ಪ್ರಭಾವ:

ಆಂಗ್ಲ ಮೇಲೆ ಇದ್ದ. ಅವನನ್ನು ಅಲ್ಲಿಂದ ನೂಕಿದೆವು ಎಂದುಕೊಂಡೆವು. ಅವನ ಸ್ಥಳಕ್ಕೆ ಈಗ ಅಮೆರಿಕನ್ ಬಂದಿದ್ದಾನೆ.

ಇದರ ಮೇಲೆ ಈ ಹೊರಗಿನಿಂದ ಬರುವ ಜನ ಎಷ್ಟು ಮಂದಿ? ಇವರು ಬರುವಂತೆ ಇದೆಷ್ಟು 'ಸೆಮಿನಾರ್' ಕಾನ್ಫರೆನ್ಸ? ಈ ಬಂದವರನ್ನೆಲ್ಲ ನಮ್ಮ ಸರಕಾರ ಅತಿಥಿಗಳಾಗಿ ಬೇರೆ ನೋಡಿಕೊಳ್ಳುತ್ತಿದೆಯಂತೆ. ಇದಕ್ಕೆಲ್ಲ ಎಷ್ಟು ಖರ್ಚು? ತೀರ ಅವಶ್ಯಕವಾದ ವೆಚ್ಚಕ್ಕೆ ಹಣವಿಲ್ಲವೆಂದು ಸಾಲ ತೆಗೆದುಕೊಳ್ಳುವ ರಾಷ್ಟ್ರ ಇಂಥ ಅನವಶ್ಯಕವಾದ ವೆಚ್ಚವನ್ನು ಮೇಲೆ ಹಾಕಿಕೊಳ್ಳಬೇಕೆ?

ನಾವು ಹೆಸರಿಗೆ 'ಡೆಮಾಕ್ರಸಿ,' ನಿಜದಲ್ಲಿ 'ಬ್ಯೂರಾಕ್ರೆಸಿ'. ಅಧಿಕಾರದಲ್ಲಿರುವ ಹತ್ತು ಜನ ತಮಗೆ ಸರಿದೋರಿದಂತೆ ಮಾಡಬಹುದು. ಅವರನ್ನು ತಡೆಯುವವರಿಲ್ಲ. ಹಿಂದೆ ಗವರ್ನರ ಜನರಲ್, ಕೌನ್ಸಿಲ್ ಮೆಂಬರ, ಮಹಾರಾಜ, ದಿವಾನ, ತಮ್ಮ ಇಷ್ಟವನ್ನು ನಡೆಸುತ್ತಿದ್ದರು. ಈಗ ಕೇಂದ್ರದ ಪ್ರಾಂತಗಳ ಮುಖ್ಯಮಂತ್ರಿಗಳು ತಮ್ಮ ಇಷ್ಟದಂತೆ ನಡೆಯುತ್ತಿದ್ದಾರೆ.

ದುರ್ವ್ಯಯ ದುರಾಚಾರ:

"Pre fabricated Houses Factory' ಎಂದು ಕೇಂದ್ರ ಸರಕಾರ ಆರಂಭಿಸಿದ ಕಟ್ಟಡಗಳ ಕಾರ್ಖಾನೆಯ ಅಧ್ಯಾಯ ಈ ಮಾತಿಗೆ ಒಂದು ನಿದರ್ಶನ.

ಜೀಪ್ ಕೊಂಡುಕೊಂಡ ವ್ಯವಹಾರ ಇದಕ್ಕೆ ಇನ್ನೊಂದು ನಿದರ್ಶನ. ಫರ್ಟಿಲೈಝರ್ಸ್ ವ್ಯವಹಾರ ಮೂರನೆಯದು.

ಸರಕಾರದ ವೆಚ್ಚದ ವಿಷಯಕ್ಕೆ ಆಂಗ್ಲರ ಆಡಳಿತದಲ್ಲಿ ಬೆಳೆದುಬಂದ ಕೆಲವು ಸೂತ್ರಗಳಿವೆ. ಯಾವ ವೆಚ್ಚಕ್ಕೂ ಆಯವ್ಯಯದ ಪಟ್ಟಿಯಲ್ಲಿ ಮೊದಲೇ ಒದಗಿದ ಹಣ ಇರಬೇಕು. ಒಂದು ಮಿತಿಗೆ ಹೆಚ್ಚಿದ ವೆಚ್ಚವನ್ನು ಮಂತ್ರಿಸಭೆ ಮಂಜೂರು ಮಾಡಬೇಕು. ಆಯವ್ಯಯದ ಪಟ್ಟಿಯಲ್ಲಿ ಹಣವಿದ್ದರೂ ಮಂತ್ರಿಸಭೆ ಮಂಜೂರು ಮಾಡಿದ್ದರೂ ಈ ಎರಡೂ ವಿವರವನ್ನು ಪರಿಶೀಲಿಸಿ ಕೋಶದ ಇಲಾಖೆ ಆ ವೆಚ್ಚ ಆಗುವುದನ್ನು ಒಪ್ಪಬೇಕು. ಆಮೇಲೆ ವೆಚ್ಚ ಆಗಬೇಕು.

ಈ ಎಲ್ಲ ಸೂತ್ರದ ಉದ್ದೇಶ ಒಬ್ಬನ ತಪ್ಪಿ ನಡೆದರೂ ಮತ್ತೊಬ್ಬನು ತಪ್ಪದೆ ನಡೆದಾನು, ಇಬ್ಬರು ಸೇರಿಕೊಂಡರೂ ಮೂರನೆಯವನು ತಡೆದಾನು, ಕೆಳಗಿನ ಅಧಿಕಾರಿ ದಾರಿ ತಪ್ಪಿದರೂ ಮೇಲಿನವನು ನೋಡಿಕೊಂಡಾನು ಎಂಬ ನಿರೀಕ್ಷೆ. ಪ್ರಜೆಗಳಿಂದ ಬಂದ ಕಾಸು ಅಧಿಕಾರಿ ವರ್ಗದ ಒಬ್ಬ ಅಯೋಗ್ಯ ಮನುಷ್ಯನ ಆಟದಿಂದ ಪೋಲಾಗಬಾರದು ಎನ್ನುವುದು ಏರ್ಪಾಡಿನ ಗುರಿ.

(ಜೀವನ ಮೇ ೧೯೫೩)

ದೇಶಬಾಂಧವರ ಪುರೋಭಿವೃದ್ಧಿಯನ್ನು ಗಮನದಲ್ಲಿಟ್ಟು ಮಾಸ್ತಿಯವರು ಆಡಿದರು, ದುಡಿದರು, ಮಾಡಿದರು. ನಮ್ಮೆಲ್ಲರ ಸುದೈವದಿಂದ ಮಾಸ್ತಿಯವರು ಎಲ್ಲ ಸಾಹಿತ್ಯ ಪ್ರಕಾರದಲ್ಲಿ ರಚನೆ ಮಾಡಿದುದಲ್ಲದೆ ತಮ್ಮ ವಿಚಾರವಾಗಿಯೂ ಎಲ್ಲ ವಿವರಗಳನ್ನು ಒದಗಿಸಿದ್ದಾರೆ. ಜನ ಅವನ್ನು ಓದಿ ಸಾಧ್ಯವಾದ ಮಟ್ಟಿಗೆ ಆಚರಣೆಯಲ್ಲಿ ತರಬೇಕಾದುದು ಅವರ ಕರ್ತವ್ಯ. ಆಗ ಮನೆ ಮನೆಯೂ ಮಾಂಗಲ್ಯದ ನಿಲಯವಾಗಿ ದೇಶ ಬಲಶಾಲಿಯಾಗುವುದು.

ಅಖಂಡ ಸ್ಫೂರ್ತಿ ಪಡೆದೆವು

ವಿ.ಕೃ. ಗೋಕಾಕ್

ಒಂದೊಂದು ಪೀಳಿಗೆ ತನ್ನ ಸಾಹಿತಿಗಳೊಡನೆ ಹುಟ್ಟಿ ಬರುತ್ತದೆ. ಬೇರೆ ಮಾಯೆ ಬಂದು ಜನತೆಯನ್ನು ಮೋಹಿಸುತ್ತದೆ. ಆಯಾ ಕಾಲಮಾನದ ಇಷ್ಟ-ಈಪ್ಸಿತಗಳ ಆವರಣದಲ್ಲಿ ಹೊಸ ಸ್ಪರ್ಧೆ-ಈರ್ಷೆಗಳು ಬೆಳೆದು ಬರುತ್ತದೆ. ಅದರ ಹಿಂದಿನ ಪೀಳಿಗೆಯ ಸ್ಪರ್ಧೆ-ಸಾಹಸಗಳು ಆಗ ತಾತ್ಕಾಲಿಕವಾಗಿ ಮರೆಯಾಗತೊಡಗುತ್ತವೆ.

ನನ್ನ ಚಿಕ್ಕಂದಿನ ಕಾಲ ಮಾಸ್ತಿಯವರ ಪೀಳಿಗೆಯ ಸಾಹಸ-ವೈಭವಗಳ ಪೀಳಿಗೆಯ ಕಾಲವಾಗಿತ್ತು. ಆಗ ಮಾಸ್ತಿಯವರ ಪ್ರತಿಭೆ ಹೆಜ್ಜೆ ಹೆಜ್ಜೆಗೆ ವಿಕಸಿತವಾಗುವ ರೀತಿಯನ್ನು ನೋಡಿ ನಾವು ಧನ್ಯರಾದೆವು. ಅವರ ಸಾಹಿತ್ಯ ಹಾಗೂ ಜೀವನದಿಂದ ಅಖಂಡ ಸ್ಫೂರ್ತಿಯನ್ನು ಪಡೆದೆವು.

ಪೀಳಿಗೆಯ ದೃಷ್ಟಿಯಿಂದ ಕಂಡ ಏಳಿಗೆ ಒಂದು ತರಹದ್ದಾದರೆ 'ಕಾಲ'ದ ದೃಷ್ಟಿ ಅದಕ್ಕೂ ಬೇರೆಯಾಗಿರುತ್ತದೆ. ಪೀಳಿಗೆಗಳು ಗತಿಸಿಹೋದ ಮೇಲೆ ಆ ಪೀಳಿಗೆಗಳ ಈರ್ಷೆ-ಸ್ಪರ್ಧೆಗಳೂ ಮಾಯವಾಗುತ್ತವೆ. ರಾಸಿಯನ್ನು ಒಕ್ಕುವ ಕೆಲಸ ಪ್ರಾರಂಭವಾಗಿ ಕಾಳು ಉಳಿಯುತ್ತದೆ. ಜೊಳ್ಳು ಅಳಿಯುತ್ತದೆ. ಇದನ್ನು ಗುರುತಿಸುವ ಕಾಲದೃಷ್ಟಿ ನಿರ್ವಿಕಾರದ ದೃಷ್ಟಿಯಾಗಿರುತ್ತದೆ.

ಹೀಗೆ ಉಳಿಯುವ ಕನ್ನಡದ ಬೀಜಗಾಳುಗಳಲ್ಲಿ ಮಾಸ್ತಿಯವರು ಒಂದು ಬೀಜಗಾಳೆಂದು ನಾನು ತಿಳಿದಿದ್ದೇನೆ. ವ್ಯಾಪಕ ಹಾಗೂ ತೇಜಸ್ವಿಯಾದ ಜೀವನ ದೃಷ್ಟಿ. ಅನುಭವದಲ್ಲಿ ಉಗಮಿಸಿದ ತತ್ವದರ್ಶನ ಜೀವನವನ್ನು ತಿಳಿಯಬೇಕೆಂಬ ದುರ್ದಮ್ಯ ಕುತೂಹಲ, ಸ್ಫೂರ್ತಿ-ವಿಮರ್ಶೆ-ಸ್ವವಿಮರ್ಶೆಗಳ ಸಮ್ಮಿಲನ, ಸಮರ್ಥ ಹಾಗೂ ಬಹುಮುಖವಾದ ಅಭಿವ್ಯಕ್ತಿ; ಬೀಜಗಳಾದ ಸಾಹಿತಿಯ ವ್ಯಕ್ತಿತ್ವದ ತಿರುಳಿನಲ್ಲಿ ಈ ಅಂಶಗಳೆಲ್ಲ ಸಮಾವಿಷ್ಟವಾಗಿರುತ್ತವೆ. ಇಂತಹ ಸಾಹಿತಿ ಬರಿ ಒಂದು ಪೀಳಿಗೆಯವನಲ್ಲ. ಒಂದು ಜನಾಂಗದ ಸಾಹಿತ್ಯದ ಇತಿಹಾಸದಲ್ಲಿಯೇ ಅವನಿಗೆ ಶಾಶ್ವತ ಸ್ಥಾನವಿರುತ್ತದೆ. ಕಾಲನೇ ಈ ನಿರ್ಣಯವನ್ನು ಕೊಡಬಲ್ಲ. ನಿರ್ವಿಕಾರ ವಿಮರ್ಶೆ ಮುಂದೆ ಬರುವ ನಿರ್ಣಯವನ್ನು ಗುರುತಿಸಬಲ್ಲದು.

ನೆನಪಿನ ಗಣಿಯಿಂದ

ಹಾ.ಮ. ನಾಯಕ

ನನ್ನ ಹತ್ತಿರದ ಬಂಧುಗಳಿಗೆ ಮಾಸ್ತಿಯವರು ಕುಟುಂಬ ಸ್ನೇಹಿತರಾಗಿದ್ದುದರಿಂದ ನನಗೆ ಮಾಸ್ತಿಯವರೊಡನೆ ಮೂರು ದಶಕಗಳಿಗೂ ಮಿಕ್ಕಿದ ಪರಿಚಯ. ಏಳೆಂಟು ವರ್ಷಗಳ ಹುಡುಗನಾಗಿದ್ದಾಗ ನಾನು ಅವರನ್ನು ಮೊದಲಬಾರಿಗೆ ಕಂಡದ್ದು. ಆಮೇಲೆ ನಾನು ಅವರಲ್ಲಿಗೆ ಅನೇಕ ಸಲ ಹೋಗಿದ್ದೇನೆ; ಅವರು ನಮ್ಮಲ್ಲಿಗೆ, ನಮ್ಮ ಬಂಧುಗಳಲ್ಲಿಗೆ ಹಲವು ಸಲ ಬಂದಿದ್ದಾರೆ; ಸಭೆ ಸಮಾರಂಭಗಳಲ್ಲಿ ಬೇಕಾದಷ್ಟು ಸಲ ಕಲೆತಿದ್ದೇವೆ. ಆ ಸಂದರ್ಭಗಳನ್ನೆಲ್ಲ ನೆನಪಿಸಿಕೊಳ್ಳುವುದೇ ಬದುಕಿನ ಒಂದು ಸಂತೋಷ. ಪ್ರತಿ ಸಲವೂ ಮನಸ್ಸಿನ ಎದುರು ಮೂಡುವ ಮಾಸ್ತಿಯವರ ಚಿತ್ರ- ಅತ್ಯುತ್ತಮ ಸಾಂಸ್ಕೃತಿಕ ಮೌಲ್ಯಗಳ ಒಂದು ಮಧುರ ಮಿಶ್ರಣ. ಅವರು ಮಾನವೀಯತೆಯ ಪ್ರತಿರೂಪ.

ಈ ಘಳಿಗೆಯಲ್ಲಿ ನೆನಪಾದ ಒಂದೆರಡು ಪ್ರಸಂಗಗಳನ್ನು ಇಲ್ಲಿ ದಾಖಲಿಸಿದ್ದೇನೆ.

೧

ಬೆಂಗಳೂರಿನಲ್ಲಿ ಒಂದು ಸಾಹಿತ್ಯಕ ಸಮಾರಂಭ. ಅದು ಮುಗಿದಮೇಲೆ ವೇದಿಕೆಯ ಬಳಿಯಿದ್ದ ಮಾಸ್ತಿಯವರನ್ನು ಮಾತಾಡಿಸಿಕೊಂಡು ಬರಲು ಹೋದೆ. ಅವರ ಪಕ್ಕದಲ್ಲಿ ಡಿ.ಸಿ. ಸುಬ್ಬರಾಯಪ್ಪನವರಿದ್ದರು. ನನಗೆ ಅವರ ಪರಿಚಯವಿರಲಿಲ್ಲ. ''ನಮ್ಮ ಸುಬ್ಬರಾಯಪ್ಪನವರ ಪರಿಚಯವಿಲ್ಲವೆ?'' ಎಂದು ಮಾಸ್ತಿ ಆಶ್ಚರ್ಯ ವ್ಯಕ್ತಪಡಿಸಿದರು. ''ಇಲ್ಲ'' ಎಂದು ನಾನು ಸಂಕೋಚಪಟ್ಟೆ. "I am an old man" ಎಂದರು ಸುಬ್ಬರಾಯಪ್ಪ. ಅವರಿಗೂ ಒಂದು ಬಗೆಯ ಸಂಕೋಚ. ಮಾಸ್ತಿಯವರು ಹೇಳಿದರು: "True, we are old. But you know, Mr. Subbarayappa is a grand old man."

೨

ಹೆಣ್ಣು ಮಕ್ಕಳ ಹೂವಿನ ಆಸೆಯನ್ನು ಕುರಿತು ಮಾಸ್ತಿಯವರು ನನ್ನ ಹೆಂಡತಿಗೆ ಹೇಳಿದ ಒಂದು ಪ್ರಸಂಗ:

ಒಮ್ಮೆ ಬಂಧುಗಳೊಬ್ಬರು ಅವರ ಮಗಳನ್ನು ಕರೆದುಕೊಂಡು ಮಾಸ್ತಿಯವರ ಮನೆಗೆ ಬಂದರು. ಸಂದರ್ಭ- ಆ ಚಿಕ್ಕ ಹುಡುಗಿಯ ಮದುವೆ ಏರ್ಪಾಡು.

ಮಾಸ್ತಿಯವರಿಂದ ಅವರು ಯಾರಿಗೋ ಒಂದು ಮಾತು ಹೇಳಿಸಬೇಕಾಗಿತ್ತು. ಮಾತು ಮುಗಿಸಿಕೊಂಡು ಮಗಳನ್ನು ಕರೆದುಕೊಂಡು ಬಂದವರು ಹೊರಟರು. ಅಂಗಳದ ಬಾಗಿಲು ದಾಟುವಾಗ ತಂದೆ ಮಗಳು ಏನೋ ಗುಟ್ಟಾಗಿ ಮಾತಾಡುವುದು ಮಾಸ್ತಿಯವರಿಗೆ ಕೇಳಿಸಿತು. ಹುಡುಗಿಯ ಮುಖದಲ್ಲಿ ದೈನ್ಯ; ತಂದೆಯ ಮುಖದಲ್ಲಿ ಕೋಪದ ಛಾಯೆ. ಬಹುಶಃ ಹುಡುಗಿ, ಮಾತುಕಥೆಯಾಗುತ್ತಿರುವ ಸಂಬಂಧವನ್ನು ಏನೋ ಕಾರಣದಿಂದ ಒಲ್ಲೆನೆಂದು ಹೇಳುತ್ತಿದ್ದಾಳೆಂದು ಮಾಸ್ತಿಯವರಿಗೆ ಅನುಮಾನ. ''ಏನು?'' ಎಂದು ವಿಚಾರಿಸಿದರು. ''ಏನೂ ಇಲ್ಲ. ಹುಚ್ಚುಹುಡುಗಿ'' ಎಂದು ಆ ಬಂಧುಗಳು ಬಾಗಿಲು ದಾಟತೊಡಗಿದರು. ತಮ್ಮ ಸಂಭಾಷಣೆ ಮಾಸ್ತಿಯವರ ಕಿವಿಯನ್ನೂ ಮುಟ್ಟಿತಲ್ಲ ಎಂದು ಅವರಿಗೆ ಕೋಪ ಇನ್ನೂ ಹೆಚ್ಚಾಯಿತು. ಮಾಸ್ತಿಯವರು ಬಿಡಲಿಲ್ಲ. ಅವರ ಹಿಂದೆಯೇ ಹೋಗಿ ಅದು ಏನು ವಿಚಾರವೆಂದು ಒತ್ತಾಯಮಾಡಿ ಕೇಳಿದರು. ಹುಡುಗಿಯ ತಂದೆ ಅಂಗಳದಲ್ಲಿದ್ದ ಸಂಪಿಗೆ ಮರದ ಕಡೆ ನೋಡುತ್ತಾ ಸಂಕೋಚಪಟ್ಟು ಹೇಳಿದರು: ''ನೋಡಿ ಅಲ್ಲಿ ಹೂಗಳಿವೆ. ನನಗೆ ನಾಲ್ಕು ಹೂ ಕೀಳಿಸಿಕೊಡು ಎಂದು ಕೇಳುತ್ತಿದ್ದಾಳೆ. ಏನು ಮಾಡುವುದು ಈ ಮಕ್ಕಳಿಗೆ?''. ಮಾಸ್ತಿಯವರು ಅವರನ್ನು ಮತ್ತೆ ಒಳಗೆ ಕರೆದು ಕೂರಿಸಿ, ಹೂ ಕೀಳಿಸಿ ಆ ಹುಡುಗಿಯ ಮನಸ್ಸನ್ನು ಸಂತೋಷಪಡಿಸಿ ಕಳಿಸಿದರು. (ಈ ಪ್ರಸಂಗವನ್ನು ಮಾಸ್ತಿಯವರು ತಮ್ಮ ಆತ್ಮಕಥೆಯಲ್ಲೂ ನಿರೂಪಿಸಿದ್ದಾರೆ.)

೩

೧೯೬೭ರಲ್ಲಿ ಮೈಸೂರಿನ ನಾಗರೀಕರು ತಮ್ಮನ್ನು ವಿಶೇಷವಾಗಿ ಸನ್ಮಾನಿಸಲು ಏರ್ಪಡಿಸಿದ್ದ ಸಮಾರಂಭದಲ್ಲಿ ಭಾಗವಹಿಸಲು ಬಂದಿದ್ದಾಗ ಮಾಸ್ತಿಯವರು ತಮ್ಮ ಶ್ರೀಮತಿಯರೊಡನೆ ನಮ್ಮ ಮನೆಗೂ ಬಂದಿದ್ದರು. ಬಿಡುವಿಲ್ಲದ ಕಾರ್ಯಕ್ರಮ. ಆದರೂ ಇದಕ್ಕಾಗಿ ಅರ್ಧಘಂಟೆ ಮೀಸಲು. ಮಾಸ್ತಿಯವರನ್ನು ಸ್ವಾಗತಿಸಲು ನನ್ನ ಮಕ್ಕಳು ಹೊರಗೆ ಬಂದಾಗ ಶ್ರೀಮತಿ ಪಂಕಜಮ್ಮನವರು ಮಾಸ್ತಿಯವರ ಕಿವಿಯಲ್ಲಿ ಉಸುರಿದರು: ''ಹಣ್ಣು ತಿಂಡಿ ಏನೂ ತರದೆ ಬರಿಗೈಲಿ ಬಂದುಬಿಟ್ಟಿದ್ದೇವಲ್ಲ!'' ಮಾಸ್ತಿಯವರು ಅವರನ್ನು ಸಮಾಧಾನ ಪಡಿಸಿದರು: ''ಏನು ಮಾಡೋಣ. ಹೋಗಲಿ ಬಿಡಿ. ಇನ್ನೊಂದು ಸಲ ಬರುವಾಗ ತಿಂಡಿ ತೆಗೆದುಕೊಂಡು ಬರೋಣ''. ಈ ಕಾರಣಕ್ಕಾಗಿ ಸಂಕೋಚಪಡಬಾರದೆಂದು ನಾನು ಶ್ರೀಮತಿ ಪಂಕಜಮ್ಮನವರನ್ನು ಪ್ರಾರ್ಥಿಸಿದೆ. ಫಲ ತಾಂಬೂಲ ತೆಗೆದುಕೊಳ್ಳುತ್ತಾ ಮತ್ತೆ ಅವರು ಹೇಳಿದರು: ''ಮಕ್ಕಳಿರುವ ಮನೆಗೆ ನಾವು ಬರಿಗೈಲಿ ಬಂದು, ಹಣ್ಣನ್ನು ತೆಗೆದುಕೊಂಡು ಹೋಗುತ್ತಿದ್ದೇವಲ್ಲಾ''. ಮಾಸ್ತಿಯವರು ಮತ್ತೊಮ್ಮೆ ಅವರನ್ನು ಸಮಾಧಾನಪಡಿಸಿದರು.

ಕೆಲಕಾಲದ ನಂತರ ಮತ್ತೆ ಬೆಂಗಳೂರಿನಲ್ಲಿ ಶ್ರೀ ದೇಜಗೌ ಅವರನ್ನು ಅಭಿನಂದಿಸಲು ಏರ್ಪಾಡಾಗಿದ್ದ ಒಂದು ಸಮಾರಂಭದ ಕೊನೆಯಲ್ಲಿ ಮಾಸ್ತಿಯವರನ್ನು ನೋಡಿದೆ. ಅಷ್ಟರಲ್ಲಿ ಶ್ರೀಮತಿ ಪಂಕಜಮ್ಮನವರು ತೀರಿಹೋಗಿದ್ದರು. ಮಾಸ್ತಿಯವರ ಬದುಕಿನಲ್ಲಿ ದೊಡ್ಡ ಆಘಾತವಾಗಿತ್ತು. ನನ್ನನ್ನು ನೋಡಿದ ಮಾಸ್ತಿಯವರು ಗುಂಪಿನಿಂದ ಈಚೆ ಬಂದರು. ನಮಸ್ಕಾರ ಹೇಳಿ ಆರೋಗ್ಯ ವಿಚಾರಿಸಿದೆ. ಅವರು ನನ್ನನ್ನು ಪಕ್ಕಕ್ಕೆ ಕರೆದು

ಬೆನ್ನಮೇಲೆ ಕೈ ಹಾಕಿಕೊಂಡು ನನ್ನ ಹೆಂಡತಿ ಮಕ್ಕಳ ಆರೋಗ್ಯ ವಿಚಾರಿಸಿದರು. ಕೊನೆಗೆ ಜೇಬಿನಿಂದ ಹತ್ತು ರೂಪಾಯಿನ ನೋಟು ತೆಗೆದುಕೊಡುತ್ತಾ ಹೇಳಿದರು: ''ಇದರಲ್ಲಿ ನಿಮ್ಮ ಮಕ್ಕಳಿಗೆ ಹಣ್ಣು ತಿಂಡಿ ತೆಗೆದುಕೊಂಡು ಹೋಗಿ ಕೊಡಿ. ಕಳೆದ ಸಲ ನಿಮ್ಮ ಮನೆಗೆ ಬಂದಾಗ, ಇನ್ನೊಂದು ಸಲ ಹಣ್ಣು ತಂದುಕೊಡುವುದಾಗಿ ಮಕ್ಕಳಿಗೆ ಹೇಳಿದ್ದೆ. ಬಹುಶಃ ಹಾಗೆ ಮಾಡಲು ಆಗಲಾರದು. ತಪ್ಪು ತಿಳಿಯಬೇಡಿ. ಇದು ನನ್ನ ದುಡ್ಡು. ಇದರಿಂದಲೇ ನೀವು ಹಣ್ಣು ಕೊಂಡುಕೊಳ್ಳಬೇಕು. ಹಾಗೆ ಮಾಡಿದರೇ ನನಗೆ ಸಮಾಧಾನವಾಗುತ್ತದೆ.''

ನನ್ನ ಬೆನ್ನು ತಟ್ಟಿ ಮಾಸ್ತಿಯವರು ನಕ್ಕರು. ಆದರೆ ನನ್ನ ಹೃದಯ ತುಂಬಿ ಹೋಯಿತು; ಕಣ್ಣಿನಲ್ಲಿ ನೀರು ತುಳುಕಿತು; ಗಂಟಲು ಕಟ್ಟಿಕೊಂಡಿತು; ಸುತ್ತಲಿದ್ದವರು ಯಾರೂ ನನಗೆ ಕಾಣಿಸುತ್ತಿರಲಿಲ್ಲ. ಕಾಣುತ್ತಿದ್ದುದು ಮಾಸ್ತಿಯವರ ಅಂತಃಕರಣ ಮಾತ್ರವಾಗಿತ್ತು.

ನಾ ಕಂಡ ಕನ್ನಡದ ಆಸ್ತಿ

ಸುರೇಂದ್ರ ದಾನಿ

ನಾನವರನ್ನು ಪರಿಚಯ ಮಾಡಿಕೊಳ್ಳುವ ಉದ್ದೇಶದಿಂದ ಭೇಟಿಯಾದದ್ದು ಅದೇ ಮೊದಲ ಸಲ. ಅದಕ್ಕೂ ಮೊದಲು ಎರಡು ಮೂರು ಸಲ ಭೇಟಿಯಾಗಿರಬಹುದು. ಅದು ನನಗೇನೋ ನೆನಪಿನಲ್ಲಿದೆ. ಆದರೆ ಅವರು ನೆನಪಿಡುವ ಅಗತ್ಯವಿರಲಿಲ್ಲ. ಆದರೂ ಅವರು ನನ್ನ ಪರಿಚಯದ ಪ್ರಥಮ ಭೇಟಿಯಲ್ಲಿಯೇ ನನ್ನೊಡನೆ ತೋರಿಸಿದ ವಿಶ್ವಾಸ ಆಶ್ಚರ್ಯಕರವಾಗಿತ್ತು.

ದೊಡ್ಡವರ ಮನೆಯ ದೊಡ್ಡಸ್ತಿಕೆಯ ಜಂಬವೇನೂ ಇಲ್ಲದ ಸರಳ ಶಾಂತವಾತಾವರಣದ ಆ ಮನೆ. ಪಡಸಾಲೆಯನ್ನು ದಾಟಿ ಹೋಗಿ ನಡುಮನೆ ಪ್ರವೇಶಿಸಿದರೆ ಅಲ್ಲಿಯೇ ಪಕ್ಕಕ್ಕೆ ಒಂದು ಪರದೆ ಇಟ್ಟು ಪ್ರತ್ಯೇಕಿಸಲ್ಪಟ್ಟ ''ದಿವಾನ ಖಾನೆ''. ಶ್ರೀ ಮಾಸ್ತಿ ಅವರು ಎಲ್ಲರನ್ನೂ ಭೇಟಿ ಮಾಡುವದು ಬಹುಶಃ ಇಲ್ಲಿಯೇ ಎಂದು ತೋರುತ್ತದೆ. ಹೌದು. ಅವರು ಯಾರನ್ನೂ ತಲೆಬಾಗಿಲಲ್ಲೇ ಭೇಟಿ ಮಾಡಿ ಮಾತಾಡಿ ಕಳಿಸುವದಿಲ್ಲ. ಎಲ್ಲರನ್ನೂ ನಡುಮನೆಯವರೆಗೆ ಒಳಮನೆಯವರೆಗೆ ಸ್ವಾಗತಿಸುತ್ತಾರೆ. ಮನದಲ್ಲೂ ಹಾಗೇ. ಹೊರಗಿನಿಂದ ಹೊರಗೇ ಯಾರನ್ನೂ ದಾಟಿಸುವದಿಲ್ಲ. ಎಲ್ಲರೂ ಮನಸ್ಸಿನ ದಿವಾನಖಾನೆಯನ್ನು ಪ್ರವೇಶಿಸಲೇಬೇಕು. ಅಲ್ಲಿ ವಿಶ್ರಮಿಸಿ ಆತಿಥ್ಯ ಸ್ವೀಕರಿಸಲೇಬೇಕು. ಮಾಸ್ತಿಯವರ ಮನೆ ದೊಡ್ಡದಾಗಿ ಕಾಣುವಂತೆ ಅವರ ಮನ ಅದಕ್ಕಿಂತ ದೊಡ್ಡದೆಂಬ ಅನುಭವ ಬರುತ್ತದೆ. ಇದು ಎಲ್ಲರೊಡನೆ ಬರುವ ಅನುಭವವಲ್ಲ.

ಉಭಯ ಕುಶಲೋಪರಿ ಮಾತುಗಳು ಆದ ಮೇಲೆ ನಾನು ಬಂದ ಉದ್ದೇಶ ಅವರಿಗೆ ವಿವರಿಸಿದೆ. ಅವರ ಜೀವನ ಪತ್ರಿಕೆ ಪೂರ್ಣ ನಿಂತು ಹೋಗಿತ್ತು. ಅವರ ಲೇಖನಗಳ ಪ್ರಕಟಣೆಗೆ ಅವರದೇ ಆದ ವೇದಿಕೆ ಇರಲಿಲ್ಲ. ನಮ್ಮ ಪತ್ರಿಕೆಯ ಸೇವೆ ಸ್ವೀಕರಿಸಬೇಕೆಂದು ನಾನವರನ್ನು ಭಿನ್ನವಿಸಿಕೊಂಡೆ.

ಅದಕ್ಕವರು ತಕ್ಷಣ ಒಪ್ಪಲಿಲ್ಲ. ''ನಾನು ಯಾವ ಪತ್ರಿಕೆಗೂ ಬರೆಯುವದಿಲ್ಲ. ದುಡ್ಡಿನ ಪ್ರಶ್ನೆ ಮಹತ್ವದ್ದಲ್ಲ. ಇಷ್ಟು ದಿನಗಳವರೆಗೆ ನನ್ನದೊಂದು ಪತ್ರಿಕೆ ಇತ್ತು. ಈಗ ಏನು ಮಾಡಬೇಕೆಂಬುದನ್ನು ನಾನು ನಿರ್ಧರಿಸಿಲ್ಲ. ಪತ್ರಿಕೆಗಳಿಗೆ ಬರೆಯುವದೇ ಆದಲ್ಲಿ ನಿಮ್ಮ ಪತ್ರಿಕೆಗೇ ಬರೆಯುತ್ತೇನೆ'' ಎಂದು ಹೇಳಿದರು.

ಸಾಮಾನ್ಯವಾಗಿ ದೊಡ್ಡವರು ಮಾತಾಡುವ ಒಕ್ಕಣಿಕೆಯೇ ಇದು. ನೇರವಾಗಿ ಇಲ್ಲವೆನ್ನುವ ಒರಟುತನ ತೋರಿಸುವದಿಲ್ಲ. ಮಾಸ್ತಿಯವರಂತೂ ಸೌಜನ್ಯ ಸವಿ ಮಾತುಗಳಿಗೆ ಹೆಸರಾದವರು. ಅವರಿಂದ ಇದಕ್ಕಿಂತ ಹೆಚ್ಚು ಸ್ಪಷ್ಟ ಮಾತುಗಳನ್ನು ಅಪೇಕ್ಷಿಸುವದು ಸಾಧ್ಯವಿಲ್ಲ ಎಂದುಕೊಂಡು ಹೊರಟು ಬಂದೆ. ನಮ್ಮ ಪತ್ರಿಕೆಗೆ ಬರೆಯುವ ಇಚ್ಛೆ ಅವರಿಗಿಲ್ಲ ಎಂದು ಸೆರಗಿಗೆ ಗಂಟು ಹೊಡೆದುಕೊಂಡೆ.

ತಿಂಗಳೆರಡು ತಿಂಗಳು ಉರುಳಿರಬಹುದು. ಪುಟ್ಟಣ್ಣಚೆಟ್ಟಿ ಪುರಭವನದಲ್ಲಿಯ ಒಂದು ಸಮಾರಂಭ. ಮಾಸ್ತಿಯವರೂ ಬಂದಿದ್ದರು. ಪರಿಚಯವನ್ನು ಪುನರುಜ್ಜೀವಿಸುವ ಉದ್ದೇಶದಿಂದ ನಮಸ್ಕಾರ ಮಾಡಿದೆ.

ಪ್ರತಿ ನಮಸ್ಕಾರ ಮಾಡುತ್ತ '' ನಿಮ್ಮನ್ನೇ ನೋಡೋಣ ಅಂತಿದ್ದೆ. ನೀವೇ ಸಿಕ್ಕಿದಿರಿ. ಸಂತೋಷ. ನಾನು ಲೇಖನ ಬರೆಯಲು ನಿರ್ಧರಿಸಿದ್ದೇನೆ. ನಿಮ್ಮ ಪ್ರತಿಕೆಗೇ ಬರೆಯುತ್ತೇನೆ. ಬಿಡುವು ಮಾಡಿಕೊಂಡು ಮನೆಯ ಕಡೆಗೆ ಬನ್ನಿ ಮಾತಾಡೋಣ'' ಎಂದರು.

ನನಗಾದ ಆನಂದಾಶ್ಚರ್ಯಗಳನ್ನು ಹೇಳಲಾಗಲ್ಲ. ಅವರಿಂದ ಈ ಮಾತನ್ನು ಕೇಳಲು ನನ್ನ ಕಿವಿ ಸಿದ್ಧವಿರಲಿಲ್ಲ. ''ಬಹಳ ಸಂತೋಷ'' ಎಂದು ಹೇಳಿದೆ. ಹೆಚ್ಚಿಗೆ ಮಾತುಗಳೇ ಬರಲಿಲ್ಲ. ನಾಳೆಯೇ ಬರುತ್ತೇನೆ ಎಂದು ನುಡಿದೆ. ''ನೀವು ಲೇಖನ ಬರೆಯುತ್ತೀರಿ ಎಂದು ನಾಳೆಯ ಪತ್ರಿಕೆಯಲ್ಲೇ ಪ್ರಕಟಿಸುತ್ತೇನೆ'' ಎಂದೆ.

''ಬೇಡ ಬೇಡ. ಲೇಖನಗಳು ಸಿದ್ಧವಾಗಲಿ. ವಿಷಯ ನಿರ್ಧಾರವಾಗಲಿ. ನಿಮ್ಮ ಕೈಯಲ್ಲಿ ಒಂದೆರಡು ಲೇಖನಗಳು ಬಂದ ಮೇಲೆ ಪ್ರಕಟಣೆ ಕೊಡಿ. ಆವರೆಗೆ ಬೇಡ'' ಎಂದರು. ನುರಿತ ಸಂಪಾದಕನ ಸಲಹೆ. ನನ್ನ ಯಾವ ಆಗ್ರಹಕ್ಕೂ ಮಣಿಯಲಿಲ್ಲ.

ಮರುದಿನ ಅವರ ಮನೆಗೆ ಹೋಗಿ ವಿವರಗಳನ್ನು ಚರ್ಚಿಸಿದೆ. ವಾರಕ್ಕೊಂದು ಲೇಖನ ಭಾನುವಾರ ಸಂಚಿಕೆಗಾಗಿ ಬರೆಯುವದಾಗಿ ಒಪ್ಪಿದರು. ಗೌರವಧನದ ಪ್ರಶ್ನೆ ಬಂದಾಗ ಲೇಖನವೊಂದಕ್ಕೆ ಇಷ್ಟು ಎಂದು ಒಪ್ಪಿಗೆಯಾದ ಮೇಲೆ ತಿಂಗಳಿಗೊಂದು ಮೊತ್ತ ಗೊತ್ತು ಮಾಡಿಬಿಡಿ ಎಂದರು. ಅದೂ ಆಯಿತು.

ಲೇಖನ ಮಾಲೆ ಆರಂಭವಾಯಿತು. ರಾಜಕೀಯ, ಸಾಮಾಜಿಕ, ಸಾಹಿತ್ಯಕ್ಕೆ ಎಲ್ಲ ವಿಷಯಗಳ ಮೇಲೆ ಅವರು ತಮ್ಮ ಪ್ರಾಮಾಣಿಕ ಪ್ರತಿಕ್ರಿಯೆ ವ್ಯಕ್ತಪಡಿಸುತ್ತ ಹೊರಟರು.

ಕೆಲ ತಿಂಗಳುಗಳ ನಂತರ ಲೇಖನ ಮಾಲೆಯನ್ನು ನಿಲ್ಲಿಸುವ ಸಂದರ್ಭ ಬಂತು. ಆ ತಿಂಗಳಲ್ಲಿ ಮೂರು ವಾರ ಮಾತ್ರ ಲೇಖನ ಬರೆದಿದ್ದರು. ಇನ್ನೊಂದು ವಾರ ಬರೆದಿದ್ದರೆ ಆ ತಿಂಗಳ ಲೆಕ್ಕ ಪೂರ್ತಿ ಆಗುತ್ತಿತ್ತು. ಆದರೆ ಅಲ್ಲಿಗೇ ಲೇಖನ ಮಾಲೆ ನಿಂತುಹೋಯಿತು. ಆದರೆ ಅವರಿಗೆ ಗೌರವ ಧನ ಕೊಡುವಾಗ ಮೊದಲಿನ ಮಾತಿನಂತೆ ಲೇಖನಗಳ ಲೆಕ್ಕ ಮಾಡದೆ ತಿಂಗಳ ಮೊತ್ತವನ್ನೇ ಕಳಿಸಲಾಯಿತು.

ಮರು ಟಪಾಲಿಗೇ ಚೆಕ್ ವಾಪಸ್ ಬಂತು. ಅದರೊಡನೆ ಇಟ್ಟ ಕಾಗದದಲ್ಲಿ ''ನಾನು ಈ ತಿಂಗಳು ಎಲ್ಲ ವಾರಗಳಲ್ಲೂ ಲೇಖನ ಬರೆದಿಲ್ಲ. ಆದ್ದರಿಂದ ಈ ಪೂರ್ತಿ ಹಣಕ್ಕೆ ನಾನು ಪಾತ್ರನಲ್ಲ. ಕೊನೆಯ ಒಂದು ಲೇಖನದ ಹಣ ಹಿಡಿದುಕೊಂಡು ಉಳಿದ ಹಣಕ್ಕೆ ಚೆಕ್ಕು ಕಳಿಸಿರಿ'' ಎಂದು ಬರೆದಿದ್ದರು.

ಈ ನಿಸ್ಪೃಹತೆಯನ್ನು ಕಂಡು ನಮಗೆಲ್ಲ ಆಶ್ಚರ್ಯವೋ ಆಶ್ಚರ್ಯ. ಮನೆಗೆ ಹೋಗಿ ಮತ್ತೊಮ್ಮೆ ಹೇಳಿದ್ದಾಯಿತು. ತಿಂಗಳ ಕರಾರನ್ನು ನಾನೇ ಅವರಿಗೆ ನೆನಪು ಮಾಡಿಕೊಟ್ಟೆ. ಯಾವುದಕ್ಕೂ ಅವರು ಜಗ್ಗಲಿಲ್ಲ. ತಮ್ಮ ಲೆಕ್ಕದಂತೇ ಹಣ ತೆಗೆದುಕೊಂಡರು.

''ಮಾಸ್ತಿ ಎಂದರೆ ಕನ್ನಡಕ್ಕೊಂದು ಆಸ್ತಿ'' ಎಂಬ ಮಾತನ್ನು ಅವರ ಈ ನಿಸ್ಪೃಹ ಪ್ರಾಮಾಣಿಕ ಸ್ವಭಾವ ಸಾರ್ಥಕಗೊಳಿಸಿದೆ.

ಪುಷ್ಪಾರ್ಚನೆ

ಜಿ. ಆರ್. ಪಾಂಡೇಶ್ವರ್

ಅಸದೃಶ ಪ್ರತಿಭಾಪೂರ್ಣ ಕವನ-ಗೀತೆಗಳು, ಸಣ್ಣಕತೆಗಳು, ಗೀತ ನಾಟಕಗಳು, ಕಾದಂಬರಿಗಳು, ಜೀವನ ಚರಿತ್ರೆಗಳು, ವಿಮರ್ಶೆಗಳು, ವಾಲ್ಮೀಕಿ, ಭಾರತತೀರ್ಥ ಮೊದಲಾದ ಅದ್ಭುತ ಉದ್ಗ್ರಂಥಗಳು, ಪ್ರಬಂಧ ಸಮುಚ್ಚಯಗಳು - ಹೀಗೆ ನಾನಾ ರೀತಿಯಿಂದ ಕನ್ನಡ ಸರಸ್ವತಿಯ ರತ್ನ ಭಂಡಾರವನ್ನು ತುಂಬಿದ ''ಅಣ್ಣ ಮಾಸ್ತಿ''ಯವರನ್ನು ದಿವಂಗತ ಪಂಜೆಯವರು-''ಇವರು ನಮ್ಮ ಕನ್ನಡದ ರವೀಂದ್ರರು'' ಎಂದು ೧೯೩೦ರಲ್ಲೇ ಕೊಂಡಾಡಿದ್ದರು. ಆ ಮಾತು ಇಂದಿಗೂ ಸತ್ಯವಾಗಿದೆ. ಎಲ್ಲರೂ ತಲೆಬಾಗಿ ಒಪ್ಪಿಕೊಳ್ಳುವ ಸೌಜನ್ಯಕ್ಕೆ, ''ವೀರಕ್ಕೆ ವಿನಯವೆಂಬುದು ಮುಡಿಯ ಮಾಣಿಕಂ'' ಆಗಿ ಪರಿಣಮಿಸುವುದು.

*

೧೯೨೯ರ ಸೆಪ್ಟಂಬರದಲ್ಲಿ ಪೂಜ್ಯ ಮಾಸ್ತಿಯವರ ದರ್ಶನವಾಯಿತು ನನಗೆ ದಿವಂಗತ ದ.ಕೃ. ಭಾರದ್ವಾಜರ ಮುಖಾಂತರ. ಆಗ್ಗೆ ನಾನು ಮಂಗಳೂರಿನ ಅಲೊಸಿಯೆಸ್ ಕಾಲೇಜಿನಲ್ಲಿ ಕಲಿಯುತ್ತಿದ್ದೆ ಅಷ್ಟರಲ್ಲೆ ನನ್ನ ''ಹೂಗೊಂಚಲು'' ಎಂಬ ಪುಟ್ಟ ಕವನ ಸಂಕಲನ, ನನ್ನ ಇಂಗ್ಲಿಷ್ ಕವನ ಪುಸ್ತಕ "Fragrant Buds" ಪ್ರಕಟವಾಗಿದ್ದು. ಅವುಗಳನ್ನು ನಾನು ಮಾಸ್ತಿಯವರಿಗೂ, ಗುಂಡಪ್ಪನವರಿಗೂ, ವೆಂಕಣ್ಣಯ್ಯನವರಿಗೂ ಅರ್ಪಿಸಿ, ಅವರಿಂದ ಬಹು ಸಂತೋಷದ ಆಶೀರ್ವಾದ-ಪ್ರಶಂಸೆ ಪಡೆದೆನು. ಪೂಜ್ಯ ಮಾಸ್ತಿಯವರು ಆಗ್ಗೆ ಅಂಡರ್ ಸೆಕ್ರೆಟರಿಯಾಗಿ ಈಗಿನ ಗವಿಪುರದ ಮನೆಯಲ್ಲೆ ಇದ್ದರು.

*

ಆ ವೇಳೆ ಒಂದು ದಿನ ಅವರ ಬೈಠಕ್ ಕೋಣೆಯ ಗೋಡೆಯ ಒಂದು ಮೂಲೆಗೆ ನನ್ನ ದೃಷ್ಟಿ ಹೋಯಿತು ''ತನ್ನ ಹಸಿವೆ ಹಿಂಗಿಸಲು ಒಂದೇ ಒಂದು ಬಿಂದು ರಕ್ತವನ್ನು ಕೇಳುವ ತಿಗಣೆಯನ್ನು ಕೊಲ್ಲುತ್ತಾನಲ್ಲಾ ಈ ಮನುಷ್ಯ, ಎಷ್ಟು ಕ್ರೂರಿ, ಎಷ್ಟು ಜಿಪುಣ!'' ಎಂದು ಪೆನ್ಸಿಲ್ಲಿನಲ್ಲಿ ಬರೆದ ಮಾಸ್ತಿಯವರ ಸ್ವಹಸ್ತಾಕ್ಷರ ಕಂಡು ಮೂಕ ವಿಸ್ಮಿತನಾದೆ ನಾನು. ಆ ದಯಾಭರಿತ ವ್ಯಕ್ತಿತ್ವವನ್ನು ಮೆಲುಕು ಹಾಕುತ್ತ ಬಂದೆ.

ಆಮೇಲೆ ಅನೇಕ ಸಲ ಅವರ ಮಧುರಾತಿಥ್ಯ. ಆಶೀರ್ವಾದಗಳನ್ನು ಆಗಾಗ, ೧೯೮೬ರ ವರೆಗೂ ಪಡೆಯುತ್ತ ಬಂದ ಧನ್ಯಜೀವಿ ನಾನು.

ನಿರಸೂಯಾಭಾವ, ನಿರಲಸಕಾರ್ಯ ಪ್ರವೃತ್ತಿ, ಋಷಿ ಜೀವನ ಪಾವಿತ್ರ್ಯ, ಕವಿ ದೃಷ್ಟಿಯ ಸೌಂದರ್ಯ ಪ್ರೇಮ, ಕವಿಕಾಣದುದನ್ನೂ ಕಾಂಬ ವಿಮರ್ಶನ ದೃಷ್ಟಿ, ವಿನಯೌದಾರ್ಯದ ಹೃದಯ ಶ್ರೀಮಂತಿಕೆ ಇವು ಒಂದೇ ವ್ಯಕ್ತಿಯಲ್ಲಿ ಒಬ್ಬನೆ ಮಹಾ ಸಾಹಿತಿಯಲ್ಲಿ ಕಾಣಬರುವುದಾದರೆ, ಅದು ಪೂಜ್ಯ ಮಾಸ್ತಿಯವರಲ್ಲಿ. ಅವರಿಗೆ ಇದು ನನ್ನ ಗೌರವಾದರದ ಪುಟ್ಟ ಪೂಜಾ ಪುಷ್ಪಾರ್ಚನೆ.

ಮಾಸ್ತಿ

ಕೆ.ಎಸ್. ನಿಸಾರ್ ಅಹಮದ್

ಸದಾ ಇವರು ಹೀಗೆಯೇ-
ಇಲ್ಲೆ, ಗಾಂಧಿಬಜಾರಿನ ಹಿರಿಜೌಕದೆದುರಲ್ಲೇ,
ಸಿಗರೇಟು ಸೇದುತ್ತಲೊ ಪತ್ರಿಕೆಯನೋದುತ್ತಲೊ
ಹರಟುತ್ತಲೊ ಇದ್ದಾಗ ಎದುರಾಗುವರು ಇದ್ದಕಿದ್ದಂತೆ
ನಿರ್ದಿಷ್ಟ ಸಮಯದಂತೆ.

ವಯಸು ಅನುಭವ ಹೂಡಿ ಸುಖದುಃಖ ಬೆಳೆದ ಮುಖ,
ಹಿಂದೊಮ್ಮೆ ನೆಲಸಿದ್ದ ಬೆಳಕ ಕನವರಿಸುತಿಹ ಮಂದಗಣ್ಣು;
ಸಾಂತ್ವನವ ನುಡಿದಿರುವ ಹಳೆನಮೂನೆಯ ಚಶ್ಮ
ಅದೇ ಕೊಡೆಯ ಗದೆ:
ಬೆದರಿಸಲು ಭಿಕ್ಷುಕರ ಹುಡುಗರನ್ನ,
ಬೀದಿಕುನ್ನಿಯ, ಪೋಲಿದನಗಳನ್ನ,
ಎದುರಿಸಲು ಮಳೆ ಬಿಸಿಲ ದಾಳಿಯನ್ನ,
ಸಾಲುವೃಕ್ಷದ ಹಕ್ಕಿಹಿಕ್ಕೆಯನ್ನ.

ಇವರು ನನ್ನೆದುರಲ್ಲಿ ಹಾದು ಹೋದಾಗೆಲ್ಲ
ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ,
ಬೆಳಗಾಗ ಛಳಿಯಲ್ಲಿ ಬಿಸಿನೀರ ಮಿಂದಂತೆ
ಎದೆ ಸ್ವಚ್ಛಗೊಳ್ಳುತ್ತದೆ; ಹಗುರಕ್ಕೆ ಸಲ್ಲುತ್ತದೆ.

೨

ಗವೀಪುರದಿಂದ ಗಾಂಧಿಬಜಾರಿನ ಕೊನೆಗೆ
ಪ್ರಕೃತಿಯ ಕರೆಯಂತೆ ಎಳೆಯುವುದು ಕ್ಲಬ್ಬು
ಅಲ್ಲಿ ಕಾಯುತ್ತಾರೆ ಕಿಟ್ಟಿ ಗುಂಡೂ ಸುಬ್ಬು-
ಹೊಚ್ಚ ಹೊಸ ಯೌವನದ ರಂಗುಗಳ ಗುಂಗುಗಳ,

ಫ್ಯಾಶನ್ನು ಪಹರೆಗಳ, ಕಸಿಹಣ್ಣು ಚಹರೆಗಳ
ವರ್ತಮಾನದ ನಟ್ಟನಡುವಿನಲ್ಲಿ
ಹುಚ್ಚುಹುರುಪಿನ ನೂಕುನುಗ್ಗುಲಲ್ಲಿ -
ಅಚ್ಚುಕಟ್ಟಿನ ಹಾಗೆ,
'೪೦ ಮಾದರಿಯ ಬೆಂಗಳೂರಿನ ಹಾಗೆ,
ಕಾಲ ಕುಗ್ಗಿಸಿದೊಡಲು ಕಾಲನೆಳೆಯುತ ಬರಲು
ಈ ವೃದ್ಧರನು ಕಂಡು ''ಅಯ್ಯೊ'' ಎಂದಿದ್ದೇನೆ;
ಎನ್ನುತಿರುವಂತೆಯೆ ಕೈಯ ಮುಗಿದಿದ್ದೇನೆ.

ರಸ್ತೆ ಹಿರಿದಾಗಿ ಫುಟ್‌ಪಾತು ಕಿರಿದಾಗಿ
ಓಡಾಟ ಹೆಚ್ಚಾಗಿ, ನೆಮ್ಮದಿಯೆ ಪೆಚ್ಚಾಗಿ,
ಲೋಕ ಕಂಪ್ಯೂಟರಿನ ಸ್ವಿಚ್ಚು ತಂತಿಗಳಂತೆ ಸಂದಿಗ್ಧವಾಗಿ,
ಬೆಲೆಗಳೆಲ್ಲ ಬಿದ್ದು ಹರಡಿ ದಿಕ್ಕಾಪಾಲು
ಎಸೆಯುತಿವೆ ಪ್ರತಿಕ್ಷಣವು ಸರಳ ವೃದ್ಧಾಪ್ಯಕ್ಕೆ ಹಿರಿಸವಾಲು.

೩

ಕ್ಲಬ್ಬಿನಲಿ ನಿಶ್ಚಿಂತವಾಗಿ ಎಲೆ ಕಲಸುವುದು
ಇಪ್ಪತ್ತೆಂಟನಾಡುವುದು-ನಡುವೆ ಅದೂ ಇದೂ
ಇಪ್ಪತ್ತೆಂಟನಾಡುವುದು:
ನಂಬರೆರಡರ ಬಸ್ಸಿನೆದುರು ಬಾಳೆಯ ಸಿಪ್ಪೆ
ಟೈಲರನ ಎಡಗಾಲನುಳುಕಿಸಿದ್ದು;

ರಾತ್ರಿ ಪುರಭವನದಲಿ ಸಂಗೀತ ಸಾಮ್ರಾಜ್ಞೆ
ಶಂಕರಾಭರಣದಲಿ ಪುಲಕಿಸಿದ್ದು;
ಅಬ್ದುಲನ ಹೈಕೋರ್ಟು ರಿಟ್ಟು ವಜಾ ಆದದ್ದು;
ಖೋಟ ನೋಟ್ ಕೃಷ್ಣನಿಗೆ ಕಠಿಣ ಸಜ ಆದದ್ದು;
ಬದರಿ ನಾದಿನಿಗೊಬ್ಬ ಒಳ್ಳೆವರ ಸಿಕ್ಕಿದ್ದು;
ರಷ್ಯ ಚೀನಾ ಕ್ಯೂಬ ಅಮೆರಿಕ ವಾರ್ತೆ ಮಿಕ್ಕಿದ್ದು -
ಅದೂ ಇದೂ ಇಪ್ಪತ್ತೆಂಟನಾಡುವುದು.
ನಡುವೆ ತಪ್ಪಾಡಿದರೆ ಎದುರಾಳಿಯಲ್ಲೊಬ್ಬ
ಮನೆಯ ಕಿರಿಸೊಸೆಯಂತೆ ಮುಖವನೂದಿಸಿ ಬೇಗಿ
ಗೊಣಗುವುದು: Let us play the game
for game sake.

ಇನ್ನಿವರ ಜೀವನ? ಅದು ಕೂಡ ಹೀಗೆಯೇ ಎಲ್ಲ ಖುಲ್ಲ
ಖುಷಿಗಷ್ಟೆ ನಷೆಗಲ್ಲ.
ಗಂಟೆಗಟ್ಟಲೆ ಕಲಸಿದರು ಕೈ
ಬಂದರಿಪ್ಪತ್ತು ಹೋದರಿಪ್ಪತ್ತು ನ.ಪೈ.,
ಕೂಗು ಹುಸಿಮುನಿಸುಗಳ ನಡುವೆ ತುಟಿಗಳ ಮೊಗ್ಗೆ
ಬಿರಿಸಿ ನಕ್ಕಾಗಿವರು ಥೇಟ್ ಜುಲೈ ತಿಂಗಳಿನ ಶಿವಮೊಗ್ಗೆ:
ಚಣಕ್ಕಷ್ಟು ಚಳಿ ನೂಲು, ಒಂದಿಷ್ಟು ಹೂಬಿಸಿಲು
ಹೊರಗೆ ಕಚಪಿಚ ಕೆಸರು, ಒಳಗೆ ಬೆಚ್ಚನೆ ಸೂರು.

೪

ಹೊತ್ತಾಯಿತೆ? ಆವರಿಸಿತೇ ಮಬ್ಬು?
ಕೊಡೆತೆರೆದು ಏಕಾಕಿ ಮನೆಯತ್ತ ನಡೆಯುವರು ಮರೆತು ಕ್ಲಬ್ಬು,
ಗಾಂಧಿಬಜಾರೀಗ ತಿಳಿಯಾಗಿ ಫರ್ಲಾಂಗು ಬೆಳಕ ಹಬ್ಬ-
ಚೌಕದೆಡೆ ಆಗೀಗ ಪ್ರತಿಪಕ್ಷದವನೊಬ್ಬ
ಎಲುಬಿರದ ನಾಲಗೆಯ ನಾಚು ನಡೆಸುತ್ತಿರಲು
ಸರ್ಕಾರದಸಫಲತೆಯಹುಣ್ಣ ನೊಣ-ಸುತ್ತಿರಲು,

ದೀಪಗಳ ಝುಗಮಗದಿ ಕಣ್ಸೋತು ನಿಂತಿರಲು
ಮನೆಮಠದ ಮರೆತಿರುವ ಮಂದಿಸಂತೆ
ಬೊಬ್ಬೆ ಅಬ್ಬರದೆದುರು ಗುರುತುಹತ್ತದ ಹಾಗೆ
ಕಾಲಿಗೊತ್ತಿದ ಗಾಜ ಚೂರ ದೂರಕೆ ಎಸೆದು
ಸಾಗುವರು ಸದ್ದಿರದೆ ಚಂದ್ರನಂತೆ;
ಗಂಭೀರವಾಗಿ
ಕರ್ತವ್ಯದೆಚ್ಚರಿನ ಸನ್ನೆಯಂತೆ.
ನೋಡುತ್ತಲಿದ್ದಂತೆ
ಹೋಟಲಿನ ಬದಿಯಲ್ಲಿ ಬೀದಿ ತಿರುಗನು ಹೊಕ್ಕು
ಮರೆಯಾಗುವರು ಮಾಸ್ತಿ-
ಸಂದ ಜೀವನದೊಂದು ರೀತಿಯಂತೆ,
ಸರಳ ಸವಭಿರುಚಿಯ ಖ್ಯಾತಿಯಂತೆ.

ಆಚಾರ್ಯರು

ಎನ್.ಎಸ್. ಗದಗಕರ

ಕನ್ನಡಕ್ಕೆ ಮಾಸ್ತಿ ಆಸ್ತಿಯು ಆಗಿರುವರೆಂದು
ಎಲ್ಲಿ ಯಾರೊ ಒಮ್ಮೆ ನುಡಿದದ್ದು ಕೇಳಿದ್ದೆ.
ನಡೆಯಲ್ಲಿ ನಯ ವಿನಯ; ವಾಣಿಯಲಿ ವಿದ್ವತ್ತೆ.
'ಕೆಟ್ಟ' ಎನ್ನುವ ಪದವು ಇವರ ಕೋಶದಲಿಲ್ಲ!
'ಅಣ್ಣಾ' ಎಂದೇ ಇವರು ಸಂಬೋಧಿಸುವ ಸರಣಿ
ಬರಿ ಮೋಹಕವು ಏಕೆ? ವ್ಯಕ್ತಿತ್ವ ದೈಸಿರಿಯು!
ಕತೆ, ಕವನ, ನಾಟ್ಯ, ಕಾದಂಬರಿಯ ರಂಗದಲಿ
ಇವರ ಸರಿದೂಗುವರು ಕೈ ಬೆರಳಿನೆಣಿಕೆ!

ಸರಕಾರ ಸೇವೆ ಹಿಂದಕೆ ಒಮ್ಮೆ ಇದ್ದರೂ
ಪತ್ರಿಕಾ ವ್ಯವಸಾಯ, ಸಿರಿಗನ್ನಡದ ಏಳ್ಗೆ -
ಇಂದಿವರ ನರನಾಡಿಗಳಲೊಂದು ಆಗಿಹವು!
ಸಹಜ ಸುಂದರ ಬಂಧ ತಿಳಿ ವಿನೋದರಿ ಬೆರೆತು
ಇವರ ಶೈಲಿಗೆ ಮಿಂಚು ಸುಭಗತೆಯ ಒದವಿಸಿದೆ.
- ಇಂತಿವರು ಕನ್ನಡದ 'ಆಚಾರ್ಯ'ರೇ ಅಲ್ತೆ?

ಮಾಗಿದ ಹೂ

ಕೃಷ್ಣಮೂರ್ತಿ ಪುರಾಣಿಕ

ಯಾರು ಬಂದಾರ ಇಲ್ಲಿ ತಂದಾರ ಹೂವ
ತೋಟದ ತುಂಬೆಲ್ಲ ಹರವ್ಯಾರ ಹೂವ
ಸಾಹಿತ್ಯ ಸಂಸ್ಕೃತಿಯ ಗಂಧ ಸೌರಭವ
ಬಾನ ಬಳ್ಳಿಯೊಳಗ ಸಣ್ಣ ಕತೆಗಳ ಹೂವು
ಚಿಕ್ಯಾಗಿ ಚುಕ್ಯಾಗಿ ಹಚ್ಯಾವ ದೀಪ
ಕವನ ಕಥೆಗಳ ಹೂವು
ಗಂಥ ಬೀರ್‍ಯಾವ

ಯಾರು ಬಂದಾರ ಗಂಗಾ! ತಂದಾರ ಹೂವ
ಮಗಮಗಿಪ ಮಲ್ಲಿಗೆಯ ಗಂಧ ಸೌರಭವ.
ತಂದವರು ಮಾಸ್ತಿ
ಕನ್ನಡದ ಆಸ್ತಿ
ಚಾಲುಕ್ಯ ರೂವಾರಿ ಮೇಣಬಸ್ತಿ.

೨

ಸಣ್ಣ ಕತೆಗಳ ತಂದೆ ಅಂತಾರ ಇವಗ
ತಂದೆಯೊ ಮಗನೊ ನಾನೇನು ಬಲ್ಲೆ
ತಂದೆಗೆ ಮಗನೀತ, ಮಗನಿಗೆ ತಂದೆ
ಸಾಹಿತ್ಯ ಸಂಸಾರ ಜೇನು ಹಲ್ಲೆ.

ಯಾರು ಬಂದಾರ ಇಲ್ಲಿ ತಂದಾರ ಹೇಳ!
ಅನುಕಂಪವರಳಿದ ಬಿರಿದೆದೆಯ ಹೂವ
ಬೆಂದವರ ನೊಂದವರ ಕಣ್ಣಹನಿ ತೊಳೆದು
ಉಳಿತೊಳಿ ಬಿಡಿ ಶ್ಯಾನ ಜೀವನದ ಹೂವ
ಹರಯದ ಹೂವಿದು 'ಶ್ರೀನಿವಾಸ'
ಮಾಗಿದರು ಮೊಗ್ಗಿದು 'ಶ್ರೀನಿವಾಸ'

ಜೀವನದ ತುಂಬೆಲ್ಲ ಶ್ರೀಗಂಧ ಕಂಪು
ಕನ್ನಡದ ಸಾಹಿತ್ಯಕೇನಂಥ ಸೊಂಪು.

೩

ಯಾರು ಬಂದಾರ ಇಲ್ಲಿ ತಂದಾರ ಗಂಗಾ!
ಕನ್ನಡದ ಸಿರಿಮುಡಿಗೆ ಪಾರಿಜಾತಾ
ಏನೊಂದು ಹೂವು! ಎಷ್ಟೊಂದು ಹೂವು!
ಕನ್ನಡದ ತುಂಬೆಲ್ಲ ಸಿರಿಗಂಧ ಹೂವು!!
ತಂದವರು ಮಾಸ್ತಿ
ಕನ್ನಡದ ಆಸ್ತಿ
ರೂವಾರಿ ಕಟೆದಂಥ ಮೇಣಬಸ್ತಿ.

'ಯಾವ ಕತೆ ಮೆಚ್ಚುವಿರಿ?'

ಪಿ.ಎಲ್. ಸಂಜೀವರಾವ್

ಮಧುಗಿರಿಯಲಿಹುದು ವೆಂಕಟೇಶನ ಗುಡಿಯು
ಮುಂದೊಂದು ಕಟ್ಟೆ
ಆ ಬೀದಿಯಲ್ಲೆ ನಾರ್ಣಭಟ್ರು, ವೇದ ಪಾರಂಗತರು
ಮನೆ ಹೆಸರು ಅಡಿಕೆ ಪಟ್ಟೆ
ಅಭಿಮಾನ ಧನರು, ನೋಟಕ್ಕೆ ದೂರ್ವಾಸರೇ!
ಸಂಸ್ಕೃತ ಪಾಠ ಹೇಳುತಿದ್ರು.
ನನಗಾಗ ಹದಿನೈದು, ಮಾಧ್ಯಮಿಕ ಶಾಲೆಯಲಿ
ಆಂಗ್ಲ ಕಲಿಸುತಿದ್ರು
ಸಂಸ್ಕೃತಿಯ ಬಲದಿಂದಲೆಂಬಂತೆ ಕಲಿಯ
ಲಾಶಾಯ್ತೆನಗೆ, ಸಕ್ಕದವನು.
ಭಯ ಭಕ್ತಿ ಶ್ರದ್ಧೆಯಿಂದುಚ್ಚರಿಸುತಿದ್ದೆ
ವಿಭಕ್ತಿಗಳ ಹಚ್ಚಿ ರಾಮಶಬ್ದವನು.
ಇದ್ದಕಿದ್ದಂತೆ ಎಲ್ಲರೆದ್ದು ನಿಂತುದ ಕಂಡು
ತನ್ನರಿಯದೆದ್ದು ನಿಂತಿದ್ದೆ.
ಸಹಪಾಠಿ ಯಣುಗ ''ಅಸಿಸ್ಟೆಂಟ್ರು ಕಣೊ''
'ಅವರವರ ತಾಯಿ'' ಎಂದಿದ್ದ.
ಬೆಳ್ಳನೆಯ ಮಡಿಯುಟ್ಟ ಮಾತೆ ತೆಳ್ಳನೆಯ ನಾಮದಿಂ
ಮಗನು
ಅಡಿಯಲಡಿಯಿಟ್ಟು ತಾಯನನುಸರಿಸಿ ನಯ
ವಿನಯದಿಂ ಬರುತ್ತಿದ್ದ ಮಗನು.
ಹುಟ್ಟಿನಿಂದಾ ತಾಯಿಗಾತ ಮಗನಾಗೆ
ಇರಬೇಕೆಂದುಕೊಂಡೆನಬ್ಬ!
ದಿನ ನಿತ್ಯ ದೇವ ದರುಶನಕೆ, ಹೂ ಹಣ್ಣು
ತರುತಿದ್ದುದೊಂದು ಕಣ್ಮನಕೆ ಹಬ್ಬ
ನಮ್ಮಮ್ಮಗಾನಂತೆ ಮಗನಾಗಬೇಕೆಂದುಕೊಂಡೆ
ಆಘಟನೆ ಪೀಠಿಕಾಯ್ತು!
ಇಂದುವರೆಗೆನ್ನ ಮನ ಪೀಠದಿಂ ದಾಮೂರ್ತಿ
ಮಾಸಿಲ್ಲವಾಯ್ತು!

ಚೊಕ್ಕದಧಿಕಾರಿಯಾಗಿ ನಿಷ್ಠೆಯಿಂ ಹಂತ ಹಂತವನೇರಿ
ಮೇಲಿನಂತಸ್ತು ಮುಟ್ಟುವನ್ನೆಗಂ ರಾಜಮರ್ಯಾದೆ
ಬಂದಿತ್ತು ಸಾರಿ

೨

ಎರಡೊರುಸ ಕಳೆದಿತ್ತು ಉನ್ನತ ವಿದ್ಯೆಗೆನೆ
ತುಮಕೂರು ಕರೆದಿತ್ತು.
ಸಣ್ಣ ಕತೆಗಳ ಪಠ್ಯಪುಸ್ತಕವೊಂದು ನನಗಾಗೆ
ಕಾದು ಕುಳಿತಿತ್ತು.
ಬರೆದವರು ''ಶ್ರೀನಿವಾಸ'' ರೆಂದಿತ್ತು, ''ಮಾಸ್ತಿ''ಯರ
ಕಾವ್ಯನಾಮವೆಂದಿತ್ತು.
ಕತೆಗಳೋ, ಅವರ ಮೂರ್ತಿಯನೆ ಬೇರ್ಬೇರೆ
ವಸ್ತುವಿಂ ಕೆತ್ತಿದಂತಿತ್ತು.
ಶೋಧನೆಯು ಬಂದಿತ್ತು - ಪ್ರಶ್ನೆಯೊಂದೆ!
''ಯಾವ ಕತೆ ಮೆಚ್ಚುವಿರಿ''? ಯಾಕೆ?
ಯಕ್ಷಪ್ರಶ್ನೆ! ''ವೆಂಟ್ರಾಯನ ಪಿಶಾಚ''
ಕತ್ತಲು ಕವಿಸಿ ಬೆದರಿಸಿತ್ತು.
''ವ್ಯಾಸಮುನಿ,'' 'ಶಿಷ್ಯ,' ''ತೊಯ್ಯೊಡಲ ಮಂಗೆ,'' ''ಶಾರದಾಂಬೆ''
ಏನೇನೋ ಮಸುಕಾಗಿ ಚಲಿಸುತ್ತಿತ್ತು
ಹುಡುಗ ಚೇಷ್ಟೆ! ''ರಂಗಪ್ಪನ ಮದುವೆ''-''ಕೊರ್ಟುಷಿಪ್ಪು''
ಎಂದೆ ಬರೆಯಿಸಿತ್ತು.
ಆಶ್ಚರ್ಯ! ತೇರ್ಗಡೆಯು ಆಗಿತ್ತು! ಉದ್ಯೋಗ ದೊರಕಿತ್ತು
ಮೆಪ್ಪು ಬಂದಿತ್ತು.

೩

ಉತ್ತರ ಪಿನಾಕಿನಿಯ ದಡದಲ್ಲಿ ''ಸೇವಮಂದಿರ''ವೆಂಬ
ಗಾಂಧಿಯಾಶ್ರಮ
ಮಾನ್ಯ ಲಿಂಗಣ್ಣ ನಾಶ್ರಯದಿ, ಗೆಯ್ಯಲೆಂದೆ ನಿಂತೆ
ಕೈಲಾದ ದೇಹ ಶ್ರಮ.
ಅಂದಿಗಾಗಲೆ ''ಜೀವನ''ದ ದರ್ಶನವಾಗಿತ್ತು
ಮಾಸ್ತಿ ವಾಮನರಂದು
ಇಷ್ಟಾಗಿ, ಅಷ್ಟಾಗಿ, ತ್ರಿವಿಕ್ರಮರಾಗಿ, ವಿಶ್ವದಾರ್ಶಿಕರಾಗಿ

ಎದ್ದು ನಿಂದು
ದೊಡ್ಡ ಹುದ್ದೆಯನೊದ್ದು, ಮಮಕಾರ ದಧಿಕಾರ
ಪಾತಾಳಕಿಕ್ಕಿ
ತಮಿಳಾಂಧ್ರ ವಾಂಗ್ಲ, ಸಕ್ಕದ ಸಾಹಿತ್ಯ ಭಂಡಾರ ಸಾರ
ಕನ್ನಡದ ಭಾಂಡಕಿಕ್ಕಿ
ನವಶೈಲಿ ನವರಸದಿ ನವ್ಯ ಸಾಹಿತ್ಯ ಭವ್ಯ
ಸೃಷ್ಟಿಯಂ ಮಾಡಿದ್ದರು.
ಅವರ ''ಜೀವನ''ದ ''ಚಂದ'' ಭಕ್ತನಾಗಿದ್ದೆನಗು
ಸ್ಫೂರ್ತಿ ನೀಡಿದ್ದರು.
''ಗುಂಡು ಮುಳುಗ''ನ ಮಾಡಿ ''ರಾಮನಂಕಿತ''ದ
ಗಿರಿಯಾಗಿ ತೇಲಿಸಿವರು.
''ಕನಕ ನುಣ್ಣಿಸಿದ ತುಪ್ಪ ಬೆಲ್ಲದ ಬಿಸಿ ರೊಟ್ಟಿ
ಎನಗು ಮೂಸಿಸಿದರು.
''ಶಾಮನ ಕನಸೆ''ಂಬೊ ಕವಿತೆಯಂ ಎನ್ನಿಂದ
ಬರೆಯಿಸಿದರು.
''ಜೀವನ''ದ ಮಾಸಿಕದೊಳಚ್ಚೊತ್ತಿ ''ಮಿಗಿಲಾಗಿ ಬರೆ''
ಎಂದು ಸೂಚಿಸಿದರು.
ಕೃತಕೃತ್ಯನಾಗಿದ್ದೆ! ''ಹೆಬ್ಬೆರಳ ಕೊಯ್ಕೊಡದೆ''
ಏಕಲವ್ಯನಾಗಿದ್ದೆ.
ಮುಂದೆ ಬರೆಯದಿದ್ದೆ! ರಾಮ ನಕ್ಕರೆಯ
ಅಳಿಲಾಗ ಲೊಪ್ಪದಿದ್ದೆ.
ಕೋದಂಡ ದಡಿಯಿಡಿಗೆ ತುತ್ತಾಗಲೆಂದೆ
ವಟಗುಟ್ಟದಿದ್ದೆ.
ಅಹಲ್ಯೆ ಗುಹರಂತೆ, ಶಬರಿ ಹನುಮಂತರಂತೆ
ದರ್ಶನಕೆ ಕಾದೆಯಿದ್ದೆ.

೪

ಅನಂತಪುರದ ರಾಘವಾಚಾರ್ಯರೆಮ್ಮಾಶ್ರಮದ
ಧರ್ಮದರ್ಶಿ
ಕಾರ್ಯಗೌರವದೊಳೊಂದು ದಿನ ನಾನವರ
ಮಂದಿರಕೆ ಬಂದಿದ್ದೆನರಸಿ
ಅವರ ಷಡ್ಡುಕರಂತೆ! ಮಾಸ್ತಿಯವರ ನಲ್ಲೆ
ಕೌತುಕ ಮೀರೆ ಕಂಡಿದ್ದೆ.

ಕುಚೇಲನಂತೆ ಹೆಚ್ಚು ಪೆಚ್ಚಾಗಿದ್ದೆ, ಹುಚ್ಚು ವಿದುರನಾಗಿದ್ದೆ
ಮೂವತ್ತರಲ್ಲಂತೆ ಅರವತ್ತರಲಿ, ಸುಸ್ನೇಹ, ಸೌಜನ್ಯ
ಗಾಂಭೀರ್ಯ ಕಂಡಿದ್ದೆ
ಕನ್ನಡಮ್ಮನ ಸೌಧದುಪ್ಪರಿಗೆ ಯಂತಸ್ತು ಕಡೆಯವರೆಗೇರಿ
ಕೆಳಮನೆಯ ನೆಲದಲ್ಲಿ ಕೊಳೆವರಂ ಮರೆಯದಲೆ ಸೇರಿ
ಕನಿಕರದ ಸೊಲ್ಲಿನಿಂ, ಕಾರುಣ್ಯ ನೋಟದಿಂ ನಗುವ ಬೀರಿ
ಬದಗಿದ್ದ ತರುಣದಿಂದವರವರ ನೋವನಿಳಿಸಿಹರು ಸಾರಿ.

೫

ಈಗೀಗ ಎಂಭತ್ತು ದಾಟಿಯಿರಬಹುದೆಂದು
ಮನವೆಣಿಸುತಿತ್ತಲ್ಲ!
''ಸಂಭವಾನಾಗ್ರಂಥ'' ಶುಭಯೋಗ ಪ್ರಾಪ್ತಿಯಿಂ
ಸುಪ್ತ ಚೇತನ ವೆಚ್ಚೆತ್ತಿತಲ್ಲ!
ಮನ ತುಂಬಿದಾಮೂರ್ತಿ ದಿವ್ಯದರ್ಶನಕೆ ಕಾವೇರೆ
ಹೊರಕಣ್ಣು ಬಯಸಿತಲ್ಲ!
ಹೌಹಾರಿ ಹೋಗಿ ನೋಡಬೇಕೆಂಬಾಸೆ ಸಾಮಾನ್ಯ
ಮರ್ಯಾದೆಯಂ ಮೀರಿತಲ್ಲ!
ನೇರ ನಿಂತಿದ್ದೆರವರೆದುರೆ ಭಯ ಭಕ್ತಿ ಶ್ರದ್ಧೆಯಿಂ ದರ್ಶನಾರ್ಥಿ
ಅಂತು ಕಂಡೆ! ಅದೆ ಸರಳ ಹೃದಯಿ! ಅದೇ ಶಾಂತಮೂರ್ತಿ!
ಸಾಮಾನ್ಯನಂ ಕಂಡು ತಾನು ಸಾಮಾನ್ಯನೆಂಬಂತು
ನಿಂತಿತ್ತು ಮೂರ್ತಿ!
ಸುಸ್ನೇಹ ದರಹಸಿತ ನಯನ ಲಾಸ್ಯ ದಾಸ್ಯದಿಂ
ಮನದಣಿಸಿಯಂತೆ ನಿಂತಿತ್ತು ಮೂರ್ತಿ!
ತೊಂಭತ್ತರಲಿ ನೋಡಿ ಮಂತೆ, ನೂರರಲಿ ನೋಡಿ
ಮಂತೆ ಬೆಳಗುವರು ಕೀರ್ತಿ
ಮೇಲಿಪ್ಪತ್ತು ಬರಲಿ ಸಂದೇಹ ಕಿಂಚತ್ತು ಬೇಡ
ಮಂತೆ ನೀಡುವರು ಸ್ಫೂರ್ತಿ
ಸಾಮಾನ್ಯರಲ್ಲೆಮ್ಮ ಮಾಸ್ತಿವರ್ಯರ್ಕನ್ನಡ
ದಸಮಾನ ದಾಸ್ತಿ
ದೇವ ದೇವಂ ನೀಡುವಂ ಬಿಡದೆ ನಾವೆಲ್ಲ ಕೊಂಡಾಡಿ
ಕಾಡಿ ಬೇಡೆ ಸ್ವಸ್ತಿ.
ವೆಂಕಟೇಶನ ರಕ್ಷೆ, ಶ್ರೀನಿವಾಸನ ರಕ್ಷೆ
ಕನ್ನಡದನ್ನಪೂರ್ಣೆ, ಮಾಸ್ತಿ ಮಾತೇ ರಕ್ಷೆ.

ಹರಸುವುದಕ್ಕಾಗಿ ಬಾಳು

ಕೂರಾಡಿ ಸದಾಶಿವ ಕಲ್ಕೂರ

ನಿನ್ನ ನಾನೊಮ್ಮೆ ಕಂಡಿದ್ದೆ;
ಹಲವೊಮ್ಮೆ ಓದಿದ್ದೆ ; ಕೇಳಿದ್ದೆ.
ನಿನ್ನ ವಿಚಾರಕೆ ಮೈ ಮರೆತಿದ್ದೆ;
ನಿನ್ನೊಡನೆ ಮಾತಾಡಿ ಸಲುಗೆಯಿಲ್ಲ.
ನಿನ್ನ ಜ್ಞಾನಾಭಿಷೇಕವಿಲ್ಲದಿರೆ ನನ್ನನಾಳುವುದು ಶೂನ್ಯ.
ಶ್ರೀನಿವಾಸ, ವೆಂಕಟೇಶ, 'ಮಾಸ್ತಿ' - ತ್ರಿನಾಮಧಾರಿ ಮಾನ್ಯ.

ಸತ್ಯವನು ಪ್ರಿಯವಾಗಿ ಮಧುರಮೃದು
ನುಡಿಯಲ್ಲಿ, ಘನಗಹನ ವಿಚಾರವನು
ಸರಳ ಸಲಿಲವಾಗಿ, ಹರಿಯಗೊಡುವಲ್ಲಿ,
ಸಿದ್ಧಹಸ್ತನು ನೀನು. ನಿನ್ನ ಕೃಷಿ ಸಫಲ.
ಅಧಿಕ ಪುಟವಿಟ್ಟ 'ರಸಭಸ್ಮ' - ವಾರ್ಧಕ್ಯದಿಂದ
ಯೌವನಕೆ ಕಾಲಿಟ್ಟ ಅಕ್ಷಯಜ್ಞಾನ ; ಪ್ರಜ್ಞೆ
ಭಾರತಿಯ ಸುಕುಮಾರ, - ನೀ ಸನಾತನಿ.

ಶೀಲ ಮರ್ಯಾದೆಯನು ಮೀರದ ಸದ್ಗುಣ.
'ಹಿತೇನತುಕ್ತಮ್ ತಸ್ಯಭಾವಃ ಸಾಹಿತ್ಯಮ್'
ಪರಂಪರೆಯ ಬಳಕೆಯಿಂದ ಬಂದ ಲೇಖನಿ.
ನಲ್ನುಡಿಯ ಆಚಾರ್ಯ ನೀನು. 'ನಿನಗೆ ಶರಣು.'

ಸಕ್ಕದವು, ಕನ್ನಡವು, ಇಂಗ್ಲಿಷು
ರಸಬಾಳೆಹಣ್ಣು; ಕಳೆದ ಸಿಪ್ಪೆಯ ಕಬ್ಬು.
ಏನು ಮೋಹಕವೋ ನಿನ್ನ ಶೈಲಿ; ಶಬ್ದಬಂಧ.
ಮುತ್ತೈದೆ ಕರಿಮಣಿಯ ಸೊಬಗು -ಶಾಶ್ವತದ ಚಂದ.
ಸಹಜ ಸುಂದರ ಬಂಧುರ
ನಾಡಭಕ್ತಿ, ದೇಶಪ್ರೇಮ, ಸದ್ಭಾವ-
ಮೂಡಿನಿಂತ ಚದುರು, ಜಾಣು, ನಿನ್ನ 'ಲೋಕಚರಿತೆ',

ಪ್ರತ್ಯುತ್ಪನ್ನಮತಿ, ಸಮರ್ಥ;
ಜ್ಞಾನ-ಬುದ್ಧಿಗಳ ಸಾಣೆಹಿಡಿದ ಪುರುಷರೂಹು.
ನಿನ್ನೆದೆಯೊಳಗೆ ಸಾಹಿತ್ಯ 'ಶ್ರೀ'-ನಿವಾಸ
ನೀಮೇದ ಹೊಲಹಲವು:

ಗದ್ಯ, ಪದ್ಯ, ನಾಟಕ, ಕಥೆ, ಶೋಧನೆ, ವಿಮರ್ಶೆ, ಜೀವನ, ತರ್ಜುಮೆ.
ನಿನ್ನ ನರನಾಡಿ, ಶ್ರೋತಸ್ಸು, ಇಂದ್ರಿಯಗಳೆಲ್ಲ
ಸಾಹಿತ್ಯ ಶಾರದೆಯ ಮಂದಿರ (ಇವಗೇಕೆ ಬಿರುದು?)
ಗುರು ಋಣವ ತೀರಿಸಿದ, ದೇವಿಯನುಗ್ರಹಗ್ರಹೀತ.
ನಿನ್ನ ಋಣ ನಮಗೆಲ್ಲ-ಕನ್ನಾಡ ಮರಿಮಕ್ಕಳಿಗೆ
ನೀ ನೇಯ್ದ ಮಾಲೆಯ ರತ್ನಗಳ ಹೆಸರಿಸಲೇಕೆ?
'ಮಾತು ಮಾಣಿಕ್ಯ'ವೆಂಬ ನುಡಿ ನೀ ವಿಕ್ರಯಿಸಿದೆ.

ನೀನಿಂದು ಅಜ್ಜ (ಅಲ್ಲ)
ನೀನು ಹುಟ್ಟು ಅಜ್ಜ.
ನೀ ಕಲಿತನುಡಿ ಅಜ್ಜ ಮೀಟಿದ ದುಡಿ.
ನಲ್ಮೆ, ವಾತ್ಸಲ್ಯ ತುಳುಕುವ ಮಾತು; ಸವಿನುಡಿ.
ಅಜ್ಞಾತ ಮೊಮ್ಮಗನ ಎದೆಬಿರಿದ ಉಸಿರಿದುವೆ-
ನೀ ಸಾರ್ಥಕ್ಯ ಜೀವನದ ತಿದ್ದಿ ಬಾಳುತ್ತಿರುವೆ.
ಜೀವನದಿ ಈಜಾಡಿ ರಸವ ಹೀರುತ್ತಿರುವೆ.

ತಪಸಿ:
ಆರ್ಷೇಯ-ನಾವಿನ್ಯ, ರೂಢಿಸಿದ ಸುಸಂಸ್ಕೃತ ಸತ್ಪ್ರಜೆ ನೀನು.
ಲೇಖನಿ ಹಿಡಿದವಗೆ ನೀನು ಹರಸು, ಅಧಿಕಾರಿ ಆರ್ಯ, ಹರಸು ನೀನು.
ಹಲಗಾಲ ಬಾಳಿ ಬದುಕಿ ಹರಸು. ಹರಸುವುದಕಾಗಿ ಬಾಳು ಚಿರಕಾಲ.
'ಸಾರ್ಥಕ್ಯ ನಿನಗು ಇರಲಿಮಗು' ಎಂದು ಹರಸು ಶತಕಾಲ.

ವಿಶೇಷ ರಿಪೋರ್ಟು

ಎ.ಎಚ್. ಗೋಪಾಲರಾವ್

ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್ ಅವರು, ೧೯೩೧ನೇ ಇಸವಿಯಲ್ಲಿ ಮೈಸೂರು ಸರ್ಕಾರದಲ್ಲಿ ಸೆನ್‌ಸಸ್ ಸೂಪರಿಂಟೆಂಡೆಂಟರಾಗಿದ್ದರು. ಅವರ ಕಛೇರಿಯು ಬೆಂಗಳೂರಿನ ಶಂಕರಪುರದ ಮೇನ್ ರಸ್ತೆಯಲ್ಲಿತ್ತು.

ಸೆನ್‌ಸಸ್ ಕಂಪೈಲೇಷನ್ ಕೆಲಸಕ್ಕೆ, ರೂ. ೪೦ ಸಂಬಳದ ೧೦ ಸೂಪರ್ ವೈಸರುಗಳಿಗೂ, ರೂ. ೩೦ ಸಂಬಳದ ೨೦೦ ಕಂಪೈಲರ್‌ಗಳಿಗೂ, ಜಾಹಿರಾತು ಆಗಿ, ಸೂಪರ್‌ವೈಸರುಗಳಾಗಿ ನೇಮಕರಾದವರಲ್ಲಿ ನಾನೂ ಒಬ್ಬನಾಗಿದ್ದೆ. ಆಗತಾನೇ ಮೈಸೂರು ಮಹಾರಾಜ ಕಾಲೇಜಿನಿಂದ 'M. A. ' ಪದವೀಧರನಾಗಿ ಹೊರಬಂದಿದ್ದೆ.

ಒಬ್ಬ ಸೂಪರ್‌ವೈಸರ್ ಮತ್ತು ಇಪ್ಪತ್ತು ಕಂಪೈಲರ್ - ಈ ರೀತಿ ಹತ್ತು ಗುಂಪುಗಳನ್ನಾಗಿ ಮಾಡಿ, ಸಂಸ್ಥಾನದ ಮೂಲೆ ಮೂಲೆಯಿಂದ ಬಂದಿದ್ದ ಸೆನ್‌ಸಸ್ ಕಾರ್ಡುಗಳನ್ನು, ಎಲ್ಲಾ ಗುಂಪುಗಳಿಗೂ ಸಮನಾಗಿ ಜಿಲ್ಲಾವಾರು ಹಂಚಿ, ಸುಮಾರು ೨೦ ಸೆನ್‌ಸಸ್ ಲೆಖ್ಖಗಳನ್ನು ೬ ತಿಂಗಳುಗಳ ಅವಧಿಯಲ್ಲಿ ಪೂರೈಸುವ ಕೆಲಸವನ್ನು ನಮಗೆ ವಹಿಸಿದ್ದರು. ನಾವೆಲ್ಲರೂ ಚಿಕ್ಕವಯಸ್ಸಿನವರಾಗಿದ್ದು, ನಮ್ಮಲ್ಲಿ ಅನೇಕರು ಪದವೀಧರರಾಗಿಯೂ ಇದ್ದು, ಕೆಲಸವು ಬಿರುಸಾಗಿ ನಡೆಯುತ್ತಿದ್ದು, ಗುಂಪು ಗುಂಪಿಗೂ ಪೈಪೋಟಿ ಬಿದ್ದಿತ್ತು. ಸೆನ್‌ಸಸ್ ಅ|| ಸೂಪರಿಂಟೆಂಡೆಂಟರವರಾದ ಶ್ರೀ ಯಸ್. ನಾಗಪ್ಪನವರು ನಮ್ಮ ಮೇಲಿನ ನೇರ ಅಧಿಕಾರಿಗಳಾಗಿದ್ದರು.

ಸೆನ್‌ಸಸ್ ಸೂಪರಿಂಟೆಂಡೆಂಟರಾದ ಶ್ರೀ ವೆಂಕಟೇಶಯ್ಯಂಗಾರ್‌ರವರೂ ಮೇಲಿನ ಅಂತಸ್ತಿನಲ್ಲಿದ್ದ ಅವರ ಕೊಠಡಿಯಿಂದ ೪-೬ ದಿನಗಳಿಗೊಮ್ಮೆ ಬಂದು ಪ್ರತಿ ಗುಂಪಿನ ಕೆಲಸವನ್ನು ಪರೀಕ್ಷಿಸುತ್ತಿದ್ದರು. ಒಂದು ದಿನ ಅವರು ನನ್ನ ಕೊಠಡಿಗೆ ಬಂದಾಗ ನಮ್ಮ ಪಂಗಡದ ಕೆಲಸ ಯಥಾಪ್ರಕಾರ ಮುಂದುವರಿಯುತ್ತಿತ್ತು. ಆದರೆ ನಾನು ನನ್ನ ಸೀಟಿನಲ್ಲಿ ಕುಳಿತುಕೊಂಡು ಟಾಲ್‌ಸ್ಟಾಯ್ (Tolstoy)ರ ಇಂಗ್ಲಿಷ್ ಕಾದಂಬರಿಯನ್ನು ಓದುತ್ತಿದ್ದೆ. ಅದನ್ನು ಕಂಡು ಅವರು ಈ ರೀತಿ ಕೆಲಸದ ಕಾಲದಲ್ಲಿ ಓದುವುದು ತಪ್ಪೆಂದು ಆಕ್ಷೇಪಿಸಿದರು. ಮುಂದೆ ಮಾಡುವುದಿಲ್ಲವೆಂದು ಭರವಸೆಕೊಟ್ಟೆ.

ಕೆಲವು ದಿನಗಳ ನಂತರ ಶ್ರೀ ವೆಂಕಟೇಶಯ್ಯಂಗಾರ್‌ರವರು ಅವರ ಅಸಿಸ್ಟೆಂಟ್ ಶ್ರೀ ನಾಗಪ್ಪನವರೊಡನೆ ನನ್ನ ಕೊಠಡಿಗೆ ಬಂದಾಗ ನನ್ನ ಮೇಜಿನ ತುದಿಯಲ್ಲಿ ಇಟ್ಟಿದ್ದ H.G. Wellsರ ಕಾದಂಬರಿಯ ಪುಸ್ತಕವನ್ನು ಕಂಡು "You are again in the habit of reading novels during office hours" ಎಂದು ಪ್ರಶ್ನಿಸಿದರು. "I brought it to be read only during my afternoon leisure hour" ಎಂದು ಉತ್ತರ ಕೊಟ್ಟೆ. ಈ ಉತ್ತರ ಅವರನ್ನು

ಸಮಾಧಾನ ಪಡಿಸಲು ಆಗಲಿಲ್ಲ. "You seem to be proud of your M.A Degree" ಎಂದು ಸ್ವಲ್ಪ ಗಡುಸಾಗಿ ನನ್ನನ್ನು ಸಂಬೋಧಿಸಿದರು. ಆಗ ತಾನೇ ಕಾಲೇಜು ವಾತಾವರಣದಿಂದ ಹೊರಬಿದ್ದು, ಯಾವ ಜವಾಬ್ದಾರಿಯನ್ನೂ ಅರಿಯದ ನನಗೆ, ಅವರ ಈ ಮಾತುಗಳು ಸಹಿಸಲಾರದೇ "If I were so, I would not have taken up service under another M.A." ಎಂದು ನುಡಿದೆ. ತಕ್ಷಣವೇ ಅವರು ಯಾವ ಮಾತನ್ನೂ ಆಡದೇ ಶ್ರೀ ನಾಗಪ್ಪನವರನ್ನೂ ಕರೆದುಕೊಂಡು ತಮ್ಮ ಕೊಠಡಿಗೆ ವಾಪಸಾದರು. ಸಾಯಂಕಾಲದ ವೇಳೆಗೆ ನನಗೆ "Quit notice" ಬರುತ್ತದೆಂದು ನಿರೀಕ್ಷಿಸಿದ್ದೆ.

ಆದರೆ ಈ ಘಟನೆಯ ಪರಿಣಾಮ ಬೇರೆಯಾಗಿತ್ತು. ಶ್ರೀ ವೆಂಕಟೇಶಯ್ಯಂಗಾರ್ ಅವರು ತಮ್ಮ ಕೊಠಡಿಗೆ ಹೋದನಂತರ ನನ್ನ ಮನಸ್ಸನ್ನು ವೃಥಾ ನೋಯಿಸಿದರೆಂದು ಬಹಳ ಪಶ್ಚಾತ್ತಾಪ ಪಟ್ಟು, ವ್ಯಥೆ ಪಟ್ಟಂತೆ. ಅವರನ್ನು ಅವರ ಕೊಠಡಿಯಲ್ಲಿ ಸಾಯಂಕಾಲ ಕಾಣಬೇಕೆಂದು ಶ್ರೀ ನಾಗಪ್ಪನವರೊಡನೆ ನನಗೆ ಹೇಳಿ ಕಳುಹಿಸಿದರೂ, ನಾನು ಅವರನ್ನು ಕಾಣಲು ನಿರಾಕರಿಸಿದ ವಿಷಾದದ ಸಂಗತಿಯನ್ನು ನಾನು ನನ್ನ ಜೀವಮಾನದಲ್ಲಿ ಮರೆಯಲು ಸಾಧ್ಯವೇ ಇಲ್ಲ.

ನಮ್ಮ ಗುಂಪಿನ ಕೆಲಸ ಇತರ ಗುಂಪುಗಳಿಗಿಂತ ಬಹಳ ಮುಂದುವರಿದಿತ್ತು. ಅವರಲ್ಲಿ ನಾನು ತೋರಿಸಿದ ಅಸಭ್ಯತೆಯನ್ನು ಗಮನದಲ್ಲಿಡದೇ, ಶ್ರೀ ವೆಂಕಟೇಶ ಅಯ್ಯಂಗಾರ್‌ರವರು, ನನ್ನ ದಕ್ಷತೆ ಮತ್ತು ವಿದ್ಯಾರ್ಹತೆ ವಿಷಯದಲ್ಲಿ ಸರ್ಕಾರಕ್ಕೆ ಒಂದು ವಿಶೇಷ ರಿಪೋರ್ಟನ್ನು ಕಳುಹಿಸಿ ನನ್ನನ್ನು ಸೆಕ್ರೆಟೇರಿಯಟ್ಟಿನಲ್ಲಿ ಖಾಯಂ ಆಗಿ ನೇಮಕ ಮಾಡಿಕೊಳ್ಳಬೇಕೆಂದು ಶಿಫಾರ್ಸು ಮಾಡಿದ್ದ ಸಂಗತಿ, ನನಗೆ ಕಾಲಾನಂತರ ತಿಳಿಯಿತು.

ನನ್ನ ಮುಂದಿನ ಸರ್ಕಾರಿ ನೌಕರಿಯಲ್ಲಿ ಶ್ರೀ ವೆಂಕಟೇಶಯ್ಯಂಗಾರ್ ಅವರನ್ನು ಪುನಃ ಸೇವೆ ಮಾಡುವ ಲಭ್ಯ ನನಗೆ ದೊರಕಲಿಲ್ಲ. ಅವರನ್ನು ಕಂಡು ಅವರೊಡನೆ ಸಂಭಾಷಿಸುವ ಯಾವ ಸಂದರ್ಭವೂ ಸಹ ಒದಗಲಿಲ್ಲ. ಅವರು ನನ್ನಲ್ಲಿ ತೋರಿದ ಔದಾರ್ಯ, ಅಂತಃಕರಣ ಮತ್ತು ಅಭಿಮಾನಕ್ಕೆ ಅವರಿಗೆ ನಾನು ಸದಾ ಋಣಿ ಇರುತ್ತೇನೆ. ೪೧ ವರ್ಷಗಳ ನಂತರ ಈ ಪ್ರಸಂಗವನ್ನು ವ್ಯಕ್ತಪಡಿಸುವ ಅವಕಾಶ ನನಗೆ ದೊರೆತಿರುವುದಕ್ಕೆ ನನಗೆ ಹೆಚ್ಚಿನ ಸಮಾಧಾನವಾಗಿರುತ್ತೆ. ಇನ್ನು ಮುಂದಾದರೂ ಅವರ ದರ್ಶನ ಪಡೆದು, ಅವರಲ್ಲಿ ನನ್ನ ಪ್ರಣಾಮಗಳನ್ನು ಅರ್ಪಿಸಿ, ಅವರ ಆಶೀರ್ವಾದವನ್ನು ಹೊಂದುವ ಸೌಭಾಗ್ಯ ಲಭಿಸಲೆಂದು ಮನಸಾ ಆಶಿಸುತ್ತೇನೆ.

ಪ್ರಥಮ ಗ್ರಾಹಕ

ಹನುಮಂತರಾವ್ ಮಾಂಜರೇಕರ್

ಕನ್ನಡ ಪತ್ರಿಕಾ ಪ್ರಪಂಚದಲ್ಲಿ ದುಡಿಯುವವರಿಗೆ ಮತ್ತು ಅದರಲ್ಲಿ ಹೊಸದಾಗಿ ಸೇರಬಯಸುವವರಿಗೆ ಮಾಸ್ತಿಯವರ ಜೀವನ ಸಂಪಾದಕೀಯ ಸಂಪುಟಗಳು ನಿತ್ಯ ಪಾರಾಯಣದ ಗ್ರಂಥಗಳಾಗಿರಬೇಕು.

ಇಂತಹ ಮಹತ್ವಪೂರ್ಣ ಸಂಪುಟಗಳ ವಿಮರ್ಶೆ ಅಥವಾ ಪರಿಚಯ ಕನ್ನಡ ಪತ್ರಿಕೆಗಳಲ್ಲಿ ಬಂದುದು ನನ್ನ ಗಮನಕ್ಕೆ ಬಂದಿಲ್ಲ. ೩೬ ರೂಪಾಯಿ ಬೆಲೆಬಾಳುವ ಈ ಸಂಪುಟಗಳನ್ನು ಮಾಸ್ತಿಯವರು ಬಹುಶಃ ಪತ್ರಿಕೆಗಳಿಗೆ ವಿಮರ್ಶೆಗಾಗಿ ಕಳಿಸದೇ ಇರಲೂ ಬಹುದು. ಆದರೆ ಈ ಕಾರಣದಿಂದಾಗಿ ಅವುಗಳ ಬಗ್ಗೆ ಪತ್ರಿಕೆಗಳು ಒಂದು ಶಬ್ದವನ್ನೂ ಬರೆಯದೇ ಇದ್ದುದು ಶೋಚನೀಯವಲ್ಲವೇ?

ಈ ಸಂಪುಟಗಳ ಬಗ್ಗೆ ಪತ್ರಿಕೆಗಳಲ್ಲಿ ವಿಸ್ತಾರ ವಿಮರ್ಶೆ ಬರಬೇಕು. ಸಾಹಿತ್ಯದ ದೃಷ್ಟಿಯಿಂದ ಅವುಗಳ ಮೌಲ್ಯಮಾಪನವಾಗಬೇಕು. ಅವುಗಳ ಬಗ್ಗೆ ವಿಚಾರ ಸಂಕಿರಣಗಳು ನಡೆಯಬೇಕು. ನಮ್ಮ ಪತ್ರಿಕಾ ಪ್ರಪಂಚದ ವಿಕಾಸಕ್ಕೆ ಇದು ಅತ್ಯವಶ್ಯವಾಗಿ ನಡೆಯಬೇಕಾದ ಕಾರ್ಯ.

''ಸಂಪಾದಕೀಯ ಟಿಪ್ಪಣಿಗಳನ್ನು ವಿಶ್ವಾಸದಿಂದ ನೋಡಿದ ಮಿತ್ರರು ಅವನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವದು ಒಳಿತು ಎಂದು ಸೂಚಿಸಿದದುಂಟು'' ಎಂದು ಶ್ರೀ ಮಾಸ್ತಿಯವರು ಈ ಸಂಪುಟಗಳಿಗೆ ಬರೆದ ಮುನ್ನುಡಿಯಲ್ಲಿ ಹೇಳಿದ್ದಾರೆ. ಇವರಲ್ಲಿ ನಾನೂ ಒಬ್ಬನಾಗಿದ್ದೇನೆಂದು ಇಲ್ಲಿ ತಿಳಿಸಲು ಬಯಸುತ್ತೇನೆ.

ಈ ಸಂಪುಟಗಳನ್ನು ಪ್ರಕಟಿಸುವ ಮೊದಲು ಈ ಬರಹಗಳಲ್ಲಿ ಕೆಲವೊಂದನ್ನೊಳಗೊಂಡ ''ಪ್ರಸಂಗ'' ಎಂಬ ಹೆಸರಿನ ಒಂದು ಪುಸ್ತಕವನ್ನು ಶ್ರೀ ಮಾಸ್ತಿಯವರು ಪ್ರಕಟಿಸಿದರು. ಅದರ ಜಾಹಿರಾತನ್ನು ಓದಿ ಒಂದು ಪ್ರತಿಯನ್ನು ವ್ಹಿ.ಪಿ. ಮೂಲಕ ಕಳಿಸಿಕೊಡಬೇಕೆಂದು ಅವರಿಗೆ ಬರೆದೆ. ಅದನ್ನು ಹಾಗೆ ಕಳಿಸುವಾಗ ಅದರ ಜೊತೆಗೆ ತಮ್ಮ ಹಸ್ತಾಕ್ಷರದ ಇನ್ನೊಂದು ಪ್ರತಿಯನ್ನು ನನಗೆ ಕಾಣಿಕೆಯಾಗಿ ಕಳಿಸಿದ್ದರು. ಆ ನಂತರ ನಮ್ಮಿಬ್ಬರ ಪ್ರತ್ಯಕ್ಷ ಭೇಟಿಯಲ್ಲಿ ಹೀಗೆ ಮಾಡಲು ಕಾರಣವೇನೆಂದು ಕೇಳಿದಾಗ, ನಾನ್ನೇ ಆ ಪುಸ್ತಕಕ್ಕೆ ಪ್ರಥಮ ಗ್ರಾಹಕನಾಗಿರುವ ವಿಷಯ ತಿಳಿಯಿತು.

ಸಂಪಾದಕೀಯ ನೀತಿಯನ್ನು ವಿವರಿಸುತ್ತ ಶ್ರೀ ಮಾಸ್ತಿಯವರು ''ಸ್ವಾತಂತ್ರವಾಗಿ ವಿಚಾರಮಾಡಿ ಪ್ರಬಲರಾದವರು ಅಸಮಾಧಾನಪಟ್ಟಾರೆಂದು ಭಯವಿಟ್ಟುಕೊಳ್ಳದೇ, ಯಾರಿಗೆ ಅನುಕೂಲವಾಗಲೆಂದು ಪಕ್ಷಪಾತ ತೋರದೆ, ತನಗೆ ಸತ್ಯವೆಂದು ತೋರಿದ್ದನ್ನು ಹೇಳುವದು ಸಂಪಾದಕನ ಶ್ರೇಷ್ಠ ಲಕ್ಷಣ'' ಎಂದು ಅವರು ಹೇಳಿದುದು ನಮ್ಮ ಸಂಪಾದಕ ವರ್ಗಕ್ಕೆ ಯಾವಾಗಲೂ ಮಾರ್ಗದರ್ಶಕವಾಗಬಲ್ಲುದು.

ಶ್ರೀ ಮಾಸ್ತಿಯವರ ಸಂಪಾದಕೀಯ ಶೈಲಿ ಮಧುರ, ಸರಳ, ಖಚಿತ, ನೇರ. ಈ ಶೈಲಿಗೆ ಬೆಡಗು ಬಿನ್ನಾಣಗಳಿಲ್ಲ ಅದು ನಿರಾಭರಣ ಸುಂದರಿ. ನಯದ ಎಲ್ಲೆಯನ್ನು ಎಲ್ಲಿಯೂ ಮೀರುವುದಿಲ್ಲ. ಮಾತು ಸಾಮಾನ್ಯವಾದರೂ ಪರಿಣಾಮ ವಿಸ್ಮಯಕರ. ಅಧಿಕಾರದಲ್ಲಿರುವವರ ಮನಸ್ಸನ್ನು ಮುಟ್ಟುವದಿಲ್ಲವೆಂದು ಖಚಿತವಾದಮೇಲೆ ಅವರು ಸ್ವಲ್ಪ ಗಟ್ಟಿಯಾಗಿಯೂ ಬರೆದುದುಂಟು. ಆಗ ಚಾಟಿಯ ಏಟಿನಂತೆ ಅವರ ಶೈಲಿ ಪರಿಣಾಮಕಾರಿಯಾಗಬಲ್ಲದು.

ನಮ್ಮ ರಾಷ್ಟ್ರದ ಮತ್ತು ಪ್ರಪಂಚದ ಕಳೆದ ಹದಿನೈದು ವರ್ಷಗಳಲ್ಲಿ ಇತಿಹಾಸದ ಮುಖ್ಯ ವೀರರುಗಳನ್ನು ಕುರಿತು ದೇಶ-ಪ್ರೇಮಿ, ಲೋಕ-ಪ್ರೇಮಿ ಆದ ಭಾರತೀಯನ ಮನಸ್ಸು ಹೇಗೆ ಹರಿಯಿತು ಎನ್ನುವುದನ್ನು ಈ ಸಂಪುಟಗಳಲ್ಲಿ ಕಾಣಬಹುದು. ಜನತೆಯ ಹಿತದ ದೃಷ್ಟಿ ಅವುಗಳಲ್ಲಿದೆ. ಕನ್ನಡ ಜನರ ಇಂದಿನ ಸಂಸ್ಕೃತಿಯನ್ನು ಗಂಭೀರವಾಗಿ ಪ್ರತಿನಿಧಿಸುವ ಪ್ರಯತ್ನವೂ ಅವುಗಳಲ್ಲಿದೆ. ಅವಲೋಕನ ಮಾಡುವಲ್ಲಿ ಪತ್ರಿಕೆಯ ನಿಲುವು ಸಹೃದಯವಾಗಿರಬೇಕೆಂಬ ಎಚ್ಚರವನ್ನು ನಾವು ಅವುಗಳಲ್ಲಿ ಕಾಣಬಹುದು.

ಈ ಬೃಹತ್ ಸಂಪುಟಗಳನ್ನು ಪ್ರಕಟಿಸಿ ಶ್ರೀ ಮಾಸ್ತಿಯವರು ಕನ್ನಡಕ್ಕೆ ಮಹೋಪಕಾರ ಮಾಡಿದ್ದಾರೆ. ಕೃತಜ್ಞತೆಯನ್ನು ತೋರಿಸಿ ಅವರ ಸಾಹಸವನ್ನು ಸಾರ್ಥಕಗೊಳಿಸುವದು ಕನ್ನಡಿಗರ ಪವಿತ್ರ ಕರ್ತವ್ಯ.

ಮಾಸ್ತಿ ರೀತಿ

ಕೆ. ಪ್ರಭುಶಂಕರ

ಕೆಲವು ವರ್ಷಗಳ ಹಿಂದೆ ಶ್ರೀ ಮಾಸ್ತಿಯವರಿಗೆ ತುಂಬ ಆಪ್ತರಾಗಿದ್ದ ಸಾಹಿತಿಯೊಬ್ಬರಿಗೆ ಮನಸ್ಸಿನ ಸ್ವಾಸ್ಥ್ಯ ತಪ್ಪಿತು. ದೀರ್ಘಕಾಲ ಅವರು ಕಚೇರಿಗೆ ಹೋಗಿ ದುಡಿಯುವಂತಿರಲಿಲ್ಲ. ಹೆಂಡತಿ, ಐದು ಮಕ್ಕಳು. ಮಕ್ಕಳು ಇನ್ನೂ ಚಿಕ್ಕವರು. ಇವರಿಗೆ ತುಂಬ ಜನ ಬಂಧು ಬಾಂಧವರು. ಆದರೆ ಯಾರೂ ಇವರಿಗೆ ನೆರವು ನೀಡಲು ಮುಂದೆ ಬರಲಿಲ್ಲ. ಸ್ವಲ್ಪ ಸಹಾಯಮಾಡುವ ಮನೋವೃತ್ತಿಯನ್ನು ತೋರಿಸಿದರೂ ಇಡೀ ಸಂಸಾರದ ಜವಾಬ್ದಾರಿ ತಮ್ಮ ತಲೆಯಮೇಲೆ ಬೀಳುತ್ತದೆ ಎಂಬ ಭಯ ಅವರಿಗೆ.

ಮಾಸ್ತಿಯವರಿಗೆ ಇಡೀ ಸಂಗತಿ ತಿಳಿಯಿತು. ಸೋದರ ಸಾಹಿತಿಯ ಕುಟುಂಬ ವರ್ಗದವರ ದುಃಸ್ಥಿತಿ ಅವರ ಹೃದಯವನ್ನು ಕರಗಿಸಿತು. ಆದರೆ ಇವರು ತಾವಾಗಿ ಮುಂದೆ ಬಂದು ಏನಾದರೂ ನೀಡಿದರೆ ಅವರು ಸ್ವೀಕರಿಸುತ್ತಾರೆಯೋ ಇಲ್ಲವೋ ಸಂದೇಹ. ಅಲ್ಲದೆ ನೀಡುವ ಮನಸ್ಸು ಎಷ್ಟು ವಿಶಾಲವೋ ನೀಡುವ ರೀತಿಯೂ ಅಷ್ಟೇ ಉದಾತ್ತವಾಗಿರಬೇಕು ಎಂಬ ತತ್ತ್ವ ಅವರದ್ದು. ಆದ್ದರಿಂದ ಹಿರಿಯರಾದ ಮಾಸ್ತಿಯವರು ಪ್ರತಿ ತಿಂಗಳೂ ನಿರ್ದಿಷ್ಟ ದಿನ ಆ ಸೋದರ ಸಾಹಿತಿಯ ಮನೆಗೆ ನಡೆದು, ದೇವರ ಕೋಣೆಯಲ್ಲಿ ಕುಳಿತಿದ್ದು ದೇವರಿಗೆ ನಮಸ್ಕಾರ ಮಾಡಿ ಇಪ್ಪತ್ತು ರೂಪಾಯಿ ಇಟ್ಟು ಬರುತ್ತಿದ್ದರು. ದೇವರ ಕೃಪೆ ಎಂಥ ಶುದ್ಧ ಪಾತ್ರದ ಮೂಲಕ ಹರಿದು ಬರುತ್ತಿದೆ ಎಂದು ತಿಳಿದ ಆ ಮನೆಯವರು ಈ ನೆರವನ್ನು ಹೇಗೆ ತಾನೆ ಸ್ವೀಕರಿಸದೆ ಹೋದಾರು?

ಇಂದಿಗೂ ಆ ಮನೆಯ ಮಕ್ಕಳು-ಈಗ ಅವರೆಲ್ಲ ವಿದ್ಯಾವಂತರು-ಕಂಬನಿ ತುಂಬಿ ಕೃತಜ್ಞತೆಯಿಂದ ಮಾಸ್ತಿಯವರ ಆ ಸಕಾಲಿಕ, ಅಪ್ರಾರ್ಥಿತ, ಅನಿರೀಕ್ಷಿತ ನೆರವನ್ನೂ, ಅದು ಬಂದ ಉದಾತ್ತ ರೀತಿಯನ್ನೂ ನೆನೆಯುತ್ತಾರೆ.

ಶ್ರೀನಿವಾಸರ 'ಸಾಹಿತ್ಯ ಲಾಲನೆ'

ಎಸ್. ಚೆನ್ನಪ್ಪ

ಸುಮಾರು ನಾಲ್ಕು ವರ್ಷಗಳ ಹಿಂದಿನ ಮಾತು: 'ಕನ್ನಡದ ರತ್ನ'ರಾಗಿರುವ ಶ್ರೀ ಜಿ.ಪಿ. ರಾಜರತ್ನಂ ಅವರ ಅರವತ್ತನೆಯ ಹುಟ್ಟು ಹಬ್ಬವನ್ನು ಆಚರಿಸಲು ಬೆಂಗಳೂರಿನಲ್ಲಿ ಒಂದು ಸಮಾರಂಭ ಏರ್ಪಾಡಾಗಿತ್ತು. ಆ ಸಮಾರಂಭವನ್ನು ಏರ್ಪಡಿಸಿದ್ದವರು ಪ್ರಸಿದ್ಧ ಮುದ್ರಣಕಾರರಾಗಿರುವ ಬಿ.ಬಿ.ಡಿ. ಪ್ರೆಸ್ ಮಾಲಿಕರು. ಶ್ರೀ ರಾಜರತ್ನಂ ಅವರ ಬಹುಪಾಲು ಕೃತಿಗಳನ್ನು ಅಚ್ಚು ಮಾಡಿದ ಕೀರ್ತಿ ಇವರದು.

ಆ ಸಮಾರಂಭ ನಡೆದಿದ್ದು ಬಸವಗುಡಿಯಲ್ಲಿರುವ ನ್ಯಾಷನಲ್ ಕಾಲೇಜ್‌ನ ಸಭಾಂಗಣದಲ್ಲಿ ಆ ಸಮಾರಂಭಕ್ಕೆ ಇಬ್ಬರು ಅಧ್ಯಕ್ಷರಾಗಿದ್ದರು. ಒಬ್ಬರು ಶ್ರೀ ಡಿ.ವಿ.ಜಿ. ಅವರು, ಇನ್ನೊಬ್ಬರು ಅಣ್ಣ ಮಾಸ್ತಿ ಅವರು. ಖ್ಯಾತ ಸಾಹಿತಿಗಳಾದ ಡಾ.ವಿ. ಕೃ. ಗೋಕಾಕ್, ವಿ.ಸೀ., ಅ.ನ.ಕೃ. ಮೊದಲಾದವರು ಪ್ರೇಕ್ಷಕರಾಗಿದ್ದರು! ಸಾಹಿತ್ಯ ಪ್ರಿಯರಿಂದ ಸಭಾಂಗಣ ಕಿಕ್ಕಿರಿದು ತುಂಬಿತ್ತು. ಅದೊಂದು ಅಪರೂಪ ಸಂಜೆ.

ಖ್ಯಾತ ಬರೆಹಗಾರರಾದ ಶ್ರೀ ರಾ.ಶಿ. (ಡಾ. ಎಂ. ಶಿವರಾಮ್) ಅವರು ಬರೆದಿದ್ದ 'ಇಂದಾನೊಂದು ಕಾಲದಲ್ಲಿ' ಎಂಬ ಪುಸ್ತಕ ಅದೇ ಸಮಾರಂಭದಲ್ಲಿ ಬಿಡುಗಡೆಯಾಯಿತು. ಆ ಪುಸ್ತಕದ ಮಾರಾಟದ ಹೊಣೆಯನ್ನು ಶ್ರೀ ರಾಜರತ್ನಂ ಅವರೇ ವಹಿಸಿಕೊಂಡಿದ್ದರು. ಆದ್ದರಿಂದ ರಾಜರತ್ನಂ ಅವರು, ಪುಸ್ತಕ ಬೆಲೆ, ಆ ಪುಸ್ತಕದ ಮಾರಾಟದಿಂದ ಸಂಗ್ರಹವಾಗುವ ಮೊತ್ತ ಮತ್ತು ಅದರ ಉಪಯೋಗ ಮೊದಲಾದ ವಿವರಗಳನ್ನು ಸಭೆಗೆ ತಿಳಿಸಿ ಇನ್ನೇನು ಕುಳಿತುಕೊಳ್ಳಬೇಕು ಎನ್ನುವಷ್ಟರಲ್ಲಿಯೇ, ಪಕ್ಕದಲ್ಲಿ ಕುಳಿತಿದ್ದ ಅಣ್ಣ ಮಾಸ್ತಿ ಅವರು ಜೇಬಿನಿಂದ ಒಂದೊಂದು ರೂಪಾಯಿನ ಮೂರು ನೋಟುಗಳನ್ನು ತೆಗೆದು, ರಾಜರತ್ನಂ ಕೈಯಲ್ಲಿಡುತ್ತಾ 'ನನಗೊಂದು ಪ್ರತಿ ಕೊಡಿ' ಎಂದರು. ಅವಕ್ಕಾದ ರಾಜರತ್ನಂ ಕ್ಷಣಾರ್ಧದಲ್ಲಿಯೇ ಸಾವರಿಸಿಕೊಂಡು, ಮಾಸ್ತಿ ಅವರಿಂದ ದುಡ್ಡು ತೆಗೆದುಕೊಂಡು, ಅವರಿಗೆ ಒಂದು ಪ್ರತಿಯನ್ನು ಕೊಟ್ಟರು. ಆ ಪುಸ್ತಕದ ಬೆಲೆ ಎರಡೂವರೆ ರೂಪಾಯಿ. ಮಾಸ್ತಿ ಅವರಿಗೆ ಎಂಟಾಣೆ ವಾಪಸ್ಸು ಕೊಡಬೇಕಾಗಿತ್ತು. ಆದರೆ ರಾಜರತ್ನಂ ಅವರಲ್ಲಿ ಚಿಲ್ಲರೆ ಇರಲಿಲ್ಲ. ಆದ್ದರಿಂದ 'ಆ ಎಂಟಾಣೆಯನ್ನು ನಾನು ಕೊಡುವುದಿಲ್ಲ. ಅದನ್ನೂ ಲೆಕ್ಕಕ್ಕೆ ಸೇರಿಸಿಕೊಳ್ಳುತ್ತೇನೆ' ಎಂದು ಬಿಟ್ಟರು! ಶ್ರೀನಿವಾಸರು ನಸುನಕ್ಕರು. ಈ ಅಪೂರ್ವ ದೃಶ್ಯವನ್ನು ನೋಡುತ್ತಿದ್ದ ಇಡೀ ಸಭೆ ಜೋರಾಗಿ ಚಪ್ಪಾಳೆ ಹಾಕಿ, ಹರ್ಷೋದ್ಗಾರ ಮಾಡಿತು; ಶ್ರೀನಿವಾಸರು ನಗುತ್ತಲೇ ಇದ್ದರು!

ಶ್ರೀ ರಾಜರತ್ನಂ ಅವರಿಂದ ಖಂಡಿತವಾಗಿಯೂ ಬರುತ್ತಿದ್ದ 'ಗೌರವದ ಪ್ರತಿ'ಗೂ ಕಾಯದೆ, ಮಾಸ್ತಿ ಅವರು ದುಡ್ಡು ಕೊಟ್ಟು ಪುಸ್ತಕವನ್ನು ಕೊಂಡುಕೊಂಡಿದ್ದು ಅವರ ಸಹೃದಯತೆಯನ್ನು ಜೊತೆಗೆ ಅವರ 'ಸಾಹಿತ್ಯ ಲಾಲನೆ'ಯನ್ನು ವ್ಯಕ್ತಪಡಿಸಿದೆ. ಈ ಘಟನೆ ನಡೆದು ನಾಲ್ಕು ವರ್ಷಗಳು ಕಳೆದಿವೆ, ಆದರೆ ಆ ಚಿತ್ರ ನನ್ನ ಮನಸ್ಸಿನಲ್ಲಿ ಇಂದಿಗೂ ಅಚ್ಚ ಹಸಿರಾಗಿದೆ.

ಮಹಾದಾನಿ

ಭಾರತಿ ಶ್ರೀನಿವಾಸ ಅಯ್ಯಂಗಾರ್

ನಾನು ಚಿಕ್ಕಂದಿನಲ್ಲಿ ಮಾಸ್ತಿಯವರ ಸಣ್ಣಕತೆಗಳು, ಚಿಕ್ಕ ನಾಟಕಗಳಾದ ಶಾಂತಾ ಸಾವಿತ್ರಿ ಸರಳರಗಳೆಯಲ್ಲಿ ಕನಕದಾಸರ ಕತೆ, ಇವುಗಳನ್ನು ಓದಿ ಅವುಗಳಲ್ಲಿನ ಸರಳವಾದ ಭಾಷಾ ಶೈಲಿ, ಮತ್ತು ಸೊಬಗಿನಿಂದ ಆಕರ್ಷಿತನಾಗಿ ಆಗ ನಾನು ಮಾಸ್ತಿಯವರನ್ನು ಪ್ರತ್ಯಕ್ಷ ನೋಡದಿದ್ದರೂ, ಪರೋಕ್ಷವಾಗಿ ಅವರಲ್ಲಿ ಪೂಜ್ಯ ಭಾವನೆಯನ್ನು ಹೊಂದಿದ್ದೆ.

ಮಾಸ್ತಿಯವರನ್ನು ಕಾಣಬೇಕೆಂದಿದ್ದ ನನ್ನ ಆಸೆ, ೧೯೫೨ರಲ್ಲಿ ಬೆಂಗಳೂರಿನಲ್ಲಿ ನಮ್ಮ ಬಂಧುಗಳೊಬ್ಬರ ಮದುವೆಯ ಸಮಯದಲ್ಲಿ ನೆರವೇರಿತು. ಮಾಸ್ತಿಯವರೂ ನಾನೂ ಒಂದೇ ಜನಾಂಗಕ್ಕೆ ಸೇರಿದವರು, ದೂರದ ಬಾಂಧವ್ಯ ಇದ್ದರೂ ಇರಬಹುದು.

ಮಾಸ್ತಿಯವರ ಪ್ರೀತಿ ವಾತ್ಸಲ್ಯಗಳಿಗೆ, ಬಾಂಧವ್ಯ- ಅಂತಸ್ತು ಸಣ್ಣವರು ದೊಡ್ಡವರು ಎಂಬ ತಾರತಮ್ಯವೇ ಇಲ್ಲ. ಒಂದು ಸಾರಿ ಪರಿಚಯವಾದರೆ ಸರಿ, ಆ ವ್ಯಕ್ತಿಯನ್ನು ಎಂದಿಗೂ ಮರೆಯುವ ಸ್ವಭಾವದವರಲ್ಲ. ಸಾಹಿತಿಗಳು ಬರಹಗಾರರು ಅಲ್ಲದೆ, ಕನ್ನಡದ ಪುಸ್ತಕಗಳನ್ನು ಓದುವ ಅಭ್ಯಾಸ ಬೆಳೆಸಿ ಕೊಂಡಿರುವವರನ್ನು ಕಂಡರೂ, ಅವರಿಗೆ ಎಷ್ಟೋ ಆನಂದ ತಮ್ಮನ್ನು ಕಾಣಲು ಬಂದವರಿಗೆ ಯಾವುದಾದರೂ ಪುಸ್ತಕವನ್ನು ತಮ್ಮ ಪ್ರೀತಿಪೂರ್ವಕ ಹಸ್ತಾಕ್ಷರದೊಂದಿಗೆ ಕೊಡುವುದನ್ನು ನಾನು ಎಷ್ಟೋ ಸಾರಿ ಕೇಳಿದ್ದೇನೆ.

ನನಗೂ ಆ ಸುಯೋಗ ಒಂದು ಸಾರಿ ಲಭಿಸಿದೆ. ನಮ್ಮ ಹೋಬಳಿ ಕೇಂದ್ರವೂ, ನೆರೆಯ ಗ್ರಾಮವೂ ಆದ ಕೋಲಾರ ತಾಲ್ಲೂಕು ನರಸಾಪುರದಲ್ಲಿ ೧೯೬೩ನೆ ಇಸ್ವಿಯಲ್ಲಿ, ಭಾರತ ರತ್ನ ಎಂ. ವಿಶ್ವೇಶ್ವರಯ್ಯನವರ ಅಂಕಿತದಲ್ಲಿ, ಒಂದು ಖಾಸಗಿ ಪ್ರೌಢಶಾಲೆ ಸ್ಥಾಪಿಸಲಾಯಿತು. ಈಗ ಶಾಲೆ ಉತ್ತಮವಾದ ಸ್ಥಿತಿಯಲ್ಲಿ ನಡೆಯುತ್ತಿದೆ.

೧೯೬೫ ಜೂನ್ ಸುಮಾರಿನಲ್ಲಿ, ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸಿ.ಆರ್. ಸೀತಾರಾಮಯ್ಯನವರು, (ಈಗಲೂ ಅವರೇ ಮುಖ್ಯೋಪಾಧ್ಯಾಯರು ಆಗಿದ್ದಾರೆ) ನನ್ನನ್ನು ಕಂಡು ಶಾಲೆಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಒಂದು ಪುಸ್ತಕ ಭಂಡಾರವು ಶಾಲೆಗೆ ಅವಶ್ಯಕವೆಂದೂ, ಪುಸ್ತಕಗಳನ್ನು ಕೊಂಡುಕೊಳ್ಳಲು ಹಣದ ಅಭಾವವಿರುವುದರಿಂದ, ಸಹೃದಯರಾದ ಸಾಹಿತಿಗಳನ್ನೂ ಬರಹಗಾರರನ್ನೂ ಕಂಡು; ಪ್ರಾರ್ಥಿಸಿದಲ್ಲಿ ಅವರು ಉಚಿತವಾಗಿ ಸಾಧ್ಯವಾದಷ್ಟು ಪುಸ್ತಕಗಳನ್ನು ದಾನವಾಗಿ ಕೊಡಬಹುದೆಂದೂ, ಸಾಹಿತಿಗಳ ಬರಹಗಾರರ ಪರಿಚಯವಿರುವವರು• ಪ್ರಯತ್ನಿಸಿದರೆ ಅನುಕೂಲವೆಂದು ಹೇಳಿದರು.

ನಾನು, ಮಾಸ್ತಿಯವರನ್ನು ಪ್ರಾರ್ಥಿಸಿ ಸಾಧ್ಯವಾದಷ್ಟು ಪುಸ್ತಕಗಳನ್ನು ಸಂಗ್ರಹಿಸಿಡಬೇಕೆಂದು ಅವರ ಸೂಚನೆ. ಮಾಸ್ತಿಯವರ ಸೌಜನ್ಯದ ಪರಿಚಯ ನನಗೆ

ಆಗಿದ್ದುದರಿಂದ, ಧೈರ್ಯವಾಗಿ ಒಂದು ದಿನ, ಬೆಂಗಳೂರಿನಲ್ಲಿ ಅವರ ಮನೆಯಲ್ಲಿಯೇ ಅವರನ್ನು ಕಂಡು ನಾನು ಬಂದ ಉದ್ದೇಶ ತಿಳಿಸಿದೆ.

ಕೂಡಲೇ ಮಾಸ್ತಿಯವರು, ''ನಿಮ್ಮ ನರಸಾಪುರದಲ್ಲಿಯೂ ಪ್ರೌಢಶಾಲೆ ಇರುವುದು ಸಂತೋಷದ ವಿಷಯ, ಮಾಲೂರು ತಾಲ್ಲೂಕಿನ ಮಾಸ್ತಿ ಮತ್ತು ಶಿವಾರ ಪಟ್ಟಣ ಈ ಎರಡು ಕಡೆಯ ಪ್ರೌಢಶಾಲೆಗಳವರೂ ತಮ್ಮ ತಮ್ಮ ಶಾಲೆಗಳಿಗೆ ಪುಸ್ತಕಗಳನ್ನು ಕೊಡಬೇಕೆಂದು ನನ್ನನ್ನು ಕೇಳಿರುತ್ತಾರೆ. ಇನ್ನೂ ಕೊಟ್ಟಿಲ್ಲ. ಶಾಲೆಗಳಿಗೆ ಕೊಡಬಹುದಾದ ಪುಸ್ತಕಗಳನ್ನು ವಿಂಗಡಿಸಿ ಒಟ್ಟಿಗೆ ಸೇರಿಸಿ ಒಂದೇ ಸಾರಿ ಮಾಸ್ತಿ ಶಿವಾರಪಟ್ಟಣ ನರಸಾಪುರ ಈ ಮೂರು ಕಡೆಗೂ ಕಳುಹಿಸುತ್ತೇನೆ'' ಎಂದು ಹೇಳಿದರು.

(ಇಲ್ಲಿ ಮುಖ್ಯವಾದ ಒಂದು ಸಂಗತಿಯನ್ನು ತಿಳಿಸಬೇಕಾದ್ದೂ ನನ್ನ ಕರ್ತವ್ಯ. ಮಾಲೂರು ತಾಲ್ಲೂಕಿನ ಮಾಸ್ತಿ ಗ್ರಾಮವು ಶ್ರೀಮಾನ್ ಮಾಸ್ತಿ-ಶ್ರೀನಿವಾಸರ ಹುಟ್ಟೂರು ಮತ್ತು ಅದೇ ತಾಲ್ಲೂಕಿನ ಶಿವಾರಪಟ್ಟಣ ಮಾಸ್ತಿಯವರು ಪ್ರಾಥಮಿಕ ಶಿಕ್ಷಣ ಪಡೆದ ಸ್ಥಳ.

ಮಾಸ್ತಿಯವರು ತಮ್ಮ ಹುಟ್ಟೂರು ಆದ ಮಾಸ್ತಿ ಮತ್ತು ತಾವು ಪ್ರಾಥಮಿಕ ಶಿಕ್ಷಣ ಪಡೆದ ಶಿವಾರಪಟ್ಟಣ, ಈ ಎರಡು ಊರುಗಳ ಮಾಧ್ಯಮಿಕ ಶಾಲೆಗಳಲ್ಲಿ ಏಳನೇ ತರಗತಿಯಲ್ಲಿ ಎಲ್ಲರಿಗಿಂತ ಹೆಚ್ಚು ಅಂಕಗಳನ್ನು ಪಡೆದು ತೇರ್ಗಡೆ ಹೊಂದುವ ಒಬ್ಬ ಪ್ರತಿಭಾವಂತ ವಿದ್ಯಾರ್ಥಿಗೆ ಬಹುಮಾನವಾಗಿ ಕೊಡಲು, ವರ್ಷಂಪ್ರತಿ ೫೦ ರೂಪಾಯಿಗಳ ಬಡ್ಡಿ ಬರುವಹಾಗೆ, ತಲಾ ೧೪೦೦ ರೂಪಾಯಿಗಳ ಪುದುವಟ್ಟು ನಿಧಿಯನ್ನು ಸರ್ಕಾರದಲ್ಲಿ ಠೇವಣಾತಿ ಇಟ್ಟಿರುತ್ತಾರೆ. ಕೋಲಾರ ಜಿಲ್ಲಾ ವಿದ್ಯಾಧಿಕಾರಿಗಳು ಪ್ರತಿವರ್ಷದ ಈ ಹಣವನ್ನು ಪಡೆದು ಮೇಲ್ಕಂಡ ಶಾಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನವಾಗಿ ಕೊಡುತ್ತಾರೆ. ಈ ಪದ್ಧತಿ, ವಿದ್ಯಾರ್ಥಿಗಳು ಆಸಕ್ತಿಯಿಂದ ವ್ಯಾಸಂಗಮಾಡಲು ಸಹಕಾರಿಯಾಗಿದೆ. ಈ ವಿಷಯವನ್ನು ಮಾಸ್ತಿಯವರೇ ಒಂದು ಸಾರಿ ನನಗೆ ತಿಳಿಸಿದರು.)

ನರಸಾಪುರದ ಪ್ರೌಢಶಾಲೆಗಾಗಿ ಕೆಲವು ಪುಸ್ತಕಗಳನ್ನು ಮಾಸ್ತಿಯವರು ಕೊಡುವುದಾಗಿ ತಿಳಿಸಿದಾಗ, ಪುಸ್ತಕಗಳನ್ನು ಕೊಡುವ ಸಮಯ ನನಗೆ ತಿಳಿಸಿದರೆ ನಾನೇ ಅವರಲ್ಲಿ ಹೋಗಿ ಪುಸ್ತಕಗಳನ್ನು ಪಡೆಯುವುದಾಗಿ ನಾನು ಹೇಳಿದೆ.

ಅದಕ್ಕೆ ಮಾಸ್ತಿಯವರು. ''ನೀನು ಕೇಳಿದ್ದಾಯಿತು. ನಾನು ಕೊಡಲು ಒಪ್ಪಿದೆ. ಇನ್ನು ಅದರ ಯೋಚನೆ ನಿನಗೆ ಅನಾವಶ್ಯಕ. ನಾನೇ ನರಸಾಪುರದ ಶಾಲೆಗೆ ರವಾನಿಸುತ್ತೇನೆ'' ಎಂದರು. ಪುಸ್ತಕಗಳನ್ನು ಸಾಗಿಸಿಕೊಂಡು ಬರುವ ಕಷ್ಟವೂ ತಪ್ಪಿತು ಎಂದು ನಾನು ಸಂತೋಷದಿಂದ ಹಿಂದಿರುಗಿದೆ.

ನಂತರ ಮಾಸ್ತಿಯವರಿಗೆ ಮಾತೃವಿಯೋಗ ಘಟನೆ, ಮುಂತಾದ ಕಾರಣಗಳಿಂದ ಅವರ ಪುಸ್ತಕಗಳು ಬರಲು ಸಾವಕಾಶವಾಯಿತು. ೧೯೬೭ ಸೆಪ್ಟಂಬರಿನಲ್ಲಿ ಮಾಸ್ತಿಯವರು ತಮ್ಮ ಪ್ರತಿನಿಧಿಯೊಬ್ಬರ ಸಂಗಡ ಸುಮಾರು ೧೨೫ ಪುಸ್ತಕಗಳನ್ನು ಭದ್ರವಾಗಿ ಪ್ಯಾಕ್ ಮಾಡಿ, ಪುಸ್ತಕಗಳ ಕ್ರಮಸಂಖ್ಯೆ ಹೆಸರು ಮೊದಲಾದ ಪಟ್ಟಿಯೊಂದಿಗೆ ನರಸಾಪುರದ ಪ್ರೌಢಶಾಲೆ ಮುಖ್ಯೋಪಾಧ್ಯಾಯರಿಗೆ ತಲಪಿಸಿ ರಶೀತಿ ಪಡೆದು ಬರಲು ಕಳುಹಿಸಿದರು.

ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸೀತಾರಾಮಯ್ಯನವರಿಗಂತೂ ನಿರೀಕ್ಷೆಗೆ ಮೀರಿದ ಇಷ್ಟು ಹೆಚ್ಚು ಸಂಖ್ಯೆಯ ಪುಸ್ತಕಗಳನ್ನು ಕಂಡು ತಡೆಯಲಾರದ ಆನಂದ.

ನರಸಾಪುರದ ಶಾಲೆಯಲ್ಲಿ ಈಗ ಪುಸ್ತಕ ಭಂಡಾರದಲ್ಲಿರುವ ಮಾಸ್ತಿಯವರು ಕಳುಹಿದ ಪುಸ್ತಕಗಳು, ಮಾಸ್ತಿಯವರ ಪ್ರೀತಿ ವಾತ್ಸಲ್ಯದ ಗುರುತಾಗಿ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತಿವೆ.

ಸಂಕ್ರಮಣ

ಸಿ.ವ್ಹಿ. ಕೆರಿಮನಿ

ಅಂದು ಜನವರಿ ೧೪, ೧೯೭೧. ನಾನು ಹಾಗೂ ಲಕ್ಷ್ಮೇಶ್ವರದ 'ಅಣ್ಣ' ಶ್ರೀ ಬಿ.ಡಿ. ಕಟ್ಟಿಯವರೊಡಗೂಡಿ ಬೆಂಗಳೂರಿನ ಅವರ ಮನೆಗೆ ಹೋದೆವು. ಅವರು ಇರುವ ಮನೆ ಶಾಂತ ವಾತಾವರಣ. ಮನೆಯ ಆವರಣದ ಸುತ್ತಲೂ ಹೂಬಳ್ಳಿ ಮರಗಳು. ಬಾಗಿಲ ಮುಂದೆ ಕಲಾತ್ಮಕವಾಗಿ ಹಾಕಲ್ಪಟ್ಟ ರಂಗವಲ್ಲಿ. ಒಳಗೆ ಹೋದೊಡನೆಯೇ ತುಂಬು ಆತ್ಮೀಯತೆಯಿಂದೊಡಗೂಡಿದ ಸ್ವಾಗತ. ಮಾತಿನಲ್ಲಿ ನಯವಿನಯಗಳು, ಹಸುಮಗುವಿನಂತೆ ಮುಗ್ಧ ಹೃದಯದ ಅಕ್ಕರೆಯ ಹಿರಿನುಡಿಗಳು. ನನ್ನದು ಅದೇ ಪ್ರಥಮಸಲ ಭೆಟ್ಟಿ. ನನ್ನ ಪರಿಚಯ ಕೇಳಿ, ಕನ್ನಡ ಪ್ರಾಧ್ಯಾಪಕರೇ-ನೀವೆಲ್ಲ ತರುಣರು. ಸತತ ಪ್ರಯತ್ನವಾದಿಗಳಾಗಿರಿ; ದುಡಿದಷ್ಟು ಫಲ. ನಿಮ್ಮ ದುಡಿಮೆಯಲ್ಲಿ ನಂಬಿಗೆಯಿರಲಿ. ಎಂದು ಹೇಳಿದಾಗ ಅವರ ಸರಸಸಜ್ಜನಿಕೆ ಹಾಗೂ ತರುಣ ಪೀಳಿಗೆಗಾಗಿ ನೀಡುವ ಅವರ ಪ್ರೋತ್ಸಾಹ ಕಂಡು ನನಗೆ ಅತೀವ ಆನಂದವೆನಿಸಿತು.

ನಾನು ಅವರಿಗೆ-ಡಾ|| ಆರ್.ಸಿ. ಹಿರೇಮಠ, ಧಾರವಾಡ ಅವರ ಸಲಹೆಯಂತೆ 'ಶ್ರೀನಿವಾಸ ಹಾಗೂ ಸಣ್ಣ ಕತೆಗಳು' ಈ ವಿಷಯದ ಮೇಲೆ ಹೆಚ್ಚಿನ ಸಂಶೋಧನೆ ನಡೆಯಿಸಿ ಪ್ರಬಂಧ ಬರೆಯಬೇಕೆಂದಿದ್ದೇನೆ; ಅದಕ್ಕೆ ತಮ್ಮ ಸಹಕಾರ ಸಿಗಬಹುದೇ? ಎಂದಾಗ ಶ್ರೀನಿವಾಸರು, ''ನಾನೆಂಥ ದೊಡ್ಡ ಮನುಷ್ಯ? ನಾನು ಸಾಹಿತ್ಯಕ್ಕೆ ನೀಡಿರುವ ಕೊಡುಗೆಯಾದರೂ ತೀರಾ ಅಲ್ಪ. ಆದರೂ ತಮಗೆ ಬೇಕೆನಿಸಿದಲ್ಲಿ ಸದಾಸಿದ್ಧ; ನಿಮಗೆ ಬಿಡುವಿನ ದಿನಗಳಲ್ಲಿ ಯಾವಾಗಲಾದರೂ ಬರಬಹುದು ಸ್ವಾಮಿ'' ಎಂದು ಹೇಳಿದಾಗ ಅವರೆಂಥ ಮಹಾನುಭಾವರು, ಅವರಲ್ಲಿ ಅಹಂಭಾವವಂತೂ ಹತ್ತಿರ ಕೂಡಾ ಸುಳಿಯದು ಅಲ್ಲಷ್ಟು ಇಲ್ಲಷ್ಟು ಬರೆದು ಪ್ರಸಿದ್ಧಿ ಪಡೆಯುವ ಹಂಬಲವಿದ್ದವರೇ ಇಂದಿನ ಕಾಲದಲ್ಲಿ ಜಾಸ್ತಿ. ಆದರೆ ಶ್ರೀನಿವಾಸರು ಇದಕ್ಕೆ ಅಪವಾದವಾಗಿದ್ದಾರೆ. ಮತ್ತೆ ಅನೇಕ ಸಾಹಿತ್ಯಿಕ ವಿಷಯಗಳ ಸೂಕ್ಷ್ಮ ಪರಿಶೀಲನೆ ಮಾಡಿ ನನ್ನ ಸಂಶಯಗಳ ನಿವಾರಣೆಯನ್ನು ಮಾಡಿದರು. ಅವರು ಬೇರೆ ಯಾವ ಹಿಂದಿನ ಇಂದಿನ ಸಾಹಿತಿಗಳನ್ನು ಟೀಕಿಸಲಿಲ್ಲ. ಆಗಲೇ ೨-೩ ಘಂಟೆಗಳು ಕಳೆದು ಹೋದದ್ದು ತಿಳಿಯಲಿಲ್ಲ. ಅವರ ಜೊತೆಗೆ ಮಾತನಾಡುವದೆಂದರೆ ಬೆಳ್ದಿಂಗಳಿನಲ್ಲಿ ವಿಹರಿಸಿದಂತೆ. ನನ್ನ ಬುದ್ಧಿಗೆ ಆಹಾರ ನೀಡುವುದರ ಜೊತೆಗೆ ಉದರಕ್ಕೆ ಇಡ್ಲಿ ಕಾಫಿಗಳನ್ನು ನೀಡಿ ಬೀಳ್ಕೊಟ್ಟರು.

ಉದಾರತೆ

ಆರ್. ಶ್ರೀನಿವಾಸಯ್ಯ

ಶ್ರೀ ರಂಗನಾಥನ್ ಅವರಲ್ಲಿ ವಿನಂತಿ - ನಾನು ಕಳೆದವಾರ ತಮ್ಮನ್ನು ನೋಡಿ ಪ್ರಸ್ತಾಪಿಸಿದ ವಿಷಯ ಶ್ರೀ ಶಿವರಾಮಯ್ಯನವರನ್ನು ಕುರಿತದ್ದು. ಅವರಲ್ಲಿಗೆ ಹೋಗಿ ಜಂಟಿಯಿರುವ ಅವರ ಹೇಳಿಕೆಯನ್ನು ತಮ್ಮ ಅವಗಾಹನೆಗೆ ಕಳುಹಿಸುತ್ತಿದ್ದೇನೆ. Represention of my difficulties ಎನ್ನುವ ವಿಷಯದಲ್ಲಿ ಮಾತ್ರ ಅವರಿಂದ ನಾನು ಕೇಳಿದಾಗ ನನ್ನ ಕಣ್ಣುಗಳು ಹನಿಗೊಂಡವು.

ಚಿಕ್ಕ ಮಕ್ಕಳು, ಆಗತಾನೆ ತಾಯಿಯನ್ನು ಕಳೆದುಕೊಂಡಿದ್ದರು. ಮನೆಯಲ್ಲಿ ಇನ್ನಾರ ಸಹಾಯವೂ ಇಲ್ಲ. ಅಡಿಗೆ ಕೆಲಸ, ಮಕ್ಕಳ ಊಟ ಉಪಹಾರಾದಿಗಳೆಲ್ಲಾ ಈತನದೇ. ಬಳೇಪೇಟೆಯಲ್ಲಿ ವಾಸ. ಆಫೀಸಿಗೆ ಹೊರಡುವ ವೇಳೆಗೆ ಮಕ್ಕಳು ಅಳುತ್ತಾ ಇವರನ್ನು ಹಿಂಬಾಲಿಸುವುದು. ಹತ್ತಿರದ ಅಂಗಡಿಗಳಲ್ಲಿ ದಿನವೂ ಶಕ್ತಿಮೀರಿದ ಕಾಸಿನಿಂದ ಬಿಸ್ಕತ್ತು ಪೆಪ್ಪರ್ ಮೆಂಟು ಇತ್ಯಾದಿಗಳ ವೆಚ್ಚ. ಅವರನ್ನು ತಣಿಸಲು ಬೇಗ ಬರುವೆನೆಂದು ಹತ್ತು ಸುಳ್ಳುಗಳು ಇಪ್ಪತ್ತು ಆಶೆಗಳನ್ನು ತೋರಿ, ಮನೆಯಿಂದ ಅಷ್ಟು ದೂರ ಬರುವಾಗ್ಗೆ ಪುನಹ ತಿಂಡಿ ಮುಗಿಯುತ್ತಲು ಮಕ್ಕಳು ಅಳುತ್ತಾ ಅವರನ್ನು ಹಿಂಬಾಲಿಸುವುದು. ಪುನಹ ಅವರನ್ನು ಮನೆಗೆ ಕರೆದುಕೊಂಡು ಬಂದು ಸಮಾಧಾನ ಪಡಿಸಿ ಹೊರಡುವುದು. ಇದು ಆತನ ನಿತ್ಯದ ಬವಣೆ.

ಮೂರು ದಿನ ಲೇಟಾದರೆ ಒಂದು ದಿನ C.L.ಹೋಯಿತು. ಹೀಗೆ ಹತ್ತಿರ ಹತ್ತಿರ ತಿಂಗಳಾಯಿತು. ಮೇಲಿನ ಅಧಿಕಾರಿಗಳಿಗೂ ಬೇಜಾರಾಯಿತು. ರಿಪೋರ್ಟು ಶ್ರೀ ಮಾಸ್ತಿಯವರಿಗೂ ತಲುಪಿತು. ಅವರು ಈತನ ಹಿಂದಿನ ಮತ್ತು ಈಗಿನ ಕೆಲಸದ ನಿಷ್ಠೆಯನ್ನು ನೋಡಿ ಕೇವಲ ಈ ಶಿಸ್ತಿಗೆ ವಿರೋಧವಾದ ವರ್ತನೆಗೆ ಏನೋ ವಿಶೇಷ ಕಾರಣವಿರಬೇಕೆಂದು ವಿಷಯವನ್ನು ಪರಿಶೀಲಿಸಿ ತಮ್ಮ ಉದಾರತೆಯನ್ನು ತೋರಿದ್ದು ಈ ರೀತಿ! ""Let him not forfeit any casual leave. Let him try to start a little earlier hereafter".

ಈಗ ಶ್ರೀ ಶಿವರಾಮಯ್ಯನವರು Loss of memoryಯಿಂದ ನರಳುತ್ತಿದ್ದಾರೆ. ಆದರೆ ಅವರೇ ಹೇಳಿರುವಂತೆ ಶ್ರೀ ಮಾಸ್ತಿಯವರ ಚಿತ್ರಮಾತ್ರ ಈಗಲೂ ಸ್ಫುಟವಾಗಿದೆಯಂತೆ ಅವರ ಕಣ್ಣಿಗೆ. ನಮ್ಮ ಸಮಾಜದಲ್ಲಿ ಕೃತಜ್ಞತೆಯು ಅತಿ ವಿರಳ. ಇದು ನಿಜವಾಗಿಯೂ ಮಾಸ್ತಿಯವರಿಗೆ ಒಂದು ಸವಿನೆನಪೇ ಎಂದು ನಾನು ಭಾವಿಸುತ್ತೇನೆ.

ಕಂಬಮೇ ತಣ್ಣೆ!

ಹ. ಗೋಪಾಲ ಕೃಷ್ಣ

ಈ ಪುಟ್ಟ ಪ್ರಸಂಗ ಈಗ್ಗೆ ಸುಮಾರು ಎರಡು ವರ್ಷದ ಹಿಂದೆ ನಡೆದದ್ದು. ನಮ್ಮ ದೊಡ್ಡ ಅಣ್ಣನ ಮಗ ೩ ವರ್ಷದವನು, ಸುಬ್ಬಣ್ಣ ಅವನ ಹೆಸರು, ಆಟ ಆಡುತ್ತಾ ಇರಬೇಕಾದರೆ ರಸ್ತೆಯಲ್ಲಿ ಇಟ್ಟಿದ್ದ ಸೈಕಲ್ಲನ್ನು ಮೇಲೆ ಎಳೆದುಕೊಂಡು ತೊಡೆ ಮೂಳೆಯನ್ನು ಮುರಿದುಕೊಂಡು ಸುಮಾರು ಮೂರೂವರೆ ತಿಂಗಳ ಕಾಲ ಹಾಸಿಗೆಯ ಮೇಲೆ ಕಾಲ ತಳ್ಳಿದ. ಅವನ ಕಾಲಪಟ್ಟಿ ಬಿಚ್ಚಿದ ದಿನ ನಮಗೆಲ್ಲಾ ಸಮಾಧಾನದ ನಿಟ್ಟುಸಿರು ಬಂತು. ಮನೆಯಲ್ಲೇ ಮೂರುವರೆ ತಿಂಗಳು ಕಳೆದ ಅವನಿಗೆ ಸ್ವಲ್ಪ ರಿಲ್ಯಾಕ್ಸ್ ಮಾಡಲು ಬಸವಣ್ಣನ ಗುಡಿಯ ದೇವಸ್ಥಾನಕ್ಕೆ ಕರೆದೊಯ್ದೆವು.

ಅಲ್ಲಿಯ ದೇವಸ್ಥಾನದಲ್ಲಿ ಮಾಸ್ತಿಯವರ ಮನೆಯ ಯಾವುದೋ ಸಮಾರಂಭ ಅಂದೇ ನಡೆಯುತ್ತಿತ್ತು. ಒಳಗೆ ಮುತ್ತೈದೆಯರಿಗೆ ಅರಿಶಿನ ಕುಂಕುಮ ವಿತರಣೆ ಆಗುವಾಗ ಮಾಸ್ತಿಯವರೂ ಆಚೆ ಬಂದು ಕುಳಿತು ಸುಧಾರಿಸಿಕೊಳ್ಳುತ್ತಿದ್ದರು. ನಾನು, ಸುಬ್ಬಣ್ಣನನ್ನು ಎತ್ತಿಕೊಂಡಿದ್ದ ಅವನ ಅಪ್ಪ (ನಮ್ಮ ಅಣ್ಣ) ಒಳಗೆ ಹೋದಕೂಡಲೇ ಮಾಸ್ತಿಯವರು ನಗುಮುಖದಿಂದ ನಮ್ಮನ್ನು ಸ್ವಾಗತಿಸಿದರು. ಪ್ರೀತಿಯಿಂದ ಸುಬ್ಬಣ್ಣನ್ನ ಮೈದಡವಿದರು. 'ಏಕೆ ಎತ್ತಿಸಿಕೊಂಡಿದೀಯಾ?' ಅಂತ ಕೇಳಿದರು. ನಮ್ಮಣ್ಣ ಏಕೆ ಎತ್ತಿಕೊಂಡಿದೀನೀ ಅನ್ನೋದನ್ನು ಹೇಳಿದ ಮೇಲೆ ಬಹಳ ನೊಂದುಕೊಂಡರು. ಮಕ್ಕಳನ್ನು ಬಹಳ ಹುಷಾರಾಗಿ ನೋಡಿಕೊಳ್ಳಬೇಕಪ್ಪಾ ಅಂದರು. ಮರು ನಿಮಿಷದಲ್ಲಿಯೇ ಮಕ್ಕಳನ್ನು ತಡೆಯೋದು ಬಹಳ ಕಷ್ಟ ಅಲ್ಲವೇ ಅಂತ ಸಮಾಧಾನಾನೂ ಹೇಳಿದರು; ಹಾಗೇ ಅದು ಗ್ರಹಚಾರ ಅಂತಲೂ ನುಡಿದರು. ಆಮೇಲೆ ಮಗುವಿನ ಹೆಸರು ವಿಚಾರಿಸಿದರು. ನಮ್ಮಣ್ಣ 'ಸುಬ್ಬಣ್ಣ' ಅಂತ ಹೇಳಿದ ಕೂಡಲೇನೆ ಅವರ ಮುಖದಲ್ಲಿ ಯಾವುದೋ ಹಳೇ ನೆನಪು ಮೂಡಿ ಮಸುಕಾಯಿತು. 'ನಿಮ್ಮ ಮಗ ಬಹಳ ಚೆನ್ನಾಗಿದ್ದಾನೆ. ಚೆನ್ನಾಗಿ ನೋಡ್ಕೊಳ್ಳಿ' ಅಂತ ಸುಬ್ಬಣ್ಣನ್ನ ತೊಡೆಮೇಲೆ ಕೂರಿಸಿಕೊಂಡರು. ಸುಬ್ಬಣ್ಣಾನೂ ಅವರಿಗೆ ತುಂಬಾ ಹೊಂದಿಕೊಂಡಿದ್ದ ಇಷ್ಟು ಹೊತ್ತಿಗೆ. ''ನಿಮ್ಮ ಸುಬ್ಬಣ್ಣನ ಹಲ್ಲು ಸಾಲು ತುಂಬಾ ಚೆನ್ನಾಗಿ ಬೆಳೆದಿದೆ. ಅವನ ಏಳನೇ ವರ್ಷದ ಹೊತ್ತಿಗೆ ಮೊದಲನೇ ಹಲ್ಲು ಬಿದ್ದಾಗ ಅದನ್ನು ನಾಲಗೆಯಿಂದ ಒತ್ತೋದಕ್ಕೆ ಬಿಡಬೇಡಿ'' ಎಂದು ನಮಗೆ ಹೇಳಿ, ಏನೋ ಹಲ್ಲುಬಿದ್ದಾಗ ನಾಲಗೆಯಿಂದ ಒತ್ತರಿಸಬೇಡ ಎಂದು ಸುಬ್ಬಣ್ಣನಿಗೂ ಹೇಳಿದರು.

ಅಷ್ಟು ಹೊತ್ತಿಗೆ ಒಳಗಡೆ ಅರಿಶಿನ ಕುಂಕುಮ ವಿತರಣೆ ಪೂರ್ತಿ ಆಗಿತ್ತು. ಪ್ರಸಾದ ತೊಗೊಂಡು ಪೂಜಾರರು ಮಾಸ್ತಿ ಅವರ ಬಳಿಗೇನೇ ಮೊದಲು ಬಂದರು. ಮಾಸ್ತಿ ಅವರು ಬಲವಂತದಿಂದ ಪ್ರಸಾದಾನ ನಾವೇ ಮೊದಲು ತೆಗೆದುಕೊಳ್ಳುವಂತೆ ಮಾಡಿ ಆಮೇಲೆ ಅವರೂ ತೆಗೆದುಕೊಂಡರು. ಪ್ರಸಾದ ಪೂರ್ತಿ ಆದಮೇಲೆ, 'ಪ್ರಸಾದ ತಿಂದಮೇಲೆ ಕೈ

ತೊಳೆದುಕೊಬೇಡಿ' ಕೈ ತೊಳೆದುಕೊಂಡರೆ ಪುಣ್ಯ ಕಡಮೆ ಆಗುತ್ತೆ ಎಂದು ಹೇಳಿ ಕೈಗೆ ಮೆತ್ತಿದನ್ನು ಕಂಬಕ್ಕೆ ಒರೆಸೋದಿಕ್ಕೆ ಹೇಳಿ ಅವರ ಊರಿನಲ್ಲಿ ಕಂಬಕ್ಕೆ ಕೈ ಒರಸಿ ಒರಸಿ, ಕಂಬ ಗಮಟು ವಾಸನೆ ಹೊಡೀತಿದ್ದದ್ದನ್ನು ಹೇಳಿ ತಮಾಷೆ ಮಾಡಿದರು. ಆಮೇಲೆ ಅದಕ್ಕೋಸ್ಕರಾನೇ ತಮಿಳಿನಲ್ಲಿ ''ಕಂಬಮೇ ತಣ್ಣಿ'' ಅನ್ನೋ ಗಾದೆ ಹುಟ್ಟಿದ್ದು ಅಂತಲೂ ಹೇಳಿದರು. ಸುಮಾರು ಒಂದು ಗಂಟೆವರೆವಿಗೂ ಅವರ ಜೊತೇಲಿ ಕಳೆದ ಮೇಲೆ ನಾವು ಹೊರಟಾಗ ಅವರು ''ಸುಬ್ಬಣ್ಣ, ತಾತನ್ನ ಮರೀಬೇಡಕಣೋ'' ಎಂದು ನುಡಿದದ್ದು ನಮ್ಮ ಕಿವಿಯಲ್ಲಿ ಇನ್ನೂ ಧ್ವನಿಸುತ್ತಲೇ ಇದೆ.

ಡಾ|| ಮಾಸ್ತಿಯವರ ಒಲವುಗಳು

ಕೆ. ವೆಂಕಟರಾಯಾಚಾರ್ಯ

'ಕನ್ನಡದ ಆಸ್ತಿ'ಯೆಂದು ಹೆಸರು ಪಡೆದವರು, ಡಾ. ಮಾಸ್ತಿ ವೆಂಕಟೇಶಯ್ಯಂಗಾರರು. ಕನ್ನಡದ ಜನತೆಯಲ್ಲಿ, ಸಾಹಿತ್ಯ ಪ್ರಕಾರಗಳಲ್ಲಿ ಶ್ರೀಯುತರು ಅಳವಡಿಸಿದ ಹಲವು ಬಗೆಯ ಒಲವೇ ಅದಕ್ಕೆ ಮುಖ್ಯಕಾರಣವೆನ್ನಬೇಕು. ಈ ಬಗೆಗೆ ನನ್ನ ಒಂದೆರಡು ಸವಿನೆನಹು ಇಲ್ಲಿ ಸಂಕಲಿಸಿದ್ದೇನೆ.

೧೯೬೦ರಲ್ಲಿ, ಸುರತ್ಕಲ್ಲಿನ 'ವಿಜಯ ಸಾಹಿತ್ಯಮಾಲೆ'ಯ ವತಿಯಿಂದ ಕನ್ನಡದ ಹಲವು ಹಿರಿಯರ-ಕಿರಿಯರ ಕೃತಿಗಳ ಪ್ರಾತಿನಿಧಿಕ ಸಂಕಲನಕ್ಕೆಳಸಿದೆ; ಅಂತೆ, ಹಲವಾರು ಮಹನೀಯರಲ್ಲಿ ಪತ್ರ ಮೂಲಕ ವಿನಂತಿಸಿದೆನು. ಧಾರವಾಡದಿಂದ ಡಾ|| ದ.ರಾ. ಬೇಂದ್ರೆಯವರು ಒಂದು ಚೊಚ್ಚಲ ಕವಿತೆಯನ್ನು ಕಳುಹಿದರು. ಆಗ ಬೆಂಗಳೂರಿನಲ್ಲಿ 'ಜೀವನ' ಪತ್ರಿಕೆಯನ್ನು ನಡೆಯಿಸುತ್ತಿದ್ದ ಶ್ರೀ ಮಾಸ್ತಿಯವರು ಆ ಮೊದಲು ಮದ್ರಾಸಿನ ಆಕಾಶವಾಣಿಯಲ್ಲಿ ಬಿತ್ತರಿಸಿದ 'ಸಂಕ್ರಾತಿ' ಎಂಬ ನೀಳ್ಗವಿತೆಯನ್ನು ಪ್ರಕಟಿಸಲು ಸಮ್ಮತಿಯಿತ್ತರು. ಕೇವಲ ಎಳೆಯವನೂ, ಕೆಲವು ಲೇಖನಗಳ ಪ್ರಕಟನೆಯವನೂ ಆಗಿದ್ದ ನನ್ನ ಪ್ರಕಾಶನೋದ್ಯಮಕ್ಕೆ ಇದರಿಂದಾಗಿ ಗರಿ ಹುಟ್ಟಿದಂತಾಯಿತು. 'ಉದ್ಯಾನ'ವೆಂಬ ಆ ಸಂಕಲನದ ಮೂಲಕವಾಗಿ ನನ್ನ ಕಿರಿಯ ಪ್ರಕಟನೋದ್ಯಮವು ಹಲವೆಡೆ ಪ್ರಸಾರಗೊಂಡುದಲ್ಲದೆ, ಕೆಲವು ಪ್ರಾಚೀನ ಕೃತಿಗಳ ಮುದ್ರಣಕ್ಕೆ 'ನಾಂದಿ'ಯಾಯಿತೆನ್ನಲಡ್ಡಿಯಿಲ್ಲ!

ಶ್ರೀ ಮಾಸ್ತಿಯವರು ಉತ್ತಮ ಕೃತಿಗಳ ಪ್ರಕಟನೆಗೂ ಹುರುಪುಗೊಡುವವರೆಂಬುದು ಇನ್ನೊಂದು ಮರೆಯಲಾಗದ ಸಂಗತಿ; ಇದುವರೆಗೆ ಅಚ್ಚಾಗದ, ಕನ್ನಡದ ನಾರಾಯಣ ಕವಿಯ ಉತ್ತರ ರಾಮಕಥೆ (ಉತ್ತರಕಾಂಡ ರಾಮಾಯಣ) ಎರಡು ವಿಭಾಗವಾಗಿ ಮುದ್ರಿಸಲೆಳಸಿದೆನು; ಸರಕಾರದ ಪ್ರೋತ್ಸಾಹಧನವೊದಗಿದ ಕಾರಣ, ಮೊದಲ ವಿಭಾಗ ಮುದ್ರಿಸಿದೆನು. ಮುನ್ನಡೆಗೆ ಹಲವೆಡೆಯ ಮಹನೀಯರಲ್ಲಿ ಹಣಕ್ಕಾಗಿ ಕೈಯೊಡ್ಡಿದೆನು. 'ವಿದ್ವಾನೇವ ವಿಜಾನಾತಿ ವಿದ್ವಜ್ಜನ ಪರಿಶ್ರಮಂ' ಎಂಬಂತೆ, ಕನ್ನಡದ ಪ್ರಾಚೀನ ಸಾಹಿತ್ಯ ಕೃತಿಯೊಂದು ಮೂಲೆಗುಂಪಾಗಬಾರದೆಂದು ಹಲವರು ನನಗೆ ಉದಾರತೆಯ ಕೈನೀಡಿದ್ದರು. ಸ್ವಯಂ ಹಲವಾರು ಸಾಹಿತ್ಯ ಕೃತಿಗಳ ಪ್ರಕಾಶಕರಾಗಿರುವ ಶ್ರೀ ಮಾಸ್ತಿಯವರೂ ಆತ್ಮೇಚ್ಛೆಯಿಂದ ಐವತ್ತು ರೂಪಾಯಿ ಕಳುಹಿಸಿ ಆಶೀರ್ವದಿಸಿದ್ದರು. (ಈ ಬಗೆಗೆ ಡಾ. ಕೋಟ ಶಿವರಾಮಕಾರಂತರೂ ಇಪ್ಪತ್ತೈದು ರೂಪಾಯಿ ಕಳುಹಿ ಪ್ರೋತ್ಸಾಹಿಸಿದ್ದರೆಂಬುದೂ ಗಮನೀಯ).

''ಒಳ್ಳೆಯ ಪುಸ್ತಕ ಎಂದು ನೀವು ಅಚ್ಚು ಮಾಡಿದೀರಿ. ನೀವೇನು ತಿಳಿವಳಿಕೆ ಸಾಲದ ಮನುಷ್ಯರಲ್ಲ. ಬಲ್ಲಜನ ಅವರವರಿಗೆ ಒಳ್ಳೆಯದೆಂದು ಕಂಡ ಕಾರ್ಯವನ್ನು ಮಾಡಬೇಕು. ಜೊತೆಯ ಜನ ಅದನ್ನು ಕೃತಜ್ಞತೆಯಿಂದ ಸ್ವೀಕರಿಸಬೇಕು. ನಿಮ್ಮಿಂದಾದ ಸೇವೆಯನ್ನು ನೀವು ಸಲ್ಲಿಸಿರಿ. ನುಡಿ ತಾಯಿಗೆ ಅದು ಬೇಕೇ ಆಗುತ್ತದೆ'' ಯೆಂದು ಶ್ರೀಯುತರು ಬರೆದುದು ಅದರಲ್ಲೇ ಮುದ್ರಿಸಲಾಗಿದೆ. ನುಡಿ ತಾಯಿಯ ಸೇವೆಗೆ ಹಲವಾರು ತರದಲ್ಲಿ ಸ್ವಯಂ ಸಾಗುವುದಲ್ಲದೆ, ಇತರರಿಗೆ ಬಾಯ್ದೆರೆ-ಬರೆದು-ಹರಸುವುದಲ್ಲದೆ, ಕೈಯೆತ್ತಿ ನೀಡಿ ಬೆಂಬಲಿಸುವುದೆಂದರೆ ಬಲು ದೊಡ್ಡ ಶ್ರೀಯುತರ ಸದ್ಗುಣವಾಗಿದೆಯಲ್ಲವೇ?

ಅದು ಕಾರಣ, ಶ್ರೀಯುತರಲ್ಲಿ ಎಲ್ಲರಿಗೆ ಒಲವಿದೆ; ಶ್ರೀಯುತರಿಗೆ ಎಲ್ಲರಲ್ಲಿ-ಎಲ್ಲವುಗಳಲ್ಲಿ-ಒಲವಿದೆ: ''ಪರಸ್ಪರಂ ಭಾವಯಂತಃ ಶ್ರೇಯಃ ಪರಂ ಅವಾಪ್ಸ್ಯಥ'' ಎಂಬ ಗೀತಾಚಾರ್ಯನ ಸೂಕ್ತಿಯಂತೆ, ಸಾಹಿತ್ಯದ ಮುನ್ನಡೆಗೆ-ಪ್ರಸಾರಣಕ್ಕೆ-ಇಂತಹ ಉಭಯ ವಿಧದ- ಉಭಯತರ-ಒಲವುಗಳಿರಬೇಕಾದುದು ಅನುಸರಣೀಯವಾಗಿದೆಯಲ್ಲವೇ?

ಬೆಳಕು ನೀಡಿದ ಹಿರಿಯರು

ಎಂ. ವಾಸುದೇವರಾವ್

೧೯೪೪ಮೇ. ಆಗ ನಾನು ಬರೆಯತೊಡಗಿದ್ದ 'ದಕ್ಷಿಣ ಭಾರತದ ಖನಿಜ ಸಂಪತ್ತು' ಎಂಬ ಪುಸ್ತಕಕ್ಕೆ ಅವಶ್ಯವೆನಿಸಿದ ವಿಷಯ ಸಂಗ್ರಹಕ್ಕಾಗಿ ಬೆಂಗಳೂರಿಗೆ ಹೋಗಿದ್ದೆ. ಆ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕರ್ತರಾಗಿದ್ದ ಮಿತ್ರ ಬೈಕಾಡಿ ವೆಂಕಟಕೃಷ್ಣರಾಯರೊಂದಿಗೆ ಶ್ರೀ ಮಾಸ್ತಿಯವರನ್ನು ಅವರ ಸುವಿಖ್ಯಾತ ಬಸವನಗುಡಿ ನಿವಾಸದಲ್ಲಿ ನಾನು ಪ್ರಥಮವಾಗಿ ಕಂಡೆ. ಮೊದಲ ಮಾತುಗಳೇ ಆತ್ಮೀಯತೆಯ ಜೇನಿನಿಂದ ತುಂಬಿದ್ದವು, ಅದಾಗಲೇ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದುದರಿಂದ ಮುಂದಿನ ದಸರಾದ ವೇಳೆ ಕನ್ನಡ ನಾಡನ್ನು ಮುಖ್ಯವಾಗಿ ದ.ಕ. ಮತ್ತು ಕೊಡಗು ಜಿಲ್ಲೆಗಳನು-ಸಂಚರಿಸುವ ಯೋಜನೆಯನ್ನು ರೂಪಿಸುವುದರಲ್ಲಿದ್ದರು. ಆ ಕಾರ್ಯಕ್ರಮದಲ್ಲಿ ಸುರತ್ಕಲ್‌ನ್ನು ಸೇರಿಸಿಕೊಳ್ಳಬೇಕೆಂದು ವಿನಂತಿಮಾಡಿದೆ. ''ಆಗಲಿ, ಬರುತ್ತೇನೆ'' ಎಂದರು. ಮಾತು ಸಹಜವಾಗಿ ಕನ್ನಡ ನಾಡು ನುಡಿಗಳ ಏಳ್ಗೆಯ ಕಡೆಗೆ ಹೊರಳಿತು; ಅವರ ಸಮ್ಮುಖದಲ್ಲಿ ಹಲವು ರಸನಿಮಿಷಗಳೇ ಉರುಳಿದವು. ದೊಡ್ಡ ವ್ಯಕ್ತಿಯ ದೊಡ್ಡ ಗುಣಕ್ಕೆ ತಲೆಬಾಗಿದೆ.

ಅದೇ ಜೂನ್‌ನಲ್ಲಿ ಸುರತ್ಕಲ್ಲಿನಲ್ಲಿ ಹೊಸತಾಗಿ ಸ್ಥಾಪಿತವಾದ ವಿದ್ಯಾದಾಯಿನೀ ಹೈಸ್ಕೂಲಿನ ಮುಖ್ಯೋಪಾಧ್ಯಾಯನಾದೆ. ಹಿಂದಿನ ನನ್ನ ವಿನಂತಿಯನ್ನು ಪುನಃ ಶ್ರೀ ಮಾಸ್ತಿಯವರ ಮುಂದಿರಿಸಿದೆ. ಸುರತ್ಕಲ್ ಅವರ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಕೊಂಡಿತು. ಆ ವರ್ಷದ ವಿಜಯದಶಮಿ (೨೮-೯-೪೪)ಯಂದು ಸಂಜೆ ನಮ್ಮ ಶಾಲೆಯಲ್ಲಿ ಏರ್ಪಡಿಸಲಾದ ಸಭೆಗೆ ಅವರು ತಮ್ಮ ಮಿತ್ರರಾದ ಸರ್ವಶ್ರೀ ಕ.ವೆಂ. ರಾಘವಾಚಾರ್ಯ, ಹ.ವೆಂ. ಶ್ರೀನಿವಾಸ ಮತ್ತು ಬೈಕಾಡಿಯವರೊಂದಿಗೆ ಸಕಾಲಕ್ಕೆ ಬಂದರು. ಹೊಸ ಹೈಸ್ಕೂಲಿನ ಸಂದರ್ಶಕರ ಪುಸ್ತಕದಲ್ಲಿ ಅವರದೇ ಮೊದಲ ಹರಕೆ ನುಡಿ. ಉಡುಪಿಯಿಂದ ಬಂದ ಆ ಕಾಲದ ಪಯಣದ ಬಳಲಿಕೆಯನ್ನು ಪರಿಗಣಿಸದೆ ಅವರು ವಿಶಾಲವೂ, ಸಸ್ಯರಮ್ಯವೂ ಆದ ಶಾಲಾ ವಠಾರವನ್ನು ನೋಡಲೆಂದು ನನ್ನನ್ನು ತೆಂಗಿನ ತೋಟದತ್ತ ಕರೆದೊಯ್ದರು. ಶಾಲಾ ಚರಿತ್ರೆಯನ್ನು ಕೇಳಿ ತಿಳಿದುದಲ್ಲದೆ ಕನ್ನಡದ ಕೆಲಸದ ಸೂಕ್ಷ್ಮ ಪರಿಚಯ ನೀಡಿದರು. ಹಾಗೆ ಮಾತನಾಡುತ್ತ ಆತ್ಮೀಯತೆಯು ಹೊರಹೊಮ್ಮುವ ಭಾವದಿಂದ ನನ್ನ ಬೆನ್ನುತಟ್ಟಿ ''ವಾಸುದೇವರಾವ್, ನಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ'' ಎಂದು ನುಡಿದರು. ಅನಂತರ ಶಾಲಾ ಮಹೋತ್ಸವದ ಕಾರ್ಯಕ್ರಮದಲ್ಲಿನ ಅವರ ಭಾಷಣವು ಮಾತಿನ ಸವಿ-ನವಿರುಗಳಿಂದ ಜನಮನ ಸೂರೆಗೊಂಡಿತು. ರಾತ್ರಿ ಶಾಲೆಯಲ್ಲೇ ಅವರೆಲ್ಲರೂ ತಂಗಿದ್ದು, ಮಾರನೆಯ ದಿನ ಬೆಳಗ್ಗೆ ನಡೆದೇ ಮಂಗಳೂರಿಗೆ ಪಯಣ ಸಾಗಿತು. ಆಗ ದಾರಿಯುದ್ದಕ್ಕೂ ನಡೆದ ಸರಸ ಸಲ್ಲಾಪಗಳ, ಬಿಡಿನುಡಿ

ಕಿಡಿನುಡಿಗಳ ವೈಖರಿಯೇ ವೈಖರಿ. ಹೋಗುತ್ತಾ ನನ್ನ ಮನೆಗೂ, ಬಂದು ನನ್ನ ಮಾತೃಶ್ರೀಯವರನ್ನೂ, ಸಹಧರ್ಮಿಣಿಯನ್ನೂ ಕಂಡು ಮಾತನಾಡಿ ಮುನ್ನಡೆದರು. ಮಂಗಳೂರಿನಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರಲ್ಲಿ ನಮಗೆಲ್ಲರಿಗೂ ಸುಖ ಸ್ನಾನ, ಪುಷ್ಕಳ ಊಟ ಮತ್ತು ವಿಶ್ರಾಂತಿ. ಸಂಜೆ ಮಂಗಳೂರಿನ ಕಾರ್ಯಕ್ರಮವಿತ್ತು. ಅಲ್ಲಿಂದ ಶ್ರೀ ಮಾಸ್ತಿಯವರನ್ನು ನಾನು ಬೀಳ್ಕೊಂಡಾಗ ಅವರು ನನ್ನನ್ನು ತಬ್ಬಿಕೊಂಡು, ''ಮಚ್ಚಿತ್ತ ಸರ್ವದುರ್ಗಾಣಿ, ಮತ್ಪ್ರಸಾದಾತ್ತಂಪ್ಯಸಿ॥ ಕೌಂತೇಯ ಪ್ರತಿಜಾನೀಹಿ ನಮೇ ಭಕ್ತಪ್ರಣಶ್ಯತಿ'' ಎಂದು ಹರಸಿ ಹೇಳಿದ ಮಾತುಗಳಂತೂ ನನ್ನ ಜೀವನ ಮಾರ್ಗದರ್ಶಿಗಳಾದವು. ಅವರ ಕೈಗೆ 'ಜೀವನ' ಮಾಸಪತ್ರಿಕೆ ಬಂದಂದಿನಿಂದಲೂ ಬೆಳೆದು ಬಂದ ನನ್ನ ಮತ್ತು ಆ ಹಿರಿಯರ ಸಂಪರ್ಕ ಸುದೀರ್ಘಕಾಲದ್ದು. ಬೆಂಗಳೂರಿಗೆ ಹೋದಾಗಲೆಲ್ಲ ಬಿಡುವೆನಿಸಿದಾಗ ಅವರ ಭೇಟಿಮಾಡಿ ಸ್ಫೂರ್ತಿ-ಸಂತೋಷ ಪಡೆಯುತ್ತಿದ್ದೆ. ನಾನು ಉದ್ಯೋಗ ನಿವೃತ್ತಿ ಹೊಂದಿದ ಸಂದರ್ಭದಲ್ಲಿ ಮಿತ್ರರು ಮತ್ತು ವಿದ್ಯಾರ್ಥಿಗಳು ಪ್ರಕಟಿಸಿದ 'ಅರ್ಪಣ' ಗ್ರಂಥದಲ್ಲೂ ಅವರು ಹರಸಿ ಬರೆದು ಉಪಕರಿಸಿದ್ದಾರೆ.

ಅವರ ಸಜ್ಜನಿಕೆ-ಆತ್ಮೀಯತೆಯೊಂದು ಚಿಜ್ಯೋತಿಯಂತೆ ಚಿರವೈಕಾರಕ, ಚಿರನೂತನ, ಚಿರ ಆನಂದದಾಯಿ.

ನರಹರಿ!

ಎಸ್. ಕೃಷ್ಣಭಟ್ಟ

ಪೂಜ್ಯ ಮಾಸ್ತಿಯವರ ಕೆಲವು ಗ್ರಂಥಗಳನ್ನು ಓದಿ, ಅಲ್ಲಲ್ಲಿ ಅವರ ಭಾಷಣಗಳನ್ನು ನಾನು ಕೇಳಿದ್ದರೂ ನನಗೆ ಅವರ ಪರಿಚಯವಾದದ್ದು ಸುಮಾರು ಎಂಟು ವರ್ಷಗಳ ಹಿಂದೆ, ಬೆಂಗಳೂರು ಬಸವನಗುಡಿಯ ರಾಮಕೃಷ್ಣಾಶ್ರಮದ ಸಮೀಪದಲ್ಲಿ. ನಾನು ಶೃಂಗೇರಿಯ ಕಡೆಯವನೆಂದು ಹೇಳಿದಾಗ, ನನ್ನ ವಿವರಗಳನ್ನು ತಾಳ್ಮೆಯಿಂದ ಕೇಳಿ ತಿಳಿದುಕೊಂಡ ಆ ಸೌಜನ್ಯಮೂರ್ತಿಯ ನುಗುಮುಖವನ್ನು ಎಂದಿಗೂ ಮರೆಯಲಾರೆ. ಗವಿಪುರಂ ಬಡಾವಣೆಯಲ್ಲಿ ನಾವು ಸುಮಾರು ಒಂದು ವರ್ಷಕಾಲ ಅವರ ಮನೆಯ ಎದುರಿನಲ್ಲೇ ವಾಸವಾಗಿದ್ದು, ಈಗ ಹನುಮಂತನಗರಕ್ಕೆ ಬಂದಿದ್ದೇವೆ. ಹೀಗೆ ನಾನು ಗಾಂಧಿಬಜಾರ್ ಕಡೆ ಹೋಗುವಾಗಲೆಲ್ಲಾ ಬಹುಮಟ್ಟಿಗೆ ಅವರ ಭೇಟಿ; ತಮ್ಮ ಕೆಲಸವೇನಿದ್ದರೂ ರಸ್ತೆಯಲ್ಲಿ ಒಂದು ನಿಮಿಷವಾದರೂ ನಿಂತು ನನ್ನ ಯೋಗಕ್ಷೇಮವನ್ನು ತಾವು ವಿಚಾರಿಸಿದರೇ ತೃಪ್ತಿ. ಆಗ ಅಲ್ಲಿನ ಜನಜಂಗುಳಿ, ಆಟೋರಿಕ್ಷಾಗಳ ಕೊರೆತ-ಇವೆಲ್ಲವನ್ನೂ ಮರೆತು, ನಾನು ಒಂದು ಪ್ರಾಚೀನವಾದ, ನಿಸರ್ಗರಮಣೀಯವಾದ ಗುರುಕುಲದಲ್ಲಿ ಗುರುವಿನ ಸಾನ್ನಿಧ್ಯದಲ್ಲಿ ಇರುವಂತೆ ನನ್ನ ಮನಸ್ಸಿಗೆ ಖಂಡಿತವಾಗಿ ಭಾಸವಾಗುತ್ತದೆ.

ಮಾಸ್ತಿಯವರ ಮತ್ತು ನನ್ನ ಪರಿಚಯ ಇನ್ನೂ ನಿಕಟವಾದದ್ದು ಶ್ರೀ ಪುರಂದರದಾಸರ ನಾಲ್ಕನೇ ಶತಾಬ್ಧಿಯ ಉತ್ಸವ ನಡೆಯುತ್ತಿದ್ದ ಕಾಲದಲ್ಲಿ. ಅವರು ದಾಸರ ಮೇಲೆ ಬರೆದ ರೇಡಿಯೊ ರೂಪಕದ ಪ್ರಸಾರ ನಿರ್ದೇಶನವನ್ನೂ ಆಕಾಶವಾಣಿಯಲ್ಲಿ ತಾವೇ ಕೈಗೊಂಡಿದ್ದರು; ಆದರಲ್ಲಿ ಶ್ರೀ ವ್ಯಾಸರಾಯರ ಶಿಷ್ಯನಾದ ನರಹರಿಯ ಪಾತ್ರವು ನನಗೆ ದೊರೆತಿತ್ತು. (ಆದಾಗಿ ಕೆಲವು ಕಾಲ ನನ್ನನ್ನು ಅವರು 'ನರಹರಿ' ಎಂದೇ ಕರೆಯುತ್ತಿದ್ದರು. ಹೇಗೂ 'ಕೃಷ್ಣ', 'ನರಹರಿ' ಎಂಬ ಎರಡು ನಾಮಗಳೂ ದಶಾವತಾರಕ್ಕೇ ಸಂಬಂಧಪಟ್ಟದ್ದರಿಂದ ಆ ಮಹನೀಯರ ಜ್ಞಾಪಕ ಪಥದಲ್ಲೂ ಈ ಮಾರ್ಪಾಟು ಆಗಿತ್ತೋ ಏನೋ!) ಧ್ವನಿ ಮುದ್ರಣವಾಗುವಾಗ ಆ 'ಪುರಂದರ' ರೂಪಕದ ಪೀಠಿಕೆಯ ಸಾಲುಗಳನ್ನು ಮಾಸ್ತಿಯವರು ವಾಚಿಸಿದ ರೀತಿಯ ಸ್ಮರಣೆಯೇ ನನಗೆ ರೋಮಾಂಚಕಾರಕ.

ಕಳೆದ ವರ್ಷ, ರಾಜಾಜಿಯವರ ''ಭಜಗೋವಿಂದಮ್'' ಎಂಬ ವ್ಯಾಖ್ಯಾನವನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿ, ಮಾಸ್ತಿಯವರಿಗೆ ತೋರಿಸಲು ಹೋಗಿದ್ದೆ. ''ಆದಿಶಂಕರರ ಕೃತಿ, ರಾಜಾಜಿಯವರ ವ್ಯಾಖ್ಯಾನ ಎಂದರೆ ಕೇಳಬೇಕೆ? ಬಹಳ ಒಳ್ಳೆಯ ಕೆಲಸ ಮಾಡಿದಿರಿ'' ಎಂಬ ತುಂಬು ಹೃದಯದ ಮಾತು ಬಂದಿತು. ಕಾಲು ಮುಟ್ಟಿ ನಮಸ್ಕಾರ ಮಾಡಲು ಹೋದಾಗ ಮಾತ್ರ ''ಛೆ! ಛೆ! ಎಲ್ಲರಲ್ಲೂ ಇರುವ ಭಗವಂತನು ಒಬ್ಬನೇ'' ಎಂದು ಕೈ ಹಿಡಿದು ಎಬ್ಬಿಸಿದರು. ಬರವಣಿಗೆಗೆಲ್ಲಾ ಅವರ ಮಂದಹಾಸದ ಪ್ರೋತ್ಸಾಹ.

ಬೃಹದಾಕಾರದ ಸಾರಸ್ವತ ಸಂಪತ್ತು. ಮಾನವೀಯತೆಯಿಂದ ಕಂಗೊಳಿಸುವ ಸೌಜನ್ಯದ ಸಾಕಾರಮೂರ್ತಿ ಮಾಸ್ತಿಯವರು ಒಂದು ವ್ಯಕ್ತಿಯಲ್ಲ, ಮಹಾ ಸಂಸ್ಥೆ. ಇವರಿಗೆ ದೀರ್ಘಾಯುರಾರೋಗ್ಯಾದಿಗಳನ್ನು ಅನುಗ್ರಹಿಸುವಂತೆ ಭಗವಂತನಲ್ಲಿ ಮೊರೆಯಿಡುವ ಎಲ್ಲರ ಜತೆ ನಾನೂ ದನಿಗೂಡಿಸುತ್ತೇನೆ.

ಏರುತ್ತಾ ಇರಿ

ಬೆ.ಗೋ. ರಮೇಶ್

ಡಿಸೆಂಬರ್ ೧೭,೧೯೮೯ ಬುಧವಾರ ಮಧ್ಯಾಹ್ನ ೧೨ ಗಂಟೆ. ನಾನು, ನನ್ನ ಸ್ನೇಹಿತ ಡಾ|| ಹೊ.ರಾ. ನಾಗರಾಜು ಹೋಗೋಣವೊ ಬೇಡವೊ ಎಂದು ಚರ್ಚಿಸಿ, ಕೊನೆಗೆ ಸ್ಕೂಟರ್ ಹತ್ತಿ ಹೊರಟೆವು. ಬೆಂಗಳೂರು ಗವಿಪುರಂ ಬಡಾವಣೆಯಲ್ಲಿ ಶ್ರೀನಿವಾಸರ (ಶ್ರೀ ಮಾಸ್ತಿ) ಮನೆ. ಮನೆ ತಿಳಿಯದು. ಅಲ್ಲಿಗೆ ಹೋದಾಗ ನಾಲ್ಕಾರು ಆಡುತ್ತಿದ್ದ ಹುಡುಗರನ್ನು ಕೇಳಿದೆವು. ''ಬನ್ನಿ ಬನ್ನಿ, ತಾತನ ಮನೆ ನಾವು ತೋರಿಸ್ತೇವೆ'' ಎಂದು ಉತ್ಸಾಹದಿಂದ ಕರೆದುಕೊಂಡು ಹೋಗಿ ತೋರಿಸಿದರು. ಅವರಲ್ಲಿರಬೇಕಾದ ವಾತ್ಸಲ್ಯ ಇದ್ದೇ ಇದೆ. ವ್ಯಕ್ತಿಯ ಮೇಲೆ ಅದು ನಿಂತಿದೆ ಎಂದಂದುಕೊಂಡೆ. ಮನೆಗೆ ಹೋಗಿ ಸಾರ್, ಸಾರ್ ಎಂದು ಕೂಗಿದೆವು. ಹಳೆ ಕಾಲದ ಮನೆ. ಆಚಾರ, ವ್ಯವಹಾರ ಹೇಗಿದ್ದಿರಬಹುದು ಆ ಕಾಲಕ್ಕೆ ಎಂಬುದಕ್ಕೆ ಸಾಕ್ಷಿಯಾಗಿತ್ತು ಮನೆ. ಮಾಸ್ತಿಯವರು ಊಟ ಮಾಡುತ್ತಿದ್ದರು. ಕೈತೊಳೆದು ಬಂದರು. ಅಪಚರಿತರಲ್ಲಿ ಪರಿಚಿತರಲ್ಲಿ ತೋರಬೇಕಾದ್ದಕ್ಕಿಂತ ಹೆಚ್ಚು ವಿಶ್ವಾಸ ಮಾಸ್ತಿಯವರಲ್ಲಿ ಬನ್ನಿ ಬನ್ನಿ ಎಂದು ರೂಮಿಗೆ ಕರೆದೊಯ್ದರು. ಪರಸ್ಪರ ಪರಿಚಯವಾಯಿತು. ನಾನು ನಮ್ಮ ಗುರುಗಳೊಬ್ಬರ ಪುಸ್ತಕಕ್ಕೆ ಮುನ್ನುಡಿ ಬರೆಯುವಿರಾ ಎಂದು ಕೇಳಹೋಗಿದ್ದೆ. ''ಅಯ್ಯೋ, ಈಗ ಸ್ವಲ್ಪ ಹಾಯಾಗಿದ್ದೇನಪ್ಪ. ಅವೆಲ್ಲ ಈಗ ಯಾವುದೂ ನಾ ಮಾಡ್ತಾ ಇಲ್ಲ'' ಎಂದರು. ಆದರೆ ನಿರಾಶೆ ಮೂಡಿಸಲಿಲ್ಲ. ಪುಸ್ತಕ ಕೈಗೆತ್ತಿ ನೋಡಿದರು. ವಿಷಯದ ಬಗ್ಗೆ ಚರ್ಚಿಸಿದರು. ನಾನು ನನ್ನ ಬರವಣಿಗೆಯ ಬಗ್ಗೆ ಹೇಳಿಕೊಂಡೆ. ಆಗ ಅಚ್ಚಾಗಿ ಬಂದಿದ್ದ ಗುರುನಾನಕರ ಬಗ್ಗೆ ಲೇಖನ ತೋರಿಸಿದೆ. ಮಾಸ್ತಿಯವರು ಅಲ್ಲಿಯ ಎರಡು ಮೂರು ಸಾಲುಗಳನ್ನೋದಿ ನನಗೆ ''ಮೆಕಾಲಿಫ್ ಅವರ ಗ್ರಂಥಗಳನ್ನೋದಿ ಗುರುನಾನಕರ ಬಗ್ಗೆ ಇನ್ನೂ ಬರೆಯಿರಿ'' ಎಂದು; ಆ ಗ್ರಂಥಗಳು ಎಲ್ಲಿ ಸಿಗುತ್ತವೆ ಎಂದೂ ತಿಳಿಸಿದರು. 'ಸಾಹಿತ್ಯ ಅವರು ಬರೆಯಬೇಕು ಇವರು ಬರೆಯಬೇಕು ಎಂದಿಲ್ಲ ರಮೇಶ್. ಅದೊಂದು ಹುಚ್ಚು. ವೃತ್ತಿ ಅಡ್ಡಿಬರುವುದಿಲ್ಲ'' ಎಂದರು. ರಜತೋತ್ಸವದ ಜೀವನ ಸಂಚಿಕೆಯಲ್ಲಿ ಅವರು ಚಂದಾಹಣ ಎತ್ತಲು ಕಷ್ಟಪಟ್ಟಿದ್ದನ್ನು ಜ್ಞಾಪಿಸಿ ನಿವೇದಿಸಿದೆ. ''ರಮೇಶ್, ಬಲು ಕಷ್ಟಪಟ್ಟೆ. ಆದರೆ ನಮ್ಮ ಜನಕ್ಕಾಗಿ ಮಾಡಿದೆ. ಎಲ್ಲೂ ನಾ ಕೂರಲಿಲ್ಲ'' ಎಂದರು. ಕಿರಿಯರಾದ ನಮ್ಮ ಹತ್ತಿರ ಕೂಡಾ ಅವರು ಬೇರೆ ಏನೂ ಹೇಳಲಿಲ್ಲ. ಯಾವ ಲೇಖಕನೆ ಆಗಲಿ ''ಬರೆಯಲಿ, ಕೂರಬೇಡಿ, ನಿಲ್ಲಬೇಡಿ, ಇಳಿಯಬೇಡಿ, ಏರುತ್ತಾ ಇರಿ'' ಎಂದು ನನಗೆ ಸಲಹೆ ಇತ್ತರು. ಅಪರಿಚಿತನಾಗಿ ಹೋದವನಿಗೆ ೮೦ ವರುಷಗಳಿಂದಲೂ ಇವರು ಪರಿಚಯವೊ ಏನೊ ಎನ್ನುವಂತೆ ಮಾತನಾಡಿಸಿದರು. ಬಿಸಿಲಿನಲ್ಲಿ ಬಂದು ತೊಂದರೆ ಕೊಟ್ಟೆವು ಸಾರ್ ಎಂದೆವು. ''ಅಯ್ಯೋ ತೊಂದರೆ ಏನು ಬಂತು. ನೀವೇ ತೊಂದರೆ ತೆಗೆದುಕೊಂಡಿರಿ. ಇರಿ ಸ್ವಲ್ಪ ಕಾಫಿಯೊ,

ಶರಬತ್ತೊ ಮಾಡಿಸುತ್ತೇನೆ'' ಎಂದರು. ನಾವು ಇಲ್ಲಾ ಸಾರ್ ಎಲ್ಲಾ ಆಗಿದೆ ಎಂದು ಅವರಿಗೆ ನಮಸ್ಕಾರ ಮಾಡಿ ಹೊರಟೆವು. ''ತಾಳಿ, ಜೀವನದ ಒಂದು ಪ್ರತಿ ಕೊಡುತ್ತೇನೆ'' ಎಂದು ನಿಲ್ಲಿಸಿ ಒಳಗೆ ಹೋಗಿ ಹುಡುಕಿದರು. ಅಷ್ಟು ಆದರ ನಮಗೆ ತೋರಿಸಿದರು. ಆದರೆ ಜೀವನದ ಪ್ರತಿ ಬೇಗ ಸಿಕ್ಕಲಿಲ್ಲ, ಮತ್ತೆ ಬಂದರು. ಹೋಗಿಬನ್ನಿ ಎಂದು ಬೀಳ್ಕೊಟ್ಟರು. ನಾವು ಬರುವಾಗ ಅವರು ನಗೆಮುಖದಿಂದ ಬೀಳ್ಕೊಟ್ಟ ದೃಶ್ಯ ನಾನೆಂದಿಗೂ ಮರೆಯಲಾರೆ. ಗುರುಗಳಿಗಾಗಿ ಹೊರಟು ''ಭವ್ಯ ಜೀವನ, ತುಂಬು ಬಾಳು ನಡೆಸಿರುವ ನಿಜಕ್ಕೂ ಶ್ರೀ-ನಿವಾಸರೇ ಆಗಿರುವ ಮಾಸ್ತಿಯವರು'' ನನಗೆ ಗುರುಗಳಾದರು ಆ ದಿನ ನನಗೆ ೨೫, ಅವರಿಗೆ ಎಪ್ಪತ್ತೈದು. ನಾನಿನ್ನು ಏನೂ ಕಾಣದವನು. ಎಲ್ಲಾ ಬಲ್ಲವರು ಮಾಸ್ತಿಯವರು. ಸುಮಾರು ಇನ್ನುಳಿದ ನನ್ನ ಆಯಸ್ಸಿನಲ್ಲಿ ನಾನು ಹೇಗಿರಬೇಕು ಎಂಬುದನ್ನು ಕೇವಲ ''ಕೂರಬೇಡಿ, ಏರುತ್ತಾ ಇರಿ'' ಎಂದು ಎರಡೇ ಪದಗಳಲ್ಲೇ ತೋರಿಸಿಬಿಟ್ಟರು. ಇದರಿಂದ ಮಾನವನಿಗುಂಟಾಗುವ ನಿರಾಸೆ, ನಿರ್ವಿಕಾರಗಳು ಕಳೆಯಲಿ. ಏರುಮುಖದಲ್ಲಿ ಇವೆಲ್ಲಾ ಮರೆತುಬಿಡಿ ಎಂಬ ಪಾಠ ನನಗೆ ಹೇಳಿ ಕೊಟ್ಟರು ಗುರು ಶ್ರೀನಿವಾಸರು.

ಒಂದು ಪ್ರವಾಸ

ನಿಟ್ಟೂರು ಶ್ರೀನಿವಾಸರಾವ್

ನನಗೆ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಅನುಭವದ ಅವಕಾಶವು ಮೊಟ್ಟ ಮೊದಲು ದೊರೆತದ್ದು ಸೆಂಟ್ರಲ್ ಕಾಲೇಜಿನಲ್ಲಿ ನಾನು ಓದುತ್ತಿದ್ದಾಗ. ಈಗ್ಗೆ ೫೦ ವರ್ಷಗಳಿಗಿಂತ ಹಿಂದೆ. ಆ ಹೊತ್ತಿಗಾಗಲೇ ಅವರ ಪುಸ್ತಕಗಳನ್ನು ಓದುತ್ತಿದ್ದುದಲ್ಲದೆ ಅವರ ವಿಷಯಗಳನ್ನೂ ಕೇಳಿದ್ದೆ. ಆದ್ದರಿಂದ ನಾನು ಅವರನ್ನು ಕಾಣುವ ಅವಕಾಶವನ್ನು ಅತ್ಯಂತ ಆತುರದಿಂದ ಎದುರು ನೋಡುತ್ತಾ ಇದ್ದೆ. ಅವರು ಮಧುಗಿರಿಯಲ್ಲಿ ಸಬ್‌ಡಿವಿಷನಲ್ ಆಫೀಸರಾಗಿದ್ದಾಗ ಸೆಂಟ್ರಲ್ ಕಾಲೇಜಿನ ವಾರ್ಷಿಕೋತ್ಸವಕ್ಕಾಗಿ ಇಲ್ಲಿಗೆ ಬಂದರು. ನನ್ನ ಆಪ್ತ ಸ್ನೇಹಿತರಾದ ದಿವಂಗತ ಶ್ರೀ ಶಂಕರಯ್ಯನವರ ಜೊತೆಗೆ ಸೆಂಟ್ರಲ್ ಕಾಲೇಜಿನ ಹಾಸ್ಟಲ್‌ನಲ್ಲಿ ಅವರ ಕೋಣೆಯಲ್ಲೇ ಇಳಿದುಕೊಂಡರು. ಆಗ ಎಷ್ಟು ಸಾಧ್ಯವೋ ಅಷ್ಟು ಕಾಲವನ್ನು ಅವರ ಜೊತೆಗೆ ಕಳೆದೆವು. ಅಲ್ಲಿಂದಾಚೆ ಅವರ ಸಂಪರ್ಕ ಇನ್ನೂ ಗಾಢವಾಗಿ ನಾನು ಅವರ ಮನೆಯ ಹುಡುಗರಲ್ಲಿ ಒಬ್ಬನಾದೆನು. ಅಂದಿನಿಂದ ಇಂದಿನವರೆಗೂ ಅವರ ಮತ್ತು ಅವರ ಧರ್ಮ ಪತ್ನಿ ಶ್ರೀಮತಿ ಪಂಕಜಮ್ಮನವರ ವಾತ್ಸಲ್ಯಕ್ಕೆ ನಾನು ಅವಿಚ್ಛಿನ್ನವಾಗಿ ಪಾತ್ರನಾದೆನು. ಈ ದೀರ್ಘ ಕಾಲದಲ್ಲಿ ನಾನು ಹಲವು ಬಾರಿ ಶ್ರೀ ವೆಂಕಟೇಶ ಅಯ್ಯಂಗಾರ್‌ರವರೊಂದಿಗೆ ಪ್ರವಾಸ ಮಾಡುವ ಸುಸಂದರ್ಭಗಳು ಒದಗಿದುವು. ಒಬ್ಬ ವ್ಯಕ್ತಿಯನ್ನು ಅನೇಕ ವರ್ಷ ಪದೇ ಪದೇ ಕಾಣುತ್ತಾ ಇರಬಹುದು. ಆದರೂ ಅವರ ನಿಜವಾದ ವ್ಯಕ್ತಿತ್ವ ಅವರೊಡನೆ ೪ ವರ್ಷ ಪ್ರವಾಸ ಮಾಡಿ ಸದಾಕಾಲ ಜೊತೆಗೆ ಇರುವುದರಿಂದ ತಿಳಿಯುವ ಮಟ್ಟಿಗೆ ದೀರ್ಘಕಾಲದ ಪರಿಚಯದಿಂದ ತಿಳಿಯಬರುವುದಿಲ್ಲವೆಂಬುದು ಅನುಭವಿಸಿದ್ಧವಾದ ಮಾತು. ಇದು ನನಗೆ ಸ್ವಂತ ಅನುಭವದಿಂದ ಸಂಪೂರ್ಣವಾಗಿ ಮನದಟ್ಟಾಗಿದೆ. ಇದರಿಂದ ನಾನು ಹೇಳಲಾರದಷ್ಟು ಲಾಭ ಪಡೆದಿದ್ದೇನೆ. ಮಾಸ್ತಿಯವರ ವಿಶಾಲ ಹೃದಯ ಅನುಕಂಪ ತಿಳಿಯಾದ ಹಾಸ್ಯ ನಿಷ್ಕಲ್ಮಶವಾದ ಮನೋವೃತ್ತಿ ಅನನ್ಯವಾದವುಗಳು. ಅವರ ನಿರಂತರ ಕೃಪಾದೃಷ್ಟಿಯು ನನ್ನ ಜೀವನದ ಒಂದು ದೊಡ್ಡ ಸೌಭಾಗ್ಯವಾಗಿದೆ. ಅವರಿಗೆ ಅರ್ಪಿಸಲಿರುವ ಈ ಗ್ರಂಥದಲ್ಲಿ ನಾನು ಅವರ ಜೊತೆಗೆ ಮಾಡಿದ ಒಂದೇ ಒಂದು ಪ್ರವಾಸದ ಅನುಭವವನ್ನು ಕುರಿತು ನಾಲ್ಕು ಮಾತುಗಳನ್ನು ಹೇಳಿ ನನ್ನ ಭಕ್ತಿಯ ಕಾಣಿಕೆಯನ್ನು ಅರ್ಪಿಸುತ್ತೇನೆ.

ಮದ್ರಾಸ್ ವಿಶ್ವವಿದ್ಯಾನಿಲಯದ ಆಹ್ವಾನದ ಮೇಲೆ ೧೯೨೭ನೇ ಇಸವಿ ಕಡೇ ಭಾಗದಲ್ಲಿ ಅಥವಾ ೧೯೨೮ರ ಮೊದಲಲ್ಲಿ ಶ್ರೀ ವೆಂಕಟೇಶ ಅಯ್ಯಂಗಾರ್ಯರು ಮದ್ರಾಸಿಗೆ ಪ್ರಯಾಣ ಬೆಳೆಸಿದರು. ಆ ಪ್ರವಾಸವನ್ನು ತಮ್ಮ ಮೋಟಾರ್ ಕಾರಿನಲ್ಲಿ ಕೈಗೊಂಡರು. ನನ್ನನ್ನೂ ಅವರ ಜೊತೆಗೆ ಬರಲು ಅತ್ಯಂತ ವಿಶ್ವಾಸದಿಂದ ಕರೆದರು. ನಾವಿಬ್ಬರೂ ಶ್ರೀವೆಂಕಟೇಶ ಅಯ್ಯಂಗಾರ್‌ರವರ ಮಾವಂದಿರಾದ ಕೃಷ್ಣಸ್ವಾಮಿ ಅಯ್ಯಂಗಾರ್‌ರವರೂ,

ಅವರ ಬೀಗರಾದ ಪಂಡಿತ ಚೆಲುವಯ್ಯಂಗಾರ್ಯರೂ ನಮ್ಮ ಜೊತೆಯಲ್ಲೇ ಪ್ರಯಾಣ ಮಾಡುವವರಾಗಿದ್ದರು. ನಾನು ಇಂತಹ ಸನ್ನಿವೇಶವನ್ನು ಕಳೆದುಕೊಳ್ಳುವುದುಂಟೇ? ಆದರೆ ಒಂದೆರಡು ವಿಷಯಗಳ ಕಾರಣ ನಾನು ಸ್ವಲ್ಪ ವಿಚಾರ ಮಾಡಬೇಕಾಗಿತ್ತು. ನಾನು ಆಗ ತಾನೇ ಅನಾರೋಗ್ಯದಿಂದ ಮಲಗಿ, ಗುಣಮುಖವಾಗುತ್ತಾ ಇದ್ದೆನು. ಆಗ ದೂರದ ಪ್ರಯಾಣ ಮಾಡಿದರೆ ಆರೋಗ್ಯಕ್ಕೆ ತೊಂದರೆಯಾಗುವುದಿಲ್ಲವೇ ಎಂಬುದೊಂದು. ಎರಡನೆಯದು, ಕೆಲವೇ ದಿವಸಗಳಲ್ಲಿ ನಾನು ಮೈಸೂರು ಚೀಫ್ ಕೋರ್ಟಿನ ಅಡ್ವೋಕೇಟ್ ಆಗಿ ಸೇರಲು ಪಾಸ್ ಮಾಡಬೇಕಾಗಿದ್ದ ಪ್ರೊಸೀಜರ್ ಪರೀಕ್ಷೆಗೆ ಕಟ್ಟಿದ್ದೆನು. ಆ ಪರೀಕ್ಷೆಯು ಕೆಲವೇ ದಿವಸಗಳಲ್ಲಿ ನಡೆಯುವುದಿತ್ತು. ಅದಕ್ಕೆ ನಾನು ಸಿದ್ಧ ಮಾಡಿಕೊಂಡಿರಲಿಲ್ಲ. ಉಳಿದ ಕಾಲ ಈ ಪ್ರವಾಸದಲ್ಲಿ ಕಳೆದರೆ ಪರೀಕ್ಷೆಗೆ ಕೂಡುವುದು ಹೇಗೆ? ಎರಡು ಅಡಚಣೆಗಳಿಗೂ ವೆಂಕಟೇಶ ಅಯ್ಯಂಗಾರ್ಯರು ಸೂಕ್ತ ಸಮಾಧಾನ ಹೇಳಿದರು. ಆ ಕಾಲ, ಎಂದರೆ ಡಿಸೆಂಬರ್ ಜನವರಿ ತಿಂಗಳುಗಳು, ಹವಾಮಾನ ದೃಷ್ಟಿಯಿಂದ ಮದ್ರಾಸಿನಲ್ಲಿ ಅತಿ ಪ್ರಶಸ್ತವಾದ ಕಾಲ. ಆದುದರಿಂದ ಆಗ ಪ್ರಯಾಣ ಬೆಳೆಸುವುದು ಮತ್ತು ಸಮುದ್ರ ತೀರದಲ್ಲಿ ಕಾಲ ಕಳೆಯುವುದು ನನ್ನ ಆರೋಗ್ಯಕ್ಕೆ ಸುಧಾರಣೆ ದೃಷ್ಟಿಯಿಂದ ಅತ್ಯಂತ ಸಹಾಯಕವಾಗುವುದು. ಪರೀಕ್ಷೆ ವಿಷಯದ ಒಂದು ಭಾಗದ ಮಟ್ಟಿಗಾದರೂ ನನಗೆ ಅನನ್ಯವಾದ ಸಹಾಯ ದೊರಕುವುದು-ಏಕೆಂದರೆ ಅವರ ಮಾವಂದಿರಾದ ಕೃಷ್ಣಸ್ವಾಮಿ ಅಯ್ಯಂಗಾರ್‌ರವರು ಅನೇಕ ವರ್ಷ ಅಸಿಸ್ಟೆಂಟ್ ಕಮೀಷನರ್ ಮತ್ತು ಮ್ಯಾಜಿಸ್ಟ್ರೇಟರಾಗಿ ಕ್ರಿಮಿನಲ್ ಪ್ರೊಸೀಜರ್ ಕೋಡಿನ ಸಂಪೂರ್ಣ ಜ್ಞಾನವನ್ನು ಅದರ ಅಭ್ಯಾಸದಿಂದಲೂ ಪ್ರಯೋಗದಿಂದಲೂ ಪಡೆದಿದ್ದರು. ಆ ಹಿರಿಯರ ಅನುಭವದ ಪ್ರಯೋಜನ ಅಷ್ಟೇ ಅಲ್ಲದೆ ತಾವೂ (ವೆಂಕಟೇಶ ಅಯ್ಯಂಗಾರ್ಯರೂ) ಕೂಡ ಮ್ಯಾಜಿಸ್ಟ್ರೇಟರಾಗಿ ಕೆಲಸ ಮಾಡಿ ಅನುಭವ ಪಡೆದಿದ್ದರು. ಆದುದರಿಂದ ನನಗೆ ಇವರಿಬ್ಬರ ಪರಿಜ್ಞಾನದ ಪ್ರಯೋಜನವನ್ನು ನಮ್ಮ ಪ್ರವಾಸ ಕಾಲದಲ್ಲಿ ಪಡೆಯುವ ಅವಕಾಶ ಇದ್ದೇ ಇತ್ತು. ಮನೆಯಲ್ಲಿ ಕೂತು ಪುಸ್ತಕವನ್ನು ಓದುವುದಕ್ಕಿಂತ ಇದು ಎಷ್ಟೋ ಉತ್ತಮವಲ್ಲವೇ? ಈ ರೀತಿಯ ಆಶ್ವಾಸನೆಯನ್ನು ನಾನು ಅತ್ಯಂತ ಉತ್ಸಾಹದಿಂದ ಸ್ವಾಗತಿಸಿ ಪ್ರಯಾಣಕ್ಕೆ ಅನುವಾದೆನು.

ಬೆಂಗಳೂರಿನಿಂದ ಹೊರಟು ಮೊದಲು ನಿಂತ ಸ್ಥಳ ಕೋಲಾರ. ಅಲ್ಲಿ ಪ್ರಸಿದ್ಧ ವಕೀಲರಾದ ಶ್ರೀ ಟಿ. ಶ್ರೀನಿವಾಸಾಚಾರ್ಯರ ಮನೆಯಲ್ಲಿ ತಂಗಿದೆವು. ಆ ದಿನ ರಾತ್ರಿ ಅಲ್ಲಿಯೇ ಇನ್ನೊಬ್ಬ ಪ್ರಸಿದ್ಧ ವಕೀಲರಾದ ಶ್ರೀ ವೆಂಕಟಾಚಾರ್ಯರ ಮನೆಯಲ್ಲಿ ಊಟ. ನಾವು ಕೋಲಾರದಿಂದ ಮುಂದೆ ಪ್ರಯಾಣ ಬೆಳೆಸಿದಾಗ ಶ್ರೀನಿವಾಸಾಚಾರ್ಯರು ನಮಗೆ ಮಾರ್ಗ ಕಳೆಯಲು ಸಹಾಯವಾಗುವುದಕ್ಕೆ ಹುರಿಯಕ್ಕಿ, ಚಿನಕುರುಳಿ, ಮುಂತಾದವನ್ನು ಕೊಟ್ಟಿದ್ದು ಚೆನ್ನಾಗಿ ನೆನಪಿದೆ. ಮದ್ರಾಸಿನಲ್ಲಿ ನಾವು ಇಂಡಿಯನ್ ಆಫೀಸರ್ಸ್ ಅಸೋಷಿಯೇಷನ್ ಸಂಸ್ಥೆಯು ಸದಸ್ಯ ಅಧಿಕಾರಿಗಳ ಮಕ್ಕಳು ಮತ್ತು ಬಂಧುಗಳಾದ ಯುವಕರಿಗಾಗಿ ನಡೆಸುತ್ತಿದ್ದ ಹಾಸ್ಟಲ್‌ನಲ್ಲಿ ಇಳಿದುಕೊಂಡೆವು. ನಾನು ಹಿಂದಿನ ವರ್ಷದಲ್ಲಿ ಮದ್ರಾಸ್ ಲಾ ಕಾಲೇಜಿನಲ್ಲಿ ಓದುತ್ತಿದ್ದಾಗ ಇದೇ ಹಾಸ್ಟಲ್‌ನಲ್ಲಿ ವಾಸಿಸುತ್ತಿದ್ದೆನಾದ್ದರಿಂದ ಮತ್ತು ಅಲ್ಲೇ ನನ್ನ ಹಲವು ಸ್ನೇಹಿತರು ಇನ್ನೂ ಇದ್ದಿದ್ದರಿಂದ ನಮಗೆ ಅಲ್ಲಿ ಇರುವುದು ಬಹಳ ಹಿತಕರವಾಗಿದ್ದಿತು. ಅಲ್ಲಿ ವಿಶ್ವವಿದ್ಯಾನಿಲಯದಲ್ಲಿ ಮಾಡಿದ ಭಾಷಣಗಳ ವಿಷಯಗಳನ್ನು ಕುರಿತು ವೆಂಕಟೇಶ ಅಯ್ಯಂಗಾರ್‌ರವರು ತಮ್ಮ 'ಭಾವ' ಎಂಬ ಪುಸ್ತಕದಲ್ಲಿ ಕೆಲವು

ಮಾತುಗಳನ್ನು ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ವಿಶೇಷವಾದ ಅಂಶಗಲ್ಲಿ ಶ್ರೋತೃವರ್ಗದ ಪೈಕಿ ಬೆಂಗಳೂರಿನಿಂದ ವೆಂಕಟ ಅಯ್ಯಂಗಾರ್‌ರವರ ಜೊತೆಗೆ ಹೋಗಿದ್ದ ನಾವುಗಳು ಅನಲ್ಪ ಭಾಗವಾಗಿರಲಿಲ್ಲವೆಂಬುದು ಒಂದು. ಎರಡನೆಯದು, ಆಗ ಮದ್ರಾಸ್ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸ್‌ಲರ್ ಆಗಿದ್ದ ಶ್ರೀ ವೆಂಕಟರಂಗಂ ನಾಯಿಡುರವರು ತಾವು ಅನಾರೋಗ್ಯದಿಂದ ತೊಂದರೆ ಪಡುತ್ತಿದ್ದರೂ ಉಪನ್ಯಾಸಕ್ಕೆ ಬಂದು ವೆಂಕಟೇಶ ಅಯ್ಯಂಗಾರ್‌ರವರನ್ನು ಎದುರುಗೊಂಡು ಅವರನ್ನು ಸ್ವಾಗತಿಸಿ ಅವರ ವಿಷಯವನ್ನೂ ಮತ್ತು ಅವರ ಉಪನ್ಯಾಸದ ವಿಷಯದ ಮಹತ್ವವನ್ನೂ ಕುರಿತು ಆಡಿದ ಮಾತುಗಳು, ಅವರ ಸೌಜನ್ಯ, ಹೃದಯ ವೈಶಾಲ್ಯ, ಇವೆಲ್ಲವೂ ನಮ್ಮಗಳ ಮನಸ್ಸಿನ ಮೇಲೆ ದೊಡ್ಡ ಪರಿಣಾಮ ಉಂಟುಮಾಡಿದುವು. ನಾವು ಮದ್ರಾಸಿನಲ್ಲಿ ಇದ್ದ ಕಾಲದಲ್ಲಿ ಪಂಜೆಮಂಗೇಶರಾಯರು ಅಲ್ಲೇ ಇದ್ದರು. ಅವರೊಡನೆಯೂ ಶ್ರೀ ಬೆನಗಲ್ ರಾಮರಾಯರೊಡನೆಯೂ ಆಗ ಮದ್ರಾಸ್ ಸರ್ಕಾರದಲ್ಲಿ ದೊಡ್ಡ ಅಧಿಕಾರದಲ್ಲಿದ್ದ ಏ.ಪಿ. ರಾವ್ ಅವರೊಡನೆಯೂ ನಾವು ಕೆಲವು ಕಾಲವನ್ನು ಕಳೆದೆವು. ಒಂದು ರಾತ್ರಿ ಬೆಳದಿಂಗಳಿನಲ್ಲಿ ಪಂಜೆ ಮಂಗೇಶರಾಯರೊಡನೆ ಸಮುದ್ರತೀರದ ಮರಳಿನಲ್ಲಿ ಮಧ್ಯರಾತ್ರಿಯವರೆಗೂ ಸುಖಸಂಕಥಾ ವಿನೋದದಿಂದ ಕಾಲ ಕಳೆದೆವು.

ಈ ಪ್ರವಾಸದಲ್ಲಿ ನಾವು ಕಂಚಿಗೆ ಹೋಗಿ ಅಲ್ಲಿಯ ದೇವಸ್ಥಾನಗಳನ್ನು ನೋಡಿದೆವು. ಅಲ್ಲಿಂದ ಮದ್ರಾಸಿಗೆ ಹೋಗಿ ಶ್ರೀ ರಾಮಾನುಜರ ಜನ್ಮಸ್ಥಾನವಾದ ಶ್ರೀ ಪೆರಂಬೂರಿನ ದೇವಸ್ಥಾನಕ್ಕೂ ಹೋದೆವು. ಅಲ್ಲಿ ಮಂಗಳಾರತಿ ಆದ ಮೇಲೆ ನಮಗೆ ಅರ್ಚಕರು ಪ್ರಸಾದವನ್ನು ಕೊಟ್ಟರು. ನಾನು ಆ ಪ್ರಸಾದವನ್ನು ಅಂದರೆ ಪೊಂಗಲನ್ನು ಸೇವಿಸಿ ನನ್ನ ಕೈಯನ್ನು ಶುದ್ಧಿ ಮಾಡಿಕೊಳ್ಳಲು ಅತ್ತ ಇತ್ತ ನೋಡುತ್ತಿದ್ದೆನು. ಇದು ವೆಂಕಟೇಶ ಅಯ್ಯಂಗಾರ್ಯರಿಗೆ ಗೊತ್ತಾಗಿರಬೇಕು. ಏಕೆಂದರೆ ಅವರು ನನ್ನ ಹತ್ತಿರ ಬಂದು ಮೆದು ಮಾತಿನಲ್ಲಿ ಹೀಗೆ ಹೇಳಿದರು: ''ಶ್ರೀ ವೈಷ್ಣವರ ದೇವಸ್ಥಾನಗಳ ಸಂಬಂಧವಾಗಿ ಹೇಳಿದ ಈ ಮಾತನ್ನು ಕೇಳಿಲ್ಲವೇ? 'ರಂಗನೇ ಪೆರುಮಾಳ್, ಪೊಂಗಲೇ ಪ್ರಸಾದಂ, ಕಂಬಮೇ ತಣ್ಣಿ. . .ನಾನು ಅದೇ ಪ್ರಕಾರ ನನ್ನ ಸಮಸ್ಯೆಯನ್ನು ಪರಿಹಾರ ಮಾಡಿಕೊಂಡೆನು. ಕಂಬಗಳನ್ನು ನೋಡಿದಾಗ ಅವುಗಳು 'ತಣ್ಣಿ'ಯಾಗಿ ಉಪಯೋಗಿಸುವುದು ಅನೇಕ ತಲೆಮಾರುಗಳಿಂದ ನಡೆದುಕೊಂಡು ಬಂದಿರಬೇಕೆಂಬುದು ಸ್ಪಷ್ಟವಾಗಿ ಕಾಣುತ್ತಿತ್ತು.

ಮದ್ರಾಸಿನಿಂದ ಹಿಂತಿರುಗುವಾಗ ಮಹಾಬಲಿಪುರ ಮತ್ತು ಪಕ್ಷಿತೀರ್ಥಗಳನ್ನು ನೋಡಿಕೊಂಡು ಬಂದೆವು. ಈ ಪ್ರವಾಸದಲ್ಲಿ ನಾವು ಸುಮಾರು ಒಂದು ವಾರ ಕಳೆದೆವು. ನಮ್ಮ ಜೊತೆಗೆ ವೆಂಕಟೇಶೈಂಗಾರ್ಯರ ಕಾರಿನ ಚಾಲಕ ಮರಿಯಪ್ಪ ಬಂದಿದ್ದರೂ ಸಾರಥ್ಯ ಬಹುಮಟ್ಟಿಗೆ ವೆಂಕಟೇಶೈಂಗಾರ್ಯರದೇ ಆಗಿತ್ತು. ನನಗೆ ಈ ಸಂದರ್ಭದಲ್ಲಿ ದೊರೆತ ವ್ಯಕ್ತಿಗಳ ಸಹವಾಸ ಲಾಭವನ್ನು ನಾನು ಎಂದಿಗೂ ಮರೆಯುವ ಹಾಗಿಲ್ಲ. ಕೃಷ್ಣಸ್ವಾಮಿ ಅಯ್ಯಂಗಾರ್ಯರು ನಿಧಾನಸ್ಥರು, ಮಿತಭಾಷಿಗಳು, ಅವರ ಮಾತಿನಲ್ಲಿ ಅವರ ಪರಿಪಕ್ವ ಅನುಭವವು ಅರಿವಾಗುತ್ತಿದ್ದಿತು. ಅವರೊಡನೆಯೂ ಬೀಗರಾದ ಪಂಡಿತ ಚೆಲುವೈಂಗಾರ್ಯರೊಡನೆಯೂ . ನಡೆಯುತ್ತಿದ್ದ ಸಂಭಾಷಣೆ ಅತ್ಯಂತ ಬೋಧಪ್ರದವಾಗಿಯೂ ಮನೋರಂಜಕವಾಗಿಯೂ ಇರುತ್ತಿತ್ತು ಆಗಾಗ್ಗೆ ಲಘುಹಾಸ್ಯದಿಂದ ಕೂಡಿರುತ್ತಿತ್ತು.

ಇನ್ನು ನನ್ನ ಪರೀಕ್ಷೆಯ ವಿಚಾರ. ನಾನು ಇಡೀ ಪ್ರವಾಸ ಕಾಲದಲ್ಲಿ ಮ್ಯಾಜಿಸ್ಟ್ರೇಟ್

ಅಧಿಕಾರದ ಅನುಭವ ಪಡೆದ ಇಬ್ಬರು ಹಿರಿಯರಿಂದ ಪ್ರಯೋಜನ ಹೊಂದುವ ಸದವಕಾಶವನ್ನು ಉಪಯೋಗಿಸಿಕೊಳ್ಳಲಿಲ್ಲವೆಂದು ಹೇಳಬೇಕು.

ಆದರೂ ನಾನು ಪರೀಕ್ಷೆಗೆ ಕುಳಿತೆನು. ಆ ಪರೀಕ್ಷೆಯ ಫಲಿತಾಂಶ ಪ್ರಕಟಿಸುವಾಗ ಪ್ರಥಮ, ದ್ವಿತೀಯ, ತೃತೀಯ ಶ್ರೇಣಿಗಳನ್ನು ಸೂಚಿಸುವುದಲ್ಲದೆ ಎಲ್ಲ ಶ್ರೇಣಿಗಳಲ್ಲೂ ಸ್ಥಾನಕ್ಕನುಗುಣವಾಗಿ ಹೆಸರುಗಳನ್ನು ಪ್ರಕಟಿಸುವ ಪದ್ಧತಿಯಿತ್ತು. ಆ ಸಲದ ಪರೀಕ್ಷೆಯಲ್ಲಿ ಯಾರೂ ತೇರ್ಗಡೆಯಾಗದಿರಲಿಲ್ಲ. ನನ್ನ ಮತ್ತು ನನ್ನ ಸನ್ಮಿತ್ರರೊಬ್ಬರ ಹೆಸರುಗಳು ಒಟ್ಟಿಗೇ ಮೂರನೆಯ ಶ್ರೇಣಿಯ ಕಡೆಯ ಸ್ಥಾನದಲ್ಲಿ ರಾರಾಜಿಸುತ್ತಿದ್ದವು. ನನ್ನ ಊಹೆಯೇನೆಂದರೆ, ಪರೀಕ್ಷಕರು ಬಹಳ ದಯಶೀಲರಾಗಿದ್ದಿರಬೇಕು. ಅವರು ನಮ್ಮಿಬ್ಬರನ್ನು ಮಾತ್ರ ಏಕೆ ಇನ್ನೊಂದು ಪ್ರಯತ್ನಕ್ಕೆ ಗುರಿ ಮಾಡಬೇಕೆಂಬ ಕರುಣೆಯ ಬುದ್ಧಿಯಿಂದ ನಮ್ಮನ್ನು ದಾಟಿಸಿರಬೇಕು. ಇದೇ ಕಡೆಯ ಸ್ಥಾನದ ಗೌರವಕ್ಕೆ ಇಬ್ಬರೂ ಒಟ್ಟಿಗೆ ಪಾತ್ರರಾದ ಅಪೂರ್ವ ಘಟನೆ ಕಾರಣವಾಗಿರಬೇಕು.

‘ಜೀವನ’ ಯಾತ್ರೆ

ನಿರಂಜನ

ಮಾನ್ಯ ಮಾಸ್ತಿಯವರ ‘ಜೀವನ’ ಪತ್ರಿಕೆಗೆ ಇಪ್ಪತ್ತೈದು ವರ್ಷಗಳು ಸಂದಿವೆ. ವರ್ಷದ ಕೊನೆಯ ಸಂಚಿಕೆಯನ್ನು ಉತ್ಸವ ಸಂಚಿಕೆಯಾಗಿ ಅವರು ಪ್ರಕಟಿಸಿದ್ದಾರೆ. ಬೆಳ್ಳಿ-ಬಂಗಾರಗಳ ಅಳತೆಗೋಲನ್ನು ಬಳಸದೆ ‘ಇಪ್ಪತ್ತೈದು ವರ್ಷದ ಉತ್ಸವ ಸಂಚಿಕೆ’ ಎಂದು ಸರಳವಾಗಿ ಕರೆದಿದ್ದಾರೆ.

ಇನ್ನೂ ಒಂದು ಕಾರಣಕ್ಕಾಗಿ ಈ ಸಂಚಿಕೆಗೆ ಹೆಚ್ಚಿನ ಮಹತ್ವ ಪ್ರಾಪ್ತವಾಗಿದೆ. ಈ ಸಂಚಿಕೆಯೊಂದಿಗೆ ಮಾಸ್ತಿಯವರು ಸಂಪಾದಕನ ಹೊಣೆಯಿಂದ ಮುಕ್ತರಾಗುತ್ತಾರೆ. ತೇರನ್ನೆಳೆಯಲು ಮುಂದೆ ಬಂದಿರುವ ಸಾಹಸಿಗಳಿಗೆ ಎಡೆಮಾಡಿಕೊಟ್ಟು ತಾವು ಹಿನ್ನೆಲೆಗೆ ಸರಿಯುತ್ತಾರೆ.

ನೂರಮೂವತ್ತು ಪುಟಗಳ ಆಕರ್ಷಕ ಉತ್ಸವ ಸಂಚಿಕೆಯಲ್ಲಿ ಮೂರು ಭಾಗಗಳಿವೆ. ಒಂದು ಜೀವನ ಪತ್ರಿಕೆಯ ಕಥೆ; ಎರಡನೆಯದು, ಶ್ರೀನಿವಾಸ ವಿರಚಿತ ‘ಕನಕಣ್ಣ’ ದೃಶ್ಯ; ಮೂರನೆಯದು, ಇಪ್ಪತ್ತೈದು ವರ್ಷಗಳಲ್ಲಿ ‘ಜೀವನ’ದಲ್ಲಿ ಏನೇನು ಪ್ರಕಟವಾಯಿತೆಂದು ತಿಳಿಸುವ ವಿಷಯ ಸೂಚಿಕೆ.

ಜೀವನ ಪತ್ರಿಕೆಯ ಕಥೆ ಎಂದಿರುವುದು ಎಷ್ಟು ಸಮಂಜಸ! ಈ ಜೀವನ ವೃತ್ತ, ರಸಭರಿತವಾದೊಂದು ನೀಳ್ಗತೆ; ಅಥವಾ, ಹೃದಯಸ್ಪರ್ಶಿಯಾದೊಂದು ಕಥನ ಕವನ.

*

ಉದ್ಯೋಗದಿಂದ ನಿವೃತ್ತರಾದ ಮೇಲೆ ಕಾವ್ಯಾರಾಮ ಎಂಬ ಸೇವಾಸಂಸ್ಥೆಯನ್ನು ಸ್ಥಾಪಿಸಿ ಅದೇ ಹೆಸರಿನ ಮಾಸ ಪತ್ರಿಕೆಯೊಂದನ್ನು ನಡೆಸುವ ಕನಸು ಕಂಡರು, ಮಾಸ್ತಿಯವರು. ತಮ್ಮ ಜೀವನದ ‘ಅತ್ಯಂತ ಸುಭಿಕ್ಷ ಕಾಲದಲ್ಲಿ’, ಮೂವತ್ತು ವರ್ಷಗಳಿಗೆ ಹಿಂದೆ.

ಆ ಸಮಯದಲ್ಲಿ ‘ತಮ್ಮ’ ಬೇಂದ್ರೆಯವರು ‘ಯಾವ ಕೆಲಸವೂ ಇಲ್ಲದೆ ಬಿಡುವಾಗಿದ್ದರು’. ಮೇಲುಮಟ್ಟದ ಮಾಸಪತ್ರಿಕೆಯೊಂದನ್ನು ಹೊರಡಿಸಲು ಅವರೂ ಗೆಳೆಯರೂ ಯೋಚಿಸಿದರು. ಪತ್ರಿಕೆಯ ಹೆಸರು ‘ಜೀವನ’. ಬೇಂದ್ರೆ, ಗೋಕಾಕ, ಮುಗಳಿ - ಸಂಪಾದಕರು.

ಮೂರು ವರ್ಷ ‘ಜೀವನ’ ಬಹು ಚೆನ್ನಾಗಿ ನಡೆಯಿತು. ‘ದಿಟವಾಗಿ ಅಂದು ನಡೆದಷ್ಟು ಚೆನ್ನ ಮರಳಿ ಈಚೆಗೆ ಎಂದೂ ನಡೆದಿಲ್ಲ’.

ಯುದ್ಧಕಾಲ, ಕಾಗದ ದೊರೆಯದೆ ನಾಲ್ಕನೆಯ ವರ್ಷ ‘ಜೀವನ’

ತ್ರೈಮಾಸಿಕವಾಯಿತು. ಅಲ್ಲದೆ ವರಮಾನವೂ ಸಾಕಷ್ಟು ಇರಲಿಲ್ಲ. ಪತ್ರಿಕೆಯನ್ನು ನಿಲ್ಲಿಸದೆ ಅನ್ಯಗತಿಯಿಲ್ಲ ಎನ್ನುವಂತಾಯಿತು.

ಆ ವೇಳೆಗೆ ಮಾಸ್ತಿಯವರು 'ಅಧಿಕಾರದಿಂದ, ನಿರೀಕ್ಷೆಗೆ ಸ್ವಲ್ಪ ಮುಂದಾಗಿ' ವಿಶ್ರಾಂತಿ ಪಡೆದಿದ್ದರು. ಸಂಸ್ಥೆ ಕಟ್ಟುವ ಆಲೋಚನೆ ಇರಲಿಲ್ಲ. ಮಾಸ ಪತ್ರಿಕೆಯನ್ನು ನಡೆಸುವುದು ಸಾಧ್ಯ ಎನ್ನಿಸಿತು. 'ಜೀವನ ಏನು, ಕಾವ್ಯರಾಮ ಏನು? ಜೀವನ ಪತ್ರಿಕೆಯನ್ನೇ ನಡೆಸಿದರೆ ಆಯಿತು ಎಂದು ಯೋಚನೆ ಮೂಡಿತು'.

ಮಾಸ್ತಿ ಸಂಪಾದಕರಾದರು. 'ಜೀವನ' ಧಾರವಾಡದಿಂದ ಬೆಂಗಳೂರಿಗೆ ಬಂತು.

*

ಅಲ್ಲಿಂದ ಇಪ್ಪತ್ತೊಂದು ವರ್ಷಗಳ ಕಾಲ ತಪ್ಪದೆ ಪ್ರತಿ ತಿಂಗಳೂ ಮೊದಲನೆಯ ತಾರೀಖು 'ಜೀವನ' ಪ್ರಕಟವಾಯಿತು. (ಗಾಂಧೀ ಹತ್ಯೆಯ ಅನಂತರದ ಸಂಚಿಕೆಯೊಂದೇ ಅಪವಾದ. ಗಾಂಧೀಜಿಯನ್ನು ಕುರಿತ ಲೇಖನವನ್ನು ಒಳಗೊಳ್ಳುವುದಕ್ಕಾಗಿ ಮೂರು ದಿನ ತಡವಾಯಿತು ಆ ಫೆಬ್ರುವರಿ ಸಂಚಿಕೆ.)

ಆ ಅವಧಿಯಲ್ಲಿ ಸಂಪಾದಕ ಮಾಸ್ತಿಯವರಿಗಾದ ಅನುಭವಗಳು ಅನೇಕ.

'ಪತ್ರಿಕೆ ಸ್ವತಂತ್ರವಾಗಿ ನಡೆಯಬೇಕಾದರೆ ಏನಿಲ್ಲವೆಂದರೂ ಒಂದು ಸಾವಿರ ಜನ ಚಂದಾದಾರರು ಇರಬೇಕು.'

ಅಷ್ಟು ಜನರನ್ನು ದೊರಕಿಸುವ ವಿಶಿಷ್ಟ ಸೇವಾಕಾರ್ಯ ಆರಂಭ. ಒತ್ತಾಸೆ, ಕೋರಿಕೆ, ಬೇಡಿಕೆ.

''ಈ ಸಂದರ್ಭ . . . ಕೆಲವು ಕತೆಗಳು ನೆನೆಯತಕ್ಕವು.''

(ಕತೆಗಳಷ್ಟೇ ಸ್ವಾರಸ್ಯಕರ ವಾಸ್ತವ ಘಟನೆಗಳು)

ಒಬ್ಬರು ಹಿರಿಯರನ್ನು ಮಾಸ್ತಿ, ಚಂದಾದಾರಗಬೇಕು ಎಂದು ಕೇಳಿಕೊಂಡರು. ಅವರು, ಕ್ಷಣ ಏನೂ ಹೇಳದೆ ಕೆಲವು ನಿಮಿಷ ಬಿಟ್ಟು, ''ನಮ್ಮಲ್ಲಿ ಬಲ್ಲವರು ಎನ್ನುವ ಜನ ಕೂಡ ತಾವು ಮಾಡುತ್ತಿರುವ ಕೆಲಸ ಬಹು ದೊಡ್ಡದು, ಅದು ನಡೆಯದಿದ್ದರೆ ಲೋಕವೇ ನಡೆಯುವುದಿಲ್ಲ ಎಂಬಂತೆ ಮಾತನಾಡುತ್ತಾರೆ,'' ಎಂದರು.

ಮೂರು ವರ್ಷ ಪತ್ರಿಕೆ ಪಡೆದ ಒಬ್ಬ ಮಿತ್ರರು, ''ಪತ್ರಿಕೆ ನಮಗೆ ಬೇಡವಾಗಿದ್ದರೂ ಇಷ್ಟು ದಿನವೂ ಬಂದಿದೆ. ಮೂರು ವರ್ಷದ ಚಂದಾ ಹಣದ ಬಗ್ಗೆ ಚೆಕ್ ಇದರೊಂದಿಗೆ ಕಳುಹಿಸಿದೆ. ಇನ್ನು ಪತ್ರಿಕೆ ಬೇಡ'' ಎಂದು ಬರೆದರು. ''ಬೇಡದೇ ಇದ್ದ ಪತ್ರಿಕೆ ಬಂದ ಮಾತ್ರಕ್ಕಾಗಿ ತಾವು ಏಕೆ ವೆಚ್ಚಕ್ಕೆ ಗುರಿಯಾಗಬೇಕು? ಚೆಕ್ ಹಿಂದಕ್ಕೆ ಕಳುಹಿಸಿದ್ದೇನೆ. ಇದನ್ನು ಬೇಸರದಿಂದಾಗಲಿ ಅಸಮಾಧಾನದಿಂದಾಗಲಿ ಮಾಡುತ್ತಿಲ್ಲ. ಪತ್ರಿಕೆಯನ್ನು ಇನ್ನು ಕಳುಹಿಸುವುದಿಲ್ಲ,'' ಎಂದು ಉತ್ತರ ಬರೆದು ಚೆಕ್ಕನ್ನು ಮಾಸ್ತಿ ಹಿಂತಿರುಗಿಸಿದರು. ಆ ಮಿತ್ರರು ಮತ್ತೆ ಪತ್ರ ಬರೆದರು. ''ನಿಮ್ಮಿಂದ ಬಹಳ ಕೆಲಸ ಆಗುತ್ತಿದೆ. ಇದು ನಡೆಯಬೇಕು. ನನ್ನನ್ನು ಚಂದಾದಾರನನ್ನಾಗಿ ಇರಿಸಿಕೊಳ್ಳಿ. ಇನ್ನು ಮುಂದೆಯೂ

ಪತ್ರಿಕೆಯನ್ನು ಕಳುಹಿಸಿಕೊಡಿ. ಚೆಕ್ಕನ್ನು ಮತ್ತೆ ಕಳುಹಿಸಿದ್ದೇನೆ,'' ಎಂದು ಅಪ್ಪಣೆಮಾಡಿದರು.

*

ಬಗೆಬಗೆಯ ಅನುಭವಗಳಾದ ಬಳಿಕ ಮಾಸ್ತಿಯವರಿಗೆ ಈಗಲೂ ಅನ್ನಿಸುತ್ತದೆ:

''ಪತ್ರಿಕೆ ಇಪ್ಪತ್ತೈದು ವರ್ಷ ನಡೆದಿದೆಯಾದರೂ ನಮ್ಮ ಚಂದಾದಾರರ ಮನೋಧರ್ಮ ಇನ್ನೂ ಹೀಗೆಯೇ ಇದೆ.''

ಉತ್ತಮ ಮಟ್ಟದ ಲೇಖನಗಳು ತಾವಾಗಿಯೇ 'ಜೀವನ'ಕ್ಕೆ ಬರುತ್ತಿದ್ದುವು. ಸಾಧ್ಯವಿದ್ದಾಗ ಅಲ್ಪ ಸ್ವಲ್ಪ ಸಂಭಾವನೆಯನ್ನೂ ಮಾಸ್ತಿ ಕೊಟ್ಟರು.

ಅವರು ಸಂಪಾದಕೀಯ ಟಿಪ್ಪಣಿಗಳನ್ನು ಬರೆಯತೊಡಗಿದರು.

''ಸ್ವತಂತ್ರವಾಗಿ ವಿಚಾರಮಾಡಿ, ಪ್ರಬಲರಾದವರು ಅಸಮಾಧಾನಪಟ್ಟರೆಂದು ಭಯವಿಟ್ಟುಕೊಳ್ಳದೆ ಯಾರಿಗೆ ಆಗಲಿ ಅನುಕೂಲವಾಗಲೆಂದು ಪಕ್ಷಪಾತ ತೋರದೆ, ತನಗೆ ಸತ್ಯವೆಂದು ತೋರಿದ್ದನ್ನು ಹೇಳುವುದು ಸಂಪಾದಕನ ಶ್ರೇಷ್ಠ ಲಕ್ಷಣ.''

ಮಾಸ್ತಿಯವರ ಟಿಪ್ಪಣಿಗಳು ಜನಪ್ರಿಯವಾದುವು. ಒಮ್ಮೆ ಅದು ಬರದೇ ಇದ್ದಾಗ ವಾಚಕರೊಬ್ಬರು, ''ಪತ್ರಿಕೆ ತಿಲಕವನ್ನು ಇಟ್ಟುಕೊಳ್ಳಲು ಮರೆತ ಸ್ತ್ರೀಯ ಮುಖದಂತೆ ಇತ್ತು'' ಎಂದು ಬರೆದರು.

*

'ಕಥೆ'ಯ ಕೊನೆಯಲ್ಲಿ ಮಾಸ್ತಿಯವರು ಹೇಳಿರುವ ಮಾತು ಇದು:

''ಜೀವನ ಪತ್ರಿಕೆಯ ಈ ಇತಿಹಾಸ ನನ್ನ ಜೀವನದ ಇತಿಹಾಸದ ಒಂದು ಅಧ್ಯಾಯ. ಪತ್ರಿಕೆ ಕನ್ನಡ ಜನತೆಯ ಜೀವನದ ಸೇವಕ. ಅದು ವ್ಯಕ್ತಿಯನ್ನು ಅವಲಂಬಿಸಿ ನಿಲ್ಲಬಾರದು. ವ್ಯಕ್ತಿಗಳು ಹಿಂದೆ ನಿಲ್ಲುತ್ತಾರೆ. ಪತ್ರಿಕೆ ಮುಂದೆ ನಡೆಯಬೇಕು. ಪತ್ರಿಕೆಯ ಕೆಲಸವನ್ನು ಮಿತ್ರರಿಗೆ ಒಪ್ಪಿಸುತ್ತಾ ನಾನು ದೈವ ಸನ್ನಿಧಿಯಲ್ಲಿ ಈ ಪ್ರಾರ್ಥನೆಯನ್ನು ಮಾಡುತ್ತಿದ್ದೇನೆ. ನಾಡು ನುಡಿಯ ಸೇವೆಯನ್ನು ಸಂತತವಾಗಿ ನಡೆಸುತ್ತಾ ಜೀವನ ಸಾವಿರ ಕಾಲ ನಡೆಯಲಿ. ನಮ್ಮ ಜನ ಇದನ್ನು ಹೆಮ್ಮೆಯಿಂದ ತಮ್ಮದೆಂದು ನೋಡಿಕೊಳ್ಳುವಂತೆ ದೈವ ಅನುಗ್ರಹಿಸಲಿ. ಕನ್ನಡ ಜೀವನ ಚೆನ್ನವಾಗಲಿ; ಸಿರಿಗನ್ನಡ ಗೆಲ್ಲಲಿ.''

ಪ್ರಾಮಾಣಿಕ ಗೆಳೆತನ

ಶಿವರಾಮ ಕಾರಂತ

ಈ ಶತಮಾನದ ಆರಂಭದಿಂದಲೇ ಕನ್ನಡ ನಾಡಿನಲ್ಲಿ ಸಾಹಿತ್ಯ ರಚನೆಗೆ ತೊಡಗಿ ಹೆಸರಾದವರಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರರವರು ಒಬ್ಬ ಪ್ರಸಿದ್ಧರು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿ. ಗೋವಿಂದ ಪೈ ಮತ್ತು ಪಂಜೆ ಮಂಗೇಶರಾಯರಂತಹ ಹಿರಿಯರ ಹೆಸರು ಕೇಳಿಬಂದಂತೆ, ಅಂದಿನ ಮೈಸೂರು ರಾಜ್ಯದಲ್ಲಿ ಕನ್ನಡಕ್ಕಾಗಿ ಶ್ರಮಿಸಿದ ಹಿರಿಯರಲ್ಲಿ ಮಾಸ್ತಿಯವರು ಪ್ರಮುಖರು. ವೃತ್ತಿಯಿಂದ ಅವರು ಸರಕಾರದ ಜಿಲ್ಲಾ ಕಮೀಶನರಾಗಿಯೋ, ಕಂಟ್ರೋಲರರಾಗಿಯೋ ಪ್ರಸಿದ್ಧರಾಗಿದ್ದರೂ - ಯಾವತ್ತೂ ಕನ್ನಡಿಗರ ಪಾಲಿಗೆ ಸಣ್ಣ ಕತೆಗಳ ನಿರ್ಮಾತೃಗಳೆನಿಸಿ ಪ್ರಸಿದ್ಧರಾದರು. ಬಹಳ ಕಾಲ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದರು. ಕರ್ನಾಟಕದ ಉದ್ದಗಲಕ್ಕೂ ಸಂಚರಿಸಿ, ತಾವು ಸರಕಾರಿ ವರಿಷ್ಠ ಅಧಿಕಾರಿಗಳು ಎಂಬುದನ್ನು ಮರೆತು, ಕನ್ನಡದಲ್ಲಿ ಬರೆಯತೊಡಗಿದ ಪ್ರತಿಯೊಬ್ಬ ಕಿರಿಯನ ಬೆನ್ನು ತಟ್ಟಿ ಪ್ರೋತ್ಸಾಹಿಸಿದುದು ಅವರ ಹಿರಿಯ ಗುಣ. ನನಗೆ ಅವರ ನಿಕಟ ಪರಿಚಯವಾದುದು ಈ ಶತಮಾನದ ನಾಲ್ಕನೆಯ ದಶಕದ ಆರಂಭದಲ್ಲಿ. ಆಗಾಗಲೇ ನಾನೊಂದು ಮಾಸಪತ್ರಿಕೆ ಹೊರಡಿಸಿ ಕನ್ನಡನಾಡಿನ ನಾಡಹಬ್ಬಗಳಲ್ಲಿ ಭಾಗಿಯಾಗುತ್ತಿದ್ದೆ.

ಬೆಂಗಳೂರಿನಲ್ಲಿ ಮಾಸ್ತಿಯವರ ಮನೆ ಇದ್ದುದರಿಂದ ನನ್ನ ಮಿತ್ರರಾದ ಏ. ಸೀತಾರಾಮಯ್ಯನವರು ನನ್ನನ್ನು ಅವರ ಮನೆಗೊಯ್ದು ಪರಿಚಯ ಮಾಡಿಸಿಕೊಟ್ಟರು. ನನಗೂ ಅವರಿಗೂ 10-11 ವರ್ಷಗಳ ಅಂತರವಿದ್ದುದನ್ನು ನೆನೆದರೆ - ಅವರು ನನ್ನಂತಹ ಕಿರಿಯನಿಗೆ ತೋರಿಸುತ್ತಿದ್ದ ಸಲುಗೆ ವಿಶೇಷ. ಬೆಂಗಳೂರಿಗೆ ಹೋದಾಗಲೆಲ್ಲ ಅವರು ಮನೆಗೆ ಊಟಕ್ಕೆ ಕರೆದು ಮಾತಾಡಿಸುತ್ತಿದ್ದವರು .

ಅವರು ತಮ್ಮ ವೇತನದಲ್ಲಿ ಒಂದು ದೊಡ್ಡ ಪಾಲನ್ನು ಬಡ ವಿದ್ಯಾರ್ಥಿಗಳಿಗಾಗಿ ವ್ಯಯಿಸಿದವರು. ಅದಕ್ಕೆ ಮುಖ್ಯ ಕಾರಣ ''ತಾನು ವಾರಾನ್ನದಿಂದ ಶಿಕ್ಷಣ ಪಡೆದವನು'' ಎಂಬ ಋಣಭಾರ.

ನಮ್ಮ ಜಿಲ್ಲೆಯ ಪುತ್ತೂರಿನಲ್ಲಿ ನಾನು ನೆಲೆಸಿದ ಹೊತ್ತಿನಲ್ಲಿ - ನಾಲ್ಕನೆಯ ದಶಕದಲ್ಲಿ ದಸರಾ ಉತ್ಸವ ನಡೆಯಿಸುವ ಊರವರ ವ್ಯವಸ್ಥೆಯಲ್ಲಿ ಸೇರಿಕೊಂಡೆ. ಊರೂರು ತಿರುಗುವಂಥವನೊಬ್ಬ ನಮ್ಮವರಿಗೆ ಬೇಕಾಗಿತ್ತು ಆ ಉತ್ಸವದ ಉಪನ್ಯಾಸಗಳ ವ್ಯವಸ್ಥೆಗೆ. ಹೀಗಾಗಿ ಮಾಸ್ತಿಯವರು, ಬಿ.ಎಂ. ಶ್ರೀಯವರು, ಡಿ.ವಿ.ಜಿ.ಯವರು, ನವರತ್ನಂ ರಾಮರಾಯರು - ಇವರೇ ಮೊದಲಾದ ಹಿರಿಯರನ್ನು ಕರೆಯಿಸಿಕೊಳ್ಳಲು ನಾನು ಸೂತ್ರಧಾರನಾದೆ. ಆ ಕಾಲಕ್ಕೆ ಮಾಸ್ತಿಯವರು - ತಮ್ಮ ''ಸುಬ್ಬಣ್ಣ'' ಎಂಬ ಕಿರು ಕಾದಂಬರಿಗಾಗಿ ಹೆಸರಾಗಿದ್ದರು. ಕೆಲವು ಕವನ ಸಂಗ್ರಹಗಳನ್ನು ಪ್ರಕಟಿಸಿ ಪ್ರಸಿದ್ಧರಾಗಿದ್ದರು. ಅವರ ಬಾಂಧವ್ಯ ಗಳಿಸಲು ಕನ್ನಡ ನುಡಿಯ ನೆಪವೊಂದೇ ಸಾಕಿತ್ತು,

ಕನ್ನಡದಲ್ಲಿ ನೀವೇನೂ ಬರೆದರೂ, ಅದು ಅವರ ಪಾಲಿಗೆ ದೊಡ್ಡ ಕೆಲಸವೇ ಅನಿಸಿತ್ತು.

ಆ ಕಾಲಕ್ಕೆ ನಾನು 'ಮುಕ್ತದ್ವಾರ'ವೆಂಬ ಒಂದು ಕಿರುನಾಟಕವನ್ನು ಬರೆದು, ಆಡಿ ತೋರಿಸಿದ್ದೆ. ಅದನ್ನು ಅಚ್ಚಿಗೆ ತರಲು ಒತ್ತಾಯಿಸಿ, ನೆರವಿತ್ತವರು ಅವರು. ಅವರು ನಮ್ಮ ಊರಿಗೆ ಬಂದ ವೇಳೆಯಲ್ಲಿ ಅವರನ್ನು ಮಂಜೇಶ್ವರ ಗೋವಿಂದ ಪೈಗಳವರ ದರ್ಶನಕ್ಕೆ ಕರೆದೊಯ್ದು ನೆನಪಿದೆ! ಆ ಇಬ್ಬರು ಹಿರಿಯರು ಬೆಂಗಡೆಯಲ್ಲಿ ಕುಳಿತು ಸರಸಸಲ್ಲಾಪ ನಡೆಯಿಸುತ್ತಿದ್ದ ಮೋಜನ್ನು ಕಂಡು ಫೋಟೋವನ್ನೂ ತೆಗೆದಿದ್ದೆ.

ತಾವು ಯಾವುದಾದರೂ ಹೊಸ ಕೃತಿಯನ್ನು ರಚಿಸಿದರೆ, ಅದನ್ನು ಮಿತ್ರರಿಗೆ ಪರಿಚಯಿಸುವ ಸಲುವಾಗಿ ಮನೆಗೆ ಅವರನ್ನು ಕರೆದು, ಉಪಾಹಾರದಿಂದ ಸತ್ಕರಿಸಿ, ತಮ್ಮ ಬರಹವನ್ನು ಓದಿ ಹೇಳುವ ಪರಿಪಾಠ ಅವರದು. ಅಂದಿನ ಅವರ ಸರಕಾರೀ ಉದ್ಯೋಗದಿಂದ ದೊಡ್ಡ ಹುದ್ದೆ ಅವರದ್ದಾದರೂ, ಕನ್ನಡ ಜನರ ಪಾಲಿಗೆ ಬಲು ಸುಲಭಸಾಧ್ಯ ವ್ಯಕ್ತಿಗಳಾಗಿದ್ದರು.

ಪ್ರತಿಯೊಂದರಲ್ಲೂ ಅವರೇ ಆದರ್ಶರು ಎಂಬ ಭಾವನೆ ನನಗಿಲ್ಲ! ಪ್ರಾಮಾಣಿಕ ಗೆಳೆತನಕ್ಕೆ ಅವರು ಸುಲಭದಲ್ಲಿ ಎಟುಕುವವರು! ಆದರೆ ಭಾರತದ ಜನ, ಸಂಸ್ಕೃತಿ, ಇತ್ಯಾದಿಗಳ ವಿಷಯಗಳಲ್ಲಿ ಅವರ ಮೋಹ ಅತಿ. ''ಇಂಥ ಒಂದು ಬರಹ ಪರ್ಲ್‌ಬಕ್ ಬರೆದಿದ್ದಾಳೆ'' ಎಂದಾಗ - 'ಮಾಸ್ತಿ ಬರೆದಾರು. ಕಾರಂತ ಬರೆದಾನು' ಎಂದು ಅಂದವರು ಅವರು! ಒಮ್ಮೆ ಅದೇ ಮಾತು ಅವರ ಬಾಯಿಂದ ಬಂದಾಗ ''ಅವರು ಬರೆದಿಲ್ಲವಲ್ಲ'' ಎಂದು ನನ್ನ ಮಡದಿ ಅವರಿಗೆ ತಿಳಿಸಿ, ತುಸು ಗಾಬರಿ ಬರಿಸಿದ್ದುಂಟು! ಜಗತ್ತಿನ ಸಂಸ್ಕೃತಿಗಳಲ್ಲಿ- ಭಾರತಕ್ಕೆ ಅಗ್ರಗಣ್ಯ ಸ್ಥಾನ ಅವರ ಪಾಲಿಗೆ! ಇಂಥ ಪ್ರಸಂಗಗಳಲ್ಲಿ ನಮಗೆ ಕೇವಲ ನಮ್ಮದಷ್ಟೇ ಗೊತ್ತಿದ್ದು. ಪರದೇಶಗಳ ವಿಚಾರ ಏನೂ ತಿಳಿಯದಿರುವಾಗ, ಸ್ವಾಭಿಮಾನದ ಮಾತುಗಳು ಸಾಧುವಲ್ಲದೆ ಹೋದಾವು.

ಮಾಸ್ತಿಯವರ ಕಾದಂಬರಿಗಳಲ್ಲಿ ಚನ್ನಬಸವನಾಯಕ ಮತ್ತು ಕೊಡಗಿನ ಚಿಕವೀರ ರಾಜೇಂದ್ರ, ಎಂಬ ಐತಿಹಾಸಿಕ ವ್ಯಕ್ತಿಗಳನ್ನು ಅವರು ಚಿತ್ರಿಸಿದ ಸಂದರ್ಭದಲ್ಲಿ ಹಲವರ ಸ್ವಜಾತಿ ಮೋಹ ಕಾಡಿದ್ದುಂಟು. ಆಗ ಚರಿತ್ರೆಯನ್ನು ತಂತಮ್ಮ ಜಾತಿಮತಗಳ ಪ್ರತಿಷ್ಠೆಗೆ ಬರೆಯಬೇಕೇ- ಎಂಬ ಸಂದಿಗ್ಧ ಪ್ರಕಟಗೊಂಡದ್ದನ್ನು ಕಾಣುತ್ತೇವೆ. ಇವು ಲೇಖಕರನ್ನು ಅಳೆಯುವ ಮಾನದಂಡಗಳಾಗಕೂಡದು. ಶಿವಾಜಿಯನ್ನು ಕುರಿತು ದಿ. ಬಸವನಾಳರವರು ತಮಗೆ ತಿಳಿದ ಚರಿತ್ರಾಂಶಗಳಿಂದ ಬಣ್ಣಿಸಿದಾಗ ಮರಾಠರು ರೇಗಿ, ಕೋಲಾಹಲ ಎಬ್ಬಿಸಿದ್ದನ್ನು ನಾವು ಮರೆಯುವಂತಿಲ್ಲ.

ನೆನಪುಗಳು

ಕೆ. ಶ್ರೀರಂಗಾನಾಯಕಿ

ಒಂದು ಸಲ ನಾನು ತೀಯವರಿಗೆ jersey knir ಮಾಡಿಕೊಟ್ಟೆ. ಅದು ಅಳತೆ ಸ್ವಲ್ಪ ದೊಡ್ಡದಾಗಿತ್ತು. ಮಾವನವರಿಗೆ ಮಾಡಿದ್ದು ಚಿಕ್ಕದಾಗಿ ಉಪಯೋಗವಾಗಲಿಲ್ಲ. ಅದರಿಂದ ಸ್ವಲ್ಪ ದೊಡ್ಡದಾಗಿ ಹಾಕಿ-ಕಾಗದ ಬರೆದು ನಾನು, ''ನಾನೇನೋ ಪ್ರೀತಿಯಿಂದ ನಿಮಗಾಗಿ ಹೆಣೆದಿದ್ದೇನೆ-ಇದರ ಅಳತೆಗೆ ಸರಿಯಾಗುವುದು ನಿಮ್ಮ ಭಾರ'' ಎಂದು ಹೇಳಿದೆ. ಬದಲು ಬಂತು-''ಇದಕ್ಕೆ ಸರಿಯಾಗಬೇಕಾದರೆ, ನಾನು ಭಾರವೇ ಆಗಬೇಕು?'' ಎಂದು.

ಮತ್ತೊಮ್ಮೆ ಏನೋ ಕಷ್ಟ ಎಂದು ಹೇಳಿಕೊಂಡೆ-''ನಿನಗೆ ಬರಬೇಡ ನಿಜ-ಆದರೆ ಮತ್ತೆ ಯಾರಿಗೆ ಬರಬೇಕು, ಹೇಳುವಿಯಾ?''

''ಒಂದು ಅಂಕದಲ್ಲಿ 1 ಕ್ಲಾಸ್ ಬರಲ್ಲಿಲ್ಲ'' ಎಂದರೆ ''ಏಕೆ ಎರಡು ಅಂಕ ಹೆಚ್ಚಾಗಿ ತೆಗೆಯಲಿಲ್ಲ?'' ಎಂಬತ್ತೈದು ಶೇಕಡ ಬಂದಿದೆ-ಎಂದರೆ-100ಕ್ಕೆ 15 ಕಡಿಮೆ-ಹೀಗೆ ನಮ್ಮ ತಂದೆ ಮತ್ತು ಮತ್ತೂ ಹುರಿದುಂಬಿಸುವರು.

ಬರದಲ್ಲಿ ಜನ ಒದ್ದಾಡುತ್ತಿರುವಾಗ, ಪಾಯಸ, ಪೂರಿ - ಎಲ್ಲಾ ಮಾಡಿ ತಿನ್ನುವುದು ಸರಿಯಲ್ಲ. ಬಟ್ಟೆ ಇಲ್ಲದೆ ಜನ ಭಂಗ ಪಡುವಾಗ, ಜರತಾರಿ, ರೇಷ್ಮೆ ಬಟ್ಟೆ ತಮಗೆ ಬೇಡ; ನಮಗೆ ನೀವೆಲ್ಲ ಚಿಕ್ಕವರು, ಒಳ್ಳೆ ಬಟ್ಟೆ ಹಾಕಿಕೊಳ್ಳಿ ಸಂತೋಷದಿಂದ ಇರಿ-ಎಂದು ಹೇಳುವರು. ತೀಯವರ ಸ್ವಭಾವ-ಸಂಪ್ರದಾಯಸ್ಥರಿಗೆ, ಮಾಡರ್ನ್ ಆಗಿ ಈ ಕಾಲದವರಿಗೆ ಹಳೆಯ ತರಹ ಕಾಣುವ ಒಂದು ಉದಾರ ಚಿತ್ತ-ಸಹಿಷ್ಣು ಜಿಷ್ಣು-ಬದಲು ಮಾಡುವರಲ್ಲ ಮನಸ್ಸಿನಲ್ಲಿರುವುದು, ಮಾತಿನಲ್ಲಿ-ಮತ್ತೆ ನಡತೆಯಲ್ಲಿ ಇದೇ ಅವರ ಮನೋಭಾವ-ಹೊರಗೆ ಪುರಭವನದಲ್ಲಿ ಹೇಳುವುದನ್ನೇ-ಮನೆಯಲ್ಲಿ ನಮ್ಮ ತಾಯಿಯವರ ರೂಮಿನಲ್ಲಿ ನಮಗೆ ತಿಳಿಸುವರು. ಮುಖ್ಯವಾಗಿ ತಂದೆ ತಾಯಿ ಇಬ್ಬರೂ ನಡೆದು ತೋರಿಸಿದರು. ಅವರಿಗೆ ಬೇಡ ಎಂದರೆ, ಪ್ರೀತಿಗೋಸ್ಕರವಾದರೂ ನಮಗೆ, ನಮ್ಮ ತಾಯಿ ಬೇರೆಯಾಗಿ ಏನನ್ನೂ ಕೊಟ್ಟವರಲ್ಲ. ಅಲ್ಲದೆ ಕನ್ನಡದ ಕೆಲಸದಲ್ಲಿ ಸಹಾಯ ಎಂದರೆ ಮೊದಲ ಕೈ. ಪುಸ್ತಕಗಳ ಪಟ್ಟಿ ಜೋಡಣೆ - ಉತ್ತಮ ಪ್ರತಿ ತಯಾರಿ, ಉಕ್ತಲೇಖನ - ಹೀಗೆ ಮನೆಕೆಲಸದಲ್ಲಿ ಹೊತ್ತು ಮಾಡಿಕೊಂಡು ಅವರಿಗೆ ನಮ್ಮ ತಾಯಿ ನೆರವಾಗುವರು - ಮನೆ ತುಂಬ ಜನ - ಸ್ನೇಹಿತರು. ಅವರ ಊಟ, ಉಪಚಾರ ಸ್ವಲ್ಪವೂ ಕಡಿಮೆಯಾಗದೆ ನೋಡಿಕೊಳ್ಳುವರು. ಮನೆಯ ತಾಪತ್ರಯ ಲೇಶವೂ ಅವರ ಕಿವಿಗೆ ಹೋಗುತ್ತಿರಲಿಲ್ಲ. ಹೀಗೆ ಅವರ ದಾಂಪತ್ಯ ಜೀವನ ಬಹಳ ಸೊಂಪಾಗಿ ನಡೆಯಿತು.

ಬಿ.ಎ. ಪ್ರಥಮ ದರ್ಜೆ ಬಂದಾಗ, ''ಏನು, ನನ್ನ ಬಿ.ಎ. ಮಗಳು ಏನು ಹೇಳುತ್ತಾಳೆ'' ಎಂದರು. ನಾನು ಸುಮ್ಮನೆ ನಕ್ಕೆ. ಅವರು, ''ಮಲ್ಲಿಗೆಯ ಹೂವಿನಂತೆ ಮನಸ್ಸು ಇಟ್ಟುಕೊಳ್ಳಬೇಕು'' - ಎಂದರು.

ಒಬ್ಬ ಆಗಾಗ್ಗೆ ಬಂದು, ತಂದೆ ತೀರಿ ಹೋದರು. ಹಣ ಬೇಕು ಎಂದು ಹೇಳುತ್ತಿದ್ದ. ಅವರು ಹಣ ಕೊಟ್ಟು - ''ಅಪ್ಪಾ, ಹಣ ಬೇಕೆಂದರೆ ಕೇಳು, ಅದಕ್ಕೋಸ್ಕರ ನಿಮ್ಮ ತಂದೆಯನ್ನು ಮತ್ತೆ ಮತ್ತೆ ಸಾಯಿಸಬೇಡ'' ಎಂದರು. ಹಾಗೆಯೇ ನಮಗೆ, ''ನಮ್ಮ ಮನಸ್ಸು ಹಣ ಕೊಡುವುದನ್ನು ಒಪ್ಪುತ್ತದೆಯೇ ಎಂದು ಇದು ನಮ್ಮ ಸತ್ವ ಪರೀಕ್ಷೆ'' - ಎಂದು ಹೇಳುವರು.

ಒಬ್ಬ ಮೋಚಿ, ಅವನ ಮನೆಯವರಿಗೆ ಅವನು ಇರುವ ತನಕ, ದೀಪಾವಳಿಗೆ ಬಟ್ಟೆ ತಪ್ಪದೆ ಕೊಡಿಸುವರು. ಹೇಳುತ್ತಾ ಹೋದರೆ, ಒಂದು ದೊಡ್ಡ ಗ್ರಂಥವೇ ಆಗಬಹುದು.

ಒಂದು ದಿನ ನಮ್ಮ ಮನೆಯಲ್ಲಿ ನಲ್ಲಿ ಸುರಿಯುತ್ತಿತ್ತು. ವಾಷರ್ ಹಾಕಿಸಬೇಕೆಂದು ಒಬ್ಬ ಕೆಲಸಗಾರನಿಗೆ ಹೇಳಿದರು. ನಮ್ಮ ತಂದೆ, ವಾಡಿಕೆಯ ಹಾಗೆ ಮಹಾರಾಜರಿಗೆ ಆಶೀರ್ವಾದವಾಗಲಿ, ಎಂದು ಅವರು ಕೊಟ್ಟ ಜರಿಶಾಲನ್ನೇ ತೋಳ ಮೇಲೆ ಹಾಕಿಕೊಂಡು ರಾಮಾಯಣ ಪಾರಾಯಣ ಮಾಡುತ್ತಿದ್ದರು. 'ರಿಪೇರಿ ಆಯಿತು' ಎಂದು ಕೆಲಸದವನು ಹೊರಟ, ನಮ್ಮ ತಾಯಿ ದುಡ್ಡು ಕೊಟ್ಟರು - ಆದರೆ ನಲ್ಲಿ ಮಾತ್ರ ಸುರಿಯುತ್ತಲೇ ಇದೆ - ಅದನ್ನು ಹೇಳುತ್ತಿರುವಾಗ ನಮ್ಮ ತಂದೆ ಹೊರಗೆ ಬಂದರು. ನೋಡಿ ಅವನ ಮೇಲೆ ಬಹಳ ಕೋಪಿಸಿಕೊಂಡರು. ಶಾಲು ತೆಗೆದು ಒಂದು ಏಟು ಕೊಟ್ಟರು. ಪೆಟ್ಟೇನೂ ಆಗಲಿಲ್ಲ ಅವನಿಗೆ. ಆದರೆ ಇವರಿಗೇ ಬಹಳ ದುಃಖವಾಯಿತು. ಕಣ್ಣುಗಳಲ್ಲಿ ಬಳಬಳನೆ ನೀರು ಸುರಿಯಿತು. ಅವನ ಮೈದಡವಿ, ಒಳ್ಳೆಯ ಮಾತು ಹೇಳಿ, ಊಟ ಹಾಕಿ ಇನ್ನಷ್ಟು ಹಣ ಕೊಟ್ಟು ಕಳುಹಿಸಿದರು. ಆಗ ನಾನು ಬಹಳ ಚಿಕ್ಕವಳು. ಅದೇ ಕೊನೆ ನಮ್ಮ ತಂದೆಗೆ ಅಂಥ ಸಿಟ್ಟು ಬಂದದ್ದು, ನಾನು ನೋಡಿದ್ದು.

ತಾವು ಬರೆದ ಹಾಡುಗಳಿಗೆ ರಾಗ ಹಾಕಿ, ನಮ್ಮ ತಾಯಿಯವರ ಕೈಯಲ್ಲ ವೀಣೆಯಲ್ಲಿ ನುಡಿಸಹೇಳಿ, ಸಂತೋಷಪಡುತ್ತಿದ್ದರು. ನಾವೆಲ್ಲ ಸುತ್ತ ಕುಳಿತು ಕೇಳುತ್ತಿದ್ದೆವು. ಸಂಗೀತದ ಮೇಷ್ಟ್ರು, ಸಂಸ್ಕೃತದ ಮೇಷ್ಟ್ರು, ತಮಿಳು ಪ್ರಬಂಧಕ್ಕಾಗಿ ಮೇಷ್ಟ್ರು ಎಲ್ಲರೂ ಆಗಾಗ್ಯೆ ಬರುತ್ತಿದ್ದರು. ನಾವೂ ಚಿಕ್ಕವರು, ಅಷ್ಟು ಅಗತ್ಯದಿಂದ ಕಲಿಯಲಿಲ್ಲ. ವಿದ್ಯಾರ್ಥಿ ಹುಡುಗರಿಗೆ ಏನೂ ಕೆಲಸ ಹೇಳಬಾರದು, ಎಂದು ನಮ್ಮ ತಂದೆಯವರ ಕಟ್ಟಾಜ್ಞೆ - ಕಾಯಿಲೆಯಾದರೆ ಔಷಧ, ಅಥವಾ ಮನೆಗೆ ತರಕಾರಿ ಸಾಮಾನು ಯಾವುದೂ ಅವರ ಕೈಯಲ್ಲಿ ತರಿಸಬೇಡಿ. ನಿಮ್ಮ ಕೈಲಾದ್ದು ಮಾಡಿ, ಮತ್ತೊಬ್ಬರ ಕೈಲಿ ಮಾಡಿಸಿಕೊಳ್ಳಬೇಡಿ - ಇದೇ ಅವರ ವಾದ. ತಾವೇ ಆಸ್ಪತ್ರೆಯಲ್ಲಿದ್ದಾಗ, ಹೋಗಿ ದೀಪ ಹಾಕಿದರು - ನಾನು: ''ಏಕೆ ಮುತ್ತಣ್ಣ ನನಗೆ ಹೇಳಿದರೆ ನಾನು ಹಾಕಲಾರೆನೆ?'' ಎಂದೆ. ''ಅಮ್ಮ ನನ್ನದು ಸ್ವಲ್ಪ ಸೋಮಾರಿ ಸ್ವಭಾವ - ಅದಕ್ಕೇ ನಾನು ನನಗೇ ಡಿಸಿಪ್ಲಿನ್ ಮಾಡಿಕೊಳ್ಳುತ್ತೇನೆ'' - ಎಂದರು. ಆಗ ಅವರಿಗೆ 90 ವರ್ಷ ಆ ಡಿಸಿಪ್ಲಿನ್ ಈಗಿನ ಮೂವತ್ತು ವರ್ಷ ಹರೆಯದವರಿಗೆ ಬರುವುದಿಲ್ಲ. ಮನೆ ಹಾಲಿನಲ್ಲೇ ಮಲಗುವರು. ಚಿಕ್ಕ ಮಕ್ಕಳು ಚಾಕ್ ತುಂಡಿನಿಂದ ನೆಲದ ಮೇಲೆ ಬೊಂಬೆ ಬರೆಯುವುದು, ಕಿರಿಚಾಡಿ ಆಡುವುದು, ಅಳುವುದು, ಶಬ್ದ ಯಾವುದಕ್ಕೂ ಅವರ ಲಕ್ಷ್ಯವೇ ಇಲ್ಲ - ತಮ್ಮ ಪಾಡಿಗೆ ಕೆಲಸ ನೋಡಿಕೊಂಡು ಹೋಗುತ್ತಿದ್ದರು.

ಒಂದು ದಿನ ರಾತ್ರಿ ಹಾಲು ತೆಗೆದುಕೊಂಡು ಹೋಗಿ ಕೊಟ್ಟೆ. ಅದು ಸ್ವಲ್ಪ ಬಿಸಿ. ಅವರು ಅದನ್ನು ತೆಗೆದುಕೊಂಡು, ಸುಮ್ಮನೆ ಹಿಡಿದುಕೊಂಡಿದ್ದರು. ನಾನು, 'ಆರಿಸಿ

ಕೊಡಲೆ?' ಎಂದು ಕೇಳಿದೆ - ಅವರು ಆರಿಸಿ ಕೊಟ್ಟರೆ ಕುಡಿಯುತ್ತೇನೆ ಎಂದರು. ಆಗ ಆರಿಸಿಕೊಟ್ಟೆ - ಹೀಗೆ ಅವರ ಸ್ವಭಾವದ ನವುರು ನೂರಾರು.

ನಾನು ಒಂದು ಸಲ ಅವರಿಗೆ ಗಟ್ಟಿ ಮೊಸರು ಬಡಿಸಿದೆ. ಹೊರಗೆ ಬಂದುಬಿಟ್ಟೆ. ಅವರು ಮತ್ತೆ ಕರೆದರು. ಹೋಗುವುದಕ್ಕೆ ನನಗೆ ಭಯ - ಏಕೆಂದರೆ 'ಎಲ್ಲರಿಗೂ ಇದೇ ತರಹ ಬಡಿಸಿದೆಯಾ' ಎಂದು ಕೇಳುವರೇನೋ, ನನಗೆ ಅದು ಗೊತ್ತಿಲ್ಲ - ಹೋಗಿ ನೋಡಿದರೆ, ''ಉಪ್ಪಿನ ಕಾಯಿ ಹಾಕಮ್ಮ'' ಎಂದರು. ಸೇಬು, ಮಾವಿನಹಣ್ಣು, ಕಿತ್ತಿಳೆ - ಯಾವುದೂ ಎಲ್ಲರಿಗೂ ಕೊಟ್ಟೇ ನಾವು ತೆಗೆದುಕೊಳ್ಳಬೇಕು.

೧೯೮೬ ಜೂನ್ ೩ರಂದು ಗಂಡಸರು ಊಟ ಮಾಡುತ್ತಿದ್ದರು. ನಮ್ಮ ತಂದೆಯವರದೂ ನೆಪಕ್ಕೆ ಆಯಿತು. ವಿಷ್ಣು ಸಹಸ್ರನಾಮ ಹೇಳಿ ಎಂದರು. ನಾವು ಮೂರು ಜನ, ಇಂದಿರಮ್ಮ, ಅರವಿಂದು, ನಾನು - ಹೇಳಿ ಮುಗಿಸಿದೆವು. ಅವರು ಜೋರಾಗಿ 'ಮುತ್ತಣ್ಣಾ!' ಎಂದು ಕೂಗಿ ಸುಮ್ಮನಾದರು. ಎಷ್ಟು ರೆಸ್ಟ್‌ಲೆಸ್ ಆಗಿದ್ದರೂ, ಶ್ರೀ ಕೃಷ್ಣಾಷ್ಟೋತ್ತರ ಶತ - ತ್ಯಾಗರಾಜರ ರಾಮ ದೇವರ ಸ್ತೋತ್ರ, ೧೦೮ ನಾಮವಾಳಿ - ಇದೊಂದು ಹೇಳಿದ್ದಾರೆ. ನಿದ್ರೆಯೇ ಮಾಡುವರು. ಸಣ್ಣಗೆ, ಕಿವಿಯ ಹತ್ತಿರ ಹೇಳಿ ನಾನು ನಾಲ್ಕನೆಯ ತಾರೀಕು ಒಂಬತ್ತು ಗಂಟೆಗೆ ಮನೆಗೆ ಬಂದೆನು. ಅರ್ಧ ಗಂಟೆಗೆ ಅವರಿಗೆ ಜ್ಞಾನ ತಪ್ಪಿ ಹೋಯಿತು. ಮರಳಿ ಬರಲೇ ಇಲ್ಲ. ಅದಕ್ಕೆ ಮೊದಲು, ಗೀತೆಯ ''ವಾಸಾಂಸಿ ಜೀರ್ಣಾನಿ ಯಥಾ ವಿಹಾಯ'' ಎನ್ನುವ ಶ್ಲೋಕವನ್ನು ಹೇಳಿದರು. ನಾವು ಬಿಡಲಾರದೆ ಬಿಟ್ಟು ಬಂದೆವು ಮತ್ತೆ ನಮ್ಮ ಮುತ್ತಣ್ಣ ನಮ್ಮ ಹತ್ತಿರ ಮಾತನಾಡಲೇ ಇಲ್ಲ.

ಪೂಜ್ಯ ತಂದೆಯ ಸವಿನೆನಪುಗಳು

ಇಂದಿರಮ್ಮ

ಜೂನ್ ಆರು ನಮ್ಮ ತಂದೆಯವರ ಹುಟ್ಟಿದ ದಿನವೂ ಹೌದು. ದೈವಾಧೀನರಾದ ದಿನವೂ ಹೌದು. ಹುಟ್ಟುಹಬ್ಬ ಆಚರಿಸೋಣ ಎಂದರೆ ಅದರ ಜೊತೆಗೆ ಈ ಕಹಿಯೂ ಸೇರಿದೆ. ಇದು ದೈವ ಸಂಕಲ್ಪವೋ, ವಿಧಿ ನಿಯಮವೋ ಏನು ಎಂದು ನಮಗೆ ತಿಳಿಯದು.

ನಾವು ೧೯೬೯ ಜುಲೈ ೩ರಂದು ತಾಯಿ ದೈವಾಧೀನರಾದ ಸುದ್ದಿ ತಿಳಿದು ದೆಹಲಿಯಿಂದ ಬಂದೆವು. ನಮ್ಮ ಯಜಮಾನರಿಗೆ ಅದೇ ದಿನವೇ ಕೆಲಸದಿಂದ ನಿವೃತ್ತಿಯಾಯಿತು. ಬಂದವರು ಇಲ್ಲಿಯೇ ನಮ್ಮ ತಂದೆಯವರ ಸೇವೆಗೆಂದು ನಿಂತೆವು. ಎರಡು ವರ್ಷ ಕಳೆದು ರಾಘವಾಚಾರ್ಯರು ಮತ್ತು ನನ್ನ ತಂಗಿ ಅರವಿಂದು ಕೂಡಾಬಂದರು.

ನಮ್ಮ ತಂದೆಯವರನ್ನು ನಾವೆಲ್ಲ ಮುತ್ತಣ್ಣ ಎಂದೇ ಕರೆಯುತ್ತಿದ್ದೆವು. ನಮ್ಮ ತಾಯಿಯವರು, ನಾನು ಚಿಕ್ಕವಳಾಗಿದ್ದಾಗ ಹಾಗೆ ಕರೆಯಲು ಹೇಳಿಕೊಟ್ಟರಂತೆ. ಆಗಿನ ನಮ್ಮ ಪರಿಸರದ ಜ್ಞಾಪಕ ಸುಮಾರು 1919ರಿಂದ ಈಚಿನದು. ಈಗ ನಾವು ವಾಸಿಸುತ್ತಿರುವ ಗವೀಪುರದ ಮನೆಯನ್ನು (ಹೊಸದೇ ಆಗಿ ಅರ್ಧ ಕಟ್ಟಿದ್ದು) ಕೊಂಡುಕೊಂಡರಂತೆ. ಅದಕ್ಕೆ ಮುಂಚೆ ಕೋಲಾರ ಮೈಸೂರುಗಳಲ್ಲಿ ಸಿವಿಲ್ ಸರ್ವಿಸ್ ಪ್ರೊಬೇಷನರ್ ಆಗಿ ಸೇರಿದ್ದರು.

ಸಂಸಾರ ಆರಂಭವಾದಾಗಿನಿಂದ ಮನೆಯಲ್ಲಿ ಜನ ತುಂಬಿರುತ್ತಿದ್ದರು. ಮುತ್ತಣ್ಣ, ನಮ್ಮ ತಾಯಿ, ಅಜ್ಜಿ, ಚಿಕ್ಕಪ್ಪಂದಿರು, ಇವರಲ್ಲದೆ ವಿದ್ಯಾರ್ಥಿಗಳು ಇಬ್ಬರು ಮೂವರು; ಮಾಸ್ತಿಯಿಂದ ಬೇರೆ ಕೆಲಸಕ್ಕಾಗಿ ಬಂದು ಹೋಗುತ್ತಿದ್ದವರು: ಇವರೆಲ್ಲರಿಗೂ ನಮ್ಮ ಅಜ್ಜಿ ಅಡಿಗೆ ಊಟದ ವ್ಯವಸ್ಥೆ ನೋಡಿಕೊಳ್ಳುತ್ತಿದ್ದರು. ನಮ್ಮ ತಾಯಿಯವರೂ ಹಿರಿಯರಿಗೆ ಸಹಾಯಕ್ಕೆ ನಿಂತರು. ನಮ್ಮ ತಾಯಿಯವರು ಅಜ್ಜಿಯವರಿಗೆ ವಿಧೇಯರಾಗಿ ನಡೆದುಕೊಳ್ಳುತ್ತಿದ್ದರು. ಮನೆಯಲ್ಲಿ ಎಲ್ಲರೂ ಮುತ್ತಣ್ಣ ಅವರಿಗೆ ವಿಧೇಯರಾಗಿ ನಡೆದುಕೊಳ್ಳುತ್ತಿದ್ದರು. ಎಲ್ಲರಿಗೂ ಅವರ ವಿಷಯದಲ್ಲಿ ಭಯ ಭಕ್ತಿ ಎರಡೂ ಇದ್ದಿತು. ಇದರಿಂದ ಸಂಸಾರದ ಗಾತ್ರ ದೊಡ್ಡದಾದರೂ ಸುಸೂತ್ರವಾಗಿ ನಡೆಯಿತು.

ಮುತ್ತಣ್ಣನವರಲ್ಲಿ ಕೆಲವು ವಿಶೇಷ ಗುಣಗಳಿದ್ದುವು. ಚಿಕ್ಕವಯಸ್ಸಿನಲ್ಲಿಯೇ ತಾವು ಓದಿ ಮುಂದೆ ಬಂದು, ತಮ್ಮ ತಾಯಿತಂದೆಯರಿಗೆ ಆಧಾರವಾಗಬೇಕೆಂದು ಮನಗಂಡಿದ್ದರು. ಇದನ್ನು ಅವರ ತಾತ (ತಾಯಿಯ ತಂದೆ) ''ಈ ಹುಡುಗ ನಿಮ್ಮನ್ನು ಸಾಕುತ್ತಾನೆ'' ಎಂದು ಹೇಳುತ್ತಿದ್ದರಂತೆ. ಅವರ ಬುದ್ಧಿಶಕ್ತಿ, ಜ್ಞಾಪಕಶಕ್ತಿ, ಪಟ್ಟು ಹಿಡಿದು ಕೆಲಸ ಮುಗಿಸುವುದು ಇವೆಲ್ಲ ಅವರು ಅಭಿವೃದ್ಧಿ ಹೊಂದಲು ಪೂರಕವಾದ ಗುಣಗಳಾದುವು. ಇದರ ಜೊತೆಗೆ ಎಷ್ಟು ಕಷ್ಟಬಂದರೂ ಧೃತಿಗೆಡುತ್ತಿರಲಿಲ್ಲ. ತಮ್ಮಂದಿರನ್ನು, ಸಹ ಧರ್ಮಿಣಿಯನ್ನು, ಮಗಳನ್ನು ಕಳೆದುಕೊಂಡು ಮೌನವಾಗಿ

ಸಹಿಸಿಕೊಂಡರು. ತಮಗೆ ಮಂತ್ರಿ ಪದವಿ ತಪ್ಪಿದಾಗ ಬಹಳ ನೊಂದಿದ್ದರೂ ತೋರಗೊಡುತ್ತಿರಲಿಲ್ಲ. ಕೆಲಸಕ್ಕೆ ರಾಜೀನಾಮೆ ಕೊಟ್ಟು ಕರ್ನಾಟಕವೆಲ್ಲ ಸುತ್ತಿ ಬಂದರು.

ಮತ್ತೊಂದು ವಿಶೇಷ ಅವರ ನಮ್ರತೆ. ಇದಕ್ಕೆ ಕಾರಣ ಅವರಲ್ಲಿದ್ದ ದೈವ ಭಕ್ತಿ. ''ಯಾವುದೋ (ಕೈಂಡ್ಲಿ ಪವರ್) ತನ್ನನ್ನು ಇಷ್ಟು ದೂರಕ್ಕೆ ತಂದಿದೆ'' ಎನ್ನುತ್ತಿದ್ದರು. ಅವರು ತಮ್ಮ ಕೆಲವು ಕಾವ್ಯಕೃತಿಗಳಲ್ಲಿ ಈ ಭಾವವನ್ನು ತಿಳಿಸಿದ್ದಾರೆ. ಸಭೆಗಳಲ್ಲಿಯೂ ಇವು ಕಡೆಯ ಮಾತುಗಳಾಗಿದ್ದುವು.

1. ನೀನು ಮಂತ್ರಿಸಿದ ಮಣ್ಣಿನ ಗೊಂಬೆ. . .

2. ನೀನೆನ್ನ ಜೊತೆಯಲೇ ಎಡೆಬಿಡದೆ. . .

3. ನಾನಿನ್ನವರ ಮರೆಯೆನಯ್ಯ

ತಮಗೆ ನ್ಯಾಯವಾಗಿ ಬರಬೇಕಾಗಿದ್ದ ಮಂತ್ರಿ ಪದವಿ ತಪ್ಪಿದ್ದಕ್ಕಾಗಿ ವ್ಯಥೆಗೊಂಡು, ಅಂತೆ ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬಂದಿದ್ದು ಕೆಲಸವನ್ನೇ ತ್ಯಾಗ ಮಾಡುವಷ್ಟು ಕೆಚ್ಚೆದೆ ಅವರದು. ಕೆಲಸ ಬಿಟ್ಟದ್ದು ಮನೆಯಲ್ಲಿ ಬಹಳ ಅನನುಕೂಲಕ್ಕೆ ಕಾರಣ ಆಯಿತು. ಮೋಟರ್ ಗಾಡಿ (ವಾಹನ) ಮಾರಿದರು. ಕೆಲಸದವರು, ಅಡಿಗೆಯವರು ಎಂದು ಅನೇಕ ಸೌಲಭ್ಯಗಳು ಕಮ್ಮಿ ಆದವು. ಹಣ ಕಾಸೂ ಕಮ್ಮಿ ಯಾಯಿತು. ಆದರೂ ಧೈರ್ಯಗೆಡಲಿಲ್ಲ. ಅವರ ಜತೆಯಲ್ಲಿ ನಾವೆಲ್ಲ ಕೊಂಚ ಅನನುಕೂಲಕ್ಕೇ ಸಿಕ್ಕಿಕೊಂಡೆವು ಎಂದೇ ಹೇಳಬೇಕು.

ಮುತ್ತಣ್ಣನವರಿಗೆ ಹಣ ಕೂಡಿಡಬೇಕೆಂಬ ಆಸೆ ಇರಲಿಲ್ಲ. ತಾವು ಸಂಪಾದಿಸಿದ ಹಣದಲ್ಲಿ ಸಾಹಿತಿಗಳಿಗೆ, ವಿದ್ಯಾರ್ಥಿಗಳಿಗೆ (ದಾನ ಧರ್ಮಕ್ಕೆ) ಎಂದೇ ಬೇರೆಯಾಗಿ ಇಡುತ್ತಿದ್ದರು. ಅವರ ಸೋದರತ್ತೆ ಅಚ್ಚಮ್ಮನವರಿಗೆ ಅರ್ಬುದ ರೋಗ ಅಂಟಿ ಮನೆಯಲ್ಲಿಯೇ ಉಪಚಾರ ನಡೆಯಿತು. ಮತ್ತೊಬ್ಬ ಸೋದರಮಾವಂದಿರ ಹೆಣ್ಣು ಮಕ್ಕಳಿಗೆಲ್ಲ ಇಲ್ಲಿಯೇ ಮದುವೆಗಳು ನಡೆದುವು.

ನಮ್ಮ ತಾಯಿ, ತಂದೆ ಒಬ್ಬರಿಗೊಬ್ಬರು ಅನ್ಯೋನ್ಯವಾಗಿ ಇದ್ದರು. ಎಂದೂ, ಯಾವ ವಿಷಯಕ್ಕೂ ಚರ್ಚೆ, ವಾದ ಮಾಡುತ್ತಿರಲಿಲ್ಲ. ನಮ್ಮ ತಾಯಿ ಬಹಳ ನಿಧಾನಸ್ತೆ. ಸಂಸ್ಕೃತದಲ್ಲಿ ''ಅನುಕೂಲಾ ಭಾರ್ಯಾ'' ಎಂದು ಹೇಳುತ್ತಾರೆ. ಆ ಮಾತು ಮುತ್ತಣ್ಣ ಅವರಿಗೆ ಅಕ್ಷರಶಃ ನಿಜವಾಗಿತ್ತು. ಸಂಸಾರದ ಸಣ್ಣಪುಟ್ಟ ವಿಷಯಗಳೆಲ್ಲ ನಮ್ಮ ತಾಯಿಯವರೇ ನಿರ್ವಹಿಸುತ್ತಿದ್ದರು. ಇದರಿಂದ ಅವರ ಬರವಣಿಗೆ ಸರಾಗವಾಗಿ ನಡೆಯಿತು. ''ಚಿಕವೀರ ರಾಜೇಂದ್ರ' 'ಭಾವ' ಮುಂತಾದ ಪುಸ್ತಕಗಳನ್ನು ಅವರು ಹೇಳಿದರೆ ನಮ್ಮ ತಾಯಿ ಬರೆದುಕೊಂಡರು. ತಮ್ಮ ಹೊಸ ಪುಸ್ತಕವೋ,ಕತೆಯೋ, ಅಚ್ಚಿಗೆ ಹೋಗುವ ಮುಂಚೆಯೇ ನಮ್ಮ ತಾಯಿಯವರಿಗೆ ಓದಿ ಚೆನ್ನಾಗಿ ಬಂದಿದೆಯೆ ಎಂದು ಕೇಳುತ್ತಿದ್ದರು. 'ಮಂಜುಳಾ', 'ಕುಚೇಲನ ಭಾಗ್ಯ', 'ಶ್ರೀಕೃಷ್ಣನ ಅಂತಿಮ ದರ್ಶನ', 'ಮಾಯಣ್ಣನ ಕನ್ನಡಿ' ಮುಂತಾದ ಕತೆಗಳನ್ನು ಬರೆಯುವ ಮೊದಲೇ ಹೇಳಿ ತೋರಿಸಿದ್ದರು.

ಮುತ್ತಣ್ಣನವರು ತಮ್ಮ ಕೊನೆಯ ದಿನಗಳಲ್ಲಿ ನಮ್ಮ ಭಾರತ ದೇಶದ ವಿಷಯ, ನಮ್ಮ ಧರ್ಮದ ವಿಷಯಗಳಲ್ಲಿ ತುಂಬ ಕಳವಳಗೊಂಡಿದ್ದರು. ರಾಮಕೃಷ್ಣ ಆಶ್ರಮದ ಸ್ವಾಮೀಜಿಯವರನ್ನು ಭೇಟಿ ಮಾಡಿ ''ಈ ವಿಷಯ ನೀವೂ ಮಠಾಧಿಪತಿಗಳೂ ಏನಾದರೊಂದು ವ್ಯವಸ್ಥೆ ಮಾಡಬೇಕು'' ಎನ್ನುತ್ತಿದ್ದರು. ಪೇಜಾವರ ಮಠದ ಸ್ವಾಮಿಗಳಿಗೂ ಈ ವಿಷಯ ವಿಜ್ಞಾಪನೆ ಮಾಡಿಕೊಂಡರು. ಅವರಿಗೆ ಯಾವ ಧರ್ಮದ

ವಿಷಯದಲ್ಲಿಯೂ ಅಸಡ್ಡೆ ಇರಲಿಲ್ಲ. ಎಲ್ಲರ ಮತ ಗ್ರಂಥಗಳು - ಬೈಬಲ್, ಕುರಾನ್ ಗ್ರಂಥಗಳು ಇವುಗಳ ಇಂಗ್ಲಿಷ್ ಅನುವಾದಗಳನ್ನು ಓದಿದ್ದರು. ಅವರು ವಿಶಾಲ ಹೃದಯರು. ತಮ್ಮ ಸ್ವಂತ ನಂಬುಗೆ ರೀತಿ ನೀತಿಗಳನ್ನು ಬಿಡಲಿಲ್ಲ.

ಪ್ರತಿದಿನ ಮೂರು ವೇಳೆ ಸಂಧ್ಯಾವಂದನೆ, ರಾಮಾಯಣ, ಭಾಗವತ ಪಾರಾಯಣ ಮಾಡುತ್ತಿದ್ದರು. ಪರ್ವ ಕಾಲಗಳಲ್ಲಿ ತರ್ಪಣ ಕೊಡುತ್ತಿದ್ದರು. ತಂದೆ ತಾಯಿಯರ ಶ್ರಾದ್ಧಗಳನ್ನು ಶಾಸ್ತ್ರರೀತಿ ಆಚರಿಸುತ್ತಿದ್ದರು. ಶ್ರೀರಾಮ ಪಟ್ಟಾಭಿಷೇಕ ಪ್ರತಿವರ್ಷ ವಿಜಂಭಣೆಯಿಂದ ನಡೆಯುತ್ತಿತ್ತು. ಈ ವೈಭವ ೨೫-೩೦ ವರ್ಷಗಳ ಹಿಂದೆ ಮಂಗಳ ವಾದ್ಯ ಓಲಗದೊಡನೆ ಪ್ರಾತಃ ಪ್ರಾರಂಭಿಸಿ, ಪಾರಾಯಣದ ಮುಕ್ತಾಯದ ಆಶೀರ್ವಾದಗಳ ವೇದ ಘೋಷ ಸಭಾಮರ್ಯಾದೆಗಳು, ಕೋಸುಂಬರಿ, ಪಂಚಮೃತ ವಿನಿಯೋಗ, ಅತಿಥಿ ಸಮಾರಾಧನೆ, ತಾಂಬೂಲ ಎಲ್ಲ ನಡೆಯುತ್ತಿತ್ತು. ಈ ಸಭಾಮರ್ಯಾದೆಗಳಲ್ಲಿ ಮುಖ್ಯವಾಗಿ ಒಂದು ಜನಕಮಹಾರಾಜನ ಸಂಭಾವನೆ ಎಂಬುದು ಅಶಕ್ತ ಪೋಷಕ ಸಭೆಗೆ ಕಳುಹಿಸುತ್ತಿದ್ದರು. ಅಲ್ಲದೆ ತ್ರಿಮತಸ್ಥ ಗುರುಸಂಭಾವನೆ ಇತ್ಯಾದಿ. ಈ ಪರಿಪಾಠವನ್ನು ಈಗಲೂ ಶಕ್ತ್ಯಾನುಸಾರ ನಡೆಸುತ್ತಿದ್ದೇವೆ.

ತಾವು ಬೆಳಗ್ಗಿನ ಹೊತ್ತು ಒಂದು ಗಂಟೆ ಸುತ್ತಾಡಲು ಹೋದಾಗ ಜೇಬಿನಲ್ಲಿ ಪೆಪ್ಪರ್‌ಮಿಂಟ್ ತುಂಬಿಕೊಂಡು ದಾರಿಯಲ್ಲಿ ಸಿಕ್ಕಿದ ಮಕ್ಕಳಿಗೆಲ್ಲ ಹಂಚುತ್ತಿದ್ದರು. ಇನ್ನೊಂದು ಇಪ್ಪತ್ತು ರೂಪಾಯಿಗೆ ತರಿಸು - ನನ್ನ ಜೇಬು ಖಾಲಿಯಾಯಿತು ಎನ್ನುವರು.

ಒಟ್ಟಿನಲ್ಲಿ ಮುತ್ತಣ್ಣ ನುಡಿದಂತೆ ನಡೆದವರು ಎಂದರೆ ಉತ್ಪ್ರೇಕ್ಷೆಯಾಗಲಾರದು. ಬರೆದರೆ ಇಂತಹ ಅನೇಕ ವಿಷಯಗಳು ಇವೆ. ಕೊನೆಯ ೧೭ ವರ್ಷಗಳು ನನಗೆ ಅವರ ಸಾಮೀಪ್ಯದ ಸೌಭಾಗ್ಯ ತಂದವು. ಅವರ ಹತ್ತಿರ ನಮ್ಮ ಮನಸ್ಸಿಗೆ ತೃಪ್ತಿಯಾಗುವಂತೆ ನಡೆದುಕೊಂಡೆವು. ಆಗಾಗ್ಗೆ ನಮಗೆ ''ಹಳೇ ಗೋಡೆ ಎಂದಾದರೂ ಕುಸಿಯುತ್ತದೆ. ದುಃಖ ಪಡಬೇಡಿ'' ಎನ್ನುತ್ತಿದ್ದರು. (ಇಂದಿನ ದೇಹಸ್ಥಿತಿ ಹೇಗಿದೆ ಎಂದು ಕೇಳಿದಾಗ). ಎಂತೆಂತಹ ಪುಣ್ಯ ಪುರುಷರೋ ಕಾಲಕ್ಕೆ ಅಧೀನರಾದರು. ಅಂತೆಯೇ ಮುತ್ತಣ್ಣನವರೂ, ಆದರೆ ಅವರ ಮಾತುಗಳು, ನಡತೆ, ನಿರಹಂಕಾರ ಪ್ರವೃತ್ತಿ, ಕೊನೆಯ ತನಕ ದುಡಿಯುವ ಸ್ವಭಾವ ಮುಂತಾದ ಗುಣಗಳು ನನ್ನ ಮನಸ್ಸಿನಲ್ಲಿ ಅಚ್ಚಳಿಯದಂತೆ ಇವೆ. ಈಗಲೂ ಮನೆಯಲ್ಲಿ ಅವರು ಇರುವಂತೆಯೇ ಭಾಸವಾಗುತ್ತದೆ. ಕನ್ನಡನಾಡಿನಲ್ಲಿಯೂ ಅವರ ಧ್ವನಿ ಕತೆಗಳ ಮೂಲಕ, ಕಾವ್ಯ, ನಾಟಕಗಳ ಮೂಲಕ ಎಲ್ಲೆಲ್ಲಿಯೂ ಹರಡಿ ಹಚ್ಚಹಸುರಾಗಿ ಅವರ ಜ್ಞಾಪಕ ಇರಲೆಂದು ಹಾರೈಸುತ್ತೇನೆ.

ಬೃಹತ್ ಚೇತನ - ಮುತ್ತಣ್ಣ

ವಸಂತಶ್ರೀ

''ದೈವ ವಾತ್ಸಲ್ಯದಿಂದ ಬೀಳ್ಕೊಳ್ಳುತ್ತದೆ. ಸ್ನೇಹದಿಂದ ನಿನ್ನೊಡನೆ ಬರುತ್ತದೆ. ಆದರರಿಂದ ನೀನಿಳಿಯುವಲ್ಲಿ ನಿನ್ನನ್ನೆದುರುಗೊಂಡು ತನ್ನ ಮಡಿಲಲ್ಲಿ ಹಾಕಿಕೊಳ್ಳುತ್ತದೆ. ಜಾಣೆಯಾಗಿರಮ್ಮ'' ಎಂದರು ತಾತ ಮುತ್ತಣ್ಣ, ನಾನು ಮೊತ್ತಮೊದಲು ಬೆಂಗಳೂರು ಬಿಟ್ಟು ಕೆಲಸಕ್ಕೆ ಹೊರಟಾಗ, ನನ್ನೀ ಬಾಳಿನಲ್ಲಿ 'ಕೋಣೆ'ಯಾಗಿ ನಡೆದಿರುವುದೇ ಬಹಳವಾದರೂ, ಇಟ್ಟ ಅಷ್ಟಿಷ್ಟು 'ಜಾಣ' ಹೆಜ್ಜೆ ಏನಿದೆ ಅದು ತಾತ - ಅಜ್ಜಿ - ತಾಯಿ ಇವರ ತ್ರಯೀ ಪ್ರಭಾವದಿಂದ ಎಂಬುದು ನಿಸ್ಸಂಶಯ ನನಗೆ!

ಒಬ್ಬರ ನೆನಪು ಇನ್ನೊಬ್ಬರಲ್ಲಿ ಮೂಡಬೇಕು - ಹೇಗೆ? ಏಕೆ? ಎಂತಹ ನೆನಪದು? ನನ್ನ ಇಡಿಯ ಬೆಳವಣಿಗೆಯೇ ತಾತನ ಆಶ್ರಯದಲ್ಲಿ ಎಂದ ಮೇಲೆ ತಾತನ 'ನೆನಪು' ನನಗೆ ಬಾಹ್ಯ ಪ್ರಪಂಚದ ಅರಿವು ಮೂಡಿದಾಗನಿಂದಲೇ ಎನ್ನಬೇಕು - ಗುರುತಿಸಿಕೊಂಡ ಎಷ್ಟೋ 'ದೃಶ್ಯ'ಗಳಲ್ಲಿ ಹಲವು ಇಟ್ಟು ಕಳಿಸಿರುವ ಗುಲಗಂಜಿಯಿದು. . .

ನನ್ನ ತಾಯಿ 'ಬಿಜ್' ಹೇಳುವರು. ನನಗೂ ಬಹಳsss ಮಸಕಾಗಿ ನೆನಪು. . .ತಾತ ''ಚಿನ್ನಾಜ್, ಪೊನ್ನಾಜ್, ಮುತ್ತಾಜ್, ಕುಟ್ಟಾಜ್'' ಎಂದರೆ ನಾನು ''ಪಾಪಾಜ್'' ಎಂದು ದನಿಗೂಡಿಸುತ್ತಿದ್ದುದು. . . .''ನಿನ್ನ ಗೊಂಬೆಯ ಮೂಗು ಹೇಗಿದೆಯಮ್ಮ?'' ಎಂದರೆ ನನ್ನ ಚಪ್ಪಟೆ ಮೂಗನ್ನು ಹೇಗಿದೆಯಮ್ಮ?'' ಎಂದರೆ ನನ್ನ ಚಪ್ಪಟೆ ಮೂಗನ್ನು ಇನ್ನಷ್ಟು ಚಪ್ಪಟೆ ಮಾಡಿ ತೋರಿಸುತ್ತಿದ್ದುದು. . .''ಆ್ಯನಾ ಮೇ ವಾಂಗ್'' ಎಂದು ತಾನು ಹೇಳಿ ನನ್ನ ಕೈಲಿ ''ಚಿನ್ನಾ ಕೋರಾಂಗ್'' ಎಂದು ಹೇಳಿಸಿ ನಗುತ್ತಿದ್ದುದು. . .ತಾತನ ಐದನೇ ಮಗಳ ಮದುವೆಯಲ್ಲಿ ಮೊದಲ ದಿನದ ವರಪೂಜೆ. . .ಕಾರು. . .ದೀವಟಿಗೆ ಪೆಟ್ರೋಮ್ಯಾಕ್ಸ್ ಕಂಬಗಳು. . .ಬಾಗಿಲ ಮುಂದೆ ಅಜ್ಜಿ, ತಾತ, ಪಕ್ಕದಲ್ಲಿ ನನ್ನ ತಾಯಿಯ ಕೈಹಿಡಿದುಕೊಂಡು ನಾನು. . .ನಂತರದ ನೆನಪು - ನಾವು ಸ್ಕೂಲಿಗೆ ಸೇರಿದಾಗ ತಾತ ಇನ್ನೂ ದೊಡ್ಡ ಸರಕಾರೀ ಹುದ್ದೆಯಲ್ಲಿದ್ದರು. . .ಡ್ರೈವರ್ ಮರಿಯಪ್ಪ - ಬಂಡಿಯಲ್ಲಿ ಕೋಟೆ ದೇವಸ್ಥಾನಕ್ಕೆ, ಲಾಲ್‌ಬಾಗಿಗೆ, ಸೆಂಚುರಿ ಕ್ಲಬ್ಬಿಗೆ ತಾತನನ್ನು ಕರೆದುಕೊಂಡು ಹೋದಾಗ ನಮ್ಮದೂ ಸವಾರಿ, ಬಾಲ. ಹಿಂದೆ ಸೀಟಲ್ಲಿ. . .ಇನ್ನೊಬ್ಬ ಆಳು ಜಾಫರ್ - ಬಿಳಿಯ 'ಹೋತದ' ಗಡ್ಡ ಇತ್ತು ಅವನಿಗೆ - 'ಬಾರ್' ಮೇಲೆ ನನ್ನಣ್ಣ ರಾಮಭದ್ರ, ಸೀಟಿನ ಮೇಲೆ ನಾನು. ಹಿಂದೆ ಕ್ಯಾರಿಯರ್ ಮೇಲೆ ತಮ್ಮ ವಸಂತರಾಮ ಜಾಫರ್‌ನ ಸೈಕಲ್ ಸವಾರಿ ಮಾಡಿ ಸ್ಕೂಲಿಗೆ ಹೋಗುತ್ತಿದ್ದುದು. . .ಮತ್ತೊಬ್ಬ ಆಳು ಬೋರಪ್ಪ, ನಮ್ಮ ಜೊತೆಗೆ ಗೋಲಿ, ಚಿಣ್ಣಿದಾಂಡು, 'ಕ್ರಿಕೆಟ್' ಆಡಲು. . .ಪಟ್ಟಿ ಹಾಕಿದ್ದ ಆಳೊಬ್ಬ ಬರುವ. . .ಕಾರಕೂನರು ಹಲವರು. . .

ಸರಕಾರೀ ಕೆಲಸಕ್ಕೆ ರಾಜೀನಾಮೆ ಕೊಡುವ ಮಾತಿದ್ದಿರ ಬೇಕು. ನಮ್ಮಜ್ಜಿಯೊಡನೆ 'ಅಮ್ಮಾರೂಂ'ನಲ್ಲಿದ್ದೆವು. ಮೊಮ್ಮಕ್ಕಳಿಗೆ -'' ಏನು, ಕೆಲಸ ಬಿಡುತ್ತೇನೆ ಈಗ. ಈ ಆಳುಗಳಿರುವುದಿಲ್ಲ. ಬಂಡಿ ಸೊನ್ನೆ, ಏನೆನ್ನುತ್ತೀರಿ?'' ಎಂದಾಗ ''ಸೈ'' ಎಂದು ಹೇಳಿ ನಾವು ಮೂವರೂ ತಾತನ ರಾಜೀನಾಮೆ ಎಂಡೋರ್ಸ್ ಮಾಡಿದುದರ ನೆನಪು. . .ತಾತನ ಕ್ಲಬ್ಬಿನಿಂದ ಬಂದರೆ ''ನಮಸ್ಕಾರ ಮುತ್ತಣ್ಣ'' ಎಂದು ಕೂಗಿ ಅವರು ನಮಗೆ ''ನಮಸ್ಕಾರ್ ಗ್ರ್ಯಾಂಡ್ ಚಿಲ್ಡ್ರನ್'' ಎಂದುತ್ತರಿಸಿ, ಬಹಳವೇ 'ಸಭ್ಯ'ರಾಗಿ ನಡೆದು ಅವರು ತಲೆ ನೇವರಿಸಿದಾಗ ಏನೋ ಹೆಮ್ಮೆ, ಖುಷಿ. . .

ನನಗೇ ನೆನಪಿದ್ದ ಹಾಗೆ ಬೆಳೆಯಿತು ಮನೆಯಲ್ಲಿ ಪುಸ್ತಕದ ಹಾವಳಿ! ಬೀರುಗಳು, ಕಪಾಟುಗಳು, ಅಚ್ಚು ಮಾಡುವ ಕಾಗದದ ಬೆಟ್ಟ, ಪುಸ್ತಕ ಕಟ್ಟುಗಳ ಸಾಗರ, ಇವೆಲ್ಲದರ ಮಧ್ಯೆ 'ಜೀವನ' ಪತ್ರಿಕೆಯ ಕಾರ್ಯಾಲಯ - ಉಳಿದ ಜಾಗದಲ್ಲಿ ಮನೆ ಮಂದಿ, ಓದುವ ಹುಡುಗರು, ಅತಿಥಿಗಳು, ನಿತ್ಯ ಭೇಟಿ ಮಾಡಬರುವವರು. . .ತಾತನ ಪುಸ್ತಕ ಮಾರಾಟ ಆದಾಗ ನಮಗೂ ಮನಸ್ಸು ಹಾಯ್ದಾಗ - ಅವುಗಳ 'ಬಿಲ್' ಬರೆಯುವುದು, ಪುಸ್ತಕದ 'ಸ್ಟಾಕ್ ಟೇಕಿಂಗ್'ಗೆ ನಮ್ಮ ಅರಿತ್‌ಮೆಟಿಕ್ ಎಕ್ಸ್‌ಪರ್‌ಟೈಸ್ ಕೊಡುತ್ತಿದ್ದದು. .

ವಾರದಲ್ಲೆರಡು ಮೂರು ಸಲವಾದರೂ ಬರುತ್ತಿದ್ದ ಹಣ್ಣು - ಹಂಪಲು - ಮಲ್ಲಿಗೆ - ಸುಗಂಧರಾಜ - ಗಂಧದ ಹೂಮಾಲೆಗಳು - ತಾತ ಕನ್ನಡದ ಕೆಲಸಕ್ಕೆ ಅಮ್ಮಣಿಯೊಂದಿಗೆ ಹೊರಟಾಗ ಮಾಡಿದ ತಿಂಡಿ, ಬರುತ್ತಾ ತರುತ್ತಿದ್ದ ಫೇಡೆ, ಬರ್ಫಿ, ಉಡುಪಿಯಿಂದ ತಂದ ಪಂಚಪಾತ್ರೆ, ಲೋಟಗಳು, ಮಂಗಳೂರಿಂದ ಗೇರುಬೀಜ, ಮೈಸೂರಿಂದ ಬರುವಾಗ ಸೊಪ್ಪಿನ ಕಡಲೆ, ನಂಜನಗೂಡಿನ ಬಾಳೆಹಣ್ಣು - ಎಲ್ಲದರಲ್ಲೂ ನಮ್ಮ ಪಾಲು. . .

ತಾತನನ್ನು ಕಾಣಬರುವ ಜನ - ಅದೆಷ್ಟು ಮಂದಿ! - ಲೆಕ್ಕವಿಲ್ಲ - ನೋಡಲು ಬಂದವರ ಹೆಸರು ಕೇಳಿ, ಕೂರಿಸಿ, ಇಂಥವರು ಬಂದಿದಾರೆ ಎಂದು ಮಹಡಿಗೆ ಹೋಗಿ ಮುತ್ತಣ್ಣಗೆ ಹೇಳಿ - ಅಮ್ಮಣಿ - ಶಿತ್ತಮ್ಮ ಕೂಡಿಸಿಕೊಟ್ಟ ಕಾಫಿನೋ, ಇಲ್ಲ ಟೀ, ಹಣ್ಣಿನ ರಸ ತಂದುಕೊಡುವುದು. ನಮ್ಮ ಕೊಸರು ಆಮೇಲೆ. ಎಷ್ಟೋ ಸಲ ಬರೆಯುತ್ತಿದ್ದ ಮುತ್ತಣ್ಣ ನಮ್ಮ ಎನೌನ್ಸ್‌ಮೆಂಟ್ ಧ್ವನಿ ಕೇಳಿ ಬೆಚ್ಚಿಬಿದ್ದುದುಂಟು. ಕವಿಗೋಷ್ಠಿಗಳಿಗೆ ಉತ್ಸಾಹದಿಂದ ಜಮಖಾನೆಗಳನ್ನು ಹಾಸಿ, ತಿಂಡಿ ಸರಬರಾಜು ಮಾಡಿ ಗಿಟ್ಟಿಸುತ್ತಿದ್ದೆವು ಪುಷ್ಕಳ ತಿಂಡಿ ತೀರ್ಥ. . .

ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಿಗೆ, ಹಿರಣ್ಣಯ್ಯ ಕಂಪನಿಯವರು ತಾತನ ಅಧ್ಯಕ್ಷತೆಯಲ್ಲಿ ಆಡಿದ ನಾಟಕಗಳಿಗೆ ಹೋದ ನೆನಪು. . .ಮತ್ತು ಇತ್ತೀಚೆಗೆ ತಾತನೊಡನೆ ನೋಡಿದ ರವಿ ಕಲಾವಿದರು ಆಡಿದ 'ಕಾಕನ ಕೋಟೆ'. . .ಒಟ್ಟಿನಲ್ಲಿ ಚಿಕ್ಕಂದಿನಲ್ಲಿ ನಮ್ಮ ತಾತ ಬಹಳ ದೊಡ್ಡ ವ್ಯಕ್ತಿ. ಬಹಳ ಬುದ್ಧಿವಂತರು. ಬಹಳ ಜನ ಗೌರವಿಸುತ್ತಾರೆ. ಅವರ ಬಳಿ 'ಭೇಷ್' ಎನಿಸಿಕೊಳ್ಳಬೇಕು. ಬೈಗಳು ಕೇಳಿದರೆ ಬಹಳ ಅವಮಾನ ಎಂಬ ಭಾವನೆ ಬೇರೂರಿತ್ತು - ಇದೆ ಅದಿಂದೂ!

ಮುತ್ತಣ್ಣ ತನ್ನ ಅನುಭವಗಳನ್ನು ಬಹಳ ಮಿತವಾಗಿ, ಆದರೆ ಹಲವಾರು ಬಾರಿ ಆಡಿದಾರೆ ಮನೆಮಕ್ಕಳೊಂದಿಗೆ - ಬರವಣಿಗೆಯ ಮಧ್ಯೆ - ಶತಪಥ ತಿರುಗುತ್ತಾ. ಭಾಷಣ ಮುಗಿಸಿ ಬಂದ ಮೇಲೆ - ಕ್ಲಬ್ಬಿನಿಂದ ಗೆದ್ದ ಕಾಸೆರಡು ತೋರಿಸಿ ನಾವೆಲ್ಲ ನಕ್ಕಾಗ, ಕೆಲಸದಲ್ಲಿನ ಸನ್ನಿವೇಶಗಳು - ನನ್ನ ತಾಯಿ, ಅತ್ತೆ, ದೊಡ್ಡಪ್ಪನ ಬಗ್ಗೆ - ತನಗೆ ಭಿಕ್ಷಾನ್ನ,

ವಾರಾನ್ನ ಹಾಕಿದವರ ನೆನಪು - ವಿದ್ಯಾರ್ಥಿಯಾಗಿದ್ದಾಗ ಪಟ್ಟ ಬವಣೆ, ಪಾಠ ಹೇಳಿಕೊಟ್ಟ ಪ್ರೊ। ಟೇಟ್, ಆಳಿದ ಮಹಾಸ್ವಾಮಿಯವರು, ಸರ್ ಎಂ. ವಿಶ್ವೇಶ್ವರಯ್ಯ - ಮಿರ್ಜಾ, ಚಕ್ರವರ್ತಿ ರಾಜಗೋಪಾಲಾಚಾರಿ ಬಗ್ಗೆ. . . ಸಾಹಿತಿಗಳು ಬೇಂದ್ರೆ, ಡಿ.ವಿ. ಗುಂಡಪ್ಪ - ಎಲ್. ಗುಂಡಪ್ಪ - ವಿ. ಸೀ. - ರಾಜರತ್ನಂ - ಕಾರಂತ - ಮುಗುಳಿ - ಕಡಂಗೋಡ್ಲು ಶಂಕರ ಭಟ್ಟ - ಬಿ.ಎಂ. ಶ್ರೀ - ಗೋವಿಂದ ಪೈ - ಗೋಕಾಕ್ - ಸಾಲಿ ರಾಮಚಂದ್ರರಾಯರು - ಮರಿಯಪ್ಪ ಭಟ್ಟ - ವಾಡಿಯಾ ದಂಪತಿಗಳು - ರಾಮಕೃಷ್ಣಾಶ್ರಮದ ಸ್ವಾಮಿಗಳು - ರಾಮದಾಸ ಸ್ವಾಮಿಗಳು - ಮಾತೆ ಕೃಷ್ಣಾ ಬಾಯಿ - ಧರ್ಮಸ್ಥಳದ ಹೆಗ್ಗಡೆಗಳು - ನವರತ್ನ ರಾಮರಾವ್ - ಸರ್ ಸಿ.ವಿ. ರಾಮ್ - ಹೀಗೇ ಎಷ್ಟು 'ದೊಡ್ಡ' ಜನ - ಹಿರಿಯರು - ಗಣ್ಯರು ನಮ್ಮ ರಿವಿಲ್ಲದೆಯೇ 'ಸುಲಭವಾಗಿ' ದರ್ಶನಕ್ಕೆ ದೊರೆತರೋ ತಾತನ ನೆವದಿಂದ - ಹೇಳಿ ತೀರದ ನೆನಪು ಅವು.

ಮಾತಿನ ಸರಣಿಯಲ್ಲಿ ತನ್ನ ಬರಹ ನಿಂತ ಹಾಗೇ ಹೇಳುವರು ಮುತ್ತಣ್ಣ - ಅದಕ್ಕೆ ಮೊದಲು ಅವರ ಮನಸ್ಸಿನಲ್ಲೇ ಆಗುವ ತಯಾರಿ, ಬರೆಯದೇ ಇರುವ ಮಿಕ್ಕೆಲ್ಲ ಹೊತ್ತಿನಲ್ಲಿ, ನಾವು ಅವರನ್ನು ದೃಷ್ಟಿಸಿದಾಗ, ಎಷ್ಟೋ ಸಲ ಕಂಡಿದ್ದೇನೆ. ಗವಿಪುರದ ಮನೆ ಮಹಡಿಯ ಮುಂದಿನ ಕೋಣೆಯಲ್ಲಿ, ಇಲ್ಲ ಪಕ್ಕದ 'ಹಾಲ್'ನಲ್ಲಿ ಅಮ್ಮಣಿ ಕುಳಿತು ಬರೆದುಕೊಳ್ಳಲು ತೊಡಗುವರು - ತಾತ ಶಥಪಥ ತಿರುಗುತ್ತಾ ಬರಹ ಹೇಳುವರು- ಬರೆದುಕೊಳ್ಳಲು ಇನ್ನೂ ಹಲವರು ಬರುತ್ತಿದ್ದರು - ನನಗೆ ಅಚ್ಚಳಿಯದಿರುವ ನೆನಪು ಈ ಗಂಡ ಹೆಂಡಿರ ಬರಹದ ದಾಂಪತ್ಯ - ೬೯ರಲ್ಲಿ ಅಮ್ಮಣಿ ತೀರಿಕೊಳ್ಳುವವರೆಗೂ ನಡೆದಿದೆ ಈ ಸಾಹಿತ್ಯಯಜ್ಞ. . .ಷೇಕ್ಸ್‌ಪಿಯರ್ ನಾಟಕಗಳ ಕನ್ನಡ ನಿರೂಪಣೆ ತಾನು ತೆಗೆದುಕೊಂಡಾಗ ಆದ ಅನುಭವ ಹೇಳಿದುದು ಮರೆಯದು. . .ಈಗಲೂ ಕೇಳಿಸುವ ಅವರ ಧ್ವನಿ ನನ್ನ ಒಳಕಿವಿಯೊಳಗೆ. . .ಬೆಳಗ್ಗೆ ಮೆಟ್ಟಿಲು ಇಳಿದು ಬರುತ್ತಾ ''ಕೌಸಲ್ಯಾಸುಪ್ರಜಾರಾಮಾ''. . .ಬೇಗ ಬೇಗ ಬಚ್ಚಲು ಮನೆಯಲ್ಲಿದ್ದವರು ಓಡಿ ಹೊರಗೆ ಬರುತ್ತಿದ್ದೆವು. . .ತಾತ ಬಂದರೆ ಬಿಡುವು ಆಗಲೆಂದು. . .ಸಂಜೆ ಕ್ಲಬ್ಬಿಗೆ ಹೋಗುವ ಮುನ್ನ ನಮ್ಮ ಗಿಣಿ 'ಕಿಲು' ವಿನ ಪಂಜರದ ಬಳಿ ''ಜಿತಂತೇ ಪುಂಡರೀಕಾಕ್ಷ ನಮಸ್ತೇ ವಿಶ್ವಭಾಜನಃ. . .'' ದಿನನಿತ್ಯದ ಪಾರಾಯಣದಲ್ಲಿನ ''ಪಲ್ಲಾಂಡ್ ಪಲ್ಲಾಂಡ್. . .ಕೂಜಂತಂ ರಾಮ ರಾಮೇತಿ ಮಧುರಂ. . .ರಾಮಂ ಭಜೇ ಶ್ಯಾಮಲಂ ಶ್ರೀರಾಮಂಭಜೇ ಶ್ಯಾಮಲಂ. . .'' ವರ್ಷದಲ್ಲೆರಡು ಬಾರಿ ನಡೆಯುತ್ತಿದ್ದ ಪಟ್ಟಾಭಿಷೇಕದಲ್ಲಿ ಘೋಷ ''ತತಃ ನಪ್ರಯ ತೋವೃದ್ಧೋ ವಸಿಷ್ಠೋ ಬ್ರಾಹ್ಮಣೈಃ ಸಹ ರಾಮಂ ರತ್ನಮಯೇ ಪೀಠೇ ಸಹಿಸೀತಂ ನ್ಯವೇಶಯತ್. . .ಸಲಿಲೇನ ಸಹಸ್ರಾಕ್ಷಂ ವಸವೋ ವಾಸವಂ ಯಥಾ. . .'' ಎಂದು ಗಮಕ ಎಳೆಯುತ್ತಿದ್ದುದು. . .

ತಾತ ಓದುವಾಗ ಗಳಿಸಿದ ಪಾರಿತೋಷಕಗಳು, ಕೆಲಸದಲ್ಲಿದ್ದಾಗ ಮಹಾರಾಜರು ಕೊಟ್ಟ ಗೌರವರ ಕುರುಹುಗಳು, ನಂತರದ ಅನೇಕ ಸನ್ಮಾನಗಳ ಕಾಲಕೃತಿಗಳು, ಸಾಹಿತ್ಯ ಅಕಾಡೆಮಿಯ, ಜ್ಞಾನಪೀಠದ ಪ್ರಶಸ್ತಿಗಳು - ಪಿ.ಇ.ಎನ್. ಮತ್ತನೇಕರು ಕೊಟ್ಟ ಬಿನ್ನವತ್ತಳೆಗಳು - ಗೌರವ ಡಾಕ್ಟರೇಟ್‌ಗಳು - ಮುತ್ತಣ್ಣನಿಗೆ ಕನ್ನಡದ ಜನತೆ, ನಾಡ ಜನ ಪ್ರೀತ್ಯಾಭಿಮಾನಗಳಿಂದ ಗೌರವಿಸಿ, ಮೆಚ್ಚಿಕೆಯಿಂದ ಧಾರೆಯೆರೆದ ಬಳುವಳಿಗಳು - ಮನೆ ತುಂಬಿರುವ ಅವರ ಪುಸ್ತಕಗಳು - ತಾತನ ಹಿರಿಮೆಯ ಸಾಕ್ಷಿ ರೂಪಗಳು. . . ವ್ಯಕ್ತಿಯೊಬ್ಬನ

ಸಾಧನೆಗೆ ನಮ್ಮೆದುರಿಗಿರುವ 'ಅಸಾಧ್ಯ' ನಿದರ್ಶನಗಳು. . .

ಚಿಕ್ಕಂದಿನಲ್ಲಿ ತಾತನ ಕಥೆಗಳು - ಪದ್ಯಗಳು - ನಾಟಕಗಳ ದೃಶ್ಯಗಳು ಹಲವು. 'ತಿರುಪಾಣಿ'ಯಿಂದ ನನ್ನ ತಾಯಿ ಕಲಿಸಿ, ನಾವಾಡಿದ 'ಕಾವೇರಿ ನದಿ'ಯ ಕೋಲಾಟ, ಕೃಷ್ಣ ರಾಧೆಯ ಗೀತನೃತ್ಯ - ಎಲ್ಲ ನೋಡಿ ಕೇಳಿ ತಾತನಿಗೆ ತನ್ನ ಮಕ್ಕಳ, ಮೊಮ್ಮಕ್ಕಳ ಹಾಡಿನ ಅಭಿರುಚಿಯ ಒಂದು ಭಾವ ಇತ್ತು. ಬಹಳಷ್ಟು ಒಪ್ಪಿಕೊಳ್ಳುವರು - ತಿದ್ದುವರು. ಹಾಡಿಗೂ ಪದಗಳಿಗೂ ಹೊಂದದಾಗ - ಅವರೆದುರು ಬಹಳ ಹಾಡುವ 'ಧೈರ್ಯ' ಇಲ್ಲ! ಏನೋ ಸಂಕೋಚ. . . ಅವರು 'ಭೇಷ್' ಎಂದರೆ ಖುಷಿ. ಸಮಾಧಾನ. . .ಅದರ ನೆನಪು 'ಜೀವನ' ಪತ್ರಿಕೆಯ ಮುಕ್ತಾಯ ಸಮಾರಂಭ ಮನೆಯಲ್ಲಿ ನಡೆದಾಗ. . .ಆಗಿನ ಮುಖ್ಯಮಂತ್ರಿ ನಿಜಲಿಂಗಪ್ಪನವರು, ಹಿರಿಯ ಸಾಹಿತಿಗಳನೇಕರು ನೆರೆದಿದ್ದಾಗ 'ಅಮ್ಮಣಿ' ತಾನು ಬರೆದ 'ಹೋಗಿಬಾ ಜೀವಣ್ಣ' ಓದಿದ ನಂತರ - ತಾತ ಅಲ್ಲಿ ಕುಳಿತಿದ್ದು ನನ್ನ ತಾಯಿಯ ನಿರ್ದೇಶನದಲ್ಲಿ ನಾನು ಮಾಡಿದ ಹಾಡಿನ ಕಛೇರಿ!!

ಮುತ್ತಣ್ಣ ಬರೆದ ಕೃತಿಯೆಲ್ಲದರ 'ಪರಿಚಯ'ವಾದುದು - ಅವರ ಬರಹದ ಆಳ - ಅಗಲ - ವ್ಯಾಪ್ತಿ ಸ್ವಲ್ಪಮಟ್ಟಿಗಾದರೂ ಅರಿವಾದುದು ನಾನು ಬೆಂಗಳೂರು ಬಿಟ್ಟ ಮೇಲೆ. . .ನನಗೇ ಆದ ಅನುಭವಗಳ ಬಗ್ಗೆ ಯೋಚಿಸಿದಾಗ. . .ಎಷ್ಟೋ ಕೆಲಸ ಮಾಡಬೇಕೆಂದಾಸೆ. . .ಆದರೆ ನಾನು ಹಾಕುವ ವೇಳೆ, ಪ್ರಯತ್ನ ಸಾಲದು ಎಂದುಕೊಂಡಾಗ ಎಚ್ಚರಿಸುತ್ತದೆ ''ಕ್ರಿಯೆಯಾಗದಿಹ ಭಾವ ತಾನಹುದೆ ಹರಿಸೇವ?. . .'' ''ಭ್ರೂಣವೇ ಪಿತೃಋಣಕೆ ಸಲಿಕೆಯಹುದೆ?. . ., ''ನಿಜವನಾರಯಿಸು ಮನುಜ''. ''ಸಾಕಾರನಾಗಿ ಎದುರಿನಲಿ ನಿಲಲು ನಿನ್ನ ನೋಡದ ಈ ಜನ್ಮ ವ್ಯರ್ಥ. . .'' ''ಭಾವದಲಿ ನಿನ್ನ ಅರಿವೆನೆಂಬರುಂಟೆ? ಭಾವನಾತೀತ, ಗಹನ, ಗಂಭೀರ. . .ಸೇವೆಯನು ಕೊಳಲು ನೀನಿಲ್ಲಿ ತೋರೆ ನಿನ್ನ ನೋಡದ ಈ ಜನ್ಮ ವ್ಯರ್ಥ. . .'', ''ಮಾತೆ ಭಾರತ ಮಾತೆ ಸಕಲ ಭುವನ ವಿಖ್ಯಾತೆ'' - ನನ್ನ ತಾಯಿ ಹಾಡಿ ಹೇಳಿಕೊಟ್ಟ ತಾತನ ಪದ್ಯಗಳಿವು. ''ನೀನು ಯಾರು? ಏನು ಗಾನವಿದು? ಏನು ನಿನ್ನ ಹೆಸರು? ಸಣ್ಣವನೆಲೆ ನೀ ಬಹು ಸಣ್ಣವನು. . .ನನ್ನ ಅಜ್ಜಿ ಮೆಲ್ಲಗೆ ಹಾಡಿ ತೋರಿಸಿದ್ದು. . ಜನಪದ ಸಂಸ್ಕೃತಿಗೆ, ಸಂಪರ್ಕಕ್ಕೆ ಹಾತೊರೆದಾಗ ಅತ್ತು ಹಾಡಿದೇನೆ ''ಏತಕೆನ್ನ ದೂರ ನಿಲಿಸಿದೇ?. . .'' ಬಹಳ ಅಧೀರಳಾದಾಗ ತಾತ ಹೇಳಿಕೊಂಡ ''ನಂಬಿಕೆಯನ್ನು ಕೊಡು, ಭಕ್ತಿಯನ್ನು ಕೊಡು. ಧೈರ್ಯ ಕೊಡು, ಶಕ್ತಿ ಕೊಡು, ಸೇವೆ ಮಾಡಿಸಿಕೊ, ಉದ್ಧಾರ ಮಾಡು'' ಎಂಬುದು ಹೇಳಿಕೊಂಡು ಧೈರ್ಯ ತಳೆದಿದ್ದೇನೆ. . .ಕಾಯಿಲೆ ಮಲಗಿದಾಗ, ಬಹಳ ದುಃಖ ಆದಾಗ, ಕೋಪ ಬಂದು ನಿಃಸಹಾಯಕಳಾದಾಗ ''ನೀನು ಇದ್ದೀಯೆ, ನೀನು ನಡೆಸುತ್ತಿದ್ದೀಯೆ. ಅಮ್ಮ! ನನ್ನಪ್ಪ! ಕಾಪಾಡು! ನಿನ್ನ ಕಾಲ ಮೇಲೆ ಬಿದ್ದಿದ್ದೇನೆ ಕಾಪಾಡು!'' ಎಂದು ತಾತನ ಶರಣಾಗತಿ ಸ್ಮರಿಸಿ ನಾನೂ ಶರಣು ಬಿದ್ದಿದೇನೆ. .

೬೯ರಲ್ಲಿ ನಾನೂ ಹೀಗೆ ಬಂದೆ ಕೆಲಸಕ್ಕೆ, ಅಲ್ಲಿ ಅಮ್ಮಣಿ ನಮ್ಮನ್ನಗಲಿದರೆಂಬ ಸುದ್ದಿ ಬಂತು. ಲ್ಯಾಬಿನಿಂದ ಓಡಿದೆ ಎದುರಿಗೇ ಇರುವ ಹೈಡ್‌ಪಾರ್ಕಿಗೆ. ಅಲ್ಲಿ ಮರದಡಿ ಕುಳಿತು ಮುತ್ತಣ್ಣಗೆ ಪತ್ರ ಬರೆದೆ - ಉತ್ತರ ಕೊಟ್ಟರು ತಾತ -'' . . .ಎಲ್ಲ ದೇವರ ಇಚ್ಛೆ, ಎಂದ ಮೇಲೆ ದೇವರ ಕೃಪೆ, ಕೃಪೆ ಹೇಗೋ ತಿಳಿಯದು. . .''ನಿರ್ಲಿಪ್ತತೆ, ಅಕ್ಕರೆ, ಆತಂಕ, ಅನ್ಯಾಯಕ್ಕೆ, ಅಸತ್ಯಕ್ಕೆ ಮಣಿಯದೆ ನಿಲ್ಲುವ ಸ್ಥೈರ್ಯ, ನನ್ನದೂ ತಪ್ಪಿರಬಹುದೆಂದು ಒಪ್ಪಿಕೊಳ್ಳುವ ನಿಲುವು, 'ಪಾಪ, ತಪ್ಪು ಮಾಡಿದರು- ಆದರೆ ತಿಳಿಯದು' ಎಂದು

ಕ್ಷಮಿಸುವ ಮನೋಧರ್ಮ, ಸ್ವಪ್ರತಿಷ್ಠೆಯನ್ನು ತಳ್ಳಿ - ದೂರ ಮಾಡಿಕೊಳ್ಳಬಹುದಾದ ಸನ್ನಿವೇಶದಲ್ಲಿ ಹತ್ತಿರ ಕರೆಯಲು ಬೇಕಾಗುವ ಔದಾರ್ಯ - ಇವೆಲ್ಲ ತಾತನ ನಿತ್ಯ ಜೀವನದಲ್ಲಿ ನಾನು ನೋಡಿದ್ದೇನೆ. ಅವರ 'ಭಾವ'ದಲ್ಲಿ, ಕಥೆ, ನಾಟಕ, ಪದ್ಯಗಳಲ್ಲಿ ಓದಿದ್ದೇನೆ, ಬಳಕೆಗೆ ತರಲು ನಿರಂತರ ಸಾಹಸ ನಡೆದಿದೆ!

ತಾತ ಮುತ್ತಣ್ಣ ತನ್ನ ಬಾಳಲ್ಲಿ ಕಂಡು ಪಾಲಿಸಿದ ತತ್ವ ಅಸದೃಶ, ಅವರ ಬರಹದ ಮೌಲ್ಯ ಅನಂತ, ದೈವಭಕ್ತಿ ಅಚಲ, ಸ್ವಪ್ರಯತ್ನ ಅತುಲ್ಯ - ಅಣುವಷ್ಟಾದರೂ ಅದರ ಅರಿವು ಆಗಿರುವುದು ಈಗ ನನ್ನ ಬೆನ್ನೆಲುಬಿನಲ್ಲಿ ನಿಂತಿರುವ ಬಲ - ಇತ್ತ ಆ ಬೃಹತ್ ಚೇತನದ ನೆನಪು ಎಂತಹುದಿರಬೇಕು? ಅವರ ಮೊಮ್ಮಗಳು ಹೇಗೆ 'ಬೆಳೆಯ' ಬೇಕು, ನಡೆಯಬೇಕು? ದೀಪದ ಕೆಳಗೆ ಕತ್ತಲು? ಹಚ್ಚಿಸಿಕೊಂಡ ದೀಪ ಹಚ್ಚಿಲ್ಲದ ದೀಪಕ್ಕೆ ಕೆಳಗೆ ಬೇಕಾಗಬಹುದೇನೋ. ಹಚ್ಚಿದ ದೀಪಕ್ಕಂತೂ ಅಲ್ಲ! ಕಥೆಯೊಂದಿದೆ. . .ಎಲ್ಲರೂ ಮಣಿದು ಹೋಗುತ್ತಿದ್ದರು. ತನಗೇ ಎಂದು ಭ್ರಮೆಗೊಂಡಾಗ, ಅಲ್ಲ ಮಣಿದುದು ನೆಳಲು ಕೊಟ್ಟ ಮಂಟಪದ ಮೇಲೆ ಮಂಡಿಸಿದ್ದ ಮೂರ್ತಿಗೆ ಎಂಬ ಅರಿವು ಆಮೇಲೆ! ''ನೀನ್ಯಾಕೋ ನಿನ್ನ ಹಂಗ್ಯಾಕೋ? ನಿನ್ನ ನಾಮದ ಬಲ ಒಂದಿದ್ದರೆ ಸಾಕೋ!'' ಎಂಬುದರರ್ಥ ತಾತನ ಮೊಮ್ಮಗಳಾಗಿ ನನಗೆ ಪದೇ ಪದೇ ಅನುಭವಕ್ಕೆ ಬಂದ ದಾಸರ ಪದ. . .ಮೊತ್ತಮೊದಲು ತಾತ ಹೇಳಿದ ಮಾತು. ಆ ಕ್ಷಣ ನನ್ನ ಅಂದಿನ ಪ್ರಯಾಣಕ್ಕೆ ಧೈರ್ಯಕೊಳ್ಳಲು ಅನ್ವಯಿಸಿಕೊಂಡೆ, ನಿಜಕ್ಕೂ, ಆಜೀವ - ಆಜನ್ಮ ಪರ್ಯಂತ ಇದೆ ಅದರ ಸಂದೇಶ. ತಾತನ ನೆರಳಿನಲ್ಲಿ ಬೆಳೆದಿದ್ದೇನೆ. . .ನನ್ನ ತಾತನಾದರೂ ನನ್ನೊಬ್ಬಳಿಗೇ ಮೀಸಲಿಲ್ಲ. ವಿಶ್ವಕ್ಕೇ ಅವರು ಬೇಕು ಎಂದು ಬಾಗಿದ್ದೇನೆ ನಮೋ ನಮಃ!. . . ಮಾಸ್ತಿಯವರ ಬರಹ ಅವರ ಚೇತನದ ಒಂದು ಗವಾಕ್ಷ. ಅದರಲ್ಲಿ ಕಾಣಬರುವುದು ಗವಾಕ್ಷದ ಅಳತೆಗೂ ಒಳಪಟ್ಟಿಲ್ಲ. ಕಾಣುವಾಗಿನ, ಮತ್ತೆ ನೋಡಲು ಬೇರೆಯಂದು ಕಾಣುವ - ಕಾಣುವವರ ಎಚ್ಚರ, ಇಡುವ ನೆನಪು - ಅವರವರ ಆಳಕ್ಕೆ ತಕ್ಕಂತೆ ಜೀವನದ ದೀಕ್ಷೆಯಲ್ಲಿ ನಡೆಯ ಬರುವ ನಿರಂತರ ಯಜ್ಞದಲ್ಲಿ ಆ ಚೇತನ ನಡೆದು, ಬರೆದು ತೋರಿದ ದಾರಿಯ ಅನುಷ್ಠಾನ.

ತಾತನ ಎರಡು ಅಕ್ಕರೆಯ ಪರಮಾವಧಿ ಹೇಳಿ ಮುಗಿಸುತ್ತೇನೆ. . .ಸಣ್ಣ ಹುಡುಗಿ ಆಗ. .ನೀರುಕೋಟ್ಲೆ, ಟೈಫಾಯ್ಡ್ ಎರಡು ಬಾರಿ ಒಂದರ ಮೇಲೊಂದು ಬಂದು ಕೊನೆಗೆ ಡಿಫ್ತೀರಿಯಾದಲ್ಲಿ ರಾತ್ರಿಯೆಲ್ಲಾ ಕನವರಿಸಿ ಕೊಳ್ಳುತ್ತಿದ್ದೇನೆ. . .ತಲೆ ತಾಯಿಯ ಮಡಿಲಲ್ಲಿ, ಹತ್ತಿರವೇ ಅಜ್ಜಿ - ತಾತ - ಡಾಕ್ಟರ್ ಕುಪ್ಪೂರಾಯರು ಬಂದುದು ಗೊತ್ತು. . .ಬೆಳಗ್ಗೆ ಕಣ್ಣು ತೆರೆದೆ. ಕಾಲ ಬಳಿ ತಾತ ಇನ್ನೂ ನಿಂತೇ ಇದ್ದಾರೆ - ''ಏನು ಆಟ ಕಾಯಿಸಿದೆ ನಮ್ಮನ್ನು'' ಎಂದು ನಕ್ಕರು. . .೮೬ ಮಾರ್ಚ್-ಏಪ್ರಿಲ್ ಬೆಂಗಳೂರಲ್ಲಿದ್ದೆ. ಇಲ್ಲಿ ವಿದ್ಯಾಭವನದಲ್ಲಿ ಶಿವರಾತ್ರಿಗೆ ನಾನೇ ರಾಗ ಹಾಕಿ ಹಾಡಿದ ದಾಸರ ಶಿವಸ್ತುತಿಗಳೆರಡು, ಶಿವಪಂಚಕ, ತಾತನದೇ ಪದ್ಯಗಳೆರಡು - ದೊಡ್ಡಮ್ಮ ಹೇಳಿಕೊಟ್ಟು ತಾಯಿತಿದ್ದಿದ ದೀಕ್ಷಿತರ ಕೀರ್ತನೆ 'ಮಾಮವ ಪಟ್ಟಾಭಿರಾಮ' ಎಲ್ಲ ಹಾಡತೊಡಗಿದೆ. ಒಂದು ಮಧ್ಯಾಹ್ನ ಮುತ್ತಣ್ಣನಿಗೆ ಸದ್ದು ಆಗದಿರಲೆಂದು ಮನೆ ಮಕ್ಕಳೆಲ್ಲಾ ಹಿಂದಿನ ಉಯ್ಯಾಲೆ ಹಜಾರದಲ್ಲಿ ಕಲೆತಿದ್ದೆವು. ನಾನಿನ್ನೂ ಮೊದಲ ಹಾಡು ಹಾಡಿ ಮುಗಿಸಿಲ್ಲ. ಮೆಲ್ಲಗೆ ತನ್ನ ಮಂಚದಿಂದ ಇಳಿದು ಬಂದು, ನನ್ನೆದುರು ಮುತ್ತಜ್ಜಿಯ ಕುರ್ಚಿಯಲ್ಲಿ ಕುಳಿತು ಅಷ್ಟು ಹೊತ್ತೂ ಕೇಳಿದಾರೆ ಹಾಡು ಮುತ್ತಣ್ಣ. ಅಚ್ಚಳಿಯದ ನೆನಪು ಅವು.

ಮುತ್ತಣ್ಣ, ಅಮ್ಮಣಿ ನನ್ನ ತಾಯಿಯನ್ನೂ ನನ್ನನ್ನೂ ಮಡಿಲಿಗೆ ಹಾಕಿಕೊಂಡು,

ಸಾಕಿ, ಸಲಹಿ, ತಿದ್ದಿ, ಹೆಮ್ಮೆ ಪಟ್ಟು, ನಮ್ಮ ಸುಖ ದುಃಖಗಳಲ್ಲಿ ಸಮಭಾಗಿಗಳಾಗಿ ನಿಂತುಬಿಟ್ಟಿದ್ದಾರೆ. . .' ೮೬ರಲ್ಲಿ ಊರಿಗೆ ಹೊರಡುವ ಮುನ್ನ ನಮಸ್ಕಾರ ಮಾಡಲು ಹೋದಾಗ ತಾನೇ ಹೋಗಿ ಬರುತ್ತೇನೆ ಎಂದು ನನಗೆ ಹೇಳಬೇಕೆಂದೇನೋ ನಮ್ಮಿಬ್ಬರ ಜೀವನದಲ್ಲಿ ನಡೆದ ಘಟನೆಗಳು, ತಾನು ತನ್ನ ಧರ್ಮಪತ್ನಿಯೊಂದಿಗೆ ತಳೆದ ನಿಲುವು ಎಲ್ಲ ದೊಡ್ಡಪ್ಪನಿಗೆ ಹೇಳಿ ಬರೆಸಿ, ನನ್ನನ್ನು ಓದ ಹೇಳಿ, ನನ್ನ ಕೈಗಳನ್ನು ಆದಷ್ಟು ಬಿಗಿಯಾಗಿ ಹಿಡಿದು, ನನ್ನ ತಾಯಿ, ತನ್ನ ಮಗಳು ಪಟ್ಟ ಕಷ್ಟ, '೭೪ರಲ್ಲಿ ಕಳೆದುಕೊಂಡುದನ್ನು ನೆನೆದು' ಮಮ್ಮಲ ಮರುಗಿ ನನ್ನನ್ನು ತಬ್ಬಿಕೊಂಡು ಕಳಿಸಿಕೊಟ್ಟರು.

ತಾತನ ನೆನಪೇ? ನೆನಪಾಗದ ಕ್ಷಣ ಒಂದಿಲ್ಲ, ಬರಹದಲ್ಲಿ ಹೇಗಡಗಿಸಲಿ? 'ಮಳೆ ಬಿಟ್ಟರೂ ಮರದ ಹನೀ ಬಿಡದೂ. . .'

ನಿನಗಿದೋ ನಮ್ಮ ನಮನ

ಪಿ. ಎಸ್. ರಾಮಾನುಜಂ

ಸಾಹಿತ್ಯ ಸಪ್ತಲೋಕದ ಏಳುಮಲೆಯ ಮೇಲ್ನಿಂತ
ವೆಂಕಟೇಶ, ಕನ್ನಡದ ಆಸ್ತಿಯೆಂದಾದ ಮಾಸ್ತಿ
ನಮಗಾಗಿ ಶಾರದೆಯು ಕೊಟ್ಟ ಸಾರಸ್ವತಲೋಕದಾಸ್ತಿ.

ಮುಖದೊಳಗೆ ಮಂದಹಾಸ, ಕಣ್ಣಿನಲಿ ಚಿಂತನದ ಹೊಳಪು
ಮನದೊಳಗೆಮೊಂಥನದ ದೂರನೋಟ.
ಹೃದಯತೆರೆದರೆ ಜ್ಞಾನಲೋಕದ ವಿಶ್ವರೂಪ
ಚಿಂತನನವನೀತ ಕೃಷ್ಣ, ಕಾವ್ಯರಸರಾಸಾಸಕ್ತ,
ರಸಧ್ವನಿಶಕ್ತ, ಚಿಂತನಾನುರಕ್ತ.

ಸಣ್ಣ ಕಥೆಗಳ ಹೆಜ್ಜೆ, ಗದ್ಯ, ಕಾವ್ಯದ ಗೆಜ್ಜೆ,
ಭಾವ ಲಹರಿಗಳ ಕಡಲನೀಜಿ ಮುಳುಗೆದ್ದು ಗೆದ್ದು
ಹೊರಬಂದ ತ್ರಿವಿಕ್ರಮನ ವಿಕ್ರಮ,
ದಾಟಿ ಬಂದ ಆನೆ ಹೆಜ್ಜೆಗಳ ಸಾಲು

ಈಗ ಕಾಣುತ್ತಿದೆ ಈ ಮಹಾಚೇತನ ಸೃಷ್ಟಿಸಿದ ಆ
ಲೋಕ, ಅದರ ಧ್ವನ್ಯಾಲೋಕ, ಜ್ಞಾನದ ಆಲೋಕ
ದಿಗಂತದೊಳಗೆ ಕೇಳಿಸುತ್ತಿರುವ ಪಾಂಡಿತ್ಯದ ಮೊರೆತ
ಪ್ರತಿಭೆಯ ಮೇಘ ಮೃದಂಗಗಳ ಗಂಭೀರ ಲಯಬದ್ಧ ತುಡಿತ
ಒಮ್ಮೆ ಪ್ರಶಾಂತ ಗಂಭೀರ, ಚೇತೋಹಾರಿ ಹೃದಯವಿಹಾರಿ
ಭಾವಸರಸ್ಸಿನ ದೃಶ್ಯ, ಎಲ್ಲಿಯ ಸಾದೃಶ್ಯ?

ಬಿಟ್ಟು ಹೋದದ್ದೆಲ್ಲ - ಕೊಟ್ಟು ಹೋದದ್ದು, ಇಟ್ಟು ಹೋದದ್ದು.
ತಲೆತಲಾಂತರಕ್ಕೆ, ನಮಗೆ, ನಿಮಗೆ ಎಲ್ಲರಿಗೆ - ಎಲ್ಲ ಜಗಕೆ.
ಅಖಿಲಾಂಡ ಕೋಟಿ ಬ್ರಹ್ಮಾಂಡಕ್ಕೆ,
ವಿಶಿಷ್ಟ ದರ್ಶನವೊಂದರ ಪ್ರವಕ್ತಾರನಾಗಿ, ದ್ರಷ್ಟಾರನಾಗಿ.

ಶಾರದೆಯನಾಟವಾಡಿಸುತ, ಚದುರಂಗವಾಡಿ
ಕೊನೆಗೆ ಜ್ಞಾತನಾಗಿ, ಬಹುಶ್ರುತರಿಗೂ
ಅಜ್ಞಾತನಾಗಿ, ಅಜ್ಞಾತ ಲೋಕದೆಡೆ ಕಾಲಿಟ್ಟು
ಮಾಯವಾಗುತ್ತ, ಎಲ್ಲೆಲ್ಲೂ ಪ್ರತ್ಯಕ್ಷವಾಗುತ್ತ,
ನಾಸದಾಸೀತ್ ನೋ ಸದಾಸೀತ್ ತದಾನೀಂ
ಎಂಬಲ್ಲಿಗೆ ಹೋಗಿಯೂ ನಮ್ಮೊಳಗೆ ಉಳಿದ
ಮಹಾಚೇತನವೇ, ನಿನಗಿದೋ ನಮ್ಮ ಸಾಷ್ಟಾಂಗ.

ಕರುಣಾಮಯಿ ಮುತ್ತಣ್ಣ

ಪದ್ಮಾ ರಂಗಸ್ವಾಮಿ ಅಯ್ಯಂಗಾರ್

''ಜೋಡ್ ರಿಪೇರಿ ಸೋಮಿ ಜೋಡ್ ರಿಪೇರಿ''

ಮಟಮಟ ಮಧ್ಯಾಹ್ನ. ಈ ಸದ್ದು ಬಹಳ ದೂರದಲ್ಲಿ ಕೇಳಿಸುತ್ತಿತ್ತು. ಮುತ್ತಣ್ಣ ಊಟ ಮಾಡಿ ಮಧ್ಯಾಹ್ನದ ವಿಶ್ರಾಂತಿಗಾಗಿ ಮಲಗಲು ಮಹಡಿಗೆ ಹೋದರು. ನಮ್ಮಮ್ಮ, ಚಿಕ್ಕಮ್ಮ ಮತ್ತು ನಾನು ಮೂವರೂ ಅದೇ ತಾನೆ ಊಟಮಾಡಿ ಕೈ ತೊಳೆಯಲು ಹೋಗುತ್ತಿದ್ದೆವು. ಬರಬರುತ್ತ ಆ ಸದ್ದು ಹತ್ತಿರ ಹತ್ತಿರ ಕೇಳಿ ಬರುತ್ತಿತ್ತು. ಚಿಕ್ಕಮ್ಮ ನನ್ನ ಮುಖ ನೋಡಿ ತಡೆಯಲಾರದೆ, ''ಪದ್ಮ, ಆ ಮುದುಕ ಬರುತ್ತಿದ್ದಾನೆ'' ಎಂದರು. ನಾನು ''ಹೌದು'' ಎನ್ನುವಂತೆ ತಲೆ ಅಲ್ಲಾಡಿಸಿದೆ.

''ಆ ಮುದುಕ'' ಎಂದು ಅವರು ಹೇಳಿದ್ದು ಒಬ್ಬ ಮೋಚಿಗೆ. ಅವನು ನಮ್ಮ ಮನೆಗೆ ಮಾಮೂಲಾಗಿ ಬರುತ್ತಿದ್ದವರಲ್ಲಿ ಒಬ್ಬ. ಬಡತನ, ಕುಡಿತ ಅವನನ್ನು ವಯಸ್ಸಿಗೆ ಮೀರಿದ ಮುದುಕನನ್ನಾಗಿ ಮಾಡಿತ್ತು. ಮನೆ ಹತ್ತಿರವಾದಂತೆಲ್ಲಾ ಆ ಸದ್ದು ಜೋರಾಗಿ ಮತ್ತು ಮೇಲೆ ಮೇಲೆ ಕೇಳಿ ಬರುತ್ತಿತ್ತು. ನಾವು ಮೂವರೂ ಕೈ ತೊಳೆದು ನಮ್ಮ ನಮ್ಮ ಕೆಲಸಕ್ಕೆ ಹೋದೆವು. ಆ ವೇಳೆಗೆ ಮುತ್ತಣ್ಣ ಕಾಲಲ್ಲಿ ಒಂದು ಹರಕು ಚಪ್ಪಲಿ ಮೆಟ್ಟಿಕೊಂಡು ಮಹಡಿ ಇಳಿದು ಬರುತ್ತಿದ್ದರು. ಅವರಿಗೆ ಕಿವಿ ಬಲು ಚುರುಕು. ನಿದ್ರೆ ಜೊಂಪಿನಲ್ಲೂ ಅವನ ಕೂಗು ಅವರಿಗೆ ಕೇಳಿಸುತ್ತಿತ್ತು. ಮುತ್ತಣ್ಣ ವರಾಂಡಕ್ಕೆ ಬರುವುದಕ್ಕೂ ಆ ''ಜೋಡ್ ರಿಪೇರಿ'' ಗೇಟಿನ ಬಳಿ ಬರುವುದಕ್ಕೂ ಸರಿ ಹೋಗುತ್ತಿತ್ತು. ಅವನು ಮುತ್ತಣ್ಣನ ನೋಡಿದ ಕೂಡಲೇ ಗೇಟು ತೆಗೆದು ಒಳಗೆ ಬಂದು ಕುಳಿತುಕೊಳ್ಳುತ್ತಿದ್ದ. ಜೋಡನ್ನು ಅವನ ಮುಂದೆ ಇಟ್ಟು ರಿಪೇರಿ ಮಾಡುವಂತೆ ಹೇಳುತ್ತಿದ್ದರು. ಅದು ನಿಜವಾಗಿಯೂ ಹಳೇ ಚಪ್ಪಲಿಯಾಗಿದ್ದುದರಿಂದ ಅವನು ಹೊಲಿಗೆ ಹಾಕಿ ಮೊಳೆ ಹೊಡೆದು ಕೊಡುತ್ತಿದ್ದ (ಮುತ್ತಣ್ಣ ಅದನ್ನು ಉಪಯೋಗಿಸುತ್ತಿರಲ್ಲಿಲ್ಲ). ಅವನಿಗೆ ಕೂಲಿ ಎಂದು ಎರಡು ರೂಪಾಯಿ ಕೊಡುತ್ತಿದ್ದರು. ಅವನು ಹೋಗುವ ಮುನ್ನ ಅವರಿಗೆ ನಮಸ್ಕಾರ ಮಾಡುತ್ತಿದ್ದ. ಆಗ ನಾವ್ಯಾರಾದರೂ ಅಲ್ಲಿದ್ದರೆ, ''ನೋಡಮ್ಮ, ಅವನಿಗೆ ಎಷ್ಟು ಮರ್ಯಾದೆ ತಿಳಿದಿದೆ'' ಎನ್ನುತ್ತಿದ್ದರು. ನಿಜ. ಅವನು ಕಸುಬಿನಲ್ಲಿ ಮೋಚಿಯಾದರೂ ಉತ್ತಮ ಸಂಸ್ಕೃತಿ ಅವನಲ್ಲಿತ್ತು.

ಹೀಗೆ ತಿಂಗಳು, ಎರಡುವಾರ, ವಾರ ಎಂದು ಅವನು ಆಗಾಗ್ಗೆ ಬರುತ್ತಿದ್ದ. ಕಾರಣವಿಲ್ಲದೆ ಸಹಾಯ ಮಾಡುವುದು ಸರಿಯಲ್ಲವೆಂದು ಅವರು ತಮ್ಮ ಹಳೇ ಚಪ್ಪಲಿಗಳನ್ನು ಬಿಸಾಕದೆ ರಿಪೇರಿ ಮಾಡಲು ಕೊಡುತ್ತಿದ್ದರು.

ಕೆಲವು ದಿನಗಳು ಕಳೆದರೂ ಅವನು ಬರಲಿಲ್ಲ. ಮುತ್ತಣ ನನ್ನನ್ನು ಕರೆದು, ''ಪದ್ದಮ್ಮ, ಆ ಜೋಡ್ ರಿಪೇರಿ ಬರಲಿಲ್ಲವೆ?'' ಎಂದು ಕೇಳಿದರು. ನಾನು ಇಲ್ಲ ಎಂದೆ.

ಸಂಜೆ ಕ್ಲಬ್‌ನಿಂದ ಬಂದವರು ನಮ್ಮ ತಾಯಿಯವರನ್ನೂ ಕೇಳಿದರು. ಅವರೂ ಅವನು ಬರಲಿಲ್ಲವೆಂದರು. ಅವನು ಏಕೆ ಬರಲಿಲ್ಲ ಎಂದು ಅವರಿಗೆ ಯೋಚನೆ. ಆದರೆ ಅದನ್ನು ತೋರಗೊಡಲಿಲ್ಲ. ಕೆಲವು ತಿಂಗಳಾದ ನಂತರ ಮತ್ತೆ ಆ ''ಜೋಡ್ ರಿಪೇರಿ'' ಸದ್ದು ಕೇಳಿಸಿತು. ಆದರೆ ಮೊದಲಿನಂತೆ ಆ ಕೂಗು ಜೋರಾಗಿ ಬರುತ್ತಿರಲಿಲ್ಲ. ಧ್ವನಿ ಕುಗ್ಗಿತ್ತು. ನಾನು ನಮ್ಮ ತಾಯಿಗೆ, ''ಅಮ್ಮ, ಮುತ್ತಣ್ಣ ಮನೇಲಿಲ್ಲ. ಆ ಮುದುಕನಿಗೆ ಕೊಡುವುದನ್ನು ಕೊಟ್ಟು ಕಳುಹಿಸೋಣವೆ?''ಎಂದೆ. ಅವರು ಅವನಿಗೆ ಮುತ್ತಣ್ಣ ಮನೇಲಿಲ್ಲವೆಂದು ಹೇಳಿ ಎರಡು ರೂಪಾಯಿ ಕೊಟ್ಟರು. ಅವನು ಕುಳಿತೇ ಇದ್ದ! ನಾವು ಅವನಿಗೆ ಆಯಾಸವಿರಬಹುದೆಂದುಕೊಂಡೆವು. ಅವನು ''ಸೋಮೀರು ಮನೇಲಿಲ್ವ?'' ಎಂದು ಕೇಳಿದ. ಆಗ ಅವನಿಗೆ ನಮ್ಮ ಮಾತಿನಲ್ಲಿ ನಂಬುಗೆ ಇಲ್ಲವೆಂದು ಹೊಳೆಯಿತು. ನಾವು ಇಲ್ಲವೆಂದ ಮೇಲೆ ಹೊರಟುಹೋದ.

ತಮಿಳಿನಲ್ಲಿ ''ರುಚೆಕಂಡ ಮಾಮಿಯಾರ್''ಎಂಬ ಗಾದೆಯೊಂದಿದೆ. ಅದರಂತೆ ಅವನು ಮತ್ತೆ ಮಾರನೆಯ ದಿನ ಬಂದ. ಮುತ್ತಣ್ಣ ವಾಡಿಕೆಯಂತೆ ಮಹಡಿ ಇಳಿದು ಬಂದು ರಿಪೇರಿಗೆ ಹಳೆ ಜೋಡುಗಳೆಲ್ಲಾ ಕೊಟ್ಟ ಮೇಲೆ ಬೇರೆ ಎಲ್ಲಿಂದ ತರುವುದು? ಅದಕ್ಕೆ ಅವರು, ''ಜೋಡಿಲ್ಲ, ಆ ಹಣ ತೆಗೆದುಕೋ''ಎಂದು ಎರಡು ರೂಪಾಯಿ ಕೊಟ್ಟರು. ಅವನು ಕುಳಿತೇ ಇದ್ದ. ಮುತ್ತಣ್ಣ ''ಏಕಪ್ಪ ಕುಳಿತೆ?'' ಎಂದು ವಿಚಾರಿಸಿದ್ದೇ ತಡ ಅವನು ತನ್ನ ತಾಪತ್ರಯಗಳ ಸುರಿಮಳೆಯನ್ನೇ ಸುರಿಸಿದ. ತನಗೆ ವರಮಾನ ಕಡಿಮೆ, ಹೊಟ್ಟೆಗೆ ಇಲ್ಲ. ಹೆಂಡತಿಗೆ ಕಾಯಿಲೆ, ಚಳಿಗಾಲ ಬೇರೆ.....ಹೀಗೆ ಎಷ್ಟೋ.

ಅವನಿಗೆ ಸಹಾಯ ಬೇರೊಂದು ವಿಧವಾಗಿ ಪ್ರಾರಂಭವಾಯಿತು. ಮಧ್ಯಾಹ್ನ ಬಂದರೆ ನಾವು ಊಟ ಮಾಡಿದ ಅನಂತರ ಉಳಿದಿದ್ದನ್ನು ಅವನಿಗೆ ಕೊಡುತ್ತಿದ್ದೆವು. ಮುತ್ತಣ್ಣ ತಾವು ಉಡುತ್ತಿದ್ದ ಹಳೇ ಪಂಚೆಗಳನ್ನು ಅವನಿಗೆ ಕೊಟ್ಟು ತಮ್ಮ ಬಳಿ ಇದ್ದ ಹೊಸ ಪಂಚೆಗಳನ್ನು ಉಬ್ಬೆಗೆ ಹಾಕಿ ಅನಂತರ ಉಡುತ್ತಿದ್ದರು. ನಾನು ''ಮುತ್ತಣ್ಣ, ಆ ಜೋಡ್ ರಿಪೇರಿ (ನಾವು ಆ ಮುದುಕನನ್ನು ಹಾಗೆ ಸಂಬೋಧಿಸಿತ್ತಿದ್ದೆವು) ಪಂಚೆ ಉಡುತ್ತಾನೆಯೇ?'' ಎಂದು ಕೇಳಿದರೆ ''ಪಂಚೆ ಹೊದ್ದುಕೊಳ್ಳಲೂಬಹುದು, ಅಲ್ಲವೇನಮ್ಮ?'' ಎಂದು ಹೇಳುತ್ತಿದ್ದರು. ಸರಿ, ಪಂಚೆಯಿಂದ ಪ್ರಾರಂಭವಾದದ್ದು ನೆಟ್ ಬನಿಯನ್, ಹತ್ತೀದು, ಉಲ್ಲನ್‌ದು, ಬುಷ್ ಷರಟುವರೆಗೂ ವ್ಯಾಪಿಸಿತು. ಜೊತೆಗೆ ದುಡ್ಡೂ ಕೊಡುತ್ತಿದ್ದರು.

ಅವನು ಬರುವುದು ಹಿಂದುಮುಂದಾಯಿತು, ಬಂದಾಗ ಗೇಟಿನ ಬಳಿ ನಿಂತು ''ಜೋಡ್ ರಿಪೇರಿ''ಎಂದು ಸೂಚನೆ ಕೊಡುತ್ತಿದ್ದ. ಅವರು ಅವನಿಗೆ ಬಂದಾಗಲೆಲ್ಲ ಬಟ್ಟೆ ಬರೆ, ಐದು ರೂಪಾಯಿ ಕೊಡುತ್ತಿದ್ದರು. ಬಡತನ ಅವನನ್ನು ಕಾಡುತ್ತಿತ್ತು. ಬಡತನದ ಬೇಗೆಯನ್ನು ಅನುಭವಿಸಿದ್ದ ಮುತ್ತಣ್ಣನಿಗೆ ಅವನ ಬಗ್ಗೆ ಕನಿಕರ. ನಾವು, ''ಮುತ್ತಣ್ಣ, ನೀವು ಅವನಿಗೆ ಕೊಡುವುದನ್ನು ಮಾರಿ ಕುಡಿಯುತ್ತಾನೋ ಏನೋ?''ಎಂದರೆ, ಒಂದು ಕ್ಷಣ ಸುಮ್ಮನಿದ್ದು ಶತಪಥ ತಿರುಗಿ, ''ನೋಡಮ್ಮ, ನಿಮ್ಮ ತಾತ ಇದ್ದಿದ್ದರೆ ಇವನಿಗಿಂತ ವಯಸ್ಸಾಗಿರುತ್ತಿತ್ತು. ನನ್ನ ದುರದೃಷ್ಟ. ನಾನು ಸಂಪಾದಿಸಿದ ಕಾಲಕ್ಕೆ ಅವರಿಲ್ಲದೇ ಹೋದರ''ಎಂದು ಚಿಕ್ಕಂದಿನಲ್ಲಿ ತೀರಿಕೊಂಡ ತಂದೆಯನ್ನು ಜ್ಞಾಪಿಸಿಕೊಳ್ಳುತ್ತಿದ್ದರು. ತಮ್ಮ ತಂದೆಯನ್ನು ಸುಖವಾಗಿರುವಂತೆ ಇಟ್ಟುಕೊಳ್ಳಲು ದೇವರು ಕರುಣಿಸಲಿಲ್ಲವೆಂಬ

ಕೊರಗು ಅವರಿಗೆ.

ದಿನಗಳು ಕಳೆದುವು. ಒಂದು ದಿನ ಅವನು ಗೇಟಿನ ಬಳಿ ನಿಂತಿದ್ದ. ಗುರುತೇ ಸಿಗದಷ್ಟು ಮುದುಕನಾಗಿದ್ದ. ಕೂಗಲೂ ಶಕ್ತಿ ಇಲ್ಲ. ಆದರೆ ಮಾತ್ರ ಅವನ ಹೆಗಲಿನಲ್ಲಿ ಸಾಮಾನಿಲ್ಲದ ಹಳೇ ಚೀಲ ನೇತಾಡುತ್ತಿತ್ತು. ವಾಡಿಕೆಯಂತೆ ಅವನಿಗೆ ತಿನ್ನಲು ಏನಾದರೂ ಕೊಟ್ಟು ದುಡ್ಡು ಕೊಟ್ಟು ಕಳುಹಿಸುತ್ತಿದ್ದೆವು. ಕಡೆಗೆ ಅವನು ಬರುವುದೂ ನಿಂತು ಹೋಯಿತು.

ಯಶೋರೂಪಿ ಮಾಸ್ತಿಯವರಿಗೆ ನಮನ

ಗೋಪಾಲಕೃಷ್ಣ ಅಡಿಗ

ಕನ್ನಡದ ತೋಟದಲ್ಲಿತ್ತು. ತಲೆಯೆತ್ತಿ ನಿಂತಿತ್ತು.
ಈ ಮಧುರ ಮಾಕಂದ. ಕೊಂಬೆ ಕೊಂಬೆಗಳಲ್ಲು
ಗೆಲ್ಲುಗೆಲ್ಲುಗಳಲ್ಲು ಹಣ್ಣುಗಳ ಗೊಂಚಲು;
ಸುತ್ತಲು ಅತಿ ಸಾಂದ್ರ ನೆಳಲು ಪಥಶ್ರಾಂತ
ಸಾಹಿತಿ ಜನಕ್ಕೆ; ಗ್ರಂಥಗ್ರಂಥಗಳ ಪುಟಪುಟದಲ್ಲಿ
ಪಡಿಮೂಡಿ ನಿಂತಿದೆ ಈಗಲೂ ಇಲ್ಲಿ
ಸರಳ, ಸುಂದರ, ಸಂತೋಷಪ್ರದವಾದ ಮಾಮರದ
ಪ್ರತಿಬಿಂಬ, ಜನ್ಮ ಶತಾಬ್ಧಿ, ಸಹಸ್ರಾಬ್ಧಿ ಕಳೆದರೂ ಇಲ್ಲೆ
ನಿಲ್ಲುವಿರಿ - ಕನ್ನಡದ ಉಪವನದ ಹೆಗ್ಗಳಿಕೆ ಅಗ್ಗಳಿಕೆ
ಯಾಗಿ ನಿರಂತರವಾಗಿ, ನಿಃಸಂದೇಹ

2

ಎಂಥೆಂಥ ಎಷ್ಟೆಷ್ಟು ಹಣ್ಣುಗಳು! ಓ ಎಂಥ
ಸಿಹಿ, ಎಂಥ ಕಂಪು, ಎಂಥಾ ತಂಪು ಮನಸ್ಸಿಗೆ!
ಸಣ್ಣ ಕಥೆಗಳ ಸರಣಿ, ಕವನ ಕವನಗಳ ಸರಮಾಲೆ,
ಕಾದಂಬರಿಗಳ ಸುಗ್ರಾಸ, ನಾಟಕಗಳ ಸುವಿಶಾಲ
ನೋಟ; ವಿಮರ್ಶೆಗಳು, ಪ್ರಬಂಧಗಳಂತು
ಬೇಕಾದಷ್ಟು! ಅಧಿಕಾರದಲ್ಲಿದ್ದಾಗ, ಲೆಕ್ಕಣಿಕೆ ಹಿಡಿದಾಗ,
ಮಾನವತ್ವದ ಆಳ ವಿಸ್ತಾರಗಳ ಶೋಧ,
ಅತ್ಯುತ್ತಮದ ಅನುಸಂಧಾನ, ಅದರ ಬೋಧ!

3

ಕಣ್ಗೆ ಕಾಣುವ ಒಡಲು ಈಗಿಲ್ಲ ನಿಜ, ನಮ್ಮ
ನಿಮ್ಮ ಮಾಸ್ತಿಗೆ ಈಗ ಜ್ವಲಂತ ಕೀರ್ತಿ ಶರೀರ.
ಯಾವಾಗಲೂ ನೀವು ಕನ್ನಡದ ಆಸ್ತಿಯೇ; ಈ ಇಲ್ಲೆ
ಹುಟ್ಟಿ ಬರುವುದು ನಿಮ್ಮ ಸಾಹಿತ್ಯ ಸಂತಾನ.
ನಿಮ್ಮಾತ್ಮದ ಅಪತ್ಯವಾದಂಥ ಕವಿಜನ
ನಿಮಗೆ, ಕನ್ನಡದಮರ ಚೇತನರೆ, ಹಿರಿಯರೇ,
ಇದೋ ನಮ್ಮ ದೀರ್ಘದಂಡ ನಮಸ್ಕಾರ,
ನಮನ, ನಮನ-ಜನ್ಮ ಶತಾಬ್ಧಿ ನಮನ.

ಮಾಸ್ತಿ ತಾತಾ-ನಾನು ಕಂಡಂತೆ

ಕೆ. ಶಾಂತಾ

ನಾನು ೧೯೩೩ರಲ್ಲಿ ಹುಟ್ಟಿದೆ. ೧೯೩೯ರವರೆಗೆ ನಮ್ಮ ತಂದೆಯವರರಾದ ಡಾ। ಎ. ಆರ್. ಕೃಷ್ಣಶಾಸ್ತ್ರಿಗಳು ಸೆಂಟ್ರಲ್ ಕಾಲೇಜಿನ ಪ್ರೊಫೆಸರ್ ಆಗಿದ್ದರು. ಅವರ ಮನೆ ಬಸವನಗುಡಿಯಲ್ಲಿ. ಆಕಾಲದಲ್ಲಿ ನಾನು ಬಹಳ ಚಿಕ್ಕವಳಾಗಿದ್ದರೂ ಕೆಲವು ಘಟನೆಗಳು ನೆನಪಿದೆ.

ನಮ್ಮ ತಂದೆಯವರು ಬೆಳಗಿನ ಜಾವ ಎದ್ದು ಅಂಗಸಾಧನೆ ಮಾಡಿ, ಸ್ನಾನದ ನೀರೊಲೆಗೆ ಉರಿಹಾಕಿ ವಾಕಿಂಗ್ ಹೊರಡುತ್ತಿದ್ದರು. ಬರುವಾಗ ನಾನಾ ತರಹದ ಹೂವುಗಳನ್ನು ತರುತ್ತಿದ್ದರು. ಬಂದಮೇಲೆ ಕಾಫಿ ಕುಡಿದು, ಭೃಂಗಾಮಲಕ ತೈಲವನ್ನು ತಲೆಗೆ ಉಜ್ಜಿಕೊಳ್ಳುತ್ತಾ ನ್ಯೂಸ್‌ಪೇಪರ್ ಓದಿ, ೮ ಗಂಟೆಗೆ ಬರುತ್ತಿದ್ದ ಇಂಗ್ಲಿಷ್ ವಾರ್ತೆ ಕೇಳಿ ಅನಂತರ ಸ್ನಾನಕ್ಕೆ ಹೊರಡುತ್ತಿದ್ದರು. ಸ್ನಾನಾನಂತರ ತಂದಿದ್ದ ಬಗೆಬಗೆಯ ಹೂವುಗಳಿಂದ ದೇವರನ್ನು ಅಲಂಕರಿಸಿ ಪೂಜಿಸುತ್ತಿದ್ದರು.

ಆ ವೇಳೆಗೆ ಅವರ ಕೊಠಡಿಯಲ್ಲಿ ಮಾಸ್ತಿಯವರು, ಡಿ.ವಿ.ಜಿ, ಎಂ.ಆರ್ ಶ್ರೀನಿವಾಸಮೂರ್ತಿ, ಡಿ.ಸಿ. ಸುಬ್ಬರಾಯಪ್ಪ, ಬಿ.ವೆಂಕೋಬರಾವ್ ಮುಂತಾದವರೆಲ್ಲಾ ಸೇರಿರುತ್ತಿದ್ದರು.

ಎ.ಆರ್.ಕೃಷ್ಣಶಾಸ್ತ್ರಿಯವರು ಪೂಜೆ ಮುಗಿಸಿ ಎದ್ದು ಬರುವಾಗಲೇ ಒಂದು ತಟ್ಟೆಗೆ ಚಕ್ಕಲಿ, ಕೋಡುಬಳೆ, ಚಿರೋಟಿ ಮುಂತಾದ ಕರಿದ ತಿಂಡಿಗಳನ್ನು ತುಂಬಿಕೊಂಡೇ ಬರುತ್ತಿದ್ದರು. ಅವರ ಕೊಠಡಿಯಲ್ಲಿ ಸೇರಿದ್ದವರೆಲ್ಲಾ ಹರಟೆ ಹೊಡೆಯುತ್ತಾ ತಿನ್ನುತ್ತಿದ್ದರು. ಕೆಲವು ದಿನ ಮನೆಯಲ್ಲೇ ಕಾಫಿ ಆಗುತ್ತಿತ್ತು, ಇಲ್ಲ ಹೊರಗಡೆ ತೆಗೆದುಕೊಳ್ಳುತ್ತಿದ್ದರು. ಅನಂತರ ಎಲ್ಲರೂ ಲಾಲ್‌ಬಾಗ್‌ವರೆಗೆ ಹೋಗಿ ತಮ್ಮ ತಮ್ಮ ಮನೆಗೆ ತೆರಳುತ್ತಿದ್ದರು.

ಅವರೆಲ್ಲಾ ಬಂದಾಗ ನಾನೂ ಸಹ ನಮ್ಮ ತಂದೆಯವರ ಕೊಠಡಿಗೆ ಹೋದರೆ ಅವರೇನೂ ಬೇಡ ಎನ್ನುತ್ತಿರಲಿಲ್ಲ. ಎಷ್ಟೋ ವೇಳೆ ಹೋಗುತ್ತಿದ್ದೆ. ಅಷ್ಟು ಚಿಕ್ಕ ವಯಸ್ಸಿಗೇ ಅಂಥ ಮಹನೀಯರ ಪರಿಚಯವೆಲ್ಲಾ ಇತ್ತು.

೧೯೩೯ರ ವೇಳೆ ಶ್ರೀ.ಟಿ.ಎಸ್. ವೆಂಕಣ್ಣಯ್ಯನವರ ನಿಧನದಿಂದ ಎ.ಆರ್. ಕೃಷ್ಣಶಾಸ್ತ್ರಿ ಅವರು ಮೈಸೂರಿಗೆ ಬರಬೇಕಾಯಿತು ಅವರ ಜಾಗಕ್ಕೆ ೧೯೫೧ರ ವರೆಗೆ ಮೈಸೂರಿನಲ್ಲಿದ್ದೆವು. ಅನಂತರ ಪುನಃ ಬೆಂಗಳೂರಿಗೇ ಬಂದು ಸ್ವಗೃಹದಲ್ಲಿ ನೆಲೆಸಿದೆವು. ಆ ವೇಳೆಗೆ ಎ.ಆರ್.ಕೃಷ್ಣಶಾಸ್ತ್ರಿ ಅವರಿಗೆ ನಿವೃತ್ತಿ ಆಗಿತ್ತು. ನನಗೆ ಮದುವೆ ಆಗಿ ಎನ್.ಆರ್.ಕಾಲೋನಿಯಲ್ಲಿ ವಾಸವಾಗಿದ್ದೆ. ಆ ಸಮಯದಲ್ಲಿ ನಾನು ನಮ್ಮ ತಂದೆಯವರ

ಮನೆಗೆ ಬಂದರೆ ನಾನು ಸಂಜೆ ಮನೆಗೆ ಹೋಗುವಾಗ ನನ್ನ ಜೊತೆ ನಮ್ಮ ತಂದೆಯವರು ಬಂದು ಮನೇತನಕ ಬಿಟ್ಟು ಬರುತ್ತಿದ್ದರು.

ಆ ಸಮಯದಲ್ಲೆಲ್ಲಾ ಮಾಸ್ತಿಯವರ ಭೇಟಿ ಆಗುತ್ತಿತ್ತು. ಅವರು ಬಸವನಗುಡಿ ಕ್ಲಬ್‌ಗೆ ಹೋಗುತ್ತಿದ್ದರು. ಪ್ಯಾಂಟ್, ಕೋಟು, ಟೋಪಿ, ಛತ್ರಿ, ಮಫ್ಲರ್, ಇತ್ಯಾದಿ ಉಡಿಗೆಗಳಿಂದ ಅಲಂಕೃತರಾಗಿರುತ್ತಿದ್ದರು. ಕೆಲವು ವೇಳೆ ಚಳಿ, ಮಳೆ, ಬಿಸಿಲು, ಗಾಳಿ ಏನು ಇಲ್ಲದಿದ್ದರೂ ಕೊಡೆ ತೆರೆದು ಹಿಡಿದುಕೊಂಡು ಹೋಗುತ್ತಿದ್ದರು. ಕಾರಣ ಸಂಜೆ ಹೊತ್ತು. ಗಾಂಧೀ ಬಜಾರ್‌ನಲ್ಲಿ ಸಾಲು ಮರ, ಹಕ್ಕಿಗಳು ತುಂಬಿಕೊಂಡಿರುತ್ತದೆ, ಮೈಮೇಲೆ ಗಲೀಜು ಹಾಕುತ್ತವೆ ಅದಕ್ಕೆ ಎನ್ನುತ್ತಿದ್ದರು.

ದೊಡ್ಡವಳಾದ ಮೇಲೂ ಸಹ ನಮ್ಮ ತಂದೆಯವರೊಡನೆ ಮಾಸ್ತಿಯವರ ಭೇಟಿ ಆಗುತ್ತಿತ್ತು. ಅವರ ಮಾತು, ಕಥೆ, ಸ್ನೇಹ, ಪ್ರೀತಿ, ವಿಶ್ವಾಸ ಅದನ್ನೆಲ್ಲಾ ಪುನಃ ಎಲ್ಲಿ ನೋಡುವುದು? ಆ ವೇಳೆಗೆ ಮಾಸ್ತಿಯವರ ಬರಹಗಳನ್ನೆಲ್ಲಾ ಓದಿಕೊಂಡಿದ್ದೆ. ಎಲ್ಲಾ ಪುಸ್ತಕಗಳೂ ನಮ್ಮ ಮನೆಗೆ ಗೌರವ ಪ್ರತಿಗಳು ಬರುತ್ತಿತ್ತು.

೧೯೬೮ರಲ್ಲಿ ನಮ್ಮ ತಂದೆಯವರು ಸ್ವರ್ಗಸ್ಥರಾದಾಗ ಮಾಸ್ತಿಯವರು ಬಂದು ಅವರ ಮಂಚದ ಬಳಿ ಒಂದು ಕುರ್ಚಿ ಹಾಕಿಕೊಂಡು ಕುಳಿತು ಬಹಳ ವೇಳೆ ದುಃಖಿಸಿದರು. ಇಂಥಹ ಸ್ನೇಹಿತನನ್ನು ಇನ್ನೆಲ್ಲಿಂದ ತರುವುದು? ಎಂದು ಹಂಬಲಿಸಿದರು. ಅನಂತರ ನಾನು ಬೇರೆ ಊರಲ್ಲಿ ನೆಲಸಬೇಕಾಗಿ ಬಂತು. ೧೯೭೭ರ ವೇಳೆಗೆ ಪುನಃ ನನ್ನ ವಾಸ ಬೆಂಗಳೂರಿಗೆ ಬಂತು.

ಆ ವೇಳೆಗೆ ಮಕ್ಕಳೆಲ್ಲಾ ದೊಡ್ಡವರಾಗಿದ್ದರು. ಕೈಯಲ್ಲಿ ಬಹಳ ಸಮಯವಿತ್ತು ಅದನ್ನು ಸದುಪಯೋಗಪಡಿಸಿಕೊಳ್ಳಲು ''ಎ. ಆರ್. ಕೃಷ್ಣಶಾಸ್ತ್ರಿ ಸಂಸ್ಕೃತಿ ಪೀಠದ'' ಸ್ಥಾಪನೆ ಆಯಿತು.

ಆ ಸಂದರ್ಭದಲ್ಲಿ ಮಾಸ್ತಿಯವರ ಮನೆಗೆ ಒಂದೆರಡು ಸಲ ಹೋಗಬೇಕಾಗಿ ಬಂತು.

''ನಮಸ್ಕಾರ ತಾತಾ''

''ನಮಸ್ಕಾರ ತಾಯೀ. ಚೆನ್ನಾಗಿದೆಯಾ? ಬಾ ಒಳಗೆ ಕುಳಿತುಕೊ'' ಎಂದು ಪಕ್ಕದಲ್ಲಿ ಕುಳ್ಳಿರಿಸಿಕೊಂಡರು. ಚೆನ್ನಾಗಿ ಮಾತನಾಡಿದರು. ಹೆಣ್ಣು ಮಕ್ಕಳಿಗೆ ''ಶಾಂತಮ್ಮಾ ತಾಯೀ ಬಂದಿದಾಳೆ ಕಾಫಿ ಕೊಡು'' ಎಂದು ಹೇಳಿ ಕಾಫಿ ಕೊಡಿಸುವರು. ಹೊರಡುವಾಗ ರೌಕೆ ಖಣ ತೆಂಗಿನಕಾಯಿ ಎಲೆ ಅಡಿಕೆ ಕೊಡಿಸುವರು. ಅವರ ಸೌಜನ್ಯಕ್ಕೆ ಮೂಕಳಾಗಿದ್ದೆ.

ಇನ್ನೊಂದು ದಿನ ಹೋದಾಗಲೂ ಇದೇ ರೀತಿ ಆದರ, ಆತಿಥ್ಯ, ಸ್ವಾಗತ. ಅಂದು ರೌಕೆ ಖಣ ಇರಲಿಲ್ಲ ಎಂದು ಕಾಣುತ್ತೆ. ಎಲೆ ಅಡಿಕೆ ಜೊತೆ ಹತ್ತುರೂಪಾಯಿಗಳನ್ನಿಟ್ಟು ಕೊಡಿಸಿದರು. ಶಾಂತಮ್ಮಾ ಮನೆಗೆ ಹೋಗುವಾಗ ಇದರಲ್ಲಿ ಒಂದು ರೌಕೆ ಖಣ ಕೊಂಡುಕೊಂಡು ಹೊಲಿಸಿಕೋ ಎಂದರು. ಅದರಂತೆ ಮಾಡಿದೆ.

ಮಾಸ್ತಿಯವರ ಮನೆ ಗವಿಪುರಂನಲ್ಲಿ ಮೂರು ರಸ್ತೆ ದಾಟಿದರೆ ಶ್ರೀ. ಎಂ. ವಿ. ಸೀತಾರಾಮಯ್ಯನವರ ಮನೆ, ಬಿ. ಎಮ್. ಶ್ರೀ. ಪ್ರತಿಷ್ಠಾನ.

ಒಂದು ದಿನ ಬಿ. ಎಂ. ಶ್ರೀ. ಪ್ರತಿಷ್ಠಾನಕ್ಕೆ ಹೋಗಿಬರುತ್ತಿದ್ದಾಗ ಮಾಸ್ತಿಯವರ ಭೇಟಿ ಆಯಿತು.

ಮಕ್ಕಳೆಲ್ಲಾ ಮುತ್ತಿಕೊಂಡವು. ತಮ್ಮ ಜೇಬಿಗೆ ಕೈಹಾಕಿ ನೋಡಿಕೊಂಡರು. ಇವತ್ತು ಚಾಕಲೇಟ್ ಇಲ್ಲ ಎಂದರು. ಮಕ್ಕಳು ಪೆಚ್ಚುಮೋರೆ ಹಾಕಿಕೊಂಡು ಹೋದವು.

ನಾನು ಹಾಗೇ ಅವರ ಜೊತೆ ಮಾತನಾಡಿಕೊಂಡು ರಾಮಕೃಷ್ಣಾಶ್ರಮದವರೆಗೆ ಬಂದೆ. ಅಲ್ಲಿ ನನಗೆ ಎನ್.ಆರ್.ಕಾಲೋನಿಗೆ ಬಸ್ ಸಿಗುತ್ತಿತ್ತು. ಮಾಸ್ತಿಯವರು ಆಶ್ರಮಕ್ಕೆ ಹೋದರು,

ದಾರಿಯಲ್ಲಿ ನಾನು ಹೇಳಿದೆ, ''ತಾತಾ, ನಮ್ಮ ಮನೆಗೆ ಒಮ್ಮೆ ಬನ್ನಿ''

''ಯಾಕೆ ಬರಬೇಕು?''

''ಸುಮ್ಮನೆ, ನೀವು ನಮ್ಮ ತಂದೆಯವರ ಸ್ನೇಹಿತರು. ತಾವು ಬಂದರೆ ನಮ್ಮ ತಂದೆ ಬಂದಂತಾಗುತ್ತದೆ'' ಎಂದೆ.

''ಆಗಲಿ'' ಎಂದಿದ್ದರು.

ಮೂರನೆಯ ದಿನ ರಾತ್ರಿ ೮-೩೦ರ ಸಮಯ, ಎನ್.ಆರ್. ಕಾಲೋನೀ ಮನೆ ಮುಂದೆ ಮೊಮ್ಮಗುವನ್ನು ಕುಳ್ಳಿರಿಸಿಕೊಂಡು ಕುಳಿತಿದ್ದೆ. ತ್ಯಾಗರಾಜ ನಗರದ ಕಡೆಯಿಂದ ಮಾಸ್ತಿಯವರು ಬರುತ್ತಿದ್ದರು. ನಿನ್ನೆ ತಾನೇ ನಮ್ಮ ಮನೆಗೆ ಆಹ್ವಾನಿಸಿದ್ದೆ. ಇವತ್ತು ಅನಾಯಾಸವಾಗಿ ನಮ್ಮ ಮನೆಯ ಮುಂದೆಯೇ ಬರುತ್ತಿದ್ದಾರಲ್ಲಾ ಎಂದು ಸಂತೋಷ ಆಯಿತು. ಅವರಿಗೆ ಅದು ನಮ್ಮ ಮನೆ ಎಂದು ಗೊತ್ತಿರಲ್ಲಿಲ್ಲ. ನಾನೇ ಹೋಗಿ ವಂದಿಸಿ ಬನ್ನಿ ಮನೆಗೆ. ಇದೇ ಮನೆ ಎಂದೆ, ಬಂದರು.

''ಎಲ್ಲಿ ಹೋಗಿದ್ರೀ ಈ ಹೊತ್ತಿನಲ್ಲಿ?''

''ನಮ್ಮ ರಂಗನಾಯಕೀಗೆ ಹುಷಾರಿಲ್ಲ ಎಂದು ತಿಳೀತು ನೋಡಿಕೊಂಡು ಬರೋಣ ಎಂದು ಹೋಗಿದ್ದೆ.''

ಅವರ ಮಗಳು ರಂಗನಾಯಕಿಗೆ ಆ ವೇಳೆಗೆ ಮೊಮ್ಮಕ್ಕಳಾಗುವ ವಯಸ್ಸಾಗಿತ್ತು. ಮಾಸ್ತಿಯವರ ಮನೆ ಗವಿಪುರಂ. ರಂಗನಾಯಕಿಯವರ ಮನೆ ತ್ಯಾಗರಾಜ ನಗರದಲ್ಲಿ. ಒಬ್ಬರೇ ಕಾಲು ನಡಗೆಯಲ್ಲಿ ಹೊರಬಿದ್ದರು. ಅವರ ಪಿತೃವಾತ್ಸಲ್ಯಕ್ಕೆ ನಮಿಸಿದೆ.

ಕೆಲವು ಒಳನೋಟಗಳು

ಮಾವಿನಕೆರೆ ರಂಗನಾಥನ್.

ವಿಶಿಷ್ಟ ರೀತಿಯ ಚೇತೋಹಾರಿ ನಗು, ತನ್ನ ಬಳಿ ಸೆಳೆದಿಡುವ ಅಕ್ಕರೆಯ ನಗು. ಪರಕೀಯತೆ ದೂರಮಾಡುವ ಸರಳ ನಗು ಅದು. ಕಾಲನ ಹೆಜ್ಜೆಯಲ್ಲಿ ಆ ನಗುವಿನ ಚೇತನ ಅದೃಶ್ಯವಾಗಿ ಐದು ವರ್ಷವೇ ಸಂದರೂ ನಾಡಿನ ಉದ್ದಗಲಕ್ಕೂ ಸಹಜ ಪ್ರೇಮದಿಂದ ರಿಂಗಣವಾಡಿದೆ.

ಬಾಳಿಗೊಂದು ನಂಬಿಕೆ ಹುಟ್ಟಿಸಿ ಆತ್ಮಸ್ಥೈರ್ಯ ಸಂವರ್ಧನೆಯೊಂದಿಗೆ ಉಪಯುಕ್ತ ಜೀವನ ನಡೆಸ ಬಯಸುವವರಿಗೆ ಸೌಮ್ಯಮೂರ್ತಿಯಾಗಿ ದಿಕ್ಸೂಚಿಸುತ್ತದೆ. ದೈವವನ್ನು ನಂಬಿಯೂ ಅಂಧಶ್ರದ್ಧೆ ಬೆಳೆಸದಂತೆ, ಪ್ರತಿ ಜೀವದಲ್ಲಿಯೂ ಆತ್ಮಮೂರ್ತಿ ಶಕ್ತಿ ಸೌಂದರ್ಯ ನವಿರು ಗುರುತಿಸಿ ಗೌರವಿಸುವುದನ್ನು ನೆನಪಿಸುತ್ತದೆ. ಈಗ ಆ ಚೇತನದ ಜನ್ಮ ದಿನದ ಎಣಿಕೆಯಿಂದ ಶತಮಾನೋತ್ಸವ. ಅದರ ಅನುಪಮ ಸಾಧನೆಯಿಂದ ಸಾಹಿತ್ಯೋತ್ಸವ.

ಹುಟ್ಟು ದಿನದಂದೇ (6.6.1891-6.6.1986) ಈ ಲೋಕದಿಂದ ನಿರ್ಗಮಿಸಿದ್ದೂ ಒಂದು ಅಪೂರ್ವ ಪ್ರಸಂಗವೆ. ಇರುವಷ್ಟು ಕಾಲ ''ಒಳ್ಳೆಯ ಮಾತನಾಡಿ - ಒಳ್ಳೆ ಕೆಲಸ ಮಾಡಿ - ಉದ್ಧಾರವಾಗಿ'' ಎಂದು ಹೇಳುತ್ತ ನುಡಿದಂತೆ ನಡೆದು. ಮನಸ್ಸಿನಲ್ಲಿ ಒಂದಷ್ಟು ಕೀಳು ಭಾವನೆಗೂ ಅವಕಾಶವಿಲ್ಲದಂತೆ ಶುಚಿಯಾದ ಜೀವನ ನಡೆಸಿ; ಬೇರೆಯವರ ಸಾಧನೆಗಳ ಕಂಡು ಹಿಗ್ಗುತ್ತಾ ಎಲ್ಲ ಕಾರ್ಯವೂ ಲೋಕಕಲ್ಯಾಣ ಕಾರ್ಯವೇ ಎಂದು ನಂಬಿದ ಮಾಸ್ತಿ, ಹೊಸಗನ್ನಡ ಸಾಹಿತ್ಯದ ಆರಂಭ ಕಾಲದಿಂದ ಕೃತಿ ರಚನೆ ಮಾಡುತ್ತ ಬಂದವರು. ಸುಮಾರು ಏಳುದಶಕಗಳಷ್ಟು ಅದನ್ನು ವ್ರತವೆಂಬಂತೆ ನಡೆಸಿದರು. ನೂರಿಪ್ಪತ್ತಕ್ಕೂ ಮಿಕ್ಕು ವೈವಿಧ್ಯಮಯ ಕೃತಿಗಳನ್ನು ರಚಿಸಿದ ಡಾ. ಮಾಸ್ತಿ ಸೃಷ್ಟಿ ಎಷ್ಟು ವಿಪುಲವೊ ಅಷ್ಟೇ ಪ್ರಾಮುಖ್ಯವುಳ್ಳದ್ದು. ಅವರು ನಾಡಿಗೆ ಸಲ್ಲಿಸಿದ ಸೇವೆ ಬಹುಮುಖ್ಯವೂ ಗಣನೀಯವಾದದೂ ಆಗಿದೆ.

ಲೇಖಕರಾಗಿ ಪತ್ರಕರ್ತರಾಗಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ದಕ್ಷ ಅಧಿಕಾರಿಯಾಗಿ ಹೊಸ ಪೀಳಿಗೆಯ ಲೇಖಕರನ್ನು ಪ್ರೋತ್ಸಾಹಿಸಿದವರಾಗಿದ್ದಾರೆ.

'ಜೀವನ' ಸಾಫಲ್ಯ

ಮಾಸ್ತಿ ಅವರ ವಯೋಮಾನದ ಮಜಲಲ್ಲಿ ಕನ್ನಡ ಸಾಹಿತ್ಯದ ಬಹುತೇಕ ಲೇಖಕರು ಅವರಿಗೆ ತರುಣರೆ! 'ನಮ್ಮ ಹುಡುಗ'ರೇ! ಷಷ್ಟ್ಯಬ್ದಿಪೂರ್ತಿ ಮುಗಿಸಿ ಭರದಿಂದ ಮುನ್ನಡೆದ ಮಹಾಶಯರೂ ಮಾಸ್ತಿ ಜಾತಕ ರೀತಿಯಿಂದ 'ಇನ್ನೂ ಯುವಕರೇ', ಹೀಗೆ ಕರೆವ ಅಧಿಕಾರ ಅವರಿಗೆ ಹುಟ್ಟು ಮತ್ತು ವಾಂಛಲ್ಯ ಮನೋಧರ್ಮದಿಂದ ಸಿದ್ಧಿಸಿದ್ದು; ಹೊಸ ತಲೆಮಾರಿನವರಿಂದ ಕನ್ನಡ ಸಾಹಿತ್ಯ ಸಫಲವೂ ವಿಪುಲವೂ ಆಗುತ್ತಿದೆಯಲ್ಲ ಎಂಬ ಅಕಳಂಕ ಹಿಗ್ಗು ಅವರಿಗೆ. ತನ್ನ ಬೆಳಸು ಮೈದುಂಬಿ ನಿಂತಾಗ ರೈತ ಪಡುವ ಸಡಗರದ ರೀತಿಯದು.

ಅವರು ನಡೆಸುತ್ತ ಬಂದ 'ಜೀವನ' ಪತ್ರಿಕೆಯಲ್ಲಿ ಮೊದಲ ಅಚ್ಚು ಕಂಡ ಹಲವಾರು ಬರಹಗಾರರು ಇಂದು ಕನ್ನಡದ ಪ್ರತಿಷ್ಠಿತ ಲೇಖಕರು.

ಮಾಸ್ತಿ ಅವರ ಪ್ರೋತ್ಸಾಹ ಬೆಂಬಲ ಅಂತಃಕರಣ ಬಹಳಷ್ಟು ಲೇಖಕರಿಗಿದ್ದರೂ ಅದನ್ನು ಜಾಹೀರು ಮಾಡುವ ಪ್ರಕೃತಿಯವರಲ್ಲ. ಮಾಡುವುದನ್ನು ಕರ್ತವ್ಯವೆಂಬಂತೆ ನೆರವೇರಿಸಿದರು. ಸಮಯ ಬಂದಾಗ ಯುವಜನರ ಸಾಧನೆ ಸಿದ್ಧಿಗಳನ್ನು ನಿಸ್ಸಂಕೋಚವಾಗಿ ಮುಕ್ತವಾಗಿ ಕೊಂಡಾಡಿ ಹುರಿದುಂಬಿಸುತ್ತಿದ್ದ ಉದಾರ ಮನೋಭಾವದವರು.

ಅಂದು, ಬೇಂದ್ರೆ, ಕುವೆಂಪು ರಾಜರತ್ನಂ ಪುತಿನ ದೇವಡು ಕೈಲಾಸಂ, ಕಾರಂತ ಮುಂತಾದವರ ಕೃತಿಗಳನ್ನು ಪ್ರಕಟಿಸಲು ಸಹಕರಿಸಿದ ಮಾಸ್ತಿ ಅವರ ಸಾಹಿತ್ಯ ಪ್ರಕಟಣಾ ಸೇವೆ, ಕೆಲವು ವರ್ಷಗಳ ಹಿಂದೆ ಪ್ರಕಟವಾದ ಅರವತ್ತರ ದಶಕದ ಕತೆಗಾರರ ''ಹದಿನೈದು ಕಥೆಗಳು''ವರೆಗೆ ವ್ಯಾಪಿಸಿದೆ. ಪುಸ್ತಕ ಪ್ರಕಟಿಸುವುದೊ, ಇಲ್ಲ ಸ್ವಲ್ಪ 'ಕೈಗಾವಲಿಗಿರಲಿ' ಎಂದೋ ಹಣ ನೀಡುತ್ತ ಬಂದವರು. ಜ್ಞಾನಪೀಠ ಪ್ರಶಸ್ತಿಯ ಮೂಲಕ ಅವರಿಗೆ ಸಂದ ಮೊತ್ತದ ದೊಡ್ಡ ಅಂಶವನ್ನು ಪುಸ್ತಕ ಪ್ರಕಾಶನಕ್ಕೆ ಲಭಿಸುವಂತೆ ದತ್ತಿ ನಿರ್ಮಿಸಿ ಇಂದಿಗೂ ಉಪಯುಕ್ತವಾಗಿಸಿದ್ದಾರೆ.

ಮನುಷ್ಯನಿಗೆ ಕಷ್ಟ ದುಃಖ ಬರುವುದು ಸಹಜ, ಆದರೆ ಅದರಿಂದಲೇ ಆ ಮನುಷ್ಯ ಕೆಡುವಂತೆ ಆಗಬಿಡಬಾರದೆಂಬುದು ಅವರ ಅಂಬೋಣ, ಸಂಸ್ಕೃತಿ ಕೂಡ. ಆ ಉತ್ತಮ ಗುಣ ಮುಪ್ಪರಿಯಾಗಿ ಜೀವಮಾನದುದ್ದಕ್ಕೂ ಹುರಿಗಟ್ಟಿತ್ತು ಮಮತೆ ವಾತ್ಸಲ್ಯ ಜೀವನ ಮೌಲ್ಯಕ್ಕೆ ನಿರಂತರ ಸ್ಪಂದಿಸಿ ಮಾರ್ದನಿಸುತ್ತಿದ್ದ ಅವರ ಬಳಿ ನಾನು ಕಂಡ ಸಂದರ್ಭಗಳಲ್ಲಿ ಮೂರು ಎಳೆ ತಕ್ಷಣ ನೆನಪಿಗೆ ಬರುತ್ತದೆ.

ಕನ್ನಡ ಸಾಹಿತ್ಯದ 'ಕಾದಂಬರಿ ಸಾರ್ವಭೌಮ' ಎಂದು ಜನರಿಂದ ಅಂಕಿತರಾದ ಸ್ಟಾರ್ ವ್ಯಾಲ್ಯೂ ಗಳಿಸಿದ್ದ ಅ.ನ. ಕೃಷ್ಣರಾಯರು ಮಾಸ್ತಿ ಅವರನ್ನು 'ಅಣ್ಣ ಮಾಸ್ತಿ' ಎಂದು ಸಂಬೋಧಿಸುತ್ತಿದ್ದರು. ಮಾಸ್ತಿ ರಾಯರನ್ನು 'ನಮ್ಮ ಕೃಷ್ಣರಾಯ' ಎಂದೆನ್ನುತ್ತಿದ್ದರು. ಇಬ್ಬರಲ್ಲಿಯೂ ಪರಸ್ಪರರ ಸಾಧನೆ ಬಗ್ಗೆ ಅಭಿಮಾನ ಮಮತೆ ಸಹೃದಯತೆ.

ನಾಡಿನ ಸಾಹಿತ್ಯದಲ್ಲಿ ಪ್ರಗತಿಶೀಲ ಚಳವಳಿ ಮೈದೋರಿ ಅದರ ಮುಂಚೂಣಿಯಲ್ಲಿ ಅನಕೃ. ಸಾಹಿತ್ಯದಲ್ಲಿ ಕಾಮ ಪ್ರಚೋದನೆ ಸಲ್ಲ ಅದರಿಂದ ನಮ್ಮ ಜನ ಸಮಾಜದ ಅಧಃಪತನ ನಿಶ್ಚಿತವೆಂಬ ಕಳವಳ ಮಾಸ್ತಿಗೆ. ಇವರ ನಿಲುವು ಗತ ಇತಿಹಾಸದ್ದು ಎಂಬುದರೊಂದಿಗೆ ಸೌಜನ್ಯ ಗಾಂಭೀರ್ಯದ ಎಲ್ಲೆ ಮೀರಿದ ಟೀಕೆಗಳನ್ನು ರಾಯರ ಸಮೀಪವರ್ತಿಗಳಲ್ಲಿ ಒಂದಿಬ್ಬರು ಮಾಸ್ತಿ ವಿಚಾರದಲ್ಲಿ ಬಳಸಿದ್ದರು. ''ಅಭಿಮಾನ ಇಟ್ಕೊಂಡೆ ಕೃಷ್ಣರಾಯ ಬೈತಿದ್ದ, ಏನ್ ಮಾಡೋದು?'' ಎಂದು ಕಿಲಕಿಲ ನಗುತ್ತ ಇತ್ತೀಚೆಗೂ (ದೂರದರ್ಶನ ಸಂದರ್ಶನ ಯು.ಆರ್. ಅನಂತಮೂರ್ತಿ) ಮಾಸ್ತಿ ಹೇಳಿದ್ದರು. ಅಣ್ಣ ಮಾಸ್ತಿಯನ್ನು ಒಮ್ಮೆ ಕಂಡು ಆಗಿರುವ ಕಿರಿಕಿರಿಯನ್ನು ಪರಿಹರಿಸುವ ಅಪೇಕ್ಷೆಯಲ್ಲಿ ಭೇಟಿಯ ಕಾರ್ಯಕ್ರಮ ಸಿದ್ಧವಾಗುವುದು. ಆ ಸಮಯ ಬಂದಾಗ ಏನಾದರೂ ಕಾರಣದಿಂದ ರದ್ದಾಗುವುದು ನಡೆದಿತ್ತು. ಅಪರೂಪಕ್ಕೆ ಸಮಾರಂಭವೊಂದರಲ್ಲಿ ಮುಖಾಮುಖಿಯಾದ ದೈತ್ಯರಿಬ್ಬರೂ ಮನಸ್ಸು ಕೆಡಿಸಿದ ಸಂಗತಿಯ ಬಗ್ಗೆ ಪ್ರಸ್ತಾಪಿಸಿ ಸೆಣಸುವರೊ ಎಂಬ ಆತಂಕ ನನಗೆ. ಅಸಲು ಈ ವಿಷಯದ ಪ್ರಸ್ತಾಪವೆ ಇಲ್ಲ! ಇಬ್ಬರೂ ಸಮಾಗಮದಿಂದ ಉತ್ಸಾಹದ ಚಿಲುಮೆಗಳು! ಅದೇ ಮಮತೆ ವಿಶ್ವಾಸ!

ಕಾಲಗರ್ಭ ಕಹಿಯನ್ನು ನುಂಗಿ ನಂಜುಂಡನಾಗುವ ಪರಿ ಹೀಗೂ ಇರಲೂ ಸಾಧ್ಯವೆಂಬ ದಾರಿ ಕಂಡೆ.

ಅನಕೃ ನಿಧನದ ವಾರ್ತೆ ತಿಳಿದಾಗ ಉದ್ಗಾರ; ''ಅಯ್ಯೋ ಪಾಪ, ಸಣ್ಣ ಹುಡುಗ ಹೋಗಿಬಿಟ್ಟನೆ.'' ರಾಯರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಬೀಳ್ಕೊಡುಗೆಗೆ ಮನೆ ಮುಂದೆ ಸಹಸ್ರಾರು ಮಂದಿ. ಆ ಗುಂಪಿನಲ್ಲಿ ಮಾಸ್ತಿ ನುಸುಳಿ ಮೆಟ್ಟಲಲ್ಲಿ ಬಂದು ನಿಂತಿದ್ದಾರೆ. ಆ ವೇಳೆಗೆ ರಾಯರ ದೇಹವನ್ನು ವಾಹನದ ಬಳಿಗೆ ಕೊಂಡೊಯ್ಯಲು ಅಭಿಮಾನಿಗಳು ಎತ್ತಿ ತಂದರು. ಚಿಟಿ ಚಿಟಿ ಮಳೆ, ತಕ್ಷಣ ಮಾಸ್ತಿ ತಮ್ಮ ತೋಳಿನಲ್ಲಿ ತೂಗಿದ್ದ ಕೊಡೆಯನ್ನು ಬಿಚ್ಚಿ ರಾಯರ ಮುಖಕ್ಕೆ ಅಡ್ಡಲಾಗಿ ಹಿಡಿದರು. ವಾಹಕರು ಮುಂದೆ ನಡೆದರು. ಆ ಕೂಟದ ಓಲಾಟಕ್ಕೆ ಹೆಜ್ಜೆ ಹಾಕಲು ಸಾಧ್ಯವಾಗದೆ ಮಾಸ್ತಿ 'ಇದನ್ನು ಹಿಡಿದು ಹೋಗಿ' ಎಂದು ಛತ್ರಿಯನ್ನು ಮತ್ತೊಬ್ಬರಿಗೆ ಹಸ್ತಾಂತರಿಸಿದರು. ವಾಹನ ಹೊರಡುವವರೆಗೂ ನಿಂತು ನಿಧಾನವಾಗಿ ಮನೆ ದಾರಿ ಹಿಡಿದರು.

ರಾಯರ ಕ್ರಿಯೆಗಳು ಮುಗಿದು ಹೊರಬರುವಾಗ ಅನಾಥವಾಗಿ ಬಿದ್ದ ಕೊಡೆಯನ್ನು ಒಬ್ಬರು ಎತ್ತಿ ಆಡಿಸುತ್ತ 'ಯಾರದಿದು?' ಎಂದು ಪ್ರಸಾರ ಧ್ವನಿಯಲ್ಲಿ ಬಿತ್ತರಿಸುತ್ತಿದ್ದರು. ಸಂಗತಿ ನನಗೆ ತಿಳಿದಿದ್ದೂ ಆವರಿಸಿದ ಬೇಗುದಿ, ಅದನ್ನು ಸಾಗಿಸಬೇಕಾದ ಮುಜುಗರದಿಂದ ಉದಾಸೀನವಾಗಿ ತೆಪ್ಪಗೆ ನಡೆದೆ.

ಕೆಲ ದಿನದ ನಂತರ ಮಾಸ್ತಿ ಅವರ ಬಳಿ ಛತ್ರಿಯ ಪ್ರಕರಣವನ್ನು ಸೂಕ್ಷ್ಮವಾಗಿ ಹೇಳಿದೆ. ''ಒಳ್ಳೆಯದಾಯಿತು. ಅಗತ್ಯವಾದರೆ ಬೇಕಷ್ಟು ಕೊಡೆ ತಗೋಬಹುದು. ಆದರೆ ಸಮೃದ್ಧವಾಗಿ ಬರೀತಿದ್ದ ಕೃಷ್ಣರಾಯನನ್ನ ಮತ್ತೆ ನಮ್ಮ ನಾಡು ಪಡೆಯುವುದೆ. ತರಲಾಗುವುದೇ?''

1972ರಲ್ಲಿ ನಾಡು ನುಡಿಗೆ ಅನನ್ಯ ಸೇವೆ ಸಲ್ಲಿಸಿದ ಮಾಸ್ತಿ ಅವರಿಗೆ ನಗರದ ಪುರಭವನದಲ್ಲಿ ಸನ್ಮಾನ. ಸಂಭವನಾ ಗ್ರಂಥ 'ಶ್ರೀನಿವಾಸ' ಅರ್ಪಿಸುವ ಸಮಾರಂಭ. ಸಾಹಿತ್ಯ ತಪಸ್ವಿಗಳಿಂದ ಮಾಸ್ತಿ ಸಾಹಿತ್ಯಾರಾಧನೆ. ಜನ ಸಾಗರದಿಂದ ಭವನ ತುಂಬಿ ತುಳುಕಿದ ದಿನವದು. ಸಾಲುಗಟ್ಟಿ 'ಶ್ರೀನಿವಾಸ'ನನ್ನು ಕೊಂಡು ದಾಖಲೆ ಸ್ಥಾಪಿಸಿದ ಸಹೃದಯ ಅಭಿಮಾನಿಗಳು! ಅದನ್ನು ಕಂಡವರಿಗೆ ಚಿತ್ತಬಿತ್ತಿಯಲ್ಲಿ ಇನ್ನೂ ಮಾಸದ ನೆನಪು.

ಉತ್ಸವ ಮುಗಿದು ಬಿಡುವಾಗಿ ವಾರ ಕಳೆದು ಮಾಸ್ತಿ ಮನೆಗೆ ಹೋದೆ. ಅವರು ಕೂರುತ್ತಿದ್ದ ಕುರ್ಚಿ ಪಕ್ಕದ ಟೀಪಾಯ್ ಮೇಲೆ 'ಶ್ರೀನಿವಾಸ'. ಆಗಾಗ ಅದನ್ನು ಪರಿಶೀಲಿಸುವರೆಂದು ಅವರ ಮಗಳು ಶ್ರೀಮತಿ ಇಂದಿರಮ್ಮ ಹೇಳಿದಾಗ ನನಗೆ ತೃಪ್ತಿ ಸಮಾಧಾನ ತಂದಿತು. ಒಳಗಿದ್ದ ಮಾಸ್ತಿ ಬಂದು ಕುಳಿತು. ''ಬಹಳ ಶ್ರಮ ಪಟ್ಟಿದ್ದೀಯಪ್ಪಾ, ಪುಸ್ತಕ ಅಚ್ಚುಕಟ್ಟಾಗಿದೆ. ತರುಣ, ಇದಕ್ಕೆಲ್ಲ ಕಾಸು ಹೇಗೆ ಜೊತೆ ಮಾಡಿದೆ ವ್ಯಯಿಸಿದೆ, ಅರ್ಥವಾಗುತ್ತಿಲ್ಲ. ಮಾಡಿದ್ದು ಖರ್ಚಾಗದಿದ್ದರೆ ನಿನ್ನ ಗತಿ?'' ಹೆಗಲ ಮೇಲೆ ಕೈಯಾಡಿಸಿ ತಟ್ಟಿ ಆಳವಾದ ಕಳಕಳಿಯಿಂದ ಕೇಳಿದರು.

''ಯೋಚನೆ ಬೇಡ ಸಾರ್, ಫಂಕ್ಷನ್ ದಿನ ಇನ್ನೂರರಷ್ಟು ಪ್ರತಿ ಹೋದುವು. ಆರ್ಡರ್‌ಗಳು ಬರ್ತಾ ಇವೆ. ಪುಸ್ತಕ ಬೈಂಡಾಗಬೇಕು ಅಷ್ಟೇ.''

''ಹೌದೆ! ಭೇಷ್''.

ಕೆಲವು ನಿಮಿಷಗಳ ನಂತರ ಸಣ್ಣ ಧ್ವನಿಯಿಂದ ಮಾತು ಮುಂದುವರೆಯಿತು:

''ನೀನೇನೋ ಪ್ರೀತಿಯಿಂದ ಬೆಳ್ಳಿ ಹರಿವಾಣದಲ್ಲಿ ಹಣ್ಣು ತುಂಬಿ ಕೊಟ್ಟೆ, ಶಾಲು

ಹೊದಿಸಿದೆ. ಗ್ರಂಥ ಮಾಡಿದೆ. ತುಂಬಾ ಸಂತೋಷವಾಯ್ತು . . . ಜನ ಆದರದಿಂದ ಕಾಪಾಡಿದರು. . . ನೀನು ಹುಡುಗ, ಬೆಳೆದು ಬಾಳಬೇಕಾದವನು . . . . ನಂಗೆ ಸರ್ಕಾರ ಪೆನ್‌ಶನ್ ಕೊಡುತ್ತೆ . . . ನೆಮ್ಮದಿಯಾಗಿದೀನಿ . . . ತೃಪ್ತಿಯಾಗಿದೀನಿ . . . ಮಕ್ಕಳು ಪ್ರೀತಿಯಿಂದ ನೋಡ್ಕೋತಾರೆ . . . ಇನ್ನೇನು ಬೇಕು ನಂಗೆ . . . . ? ಈ ತಟ್ಟೆ ಶಾಲು ಎಲ್ಲ ಮುದುಕನಿಗೆ ಯಾಕೆ. ನೀನೆ ತಗೊಂಡು ಹೋಗು . . . . ಅದು ನಿನ್ನ ಹತ್ತಿರ ಇರೋದೆ ವಾಸಿ . . . ಹಣ್ಣು ತಿಂದ್ನಲ್ಲ . . . . ಪುಸ್ತಕ ಇಟ್ಕೊಂಡ್ನಲ್ಲ . . . ಸಾಕು ಅನಿಸುತ್ತೆ . . . ''

ಅವರ ಮಾತಿನಿಂದ ವಿಪರೀತ ಮುಖಭಂಗವಾಯಿತು. ಒಳಗೆ ಪುಟಿದೇಳುತ್ತಿದ್ದ ಸಂಕಟ, ಕಣ್ಣಲ್ಲಿ ಮೆಲ್ಲಗೆ ನೀರು ತುಂಬುತ್ತಿತ್ತು ತಕ್ಷಣ ಮೇಲೆದ್ದೆ, ಹೊರಟೆ.

''ಮಾವಿನಕೆರೆ . . . . ಅಯ್ಯಾ ರಂಗನಾಥ ನಿಂತ್ಕೊ. . .ಬಾ ಇಲ್ಲಿ. . .''

ಕಂಗೆಟ್ಟಿದ್ದರೂ ಆ ಕರೆಗೆ ಹೆಜ್ಜೆಗಳು ತಡೆದವು. ಮಾಸ್ತಿ ಮಕ್ಕಳು ಇಂದಿರಮ್ಮ, ಅರವಿಂದಮ್ಮ ಏನು ಮಾಡಬೇಕೆಂದು ತೋಚದೆ ಹಾಗೇ ನಿಂತಿದ್ದಾರೆ.

ಹಿಂದಿರುಗಿದೆ.

ರಟ್ಟೆ ಎಳೆದು ಪಕ್ಕದಲ್ಲಿ ಕೂಡಿಸಿಕೊಂಡರು.

''ಬೇಸರ ಬಂತೆ? ನಾ ಹೇಳಿದ್ದನ್ನು ಬೇರೆ ರೀತಿ ಗ್ರಹಿಸಿದೆ ಅನ್ಸುತ್ತೆ, ಉದುರಿ ಹೋಗೋ ಹಣ್ಣೆಲೆಗೆ ಇದೆಲ್ಲ ಯಾಕೆ ಅಂತ ತೋಚ್ತು. . . ಹೇಳಿದೆ. ನೀನು ಗಟ್ಟಿಗ ಅಂದ್ಕೊಂಡಿದ್ದೆ. . .ಅತ್ತೇಬಿಟ್ಟೆಯಲ್ಲೊ ಹೈದ (ನನ್ನ ಭುಜವನ್ನು ಅಳ್ಳಾಡಿಸಿ) ಹೋಗಲಿ ಬಿಡು . . . .ಇದಕ್ಕೆಲ್ಲ ಎಷ್ಟು ಖರ್ಚು ಮಾಡಿದೆ. ಅದನ್ನಾದ್ರೂ ಹೇಳು. ಅದರ ಮೊತ್ತ ಕೂಡಿಸಿ ಒಂದು ನಿಧಿ ಮಾಡೋಣ. ಹಿಂಗೆ ಬಂದದ್ದೆಲ್ಲ ಈ ನಿಧಿಗೆ ಸೇರಿಸೋಣ. ಕಷ್ಟದಲ್ಲಿರೊ ಲೇಖಕರಿಗೆ ಕಲಾವಿದರಿಗೆ ಏನಾದರೂ ನೆರವಿಗೆ ಆಗುತ್ತೊ ಯತ್ನಿಸೋಣ. . .ಏನಂತೀ? ನನ್ನ ಮಾತು ಸರಿಯಾಗಿ ತಿಳೀತೆ?''

ಆ ವೇಳೆಗೆ ಏರಿದ ಉದ್ವೇಗ ಇಳಿದು ಮಾಸ್ತಿ ಒಳದೃಷ್ಟಿ ನಿಚ್ಚಳವಾಗಿ ಕಂಡಿತು. ಕೆಲವು ತಿಂಗಳ ನಂತರ ಆಕಾರ ಪಡೆದುದು ''ಲೇಖಕರ ಸಾಹ್ಯನಿಧಿ.''

ನಿಧಿ ಆಗಿನಿಂದಲೂ ತೊಂದರೆಯಲ್ಲಿರುವ ಲೇಖಕ. . .ಕಲಾವಿದರಲ್ಲಿ ಕೆಲವರಿಗಾದರೂ ಅಳಿಲುಸೇವೆ ಸಲ್ಲಿಸುತ್ತ ಬಂದಿದೆ. ಪಡೆದವರ ಹೆಸರನ್ನು ಯಾವ ಕಾರಣಕ್ಕೂ ಬಹಿರಂಗಪಡಿಸಬಾರದೆಂಬ ಮಾಸ್ತಿ ಅಪೇಕ್ಷೆ ನಡೆಸಲಾಗುತ್ತಿದೆ.

'ಶ್ರೀನಿವಾಸ' ಗಳಿಸಿದ ಲಾಭ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಉತ್ತಮ ವಿಮರ್ಶೆ, ಸಂಶೋಧನಾ ಪ್ರಕಟಣೆಗಾಗಿ ದೊರಕುವಂತೆ ೧೯೭೭ರಲ್ಲಿ ''ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ದತ್ತಿ ಪ್ರಕಟಣೆ''ಯಾಗಿ ಸೇರಿತು.

೧೯೮೩ರಲ್ಲಿ ಭಾರತೀಯ ಜ್ಞಾನಪೀಠ ಮಾಸ್ತಿ ಅವರು ಭಾರತೀಯ ಸಾಹಿತ್ಯಕ್ಕೆ ಸಲ್ಲಿಸಿದ ಅಸಾಧಾರಣ ಕೊಡುಗೆಯನ್ನು ಪರಿಗಣಿಸಿ, ಈ ಸಂಬಂಧ ''ಚಿಕವೀರ ರಾಜೇಂದ್ರ'' ಕಾದಂಬರಿ ಹೆಸರಿಸಿ ಪ್ರಶಸ್ತಿ ಪ್ರಕಟಿಸಿತು. ಕನ್ನಡ ಸಾಹಿತ್ಯಕ್ಕೆ ನಾಲ್ಕನೆ ಬಾರಿ ಸಂದಿತಲ್ಲ. - ಮಾಸ್ತಿ ಅವರಿಗೆ ಬಂತಲ್ಲ ಎಂದು ನಾಡಿನಲ್ಲಿ ಬಹಳ ಜನ ಹರ್ಷಿಸಿದರು.

ಆ ವಾರ್ತೆ ಪ್ರಕಟಗೊಂಡ ಕೆಲ ದಿನದಲ್ಲಿ 'ಚಿಕವೀರ ರಾಜೇಂದ್ರ'ನ ಬೆನ್ನಿಗೆ ಅಂಟಿಬಂದ ಮಹಾವ್ಯಾಧಿ ಮತ್ತೆ ಉಲ್ಬಣವಾಯಿತು. ''ಅವರಿಗೆ ಪ್ರಶಸ್ತಿ ಬೇಕಾದರೆ ನೀಡಲಿ, ಆದರೆ ಆ ಕೃತಿಗಲ್ಲ''. ಎಂದು ಕೆಲವರು ಪ್ರತಿಭಟಿಸಿದರು. ಪೀಠಕ್ಕೆ ಬರೆದರು, ಟೆಲಿಗ್ರಾಂಗಳನ್ನು ರವಾನಿಸಿದರು. ಈ ತಡೆ ಯತ್ನವನ್ನು ಮತ್ತೆ ಕೆಲವರು ತೀವ್ರವಾಗಿ

ಖಂಡಿಸಿದರು. ವಾದ ವಿವಾದಗಳು ಪ್ರಖರವಾಯಿತು ಪತ್ರಿಕೆಗಳು ಸುದ್ದಿ ಮಾಡಿದುವು.

ಈ ತಿಕ್ಕಾಟ ಉಪಶಮನಗೊಳಿಸುವಂತೆ ಉಪಾಯದಿಂದ ಜ್ಞಾನಪೀಠವು, ''ಇದು ಮಾಸ್ತಿ ಅವರ ಒಟ್ಟು ಸಾಹಿತ್ಯಕ್ಕೆ ಸಂದ ಪ್ರಶಸ್ತಿ'' ಎಂದು ಮಾತನ್ನು ರೂಪಾಂತರಗೊಳಿಸಿ ನುಡಿಯಲಿದೆ ಎಂಬ ಸಮಾಚಾರ ಮಾಸ್ತಿ ಅವರಿಗೆ ಮುಟ್ಟಿತೆನ್ನಿಸುತ್ತದೆ. ಅವರು ಹಾಗೆ ಮಾಡಿದರೆ! ''ಪ್ರಶಸ್ತಿ ನಾನೊಲ್ಲೆ'' ಎಂದು ತಕ್ಷಣ ಪ್ರತಿಕ್ರಿಯಿಸಿದರು. ಹಾ.ಮಾ. ನಾಯಕರಿಗೆ (ಆಗ ಪ್ರಶಸ್ತಿ ಆಯ್ಕೆ ಮಂಡಳಿಯ ಸದಸ್ಯರು) ಈ ಅರ್ಥದ ತಾರುಹೋಯಿತು. ಗುಲ್ಬರ್ಗಾ ವಿಶ್ವವಿದ್ಯಾಲಯ ಕುಲಪತಿಗಳಾಗಿದ್ದ ಅವರು ''ವಾರಾಂತ್ಯದಲ್ಲಿ ನಿಮ್ಮನ್ನು ಬಂದು ಕಾಣುವೆ. ಆವರೆಗೆ ದಯಮಾಡಿ ಸುಮ್ಮನಿರಿ'' ಎಂದರು- ಎಲ್.ಎಸ್. ಶೇಷಗಿರಿರಾವ್ ಮತ್ತು ಬಹಳಷ್ಟು ಲೇಖಕರು ಬಿಗಡಾಯಿಸಿದ ವಾತಾವರಣ ತಿಳಿಗೊಳಿಸಲು ಯತ್ನಿಸಿದರು.

ಮಾಸ್ತಿ ಅಂದರು:

''ಯಾರನ್ನಾದರೂ ಪ್ರಶಸ್ತಿ ಕೊಡಿರಪ್ಪ ಎಂದು ಕೇಳಿದೆನೆ? ನೀನು ಮಾಡಿದ ಕೆಲಸ ಜನಕ್ಕೆ ಮೆಚ್ಚುಗೆ ಆಯಿತು, ಬಹುಮಾನಿಸುತ್ತೇವೆ ಅಂದರು ಒಳ್ಳೆಯದೆಂದು ಒಪ್ಪಿದೆ. ಈಗ ಯಾರೊ ಏನೊ ಅಂದರೆ ಅದನ್ನು ಕೇಳಿ, ನುಡಿದದ್ದನ್ನು ಬದಲಿಸಿ ಹೇಳುತ್ತೇವೆ ಎಂದರೆ ಹೇಗೆ? ಆಗದು. ಆಡುವ ಪ್ರತಿಮಾತಿಗೂ ತೂಕವಿದೆ. ಅರ್ಥವಿದೆ. ''ಚಿಕ್ಕವೀರ ರಾಜೇಂದ್ರ'' ಕಾದಂಬರಿಗೆ ಪ್ರಶಸ್ತಿ ಎಂದು ಸಾರಿದಾರೆ. ಅದು ದಿಟ, ಪ್ರಶಸ್ತಿಗಾಗಿ ಬೇರೆ ಮಾತನ್ನು ಕೇಳಬೇಕಿಲ್ಲ.''

ಇಂಥದೇ ಒಂದು ಸಂದರ್ಭ ಹಿಂದೆ ಎದುರಾಗಿ ಆತ್ಮಗೌರವ ಮುಖ್ಯವೆನ್ನಿಸಿದ ಮಾಸ್ತಿ ೧೯೪೩ರಲ್ಲಿ ಇದ್ದ ಅಧಿಕಾರ ಪದವಿ ಕೊಡವಿದ್ದರು.

ಈ ತಕರಾರು ಜಿಜ್ಞಾಸೆಗಳು ಸುಮಾರು ದಿನ ನಡೆಯಿತು. ತಾತಪ್ಪ ತಳೆದ ನಿಲುವು ಗಟ್ಟಿತನ ಪಟ್ಟು ಉತ್ತರ ಸಡಿಲಗೊಳ್ಳಲಿಲ್ಲ. ನಂಬಿದ ಜೀವನ ಮೌಲ್ಯದ ಕಟ್ಟುಪಾಡಿಗೆ ಒಳಗಾದ ಧೀಮಂತಿಕೆ ಮೆರೆಯಿತು.

ಆಗ ಹಾ. ಮಾ. ನಾಯಕರು ನಿರ್ವಹಿಸಿದ ಸೇವೆ ಗಣನೀಯ, ೧೩ ಏಪ್ರಿಲ್ ೧೯೮೫ರಂದು ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ 'ಶ್ರೀನಿವಾಸ' ಜ್ಞಾನಪೀಠ ಪ್ರಶಸ್ತಿ ಪತ್ರ ಸ್ವೀಕರಿಸಿದರು. ಪ್ರಶಸ್ತಿ ಪ್ರಧಾನ ಪತ್ರದಲ್ಲಿ ''ಚಿಕವೀರ ರಾಜೇಂದ್ರ'' ಕಾದಂಬರಿಯನ್ನು ವಿಶೇಷವಾಗಿ ಉಲ್ಲೇಖಿಸಲಾಯಿತು.

ಮಾಸ್ತಿ ಹಾಡಿದರು!

ದಿನಾಂಕ ೧೪-೧೧-೧೯೬೧ರಂದು ಕೋಲಾರದಲ್ಲಿ ಅಖಿಲ ಕರ್ನಾಟಕ ಮಕ್ಕಳ ಕೂಟದ ೨೧ನೆಯ ಅಧಿವೇಶನ. ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಆರಂಭೋತ್ಸವ ನೆರವೇರಿಸಿದರು.

''ಪಂಡಿತ ನೆಹರು ಹುಟ್ಟಿದ ದಿನ- ಹಬ್ಬದ ದಿನ ಇಂದು. ತಾವರೆ ಹೂವಿನಂತೆ ಉಲ್ಲಸಿತ ಸುಂದರವದನದ ಮಕ್ಕಳೊಡನೆ ಇರುವ ಅವಕಾಶ ದೊರೆತುದು ನನ್ನ ಸುಯೋಗ''

ಎಂದಾರಂಭಿಸಿದರು ಮಾಸ್ತಿ.

ಕುಮಾರಿ ಜಯಶ್ರೀ ಭಟ್ಟ ಸ್ವಾಗತವನ್ನು ನೀಡುತ್ತಾ,

''ಮಾಸ್ತಿ ದೊಡ್ಡಪ್ಪ ತಮ್ಮ ಚಿಕ್ಕವಯಸ್ಸಿನಲ್ಲಿ ಚೆನ್ನಾಗಿ ಹಾಡುತ್ತಿದ್ದರೆಂದು ಕೇಳಿದ್ದೇನೆ. ಅವರು ಈಗ ಒಂದು ಹಾಡನ್ನು ಹಾಡಿ, ಮಕ್ಕಳನ್ನೆಲ್ಲ ಹರಸಬೇಕು''

ಎಂದು ಬಿನ್ನಹ ಮಾಡಿಕೊಂಡಳು!

ಶ್ರೀ ಮಾಸ್ತಿಯವರು ನಗುತ್ತ, ನಗುತ್ತ,

''ನಾನು ಈ ಹಾಡನ್ನು ನಮ್ಮ ತಾಯಿಂದ ಕೇಳಿ ಕಲಿತೆ''

ಎಂದು ಈ ಹಾಡನ್ನು ಹಾಡಿದರು. ಅದು ಪುರಂದರದಾಸರ ಹಾಡು. ಹಾಡುತ್ತ, ಹಾಡುತ್ತ ಅವರಿಗೆ ಒಂದು ಚರಣ ಮರೆತುಹೋಯಿತು. ಕೂಡಲೆ ಸಭೆಯಲ್ಲಿ ಕೂತಿದ್ದ ಮಹಿಳೆಯೊಬ್ಬರು ಆ ಚರಣದ ನೆನಪು ಮಾಡಿಕೊಟ್ಟರು!

''ಭಾಗ್ಯದ ಲಕ್ಷ್ಮೀ ಬಾರಮ್ಮಾ
ನಮ್ಮಮ್ಮ ನೀ ಸೌ
ಭಾಗ್ಯದ ಲಕ್ಷ್ಮೀ ಬಾರಮ್ಮಾ । ಪ ।

ಹೆಜ್ಜೆಯ ಮೇಲೆ ಹೆಜ್ಜೆಯ ಇಕ್ಕುತ
ಗೆಜ್ಜೆ ಕಾಲ್ಗಳ ಧ್ವನಿಯ ಮಾಡುತ
ಸಜ್ಜನ ಸಾಧು ಪೂಜೆಯ ವೇಳೆಗೆ
ಮಜ್ಜಿಗೆಯೊಳಗಿನ ಬೆಣ್ಣೆಯಂತೆ ॥

ಕನಕ ವೃಷ್ಟಿಯ ಕರೆಯುತ ಬಾರೆ

ದಿನಕರಕೋಟಿ ತೇಜದಿ ಹೊಳೆವ
ಜನಕರಾಯನ ಕುಮಾರಿ ಬೇಗ ||
ಅತ್ತಿತ್ತಗಲದೆ ಭಕ್ತರ ಮನೆಯಲಿ
ನಿತ್ಯಮಹೋತ್ಸವ ! ನಿತ್ಯಸುಮಂಗಳ !
ಸತ್ಯವ ತೋರುವ ಸಾಧುಸಜ್ಜನರ
ಚಿತ್ತದಿ ಹೊಳೆವ ಪುತ್ಥಳಿ ಬೊಂಬೆ ||

ಸಂಖ್ಯೆ ಇಲ್ಲದ ಭಾಗ್ಯವ ಕೊಟ್ಟು
ಕಂಕಣಕೈಯ ತಿರುವುತ ಬಾರೆ
ಕುಂಕುಮ ಮಾಹಿತೆ ಪಂಕಜ ಲೋಚನೆ
ವೆಂಕಟರಮಣನ ಬಿಂಕದ ರಾಣಿ ||

ಸಕ್ಕರೆ ತುಪ್ಪ ಕಾಲಿವೆ ಹರಿಸಿ
ಶುಕ್ರವಾರದ ಪೂಜೆಯ ವೇಳೆಗೆ
ಅಕ್ಕರವುಳ್ಳ ಅಳಗಿರಿ ರಂಗನ
ಚೊಕ್ಕಪುರಂದರ ವಿಠಲನ ರಾಣಿ ||

ಅಭಿನಂದನೆ

ಕನ್ನಡ ನಾಡಿನ ಹಿರಿಯ ಸಾಹಿತಿಗಳೂ, ಸಣ್ಣ ಕಥೆಯ ಜನಕರೂ, ನವೋದಯದ ಆಚಾರ್ಯರಲ್ಲಿ ಒಬ್ಬರೂ ಆದ ಸನ್ಮಾನ್ಯ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರಿಗೆ:

ಕಳೆದ *ಅರ್ಧ ಶತಮಾನದಲ್ಲಿ ತಾವು ಕನ್ನಡ ನಾಡಿಗೂ ನುಡಿಗೂ ಸಲ್ಲಿಸಿದ ಮಹತ್ತರವಾದ ಸೇವೆಯನ್ನು ಸ್ಮರಿಸಿಕೊಂಡು, ನಮ್ಮ ಪ್ರೀತಿಯನ್ನೂ ಗೌರವವನ್ನೂ ವ್ಯಕ್ತಪಡಿಸುವ ಸಲುವಾಗಿ ಏರ್ಪಡಿಸಿರುವ ಈ ಸಮಾರಂಭಕ್ಕೆ ನಮ್ಮ ಕರೆಯನ್ನು ಒಪ್ಪಿಕೊಂಡು ತಾವು ಇಲ್ಲಿಗೆ ದಯಮಾಡಿಸಿರುವ ಉಪಕಾರಕ್ಕಾಗಿ ನಾವು ತಮಗೆ ಕೃತಜ್ಞರಾಗಿದ್ದೇವೆ. ಮೈಸೂರು, ಕನ್ನಡ ನಾಡಿನ ಸಾಂಸ್ಕೃತಿಕ ರಾಜಧಾನಿಯಾಗಿದ್ದು, ರಸಿಕರಾದ ಇಲ್ಲಿನ ನಾಗರಿಕರು ಕಲೆ, ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಬಗೆಗೆ ವಿಶೇಷ ಅಭಿಮಾನ ತಳೆದವರಾಗಿದ್ದು, ಆ ಕ್ಷೇತ್ರಗಳಿಗೆ ಬೆಲೆ ಬಣ್ಣಗಳನ್ನು ತಂದ ಚತುರರನ್ನು ಗೌರವಿಸುವುದು ಅತ್ಯಂತ ಸಂತೋಷದ, ಗೌರವದ ಕಾರ್ಯವೆಂದು ಭಾವಿಸುತ್ತಾರೆ. ಆದುದರಿಂದಲೇ ಈ ದಿನ ತಮ್ಮನ್ನು ಸನ್ಮಾನಿಸುವ ಈ ಅವಕಾಶ ದೊರೆತಿರುವುದು ನಮ್ಮ ದೊಡ್ಡ ಪುಣ್ಯಗಳಲ್ಲಿ ಒಂದಾಗಿದೆ.

ನಮ್ಮ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವ ಪುಣ್ಯಪುರುಷರಲ್ಲಿ ತಾವು ಒಬ್ಬರಾಗಿದ್ದೀರಿ. ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಸಾಧನೆಮಾಡಿ ಸಾರ್ಥಕವಾದ ಕೃತಿಗಳನ್ನು ರಚಿಸಿದ್ದೀರಿ. ಕಥೆ, ಕವಿತೆ, ನಾಟಕ, ಕಾದಂಬರಿ, ವಿಮರ್ಶೆ, ವಿಚಾರ, ಜೀವನ ಚರಿತ್ರೆ - ಹೀಗೆ ಎಲ್ಲ ವಿಭಾಗದಲ್ಲಿಯೂ ಏಕಪ್ರಕಾರವಾದ ಯಶಸ್ಸನ್ನು ಗಳಿಸಿದ್ದೀರಿ. ಕ್ರೀಡಾರಂಗದ ಪರಿಭಾಷೆಯನ್ನು ಬಳಸಿ ಹೇಳುವುದಾದರೆ ತಾವು ನಮ್ಮ ಸಾಹಿತ್ಯಕ್ಷೇತ್ರದ 'ಆಲ್‌ರೌಂಡರ್' ಆಗಿದ್ದೀರಿ. ಲೋಕದ ಯಾವುದೇ ಸಾಹಿತ್ಯ ಚರಿತ್ರೆಯಲ್ಲಿಯೂ ಒಬ್ಬನೇ ಲೇಖಕ ನಾನಾ ಪ್ರಕಾರಗಳಲ್ಲಿ ಕೆಲಸ ಮಾಡಿರುವುದು, ಮಾಡಿದ್ದರೂ ಸಮಯಶಸ್ಸನ್ನು ಪಡೆದಿರುವುದು ಅತ್ಯಂತ ವಿರಳ. ತಾವು ಆ ವಿರಳರಲ್ಲಿ ಒಬ್ಬರಾಗಿರುವುದು ನಮಗೆ ಅಭಿಮಾನದ ವಿಷಯವಾಗಿದೆ.

ಕನ್ನಡದ ಆಧುನಿಕ ಸಣ್ಣ ಕಥೆಗೆ ತಾವು ಮೂಲಪುರುಷರಾಗಿದ್ದೀರಿ. ಈ ಸಾಹಿತ್ಯ ಪ್ರಕಾರವನ್ನು ನಮ್ಮ ಸಾಹಿತ್ಯದಲ್ಲಿ ಹುಟ್ಟು ಹಾಕಿ ಅದನ್ನು ಬೆಳೆಸಿದ್ದೀರಿ; ಬಲಿಸಿದ್ದೀರಿ. ತಮ್ಮ ಕಥೆಗಾರಿಕೆಯ ಮಂತ್ರದಂಡದಿಂದ ಅಪೂರ್ವವಾದ ಅನೇಕ ರತ್ನಗಳನ್ನು ನಮಗೆ

---

* ದಿನಾಂಕ೧೩ ಜನವರಿ ೧೯೬೮ರ ಶನಿವಾರದಂದು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ|| ಕೆ.ಎಲ್. ಶ್ರೀಮಾಲಿ ಅವರ ಅಧ್ಯಕ್ಷತೆಯಲ್ಲಿ ಮೈಸೂರಿನ ಸಾರ್ವಜನಿಕರು ಏರ್ಪಡಿಸಿದ ಸನ್ಮಾನ ಸಮಾರಂಭದಲ್ಲಿ ಅರ್ಪಿಸಿದ ಅಭಿನಂದನ ಪತ್ರ.

ಕೊಟ್ಟಿದ್ದೀರಿ. ವಸ್ತು, ತಂತ್ರಗಳ ಆಡಂಬರವಿಲ್ಲದೆಯೂ, ಕಲೆಗಾರಿಕೆ ಅರಳಬಲ್ಲುದೆಂಬುದನ್ನು ತಾವು ದೃಢಪಡಿಸಿದ್ದೀರಿ. ಸರಳತೆ ಸೌಂದರ್ಯವಾಗಬಲ್ಲುದೆಂಬುದನ್ನು ತೋರಿಸಿದ್ದೀರಿ. ತಮ್ಮ ಕಥೆಗಾರಿಕೆಯನ್ನು ಅನುಸರಿಸಿದವರು ಹಲವರಿದ್ದಾರೆ; ಮೀರಿದವರು ಒಬ್ಬರೂ ಇಲ್ಲ. ಇದು ಒಂದು ದೃಷ್ಟಿಯಲ್ಲಿ ನಮ್ಮ ಸಾಹಿತ್ಯಕ್ಕೆ ಆದ ನಷ್ಟವಾದರೂ, ತಮ್ಮ ವೈಯಕ್ತಿಕ ಸಿದ್ಧಿಯ ಹೆಚ್ಚಳವಾಗಿದೆ.

ಅನೇಕ ವರ್ಷಗಳ ಕಾಲ ತಾವು ನಡೆಸಿಕೊಂಡು ಬಂದ 'ಜೀವನ' ಪತ್ರಿಕೆಯನ್ನು ನಾವು ಈ ಸಂದರ್ಭದಲ್ಲಿ ಉಲ್ಲೇಖಿಸಲೇ ಬೇಕು. ಈಚಿನ ಕೆಲವು ವರ್ಷಗಳಲ್ಲಿ ಈ ಪತ್ರಿಕೆಯೂ ಹೆಸರೂ ತಮ್ಮ ಹೆಸರೂ ಅಭಿನ್ನವಾಗಿದ್ದವು. ಪತ್ರಿಕಾಧರ್ಮವನ್ನು ತಾವು ಚಾಚೂ ತಪ್ಪದೆ ನಡೆಸಿಕೊಟ್ಟಿರಿ. ಸದಭಿರುಚಿ, ಕಾಲನಿಯತತೆ, ನ್ಯಾಯ ನಿಷ್ಠುರತೆ ಧ್ಯೇಯ ಸಂಪನ್ನತೆಗಳನ್ನು ತಾವು ಈ ಕೆಲಸದಲ್ಲಿ ಮೆರೆದಿರಿ. ರಾಷ್ಟ್ರೀಯ ಅಂತರ ರಾಷ್ಟ್ರೀಯ ವಿಚಾರಗಳಲ್ಲಿಯೂ, ನಮ್ಮ ನಾಡಿನ ಸಮಸ್ಯೆಗಳಲ್ಲಿಯೂ ಒಂದೇ ಬಗೆಯ ಆಸಕ್ತಿವಹಿಸಿ ತಾವು ತಮ್ಮ ಸಂಪಾದಕೀಯ ಲೇಖನಗಳಲ್ಲಿ ತೋರಿದ ವಿಚಕ್ಷಣತೆಯೂ ವಿಶ್ಲೇಷಣ ಚತುರತೆಯೂ, ಎಚ್ಚರ ಚಚ್ಚರಗಳೂ ಅನ್ಯಾದೃಶವಾದವು. ಇಷ್ಟು ಹರಿತವಾದ; ವಿಶ್ಲೇಷಕವಾದ ವಿಚಾರಧಾರೆ ಲೋಕದ ಬಹುಪಾಲು ಜನರ ಗಮನಕ್ಕೆ ಬಾರದೆ ಹೋದುದು ಅವರಿಗಾದ ನಷ್ಟವೇ ಸರಿ. ಆದರೆ ಸುದೈವದಿಂದ ಇದು ನಮ್ಮ ಸಂಪತ್ತಾಗಿದೆ. ನವುರಾದ ಆಧುನಿಕ ವಿಚಾರಗಳನ್ನು ಕನ್ನಡ ಭಾಷೆ ಎಷ್ಟು ಸುಲಭವಾಗಿ ಸಹಜವಾಗಿ ಪ್ರಕಟಗೊಳಿಸಬಲ್ಲುದೆಂಬುದಕ್ಕೆ ತಮ್ಮ ಈ ಬರವಣಿಗೆಗಳು ಸಾಕ್ಷಿಯಾಗಿವೆ.

ಅನೇಕ ವರ್ಷಗಳ ಕಾಲ ಸರ್ಕಾರದ ಅಧಿಕಾರದಲ್ಲಿದ್ದರೂ, ನಮ್ಮ ನಾಡಿನ ಸಾಂಸ್ಕೃತಿಕ ಜೀವನವನ್ನು ರೂಢಿಸಿದ ಶಿಲ್ಪಿಗಳಲ್ಲಿ ತಾವು ಮುಖ್ಯರಾಗಿದ್ದೀರಿ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ, ಪರಿಷತ್ತಿನ ಉಪಾಧ್ಯಕ್ಷರಾಗಿಯೂ ತಾವು ಅನೇಕ ಸಂಪ್ರದಾಯಗಳನ್ನು ಹಾಕಿಕೊಟ್ಟಿರಿ. ಅನೇಕ ರಾಷ್ಟ್ರೀಯ ಸಭೆ ಸಮ್ಮೇಳನಗಳಲ್ಲಿ ಭಾಗವಹಿಸಿ ಕನ್ನಡದ ಗಣ್ಯತೆಗೆ ಕಾರಣರಾದಿರಿ. ಸೃಷ್ಟ್ಯಾತ್ಮಕ ಲೇಖಕರಾಗಿದ್ದೂ ತಾವು, ತಮ್ಮ ಹಲವು ಕೃತಿಗಳನ್ನು ಇಂಗ್ಲಿಷಿಗೆ ಭಾಷಾಂತರರಿಸಿ, ಇಂಗ್ಲಿಷ್ ಸಂಸ್ಕೃತ ಭಾಷೆಗಳ ಹಲವು ಕೃತಿಗಳನ್ನು ಕನ್ನಡಕ್ಕೆ ತಂದು ಬೇರೆ ಬೇರೆ ಜನರ ಹೃದಯಗಳನ್ನು ಬೆಸೆಯುವುದರಲ್ಲಿ, ಪರಸ್ಪರ ಅರಿವುಂಟುಮಾಡುವುದರಲ್ಲಿ ಮಾರ್ಗದರ್ಶಕರಾಗಿದ್ದೀರಿ.

ಇಂದು ಕನ್ನಡದಲ್ಲಿ ಖ್ಯಾತನಾಮರಾಗಿರುವ ಎಷ್ಟೋ ಲೇಖಕರಿಗೆ ಅವರ ಆರಂಭದ ದಿನಗಳಲ್ಲಿ ತಾವು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನಾನಾ ಬಗೆಯ ನೆರವು ನೀಡಿ ಅವರನ್ನೂ ಅವರ ಶಕ್ತಿ ಸಂಪತ್ತನ್ನೂ ನಮಗೆ ಉಳಿಸಿಕೊಟ್ಟಿದ್ದೀರಿ. ತಾವು ಸಾಹಿತ್ಯವನ್ನು ಮಾತ್ರವಲ್ಲದೆ ಸಾಹಿತಿಗಳನ್ನೂ ಸೃಷ್ಟಿಸಿದ್ದೀರಿ. ಕವಿಗೆ ಕವಿ ಮುನಿಯುತ್ತಾನೆಂಬ ಮಾತನ್ನು ಸುಳ್ಳು ಮಾಡಿದ್ದೀರಿ.

ಕನ್ನಡ ನಾಡಿನ ಜನಜೀವನದಲ್ಲಿ ಕನ್ನಡಕ್ಕೆ, ತನ್ಮೂಲಕವಾಗಿ ಭಾರತೀಯರ ಜೀವನದಲ್ಲಿ ಭಾರತೀಯ ಭಾಷೆಗಳಿಗೆ, ಅಗತ್ಯವಾಗಿ, ಅನಿವಾರ್ಯವಾಗಿ ದೊರಕಬೇಕಾದ ಸ್ಥಾನಮಾನಗಳ ಬಗೆಗೆ ತಾವು ಒಂದೇ ರೀತಿಯಿಂದ ಬಣ್ಣ ಬದಲಾಯಿಸದೆ ನಡೆಸಿರುವ ಕಳಕಳಿಯ ಪ್ರಯತ್ನಗಳನ್ನು ನೆನೆಸಿಕೊಂಡಾಗ ನಮ್ಮ ಹೃದಯ ತುಂಬಿ ಬರುತ್ತದೆ. ಆಡಳಿತದ ಭಾಷೆಯಾಗಿ, ಶಿಕ್ಷಣ ಮಾಧ್ಯಮವಾಗಿ ಕನ್ನಡ ಜಾರಿಗೆ ಬಂದಾಗಲೇ ದೇಶದ

ಜನಕ್ಕೆ ನಿಜವಾದ ಸ್ವಾತಂತ್ರ್ಯದ ಅರಿವಾಗುವುದೆಂದೂ, ಅವರ ವಿದ್ಯೆ ಸಾರ್ಥಕವಾಗುವುದೆಂದೂ ತಾವು ಘೋಷಿಸುತ್ತಲೇ ಬಂದಿದ್ದೀರಿ. ದೇಶ ಭಾಷೆಗಳ ಬಗೆಗೆ ತಮ್ಮ ಹಾಗೆ ವೀರನಿಷ್ಠೆಯನ್ನು ತೋರುವ ಜನ ಹೆಚ್ಚಾಗಿಲ್ಲದಿರುವುದೂ, ಅಧಿಕಾರದಲ್ಲಿರುವ ಜನ ತಮ್ಮಂಥ ಪ್ರವಾದಿಗಳ ಮಾತಿಗೆ ಕಿವಿಗೊಡದಿರುವುದೂ ಈ ನಾಡಿನ ದುರ್ದೈವವಾಗಿದೆ. ಆದರೆ ತಮ್ಮಂಥ ಹಿರಿಯರ ಪ್ರಯತ್ನ, ತಪಸ್ಸುಗಳು ವ್ಯರ್ಥವಾಗಲಾರವು. ಈಗ ನಾವು ಎಚ್ಚರಾಗುತ್ತಿದ್ದೇವೆ; ಗರಿಗಟ್ಟುತ್ತಿದ್ದೇವೆ. ತಾವು ಹಾಕಿಕೊಟ್ಟ ಗುರಿಯನ್ನು ಮುಟ್ಟಲು ನಮಗೆ ತಮ್ಮ ಆಶೀರ್ವಾದವಿರಲಿ.

ನಿತ್ಯ ಜೀವನದ ಪ್ರೇಮವನ್ನು, ಸೌಂದರ್ಯವನ್ನು ತಾವು ತಮ್ಮ ಸಾಹಿತ್ಯದಲ್ಲಿ ಅಸ್ವಾದ್ಯಶವಾಗಿ ಮೆರೆದಿದ್ದೀರಿ. ನಿರ್ಮಲಾಂತಃಕರಣದ ಮಾನವೀಯತೆಗೆ ದನಿ ಕೊಟ್ಟಿದ್ದೀರಿ. ಈ ನಾಡಿನ ಸಂಸ್ಕೃತಿಯ ಅತ್ಯುತ್ತಮವಾದುದೆಲ್ಲವನ್ನೂ ಅಲ್ಲಿ ಕೆನೆ ಗಟ್ಟಿಸಿದ್ದೀರಿ. ಕನ್ನಡಿಗರ ಕನ್ನಡತನದ ಸಾಕಾರ ಮೂರ್ತಿಯಾದ ತಾವು ನಮಗೆಲ್ಲ ಹೆಮ್ಮೆಯಾಗುವಂಥ ಸಾರ್ಥಕ ಬದುಕನ್ನು ನಡೆಸಿದ್ದೀರಿ. ಸಮೃದ್ಧ ಕೆಲಸ ಮಾಡಿದ್ದೀರಿ. ನಮ್ಮ ಅಮೂಲ್ಯ ಆಸ್ತಿಯಾಗಿದ್ದೀರಿ. ತಾವು ರಚಿಸಿರುವ ಸುಮಾರು ಹದಿನೈದು ಸಾವಿರ ಪುಟಗಳ ಸಾಹಿತ್ಯ ಗುಣ ಗಾತ್ರ ಎರಡಲ್ಲಿಯೂ ವಿಶ್ವಸಾಹಿತ್ಯ ಮೇಳಕ್ಕೆ ಕನ್ನಡ ನಿರ್ದಾಕ್ಷಿಣ್ಯದಿಂದ ಕೊಡಬಹುದಾದ ಕೊಡುಗೆಯಾಗಿದೆ. ಖಂಡಿತವಾಗಿಯೂ ಯಾವ ಮಾನದಿಂದ ನೋಡಿದರೂ ವಿಶ್ವದ ಯಾವ ಸಮಕಾಲೀನ ಲೇಖಕನಿಗೂ ತಾವು ಹೆಗಲೆಣೆಯಾಗಬಲ್ಲಿರಿ. ಈ ಗೌರವವನ್ನು ಕನ್ನಡಿಗರಿಗೆ ಒದಗಿಸಿರುವ ದಯಾಮಯನಾದ ಭಗವಂತನಿಗೆ ನಾವು ಕೃತಜ್ಞರಾಗಿದ್ದೇವೆ. ಇನ್ನೂ ಬಹುಕಾಲ ತಮ್ಮನ್ನು ಪಡೆದಿರುವ ಪುಣ್ಯ ನಮಗಿರಲಿ ಎಂಬುದೇ ಈಗ ಅವನಲ್ಲಿ ನಮ್ಮ ಪ್ರಾರ್ಥನೆಯಾಗಿದೆ.

ಈ ಹೊತ್ತು ತಮ್ಮ ಶ್ರೀಮತಿಯವರೂ ಇಲ್ಲಿ ಭಾಗವಹಿಸಿರುವುದು ನಮಗೆಲ್ಲ ಹೆಚ್ಚಿನ ಸಂತೋಷಕ್ಕೆ ಕಾರಣವಾಗಿದೆ. ಭಗವಂತನು ತಮಗೂ ತಮ್ಮ ಕುಟುಂಬದವರಿಗೂ ಆಯುರಾರೋಗ್ಯ ಭಾಗ್ಯಗಳನ್ನು ಕರುಣಿಸಲೆಂದು ನಾವು ಪ್ರಾರ್ಥಿಸುತ್ತೇವೆ.

ಪ್ರಶಸ್ತಿ

ಜ್ಞಾನಪೀಠ

ಭಾರತೀಯ ಜ್ಞಾನಪೀಠವು ತನ್ನ 1983ರ ಸಾಹಿತ್ಯ ಪ್ರಶಸ್ತಿಯನ್ನು 1978ಕ್ಕೂ ಮುಂಚಿನ ಕಾಲಾವಧಿಯಲ್ಲಿ ಡಾ. ಮಾಸ್ತಿವೆಂಕಟೇಶ ಅಯ್ಯಂಗಾರ್ 'ಶ್ರೀನಿವಾಸ' ಅವರು ಭಾರತೀಯ ಸಾಹಿತ್ಯಕ್ಕೆ ಅಸಾಧಾರಣ ಕೊಡುಗೆಯನ್ನು ಪರಿಗಣಿಸಿ ಪ್ರಶಸ್ತಿಯ ನಿಯಮಗಳಿಗನುಗುಣವಾಗಿ ನೀಡಲಾಗುತ್ತಿದೆ; ಈ ಸಂಬಂಧದಲ್ಲಿ ಇವರ 'ಚಿಕ್ಕವೀರರಾಜೇಂದ್ರ' ಕಾದಂಬರಿಯನ್ನು ವಿಶೇಷವಾಗಿ ಉಲ್ಲೇಖಿಸಲಾಗಿದೆ. 'ನವರಾತ್ರಿ', 'ಶ್ರೀರಾಮ ಪಟ್ಟಾಭಿಷೇಕ' ಮತ್ತು 'ಭಾವ' - ಈ ಕೃತಿಗಳೂ ಶ್ರೀ ಮಾಸ್ತಿ ಅವರ ಸೃಜನಶೀಲತೆಗೆ ಜ್ವಲಂತ ಉದಾಹರಣೆಗಳಾಗಿವೆ.

'ಚಿಕ್ಕವೀರರಾಜೇಂದ್ರ' ಕೃತಿಯು ಈ ಪ್ರಶಸ್ತಿಯ ಕಾಲಾವಧಿಯ ಅಪೂರ್ವ ಕಾದಂಬರಿಯಾಗಿದೆ. ಇದು ವ್ಯಕ್ತಿಗತ ದುರಂತ, ಸಾಮಾಜಿಕ ಹಾಗೂ ರಾಜಕೀಯ ಚೌಕಟ್ಟು ಶಿಥಿಲಗೊಳ್ಳುವಿಕೆ, ರಾಜಕೀಯ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಪೂರ್ವ ಮತ್ತು ಪಶ್ಚಿಮಗಳ ನಡುವಿನ ಸಂಘರ್ಷಗಳನ್ನು ಉಬ್ಬಿದ ಕನ್ನಡಿಯಂತೆ ಏಕಕಾಲದಲ್ಲಿ ಪ್ರತಿಬಿಂಬಿಸುತ್ತಾ, ಚಾರಿತ್ರಿಕ ಪ್ರಕ್ರಿಯೆಯ ಸುರುಳಿಯನ್ನು ಬಿಚ್ಚುತ್ತಾ ಹೋಗುತ್ತದೆ. ಮಾಸ್ತಿಯವರ ಗದ್ಯ ಸ್ಫುಟ ಹಾಗೂ ತಿಳಿಯಾದ್ದು, ಶೈಲಿ ನಾಗರಿಕ, ಸಂಭಾಷಣೆ ನಾಗಾಲೋಟದ್ದು ಹಾಗೂ ಶಕ್ತಿಶಾಲಿ; ಜೊತೆಗೆ ಇದು ಸಮೃದ್ಧವಾದ ಮನಸೂರೆಗೊಳ್ಳುವ ಚಾತುರ್ಯ ಹಾಗೂ ತಿಳಿಹಾಸ್ಯವನ್ನು ಮೈಗೂಡಿಸಿಕೊಂಡು ಜೀವಂತವಾಗಿದೆ.

ಮಾಸ್ತಿಯವರು ಮೂಲತಃ ಕತೆಗಾರರು; ಗದ್ಯದಲ್ಲೇ ಆಗಲಿ, ಪದ್ಯದಲ್ಲೇ ಆಗಲಿ ಕತೆಹೇಳುವ ಕಲೆಯನ್ನು ಕರಗತ ಮಾಡಿಕೊಂಡಿರುವ ನಿಪುಣ. ''ಕನ್ನಡದ ಸಣ್ಣ ಕತೆಗಳ ಜನಕ'' ಎಂಬ ಮಾನ್ಯತೆ ಇವರಿಗೆ ಲಭಿಸಿದೆ. ಇವರ ಸಣ್ಣ ಕತೆಗಳು ಓದುಗನನ್ನು ''ಶತಮಾನದಿಂದ ಶತಮಾನಕ್ಕೆ, ದೇಶದಿಂದ ದೇಶಕ್ಕೆ'' ಕೊಂಡೊಯ್ಯುತ್ತವೆ.

ಮಾಸ್ತಿಯವರು ಎಪ್ಪತ್ತು ವರ್ಷಗಳಿಗೂ ಹೆಚ್ಚು ಕಾಲ ಕನ್ನಡದ ಪುನರುಜ್ಜೀವನ ಕಾರ್ಯದಲ್ಲಿ ಅಗ್ರೇಸರರಾಗಿದ್ದು ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಅಗಾಧವಾದ ಕೊಡುಗೆಯನ್ನು ಸಲ್ಲಿಸಿದ್ದಾರೆ. ಮಾನವನ ಮಹಾಚೇತನ ಹಾಗೂ ಸಾಮರ್ಥ್ಯಗಳಲ್ಲಿ ಅಪಾರ ನಂಬಿಕೆಯುಳ್ಳ ಇವರ ಬರಹಗಳು ಎಂಥ ಪ್ರಕ್ಷುಬ್ಧ ಪರಿಸ್ಥಿತಿಗಳಲ್ಲೂ ನಿಶ್ಚಲವಾಗಿ ನಿಲ್ಲುವಂಥ ಮಾನವನ ಮೂಲಭೂತ ಮೌಲ್ಯಗಳ ಶ್ರೇಷ್ಠತೆಯನ್ನು ಎತ್ತಿಹಿಡಿಯುವಂಥ ಆಂತರಿಕ ಪ್ರೇರಣೆಯನ್ನು ಪ್ರತಿಬಿಂಬಿಸುತ್ತವೆ.

ಮಾಸ್ತಿಯವರು ಇನ್ನೂ ಬೆಳೆಯುತ್ತಿದ್ದಾರೆ. ಬಲಿಷ್ಠರಾಗುತ್ತಿದ್ದಾರೆ. ಭಾರತೀಯ ಸಾಹಿತ್ಯದ ಮಹಾ ಪಂಡಿತರಾದ ಇವರಿಗೆ ಭಾರತೀಯ ಜ್ಞಾನಪೀಠವು ಆಯುರಾರೋಗ್ಯ ಭಾಗ್ಯವನ್ನು ಕೋರುತ್ತದೆ.

ಬೆಂಗಳೂರು

13 ಏಪ್ರಿಲ್ 1985

೧	1910-11	ರಂಗನ ಮದುವೆ	(ಸಣ್ಣ ಕತೆಗಳು)
೨	1911-20	ಇತರ ಹತ್ತು ಕತೆಗಳು	
೩	1911-20	ಕೆಲವು ಸಣ್ಣ ಕತೆಗಳು	
೪	1922	ಬಿನ್ನಹ	(ಕಾವ್ಯ)
೫	1923	ಶಾಂತಾ	(ನಾಟಕ)
೬	1923	ಸಾವಿತ್ರಿ	(ನಾಟಕ)
೭	1924	ಸಣ್ಣ ಕತೆಗಳು	
೮	1924	''ಸಾಹಿತ್ಯ''	(ಪ್ರಬಂಧ)
೯	1924	ಅರುಣ	(ಕಾವ್ಯ)
೧೦	1924	ವಿಮರ್ಶೆ	
೧೧	1927	ಉಷಾ	(ನಾಟಕ)
೧೨	1928	ಸುಬ್ಬಣ್ಣ	(ನೀಳ್ಗತೆ)
೧೩	1929	ತಾಳೀಕೋಟೆ	(ನಾಟಕ)
೧೪	1929	ವಿಮರ್ಶೆ-೨	
೧೫	1930	ನಾಲ್ಕು ಸಣ್ಣ ಕತೆಗಳು	
೧೬	1930	ಕನ್ನಡ ಸೇವೆ	
೧೭	1930	ಮಂಜುಳ	(ನಾಟಕ)
೧೮	1930	ತಾವರೆ	(ಕಾವ್ಯ)
೧೯	1931	ಜನತೆಯ ಸಂಸ್ಕೃತಿ	
೨೦	1931	ಚೆಲುವು	(ಕಾವ್ಯ)
೨೧	1932	ಶಿವಛತ್ರಪತಿ	(ನಾಟಕ)
೨೨	1933	ವಿಮರ್ಶೆ-೩	
೨೩	1933	ಯಶೋಧರಾ	(ನಾಟಕ)
೨೪	1933	ಮಲಾರ	(ಕಾವ್ಯ)
೨೫	1934	ಸಣ್ಣ ಕತೆಗಳು	(ಭಾಗ-೪)
೨೬	1935	ರವೀಂದ್ರನಾಥ ಠಾಕೂರ್	(ಜೀವನ ಚರಿತ್ರೆ)
೨೭	1936	ಸಣ್ಣ ಕತೆಗಳು	(ಭಾಗ-೫)
೨೮	1936	ಶ್ರೀರಾಮಕೃಷ್ಣ	(ಜೀವನ ಚರಿತ್ರೆ)
೨೯	1937	ತಿರುಪಾಣಿ	(ಕಾವ್ಯ ನಾಟಕ)
೩೦	1937	ಜನಪದ ಸಾಹಿತ್ಯ	(ಪ್ರಬಂಧ)
೩೧	1937	Popular Culture in Karnataka	
೩೨	1938	ಕಾಕನ ಕೋಟೆ	(ನಾಟಕ)
೩೩	1938	ಆದಿಕವಿ ವಾಲ್ಮೀಕಿ	(ವಾಲ್ಮೀಕಿ ರಾಮಾಯಣದ ಸಮೀಕ್ಷೆ)

೩೪	1939	ವಿಮರ್ಶೆ-4	
೩೫	1940	ಸಣ್ಣ ಕತೆಗಳು-6	
೩೬	1940	ಗೌಡರ ಮಲ್ಲಿ	(ಕಾವ್ಯ)
೩೭	1940	The Poetry of Valmiki	
೩೮	1941	ರಾಮನವಮಿ	(ಕಾವ್ಯ)
೩೯	1943	ಮೂಕನ ಮಕ್ಕಳು	(ಕಾವ್ಯ)
೪೦	1943	Subbanna	
೪೧	1943	Short Stories (English)	1
೪೨	1943	,,	2
೪೩	1944	,,	3
೪೪	1944	,,	4
೪೫	1944	ತಾಯ್ನುಡಿಯ ತಮ್ಮಡಿ	(ಅಖಿಲ ಭಾರತ ಓರಿಯಂಟಲ್ ಕಾನ್‌ಫರೆನ್ಸಿನ ಅಧ್ಯಕ್ಷ ಭಾಷಣ)
೪೬	1944	ನವರಾತ್ರಿ-೨	
೪೭	1945	ನವರಾತ್ರಿ-೫	
೪೮	1945	ಚಿತ್ರಾಂಗದ	(ಠಾಕೂರರ ನಾಟಕಾನುವಾದ)
೪೯	1946	ನವರಾತ್ರಿ-೩	
೫೦	1946	ಸುನಿತಾ	(ಕಾವ್ಯ)
೫೧	1946	ಪ್ರಸಂಗ	(ಲೇಖನಗಳು)
೫೨	1946	Ravindranatha Tagore	
೫೩	1947	ಸಣ್ಣ ಕತೆಗಳು-೭	
೫೪	1947	ಸಣ್ಣ ಕತೆಗಳು-೮	
೫೫	1948	ನವರಾತ್ರಿ	(ಭಾಗ-೫)
೫೬	1949	ಸಣ್ಣ ಕತೆಗಳು-೯	
೫೭	1950	ಚೆನ್ನಬಸವನಾಯಕ	(ಐತಿಹಾಸಿಕ ಕಾದಂಬರಿ)
೫೮	1950	ಸಣ್ಣ ಕತೆಗಳು-೧೦	
೫೯	1951	ಮನವಿ	(ಕಾವ್ಯ)
೬೦	1951	ಪೂಜನ	(ಮುನ್ನುಡಿಗಳು)
೬೧	1952	ಚಿಂತನ	
೬೨	1952	ಭಾರತ ತೀರ್ಥ	(ಮಹಾಭಾರತ ಪರಿಚಯ)
೬೩	1953	ನವರಾತ್ರಿ	(ಭಾಗ-೧)

೬೪	1953	ಮಾಸ್ತಿ	(ಕಾವ್ಯ ನಾಟಕ)
೬೫	1955	ಅನಾರ್ಕಳಿ	(ನಾಟಕ)
೬೬	1956	ಚಿಕವೀರ ರಾಜೇಂದ್ರ	(ಐತಿಹಾಸಿಕ ಕಾದಂಬರಿ)
೬೭	1957	ಕನ್ನಡಲೆಂಕ	(ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವ ಭಾಷಣ)
೬೮	1957	ಸಣ್ಣ ಕತೆಗಳು	
೬೯	1957	Chenna Basava Nayaka	
೭೦	1958	ಹ್ಯಾಮ್‌ಲೆಟ್	(ಷೇಕ್ಸ್‌ಪಿಯರ್ ನಾಟಕದ ಅನುವಾದ)
೭೧	1959	ಚಂಡಮಾರುತ	(— ,, —)
೭೨	1959	ಲಿಯರ್ ಮಹಾರಾಜ	(ಅನುವಾದ)
೭೩	1959	ದ್ವಾದಶ ರಾತ್ರಿ	(ಅನುವಾದ)
೭೪	1959	ಶ್ರೀಕೃಷ್ಣ ಕರ್ಣಾಮೃತ	(ಸಂಸ್ಕೃತ ಅನುವಾದ)
೭೫	1960	ನಮ್ಮ ನುಡಿ	(ಲೇಖನಗಳು)
೭೬	1960	ಸರ್.ಎಂ. ವಿಶ್ವೇಶ್ವರಯ್ಯ	(ಸಂಪಾದಿತ-ಲೇಖನಗಳ ಸಂಗ್ರಹ)
೭೭	1963	ಷೇಕ್ಸ್‌ಪಿಯರ್ ದೃಶ್ಯಗಳು-೧	(ಆಯ್ದ ೧೫ ದೃಶ್ಯಗಳು)
೭೮	1963	ಪ್ರಸಂಗ	(ಭಾಗ-೨)
೭೯	1964	ಪುರಂದರದಾಸ	(ನಾಟಕ)
೮೦	1964	ಷೇಕ್ಸ್‌ಪಿಯರ್ ದೃಶ್ಯಗಳು-೨	(ಆಯ್ದ ೯ ದೃಶ್ಯಗಳು)
೮೧	1964	ಷೇಕ್ಸ್‌ಪಿಯರ್ ದೃಶ್ಯಗಳು-೩	(ಹೆನ್ರಿ ೪ ಮತ್ತು ಹೆನ್ರಿ ೫ ನಾಟಕದ ಅನುವಾದ)
೮೨	1965	ಪ್ರಸಂಗ	(ಭಾಗ-೩)
೮೩	1965	ಕನಕಣ್ಣ	(ನಾಟಕ)
೮೪	1965	ಸಣ್ಣ ಕತೆಗಳು	
೮೫-೮೯	1967	ಸಂಪಾದಕೀಯ ೫ ಭಾಗಗಳು	
೯೦	1967	ಸಾಹಿತ್ಯ ಲಾಲನೆ	(ಪತ್ರಗಳ ಸಂಗ್ರಹ)
೯೧	1967	ಪ್ರಸಂಗ	(ಭಾಗ-೪)
೯೨	1968	ಸಣ್ಣ ಕತೆಗಳು-೧೨	
೯೩	1968	Short Stories-5	
೯೪	1968-69	ಭಾವ	(ಆತ್ಮಚರಿತ-ಮೂರು , ಭಾಗಗಳು)
೯೫	1969	ಭಟ್ಟರ ಮಗಳು	(ಗೀತ ನಾಟಕ)

೯೬	1969	ಸಂಕ್ರಾತಿ	(ಕಾವ್ಯ)
೯೭	1971	ವಿಚಾರ	(ಲೇಖನಗಳು)
೯೮	1972	ಶ್ರೀರಾಮ ಪಟ್ಟಾಭಿಷೇಕ	(ಕಾವ್ಯ)
೯೯	1974	ಬಾನುಲಿ ದೃಶ್ಯಗಳು	(ನಾಟಕ)
೧೦೦	1975	ಸಾಹಿತ್ಯ ಪ್ರೇರಣೆ	(ಉಪನ್ಯಾಸ)
೧೦೧	1975	Essays, Addresses	
೧೦೨	1975	Rajaji Vol I & II	
೧೦೩	1976	ಶೇಷಮ್ಮ	(ಕತೆ)
೧೦೪	1976	ನವರತ್ನ ರಾಮರಾವ್	(ಉಪನ್ಯಾಸ)
೧೦೫	1977	ಪತ್ರಗಳು	
೧೦೬	1978	Srimad Bhagavadgita-A Study	
೧೦೭	1978	ಕಾಳಿದಾಸ	(ನಾಟಕ)
೧೦೮	1979	ಆರಂಭದ ಆಂಗ್ಲ ಸಾಹಿತ್ಯ	(ಉಪನ್ಯಾಸ)
೧೦೯	1979	ನಮ್ಮ ಹೊಸ ಸಾಹಿತ್ಯದ ಆರಂಭ	(ಉಪನ್ಯಾಸ)
೧೧೦	1979	ಅರ್ಚನ	(ಉಪನ್ಯಾಸ)
೧೧೧	1980	Addresses	
೧೧೨	1980	Kalidasa	
೧೧೩	1980	ಪ್ರಸಂಗ-೫	
೧೧೪	1981	ಸಂಕ್ಷಿಪ್ತ ವಾಲ್ಮೀಕಿ ರಾಮಾಯಣ	
೧೧೫	1981	ಉತ್ತರ ಕಾಂಡ ವಿಚಾರ	(ಒಂದು ಪ್ರಬಂಧ)
೧೧೬	1982	ಅಂತರ ಗಂಗೆ	
೧೧೭	1983	ಅಜ್ಞನ ದಾರಿ	(ನಾಟಕ)
೧೧೮	1983	ಧರ್ಮ ಸಂರಕ್ಷಣೆ	
೧೧೯	1983	Thoughts on Religion	
೧೨೦	1983	Thinking of My Life	
೧೨೧	1984	ಸಣ್ಣ ಕತೆಗಳು-೧೫	
೧೨೨	1985	ವಿಮಲ ಮರಿಯಾನ್	(ನಾಟಕ)
೧೨೩	1985	ಮಾತುಗಾರ ರಾಮಣ್ಣ	
೧೨೪	1987	ಸಮಗ್ರ ಕಥೆಗಳು	(ಸಂಪುಟ-೧)
೧೨೫	1988	ಸಮಗ್ರ ಕಥೆಗಳು	(ಸಂಪುಟ-೨)

*

ಮಾಸ್ತಿ ಜನ್ಮ ಶತಮಾನೋತ್ಸವ ಸಮಿತಿ

ಅಧ್ಯಕ್ಷರು : ಪ್ರೊ. ಎಲ್. ಎಸ್. ಶೇಷಗಿರಿ ರಾವ್

ಕಾರ್ಯದರ್ಶಿ : ಶ್ರೀ ಮಾವಿನಕೆರೆ ರಂಗನಾಥನ್

ಸಹ-ಕಾರ್ಯದರ್ಶಿ : ಶ್ರೀ ಅರಳುಮಲ್ಲಿಗೆ ಪಾರ್ಥಸಾರಥಿ

ಖಜಾಂಚಿ : ಶ್ರೀಮತಿ ಉಷಾ ಕೇಸರಿ

ಸದಸ್ಯರು : ಡಾ. ಜಿ. ಎಸ್. ಶಿವರುದ್ರಪ್ಪ
ಡಾ. ಹಾ.ಮಾ. ನಾಯಕ
ಶ್ರೀ ಜಿ. ನಾರಾಯಣ
ಪ್ರೊ. ಜಿ.ಎಸ್. ಸಿದ್ದಲಿಂಗಯ್ಯ
ಶ್ರೀ ಸಂತೋಷಕುಮಾರ ಗುಲ್ವಾಡಿ
ಡಾ. ತಾಳ್ತಜೆ ವಸಂತಕುಮಾರ್
ಶ್ರೀಮತಿ ಹೇಮಲತಾ ಮಹಿಷಿ
ಶ್ರೀ ಹರಿಹರೇಶ್ವರ (ಅಮೆರಿಕ)
ಶ್ರೀಮತಿ ವಿ. ವಸಂತಶ್ರೀ
ಡಾ. ಎಂ. ಎನ್. ಜನಾರ್ಧನ (ಆಸ್ಟ್ರೇಲಿಯ)
ಶ್ರೀಮತಿ ಎಸ್. ವಿಜಯಲಕ್ಷ್ಮೀ (—— ’’ ——)
ಶ್ರೀ ಮತ್ತೂರು ಕೃಷ್ಣಮೂರ್ತಿ (ಲಂಡನ್)

ವಿಶೇಷ ಕಾರ್ಯಕರ್ತರು: ಡಾ. ಕೆ. ಲಕ್ಷ್ಮಣ್

